REGISTERED No M 2266 ‖ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ‖ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೭ ನೇ ಜನವರಿ ೧೯೩೫ [ಸಂಚಿಕೆ ೩೪

ನಮಃ ಪಂಚಜಗದ್ಗುರುಭ್ಯಃ

ಧಾರ್ಮಿಕಸಭೆ.

ಅಕ್ಕಲಕೋಟೆ ಸಂಸ್ಥಾನಕ್ಕೆ ಸೇರಿದ ಚಪ್ಪಳಗಾಂವ ಎಂಬಲ್ಲಿ ವೀರಶೈವ ಸೇವಾಸಂಘ'ವು ಸ್ಥಾಪಿತವಾದದ್ದು ಸರ್ವಶ್ರುತವಷ್ಟೇ! ಈ ಸಂಘದಿಂದ ವೀರಶೈವ ಧರ್ಮಸುಧಾರಣೆಯು ಪತ್ರಿಯಲ್ಲಿ ತಿಂಗಳಿಗೊಂದಾವರ್ತಿ ಸಭೆಸೇರಿ ಧಾರ್ಮಿಕ ಚರ್ಚೆಗಳು ನಡೆಯುತ್ತಿರುತ್ತವೆ. ಅದೇ ಪ್ರಕಾರ ತಾ|| ೨೦—೧೨—೩೪ ನೆಯ ದಿವಸ ವೀರಶೈವಶ್ರೇಷ್ಠರೂ, ಆಗರ್ಭಶ್ರೀಮಂತರೂ ಪ್ರಸಿದ್ಧ ವ್ಯಾಪಾರಿಗಳೂ ಆದ ಬೋಜರಾಯ ಪಾಟೀಲ ಎಂಬವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸುಮಾಡಲ್ಪಟ್ಟವು

೧ ನೆಯ ಠರಾವು—'ವೀರಶೈವ ಧರ್ಮಾಂಬುಧಿಯನ್ನು ತಮ್ಮ ಪಾಂಡಿತ್ಯವೆಂಬ ಮಂಥನದಂಡದಿಂದ ಮಂಥನ ಮಾಡಿ ಮಹತ್ವದ ಬೋಧಕ ಗ್ರಂಥರತ್ನಗಳನ್ನು ತೆಗೆದು ವೀರಶೈವರಪಾಲ್ಗೆ ಧರ್ಮಗುರುಗಳನಿತ್ತು ಎಚ್ಚರಗೊಳಿಸಿದ ಪಂಡಿತಮಂಡಲಿಮಂಡನಾಯಮಾನರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ನಮ್ಮೂರ 'ಶ್ರೀ ಮರುಳಾರಾಧ್ಯ ವಾಚನಾಲಯ'ಕ್ಕೆ ತಮ್ಮ ಸರ್ವಗ್ರಂಥರತ್ನಗಳನ್ನು ಕೊಟ್ಟದುದಕ್ಕಾಗಿ ನಾವುಗಳೆಲ್ಲರೂ ಚಿರಋಣಿಗಳಾಗಿರುವೆವೆಂದು ಈ ಸಭೆಯು ಠರಾಯಿಸುವುದಲ್ಲದೆ ಜಗದಾಚಾರ್ಯರು ಸದರಿ ಪಂಡಿತರಿಗೆ ಚಿರಾಯುವನ್ನೀಯಲೆಂದು ಪ್ರಾರ್ಥಿಸುತ್ತದೆ ೫ ನಿಮಿಷಗಳ ವರೆಗೆ ಜಗದಾಚಾರ್ಯರ ಸ್ತುತಿಗಾಯಿತು

೨ ನೆಯ ಠರಾವು—"ವೀರಶೈವ ಧರ್ಮಸುಧಾರಣೆಗಾಗಿ ಧರ್ಮಗ್ರಂಥ ಮುದ್ರಣ ಧರ್ಮಗುರುಗಳ ಸುಧಾರಣೆ ಇವೆ ಮೂಲಕಾರಣಗಳೆಂದು ಅರಿತು ಸಹಸ್ರ ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡಿ ಧರ್ಮಸುಧಾರಣೆಯನ್ನು ಮಾಡಿದವರೀ ಶ್ರೀ|| ವಾಸಿಗಳಾದ ಶ್ರೀಮಂತ ಮಲ್ಲಪ್ಪ ವಾರದ ಇವರ ದ್ವಿತೀಯ ಅವತಾರದಂತಿರುವ ಇವರ ಸುಪುತ್ರರತ್ನರಾದ ಚನ್ನಬಸಪ್ಪ ವಾರದ ಈ ಮಹೋದಯರು ತಮ್ಮಲ್ಲಿರುವ ಸರ್ವ ವೀರಶೈವ ಧರ್ಮಗ್ರಂಥಗಳನ್ನು ಅರ್ಧ ಕಿಮ್ಮತ್ತಿಗೆ ಕೊಟ್ಟದುದಕ್ಕಾಗಿ ಸದರಿ ಶ್ರೀಮಂತರಿಗೆ ನಾವು ಬಹಳ ಆಭಾರಿಗಳಾಗಿರುತ್ತೇವಲ್ಲದೆ ಇಂಥ ಮಹೋದಯರನ್ನು ಇನ್ನೂ ಅನೇಕರನ್ನಾಗಿ ನಿರ್ಮಿಸೆಂದು ಪರಶಿವನ ಚರಣಸರಸಿಗಳನ್ನು ಈ ಸಭೆಯು ಭಜಿಸುತ್ತದೆ

೫ ನಿಮಿಷ ಉಭಶೃತಿನವಾಗಿ ಈ ಠರಾವು ಪಾಸಾಯಿತು

೩ ನೆಯ ಠರಾವು—ಪರಮಪೂಜ್ಯರೂ ಧರ್ಮಸುಧಾರಣೆಯ ಬಗ್ಗೆ ವಿಶೇಷ ಕಳಕಳಿಯುಳ್ಳವರೂ ವಿದ್ವಾಂಸರೂ, ಪರಮ ವಿರಾಗಿಗಳೂ ಆದ ಶ್ರೀ|| ಷ|| ಬ್ರ|| ಶ್ರೀಗುರುವರ್ಯ ಶಿವಾಚಾರ್ಯ ಸ್ವಾಮಿಗಳವರು ಸುತ್ತಗಟ್ಟಿ ಈ ಪೂಜ್ಯಪಾದರು ಧರ್ಮಸುಧಾರಣೆಯ ಕಳಕಳಿಯಿಂದ ಶಿವಾದ್ವೈತಮಂಜರಿ ಎಂಬ ಮಹಾಗ್ರಂಥವನ್ನು ದಯಪಾಲಿಸಿದುದಕ್ಕಾಗಿ ಈ ಸಂಸ್ಥೆಯವರು ಋಣಿಗಳಾಗಿರುವರಲ್ಲದೆ ಸದರಿ ಶ್ರೀಗಳವರ ಪಂಥವನ್ನು ಉಳಿದಾದ ಗುರುವರ್ಗದವರು ಕಲಿಯಬೇಕೆಂದು ಭಕ್ತಿಭಾವದಿಂದ ಈ ಸಭೆಯು ಪ್ರಾರ್ಥಿಸುತ್ತದೆ

೪ ನೆಯ ಠರಾವು—ಪೋತ್ರ 'ವೀರಶೈವಧರ್ಮಸುಧಾರಕ ಸಂಘ' ದವರು ದೀಕ್ಷಾ ಕಲ್ಪವೃಕ್ಷವೆಂಬ ಗ್ರಂಥವನ್ನೂ ೨ ನೋಟೀಸುಗಳನ್ನೂ ಶ್ರೀ ಜೈನಾಪುರ ಮಹಾಲಿಂಗಸ್ವಾಮಿಗಳವರು ಶ್ರೀ ಕಾಶೀನಾಥಸ್ವಾಮಿಯವರ ಟೀಕೆ ಖಾಷೆ ಎಂಬ ಗ್ರಂಥವನ್ನೂ ಹೋಟಗಿ ಶ್ರೀಗಳವರು ಕೆಲವು ಚಿಕ್ಕ ಚಿಕ್ಕ ಪುಸ್ತಕಗಳನ್ನೂ ಗುರುಭಕ್ತ ಬಾಳಾಬುವಾ ಕಬಾಡಿ ಎಂಬವರು ಓಂ ಗಾದಾ ಎಂಬ ಪುಸ್ತಕವನ್ನೂ ಅರ್ಪಿಸಿರುತ್ತಾರೆ ಇವರೆಲ್ಲರನ್ನು ನಾವು ಎಷ್ಟು ವರ್ಣಿಸಿದರೂ ಅಲ್ಲವೇ! ಇವರೆಲ್ಲರಂತೆ ಸರ್ವ ವೀರಶೈವರಿಗೆ ಇದೇ ಸದ್ಬುದ್ಧಿಯನ್ನು ದಯಪಾಲಿಸಲೆಂದು ಈ ಸಭೆಯು ಜಗದಾಚಾರ್ಯರನ್ನು ಅನನ್ಯಭಾವದಿಂದ ಭಜಿಸುತ್ತಿದೆ

ಶ್ರೀಯುತ ಬಸವಣ್ಣಪ್ಪ ಪಾಟೀಲ ಶ್ರೀ ವಿಠ್ಠಲರಾವ ಧರಮಶೆಟ್ಟಿ ಇವರು ವ್ಯಾಖ್ಯಾನಮಾಡಿ ಸರ್ವರನ್ನೂ ಆನಂದಗೊಳಿಸಿದರು ಕಡೆಗೆ ಮಂಗಳಾಚರಣೆಯಾಗಿ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು

ಅಣ್ಣಾರಾವ ಪಾಟೀಲ ಸೆಕ್ರೆಟರಿ
ವೀರಶೈವಸೇವಾಸಂಘ ಚಪ್ಪಳಗಾಂವ

ಧಾರ್ಮಿಕಸಭೆ

ಸೋಲಾಪೂರ ತಾಲೂಕಿಗೆ ಸಾರಿದ ಬಿ ಬೀಬೆಂದೋಳಿ ಎಂಬ ಗ್ರಾಮದಲ್ಲಿ ಶ್ರೀ ವಡೂರು ಪಟ್ಟಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಧಾರ್ಮಿಕಸಂಬಂಧ ಚರ್ಚೆಗಳಾದವು ಬಳಿಕ ಶ್ರೀ ಗುರುವರ್ಯಸ್ವಾಮಿಗಳು ಸುತ್ತಗಟ್ಟಿ ಇವರು ನಮ್ಮ 'ಶ್ರೀ ರೇವಣಸಿದ್ಧೇಶ್ವರ ವಾಚನಾಲಯ'ಕ್ಕೆ ವೀರಶೈವರತ್ನವೆಂಬ ಗ್ರಂಥವನ್ನೂ ವಡೂರು ಶ್ರೀಗಳವರು 'ಶ್ರೀ ಜಗದ್ಗುರು ಪಂಚಾಚಾರ್ಯಸ್ತೋತ್ರರತ್ನಾಕರ ಮತ್ತು ಶಿವಾಸೂತ್ರ ಸಿದ್ಧಾಂತದರ್ಪಣ'ವೆಂಬ ಗ್ರಂಥಗಳನ್ನೂ ದಯಪಾಲಿಸಿದರು ಅನಂತರ ಹೋಟಗಿ ಶ್ರೀಗಳವರ ವ್ಯಾಖ್ಯಾನವಾಯಿತು ವ್ಯಾಖ್ಯಾನದ ಸಾರಾಂಶ—ಮಹನೀಯರೇ ಸದರಿ ವಾಚನಾಲಯದ ಆವಶ್ಯಕತೆಯು ವಿಶೇಷವಿರುವದರಿಂದ ನಾವು ಇದನ್ನು ಸ್ಥಾಪಿಸುವಿರಿ ವೀರಶೈವಮತಸ್ಥಾಪಕರಾದ ಪಂಚಾಚಾರ್ಯರಲ್ಲಿ ಓರ್ವರಾದ ಶ್ರೀ ರೇವಣಸಿದ್ಧೇಶ್ವರರು ಅನೇಕಾನೇಕ ರಾಜಪುಂಗವರಿಂದ ಪೂಜೆಗೊಂಡ ವಿಷಯವು ಸರ್ವತ್ರ ಪ್ರಸಿದ್ಧವೇ ಆದೆ ಆ ಮಹಿಮರ ದಿವ್ಯನಾಮದಿಂದ ಸ್ಥಾಪಿತವಾದ ನಿಮ್ಮ ಈ ಶ್ರೀ ರೇವಣಸಿದ್ಧೇಶ್ವರ ವಾಚನಾಲಯಕ್ಕೆ ಕಪಂಶೀಭೂತರಾದ ಈ ಮಹನೀಯರಿಂದ ಈ ಮೂರು ಗ್ರಂಥಗಳು ಆರಂಭದಲ್ಲಿಯೇ ಆಶೀರ್ವಾದರೂಪದಿಂದ ಬಂದದ್ದು ನೋಡಿದರೆ ಈ ವಾಚನಾಲಯವು ವೃದ್ಧಿಹೊಂದುವದರಲ್ಲಿ ಸಂಶಯವಿಲ್ಲ ರಾಜಪೂಜ್ಯರಾದ ರೇವಣಸಿದ್ಧೇಶ್ವರ ವಾಚನಾಲಯಕ್ಕೆ ಸಣ್ಣ ಗ್ರಂಥಗಳನ್ನು ಅರ್ಪಿಸಿದರೆ ಶೋಭೆಯುಂಟಾದೀತೆ? ಆದ್ದರಿಂದ ಈ ವಾಚನಾಲಯದ ಕೊರತೆಗೆ ಯೋಗ್ಯವಾದ ಆಧಾರವನ್ನೇ ಅರ್ಪಿಸಬೇಕೆಂಬುದ್ದೇಶದಿಂದ ಸುತ್ತಗಟ್ಟಿ ಶ್ರೀಗಳವರು ಕೌಸ್ತುಭಮಣಿಸದೃಶನಾದ ವೀರಶೈವರತ್ನವೆಂಬುದನ್ನು ಧರಿಸಿದರು ವಡೂರು ಶ್ರೀಗಳಂತೂ 'ಪಂಚಾಚಾರ್ಯಸ್ತೋತ್ರರತ್ನಾಕರ'ವೆಂಬ ರತ್ನಕೋಶವನ್ನೇ ಆಭರಣವನ್ನಾಗಿ ಮಾಡಿದರು ಆ ಆಭರಣಗಳನ್ನು ಧರಿಸಿಕೊಂಡವರಿಗೆ ಚಿರಾಯುವಾಗಿ ಧಾರಣವಾಗಿದೆಯೋ ಇಲ್ಲವೋ ಎಂಬುದು ತಿಳಿಯಬೇಕಾದರೆ ದರ್ಪಣದ ಆವಶ್ಯಕತೆಯುಂಟೆಂದು ತಿಳಿದು ಶಿವಾಸೂತ್ರಸಿದ್ಧಾಂತದರ್ಪಣ' ವೆಂಬ ಗ್ರಂಥರೂಪ ದರ್ಪಣವನ್ನು ಅರ್ಪಿಸಿರುತ್ತಾರೆ ಆದ್ದರಿಂದ ನಿಮ್ಮ ವಾಚನಾಲಯವು ಅತ್ಯಂತ ಸುಶೋಭಿತವಾಗಿ ಕಾಣುತ್ತದೆ. ಈ ಗ್ರಂಥಗಳನ್ನು ಓದಿ ಅದರಲ್ಲಿರುವ ವಚನಗಳನ್ನರಿತು ಆಚರಣೆಗೆ ತರಬೇಕೆಂದು ಬೋಧಿಸಿದರು ಬಳಿಕ ರೇವಣಯ್ಯನವರು ಸರ್ವರ ಅಭಾರವನ್ನು ಮನ್ನಿಸಿದರು ವಾಚನಾಲಯದ ಅಧ್ಯಕ್ಷರಾದ ಮಲಕಪ್ಪನವರು ಆ ಗ್ರಂಥಗಳನ್ನು ಭಕ್ತಿಯಿಂದ ಸ್ವೀಕರಿಸಿದರು ಧೀಮಂತರಾದ ಭೀಮಾಶಂಕರ ಗುರುಲಿಂಗಪ್ಪ ಗುರುಸಿದ್ಧಪ್ಪ ಕೋಟಿಗೆ ಹೋಟಗಿ ಇವರು ಬಹಳೇ ಪ್ರಯತ್ನಪೂರ್ವಕ ಕಾರ್ಯವಹಿಸುತ್ತಿರುತ್ತಾರೆ ಈ ವಾಚನಾಲಯದ ಕಾರ್ಯವು ಇನ್ನೂ ಯಶಸ್ವಿಯಾಗಲೆಂದು ಆ ಜಗದ್ಗುರು ರೇವಣಸಿದ್ಧೇಶ್ವರನನ್ನು ಪ್ರಾರ್ಥಿಸುತ್ತೇನೆ

ಸೆಕ್ರೆಟರಿ
ವೀರಯ್ಯಸ್ವಾಮಿ ಬೀಬೆಂದೋಳಿ

ಕರವೀರಶೆಟ್ಟರ ರಾಚಪ್ಪನವರ ನಿಧನ

ಧಾರವಾಡ ಜಿ|| ಹುಬ್ಬಳ್ಳಿಯಲ್ಲಿ ಪ್ರಸಿದ್ಧ ವೀರಶೈವ ಮುಖಂಡರೂ ಅಸಾಧಾರಣ ಗುರುಭಕ್ತರೂ ಪರೋಪಕಾರಿಗಳೂ, ಶಮದಮಾದಿಗುಣಸಂಪನ್ನರೂ ಗುರುದೇವತೆಗಳಲ್ಲಿ ಪೂರ್ಣ ವಿಶ್ವಾಸವುಳ್ಳವರೂ ರಾಜಕಾರಣಪಟುಗಳೂ ಆದ ಮ|| ರಾ|| ಕರವೀರಶೆಟ್ಟರ ರಾಚಪ್ಪನವರು ಜ್ವರಬಾಧೆಯಿಂದ ಶಿವಾಧೀನರಾದರೆಂದು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಇವರ ಸಂತಾನಕ್ಕೆ ಆಸಂಖ್ಯಾತ ಜನರು ಕೊಡಿದ್ದರು ಅವರ ಮನೆಯ ಗುರುಗಳಾದ ಧಾರವಾಡದ ಲಿಂಗಣ್ಣದೇವರ ಮಠದ ವೇ|| ಶಿವಲಿಂಗಸ್ವಾಮಿಗಳವರಿಂದ ಅಂತ್ಯವಿಧಿಸಂಸ್ಕಾರವು ಮಾಡಲ್ಪಟ್ಟಿತು ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುವ

ಚನ್ನಬಸವಾರ್ಯ
ಗಂಜಿಗಟ್ಟಿ ಹಿರೇಮಠ

ಸ್ವೀಕಾರ

ಶಿವಮೊಗ್ಗಾ ಜಿ|| ಆಯನೂರಲ್ಲಿರುವ ಮ|| ರಾ|| ಧರ್ಮವರದ ಶಿವರುದ್ರಪ್ಪನವರ ಪುತ್ರ ಚಿ|| ತಿಪ್ಪಯ್ಯನ ಕಂಠಾವೃತ ವ್ರಣವು ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪಾಬಲದಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣೆಕೋಸ್ಕರ ಸಮರ್ಪಿಸಿದ 1 ರೂ ಯು ವೇ|| ಗುಬ್ಬಿ ಶಿವಕಥಾ ಪಂಡಿತ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ

ಹುಬ್ಬಳ್ಳಿ ಟವನ್ ನಿವಾಸಿಗಳಾದ ಮ|| ರಾ|| ಕರವೀರಶೆಟ್ಟರ ರಾಚಪ್ಪನವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ವೇ|| ಗಂಜಿಗಟ್ಟಿ ಹಿರೇಮಠದ ಚನ್ನಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ತಾಯಿಗೆ ಶಿಕ್ಷೆ!

ಪೋರ್ಟ್-ಸ್ಮಿತ್ ಎಂಬಲ್ಲಿ ಇಸಾಬೆಲಾ ರಾಬರ್ಟ್ ಎಂಬಾಕೆಯು ತನ್ನ ಮಗಳು ಏನೋ ತಪ್ಪುಮಾಡಿದುದಕ್ಕೆ ಸಲಾಕಿಯಿಂದ ಬರೆಹಾಕಿದಳು ಇದಕ್ಕಾಗಿ ನ್ಯಾಯಾಧೀಶರು ತಾಯಿಗೆ ಆರು ವಾರಗಳ ಕಠಿನ ಶಿಕ್ಷೆಯನ್ನು ವಿಧಿಸಿದರು

ಜಲಕಂಪ!

ಮಧುಬಾನಿ ಎಂಬಲ್ಲಿ ಭೂಕಂಪವಿಲ್ಲದೆ ಕೇವಲ ಜಲಕಂಪವು ಮಾತ್ರ ಉಂಟಾಗಿ ಸುತ್ತಮುತ್ತಲಿರುವ ಭಾವಿಗಳ ನೀರು ಅನೇಕ ಸಾರೆ ಉಕ್ಕಿತು ಈ ವಿಧವಾದ ವಿಚಿತ್ರದೃಶ್ಯವನ್ನು ಹಿಂದೆ ಎಂದೂ ಯಾರೂ ಕಂಡಿಲ್ಲವೆಂದು ತಿಳಿದುಬರುತ್ತದೆ

ಪತ್ರವ್ಯವಹಾರ.

ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅಭಿಪ್ರಾಯಗಳಿಗೂ ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ಆಯುರ್ವೇದಪರಿಚಯ.

ಆರೋಗ್ಯಮಾರ್ಗ

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರ... ಬೆಂಗಳೂರು

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ

ಶ್ರೀಕ್ಷೇತ್ರಕಾಶಿ

ಆಹಾರ ನಿಯಮಗಳು

ಮತ್ತೆ ಕಲವರು ಈ ಒಲಲಾಸಪದ್ಧತಿಯ [illegible] ಸರಿಸುವುದರಿಂದ ಶರೀರದಲ್ಲಿ [illegible] ಗಳನ್ನು ಹೊಂದದೆಯೂ ಇರಬಹುದು [illegible] ಒಸರು [illegible] ಕೊಂಡರೂ ಅಗ್ನಿಮಾಂದ್ಯ [illegible] ಬಲೆಯಿಂದ ತಪ್ಪಿಸಿಕೊಳ್ಳುವದಂತೂ [illegible] ಈ ಅಗ್ನಿಮಾಂದ್ಯ [illegible] ಲಕ್ಷ್ಯ [illegible] ರೋಗಗಳಿಗೆ [illegible] ದೂರ ಹೋಗಿ [illegible] ವದೆ ಇವುಗಳ ನಿಜಸ್ವರೂಪವ [illegible] ಅಗ್ನಿಮಾಂದ್ಯವು ಸಮಸ್ತರೋಗಗ [illegible] ಇದರಿಂದುಂಟಾಗುವ ರೋಗಗಳ [illegible] ಲಿಪಿಸಲು ಪ್ರಸ್ತುತವಾಗಿರ [illegible] ಒಂದೇ ಮಾತಿನಿಂದ [illegible] ಸಕಲ ರೋಗಗಳ [illegible] ಬಂದು [illegible] ಚರಕಸಂಹಿತೆಯ ಚಿಕಿತ್ಸಾ [illegible] ಯದಲ್ಲಿ—

ಅನ್ನಸ್ಯ ಪಕ್ತಾ ಸರ್ವೇಷಾಂ [illegible] ಮುಕ್ತಃ

[illegible] ತದ್ವೃದ್ಧಿಕ್ಷಯವೃದ್ಧಿಕ್ಷಯಾ [illegible] ||

ತಸ್ಮಾತ್ತಂ ವಿಧಿವದ್ಯುಕ್ತೈರನ್ನಪಾನೇಂಧನೈಃ [illegible] ||

ಪಾಲಯೇತ್ಪ್ರಯತಸ್ತಸ್ಯ ಸ್ಥಿತೌಹ್ಯಾಯುರ್ಬಲ [illegible] |

ಎಂಬ ಶ್ಲೋಕಗಳಿಂದ ಶರೀರದಲ್ಲಿರುವ ಸಕಲ [illegible] ವಾದ ಅಗ್ನಿಗಳಲ್ಲಿ ಅನ್ನವನ್ನು [illegible] ಜಠರಾಗ್ನಿಯೇ ಶ್ರೇಷ್ಠವಾದುದು ಇದರ ವೃದ್ಧಿಕ್ಷಯ ಗಳನ್ನೇ ಅವಲಂಬಿಸಿ ಇತರ [illegible] ಗಳು ತಮ್ಮ ವೃದ್ಧಿಕ್ಷಯಗಳನ್ನು ಹೊಂದುವುವು [illegible] ಮಂದವಾದರಾಯಿತು ಉಳಿದ ಅಗ್ನಿಗಳೆಲ್ಲ [illegible] ಶರೀರವನ್ನೂ [illegible] ಗೊತ್ತೆ ಬಿಡುತ್ತವೆ ಅದುಕಾರಣವೇ ಶಾಸ್ತ್ರ ಹಿತಗಳಾದ ಅನ್ನಪಾನಗಳೆಂಬ ಇಂಧನ (ಕಟ್ಟಿಗೆ) ಗಳಿಂದ [illegible] ರಕ್ಷಿಸಿಕೊಳ್ಳುವದರಲ್ಲಿ [illegible] ಜಾಗ್ರತನಾಗಿರಬೇಕು ಏಕಂದರೆ—ಆಯುಸ್ಸು [illegible] ಬಲಗಳು ಈ ಅಗ್ನಿಯನ್ನೇ [illegible] ಪ್ರತಿಪಾದಿಸಲ್ಪಟ್ಟಿದೆ [illegible] ಕೃಶತೆಯೆಂಬ [illegible] ದಿಂದ ಪಾರಾಗುವದರೊಳಗಾಗಿ ಅಗ್ನಿಮಾಂದ್ಯ ವೆಂಬ ಬ್ರಹ್ಮರಾಕ್ಷಸವು [illegible] ದುರಿಗೆ ಬಂದು [illegible]

ಇನ್ನು ಕಫದ ವೃದ್ಧಿಯಿಂದ ಸ್ಥೌಲ್ಯವೆಂಬ ಒಂದು ರೋಗವು ಒಂದುವೇಳೆ [illegible] ಕಾಲಾಂತರದಿಂದ ದೂರವಾದರೂ [illegible] ಇತರ [illegible] ರೋಗಗಳು [illegible] ವು ಕಫದ ವೃದ್ಧಿಯಿಂದುಂಟಾಗುವ ರೋಗಗ [illegible] ಲೆಕ್ಕವಿಲ್ಲದಷ್ಟಿವೆ ಆದರೆ ಅವುಗಳೆಲ್ಲ ಪ್ರಧಾನ [illegible] ಗಿರುವ ಇಪ್ಪತ್ತು ರೋಗಗ [illegible] ಹೆಸರುಗಳು ಮಾತ್ರ ಚರಕಸಂಹಿತೆಯ ಮಹಾರೋಗಾಧ್ಯಾಯದಲ್ಲಿ [illegible] ತಿಸಲ್ಪಟ್ಟಿವೆ

[illegible]

ರಸದ ಆಹಾರದ ವಿಶೇಷ ಸೇವನೆಯಿಂದ [illegible] ಗಂಟಲು ತುಟಿಗಳು ಒಣಗುತ್ತವೆ ಮತ್ತು [illegible] ಗಳುಂಟಾಗುವುವಲ್ಲದೆ ಶರೀರದಲ್ಲಿ [illegible] ಕಾಂತಿಯೂ ಕ್ಷೀಣವಾಗುತ್ತವೆ ಇದ [illegible] ಒಗರು [illegible] ರಸಗಳನ್ನು [illegible] ಸೇವಿಸುವ [illegible] ಸವಿಂದಲೂ ಅನೇಕ ರೋಗಗಳುಂಟಾಗುತ್ತವೆ ಆದದರಿಂದ ಯಾವ ರಸದ ಆಹಾರವನ್ನೂ ವಿಶೇಷವಾಗಿ ಸೇವಿಸುವ ಅಭ್ಯಾಸವನ್ನಿಡದೆ ಮಿತವಾಗಿ [illegible] ಸೇವಿಸುವದು ಹಿತಕರವಾದುದು

[illegible] ಮೊದಲು ಹಸಿಯ ಶುಂಠಿಯನ್ನು [illegible] ಲವಣದೊಡನೆ ಸೇವಿಸುವ ಅಭ್ಯಾಸದಿಂದ [illegible] ಗೆ ಮತ್ತು ಕಂಠಗಳು ಶುದ್ಧಿಯಾಗಿ ಊಟದಲ್ಲಿ [illegible] ರುಚಿಯುಂಟಾಗುವುದು ಮತ್ತು ಆಹಾರ ಪದಾರ್ಥಗಳು ಆಯಾಸವಿಲ್ಲದೆ ಜೀರ್ಣವಾಗುವುವು ಈ ಪದ್ಧತಿಯ [illegible] ಹಿತಕರವಾದುದಾ [illegible] ಸ್ಯಂದವ ಲವಣಗಳ ಅಭ್ಯಾಸದಿಂದ ಯಾರಿಗೂ ಯಾವ ಹಾನಿಯೂ ಉಂಟಾಗಲಾರದು

[illegible] ಮೊದಲು [illegible] ಪಲ್ಯಗಳ [illegible] ನಂತರ [illegible] ಕಡೆಯಲ್ಲಿ [illegible] ಗಲಿ ಮಜ್ಜಿಗೆಯನ್ನಾಗಲಿ ಕುಡಿಯಬೇಕು

[illegible] ದ ಕೂಡಲೆ [illegible] ಗದಿಂದೋಡುವು [illegible] ಇವುಗಳನ್ನು ಅವಶ್ಯವಾಗಿ [illegible] ನಂತರ ಯಾವನು [illegible] ಮೃತ್ಯುವೂ [illegible]

[illegible] ಬಂದೇ ಸ್ಥಳದಲ್ಲಿ [illegible] ಮಲಮೂತ್ರಗ [illegible] ರಾತ್ರಿಯಲ್ಲಿ ಜಾಗರಣೆ [illegible] ಸಮಯಕ್ಕೆ ಸರಿಯಾಗಿ ಮಿತ [illegible] ಆಹಾರವೂ ಜೀರ್ಣವಾಗ [illegible]

[illegible] ಆಯಾಸವುಂಟಾಗುವಂತಹ [illegible] ಬಿಸಿಲು [illegible] ಬೆಂಕಿ [illegible] ಸಿದ್ಧಕರ್ಮಗಳಾ [illegible] ಸಂಚರಿಸುವುದರಿಂದ [illegible] ಮೊದಲಾದ [illegible] ಸೆಯುತ್ತವೆ ಊಟವಾದ [illegible] ಆಹಾರವ [illegible] ಪರ್ಯಂತ [illegible] ಶಾರೀರಕ ಪರಿಶ್ರಮಗಳನ್ನು ಮಾಡ [illegible] ರದು

[illegible] ದ ನಂತರ [illegible] ಕಾಯಿಸುವುದು [illegible] ಮಲಗುವುದು [illegible] ವಾಹನಗ [illegible] ಸುವುದು, ವ್ಯಾಯಾ [illegible] ಮಾಡುವುದು ಗಟ್ಟಿಯಾಗಿ [illegible] ಓದುವುದು [illegible], ಬಹಳ [illegible] ದ್ರವಪದಾರ್ಥಗಳನ್ನು ವಿಶೇಷವಾಗಿ ಕುಡಿಯುವುದು [illegible] ಪ್ರಸಂಗ ಮೊದಲಾದ ಕಾರ್ಯಗಳು [illegible] ಶಾಸ್ತ್ರದಿಂದ ಅತಿಶಯವಾಗಿ [illegible] ಸಲ್ಪಟ್ಟಿರತ್ತವೆ

[illegible] ದನಂತರ ಸಿಪೆಸಿನಿಂದ [illegible] ಹಲ್ಲುಗಳನ್ನು ಸ್ವಚ್ಛಗೊಳಿಸುವುದ [illegible] ಹಲ್ಲುಗಳ ಸಂದುಗಳಲ್ಲಿ [illegible] ಆಹಾರವನ್ನು [illegible] ದಿದ್ದರೆ ಅದ [illegible] ದುರ್ಗಂಧವುಂಟಾಗು [illegible] ರುವ ಆಹಾರದ ಕಣವು ಹೊಟ್ಟೆ [illegible] ಪಚನಕ್ರಿಯೆಗೆ [illegible] ವಿಧವಾದ ಉದರರೋಗಗಳ [illegible] ಕಾರಣ [illegible] ಗುತ್ತದೆ ಆದದರಿಂದ [illegible] ಮತ್ತು ಹಲ್ಲುಗಳ ಸ್ವಚ್ಛತೆಯಲ್ಲಿ [illegible] ಹೊಂದುವುದುಚಿತವಲ್ಲ

[illegible] ವೈದ್ಯಶಾಸ್ತ್ರವು ಆರೋಗ್ಯವಂತನಾದ [illegible] ದಿನಕ್ಕೆರಡು ಊಟಗಳನ್ನೇ ವಿಧಿಸುತ್ತದೆ [illegible] ಕಾಲದ [illegible] ಗಂಟೆ [illegible] ರೋಗೂ [illegible] ಊಟವು ರಾತ್ರಿ [illegible] ಗಂಟೆಯೊಳಗೂ ಆಗಬೇಕು ಶಾರೀರಕ

ಮತ್ತು ಮಾನಸಿಕ ಪರಿಶ್ರಮಗಳನ್ನು ವಿಶೇಷವಾಗಿ ಮಾಡತಕ್ಕವರು ಮಾತ್ರ ಪ್ರಾತಃಕಾಲದಲ್ಲಿ ಹುಲ್ಲಾದ ಹಗುರವಾದ ಅಲ್ಪಾಹಾರವನ್ನು ಸೇವಿಸಬಹುದು. ರಾತ್ರಿಯಲ್ಲಿ ಸಮಯವನ್ನು ನೋಡಿ ಊಟ ಮಾಡದು ಮತ್ತು ಗುರುವಾದ ಆಹಾರವನ್ನು (ಗೋಧಿಯ ಹಿಟ್ಟು ಸಕ್ಕರೆ ಮುಂತಾದುವುಗಳಿಂದ ಮಾಡಿದ ಕರಿದ ಪದಾರ್ಥಗಳನ್ನು) ಸೇವಿಸಬಾರದು. ರಾತ್ರಿಯ ಭೋಜನವು ಯಾವಾಗಲೂ ಹಗುರವಾದದ್ದೇ ಆಗಬೇಕು. ಏಕೆಂದರೆ ರಾತ್ರಿಯು ವಿಶ್ರಾಂತಿಕಾಲವಾಗಿರುತ್ತದೆ. ಆ ಸಮಯವು ದಿನದಲ್ಲಿ ದುಡಿದಿರುವ ಸಕಲೇಂದ್ರಿಯಗಳಿಗೆ ವಿಶ್ರಾಂತಿಯನ್ನೀಯುವುದಾಗಿದೆ. ನಿದ್ರೆಯ ಕಾಲದಲ್ಲಿ ಹೃದಯಕಮಲವು ಮುಚ್ಚಿಕೊಂಡಿರುವುದು. ರಸ ಮತ್ತು ರಕ್ತವನ್ನು ವಹಿಸುವ ನಾಡಿಗಳು ಮಂದಗತಿಯಿಂದ ಕೂಡಿರುವುವು. ಜಠರಾಗ್ನಿಯು ಕ್ಷೀಣಬಲವುಳ್ಳದಾಗಿರುವುದು. ಹೀಗಿರುವಾಗ ರಾತ್ರಿಯ ಅಕಾಲಭೋಜನವೂ ಗುರುಭೋಜನವೂ ಬೇಗನೆ ಜೀರ್ಣವಾಗಬಲ್ಲುದೆ? ಹಗಲಿನ ಆಹಾರವು ರಾತ್ರಿಯಲ್ಲಿ ಸಂಪೂರ್ಣವಾಗಿ ಜೀರ್ಣವಾಗದಿದ್ದರೂ ರಾತ್ರಿಯಲ್ಲಿ ಆಹಾರವನ್ನು ಸೇವಿಸುವುದು ಹಾನಿಕರವಲ್ಲ. ಆದರೆ ರಾತ್ರಿಯಲ್ಲಿ ಸೇವಿಸಲ್ಪಟ್ಟ ಆಹಾರವು ದಿನದಲ್ಲಿ ಸಂಪೂರ್ಣವಾಗಿ ಜೀರ್ಣವಾಗದಿದ್ದರೆ ಮಾತ್ರ ದಿನದಲ್ಲಿ ಆಹಾರವನ್ನು ಸೇವಿಸುವುದು ಬಹಳ ಕೆಡಕನ್ನುಂಟು ಮಾಡುವುದಾಗುತ್ತದೆ. ಅಂತಹ ಸಮಯದಲ್ಲಿಯೂ ಊಟವನ್ನು ಬಿಡಲಾರದವರು ತಮ್ಮ ಆಹಾರಪ್ರಮಾಣದ ಅರ್ಧಭಾಗವನ್ನು ಮಾತ್ರ ಸೇವಿಸಬಹುದು. ಅದಾದರೂ ಬಹಳ ಬೇಗನೆ ಪಚನವಾಗುವಂತಹ ಹಗುರವಾದ ಆಹಾರವಸ್ತುವಾಗಿರಬೇಕಾಗುತ್ತದೆ.

೨೩. ಆರೋಗ್ಯಾಭಿಲಾಷಿಯಾದ ಮನುಷ್ಯನು ಭೋಜನ ಸಮಯದಲ್ಲಿ ಮುಂದಿರುವ ಅನ್ನವನ್ನು ಪ್ರಾಣಾಧಾರವಾಗಿರುವುದೆಂಬುದಾಗಿ ತಿಳಿದು ಶೋಕ ಭಯ ಕಲಹ ಮುಂತಾದುವುಗಳ ಕಡೆಗೆ ಮನಸ್ಸನ್ನು ಕಳುಹದೆ ಏಕಾಗ್ರಚಿತ್ತನಾಗಿ ಭುಂಜಿಸಬೇಕು. ಚಿಂತೆ ಶೋಕಾದಿಗಳಿಂದ ಮನಸ್ಸು ಕಲುಷಿತವಾದುದರಿಂದ ಉಂಡ ಅನ್ನವು ಸರಿಯಾಗಿ ಪಚನವಾಗುವದಿಲ್ಲವಾದುದರಿಂದ ಅಜೀರ್ಣಾದಿ ರೋಗಗಳು ತಲೆದೋರುವುವು. ಆದುದರಿಂದ ಪ್ರಸನ್ನಚಿತ್ತನಾಗಿಯೇ ಭೋಜನವನ್ನು ಮಾಡುವುದು ಆರೋಗ್ಯವರ್ಧಕವಾಗಿರುವುದಾಗಿದೆ.

೨೪. ಭೋಜನಾನಂತರ ಮಧ್ಯಾಹ್ನದಲ್ಲಿ [illegible] ಕಾಲದ ಹೊರತು ಇತರ ಕಾಲಗಳಲ್ಲಿ ನಿದ್ರಿಸಿದರೆ ಕಫವು ವೃದ್ಧಿಯಾಗಿ ಜಠರಾಗ್ನಿಯನ್ನು ಕ್ಷೀಣಗೊಳಿಸುವುದಾಗಿರುವುದರಿಂದ ಆಹಾರಾನಂತರ ವಿಶ್ರಾಂತಿಗಾಗಿ ಸ್ವಲ್ಪಹೊತ್ತು ನಿದ್ರಿಸದೆ ಸುಮ್ಮನೆ ಮಲಗಿರುವುದುಚಿತವಾಗಿದೆ.

೨೫. ಊಟವಾದಮೇಲೆ ೧೦೦ ಹೆಜ್ಜೆಗಳು ಮೆಲ್ಲಗೆ ನಡೆದಾಡುವುದರಿಂದ ಆಹಾರವು ಸರಿಯಾಗಿ ಪಚನವಾಗಲು ಸಹಾಯವಾಗುತ್ತದೆ. ಮತ್ತು ಕುತ್ತಿಗೆ ಮೊಣಕಾಲು ಸೊಂಟಗಳಿಗೆ ಬಲಬರುವುದು.

೨೬. ಭೋಜನವಾದ ಮೇಲೆ ೧೬ [illegible] ಮಾಡಿದ ನಂತರ ಎಡ ಮಗ್ಗುಲಾಗಿ ಮಲಗ[illegible]. ಸುಶ್ರುತಮುನಿಯು ಹೇಳಿರುವ [illegible] ಊಟವಾದ ನಂತರ [illegible] ತಿರುಗಾಡಿದ ಮೇಲೆ [illegible] ಹಾಗೆ [illegible] ಮಲಗಿ [illegible] ಸಲ ಉಸಿರಾಡಿ [illegible] ಸಲ ಉಸಿರಾಡಿದ ಬಳಿಕ ಎಡ ಮಗ್ಗುಲಾಗಿ [illegible] ಸಲ ಉಸಿರಾಡಿದ ನಂತರ ಇಷ್ಟಬಂದಂತೆ [illegible]ರವಾಗಿ ಮಲಗಿರುವುದೆಂದು ಹೇಳಿರು[illegible] ದೇಹದ ಎಡಗಡೆ [illegible] ಜಠರಾಗ್ನಿಯು ಹೆಚ್ಚಾಗಿರುವುದರಿಂದ ಉಂಡ ಅನ್ನವು ಸರಿಯಾಗಿ ಪಚನವಾಗಲೆಂದೇ ಎಡಮಗ್ಗುಲಾಗಿ ಮಲಗಬೇಕೆಂದು ವೈದ್ಯಶಾಸ್ತ್ರವು ತಿಳಿಸುತ್ತದೆ.

೨೭. ನಾವುಗಳು ನಿತ್ಯದಲ್ಲಿ ಉಪ್ಪು ಹುಳಿ ಕಾರ ಮಸಾಲೆ ಮುಂತಾದ ದಾಹಕಾರಕ ವಸ್ತುಗಳಿಂದೊಡಗೂಡಿದ ಭೋಜನವನ್ನು ಮಾಡುವುದು ಸರಿಯಷ್ಟೆ. ಇಂತಹ ಭೋಜನದಿಂದ ಪಿತ್ತವು ಕುಪಿತವಾಗುತ್ತದೆ. ಈ ಪಿತ್ತದ ಶಾಂತಿಗಾಗಿಯೇ ಭೋಜನದ ಕಡೆಯಲ್ಲಿ ಹಾಲನ್ನು ಕುಡಿಯುವುದಕ್ಕವಶ್ಯಕವಾಗಿರುವುದೆಂದು ವೈದ್ಯಶಾಸ್ತ್ರದ ತಿಳಿಸುತ್ತದೆ. ಅಥವಾ ಹಾಲಿಲ್ಲದ ವೇಳೆಯಲ್ಲಿ ಉಪ್ಪು ಬೆರೆಸಿದ ಮಜ್ಜಿಗೆಯನ್ನು ಸೇರಿಸಿ ಕುಡಿಯಬಹುದು.

೨೮. ಹೆಸರುಬೇಳೆ ಮುಂತಾದ ಪದಾರ್ಥಗಳು ಸ್ವಭಾವದಿಂದಲೇ ಹಗುರಾದುವುಗಳಾಗಿದ್ದರೂ ಪ್ರಮಾಣವನ್ನು ಮೀರಿ ಸೇವಿಸುವುದರಿಂದ ಅವೇ ಗುರುವಾಗುವುವು (ಬೇಗ ಪಚನವಾಗದಿರತಕ್ಕವು). ಉದ್ದು ಮುಂತಾದ ವಸ್ತುಗಳು ಸ್ವಭಾವದಿಂದಲೇ ಗುರುವಾಗಿರುವುವು. ಗೋಧಿಯ ಹಿಟ್ಟು ಅಕ್ಕಿಯ ಹಿಟ್ಟು ಮೊದಲಾದುವುಗಳಿಂದ ಸಿದ್ಧಗೊಳಿಸಿದ ಆಹಾರ ಪದಾರ್ಥಗಳು ಸಂಸ್ಕಾರದಿಂದ ಗುರುವಾಗಿರುತ್ತವೆ. ಯಾರ ಜಠರಾಗ್ನಿಯು ಮಂದವಾಗಿರುವುದೋ ಅವರು ಇಂತಹ ಪ್ರಮಾಣದಿಂದ ಗುರುವಾದ, ಸ್ವಭಾವದಿಂದ ಗುರುವಾದ, ಸಂಸ್ಕಾರದಿಂದ ಗುರುವಾದ ಪದಾರ್ಥಗಳನ್ನು ಸೇವಿಸಬಾರದು.

೨೯. ಸಂಯೋಗವಿರುದ್ಧ ಪದಾರ್ಥಗಳು — ಉದ್ದು ಅವರೆ ಕಾಳು ಹೆಸರು ಹಾಗಲಕಾಯಿ ಸಾಸಿವೆ ಹುರುಳಿ ಎಳ್ಳು, ಸಕಲವಿಧ ಪಲ್ಯಗಳು, ಉಪ್ಪು ಹುರಿದಹಿಟ್ಟು ಬೆಲ್ಲ ಮೊಸರು, ಇವುಗಳನ್ನು 'ಹಾಲಿನೊಡನೆ' ಸೇವಿಸಬಾರದು. ಬಾಳೆಹಣ್ಣು (ಬೀಜವಿಲ್ಲದ ರಸಬಾಳೆಯ ಹಣ್ಣನ್ನು ಬಿಟ್ಟು) ನೇರಳೆ ಹಣ್ಣು, ಜೋಳೆ (ಎಲಚಿ) ಹಣ್ಣು, ಬೆಳವಲ ಹಣ್ಣು, ಹಲಸಿನ ಹಣ್ಣು, ಕಮ್ಮರಕ ಹಣ್ಣು, ನಾರಿನಿಂದ ಕೂಡಿರುವ ಹುಳಿಮಾವು, ನೆಲ್ಲಿಕಾಯಿ, ಅಮಟೆಕಾಯಿ, ತೆಂಗಿನಕಾಯಿ, ದಾಳಿಂಬೆ ಹಣ್ಣು, ಮಾದಲದ ಹಣ್ಣು ಮೊದಲಾದವುಗಳೂ ಮತ್ತು ಇದೇ ತೆರನ ಹುಳಿರಸದ ಹಣ್ಣುಗಳೂ ಬೇಗ ಜೀರ್ಣವಾಗದ ಆದವಾ ಹುಳಿ ಸಕಲವಿಧ ಹುಳಿಗಳೂ ಮತ್ತು ಹುಳಿರಸದಿಂದ ಕೂಡಿದ ಪದಾರ್ಥಗಳೂ ಹಾಲಿನೊಡನೆ ಸೇರುವುದರಿಂದ ವಿಷತುಲ್ಯ ಸಮಾನವಾಗುವುವು. ಇವುಗಳಿಗೆ ಹೊಂದಿಕೆಯಾಗದ ಕಾರಣ ಹಾಲನ್ನು ಕುಡಿಯಬಾರದು.

[illegible] (ಮೊದಲಿನ ದಿವಸದ ಮೊಸರನ್ನು ಬಿಟ್ಟು) ಬೆಣ್ಣೆ, ಮಜ್ಜಿಗೆ ಅಥವಾ ಇದರ ತುಪ್ಪ ಕರಿದ ತರಕಾರಿಯ ತುಂಡು ಮೊದಲಾದುವುಗಳನ್ನು ತಿಂದು ಹಾಲನ್ನು ಕುಡಿಯುವುದರಿಂದ ಕುಷ್ಠರೋಗವುಂಟಾಗುತ್ತದೆ.

ಗುಲಗಂಜಿ ಹಣ್ಣನ್ನು ಜೇನು ತುಪ್ಪ ಹಾಲು ಮುದ್ದೆ ಮೊದಲಾದ ತುಪ್ಪಗಳೊಡನೆ ತಿನ್ನುವುದರಿಂದ ಬಲ ವರ್ಣ ತೇಜಸ್ಸು ವೀರ್ಯಗಳು ಕ್ಷೀಣವಾಗಿ ಅಸಾಧ್ಯ ರೋಗಗಳುಂಟಾಗುತ್ತವೆ. 'ಫಲಾನಾಂ ವಹೇ ಲಕುಚಮಹಿತಂ' ಎಂದು ಚರಕ ಸಂಹಿತೆಯ ಗಜಾಂಬಿಹಣ್ಣನ್ನು ಸಕಲವಿಧ ಹಣ್ಣುಗಳಲ್ಲಿ ಕನಿಷ್ಠವಾದದೆಂದ ಬೋಧಿಸುತ್ತದೆ.

ಕಾಕಮಾಚಿ ಸೊಪ್ಪನ್ನು (ಗಣಿಕೆಸೊಪ್ಪು) ಬೇಯಿಸಿದ ಪಿಪ್ಪಲಿ ಮೆಣಸು ಬೆಲ್ಲದೊಡನೆ ಅಥವಾ ಜೇನುತುಪ್ಪದೊಡನೆ ತಂಗಳಾಗಿರುವ ಗಣಿಕೆಸೊಪ್ಪಿನ ಪಲ್ಯವು ಮರಣವನ್ನುಂಟುಮಾಡುವುದಾಗಿದೆ. ಎಳ್ಳಿನ ಪುಡಿಯನ್ನು ಹಾಕಿ ಮಾಡಿರುವ ಬಸಳೆಸೊಪ್ಪಿನ ಪಲ್ಯದ ಸೇವನೆಯಿಂದ ಅತಿಸಾರ ರೋಗವುಂಟಾಗುತ್ತದೆ.

ಜೇನುತುಪ್ಪದೊಡನೆ ಬಾಳೆಹಣ್ಣು ಜೇನು ಕಲ್ಲುಸಕ್ಕರೆ ತಾಳೆಹಣ್ಣು ಹಾಲು ಮೂಲಂಗಿ ಇವುಗಳನ್ನು ಸೇವಿಸಬಾರದು ಮತ್ತು ಇವುಗಳನ್ನೇ ಲೆಕ್ಕಿಸದೆ ಸೇವಿಸಿದರೆ ೧೦ ಮಾಸದೊಳಗೆ ಇವುಗಳ ಸೇವನೆಯಿಂದ ವಿರುದ್ಧವಾಗಿರುತ್ತದೆ.

ಮ[illegible] ಜೇನು ತುಪ್ಪ ಬಾಳೆಹಣ್ಣು ಹಾಲು ಮೊಸರು ಮುಂತಾದುವುಗಳು ವಿರುದ್ಧವಾಗಿವೆ.

[illegible] ತುಪ್ಪದೊಡನೆ ಅವರೆ ಹಲಸಿನ ಹಣ್ಣು ಮೊಲಂಗಿ ಬಿಸಿನೀರು ಯಾವುದಾದರೂ [illegible] ಮದ್ಯ ಇವುಗಳು ವಿರುದ್ಧಗಳಾಗಿ[illegible].

೩೦. ಕರ್ಮವಿರುದ್ಧ ಪದಾರ್ಥಗಳು — ಕಂಚಿನ ಪಾತ್ರೆಯಲ್ಲಿ ೧೦ ದಿನಗಳ ವರೆಗಿಟ್ಟಿದ್ದ ತುಪ್ಪವು ವಿಷತುಲ್ಯವಾಗುವುದು. ಜೇನುತುಪ್ಪವನ್ನು ಕಾಯಿಸಿಯಾಗಲಿ ಬೇಸಗೆಯಕಾಲದಲ್ಲಾಗಲಿ (ಗ್ರೀಷ್ಮ ಶರದೃತುಗಳಲ್ಲಿ) ಸೇವಿಸಬಾರದು. ಒಂದು ಸಲ ಬೇಯಿಸಿದ ಯಾವ ಪದಾರ್ಥವಾಗಲಿ ಆರಿದಮೇಲೆ ಪುನಃ ಅದನ್ನು ಬಿಸಿಮಾಡಿ ಸೇವಿಸುವುದತ್ಯಂತ ವಿರುದ್ಧವಾಗಿದೆ.

೩೧. ಮಾನವಿರುದ್ಧ ಪದಾರ್ಥಗಳು — ಜೇನುತುಪ್ಪ ನೀರುಗಳನ್ನೂ ಜೇನುತುಪ್ಪ ಮತ್ತು ತುಪ್ಪವನ್ನೂ ಸಮಭಾಗದಿಂದ ಕೂಡಿಸಿ ಸೇವಿಸಬಾರದು. ತುಪ್ಪ ಎಣ್ಣೆ ಮುಂತಾದ ಯಾವ ಸ್ನೇಹವಸ್ತುಗಳನ್ನೂ ನೀರು ಮತ್ತು ತುಪ್ಪ ಎಣ್ಣೆ ಮುಂತಾದ ಸ್ನೇಹದ್ರವ್ಯಗಳನ್ನೂ ಎರಡು ಅಥವಾ ಮೂರು ಒಟ್ಟಿಗೆ ಸಮವಾಗಿ ಕೂಡಿಸಿ ಸೇವಿಸಬಾರದು.

ಮೇಲೆ ಉದಾಹರಿಸಿರುವ ವಿರುದ್ಧಪದಾರ್ಥಗಳ ಸೇವನೆಯಿಂದ ಷಂಡತನ ಕುರುಡತನ, ಜಲೋದರ (ಹೊಟ್ಟೆಯಲ್ಲಿ ನೀರು ತುಂಬಿಕೊಳ್ಳುವುದು) ಉನ್ಮಾದ (ಹುಚ್ಚು) ಮೂರ್ಛೆ ಕುತ್ತಿಗೆಯು ಹಿಡಿದುಕೊಳ್ಳುವುದು ಕಷ್ಟ ಭಗಂದರ ಕಾಮಾಲೆ, ನಾನಾವಿಧ ಕುರಗಳು, ಸಂಗ್ರಹಣಿ, ಬಾವು ಅಮ್ಲಪಿತ್ತ ಜ್ವರ ಪೀನಸ, ಗುಲ್ಮ ರಾಜಯಕ್ಷ್ಮ ಮೂಲವ್ಯಾಧಿ ಸ್ತ್ರೀಯರ ಬಂಜೆತನ ಮತ್ತು ರಜೋವಿಕಾರ, ಗರ್ಭಪಾತ ಮುಂತಾದುವು ಪ್ರಮೇಹ ವಾತರೋಗ (ಈ ರೋಗವು ೮೦ ವಿಧವಾಗಿದೆ) ಇವೇ ಮೊದಲಾದ ಅಸಾಧ್ಯ ರೋಗಗಳು ಸಂಭವಿಸಿ ವಿರುದ್ಧಾಹಾರಸೇವಿಯಾದ ಮಾನವನ ಇಹಲೋಕಯಾತ್ರೆಯನ್ನು ಅತಿ ಶೀಘ್ರವಾಗಿಯೇ ಪೂರ್ಣಗೊಳಿಸುತ್ತವೆಂದು ಚರಕಮಹರ್ಷಿಯು ಹೇಳಿರುತ್ತಾನೆ.

ಈ ವಿರುದ್ಧವಸ್ತುಗಳ ಸೇವನೆಯಿಂದ ಕೆಲವು ಸಂದರ್ಭಗಳಲ್ಲಿ ತರುಣರಿಗೂ ನಿತ್ಯವ್ಯಾಯಾಮಶೀಲರಿಗೂ, ತೀಕ್ಷ್ಣವಾದ ಜಠರಾಗ್ನಿಯುಳ್ಳವರಿಗೂ ಯಾವಾಗಲೂ ಇಂತಹ ವಿರುದ್ಧವಸ್ತುಗಳನ್ನೇ ಸೇವಿಸುವ ಚಟವುಳ್ಳವರಿಗೂ ನಿತ್ಯದಲ್ಲಿ ಸ್ನಿಗ್ಧಪದಾರ್ಥಗಳನ್ನು (ಹಾಲು ತುಪ್ಪ ಬಾದಾಮಿ ಅಕ್ರೋಟು ಮುಂತಾದವು) ಸೇವಿಸತಕ್ಕವರಿಗೂ ಆಗಿಂದಾಗಲೇ ಯಾವ ದುರ್ಗುಣವೂ ತೋರದಿರಬಹುದು. ಆದರೆ ಶರೀರದಲ್ಲಿ ವಾರ್ಧಕ್ಯದ ಪೂರ್ವರೂಪವು ತಲೆದೋರಿ ಬಲವು ಕುಂದಿದಾಗ ಬಹು ದಿನಗಳಿಂದಲೂ ಸಮಯನಿರೀಕ್ಷಣೆಯನ್ನು ಮಾಡುತ್ತಲಿದ್ದ ವಿರುದ್ಧಾನ್ನಸೇವನಜನ್ಯವಾದ ದೋಷವು ತನ್ನ ಅನುಕೂಲ ಸಮಯವನ್ನು ಹೊಂದಿ ಆ ದುರ್ಬಲಶರೀರವನ್ನು ನಾನಾಬಾಧೆಗಾಗಿ ಪೀಡಿಸುತ್ತ ಇಹಲೋಕದಲ್ಲಿಯೇ ಅದರಲ್ಲಿಯೂ ಶರೀರದಲ್ಲಿ ಪ್ರಾಣವಾಯುವಿನ ಸಂಚಾರವಿರುವಾಗಲೇ ಯಮಯಾತನೆಯ ಅನುಭವವನ್ನುಂಟುಮಾಡಿ ಕಡೆಗೆ ಯಮಪುರಿಯ ಮಾರ್ಗವನ್ನು ತೋರಿಸಲು ಕಾರಣವಾಗಿ ಪರಿಣಮಿಸುತ್ತದೆ. ಆದುದರಿಂದ ಜಗತ್ತಿನಲ್ಲಿ ಕೆಲವು ದಿನಗಳು ಸುಖದಿಂದ ಬಾಳಬೇಕೆಂಬ ಅಭಿಲಾಷೆಯುಳ್ಳವರು ಮೇಲೆ ಬರೆದಿರುವ ವಿರುದ್ಧವಸ್ತುಗಳ ಸೇವನೆಯನ್ನು ವಿಷಸೇವನೆಯಂತೆ ಪರಿತ್ಯಾಗಮಾಡುವುದುಚಿತವಾಗಿರುತ್ತದೆ.

ಇಲ್ಲಿಯವರೆಗೆ ಸಂಕ್ಷೇಪವಾಗಿ ಉದಾಹರಿಸಿರುವ ವೈದ್ಯಶಾಸ್ತ್ರನಿಯಮಗಳನ್ನನುಸರಿಸಿ ನಿತ್ಯದಲ್ಲಿ ಆಹಾರಗಳನ್ನು ಸೇವಿಸಿ ಸ್ಥಿರವಪುವಾದರೆ ಪ್ರಾಜ್ಞರಾದ ವಾಚಕರು ಆರೋಗ್ಯವೆಂಬ ದಿವ್ಯರತ್ನವನ್ನು ಹೊಂದಿ ಒದಗುವ ಅಪ್ರಕಾಶದಲ್ಲಿ ತಮ್ಮ ತಮ್ಮ ಉನ್ನತಿಯ ಮಾರ್ಗಗಳನ್ನು ಹುಡುಕಿಕೊಳ್ಳಲು ಸಮರ್ಥರಾಗಲು ಯಾವ ಸಂಶಯವೂ ಇಲ್ಲ.

(ಮುಂದೆ ಬರುವುದು)

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸಾದಂ

ಶ್ರೀ ಪಂಚಾಚಾರ್ಯ ಲೈಬ್ರರಿ ಸ್ಥಾಪನೆ,

ಹೊಸೂರು.

ಇದೇ ಭಾವನಾಮ ಸಂವತ್ಸರ ಮಾರ್ಗಶಿರ ಶುದ್ಧ ಸಪ್ತಮಿ (1 1' 34)ನೆಯ ಬುಧವಾರ ಬೆಳಗ್ಗೆ ೧೦|| ಘಂಟೆಗೆ ನೂತನವಾಗಿ ಕಟ್ಟಿರುವ 'ಪಂಚಾಚಾರ್ಯ ಹಾಲ್' ಪ್ರಾರಂಭೋತ್ಸವವು ನೆರವೇರಿತು. (ತಾ|| 13 1' 34) ಗುರುವಾರ ಸಾಯಂಕಾಲ ೫

(೬ನೆಯ ಕಲವನ್ನು ನೋಡಿ)

ಪಂಚಾಚಾರ್ಯ ಪ್ರಭಾ.

೧೯೩೫ ನೇ ಜನವರಿ ತಾ|| ೭ ನೇ ಸೋಮವಾರ

ಗುಬ್ಬಿ ಕಂಪನಿಯ ಸುವರ್ಣೋತ್ಸವ.

ಗುಬ್ಬಿ ನಾಟಕಕಂಪನಿಯು [illegible] ಇಂದಿಗೆ ೫೦ ವರ್ಷಗಳು ಸಮಾಪ್ತಿಯಾದ ದರ ಸ್ಮಾರಕವಾಗಿ ಕಳೆದ ಸೋಮವಾರದ ಸಾಯಂಕಾಲ ೬ ಘಂಟೆಯ ಸಮಯದಲ್ಲಿ ಬೆಂಗಳೂರು [illegible] ಶ್ರೀ ದಿವಾನ್ ಸಾಹೇಬ ಸರ್ [illegible] ಯಲ್ಲಿ ಕನಕಮಹೋತ್ಸವವು [illegible] ನೆರವೇರಿಸಲ್ಪಟ್ಟಿತು ಈ ಸಭೆಗೆ ಶ್ರೀಮಾನ ಸರ್ ಕೆ ಪಿ ಪುಟ್ಟಣ್ಣಶೆಟ್ಟಿ ದಿವಾನ್ ಬಹದೂರ [illegible] ಮಂತ್ರಿಪ್ರವೀಣ ಶ್ರೀಮಾನ [illegible] ಸವರು ಶ್ರೀಮಾನ್ [illegible] ಮುಂತಾದ ಅನೇಕಾನೇಕ ಪ್ರಮುಖರು [illegible] ದರು [illegible] ದಲೂ [illegible] ವಿಶೇಷ ಅಲಂಕೃತವಾದ [illegible] ಕಾರ್ಯವು [illegible] ಸಿಯು [illegible] [illegible] ಇವರಿ [illegible] ಸವರು ರಿಪೋರ್ಟ [illegible] ಈ ಕಂಪನಿಯ [illegible] ಯುತೆಯ [illegible] ಈ ಕಂಪನಿ [illegible] ವು ಅನಂತರ ಶ್ರೀಮಾನ್ [illegible] ಯವರ [illegible] ಪತಿ ಕೆಯಲ್ಲೀದ [illegible] ಕರ್ನಾಟಕ [illegible] ಪ್ರಶಸ್ತಿಯನ್ನು [illegible] ತರುವಾಯ [illegible] ವರ್ತಕ ಮಂಡಲಿಯ ಪರವಾಗಿ ಮ|| ರಾ|| ಶ್ರೀಕಂಠಯ್ಯನವರು ಸೇಂಟ್ [illegible] ಪತಿ ಕೆಯಲ್ಲೀದ ರತ್ನ [illegible] ವಾಗಿ [illegible] ದ ಪದಕವನ್ನು ಅರ್ಪಿಸಿದರು ಬಳಿಕ ಕಂಪನಿಯ ಪಾತ್ರಧಾರಕರು ರಜತಮಯ ಸುಂದಾಸನ ಯುಕ್ತವಾದ ಸುವರ್ಣ ವಿನಾಯಕಮೂರ್ತಿಯನ್ನೂ, ಕಪೂರ್ ಚಂದರವರು ಬೆಳ್ಳಿಯ ಕುಂಡವನ್ನೂ [illegible] ಯವರು ರೋಲ್ಡ್ ಗೋಲ್ಡ್ ಕಪ್ಪನ್ನೂ ಶ್ರೀ|| ವರದಾಚಾರ್ ವೆಂ [illegible] ಪಂಡಿತರು ರಜತಪಾತ್ರವನ್ನೂ, ಇಂಡಿಯನ್ [illegible] ಪ್ಯಾಯಿಲ್ [illegible] ನವರು ಬೆಳ್ಳಿಯ ಕುಂಡವನ್ನೂ ಸಮರ್ಪಿಸಿದರು ಕಂಪೆನಿ ಪ್ರವರ್ತಕರಾದ ಶ್ರೀ ಬೆ [illegible] ರ ಹರಿಶಾಸ್ತ್ರಿಗಳಿಗೆ ಮ|| ರಾ|| [illegible] ನವರು ಶಾಲು ಜೋಡಿಯನ್ನು ಹೊದ್ದಿಸಿ ತಮ್ಮ ಕೃತಜ್ಞತೆಯನ್ನು ತೋರಿಸಿದರು ಅಷ್ಟಕ್ಕೆ ಕಾರ್ಯ ಗೌರವ ವಿಶೇಷದಿಂದ ದಿವಾನ್ ಸಾಹೇಬರವರು ಸ್ವಸ್ಥಾನಕ್ಕೆ ತೆರಳಬೇಕಾದುದರಿಂದ ಅಧ್ಯಕ್ಷರಿಗೂ ಸಭಿಕರಿಗೂ ಗಂಧಪುಷ್ಪ ಹಾರಾದಿಗಳ ವಿನಿಯೋಗವಾಯಿತು ಅನಂತರ ಧರ್ಮ ಸಾಮ್ರಾಜ್ಯದ ಒಂದು ಭಾಗವನ್ನು ಆಡಿಸಿ ವೀರಣ್ಣನವರು ಎಲ್ಲರಿಗೂ ಆನಂದಿಸಿದರು ಬಳಿಕ ಶ್ರೀಮನ್ಮಹಾರಾಜರವರ ಜಯಘೋಷದೊಡನೆ ಸಭಾ ಕಾರ್ಯವು ಮುಕ್ತಾಯವಾಯಿತು

ಮ|| ರಾ|| ವೀರಣ್ಣನವರು ನಾಟಕಕಲೆಯಲ್ಲಿ ಅಗ್ರಗಣ್ಯತೆಯನ್ನು ಪಡೆದಿರುವರಲ್ಲದೆ ಪ್ರಾಣಿಗಳಲ್ಲಿ ದಯಾರ್ದ್ರಹೃದಯರಾಗಿಯೂ ಗುರುದೇವರಲ್ಲಿ ನಿಸ್ಸೀಮಭಕ್ತಿಯುಳ್ಳವರಾಗಿಯೂ ಹಿಡಿದ ಕಾರ್ಯವನ್ನು ಕೊನೆಗಾಣಿಸುವುದರಲ್ಲಿ ದಕ್ಷತೆಯುಳ್ಳವರಾಗಿಯೂ [illegible] ಲ್ಲಿ [illegible] ಗಿಯೂ ಕಾರ್ಯಕರಣ [illegible] ಗಿಯೂ ಜನಾನುರಾಗವುಳ್ಳವರಾಗಿಯೂ [illegible] ಈ ಮಹೋದಯರ [illegible] ತಿಯ ನಮ್ಮ ಕರ್ನಾಟಕ ದೇಶದಲ್ಲಿ [illegible] ಇರುವರೆಗೆ ಅನಂತ [illegible] ಸಮುದ್ರದ ತೆರೆಗಳಂತೆ [illegible] ಲ್ಲಿಯೇ ಮಾಯಗಾದವು ಇನ್ನು [illegible] ಸಂಘಗಳು ಜೀವಂತಗಳಾಗಿದ್ದರೂ [illegible] ರುತ್ತಿರುವವರಂತೆ ಮೃತಪ್ರಾಯಗ [illegible] ಕ್ತವೆ ಇನ್ನು ಕೆಲವು ದೀರ್ಘನಿದ್ರೆಯ [illegible] ತ್ತವೆ ಮ|| ರಾ|| ವೀರಣ್ಣನವರು ಮಾತ್ರ [illegible] ಚಂದಣ್ಣನವರಿಂದ ಸ್ಥಾಪಿತವಾದ ಕಂಪನಿಯಲ್ಲಿ [illegible] ಉತ್ತಮ ಪಾತ್ರವಾಹಕರಾಗಿಯೂ ಸದ್ಗುಣಗಣಭೂಷಿತರಾಗಿಯೂ ಇದ್ದುದರಿಂದ ಮ|| ಚಂದಣ್ಣನವರು ತಮ್ಮ ಅಂತ್ಯಾವಸ್ಥೆಯ [illegible] ಸಂಘದ ಭಾರವನ್ನೆಲ್ಲಾ ಈ ಮಹಾಶಯರಿಗೆ ವಹಿಸಿದರು ಈ ಮಹಾಶಯರು ಆವರ ಸಕ್ಷಂಕ [illegible] ಆಂದಿನಿಂದ ತಮ್ಮ ಶಕ್ತಿಸಾಹಸ [illegible] ದಲೂ ಪುಣ್ಯಬಲದಿಂದಲೂ ಈ ಸಂಘವನ್ನು ಇದುವರೆಗೂ ಅಭಿವೃದ್ಧಿಗೆ ತಂದು ಮಹಾ ಜನಗಳ ಪ್ರೇಮಾತಿಶಯಕ್ಕೆ ಪಾತ್ರವನ್ನಾಗಿ ಮಾಡಿದರು ಇವರು [illegible] ಆಸ್ತಿಕರೂ ಆಗಿರುವುದರಿಂದ ಹೋದ ಕಡೆಗಳಲ್ಲೆಲ್ಲಾ ಅನೇಕ ದಮು [illegible] ಮಾಡಿ [illegible] ವ್ಯಕ್ತಿಯಿಂದಲೂ [illegible] ಯದಿ ಸಂತಿ ಗುಣಾಃ ಪುಂಸಾಂ ವಿಕಸಂತ್ಯೇವ ತೇ ಸ್ವಯಂ [illegible] ಯಾವವನ್ನು ವಿನಲ್ಲಿ [illegible] ಅವು [illegible] ಪ್ರಕಾಶ [illegible] ನೀತಿವಾಕ್ಯಾನುಸಾರವಾಗಿ [illegible] ಸವರ [illegible] ಕಸದ್ಗುಣಗಳ [illegible] ಗ್ರಾಮ [illegible] ಇವ [illegible] ನಪ [illegible] ವಹಿ [illegible] ಅಗ್ರಗಣ್ಯತೆಯನ್ನು ಪಡೆದಿರುವುದರಿಂದ [illegible] ಜನರು ಇವರಿಗೆ ಪ್ರಶ [illegible] ಅನೇಕ ನಗರಗಳಲ್ಲಿ [illegible] ರಜತ ಸುವರ್ಣಾಭರಣಗಳನ್ನೂ [illegible] ಕೊಟ್ಟಿರುವರು ಈ ಕಂಪನಿಯು ಇವರ ಅಧಿಪತ್ಯಕ್ಕೆ ಬಂದಂದಿನಿಂದ ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿಸಿ ಯಶಸ್ವಿಯನ್ನಾಗಿ ಮಾಡಿ ಕಂಪನಿಯ ಮೂಲಸ್ಥಾಪಕರಾದ ಚಂದಣ್ಣನವರ ಸಂಕಲ್ಪಾಂಕುರವು ಪಲ್ಲವಿಸಿ ಫಲಿತವಾಗುವಂತೆ ಮಾಡಿದರು ಈ ರೀತಿಯಾಗಿ ಕೃತ ಕೃತ್ಯರೂ ದಾನಧರ್ಮ ಪರೋಪಕಾರ ನಿರತರೂ ಆದ ಮ|| ರಾ|| ವೀರಣ್ಣನವರಿಗೆ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಆಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನಿತ್ತು ರಕ್ಷಿಸಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುವೆವು

ಶೋಚನೀಯ ನಿಧನ

ಹೈದರಾಬಾದ ಪಟ್ಟಣದಲ್ಲಿ ವಿರಾಜಿಸುತ್ತಿದ್ದ ಶ್ರೀಮಾನ್ ನಿಪ [illegible] ದೇಶಮುಖ ಬಸವರಾಜ್ ಹೈಕೋರ್ಟ ವಕೀಲ ಈ ಮಹೋದಯರು ಕಳೆದ ತಿಂಗಳು [illegible] ನೆಯ ತಾರೀಖಿನ ದಿವಸ ಶಿವಾಧೀನರಾದರೆಂಬ ವಿಷಯವನ್ನು ಕೇಳಿ ವೀರಶೈವ ಸಮಾಜವೆಲ್ಲ [illegible] ದು ಖಿಡಬೇಕಾಗಿದೆ ಇವರು ನಿಜಾಮರಾಜ್ಯದಲ್ಲಿ ಸುಪ್ರಸಿದ್ಧರಾಗಿದ್ದು ಅಖಿಲ ವೀರಶೈವ ಸಮಾಜಕ್ಕೆಲ್ಲಾ ಪರಿಚಿತರಾಗಿದ್ದರು ಈ ಮಹಾಶಯರು ಪರಳೀಕ್ಷೇತ್ರದ ರುದ್ರಾಭಿಷೇಕ ಪ್ರಕರಣದಲ್ಲಿ ಮುಖ್ಯಭಾಗವಹಿಸಿ ವಿಶೇಷ ಶ್ರಮದಿಂದ ಕಾರ್ಯವನ್ನು ಮಾಡಿ ದಿಗ್ವಿಜಯವನ್ನು ಹೊಂದಿದ ವಿಷಯವು ಸರ್ವರಿಗೂ ವೇದ್ಯವಾಗಿದೆ ನಿಜಾಂರಾಜ್ಯದಲ್ಲಿ ಅನೇಕ ವೀರಶೈವರು ರಾಜಕೀಯ ಶಿಕ್ಷಣವನ್ನು ಹೊಂದಿ ಮುಂದೆ ಬರಲಿಕ್ಕೆ ಇವರೇ ಕಾರಣೀಭೂತರೆಂದು ಧಾರಾಳವಾಗಿ ಹೇಳಬಹುದಾಗಿದೆ ಇವರು ಪರಮ ಗುರುಭಕ್ತರೂ, ಶಾಂತಮೂರ್ತಿಗಳೂ, ದಯಾಪರರೂ, ವಿಶಾಲಮತಿಗಳೂ, ಸನಾತನಧರ್ಮರಕ್ಷಕರೂ, ದೈವಭಕ್ತಿಶೀಲರೂ ಆಗಿದ್ದರಲ್ಲದೆ, ಅಸಾಧಾರಣ ಶ್ರೀಮಂತರಾಗಿದ್ದರು ನಿಜಾಮರಾಜ್ಯದಲ್ಲಿ ಮೇಲಿಂದ ಮೇಲೆ ಒದಗುತ್ತಿದ್ದ ಮತಸಂಬಂಧಕಾರ್ಯಗಳಲ್ಲಿ ಮುಂದಾಳುಗಳಾಗಿ ನಿಂತು ಸರ್ವರಿಗೂ ಸಂತೋಷವನ್ನುಂಟುಮಾಡುತ್ತಿದ್ದರು. ಇವರು ಕಾಶೀ ಮೊದಲಾದ ಅನೇಕ ಕ್ಷೇತ್ರಯಾತ್ರೆಗಳನ್ನು ಮಾಡಿ ಪುಣ್ಯಶರೀರಿಗಳಾಗಿದ್ದರು ಇಂಥ ಪುಣ್ಯ ವಿಭೂತಿಯು ಈ ಸಮಾಜದಿಂದ ಮರೆಯಾದುದು ಈ ಸಮಾಜದ ದುರ್ದೈವವೆಂದೇ ಹೇಳಬೇಕಾಗಿದೆ ಶ್ರೀ ಜಗದ್ಗುರು ಪಂಚಾಚಾರ್ಯರು ಈ ಪುಣ್ಯಮೂರ್ತಿಗಳ ಆತ್ಮಕ್ಕೆ ಶಾಂತಿಯನ್ನೀಯಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇವೆ

ಒಳದೇಶದ ವೃತ್ತಾಂತಗಳು.

ಗೌರ್ನಮೆಂಟ್ ಅಸಿಸ್ಟಂಟ್ ಸೆಕ್ರೆಟರಿ ಮಿ|| ಎ ಸುಬ್ಬರಾವ್ ಬಿ ಎ , ಬಿ ಎಲ್ ಇವರಿಗೆ ಜನವರಿ ೩ನೇ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಮಂಜೂರಾಗಿರುತ್ತದೆ

ಶಿವಮೊಗ್ಗ ಪ್ರಾಂತ್ಯದ ದೊಡ್ಡ ವರ್ತಕರು ಸೇರಿ, ದಿನಕ್ಕೆ ೨೦೦ ರಿಂದ ೩೦೦ ಟನ್ ಸಕ್ಕರೆಯು ಸಿದ್ಧವಾಗುವ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಪ್ರಯತ್ನಪಡುತ್ತಿದ್ದಾರೆಂದು ತಿಳಿದುಬಂದಿದೆ.

ಚಿಂತಾಮಣಿ ತಾಲ್ಲೂಕು ಅಮಲ್ದಾರ್ ಮಿ|| ಟಿ ಎಲ್ ಕ [illegible] ತಿಂರವರನ್ನು ಮಿ|| ಜಾರ್ಜ್ ಮಾಥ್ಯೂರವರಿಗೆ ೩ನೇ ತಾರೀಕು ಜನವರಿಯಿಂದ ಕೊಟ್ಟಿರುವ ಎರಡು ತಿಂಗಳ ರಜಾಕಾಲದಲ್ಲಿ ಹಾಸನದ ಸಬ್‌ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಕೆಲಸ ನೋಡಲು ನಿಯಮಿಸಿರುತ್ತಾರೆ

ಹಾಸನ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ಸಿ ಐ ಮಾಚಯ್ಯನವರಿಗೆ ಜನವರಿ [illegible]ನೇ ತಾರೀಖಿನಿಂದ ಎರಡು ತಿಂಗಳು ಪ್ರಿವಿಲೇಜ್ ರಜಾ ಮಂಜೂರಾಗಿದೆ ಇವರ ರಜಾ ಕಾಲದಲ್ಲಿ ನಂಜನಗೂಡು ಅಸಿಸ್ಟಂಟ್ ಸೂಪರಿಂಡೆಂಟ್ ಮಿ|| ಡಿ ವ ದನಗೋಪಾಲರಾಜ ಅರಸರವರು ಇವರ ಕೆಲಸಗಳನ್ನು ನೋಡಿಕೊಳ್ಳುತ್ತಾರೆ

ಮೈಸೂರಿನಲ್ಲಿರುವ ಶ್ರೀ ಮಹಾರಾಣಿಯವರ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಕೂಡದೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವುದಕ್ಕಾಗಿ ಶ್ರೀ|| ಅಂಬಳೆ ಸುಬ್ರಹ್ಮಣ್ಯ ಅಯ್ಯರವರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿಯು ನೇಮಕವಾಯಿತಷ್ಟೆ ! ಈ ಸಮಿತಿಯವರು ಕಾಲೇಜನ್ನು ಮೈಸೂರಿನಲ್ಲೇ ಉಳಿಸುವುದಕ್ಕಾಗಿ ದೀರ್ಘವಾದ ಒಂದು ಹೇಳಿಕೆಯನ್ನು ತಯಾರುಮಾಡಿದ್ದು , ಅದರಲ್ಲಿ ಅನೇಕಕಾರಣಗಳನ್ನು ಸೂಚಿಸಿರುತ್ತಾರೆ

ರಾಜಧಾನಿಯ ಕ ವಿ ರಾಮಶೆಟ್ಟಿ ಅಂಡ್ ಕಂಪೆನಿಯವರು, ಎಸ್ ಎನ್ ಪಂಡಿತರು, ಎನ್ ಸಿ ಕೋದಂಡರಾಮಶೆಟ್ಟಿ ಅಂಡ್ ಕಂಪನಿಯವರು ಮ್ಯೂಜಿಕಲ್ ಅಂಡ್ ಕಮರ್ಷಿಯಲ್ ಏಜನ್ಸಿಯವರು, ಆರ್ ನಂದರಮಯ್ಯರವರು ಮಂಗಳೂರು ಜೆ ಎಸ್ ಬೀಡಿ ಕಂಪನಿಯವರು ವೃತ್ತಾಂತಪತ್ರಿಕೆಯವರು, ಬೆಂಗಳೂರಿನ ನ್ಯಾಷನಲ್ ಟೈಪ್ ಫೌಂಡರಿಯವರು, ಮದ್ರಾಸಿನ ಇ ಎಂ ಗೋಪಾಲಕೃಷ್ಣ ಕೋನೆಯವರು ಕಳುಹಿಸಿಕೊಟ್ಟ ೧೯೩೫ನೆಯ ಇಸವಿಯ ಅತ್ಯಂತ ಸುಂದರವಾದ ಕ್ಯಾಲೆಂಡರುಗಳನ್ನು ಅತ್ಯಾನಂದದಿಂದ ಸ್ವೀಕರಿಸಿರುತ್ತೇವೆ

ಏಕಕಾಲದಲ್ಲಿ ನಾಲ್ವರು ಮಕ್ಕಳ ಜನನ !

ರಷ್ಯಾದಲ್ಲಿ ಒಬ್ಬ ರೈಲ್ವೆ ಪೋರ್ಟರನ ಹೆಂಡತಿಯು ಏಕಕಾಲದಲ್ಲಿ ೪ ಮಕ್ಕಳನ್ನು ಹೆತ್ತಿದ್ದಾಳೆ ಅದರಲ್ಲಿ ೨ ಗಂಡು ೨ ಹೆಣ್ಣು ಪ್ರತಿಯೊಂದು ಮಗುವೂ 7। ಪೌಂಡು ತೂಕವಿದೆಯಂತೆ !

ವರ್ತಮಾನಸಂಗ್ರಹ.

ಉದುಮಲಪೇಟೆಯ ಒಂದು ಮಿಲ್ಲಿನಲ್ಲಿ ಯಂತ್ರದ ...ಲ್ಲಿಗೆ ಒಬ್ಬ ಚಿಕ್ಕ ಹುಡುಗನ ಕೈ ಸಿಕ್ಕಿದ್ದನ್ನು ...ಡಿ ಬಿಡಿಸಲು ಬಂದ ಇಂಜಿನ್ ಡ್ರೈವರನು ನೆಲ... ಬಿದ್ದು ಸತ್ತು ಹೋದನು ಹುಡುಗನ ಕೈ ...ದು ಬದುಕಿದ್ದಾನೆ

ಅತ್ಯಂತ ಪ್ರಾಚೀನಶಿಲೆ !

ಕೆನಡಾದಲ್ಲಿ ೧,೫೦೦,೦೦೦,೦೦೦ ವರ್ಷ ಆಯು...ನ ಕಲ್ಲುಗಳು ದೊರೆತಿವೆ.

ಇರುವೆಗಳನ್ನು ಕೊಲ್ಲುವ ಯಂತ್ರ

ಇರುವೆಗಳನ್ನು ಕೊಲ್ಲುವ ಯಂತ್ರವೊಂದು ಈಗ ...ರಿಸಲ್ಪಟ್ಟಿದೆ. ಇದು ಒಂದು ಸಾರಿಗೆ 12 ಪೌಂಡು ...ವೆಗಳನ್ನು ಕೊಲ್ಲುವುದಂತೆ !

ಸಾಲದಿಂದ ಮರಣ.

ಬೊಂಬಾಯಿಯ ಕೇಶವಮರ್ಕ್ಯಾ ಎಂಬ ಬಡಗಿಗೆ ...ಲ ಕೊಟ್ಟವರ ತೊಂದರೆಯು ಹೆಚ್ಚಾದುದರಿಂದ ...ವನ್ನು ಹೆಚ್ಚಾಗಿ ಸೇವಿಸಿ ಪ್ರಾಣ ಕಳೆದು ಕೊಂಡನು

ನಾಯಿಗಳ ಹಾವಳಿ !

...ಪುರದ ಹತ್ತಿರ ಕುದುರೆಯ ಮೇಲೆ ಹೋಗು...ದ ಒಬ್ಬ ಮುದುಕಿಯ ಸುತ್ತಲೂ ನಾಯಿಗಳು ...ತ್ತಿಕೊಂಡು, ಕುದುರೆಯನ್ನು ಬೆದರಿಸಿ ಕೆಳಗೆ ...ದ ಮುದುಕಿಯನ್ನು ಕಚ್ಚಿ ಚೂರುಚೂರು ಮಾಡಿ...ವವಂತೆ !

ಸಿ. ಐ. ಡಿ ಆಫೀಸರ ಕೊಲೆ

ಅಮೃತಸರದಲ್ಲಿ ಸಿ ಐ ಡಿ ಆಫೀಸರಾಗಿದ್ದ ...ರ್ ಗಂಗಾಸಿಂಗ ಎಂಬವರ ಹೆಣವು ಒಂದು ...ಯ ಒಡದಲ್ಲಿ ಸಿಕ್ಕಿದೆ ಅವರ ಮೈಮೇಲೆ ...ಯಗಳಿವೆ ಹತ್ಯಾಕಾರಿಗಳು ಯಾರೆಂಬುದು ...ನ್ನೂ ತಿಳಿದಿಲ್ಲ

ಸೂರ್ಯಮಂಡಲ

ಸೂರ್ಯನು ಭೂಮಿಯ ೧೦ ಲಕ್ಷ ಪಟ್ಟು ದೊಡ್ಡ...ನಾಗಿರುವನೆಂದೂ, ಭೂಮಿಯಿಂದ ೯೩,೦೦೦,೦೦೦ ...ಲುಗಳ ದೂರದಲ್ಲಿದ್ದಾನೆಂದೂ, ಸೂರ್ಯನ ಅರ್ಧ ...ವ ೪೩೩,೦೦೦ ಮೈಲುಗಳವರೆಗಾಗುವುದೆಂದೂ ...ತ್ತಿರುವರು

ಆತ್ಮಹತ್ಯೆ.

ಬೊಂಬಾಯಿಯಲ್ಲಿ ೨೦ ವರುಷ ವಯಸ್ಸಿನ ಕ್ರಿಸ್ತಿ...ನ್ ತರುಣಿಯು ಎಷ್ಟು ತಿರುಗಿದರೂ ಕೆಲಸವು ... ಜೀವನೋಪಾಯಕ್ಕೆ ತೊಂದರೆಯು ಬಂದುದ...ದ ತನ್ನ ಮೈಗೆ ಬೆಂಕಿ ಹತ್ತಿಸಿಕೊಂಡು ಆತ್ಮಹತ್ಯೆ ...ಮಾಡಿಕೊಂಡಳು

ಬೆಂಕಿಯಿಂದ ಅನಾಹುತ.

...ಪಟ್ಟಣದ ಹತ್ತಿರ ಬ್ರಿಟಿಷರ ಹಡ...ಗೆ ಬೆಂಕಿ ಬಿದ್ದು ಸುಮಾರು ೩೦೦ ಸಾವಿರ ಪೌಂಡು ...ರ ಪದಾರ್ಥಗಳು ನಷ್ಟವಾದುವೆಂದು ತಿಳಿದು ...ದಿದೆ ಈ ಅನರ್ಥಕ್ಕೆ ಅಲ್ಲಿ ಕೆಲಸಮಾಡುವ ಜನ...ರೆ ಕಾರಣರೆಂದು ಯೋಚಿಸಲಾಗಿದೆ

6 ವರ್ಷಗಳಲ್ಲಿ 102 ಜನ ಮಕ್ಕಳು !

...ತಿ ರೊ ಎಂಬ ಒಬ್ಬ ರಷ್ಯನನು ಆರುವರ್ಷಗ...ಲ್ಲಿ ೯ಜನ ಹೆಂಡತಿಯರನ್ನು ಮದುವೆಯಾದುದಕ್ಕೆ ...ಯಾಧೀಶರು ಇವನನ್ನು ಶಿಕ್ಷೆಗೆ ಗುರಿಮಾಡಿದರು ...ವರ್ಷಗಳಲ್ಲಿ ಎಲ್ಲಾ ಹೆಂಡರಿಂದ ಇವನಿಗೆ 102 ...ಮಕ್ಕಳಾಗಿವೆಯಂತೆ ! ಇವನು ಕಲಿಯುಗದ ಕೃಷ್ಣನೇ

ಖೋಟಾ ನಾಣ್ಯಗಳ ತಯಾರಿ.

ಖೋಟಾ ನಾಣ್ಯಗಳನ್ನು ತಯಾರುಮಾಡುತ್ತಿದ್ದರೆಂಬ ಆಪಾದನೆಯ ಮೇಲೆ ಅಮರಾವತಿಯ ಪೋಲೀಸರು ನಾಲ್ಕು ಮಂದಿ ಗಂಡಸರನ್ನೂ ಒಬ್ಬ ಹೆಂಗಸನ್ನೂ ದಸ್ತಗಿರಿಮಾಡಿದ್ದಾರೆ ಇವರ ಹತ್ತಿರ ಎಲ್ಲಾ ತರಹದ ನಾಣ್ಯಗಳೂ ಅವುಗಳನ್ನು ತಯಾರಿಸುವ ಸಾಧನಗಳೂ ಸಿಕ್ಕಿವೆ

ಕತ್ತಿಯಲ್ಲಿ ನಾಣ್ಯ !

ಅಮೇರಿಕೆಯಲ್ಲಿ ಹೆಂಗಸೊಬ್ಬಳು ಮೊಟ್ಟೆಗಳನ್ನು ಬೇಯಿಸುತ್ತಿದ್ದಾಗ ಒಂದು ಮೊಟ್ಟೆಯು ಒಡೆದು ೨೦ ಸೆಂಟಿನ ನಾಣ್ಯವೊಂದು ಆಚೆಗೆ ಬಿದ್ದಿತು ಕೋಳಿಯು ನುಂಗಿದ ನಾಣ್ಯವು ಗರ್ಭಕೋಶವನ್ನು ಹೇಗೋ ಸೇರಿ ಮೊಟ್ಟೆಯಲ್ಲಿ ಸೇರಿರಬೇಕೆಂದು ತಿಳಿಯುತ್ತದೆ ಈಶ್ವರಲೀಲೆಯು ವಿಚಿತ್ರವಾದುದು !

3 ವರುಷ ನಿದ್ರೆಮಾಡಿದ ಸ್ತ್ರೀಯಳು.

ಚಿಕಾಗೋ ಪಟ್ಟಣದಲ್ಲಿ ೨೦ ವರುಷ ವಯಸ್ಸಿನ ತರುಣಿಯೊಬ್ಬಳು 1931ನೆಯ ಇಸವಿ ಫೆಬ್ರವರಿ 15 ತಾರೀ...ನ ದಿವಸ ಮಲಗಿದವಳು ಈಗ ಎಚ್ಚರಗೊಂಡಿದ್ದಾಳೆ ಈ ವೈದ್ಯರು ಅವಳನ್ನು ಎಚ್ಚರಿಸುವುದಕ್ಕೆ ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದುವಂತೆ ! ಬಹುಶಃ ಇವಳು ಕುಂಭಕರ್ಣನ ಭಕ್ತಳಾಗಿರಬಹುದು

ಚಂದ್ರಮಂಡಲ

ಚಂದ್ರನು ಭೂಮಿಯಿಂದ ೨೪೦,೦೦೦ ಮೈಲು ದೂರದಲ್ಲಿದ್ದಾನೆಂದೂ ಚಂದ್ರನ ಅರ್ಧಗೆರೆ ೨,೦೦೦ ಮೈಲು ಆಗುವುದೆಂದೂ ಚಂದ್ರಮಂಡಲದಲ್ಲಿ ಹವೆಯಾಗಲಿ ನೀರಾಗಲಿ ಇರುವ ಸಂಭವವಿಲ್ಲವೆಂದೂ, ಚಂದ್ರಮಂಡಲದಲ್ಲಿ ಎಲ್ಲಾ ಆರಿಹೋದ ಜ್ವಾಲಾಮುಖಿಗಳ ಮಡುಗಳಿವೆಯೆಂದೂ ಈಗಿನ ಭೌತಿಕಶಾಸ್ತ್ರಜ್ಞರು ಹೇಳುತ್ತಿರುವರು

ವಿಚಿತ್ರವಾದ ಜೇಡರಹುಳವು !

ಜೈನಾದೇಶದ ಜಮಾಟಿಯರ್ ಎಂಬ ಹಳ್ಳಿಯಲ್ಲಿ ಒಂದು ಜಾತಿಯ ಜೇಡರಹುಳವು ಸಿಕ್ಕಿರುತ್ತದೆ ಇದರ ಅಂಗಗಳೆಲ್ಲಾ ಸಾಧಾರಣ ಜೇಡರಹುಳದಂತಿವೆ ಈ ಹುಳುವು ಬಿಳಿ ಮುಖದಿಂದಲೂ, ಕಪ್ಪಾದ ಹುಬ್ಬುಗಳಿಂದಲೂ ಬಿಳಿ ತುಟಿಗಳಿಂದಲೂ ಕೂಡಿದ್ದು ಮನುಷ್ಯನ ಮುಖದಂತೆ ಇದೆ ಅದನ್ನು ಅಲ್ಲಿಯ ಶಿಕ್ಷಣಾಲಯಕ್ಕೆ ಕಳುಹಿಸಿದ್ದಾರೆ

ಪೋಲೀಸ್ ಸೂಪರಿಂಟೆಂಡೆಂಟರ ಕೊಲೆ.

ಸಂಯುಕ್ತ ಪ್ರಾಂತ್ಯಗಳಿಗೆ ಸೇರಿದ ಮಿರ್ಜಾಪುರದ ಪೋಲೀಸ್ ಸೂಪರಿಂಟೆಂಡೆಂಟ್ ಮಿ| ಆಂಡ್ರೂ ಜಾರ್ಜ್ ಕ್ರಾಫರ್ಡ್ ಎಂಬವರು 10 ಮೈಲು ದೂರದ ಒಂದು ಹಳ್ಳಿಯಲ್ಲಿ ಕ್ಯಾಂಪ್ ಮಾಡಿ ರಾತ್ರಿ ಮಲಗಿದ್ದಾಗ ಯಾರೋ ದುಷ್ಕರು ಗುಂಡಿನಿಂದ ಹೊಡೆದು ಕೊಂದಿದ್ದಾರೆ ಈ ಸಂಬಂಧದಲ್ಲಿ ಸಂದೇಹದ ಮೇಲೆ ಒಬ್ಬ ಹಿಂದೀ ಸೇವಕನನ್ನು ದಸ್ತಗಿರಿಮಾಡಿದ್ದಾರೆ

ಒಂದು ಇಲಿಗೆ ೨ ಸಾವಿರ ರೂಪಾಯಿ !

ಒಲಿಂಪಿಯಾದಲ್ಲಿ ಡಿಸಂಬರ್ ೧೭ ನೇ ತಾರೀಖಿನಿಂದ ಇಲಿಗಳ ಪ್ರದರ್ಶನವು ನಡೆಯುತ್ತಿದೆ ಅಲ್ಲಿ ನಾನಾ ತರಹ ಬಣ್ಣದ 17 ಸಾವಿರ ಇಲಿಗಳನ್ನು ಪ್ರದರ್ಶಿಸಿದ್ದಾರೆ ಕ್ಯಾಟಲಗಳಿಗೂ, ಗ್ಲೋವ್ಸ್ ಗಳಿಗೂ ಇಲಿಗಳ ಚರ್ಮವನ್ನು ಕೊಳ್ಳುವವರು ಹೆಚ್ಚಿರುವುದರಿಂದ ನಾನಾ ತರಹ ಬಣ್ಣದ ಇಲಿಗಳ ಸಂತಾನಾಭಿವೃದ್ಧಿಗಾಗಿ ಈ ಪ್ರದರ್ಶನವು ಏರ್ಪಡಿಸಲ್ಪಟ್ಟಿದೆ ಕಪ್ಪು ಮತ್ತು ಬಿಳುಪು ಬಣ್ಣ ಮಿಶ್ರಿತವಾದ ಇಲಿಗೆ ೩೦ ಪೌಂಡು ಬೆಲೆ ಹಸುರು ಬಣ್ಣದ ಇಲಿಯೊಂದಕ್ಕೆ ೧೦೦ ಪೌಂಡು

ಹುಡುಗಿಯು ಹುಲಿಯನ್ನು ಕೊಂದಳು.

ರಂಗೂನಿನಲ್ಲಿರುವ ಐಮಾಂಗರವರ ಮಗಳಾದ ಮಾಸಿಕ್ ಎಂಬ ೧೫ ವಯಸ್ಸಿನ ಹುಡುಗಿಯು ತಮ್ಮ ಮನೆಯ ಹತ್ತಿರದ ತೋಟದಲ್ಲಿ ತರಕಾರಿಯನ್ನು ಕುಯ್ಯುತ್ತಿದ್ದಾಗ ಹಿಂಭಾಗದಿಂದ ಒಂದು ಹುಲಿಯು ಬಂದು ಅವಳ ಮೇಲೆ ಬಿದ್ದಿತು ಕೂಡಲೆ ಹುಡುಗಿಯು ಅದ್ಭುತವಾದ ಧೈರ್ಯದಿಂದ ಹಿಂತಿರುಗಿ ಕೈಯಲ್ಲಿದ್ದ ದೊಣ್ಣೆಯಿಂದ ಹುಲಿಗೆ ಒಂದು ಬಲವಾದ ಏಟು ಕೊಟ್ಟಳು ಇದರಂತೆ ೮೧೦ ಸಾರಿ ಏಟುಗಳನ್ನು ಕೊಟ್ಟ ಕೂಡಲೆ ಹುಲಿಯು ಸತ್ತು ಮಲಗಿತು. ಹುಡುಗಿಗೆ ತಲೆಯ ಮೇಲೆ ಸ್ವಲ್ಪ ಗಾಯವಾಗಿದೆ ಹುಡುಗಿಯ ತಂದೆಯು ಹುಲಿಯ ಚರ್ಮವನ್ನು ಅಧಿಕಾರಿಗಳಿಗೆ ಕಳುಹಿಸಿರುವನಂತೆ !

ಹೊಸ ವರ್ಷದ ಬಿರುದುಗಳು.

ಜಿ. ಸಿ. ಐ. ಇ.

ಕೊಚ್ಚಿನ್ ಮಹಾರಾಜರು

ಇಂಪೀರಿಯಲ್ ಆರ್ಡರ್ ಆಫ್ ದಿ ಕ್ರಾಸ್ ಆಫ್ ಇಂಡಿಯ

ಲೇಡಿ ಚೆಟ್ಟಿಕ್ಸ್ಯಾರ್ಕ್ಲಿ

ಸಿ. ಎಸ್. ಐ.

ಮಿ. ...ಂಬ್ ಹಾಲ್ ಮದರಾಸು ಸಿ. ಡಬ್ಲ್ಯು ಡಿ. ಚೀಫ್ ಇಂಜನಿಯರ್

ಸಿ. ಐ. ಇ.

೧ ಲೆ| ಕ|| ಡಿ. ಎಂ ... ಎ ಜೆ ಜಿ ಮದರಾಸ್ ಸ್ಟೇಟ್ ... ಸಿ ಜಿ ...ರ್, ಕಾವೇರಿ ಮೆಟ್ಟೂರ್ ಪ್ರಾಜೆಕ್ಟ್ ... ಡಬ್ಲ್ಯು ಡಿ ಮದರಾಸು, ೩ ಎಂ. ವಿ ಸಿ ಎಸ್ ಮದರಾಸ್ ಗವರ್ನರ್ ಪ್ರೈವೇಟ್ ಸೆಕ್ರೆಟರಿ

ನೈಟ್ ಹುಡ್.

ಮಹಮದ್ ಬಸೀರಾಲ್ಲಾ ಸಾಹೇಬ್ ಬಹದ್ದೂರ್ ಮದ್ರಾಸ್ ಸರ್ವಿಸಸ್ ಕಮಿಷನ್ ಮೆಂಬರ್ ಎಂ ವಿ ಎಸ್ ವೈದ್ಯನಾಥ ಮೊದಲಿಯಾರ್ ಎಂ ವಿ ಇ ... ಸೂಪರಿಂಟೆಂಡೆಂಟ್ ಆಫ್ ಪೋಲೀಸ್

ಕೇಸರಿ ಹಿಂದ್ ಮೆಡಲ್.

(ಫಸ್ಟ್ ಕ್ಲಾಸ್)

ಲೇಡಿ ಎ ಜಿ ಸ್ಟೋಕ್ಸ್, ಮದರಾಸಿನ ಹೋಮ್ ಟಾನ್ ಸ್ಟೋಕ್ಸ್ ರವರ ಪತ್ನಿ

ಸೆಂಕೆಂಡ್ ಕ್ಲಾಸ್

ಮಿಸ್ ಎಸ್ ಎಸ್ ಎಲ್ಲಾ ಬೆಂಗಳೂರಿನ ಎಡ್ವರ್ಡ್ ಕಾಟನ್ ಗರ್ಲ್ಸ್ ಹೈಸ್ಕೂಲ್ ಹೆಡ್ ಮಿಸ್ಟ್ರೆಸ್

ಮಹಾಮಹೋಪಾಧ್ಯಾಯ.

ಬ್ರಹ್ಮಶ್ರೀ ಯಜ್ಞಸ್ವಾಮಿ ಶಾಸ್ತ್ರಿಗಳು ಅದ್ವೈತ ಸಭೆಯ ಮುಖ್ಯ ಪಂಡಿತರು ಕುಂಭಕೋಣಂ

ದಿವಾನ್ ಬಹದ್ದೂರ್.

ರಾವ್ ಬಹದ್ದೂರ್ ಟಿ ವಿ ರಾಮಲಿಂಗಂ ಚೆಟ್ಟಿಯಾರ್ ಕೊಯಮತ್ತೂರು, ರಾವ್ ಬಹದ್ದೂರ್ ಎಸ್ ವಿ ರಂಗಸ್ವಾಮಿ ವೈಸ್ ಛಾನ್ಸಲರ್ ಆಂಧ್ರ ಯೂನಿವರ್ಸಿಟಿ ಸಿ ನಾರಾಯಣ ನಾಯುಡು, ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ (ರಿಟೈರ್ಡ್) ಮದರಾಸು

ರಾವ್ ಬಹದ್ದೂರ್.

ಎ ಚಂಗಪ್ಪ ಎಂ ಎಲ್ ಸಿ ಕೊಡಗು ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯರು ... ಕೆ ಗದುರಾಚಾರ್, ಪ್ರೆಸಿಡೆಂಟ್ ಬೆಂಗಳೂರು ಸಿಟಿ ಮುನಿಸಿಪಲ್ ಕೌನ್ಸಿಲ್.

(3ನೇ ಪುಟದಿಂದ ಮುಂದುವರಿದುದು)

ಘಂಟೆಗೆ ಕೊಳಗೇರಿ ಜಹಗೀರದಾರ ಮಹಾದೇವರಾಜ ಅರಸುಗಳವರ ಹಸ್ತದಿಂದ ಈ ಲೈಬ್ರರಿಯು ಸ್ಥಾಪಿಸಲ್ಪಡಬೇಕೆಂದು ನಿಯಾಮಕವಾಗಿತ್ತು. ಆದರೆ ಅವರಿಗೆ ಕಾರ್ಯಾಂತರದಿಂದ ಒದಗಿಕೊಳ್ಳಲು ಆಗದ್ದರಿಂದ ಮ|| ರಾ|| ಬಿ. ಸೀತಾರಾಮಯ್ಯ [illegible] ಇವರು ಅಗ್ರಾಸನಾಧಿಪತಿಗಳನ್ನು ವಹಿಸಿದರು. [illegible] ಹೆಸರಿನಿಂದ ನಿರ್ಮಿತವಾಗಿರುವ ಈ ಮಂದಿರವು ಬಹು ಮನೋಹರವಾಗಿರುವದಲ್ಲದೆ ಚಂದವಾದ ಕಂಭ [illegible] ಗಿಡಗಳು ತುಂಬಿರುವದರಿಂದ [illegible] ಮುಸಿಗಳ ಅತ್ಯಂತ [illegible] ರದಲ್ಲಿ ಮುಳುಗಿಸುತ್ತಿರುವದು. [illegible] ದಲ್ಲಿ ಸುಂದರವಾದ ತಪ್ಪಡದ ಹಾಕಲಟ್ಟಿತ್ತು. [illegible] ಅಂದವಾದ ಪಂಚಾಚಾರ್ಯರ [illegible] ಟ್ಟಿದ್ದುದರಿಂದ [illegible] ಭಕ್ತಿಯು ಉಕ್ಕೇರುತ್ತಿತ್ತು.

ಸರ್ಕಾರಿ ಅಧಿಕಾರಿಗಳೂ ಪಕೀಲರು [illegible] ಉಪಾಧ್ಯಾಯರು [illegible] ಕಿಕ್ಕಿರಿದಿದ್ದರು. [illegible] ಮೊದಲು [illegible] ಮ|| ರಾ|| ಪಕೀಲ ಸುಬ್ರಹ್ಮಣ್ಯ [illegible] ಇವರು ಲೈಬ್ರರಿ [illegible] ವನ್ನು ಕುರಿತು ಆಂಗ್ಲೇಯಭಾಷೆಯಲ್ಲಿ ಉಪನ್ಯಾಸವನ್ನು ಮಾಡಿದರು. ಅದನ್ನು [illegible] ಪಂಡಿತರು ಸರ್ವರಿಗೂ ತಿಳಿಯುವ ಹಾಗೆ ತೆಲುಗು ಭಾಷೆಯಲ್ಲಿ ವಿವರಿಸಿದರು. ತದನಂತರ [illegible] ತರು [illegible] ಸವನ್ನು ಮಾಡಿದರು. ಅಗ್ರಾಸನಾಧಿಪತಿಗಳು [illegible] ರಿಯ [illegible] ಯನ್ನು [illegible] ದರು. ಅನಂತರ [illegible] ಪಂಚಾಚಾರ್ಯರ ಚರಿತ್ರೆಯನ್ನು ಸಂಕ್ಷೇಪವಾಗಿ [illegible] 'ಜಗದ್ಗುರು [illegible] ಶ್ರೀ ಜಗದ್ಗುರು [illegible] ಪಂಚಾಚಾರ್ಯರು ಪ್ರತಿಯುಗದಲ್ಲಿಯೂ [illegible] ನಾಮಗಳಿಂದ [illegible] ಸೋಮನಾಥ ಸಿದ್ಧೇಶ್ವರ [illegible] ಪಂಚ ಸ್ಥಾವರಲಿಂಗಗಳಿಂದ [illegible] ಅವತರಿಸಿ ಈ ಮತದ ರಕ್ಷಣೆ [illegible] ಬಾಳೇಹೊನ್ನೂರು [illegible] ಕಾಶಿ ಈ ಪುಣ್ಯಕ್ಷೇತ್ರಗಳಲ್ಲಿ ಸಿಂಹಾಸನಗಳನ್ನು ಸ್ಥಾಪಿಸಿ [illegible] ಧರ್ಮ [illegible] ಯನ್ನು [illegible] ನಡೆಯುತ್ತಿರುವ ವಿಷಯವು ಪ್ರತಿಯೊಬ್ಬರಿಗೂ [illegible] ನಂದವನ್ನುಂಟು ಮಾಡತಕ್ಕದ್ದಾಗಿದೆಯೆಂದು [illegible] ಮಾಡಿ ಸರ್ವರಿಗೂ ಸಂತೋಷವನ್ನುಂಟುಮಾಡಿದರು. ಅನಂತರ ಅಗ್ರಾಸನಾಧಿಪತಿಗಳಿಗೂ [illegible] ಗಂಧ ಪುಷ್ಪ ತಾಂಬೂಲಾದಿಗಳ [illegible] ಕಾರ್ಯದರ್ಶಿಗಳಾದ [illegible] ಅಗ್ರಾಸನಾಧಿಪತಿಗಳಿಗೆ, ಈ ಕಾರ್ಯವನ್ನು ನೆರವೇರಿಸಿದ ಸುಬ್ರಹ್ಮಣ್ಯ [illegible] ಯವರಿಗೂ ವಂದನೆಗಳನ್ನು [illegible] ಸಿದರು.

ತಾ|| 11-12-34 ನೆಯ ಶುಕ್ರವಾರ ದಿವಸ ಸಿದ್ಧನಾಥಶಾಸ್ತ್ರಿಗಳು [illegible] ಪುಸ್ತಕದ ಸಾರಾಂಶವನ್ನು ಸಂಕ್ಷೇಪವಾಗಿ ವಿವರಿಸಿ 'ದೀಕ್ಷಾರಹಿತ ಸಾಕ್ಷಾತ್ ಸ್ನಾಪ್ಯಯಾನ್ಲಿಂಗಮುಕ್ತ್ಯಮಃ' ಎಂಬ ವಿಭಾಗಮ ಪ್ರಮಾಣದಂತೆ ಪ್ರತಿಯೊಬ್ಬ ವೀರಶೈವ ಸ್ತ್ರೀಪುರುಷರು ವಿಧಿಯುಕ್ತವಾಗಿ [illegible] ದೀಕ್ಷೆಯನ್ನು ಹೊಂದದವನು ಮಾಡುವ ಶಿವಾರ್ಚನಾ ಗುರುಪೂಜಾದಿ ಸಮಸ್ತ ಕರ್ಮಗಳು [illegible] ಬೂದಿಯಂತೆ ನಿಷ್ಫಲವಾಗುತ್ತವೆಂದೂ ದೀಕ್ಷಾರಹಿತನಾದವನು ಶಿವಾರ್ಚನೆಯನ್ನು ಮಾಡಿದರೆ ಅರಣ್ಯದಲ್ಲಿ ಬ್ರಹ್ಮರಾಕ್ಷಸನಾಗುತ್ತಾನೆಂದೂ, ಸಂಸ್ಕಾರಹೀನನಾದ ವೀರಶೈವನು ಗುರುಪೂಜೆಯನ್ನು ಮಾಡಲಿಕ್ಕೂ, ಗುರುಪಾದೋದಕವನ್ನು ಸ್ವೀಕರಿಸಲಿಕ್ಕೂ ಅರ್ಹನಲ್ಲವೆಂದೂ, ಮಾಹೇಶ್ವರರು ತಮ್ಮ ಗುರುತ್ವವನ್ನುಳ್ಳ ವೀರಮಾಹೇಶ್ವರದೀಕ್ಷೆಯನ್ನು ಹೊಂದಿ ತ್ರಿರುವಂತ ಪಕ್ಷರು ಪಕ್ಷದೀಕ್ಷಾ ಸಂಸ್ಕಾರವನ್ನು ಹೊಂದಬೇಕೆಂದೂ ಇಲ್ಲದಿದ್ದರೆ ಅವರ ಜನ್ಮವು ಸಫಲವಾಗುವದಿಲ್ಲವೆಂದೂ ಭಾಷಣಮಾಡಿದರು. ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು.

ಈ ಕಾರ್ಯದಲ್ಲಿ ಪೂರ್ಣಮನಸ್ಸಿಟ್ಟು ಆಚಾರ್ಯ [illegible] ಮಂದಿರವನ್ನು [illegible] ಸಕ್ರೆಟರಿಯವರಿಗೂ [illegible] ಶ್ರೀ ಜಗದ್ಗುರು ಪಂಚಾಚಾರ್ಯರ [illegible] ಮಂಗಲವನ್ನೀಯಲೆಂದು ಪ್ರಾರ್ಥಿಸ [illegible]

ನಿಮ್ಮ ಗುರುಭಕ್ತ,
B Hunagiri,
ಮ್ಯಸ್ಕೂಲು ಎಸ್ಸೈದಿಗ್

ಶ್ರೀಕ್ಷೇತ್ರ ಗೊಡಚಿ ವೀರಭದ್ರೇಶ್ವರ ಯಾತ್ರೆ

ಉತ್ತರ ಕರ್ನಾಟಕದಲ್ಲಿ ಪರಮಪವಿತ್ರವಾದ ಶ್ರೀ [illegible] ವೀರಭದ್ರೇಶ್ವರಕ್ಷೇತ್ರವು ವಿರಾಜಿಸುತ್ತಲಿರುವದು. ಈ ಕ್ಷೇತ್ರದಲ್ಲಿ ಪ್ರತಿವರುಷ ಮಾರ್ಗಶಿರ ಶುಕ್ಲ [illegible] ಮಹಾರಥೋತ್ಸವವು ಜರುಗುವದು. ಈ ಮಹಾಯಾತ್ರೆಗೆ ೬೦ ಸಾವಿರಕ್ಕೂ ಮೇಲ್ಪಟ್ಟು ಯಾತ್ರಿಕರು ಕೂಡುವರು. ಈ ಕ್ಷೇತ್ರವು ಕೊಲ್ಹಾಪುರ ಸಂಸ್ಥಾನಕ್ಕೆ [illegible] ಸೇರಿಕೊಂಡಿದ್ದು [illegible] ಕ್ಷೇತ್ರದ ಸುಧಾರಣೆ' ಎಂಬುದು ಆ ಸರಕಾರದವರ ಕನಸು ಮನಸ್ಸಿನಲ್ಲಿಯೂ ಸುಳಿದಾಡಿರುವದಿಲ್ಲ.

ಇಂದಿಗೆ 3 ವರುಷಗಳ ಹಿಂದೆ ಈ ಕ್ಷೇತ್ರಕ್ಕೆ ಬರುವ ಯಾತ್ರಿಕರಿಗಾಗುತ್ತಲಿದ್ದ ಕಷ್ಟನಷ್ಟಗಳ ವಿವರಣೆಯನ್ನು ಬರೆಯಲಸದಳವಾದುದು. ಶಿವಕ್ಷೇತ್ರವಾದ ಈ ಪವಿತ್ರಕ್ಷೇತ್ರದ ಯಾತ್ರೆಗೆ ಮುಖ್ಯವಾಗಿ ವೀರಶೈವರೇ ಬರುತ್ತಲಿರುವರು. ವೀರಶೈವರ ಪಂಚಗೋತ್ರ ಪುರುಷರಲ್ಲಿ ಮೊದಲನೆಯ ವಿಭೂತಿಯಾದ ವೀರೇಶನು ಇಲ್ಲಿ ಲೋಕೋಪಕಾರಕ್ಕಾಗಿ ನೆಲಸಿರುವನು. ಈ ಕ್ಷೇತ್ರದ ಮುಖ್ಯ ದೇವಸ್ಥಾನದಲ್ಲಿ ವೀರಶೈವಾಚಾರ [illegible] ಕರ್ಮಾದಿಗಳು ಅತ್ಯಂತ [illegible] ನಡೆಯುತ್ತಾ ಬಂದಿದ್ದು ಈಗಲೂ ಅವು [illegible] ನಡೆಯುತ್ತಲಿರುವದೊಂದು ಸಂತೋಷದ ಸಂಗತಿಯಾಗಿದೆ. ಮೂರು ವರುಷಗಳ ಹಿಂದೆ ಈ ಕ್ಷೇತ್ರಸುಧಾರಣೆಗಾಗಿಯೂ ಯಾತ್ರಿಕರ ಅನುಕೂಲತೆಗಾಗಿಯೂ ಸೇವಾಸಂಘವೊಂದು ಸ್ಥಾಪಿಸಲ್ಪಟ್ಟಿರುವದು ಸುಪ್ರಸಿದ್ಧವಾಗಿದೆ. [illegible] ಈ ಸೇವಾಸಂಘದ ಮೂಲಕ ಸದರಿ ಯಾತ್ರಿಕರ ತೊಂದರೆಗಳು [illegible] ವಾಗಿವೆ ಎಂದು ಹೇಳಬಹುದು. ಈ ಸಂಘವು [illegible] ಸ್ವಲ್ಪ ಅವಧಿಯಲ್ಲಿಯೇ [illegible] ಕಾರ್ಯವನ್ನು ಮಾಡಿರುವದು ಮುಖ್ಯ [illegible] ಕುಡಿಯುವ ನೀರಿನ ವ್ಯವಸ್ಥೆಯನ್ನು ಅತ್ಯಂತ [illegible] ವಾಗಿಟ್ಟಿರುವರು. [illegible] ಕಡು ತರವಾದ ಕಷ್ಟವನ್ನು ಕೊಡುತ್ತಲಿದ್ದ [illegible] ಮುಳ್ಳು ಮತ್ತು [illegible] ಮುಳ್ಳುಗಳ ಬಳ್ಳಿಯ ಕಾಟವು ಈ ವರುಷ ನಾಶಮಾಡಲ್ಪಟ್ಟಿದೆ. ಯಾತ್ರಿಕರಿಗೆ ಅಕಸ್ಮಾತ್ತಾಗಿ ಪ್ರಾಪ್ತವಾಗುವ ರೋಗ ಅಪಾಯ ಮೊದಲಾದವುಗಳಿಗೆ ಚಿಕಿತ್ಸೆಯು ಪುಕ್ಕಟೆಯಾಗಿ ದೊರೆಯುವಂತೆ ಔಷಧಾಲಯವನ್ನು ಸ್ಥಾಪಿಸಿದ್ದರಿಂದ ಈ ವರುಷ ಸಾವಿರಾರು ಜನರು ಉಪಕಾರ ಹೊಂದಿದರು. ಸೇವಾಸಂಘದವರ ಈ ಸ್ತುತ್ಯ ಕಾರ್ಯಕ್ರಮಗಳನ್ನು ನೋಡಿ ಕೊಲ್ಹಾಪುರ ಸಂಸ್ಥಾನಿಕರೂ ಕೊಲ್ಹಾಪುರ [illegible] ಅಧಿಕಾರಿಗಳೂ ಬಹು [illegible] ಈ ಸಂಘಕ್ಕೆ ಸಹಾಯ ಮಾಡಲು ಸಂತೋಷದಿಂದ [illegible] ಸಂಘದವರ ಸ್ತುತ್ಯೋತ್ಸಾಹಗಳು [illegible] ಶ್ರೀ ವೀರೇಶನ ಅನುಗ್ರಹವೂ [illegible] ಬೇಕಾಗಿದೆ. ಯಾತ್ರಿಕರ ಸುಧಾರಣೆಗಳು [illegible] ಟ್ಟಿಗೆ ಆಗಬೇಕಾಗಿದ್ದರೂ [illegible] ತತ್ಕಾಲಕ್ಕಾಗುತ್ತಿರುವ ಕ್ಷೇತ್ರಸುಧಾರಣೆಯು [illegible] ಬಹುಕಡಿಮೆಯಾದುದಾಗಿದೆ. ದೇವಸ್ಥಾನದ ಆದಾಯವು ಕೊಲ್ಹಾಪುರಸಂಸ್ಥಾನಿಕರ [illegible] ಸ್ಥಾನದ ಹೊರಗಿನ ಯಾತ್ರಾಸ್ಥಳದ [illegible] ಕೊಲ್ಹಾಪುರ ಸಂಸ್ಥಾನದವರ ಪಕ್ಷದಲ್ಲಿಯೂ [illegible] ಇದಕ್ಕೆ ಕಾರಣವಾಗಿದೆ. ಹೀಗೆ [illegible] ಯನ್ನು ತಪ್ಪಿಸಿ ಅದನ್ನು ಜಗತ್ತಿನಲ್ಲಿ ತೀರಿದ ಕೊಂಡರೆ ಈ ಕ್ಷೇತ್ರದ ಸುಧಾರಣೆಯು ಸುಗಮವನ್ನು [illegible] ಮಾಡಬಹುದು. ಈ ವರುಷ ಸಂಘದವರು ಯಾತ್ರಾಕಾಲದಲ್ಲಿ ತಾ|| ೨೧-೧೨-೧೯೩೪ ನೆಯ ಶುಕ್ರವಾರ ದಿವಸ ಸಾರ್ವಜನಿಕಸಭೆಯನ್ನು ಬೆಳಗಾಂವಿಯ ಸುಪ್ರಸಿದ್ಧ ಶ್ರೀಮಂತರೂ ವೀರಶೈವ ಸಮಾಜ ಸೇವಾಧುರೀಣರೂ ಆದ ಶ್ರೀಮಾನ್ ಉಪ್ಪಿನವೀರಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಸಭೆಗೆ ವೀರಶೈವ ಗುರುವರ್ಗದ ಪಟ್ಟಾಧಿಕಾರಿಗಳು ದಯಮಾಡಿಸಿದ್ದರಿಂದ ಸಭೆಯು 'ಶಿವ ಸಭೆ' ಯಂತೆ ಶೋಭಿಸುತ್ತಿತ್ತು. **ಹೂಲಿ ಸಾಂಬಯ್ಯಸ್ವಾಮಿ ಮಠದ ಶ್ರೀ|| ಷ|| ಬ್ರ|| ಚರಮೂರ್ತಿಸ್ವಾಮಿಗಳು** ಆಗಮಿಸಿದ್ದರು. ಇವರು ಕೇವಲ ಚಿಕ್ಕವಯಸ್ಸಿನವರಿದ್ದು ಬ್ರಹ್ಮತೇಜೋವಿಶಿಷ್ಟರಾಗಿ ಅಘಟಿತಘಟನಾ ಸಾಮರ್ಥ್ಯವುಳ್ಳವರಾಗಿರುವರು. ಇವರ ಮೇಲಿರುವ ಜನತೆಯ ಭಕ್ತಿವಿಶ್ವಾಸಕ್ಕೆ ಎಣೆಯಿಲ್ಲದಾಗಿದೆ. ಮಹಾತ್ಮರುಗಳಾದ ಈ ಗುರುವರೇಣ್ಯರು ಸಭೆಗೆ ಆಕಸ್ಮಾತ್ತಾಗಿ ಆಗಮಿಸಿ ಸಂಘದವರಿಗೆ ಅನುಗ್ರಹಪೂರ್ವಕವಾಗಿ ಆಶೀರ್ವದಿಸಿದ್ದು ಅತ್ಯಂತ ಸಂತೋಷದ ಸಂಗತಿಯು. ಅಂದಿನ ಸಭೆಯು ಕಾರ್ಯಕ್ರಮಗಳು ಸರ್ವೋತ್ತಮವಾಗಿ ನಡೆಗಿದವು. ವೇ|| ಶಿರೋಳ ಪಂಚಾಕ್ಷರ ಶಾಸ್ತ್ರಿಗಳವರು ಶಿವಕ್ಷೇತ್ರಯಾತ್ರಾ ವಿಷಯವಾಗಿ ಭಾಷಣಮಾಡಿದರು. ಸೇವಾಸಂಘದ ಚಾಲಕರು ತಮ್ಮ ಸಂಘದ ವತಿಯಿಂದ ಇದುವರೆಗಾದ ಕಾರ್ಯಕ್ರಮಗಳನ್ನು ವಿವರಿಸಿದರು. ಸಭಾಧ್ಯಕ್ಷರು ಸಂಘದವರ ಕಾರ್ಯಕಲಾಪಗಳನ್ನು ವಿಮರ್ಶಿಸುತ್ತ ಸಂಘದೇಳ್ಗೆಯ ಬಗ್ಗೆ ತಮ್ಮ ಅಮೋಘವಾದ ಅಭಿಪ್ರಾಯವನ್ನು ಸೂಚಿಸಿ ಸಭೆಯನ್ನು ಸಮಾಪ್ತಿಗೊಳಿಸಿದರು.

ಪುನಃ ಸಾಯಂಕಾಲಕ್ಕೆ ಸಾರ್ವಜನಿಕಸಭೆ ಸೇರಿತು. ಇಗ್ಗಿ ಮಯೂರತೀರ್ಥದಲ್ಲಿ ಅನುಷ್ಠಾನಸ್ಥರಾಗಿದ್ದ ಗುರುನಾಥಪಪ್ಪ ಎಂಬವರು 'ಬ್ರಹ್ಮಚರ್ಯ' 'ಬ್ರಹ್ಮೋಪಾಸನ' ಎಂಬೀ ವಿಷಯಗಳ ಮೇಲೆ ಅಮೋಘವಾದ ಭಾಷಣವನ್ನು ಮಾಡಿದರು. ಆ ಮೇಲೆ [illegible] ವರ ಭಾಷಣಗಳು ಅಸ್ಪೃಶ್ಯತಾನಿವಾರಣೆಯ ಬಗ್ಗೆ ನಡೆಯುತ್ತಲಿದ್ದಾಗ ಸಭೆಯಲ್ಲಿ ವಿಶೇಷಗಲಭೆಯಾಗತೊಡಗಿತು. ಅಂದಿನ ಆ ಗದ್ದಲದ ಸದ್ದನ್ನು ವೇ|| ಶಿರೋಳ ಪಂಚಾಕ್ಷರಶಾಸ್ತ್ರಿಗಳು ಶಾಂತಗೊಳಿಸಿದರು. ಅಂತೂ ಈ ಅಸ್ಪೃಶ್ಯತಾನಿವಾರಣೆಯ ಭೂತವು ಈ ಸಭೆಯಲ್ಲಿ ಪಣಿಕೆಹಾಕಿ ಅವಮಾನಹೊಂದಿತು. ಸನಾತನಧರ್ಮದ ಪವಿತ್ರಕ್ಷೇತ್ರದಲ್ಲಿ ಇದರ ಹೆಸರನ್ನೆತ್ತುವಂತಿಲ್ಲದಾಗಿದೆ. ಅದು ಏನೇ ಇರಲಿ ಗೊಡಚಿಕ್ಷೇತ್ರ ಸುಧಾರಣೆಗಾಗಿ ಸ್ಥಾಪಿಸಲ್ಪಟ್ಟ ಸೇವಾಸಂಘದವರಿಂದ ಈ ವರುಷ ಯಾತ್ರೆಯಲ್ಲಿ ಯಾತ್ರಿಕರಿಗೆ ವಿಶೇಷ ಅನುಕೂಲತೆಗಳೊದಗಿದವು. ಕಡಕೋಳದ ಬಾಲವೀರಪ್ಪನವರ ಕಂಪನಿ ನಾಟಕದ ದವರು ವಿಶೇಷ ಶ್ರಮವಹಿಸಿ ಕೆಲಸ ಮಾಡಿದರು. ವೀರಶೈವರ ಕ್ಷೇತ್ರವಾದ ಇಲ್ಲಿ ಧರ್ಮೋಪದೇಶ ಸಭೆಯನ್ನು ಸ್ಥಾಪಿಸಿದರೆ ಮತ್ತೊಂದು ಶ್ರೇಯಸ್ಕರ ಕಾರ್ಯವನ್ನು ಸಾಧಿಸಿದಂತಾಗುವದು. ಸೇವಾಸಂಘದವರ ಕಾರ್ಯಗಳು ಅಭಿವೃದ್ಧಿಯನ್ನು ಹೊಂದುವಂತೆ ಶ್ರೀ ವೀರೇಶನು ಅನುಗ್ರಹಿಸಲೆಂದು ಪ್ರಾರ್ಥಿಸುವ

ನಿಮ್ಮ ಯಾತ್ರಿಕ

ಗುರುನಾಮಸಂಕೀರ್ತನ ಮಹಿಮೆ

ಪ್ರತಿಯೊಬ್ಬನೂ ಗುರುನಾಮಸ್ಮರಣೆಯಿಲ್ಲದೆ ಮೋಕ್ಷವನ್ನೂ, ಐಹಿಕ ಸೌಖ್ಯವನ್ನೂ ಎಂದೂ ಹೊಂದಲಾರನೆಂದು ಸರ್ವ ಶಾಸ್ತ್ರಗಳು ಸಿಂಹಗರ್ಜನೆಯನ್ನು ಮಾಡುತ್ತಿರುವ ವಿಷಯವು ಸರ್ವರಿಗೂ ವೇದ್ಯವೇ ಆಗಿದೆ.

ಕರಡಿಮಹಾ ಸಂಸ್ಥಾನಕ್ಕೆ ಸೇರಿದ ಮೈಂದರಗಿ [illegible] ಊರಲ್ಲಿ ಕಳೆದ ತಿಂಗಳು ತಾ|| ೨೦ರಿಂದ ೨೪ರ ವರೆಗೆ ಶಿವಬಸವಸ್ವಾಮಿಯ ಯಾತ್ರೆಯು ನೆರವೇರಿತು. ಯಾತ್ರೆಗೆ ಸದರಿ ಸಂಸ್ಥಾನಾಧಿಪತಿಗಳಾದ ಶ್ರೀಮಂತ ಬಾಪೂಸಾಹೇಬರು ಆಗಮಿಸಿದ್ದರು. ಅನೇಕ ಕಡೆಯಿಂದ ಎನ್ನುವ ಭಜನಾಸಂಘದವರೂ, ಮಲ್ಲಯ್ಯನವರೂ ಬಂದಿದ್ದರು. ಅದೇ ಪ್ರಕಾರ ಸೋಲಾಪುರ ತಾಲೂಕ ದಿಂಡೂರು ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರೂ, ಘೋತ್ರೀ ಗ್ರಾಮದ ಶ್ರೀ [illegible]

ದ್ಗುರು ಪಂಡಿತಾರಾಧ್ಯ ವ್ಯಾಯಾಮ ಮಂದಿರದವರೂ ಕೂಡ ಬಂದಿದ್ದರು ಎಲ್ಲಾ ಭಜನಾಸಂಘದವರಿಂತಲೂ ದಿಂಡೂರು ಭಜನಾಸಂಘದವರೇ ಮೇಲ್ಪಾದದಕ್ಕಾಗಿ ಸಂಸ್ಥಾನಾಧಿಪತಿಗಳು ರಜತ ಮೆಡಲ್ಲನ್ನು ಕೊಟ್ಟರು ಶಂಕರನೆಂಬ ೧೫ ವರ್ಷದ ಬಾಲಕನನ್ನು ಬಹಳವಾಗಿ ಮರ್ಯಾದಿಸಿದರು. ಇದಲ್ಲವೇ ಗುರುಸ್ಮರಣೆಯ ಮಹಿಮೆಯು? ಈ ಭಜನಾಸಂಘಪ್ರಕರಾದ ವೀರಯ್ಯನವರು ಟೆಂಚೋಲಿ ಮತ್ತು ಚಾಲಕರಾದ ನಿಜಗುಣಸ್ವಾಮಿ ದಿಂಡೂರು ಇವರು ಕೈಕೊಂಡ ಕಾರ್ಯವು ಸಂಸ್ಮರಣೀಯವಾಗಿದೆ.

ಘೋತ್ರೀ ಪಂಡಿತಾರಾಧ್ಯ ವ್ಯಾಯಾಮಮಂದಿರದವರು ಎಲ್ಲರಲ್ಲಿಯೂ ಪಾಸಾದರು. ಪ್ರತಿಯೊಬ್ಬರೂ ಕುಸ್ತಿ ಹಿಡಿಯುವದಕ್ಕಿಂತ ಪೂರ್ವದಲ್ಲಿಯೂ, ಕುಸ್ತಿಯನ್ನು ಹೊಡೆಯುವಾಗಲೂ "ಶ್ರೀಮಜ್ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜಯ" ಎಂಬ ಮಂತ್ರ ಜಯಘೋಷವನ್ನೇ ಮಾಡುತ್ತಿದ್ದರು. ಎಷ್ಟು ಜನರು ಕುಸ್ತಿಯನ್ನು ಹಿಡಿದರೋ ಅವರೆಲ್ಲರೂ ಜಯಶಾಲಿಗಳಾದರು. ಅವರಲ್ಲಿ ಮುಖ್ಯನಾದ ವಿರೂಪನೆಂಬ ಜಟ್ಟಿಯಂತೂ ಕುಸ್ತಿಯನ್ನು ಹೊಡೆಯುವಾಗ್ಗೆ ಆಚಾರ್ಯಜಯಘೋಷದೊಡನೆ ಎತ್ತಿ ಸಂಸ್ಥಾನಾಧಿಪತಿಗಳ ಮುಂಭಾಗದಲ್ಲಿ ತಂದು ಒಗೆದನು. ಇದನ್ನು ನೋಡಿ ಸರ್ವರೂ ಕರತಾಡನದೊಡನೆ ತಮ್ಮ ಆನಂದವನ್ನು ವ್ಯಕ್ತಗೊಳಿಸಿದರು. ನೋಡಿದಿರಾ ಗುರುನಾಮಮಹಿಮೆಯನ್ನು? ಯಾತ್ರಿಕರೆಲ್ಲ ಸರ್ವರನ್ನೂ ಊರತುಂಬೆಲ್ಲ ಮೆರೆಯಿಸಿ ಊಟವನ್ನು ಸದರಿ ಸರಕಾರದವರಿಂದ ಕೊಡಿಸಿದರು. ನ್ಯಾಂದಗಿ ಗ್ರಾಮದವರು ಬೆರಗಾಗಿ ಇದೇನು? ಈ ಘೋಷವನ್ನು ಮಾಡುವವರೆಲ್ಲರೂ ಜಯಶಾಲಿಗಳಾಗುವರಲ್ಲ! ಇದರಲ್ಲೇನು ಮಹತ್ವವಿರಬಹುದು ಎಂದು ಪದೇಪದೇ ನುಡಿಯುತ್ತಿದ್ದರು. ಗುರುಮಹತ್ವಕ್ಕೆ ಎಣೆಯೇ! ಗುರುಮಹತ್ವಕ್ಕೆ ಬೆಲೆಯೇ! ಜ್ಞಾನದಿಂದ ಕಂಡಕಂಡಂತೆ ಗುರುನಿಂದೆಯನ್ನು ಮಾಡಿ ದಂಡಧರನ ಕೋಪಕ್ಕೆ ಪರರಾಗಿ ನರಕಕುಂಡದಲ್ಲಿ ಬೀಳಲು ಯತ್ನಿಸುವ ಮಹಾಶಯರೇ ಇನ್ನಾದರೂ ಎಚ್ಚರರಾಗಿ ಗುರುನಾಮ ಸಂಕೀರ್ತನೆಯನ್ನು ಮಾಡಿ ಪುನೀತರಾಗಿರಿ.

ಓರ್ವ ಯಾತ್ರಿಕ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಭೂರುದ್ರಗಣಸಂತರ್ಪಣೆ.

ಶಿವಮೊಗ್ಗಾ ಡಿ|| ಆಯನೂರು ಗ್ರಾಮದಲ್ಲಿರುವ ರಾ|| ಧರ್ಮವರದ ಶಿವರುದ್ರಪ್ಪನವರು ತಮ್ಮ ಚಿ|| ರಾ|| ತಿಪ್ಪಯ್ಯನೆಂಬ ಬಾಲಕನ ಅಪಾಯಕರವಾದ ಕಂಠಶೂಲವ್ಯಾಧಿಯು ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಶೀರ್ವಾದಬಲದಿಂದ ಪರಿಹರವಾದರ ಜ್ಞಾಪಕಾರ್ಥವಾಗಿ ಸಂಕಲ್ಪಿಸಿದ್ದಂತೆ 31-12-34 ನೇ ಸೋಮವಾರ ಮಾಹೇಶ್ವರರನ್ನು ಮನೆಗೆ ಆಹ್ವಾನಿಸಿ ಈ ಗಣವರ್ಯರ ಸಮಕ್ಷಮ ಕುಟುಂಬವರ್ಗದವರೊಡನೆ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರವನ್ನು ಸದ ಕ್ರಿಯೊಡನೆ ಆರಾಧಿಸಿ ಮೃಷ್ಟಾನ್ನ ಭೋಜನದಿಂದ ಸರ್ವರನ್ನೂ ತೃಪ್ತಿಪಡಿಸಿ ಸದ್ಗುರು ಚರಣಸೇವೆಯು ದೊರಕುವುದು ದುರ್ಲಭವೆಂಬ ಶಾಸ್ತ್ರ ಪ್ರವಚನವನ್ನು ಅತ್ಯಪೂರ್ವ ಸಾರ್ಥಕಪಡಿಸಿ ನಂಬಿದ ಮಾನವರ ಬೆಂಬಲನು ಗುರುವು ಎಂಬುದಕ್ಕೆ ತಮ್ಮ ಪುತ್ರನ ಕಂಠವಾದ ವ್ಯಾಧಿ ನಿವಾರಣೆಯಾದುದೇ ನಿದರ್ಶನವೆಂದು ಶ್ರದ್ಧೆಯಿಂದ ಗುರುಸಾರ್ವಭೌಮರನ್ನು ವಂದಿಸಿ ಸಮಾರೋಪಕ್ಕೆ ಪ್ರಭಾಪೋಷಣಕ್ಕಾಗಿ ಒಂದು ರೂಪಾಯಿಯನ್ನು ಕಳುಹಿಸಲು ವೇ|| ಗುಬ್ಬಿ ಶಿವತತ್ವಪಂಡಿತ ಶ್ರೀ ಶಾಸ್ತ್ರಿಗಳವರ ವಶಕ್ಕೆ ಸಮರ್ಪಿಸಿ ತಮ್ಮ ಜನ್ಮ ಸಾಫಲ್ಯಗೊಳಿಸಿಕೊಂಡರು.

ಓರ್ವ ಗುರುಚರಣಸೇವಕ

ಒಬ್ಬ ವಿದ್ಯಾರ್ಥಿಯ ಪ್ರಣಯಪ್ರಯತ್ನ.

ರಾಜಧಾನಿಯಲ್ಲಿ ನಿಜವಾಗಿ ನಡೆದ ಕಥೆ.

ಒಬ್ಬ ಕಾಲೇಜು ವಿದ್ಯಾರ್ಥಿ ಒಬ್ಬಳು ಕ್ರೈಸ್ತ ಜಾತಿಯ ಯುವತಿ. ಯುವಕನು ಆಕೆಯಲ್ಲಿ ಅತ್ಯಂತವಾಗಿ ಆಸಕ್ತಿಯುಳ್ಳವನಾದನು. ಬೀದಿಯಲ್ಲಿ ಸಂಚರಿಸುತ್ತಿರುವಾಗಲೂ, ಕಾಲೇಜಿಗೆ ಹೋಗುತ್ತಿರುವಾಗಲೂ ಎಡೆಬಿಡದೆ ಆಕೆಯ ದೃಷ್ಟಿಗೆ ಬೀಳುತ್ತ ಆಕೆಗೆ ಸಂಜ್ಞೆಯನ್ನು ಮಾಡುತ್ತಿದ್ದನು. ಆಕೆಗೆ ಆತನ ಪ್ರಯತ್ನಗಳಲ್ಲಿ ಸ್ವಲ್ಪವೂ ಅನುಮೋದನೆಯಿರಲಿಲ್ಲ. ಉದಾಸೀನದಿಂದಿದ್ದಳು. ಆದರೆ ಯುವಕನು ಮಾತ್ರ ಆಕೆಯನ್ನು ಪದೇಪದೇ ಪೀಡಿಸುತ್ತಲೇ ಇದ್ದನು. ಆಕೆಯು ತನ್ನ ತಂದೆಗೆ ಈ ಎಲ್ಲಾ ವಿವರವನ್ನು ತಿಳಿಸಿದಳು. ತಂದೆಯು ಒಂದು ಉಪಾಯವನ್ನು ಯೋಚಿಸಿದನು. ಯುವಕನನ್ನು ಬಲೆಯಲ್ಲಿ ಸಿಕ್ಕಿಸಿಕೊಂಡು ಬುದ್ಧಿಗಲಿಸುವ ಯೋಜನೆಯನ್ನು ಮಾಡಿದನು.

ಮಾರನೆಯ ದಿನ ಯುವಕನನ್ನು ಕಂಡಾಗ ಅವನನ್ನು ಮನೆಗೆ ಬರುವಂತೆ ಹೇಳಬೇಕೆಂದು ಮಗಳಿಗೆ ತಿಳಿಸಿದನು. ಅದರಂತೆಯೇ ಬೀದಿಯಲ್ಲಿ ಯುವಕನೂ ಯುವತಿಯೂ ಸಂಧಿಸಿದರು. ಯುವತಿಯು ಯುವಕನಲ್ಲಿ ಅತ್ಯಂತ ಪ್ರೀತಿವಿಶ್ವಾಸಗಳನ್ನು ತೋರ್ಪಡಿಸಿದಳು. ತನ್ನ ತಂದೆಯು ಪೇಟೆಯಲ್ಲಿ ಇಲ್ಲದಿರುವ ಒಂದು ಸಮಯವನ್ನು ಆತನಿಗೆ ಹೇಳಿ ಆಗ ತನ್ನ ಮನೆಗೆ ಬರಬೇಕೆಂದು ಹೇಳಿದಳು. ತರುಣನು ಬಹಳ ಸಂತೋಷದಿಂದ ಒಪ್ಪಿ ಸೊಗಸಾದ ಒಳ್ಳೆ ಬಟ್ಟೆಗಳಿಂದ ಶೃಂಗಾರ ಮಾಡಿಕೊಂಡು ಸಮಯಕ್ಕೆ ಸರಿಯಾಗಿ ಅವರ ಮನೆಗೆ ಹೋಗಿ ಒಂದು ಕುರ್ಚಿಯ ಮೇಲೆ ಅಟ್ಟಹಾಸದಿಂದ ಕುಳಿತನು.

ಇತ್ತ ತಂದೆಯೂ, ಮಗಳೂ ಈ ನೂತನ ಅತಿಥಿಗೆ ತಕ್ಕ ಸತ್ಕಾರವನ್ನು ಮಾಡಲು ಎಲ್ಲ ಏರ್ಪಾಡುಗಳನ್ನು ಮಾಡಿ ಸಿದ್ಧರಾಗಿದ್ದರು. ತಂದೆಯು ಮನೆಯ ಒಂದು ಕೋಣೆಯಲ್ಲಿದ್ದನು. ಒಂದು ದೊಡ್ಡ ಕೊಡದಲ್ಲಿ ಸಗಣಿಯನ್ನು ನೀರಿನೊಡನೆ ಹುಯ್ದು ಕಲಸಿ ಇಟ್ಟಿದ್ದನು. ಯುವಕನು ಒಂದು ಸ್ವಲ್ಪ ಹೊತ್ತಿನೊಳಗೆ ಕುಶಲಪ್ರಶ್ನೆಗಳಾಗಿ ಮುಗಿಯುವ ಹೊತ್ತಿಗೆ ತಂದೆಯು ಹೊರಗೆ ಬಂದು ಉದ್ರಿಕ್ತನಾಗಿ ಯುವಕನ ಜುಟ್ಟು ಹಿಡಿದು ಬೀದಿಗೆ ಎಳೆದು ತಂದು ಒಡನೆ ಸಿದ್ಧವಾದ ಸಗಣಿ ನೀರನ್ನು ಅನಾಮತ್ತಾಗಿ ಅವನ ಮೇಲೆ ಅಭಿಷೇಕ ಮಾಡಿದನು. ಮತ್ತು ಚೆನ್ನಾಗಿ ಪ್ರಹಾರಗಳನ್ನು ಕೊಟ್ಟರು. ಬೀದಿಯ ಜನರೆಲ್ಲರೂ ಬಂದು ಸೇರಿದರು. ಯುವಕನು ನಿರಾಶನಾದನು. ಗುಟ್ಟು ರಟ್ಟಾಯಿತು. ಆಕೆಯು ನಿರಾತಂಕಳಾದಳು. ತನ್ನ ಸೊಗಸಾದ ಬಟ್ಟೆಬರೆಗಳೆಲ್ಲವೂ ಕಶ್ಮಲಮಯವಾದವು. ಆದರ ಪಡ್ವರ್ಥ ಮೀಸೆ ಮಣ್ಣಾಗಲಿಲ್ಲವೆಂಬಂತೆ ಆತನು ನಿಶ್ಚಲನಾಗಿದ್ದನು. ಆ ಯುವತಿಯಲ್ಲಿ ತನಗೆ ನಿಜವಾದ ಪ್ರೇಮವಿರುವುದೆಂದೂ, ಯುವತಿಗೆ ತನ್ನಲ್ಲಿ ವಾಸ್ತವವಾದ ಪ್ರೀತಿಯಿರುವುದೆಂದೂ, ಅದಕ್ಕೆ ಯಾರೂ ಎಂದಿಗೂ ಭಂಗತರಲು ಸಾಧ್ಯವಿಲ್ಲವೆಂದೂ ಹೇಳುತ್ತ ಹೊರಟುಹೋದನು.

(ನವಜೀವನ)

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಪುಂತದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಜನನಮೃತ ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಪೂರೈಸುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ಖರೀದಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಗಳು

ಧಾತುಪುಷ್ಟಿಲೇಹ.

1 ಇದು ಬಲಹೀನ ದೇಹಗಳಿಗೆ ಅದು ತವಾದ ಔಷಧಿ, ಇದರ ಸೇವನೆಯಿಂದ ಮಲಬದ್ಧತೆ, ಒಳಜ್ವರ, ಅಜೀರ್ಣ, ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶ್ಶಕ್ತಿ, ಕಾಲು ಸೇಳುವಿಕೆ, ರಕ್ತಹೀನತೆ, ಬೆನ್ನು ನೋವು, ತಲೆ ನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಸ್ವಪ್ನಾವಸ್ಥೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಯೋಗಶಕ್ತಿ ಕುಂದಿರುವಿಕೆ, ಶರೀರದ ಉಷ್ಣತೆ ಇವುಗಳನ್ನೆಲ್ಲಾ ಹೋಗಲಾಡಿಸಿ ರಕ್ತವೃದ್ಧಿಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಡಪ್ಪಿ 1ಕ್ಕೆ 2—8—0 3ಕ್ಕೆ 7—0—0

2 **ಮೇಹಕುಠಾರಪ್ರಮೇಹ** ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವದು. ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ್ಗ ಬರುವದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು ಡಪ್ಪಿ 1ಕ್ಕೆ 2—8—0 3ಕ್ಕೆ 7—0—0

3 **ಮಲೇರಿಯಾ ನಿವಾರಿಣಿ** ಇದು ಮಲೇರಿಯಾ ದಿನಬಿಟ್ಟು ಬರುವ ಜ್ವರ ಚಳಿಜ್ವರ ಇಂಫ್ಲುಯಂಜಾ ನ್ಯೂಮೋನಿಯಾ, ತಾಪಜ್ವರ, ಪ್ಲೀಹ ಇವೇ ಮುಂತಾದವುಗಳಿಗೆ ದಿವ್ಯೌಷಧಿ ಬಾಟ್ಲಿ 1ಕ್ಕೆ 1—8—0 ಸಣ್ಣ ಬಾಟ್ಲಿಗೆ 0—13—0 3ಕ್ಕೆ 4—0—0 ಸಣ್ಣ ಬಾಟ್ಲಿ 3ಕ್ಕೆ 2—4—0

ಬಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಿಗೆ ತಕ್ಕದಾದ ಔಷಧಿ ರವಾನಿಸಲಾಗುತ್ತೆ. ಕ್ಯಾಟಲಾಗಿಗೆ ಬರೆಯಿರಿ

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜೀಸಿಯನ್, ರಥವೀದಿ, ನಂಬರು 271 ಮಂಗಳೂರು.

ಔಷಧಿ ಸಿಕ್ಕುವ ಸ್ಥಳಗಳು—
ಮೆಸ್ಸರ್ಸ್ ಪೆಟರಜ್ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರ ... ಫೋಟೋ ಸೈಜು ...	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ... ಮುಮುಕ್ಷುಗಳಿಗೆ ಶಿವಸಿದ್ಧಾಂತವನ್ನು ... ಫೋಟೋ ಸೈಜು ...	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ... ಫೋಟೋ ಸೈಜು ...	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ... ಫೋಟೋ ಸೈಜು ...	೦—೦—೯
ಸ್ವಸ್ತಿ ಶ್ರೀ ... ಫೋಟೋ ಸೈಜು ...	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ... ಫೋಟೋ	೦—೧—೦
ಶ್ರೀಮದುಜ್ಜಯಿನಿ ಸಿಂಹಾಸನಾಧೀಶ್ವರ ... ಫೋಟೋ	೦—೧—೦
ಶ್ರೀಮದ್ರಂಭಾಪುರಿ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ... ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ... ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ... ಮುಮುಕ್ಷುಗಳಿಗೆ ... ಧಾರಣವನ್ನು ಮಾಡುತ್ತಿರುವ ... ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ... ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ... ಶಾಸ್ತ್ರಿಗಳವರು ... ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ...	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ... ಅತ್ಯಂತ ಸುಂದರವಾದ ಫೋಟೋ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ... ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ... ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ... ಫೋಟೋ	೦—೦—೯
... ಉಜ್ಜಯಿನೀ ಜಗದ್ಗುರುಗಳವರ ... ಫೋಟೋ	೦—೧—೦

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ ... ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು.

(Registered Trade Mark)

ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪಿನಸಿ, ಒಂದು ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಒಸಡೋಷ ಮೊದಲಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಮುಖರು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಪಾದರಿಸೀಸೆ ಭುಗಸಟ್ಟಿ ಕಳುಹಿಸಲಾಗುವುದು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ. ಪಿ. ೦ ...

ಡಜ಼ನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ. ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[3] ಪೋ. ಬಾ. ೫೧೦, ಮದರಾಸ್

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ... ವಚನಾವಳಿ	೩ ಆಣೆ
...	೮ ಆಣೆ
ಗೋತ್ರ ... (ಎರಡನೆಯ ಆವೃತ್ತಿ)	೧ ಆಣೆ
... (ಎರಡನೆಯ ಆವೃತ್ತಿ ಸಂಸ್ಕೃತ)	೧ ಆಣೆ
... (ಎರಡನೆಯ ಆವೃತ್ತಿ)	೧ ಆಣೆ
ಶ್ರೀ ... (ಎರಡನೆಯ ಆವೃತ್ತಿ)	೧ ಆಣೆ
... (ಎರಡನೆಯ ಆವೃತ್ತಿ)	೧ ಆಣೆ
... (ಎರಡನೆಯ ಆವೃತ್ತಿ)	೨ ಆಣೆ
ಶ್ರೀ ... (ಎರಡನೆಯ ಆವೃತ್ತಿ)	೨ ಆಣೆ
...	೩ ಆಣೆ
ವೀರಶೈವ ...	೪ ಆಣೆ
ಶಿವಶಕ್ತಿ ...	೨ ಆಣೆ
ಶ್ರೀಗುರು ...	೨ ಆಣೆ
ವೀರಶೈವ ... (ಎರಡನೆಯ ಆವೃತ್ತಿ)	೫ ಆಣೆ
... (ಎರಡನೆಯ ಆವೃತ್ತಿ)	೬ ಆಣೆ
... (ಎರಡನೆಯ ಆವೃತ್ತಿ)	೪ ಆಣೆ
ವೈದಿಕ ...	೪ ಆಣೆ
ಶ್ರುತಿ ...	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯ ... (ಪಂಡಿತರ ಕೃತಿ)	೮ ಆಣೆ
ಬಸವ ... ದಿವಾಕರ (ಎರಡನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀ ಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ...
पंडित श्रीकाशीनाथशास्त्री यांचें भाषण (मराठी)	८ ...
Speeches by Pandit Shri Kashinatha Shastri (*English*)	12 ...
ವೇದೋಕ್ತ ಶಿವಪೂಜಾವಿಧಿ	೧೦ ...
ವೀರಶೈವರತ್ನ (ಎರಡನೆಯ ಆವೃತ್ತಿ)	೧೨ ...
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ...
ಮಾಹೇಶ್ವರ ದೀಕ್ಷಾವಿಧಿ (ಎರಡನೆಯ ಆವೃತ್ತಿ)	೧೨ ...
ಸಿದ್ಧಾಂತಶಿಖಾಮಣಿ ... (ತ್ರಿಲೋಚನಶಿವಾಚಾರ್ಯ ಕೃತ)	೧೨ ...
... ಸಿದ್ಧಾಂತದರ್ಪಣ	೧೨ ...
ಸಚಿತ್ರ ರೇಣುಕವಿಜಯ (ಎರಡನೆಯ ಆವೃತ್ತಿ)	೧ ...
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ...
... (ವೀರಶೈವಭಾಷ್ಯ)	೧ ...
ವೀರಶೈವಸಿದ್ಧಾಂತಸುಧಾಕರ	೨ ...
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೧ ...
... ರಜಿಸ್ಟರ್ ಬುಕ್	೧ ...
... (ಕನ್ನಡ ... ಪುಟ)	೬ ...
लिंगधारणचंद्रिका (संस्कृत)	३ ...
महानारायणोपनिषत् (वीरशैवभाष्य-संस्कृत)	१ ...
वीरशैवेंदुशेखर (संस्कृत)	१ ...

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸ... ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವು...

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈ...

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಾಪಕರಾದ ವೇ|| ಬ್ರ|| ಪಂಡಿತ ... ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟ...

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯರೋಂ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೪ ನೇ ಜನವರಿ ೧೯೩೫ [ಸಂಚಿಕೆ ೩೫

ಕರ್ನಾಟಕಆಯುರ್ವೇದಸಮ್ಮೇಲನ, ಹುಬ್ಬಳ್ಳಿ.

ಸಪ್ತಮ ಕರ್ನಾಟಕಆಯುರ್ವೇದ ಸಮ್ಮೇಲನವು ಹುಬ್ಬಳ್ಳಿಯಲ್ಲಿ ಕಳೆದ ತಿಂಗಳ ೨೬ ನೆಯ ತಾರೀಖಿನ ದಿವಸ ವಿಜೃಂಭಣೆಯಿಂದಾಗಿ [illegible] ಅದಕ್ಕೆ ಶ್ರೀ ಕ್ಷೇತ್ರಕಾಶಿಯ ಶ್ರೀ ಸಿಂಹಾಸನಾಧೀಶ ಗುರುಕುಲ ಸಂಸ್ಥಾನ ಜಂಗಮವಾಡೀ ಮಠದಲ್ಲಿರುವ ವೈದ್ಯ ವಿದ್ಯಾ ಔಷಧಾಲಯ ಸಂಸ್ಥಾಪಕರಾದ ಬೆಂಗಳೂರಿನ ಆಯುರ್ವೇದಾಚಾರ್ಯ ಶ್ರೀ ಶಿವಕುಮಾರಸ್ವಾಮಿಗಳವರು ವಿಶೇಷ ಭಾಗಿಗಳಾಗಿದ್ದರೆಂದು ತಿಳಿಸಲು ಆನಂದವೆನಿಸುತ್ತದೆ ಅವರು ಕಾಶಿಯಿಂದ ದೊಡ್ಡ ಸ್ಥಳದಲ್ಲಿದ್ದರೂ ಕರ್ನಾಟಕದ ಅಭಿಮಾನದಿಂದ ಸರ್ವರಿಂದಲೂ ಸಮ್ಮೇಲನಕ್ಕೆ ಸಹಾಯಮಾಡಿದರು. ಸಮ್ಮೇಲನದ ವಿಷಯವನ್ನು [illegible] ಸಂಸ್ಥೆ [illegible] ಗಳನ್ನು ರಚಿಸಿ ಕಳುಹಿಸಿದ್ದರು ಅವುಗಳನ್ನು ನೋಡಿ ಅಧ್ಯಕ್ಷರೇ ಮೊದಲುಗೊಂಡು ಸರ್ವ ವಿದ್ವಜ್ಜನರೂ ಸಂತೋಷಪಟ್ಟರು. ಕರ್ನಾಟಕದಲ್ಲಿ ವಿಶೇಷತಃ ಪ್ರಾಂತ್ಯದಲ್ಲಿ ಇಂಥ ವಿದ್ವತ್ತು ನಮ್ಮೆಲ್ಲರಿಗೂ ಅಭಿಮಾನದ ಸಂಗತಿಯು. ಅವರಿಂದ ಕಳುಹಿಸಲ್ಪಟ್ಟ ಉತ್ತಮೋತ್ತಮ ರಸಾಯನ ಭಸ್ಮ ಗುಟಿಗೆ ಆಸವ ತೈಲ ಸಿದ್ಧೌಷಧಿ ಮೊದಲಾದ ಔಷಧಿಗಳು ಪ್ರದರ್ಶಿಸಲ್ಪಟ್ಟವು. ಆಯುರ್ವೇದೀಯ ಶಿಕ್ಷಣಪದ್ಧತಿ ಇತ್ಯಾದಿ ವಿಷಯ ಮೇಲೆ ಗೀರ್ವಾಣಭಾಷೆಯಲ್ಲಿ ನಿಬಂಧವನ್ನು ಬರೆದು ಕಳುಹಿಸಿದ್ದಾರೆ ಸಮ್ಮೇಲನಕ್ಕೆ ಬರಲು ಅವರಿಗೆ ಅಶಕ್ಯವಿದ್ದದ್ದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿ ಸಮ್ಮೇಲನದ ಯಶಸ್ವಿತೆಯ ವಿಷಯವಾಗಿ ಶುಭಸಂದೇಶವನ್ನು ತಂತಿಯದ್ವಾರಾ ಕಳುಹಿಸಿದರು ಸಮ್ಮೇಲನದ ಅಧ್ಯಕ್ಷರಾದ ಪಂಡಿತ ಭಿಷಗ್ರತ್ನ ಭಿಕಾಜಿ ರಾಮಚಂದ್ರ ದೇಗ್ಲೂರಕರ್ ಎಂ ಎ ಎಂ ಎಸ್‌ಸಿ ಎಲ್‌ಎಲ್ ಬಿ ಇವರು ಬಲ್ಯಲೆಕ್ಚರಿನಲ್ಲಿ ಶ್ರೀ ಶಿವಕುಮಾರಸ್ವಾಮಿಗಳನು ಕಾಶಿಯ ಒಳ್ಳೆ ಉತ್ಸಾಹಕರಿದ್ದಾರೆಂದು ಸಮ್ಮೇಲನದ ಸಭೆಯ ಮುಂದೆ ಹೇಳಿದ್ದಾರೆ ಇದೆಲ್ಲಾ ಸಂತೋಷಕರ ವಿಷಯವಾಗಿದೆ

ಓರ್ವ ಆಯುರ್ವೇದಾಭಿಮಾನಿ

ಕೊಲ್ಲಾಪುರ ಸಂಸ್ಥಾನದಲ್ಲಿ ಗಲಭೆ. ೯ ಜನ ಮುಸಲ್ಮಾನರ ಮರಣ

ಕೊಲ್ಲಾಪುರ ಸಂಸ್ಥಾನದ ಅಜಾರ್ರ ಎಂಬ ಕಡೆ ಪೋಲೀಸರು ಮುಸಲ್ಮಾನರ ಗುಂಪಿನ ಮೇಲೆ ಗುಂಡು ಹಾರಿಸಿದರು. ಪರಿಣಾಮವಾಗಿ ೯ ಜನರು ಮೃತರಾದರು ಅವರಲ್ಲಿ ಇಬ್ಬರು ಹೆಂಗಸರು ೨೦ ಜನರಿಗೆ ಗಾಯವಾಗಿದೆ ಸರಕಾರದವರು ಕೆಲಜನ ಮುಸಲ್ಮಾನರ ಮೇಲೆ ವಾರಂಟು ಹೊರಡಿಸಿದ್ದರು ಮುಸಲ್ಮಾನರು ಗುಂಪುಕಟ್ಟಿಕೊಂಡು ಅವರನ್ನು ಬಿಡುಮಾಡುವುದಕ್ಕೆ ಅಡ್ಡಿಪಡಿಸಿದರು. ಪೋಲೀಸರು ಗುಂಪನ್ನು ಬಳ್ಳಿಯವಾತಿನಿಂದ ಚದುರುವಂತೆ ಹೇಳಿದರು ಅದು ಸಾಧ್ಯವಾಗಲಿಲ್ಲ ವಾರಂಟು ಇದ್ದವರನ್ನು ಬಿಡುಗಡೆ ಮಾಡುವ ಸಲುವಾಗಿ ಪೋಲೀಸರು ಗುಂಪಿನಮೇಲೆ ಗುಂಡುಹಾರಿಸಬೇಕಾಯಿತು

ಅಜಾರ್ರದಲ್ಲಿ ಈಗ ಶಾಂತಿಯು ನೆಲಸಿದೆ ಇತರ ಕಡೆಯಿಂದ ೩ ಜನ ಡಾಕ್ಟರರೂ ಒಬ್ಬ ನರ್ಸೂ ಬರುತ್ತಾರೆ ದಿವಾನರು ನರ್ಸರೊಡನೆ ಪಟ್ಟ

[illegible] ಅನೇಕರಾಗಗಳನ್ನು ಸೋಡಿಕೆ [illegible] ಒಡ್ಡರಾದ ಕಾವಲಿನವರೂ [illegible] ಅಧಿಕಾರಿಗಳ [illegible] ಉಪದ್ರವಗಳನ್ನು [illegible] ಹೋದರು [illegible] ಇವರನ್ನು [illegible] ಉದ್ದೇಶವಾಗಿತ್ತು

[illegible]

[illegible] ತಿಂಗಳಿನ [illegible] ಇದಕ್ಕೆ ಕಾರಣ [illegible] ಸರ್ಕಾರದ [illegible] ಸರಕಾರದ ಅನುಮತಿ [illegible] ಗುಂಪದ [illegible] ಹೆಚ್ಚು [illegible] ಮಾಡಲು ಅಧಿಕಾರಿಗಳನ್ನು [illegible] ಇವರ ಅಗಸ [illegible] ಇವರ [illegible] ಕಿತ್ತು [illegible] ನಾಶಮಾಡಬೇಕೆಂದು [illegible] ಅವರು ಕೋಪಗೊಂಡು [illegible] ಗಾಡಿಗಳಲ್ಲಿದ್ದವನ್ನು [illegible] ಅಧಿಕಾರಿಗಳನ್ನು [illegible] ತೊಡಗಿದರು.

ಇದೇವ ಮೇಲೆ ಮಾಪಲೇದಾರರು [illegible] ಜನ ಮುಸಲ್ಮಾನ [illegible] ವರನ್ನು ವಧೆಮಾಡಿದರು ಇತರ ಕೆಲವರು ತಪ್ಪಿಸಿಕೊಂಡಿದ್ದಾರೆ ಪಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಪಟವರ್ಧನರವರು ಅವರನ್ನು ವಧೆಮಾಡುವುದಕ್ಕೆ ವಾರಂಟು ಹೊರಡಿಸಿದ್ದಾರೆ

ಬೋಸರ ಪ್ರಯಾಣ.

ಶ್ರೀ ಸುಭಾಷಚಂದ್ರಬೋಸರು ಚಿಕಿತ್ಸೆಗಾಗಿ ಯೂರೋಪಿಗೆ ಹೋಗಲು 10ನೆಯ ತಾರೀಖಿನ ದಿವಸ ಬೊಂಬಾಯಿಗೆ ಬಂದರು ಕಾಂಗ್ರೆಸ್ ಮುಖಂಡರು ಇವರನ್ನು ಸ್ಟೇಷನ್ನಿನಲ್ಲಿ ಎದುರುಗೊಂಡು ಹಾರತುರಾಯಿಗಳನ್ನು ಅರ್ಪಿಸಿ ಮರ್ಯಾದಿಸಿದರು ಅವರ ಮೇಲೆ ಇದ್ದ ಪೋಲೀಸು ಕಾವಲು ತೆಗೆಯಲ್ಪಟ್ಟಿತೆಂದು ತಿಳಿವ ಮೇಲೆ ಎರಡನೆಯ ತರಗತಿ ಪ್ರಯಾಣಿಕರ ವೇಟಿಂಗ್ ರೂಮಿನಲ್ಲಿ ಕುಳಿತು ಎರಡು ಗಂಟೆಗಳಕಾಲ ವಿಶ್ರಾಂತಿ ತೆಗೆದುಕೊಂಡು ಕಾಣಲು ಬಂದಿದ್ದ ಪತ್ರಿಕಾಪ್ರತಿನಿಧಿಗಳಿಗೆ ಈ ದೇಶದ ರಾಜಕೀಯ ಪರಿಸ್ಥಿತಿಯು ಉತ್ತಮಗೊಳ್ಳುವುದಕ್ಕೆ ಏನು ಮಾಡಬೇಕೆಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳುಹಿಸಿ ಜನಗಳ ಜಯಘೋಷದೊಡನೆ ವಿಕ್ಟೋರಿಯಾ ಎಂಬ ಹಡಗನ್ನು ಹತ್ತಿ ವಿಯೆನ್ನಾಕ್ಕೆ ಪ್ರಯಾಣಮಾಡಿದರು.

ಭೀಕರದರೋಡೆ.

ಎಂಪಿಸ ಬ್ಯಾಂಕಿನ ಸ್ಟೇಷನ್‌ಮಾಸ್ತರರ ಕೈಯಿಂದ ಹಣವನ್ನು ಕಿತ್ತುಕೊಂಡು ಓಡಿಹೋಗಲು ಒಬ್ಬ ಪಠಾಣನು ವಿಶೇಷ ಪ್ರಯತ್ನಮಾಡಿದನು ಸ್ಟೇಷನ್‌ಮಾಸ್ತರರು 3 ರೂಪಾಯಿಗಳುಳ್ಳ ಒಂದು ಹಣದ ಚೀಲವನ್ನು ಕೈಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದರು ಪಠಾಣನು ೪ ಜನರಿಗೆ ವಿಶೇಷ ಗಾಯಗೊಳಿಸಿದನು ಅವರಲ್ಲಿ ಒಬ್ಬನು ಪೋಲೀಸನವನು ಸಲ್ಪಹೊತ್ತಿನ ಮೇಲೆ ಅವನು ಮೃತಪಟ್ಟನು ಪಠಾಣನು ಕೈಯಲ್ಲಿದ್ದ ಚೀಲವನ್ನು ಕಿತ್ತುಕೊಂಡು ಓಡತೊಡಗಿದನು ಕೆಲವರು ಇವನನ್ನು ಹಿಡಿಯಲು ಪ್ರಯತ್ನಿಸಿದರು ಹೋಗಲು ಬಿಡದೆ ಆ ಮೂರು ಜನರಿಗೆ ಗಾಯ ಮಾಡಿದನು.

ಖೈದಿಯ ಪತ್ನಿಯೊಡನೆ ಜಡ್ಜಿಯ ವಿವಾಹ

ಒನ್ ಪಿಂಜಲಿನ್ ನ್ಯಾಯಾಧೀಶರಾದ ಎಚ್ ಬುಶ್‌ರವರು ಜಾರ್ಜ್ ಲಿಗಾಂಡ್ ಎಂಬವನನ್ನು ಕಳವಿಗಾಗಿ ಐದು ವರ್ಷ ಕಠಿಣ ಶಿಕ್ಷೆಗೆ ಗುರಿಮಾಡಿದರು ಇವನನ್ನು ವಿಚಾರಣೆ ಮಾಡುತ್ತಿದ್ದಾಗ ಈ ಖೈದಿಯ ಪತ್ನಿಯು ಅವನ ಪರವಾಗಿ ಸಾಕ್ಷ್ಯಕೊಡಲು ಬಂದಿದ್ದಳು ಅವಳ ಮುಖವನ್ನು ನೋಡಿ ನ್ಯಾಯಾಧೀಶರಿಗೆ ಮನೋವಿಕಲ್ಪವಾಗಿ, ಈ ಖೈದಿಯು ನಾಲ್ಕು ತಿಂಗಳ ಶಿಕ್ಷೆಯನ್ನನುಭವಿಸಿದ ತರುವಾಯ ಅವನಿಗೆ ೫ ವರ್ಷ ವಿದ್ದ ಶಿಕ್ಷೆಯನ್ನು ೯ ತಿಂಗಳಿಗೆ ಕಡಿಮೆಮಾಡಿದರು ಕೂಡಲೇ ಖೈದಿಯ ಪತ್ನಿಯು ಒಂದು ದಾಂಪತ್ಯ ವಿಚ್ಛೇದನದ ಅರ್ಜಿ ಹಾಕಿಕೊಂಡಳು ಅದು ಮಂಜೂರಾಯಿತು ಕೆಲವು ದಿನಗಳೊಳಗೆ ನ್ಯಾಯಾಧೀಶರೂ ಖೈದಿಯ ಪತ್ನಿಯೂ ಮೆಕ್ಸಿಕೋವಿಗೆ ಪ್ರಯಾಣ ಬೆಳಸಿ ಮದುವೆಯಾದರು ಈಗ ನ್ಯಾಯವಾದಿಗಳೂ ಜ್ಯೂರಿಗಳೂ ಈ ವಿಷಯವಾಗಿ ವಿಚಾರಣೆ ಮಾಡುತ್ತಿದ್ದಾರೆ ಅದನ್ನು ನೋಡಿ ನ್ಯಾಯಾಧೀಶರು ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿದ್ದಾರೆ

ಸ್ವೀಕಾರ

ಹ ಬ್ಬಳ್ಳಿಯಲ್ಲಿರುವ ಮ|| ರಾ|| ತಿಂಗಿನಕಾಯಿ ನಾಗಪ್ಪನವರ ಪುತ್ರ ಚಿ|| ಶಿವಪ್ಪನಿಗೆ ಲಿಂಗದಾಳ ಗ್ರಾಮದ ಮ|| ರಾ|| ಉಪವಾಸಿ ಗುರುಪಾದಪ್ಪನವರ ಪುತ್ರಿ ಹ|| ಕುಂ|| ಸೌ|| ಚಿ|| ಸೌ|| ಲಿಂಗವ್ವನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ ೧ ರೂ ಯು ವೇ|| ಗಂಜಿಗಟ್ಟಿ ಹಿರೇಮಠದ ಚನ್ನಬಸವಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಚಯ.

ಆರೋಗ್ಯಮಾರ್ಗ

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ

ಬೆಂಗಳೂರು

ಶ್ರೀ ಜಗದ್ಗುರು ವಿದ್ಯಾಲಯಾಧ ಗುರುಕುಲ [illegible]

[illegible]

ಆಹಾರ ನಿಯಮಗಳು

ಮಾನವರುಗಳಾಹಾರವಾಗಿ ಉಪಯೋಗಿಸುವ ವಸ್ತುಗಳು ಬಗೆ ತ್ರಿಸ್ಥಾನಂತವಾಗಿವೆ. ಆದರೆ ಆ ವಸ್ತುಗಳ ಪದಾರ್ಥ [illegible] ತಿಳಿದ ಕೂಡಲೆ ವಿಶೇಷ [illegible] ಕಂದರೆ—ಸಕಲವಸ್ತುಗಳೂ [illegible] ಕಾಲ ಕ್ರಿಯಾ [illegible] ದೇಹ ವಿಕಾರಾದಿಗಳನ್ನಾಶ್ರಯಿಸಿ ಕೆಲವು ವೇಳೆಗಳಲ್ಲಿ [illegible] ಕೆಲವು ವೇಳೆಗಳಲ್ಲಿ ಅಪಥ್ಯಗಳಾಗಿ ಪರಿಣಾಮಿಸುವ [illegible] ವಸ್ತು [illegible]

ಪಥ್ಯಂ ಪಥೋನಪೇತಂ ಯದ್ಯಚ್ಚೋಕ್ತಂ ಮನಸಃ ಪ್ರಿಯಂ ।

ಯಚ್ಚಾಪ್ರಿಯಮಪಥ್ಯಂ ಚ ನಿಯತಂ ತನ್ನಲಕ್ಷಯೇತ್ ॥

ಮಾತ್ರಾಕಾಲಕ್ರಿಯಾಭೂಮಿ ದೇಹದೋಷ [illegible] ಗುಣಾಂತರಂ

ಪ್ರಾಪ್ಯ ತತ್ತದ್ಧಿ ದೃಶ್ಯಂತೇ ತೇ ತೇ ಭಾವಾಸ್ತಥಾ ತಥಾ ॥ [illegible]

ಯಾವ ವಸ್ತುವು ಶರೀರಕ್ಕೆ ಹಿತಕರವೂ, ಮನಸ್ಸಿಗೆ ಪ್ರಿಯವೂ ಆಗಿರುವುದೋ ಅದನ್ನು ಪಥ್ಯವೆಂದು ಅರಿಯಬೇಕು. ಯಾವುದು ಶರೀರಕ್ಕೆ ಹಾನಿಕರವೂ ಮನಸ್ಸಿಗೆ ಅಪ್ರಿಯವೂ ಆಗಿರುವುದೋ ಅದನ್ನು ಅಪಥ್ಯವೆಂದರಿಯಬೇಕು. ಆದರೆ ಈ ಪಥ್ಯಾಪಥ್ಯಗಳ ಪ್ರಿಯಾಪ್ರಿಯತೆಗಳೂ ವಸ್ತುಗಳಲ್ಲಿ ಸ್ಥಿರವಾಗಿರುವುದಿಲ್ಲ. ಯಾವ ವಸ್ತುವೂ ಯಾವಾಗಲೂ ಪಥ್ಯವೂ ಪ್ರಿಯವೂ ಅಪಥ್ಯವೂ ಅಪ್ರಿಯವೂ ಆಗಿಯೂ ಇರಲಾರದು. ಮಾತ್ರಾಕಾಲಾದಿಗಳ ಅಧೀನದಿಂದ ಪ್ರತಿಯೊಂದು ವಸ್ತುವಿನ ಪಥ್ಯಾಪಥ್ಯತೆಗಳೂ ಪ್ರಿಯಾಪ್ರಿಯತೆಗಳೂ ಪರಿವರ್ತನಗೊಳ್ಳುತ್ತಿರುವುವು. ಆದುಕಾರಣವೇ ಸಕಲವಸ್ತುಗಳ ಹಿತಾಹಿತಫಲಗಳನ್ನು ಮಾತ್ರಾಕಾಲಾದಿಗಳ ಅಪೇಕ್ಷೆಯಿಂದರಿತು ಆ ಮಾತ್ರಾಕಾಲಾದಿಗಳಿಗನುಗುಣವಾದ ಆಹಾರವನ್ನು ಸೇವಿಸುವುದು ನಿಜವಾದ ಆರೋಗ್ಯವನ್ನಪೇಕ್ಷಿಸುವ ಪ್ರತಿಯೊಬ್ಬ ಮಾನವನ ಕರ್ತವ್ಯವಾಗಿರುತ್ತದೆ.

ಮಾನವಾಹಾರವಸ್ತುಗಳ ಒಂದಾರದಲ್ಲಿರುವ ಕೆಲವು ವಸ್ತುಗಳು ಸ್ವಭಾವದಿಂದಲೇ ಹಿತಕರಗಳಾಗಿರುವುದರಿಂದ ಅಂತಹ ವಸ್ತುಗಳನ್ನೇ ಆರೋಗ್ಯಶಾಲಿಗಳಾದ ಮಾನವರ ನಿತ್ಯಸೇವನೆಗಾಗಿ ದಯಾಮಯವಾದಾಯುರ್ವೇದವು ಬೋಧಿಸುತ್ತದೆ.

ಸ್ವಭಾವ ಹಿತಕರವಸ್ತುಗಳು—

ಕೆಂಪುಬಣ್ಣದ ಹಳೆಯಕ್ಕಿ, ೬೦ ದಿನಗಳಲ್ಲಿ ಬೆಳೆಯುವಂತಹ 'ಷಷ್ಟಿಕ' ವೆಂಬ ಅಕ್ಕಿ, ಗೋದಿ, ಜವೆ, ಹೆಸರು, ತೊಗರಿ, ಸೈಂಧವಲವಣ, ದಾಳಿಂಬೆ, ನೆಲ್ಲಿ, ದ್ರಾಕ್ಷಿ, ಖರ್ಜೂರ, ನಿಂಬೆಹಣ್ಣು, ಚಕ್ಕೋತ (ಚಕ್ರವರ್ತಿ) ಸೊಪ್ಪು, ಕೀರೆಸೊಪ್ಪು, ಹೊನಗೊನೆ ಸೊಪ್ಪು, ಸಿಹಿಹಾಲೆಸೊಪ್ಪು, ಪಿಸ್ತುಕ್ರಾಂತಿಸೊಪ್ಪು, ಸೂರಣಗಡ್ಡೆ, ಹಸಿಯಕೆಂಪು ಹಸುವಿನಹಾಲು, ತುಪ್ಪ, ಎಳ್ಳೆಣ್ಣೆ (ಅಭ್ಯಂಗಕ್ಕೆ ಮಾತ್ರಹಿತಕರ) ಕಲ್ಲುಸಕ್ಕರೆ.

ಈ ಪದಾರ್ಥಗಳು ಮಾನವರಿಗೆ (ಆರೋಗ್ಯಶಾಲಿಗಳಿಗೆ ಮಾತ್ರ) ಯಾವಾಗಲೂ ಸಾಮಾನ್ಯವಾಗಿ ಹಿತವನ್ನುಂಟುಮಾಡುವುವು. ಇವುಗಳ ಸೇವನೆಯಿಂದ [illegible] ಅನುಸರಿಸುವ [illegible] ಮತ [illegible] ಗಳನ್ನು [illegible] ಸಂಪೂ [illegible] ವಸ್ತು [illegible] ತಿಳಿಸುವ ಅತಿಸ್ವಲ್ಪ [illegible] ಸಂಪೂರ್ಣನೀರೋಗಮಯವಾದ [illegible] ಯಾವುದೂ [illegible] ವೆನ್ನೇ ಮನಸ್ಸಿನ [illegible] ಆಯುರ್ವೇದಪ್ರತಿಪಾದಿತವಾಗಿರುವ [illegible] ಟೀಕಾಕಾರನಾದ ಚಕ್ರದತ್ತನೆಂಬ [illegible] ಪಥ್ಯತಮವನ್ನು [illegible] ಎಂದು ಸ್ವಲ್ಪ ದೋಷವುಳ್ಳ [illegible] ವಸ್ತುಗಳನ್ನು ಪಥ್ಯವೆಂದೇ ಪರಿಗಣಿಸಿ [illegible] ಕಾರಣವೇ ಹೇಳಿ ಎನ್ನುಸಿರುವ [illegible] ಪಥ್ಯಗಳೆಂದರೆ ಅವುಗಳನ್ನೇ ಒದ [illegible] ದಲ್ಲಿ ಸಿಗುವ ಅಥವಾ ಸಿಗ [illegible] ಇನ ಮತ್ತಿತರ ಪದಾರ್ಥ [illegible] ಅತ್ಯಲ್ಪ [illegible] ಸೇವಿಸುವದರಿಂದ ಆರೋ [illegible] ಪದಾರ್ಥವೂ ಇರುವದಿಲ್ಲ.

ಯಾವ ಪದಾರ್ಥವನ್ನೇ ಆಗಲಿ ಸೇವಿಸುವಾಗ ಅದರ ಗುಣದೋಷಗಳನ್ನರಿತಿರುವುದರ ಅವಶ್ಯಕವಾದುದು. [illegible] ವಸ್ತುಗಳ ಗುಣದೋಷಗಳ ಪರಿಜ್ಞಾನದಿಂದ [illegible] ಉಪಯೋಗಿಸಲಾದ ತೊಂದರೆಗಳಲ್ಲಿ [illegible] ಕಡಿಮೆಯಾಗುತ್ತದೆ. ಈ ಜಾಗರೂಕತೆ [illegible] ಹಿತಕರವಸ್ತುಗಳ ಸೇವನೆಯಲ್ಲಿ ಪ್ರವೃತ್ತಿಯುಂಟಾಗುತ್ತದೆ. ಆದುದರಿಂದ ಸರ್ವಸಾಧಾರಣವಾಗಿ ನಿತ್ಯದಲ್ಲಿಯೂ ಮತ್ತು ಆಗಿಂದಾಗ [illegible] ಬಳಸಲ್ಪಡುವ ಕೆಲವು ವಸ್ತುಗಳ ಗುಣದೋಷಗಳನ್ನು ಸಂಕ್ಷೇಪವಾಗಿ ಇಲ್ಲಿ ವಿವರಿಸುವುದಾಗುತ್ತದೆ.

ಅಕ್ಕಿ—ಹೊಸದಾಗಿರುವ ಅಕ್ಕಿಯು ಸಿಹಿಯಾಗಿದ್ದು ಪುಷ್ಟಿಕರವಾಗಿರುವುದಾದರೂ ಬೇಗನೆ ಜೀರ್ಣವಾಗುವುದಿಲ್ಲ. ಹಳೆಯಕ್ಕಿಯು ಶರೀರದ ಸಂಧಿಗಳನ್ನು ಬಲಪಡಿಸುವುದು ಮತ್ತು ಮೇಹರೋಗವನ್ನು ಶಾಂತಗೊಳಿಸುವುದಾಗಿದೆ. ಯಾವಾಗಲಾದರೂ ಹಳೆಯಕ್ಕಿಯೇ ಹಿತಕರವಾಗಿರುತ್ತದೆ. ಆದರೆ ಎರಡು ವರುಷಗಳ ಮೇಲೆ ಅಕ್ಕಿಯಲ್ಲಿ ಸತ್ವವು ಕಡಿಮೆಯಾಗುವುದು. ಆದುದರಿಂದ ಬಹಳ ಹಳೆಯಅಕ್ಕಿಯು ಪುಷ್ಟಿಕರವಾಗಿರುವುದಿಲ್ಲ. ರೋಗಗಳಿಗೆ ಮಾತ್ರ ಅತ್ಯಂತ ಹಿತವಾಗಿರುತ್ತದೆ. ಅಕ್ಕಿಯನ್ನು ತೊಳೆದು ನಿರ್ಮಲವಾದ ನೀರಿನಲ್ಲಿ ಹದವಾಗಿ ಬೇಯಿಸಿ ಗಂಜಿಯನ್ನು ಬಸಿದು ಉಣ್ಣುವುದರಿಂದ ಅದು ಬೇಗನೆ ಪಚನವಾಗುವುದು ಮತ್ತು ಶರೀರವು ಹಗುರವಾಗಿರುವುದು. ನೀರನ್ನು ಇಂಗಿಸಿ ಮಾಡಿದ ಅನ್ನವು ಬಹಳ ಗುರು (ಬೇಗನೆ ಪಚನವಾಗದಿರುವುದು) ವಾಗಿರುವುದರಿಂದ ಶರೀರಕ್ಕೆ ಹಿತಕರವಾದುದಲ್ಲ.

ಹುರಿದಕ್ಕಿಯ ಅನ್ನ—ಅಕ್ಕಿಯನ್ನು ಸ್ವಲ್ಪ ಕೆಂಪಗೆ ಹುರಿದು, ನೀರಿನಲ್ಲಿ ಬೇಯಿಸಿ ಬಸಿದ ಅನ್ನವು ಅತ್ಯಂತ ಲಘುವಾಗಿಯೂ, ಕಫನಾಶಕವಾಗಿಯೂ ಇರುತ್ತದೆ. ಮತ್ತು [illegible] ಕಾಲದಲ್ಲಿಯೂ, ಕಫಸಂಬಂಧವಾದ ರೋಗಗಳಲ್ಲಿಯೂ ಹುರಿದಕ್ಕಿಯ ಅನ್ನವೇ ಹಿತಕರವೆಂದು ಚರಕಸಂಹಿತೆಯು ಬೋಧಿಸುತ್ತದೆ. ಮತ್ತು ಬಾವಪ್ರಕಾಶಕಾರರಾದ [illegible] ಹುರಿದಕ್ಕಿಯ ಅನ್ನವನ್ನು ಅಮೃತೋಪಮ [illegible] ಕಫ ಮತ್ತು ವಾತಗಳನ್ನು ನಾಶಗೊಳಿಸುವುದೆಂತಲೂ ಅಗ್ನಿಮಾಂದ್ಯವುಳ್ಳವರಿಗೂ, [illegible] (ಎನಿಮಾ) ಮಾಡಿಕೊಂಡವರಿಗೂ [illegible] (ಭೇದಿಯ ಔಷಧ) ಸೇವಿಸಿದವರಿಗೂ ಬಹಳ ಹಿತವಾಗಿರುವುದೆಂದು ಹೇಳಿರುವ.

ನಾಲ್ಕು ವಿಧವಾದ ಗಂಜಿ—[illegible] ಅಗುಳುಗಳಿಲ್ಲದ ಗಂಜಿಯು 'ಮಂಡ' [illegible] ಸ್ವಲ್ಪ ಅಗುಳುಗಳಿಂದ ಕೂಡಿ ಗಂಜಿಯು ಹೆಚ್ಚಾಗಿರುವುದು 'ಪೇಯಾ' ಎಂತಲೂ, ಅಗುಳುಗಳು ಹೆಚ್ಚಾಗಿದ್ದು ನೀರು ಸ್ವಲ್ಪವಾಗಿರುವ ಗಂಜಿಯು 'ವಿಲೇಪಿ' ಎಂತಲೂ, ಅಗುಳುಗಳೂ ನೀರೂ ಸಮಭಾಗದಿಂದಿದ್ದು ಬಹಳ ಗಟ್ಟಿಯಾಗದಿರುವ ಗಂಜಿಯು 'ಯವಾಗೂ' ಎಂತಲೂ ಸುಶ್ರುತಸಂಹಿತೆಯಲ್ಲಿ ನಿರ್ದೇಶಿಸಲ್ಪಟ್ಟಿದೆ.

ಮಂಡದ ಗುಣ—ಮಂಡವೆಂಬ ತಿಳಿಯಾದ ಗಂಜಿಯು ಮಲವನ್ನು ಬಂಧಿಸತಕ್ಕದು. ಹಗುರ, ಶೈತ್ಯಗುಣವುಳ್ಳದು, ಅಗ್ನಿಯನ್ನು ವೃದ್ಧಿಗೊಳಿಸುವುದು. ಬಲ ಮತ್ತು ಸಂತೃಪ್ತಿಯನ್ನುಂಟುಮಾಡಿ ಸಪ್ತಧಾತುಗಳನ್ನು ಸಮಗೊಳಿಸಿ ಜ್ವರ, ಪಿತ್ತ, ಶ್ಲೇಷ್ಮಗಳನ್ನೂ, ಆಯಾಸವನ್ನೂ ನಾಶಗೊಳಿಸುವುದು.

ಪೇಯದ ಗುಣ—ಪೇಯವೆಂಬ ಗಂಜಿಯು ಬಹಳ ಹಗುರವಾದುದು. ಮಲವನ್ನು ಬಂಧಿಸುವುದು, ದಾತುಪುಷ್ಟಿಯನ್ನುಂಟುಮಾಡಿ ಬಾಯಾರಿಕೆ, ಜ್ವರ, ವಾತ, ಅಶಕ್ತತೆ, ಉದರರೋಗ ಇವುಗಳನ್ನು ನಾಶಗೊಳಿಸಿ ಬೆವರನ್ನುಂಟುಮಾಡಿ ಜಠರಾಗ್ನಿಯನ್ನು ವೃದ್ಧಿಗೊಳಿಸಿ ವಾಯು ಮತ್ತು ಮಲವನ್ನು ಸಡಿಲಿಸುತ್ತದೆ. ಈ ಗಂಜಿಯಲ್ಲಿ ಶುಂಠಿ ಸೈಂಧವಲವಣಗಳನ್ನು ಕೂಡಿಸಿ ಕುಡಿಯುವುದರಿಂದ ಅಗ್ನಿಯು ವೃದ್ಧಿಯಾಗಿ ಪಚನಶಕ್ತಿಯು ಬೆಳೆದು ಆಮಶೂಲೆಯು ಶಾಂತವಾಗುತ್ತದೆ. ಮತ್ತು ಮಲಮೂತ್ರಗಳ ಬದ್ಧತೆಯನ್ನು ಹೋಗಲಾಡಿಸಿ ನಾಲಗೆಯ ಅರೋಚಕತೆಯನ್ನು ನಾಶಗೊಳಿಸುವುದು.

ಯವಾಗೂ—ಯವಾಗೂ ಎಂಬ ಗಂಜಿಯು ಬಹಳ ಹಗುರವಾದುದು. ಅಗ್ನಿಯನ್ನು ವೃದ್ಧಿಗೊಳಿಸಿ ಬಾಯಾರಿಕೆಯನ್ನು ಶಾಂತಗೊಳಿಸಿ ಬಸ್ತಿಯನ್ನು ಶುದ್ಧಗೊಳಿಸುವುದು ಮತ್ತು ಆಯಾಸವನ್ನು ನಿವಾರಿಸಿ ಜ್ವರ ಮತ್ತು ಅತಿಸಾರವನ್ನು ನಾಶಗೊಳಿಸುವುದು.

ವಿಲೇಪೀ—ವಿಲೇಪಿಯೆಂಬ ಗಂಜಿಯು ಅಗ್ನಿಯನ್ನು ವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಹೃದಯದಲ್ಲಿ ಶಾಂತಿಯನ್ನು ಸ್ಥಿರಗೊಳಿಸುವುದು. ಬಾಯಾರಿಕೆ, ಜ್ವರ ಇವುಗಳನ್ನು ದೂರಮಾಡಿ ತೃಪ್ತಿಯನ್ನುಂಟುಮಾಡುತಕ್ಕದು. ಗಾಯಹೊಂದಿದವರಿಗೂ, ಕಣ್ಣು ಬೇನೆಯುಳ್ಳವರಿಗೂ ಬಹಳ ಪಥ್ಯವಾದುದು.

ಅರಳಿನ ಮಂಡ—ಹಿಪ್ಪಲಿ, ಶುಂಠಿಗಳ ಚೂರ್ಣಗಳಿಂದ ಮಿಶ್ರಿತವಾದೀ ಗಂಜಿಯು ವಿರೇಚನೌಷಧವನ್ನು ಸೇವಿಸಿದವರಿಗೆ ಅತ್ಯಂತಹಿತವಾಗಿರುವುದಾಗಿದೆ. ಮತ್ತು ಅಗ್ನಿಯನ್ನು ವೃದ್ಧಿಗೊಳಿಸಿ ವಾಯುವನ್ನು ಅನುಲೋಮನ (ಕೆಳಮುಖವಾಗುವುದು) ಗೊಳಿಸುತ್ತದೆ.

ಈ ಗಂಜಿಗಳು ನಿತ್ಯೋಪಯೋಗಿಗಳಲ್ಲದಿದ್ದರೂ ಇವು ಸಂದರ್ಭಾನುಸಾರವಾಗಿ ಅತ್ಯಂತಆವಶ್ಯಕಗಳಾಗಿರುವುದರಿಂದ ಇಲ್ಲಿ ಬರೆಯಲ್ಪಟ್ಟಿವೆ.

ಗೋಧಿ—ಸಿಹಿ ಅತ್ಯಂತರುಚಿಕರ ಬಲ ಸ್ಥೈರ್ಯ, ವೀರ್ಯಗಳನ್ನು ವೃದ್ಧಿಗೊಳಿಸುವುದು, ಬಹಳ ತಡವಾಗಿ ಜೀರ್ಣವಾಗುವುದು, ಬಹಳ ತಂಪಾದುದು, ವಾತಪಿತ್ತಗಳನ್ನು ಶಾಂತಗೊಳಿಸುವುದು, ಶರೀರದ ಸಂಧಿಗಳನ್ನು ಬಲಪಡಿಸುವುದು (ಹೊಸಗೋದಿಯು ಮಾತ್ರ), ಕಾಂತಿಯನ್ನು ಹೆಚ್ಚಿಸುವುದು, ಅತಿ ಸ್ನಿಗ್ಧವಾದುದು.

(ಸಶೇಷ)

ಬಾಪುರಾಯರ ನಿಧನವೂ ಕಾಶಿಯಲ್ಲಿ ಶೋಕಸಭೆಯೂ.

ಡಿಸಂಬರ ತಾ|| ೨೨-೧೨-೩೨ ನೆಯ ದಿವಸ ಸುಪ್ರಸಿದ್ಧ ವಕೀಲರೂ ನಿಜಾಂಪ್ರಾಂತದ ವೀರಶೈವರಿಗೆಲ್ಲ ಮುಂದಾಳುಗಳೂ, ದಯಾಳುಗಳೂ, ಶಾಂತಸ್ವಭಾವದವರೂ ಕಾರ್ಯದಕ್ಷರೂ ಆದ ನಿರ್ಮಲ ದೇಶಮುಖಿ ಶ್ರೀಮಂತ ಬಾಪುರಾಯ ವಕೀಲರು ಶಿವಲೋಕಗತರಾದುದು ಅತ್ಯಂತ ವಿಷಾದಕರವಾದ ಸಂಗತಿಯಾಗಿದೆ. ಶಂಕರ ಸಂಸ್ಕೃತಕಾಲೇಜಿನ ಉತ್ಪಾದಕ ಕೈ|| ಶಂಕರಣ್ಣನವರ ಅಳಿಯಂದಿರಾದ ಚನ್ನಪ್ಪನವರು ಶಿವಾಧೀನರಾಗಿ ಆರುತಿಂಗಳಾದರೂ ಆಗಲಿಲ್ಲ. ಅಷ್ಟರಲ್ಲಿಯೇ

ಶಂಕರಶಾಲೇಜದ ಅಧ್ಯಕ್ಷರಾದ ಈ ಸುಪ್ರಸಿದ್ಧರ ನಿಧನದ ವಾರ್ತೆಯನ್ನು ಕೇಳಿ ಪ್ರತಿಯೊಬ್ಬ ವೀರಶೈವ ಸಾಮಾಜಿಕನಿಗೆ ದುಃಖವೆನಿಸದೆ ಇರಲಾರದು. ನಿಜಾಂ ಪ್ರಾಂತದಲ್ಲಿ ಅಲ್ಪಾವಧಿಯಲ್ಲಿಯೇ ಇಂಥ ಕಾರ್ಯದಕ್ಷರಾದ ವ್ಯಕ್ತಿಗಳ ನಿಧನವೆಂದರೆ ಸಾಮಾನ್ಯವಾದ ಮಾತಲ್ಲ! ಈ ಎರಡು ವ್ಯಕ್ತಿಗಳಿಂದ ಶಂಕರಸಂಸ್ಕೃತ ಶಾಲೇಜವು ಅತ್ಯಂತ ಸುವ್ಯವಸ್ಥಿತವಾಗಿ ನಡೆಯುತ್ತಿತ್ತು. ಅಂಥ ವ್ಯಕ್ತಿಗಳನ್ನು ಕಳೆದುಕೊಂಡ ನಾವು ದುರ್ದೈವಿಗಳೆಂದು ಹೇಳಿಕೊಳ್ಳಬೇಕಾಗಿದೆ. ಈ ಮಹನೀಯರು ತಮ್ಮ ಜೀವನದಲ್ಲಿ ಅತ್ಯಂತ ಮಹತ್ವವಾದ ಕಾರ್ಯಗಳನ್ನು ಮಾಡಿ ಕೀರ್ತಿಶಾಲಿಗಳಾಗಿದ್ದಾರೆ. ಇಂಥ ಸುಪ್ರಸಿದ್ಧವ್ಯಕ್ತಿಯ ಶೋಕಸಭೆಯನ್ನು ಮಾಡಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಕೃತಜ್ಞತೆಯನ್ನು ವ್ಯಕ್ತಪಡಿಸುವದೇ ನಮ್ಮ ಕರ್ತವ್ಯವಾಗಿದೆ.

ಅದರಂತೆ ತಾ|| ೨೯-೧೨-೧೯೩೪ ನೆಯ ದಿವಸ ಕಾಶೀ ವೀರಶೈವ ವಿದ್ವತ್ಸಂಘದ ಪರವಾಗಿ ಶ್ರೀಜಗದ್ಗುರು ವಿಶ್ವಾರಾಧ್ಯಪೀಠ (ಶ್ರೀ ಜಂಗಮವಾಡೀಮಠ) ದಲ್ಲಿ ಮಧ್ಯಾಹ್ನ ೨ ಘಂಟೆಗೆ ಸಭೆಯು ಸೇರಿಯಿತು. ಮೊದಲು ಮುದೇನೂರು ಶ್ರೀವಾಗೀಶ ಶಿವಾಚಾರ್ಯರು ಮ|| ರಾ|| ಶ್ರೀಮಂತ ಬಾಪೂರಾಯರ ಗುಣಕಥನವನ್ನು ಮಾಡಿ ಇಂಥ ವ್ಯಕ್ತಿಯನ್ನು ಕಳೆದುಕೊಂಡದ್ದು ಇಡೀ ವೀರಶೈವ ಸಮಾಜದ ದುರ್ದೈವವೆಂದು ಹೇಳಿ ದುಃಖಪ್ರದರ್ಶನ ಪ್ರಸ್ತಾವವನ್ನು ಸೂಚಿಸಿದನಂತರ ಗೊರ್ಟ ಶ್ರೀ ವೃಷಭಲಿಂಗ ಶಿವಾಚಾರ್ಯರು ಅವರ ಸ್ವಭಾವವನ್ನೂ, ದಾನಶೀಲತೆಯನ್ನೂ ಅವರು ಮಾಡಿದ ಕಾರ್ಯಗಳನ್ನೂ ಸಂಕ್ಷಿಪ್ತವಾಗಿ ವಿವರಿಸಿ ದುಃಖಸೂಚಕಪ್ರಸ್ತಾವವನ್ನು ಸಮರ್ಥಿಸಿದರು. ಅವನ್ನೆಲ್ಲ ಕೇಳಿದ ಸಭಿಕರು ಅಂಥ ಅಮೂಲ್ಯರತ್ನವನ್ನು ಕಳೆದುಕೊಂಡೆವಲ್ಲ ಎಂಬ ಚಿಂತೆಯಲ್ಲಿ ಮುಳುಗಿದರು. ಅನಂತರ ಬೆಂಗಳೂರು ಶ್ರೀ ಶಿವಕುಮಾರಸ್ವಾಮಿಗಳು ಶ್ರೀ ಬಾಪೂರಾಯರ ಸಹವಾಸ ಒಂದೆರಡು ವೇಳೆ ಕೆಲದಿನಗಳ ಮಟ್ಟಿಗೆ ದೊರೆತಿದ್ದರೂ ಅವರ ಸೌಜನ್ಯ ಔದಾರ್ಯಗಳು ಅಸದೃಶವಾದವುಗಳೆಂದೂ ಅವರ ಸಹಾಯದಿಂದಲೇ ವಿದ್ವಾಂಸರಾದ ಓರ್ವ ನಮ್ಮ ಗುರುಕುಲವಾಸಿಗಳ ಕೃತಿಯನ್ನು ನೋಡುವುದಕ್ಕೆ ಮುಂಚೆಯೇ ಅವರು ಹೋದುದು ಅತ್ಯಂತ ವಿಷಾದಕರವೆಂದೂ ಹೇಳಿದರು. ಅನಂತರ ಪಂ|| ವೀರಭದ್ರಶಾಸ್ತ್ರಿಗಳು ಭಾಷಣಮಾಡಲು ಉತ್ಸಾಹವಿಲ್ಲದವರಾದ್ದರೂ ಪ್ರಾಸಂಗಿಕವೆಂದು ಅವರ ಜೀವನ ಚರಿತ್ರೆಯನ್ನವಲಂಬಿಸಿ ಬಹು ಮಾರ್ಮಿಕವಾಗಿ ಮಾತನಾಡಿದರು. ಅದರ ಕೆಲವಂಶವನ್ನು ಇಲ್ಲಿ ಬರೆಯುವದು ಅಪ್ರಸ್ತುತವಾಗಲಾರದು.

ಶ್ರೀಮಂತ ಬಾಪೂರಾಯರು ಹೈದರಾಬಾದಿಗೆ ೫೦ ಮೈಲುಗಳ ದೂರದಲ್ಲಿರುವ ನಿರ್ಮಲವೆಂಬ ಊರಲ್ಲಿ ದೇಶಮುಖರ ವಂಶದಲ್ಲಿ ಹುಟ್ಟಿದರು. ೧೨ ವರ್ಷದವರಾಗುವವರೆಗೂ ತಕ್ಕಮಟ್ಟಿಗೆ ಮರಾಠಿ, ತೆಲುಗು, ಭಾಷೆಗಳನ್ನು ಓದಿದರು. ಅನಂತರ ಇವರಿಗೆ ಉರ್ದು, ಪಾರ್ಸಿ ಭಾಷೆಗಳನ್ನು ಅಭ್ಯಾಸಮಾಡಬೇಕೆಂಬ ಬಲವಾದ ಇಚ್ಛೆಯು ಉತ್ಪನ್ನವಾಗಿ ಓರ್ವ ಮೌಲವಿಗಳ ಹತ್ತಿರ ಓದಿ ಭಾಷಾಪಾಟವವನ್ನು ಸಂಪಾದಿಸಿಕೊಂಡು ಹೈದರಾಬಾದಿಗೆ ಬಂದು, ಕಡೆಗೆ ಕಾಯಿದೆ ಪರೀಕ್ಷೆಯಲ್ಲಿ ಇಡೀ ನಿಜಾಂ ಪ್ರಾಂತದಲ್ಲಿಯೇ ಮೊದಲನೆಯ ಶ್ರೇಣಿಯಲ್ಲಿ ಪಾಸಾಗಿ ಬಂದರು. ಅನಂತರ ಇವರು ಒಂದು ಆಫೀಸಿಯಲ್ಲಿ ಕಾರಕೂನರಾಗಿ ಕೆಲಸಮಾಡಿದರು. ಇವರು ಬುದ್ಧಿವಂತರಾಗಿದ್ದರೂ ಈ ಕೆಲಸಮಾಡುತ್ತ ಸ್ವಲ್ಪವೂ ಅಭಿಮಾನಪಡದೆ ಪರಿಶ್ರಮಮಾಡಿ ಅಧಿಕಾರಿಗಳಿಗೆ ಪ್ರೇಮಾಸ್ಪದರಾಗಿದ್ದರು. ಅಲ್ಲಿ ಕೆಲವರು ಇವರ ಅತ್ಯಧಿಕಾಭಿವೃದ್ಧಿಯನ್ನು ನೋಡಿ ದ್ವೇಷಿಸಿ ಪ್ರಾರಬ್ಧಮಾಡಿದರು. ಇಷ್ಟೇ ಅಲ್ಲ, ಇವರಿಗೂ ಇವರ ತಂದೆಯವರಿಗೂ ಸಹ ಒಂದು ದೊಡ್ಡ ವಿಪತ್ತನ್ನೇ ತಂದರು. ಆದಾಗ್ಯೂ ಇವರು ನಿರ್ದೋಷಿಗಳೆಂದು ಕೋರ್ಟಿನಿಂದಲೇ ತೀರ್ಮಾನವಾಯಿತು. ಆ ಮೇಲೆ ಇವರು ಹೈದರಾಬಾದಿನಲ್ಲಿ ವೀರಶೈವ ವಕೀಲರಾರೂ ಇಲ್ಲವೆಂದುಭಾವಿಸಿ ನಿಜಾಂ ಪ್ರಾಂತದ ಮೊದಲನೆ ವೀರಶೈವ ವಕೀಲರಾಗಿ ಕೋರ್ಟಿನಲ್ಲಿ ಕೆಲಸಮಾಡಿ ಪ್ರಖ್ಯಾತಿಯನ್ನು ಪಡೆಯುತ್ತಿದ್ದರು. ಇದ್ದಾಗ್ಯೂ ಪದವೀಧರನಾಗಿ ಇವರ ಹೆಸರು ಜಿಲ್ಲೆ ಜಿಲ್ಲೆಗಳಲ್ಲಿ ಹಬ್ಬಲು ಪ್ರಾರಂಭವಾಯಿತು.

ಅನಂತರ ಇವರ ಹೆಸರನ್ನು ಕೇಳುತ್ತ ಎಷ್ಟೋ ಜನರು ಬಂದರಾಗ್ಯೂ ಅವರ ಮನೋರಥಗಳನ್ನು ಪೂರ್ಣಗೊಳಿಸದೆ ಎಂದೂ ಕಳುಹುತ್ತಿರಲಿಲ್ಲ. ಇವರು ಮೊದಲು ದ್ವೇಷಿಸಿದ ಜನರ ಮೇಲೆ ಎಂದೂ ಕೈಮಾಡಲಿಲ್ಲ. ಇವರಿಗೆ ಪ್ರತಿಯೊಂದು ಮತದವರಲ್ಲಿ ಸಮಾನವಾದ ಪ್ರೀತಿಯಿತ್ತು. ಕೋರ್ಟಿನಲ್ಲಿ ಪ್ರತಿಯೊಬ್ಬರೂ ಇವರ ಪ್ರತಿಭೆಯನ್ನೂ ಶಾಂತಸ್ವಭಾವವನ್ನೂ ಸಮಯೋಚಿತಗಳಾದ ಯುಕ್ತಿ ಹಾಗೂ ಪಾರ್ಸಿಭಾಷೆಗಳಿಗಾವೆ ಮಾತುಗಳನ್ನೂ ಕವಿತೆಗಳನ್ನೂ ಕೇಳಿ ಇವರನ್ನು ಪಂಡಿತ ಬಾಪೂರಾಯರೆಂದು ಕರೆಯುತ್ತಿದ್ದರು.

ಇವರು ತಮ್ಮ ಆಯುಷ್ಯದಲ್ಲಿ ಎಷ್ಟೋ ಜನ ಬಡ ವಿದ್ಯಾರ್ಥಿಗಳಿಗೆ ಊಟ ಅರಿವೆ ಇರಲು ಸ್ಥಳಕೊಟ್ಟು ಅವರ ಅಭ್ಯಾಸಕ್ಕೆ ಸಂಪೂರ್ಣ ಅನುಕೂಲ ಮಾಡಿಕೊಟ್ಟಿದ್ದರಲ್ಲದೆ ಅವರನ್ನು ಕೇವಲ ತಮ್ಮ ಮಕ್ಕಳಂತೆ ನೋಡುತ್ತಿದ್ದರು. ಇವರು ವಿದ್ಯಾರ್ಥಿಗಳ ಸಹಪಂಕ್ತಿಯಲ್ಲಿ ಕುಳಿತು ಊಟಮಾಡುತ್ತಿದ್ದರು. ಇದರಿಂದಲೇ ಇವರು ಎಂಥ ದಯಾಳು ಸ್ವಭಾವದವರಿದ್ದರೆಂಬುದು ವ್ಯಕ್ತವಾಗುತ್ತದೆ. ಇವರ ಮನೆಯಲ್ಲಿ ಯಾವಾಗಲೂ ೨೫-೩೦ ಜನ ವಿದ್ಯಾರ್ಥಿಗಳು ಇರುತ್ತಿದ್ದರು. ಇವರ ಸಂಪೂರ್ಣ ಸಹಾಯದಿಂದಲೇ ತಯಾರಾದ ಕೆಲಜನ ವಕೀಲರೂ ಗ್ರ್ಯಾಜುಯೇಟರೂ ಹೈದರಾಬಾದಿನಲ್ಲಿ ಇರುತ್ತಾರೆ. ಇವರ ಮನೆಯು ಅಪ್ರತ್ಯಕ್ಷರೂಪವಾಗಿ ವಿದ್ಯಾರ್ಥಿಗಳಿಗೆ ಫ್ರೀ ಬೋರ್ಡಿಂಗಾಗಿತ್ತೆಂದರೂ ಸಲ್ಲುವದೇ ಸರಿ! ಇವರು ವಕೀಲರಾಗಿ ಕೆಲಸಮಾಡುತ್ತಿದ್ದಾಗ್ಗೆ ಬಡಜನರ ಕೆಲಸಗಳನ್ನು ನಿಃಸ್ವಾರ್ಥಪೂರ್ವಕವಾಗಿ ಮಾಡುತ್ತಿದ್ದರಲ್ಲದೆ ಅವರಿಂದ ಏನೂ ತೆಗೆದುಕೊಳ್ಳುತ್ತಿರಲಿಲ್ಲ. ಇವರು ಕಾಯಿದೆಯಲ್ಲಿ ಅತಿ ತೀಕ್ಷ್ಣಮತಿಗಳಾದುದರಿಂದ ದೊಡ್ಡ ದೊಡ್ಡ ಜಹಗೀರದಾರ ಮೊದಲಾದವರು ಇವರನ್ನೇ ಆಶ್ರಯಮಾಡುತ್ತಿದ್ದರು. ಇವರು ಹಿಡಿದ ವ್ಯಾಜ್ಯಗಳಲ್ಲಿ ಒಂದೂ ನಿಷ್ಫಲವಾಗುತ್ತಿರಲಿಲ್ಲ. ಅಂದ ಅನಾಯಕ ವ್ಯಾಜ್ಯಗಳಿದ್ದರೆ ಉಭಯಪಕ್ಷದವರಿಗೆ ಸಮುಚಿತವಾಗಿ ಹೇಳಿ ತೀರ್ಮಾನ ಮಾಡುತ್ತಿದ್ದರು.

ಇವರ ಪ್ರತಿಭೆಯನ್ನೂ ದಯಾಳು ಹೃದಯವನ್ನೂ ಕೇಳಿ ಈಗಿರುವ ನಿಜಾಂಸರಕಾರರು ಇವರನ್ನು ಬಹು ಮರ್ಯಾದೆಯಿಂದ ಕಾಣುತ್ತಿದ್ದರು. ಆಸೆಯೋ ಕಲ್ಯಾಣಪುರದ ಮಹೋತ್ಸವದಲ್ಲಿ ದೊಂಬಿಯಾಗುವ ಪ್ರಸಂಗ ಬಂದಾಗ ಅಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೋಸ್ಕರ ಇವರಿಗೆ ಸರ್ಕಾರದ ಪಕ್ಷದಿಂದ ಸಮಸ್ತ ಅಧಿಕಾರವನ್ನು ಕೊಟ್ಟಿದ್ದರಲ್ಲದೆ ಪೋಲೀಸ್ ಸೈನ್ಯವನ್ನೆಲ್ಲ ವಶಪಡಿಸಿದ್ದರು. ಇವರು ಪರಳಿಪ್ರಕರಣದಲ್ಲಿ ಮಾಡಿದ ಸಾಹಸಕಾರ್ಯವು ಅತ್ಯಂತ ಮಹತ್ವದ್ದಾಗಿದೆ. ೨೮ ವರ್ಷ ನಿರಂತರವಾಗಿ ನಡೆದ ಆ ಪ್ರಕರಣವ ಸಂಪೂರ್ಣವಾಗಿ ಇವರಿಂದಲೇ ನೆರವೇರಿರುವುದರಿಂದ ಆ ವಿಜಯದ ಯಶಸ್ಸು ಈ ಪುಣ್ಯಾತ್ಮರಿಗೇನೇ ಇರುವುದು. ಇವರು ಆ ಕೆಲಸದಲ್ಲಿ ತನುಮನೋಧನಗಳಿಂದ ಪರಿಶ್ರಮವನ್ನು ಮಾಡಿರುವದಲ್ಲದೆ ಸ್ವಂತವಾಗಿ ಸಾವಿರಗಟ್ಟಲೆ ಹಣವನ್ನು ವ್ಯಯಪಡಿಸಿರುತ್ತಾರೆ. ಶ್ರೀ ಶಿವಕೋಟಿ ವೀರಭದ್ರಯ್ಯನವರು ೬೦-೭೦ ಸಾವಿರ ರೂ ಗಳ ವ್ಯಯದಿಂದ ಕಟ್ಟಿಸಿದ ಮಂದಿರದ ಪ್ರಾರಂಭೋತ್ಸವದಲ್ಲಿ ಮಹಾವಿಪತ್ತು ಸಂಭವಿಸಿ ಎಲ್ಲವೂ ನಿಷ್ಫಲವಾಗುವ ಪ್ರಸಂಗದಲ್ಲಿ ಅತ್ಯಂತ ಚಾತುರ್ಯದಿಂದಲೂ ಧೈರ್ಯದಿಂದಲೂ ಆ ಕಾರ್ಯವನ್ನು ನೆರವೇರಿಸಿ ಮುಂದೆಯೂ ಬಾಧೆಯಿಲ್ಲದಂತೆ ಮಾಡಿದರು. ಶಂಕರ ಸಂಸ್ಕೃತಶಾಲೇಜದಲ್ಲಿ ವ್ಯಾಜ್ಯವುಂಟಾಗಿ ಲಕ್ಷಗಟ್ಟಲೆ ಬೆಲೆಯುಳ್ಳ ಈ ಸಂಸ್ಥೆಗೇನ ವಿಪತ್ತು ಬಂದಾಗ ತಮ್ಮ ವ್ಯಾಧಿಯನ್ನು ಗಣಿಸದೆ ಬಹಳ ಕೌಶಲದಿಂದ ಅದರ ಸುವ್ಯವಸ್ಥೆಯನ್ನು ಮಾಡಿದ್ದಾರೆ. ತಮ್ಮ ಸ್ವಂತ ಪರಿಶ್ರಮದಿಂದ ಗಳಿಸಿದ ದ್ರವ್ಯದಲ್ಲಿ ೫೦-೬೦ ಲಕ್ಷ ರೂ ಗಳವರೆಗೆ ದಾನಧರ್ಮಗಳಿಗೋಸ್ಕರ ವಿನಿಯೋಗಿಸಿದರು. ಪ್ರಶಂಸಾವಿಮುಖರಾದುದರಿಂದ ಇವರ ಅನೇಕ ಮಹೋಪಕಾರಗಳು ಪತ್ರಿಕೆ ಮುಂತಾದವುಗಳಿಂದ ಪ್ರಸಿದ್ಧಿಗೆ ಬಂದಿಲ್ಲ. ಅವರಿಂದ ಸಹಾಯಹೊಂದಿದ ಸಾವಿರಾರು ಜನರು ಹೈದರಾಬಾದಿನ ಸುತ್ತುಮುತ್ತಲು ಇರುವರೆಂದರೆ ಅತಿಶಯೋಕ್ತಿಯಲ್ಲ. ಇಂತಹ ಸರ್ವಜನಪ್ರಿಯರಾದ ಮಹಾನುಭಾವರು ನಮ್ಮಿಂದ ಅಗಲಿದುದು ಸಮಾಜದ ದುರ್ದೈವವೆಂದು ಪಂ|| ವೀರಭದ್ರಶಾಸ್ತ್ರಿಗಳು ಹೇಳಿದರಲ್ಲದೆ ತಮಗೆ ಹನ್ನೆರಡು ವರುಷಗಳವರೆಗೆ ಆತ್ಮಾದರದಿಂದ ಸಹಾಯಮಾಡಿದುದರಿಂದಲೇ ಇಲ್ಲಿಯವರೆಗೆ ವಿದ್ಯಾಭ್ಯಾಸವು ನಿರ್ವಿಘ್ನವಾಗಿ ನಡೆಯುತೆಂತಲೂ, ಇಂತಹ ಆತ್ಮೀಯರ ಅವಸಾನಕಾಲದಲ್ಲಿ ತಾವು ದೂರದಲ್ಲಿದ್ದುದರಿಂದ ಮನಸ್ಸಿಗೆ ಬಹಳೇ ಖೇದವಾಯಿತೆಂತಲೂ, ಬಾಷ್ಪಾವರುದ್ಧಕಂಠವುಳ್ಳವರಾಗಿ ಭಾಷಣವನ್ನು ವಿವರಿಸುವಾಗ ಸಭಿಕರಲ್ಲಿ ಮೂರ್ತಿಮತ್ತಾದ ವಿಷಾದವು ಪ್ರತ್ಯಕ್ಷವಾಯಿತು. ಆ ಮೇಲೆ ಮುದೇನೂರು ಶ್ರೀ ವಾಗೀಶ ಶಿವಾಚಾರ್ಯರು ಧರ್ಮಾತ್ಮರೂ ಆಚಾರ್ಯಭಕ್ತರೂ ಆದ ಶ್ರೀ ಬಾಪೂರಾಯರ ಆಕಸ್ಮಿಕ ನಿಧನದಿಂದ ಬಹಳ ಅನಿಷ್ಟವುಂಟಾಯಿತೆಂದೂ, ಅವರ ಪುತ್ರದಾರಾದಿಗಳಿಗೆ ಜಗದೀಶನು ದುಃಖೋಪಶಮನವನ್ನುಂಟುಮಾಡಲೆಂದೂ ಹೇಳಿ ಸಭೆಯನ್ನು ಸಮಾಪ್ತಿಗೊಳಿಸಿದರು.

ಶ್ರೀ ಬಾಪೂರಾಯರಿಗೆ ಸುಮಾರು ಏಳು ವರ್ಷಗಳ ಹಿಂದೆ ಪಕ್ಷವಾತವ್ಯಾಧಿಯಿಂದ ಎಡಭಾಗವು ನಿರ್ಜೀವವಾಗಿದ್ದು ಅದು ಯಾವ ಚಿಕಿತ್ಸೆಯಿಂದಲೂ ಗುಣವಾಗಲಿಲ್ಲ. ಅಂಥ ಸ್ಥಿತಿಯಲ್ಲಿಯೂ ಅವರು ದಾನಧರ್ಮಾದಿಗಳಲ್ಲಿ ಶ್ರದ್ಧೆಯುಳ್ಳವರಾಗಿದ್ದರು. ಈಚೆಗೆ ಶ್ರೀಶೈಲ, ರಾಮೇಶ್ವರ ಮುಂತಾದ ಶಿವಸಯಾತ್ರೆಗಳನ್ನು ಮಾಡಿದರು. ಎರಡು ಸಲ ಶ್ರೀ ಕಾಶೀಕ್ಷೇತ್ರಕ್ಕೂ ಬಂದು ಶ್ರೀ ಜಗದ್ಗುರು ವಿಶ್ವಾರಾಧ್ಯಪೀಠದ ಮಹಾಸನ್ನಿಧಿಯಲ್ಲಿ ಗುರುಕಾಣಿಕೆಗಳನ್ನರ್ಪಿಸಿ ಗುರುಕುಲದ ವಿದ್ಯಾರ್ಥಿಗಳನ್ನು ಆತ್ಮೀಯತೆಯಿಂದಾದರಿಸಿ ದಕ್ಷಿಣಾದಿಗಳಿಂದ ಸಂತೃಪ್ತಿಪಡಿಸಿದರಲ್ಲದೆ ಹಿಂದೆ ಫಾಲ್ಗುಣಮಾಸದಲ್ಲಿ ನಡೆದ ಗುರುಕುಲದ ಒಂದು ಸಭೆಯಲ್ಲಿ ತಮ್ಮ ಚಮತ್ಕಾರಪೂರ್ಣವಾದ ಭಾಷಣದಿಂದ ವಿದ್ಯಾರ್ಥಿಗಳಲ್ಲಿ ಅತ್ಯಂತ ಉತ್ಸಾಹವನ್ನುಂಟುಮಾಡಿದರು. ೬೫ ವರ್ಷದ ವಯಸ್ಸಿನವರಾದರೂ ಅವರ ವಾಕ್ಚಾತುರ್ಯ ಉತ್ಸಾಹದ ಪಕ್ಷಪಾತ ಮುಂತಾದವುಗಳು ಯುವಕರಿಗೂ ಅನುಕರಣೀಯವಾಗಿದ್ದವು. ಇನ್ನೂ ಇವರಿಂದ ನಮ್ಮ ಸಮಾಜಕ್ಕೆ ಉಪಕಾರವಾಗತಕ್ಕದ್ದಿತ್ತೆಂಬುದನ್ನು ನೆನಸಿದಾಗ ಯಾರಿಗೆ ವ್ಯಸನವಾಗಲಾರದು? ಇವರ ಸ್ಮಶಾನಯಾತ್ರೆಯಲ್ಲಿ ಹೈದರಾಬಾದಿನ ಸಾವಿರಾರು ಜನ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಭಾಗಿಗಳಾಗಿದ್ದರೆಂತಲೂ ಪುಷ್ಪಮಾಲಿಕೆಗಳೊಡನೆ ಸ್ವರ್ಣರಜತಪುಷ್ಪಗಳೂ, ರೊಕ್ಕವೂ ಅತ್ಯಧಿಕವಾಗಿ ಚೆಲ್ಲಲ್ಪಟ್ಟಿತೆಂತಲೂ ಅವರ ಮಹೋತ್ಸವವು ರೋಡಿನತುಂಬಾ ಅತ್ಯಂತ ವಿಜೃಂಭಣೆಯಿಂದ ಹೊರಟು ವಿಧ್ಯುಕ್ತಸಮಾಧಿಯಾಯಿತೆಂತಲೂ ವಾರ್ತೆಯನ್ನು ಕೇಳುತ್ತೇವೆ. ಶ್ರೀಬಾಪೂರಾಯರ ಅವಶಿಷ್ಟಸತ್ಕಾರ್ಯಗಳನ್ನು ಅವರ ಪುತ್ರರಾದ ಬ್ಯಾರಿಷ್ಟರ್ ನಾಗಭೂಷಣರಾವ ದೇಶಮುಖರು ನೆರವೇರಿಸುವಂತೆ ಅನುಗ್ರಹಿಸಲೆಂದು ಶ್ರೀ ವಿಶ್ವನಾಥನನ್ನು ಪ್ರಾರ್ಥಿಸುವ

ಶ್ರೀ ಕಾಶೀ ವೀರಶೈವ ವಿದ್ವತ್ಸಂಘದ ಕಾರ್ಯದರ್ಶಿ

ಗುರುದರ್ಶನ.

ಬೆಂಗಳೂರು ಸಿಟಿ ಅರಳೆಪೇಟೆ ದೇಶದ ಶ್ರೇಷ್ಠಿ (ಶೆಟ್ಟರು) ಗಳಾದ ಶ್ರೀಮಾನ್ ರುದ್ರಪ್ಪಶೆಟ್ಟರೂ ಮತ್ತು ಶ್ರೀ ಗೌರೀಸಿಲಯ ಮುದ್ರಾಕ್ಷರಶಾಲೆಯ ಅಧ್ಯಕ್ಷರಾದ ಶ್ರೀಮಾನ್ ಶಿವಣ್ಣನವರೂ ತಮ್ಮ ಮಿತ ಪರಿವಾರದೊಡನೆ ಕಾಶೀಕ್ಷೇತ್ರಕ್ಕೆ ೩-೧-೧೯೩೫ ರಲ್ಲಿ ಬಂದು ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾಪೀಠದಲ್ಲಿ ಮಹೇಶ್ವರ ಸಂತರ್ಪಣೆ ಶ್ರೀ ವಿಶ್ವನಾಥನ ರುದ್ರಾಭಿಷೇಕ ಮುಂತಾದ ಕ್ಷೇತ್ರಯಾತ್ರೋಚಿತ ಪುಣ್ಯಕಾರ್ಯಗಳನ್ನು ನೆರವೇರಿಸಿ ಶ್ರೀ ಜಗದ್ಗುರು ಮಹಾಸನ್ನಿಧಿಗೆ ಯಥೋಚಿತಗುರುಕಾಣಿಕೆಯನ್ನರ್ಪಿಸಿ ತಮ್ಮ ಅಪಾರವಾದ ಗುರುಭಕ್ತಿಯನ್ನು ಪ್ರಕಟಿಗೊಳಿಸಿದರು. ಈ ಉಭಯ ಗುರುಭಕ್ತ ಪುಂಗವರು ಸಣ್ಣ ವಯಸ್ಸಿನವರಾಗಿದ್ದರೂ ಇವರ ಅಸೀಮವಾದ ಗುರುಭಕ್ತಿಯು ಅತ್ಯಂತ ಪ್ರಶಂಸನೀಯವಾಗಿರುವುದೆಂದು ತಿಳಿಸಲು ಆನಂದವೆನಿಸುತ್ತದೆ.

ಓರ್ವ ಗುರುಭಕ್ತ.

ಪಂಚಾಚಾರ್ಯ ಪ್ರಭಾ.

೧೯೧೬ನೇ ಜನವರಿ ೩ | ೧ನೇ ಸೋಮವಾರ

ಲಿಂಗಧಾರಣಸ್ಥಾನಗಳು.

ಹಿಂದೆ ನಮ್ಮ ಪತ್ರಿಕೆಯಲ್ಲಿ [illegible] ಜ್ಯೋತಿಲಿ [illegible] ಇಷ್ಟಲಿಂಗೋಪ [illegible] [illegible]

[illegible]

ಷ ವರ್ಣಾಂತರ ದ ಸದಸ್ಸ ವಿಶ [illegible] ವಣವಾಗಿ [illegible] ವಿಷಯ [illegible] ನೆಗೆ [illegible] ಸಿ ಕಲಸಬೇಕ [illegible] ವಾತುವ ದ ಒತ [illegible] ವಿಕರಣಕಾಂಡ ಎಂಬ [illegible] ಸವ ವನಶಿರೋಗ್ರೀವ [illegible] ಕಿಪಕ ಶರಣರಿಗೆ [illegible] ಧಾರಣಕ್ಕೆ [illegible] ಲಿಂಗವು [illegible] ಲೆಂದು ಆದ್ ಮಾಡ ಪಲ್ಲ ಯಾವ ಆ [illegible] ಬರುವುದಿಲ್ಲ ಇದರಿಂದ ಇಷ್ಟಲಿಂಗವು [illegible] ಕಂಠ [illegible] ಸ್ಥಾನಗಳಲ್ಲಿ ಧರಿಸಲ್ಪಡತಕ್ಕದೆಂದ [illegible] ಮಂತ್ರದಿಂದ ಸ್ಥಾನನಿದೆ [illegible] ಮಾಡಲ್ಪಟ್ಟಂತಾಯಿ ತು ಇದಕ್ಕೆ ಶೃತ್ಯರ್ಥವನ್ನು—

ಕ್ಷೇತ್ರಜ್ಞ ನಹಿ ಸತತಂ ಲಿಂಗಂ ವಕ್ಷ [illegible] |
ಮಸ್ತಕೇ ಕಂಧರೇ ಕುಕ್ಷೌ ವಕ್ಷಸ್ಥಲೇ [illegible] |

ಎಂದು ಸ್ಕಾಂದಪುರಾಣವು ಅನುವಾದ ಮಾಡಿರು ವುದು ಭಗವತ್ಪಾದ [illegible] ಯ [illegible] ಸಹ—

ಉತ್ತಮಾಂಗೇ ಗಲೇ [illegible] ಕುಕ್ಷೌ ವಕ್ಷಸ್ಥ [illegible] |
ಕಥಾ ಹಸ್ತತಲೇ [illegible] ಲಿಂಗಂ ಧರೇತ್ [illegible] ||

ಎಂದು ಸ್ಪಷ್ಟಪಡಿಸಿರುತ್ತಾರೆ

ಹೀಗೆ "ಸರ್ವಾನನಶಿರೋಗ್ರೀವ" ಎಂಬ ಪದದಿಂದ ಮುಖ ಶಿರಸ್ಸು ಕಂಠಗಳಲ್ಲಿ ಗುರುವಿನಿಂದ ದೀಕ್ಷಾಪ್ರ ವಕವಾಗಿ ಅನುಗ್ರಹಿಸಿದ ಇಷ್ಟಲಿಂಗವನ್ನು ಧರಿಸಿ ಕೊಳ್ಳಬೇಕೆಂದು ಸಿದ್ಧಾಂತವಾದರೂ ಆ ಇಷ್ಟಲಿಂಗವ ನ್ನು ಶಿರಸ್ಸಿನಲ್ಲಿಯೂ ಕಂಠದಲ್ಲಿಯೂ ಧರಿಸಬಹುದು ಆದರೆ ಮುಖದಲ್ಲಿ ಧರಿಸಲು [illegible] ಸ್ಥಾನವೆಲ್ಲಿ ಎಂಬ ಶಂಕೆಯನ್ನು ಪರಿಹರಿಸ [illegible]—

[illegible]
[illegible] ||
[illegible]
[illegible] ಲಿಂಗಮಾ [illegible] |

[illegible] ಮನನಾ [illegible] ಪ್ರ [illegible] ಶಿವಲಿಂಗದ [illegible] ಅಕ್ಷರ [illegible] ಶಿವಲಿಂಗದ [illegible] ಇರುವದು ಎಂಬುದಾಗಿ [illegible] ಪಂಚಾಕ್ಷರೀ ಮಂತ್ರಕ್ಕೆ [illegible] ಇಷ್ಟಲಿಂಗಕ್ಕೂ ಏಕರೂ ಪತ [illegible] ಅಂಗೀಕಾರಮಾಡಿರುತ್ತಾರೆ ಆದುದರಿಂದ [illegible] ಅಕ್ಷರ [illegible] ಮಂತ್ರರೂಪದಿಂ [illegible] ಲಿಂಗ [illegible] ಶಿವಲಿಂಗ ವನ್ನು ಧರಿಸಬೇಕೆಂದು [illegible] ಸ್ಥಾನಗಳಲ್ಲಿ ಇಷ್ಟಲಿಂಗ ವನ್ನು [illegible] ಧರಿಸಲು ಸಾಧ್ಯವಿಲ್ಲವಸೆ [illegible] ಪ್ರಯೋಜನಕ್ಕಾಗಿ [illegible] ಲಿಂಗಗಳನ್ನು [illegible] ಧರಿಸುವುದ [illegible] ಶಿವವಿರೋಧ [illegible] ಇವು ವಿಷಯಸಂವಾದಗಳಲ್ಲಿ [illegible] ನ್ಯಾಯದಿಂದ ಸಿದ್ಧಾಂತಿಗಳು ಸಿದ್ಧಮಾಡಿರುತ್ತಾರೆ [illegible] ವ್ರೀಹಿಯ [illegible] ಯಾಗವನ್ನು ಮಾಡಬೇಕು [illegible] ಯಾಗವನ್ನು ಮಾಡಬೇಕು ಎಂಬ ಎರಡು ವಾಕ್ಯಗಳ ಉತ್ತಮ ಇವೆರಡು ವಾಕ್ಯಗಳಿಗೂ ಪುರೋ ಡಾಶಸಿದ್ಧಿ ಎಂಬ ಒಂದೇ ಪ್ರಯೋಜನವು [illegible] ಒಂದು ಪ್ರಯೋಜನಕ್ಕಾಗಿ [illegible] ಯಾಗವನ್ನೂ [illegible] ಯಾಗವನ್ನೂ ಎರಡನ್ನೂ ಮಾಡಬೇಕೋ [illegible] ಎಂಬ ಸಂಶಯವು ಉತ್ಪನ್ನ [illegible] ವ್ರೀಹಿಯಾಗವಾದರೆ [illegible] ವನ್ನು ಮಾಡಬೇಕಾಗಿಲ್ಲವೆಂಬ [illegible] ಅಂಗೀಕಾರವಾಗಿರುವಂತೆ [illegible] ಸಾಧಿಸುವುದಕ್ಕಾಗಿ [illegible] ಅವಯವಗಳಲ್ಲಿ ಲಿಂಗಧಾರಣವು [illegible] ಸ್ಥಾನದಲ್ಲಿ ಇಷ್ಟಲಿಂಗವನ್ನು ಧರಿ ಸಿದರೂ ಮೋಕ್ಷವೆಂಬ ಮಹಾಫಲ [illegible] ಸಿದ್ಧಿಸು ವುದರಿಂದ [illegible] ತೋರಿಸಿದ [illegible] ಮುಂತಾದ ಸ್ಥಾನಗಳಲ್ಲಿ ಇಷ್ಟಲಿಂಗವನ್ನು ಧರಿಸ ಬೇಕಾಗಿಲ್ಲವು ಒಂದು ಸ್ಥಲದಲ್ಲಿ ಧರಿಸಿದರೆ ಆದೇ ಸಮ ಯದಲ್ಲಿ ಮತ್ತೊಂದು ಸ್ಥಲದಲ್ಲಿ ಧರಿಸಬೇಕಾಗ [illegible] ವಶ್ಯಕತೆಯಿಲ್ಲವೆಂದು [illegible] ದಿರುವುದರಿಂದ [illegible] ದೀಕ್ಷಾ [illegible] ಮಂತ್ರಂ ಪವಿತ್ರ [illegible] ಇರುವ ಆದರ ನಿಜತತ್ವವನ್ನು [illegible] ಶಿರೋಗ್ರೀವ ಎಂಬ [illegible] ಹೃದಯಾವ್ಯಕ್ತವಾಂಗ [illegible] ದರೂ ಒಂದು ಸ್ಥಲದ [illegible] ಧಾರಣ ರಹಸ್ಯವು

ಒಳದೇಶದ ವೃತ್ತಾಂತಗಳು.

ಮೈಸೂರು ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡಿಗೆ ಶ್ರೀಮತಿ ಡಿ ಸಾಕಮ್ಮನವರು ರಾಜೀನಾಮೆಯನ್ನಿತ್ತು ಸಂಯುಕ್ತ ಶ್ರೀಮತಿ ಕೆ ಡಿ ರುಕ್ಮಿಣಿಯಮ್ಮನವರು ಚುನಾಯಿತರಾಗಿದ್ದಾರೆ

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸ್ವಾರಿ ಯು ಇದೇ ತಿಂಗಳು 16 ನೆಯ ತಾರೀಖಿನ ದಿವಸ ಸಕಲ ಬಿರುದಾವಳಿಗಳೊಡನೆ ಚಾಮರಾಜನಗರದ ಟವ ನ್ನಿಗೆ ದಯಮಾಡಿಸುತ್ತಾರೆಂದು ತಿಳಿದುಬರುತ್ತದೆ

[illegible] ದೇವನಹಳ್ಳಿಯ [illegible] [illegible] ಆಡಿಗೆ ಮಾಡುತ್ತಿದ್ದಾಗ್ಗೆ ಸೀರೆಗೆ ಬೆಂಕಿ [illegible] ಆರಿಸುವುದರೊಳಗಾಗಿ, ವೈದ್ಯರೆಲ್ಲಾ [illegible] [illegible] ಪ್ರಯೋಜನವಾಗದೆ ಸಾವ [illegible]

ಶ್ರೀಮನ್ಮಹಾರಾಜರವರು ಮ|| ಜಸ್ಟಿಸ್ ಕೆ ಶಂ ಕರನಾರಾಯಣರಾಯರವರಿಗೆ 40 10 15 ರಿಂದ ಒಂ ದುವರ್ಷ ಅವಧಿಯನ್ನೂ ಮ|| ಜಸ್ಟಿಸ್ [illegible] ಕರ್ ತಾರಾಯರವರಿಗೆ 1 12 15 ರಿಂದ 1 ವರ್ಷ ಅವ ಧಿಯನ್ನೂ ಹೆಚ್ಚಿಸಿರುತ್ತಾರೆ

[illegible] ಪಥಾಸಿಯ ಮ|| ರಾ|| ಧನಲಕ್ಷ್ಮಿ ಪ್ರಿಂಟಿಂಗ್ ಕಂಪನಿಯವರು ಮ|| ರಾ|| ಬಿ ರುದ್ರಪ್ಪನವರು, ಗೌರೀಶಂಕರದಾಸ್‌ನವರು ಕಳುಹಿಸಿಕೊಟ್ಟ 1915 ನೇ ಇಸವಿಯ ಸುಂದರವಾದ ಕ್ಯಾಲೆಂಡರುಗಳನ್ನು ಸಂ ತೋಷದಿಂದ ಸ್ವೀಕರಿಸಿರುತ್ತೇವೆ

ಮೈಸೂರು ಚಾಮರಾಜಪುರಂ [illegible] [illegible] ಹುಡುಗನು [illegible] ಹೋಗುತ್ತಿದ್ದಾಗ [illegible] ಮುಂದ ದಾಟಿದ್ದರಿಂದ [illegible] ತಗಲಿ ದೂರ ಎಸೆಯಲ್ಪಟ್ಟ [illegible] ಜಬ್ಬಿ ಹೋಗಿ [illegible] ರಿಂದ ಮೃತನಾದನು

ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟ ಗಳಾದ ಸರ್ [illegible] ಬಹದ್ದೂರವರಿಗೆ ಕಳೆದ ನವಂಬರ್ 4 ನೆಯ ತಾರೀಖಿನಿಂದ 1 ತಿಂಗಳು ರಜಾ ಮಂಜೂರಾಗಿದ್ದು ಅದರಲ್ಲಿ 10 ದಿನಗಳು [illegible] ಉಳಿದುದು ಅರ್ಧ ಸಂಬಳ ದ ರಜಾ ಮಂಜೂರಾಗಿದೆ

ಗ್ರೀಸ್ ದೇಶದ ಮಾಜಿದೊರೆಗಳಾದ ಮ|| ಜಾರ್ಜ ರವರು 11 ನೆಯ ತಾರೀಖಿನ ದಿವಸ ಬೆಂಗಳೂರಿಗೆ ಬಂದು ಅದೇ ದಿನ ನಮ್ಮ ದಿವಾನ್ ಸಾಹೇಬರೊಡನೆ ಮೈಸೂರಿಗೆ ಪ್ರಯಾಣಮಾಡಿ, ಶಿವಸಮುದ್ರ, ಶ್ರೀರಂ ಗಪಟ್ಟಣ ಮುಂತಾದ ಸ್ಥಳಗಳನ್ನು ನೋಡಿ 1 ನೆಯ ತಾರೀಖಿಗೆ ಹಿಂದಿರುಗುತ್ತಾರೆಂದು ತಿಳಿದು ಬಂದಿದೆ

ಮೈಸೂರು ಸ್ಟೇಟ್ ಟ್ರೂಪ್ [illegible] ಕರ್ನಲ್ [illegible] [illegible] 1 ಒಂದನೇ ತಾರೀಖಿನಿಂದ 1 ತಿಂಗಳು [illegible] ದಿವಸ [illegible] ರಜಾ ಮಂಜೂರಾಗಿರುತ್ತದೆ ಇವರ ರಜಾಕಾಲದಲ್ಲಿ [illegible] ಆಸಿಸ್ಟೆಂಟ್ [illegible] ಎಂಬುವರು ಇವರ ಕೆಲ ಸವನ್ನು ನೋಡಿಕೊಳ್ಳುತ್ತಾರೆ

[illegible] ಎಂಬಲ್ಲಿ ಹಿಂದೂ ಮುಸಲ್ಮಾನರಿಗೆ ಜಗಳವಾಗಿ [illegible] ಹಿಂದೂಗಳೂ ಗಾಯಗೊಂಡು [illegible] ಪೋಲೀಸರು ಒಂದು ಗಲಭೆಯನ್ನು ನಿಲ್ಲಿಸಿ ದರು [illegible] ನೆಂಗತ [illegible] ಪ್ರಯತ್ನವೇ ಈ ಕಲ ಹಕ್ಕೆ ಕಾರಣವೆಂದು ತಿಳಿದು ಬಂದಿದೆ

[illegible] ಪೋಲೀಸ್ ಸ್ಟೇಷನ್ ಬಳಿ ಇರುವ [illegible] ಎಂಬುವನು ತಾರೀಖು 6 7 14 ರಲ್ಲಿ [illegible] [illegible] ನೊಡನೆ [illegible] ಗಾಯಪ್ರಂಟುಮಾಡಿದನೆಂಬ ಆಪಾದನೆಯ [illegible] ಮಾಡಲ್ಪಟ್ಟಿದ್ದನು ನೆನ್ನೆ ದಿನ [illegible] [illegible] ಕೋರ್ಟಿನಲ್ಲಿ ವಿಚಾರಣೆಯಾ

[illegible] ಇಷ್ಟು ಸಂದು ನ್ಯಾಯಾಧೀಶರು ಅವನಿಗೆ ಎರಡು ವರ್ಷ [illegible] ಕಠಿಣಶಿಕ್ಷೆ ವಿಧಿಸಿದರು

ನಿನ್ನೆ ದಿವಸ ರಾಜಲಕ್ಷ್ಮೀ ಥಿಯೇಟರಿನಲ್ಲಿ ಸಾಯಂಕಾಲ ಕುಸ್ತಿಗಳು ನಡೆಯುವ ಸಮಯದಲ್ಲಿ ಥಿಯೇಟರಿನ ಮುಂಭಾಗದ ರೋಡಿನಲ್ಲಿ ದಂಡ ಮಂಡಿ [illegible] ಹೊಡೆದಾಟಗಳು ನಡೆದಿರುತ್ತವೆ [illegible] ಹೊಡೆದಾಟದಲ್ಲಿ ಹಿಂದೂಮುಸಲ್ಮಾನರೀರ್ವರೂ [illegible] ಗಾಯಗೊಂಡಿರುತ್ತಾರೆ

ಇರ್ವಿನ್ ನಾಲೆಯಿಂದ ಜನ್ಮಸಿಟ್ಟನಾದವರಿಗೆ ನೀರ್ ಕಾಮಗಾರಿಯು ನಡೆದಿರುವುದು [illegible] ವ ೨ಡೆ ೧೩ ವರ್ಷ ಮಳೆ ಕಡಿಮೆಯಾದ [illegible] [illegible] ಪಟ್ಟಣಕ್ಕೆ ಕಾವೇರಿ ನೀರನ್ನು ತರಬೇಕೆಂಬ [illegible] ದ್ದೇಶದಿಂದ ಅಲ್ಲಲ್ಲಿ ದಿಗ್ಗಳಿಕತ್ತ [illegible] [illegible] ಪ್ರದೇಶಗಳಿಗೆ [illegible] [illegible] ಮಾಡಿ ಸಿಟಿಗೆ ನೀರನ್ನು ತರುವುದಕ್ಕಾಗಿ [illegible] ವಿಶ್ವೇಶ್ವರಯ್ಯನವರ [illegible] ಮತ್ತು [illegible] ಗೌರ್ನಮೆಂಟಿನವರ [illegible] ರಾತಿಯ [illegible] ಕಳುಹಿಸಲ್ಪಟ್ಟಿದ್ದು [illegible] ಪರಿ ಮಂಜೂರುಮಾಡಿರುವುದಾಗಿ ತಿಳಿಯುತ್ತದೆ

ವರ್ತಮಾನಸಂಗ್ರಹ.

[illegible] ಡಿನಲ್ಲಿ ಕೋಟೇಶ್ವರದ [illegible] ವರ ಆಸ್ತಿಯನ್ನು ವಾರಸದಾರರು [illegible] ವ ಮೊದಲು ಗೌರ್ನಮೆಂಟಿಗೆ ಆಸ್ತಿಯ [illegible] ಸಂಕಡಾ ೧ ರಿಂದ ೧೧ ವರಗೆ ತರಿಗೆ [illegible]

[illegible] ಮೈಸೂರಿನ ಪಿ [illegible] ತಮ್ಮ ಸೂಸೆಗೆ ವಿಷಕೊಟ್ಟ [illegible] ಮಾನವಾಗಿ ಸೆಷನ್ ಜಡ್ಜರು ಇವರಿಗೆ [illegible] ಶಿಕ್ಷೆಯನ್ನೂ, ೫೦೦ ರೂಪಾಯಿ [illegible] ವಿಧಿಸಿದರೆಂದು ತಿಳಿದುಬರುತ್ತದೆ

[illegible] ಮೈಸೂರು [illegible] ಒಂಗಲೆಯಲ್ಲಿ [illegible] ಪ್ರದರ್ಶನ [illegible] ಪೋಲೀಸಿನವರ ಮೇಲೆ ಗುಂಡು [illegible] ಕಾರಣವನ್ನು ತಿಳಿಯುವುದಕ್ಕಾಗಿ [illegible] ಗುಂಡನ್ನು [illegible] ರಕ್ಷಣೆಯಲ್ಲಿ [illegible]

ಬೊಂಬಾಯಿ ಸರಕಾರಕ್ಕೆ ನೌಕರಿಗಾಗಿ [illegible] ಕುವವರು ಅರ್ಜಿಯಸಂಗಡ [illegible] ವಿಧಿಸಿದ್ದಾರೆ ಈಗ ಸಕ್ರೆಟೇರಿಯಟ್ಟಿನಲ್ಲಿ [illegible] ವ ಕೆಲಸಗಳಿಗೆ ಅರ್ಜಿ [illegible] ಬಿದ್ದಿವೆಯಂತೆ! ಇನ್ನೂ ೨೦ ಸಾವಿರ [illegible] ಬಹುದೆಂದು ಕಾಣುತ್ತದೆ ಇದರಿಂದ [illegible] ೧೦ ಸಾವಿರ ರೂಪಾಯಿಗಳ ಲಾಭವಾಗುವ [illegible] ಒದಗಿದೆ

ಎಣ್ಣೆಯ ಬಾವಿ.

ರಷ್ಯಾದೇಶಕ್ಕೆ ಸೇರಿದ ಬಾಕು ಎಂಬಲ್ಲಿ ಒಂದು [illegible] ಬಾವಿಯು ಸಿಕ್ಕಿದ್ದು, ಅದರಿಂದ ದಿನಕ್ಕೆ [illegible] ಟನ್ ಎಣ್ಣೆಯನ್ನು ತೆಗೆಯುತ್ತಾರೆಂದು ತಿಳಿದುಬಂದಿದೆ

ಒಂದೇಕಾಲದಲ್ಲಿ ೮ ಮಕ್ಕಳ ಜನನ!

ಚೈನಾದ ಚೆಂಗ್ ಸಾಕ್ ಎಂಬಲ್ಲಿ ಬೆಸ್ತರವನೊಬ್ಬನ ಹೆಂಡತಿಯು [illegible] ಕಾಲದಲ್ಲಿ ಏಳು ಗಂಡು ಒಂದು ಹೆಣ್ಣು ಒಟ್ಟು [illegible] ಮಕ್ಕಳನ್ನು ಪ್ರಸವಿಸಿದ್ದಾಳೆ ತಾಯಿಮಕ್ಕಳು ಸೌಖ್ಯವಾಗಿದ್ದಾರೆಂದು ತಿಳಿದುಬಂದಿದೆ

ವೈಸರಾಯರವರ ಸಂಚಾರ.

ವೈಸರಾಯರವರೂ, ಲೇಡಿ ವಿಲಿಂಗ್ಡನ್ನರೂ [illegible] [illegible] ಸ್ಥಾನಕ್ಕೂ, ಸೆಂಟ್ರಲ್ ಇಂಡಿಯಾ ಸಂಸ್ಥಾನಗಳಿಗೂ ಹೋಗುವುದಕ್ಕಾಗಿ ಸ್ಪೆಷಲ್ ರೈಲಿನಲ್ಲಿ ೧೦ನೇ ತಾರೀಖಿನ ದಿವಸ ಹೊರಟಿರುತ್ತಾರೆ

ನರೇಂದ್ರರ ಸಮ್ಮೇಳನ.

ನರೇಂದ್ರರ ಸಮ್ಮೇಳನಕ್ಕೆ ಎಲ್ಲ ಸಿದ್ಧತೆಗಳೂ ಆಗಿವೆ ವೈಸರಾಯರವರು ಜನವರಿ ೨೧ ನೆಯ ತಾರೀಖಿನ ದಿವಸ ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುವರು ಸಮ್ಮೇಳನವು ಮೂರು ದಿನ ನಡೆಯುವುದು

ಮಗುವನ್ನು ಉಳಿಸುವ ಪ್ರಯತ್ನದಲ್ಲಿ ತಾಯಿಯ ಮರಣ.

[illegible] ತಸರದಲ್ಲಿ ೨೦ ವರುಷ ವಯಸ್ಸಿನ ಮಾರ್ವಾಡಿ [illegible] ಯೊಬ್ಬಳು ತನ್ನ ಮಗುವನ್ನು [illegible] ಕುಳ್ಳಿರಿಸಿ ತಾನು ಕೊಳದಲ್ಲಿ ಸ್ನಾನಮಾಡುತ್ತಿದ್ದಾಗ್ಗೆ ಮಗುವು ಜಾರಿ ನೀರಿನಲ್ಲಿ ಬಿದ್ದಿತು ಅದನ್ನು ಬದುಕಿಸಬೇಕೆಂಬ ಆತುರದಲ್ಲಿ [illegible] ಯೂ ನೀರಿನಲ್ಲಿ ಬಿದ್ದು ಮುಳುಗಿ ಸತ್ತಳು

ಕೋರ್ಟಿನಲ್ಲಿ ವಕೀಲರ ಮರಣ!

ನಾಗಪುರದ ಜುಡಿಸಿಯಲ್ ಕಮಿಷನರ್ ಕೋರ್ಟಿನಲ್ಲಿ ಒಂದು ಕೇಸಿನ ಮೊಕದ್ದಮೆಯಲ್ಲಿ ವಾದ [illegible] ತ್ತಿದ್ದ [illegible] ಎಂಬ ವಕೀಲರು [illegible] ಕುಸಿದು ಬಿದ್ದರು [illegible] ಅವರನ್ನು ಪರೀಕ್ಷಿಸುವಷ್ಟರಲ್ಲಿ ಪ್ರಾಣವು ಹೋಗಿತ್ತು!

ತಿರುವಾಂಕೂರು ಮಹಾರಾಜರಿಗೆ ಮೋಸ!

[illegible] ಯಲ್ಲಿ [illegible] ಮಹಾರಾಜರಿಗೆ [illegible] ಮೋಸ [illegible] ಹಣ [illegible] ಪ್ರಯತ್ನಪಟ್ಟ [illegible] ಕಕ್ಷಿ [illegible] ದಸ್ತಗಿರಿ ಮಾಡಿ [illegible]

ಇಟಲಿ ದೇಶದ ರಸ್ತೆಗಳ ವ್ಯವಸ್ಥೆ!

ಇಟಲಿ ಸರಕಾರದವರು ತಮ್ಮ ದೇಶದ ರಸ್ತೆಗಳಲ್ಲಿ [illegible] ಸರಿಯಾದ ಪಕ್ಕದಲ್ಲಿ ಹೋಗಲು ತಪ್ಪಿದರೂ [illegible] ಪ್ರಕಾರ ರಸ್ತೆಯ ಸರಿಯಾದ ಪಕ್ಕದಲ್ಲಿ ನಿಲ್ಲದಿದ್ದರೂ ಅವರನ್ನು [illegible] ಕೊಟ್ಟಿದ್ದಾರೆ

ಮಾದಕರಸ ಕೊಡುವ ಬೇವಿನಮರ

[illegible] ಎಂಬಲ್ಲಿ [illegible] ಬೇವಿನ ಮರದಿಂದ [illegible] ರಸವು [illegible] ಇದರ [illegible] ಆನೇಕ ವ್ಯಾಧಿ [illegible] ವಾಸವಾ [illegible] ತ್ತಾರೆ

ಕಾರಣವಿಲ್ಲದ ವ್ಯಾಜ್ಯ!

[illegible] ಆನರೇಬಲ್ ವ್ಯಾಜ್ಯ [illegible] ಎಂಬವರು [illegible] ೧೧ ವರ್ಷ ವಯಸ್ಸಿನ ವೈನ್ [illegible] ಬಿಲ್ಲಿಗೆ ವಿರೋಧವಾಗಿ [illegible] ಕೋರ್ಟಿನಲ್ಲಿ ವಿಚಾರಣೆ [illegible] ಇನ್ನೂ ತೀರ್ಮಾನವಾಗಿಲ್ಲ

ಅತ್ಯಂತವಾಗಿ ಬೆಳೆದ ಮನುಷ್ಯ!

[illegible] ದೇಶದ ಕ್ವೈರೊಪಟ್ಟಣದಲ್ಲಿರುವ ಮಹ [illegible] ಎಂಬವನು ಅತಿ ಎತ್ತರವಿದ್ದಾನೆ ಈಗ [illegible] ವರುಷಗಳ ಹಿಂದೆ ಈತನು ಒಂದು [illegible] ತಕ್ಕ [illegible] ಡಾಕ್ಟರರು ಇವನಿಗೆ ಚಿಕಿತ್ಸೆಮಾಡಿದರಂತೆ! ಈಗ [illegible] ಮಾತ್ರವಿದ್ದವನು [illegible] ವರ್ಷಗಳಲ್ಲಿ [illegible] ಬೆಳೆದಿದ್ದಾನೆ ಪ್ರಪಂಚದಲ್ಲೆಲ್ಲಾ ಇವನೇ ಎತ್ತರವಾದ ಮನುಷ್ಯನೆಂದು ತಿಳಿದುಬಂದಿದೆ

ಚಂದ್ರಕಿರಣದ ಸಂಗೀತ.

[illegible] ಕನ್ನು [illegible] ಮಾಡುವ ಒಂದು ವಿಚಿತ್ರ ಯಂತ್ರವನ್ನು ಪ್ರೇಗ್ ನಗರದ ಸಿಜೋಸ್ಲೋ [illegible] ಯೂನಿವರ್ಸಿಟಿಯ ವೈಜ್ಞಾನಿಕರು ಕಂಡು ಹಿಡಿದಿದ್ದಾರೆ ಇದರಿಂದ ಚಂದ್ರನ ಮತ್ತು ಇತರ ಕೆಲವು ಗ್ರಹಗಳ ಬೆಳಕು ಶಬ್ದರೂಪವಾಗಿ ಮಾರ್ಪಡಿಸಲ್ಪಟ್ಟಿದೆ ಚಂದ್ರಕಿರಣಗಳ ಶಬ್ದವು ದೊಡ್ಡ ಗಂಟೆಗಳನ್ನು ಬಾರಿಸಿದಂತಿರುವುದು [illegible] ಇನ್ನೊಂದು ಗ್ರಹದ ಶಬ್ದವು ಜನರಗುಂಪು ಕೂಗಿದಂತಿರುವುದು.

ರಷ್ಯಾದಲ್ಲಿರುವ ಸೆರೆಮನೆಗಳು.

ರಷ್ಯಾದೇಶದ ಬಂದೀಖಾನೆಗಳಿಗೆ ಹೊಂದಿಗೊಂಡಿಗ [illegible] ಸಾಮಾನ್ಯವಾಗಿ ಯಾವ ಪ್ರತಿಬಂಧಗಳೂ ಇಲ್ಲದೆ ಅಲ್ಲಿಯ ಕೈದಿಗಳು ವಾಸಮಾಡುತ್ತಾರೆ. ಸಾಮಾನ್ಯ ಜನರಂತೆಯೇ ಬಟ್ಟೆ ಹಾಕುತ್ತಾರೆ ಅವರ ವಿಚಾರದಲ್ಲಿ ಜೈಲಿನವರು ಯಾವ ಎಚ್ಚರಿಕೆಯನ್ನೂ ತೆಗೆದುಕೊಳ್ಳುವುದಿಲ್ಲ ಒಂದು ವೇಳೆ ಅವರು ಬಂದೀಖಾನೆಯಿಂದ ಓಡಿಹೋದರೂ [illegible] ಘಂಟೆಯೊಳಗಾಗಿ ಹಿಂದಿರುಗಿ ಬಂದರೆ ಅದು ಅಪರಾಧವಾಗಿ ಗಣಿಸಲ್ಪಡುವುದಿಲ್ಲ ಕೈದಿಗಳು ಬಿಗಿಂಗಾಗಿ ಸಮಾಪದ ಮನೋಹರ ಸ್ಥಳಗಳಿಗೆ ಹೋಗಿ ಬರುತ್ತಾರೆ ಇಷ್ಟಾದರೂ ಅವರು ಎಂದೂ ತಪ್ಪಿಸಿಕೊಂಡು ಓಡಿಹೋಗಿಲ್ಲವಂತೆ!

ಪ್ರಪಂಚದಲ್ಲಿ ದೊಡ್ಡ ಕಾಲುವೆ

ಅಮೇರಿಕದ ಸಾನ್‌ಫ್ರಾನ್ಸಿಸ್ಕೋದಲ್ಲಿ ೬೦೦ ಮೈಲು ಉದ್ದವಾದ ಒಂದು ದೊಡ್ಡ ಕಾಲುವೆಯು ಈಗ ಕಟ್ಟಿ ಮುಗಿದಿದೆ [illegible] ನೆವಾಡಾ ಪರ್ವತಗಳಿಂದ ಸ್ಯಾನ್‌ಫ್ರಾನ್ಸಿಸ್ಕೋ ನಗರಕ್ಕೆ ನೀರನ್ನು ತರಲು ಇದು ಕಟ್ಟಲ್ಪಟ್ಟಿದೆ ಈ ಕಾಲುವೆಯನ್ನು ಕಟ್ಟಲು ೨೦ ವರ್ಷಗಳು ಹಿಡಿದವು ಅದರ ಖರ್ಚು [illegible] ಕೋಟಿ ಪೌಂಡುಗಳು [illegible] ದೇಶದಲ್ಲಿ [illegible] ಮೈಲಿ ಸುರಂಗ ಮಾರ್ಗವನ್ನು ಕೊರೆಯಬೇಕಾಯಿತು. ಈ ಒಂದು ಕೆಲಸಕ್ಕಾಗಿ [illegible] ಲಕ್ಷ ಪೌಂಡುಗಳು ಖರ್ಚಾದವು [illegible] ಜನರು ಪ್ರಾಣ ಕಳೆದುಕೊಂಡರು ಮೈಸೂರು ದೇಶದಲ್ಲಿರುವ ಇರ್ವಿನ್ ಕಾಲುವೆಯು ಉದ್ದದಲ್ಲಿ ಕಡಿಮೆಯಾದರೂ ಇಂಜನೀಯರಿಂಗ್ ಸಾಹಸದಲ್ಲಿ ಮೇಲ್ಕಂಡ ಕಾಲುವೆಗಿಂತ ಯಾವ ವಿಧದಲ್ಲಿಯೂ ಕಡಿಮೆಯಾಗಿಲ್ಲ

ಅದ್ಭುತವಾದ ಯಾತ್ರಾಪ್ರವಾಸ.

ಅಹಮದಾಬಾದಿನ [illegible] ಮಿಲ್ ಏಜಂಟರಾದ ಸೇಟ್ ಮಾಣೆಕ್‌ಲಾಲ್ ಸಮರಾಂಗವರು ಬೊಂಬಾಯಿ ಆಧಿಪತ್ಯದಲ್ಲಿರುವ ಪ್ರಸಿದ್ಧ ಜೈನ ಯಾತ್ರಾಸ್ಥಳವಾದ ಪಾಲಿಟಾನಕ್ಕೆ ಪಾದಚಾರಿಗಳಾಗಿ ಯಾತ್ರೆ ಹೋಗಲು ಹೊರಟಿರುತ್ತಾರೆ ಅವರ ಜೊತೆಯಲ್ಲಿ ಐದುಸಾವಿರ ಜನ ಜೈನಯಾತ್ರಿಕರೂ [illegible] ಗಾಡಿಗಳೂ [illegible] ದೊಂ [illegible], [illegible] ಘಂಟೆಗಳೂ, [illegible] ಮೋಟಾರುಗಳೂ, [illegible] ಜನ ಕಾವಲುಗಾರರೂ, [illegible] ಜನ ಪೋಲೀಸಿನವರೂ ಅವರ ಸಂಗಡ [illegible] ಹೊರಟಿರುತ್ತಾರೆಂದೂ, ಈ ಯಾತ್ರಿಕರು ಪಾಲಿಟಾನಕ್ಕೆ ಸೇರಲು ಒಂದು ತಿಂಗಳು ಹಿಡಿಯುತ್ತದೆಂದೂ ಇವರು ೧೦ ಕಡೆ ಮಧ್ಯಮಾರ್ಗದಲ್ಲಿ [illegible] ಯುತ್ತಾರೆಂದೂ ಹೇಳಲಾಗಿದೆ. ಈ ಯಾತ್ರಿಕರಿಗೆ ಊಟ ಉಪಚಾರಗಳಿಗೆ [illegible] ಲಕ್ಷ ರೂಪಾಯಿ ಖರ್ಚಾಗುತ್ತದೆಯೂ, ಇದಲ್ಲದೆ ಐದು ಲಕ್ಷ ರೂಪಾಯಿಗಳನ್ನು ಕೊಡಲು ಸೇಟ್ ಮಾಣಿಕಲಾಲರವರು ಒಪ್ಪಿರುತ್ತಾರೆಂದೂ ತಿಳಿದುಬಂದಿದೆ ಪಾಲಿಟಾನದಲ್ಲಿರುವ ಜನದೇವರಿಗೆ ಒಪ್ಪಿಸಲು ಚಿನ್ನ ಮತ್ತು ಬೆಳ್ಳಿಯಿಂದ ತಯಾರುಮಾಡಿದ ಒಂದು ರಥವನ್ನೂ, ಬೆಳ್ಳಿಯಿಂದ ಮಾಡಿರುವ ಒಂದು ದೇವಸ್ಥಾನವನ್ನೂ, ಒಂದು ಲಕ್ಷ ರೂಪಾಯಿ ಬೆಲೆಬಾಳುವ ಒಂದು ವಜ್ರದ [illegible] ವನ್ನೂ ಮತ್ತು ಒಂದು ಕಿರೀಟವನ್ನೂ ಸೇಟರವರು ತೆಗೆದುಕೊಂಡು ಹೋಗಿರುತ್ತಾರೆಂದು ತಿಳಿದುಬಂದಿದೆ ಇಂಥ ಅಗಾಧವೂ, ಚರಿತ್ರಾರ್ಹವೂ ಆದ ಯಾತ್ರೆಯನ್ನು ೮೦೦ ವರ್ಷಗಳ ಹಿಂದೆ ಧೈವಭಕ್ತನಾದ ಕುಮಾರಪಾಲ್ ಎಂಬ ಗುಜರಾಥಿ ಧೊರೆಯು ಮಾಡಿದ್ದನಂದೂ, ಇದುವರೆಗೂ ಯಾರೂ ಇಂಥ ಯಾತ್ರೆಯನ್ನು ಕೈಗೊಂಡಿದ್ದಿಲ್ಲವೆಂದೂ ಹೇಳಲಾಗಿದೆ

ಸುಜನ ಸಂತಾಪ.

ಕಂ|| ದುಷ್ಟಪ್ರಾಬಲ್ಯಂ ಬಹು |
ಕಷ್ಟಕರಂ ಸಾಧುಜನರ ಬಾಳ್ವಿಕೆಗಳವಂ ||
ನಷ್ಟವು ಪ್ರಾಪ್ತಿಸಿ ಹರಿಹರ |
ಧೃಷ್ಟತೆಯುಂ ಪೊಂಪಿ ಕೊನೆಗೆ ಕೆಡುವುದು ಸಹಜಂ ||೧||

ಕೃತ್ರಿಮದೊಳ್ಮೆಯು ಲೋಕಕೆ |
ಚಿತ್ರಿಸಿ ಮಿಗೆ ಮತುಳಗೋಳಕರರಿಯದ ಜನರಂ ||
ಮಿತ್ರದ್ರೋಹಿಗಳವರು ಪ |
ವಿತ್ರಗುಣದಿ ದೋಷಗಳನು ಹುಡುಕುವರವರ್ ||೨||

ಮನಸ್ಪೇಪ್ಪಿದ ಜನಬಂಧಂ |
ಧನಕಮನಸುಳಿದಮಿಗೆ ಪಮರದಾಶೆಂಮಲಿವರ್ ||
ವಿನಯಗುಣಮಿರದೆ ನೀತಿಯು |
ನನುಸರಿಸದೆ ಮೇರೆಮೀರಿ ನಡೆಯುವರಧಮರ್ ||೩||

ಛಾ|| ಷ|| ಮರ್ಮಘಾತುಕರಿವರು ಪಾಪಿವ |
ಧರ್ಮಬಾಹಿರರಿವರು ಹಿಂಸಕ |
ಪೆರ್ಮೆಯಗುಣಹೀನರಿವರು ಪಮಾಹಿತರಿವರು |
ದುರ್ಮನೋರಥರಿವರು ದುರಿತಪಿ |
ಕರ್ಮಜೀವಿಗಳಿವರು ಜಗದೊಳ್ |
ಧರ್ಮಲಕ್ಷಣವರಿಯರಿವರು ವಿಚಾರಹೀನರಿವರು ||೪||

ನೋಡದ ಪಾಪಿಗಳಲ್ಲಂ |
ಮಾಡದ ದುಷ್ಕೃತ್ಯವಿಲ್ಲ ಮರಿಯುದುವಿಲ್ಲಂ |
ಆಡದ ದುರ್ನುಡಿಯಿಲ್ಲಂ |
ಕೂಡದ ನರಿ ಕಪಟತಂತ್ರಕೂಟವುದಿಲ್ಲಂ ||೫||

ಗುಬ್ಬಿ ಶಿವಕದಂಪಂಡಿತ
ಶಿವರುದ್ರಶಾಸ್ತ್ರಿ ಹಾರನಹಳ್ಳಿ

ಸೋಮನಾಥಲಿಂಗದ ಕಾರ್ತಿಕ ಮಹೋತ್ಸವ ಹೊಳಗುಂದಿ.

ಒಳ್ಳಾರಿ ಡಿ|| ಹುಪ್ಪಿನಹಡಗಲಿ ತಾ|| ಹೊಳಗುಂದಿ ಗ್ರಾಮದಲ್ಲಿ ಸೋಮನಾಥಲಿಂಗಮೂರ್ತಿಯ ದೇವಸ್ಥಾನವು ಶಿಥಿಲವಾಗುತ್ತ ಬಂದಿರುವುದರಿಂದ ನಮ್ಮ ಗ್ರಾಮದ ಯಜಮಾನರೂ ವೀರಶೈವ ಸದ್ಭಕ್ತರೂ ಆಚಾರಶೀಲರೂ ಆದ ಪಾಸಯೋಗದ ಒದ್ದುಲಿಂಗಪ್ಪನವರು ಸ್ವಹಸ್ತ ಪರಹಸ್ತಗಳಿಂದ ಧನವನ್ನು ಕೇಯುರಿಸಿ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿದರು ಕಾರ್ತಿಕ ಮಾಸಾದಿಯಾಗಿ ಪ್ರತಿದಿವಸವೂ ನಮ್ಮ ಗ್ರಾಮದ ಉಜ್ಜಯನೀಮಠದ ಮಠದ ವೇ|| ಬ್ರಂ|| ಶ್ರೀ|| ಪಟ್ಟದ ಸಿದ್ಧಲಿಂಗ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ ಶಿಷ್ಯರೊಂದಿಗೆ ಶ್ರೀ ಜಗದ್ಗುರುಗಳವರ ನಾನಾ ಸಂಕೀರ್ತನಗಳಿಂದೊಡಗೂಡಿದ ಸ್ತೋತ್ರಾವಳಿಗಳಿಂದ ಕೃತ್ತಿಕೋತ್ಸವವನ್ನು ನಡೆಸುತ್ತಿದ್ದು ಇದೇ ಮಾರ್ಗಶಿರ ಬ|| ೧೧ ಸೋಮವಾರ ದೇವಸ್ಥಾನವು ತಳಿರು ತೋರಣ ರಂಬಾಸ್ತಂಭಗಳಿಂದಲೂ ಪುಷ್ಪಮಾಲಾದಿಗಳಿಂದಲೂ ಅಲಂಕರಿಸಲ್ಪಟ್ಟು ಮಹೋತ್ಸವಕಾರ್ಯವನ್ನು ಪೂರ್ತಿಗೊಳಿಸಿದರು ಸಹಸ್ರಾರು ಜನರು ಉತ್ಸವದಲ್ಲಿ ಭಾಗಿಗಳಾಗಿ ಶ್ರೀ ಗುರುದೇವತೆಗಳ ಭಜನ ಕೀರ್ತನಗಳಿಂದಲೂ ವಾದ್ಯವೈಭವಗಳಿಂದಲೂ ಕೃತ್ತಿಕೋತ್ಸವವನ್ನು ಪೂರ್ತಿಗೊಳಿಸಿದನಂತರ ಶ್ರೀ ಪಟ್ಟಾಧ್ಯಕ್ಷರ ಅಧ್ಯಕ್ಷತೆಯಲ್ಲಿ ವೇ|| ಗದ್ದಿಕೇರಿ ಬ್ರಹ್ಮಯ್ಯನವರ ಅಡಿವಪ್ಪನವರು ಈ ಸೋಮನಾಥಲಿಂಗದ ಯಥಾರ್ಥಸ್ವರೂಪವನ್ನೂ ಈ ಲಿಂಗಾವಿರ್ಭಾವಕರಾದ ರೇಣುಕಾಚಾರ್ಯರ ಅದ್ಭುತಶಕ್ತಿಯನ್ನು ಸರ್ವರಿಗೂ ತಿಳಿಯುವಂತೆ ವ್ಯಾಖ್ಯಾನಮಾಡಿದರು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಉತ್ಸವವು ಸಮಾಪ್ತಿಗೊಳಿಸಲ್ಪಟ್ಟಿತು ಸಮಸ್ತ ವೀರಶೈವ ಸದ್ಭಕ್ತರು ಪ್ರತಿವರುಷವೂ ಇದೇ ಪ್ರಕಾರ ಆ ಗುರುದೇವತೆಗಳ ಮಹೋತ್ಸವದಲ್ಲಿ ಭಾಗಿಗಳಾಗಿ ಫಲಪುಷ್ಪಾದಿಗಳನ್ನು ಸಮರ್ಪಿಸಿ ಪ್ರಸಾದವನ್ನು ಸ್ವೀಕರಿಸಿ ಕೃತಾರ್ಥರಾಗಿ ದೇವತಾಸಾರ್ವಭೌಮನಾದ ಶ್ರೀ ಸಾಂಬಮೂರ್ತಿಯ ಪ್ರೀತಿಗೂ ಶ್ರೀ ಜಗದಾಚಾರ್ಯರ ಕೃಪಾಶೀರ್ವಾದಕ್ಕೂ ಪಾತ್ರರಾಗಲು ಹಾರೈಸುವ,

ಓರ್ವ ಗುರುಭಕ್ತ,
ಸಿದ್ದಪ್ಪ ಒಡ್ಡಿನ ಹೊಳಗುಂದಿ

ಚಾಣಕ್ಯನ ಅರ್ಥಶಾಸ್ತ್ರ.

(ಕನ್ನಡ ಕವಿ ಆಸ್ಥಾನ ವಿದ್ವಾನ್ ಆನವಟ್ಟಿ ರಾಮರಾಯರಿಂದ)

೪ ನೆಯ ಅಧ್ಯಾಯ

ಗೂಢ ಪುರುಷೋತ್ಪತ್ತಿ.

ಶತ್ರುರಾಜ್ಯದಲ್ಲಾಗಲಿ ಸ್ವರಾಜ್ಯದಲ್ಲಾಗಲಿ ರಾಜನಿಗೆ ಪ್ರತಿಕೂಲವಾಗಿ ನಡೆಸಲ್ಪಡುತ್ತಿರುವ ಕಾರ್ಯಗಳು ಮರ್ಮಗಳನ್ನು ತಿಳಿದು ರಾಜನಿಗೆ ತಿಳಿಸಲು ನೇಮಿಸಲ್ಪಟ್ಟವರು ಗೂಢಚಾರರೆಂದು ಹೇಳಿಸಿಕೊಳ್ಳುವರು

1 ನಾನಾವಿಧವಾದ ತಂತ್ರಗಳಿಂದ ಪರೀಕ್ಷಿಸಲ್ಪಟ್ಟ ಮಂತ್ರಿಗಳಿಂದ ಯುಕ್ತನಾದ ರಾಜನು ಗೂಢಚಾರರನ್ನು ಹೊಸದಾಗಿ ಏರ್ಪಡಿಸಬೇಕು ಕೆಲವರನ್ನು ಕಪಟಶಿಷ್ಯರಂತೆಯೂ ಕೆಲವರನ್ನು ವೈರಾಗಿಗಳಂತೆಯೂ ಕೆಲವರನ್ನು ಗೃಹಸ್ಥರಂತೆಯೂ, ಕೆಲವರನ್ನು ವ್ಯಾಪಾರಿಗಳಂತೆಯೂ ಕೆಲವರನ್ನು ತಪಸ್ವಿಗಳಂತೆಯೂ ಕೆಲವರನ್ನು ಸಾಹಸ್ರಾದ್ಯೋಗ ಮಾಡುವ ಎಡಿಗರಂತೆಯೂ ಕೆಲವರನ್ನು ಮುದ್ರೆಹಾಕುವವರಂತೆಯೂ, ರಸವಾದಿಗಳಂತೆಯೂ, ಭಿಕ್ಷುಕರಂತೆಯೂ ವೇಷಗಳನ್ನು ಹಾಕಿ ರಾಜ್ಯದಲ್ಲಿ ಸಂಚಾರ ಕಳುಹಿಸಬೇಕು

2 ಎಷ್ಟುತ್ಸಾಹಿಯಾಗಿ ಪರರ ಹೃದಯಾಂತರ್ಗತವಾದ ಮರ್ಮಗಳನ್ನು ಊಹಿಸಿ ತಿಳಿದುಕೊಳ್ಳುವವನೇ ಕಾರ್ಯಕ್ಕೆ ಶಿಷ್ಯನೆಂದರಿಯತಕ್ಕದು ಇತರರಿಗೆ ತಿಳಿಸದೆ ಗೌರವ ದಮಾಡಿ, ದ್ರವ್ಯವನ್ನು ಬಹುಮಾನವಾಗಿ ಕೊಟ್ಟು, ಮಂತ್ರಿಯು ಅವನನ್ನು ಕುರಿತು—ನೀನು ಮಹಾರಾಜರಿಗೂ ಮತ್ತು ನನಗೂ ಪ್ರಮಾಣಮಾಡಿಕೊಟ್ಟು ಇತರರಲ್ಲಿ ಕಾಣ ಬರುವ ಅಂತಹ ಕೆಲಸಗಳನ್ನು ಕಂಡರೂ ತಪ್ಪದ ಬಂದು ಹೇಳಬೇಕೆಂದು ಪ್ರಮಾಣಮಾಡಿಕೊಂಡು ಕಳುಹಿಸಬೇಕು

3 ತಪಸ್ಸಿನಿಂದ ಪತಿತನಾಗಿ ಉಪಯೋಗಿಸಬೇಕಾದ ನಾನಾವಿಧವಾದ ಆಸನಾದಿಗಳನ್ನು ತಿಳಿದು ಮುಂದಿನ ದೃಷ್ಟಿಯುಳ್ಳವನಾಗಿ ಸನ್ಯಾಸವೃತ್ತಿಯುಳ್ಳವನಾಗಿರುವವನೇ ವೈರಾಗಿ ಗೂಢಚಾರನು. ಈ ಗೂಢಪುರುಷನು ಏಕಾಂತಸ್ಥಳವನ್ನು ರಾಜನಿಂದ ಹೊಂದಿ, ಅನೇಕ ಶಿಷ್ಯರಿಂದ ಕೂಡಿದವನಾಗಿ ಉದ್ದಿಷ್ಟಕಾರ್ಯವನ್ನು ಸಾಧಿಸಬೇಕು. ಇವನು ಬೀಜದ ವ್ಯವಸಾಯವನ್ನು ಮಾಡುವರೀತಿಯನ್ನು ಪಶು ವ್ಯವಸಾಯ ಶಾಸ್ತ್ರವನ್ನೂ ಪಶುಪಾಲನೆಯನ್ನೂ ವ್ಯಾಪಾರಲಕ್ಷಣವನ್ನೂ ತಿಳಿದವನಾಗಿರಬೇಕು ವ್ಯವಸಾಯದಿಂದ ಲಭ್ಯವಾದ ಧನಧಾನ್ಯ ಮತ್ತು ಆದಾಯಗಳಿಂದ ತನ್ನ ಸಂಗಡಿಗರಾಗಿರುವ ಶಿಷ್ಯಮಂಡಲಿಯನ್ನು ಕಾಪಾಡುವುದಕ್ಕೆ ಬೇಕಾದ ಆಹಾರ ಒಟ್ಟು ಮನೆಗೆಲಸ್ಸು ಒದಗಿಸಿಕೊಂಡು ಅವರನ್ನು ಕಾಪಾಡಿಕೊಂಡು ಬರಬೇಕು ಇಂತಹ ಶಿಷ್ಯರಲ್ಲಿ ಯಾರು ಗೂಢಚಾರರಾಗಿ ಪ್ರತ್ಯೇಕ ಸ್ಥಳಕ್ಕೆ ಹೋಗಲು ಇಷ್ಟಪಡುವರೋ ಅಂಥವರನ್ನು ರಾಜದ್ರವ್ಯದ ವಿಷಯದಲ್ಲಿ ಯಾವ ದ್ರೋಹಕಾರ್ಯಗಳು ನಡೆದರೂ ನೋಡಿಕೊಂಡಿದ್ದು ತಪ್ಪಿತಸ್ಥರನ್ನು ಕರೆತಂದು ವರದಿ ಹೇಳಬೇಕೆಂದು ಕಟ್ಟುಮಾಡಿ ಅನಂತರ ಅವರಿಗೆ ಸಲ್ಲಿಸಬೇಕಾದ ಆಹಾರಸಾಮಗ್ರಿಗಳನ್ನೂ, ಕೂಲಿಯನ್ನೂ ಕೊಡಬೇಕು

4 ಒಬ್ಬ ವ್ಯವಸಾಯಗಾರನು ತನ್ನ ವೃತ್ತಿಯನ್ನು ತ್ಯಜಿಸಿ ಮುಂದಿನದೃಷ್ಟಿಯುಳ್ಳವನಾಗಿ ಸದ್ಗುಣಗಳಿಂದ ಕೂಡಿದವನೇ ಸಂಸಾರಿಯಾದ ಗೂಢಚಾರನೆನಿಸಿಕೊಳ್ಳುವನು ಈ ಗೂಢಪುರುಷನು ಅವನಿಗೆ ಕಟ್ಟಲ್ಪಡುವ ಭೂಮಿಯನ್ನು ವ್ಯವಸಾಯಮಾಡಿಕೊಂಡು ತನ್ನ ಕೈಕೆಳಗಿರುವ ವ್ಯವಸಾಯಗಾರರನ್ನು ಕಾಪಾಡಿಕೊಂಡುಬರುತ್ತ ರಾಜನಿಗೆ ದ್ರೋಹವುಂಟಾಗತಕ್ಕ ವಿಷಯಗಳನ್ನು ಕಂಡರೆ ಎಡನೆ ತಂದು ಹೇಳಬೇಕಾದುದೇ ಅವನ ಕರ್ತವ್ಯವು

5 ವ್ಯಾಪಾರವೃತ್ತಿಯಲ್ಲಿ ಲೋಪಬಂದಾಗ್ಯೂ ಮುಂದಿನದೃಷ್ಟಿಯುಳ್ಳವನಾಗಿ, ಸವಿವಾಜೀವವೃತ್ತಿಪರನೆನಿಸಿರುವವನೇ ಐಶ್ವರ್ಯವಂತನಾದ ಗೂಢಪುರುಷನೆನಿಸಿಕೊಂಡಿರುವನು ಇವನು ತನಗೆ ಕೊಡಲ್ಪಟ್ಟ ಭೂವ್ಯವಸಾಯದಿಂದ ಲಭ್ಯವಾದ ಧನಧಾನ್ಯಗಳ ವ್ಯಾಪಾರಗಳನ್ನು ಮಾಡಿಕೊಂಡು ಬರುತ್ತ ರಾಜದ್ರೋಹಕಾರ್ಯಗಳು ಎಲ್ಲಿ ಕಂಡುಬಂದರೂ ಅವುಗಳನ್ನು ಕೂಡಲೆ ರಾಜನಿಗೆ ತಂದು ಹೇಳತಕ್ಕವನಾಗಿರುವನು

6 ತಲೆಯನ್ನು ಮುಂಡನಮಾಡಿಕೊಂಡಾಗಲಿ, ಜಟೆಯನ್ನು ಬಿಟ್ಟುಕೊಂಡಾಗಲಿ, ಸನ್ಯಾಸಿಯ ವೇಷವನ್ನು ತಾಳಿ, ನಾನಾವಿಧವಾದ ಯೋಗಾಭ್ಯಾಸಗಳನ್ನು ಕಲಿತುಕೊಂಡು ಇರುವವನೇ ಸನ್ಯಾಸಿಗೂಢಚಾರನೆಂದು ತಿಳಿಯಬೇಕು ಇಂತಹ ಗೂಢಪುರುಷನು ತನ್ನ ಸುತ್ತಾರ ತನ್ನಂತೆಯೇ ವೇಷಗಳನ್ನವಡಿಸಿಕೊಂಡು ಅನೇಕರನ್ನು ತನ್ನ ಶಿಷ್ಯರನ್ನಾಗಿಮಾಡಿಕೊಂಡು ಪಟ್ಟಣಕ್ಕೆ ಸಮೀಪವಾಗಿರುವ ಒಂದಾನೊಂದು ಸ್ಥಳದಲ್ಲಿ ಇಳಿದುಕೊಂಡಿದ್ದು ಎಲ್ಲಿಯೋ ಸ್ವಲ್ಪ ಗೆಡ್ಡೆಗೆಣಸುಗಳನ್ನು ತಿಂದು ಜೀವಿಸಿಕೊಂಡಿರುವಂತೆ ನಟಿಸಿ ತೋರಿಸುತ್ತ, ತನಗೆ ಬೇಕಾದ ಆಹಾರಗಳನ್ನು ಗೋಪ್ಯದಲ್ಲಿ ತಿಂದುಕೊಂಡು ಜೀವಿಸಿಕೊಂಡಿರುವನು

7 ವ್ಯಾಪಾರಿಯಂತಿರುವ ಗೂಢಪುರುಷರೂ ಇತರ ಶಿಷ್ಯರೂ ಒಬ್ಬ ಯಜಮಾನನಿಗೆ ತಾವು ಶಿಷ್ಯರಾಗಿ ಅವನಿಗ ವಿಶೇಷ ಭಯಭಕ್ತಿಗಳನ್ನು ತೋರಿಸುತ್ತಾ, ಆತನಲ್ಲಿ ಅದ್ಭುತಶಕ್ತಿಯಿರುವುದೆಂದು ಹೊಗಳಿ, ಲೋಕಕ್ಕೆಲ್ಲಾ ಹರಡಿ ಜನರಿಗೆ ಭ್ರಾಂತಿಗೊಳಿಸಿಕೊಂಡಿರುವರು

8 ಇವರುಗಳ ಸ್ಥಿತಿಗಳನ್ನು ನೋಡಿ ನೋಡಿ ಭ್ರಾಂತರಾಗಿ ಜನರು ತಮಗೆ ಮುಂದೇನಾಗುವುದನ್ನು ಪ್ರಶ್ನಮಾಡಿ ತಿಳಿದುಕೊಳ್ಳಬೇಕೆಂದು ಭ್ರಾಂತಿಯಿಂದ ಗುಂಪುಗುಂಪಾಗಿ ಬರುವ ಜನಗಳಿಗೆ ಅವರವರ ಹಸ್ತಗಳನ್ನು ನೋಡಿ, ಸಾಮುದ್ರಿಕಾಲಕ್ಷಣಗಳನ್ನು ಹೇಳಿ ಮುಂದಕ್ಕೆ ನಿನಗೆ ಹೀಗ ಸಂಭವಿಸುವುದೆಂಬ ವಿಷಯಗಳನ್ನು ಹೇಳಿದಾಗ್ಗೆ ತನ್ನ ಶಿಷ್ಯರು ತಲೆದೂಗಾಡಿಸುವುದನ್ನೂ ಅವರು ಕೊಡುವ ಇತರ ವಿಧವಾದ ಸಂಜ್ಞೆಗಳನ್ನು ತಿಳಿದು ಸದ್ವಂಶಸಂಜಾತರಾದವರ ವಿಷಯದಲ್ಲಿ—ಸ್ವಾಮಿಗಳೇ ನಿಮಗ ಮುಂದಕ್ಕೆ ಸ್ವಲ್ಪ ಆದಾಯವುಂಟು, ಬೆಂಕಿಯಬೀತಿಯುಂಟಾಗುವುದು, ಕಳ್ಳಕಾಕರ ಭಯವುಂಟು ರಾಜದ್ರೋಹಕರ ಭೀತಿಯುಂಟು, ಈ ಕಾರಣಗಳಿಂದ ನೀವು ಸಜ್ಜನರಿಗೆ ದಾನಧರ್ಮಗಳನ್ನು ಮಾಡುತ್ತಿರಿ, ಬೇರೆ ಸ್ಥಳದಿಂದ ಒಳ್ಳೆಯ ಸಮಾಚಾರ ಬರುವುದು. (ವಿದೇಶಪ್ರವೃತ್ತಿ ವಿಜ್ಞಾನ) ಎಂಬುದಾಗಿ ನಾನಾ ವಿಧವಾಗಿ ಹುಟ್ಟಿಸಿಕೊಂಡು ಹೇಳುತಲ್ಲ, ಈ ಕಾರ್ಯವು ಕ್ಷಿಪ್ರದಲ್ಲಿಯೇ ಸಂಭವಿಸುವುದು ಆದಕ್ಕ ನಾಳ ರಾಜನು ಸಹಾಯ ಮಾಡುವನು, ಎಂದು ನಾನಾ ವಿಷಯಗಳನ್ನು ಹೇಳುತ್ತಾಬರುವನು ಈ ರೀತಿಯಾಗಿ ಹೇಳುವ ಯಜಮಾನಸನ್ಯಾಸಿಯ ಮಾತುಗಳಿಗನುಸಾರವಾಗಿ ಅವನ ಶಿಷ್ಯರೂ ಆಡುತ್ತಾ ಬರುವರು

9 ಇಷ್ಟು ಅಲ್ಲದೆ ತನ್ನಲ್ಲಿ ಬಂದು ಮುಂದಾಲೋಚನೆ ಮಾಡುವ, ವಾಕ್ಚಾತುರ್ಯವುಳ್ಳ, ಶೌರ್ಯವಂತರಾದ ಜನಗಳಿಗೆ ಮರ್ಯಾದೆಗಳನ್ನು ಮಾಡುತ್ತ ಬನ್ನಿ ಎಂದು ಹೇಳುತ್ತ, ರಾಜರುಗಳಿಂದಲೂ ಮರ್ಯಾದೆಗಳನ್ನು ಪಡೆಯುತ್ತ, ರಾಜ್ಯದ ಅಮಾತ್ಯರಲ್ಲಿಯೂ ಕೆಲವು ಬದಲಾವಣೆಗಳು ನಡೆಯುವುವೆಂದು ಹೇಳುವನು

10 ಈ ಮಾತುಗಳನ್ನು ಕೇಳಿದ ರಾಜನ ಮಂತ್ರಿಗಳೂ ಕೂಡ ಮುಂದಾಗುವುದೆಂದು ಅವನು ಹೇಳಿದ ಮಾತುಗಳಿಗೆ ಅನುಸಾರವಾಗಿ ಹೇಳಿದ ವಿಷಯಗಳನ್ನು ಕೇಳಿ ತನ್ನ ಮಾತುಗಳನ್ನು ಊರ್ಜಿತಪಡಿಸಿಕೊಳ್ಳುವನು ಇಷ್ಟೂ ಅಲ್ಲದೆ ರಾಜನ ಮೇಲೆ ನಿಕೋಪ ಮಾಡಿಕೊಂಡು ಬರುವವರಿಂದ ಕೇಳಿದ ವಿಷಯಗಳನ್ನು ಕೇಳಿ ಅವರಿಗೆ ಪ್ರತಿಕೂಲವಾಗುವುದೆಂತಾಗಲಿ, ಕಾರಣವಿಲ್ಲದೆ ಅಂತರಂಗದಲ್ಲಿಯೇ ಶಿಕ್ಷೆಯುಂಟಾಗುವುದೆಂತಾಗಲಿ, ಇದಕ್ಕಾಗಿ ವ್ಯಸನಪಡಬೇಕಾದುದಿಲ್ಲವೆಂತಾಗಲಿ ಅವರಿಗೆ ಹೇಳಿ, ಅವರು ಕೊಡುವ ದ್ರವ್ಯ ಮತ್ತು ಮರ್ಯಾದೆಯರೂಪದಲ್ಲಿ ನೀಡುವ ದ್ರವ್ಯಗಳನ್ನು ಸ್ವೀಕರಿಸಿ, ಬಂದವರ ಮನಸ್ಸಿಗೆ ದುಃಖಶಮನವಮಾಡಿ ಕಳುಹಿಸುತ್ತಿರುವನು.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕಂದಾಶಿಸುತ್ತೇವೆ.

ಬೆಲೆ ೧೨ ಆಣೆ. ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಪ್ರಖ್ಯಾತಿಯಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಶಾಂತಿಪುರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲಟ್ಟಿದೆ. ಈ ಗ್ರಂಥದ ರಚನೆಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೬ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೪೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಪಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮ ಸ್ವಾಮಿಗಳಾದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ನೋಡಿ ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವವಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೫೬೯ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ ಪಿ ಚಾರ್ಜ ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಗಳು

ಧಾತುಪುಷ್ಟಿಲೇಹ.

1 ಇದು ಬಲಹೀನ ದೇಹಗಳಿಗೆ ಅದ್ಭುತವಾದ ಔಷಧಿ. ಇದರ ಸೇವನೆಯಿಂದ ಮಲಬದ್ಧತೆ, ಒಳಜ್ವರ, ಅಜೀರ್ಣ, ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶ್ಶಕ್ತಿ, ಕಾಲು ಕೀಲುನೋವು, ರಕ್ತಹೀನತೆ, ಬೆನ್ನು ನೋವು, ಕೈ ನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಸ್ವಪ್ನಾವಸ್ಥೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಯೋಗಶಕ್ತಿಯು ಕುಂದಿರುವಿಕೆ, ಶರೀರದ ಉಷ್ಣತೆ ಇವುಗಳನ್ನೆಲ್ಲಾ ಹೋಗಲಾಡಿಸಿ ರಕ್ತವೃದ್ಧಿಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಡಬ್ಬಿ 1ಕ್ಕೆ 2—8—0 3ಕ್ಕೆ 7—0—0

2 **ಮೇಹಕುಠಾರಪ್ರಮೇಹ** ಮೂತ್ರ ಹೋಗದಿರುವಿಕೆ ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವದು. ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ್ಗ ಒಂದು ತನಿಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು. ಡಬ್ಬಿ 1ಕ್ಕೆ 2—8—0 3ಕ್ಕೆ 7—0—0

3. **ಮಲೇರಿಯಾ ನಿವಾರಿಣಿ** ಇದು ಮಲೇರಿಯಾ, ದಿನಬಿಟ್ಟು ಬರುವ ಜ್ವರ, ಚಳಿಜ್ವರ, ಇಂಪ್ಲುಯಂಜಾ, ನ್ಯೂಮೋನಿಯಾ, ಕಫಜ್ವರ, ಜ್ವರಗೆಡ್ಡೆ ಮುಂತಾದವುಗಳಿಗೆ ದಿವ್ಯೌಷಧಿ. ಬಾಟ್ಲಿ 1ಕ್ಕೆ 1—8—0 ಸಣ್ಣ ಬಾಟ್ಲಿಗೆ 0—13—0. 3ಕ್ಕೆ 4—0—0 ಸಣ್ಣ ಬಾಟ್ಲಿ 3ಕ್ಕೆ 2—2—0

ಬಿಡಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಿಗೆ ತಕ್ಕಂಥಾದ ಔಷಧಿ ರವಾನಿಸಲಾಗುತ್ತೆ. ಕ್ಯಾಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಅಂಡ್ ಸನ್ಸ್

ಔಷಧಿ ಸಿಕ್ಕುವ ಸ್ಥಳಗಳು— ಆಯುರ್ವೇದಿಕ್ ಫಿಜಿಸಿಯನ್, ರಥವೀದಿ, ನಂಬರು 271 ಮಂಗಳೂರು

ಮೆಸ್ಸರ್ಸ್ ಪಟೇಲ್ ಬ್ರದರ್ಸ್ 91 ಚಿಕ್ಕಪೇಟೆ ಬೆಂಗಳೂರು ಸಿಟಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರೆಯಲ್ಲಂತದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಾನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಶಂಕರಾಂತವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಜತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೊಂಬಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಒಖೀಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳನ್ನೊಳಗೊಂಡ ಫೋಟೋ ಸೈಜು ೨೦X೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦X೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪\೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦\೮ ಬೆಲೆ ೧ಕ್ಕೆ	೦—೦—೯
ಪಂಚ ಪೀಠಾಧೀಶರುಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪ ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಮೇತರಾಗಿ ಉಪಯೋಗಿಸುತ್ತಾರೆ ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗುವದಿಲ್ಲ

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦ ೪ ೦ ವಿ ಪಿ ೦-೬-೦
ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೨] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ .	೧ ಆಣೆ
ಗೋತ್ರಸೂತ್ರವಟ (೪ನೆಯ ಆವೃತ್ತಿ)	೧ ಆಣೆ
ಸನ್ಯಾಸಾತ್ರಸಂಪರ್ಕ (೪ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೪ನೆಯ ಆವೃತ್ತಿ) ...	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ) ..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ) ..	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ) ..	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೩ ಆಣೆ
ಸನ್ಯಾಸಾತ್ರಸು ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವತತ್ವ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) ...	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮೋಕ್ತ ಸಿದ್ಧಾಂತದರ್ಪಣ .	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀ ಷಟ್ಪದಿ)	೧ ರೂ
ಶಿಷ್ಯರ ಮಠಗಳ ರಜಿಸ್ಟರ್ ಬುಕ್ . ..	೧ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೫೦೪ ಪುಟ)	೮ ರೂ
लिंगधारणचंद्रिका (संस्कृत)	३ रु
महानारायणोपनिषत् (वीरशैवभाष्य-संस्कृत)	१ रु
वीरशैवेंदुशेखर (संस्कृत)	१ रु

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರ್

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಾಪಕ ಮ|| ರಾ|| ಪಂಡಿತ ಶಿವಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ. ೮ ಆಣೆ. ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೧ ನೇ ಜನವರಿ ೧೯೩೫ [ಸಂಚಿಕೆ ೩೬

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ದೀಕ್ಷಾಮಹೋತ್ಸವ

ಹೋಟಗಿ

ಪರಶಿವೀಕರಣದಲ್ಲಿ ರತರಾದ ವೀರಶೈವರಿಗೆ ದೀಕ್ಷಾಸಂಸ್ಕಾರವು ಮೋಕ್ಷಸಾಧಕವಾದುದೆಂದು ಹೇಳುವ ಆಗಮೋಪನಿಷತ್ತುಗಳ ಉಕ್ತಿಯಂತೆ ಸೋಲಾಪೂರ ಜಿ|| ಹೋಟಗಿ ಮಲ್ಲಿಕಾರ್ಜುನಪ್ಪ ರೇವಪ್ಪ ಪತಾಟೆ ಇವರು ತಮ್ಮ ಕುಲಗುರುಗಳ ಕಡೆಯಿಂದಲೇ ದೀಕ್ಷಾಸಂಸ್ಕಾರವನ್ನು ಹೊಂದಬೇಕೆಂಬ ಬಹುಕಾಲದ ಸಂಕಲ್ಪದಂತೆ ತಮ್ಮ ಮನೆ ಗುರುಗಳೂ ನಂದಿಗೋತ್ರೋದ್ಭವರೂ ಆದ ವಿಜಾಪುರ ಜಿ|| ಕೊಡಗಾನೂರು ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷರ ಸನ್ನಿಧಿಯಲ್ಲಿ ವೀರಗೋತ್ರೋದ್ಭವ ಶೊರವಿ ಪಟ್ಟಾಧ್ಯಕ್ಷರು, ನಂದಿಗೋತ್ರೋದ್ಭವ ಶಿವಶರಣಕರೆಮಠದ ಪಟ್ಟಾಧ್ಯಕ್ಷರು, ಭೃಂಗಿಗೋತ್ರೋದ್ಭವ ಶ್ರೀ|| ಷ|| ಬ್ರ|| ಚರಪಟ್ಟಾಧ್ಯಕ್ಷ ಗುರುಸ್ವಾಮಿ ಜೈನಾಪುರ, ವೃಷಭಗೋತ್ರೋದ್ಭವ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯರು. ಹೋಟಗಿ, ಸ್ಕಂದಗೋತ್ರೋದ್ಭವ ಮಹಾಲಿಂಗಸ್ವಾಮಿ ಕಾಶೀಕರ ಈ ಐದು ಜನ ಸ್ವಾಮಿಗಳ ಸಾಕ್ಷಿತ್ವದಲ್ಲಿ ಪತ್ನೀಸಹಿತರಾಗಿ ತಾ|| ೨-೧-೧೯೩೫ ನೆಯ ದಿವಸ ಶಾಸ್ತ್ರವಿಧಿಗನುಸಾರವಾಗಿ ಶಿವದೀಕ್ಷೆಯನ್ನು ಪಡೆದರು. ಇವರು ತಮ್ಮ ಮನೆ ಗುರುಗಳ ಸನ್ನಿಧಿಯಲ್ಲಿಯೂ, ಐದು ಸ್ವಾಮಿಗಳ ಸಾಕ್ಷಿತ್ವದಲ್ಲಿಯೂ ಶಿವದೀಕ್ಷೆಯನ್ನು ಹೊಂದಿದ ವಿಷಯವನ್ನು ಪರಿಶೀಲಿಸಿದರೆ ಇವರ ಪುಣ್ಯಕ್ಕೆ ಕೊನೆಯೇ ಇಲ್ಲವೆಂದು ಹೇಳಬೇಕಾಗುತ್ತದೆ. ಕೆಲವು ವೇಷಧಾರಿ ಸನ್ಯಾಸಿಗಳು ತಾವು ಯಾವ ಕಾರ್ಯದಲ್ಲಿಯೂ ಅರ್ಹರಾಗದೆ ಇದ್ದರೂ ಮೂಢಭಕ್ತರಿಗೆ ದುರುಪದೇಶಮಾಡಿ ದುಡ್ಡು ಸೆಳೆದುಕೊಂಡು ಆ ಭಕ್ತರು ಯಾವ ಗತಿಯನ್ನೂ ಹೊಂದದ ಹಾಗೆ ಮಾಡುತ್ತಿರುವರು. ಆದಕಾರಣ ಭೋ ವೀರಶೈವರೇ! ಇಂಥ ಕಪಟ ಸನ್ಯಾಸಿಗಳ ಜಾಲದಲ್ಲಿ ಬೀಳದೆ ಜಾಗ್ರತರಾಗಿರಿ!! ನಿಮ್ಮ ಮನೆ ಗುರುಗಳ ಕಡೆಯಿಂದಲೇ ದೀಕ್ಷಾಸಂಸ್ಕಾರವನ್ನು ಹೊಂದಿ ಧನ್ಯರಾಗಿರಿ !!

ಓರ್ವ ಮತಾಭಿಮಾನಿ

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ವೀರಶೈವ ಸಮಾಜದವರಿಗೆ ತಿಳಿಸುವುದೇನೆಂದರೆ—

ಶ್ರೀ ಜಗದ್ಗುರು ಶ್ರೀಶೈಲ ಪರ್ವತ ಶ್ರೀ ಗಿರಿರಾಜಸೂರ್ಯಸಿಂಹಾಸನ ಪೀಠದ ಹೆಸರಿನ ಮೇಲೆ ದೂರದೂರ ಪ್ರಾಂತ್ಯಗಳಲ್ಲಿ ಅನಧಿಕಾರಿಗಳು ಸಂಚರಿಸುತ್ತ ಭಕ್ತರಿಗಳಿಗೆ ಮೋಸಗೊಳಿಸುತ್ತ, ಚಿಕ್ಕ ಚಿಕ್ಕ ರಸೀಟುಗಳನ್ನು ತೆಗೆದು ದಬ್ಬಾಳಿ ಜನಗಳ ಹಿಮ್ಮತ್ತಿನಿಂದ ಹಳ್ಳಿಹಳ್ಳಿಗಳಲ್ಲಿ ತಿರುಗುತ್ತ ಜಗದ್ಗುರು ಪೀಠದ ಗೌರವಕ್ಕೆ ಕುಂದಕ ತರುತ್ತ ದಬ್ಬಾಳಿ ಜನರ ಕಾಮಾರ್ಥ ಪಜಾಬಾತಾ ಬಂದಷ್ಟು ದುಡ್ಡನ್ನು ದುರುಪಯೋಗಪಡಿಸುತ್ತಾರೆಂದು ಅರಿಕೆ ಆಗಿರುತ್ತದೆ.

ಈ ಮಹಾಪೀಠದ ನೆಕರ್ ಟು ಅಸ ವಗ್ಯೆರ ಹುಜೂರ್ ಸೆಲ್ವ ಸಮೇತ ಒಬ್ಬಾರ ಬಿಲ್ಲಾಕ್ಕೆ ಕಳುಹಿಸಿರುತ್ತವಲ್ಲದೆ ಬೇರಕಡೆಗೆ ಕಳುಹಿಸಿಲ್ಲ. ಇದುವರಿಂದ ಅನಧಿಕಾರಿ ಗುರುಗಳು ಬಂದರೆ ಅವರಿಗೆ ಕಾಣಿಕೆ ವಗ್ಯೆರೆ ಕೊಟ್ಟು ಯಾರೂ ಮೋಸಹೋಗಬಾರದು.

A B—ಮತ್ತು ಚಿತ್ರದುರ್ಗ ತಾಲ್ಲೂಕು ಕೂಡ್ಲಿಗೆ ವೀರ ವಿರಕ್ತಪತಿ ಮಠದ ವಿ ಎಂ ಚನ್ನಬಸಯ್ಯನವರು, ಸಿದ್ಧಯ್ಯನವರು ಇವರುಗಳಿಗೆ ಟೆಂಪರರಿ ಹುಕುಂ ಮಾಡಿ ಕಳುಹಿಸಿದ್ದಂತ ನಡೆಯುವೆ ಷರತ್ತು ಮುಟ್ಟಳಿ ಕ್ರಮಕ್ಕೆ ತಪ್ಪಿ ನಡೆದದ್ದರಿಂದ ಇವರ ಸಂಚರಣೆಯನ್ನು ತತ್‌ಕಾಲ ಬಂದುಮಾಡಿದ್ದಾಗಿದೆ. ಗುರುಕರಣ ಮೋತ್ಸಾಂ ವ ಹಾ|| || ಸಂಸ್ಥಾನದ ಪತಿಯಿಂದ ಹುಕುಂ ಬಾರದೆ ಯಾರಿಗೂ ಕಾಣಿಕೆ ವಗ್ಯೆರೆ ಕೊಟ್ಟು ದುರುಪಯೋಗದ ಪಾಲಕ್ಕೆ ಭಾಗಿಗಳಾಗಬಾರದೆಂದು ಎಚ್ಚರಿಸಿದೆ.

R C Aradhya Swamy
Hiremath A
ಶ್ರೀ ಜಗದ್ಗುರು ಶ್ರೀಶೈಲ ಪರ್ವತ
ಸಂಸ್ಥಾನ ಏಜೆಂಟ್

ಅರ್ಧೋದಯಮಹಾಪರ್ವಕಾಲ.

ಸೂಚಕ—ದೈವಜ್ಞ ವಿನೋದ, ಶಿರೋಳ

ಅರ್ಧೋದಯಮಹಾಪರ್ವಕಾಲವು, ಇದೇ ಸಂ|| ಪುಷ್ಯ ಕೃಷ್ಣ ಪಕ್ಷ ಅಮಾವಾಸ್ಯಾ ಆದಿತ್ಯವಾರ ದಿವಸ ಪ್ರಾಪ್ತವಾಗುವದು. ಪುಷ್ಯಮಾಸದ ಅಮಾವಾಸ್ಯೆಯ ದಿವಸವು ಆದಿತ್ಯವಾರ, ಶ್ರವಣಾನಕ್ಷತ್ರ, ವ್ಯತೀಪಾತ ಯೋಗ ಇವುಗಳಿಂದ ಕೂಡಿದರೆ 'ಅರ್ಧೋದಯ' ಪರ್ವಕಾಲವಾಗುವದೆಂದು ಶಾಸ್ತ್ರಪ್ರಮಾಣವಿರುವದು. ಆದುದರಿಂದ ಈ ಪರ್ವಕಾಲದಲ್ಲಿ ಸಮಸ್ತ ಆಸ್ತಿಕರೂ ಪುಣ್ಯಕರ್ಮಗಳನ್ನಾಚರಿಸಬೇಕು. 'ಅರ್ಧೋದಯಃ ಸವಿಜ್ಞೇಯಃ ಕೋಟಿಸೂರ್ಯಗ್ರಹೈಃಸಮಃ ||' ಈ ಕಾಲವು ಕೋಟಿಸೂರ್ಯಗ್ರಹಣದ ಪರ್ವಕಾಲದಂತಿರುವದು. ಇದು ಯಾವಾಗಲೂ ಒದಗುತ್ತಿರುವದಿಲ್ಲ. ೧೯ ವರುಷಕ್ಕೊಮ್ಮೆ ಬರುವ ಸಂಭವವುಂಟು. ಈ ಸಮಯದಲ್ಲಿ, "ಅರ್ಧೋದಯೇತು ಸಂಪ್ರಾಪ್ತೇ ಸರ್ವಂಗಂಗಾಸಮಂಜಲಂ |" ಸಮಸ್ತ ನೀರಿನ ಸಂಚಯಗಳೂ ಗಂಗಾನದಿಯಂತೆ ಪರಮಪವಿತ್ರವಾಗಿರುವವು. ಅತ್ಯಂತ ಪವಿತ್ರವಾಗಿಯೂ, ವಿಶೇಷಪುಣ್ಯಪ್ರದವಾಗಿಯೂ ಪ್ರಾಪ್ತವಾಗುತ್ತಲಿರುವ ಈ ಪರ್ವಕಾಲದಲ್ಲಿ ಸಕಲರೂ ತಮಗನುಕೂಲವಾದ ನದಿ, ತೀರ್ಥ ಮೊದಲಾದವುಗಳಲ್ಲಿ ಸ್ನಾನಮಾಡಿ ಯಥಾಶಕ್ತ್ಯನುಸಾರವಾಗಿ ದಾನವನ್ನು ಮಾಡಬೇಕು.

"ಶುದ್ಧಾತ್ಮಾನೋ ದ್ವಿಜಾಃ ಸರ್ವೇ ಭವೇಯುರ್ಬ್ರಹ್ಮಸನ್ನಿಭಾಃ |
ಯತ್ಕಿಂಚಿದ್ದೀಯತೇ ದಾನಂ ತದ್ದಾನಂ ಮೇರುಸನ್ನಿಭಂ ||"

ಎಂಬ ಪ್ರಮಾಣದಂತೆ ಈ ಪುಣ್ಯಕಾಲದಲ್ಲಿ ಸಮಸ್ತ ದ್ವಿಜರೂ ಸಾಕ್ಷಾತ್ ಪರಬ್ರಹ್ಮಸ್ವರೂಪಿಗಳಾಗಿರುವರು. ಮಹೇಶ್ವರರಾದ ಜಂಗಮರಿಗೆ ಅಲ್ಪದಾನವನ್ನು ಮಾಡಿದರೂ ಅದು ಮಹತ್ತರವಾದ ಮೇರುಪರ್ವತಸಮಾನವಾದ ಮಹಾದಾನದಷ್ಟು ಫಲಪ್ರದಾಯಕವಾಗುವದು. ವೈದಿಕಮತಾಗ್ರಣಿಗಳಾದ ವೀರಶೈವರು ಈ ಪರ್ವಕಾಲದಲ್ಲಿ ಸ್ನಾನ, ಶಿವಾರ್ಚನಾದ್ಯನುಷ್ಠಾನಗಳನ್ನು 'ಸ್ವೈಚ್ಛಿಕ' ವಿಧಿಯಂತೆ ಶಾಲಿನಿ ಮಹೇಶ್ವರಾರಾಧನೆಯನ್ನು ಮಾಡುವದಕ್ಕಾಗಿ ತಾವು ಅಗ್ಗಿ ಸಮಸ್ತ ಆಸ್ತಿಕರೂ ತಮ್ಮ ತಮ್ಮ ಮತಧರ್ಮಾನುಸಾರ ಪುಣ್ಯಕರ್ಮಾನುಷ್ಠಾನವನ್ನು ಮಾಡಿ ದಾನಕಾರ್ಯಗಳಿಂದ ಸಮಸ್ತ ಪೀಡಾವಿಘ್ನ ವಿಘ್ನಪರಂಪರೆಗಳ ಪರಿಹಾರವನ್ನು ಮಾಡಿಕೊಂಡು ಪುಣ್ಯಭಾಗಿಗಳಾಗಬೇಕೆಂದು ದೈವಜ್ಞನ ವಿನಯ ಸೂಚನೆಯು.

ಸ್ವೀಕಾರ

ಸೊಲ್ಲಾಪುರ ಜಿ|| ಹೋಟಗಿ ಗ್ರಾಮದಲ್ಲಿರುವ ಮ|| ರಾ|| ಮಲ್ಲಿಕಾರ್ಜುನಪ್ಪ ಪತಾಟೆ ಇವರು ಸಪತ್ನೀಕರಾಗಿ ಶಿವದೀಕ್ಷೆಯನ್ನು ಪಡೆದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ ಗಳು ಹೋಟಗಿ ಬೃಹನ್ಮಠಾಧೀಶ ಶ್ರೀ|| ಷ|| ಬ್ರ|| ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿ|| ಮಂದಿಹಾಳು ಮಠದ ವೇ|| ಜಂಬಯ್ಯನವರ ಕಾಯಿಲೆಯು ಶ್ರೀ ಜಗದಾಚಾರ್ಯರ ಅನುಗ್ರಹದಿಂದ ಗುಣವಾದ ಸಂತೋಷಕ್ಕಾಗಿ ಅವರಿಯವರು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಗಳು ಬಳ್ಳಾರಿ ಜಿ|| ಮೆಟ್ರಿಯಲ್ಲಿರುವ ವೇ|| ಮಂದಿಹಾಳುಮಠದ ಮಹಾದೇವಯ್ಯನವರ ಮನೆಯಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆಯನ್ನು ಸಮಾಪ್ತಿಗೊಳಿಸಿದ ಸಮಯದಲ್ಲಿ ತೆಗೆಯಿಸಿದ 1 ರೂ ಒಟ್ಟು 3 ರೂಪಾಯಿಗಳು ವೇ|| ಮೆಟ್ರಿಸ್ಕೂಲ್ ಮಾಸ್ಟರ್ ಮಹಾದೇವಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಇಟಲಿ ದೇಶದಲ್ಲಿ ಔಷಧೋಪಚಾರದಿಂದ ಬಂಜೆ ಸ್ತ್ರೀಯರನ್ನು ಇಲ್ಲದಂತೆ ಮಾಡುವುದಕ್ಕಾಗಿ ಎರಡು ಆಸ್ಪತ್ರೆಗಳನ್ನು ತೆರೆಯಬೇಕೆಂದು ಮುಸಲೋನಿಯವರು ಆಲೋಚನೆಮಾಡಿರುವರಂತೆ.

ಪತ್ರವ್ಯವಹಾರ.

[illegible]ಪತ್ರಿಕೆ ಯವರು ಬರೆದಿರುವ [illegible] ಪತ್ರಿಕಾಕರ್ತರು ಉತ್ತರದಾಯಿಗಳಲ್ಲವೆಂಬ ವಿಷಯವನ್ನು ಸದಾ ಲಕ್ಷ್ಯದಲ್ಲಿಡತಕ್ಕದ್ದು

ಆಯುರ್ವೇದ ಪರಿಚಯ.

ಆರೋಗ್ಯಮಾರ್ಗ

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿಗಳವರು

ಶ್ರೀ ಜಗದ್ಗುರು ವಿದ್ಯಾರಾಧ ಗುರುಕುಲ ಶ್ರೀಶೈಲಕ್ಷೇತ್ರ

ಆಹಾರ ನಿಯಮಗಳು

ಜವೆ—ಒಗರು ಮತ್ತು ಸಿಹಿ ಶೀತಗುಣವುಳ್ಳದು. ಮಲವನ್ನು ಸಡಿಲಿಸುವುದು ಬುದ್ಧಿವರ್ಧಕ ಕಫಪಿತ್ತಗಳನ್ನು ಶಾಂತಗೊಳಿಸುವುದು, [illegible] ಯಾವಾಗಲೂ ವ್ರಣಗಳಿಗೆ ಹಿತಕರವಾಗಿದೆ [illegible] ಸ್ವರವರ್ಣ ಇವುಗಳನ್ನು [illegible]ಗೊಳಿಸುವುದು ಸ್ಥೂಲತೆಯನ್ನು ತಗ್ಗಿಸುವುದು, [illegible] ವಾಯುವಾರಿಕೆ ವಾತರೋಗ ಇವುಗಳನ್ನು ನಿವಾರಿಸುವುದು ಮೂತ್ರರೋಗ ಚರ್ಮರೋಗ [illegible]ರೋಗ ಇವುಗಳಿಂದ ಪೀಡಿತರಾದವರಿಗೆ ಹಿತಕರವಾಗಿರುತ್ತದೆ

ರಾಗಿ—ಸಿಹಿ ಮತ್ತು ಒಗರು ರಸಗಳಿಂದ ಕೂಡಿರುವುದು ತಂಪು, [illegible] ರೋಗಗಳನ್ನು ನಿವಾರಿಸುವುದು ಬಲವನ್ನುಂಟುಮಾಡುವುದು. ಇದು ವಿಸಂಧಿ [illegible] ದೆಂಕಲೂ, ತ್ರಿದೋಷ[illegible]ವನ್ನುಂಟುಮಾಡುತ್ತದೆ

ಬಿಳಿಜೋಳ—ಸಿಹಿ ಮತ್ತು ಒಗರು ಕಫ [illegible]ಗಳನ್ನು ಶಮನಗೊಳಿಸುವುದು ಬಲಕಾರಿ [illegible] [illegible]ಗಳಲ್ಲಿ ವ್ರಣಗಳಲ್ಲಿ ಹಿತಕರವಾದುದು. [illegible]ಗಳಿಗೆ ಹಿತಕರವಲ್ಲ ಜೋಳದ ತೆನೆಯಲ್ಲಿ [illegible] ತತ್ಪತ್ತಿ[illegible]ವಾಗಿರುತ್ತದೆ

ಸಜ್ಜೆ—ಉಷ್ಣ ಹೃದಯಕ್ಕೆ ಹಿತಕರ ಬಲಪ್ರದ ಕಾಂತಿಪ್ರದ [illegible] [illegible] ಮತ್ತು [illegible]ಯನ್ನು ವೃದ್ಧಿಮಾಡುವುದು [illegible] ಹಿತಕರವಾದುದಲ್ಲ ಕಫ ಮತ್ತು ವಾತವನ್ನು ಕೆರಳುವಂತೆ ಮಾಡುತ್ತದೆ

ಬೇಳೆಗಳ ಸಾಮಾನ್ಯಗುಣ—ಸಕಲ ಬೇಳೆಗಳೂ ಸಾಮಾನ್ಯವಾಗಿ [illegible]ವಾಗತಕ್ಕವಾಗಿವೆ ಬೇಳೆಗಳಲ್ಲಿ ಶರೀರಪೋಷಕತ್ವವು ವಿಶೇಷವಾಗಿರುವುದು ಸಾರು ಅದರಾ ತೊವೆಯನ್ನು ಮಾಡುವಾಗ ಬೇಳೆಗಳನ್ನು ಸೀರಿನೊಡನೆ ಕೂಡಿ ಹೋಗುವಂತೆ ಬೇಯಿಸುವುದು ಪಥ್ಯವಾದುದು ಇಲ್ಲವಾದರೆ ಬೇಗ ಪಚನವಾಗುವುದಿಲ್ಲ ಪಂಜಾಬ್ ಮತ್ತು ಬಂಗಾಳ ಪ್ರಾಂತ್ಯಗಳಲ್ಲಿ ಬಿಡು. ವಿಶೇಷವಾಗಿ ಸಿತ್ಯೋಪಯೋಗಿಯಾಗಿ [illegible] ದಕ್ಷಿಣ ದೇಶದಲ್ಲಿ ತೊಗರಿಬೇಳೆಯು ನಿತ್ಯೋಪಯೋಗಿಯಾಗಿರುತ್ತದೆ ಆದರೆ ಹೆಸರು ಬೇಳೆಯು ರೋಗಿಗಳಿಗೆ ಅತ್ಯಂತ ಹಿತಕರವಾಗಿರುವುದೆಂದು ವೈದ್ಯಶಾಸ್ತ್ರವು ವಿಧಿಸುತ್ತದೆ

ಹೆಸರು—ಸಕಲವಿಧ ಬೇಳೆಗಳಿಗಿಂತಲೂ ಇದರಲ್ಲಿ ವಾತಪ್ರಕೋಪಗುಣವು ಕಡಿಮೆಯಾಗಿರುವುದರಿಂದಲೇ ಇದು ಚರಕಸಂಹಿತೆಯಲ್ಲಿ "ಮುದ್ಗಃ ಶೂಪ್ಯೋತ್ತಮೋಮತಃ" ಎಂದು ತೊವೆಗೆ ಅತ್ಯಂತ ಶ್ರೇಷ್ಠವಾಗಿ ಪರಿಗಣಿಸಲ್ಪಟ್ಟಿದೆ ಇದು ಕಣ್ಣುಗಳಿಗೆ ಅತ್ಯಂತ ಹಿತಕರವಾದುದು ಸಿಹಿ ಮತ್ತು ಒಗರಿನಿಂದ ಕೂಡಿರುವುದು, ಒಡಟಾದುದು, ಶೈತ್ಯಗುಣವುಳ್ಳದು, ಪಾಕವಾದನಂತರ (ಹೊಟ್ಟೆಯಲ್ಲಿ) ಕಟುರಸದಿಂದ ಕೂಡುವುದು, ಹಗುರಾದುದು, ಕಫ ಪಿತ್ತಗಳನ್ನು ಶಮನಗೊಳಿಸುವುದು, ಇದರಲ್ಲಿ ಹಸಿರು ಬಣ್ಣವುಳ್ಳದೇ ಅತ್ಯುತ್ತಮ ಗುಣವುಳ್ಳದಾಗಿದೆ ಕಾಡು ಹೆಸರಿನಲ್ಲಿಯೂ ಇದೇ ಗುಣಗಳಿರುತ್ತವೆ

ತೊಗರಿ—ಒಗರು, ಒಡಟಾದುದು, ಸಿಹಿ, ಶೈತ್ಯಗುಣವು[illegible], ಮಲವನ್ನು ಬಂಧಿಸುವುದು, [illegible] ಕಾಂತಿಯನ್ನುಂಟುಮಾಡುವುದು. ಪಿತ್ತ, ಕಫ ರಕ್ತ, ಇವುಗಳ ವಿಕಾರವನ್ನು ನಾಶಗೊಳಿಸುವದು

ಕಡಲೆ—ಸಿಹಿ ಒಗರುರಸಗಳಿಂದ ಕೂಡಿದೆ ಶೀತ ಒಡ ಒಡಟಾದುದು, ಕಫ ರಕ್ತ ಪಿತ್ತವಿಕಾರಗಳನ್ನು ಜ್ವರ ಪಿತ್ತವನ್ನು ನಾಶಗೊಳಿಸುವುದು ವಾಯುವನ್ನು ವೃದ್ಧಿಮಾಡುವುದು ಆದರೆ ತುಪ್ಪದೊಡನೆ [illegible] ದೋಷಗಳನ್ನು ಶಾಂತಗೊಳಿಸುವುದು, [illegible]ದಲ್ಲಿ ಮತ್ತು [illegible]ದಲ್ಲಿ ಹುರಿದ ಕಡಲೆಯಲ್ಲಿ [illegible] ಗುಣಗಳು ಇರುವುವು ನೆನೆಸಿದ ಕಡಲೆ [illegible] ಹುರಿದ ಕಡಲೆಯು ಬಲಕರವು, [illegible]ಕರವು, [illegible] ಬೇಗಿದ ಕಡಲೆಯನ್ನು [illegible]ದಲ್ಲಿ ವಿಶೇಷ ರೂಕ್ಷ (ಒಡಟು) ಗುಣವಿರುತ್ತದೆ ಬೇಯಿಸಿದ ಕಡಲೆಯು ಪಿತ್ತಕಫಗಳನ್ನು ನಾಶಗೊಳಿಸುವದು ಕಡಲೆಯು ತೊವೆಯಿಂದ ಹೊಟ್ಟೆಯಲ್ಲಿ ಶಬ್ದ ('ಗುಡುಗುಡು' ಎಂಬ ಶಬ್ದ) [illegible] ಮುಂತಾದ ವಿಕಾರಗಳು) ಹುಟ್ಟುವುದು. [illegible] ಕಡಲೆಯು ಒಡೆದಿದ್ದರೆ ರುಚಿಕರ ಒಗರು ಮಲವನ್ನು ಬಂಧಿಸುವುದು, ಹಗುರ ತಂಪು, ವಾಯುವನ್ನು ಹೆಚ್ಚಿಸುವುದು, ಪಿತ್ತ ಕಫ ವೀರ್ಯ, ಇವುಗಳನ್ನು ನಾಶಮಾಡುವುದು

ಉದ್ದು—ಸಿಹಿ ಗುರು, ಉಷ್ಣ, ಬಲಕಾರಿ, ವಾತನಾಶಕ, ಕಫ ಮತ್ತು ವೀರ್ಯವನ್ನು ವೃದ್ಧಿಗೊಳಿಸುವುದು ಮಲಮೂತ್ರಗಳನ್ನು ಸಡಲಿಸುವುದು, [illegible]ವನ್ನು ಹೆಚ್ಚಿಸುವುದು.

ಅಲಸಂದೆ—ಒಗರು ಒರಟು ವಾಯುವನ್ನು [illegible]ಸುವದು ಕಫ ಪಿತ್ತಗಳನ್ನು ಶಾಂತಗೊಳಿಸುವದು. ಸ್ತಂಭನವನ್ನುಂಟುಮಾಡುವುದು ಬಲಕರವಾದದ್ದು ಇದರಲ್ಲಿ ಒಗರು ರಸವಿರುವುದರಿಂದ ಮಲ[illegible] ಸಡಿಲಿಸುವ ಗುಣವಿರುವದಿಲ್ಲ ಸೂಕ್ಷ್ಮವನ್ನು ಹುಟ್ಟಿಸುವುದು [illegible]ಕದಲ್ಲಿ ಸಿಹಿಯಾಗುವುದು, ಇದೆ [illegible] ಹುಟ್ಟಿಸುವದು, ಇದು [illegible] ಕೆಂಪು ಕಪ್ಪು [illegible]ಗಳಿಂದ ಮೂರು ವಿಧವಾಗಿದೆ ಅವುಗಳಲ್ಲಿ [illegible] ಆದರೆ [illegible] ಹೆಚ್ಚು ಗುಣವುಳ್ಳದಾಗಿರುತ್ತದೆ

ಹುರುಳಿ—ಒಗರು ಉಷ್ಣ ವಿಪಾಕದಲ್ಲಿ ಕಾರವಾಗುವುದು ಕಫ ವಾತಗಳನ್ನು ನಿವಾರಿಸುವುದು ಶುಕ್ರಾಶ್ಮರಿ (ವೀರ್ಯವು ಒಳಗೆ ಕಲ್ಲು ಹರಳಿನಂತೆ ಗಟ್ಟಿಯಾಗುವುದು) ಗುಲ್ಮ ಹಿಕ್ಕೆ ಕೆಮ್ಮು ಇವುಗಳನ್ನು ನಿವಾರಿಸುತ್ತದೆ

ಅವರೆ—ಸಿಹಿ ಮತ್ತು ಒಗರು ರುಚಿಕರ ವಿಪಾಕದಲ್ಲಿ ಹುಳಿಯಾಗುವುದು ಗುರು ವಿಶೇಷದಾಹಗುಣವುಳ್ಳದು, ಉಷ್ಣ ರಕ್ತಪಿತ್ತ ವಾತ ಪೂತಿಯ ವಿಗತ ಇವುಗಳನ್ನುಂಟುಮಾಡುವುದು, ಎದೆಹಾಲನ್ನು ಹೆಚ್ಚಿಸುವುದು. ವಿಷ ಕಫ ಶೋಥ ಇವುಗಳನ್ನು ನಿವಾರಿಸುವುದು ವಿಶೇಷ ಮೂತ್ರವನ್ನುಂಟುಮಾಡುವುದಲ್ಲದೆ ವೀರ್ಯವನ್ನು ನಷ್ಟಗೊಳಿಸುತ್ತದೆ ಸಕಲವಿಧ ಬೇಳೆಗಳನ್ನು ಸ್ವಲ್ಪ ಹುರಿದು ಅನಂತರ ನಾರ, ತೊವೆಗಳಿಗೆ ಉಪಯೋಗಿಸುವುದು ಹಿತಕರವಾದುದಾಗಿದೆ

ಮೊಳಕೆಬಂದ ಧಾನ್ಯಗಳು—ಮಲಮೂತ್ರಗಳನ್ನು ಬಂಧಿಸುವುವು, ಬೇಗನೆ ಪಚನವಾಗತಕ್ಕುವಲ್ಲ, ವಿಶೇಷ ದಾಹವನ್ನುಂಟುಮಾಡುವವಲ್ಲದೆ ಕಣ್ಣುಗಳಿಗೆ ವಿಶೇಷ ಹಾನಿಯನ್ನುಂಟುಮಾಡುತ್ತವೆ

ಹೀರೆಕಾಯಿ—ಸಿಹಿ ಕಫ ಪಿತ್ತಗಳನ್ನು ಶಮನಗೊಳಿಸುವುದು, ರುಚಿಕರ ಬಲ ವೀರ್ಯಗಳನ್ನುಂಟುಮಾಡುವುದು, ಸಘ ವಾದುದು, ವಾತವನ್ನು ಸ್ವಲ್ಪ ಹೆಚ್ಚಿಸುವುದು ಇದೇ ಜಾತಿಯ ತುಪ್ಪ ಹೀರೆಕಾಯಿ ಕಫಪಿತ್ತ ಮತ್ತು ವಾಯುವನ್ನು ನಷ್ಟಗೊಳಿಸುತ್ತದೆ

ಬೂದಿಗುಂಬಳಕಾಯಿ—ಇದು ಪಿತ್ತವನ್ನು ನಾಶಗೊಳಿಸುತ್ತದೆ ಅರ್ಧಬಲಿತಿರುವುದು ಕಫವನ್ನು ಹೆಚ್ಚಿಸುವುದು, ಹಣ್ಣಾಗಿರುವುದು ಹಗುರ, ಉಷ್ಣ ಕ್ಷಾರವುಳ್ಳದು ಅಗ್ನಿದೀಪನಕರ. ಮೂತ್ರಾಶಯವನ್ನು ಶೋಧಿಸುವುದು, ಸರ್ವದೋಷಹರ, ಹೃದಯಕ್ಕೆ ಹಿತಕರ ಮನೋರೋಗವುಳ್ಳವರಿಗೆ ಪಥ್ಯವಾಗಿರುತ್ತದೆ

ಸೋರೆಕಾಯಿ—ಇದರಲ್ಲಿ ಸಿಹಿ, ವಿಷಗಳೆಂಬ ಎರಡು ಭೇದಗಳಿರುತ್ತವೆ ಸಿಹಿಯಾದ ಸೋರೆಕಾಯಿ ರೂಕ್ಷಗುಣವುಳ್ಳದು ಗುರು, ಶೀತ, ಮಲವನ್ನು ಸಡಿಲಿಸುವುದು. ಕಹಿಸೋರೆಕಾಯಿ ವಾಂತಿಮಾಡಿಸುತ್ತದೆ ವಾತಪಿತ್ತಗಳನ್ನು ಜಯಿಸುವುದಾಗಿರುವುದಾದರೂ ಹೃದಯಕ್ಕೆ ಹಿತಕರವಾದುದಲ್ಲ

ಸವುತೆಕಾಯಿ—ಪಿತ್ತನಾಶಕ, ಬಹಳ ಶೀತ, ಸಿಹಿ ಗುರು, ರುಚಿಕರ, ತೃಪ್ತಿಕರ, ಮೂತ್ರರೋಗ ಕಾಮಾಲೆ ಇವುಗಳನ್ನು ನಿವಾರಿಸುತ್ತದೆ ಇದರಲ್ಲಿ ಅನೇಕ ಜಾತಿಗಳಿವೆ ದೊಡ್ಡ ಜಾತಿಯಲ್ಲಿ ಎಳೆಯದು, ಶೀತ, ಹಗುರ, ರೂಕ್ಷಗುಣವುಳ್ಳದು, ಅತಿಶಯ ಮೂತ್ರಕಾರಿ ರಕ್ತಪಿತ್ತ ಮೂತ್ರಕೃಚ್ಛ್ರ ರಕ್ತವಿಕಾರ ಇವುಗಳನ್ನು ನಿವಾರಿಸುತ್ತದೆ, ಹಣ್ಣಾಗಿರುವುದು ಉಷ್ಣ ಅಗ್ನಿದೀಪನಕಾರಿ, ತ್ರಿದೋಷನಾಶಕ; ಇದರಲ್ಲಿಯೇ ಹಳೆಯದು, ಉಷ್ಣ, ಪಿತ್ತಕರ, ಕಫವಾತಗಳನ್ನು ನಿವಾರಿಸುತ್ತದೆ ಸಣ್ಣ ಜಾತಿಯದು ಶೀತ, ಕೆಮ್ಮು ಮತ್ತು ಪೀನಸವನ್ನುಂಟುಮಾಡುವುದು, ಪಿತ್ತಹರ, ಪಚನಕರ, ಉದರದಲ್ಲಿರುವ ವಾತವನ್ನು ಶಮನಗೊಳಿಸುವುದು, ಮಳೆಗಾಲದಲ್ಲಿ ಬೆಳೆದ ಸವುತೆಕಾಯಿಯು ಹಿತಕರವಲ್ಲ

ಹಾಗಲಕಾಯಿ—ಶೀತ, ಹಗುರಾದುದು (ಬೇಗನೆ ಪಚನವಾಗುವುದು) ವಿಶೇಷ ವಾತಕರವಾದುದಲ್ಲ ಭೇದಿಯನ್ನು ಸರಿಯಾಗಿ ಮಾಡಿಸುವುದು, ಜ್ವರ ಪಿತ್ತ ಕಫ ರಕ್ತವಿಕಾರ-ಪಾಂಡು ಮೇಹ-ಕೃಮಿ, ಈ ರೋಗಗಳನ್ನು ನಾಶಮಾಡುತ್ತದೆ.

ಬದನೆಕಾಯಿ—ಉಷ್ಣ ರುಚಿಕರ, ವಿಪಾಕದಲ್ಲಿ ಕಾರವಾಗುವುದು, ಪಿತ್ತನಾಶಕ, ಲಘು ದೀಪನಕಾರಿ, ವೀರ್ಯವೃದ್ಧಿಕರ ಜ್ವರ-ವಾತ-ಕಫ, ಇವುಗಳನ್ನು ನಿವಾರಿಸುವುದು ಬಲಿತಕಾಯಿ ಸ್ವಲ್ಪ ಪಿತ್ತವನ್ನುಂಟುಮಾಡುತ್ತದೆ ಕಂಡದಲ್ಲಿ ಸುಟ್ಟಕಾಯಿ ಕಫ-ವಾತ ಅಮ ಮೇದಸ್ಸು, ಇವುಗಳನ್ನು ನಾಶಗೊಳಿಸುವುದು ಹಗುರಾದುದು, ಅಗ್ನಿಯನ್ನು ವೃದ್ಧಿಗೊಳಿಸುವುದು ಇದರೊಡನೆ ಎಣ್ಣೆ ಮತ್ತು ಉಪ್ಪು ಸೇರುವುದರಿಂದ ಗುರು ಮತ್ತು ಸ್ನಿಗ್ಧಗುಣವುಳ್ಳದಾಗುತ್ತದೆ

ಗುಳ್ಳದಕಾಯಿ—ಸಿಹಿ ಮತ್ತು ಕಾರವಾದುದು ರುಚಿಕರ ಪಿತ್ತವನ್ನು ಶಾಂತಗೊಳಿಸುವುದು ಮತ್ತು ಬಲ ಪುಷ್ಟಿಗಳನ್ನುಂಟುಮಾಡುತ್ತದೆ ವಾತರೋಗದಲ್ಲಿ ಹಿತಕರವಾದುದಲ್ಲ

ಪಡವಲಕಾಯಿ—ಸಿಹಿ ಪಿತ್ತನಾಶಕ, ರುಚಿಕರ ಜ್ವರಹರ ಅಗ್ನಿಯನ್ನು ವೃದ್ಧಿಗೊಳಿಸಿ ಪಚನಕ್ರಿಯೆಯನ್ನು ಬೆಳೆಸುವುದು, ಮತ್ತು ಬಲ ಪುಷ್ಟಿಗಳನ್ನುಂಟುಮಾಡುವುದು ಪಥ್ಯವಾದುದು. ಇದರ ಎಲೆಯು ವಿಶೇಷವಾಗಿ ಪಿತ್ತನಾಶಕವಾದುದು ಇದರ ದಂಟು ಕಫನಾಶಕವಾದುದು ಇದರ ಬೇರು ಭೇದಿಕಾರಿಯಾಗಿರುವುದು ಈ ಗುಣಗಳೆಲ್ಲವೂ ಗಿಡ್ಡವಾಗಿ ಬೆಳೆಯುವ ಕಾಯಿಗಳಲ್ಲಿ ಮಾತ್ರ ಇರುತ್ತವೆ. ಉದ್ದವಾಗಿ ಬೆಳೆಯುವ ಕಾಯಿ ಕಾರ, ಮಲಬದ್ಧತೆಯನ್ನುಂಟುಮಾಡುವುದು ವಾತವನ್ನು ವೃದ್ಧಿಗೊಳಿಸುವುದು, ಕಫವನ್ನು ಕೋಪಗೊಳಿಸುವುದು, ಶೀತ ಮತ್ತು ಭೇದಿಕಾರಿಯಾಗಿರುತ್ತದೆ

(ಸಶೇಷ)

ನಮಃ ಪಂಚಜಗದ್ಗುರುಭ್ಯಃ

ಏಕೇಶ್ವರೀಭಕ್ತಿ.

(33ನೆಯ ಸಂಚಿಕೆಯಿಂದ ಮುಂದುವರಿದುದು)

ಈ ಪ್ರಕಾರ ಧರ್ಮಗ್ರಂಥಗಳಲ್ಲಿರುವ ವಿಷಯಗಳ ಕಡೆಗೆ ಲಕ್ಷ್ಯಗೊಡದೆ ಎಷ್ಟೋಜನ ವೀರಶೈವರು ಎಲ್ಲವೂ ದೇವರೇ' ದೇವರಲ್ಲಿ ಭೇದಭಾವವನ್ನೇಕೆ ಮಾಡಬೇಕು? ನಾವು, ಎಲ್ಲಾ ದೇವರೂ ಸಮಾನರೆಂದು ತಿಳಿದು, ಎಲ್ಲಾ ದೇವತೆಗಳನ್ನೂ ಭಜಿಸುತ್ತೇವೆನ್ನುವರು ಮರುಳೇ ಯರೇ! ಸ್ತ್ರೀಯಳು ಸನ್ನ ಗಂಡ ನಂತೆ ಎಲ್ಲರೂ ಗಂಡಸರೇ ಎಂದು ಸರ್ವರಲ್ಲಿಯೂ ಪ

ಭಾವದಿಂದ ವರ್ತಿಸಿದರೆ ಯೋಗ್ಯವಾದೀತೇ? ನಮ್ಮ ತಂದೆಯಂತೆ ಇತರ ಜನರೆಲ್ಲರನ್ನೂ ತಂದೆಯಂತೆ ತಿಳಿದರೂ, ನಮ್ಮ ಹೆಸರನ್ನು ಬರೆಯುವಾಗ್ಗೆ ನಮ್ಮ ತಂದೆಯ ಹೆಸರನ್ನೇ ಏಕೆ ಬರೆಯುವದು? ಇತರರ ಹೆಸರನ್ನು ಬರೆದರೆ ಯೋಗ್ಯವಾದೀತೆ? ನಮ್ಮ ನಿಜವಾದ ತಂದೆಯ ಸೊತ್ತಿಗೇನೇ ನಾವು ಪಾಲಕರಾಗುತ್ತೇವೆಯೋ ಹೊರತು ಇತರರ ಸೊತ್ತಿಗೆ ಎಂದೂ ಪಾಲಕರಾಗುವದಿಲ್ಲ. ಆದ್ದರಿಂದ ನಮ್ಮ ದೇವತೆಯಾದ ಇಷ್ಟಲಿಂಗಮೂರ್ತಿಯಲ್ಲಿಯೇ ನಾವು ಭಕ್ತಿಯನ್ನಿಡಬೇಕು. ಜಗತ್ತಿನಲ್ಲಿ ದೇವನೊಬ್ಬನಲ್ಲದೆ ಇಬ್ಬರಿಲ್ಲವು. ಒಬ್ಬನೂ, ಅನಾದಿಸಂಸಿದ್ಧನೂ, ನಿಗಮಾಗಮಪ್ರಸಿದ್ಧನೂ, ಯೋಗಿಜನಸಾಧ್ಯನೂ, ಭವರೋಗಿಜನವೈದ್ಯನೂ, ವೇದಾಂತವಿದ್ಯಾವೇದ್ಯನೂ ಸಚ್ಚಿದಾನಂದಮಯ ಶಂಕರನಲ್ಲದೆ ಬೇರೊಬ್ಬ ದೇವರುಂಟೇ? ಇತರ ದೇವತೆಗಳೆಲ್ಲರೂ ಸೇವಕರೇ ಹೊರತು ಪಾಲಕರಲ್ಲವು. ಸರ್ವದೇವತೆಗಳಿಂದಲೂ ಹೆಚ್ಚಿನವನೆಂದೇ ಈಶ್ವರನಿಗೆ ಮಹಾದೇವನೆಂದು ಹೆಸರಿದೆ. ಮಹಾದೇವನೆಂದರೆ—ದೊಡ್ಡದೇವನೆಂದರ್ಥವಾಗುತ್ತದೆ. ಈ ನಾಮವು ಇತರ ಯಾವ ದೇವತೆಗಳಿಗೂ ಇಲ್ಲದಿರುವ ಕಾರಣ ಉಳಿದಾದ ದೇವತೆಗಳೆಲ್ಲರೂ ಸೇವಕರೆಂದು ಸ್ಪಷ್ಟವಾಗುವುದಷ್ಟೆ! ಈ ವಿಷಯದ ಬಗ್ಗೆ ನೀಲಕಂಠ ಚಂಪೂಗ್ರಂಥದಲ್ಲಿ ಹೇಳಿರುವದೇನೆಂದರೆ—"ದೃಷ್ಟ್ವಾತ್ರ ಕೌತ್ಸ್ಯಮನಸ್ವಿನೋ ಗಣಾನಪಿ ಪ್ರತ್ಯಂತವಾದಾ ಇಥರೇ | ಗೀರ್ವಾಣಾಃ ಕತಿವಾ ವಸಂತಿ ಭುವನೇ ಭಾರಾವಹಾಃ ಕೇವಲಂ || ನಿಷ್ಕ್ರಾಂತೇ ಗರಲೇ ಧೃತೇ ಸುರಗಣೇ ನಿಶ್ಚೇಷ್ಟಿತೇ ವಿಷ್ಟಪೇ | ಮಾಮಸ್ಮಿನ್ನಿತಿ ಗಿರಾ ವಿರಾಜಧುರೀಣೋ ದೇವಸ್ತ್ವಮೇವ ಸ್ತುಮಃ ||೧|| ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಪುಂಗವರ ಸೃಷ್ಟಿಯಾದ ದೂರ್ವಾಸಮಹರ್ಷಿಯ ಶಾಪದಿಂದ ಸಮುದ್ರಪಾಲಾದ ಇಂದ್ರನ ಸಕಲ ಸಂಪತ್ತನ್ನು ಕರೆಗೆ ತೆಗೆಯುವ ನಿಮಿತ್ತದಿಂದ ಆ ಸಮುದ್ರವನ್ನು ಮಂಥನ ಮಾಡುವ ಕಾಲದಲ್ಲಿ ಕೌಸ್ತುಭರತ್ನವೂ, ಅಮರಸ್ತ್ರೀಯರೂ, ಇತ್ಯಾದಿ ಮೋಹಕಪದಾರ್ಥಗಳು ಹೊರಬಂದಾಗಲೆ ನನಗೆ ತನಗೆಂದು ಕಲಹವಾಡಿ ತೆಗೆದುಕೊಂಡು ಕುಣಿದಾಡುವ ಸ್ವರ್ಗವಾಸಿ ಜನರಿಗೆ ಕೇವಲ ಭಾರಭೂತರಾದ ದೇವತೆಗಳು ಅನೇಕರುಂಟು. ಆದರೆ ಲೋಕತ್ರಯವನ್ನೇ ನಾಶಮಾಡುವ ಹಾಲಾಹಲವಿಷದ ಭಯಂಕರಸ್ವರೂಪತ್ವಕ್ಕಾಗಿ ಹೊರಹೊಮ್ಮಿದ ಕೂಡಲೆ ದೇವತೆಗಳು ನನಗೆ ಬೇಡ ತನಗೆ ಬೇಡವೆಂದು ಓಡಿದರು. ಕೆಲವರು ಮೂರ್ಛೆಹೊಂದಿದರು. ಕಡೆಗೆ ಪರಶಿವನನ್ನು ಸ್ತುತಿಸಲು ಆಗ್ಗೆ ಆ ದಯಾಸಮುದ್ರನು ಭಯಂಕರವಾದ ವಿಷವನ್ನು ಕುಡಿದು ಕಂಠದಲ್ಲಿರಿಸಿದನು. ಆದರ ದೇವರನ್ನೇ ಸ್ತುತಿಸುತ್ತೇವೆಂದು ನೀಲಕಂಠದೀಕ್ಷಿತರು ನುಡಿದಿರುತ್ತಾರೆ.

ಇದಕ್ಕೆ ಕೆಲವರು—ವಿಷವನ್ನು ಪ್ರಾಶಿಸಿದನಂತರ ಶಂಕರನಿಗೆ ವಿಶೇಷ ಕಷ್ಟವಾದಕಾರಣ ದಶರಥನ ಮಗನಾದ ರಾಮನ ಧ್ಯಾನವನ್ನು ಮಾಡಿದನೆಂದು ನುಡಿವರು. ಆದರೆ ದಶರಥನ ಮಗನಾದ ರಾಮನ ಜನ್ಮವೆತ್ತ? ಹಾಲಾಹಲವಿಷಪ್ರಾಶನದ ಸಮಯವೆತ್ತ? ರಾಮನು ವಿಷ್ಣುವಿನ ಅವತಾರವಲ್ಲವೇ? ಹಾಗಾದರೆ ಆ ಸಮಯದಲ್ಲಿದ್ದ ವಿಷ್ಣುವು ಕೌಸ್ತುಭಮಣಿಯನ್ನು ಮಾತ್ರ ಸ್ವೀಕರಿಸಿ ವಿಷವನ್ನು ಗ್ರಹಿಸದೆ ಪರಶಿವನ ಮೊರೆಹೊಗುವ ಕಾರಣವೇನಿತ್ತು? ಪರಶಿವನಿಗೆ ಕಷ್ಟವಾಗುತ್ತಿದ್ದರೆ ಪಾನಮಾಡುತ್ತಿದ್ದನೇ? ಅವನಿಗೆ ಅಷ್ಟು ತಿಳಿಯುತ್ತಿರಲಿಲ್ಲವೇ ಹೇಗೆ! ಆತ್ಮಾರಾಮನನ್ನು ಧ್ಯಾನಿಸಿದನೆಂದು ಕೆಲವರನ್ನುವದುಂಟು. ಪರಶಿವನೇ ಆತ್ಮಾರಾಮನಿರುತ್ತಿರಲು ಇನ್ನೊಬ್ಬ ಆತ್ಮಾರಾಮನು ಎಲ್ಲಿಂದ ಬಂದನು? ಪರಶಿವನು ವಿಷವನ್ನು ಲೀಲಾಮಾತ್ರದಿಂದ ಪಾನಮಾಡಿದನೇ ಹೊರತು ಕಷ್ಟದಿಂದಲ್ಲ. ವಿಷ್ಣುವು ತನ್ನ ದಶಾವತಾರಗಳಲ್ಲಿಯೂ ಶಿವಲಿಂಗಗಳನ್ನು ಸ್ಥಾಪಿಸಿರುವದು ಶಾಸ್ತ್ರಪ್ರಸಿದ್ಧವಿದೆ. ಮತ್ಸ್ಯಾವತಾರದಲ್ಲಿ ಲಂಕೆಯೊಳಗೆ ಮತ್ಸ್ಯೇಶ್ವರನನ್ನೂ, ಕೂರ್ಮಾವತಾರದಲ್ಲಿ ಕೂರ್ಮೇಶ್ವರನನ್ನೂ, ವರಾಹಾವತಾರದಲ್ಲಿ ವರಾಹೇಶ್ವರನನ್ನೂ, ವಾಮನಾವತಾರದಲ್ಲಿ ವಾಮನೇಶ್ವರನನ್ನೂ, ರಾಮಾವತಾರದಲ್ಲಿ ರಾಮೇಶ್ವರನನ್ನೂ ಸ್ಥಾಪಿಸಿ ಪೂಜಿಸಿ ತನ್ನ ಅವತಾರಗಳನ್ನು ಸಮಾಪ್ತಿಗೊಳಿಸಿರುವ ವಿಷಯವು ಪುರಾಣಾದಿಗಳಲ್ಲಿ ಸುಪ್ರಸಿದ್ಧವೇ ಇದೆ.

ರಾಮಾವತಾರದಲ್ಲಿ ರಾಮಚಂದ್ರನು ರಾವಣನವಧೆಯನ್ನು ಮಾಡಿದನಂತರ ರಾಮನಿಗೆ ಹಗಲಿರುಳೂ, "ರಾವಣ" ಎಂಬ ಶಬ್ದವೇ ಬೆನ್ನು ಹತ್ತಿತಂತೆ! ಇದರ ನಿವಾರಣೆಗಾಗಿ ಏನು ಮಾಡಬೇಕೆಂದು ತಮ್ಮನಾದ ಲಕ್ಷ್ಮಣನನ್ನು ವಿಚಾರಿಸಲು ಆಗ್ಗೆ ಲಕ್ಷ್ಮಣನು ಹೇಳಿದ್ದೇನೆಂದರೆ ಅಣ್ಣಾ! ರಾವಣನು ಪರಮಶಿವಭಕ್ತನು ಆದ್ದರಿಂದ ಅವನನ್ನು ಕೊಂದ ದೋಷದಿಂದ ಬ್ರಹ್ಮರಾಕ್ಷಸರೂಪವಾಗಿ ಅವನ ನಾಮವು ನಿಮ್ಮ ಬೆನ್ನು ಹತ್ತಿದೆ. ಇದರ ನಿವಾರಣೆಯಾಗಬೇಕಾದರೆ ಸರ್ವರ ಇಚ್ಛಿತ ಫಲಕ್ಕೆ ಕಾಮಧೇನುಸ್ವರೂಪನಾದ ರಾವಣನ ಮುಖ್ಯ ದೈವವಾದ ಭೋಳಾಶಂಕರ ಶಿವನನ್ನೇ ಸ್ಮರಿಸಬೇಕು. ಆದರಿಂದ ನಿಮ್ಮ ದೋಷವು ನಷ್ಟವಾಗುವುದೇ ಹೊರತು ಬೇರೊಂದುಪಾಯವಿಲ್ಲವೆಂದು ಹೇಳಿದ ಅನುಜನ ವಾಕ್ಯವನ್ನು ಕೇಳಿ ರಾಮನು ಸಂತುಷ್ಟನಾಗಿ ಅನೇಕ ಕಡೆಗೆ ಶಿವಲಿಂಗಗಳನ್ನು ಸ್ಥಾಪಿಸಿ ಸ್ಮರಿಸಿದನು. ಬಾರ್ಸಿತಾಲೂಕು ಪೈಕಿ ವಡಕಿ ಎಂಬಲ್ಲಿ "ರಾಮಲಿಂಗ ದೇವಾಲಯ" ಇದೆ. ಧಾರವಾಡ ಜಿಲ್ಲಾ ಪೈಕಿ "ಗಂಗೀಭಾವಿ" ಎಂಬಲ್ಲಿ ರಾಮಲಿಂಗವಿದೆ. ಕಲಬುರ್ಗಿ ಜಿಲ್ಲಾ ಪೈಕಿ ಜಮಗೀರ ಜೇವರಗಿಯಲ್ಲಿ "ರಾಮಲಿಂಗ" ಇದೆ. ವಿಜಾಪೂರ ಜಿಲ್ಲೆಗೆ ಸೇರಿದ ಕಡ್ಲವಾಡದಲ್ಲಿ ರಾಮಲಿಂಗ ಹೀಗೆ ಅನೇಕಾನೇಕ ಲಿಂಗಗಳನ್ನು ಸ್ಥಾಪಿಸುತ್ತಾ ಲಿಂಗ' ಇದೆ. ಸೋಲಾಪೂರ ಜಿಲ್ಲೆಗೆ ಸೇರಿದ 'ತೀರ್ಥ' ಎಂಬ ಗ್ರಾಮಕ್ಕೆ ಬಂದು ಅಲ್ಲಿ 'ರಾಮಲಿಂಗ'ವೆಂಬ ದೇವರನ್ನು ಸ್ಥಾಪಿಸಿ ಸ್ಮರಿಸಲು ಅಲ್ಲಿ ಪರಮಾತ್ಮನು ಪ್ರಸನ್ನನಾಗಿ ರಾಮನಿಗೆ ತೀರ್ಥವನ್ನಿತ್ತು ನೀನು ಇನ್ನೊಂದು ಲಿಂಗವನ್ನು ಸ್ಥಾಪಿಸಿದರೆ ನಿನ್ನಿಚ್ಛೆಯು ಫಲಿಸುವದೆಂದು ಆಶೀರ್ವದಿಸಿದನಂತೆ! ಆದ್ದರಿಂದ ಯಾವಸ್ಥಲದಲ್ಲಿ ರಾಮನಿಗೆ ಪರಶಿವನಿಂದ ತೀರ್ಥವು ದೊರೆಯಿತೋ ಆ ಸ್ಥಲದಲ್ಲಿ 'ತೀರ್ಥ' ಎಂಬ ಗ್ರಾಮವು ಪ್ರಸ್ತವಾಗಿದೆ. ಅನಂತರ ರಾಮನು ಔಸಾ ತಾಲೂಕಿಗೆ ಸೇರಿದ ಒಂದು ರಮ್ಯವಾದ ಸ್ಥಳಕ್ಕೆ ಹೋಗಿ ಅಲ್ಲಿ 'ರಾಮಲಿಂಗ'ವೆಂಬ ಮೂರ್ತಿಯನ್ನು ಸ್ಥಾಪಿಸಿ ಪೂಜಿಸಲು ಆಗ್ಗೆ ರಾವಣ ರಾವಣ ಎಂಬ ಶಬ್ದವು ಇಲ್ಲದಂತಾದ ದೆಸೆಯಿಂದಾಗಿ ರಾಮನು 'ನರಾವಣಃ' ಎಂದು ಅಂದನಂತೆ! ಆದ್ದರಿಂದ ಆ ಸ್ಥಳದ ಗ್ರಾಮಕ್ಕೆ ಈಗ ಅಪಭ್ರಂಶರೀತಿಯಿಂದ 'ನರವಣೆ' ಎಂದು ಹೆಸರು ಬಿದ್ದಿದೆ. ಅಲ್ಲಿ ರಾಮನಿಗೆ ಫಲವು ದೊರೆತುದರಿಂದಾಗಿ ಕ್ಷೇತ್ರವು 'ರಾಮಲಿಂಗೇಶ್ವರ' ಎಂಬ ನಾಮವಿದೆ. ಹೀಗೆ ರಾಮನು ತನ್ನ ದೋಷಕ್ಕಾಗಿ ಅನೇಕ ಶಿವಲಿಂಗಗಳನ್ನು ಸ್ಥಾಪಿಸಿ ಪೂಜಿಸಿರುವದು ಶಾಸ್ತ್ರದಿಂದಲೂ ಇತಿಹಾಸದಿಂದಲೂ, ಪ್ರತ್ಯಕ್ಷಾನುಭವದಿಂದಲೂ ಕಂಡುಬಂದರೂ ಆಜ್ಞರು ಪರಮಾತ್ಮನು ವಿಷಪಾನಮಾಡಿದಾಗ್ಗೆ ರಾಮನ ಸ್ತುತಿಯನ್ನು ಮಾಡಿದನೆಂಬುದು ಮೂರ್ಖತನವಲ್ಲವೇ? ಇದೇರೀತಿಯಾಗಿ ಸರ್ವ ಅವತಾರಗಳೂ ದೇವತೆಗಳೂ 'ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಜ್ಯ' ಎಂಬ ವೇದವಾಕ್ಯದಂತೆ ಒಬ್ಬನೇ ಈಶ್ವರನೆಂದು ತಿಳಿದು ಸ್ಥಾಪಿಸಿ ಪೂಜಿಸಿ ಮುಕ್ತಿಗಳಾಗಿದ್ದಾರೆ. ಇದೇ ನಿಜವಾದ ಏಕೇಶ್ವರಭಕ್ತಿಯು!

(ಸಶೇಷ)

ಶ್ರೀ ಪಟ್ಟಾಧ್ಯಕ್ಷ, ಬೃಹನ್ಮಠ, ಹೋಟಗಿ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಪಂಚಾಕ್ಷರೀ ಮಹಾತ್ಮ್ಯ

ಲೇಖಕರು—ಶಾಸ್ತ್ರೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲವಾಸಿ ಸಿದ್ಧಲಿಂಗಯ್ಯನವರು ಇನಾಮ ಹೊಂಗಲ

ವೃತಪ್ರಭೂತಿರುದ್ರಾಕ್ಷೈಃ ಪ್ರಯುಕ್ತೋ ಲಿಂಗಧಾರಕಃ |
ಜಪೇತ್ಪಂಚಾಕ್ಷರೀವಿದ್ಯಾಂ ಶಿವತತ್ತ್ವ ಪ್ರಬೋಧಿನೀಂ ||

ವಿಭೂತಿರುದ್ರಾಕ್ಷಿಗಳನ್ನು ಧರಿಸಿದವನಾಗಿಯೂ ಲಿಂಗಧಾರಕನಾಗಿಯೂ, ಪವಿತ್ರಮನಸುಳ್ಳವನಾಗಿಯೂ ಇರುವ ವೀರಶೈವನು ಪರಶಿವತತ್ತ್ವ ಪ್ರಕಾಶಕವಾದ ಪಂಚಾಕ್ಷರೀಮಹಾಮಂತ್ರವನ್ನು ಜಪಿಸಬೇಕು

ಶಿವತತ್ತ್ವಾತ್ ಪರಂ ನಾಸ್ತಿ ಯಥಾ ತತ್ತ್ವಂ ಪರಂ ಮಹತ್ |
ತಥಾ ಪಂಚಾಕ್ಷರೀ ಮಂತ್ರಾನ್ನಾಸ್ತಿ ಮಂತ್ರಂ ಪರಂ ಮಹತ್ ||

"ಶಿವಏಕೋಧ್ಯೇಯಃ" ಇವೇ ಮೊದಲಾದ ಶ್ರುತಿಪ್ರಮಾಣಗಳಿಂದ ಶಿವತತ್ತ್ವಕ್ಕಿಂತಲೂ ಶ್ರೇಷ್ಠವಾದ ಅನ್ಯತತ್ತ್ವವು ಹೇಗೆ ಇರುವದಿಲ್ಲವೋ ಅದೇ ಪ್ರಕಾರವಾಗಿ ಪಂಚಾಕ್ಷರೀ ಮಂತ್ರಕ್ಕಿಂತಲೂ ಶ್ರೇಷ್ಠವಾದ ಬೇರೆ ಮಂತ್ರವು ಯಾವುದೂ ಇರುವದಿಲ್ಲ

ವಿದ್ಯಾಸು ಶ್ರುತಿರುತ್ಕೃಷ್ಟಾ ರುದ್ರೈಕಾದಶಿನೀ ಶ್ರುತೌ |
ತತ್ರ ಪಂಚಾಕ್ಷರೀ ತಸ್ಯಾಂ ಶಿವ ಇತ್ಯಕ್ಷರದ್ವಯಂ ||

ಚತುರ್ದಶ ವಿದ್ಯೆಗಳಲ್ಲಿ ವೇದವು ಶ್ರೇಷ್ಠವಾದುದು ಆ ವೇದದಲ್ಲಿ ಶ್ರೀರುದ್ರವು ಶ್ರೇಷ್ಠವಾದುದು. ಆ ಶ್ರೀ ರುದ್ರದಲ್ಲಿ ಪಂಚಾಕ್ಷರೀ ಮಂತ್ರವು ಶ್ರೇಷ್ಠವಾದುದು ಆ ಪಂಚಾಕ್ಷರೀಮಂತ್ರದಲ್ಲಿ "ಶಿವ" ಎಂಬ ಎರಡು ಅಕ್ಷರಗಳು ಶ್ರೇಷ್ಠವಾದವುಗಳು

ಸಪ್ತಕೋಟಿಷು ಮಂತ್ರೇಷು ಮಂತ್ರಃ ಪಂಚಾಕ್ಷರೋ ಮಹಾನ್ |
ಬ್ರಹ್ಮವಿಷ್ಣ್ವಾದಿದೇವೇಷು ಯಥಾ ಶಂಭುರ್ಮಹತ್ತರಃ ||

ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಲ್ಲಿ ಹೇಗೆ ಶಿವನು ಶ್ರೇಷ್ಠನೋ, ಅದರಂತೆ ಸಪ್ತಕೋಟಿ ಮಹಾಮಂತ್ರಗಳಲ್ಲಿ ವೇದಸಾರವಾದ ಪಂಚಾಕ್ಷರೀ ಮಂತ್ರವೇ ಶ್ರೇಷ್ಠವಾದುದು.

ಪಂಚಭೂತಾನಿ ವರ್ಣಾಣಿ ಪಂಚತನ್ಮಾತ್ರಕಾನಿ ಚ |
ಜ್ಞಾನೇಂದ್ರಿಯಾಣಿ ಪಂಚಾಪಿ ಪಂಚ ಕರ್ಮೇಂದ್ರಿಯಾಣಿ ಚ ||
ಪಂಚಬ್ರಹ್ಮಾಣಿ ಪಂಚಾಪಿ ಕೃತ್ಯಾನಿ ಸಹ ಕಾರಣೈಃ |
ಬೋಧ್ಯಾನಿ ಪಂಚಭಿರ್ವರ್ಣೈಃ ಪಂಚಾಕ್ಷರಮಹಾಮನೋಃ ||

ಪೃಥ್ವಿ ಅಪ್ ತೇಜ ವಾಯು ಆಕಾಶಗಳೆಂಬ ಪಂಚಭೂತಗಳು, ಗಂಧ ರಸ ರೂಪ ಸ್ಪರ್ಶ ಶಬ್ದಗಳೆಂಬ ಪಂಚತನ್ಮಾತ್ರೆಗಳು, ನೇತ್ರ ಕಿವಿ ಮೂಗು ನಾಲಗೆ ಚರ್ಮಗಳೆಂಬ ಪಂಚ ಜ್ಞಾನೇಂದ್ರಿಯಗಳು, ವಾಕ್ ಪಾಣಿ ಪಾದ ಗುದ ಗುಹ್ಯಗಳೆಂಬ ಪಂಚಕರ್ಮೇಂದ್ರಿಯಗಳು ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರೆಂಬ ಪಂಚಬ್ರಹ್ಮರು, ಸೃಷ್ಟಿ ಸ್ಥಿತಿ ಲಯ ಅನುಗ್ರಹ ತಿರೋಧಾನಗಳೆಂಬ ಪಂಚಕೃತ್ಯಗಳು ಈ ಸಕಲವೂ ಪಂಚಾಕ್ಷರಗಳಿಂದಲೇ ತಿಳಿದುಕೊಳ್ಳತಕ್ಕವುಗಳಾಗಿವೆ ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಅಪ್ಪಣೆಯನಿತ್ತಿದ್ದಾರೆ

ಅಮಂತ್ರಕಂ ಮಾಂ ಪತಿತಃ ಪೂಜಯೇತ್ ಯದಿ ಮೋಹಿತಃ |
ನಾರಕೀ ಸ್ಯಾನ್ನ ಸಂದೇಹೋ ಮಮ ಪಂಚಾಕ್ಷರೀಂ ವಿನಾ ||

ಹೇ ಪಾರ್ವತಿ! ಮನುಷ್ಯನು ಪಂಚಾಕ್ಷರೀ ಮಹಾಮಂತ್ರವಿಲ್ಲದೆ ನನ್ನನ್ನು ಪೂಜಿಸಿದರೆ ಅವನು ಪತಿತನಾಗುವನೆಂದು ಪರಮೇಶ್ವರನು ಪಾರ್ವತಿಯನ್ನು ಕುರಿತು ಉಪದೇಶಿಸಿರುತ್ತಾನೆ

ಪಂಚಾಕ್ಷರಸಮೋ ಮಂತ್ರೋ ನಾಸ್ತಿ ನಾಸ್ತಿ ಮಹಾಮುನೇ |
ಮಹಾದೇವಸಮೋ ನಾಸ್ತಿ ಯಥಾ ದೇವೋ ಜಗತ್ತ್ರಯೇ ||
ಉಮಾಸಮಾ ಯಥಾ ನಾರೀ ಯಥಾ ಗಂಗಾಸಮಾ ನದೀ |
ಯಥಾ ಮೇರುಸಮೋ ಮಹೀಧ್ರಃ ಸಾಗರೇಣ ಸಮಂ ಸರಃ ||
ಶಿವಭಕ್ತಿಸಮಾ ನಾಸ್ತಿ ಯಥಾ ಮುಕ್ತಿ ವಿದಾಯಿನೀ |
ತದ್ವತ್ ಶಿವಮಂತ್ರಸ್ಯ ತುಲ್ಯೋ ನಾಸ್ತ್ಯಪಿ ಕೋಽಪಿ ವಾ ||

([illegible] ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೫ನೇ ಜನವರಿ ತಾ|| ೨೧ನೇ ಸೋಮವಾರ

ಲಿಂಗಧಾರಣವು ಶ್ರುತಿ ಸಿದ್ಧವಾದುದು.

ನಾವು ಹಿಂದೆ ಹೇಳಿದಪ್ರಕಾರ ಸರ್ವಲಿಂಗಂ ಸ್ಥಾಪಯತಿ ಎಂಬ ತೈತ್ತಿರೀಯ ಶ್ರುತಿಯಿಂದ ದೇಹದಲ್ಲಿ ಇಷ್ಟಲಿಂಗಧಾರಣವು ವಿಧಿಸಲ್ಪಟ್ಟಿತು ಸರ್ವಾನನ ಶಿರೋಗ್ರೀವಃ ಎಂಬ ಶ್ವೇತಾಶ್ವತರೋಪನಿಷನ್ಮಂತ್ರದಿಂದ ಆ ಇಷ್ಟಲಿಂಗವನ್ನು ಧರಿಸುವ ಕೆಲವು ಸ್ಥಾನಗಳು ತೋರಿಸಲ್ಪಟ್ಟವು ಲಿಂಗಧಾರಣಪರವಾದ ಈ ಉಭಯಉಪನಿಷತ್ತುಗಳ ಅರ್ಥವು ಅನೇಕ ಉಪಬೃಂಹಣವಾಕ್ಯಗಳಿಂದ ಪ್ರತಿಪಾದಿಸಲ್ಪಟ್ಟಿದೆ ತ್ತನೆ ವೀರಶೈವಸಿದ್ಧಾಂತಿಗಳು ಈ ಮಂತ್ರಾರ್ಥವನ್ನು ಬಹು ದೂರವಾಗಿ ವಿಚಾರಮಾಡಿ ಈ ಮಂತ್ರಗಳು ಲಿಂಗಧಾರಣಪ್ರತಿಪಾದಕಗಳೆಂದು ನಿರ್ಣಯಿಸಿದ್ದಾರೆ ಆದರೆ ಇಷ್ಟಲಿಂಗವನ್ನು ಧರಿಸಬೇಕೆಂದು ವಿಧಿಸುವ ಸರ್ವಲಿಂಗಂ ಮುಂತಾದ ಮಂತ್ರಗಳಿಗೆ ವೇದಗಳಿಗೆ ವ್ಯಾಖ್ಯಾನವನ್ನು ಬರೆದ ಸಾಯಣಾಚಾರ್ಯರು ಲಿಂಗಧಾರಣಪರವಾಗಿ ವ್ಯಾಖ್ಯಾನವನ್ನು ಬರೆಯದೆ ಇರುವುದರಿಂದ ಈ ಮಂತ್ರಗಳೆಲ್ಲ ಇಷ್ಟಲಿಂಗಧಾರಣಪರವಾಗಿ ಅರ್ಥ ಮಾಡುವುದು ಸರಿಯಲ್ಲ ವೇದಾರ್ಥದಲ್ಲಿ ಯಾವ ಆಸ್ತಿಕಮಾನವನೂ ಭಿನ್ನಾಭಿಪ್ರಾಯಪಡಲಾರನು ಸಾಯಣಾಚಾರ್ಯಾದಿಗಳು ಲಿಂಗಧಾರಣಪರವಾಗಿ ಅರ್ಥ ಮಾಡದಿದ್ದರೂ ಆ ಸಾಯಣಾಚಾರ್ಯಾದಿಗಳಿಗಿಂತಲೂ ಪ್ರತಿ ಶ್ರೇಷ್ಠರೆನಿಸಿ ಶ್ರೀ ಪರಮೇಶ್ವರಾನುಗ್ರಹದಿಂದ ಸಕಲ ವೇದಾರ್ಥವನ್ನು ಕರತಲಾಮಲಕದಂತೆ ತಿಳಿದು ಸರ್ವಜ್ಞರೆನಿಸಿರುವ ಶ್ರೀ ರೇಣುಕಾಚಾರ್ಯ ಭಗವತ್ಪಾದರೂ ವ್ಯಾಸ ಮಹರ್ಷಿ ಪ್ರಣೀತ ಉಪಪುರಾಣ ಸ್ಮೃತಿ ಮುಂತಾದ ಗ್ರಂಥ ಕರ್ತೃಗಳೂ ಈ ಮಂತ್ರಗಳು ಇಷ್ಟಲಿಂಗಧಾರಣವನ್ನು ವಿಧಿಸುವ ಮಂತ್ರಗಳೆಂದು ವ್ಯಾಖ್ಯಾನಮಾಡಿರುತ್ತಾರೆ ಸಾಯಣಾಚಾರ್ಯರು ಈ ಮಂತ್ರಗಳಿಗೆ ಲಿಂಗಧಾರಣಪರವಾಗಿ ವ್ಯಾಖ್ಯಾನವನ್ನು ಬರೆಯದಿದ್ದುದು ಅವರಿಗೆ ಅಪ್ರಕೃತವಾದಕಾರಣ ಅವರು ಬರೆಯದಿದ್ದರೂ ಅಷ್ಟೇ ಅಲ್ಲದೆ ಆ ಸಾಯಣಾಚಾರ್ಯರು ಲಿಂಗಧಾರಣಮಂತ್ರಗಳಿಗೆ ವ್ಯಾಖ್ಯಾನವನ್ನು ಬರೆಯದಿದ್ದರೂ ಇವರ ಮೂಲಾಚಾರ್ಯರಾದ ಶ್ರೀ ಶಂಕರಾಚಾರ್ಯರು ದುರ್ಗಾಮಂತ್ರಗಳಿಗೆ ವ್ಯಾಖ್ಯಾನ ಬರೆದು ಲಿಂಗಪೂಜೆಯಲ್ಲಿ ವಿನಿಯೋಗವನ್ನು ಮಾಡಿದ್ದಾರೆ ಆದುದರಿಂದ "ಸ್ಥಾಪಯತಿ" ಮುಂತಾದ ಶ್ರುತಿಗಳ ಅರ್ಥವನ್ನೇ ಬಾದರಾಯಣಾದಿ ಮಹರ್ಷಿಗಳೂ, ವೀರಶೈವಮತಸ್ಥಾಪಕರಾದ ಶ್ರೀ ರೇಣುಕಾದ್ಯಾಚಾರ್ಯರೂ ಲಿಂಗಧಾರಣಪರವಾಗಿ ಹೇಳಿರುವುದರಿಂದ ಲಿಂಗಧಾರಣ ವಿಧಿಯು ವೇದಮೂಲವಾದುದೆಂದು ಸ್ಪಷ್ಟವಾಗುತ್ತದೆ "ಸರ್ವಲಿಂಗಂ ಸ್ಥಾಪಯತಿ" ಎಂಬ ವಾಕ್ಯದಲ್ಲಿ ಸ್ಥಾಪಯತಿ ಎಂಬ ಕ್ರಿಯಾಪದವು ಲಡಂತವಾಗಿರುವುದರಿಂದ ವಿಧಿಯೆನಿಸಿಕೊಳ್ಳಲಾರದೆಂದೂ, ಲಿಙ್ ಲೋಟ್ ತವ್ಯಪ್ರತ್ಯಯಗಳಿಂದ ಕೂಡಿದ ಪದಗಳಿಗೇನೇ ವಿಧ್ಯರ್ಥವು ಸಂಭವಿಸುವುದರಿಂದ ಈ ಶ್ರುತಿಯು ಲಿಂಗಧಾರಣವಿಧಾಯಕವಾದ ಶ್ರುತಿಯಲ್ಲವೆಂದೂ ಆಕ್ಷೇಪಿಸುವವರ ಮತವನ್ನು ಮೀಮಾಂಸಾ ದೃಷ್ಟಾಂತದಿಂದ ಪರಿಹರಿಸುತ್ತಾರೆ ಮೀಮಾಂಸಾಶಾಸ್ತ್ರದಲ್ಲಿ 'ವ್ರೀಹೀನವಹಂತಿ" 'ವ್ರೀಹೀನ್ ಪ್ರೋಕ್ಷತಿ" ಮುಂತಾದ ವಾಕ್ಯಗಳಲ್ಲಿ 'ಪ್ರೋಕ್ಷತಿ—ಅವಹಂತಿ" ಎಂಬ ಲಡಂತವಾದ ಕ್ರಿಯಾಪದಗಳಿದ್ದರೂ ಅವು ವಿಧಿಪ್ರಯೋಜಕರೂಪವಾಗಿರುವುದರಿಂದ ಅವುಗಳಿಗೆ ವಿಧ್ಯರ್ಥವನ್ನು ಅಂಗೀಕಾರಮಾಡಿರುವಂತೆ 'ಸ್ಥಾಪಯತಿ' ಎಂಬ ಕ್ರಿಯಾಪದವು ಲಡಂತವಾಗಿದ್ದರೂ ವಿಧಿಪ್ರಯೋಜಕರೂಪವಾಗಿರುವುದರಿಂದ 'ಸ್ಥಾಪಯೇತ್' ಲಿಂಗವನ್ನು ಧರಿಸಬೇಕು ಎಂಬ ವಿಧ್ಯರ್ಥವು ಸಂಭವಿಸುತ್ತದೆ ಮೀಮಾಂಸಾಕಾರರು ವಿಧಿಗಳಲ್ಲಿ ಅಪೂರ್ವವಿಧಿ, ನಿಯಮವಿಧಿ, ಪರಿಸಂಖ್ಯಾವಿಧಿ ಎಂದು ಮೂರು ಪ್ರಕಾರವಾದ ವಿಧಿಗಳನ್ನು ಅಂಗೀಕಾರಮಾಡಿದ್ದಾರೆ ಅವುಗಳಲ್ಲಿ ಇಷ್ಟಲಿಂಗಧಾರಣವನ್ನು ವಿಧಿಸುತ್ತಿರುವ 'ಸರ್ವಲಿಂಗಂ ಸ್ಥಾಪಯತಿ' ಎಂಬ ವಾಕ್ಯವು ಯಾವ ವಿಧಿಯೊಳಗೆ ಸೇರಲೇಬೇಕಾಗುವುದು ಒಂದು ಪ್ರಮಾಣದಿಂದ ಸಿದ್ಧವಾದುದನ್ನು ಮತ್ತೊಂದು ವಾಕ್ಯದಿಂದ ಹೇಳದಿರುವುದೇ ಅಪೂರ್ವವಿಧಿಗೆ ಲಕ್ಷಣವು 'ವ್ರೀಹೀನ್ ಪ್ರೋಕ್ಷತಿ' ಭತ್ತಗಳನ್ನು ಪ್ರೋಕ್ಷಣಮಾಡಬೇಕೆಂದು ದರ್ಶಪೂರ್ಣಮಾಸಪ್ರಕರಣದಲ್ಲಿ ಹೇಳಿದ ಈ ವಾಕ್ಯಾರ್ಥವು ಇನ್ನಾವ ವಾಕ್ಯದಲ್ಲಿಯೂ ಹೇಳದಿರುವುದರಿಂದ ಇದು ಅಪೂರ್ವ ವಿಧಿಯೆನಿಸುತ್ತದೆ ಆದರಂತೆ 'ಸರ್ವಲಿಂಗಂ ಸ್ಥಾಪಯತಿ' ದೀಕ್ಷಿತರಾದ ಸಮಸ್ತ ಶಿವಭಕ್ತರ ಹೃದಯದಲ್ಲಿ ಇಷ್ಟಲಿಂಗವನ್ನು ಧರಿಸಬೇಕು ಎಂಬ ವಾಕ್ಯವು ಲಿಂಗಧಾರಣವಿಧಾನವನ್ನು ಮಾಡುತ್ತದೆ ಸರ್ವಾನನ ಶಿರೋಗ್ರೀವಃ ಎಂಬ ಬೇರೆ ವಾಕ್ಯವೂ ಸಹ ಆ ಲಿಂಗಧಾರಣವನ್ನೇ ವಿಧಿಸುವುದರಿಂದ ಅಪೂರ್ವವಿಧಿಲಕ್ಷಣಕ್ಕೆ ಬಾಧೆಯುಂಟಾಗುವದು ಎರಡನೆಯದಾದ ನಿಯಮವಿಧಿಯನ್ನಾಗಿ ಅಂಗೀಕರಿಸುವೆನೆಂದರೆ ಅದೂ ಸರಿಬೀಳುವುದಿಲ್ಲ ಒಂದು ಕಾರ್ಯವನ್ನು ಸಾಧಿಸುವುದಕ್ಕಾಗಿ ಎರಡು ಕಾರಣಗಳೊದಗಿ ಇದೊಂದರಿಂದಲೇ ಕಾರ್ಯವನ್ನು ಪೂರ್ಣಗೊಳಿಸಬೇಕೆಂಬ ನಿಯಮಕ್ಕೆ ನಿಯಮವಿಧಿಯೆನ್ನುತ್ತಾರೆ ಉಗುರಿನಿಂದ ಭತ್ತದ ಹೊಟ್ಟನ್ನು ತೆಗೆಯಬೇಕೋ ಅಥವಾ ಒನಕೆಯಿಂದ ಕುಟ್ಟಿ ಹೊಟ್ಟನ್ನು ತೆಗೆಯಬೇಕೋ ಎಂದು ಎರಡು ಪಕ್ಷಗಳುಂಟಾಗಿ ಒನಕೆಯಿಂದ ಕುಟ್ಟಿ ಹೊಟ್ಟನ್ನು ತೆಗೆಯಬೇಕು ಅಂತಹ ಹನನಸಂಸ್ಕಾರವುಳ್ಳ ಅಕ್ಕಿಯೇ ಯಜ್ಞಸಾಧನವಾದ ಪುರೋಡಾಶಕ್ಕೆ ಉಪಯೋಗಿಸಲ್ಪಡಬೇಕಲ್ಲದೆ ನಖವಿದಲನದಿಂದ ತೆಗೆದ ತಂಡುಲವು ಪುರೋಡಾಶನಿಷ್ಪಾದನಕ್ರಿಯೆಗೆ ಅರ್ಹವಾಗಲಾರದೆಂಬ ನಿಯಮ ವಿರುವುದರಿಂದ ವಿಧಿವಿಹಿತ ತಂಡುಲವನ್ನೇ ಉಪಯೋಗಿಸಬೇಕಾಗುವುದು

> ಭಸ್ಮಚ್ಛನ್ನೋ ಭಸ್ಮಶಯ್ಯಾಶಯಾನಃ |
> ರುದ್ರಾಧ್ಯಾಯೀ ಮುಚ್ಯತೇ ಸರ್ವಪಾಪೈಃ ||

ಇತ್ಯಾದಿ ಶ್ರುತಿವಾಕ್ಯಗಳಿಂದ ಭಸ್ಮರುದ್ರಾಕ್ಷಧಾರಣವೂ ಸಹ ಹೇಳಲ್ಪಟ್ಟಿರುತ್ತದೆ ಲಿಂಗವನ್ನು ಧರಿಸಿದರೆ ಭಸ್ಮರುದ್ರಾಕ್ಷಾದಿಗಳನ್ನು ಧರಿಸಕೂಡದೆಂದು ಬಸ್ಮರುದ್ರಾಕ್ಷಗಳಿಗೆ ನಿಷೇಧಿಸಬೇಕಾಗುತ್ತದೆ ಅದು ವೀರಶೈವ ಸಿದ್ಧಾಂತಕ್ಕೆ ಅತಿವಿರೋಧವಾದುದಾಗಿದೆ ಶ್ರೀ ರೇಣುಕಭಗವತ್ಪಾದರು—

> ದಿಕ್ಷಾಲಿಂಗಧೃತಿಶ್ಚೈವ ವಿಭೂತೇರಪಿ ಧಾರಣಂ |
> ರುದ್ರಾಕ್ಷಧಾರಣಂ ಚೈವ ಪಂಚಾಕ್ಷರಜಪಸ್ತಥಾ ||
> ಭಕ್ತಿಮಾರ್ಗಕ್ರಿಯಾ ಚೈವ ಗುರೋರ್ಲಿಂಗಸ್ಯ ಚಾರ್ಚನಂ |
> ಏತಾನಿ ಶಿವಭಕ್ತಸ್ಯ ಕರ್ತವ್ಯಾನಿ ಪ್ರಯತ್ನತಃ ||

ಎಂದು ಶಿವ ಲಿಂಗ ಭಸ್ಮ ರುದ್ರಾಕ್ಷಗಳೆಲ್ಲಕ್ಕೂ ಅತ್ಯವಶ್ಯಕತೆಯನ್ನು ತೋರಿಸಿರುತ್ತಾರಾದ್ದರಿಂದ ಇಲ್ಲಿ ನಿಯಮವಿಧಿಯನ್ನೂ ಹೇಳಲಾಗುವುದಿಲ್ಲ ಇನ್ನು ಪರಿಸಂಖ್ಯಾವಿಧಿಯನ್ನು ಹೇಳುತ್ತೇನೆಂದರೆ ಅದೂ ಕೂಡ ಸಂಭವಿಸುವುದಿಲ್ಲ ಎರಡು ಕಾರ್ಯಗಳಿಗೂ ಸಮುಚ್ಚಯವಾಗಿ ಪ್ರಸಕ್ತಿಯು ಸಂಭವಿಸಿ ಒಂದನ್ನೇ ನಿಷೇಧಿಸಿ ಒಂದನ್ನು ಮಾತ್ರ ಗ್ರಹಿಸುವುದು ಪರಿಸಂಖ್ಯಾವಿಧಿಯೆನಿಸುವುದು ಹೇಗೆಂದರೆ—ಚಯನಪ್ರಕರಣದಲ್ಲಿ ಯಜ್ಞವೇದಿಕೆಯನ್ನು ರಚಿಸುವುದಕ್ಕಾಗಿ ರಥಕ್ಕೆ ಒಂದು ಕಡೆಯಲ್ಲಿ ಕುದುರೆಯನ್ನೂ ಮತ್ತೊಂದು ಕಡೆಯಲ್ಲಿ ಗರ್ದಭವನ್ನೂ ಕಟ್ಟಿಕೊಂಡು ಇಟ್ಟಿಗೆಗಳನ್ನು ತರುವುದಕ್ಕೆ ಹೋದ ಸಮಯದಲ್ಲಿ ವಿಹಿತವಾದ "ಇಮಾಮಗೃಭ್ಣನ್ ರಶನಾಮೃತಸ್ಯ" ಎಂಬ ವಾಕ್ಯದಿಂದ ರಶನಾಗ್ರಹಣವನ್ನು ಮಾಡಬೇಕು (ಹಗ್ಗವನ್ನು ಹಿಡಿಯಬೇಕು) ಎಂದು ಸಾಮಾನ್ಯವಾಗಿ ಹೇಳಿರುವುದರಿಂದ ಇಲ್ಲಿ ಕುದುರೆಯ ಹಗ್ಗ ಗರ್ದಭದ ಹಗ್ಗ ಈ ಎರಡಕ್ಕೂ ಸಮುಚ್ಚಯವಿರುವುದರಿಂದ ಈ ಮಂತ್ರವನ್ನು ಉಚ್ಚರಿಸುತ್ತ ಕುದುರೆಯ ಹಗ್ಗವನ್ನು ಮಾತ್ರ ಗ್ರಹಿಸಬೇಕು ಗರ್ದಭದ ಹಗ್ಗವನ್ನು ಹಿಡಿಯಬಾರದು ಮಂತ್ರವನ್ನುಚ್ಚರಿಸದೆ ಸುಮ್ಮನೆ ಗರ್ದಭದ ಹಗ್ಗವನ್ನು ಹಿಡಿದಿರಬೇಕೆಂಬಲ್ಲಿ ಪರಿಸಂಖ್ಯಾವಿಧಿಯೆನಿಸುತ್ತದೆ ಇಲ್ಲಿ ಲಿಂಗಧಾರಣವನ್ನು ಮಾಡಬೇಕೆಂದೂ ಮಾಡಬಾರದೆಂದೂ ಒಂದೇ ಕಾಲದಲ್ಲಿ ಸಮುಚ್ಚಯರೂಪವಾಗಿ ಅಂತಹ ಪ್ರಸಕ್ತಿಯೇ ಇಲ್ಲದೆ ಸಮುಚ್ಚಯವು ಸಂಭವಿಸದಿರುವುದರಿಂದ ಪರಿಸಂಖ್ಯಾವಿಧಿಯೇ ಸಂಭವಿಸುವುದಿಲ್ಲ ಇತ್ಯಾದಿ ಅನೇಕ ಪೂರ್ವಪಕ್ಷಗಳುಂಟಾಗಿ "ಸರ್ವಲಿಂಗಂ ಸ್ಥಾಪಯತಿ" ಎಂಬಲ್ಲಿ ನಿಯಮವಿಧಿಯನ್ನಾಗಲಿ ಪರಿಸಂಖ್ಯಾವಿಧಿಯನ್ನಾಗಲಿ ಹೇಳದೆ ಮೊದಲನೆಯದಾದ ಅಪೂರ್ವವಿಧಿಯಿಂದಲೇ ಸಿದ್ಧಾಂತಿಗಳು ಲಿಂಗಧಾರಣವನ್ನು ಸಿದ್ಧಮಾಡಿರುತ್ತಾರೆ ಹಾಗಾದರೆ ಸ್ಥಾಪಯತಿ ಎಂಬುದರಿಂದ ಹೇಳಿದ ಲಿಂಗಧಾರಣ ವಿಧಾನವನ್ನು "ಸರ್ವಾನನ" ಎಂಬ ಶ್ವೇತಾಶ್ವತರೋಪನಿಷತ್ತು ಸಹ ಹೇಳುತ್ತದೆಯಲ್ಲ! ಎಂದರೆ "ಸರ್ವಲಿಂಗಂ ಸ್ಥಾಪಯತಿ" "ಸರ್ವಾನನಶಿರೋಗ್ರೀವಃ" ಎಂಬಿವೆರಡು ವಾಕ್ಯಗಳಿಗೂ ಪರಸ್ಪರ ಉಪಜೀವ್ಯೋಪಜೀವಕಭಾವವನ್ನು ಅಂಗೀಕಾರಮಾಡಿ ಇವೆರಡು ವಾಕ್ಯಗಳಿಗೂ ಏಕವಾಕ್ಯತೆಯು ಸಂಭವಿಸುವುದರಿಂದ ಬೇರೆ ಪ್ರಮಾಣಗಳಿಂದ ಅಪ್ರಾಪ್ತವೇ ಆಯಿತು ಆದುದರಿಂದ "ಸರ್ವಲಿಂಗಂ ಸ್ಥಾಪಯತಿ" ಎಂಬಲ್ಲಿ ಅಪೂರ್ವವಿಧಿಯಾಗುವುದೆಂಬಲ್ಲಿ ಯಾವ ಬಾಧಕವೂ ಬರುವುದಿಲ್ಲವಾದುದರಿಂದ ಇಷ್ಟಲಿಂಗಧಾರಣವಿಧಾನವು, ನಿರಾತಂಕವಾದುದೆಂದು ಮೀಮಾಂಸಾವಿಚಾರದಿಂದಲೂ ಸ್ಪಷ್ಟವಾಗುತ್ತದೆ

ಒಳದೇಶದ ವೃತ್ತಾಂತಗಳು.

ಸಾಗರದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಕೆ ಆರ್ ತಿಮ್ಮರಾಯಶೆಟ್ಟಿ, ಎಂ ಎ, ಎಲ್ ಎಲ್ ಬಿ, ಇವರಿಗೆ ಇದೇ ಜನವರಿ ೨೮ ನೆಯ ತಾರೀಖಿನಿಂದ ಒಂದು ತಿಂಗಳು ಪ್ರಿವಿಲೆಜ್ ರಜಾ ಮಂಜೂರಾಗಿರುತ್ತದೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಹೆಲ್ತಾಫೀಸರ್ ಮಿ|| ಜಿ ಎಂ ಡಾಮ್ಮಯವರಿಗೆ ಜನವರಿ ೧೨ ರಿಂದ ಮೂರು ವಾರಗಳು ಪ್ರಿವಿಲೆಜ್ ರಜಾ ಮಂಜೂರಾಗಿರುತ್ತದೆ ಇವರ ರಜಾಕಾಲದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರು ಇವರ ಕೆಲಸಗಳನ್ನು ನೋಡಿಕೊಳ್ಳುತ್ತಾರೆ

ಕಳೆದ ವಾರದ ನಮ್ಮ ಪತ್ರಿಕೆಯಲ್ಲಿ ರಾಜಲಕ್ಷ್ಮೀ ಥಿಯೇಟರಿನಲ್ಲಾದ ಕುಸ್ತಿಯ ಸಮಯದಲ್ಲಿ ಹಿಂದೂ ಮುಸಲ್ಮಾನರಿಗೆ ಹೊಡೆದಾಟವಾಯಿತೆಂಬ ವಿಷಯವು ಪ್ರಸಿದ್ಧವಾಗಿರುವುದು ಸರಿಯಷ್ಟೆ! ಆ ಸ್ಥಳದಲ್ಲಿ ಆರೀತಿಯಾಗಿ ಹೊಡೆದಾಟವಾಗಲಿಲ್ಲವೆಂದು ಇತ್ತೀಚೆಗೆ ತಿಳಿದುಬಂದಿತು ಮೇಲ್ಕಂಡ ವಿಷಯವು ಕರ್ಣಾಕರ್ಣಿಕೆಯಿಂದ ಕೇಳಿ ಪ್ರಸಿದ್ಧವಾದುದಕ್ಕಾಗಿ ವಿಷಾದಿಸುತ್ತೇವೆ

ಮೈಸೂರು ಸಂಸ್ಥಾನ ವಾಣಿಜ್ಯ ಮತ್ತು ಕೈಗಾರಿಕೆಯ ಡೈರೆಕ್ಟರಾಗಿರುವ ಮ|| ಎಸ್ ಜಿ ಶಾಸ್ತ್ರಿಯವರು ಇದೇ ತಿಂಗಳು ತಾ|| ೨೩ ಕ್ಕೆ ಕೊಲಂಬೊ ಬಂದರಿನಲ್ಲಿ ಹಡಗು ಹತ್ತಿ ಜಪಾನ್, ಅಮೇರಿಕಾ ಮತ್ತು ಇಂಗ್ಲೆಂಡು ದೇಶಗಳಲ್ಲಿ ಮೂರು ತಿಂಗಳು ಸಂಚಾರಮಾಡಿಕೊಂಡು ಬರುತ್ತಾರೆಂದು ತಿಳಿದುಬಂದಿದೆ ನಮ್ಮ ಸಂಸ್ಥಾನದಲ್ಲಿ ತಯಾರಾಗುತ್ತಿರುವ ಗಂಧದ ಎಣ್ಣೆ, ಸಾಬೂನು ಮತ್ತು ಇತರ ಮುಖ್ಯ ಕೈಗಾರಿಕೆಗಳಿಗೆ ಪರದೇಶಗಳಲ್ಲಿ ಗಿರಾಕಿಗಳನ್ನು ಹೊಂದಿಸಿ ನಮ್ಮ ಸಂಸ್ಥಾನದ ವ್ಯಾಪಾರವನ್ನು ಹೇಗೆ ಅಭಿವೃದ್ಧಿಪಡಿಸಬಹುದೆಂಬುದನ್ನೂ ಮೈಸೂರು ಸಂಸ್ಥಾನದಲ್ಲಿ ಕಾಗದ ತಯಾರು ಮಾಡುವ ಕಾರ್ಖಾನೆಯನ್ನೂ ಗ್ರಾಮಕೈಗಾರಿಕೆಗಳನ್ನೂ ಪ್ರಾರಂಭಿಸಲು ತಿಳಿಯಬೇಕಾದ ಎಲ್ಲಾ ಅಂಶಗಳನ್ನೂ ಪಾಶ್ಚಿಮಾತ್ಯ ದೇಶಗಳಲ್ಲಿದ್ದು ತಿಳಿದುಕೊಂಡು ಬರಬೇಕೆಂಬುದೇ ಇವರ ಪ್ರಯಾಣದ ಉದ್ದೇಶವಾಗಿದೆ

ಶಸ್ತ್ರಚಿಕಿತ್ಸೆ.

ನಮ್ಮ ಶ್ರೀಮನ್ಮಹಾರಾಜರವರಿಗೆ ದೇಹದಲ್ಲಿ ಒಂದು ಗುಳ್ಳೆ ಎದ್ದು ಬಾಧೆಪಡಿಸುತ್ತಿತ್ತು ಅದು ಕಳೆದ ಶುಕ್ರವಾರ ಶಸ್ತ್ರಚಿಕಿತ್ಸೆಯಿಂದ ಪರಿಹರಿಸಲ್ಪಟ್ಟಿತು ಮಹಾಪ್ರಭುಗಳವರು ಸುಖವಾಗಿದ್ದಾರೆ ಶಸ್ತ್ರಚಿಕಿತ್ಸಾ ಸಮಯದಲ್ಲಿ ನಮ್ಮ ದಿವಾನ್‌ರವರೂ, ಸೀನಿಯರ್ ಸರ್ಜನ್‌ರವರೂ ರಾಜಧಾನಿಗೆ ದಯಮಾಡಿ ಎರಡು

ದಿನಗಳವರೆಗಿದ್ದು ನೋಡಿಕೊಂಡು ಪುನಃ ಬೆಂಗಳೂರಿಗೆ ಪ್ರಯಾಣಮಾಡಿದರು.

ಲೋಕಹಿತೈಷಿ ನಂಜುಂಡರಾಜ ಅರಸರವರ ನಿಧನ.

ರಾಜಬಂಧುಗಳಾದ ಮ|| ರಾ|| ಲೋಕಹಿತೈಷಿ ಎಚ್ ನಂಜುಂಡರಾಜ ಅರಸರವರು ವಾರ್ಧಕ್ಯ ಪ್ರಯುಕ್ತವಾದ ಅಸ್ವಸ್ಥತೆಯಿಂದ 16 1 1935 ನೇ ಬುಧವಾರ ದಿವಸ ರಾಜಧಾನಿಯಲ್ಲಿ ಪರಂಧಾಮ ವನ್ನೈದಿದರು ಅಂತ್ಯಕಾಲದಲ್ಲಿ ಇವರಿಗೆ 79 ವರ್ಷ ಗಳಾಗಿದ್ದುವು ಇವರು ಬಹು ಶಾಂತಸ್ವಭಾವಿಗಳೂ, ನಿಗರ್ವಿಗಳೂ, ಪ್ರಜಾಸೌಕರ್ಯಪ್ರೇಮಿಗಳೂ, ಪ್ರಾಣಿಗಳಲ್ಲಿ ನಿರ್ವ್ಯಾಜ ದಯಾಶೀಲರೂ ಆಗಿದ್ದರು ಈ ಮಹೋದಯರ ಪ್ರಜೋಪಯುಕ್ತಗಳಾದ ದಿನಚರ್ಯೆಗಳನ್ನು ಕಂಡು ಸಂತುಷ್ಟರಾದ ಶ್ರೀಚಾಮರಾಜ ಒಡೆಯರ್ ಬಹದ್ದೂರ್‌ರವರು ಇವರಿಗೆ 'ಲೋಕಹಿತೈಷಿ' ಎಂಬ ಪ್ರಶಸ್ತಿಯನ್ನು ದಯಪಾಲಿಸಿದ್ದರು ಇದು ಇವರಿಗೆ ಅಕ್ಷರಶಃ ಅನ್ವರ್ಥಕವಾದುದಾಗಿತ್ತು ಹಗಲಿರುಳೂ ಲೋಕಕ್ಕೆ ಹಿತವುಂಟಾಗುವ ಉಪಾಯಗಳನ್ನು ಕಂಡುಹಿಡಿಯುವುದೇ ಇವರ ಸ್ವಾಭಾವಿಕವಾದ ಧರ್ಮವಾಗಿದ್ದುದರಿಂದ ರಾಜಧಾನಿಯ ಪ್ರತಿಯೊಬ್ಬ ಪ್ರಜೆಗಳಿಗೂ ಈ ಮಹೋದಯರ ಆತ್ಯಂತಿಕವಿಯೋಗವು ಅತ್ಯಂತ ದುಃಖವನ್ನುಂಟುಮಾಡಿರುತ್ತದೆ ಅದೇ ದಿವಸವೇ ಇವರ ಕಳೇಬರವು ರಾಜಮರ್ಯಾದೆಗಳೊಡನೆ ರುದ್ರಭೂಮಿಗೆ ಸಾಗಿಸಲ್ಪಟ್ಟು ಅಂತ್ಯಸಂಸ್ಕಾರವು ಸಾಂಗವಾಗಿ ನೆರವೇರಿಸಲ್ಪಟ್ಟಿತು ರಾಜಧಾನಿಯ ಪ್ರಮುಖರನೇಕರು ಇವರ ಅಂತ್ಯೋತ್ಸವದಲ್ಲಿ ಭಾಗಿಗಳಾಗಿದ್ದರು 17ನೆಯ ತಾರೀಖು ಗುರುವಾರ ದಿವಸ ರಾಜಧಾನಿಯ ಪ್ರಮುಖರೆಲ್ಲರೂ, ಇವರ ನಿಧನದಿಂದುಂಟಾದ ಶೋಕವನ್ನು ಪ್ರದರ್ಶಿಸುವುದಕ್ಕಾಗಿ ಟೌನ್‌ಹಾಲಿನಲ್ಲಿ ಶ್ರೀಮಾನ್ ಬಿ ಟಿ ಕೇಶವಯ್ಯಂಗಾರ್‌ರವರ ಅಧಿಪತ್ಯದಲ್ಲಿ ಒಂದು ಸಭೆಯನ್ನು ಕೂಡಿದ್ದರು ಈ ಸಭೆಯಲ್ಲಿ ಮ|| ರಾ|| ಎ ಸುಬ್ರಹ್ಮಣ್ಯ ಅಯ್ಯರ್, ರಾ|| ಸಾ|| ಎಂ ರಾಮಸ್ವಾಮಿಯವರು, ಮ|| ರಾ|| ಮಹಮ್ಮದ್ ಪೀಟರು, ಆಯುರ್ವೇದವಿದ್ವಾನ್ ಬಿ ವಿ ವೆಂಕಟೇಶಶಾಸ್ತ್ರಿಗಳು ಮುಂತಾದವರು ಮೃತರ ಸ್ವಭಾವಗುಣಗಣಮಾಲಿಕೆಯನ್ನು ಸಭಿಕರಿಗೆ ತೋರಿಸಿ ಹಾರ್ದಿಕಸಂತಾಪವನ್ನು ಪ್ರದರ್ಶಿಸಿದರು ಅನಂತರ ಪೌರರಿಗುಂಟಾದ ಈ ಮಹಾಶಯರ ವಿಯೋಗದುಃಖವನ್ನು ಅವರ ಕುಟುಂಬವರ್ಗಕ್ಕೆ ತಿಳುಹಿಸಬೇಕೆಂದೂ ನಿರ್ಧಾರವಾಗಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಸಭೆಯು ಸಮಾಪ್ತಿಗೊಂಡಿತು.

ವರ್ತಮಾನಸಂಗ್ರಹ.

ರಂಗೂನಿನ ಜನರಲ್ ಪೋಸ್ಟಾಫೀಸಿನಲ್ಲಿ ಒಬ್ಬ ಪೋಲೀಸ್ ಹೆಡ್ ಕಾನ್ಸ್ಟೇಬಲನು ತನ್ನ ತಮ್ಮನಿಗೆ ಮನಿಯಾರ್ಡರ್ ಕಳುಹಿಸಬೇಕೆಂದು 1000 ರೂಪಾಯಿ ನೋಟುಗಳನ್ನು ಇಟ್ಟುಕೊಂಡು ನಿಂತಿರುವಾಗ್ಗೆ ಕಾಲಿನ ಹತ್ತಿರ ಏನೋ ಬಿದ್ದಂತಾಗಲು ಬಗ್ಗಿ ನೋಡಿದನು ಅಷ್ಟರಲ್ಲಿ ಇವನನ್ನು ಯಾರೋ ತಳ್ಳಿ, ಕಣ್ಮರೆಯಾದದ್ದಲ್ಲದೆ ರೂಪಾಯಿಗಳೂ ಮಾಯವಾಗಿದ್ದುವು

ಮಳಲು ಗುಡ್ಡ!

ಆಸ್ಟ್ರೇಲಿಯಾದೇಶಕ್ಕೆ ಸೇರಿದ ಕ್ವೀನ್ಸ್‌ಲ್ಯಾಂಡಿನಲ್ಲಿ ಮಳಲು ಬೆಟ್ಟದಂತೆ ಬೆಳೆಯಲು ಪ್ರಾರಂಭವಾಗಿ 40 ಅಡಿ ಎತ್ತರ ಮರಗಳ ಒಂದು ದೊಡ್ಡ ತೋಪೆಲ್ಲಾ ಮುಚ್ಚಿ ಕಾಣದಂತಾಗಿವೆ

ಕ್ರಾಂತಿಕಾರರಿಗೆ ಮರಣದಂಡನೆ.

ರಷ್ಯಾದೇಶದ ಮಧ್ಯ ಓಲ್ಗಾ ಪ್ರಾಂತದಲ್ಲಿ ಸೋವಿಯಟ್ ಅಧಿಕಾರವರ್ಗಕ್ಕೆ ಸೇರಿದ 13 ವರ್ಷ ವಯಸ್ಸಿನ ಇಬ್ಬರು ಸ್ಕೌಟ್ ಹುಡುಗಿಯರನ್ನು ಘಾಸಿಪಡಿಸಿ ಕೊಂದದ್ದಕ್ಕಾಗಿ ನಾಲ್ಕು ಜನ ಕ್ರಾಂತಿಕಾರರಿಗೆ ಮರಣಶಿಕ್ಷೆಯನ್ನು ವಿಧಿಸಿದರು

ಭೂಕಂಪ.

ಮರ್ಕ್ವೀರಾ ದ್ವೀಪದಲ್ಲಿ ಉಂಟಾದ ಭೂಕಂಪದಿಂದ 15 ಹಳ್ಳಿಗಳು ನಾಶವಾಗಿ 5 ಜನರು ಸತ್ತಿದ್ದಲ್ಲದೆ ಅನೇಕ ಜನರು ಮನೆಮಠಗಳಿಲ್ಲದೆ ನಿಲ್ಲುವುದಕ್ಕೆ ನೆರಳೂ ತಿನ್ನುವುದಕ್ಕೆ ಆಹಾರವೂ ಇಲ್ಲದೆ ಭಯಂಕರ ತೊಂದರೆಗೊಳಗಾಗಿದ್ದಾರೆ

ದೇವಾಲಯದಲ್ಲಿ ಕಳವು

ಗ್ವಾಲಿಯರಿನ ರಾಜಧಾನಿಯಲ್ಲಿರುವ ಒಂದು ಜೈನ ದೇವಾಲಯದಲ್ಲಿ 1 ಸಾವಿರ ತೊಲ ತೂಕದ ಮೂರು ಬೆಳ್ಳಿಯ ವಿಗ್ರಹಗಳು ಕಳವಾಗಿವೆ ಕಳ್ಳರು ಹೋಗುವಾಗ ದೇವಾಲಯಕ್ಕೆ ಬೆಂಕಿಯನ್ನಿಟ್ಟು ಹೋಗಿದ್ದಾರೆಂದು ತಿಳಿದುಬಂದಿದೆ

9 ಸಾವಿರ ರೂಪಾಯಿಗಳ ಇನ್ಷೂರು ಮಾಯವಾಗಿದೆ.

ಅಲಹಾಬಾದ್ ಟಪಾಲ್ ಆಫೀಸಿನಲ್ಲಿ ಚೀಲಗಳನ್ನು ಬಿಚ್ಚಿದಾಗ 9 ಸಾವಿರ ರೂ ಗಳ ಇನ್ಷೂರು ಮಾಯವಾಗಿತ್ತು ಸಂದೇಹದ ಮೇಲೆ ಒಬ್ಬ ಆರ್ ಎಂ ಎಸ್ ಪೋಸ್ಟರನನ್ನೂ ಒಬ್ಬ ಜವಾನನನ್ನೂ ದಸ್ತಗಿರಿ ಮಾಡಿದ್ದಾರೆ

ಸ್ಸಾರ್ ಪ್ರಾಂತ್ಯದ ವ್ಯವಸ್ಥೆ!

ಸ್ಸಾರ್ ಪ್ರಾಂತ್ಯದ ಸಾರ್ವಜನಿಕಮತವನ್ನು ತೆಗೆದುಕೊಳ್ಳಲು, ಜರ್ಮನಿಗೆ ಸೇರಬೇಕೆಂಬುವಕ್ಕೆ 476089 ಓಟುಗಳು ಬಂದದ್ದರಿಂದ ಸ್ಸಾರ್ ಪ್ರಾಂತವು ಜರ್ಮನಿಗೆ ಸೇರುವುದು ಸ್ಥಿರಪಟ್ಟಿತು ಇಷ್ಟರಲ್ಲೇ ಜರ್ಮನರು ಇದರ ಆಡಳಿತವನ್ನು ವಹಿಸಿಕೊಳ್ಳುವರು

ಹಿಮದಿಂದ ತೊಂದರೆ!

ಯೂರೋಪು ಮತ್ತು ಅಮೇರಿಕದ ಉತ್ತರಭಾಗಗಳಲ್ಲಿ ಬಹಳ ಚಳಿಯಿಂದ ನೀರು ಹೆಪ್ಪುಗೊಂಡು ಹಡಗುಗಳಿಗೆ ತುಂಬಾ ತೊಂದರೆಯುಂಟಾಗಿದೆಯೆಂದೂ ಇಂಗ್ಲೆಂಡಿನಲ್ಲೂ ವಿಮಾನಗಳಿಗೆ ಇದರಿಂದ ತೊಂದರೆಯಾಗಿದೆಯೆಂದೂ ತಿಳಿದುಬರುತ್ತದೆ

ಭಯಂಕರ ಹಾವಳಿ!

ಪಾಟಿಯಾಲ ಸಂಸ್ಥಾನದ ಒಂದು ಗ್ರಾಮದಲ್ಲಿ ಡಕಾಯಿತರು ಒಬ್ಬ ಐಶ್ವರ್ಯವಂತನ ಮನೆಗೆ ನುಗ್ಗಿ ಬಾಗಿಲನ್ನು ತೆಗೆಯಲು ಕೊಡದಿರಲು ಅವನನ್ನು ಸೀಮೆ ಎಣ್ಣೆಯಿಂದ ಸುಟ್ಟು ಹೆಂಗಸರನ್ನು ಹೆದರಿಸಿ 10 ಸಾವಿರ ರೂಪಾಯಿಗಳ ಆಭರಣಗಳನ್ನೂ ಹಣವನ್ನೂ ದೋಚಿಕೊಂಡು ಹೋದರು

ದನಗಳಿಗೆ ಹೊಸರೋಗ.

ಬಿಹಾರಿನಲ್ಲಿರುವ ದನಗಳು ಭೂಕಂಪವಾದಾಗ್ಗೆ ಭೂಮಿಯಿಂದ ಮೇಲಕ್ಕೆ ಬಂದ ಹೊಸಮಣ್ಣಿನಲ್ಲಿ ಬೆಳೆದ ಹುಲ್ಲನ್ನು ಮೇಯುವುದರಿಂದ ಅವುಗಳಿಗೆ ಅಪಾಯಕರವಾದ ಹೊಸಬಗೆಯ ಅಂಟುರೋಗವು ಪ್ರಾಪ್ತವಾಗಿದೆ ಇದರಿಂದ ಮುಜಫರ್‌ಪುರಡಿಸ್ಟ್ರಿಕ್ಟಿನಲ್ಲಿ ಅನೇಕ ದನಗಳು ಸಾಯುತ್ತಿವೆ

ಬೆಂಕಿಯಿಂದ ಸುಡದಿರುವ ಉಡುಪು!

ಹೆರ್ಸ್ಟ್ ಎಂಬಲ್ಲಿಯ ವೈಮಾನಿಕ ಇಲಾಖೆಯ ಸೂಪರಿಂಟೆಂಡೆಂಟರಾದ ಮಿ|| ಆರ್ ಎಚ್ ಆಲ್‌ಕಾಕ್ ಎಂಬವರು ಹೊಸಮಾದರಿಯ ಉಡುಪನ್ನು ತಯಾರಿಸಿರುವರು ಇದರ ಸಹಾಯದಿಂದ ನಿರಾಯಾಸವಾಗಿ ಎಂಥ ಬೆಂಕಿಯನ್ನಾದರೂ ಪ್ರವೇಶಿಸಿಸಬಹುದಂತೆ! 1100 ಡಿಗ್ರಿ ತಾಪವುಳ್ಳ ಅಗ್ನಿಕುಂಡದಲ್ಲಿ ನಿಂತರೂ ಯಾವ ತೊಂದರೆಯೂ ಆಗಿರುವುದಿಲ್ಲವಂತೆ!

ಆಕಾಶಬುಟ್ಟಿ!

ಭೂಮಿಯಿಂದ 20 ಮೈಲುಗಳಷ್ಟು ಮೇಲಕ್ಕೆ ಹೋಗಿ ಭೂಮಿಯು ಇತರಗ್ರಹಗಳಂತೆ ಗುಂಡಾಗಿದೆಯೆಂಬ ವಿಷಯವನ್ನು ಕಣ್ಣಾರೆ ನೋಡಿ ತಿಳಿಯುವುದಕ್ಕೂ ಭೂಮಿಯ ಮೇಲೆ ಯಾವಯಾವ ಗ್ರಹದ ಶಕ್ತಿಯು ಹೇಗೆ ಕೆಲಸ ಮಾಡುತ್ತದೆಂಬುದನ್ನು ಪರಿಶೋಧಿಸುವುದಕ್ಕೂ ಅತ್ಯಂತ ದೊಡ್ಡದಾದ ಆಕಾಶಬುಟ್ಟಿಯನ್ನು ಬ್ರಸೆಲ್ಸ್ ಯೂನಿವರ್ಸಿಟಿಯ ಪ್ರೊಫೆಸರ್ ಪಿಕಾರ್ಡ್ ಎಂಬವರು ತಯಾರುಮಾಡಿಸುತ್ತಿದ್ದಾರೆ

ಶಸ್ತ್ರಚಿಕಿತ್ಸೆ ಮಾಡಲು ಹೋದ ಡಾಕ್ಟರು ತಾವೇ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕಾಯಿತು.

ಪೋಲೆಂಡಿನ ವಿಬೋರ್ಗ್ ಎಂಬಲ್ಲಿ ಒಬ್ಬ ಸಣ್ಣ ಹುಡುಗಿಯು ನುಂಗಿದ ಮೊಳೆಯನ್ನು ತೆಗೆಯುವುದಕ್ಕೆ ಶಸ್ತ್ರಚಿಕಿತ್ಸೆಗಾಗಿ ಡಾಕ್ಟರರು ಎಲ್ಲವನ್ನೂ ಸಿದ್ಧಮಾಡಿಕೊಂಡಿದ್ದರು ಆ ಸಮಯದಲ್ಲಿ ಆ ಹುಡುಗಿಯು ವಿಶೇಷವಾಗಿ ಕೆಮ್ಮಿದ್ದರಿಂದ ಮೊಳೆಯು ಅತಿಜೋರಿನಿಂದ ಬಂದು ಶಸ್ತ್ರವನ್ನು ಹಿಡಿದುಕೊಂಡು ನಿಂತಿದ್ದ ಡಾಕ್ಟರ್ ವೈಡ್‌ಬ್ಲ್ಯಾಕ್ ಎಂಬವರ ಕಣ್ಣನ್ನು ಪ್ರವೇಶಿಸಿತು ಇದರಿಂದ ಡಾಕ್ಟರರೇ ಶಸ್ತ್ರಚಿಕಿತ್ಸೆಯನ್ನು ಹೊಂದಬೇಕಾಯಿತು

ದರೋಡೆಖೋರರಿಗೆ ವಿಮಾನಗಳ ಉಪಯೋಗ.

ಹಂಗೇರಿ ದೇಶದಲ್ಲಿ ದರೋಡೆಖೋರರು ಲೂಟಿ ಮಾಡುವುದಕ್ಕೆ ವಿಮಾನಗಳನ್ನು ಉಪಯೋಗಿಸುತ್ತಿದ್ದಾರೆ ಇವರು ಉಪಯೋಗಿಸುವ ವಿಮಾನದ ವೇಗದಿಂದ ಇವರನ್ನು ಹಿಡಿಯಲು ಪ್ರಯತ್ನಿಸಿದ ಮಿಲಿಟರಿ ವೈಮಾನಿಕರ ಪ್ರಯತ್ನವೆಲ್ಲಾ ವಿಫಲವಾಗಿದೆ ಬೆಟ್ಟಗಳ ನಡುವೆ ಇವರು ಸ್ಥಳಮಾಡಿಕೊಂಡಿದ್ದಾರೆಂದು ಊಹಿಸಲಾಗಿದೆ ಇಲ್ಲಿಯವರೆಗೆ ದಾರಿಯಲ್ಲಿ ಹೋಗುತ್ತಿರುವ ಮೋಟಾರುಗಳನ್ನೂ ರೈಲನ್ನೂ ನಿಲ್ಲಿಸಿ ಲೂಟಿ ಮಾಡಿದ್ದಾರೆ ಮಿಲಿಟರಿ ವಿಮಾನಗಳು ಇವರ ಸ್ಥಾನಗಳನ್ನು ಶೋಧಮಾಡುತ್ತಲಿವೆ

ಹಣದಭ್ರಾಂತಿ!

ಅಂಕೋಲಾ ತಾಲ್ಲೂಕಿಗೆ ಸೇರಿದ ಉಳವರೆಯೆಂಬ ಗ್ರಾಮದಲ್ಲಿದ್ದ ಒಂದು ಶಿಲಾಶಾಸನದ ಕೆಳಗೆ ನಿಧಿಯಿದೆಯೆಂದು ಪಂಡಿತರೊಬ್ಬರು 6 ತಿಂಗಳಿಂದಲೂ ನೋಡುತ್ತಿದ್ದರು ಹಣದ ಭ್ರಾಂತಿಯಿಂದ ಒಂದು ದಿವಸ ಆ ಶಾಸನವನ್ನು ಒಡೆದು ಭೂಮಿಯನ್ನು ಅಗೆಯಲು ಒಂದು ದೊಡ್ಡ ಹಾವು ಬುಸ್ಸೆಂದು ಎದ್ದಿತಂತೆ! ಅದನ್ನು ಕೊಲ್ಲುವಲ್ಲಿ ಮತ್ತೊಂದು ಹಾವು ಅದರಂತೆಯೇ ಏಳಲು ಆಗ ಪಂಡಿತರು ಹೆದರಿ ಓಡಿದರಂತೆ! ಈ ಸಂಗತಿಯು ಪೋಲೀಸರಿಗೆ ತಿಳಿದು ಪಂಡಿತರನ್ನು ದಸ್ತಗಿರಿಮಾಡಿದ್ದಾರೆ

ಪಬ್ಲಿಕ್ ಪ್ರಾಸಿಕ್ಯೂಟರೂ ಮೋಸಹೋದರು!

ಲಾಹೋರಿನ ಸುಪ್ರಸಿದ್ಧ ಪಬ್ಲಿಕ್ ಪ್ರಾಸಿಕ್ಯೂಟರಾದ ರಾಯಬಹದ್ದೂರ್ ಜ್ವಾಲಾಪ್ರಸಾದರಲ್ಲಿಗೆ ಯಾವನೋ ಒಬ್ಬ ಯುವಕನು ಒಂದು ತಾನು ಗಡಿಯಾರ ರಿಪೇರಿಯಲ್ಲಿ ಬಹಳ ಬುದ್ಧಿಶಾಲಿಯೆಂದು ಹೇಳಿಕೊಂಡನು ಪ್ರಸಾದರು ಗಡಿಯಾರವನ್ನು ತಮ್ಮ ಎದುರಿನಲ್ಲೇ ರಿಪೇರಿ ಮಾಡಬೇಕೆಂದು ಹೇಳಿ 100 ರೂಪಾಯಿ ಬೆಲೆ ಬಾಳುವ ತಮ್ಮ ಚಿನ್ನದ ಗಡಿಯಾರವನ್ನು ತೆಗೆದುಕೊಟ್ಟರು ವಕೀಲರು ಯಾವುದೋ ಕೆಲಸಕ್ಕಾಗಿ ಸ್ವಲ್ಪ ಒಳಗೆ ಹೋಗಿ ಹೊರಗೆ ಬರುವಷ್ಟರಲ್ಲಿ ರಿಪೇರಿ ಮಾಡುವವನು ಮಾಯವಾಗಿದ್ದನು

ಹಿಟ್ಲರನ ನೂತನ ಶಾಸನ!

ಜರ್ಮನಿದೇಶದಿಂದ ಅನೀತಿಯ ರಾಕ್ಷಸನನ್ನು ಹಿಡಿಸಿಬಿಡಬೇಕೆಂದು ಹಿಟ್ಲರನು ಸಿದ್ಧಾಂತಮಾಡಿದ್ದಾನೆ ನೀತಿಬಾಹಿರರನ್ನು ಹಿಡಿದು ಶಿಕ್ಷಿಸುವುದಕ್ಕೆ ತನ್ನ ಗುಪ್ತ ಪೋಲೀಸರನ್ನು ನಿಯಮಿಸಿದ್ದಾನೆ. ಈ ತಪ್ಪಿಗಾಗಿ ಅನೇಕ ನಾಜಿ ಗುಂಪಿನವರೂ, ಹಿಟ್ಲರ್ ಸಂಘದವರೂ, ಸ್ಟಾರಂಟ್ರೂಪಿನವರೂ, ಇತರ ನಾಜಿ ಸಂಸ್ಥೆಗಳವರೂ ಸಿಕ್ಕಿಬಿದ್ದಿದ್ದಾರೆ ಬರ್ಲಿನ್‌ನಗರದಲ್ಲಿ 100 ಜನಗಳಿಗಿಂತ ಹೆಚ್ಚಾಗಿ ಸೆರೆಮನೆಗೆ ಸೇರಿಸಲ್ಪಟ್ಟಿದ್ದಾರೆ ಜರ್ಮನಿದೇಶದಲ್ಲೆಲ್ಲಾ ಸುಮಾರು 500 ರಿಂದ 700 ಜನಗಳವರೆಗೂ ದಸ್ತಗಿರಿಮಾಡಲ್ಪಟ್ಟಿದ್ದಾರೆ.

(೩ನೆಯ ಪುಟದಿಂದ ಮುಂದುವರಿದುದು)

ಪಾರ್ವತಿಗೆ ಸಮಾನಳಾದ ಸ್ತ್ರೀಯಳು ಹೇಗೆ ಇಲ್ಲವೋ, ಗಂಗಾನದಿಗೆ ಸಮಾನವಾದ ನದಿಯು ಹೇಗೆ ಇಲ್ಲವೋ, ಮೇರು ಪರ್ವತಕ್ಕೆ ಸಮಾನವಾದ ಬೇರೆ ಪರ್ವತವು ಹೇಗೆ ಇಲ್ಲವೋ, ಶಿವಭಕ್ತಿಗೆ ಸಮಾನವಾದ ಇತರ ಭಕ್ತಿಯು ಹೇಗೆ ಇಲ್ಲವೋ, ಮೂರು ಲೋಕಗಳಲ್ಲಿ ಮಹಾದೇವನಿಗೆ ಸಮಾನವಾದ ಬೇರೆ ದೇವತೆಗಳು ಹೇಗೆ ಇಲ್ಲವೋ ಅದರಂತೆ—ಪಂಚಾಕ್ಷರೀ ಮಂತ್ರಕ್ಕೆ ಸಮಾನವಾದ ಬೇರೆ ಮಂತ್ರಗಳು ಇಲ್ಲವೆಂದು ನಂದಿಕೇಶ್ವರನು ಸನತ್ಕುಮಾರನನ್ನು ಕುರಿತು ಬೋಧಿಸಿದ್ದಾನೆ.

ಪುರಾ ನಾನಂದಯೋಗೀಂದ್ರಃ ಶಿವಜ್ಞಾನಪರಾಯಣಃ ।
ಪಂಚಾಕ್ಷರೀಂ ಸಮುಚ್ಚಾರ್ಯ ನಾರಕಾನುದತಾರಯತ್ ||

ಪೂರ್ವದಲ್ಲಿ ಶಿವಭಕ್ತಿಯುಕ್ತನಾದ ನಾನಂದ ಯೋಗೀಂದ್ರನು ಯಮಲೋಕದ ಮಾರ್ಗದಲ್ಲಿ ನಿಂತು ಪಂಚಾಕ್ಷರೀ ಮಹಾಮಂತ್ರವನ್ನು ಜಪಿಸಿದ ಕೂಡಲೆ ನರಕದಲ್ಲಿದ್ದ ಸಮಸ್ತ ಪ್ರಾಣಿಗಳನ್ನು ಉದ್ಧರಿಸಿದನೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಅಪ್ಪಣೆ ಕೊಡಿಸಿದ್ದಾರೆ. ಎಂದ ಮೇಲೆ ಈ ಪಂಚಾಕ್ಷರೀ ಮಹಾಮಂತ್ರದ ಮಹಿಮೆಯು ಅಪ್ರಮೇಯವೆಂಬುದನ್ನು ಪಾಠಕರೇ ಗ್ರಹಿಸಬೇಕು. ಈ ಪಂಚಾಕ್ಷರೀಮಂತ್ರದ ಜಪವು ವಾಚಿಕ ಉಪಾಂಶು ಮಾನಸಿಕವೆಂದು ಮೂರು ಪ್ರಕಾರವಾಗಿದೆ. ಇವುಗಳಲ್ಲಿ ವಾಚಿಕ ಜಪವು ಕನಿಷ್ಠವು. ಇದಕ್ಕಿಂತಲೂ ಉಪಾಂಶು ಜಪವು ಶತಗುಣಾಧಿಕವಾದುದು. ಉಪಾಂಶು ಜಪಕ್ಕಿಂತಲೂ ಮಾನಸಿಕಜಪವು ಸಹಸ್ರಗುಣಾಧಿಕವಾದುದು. ಆದುದರಿಂದ ಮಾನಸಿಕಜಪವೇ ಶ್ರೇಷ್ಠವಾಗಿದೆ. ಈ ಮಹಾಮಂತ್ರದಿಂದಲೇ ಸಕಲ ವೀರಶೈವರು ಗುರುಕೊಟ್ಟ ಇಷ್ಟಲಿಂಗವನ್ನು ನಿತ್ಯಗಳೂ ಪೂಜಿಸಬೇಕು. ಪೂರ್ವದಲ್ಲಿ ಬ್ರಹ್ಮವಿಷ್ಣು ಮೊದಲಾದ ದೇವತೆಗಳೂ ಅಗಸ್ತ್ಯ ವಸಿಷ್ಠ ವ್ಯಾಸ ಮೊದಲಾದ ಮುನೀಶ್ವರರೂ ಈ ಪಂಚಾಕ್ಷರೀ ಮಹಾಮಂತ್ರವನ್ನು ಜಪಿಸಿ ಇಷ್ಟಲಿಂಗಪೂಜೆಯನ್ನು ಮಾಡಿ ಮಹಾಪದವಿಗಳನ್ನು ಪಡೆದರು. ಅದರಂತೆ ಸಕಲ ಭಕ್ತರೂ ಈ ಮಹಾಮಂತ್ರವನ್ನು ಜಪಿಸಿ ಜನನ ಮರಣಾತ್ಮಕವಾದ ದುಃಖವನ್ನೂ ದುಃಖಮಯವಾದ ಸಂಸಾರವನ್ನೂ, ಆಧ್ಯಾತ್ಮಿಕಾದಿ ದುಃಖತ್ರಯವನ್ನು ನಾಶಮಾಡಿಕೊಂಡು ಸುಖಿಗಳಾಗಬೇಕು.

ಚಿತಾಪುರದಲ್ಲಿ ಧಾರ್ಮಿಕಸಭೆ.

ನಿಜಾಮ ಇಲಾಖಾ ಚಿತಾಪುರದಲ್ಲಿ ಜವಾಹರ್ ಗಂಜ ಬಾಜಾರದಲ್ಲಿರುವ ವೀರಶೈವರು ಮತಸುಧಾರಣೆಗಾಗಿ ಪುಷ್ಯ ಶು|| ೫ ದಿವಸ ಧಾರ್ಮಿಕಸಭೆಯನ್ನು ಕೂಡಿಸಿದ್ದರು. ಸಭೆಗೆ ಅನೇಕ ಜನ ವೀರಶೈವರು ಆಗಮಿಸಿದ್ದರು. ಸದರಿ ಸಭೆಯಲ್ಲಿ ಕನಕಪುರದ ಪಟ್ಟಾಧ್ಯಕ್ಷರು ಮತ್ತು ಮ|| ರಾ|| ವಕೀಲ ಶರಣಪ್ಪಗೌಡರು ಈ ಉಭಯರು ಧರ್ಮಸುಧಾರಣೆಯ ಬಗ್ಗೆ ಒಳ್ಳೆ ಮಹತ್ವದ ಭಾಷಣವನ್ನು ಮಾಡಿದರು. ಸದರಿ ಸಭೆಯಲ್ಲಿ ಒಬ್ಬ ಹುಡುಗನ ವೀರಪ್ಪ ಎಂಬ ಹೆಸರನ್ನು ತೆಗದುಹಾಕಿ 'ಮಹಾದೇವಪ್ಪ' ಎಂಬ ಹೆಸರು ಇಡಲ್ಪಟ್ಟಿತು. ಇದರಂತೆಯೇ ಆಗಾಗ್ಗೆ ಸಭೆಯನ್ನು ಕೂಡಿಸಿ ಧರ್ಮಸಂಬಂಧ ವಿಷಯಗಳನ್ನು ಬೋಧಿಸಿದರೆ ಸಮಾಜವು ಶೀಘ್ರವಾಗಿ ಸುಧಾರಿಸಬಹುದೆಂದು ಹೇಳಬೇಕಾಗಿದೆ. ಮ|| ರಾ|| ಶಾರಜಾರಿ ರೇವಣಸಿದ್ಧಪ್ಪ, ಕಂಬಲಿಂಗಪ್ಪ ಚಂದ್ರಶೇಖರಪ್ಪ ಇವರು ಈ ಸಭೆಯನ್ನು ವಿಶೇಷ ಶ್ರಮವಹಿಸಿ ಕೂಡಿಸಿದ್ದರು. ಇವರೇ ಮೊದಲಾದ ಎಲ್ಲಾ ಸದ್ಭಕ್ತರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುವ,

ಕರಿವೀರಪ್ಪ.

ಘಾಟಿ ಸುಬ್ರಹ್ಮಣ್ಯಸ್ವಾಮಿಯ ಜಾತ್ರೆ.

ನಿವಾರ್ ರಾಮೇಶರವರು ಅಪ್ಪಣೆ ಕೊಡಿಸಿದ ಭಾಷಣ

ಮಹಾಶಯರೇ, ಈ ದಿವಸದ ಉತ್ಸವದಲ್ಲಿ ನಿಮ್ಮೊಡನೆ ಸೇರಿರುವುದು ನನಗೆ ಅತೀವ ಸಂತೋಷಕರವಾಗಿದೆ. ದೇವಾಲಯದ ಧರ್ಮದರ್ಶಿಗಳು ಒಪ್ಪಿಸಿದ ಪತ್ರದಲ್ಲಿ ಇಲ್ಲಿನ ವಿಷಯವಾಗಿ ಬರೆದಿರುವ ಸಂಗತಿಗಳನ್ನು ನೋಡಿದ್ದೇನೆ. ಅದಕ್ಕಾಗಿ ನಾನು ಅವರಿಗೆ ವಂದನೆಗಳನ್ನು ಸಮರ್ಪಿಸುತ್ತೇನೆ.

ಈ ಸ್ಥಳದ ಇಲ್ಲಿ ಸಮೃದ್ಧವಾಗಿ ನೀರು ದೊರೆಯುವುದು ಕಷ್ಟವಾಗಿದೆ. ಎಂದಿಗೂ ಶುದ್ಧವಾದ ಕುಡಿಯುವ ನೀರು [illegible] ನೋಡಿದರೆ ಜನಗಳಿಗೂ ದನಕರುಗಳಿಗೂ ಬಹಳ ಕಷ್ಟವಾಗುತ್ತದೆ. ಆದರೆ ಶ್ರೀಯುತ ಮಹಾರಾಜರ ದೇವಾಲಯಗಳಲ್ಲಿ ಶುದ್ಧವಾದ ನೀರು ಒದಗದ ಹೋದರೆ ತೀರ ಕಷ್ಟವೇ ಆಗುತ್ತದೆ. ಹಿಂದೆ ಯಾತ್ರಾಸ್ಥಳಗಳಲ್ಲಿ ಕಾಲರಾ ಜಾಡ್ಯ ಸಂಭವಿಸಿ ಅನೇಕ ಮಂದಿ ಮೃತಪಡುತ್ತಿದ್ದರು. [illegible] ಕಾಲರಾ ಜಾತ್ರೆಯ ಕಾಲದಲ್ಲಿ ಸಾವಿರಾರು ಜನ ಸೇರುವ ಈ ಪ್ರದೇಶದಲ್ಲಿಂತೂ ಶುದ್ಧವಾದ ನೀರು ಸಮೃದ್ಧವಾಗಿ ದೊರೆಯುವುದು ಅತ್ಯವಶ್ಯಕ. ಈ ದೃಷ್ಟಿಯಿಂದ ಇಲ್ಲಿ ನಲ್ಲಿಗಳ ಮೂಲಕ ನೀರು ಒದಗಿಸಲಾಗಿದೆ. ಬಹು ಕಾಲದಿಂದಿದ್ದ ಕೊರತೆಯು ಈಗ ಪರಿಹಾರವಾಗಿದೆ. ಇದಕ್ಕಾಗಿ ಇಲ್ಲಿನ ಜನರು ಹರ್ಷಿಸುತ್ತಿದ್ದಾರೆ. ಅವರ ಸಂತೋಷದಲ್ಲಿ ನಾನೂ ಭಾಗಿಯಾಗಿದ್ದೇನೆ.

ದನಗಳ ಪ್ರದರ್ಶನ

ಇಲ್ಲಿ ದನಗಳ ಜಾತ್ರೆಯೂ ನಡೆಯುವುದು ಬಹಳ ಸಂತೋಷಕರವಾದ ವಿಷಯ. ಅನೇಕ ಸಾವಿರ ರಾಸುಗಳು ಸೇರುವ ದೊಡ್ಡ ಜಾತ್ರೆಯು ಈ ಕ್ಷೇತ್ರದಲ್ಲಿ ನಡೆಯುತ್ತದೆ. ಈ ಕ್ಷೇತ್ರಕ್ಕೆ ಒಂದು ದನಕರುಗಳನ್ನು ಮಾರಾಟಮಾಡತಕ್ಕವರಿಗೆ ಪುಷ್ಕಳ ಪ್ರಯೋಜನವೂ ಬಹಳ ಉಂಟು. ಅಲ್ಲದೆ ಪ್ರತಿ ವರ್ಷವೂ ಇಲ್ಲಿಗೆ ಬರುವ ದನಕರುಗಳನ್ನು ಪರಿಶೀಲಿಸಿದರೆ ನಮ್ಮ ಸಂಸ್ಥಾನದಲ್ಲಿ ದನಕರುಗಳ ಸ್ಥಿತಿಯು ಉತ್ತಮಪಡುತ್ತಿದೆಯೋ ಅಥವಾ ಹೀನವಾಗುತ್ತಿದೆಯೋ ಎಂಬ ಅಂಶವು ಗೋಚರವಾಗುವುದು. ದನಕರುಗಳು ರೈತರ ಬಳಿಗಿರುವ ಮುಖ್ಯ ಸಾಧನ. ವ್ಯವಸಾಯವೇ ಮುಖ್ಯವೃತ್ತಿಯಾದ ನಮ್ಮ ದೇಶದಲ್ಲಿ ದನಕರುಗಳು ಬಹಳ ಒಳ್ಳೆಯ ಸ್ಥಿತಿಯಲ್ಲಿರಬೇಕಾದುದು ಅತ್ಯಾವಶ್ಯಕ. ಇಲ್ಲಿಗೆ ರಾಸುಗಳನ್ನು ತರುವವರು ವರ್ಷವರ್ಷವೂ ಉತ್ತಮ ಮಾದರಿ ರಾಸುಗಳನ್ನು ಬೆಳೆಸಿಕೊಳ್ಳುವಂತೆ ಅವಕ್ಕೆ ಅಗತ್ಯವಾಗಿ ಪ್ರೋತ್ಸಾಹಿಸಬೇಕು. ಈ ದನಗಳ ಜಾತ್ರೆಯು ಒಂದು ದೊಡ್ಡ ಪ್ರದರ್ಶನವಾಗುವಂತೆ ಮಾಡಿ ಆ ಮೂಲಕ ದೇಶಸೇವೆ ಮಾಡಬೇಕು. ಶಿವನ ವಾಹನವು ವೃಷಭವಾದುದಕ್ಕೂ ಶ್ರೀ ಕೃಷ್ಣನು ಗೋಪಾಲನಾದುದಕ್ಕೂ ಇರುವ ಅರ್ಥವೇನೆಂಬುದನ್ನು, ಹಿಂದುಗಳೇ ಹೆಚ್ಚಾಗಿರುವ ಈ ಸಭೆಯಲ್ಲಿ ನಾನು ಸೂಚಿಸಬೇಕಾದ ಅಗತ್ಯವಿಲ್ಲ.

ಸಾಹಿತ್ಯ ಸೇವೆ

ಜಾತ್ರೆಯ ಕಾಲದಲ್ಲಿ ಸಾಹಿತ್ಯ ಸೇವೆಯು ದೊಡ್ಡ ಕೆಲಸವೆಂಬುದನ್ನು ಗಮನಿಸಬೇಕಾಗಿದೆ. ಇಲ್ಲಿ ಸುಮಾರು ಹತ್ತು ಸಾವಿರ ಜನಗಳು ಸೇರುವುದು ಸರಿಯಷ್ಟೆ! ಜನಪದ ಸಾಹಿತ್ಯ ಪ್ರಚಾರಕ್ಕೆ ಜಾತ್ರೆಯ ಕಾಲದಲ್ಲಿ ಉತ್ತಮ ರೀತಿಯ ಅವಕಾಶವುಂಟು. ರೈತರಲ್ಲಿ ಬಳಕೆಯಲ್ಲಿರುವ ಅನೇಕ ಗಾದೆಗಳಲ್ಲಿಯೂ, 'ಪದ'ಗಳಲ್ಲಿಯೂ ಸಾಹಿತ್ಯ ಮೌಲ್ಯ ಬೇಕಾದಷ್ಟಿದೆ. [illegible] ಅವುಗಳಲ್ಲಿ ಅನೇಕ ನಿದರ್ಶನಗಳು ಸಿಕ್ಕುತ್ತವೆ. ಆದಕಾರಣ ಇಲ್ಲಿ ಗಾದೆಗಳನ್ನೂ 'ಪದ'ಗಳನ್ನೂ ಹಾಡುವ ಸ್ಪರ್ಧೆಯೊಂದನ್ನು ಜಾತ್ರೆಯ ಕಾಲದಲ್ಲಿ ಏರ್ಪಡಿಸಬಹುದು. ಸ್ಪರ್ಧೆಯಲ್ಲಿ ಗೆದ್ದ ಉತ್ತಮರಾದವರಿಗೆ ಬಹುಮಾನಗಳನ್ನು ಕೊಡಬಹುದು. ಈ ಬಗೆಯ ಸಾಹಿತ್ಯ ಸೇವೆಗೆ ಪ್ರೋತ್ಸಾಹವಾಗುವುದು, ಸಾಹಿತ್ಯ ಪ್ರೇಮಿಗಳು ಇಲ್ಲಿಗೆ ಪ್ರತಿವರ್ಷ ಬರುವಂತೆಯೂ ಆಗುವುದು. ಇದರಿಂದ ಸಾಮಾನ್ಯ ರೈತರೆಲ್ಲರಿಗೂ ಬಹಳ ಸಂತೋಷವಾಗುವುದು. ಇಲ್ಲಿಗೆ ಬಂದು ಸ್ಪರ್ಧೆಗಳಲ್ಲಿ ಹಕ್ಕಿಗಳಂತೆ ಹಾಡಿ ಆನಂದಿಸಿದ ರೈತರಲ್ಲಿ ಪ್ರತಿಯೊಬ್ಬನೂ ಸಮಾಜದಲ್ಲಿ ತಾನೂ ಒಂದು ಪದಾರ್ಥವೆಂಬುದನ್ನು ಮತ್ತಷ್ಟು ಮನಗಂಡು ಹಿಗ್ಗುವನು. ಅಷ್ಟೇ ಅಲ್ಲ ಮತ್ತೆಮತ್ತೆ ಹೊಸಹೊಸ ಲಾವಣಿಗಳೇ ಮುಂತಾದವುಗಳನ್ನು ಅರಸಿ ಕಲಿತುಕೊಂಡು ಬರುವನು. ಇದರ ಪರಿಣಾಮವಾಗಿ ರೈತರಿಗೆ ಸಾಹಿತ್ಯದಲ್ಲಿ ಅಭಿರುಚಿಯುಂಟಾಗುವುದು. ವಿದ್ಯಾವಂತರಿಗೆ ರೈತರ ಹೃದಯದಲ್ಲಿ ಹರಿಯುತ್ತಿರುವ ಕಾವ್ಯರಸದ ಸ್ವರೂಪವು ಗೊತ್ತಾಗುವುದು. ಇದೊಂದು ದೊಡ್ಡ ಲಾಭವಲ್ಲವೆ?

ದೇವಾಲಯವು ಆಕರ್ಷಕವಾಗಿರಬೇಕು

ಈ ದೇವಾಲಯವು ರಮಣೀಯವಾದ ಪ್ರದೇಶದಲ್ಲಿದೆ. ದಿಗಂತದಲ್ಲಿ ಕಾಣುವ ಸಣ್ಣ ಪುಟ್ಟ ಗುಡ್ಡಗಳೂ, ಉಲ್ಲಾಸಕರವಾದ ಇಲ್ಲಿಯ ಹುಲ್ಲುಬಯಲುಗಳೂ, ಕಣ್ಣಿಗೆ ಹಬ್ಬವನ್ನೊದಗಿಸುತ್ತವೆ. ಪ್ರಕೃತಿಯು ಪ್ರಸನ್ನವಾಗಿರುವ ಸೊಗಸಾದ ಸ್ಥಳದಲ್ಲಿ ಈ ದೇವಾಲಯವಿರುವುದನ್ನು ಯೋಚಿಸಿದರೆ, ಮನಸ್ಸಿಗೆ ಬಹಳ ಆನಂದವಾಗುತ್ತದೆ. ಈ ಪ್ರದೇಶವನ್ನು ಚೊಕ್ಕಟವಾಗಿಟ್ಟು ಇಲ್ಲಿಯ ಸೊಬಗನ್ನು ಹೆಚ್ಚಿಸುವ ಒಗುಗೆಯ ಕೆಲಸಗಳನ್ನೂ ಧರ್ಮದರ್ಶಿಗಳು ನೆರವೇರಿಸುತ್ತಿರುವುದು ಶ್ಲಾಘ್ಯವಾದ ವಿಚಾರ. ದೇವಸ್ಥಾನಗಳು ಚೊಕ್ಕಟವಾಗಿರಬೇಕಾದುದು ಅತ್ಯಾವಶ್ಯಕ. ಅವುಗಳ ಬಳಿಯಲ್ಲಿ ಕಶ್ಮಲವಿಲ್ಲದೆ ನಿರ್ಮಲವಾಗಿದ್ದಷ್ಟೂ ಭಕ್ತಿಯು ಹೆಚ್ಚಲು ಕಾರಣವಾಗುವುದು. ಅಲ್ಲದೆ ಜನರಿಗೆ ತಾವೂ ಶುಚಿಯಾಗಿ ಅಲ್ಲಿಗೆ ಬರಬೇಕೆಂಬ ಪ್ರೇರಣೆ ಹುಟ್ಟುವುದು. ದೇವಸ್ಥಾನಗಳ ಬಳಿಯಲ್ಲಿ ಸಣ್ಣ ಪುಷ್ಪ ತೋಟಗಳನ್ನು ಮಾಡಿ ಹೂವಿನ ಗಿಡಗಳನ್ನು ಬೆಳೆಸಿದರೆ ಮನಸಿಗೆ ಸೊಗಸೂ ಆಗುವುದು, ಅದರ ಜೊತೆಗೆ ಪ್ರಯೋಜನವೂ ದೊರೆಯುವುದು.

ಈ ಸಲದ ಜಾತ್ರೆಯ ಕಾಲದಲ್ಲಿ ಕೆಲವು ಉಪನ್ಯಾಸಗಳು ನಡೆಯುವಂತೆ ಏರ್ಪಾಡು ಮಾಡಿದ್ದೇವೆ. ಜನರು ತಿಳಿದುಕೊಳ್ಳಬೇಕಾದ ಅತ್ಯವಶ್ಯವಾದ ಕೆಲವು ವಿಷಯಗಳನ್ನು ಕುರಿತು ಆ ಉಪನ್ಯಾಸಗಳು ನಡೆಯುತ್ತವೆ. ವ್ಯವಸಾಯದ ಇಲಾಖೆಯವರೂ ಜನಗಳ ಆರೋಗ್ಯರಕ್ಷಣೆಗಾಗಿ ಏರ್ಪಟ್ಟಿರುವ 'ಪಬ್ಲಿಕ್ ಹೆಲ್ತ್' ಇಲಾಖೆಯವರೂ ಅವುಗಳನ್ನು ನಡೆಸುತ್ತಾರೆ. ನೀವುಗಳೆಲ್ಲರೂ ಆ ಉಪನ್ಯಾಸಗಳನ್ನು ಕೇಳಿ ಲಾಭ ಹೊಂದಬೇಕೆಂದು ಕೋರುತ್ತೇನೆ.

ಈ ಪ್ರದೇಶದಲ್ಲಿ ಅಲ್ಲಲ್ಲಿ ಸಿಡುಬಿನ ಹಾವಳಿಯು ಇರುವುದಾಗಿ ತಿಳಿದುಬಂದಿದೆ. ಸಂಸ್ಥಾನದ ಇತರ ಪ್ರದೇಶಗಳಲ್ಲಿಯೂ ಅಲ್ಲಲ್ಲಿ ಸಿಡುಬು ಉಲ್ಬಣವಾಗಿದೆ. ಸಿಡುಬಿನಿಂದ ಅನೇಕ ಮರಣಗಳು ಕೂಡ ಸಂಭವಿಸಿವೆ. ಸಕಾಲದಲ್ಲಿ ದೇವೀ ಹಾಕಿಸಿಕೊಳ್ಳದೆ ಹೋದ ಕಾರಣ ಹೀಗೆ ಮರಣಗಳು ಸಂಭವಿಸಲು ಕಾರಣವಾಯಿತು. ದೇವೀ ಹಾಕಿಸಿಕೊಂಡಲ್ಲಿ ಸಿಡುಬು ಬರುವುದೇ ಇಲ್ಲ. ಒಂದು ವೇಳೆ ಸಿಡುಬು ಎದ್ದರೂ ಅದು ಸ್ವಲ್ಪ ಏಳುತ್ತದೆ. ಆದಕಾರಣ ಸಿಡುಬಿನ ಹಾವಳಿಯಿಂದ ತಪ್ಪಿಸಿಕೊಳ್ಳಲು ದೇವೀ ಹಾಕಿಸಿಕೊಳ್ಳುವುದೇ ಉತ್ತಮಮಾರ್ಗ. ಸಿಡುಬು ಬಂದ ಮೇಲೆ ಬಾಧೆಪಡುವುದಕ್ಕಿಂತ ದೇವೀ ಹಾಕಿಸಿಕೊಂಡು ಸಿಡುಬು ಬರದಂತೆಯೇ ಮಾಡಿಕೊಳ್ಳುವುದು ಮೇಲು. ನೀವುಗಳೆಲ್ಲರೂ ಇದಕ್ಕೆ ಗಮನಕೊಡುವಿರೆಂದು ನಂಬಿದ್ದೇನೆ.

ಇಲ್ಲಿ ನಡೆಯಬೇಕಾದ ಕೆಲವು ಅಭಿವೃದ್ಧಿ ಕಾರ್ಯಗಳನ್ನು ಬಿನ್ನವತ್ತಳೆಯಲ್ಲಿ ಸೂಚಿಸಿ ಅವಕ್ಕಾಗಿ ಸರಕಾರದಿಂದ ಹಣವನ್ನು ಕೊಡಬೇಕೆಂದು ಧರ್ಮದರ್ಶಿಗಳು ಕೇಳಿದ್ದಾರೆ. ಇವು ನಡೆಯಬೇಕಾದುದು ಯುಕ್ತವೆ ಸರಿ. ಆದರೆ ಇಲ್ಲಿಯ ಹುಟ್ಟುವಳಿಯಿಂದಲೇ ಆ ಸ್ವಲ್ಪ ಹಣವನ್ನೊದಗಿಸಿಕೊಳ್ಳಬೇಕಾದುದೇ ಯುಕ್ತ. ಅವಕ್ಕೆ ಸರಕಾರದಿಂದ ಸಹಾಯವನ್ನು ಕೇಳುವುದು ಉಚಿತವಲ್ಲ. ಮಹಾಶಯರೇ, ಇಲ್ಲಿ ಏರ್ಪಡಿಸಿರುವ ನಲ್ಲಿಗಳಿಗೆ ಮೊಟ್ಟಮೊದಲು ನೀರನ್ನು ತಿರುಗಿಸುವ ಕೆಲಸವನ್ನು ಇನ್ನು ನಾನು ಬಹು ಸಂತೋಷದಿಂದ ನೆರವೇರಿಸುವೆನು. ಇಲ್ಲಿಗೆ ಬರುವವರೆಲ್ಲರಿಗೆ ಸಮೃದ್ಧವಾಗಿ ನೀರು ದೊರೆತು ಅನುಕೂಲವಾಗಲೆಂದೂ, ಈ ಕ್ಷೇತ್ರದ ಖ್ಯಾತಿಯು ವರ್ಷವರ್ಷಕ್ಕೂ ಹೆಚ್ಚಲೆಂದೂ ನಾನು ಹಾರೈಸುವೆನು.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೨೦ ಪುಟಗಳುಳ್ಳದಾಗಿದ್ದು ಅತ್ಯುತ್ಕೃಷ್ಟವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿವೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕೊಂಡುಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಒಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಕಾಶಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಬೇಕೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ಪ್ರಯತ್ನವನ್ನು ಪ್ರಯುಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರಿಗ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಮುಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೭೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದು ರೂಪಾಯಿಗೆ ಸಾಲಾಗುವಂತೆ ವಿಶಾಷನ್ ಮಠಾ ಹೋಗಲಾಗಿ ೬ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಗಳು

ಧಾತುಪುಷ್ಟಿಲೇಹ.

1 ಇದು ಬಲಹೀನ ದೇಹಗಳಿಗೆ ಅದ್ಭುತವಾದ ಔಷಧಿ, ಇದರ ಸೇವನೆಯಿಂದ ಮಲಬದ್ಧತೆ, ಒಳಜ್ವರ, ಅಜೀರ್ಣ, ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶ್ಶಕ್ತಿ, ಕಾಲು ಕೀಲುನೋವು, ರಕ್ತಹೀನತೆ, ಬೆನ್ನು ನೋವು, ತಲೆನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಸ್ವಪ್ನಾವಸ್ಥೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಯೋಗಶಕ್ತಿಯು ಕುಂದಿರುವಿಕೆ, ಶರೀರದ ಉಷ್ಣತೆ ಇವುಗಳನ್ನೆಲ್ಲಾ ಹೋಗಲಾಡಿಸಿ ವೃದ್ಧಿಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಡಬ್ಬಿ 1ಕ್ಕೆ 2—8—0 3ಕ್ಕೆ 7—0—0

2 **ಮೇಹಕುಠಾರಪ್ರಮೇಹ** ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ ಮೂತ್ರದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ್ಗೆ ಒಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು ಡಬ್ಬಿ 1ಕ್ಕೆ 2—8—0. 3ಕ್ಕೆ 7—0—0.

3. **ಮಲೇರಿಯಾ ನಿವಾರಿಣಿ** ಇದು ಮಲೇರಿಯಾ, ದಿನಬಿಟ್ಟು ಬರುವ ಜ್ವರ, ಚಳಿಜ್ವರ, ಇಂಫ್ಲುಯೆಂಜಾ, ನ್ಯೂಮೋನಿಯಾ, ಕಫಜ್ವರ, ಜ್ವರಗೆಡ್ಡೆ ಮುಂತಾದವುಗಳಿಗೆ ದಿವ್ಯೌಷಧಿ ಬಾಟ್ಲಿ 1ಕ್ಕೆ 1—8—0. ಚಿಕ್ಕ ಬಾಟ್ಲಿಗೆ 0—13—0. 3ಕ್ಕೆ 4—0—0 ಸಣ್ಣ ಬಾಟ್ಲಿ 3ಕ್ಕೆ 2—4—0

ಬಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಿಗೆ ತಕ್ಕದಾದ ಔಷಧಿ ರವಾನಿಸಲಾಗುತ್ತೆ. ಕ್ಯಾಟಲಾಗಿ ಬರೆಯಿರಿ.

ಎಂ. ಗಣಪಯ್ಯ ಅಂಡ್ ಸನ್ಸ್.

ಆಯುರ್ವೇದಿಕ್ ಫಿಜಿಸಿಯನ್, ರಥಬೀದಿ, ನಂಬರು 271 ಮಂಗಳೂರು

ಔಷಧಿ ಸಿಕ್ಕುವ ಸ್ಥಳಗಳು—

ಮೆಸ್ಸರ್ಸ್ ಪಟೇಲ್ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ, ಇದರಲ್ಲಿ ಬರೆಯತಕ್ಕ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಶ್ರೇಷ್ಠವಾದ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮೌಕ್ತಿಕಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕರ್ಪೂರ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸುವರ್ಣಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಳಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಪತ್ರವ್ಯವಹಾರ.

ಅತ್ಮೀಯರಾದವರು ಆ ಸಿನ್ರ್ಯ [illegible] ಪತ್ರಕಾರ್ತರು [illegible] ಉತ್ತರವಾಗಿಲ್ಲವೆಂಬ [illegible] ವಸ್ತು ಸೇರಿದ [illegible] ಕ್ಷ ವಲ್ಲಿದೆ

ಆಯುರ್ವೇದಪರಿಚಯ.

ಆರೋಗ್ಯಮಾರ್ಗ

ಲೇಖಕ—ಆಯುರ್ವೇದ [illegible] ವಿಶಾರದರು [illegible]

[illegible]

ಶ್ರೀ ಜಗದ್ಗುರು [illegible] ಗುಂಡ್ಲುಪೇಟೆ

[illegible]

ಆಹಾರ ನಿಯಮಗಳು

ಸುಗ್ಗಿಕಾಯಿ—[illegible] ವತ್ತು [illegible] ಕಫ ಪಿತ್ತಗಳನ್ನು ನಾಶಗೊಳಿಸುವುದು [illegible] ಅತಿಶಯವಾಗಿ [illegible] ಕುಷ್ಠ [illegible] ರೋಗಗಳನ್ನು ನಾಶ ಮಾಡುತ್ತದೆ

ಬೆಂಡೆಕಾಯಿ—ಶೀತ [illegible] ವನ್ನುಂಟುಮಾಡುವುದು [illegible] ತವನ್ನು ಕೋಪಗೊಳಿಸು ವುದು, [illegible] ಶಾಂತಗೊಳಿಸುವುದು ಮತ್ತು [illegible] ಮೂಗಿನಾಡಿಸು ವುದು [illegible] ಪ್ರಕೃತಿಯವರಿಗೆ ಹಿತಕರವು [illegible] ಕೃತಿಯವರಿಗೆ [illegible] ಆಗಿರುವುದು [illegible] ಮಲಬದ್ಧತೆಯನ್ನುಂಟುಮಾಡುವುದು ಮತ್ತು ಕಫ [illegible] ರೋಗಿಗಳಿಗೆ ಹಿತಕರವಲ್ಲ

ಗೋರಿಕಾಯಿ ಅಥವಾ ಚವಳೀಕಾಯಿ—ವಿಶೇಷ [illegible] ಕಾರಿ [illegible] ಯೂ ರವನ್ನುಂಟು ಮಾಡುವುದು [illegible] ನ್ನುಂಟುಮಾಡಿ [illegible] ನ್ನುಂಟುಮಾಡು ತ್ತದೆ

ಅಲುಗಡ್ಡೆ—ಸಿಹಿ ಬಲಕಾರಿ [illegible] ಟ್ಟಿಯಲ್ಲಿ [illegible] ಗಳನ್ನುಂಟುಮಾಡುತ್ತದೆ

ಬಾಳೆ ದಿಂಡು—ಶೀತ ಬಲಕಾರ [illegible] ಹಿತಕರವಾದುದು [illegible] ಶಾಂತಗೊಳಿಸು ವುದು [illegible] ನಾಶಕ, [illegible] ಕರ ವಾಗಿರುತ್ತದೆ

ಸೂರಣ ಗಡ್ಡೆ—ಕಾರ [illegible] ಅಗ್ನಿದೀಪಕ [illegible] ವನ್ನುಂಟುಮಾಡುವುದು [illegible] ವುದು, ಹೊಟ್ಟೆಯ [illegible] ಇವುಗಳನ್ನು ನಾಶಮಾಡುವುದು [illegible] ಅತ್ಯಂತ ಹಿತಕರವಾಗಿರು ತ್ತದೆ ಆದರೆ [illegible] ರಕ್ತಪಿತ್ತ [illegible] ರೋಗ ದಿಂದ [illegible] ಹಿತಕರವಾಗಿರುವುದಿಲ್ಲ

ಚಕ್ಕೋತ ಸೊಪ್ಪು (ಚಪ್ಪಲಿ)—ಉಷ್ಣ, ಸಿಹಿ [illegible] ಪಾಕದಲ್ಲಿ ಕಾರ ವಾಗಿರುವುದು, ಅಗ್ನಿದೀಪಕ [illegible] ಗಳನ್ನು ನಾಶಗೊಳಿಸುವುದು. ತ್ರಿದೋಷನಾಶಕ, [illegible] ಹೊಟ್ಟೆಯಲ್ಲಿ [illegible] ರಕ್ತಪಿ ತ್ತ ಸಂಗ್ರಹಣಿ ಕ್ಷಯರೋಗ ಇವುಗಳಲ್ಲಿ ಅತ್ಯಂತ ಹಿತಕರವಾಗಿರುತ್ತದೆ

ಕೀರೆ ಸೊಪ್ಪು—ಶೀತ, ಸರಿಯಾಗಿ [illegible] ತ್ರವಿಸರ್ಜನೆಗಳನ್ನು ಮಾಡಿಸುವುದು ಅಗ್ನಿದೀಪಕ, ರುಚಿಕರ [illegible] ನಾಶಕ ಪಿತ್ತ ಕಫ ರಕ್ತವಿಕಾರ ಇವುಗ ಳನ್ನು ಶಾಂತಗೊಳಿಸುವುದು ವಿಪಾಕದಲ್ಲಿ ಮತ್ತು ರುಚಿಯಲ್ಲಿ ಸಿಹಿಯಾಗಿರುತ್ತದೆ

ಹೊನಗೊನೆ ಸೊಪ್ಪು—ಸಿಹಿ ಮತ್ತು [illegible] ದು, ತ್ರಿದೋಷನಾಶಕ, ರುಚಿಯನ್ನುಂಟುಮಾಡು ವುದು, ಸಕಲವಿಧ ನೇತ್ರರೋಗಗಳಿಗೆ ಅತ್ಯಂತ ಹಿತಕರವಾ ದುದು, ವೀರ್ಯವನ್ನು ವೃದ್ಧಿಗೊಳಿಸುವುದು, ರಕ್ತಪಿತ್ತ ಕೆಮ್ಮು ದಮ್ಮು ಜ್ವರ ದಾಹ ಶೂಲವ್ಯಾದಿ ಮೊತ್ರಕೃ [illegible] ಇವುಗಳನ್ನು ನಾಶಗೊ [illegible] ಶಿಸುವ [illegible] ವಾಗಿರುತ್ತದೆ

ಸಿಹಿಹಾಲೆ ಸೊಪ್ಪು (ಜೀವಂತಿ)—[illegible] ಶೀತ [illegible] ಬಲಕರ ಕಫಪಿತ್ತ [illegible] ವಿದಲ್ಲದೆ [illegible]

ವಿಷ್ಣುಕ್ರಾಂತಿ—ಕಾರ [illegible] ದ [illegible] ರೋಗಗಳನ್ನು [illegible] ಶ ಪಡಿಸುವುದು [illegible] ವಾಗಿರುತ್ತದೆ

ಪಾಲಂಕ ಸೊಪ್ಪು—ಶೀತ, [illegible] ಟುಮಾಡುವುದು. [illegible] ತವನ್ನುಂಟುಮಾಡು ವುದು ಕಫವನ್ನು ನಾಶಗೊಳಿಸುವುದು ವಿಷ ಶ್ವಾಸ ಪಿತ್ತ ರಕ್ತವಿಕಾರ ಇವುಗಳನ್ನು ಪರಿಹರಿಸುತ್ತದೆ

ಪ್ರಳ್ಳಂಪ್ರುರಚಿ ಸೊಪ್ಪು—ಹುಳಿ, ಉಷ್ಣ, ಅ ಗ್ನಿದೀಪಕ ಕಫ ಮತ್ತು ವಾತವಿಕಾರಗಳಲ್ಲಿ ಹಿತಕರ ವಾದದು ಗ್ರಹಣಿ ಮತ್ತು ಮೂಲವ್ಯಾಧಿಗ್ರಸ್ತ ರಾದವರಿಗೆ ವಿಶೇಷ ಗುಣಕಾರಿಯಾಗಿರುತ್ತದೆ

ಕಾಕೀ ಸೊಪ್ಪು—ಸಮಶೀತೋಷ್ಣವಾದುದು, ತ್ರಿದೋಷನಾಶಕ ವೀರ್ಯವರ್ಧಕ ರಸಾಯನ [illegible] ಯನ್ನು ಮಾಡಿಸುವುದು ಮತ್ತು ಕುಷ್ಠನಾಶಕವಾಗಿ ರುತ್ತದೆ, ಆದರೆ [illegible] ವಿಶೇಷ ಹಾನಿಕರ ವಾಗಿರುತ್ತದೆ

ಮೆಂತ್ಯದ ಸೊಪ್ಪು—ಸ್ವಲ್ಪ ಕಹಿ, ವಾತನಾ ಶಕ, ರುಚಿಕರ ಅಗ್ನಿಯನ್ನು ದೀಪನಗೊಳಿಸುವುದು [illegible] ಪಿತ್ತವನ್ನುಂಟುಮಾಡುತ್ತದೆ

ಸಬ್ಬಸಿಗೆ—ಉಷ್ಣ, ಸಿಹಿ ಅಗ್ನಿಯನ್ನು ವೃದ್ಧಿ ಗೊಳಿಸುವುದು, [illegible] ಮತ್ತು ವಾತವನ್ನು ನಾಶ ಮಾಡುವುದು, ರುಚಿಕರ ಪಿತ್ತವನ್ನು ಹುಚ್ಚಿಸುವುದು [illegible] ವಾಗಿರುತ್ತದೆ

ಸುಗ್ಗಿ ಸೊಪ್ಪು—ಸ್ವಲ್ಪ ಕಾರ ಉಷ್ಣ, ಅಗ್ನಿ ದೀಪಕ ಕ್ರಿಮಿನಾಶಕ [illegible] ಮತ್ತು ಕಫವನ್ನು ನಿವಾ ರಿಸುವುದ [illegible] ಅತ್ಯಂತ [illegible] ವಾಗಿರುತ್ತದೆ

ಸಕಲವಿಧ ಶಾಕಗಳ ತಾರತಮ್ಯ—[illegible]

ದಾಳಿಂಬದ ಹಣ್ಣು—ಹುಳಿ ಒಗರು ಸಿಹಿ [illegible] ಕೂಡಿರು ವುದು. ವಾತನಾಶಕ ಅಗ್ನಿದೀಪಕ ಹೃದಯಕ್ಕೆ ಹಿತ ಕರವಾದುದು [illegible] ವುದು [illegible] ವಾತ [illegible] ಸಿಹಿಯಾಗಿರುವ ಹಣ್ಣು [illegible] ಉತ್ತಮವಾದ [illegible]

ಖರ್ಜೂರ—ಶೀತ [illegible] ರುಚಿಯಲ್ಲಿ [illegible] ಪುಷ್ಟಿಕರ ತೃಪ್ತಿ ಕರ [illegible] ಲ್ಲದೆ ಗಾಯಹೊಂದಿದವರಿಗೆ ಹಿತಕರವಾದುದು

ನೆಲ್ಲಿ—ಹುಳಿ [illegible] ಒಗರು ಕಾರಗಳಿಂದ [illegible] ರಸಗಳಿಂದ ಕೂಡಿರುವುದು [illegible] ಒಪರು [illegible] ಕಫ [illegible] ರೋಗಗಳನ್ನು [illegible] ವಾಗಿದೆ ಕಣ್ಣುಗಳಿಗೆ ಹಿತಕರವಾದುದು. ಸಕಲ ದೋಷಗಳನ್ನು ನಾಶಗೊಳಿಸುವುದು. ಹುಳಿಯಾಗಿರುವುದರಿಂದ ವಾತ ವನ್ನು, [illegible] ಶೀತಲವಾಗಿರುವುದರಿಂದ ಪಿತ್ತ ವನ್ನು, ಮಧುರ (ರುಕ್ಷ) ಮತ್ತು ಒಗರುಗಳಿಂದ ಕೂಡಿದ [illegible] ಕಫವನ್ನು ನಾಶಮಾಡುವುದಾ ಗಿದೆ [illegible] ಸಕಲ ಫಲಗಳಲ್ಲಿಯೂ ಶ್ರೇಷ್ಠವಾಗಿದು [illegible] ಗಳಿಂದ ಕೂಡಿರುತ್ತದೆ

ದ್ರಾಕ್ಷೆ—ಸಿಹಿ ಸ್ವಲ್ಪ ಶೀತಲವಾದುದು [illegible] ಸಡಿಲಿಸುವುದು. ಸ್ವರವನ್ನು ಉತ್ತಮಗೊಳಿಸು ವುದು ಮತ್ತು ರಕ್ತಪಿತ್ತ [illegible] ಬಾಯಾ ರಿಕೆ ಉರಿ ಕ್ಷಯ ಇವುಗಳನ್ನು ನಿವಾರಿಸುವುದು ಮತ್ತು ಶರೀರಕ್ಕೆ ಬಲವನ್ನೂ ಕಾಂತಿಯನ್ನೂ ಉಂಟುಮಾಡು ತ್ತದೆ ಹುಳಿಯಾಗಿರುವ ಹಣ್ಣು ರಕ್ತಪಿತ್ತ, ವಾತ, ಕಫ ಇವುಗಳನ್ನುಂಟುಮಾಡುತ್ತದೆ

ಬಾಳೆಹಣ್ಣು—ಶೀತ ರುಚಿಯಲ್ಲಿ ಮತ್ತು ಪಾಕದಲ್ಲಿ ಸಿಹಿ, ಬಲಕರ, ಪುಷ್ಟಿಕರ, ಹಸಿವನ್ನು ಕಡಿಮೆ ಮಾಡುವುದು ಮತ್ತು ಬಾಯಾರಿಕೆ ಕಣ್ಣಿನ ರೋಗ ಮೇಹರೋಗ ಇವುಗಳನ್ನು ನಿವಾರಿಸಿ ಮಾಂಸ ವನ್ನು ಬೆಳೆಸುತ್ತದೆ ಕಾಯಿಯು ಸಿಹಿ ಶೀತ, ಹೊಟ್ಟೆ ಯನ್ನು ಹಿಡಿಯುವುದು. ಬೇಗನೆ ಪಚನವಾಗದಿರು ವುದು ಕಫನಾಶಕ ಮತ್ತು ರಕ್ತಪಿತ್ತ ಬಾಯಾರಿಕೆ ಉರಿ ಕ್ಷಯ ವಾಯು ಇವುಗಳನ್ನು ಒಡಿಸುವುದಲ್ಲದೆ, ಗಾಯಹೊಂದಿದವರಿಗೆ ಹಿತಕರವಾಗಿರುತ್ತದೆ

ಮಾವಿನಹಣ್ಣು—ಸಿಹಿ, ಪುಷ್ಟಿಕರ, ರುಚಿಕರ, ವಾಯುನಾಶಕ ಹೃದಯಕ್ಕೆ ಹಿತಕರ, ಬೇಗನೆ ಜೀರ್ಣಿ ಸುವುದಿಲ್ಲ, ಮಲವನ್ನು ಕಟೆಯುವುದು, ಪ್ರಮೇಹ ನಾಶಕ, ಶರೀರದ ವರ್ಣವನ್ನು ಉತ್ತಮಗೊಳಿಸುವು ದಲ್ಲದೆ ವ್ರಣ ಕಫ-ರಕ್ತವಿಕಾರ ಇವುಗಳನ್ನು ದೂರ ಮಾಡುವುದು ಚಾಕಿನಿಂದ ಹೆಚ್ಚಿ ಹಾಗೆಯೇ ಬಾ ಯಿಂದಲೇ ರಸವನ್ನು ಹೀರಿ ಸೇವಿಸಲ್ಪಟ್ಟ ಹಣ್ಣು ಹಗುರವೂ, ವೀರ್ಯವರ್ಧಕವೂ ಶೀತಲವೂ ವಾತ ಪಿತ್ತನಾಶಕವೂ ಮಲವನ್ನು ತಡೆಯುದಿರುವ್ಹದೂ, ಆಗಿ ರುತ್ತದೆ ಚಾಕಿನಿಂದ ಹೆಚ್ಚಿ ಸೇವಿಸಲ್ಪಟ್ಟ ಹಣ್ಣು ಬೇಗ ಜೀರ್ಣವಾಗುವುದಿಲ್ಲ ಮತ್ತು ಧಾತುಪುಷ್ಟಿಯ ನ್ನೂ, ಬಲವರ್ಧನವನ್ನೂ ಮಾಡಿ ವಾಯುವನ್ನು ಶಾಂತಗೊಳಿಸುತ್ತದೆ ಹಣ್ಣಿನ ರಸವು ಬಲದಾಯಕ, ಗುರು, ವಾತನಾಶಕ, ಬೇಧಿಕರ, ಕಫವರ್ಧಕ ಮತ್ತು ವಿಶೇಷ ಪುಷ್ಟಿಕರವಾಗಿರುವುದಾದರೂ ಹೃದಯಕ್ಕೆ ಅತ್ಯಂತ ಹಿತಕರವಾಗಿರುವುದಿಲ್ಲ ಹಾಲಿನೊಡನೆ ಸೇವಿ ಸಲ್ಪಟ್ಟ ಹಣ್ಣು ವಾತಪಿತ್ತನಾಶಕ, ರುಚಿಕರ, ಪುಷ್ಟಿ ಕರ ಮತ್ತು ಬಲವೀರ್ಯಗಳನ್ನು ವೃದ್ಧಿಗೊಳಿಸುವು ದಾಗಿದೆಯಲ್ಲದೆ ನಾಮಕಾಲದಿಂದ ಪಚನವಾಗುತ್ತದೆ ಹಣ್ಣಿನ ರಸವನ್ನು ಜೇನುತುಪ್ಪದೊಡನೆ ಸೇವಿಸುವುದು ವಾತುಗತಜ್ವರದವರಿಗೆ ಹಿತಕರವಾಗಿದೆ ಮಾವಿನ ಹಣ್ಣುಗಳನ್ನು ವಿಶೇಷವಾಗಿ ತಿನ್ನುವುದರಿಂದ ಮಂ ದಾಗ್ನಿ ವಿಷಮಜ್ವರ ರಕ್ತವಿಕಾರ ಅಜೀರ್ಣ ಮತ್ತು ನೇತ್ರರೋಗ ಮುಂತಾದ ಉಪದ್ರವಗಳುಂಟಾಗು ವುವು [illegible] ಗಿಡದಲ್ಲಿಯೇ ಪಕ್ವವಾದ ಹಣ್ಣುಗಳಲ್ಲಿ ಅಧಿಕಪ್ರಮಾಣದಿಂದಿರುವುವು [illegible] ಹಣ್ಣುಗಳನ್ನು ತಿನ್ನುವುದರಿಂದ ತೊಂದರೆಯುಂಟಾ ದಾಗ [illegible] ಕಷಾಯವನ್ನಾಗಲಿ, [illegible] ಜೀರಿಗೆಯನ್ನು ಹಾಲಿನೊಡನೆಯಾಗಲಿ ಸೇವಿಸುವುದು ಹಿತಕರವಾಗಿರುತ್ತದೆ [illegible] ಮಾವಿನಕಾಯಿ ಯು ಒಗರು ಮತ್ತು ಹುಳಿಯಿಂದ ಕೂಡಿದ್ದು ರುಚಿ ಕರ ಮತ್ತು ಪಿತ್ತವನ್ನುಂಟುಮಾಡುವುದಾಗಿದೆ ಬಲಿ ತಿರುವ ಕಾಯಿಗಳು ಹುಳಿಯಾಗಿದ್ದು ತ್ರಿದೋಷಗ ಳನ್ನುಂಟುಮಾಡಿ ರಕ್ತವನ್ನು ಕೆಡಿಸಿ ಶರೀರವನ್ನು [illegible] ಸುತ್ತದೆ ಮಾವಿನಹಣ್ಣುಗಳೊಳಗೆ ಕಸಿಗಿಡದ [illegible] ಸರ್ವೋತ್ತಮವಾಗಿಯೂ, ರುಚಿಕರ ವಾಗಿಯೂ ಇರುತ್ತವೆ

ನಿಂಬೆ ಹಣ್ಣು—ಹುಳಿ, ಜೀರ್ಣಶಕ್ತಿವರ್ಧ ಕ, ತ್ರಿದೋಷನಾಶಕ, ಬುದ್ಧಿಭ್ರಮ ಕಣ್ಣಿನರೋಗ ಬಾಯಾ ಸ ಸಕಲವಿಧವಿಷ [illegible] ದಾಹ ಶೂಲ ಪಿತ್ತವಿಕಾರ [illegible] ದನ್ನು [illegible] ಕಾಮಾಲೆ [illegible] ಇವುಗಳನ್ನು ನಾಶಗೊಳಿಸುವುದಲ್ಲದೆ, ಮೂ ಗ [illegible] ಗಂಟಲು ಇವುಗಳಲ್ಲುಂಟಾಗುವ ವಿಕಾರಗ ಳನ್ನು ಶಾಂತಗೊಳಿಸುವುದು ಮತ್ತು ಶರೀರದೊಳಗಿನ ಕಲ್ಮಷಪದಾರ್ಥಗಳನ್ನು ಹೊರಗೆ ಹಾಕುವುದು ಸಕಲ ವಿಧ ಮಾದಕವಸ್ತುಗಳಿಂದ ಉಂಟಾಗುವ ಉಪದ್ರವಗ ಳನ್ನು ನಿರ್ಮೂಲಗೊಳಿಸುವುದು ಮತ್ತು ಸಕಲವಿಧ ಗಳಾದ ಉದರರೋಗಗಳನ್ನು ಶಾಂತಗೊಳಿಸುತ್ತದೆ

ಹಲಸಿನ ಹಣ್ಣು—ಸಿಹಿ, ರುಚಿಕರ, ಪಿತ್ತನಾ ಶಕ, ವಾತಶ್ಲೇಷ್ಮ ಕಾರಕ, ಬಲ-ಪುಷ್ಟಿ-ಮಾಂಸ ವೀರ್ಯ ಇವುಗಳನ್ನು ವೃದ್ಧಿಗೊಳಿಸುವುದಲ್ಲದೆ ನರಗಳಿಗೆ ಬಲವ ನ್ನೀಯುವುದು ಮತ್ತು ಅಜೀರ್ಣ ಅಂಡವೃದ್ಧಿರೋಗ ಅಗ್ನಿಮಾಂದ್ಯ ಹೊಟ್ಟೆನೋವು ಶೀತಪಿತ್ತರೋಗ-ವಾತ ಇವುಗಳನ್ನುಂಟುಮಾಡುತ್ತದೆ. ಎಳೆಹಲಸು ಬಲಕರ

ಉಚಿತರು, ವೀರ್ಯವೃದ್ಧಿಕರವಾಗಿರುವುದಾದರೂ ಅತಿಶಯವಾದ ಮಲಬದ್ಧತೆಯನ್ನುಂಟುಮಾಡಿ ಹಸಿವೆಯನ್ನು ಕೆಡಿಸುತ್ತದೆ. ಹಲಸಿನ ಹಣ್ಣು ಮತ್ತು ಕಾಯಿಯು ಗುಲ್ಮ ಶ್ಲೇಷ್ಮ-ಅಗ್ನಿಮಾಂದ್ಯ ಇವುಗಳಿಂದ ಪೀಡಿತರಾದವರಿಗೆ ಹಾನಿಯನ್ನುಂಟುಮಾಡುವುದಾಗಿದೆ.

ಬೇಲದ ಹಣ್ಣು—ಒಗರು, ಹುಳಿ, ಸಿಹಿ, ರಸಗಳಿಂದ ಕೂಡಿರುವುದು, ತ್ರಿದೋಷನಾಶಕ ಮತ್ತು ಕಫ ಸಂಬಂಧವಾದ, ಪಿತ್ತಸಂಬಂಧವಾದ ರೋಗವನ್ನು ನಿವಾರಿಸುವುದು, ದಮ್ಮು ಕೆಮ್ಮು ಗ್ರಹಣಿ ಶೂಲೆ ಬಿಕ್ಕಳಿಕೆ ವಾಂತಿ ಅಗ್ನಿಮಾಂದ್ಯ ಮೂಲವ್ಯಾಧಿ ಅರೋಚಕ ಆಯಾಸ-ವಿಷ-ದಾಹ ಇವುಗಳನ್ನು ಶಾಂತಗೊಳಿಸುವುದು, ಮೇಹನಿವಾರಣೆಯಲ್ಲಿ ಹೆಸರುಗೊಂಡಿದೆ. ಅತ್ಯಂತ ಪಥ್ಯವಾಗಿರುವುದರಿಂದಲೇ 'ಕಪಿತ್ಥಂ ಸರ್ವದಾ ಪಥ್ಯಂ' ಎಂಬ ಶಾಸ್ತ್ರಸ್ತುತಿಯು ಬೇಲದ ಹಣ್ಣಿಗೆ ಬಂದಿರುತ್ತದೆ.

ಹುಣಸೆಹಣ್ಣು—ಹೊಸದು ಒಗರು ಹುಳಿಯಾಗಿರುತ್ತದೆ. ಬೇದಿಯನ್ನು ಮಾಡಿಸುವುದು, ವಾಯುವನ್ನು ಕಡಿಮೆಮಾಡುವುದು ಶ್ಲೇಷ್ಮವನ್ನುಂಟುಮಾಡುವುದು, ಕಣ್ಣುಗಳಿಗೆ ಹಿತಕರವಲ್ಲ, ಅಪಥ್ಯವಾಗಿರುತ್ತದೆ. ಹಳೆಯ ಹುಣಸೆಹಣ್ಣು ಹುಳಿ ಕಡಿಮೆಯಾಗಿರುತ್ತದೆ. ವಾತ ಪಿತ್ತ, ಶ್ಲೇಷ್ಮ ರೋಗಗಳನ್ನು ಶಾಂತಗೊಳಿಸುವುದು, ಮತ್ತು ಹೃದಯಕ್ಕೆ ಬಲವನ್ನೀಯುವುದು, ರುಚಿಯನ್ನು ಮಾಡಿಸುವುದು, ಮೇಹವನ್ನು ತಗ್ಗಿಸುವುದು. ಆದರೆ ಹುಣಸೆಹಣ್ಣು ಹಳೆಯದಾಗಲಿ ಹೊಸದಾಗಲಿ ಹೆಚ್ಚಾಗಿ ಸೇವಿಸಲ್ಪಟ್ಟು ಪಿತ್ತವನ್ನು ಹೆಚ್ಚಿಸುತ್ತದೆ.

ತೆಂಗಿನಕಾಯಿ—ಶೀತಲ ಎಳೆನೀರಾಗಿರುವುದು, ಮೂತ್ರಾಶಯವನ್ನು ಶೋಧಿಸುವುದು, ಪುಷ್ಟಿಕರ, ಬಲದಾಯಕ ಮತ್ತು ವಾತ ಪಿತ್ತ ರಕ್ತವಿಕಾರ, ದಾಹಗಳನ್ನು ಶಾಂತಗೊಳಿಸುವುದು. ಎಳನೀರು ವಿಶೇಷವಾಗಿ ಪಿತ್ತಜ್ವರ ಮತ್ತು ಪಿತ್ತಸಂಬಂಧವಾದ ವಿಕಾರವನ್ನು ದೂರಮಾಡುತ್ತದೆ. ಎಳನೀರು ಶೀತಲ, ಹೃದಯಕ್ಕೆ ಹಿತಕರವಾದುದು, ಅಗ್ನಿದೀಪಕ ವೀರ್ಯವರ್ಧಕ, ಬಾಯಾರಿಕೆ ಮತ್ತು ಪಿತ್ತವನ್ನು ನಿವಾರಿಸುವುದು ಸಿಹಿ, ಮೂತ್ರಾಶಯ ಸಂಬಂಧವಾದ ವಿಕಾರವನ್ನು ನಾಶಮಾಡುತ್ತದೆ.

ಅತ್ತಿಯ ಹಣ್ಣು—ಸಿಹಿ ತಂಪು ರಕ್ತವೃದ್ಧಿಕರ ವೀರ್ಯವನ್ನು ವೃದ್ಧಿಗೊಳಿಸಿ ಸ್ತಂಭನಮಾಡುವುದು ಮತ್ತು ಮೇಹರೋಗ ಕ್ಷಯ ರಕ್ತಪಿತ್ತ ವಿಕಾರ ಇವುಗಳನ್ನು ಶಮನಗೊಳಿಸಿ ಕಣ್ಣುಗಳಿಗೆ ತಂಪನ್ನೀಯುವುದು ಪಿತ್ತಶ್ಲೇಷ್ಮಗಳನ್ನು ಅಡಗಿಸುವುದು ಆಲಸ್ಯದಿಂದ ಜೀರ್ಣವಾಗುತ್ತದೆ. (ಸಶೇಷ)

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ
ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ
ಶಿವಾಚಾರ್ಯಮಹಾಸ್ವಾಮಿಗಳವರ
ದೇಶ ಸಂಚಾರ.

ಶ್ರೀಮದಾಚಾರ್ಯಭಗವತ್ಪಾದರು ನಂಜನಗೂಡು ಹತ್ತಿರ ಕ್ಷೇತ್ರದಲ್ಲಿ ತಪೋನುಷ್ಠಾನ ಸಮಯದಲ್ಲಿ ದಕ್ಕೋಪಟ್ಟ ಹಳ್ಳಿ ಶಿವಪುರ ಮುಸ್ಕೂರು ಗ್ರಾಮಗಳ ಭಕ್ತರು ಮಹದುತ್ಸವಪೂರ್ವಕವಾಗಿ ಮಾಡಿದ ಕಾಣಿಕಾಸಮರ್ಪಣಾದ್ಯುಪಚಾರ ಸೇವೆಯನ್ನು ಕೈಕೊಂಡು ದೇವನಸಹಳ್ಳಿ ಶ್ರೀಯುತ ಗೌಡರ ಮಿತ್ರ ಕೆಂಚೇಗೌಡರು ತಾವು ಪರಮಭಕ್ತರಾದುದರಿಂದ ತಮ್ಮ ನೂತನ ಗೃಹಕ್ಕೆ ವಿಜಯಮಾಡಿಸಿಕೊಂಡು ಹೋಗಿ ಒಂದುನೂರುಎಂಟು ರೂಪಾಯಿ ಒಂದುನೂರುಎಂಟು ಆರತಿಗಳನ್ನು ಪುಷ್ಪಗಳೊಡನೆ ಇವೂ ಸುವರ್ಣಪುಷ್ಪಗಳೆಂದು ಭಾವಿಸಿಮಾಡಿದ ಪಾದಪೂಜೆಯನ್ನು ಸಂತೋಷದಿಂದ ಕೈಕೊಂಡು ಕರುಣಾಮೃತರಸದಿಂದ ಆನಂದಗೊಳಿಸಿ ಹರಸಿ ಆ ಊರಿನ ಭಕ್ತರನ್ನುದ್ಧರಿಸುತ್ತಿರಲು ಚಾಮರಾಜನಗರ ಟೌನಿನ ಭಕ್ತರು ಪ್ರಾರ್ಥಿಸಿಕೊಂಡದ್ದರಿಂದ ಅವರ ಇಷ್ಟಾರ್ಥವನ್ನು ಪೂರ್ತಿಮಾಡಲು ಮೊದಲೇ ನಿಶ್ಚಯಿಸಿದ ಪ್ರಕಾರ ತಾ|| ೧೬-೧-೧೯೩೫ ಬುಧವಾರ ನಂಜನಗೂಡಿನಲ್ಲಿಯೇ ಪ್ರಾತಃಕಾಲದ ಸ್ನಾನಾನ್ಹಿಕವನ್ನು ಪೂರೈಸಿಕೊಂಡು ಚಾಮರಾಜನಗರಕ್ಕೆ ಸಕಲ ಬಿರುದಾವಳಿ ಸಮೇತ ಚತುರಂಗಬಲದೊಡನೆ ದಯಮಾಡಿಸಿದರು. ಪುರವು ತಳಿರುತೋರಣ ಧ್ವಜಗಳಿಂದಲಂಕರಿಸಲ್ಪಟ್ಟಿತ್ತು. ವೀರಶೈವರ ಸಂಖ್ಯೆಯು ಕಡಿಮೆಯಿದ್ದರೂ ಸನಾತನಧರ್ಮನಿಷ್ಠರೂ ಗುರುಭಕ್ತರೂ ಇತರ ಜಾತಿಗಳೂ ಸಾಹುಕಾರರೂ ಆದ ಶ್ರೀಯುತ ಸಿ. ಡಿ. ನಾರಾಯಣರಾಯರೂ ಸಾಹುಕಾರ್ ಶ್ರೀಯುತ ಎ. ಎನ್. ವೆಂಕಟನಾಗಪ್ಪಶೆಟ್ಟರೂ ಸಹಾಯವನ್ನಿತ್ತುದಲ್ಲದೆ ತಾವು ಸರ್ವರಿಗೂ ಮುಂದಿನವರಾಗಿ ಶ್ರಮೆಯನ್ನು ವಹಿಸಿರುವುದು ಸ್ತವನೀಯವಾಗಿರುವುದು. ಸದರಿ ನಾರಾಯಣರಾಯರು ಶ್ರೀಯುತ ದಾಸಪ್ಪನವರ ಛತ್ರವೆಂದು ತಮ್ಮ ಪಿತೃಗಳ ಹೆಸರಿನಿಂದ ಕಟ್ಟಿಸಿರುವ ಛತ್ರವನ್ನು ಸ್ವಾಮಿಗಳವರ ಬಿಡಾರಕ್ಕಾಗಿ ವ್ಯವಸ್ಥೆಮಾಡಿ ಕೊಟ್ಟಿರುವದನ್ನು ನೋಡಿದರೆ ಅವರ ಧರ್ಮಬುದ್ಧಿಯು ಸ್ಪಷ್ಟವಾಗಿಯೇ ವ್ಯಕ್ತವಾಗುತ್ತಿರುವುದು. ಇವರ ತಂದೆ ಹಿಂದೂಮತಸ್ಥರ ಧರ್ಮದವರಾದ ಎಲ್ಲ ಸ್ವಾಮಿಗಳವರ ಪೂರ್ಣಭಕ್ತರಾದವರು ಅವರ ಗುರುಗಳವರ ಆಗಮನದಲ್ಲಿ ಸಂತೋಷಪಡುತ್ತಿರುತ್ತಿದ್ದುದರಿಂದ ಆ ಸಂಪ್ರದಾಯವು ಇವರಿಗೆ ಕೃತಾರ್ಥತೆಗೆ ದರ್ಶನೀಯವು ಎರಡನೇ ಇದಲ್ಲ. ಇಂತಹ ಆನಂದಸಮಯದಲ್ಲಿ ಈ ತಾಲ್ಲೂಕಿನ ಅಸಿಸ್ಟೆಂಟ್ ಸಾಹೇಬರೂ ಪೋಲೀಸ್ ಇನ್ಸ್‌ಪೆಕ್ಟರ್ ಸಾಹೇಬರೂ ಸಬ್ ಇನ್ಸ್‌ಪೆಕ್ಟರ್ ಸಾಹೇಬರೂ ಗಳಿಗೆಗೆ ಆವ ಕಾಲಕ್ಕೂ ಪೋಲೀಸ್ ವ್ಯವಸ್ಥೆಯನ್ನಿಟ್ಟು ಶ್ರೀಮನ್ಮಹಾಪ್ರಭುಗಳವರ ಧರ್ಮರಕ್ಷಣೆಯ ಗೌರವವನ್ನು ವ್ಯಕ್ತಗೊಳಿಸುತ್ತಿದ್ದರು. ಶ್ರೀಯುತ ಸಿ. ಡಿ. ನಾರಾಯಣರಾಯರೂ ಸಾಹುಕಾರ್ ಶ್ರೀಯುತ ಎ. ಎನ್. ವೆಂಕಟನಾಗಪ್ಪಶೆಟ್ಟರೂ ಮುಂತಾದ ಸರ್ವಮತೀಯ ಮಹಾಶಯರು ಅತಿಶಿಸ್ತಿನಿಂದ ಗುರುಭಕ್ತಿಯ ಜಾಗ್ರತಿಯನ್ನುಂಟುಮಾಡುತ್ತಿದ್ದರು. ಎತ್ತ ನೋಡಿದತ್ತ ಆನಂದ! ಈ ಆನಂದದಲ್ಲಿ ಕರ್ಮಸಾಕ್ಷಿಯಾದ ಪ್ರಭಾಕರನ ಕಿರಣಗಳು ಒತ್ತರಿಸಿಕೊಂಡು ಬರುತ್ತಿರಲು ಕತ್ತಲೆಯು ಹಿಂಜರಿಯುತ್ತಿರುವಂತೆ ಕಾಣಿಸುತ್ತಿತ್ತು. ಸಾಗರವಾಗಿ ಹರಿದ ದರ್ಶನದ ಪ್ರಭಾವವೆಂಬ ರತ್ನಮಯ ಕಳಸಗಳಿಂದ ಸಿಂಗರಿಸಿದ ಅಟ್ಟಣೆಯ ಉಪರಾಣೆ ಇದರಿಂದ ಮತ್ತಷ್ಟು ಆನಂದವೆಂದು ಹೇಳಲು ಆನಂದವೇ ಆಗುತ್ತಿರುವುದು. ಇಂತಹ ಸಮಯದಲ್ಲಿ ನಗರದ ಪ್ರಮುಖರಾದ ಮೈಸೂರು ಪ್ರೆಸಿಡೆಂಟ ಶ್ರೀಯುತ ಸಂಗನಬಸಪ್ಪನವರೂ ಶ್ರೀಯುತ ಸರಾಫ್ ಅಂಗಡಿ ಬಂ|| ಬಸವಣ್ಣನವರ ಶ್ರೀಯುತ ಎ. ಎಸ್. ಸುಬ್ಬಣ್ಣನವರು ಶ್ರೀಯುತ ಕರಿಬಸಪ್ಪನವರ ಚನ್ನಬಸಪ್ಪನವರು ಮಲ್ಲಪ್ಪನವರು ಮುಂತಾದ ವೀರಶೈವ ಭಕ್ತರು ಇತ್ತ ಕಾಯಕನಿರತರಾಗಿ ಸಿದ್ಧತೆಯಲ್ಲಿ ಸರ್ವರೂ ನಿರೀಕ್ಷಿಸಿಕೊಂಡಿದ್ದರು. ಮಹಾಗುರುಗಳವರು ಸಮಯವನ್ನು ಅಂಗೀಕರಿಸಿ ಎಲ್ಲರ ಪಂಚಪದಿಂದ ಆನಂದಕಂದಲಿತಹೃದಯರಾಗಿ ಅಲಂಕರಿಸಲ್ಪಟ್ಟಿದ್ದ ಸುವರ್ಣರಜತಾತ್ಮಕ ಆಂದೋಳಿಕೆಯು ಸ್ವಾಮಿಗಳವರು ಸಕಲವಾದ್ಯಗಳೂ ಘೋಷಿಸುತ್ತಿರಲು ಗೌರವಪೂರ್ವಕ ಸಮವಸ್ತ್ರದಲ್ಲಿ ಉತ್ಸವವು ಪ್ರಾರಂಭವಾಯಿತು. ಎತ್ತ ನೋಡಿದತ್ತ ಸಂತೋಷಗಳ ಜಯಘೋಷವು ಕೇಳುತ್ತಿದ್ದಿತು. ಬೆಂಗಳೂರು ವೈದಿಕ ವಿದ್ಯಾರ್ಥಿಗಳ ಸುಶ್ರಾವ್ಯವೇದಘೋಷವೂ ಗುರುಭಕ್ತಿಯನ್ನು ಉಜ್ವಲಗೊಳಿಸುತ್ತಿತ್ತು. ಅಲ್ಲಲ್ಲಿ ಗುರುಭಕ್ತರು ನೀರಾಜನವನ್ನಿತ್ತು ಫಲತಾಂಬೂಲಾದಿಗಳಿಂದ ಪೂಜೆಯನ್ನು ಸಲ್ಲಿಸುತ್ತಿರುವುದರಿಂದ ಅವರ ಆನಂದವೆಂಬ ಬಲದಿಂದ ಒಬ್ಬೊಬ್ಬರ ಮನಸ್ಸಿನಲ್ಲಿದ್ದ ಕುಶಲ್ಯವಾದೊಳೆಯು ಅವರ ಮನಸ್ಸು ಬಡತನದ ದಾರಿದ್ರ್ಯದಿಂದ ಮತ್ತಷ್ಟು ಶೋಭೆಯನ್ನು ಪಡೆದು ಪುರಬೀದಿಗಳಲ್ಲಿ ಅಟ್ಟಹಾಸದಿಂದ ಒದಗಿ ನಿರ್ವಾಣಶಾಲೆಗೆ ಉತ್ಸವವು ಬಂದಿತು. ಶ್ರೀ ಪೂಜ್ಯಪಾದರು ಆಂದೋಳಿಕೆಯಿಂದವತರಿಸಿ ವಿರಾಜಮಾನವಾದ ಸಿಂಹಪೀಠವನ್ನಾರೋಹಿಸಿ ಅಪ್ಪಣೆಯನ್ನು ಕೊಟ್ಟ ಪ್ರಕಾರ ಸರ್ವರೂ ಜಯಘೋಷನೆಯನ್ನು ಮಾಡಿ ಸ್ಥಳವನ್ನಲಂಕರಿಸಿದರು. ಬಳಿಕ ಮಹಾಸ್ವಾಮಿಗಳವರು ಸರ್ವಮತೀಯರ ಆದರಪೂರಿತ್ವದ ಭವ್ಯವಾದ ಉತ್ಸವದ ವ್ಯವಸ್ಥೆಯನ್ನೂ ಧರ್ಮಾಭಿಮಾನದಿಂದ ತೋರ್ಪಡಿಸಿದ ಉಪಚಾರದ ಸೊಬಗನ್ನೂ ಚಿತ್ತಕ್ಕೆ ತಂದು ತಮಗುಂಟಾದ ಆನಂದವನ್ನು ವ್ಯಕ್ತಗೊಳಿಸಲು ಪ್ರಸಾದವಾಣಿಯಿಂದ ಒಂದು ಗ್ರಾಮದವರು ಬಿನ್ನಬಿನ್ನವಾದ ಒಣಗುಳ್ಳಿದ್ದರೂ ಗ್ರಾಮದ ರಕ್ಷಣೆಗೆ ಏಕಾಭಿಪ್ರಾಯವುಳ್ಳವರಾಗಿ ಹೇಗೆ ಸಾಹಸಪಡುತ್ತಿರುವರೋ ಅದರಂತೆ ನೀವುಗಳೆಲ್ಲ ಬಿನ್ನಬಿನ್ನಮತದವರಾಗಿದ್ದರೂ ಆಯಾಯ ಮತಸ್ಥಾಪಕರು ಭಗವಂತನನ್ನೇ ಗುರಿಯಿಟ್ಟು ನಿರ್ಧರಿಸಿದ ಉಪಾಯಗಳಿಗೆ ಕಳೆಕಟ್ಟಿಯಾದ ದರ್ಪಣವೊಂದನ್ನೇ ಲಕ್ಷಿಸಿ ಮಾಡಿದ ಈ ಆದರ ಪೂರ್ವಕವಾದ ಸತ್ಕಾರವು ಕೇವಲ ಪರಶಿವನ ಗೌರವವನ್ನು ಉಜ್ವಲಗೊಳಿಸಿದುದು ಜಗದ್ಭಕ್ತಿಯುವಾಗಿ ಪೂರ್ವದ ಮಂತ್ರಿಗಳು ತಾತ್ಕಾಲಿಕ ಭಾಷಣವನ್ನು ಮಾಡಿ ವೇದವಾದ್ಯರಿಂದ ಸಭಾವಿಸರ್ಜನಕ್ಕೆ ಅಪ್ಪಣೆಯನ್ನು ದಯಪಾಲಿಸಿದರು. ಸಾಯಂಕಾಲಕ್ಕೆ ಪುನಃ ಪೂರ್ವದಂತೆ ಆರಂಭವಾಯಿತು. ವೇ|| ಇನ್ನಾವ ವಿದ್ವಾಂಸರೆನಿಸಿದ ತಮ್ಮ ವ್ಯಾಕರಣಶಾಸ್ತ್ರಿಗಳು ವೇ|| ಶಂಕರದೇವ ರಾಜಪತಿಗಳಾದ ಗುರುಕ್ಷೇತ್ರ ಮಹಾಸ್ವಾಮಿಗಳು ವೇ|| ಅನ್ನಾನ ಮಹಾಪಂಡಿತ ಶಾಸ್ತ್ರವಿದಾನಗಳು ಬ್ರ|| ಶ್ರೀ|| ಆನಂದ ವಿದ್ವಾನ್ ಮಹಾಪಂಡಿತ ಗುರು ಮಹಾದೇವರು, ಬ್ರ|| ಶ್ರೀ|| ಶ್ರೀಕಂಠಾರಾಧ್ಯರು, ಬ್ರ|| ಶ್ರೀ|| ಚಕ್ರವರ್ತಿ ಗೋಪಾಲಾಚಾರ್ಯರು ಡಿ. ವೆಂಕಟರಮಣಯ್ಯನವರು ಮೊದಲಾದ ಪರಮತೀಯ ಪಂಡಿತರೂ, ಎಲ್ಲಾ ಅಧಿಕಾರಿಗಳೂ, ವರ್ತಕಮಂಡಳಿಯವರೂ, ಮಹಮ್ಮದೀಯ ಪ್ರಮುಖರು ಮುಂತಾದ ಮಹಾಶಯರು ಸಭೆಯನ್ನಲಂಕರಿಸಿದರು. ದರ್ಶನೀಯವಾದ ಆ ಕಾಲದ ಸಭೆಯನ್ನು ವರ್ಣಿಸುವುದು ಮತಾಭಿಮಾನಿಗೆ ಸಮಾಧಾನವನ್ನೀಯುವ ಕಾರ್ಯವು. ಅದಂತೆ ಸಂಸ್ಕೃತ ಅಷ್ಟಾದಶ ಪೌರಾಣಿಕ ಪುರಾಣವತ್ತ ಒಸವಲಿಂಗಶಾಸ್ತ್ರಿಗಳು ಆರಾಧ್ಯಮತ ಸಾಹಿತ್ಯವಿದರು ಇವರು ವೇದಾಗಮಪ್ರಮಾಣವನ್ನನುಸರಿಸಿ ಪ್ರತಿಷ್ಠಿತಗಳಾದ ಮತಧರ್ಮಗಳು ಕಾಲವೈಷಮ್ಯದಿಂದ ಹಾಸ್ಯಾಸ್ಪದವಾಗುತ್ತಿರುವುದಕ್ಕೆ ಧರ್ಮಶಿಕ್ಷಣಾಭಾವವೇ ಮುಖ್ಯವಾಗಿರುತ್ತದೆ. ಇದರಲ್ಲಿಯೂ ಉದರಪೋಷಣಾ ವಿದ್ಯಾಪ್ರಾಬಲ್ಯದಿಂದ ಶಿಷ್ಟಾಚಾರಗಳಲ್ಲಿ ಶ್ರದ್ಧೆಯು ತಪ್ಪಿ ಸ್ವಕಪೋಲಕಲ್ಪಿತದ ಯುಕ್ತಿಗಳನ್ನು ವಿಸ್ತರಿಸಲು ಕೃತಪ್ರಯತ್ನರಾಗಿ ಪೂಜ್ಯಾಪೂಜ್ಯಸ್ಥಿತಿಯನ್ನು ತಿಳಿಯದೆ ಸಮುದಾಯವೂ ಸಹಜವರ್ಮವೋಧಕರಿಗೂ ವ್ಯವಹಾರಿಕ ಸಮ್ಮತವಾಗುತ್ತ ಸ್ವೇಚ್ಛಾಚಾರಗಳನ್ನು ಕೈಕೊಂಡಿರುವುದರಿಂದ ಸಮಾಜಸುಧಾರಣೆಗೆ ದೊಡ್ಡ ಕುಂದಕವಾಗಿದೆ. ಕಪ್ಪ ಪೂರ್ವಾಚಾರ್ಯರ ಶಾಸನಗಳಿಂದಲೇ ಸುಧಾರಿಸಲು ಯತ್ನವನ್ನು ಮಾಡತಕ್ಕದ್ದು ಜಗತ್ಪಾವನ ಸಿದ್ಧಾಂತಗಳಿಗೆ ಅವಶ್ಯಕವೆಂದು ಸೂಚಿಸಿದರು. ಬಳಿಕ ಶ್ರೀಯುತ ವೈಶ್ಯಪ್ರಸಿದ್ಧ ಸಂಗನಬಸಪ್ಪನವರೂ ಮಹಮ್ಮದೀಯ ಮಹಾಶಯರೂ ತಮ್ಮ ಸ್ವಸಮಾಜದವರಾಗಿ ವಿಜ್ಞಾಪನಾಪತ್ರಿಕೆಗಳನ್ನು ಓದಿ ಸಮರ್ಪಿಸಿದರು. ಶ್ರೀಮದಾಚಾರ್ಯಭಗವತ್ಪಾದರು ಆಯಾ ವಿಜ್ಞಾಪನಾಪತ್ರಿಕೆಗಳಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳನ್ನು ಒಂದೊಂದಾಗಿಯೇ ತೆಗೆದುಕೊಂಡು ವೀರಶೈವಮತಸ್ಥಾಪಕರು ಯಾರು? ಇವರ ಸಿದ್ಧಾಂತವಾವುದು? ಯಾವಕಾಲದಲ್ಲಿ ಈ ಮತವು ಸ್ಥಾಪಿಸಲ್ಪಟ್ಟಿತು? ಚಕ್ರವರ್ತಿಗಳು ಮೊದಲಾದವರಗಳಲ್ಲಿ ಯಾರಾರಿಂದ ಈ ಮತಾಚಾರ್ಯರ ಪರರಗಳಿಗೆ ಪ್ರಾಶಸ್ತ್ಯವು ದೊರೆತಿದೆ. ಈ ಮಠಗಳು ಎಲ್ಲೆಲ್ಲಿ ಸ್ಥಾಪಿತಗಳಾಗಿರುವವು ಮುಂತಾದವುಗಳನ್ನು ಸಪ್ರಮಾಣವಾಗಿ ವಿಸ್ತರಿಸಿದ್ದಲ್ಲದೆ ಈ ನಮ್ಮ ಮಠದ ಪ್ರಾಚೀನತಾ ಪ್ರಾಶಸ್ತ್ಯ ಮುಂತಾದವುಗಳನ್ನು ಚಿತ್ತಕ್ಕೆ ತಂದು ತಮ್ಮ ವಂಶಪರಂಪರೆಯಿಂದಲೂ ಗೌರವಿಸುತ್ತ ಬಂದಿರುವಾಗ ಕೃಪಾದೃಷ್ಟಿಯಿಟ್ಟು ಅಧಿಕಾರಿಗಳನ್ನು ಪ್ರತಿಷ್ಠಿಸಿ ಜೀರ್ಣೋದ್ಧಾರವನ್ನು ಮಾಡಿ ವಿಶೇಷ ಗೌರವವನ್ನಿತ್ತುದಲ್ಲದೆ ಮಠಕ್ಕೆ ದಯಮಾಡಿಸಿದಕಾಲದಲ್ಲಿ ಅರಮನೆಗೂ ವಿಶೇಷ ರಾಜಮರ್ಯಾದೆಯಿಂದ ವಿಜಯಮಾಡಿಸಿಕೊಂಡು ವಿಶೇಷವಾಗಿ ಸತ್ಕರಿಸಿದುದು ಮೊದಲಾದ ಸಂಗತಿಯನ್ನು ಗರ್ಭೀಕರಿಸಿದ ಉತ್ತರವನ್ನು ಕನ್ನಡ ಮತ್ತು ಹಿಂದೀ ಭಾಷೆಯಿಂದ ದಯಪಾಲಿಸಿದ್ದಲ್ಲದೆ ಈ ಭಾರತಭೂಮಿ

(6ನೇ ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೫ನೇ ಜನವರಿ ತಾ|| ೨೮ನೇ ಸೋಮವಾರ

ಲಿಂಗಧಾರಣವು ಪ್ರತಿಸಿದ್ಧವಾದುದು.

ನಮ್ಮ ಹಿಂದಿನ ವರ್ತಮಾನಪತ್ರಿಕೆಯಲ್ಲಿ ಹೇಳಿದ ಪ್ರಕಾರವಾಗಿ ವೀರಶೈವರಿಗೆ ಪರ್ವತಾನನ ಶಿವಲಿಂಗವನ್ನು ವಿಧಿಸುವ 'ಸರ್ವಲಿಂಗಂ ಸ್ಥಾಪಯತಿ' ಎಂಬ ವಾಕ್ಯವು ಸಾಮಾನ್ಯವಾಗಿ ಲಿಂಗಧಾರಣವನ್ನು ವಿಧಾನಮಾಡುವುದಲ್ಲದೆ ಹೊರತು ಇಂತಹ ಸ್ಥಳಗಳಲ್ಲಿಯೇ ಧರಿಸಬೇಕೆಂಬ ನಿರ್ದಿಷ್ಟವಾದ ಆದೇಶಗಳನ್ನೇನೂ ತೋರಿಸಿಲ್ಲವು. ಹಾಗೆ ಆದೇಶ (ಲಿಂಗವನ್ನು ಧರಿಸುವ ಸ್ಥಳ)ಗಳನ್ನು ತೋರಿಸದೆ ಇದ್ದ ಪಕ್ಷದಲ್ಲಿ ಜನಗಳಿಗೆ ಲಿಂಗಧಾರಣೆಯಲ್ಲಿ ಪ್ರವೃತ್ತಿಯೇ ಹುಟ್ಟಲಾರದ ಅವಕಾರಣವೇ ಕಂಠ ಶಿರಸ್ಸು ಮುಂತಾದ ವಿಶೇಷಾಂಗಗಳನ್ನು ಬೋಧಿಸುವ 'ಸರ್ವಾನನ ಶಿರೋಗ್ರೀವಃ' ಎಂಬ ವಾಕ್ಯಸಹ ಹೇಳಲ್ಪಟ್ಟಿದ್ದ ಪಕ್ಷದಲ್ಲಿ ಲಿಂಗಧಾರಣವಿಧಾಯಕವಾದ 'ಸರ್ವಲಿಂಗಂ ಸ್ಥಾಪಯತಿ' ಎಂಬ ವಾಕ್ಯವೇ ಪೂರ್ಣವಾಗದೆ ಹೋಗುತ್ತದೆ. ಆದುದರಿಂದ 'ಸರ್ವಾನನ ಶಿರೋಗ್ರೀವ' ಎಂಬ ವಾಕ್ಯವು ಉಪಜೀವಕವಾಕ್ಯವಾಗಿಯೂ 'ಸರ್ವಲಿಂಗಂ ಸ್ಥಾಪಯತಿ' ಎಂಬ ವಾಕ್ಯವು ಉಪಜೀವ್ಯವಾಕ್ಯವಾಗಿಯೂ ಆಗಿರುವುದರಿಂದ ಇವೆರಡು ವಾಕ್ಯಗಳೂ ಒಟ್ಟುಗೂಡಿ ಏಕವಾಕ್ಯವೇ ಆಗುವುದರಿಂದ 'ಸರ್ವಲಿಂಗಂ' ಎಂಬಲ್ಲಿ ಅಪೂರ್ವವಿಧಿಯಾಗುವುದೆಂದು ಸ್ಪಷ್ಟವಾಯಿತಷ್ಟೆ. ಆದರೆ ತೈತ್ತಿರೀಯ ಶ್ರುತಿಯಲ್ಲಿ ಹೇಳಿದ 'ಸರ್ವಲಿಂಗಂ' ಎಂಬ ವಾಕ್ಯವು ಶ್ವೇತಾಶ್ವತರೋಪನಿಷತ್ತಿನಲ್ಲಿರುವ 'ಸರ್ವಾನನ' ಎಂಬ ವಾಕ್ಯವು ಭಿನ್ನಶ್ರುತಿಗಳಾದ್ದರಿಂದ ಇವುಗಳಿಗೆ ಏಕವಾಕ್ಯತೆಯನ್ನು ಹೇಳುವುದಕ್ಕಿಂತಲೂ ಶ್ವೇತಾಶ್ವತರೋಪನಿಷತ್ತಿನಲ್ಲಿರುವ 'ಸರ್ವಾನನ ಶಿರೋಗ್ರೀವ' ಎಂಬ ವಾಕ್ಯದ ಸಮೀಪದಲ್ಲಿಯೇ 'ಕ್ಷರಂ ಪ್ರಧಾನಮಮೃತಾಕ್ಷರಂ ಹರಃ [illegible] ಏಕಃ [illegible] ತಸ್ಯಾಭಿಧ್ಯಾನಾದ್ಯೋಜನಾತ್ತತ್ತ್ವಭಾವಾತ್ ಭೂಯಶ್ಚಾಂತೇ ವಿಶ್ವಮಾಯಾನಿವೃತ್ತಿಃ. ತಸ್ಯ—ಆ ಶಿವಲಿಂಗವನ್ನು, ಅಭಿಧ್ಯಾನಾತ್—ಜ್ಯೋತಿರ್ಲಿಂಗರೂಪದಿಂದ ಧ್ಯಾನ ಮಾಡುವುದರಿಂದಲೂ, ಯೋಜನಾತ್—ಇಷ್ಟಲಿಂಗರೂಪದಿಂದ ಉತ್ತಮಾಂಗಗಳಲ್ಲಿ ಧರಿಸುವುದರಿಂದಲೂ, ತತ್ತ್ವಭಾವಾತ್—ಶಿವಲಿಂಗವನ್ನು ಸಾಕ್ಷಾತ್ಕರಿಸುವುದರಿಂದಲೂ ವಿಶ್ವಮಾಯಾನಿವೃತ್ತಿಃ—ಸಮಸ್ತಮಾಯೆಯು ನಾಶವಾಗುತ್ತದೆ ಎಂದು ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗಗಳ ಸ್ವರೂಪವು ಹೇಳಲ್ಪಟ್ಟಿರುವುದರಿಂದ ಲಿಂಗಧಾರಣವಿಧಾಯಕವಾದ 'ತಸ್ಯಾಭಿಧ್ಯಾನಾದ್ಯೋಜನಾತ್' ಎಂಬ ವಾಕ್ಯದಿಂದ ಸಾಮಾನ್ಯವಾಗಿ ಲಿಂಗವನ್ನು ಧರಿಸಬೇಕೆಂದು ಆದೇಶವಾಗುತ್ತದಲ್ಲದೆ ಯಾವಯಾವ ಸ್ಥಳಗಳಲ್ಲಿ ಧರಿಸಬೇಕೆಂಬ ವಿಶೇಷಾರ್ಥವು ಆಗುವುದಿಲ್ಲ. ಈ ವಿಶೇಷಾರ್ಥವನ್ನು ಪ್ರಕಾಶಪಡಿಸುವುದಕ್ಕಾಗಿಯೇ ಮುಂದೆ 'ಸರ್ವಾನನಶಿರೋಗ್ರೀವಃ" ಎಂಬ ವಾಕ್ಯವು ಹೊರಟಿರುತ್ತದೆ. ದೂರಸ್ಥವಾದ ಸರ್ವಲಿಂಗವಾಕ್ಯಕ್ಕೆ ಸರ್ವಾನನ ವಾಕ್ಯದೊಡನೆ ಏಕವಾಕ್ಯತೆಯನ್ನಂಗೀಕಾರಮಾಡಿ ಉಪಜೀವ್ಯ ಉಪಜೀವಕಭಾವವನ್ನು ಹೇಳುವುದಕ್ಕಿಂತ ಅತಿ ಸಮೀಪದಲ್ಲಿರುವ "ತಸ್ಯಾಭಿಧ್ಯಾನಾದ್ಯೋಜನಾತ್ತತ್ತ್ವಭಾವಾತ್" ಎಂಬ ವಾಕ್ಯಕ್ಕೂ 'ಸರ್ವಾನನ ಶಿರೋಗ್ರೀವಃ" ಎಂಬ ವಾಕ್ಯಕ್ಕೂ ಪರಸ್ಪರ ಉಪಜೀವ್ಯೋಪಜೀವಕಭಾವವನ್ನು ಹೇಳುವದುಚಿತವಲ್ಲವೆ ಎಂಬ ಸಂದೇಹವು ಉತ್ಪನ್ನವಾಗುತ್ತದೆ. ಆದರೆ ದೂರದಲ್ಲಿರುವ ಎರಡು ವಾಕ್ಯಗಳಿಗೆ ಏಕವಾಕ್ಯತೆಯನ್ನು ಹೇಳುವುದಕ್ಕಿಂತ ಸಮೀಪಸ್ಥಗಳಾದ ವಾಕ್ಯಗಳಿಗೆ ಏಕವಾಕ್ಯತೆಯನ್ನು ಹೇಳುವದು ಯುಕ್ತವಾದರೂ 'ತಸ್ಯಾಭಿಧ್ಯಾನಾದ್ಯೋಜನಾತ್' ಎಂಬ ವಾಕ್ಯದಲ್ಲಿ ಲಿಂಗ ಎಂಬ ಪದವೇ ಇಲ್ಲದ ಕಾರಣ ಹಿಂದಿನ ವಾಕ್ಯದಲ್ಲಿರುವ ಲಿಂಗಪದವನ್ನು ತೆಗೆದುಕೊಂಡು ತಸ್ಯ ಅಂದರೆ ಆ ಶಿವಲಿಂಗವನ್ನು ಎಂದು ಅರ್ಥವಾಗಿ ಅನ್ವಯಮಾಡಬೇಕಾಗಿದೆ. 'ಸರ್ವಲಿಂಗಂ ಸ್ಥಾಪಯತಿ' ಎಂಬ ವಾಕ್ಯವು [illegible] ಇನ್ನು ನ ದೇವತೆಗಳಲ್ಲಿ [illegible] ನಿಯಮವಿಲ್ಲದೆ ಸರ್ವಲಿಂಗವೆಂಬ ಪದವಿರುವುದರಿಂದ [illegible] 'ಸರ್ವಲಿಂಗಂ ಸ್ಥಾಪಯತಿ' ಎಂಬ ವಾಕ್ಯದಿಂದಲೂ ಈ ಸರ್ವಲಿಂಗವಾಕ್ಯಕ್ಕೆ ದೂರದಲ್ಲಿರುವ ಸರ್ವಾನನವಾಕ್ಯದೊಡನೆ ಏಕವಾಕ್ಯತೆಯನ್ನು ಹೇಳುವದುಚಿತವಾಗಿರುವುದರಿಂದ 'ಸರ್ವಲಿಂಗಂ ಸ್ಥಾಪಯತಿ' ಎಂಬಲ್ಲಿ ಅಪೂರ್ವವಿಧಿಗೆ ಯಾವ ಬಾಧಕವಿಲ್ಲ.

ಇನ್ನು ನಿಯಮವಿಧಿಯಿಂದಲೂ ಸಹ ಲಿಂಗಧಾರಣವು ಸಿದ್ಧವಾಗುತ್ತದೆ. 'ಅಗ್ನಿಹೋತ್ರಂ ಜುಹೋತಿ' (ಅಗ್ನಿಹೋತ್ರನಾಮಕವಾದ ಹೋಮದಿಂದ ಸ್ವರ್ಗವನ್ನು ಭಾವಿಸಬೇಕು) ಎಂಬ ಸಾಮಾನ್ಯವಾಗಿ ಸ್ವರ್ಗವನ್ನು ಬಯಸುವವನು ಅಗ್ನಿಹೋತ್ರವನ್ನು ಮಾಡುವನೆಂದು ಸ್ಪಷ್ಟವಾಗಿದೆ. ಈ ವಾಕ್ಯದಲ್ಲಿ ಅಧಿಕರಣವನ್ನು ಹೇಳದಿರುವುದರಿಂದ ಎಲ್ಲಿ ಹೋಮಮಾಡಬೇಕೆಂದು ಅಧಿಕರಣವನ್ನು ಅಪೇಕ್ಷಿಸುತ್ತದೆ. ಸಾಮಾನ್ಯವಾಗಿ ಆಹವನೀಯಾದಿಗಳಲ್ಲಿ ಹೋಮಮಾಡಬೇಕೆಂದು ತೋರಿದರೂ 'ಆಹವನೀಯೇ ಜುಹೋತಿ' ಎಂಬ ವಿಶೇಷವಾಕ್ಯವಿರುವುದರಿಂದ ಅಗ್ನಿಹೋತ್ರಹೋಮವನ್ನು ಆಹವನೀಯದಲ್ಲಿಯೇ ಮಾಡಬೇಕು ಮತ್ತೊಂದರಲ್ಲಿ ಮಾಡಬಾರದೆಂದು ಮೀಮಾಂಸಾಕಾರರು ನಿಯಮವಿಧಿಯನ್ನು ಅಂಗೀಕರಿಸಿರುವಂತೆ 'ಸರ್ವಲಿಂಗಂ ಸ್ಥಾಪಯತಿ' ಎಂಬಲ್ಲಿ ಸಾಮಾನ್ಯವಾಗಿ ಲಿಂಗಸ್ಥಾಪನೆಯು ಹೇಳಲ್ಪಟ್ಟಿರುತ್ತದೆ. ಇಂತಹ ಸ್ಥಲದಲ್ಲಿಯೇ ಸ್ಥಾಪನೆ ಮಾಡಬೇಕೆಂದು ಹೇಳಲ್ಪಟ್ಟಿಲ್ಲವಾದ್ದರಿಂದ ಅಧಿಕರಣ ವಿಶೇಷವನ್ನು ಅಪೇಕ್ಷಿಸುತ್ತದೆ. ಲಿಂಗವನ್ನು ಪಾಷಾಣಪೀಠಾದಿಗಳಲ್ಲಿಟ್ಟು ಪೂಜಿಸಬೇಕೋ, ಹಸ್ತವೆಂಬ ಪೀಠದಲ್ಲಿಟ್ಟು ಪೂಜಿಸಬೇಕೋ ಎಂಬ ಎರಡು ಪಕ್ಷ ಪ್ರಾಪ್ತವಾಗಿ 'ಸರ್ವಲಿಂಗಂ ಸ್ಥಾಪಯತಿ' ಎಂಬ ವಾಕ್ಯದ ಮುಂದೆಯೇ 'ಪಾಣಿಮಂತ್ರಂ ಪವಿತ್ರಂ' ಎಂಬ ವಿಶೇಷವಾಕ್ಯವಿರುವುದರಿಂದ ಮನನಾತ್ ತ್ರಾಯತ ಇತಿ ಮಂತ್ರಂ ಪಾಣೌ ಮಂತ್ರಂ ಪಾಣಿಮಂತ್ರಂ ಎಂಬ ವ್ಯುತ್ಪತ್ತಿಬಲದಿಂದಲೂ 'ತಸ್ಮಾದ್ಬ್ರಹ್ಮಾ ಮಹಾಲಿಂಗಂ ಪಾಣಿಮಂತ್ರೇ ಶಿವಂ ಪ್ರತಿ' ಇತ್ಯಾದಿ ಅಥರ್ವಯುಕ್ತಿಗಳಿಂದಲೂ ಮಂತ್ರರೂಪವಾದ ಶಿವಲಿಂಗವನ್ನು ಹಸ್ತಪೀಠದಲ್ಲಿರಿಸಿಯೇ ಪೂಜಿಸಬೇಕಲ್ಲದೆ ಪಾಷಾಣಾದಿ ಪೀಠಗಳಲ್ಲಿಟ್ಟು ಪೂಜಿಸಬಾರದೆಂದು ನಿಯಮಮಾಡಿರುವುದರಿಂದ ನಿಯಮವಿಧಿಗೂ ಯಾವ ಬಾಧಕವಿಲ್ಲ.

ಇನ್ನು ಪರಿಸಂಖ್ಯಾವಿಧಿಯಿಂದಲೂ ಲಿಂಗಧಾರಣವು ಸಿದ್ಧವಾಗುತ್ತದೆ. ಸಿದ್ಧಾಂತಾಗಮದಲ್ಲಿ—

ಶ್ರೌತಾಶ್ರೌತವಿಭೇದೇನ ದ್ವಿಧಾ ಲಿಂಗಸ್ಯ ಧಾರಣಂ ।
ವೇದಬುದ್ಧಿಲಿಂಗಂ ಶ್ರೌತಮುಕ್ತಮಭಿಧೀಯತೇ ॥
ಅಶ್ರೌತಂ ತಪ್ತಲಿಂಗಾದಿಧಾರಣಂ ಪ್ರಕೃತಂ ಶಿವ ।
ಶ್ರೌತಾನಾಂ ಶಿವಭಕ್ತಾನಾಂ ಸಾಧನಾಗ್ನಿರ್ವಶಾತ್ಮನಾಂ ।
ತಪ್ತಲಿಂಗಧರಾಸ್ತು [illegible] ಮಹಾರ್ಣವೇ ।

ಶ್ರೌತಲಿಂಗಧಾರಣವೆಂತಲೂ ಅಶ್ರೌತಲಿಂಗಧಾರಣವೆಂತಲೂ ಎರಡು ಪ್ರಕಾರವು. ಶ್ರೀಗುರುಗಳಿಂದ ವಿಧಿಪೂರ್ವಕವಾಗಿ ಮಾಡಲ್ಪಟ್ಟ ಲಿಂಗಧಾರಣವೇ ಶ್ರೌತಲಿಂಗಧಾರಣವು. ಪಂಚಿಯಲ್ಲಿ ಕಾಯಿಸಿದ ಲಿಂಗಮುದ್ರೆಯನ್ನು ಶರೀರದಲ್ಲಿ ಧರಿಸುವುದೇ ಅಶ್ರೌತಲಿಂಗಧಾರಣವು. ವೀರಶೈವರಾದರೂ ಕೇವಲ ವೇದಮಾರ್ಗಾವಲಂಬಿಗಳಾದುದರಿಂದ ಇವರಿಗೆ ವೇದವಿಹಿತವಲ್ಲದ ತಪ್ತಲಿಂಗಧಾರಣ ಮಾಡುವುದು ಅತ್ಯಂತ ದೋಷಾವಹವಾದುದು ಎಂದು ಈಶ್ವರನು ಪಾರ್ವತಿಗೆ ಬೋಧಿಸಿರುವುದರಿಂದ 'ಸರ್ವಲಿಂಗಂ ಸ್ಥಾಪಯತಿ' ಎಂಬ ವಾಕ್ಯದಲ್ಲಿ ಸಾಮಾನ್ಯವಾಗಿ ಲಿಂಗಧಾರಣವು ವಿಧಿಸಲ್ಪಡುತ್ತದೆ. ತಪ್ತಲಿಂಗಾದಿಗಳನ್ನಾದರೂ ಧರಿಸಬಹುದೆಂತಲೂ, ವೇದೋಕ್ತಗಳಾದ ಶಿವಲಿಂಗಭಸ್ಮರುದ್ರಾಕ್ಷಿಗಳನ್ನಾದರೂ ಧರಿಸಬಹುದೆಂತಲೂ ಸಮುಚ್ಚಯಾರ್ಥವು ತೋರಿ ಬರುತ್ತದೆ. ಅಶ್ರೌತಲಿಂಗಾದಿಗಳನ್ನು ಧರಿಸಬೇಕಿಲ್ಲದೆ ಅಶ್ರೌತವಾದ ತಪ್ತಲಿಂಗಾದಿಗಳನ್ನೆಂದೂ ಧರಿಸಕೂಡದೆಂದು ವಿಧಿಸುವುದರಿಂದ ಪರಿಸಂಖ್ಯಾವಿಧಿಗೆ ಯಾವ ಬಾಧಕವೂ ಇಲ್ಲ. ಹೀಗೆ ಮೀಮಾಂಸಾಶಾಸ್ತ್ರದಲ್ಲಿ ಹೇಳಿದ ಅಪೂರ್ವ ನಿಯಮ ಪರಿಸಂಖ್ಯಾ ಎಂಬ ಮೂರು ಪ್ರಕಾರವಾದ ವಿಧಿಗಳೂ ಲಿಂಗಧಾರಣವಿಧಾಯಕವಾದ 'ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ' ಎಂಬ ವಾಕ್ಯದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವುವೆಂದು ಶ್ರೀ ವೀರಶೈವಮತಸ್ಥಾಪನಾಚಾರ್ಯರಾದ ರೇಣುಕಾದಿಸ್ವಾಮ್ಯಾಚಾರ್ಯರು ಈ ಮಂತ್ರಾರ್ಥವನ್ನು ಬಹಳ ದೂರವಾಗಿ ವಿಚಾರ ಮಾಡಿರುತ್ತಾರೆ.

ವರ್ತಮಾನಸಂಗ್ರಹ.

ಕಾನ್ಪುರದಲ್ಲಿ ಮಕರಸಂಕ್ರಮಣದ ಗಂಗಾಸ್ನಾನ ಕಾಲದಲ್ಲಿ ತುಂಬಿದ ದೋಣಿಯು ಮೊಗಚಿಕೊಂಡು ಇಬ್ಬರು ಹೆಂಗಸರು ನೀರಿನ ಪಾಲಾದರು.

ಜಬ್ಬಲ್ಪುರದ ಒಬ್ಬ ಸ್ತ್ರೀಯರು ಕೋರ್ಟಿಗೆ ಹೋಗುತ್ತಿದ್ದಾಗ್ಯೆ ಅವರಿಗೆ ಆಗದಿದ್ದ ಜನರು ಕೆಲವರು ಸೇರಿ ಅವರನ್ನು ಹಿಡಿದು ಹೊಡೆದು ಘಾಸಿಪಡಿಸಿದರು. ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಮಂಗಳೂರು ಗೇರುಬೀಜದ ಕಾರ್ಖಾನೆಯಲ್ಲಿ ಒಂದು ಭಾಗವು ಕುಸಿದು ಕೆಲಸ ಮಾಡುತ್ತಿದ್ದ ೩೦ ಜನ ಹೆಂಗಸರ ಮೇಲೆ ಬಿತ್ತು. ಕಷ್ಟದಿಂದ ಎಲ್ಲರನ್ನೂ ಜೀವಸಹಿತ ಉಳಿಸಿದರು. 10 ಜನಕ್ಕೆ ಬಹಳ ಗಾಯವಾಗಿರುವುದಂತೆ!

ಹಿಂಟೆನ್ ಎಂಬವನು ಕಲ್ಕತ್ತೆಯಲ್ಲಿ 75 ರೂ ಸಂಬಳವನ್ನು ಸಂಪಾದಿಸುತ್ತಿದ್ದ ಡಿ ಕ್ರೂಜ್ ಎಂಬ ಒಬ್ಬ ದಾದಿಯನ್ನು ಮದುವೆ ಮಾಡಿಕೊಳ್ಳುತ್ತೇನೆಂದು ಹೇಳಿ ಕೆಲಸಕ್ಕೆ ರಾಜೀನಾಮೆ ಕೊಡಿಸಿದನು. ಅವಳು ತನ್ನಲ್ಲಿಗೆ ಬಂದ ಮೇಲೆ ತಾನು ಹಿಂದೆಯೇ ಮದುವೆ

೧೯ನೇ ರವಿವಾರ ರಾತ್ರಿ ಸುಮಾರು ೩ ಘಂಟೆಯ ಸಮಯದಲ್ಲಿ ನಾರಾಯಣ ಎಂಬವನು ರಾಣಾಸಿಂಗ್ ಪೇಟೆಯಲ್ಲಿರುವ ರಾಮಚಂದ್ರನಾಯಿಡು ಎಂಬವರ ಮನೆಗೆ ನುಗ್ಗಿ ಬೀಗವನ್ನು ಮುರಿದು ಅವರ ಮನೆಯಲ್ಲಿದ್ದ ಒಂದು ಟ್ರಂಕನ್ನೂ ಇನ್ನೂ ಕೆಲವು ಸಾಮಾನುಗಳನ್ನೂ ಕೆಲವು ನಗದು ಹಣವನ್ನೂ ಅಪಹರಿಸಿಕೊಂಡು ಓಡಿಹೋಗುತ್ತಿರುವಾಗ್ಗೆ ಕ್ರೈಂ ಬ್ರಾಂಚಿನ ಮಿ|| ಹೈದರ್ ಅಲ್ಲೀಖಾನ್ ಎಂಬವರು ಬಹಳ ಚಮತ್ಕಾರವಾಗಿ ಹಿಡಿದು ಅಪರಾಧಿಯಲ್ಲಿದ್ದ ಎಲ್ಲಾ ಸಾಮಾನುಗಳನ್ನೂ ಪತ್ತೆಮಾಡಿ ಪದರಿಯವನನ್ನು ಲಾಕಪ್ಪಿನಲ್ಲಿಟ್ಟಿದ್ದಾರೆ.

ಮೈಸೂರು ತಾಲ್ಲೂಕು ಕಚೇರಿ ಶಿರಸ್ತೇದಾರರಾಗಿದ್ದ ಸಿ ಎನ್ ವೆಂಕಟರಾಘವ ಅಯ್ಯಂಗಾರ್ ಮತ್ತು ಕರ್ಣಂ ಪೊನ್ನಯ್ಯ ಇವರುಗಳು ಟ್ರೆಜರಿಯ ಹಣವನ್ನು ದುರುಪಯೋಗಪಡಿಸಿದರೆಂದು ಮ್ಯಾಜಿಸ್ಟ್ರೇಟರು ಮೂವರು ವರ್ಷ ಕಠಿನ ಶಿಕ್ಷೆಯನ್ನು ವಿಧಿಸಿದ್ದರು. ಇವರು ಸೆಷನ್ಸ್ ಕೋರ್ಟಿನಲ್ಲಿ ಅಪೀಲು ಮಾಡಿದರು. ಸೆಷನ್ಸ್ ಜಡ್ಜಿಯವರು ಕೆಳಕೋರ್ಟಿನ ತೀರ್ಮಾನವನ್ನೇ ಕಾಯಂ ಮಾಡಿದರು. ಅನಂತರ ಹೈಕೋರ್ಟಿನಲ್ಲಿ ಅಪೀಲು ಮಾಡಲು ಜಡ್ಜಿಯವರು ಅಪೀಲನ್ನ ವಜಾಮಾಡಿ ಕೆಳಕೋರ್ಟಿನವರು ವಿಧಿಸಿದ ಶಿಕ್ಷೆಯನ್ನೇ ಸ್ಥಿರಪಡಿಸಿದರೆಂದು ತಿಳಿದುಬಂದಿದೆ.

ಕುಣಿಗಲ್ ತಾಲ್ಲೂಕಿಗೆ ೧೬ ಮೈಲುಗಳ ದೂರದಲ್ಲಿರುವ ಮಾರ್ಕೋನಹಳ್ಳಿ ಎಂಬಲ್ಲಿ ಶಿಂಷಾ ನದಿಗೆ ಸುಮಾರು ಇಪ್ಪತ್ತು ಲಕ್ಷ ರೂಪಾಯಿಗಳ ಖರ್ಚಿನಿಂದ ಅಣೆಕಟ್ಟನ್ನು ಕಟ್ಟಲು ಪ್ಲಾನುಗಳೂ ಅಂದಾಜುಪಟ್ಟಿಯೂ ತಯಾರಾಗಿ ಸಿದ್ಧವಾಗಿವೆಯೆಂದೂ, ಬರುವ ಬಡ್ಜೆಟ್ಟಿನಲ್ಲಿ ಈ ಹಣವನ್ನು ಸರಕಾರದವರು ಸ್ಯಾಂಕ್ಷನ್ ಮಾಡುತ್ತಾರೆಂದೂ ಹೇಳಲಾಗಿದೆ. ಈ ಅಣೆಕಟ್ಟಿನಿಂದ ಕುಣಿಗಲ್ ಸುತ್ತಲೂ ಸುಮಾರು ೩,000 ಎಕರೆ ಜಮೀನುಗಳು ಕಬ್ಬು ಮತ್ತು ಭತ್ತದ ಸಾಗುವಳಿಗೆ ಬರುವವೆಂದೂ, ಇದಕ್ಕಾಗಿ ಎಕರೆ ಒಂದಕ್ಕೆ 150 ರೂಪಾಯಿ ಕಂಟ್ರಿಬ್ಯೂಷನ್ ಹಣ ಕೊಡಲು ಅಲ್ಲಿಯ ರೈತರು ಒಪ್ಪಿರುತ್ತಾರೆಂದೂ ತಿಳಿದುಬಂದಿದೆ.

ವಾಗಿರುವೆನೆಂದು ಹೇಳಿದನಂತೆ! ಇದಕ್ಕಾಗಿ ವಾದಿಯು ನಷ್ಟಕ್ಕಾಗಿ ಅವನ ಮೇಲೆ ಮೊಕದ್ದಮೆಯನ್ನು ಮಾಡಿರುತ್ತಾಳೆ

200 ವರ್ಷ ವಯಸ್ಸಿನ ಯೋಗಿಗಳು

ಟಿಬೆಟ್ ದೇಶದಲ್ಲಿ 200 ವರ್ಷ ವಯಸ್ಸಿಗಿಂತ ಹೆಚ್ಚಾಗಿರುವ 200 ಜನ ಯೋಗಿಗಳಿದ್ದಾರಂತೆ!

ಕಂದಾಯದ ರಿಯಾಯತಿ.

ಹೈದರಾಬಾದಿನ ನೈಜಾಂರವರು ಕಂದಾಯದಲ್ಲಿ ರೂಪಾಯಿಗೆ 2 ಆಣೆಯಂತೆ ರಿಯಾಯತಿ ಕೊಟ್ಟಿರುವುದಾಗಿ ತಿಳಿದುಬಂದಿದೆ

ತಾಳೆ (ಕೇದಿಗೆ) ಹೂವಿನಿಂದ ಸಕ್ಕರೆ

ಪ್ರಫುಲ್ಲಘೋಷರವರು ಬಂಗಾಳದ ಹಳ್ಳಿಗಳಲ್ಲಿ ತಾಳೆ (ಕೇದಿಗೆ) ಹೂವಿನ ರಸದಿಂದ ಡೈಮಂಡ್ ಸಕ್ಕರೆ ತಯಾರಿಸುವ ಕೈಗಾರಿಕೆಯನ್ನು ಸ್ಥಾಪಿಸಬೇಕೆಂದು ಯೋಚಿಸಿದ್ದಾರೆ

ಶಿಶುಹತ್ಯೆ!

17 ವರ್ಷ ವಯಸ್ಸಿನ ತರುಣಿಯೊಬ್ಬಳು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣುಮಗುವನ್ನು ನೀರಿನಲ್ಲಿ ಬಿಸಾಡಿ ಕೊಂದಳೆಂಬ ಅಪವಾದನೆಯ ಮೇಲೆ ಪಟ್ಟಣದ ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ

ಪ್ರಪಂಚದಲ್ಲೆಲ್ಲಾ ಸಣ್ಣ ಯಂತ್ರ!

2½ ಇಂಚು ಉದ್ದವೂ 1 ಇಂಚು ಎತ್ತರವೂ ಇದ್ದು ಬಹಳ ವೇಗವಾಗಿಯೂ ಚನ್ನಾಗಿಯೂ ಕೆಲಸ ಮಾಡುವ ಆಶ್ಚರ್ಯಕರವಾದ ಸಣ್ಣ ಹಡಿಯಂತ್ರವನ್ನು ನ್ಯೂಯಾರ್ಕಿನ ನ್ಯಾಷನಲ್ ಎಕ್ಸಿಬಿಷನ್ನಲ್ಲಿ ಪ್ರದರ್ಶಿಸಿದ್ದಾರೆ.

ಶ್ರೀಮತಿ ಕಮಲಾನೆಹರೂರವರು ಆರೋಗ್ಯ ಹೊಂದುತ್ತಿರುವರು.

ಶ್ರೀಮತಿ ಕಮಲಾನೆಹರೂರವರು ಬೋವಾಲಿಗೆ ಬಂದಿನಿಂದ ಆರೋಗ್ಯ ಹೊಂದುತ್ತಿರುವರು ಪಂ|| ಜವಾಹರಲಾಲರವರು ಈಚೆಗೆ ಸರ್ಕಾರದ ಅನುಮತಿ ಪಡೆದು ಅವರನ್ನು ಕಂಡು ಒಂದು ದಿನವಿದ್ದು ಮರಳಿ ಜೈಲಿಗೆ ಹೋದರು

ಅಗ್ನಿಪರ್ವತದ ಉತ್ಪತ್ತಿ ಸೂಚನೆ.

...ವಾಲ ಜಿಲ್ಲೆಯಲ್ಲಿರುವ ಲ್ಯಾಂಡ್ ಸ್ಲೈಡಿನಲ್ಲಿಯ ...ದ ಮಗ್ಗುಲಲ್ಲಿ ಒಂದು ಜಾತಿಯ ಬಿಸಿಬಿಸಿಯಾದ ...ಯು ಹೊರಡುತ್ತಿರುವುದಂತೆ! ಆದರಿಂದ ಅಲ್ಲಿ ಅಗ್ನಿಪರ್ವತವು ಕಾಣಿಸಬಹುದೆಂಬ ಭೀತಿಯು ಹುಟ್ಟಿದೆ

ಮೋಟಾರು ಅನಾಹುತ

ನಮ್ಮ ಚಕ್ರವರ್ತಿಯವರ ಮಕ್ಕಳಾದ ಡ್ಯೂಕ್ ಕೆಂಟ್ ಮತ್ತು ಇವರ ಪತ್ನಿಯವರು ಪ್ಯಾರಿಸ್ನ ಮೋಂಬಾರ್ಡ್ ಕಾರಿನಲ್ಲಿ ಹೋಗುತ್ತಿದ್ದಾಗ 6 ವರ್ಷದ ಹೆಣ್ಣುಮಗುವು ಕಾರಿಗೆ ಸಿಕ್ಕಿಬಿತ್ತು ಮಗು ಆಸ್ಪತ್ರೆಗೆ ಸಾಗಿಸಿದರು

ಕೋರ್ಟಿನಲ್ಲಿ ಅಪರಾಧಿಯ ಮರಣ.

ಕನ್ನನೂರು ತಾಲ್ಲೂಕ ಆಫೀಸಿನಲ್ಲಿ ಜಾಯಿಂಟ್ ಮ್ಯಾಜಿಸ್ಟ್ರೇಟರಾದ ಮಿ|| ಪಾಂಡೇಕರ್ ಐ ಸಿ ಎಸ್ ರವ. ಮೊಕದ್ದಮೆಯನ್ನು ತನಿಖೆಮಾಡುತ್ತಿದ್ದಾಗ ಆಪಾದಿತರಲ್ಲಿ ಒಬ್ಬನಾದ 70 ವರ್ಷ ವಯಸ್ಸಿನ ಮುದುಕನು ಅಕಸ್ಮಾತ್ ವಾಂತಿಮಾಡಿ ಅಲ್ಲಿಯೇ ಸತ್ತುಹೋದನು

ಅಮೇರಿಕೆಯ ವಿದ್ಯಾರ್ಥಿ ವೇತನ.

ಅಮೇರಿಕೆಯ ಯುನೈಟೆಡ್ ಪ್ರಾವಿನ್ಸ್ ಗೌರ್ನಮೆಂಟಿನವರು ಇಂಡಿಯಾದ ಸ್ತ್ರೀ ಗ್ರ್ಯಾಜುಯೇಟರು ಯಾರಾದರೂ ಉಪಾಧ್ಯಾಯಿನಿಯ ಶಿಕ್ಷಣಹೊಂದುವುದಕ್ಕೆ ಅಮೇರಿಕೆಗೆ ಬರುವುದಾದರೆ 210 ಪೌಂಡು ವಿದ್ಯಾರ್ಥಿವೇತನವನ್ನು ಕೊಡುವುದಾಗಿ ಗೊತ್ತುಮಾಡಿದ್ದಾರೆ

ಕಳವುಮಾಡಿದ ಅಪಮಾನಕ್ಕಾಗಿ ಆತ್ಮಹತ್ಯೆ!

ಲಾಹೋರಿನ ಒಂದು ಔಷಧಾಲಯದಲ್ಲಿ ಕಾಂಪೋಂಡರ್ ಕೆಲಸಮಾಡುತ್ತಿದ್ದ ಮುನ್ಷಿರಾಂ ಎಂಬವನು 25 ರೂಪಾಯಿ ಬೆಲೆಬಾಳುವ ಔಷಧವನ್ನು ಕಳವು ಮಾಡಿದನೆಂದು ತನ್ನ ಮೇಲೆ ಬಂದ ಆಪಾದನೆಯ ಅಪಮಾನವನ್ನು ಸಹಿಸಲಾರದೆ ವಿಷವನ್ನು ತಿಂದು ಆತ್ಮಹತ್ಯೆಮಾಡಿಕೊಂಡನು

ಮಕ್ಕಳ ಆಟ ಮರಣದಲ್ಲಿ ಕೊನೆಗಂಡಿತು!

ಕರಾಚಿಯಲ್ಲಿ 6 ವರ್ಷ ಮತ್ತು 7 ವರ್ಷ ವಯಸ್ಸಿನ ಇಬ್ಬರು ಮಕ್ಕಳು ಆಟವಾಡುತ್ತಿದ್ದಾಗ್ಗೆ ಜಗಳ ಬಂದು ದೊಡ್ಡವನು ಚಿಕ್ಕವನನ್ನು ಹೊಡೆದನು ಅದು ಅಪಾಯವಾಗಿ, ಚಿಕ್ಕಹುಡುಗನ ಸತ್ತುಹೋದನು ಪೋಲೀಸರು ದೊಡ್ಡವನ ಮೇಲೆ ಕೊಲೆಯ ಅಪಾದನೆಯನ್ನು ತಂದು ಛಾರ್ಜ್ ಮಾಡಿದ್ದಾರೆ

ಕಲೆಕ್ಟರರ ಮೇಲೆ ಪುಂಡರ ದಾಳಿ

ಐರ್ಲೆಂಡಿನ ಮಿಡಲ್‌ಫೋರ್ಡ್ ಎಂಬಲ್ಲಿ ರೆವಿನ್ಯೂ ಕಲೆಕ್ಟರ್ ಮನೆಯಮೇಲೆ ಕೆಲವು ಪುಂಡರು ದಾಳಿ ನಡೆಸಿದರು ಮಲಗಿದ್ದ ಕಲೆಕ್ಟರ್ ಮತ್ತು ಅವರ ಪತ್ನಿಯವರಿಗೆ ಗುಂಡುಹಾರಿಸಿ ಮನೆಯ ಅನೇಕ ಕಿಟಕಿಗಳನ್ನೆಲ್ಲಾ ಒಡೆದುಹಾಕಿದರು ಈ ಸಂಬಂಧದಲ್ಲಿ ಎಲ್ಲರನ್ನು ದಸ್ತಗಿರಿಮಾಡಿದ್ದಾರೆ

21 ವರ್ಷಕಾಲ ಮತಿ ಇಲ್ಲದಿದ್ದರೂ ಅತ್ಯುತ್ತಮ ಹಸು

ಇಂಗ್ಲೆಂಡ್ ದೇಶಕ್ಕೆ ಸೇರಿದ ಜರ್ಸೀ ಎಂಬಲ್ಲಿ ಈಗ 21 ವರ್ಷಗಳಿಂದ ಮತಿಯೇ ಇಲ್ಲ ಆದಾಗ್ಯೂ ವಾಯುಗುಣವು ಅತ್ಯಂತ ಹಿತಕರವಾಗಿದ್ದು, ಆರೋಗ್ಯವಾಯಿವಾಗಿದೆಯಂತೆ! ಹೀಗಿರುವುದ ಆಸ್ಥಳದ ಮಾಲಿ ಬೀಳದ ಜಾಂಟೀ (Violet) ಎಲ್ಲದ ... ಗುಣವೆಂದು ವಿಜ್ಞಾನಿ ಶಾಸ್ತ್ರಜ್ಞರು ... ತ್ತಾರೆ

ಜಪಾನ ಅಫೀಸರ ದಸ್ತಗಿರಿ

ರಷ್ಯಾದ ಸೋವಿಯಟ್ ಸರಕಾರದವರು ರಷ್ಯಾ ಚೀಣ ಪದ್ದಿನಲ್ಲಿರುವ ಸ್ಥಳಗಳ ಫೋಟೋ ತೆಗೆಯುತ್ತಿದ್ದನೆಂದು ಜಪಾನ್ ಆಫೀಸರನ್ನೂ ಅವನ ಸಾವಕನನ್ನೂ ದಸ್ತಗಿರಿಮಾಡಿದ್ದಾರೆ ಆಫೀಸರನು ತಪ್ಪಿಸಿಕೊಂಡು ಹಾರಿದ ತನ್ನ ಮಗನನ್ನು ಹುಡುಕುತ್ತಿದೆ ನಾನು ಉತ್ತರಕೊಟ್ಟಿದ್ದಾನೆ ವಿಚಾರಣೆಯು ನಡೆಯುತ್ತಿದೆ

ಶಾರದಾಬಿಲ್ಲಿನ ವ್ಯಾಜ್ಯ

ಅನರೆರಿ ಮ್ಯಾಜಿಸ್ಟ್ರೇಟರಾದ ರಾವ್‌ಸಾಹೇಬ್ ಮೋತೀಲಾಲರ. 11 ವರ್ಷ ವಯಸ್ಸಿನ ಪೈನರ್ ಹುಡುಗಿ ವಿದ್ಯಾವತಿಯೆಂಬವಳನ್ನು ಮದುವೆಯಾದರೆಂದು ಅಜ್ಮೀರ್ ಕೋರ್ಟಿನಲ್ಲಿ ಕೇಸಾಗಿದ್ದಿತಷ್ಟೆ! ಈಗ ವಿದ್ಯಾವತಿಯ ತಂದೆಯು ಪ್ರತಿವಾದಿಯಾಗಿದ್ದಾನೆ ಆಪಾದಿತರು ತಾವು ಹುಡುಗಿಯನ್ನು ಮದುವೆಯಾಗಲಿಲ್ಲವೆಂದು ಹೇಳುತ್ತಾರೆ ಇನ್ನೂ ತೀರ್ಪು ಆಗಿಲ್ಲ

ಮೋಟಾರು ಅನಾಹುತ.

ಧಾರವಾಡ ಡಿ|| ರಾಣಿಬೆನ್ನೂರಿನ ಹತ್ತಿರ ಮೋಟಾರ್ ಅನಾಹುತವಾಗಿ ಇಬ್ಬರು ಹೆಂಗಸರೂ ಏಳು ಜನ ಗಂಡಸರೂ ಮರಣ ಹೊಂದಿದರು ಅನೇಕರಿಗೆ ಬಹಳ ಗಾಯಗಳಾಗಿವೆ ಮೋಟಾರು ರಸ್ತೆಯಲ್ಲಿ ಹೋಗುತ್ತಿರುವಾಗ ಒಂದು ಭಾರಿಮರಕ್ಕೆ ಢಿಕ್ಕಿ ಹೊಡೆದದ್ದರಿಂದ ಈ ಅನಾಹುತವಾಯಿತೆಂದು ತಿಳಿದುಬಂದಿದೆ ಗಾಯಪಟ್ಟವರನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ

ಚಳಿಯಿಂದ ಮರಣಗಳು.

ಸಿಂಧು, ಕರಾಚಿ, ಲಾಹೋರು ಮೊದಲಾದ ಪ್ರಾಂತಗಳಲ್ಲಿ ವಿಪರೀತ ಚಳಿಯಿಂದ ಅನೇಕ ಮರಣಗಳು ಸಂಭವಿಸಿವೆ ಲಾಹೋರಿನಲ್ಲಿ ಸುಮಾರು 20 ಮಂದಿ, ಡೇರಾಇಸ್ಮಾಯಿಲ್‌ಖಾನದಲ್ಲಿ 3 ಮಂದಿ ಕಾನ್‌ಸ್ಟೇಬಲರು ಶಿಕಾರಿಪುರದಲ್ಲಿ 4 ಮಂದಿ ಈ ರೀತಿ ಮೃತರಾಗಿದ್ದಾರೆ 70 ವರ್ಷ ವಯಸ್ಸಿನ ಮುದುಕನೊಬ್ಬನು ಔಷಧಕ್ಕೆ ಆಸ್ಪತ್ರೆಗೆ ಹೋಗುತ್ತಿದ್ದವನು ಚಳಿಯನ್ನು ಸಹಿಸಲಾರದೆ ದಾರಿಯಲ್ಲೇ ಮೃತನಾದನು

7 ವರ್ಷಕ್ಕೆ 17 ವಯಸ್ಸಿನಷ್ಟು ಬುದ್ಧಿ.

ಅಮೇರಿಕೆಯ ಬ್ರೂಕ್‌ಲೀನ್ ಎಂಬಲ್ಲಿ ಯೆಹೂದ್ಯ ಪಂಗಡಕ್ಕೆ ಸೇರಿದ ಒಬ್ಬ ಹುಡುಗನಿದ್ದಾನೆ ಜನ್ಮದಿಂದಲೂ ಇವನ ಮೇಧಾಶಕ್ತಿಯು ಆಶ್ಚರ್ಯಜನಕವಾಗಿದೆ ಇವನ ತೊದಲು ಮಾತುಗಳೂ ಕೂಡ ವ್ಯಾಕರಣಬದ್ಧವಾಗಿದ್ದುವಂತೆ! 2 ವರ್ಷ ವಯಸ್ಸಿನಲ್ಲೇ ಓದಲು ಕಲಿತನಂತೆ! ಕ್ಷೇತ್ರಗಣಿತವು ಇವನಿಗೆ ಬಹು ಸುಲಭವಾಗಿದೆಯಂತೆ! ವಾಸ ನಿರ್ಮಿಸಿದ ಹೊಸಮಾದರಿಯ ಅಂಕಿಗಳಿಂದ ಲೆಖ್ಖಾಚಾರವನ್ನು ಅತಿ ತೀವ್ರವಾಗಿ ಮಾಡಬಲ್ಲನಂತೆ! ಈತನು 7 ವಯಸ್ಸಿನವನಾದರೂ 17 ವರ್ಷ ವಯಸ್ಸಿನವರಿಗಿಂತ ಹೆಚ್ಚು ಜ್ಞಾನವುಳ್ಳವನಾಗಿದ್ದಾನೆಂದು ತಿಳಿದುಬಂದಿದೆ

ಋಣದಿಂದ ಪ್ರಾಣಹಾನಿ!

ಭವಾಲಪುರ ಸ್ಟೇಟಿನ ಜಲಾಯಾ ಎಂಬ ಹಳ್ಳಿಯಲ್ಲಿ ಒಬ್ಬ ಮುಸಲ್ಮಾನ ರೈತನು ಹತ್ತಿಬೆಳೆಯನ್ನು ಮಾರಿ ಬಂದ 100 ರೂ ಗಳ ನೋಟನ್ನು ಹೆಂಡತಿಯ ಕೈಯಲ್ಲಿ ಕೊಟ್ಟನು ಅವಳು ಕೆಲಸದ ಅವಸರದಲ್ಲಿ ಮರೆತು ಸಲದಮೇಲೆ ಇಟ್ಟಳು ಇವರ ಚಿಕ್ಕ ಮಗುವು ಅವನ್ನು ತೆಗೆದು ಉರಿಯುತ್ತಿದ್ದ ಬೆಂಕಿಗೆ ಹಾಕಿತು ತಂದೆಯು ಕೋಪದಿಂದ ಮಗುವನ್ನು ಬೆಂಕಿಯಲ್ಲಿ ಹಾಕಿದನು ಇವನ್ನು ನೋಡಿ ಸಹಿಸಲಾರದೆ ತಾಯಿಯು ಬಾವಿಯಲ್ಲಿ ಬಿದ್ದು ಪ್ರಾಣಬಿಟ್ಟಳು. ಮಗುವು ವಿಷಮಾವಸ್ಥೆಯಲ್ಲಿದೆ, ತಂದೆಯನ್ನು ದಸ್ತಗಿರಿಮಾಡಿದ್ದಾರೆ.

ಹುಡುಗಿಯನ್ನು 14 ರೂಪಾಯಿಗಳಿಗೆ ವಿಕ್ರಯಿಸಿದರು

ಹಬಿಗಂಜ್ ಎಂಬಲ್ಲಿ ಮೊನೆ ಎಂಬವನೂ ಒಬ್ಬ ಹೌಕಿದಾರನೂ ಸೇರಿ ಅಜ್ಜನ ಬೀಬಿಯೆಂಬುವಳ ಮಗಳು 18 ವರ್ಷ ವಯಸ್ಸಿನ ಹುಡುಗಿಯನ್ನು ಅಪಹರಿಸಿ ಅದೇ ಊರಿನ ಲೋಕಲ್ ಬೋರ್ಡ್ ಪ್ರೆಸಿಡೆಂಟ್ ಮೌಲ್ವಿ ಮುದಬಿರ್‌ಹುಸೇನ್ ಚೌದರಿ ಎಂಬವರಿಗೆ 14 ರೂಪಾಯಿಗಳಿಗೆ ವಿಕ್ರಯಿಸಿದರು ಇದನ್ನು ತಿಳಿದು ತಾಯಿಯು ಸದರಿ ಹುಸೇನ್ ಚೌದರಿಯ ಬಳಿ ಹೋಗಿ ತನ್ನ ಮಗಳನ್ನು ಬಿಟ್ಟುಕೊಡಬೇಕೆಂದು ಕೇಳಲು 14 ರೂಗಳನ್ನು ವಾಪಸ್ಸು ಕೊಡಬೇಕೆಂದರು. ಅದಕ್ಕೆ ತಾಯಿಯು ಒಪ್ಪದೆ ಪೋಲೀಸಿಗೆ ತಿಳಿಸಿದ್ದರಿಂದ ಹುಡುಗಿಯನ್ನು ಹುಡುಕಿ ಪತ್ತೆಮಾಡುವುದಕ್ಕೆ ಸರ್ಚ್‌ವಾರೆಂಟು ತಂದಿರುತ್ತಾರೆ

ಅರಳಿಮರದಲ್ಲಿ ದುರ್ಗಾವಿಗ್ರಹ

ಸಿಂಧ್ ಹೈದರಾಬಾದಿಗೆ ಸೇರಿದ ಬಂಡಿಯಾಲ ...ರ್ ಎಂಬಲ್ಲಿಯ ಒಂದು ಅರಳಿಮರದಲ್ಲಿ ದುರ್ಗಾಮೂರ್ತಿಯು ಪ್ರಕಟವಾಗಿ ಅದರ ಹಂಟೆಗೆ ಹೋದವರಿಗೆಲ್ಲಾ ತೊಂದರೆಯಾಗುತ್ತಿದೆಯಂತೆ! ಆ ಊರಿನ ಗುಲಾಂದಾಸ್ ಎಂಬ ಬ್ರಾಹ್ಮಣನು ಈ ಮರವನ್ನು ಅಲ್ಲಿಯ ಕಬ್ಬಿಣಕೆಲಸದ ಮುಸಲ್ಮಾನನೊಬ್ಬನಿಗೆ ಮಾರಿದನು ಆ ಮುಸಲ್ಮಾನನ ಮಗನು ಗುಡಿಸಲು ಕಟ್ಟುವುದಕ್ಕಾಗಿ ಮರವನ್ನು ಕಡಿಯಲು ಹೋದಾಗ ಮರದ ಮಧ್ಯದಿಂದ ಸುಮಾರು 8 ಅಂಗುಲ ಪ್ರಮಾಣವುಳ್ಳ ಕತ್ತಿನಲ್ಲಿ ರಕ್ತಲಾಂಛನವುಳ್ಳ ಮುಖದಲ್ಲಿ ತಿಲಕದಿಂದ ಕೂಡಿದ ದುರ್ಗಾದೇವಿಯ ವಿಗ್ರಹವು ಹೊರಬಿತ್ತು. ಮರವನ್ನು ಮಾರಿದಾಗಿನಿಂದ ಬ್ರಾಹ್ಮಣನ ಹೆಂಡತಿಯೂ, ಮರವನ್ನು ಕಡಿದಾಗಿನಿಂದ ಮುಸಲ್ಮಾನನ ಮಗನೂ ಖಾಯಿಲೆ ಬಿದ್ದು ಅಸ್ವಾಯಸ್ಥಿತಿಯಲ್ಲಿದ್ದಾರೆಂದು ತಿಳಿದುಬಂದಿದೆ

(೯ನೆಯ ಫುಟದ ಮುಂದರಿದುದು)

ಯಲ್ಲಿ [illegible]

[illegible] ಗಳು ವೃದ್ಧಿಯಾಗಿ ಈ [illegible] ಕೀರ್ತಿಸ್ತಂಭಗಳು [illegible] ಸದಿಂದ ಅನ್ನದಾದಿಗಳಿಗೆ [illegible] ದನ್ನು ವಿದ್ವಾಂಸರಿಗೆ [illegible] ಒಳಕ ಸೌಕರ್ಯಗಳನ್ನು [illegible] ಮತ್ತು ಮಹಾಪ್ರಭುಗಳವರ ಒಯ್ದಾಗ್ಯದಿಂದ ಸಭೆಯು [illegible] ಗಳ ಚಿತ್ತಕ್ಕೆ [illegible] ದಲ್ಲಿ ಸದ್ಧತಿಯಂತೆ ಸಿತ್ಯಪ್ರೂ ಪುರಾಣವು ಪ್ರವಚಿತವಾಗಿರುವುದು. ಪೌರರು ತನುಮನೋಧನಗಳಿಂದ ಸೇವೆಯನ್ನು ಮಾಡಲು [illegible] ದನ ಮತ್ತು ಸಂಜೆಗಾಲಕ್ಕೆ [illegible] ಪ್ರತಿಯೊಂದು ಗ್ರಾಮಕ್ಕೂ ಬಂದು ಸೇವೆಯನ್ನು ಮಾಡುತ್ತಿರುವುದು ಸ್ತುತ್ಯವಾಗಿರುವುದು. ಈ ಮಹಾಸಭೆಗೆ ಜಗದ್ಗುರು ಪಂಚಾಚಾರ್ಯರು ಇಷ್ಟಾರ್ಥವನ್ನೀಯಲಿ.

ಓರ್ವ ಗುರುಭಕ್ತ

ಶೋಚನೀಯ ನಿಧನ.

ಒನವರಿ ತಾ|| ೧೮-೧-೩೫ ನೇ ಶುಕ್ರವಾರ ಸಾಯಂಕಾಲ ಏಳು ಘಂಟೆಯಲ್ಲಿ ಬಳ್ಳಾರಿಯ ಪ್ರಸಿದ್ಧ ಶ್ರೀಮಂತರೂ ವರ್ತಕಶ್ರೇಷ್ಠರೂ ಆದ ಶ್ರೀಮಾನ್ ಕುಪ್ಪಗಲ್ಲು ಅಯ್ಯಪ್ಪನವರ ಪರಲೋಕಗಮನದ ವಿಷಯವನ್ನು ಪ್ರಕಟಿಸಲು ಮನಸ್ಸಿಗೆ ಅತ್ಯಂತ ವ್ಯಸನವಾಗುತ್ತದೆ. ಈ ದುಃಖದಾಯಕ ನಿಧನದ ವಾರ್ತೆಯನ್ನು ಕೇಳಿ ಯಾವ ವೀರಶೈವ ಸಾಮಾಜಿಕನಿಗೆ ದುಃಖವಾಗಲಿಕ್ಕಿಲ್ಲ? ಇವರು ತಮ್ಮ ಆಯುಷ್ಯದಲ್ಲಿ ಎಷ್ಟೋ ಪುಣ್ಯಕಾರ್ಯಗಳನ್ನು ಮಾಡಿರುವರು. ಅವುಗಳೆಲ್ಲವನ್ನು ಇಲ್ಲಿ ವರ್ಣಿಸಲು ಶಕ್ಯವಿಲ್ಲ. ಪ್ರಾಸಂಗಿಕವಾಗಿ ಬಂದೆರಡು ವಿಷಯಗಳನ್ನು ಮಾತ್ರ ಸಂಕ್ಷೇಪವಾಗಿ ಬರೆಯುವೆನು. ಇವರು ಮೊದಲು ಬಹಳ ಬಡತನದಲ್ಲಿದ್ದು ಪ್ರಾಮಾಣಿಕತನದಿಂದ ವ್ಯಾಪಾರವನ್ನು ಮಾಡಿ ಶ್ರೀಮಂತರಾದವರು. ತಮ್ಮ ಜೀವಿತಕಾಲದಲ್ಲಿ ಒಮ್ಮೆಯಾದರೂ ಕೋರ್ಟಿನ ಬಾಗಿಲನ್ನು ಕಾಣಲಿಲ್ಲ. ಒಡವೆಯಲ್ಲಿ ದಯೆ [illegible] ಮತ್ತಾವ [illegible] ಆಗಿದ್ದಲ್ಲದೆ ಸ್ಕೂಲಿನ ಎಲ್ಲಾ ಪ್ರಸಂಗಗಳ ವಿಷಯದಲ್ಲಿ ಅತಿ ಉತ್ಸಾಹವುಳ್ಳವರಾಗಿದ್ದರು. ಬಳ್ಳಾರಿಯಲ್ಲಿ ಸ್ಥಾಪಿತವಾದ [illegible] ವೀರಶೈವವಿದ್ಯಾವರ್ಧಕ ಸಂಘದ [illegible] ಅದನ್ನು ಅತ್ಯಂತ ಉನ್ನತ ಸ್ಥಿತಿಗೆ ತಂದರು.

ಇವರು ಈ ಊರಲ್ಲಿ ತಮ್ಮ ಹೆಸರಿನಿಂದ ವೀರಶೈವ ವಿದ್ಯಾರ್ಥಿಗಳಿಗಾಗಿ ಒಂದು ಅನ್ನಛತ್ರವನ್ನು ಸ್ಥಾಪಿಸಿರುವರು. ಈ ಛತ್ರದಲ್ಲಿ ೫೦ ಜನ ವಿದ್ಯಾರ್ಥಿಗಳು [illegible] ಇವರಲ್ಲಿ ಕೆಲವರು ಸಂಸ್ಕೃತ [illegible] ಕೆಲವರು ಜ್ಯೋತಿಷವೈದಿಕ [illegible] ಅಭ್ಯಾಸಮಾಡುತ್ತಿರುವರು. ಇವರಲ್ಲಿ ಜ್ಯೋತಿಷ [illegible] ವಿದ್ಯಾರ್ಥಿಗಳ [illegible] ಈ ವಿದ್ಯಾರ್ಥಿಗಳಿಂದಲೇ [illegible] ಶ್ರೀ ಗುರುನಿವಾಸ ಸಂಸ್ಕೃತ [illegible] ಈ ಎಲ್ಲಾ ವಿದ್ಯಾರ್ಥಿಗಳ [illegible] ರೂಪಾಯಿಗಳು [illegible] ಈ ಛತ್ರದ [illegible] ಈ ಛತ್ರವು ಚಿರಸ್ಥಾಯಿಯಾಗಬೇಕೆಂದು ೫೦೦೦೦ ರೂಪಾಯಿಗಳನ್ನು [illegible] ಇದನ್ನು [illegible] ಒಂದು ಟ್ರಸ್ಟ್ ಕಮಿಟಿಯನ್ನು ನೇಮಿಸಿರುವರು. ಇದ್ದರಿಂದ ಈ ಸಂಸ್ಥೆಯು ಆಚಂದ್ರಾರ್ಕವಾಗಿ ನಡೆಯುವದೆಂದು ಹೇಳಲು ಏನೂ ಅಡ್ಡಿಯಿಲ್ಲ. ಇವರು [illegible] ಸ್ವಲ್ಪ ದ್ರವ್ಯ ಸಹಾಯವನ್ನು ಮಾಡಿರುವರು ಮತ್ತು ಇವರಿಂದ [illegible] ಈಗಿರುವ ವೀರಶೈವ ಸ್ಕೂಲನ್ನು ಇವರ ಹೆಸರಿನಿಂದ ಹೈಸ್ಕೂಲನ್ನಾಗಿ ಮಾಡಬೇಕೆಂದು ಇಲ್ಲಿಯ ಪ್ರಮುಖ ವೀರಶೈವರು ಆಲೋಚಿಸಿದರು. ಅದೂ ಕೂಡ ಸಮಾಜಪ್ರೇಮಿಗಳಾದ ಇವರಿಂದ ಇಷ್ಟರಲ್ಲಿಯೇ ಜರುಗಬಹುದಾಗಿದ್ದಿತು. ಇಂಥ ಶ್ರೇಷ್ಠ ಧರ್ಮಾತ್ಮರನ್ನು ಅಲ್ಪಕಾಲದಲ್ಲಿಯೇ ಕಳೆದುಕೊಂಡ ವೀರಶೈವರ ದುರ್ದೈವಕ್ಕೆ ಪಾರವೇ ಇಲ್ಲವೆಂದು ಹೇಳಬೇಕಾಗಿದೆ. ಈ ಧರ್ಮಾತ್ಮರ ಸ್ವರ್ಗವಾಸವು [illegible] ವೀರಶೈವರಿಗೆ ಅಲ್ಲದೆ ಎಲ್ಲಾ ವೀರಶೈವರಿಗೂ ದುಃಖದಾಯಕವಾಗಿದೆ. ಇವರು ತಮಗೆ ಪುತ್ರಸಂತಾನವಿಲ್ಲದುದರಿಂದ ತಮ್ಮ ಎಲ್ಲಾ ಆಸ್ತಿಯನ್ನೂ ಸಮಾಜಕ್ಕಾಗಿಯೇ ಅರ್ಪಿಸಬೇಕೆಂಬ ಸದಿಚ್ಛೆಯುಳ್ಳವರಾಗಿದ್ದರು. ಹೇಗೆಯೇ ಇವರ ಧರ್ಮಗುಣಗಳು ಅಗಣಿತವಾಗಿರುತ್ತವೆ. ಇಂಥ ಧರ್ಮಾತ್ಮರ ಆತ್ಮಕ್ಕೆ ಶ್ರೀ ಸದ್ಗುರುವು [illegible] ಶಾಂತಿಯನ್ನಿತ್ತು ಇನ್ನುಳಿದ ಇವರ ಬಂಧುಗಳಿಗೆ ಇವರ [illegible] ಪೂರ್ಣಗೊಳಿಸುವ ಬುದ್ಧಿಯನ್ನೂ ಆಯುರಾರೋಗ್ಯೈಶ್ವರ್ಯಾದಿ ಸಂಪತ್ತುಗಳನ್ನೂ ಇತ್ತು ರಕ್ಷಿಸಲೆಂದು ಪ್ರಾರ್ಥಿಸುವ,

ಡಿ ಯಂ ಸೊಗಮೇಶಮಠ್,
ಶ್ರೀಗುರುನಿವಾಸ ಸ್ಕೂಲ್, ಬಳ್ಳಾರಿ

ಪವಿತ್ರಮರಣ

ವಿಶ್ವಕರ್ಮ ಮಠೀಯರಾದ ಬ್ರಹ್ಮಶ್ರೀ ಗುರುವೆಂಕಟಾಚಾರ್ಯಸ್ವಾಮಿಗಳವರ ಧರ್ಮಪತ್ನಿ ಸದ್ಧರ್ಮ ಪೂಜ್ಯಮಹಾಮಾತೃಶ್ರೀ ನಂಜಾಂಬಾ ಅಮ್ಮನವರು ತಾ|| 11-1-1935 ನೇ ಶುಕ್ರವಾರ ಮಧ್ಯಾಹ್ನ 3 ಘಂಟೆಗೆ ಶ್ರವಣಬೆಳಗೊಳಕ್ಷೇತ್ರದಲ್ಲಿ ವೈಕುಂಠವನ್ನು ಹೊಂದಿದರು. ಇವರು ತಮ್ಮ ಮನೆ ಮುಡಿಯ ಮುಂತಿ ಎಲ್ಲಾ ಬಂಧುಮಿತ್ರ, ಶಿಷ್ಯರೊಡನೆ ಮಾತನಾಡುತ್ತಲೂ ಶ್ರೀ ಮಹಾದೇವಿಯ ಧ್ಯಾನವನ್ನು ಮಾಡುತ್ತಲೂ ಶ್ರೀ ಮಹಾದೇವಿ ಪ್ರಸಾದ ದಿವ್ಯವ್ಯಕ್ತವನ್ನು ಪಾನಮಾಡಿ ಪಂಚಾಕ್ಷರೀ ಮಂತ್ರವನ್ನುಚ್ಚರಿಸಿ ತಮ್ಮ ಆತ್ಮವನ್ನು ಶ್ರೀ ಪರಮಾತ್ಮನಲ್ಲಿ ಸಮರ್ಪಿಸಿದರು. ಇವರ ಶರೀರವನ್ನು ವೈಭವದಿಂದ ಪೂಜೆಮಾಡಿ "ಪೂಜ್ಯಮಹಾಮಾತೃಶ್ರೀ ನಂಜಾಂಬಾ ಮಾತಾಕೀ ಜೈ" ಎಂದು ಎಲ್ಲಾ ಶೋಕಯುಕ್ತ ಮಹಾಜನಗಳು ಗುಂಪಾಗಿ ಸೇರಿಕೊಂಡು ಜಯಘೋಷದೊಡನೆ ಸ್ಮಶಾನದವರೆಗೂ ತೆಗೆದುಕೊಂಡುಹೋಗಿ ಬಹಳ ಆನಂದದಿಂದ ಸಂಸ್ಕಾರವಮಾಡಿದರು. ಇವರಿಗೆ 75 ವರ್ಷ ವಯಸ್ಸಾಗಿದ್ದು 13 ಜನ ಮಕ್ಕಳುಗಳು ಈಗ 5 ಜನ ಪುತ್ರರು, ಒಬ್ಬಳೇ ಪುತ್ರಿಯು 12 ಜನ ಮೊಮ್ಮಕ್ಕಳು 4 ಜನ ಮರಿಮಕ್ಕಳುಗಳೂ ಇರುತ್ತಾರೆ. ಯಾವಾಗಲೂ ಆರೋಗ್ಯಭಾಗ್ಯದಿಂದ ಇದ್ದ ಈ ಪುಣ್ಯಾತ್ಮರು ಕೇವಲ ವಿದ್ಯಾವಂತರು ಶಕಜ್ಞಾನಿಗಳಾದರೂ ನಿರಂತರ ಪರೋಪಕಾರಿಗಳು ಸರ್ವಜೀವದಯಾಪರರು ಧರ್ಮಾತ್ಮರು ಸುಗುಣಶೀಲರೂ ಆಗಿದ್ದರು. ಶಿವಪಾದಪೂಜಾಧುರಂಧರರಾದ ರಾಜಯೋಗಿಗಳು ಈ ಮಹಾತಾಯಿಯರಿಗುಂಟಾದ [illegible] ಯಾವಾಗಲೂ ಕೊಂಡಾಡುತ್ತಾ ಈ ಆಗಾಧ [illegible] ಇನ್ನು ಮುಂದೆ ಜರುಗುವ ದಶದಿನದ ಪಿಂಡದಾನ ಆರಾಧನೆ ಕೆಲಸಗಳ ಭಕ್ತಸಂತರ್ಪಣೆ ಮುಂತಾದ ಮುಕ್ತ್ಯರ್ಥ ವೈಭವಗಳಿಗೆ ಎಲ್ಲರೂ ಭಾಗಿಗಳಾಗಲು ಪ್ರಯತ್ನಿಸಬೇಕೆಂದು ಪ್ರಾರ್ಥಿಸುವ

ಶ್ರೀಯುತರ ಪಾದಪೂಜಕರಾದ ಶ್ರೀ ವಿಶ್ವಕರ್ಮ
ಗುರುಮೂರ್ತಿ ಆಚಾರ್ಯಸ್ವಾಮಿಗಳು,
ರೆಪ್ರೆಜೆಂಟೇಟಿವ್ ಅಸೆಂಬ್ಲಿ ಮೆಂಬರ್

ಶ್ರೀ ಜಗದ್ಗುರು ಪಂಚಾಚಾರ್ಯನಮಃ

ಧರ್ಮ

(ಸಲ್ಲಾಪ)

ಧಾ|| ಪ|| ಅರುಣನುದಯಕೆ ಮುನ್ನವೇಳುತೆ | ಸದ್ಗುರುಶಿವಗುರುಧ್ಯಾನಗೆಯ್ಯುತೆ | ಧರದಿ ನಿತ್ಯಾಚಾರ ಸ್ನಾನ ಪಾರುಸದಿಂ ಗೆಯ್ದು || ಗುರುವಿನಪ್ಪಣೆವಿಡಿದ ಬಸಯುಗದೂ | ಅರಿದು ನಿಜವ ತತ್ತ್ವಸಾರವ | ತನ ನೋಪ್ಪದು ಜೀವರಾಶಿಯೊಳಿರುವ ಪರ್ತನಾ ||೧||

ಜನುಮಪಿತೃಮಾತೃ ಒನನಿಜಜನಕರ | ಮನಕೆ ಸಂತಸವಪ್ಪ ತೆರದಲಿ | ವಿನಯವಿಡಿದವರೆಂದಕಜ್ಜವ ತಪ್ಪದನುಮಾಡಿ || ಕಿನಿಸದೊಯ್ಯನೆ ಸೇವೆಗೆಯ್ಯುತೆ | ಅನವರಿದು ಜಯಜಕ್ತಿದೋರುತ | ಮನೆಯೊಳೆಲ್ಲರ ಹಿತವ ಗಳಿಪುದು ಧರ್ಮವೆನಿಸುವುದು ||೨||

ಅಣಸಿಡೆಡೆಯೊಳು ಜೀತಿಸದೆಯುಡೆ ನಡೆವನೆಡವವನೆಂದು ನಂಬುತೆ | ಮೃಡನ ನೆನೆಯುತ ಮನದಿ ಧೈರ್ಯವತಾಳುತೊಲವಿನಲಿ || ಹಿಡಿದು ಸುವಿವೇಕಶಾಸ್ತ್ರಮಾರ್ಗದಿ | ನಡೆಯುತಿಹಪರಸುಖವ ಪಡೆವುದು | ನುಡಿದು ತಪ್ಪದೆ ತೋರುವುದದು ನೇರೆ ಧರ್ಮವೆನಿಸುವುದು ||೩||

ಪರರ ಸಂಕಟವರಿದು ಮನದೊಳು | ಮರುಗಿ ಕರುಣದಿ ನೆರವನಾರುತ | ಮರೆಯದೆಲ್ಲರ ತನ್ನ ಪರಿಯೊಳು ನೋಡುತೊಲುಮೆಯಲಿ || ಪರಧನಕೆ ಪರವನಿತೆಗಳಿಕೆಗೆ ಪೊರೆಯುತನುದಿನ ತನ್ನ ಸೋದರ | ನಿರುತಸತ್ಯವನರಿ ನಡೆವುದು ಧರ್ಮವೆನಿಸುವುದು ||೪||

ಒನರ ಸೇವಿಪದು ತನ್ನ ಸುಖವೆಂ | ದನವರತ ವ ದೊಳಗೆ ಬಗೆದು | ಜನರ ಪಾಲಿಪದೊರೆಯೊಳೊಯ್ಯ ಭಕ್ತಿನೆರಸಿದರ್ಮ || ಎನುತಮತಸದ್ಗತಿಯ ತಪ್ಪದೆ ಸಮತದೊಳಾಚರಿಸುತನುದಿನ | ಮನದ ಸಂತಸದಿಂದು ನಡೆವುದು ಧರ್ಮವೆನಿಸುವುದು ||೫||

ಒಗೆಯು ಕೆಲಕುವ ಎಗಡಕಾಪುಗೆ | ಸುಗಿಯದಿದ್ದ್ಯಯುಗನುಜನ ಸುತೆ | ಒಗೆಯುದೆರತನು ನಲಿದು ತನೊಳಿಳ್ತುಯಿಂದಿರುದ್ಯೆ || ಒಗೆಬಗೆಯನೋಂಗಿಗಳು | ಮಗುವೆ ದೇಹವು ಮೂಲಕಾರಣ | ನರಳುವಿರಾದೇಹಪೋಷ್ಯವನರಿದು ನಡೆಸದೇ ||೬||

ಪರಮಗುಣಗಳು ಸಂಲ್ಲ ಧರ್ಮವ | ನರಿದು ವ ಮಾಕರಾಯುಸೂರಲಿ | ಪಿರಿದು ಸೇವೆಯನೆಸಗಿ ನಕ್ಷ್ಮವೆಯಾಂತು ಬಾಳುವುದು | ಒರಿಸಿ ಶಂಭಕೆ ಪ್ರಸೇಯುದೆ | ಸರಸಸಜ್ಜನದಿ ಜನರ ಸುಖಿಸುತ | ಮನದೊಳ್ಪಡರ್ವಲ್ತಿ ನಡೆವುದು ಧರ್ಮವೆನಿಸುವುದು ||೭||

ತನ್ನ ಹೃದಯದೊಳಿರ್ಪ ದೈವವೆ ಅನ್ಯರೊಳಗಿರ್ಪುದೆನುತಲಿ | ಮನ್ನಿಸುತ್ತಾಮುದ್ಯೆದೆ ಒನಪದಿನಭಯುಸುತಲಿ || ತನ್ನ ದೇಶವು ತನ್ನ ತಾಯ್ನಾಡಿಯೆನ್ನುತೆನ್ನುತ ನೆನೆದು ಮನದೊಳು | ಸನ್ನಿಧಿಯ ಸೇವೆಗೆಯ್ವುದು ಧರ್ಮವೆನಿಸುವುದು ||೮||

ಕಲರು ತಪದೊಳು ಸ್ವರ್ಗ ಮೋಕ್ಷದು | ಕೆಲರು ದಾನದಿ ಪುಣ್ಯವನೆದರು | ಕೆಲರು ಸನ್ನಿಯ ದಸಬೋಧಿಸಿ ಮೋಕ್ಷವೆಯ್ದಿದರು || ಪಲರು ಧರ್ಮವಿರಾಂದಿಸಿದವು | ನಲಿಸ ಪಾಲಿಸಿ ಧನ್ಯರಾದರು | ಎನಿಂದಲು ಕೇಳಿಸಲ್ಲವು ಧರ್ಮವೆನಿಸುವುದು ||೯||

ಧರೆಯು ತಪ್ಪದೆ ಬೆಳೆಯನೀವುದು | ಸುರಿವುದು ಮಳೆ ಕಾಲಕಾಲಕೆ | ಶರಧಿ ಮೇರೆಯ ಮೀರದು ವಾಯುವು ಚಲಿಸುವುದು || ತರುತತಿ ಫಲಪುಷ್ಪನೀವುದು | ಮೆರೆವುದಿನಕರಶಶಿಗಗನಮಧ್ಯದಿ ಪರಮಧರ್ಮದ ನೆರವಿದೆಂಬುದನರಿದು ನಡೆ ಮಗು

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಶಕ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೨೦ ಪುಟಗಳುಳ್ಳದಾಗಿದ್ದು ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಒಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥದ ವ್ಯಾಖ್ಯಾನಕ್ಕಾಗಿ ಪಂಡಿತರು ವಿಶೇಷ ಪ್ರಯತ್ನವನ್ನು ಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ನಿಃಸಂಶಯವಾಗಿ ಹೇಳಬಹುದಾಗಿದೆ. ನಮ್ಮ ಸ್ವಾಮಿಗಳಾದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಬೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಳ್ಳಲೇಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ ಪಿ ಚಾರ್ಜ ೧ ರೂ ೫ ಆಣೆ ಪ್ರತ್ಯೇಕ

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಗಳು

ಧಾತುಪುಷ್ಟಿಲೇಹ.

1 ಇದು ಬಲಹೀನ ದೇಹಗಳಿಗೆ ಅದ್ಭುತವಾದ ಔಷಧಿ, ಇದರ ಸೇವನೆಯಿಂದ ಮಲಬದ್ಧತೆ, ಜೀರ್ಣಜ್ವರ, ಅಜೀರ್ಣ, ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶ್ಶಕ್ತಿ, ಕಾಲು ಕೈ ನಡುಕ, ರಕ್ತಹೀನತೆ, ಬೆನ್ನು ನೋವು, ತಲೆನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಸ್ವಪ್ನಾವಸ್ಥೆ, ಧಾತು ಮೂತ್ರದೊಡನೆ ಹೊರಹೋಗುವಿಕೆ ಮುಂತಾದ ದುರ್ಬಲವಾಗಿ ಸಂಯೋಗಶಕ್ತಿಯು ಕುಂಠಿತವಿಕೆ, ಶರೀರದ ಶಾಶ್ವತ ಇವುಗಳನ್ನೆಲ್ಲಾ ಹೋಗಲಾಡಿಸಿ ಪುಷ್ಟಿಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಡಬ್ಬಿ 1ಕ್ಕೆ 2—8—0 3ಕ್ಕೆ 7—0—0

2 **ಮೇಹಕುಠಾರಪ್ರಮೇಹ** ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ ಮೂತ್ರದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ್ಗೆ ಒಂದು ತಡೆಯಿಲ್ಲದೆ ಸಾಮರ್ಥ್ಯವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು ಡಬ್ಬಿ 1ಕ್ಕೆ 2—8—0. 3ಕ್ಕೆ 7—0—0

3 **ಮಲೇರಿಯಾ ನಿವಾರಿಣಿ** ಇದು ಮಲೇರಿಯಾ, ದಿನಬಿಟ್ಟು ಬರುವ ಜ್ವರ, ಚಳಿಜ್ವರ, ಇಂಫ್ಲುಯೆಂಜಾ ನ್ಯೂಮೋನಿಯಾ, ಕಫಜ್ವರ, ಜ್ವರಗೆಡ್ಡೆ ಮುಂತಾದವುಗಳಿಗೆ ದಿವ್ಯೌಷಧಿ ಬಾಟ್ಲಿ 1ಕ್ಕೆ 1—8—0 ಚಿಕ್ಕ ಬಾಟ್ಲಿಗೆ 0—13—0. 3ಕ್ಕೆ 4—0—0 ಸಣ್ಣ ಬಾಟ್ಲಿ 3ಕ್ಕೆ 2—4—0

ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಿಗೆ ತಕ್ಕುದಾದ ಔಷಧಿ ರವಾನಿಸಲಾಗುತ್ತೆ. ಕ್ಯಾಟಲಾಗ್ ಬರೆಯಿರಿ.

ಎಂ. ಗಣಪಯ್ಯ ಅಂಡ್ ಸನ್ಸ್.

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ನಂಬರು 271 ಮಂಗಳೂರು.

ಔಷಧಿ ಸಿಕ್ಕುವ ಸ್ಥಳಗಳು—

ಮೆಸ್ಸರ್ಸ್ ಪೆಟರಸ್ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ

7

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಪೀಠಗಳಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಿಸಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿ ವ್ಯಕ್ತಿ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಬೆಲೆಯುಳ್ಳ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಿಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦ ೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ಪಂಚಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ವಶಿಷ್ಠ ವ್ಯಾಸ ಸಾನಂದ ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯ! ಪ್ರಚಾರೋಪಯೋಗವಾಡಿದರಕ್ಕೆ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನಿ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ನಿಮಿಷಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಶ್ರೀ ದಾರುಕಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಶ್ರೀ ದಾರುಕಸಿಂಹಾಸನದ ಧರ್ಮಮಂದಿರದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಹಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು.

(Registered Trade Mark)

ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮೊದಲಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಡಕ್ಕೆ ನೇಲ್ಪಟ್ಟ ಇಂಥ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಪಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಒಳ್ಳೆ ಪರಿಮಳವಾಗುವುದು. ಇದನ್ನು ಅನೇಕ ಪ್ರಮುಖರು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಫ್ರೀ ಕಳುಹಿಸಲಾಗುವುದಿಲ್ಲ.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ. ಪಿ. ೦-೯-೦
ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ. ೮ ಹಣ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[4] ಪೋ ಬಾ ೫೧೦ ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೩ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮನಿರ್ಣಯ (೧ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೧ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಪಂಚರತ್ನಸ್ತೋತ್ರ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ಶಿವತತ್ತ್ವದರ್ಶನ (೪ನೆಯ ಆವೃತ್ತಿ)	೩ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ವೀರಶೈವಮತಪ್ರಮಾಣ	೩ ಆಣೆ
ಶಿವಶಕ್ತಿವಿಲಾಸ	೩ ಆಣೆ
ಶ್ರೀಗುರುತತ್ತ್ವಪದಗಳು	೩ ಆಣೆ
ವೀರಶೈವಾಚಾರಪದ್ಧತಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಷಯಕ ತತ್ತ್ವಪರೀಕ್ಷಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಕ್ಯರಹಸ್ಯ	೪ ಆಣೆ
ಆಗಮಪರಿಜ್ಞಾನ	೬ ಆಣೆ
ಶಿವಾದ್ವೈತರತ್ನಾವಳಿ (ಸಂಸ್ಕೃತ ಕನ್ನಡ)	೬ ಆಣೆ
ಬಸವಸಿದ್ಧಾಂತ ದಿವಾಕರ (೩ನೆಯ ಆವೃತ್ತಿ)	೬ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ…
पंडित श्रीकाशीनाथशास्त्री यांचे भाषण (मराठी)	८ आणे…
Speeches by Pandit Shri Kashinatha Shastri (*English*)	12 As…
ವೀರಶೈವರತ್ನ (೪ನೆಯ ಆವೃತ್ತಿ)	೧೨ ಆ…
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ …
ಮಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ …
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ …
ಶಿವಾಗಮತತ್ತ್ವಸಿದ್ಧಾಂತದರ್ಪಣ	೧೨ …
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧ …
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ …
ಜಾಬಾಲೋಪನಿಷತ್ (ವೀರಶೈವಭಾಷ್ಯ)	೧ …
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ ಸಹಿತ)	೧ …
ವೀರಶೈವಸಿದ್ಧಾಂತಸುಧಾಕರ	೨ …
ಶಿವಯೋಗಿಗಳ ರಜಿಸ್ಟರ್ ಬುಕ್	೧ …
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ …
लिंगधारणचंद्रिका (संस्कृत)	३
महानारायणोपनिषत् (शांकरभाष्य-संस्कृत)	१
वीरशैव[illegible] (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ… ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು… ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ…

ಮೈಸೂರು ಸಯ್ಯಾಜಿರಾವ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಗ್ನೇಯ ನಾಡ್ಯಾಳ್ ವೇ|| ಬ್ರ|| ಪಂಡಿತ ಶಿವ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M. 2266 || ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂ || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರಿವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೬ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ ನೇ ಫೆಬ್ರವರಿ ೧೯೩೬ [ಸಂಚಿಕೆ ೩೮

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ವೀರಶೈವ ಸಮಾಜದವರಿಗೆ ತಿಳಿಯಪಡಿಸುವದೇನೆಂದರೆ—

ಶ್ರೀ ಜಗದ್ಗುರು ಶ್ರೀಶೈಲ ಪರ್ವತ ಶ್ರೀ ಗಿರಿರಾಜ ಸೂರ್ಯಸಿಂಹಾಸನ ಪೀಠದ ಹೆಸರು ಹೇಳಿ ದೂರ ದೂರ ಪ್ರಾಂತ್ಯಗಳಲ್ಲಿ ಅನಧಿಕಾರಿಗಳು ಸುಳ್ಳುಪತ್ರ ಪತ್ರಾದಿಗಳಿಗೆ ಮೋಸಗೊಳಿಸುತ್ತ ಚಿಕ್ಕ ಚಿಕ್ಕ ಸರ್ಕ್ಯೂಲರುಗಳನ್ನು ತೆಗೆದು ದಾಕ್ಷಿಣ್ಯ ಜನಗಳ ಹಸ್ತದಿಂದ ಹಳ್ಳಿಹಳ್ಳಿಗಳಲ್ಲಿ ತಿರುಗುತ್ತ ಜಗದ್ಗುರು ಪೀಠದ ಗೌರವಕ್ಕೆ ಕುಂದಕ ತರುತ್ತ ಸಲ್ಲಾಳಿ ಜನರ ತವಿರಾರ್ಥ ಪದಾರ್ಥಜಾತಾ ಒಂದಷ್ಟು ದಕ್ಷಿಣೆ ದುರುಪಯೋಗಪಡಿಸುತ್ತಾರೆಂದು ಅರಿಕೆ ಆಗಿರುತ್ತದೆ

ಈ ಮಹಾಪೀಠದ ಸರ್ಕ್ಯೂಲರು ಆಸ ವಗೈರೆ ಹುಜೂರ್ ಸೀಲು ಸಮೇತ ಒಳ್ಳಾರಿ ಜಿಲ್ಲಾಕ್ಕ ಕಳು ಹಿಸಿರುತ್ತದ್ದಲ್ಲದೆ ಬೇರೆಕಡೆಗೆ ಕಳುಹಿಸಿಲ್ಲ ಆದುದರಿಂದ ಅನಧಿಕಾರಿ ಗುಂಪಿನವರು ಬಂದರೆ ಅವರಿಗೆ ಕಾಣಿಕೆ ವಗೈರೆ ಕೊಟ್ಟು ಯಾರೂ ಮೋಸಹೋಗಬಾರದು

N.B—ಮತ್ತು ಚಿತ್ರದುರ್ಗ ತಾಲ್ಲೂಕು ಕೂಡಪೇಟೆ ವೀರಭದ್ರಸ್ವಾಮಿ ಮಠದ ಬಿ ಯಂ ಚನ್ನಬಸಯ್ಯನವರು, ವೀರಭದ್ರಯ್ಯನವರು ಇವರುಗಳಿಗೆ ಹುಕುಂ ಮಾಡಿ ಕಳುಹಿಸಿದ್ದಂತೆ ನಡೆಯದೆ ಪತ್ರ ಮುಚ್ಚಳಿಕೆ ಕ್ರಮಕ್ಕೆ ತಪ್ಪಿ ನಡೆದದ್ದರಿಂದ ಇವರ ಸಂಚರಣೆಯನ್ನು ಅತಂಕಪಡಿಸಿದ್ದಾಗಿದೆ ಗುಂತಕಲ್ ಮೊಕ್ಕಾಂ, ಮಹಾ|| || ಸಂಸ್ಥಾನದ ವತಿಯಿಂದ ಹುಕುಂ ಬಾರದೆ ಯಾರಿಗೂ ಕಾಣಿಕೆ ವಗೈರೆ ಕೊಟ್ಟು ದುರುಪಯೋಗದ ಫಲಕ್ಕೆ ಭಾಗಿಗಳಾಗಬಾರದೆಂದು ಎಚ್ಚರಿಸಿದೆ

R. C. Aradhya Swamy,
Hirematt A
ಶ್ರೀ ಜಗದ್ಗುರು ಶ್ರೀಶೈಲ ಪರ್ವತ
ಸಂಸ್ಥಾನ ಏಜೆಂಟ್

ಕಡೂರು ಡಿಸ್ಟ್ರಿಕ್ಟು ವೀರಶೈವಸಮ್ಮೇಳನ

ಶಿವಾನಂದ ಆಶ್ರಮ, ಕಂಸಾಗರ ಎಸ್ಟೇಟು,
ಕಡೂರು ತಾಲ್ಲೂಕು

ಕಡೂರು ತಾಲ್ಲೂಕು ಕಂಸಾಗರದ ಎಸ್ಟೇಟು ಶಿವಾನಂದ ಆಶ್ರಮದಲ್ಲಿ ಭಾವನಾಮಸಂವತ್ಸರದ ಫಾಲ್ಗುಣ ಶುದ್ಧ ತದಿಗೆ ಆಗಾಯಿತು (ತಾ|| 11 1935) ಒಂದು ವಾರದವರೆವಿಗೆ ನಡೆಯಲು ಶ್ರೀ ಮರುಳಸಿದ್ಧೇಶ್ವರಸ್ವಾಮಿಯವರ ಜಾತ್ರೆ ಮತ್ತು ದನಗಳ ಪ್ರದರ್ಶನಕಾಲದಲ್ಲಿ ಕಡೂರು ಡಿಸ್ಟ್ರಿಕ್ಟಿನ ವೀರಶೈವರ ಪ್ರಥಮ ಸಮ್ಮೇಳನವನ್ನು ನೆರೆಯಿಸಬೇಕೆಂದು ನಿಶ್ಚಯಿಸಿ ಈ ಡಿಸ್ಟ್ರಿಕ್ಟಿನಲ್ಲಿ ವೀರಶೈವ ಮಹನೀಯರುಗಳನ್ನು ಸ್ವಾಗತಸಂಘದ ನಿರ್ಮಾಣಕ್ಕೆ ತಾ|| 21 1 1930 ನೇ ಭಾನುವಾರ ಕಂಸಾಗರದ ಎಸ್ಟೇಟು ಶಿವಾನಂದ ಆಶ್ರಮಕ್ಕೆ ದಯಮಾಡಿಸಬೇಕೆಂದು ಆಹ್ವಾನಿಸಿತ್ತು ಆ ಮೇರೆಗೆ ಡಿಸ್ಟ್ರಿಕ್ಟಿನ ಅನೇಕ ಕಡೆಯಿಂದ ವೀರಶೈವಮಹನೀಯರು ಆಶ್ರಮಕ್ಕೆ ದಯಮಾಡಿಸಿ ಸಭೆಯನ್ನು ನಡೆಯಿಸಿದರು ಆ ಕಾಲದಲ್ಲಿ ಆ ದಿವಸದ ಕಾರ್ಯಕಲಾಪಗಳು ಕಡೂರು I ಸಬ್ ಡಿವಿಜನ್ ಅಸಿಸ್ಟೆಂಟ್ ಇಂಜಿನಿಯರರಾದ ಮ|| ರಾ|| ಕೆ ಎಸ್ ಗಂಗಾಧರಪ್ಪ ಬಿ ಇ ಇವರ ಅಧ್ಯಕ್ಷಸ್ಥಾನದಲ್ಲಿ ನಡೆದು ಈ ವೀರಶೈವ ಸಮ್ಮೇಳನವನ್ನು ನೆರೆಯಿಸುವುದು ಅವಶ್ಯಕವೆಂದು ಸರ್ವಾನುಮತದಿಂದ ತೀರ್ಮಾನಿಸಲ್ಪಟ್ಟಿತು ಅನಂತರ ಸಮ್ಮೇಳನದ ಕಾರ್ಯಗಳನ್ನು ನೆರವೇರಿಸುವುದಕ್ಕೆ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರ ಚುನಾವಣೆಯು ನಡೆದು ಚಿಕ್ಕಮಗಳೂರು ಕಾಫಿಪ್ಲಾಂಟರು ಮ|| ರಾ|| ಸಿ ವಿ ಬಸವೇಗೌಡರನ್ನು ಅಧ್ಯಕ್ಷರನ್ನಾಗಿಯೂ ಬೀರೂರು ಕೋಡಿಹಳ್ಳಿ ವೆ|| ರಾ|| ಎಂ ಬಸಪ್ಪನವರನ್ನು ಉಪಾಧ್ಯಕ್ಷರನ್ನಾಗಿಯೂ ಮತ್ತು ಮ|| ರಾ|| ವಕೀಲು ಬಿ ಬಸವಲಿಂಗಯ್ಯನವರು ಬಿ ಎ, ಬಿ ಎಲ್ ಮತ್ತು ಬೀರೂರು ಮ|| ರಾ|| ಎಂ ವಿ ಮುದ್ದೀರಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ನಿಯಮಿಸುವುದರಲ್ಲಿ ಒಂದಿತು ಈ ವೀರಶೈವ ಸಮ್ಮೇಳನವು 1936 ನೇ ಇಸವಿ ಮಾರ್ಚಿ ತಾರೀಖು 10ನೇ ಭಾನುವಾರ ನಡೆಯಬೇಕೆಂದು ನಿರ್ಧರಿಸಿರುತ್ತದೆ ಈ ದಿನದ ಕಾರ್ಯಗಳು ನೆರವೇರಿದನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಯು ಮುಕ್ತಾಯವಾಯಿತು.

ಬಸವಲಿಂಗಯ್ಯ,
ಸೆಕ್ರೆಟರಿ

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ನವರತ್ನಮಾಲಿಕಾ.

ಕಂದ|| ಪಾವನಸನ್ಮಹಿಮಾವಾಸಂ | ಪಾವನಶಂ ನಿಷ್ಕಳಂಕ ನಿಗಮವಿನೋದಂ || ಕೋವಿದಜನಸಂಪ್ರೀತಂ | ಓವುಗೆ ಶ್ರೀಸಿದ್ಧಲಿಂಗಯತಿಕುಲತಿಲಕಂ ||೧||

ಶಾ|| ವಿ|| ಧರ್ಮಾಗಾರ ಸುಶೀತಿಸಾರ ಮದನಾಟೋಪಕ್ಕೆ ಪಕ್ಷಾಗದಂ | ನಿರ್ಮೋಹಾತ್ಮಕ ಕರ್ಮಧರ್ಮವಿಹಿತಂ ಕಾರುಣ್ಯಸಂಪೂರ್ಣನುಂ || ಶರ್ಮಾರ್ಪಿತ ಸದ್ಗುಣೈಕವಿರತಂ ಲಿಂಗಾಂಗಯೋಗಾನ್ವಿತಂ | ಧರ್ಮಾರಾಧಿತಿಜನಾದ್ರಿವಾಶಕುಲಿಶಂ ಶ್ರೀಸಿದ್ಧಲಿಂಗೇಶ್ವರಂ ||೨||

ಕಂ|| ಶಿವಮುಕಶರದಿಶಶಾಂಕಂ | ಶಿವೆ ಪಕ್ಷಾಬೀಕ್ಷಿದಾತನುರುಕರವಿಮುಖಿ|| ಭುವಿಜನಪೂಜ್ಯನಮೋಘಂ | ತವಿಸುಗೆ ಗುರುವೆನ್ನ ದುಃಖರಾಶಿಯನನಿಶಂ ||೩||

ಮ|| ವಿ|| ಭವಪಾರಾಶಿಯೊಳದ್ದು ಕಾಣದಿವಂ ಸಂತಾಪಮಂ ಗೈವರಂ | ಒವದಿಂ ಶಾಂಭವತತ್ತ್ವಬೋಧದುರದಿಂ ಶಾಂತಾತ್ಮರಂ ಗೈಯುತಂ || ಶಿವಯೋಗಾತ ವಿಲೋಲನಾಗುತಲಿಪುತ್ತಗಂಗಲಂ ಗೆಲ್ದವಂ | ಭುವನಾರಾಧ್ಯನುದಾರಶೈವಮಹಿಮಂ ಶ್ರೀಸಿದ್ಧಲಿಂಗೇಶ್ವರಂ ||೪||

ಕಂ|| ಲೋಕಗುರು ಪ್ರಾಜ್ಞಸಿಂದು ಪಿ | ನಾಕಿಯು ನೀನೆಂದುಮರಿದು ಪಜಿಸುವೆ ನಿರತಂ || ನಾಕರು ತಿಳಿಯರು ನಿನ್ನಯ | ಶ್ರೀಕರಮುಖ ಮೋದಕರಿಯು ಮುಕ್ತ್ಯತಿ ದನ್ಯರ್ ||೫||

ಒಾ||ಷ|| ನಿಧಿಯನಾರ್ತನು ಒಯಸುವಂದದಿ | ಮದದಿ ಚಾತಕ ಮೇಘಬರವನು| ಸದುಗದಿಂ ಪಡಕಸ್ಕವರವನು ಯೋಗಿಯುರವನ್ನೋಲ್ | ಸಡಯುಗುರುವರ ಸಿದ್ಧಲಿಂಗನೆ | ಪ್ರದಿದ ಹರಿಸದಿ ಪಕುತವರ್ಗಪ್ರೆ | ಮುದನರಿತ್ತು ಶಿವನೊದು ಸುಂಪುದು ನಾಡೆ ಪಿದಕಿಪುದು ||೬||

ಕಂ|| ವಿರತಿಯು ನಲಿವನೆಯೆನಿಸುತ | ಪರತರಪದ್ರ್ಯಪ್ತಪರವ್ಯಾಗರನಾದ್ಯೈ || ಪರಮುಕ್ತಿಕಾಂತೆಯೊಡವೆವ | ನಿರುತಿಹೆ ಗುರುಸಾರ್ವಭೌಮ ಗಣಕುಲದಾಮಾ ||೭||

ಭಾ|| ಷ|| ಸರಸ ಪುಣ್ಯದ ಚರಿಪ ಧರ್ಮದ | ವಿರತ ಮುನಿಗಳು ಮನದಿ ಜಪಿಪ | ಪರತರಾತ್ಮ ಬ್ರಹ್ಮರೂಪದ ಸತ್ಯಸಾಗರದ || ಸುರರ ನವಮುಂದಾರ ಶೇಖರುವೆನ | ಶಿವನೆ ಪೊರೆಯುವ ಗುರುವೆ ನಿನ್ನಯ | ಚರಣಸರಸಿಜವೆನ್ನ ಹೃದಯದಿ ನಿತ್ಯ ನೆಲೆಸಿರಲಿ ||೮||

ಪರಮತಪವನು ಚರಿಸಿ ಹರುಷದಿ | ವರಷಟ್ಸ್ಥಲ ಸಾರವೆಲ್ಲವ | ಪರಿದು ಶಿವಸಮಯಪ್ರತಿಷ್ಠಾಚಾರ್ಯರೊಳವಾಂತ. || ದುರಿತಕಾನನದಾವ ಪರಶಿವ | ನಿರವಡೋರುತ ಮೆರೆವ ಘನಗುರು | ವರನ ಶಿವಪದಕಿದನು ಪಂಡಿತನ್ಯ ಷಡನರ್ಪಿಸಿದಂ ||೯||

ಎಸ್. ಎಂ ಬಸವಯ್ಯ,
ಹೈಸ್ಕೂಲ್ ಕನ್ನಡಪಂಡಿತ, ಶಿವಮೊಗ್ಗ

ಸ್ವೀಕಾರ

ಬಳ್ಳಾರಿ ಡಿ|| ಶೆಕ್ಕಲಕೋಟೆ ಗ್ರಾಮದಲ್ಲಿರುವ ಮ|| ರಾ|| ದೇಶನೂರು ಮಹಾಂತಪ್ಪನವರಿಗೆ ಶ್ರೀ ಕೇದಾರ ಜಗದ್ಗುರುಗಳವರು "ಕರ್ಣಾಟಕಕಾಶಿವ" ಎಂಬ ಪದವಿಯನ್ನು ದಯಪಾಲಿಸಿದ ಸಂತೋಷಕ್ಕಾಗಿ ಸದರಿಯವರು ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಾಗಿಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಚಯ.

ಆರೋಗ್ಯಮಾರ್ಗ

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಶಾಸ್ತ್ರಿ [illegible] ಬೆಂಗಳೂರು

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ಶ್ರೀಕ್ಷೇತ್ರಕಾಶೀ

ಆಹಾರ ನಿಯಮಗಳು.

ನೇರಳೆ ಹಣ್ಣು—ಒಗರು, ಸಿಹಿ, ಹುಳಿರಸಗಳಿಂದ ಕೂಡಿರುವುದಾಗಿದೆ. ಬೇಗನೆ ಪಚನವಾಗುವುದಲ್ಲ, ಕಫವಾಯು ಮಲಬದ್ಧತೆ ಇವುಗಳನ್ನುಂಟು ಮಾಡುವುದು. ಗಂಟಲು ಎದೆ ಮತ್ತು ಗರ್ಭಿಣಿ ಸ್ತ್ರೀಯರಿಗೆ ಹಾನಿಯನ್ನುಂಟುಮಾಡುವುದು. ದೋಷ ಪಿತ್ತ-ರಕ್ತಾಧಿಕ್ಯದಿಂದುಂಟಾಗುವ [illegible] ಇವುಗಳನ್ನು ಶಾಂತಗೊಳಿಸುವುದು ಮತ್ತು ರಕ್ತವಿಕಾರ ದಾಹಗಳನ್ನು ನಾಶಮಾಡುವುದಾಗಿದೆ.

ಅಂಜೀರ ಹಣ್ಣು—ಅತಿಶೀತಲ, ಪಿತ್ತನಾಶಕ. ತಲೆಯಲ್ಲಿ ಉಂಟಾಗುವ ವಿಕಾರಗಳಿಗೂ, ಕುಷ್ಠರೋಗಗಳಿಗೂ ವಿಶೇಷ ಲಾಭ [illegible] ಮತ್ತು ಶ್ವಾಸನಾಳ ಎದೆ ಮೂತ್ರಾಶಯ [illegible] ಇವುಗಳಿಗೆ [illegible] ಕ್ಷಯ ಕಫ ಅಜೀರ್ಣ [illegible] ಇವುಗಳನ್ನು ಶಾಂತಗೊಳಿಸಿ ಶುದ್ಧರಕ್ತವನ್ನುಂಟುಮಾಡುವುದಾಗಿದೆ. ಈ ಹಣ್ಣುಗಳನ್ನು [illegible] ಗಡ್ಡೆಗಳಿಗೆ ಕಟ್ಟುವುದರಿಂದ [illegible] ಬೇಗನೆ ಒಡೆಯುತ್ತವೆ. ಇದರ ಬಲಿಯದ ರಸವನ್ನು ಹಚ್ಚುವುದರಿಂದ ಕುಷ್ಠರೋಗದ [illegible] ವಿಶೇಷ ಲಾಭವುಂಟಾಗುವುದು. ಈ ಹಣ್ಣುಗಳನ್ನು [illegible] ತಿನ್ನುವುದರಿಂದ ಹಲ್ಲುಗಳಿಗೆ ಹಾನಿಯುಂಟಾಗುತ್ತದೆ.

ಕಿತ್ತಳೆ ಹಣ್ಣು—ಗಿಡದಲ್ಲಿಯೇ ಪಕ್ವವಾಗಿರುವ ಕಿತ್ತಳೆಯು ಸಿಹಿಯಾಗಿಯೂ, ಅತಿಶೀತಲವಾಗಿಯೂ ಇರುವುದು. ಸಕಲವಿಧ ಪ್ರಮೇಹ ಶೂಲ ಕ್ಷಯ ಪಿತ್ತವಿಕಾರ ದಾಹ ಇವುಗಳನ್ನು ಶಾಂತಗೊಳಿಸುವುದಲ್ಲದೆ, ರಕ್ತ ಮತ್ತು ಮೂತ್ರಾಶಯವನ್ನು ಶುದ್ಧಗೊಳಿಸಿ ಅಗ್ನಿಯನ್ನು ಹೆಚ್ಚಿಸಿ ಜಠರವನ್ನು ಬಲಪಡಿಸುವುದಾಗಿದೆ. ಹುಳಿಯಾಗಿರುವ ಹಣ್ಣು ಅತ್ಯುಷ್ಣಗುಣವುಳ್ಳದ್ದು, ಕೆಮ್ಮು ಮತ್ತು ಕಫವನ್ನು ಹೆಚ್ಚಿಸಿ ಗಂಟಲು-ಕಣ್ಣುಗಳಿಗೆ ವಿಶೇಷ ಹಾನಿಯನ್ನುಂಟುಮಾಡುತ್ತದೆ.

ಸೇವು ಹಣ್ಣು—ಪಾಕವಲ್ಲಿಯೂ ರಸದಲ್ಲಿಯೂ ಸಿಹಿಯಾಗಿರುವುದು, ವಾತಪಿತ್ತನಾಶಕ, ಪುಷ್ಟಿಕಾರಕ, ವೀರ್ಯವರ್ಧಕ, ಶ್ಲೇಷ್ಮಕಾರಕ, ಶೀತಲ, ರುಚಿಕರ, ಸ್ಮರಣಶಕ್ತಿವರ್ಧಕ, ಉನ್ಮಾದನಾಶಕ ಮತ್ತು ತಲೆನೋವು ಉನ್ಮಾದ ಅತ್ತರೀ ಈ ರೋಗಗಳಲ್ಲಿ ವಿಶೇಷ ಗುಣಕಾರಿಯಾಗಿರುವುದಲ್ಲದೆ, ಮೂತ್ರಾಶಯವನ್ನು ನಿರ್ಮಲಗೊಳಿಸುವುದು ಮತ್ತು ಹೃದಯಕ್ಕೆ ಅತ್ಯಂತ ಹಿತಕಾರಿಯಾಗಿರುತ್ತದೆ, ಬೇಗನೆ ಪಚನವಾಗುವುದಿಲ್ಲ.

ಎಲಚಿ(ಬೋರೆ) ಹಣ್ಣು—ಇದರಲ್ಲಿ ದೊಡ್ಡದು ಸಣ್ಣದು, ಬಹಳ ಸಣ್ಣದು ಎಂಬ ಮೂರು ಜಾತಿಗಳಿವೆ; ಅದರಲ್ಲಿ ದೊಡ್ಡ ಜಾತಿಯ ಹಣ್ಣು ಬಹಳ ಸಿಹಿಯಾಗಿಯೂ, ಶೈತ್ಯಗುಣವುಳ್ಳದಾಗಿಯೂ, ವೀರ್ಯವರ್ಧಕ ಮತ್ತು ಪುಷ್ಟಿಕರವಾಗಿಯೂ, ಪಿತ್ತ-ದಾಹ ರಕ್ತವಿಕಾರ-ಕ್ಷಯ-ನೀರಡಿಕೆ ಇವುಗಳನ್ನು ನಿವಾರಿಸುವುದಾಗಿಯೂ, ಭೇದಿಯನ್ನು ಮಾಡಿಸುವುದಾಗಿಯೂ ಪಿತ್ತವನ್ನು ಹೆಚ್ಚಿಸುವುದಾಗಿಯೂ ಇರುತ್ತದೆ, ಬೇಗನೆ ಪಚನವಾಗುವುದಿಲ್ಲ. ಸಣ್ಣಜಾತಿಯ ಹಣ್ಣು, ಉಷ್ಣಗುಣವುಳ್ಳದೂ, ವಾತ ಮತ್ತು ಶ್ಲೇಷ್ಮವನ್ನು ನಿವಾರಿಸುವುದೂ, ಭೇದಿಕಾರಿಯೂ, ಪಿತ್ತವರ್ಧಕವೂ ಆಗಿದ್ದು [illegible] ಬೇಗನೆ ಪಚನವಾಗುವುದಲ್ಲ. ಬಹಳ ಸಣ್ಣ ಜಾತಿಯು [illegible] ಸ್ವಲ್ಪ ಸಿಹಿರಸಗಳಿಂದ [illegible] ವಾತಪಿತ್ತನಾಶಕವೂ, [illegible] ಪಕ್ವವಾಗದಿದ್ದಲ್ಲಿ ಹುಳಿಯಾದ [illegible] ಬೇಗನೆ [illegible] ಅಯಾಸ ನೀರಡಿಕೆಗಳು [illegible] ಸ್ವಲ್ಪ [illegible] ಹೆಚ್ಚಿಸು [illegible]

ಸೀತಾಫಲ—[illegible] ಮತ್ತು ರಕ್ತ [illegible] ಬಲಕರವಾ [illegible] ಕ್ರಿಮಿ [illegible] ಶ್ಲೇಷ್ಮ [illegible] ಇದರ [illegible] ಬೇಗನೆ [illegible] ಗುಣವಾ [illegible] ವಿಶೇಷವಾಗಿರುತ್ತವೆ.

ಪೇರಲ (ಶೀಬೆ) ಹಣ್ಣು—ಅತಿಶೀತಲ, ಗುರು, ವಾತ ಮತ್ತು [illegible] ಉನ್ಮಾದ (ಹುಚ್ಚು) [illegible] ಶಾಂತಗೊಳಿಸುವುದು ಮತ್ತು [illegible] ಆಗಿರುವುದು [illegible] ಮತ್ತು [illegible] ವಿಶೇಷ ಪಕ್ವವಾಗಿರುವ ಹಣ್ಣು [illegible] ಕರವಾಗುವುದಿಲ್ಲ.

ಚಕ್ಕೋತ ಹಣ್ಣು—ಶೀತಲ, ಗುರು, ರುಚಿಕರ ಮತ್ತು ರಕ್ತಪಿತ್ತ ಕ್ಷಯ [illegible] ಇವುಗಳನ್ನು [illegible].

ಕಲ್ಲಂಗಡಿ ಹಣ್ಣು—ಕ್ಷಾರ (ಉಪ್ಪು) ರಸದಿಂದ ಕೂಡಿರುವುದು. ತಂಪೆಸಂತೆ ತೋರುವುದಾದರೂ ವಸ್ತುತಃ ಉಷ್ಣಗುಣದಿಂದ ಕೂಡಿರುವುದಾಗಿದೆ. ಸಿಂಧಿಕ ಆಯಾಸ ಕಫ ವಾತ ಇವುಗಳನ್ನು ಶಾಂತಗೊಳಿಸುವುದಾದರೂ ಕಣ್ಣುಗಳಿಗೆ ಮಾತ್ರ ಹಿತಕರವಾಗುವುದಿಲ್ಲ.

ಕರಬೂಜ ಹಣ್ಣು—ಸಿಹಿ, ಶೀತಲ, ಬಲಕಾರಿ, ವೀರ್ಯವರ್ಧಕ, ಮತ್ತು ವಾತಪಿತ್ತಗಳನ್ನು ಶಾಂತಗೊಳಿಸುವುದಲ್ಲದೆ ಹೊಟ್ಟೆಯನ್ನು ಶುದ್ಧಗೊಳಿಸುವುದಾಗಿದೆ. ಇದರಲ್ಲಿಯೇ ಹುಳಿ, ಸಿಹಿ, ಉಪ್ಪು ಈ ಮೂರು ರಸಗಳ ಮಿಶ್ರರುಚಿಯಿಂದ ಕೂಡಿರುವ ಹಣ್ಣು ರಕ್ತಪಿತ್ತರೋಗ ಮತ್ತು ಭಯಂಕರವಾದ ಪ್ರಮೇಹ (ಗುಪ್ತಾಂಗರೋಗ)ವನ್ನುಂಟುಮಾಡುತ್ತದೆ.

ಬಾದಾಮಿ—ಸಿಹಿ, ಉಷ್ಣ, ವೀರ್ಯವರ್ಧಕ ಮತ್ತು ವಾತಪಿತ್ತಗಳನ್ನು ಶಾಂತಗೊಳಿಸುವುದಲ್ಲದೆ ಕಫವನ್ನು ವೃದ್ಧಿಗೊಳಿಸುವುದು, ರಕ್ತಪಿತ್ತರೋಗಗಳಿಗೆ ಹಾನಿಕರವಾಗಿದೆ.

ಒಣಗಿದ ದ್ರಾಕ್ಷೆ (ಬೀಜಸಹಿತವಾಗಿರುವುದು)—ವೀರ್ಯವರ್ಧಕ, ಶೀತಲ, ಮಲಶೋಧಕ, ಬಲವರ್ಧಕ, ಮತ್ತು ವೀರ್ಯವನ್ನು ವರ್ಧಿಸುವುದಲ್ಲದೆ ವಾತ ರಕ್ತಪಿತ್ತ ಕ್ಷೀಣತೆ ಇವುಗಳನ್ನು ನಾಶಗೊಳಿಸಿ ಹೃದಯಕ್ಕೆ ಹಿತವನ್ನುಂಟುಮಾಡುವುದಾಗಿದೆ. ಇದರಲ್ಲಿ ವಾಯುವನ್ನು ಅನುಲೋಮ (ಕೆಳಮುಖ) ಗೊಳಿಸುವಶಕ್ತಿಯು ವಿಶೇಷವಾಗಿರುತ್ತದೆ.

ಒಣಗಿದ ಸಣ್ಣದ್ರಾಕ್ಷೆ—ವೀರ್ಯವರ್ಧಕ, ರುಚಿಪ್ರದ, ಮತ್ತು ಶ್ವಾಸ ಜ್ವರ ದಾಹ ಮೂರ್ಛೆ ಸ್ವರಭಂಗ ಇವುಗಳನ್ನು ದೂರಗೊಳಿಸುವುದಾಗಿದೆ.

ಸಿಂಧ ಖರ್ಜೂರ—ಶ್ವಾಸ-ದಾಹ-ಮೂರ್ಛೆ ರಕ್ತವಿಕಾರ ಕ್ಷಯ ಅತಿಸಾರ, ಇವುಗಳನ್ನು ನಾಶಗೊಳಿಸುವುದಲ್ಲದೆ ಬಲ-ವೀರ್ಯವರ್ಧಕವೂ, ವಾಯುನಾಶಕವೂ, ಆಗಿರುತ್ತದೆ. ಅದರ ಬೇಗನೆ ಪಚನವಾಗುವುದಲ್ಲ.

ಇಲ್ಲಿ ಹಣ್ಣುಗಳ ಸಾಮಾನ್ಯಗುಣಗಳನ್ನೇ ವಿವರಿಸಿರುವುದಾಗಿದೆ. ಇವುಗಳ ವಿಶೇಷ ಗುಣಗಳನ್ನು ಫಲಚಿಕಿತ್ಸೆಯಲ್ಲಿ ವಿಸ್ತರಿಸುವುದಾಗುತ್ತದೆ.

ಬೆಲ್ಲ—ಜ್ವರ-ಶೂಲ-ಉದರರೋಗ ವಾಯು ಇವುಗಳನ್ನು ದೂರಮಾಡುವುದು ಮತ್ತು ಹೊಟ್ಟೆಯಲ್ಲಿ ಜಂತುಗಳನ್ನು ಬೆಳೆಸುವುದು, ಬಲಕರವಾದುದು. ಹೊಸ ಬೆಲ್ಲವು ಕಫವನ್ನು ಹೆಚ್ಚಿಸಿ ಅಗ್ನಿಯನ್ನು ಮಂದಗೊಳಿಸುತ್ತದೆ. ಹಳೆಯ ಬೆಲ್ಲವು ಸರ್ವದೋಷನಾಶಕ, ಅಗ್ನಿವರ್ಧಕ, ಶ್ರಮನಿವಾರಕ ಮತ್ತು ಪಾಂಡು-ಪ್ರಮೇಹಗಳನ್ನು ತಗ್ಗಿಸುವುದು, ಪಥ್ಯವಾದುದು. ಕರಗಿ ಮೇಣದಂತಿರುವ ಜಿಗುಟಾಗಿರುವ ಬೆಲ್ಲವು ಬಹಳ ಗುರುವಾಗಿರುವುದು. ಕ್ಷಯರೋಗವನ್ನುಂಟುಮಾಡುವುದು, ಮಲವನ್ನು ಬಂಧಿಸುವುದು ಮತ್ತು ಮೂತ್ರರೇಚಕವಾಗಿರುವುದಾಗಿದೆ. ಬೆಲ್ಲವು ಶುಂಠಿಯೊಡನೆ ಸೇವಿಸಲ್ಪಟ್ಟು ವಿಶೇಷವಾಗಿ ಕಫವನ್ನು ಹರಣಮಾಡುವುದು. ಅಳಲೆಕಾಯಿಯೊಡನೆ ಸೇವಿಸಲ್ಪಟ್ಟು ಪಿತ್ತವನ್ನು ಹರಣಮಾಡುವುದು, ಒಣಗಿದ ಶುಂಠಿಯೊಡನೆ ಸೇವಿಸಲ್ಪಟ್ಟು ವಾಯುವನ್ನು ಹರಣಮಾಡುವುದು. ಈ ಕಾರಣದಿಂದಲೇ ಚರಕಪ್ರಾಚಾರ್ಯರು "ದೋಷತ್ರಯಕ್ಕೂ ಔಷಧವಾಗಿರುವ ನಮೋ ಗುಡಾಯ" ಎಂಬುದಾಗಿ ಬೆಲ್ಲವನ್ನು ಪ್ರಶಂಸಿಸಿರುತ್ತಾರೆ.

ಸಕ್ಕರೆ—ಪುಡಿಸಕ್ಕರೆಯು (ಬೂರಾ) ವಾತ ಪಿತ್ತ-ರಕ್ತವಿಕಾರ ದಾಹ ಮೂರ್ಛೆ-ವಮನ-ಜ್ವರ ಇವುಗಳನ್ನು ಶಾಂತಗೊಳಿಸುವುದು ಮತ್ತು ತಂಪಾಗಿಯೂ ವೀರ್ಯವರ್ಧಕವಾಗಿಯೂ ಇರುತ್ತದೆ. ಕಲ್ಲುಸಕ್ಕರೆಯು ವಿಶೇಷ ಸಂಸ್ಕಾರದಿಂದ ಶುದ್ಧವಾಗಿರುವುದರಿಂದ ಲಘುವಾಗಿಯೂ, ಅತ್ಯಂತ ಸಿಹಿಯಾಗಿಯೂ, ಬಲಪುಷ್ಟಿವರ್ಧಕವಾಗಿಯೂ, ವಾತ-ಪಿತ್ತ ವಮನ ಇವುಗಳನ್ನು ಶಾಂತಗೊಳಿಸುವುದಾಗಿಯೂ, ಪಥ್ಯವಾಗಿಯೂ, ಸಕ್ಕರೆಯ ಜಾತಿಯಲ್ಲಿ ಅತ್ಯಂತ ಗುಣಪ್ರದವಾಗಿಯೂ ಇರುತ್ತದೆ. ಆದರೆ ಬೆಲ್ಲವನ್ನಾಗಲಿ, ಸಕ್ಕರೆಯನ್ನಾಗಲಿ ಸರ್ವದೋಷನಾಶಕವೆಂದು ತಿಳಿದು ಅತಿಯಾಗಿ ಸೇವಿಸುವುದಾದರೆ ಲಾಭಕ್ಕೆ ಬದಲು ಹಾನಿಯೇ ಅಧಿಕವಾಗಿ ಸಂಭವಿಸದಿರಲಾರದು. ಆದುದರಿಂದ ಪಥ್ಯವಸ್ತುವನ್ನಾದರೂ ಮಿತವಾಗಿಯೇ ಸೇವಿಸಬೇಕೆಂದು ಹಿಂದೆ ಬರೆದಿರುವ 'ಮಾತ್ರಾಶೀ ಸ್ಯಾತ್' ಎಂಬ ಆಹಾರಪ್ರಕರಣದ ಮೂಲಮಂತ್ರವನ್ನು ವಾಚಕರು ನೆನಪಿನಲ್ಲಿಟ್ಟಿರಬೇಕು.

ಬರೆದಂತೆಲ್ಲ ಒಂದೊಂದು ವಸ್ತುವು ಕಣ್ಣೆದುರಿಗೆ ಬಂದು ನಿಲ್ಲುವುದು ಒಂದನ್ನು ಬಿಡಬಾರದೆಂದು ಹೀಗೆಯೇ ಬರೆಯುತ್ತ ಹೋದರೆ ಕೇವಲ ದ್ರವ್ಯಗುಣ ನಿರ್ವಚನಾತ್ಮಕವಾದ ವಿಷಯವೇ ಹನುಮಂತನ ಬಾಲದಂತೆ ಬೆಳೆದು ಇತರ ವಿಚಾರಗಳಿಗೆ ಬಾಧಕವುಂಟಾಗುವುದೆಂದು ತಿಳಿದು ಸಾಮಾನ್ಯವಾಗಿ ಎಲ್ಲರಿಗೂ ಉಪಯುಕ್ತವಾಗಿರುವ ಕೆಲವು ವಸ್ತುಗಳನ್ನೇ ಇಲ್ಲಿ ವಿವರಿಸಿರುವುದಾಗಿದೆ. ಇನ್ನು ಉಳಿದಿರುವ ನಿತ್ಯೋಪಯೋಗಿಗಳಾದ ನಾಲ್ಕಾರು ದ್ರವವಸ್ತುಗಳನ್ನೂ ವಿವರಿಸಿ ಈ ಆಹಾರ ದ್ರವ್ಯಗುಣವರ್ಣನೆಯನ್ನು ಮುಗಿಸುವುದಾಗುತ್ತದೆ. ಇಷ್ಟರಿಂದಲೇ ಗುಣಜ್ಞರಾದ ವಾಚಕರು ಸಂತೋಷಗೊಂಡು ಮುಂದಿನ ವಿಚಾರಗಳಿಗವಕಾಶವನ್ನೀಯದಿರಲಾರರು. ಮತ್ತೊಮ್ಮೆ ಕೇವಲ ಆಹಾರದ್ರವ್ಯಗಳ ರಾಶಿಯನ್ನು ಪ್ರಿಯವಾಚಕರ ಕಣ್ಣೆದುರಿಗೆ ಸುರಿಯುವ ಯತ್ನವನ್ನು ಮಾಡುವುದಾಗುತ್ತದೆ.

ಹಾಲು—ದಯಾನಿಧಿಯಾದ ಪರಮೇಶ್ವರನು ಜೀವಿಗಳ ಪ್ರಾಣಧಾರಣೆಗಾಗಿ ಅನೇಕವಿಧ ವಸ್ತುಗಳನ್ನು ನಿರ್ಮಿಸಿರುವನಷ್ಟೆ? ಆದರೆ ಅವುಗಳಲ್ಲೆಲ್ಲ ಹಾಲು ಅತ್ಯಂತ ಶ್ರೇಷ್ಠವಾಗಿರುತ್ತದೆ. ಹುಟ್ಟಿದಂದಿನಿಂದ ಅನ್ನಪ್ರಾಶನ ಸಂಸ್ಕಾರವಾಗುವವರೆಗೂ ಮಕ್ಕಳಿಗೆ ಹಾಲೇ ಜೀವನಾಧಾರವಾಗಿರುತ್ತದೆ. ರೋಗಿಗಳಿಗೂ, ನಿರೋಗಿಗಳಿಗೂ, ಬಾಲಕರಿಗೂ, ತರುಣರಿಗೂ, ವೃದ್ಧರಿಗೂ, ಬಲಶಾಲಿಗಳಿಗೂ, ನಿರ್ಬಲರಿಗೂ, ಅವರವರ ಇಷ್ಟಾರ್ಥವನ್ನೀಯುವುದರಲ್ಲಿ ಹಾಲು ಸುರತರುವಿನಂತಿದೆ. ಆದುದರಿಂದಲೇ ಜೀವಿಗಳ ಜೀವನವೆಂಬ ಅಮೂಲ್ಯವಸ್ತುವೆ ಇದರಲ್ಲಡಕವಾಗಿರುತ್ತದೆ. ಮತ್ತು ಸಕಲ ಜೀವಿಗಳ ಆರೋಗ್ಯವನ್ನು ಸ್ಥಿರಗೊಳಿಸಲು ಹಾಲು ರಸಾಯನ

ಪ್ರದಾಯವಾಗಿರುವುದೆಂದು ಚರಕಸಂಹಿತೆಯ ಸೂತ್ರಸ್ಥಾನದಲ್ಲಿ "ಪ್ರವರಂ ಜೀವನೀಯಾನಾಂ ಕ್ಷೀರಮುಕ್ತಂ ರಸಾಯನಂ" ಎಂದು ವರ್ಣಿತವಾಗಿರುತ್ತದೆ

ಶ್ರೀಮದ್ರಂಭಾಪುರೀ ಸ್ವಾಮಿಗಳವರು ನಡೆಯಿಸಿದ ವಿದ್ವತ್ಸಭೆಯ ವೃತ್ತಾಂತ.

ಚಾಮರಾಜನಗರದಲ್ಲಿ ಇದೇ ಜನವರಿ 28ನೇ ಸೋಮವಾರ ನಡೆದದ್ದು

ಈ ಪ್ರಾತಃಕಾಲ ಮಹಾಸ್ವಾಮಿಗಳವರು ಶಿವಪೂಜಾನಂತರ 9-30 ಗಂಟೆಗೆ ಸರಿಯಾಗಿ ಮಠಾಧಿಪತಿಗಳನ್ನೂ ಪಾಠಶಾಲಾಧ್ಯಕ್ಷರು ಉಪಾಧ್ಯಾಯರು ಸ್ಥಳೀಯ ವಿದ್ವಾಂಸರು ಘನಪಾಠಿಗಳೇ ಮುಂತಾದವರನ್ನೂ ಬರಮಾಡಿಕೊಂಡು ಮಹಾಸಂಸ್ಥಾನದ ಪಂಡಿತವರ್ಗವೂ ಸಹ ಸೇರಿ ವೇದಶಾಸ್ತ್ರಗಳ ಮತ್ತು ಜ್ಯೋತಿಷ ತರ್ಕ ಧರ್ಮಶಾಸ್ತ್ರ ವ್ಯಾಕರಣಾದಿ ಶಾಸ್ತ್ರಗಳಲ್ಲಿ ಸಾರತರವಾದ ವಾಕ್ಯಾರ್ಥಗಳನ್ನು ನಡೆಯಿಸಿ ಅನಂತರ ಹನ್ನರಡು ಗಂಟೆಗೆ ಸಭಾವಿಸರ್ಜನೆಯನ್ನು ಮಾಡಿದರು

ಪುನಃ 4-30 ಗಂಟೆಗೆ ಸರಿಯಾಗಿ ವಿದ್ವತ್ಸಭೆಯು ನೆರೆಯಿತು. ಒಂದುಹೊತ್ತು ಶಾಸ್ತ್ರವಿಚಾರಗಳ ಚರ್ಚೆಯಾದ ಬಳಿಕ ಮಹಾಸ್ವಾಮಿಗಳವರು ಬಹಳ ಸಂತೋಷವನ್ನು ಹೊಂದಿ, ಈ ಚಾಮರಾಜನಗರವು ರಾಜಧಾನಿಗೆ ಸಮಾನವಾದುದೆಂತಲೂ ಇಲ್ಲಿ ಕವಿಗಳೂ ಪಂಡಿತರೂ ಗಾಯಕರೇ ಮುಂತಾದವರು ನಿಬಿಡವಾಗಿರುವುದರಿಂದ ನಮ್ಮ ಮೈಸೂರು ದೇಶದಲ್ಲಿ ಇದು ಚತುರ್ಥವಾದ ಉತ್ತಮ ಪಟ್ಟಣವೆಂದು ಅಪ್ಪಣೆಕೊಡಿಸಿ ವೇ|| ಬ್ರಹ್ಮ ಶ್ರೀ|| ಶೃಂಗೇರೀಮಠಾಧಿಕಾರಿಗಳಾದ ಶ್ರೀಕಂಠಾವಧಾನಿಗಳಿಗೂ ವೇ|| ಸಿದ್ಧಾಂತಿ ತಮ್ಮಯ್ಯ ಶಾಸ್ತ್ರಿಗಳವರಿಗೂ ಕವಿತೆಗಳನ್ನು ಸಮರ್ಪಿಸಿದ ಕರ್ನಾಟಕ ಕವಿತಿಲಕ ವೇ|| ವೆಂಕಟರಮಣಶಾಸ್ತ್ರಿಗಳಿಗೂ ಮತ್ತು ಚಕ್ರವರ್ತಿ ವೇ|| ಗೋಪಾಲಾಚಾರ್ಯರಿಗೂ, ಆಸ್ಥಾನ ಮಹಾವಿದ್ವಾನ್ ಋಗ್ವೇದ ಘನಪಾಠಿ ವೇ|| ಕೃಷ್ಣಾವಧಾನಿಗಳು ವೇ|| ಅಗರಂ ಮುಖ್ಯಪ್ರಾಣಾಚಾರ್ಯರು ಮುಂತಾದ ವೈದಿಕ ಮಂಡಲಿಗೂ ಫಲಮಂತ್ರಾಕ್ಷತೆ ಸಹಿತವಾಗಿ ಶಾಲುಗಳನ್ನು ದಯಪಾಲಿಸಿದರು. ಅನಂತರ ಮಹಾಸ್ವಾಮಿಗಳವರಿಗೆ ವೇದಶಾಸ್ತ್ರಗಳಲ್ಲೂ, ಪಂಡಿತಮಂಡಲಿಯಲ್ಲೂ ಇರುವ ಅಸಿತರಸಾಧಾರಣವಾದ ಪ್ರೀತಿಗೌರವಗಳನ್ನು ಕುರಿತು ವೇ|| ತಮ್ಮಯ್ಯಶಾಸ್ತ್ರಿಗಳವರು ಹೃದಯಂಗಮವಾದ ಭಾಷಣವನ್ನು ಮಾಡಿದರು ಆ ರಾತ್ರಿ ದರ್ಬಾರು ನಡೆದು ಪ್ರಸಿದ್ಧ ಗವಾಯಿಗಳಾದ ವೇ|| ತಮ್ಮಯ್ಯನವರ ವಾದ್ಯವಾದನವು ಜರುಗಿತು ಇದೇ ರೀತಿ ಪ್ರತಿದಿವಸ ರಾತ್ರಿಯೂ ಶಿವಕಥಾ, ಉಪನ್ಯಾಸ, ಗಾಯನ ಕವಿತಾಸ್ಪರ್ಧೆಗಳೇ ಮುಂತಾದ ಹಲಕೆಲವು ಪಾಂಡಿತ್ಯಪ್ರದರ್ಶನಗಳಿಂದ ಮಹಾಸ್ವಾಮಿಗಳವರ ಸಭೆಯು ವರ್ಣನಾತೀತವಾದ ಕಾಂತಿಯಿಂದ ವಿರಾಜಿಸುತ್ತಿದ್ದಿತು. ಮಹಾಸ್ವಾಮಿಗಳವರ ಸವಾರಿಯು ಮುಂದಿನ ತಿಂಗಳ ಆದಿಯಲ್ಲಿ ಕುದೇರು ಪ್ರಾಂತ್ಯಕ್ಕೆ ದಯಮಾಡಿಸುವುದಾಗಿದೆ

ಸಿ ಪಿ ನರಸಿಂಹಶಾಸ್ತ್ರಿ, ಚಾಮರಾಜನಗರ

ಚಾಮರಾಜನಗರದಲ್ಲಿ ನಡೆದ

ಅಭೂತಪೂರ್ವವಾದ ವಿದ್ವನ್ಮಹಾಸಭೆ. ರಂಭಾಪುರೀ ಶ್ರೀಜಗದ್ಗುರು ಶಿವಾನಂದ ರಾಜೇಂದ್ರಶಿವಾಚಾರ್ಯಸ್ವಾಮಿಗಳ ಸಮ್ಮುಖದಲ್ಲಿ

ಇದೇ ಜನವರಿ 27 ನೇ ತಾರೀಖು ಭಾನುವಾರ ಸಾಯಂಕಾಲ 7½ ಗಂಟೆಗೆ ಚಾಮರಾಜನಗರದ ಜನ ಗೃಹಮಂಟಪದಲ್ಲಿ ಒಂದು ಮಹಾಸಭೆಯು ನಡೆಯಿತು ನಮ್ಮ ಶ್ರೀಮನ್ಮಹಾರಾಜರವರ ಮುತ್ತಾತರಾದ ಚಾಮರಾಜೇಂದ್ರವಡೆಯರವರು ಜನ್ಮಗ್ರಹಣಮಾಡಿದ ಐತಿಹಾಸಿಕ ಪ್ರದೇಶದಲ್ಲಿ ಶ್ರೀಜಗದ್ಗುರು ಜಗದ್ಗುರು ಮಹಾಸ್ವಾಮಿಗಳವರು ಉನ್ನತವಾದ ಪೀಠದಲ್ಲಿ ಮಂಡಿಸಿದ್ದರು ಪ್ರಕಾಶಮಾನವಾದ ದೀಪಗಳಿಂದಲೂ, ವೈದಿಕಲೌಕಿಕ ಮಹಾಜನರಿಂದಲೂ ಪುರಜನರಿಂದಲೂ ಆ ಸಭೆಯು ಅಪೂರ್ವವಾದಕಾಂತಿಯಿಂದ ಕಂಗೊಳಿಸುತ್ತಿತ್ತು

ಮೊದಲನೆ ಘಂಟೆಗೆ ಸಭಾಕಾರ್ಯಗಳು ಆರಂಭಿಸಲ್ಪಟ್ಟವು ಮೊಟ್ಟಮೊದಲು ಕಾದಂಬರೀಸಂಗ್ರಹದ ಸಂಪಾದಕರಾದ ವೇ|| ಸಿ ವೆಂಕಟರಮಣಶಾಸ್ತ್ರಿಗಳು ತಾವು ಮಾಡಿದ್ದ ಕವಿತಾ ಶ್ಲೋಕಗಳನ್ನು ಸ್ವಾಮಿಗಳವರ ಸಮ್ಮುಖದಲ್ಲಿ ಓದಿದರು ಅನಂತರ ಲೇಟ್ ಬಸವಪ್ಪಶಾಸ್ತ್ರಿಗಳ (ಅಭಿನವಕಾಳಿದಾಸ) ಮಕ್ಕಳಾದ ಮಹಾದೇವಶಾಸ್ತ್ರಿಗಳ ಕನ್ನಡಕವಿತೆಯೂ, ಸಾರಸ್ವತ ಸಾಹಿತ್ಯಪಂಡಿತರೂ, ಹಿಂದೀಪಂಡಿತರೂ ಆದ ಚಕ್ರವರ್ತಿ ಗೋಪಾಲಾಚಾರ್ಯರ ಸಂಸ್ಕೃತ, ಹಿಂದೀ ಕವನಗಳೂ ಕ್ರಮವಾಗಿ ಓದಲ್ಪಟ್ಟವು

ಬಳಿಕ ಮಹಾಸ್ವಾಮಿಗಳವರು ಮೊದಲು ಸಂಸ್ಕೃತ ಬಳಿಕ ಹಿಂದೀ ಅನಂತರ ಕನ್ನಡದಲ್ಲೂ ಸಹ ತಮ್ಮ ಹೃದಯಂಗಮವಾದ ವಾಗ್ವೈಖರಿಯಿಂದ ಒಂದೂವರೆಗಂಟೆಗಳ ಕಾಲ ಧರ್ಮವಿಚಾರದಲ್ಲಿ ಅವಿಚ್ಛಿನ್ನವಾಗಿ ಉಪನ್ಯಾಸಮಾಡಿದರು ಅದರ ಸಾರಾಂಶವನ್ನಿಲ್ಲಿ ಬರೆಯುತ್ತೇವೆ

ಲೋಕದಲ್ಲಿ ಪ್ರತಿಯೊಂದು ಪ್ರಾಣಿಯೂ ಸುಖವನ್ನೇ ಬಯಸುತ್ತದೆ ಮನುಷ್ಯನಂತೂ ದುಃಖವನ್ನು ಸಹಿಸಲಾರನು. ಸಂಸಾರವೆಂಬ ವ್ಯಾಧಿಯೂ ಶಕ್ತ ದುಃಖವು ಜೀವರ ಹಲವು ಬಗೆಯನ್ನು ನೀಯನ್ನು ತೋರಿ ಅವರೊಳಗ ಸಿಕ್ಕಿಕೊಂಡು ನರಳುವಂತೆ ತನ್ನಿಂದಲೇ ಕಲ್ಪಿಸಿಕೊಂಡದ್ದಾಗಿದೆ ಮನುಷ್ಯನಿಗೆ ಬರುವ ನಾನಾರೋಗಗಳಿಗೆ ಡಾಕ್ಟರುಗಳು ಔಷಧಕೊಟ್ಟು ಗುಣಪಡಿಸುತ್ತಾರೆ ಆದರೆ ಪುನಃ ರೋಗವು ಬಾರದಂತೆ ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಮತ್ತು ಸಂಸಾರರೋಗಕ್ಕೆ ಔಷಧವನ್ನು ಕೊಡಲು ಡಾಕ್ಟರುಗಳಿಂದ ಸಾಧ್ಯವಾಗುವದು ಅಂಥಾ ರೋಗವು ಗುರೂಪದೇಶದಿಂದ ದೊರೆತ ಜ್ಞಾನದ ಅಭ್ಯಾಸದಿಂದ ಪರಿಹಾರವಾಗುವುದು. ಆದ್ದರಿಂದಲೇ ಆಯಾಯ ಸಂಗಡದಲ್ಲಿ ಮತಪ್ರವರ್ತಕರುಗಳೂ, ಗುರುಗಳೂ ಏರ್ಪಟ್ಟು ಒಂದೊಂದು ಮಾರ್ಗಗಳನ್ನು ತೋರಿಸುತ್ತಿದ್ದಾರೆ ಎಲ್ಲಾ ಮತದರ್ಶನಗಳೂ ವಿಚಾರಮಾಡುವುದಾದರೆ, ತಮ್ಮ ತಮ್ಮ ಪೂರ್ವಿಕರ ಸಂಪ್ರದಾಯಗಳನ್ನು ದೇವರ ಸ್ವರೂಪಗಳನ್ನು ತಿಳಿಯ ಬೇಕೆಂಬ ಆಸೆ ಮಾರ್ಗಗಳು ಬೇರೆಬೇರೆ ಹೆಸರಿನಿಂದ ಹರಿದಾಗ್ಯೂ ಕಡೆಗೆ ಎಲ್ಲವೂ ಸಮುದ್ರಕ್ಕೇ ಸೇರುವಂತೆ ಎಲ್ಲ ಮತದವರೂ ಏಕವೆಂಬ ಒಂದೇ ಸಮುದ್ರವನ್ನು ಮುಟ್ಟುವವರಾಗಿದ್ದಾರೆ.

ಈ ಸಂಸಾರಕ್ರಮವು ಆಶ್ಚರ್ಯವನ್ನುಂಟುಮಾಡತಕ್ಕದ್ದಾಗಿದೆ ಸಂಸಾರಿಗಳಿಗೂದಗುವ ನಾನಾ ದುಃಖಗಳನ್ನು ದೂರಮಾಡಲು ರಾಜರೆಂದೂ ಗುರುಗಳೆಂದೂ, ಆಚಾರ್ಯರೆಂದೂ ಏರ್ಪಟ್ಟಿದ್ದಾರೆ ಅದರಲ್ಲೂ ಮಹಾರಾಜ ಮಹಾಗುರು, ಮಹಾಚಾರ್ಯ, ಮಹಾಸ್ವಾಮಿ ಎಂಬ ಪದಗಳಿಗೆ ತಕ್ಕಂತೆ ಗೂಢವಾದ ಗಾಂಭೀರ್ಯಾರ್ಥವಿರುತ್ತದೆ ಇದನ್ನು ವಿಚಾರಿಸಿದರೆ ಲೋಕವು ರಾಜ್ಯವೆಯ ತತ್ವವು ಹೊರಡುವುದು ಈ ತತ್ವವನ್ನು ವಿಚಾರಿಸದಿರುವವರು ದಂಡಾರ್ಹರಾಗುತ್ತಾರೆ ಸಂಧ್ಯಾವಂದನೆ ಅಂದರೆ, ಸಂಧಾನಕ್ಕಾಗಿ, ಧ್ಯಾನಧ್ಯಾನಮಾಡುವ, ವಂದನೆನಮಸ್ಕಾರ ಪ್ರತಿಯೊಬ್ಬ ಮತೀಯನೂ ತನ್ನ ಧರ್ಮಕ್ಕೆ ತಕ್ಕ ಸಂಧ್ಯಾವಂದನೆಯನ್ನು ಮಾಡಲೇಬೇಕು ಸಂಸಾರವಾದರೆ ಬಳ್ಳಿಯ ಸಾರವಿಲ್ಲದ ವಸ್ತುವೆಂದು ಅರ್ಥ ಇದು ತಪ್ಪಿದರೆ ಅನೇಕ ದುಃಖಾನುಭವಿಸುವುದು ಆದ್ದರಿಂದ ನಿತ್ಯವಾದ ಸುಖವನ್ನು ವೈಷ್ಣವರಿಂದಲೂ ಗುರುಮುಖದಿಂದಲೂ ತಿಳಿಯಬೇಕು. ನಮ್ಮ ಶ್ರೀಮನ್ಮಹಾರಾಜರವರು ಪಂಚಶಕ್ತಿವನ್ನು ಚೆನ್ನಾಗಿ ತಿಳಿದು ಪ್ರತ್ಯಕ್ಷದರ್ಶನಸ್ವರೂಪರಾಗಿ ಪ್ರಜೆಗಳನ್ನು ಕಾಪಾಡುತ್ತಿದ್ದಾರೆ ಅವರ ಮೇಲ್ಪಂಕ್ತಿಯನ್ನು ಸರ್ವರೂ ಅನುಸರಿಸಬೇಕು ಇದೇ ಮುಂತಾದ ವಿಚಾರಗಳನ್ನು ವಿಶದೀಕರಿಸಿ ಉಪನ್ಯಾಸಮಾಡಿದರು ಒಂಭತ್ತುವರೆ ಗಂಟೆಗೆ ಸಭಾವಿಸರ್ಜನೆಯಾಯಿತು ಸ್ವಾಮಿಗಳವರು ಸರ್ವರನ್ನು ಪ್ರಸನ್ನದೃಷ್ಟಿಯಿಂದ ನೋಡುತ್ತಾ ಮಠಕ್ಕೆ ವಿಜಯಂಗೈದರು

ಸಿ ವೆಂಕಟರಮಣಶಾಸ್ತ್ರಿ,
ಎಡಿಟರ್ ಕಾದಂಬರೀ ಸಂಗ್ರಹ

ಮೈಸೂರು ಮುಜರಾಯಿ ಇಲಾಖೆ.

1933-34ನೆಯ ಸಾಲಿನ ಆಡಳಿತಗಳು

ಮುಜರಾಯಿ ಇಲಾಖೆಯ 1933-34 ನೆಯ ಸಾಲಿನ ಆಡಳಿತದ ವರದಿಯನ್ನು ಸರ್ಕಾರದವರು ಈಗತಾನೆ ವಿಮರ್ಶೆಮಾಡಿರುತ್ತಾರೆ ಅದರಲ್ಲಿ ಸ್ವಾರಸ್ಯಕರವಾದ ಹಲವು ಸಂಗತಿಗಳು ಅಡಕವಾಗಿವೆ ಪ್ರಸಕ್ತವರ್ಷದಲ್ಲಿ ಕಲವು ನಿಬಂಧನೆಗಳೇ ಮುಂತಾದವು ಮಂಜೂರಾದವು ಮತ್ತೆ ಕೆಲವು ಏರ್ಪಾಡುಗಳು ನಡೆದವು. ಅವುಗಳಲ್ಲಿ ಮುಖ್ಯವಾದವುಗಳಾವುವೆಂದರೆ—(1) 1925 ನೆಯ ಇಸವಿಯ IX ನೆಯ ನಂಬರಿನ ಮೈಸೂರು ಪ್ರಾಚೀನ ಸ್ಮಾರಕ ವಸ್ತುಗಳ ರಕ್ಷಣೆಯ ರೆಗುಲೇಷನಿಗನುಸಾರವಾಗಿ ರಚಿಸಿದ ನಿಬಂಧನೆಗಳನ್ನು 1934ನೆಯ ಇಸವಿ ಫೆಬ್ರವರಿ ತಿಂಗಳಿನಲ್ಲಿ ಪ್ರಕಟಿಸಲಾಯಿತು (2) ಸಂಸ್ಥಾನದಲ್ಲಿರುವ ಮುಜರಾಯಿ ಸಂಸ್ಥೆಗಳಿಗೆ ವರಮಾನ ಬರುವ ಸ್ವತ್ತುಗಳ ವಿಷಯದಲ್ಲಿ ಹರಾಜು ನಡಿಸುವುದನ್ನು ಕ್ರಮಪಡಿಸುವುದಕ್ಕಾಗಿ ನಿಬಂಧನೆಗಳನ್ನು 1934 ನೆಯ ಇಸವಿ ಮಾರ್ಚಿ ತಿಂಗಳಿನಲ್ಲಿ ಮಂಜೂರು ಮಾಡಲಾಯಿತು (3) ಮೈಸೂರು ಸಿಟಿಯಲ್ಲಿರುವ ಸಾರ್ವಜನಿಕ ಧರ್ಮಸಂಬಂಧವು ಮತ್ತು ಸುಕಸಂಬಂಧದ ಸಂಸ್ಥೆಗಳಿಗೆ ಮುಖ್ಯವಾಗಿ ನೀರನ್ನು ಸರಬರಾಯಿ ಮಾಡುವಂತೆ ವ್ಯವಸ್ಥೆ ಪಡಿಸುವುದಕ್ಕಾಗಿ ತಿದ್ದುಪಾಟಾದ ನಿಬಂಧನೆಗಳನ್ನು 1933 ನೆಯ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ಜಾರಿಮಾಡಲಾಯಿತು (4) ಧರ್ಮಕಾರ್ಯಗಳಿಗಾಗಿ ಠೇವಣಿ ಮಾಡಿದ ಹಣಗಳ ಮೇಲೆ ಶೇಕಡ 5 ರಂತೆ ಬಡ್ಡಿ ಕೊಡುತ್ತಿದ್ದುದನ್ನು ತಗ್ಗಿಸಿ 4½ ರಂತೆ ಬಡ್ಡಿ ಸಂದಾಯವಾಗಬೇಕೆಂದು ಅಪ್ಪಣೆಮಾಡಲಾಯಿತು (5) ಸ್ವಲ್ಪಮಟ್ಟಿಗಾಗಲಿ, ಪೂರ್ತಿಯಾಗಿಯೇ ಆಗಲಿ ಸ್ಥಳೀಯ ಸಂಸ್ಥೆಗಳವರಿಂದ ನಿರ್ವಹಿಸಲ್ಪಡುವ ಎಲ್ಲಾ ವೈದ್ಯಶಾಲೆಗಳಲ್ಲೂ, ದವಾಖಾನೆಗಳಲ್ಲೂ ಸರ್ಕಾರದವರಿಂದ ಅಂಗೀಕೃತವಾದ ಒಂದು ಆಯುರ್ವೇದದ ಕಾಲೇಜಿನಲ್ಲಿ ಕ್ರಮವಾಗಿ ಶಿಕ್ಷಣವನ್ನು ಪಡೆದವರನ್ನು ಮಾತ್ರವೇ ಕೆಲಸಕ್ಕೆ ನೇಮಕಮಾಡಬೇಕೆಂದು ಸರ್ಕಾರದವರು ಅಪ್ಪಣೆಮಾಡಿರುತ್ತಾರೆ (6) ಮುಜರಾಯಿ ಸಂಸ್ಥೆಗಳ ಸಂಬಂಧದಲ್ಲಿ ನಡೆಯುವಂಥವುಗಳೂ ಸೇರಿದಂತೆ ಸಮಸ್ತ ಪ್ರದರ್ಶನಗಳನ್ನೂ, ಪರಿಷೆಗಳನ್ನೂ ಇನ್ನು ಮುಂದೆ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಮ್ಯುನಿಸಿಪಾಲಿಟಿಗಳವರೂ ನಡಿಸತಕ್ಕದೆಂದು ಹುಕುಂ ಮಾಡಲಾಯಿತು ಮ್ಯುನಿಸಿಪಾಲಿಟಿಗಳವರು ನಡೆಯಿಸುವ ವಿಷಯದಲ್ಲಿ ಅವರು ಕೆಲವು ಷರತ್ತುಗಳಿಗೆ ಒಳಪಟ್ಟು ವರ್ತಿಸಬೇಕೆಂದು ವಿಧಾಯಕಮಾಡಲಾಯಿತು (7) ತಿದ್ದುಪಾಟಾದ ಮುಜರಾಯಿ ಕೈಪಿಡಿಯನ್ನೂ, ಕನಕದಲ್ಲಿರುವ ಶ್ರೀ ಕಳಲೇಶ್ವರಸ್ವಾಮಿ ದೇವಸ್ಥಾನದ ಕೈಪಿಡಿಯನ್ನೂ ಪ್ರಕಟಿಸಲಾಯಿತು ಅವೈರಾದ ತಿದ್ದುಪಾಟಾಗಿ ಅಂಗೀಕಾರಕ್ಕಾಗಿ ಒಪ್ಪಿಸಲ್ಪಟ್ಟಿರುವ ಮೇಲುಕೋಟೆಯಲ್ಲಿರುವ ಶ್ರೀ ನಾರಾಯಣಸ್ವಾಮಿ ದೇವಸ್ಥಾನದ ಮತ್ತು ಇತರ ದೇವಸ್ಥಾನಗಳ ಮಸೂದಾ ಕೈಪಿಡಿಯು ಸರ್ಕಾರದವರ ಪರಾಂಬರಿಕೆಯಲ್ಲಿದೆ (8) ದೊಡ್ಡಬಳ್ಳಾಪುರದ ತಾಲ್ಲೂಕು ಘಾಟಿಯಲ್ಲಿರುವ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಜಾತ್ರೆಯ ಪ್ರದೇಶಗಳಿಗೆ 16,000 ರೂ ವೆಚ್ಚದಿಂದ ಕೊಳಾಯಿಗಳ ಮೂಲಕ ನೀರು ಸರಬರಾಯಿ ಮಾಡುವುದನ್ನೂ, ಯಂತ್ರದಿಂದ ಕೊರೆದು ತೆಗೆಯಿಸಿದ ಬಾವಿಯ ಮೂಲಕ ಮಾಲೇಕಲ್ ತಿರುಪತಿಗೆ ನೀರನ್ನು ಸರಬರಾಯಿ ಮಾಡುವುದನ್ನೂ ಮಂಜೂರು ಮಾಡಲಾಯಿತು (9) ದೇವರಾಯನದುರ್ಗದಲ್ಲಿ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನಗಳ ಮುಂದಿನ ಆಡಳಿತದ ಏರ್ಪಾಟೊಂದನ್ನೂ ಅವುಗಳ ಆಡಳಿತವನ್ನು ನೋಡಿಕೊಳ್ಳುವ ಸಮಿತಿಯ ಪುನರ್ವ್ಯವಸ್ಥೆಯ ಕೆಲಹೆಯನ್ನೂ ಸರ್ಕಾರದವರು ಅಂಗೀಕರಿಸಿ ಮಂಜೂರುಮಾಡಿದರು

ಮಠಗಳಿಗೆ ಛತ್ರಗಳಿಗೆ ಕೊಟ್ಟಿರುವ ಇನಾಂ ಗ್ರಾಮಗಳನ್ನು ಹಿಂದಕ್ಕೆ ತೆಗೆದುಕೊಳ್ಳುವ ವಿಷಯವು ಕಳೆದ ವರ್ಷ ಪರ್ಯಾಲೋಚನೆಯಲ್ಲಿದ್ದಿತಷ್ಟೆ ಈ ವಿಷಯದಲ್ಲಿ ಮುಜರಾಯಿ ಕಮಿಷನರವರು "ಈ ಧರ್ಮಾದಾಯ ಇನಾಂತಿಗಳ ವಿಚಾರದಲ್ಲಿ ಗ್ರಾಂಟು

(6 ನೆಯ ಪುಟವನ್ನು ನೋಡಿ)

ಪಂಚಾಚಾರ್ಯ ಪ್ರಭಾ.

೧೯೩೫ ನೇ ಫೆಬ್ರವರಿ ತಾ|| ೪ನೇ ಸೋಮವಾರ

ಲಿಂಗಧಾರಣವು ಶ್ರುತಿಸಿದ್ಧವಾದುದು.

"ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ" ಎಂಬ ತೈತ್ತಿರೀಯಕ ಮಂತ್ರದಲ್ಲಿ ಅಪೂರ್ವವಿಧಿ, ನಿಯಮವಿಧಿ ಪರಿಸಂಖ್ಯಾವಿಧಿ ಎಂಬ ಮೂರು ಪ್ರಕಾರವಾದ ವಿಧಿಯಿಂದಲೂ ಸ್ವಶರೀರದಲ್ಲಿ ಲಿಂಗಧಾರಣವೂ, ಹಸ್ತಪೀಠದಲ್ಲಿ ಲಿಂಗಪೂಜೆಯೂ ಸಿದ್ಧವಾಯಿತು. ಆದರೆ ಈ 'ಸರ್ವಲಿಂಗಂ ಸ್ಥಾಪಯತಿ' ಎಂಬ ವಾಕ್ಯದ ಹಿಂದಣ 'ವಿತತೋ ಸ್ಯ ಸೂರ್ಯಸ್ಯ' ಎಂಬ ವಾಕ್ಯವಿರತ್ತದ ಅನಾಸ್ಯದಲ್ಲಿ ಸೂರ್ಯ ಚಂದ್ರ ಎಂಬ ಅರ್ಥವುಳ್ಳ ಪದಗಳಿರುವದರಿಂದಲೂ ಹಿಂದಿನ ...ತಿಸ್ರಿಯವನ್ನು ಸ್ಮರಣೆಗೆ ತಂದು ಕೊಡುವ "ವಿತತಾ" ಎಂಬ ಪದವಿರುವುದರಿಂದಲೂ ಈ ಶ್ರುತಿವಾಕ್ಯದ ಪ್ರಾರಂಭದಲ್ಲಿರುವ 'ನಿಧನಪತ ಯನಮಃ ನಿಧನಪತಾಂತಿಕಾಯ ನಮ ... ಯನಮಃ ಊರ್ಧ್ವಲಿಂಗಾಯನಮಃ' ಇತ್ಯಾದಿ ವಾಕ್ಯಗಳಿಂದ ಹೇಳಲ್ಪಡುವ ಸ್ತೋತ್ರ ಸೂರ್ಯಚಂದ್ರರನ್ನು ಉದ್ದೇಶಿಸಿ ... ಒತ್ತು ಪದವ ಜ್ಯಪಾದ ದೇವದಲ್ಲ ದಿಸಲ್ಪಡುವ ಶಿವಲಿಂಗವನ್ನು ಉದ್ದೇಶಿಸಿ ... ಹುಟ್ಟ ಮುಂದೆಬಂದು ನಿಲ್ಲುವುದು. ಆದರೆ ಈ ಮಂತ್ರದ ಉಪಕ್ರಮ ಉಪಸಂಹಾರಗಳನ್ನು ಪದ ಪದನ್ನು ವಿಚಾರಮಾಡಿ ನೋಡಿದರೆ ಆದ್ಯಂತವಾಗಿ ಶಿವಲಿಂಗವನ್ನು ಸ್ತೋತ್ರ ಮಾಡುವ ಸಂದರ್ಭ ತೋರುತ್ತಿದೆಯಲ್ಲದೆ ಸೂರ್ಯಚಂದ್ರರನ್ನು ಸ್ತೋತ್ರಮಾಡುವ ಸಂದರ್ಭ ತೋರಿಬರುವುದಿಲ್ಲ. ಈ ಮಂತ್ರದ ಪ್ರಾರಂಭವಾಕ್ಯಗಳಲ್ಲಿ ಶಿವಲಿಂಗವನ್ನು ಸ್ತುತಿಸುತ್ತ ಅಂತ್ಯದಲ್ಲೂ ಶಿವಲಿಂಗಧಾರಣವನ್ನು ವಿಧಾಯಕಮಾಡಿರುವುದನ್ನು ಪರಿಶೀಲಿಸಿದ್ದಾದರೆ ಮಧ್ಯದ ಸೋಮ ಸೂರ್ಯಪದಗಳಿದ್ದ ಮಾತ್ರದಿಂದ ಈ ಮಂತ್ರವು ಸೂರ್ಯಚಂದ್ರರನ್ನು ಸ್ತುತಿಸುವ ಮಂತ್ರವೆಂದು ಹೇಳುವದು ಪ್ರಕರಣವಿರೋಧವಾಗುವುದರಿಂದ ಈ ಸೋಮ ಸೂರ್ಯಪದಗಳಿಗೂ ಶಿವಲಿಂಗಪರವಾಗಿ ಅರ್ಥಮಾಡಿದಲ್ಲಿ ಉಪಕ್ರಮ ಉಪಸಂಹಾರಗಳಿಗೆ ಸರಿಹೋಗುತ್ತದೆ. ಸೋಮಶಬ್ದವು ಶಿವನಲ್ಲಿ ರೂಢವಾಗಿಯೂ ಯೌಗಿಕವಾಗಿಯೂ ಇರುತ್ತದೆ.

ಮತ್ತು—

ಸೋಮುಖಿಲ್ಲ ಭವತಿ ಧ್ಯಕನೋಕಮುಪಾಸತೆ ||

ಎಂಬಲ್ಲಿರುವ ಸೋಮಪದಕ್ಕೆ ಉಮಯಾಸಹಿತಃ ಸೋಮಃ ಎಂಬ ವ್ಯುತ್ಪತ್ತಿಬಲದಿಂದ ಶಿವಲಿಂಗವೆಂದು ಅರ್ಥಮಾಡಿರುವಂತೆ ಸೋಮನ್ನ ಅಂದರೆ ಉಮಾ (ಶಕ್ತಿ) ವಿಶಿಷ್ಟನ ದೆಂದೂ ಸೂರ್ಯಸ್ಯ ಎಂಬುವಲ್ಲಿ

ಯ ಆದಿತ್ಯ ಶಿಪ ಸ್ತಾದಿಕ ಮಂಡಲೇ ಯುಯುಯಿ
ಉಮಾಪತ್ನೋ ನಮ ||

ಯಾವ ಪರಶಿವನು ಸೂರ್ಯಮಂಡಲಾಂತರ್ವರ್ತಿಯಾಗಿದ್ದು ಆ ಸೂರ್ಯನಿಂದ ಲೋಕವನ್ನು ಬೆಳಗಿಸುವನೋ ಅಂತಹ ಸೂರ್ಯನು ತನ್ನ ಮಂಡಲದಲ್ಲಿಯೇ ಇದ್ದರೂ ಯಾವ ಪರಶಿವನನ್ನು ತಿಳಿಯದೆ ಹೋಗಿರುತ್ತಾನೆಯೋ ಎಂಬ ಅಂತರ್ಯಾಮಿಬ್ರಾಹ್ಮಣದಲ್ಲಿ ಹೇಳಿರುವಂತೆ ಸೂರ್ಯಮಂಡಲಾಂತರ್ವರ್ತಿಯಾದ ಲಿಂಗರೂಪಶಿವನೆಂದು ಅರ್ಥಮಾಡುವುದೇ ಅತ್ಯಾವಶ್ಯಕವಾಗಿರುತ್ತದೆ. ಹಾಗಿಲ್ಲದೆ ಹೋದರೆ ಶಿವಲಿಂಗಸ್ತುತಿಯೇ ಸಂಭವಿಸುವುದಿಲ್ಲ. ಹಾಗೆ ಸ್ತುತಿಯು ಸಂಭವಿಸದೆ ಇದ್ದರೆ "ಸರ್ವಲಿಂಗಂ ಸ್ಥಾಪಯತಿ" ಎಂಬಲ್ಲಿ ಶರೀರದಲ್ಲಿ ಶಿವಲಿಂಗವನ್ನು ಧರಿಸಬೇಕೆಂಬ ವಿಧಿಯೇ ಸಂಭವಿಸಲಾರದು. ಆದುದರಿಂದ

ಶಿಮುಂಬರಿಃ ಯುತ್ನೋ ಭವತಿಗ್ಯಾ ಉದುಂಬರ
ಊರ್ಧ್ವಕ ಊರ್ಧ್ವವಾಕ್ಯಾ ಊರ್ಧ್ವ ಕೂನಾಥ್ನೋ
ಕ್ಯಿಟೀರವಳಿಸಿ ||

ಅಂದರೆ ಉದುಂಬರವೃಕ್ಷವು ಬಲಿಷ್ಠವಾದುದು ಪಶುಗಳೂ ಬಲಿಷವಾದವುಗಳು. ಬಲವುಳ್ಳ ವಸ್ತುವಿನೊಡನೆ ಬಲವುಳ್ಳ ವಸ್ತುವಿನ ಸಂಬಂಧವಿರುತ್ತದೆ. ಬಲವುಳ್ಳ ಉದುಂಬರವೃಕ್ಷವು ಬಲಪ್ರಾಪ್ತಿಗಾಗಿ ಪಶುಗಳನ್ನು ಹೊಂದುವದು ಎಂಬ ಶ್ರುತಿವಾಕ್ಯದಿಂದ ಉದುಂಬರವೃಕ್ಷದ ಸ್ತುತಿಯು ತೋರುತ್ತದೆ. ಈ ಅರ್ಥವ ಬಲದಿಂದ "ವಿದುಂಬರೋ ಯೂಪೋ ಭವತಿ" ಎಂಬಲ್ಲಿ ಅದು ಪ್ರತ್ಯಯಾಂತವಾದ ಯೂಪ ಪದವಿದ್ದರೂ ಅಪ್ರಕೃತವಾದ ಬೋಧಕವಾದ ಲಿಂಗ ಅರ್ಥವನ್ನು ವಿಮಾಂಸಕರು ಅಂಗೀಕಾರಮಾಡಿರುತ್ತಾರೆ. ಅದರಂತೆ "ಸರ್ವಲಿಂಗಂ ಸ್ಥಾಪಯತಿ" ಎಂಬಲ್ಲಿಯೂ ಲಿಂಗ ಲೋಟ್ ಪ್ರತ್ಯಯಾಂತವ ವಿಧ್ಯರ್ಥಕಪದವಿಲ್ಲದೆ ಲಟ್ ಪ್ರತ್ಯಯಾಂತವಾದ ಪದವಿದ್ದರೂ ಊರ್ಧ್ವಲಿಂಗಾಯ ಹಿರಣ್ಯಲಿಂಗಾಯ ಇತ್ಯಾದಿ ಉಪಕ್ರಮವಾಕ್ಯಗಳಲ್ಲಿ ಶಿವಲಿಂಗಸ್ತುತಿಯನ್ನು ಮಾಡಿರುವುದರಿಂದ ಈ ಅರ್ಥವಾದದ ಸಾಮರ್ಥ್ಯದಿಂದ "ಸರ್ವಲಿಂಗಂ ಸ್ಥಾಪಯತಿ" ಎಂಬಲ್ಲಿ ಲಿಂಗಧಾರಣಕ್ಕೆ ವಿಧಿತ್ವವನ್ನು ಬೋಧಿಸುವ ಲಿಂಗ ಲೋಟ್ ಪ್ರತ್ಯಯಗಳಿಲ್ಲದಿದ್ದರೂ "ಸ್ಥಾಪಯತಿ" ಎಂಬ ಲಡಂತ ಪದಕ್ಕೆ ವಿಧ್ಯರ್ಥವನ್ನು ಅಂಗೀಕಾರಮಾಡುವುದರಿಂದ ಲಿಂಗಧಾರಣವಿಧಿಯು ಶಕ್ತವೂ ಸಂಗತವೂ ಆಗುತ್ತದೆ. ಇದಲ್ಲದೆ ವೀರಶೈವಸಿದ್ಧಾಂತದಲ್ಲಿ ಯಾವದೂ,

ಅಖಂಡಮೇಕಂ ಲಿಂಗಂ ... ಶಕ್ತಿಮಾನ ... ಶಿವಂ |
ಭಾವತ ... ದಶಧಾ ಭಜತೇ ... |
ಇಷ್ಟಲಿಂಗ ... ಆಚಾರ ಲಿಂಗ ...
... ವಿರಾಜಿತೇ ||
... ಗುರು ... ಶಿವ ... ಮುಂ ... |
ಶಿವಲಿಂಗ ... ಪ್ರಾಣ ... ಸತ್ಯವೇನ |
... ಮಹತ್ತ್ವಂ |
... ಮಹತ್ತ್ವಂ

ಅಖಂಡಲಿಂಗ, ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗ, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಹತ್ತು ವಿಧವಾದ ಲಿಂಗಗಳು ಹೇಳಲ್ಪಟ್ಟಿರುತ್ತವೆ. ಇವುಗಳಲ್ಲಿ ಅಖಂಡಲಿಂಗದ ಪರಿಣಾಮವಾಗಿರುವ ಒಂಬತ್ತು ಲಿಂಗಗಳು ದೇಹದಲ್ಲಿರುವ ಒಂದೊಂದು ಇಂದ್ರಿಯ ಗೋಳಕವನ್ನಾಶ್ರಯಿಸಿ ಸ್ವಾಧಿಷ್ಠಾನಾದಿಯಾಗಿರುತ್ತವೆ. ಇಂತಹ ಹತ್ತು ಲಿಂಗಗಳ ಸ್ತುತಿಯು ಈ ತೈತ್ತಿರೀಯ ವಾಕ್ಯದಲ್ಲಿ ಕ್ರಮದಿಂದ ಹೇಳಲ್ಪಟ್ಟಿರುತ್ತದೆ. ಹೇಗೆಂದರೆ—ಈ ಶ್ರುತಿಯು ಊರ್ಧ್ವಲಿಂಗಾಯನಮಃ ಎಂಬ ವಾಕ್ಯದಿಂದ ದೇಹದ ಬ್ರಹ್ಮರಂಧ್ರಸ್ಥ ಸಹಸ್ರದಳಚಕ್ರನಿವಾಸಿಯಾದ ಅಖಂಡಲಿಂಗವನ್ನೂ, ಹಿರಣ್ಯಲಿಂಗಾಯನಮಃ ಎಂಬ ವಾಕ್ಯದಿಂದ ಸೂಕ್ಷ್ಮಶರೀರದಲ್ಲಿರುವ ಸುವರ್ಣಚ್ಛಾಯೆಯುಳ್ಳ ಪ್ರಾಣಲಿಂಗವನ್ನೂ ಸುವರ್ಣಲಿಂಗಾಯನಮಃ, ಎಂಬ ವಾಕ್ಯದಿಂದ ಸ್ಥೂಲದೇಹದಲ್ಲಿರುವ ಇಷ್ಟಲಿಂಗವನ್ನೂ ದಿವ್ಯಲಿಂಗಾಯನಮಃ ಎಂಬ ವಾಕ್ಯದಿಂದ ಘ್ರಾಣೇಂದ್ರಿಯದ ಗೋಳಕದಲ್ಲಿರುವ ಆಚಾರಲಿಂಗವನ್ನೂ ಭವಲಿಂಗಾಯನಮಃ ಎಂಬ ವಾಕ್ಯದಿಂದ ರಸನೇಂದ್ರಿಯದಲ್ಲಿರುವ ಗುರುಲಿಂಗವನ್ನೂ ಶರ್ವಲಿಂಗಾಯನಮಃ ಎಂಬುದರಿಂದ ನೇತ್ರೇಂದ್ರಿಯದಲ್ಲಿರುವ ... ಲಿಂಗವನ್ನೂ ಶಿವಲಿಂಗಾಯನಮಃ ಎಂಬುದರಿಂದ ಚಕ್ಷುರಿಂದ್ರಿಯದಲ್ಲಿರುವ ಶಿವಲಿಂಗವನ್ನೂ, ಜ್ವಲಲಿಂಗಾಯನಮಃ ಎಂಬುವುದರಿಂದ ತ್ವಗಿಂದ್ರಿಯದಲ್ಲಿರುವ ಜಂಗಮಲಿಂಗವನ್ನೂ "ಪರಮಲಿಂಗಾಯನಮಃ" ಎಂಬುವುದರಿಂದ ಮನೋವೃತ್ತಿಯಾದ ಮಹಾಲಿಂಗವನ್ನೂ ಆತ್ಮಲಿಂಗಾಯನಮಃ ಎಂಬುವುದರಿಂದ ಕಾರಣಶರೀರವೃತ್ತಿಯಾದ ಭಾವಲಿಂಗವನ್ನೂ ಸ್ತೋತ್ರಮಾಡಿರುತ್ತದೆ. ಹೀಗೆ ಸೃಷ್ಟಿ ಸ್ಥಿತಿ ಸಂಹಾರಕರ್ತನಾದ ಶಿವಯುವನಾದ ಶಕ್ತಿವಿಶಿಷ್ಟಪರಶಿವನೊಬ್ಬನೇ ಪೃಥಿವ್ಯಾದಿ ನಾನಾಪ್ರಕಾರಗಳಾದ ಉಪಾಧಿಭೇದದಿಂದ ಇಷ್ಟ ಪ್ರಾಣ ಭಾವ ಎಂಬ ಮೂರು ಭೇದವನ್ನು ಹೊಂದಿ ಸ್ಥೂಲಸೂಕ್ಷ್ಮಕಾರಣಗಳೆಂಬ ಮೂರು ಶರೀರದಲ್ಲಿರುತ್ತ ಪುನಃ ಒಂದೊಂದು ಲಿಂಗವು ಎರಡೆರಡುನಾಮಗಳನ್ನು ಧರಿಸುತ್ತ ಆಯಾಯ ಇಂದ್ರಿಯಗಳಲ್ಲಿರುತ್ತಾನೆ ಎಂಬರ್ಥವನ್ನು ಪ್ರಕಾಶಪಡಿಸಿ ಕೊನೆಯಲ್ಲಿ "ಸರ್ವಲಿಂಗಂ ಸ್ಥಾಪಯತಿ" ಎಂದು ಲಿಂಗಧಾರಣವಿಧಿಯನ್ನು "ಪಾಣಿಮಂತ್ರಂ" ಎಂಬುವದರಿಂದ ಹಸ್ತದಲ್ಲಿ ಪೂಜೆಯನ್ನೂ "ಪವಿತ್ರಂ" ಎಂಬುವುದರಿಂದ ಶುಚ್ಯಶುಚಿ ಸಾಧಾರಣಕಾಲದಲ್ಲಿ ಲಿಂಗಧಾರಣವೂ ಹೇಳಲ್ಪಡುವುದರಿಂದ ಆ ಶ್ರುತಿಯ ಏಕದೇಶದಲ್ಲಿರುವ ಸೋಮ ಸೂರ್ಯಪದಗಳಿಗೆ ಉಪಕ್ರಮ ಉಪಸಂಹಾರಾನುಗುಣವಾಗಿ ಶಿವಲಿಂಗವೆಂಬ ಅರ್ಥಮಾಡುವುದೇ ನ್ಯಾಯವಾದುದರಿಂದ ಅಂತಹ ಉಪಕ್ರಮ ಉಪಸಂಹಾರಗಳಿಗೆ ವಿರುದ್ಧವಾಗಿ ಸೂರ್ಯಚಂದ್ರಸ್ತುತಿಪರವಾಗಿ ಅರ್ಥಮಾಡುವುದು ಪ್ರಕರಣವಿರೋಧವಾಗುವುದರಿಂದ "ಸರ್ವಲಿಂಗಂ ಸ್ಥಾಪಯತಿ" ಎಂಬ ವಾಕ್ಯವು ಗುರುವಿನಿಂದದೀಕ್ಷಾಸಂಸ್ಕಾರದಿಂದ ಪರಿಶುದ್ಧಗೊಳಿಸಲ್ಪಟ್ಟ ಸ್ಥೂಲಶರೀರದಲ್ಲಿ ಪಂಚಸೂತ್ರಘಟಿತವಾದ ಶಿವ(ಇಷ್ಟ) ಲಿಂಗ ವಿಧಾಯಕವಾದುದೇ ಹೊರತು ಭೂಮಿಯಲ್ಲಿ ದೇವಮಾನವಾದಿಗಳಿಂದ ಪ್ರತಿಷ್ಠಿತವಾದ ಸ್ಥಾವರ ಲಿಂಗವಿಧಾಯಕನೆಂದಾಗಲಿ, ಸೂರ್ಯ ಚಂದ್ರ ದೇವತಾವಿಷಯಕವೆಂದಾಗಲಿ ಹೇಳಲು ಅವಕಾಶವೇ ಇಲ್ಲವೆಂಬುದನ್ನು ಸದಸದ್ವಿವೇಕಿಗಳಿಗೆ ಸ್ಪಷ್ಟವಾಗಿ ಗೋಚರವಾಗದಿರದು.

ಒಳದೇಶದ ವೃತ್ತಾಂತಗಳು.

ಮೈಸೂರು ಸಂಸ್ಥಾನದಲ್ಲಿರುವ ಮೇಲುಕೋಟೆ ಯತಿರಾಜ ಮಠದ ಆಸ್ತಿಯ ವಿಚಾರದಲ್ಲಿ ಮೈಸೂರು ಸರ್ಕಾರದವರು ಮುಜರಾಯಿ ಕಮಿಷನರ್‌ರವರ ಪರವಾಗಿ ೧೧,೧೭೩ ರೂ ಗಳಿಗೆ ಬೆಂಗಳೂರಿನ ಡಿ|| ಜಡ್ಜರ ಮುಂದೆ ಒಂದು ಮೊಖದ್ದಮೆಯನ್ನು ತಂದಿರುವರು.

ಮಾಗಡಿಯಲ್ಲಿ ಪಾರ್ವತಮ್ಮ ಎಂಬಾಕೆಯು ಅಮಲ್ದಾರರು ತನ್ನಿಂದ ೬೦ ರೂ ಲಂಚ ತೆಗೆದುಕೊಂಡರೆಂದು ಡೆಪ್ಯುಟಿ ಕಮಿಷನರಿಗೆ ಹಾಕಿದ್ದ ಅರ್ಜಿಯು ತನಿಖೆಯಾಗಿ ಆರೋಪವು ಸುಳ್ಳೆಂದು ಕಂಡುಬಂದದ್ದರಿಂದ ಡೆಪ್ಯುಟಿಕಮಿಷನರು ಆಕೆಯು ಕ್ಷಮೆ ಬೇಡಿದರೂ ಬಿಡದೆ ೫೦ ರೂಪಾಯಿ ಜುಲ್ಮಾನೆ ಕೊಡದಿದ್ದರೆ ೧ ತಿಂಗಳ ಶಿಕ್ಷೆಯನ್ನು ಅನುಭವಿಸಬೇಕೆಂದು ತೀರ್ಮಾನಮಾಡಿದರು.

ಮಂಡ್ಯ ಟೌನಿನಲ್ಲಿರುವ ನಂಜುಂಡಪ್ಪ ಎಂಬುವನು ಇಟ್ಟುಕೊಂಡಿದ್ದ ಚನ್ನಮ್ಮ ಎಂಬಾಕೆಯ ತಲೆಯಮೇಲೆ ಹಾರೆಯಿಂದ ಹೊಡೆದು ಸಾಯಿಸಿದನೆಂಬ ಅಪಾದನೆಯ ಮೇಲೆ ಸೆಷನ್ ಕೋರ್ಟಿನಲ್ಲಿ ವಿಚಾರಣೆಯಾಯಿತು. ಪ್ರಾಸಿಕ್ಯೂಷನ್ ಪರವಾಗಿ ೧೩ ಸಾಕ್ಷಿಗಳನ್ನು ವಿಚಾರಣೆಮಾಡಲಾಯಿತು. ಆಪಾದಿತನು ತಪ್ಪನ್ನು ಒಪ್ಪಿಕೊಂಡನು. ಕೇಸು ರುಜುವಾತಾದುದರಿಂದ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮಿ|| ಅಬ್ದುಲ್ ಘನಿಯವರು ಅಪರಾಧಿಗೆ ೭ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಬೆಂಗಳೂರಿಗೆ ಆರುಮೈಲು ದೂರದಲ್ಲಿರುವ ಬೇಗೂರಿನ ಪಟೇಲ್ ಅಣ್ಣಯ್ಯಪ್ಪನನ್ನು ಯಾರೋ ದುಷ್ಕರ್ತರು ಖೂನಿಮಾಡಿ ಮುಂಡವನ್ನು ಮಾತ್ರ ಒಂದು ಮರದ ಬಳಿಯಲ್ಲಿ ಬಿಸಾಡಿ ತಲೆಬುರುಡೆಯನ್ನು ತೆಗೆದುಕೊಂಡು ಹೋಗಿರುತ್ತಾರೆಂದೂ, ಪೋಲೀಸಿನವರು ಸಕ್ತ ತನಿಖೆಯನ್ನು ನಡೆಯಿಸುತ್ತಿದ್ದಾರೆಂದೂ ತಿಳಿದುಬಂದಿದೆ. ಆ ಊರಿನಲ್ಲಿ ಕೆಲವು ದಿನಗಳಿಂದಲೂ ಪಾರ್ಟಿ ಕಲಹಗಳು ನಡೆಯುತ್ತಿದ್ದವೆಂದೂ, ಎದುರು ಪಾರ್ಟಿಯವರು ಈ ಅಕೃತ್ಯಮಾಡಿರಬಹುದೆಂದೂ, ೧೩ ಮಂದಿ ದಸ್ತಗಿರಿಯಾಗಿದ್ದಾರೆಂದೂ ವರ್ತಮಾನವಿದೆ.

ರೈಟ್ ಆನರೆಬಲ್ ಮ|| ವಿ ಎಸ್ ಶ್ರೀನಿವಾಸಶಾಸ್ತ್ರಿಗಳು ಮೈಸೂರು ಯೂನಿವರ್ಸಿಟಿ ಆಶ್ರಯದಲ್ಲಿ ಬೆಂಗಳೂರಿನಲ್ಲೂ, ರಾಜಧಾನಿಯಲ್ಲೂ ಕಳೆದ ವಾರ ಕೀರ್ತಿಶೇಷರಾದ ಗೋಖಲೆಯವರ ಜೀವನಚರಿತ್ರೆಯನ್ನೂ, ಅವರ ಸಮಕಾಲಿಕ ರಾಜಕೀಯ, ಸಾಮಾಜಿಕ ವಿಚಾರಗಳಲ್ಲಿ ಅವರು ಮಾಡಿದ ದೇಶಹಿತಕರವಾದ ಕಾರ್ಯವಿಶೇಷಗಳನ್ನೂ ಕುರಿತು ಬಹು ಕುತೂಹಲಯುಕ್ತವಾದ ಭಾಷಣಗಳನ್ನು ಮೂರು ದಿನ ಮಾಡಿದರು. ಅಧಿಕಾರ ವರ್ಗದವರೂ, ಹಿರಿಯ ದೊಡ್ಡಮನುಷ್ಯರೂ, ವಿದ್ಯಾರ್ಥಿ ವರ್ಗದವರೂ, ಮ...

ಧಿಯರೂ ಮೈದಾನವು ಕಿಕ್ಕಿರಿಯುವಂತೆ ಸೇರಿ ಉಪನ್ಯಾಸಗಳನ್ನು ಕೇಳಿ ಆನಂದಪಟ್ಟರು. ಈ ಮೈದಾನಗಳಲ್ಲಿ ಅಣಿಮಾಡಿ ಇಡಿಸಿದ್ದ ಭಾಷಣ ಪ್ರತಿಬಿಂಬದ (ಮೈಕ್ರೋ-ಫೋನ್) ಯಂತ್ರಸಾಧನಗಳಿಂದ ಆ ಉಪನ್ಯಾಸಗಳು ಪದಶಃ ಸಮಸ್ತರಿಗೂ ಪರಿಷ್ಕಾರವಾಗಿ ಕೇಳಿಸಿದವು.

ನಮ್ಮ ಚಕ್ರವರ್ತಿ ಸಾರ್ವಭೌಮರವರ ಆಳ್ವಿಕೆಯ ಸಿಲ್ವರ್ ಜ್ಯೂಬಿಲಿ ಮಹೋತ್ಸವಕ್ಕೆ ಹಿಂದೂಸ್ಥಾನದಿಂದಲೂ, ದೇಶೀಯ ಸಂಸ್ಥಾನಗಳಿಂದಲೂ ಪ್ರತಿನಿಧಿಗಳು ಇಂಗ್ಲೆಂಡಿಗೆ ಹೋಗಿದ್ದು ಬರುವರು. ಇಂಡಿಯಾ ಗವರ್ನಮೆಂಟಿನ ಪರವಾಗಿ ಸರ್ ಜೋಸೆಫ್ ಭೋರ್ ಯವರೂ, ಬಿಕಾನೀರ್, ಕಾಶ್ಮೀರ, ಪಾಟಿಯಾಲಾ ಸಂಸ್ಥಾನಗಳ ಮಹಾರಾಜರುಗಳೂ, ಸರ್ ಉಮ್ಮರ್ ಹಯಾತ್‌ಖಾನರವರೂ ಪ್ರಯಾಣಮಾಡುವರು. ನಮ್ಮ ದಿವಾನರವರೂ ದಯಮಾಡುವರೆಂಬ ವರ್ತಮಾನವಿದೆ. ಈ ಸಂತೋಷೋತ್ಸವದ ಜ್ಞಾಪಕಾರ್ಥವಾಗಿ ಹೈದರಾಬಾದು, ಬರೋಡಾ, ಮೈಸೂರು, ಕಾಶ್ಮೀರ, ಗ್ವಾಲಿಯರ್ ಈ ಐದು ಸಂಸ್ಥಾನಗಳ ಮಹಾರಾಜರುಗಳಿಗೂ ದೊರೆತನದ ಸಂಪೂರ್ಣಾಧಿಕಾರಗಳನ್ನು ದಯಪಾಲಿಸುವಂತೆ ದೆಹಲಿಯಲ್ಲಿ ನಡೆಯುವ ಜ್ಯೂಬಿಲಿ ಉತ್ಸವದ ದರ್ಬಾರಿನಲ್ಲಿ ಇಸ್ತಿಹಾರುಯನ್ನು ಪ್ರಕಟಮಾಡುವರೆಂದು ಇಂಗ್ಲೆಂಡಿನಲ್ಲಿ ಪ್ರಕಟವಾಗುವ 'ಸಂಡೆ ಎಕ್ಸ್‌ಪ್ರೆಸ್' ಎಂಬ ಪತ್ರಿಕೆಯು ಬರೆಯುತ್ತದೆ.

ವರ್ತಮಾನಸಂಗ್ರಹ.

ಪ್ಯಾಲಸ್ಟೈನಿನ ಉತ್ತಮಸ್ಥಿತಿಯನ್ನು ನೋಡಿ ಅಸೂಯೆಯಿಂದ ಸಿರಿಯಾದೇಶೀಯರು ತಮ್ಮ ವ್ಯಾಪಾರಾಭಿವೃದ್ಧಿಗೆ ಅನುಕೂಲವಾಗುವಂತೆ ಬಂಡವಾಳವನ್ನು ತರುವ ದೇಶಭ್ರಷ್ಟರಾಗಿ ತಿರುಗುತ್ತಿರುವ ಯೆಹೂದ್ಯರಿಗೆ ತಮ್ಮಲ್ಲಿ ಸ್ಥಳಕೊಡುತ್ತೇವೆಂದು ಹೇಳುತ್ತಿದ್ದಾರೆ.

ಪಂಜಾಬಿನ ಸಿಕ್ ಜನಗಳು ಯಾವಾಗಲೂ ಕತ್ತಿಯನ್ನೋ ಅಥವಾ ಬಾಕುವನ್ನೋ ಸಂಗಡಲೇ ಇಟ್ಟುಕೊಂಡಿರುವುದು ತಮ್ಮ ಕುಲಕ್ರಮವಾಗಿ ಬಂದ ಪದ್ಧತಿಯಾದ್ದರಿಂದ ಹಾಗೆ ಇಟ್ಟುಕೊಳ್ಳಲು ಅಪ್ಪಣೆಕೊಡಬೇಕೆಂದು ವೈಸ್ರಾಯರಿಗೆ ಒಂದು ವಿಜ್ಞಾಪನಾಪತ್ರಿಕೆಯನ್ನು ಕಳುಹಿಸಿರುತ್ತಾರೆ.

ಅಮೇರಿಕಾದೇಶದ ಇಂಗಲ್‌ವುಡ್ ಎಂಬಲ್ಲಿ ಪ್ರೆಸರ್ ಚೆಂಗರ್ ಎಂಬ ವಿಧವೆಯು ತನ್ನ ಒಳ್ಳೆಯ ಹಣವನ್ನು ಯಾರಾದರೂ ಕದಿಯಲು ಬಂದರೆ ಅವರಿಗೆ ಕೂಡಲೆ ಶಿಕ್ಷೆಯಾಗಬೇಕೆಂದು ತನ್ನ ಹಣದ ಚೀಲವನ್ನು ಕಣಜದಲ್ಲಿ ಒಟ್ಟಿಟ್ಟು ಅದನ್ನು ಯಾರಾದರೂ ಮುಟ್ಟಿದರೆ ಕೂಡಲೆ ಹಾರುವಂತೆ ಬಂದೂಕವನ್ನು ಅಣಿಮಾಡಿಟ್ಟಿದ್ದಳು. ಇವಳ ದುರ್ದೈವದಿಂದ ಒಂದು ದಿನ ಬಂದೂಕ ಹಾರಿದ ಶಬ್ದವನ್ನು ಕೇಳಿದ್ದರಿಂದ ಓಡಿಹೋಗಿ ನೋಡಲು ಅವಳ 13 ವರ್ಷ ವಯಸ್ಸಿನ ಮಗನು ಮರಣೋನ್ಮುಖನಾಗಿ ಬಿದ್ದಿದ್ದನು. ಹುಡುಗನು ತಿಳಿಯದೆ ಚೀಲವನ್ನು ಮುಟ್ಟಿದ್ದರಿಂದ ಈ ಅಪಾಯ ಸಂಭವಿಸಿತು.

ವಿಮಾನದ ಅನಾಹುತ.

ಕರ್ನೂಲ್ ಪ್ರಾಂತದಲ್ಲಿ ಒಂದು ವಿಮಾನವು ಬಿದ್ದುದರಿಂದ ಒಬ್ಬ ಕೂಲಿಹೆಂಗಸೂ ಅವಳ ಮಗುವೂ ಹತಪಟ್ಟರು.

ಗುಂಡಿಯನ್ನು ನುಂಗಿ ಮರಣ!

ತೂತುಪರಂಬ ಎಂಬಲ್ಲಿ ಶ್ರೀ ಲಕ್ಷ್ಮಣಕಾಮತ್ ಎಂಬವರ ಮಗುವು ಆಡುತ್ತಿರುವಾಗ ಅಂಗಿಗುಂಡಿಯನ್ನು ನುಂಗಿದ್ದರಿಂದ ಅದು ಗಂಟಲಲ್ಲಿ ಸಿಕ್ಕಿಕೊಂಡು ಉಸಿರಾಡದೆ ಸತ್ತುಹೋಯಿತು.

ಹಣದಾಶೆಗಾಗಿ ಕೊಲೆ

ಹೈದರಾಬಾದು ಪ್ರಾಂತದ ಸೈನಿಕರಾದ ಪ್ರಕಾಶಸಿಂಗ್ ಮತ್ತು ದನಸಿಂಗ್ ಎಂಬ ಇಬ್ಬರು ಆಭರಣಗಳ ಆಶೆಯಿಂದ ಇಬ್ಬರು ದೇವಸ್ಥಾನದ ಅರ್ಚಕರನ್ನು ಕೊಲೆಮಾಡಿದ್ದಕ್ಕಾಗಿ ಹೈಕೋರ್ಟಿನವರು ಇವರಿಗೆ ಮರಣದಂಡನೆಯನ್ನು ವಿಧಿಸಿದರು.

ಚೀನಾ-ಜಪಾನ್ ಯುದ್ಧ

ಚೀನಾದೇಶದ ಕೆಲವು ಪ್ರಾಂತಗಳನ್ನು ಜಪಾನ್ ಸೈನಿಕರು ವಶಪಡಿಸಿಕೊಂಡು ಚೀನಾದೇಶದಮೇಲೆ ಧಾಳಿ ನಡೆಯಿಸಿದ್ದಾರೆ. ಮಾಂಚೂಕೊ ಚೀನಾಗಳ ಮಧ್ಯದಲ್ಲಿರುವ ಸ್ವಲ್ಪ ಪ್ರದೇಶವು ಯಾರಿಗೆ ಸೇರಬೇಕೆಂಬ ವಿವಾದವೇ ಈ ಯುದ್ಧಕ್ಕೆ ಕಾರಣವಾಗಿದೆ.

ಅಗ್ನಿಪರ್ವತ.

ಗ್ವಾಲಿಯರ್ ರಾಜ್ಯಕ್ಕೆ ಸೇರಿದ ಚಂಡೋರಾ ಎಂಬ ಹಳ್ಳಿಯ ಬಳಿ ಹೊಸದಾಗಿ ಹೊರಟಿರುವ ಜ್ವಾಲಾಮುಖಿಯನ್ನು ನೋಡಲು ಜನಗಳು ವಿಶೇಷವಾಗಿ ಹೋಗುತ್ತಿದ್ದಾರೆ. ಯಾವಾಗಲೂ ಇಲ್ಲಿ ಈರೀತಿಯಾದ ಅಗ್ನಿಪರ್ವತವು ಇರಲಿಲ್ಲವೆಂದು ತಿಳಿಯುತ್ತದೆ.

ಪ್ರಪಂಚದಲ್ಲೆಲ್ಲಾ ಭಾರವಾದ ಮಗು.

ನಾರ್ವೇದೇಶಕ್ಕೆ ಸೇರಿದ ಸುನಾರ್ ಎಂಬಲ್ಲಿ ಒಬ್ಬ ಅಕ್ಕಸಾಲಿಗನ ಹೆಂಡತಿಯು 11½ ಪೌಂಡು ತೂಕವುಳ್ಳ ಗಂಡು ಮಗುವನ್ನು ಹೆತ್ತಿದ್ದಾಳೆ. ಪ್ರಪಂಚದಲ್ಲಿ ಇಷ್ಟು ತೂಕವಿರುವ ಮಗುವು ಜನನವಾದ್ದು ಇದೇ ಮೊದಲೆಂದು ಹೇಳುತ್ತಾರೆ. ಇದು ಆಕೆಗೆ 9 ನೆಯ ಮಗುವಂತೆ.

ದೋಣಿಯ ಅನಾಹುತ.

ಕರಾಚಿಯಿಂದ ಸುಮಾರು 60 ಮೈಲು ದೂರದಲ್ಲಿ ಹೋಗುತ್ತಿದ್ದ ದೋಣಿಯು ಬಿರುಗಾಳಿಗೆ ಸಿಕ್ಕಿ ಮಗುಚಿಕೊಂಡಿತು. ಅದರಲ್ಲಿದ್ದ 7 ಮಂದಿ ಪ್ರಯಾಣಿಕರೂ 19 ಮಂದಿ ಕೆಲಸಗಾರರೂ ನೀರಿನಪಾಲಾದರು. ಅವರಲ್ಲಿ 6 ಜನರು ಮಾತ್ರ ಕಷ್ಟದಿಂದ ಈಜಿ ದಡವನ್ನು ಸೇರಿದರು.

ಟೆಲಿಫೋನ್ ತಂತಿ

ಬ್ರಿಟಿಷ್ ಪೋಸ್ಟಾಫೀಸಿನವರು ಕಂಬಗಳ ಮೇಲೆ ಹಾಕಿರುವ ಟೆಲಿಫೋನ್ ತಂತಿಗಳನ್ನು ತೆಗೆದು ನೆಲದೊಳಗೆ ಹಾಕಬೇಕೆಂದು ಇದಕ್ಕಾಗಿ 60 ಲಕ್ಷ ಪೌಂಡುಗಳನ್ನು ಖರ್ಚುಮಾಡಲು ನಿಶ್ಚಯಿಸಿರುತ್ತಾರೆ. ಇದರಿಂದ ಕೆಲಸವಿಲ್ಲದೆ ಅಲೆಯುತ್ತಿರುವ 30000 ಜನಕ್ಕೆ ಕೆಲಸ ಸಿಕ್ಕುವದಂತೆ!

ಮಾಂಸಾಹಾರವು ಅದೃಶ್ಯವಾಗುತ್ತಿದೆ

ಸಿಲೋನ್‌ದ್ವೀಪದ ಬೌದ್ಧ ಜನರಲ್ಲಿ ತಾವು ಮಾಡುತ್ತಿರುವ ಪ್ರಾಣಿಹತ್ಯೆಯೇ ಈಗ ತಮಗೊದಗಿರುವ ಮಲೇರಿಯಾ ಮೊದಲಾದ ರೋಗಗಳಿಗೂ ಅಪಮೃತ್ಯುವಿಗೂ ಕಾರಣವೆಂಬ ನಂಬಿಕೆಯು ಹೆಚ್ಚುತ್ತಿರುವುದರಿಂದ ಅಲ್ಲಿಯವರು ಆಹಾರಕ್ಕಾಗಿ ಮಾಡುತ್ತಿದ್ದ ಪ್ರಾಣಿಹತ್ಯೆಯು ಮಾಯವಾಗುತ್ತಿದೆ.

ಹಾಡುವ ಭಾವಿ

ಆಲ್‌ಬರ್ಟ್ ಎಂಬಲ್ಲಿ ಒಬ್ಬ ರೈತನಿಗೆ ಸೇರಿದ ಒಂದು ಬಾವಿಯಲ್ಲಿ ಪ್ರಪಂಚದ ಎಲ್ಲಕಡೆಯ ರೇಡಿಯೋ ಸಂಗೀತಗಳು ಬಹಳ ಶುದ್ಧವಾಗಿ ಕೇಳಿಬರುತ್ತವೆ. ಎಲ್ಲಕಡೆಯ ರೇಡಿಯೋ ಸಮಾಚಾರಗಳನ್ನೂ ಈ ಭಾವಿಯು ಹೇಗೆ ಗ್ರಹಿಸುತ್ತದೆಂಬುದನ್ನು ತಿಳಿಯದೆ ವಿಜ್ಞಾನಶಾಸ್ತ್ರಜ್ಞರೆಲ್ಲಾ ಆಶ್ಚರ್ಯಪಡುತ್ತಿದ್ದಾರೆ.

ಹುಂಜವು ಹೆಣ್ಣುಕೋಳಿಯಾಯಿತು.

ಅಮೇರಿಕಾದೇಶದಲ್ಲಿರುವ ಓಸ್ಕರ್‌ರಿಡಲ್, ರಾಬರ್ಟ್‌ಬೇಟ್ಸ್ ಮತ್ತು ಆರ್ನೆಸ್ಟ್‌ಲಾರ್ ಎಂಬ ಮೂವರು ವಿಜ್ಞಾನಶಾಸ್ತ್ರಜ್ಞರು ಹೆಣ್ಣುಕೋಳಿಯ ತಲೆಯಲ್ಲಿರುವ ಪ್ರೊಲಾಕ್ಟಿನ್ ಎಂಬ ಒಂದು ರಸವನ್ನು ಹುಂಜಕ್ಕೆ ಇಂಜಕ್ಷನ್ ಮಾಡಿದ್ದರಿಂದ, ಅದು ಕ್ರಮೇಣ ತನ್ನ ಸ್ವಭಾವವನ್ನು ಬದಲಾಯಿಸಿ ಹೇಂಟೆಯಾಯಿತೆಂದು ಹೇಳುತ್ತಾರೆ.

ಹುಲಿಯಿಂದ ಮರಣ

ಒಡರಾಂಪುರದ ಸಮೀಪದ ಕಾಡಿನಲ್ಲಿ 8 ಜನ ಅಗಸರು ಬಟ್ಟೆಯನ್ನು ಒಗೆಯುತ್ತಿರುವಾಗ ಅಕಸ್ಮಾತ್ ಒಂದು ಹುಲಿಯು ಒಬ್ಬನನ್ನು ಎತ್ತಿಕೊಂಡು ಹೋಯಿತು. ಉಳಿದವರು ತಮ್ಮ ಸಂಗಡಿಗನನ್ನು ಹುಡುಕುವಾಗ ಸಮೀಪದ ಒಂದು ಗುಹೆಯಲ್ಲಿ ಅರ್ಧ ತಿಂದು ಉಳಿದ ಅವನ ದೇಹವು ಸಿಕ್ಕಿತು. ಈಗ ಆ ಕಾಡಿಗೆ ಹೋಗಲು ಜನರು ಹೆದರುತ್ತಿದ್ದಾರೆ.

ಹೊಸಮಾದರಿಯ ಗಾಜು

ಬಾಸ್ಟನ್ ಎಂಬಲ್ಲಿಯ ವಿಜ್ಞಾನಶಾಸ್ತ್ರಜ್ಞರು ಈಗಿನದಕ್ಕಿಂತ 13 ಪಾಲು ಗಟ್ಟಿಯಾಗಿದ್ದು 10-12 ಅಡಿಗಳ ಎತ್ತರದಿಂದ ಬಿದ್ದರೂ ಒಡೆದುಹೋಗದಂಥ ಹೊಸಮಾದರಿಯ ಗಾಜು ತಯಾರಿಸುವುದನ್ನು ಕಂಡುಹಿಡಿದಿದ್ದಾರೆ. ಒಂದುವೇಳೆ ಇದು ಒಡೆದರೂ ಈಗಿನ ಗಾಜಿನಂತೆ ಹರಿತವಾಗಿರದೆ ಮೊಂಡಾಗಿರುತ್ತದೆ. ಗಾಜನ್ನು 1500 ಡಿಗ್ರಿಗಳು ಶಾಖದವರೆಗೆ ಕಾಯಿಸಿ ತತ್‌ಕ್ಷಣ ಎಣ್ಣೆಯಲ್ಲಿ ಹಾಕಿ ತಣ್ಣಗೆ ಮಾಡುವುದರಿಂದ ಈ ಗುಣ ಬರುತ್ತದಂತೆ!

ಕಳ್ಳನೋಟು ತಯಾರುಮಾಡುತ್ತಿದ್ದವನು ಶಿಕ್ಷಬದ್ಧನು

ಇಂಗ್ಲೆಂಡಿನ ಜಾರ್ನವೆತ್ ಎಂಬಲ್ಲಿಯ ಎಡ್ವರ್ಡ್ ಫೌಲರ್ ಎಂಬ ಒಬ್ಬ ಮೋಟಾರು ಪ್ರೊಪ್ರೈಟರು ತನ್ನ ಮೋಟಾರು ಇಡುವ ಕೊಠಡಿಯ ಮೇಲೆ 60 ಅಡಿ ಚದರದ ಒಂದು ಕೊಟ್ಟಡಿಯನ್ನು ನಿರ್ಮಿಸಿಕೊಂಡು ಬ್ಯಾಂಕ್ ಆಫ್ ಇಂಗ್ಲೆಂಡ್ ನೋಟುಗಳನ್ನು ತಯಾರುಮಾಡುತ್ತಿದ್ದುದನ್ನು ಪೋಲೀಸರು ಕಂಡು ಹಿಡಿದರು. ಅಪರಾಧಿಯನ್ನು ಪ್ರಶ್ನೆ ಮಾಡಿದಾಗ ತಾನು ಪರೀಕ್ಷೆಗಾಗಿ ತಯಾರುಮಾಡುತ್ತಿದ್ದೆನೆಂದು ಉತ್ತರಕೊಟ್ಟಿದ್ದಾನೆ.

ಅದೃಷ್ಟ

ರಾಡ್ರಿಕ್ ಚಂದಾಲ್ ಎಂಬ ಸ್ಕಾಟ್‌ಲೆಂಡ್‌ದೇಶದ ಹುಡುಗನೊಬ್ಬನು ಸಮುದ್ರತೀರದಲ್ಲಿ ತಿರುಗಾಡುತ್ತಿದ್ದಾಗ ಹಳದಿಬಣ್ಣದ ಮೇಣದಂತಿದ್ದ ಉಂಡೆಯೊಂದನ್ನು ಕಂಡು ಅದನ್ನು ನೀರಿಗೆಸೆದನು. ಅದು ತೇಲಿಕೊಂಡು ತಿರುಗಿ ಅವನಲ್ಲಿಗೇ ಬಂದಿತು. ಹೀಗೆ ಅವನು ಆಡುತ್ತಿರುವಾಗ ಅವನ ತಂದೆಯು ಅಲ್ಲಿಗೆ ಬಂದು ಮಗನು ಆಡುತ್ತಿದ್ದ ಪದಾರ್ಥವನ್ನು ತೆಗೆದುಕೊಂಡನು. ಅದು ತಿಮಿಂಗಿಲಜನ್ಯವಾದ ಅತ್ಯುತ್ತಮ ಸುವಾಸನಾದ್ರವ್ಯಗಳ ತಯಾರಿಕೆಗೆ ಉಪಯೋಗಿಸುವ ಅಮೂಲ್ಯಪದಾರ್ಥವೆಂಬುದು ತಿಳಿಯಿತು. ಇದರ ತೂಕ 17 ಪೌಂಡು ಇದ್ದು ಬೆಲೆ 32 ಸಾವಿರ ರೂಪಾಯಿಗಳಂತೆ!

ಜಪಾನಿನ ಕಠಿಣಸಮಸ್ಯೆ.

ಲೀಗ್ ಆಫ್ ನೇಷನ್ಸ್ ಸದಸ್ಯತ್ವವನ್ನು ಬಿಟ್ಟುಬಿಡುವುದಕ್ಕೆ ಜಪಾನ್‌ದೇಶವು ಕೊಟ್ಟಿದ್ದ ಅವಧಿಯು ಮುಂದಿನ ತಿಂಗಳಿಗೆ ಮುಗಿಯುತ್ತದೆ. ಆ ವೇಳೆಗೆ ಸದಸ್ಯತ್ವವನ್ನು ಬಿಡುವುದೋ ಅಥವಾ ಒಪ್ಪಿಕೊಳ್ಳುವುದೋ ಎಂಬುದನ್ನು ಜಪಾನು ನಿರ್ಧರಿಸಬೇಕಾಗಿರುತ್ತದೆ. ಸದಸ್ಯತ್ವಕ್ಕೆ ರಾಜೀನಾಮೆ ಕೊಡುವುದೇ ನಿಶ್ಚಯವಾದರೆ ಲೀಗಿನವರು ತಮ್ಮ ಅಧೀನಕ್ಕೆ ಕೊಟ್ಟಿರುವ ಪೆಸಿಫಿಕ್ ಸಾಗರದಲ್ಲಿರುವ ಜರ್ಮನರಿಗೆ ಸೇರಿದ್ದ ದ್ವೀಪಗಳನ್ನು ಹಿಂದಕ್ಕೆ ಬಿಟ್ಟುಕೊಡಬೇಕಾಗುತ್ತದೆ. ಜರ್ಮನರೂ ಅವುಗಳನ್ನು ಬಿಟ್ಟುಕೊಡಬೇಕೆಂದು ಕೇಳುತ್ತಿದ್ದಾರೆ. ಜರ್ಮನರು ಲೀಗಿನ ಸದಸ್ಯತ್ವವನ್ನು ಬಿಟ್ಟಿದ್ದರೂ ಇಂದಿಗೂ ಅವರು ತಿರುಗಿ ಸೇರಿಕೊಳ್ಳಬಹುದೆಂಬ ಭರವಸೆ ಇದೆ. ಜಪಾನರು ಈ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತಾರೋ ನೋಡಬೇಕಾಗಿದೆ.

(3 ನೆಯ ಪುಟದಿಂದ ಮುಂದುವರಿದುದು)

ಮೊಬಲಗುಗಳಿಗೆ ಸಂಬಂಧಪಟ್ಟ ಮತ್ತು ಗಣನೀಯವಾಗಿ ಕೆಲಸ ನಡೆಯುತ್ತಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳುವುದಕ್ಕಾಗಿ ಕ್ರಮ ಜರುಗಿಸುವುದಕ್ಕಿಂತ ಹೆಚ್ಚಾಗಿ ಮತ್ತೇನನ್ನಾದರೂ ಅಗಲಿ [illegible] ತಪ್ಪು ಅಸಮರ್ಪಕವಾದ [illegible] ಕ್ರಮ ಜರುಗಿಸುವುದಕ್ಕಿಂತ [illegible] ಅಗಲು [illegible] [illegible]

[illegible] ಮತ್ತು [illegible] ಸಂಸ್ಕೃತ ಮಹಾಪಾಠಶಾಲೆ, ಬೆಂಗಳೂರಿನಲ್ಲಿರುವ ಶ್ರೀ ಚಾಮರಾಜೇಂದ್ರ ವೇದಸಂಸ್ಕೃತ ಶಾಲೆ, ಮೈಸೂರಿನಲ್ಲಿರುವ ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿಯೂ ಆಗದ [illegible] ತರಗತಿಗಳು ಮತ್ತು ಇತರ [illegible] ಸಂಬಂಧಪಟ್ಟ ಇತರ [illegible] ಎಂದಿನಂತೆ ನಡೆಸಲಾಗಿದೆ. [illegible] ಮತ್ತು [illegible] ಕಾಲೇಜು ಮತ್ತು ಆಸ್ಪತ್ರೆಗಳಲ್ಲಿ [illegible] ಕೆಲಸ [illegible] ಕೆಲಸಗಳನ್ನು ಸರ್ಕಾರದವರು [illegible] ಮಾಡಿರುತ್ತಾರೆ.

ಪ್ರಸಕ್ತ ಸಾಲಿನಲ್ಲಿ [illegible] ಸಂಸ್ಥೆಗಳಲ್ಲಿ ರೂ 9,37,6,1,151 [illegible] ಇದ್ದಿತು. ರೂ 72,63,4,3 [illegible] ರೂ 16,59,14,11 1933-33 ನೆಯ ಸಾಲಿನಲ್ಲಿ 9,14,3,5 [illegible] 7,3,3,92 [illegible] 1341,21 [illegible] 1933-33 ನೆಯ ಸಾಲಿನಲ್ಲಿ 6,37,71 [illegible] 1,32,29 [illegible] ರೂ 6,62,93-2-10 [illegible] ರೂ 9,46,22-3-1 [illegible] ಮತ್ತು ಇತರ [illegible] ಸಂಸ್ಥೆಗಳ [illegible] ಕಾರಣವೆಂದು ತಿಳಿಸಲಾಗಿದೆ.

ಮೈಸೂರು, ಚಿತ್ರದುರ್ಗ, ಶಿವಮೊಗ್ಗ, ತುಮಕೂರು ಈ ಡಿಸ್ಟ್ರಿಕ್ಟುಗಳ [illegible] ಡಿಸ್ಟ್ರಿಕ್ಟುಗಳಲ್ಲಿರುವ [illegible] ಇತರ ಡಿಸ್ಟ್ರಿಕ್ಟುಗಳ [illegible] ಸರ್ಕಾರದವರಿಗೆ ತಿಳಿಸಿದ್ದಾರೆ ಮತ್ತು [illegible] ಕೆಲವು [illegible] ಸರ್ಕಾರದವರು [illegible].

ಪ್ರಕೃತಿ ಉತ್ಸವವು ನಡೆದಾಗ ಗೋಪುರ [illegible] ಶ್ರೀ ಶ್ರೀಕಂಠೇಶ್ವರಸ್ವಾಮಿಯ ರಥೋತ್ಸವವು ನಡೆದಾಗ ಸಂದರ್ಭಗಳಲ್ಲಿಯೂ ಶ್ರೀಮನ್ಮಹಾರಾಜರವರ ಸವಾರಿಯು ಚಿತ್ತೈಸಿದ್ದಿತು. ಅಲ್ಲದೆ 1934 ನೇ ಮೇ, ಜೂನ್ ತಿಂಗಳುಗಳಲ್ಲಿ ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನಕ್ಕೆ ಶ್ರೀಮನ್ಮಹಾರಾಜರವರ ಸವಾರಿಯು ಚಿತ್ತೈಸಿದ್ದಿತು. ಶ್ರೀಮದ್ಯುವರಾಜರವರೂ, ರಾಜಕುಮಾರರಾದ ಶ್ರೀ [illegible] ಚಾಮರಾಜೇಂದ್ರ ಒಡೆಯರವರೂ 1934 ನೇ ಏಪ್ರಿಲ್ ತಿಂಗಳಲ್ಲಿ ತರೀಕೆರೆ ತಾಲ್ಲೂಕಿನಲ್ಲಿರುವ ಸೋಮಪುರದ ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನಕ್ಕೆ ದಯಮಾಡಿದ್ದರು. ಕೊಚ್ಚಿ ಸಂಸ್ಥಾನದ [illegible] ಮಹಾರಾಜರವರು ಶ್ರೀರಂಗಪಟ್ಟಣದಲ್ಲಿರುವ [illegible] ದೇವಸ್ಥಾನಗಳಿಗೂ, ಮಲಿಯೂರಿನಲ್ಲಿರುವ ಶ್ರೀ [illegible] ಸ್ವಾಮಿಯ ದೇವಸ್ಥಾನಕ್ಕೂ ದಯಮಾಡಿಸಿ [illegible] ಮಿಸೆಸ್ ಗ್ರೇವಿಲ್ ಇವರು [illegible] ಗುಂಬೋಜಿಗೂ, ಜೋಡಿಪುರದ [illegible] ವೆಲಿಂಗ್ಟನ್ ಇವರು ಬೇಲೂರು ಶ್ರೀ [illegible] ಸ್ವಾಮಿಯ ದೇವಸ್ಥಾನಕ್ಕೂ ದಯಮಾಡಿ [illegible] ನಿರ್ವಾಹಕರು ಬೆಂಗಳೂರು ಮತ್ತು ಶಿವ [illegible] ಗಳಲ್ಲಿರುವ ಕೆಲವು ದೇವಸ್ಥಾನಗಳಿಗೂ [illegible] ಮೈಸೂರು ಪದ್ಮಾವತಿ ಈ ಸ್ಥಳಗಳಲ್ಲಿರುವ [illegible] ದಯಮಾಡಿಸಿದ್ದರು. ಅಲ್ಲದೆ ಶಿವರಾತ್ರಿ [illegible] ಮತ್ತು [illegible] ಜೊನ್ನಾಳಿಯಲ್ಲಿರುವ [illegible] ಪ್ರಸಿದ್ಧ ಮಹೋತ್ಸವಗಳನ್ನು ನೆರವೇರಿಸಿದರು. ಈ ವರ್ಷ ಪ್ರಸಕ್ತ ಸಾಲಿನಲ್ಲಿಯೂ ಮುಜರಾಯಿ ಇಲಾಖೆಯ ಆಡಳಿತವು ಹಿಂದಿನಂತೆ ದಕ್ಷತೆಯಿಂದ ನಡೆದುಕೊಂಡು ಬಂದಿರುವುದು ಸರ್ಕಾರದವರಿಗೆ ಕಂಡುಬಂದಿದೆ.

ಸೂರ್ಯನಲ್ಲಿ ಏನಿರುವದು?

ಸೂರ್ಯನು ಪೃಥ್ವಿಯಿಂದ ೯ ಕೋಟಿ ೩೦ ಲಕ್ಷ ಮೈಲುಗಳ ದೂರದಲ್ಲಿರುವನು. ಅವನ ಗೋಲದ ವ್ಯಾಸವು ಅಜಮಾಸು ೮,೬೬ ಸಾವಿರ ಮೈಲುಗಳು. ಭೂಮಿಯ ವ್ಯಾಸವು ೮ ಸಾವಿರ ಮೈಲುಗಳು ಮಾತ್ರ. ಆದ್ದರಿಂದ ಸೂರ್ಯನು ಪೃಥ್ವಿಗಿಂತ ೧೩ ಲಕ್ಷ ಪಟ್ಟು ದೊಡ್ಡವನಾಗಿದ್ದಾನೆ. ಸೂರ್ಯನಲ್ಲಿ ಪೃಥ್ವಿಗಿಂತ ೨೭ ಪಟ್ಟು ಹೆಚ್ಚು ಆಕರ್ಷಣ ಶಕ್ತಿಯುಂಟು ಮತ್ತು ಅವನ ಮೇಲಿನ ಉಷ್ಣತಾಮಾನವು ೬೦೦೦ ಸೆಂಟಿಗ್ರೇಡ ಇರುವುದು.

ಭೌತಿಕ ವಿಜ್ಞಾನಶಾಸ್ತ್ರಜ್ಞರು ಈ ವಿಶ್ವದಲ್ಲಿ ೯೨ ಪ್ರಕಾರದ ಭೌತಿಕ ತತ್ವಗಳಿರುವವೆಂದು ಸಿದ್ಧಮಾಡಿರುವರು. ಅವುಗಳಲ್ಲಿಯ ೬೫ ಭೌತಿಕ ತತ್ವಗಳು ಸೂರ್ಯನಲ್ಲಿ ಗ್ಯಾಸ ಅವಸ್ಥೆಯಲ್ಲಿ ಇರುವವೆಂದು ತೋರಿಸಿ ಕೊಟ್ಟಿರುವರು. ಚಂದ್ರನಲ್ಲಿ ಕಲೆಗಳಿರುವಂತೆ, ಸೂರ್ಯನಲ್ಲಿಯೂ ಕಲೆಗಳಿರುವವೆಂದೂ ಅವು ಸೂರ್ಯಗ್ರಹಣ ಸಮಯದಲ್ಲಿ ಸ್ಪಷ್ಟವಾಗಿ ಕಾಣಿಸುತ್ತವೆಂದೂ, ಅವುಗಳಲ್ಲಿಯ ಒಂದೊಂದು ಕಲೆಗಳಂತೂ ೧ ೪ ೫೦ ಸಾವಿರ ಮೈಲು ಉದ್ದವಾಗಿಯೂ ೭೫ ಸಾವಿರ ಮೈಲು ಅಗಲವಾಗಿಯೂ ಇರುತ್ತವೆಂದೂ ತೋರಿಸಿದ್ದಾರೆ.

ಇನ್ನು ಸೂರ್ಯ ಪ್ರಕಾಶ ಹಾಗೂ ಉಷ್ಣತೆಗಳ ಬಗ್ಗೆ ವಿಚಾರಿಸಿದರೆ ಅವಂತೂ ಬಹಳ ಆಶ್ಚರ್ಯವನ್ನುಂಟು ಮಾಡುವಂತಹವುಗಳು. ೨೬ ಕೋಟಿ ಪರಾರ್ಥ ಮೇಣ ಬತ್ತಿಗಳನ್ನು ಒಟ್ಟಿಗೆ ಹಚ್ಚಿದರೆ ಎಷ್ಟು ಪ್ರಕಾಶವು ಸೂರ್ಯನಲ್ಲಿದೆಯೋ ಅಷ್ಟೊಂದು ಅವನ ಸತ್ವವು ಇರುತ್ತದೆಂತಲೂ ಗಣತ್ತು ಹಚ್ಚಿದ್ದಾರೆ. ಹಾಗೂ ಸೂರ್ಯನಿಂದ ಪ್ರತಿಯೊಂದು ನಿಮಿಷಕ್ಕೆ ೨ ಲಕ್ಷ ಕೋಟಿ ಕುದುರೆಗಳ ಶಕ್ತಿಗೆ ಸಮನಾದ ಉಷ್ಣತೆಯು ಹೊರಬೀಳುವದು. ಪೃಥ್ವಿಯು ಸೂರ್ಯನಿಂದ ಇಷ್ಟು ದೂರವಿದ್ದರೂ ಅವನಿಂದ ಬರುವ ಉಷ್ಣತೆಯು ಸ್ವಲ್ಪ ಭಾಗವು ನಮಗೆ ಬಂದು ಮುಟ್ಟುವದು. [illegible] ಈ ಪೃಥ್ವಿಯ ಮೇಲೆ [illegible] ನಮಗೆ [illegible] ಮತ್ತು ಸೂರ್ಯನ ಇಷ್ಟೇ ಉಷ್ಣತೆಯಿಂದಲೇ, ಅಲ್ಲಿಯ ಕಿರಣ ಉಗಮವಾಗಿ ಆ [illegible] ಮೋಡಗಳು, ಹಿಮ, ಗೊಡವಾದವುಗಳುಂಟಾಗಿ ಮಳೆಯ ರೂಪದಿಂದ ನಮಗೆ ಗೋಚರವಾಗುವವು ಮತ್ತು ಇದರಿಂದಲೇ ವಾತಾವರಣದಲ್ಲಿ ಕಡಿಮೆ ಉಷ್ಣತೆಯುಂಟಾಗುವದು ಮತ್ತು ದೊಡ್ಡ ದೊಡ್ಡ ಬಿರುಗಾಳಿಗಳಾದರೂ ಬೀಸುವವು. ಇದಲ್ಲದೆ ಕಲ್ಲಿದ್ದಲಿ, ಎಣ್ಣೆ, ಬೆಳ್ಳಿ, ಬಂಗಾರ ಮೊದಲಾದ ಭಿನ್ನ ಭಿನ್ನ ಪ್ರಕಾರದ ಖನಿಜ ಪದಾರ್ಥಗಳಾದರೂ, ಸೂರ್ಯನಿಂದ ಪೃಥ್ವಿಗೆ ಬಂದು ಮುಟ್ಟುವ ಉಷ್ಣತೆಯಿಂದಲೇ ಉತ್ಪನ್ನವಾಗುತ್ತವೆ ಮತ್ತು ಈ ಸೂರ್ಯಕಿರಣಗಳಿಂದಲೇ ಉದ್ಭವಿಸಿದ ಚಿತ್ರವಿಚಿತ್ರವಾದ ಬಣ್ಣದ ಎಲೆಗಳನ್ನೂ ಪುಷ್ಪ ಹಾಗೂ ಫಲಗಳನ್ನೂ ಧರಿಸಿ, ಸೃಷ್ಟಿಗೆ ಬಹಳ ಶೋಭೆಯನ್ನುಂಟುಮಾಡುತ್ತವೆ ಮತ್ತು ಈ ಕಿರಣಗಳು ಹಸಿರಿನಲ್ಲಿರುವ ವಿಷಯುಕ್ತವಾದ ಕಾರ್ಬಾನಿಕ್ ಆಸಿಡ್ ಗ್ಯಾಸದಲ್ಲಿಯ ಕಾರ್ಬನ್ ಹಾಗೂ ಆಕ್ಸಿಜನ್ ಮೂಲತತ್ವಗಳನ್ನು ಬೇರೆ ಬೇರೆ ಮಾಡುವವು. ಅದರಲ್ಲಿಯ ಕಾರ್ಬನ್‌ವನ್ನು ಉದ್ಭಿಜ್ಜಗಳು ಕುಡಿದು, ಆಕ್ಸಿಜನ್ನವನ್ನು ಪ್ರಾಣಿಗಳು ಉಪಯೋಗಿಸಿಯೂ ತಮ್ಮ ಪ್ರಾಣಧಾರಣೆಯನ್ನು ಮಾಡಿಕೊಳ್ಳುವವು.

ಈ ಎಲ್ಲ ಎಶ್ವಕ್ಕೂ ಉಷ್ಣತೆ ಹಾಗೂ ಪ್ರಕಾಶಗಳನ್ನು ಪೂರಯಿಸುವದರಿಂದ ಸೂರ್ಯನ ಶರೀರವು ಪ್ರತಿಯೊಂದು ಸೇಕಂಡಿಗೆ ೧೧ ಕೋಟಿ, ೩೪ ಲಕ್ಷ ಮಣ ಕಡಿಮೆಯಾಗುವದು. ಇದೇ ಲೆಖ್ಖದಿಂದ ಅವನು ಒಂದು ವರ್ಷದಲ್ಲಿ ೩,೫೭,೪೦,೦೦೦ ಕೋಟಿ ಮಣ ಕಡಿಮೆಯಾಗುವನು. ಇದೇ ಕ್ರಮದಿಂದ ಅವನ ಶಕ್ತಿಯು ಕಡಿಮೆಯಾಗುತ್ತ ಹೋದರೆ ಕೆಲವು ವರ್ಷಗಳಲ್ಲಿ ಸೂರ್ಯನು ತಣ್ಣಗಾಗಿ ಹೋಗಬಹುದೆಂದು ಎಷ್ಟೋ ಜನರು ತರ್ಕಮಾಡಿದರು. ಮತ್ತು ಇದೇ ಕ್ರಮವು ಸಾಗುತ್ತ ಸೂರ್ಯನು ತಣ್ಣಗಾಗಿ ಹೋದ ಬಳಿಕ ಅವನಿಂದ ಪ್ರಕಾಶ ಹಾಗೂ ಉಷ್ಣತೆಗಳು ಬಾರದೆ, ಪೃಥ್ವಿಯ ಮೇಲಿನ ಎಲ್ಲ ಸಚೇತನ ಪದಾರ್ಥಗಳು ಹಾಗೂ ಅಚೇತನ ಪದಾರ್ಥಗಳು ನಷ್ಟವಾಗುವವೆಂದು ಕೆಲವರು ಚಿಂತಿಸತೊಡಗಿದರು. ಆದರೆ ಈ ನಮ್ಮ ಸೂರ್ಯದೇವನು ಈಗ ೭೫೦೦ ಕೋಟಿ ವರ್ಷಗಳಿಂದ ಇದೇ ಪ್ರಕಾರವಾಗಿ, ಉಷ್ಣತೆ ಹಾಗೂ ಪ್ರಕಾಶವನ್ನು ಕೊಡುತ್ತಿರುವನು. ಮೇಲಿನಂತೆ ಅವನು ಕ್ಷೀಣವಾಗುತ್ತ ಹೋದರೂ ಅವನ ತೂಕವು ೫೫ ಬಿಲಿಯನ್ ಪರಾರ್ಧ (೫೫ ರ ಮುಂದೆ ೨೭ ಪೂಜ್ಯಗಳು) ಮಣವಾಗಿರುವದು ಮತ್ತು ಇದೇ ಕ್ರಮದಿಂದ ಸೂರ್ಯ ಪ್ರಕಾಶ ಹಾಗೂ ಉಷ್ಣತೆಯ ಶಕ್ತಿಗಳು ಕುಂದುತ್ತಲೇ ನಡೆದರೆ, ೧೬ ಲಕ್ಷ ಕೋಟಿ (೧೬ ರ ಮುಂದೆ ೧೨ ಪೂಜ್ಯಗಳು) ವರ್ಷಗಳ ಮೇಲೆ ಸೂರ್ಯನು ಇಲ್ಲದಂತಾಗಬಹುದು.

ಮುನಿಸಿಪಲ್ ಹಣದ ದುರುಪಯೋಗ!

ಭೋಲಾ ಮುನಿಸಿಪಾಲಿಟಿಗೆ ಸೇರಿದ ಸುಮಾರು 3000 ರೂಪಾಯಿಗಳನ್ನು ದುರುಪಯೋಗಪಡಿಸಿದರೆಂದು, ಆನರರಿ ಮ್ಯಾಜಿಸ್ಟ್ರೇಟು ಮತ್ತು ಮುನಿಸಿಪಲ್ ಛೇರ್ಮನ್ನರಾದ ಬಾಬುಚಂಡ್ರಭೂಷಣಮುಕರ್ಜಿಯವರನ್ನೂ ಇತರ ಮೂವರನ್ನೂ ದಸ್ತಗಿರಿ ಮಾಡಿ ಮುಕರ್ಜಿಯವರನ್ನು ಜಾಮೀನಿನ ಮೇಲೆ ಬಿಟ್ಟು ಉಳಿದವರನ್ನು ರಿಮ್ಯಾಂಡಿನಲ್ಲಿಟ್ಟಿದ್ದಾರೆ.

2500 ಜನರು ಸಾರ್ ಪ್ರಾಂತ್ಯವನ್ನು ಬಿಟ್ಟರು.

ಸಾರ್ ಪ್ರಾಂತ್ಯವು ಜರ್ಮನಿಗೆ ಸೇರುವುದೆಂಬುದನ್ನು ತಿಳಿದು ಸುಮಾರು 2500 ಜನರು ತಮ್ಮ ಮನೆಗಳನ್ನು ಬಿಟ್ಟು ಫ್ರಾನ್ಸ್ ದೇಶವನ್ನು ಪ್ರವೇಶಿಸಿದರು. ಇವರಿಗೆಲ್ಲಾ ದಕ್ಷಿಣ ಫ್ರಾನ್ಸ್‌ನಲ್ಲಿ ವಸತಿಗಳನ್ನು ಕಲ್ಪಿಸುತ್ತಾರಂತೆ! ಸಾಮಾನ್ಯವಾಗಿ ಇವರೆಲ್ಲಾ ಫ್ರೆಂಚರೆಂದೇ ತಿಳಿದುಬರುತ್ತದೆ.

ಸಂತೋಷದಿಂದ ಆತ್ಮಹತ್ಯೆ!

ಲಂಡನ್ ಎಂಬಲ್ಲಿ ಲಿಯೋನಾರ್ಡ್‌ಹೈಡ್ ಎಂಬುವನು 12 ತಿಂಗಳುಕಾಲ ತನ್ನನ್ನು ಬಿಟ್ಟು ಬೇರೆ ಇದ್ದ ತನ್ನ ಹೆಂಡತಿಯು ಕಳೆದ ಕ್ರಿಸ್‌ಮಸ್ ಕಾಲದಲ್ಲಿ ಗಂಡನ ಅನಾರೋಗ್ಯಸ್ಥಿತಿಯನ್ನು ಕೇಳಿ ಮಗುವಿನೊಡನೆ ಬಂದದ್ದರಿಂದ ಬಹಳ ಸಂತೋಷ ಹೊಂದಿ ಆಸ್ತಿಯನ್ನೆಲ್ಲಾ ಮಗುವಿನ ಹೆಸರಿಗೆ ಬರೆದು ತಾನು ವಿಷವಾಯುಸೇವನೆಯಿಂದ ಆತ್ಮಹತ್ಯೆಮಾಡಿಕೊಂಡನು.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಆಕ್ಷ್ಣಾಂತರ ಒಸ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವನಿಗೆ ರತ್ನಸ್ವರೂಪವಾಗಿರುವ ದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ನವ್ಯ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಟೈಪಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನವಾಗಿ ಪ್ರಕಾಶಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ರಚನೆಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೆ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಬೇಕೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೭೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಮುಕ್ತಕಂಠಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ನಡಿಕೇರಿಪನ್ನಿಗ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ಪ್ರಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೯೪ ಪುಟಗಳಿಂದ ಕೂಡಿದ್ದು ಒಳ್ಳೆ ವಿಲಾಯಿತಿ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಟೈಪಿನಿಂದೊಡಗೂಡಿದ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುಕ್ತಿಸಾಧನಾಗ ದೃಷ್ಟಿಯಿಟ್ಟಿರುವ ಈ ಗ್ರಂಥರತ್ನವನ್ನು ತರಿಸಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದು ರೂಪಾಯಿಗೆ ಸಾತತ್ವಗೆಯಂತೆ ಕಾಪೀರಿಸಿದವರಿಗೆ ಹೋಗಲಾಗಿ ೩ ರೂ. ಗೆ ದೊರೆಯುವದು. ವಿ ಪಿ ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಿಗಳು

ಧಾತುಪುಷ್ಟಿಲೇಹ.

1 ಇದು ಬಲಹೀನ ದೇಹಗಳಿಗೆ ಅದ್ಭುತವಾದ ಔಷದಿ, ಇದರ ಸೇವನೆಯಿಂದ ಮಲಬದ್ಧತೆ, ಜೀರ್ಣಜ್ವರ, ಶೋಷ, ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶ್ಶಕ್ತಿ, ಕಾಲು ಕೀಳುವಿಕೆ, ರಕ್ತಹೀನತೆ, ಬೆನ್ನು ನೋವು, ಸೊಂಟ ನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಸ್ವಪ್ನಾವಸ್ಥೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ **ಸಂಯೋಗಶಕ್ತಿಯು** ಕುಂದಿರುವಿಕೆ, ಶರೀರದ ಉಷ್ಣತೆ ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿವೃದ್ಧಿಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಡಬ್ಬಿ 1ಕ್ಕೆ 2—8—0 3ಕ್ಕೆ 7—0—0

2 **ಸೋಜಾಕು ಕಾಠಪ್ರಮೇಹ** ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರ ನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ್ಗ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು ಡಬ್ಬಿ 1ಕ್ಕೆ 2—8—0, 3ಕ್ಕೆ 7—0—0.

3. **ಮಲೇರಿಯಾ ನಿವಾರಿಣಿ** ಇದು ಮಲೇರಿಯಾ, ದಿನಬಿಟ್ಟು ಬರುವ ಜ್ವರ, ಚಳಿಜ್ವರ, ಇಂಫ್ಲುಯೆಂಜಾ, ನ್ಯೂಮೋನಿಯಾ, ಕಫಜ್ವರ, ಜ್ವರಗಡ್ಡೆ ಮುಂತಾದವುಗಳಿಗೆ ದಿವ್ಯೌಷಧಿ. ಬಾಟ್ಲಿ 1ಕ್ಕೆ 1—8—0 ಅರೆ ಬಾಟ್ಲಿಗೆ 0—13—0. 3ಕ್ಕೆ 4—0—0 ಸಣ್ಣ ಬಾಟ್ಲಿ 3ಕ್ಕೆ 2—4—0

ವ್ಯಾಯಿಲೆ ಸಂಗತಿ ವಿವರವಾಗಿ ಒರೆದಲ್ಲಿ ರೋಗಿಗೆ ತಕ್ಕದಾದ ಔಷದಿ ರವಾನಿಸಲಾಗುತ್ತೆ. ಕ್ಯಾಟಲಾಗಿಗೆ ಬರೆಯಿರಿ.

ಎಂ ಗಣಪಯ್ಯ ಆಂಡ್ ಸನ್ಸ್.

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ನಂಬರು 271 ಮಂಗಳೂರು

ಔಷದಿ ಸಿಕ್ಕುವ ಸ್ಥಳಗಳು— **ಮೆಸ್ಸರ್ಸ್ ಪೆಟರನ್ ಬ್ರದರ್ಸ್,** 91 ಚಿಕ್ಕಪೇಟೆ ಬೆಂಗಳೂರು ಸಿಟಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಆಲೋಚನೆಯ ಮೇರೆಗೆ ಶಿಷ್ಯರ ಹಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳು ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭವ್ಯವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಿಂಹಾಸನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಳಸಿಂಧೂರ	೧	೪—೦—೦
ಶಿಲಾಸಿಂಧೂರ	೧	೨—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೊಂಬಿನ ಭಸ್ಮ	೧	೦—೮—೦
ಗೋದಂತಿಹರಿತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷದಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ **ಯು. ಪಿ.**

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೊ ಸೈಜು ೨೦\೧೫ ಬಿಲಿ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ವಧೀಚಿ ವ್ಯಾಸ ಸಂಪಂವ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦\೧೪ ಬಿಲಿ	೦—೧—೬
ಸದ್ಯ ಶ್ರೀಕಾಶೀಪೀಠವನ್ನಲಂಕರಿಸಿದ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪\೧೦ ಬಿಲಿ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪\೧೦ ಬಿಲಿ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦\೮ ಬಿಲಿ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೊ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬಿಲಿ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಶ್ರೀ ವೀರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ :—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರು

(Registered Trade Mark)

ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂದು ತಲೆನೋವು, ತಲೆಸುತ್ತಿಯು ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಾಡ್ಯೋಪ ಮೊಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠತ್ಯ ನೇ... ಬೃಸ್ಟ್ರ ಕಫ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ ಮೂಗಿಗೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಮುಖರು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋಗಿಸುತ್ತಾರ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗುವದು.

ಒಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦ ೪ ...

ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ. ಪಿ. ೮ ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[5] ಪೋ. ಬಾ. ೫೧೦ ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ ..	೩ ಆಣೆ
ಮರುಳಸಿದ್ಧೇಶ್ವರಸ್ತೋತ್ರ .	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರವಿಮರ್ಶ (೪ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ) ...	೧ ಆಣೆ
ಬಸವಾದಿ ಸಿಬತತ್ತ್ವದರ್ಪಣ (೪ನೆಯ ಆವೃತ್ತಿ) .	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ವೀರಶೈವಾಚಾರಪದ್ಧತಿ (೪ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಶಾಸ್ತ್ರವಿಮರ್ಶ ತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ) .	೪ ಆಣೆ
ವೈದಿಕವಾಙ್ಮಯಪರ್ಯಟನ .	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಪಡಕ್ಷರ ಕವಿಕೃತ) .	೮ ಆಣೆ
ಶಿವಸಿದ್ಧಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ವೇದೋಕ್ತ ಶಿವಪೂಜಾವಿಧಿ ..	೧೦ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣಗಳು (ಕನ್ನಡ)	೮ ಆ...
पंडित श्रीकाशीनाथशास्त्री यांचें भाषण (मराठी)	८ आ...
Speeches by Pandit Shri Kashinatha Shastri (*English*)	12 A...
ವೀರಶೈವಧರ್ಮ (೪ನೆಯ ಆವೃತ್ತಿ)	೧೨ ...
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ...
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ...
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ...
ಶಿವಾಗಮೋಕ್ತಸಿದ್ಧಾಂತದರ್ಪಣ	೧೨ ...
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ...
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ...
ಕೇನೋಪನಿಷತ್ (ವೀರಶೈವಭಾಷ್ಯ)	೧ ...
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ...	೧ ...
ವೀರಶೈವಸಿದ್ಧಾಂತಸುಧಾಕರ	೨ ...
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೩ ಪುಟ) ...	೮ ...
लिंगधारणचंद्रिका (संस्कृत)	३ ...
महानारायणोपनिषत् (वीरशैवभाष्य–संस्कृत)	१ ...
वीरशैवेंदुशेखर (संस्कृत)	१ ...

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ... ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು... ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು...

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ...**

ಮೈಸೂರು ಹನುಮಂತರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಸಿಸ್ಟೆಂಟ್ ಮ್ಯಾನೇಜರ್ ಶ್ರೀ|| ಪಂಡಿತ ಕೆ.ಜಿ. ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿತವು

REGISTERED No M. 2266 || ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂತು || REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಷೇತ್ರನಿವಾಸಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೧ ನೇ ಫೆಬ್ರವರಿ ೧೯೩೫ [ಸಂಚಿಕೆ ೩೯

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ವೀರಶೈವ ಸಮಾಜದವರಿಗೆ ತಿಳಿಯಪಡಿಸುವದೇನೆಂದರೆ—

ಶ್ರೀ ಜಗದ್ಗುರು ಶ್ರೀಶೈಲ ಪರ್ವತ ಶ್ರೀ ಸೂರ್ಯಸಿಂಹಾಸನ ಪೀಠದ ಹೆಸರಿನ ಮೇಲೆ ದೂರ ದೂರ ಪ್ರಾಂತ್ಯಗಳಲ್ಲಿ ಅನಧಿಕಾರಿಗಳು ಸಂಚರಿಸುತ್ತ ಭಕ್ತಾದಿಗಳಿಗೆ ಮೋಸಗೊಳಿಸುತ್ತ ಚಿಕ್ಕ ಚಿಕ್ಕ ಸರ್ಟಿಫಿಕೇಟುಗಳನ್ನು ತೆಗೆದು ದಲಾಲಿ ಜನಗಳ ಮುಖಾಂತರದಿಂದ ಹಳ್ಳಿಹಳ್ಳಿಗಳಲ್ಲಿ ತಿರುಗುತ್ತ ಜಗದ್ಗುರು ಪೀಠದ ಗೌರವಕ್ಕೆ ಕುಂದಕ ತರುತ್ತ ದಲ್ಲಾಳಿ ಜನರ ಕುಮಾರ್ಗ ಪಕ್ಷಾಚರಿತರಾ ಬಂದಷ್ಟು ದ್ರವ್ಯ ದುರುಪಯೋಗಪಡಿಸುತ್ತಾರೆಂದು ಅರಿಕೆ ಬರುತ್ತದೆ.

ಈ ಮಹಾಪೀಠದ ಸರ್ಟಿಫಿಕೇಟು ಆಪ ಸನ್ನಿಧಿ ಪೂರ್ ಸೆಕ್ರೆಟರಿ ಸಮೇತ ಕರ್ನೂಲು ಜಿಲ್ಲಾಕ್ಕೆ ಕೊಡಲ್ಪಟ್ಟಿರುತ್ತದಲ್ಲದೆ ಬೇರೆಕಡೆಗೆ ಕೊಟ್ಟಿಲ್ಲ. ಇದುವರಿಂದ ಅನಧಿಕಾರಿ ಗುಂಪಿನವರು ಬಂದರೆ ಅವರಿಗೆ ಕಾಣಿಕೆ ವಗೈರೆ ಕೊಟ್ಟು ಯಾರೂ ಮೋಸಹೋಗಬಾರದು.

N B—ಮತ್ತು ಚಿತ್ರದುರ್ಗ ತಾಲ್ಲೂಕು ಕರ್ನೂ ಪೇಪ ಪೀಠ ಬಕ್ಷಾಪತಿ ಮಠದ ಬ ಯ್ಯ ಜಿಸ್ಸಂಜಯ್ಯನವರು, ವೀರಭದ್ರಯ್ಯನವರು ಇವರುಗಳಿಗೆ ಬೆಂಪದರ ಹುಕುಂ ಮಾಡಿ ಕಳುಹಿಸಿದ್ದಂತೆ ನಡೆಯದೆ ಷರತ್ತಿನ ಪ್ರಕಾರ ಕ್ರಮಕ್ಕೆ ತಪ್ಪಿ ನಡೆದದ್ದರಿಂದ ಇವರ ಸಂಚಾರಣೆಯನ್ನು ಬರಖಾಸ್ತಪಡಿಸಿದ್ದಾಗಿದೆ. ಗುಂತಕಲ್ ಕ್ಯಾಂಪ್ ಮಹಾ|| || ಸಂಸ್ಥಾನದ ಪತಿಯಿಂದ ಹುಕುಂ ಬಾರದೆ ಯಾರಿಗೂ ಕಾಣಿಕೆ ವಗೈರೆ ಕೊಟ್ಟು ದುರುಪಯೋಗದ ಫಲಕ್ಕೆ ಭಾಗಿಗಳಾಗಬಾರದೆಂದು ಎಚ್ಚರಿಸಿದೆ.

R. C. Aradhya Swamy,
Hiremath A.
ಶ್ರೀ ಜಗದ್ಗುರು ಶ್ರೀಶೈಲ ಪರ್ವತ
ಸಂಸ್ಥಾನ ಏಜೆಂಟ್

ಮಹಾಶಿವರಾತ್ರಿ. (3—3—1935)
ಶ್ರೀಶೈಲಮಹಾಕ್ಷೇತ್ರ.

ಸ್ಥಲಶುದ್ಧೀಕರಣದ ಏರ್ಪಾಟುಗಳು

ಕರ್ನೂಲ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು ಈಚೆಗೆ ಶ್ರೀಶೈಲಕ್ಕೆ ದಯಮಾಡಿಸಿದ್ದರು. ಆರೋಗ್ಯ ಮತ್ತು ಯಾತ್ರಿಕರ ಅನುಕೂಲಗಳಿಗೆ ಬೇಕಾದ ಶುದ್ಧೀಕರಣಾದಿ ಏರ್ಪಾಟುಗಳು ನಡೆಯುತ್ತವೆ.

ವಸತಿ—ಯಾತ್ರಿಕರ ಮತ್ತು ಅಧಿಕಾರಿಗಳ ತಾತ್ಕಾಲಿಕ ಉಪಯೋಗಕ್ಕಾಗಿ ಗುಡಿಸಲುಗಳು ನಿರ್ಮಾಣಗುತ್ತವೆ.

ದೇವಸ್ಥಾನದ ಆವರಣದೊಳಗ ಆದಷ್ಟುಮಟ್ಟಿಗೆ ಜನಸಂದಣಿಯನ್ನು ಕಡಿಮೆಮಾಡುವುದಕ್ಕೂ ನೈರ್ಮಲ್ಯವನ್ನು ಕಾಪಾಡುವದಕ್ಕೂ ಗುಡಿಸಲುಗಳ ನಿರ್ಮಾಣವನ್ನು ಕಡಮೆಮಾಡುತ್ತಾರೆ.

ಜನಗಳನ್ನು ಹೊರಗೆ ತಂಗುವಂತೆ ಮಾಡುವುದಕ್ಕಾಗಿ ಉತ್ತರವನ್ನು ದೇವಸ್ಥಾನದ ಕಾಂಪೌಂಡಿನಿಂದ ಹೊರಗೆ ವಿಸ್ತರಿಸುವ ಏರ್ಪಾಟಾಗಿರುತ್ತದೆ.

ಪಾತಾಳಗಂಗಾ ಮತ್ತು ಭೀಮೇಶ್ವರ ಈ ಸ್ಥಳಗಳಲ್ಲಿ ಗುಡಿಸಲುಗಳ ನಿರ್ಮಿಸಲ್ಪಡುತ್ತವೆ.

ನೀರಿನ ವ್ಯವಸ್ಥೆ—ಯಾತ್ರಿಕರ್ಲ್ಲರ್ ದೇವಸ್ಥಾನದಲ್ಲಿಯೇ ವಾಸಮಾಡಿದರ ಅಲ್ಲಿರುವ ಸಣ್ಣ ಬಾವಿಗಳ ನೀರು ಸಾಕಾಗುವುದಿಲ್ಲ. ಆದ್ದರಿಂದ ದೇವಸ್ಥಾನದ ಹೊರಗಿರುವ ದೊಡ್ಡ ಕೆರೆಯಿಂದ ನೀರನ್ನು ಪಂಪುಮಾಡಿ ತೊಟ್ಟಿಗಳಿಗೆ ಶೇಖರಮಾಡಿ ಅವುಗಳಿಂದ ನಲ್ಲಿಗಳ ಮೂಲಕ ತೆಗೆದುಕೊಳ್ಳುವಂತ ಮಾಡುತ್ತವಾಗುತ್ತದೆ. ಯಾತ್ರಿಕರ ದೇವಸ್ಥಾನದ ಹೊರಗೆ ಇರುವದಕ್ಕಿಂತಲೂ ಹೊರಗೆ ನೀರಿನ ಅನುಕೂಲವೂ ವಸತಿಯ ಅನುಕೂಲವೂ ಹೆಚ್ಚಾಗಿರುತ್ತದೆ.

ಅಂಗಡಿಗಳು—ಎಷ್ಟು ಅಡ್ಡಿಪಡಿಸಿದರೂ ಕೋಟೆಯ ಪೂರ್ವದಿಕ್ಕಿನ ಮಹಾದ್ವಾರದ ಬಳಿ ಕೆಲವು ಅಂಗಡಿಗಳು ಇಡಲ್ಪಟ್ಟಿದ್ದವು. ಇದರಿಂದ ನೀರಿನ ತೊಟ್ಟಿಗಳ ಬಳಿಗೆ ಹೋಗಿ ನೀರು ತರುವ ಯಾತ್ರಿಕರಿಗೆ ತೊಂದರೆಯಾಯಿತು. ಆದಕಾರಣ ಈ ಸಾರಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಅಪ್ಪಣೆ ಇಲ್ಲದ ಸ್ಥಳಗಳಲ್ಲಿ ಅಂಗಡಿಗಳನ್ನು ಇಡದಂತೆಯೂ ಮತ್ತು ಪಾತಾಳಗಂಗೆಗೆ ಹೋಗುವ ದಾರಿಯ ಎರಡೂ ಕಡೆಯ ಮಂಟಪಗಳಲ್ಲಿ ಅಂಗಡಿಗಳನ್ನು ಇಟ್ಟುಕೊಳ್ಳುವಂತೆಯೂ ಏರ್ಪಾಡು ಮಾಡಿದೆ.

ಪೆದ್ದಚೆರುವಿನ ಹತ್ತಿರ ನೀರಿನ ಅನುಕೂಲ—ಪೆದ್ದಚೆರುವಿನ ಹತ್ತಿರವಿರುವ ಕೆರೆಯಲ್ಲಿ ಬೇಕಾದಷ್ಟು ನೀರಿನ ಅನುಕೂಲವಿದೆ. ಹೊಸ ಬಾವಿಯಲ್ಲಿ ಸಾಕಾಗುವಷ್ಟು ನೀರಿಲ್ಲ. ಇರುವ ನೀರೂ ಹಗ್ಗ ಹಾಕಿ ಸೇದುವುದಕ್ಕೆ ಆಗದಷ್ಟು ಆಳದಲ್ಲಿದೆ.

ಕೆರೆಗೆ ಹೊಸದಾಗಿ ಕಟ್ಟಿದ ಮೆಟ್ಟಲುಗಳು ನೀರಿನ ಒಳಮಟ್ಟದವರೆಗೂ ಕಟ್ಟಿ ಪೂರೈಸಿವೆ.

ಕುಡಿಯುವ ನೀರಿಗೆ ಈ ಕೆರೆಯೇ ಮುಖ್ಯ ಆಧಾರವಾದ್ದರಿಂದ ಯಾತ್ರಿಕರು ನೀರು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುವಂತೆ, ಕೆರೆಗೆ ಇಳಿಯಲು ಎರಡು ಮೂರು ಕಡೆ ತಾತ್ಕಾಲಿಕವಾಗಿ ದಾರಿಮಾಡಿಸಿಕೊಡಬೇಕೆಂದು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರನ್ನು ಕೇಳಲಾಗುವದು.

ದೀಪಗಳು—ಈ ವರುಷ ಎಲೆಕ್ಟ್ರಿಕ್ ಇಂಜನುಗಳು ಸರಿಯಾಗಿ ಕೆಲಸಮಾಡುವಂತೆ ವ್ಯವಸ್ಥೆಮಾಡಲಾಗಿದೆ ಮತ್ತು ಇದರಲ್ಲಿ ತೊಂದರೆಬಂದರೆ, ಉಪಯೋಗಿಸಿಕೊಳ್ಳಲು ಬೇಕಾದಷ್ಟು ಪೆಟ್ರೋಮ್ಯಾಕ್ಸ್ ಗ್ಯಾಸ್ ದೀಪಗಳು ತರಿಸಲ್ಪಡುತ್ತವೆ.

ವೈದ್ಯಸಹಾಯ—ಮಹಾಶಿವರಾತ್ರಿಗೆ ನಾಲ್ಕು ದಿವಸ ಮುಂಚಿತವಾಗಿ ಶಿವರಾತ್ರಿ ಕಳೆದು ಮೂರು ದಿವಸಗಳವರೆಗೂ ಯಾತ್ರಿಕರ ಸಹಾಯಕ್ಕಾಗಿ ಒಬ್ಬ ಸಬ್ ಅಸಿಸ್ಟೆಂಟ್ ಸರ್ಜನ್ನನ್ನು ಕಳುಹಿಸಿಕೊಡಬೇಕೆಂದು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರನ್ನು ಪ್ರಾರ್ಥಿಸಲಾಗುತ್ತದೆ.

ಸಿ ರಾಮಯ್ಯ, ಪ್ರೆಸಿಡೆಂಟ್,
ಶ್ರೀಶೈಲಂ ಮ್ಯಾನೇಜ್‍ಮೆಂಟ್ ಬೋರ್ಡ್

ಶ್ರೀ ಜಗದ್ಗುರು ರೇಣುಕಾಚಾರ್ಯ
ಫ್ರೀ ಬೋರ್ಡಿಂಗ ವಿಜಾಪುರ.

ಪ್ರತಿವರ್ಷದಂತೆ ಈ ವರ್ಷವಾದರೂ ವಿಜಾಪೂರದಲ್ಲಿ ಜರುಗುವ ಪಬ್ಲಿಕ್ ಪರೀಕ್ಷೆಗೆ ಬರುವ ವೀರಶೈವ ಜಂಗಮ ವಿದ್ಯಾರ್ಥಿಗಳ ಸಲುವಾಗಿ ತಾತ್ಕಾಲಿಕವಾದ ಸ್ಥಳದ ದೇಶಾಯಿಯ ಬಂಗ್ಲೆಯಲ್ಲಿ ಇರುವ ಹಿರೇಮಠದ ಪಟ್ಟಾಧ್ಯಕ್ಷರಿಂದ ಊಟದ ವ್ಯವಸ್ಥೆಯು ಮಾಡಲಾಗುವದು. ಸದರೀ ಬೋರ್ಡಿಂಗಿನಲ್ಲಿ ಅಸ್ಪ್ರಯೋಜಕವನ್ನು ತೆಗೆದುಕೊಳ್ಳಬೇಕೆಂಬ ವಿದ್ಯಾರ್ಥಿಗಳು ಮಾರ್ಚ ತಿಂಗಳು ೧೫ನೇ ತಾರೀಕಿನೊಳಗಾಗಿ (ತಮ್ಮ ಶಾಲೆಯ ಹೆಡ್ ಮಾಸ್ತರರಿಂದಾಗಲೀ ಉಪಯೋಗಿಸಯಾರಾದರೊಬ್ಬ ಪ್ರಮುಖ ಜನರಿಂದಾಗಲಿ) ಜಂಗಮರೆಂಬ ಬಗ್ಗೆ ಯೋಗ್ಯ ಸರ್ಟಿಫಿಕೇಟಿನೊಂದಿಗೆ ಅರ್ಜಿಯನ್ನು ಬರೆದು ಹಿರೇಮಠದ ಮುನಿಸಿಪಾಲ್ಟಿ ಕನ್ನಡ ಶಾಲಾ ಮಾಸ್ತರ ವಿಜಾಪೂರ ಈ ವಿಳಾಸಕ್ಕೆ ಕಳಿಸತಕ್ಕದ್ದು. ಮುದ್ದತ ಮೀರಿ ಬಂದ ಅರ್ಜಿಗಳು ಸ್ವೀಕರಿಸಲಾಗದು. ಪರೀಕ್ಷೆಗೆ ಬರುವಾಗ ನಮ್ಮ ಕಡೆಯಿಂದ ಬೋರ್ಡಿಂಗದಲ್ಲಿ ಊಟಮಾಡಲಿಕ್ಕೆ ಪರವಾನಗಿ ಸಿಕ್ಕ ಪತ್ರವನ್ನು ಸಂಗಡ ತರತಕ್ಕದ್ದು.

ವ್ಯವಸ್ಥಾಪಕ,
ಶ್ರೀ ರೇಣುಕಾಚಾರ್ಯ ಬೋರ್ಡಿಂಗ ವಿಜಾಪೂರ

ಭೂಕಂದಾಯ ರಿಯಾಯಿತಿ.

ಮದರಾಸಿನ ನ್ಯಾಯವಿಧಾಯಕ ಸಭೆಯವರು ಕಳೆದವಾರ ಸಭೆಸೇರಿದ್ದಾಗ ಸರ್ಕಾರದವರು ಆ ಅಧಿಪತ್ಯದಲ್ಲಿ ವಿಧಿಸಿರುವ ಭೂಕಂದಾಯವನ್ನು ಶೇಕಡ 33¼ ರಷ್ಟು ಕಡಮೆಮಾಡಬೇಕೆಂದು ಪ್ರಾರ್ಥಿಸುವ ಒಂದು ಠರಾವನ್ನು ಪಾಸುಮಾಡಿದರು. ಆ ಸಭೆಯವರ ಪ್ರಾರ್ಥನೆಯಂತೆ ಕಂದಾಯವನ್ನು ಕಡಿಮೆಮಾಡಿದರೆ ವರ್ಷಕ್ಕೆ 4 ಕೋಟಿ ರೂಪಾಯಿಗಳ ವರಮಾನವು ಕಡಿಮೆಯಾಗುವ ಕಾರಣ ಆ ಪ್ರಾರ್ಥನೆಯನ್ನು ನಡೆಸುವದಕ್ಕಾಗುವದಿಲ್ಲವೆಂದು ಸರ್ಕಾರದವರು ಉತ್ತರಕೊಟ್ಟರೆಂದು ತಿಳಿದುಬಂದಿದೆ.

ಪತ್ರವ್ಯವಹಾರ.

ಪ್ರಕಟಿತವಾಗುವ ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವಾಗಿ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸಿದ್ಧ ಶಿವಾನುಭವ ನಗರ ತಾಲ್ಲೂಕು ಕುದೇರು ಗ್ರಾಮಕ್ಕೆ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನವು

ಮುಹೂರ್ತವು ನಿಶ್ಚಯಿಸಲ್ಪಟ್ಟಂತೆ ಶ್ರೀಮದಾಚಾರ್ಯ ಭಗವತ್ಪಾದರು ತಾ|| ೩-೨-೩೫ ನೆಯ ರವಿವಾರ ಬೆಳಗ್ಗೆ ಹತ್ತು ಘಂಟೆಗೆ ಸಕಲ ಬಿರುದಾವಳಿ ಸಮೇತರಾಗಿ ಚತುರಂಗಬಲದೊಡನೆ ಕುದೇರು ಗ್ರಾಮಕ್ಕೆ ಬಿಜಯಂಗೈದರು. ಮಠದ ಶ್ರೀ ಪಟ್ಟಾಧ್ಯಕ್ಷ ನಿತ್ಯಾನಂದಸ್ವಾಮಿಗಳು ಮೊದಲುಮಾಡಿ ಶ್ರೀ ಪಟ್ಟದ ಸ್ವಾಮಿಗಳು ಕುದೇರು ಸಾಹುಕಾರ್ ಶ್ರೀಮಾನ್ ವೀರಣ್ಣನವರು ಶ್ರೀಯುತ [illegible] ಶಾಂತವೀರಪ್ಪನವರ ಮ|| ರಾ|| ಪಟೇಲ್ ಮಲ್ಲಪ್ಪನವರು ಮ|| ರಾ|| ಬಸವಲಿಂಗಪ್ಪನವರು ಮ|| ರಾ|| ಗುರುಬಸವಪ್ಪನವರು ಮ|| ರಾ|| ಶಿವಬಸಪ್ಪನವರು ಮ|| ರಾ|| ಮಹಾದೇವಪ್ಪನವರು ಮ|| ರಾ|| ಕೆ ಮಾದಪ್ಪನವರು ಮ|| ರಾ|| ಸಿ ಗುರುಮಪ್ಪನವರು ಮ|| ರಾ|| ಚಿಕ್ಕಸುಬ್ಬಪ್ಪನವರು ಮ|| ರಾ|| ನಾಗಲಿಂಗದೇವರು ಮ|| ರಾ|| ಮರಿಸುಬ್ಬಪ್ಪನವರು ಮ|| ರಾ|| ನಾಗಣ್ಣನವರು ಮ|| ರಾ|| ಭದ್ರಪ್ಪನವರು ಮ|| ರಾ|| ಸಿದ್ಧಲಿಂಗಪ್ಪನವರು ಮ|| ರಾ|| ಚನ್ನಮಲ್ಲಪ್ಪನವರು ಮ|| ರಾ|| ಗಂಗಪ್ಪನವರ ಪುತ್ರರು ಬಿ ವೀರಪ್ಪನವರು ಮ|| ರಾ|| ಚನ್ನಬಸಪ್ಪನವರು ಮ|| ರಾ|| ಬಸವಣ್ಣನವರು ಮ|| ರಾ|| ಪುಟ್ಟಪ್ಪನವರು, ಮ|| ರಾ|| ರಾಚಶೆಟ್ಟಿನವರು ಮ|| ರಾ|| ರುದ್ರಪ್ಪನವರು ಮುಂತಾದ ವೀರಶೈವ ಸಮಾಜ ಮುಖಂಡರು ಶ್ರೀ ಮಹಾಗುರುವನ್ನು ಸ್ವಾಗತಿಸಿ ಬರಮಾಡಿಸಿಕೊಳ್ಳಲು ಅನುಕೂಲವಾಗಿ ಪರಿವಾರಂಗಳಿಂದ ಸಮಾವೇಶವಾದ ವೀರಶೈವ ಸಟ್ಟು ಕೊಂಡು ಸಮಸ್ತ ಬಂಧುಬಾಂಧವರನ್ನು ಬರಮಾಡಿಕೊಂಡು ಇಸ್ಕೂಲ ಬಳಿ ನಿಂತಲ್ಲಿ ಶ್ರೀಗಳವರ ಮಾರ್ಗವನ್ನು ನಿರೀಕ್ಷಿಸಿಕೊಂಡಿದ್ದರು. ಶ್ರೀ ನಿತ್ಯಾನಂದ ಸ್ವಾಮಿಗಳು ತಮ್ಮ ಪ್ರಾಂತದ ವೀರಶೈವಸಮುದಾಯಕ್ಕೆ ಮೂಲಪಂಚಾಚಾರ್ಯರ ಸಂದರ್ಶನಾಶೀರ್ವಾದಗಳು ದೊರೆಯಬೇಕೆಂಬ ಸ್ವಾಮಿಭಕ್ತಿಯಿಂದ ಎಲ್ಲಾ ಕಡೆಗೂ ಪತ್ರಿಕೆಯನ್ನು ಕಳುಹಿದ ಪ್ರಕಾರ ಮೈಸೂರು ನಂಜನಗೂಡು ಚಾಮರಾಜನಗರ ಟಿ ನರಸೀಪುರ ಗುಂಡ್ಲುಪೇಟೆ ಕೊಳ್ಳೇಗಾಲ ಮುಂತಾದ [illegible] ಹೋಬಳಿ ಗ್ರಾಮಗಳ ಹೊನ್ನೂರು ಮಾಂಬಳ್ಳಿ ಮಧುವನಹಳ್ಳಿ ಹಾಳ್ಯ ಹನೂರು ದಗ್ಗನಾಡು ಹೆಗ್ಗವಾಡಿಪುರ ಉಮ್ಮತ್ತೂರು [illegible] ಆಗಹಾರ ಮುಂತಾದ ಕೊಂಡನಹಳ್ಳಿ ಮಾಂಗಲ ಮೂಲಹೂರು ಮಂಗಳೂರು ದೊಡ್ಡ ಹೊಮ್ಮ ಸಣ್ಣಹೊಮ್ಮ ಹೊಂಗನೂರು ಸಮಾಲ ಮಾರಹಳ್ಳಿ, ಹೊಸೂರು ಕೆಂಪನಪುರ ದಾಸನಪುರ ಇವೇ ಮೊದಲಾದ ಗ್ರಾಮಗಳಿಂದ ೪ ೫ ಸಾವಿರದವರೆಗೆ ಪ್ರೇಕ್ಷಕರು ಆಗಮಿಸಿದ್ದರು. ಶ್ರೀ ನಿತ್ಯಾನಂದಸ್ವಾಮಿಗಳು ಕುದೇರು ಸಾಹುಕಾರ ಶ್ರೀಮಾನ್ ವೀರಣ್ಣನವರು ಇವರಿಂದ ಪ್ರಮುಖಮಂಡಲಿಯವರ ಪರಿಚಯವಾಗಿ ಸಜ್ಜಮುಹುರ್ತಗಳು ಸಮರ್ಪಿಸಲ್ಪಟ್ಟನಂತರ ಶ್ರೀ ಪೂಜ್ಯ ಭಗವತ್ಪಾದರು ಸುವರ್ಣ ರಜತಾಂದೋಲಿಕೆಯನ್ನಾರೋಹಿಸಿದರು. ಕೂಡಲೆ ಸಕಲ ವಾದ್ಯಗಳು ಮೊಳಗಿದವು. ಉಭಯಪಾರ್ಶ್ವಗಳಲ್ಲಿಯೂ ಸಾಲುಸಾಲಾಗಿ ಎತ್ತಿ ಹಿಡಿದಿದ್ದ ಚತ್ರಚಾಮರ ಪತಾಕಾದಿಬಿರುದಾವಳಿಗಳಿಂದಲೂ ಹಸ್ತ್ಯಶ್ವರಥಪದಾತಿ ಚತುರಂಗ ಬಲದಿಂದಲೂ ಭಕ್ತ ವೃಂದದ ಜಯಘೋಷಗಳಿಂದಲೂ ತಾವು ವೀರಶೈವ ಮತಸ್ಥಾಪಕರಾದ ಗುರುಸಾರ್ವಭೌಮ ಶ್ರೀ ಜಗದ್ಗುರು ಪಂಚಾಚಾರ್ಯರ ಧರ್ಮಸಾಮ್ರಾಜ್ಯದ ಪ್ರಜೆಗಳೆಂಬುದನ್ನು ತೋರ್ಪಡಿಸಲು ಸಂಭ್ರಮದಿಂದ ಮೆರೆಯುತ್ತಿರುವ ಶ್ರೀಮದಾಚಾರ್ಯರ ಜಯಘೋಷದಿಂದಲೂ ಶ್ರೀಮನ್ಮಹಾಚಾರ್ಯಪೀಠಾಧಿಪರ ಸಂದರ್ಶನ ಸಂಜಾತಾನಂದ ಬಾಷ್ಪಪ್ರಕ್ಷಿಪ್ತ ದೃಷ್ಟಿಯಿಂದ ಮಹಾಶ್ಚೇಪಕರಾಂಗರ [illegible] ಆದಿಗಿರುವದರಿಂದ ಶ್ರೀ ಜಗದ್ಗುರು ಪೀಠದ ಸಹಜಸ್ವಚ್ಛಪ್ರಕಾಶವು ತನ್ನ ಸ್ವರೂಪವನ್ನು ವಿಸ್ತರಿಸುತ್ತಿರಲು ನಿರ್ಮಲಚಿತ್ತರಾದ ಭಕ್ತ ದಂಪತಿಗಳು ಅಲ್ಲಲ್ಲಿ ನೀರಾಜನವನ್ನೆತ್ತಿ ಮಂಗಳಾರತಿಗಳನ್ನು ಮಾಡುತ್ತಿದ್ದುದರಿಂದಲೂ, ದರ್ಶನೀಯವಾಗಿದ್ದ ಮಹೋತ್ಸವವು ಗ್ರಾಮದ ಸಕಲ ಬೀದಿಗಳಲ್ಲಿ ಅತ್ಯುತ್ಸಾಹದಿಂದಲೂ ಜರಗಿ ಶ್ರೀ ನಿತ್ಯಾನಂದಸ್ವಾಮಿಗಳವರ ಮಠದ ಆವರಣದಲ್ಲಿ ಭವ್ಯವಾಗಿ ರಚಿಸಲ್ಪಟ್ಟಿದ್ದ ದಿವ್ಯಮಂಟಪಕ್ಕೆ ಬಂದಿತು. ಶ್ರೀಗಳವರು ಆಚಾರ್ಯರ ಸಮುಖದಲ್ಲಿ ಪಾದಪೂಜೆ ಮಾಡಿದ ನಂತರ ಅಂದೋಲಿಕೆಯಿಂದಿಳಿದು ಸುವರ್ಣ ರಜತಾಸ್ವತ ಸಿಂಹಾಸನವನ್ನಾರೋಹಿಸಿದರು. ಸಭೆಯಲ್ಲಿ ಸಾವಿರಾರು ಗಳ ಮಂದಿರಲ್ಲಿ ಗಾಯಕರ ಸೇವೆಯಿಂದ [illegible] ಮುಖ್ಯಶರಣರಿಂದ ಸಭೆಯು ಉಜ್ವಲಕಳೆಯ ಪರ್ಣನಾತೀತವೇ ಆಗಿದ್ದಿತು. ತರುವಾಯ ಪಂಚಾಕ್ಷರಿ ಇಂದ ಸ್ವರೂಪವಿವೇಚನೆಯಲ್ಲದೆ ಅನುಭವಿಗಳಿಂದ ಜಾಗೃತಿ ಇದ್ದ ಭಕ್ತರಿಗೆ ನಿಜವಾದ ಪಾಶ್ಚಾತ್ಯ ಸಾಧನೆಗೆ ಆಗಬೇಕು ಆತ್ಮಸಾಕ್ಷಾತ್ಕಾರವನ್ನು ಪಡೆದಂತೆ ಶ್ರೀಮನ್ಮಹಾಚಾರ್ಯರು ಭಕ್ತರ ಹೊಟ್ಟೆಯನ್ನು ದರ್ಶಿಸಲು ವಿಜಯಯಾತ್ರೆಯನ್ನು ಕೈಕೊಂಡಿರುವುದರಿಂದ ಶ್ರೀ ನಿತ್ಯಾನಂದಸ್ವಾಮಿಗಳು ಮತ್ತು ಕುದೇರು ಸಾಹುಕಾರ ಶ್ರೀಮಾನ್ ವೀರಣ್ಣನವರು ಮೊದಲಾದವರಿಗೆ ಉಂಟಾದ ಆನಂದವನ್ನು ವರ್ಣಿಸುವುದು ಯಾರಿಗೂ ಸಾಧ್ಯವಿರಲಿಲ್ಲ. ಕಾರ್ಯಕ್ರಮದಂತೆ ಶ್ರೀ ನಿತ್ಯಾನಂದಸ್ವಾಮಿಗಳವರು ಶ್ರೀಮದಾಚಾರ್ಯ ಪ್ರಭಾವವನ್ನು ವ್ಯಕ್ತಗೊಳಿಸುವ ಪದ್ಯಗಳನ್ನೋದಿದರು. ಸಾಹುಕಾರ್ ವೀರಣ್ಣನವರು ಸಮಾಜದ ಪರವಾಗಿ ವಿಜ್ಞಾಪನಾಪತ್ರಿಕೆಯನ್ನು ಓದಿ ಶ್ರೀ ಮಹಾಸನ್ನಿಧಾನಕ್ಕೆ ಸಮರ್ಪಿಸಿದರು. ಬಳಿಕ ಜಗದ್ಗುರುಗಳವರು ನೆರೆದ ಭಕ್ತಸಮುದಾಯದ ಗುರುಭಕ್ತಿ ನಮ್ರತೆಯನ್ನು ಚಿಕ್ಕ ತಂಮ್ಮ ಸಂತೋಷಿಸಿ ವಿಜ್ಞಾಪನಾಪತ್ರಿಕೆಯಲ್ಲಿ ಪ್ರಾರ್ಥನಾವಿಷಯಗಳನ್ನು ಒಂದೊಂದಾಗಿಯೇ ತೆಗೆದುಕೊಂಡು ಸಪ್ರಮಾಣವಾಗಿಯೂ ಸಯುಕ್ತಿಕವಾಗಿಯೂ ವಿಸ್ತರಿಸಿ ಶಾಸ್ತ್ರೋಕ್ತವಾಗಿ ಮತದ ಸ್ವರೂಪವು ಸರ್ವರಿಗೆ ಸುಲಭವಾಗಿ ಗೋಚರವಾಗುವಂತೆ ಅಪ್ಪಣೆಕೊಡಿಸಿ, ಕಲಿಕಾಲದ ಮನುಜರಿಗೆ ಯಾರೂ ಮನ ನಿಷದ ಸರ್ವಮತೀಯರೂ ತಮ್ಮ ತಮ್ಮ ಧರ್ಮದಂತೆ ನಡೆದು ಐಹಿಕಾಮುಷ್ಮಿಕಸುಖಕ್ಕೆ ಭಾಗಿಗಳಾಗಬೇಕೆಂದು ಬೋಧಿಸಿದರು. ಬಳಿಕ ಪತ್ರ ಲಿಖಿತದಿಂದ ಸರ್ವಗ್ರಾಮದವರೂ ಪಟ್ಟಾಧಿಕಾರವಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಮತ್ತು ಧರ್ಮಮೂರ್ತಿ ರಾಜರ್ಷಿಪುಂಗವ ಶ್ರೀ ಕೃಷ್ಣರಾಜಒಡೆಯರ್ ಬಹದ್ದೂರ್‌ರವರ ಜಯಘೋಷದಿಂದ ಸಭೆಯು ವಿಸರ್ಜಿತವಾಯಿತು. ಬಂದ ಮಹಾಶಯರಿಗೆಲ್ಲ ಭೋಜನೋಪಚಾರದ ವ್ಯವಸ್ಥೆಯು ಸರಿಯಾಗಿ ಏರ್ಪಡಿಸಿದ್ದಿತು. ಶ್ರೀ ಜಗದ್ಗುರುಗಳವರ ವಿಜಯಯಾತ್ರೆಯು ವೀರಶೈವರ ಭಾಗ್ಯಸೂಚಕವೇ ಆಗಿರುವುದು. ಈ ಸಂದರ್ಭದಲ್ಲಿ ಶ್ರೀ ನಿತ್ಯಾನಂದಸ್ವಾಮಿಗಳವರು ಸಾಹುಕಾರ್ ವೀರಣ್ಣನವರು ಮಹಾಗುರುಗಳವರನ್ನು ದಯಮಾಡಿಸಿಕೊಂಡು ಬಂದು ಕುದೇರು ಗ್ರಾಮದ ಮತ್ತು ಸುತ್ತಮುತ್ತಣ ಅನೇಕ ಗ್ರಾಮಗಳ ಆಬಾಲವೃದ್ಧರಿಗೆಲ್ಲ ದರ್ಶನಮಾಡಿಸಿ ಸುಕೃತಿಗಳಾದರು. ಈ ಪುಣ್ಯಕೃತರಿಗೆ ಜಗದಾಚಾರ್ಯರು ಚಿರಾಯುರಾರೋಗ್ಯ ಭಾಗ್ಯಾದಿಗಳನ್ನು ಕರುಣಿಸಲೆಂದು ಬೇಡುವ

ವೀರಶೈವಭಕ್ತ

ನಮಃ ಶಿವಜಗದ್ಗುರುಭ್ಯಃ

ವಿಶೇಶ್ವರಲೀಭಕ್ತಿ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ಪ್ರಕಾರ ರಾಮನು ರಾಮೇಶ್ವರಾದಿ ಮೂರ್ತಿ ಪೂಜೆಗಳಿಂದ ಮುಕ್ತನಾದ ವೇಳೆ ಅವನ ಪರಮಭಕ್ತನಾದ ಹನುಮಂತನು ತನಗೆ ಮೋಕ್ಷ ಮಾರ್ಗವನ್ನು ತೋರಿಸೆಂದು ಬಿನ್ನೈಸಿಕೊಳ್ಳಲು ರಾಮನು ಹೇಳುವದೇ ನೆಂದರೆ—ನಾನಾದರೂ ಪರಶಿವನ ಸ್ಮರಣೆಯಿಂದ ಮುಕ್ತನಾಗುತ್ತಿರಲು ನಿನ್ನನ್ನು ಮುಕ್ತನನ್ನಾಗಿ ಮಾಡುವ ಸಾಮರ್ಥ್ಯವು ನನಗೆಲ್ಲಿಯದು? ಆದ್ದರಿಂದ ಆ ಪರಶಿವನನ್ನೇ ನೀ ಭಜಿಸು ಅದರಿಂದ ನಿನಗೂ ಪರಂಧಾಮವು ದೊರಕುವದರಲ್ಲಿ ಸಂಶಯವಿಲ್ಲವೆಂದೆನಲು ಆಂಜನೇಯನು ಆದೇ ಪ್ರಕಾರ ಪರಶಿವನನ್ನು ಭಕ್ತಿ ಪುರಸ್ಸರವಾಗಿ ಬಹುದಿನ ಧ್ಯಾನಿಸಲು ಗಾನಪ್ರಿಯನಾದ ಪರಶಿವನು ಪ್ರತ್ಯಕ್ಷನಾಗಿ ನಿನ್ನ ಇಚ್ಛೆಯೇನು ಕೇಳೆಂದೆನಲು ನನಗೆ ಮೋಕ್ಷ ಮಾರ್ಗವನ್ನು ದಯಪಾಲಿಸಬೇಕೆಂದನು. ಆಗ್ಗೆ ಶಂಕರನು ನಿನಗೆ ಉತ್ತಮ ಗುರುವನ್ನು ಕಳಿಸುತ್ತೇನೆ, ಅವನಿಂದ ನಿನ್ನಿಚ್ಛೆಯು ಪೂರ್ತಿಸುವದೆಂದು ಹೇಳಿ ವಿರಭದ್ರನನ್ನು ಕಳುಹಿಸಿದನು. ಆಗ್ಗೆ ವಿರಭದ್ರನಿಂದ ಅಂಜನೆಯ ಮಗನಿಗೆ ಲಿಂಗಧಾರಣವಾಗಿ ನಿತ್ಯದಲ್ಲೂ ಅವನು ಅತ್ಯಂತ ಭಕ್ತಿಯುಕ್ತನಾಗಿ ಪರಶಿವನನ್ನು ಸ್ಮರಿಸುತ್ತಿರಲು ಗಾನಪ್ರಿಯನಾದ ಶಂಕರನು ಇವನ ಗಾಯನಕ್ಕೆ ಮೆಚ್ಚಿ ಮೋಹಿತನಾಗಿ [illegible] ಮಾಡಿಸುತ್ತಿರಲು ಒಂದು ದಿನ ಬಹಳ ಹೊತ್ತಾದರೂ ಬರದಿರಲು ನನ್ನ ಶಿವಪೂಜೆಗೆ ಹೊತ್ತಾಯಿತೆಂದು [illegible] ಸ್ನಾನಕ್ಕೆ ತೆರಳಿ ಸ್ನಾನಗೈದು [illegible] ಆಗ್ಗೆ ಅವನಲ್ಲಿದ್ದ ಲಿಂಗವು ಮಾಯವಾಗಿತ್ತು. ಇದು ಆ ಪರಮಾತ್ಮನ ಮಾಯೆಯಲ್ಲದೆ ಬೇರೆ ಏನೂ ಅಲ್ಲವು. 'ಶಿವಾಜ್ಞೆ ಗುರುವಿನಿಂದಾಗಬೇಕಲ್ಲದೆ [illegible]' ಎಂದು ಮನದಲ್ಲಿ ಗುರುವು ಪರಶಿವನು ಗುರುವು ಮಹಾದೇವ ಎಂದು ತಿಳಿದವನೆಂಬುದನ್ನು ಸಂಪೂರ್ಣ ಬಲ್ಲವನಾದ ಹನುಮಂತನು ತನ್ನ ಗುರುವರ್ಯನಾದ ವೀರಭದ್ರನನ್ನು ಸ್ಮರಿಸಿ ವಿರಹಪೀಡಿತನಾಗಿ [illegible] ಲಿಂಗವನ್ನು ಪುನಃ ಪಡೆದು ಪೂಜಾದಿಗಳನ್ನು ಪೂರ್ತಿಗೊಳಿಸಿದನು. ಪುರಾಣಕಥೆಯುಂಟು ಇದಲ್ಲವೇ ಏಕಾಂತ ಭಕ್ತಿಯು?

ಪೂರ್ವದಲ್ಲಿ ಆಗಿಹೋದ ಅವತಾರಪುರುಷನ ಮಗನಾದ ಶ್ರೀಕೃಷ್ಣನ ಭಕ್ತಿಗೆ ಈ ಬಗೆಯಲ್ಲಿ ಸ್ವಾಮಿಯು ಅವತರಿಸಿದನು. ನಮ್ಮ ವಿಷ್ಣುಮೂರ್ತಿಯು ಕೆಂಬಸಲ್ಲಿ ಪ್ರಕಟನಾದಂತೆ ನಮ್ಮ ಶಂಕರನು ಎಲ್ಲರುವನು ತೋರಿಸಿದನು. ಆಗ ಕೇವ ವೈಷ್ಣವ ಮತೀಯರು ಮಾಡಿಸಿದರಂತೆ! ಅದಕ್ಕೆ ಶಿವಭಕ್ತರು ಒಂದು ಬಲ್ಲಿಯಲ್ಲಿರುವ ಕಾಲುಗಳಲ್ಲಿ ಅನೇಕಾನೇಕ ಪಂಚಸೂತ್ರಕ್ಕೆ ಸರಿಯಾಗಿರುವಂತೆ ಲಿಂಗಗಳನ್ನು [illegible] ಈಗಲೂ ಅದು [illegible] ಸಂಪೂರ್ಣಭರಿತವಾಗಿರುವದೆಂಬುದಕ್ಕೆ ಈ ಬಳ್ಳಿಯೇ ಸಾಕ್ಷಿ ನೀಡುವದಂತೆ! ಇದೇ ಬಳ್ಳಿಯು ಸರ್ವತ್ರ ಹಳ್ಳಿಗಳಲ್ಲಿ ಕಂಡು ಬರುವದು. ಈಗಲೂ ಆ ಬಳ್ಳಿಯು ಕಾಯಿಗಳಲ್ಲಿ ಲಿಂಗಾಕೃತಿಯು ಚೆನ್ನಾಗಿ ಕಂಡು ಬರುತ್ತವೆ. ಅದರ ಕಾಯಿಗಳು ಶ್ರೀಶೈಲ ಕ್ಷೇತ್ರದಂತೆ ಗೋಲಾಕೃತಿಯಲ್ಲಿರುತ್ತವೆ. ಈ ಬಳ್ಳಿಗೆ ಮಹಾಲಿಂಗನ ಬಳ್ಳಿ ಎನ್ನುವರು. ಸಂಸ್ಕೃತದಲ್ಲಿ 'ಲಿಂಗವಲ್ಲಿ' ಎನ್ನುವರು. ಪ್ರತಿಯೊಬ್ಬ ಜಾತೀಯ ಮಾನವನು ಕಂಕಣಬದ್ಧನಾಗಿ ಕೇವಲ ಲಿಂಗಾಕೃತಿಯುಳ್ಳದ್ದನ್ನೇ ಕೊಂಡಾಡುವನು. ಅಂದ ಮೇಲೆ ಈ ಜಗತ್ ಸೃಷ್ಟಿಗೆ ಮೂಲಕಾರಣನೇ ಭರ್ಗನು ಲಿಂಗಾಕೃತಿಯಾದ ಶಿವನೊಬ್ಬನಲ್ಲದೆ ಇತರರು ಎಂಬ ಮಾತು ಸರ್ವದಾ ಸುಳ್ಳು. ಕೇಶವನಿಗಿಂತಲೂ ಅಧಿಕರಾರೂ ಇಲ್ಲೆಂದು ವ್ಯಾಸನು ಸಾರಿ ತನ್ನ ತೋಳನ್ನು ಸ್ತಂಭನ ಮಾಡಿಕೊಂಡು ಪುನಃ ಗಿರಿಜಾರಮಣನ ಚರಣಸ್ಮರಣೆಯಿಂದಲೇ ಆ ಹಸ್ತವನ್ನು ಪಡೆದನು. ವಿಷ್ಣುವು ಶಂಕರನನ್ನು ಸ್ಮರಿಸಿ ಸುದರ್ಶನ ಚಕ್ರವನ್ನೂ 'ಶಾಸ್ತ್ರ' ಎಂಬ ಪುತ್ರನನ್ನೂ ಪಡೆದನು. ಲಕ್ಷ್ಮಿಯು ಸಾವಿರ ಕಮಲಗಳಿಂದ ಪೂಜಿಸುವಾಗ್ಗೆ ಒಂದು ಕಮಲವಿಲ್ಲದಿರಲು ವ್ರತಭಂಗವಾಗುವದೆಂದರಿತು ಕುಚವನ್ನು ಕೊಯ್ದು ಶಿವನಿಗೆ ಧರಿಸಲು ಆತನು ಸಂತುಷ್ಟನಾಗಿ ನಿನ್ನಯ ಪೂಜೆಗೆ ಮೆಚ್ಚಿ ಅದರ ಸ್ಮರಣಾರ್ಥವಾಗಿ ಭೂಲೋಕದಲ್ಲಿ ಬಿಲ್ವವೃಕ್ಷವನ್ನು ಹುಟ್ಟಿಸಿ ಆ ವೃಕ್ಷಕ್ಕೆ 'ಶ್ರೀವೃಕ್ಷ' ವೆಂಬ ನಾಮವನ್ನಿಟ್ಟನೆಂದು ಬಿಲ್ವೋಪನಿಷತ್ತಿನಲ್ಲಿ ಹೇಳಿದೆ. ವಿಶ್ವಾಮಿತ್ರನು ಶಿವಧ್ಯಾನದಿಂದ ಪುನಃ ಸೃಷ್ಟಿ ಮಾಡಲು ಸಮರ್ಥನಾದನು. ವಸಿಷ್ಠ, ಕಶ್ಯಪ, ದಧೀಚಿ, ಪರಾಶರ, ಸನಂದ, ಸನಕ, ಸನತ್ಕುಮಾರ, ಗೌತಮ ಮೊದಲಾದ ಋಷಿಪುಂಗವರೆಲ್ಲರೂ ಪರಮ ಶಿವಭಕ್ತರು. ರಾವಣನು ಪರಶಿವಧ್ಯಾನದಿಂದ ಅಷ್ಟದಿಕ್ಪಾಲಕರನ್ನೇ ಮನೆಯ ಕಾವಲುಗಾರರನ್ನಾಗಿಯೂ ಸೂರ್ಯಚಂದ್ರರನ್ನು ದೀಪಗಳನ್ನಾಗಿಯೂ ವಾಯುವನ್ನು ಮನೆಯ ಕಸವನ್ನು ಬಳಿಯುವವನನ್ನಾಗಿಯೂ ಮಾಡಿ ಅಷ್ಟೈಶ್ವರ್ಯವನ್ನು ಭೋಗಿಸಲಿಲ್ಲವೇ? ಕುಂಭಕರ್ಣನು ವರವನ್ನು ಬೇಡುವದರಲ್ಲಿ ವ್ಯತ್ಯಸ್ತವಾದರೂ ಮಹಾಶರೀರಿಯಾಗಿರಲಿಲ್ಲವೇ? ಪರಮವೈಷ್ಣವನಾದ ವಿಭೀಷಣನು ಸರ್ವತತ್ವವನ್ನರಿತು ಅಣ್ಣನಾದ ರಾವಣನ ಆಜ್ಞಾನುಸಾರವಾಗಿ ಮೂರು ಕೋಟಿ ಶಿವಲಿಂಗಗಳನ್ನು ಏಕಕಾಲದಲ್ಲಿಯೇ ಮಹಾಮಹಿಮಾಶಾಲಿಯಾದ ಶ್ರೀ ಜಗದ್ಗುರು ರೇಣುಕಾಚಾರ್ಯಭಗವತ್ಪಾದರಿಂದ ಸ್ಥಾಪಿಸಲಿಲ್ಲವೆ? ನಲ, ನೀಲ, ಜಾಂಬುವಂತ, ಸುಗ್ರೀವ, ವಾಲಿ ಇವು ಮೊದಲಾದ ಕಪಿಪುಂಗವರೂ ಪರಮ ಶಿವಭಕ್ತರೆಂಬುವದಕ್ಕೆ ಹೊಸಪೇಟೆ ಜಿಲ್ಲೆಯಲ್ಲಿರುವ ಜಾಂಬುವಂತನಿಂದ ಸ್ಥಾಪಿತವಾದ 'ಜಂಬುಲಿಂಗವೇ' ಬಲವಾದ ಸಾಕ್ಷಿಯಲ್ಲವೇ? ಅಲ್ಲದೆ ಹಂಪೆಯಲ್ಲಿ ಯಾವಾಗಲೂ ನಲ, ಸುಗ್ರೀವಾದಿಗಳು ಶ್ರೀ ವಿರೂಪಾಕ್ಷೇಶ್ವರಮೂರ್ತಿಯನ್ನು ಪೂಜಿಸುತ್ತಿದ್ದರೆಂಬುದೂ ವಿಶೇಷ ಸಾಕ್ಷಿಯು.

ಅಷ್ಟೇಕೆ? ಹಂಪೆಯಲ್ಲಿ ಎತ್ತನೋಡಿದತ್ತ ಶಿವಲಿಂಗಗಳೇ ಕಣ್ಣಿಗೆ ಕಾಣುವವಲ್ಲದೆ ಎಷ್ಟೋ ಮುನಿಪುಂಗವರು ಆಶ್ರಮಗಳನ್ನು ಮಾಡಿಕೊಂಡು ಅಲ್ಲಿದ್ದ ವಿರೂಪಾಕ್ಷೇಶ್ವರನನ್ನು ಭಜಿಸಿ ಮುಕ್ತರಾದರೆಂಬುದೂ ಈಗಲೂ ಆ ಸ್ಥಾನವನ್ನು ನೋಡಿದವರಿಗೆ ಭಕ್ತಿಯನ್ನು ಹುಟ್ಟಿಸದೆ ಬಿಡುವದಿಲ್ಲ. ಇಂಥ ಶಿವಕ್ಷೇತ್ರದಲಿ ವಿಠಲರಾಯನ ಮೂರ್ತಿಯೊಂದನ್ನು ಸ್ಥಾಪಿಸಬೇಕೆಂದು ಪಂಢರಪುರದ ಕಡೆಯಿಂದ ಬಂದ ಓರ್ವ ವೈಷ್ಣವ ಶ್ರೀಮಂತನು ಪ್ರಯತ್ನ ಮಾಡುವದನ್ನರಿತು ಶ್ರೀ ವಿರೂಪಾಕ್ಷೇಶ್ವರನು ಯೋಗವೇಷದಿಂದ ಅವನ ಸ್ವಪ್ನದಲ್ಲಿ—ಇದು ಶಿವಕ್ಷೇತ್ರವು. ಇಲ್ಲಿ ಇತರ ದೇವತೆಗಳು ಪೂಜ್ಯರಾಗರು. ಆದುದರಿಂದ ನೀನು ಇದನ್ನು ಗೋಜಿಗೆ ಹೋಗಬೇಡವೆಂದು ನುಡಿದಂತಾದರೂ, ದುರಭಿಮಾನಿ ದುರ್ವಿದಗ್ಧನಾದ ಅವನು ಮತ್ತಷ್ಟು ಹೆಚ್ಚು ಕಾರ್ಯದಲ್ಲಿ ತೊಡಗಿ ವಿಠಲರಾಯನಮೂರ್ತಿಯನ್ನು ಸ್ಥಾಪಿಸುವದಕ್ಕೆ ವಿರೂಪಾಕ್ಷೇಶ್ವರ ಮಂದಿರಕ್ಕಿಂತಲೂ ಭವ್ಯವಾದ ಮಂದಿರವನ್ನು ನಿರ್ಮಿಸಬೇಕೆಂದು ಅದೇ ಪ್ರಕಾರ ಅತ್ಯಂತ ರಮಣೀಯವಾದ ಆಲಯವನ್ನು ಸಿದ್ಧಗೊಳಿಸಿ ಮೂರ್ತಿಸ್ಥಾಪನಕ್ಕೆ ಮುಹೂರ್ತವನ್ನು ತೆಗೆಯಿಸಲು ಉತ್ತಮ ಮುಹೂರ್ತ ದೊರೆಯದೂ, ಸ್ಥಾಪಿಸಿದವನ ವಂಶನಾಶವಾಗಬೇಕೆಂದು ತೋರಿದಲು, ಪುನಃ ವಿರೂಪಾಕ್ಷೇಶ್ವರನಿಗೆ ರುದ್ರಾಭಿಷೇಕಾದಿಗಳಿಂದ ಸಂಪೂಜಿಸಿ, ನನ್ನ ಅಪರಾಧವನ್ನು ಮನ್ನಿಸಿ ಯೋಗ್ಯವಾದ ಮುಹೂರ್ತವನ್ನು ಆಜ್ಞಾಪಿಸಿದರೆ ಏಕಾಂತಭಾವದಿಂದ ಈ ಮೂರ್ತಿಯನ್ನು ಸ್ಥಾಪಿಸುವೆನು ಇಲ್ಲವಾದರೆ ಇಲ್ಲವೆಂದು ಬಿನ್ನೈಸಿ ಮಲಗಲು ಸ್ವಪ್ನದಲ್ಲಿ—ನಿನ್ನ ಇಚ್ಛಾನುಸಾರವಾಗಿ ಮುಹೂರ್ತವನ್ನು ಹೇಳುವೆನು. [illegible] ಮೂರ್ತಿಯನ್ನು ೬ ಘಂಟೆಯೊಳಗಾಗಿ ಇಲ್ಲಿಗೆ ತಂದು ಸ್ಥಾಪಿಸಬೇಕು. ೬ ಘಂಟೆಯಾದ ಮೇಲೆ ಸ್ಥಾಪಿಸಿದರೆ ನಿನ್ನ ವಂಶವು ಛೇದವಾದೀತೆಂದು ಆಜ್ಞಾಪಿಸಿದನಂತೆ. ಅದೇ ಪ್ರಕಾರ ಅವನು ಜಾತ್ರೆಯಲ್ಲಿರುವ ವೈಷ್ಣವರನ್ನೆಲ್ಲ ನೆರೆಯಿಸಿ ಪಂಢರಪುರದಿಂದ ಹಂಪೆಯ ಪರ್ಯಂತ ನಾಲ್ಕು ನಾಲ್ಕು ಹೆಜ್ಜೆಗೊಬ್ಬರಂತೆ ನಿಲ್ಲಿಸಿ ಪ್ರಾತಃಕಾಲ ೬ ಘಂಟೆಗೆ ಸರಿಯಾಗಿ ಪಂಢರಪುರದಿಂದ ಮೂರ್ತಿಯನ್ನೆತ್ತಿ ಒಬ್ಬರಿಗೊಬ್ಬರು ಕೊಡುತ್ತಾ ಕೊಡುತ್ತಾ ತುಂಗಭದ್ರಾನದಿ ಪಟ್ಟಣದ ಮೇಲೆ ಬರಲು ೬ ತಾಸು ಆಗಿತ್ತು. ನದಿ ಆಚೆಗೆ ಗುಡಿಯಿದೆ ಇನ್ನೇನೂ ಅಂಜಿಕೆಯಿಲ್ಲ. ನಾವು [illegible]ಕೊಂಡ ಕಾರ್ಯವು ನೆರವೇರಿತು ಎಂದು ಆ ಜನರು ಗರ್ವಿಷ್ಠರಾಗಿ ಮಾತಾಡತೊಡಗಿದರು. 'ಈಶ್ವರೇಚ್ಛಾ ಗರೀಯಸೀ' ಎಂಬಂತೆ ಆ ಮೂರ್ತಿಯನ್ನು ನದೀ ಮಧ್ಯಭಾಗಕ್ಕೆ ತರುವದರೊಳಗಾಗಿ ೬ ಘಂಟೆಯಾಯಿತು. ಆಗ್ಗೆ ಎಲ್ಲರೂ ಹತಾಶರಾಗಿ ಬಿಟ್ಟು ಆ ಮೂರ್ತಿಯನ್ನು ಆ ನದಿಯಲ್ಲಿಯೇ ಬಿಟ್ಟರಂತೆ! ಈಗಲೂ ಆ ವಿಠಲರಾಯನ ಗುಡಿಯು ದೇವರಿಲ್ಲದೆ ಇರುತ್ತದೆ. ಶಿವನ ಮಹಿಮೆಯು ಮುಂದೆ ಇತರರ ಮಹಿಮೆ ನಡೆದೀತೇ? ಕರ್ತುಮಕರ್ತುಮನ್ಯಥಾ ಕರ್ತುಂ ಸಮರ್ಥನಾದ ಈಶ್ವರನನ್ನು ಬಿಟ್ಟು ಇತರರ ಬೆನ್ನುಹತ್ತುವದು ಯೋಗ್ಯವೇ?

(ಸರಿಇ)

ಶ್ರೀ [illegible]

ಆಯುರ್ವೇದಪರಿಚಯ.

ಆರೋಗ್ಯಮಾರ್ಗ.

ಲೇಖಕ— ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ ಬೆಂಗಳೂರು

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ಶ್ರೀಕ್ಷೇತ್ರಕಾಶಿ

ಆಹಾರ ನಿಯಮಗಳು.

ಹಾಲುಗಳಲ್ಲಿ ಆಕಳಿನ ಹಾಲು ಪಥ್ಯವಾಗಿರುವುದು. ಅದರಲ್ಲಿಯೂ ಕರಿಯ ಆಕಳಿನ ಹಾಲು ವಿಶೇಷ ಪಥ್ಯವಾಗಿದ್ದು ವಾಯುವನ್ನು ಶಾಂತಗೊಳಿಸುವುದರಲ್ಲಿ ಅದ್ವಿತೀಯವಾಗಿರುತ್ತದೆ. ಬಿಳಿಯ ಆಕಳಿನ ಹಾಲು ಸ್ವಲ್ಪ ಕಫವನ್ನುಂಟುಮಾಡುವುದಲ್ಲದೆ ಗುರುವಾಗಿರುತ್ತದೆ. ಕೆಂಪು ಆಕಳಿನ ಮತ್ತು ಚಿತ್ರವರ್ಣದ ಆಕಳಿನ ಹಾಲು ಕರಿಯ ಆಕಳಿನ ಹಾಲಿಗಿಂತಲೂ ಗುಣದಲ್ಲಿ ಸ್ವಲ್ಪ ಕಡಿಮೆಯಾಗಿರುತ್ತದೆ.

ಎಮ್ಮೆಯ ಹಾಲು ಆಕಳಿನ ಹಾಲಿಗಿಂತಲೂ ಮಧುರವಾಗಿಯೂ, ಜಠರಾಗ್ನಿಯನ್ನು ಮಂದಗೊಳಿಸುವುದಾಗಿಯೂ, ಅತ್ಯಂತ ನಿದ್ರೆಯನ್ನುಂಟುಮಾಡುವುದಾಗಿಯೂ, ವೀರ್ಯ ಮತ್ತು ಶ್ಲೇಷ್ಮವನ್ನು ಹೆಚ್ಚಿಸುವುದಾಗಿಯೂ, ಬಹಳ ಶೀತಲವಾಗಿಯೂ, ತೀಕ್ಷ್ಣಾಗ್ನಿಯುಳ್ಳವರಿಗೆ ಮಾತ್ರ ಹಿತಕರವಾಗಿಯೂ ಇರುತ್ತದೆ.

ಆಡಿನ ಹಾಲು ಬಹಳ ಹಗುರವಾಗಿರುವುದು. ಆಡುಗಳು ಕಾಡಿನಲ್ಲಿ ನಾನಾವಿಧ ಗಿಡಗಳನ್ನೂ ಅನೇಕ ವನಸ್ಪತಿಗಳನ್ನೂ, ತಿಂದು ನೀರನ್ನು ಸ್ವಲ್ಪವೇ ಕುಡಿದು ವಿಶೇಷವಾಗಿ ಸಂಚರಿಸತಕ್ಕವುಗಳಾಗಿರುವುದರಿಂದ ಅವುಗಳ ಹಾಲು ಸಕಲದೋಷಗಳನ್ನು ಹರಣಮಾಡುವ ಶಕ್ತಿಯಿಂದ ಕೂಡಿ ಪ್ರಮೇಹ, ಕೆಮ್ಮು, ಗಂಟಲಿನ ರೋಗ ಇವುಗಳನ್ನು ನಾಶಮಾಡುವುದಲ್ಲದೆ ಲಘುವಾಗಿರುವ ಪ್ರಭಾವದಿಂದ ಬಳಲುತ್ತಿರುವವರಿಗೆ ಅತ್ಯಂತ ಹಿತಕರವಾಗಿರುತ್ತದೆ.

ಹಗಲೇ ಹಿಂಡಿದ ಆಕಳಿನ ನೊರೆಹಾಲು (ಧಾರೋಷ್ಣಕ್ಷೀರ) ತ್ರಿದೋಷಗಳನ್ನು ನಿವಾರಿಸಿ ಅಗ್ನಿಯನ್ನು ದೀಪನಗೊಳಿಸಿ ಶರೀರದಲ್ಲಿ ಬಲ ಮತ್ತು ಸ್ಫೂರ್ತಿಯನ್ನುಂಟುಮಾಡುತ್ತದೆ. ಯಾವ ಹಾಲನ್ನೇ ಆಗಲಿ ಹಿಂಡಿದ ೩ ಗಂಟೆಗಳನಂತರ ಕಾಯಿಸದೆ ಕುಡಿಯುವುದರಿಂದ ತ್ರಿದೋಷಗಳು ಕೋಪಗೊಂಡು ನಾನಾವಿಧ ಉಪದ್ರವಗಳಿಗೆ ಕಾರಣವಾಗುವುವು. ಎಮ್ಮೆ ಮತ್ತು ಆಕಳಿನ ಹಸಿಯ ಹಾಲು ವ್ಯಾಯಾಮವನ್ನು ಮಾಡುವವರಿಗೂ, ಬಲಶಾಲಿಗಳಿಗೂ ಹಿತಕರವಲ್ಲದೆ ಇತರರಿಗೆ ಅಗ್ನಿಮಾಂದ್ಯಕ್ಕೆ ಕಾರಣವಾಗುತ್ತದೆ.

ಹಾಲನ್ನು ಪ್ರಾತಃಕಾಲದಲ್ಲಿ ಕುಡಿಯುವುದರಿಂದ ಬಲ ಮತ್ತು ಅಗ್ನಿ ವೃದ್ಧಿಯಾಗುತ್ತದೆ, ಮಧ್ಯಾಹ್ನದಲ್ಲಿ ಕುಡಿಯುವುದರಿಂದ ಕಫ ಪಿತ್ತಗಳು ಶಾಂತವಾಗಿ ಬಲವು ಹೆಚ್ಚಾಗುತ್ತದೆ. ರಾತ್ರಿಯಲ್ಲಿ ಮಲಗುವಾಗ ಕುಡಿಯುವುದರಿಂದ ಶರೀರದ ಕ್ಷೀಣತೆಯು ನಾಶವಾಗುತ್ತದೆ. ರಾತ್ರಿಯ ಕ್ಷೀರಪಾನವು ಬಾಲಕರಿಗೂ ವೃದ್ಧರಿಗೂ ವಿಶೇಷ ಫಲದಾಯಕವಾಗಿರುತ್ತದೆ. ಹಗಲು ಮತ್ತು ರಾತ್ರಿಯಲ್ಲಿ ಸೇವಿಸುವ ಆಹಾರದ ಉಪ್ಪು, ಖಾರ, ಹುಳಿ ಮೊದಲಾದ ರಸಗಳಿಂದ ತ್ರಿದೋಷ ಕುಪಿತವಾಗುವುದು. ಈ ಕುಪಿತವಾಗಿರುವ ತ್ರಿದೋಷವನ್ನು ಶಾಂತಿಮಾಡುವುದಕ್ಕಾಗಿಯೇ ರಾತ್ರಿಯ ಕ್ಷೀರಪಾನವು ಸರ್ವಸಾಧಾರಣವಾಗಿ ಹಿತಕರವೆಂದು ಆಯುರ್ವೇದವು ಉಪದೇಶಿಸುತ್ತದೆ. ಮಂದಾಗ್ನಿಯುಳ್ಳವರು ಕೆನೆಯನ್ನು ತೆಗೆದು ಹಾಲನ್ನು ಕುಡಿಯುವುದು ಹಿತವಾಗಿದೆ, ಬಲಶಾಲಿಗಳೂ, ತೀಕ್ಷ್ಣಾಗ್ನಿಯುಳ್ಳವರೂ ಕೆನೆಸಹಿತವಾಗಿಯೇ ಕುಡಿಯಬಹುದು. ಹುಳಿ ಒಡಲಾಯಿಸಿರುವ, ಒಡೆದುಹೋಗಿರುವ, ಹುಳಿ ಬಿದ್ದಿರುವ ಹಾಲನ್ನು ಕುಡಿಯುವುದರಿಂದ ದೇಹವು ಕ್ಷೀಣವಾಗುವುದಲ್ಲದೆ ಅನೇಕ ರೋಗಗಳುಂಟಾಗುವುವು.

ಮಕ್ಕಳಿಗೆ ತಾಯಿಯ ಹಾಲು ಸಾಲದಿದ್ದರೆ ಆಡಿನ ಹಾಲನ್ನು ತಂದು ಸಮಭಾಗದ ನೀರನ್ನು ಕೂಡಿಸಿ [illegible] ಕಾಯಿಸಿ ಆರಿದನಂತರ ಸ್ವಲ್ಪ ಕಲ್ಲುಸಕ್ಕರೆಯನ್ನು ಕೂಡಿಸಿ ಕುಡಿಸಬಹುದು. ಆಡಿನ ಹಾಲಿನ ಅಭಾವದಲ್ಲಿ ಆಕಳಿನ ಶುದ್ಧವಾದ ಹಾಲನ್ನು ಮೇಲೆ ಬರೆದಿರುವಂತೆ ಸಂಸ್ಕರಿಸಿ ಕುಡಿಸಬಹುದು. ಈಗಿನ ನವೀನ ಸಭ್ಯತೆಯ ಕಾಲದಲ್ಲಿ ವಿದೇಶಗಳಿಂದ ಡಬ್ಬಿಯಲ್ಲಿ ಬರುತ್ತಿರುವ ಗಟ್ಟಿಯಾದ ಕೃತ್ರಿಮಕ್ಷೀರಕ್ಕೆ ಮರುಳಾಗಿರುವ ನಮ್ಮ ಭಾರತೀಯರು ದೇಹಾಂತರದ ತಮ್ಮ ಮಕ್ಕಳ ಆರೋಗ್ಯವನ್ನು ಹಾಳುಮಾಡಿ ತಮ್ಮ ಸಂತತಿಯ ಜೀವನವನ್ನು ದುರವಸ್ಥೆಗೊಳಿಸುತ್ತಿರುವುದು ಶೋಚನೀಯವಾಗಿರುವುದೆಂದು ಎಷ್ಟು ಹೇಳಿದರೂ ಸಾಲದು.

ಹಾಲಿನ ಪವಿತ್ರತೆಯ ಕಡೆಗೆ ವಿಶೇಷವಾಗಿ ಲಕ್ಷ್ಯವಿಡತಕ್ಕದ್ದು ಉಚಿತವಾಗಿದೆ. ಸಾಮಾನ್ಯವಾಗಿ ಎಲ್ಲೆಡೆಯಲ್ಲಿಯೂ ಪರಿಶುದ್ಧವಾದ ಹಾಲು ದೊರೆಯುವುದು ಕಷ್ಟವಾಗಿದೆ. ವ್ಯಾಪಾರಿಗಳು ಧನದ ಲೋಭಗ್ರಸ್ತರಾಗಿ ಜನಸಾಮಾನ್ಯದ ಅಮೂಲ್ಯಜೀವನದ ಮಹತ್ವವರಿಯದೆ ಅಪ್ರಕೃತವಾಗಿರುವ ಹಾಲಿನಲ್ಲಿ ನಾನಾವಿಧ ವಸ್ತುಗಳನ್ನು ಕೂಡಿಸುವುದು ಸರ್ವತ್ರ ವಾಡಿಕೆಯಾಗಿರುವುದಷ್ಟೆ!

ಈ ನಿರ್ದಯಾಚಾರದಿಂದ ಬಜಾರದಲ್ಲಿ ಮಾರುವ ಹಾಲು ದೋಷಯುಕ್ತವಾಗಿ ರೋಗಗಳ ಭಂಡಾರವಾಗಿರುತ್ತದೆ. ದೊಡ್ಡ ದೊಡ್ಡ ನಗರಗಳಲ್ಲಂತೂ ಶುದ್ಧವಾದ ಹಾಲು ಸಿಕ್ಕುವುದು ಸ್ವಪ್ನಪ್ರಾಯವಾಗಿರುತ್ತದೆ. ಯಾವ ಪುಣ್ಯಾತ್ಮರ ಮನೆಯಲ್ಲಿ ಪವಿತ್ರ ಶರೀರವುಳ್ಳ ಆಕಳುಗಳಿರುವವೋ ಅವರಿಗೆ ಮಾತ್ರ ಪರಿಶುದ್ಧವಾದ ಹಾಲು ದೊರೆಯಬಹುದು. ಉಳಿದವರಿಗೆ ಬಜಾರದ ಹಾಲೇ ಗತಿಯಾಗಿರುವುದು. ಇಂತಹ ನಿಸ್ಸಾರ ಮತ್ತು ದೋಷಯುಕ್ತವಾಗಿರುವ ಹಾಲನ್ನು ಕುಡಿದು ನಾನಾರೋಗಗಳಿಗೆ ನಿಮಂತ್ರಣವನ್ನೀಯುವುದಕ್ಕಿಂತ ಸ್ವಚ್ಛವಾದ ನೀರನ್ನೇ ಕುಡಿದು ತೃಪ್ತರಾಗುವುದು ಉತ್ತಮವಾಗಿದೆ.

ಹಾಲಿನಿಂದ ರೋಗನಾಶ— ಆಕಳಿನ ಹಾಲಿನಲ್ಲಿ ವಿಷಮ ಭಾಗವು ತುಪ್ಪ ಮತ್ತು ಜೇನು ತುಪ್ಪವನ್ನು ಕೂಡಿಸಿ ಅಥವಾ ಸಂಯಾವ. ಕಾಯಿಸಿದ ಹಾಲಿನಲ್ಲಿ ರುಚಿಗೆ ತಕ್ಕಷ್ಟು ಸಕ್ಕರೆಯನ್ನು ಕೂಡಿಸಿ ಕುಡಿಯುವುದರಿಂದ ಶರೀರದಲ್ಲಿ [illegible] ಬಲವುಂಟಾಗುತ್ತದೆ.

ಕಣ್ಣುಗಳು ಉರಿಯುತ್ತಿದ್ದರೆ ನಾಲ್ಕಾರು ಮಡಿಕೆಗಳನ್ನು ಮಾಡಿದ ಶುದ್ಧವಾದ ಬಿಳಿಯ ಬಟ್ಟೆಯನ್ನು ಆಕಳಿನ ಶುದ್ಧವಾದ ಹಾಲಿನಲ್ಲಿ ತೋಯಿಸಿ ಕಣ್ಣುಗಳ ಮೇಲಿಟ್ಟು ಅದರ ಮೇಲೆ ಸ್ಫಟಿಕದ ಪುಡಿಯನ್ನು ಉದುರಿಸಬೇಕು. ಈ ಉಪಚಾರದಿಂದ ನಾಲ್ಕಾರು ದಿನಗಳೊಳಗೆ ಉರಿಯು ಶಾಂತವಾಗುತ್ತದೆ.

ಆಕಳ ಹಾಲನ್ನು ಕಾಯಿಸಿ ಬಿಸಿಬಿಸಿಯಾಗಿರುವುದನ್ನೇ ಕುಡಿಯುವುದರಿಂದ ಬಿಕ್ಕಳಿಕೆಯು ಶಾಂತವಾಗುವುದು.

ಆಕಳಿನ ಹಾಲನ್ನು ಕಾಯಿಸಿ ಸ್ವಲ್ಪ ಬಿಸಿಯಾಗಿರುವಾಗಲೇ ಕಲ್ಲುಸಕ್ಕರೆ ಮತ್ತು ಮೆಣಸಿನಪುಡಿಯನ್ನು ಕೂಡಿಸಿ ಕುಡಿಯುವುದರಿಂದ ನೆಗಡಿಯು ಶಾಂತವಾಗುವದು.

ಆಕಳಿನ ಹಾಲಿನಲ್ಲಿ ಬಾದಾಮಿಯನ್ನರೆದು ಕೂಡಿಸಿ ರುಚಿಗೆ ತಕ್ಕಷ್ಟು ಕಲ್ಲುಸಕ್ಕರೆಯನ್ನು ಹಾಕಿ ಚೆನ್ನಾಗಿ ಕಾಯಿಸಿ ಕುಡಿಯುವುದರಿಂದ ಅರ್ಧತಲೆಯ ನೋವು ೩-೪ ದಿನಗಳಲ್ಲಿ ಶಾಂತವಾಗುವದು.

ರಕ್ತದ ಉಷ್ಣತೆಯಿಂದ ತಲೆಯಲ್ಲಿ ನೋವುಂಟಾದಾಗ ಆಕಳಿನ ಹಾಲಿನಲ್ಲಿ ಅಗಲವಾಗಿಯೂ, ದಪ್ಪನಾಗಿಯೂ ಮಾಡಿದ ಅರಿವೆಯನ್ನು ತೋಯಿಸಿ ತಲೆಯ ಮೇಲಿಡುವುದರಿಂದ ವಿಶೇಷ ಲಾಭವುಂಟಾಗುವುದು. ಅದರ ಸಹಾಯಕ್ಕಾಗಿ ತಲೆಯಮೇಲಿನ ಪಟ್ಟಿಯನ್ನು ತೆಗೆದುಹಾಕಿ ತಲೆಯನ್ನು ನೀರಿನಿಂದ ತೊಳೆದು ಆಕಳಿನ ಬೆಣ್ಣೆಯನ್ನು ತಲೆಗೆ ಹಚ್ಚಿ ತಿಕ್ಕುವುದನ್ನು ಮಾತ್ರ ಮರೆಯಬಾರದು.

ಧತ್ತೂರದ ವಿಷವು ಶರೀರದಲ್ಲಿ ವ್ಯಾಪಿಸಿ ತೊಂದರೆಯುಂಟಾದಾಗ ಆಕಳಿನ ಹಾಲಿನಲ್ಲಿ ಸ್ವಲ್ಪ ಸಕ್ಕರೆಯನ್ನು ಕೂಡಿಸಿ ಕುಡಿಯುವುದರಿಂದ ವಿಷದ ವೇಗವು ಕಡಿಮೆಯಾಗುವುದು.

ಅಶುದ್ಧವಾದ ಗಂಧಕದ ಸೇವನೆಯಿಂದ ಉಪದ್ರವವುಂಟಾದರೆ ಆಕಳಹಾಲಿನಲ್ಲಿ ತುಪ್ಪವನ್ನು ಕೂಡಿಸಿ ಕುಡಿಸುವುದರಿಂದ ಗಂಧಕದ ವಿಷವು ಇಳಿಯುವುದು.

ಆಕಳಹಾಲಿನಲ್ಲಿ ಒಣಗಿದ ಶುಂಠಿಯನ್ನು ಅರೆದು ಹಣೆಗೆ ದಪ್ಪವಾಗಿ ಲೇಪಿಸುವುದರಿಂದ ಪಿತ್ತವಿಕಾರದ ತಲೆನೋವಿನ ಬಾಧೆಯು ಕಡಿಮೆಯಾಗುವುದು.

ನೂತನಜ್ವರ ವ್ರಣ, ಕುಷ್ಠ, ಕಫ, ಪ್ರಮೇಹ, ಭಗಂದರ, ಅತಿಸಾರ, ಮಹಾಮಾರಿ, (ಕಾಲರಾ) ಗ್ರಹಣಿ, ಅಜೀರ್ಣ, ರಕ್ತಭೇದಿ, ಗುಲ್ಮರೋಗ ಇವುಗಳಿಂದ ಪೀಡಿತರಾದವರಿಗೆ ಹಾಲು ಹಿತಕರವಲ್ಲ.

ವ್ಯಾಧಿಯಿಂದೆದ್ದನಂತರ ಅಶಕ್ತಿಯುಳ್ಳವರಿಗೂ, ಗರ್ಭಿಣಿಸ್ತ್ರೀಯರಿಗೂ, ಒಣಗಿದ ಶರೀರವುಳ್ಳವರಿಗೂ ವಿಶೇಷವಾಗಿ ಶಾರೀರಕ ಪರಿಶ್ರಮವನ್ನು ಮಾಡುವವರಿಗೂ, ಬಾಲಕರಿಗೂ, ವೃದ್ಧರಿಗೂ, ಅಫೀಮಿನ-ದುರಭ್ಯಾಸವುಳ್ಳವರಿಗೂ ಹಾಲು ಅತ್ಯಂತ ಲಾಭದಾಯಕವಾಗಿರುತ್ತದೆ.

ಹಾಲನ್ನು ತಾಮ್ರದ ಪಾತ್ರೆಯಲ್ಲಿ ಕುಡಿಯುವುದರಿಂದ ವಾತವೂ, ಬಂಗಾರದ ಪಾತ್ರೆಯಲ್ಲಿ ಕುಡಿಯುವುದರಿಂದ ಪಿತ್ತವೂ ಬೆಳ್ಳಿಯ ಪಾತ್ರೆಯಲ್ಲಿ ಕುಡಿಯುವುದರಿಂದ ಶ್ಲೇಷ್ಮವೂ, ನಾಶವಾಗುತ್ತದೆ. ಕಂಚಿನಪಾತ್ರೆಯಲ್ಲಿ ಕುಡಿದರೆ ತ್ರಿದೋಷಗಳು ನಾಶವಾಗುವುವು ಮತ್ತು ರಕ್ತವೃದ್ಧಿಯುಂಟಾಗುವುದು. ಮಣ್ಣಿನ ಪಾತ್ರೆಯಲ್ಲಿ ಕುಡಿದರೆ ವೀರ್ಯವೃದ್ಧಿಯುಂಟಾಗುವುದು, ಮತ್ತು ಪಿತ್ತ ಕಫಗಳು ಶಾಂತವಾಗುವುವು. ಗಂಧಕದ ಪಾತ್ರೆಯಲ್ಲಿ ಕುಡಿಯುವುದರಿಂದ ಕೆಮ್ಮು-ದಮ್ಮು ಕ್ಷಯ ಇವು ನಾಶವಾಗುವುವು, ಅಯಸ್ಕಾಂತಲೋಹದ ಪಾತ್ರೆಯಲ್ಲಿ ಕುಡಿಯುವುದರಿಂದ ತ್ರಿದೋಷಗಳು ಶಾಂತವಾಗುವುವಲ್ಲದೆ ಶುದ್ಧರಕ್ತವು ವೃದ್ಧಿಗೊಳ್ಳುವುದು. ಹಾಲಿನ ವಿಷಯವಾಗಿ ಬರೆಯತಕ್ಕದ್ದು ಅನಂತವಾಗಿದೆ. ವಿಸ್ತಾರಭಯದಿಂದಿಲ್ಲಿ ನಾಲ್ಕಾರು ಮಾತುಗಳನ್ನು ಮಾತ್ರ ವಾಚಕರ ಮನೋರಂಜನಕ್ಕಾಗಿ ಬರೆದಿರುವುದಾಗಿರುತ್ತದೆ.

(ಸಶೇಷ)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಜಗದ್ಗುರು ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳವರ ವಿಜಯಯಾತ್ರೆ.

ಶ್ರೀ ಮಹಾಗುರುಗಳವರು ಚಾಮರಾಜನಗರದ ಭಕ್ತರ ಭಕ್ತಿಯಲ್ಲಿ ತಪೋನುಷ್ಠಾನವೈಭವದಿಂದಿರಲು ಗುರುಭಕ್ತಿಶಿರೋಮಣಿಗಳಾದ ಶ್ರೀಮಾನ್ ವೈಸ್‌ಪ್ರೆಸಿಡೆಂಟ್ ಸಂಗನಬಸಪ್ಪನವರು ಶ್ರೀಮಾನ್ ಚನ್ನಬಸಪ್ಪನವರು ಶ್ರೀಮಾನ್ ಸರಾಫ್ ಅಂಗಡಿ ಬಸವಣ್ಣನವರು ಹೆಚ್ ಮಲ್ಲಣ್ಣನವರು ಶ್ರೀ ಪೂಜ್ಯ ಭಗವತ್ಪಾದರನ್ನು ಮಹೋತ್ಸವದಿಂದ ತಮ್ಮ ತಮ್ಮ ಮನೆಗಳಿಗೆ ದಯಮಾಡಿಸಿಕೊಂಡು ಹೋಗಿ ಪೂಜಿಸಿ ತಮ್ಮ ಜನ್ಮದಲ್ಲಿ ಒದಗಿದ ಮಹಾಚಾರ್ಯ ಸಂದರ್ಶನದಿಂದುಂಟಾದ ಪರಮಾನಂದದಿಂದ ಭಕ್ತಿಪೂರ್ವ ಸೇವೆಯನ್ನು ಮಾಡಿ ಕೃತಾರ್ಥರಾದರು. ಇದೇ ಕಾಲದಲ್ಲಿ ಮಹತ್ಪುರಗ್ರಾಮದ ಭಕ್ತರು ಜನ್ಮಸಾಫಲ್ಯಾಪೇಕ್ಷೆಯಿಂದ ಮಹಾಗುರುಗಳವರನ್ನು ಸಕಲ ಬಿರುದಾವಳಿ ಸಮೇತ ಚತುರಂಗಬಲದೊಡನೆ ದಯಮಾಡಿಸಿಕೊಂಡು ಹೋಗಿ ಆಂದೋಲಿಕೋತ್ಸವವನ್ನು ಮಾಡಿ ತಮ್ಮ ಇಷ್ಟದಂತೆ ಪಾದಪೂಜೆಯನ್ನು ನೆರವೇರಿಸಿ ಭಕ್ತಿಪೂರ್ವ ಸೇವೆಯನ್ನು ಮಾಡಿ ಕೃತಾರ್ಥರಾದರು. ಈ ಮಹತ್ಪುರವೆಂಬ ಗ್ರಾಮವು ಚಿಕ್ಕದಾಗಿದ್ದರೂ ಈ ಗ್ರಾಮದ ಭಕ್ತರಲ್ಲಿರುವ ಗುರುಭಕ್ತಿಪ್ರಭಾವ [illegible] ದೇಶದಿಂದನ ವಿರಕ್ತ ಮಹಂತರ ಶಿಷ್ಯರುಗಳು ವರ್ಣನೆಯುವಾಗಿರುವರು ಸಂತೋಷಾಸ್ಪದವೇ ಸರಿ. ಈ ಭಾಗದಲ್ಲಿ ಮೂಲ ಪಂಚಾಚಾರ್ಯ ಸಂಚಾರ ಸಮುಪದೇಶವಿಲ್ಲ ಭಾವದಿಂದ ಸ್ವಮತ ತತ್ವ ವಿಚಾರದಲ್ಲಿ ನೀಚ ಶೈವಾಚಾರಿಗಳ ಕುತಂತ್ರ ಕುಯುಕ್ತಿಗಳೆಂಬ ಕರಾಳ ತೆರೆಗಳ ಸಮುದ್ರದಲ್ಲಿ ವೇದಾಗಮವಿಹಿತ ಗುರುಭಕ್ತಿಕಲ್ಪಲತೆಯು ಮುಸ್ಸಿನ್ನು ಬವಾಗಿ ಗಣನೆಗೆ ಬಾರದಂತಾಗಿರಲು ಶ್ರೀಮದ್ಧರ್ಮವರ್ತಕ ರಾಜರ್ಷಿ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜಒಡೆಯರ್ ಬಹದ್ದೂರವರ ಸ್ವರ್ಣಸಿಂಹಾಸನ ಶೋಭಿತ ಗುರುಪೀಠವೆನು ಮಹಾಮಹಿಮಾನ್ವಿತ ಶ್ರೀಮದ್ರಂಭಾಪುರೀ ವೀರಪೀಠಾಧೀಶ ಸಂಚಾರದ ಸನ್ನಿವೇಶ [illegible] ಪ್ರಭಾವದಿಂದ ಗುರುಭಕ್ತಿಕಲ್ಪಲತೆಯು ಪಲ್ಲವಿತವಾಗಿ ರಾರಾಜಿಸುತ್ತಲು ಆಚಾರ್ಯಭಕ್ತ ಸಂತತಿಯು [illegible] ಕುತಂತ್ರ ಕುಯುಕ್ತಿ ಸರುಳಿಗಳನ್ನು [illegible] ಬೇರುಸಹಿತ ಕಿತ್ತು ಬಿಸುಟುವ ಅವಕಾಶವನ್ನು

(ಮುಂದಿನ ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೪ನೇ ಫೆಬ್ರವರಿ ತಾ|| ೧೧ನೇ ಸೋಮವಾರ

ಲಿಂಗಧಾರಣವು ಶ್ರುತಿಸಿದ್ಧವಾದುದು.

ಕಳೆದವಾರದಲ್ಲಿ ಹೇಳಿದಂತೆ 'ನಿಧನಪತಯೇ ನಮಃ ಪಾಣಿಮಂತ್ರಂ ಪವಿತ್ರಂ' ಎಂಬ ಶ್ರುತಿಯ ಅತ್ಯಂತ ವಿಚಾರದಿಂದ ಶರೀರದಲ್ಲಿ ಇಷ್ಟಲಿಂಗಧಾರಣವು ಮಾಡಲ್ಪಡಬೇಕೆಂದು ಸಿದ್ಧವಾಯಿತು. ಈ ಶಿವಲಿಂಗವನ್ನು ನಿಯಮದಿಂದ ಯಾವಾಗಲೂ ಧರಿಸಲ್ಪಡಬೇಕಾಗಿರುವುದರಿಂದ ಈ ಲಿಂಗಕ್ಕೆ ಇಷ್ಟಲಿಂಗವೆಂಬ ಹೆಸರು ಬಂದಿರುತ್ತದೆ

ಪವಿತ್ರಕರಣಾತ್ಪುಂಸಾಂ ಪವಿತ್ರಮಿತಿ ಕಥ್ಯತೇ |
ಅಶಸ್ತವೇಲೇಷು ಕಾಲೇಷು ಧಾರಯೇಲ್ಲಿಂಗಮುತ್ತಮಂ ||
ಗಚ್ಛಂಸ್ತಿಷ್ಠನ್ ಸ್ವಪನ್ ಜಾಗ್ರನ್ನುನ್ಮಿಷನ್ನಿಮಿಷನ್ನಪಿ |
ಶುಚಿರ್ವಾಪ್ಯಶುಚಿರ್ವಾಪಿ ಲಿಂಗಂ ಸರ್ವತ್ರ ಧಾರಯೇತ್ ||
ಅರ್ಚಯನ್ ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ ||

ಎಂದು ಶ್ರೀ ವೇದವ್ಯಾಸರು ಲಿಂಗಪುರಾಣದಲ್ಲಿ ಒಂದು ನಿಮಿಷವೂ ಸಹ ಅಗಲದಂತೆ ಈ ಇಷ್ಟಲಿಂಗವನ್ನು ಧರಿಸಿರಲೇಬೇಕೆಂತಲೂ, ಶರೀರವನ್ನು ಯಾವಾಗಲೂ ಪವಿತ್ರಗೊಳಿಸುವುದರಿಂದ ಈ ಇಷ್ಟಲಿಂಗವು ಪವಿತ್ರಶಬ್ದವಾಚ್ಯವಾಗುವುದೆಂತಲೂ, ಶುಚ್ಯಶುಚಿಸಾಧಾರಣ ಕಾಲಗಳಲ್ಲಿಯೂ ಕೂಡ ಇಷ್ಟಲಿಂಗವಿಯೋಗವಾಗಬಾರದೆಂತಲೂ ಶಿವಲಿಂಗವನ್ನು ಹಸ್ತಪೀಠದಲ್ಲಿಟ್ಟು ಗಂಧಪುಷ್ಪಾದಿಗಳಿಂದ ಅರ್ಚಿಸಬೇಕೆಂತಲೂ ಇದೇ ಪ್ರತ್ಯರ್ಥವನ್ನು ತೆಗೆದುಕೊಂಡು ಇಷ್ಟಲಿಂಗದ ಮಹತ್ವವನ್ನು ವಿಶೇಷವಾಗಿ ಕೊಂಡಾಡಿರುವದರಿಂದ ಲಿಂಗಧಾರಣಕ್ಕೆ ನಿತ್ಯತ್ವವು ಸಿದ್ಧವಾಗುವುದು. ಆದರೆ "ಅಕರಣೇ ಪ್ರತ್ಯವಾಯಃ ನಿತ್ಯತ್ವಂ" ಎಂದು ವಿಧಿವಿಹಿತವಾದ ಕರ್ಮವನ್ನು ಮಾಡದಿದ್ದರೆ ಮಹಾದೋಷವು ಸಂಭವಿಸುವುದೆಂದು ಶಾಸ್ತ್ರಕಾರರು ನಿತ್ಯತ್ವದ ಸ್ವರೂಪವನ್ನು ಪರಿಷ್ಕಾರಮಾಡಿರುವುದನ್ನು ಪರಿಶೀಲಿಸಿದ್ದಾದರೆ ಪೂರ್ವಮೀಮಾಂಸಾದ್ಯನೇಕೋದಾಹರಣಗಳಿಂದಲೂ ಪ್ರಮಾಣಯುಕ್ತಿಗಳಿಂದಲೂ ಲಿಂಗಧಾರಣವಿಧಿಯು ಸಿದ್ಧವಾದರೂ ಕಾಮ್ಯವಿಧಿಯೆನಿಸಿಕೊಳ್ಳುವುದಲ್ಲದೆ ನಿತ್ಯವಿಧಿಯೆನಿಸಿಕೊಳ್ಳುವುದಿಲ್ಲವೆಂಬ ಆಕ್ಷೇಪವು ಬರುತ್ತದೆ. ಹೇಗೆಂದರೆ—ಲಿಂಗಧಾರಣಾತ್ಮಕವಾದ ವೀರಶೈವಸಿದ್ಧಾಂತವನ್ನು ಸ್ಥಾಪಿಸಿದ ರೇಣುಕ ಭಗವತ್ಪಾದರು ಮುನಿಚಕ್ರವರ್ತಿಯಾದ ಅಗಸ್ತ್ಯಮಹರ್ಷಿಗೆ ವೀರಶೈವಸಿದ್ಧಾಂತವನ್ನುಪದೇಶಿಸುವ ಸಂದರ್ಭದಲ್ಲಿ—

ಲಿಂಗಧಾರಣಮಾಖ್ಯಾತಂ ದ್ವಿಧಾ ಸರ್ವಾರ್ಥಸಾಧಕೈಃ |
ಬಾಹ್ಯಮಾಭ್ಯಂತರಂ ಚೇತಿ ಮುನಿಭಿರ್ಮೋಕ್ಷಕಾಂಕ್ಷಿಭಿಃ ||
ಚಿದ್ರೂಪಂ ಪರಮಂ ಲಿಂಗಂ ಶಾಂಕರಂ ಸರ್ವಕಾರಣಂ |
ಯತ್ತಸ್ಯ ಧಾರಣಂ ಚಿತ್ತೇ ತದಾಂತರಮುದಾಹೃತಂ ||
ಮೂಲಾಧಾರೇ ಚ ಹೃದಯೇ ಭ್ರೂಮಧ್ಯೇ ಸರ್ವದೇಹಿನಾಂ |
ಜ್ಯೋತಿರ್ಲಿಂಗಂ ಸದಾ ಭಾತಿ ಯದ್ಬ್ರಹ್ಮೇತ್ಯಾಹುರಾಗಮಾಃ ||
ಅಪರಿಚ್ಛಿನ್ನಮವ್ಯಕ್ತಂ ಲಿಂಗಂ ಬ್ರಹ್ಮ ಸನಾತನಂ |
ಉಪಾಸನಾರ್ಥಮಂತಃಸ್ಥಂ ಪರಿಚ್ಛಿನ್ನಂ ಸ್ವಮಾಯಯಾ ||
ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಂ |
ಪುನಃಪುನಸ್ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಂ ||
ನಿರುಪಾಧಿಕಮಾಖ್ಯಾತಂ ಲಿಂಗಸ್ಯಾಂತರಧಾರಣಂ |
ವಿಶಿಷ್ಟಂ ಕೋಟಿಗುಣಿತಂ ಬಾಹ್ಯಲಿಂಗಸ್ಯ ಧಾರಣಾತ್ ||
ಯೇ ಧಾರಯಂತಿ ಹೃದಯೇ ಲಿಂಗಂ ಚಿದ್ರೂಪಮೈಶ್ವರಂ |
ನ ತೇಷಾಂ ಪುನರಾವೃತ್ತಿರ್ಘೋರಸಂಸಾರಮಂಡಲೇ ||
ಅಂತರ್ಧಾರಯಿತುಂ ಲಿಂಗಮಶಕ್ತಶ್ಶಕ್ತ ಏವ ವಾ |
ಬಾಹ್ಯಂ ಚ ಧಾರಯೇಲ್ಲಿಂಗಂ ತದ್ರೂಪಮಿತಿ ನಿಶ್ಚಯಾತ್ ||

ಜಗತ್ಸಾಕ್ಷಿಯಾದ ಯಾವ ವಸ್ತುವಿನಲ್ಲಿ ಚರಾಚರಾತ್ಮಕವಾದೀ ಜಗತ್ತು ಶಕ್ತಿಸಂಕೋಚದಿಂದ ನಾಮರೂಪಕ್ರಿಯೆಗಳನ್ನು ಬಿಟ್ಟು ಸೂಕ್ಷ್ಮರೂಪದಿಂದ ಸೇರಿಕೊಳ್ಳುತ್ತದೆಯೋ, ಯಾವವಸ್ತುವಿನಿಂದಲೇ ಶಕ್ತಿವಿಕಾಸದಿಂದ ಪುನಃ ನಾಮರೂಪಕ್ರಿಯೆಗಳನ್ನು ಹೊಂದಿ ಸ್ಥೂಲರೂಪವನ್ನು ಪಡೆಯುತ್ತದೆಯೋ ಆ ವಸ್ತುವೇ ಲಿಂಗವೆನಿಸಿಕೊಳ್ಳುತ್ತದೆ. ಇಂತಹ ಲಿಂಗವು ಭಕ್ತರ ಉಪಾಸನಾಸಿದ್ಧಿಗಾಗಿ ಶಕ್ತಿಯ ವಿಲಕ್ಷಣವಾದ ಸ್ವಮಾಯೆಯಿಂದ ಪರಿಚ್ಛಿನ್ನವೆನಿಸಿ ಗುರುವಿನ ಅನುಗ್ರಹಬಲದಿಂದ ದೀಕ್ಷಿತನಾದ ಭಕ್ತನ ಶರೀರದಲ್ಲಿ ವಾಸಮಾಡಬೇಕಾಗಿರುವುದರಿಂದ ಸೃಷ್ಟಿಸ್ಥಿತಿಸಂಹಾರಕರ್ತೃವೆನಿಸಿದ ಆ ಪರಬ್ರಹ್ಮಲಿಂಗವೇ ಇಷ್ಟಲಿಂಗವೆನಿಸಿಯೂ ಅಂತರ್ಲಿಂಗವೆನಿಸಿಯೂ ಎರಡು ಪ್ರಕಾರವಾಯಿತು. ಇವೆರಡು ಲಿಂಗಗಳಲ್ಲಿ ಅಂತ (ಜ್ಯೋತಿ) ರ್ಲಿಂಗವನ್ನು ಶರೀರದ ಮೂಲಾಧಾರದಲ್ಲಾಗಲಿ ಹೃದಯಸ್ಥಾನದಲ್ಲಾಗಲಿ, ಭ್ರೂಮಧ್ಯದಲ್ಲಾಗಲಿ ಸದಾ ಧರಿಸಿರುವುದೇ ಅಂತರ್ಲಿಂಗಧಾರಣವೆನಿಸುವುದು. ಗುರುಕೃತದೀಕ್ಷಾಸಂಸ್ಕಾರದಿಂದ ಧಾರಣಯೋಗ್ಯತೆಯನ್ನು ಪಡೆದ ಸ್ಥೂಲಶರೀರದಲ್ಲಿ ಧರಿಸುವುದೇ ಬಾಹ್ಯಲಿಂಗಧಾರಣವೆನಿಸುವುದು. ಪ್ರತಿಯೊಬ್ಬ ಮುಮುಕ್ಷುವೂ ಈ ಎರಡೂ ಲಿಂಗಗಳನ್ನು ಧರಿಸುತ್ತಿರಬೇಕು. ಹಾಗೆ ದಹರಾಕಾಶದಲ್ಲಿ ಅಂತರ್ಲಿಂಗಧಾರಣಶಕ್ತಿಯನ್ನು ಪಡೆದಿರಲಿ ಅಥವಾ ಪಡೆಯದಿರಲಿ ಬಾಹ್ಯವೆನಿಸಿದ ಇಷ್ಟಲಿಂಗವನ್ನು ಮಾತ್ರ ಯಾವಾಗಲೂ ಧರಿಸಿರಲೇಬೇಕು ಎಂದು ರೇಣುಕ ಭಗವತ್ಪಾದರು ಅಪ್ಪಣೆಕೊಡಿಸಿರುವುದನ್ನು ನೋಡಿದರೆ ಯಾರು ಮೋಕ್ಷವೆಂಬ ಮಹಾ ಪುರುಷಾರ್ಥವನ್ನು ಇಚ್ಛಿಸುವರೋ ಅವರಿಗೆ ಮಾತ್ರ ಈ ಲಿಂಗಧಾರಣವು ವಿಹಿತವಾಗುವುದಲ್ಲದೆ ಇತರರಿಗೆ ವಿಹಿತವಾಗುವುದಿಲ್ಲವೆಂದು ಸ್ಪಷ್ಟವಾಗುತ್ತದೆ. ಇದರಿಂದ ಲಿಂಗಧಾರಣವೆಂಬುದು ಕಾಮ್ಯವಿಧಿಯೆನಿಸಿಕೊಳ್ಳುವುದಲ್ಲದೆ ನಿತ್ಯವಿಧಿಯೆನಿಸಲಿಲ್ಲವೆಂಬ ಸಂಶಯವು ಅಂಕುರಿಸಬಹುದು. ಅಂತಹ ಶಂಕೆಯನ್ನು ಮಾಡುತ್ತ ಹೋದರೆ ಸಂಧ್ಯಾವಂದನೆಯಲ್ಲಿಯೂ ಸಹ ಇದೇ ಆಕ್ಷೇಪವು ಹುಟ್ಟುತ್ತದೆ. ಹೇಗೆಂದರೆ—

ಸಂಧ್ಯಾಮುಪಾಸತೇ ಯೇ ತು ಸತತಂ ಸಂಶಿತವ್ರತಾಃ |
ವಿಧೂತಪಾಪಾಸ್ತೇ ಯಾಂತಿ ಬ್ರಹ್ಮಲೋಕಮನಾಮಯಂ ||

ಸಂಧ್ಯಾವಂದನೆಯೆಂಬ ನಿತ್ಯಕರ್ಮವನ್ನು ಪ್ರಾತಃಮಧ್ಯಾಹ್ನ ಸಾಯಂಕಾಲಗಳಲ್ಲಿ ತಪ್ಪದೆ ಯಾರು ಅನುಷ್ಠಿಸುತ್ತ ಬರುವರೋ ಅವರು ಪರಿಶುದ್ಧವಾದ ನಡತೆಯುಳ್ಳವರಾಗುತ್ತಾರಲ್ಲದೆ ಸಕಲ ಪಾಪಗಳಿಂದ ಬಿಡುಗಡೆಯನ್ನು ಹೊಂದಿ ಸ್ಥಿರವಾದ ಬ್ರಹ್ಮಲೋಕವನ್ನು ಹೊಂದುವರೆಂದು ಸಂಧ್ಯಾವಂದನೆಯ ಫಲವನ್ನು ಬಹಳವಾಗಿ ಪ್ರಶಂಸಿಸಿರುತ್ತಾರೆ. ಇಲ್ಲಿಯೂ ಯಾರು ಬ್ರಹ್ಮಲೋಕವನ್ನು ಹೊಂದಲು ಇಚ್ಛಿಸುವರೋ ಅವರೇ ಸಂಧ್ಯಾವಂದನೆಯನ್ನು ಮಾಡಬೇಕು. ಬ್ರಹ್ಮಲೋಕವನ್ನು ಬಯಸದಿದ್ದವರು ಆಚರಿಸಬೇಕಿಲ್ಲವೆಂದ ಮೇಲೆ ಸಂಧ್ಯಾವಂದನೆಯು ಕಾಮ್ಯವಿಧಿಯೆನಿಸಿತಲ್ಲದೆ ನಿತ್ಯವಿಧಿಯೆನಿಸಲಿಲ್ಲವೆಂಬ ದೋಷವು ಹುಟ್ಟುತ್ತದೆ

ಅನುಪಾಸ್ಯ ತ್ರಿಕಾಲೇಷು ಸಂಧ್ಯಾಮುನ್ಮಾದಿಭುಗ್ಭವೇತ್ |
ಶ್ವಾನಯೋನಿಶತಂ ಗತ್ವಾ ಚಂಡಾಲಃ ಕೋಟಿಜನ್ಮಸು ||

ಅಂದರೆ ಪ್ರತಿದಿವಸವೂ ತ್ರಿಕಾಲಗಳಲ್ಲಿ ನಿತ್ಯಕರ್ಮವೆನಿಸಿದ ಸಂಧ್ಯಾವಂದನೆಯನ್ನು ಮಾಡದೆ ಯಾವನು ಊಟಉಪಚಾರಗಳನ್ನು ನಡೆಸುವನೋ ಅಂತಹ ಘೋರಪಾಪಿಯು ನೂರುಜನ್ಮಗಳಲ್ಲಿ ನಾಯಿಯ ಜನ್ಮವನ್ನು ಎತ್ತುವನಲ್ಲದೆ ಕೋಟಿಸಾರೆ ಚಂಡಾಲನಾಗಿ ಜನಿಸುವನೆಂದು ಪ್ರತ್ಯವಾಯವಿಧಾಯಕವಾಕ್ಯವಿರುವುದರಿಂದ ಪ್ರತಿಯೊಬ್ಬನೂ ತನ್ನ ನಿತ್ಯಕರ್ಮವೆನಿಸಿದ ಸಂಧ್ಯಾವಂದನೆಯನ್ನು ಮಾಡುತ್ತಿರುವುದೇ ಕರ್ತವ್ಯವಾಗಿರುವುದರಿಂದ ಸಂಧ್ಯಾವಂದನೆಯು ನಿತ್ಯವಿಧಿಯೆನಿಸುವುದೇ ಹೊರತು ಅನಿತ್ಯ (ಕಾಮ್ಯ) ವಿಧಿಯೆನಿಸಬಾರದೆಂಬ ಸಮಾಧಾನವನ್ನು ಹೇಳುವುದಕ್ಕೆ ಹೊರಟರೆ ಲಿಂಗಧಾರಣೆಗೂ ಲಿಂಗಪೂಜೆಗೂ ನಿತ್ಯತ್ವವನ್ನು ಹೇಳುವ ವೀರಶೈವಸಿದ್ಧಾಂತಗ್ರಂಥಗಳಲ್ಲಿಯೂ ಸಹ ಇಂತಹ ಪ್ರತ್ಯವಾಯಬೋಧಕಗಳಾದ ನಿಷೇಧವಾಕ್ಯಗಳು ಅಸಂಖ್ಯಗಳಾಗಿರುತ್ತವೆ

ಭಕ್ತಸ್ಯಾಬಿಭ್ರತೋ ಲಿಂಗಂ ಯಾವತ್ಪ್ರಾಣವಿಧಾರಣಂ |
ಸ್ವಮಾಂಸಭಕ್ಷಣಂ ತಾವದನ್ನೇನ ರಚಿತಂ ಭವೇತ್ ||

ಮೋಕ್ಷವೆಂಬ ಮಹಾಫಲವನ್ನು ಅಪೇಕ್ಷಿಸಲಿ ಅಥವಾ ಅಪೇಕ್ಷಿಸದಿರಲಿ ಪರಮಾಪ್ತಗಳಾದ ವೇದಾಗಮಗಳ ಉಕ್ತಿಯನ್ನನುಸರಿಸಿ ಗುರುಗಳಿಂದ ಕೊಡಲ್ಪಟ್ಟ ಲಿಂಗವನ್ನು ಗುರುವಿನ ಅನುಜ್ಞೆಯ ಪ್ರಕಾರ ತನ್ನ ಪ್ರಾಣವಿರುವವರೆಗೂ ಧರಿಸಿಯೇ ಇರಬೇಕು. ಪ್ರಾಣವಿರುವವರೆಗೆ ಯಾವಾಗಲೂ ನಿಯಮದಿಂದ ಧರಿಸಲ್ಪಡಬೇಕಾಗಿರುವದರಿಂದ ಇದನ್ನು ಪ್ರಾಣಲಿಂಗವೆಂದೂ ಇಂತಹ ಪ್ರಾಣಲಿಂಗವನ್ನು ಭಕ್ತನು ಸಂಸ್ಕೃತವಾದ ತನ್ನ ಅಂಗದಲ್ಲಿ ಯಾವಾಗಲೂ ಸಂಬಂಧಿಸಿಕೊಂಡವನಾದುದರಿಂದ ಪ್ರಾಣಲಿಂಗಾಂಗಸಂಗಿಯೆಂದು ಹೇಳಿಸಿಕೊಳ್ಳುವನು. ಇಂತಹ ಪ್ರಾಣಲಿಂಗವನ್ನು ತನ್ನ ಮಸ್ತಕಾದ್ಯುತ್ತಮಾಂಗಗಳಲ್ಲಿ ಧರಿಸದೆ ಇರುವವನು ಶೂನ್ಯದೇಹಿಯೆಂದೂ ಭವಿಯೆಂದೂ ಹೇಳಿಸಿಕೊಳ್ಳುವನು. ಇಂಥವನಿಂದ ಮಾಡಲ್ಪಡುವ ಅನ್ನವನ್ನು ಯಾರೂ ಭುಂಜಿಸಬಾರದು. ಒಂದುವೇಳೆ ಭುಂಜಿಸಿದ್ದಾದರೆ ನಾಯಿಯ ಮಾಂಸವನ್ನು ಭಕ್ಷಿಸಿದ ಮಹಾಪಾತಕವುಂಟಾಗುತ್ತದೆಂದು ಭಯೋತ್ಪಾದಕವಾಕ್ಯಗಳಿರುವುದರಿಂದ ಇಷ್ಟಲಿಂಗಧಾರಣವಿಧಿಯು ನಿತ್ಯವಿಧಿಯೆನಿಸಿಕೊಳ್ಳುವುದಲ್ಲದೆ ಅನಿತ್ಯ (ಕಾಮ್ಯ) ವಿಧಿಯೆನಿಸುವುದಿಲ್ಲವಾದುದರಿಂದ ಲಿಂಗಧಾರಣ ಲಿಂಗಪೂಜೆಗಳಿಗೆ ನಿತ್ಯತ್ವವು ಪ್ರಮಾಣಾನುಭವೋದಾಹರಣೆಗಳಿಂದ ನಿರ್ವಿವಾದವಾಗುವುದು. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ವೇದಾಗಮಗಳ ಆಧಾರದಿಂದ ಸಿದ್ಧಾಂತಗೊಳಿಸಲ್ಪಟ್ಟ ಮುಕ್ತಿಮೂಲವಾದ ಇಷ್ಟಲಿಂಗಧಾರಣವು ನಿತ್ಯವಿಧಿಯಲ್ಲಿ ಸೇರುವುದಲ್ಲದೆ ಕಾಮ್ಯವಿಧಿಯಲ್ಲಾಗಲಿ ನೈಮಿತ್ತಿಕವಿಧಿಯಲ್ಲಾಗಲಿ ಸೇರಲು ಎಷ್ಟೂ ಅವಕಾಶವಿಲ್ಲವಾದುದರಿಂದ ಲಿಂಗಧಾರಣಕ್ಕೆ ನಿತ್ಯತ್ವವು ಸಿದ್ಧಿಸುವುದು

ಒಳದೇಶದ ವೃತ್ತಾಂತಗಳು.

ಕೋಲಾರದ ಚಿನ್ನದ ಗಣಿಯಿಂದ 1933-34ನೇ ಸಾಲಿನ ರಾಜಾದಾಯವು 1,16,117 ಪೌಂಡುಗಳು ಒಂದಿರುತ್ತದೆ. ಕಳೆದ ವರ್ಷದಲ್ಲಿ ಹೆಚ್ಚು ಚಿನ್ನವು ದೊರೆತುದರಿಂದಲೂ, ಚಿನ್ನದ ಬೆಲೆಯು ಹೆಚ್ಚಾಗಿದ್ದುದರಿಂದಲೂ ಗಣಿಯಿಂದ ತೆಗೆಯಲಾದ ಚಿನ್ನದ ಬೆಲೆಯು 20,86,002 ಪೌಂಡುಗಳಷ್ಟು ಆಯಿತೆಂದು ತಿಳಿದುಬಂದಿದೆ

ರಾಜಧಾನಿಗೆ ದಯಮಾಡಿಸಿದ್ದ ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಗಳನ್ನು ಶ್ರೀಮನ್ಮಹಾರಾಜರವರು ತಮ್ಮ ಚಾಮುಂಡೀವಿಹಾರ ಅರಮನೆಗೆ ಬರಮಾಡಿಕೊಂಡು ಸತ್ಕಾರಮಾಡಿದರು. ಈ ಸಂತೋಷಕೂಟದಲ್ಲಿ ಅನೇಕ ರಾಜಮನೆತನದವರೂ, ದೊಡ್ಡ ಅಧಿಕಾರಿಗಳೂ, ಯೂರೋಪಿಯನ್ ಮತ್ತು ದೇಶೀಯ ಮುಖ್ಯರೂ ಆಗಮಿಸಿ, ಶಾಸ್ತ್ರಿಗಳ ಪರಿಚಯ ಮಾಡಿಕೊಂಡರು

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿದ ಹಿಂಭಾಗದಲ್ಲಿ ವಾಣೀವಿಲಾಸಸನ್ನಿಧಾನದವರ ಹೆಸರಿನಿಂದ ಹೆಂಗಸರು, ಮಕ್ಕಳ ಚಿಕಿತ್ಸೆ ಮತ್ತು ಹೆರಿಗೆ ನಡೆಸುವುದಕ್ಕಾಗಿ ಸುಮಾರು 3 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ಕಟ್ಟಿಸಿರುವ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ನೆರವೇರಿಸುವುದಕ್ಕೆ ಶ್ರೀಮನ್ಮಹಾರಾಜರವರು ಬೆಂಗಳೂರಿಗೆ ಚಿತ್ತೈಸುತ್ತಾರೆಂದು ಕೇಳುತ್ತೇವೆ. ಈ ಕಟ್ಟಡದ ಖರ್ಚಿನಲ್ಲಿ ಪುಣ್ಯಾತ್ಮರು ಸುಮಾರು 2 ಲಕ್ಷದವರೆಗೂ ಸಹಾಯಮಾಡಿರುತ್ತಾರೆಂದು ತಿಳಿದುಬರುತ್ತದೆ

ಕಪಿಚೇಷ್ಟೆಯಿಂದ ಮರಣ!

ಇಂದೂರಿನಲ್ಲಿ ಒಬ್ಬ ಯುವಕನು ತನ್ನ ... ವಯಸ್ಸಿನ ಸ್ನೇಹಿತನೊಂದಿಗೆ ಮಾತನಾಡುತ್ತಾ ... ಕೊಠಡಿಯಲ್ಲಿ ಕುಳಿತಿರುವಾಗ್ಗೆ ಎಲ್ಲಿಂದಲೋ ಒಂದು ಕಪಿಯು ಮನೆಗೆ ನುಗ್ಗಿ ಗೋಡೆಗೆ ತಗುಲಿಸಿದ್ದ ಕೋವಿಯನ್ನು ತೆಗೆದುಕೊಂಡು ಹಿಂದುಮುಂದು ತಿರುಗಿಸಿ ನೋಡುವ ಸಂಭ್ರಮದಲ್ಲಿ ಗುಂಡುಹಾರಿ ಮಾತನಾಡುತ್ತಿದ್ದ ಸ್ನೇಹಿತನಿಗೆ ಬಡಿಯಿತು. ಕೂಡಲೇ ಅವನು ಮೃತಪಟ್ಟನು.

ವರ್ತಮಾನಸಂಗ್ರಹ.

ಬೆಂಕಿಯ ಅನಾಹುತ.

ನಾಸಿಕಪುರದಲ್ಲಿ ಚಳಿಕಾಯಿಸಿಕೊಳ್ಳುವುದಕ್ಕಾಗಿ ಇಟ್ಟಿದ್ದ ಒಲೆಯಿಂದ ಗುಡಿಸಲಿಗೆ ಬೆಂಕಿಹತ್ತಿ ಒಬ್ಬ ಹೆಂಗಸೂ, ಆಕೆಯ 3-4 ಜನ ಮಕ್ಕಳೂ ಸುಟ್ಟು ಹೋದರು

ಚಳಿಯ ಹಾವಳಿ.

ಕೋಮಿಲ್ಲಾ ಪ್ರಾಂತದಲ್ಲಿ ಚಳಿಯ ಹೊಡತವನ್ನು ತಾಳಲಾರದೆ ಆನೆಗಳೂ, ಕರಡಿ, ಚಿರತೆ ಮೊದಲಾದ ಮೃಗಗಳೂ ಕಾಡನ್ನು ಬಿಟ್ಟು ಹಳ್ಳಿಗಳಿಗೆ ಬಂದು ಹಾವಳಿ ಮಾಡುತ್ತಿವೆ

ಭಿಕ್ಷುಕರಿಗೆ ಪ್ರತೀಕಾರ!

ಕಲ್ಕತ್ತಾ ನಗರದಲ್ಲಿ ಭಿಕ್ಷುಕರ ಸಂಖ್ಯೆಯು ಹೆಚ್ಚುತ್ತಿರುವುದರಿಂದ ಇವನ್ನು ನಿಲ್ಲಿಸಲು ಏನಾದರೂ ಒಂದು ಉಪಾಯವನ್ನು ಮಾಡಬೇಕೆಂದು ಪೌರಸಭೆಯವರು ಒಂದು ಕಮಿಟಿಯನ್ನು ಏರ್ಪಡಿಸಿರುತ್ತಾರೆ

ನರಿಗಳ ಹಾವಳಿ.

ಸೋಮಿಯುಟ್ ಪ್ರಾಂತದಲ್ಲಿ ಒಂದು ಜಾತಿಯ ನರಿಗಳು ಹೊಲ ಗದ್ದೆಗಳಿಗೆ ನುಗ್ಗಿ ಬೆಳೆಗಳನ್ನೆಲ್ಲಾ ನಷ್ಟಮಾಡಿವೆಯಂತೆ! ಈ ನರಿಗಳ ಸಂಖ್ಯೆಯು ಮಿತಿ ಮೀರಿದರೆ ಇವು ಸಿಕ್ಕಿದ್ದನ್ನೆಲ್ಲಾ ಹಾಳುಮಾಡಿ ಕೊನೆಗೆ ಸಮುದ್ರಕ್ಕೆ ಬಿದ್ದು ಸಾಯುವುವಂತೆ!

ಬಂಗಾಳದಲ್ಲಿ ಪ್ರವಾಹದ ಅನಾಹುತ

ಬಂಗಾಳದಲ್ಲಿ ಪದ್ಮಾನದಿಯ ಪ್ರವಾಹದಿಂದ ಸುಮಾರು 300 ಚದರ ಮೈಲು ಜಾಗವು ನೀರಿನಲ್ಲಿ ಮುಳುಗಿದೆ. ಮಾತಭಂಗಾನದಿಯ ಪ್ರವಾಹದಿಂದ ಸುಮಾರು 300 ಮನೆಗಳು ಬಿದ್ದುಹೋದವು. ಜನಗಳು ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆ

ವೀರಕ್ಷಾಮ! ಗೌರ್ನಮೆಂಟಿನ ಸಹಾಯ!

ಕಡಪಾ, ಕರ್ನೂಲ್ ಮೊದಲಾದ ನಾಲ್ಕು ಜಿಲ್ಲೆಗಳಲ್ಲಿ ಘೋರಕ್ಷಾಮವು ಬಂದಿರುವುದರಿಂದ, ಕಂದಾಯವನ್ನು ಅರ್ಧಕ್ಕರ್ಧ ಮಾಫಿ ಮಾಡಿರುವುದಲ್ಲದೆ ಕೆಲವು ಕಡೆಗೆ ಕಂದಾಯವನ್ನು ವಸೂಲ್ಮಾಡದೆ ರೈತರಿಗೆ ಸಹಾಯ ಮಾಡಬೇಕೆಂದು ಮದ್ರಾಸ್ ಸರ್ಕಾರವು ಯೋಚಿಸಿದೆ.

ಚೀನಾದೇಶವು ಜಪಾನಿನ ಕ್ಷಮೆಬೇಡಿತು

ಚೀನದ ಪರವಾಗಿ ಮುಖ್ಯಮಂತ್ರಿಗಳು ಯುದ್ಧಕ್ಕೆ ಕಾರಣವಾದ ಘುಲಾನ್ ಪ್ರದೇಶವು ಜಪಾನಿಗೇ ಸೇರಿದ್ದು, ನಾವು ಅದರ ತಂಟೆಗೆ ಹೋಗುವದಿಲ್ಲ ಕ್ಷಮಿಸಬೇಕೆಂದು ಜಪಾನನ್ನು ಕೇಳಿಕೊಂಡಿದ್ದರಿಂದ ಯುದ್ಧವು ನಿಲ್ಲಿಸಲ್ಪಟ್ಟಿತು.

ಸಮಾಧಿಯಲ್ಲಿ ಕಳವು!

ಚೀನಾದೇಶದ ಪಿಪಿಂಗಿನ ಪುರಾತನ ಸಮಾಧಿಗಳಲ್ಲಿದ್ದ ಚಿನ್ನ ಮುಂತಾದ ಅಮೂಲ್ಯ ಪದಾರ್ಥಗಳನ್ನು ಕೆಲವು ಪುಂಡರು ದೋಚಿಕೊಂಡು ವಿದೇಶಗಳಿಗೆ ಸಾಗಿಸಿದ್ದಾರೆ. ಈ ಪದಾರ್ಥಗಳ ಬೆಲೆ ಸುಮಾರು 40 ಲಕ್ಷ ರೂಪಾಯಿಗಳಾಗಬಹುದಂತೆ! ಪೋಲೀಸರು ಈಗ ಶೋಧಿಸುತ್ತಿದ್ದಾರೆ.

ಸ್ತ್ರೀರಾಕ್ಷಸಿ!

ಬುಡಪೆಸ್ಟ್ ಎಂಬಲ್ಲಿ 72 ವರ್ಷ ವಯಸ್ಸಿನ ಮಿಸೆಸ್ ನಾಚಿ ಎಂಬವಳು ವಿಷಪ್ರಯೋಗದಲ್ಲಿ ಬಹಳ ಬುದ್ಧಿವಂತೆಯಂತೆ! ಅವಳೀಗೂ 16 ಜನರನ್ನು ವಿಷ ಕೊಟ್ಟು ಕೊಂದಿರುವಳಂತೆ! ಈಚೆಗೆ ಶವಗಳನ್ನು ಪರೀಕ್ಷಿಸುವಲ್ಲಿ ಅನೇಯನ್ನು ಕೊಡ ಕೊಲ್ಲುವಷ್ಟು ವಿಷ ಪ್ರಯೋಗವಾಗಿದ್ದಿತಂತೆ! ಅವಳು ಆತ್ಮಹತ್ಯೆಯಲ್ಲದೆ ಬೇರೆಯಲ್ಲ

ವಿಧಿವಿಲಾಸ!

ತ್ರಿವೇಂದ್ರಂ ಪ್ರಾಂತದಲ್ಲಿ ಒಬ್ಬ ಕೋರ್ಟು ಅಮೀನನು ಸಿವಿಲ್ ವಾರೆಂಟನ್ನು ಜಾರಿಮಾಡಲೇಬೇಕೆಂದು ಸಾಲಗಾರನ ಮನೆಯ ಹತ್ತಿರದಲ್ಲಿದ್ದ ಒಂದು ಮರದಮೇಲೆ ಹತ್ತಿ ಅವನು ಹೊರಗೆ ಹೊರಡುವದನ್ನು ನಿರೀಕ್ಷಿಸುತ್ತಿದ್ದನು ಗ್ರಹದೋಷದಿಂದ ಅಮೀನನಿಗೆ ಸ್ವಲ್ಪ ನಿದ್ರೆ ಬಂದುದರಿಂದ ಮರದಿಂದ ಬಿದ್ದು ಪ್ರಾಣಬಿಟ್ಟನು

ಆತ್ಮಹತ್ಯೆ!

ಬೊಂಬಾಯಿ ಮಲಬಾರ್ ಹಿಲ್ಸ್ ಎಂಬಲ್ಲಿ ಮಿಸೆಸ್ ಡಬ್ಲ್ಯು ಎಂ ಸೇಕ್ ಪೀಲ್ಡ್ ಎಂಬ ಯೂರೋಪಿಯನ್ ಹೆಂಗಸು ನೇಣುಹಾಕಿಕೊಂಡು ಪ್ರಾಣಬಿಟ್ಟಳು. ಈಕೆಯು ಇಟ್ಟಿದ್ದ ಹೋಟೆಲಿಗೆ ಸರಿಯಾಗಿ ಗಿರಾಕಿಗಳು ಬಾರದ್ದರಿಂದ ಬೇಜಾರುಪಟ್ಟು ಆತ್ಮಹತ್ಯೆಮಾಡಿಕೊಂಡಳಂತೆ! ಪೋಲೀಸರು ತನಿಖೆ ನಡೆಯಿಸುತ್ತಿದ್ದಾರೆ

ಅಜ್ಜನು ಮೊಮ್ಮಕ್ಕಳನ್ನು ಕೊಂದನು!

ನಾಗಪುರ ಪ್ರಾಂತದಲ್ಲಿ ಗ್ರಾಮದ ಕೂತವಾಲನಾದ ಹಂಗಸ ಎಂಬವನಿಗೆ 60 ವರ್ಷ ವಯಸ್ಸಾದುದರಿಂದ ಸರಕಾರದವರು ಅವನನ್ನು ಕೆಲಸದಿಂದ ನಿವೃತ್ತಿಮಾಡಿ ಅದೇ ಕೆಲಸವನ್ನು ಅವನ ಮಗನಿಗೆ ಕೊಟ್ಟರು. ಆ ಮುದುಕನು ತನ್ನನ್ನು ಇನ್ನೂ ಸ್ವಲ್ಪ ಕಾಲ ಕೆಲಸದಲ್ಲಿ ಇಟ್ಟುಕೊಳ್ಳಬೇಕೆಂದು ಅರ್ಜಿಕೊಟ್ಟನು. ಈ ಅರ್ಜಿಯು ಮಾನ್ಯವಾಗಲಿಲ್ಲವಾದುದರಿಂದ ತನ್ನ ಮಗನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ಮಗನ ಎರಡು ಮಕ್ಕಳನ್ನು ಕೊಂದುಹಾಕಿದನು. ಈ ಅಪರಾಧಕ್ಕಾಗಿ ಮುದುಕನಿಗೆ ಮರಣದಂಡನೆಯು ವಿಧಿಸಲ್ಪಟ್ಟಿತು

ವಿಜಾಪುರ ಜಿಲ್ಲೆಯಲ್ಲಿ ಆಣೇಕಲ್ಲು ಮಳೆಯ ಅನರ್ಥ.

ವಿಜಾಪುರ ಜಿಲ್ಲೆಯಲ್ಲಿ ೨೦ ನೇ ತಾರೀಖಿನ ದಿವಸ ಭಯಂಕರ ಆಣೇಕಲ್ಲು ಮಳೆಸುರಿದು ಬೆಳೆಗಳಿಗೆ ಭಯಂಕರ ಹಾನಿತಟ್ಟಿದೆ. ಬೆಳೆಗಳು ಕೆಟ್ಟುಹೋದುದರಿಂದ ಅನೇಕ ಸಾವಿರ ರೂಪಾಯಿಗಳು ಹಾನಿಯಾಗಿದೆಯೆಂದು ತಿಳಿಯುತ್ತದೆ. ಅಲವು ಕಡೆಗಿದ್ದ ಜೋಳ ಬೆಳೆಗಳೆಲ್ಲ ಸಂಪೂರ್ಣವಾಗಿ ಕೆಟ್ಟುಹೋಗಿವೆ. ಜಿಲ್ಲೆಯ ಎಲ್ಲ ಭಾಗದಿಂದಲೂ ಇದೇ ತರದ ಸುದ್ದಿ ಬಂದಿದೆ. ಜಿಲ್ಲೆಯ ಕಲೆಕ್ಟರರಾದ ಶ್ರೀ ಪಟ್ವರ್ಧನರು ಇದರಿಂದ ಎಷ್ಟು ಹಾನಿಯಾಗಿದೆಯೆಂಬುದನ್ನು ತಿಳಿಸಲು ಕೆಳಗಿನ ಅಧಿಕಾರಿಗಳಿಗೆ ಬರೆದಿದ್ದಾರೆ. ಧಾರವಾಡ ಜಿಲ್ಲೆಯಲ್ಲಿಯೂ ಇದೇ ರೀತಿಯಾಗಿದೆ

ಪೋಲೀಸ್ ಇನ್ಸ್‌ಪೆಕ್ಟರನಿಗೆ ೧೧,೫೦೦ ರೂಪಾಯಿ ದಂಡ

ಹೈದರಾಬಾದ್ ಎಂಬಲ್ಲಿ ಒಬ್ಬ ಮಹಮ್ಮದೀಯ ಹೆಂಗಸು ತನ್ನ ಗೂಢಪತಿಗಾಗಿ ಕೊಟ್ಟ ವಿಷಮಿಶ್ರಿತ ಹಾಲನ್ನು ಅವಳ ಗಂಡನೂ ಮತ್ತು ಗಂಡನ ಅಣ್ಣನೂ ಕುಡಿದು ಜ್ಞಾನ ತಪ್ಪಿದರು. ಅವರನ್ನು ಆಸ್ಪತ್ರೆಗೆ ಸಾಗಿಸಲು ಅಲ್ಲಿ ಒಬ್ಬನು ಸತ್ತುಹೋದನು. ಪೋಲೀಸರು ಆ ಮಹಮ್ಮದೀಯ ಹೆಂಗಸನ್ನು ಅರೆಸ್ಟುಮಾಡಿದರು. ಅವಳು ತಾನು ವಿಷಪ್ರಯೋಗದ ಸಲಹೆಯನ್ನು ತನ್ನ ಅಣ್ಣನಾದ ಅಮೀರ್ ಖಾನ್ ಎಂಬ ಪೋಲೀಸ್ ಇನ್ಸ್‌ಪೆಕ್ಟರಿಂದ ಪಡೆದುದಾಗಿ ಮೊದಲಿನಿಂದ ಕೊನೆಯವರೆಗೆ ನಡೆದುದೆಲ್ಲವನ್ನೂ ಹೇಳಿಬಿಟ್ಟಳು. ನ್ಯಾಯಾಧೀಶರು ಅಮೀರ್ ಖಾನನಿಗೆ ೧೧,೫೦೦ ರೂಪಾಯಿಗಳ ದಂಡವನ್ನು ವಿಧಿಸಿದರು.

ಅಸ್ಪೃಶ್ಯರ ದೇವಸ್ಥಾನಪ್ರವೇಶದ ಬಗ್ಗೆ ನೇಪಾಳಮಹಾರಾಜರ ಅಭಿಪ್ರಾಯ.

ಕಳೆದವಾರ ಕೊಲ್ಲಂಗೋಡಿನ ರಾಜಾ ಸರ್ ವಾಸುದೇವರಾಜರವರು ಬೆಹಲಿಪಟ್ಟಣಕ್ಕೆ ಬಂದಿದ್ದ ನೇಪಾಳದ ಮಹಾರಾಜರನ್ನು ಭೆಟ್ಟಿಮಾಡಿದಾಗ ಅಸ್ಪೃಶ್ಯರನ್ನು ದೇವಸ್ಥಾನಕ್ಕೆ ಬಿಡಲು ತಮ್ಮ ಅಭಿಪ್ರಾಯವೇನೆಂದು ಪ್ರಶ್ನಿಸಿದರು. ನೇಪಾಳದ ಮಹಾರಾಜರು ಉತ್ತರಕೊಡುತ್ತಾ ಪುರಿ, ರಾಮೇಶ್ವರ, ಕಾಶಿ ಮತ್ತು ದ್ವಾರಕಾ ಇತ್ಯಾದಿ ಕ್ಷೇತ್ರಗಳಲ್ಲಿರುವ ದೇವಸ್ಥಾನಗಳಿಗೆ ಅಸ್ಪೃಶ್ಯರು ಪ್ರವೇಶಿಸಲು ಅವಕಾಶ ಕೊಡಕೂಡದೆಂದೂ ಪೂರ್ವಕಾಲದಂತೆಯೇ ಅರ್ಚಕರುಗಳನ್ನು ನಡೆಯಿಸಿಕೊಂಡು ಅವುಗಳ ಪವಿತ್ರತ್ವವನ್ನು ಕಾಪಾಡಲು ಹಿಂದೂಜನಾಂಗವೆಲ್ಲವೂ ದೃಢಮನಸ್ಕವಾಗಿ ನೋಡಿಕೊಳ್ಳಬೇಕೆಂದೂ ಹೇಳಿದರು.

ಸನಾತನ ಪ್ರಮುಖರ ಮರಣ!

ಕಳೆದ ತಿಂಗಳು ತಾ|| 28 ರಲ್ಲಿ ಮದರಾಸಿನ ನು|| ಎಂ ಕೆ ಆಚಾರ್ಯರವರೂ ಉತ್ತರ ಅರ್ಕಾಟಿಗೆ ಸೇರಿದ ಅರಣಿಪಾಳ್ಯದಲ್ಲಿದ್ದ ದಿವಾನ್ ಬಹದ್ದೂರ್ ಎಸ್ ಎ ಗೋವಿಂದರಾಘವಯ್ಯರವರೂ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮ|| ಗಳಾದ ಆಚಾರ್ಯರವರೂ ಅಯ್ಯರವರೂ ಸನಾತನ ಧರ್ಮೋದ್ಧಾರಕ್ಕಾಗಿ ಬಹಳ ಶ್ರಮವಹಿಸಿ ಕೆಲಸಮಾಡುತ್ತಿದ್ದರು. ಇಬ್ಬರೂ ಕೆಲವು ವರ್ಷಗಳ ಕಾಲ ಮದರಾಸ್ ನ್ಯಾಯವಿಧಾಯಕಸಭೆಯಲ್ಲಿ ಮೆಂಬರುಗಳಾಗಿದ್ದರು. ವರ್ಣಾಶ್ರಮ ಧರ್ಮಾಚರಣೆಗೆ ಪ್ರತಿ ಬಂಧಕವಾಗುವಂಥ ಸಮಾಜ ಸುಧಾರಣ ನಿಯಮಗಳಾವುವೂ ಶಾಸನವಾಗದಂತೆ ಮಾಡಲು ಮ|| ಆಚಾರ್ಯರು ಬಹಳ ಸಾಹಸಪಡುತ್ತಿದ್ದರು. ಇವರು ಹೊಸ ರಾಜ್ಯಾಂಗ ರಚನೆಯ ವಿಷಯದಲ್ಲಿ ಸನಾತನಿಗಳ ಅಭಿಪ್ರಾಯವೇನೆಂಬುದನ್ನು ಜಾಯಿಂಟ್ ಕಮಿಟಿಯವರಿಗೆ ತಿಳಿಸಲು ಇಂಗ್ಲೆಂಡಿಗೆ ಹೋಗಿದ್ದರು. ಅಸ್ಪೃಶ್ಯರಿಗೆ ದೇವಸ್ಥಾನಕ್ಕೆ ಪ್ರವೇಶಿಸಲು ಅವಕಾಶ ಕಲ್ಪಿಸಿಕೊಡುವುದಕ್ಕಾಗಿ ಗಾಂಧಿಯವರು ನಡಸಿದ ಪ್ರಯತ್ನಗಳನ್ನು ಪ್ರತಿಭಟಿಸಲು ಇವರು ಬದ್ಧಕಂಕಣರಾಗಿದ್ದರು. ದಿವಾನ್ ಬಹದ್ದೂರ್ ರಾಘವಯ್ಯರ್ರವರೂ ಸಹ ಸನಾತನ ಧರ್ಮೋದ್ಧಾರಕ್ಕಾಗಿ ಬಹಳ ಶ್ರಮವಹಿಸಿ ದುಡಿಯುತ್ತಿದ್ದರು. ಈ ಉಭಯ ಧರ್ಮಾತ್ಮರ ಮರಣದಿಂದ ಸನಾತನ ಧರ್ಮಕ್ಕೆ ಅಪಾರವಾದ ಕುಂದರೆಯು ಪ್ರಾಪ್ತವಾಯಿತೆಂದು ಬಹು ವಿಷಾದದಿಂದ ಹೇಳಬೇಕಾಗಿದೆ

ಗೃಹಕೃತ್ಯದ ನೋಟೀಸು.

ಮೈಸೂರು ಲಷ್ಕರ್ ಮೊಹಲ್ಲಾ ಕುಂಬಾರ ಕೇರಿಯಲ್ಲಿರುವ ಈಡಿಗರಜಾತಿ ಮಲ್ಲೇಗೌಡನ ಮಕ್ಕಳು ಮಲ್ಲಪ್ಪ ವಗೈರೆಯವರು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಇದರಡಿ ನಮೂದಿಸಿರುವ ನನ್ನ ಪಿತ್ರಾರ್ಜಿತವಾದ ಸ್ವತ್ತುಗಳನ್ನು ನನ್ನ ತಾತ ಮಲ್ಲೇಗೌಡನ ಹೆಂಡತಿ ವೆಂಕಟಮ್ಮನವರು ಸ್ವಾಧೀನಮಾಡಲು ಉದ್ಯುಕ್ತರಾಗಿದ್ದಾರೆ. ಈಕೆಗೆ ವಾರಸುದಾರರು ನಾನೇ ಆಗಿರುತ್ತೇನೆ. ಆದ್ದರಿಂದ ಕೆಳಗೆ ಕಂಡ ಸ್ವತ್ತುಗಳನ್ನು ನಮ್ಮ ಅನುಮತಿ ಇಲ್ಲದೆ ಯಾರಾದರೂ ಆಧಾರ, ಭೋಗ್ಯ ವಗೈರೆ ಮಾಡಿಕೊಂಡರೆ ಊರ್ಜಿತವಾಗಲಾರದು

ಮೈಸೂರು ಲಷ್ಕರ್ ಮೊಹಲ್ಲಾ ಕುಂಬಾರ ಕೇರಿಯಲ್ಲಿರುವ ಡೋರ್ ನಂಬರು ೨೬೯-೨೭೦ ಉಳ್ಳ ಮನೆಗಳು, ಶ್ರೀರಂಗಪಟ್ಟಣದ ತಾಲ್ಲೂಕ್ ಚಂದಗಾಲದ ಹೋಬಳಿ ಬೆಟ್ಟಾಡಿಪುರದಲ್ಲಿರುವ ಸರ್ವೆ ನಂಬರು ೨೦೧ ನೇ ಖರಿ ವಿಸ್ತೀರ್ಣ 3 ಎಕರೆ ೨೦ ಗುಂಟೆ ಆಕಾರ 31 ರೂಪಾಯಿವುಳ್ಳ ಜಮೀನು.

5—2—35. ಮಲ್ಲಪ್ಪನ ಹುಜು.

(೩ನೆಯ ಪುಟದಿಂದ ಮುಂದುವರಿದುದು)

ಮಾಡಿ ಸತ್ಫಲವನ್ನು ಪಡೆಯಲು ಅಧಿಕಾರವನ್ನು ಪಡೆಯಿತೆಂದು ಹೇಳಲು ಅತ್ಯಾನಂದವಾಗುತ್ತಿರುವದು. ಆದ್ದರಿಂದ ಶ್ರೀ ಜಗದ್ಗುರು ಪಂಚಾಚಾರ್ಯರು ಸೇತು ಹಿಮಾಚಲದವರೆಗಿರುವ ತಮ್ಮ ನಿರಂಕುಶ ಸಾಮ್ರಾಜ್ಯದ ವಿಶಾಲಭಾಗವನ್ನು ಬೆಳಕಿಗೆ ತಂದಿದ್ದಾರೆ. ನಮ್ಮ ಸಮಾಜದಲ್ಲಿ ನಿಜದತ್ವಕ್ಕೆ ಮುಖ್ಯವಾಗಿ ಬರಲು ಅವಕಾಶವಿಲ್ಲದಿದ್ದು ಚಿರವಾಗಿ ನಮ್ಮ ಸಮಾಜಕ್ಕೆ ಈ ಸೌಭಾಗ್ಯವು ದೊರೆಯಲೆಂದು ಭಗವತ್ಪಾದರನ್ನು ಅನನ್ಯ ಭಾವದಿಂದ ಬೇಡುತ್ತೇನೆ.

ಗುರುಭಕ್ತ
ಚಾಮರಾಜನಗರ ವಾಸಿ

ಇಂಡಿಯಾಬಿಲ್ಲು
ಗವರ್ನರರ ವಿಶೇಷ ಅಧಿಕಾರ, ಸರ್ವ ಸೂತ್ರಗಳನ್ನು ಒಬ್ಬರೇ ವಹಿಸಬಹುದು

ಹಿಂದ ಸ್ವಾಸ್ಥ್ಯದ ಆವೃತ್ತಿ

ಇಂಡಿಯಾ ಬಿಲ್ಲು ಹಿಂದುಸ್ಥಾನದಲ್ಲಿ ಫೆಡರಲ್ ಸ್ವರಾಜ್ಯ ಸ್ಥಾಪಿಸಲು ತಾ|| ೬ ದಿವಸ ಪ್ರಸಿದ್ಧಮಾಡಲ್ಪಟ್ಟಿತು. ಪಾರ್ಲಿಮೆಂಟ್ ಚಕ್ರವರ್ತಿಗಳು ಲಾರ್ಡ್ಸ್ ಹಾಗು ಕಾಮನ್ಸ್ ಸಭೆಗಳ ಸಮ್ಮತಿಯಿಂದ ಹಿಂದುಸ್ಥಾನ ಸರಕಾರಕ್ಕೆ ಪ್ರತ್ಯೇಕ ಅಧಿಕಾರಗಳನ್ನು ಕೊಡುವ ಉದ್ದೇಶದಿಂದ ಈ ಬಿಲ್ಲು ಸಿದ್ಧವಾಗಿದ್ದು ಈ ಸಲದ ಪಾರ್ಲಿಮೆಂಟಿನಲ್ಲಿ ಅದನ್ನು ಸ್ವೀಕರಿಸಲಾಗುವದೆಂದು ಈ ಬಿಲ್ಲಿನ ವ್ಯಾಖ್ಯೆ ಮಾಡಲಾಗಿದೆ. ಈ ಬಿಲ್ಲನ್ನು ಭಾರತ ಮಂತ್ರಿಗಳಾದ ಸರ್ ಸ್ಯಾಮುಯೆಲ್ ಹೋರರು ಮುಖ್ಯರಾದವರು ಸೆಕ್ರೆಟರಿ ಎಲ್ಫಿನ್ ಅಟಾರ್ನಿ ಜನರಲ್ ಸರ್ ಸ್ಟೀವನ್ ಮತ್ತು ಬಟ್ಲರ್ ಇವರ ಬೆಂಬಲವನ್ನು ಪಡೆದು ಇದನ್ನು ಮಂಡಿಸಿದರು.

ಗವರ್ನರ್ ಜನರಲ್‌ರ ಶಿಫಾರಸು ಇಲ್ಲದೆ ಯಾವದೇ ಸಭೆಯಲ್ಲಿ ರೇಲ್ವೆ ಫೆಡರಲ್ ಬಿಲ್ಲುಗಳ ಬಗ್ಗೆ ಠರಾವು ಮಂಡಿಸಲು ಬಾರದೆಂತ ಈ ಬಿಲ್ಲಿನಲ್ಲಿ ಕಟ್ಟಳೆ ಮಾಡಲಾಗಿದೆ. ಈ ಬಿಲ್ಲಿನನ್ವಯ ಹಿಂದುಸ್ಥಾನದ ಗವರ್ನರ್ ಜನರಲ್ಲರೆಂದು ಒಬ್ಬರನ್ನು ಹಿಂದಿ ಸಂಸ್ಥಾನಗಳ ಸಂಬಂಧಗಳನ್ನು ನೋಡಿಕೊಳ್ಳುವದಕ್ಕಾಗಿ ಬಾದಶಹರ ಪ್ರತಿನಿಧಿಗಳೆಂದು ಮತ್ತೊಬ್ಬರನ್ನು ನೇಮಿಸಲು ಬರುವದು. ಆದರೆ ಇವೆರಡು ಕಾರ್ಯಗಳನ್ನು ಮಾಡಲು ಬಾದಶಹರು ಒಬ್ಬರನ್ನೇ ನಿಯಮಿಸಿದರೂ ನಿಯಮಿಸಬಹುದು. ಪಾರ್ಲಿಮೆಂಟು ಜಾಹೀರವಾಗಿ ಘೋಷಿಸಿದ ನಂತರ ಇನ್ನು ಮುಂದೆ ಈ ಸರಕಾರಕ್ಕೆ 'ಗವರ್ನಮೆಂಟ್ ಆಫ್ ಇಂಡಿಯಾ' ಎಂದು ನಾಮಕರಣ ಮಾಡಲಾಗುವದು.

ಫೆಡರಲ್ ಕಾರ್ಯಕಾರಿ ಸಭೆ

ದಿವಾನರ ಕೌನ್ಸಿಲ್ಲಿನಲ್ಲಿ ೧೦ ಮಂದಿಗಿಂತ ಹೆಚ್ಚಿಗಿರಕೂಡದು. ದಿವಾನರ ಅವಧಿಯು ಮುಗಿಯುವ ವರೆಗೆ ಸಂಬಳದಲ್ಲಿ ಹೆಚ್ಚು ಕಡಿಮೆಮಾಡಕೂಡದು. ಗವರ್ನರ ಜನರಲ್‌ರಿಂದ ನೇಮಿಸಲ್ಪಡುವ ಕೌನ್ಸಿಲರ ಸಂಖ್ಯೆಯು ಮೂರಕ್ಕಿಂತ ಹೆಚ್ಚಿರಬಾರದು. ಮೊದಲನೆಯ ಅಡ್ವೋಕೇಟ್ ಜನರಲರನ್ನು ಬಿಟ್ಟು ಉಳಿದವರನ್ನು ನೇಮಿಸುವಾಗ ಗವರ್ನರ್ ಜನರಲ್‌ರು ದಿವಾನರ ಸಲಹೆಯನ್ನು ತೆಗೆದುಕೊಳ್ಳಬೇಕು. ಆದರೆ ಅಡ್ವೋಕೇಟ್ ಜನರಲ್ಲರನ್ನು ನೇಮಿಸತಕ್ಕದ್ದು.

ಶಾಸನ ಮಂಡಳಗಳು

ಸರಕಾರಿ ಅಧಿಕಾರಿ ಅವರು ನೌಕರಿಯಲ್ಲಿದ್ದಾಗ್ಯೂ ಕೂಡ ಶಾಸನ ಸಭೆಯ ಸಭಾಸದರಾಗಲು ಬರುತ್ತದೆ. ಶಾಸನ ಮಂಡಳದ ಸಭಾಸದರ ಹಿರಿಯ ಹಕ್ಕುಗಳು ಮುಂದಿನಂತಿರಬಹುದಾಗುವವು. ಯಾವನಾದರೂ ಸಭಾಸದನಿಗೆ ಸಭೆಗೆ ಬರಲಿಕ್ಕೆ ಬೇಕೆಂದು ಒತ್ತಾಯಮಾಡಲು ಕೋರ್ಟುಗಳಿಗೆ ಅಧಿಕಾರವಿಲ್ಲ. ಮತ್ತು ಸಭಾಸದರ ಮೇಲೆ ಸಭಿಕಸ್ಥಾನ ಹೇತುವ ದಂಡನೀತಿಯನ್ನು ಉಪಯೋಗಿಸಲಿಕ್ಕೂ ಅಧಿಕಾರವಿಲ್ಲ.

ಆರ್ಡಿನನ್ಸು ತೆಗೆಯುವ ಅಧಿಕಾರ

ಶಾಸನ ಸಭೆಗಳು ಕೂಡದಿದ್ದಾಗ ಆರ್ಡಿನನ್ಸುಗಳನ್ನು ತೆಗೆಯಲಿಕ್ಕೆ ಗವರ್ನರ ಜನರಲ್ಲರಿಗೆ ಅಧಿಕಾರ ಕೊಟ್ಟಿದೆ. ಈ ಆರ್ಡಿನನ್ಸುಗಳು ಶಾಸನ ಸಭೆಗಳು ಕೂಡಿದ ತರುವಾಯ ಆರು ವಾರಗಳ ವರೆಗೆ ಅಮಲಿನಲ್ಲಿರಬೇಕು. ಅದಕ್ಕೂ ಮೊದಲೇ ರದ್ದಾಗಬೇಕಾದರೆ ಉಭಯ ಶಾಸನ ಸಭೆಗಳು ಆರ್ಡಿನನ್ಸುಗಳನ್ನು ಅಲ್ಲಗಳೆಯಬೇಕು. ಅಂದರೆ ಅವು ರದ್ದಾಗುವವು. ವಿಶಿಷ್ಟ ಜವಾಬ್ದಾರಿ ವಿಷಯಗಳ ಬಗ್ಗೆ ಆರ್ಡಿನನ್ಸ್ ಕಾಯಿದೆಗಳನ್ನು ಮಾಡಲಿಕ್ಕೆ ಸಹ ಗವರ್ನರ್ ಜನರಲ್ಲರಿಗೆ ಅಧಿಕಾರವಿದೆ. ಈ ಕಾಯಿದೆಗಳನ್ನು ಮಾಡಬೇಕಾದರೆ ಶಾಸನ ಸಭೆಗಳಿಗೆ ಒಂದು ತಿಂಗಳ ನೋಟೀಸು ಕೊಡತಕ್ಕದ್ದು. ಆರ್ಡಿನನ್ಸು ಕಾಯಿದೆಗಳು ಒಂದು ವರ್ಷದ ವರೆಗೆ ಅಮಲಿನಲ್ಲಿರಬೇಕು.

ಆಡಳಿತದ ಯಂತ್ರವು ನಿಂತುಹೋಗತಕ್ಕಂಥ ಪ್ರಸಂಗವು ಒದಗಿದರೆ ಫೆಡರಲ್ ಕೋರ್ಟಿನ ಅಧಿಕಾರವೊಂದನ್ನು ಬಿಟ್ಟು ಉಳಿದ ಎಲ್ಲಾ ಅಧಿಕಾರವನ್ನು ವಹಿಸಲು ಗವರ್ನರ ಜನರಲ್ಲರಿಗೆ ಅಧಿಕಾರವಿದೆ.

ವಾರ್ಷಿಕ ಆಯವ್ಯಯ ಪತ್ರಿಕೆ

ವಾರ್ಷಿಕ ಆಯವ್ಯಯ ಪತ್ರಿಕೆಯಲ್ಲಿ ಗವರ್ನರ ಜನರಲ್‌ರು ತಮ್ಮ ವಿಶೇಷ ಹೊಣೆಯನ್ನು ನೆರವೇರಿಸಲು ಯಾವನಾದರೂ ಬಾಬುಗಳನ್ನು ಸೇರಿಸಬೇಕಾದ್ದರೆ ಅವುಗಳನ್ನು ಅದರಲ್ಲಿ ನಿರ್ದಿಷ್ಟ ಮಾಡಿರಬೇಕು.

ಗವರ್ನರರ ಪ್ರಾಂತಗಳು

ಮದ್ರಾಸ್ ಮುಂಬಯಿ ಬಂಗಾಲ ಸಂಯುಕ್ತಪ್ರಾಂತ ಪಂಜಾಬ ಬಿಹಾರ ಮಧ್ಯಪ್ರಾಂತ ಆಸಾಮ ವಾಯವ್ಯ ಸರಹದ್ದು ಪ್ರಾಂತ ಒರಿಸಾ ಸಿಂಧ ಮತ್ತು ಕಾಯಿದೆಯ ಅನ್ವಯ ನಿರ್ಮಿಸಲ್ಪಡಬಹುದಾದ ಇತರ ಪ್ರಾಂತಗಳು ಗವರ್ನರರ ಅಧೀನದಲ್ಲಿರುವವು.

ವರ್ಹಾಡದ ಪ್ರಶ್ನೆ

ವರ್ಹಾಡದ ಸ್ವಾಮಿತ್ವದ ವಿಷಯದಲ್ಲಿ ನಿಜಾಮರ ಹಕ್ಕನ್ನು ಒಪ್ಪಿಕೊಳ್ಳಲಾಗಿದ್ದು ಕರಾರು ಉಭಯರಲ್ಲಿ ಆ ಬಗ್ಗೆ ವಿಚಾರವಿನಿಮಯ ನಡೆಯುವದರಿಂದ ಮಧ್ಯಪ್ರಾಂತ ಮತ್ತು ವರ್ಹಾಡ ಕೂಡಿ ಈ ಕಾಯಿದೆಯ ಅನ್ವಯ ಒಬ್ಬನೇ ಗವರ್ನರನ ಅಧೀನದಲ್ಲಿರತಕ್ಕದ್ದು. ಈ ಪ್ರಾಂತಕ್ಕೆ ಸಿ. ಪಿ. ಮತ್ತು ವರ್ಹಾಡ ಎಂದು ಕರೆಯಲಾಗುವದು. ಯಾವದೇ ಒಪ್ಪಂದವಾಗದಿದ್ದರೆ ಇಲ್ಲವೆ ಒಪ್ಪಂದವಾದರೂ ಅದರ ಪರಿಣಾಮವು ಏನೂ ಆಗದಿದ್ದರೆ ಎರಡೂ ಪ್ರಾಂತಗಳು ಮಧ್ಯಪ್ರಾಂತದಲ್ಲಿ ಗಣಿಸಲ್ಪಟ್ಟು ಅವಶ್ಯಕವಾದ ಹೊಸ ಕಾನೂನು ಮಾಡಲ್ಪಡುವದು.

ಪ್ರಾಂತಿಕ ಮಂತ್ರಿಗಳು

ಪ್ರಾಂತಗಳ ಮಂತ್ರಿಗಳ ಸಂಖ್ಯೆಯನ್ನು ನಿಯಮಿಸಿಲ್ಲ. ಆದರೆ ಅವರ ಸಂಬಳವು ಅವರ ನೌಕರಿಯ ಅವಧಿಯಲ್ಲಿ ಹೆಚ್ಚು ಕಡಿಮೆಯಾಗಕೂಡದು.

ಗವರ್ನರರ ವಿಶೇಷ ಅಧಿಕಾರ

ಯಾವತ್ತೂ ಪ್ರಾಂತಗಳ ಗವರ್ನರರ ವಿಶೇಷ ಹೊಣೆಯ ಅಧಿಕಾರವು ಸಮವಾಗಿ ಇರಬೇಕು. ಆದರೆ ಮಧ್ಯಪ್ರಾಂತ ಗವರ್ನರರಿಗೆ ತಮ್ಮ ಪ್ರಾಂತದ ಉತ್ಪನ್ನದಲ್ಲಿ ಯೋಗ್ಯಭಾಗವನ್ನು ವರ್ಹಾಡದ ಸಲುವಾಗಿ ಖರ್ಚುಮಾಡಲು ಹೆಚ್ಚಿನ ಅಧಿಕಾರವಿದೆ. ಇದರಂತೆ ಬಂಗಾಲ ಮತ್ತು ಆಸಾಮ ಪ್ರಾಂತಗಳ ಗವರ್ನರರಿಗೆ ಬಾಹ್ಯಪ್ರದೇಶಗಳ ಸಂಬಂಧದಲ್ಲಿ ವಿಶೇಷ ಹೊಣೆಯನ್ನು ಕೊಟ್ಟಿದೆ. ವಾಯವ್ಯ ಸರಹದ್ದು ಪ್ರಾಂತದ ಗವರ್ನರರಿಗೆ ಆ ಪ್ರದೇಶದ ಸಂಬಂಧದಲ್ಲಿ ವಿಶೇಷ ಜವಾಬ್ದಾರಿಯನ್ನು ಕೊಟ್ಟಿದೆ. ಗವರ್ನರರಿಗೆ ಯಾವುದಾದರೂ ಒಳಸಂಚು ಅತ್ಯಾಚಾರ ಇಲ್ಲವೆ ಕೃತ್ಯದಲ್ಲಿ ಸಾರ್ವಜನಿಕ ಶಾಂತತೆಗೆ ಭಂಗಬರುವ ಲಕ್ಷಣವಾಗಲಿ ಯಾದಿಯಿಂದ ಪ್ರಸ್ಥಾಪಿತವಾದ ಸರಕಾರವನ್ನು ಬುಡಮೇಲು ಮಾಡುವ ಯತ್ನವಾಗಲಿ ಕಂಡುಬಂದರೆ ಗವರ್ನರರು ಅವುಗಳನ್ನು ಎದುರಿಸಲು ತಮ್ಮ ವಿಶೇಷ ಅಧಿಕಾರವನ್ನು ಬಳಕೆಯಲ್ಲಿ ತಂದು ಕೈಕೆಳಗಿನ ಅಧಿಕಾರಿಗಳಿಗೆ ಅಂತಹ ಗಂಡಾಂತರವಿರುವವರೆಗೆ ಅದರಂತೆ ನಡೆಯಲು ಆಜ್ಞೆ ವಿಧಿಸಬಹುದು.

ಗವರ್ನರರು ಈ ತರಹದ ಅಧಿಕಾರವನ್ನು ವಹಿಸಿದಾಗ ಅವರು ತಮಗೆ ಇಷ್ಟಬಂದ ಅಧಿಕಾರಿಗೆ ಶಾಸನ ಸಭೆಯಲ್ಲಿ ಭಾಷಣಮಾಡಲಿಕ್ಕೂ ಅದರಲ್ಲಿ ಭಾಗತೆಗೆದುಕೊಳ್ಳಲಿಕ್ಕೂ ಆಜ್ಞೆಮಾಡಬಹುದು. ಹೀಗೆ ಅಧಿಕೃತನಾದ ಅಧಿಕಾರಿಯು ಚೇಂಬರಿನ ಸಭೆಯಲ್ಲಾಗಲಿ ಚೇಂಬರಗಳ ಸಂಯುಕ್ತಸಭೆಯಲ್ಲಾಗಲಿ ಶಾಸನ ಮಂಡಳಗಳ ಕಮಿಟಿಯ ಚರ್ಚೆಯಲ್ಲಾಗಲಿ ಭಾಗವಹಿಸಿ ಮಾತಾಡಬಹುದು. ಆದರೆ ಗವರ್ನರರು ಆ ಅಧಿಕಾರಿಯು ಯಾವ ಸಭೆಯಲ್ಲಿ ಭಾಗವಹಿಸತಕ್ಕದ್ದೆಂಬುದನ್ನು ನಿರ್ದಿಷ್ಟಮಾಡಬೇಕು. ಆದರೆ ಅವನಿಗೆ ಮತಾಧಿಕಾರವಿಲ್ಲ. (೩) ಈ ಕಲಮಿನಲ್ಲಿಯ ಕಾರ್ಯಗಳನ್ನು ಗವರ್ನರರೇ ನೆರವೇರಿಸತಕ್ಕದ್ದು.

ಪೋಲೀಸರು ರಹಸ್ಯ ಅಪರಾಧಗಳ ಮತ್ತು ಅಪರಾಧಿಗಳ ಸಂಬಂಧದಲ್ಲಿ ತಿಳಿದುಬಂದ ಮಾಹಿತಿಯನ್ನೂ ಆಗಿನ ಪತ್ರಗಳನ್ನೂ ಯಾವ ಪೋಲೀಸ ಅಧಿಕಾರಿಯೂ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಅಪ್ಪಣೆಯಿಲ್ಲದೆ ತಮ್ಮ ಖಾತೆಯಲ್ಲಿಯೂ ಬೇರೊಬ್ಬನಿಗೆ ತಿಳಿಸತಕ್ಕದ್ದಲ್ಲವೆಂದೂ ಗವರ್ನರರ ಅಪ್ಪಣೆಯಿಲ್ಲದೆ ಯಾರಿಗೂ ಸ್ಪಷ್ಟೀಕರಿಸತಕ್ಕದ್ದಲ್ಲವೆಂದೂ ಹುಕುಂ ಹೊರಡಿಸಲು ಗವರ್ನರರಿಗೆ ಅಧಿಕಾರವಿದೆ.

ಶಾಸನಸಭೆಗಳ ನಾಮಾಂತರ

ಪ್ರಾಂತಿಕ ಮತ್ತು ಮಧ್ಯವರ್ತಿ ಶಾಸನ ಮಂಡಳಗಳ ಹೆಸರುಗಳು ಬದಲಾಗುವವು. ಫೆಡರಲ್ ಸರಕಾರದಲ್ಲಿ ಮೇಲ್ಮನೆಗೆ ಕೌನ್ಸಿಲ್ ಆಫ್ ಸ್ಟೇಟ್ ಎಂದೂ ಕೆಳಮನೆಗೆ ಫೆಡರಲ್ ಅಸೆಂಬ್ಲಿಯೆಂದೂ ಪ್ರಾಂತಗಳಲ್ಲಿ ಕೆಳಮನೆಗೆ ಲೆಜಿಸ್ಲೇಟಿವ್ ಅಸೆಂಬ್ಲಿಯೆಂದೂ ಕರೆಯಲಾಗುವದು.

ಆಂಗ್ಲೋ ಇಂಡಿಯನ್ ಮತ್ತು ಯುರೋಪಿಯನ್ನರ ಶಿಕ್ಷಣ

ಆಂಗ್ಲೋ ಇಂಡಿಯನ್ ಮತ್ತು ಹಿಂದುಸ್ಥಾನದಲ್ಲಿ ವಾಸಿಸುವ ಯುರೋಪಿಯನ್ ಜನರ ಶಿಕ್ಷಣದ ಸಲುವಾಗಿ ಸಹಾಯದ್ರವ್ಯ ಕೊಡುವದು ಸಂರಕ್ಷಿಸಲ್ಪಟ್ಟಿದೆ. ಆದರೆ ಪ್ರಾಂತಿಕ ಅಸೆಂಬ್ಲಿಯ ೩/೪ ಸಭಾಸದರು ಅದಕ್ಕೆ ಸಮ್ಮತಿ ಕೊಡದಿದ್ದರೆ ಹಾಗೆ ಗ್ರ್ಯಾಂಟ್ ಕೊಡಲು ಬರುವದಿಲ್ಲ. ಆದರೆ ಅಲ್ಪಸಂಖ್ಯಾತರ ನ್ಯಾಯವಾದ ಹಿತಸಂರಕ್ಷಣೆಯ ಸಂಬಂಧದಲ್ಲಿ ಗವರ್ನರರಿಗೆ ವಿಶೇಷ ಅಧಿಕಾರ ಕೊಡಲ್ಪಟ್ಟಿದ್ದು ಆ ವಿಶೇಷ ಅಧಿಕಾರಕ್ಕೆ ಇದರಿಂದ ಏನೂ ಧಕ್ಕೆ ಬರುವದಿಲ್ಲ.

ಗವರ್ನರರು ಹಾಗೂ ಆರ್ಡಿನನ್ಸ್

ಆರ್ಡಿನನ್ಸುಗಳ ವಿಷಯದಲ್ಲಿಯೂ ಗವರ್ನರರ ಕಾಯಿದೆಯ ವಿಷಯದಲ್ಲಿಯೂ ಗವರ್ನರರಿಗೆ ಗವರ್ನರ ಜನರಲ್‌ರಂತೆಯೇ ಅಧಿಕಾರಕೊಟ್ಟಿದೆ. ಗವರ್ನರ ಜನರಲ್ಲರಂತೆ ಇವರೂ ಎರಡು ತರದ ಆರ್ಡಿನನ್ಸ್ ತೆಗೆಯಬಹುದು ಮತ್ತು ಆಡಳಿತವು ನಿಂತುಹೋಗತಕ್ಕಂಥ ಪ್ರಸಂಗ ಒದಗಿದರೆ ಹೈಕೋರ್ಟುಗಳ ಅಧಿಕಾರವೊಂದನ್ನು ಬಿಟ್ಟು ಉಳಿದ ಯಾವತ್ತೂ ಅಧಿಕಾರಗಳನ್ನು ಗವರ್ನರರು ತಮ್ಮ ಒಬ್ಬರ ಮೇಲೆಯೇ ಹೊತ್ತುಕೊಳ್ಳಬಹುದು.

ಚೀಫ್ ಕಮಿಶನರರ ಪ್ರಾಂತಗಳು

ಬ್ರಿಟಿಶ ಬಲೂಚಿಸ್ಥಾನ, ದಿಲ್ಲಿ, ಅಜಮೀರ ಮೇವಾಡ, ಕೊಡಗು, ಅಂದಮಾನ ಮತ್ತು ನಿಕೋಬಾರ ಬೆಟ್ಟಗಳು ಹಾಗೂ 'ಪ್ಯಾಂಟ್ಲಿ ಪಿಪ್ಲೋಡಾ' ಎಂದು ಕರೆಯಲ್ಪಡುವ ಪ್ರದೇಶ ಇವುಗಳು ಒಬ್ಬೊಬ್ಬ ಚೀಫ್ ಕಮಿಶನರರ ಅಧೀನದಲ್ಲಿರತಕ್ಕದ್ದು. ಈ ಚೀಫ್ ಕಮಿಶನರರನ್ನು ಗವರ್ನರ ಜನರಲ್ಲರು ತಮ್ಮ ಪರವಾಗಿ ಅವುಗಳ ಆಡಳಿತ ನಡೆಸಲು ನಿಯಮಿಸತಕ್ಕದ್ದು.

ಶಾಸನ ಸಭೆಯ ಅಧಿಕಾರಗಳು

ಸಂಯುಕ್ತ ಶಾಸನ ಸಭೆಗಳು ಯಾವದೇ ಸಂಸ್ಥಾನದ ಸಂಬಂಧವಾಗಿ ಆಗಲಿ ಆ ಸಂಸ್ಥಾನಗಳ ಪ್ರಜೆಗಳ ಸಂಬಂಧದಲ್ಲಿ ಆಗಲಿ ಕಾಯಿದೆ ಪಾಸು ಮಾಡಬೇಕಾದರೆ ಆ ಸಂಸ್ಥಾನದ ಆಜ್ಞಾಪತ್ರ ಮತ್ತು ಅದರ ಕರಾರುಗಳನ್ನು ಅನುಸರಿಸಿ ಕಾಯಿದೆ ಪಾಸು ಮಾಡಬೇಕು. ಸಂಯುಕ್ತ ಮತ್ತು ಪ್ರಾಂತಿಕ ಆಡಳಿತದ ಶಾಸನ ಸಭೆಯ ವಿಶೇಷಾಧಿಕಾರ ಸಂಬಂಧದಲ್ಲಿ ನ್ಯಾಯವು ಪ್ರಶ್ನವಾದರೆ ಅದನ್ನು ನಿರ್ಣಯಕ್ಕೆ ಗವರ್ನರ ಜನರಲ್ಲರಿಗೆ ಒಪ್ಪಿಸಬೇಕು.

ವೈದ್ಯಕೀಯ ಮತ್ತು ಇತರ ಉದ್ಯೋಗಗಳ ಅರ್ಹತೆಯ ಬಗ್ಗೆಯೂ ಕೆಲವು ಕಲಮುಗಳು ಸೇರಿಸಲ್ಪಟ್ಟಿವೆ. ಪ್ರಾಂತಗಳಿಗೆ ಮತ್ತು ಸಂಸ್ಥಾನಗಳಿಗೆ ಕೆಲವು ವಿಶಿಷ್ಟವಾದ ಹೆಚ್ಚಿನ ಹಕ್ಕುಗಳನ್ನು ಕೊಡುವ ಬಗ್ಗೆ ಪ್ರತ್ಯೇಕವಾದ ಒಂದು ಕಲಮು ಇದೆ.

ಸಂಯುಕ್ತ ಸರಕಾರ ಮತ್ತು ಸಂಸ್ಥಾನ

ಹಿಂದೀ ಸಂಸ್ಥಾನಗಳ ಸಂಬಂಧದಲ್ಲಿಯ ಬಾದಶಾಹಿ ಸರಕಾರದ ಕಾರ್ಯವನ್ನು ನೆರವೇರಿಸುವದಕ್ಕೆ ಸಂಯುಕ್ತ ಸರಕಾರವು ಬಾದಶಾಹಿ ಸರಕಾರಕ್ಕೆ ಹಣ ಕೊಡತಕ್ಕದ್ದು. ಮತ್ತು ಈಗ ಹಿಂದುಸ್ಥಾನ ಸರಕಾರಕ್ಕೆ ಹಿಂದೀ ಸಂಸ್ಥಾನಗಳಿಂದ ಸಿಗುತ್ತಿರುವ ಆದಾಯವು ಸಂಯುಕ್ತ ಸರಕಾರಕ್ಕೆ ಕೊಡಲ್ಪಡಬೇಕು. ಅದರಲ್ಲಿ ಕೆಲವಂಶವನ್ನಾಗಲಿ ಇಲ್ಲವೆ ಎಲ್ಲವನ್ನಾಗಲಿ ಬೇಕಾದಾಗ ಬಿಟ್ಟುಬಿಡಲು ಬಾದಶಹರಿಗೆ ಅಧಿಕಾರವಿದೆ. ಬಾದಶಹರು ಸಂಸ್ಥಾನದ ಆಜ್ಞಾಪತ್ರಕ್ಕೆ ತಮ್ಮ ಸಮ್ಮತಿಯನ್ನು ಕೊಟ್ಟಾಗ ಸಮ್ಮತಿಕೊಟ್ಟ ದಿನದಿಂದ ೨೦ ವರ್ಷಗಳವರೆಗೆ ಆ ಸಂಸ್ಥಾನದಿಂದ ತಮಗೆ ರೋಖ ಬರತಕ್ಕ ಆದಾಯವನ್ನು ಬಿಟ್ಟುಬಿಡಬಹುದು. ಸಂಯುಕ್ತ ಸರಕಾರದವರು ಸಂಯುಕ್ತ ಘಟನೆಯಲ್ಲಿ ಸೇರಿದ ಯಾವದೇ ಸಂಸ್ಥಾನದ ಸಲುವಾಗಿ ಕರಾರುಗಳಿಗೊಳಪಟ್ಟು ಸಾಲ ತೆಗೆಯಬಹುದು. ಇಲ್ಲವೆ ಆ ಸಂಸ್ಥಾನದವರು ಸಾಲ ತೆಗೆದಿದ್ದರೆ ಅದಕ್ಕೆ ಹೊಣೆಯಾಗಬಹುದು.

ಆಡಿಟರರು

ಹಿಂದುಸ್ಥಾನದ ಆಡಿಟರ ಜನರಲ್ ಮತ್ತು ಪ್ರಾಂತಿಕ ಆಡಿಟರ ಜನರಲ್ಲರನ್ನು ಬಾದಶಹರೇ ನಿಯಮಿಸತಕ್ಕದ್ದು.

ಶಾಸನ ಮಂಡಳಗಳು ಗವರ್ನರ ಜನರಲ್ಲರ ಮುಖಾಂತರ ಬಾದಶಹರಿಗೆ ಅಂತರ ಪ್ರಾಂತೀಯ ಕಾಯಿದೆ ಮಂಡಳ ಘಟಿಸಲು ಕೇಳಿಕೊಂಡರೆ ಹಾಗೆ ಮಾಡುವದಕ್ಕೆ ಬಾದಶಹರಿಗೆ ಅಧಿಕಾರವಿದೆ. ಅವರು ಅದರಲ್ಲಿ ಸಂಸ್ಥಾನ ಪ್ರತಿನಿಧಿಗಳೂ ಸೇರಿರಬಹುದಾಗುವಂತೆ ಕಲಮು ಸೇರಿಸಬಹುದು.

ಫೆಡರಲ್ ರೇಲ್ವೆ ಮಂಡಳಿ

ಫೆಡರಲ್ ರೇಲ್ವೆ ಮಂಡಳದಲ್ಲಿ ೭ ಜನ ಸಭಾಸದರಿರತಕ್ಕದ್ದು. ಇದರಲ್ಲಿ ಮೂವರನ್ನು ಗವರ್ನರ ಜನರಲ್ಲರು ನಿಯಮಿಸತಕ್ಕದ್ದು. ಮಂಡಳದ ಅಧ್ಯಕ್ಷಸ್ಥಾನಕ್ಕೆ ೭ ಜನ ಸಭಾಸದರಲ್ಲಿ ಯಾರಾದರೂ ಒಬ್ಬರು ನಿಯಮಿಸಲ್ಪಡುವರು. ಈ ಅಧಿಕಾರವಂತೂ ಗವರ್ನರ್ ಜನರಲ್ಲರಿಗೇನೇ ಇದೆ.

ಫೆಡರಲ್ ಕೋರ್ಟ

ಫೆಡರಲ್ ಕೋರ್ಟಿನಲ್ಲಿ ಒಬ್ಬ ಚೀಫ್ ಜಸ್ಟಿಸರೂ ೬ ಜನ ಪ್ಯೂನಿ ಜಡ್ಜರೂ ಇರತಕ್ಕದ್ದು. ಹಾಯಕೋರ್ಟ ಜಡ್ಜರ ನೌಕರಿಯ ಅವಧಿಯನ್ನು ಅವರ ವಯಸ್ಸಿನ ೬೦ ವರ್ಷದ ವರೆಗೆ ಮರ್ಯಾದಿತ ಮಾಡಿದ್ದರಿಂದ ಇವರ ನೌಕರಿಯ ಅವಧಿಯನ್ನು ವಯಸ್ಸಿನ ೬೫ ನೆಯ ವರ್ಷದ ವರೆಗೆ ನಿಯಮಿತ ಮಾಡಿದೆ. ಆಯ್. ಸಿ. ಎಸ್. ಅಧಿಕಾರಿಗಳನ್ನು ಹಾಯಕೋರ್ಟ ಇಲ್ಲವೆ ಫೆಡರಲ್ ಕೋರ್ಟಿಗೆ ಜಡ್ಜರೆಂದು ನಿಯಮಿಸಬಹುದು.

ಈ ಬಿಲ್ಲಿನಲ್ಲಿ ಸದ್ಯದ ಹಿಂದುಸ್ಥಾನ ಸರಕಾರದ ಕಾಯಿದೆಯ ಕಲಮುಗಳು ಅವುಗಳ ತಿದ್ದುಪಡಿಗಳೊಂದಿಗೆ ಸಮಾವಿಷ್ಟವಾಗಿಸಲ್ಪಟ್ಟಿವೆ. ಸಂಯುಕ್ತ ಘಟನೆಯು ಪ್ರಸ್ಥಾಪಿತವಾಗುವ ವರೆಗೆ ಇವೆಲ್ಲ ಬಿಲ್ಲಿನಲ್ಲಿ ಉಳಿಯುವವು.

(ಸಂ. ಕ)

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಅಕ್ಷ್ಯಾಂತರ ಅನ್ಯಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೨೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ

ಬೆಲೆ ೧೨ ಆಣೆ ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಪ್ರಸಿದ್ಧವಾದುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ರಚನೆಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೆ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೩೦ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೨ ಪುಟಗಳಷ್ಟಾಗಿದೆ ಈ ಮಹಾಗ್ರಂಥದ ಮುದ್ರಣಕ್ಕಾಗಿ ಪಂಡಿತರು ವಿಶೇಷ ಪ್ರಯತ್ನವನ್ನು ಪ್ರಯೋಗಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮ ಸ್ವಾಮಿಗಳಾದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ಉಪಯೋಗಿಸುವುದಕ್ಕೋಸ್ಕರ ತಮ್ಮ ಅಮೂಲ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೪೪೪ ಪುಟಗಳಿಂದ ಕೂಡಿದ್ದು ಉಚ್ಚ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುಮುಕ್ಷುಗಳಿಗೆ ದೃಷ್ಟಿಯನ್ನಿಡುವ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ** ಗೆ ದೊರೆಯುವದು ವಿ ಪಿ ಚಾರ್ಜು ೧ ರೂ ೫ ಆಣೆ ಪ್ರತ್ಯೇಕ

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಗಳು

ಧಾತುಪುಷ್ಟಿಲೇಹ.

1 ಇದು ಬಲಹೀನ ದೇಹಗಳಿಗೆ ಉತ್ಕೃಷ್ಟವಾದ ಔಷದಿ, ಇದರ ಸೇವನೆಯಿಂದ ಮಲಬದ್ಧತೆ, ಚಳಿಜ್ವರ, ಅಜೀರ್ಣ, ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶಕ್ತಿ, ಕಾಲು ಕೀಲುಗಳ ರಕ್ತಹೀನತೆ ಬೆನ್ನು ನೋವು ಸೊಂಟನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ ಸ್ವಪ್ನಾವಸ್ಥೆ ದಾತ ಮೂತ್ರದೋಷ ಪ್ರಮೇಹರೋಗಗಳು, ರೋಗದಿಂದ ದುರ್ಬಲವಾಗಿ ಸಂಯೋಗಶಕ್ತಿಯು ಕುಂದಿರುವಿಕೆ, ಶರೀರದ ಉಷ್ಣತೆ ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಸ್ಫೂರ್ತಿಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು ದೊಡ್ಡ 1ಕ್ಕೆ 2—8—0 3ಕ್ಕೆ 7—0—0

2 **ಮೇಹಕುಠಾರಪ್ರಮೇಹ** ಮೂತ್ರ ಹೋಗದಿರುವಿಕೆ ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು ಮೂತ್ರ ಆಗಾಗ್ಗ ಒಂದು ಹನಿಯ ಶಿಕ್ಷೆ ಸಾಮರ್ಥ್ಯವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು ಡಬ್ಬಿ 1ಕ್ಕೆ 2—8—0 3ಕ್ಕೆ 7—0—0.

3 **ಮಲೇರಿಯಾ ವಿನಾಶಿನಿ** ಇದು ಮಲೇರಿಯಾ ದಿನಂಪ್ರತಿ ಬರುವ ಜ್ವರ, ಚಳಿಜ್ವರ ಇಂಫ್ಲುಯೆಂಜಾ, ನ್ಯೂಮೋನಿಯಾ, ಕಫಜ್ವರ, ಜ್ವರಗೆಡ್ಡೆ ಮುಂತಾದವುಗಳಿಗೆ ದಿವ್ಯೌಷದಿ ಬಾಟ್ಲಿ 1ಕ್ಕೆ 1—8—0 ಸಣ್ಣ ಬಾಟ್ಲಿಗೆ 0—13—0. 3ಕ್ಕೆ 4—0—0 ಸಣ್ಣ ಬಾಟ್ಲಿ 3ಕ್ಕೆ 2—4—0

ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕುದಾದ ಔಷದಿ ರವಾನಿಸಲಾಗುತ್ತೆ ಕ್ಯಾಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಅಂಡ್ ಸನ್ಸ್

ಔಷಧಿ ಸಿಕ್ಕುವ ಸ್ಥಳಗಳು— ಆಯುರ್ವೇದಿಕ್ ಫಿಜಿಸಿಯನ್, ರಥಬೀದಿ ನಂಬರು 271 ಮಂಗಳೂರು

ಮೆಸ್ಸರ್ಸ್ ಪೀಟರಸ್ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ

9

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೊಂ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಅವರಿವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಬಾಧಕ ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು ಈ ಅವಶ್ಯಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ, ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂದೂರ	೧	೬—೦—೦
ಶಿಲಾಸಿಂದೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೬—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್— ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಅ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೧೨\೧೦ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ನಾರದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೬\೧೪ ಬೆಲೆ	೦—೧—೬
ಶ್ರೀ ಕಾಶೀಜಗದ್ಗುರುಗಳಾದಿಯಾಗಿ ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪\೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪\೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦\೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಿಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುಲಿಂಗವನ್ನು ಧಾರುಣವಾದಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಹಾಪುರದಲ್ಲಿ ನೆರವೇರಿದ ಉಜ್ಜಯನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೦—೯

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಹತ್ತಿಕೊಂಡ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗದು.

ಒಂದು ಡಬ್ಬಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦ ೬ ೦
ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ. ೬ ಆಣೆ

ನಿಮ್ಮ ಎಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[೬] ಪೋ ಬಾ ೫೧೦ ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೪ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ) ..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ಪ್ರಮಥತತ್ತ್ವದರ್ಶನ (೪ನೆಯ ಆವೃತ್ತಿ) ..	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ವೀರಶೈವಮತಪಿಪಾಸಾಂತಾ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)...	೪ ಆಣೆ
ವೈದಿಕಪಾಶುಪತರಹಸ್ಯ	೪ ಆಣೆ
ಆಗಮಪರಿಚ್ಛೇದ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಒಸವಧರ್ಮಾಂತ ದಿವಾಕರ (೨ನೆಯ ಆವೃತ್ತಿ) .. .	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As
ವೀರಶೈವರತ್ನ (೨ನೆಯ ಆವೃತ್ತಿ) ...	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ...	೧೨ ಆಣೆ
ಶಿವಾಸೂತ್ರ ಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ...	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ) ..	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ...	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೧ ಪುಟ)	೮ ರೂ
लिंगधारणचंद्रिका (संस्कृत)	३
महानारायणोपनिषत् (वीरशैवभाष्य-संस्कृत)	१
वीरशैवेंदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಾಪಕ ವೇ|| ಬ್ರ|| ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No. M. 2266 ‖ ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು ‖ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ‖
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ‖

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೯ ಕ್ಕೆ ೧ ಪೈ ಪರಸ್ಥಳದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ ನೇ ಫೆಬ್ರವರಿ ೧೯೩೫ [ಸಂಚಿಕೆ ೪೦

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ವೀರಶೈವ ಸಮಾಜದವರಿಗೆ ತಿಳಿಯಪಡಿಸುವದೇನಂದರೆ—

ಶ್ರೀ ಜಗದ್ಗುರು ಶ್ರೀಶೈಲ ಪರ್ವತ ಶ್ರೀ ಗಿರಿರಾಜ ಸೂರ್ಯಸಿಂಹಾಸನ ಪೀಠದ ಹೆಸರಿನ ಮೇಲೆ ದೂರ ದೂರ ಪ್ರಾಂತ್ಯಗಳಲ್ಲಿ ಅನಧಿಕಾರಿಗಳು ಸಂಚರಿಸುತ್ತ ಒಕ್ಕಲಿಗರಿಗೆ ಮೋಸಗೊಳಿಸುತ್ತ ಚಕ್ರ [illegible] ಪತ್ರಿಕೆಗಳನ್ನು ತೆಗೆದು ದಲಾಲಿ ಜನಗಳ ಹಿಸ್ಸೆತ್ತಿನಂಥ ಹಳ್ಳಿಹಳ್ಳಿಗಳಲ್ಲಿ ತಿರುಗುತ್ತ ಜಗದ್ಗುರು ಪೀಠದ ಗೌರವಕ್ಕೆ ಕುಂದಕ ತರುತ್ತ ದಲಾಲಿ ಜನರ ಕಾನಾಸ ಮಹಾಜಾತಾ ಬಂದಷ್ಟು ದುಡ್ಡನ್ನು ದುರುಪಯೋಗಪಡಿಸುತ್ತಾರೆಂದು ಗೊತ್ತು ಆಗುತ್ತದೆ

ಈ ಮಹಾಪೀಠದ ಪತ್ರಿಕೆಯು ಆಸೆ ವಗೈರೆ ಹೆಚ್ಚಿನ ಸಹಿತ ಸಮೇತ ಒಕ್ಕಲಿಗ ಚಿಲ್ಲಾಕ್ಕೆ ತಲ ಹೀಗೆ ತ್ತದ್ದಲ್ಲದೆ ಬೇರೆಕಡೆಗೆ ಕಳುಹುವಲ್ಲ ಅದುದರಿಂದ ಅನಧಿಕಾರಿ ಗುಂಪಿನವರು ಬಂದರೆ ಅವರಿಗೆ ಕಾಣಿಕೆ ವಗೈರೆ ಕೊಟ್ಟು ಯಾರೂ ಮೋಸಹೋಗಬಾರದು

N B.—ಮತ್ತು ಚಿತ್ರದುರ್ಗ ತಾಲ್ಲೂಕು ಕರ್ಣಾಟಕ ವೀರ ಭಿಕ್ಷಾವೃತ್ತಿ ಮಠದ ಜಿ. ಎಂ. ಚನ್ನಬಸಯ್ಯನವರು, ವೀರಭದ್ರಯ್ಯನವರು ಇವರುಗಳಿಗೆ ಓಂಪದರ ಪತ್ರ ಮಾಡಿ ಕಳುಹಿಸಿದ್ದಂತೆ ನಡೆಯದೆ ಪರಸ್ಪರ ಪತ್ರಿಕೆ ಕ್ರಮಕ್ಕೆ ತಪ್ಪಿ ನಡೆದದ್ದರಿಂದ ಇವರ ಬಂಗಾರಗಳನ್ನು ಆತಂಕಪಡಿಸಿದ್ದಾಗಿದೆ ಗುಂತಕಲ್ [illegible] ॥ ॥ ಸಂಸ್ಥಾನದ ವತಿಯಿಂದ ಪತ್ರ ಬಾರದೆ ಯಾರಿಗೂ ಕಾಣಿಕೆ ವಗೈರೆ ಕೊಟ್ಟು ದುರುಪಯೋಗದ ಪಾಲಿಗೆ ಭಾಗಿಗಳಾಗಬಾರದೆಂದು ಪ್ರಕಟಿಸಿದೆ

R. C. Aradhya Swamy,
Hirematt A
ಶ್ರೀ ಜಗದ್ಗುರು ಶ್ರೀಶೈಲ ಪರ್ವತ
ಸಂಸ್ಥಾನ ಏಜೆಂಟ್

ಕೊಟ್ಟೂರಗುಡ್ಡದ ಶ್ರೀ ವೀರಭದ್ರಸ್ವಾಮಿಯ ಮಹಾರಥೋತ್ಸವ.

ಜಗಳೂರು ತಾಲ್ಲೂಕು ಕೊಟ್ಟೂರಗುಡ್ಡದ ಶ್ರೀ ವೀರಭದ್ರಸ್ವಾಮಿಯ ಮಹಾರಥೋತ್ಸವವು ಮಾಮೂಲು ಪದ್ಧತಿಯಂತೆ ಈ ಭಾವನಾಮಸಂವತ್ಸರದ ಫಾಲ್ಗುಣ ಬಹುಳ (೨೧-೩-೩೫) ನೆಯ ಗುರುವಾರ ವಿಜೃಂಭಣೆಯಿಂದ ನಡೆಯುವುದು ಇಲ್ಲಿ ನೀರು ನೆರಳಿನ ಅನುಕೂಲವು ಚೆನ್ನಾಗಿದೆ ಈ ಪ್ರದೇಶದಲ್ಲಿ ಯಾವವಿಧವಾದ ಸಾಂಕ್ರಾಮಿಕ ರೋಗಗಳೂ ಇಲ್ಲ ಈ ಸ್ಥಳವು ಅರಣ್ಯವಾಗಿ ಯಾತ್ರಿಕರಿಗೆ ಮನೋಹರವಾಗಿಯೂ ಇರುವುದು ಸರ್ವರಿಗೂ ತಿಳಿದದ್ದೇ ಆದುದರಿಂದ ಸದ್ಭಕ್ತ ಮಹಾಶಯರು ದಯವಿಟ್ಟು ಬಂದು ಶ್ರೀ ಸ್ವಾಮಿಯ ದರ್ಶನಸೇವಾದಿಗಳನ್ನು ಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ.

ದೇವಸ್ಥಾನದ ಮೋಹಿನಿಬಾಂಗ್ ಕಮಿಟಿ ಸೆಕ್ರೆಟರಿ
ಕೆ. ರುದ್ರಪ್ಪ

ವಿಜ್ಞಾನವು ಸತ್ತವರನ್ನು ಬದುಕಿಸಬಲ್ಲದೇ?

ಲೇಖಕರು—ಶ್ರೀಯುತ ಸಿ. ಎನ್. ರಾಮಚಂದ್ರಯ್ಯ ಎಂ. ಎ. ಎಲ್. ಟಿ.,

ಪಾಶ್ಚಾತ್ಯ ವೈಜ್ಞಾನಿಕರು ಸತ್ತವರನ್ನು ಪುನಃ ಬದುಕಿಸಬಹುದೆಂದು ಭಾವಿಸುತ್ತಿರುವರು ಅವರ ಪ್ರಯೋಗಗಳಿಂದ ಸತ್ತವರ ಹೃದಯವನ್ನು ಪುನಃ ಕೆಲಸಮಾಡುವ ಹಾಗೆ ಮಾಡಬಹುದೆಂದು ತಿಳಿಯುತ್ತದೆ ಕ್ಯಾಲಿಫೋರ್ನಿಯಾ, ರಷ್ಯಾ, ಸ್ವಿಟ್ಜರ್‌ಲಂಡ್ ಮೊದಲಾದ ದೇಶಗಳಲ್ಲಿ ಈ ಪ್ರಯೋಗಗಳು ಅನೇಕವಾಗಿ ನಡೆದಿವೆ ಈ ಪ್ರಯೋಗಗಳ ಮುಖ್ಯಾಂಶಗಳನ್ನು ಮಾತ್ರ ಈ ಲೇಖನದಲ್ಲಿ ಸೂಚಿಸುತ್ತೇನೆ

ಕ್ಯಾಲಿಫೋರ್ನಿಯಾ ದೇಶದ ಡಾಕ್ಟರ್ ರಾಬರ್ಟ್ ಕಾರ್ನಿಷ್‌ರ ಪ್ರಯೋಗಗಳು ಇವುಗಳಲ್ಲಿ ಅತಿಮುಖ್ಯವಾದ ಪ್ರಯೋಗಗಳು. ಇವು ಆರ್ ನಾಯಿಯ ಮೇಲೆ ನಡೆದುವು ಒಯುವಾಗುವ ಶ್ವಾಸನಿರೋಧದಿಂದ ಕೊಂದಿದ್ದ ತನ್ನ ನಾಯಿಗೆ ಅದು ಸತ್ತ ನಾಲ್ಕು ನಿಮಿಷಗಳಲ್ಲಿ ಪುನಃ ಪ್ರಾಣದಾಯಕ ದ್ರಾವಕಗಳನ್ನು ರಕ್ತನಾಳಗಳಿಗೆ ಕೂಡಿಸುವುದರಿಂದ ಸತ್ತ ನಾಯಿಯ ಹೃದಯವು ಕೆಲಸಮಾಡಲು ಪ್ರಾರಂಭಿಸಿತು

ಎರಡು ದಿನಗಳಲ್ಲಿ ಪುನಃ ಅದು ತನ್ನ ಆಹಾರವನ್ನು ತಾನೇ ತೆಗೆದುಕೊಳ್ಳಲಾರಂಭಿಸಿತು ಬಂಡೆರಡು ವಾರಗಳಲ್ಲಿ ಮೊದಲಿದ್ದ ಸ್ಥಿತಿಗೆ ಬಂದಿತು ಈ ಪ್ರಯೋಗದ ಬಲದಿಂದ ಡಾಕ್ಟರ್ ಕಾರ್ನಿಷ್‌ರವರು ವಿದ್ಯುತ್ ಮೊದಲಾದವುಗಳಿಂದ ಅಕಸ್ಮಿಕವಾಗಿ ಸತ್ತವರನ್ನು ಪುನಃ ಬದುಕಿಸಬಹುದೆಂದು ತಿಳಿಸುವರು ಹೀಗೆ ಪುನರ್ಜನ್ಮವನ್ನು ಹೊಂದಿದವರ ಮನಶ್ಶಕ್ತಿಯಲ್ಲಿ ವ್ಯತ್ಯಾಸವನ್ನು ಹೊಂದಬಹುದೆಂದು ಕೆಲವರ ಅಭಿಪ್ರಾಯವಾಗಿದೆ

ನಾಯಿಗಳ ವಿಷಯದಲ್ಲಿ ಯಾವ ವಿಶೇಷವಾದ ವ್ಯತ್ಯಾಸವೂ ಕಾಣಿಸಲಿಲ್ಲ ಮನುಷ್ಯರ ವಿಷಯದಲ್ಲಿ ಹೃದಯದ ಕೆಲಸವು ನಿಂತಕೂಡಲೇ ಮೊದಲಿನ ನರಗಳು ಚೈತನ್ಯವಿಹೀನವಾಗುತ್ತವೆಂದೂ, ಆ ಕಾರಣದಿಂದ ಮೊದಲಿದ್ದ ಶಕ್ತಿಯು ಪುನರ್ಜನ್ಮದಲ್ಲಿ ಇರುವುದಿಲ್ಲವೆಂದೂ ಊಹಿಸುತ್ತಿರುವರು ಈ ಪ್ರಯೋಗಗಳನ್ನು ಮನುಷ್ಯವರ್ಗದ ಮೇಲೆ ಪ್ರಯೋಗಿಸುವುದಕ್ಕೆ ಸರಕಾರದವರ ಅನುಮತಿಯನ್ನು ಕೇಳಿದ್ದಾರೆ

ರಷ್ಯಾದೇಶದ ವೈಜ್ಞಾನಿಕರಾದ ಡಿಕ್‌ಹಾಫಿಸ್ ಎಂಬವರು ಆತ್ಮಹತ್ಯೆಯಿಂದ ಸತ್ತವರನ್ನು ಕೃತಕ ಹೃದಯದಿಂದ ಪರಿಶುದ್ಧವಾದ ರಕ್ತವನ್ನು ಕೊಟ್ಟು ಕ್ಷಣಕಾಲ ಬದುಕಿಸಿದರು. ಮೃತನ ಶರೀರವನ್ನು ಪ್ರಯೋಗಶಾಲೆಯಲ್ಲಿ ಪ್ರಯೋಗಗಳಿಗೆ ಗುರಿಮಾಡಿದ್ದರಿಂದ, ಮೃತನು ಕ್ಷಣಕಾಲ ಮಾತ್ರ ಚೈತನ್ಯವನ್ನು ತೋರಿಸಿ ಕಣ್ಣು ಬಿಟ್ಟು ನೋಡಿ ನಿರ್ಜೀವನಾದನು. ಆತನ ಪ್ರಯೋಗಗಳು ಅತಿ ಸುಲಭವಾದವು

ಮೃತನ ರಕ್ತನಾಳವನ್ನು ಛೇದಿಸಿ ಕೃತಕ ಹೃದಯಕ್ಕೆ ಸೇರಿಸುವುದರಿಂದ ಮೃತನ ಶರೀರದಲ್ಲಿರುವ ಮಲಿನ ರಕ್ತವನ್ನು ಕೃತಕಹೃದಯವು ವಿದ್ಯುತ್ ಯಂತ್ರದ ಸಹಾಯದಿಂದ ಹೀರಿ, ಶುದ್ಧಮಾಡಿ ಪುನಃ ಶುದ್ಧರಕ್ತನಾಳಕ್ಕೆ ಕಳುಹಿಸಿತು ಶುದ್ಧರಕ್ತವು ಹೃದಯವನ್ನು ಪುನರುಜ್ಜೀವನನ್ನಾಗಿ ಮಾಡಿತು ಈ ಪ್ರಯೋಗಗಳಿಂದ ಒಂದು ವಿಷಯವು ಸಿದ್ಧಾಂತವಾಗುತ್ತದೆ ಸತ್ತಕೂಡಲೇ ಶರೀರದ ಎಲ್ಲಾ ಭಾಗಗಳು ಚೈತನ್ಯಹೀನವಾಗುವುದಿಲ್ಲ ಮೊದಲು ಪ್ರಧಾನಾಂಗಗಳಾದ ಹೃದಯ, ಮೆದುಳು ಇವು ನಿರ್ಜೀವವಾಗುತ್ತವೆ ಕ್ರಮೇಣ ಶರೀರದ ಇತರ ಭಾಗಗಳು ಚೈತನ್ಯದ ಗುಣಗಳು ಸಾಯುತ್ತವೆ ಇವುಗಳು ಸಾಯುವುದಕ್ಕೆ ಮೊದಲೇ ಪುನಃ ಅವುಗಳನ್ನು ಹೃದಯಕ್ಕೆ ಕೂಡುವುದಕ್ಕೆ ಸಾಧ್ಯವಾದರೆ ಮೃತನ ಹೃದಯವು ಕೆಲಸಮಾಡಲಾರಂಭಿಸಿ ಪುನಃ ಶರೀರದಲ್ಲಿ ಚೈತನ್ಯವು ಉಂಟಾಗಬಹುದು

ವೈದ್ಯಶಾಲೆಗಳಲ್ಲಿ ಶಸ್ತ್ರಚಿಕಿತ್ಸೆಯು ನಡೆಯುತ್ತಿರುವಾಗ ರೋಗಿಯ ಹೃದಯವು ಹಠಾತ್ತಾಗಿ ಕೆಲಸ ಮಾಡದೆ ನಿಲ್ಲುವುದು ಸಾಧಾರಣವಾಗಿದೆ ಆ ಸಂದರ್ಭಗಳಲ್ಲಿ "ಎಡ್ರಿನಲಿನ್" ದ್ರಾವಕವನ್ನು ರಕ್ತಕ್ಕೆ ಕೂಡುವುದರಿಂದ ಎಷ್ಟೋ ರೋಗಿಗಳು ಬದುಕುತ್ತಿರುವರು ವಿದ್ಯುತ್ತಿನಿಂದ ಸತ್ತವರನ್ನು ಸಹ ಬದುಕಿಸಲು ಸಾಧ್ಯವಾಗಿದೆ

ಇತ್ತೀಚೆಗೆ ಶಾಸ್ತ್ರಜ್ಞರು ಸಾವನ್ನು ನಿರೋಧಿಸುವ ರಸಾಯನಿಕ ವಸ್ತುಗಳನ್ನು ಕಂಡುಹಿಡಿಯುತ್ತಿರುವರು 'ಸೋಡಿಯಂ ಬೊಡಸೇಟ್' ಎಂಬುದು ಸಾವನ್ನು ಎರಡು ವರ್ಷದ ಕಾಲ ನಿರೋಧಿಸುವ ಚೈತನ್ಯವನ್ನುಂಟುಮಾಡುತ್ತದೆ ಎಂದು ತಿಳಿದುಬಂದಿದೆ

ಪೌರಾಣಿಕವಾದ ಪ್ರಾಣದಾನವು ಈಚೆಗೆ ವೈಜ್ಞಾನಿಕರ ಪ್ರಯೋಗಗಳಿಂದ ಸಾಧ್ಯವಾಯಿತು. ವೈಜ್ಞಾನಿಕರು ಸಾವನ್ನು ಅಡ್ಡಿಮಾಡುವುದಕ್ಕೆ ಸಾಧ್ಯವಾದರೆ, ಪ್ರಪಂಚದ ಸ್ಥಿತಿಗತಿಗಳು ವ್ಯತ್ಯಾಸವನ್ನು ಹೊಂದಬಹುದು. ಆದರ್ಶಸ್ಥಿತಿಯು ಕ್ರೂರವಾಗಬಹುದು ಪ್ರಪಂಚದಲ್ಲಿ ಹುಟ್ಟಿದವರೆಲ್ಲರೂ ಸಾವನ್ನು ನಿರೋಧಿಸುವ ಪ್ರಯತ್ನಮಾಡಿದರೆ, ಇದರಲ್ಲಿ ಸುಖಕ್ಕಿಂತ ದುಃಖವು ಹೆಚ್ಚಬಹುದು ಆದರೂ ಸಾವನ್ನು ಗೆಲ್ಲುವುದೇ ನಮ್ಮ ಆದರಣೀಯವಾದ ಆಶೆ

(ಸ. ಜೀ.)

ಕಳೆದವಾರ ಮೈಸೂರು ಹೈಕೋರ್ಟಿನವರು ಒಂದು ಅಪೀಲಿನಲ್ಲಿ ತೀರ್ಮಾನಹೇಳುತ್ತ ಮೈಸೂರು ಸಂಸ್ಥಾನದಲ್ಲಿ ಹಿಂದೂ ಜನಾಂಗದವರು ಮಕ್ಕಳನ್ನು ದತ್ತಸ್ವೀಕಾರ ಮಾಡುವಂತೆ ಕ್ರಿಶ್ಚಿಯನ್ ಜನಾಂಗದವರು ಮಾಡುವ ದತ್ತಸ್ವೀಕಾರವೂ ನ್ಯಾಯಸಮ್ಮತವಾದುದೆಂದೂ ಅಂಥ ದತ್ತಸ್ವೀಕಾರವು ಊರ್ಜಿತವಾಗತಕ್ಕದೆಂದೂ ತೀರ್ಮಾನಿಸಿರುತ್ತಾರೆ.

ಪತ್ರವ್ಯವಹಾರ.

[illegible] ಪತಿ ಕಾರ್ಕತರ [illegible] ವನ್ನು ಪರ್ವರು [illegible]

ಶ್ರೀ ಜಗದ್ಗುರು ಪಂಚಾಚಾರ್ಯ [illegible]

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ೧೦೮ ಜಗದ್ಗುರು ವೀರಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಶುಭಾಗಮನ

ಶ್ರೀ ಪೂಜ್ಯಪಾದರು ಶ್ರೀ ಮಾ [illegible] ಸೋಮವಾರಕ್ಕೆ ಎಳಂದೂರು ನಗರಕ್ಕೆ ತಾ. ೧೮-೨-೧೯೩೫ ಭಾನುವಾರ ಬೆಳಗಿನ ಹತ್ತು ಘಂಟೆಗೆ [illegible] ಸಕಲ ಬಿರುದಾವಳಿ ಸಮೇತ ಚತುರಂಗಬಲದೊಡನೆ [illegible] ಈ ಪುರವು ಉತ್ಸವಕ್ಕಾಗಿ ವಿಶೇಷವಾಗಿ [illegible] ಶ್ರೀ [illegible] ಶ್ರೀ ಷಡಕ್ಷರ ಮಠ [illegible] ಹಿಂದ ಮೈಸೂರು [illegible] ಅಲಂಕರಿಸಲ್ಪಟ್ಟು [illegible] ಈ ನಗರದಲ್ಲಿ ನೆರವೇರಿದ ಮಹೋತ್ಸವಕ್ಕೆ ಸಾವಿರಾರು ಜನರು ಆಗಮಿಸಿದ್ದರು. ಶ್ರೀಮಾನ್ [illegible] ನವರು ಮುಂತಾದವರು [illegible] ಅಮಲ್ದಾರ್ ಸಾಹೇಬರು [illegible] ಸ್ಪೆಕ್ಟರ್ ಸಾಹೇಬರು ಮುಂತಾದ [illegible] ಆಗಮಿಸಿದ್ದರು. ಶ್ರೀಗಳವರು [illegible] ಸರ್ವರ [illegible] ಅಂದೋಲಿಕೆಯನ್ನಾರೋಹಿಸಿದರು. ಜನಸಮುದಾಯದಿಂದ [illegible] ಪಂಚಾಚಾರ್ಯರ ಜಯಘೋಷಪೂರ್ವಕ [illegible] ಮಹೋತ್ಸವವು ಪುರವೀಧಿಗಳಲ್ಲೆಲ್ಲಾ ಅಸಾಧಾರಣ ವೈಭವದಿಂದ ನೆರವೇರಿತು. ಈ ಮಹೋತ್ಸವವು [illegible] ಕೂಡ [illegible] ಯನ್ನು ಹುಟ್ಟಿಸುತ್ತಿದ್ದಿತು. ಗುರುಸೇವೆಗೆ ಅಡ್ಡಾಗುವ ಪಾಪಿಯುಂಟೇ? ಈ ರೀತಿ ಅತ್ಯುತ್ಸಾಹದಿಂದ ಬರಗಿ [illegible] ಯ್ಯನವರ ಭವ್ಯಭವನಕ್ಕೆ ಬಂದ ಕೂಡಲೆ ಶ್ರೀಗಳವರು ಅಂದೋಲಿಕೆಯಿಂದವತರಿಸಿ ಸಾಲಂಕೃತ ದಿವ್ಯಭವನಮಧ್ಯದಲ್ಲಿ ವಿರಾಜಿಸುತ್ತಿದ್ದ ಸಿಂಹಾಸನವನ್ನಾರೋಹಿಸಿದರು. ಬಳಿಕ ಸಮಾಜದವರಾಗಿ ಶ್ರೀಮಾನ್ ಎಲ್ ಶಿವಣ್ಣನವರು ವಿಜ್ಞಾಪನಾಪತ್ರಿಕೆಯನ್ನೋದಿ ಶ್ರೀಸನ್ನಿಧಾನಕ್ಕೆ ಸಮರ್ಪಿಸಿದರು. ಎಳಂದೂರಿನ ವಿದ್ವಾಂಸರು ಶ್ರೀ [illegible] ಶಾಸ್ತ್ರಿಗಳು ಬರೆದುಕೊಂಡು ಬಂದಿದ್ದ ಸಂಸ್ಕೃತಪದ್ಯಗಳನ್ನೋದಿ ಸಮರ್ಪಿಸಿದರು. ಮಹದ್ವಾಧೀಯ [illegible] ವಿಜ್ಞಾಪನಾಪತ್ರಿಕೆಯನ್ನೋದಿ ತಮ್ಮ ಆನಂದವನ್ನು ವ್ಯಕ್ತಗೊಳಿಸಿದರು. ಶ್ರೀ [illegible] ಸನ್ನಿಧಿಯವರು ಸಂಸ್ಕೃತ ಹಿಂದಿ ಕನ್ನಡ ಭಾಷೆಗಳಿಂದ ಆವರವರ ಪ್ರಾರ್ಥನೆಗೆ ಸಂತೋಷದ ಉತ್ತರವನ್ನು ದಯಪಾಲಿಸಿ [illegible] ಸನಾತನ ಧರ್ಮದ [illegible] ಸಿದ್ಧಾಂತರಹಸ್ಯವನ್ನು ಅಪ್ಪಣೆಕೊಡಿಸಿ ಸಭಿಕರನ್ನು ಆನಂದಗೊಳಿಸಿದರು. ಆನಂತರ ಸರ್ವರಿಗೂ ಫಲಾಕ್ಷತೆ [illegible] ಆಚಾರ್ಯರ ಮತ್ತು ಶ್ರೀ [illegible] ಮಹಾಪ್ರಭು [illegible] ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಶ್ರೀಮಾನ್ [illegible] ನವರು ಸಹ [illegible] ಗುರುಭಕ್ತಿಯುತರೂ ಗುರುಹಿತಾಭಿಮಾನಿಗಳೂ ಇಷ್ಟು ಮಹಾಸಂಭ್ರಮವನ್ನು ಅಸಾಧಾರಣ ಭಕ್ತಿಯಿಂದ ತಮ್ಮಲ್ಲಿಗೆ ದಯಮಾಡಿಸಿಕೊಂಡು ಬಂದು ಆಬಾಲವೃದ್ಧರಿಗೆ ದರ್ಶನ [illegible] ದೊರೆಯುವಂತೆ ಮಾಡಿ ಸಮಾಜವನ್ನು ಗುರುಸೇವೆಗೆ ಭಾಗಿಯಾಗುವಂತೆ ಮಾಡಿದರು. ಗುರುಸೇವಾಸಕ್ತರಾದ ಎಳಂದೂರು ಸದ್ಭಕ್ತ ಮಹಾಶಯರಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯ ಭಾಗ್ಯ [illegible] ವನ್ನೀಯಲೆಂದು ಪ್ರಾರ್ಥಿಸುವ

ಓರ್ವ ಗುರುಭಕ್ತ ಎಳಂದೂರು

ನಮಃ ಪಂಚಜಗದ್ಗುರುಭ್ಯಃ

ವಿಶೇಶ್ವರೀಭಕ್ತಿ.

ನಲಮಹಾರಾಜನು ಪರಶಿವಭಕ್ತನು. ಹರಿಶ್ಚಂದ್ರನು ಶಿವಭಕ್ತನಾದಕಾರಣ ಪರಶಿವನ ಮುಖ್ಯಸ್ಥಾನವಾದ ಭೂಕೈಲಾಸ ಕಾಶೀಕ್ಷೇತ್ರಕ್ಕೆ ಹೋಗಿ ವಿಶ್ವಾಮಿತ್ರನ ಋಣಭಾರವನ್ನಿಳಿಸಿಕೊಂಡನು. ಪಾಂಡವ ಕೌರವರೂ ಶಿವಭಕ್ತರು. ಅರ್ಜುನನು ಒಂದು ವರ್ಷ ತಪಸ್ಸನ್ನಾಚರಿಸಿ ಶಿವನಿಂದ "ಪಾಶುಪತಾಸ್ತ್ರ"ವನ್ನು ಪಡೆದನು. ಭೀಮನು ಗದೆಯನ್ನು ನೆಲಕ್ಕಪ್ಪಳಿಸಿ ಮೇಲೆ ಆಕಾಶಕ್ಕೆ ಎಸೆದು ಎತ್ತಿ ಹಿಡಿಯಲಿಲ್ಲವೇ! ನೀನು ಕೃಷ್ಣಕ್ಷೇತ್ರ [illegible] ಒಳ್ಳೆಯದಾಯಿತು. ಇಲ್ಲವಾದರೆ ಈ ಗದೆಯಿಂದ ವಿಶ್ವ [illegible] ವನ್ನೇ ಕೊಡುವೆನೆಂದನು. ಪರಮಾತ್ಮನು ಪ್ರತ್ಯಕ್ಷನಾಗಿ ಅವನಿಗೆ ಮುರಾರಿಗೇನೆಗಳವರೆಗೆ ತನ್ನ ರಾಜ್ಯಾಧಿಕಾರವನ್ನಿತ್ತನಲ್ಲವೇ? ಯಾವಸ್ಥಳದಲ್ಲಿ ಭೀಮನು ಗದೆಯನ್ನು ನೆಲಕ್ಕಪ್ಪಳಿಸಿದನೋ! ಆ ಸ್ಥಳವು ತಗ್ಗಾಗಿ ಶ್ರೀಶೈಲದಲ್ಲಿ ಈಗಲೂ ಭೀಮನಕೊಳ್ಳವೆಂದು ಪ್ರಸಿದ್ಧವಿದೆ. ಪರಮಾತ್ಮನು ಪ್ರತ್ಯಕ್ಷನಾದ ಸ್ಥಳದಲ್ಲಿಯೇ "ಭೀಮೇಶ್ವರ" ದೇವಾಲಯವಿದೆ. ಆ ಸಣ್ಣ ಸಾಧಾರಣ

[illegible] ಗುವವರೊಳಗೆ ಕೈಲಾಸವನ್ನೇ [illegible]

[illegible] ಲಿಂಗಮೂರ್ತಿಗಳ [illegible] ಲಿಂಗವಮೇಲೆ [illegible] ಉಪದೇಶ [illegible] ಲಿಂಗಾಕಾರ [illegible] ಪುನರ್ಜನ್ಮ [illegible] ಅರಳಿ [illegible] ಜೀವಾ [illegible] ವಾಗಿ [illegible] ಶಿವ [illegible] ಲಿಂಗ [illegible] ಸರ್ವ [illegible] ಹಿಂದಿನ [illegible] ಬೃಹಸ್ಪತಿ [illegible] ಶ್ರೀ [illegible] ಸಾಧುಗಳ [illegible] ಕನ್ನಡ [illegible] ಜಾತಿಗಳಿಂದ ಮಿಶ್ರಿತವಾಗಿದೆ. ಅವನ್ನು [illegible] ವೆ ಧ್ವನಿಯಾಗುತ್ತಿದೆ.

ಯಾವ ಸಮಯದಲ್ಲಿ ಎತ್ತನೊ ಜಿಷ್ಣು ಶಿವನಾದ [illegible] ಕಾಣಬರುತ್ತಿತ್ತು. ಅದು ಈಗ ಅಷ್ಟು ಪ್ರಾತಃಸ್ಮರಣೀಯವಾಗಿಲ್ಲ. ಯಾವ ಕಾಲದಲ್ಲಿ [illegible] ದೈವತ ಕ್ಷೇತ್ರ ರೀತ್ಯಾ ಗಾಗಿ ಪ್ರಾಣವನ್ನು ಹಿಂಜರಿಯಲಿಲ್ಲ. ಅವರು ಈಗ ಅನೇಕ ದೇವತೆಗಳನ್ನು ನಂಬುವರು. ಯಾವ ವೀರಶೈವರು ಪರದೇವತೆಗೆ ಕೈಮುಗಿಯುತ್ತಿರಲಿಲ್ಲವೋ? ಅವರು ಈಗ ಹಾದಿ ಬೀದಿಗಳಿಗೆ ಬಾಗುವರು. ಯಾವ ವೀರಶೈವರು ನವು ಈಶರ ಪೂಜೆಗೆ ಬೇಕಾಗುವ ಜಲವನ್ನೂ ಅಲಿಂಗಿಯಾದ ಸಜಾತಿಯರನ್ನೂ ಕೂಡ ವಿಶಾಸದಿರುತ್ತಿರಲಿಲ್ಲ. ಅವರು ಈಗ ಅಸ್ಪೃಶ್ಯತಾನಿವಾರಣೆಯಲ್ಲಿ ಸೇರಿ ಸರ್ವ ಜಾತೀಯರೊಡನೆ ಸಂಬಂಧವನ್ನಿಟ್ಟುಕೊಳ್ಳಲು ಸಿದ್ಧರಾಗಿರುವರು. ಶಿವ ಶಿವಾ. ಪೂರ್ವದ ಆಚಾರವೆಂಥದೋ ಈಗಿನ ಅನಾಚಾರವೆಂಥದೋ. ಸರ್ವಜಗತ್ತೇ ಈಶ್ವರನಿಂದ ಮೋಕ್ಷಹೊಂದುತ್ತಿರಲು ಅಂಥ ಪರಮ ಪೂಜ್ಯ ಪರಶಿವ ಪರಂಜ್ಯೋತಿ ಪರಮಾತ್ಮನನ್ನು ಬಿಟ್ಟು ಇತರ ಕ್ಷುಲ್ಲಕ ದೇವತೆಗಳಿಗೆ ಬಿನ್ನಹವಿತ್ತುವದೆಂದರೆ—ಕಾಮಧೇನುವನ್ನು ಬಿಟ್ಟು ಗೊಡ್ಡೆಮ್ಮೆಯನ್ನು ಹತ್ತಿದಂತಲ್ಲವೇ? ಈ ಪ್ರಕಾರ ನಮ್ಮ ವೀರಶೈವರ [illegible] ಶಿವ ಶಿವಾ! ಎಂಥ [illegible] ವಿಪರೀತವಾಯಿತು! ನಿಮ್ಮ ಇಷ್ಟಲಿಂಗವು ನಿಮಗೆ ವರವನ್ನು ಕೊಡುವದಿಲ್ಲವೆಂದೆನು? ನೀವು ಅನೇಕ ದೇವತೆಗಳನ್ನು ಭಕ್ತಿ ಬಿಡುವುದಕ್ಕೆ ಕಾರಣವಾದರೂ ಯಾವದು? ನಿಮ್ಮ ಪಂಚಾಚಾರ್ಯರ ನಿಯಮಗಳಿಗೆ ಭಂಗತಂದರೆ ನರಕವಾಗುವದರಲ್ಲಿ ಯಾವ ಸಂಶಯವೂ ಇಲ್ಲ. ಪೂರ್ವದಲ್ಲಿ ಆಗಿಹೋದ ಸತ್ಪುರುಷ ಶಿವಶರಣರುಗಳನ್ನು ಸ್ಮರಿಸಿರಿ. ಅವರ ಮಾರ್ಗವನ್ನನುಸರಿಸಿರಿ. ಅವರು ಯಾವ ಪ್ರಕಾರ ನಡೆದು ದಾರಿತೋರಿಸಿರುವರೋ ಹಾಗೆಯೇ ನಡೆಯುವವರಾಗಿರಿ. ಕೆಲವರು ದವ್ವದ ಆಶಿಯಿಂದ, ಕೆಲವರು ಹೊಸರ ಆಶೆಯಿಂದ, ಕೆಲವರಂತೂ ಮಕ್ಕಳ ಆಶೆಯಿಂದ ಅನೇಕಾನೇಕ ದೇವರನ್ನು ಕೇಳುವರು. ಆಯಾ ದೇವರ ಪೂಜಾರಿಗಳು ಹೇಳಿದಂತೆ ವರ್ತಿಸುವರು. ಕೆಲವು ಚೌಡಾದೇವಿಗಳುಂಟು. ಅವುಗಳಿಗೆ ಅರಿವೆಯನ್ನು ಹರಿದು ಬೇಕೆಯನ್ನು ಹಾಕಿ ನಮಿಸುವರು. ಕೆಲವು ಬಾಗುಳುವಾರಿ ದೇವರಂತೆ! ಅವುಗಳಿಗೆ ಬಾಗಿಲು ನಮಿಸುವರು. ಕೆಲವು ಕಲ್ಲಿನಂಥ ದೇವರೇನು ಕಲ್ಲಿನಿಂದ ಹೊಡೆಯುವರು. ಮಸೋಬನೆಂದು ಕೋಣಗಳನ್ನು ಮುಂಡಿಷ ಬನಿಂಬು [illegible] ಗಳನ್ನು ಪೂಜಿಸುವರು. ದಸರೆ ಹಬ್ಬದಲ್ಲಿ ಅಂಬಾಭವಾನಿಯ ನೆವದಿಂದ ಮಾದರ ಮನೆಯಲ್ಲಿರುವ ನೀರಿನ ಕುಡಿಕೆಯನ್ನು ಪೂಜಿಸುವರು. ಕೆಲವರು ಆ ಜಾತೀಯರನ್ನೇ ಮನೆಗೆ ಕರೆದು ಅವರ ಕೈಯಲ್ಲಿರುವ ಪರಡಿ (ಪುಟ್ಟಿ) ಯನ್ನು ತ್ರಿಶೂಲವನ್ನು ಪೂಜಿಸಿ ಪಾದದಿಂದ ನಮಿಸುವರು. ಶಿವಶಿವಾ! ಏನನ್ನಾಯಿವಿಧು ಇವುಗಳೆಲ್ಲಾ ದೇವರೇ! ಇವುಗಳಿಗಿಂತಲೂ ಮನುಷ್ಯಜಾತಿಯು ಕೀಳವೆ! ಬುಡುಬುಡುಕೆ ಕೊರವಂಜಿ ಜೋಯಿಸ ದಾಸ ಜೋಂಗುಳು ಗೊಲ್ಲ ಹಾರುವ, ಮುಸಲ ವಡ್ಡ ಇತ್ಯಾದಿ ಜಾತೀಯ ಪೂಜಾರಿಗಳ ಮುಂದೆ ವೀರಶೈವರಿದ್ದರೆ ಅವರ ಕಾಲಕ್ಕೆ ಬಿಟ್ಟು ಬಂದೀಣಾಗುತ್ತದೆ. ವೀರಶೈವಸ್ತ್ರೀಯರಿಗೆ ಮುಕ್ಕಾಲಾಕೆಯು ಬಹಳವಿರುವದರಿಂದ ಕೆಲಸಮಯದಲ್ಲಿ ಪೂಜಾರಿಗಳ ಆಜ್ಞಾನುಸಾರ ನಗ್ನರಾಗಿ ದೇವರ ದರ್ಶನಕ್ಕೆ ಹೋಗುವರಂತೆ! ನೋಡಿದಿರಾ? ಇವರ ವರ್ತನವನ್ನು? ವೀರಶೈವಸ್ತ್ರೀಯರಿಗೆ ದೆವ್ವಗಳು

ಬಡೆದುಕೊಳ್ಳುವದು ಬಹಳ. ಇದರ ಕಾರಣವೇನೆಂದರೆ—ಏಕೋನಿಷ್ಠಭಕ್ತರಾದ ವಿರಶೈವರು ಅನಾಚಾರಾಸಕ್ತರಾಗಿ ಅನೇಕ ದೇವತೆಗಳ ಬೆನ್ನುಹತ್ತಿದುದರಿಂದ ತಮ್ಮ ದೇವರೂ ಇಲ್ಲ, ಇತರ ದೇವರೂ ಇಲ್ಲದುದರಿಂದ ದೆವ್ವಗಳು ಪ್ರವೇಶಿಸುತ್ತವೆ. ಅದ್ದರಿಂದ ಏಕೋಶರೀರ ಭಕ್ತಿಯಿಂದ ವರ್ತಿಸುವವರಿಗೆ ಯಾವ ದುಃಖಗಳೂ ಒದಗಲಾರವು. (ಸಶೇಷ)

ಶ್ರೀ ಷಟ್‍ಸ್ಥಲಭಕ್ತ ಬಸವನ್ನರ ಹೋಟಿಗಿ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಎಳಂದೂರು ತಾ|| ಮಾಂಬಳ್ಳಿ ಗ್ರಾಮಕ್ಕೆ

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಶುಭಾಗಮನ.

ಶಿವಧರ್ಮನಿಷ್ಠರೂ ಗುರುಭಕ್ತಿ ತತ್ಪರರೂ ಜಗದ್ಗುರ [illegible] ಶ್ರೀಮಂತರೂ ಆದ ಮಾಂಬಳ್ಳಿ ಸಾಹುಕಾರ್ ಶ್ರೀಯುತ ಎಂ ಎಸ್ ಬಸವಣ್ಣದೇವರು ಇವರ ಸಹೋದರರಾದ ಶ್ರೀಯುತ ಎಂ ಸಿ ಸುಬ್ಬಣ್ಣನವರು ಇವರೀರ್ವರು ಮುಖ್ಯವಾಗಿ ಶ್ರೀಮಹಾಸನ್ನಿಧಾನವನ್ನು ತಮ್ಮ ಗ್ರಾಮಕ್ಕೆ ದಯಮಾಡಿಸಬೇಕೆಂದು ಹೋಗಲು ಅಪ್ಪಣೆಯನ್ನು ಪಡೆದು ಮುಹೂರ್ತವನ್ನು ನಿಶ್ಚಯಿಸಿದ ಪ್ರಕಾರ ಶ್ರೀಗಳವರು ಸಕಲ ಬಿರುದಾವಳಿ ಸಮೇತ ತಮ್ಮ ಚತುರಂಗಬಲದೊಡನೆ ತಾ|| ೯-೨-೧೯೩೫ ಶನಿವಾರ ದಯಮಾಡಿಸಿದರು. ಪುರವು ಅಲಂಕಾರಗೊಳಿಸಲ್ಪಟ್ಟಿದ್ದಿತು. ಅಲ್ಲಲ್ಲಿಯೇ ಮಂಟಪಗಳು ಕಂಗೊಳಿಸುತ್ತಿದ್ದುವು. ಗುರುಯಾತ್ರಾ ಭಾಗಿಯಾಗಲು ಕೊಳ್ಳೇಗಾಲ ಮುಡಿಗುಂಡ ಮಧುವನಹಳ್ಳಿ ಕಲಕಾರು ಕುದೇರು ಎಳಂದೂರು, ಸಂತೆಮರಹಳ್ಳಿ [illegible] ಮತ್ತು ಸುತ್ತಮುತ್ತಣ ಗ್ರಾಮಗಳಿಂದ ಅಪಾರವಾದ ಜನಸ್ತೋಮವು ನೆರೆದಿದ್ದಿತು. ಸದರಿ ಶ್ರೀಮಂತರು ಇಷ್ಟಬಂಧು ಸಮೇತರಾಗಿ ಅಮಲ್ದಾರ್ ಎಂಬವರು ಪೋಲೀಸ್ ಇನ್ಸ್‌ಪೆಕ್ಟರ್ ಸಾಹೇಬರು ಮುಂತಾದ ಆಫೀಸರು ಮತ್ತು ಪುರಪ್ರಮುಖರೊಡನೆಯೂ ತಮ್ಮ [illegible] ಭವ್ಯಮಂದಿರದಲ್ಲಿ ಶ್ರೀಮಹಾಸ್ವಾಮಿಗಳ ದರ್ಶನವನ್ನು ತೆಗೆದುಕೊಂಡು ನಜರುಗಳನ್ನರ್ಪಿಸಿ ಪ್ರಾರ್ಥನೆಯನ್ನು ಮಾಡಿಕೊಂಡ ಪ್ರಕಾರ ಮಹಾಸ್ವಾಮಿಗಳವರು ಸುವರ್ಣರಜತಾತ್ಮಕ ಆಂದೋಲಿಕೆಯನ್ನಾರೋಹಿಸಿದರು. ಕೂಡಲೇ ಆಚಾರ್ಯರ ಜಯಘೋಷವಾಯಿತು. ಸಕಲವಾದ್ಯಗಳು ಭೋರ್ಗರೆದವು. ಗುರುಮಹೋತ್ಸವವು ಪುರವಳಿಯಲ್ಲಿ ಅತ್ಯುತ್ಸಾಹದಿಂದ ಜರುಗಿ ಶ್ರೀಮಂತರ ಭವ್ಯಭವನಕ್ಕೆ ಬಂದಿತು. ಶ್ರೀ ಪೂಜ್ಯಪಾದರು ಆಂದೋಲಿಕೆಯಿಂದವತರಿಸಿ ಸಾಲಂಕೃತ ಸುವರ್ಣರಜತಾತ್ಮಕ ಸಿಂಹಾಸನವನ್ನಾರೋಹಿಸಿದರು. ಮಹಾಜನರು ಜಯಜಯಕಾರವನ್ನು ಮಾಡಿ ಅಪ್ಪಣೆಯ ಪ್ರಕಾರ ಸಭೆಯನ್ನಲಂಕರಿಸಿದರು. ಕಾರ್ಯಕ್ರಮದಂತೆ ಶ್ರೀಮಾನ್ ಎಂ ಸಿ ಸುಬ್ಬಣ್ಣನವರು ಸಮಾಜದವರಾಗಿ ವಿಜ್ಞಾಪನಾಪತ್ರಿಕೆಯನ್ನು ಓದಿ ಸನ್ನಿಧಾನಕ್ಕೆ ಸಮರ್ಪಿಸಿದರು. ಆನಂತರ ಮಹದ್ವಾಧೀಯ ಮಹಾಜನರು ತಮ್ಮ ಸಮಾಜದವರಾಗಿ ವಿಜ್ಞಾಪನಾಪತ್ರಿಕೆಯನ್ನೋದಿ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ಶ್ರೀಗಳವರು ಉಭಯ ವಿಜ್ಞಾಪನಾಪತ್ರಿಕೆಗಳಲ್ಲಿ ವ್ಯಕ್ತಗೊಂಡ ವಿಷಯಗಳನ್ನು ಒಂದೊಂದಾಗಿಯೇ ಗ್ರಹಿಸಿ ಸಂಸ್ಕೃತ ಹಿಂದೀ ಕನ್ನಡ ಭಾಷೆಗಳಲ್ಲಿ ಸಮರ್ಪಕ ರೀತಿಯಿಂದ ಉತ್ತರವನ್ನು ಅಪ್ಪಣೆಕೊಡಿಸಿ ಸರ್ವರಿಗೂ ಫಲಾಕ್ಷತೆ [illegible] ವನ್ನು ದಯಪಾಲಿಸಿ ಸಭಾವಿಸರ್ಜನಕ್ಕೆ ಅಪ್ಪಣೆಯನ್ನಿತ್ತರು. ಮಾಂಬಳ್ಳಿಯಲ್ಲಿ ಇನ್ನೂ ಪಾದಪೂಜೆಗಳು ಇರುವುದರಿಂದ ಎಳಂದೂರುವರೆಗೆ ಅಪ್ಪಣೆಯನ್ನು ಕೊಟ್ಟ ಪ್ರಕಾರ ಶ್ರೀಮಂತರೊಬ್ಬರ ಆತಿಥ್ಯವನ್ನು ಮಾತ್ರಕೈಕೊಂಡು ಪ್ರೋಗ್ರಾಂ ನಿಶ್ಚಯಿಸಿದ್ದ ಪ್ರಕಾರ ಎಳಂದೂರಿಗೆ ದಯಮಾಡಿಸಿದರು. ಇನ್ನೊಂದು ವಾರದಲ್ಲಿ ಪುನಃ ಮಾಂಬಳ್ಳಿಗೆ ಬಿಜಯಂಗೈಸತಕ್ಕವರಿರುವರು. ಮಾಂಬಳ್ಳಿ ಸಾಹುಕಾರರು ಕೇವಲ ಶ್ರೀಮಂತರಲ್ಲ. ಆಚಾರವಂತರೂ ಗುಣಿಗಳೂ ಗುರು [illegible] ಪರೋಪಕಾರಿಗಳೂ ಆಗಿರುವರು. ಇಂಥ ಪುಣ್ಯಾತ್ಮರನ್ನು ಪಡೆದ ವೀರಶೈವ ಮಠವೇ ಧನ್ಯ! ಇಂಥ ಧರ್ಮನಿಷ್ಠ ಶ್ರೀಮಂತರ ಉದಾರಾಶ್ರಯದಿಂದ ಧರ್ಮಾಭಿರುಚಿ ಜನೋದ್ಧಾರಕೆಯನ್ನು ಪಡೆದ ಶ್ರೀಮಂತರ ಕೀರ್ತಿಯನ್ನು ದಿಗಂತವಾಗಿ ಉಜ್ವಲಗೊಳಿಸದೆ ಇರಲಾರದೆಂದು ನಂಬಿರುವೆನು. ಈ ಮಹಾಶಯರ ಮುಖದಿಂದ ಆಬಾಲವೃದ್ಧರು ಜಗದ್ಗುರುಗಳ ದರ್ಶನಾಶೀರ್ವಾದಗಳನ್ನು ಪಡೆಯಲು ಶಕ್ತರಾದರು. ಈ ಪುಣ್ಯಶರೀರಗಳಿಗೆ ಜಗದಾಚಾರ್ಯರು ಆಯುರಾರೋಗ್ಯಾದಿ ಭಾಗ್ಯಗಳನ್ನು ಕೊಟ್ಟು ರಕ್ಷಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುವ

ಓರ್ವ ಮಠಾಭಿಮಾನಿ, ಮಾಂಬಳ್ಳಿ

ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಚಿದ್ಘನಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಪೂಜಾಸಮಾರಂಭ. ಶಿರಿಗೇರಿ.

ಬಳ್ಳಾರಿ ಜಿಲ್ಲಾ ಶಿರುಗುಪ್ಪಾ ತಾ|| ಶಿರಿಗೇರಿ ಗ್ರಾಮಕ್ಕೆ ಮೇಲ್ಕಂಡ ಜಗದ್ಗುರುಗಳವರು ತಾ|| 25-1-1935 ನೆಯ [illegible] ವಾರ ದಿವಸ ಮಹೋತ್ಸವಪೂರ್ವಕವಾಗಿ ದಯಮಾಡಿ ಶ್ರೀ [illegible] ಕೃಷ್ಣ [illegible] ಭಕ್ತಿವಾತ್ಸಲ್ಯ [illegible]

ರಿಂದ ಸಂತೋಷಪಡಿಸುತ್ತಿರುವರು. ಈ ಗ್ರಾಮದ ಸಂಸ್ಕೃತ ಪಾಠಶಾಲಾಧ್ಯಕ್ಷರಾದ ಹಿರೇಹಾಳು ಪುಲಿಮಠದ ಚರಪಟ್ಟಾಧ್ಯಕ್ಷ ಶ್ರೀ ವಿರೂಪಾಕ್ಷಸ್ವಾಮಿಗಳವರು ತಾ|| 7 2 1933 ನೇ ಗುರುವಾರ ಶ್ರೀಗಳವರನ್ನು ತಮ್ಮ ಮಠಕ್ಕೆ ದಯಮಾಡಿಸಿಕೊಂಡು ಪಾದಪೂಜೆಯನ್ನು ವಿಶೇಷ ಭಕ್ತಿಯೊಡನೆ ನೆರವೇರಿಸಿದರು. ತರುವಾಯ ಅಲ್ಲಿಗೆ ಗುರುದರ್ಶನಕ್ಕಾಗಿ ಆಗಮಿಸಿದ್ದ ಸಮಸ್ತ ಭಕ್ತಮಾಹೇಶ್ವರರಿಗೆ ಮಂಡಳಸಹಿತ ಮಿಷ್ಟಾನ್ನಭೋಜನವಂಗೈಸಿ ಗುರುಕಾಣಿಕೆಯನ್ನು ಸಮರ್ಪಿಸಿದರು. ತರುವಾಯ ಪಾಠಶಾಲಾಧ್ಯಾಪಕರಾದ ವೇ|| ಪಿ ಎಂ ಶಿವಪ್ರಸಾದಶಾಸ್ತ್ರಿಗಳು ತಾವು ರಚಿಸಿದ್ದ ಭಗವತ್ಪಾದರ ಸ್ತುತಿಯನ್ನು ಹಾರ್ಮೋನಿಯಂ ತಬಲ ಮುಂತಾದ ಗೀತವಾದ್ಯಗಳೊಡನೆ ತಮ್ಮ ವಿದ್ಯಾರ್ಥಿಗಳಿಂದ ಹೇಳಿಸಿ ಪಶ್ಚಾತ್ ತಮ್ಮಿಂದಲೇ ರಚಿತಗಳಾದ 'ಶ್ರೀ ಜಗದ್ಗುರು ಚಿದ್ಘನಲಿಂಗಶಿವಾಚಾರ್ಯಸ್ವಾಮಿಗಳ ಚರಿತ್ರೆ'ಯನ್ನು ಪಾಠಶಾಲಾ ವಿಜ್ಞಾಪನಾಪಂಚಕ'ವೆಂಬ ಕನ್ನಡ ಪದ್ಯಗಳನ್ನು ಹೇಳಿದರು. ಅನಂತರ ಶ್ರೀ ಮಹಾಸನ್ನಿಧಿಯವರು ಸರ್ವರಿಗೂ ಸದುಪದೇಶವನ್ನು ಮಾಡಿ ಫಲಾಶೀರ್ವಾದಗಳನ್ನಿತ್ತು ಅನುಗ್ರಹಿಸಿದರು. ಬಳಿಕ ಸರ್ವರೂ ಭಕ್ತಿಭಾವದೊಡನೆ ಗುರುವರ್ಯರಿಗೆ ಮಂಗಳಾರತಿಯನ್ನಿತ್ತು 'ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ' ಎಂಬ ಜಯಘೋಷವನ್ನು ಮಾಡಿದರು. ಅನಂತರ ಮಂಗಳವಾದ್ಯಗಳ ಸುನಾದವಾಗುತ್ತಿರಲು ಮಹಾಸನ್ನಿಧಿಯವರು ತಮ್ಮ ಬಿಡಾರಕ್ಕೆ ದಯಮಾಡಿಸಿದರು.

ಪ್ರತ್ಯಕ್ಷದರ್ಶಿ

ಆಯುರ್ವೇದಪರಿಚಯ.

ಆರೋಗ್ಯಮಾರ್ಗ

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ

ಬೆಂಗಳೂರು

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ

ಶ್ರೀಕ್ಷೇತ್ರಕಾಶೀ

ಆಹಾರ ನಿಯಮಗಳು.

ಮೊಸರು—ಇದು ಸಾಮಾನ್ಯವಾಗಿ ಉಷ್ಣ, ಅಭಿಷ್ಯಂದಿ, ಸ್ನಿಗ್ಧ, ಗುರು ಇವುಗಳೆಂಬ ಪ್ರಧಾನಗುಣಗಳಿಂದೊಡಗೂಡಿ ಪರಿಪಾಕದಲ್ಲಿ ಆಮ್ಲತೆಯನ್ನು ಹೊಂದುವುದೂ ವಾತನಾಶಕವೂ ಅಗ್ನಿವರ್ಧಕವೂ, ಶ್ಲೇಷ್ಮಕಾರಿಯೂ ಬಲಕರವೂ, ತೃಪ್ತಿಕರವೂ ಶ್ವಾಸ ಪಿತ್ತ ರಕ್ತವಿಕಾರ-ಬಾವು ಮೇದಸ್ಸಿನ ವೃದ್ಧಿ ಇವುಗಳನ್ನುಂಟುಮಾಡುವುದೂ. ಮೂತ್ರಕೃಚ್ಛ್ರ (ಕಷ್ಟದಿಂದ ಮೂತ್ರವಿಸರ್ಜನೆಯಾಗುವಿಕೆ) ನೆಗಡಿ-ಶೀತವಿಷಮಜ್ವರ ಅತಿಸಾರ ಅರೋಚಕ ದುರ್ಬಲತೆ ಇವುಗಳಿಂದ ಪೀಡಿತರಾದವರಿಗೆ ಅತ್ಯಂತ ಹಿತಕರವೂ ವೀರ್ಯವರ್ಧಕವೂ ಆಗಿರುವ ಮಂಗಳದ್ರವ್ಯವಾಗಿರುತ್ತದೆ. ಈ ಮಂಗಳದ್ರವ್ಯವು ವೈದ್ಯಶಾಸ್ತ್ರದಲ್ಲಿ ಈ ವಿಧವಾಗಿ ವಿಭಾಗಿಸಲ್ಪಟ್ಟಿದೆ. ಯಾವುದು ಹಾಲಿನಂತೆಯೇ ಇದ್ದು ಹೆಪ್ಪಿನಿಂದುಂಟಾಗಬೇಕಾಗಿರುವ ಸಂಪೂರ್ಣ ರಸವನ್ನು ಹೊಂದದೆ ಸ್ವಲ್ಪ ಗಾಢತೆಯನ್ನು ಹೊಂದಿರುವುದೋ ಅದು 'ಮಂದ'ವೆಂಬ ಸಂಜ್ಞೆಯನ್ನು ಹೊಂದುವುದು. ಈ ಮಂದನಾಮಾಂಕಿತವಾದ ಮೊಸರು ಸಂತತವಾಗಿ ಮಲಮೂತ್ರಗಳನ್ನು ಹೊರಡಿಸುವುದಾದರೂ ತ್ರಿದೋಷಗಳನ್ನು ಕೋಪಗೊಳಿಸುವುದಾಗಿದೆ. ಯಾವುದು ಸಂಪೂರ್ಣಗಾಢತೆಯನ್ನು ಹೊಂದಿ ವಿಶೇಷ ಸಿಹಿರಸದಿಂದಲೂ ಬಹಳ ಸ್ವಲ್ಪವಾದ ಹುಳಿರಸದಿಂದಲೂ ಕೂಡಿರುವುದೋ ಅದು 'ಸ್ವಾದು' ಎಂಬ ಸಂಜ್ಞೆಯನ್ನು ಹೊಂದುವುದು. ಈ ಸ್ವಾದುನಾಮಾಂಕಿತವಾದ ಮೊಸರು ಅತ್ಯಂತ ಅಭಿಷ್ಯಂದಿ (ತನ್ನಲ್ಲಿರುವ ಜಡತ್ವ ಮತ್ತು ಭಾರ ಶ್ಲೇಷ್ಮವನ್ನು ಹೆಚ್ಚಿಸುವಿಕೆ ಇವುಗಳಿಂದ ರಸವಾಹಿಗಳಾದ ನಾಡಿಗಳ ಮಾರ್ಗವನ್ನು ತಡೆಯುವುದು) ಯಾಗಿರುವುದರಿಂದ ಮೇದಸ್ಸನ್ನು ಬೆಳೆಸುವುದೂ ಶ್ಲೇಷ್ಮವನ್ನು ವರ್ಧಿಸುವುದೂ ವಾತವನ್ನು ತಗ್ಗಿಸುವುದೂ ಪರಿಪಾಕದಲ್ಲಿ ಸಿಹಿಯಾಗುವುದೂ ರಕ್ತಪಿತ್ತರೋಗನಾಶಕವೂ ಬಲಕರವೂ ಆಗಿರುತ್ತದೆ. ಯಾವುದು ಸಿಹಿ ಮತ್ತು ಹುಳಿಯ ಸಮತೆಯಿಂದಲೂ ಸಲ್ಪ ಒಗರಿನಿಂದಲೂ ಕೂಡಿ ಸಂಪೂರ್ಣ ಗಾಢತೆಯನ್ನು ಹೊಂದಿರುವುದೋ ಅದು 'ಸ್ವಾದ್ವಮ್ಲ'ವೆಂಬ ಸಂಜ್ಞೆಯನ್ನು ಹೊಂದುತ್ತದೆ. ಈ ಸ್ವಾದ್ವಮ್ಲನಾಮಾಂಕಿತವಾದ ಮೊಸರಿನ ಗುಣವು ಮೇಲೆ ವರ್ಣಿಸಲ್ಪಟ್ಟಿರುವ ಸಾಮಾನ್ಯ ಮೊಸರಿನ ಗುಣದಂತೆಯೇ ಇರುವುದಾಗಿದೆ. ಯಾವುದು ಸಂಪೂರ್ಣಗಾಢತೆಯನ್ನು ಹೊಂದಿ ಪೆಟ್ಟಾದ ಹುಳಿ ಮತ್ತು ಸ್ವಲ್ಪವಾದ ಸಿಹಿರಸಗಳಿಂದ ಕೂಡಿರುವುದೋ ಅದು 'ಅಮ್ಲ'ವೆಂಬ ಸಂಜ್ಞೆಯನ್ನು ಹೊಂದುವುದು. ಈ ಅಮ್ಲವೆಂಬ ಮೊಸರು ಅಗ್ನಿದೀಪಕವೂ ಶ್ಲೇಷ್ಮವರ್ಧಕವೂ ರಕ್ತಪಿತ್ತರೋಗವನ್ನುಂಟುಮಾಡುವುದೂ ಶ್ಲೇಷ್ಮವರ್ಧಕವೂ ಆಗಿರುತ್ತದೆ. ಯಾವುದು ಸಂಪೂರ್ಣಗಾಢತೆಯನ್ನು ಹೊಂದಿ ಸಾಧಾರಣವಾದ ಸಿಹಿರಸವಿಲ್ಲದೆ ಕೇವಲ ಹುಳಿರಸದಿಂದ ಹಲ್ಲುಗಳನ್ನು ಜುಮುಗಟ್ಟಿಸಿ ಮೈಯಲ್ಲಿ ರೋಮಾಂಚವನ್ನುಂಟುಮಾಡಿ ಗಂಟಲಿನೊಳಗೆ ಉರಿಯನ್ನುಂಟುಮಾಡುವುದೋ ಅದು 'ಅತ್ಯಮ್ಲ'ವೆಂಬ ಸಂಜ್ಞೆಯನ್ನು ಹೊಂದುವುದು. ಈ ಅತ್ಯಮ್ಲವೆಂಬ ಮೊಸರು ಅಗ್ನಿಯನ್ನು ದೀಪನಗೊಳಿಸುವುದಾದರೂ ರಕ್ತವನ್ನೂ ವಾತಪಿತ್ತಗಳನ್ನೂ ಅತ್ಯಂತವಾಗಿ ಕೋಪಗೊಳಿಸುತ್ತದೆ.

ಮೊಸರಿನಲ್ಲಿ ಆಕಳಿನ ಮೊಸರು ಶ್ರೇಷ್ಠವಾಗಿರುತ್ತದೆ. ಇದು ಅತ್ಯಂತ ರುಚಿಕರವೂ ಅಗ್ನಿದೀಪಕವೂ ಬಲ ಮತ್ತು ವೀರ್ಯವನ್ನು ವೃದ್ಧಿಗೊಳಿಸುವುದೂ ವಾತನಾಶಕವೂ ಪರಮಪವಿತ್ರವೂ ಆಗಿರುತ್ತದೆ. ಎಮ್ಮೆಯ ಮೊಸರು ಅತ್ಯಂತ ಗುರುವೂ ಅಭಿಷ್ಯಂದಿಯೂ ಶ್ಲೇಷ್ಮವರ್ಧಕವೂ ವಾತಪಿತ್ತನಾಶಕವೂ ರಕ್ತವಿಕಾರವನ್ನುಂಟುಮಾಡುವುದೂ ಆಗಿರುತ್ತದೆ. ನವನೀತ (ಹಸನಾಗಿರುವಂಥ ಬೆಣ್ಣೆಯನ್ನು ತೆಗೆದಿರುವುದು) ವಾದ ಹಾಲಿನ ಮೊಸರು ಶೀತವೂ ಹಗುರವೂ ವಾತವರ್ಧಕವೂ ಮಲಬಂಧವನ್ನುಂಟುಮಾಡುವುದೂ ಅಗ್ನಿದೀಪಕವೂ ಗ್ರಹಣೀರೋಗದಲ್ಲಿ ಅತ್ಯಂತ ಲಾಭಕರವೂ ಆಗಿರುತ್ತದೆ. ಮೊಸರನ್ನು ಯಾವಾಗ ಹೇಗೆ ಸೇವಿಸಬೇಕೆಂಬ ವಿಷಯದಲ್ಲಿ ವೈದ್ಯಶಾಸ್ತ್ರವು ಅತ್ಯಂತ ಹಿತಕರಗಳಾದ ನಿಯಮಗಳನ್ನು ಈ ಮನೋಹರವಾಗಿ ಬೋಧಿಸುತ್ತದೆ.

ನ ನಕ್ತಂ ದಧಿ ಭುಂಜೀತ ನ ಚಾಪ್ಯಘೃತಶರ್ಕರಂ |
ನಾಮುದ್ಗಸೂಪಂ ನಾಕ್ಷೌದ್ರಂ ನೋಷ್ಣಂ ನಾಮಲಕೈರ್ವಿನಾ ||
ಜ್ವರಾಸೃಕ್ಪಿತ್ತವೀಸರ್ಪಕುಷ್ಠಪಾಂಡ್ವಾಮಯಭ್ರಮಾನ್ |
ಪ್ರಾಪ್ನುಯಾತ್ಕಾಮಲಾಂ ಚೋಗ್ರಾಂ ವಿಧಿಂ ಹಿತ್ವಾ ದಧಿಪ್ರಿಯಃ ||

ಚ ಸಂ ಸೂ ೭ ೬

ರಾತ್ರಿ ಸಮಯದಲ್ಲಿ ಮೊಸರನ್ನು ಸೇವಿಸುವುದಕ್ಕಂತು ನಿಷಿದ್ಧವಾಗಿದೆ. ಒಂದು ವೇಳೆ ಸೇವಿಸುವುದು ಅವಶ್ಯವಾಗಿದ್ದಲ್ಲಿ ತುಪ್ಪ ಸಕ್ಕರೆ ಹೆಸರುಬೇಳೆಯ ತೊವ್ವೆ ಜೇನುತುಪ್ಪ ನೆಲ್ಲಿಕಾಯಿ ಇವುಗಳಲ್ಲಾವುದಾದರೊಂದು ಪದಾರ್ಥವನ್ನು ಕೂಡಿಸಿಕೊಂಡೆ ಸೇವಿಸಬೇಕು. ಕಾಯಿಸಿದ ಮೊಸರಂತೂ ದಿನವಲ್ಲಾಗಲಿ ರಾತ್ರಿಯಲ್ಲಾಗಲಿ ಸರ್ವಥಾ ನಿಷಿದ್ಧವಾಗಿದೆ. ಕೆಲವೆಡೆಗಳಲ್ಲಿ ಮೊಸರನ್ನು ಕಾಯಿಸಿ ಉಪ್ಪು, ಖಾರಗಳಿಂದ ಸಂಸ್ಕರಿಸಿ ಸಾರಿನ ಸ್ಥಾನದಲ್ಲಿ ಉಪಯೋಗಿಸುವುದು ವಾಡಿಕೆಯಾಗಿದೆ. ಆದರೆ ಈ ಕಾಯಿಸಿದ ಮೊಸರು ದ್ರವ್ಯಾಂತರಗಳ ಸಂಯೋಗದಿಂದ ಗುಣಾಂತರವನ್ನು ಹೊಂದುವುದರಿಂದ ಶರೀರಕ್ಕೆ ಹಾನಿಕರವಾಗುವುದು (ಈ ವಿಷಯವು ಹಿಂದೆ ವಿರುದ್ಧಾಹಾರಗಳ ಸಂದರ್ಭದಲ್ಲಿ ವಿವರಿಸಲ್ಪಟ್ಟಿರುವುದಾಗಿದೆ) ಮತ್ತು 'ಜಠರಕ್ಷ್ಣಾಸಾದರೂ ನಾಶ್ನೀಯಾದ್ದಧಿ ನಕ್ತಮುಷ್ಣಂ ಚ, ನ ಘೃತದ ದುಃಶರ್ಕರಾ ಮುದ್ಗಾಮಲಕೈರ್ವಿನಾ ನಾ ಸ ವಸಂತಹೇಮಂತ ಶರದ್ವರ್ಷಂ ವಾ ಭುಂಜೀತ' ಎಂದು ರಾತ್ರಿ ಸಮಯದಲ್ಲಿ ಮೊಸರಿನ ಸೇವನೆಯು ಅನಿವಾರ್ಯವಾಗಿದ್ದ ಪಕ್ಷದಲ್ಲಿ ತುಪ್ಪ ಸಕ್ಕರೆ ಮುಂತಾದವುಗಳ ಸಂಯೋಗದಿಂದಲೇ ಸೇವಿಸಬೇಕೆಂತಲೂ ಇತರ ಕಾಲಗಳಲ್ಲಿ ಯಾವತ್ತೂ ಉಪ್ಪು ಮತ್ತು ಖಾರವನ್ನು ಕೂಡಿಸಿಯೇ ಸೇವಿಸಬೇಕೆಂತಲೂ ಕಾಯಿಸಿದ ಮೊಸರು ಯಾವಾಗಲೂ ಅತ್ಯಂತ ನಿಷಿದ್ಧವೆಂತಲೂ ಹೇಳಿರುವನು ಮತ್ತು ಸುಶ್ರುತಮಹರ್ಷಿಯಿಂದಲೂ ವಾಗ್ಭಟಾಚಾರ್ಯನಿಂದಲೂ ಇದೇ ರೀತಿಯಾಗಿ ನಿಷೇಧಿಸಲ್ಪಟ್ಟಿದೆ. ಆದುದರಿಂದ ದಧಿಪ್ರಿಯನಾದ ಮನುಷ್ಯನು ಈ ದಧಿಭೋಜನ ವಿಧಿಯನ್ನತಿಕ್ರಮಿಸಿ ಮೊಸರನ್ನು ಸೇವಿಸುವನಾದರೆ ಎಂದಾದರೊಂದು ದಿನ ಜ್ವರ ರಕ್ತಪಿತ್ತ ನಾನಾವಿಧಕುಷ್ಠಗಳು ಪಾಂಡು ಕಾಮಾಲೆ ಉನ್ಮಾದ ಈ ರೋಗಗಳಲ್ಲಾವುದಾದರೊಂದರ ಬಲೆಯಲ್ಲಿ ಬೀಳುವುದನಿವಾರ್ಯವಾಗಿರುತ್ತದೆ ಮತ್ತು ಚರಕಸಂಹಿತೆಯ ಸೂತ್ರಸ್ಥಾನದ ೫ನೆಯ ಅಧ್ಯಾಯದಲ್ಲಿ 'ದಧಿನಾಭ್ಯಸೇತ್' ಎಂದು ಯಾವಾಗಲೂ ತಪ್ಪದೆ ನಿತ್ಯದಲ್ಲಿ ಮೊಸರನ್ನು ಬಳಸುವ ಪದ್ಧತಿಯನ್ನು ನಿಷೇಧಿಸಿ ಮುಂದೆ ಅದೇ ಸೂತ್ರಸ್ಥಾನದ ೭ನೆಯ ಅಧ್ಯಾಯದಲ್ಲಿ 'ಯದ್ಯಶ್ನೀತೇ ಶರೀರಸ್ಯಂ ತಥಾ ಉಪಕರೋಗಾವಹತ್ವಾತ್ ದಧಿ ನ ನಿತ್ಯಮುಪಸೇವನೀಯಂ' ಎಂದು ಮೊಸರಿನ ನಿತ್ಯಸೇವನ ಪದ್ಧತಿಯನ್ನು ಸಹೇತುಕವಾಗಿ ನಿಷೇಧಿಸುತ್ತದೆ. ನಿತ್ಯದಲ್ಲಿ ಮೊಸರನ್ನು ಸೇವಿಸುತ್ತಿರುವಾಗ ಕಾರಣಾಂತರದಿಂದೊಂದು ವೇಳೆ ಶರೀರದಲ್ಲಿ ಯಾವ ಉಪದ್ರವವು ತಲೆದೋರದಿದ್ದರೂ ಸಂಚಿತವಾಗಿರುವ ದೋಷವು ಕಾಲಾಂತರದಲ್ಲಿ ತನ್ನ ಅನುಕೂಲಸಮಯವನ್ನು ಹೊಂದಿ ಕುಪಿತವಾಗಿ ಒಂದಲ್ಲೊಂದು ರೋಗವನ್ನುಂಟು ಮಾಡದಿರಲಾರದು.

ಶರದ್ಗ್ರೀಷ್ಮವಸಂತೇಷು ಪ್ರಾಯಶೋ ದಧಿ ಗರ್ಹಿತಂ |
ಹೇಮಂತೇ ಶಿಶಿರೇ ಚೈವ ವರ್ಷಾಸು ದಧಿ ಶಸ್ಯತೇ ||

ಸು ಸೂ ೪೫

ಆಶ್ವಯುಜ ಕಾರ್ತಿಕ ಜ್ಯೇಷ್ಠ ಆಷಾಢ ಚೈತ್ರ ವೈಶಾಖ ಈ ಮಾಸಗಳಲ್ಲಿ ಮೊಸರನ್ನು ಸೇವಿಸುವುದು ಹಿತಕರವಾಗಿರುವುದಿಲ್ಲ. ಮಾರ್ಗಶಿರ ಪುಷ್ಯ ಮಾಘ ಫಾಲ್ಗುಣ ಶ್ರಾವಣ ಭಾದ್ರಪದ ಈ ಮಾಸಗಳು ಮೊಸರಿನ ಸೇವನೆಗೆ ಅತ್ಯಂತ ಪ್ರಶಸ್ತಗಳೆಂದು ವೈದ್ಯಶಾಸ್ತ್ರವು ಬೋಧಿಸುತ್ತದೆ. ರಕ್ತಪಿತ್ತ ಮತ್ತು ಕಫಸಂಬಂಧವಾದ ರೋಗಪೀಡಿತರು ಮಾತ್ರ ಯಾವಾಗಲೂ ಮೊಸರನ್ನು ಸೇವಿಸತಕ್ಕದ್ದಲ್ಲ. ಆರೋಗ್ಯಾಭಿಲಾಷಿಗಳು ಈ ದಧಿಭೋಜನ ವಿಧಿಯನ್ನನುಸರಿಸುವುದುಚಿತವಾಗಿರುತ್ತದೆ.

ಮೊಸರಿನ ವಿಶೇಷ ಉಪಯೋಗ—ಸೂರ್ಯನ ಉದಯಕಾಲದಲ್ಲಿ ತಲೆನೋವು ಸೂರ್ಯನು ಅಭಿವೃದ್ಧಿಯಾದಂತೆಲ್ಲ ಅಭಿವೃದ್ಧಿಗೊಂಡು ಪುನಃ ಸೂರ್ಯನೊಡನೆ ಕ್ಷೀಣವಾಗುತ್ತಿರುವಂಥ ತಲೆನೋವು ಸಂಭವಿಸಿದಾಗ ಸೂರ್ಯೋದಯಕ್ಕಿಂತ ಮೊದಲು ೩-೪ ದಿನಗಳ ವರೆಗೆ ಆಕಳಿನ ಮೊಸರಿನೊಡನೆ ಅನ್ನವನ್ನು ಭುಂಜಿಸುವುದರಿಂದ ವಿಶೇಷ ಲಾಭವುಂಟಾಗುತ್ತದೆ.

ಯಾರಿಗಾದರೂ ಕ್ಷಯ (ಬಾಯೊರಿಕೆ) ರೋಗದಿಂದ ವಿಶೇಷ ನೀರಡಿಕೆಯುಂಟಾದಾಗ ಒಂದು ಹಳೆಯ ಇಟ್ಟಿಗೆಯನ್ನು ನೀರಿನಿಂದ ಚೆನ್ನಾಗಿ ತೊಳೆದು ಅದನ್ನು ಬೆಂಕಿಯಲ್ಲಿ ಕೆಂಪಾಗುವವರೆಗೆ ಕಾಯಿಸಿ ಆಕಳಿನ ಮೊಸರಿನಲ್ಲಿ ಅದ್ದಿ ಆರಿಸಬೇಕು. ಅನಂತರ ಆ ಮೊಸರನ್ನು ರೋಗಿಗೆ ಸ್ವಲ್ಪ ಸ್ವಲ್ಪ ಕುಡಿಸಿದರೆ ವಿಶೇಷ ಶಾಂತಿಯುಂಟಾಗುತ್ತದೆ. ಇದರಿಂದಲೂ ಲಾಭವುಂಟಾಗದಿದ್ದರೆ ಹುಳಿಯಿಲ್ಲದ ಮೊಸರು ೧೬ ಭಾಗ ಸಕ್ಕರೆ ೮ ಭಾಗ ತುಪ್ಪ ೫ ಭಾಗ ಜೇನುತುಪ್ಪ ೩ ಭಾಗ ಮೆಣಸಿನ ಪುಡಿ ೨ ಭಾಗ ಏಲಕ್ಕಿಯ ಪುಡಿ ೨ ಭಾಗ ಈ ಪದಾರ್ಥಗಳನ್ನೆಲ್ಲ ಒಂದು ಮಣ್ಣಿನ ಹೊಸ ಗಡಿಗೆಯಲ್ಲಿ ಹಾಕಿ ಕಲಸಿಟ್ಟುಕೊಂಡು ನೀರಡಿಕೆಯಿಂದ ಪರಿತಪಿಸುತ್ತಿರುವ ರೋಗಿಗೆ ಸ್ವಲ್ಪ ಸ್ವಲ್ಪ ಕುಡಿಸಬೇಕು. (ಸಶೇಷ)

ಶಿಂಗಟಾಲೂರು

ಶ್ರೀ ವೀರಭದ್ರಸ್ವಾಮಿ ಸಂದರ್ಶನಾರ್ಥವಾಗಿ ಕೆಳಗೆ ಬರೆದ ಪ್ರಕಾರ ಆಯಾಯ ತಾರೀಖುಗಳಲ್ಲಿ ಬಂದಂಥ ಅಧಿಕಾರಿಗಳು ವಿಜಿಟರ್ಸ್ ಬುಕ್ಕಿನಲ್ಲಿ ಬರೆದ ಅಭಿಪ್ರಾಯಗಳ ಕನ್ನಡ ಭಾಷಾಂತರ—

ಮ|| ರಾ|| ಬಿ ಎಸ್ ಕುಂಟಿನಾಳ ಪ್ರಿನ್ಸಿಪಾಲ ರಾಜಾಲಖಮನಗೌಡ ಸರ್ದೇಸಾಯಿ ಹೈಸ್ಕೂಲು ಧಾರವಾಡ ಇವರು

'ನಾನು ಈ ದಿವಸ ಮ|| ರಾ|| ಗುಗ್ರಿ ಹುಚ್ಚಪ್ಪನವರೊಡನೆ ದೇವಸ್ಥಾನವನ್ನು ಸಂದರ್ಶನಮಾಡಿದೆನು. ದೇವಸ್ಥಾನವನ್ನು ಊರ್ಜಿತಸ್ಥಿತಿಗೆ ತರಲು ಶಾನುಭೋಗರು ಸತತ ಪ್ರಯತ್ನ ಪಡುತ್ತಿದ್ದಾರೆ. ಈ ಸ್ಥಾನವು ಬಂದಂಥ ಜನರ ಮನಸ್ಸಿಗೆ ಶಾಂತಿಯನ್ನುಂಟುಮಾಡತಕ್ಕದ್ದಾಗಿದೆ. ಮುಂಬಯಿ ಮದ್ರಾಸ ಇಲಾಖೆಗಳಿಂದ ಇಲ್ಲಿಗೆ ಬರುವಂಥ ಸುಹೃದಯರು ಶಾನುಭೋಗರ ಪ್ರಯತ್ನಕ್ಕೆ ಉತ್ತೇಜನ ಕೊಡುವರೆಂದು ನನ್ನ ಆಶೆ.'

ತಾ|| ೨೭ ೧೨ ೩೧

ಪ್ರಿ ಮೋಹರ್ಲಿನ ಆರ್ ಎಸ್ ಹಿರೇಮಠ ಕಲೆಕ್ಟರ ಸಾಹೇಬ ಬಹದ್ದೂರ ಜಿಲ್ಲಾ ಧಾರವಾಡ ಇವರು—

ಈ ದಿವಸ ಬೆಳಗ್ಗೆ ನಾನು ದೇವಸ್ಥಾನವನ್ನು ಸಂದರ್ಶಿಸಿದೆನು. ದೇವಸ್ಥಾನದ ಅಭಿವೃದ್ಧಿಗೋಸ್ಕರ ಮ್ಯಾನೇಜಿಂಗ ಶಾನುಭೋಗರು ಶ್ರದ್ಧೆವಹಿಸಿ ಕೆಲಸಮಾಡುತ್ತಲಿದ್ದಾರೆ. ಸದ್ಯಃ ದೇವಸ್ಥಾನವರೆಗೆ ರಸ್ತೆಯನ್ನು ದುರಸ್ತ ಮಾಡಿಸುವುದು ಮುಖ್ಯಕರ್ತವ್ಯವಾಗಿದೆ. ತಾ||೨೦ ೧ ೩೨

ದೇವಸ್ಥಾನದ ಕಾರ್ಯಕರ್ತ ರುದ್ರಪ್ಪ

ವಿಜ್ಞಾಪನಾ ಪತ್ರಿಕೆ

1 ಮೈಸೂರು ಪಟ್ಟಣದಲ್ಲಿ ಸಿಡುಬಿನ ಉಪದ್ರವವು ಕಾಣಿಸಿಕೊಂಡು ಸಣ್ಣಮಕ್ಕಳೂ ವೃದ್ಧರೂ ಸಹ ತೊಂದರೆಪಡುತ್ತಿರುವುದೂ ದುಃಖಕ್ಕೆ ಈಡಾಗುತ್ತಿರುವುದೂ ಈ ನಗರದ ಮಹಾಜನರಿಗೆ ವಿಶದವಿದೆ. ಈ ವಿಷಯದಲ್ಲಿ ಮ|| ರಾ|| ಶ್ರೀ|| ಸಿಟಿ ಮುನ್ಸಿಪಲ್ ಪ್ರೆಸಿಡೆಂಟ್‌ರವರು ರೋಗನಿವಾರಣಾರ್ಥವಾಗಿ ಮುತವರ್ಜಿಯಿಂದ ಸಿಡುಬು ಹಾಕಿಸುವ ಏರ್ಪಾಡುಮಾಡಿ ಉಪಕಾರಮಾಡುತ್ತಿದ್ದಾರೆ. ಮ|| ಹೆಲ್ತಾಫೀಸರವರು ಸಹ ಪ್ರಜಾನುರಾಗಿಗಳಾಗಿ ಇದುವರಿಗೆ ಸುಮಾರು 8456 ಮಂದಿಗಳಿಗೆ ಸಿಡುಬು ಹಾಕಿಸಿ ಈ ಉಪದ್ರವದ ತೊಂದರೆಯನ್ನು ತಪ್ಪಿಸಲು ಬಹಳ ಪ್ರಯತ್ನ ಪಡುತ್ತಾರೆ ಮತ್ತು ಪಡುತ್ತಲೂ ಇರುತ್ತಾರೆ. ಆದರೆ ಲಕ್ಷಾಂತರ ಜನಗಳಿರುವ ಈ ನಗರದಲ್ಲಿ ಇಷ್ಟು ಮಂದಿಗೆ ಮಾತ್ರ ಸಿಡುಬು ಹಾಕಿಸಿರುವುದರಿಂದ ಹೆಚ್ಚು ಪ್ರಯೋಜನವಾಗಲಾರದು. ಅನೇಕ ಮಂದಿ 3 ವರುಷಗಳ ಹಿಂದೆ ಸಿಡುಬುಹಾಕಿಸಿಕೊಂಡಿರುವವರೂ ಸಹಾ ಪುನಃ ಸಿಡುಬುಹಾಕಿಸಿಕೊಳ್ಳದಿದ್ದರೆ ಈ ರೋಗದ ಭಯವು ಇದ್ದೇ ಇರುವುದು. 'ವಿಹ್ವಾ ರೋಗ್ಯಸಮಂ ಭಾಗ್ಯಂ' ಎಂಬ ಹಿತೋಕ್ತಿಯಂತೆ ಪ್ರತಿನಾಗರಿಕರೂ ಆರೋಗ್ಯದೃಷ್ಟಾ ದೃಷ್ಟಿಯಿಂದ ಮುನ್ಸಿಪಲ್ ಅಧಿಕಾರಿಗಳೊಡನೆ ಸಹಕರಿಸಿ ಹೆಚ್ಚು ಮಂದಿಗೆ ಸಿಡುಬುಹಾಕಿಸುವುದರ ಮೂಲಕ ಉಪದ್ರವದ ತೊಂದರೆಯಿಂದ ತಪ್ಪಿಸಿಕೊಳ್ಳಬೇಕಾದುದು ಅವಶ್ಯಕವಾಗಿರುತ್ತದೆ. ಆದ್ದರಿಂದ ಮುನ್ಸಿಪಲ್ ಆಫೀಸಿನಲ್ಲಿಯೇ ಆಗಲೀ ಅಥವಾ ಆಯಾ ಮೊಹಲ್ಲಾಗಳಲ್ಲಾಗಲೀ ಪ್ರಜೆಗಳನ್ನು ಸೇರಿಸಿ ಸಿಡುಬುಹಾಕಿಸಿಕೊಳ್ಳುವುದರ ಮೂಲಕ ರೋಗನಿವಾರಣೆಗೆ ಸಹಾಯಕರಾಗಿ ಪುಣ್ಯಭಾಗಿಗಳಾಗಬೇಕೆಂದು ಕೋರಿದೆ.

2 ಇದೇ ಫೆಬ್ರವರಿ 1 ನೇ ತಾರೀಖಿನಿಂದ ರಸ್ತೆಯಲ್ಲಿ ತಿರುಗುವ ಪ್ರಜೆಗಳು ರಸ್ತೆಯ ಪಕ್ಕದಲ್ಲಿರುವ ಫುಟ್‌ಪಾತ್‌ಗಳಲ್ಲೇ ತಿರುಗಾಡಬೇಕೆಂದು ಸರ್ಕಾರದ ಆಜ್ಞೆಯಾಗಿರುವುದು ಸರಿಯಷ್ಟೆ. ಈ ನಿಯಮದಿಂದ ಕಾಲು ನಡಿಗೆಯಲ್ಲಿ ಸಂಚರಿಸುವ ಪ್ರಜೆಗಳಿಗೆ ವಿಶೇಷ ಸಾಕರ್ಯವೇರ್ಪಟ್ಟಿರುವುದೂ ಇವರುಗಳಿಗೆ ವಾಹನಗಳಿಂದ ಆಗುವ ತೊಂದರೆ ತಪ್ಪುವುದೂ ಮಹಾಜನಗಳಿಗೆ ತಿಳಿದ ವಿಷಯವಾಗಿದೆ. ಈ ವಿಷಯದಲ್ಲಿ ಮ|| ರಾ|| ಶ್ರೀ|| ಸಿಟಿ ಪೋಲೀಸ್ ಸೂಪರಿಂಟೆಂಡೆಂಟರವರು ಮುತವರ್ಜಿಯಿಂದ ಜನಗಳಿಗೆ ಎಚ್ಚರಿಕೆ ಕೊಡುತ್ತಲೇ ಇರುತ್ತಾರೆ. ಅದರಂತೆ ಪೋಲೀಸು ಅಧಿಕಾರಿಗಳೂ ಸಹಾ ಬೋಧಿಸುತ್ತಿರುತ್ತಾರೆ. ಹೀಗಿದ್ದರೂ ಇದನ್ನು ಲಕ್ಷ್ಯಕ್ಕೆ ತಾರದೆ ಜನಗಳು ವೃಥಾ ತೊಂದರೆಗೂ ಶಿಕ್ಷೆಗೂ ಗುರಿಯಾಗುವರು. ವಿಹಿತವಲ್ಲ. ಆದ್ದರಿಂದ ಫುಟ್‌ಪಾತ್ ಮೇಲೆ ತಿರುಗಾಡುವುದು ಕ್ಷೇಮವಾಗಿರುತ್ತದೆ. ಫುಟ್‌ಪಾತ್ ಇಲ್ಲದೆ ಇರುವ ರಸ್ತೆಯಲ್ಲಿ ರಸ್ತೆಯ ಪಕ್ಕದಲ್ಲಿ ತಿರುಗಾಡುವುದು ಸೂಕ್ತವಾಗಿರುತ್ತದೆ. ಮೇಲ್ಕಂಡ ವಿಷಯಗಳನ್ನು ಗಮನಕ್ಕೆ ತಂದುಕೊಂಡು ಅದರಂತೆ ನಡೆಯುವರೆಂದು ನಂಬಿರುವ

ಎಂ ಸಿ ತಮ್ಮಯ್ಯ
ಮುನ್ಸಿಪಲ್ ಕೌನ್ಸಿಲರ್, ಮೈಸೂರು

ಪಂಚಾಚಾರ್ಯ ಪ್ರಭಾ.

೧೯೩೫ನೇ ಫೆಬ್ರವರಿ ತಾ|| ೧೮ನೇ ಸೋಮವಾರ

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತಕಾಲೇಜ್.

ಮೈಸೂರು ದೇಶಕ್ಕೆ ದ್ವಿತೀಯ ರಾಜಧಾನಿ ಎನಿಸಿದ ಬೆಂಗಳೂರು ಪಟ್ಟಣದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಹೆಸರಿನಿಂದ ಒಂದು ಸಂಸ್ಕೃತ ಕಾಲೇಜನ್ನು ಸ್ಥಾಪಿಸಬೇಕೆಂದು ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಅಧಿಕಾರ ಸಮಯದಲ್ಲಿ ಅಪ್ಪಣೆಯನಿತ್ತ ವಿಷಯವು ಸರ್ವರಿಗೂ ತಿಳಿದೇ ಇದೆ. ಸದರಿ ಜಗದ್ಗುರುಗಳವರ ಕಳೆದವರ್ಷ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿಗೆ ದಯಮಾಡಿಸಿದರ ಆ ಸ್ಮರಣಾರ್ಥಕ್ಕಾಗಿ ಶ್ರೀಮತ್ಪಂಚಾಚಾರ್ಯರ ಪವಿತ್ರಾಭಿದಾನದಿಂದ ಸಂಸ್ಕೃತ ಮಹಾವಿದ್ಯಾಲಯವನ್ನು ಸ್ಥಾಪಿಸಬೇಕೆಂಬ ಸತ್ಯಸಂಕಲ್ಪವು [illegible] ಈ ಮಹಾ ಕಾರ್ಯವನ್ನು ಕೈಕೊಂಡಿದ್ದರೆ. ಬೆಂಗಳೂರ ರೈಲ್ವೆ ಸ್ಟೇಷನ್ನಿಗೆ ೧ ಫರ್ಲಾಂಗ್ ದೂರದಲ್ಲಿರುವ ಎಲೆಕ್ಟ್ರಿಕ್ ಆಫೀಸಿನ ಹತ್ತಿರ ಅತಿವಿಶಾಲ ಪ್ರದೇಶದಲ್ಲಿ ಒಂದು ಬಂಗಲೆಯನ್ನು ಈ ವಿದ್ಯಾಲಯಕ್ಕಾಗಿ ಏರ್ಪಡಿಸಿರುತ್ತಾರೆ. ಈಗ ತೆರೆದ ಕಾಲೇಜಿನ ಸ್ಥಳವು ಬಹು ಮನೋಹರವಾಗಿದ್ದು ಸರ್ವರೂ ಉಪಯೋಗಿಸಲಿಕ್ಕೆ ವಿಶೇಷ ಅನುಕೂಲವಾಗಿದೆ. ಇಂತಹ ಸುಪ್ರಸಿದ್ಧ ನಗರದಲ್ಲಿ ಮತಸ್ಥಾಪನಾಚಾರ್ಯರ ಹೆಸರಿನಿಂದ ಇಂತಹ ಸಂಸ್ಥೆಯೊಂದು ಅವಶ್ಯವಾಗಿ ಸ್ಥಾಪಿಸಲ್ಪಡಬೇಕಾದ್ದು ಈ ದಿವಸ ವೀರಶೈವ ಸಮಾಜಕ್ಕೆ ಒಂದು ವಿಶೇಷ ಶೋಭೆಯ ಸಂಗತಿಯೆಂಬ ವಿಷಯವನ್ನು ಹೇಳಬೇಕಾಗಿಲ್ಲ. ಇದನ್ನು ಪೋಷಿಸುವುದು ಪ್ರತಿಯೊಬ್ಬ ಮತಾಭಿಮಾನಿಗೂ ಸಹಾಯಮಾಡಬೇಕಾಗಿದೆ. ಇತರರಿಗೂ ಬೋಧಿಸಿ ಅವರಿಂದಲೂ ಸಹಾಯವನ್ನು ಮಾಡಿಸುವುದು ಅವರ ಕರ್ತವ್ಯವಾಗಿದೆ. ಇಲ್ಲಿಯವರೆಗೆ ನಮ್ಮ ದೇಶದಲ್ಲಿ ವೀರಶೈವ ವಿದ್ಯಾರ್ಥಿಗಳ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಯಾವ ಮಹಾಸಂಸ್ಥೆಯೂ ಸ್ಥಾಪಿಸಲ್ಪಟ್ಟಿಲ್ಲ. ಆದುದರಿಂದ ಸರ್ವ ವೀರಶೈವರೂ ಕೀರ್ತಿಪ್ರದವೂ ಜ್ಞಾನಪ್ರದವೂ ಮೋಕ್ಷಪ್ರದವೂ ಆದ ದೇವಭಾಷಾಭಿವೃದ್ಧಿಯ ವಿಷಯದಲ್ಲಿ ಗಮನವನ್ನು ಕೊಟ್ಟು ಈ ಮಹಾಕಾರ್ಯಕ್ಕೆ ತನುಮನಧನಗಳಿಂದ ಸಹಾಯ ಮಾಡಬೇಕೆಂದು ಬಿನ್ನೈಸಬೇಕಾಗಿದೆ. ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಪಟ್ಟಾಧಿಕಾರ ಸಮಯದಲ್ಲಿ ಅಲ್ಲಿಗೆ ಆಗಮಿಸಿದ್ದ ಅನೇಕ ಜನ ವೀರಶೈವಮತಾಭಿಮಾನಿಗಳು ಜಗದ್ಗುರು ಪಂಚಾಚಾರ್ಯರ ಹೆಸರಿನಿಂದ ಸ್ಥಾಪಿಸಲ್ಪಡುವ ಸಂಸ್ಕೃತ ಮಹಾವಿದ್ಯಾಲಯಕ್ಕಾಗಿ ವಾಗ್ದಾನವನ್ನು ಮಾಡಿದ್ದರು. ಆ ಮಹನೀಯರೆಲ್ಲರೂ ತಮ್ಮ ತಮ್ಮ ವಾಗ್ದಾನದ ಹಣವನ್ನು ಸದ್ಯ ಸಲ್ಲಿಸಿದರೆ ತಮ್ಮ ವಾಗ್ದಾನವನ್ನು ಸಾರ್ಥಕಮಾಡಿಕೊಂಡಂತಾಗುವದಲ್ಲದೆ, ವಿದ್ಯಾದಾನ ದ್ವಾರಾ ಮಹಾಪುಣ್ಯಲಾಭವನ್ನು ಸಂಪಾದಿಸಿಕೊಂಡಂತಾಗುತ್ತದೆ. ಆದುದರಿಂದ ವಾಗ್ದಾನ ಮಾಡಿದ ಧರ್ಮಾತ್ಮರು ಬಹಳ ದಿವಸಗಳಾದವೆಂದು ಪರಿಭಾವಿಸದೆ, ಈ ದಿನವೇ ವಾಗ್ದಾನ ಮಾಡಿದ್ದೇವೆಂದು ಭಾವಿಸಿ ತಮ್ಮ ಹಣವನ್ನು ಶ್ರೀ ಜಗದ್ಗುರು ಪಂಚಾಚಾರ್ಯರ ಹೆಸರಿನಿಂದ ಮೈಸೂರು ಬ್ಯಾಂಕಿಗೆ ಕಟ್ಟಬೇಕೆಂದಾಶಿಸುತ್ತೇವೆ.

ಈ ಸಂಸ್ಕೃತಮಹಾವಿದ್ಯಾಲಯಕ್ಕೋಸ್ಕರ ಸಹಾಯಮಾಡಿದ ಧರ್ಮಾತ್ಮರ ಹೆಸರುಗಳು ಚಿರಕಾಲವಾಗಿ ಉಳಿಯಲೆಂಬ ಸದುದ್ದೇಶದಿಂದ ಅವರ ಹೆಸರುಗಳನ್ನು ಶಿಲೆಯಲ್ಲಿ ಕೆತ್ತಿಸಬೇಕೆಂದೂ, ೫೦೦ ರೂಪಾಯಿಗಳನ್ನು ಕೊಟ್ಟವರ ಹೆಸರಿನಿಂದ ಒಂದೊಂದು ರೂಮನ್ನು ಕಟ್ಟಬೇಕೆಂದೂ, ಅದರಲ್ಲಿ ಅವರ ಭಾವಚಿತ್ರವನ್ನು ಸ್ಥಾಪಿಸಬೇಕೆಂದೂ, ೫೦೦೦ ರೂಪಾಯಿಗಳನ್ನು ಸಹಾಯಮಾಡಿದರೆ ಅದರ ವೃದ್ಧ್ಯಂಶದಿಂದ ಬರುವ ಹಣವನ್ನು ಅವರ ಹೆಸರಿನಿಂದಲೇ ವಿನಿಯೋಗಿಸಬೇಕೆಂದೂ ನಿರ್ಣಯವಾಗಿದೆ. ಈ ರೀತಿಯಾಗಿ ನಿರ್ಣಯಮಾಡಿರುವುದು ಅತ್ಯಂತ ಯೋಗ್ಯವಾಗಿದೆ. ಈ ವಿಷಯಗಳನ್ನೆಲ್ಲಾ ಮತಾಭಿಮಾನಿಗಳೂ ಗುರುಭಕ್ತರೂ ಆದ ಮಹಾಶಯರೆಲ್ಲರೂ ನಿರ್ಮಲಬುದ್ಧಿಯಿಂದ ಪರ್ಯಾಲೋಚಿಸಿ ಇಹಪರಸುಖದಾಯಕವಾದ ಈ ಮಹಾವಿದ್ಯಾದಾನ ಕಾರ್ಯಕ್ಕೆ ಸಹಾಯ ಮಾಡಿ ಜಗದೀಶ್ವರನ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಭರತಖಂಡದಲ್ಲಿರುವ ಪ್ರತಿಯೊಂದು ವೈದಿಕಮತದ ತತ್ವಗಳೆಲ್ಲಾ ಸಂಸ್ಕೃತಭಾಷೆಯಲ್ಲಿಯೇ ಅಡಕವಾಗಿವೆ. ಎಲ್ಲಾ ಮತಗಳ ಪ್ರವರ್ತಕಾಚಾರ್ಯರು ಈ ದೇವಭಾಷೆಯಲ್ಲಿಯೇ ತಮ್ಮ ತಮ್ಮ ಸಿದ್ಧಾಂತಗಳನ್ನು ಬರೆದಿಟ್ಟಿದ್ದಾರೆ. ಅದರಂತೆ ವೀರಶೈವಮತಾಚಾರ್ಯರೂ ಈ ದೇವಭಾಷೆಯಲ್ಲಿಯೇ ತಮ್ಮ ತತ್ವಗಳನ್ನು ಬರೆದಿಟ್ಟಿದ್ದಾರೆ. ಈ ಮತದ ನಿಜಸ್ವರೂಪವನ್ನು ಅರಿತುಕೊಳ್ಳಬೇಕಾದರೆ ಸಂಸ್ಕೃತಭಾಷೆಯ ಜ್ಞಾನವು ಅವಶ್ಯವಾಗಿ ಬೇಕೇಬೇಕು. ಈ ಭಾಷೆಯ ಸಹಾಯವಿಲ್ಲದೆ ಮತತತ್ವಗಳನ್ನು ತಿಳಿಯಬಹುದೆಂದು ಹೇಳುವವರು ನೌಕೆಯ ಸಹಾಯವಿಲ್ಲದೆ ಸಮುದ್ರವನ್ನು ದಾಟುವೆವೆಂದು ಹೇಳುವ ಜಾಣರ ಗುಂಪಿಗೆ ಸೇರುವರೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಮಾನವನನ್ನು ಸಂಸಾರಬಂಧನದಿಂದ ಬಿಡಿಸುವುದಕ್ಕೆ ಈ ದೇವಭಾಷೆಯೇ ವಿಶೇಷ ಸಹಾಯಕವಾಗಿರುತ್ತದೆ. ಆದುದರಿಂದಲೇ ಪ್ರಾಚೀನ ಸುಪ್ರಸಿದ್ಧ ಮಹರ್ಷಿಗಳೂ, ಚಕ್ರವರ್ತಿಗಳೂ ಮಹಾರಾಜರೂ ಈ ಭಾಷೆಯನ್ನು ಅಭ್ಯಾಸಮಾಡಿಯೇ ಇಹಪರ ಸುಖವನ್ನು ಪಡೆದರು. ಈಗಿನ ಪಾಶ್ಚಾತ್ಯರೂ ಕೂಡ ಈ ಭಾಷೆಯ ಮಹಿಮೆಯನ್ನು ತಿಳಿದು ತಮ್ಮ ದೇಶದಲ್ಲಿ ವಿಶೇಷ ಪ್ರಚಾರದಲ್ಲಿ ತರಹತ್ತಿದ್ದಾರಲ್ಲದೆ ವೇದಸಂಬಂಧವಾದ ಅನೇಕ ಮಹಾಗ್ರಂಥಗಳನ್ನು ದೇವನಾಗರೀ ಲಿಪಿಯಲ್ಲಿ ಮುದ್ರಿಸಿರುವರು. ಪಾಶ್ಚಾತ್ಯರೇ ಈ ಭಾಷೆಗೆ ಇಷ್ಟು ಗೌರವವನ್ನು ಕೊಡುತ್ತಿರುವಾಗ ವೇದಾಗಮಾದಿ ಪರಮಪವಿತ್ರಗ್ರಂಥಗಳ ಬಗ್ಗೆ ಪ್ರಾಣವನ್ನು ಸಹ ಅರ್ಪಿಸಲು ಸಿದ್ಧರಾಗಿರುವ ನಾವುಗಳು ಕೊಡದಿರುವುದು ಆಶ್ಚರ್ಯವಲ್ಲವೇ? ಉತ್ತರಹಿಂದೂಸ್ಥಾನದಲ್ಲಿ ಅನೇಕ ಮತದವರ ಸಂಸ್ಕೃತವಿದ್ಯಾಭ್ಯಾಸಕ್ಕಾಗಿ ಮಹಾಮಹಾಸಂಸ್ಥೆಗಳನ್ನು ಸ್ಥಾಪಿಸಿ ಕೋಟಿಯಾಂತರವಾಗಿ ಧನವನ್ನು ವ್ಯಯಮಾಡಿರುವರು. ವೀರಶೈವರಾದ ನಾವು ಅವರಲ್ಲಿ ಏಕಶತಾಂಶವನ್ನಾದರೂ ಮಾಡುವುದುಚಿತವಲ್ಲವೇ? ಇತ್ಯಾದಿ ವಿಷಯಗಳನ್ನೆಲ್ಲಾ ವಿದ್ಯಾಭಿಮಾನಿಗಳು ಮನಸ್ಸಿನಮೇಲೆ ತೆಗೆದುಕೊಂಡು ತಮ್ಮ ಮತಾಚಾರ್ಯರ ಪವಿತ್ರಾಭಿದಾನದಿಂದ ಸ್ಥಾಪಿತವಾಗಲಿರುವ ಸಂಸ್ಕೃತ ಮಹಾವಿದ್ಯಾಲಯಕ್ಕೆ ಸರ್ವರೀತಿಯಿಂದಲೂ ಸಹಾಯ ಮಾಡಿ ಜಗದೀಶ್ವರನ ಕೃಪೆಗೂ ಪಂಚಾಚಾರ್ಯರ ಕೃಪೆಗೂ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಮುಂಬಯಿ ಹೈಕೋರ್ಟಿನಲ್ಲಿ ಬನವಾಸಿ ಪ್ರಕರಣದ ತೀರ್ಪು.

ಕಾರವಾರ ಡಿಸ್ಟ್ರಿಕ್ಟಿಗೆ ಸೇರಿದ ಬನವಾಸಿ ಮಧುಕೇಶ್ವರ ದೇವಸ್ಥಾನದಲ್ಲಿ ರತ್ನಾಗಿರಿ ಡಿ|| ಡಿ|| ಕಲೆಕ್ಟರಾಗಿರುವ ಮಿ|| ಶಾಂತವೀರ ಒಡೆಯರವರು ಪ್ರವೇಶ ಮಾಡಿದರೆಂಬ ಆಪಾದನೆಯ ಮೇಲೆ ಆ ದೇವಸ್ಥಾನದ ಮುಕ್ತೇಸರರು ಸದರಿಯವರ ಮೇಲೆ ದಾವೆಯನ್ನು ಹೂಡಿದ ವಿಷಯವು ಸರ್ವರಿಗೂ ವೇದ್ಯವೇ ಇದೆ. ಈ ದಾವೆಯು ಒಳ ಕೋರ್ಟಿನವರಿಗೆ ವಿಚಾರಿಸಲ್ಪಟ್ಟು ದೇವಾಲಯದ ಶುದ್ಧಿಗಾಗಿ ಒಡೆಯರವರು ೫೦ ರೂಗಳನ್ನು ಕೊಡಬೇಕೆಂದು ಮನಸೀಫ್ ಮತ್ತು ಡಿ|| ಜಡ್ಜರವರ ಕೋರ್ಟುಗಳಲ್ಲಿ ತೀರ್ಮಾನವಾಯಿತು. ಇದರ ಮೇಲೆ ಒಡೆಯರವರು ಮುಂಬಯಿ ಹೈಕೋರ್ಟಿಗೆ ಅಪೀಲುಮಾಡಿ ಸುಪ್ರಸಿದ್ಧ ಬ್ಯಾರಿಸ್ಟರರಾದ ಜಯಕರರನ್ನು ತಮ್ಮ ಪರವಾಗಿ ವಕೀಲರನ್ನಾಗಿ ನಿಯಮಿಸಿದರು. ದೇವಸ್ಥಾನದ ಧರ್ಮದರ್ಶಿಗಳು ಮಿ|| ಮುಡೇಶ್ವರರನ್ನು ನಿಯಮಿಸಿದರು. ಬ್ಯಾರಿಸ್ಟರ್ ಜಯಕರರವರು ಹೈಕೋರ್ಟಿನ ಜಡ್ಜರವರಲ್ಲಿ ವೀರಶೈವ ಮತದ ಸಮಗ್ರ ವಿಚಾರವನ್ನು ಪ್ರತಿಪಾದನಮಾಡಿ ವೀರಶೈವರಲ್ಲಿ ಜಾತಿ [illegible]ಗಳಿಲ್ಲವೆಂದೂ, ಮಿ|| ಒಡೆಯರವರು ಗುರುವಂಶೀಯ ಶ್ರೇಷ್ಠ ಬ್ರಾಹ್ಮಣರೆಂದೂ, ಇಂಥ ಪವಿತ್ರ ಜಂಗಮರು ಪ್ರವೇಶಮಾಡಿದರೆ ದೇವಾಲಯವು ಅಪವಿತ್ರವಾಯಿತೆಂದು ವಾದಿಸುವುದು ಕೇವಲ ಅನ್ಯಾಯವೆಂದೂ, ಲೋಕವಿಖ್ಯಾತರಾದ ಡಾ|| ಭಾಂಡಾರಕರರವರು ವೀರಶೈವರಲ್ಲಿ ಬ್ರಾಹ್ಮಣ ವರ್ಗವೆಂಬುದೊಂದು ವರ್ಗವಿರುವುದೆಂಬ ಅಭಿಪ್ರಾಯವನ್ನು ತೋರ್ಪಡಿಸಿರುವರೆಂದೂ ಇವೇ ಮೊದಲಾದ ಕಾರಣಗಳನ್ನು ತೋರಿಸುತ್ತ ಮೂರು ದಿವಸಗಳವರೆಗೆ ಆರ್ಗ್ಯುಮೆಂಟ್ ಮಾಡಿದರು. ವಾದಿಗಳ ವಕೀಲರು ೨ ದಿವಸಗಳವರೆಗೆ ತಮ್ಮ ಅಭಿಪ್ರಾಯವನ್ನು ಸಮರ್ಥಿಸಿದರು. ನ್ಯಾಯಾಧೀಶರು ಉಭಯಪಕ್ಷಗಳ ಅಭಿಪ್ರಾಯವನ್ನು ಚೆನ್ನಾಗಿ ತಿಳಿದುಕೊಂಡು, ದೇವಾಲಯವು ಅಪವಿತ್ರವಾದುದರಿಂದ ಪ್ರಾಯಶ್ಚಿತ್ತಕ್ಕಾಗಿ ೩೫೦ ರೂ ಕೊಡಬೇಕೆಂದು ಕೆಳಗಿನ ಕೋರ್ಟಿನವರು ಬರೆದಿದ್ದ ತೀರ್ಪನ್ನು ರದ್ದುಮಾಡಿ, ದೇವಾಲಯದ ಮಾಮೂಲಿಗೆ ವಿರುದ್ಧವಾಗಿ ವರ್ತಿಸಿದ್ದಕ್ಕೋಸ್ಕರ ನಷ್ಟದ್ರವ್ಯರೂಪದಿಂದ ೧೦ ರೂ ಕೊಟ್ಟರೆ ಸಾಕೆಂದು ತೀರ್ಪುಕೊಟ್ಟರೆಂದು ತಿಳಿದುಬಂದಿದೆ.

ಕರ್ನಾಟಕಲಿಪಿಸುಧಾರಣೆಯ ವಿಮರ್ಶೆ.

ಹಾಸನ ಡಿ|| ಡೆ|| ಕ|| ಆಫೀಸ್ ಎಕ್ಸೈಜ್ ಇಲಾಖೆಯ ಹೆಡ್‌ಕ್ಲಾರ್ಕರಾಗಿರುವ ಶ್ರೀಮಾನ್ ಬಿ ಶ್ರೀಕಂಠಯ್ಯನವರು "ಕರ್ನಾಟಕಲಿಪಿಸುಧಾರಣೆ" ಎಂಬ ಹೆಸರಿನ ಪುಸ್ತಕವನ್ನು ನಮ್ಮ ಕಡೆಗೆ ಕಳುಹಿಸಿದ್ದಾರೆ. ಕನ್ನಡ ಭಾಷೆಯಲ್ಲಿ ಅಕ್ಷರಗಳು ಹೆಚ್ಚಾಗಿದ್ದು, ಅವುಗಳಲ್ಲಿ ಕೆಲವು ಅಕ್ಷರಗಳು ನಿರುಪಯೋಗವುಳ್ಳವುಗಳಾಗಿರುವುದರಿಂದ ಅವುಗಳನ್ನು ತೆಗೆದುಹಾಕಿ ಸ್ವಲ್ಪ ಅಕ್ಷರಗಳಲ್ಲಿಯೇ ಈ ಲಿಪಿಯನ್ನು ಉಪಯೋಗಿಸಿ ಕರ್ನಾಟಕ ದೇಶೀಯರಿಗೆ ಸುಲಭಮಾಡಿಕೊಡಬೇಕೆನ್ನುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಗ್ರಂಥಕರ್ತರು ಕೆಲವು ವಿಷಯಗಳನ್ನು ಬಹು ಸಮರ್ಪಕವಾಗಿ ಪ್ರತಿಪಾದಿಸಿದ್ದಾರೆ. ಅ ಇ ಉ ಎ ಒ ಎಂಬ ೫ ಸ್ವರಗಳಲ್ಲಿಯೇ ೧೬ ಸ್ವರಗಳನ್ನು ಕಲ್ಪಿಸಬಹುದೆಂದೂ, ೧೮ ವ್ಯಂಜನಾಕ್ಷರಗಳಲ್ಲಿಯೇ ಎಲ್ಲಾ ವ್ಯಂಜನಾಕ್ಷರಗಳ ಉಪಯೋಗವನ್ನು ಮಾಡಿಕೊಳ್ಳಬಹುದೆಂದೂ ಯುಕ್ತಿಯುಕ್ತವಾಗಿ ತೋರಿಸಿದ್ದಾರೆ. ಶ್ರೀಮಾನ್ ಶ್ರೀಕಂಠಯ್ಯನವರು ತಮ್ಮ ಬುದ್ಧಿಪ್ರತಿಭೆಯಿಂದ ಈ ತರಹದ ನೂತನ ಶೋಧವನ್ನು ಮಾಡಿರುವುದು ಕರ್ನಾಟಕದೇಶೀಯರೆಲ್ಲರಿಗೂ ಅತ್ಯಂತ ಸಂತೋಷವನ್ನುಂಟುಮಾಡತಕ್ಕದ್ದಾಗಿದೆ. ಕರ್ನಾಟಕಭಾಷಾಭಿಮಾನಿಗಳೆಲ್ಲರೂ ಈ ನವೀನ ಶೋಧದ ಕಡೆಗೆ ದೃಷ್ಟಿಯನ್ನಿಟ್ಟು ಅಕ್ಷರಸುಧಾರಣೆಯನ್ನು ಪ್ರಚಾರದಲ್ಲಿ ತಂದರೆ ಕರ್ನಾಟಕಭಾಷೆಯ ಮುದ್ರಣಕಲೆಗೂ, ಟೈಪ್‌ರೈಟಿಂಗ್ ಕಲೆಗೂ, ಲೇಖನ ಕಲೆಗೂ ವಿಶೇಷ ವೃದ್ಧಿಯನ್ನುಂಟುಮಾಡಿದಂತಾಗುವುದು. ಇಂಗ್ಲೀಷ್ ಭಾಷೆಯಲ್ಲಿ ೨೬ ಅಕ್ಷರಗಳಿಂದಲೇ ಸಮಸ್ತ ವ್ಯವಹಾರವು ನಡೆಯುವಂತೆ ಕನ್ನಡಭಾಷೆಯಲ್ಲಿಯೂ ನಡೆಯುವುದರಲ್ಲಿ ಯಾವ ಸಂಶಯವೂ ಇಲ್ಲ. ಈ ಮಹಾ ಕಾರ್ಯವು ಒಬ್ಬಿಬ್ಬರಿಂದ ಆಗತಕ್ಕದ್ದಲ್ಲ. ಇದಕ್ಕೆ ಸಮಸ್ತ ಕರ್ನಾಟಕದೇಶೀಯರ ಸಹಾನುಭೂತಿಯು ಬೇಕು. ಮುಖ್ಯವಾಗಿ ಮುದ್ರಣ ಕಲೆಯವರೂ, ವರ್ತಮಾನಪತ್ರಿಕೆಯವರೂ ಈ ಕಾರ್ಯವನ್ನು ಕೈಕೊಳ್ಳಬೇಕಲ್ಲದೆ ಸರಕಾರದವರೂ ಕೂಡ ಈ ವಿಷಯದಲ್ಲಿ ಪೂರ್ಣ ಸಹಾಯಕರಾಗಬೇಕಾಗುವುದು. ಕರ್ನಾಟಕರಾಜ್ಯವನ್ನು ಪರಿಪಾಲಿಸುತ್ತಿರುವ ನಮ್ಮ ಮೈಸೂರು ಸರಕಾರದವರೂ, ಬ್ರಿಟಿಷ್ ಸರಕಾರದವರೂ ಇತ್ತ ಲಕ್ಷ್ಯವನ್ನಿತ್ತರೆ ನಾಲ್ಕಾರು ವರ್ಷಗಳಲ್ಲಿಯೇ ಈ ಲಿಪಿಯಲ್ಲಿ ಸುಧಾರಣೆಯಾಗಬಹುದೆಂದು ಹೇಳಬಹುದಾಗಿದೆ. ಶ್ರೀಮಾನ್ ಶ್ರೀಕಂಠಯ್ಯನವರ ಪವಿತ್ರೋದ್ಯಮಕ್ಕೆ ಶ್ರೀ ಜಗದೀಶ್ವರನ ಅನುಗ್ರಹವು ಪೂರ್ಣವಾಗಿ ದೊರೆತು ಇವರ ಸಂಕಲ್ಪವು ಕಾರ್ಯರೂಪವಾಗಿ ಪರಿಣಮಿಸಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕಿವಿ, ಮೂಗು ಮತ್ತು ಗಂಟಲು ಉಪದ್ರವಗಳಿಗೆ ಡಾಕ್ಟರರಾಗಿರುವ ಶ್ರೀಯುತ ಪಡಕಿ ಲಕ್ಷ್ಮಣರಾಯರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇಷ್ಟರಲ್ಲಿಯೇ ಯೂರೋಪಿಗೆ ಪ್ರಯಾಣಮಾಡುವರೆಂದು ತಿಳಿದುಬಂದಿದೆ.

ಶ್ರೀಮನ್ಮಹಾರಾಜರವರು ಕಳೆದ ಭಾನುವಾರ ರಾಜಧಾನಿಯಿಂದ ಮೋಟಾರಿನಲ್ಲಿ ಬೆಂಗಳೂರಿಗೆ ಪ್ರಯಾಣಿಸಿದರು. ಸುಮಾರು ಒಂದುವಾರದ ಮೇಲೆ ರಾಜಧಾನಿಗೆ ದಯಮಾಡುತ್ತಾರೆಂಬ ವರ್ತಮಾನವಿದೆ. ಶ್ರೀಮದ್ಯುವರಾಜರವರು ಇಷ್ಟರಲ್ಲೇ ಸೀಮೆಗೆ ಪ್ರಯಾಣ ಮಾಡುವ ಸುದ್ದಿ ಇದೆ. ಶ್ರೀಮನ್ಮಹಾರಾಣಿಯವರು ಸುಮಾರು 5 ತಿಂಗಳಿಂದ ಬೆಂಗಳೂರಿನಲ್ಲಿದ್ದು ಆದಿವಾರ ರಾಜಧಾನಿಗೆ ದಯಮಾಡಿಸಿದ್ದಾರೆ.

ಬೆಂಗಳೂರಿನಿಂದ ಹರಿಹರದವರೆಗೆ ಎಂ ಎಸ್ ಎಂ ರೈಲ್ವೆ ಕಂಪನಿಯವರು ನಡೆಸುತ್ತಿದ್ದ ರೈಲ್ವೆಯನ್ನು ಆದಷ್ಟು ಜಾಗ್ರತೆ ವಹಿಸಿಕೊಳ್ಳಲು ನಮ್ಮ ಸರ್ಕಾರದವರು ಅನೇಕ ದಿನಗಳಿಂದಲೂ ಪ್ರಯತ್ನಪಡುತ್ತಿದ್ದಾರಷ್ಟೆ! ಆದರೆ ಮೇಲ್ಕಂಡ ರೈಲ್ವೆ ಕಂಪನಿಯವರು ತಮ್ಮ ಕಂಟ್ರಾಕ್ಟು ಮುಗಿಯುವವರೆಗೂ ಅಂದರೆ 1937 ನೇ ಇಸವಿಯ ಅಂತ್ಯದವರೆಗೂ ಇದನ್ನು ನಮ್ಮ ಸರಕಾರದವರಿಗೆ ಒಪ್ಪಿಸದೆ ತಾವೇ ನಡೆಸಿಕೊಂಡು ಬರುತ್ತಾರೆಂದು ತಿಳಿದುಬಂದಿದೆ.

ರಾಜಧಾನಿಯಲ್ಲಿ ಪಾದಚಾರಿಗಳು ದೊಡ್ಡ ರಸ್ತೆಯ ಎರಡು ಪಕ್ಕಗಳಲ್ಲಿರುವ ಫುಟ್‌ಪಾತುಗಳ ಮೇಲೆ ನಡೆಯಬೇಕೆಂದು ಸರ್ಕಾರದವರು ಜಾರಿಗೆ ತಂದಿರುವ ನಿಯಮವನ್ನು ಅತಿಕ್ರಮಿಸಿ ನಡೆದುದರಿಂದ ನಾಗರಾಜು, ನರಸಿಂಹಮೂರ್ತಿ, ಕೃಷ್ಣ, ಪಾಕಪ್ಪ ಮತ್ತು ಎಂ ರಾಮಯ್ಯ ಎಂಬ ಆರು ಜನರ ಮೇಲೆ ಪೋಲೀಸರು ಮೊಕದ್ದಮೆಗಳನ್ನು ಹೂಡಿದ್ದಾರೆ. ಕಳೆದವಾರ ಎಂ ರಾಮಯ್ಯನಿಗೆ ಎಂಟನೇ ಮ್ಯಾಜಿಸ್ಟ್ರೇಟರು ಒಂದು ರೂಪಾಯಿ ಜುಲ್ಮಾನೆ ವಿಧಿಸಿದರು. ಉಳಿದ ಐದು ಜನಗಳ ವಿಚಾರಣೆಯು ನಡೆಯುತ್ತಿದೆ.

ಶಿವಮೊಗ್ಗ ನಿವಾಸಿಗಳಾದ ಮ|| ಗಂಗಾಧರಯ್ಯ ಎಲ್ ಕೃಷ್ಣಮೂರ್ತಿ ನಾಯಕ, ಪರಮಶಿವಯ್ಯ, ಮೂವಾಲಂ ಧಾಮಯ್ಯಶೆಟ್ಟಿ, ಗೋವಿಂದಸ್ವಾಮಿಶೆಟ್ಟಿ, ಶ್ರೀನಿವಾಸಯ್ಯಂಗಾರ್, ಮತ್ತು ಮೊಹಮ್ಮದ್ ಬುದ್ದೀನ್ ಇವರುಗಳು ವ್ಯವಸಾಯದ ಮತ್ತು ಕೈಗಾರಿಕೆಗಳ ನಿವೃತ್ತ ಡೈರೆಕ್ಟರಾದ ಮ|| ನರಸಿಂಹರಾಮಚಂದ್ರರಾಯರ ನಾಯಕತ್ವದಲ್ಲಿ ದಿವಾನರವರನ್ನು ಸಂದರ್ಶಿಸಿ ಶಿವಮೊಗ್ಗೆಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವುದು ಅತ್ಯಾವಶ್ಯಕವಾದೂ, ಇದರಿಂದ ಮಲೆನಾಡಿನ ರೈತರ ಏಳಿಗೆಯು ಕಬ್ಬಿನ ಬೆಳೆಗೆ ಅನುಕೂಲವಾಗುತ್ತದೆಂದೂ, ಸರಕಾರದವರು ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ಷೇರುಗಳನ್ನು ತೆಗೆದುಕೊಂಡಿರುವಂತೆ ಈ ಕಾರ್ಖಾನೆಯಲ್ಲಿಯೂ ಷೇರುಗಳನ್ನು ತೆಗೆದುಕೊಳ್ಳಬೇಕೆಂದು ಅರಿಕೆ ಮಾಡಿಕೊಂಡರೆಂದೂ, ದಿವಾನರವರು ಇವರ ಅರಿಕೆಯನ್ನು ಸಾವಧಾನದಿಂದ ಕೇಳಿ, ಈ ವಿಷಯವನ್ನು ಪರ್ಯಾಲೋಚಿಸಿ ಸರ್ಕಾರದವರಿಗೆ ತಕ್ಕ ಸಲಹೆಗಳನ್ನು ಕೊಡಲು ಒಂದು ಕಮಿಟಿಯನ್ನು ಸ್ಥಾಪಿಸಲಾಗುವುದೆಂಬ ಭರವಸೆಯನ್ನು ಕೊಟ್ಟಿರುತ್ತಾರೆಂದು ತಿಳಿದುಬಂದಿದೆ.

ವರ್ತಮಾನಸಂಗ್ರಹ.

ಅಮೇರಿಕೆಯಲ್ಲಿ ವಿವೇಕಾನಂದರ ಮಂದಿರ

ಅಮೇರಿಕಾದೇಶದಲ್ಲಿರುವ ವಿವೇಕಾನಂದರ ಶಿಷ್ಯರೆಲ್ಲರೂ ಸೇರಿ ವಿವೇಕಾನಂದರ ಹೆಸರಿನಿಂದ ಒಂದು ಮಹಾಮಂದಿರವನ್ನು ಕಟ್ಟಬೇಕೆಂದು ಯೋಚಿಸಿ ೨ ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದ್ದಾರೆ ಸ್ವಸ್ತಿ!

ಭೂಕಂಪ

ಕಾನ್‌ಸ್ಟೆಂಟಿನೋಪಲ್ಲಿನಿಂದ 30 ಮೈಲು ದೂರದಲ್ಲಿರುವ ಮರ್ಮೊರಾದ್ವೀಪದಲ್ಲಿ ಭೂಕಂಪದಿಂದ 17 ಗ್ರಾಮಗಳು ಹಾಳಾಗಿವೆ. 5 ಜನರು ಮೃತರಾದರು. ನೂರಾರು ಜನರು ಮನೆಮಠಗಳಿಲ್ಲದೆ ಅನಾಥರಾಗಿರುವರು. ಭೂಮಿಯು ಇನ್ನೂ ನಡುಗುತ್ತಿದೆಯೆಂದು ತಿಳಿದುಬರುತ್ತದೆ.

ಟ್ರ್ಯಾಮಿನಿಂದ ಮರಣ!

ಜನೀವಾ ಲೀಗ್ ಆಫ್ ನೇಷನ್‌ಸ್‌ನ ಇಂಡಿಯಾ ಸೆಕ್ಷನ್ ಪಬ್ಲಿಸಿಟಿ ಆಫೀಸರಾದ ಎ ಸಿ ಚಟರ್ಜಿಯವರು ಅಲಿಪುರದಲ್ಲಿ ಕಾರಿನಲ್ಲಿ ಹೋಗುತ್ತಿರುವಾಗ ಇವರ ಕಾರು ಟ್ರ್ಯಾಮಿಗೆ ಡಿಕ್ಕಿಹೊಡೆಯಿತು. ಚಟರ್ಜಿಯವರು ಹೊರಗೆ ಬಿದ್ದು ಟ್ರ್ಯಾಮಿನ ಕೆಳಗೆ ಸಿಕ್ಕಿದ್ದರಿಂದ ತಲೆಯು ಒಡೆದು ಮೃತರಾದರು.

ದೈವಲೀಲೆಯು!

ಕಾಶ್ಮೀರದಲ್ಲಿ ಒಂದು ಬಾವಿಯನ್ನು ತೋಡುತ್ತಿದ್ದಾಗ್ಗೆ ಸುಮಾರು 21 ಅಡಿಯ ಕೆಳಗೆ ಭೂಮಿಯಲ್ಲಿ ಅರ್ಧ ನೀರಿನಿಂದ ತುಂಬಿದ್ದ ಒಂದು ಮಡಕೆಯು ಸಿಕ್ಕಿತು. ಅದರಲ್ಲಿ 3 ಕಪ್ಪೆಗಳು ಜೀವಸಹಿತ ಇದ್ದುವಂತೆ! ಈಶ್ವರ ಸೃಷ್ಟಿಯು ವಿಚಿತ್ರವಾದುದು. ಈಗಿನ ನವೀನ ನಾಸ್ತಿಕರು ಇದಕ್ಕೇನನ್ನುವರೋ!

ಮದುವೆಯ ಊಟದಿಂದ ಮರಣ!

ತಿನ್ನವೆಲ್ಲಿಯ ಶಂಕರಕೋಯಿಲ್ ತಾಲ್ಲೂಕಿಗೆ ಸೇರಿದ ಒಂದು ಹಳ್ಳಿಯಲ್ಲಿ ನಡೆದ ಮದುವೆಯ ಸಮಾರಾಧನೆಯಲ್ಲಿ ಊಟ ಮಾಡಿದ 60 ಜನಗಳಿಗೆ ವಾಂತಿಭೇದಿ ಮುಂತಾದ ರೋಗಗಳುಂಟಾಗಿ ಮೂವರು ಮೃತಪಟ್ಟರು. ಆಹಾರದಲ್ಲಿ ವಿಷಬೆರೆತಿರಬೇಕೆಂದು ಪೋಲೀಸರು ಶೋಧಮಾಡುತ್ತಿದ್ದಾರೆ.

3 ದಿನಗಳು ಮರದಮೇಲೆ ವಾಸ!

ತ್ರಿಚಿನಾಪಲ್ಲಿ ಜಿಲ್ಲೆಯ ಗ್ರಾಮವೊಂದರ ಬಳಿ ಕಾಡಿಗೆ ಹೋಗಿದ್ದ ೨ ಜನ ರೈತರು ಘೋರ ಕ್ರಿಯಲ್ಲಿ ಜಾಗರ ಎಂಬ ಭಯಂಕರ ಹುಲಿಯ ಗರ್ಜನೆಯಿಂದ ಎಚ್ಚೆತ್ತು ಮರಗಳನ್ನೇರಿದರು. ಮರುಕ್ಷಣದಲ್ಲಿಯೇ ಎರಡು ಹುಲಿಗಳು ಇವರಿದ್ದ ಮರಗಳ ಬಳಿಗೆ ಬಂದು ವರಾರು ದಿನಗಳವರೆಗೂ ಕಚ್ಚಲೆತ್ತಲು ಕಾದು ಕುಳಿತವು. ನಾಲ್ಕನೆಯ ದಿನ ಇವರು ಮನೆಗೆ ಬಾರದಿದ್ದುದರಿಂದ ಊರಿನವರು ಗಾಬರಿಯಾಗಿ ಜನಗಳ ಗುಂಪನ್ನು ತೆಗೆದುಕೊಂಡು ಬಂದು ಹುಲಿಗಳನ್ನೋಡಿಸಿ ಇವರನ್ನು ಮರದಿಂದ ಇಳಿಸಿಕೊಂಡರು.

ಎಕ್ಸರೇಗಳು ಮತ್ತು ಅವುಗಳ ಉಪಯೋಗಗಳು.

ಮೈಸೂರು ಇಂಟರ್‌ಮೀಡಿಯಟ್ ಕಾಲೇಜಿನ ಫಿಸಿಕ್ಸ್ ಅಸೋಸಿಯೇಷನ್ನಿನ ಆಶ್ರಯದಲ್ಲಿ ಭೌತಿಕಶಾಸ್ತ್ರಾಧ್ಯಾಪಕರಾದ ಮ|| ಕೆ ಶಂಕರನಾರಾಯಣರಾಯರವರು 'ಎಕ್ಸರೇಗಳು ಮತ್ತು ಅವುಗಳ ಉಪಯೋಗ' ಎಂಬ ವಿಷಯವಾಗಿ ಮಾತನಾಡಿದರು. ಉಪನ್ಯಾಸವು ಪ್ರದರ್ಶನ ಮತ್ತು ಪ್ರಯೋಗಗಳನ್ನೊಳಗೊಂಡಿತ್ತು. ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಜೆ ಸಿ ರೋಲೊರವರು ಅಧ್ಯಕ್ಷರಾಗಿದ್ದರು.

ಉಪನ್ಯಾಸಕರು ಎಕ್ಸರೇಗಳ ಚರಿತ್ರೆಯನ್ನು ಸೂಚಿಸುತ್ತಾ ಇಗ್ಗೆ ಸುಮಾರು ೫೦ ವರ್ಷಗಳ ಹಿಂದೆ ಡಾಲ್ಟನ್ನರ ಕಾಲದಲ್ಲಿ ಅಟಮ್ (atom) ಅತ್ಯಂತ ಕ್ಷುದ್ರವಾದ ವಸ್ತುವೆಂದು ಗಣಿಸಲ್ಪಟ್ಟಿತ್ತು. ಆದರೆ ಈಗೀಗ ಪ್ರತಿಯೊಂದು ಅಣುವೂ ಮತ್ತಷ್ಟು ಭಾಗಿಸಲ್ಪಡಬಹುದೆಂದು ತಿಳಿದುಬಂದಿದೆ. ಸುಮಾರು ೧೮೭೯ರಲ್ಲಿ ಸರ್ ವಿಲಿಯಂ ಕ್ರೂಕ್ಸ್ ಎಂಬವರು ವಾಯುಶೂನ್ಯವಾದ (Vacuous) ಒಂದು ಗಾಜಿನ ಕೊಳವೆಯಲ್ಲಿ ವಿದ್ಯುತ್ತನ್ನು ಪ್ರವಹಿಸಿದರೆ ವಿದ್ಯುತ್ತಿನಿಂದ ತುಂಬಿದ ಎಲೆಕ್ಟ್ರಾನ್ ಕಣಗಳು ಬಹು ವೇಗದಿಂದ ಚಲಿಸುತ್ತಿರುತ್ತವನ್ನು ನೋಡಬಹುದೆಂದು ಪ್ರಯೋಗದಿಂದ ಸಿದ್ಧಾಂತಮಾಡಿದರು. ಇವನ್ನು 'ಕ್ಯಾಥೋಡ್ ಕಿರಣ' ಎಂದು ಕರೆಯುತ್ತಾರೆ. ಈ ಕಿರಣಗಳು ಅಂತಹ ಗಾಜಿನ ನಳಿಕೆಯಲ್ಲಿಟ್ಟ ದಪ್ಪತಗಡುಗಳನ್ನೂ ಛೇದಿಸಬಲ್ಲವೆಂದು ಪ್ರಸಿದ್ಧ ವೈಜ್ಞಾನಿಕರಾದ ಹರ್ಟ್ಸ್ ಎಂಬವರು ತೋರಿಸಿದರು. ಇದನ್ನನುಸರಿಸಿ ಲೆನಾರ್ಡ್ (೧೮೯೪) ಎಂಬವರು ಮೇಲೆ ಹೇಳಿದ ಕ್ಯಾಥೋಡ್ ಕಿರಣಗಳು ಗಾಜಿನ ಕೊಳವೆಯಿಂದ ಹೊರಗೆ ಪ್ರತಿಬಿಂಬಿಸಲ್ಪಡುವಂಥ ಅಲ್ಯೂಮಿನಿಯಂ ಲೋಹದ ಒಂದು ಸಾಧನವನ್ನು ಕಂಡುಹಿಡಿದರು. ಈ ಕಿರಣಗಳ ಇತರ ಸ್ವಭಾವಲಕ್ಷಣಗಳನ್ನು ಹೇಳಲು ಕಂಡುಹಿಡಿದವನು ರಾಂಟ್‌ಜೆನ್ ಎಂಬಾತನು. ನಮ್ಮ ದೇಹವನ್ನು ಈ ಕಿರಣಗಳು ಛೇದಿಸಬಲ್ಲವೆಂದು ಕಾಣುವನೂ ಈತನೇ. ಇವು ಪ್ರತಿಯೊಂದು ಪದಾರ್ಥವನ್ನೂ ಛೇದಿಸಬಲ್ಲವೆಂದು ಹೇಳಬಹುದಾಗಿದೆ. ೯ ಅಂಗುಲ ದಪ್ಪವುಳ್ಳ ಅಲ್ಯೂಮಿನಿಯಂ ತಗಡನ್ನು ಈ ಕಿರಣಗಳು ಪ್ರವೇಶಮಾಡಬಲ್ಲುವು.

ಈ 'ಎಕ್ಸರೇ'ಗಳ ಉಪಯೋಗವು ಅಪಾರವು! ಕೈಗಾರಿಕೆ, ಕಾಗದಪತ್ರಗಳ ಪರೀಕ್ಷೆ, ವೈದ್ಯಚಿಕಿತ್ಸೆ ಇವೇ ಮೊದಲಾದುವುಗಳಲ್ಲಿ ಇದರ ಪ್ರಯೋಜನವು ಅಗಾಧವಾದುದು. ದೇಹದ ಯಾವುದಾದರೂ ಒಂದು ಭಾಗದಲ್ಲಿ ಮೂಳೆಯು ಮುರಿದು ಹೋಗಿದ್ದರೆ, ಅದನ್ನು ಸರಿಯಾಗಿ ಚಿಕಿತ್ಸೆಮಾಡಲು ಯಾವರೀತಿ ಮೂಳೆಯು ಮುರಿದಿದೆ ಎಂಬುದನ್ನು ತಿಳಿಯಬೇಕಾದರೆ ಈ ಕಿರಣಗಳ ಸಹಾಯವು ಬೇಕೇಬೇಕು. ಈ ಕೆಲಸವು ಇನ್ನಾವುದರಿಂದಲೂ ಸಾಧ್ಯವಿಲ್ಲ. ಈ ಪರೀಕ್ಷೆಯಾದನಂತರ ಮೂಳೆಯ ಚಿಕಿತ್ಸೆಯನ್ನು ನಿರಾತಂಕವಾಗಿ ನಡೆಸಬಹುದು. ಪ್ರಾಮಿಸರಿ ನೋಟುಗಳು, ವ್ಯಾಪಾರ ಕರಾರುಗಳು ಇವುಗಳಲ್ಲಿ ಕೆಲವು ಕಾಗದಪತ್ರಗಳು ನಕಲಿಗಳೂ ಇರುತ್ತವೆ. ಮೇಲ್ನೋಟಕ್ಕೆ ಈ ಕಾಗದಗಳಲ್ಲಿ ಯಾವ ಲೋಪವೂ ಕಾಣುವುದೇ ಇಲ್ಲ. ಅವುಗಳನ್ನು ಎಕ್ಸರೇಗಳ ಮೂಲಕ ಪರೀಕ್ಷಿಸಿದರೆ ತಿದ್ದಿದ ಬರವಣಿಗೆಯು ಕಾಣುವುದು. ಇದರಿಂದ ಆ ಕಾಗದ ಪತ್ರಗಳ ಸತ್ಯತೆಯನ್ನು ಪರೀಕ್ಷಿಸಬಹುದು.

ಇಂತಹ ಫೋರ್ಜರಿ ಪ್ರಸಂಗಗಳು ಅಮೇರಿಕಾಯು ನೈಟೆಡ್ ಸ್ಟೇಟ್ಸ್‌ಗಳಲ್ಲಿ ನಡೆಯುವುದು ಹೆಚ್ಚು. ತಪ್ಪು ಒಪ್ಪಿನ ಸಹಿಯನ್ನು ಕಂಡುಹಿಡಿಯುವುದೇ ಬಹಳ ಕಷ್ಟವಾಗಿರುವುದರಿಂದ ಇವುಗಳ ಸಂಖ್ಯೆಯು ಹೆಚ್ಚಾಗಿದೆ. ಪಾಪಿಗಳು ಹಾಳೆಗಳ ಚೆಕ್ಕುಗಳಲ್ಲಿನ ಅಂಕಿಗಳನ್ನು ಅಳಿಸಿ ಮತ್ತಾವುದನ್ನೋ ಬರೆದು ಹಣವನ್ನು ಪಡೆಯುವ ಪ್ರಸಂಗಗಳು ನಡೆದಿವೆ. ಸಹಿಯುಳ್ಳ ಬಿಳಿಯ ಹಾಳೆ ಕೊಟ್ಟು ಪತ್ರ ಬರೆಯಿಸಿಕೊಂಡವರು ಒಡ್ಡಿ ಹೆಚ್ಚಾಗಿ ಪತ್ರದಲ್ಲಿ ವರ್ಷಗಳನ್ನು ಹೆಚ್ಚಿಸಿರುವ ಪ್ರಸಂಗಗಳು ಅನೇಕ ಇವೆ. ಹೀಗೆ ಒಂದು ಬರಹವನ್ನು ಅಳಿಸಿ ಅದರ ಮೇಲೆ ಬರೆದಿದ್ದರೂ ಹಾಗೆ ಫೋರ್ಜರಿ ಮಾಡಿದ ಒಕ್ಕಲು ಅದವಾ ಪತ್ರಗಳಲ್ಲಿ ಯಾವ ತಪ್ಪೂ ಕಂಡುಬರುವುದಿಲ್ಲ. ಆದರೆ ಇವುಗಳನ್ನು ಎಕ್ಸರೇ ಪರೀಕ್ಷೆಗೆ ಗುರಿಮಾಡಿದರೆ ಮೊದಲಿದ್ದ ಬರವಣಿಗೆಯು ಸ್ಪಷ್ಟವಾಗಿ ಕಾಣುವುದು. ಕೈಗಾರಿಕೆಯಲ್ಲಿಯೂ ಈ ಕಿರಣಗಳ ಉಪಯೋಗವಿಲ್ಲದೇ ಇರುವುದು. ಎರಡು ಉಕ್ಕಿನ ಅದವಾ ಕಬ್ಬಿಣದ ಸಲಾಕೆಗಳನ್ನು ಕೂಡಿಸಿ ಬೆಸುಗೆ ಹಾಕಿದರೆ ಅವೆರಡೂ ಸರಿಯಾಗಿ ಜೋಡಿಸಲ್ಪಟ್ಟಿಯೋ ಇಲ್ಲವೇ ಎಂಬುದನ್ನು ತಿಳಿಯುವುದು ಆವಶ್ಯಕ.

ಬೀಗ ಸಂಬಂಧ ವಿಗನನ್ನು ಮೇಲೆ ಹೇಳಿದ ಕಿರಣಗಳ ಮೂಲಕ ಪರೀಕ್ಷಿಸಿದರೆ ಅದು ಗೊತ್ತಾಗುತ್ತದೆ. ಜೋಡಿಸಲ್ಪಟ್ಟಭಾಗದಲ್ಲಿ ಯಾವ ತಪ್ಪು ಇದ್ದರೂ ಕಾಣಿಸಿದ್ದ ಪಕ್ಷದಲ್ಲಿ ಬೆಸುಗೆ ಸರಿಪಡಿಸಲ್ಪಟ್ಟಿದೆಯೆಂದೂ, ಕರಿಯ ಕಲೆ ಇದ್ದರೆ ಸರಿಯಾಗಿಲ್ಲವೆಂದೂ ತಿಳಿಯಬಹುದು. ಈ ರೀತಿಯಲ್ಲಿ ಜೋಡಿಸಿದ ಗರ್ಡರುಗಳನ್ನು ಸೇತುವೆ ಮೊದಲಾದವುಗಳನ್ನು ಕಟ್ಟಲು ಉಪಯೋಗಿಸುತ್ತಾರೆ. ಆದುದರಿಂದ ಬೆಸುಗೆಯು ಗಟ್ಟಿಯಾಗಿರಬೇಕಾದ್ದು ಅವಶ್ಯಕ.

ಈ ಕಿರಣಗಳ ಮತ್ತೊಂದು ಉಪಯೋಗವೇನೆಂದರೆ ಕ್ರಿಕೆಟ್ ಗಾಲ್ಫ್ ಮುಂತಾದ ಆಟಗಳಲ್ಲಿ ಉಪಯೋಗಿಸುವ ಚೆಂಡುಗಳನ್ನು ಪರೀಕ್ಷಿಸುವುದು. ಈ ಚೆಂಡುಗಳೊಳಗಿರುವ ಗಟ್ಟಿಯಾದ ಭಾಗವು ಗುಂಡಾಗಿದ್ದರೆ ಸರಿ. ಇಲ್ಲದಿದ್ದರೆ ಏಟು ಬಿದ್ದೊಡನೆಯೇ ಗಿರ್ರನೆ ತಿರುಗುವುವು. ಇಂತಹವು ಎಷ್ಟು ಜೋರಾಗಿ ಹೊಡೆದರೂ ದೂರ ಹೋಗುವುದಿಲ್ಲ. ಒಳಗಿನ ಭಾಗವು ಗುಂಡಾಗಿದೆಯೇ ಇಲ್ಲವೇ ಎಂಬುದನ್ನು ಎಕ್ಸರೇಗಳ ಸಹಾಯದಿಂದ ನೋಡಬಹುದು.

R. K. S.

ಬಾಲಲೀಲಾ ಶ್ರೀಸಂಗಮೇಶ್ವರ ಸ್ವಾಮಿಗಳವರ ಪುಣ್ಯತಿಥಿ ಮಹೋತ್ಸವ.

ಶ್ರೀಮತ್ಪಲ್ಲೀ (ಹೂಲಿ) ಕ್ಷೇತ್ರದಲ್ಲಿ ವಿರಾಜಿಸುತ್ತಲಿದ್ದ ಸಾಂಬಯ್ಯಸ್ವಾಮಿ ಮಠದ ಬಾಲಲೀಲಾ ಶ್ರೀ ಸಂಗಮೇಶ್ವರ ಸ್ವಾಮಿಗಳವರು ಲಿಂಗೈಕ್ಯರಾದ ಪುಷ್ಯ ಬಹುಳ ೧೨ ತಿಥಿಯ ದಿವಸವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಸದ್ಗುರು ವರೇಣ್ಯರ ದಿವ್ಯಮಹಿಮಾತಿಶಯಗಳನ್ನು ಬಣ್ಣಿಸಿ ಬರೆಯಲಸದಳವಾದುದಾಗಿದೆ. ಈ ಮಹಾತ್ಮರು ಇಹಲೋಕದಲ್ಲಿ ಪ್ರತ್ಯಕ್ಷರಾಗಿದ್ದಾಗ ಇವರ ಘನತರವಾದ ಮಹಿಮೆಯು ಬೂದಿ ಮುಚ್ಚಿದ ಕೆಂಡದಂತಿದ್ದು ಲಿಂಗೈಕ್ಯರಾದೊಡನೆ ಅದು ಈಗ ಪ್ರಪಂಚವನ್ನೇ ಬೆಳಗುಗೊಳಿಸುವ ದಿವ್ಯಪ್ರತ್ಯಕ್ಷವಾದುದಾಗಿದೆ. ಕಳೆದ ವರುಷದಿಂದಲೂ ಈ ಮಹಾಮಹಿಮರ ದಿವ್ಯಸಮಾಧಿಯ ಪ್ರಭೆಯು ದಿನೇ ದಿನೇ ವೃದ್ಧಿಯಾಗುತ್ತಲಿದೆ. ಈ ಬಾಲಲೀಲಾ ಸಂಗಮೇಶ್ವರ ಸ್ವಾಮಿಗಳವರು ತಾವು ಲಿಂಗೈಕ್ಯರಾಗುವ ಸಮಯದಲ್ಲಿ ತಮ್ಮ ಅಮೃತಹಸ್ತವನ್ನು ತಮ್ಮ ಮಠಕ್ಕೆ ಉತ್ತರಾಧಿಕಾರಿಗಳಾಗಬೇಕಾದ ಶ್ರೀ ಸಂಗಮೇಶ್ವರ ಶಿವಾಚಾರ್ಯರ ಮಸ್ತಕದ ಮೇಲಿಡಲು ಆ ಹಸ್ತಮಸ್ತಕಸಂಯೋಗದ ಪ್ರಭಾವವು ಕೇವಲ ಬಾಲ್ಯಾವಸ್ಥೆಯಲ್ಲಿದ್ದ ಆ ಶ್ರೀಗಳನ್ನು ಈಗ ಬ್ರಹ್ಮತೇಜೋವಿಶಿಷ್ಟರನ್ನಾಗಿ ಮಾಡಿದೆ. ಬ್ರಹ್ಮಚರ್ಯಾಶ್ರಮದ ಈಗಿನ ಆ ಶ್ರೀಗಳವರು ತಮ್ಮ ಗುರುಪುಂಗವರ ಪುಣ್ಯತಿಥಿಯ ಮಹೋತ್ಸವವನ್ನು ಸಹಾನುಭವದಿಂದ ನೆರವೇರಿಸಿದರು. ಪುಷ್ಯ ಬ ೧೧ ಬುಧವಾರ ದಿವಸ ಸಾಯಂಕಾಲಕ್ಕೆ ಶ್ರೀ ಸಾಂಬಯ್ಯಸ್ವಾಮಿಮಠದಲ್ಲಿ ಸಭೆಯನ್ನು ಕಡಕೋಳ ಹಿರೇಮಠದ ಶ್ರೀ ಷಟ್ಸ್ಥಲ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಕೂಡಿಸಿ ಧಾರ್ಮಿಕ ಪ್ರವಚನೋಪನ್ಯಾಸವು ಶಿರೋಳ ಹಿರೇಮಠದ ವೇ|| ಪಂಚಾಕ್ಷರ ಶಾಸ್ತ್ರಿಗಳವರಿಂದ ನಡೆಯಿತು. ಆ ಮೇಲೆ ಮ|| ರಾ|| ವೆಂಕರೆಡ್ಡೆಪ್ಪನವರು ತಿಕ್ಕರಡ್ಡಿ, ಬೆಟಿಗೇರಿ ಶ್ರೀ ಕಲ್ಲಪ್ಪನವರೇ ಮೊದಲಾದವರ ಭಾಷಣಗಳಿಂದ ಘೋಷಿತವಾದ ಸಭೆಯು ಶ್ರೀಗಳವರ ಜಯಜಯಕಾರದಿಂದ ಮುಕ್ತಾಯವಾಯಿತು. ಮರುದಿವಸ ಪುಷ್ಯ ಬ ೧೨ ಗುರುವಾರ ಸಾಯಂಕಾಲಕ್ಕೆ ಬೆಟಗೇರಿ ತಿಪ್ಪಣ್ಣನವರ ... ಕರ್ಣವಾಯಿತು. ಪುಷ್ಯ ಬಹುಳ ೧೪ ಶುಕ್ರವಾರ ದಿವಸ ಪ್ರಾತಃಕಾಲ ಬಾಲಲೀಲಾ ಶ್ರೀ ಸಂಗಮೇಶ್ವರಮಹಾಸ್ವಾಮಿಗಳವರ ಗದ್ದುಗೆಗೆ ಶ್ರೀ ರುದ್ರಾಭಿಷೇಕ ಮಹಾಭಿಷೇಕವು ನೆರವೇರಿತು. ಈ ಸಮಯದಲ್ಲಿ ಕೆಲವರು ಅನುಷ್ಠಾನ ಧ್ಯಾನ ಪೂಜಾದಿಗಳನ್ನು ಮಾಡಿ ಸಂಸ್ಕೃತಸ್ತೋತ್ರ ಅಷ್ಟೋತ್ತರಗಳನ್ನು ಮಾಡುತ್ತಿದ್ದರು. ಇಲ್ಲಿಯ ಪ್ರವಚನ ಬೃಹಸ್ಪತಿ ವೀರಭದ್ರ ಧರ್ಮಾಧಿಕಾರಿಗಳ ಪ್ರತಿದಿನದ ಸೇವೆಯು ಶ್ರೀಗಳ ವೇದಘೋಷವು ಸಂಗೀತಭಜನೆಯು ನಾನಾವಿಧವಾದ ವಾದ್ಯಗಳ ಮಂಗಳಘೋಷಗಳೊಂದಿಗೆ ಆನಂದದ ತರಂಗಗಳನ್ನು ಏಳಿಸುತ್ತಿದ್ದವು. ಅತ್ಯಂತ ಭಕ್ತಿಯಿಂದ ಗುರುವಿನ ಉತ್ಸವವನ್ನು ಮಾಡುವ ಪರಿಯು ಅತ್ಯಂತ ಶ್ಲಾಘನೀಯವಾದುದಾಗಿತ್ತು. ಕ್ರಮವಾಗಿ ನಿಂತು ನಡೆ ಕಂಡಿತ್ತು. ೧೪ ಸಾವಿರ ಜನ ಸಮುದಾಯವು ಸರ್ವರೂ ಶುದ್ಧಮಡಿಯಿಂದ ದಿವ್ಯವಸ್ತ್ರಗಳನ್ನು ಧರಿಸಿ ಬಸ್ಮಾಂಕಿತಭಾಲರಾಗಿ ಫಲಪುಷ್ಪಮಾಲೆಗಳಿಂದ ಶೋಭಿಸುವ ಹಸ್ತದಿಂದ ಸಮೀಪದಲ್ಲಿ ಸದ್ಗುರುವಿನ ಜಯಜಯಕಾರನಾದವು ಆವಿರ್ಭವಿಸಿ ನಭೋಮಂಡಲವನ್ನು ವ್ಯಾಪಿಸುತ್ತಲಿತ್ತು. ಈ ಶಿವಸಭೆಯು ಸಾಕ್ಷಾತ್ ಆ ಪರಶಿವಸ್ವರೂಪಿಯಾದ ಬಾಲಲೀಲಾ ಶ್ರೀ ಸಂಗಮೇಶ್ವರವಿಭೂತಿಯ ಪ್ರಭೆಯೇ ಪ್ರಕಾಶಿಸುವಂತೆ ಪ್ರತಿಯೊಬ್ಬರೂ ಶಿವಸಭೆಯಲ್ಲಿದ್ದ ಪ್ರಮಥರಂತೆ ತೋರುತ್ತಿದ್ದರು. ಧನ್ಯ! ಧನ್ಯ! ಈ ಪೂಜಾ ಮಹೋತ್ಸವವನ್ನು ಕಂಡ ಕಣ್ಣುಗಳೇ ಧನ್ಯ! ಗದ್ದುಗೆಯ ಪೂಜಾ ಕಾರ್ಯಗಳೆಲ್ಲವು ಪೂರೈಸಿದ ಬಳಿಕ ಮಹೇಶ್ವರಾರಾಧನೆಯು ನೆರವೇರಿತು. ಆ ದಿನ ೧೦ ಸಾವಿರ ಜನರ ಭೋಜನವಾಯಿತು. ಗುರುಪ್ರಸಾದವನ್ನು ಸಮಸ್ತರೂ ಸವಿದುಂಡರು. ಸಾಯಂಕಾಲಕ್ಕೆ ಅಘಟಿತಘಟನಾಸಾಮರ್ಥ್ಯರಾಗಿ ಲಿಂಗೈಕ್ಯರಾದ ಬಾಲಲೀಲಾ ಶ್ರೀ ಸಂಗಮೇಶ್ವರಸ್ವಾಮಿಗಳವರ ಭಾವಚಿತ್ರವನ್ನು ಶೃಂಗರಿಸಿದ ಪಲ್ಲಕ್ಕಿಯಲ್ಲಿ ಮೂರ್ತಿಗೊಳಿಸಿ ಶ್ರೀ ಮಠದಿಂದ ಮಹೋತ್ಸವವು ಆರಂಭವಾಯಿತು. ಈ ಮಹೋತ್ಸವದ ವರ್ಣನೆಯನ್ನು ಸಾಮಾನ್ಯ ಲೇಖನಿಯಿಂದ ಬಣ್ಣಿಸುವದಾಗದು. ಅಂದು ಜನಸಮುದ್ರದಲ್ಲಿ ವಿರಾಜಿಸುತ್ತಲಿದ್ದ ಶ್ರೀಗಳವರ ಪಲ್ಲಕ್ಕಿಯು ಅತ್ಯಂತ ಶಾಂತತೆಯಿಂದ ಶ್ರೀಕ್ಷೇತ್ರದ ಮುಖ್ಯಬೀದಿಗಳಲ್ಲಿ ಹಾಯ್ದು ಇಲ್ಲಿಯ ಪಂಚವರ್ಣ ಬಿರುದು ಪತಾಕೆಗಳಿಂದ ಶೋಭಿಸುತ್ತಿತ್ತು. ಸಮಸ್ತ ಮತೀಯರೂ ಈ ಮಹೋತ್ಸವದಲ್ಲಿ ಭಾಗಿಗಳಾಗಿದ್ದರು. ೨೦-೨೫ ಸಾವಿರ ಜನರಿಂದ ಕೂಡಿದ ಈ ಮಹೋತ್ಸವದ ಶಾಂತತೆಯನ್ನು ರಕ್ಷಿಸಲು ಸ್ವಯಂಸೇವಕರು ಸಿದ್ಧರಾಗಿದ್ದರು. ದಿವ್ಯವಿಭೂತಿಯಾದ ಆ ಬಾಲಲೀಲಾಸಂಗಮೇಶ್ವರಸ್ವಾಮಿಯ ಮಹಿಮಾಶಕ್ತಿಯುಕ್ತ 'ಲಿಂಕೆಟ್'ಗಳನ್ನು ಧರಿಸಿದ ಬಾಲವೀರರು ಜನತೆಯ ಸೇವೆಯನ್ನು ಚನ್ನಾಗಿ ಮಾಡಿದರು. ರಾತ್ರಿ ೧೨|| ಗಂಟೆಗೆ ಮಹೋತ್ಸವವು ಸಮಾಪ್ತಿಯಾದನಂತರ ಶಿರೋಳ ಹಿರೇಮಠದ ವೇ|| ಪಂಚಾಕ್ಷರಶಾಸ್ತ್ರಿಗಳವರು ಲಿಂಗೈಕ್ಯರಾದ ಶ್ರೀ ಸ್ವಾಮಿಗಳವರ ಮಹಿಮಾತಿಶಯಗಳ ಬಗ್ಗೆ ಅಮೋಘವಾದ ಭಾಷಣಮಾಡಿದ ಬಳಿಕ ಮಂಗಲಾರತಿಯ ಸವಾಗಿ ಗುರುಪ್ರಸಾದವು ಹಂಚಲ್ಪಟ್ಟಿತು. ಮರುದಿವಸ ಪುಷ್ಯ ಬ|| ೧೪ ಶನಿವಾರ ಶಿವಕೀರ್ತನಗಳು ಮುಧೋಳ ಶಿವಶಾಸ್ತ್ರಿಗಳಿಂದಲೂ ಸಾಯಂಕಾಲಕ್ಕೆ ಶೋಲಾಪುರದ ವೇ|| ಚರಂತಯ್ಯನವರಿಂದಲೂ ನೆರವೇರಿದವು. ಈ ಹೂಲಿಕ್ಷೇತ್ರದಲ್ಲಿ ಗುರುವರ್ಗದ ಎರಡು ಮಠಗಳು ಸುಪ್ರಸಿದ್ಧವಾದವುಗಳಾಗಿವೆ. ಸಾಂಬಸ್ವಾಮಿ ಮಠವೂ ಪಂಚವಣ್ಣಿಗೆಯ ಹಿರೇಮಠವೂ ಅತ್ಯಂತ ಪ್ರಾಚೀನತಾ ಯಿಂದಲೂ ಸಗರು ಗೋಚರಿಸುತ್ತವೆ. ಸಾಂಬಯ್ಯಸ್ವಾಮಿ ಮಠವು ಶ್ರೀ ಜಗದ್ಗುರುವಿರಕ್ತರೇಣುಕಾರಾಧ್ಯ ಪೀಠಕ್ಕೆ ಸೇರಿದ್ದು ಅದು ವೈರಾಗ್ಯಪೀಠವಲ್ಲವೇ? ಆ ವೈರಾಗ್ಯಪೀಠದ ಶಾಖಾಮಠವಾದ ಇಲ್ಲಿಯೂ ವೈರಾಗ್ಯಚಕ್ರವರ್ತಿಗಳೇ ಉದಯಿಸಿ ಈ ಮಠದ ಗೌರವವನ್ನು ಹೆಚ್ಚಿಸುತ್ತಲಿರುವರು. ಜ್ಞಾನಸಿಂಹಾಸನವೆಂದು ಆಗಮಾದಿಗಳಲ್ಲಿ ಸುಪ್ರಸಿದ್ಧವಾದ ಕಾಶೀ ಜಗದ್ಗುರು ಪೀಠಕ್ಕೆ ಸೇರಿದ ಇಲ್ಲಿಯ ಹಿರೇಮಠದಲ್ಲಿಯೂ ಮೊದಲಿನಿಂದಲೂ ಏಕಾಂತವಾಸಿಗಳಾಗಿ ಜ್ಞಾನಿಗಳಾಗಿ ಹೋಗಿರುವರಲ್ಲದೆ ಈಗ ಸದ್ಯಃ ಇರುವ ಸುಪ್ರಸಿದ್ಧ **ಶ್ರೀ ನೀಲಕಂಠಶಿವಾಚಾರ್ಯರೂ** ಶಕ್ತಿವಿಶಿಷ್ಟಾದ್ವೈತತತ್ವಜ್ಞಶಿರೋಮಣಿಗಳಾಗಿರುವರು. ವೈರಾಗ್ಯಮೂರ್ತಿಗಳನ್ನೂ ಜ್ಞಾನಿಗಳನ್ನೂ ಹಡೆದ ಹೂಲಿಕ್ಷೇತ್ರವು ಧನ್ಯವಾದದು. ಈ ಮಹನೀಯರ ಪುಣ್ಯತಿಥಿ ಮಹೋತ್ಸವವನ್ನು ಇದರಂತೆಯೇ ಪ್ರತಿವರುಷ ಜರಗುವಂತೆ ವ್ಯವಸ್ಥಾಪಕಕಮಿಟಿಯವರು ನಿರ್ಣಯಿಸಿದ್ದಾರೆ. ಈ ವರುಷದ ಕಾರ್ಯಭಾಗಗಳು ಇಲ್ಲಿಯ ಸದ್ಭಕ್ತಶಿಖಾಮಣಿಗಳಾದ ಶ್ರೀ|| ವೀರಸಂಗಯ್ಯನವರು, ಮ|| ರಾ|| ಸಟ್ಟೆಪ್ಪನವರು ಮುನವಳ್ಳಿ, ವೆಂಕರಡ್ಡೆಪ್ಪನವರು, ಚಿಕ್ಕರಡ್ಡಿ, ಮಲಪ್ಪನವರು ಕೌಜಲಗಿ, ತಿಮ್ಮಣ್ಣಪ್ಪನವರು ತಿಮ್ಮರಡ್ಡಿ ಮೊದಲಾದವರಿಂದ ಸಾಗಿದವು. ಈ ಮಹೋತ್ಸವಕ್ಕೆ ಬೆಳಗಾಂವ, ಬಿಜಾಪುರ, ಧಾರವಾಡ, ಹುಬ್ಬಳ್ಳಿ, ಗದಗ, ಬೈಲಹೊಂಗಲ, ಅಮ್ಮಿನಭಾವಿ ಮುಂತಾದ ಪಟ್ಟಣ ನಿವಾಸಿಗಳೂ ಕಲ್ಲೂರು ದೇಸಾಯಿಯರೂ ಮರಕುಂಬಿ ನಾಯಿಕರೂ ಚಚಡಿ ದೇಸಾಯರೂ ಮುರಗೋಡ ದೇಸಾಯರೂ, ನವಲಗುಂದ ಗೌಡರವರೊಳ್ಳಿ ಮೊದಲಾದ ಸುಪ್ರಸಿದ್ಧ ಪಾಟೀಲ ದೇಸಾಯಿ, ದೇಶಪಾಂಡೆ ಮಹಾಜನಗಳೂ ಆಗಮಿಸಿದ್ದುದು ಪರಮಸಂತೋಷದ ಸಂಗತಿಯಾಗಿದೆ. ಈ ಜನಸಮುದಾಯಕ್ಕೆಲ್ಲಾ ಶ್ರೀ ಸಾಂಬಯ್ಯಸ್ವಾಮಿ ಮಠಾಧಿಕಾರಿಗಳಾದ ಶ್ರೀ ಸಂಗಮೇಶ್ವರಮರಿದೇವರು ಭೋಜನದ ವ್ಯವಸ್ಥೆಯನ್ನು ಅತ್ಯುತ್ತಮರೀತಿಯಿಂದ ಇಡಿಸಿದ್ದರು. ಜನತೆಯ ಉದ್ಧಾರಕ್ಕಾಗಿ ಪ್ರವಚನಕಾರರೂ ಕೀರ್ತನಕಾರರೇ ಮೊದಲಾದವರು ಬಂದಿದ್ದರಲ್ಲದೆ ಗಾಯನವಿಶಾರದರೂ, ದೇಶೀಯ ಸಾಮ್ರಾಜ್ಯದ ಮೇಳಗಳೂ ಭಜನಸಂಘದವರೂ ಜನಪದ ಸಾಹಿತ್ಯವಿಬುಧರೂ ಬಂದುದರಿಂದ ಈ ಮಹೋತ್ಸವದ ಶೋಭೆಯು ಸೂರ್ಯಾದಿಯಾಗಿ ಜನಾಹ್ಲಾದಕರವಾಗಿತ್ತು. ಲಿಂಗದೇಹಿಯಾಗಿ ಲಿಂಗದೊಳಡಗಿದ ಬಾಲಲೀಲಾ ಶ್ರೀ ಸಂಗಮೇಶ್ವರ ಗುರುವರೇಣ್ಯರು ಸಮಸ್ತರಿಗೂ ಸುಖವನ್ನೀಯಲೆಂದು ಪ್ರಾರ್ಥಿಸಿ ಈ ಲೇಖನವನ್ನು ಮುಗಿಸುತ್ತೇನೆ.

ಸೆಕ್ರೆಟರಿ

ಶ್ರೀ ಜಗದ್ಗುರು ವಿಶ್ವಾರಾಧ್ಯ ವಾಚನಾಲಯ ಹೂಲಿ

ಜಪಾನ್ ಸ್ತ್ರೀಯರ ನೂತನ ಪಾಠಶಾಲೆಗಳು.

ಲೇಖಕರು—ಆರ್ ಎಸ್ ಆರಾಧ್ಯ
ತುಮಕೂರು

ಸ್ತ್ರೀಯರ ವಿದ್ಯಾಭ್ಯಾಸಮಾಡಿಸಲು ಎಲ್ಲೆಡೆಯಲ್ಲಿಯೂ ಪಾಠಶಾಲೆಗಳು ಹೆಚ್ಚುತ್ತಿವೆ. ಆದರೆ ಜಪಾನಿನಲ್ಲಿ 3-4 ವರ್ಷಗಳಿಂದೀಚೆಗೆ, ಒಂದು ಮಾದರಿಯ ಪಾಠಶಾಲೆಗಳು ಪ್ರಾರಂಭವಾಗಿವೆ. ಅವು ಕೇವಲ ನವಯುವತಿಯರಿಗೆ ಮಾತ್ರ. ಈ ಪಾಠಶಾಲೆಗಳಲ್ಲಿ ಮದುವೆಗೆ ಮುಂಚೆ ತಾಯಿಯರ ಕರ್ತವ್ಯವನ್ನೂ ಸದ್ಗುಣಗಳನ್ನೂ ಕಲಿಸುವರು. ತರುಣಿಯರು ವಿವಾಹಕ್ಕೆ ಮುಂಚೆ ಕಲಿಯಬೇಕಾದ ವಿಷಯಗಳು ಬಹಳವಿವೆ. ಇವುಗಳನ್ನು ಕಲಿಸಬೇಕೆಂಬ ಉದ್ದೇಶದಿಂದ ಸ್ಥಾಪಿತವಾದ ಪಾಠಶಾಲೆಗಳಿವೆ. ಇವುಗಳಿಗೆ ಅವರು 'ವಧುಗಳ ಪಾಠಶಾಲೆ' ಗಳೆಂದು ಕರೆಯುವರು.

ಈ ಪಾಠಶಾಲೆಗಳಲ್ಲಿ ಎಲ್ಲಾ ಕೋಮಿನ ಹೆಣ್ಣುಮಕ್ಕಳು ಬಡವರು ಬಲ್ಲಿದರೆಂಬ ಭೇದವಿಲ್ಲದೆ ಒಟ್ಟಾಗಿ ಸೇರಿ ಪಾತ್ರಧರ್ಮದ ವಿಷಯದಲ್ಲಿ ಸುಶಿಕ್ಷಣವನ್ನು ಪಡೆಯುತ್ತಾರೆ. ಇಲ್ಲಿ ಹುಡುಗಿಯರು ವಿದ್ಯಾಭ್ಯಾಸಮಾಡಿದಮೇಲೆ ವಿವಾಹಕ್ಕೆ ಯೋಗ್ಯರಾಗುವರು. ಈ ಪಾಠಶಾಲೆಗಳಲ್ಲಿ ಬಂದು ಸೇರುವವರಲ್ಲಿ ಕೆಲವರು ಮೊದಲೇ ಲಗ್ನಗಳನ್ನು ನಿಶ್ಚಯಮಾಡಿಕೊಂಡಿರುತ್ತಾರೆ. ಮತ್ತೆ ಕೆಲವರು ನಿಶ್ಚಯಮಾಡಿಕೊಳ್ಳುವುದಿಲ್ಲ ರುತ್ತಾರೆ. ಜಪಾನಿನ ಸ್ತ್ರೀಯರು ಪುರಾತನ ಪದ್ಧತಿಗಳಲ್ಲಿ ಕೊಂಚ ಬದಲಾವಣೆಯನ್ನು ಮಾಡಿಕೊಂಡಿದ್ದರೂ, ಹಿಂದಿನ ಪದ್ಧತಿಗಳನ್ನು ಬಿಟ್ಟಿಲ್ಲ. ಅವರಿಗೆ ಅವರ ಧರ್ಮಗ್ರಂಥಗಳಲ್ಲಿಯೂ ಪುರಾಣಗಳಲ್ಲಿಯೂ ತುಂಬ ನಂಬಿಕೆಯಿದೆ. ಈ ವಿಷಯದಲ್ಲಿ ನಮ್ಮ ಸ್ತ್ರೀಯರು ಜಪಾನ್ ಸ್ತ್ರೀಯರಿಂದ ಕಲಿಯಬೇಕಾದುದು ಬಹಳವಿದೆ. ಆಚಾರ, ವ್ಯವಹಾರಗಳಲ್ಲಿ ಇವರು ನಮ್ಮ ಸ್ತ್ರೀಯರಿಗಿಂತ ಉನ್ನತಮಟ್ಟದಲ್ಲಿರುವರೆಂದು ಹೇಳಬಹುದು. ನಮ್ಮ ಸ್ತ್ರೀಯರಂತೆ ಬಾಯಿ ಬಡುಕರಲ್ಲ! ಜಪಾನಿನವರು ಎರಡು ದಿನಗಳಿಂದಲೂ ಈ ತೆರದ ಪಾಠಶಾಲೆಗಳನ್ನು ನಡೆಸಬೇಕೆಂದು ಪ್ರಯತ್ನಿಸಿ ಕೊನೆಗೆ ಆ ಕಾರ್ಯವನ್ನು ಸಾಧಿಸಿರುವರು.

ಈ ಪಾಠಶಾಲೆಗಳಲ್ಲಿ ಅಡಿಗೆ, ಹೊಲಿಗೆ, ಸಂಗೀತ ಮೊದಲಾದ ಉಪಯುಕ್ತವಿಷಯಗಳನ್ನು ಹೇಳಿಕೊಡುವುದಲ್ಲದೆ ಕುಟುಂಬಕ್ಕೆ ಸಂಬಂಧಪಟ್ಟ ಒಂದೊಂದು ವಿಷಯದ ಕೆಲಸಗಳನ್ನು ವಿಭಾಗಿಸಿ ಇಲ್ಲಿ ಕಲಿಸುವ ಕೇವಲ ಆರು ತಿಂಗಳು ಮಾತ್ರ. ಆದರೆ ಹುಡುಗಿಯರು ಇಷ್ಟಪಡುವುದಾದರೆ ಮತ್ತೆ ವಿದ್ಯಾಭ್ಯಾಸಮಾಡಬಹುದು. ಇಲ್ಲಿನ ಉಪಾಧ್ಯಾಯರು ಸುಶಿಕ್ಷಣ ಹೊಂದಿದವರಾಗಿದ್ದಾರೆ. ಅನೇಕ ವಿದ್ಯಾರ್ಥಿನಿಯರು ಈ ಪಾಠಶಾಲೆಗಳಲ್ಲಿಯೇ ಕಾಲಕಳೆಯಲು ಆಶಿಸುತ್ತಾರೆ. ಈಗ ಅಲ್ಲಿನ ಚಕ್ರವರ್ತಿಯವರು ಪ್ರತಿಯೊಬ್ಬ ತರುಣಿಯೂ ವಿದ್ಯಾಭ್ಯಾಸವನ್ನು ಮಾಡಿಯೇ ತೀರಬೇಕೆಂದು ಶಾಸನ ಮಾಡಿರುವರು. ಈ ಪಾಠಶಾಲೆಗಳಲ್ಲಿ ತರುಣಿಯರು ಅತಿಥಿಗಳನ್ನು ಆದರಿಸುವುದು ಟೀ ಕೊಡುವ ವಿಧಾನ, ಗೌರವದಿಂದ ಮಾತನಾಡಿಸುವುದು, ಗೃಹಿಣಿಯರು ಹೇಗೆ ನಡೆಯಬೇಕೆಂಬುದನ್ನೂ ಕಲಿಸಿಕೊಡುವರು. ಮತ್ತು ಮಕ್ಕಳ ಪೋಷಣೆ, ಮನಸಂಬಂಧವಾದ ವಿಚಾರ, ವಿಶೇಷ ಸಂದರ್ಭದಲ್ಲಿ ಹೇಗೆ ವರ್ತಿಸಬೇಕೆಂದು ಇತ್ಯಾದಿ ವಿಷಯಗಳ ಉಪನ್ಯಾಸ ಕೇಳುತ್ತಾರೆ.

ತಮ್ಮ ತಮ್ಮ ಮನೆಗಳಲ್ಲಿ ಶೃಂಗರಿಸಲು ಯೋಗ್ಯವಾದ ಚಿತ್ರಮಯವಾಗಿ ಹೂ ಕತ್ತರಿಸುವುದನ್ನೂ ಕಸೂತಿ ಕೆಲಸಮಾಡುವುದನ್ನು ಹೇಳಿಕೊಡುತ್ತಾರೆ. ಇದೂ ಅಲ್ಲದೆ ಕೈ ಬರವಣಿಗೆ ಕಾಗದಗಳನ್ನು ಬರೆಯುವುದು, ಸಂಗೀತವಿದ್ಯೆ, ಪಿಯಾನೋ ಮುಂತಾದ ವಿದ್ಯೆಗಳನ್ನು ತಪ್ಪದೆ ಹೇಳಿಕೊಡುತ್ತಾರೆ. ಇದರ ಜೊತೆಗೆ ಪಾಕಶಾಸ್ತ್ರವನ್ನು ಕಲಿಯಲು ಹೆಚ್ಚು ಉತ್ತೇಜನವನ್ನು ಕೊಡುವರು. ತಮ್ಮ ದೇಶದ ಪಾಕಗಳಲ್ಲದೆ ಇತರ ದೇಶಗಳ ಪಾಕಗಳನ್ನೂ ಅವರು ಮಾಡುವವಿಧಾನಗಳನ್ನೂ ಹೇಳಿಕೊಡುವರು. ಈ ರೀತಿಯಲ್ಲಿ ಮಾಕ್ಯ ಶಿಕ್ಷಣಗಳನ್ನು ಪಡೆದು ವೀರಪುರುಷರನ್ನು ಹಡೆಯುವುದಕ್ಕೆ ಯೋಗ್ಯರನ್ನಾಗಿಮಾಡಲು ಜಪಾನಿನವರು ಈ ಪಾಠಶಾಲೆಗಳನ್ನು ಪ್ರಾರಂಭಿಸಿರುವರು. ಈ ಪಾಠಶಾಲೆಯ ವಿದ್ಯಾರ್ಥಿನಿಯರಿಗೆ ಮಧ್ಯಾಹ್ನದ ಫಲಾಹಾರವು ಆ ಪಾಠಶಾಲೆಯಲ್ಲಿಯೇ ನಡೆಯುತ್ತದೆ. ಫಲಾಹಾರವನ್ನು ತಿಂದ ಬಳಿಕ ಸರದಿಯಮೇರೆ ಬಟ್ಟಲುಗಳನ್ನೆಲ್ಲಾ ಶುಭ್ರವಾಗಿ ತೊಳೆದಿರುತ್ತಾರೆ. ಫಲಾಹಾರಾನಂತರ ನಿತ್ಯವೂ ಧರ್ಮಬೋಧೆಯ ಉಪನ್ಯಾಸವು ನಡೆಯುತ್ತದೆ. ಹಿಂದಿನ ತಿಂಗಳ ಒಂದು ವಾರದಲ್ಲಿ ಟೋಕಿಯೋ ನಗರದಲ್ಲಿರುವ ಪಾಠಶಾಲೆಯೊಂದರಲ್ಲಿಯೇ ಸುಮಾರು ನೂರು ಜನ ತರುಣಿಯರು ಶಿಕ್ಷಣವನ್ನು ಪಡೆದು ಹೋದರು. ಹೀಗೆಯೇ ಪ್ರತಿವಾರ ಸಹಸ್ರಾರು ತರುಣಿಯರು ಸೇರುತ್ತಲೂ ಹೊರಗೆ ಹೋಗುತ್ತಲೂ ಇದ್ದಾರೆ. ಇಂತಹ ಸುಶಿಕ್ಷಣವನ್ನು ಪಡೆದ ತರುಣಿಯರು ಒಳ್ಳೆಯ ಮಾತೆಯರಾಗಿ ದೇಶಕ್ಕೆ ಕೀರ್ತಿ ತರುವುದರಲ್ಲಿ ಸಂದೇಹವಿಲ್ಲ.

ಕಾಲವೈಚಿತ್ರ್ಯ

ಮಂದಾನಿಲರಗಳೆ.

ಗುರುಹಿರಿಯರನುರೆ | ಮರೆಯುವಕಾಲ |
ದುರಹಂಕಾರದೆ | ಮೆರೆಯುವಕಾಲ |
ದುರುಳರ ಸಂಗದೆ | ಬೆರೆಯುವಕಾಲ |
ಪರಮಪುರುಷನ | ತೊರೆಯುವಕಾಲ ||೧||

ಕುಟಿಲವೇಷದಿಂ | ನಟಿಸುವಕಾಲ |
ಕಟುನುಡಿಯಿಂದಾ | ರ್ಭಟಿಸುವಕಾಲ |
ದಿಟಕಪ್ಪೈಪ್ಸಿಯ ಸೆಂ | ಘಟಿಸುವಕಾಲ |
ನಟಿಗನುಪದ ಮಿಗಿ | ಲೆಟಕುವಕಾಲ ||೨||

ಹಣಮಿದದೋಷವ | ನೆಣಿಸದಕಾಲ |
ಗಣಿಸಂ ತಾಳ್ಮಿಸಿ | ಮಣಿಯದಕಾಲ |
ಋಣಬಂದತಿಪಿಯ | ಕಣಿಸದಕಾಲ |
ಬಣ್ಣಿಸಲಣಕಿ ಪಮಂ | ದಣಿಸಿದಕಾಲ ||೩||

ತುಚ್ಛರನುಡಿಯಂ | ಮೆಚ್ಚುವಕಾಲ |
ನಿಚ್ಚರವಿರದ ಜಾ | ಯ್ಮುಚ್ಚುವಕಾಲ |
ಇಚ್ಛೆದಿಗಾಡರು | ಹೆಚ್ಚುವಕಾಲ |
ಗಚ್ಚಿಸಿತಲೆಯಂ | ಚುಚ್ಚುವಕಾಲ ||೪||

ಕುಜನಕುಚಾರಿಕ | ಜಲುವಿನಕಾಲ |
ಸುಜನ ವಿಧರ್ಮಗ | ಳೊಲುವಿನಕಾಲ |
ಕುಲಕುತಂತ್ರಿಗಳ | ಗೆಲುವಿನಕಾಲ |
ಬಲಿಪವಿವೇಕಿಗ | ಳಳುವಿನಕಾಲ ||೫||

ತಡಬಡೆಯಿಲ್ಲದ | ಗಡಿಬಿಡಿಕಾಲ |
ಸಡಗರಿಯೊಂದದ | ಸಿಡಿಮಿಡಿಕಾಲ |
ಕಡುಕಿಸನುಪರ್ವದ | ಕಿಡಿಕಿಡಿಕಾಲ |
ಕಡಕಡೆಗಿದರಿಂ | ಪುಡಿಪುಡಿಕಾಲ ||೬||

ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿ,
ಹಾವನಹಳ್ಳಿ.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ವರ್ಷ ಮಾಡಿದ ಎರಡು ಉಪನ್ಯಾಸಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಉಪನ್ಯಾಸಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಉಪನ್ಯಾಸಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ನವ್ಯ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೩೨೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ **ಟೀಕೆಯನ್ನು** ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೦ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥವನ್ನು ಅಚ್ಚುಹಾಕಿಸಲು ಪಂಡಿತರು ವಿಶೇಷ ಪ್ರಯತ್ನವನ್ನು ಪ್ರಯುಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಸಂತೋಷಪೂರ್ವಕ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವದಲ್ಲದೆ ಈ ಗ್ರಂಥದಲ್ಲಿ ನಿರ್ಮಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೬೪ ಪುಟಗಳಿಂದ ಕೂಡಿದ್ದು ಬಿಳಿಯ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹು ಸುಂದರವಾದ ಬೈಂಡಿನಿಂದಲಂಕೃತವಾಗಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಷ್ಟಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದು ರಾಜಾಜ್ಞೆಗೆ ನಾಮಕ್ಕೆನ್ನುವಂತೆ ವಿಶಾಷನಾ ಮಠಾಧಿಕಾರಿಗಳಿಗೆ ೩ **ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ ೪ ಆಣೆ ಪ್ರತ್ಯೇಕ.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಗಳು

ಧಾತುಪುಷ್ಟಿಲೇಹ.

1 ಇದು ಬಲಹೀನ ದೇಹಗಳಿಗೆ ಅದ್ಭುತವಾದ ಔಷಧಿ, ಇದರ ಸೇವನೆಯಿಂದ ಮಲಬದ್ಧತೆ, ಜೀರ್ಣಜ್ವರ, ಅಜೀರ್ಣ, ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶ್ಶಕ್ತಿ, ಕಾಲು ತೀಕ್ಷ್ಣವಿಕ, ರಕ್ತಹೀನತೆ, ಪಿತ್ತ ರೋಗವು, ತಲೆ ನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಸ್ವಪ್ನಾವಸ್ಥೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ರೋಗದಿಂದ ದುರ್ಬಲವಾಗಿ ಸಂಯೋಗಶಕ್ತಿಯು ಕುಂದಿರುವಿಕೆ, ಶರೀರದ ಉಷ್ಣತೆ ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿವೃದ್ಧಿಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಡಬ್ಬಿ 1ಕ್ಕೆ 2—8—0 3ಕ್ಕೆ 7—0—0

2 **ಮೇಹಕುಠಾರಪ್ರಮೇಹ** ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ್ಗೆ ಒಂದು ಹನಿಯಾಳಿಕ್ಕೆ ಸಾಮರ್ಥ್ಯವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು ಡಬ್ಬಿ 1ಕ್ಕೆ 2—8—0 3ಕ್ಕೆ 7—0—0

3 **ಮಲೇರಿಯಾ ನಿವಾರಿಣಿ** ಇದು ಮಲೇರಿಯಾ, ದಿನಬಿಟ್ಟು ಬರುವ ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ನ್ಯೂಮೋನಿಯಾ, ಕಫಜ್ವರ, ಜ್ವರಗೆಡ್ಡೆ ಮುಂತಾದವುಗಳಿಗೆ ದಿವ್ಯೌಷಧಿ ಬಾಟ್ಲಿ 1ಕ್ಕೆ 1—8—0 ಸಣ್ಣ ಬಾಟ್ಲಿಗೆ 0—13—0. 3ಕ್ಕೆ 4—0—0. ಸಣ್ಣ ಬಾಟ್ಲಿ 3ಕ್ಕೆ 2—4—0.

ಖಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಿಗೆ ತಕ್ಕಂಥಾದ ಔಷಧಿ ರವಾನಿಸಲಾಗುತ್ತೆ. ಕ್ಯಾಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,

ಔಷಧಿ **ಸಿಕ್ಕುವ ಸ್ಥಳಗಳು—** ಆಯುರ್ವೇದಿಕ್ ಫಿಸಿಸಿಯನ್, ರಥಬೀದಿ, ನಂಬರು 271 ಮಂಗಳೂರು

ಮೆಸ್ಸರ್ಸ್ ಪೆಟರ್ಸ್ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಸಿಂಹಾಸನದಲ್ಲಿರುವ ಪ್ರತಿಯೊಂದು ಗುರುಮನೆತನದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೊಂ ಹತ್ತುವರ್ಷಕ್ಕೊಂ ಒಂದಾವರ್ತಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆವರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಹೆಸರು, ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಹೋಗಲಾಡಿಸುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಿಸಿಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಬೇರಾಗಿ ಕೊಡಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೨—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೬—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿರಾಕಶಿಭಸ್ಮ	೧	೦—೮—೦
ಕಾಂಜೀರಭಸ್ಮ	೧	೦—೮—೦
ಬಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೨—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೊಂಬಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಪಂಚ ಪೀಠಾಧೀಶ್ವರರಾದಿರಕ್ಕೆ ಐವರ ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೨ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೮
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೭
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಪದೇಶಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನಿ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಲಿಂಗ ಮತ್ತು ಮಂದಿರದ ಸುಂದರ ಫೋಟೋ	೦—೦—೭
ಕೊಲ್ಲಿಪಾಕಿ ಪುರದಲ್ಲಿ ಸೇರಿರುವ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೭

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗ ವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ನೇರಿಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವು ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬದಿಸದವಾಗಿ ಉಪಯೋಗಿಸುತ್ತಾರೆ ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ ಪಿ ೦-೬-೦
ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ. ೮ ಪೈ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[7] ಪೋ ೫೨ ೫೧೦, ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ ...	೩ ಆಣೆ
ಮಹಾಬಲೇಶ್ವರಸ್ತೋತ್ರ ..	೧ ಆಣೆ
ಗೋತ್ರಸೂತ್ರಪಟ (೩ನೆಯ ಆವೃತ್ತಿ) .	೧ ಆಣೆ
ಸನ್ಯಾಸಾಶ್ರಮನಿಷೇಧ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಳಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ) ...	೧ ಆಣೆ
ಬಸವಾದಿ ಸಿದ್ಧತತ್ತ್ವದರ್ಪಣ (೪ನೆಯ ಆವೃತ್ತಿ) .	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವದರ್ಪಣ	೨ ಆಣೆ
ವೀರಶೈವಮತನಿರ್ಣಯಸಂಗ್ರಹ	೩ ಆಣೆ
ವೀರಶೈವಾಚಾರಪದ್ಧತಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೭ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಷಯಕ ತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)...	೪ ಆಣೆ
ವೈದಿಕಪಾಷಂಡರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕೃತ)	೮ ಆಣೆ
ಬಸವವ್ಯಾಂತಕ ದಿವಾಕರ (೨ನೆಯ ಆವೃತ್ತಿ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಅವರ ಭಾಷಣವು (ಕನ್ನಡ)	೮ ಆಣೆ
पंडित श्रीकाशीनाथशास्त्री याचे भाषण (मराठी)	८ आणे
Speeches by Pandit Shri Kashinatha Shastri (*English*)	12 As
ವೀರಶೈವರತ್ನ (೩ನೆಯ ಆವೃತ್ತಿ) ...	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ...	೧೨ ಆಣೆ
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ) ..	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾ ಸಹಿತ) ...	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) ...	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेन्दुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಾಪಕ ಸಾ|| ಪ್ರ|| ಪಂಡಿತ ಶೇಷ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ

REGISTERED No M. 2266 || ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ. ಪಿ ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ ನೇ ಫೆಬ್ರವರಿ ೧೯೩೫ [ಸಂಚಿಕೆ ೪೧

ಶ್ರೀ ಮಹಾಬಲೇಶ್ವರಾಯ ನಮಃ

ಗೋಕರ್ಣಕ್ಷೇತ್ರದಲ್ಲಿ ಶ್ರೀ ಷ|| ಬ್ರ|| ಚರಮೂರ್ತಿ ಸ್ವಾಮಿಗಳವರು ಹನ್ನೆರಡುಮಠ ಹುಬ್ಬಳ್ಳಿ ಇವರ ಮಠವು.

ವೀರಶೈವ ಮಹಾಜನಗಳಲ್ಲಿ ವಿನಂತಿ —

ಗೋಕರ್ಣವು ಹಿಂದೂ ಜನರಿಗೆ ಒಳ್ಳೇ ಪವಿತ್ರಸ್ಥಾನವು. ಈ ಹಾಗು ಮಹಾ ಋಷಿಗಳೂ ಯತಿಗಳೂ ವೀರಶೈವ ಶಿವಯೋಗಿಗಳೂ ಈ ಸ್ಥಾನದಲ್ಲಿ ತಪಸ್ಸು ಮಾಡಿದ್ದರಿಂದ ಈ ಸ್ಥಾನಕ್ಕೆ ಪಟ್ಟ ಶೋಭೆಯುಂಟಾಗಿದೆ. ಈ ಕ್ಷೇತ್ರದಲ್ಲಿ ವಿರಾಜಿಸುವ ಶ್ರೀ ಮಹಾಬಲೇಶ್ವರ ಲಿಂಗವು ಬಹು ಕಾಲದಿಂದ ಈ ಸ್ಥಾನದ ಅಧಿದೇವತೆಯಾಗಿ ಮೆರೆಯುತ್ತದೆ. ಇಷ್ಟೇ ಅಲ್ಲ, ಶಿವನಾತ್ಮಲಿಂಗರೂಪದಿಂದ ಈ ಸ್ಥಾನದಲ್ಲಿ ವಾಸಿಸಿದ್ದಾನೆಂದು ಪುರಾಣಪ್ರಸಿದ್ಧವಿದೆ.

ಕರ್ನಾಟಕಕ್ಕೆ ಕಳಸಪ್ರಾಯವಾಗಿರುವ ಗೋಕರ್ಣ ಕ್ಷೇತ್ರಕ್ಕೆ ಹಿಂದುಸ್ಥಾನದ ಎಲ್ಲ ಭಾಗಗಳಿಂದಲೂ ಅನೇಕ ಮತಾವಲಂಬಿಗಳು ಪರಮಪೂಜ್ಯ ಬುದ್ಧಿಯಿಂದ ಈ ಸ್ಥಾನದ ಅಧಿದೇವತೆಯ ದರ್ಶನಕೊಂಡು ಕೃತಾರ್ಥರಾಗುತ್ತಾರೆ. ಈ ಸ್ಥಾನವು ಪುರಾಣಪ್ರಸಿದ್ಧ ಮತ್ತು ಇತಿಹಾಸಪ್ರಸಿದ್ಧವಾಗಿದೆ. ಇಷ್ಟೇ ಅಲ್ಲದೆ ಅನುಭವದಿಂದಲೂ ಒಳ್ಳೇ ಮೇಲ್ಮೆಯನ್ನು ಹೊಂದಿದೆ.

ಇಂಥ ಪರಮ ಪವಿತ್ರ ಸ್ಥಾನಕ್ಕೆ ಭಕ್ತಿಯಿಂದ ಬರುವ ವೀರಶೈವ ಯಾತ್ರಿಕರಿಗೆ ಸುರಾರು ವರ್ಷಗಳಿಂದ ವಸತಿ ಮೊದಲಾದವುಗಳ ಕೊರತೆಯು ವಿಶೇಷವಾಗಿ ಬಾಧಿಸುತ್ತಿತ್ತು. ವೀರಶೈವ ಧರ್ಮಪದ್ಧತಿಯ ಮೇರೆಗೆ ಕಾರ್ಯಗಳು ಜರುಗುವದು ದುಸ್ತರವಾಗಿತ್ತು. ಈ ವಿಷಯವನ್ನು ಮನಗಂಡು ಧಾರವಾಡ ಜಿಲ್ಲೆಯಲ್ಲಿಯ ಶ್ರೀ|| ಷ|| ಬ್ರ|| ಚರಮೂರ್ತಿ ಸ್ವಾಮಿಗಳವರು ಹನ್ನೆರಡುಮಠ ಇವರು ಕಳೆದ ೨ ವರ್ಷಗಳಿಂದ ಸತತ ಪ್ರಯತ್ನ ಮಾಡಿ ಗೋಕರ್ಣದಲ್ಲಿ ತಮ್ಮ ಮಠವನ್ನು ಕಟ್ಟಿಸಲು ಸ್ಥಳವನ್ನು ಸರಕಾರದವರಿಂದ ಪಡೆದುಕೊಂಡಿದ್ದಾರೆ. ಈ ವರೆಗೆ ಬೇರೆ ಬೇರೆ ಜನರು ಈ ಸ್ಥಾನದಲ್ಲಿ ಮಠ ಕಟ್ಟಿಸಲಿಕ್ಕೆ ಅನೇಕ ರೀತಿಯಿಂದ ಪ್ರಯತ್ನ ಮಾಡಿದರೂ ಸಾಧ್ಯವಾಗದೆ ಇದ್ದು ಈಗ ಯಶಸ್ವಿಯಾದುದನ್ನು ನೋಡಿದರೆ ಇದು ಮಹಾಸ್ವಾಮಿಗಳವರ ತಪೋಬಲದಿಂದಲೇ ಆಗಿದೆಯೆಂದು ಧಾರಾಳವಾಗಿ ಹೇಳಬಹುದು. ಗೋಕರ್ಣದಲ್ಲಿ ಬಹುಕಾಲದಿಂದ ವೀರಶೈವರ ಚಿಹ್ನವು ಸಹಿತ ಇಲ್ಲದ ಇದ್ದಾಗ್ಗೆ ಈಗ ತಾನೇ ಶ್ರೀ ಸ್ವಾಮಿಗಳವರ ಕೃಪೆಯಿಂದ ಲಭಿಸಿದ್ದು ವೀರಶೈವರಿಗೆ ಅತ್ಯಂತ ಗೌರವವಾಗಿಯೂ ಅಭಿಮಾನಾಸ್ಪದವಾಗಿಯೂ ಧರ್ಮದ ಕೊರತೆಯನ್ನು ನಿವಾರಿಸುವದಾಗಿಯೂ ಆಗಿದೆ. ಧರ್ಮದ ಉನ್ನತಿ, ಉನ್ನತಿ ಮತ್ತು ಪ್ರಸಾರಣೆಗಳಾಗುವದು ಮಠಗಳಿಂದಲ್ಲವೇ? ಮಠವೇ ಧರ್ಮದ ಕೇಂದ್ರಸ್ಥಾನವು.

ಇಂಥ ಮಠವನ್ನು ಶ್ರೀ ಮಹಾಸ್ವಾಮಿಗಳವರು ಸರ್ವರೀತಿಯಿಂದ ವೀರಶೈವರ ಉದ್ಧಾರಕ್ಕಾಗಿಯೂ ಅನುಕೂಲಕ್ಕಾಗಿಯೂ ಗೋಕರ್ಣ ಕ್ಷೇತ್ರದಲ್ಲಿ ಕಟ್ಟಿಸಲು ಕೈಕೊಂಡಿದ್ದಾರೆ. ಈ ಕಾರ್ಯವು ಈಗಿನ ಕಾಲಕ್ಕೆ ಶ್ರೀ ಸ್ವಾಮಿಗಳವರಿಗೆ ಸುಲಭಸಾಧ್ಯವಾಗದೆಂದು ತೋರಿದರೂ ತಮ್ಮಂಥ ವೀರಶೈವ ಮಹಾಜನರೂ ಮತ್ತು ಉದಾರಿಗಳೂ ತಮ್ಮ ಉದಾರ ಹಸ್ತವನ್ನು ಮುಂದುಮಾಡಿ ಈ ಮಹತ್ಕಾರ್ಯವನ್ನು ಯಶಸ್ವಿಯಾಗಿ ಮಾಡಲಿಕ್ಕೆ ಭುಜಕೊಟ್ಟರೆ ಶೀಘ್ರದಲ್ಲಿ ಕಳೆತುಂಬಾಗುವದು. ತಮ್ಮೆಲ್ಲರ ಉದಾರಾಶ್ರಯ ಮತ್ತು ಉದಾರ ದೇಣಿಗೆಗಳು ಶ್ರೀ ಸ್ವಾಮಿಗಳವರ ಧರ್ಮಕಾರ್ಯವನ್ನು ಸುಲಭಸಾಧ್ಯ ಮಾಡುವವೆಂಬುದರಲ್ಲೇನೂ ಅಡ್ಡಿಯಿಲ್ಲ. ಬಹು ಪುರಾತನದಿಂದಿದ್ದ ವೀರಶೈವರ ಕೊರತೆಯನ್ನು ನೀಗಿಸಲಾಡಿಸಲು ಶ್ರೀ ಸ್ವಾಮಿಗಳು ಸತತ ಪ್ರಯತ್ನ ಮಾಡುವ ಸಮಯದಲ್ಲಿ ವೀರಶೈವರಾದ ತಾವು ತಮ್ಮ ಭಕ್ತಿಯನ್ನಿರಿಸಿ ಈ ಕಾರ್ಯವನ್ನು ಶೀಘ್ರ ಕೊನೆಗಾಣಿಸಲು ಹೊಣೆಗಾರರಾಗುವಿರೆಂದು ತುಂಬಾ ನಂಬಿಕೆಯಿದೆ.

ಇಂಥ ಪವಿತ್ರ ಕಾರ್ಯಕ್ಕೆ ವೀರಶೈವ ಬಾಂಧವರಾದ ತಾವುಗಳು ತಮ್ಮ ಭಕ್ತಿ ದೇಣಿಗೆಗಳನ್ನು ಶ್ರೀ ಸ್ವಾಮಿಗಳವರ ಕಳುಹಿಸಿ ಉದಯ ಹೊಂದುವ ಕಾರ್ಯದಲ್ಲಿ ಪಾಲುಗಾರರಾಗಿ ವಂಶೋದ್ಧಾರ ಮಾಡುವ ಪುಣ್ಯವನ್ನು ಪಡೆಯಲು ಮನಸ್ಸುಳ್ಳವರಾಗುವಿರೆಂದು ವಿನಯದ ವಿನಂತಿ. ತಮ್ಮ ಬಂಧು

ಪಟ್ಟದಸ್ವಾಮಿ ಹಿರೇಮಠ

ತಾ|| ೧೫-೨-೧೯೩೫ ಪ್ಲೀಡರ್ ವಕೀಲ ಹುಬ್ಬಳ್ಳಿ

[ಸಿ ಸೂ—ಇದೇ ಶಿವರಾತ್ರಿಗೆ ಈ ಕ್ಷೇತ್ರದ ವರ್ಷೋತ್ಸವದ ಸಮಯದಲ್ಲಿ ಶ್ರೀ ಮಹಾಸ್ವಾಮಿಗಳು ಪಾದಮಾಡಿಸುವವರಿದ್ದಾರೆ. ತಾವುಗಳು ಆ ಕಾಲಕ್ಕೆ ಕ್ಷೇತ್ರಕ್ಕೆ ಬಂದು ದರ್ಶನಾಶೀರ್ವಾದಗಳನ್ನು ಹೊಂದಬೇಕಾಗಿ ವಿನಂತಿ]

ನಮಃ ಪಂಚಜಗದ್ಗುರುಭ್ಯಃ!

ಶ್ರೀ|| ಷ|| ಬ್ರ|| ಪಸ್ತ ವೀರಶಿವಾಚಾರ್ಯರು ಬೃಹನ್ಮಠ ಹಾನಗಲ್ಲ ಇವರಿಂದ ಸ್ಥಾಪಿಸಲ್ಪಟ್ಟ

ವೀರಶೈವ ಧರ್ಮೋನ್ನತಿ ಪರಿಷತ್ತು

೨ ನೆಯ ಅಧಿವೇಶನವು

ಪ್ರತಿಯೊಂದು ಸಮಾಜವು ವೃದ್ಧಿಯನ್ನು ಹೊಂದಬೇಕಾದರೆ ಅದಕ್ಕೆ ಚಿಕ್ಕಪುಟ್ಟ ಸಭೆಗಳ ಆವಶ್ಯಕತೆಯುಂಟು. ಈ ಸಭೆಗಳು ಶಹರಗಳಲ್ಲಿಯೂ ಹಳ್ಳಿಗಳಲ್ಲಿಯೂ ಸರ್ವತ್ರ ನೆರವೇರದಂತೆ ಸಮಾಜವು ವೃದ್ಧಿಯಾಗುವದಿಲ್ಲ. ಅದರಲ್ಲಿ ಹಳ್ಳಿಯಲ್ಲಿಯ ಜನಾಂಗವು ಸುಧಾರಿಸದ ಹೊರತು ಯಾವ ಮತವೂ ಸುಧಾರಿಸುವದಿಲ್ಲೆಂಬುದು ಸರ್ವಾನುಮತವಾಗಿ ಎಲ್ಲರಿಗೂ ತಿಳಿದ ಅದೆ. ವೀರಶೈವ ಸಮಾಜವು ವಿಶೇಷವಾಗಿ ಹಳ್ಳಿಗಳಲ್ಲಿಯೇ ಇರುವದರಿಂದ ಈ ವೀರಶೈವರ ಉನ್ನತಿಯ ದೆಸೆಯಿಂದ ನಮ್ಮ ಗುರುವರ್ಯ ಬಾಲತಪಸ್ವಿ ಶ್ರೀ|| ಷ|| ಬ್ರ|| ಶ್ರೀ ಪಸ್ತ ವೀರಶಿವಾಚಾರ್ಯರು ಬೃಹನ್ಮಠ ಹಾನಗಲ್ಲ ಈ ಮಹನೀಯರು 'ವೀರಶೈವ ಧರ್ಮೋನ್ನತಿ ಪರಿಷತ್ತು' ನ್ನು ಸ್ಥಾಪಿಸಿ ಸೋಲಾಪುರ ತಾಲೂಕ ಪ್ರಾಂತ ಶ್ರೀ ಗ್ರಾಮದಲ್ಲಿ ಬೆಂಗಳೂರು ಮಹಾಂತಿನ ಮಠಾಧ್ಯಕ್ಷರಾದ ಭಾಸ್ಕರಪ್ಪಂತ ಷ|| ಬ್ರ|| ಶ್ರೀ ಗಂಗಾಧರ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿಸಿದ್ದು ಸರ್ವಶ್ರುತವಷ್ಟೆ!

ಪರಿಷತ್ತಿನ ೨ ನೆಯ ಅಧಿವೇಶನವು ಈ ವರ್ಷ ನಮ್ಮ ಗ್ರಾಮದಲ್ಲಿ ಶ್ರೀ ಜಗದ್ಗುರು ರೇಣುಕಭಗವತ್ಪಾದರ ಜಯಂತಿಯ ಸಮಯದಲ್ಲಿ (ತಾ|| ೧೮ ೧೯ ಮಾರ್ಚ ೧೯೩೫) ಶು|| ೧೩ ೧೪ ಈ ಎರಡು ದಿವಸಗಳಲ್ಲಿ ವೇದತೀರ್ಥ ಸ್ಮೃತಿತೀರ್ಥ ಕಾವ್ಯತೀರ್ಥ ಧರ್ಮಾಚಾರ್ಯ ಸಾಹಿತ್ಯವಿಶಾರದ ಇತ್ಯಾದಿ ಪದವೀಧರರಾದ ಚಿಪರೆ ಮಠದ ಪಂಡಿತ ಶ್ರೀ ವೀರಭದ್ರಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ನೆರವೇರಿಸಬೇಕೆಂದು ನಿರ್ಧರಿಸಿರುತ್ತೇವೆ. ಆ ಸಮಯಕ್ಕೆ ಸರ್ವವೀರಶೈವ ಮಹನೀಯರೂ ಪಂಡಿತರೂ ಗುರುಮೂರ್ತಿಗಳೂ ಅವಶ್ಯವಾಗಿ ಆಗಮಿಸಬೇಕೆಂದು ಅನಂತಪ್ರಾರ್ಥನೆಗಳುಂಟು. ಅವಧಿಯು ಸ್ವಲ್ಪೇ ಇದ್ದ ಮೂಲಕ ಪ್ರತ್ಯೇಕ ಆಮಂತ್ರಣದ ಅಪೇಕ್ಷೆಯನ್ನು ಯಾವ ಮಹನೀಯರೂ ಮಾಡದೆ ಸಮಾಜದ ಕಡೆಗೆ ಲಕ್ಷ್ಯಕೊಟ್ಟು ಅವಶ್ಯ ಆಗಮಿಸಬೇಕೆಂದು ಪ್ರಾರ್ಥನೆ.

ಸಭೆಯಲ್ಲಿಯ ವಿಷಯಗಳು

೧ ವೀರಶೈವ ಪ್ರಾಚೀನತ್ವ
೨ ವೀರಶೈವರಲ್ಲಿ ವರ್ಣಾಶ್ರಮವಿಚಾರ
೩ ವೀರಶೈವರಲ್ಲಿ ಸಂಸ್ಕಾರಗಳು
೪ ಸ್ತ್ರೀ ಶಿಕ್ಷಣ
೫ ಔದ್ಯೋಗಿಕ, ಶೈಕ್ಷಣಿಕ ಕೃಷಿ ಇತ್ಯಾದಿ ವಿಷಯಗಳು

ಈ ವಿಷಯಗಳ ಬಗ್ಗೆ ಯಾರಾದರೂ ಮಾತಾಡುವವರಿದ್ದರೆ ಅವರು ತಮ್ಮ ತಮ್ಮ ವಿಷಯಗಳನ್ನು ಶಿವಲಿಂಗಪ್ಪ ಸಿದ್ಧರಾಮಪ್ಪ ಮಾಳಗೆ ಪೂರ್ವಮಂಗಳವಾರಪೇಠ ಸೋಲಾಪುರ ಇವರ ಹೆಸರಿನಿಂದ ಬರೆದು ಕಳಿಸಬೇಕು. ಇಷ್ಟು ವಿಷಯಗಳಲ್ಲದೆ ಅಗತ್ಯಬಿದ್ದರೆ ಆ ಸಮಯದಲ್ಲಿ ಅಧ್ಯಕ್ಷರ ಅಪ್ಪಣೆಯಿಂದ ಬೇರೆ ಕೆಲವು ವಿಷಯಗಳ ಬಗ್ಗೆ ಮಾತನಾಡಬಹುದು. ಈ ಸಭೆಯ ಸ್ವಾಗತಾಧ್ಯಕ್ಷರು ಶಿವಲಿಂಗಪ್ಪ ಸಿದ್ಧರಾಮಪ್ಪ ಮಾಳಗೆ ಇವರು ಇರುತ್ತಾರೆ.

ಅದೇ ಸಮಯದಲ್ಲಿ ಸೌ|| ಭಾಗೀರಥೀಬಾಯಿ ಕಟಾರೆ ಸೋಲಾಪುರ ಇವರ ಅಧ್ಯಕ್ಷತೆಯಲ್ಲಿ ಸ್ತ್ರೀ ಸಮ್ಮೇಲನ ನೆರವೇರಿಸಲ್ಪಡುತ್ತದೆ. ಆ ಸಮಯದಲ್ಲಿ ವೀರಶೈವ ವಿದ್ವನ್ಮಣಿ ಮಹಿಳೆಯರು ಅವಶ್ಯವಾಗಿ ಆಗಮಿಸಬೇಕಾಗಿ ಅವರಲ್ಲಿಯೂ ಕೋರಿಕೆ. ವಿಸಂತಿ ವಾರ್ತಾಪತ್ರ ವಿಷಯಗಳಿಗೆ ಅವಕಾಶವು ದೊರೆಯುವದಿಲ್ಲ.

ಸೂಚನೆ—ದರ್ಶನಹಾಳಗ್ರಾಮವು ಅಕ್ಕಲಕೋಟ ಸಂಸ್ಥಾನದಲ್ಲಿರುತ್ತದೆ. ಸೋಲಾಪುರದಿಂದ ಪೂರ್ವದಿಕ್ಕಿಗೆ ನಳದುರ್ಗ ಮಾರ್ಗವಾಗಿ ತಾಂಡೂರವಾಡಿಯವರೆಗೆ ಸರ್ವಿಸ್ ಮೋಟಾರುಗಳಿವೆ. ತಾಂಡೂರವಾಡಿಯಿಂದ ದರ್ಶನಹಾಳಗ್ರಾಮವು ೩ ಮೈಲು ಅಂತರದಲ್ಲಿದೆ. ತಾಂಡೂರವಾಡಿಯಿಂದ ದರ್ಶನಹಾಳದವರೆಗೆ ವಾಹನದ ವ್ಯವಸ್ಥೆಯನ್ನು ಮಾಡಿದ್ದೇವೆ.

ಸಭೆಯ ಕಾರ್ಯಕ್ರಮಗಳು

ಮೊದಲನೆಯ ದಿವಸ ತಾರೀಖು ೧೮-೩-೧೯೩೫ ರಲ್ಲಿ ಮಧ್ಯಾಹ್ನ ೧ ಘಂಟೆಗೆ ಅಧ್ಯಕ್ಷರ ಸ್ವಾಗತ ಮತ್ತು ಅಧ್ಯಕ್ಷರ ಭಾಷಣ. ರಾತ್ರಿ ೯ ಘಂಟೆಗೆ ಶ್ರೀ ಜಗದ್ಗುರು ರೇಣುಕಭಗವತ್ಪಾದರ ಭಾವಚಿತ್ರಮಹೋತ್ಸವ.

ಜಯಂತಿಯ ವಿಷಯದಲ್ಲಿ ವ್ಯಾಖ್ಯಾನಗಳು.

ಎರಡನೆಯ ದಿವಸ ತಾರೀಖು ೧೯-೩-೧೯೩೫ ರಲ್ಲಿ ಪ್ರಾತಃಕಾಲ ೮ ಘಂಟೆಯಿಂದ ೧೧ ಘಂಟೆಯವರೆಗೆ ಮಧ್ಯಾಹ್ನ ೨ ಘಂಟೆಯಿಂದ ೬ ರ ವರೆಗೆ.

ಹೀಗೆರಡು ದಿನಸಗಳಲ್ಲಿ ಸಭೆಯು ನೆರವೇರುವದು. ಈ ವರ್ಷದ ಈ ಪರಿಷತ್ತಿಗೆ ಮಹಾವಿದ್ವಾಂಸರೂ ಪೂಜ್ಯಗುರುಮೂರ್ತಿಗಳೂ ಪದವೀಧರರೂ ಆಗಮಿಸುವವರಿದ್ದಾರೆ. ಆದ್ದರಿಂದ ವೀರಶೈವ ಮಹನೀಯರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು.

ಸೇವಕ

ದಾಜೀಬಾ ಅಪ್ಪಾರಾವ ಪಾಟೀಲ,

ಸರ್ವವೀರಶೈವ ಮಂಡಳಿ

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್.

ಮಹನೀಯರೇ!

ಮೇಲ್ಕಂಡ ಕಾಲೇಜಿನ ಸಂಬಂಧವಾದ ಧರ್ಮಗ್ರಂಥ ಭಂಡಾರದ ವತಿಯಿಂದ ವೀರಶೈವಮತತತ್ತ್ವ ವಿಷಯವಾಗಿ ಸರ್ವರಿಗೂ ಸುಲಭ ರೀತಿಯಿಂದ ತಿಳಿಯುವಂತೆ ಅನೇಕ ಸಣ್ಣಪುಟ್ಟ ಗ್ರಂಥಗಳನ್ನು ಪ್ರಕಟಿಸಬೇಕಾಗಿರುವದರಿಂದ, ಸದರಿ ವಿಷಯಗಳ ಮೇಲೆ ಒಳ್ಳೆ ಶೈಲಿಯಿಂದ ಪ್ರಮಾಣಪೂರ್ವಕವಾಗಿ ಬರೆದು ಕಳುಹಿಸಬೇಕೆಂದು ವಿದ್ವನ್ಮಣಿಗಳಲ್ಲಿ ಪ್ರಾರ್ಥನೆ. ಪ್ರಿಂಟಾಗದಿರುವ ವೀರಶೈವ ಪುರಾತನ ಗ್ರಂಥಗಳನ್ನು ಕಳುಹಿಸಿದರೆ ಸೂಕ್ತಕಂಡರೀತಿ ಸತ್ವರ ಅವಗಾಹನೆಗೆ ಪ್ರಿಂಟುಮಾಡಿಸಲ್ಪಡುತ್ತೆ.

ದೊಡ್ಡಪೇಟೆ ಚೌಕ, ಬೆಂಗಳೂರು ಸಿಟಿ
22 2-35

ಸೆಕ್ರೆಟರಿ ಬಿ. ಬಸವಪ್ಪ, ಟ್ರೆಜರರ್.

ಪತ್ರವ್ಯವಹಾರ.

ಲೇಖಕರ ಅಭಿಪ್ರಾಯಗಳಿಗೆ [illegible] ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ [illegible] ವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ಆಯುರ್ವೇದಪರೀಕ್ಷೆಯು.

ಆರೋಗ್ಯಮಾರ್ಗ

ಲೇಖಕ—ಆಯುರ್ವೇದಾಚಾರ್ಯ [illegible]

[illegible]

ಶ್ರೀ ಜಗದ್ಗುರು ವಿದ್ಯಾಲಯದ ಗುರುಗಳು

ಶ್ರೀಶೈಲ [illegible]

ಆಹಾರ ನಿಯಮಗಳು

ಮಜ್ಜಿಗೆ—ಸಿಹಿ ಹುಳಿ ಸ್ವಲ್ಪ ಒಗರುಗಳ ರಸವುಳ್ಳದ್ದು ಹಗುರವಾದ ಮತ್ತು ಉಷ್ಣಗುಣವುಳ್ಳ ಪದಾರ್ಥವಾಗಿದೆ. ಇದು ವಿಷವಿಕಾರ ಬಾವು ಅತಿಸಾರ ಗ್ರಹಣಿ ವಾಂತಿ ಪಾಂಡುರೋಗ ಮೂಲವ್ಯಾಧಿ ಹೊಟ್ಟೆಯಲ್ಲಿನ ಗಂಟು ಅರುಚಿ [illegible] ವಾತಿಕವಾದ ಶೂಲೆ ಮೇದಸ್ಸನ್ನು [illegible] ಆಗಿರುವ ಕುಷ್ಠವನ್ನು ಕಡಿಮೆ ಮಾಡುವುದರಿಂದಲೂ [illegible] ನಾಶಮಾಡುವುದೂ ವಿಪಾಕದಲ್ಲಿ [illegible] ಹೃದಯಕ್ಕೆ ಹಿತಕರವೂ ವೀರ್ಯವನ್ನುಂಟುಮಾಡುವುದೂ ಆಗಿರುತ್ತದೆ. ಸಂಪೂರ್ಣವಾಗಿ ಬೆಣ್ಣೆಯನ್ನು ತೆಗೆದ ಮಜ್ಜಿಗೆಯು ಹಗುರವಾಗಿಯೂ ಅರೆ ಬೆಣ್ಣೆಯನ್ನು ತೆಗೆದ ಮಜ್ಜಿಗೆಯು ಭಾರವಾಗಿಯೂ ಇರುವುದಾಗಿದೆ. ಮಜ್ಜಿಗೆಯನ್ನು ಸೇವಿಸುವುದಕ್ಕೆ ಉಷ್ಣಕಾಲದ ಹೊರತು ಉಳಿದ ಕಾಲಗಳು ಅನುಕೂಲ ಪ್ರಶಸ್ತವಾಗಿರುವುವೆಂದು ವೈದ್ಯಶಾಸ್ತ್ರವು ವಿಧಿಸುತ್ತದೆ. ದುರ್ಬಲರೂ, ವ್ರಣಪೀಡಿತರೂ [illegible] ದಾಹ ರಕ್ತಪಿತ್ತ ಈ ರೋಗಗಳಿಂದ ಪೀಡಿತರಾದವರೂ ಮಜ್ಜಿಗೆಯು ಹಾನಿಯನ್ನುಂಟುಮಾಡುವುದು ಮತ್ತು [illegible] ದಿಂದುಂಟಾದ ರೋಗಗಳಲ್ಲಿಯೂ ವಾತವಿಕಾರಗಳಲ್ಲಿಯೂ ರಸ ಮತ್ತು ರಕ್ತವನ್ನು ವಹಿಸುವ ನಾಡಿಗಳ ಮಾರ್ಗವು ಕಟ್ಟಿರುವಾಗಲೂ ಅತ್ಯಂತ ಲಾಭವನ್ನುಂಟುಮಾಡುವುದು

ಸಿಹಿಯಾದ ಮಜ್ಜಿಗೆಯು ಪಿತ್ತವನ್ನು ತಗ್ಗಿಸಿ ಶ್ಲೇಷ್ಮವನ್ನು ಹೆಚ್ಚಿಸುವುದು, ಹುಳಿಮಜ್ಜಿಗೆಯು ವಾಯುವನ್ನು ತಗ್ಗಿಸಿ ಪಿತ್ತವನ್ನು ಹೆಚ್ಚಿಸುವುದು. ವಾತಪ್ರಕೋಪದ ಸಮಯದಲ್ಲಿ ಸೈಂಧವಲವಣ ಮತ್ತು [illegible] ಕೂಡಿಸಿದ ಹುಳಿಮಜ್ಜಿಗೆಯನ್ನೂ ಪಿತ್ತಪ್ರಕೋಪದ ಸಮಯದಲ್ಲಿ ಸಕ್ಕರೆಯೊಡನೆ ಸಿಹಿಮಜ್ಜಿಗೆಯನ್ನೂ ಕಫಪ್ರಕೋಪದ ಸಮಯದಲ್ಲಿ ಹುಳಿ ಮತ್ತು ಸಿಹಿಯ ಸಮತೆಯಿಂದ ಕೂಡಿರುವ ಮಜ್ಜಿಗೆಯನ್ನು ಸೈಂಧವಲವಣ ಶುಂಠಿ ಮೆಣಸು ಹಿಪ್ಪಲಿ ಇವುಗಳ ಚೂರ್ಣದೊಡನೆಯೂ ಸೇವಿಸಬೇಕು. ಭೂಲೋಕದಲ್ಲಿ ಅಮೃತ ಸದೃಶವಾಗಿರುವ ಮಜ್ಜಿಗೆಯನ್ನು ಆರ್ಷಗ್ರಂಥಗಳಾಗಿರುವ ಚರಕಸುಶ್ರುತಸಂಹಿತೆಗಳು ಮನಮುಟ್ಟಿ ಪ್ರಶಂಸಿಸುವುದಲ್ಲದೆ ವೈದ್ಯರಾಜರಿಗೆ ಕೇರಳದ [illegible] ವಾಗ್ಭಟ ಭಾವಮಿಶ್ರ ಮುಂತಾದವರೂ ಅತಿಶಯವಾಗಿ ಪ್ರಶಂಸಿಸುತ್ತಾರೆ. ವಾಗ್ಭಟಾಚಾರ್ಯನು

ಸ್ರೋತಸ್ಸು ತಕ್ರಶುದ್ಧೇಷು ರಸೋ ಧಾತೂನುಪೈತಿಯಃ |
ತೇನ ಪುಷ್ಟಿರ್ಬಲಂ ವರ್ಣಃ ಪರಂ ತುಷ್ಟಿಶ್ಚ ಜಾಯತೇ |
ವಾತಶ್ಲೇಷ್ಮವಿಕಾರಾಣಾಂ ಶತಂ ಚ ವಿನಿವರ್ತತೇ ||

ಅ ಹೃ ಚಿ ಅ ೮

ಎಂದು ಹೇಳಿರುವನು. ಮಜ್ಜಿಗೆಯ ಸೇವನೆಯಿಂದ ಶರೀರದಲ್ಲಿರುವ ಸಕಲ ನಾಡಿಗಳೂ ದೋಷರಹಿತಗಳಾಗಿ ವಿಶೇಷ ಪರಿಶುದ್ಧತೆಯನ್ನು ಹೊಂದುವುವು, ಈ ಪರಿಶುದ್ಧನಾಡಿಗಳ ಮೂಲಕ ಆಹಾರದ ರಸವು ಸರ್ವಾವಯವಗಳನ್ನು ವ್ಯಾಪಿಸುವುದರಿಂದ ಶರೀರವು ಬಲ ವರ್ಣ ಪುಷ್ಟಿಗಳಿಂದ ಶೋಭಿಸುತ್ತಾಗುವುದು ಇಂತಹ ಸುಂದರಶರೀರದಿಂದ ವಿಭೂಷಿತನಾದ ಮನುಷ್ಯನು ಆನಂದಪಡುವನೆಂಬುದರಲ್ಲಿ ಸಂದೇಹವೇ ಇಲ್ಲ. ಮತ್ತು ಕಾಲ, ದೇಶ ದೋಷಾದಿಗಳ ವಿವೇಚನೆಯಿಂದ ಸೇವಿಸಲ್ಪಟ್ಟ ಮಜ್ಜಿಗೆಯು ವಾತಶ್ಲೇಷ್ಮಜನ್ಯಗಳಾದ ಅನಂತ ರೋಗಗಳನ್ನು ನಿವಾರಿಸುತ್ತದೆ

ಭಾವಮಿಶ್ರ ಪಂಡಿತನು—

ನ ತಕ್ರಸೇವೀ ವ್ಯಥತೇ ಕದಾಚಿನ್ನ ತಕ್ರದಗ್ಧಾಃ ಪ್ರಭವಂತಿ ರೋಗಾಃ |
ಯಥಾ ಸುರಾಣಾಮಮೃತಂ ಸುಖಾಯ ತಥಾ ನರಾಣಾಂ ಭುವಿ ತಕ್ರಮಾಹುಃ ||

ಭಾ ಪ್ರ ಪೂ ೧

ಈ ನಿಯಮಗಳಿಗನುಸರಿಸಿ ವಿಧಿಯನ್ನನುಸರಿಸಿ ಮಜ್ಜಿಗೆಯನ್ನು ಸೇವಿಸುವ ಮನುಷ್ಯನಿಗೆ ಪ್ರಾಯಶಃ ಯಾವ ರೋಗಗಳ ಬಾಧೆಯೂ ತಟ್ಟುವ ಪ್ರಸಂಗವು ಒದಗಲಾರದು. ಮತ್ತು ತಕ್ರಸೇವನೆಯಿಂದ ನಷ್ಟವಾದ ರೋಗಗಳಂತೂ ಪುನಃ ಶರೀರದಲ್ಲಿ ಉದಯಿಸುವ ಸಂಭವವೂ ಇರುವುದಿಲ್ಲ. ದೇವತೆಗಳ ಸಂತೋಷಕ್ಕಾಗಿ ಸ್ವರ್ಗದಲ್ಲಿ ಅಮೃತವು ವಿರಾಜಿಸಿರುವಂತೆ ಮಾನವರ ಸಂತೋಷಕ್ಕಾಗಿ ಮರ್ತ್ಯಲೋಕದಲ್ಲಿ ತಕ್ರವೆಂಬ ಅಮೃತವು ವಿರಾಜಿಸುತ್ತಿದೆಯೆಂದು ವರ್ಣಿಸುತ್ತಾನೆ. ಇದರಂತೆಯೇ ಸಕಲ ಗ್ರಂಥಕಾರರೂ ವಿಶೇಷರೀತಿಯಿಂದ ತಕ್ರದ ಪ್ರಶಂಸೆಯನ್ನು ಮಾಡಿರುವರು. ಈ ಪ್ರಕರಣದಲ್ಲಿ ಆಕಳಿನ ಮಜ್ಜಿಗೆಯನ್ನೇ ನಿರ್ದೇಶಿಸಲಾಗುತ್ತದೆ

ತಕ್ರಪ್ರಯೋಗ—ಮೂಲವ್ಯಾಧಿಯಿಂದ ಪೀಡಿತರಾದವರು ಚಿತ್ರಮೂಲದ ಬೇರನ್ನು ತಂದು ನೀರಿನಲ್ಲರೆದು ಅದನ್ನು [illegible] ಹೊರಭಾಗಕ್ಕೆ ಲೇಪಿಸಿ ನೆರಳಿನಲ್ಲಿ ಒಣಗಿಸಿದನಂತರ ಆ ಗಡಿಗೆಯಲ್ಲಿ ಆಕಳ ಹಾಲಿನ ಮೊಸರನ್ನು ಮಾಡಿ ಆ ಮೊಸರನ್ನು ಕಡೆದು [illegible] ಆ ಮಜ್ಜಿಗೆಯನ್ನು ಕುಡಿಯುವುದಾದರೆ ಕೆಲವು ದಿನಗಳಲ್ಲಿ ಮೂಲವ್ಯಾಧಿಯು ನಿರ್ಮೂಲವಾಗುವುದೆಂದು ವಾಗ್ಭಟಾಚಾರ್ಯನ ಸಮ್ಮತಿಯಾಗಿರುತ್ತದೆ

ಮೂಲವ್ಯಾಧಿಯ ಮೊಳೆಯು ವಿಶೇಷವಾಗಿ ಊದಿಕೊಂಡು ಅನೇಕ ವಿಧ ಚಿಕಿತ್ಸೆಗಳಿಂದಲೂ ರಕ್ತಧಾರೆಯು ನಿಲ್ಲದಿರುವುದರಿಂದ ಅಶಕ್ತ [illegible] ರಾದವರು ಈ ಕೆಳಗೆ ಬರೆದಿರುವ ಉಪಾಯದಿಂದ ಸಂತುಷ್ಟರಾಗಬಹುದು ೫|ತೊಲೆ (೫೦ ತೊಲೆಗಳ ಸೇರು) ಆಕಳಿನ ಮಜ್ಜಿಗೆಯಲ್ಲಿ ಅರ್ಧತೊಲೆ ಅಫೀಮನ್ನು ಅರೆದು ಕೂಡಿಸಬೇಕು. ಅನಂತರ ಒಂದು ಬಟ್ಟೆಯನ್ನು ಒಲೆಯ [illegible] ಕೇಂದ್ರಗಳಂತೆ ಸರಿಯಾಗಿ ಕಾಯಿಸಿ ಆ ಕಾಸಿದ ಬಟ್ಟೆಯ ಮೇಲೆ ಎಡದ [illegible] ಮಜ್ಜಿಗೆಯನ್ನು [illegible] ಅದರಲ್ಲಿಯೇ ಒಂದು ಶುಭ್ರವಾಗಿ [illegible] ಆ ಬಟ್ಟೆಯನ್ನು ಸುತ್ತಿ [illegible] ಮಡಿಸಿ ಗುದದ್ವಾರಕ್ಕೆ ಹಿಡಿಯಬೇಕು [illegible] ಸುತ್ತಿರುವ ಬಟ್ಟೆಯನ್ನು ಗುದದ [illegible] ಆ ಹಬೆಯು ಗುದಾಂಕುರಗಳನ್ನು ವ್ಯಾಪಿಸಿ [illegible] ರಕ್ತಸ್ರಾವವನ್ನು ನಿಲ್ಲಿಸುತ್ತದೆ

[illegible] ಹಚ್ಚಿ [illegible] ಕೇವಲ ಮಜ್ಜಿಗೆಯನ್ನು ಕುಡಿಯುವುದರಿಂದ ತೃಪ್ತಿಯಾಗುತ್ತದೆ

[illegible] ಮಿತಿಮೀರಿದ ಉರಿಯುಂಟಾದಾಗ ಆಕಳಿನ ಮಜ್ಜಿಗೆಯಲ್ಲಿ ಬಟ್ಟೆಯನ್ನು ತೋಯಿಸಿ ಹೊದಿಸುವುದರಿಂದ ಉರಿಯು ಶಾಂತವಾಗುತ್ತದೆ. ಈ ಗುಣಗಳೆಲ್ಲವೂ ಆಕಳಿನ ಮಜ್ಜಿಗೆಯಲ್ಲಿಯೇ ಇರುವವೆಂದರಿಯಬೇಕು. ಎಮ್ಮೆಯ ಮಜ್ಜಿಗೆಯು ಅದರ ಮೊಸರಿನ ಗುಣದಂತೆಯೇ ಇದ್ದು ಅನಾರೋಗ್ಯಕರವಾಗಿರುತ್ತದೆ

ಬೆಣ್ಣೆ—ಆಗಲೇ ತೆಗೆದಿರುವ ಬೆಣ್ಣೆಯು ಸಿಹಿ ಒಗರು ಸ್ವಲ್ಪ ಹುಳಿರಸಗಳಿಂದ ಕೂಡಿ ಶೀತಲವೂ ಬುದ್ಧಿವರ್ಧಕವೂ ಅಗ್ನಿದೀಪಕವೂ ಹೃದಯಕ್ಕೆ ಹಿತಕರವೂ ವಾತಪಿತ್ತನಾಶಕವೂ ಬಲಕರವೂ ವಿಪಾಕ (ಮಲಿನತೆಗೆ ಬಾಯಾರಿಕೆ ಎದೆಯೊಳಗೆ ಉರಿ ಇವುಗಳನ್ನುಂಟುಮಾಡಿ ಕಾಮಲಾದಿಂದ ಪರಿಪಾಕವನ್ನು ಹೊಂದುವ ವಸ್ತುವು) ಯಾಗದಿರುವುದೂ ಕ್ಷಯರೋಗವನ್ನು ವ್ರಣ ಶರೀರದ ಒಣಗುವಿಕೆ ಮೂಲವ್ಯಾಧಿ ಅರ್ದಿತ (ವಾಯುವಿಕಾರದಿಂದ ಬಾಯಿ ಕುತ್ತಿಗೆ ಮುಂತಾದ ಎಡದ ಮೇಲ್ಭಾಗದ ಅವಯವಗಳಲ್ಲಿ ಉಂಟಾಗುವ ವಾತರೋಗ) ಇವುಗಳನ್ನು ಶಾಂತಗೊಳಿಸುವುದೂ ಹಗುರವಾದುದೂ ಆಗಿರುತ್ತದೆ. ಹೊರಗೆ ತೆಗೆದು ಬಹಳ ಹೊತ್ತು ಸಮರಿಗಿಟ್ಟದ್ದ ಬೆಣ್ಣೆಯು ಗುರುವಾಗಿಯೂ ಶ್ಲೇಷ್ಮ ಮತ್ತು ಮೇದಸ್ಸನ್ನು ವರ್ಧಿಸುವುದಾಗಿಯೂ ಬಲಕರವಾಗಿಯೂ ಶರೀರವನ್ನು ಪುಷ್ಟಿಗೊಳಿಸುವುದಾಗಿಯೂ ಇರುವುದಲ್ಲದೆ ಬಾಲಕರಿಗೆ ವಿಶೇಷಹಿತಕರವಾಗಿರುತ್ತದೆ

ಹಸಿಹಾಲಿನಿಂದಲೇ ತೆಗೆದ ಬೆಣ್ಣೆಯು ಮೊಸರಿನಿಂದ ಹುಟ್ಟುವ ಬೆಣ್ಣೆಗಿಂತಲೂ ವಿಶೇಷ ಸ್ನೇಹ (ಜಿಡ್ಡು) ವುಳ್ಳದ್ದೂ ಅತಿಮಧುರವೂ ಅತಿಶೀತಲವೂ ಅವಯವಗಳಲ್ಲಿ ಕೋಮಲತೆಯನ್ನುಂಟುಮಾಡುವುದೂ ಕಣ್ಣುಗಳಿಗೆ ವಿಶೇಷ ಹಿತಕರವೂ ಶರೀರದ ಬಣ್ಣವನ್ನುತ್ತಮಗೊಳಿಸುವುದೂ ರಕ್ತಪಿತ್ತರೋಗನಾಶಕವೂ ಆಗಿರುತ್ತದೆ. ಈ ಮೇಲಿನ ಗುಣಗಳೆಲ್ಲವೂ ಆಕಳ ಬೆಣ್ಣೆಯ ಸಂಬಂಧವಾಗಿಯೇ ಇರುತ್ತವೆಂದರಿಯಬೇಕು

ಎಮ್ಮೆಯ ಬೆಣ್ಣೆಯು ಗುರುವಾಗಿಯೂ ವಾತಕಫಗಳನ್ನು ಹೆಚ್ಚಿಸುವುದಾಗಿಯೂ ಮತ್ತು ದಾಹ ಪಿತ್ತ ಆಯಾಸ ಇವುಗಳನ್ನು ಶಾಂತಗೊಳಿಸುವುದಾಗಿಯೂ ಮೇದಸ್ಸು ಮತ್ತು ವೀರ್ಯವನ್ನು ವೃದ್ಧಿಗೊಳಿಸುವುದಾಗಿಯೂ ಇರುತ್ತದೆ

ತುಪ್ಪ—ಸಕಲವಿಧ ಸ್ನೇಹದ್ರವ್ಯಗಳ ಮಧ್ಯದಲ್ಲಿ ನಾಯಕಮಣಿಯಂತಿರುವ ತುಪ್ಪವು ಮಧುರರಸವುಳ್ಳ ಸ್ನಿಗ್ಧಗಳೆಂಬ ಮಹೋನ್ನತಗುಣಗಳಿಂದೊಡಗೂಡಿ ಸ್ಮೃತಿ ಬುದ್ಧಿ ಕಾಂತಿ ವೀರ ಓಜಸ್ಸು ಬಲ ಆಯುಷ್ಯ ಇವುಗಳನ್ನು ವರ್ಧನಗೊಳಿಸಿ ವಾತ ಪಿತ್ತ ಶೂಲ ವಿಷವಿಕಾರ ಉನ್ಮಾದ ಕ್ಷಯ ಬಹುವಿಧಗಳವರೆಗೆ ಸಂತಾಪಗೊಳಿಸುತ್ತಿರುವ ಜ್ವರ ಭೂತಬಾಧೆ ಇವುಗಳನ್ನು ನಿವಾರಿಸುವುದೂ ವಯಸ್ಸನ್ನು ಸ್ಥಿರಗೊಳಿಸುವುದೂ ಕಣ್ಣುಗಳ ರೋಗವನ್ನು ಶಾಂತಗೊಳಿಸುವುದೂ ಶ್ಲೇಷ್ಮ ಮತ್ತು ಮೇದಸ್ಸನ್ನು ಹೆಚ್ಚಿಸುವುದೂ ಶರೀರದಲ್ಲಿ ಮೃದುತ್ವವಾಗುವುದೂ ಪರಮಹಿತವೂ ಆಗಿರುತ್ತದೆ. ಈ ಕಾರಣದಿಂದಲೇ ವೈದ್ಯಶಾಸ್ತ್ರವು

ಸರ್ವಸ್ನೇಹೋತ್ತಮಂ ಶೀತಂ ಮಧುರಂ ರಸಪಾಕಯೋಃ
ಸಹಸ್ರವೀರ್ಯಂ ವಿಧಿಭಿರ್ಘೃತಂ ಕರ್ಮ ಸಹಸ್ರಕೃತ್ ||

ಚ ಸೂ ಅ೨೭

ಎಂದು ಘೃತವನ್ನು [illegible] ಪ್ರಶಂಸಿಸುತ್ತಿರುವುದನ್ನಾಗಿ ಹೊಗಳುತ್ತದೆ. ಇದು [illegible] ರೋಗಗಳನ್ನು ನಿವಾರಿಸುವ ಅನಂತವಿಧ ವಸ್ತುಗಳೊಡನೆ [illegible] ಸಂಸ್ಕಾರದಿಂದ ಸಾವಿರಾರು ರೋಗಗಳನ್ನು ನಿರ್ಮೂಲಗೊಳಿಸುವ ಅದ್ಭುತಶಕ್ತಿಯಿಂದ ಕೂಡಿರುವುದರಿಂದಲೇ ಇದಕ್ಕೆ "ಸಹಸ್ರವೀರ್ಯ"ವೆಂಬ ನಾಮಧೇಯವು ಸಾರ್ಥಕವಾಗಿರುತ್ತದೆ. ಆದರೆ ಈ ಗುಣಗಳೆಲ್ಲವೂ ಆಕಳಿನ ಪರಿಶುದ್ಧವಾದ ತುಪ್ಪದಲ್ಲಿಯೇ ಇರುತ್ತವಲ್ಲದೆ ಬಜಾರದಲ್ಲಿ ಸಿಗುವ ನಾನಾವಿಧ ದೂಷಿತವಸ್ತುಗಳಿಂದ ಕಲುಷಿತವಾಗಿರುವ ತುಪ್ಪದಲ್ಲಿರುವುದಿಲ್ಲವೆಂಬುವದನ್ನು ವಾಚಕರು ನೆನಪಿನಲ್ಲಿಟ್ಟಿರಬೇಕು. ಪ್ರಾಚೀನಕಾಲದ ನಮ್ಮ ಭಾರತೀಯರು ಸ್ಮೃತಿಬುದ್ಧ್ಯಾದಿ ಸದ್ಗುಣಭಂಡಾರರಾಗಿರುವ ತುಪ್ಪದ ಪರಿಶುದ್ಧತೆಯಲ್ಲಿ ವಿಶೇಷ ಲಕ್ಷ್ಯವುಳ್ಳದ್ದೂ ಕಾರಣ ಗೋರಕ್ಷಣೆಯನ್ನು ತಮ್ಮ ಜೀವನದ ಪ್ರಧಾನಕರ್ಮವನ್ನಾಗಿ ಎಣಿಸಿ ತಮ್ಮ ತಮ್ಮ ಗೃಹಗಳಲ್ಲಿ ಅತ್ಯಂತ ಶ್ರದ್ಧೆಯಿಂದ ಗೋಸೇವೆಯನ್ನು ಮಾಡುತ್ತಿದ್ದರು. ಆ ಗೋಸೇವೆಯ ಪ್ರಸಾದರೂಪಗಳಾದ ಮತ್ತು ಪರಿಶುದ್ಧಗಳಾದ ಹಾಲು ತುಪ್ಪಗಳ ಸೇವನೆಯಿಂದ ವಿಲಕ್ಷಣಸ್ಮೃತಿ ಬುದ್ಧಿ, ಬಲ ವರ್ಣ, ತೇಜಸ್ಸು ದೀರ್ಘಾಯುಗಳಿಂದೊಡಗೂಡಿ ಅನನ್ಯಸಾಧಾರಣ ಜ್ಞಾನಭಂಡಾರದಿಂದಲಂಕೃತರಾಗಿ ಭೂಮಂಡಲಕ್ಕೇ ಸನ್ಮಾರ್ಗದರ್ಶಕರಾಗಿದ್ದರು. ಕಾಲಕ್ರಮದಿಂದ ಭರತಖಂಡದಲ್ಲಿ ಗೋಸೇವಾಪದ್ಧತಿಯು ಕ್ಷೀಣವಾಗುತ್ತಿರುವ ಕಾರಣವೇ ಈಗಿನ ನಮ್ಮ ಭಾರತೀಯರು ಪರಿಶುದ್ಧಗಳಾದ ಹಾಲುತುಪ್ಪಗಳ ಅಭಾವದಿಂದ ಕ್ಷೀಣಬಲರೂ ನಾನಾರೋಗಗಳೂ ನಿಸ್ತೇಜಸ್ಕರೂ ಆಗುತ್ತಿರುವರು. ಅದರಲ್ಲಿಯೂ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸಿಸುವ ಜನಗಳು ಪರಿಶುದ್ಧಗಳಾದ ಹಾಲು ತುಪ್ಪಗಳನ್ನು ಸ್ವಪ್ನದಲ್ಲಿಯೂ ಕಾಣದಿರುವವರಾದುದರಿಂದ ಅತ್ಯಂತ ದುರ್ಬಲರೂ ನಿಸ್ತೇಜಸ್ಕರೂ ಆಗಿ ಪುನಃ ಪುನಃ ಯಾವುದಾದರೊಂದು ರೋಗದ ಬಲೆಯಲ್ಲಿ ಬೀಳುತ್ತಲೇ ಇರುವರೆಂಬುದು ಪ್ರತ್ಯಕ್ಷಸಿದ್ಧವಾಗಿರುವುದಾಗಿದೆ. ಬಜಾರದ ತುಪ್ಪವು ಸಾಂಕ್ರಾಮಿಕರೋಗಗಳ ಜನ್ಮಭೂಮಿಯೆಂದು ಅರಿತಿದ್ದರೂ ಗತ್ಯಂತರವಿಲ್ಲದೆ ಅದನ್ನೇ ಉಪಯೋಗಿಸುವ ಪ್ರಸಂಗವು ಬಂದೊದಗಿರುವುದೆಂಬುದನ್ನು ಅತ್ಯಂತ ದುಃಖದಿಂದ ಹೇಳಬೇಕಾಗಿರುತ್ತದೆ

ಆಕಳಿನ ತುಪ್ಪವು ಎಮ್ಮೆ ಆಡು ಮುಂತಾದವುಗಳ ತುಪ್ಪಗಳಿಗಿಂತಲೂ ವಿಶಿಷ್ಟಗಳಾದ ಗುಣಗಳಿಂದೊಡಗೂಡಿರುವುದರಿಂದಲೇ ಸುಶ್ರುತಮಹರ್ಷಿಯು "ಗವ್ಯಂ ಸರ್ಪಿರ್ಗುಣೋತ್ತರಂ" ಎಂದು ಆಕಳಿನ ತುಪ್ಪವನ್ನು ಲೋಕೋತ್ತರಗುಣಯುಕ್ತವಾದುದನ್ನಾಗಿ ವರ್ಣಿಸಿರುತ್ತಾನೆ. ಎಮ್ಮೆಯ ತುಪ್ಪವು ಸಿಹಿ ಶೀತಲ ಮತ್ತು ರಕ್ತವಿಕಾರ ಪಿತ್ತ ವಾತ ಇವುಗಳನ್ನು ನಾಶಮಾಡುವುದೂ ಕಫವರ್ಧಕವೂ ಆಗಿರುತ್ತದೆ. ಬಜಾರದ ತುಪ್ಪವನ್ನು ತಂದು ಈ ಕೆಳಗೆ ಬರೆದಿರುವಂತೆ ಶುದ್ಧಗೊಳಿಸಿಕೊಂಡು ಸೇವಿಸುವುದಾದರೆ ಸಾಂಕ್ರಾಮಿಕರೋಗಗಳ ಭಯವು ಸಂಭವಿಸಲಾರದು

ಬಜಾರದ ತುಪ್ಪವನ್ನು ಒಂದು ಪಾತ್ರೆಯಲ್ಲಿ ಅಥವಾ ಬಾಣಲೆಯಲ್ಲಿ ಹಾಕಿ ಒಲೆಯಮೇಲಿಟ್ಟು ಸ್ವಲ್ಪ ಕರಗಿದ ನಂತರ ಒಂದು ಸೇರಿಗೆ ಒಂದು ಪಾವಿನಷ್ಟು ಹಸಿಯ ಹಾಲನ್ನೂ ೭.೮ ಲವಂಗಗಳನ್ನೂ ಒಂದು ಚಮಚದಷ್ಟು ಉಪ್ಪನ್ನೂ, ೩ ೪ ನಿಂಬೆಯ ಗಿಡದ ಎಲೆಗಳನ್ನೂ ಹಾಕಿ ಚೆನ್ನಾಗಿ ಕಾಯಿಸಿ ಶೋಧಿಸಿಟ್ಟುಕೊಳ್ಳಬೇಕು. ಈ ವಿಧಿಯಿಂದ ತುಪ್ಪದಲ್ಲಿರುವ ದೂಷಿತಾಂಶವು ನಷ್ಟವಾಗುವುದಲ್ಲದೆ ಸುಗಂಧವು ಕಲಬೆರಿಕೆ ಉಳ್ಳವರ ಮನಸ್ಸಿಗೆ ಇಂಪನ್ನೀಯುದಿರಲಾರದು. ಯಾರು ಆಕಳಿನ ಪರಿಶುದ್ಧವಾದ ತುಪ್ಪದಿಂದ ವಂಚಿತರಾಗಿರುವರೋ ಅವರು ಈ ವಿಧಿಯಿಂದ ಇದ್ದುದರಲ್ಲಿಯೇ ಸ್ವಲ್ಪಮಟ್ಟಿಗಾದರೂ ತುಪ್ಪದ ಗುಣವನ್ನು ಹೊಂದಿ ಸಂತುಷ್ಟರಾಗಬಹುದು

ತುಪ್ಪದ ವಿಶೇಷ ಉಪಯೋಗ—೧ ಜ್ವರದಿಂದಾಗಲಿ ಮತ್ತಾವ ಕಾರಣದಿಂದಾಗಲಿ ಶರೀರದಲ್ಲಿ ಉರಿಯುಂಟಾದಾಗ ನೂರು ಸಲ ನೀರಿನಿಂದ ತೊಳೆದ ಆಕಳಿನ ತುಪ್ಪವನ್ನು ಹಚ್ಚಿ ತಿಕ್ಕುವುದರಿಂದ ಉರಿಯು ಶಾಂತವಾಗುವುದು

೨ ಅಂಗೈಯ ಮತ್ತು ಅಂಗಾಲುಗಳು ಉರಿಯುತ್ತಿದ್ದರೆ ಆಕಳಿನ ತುಪ್ಪವನ್ನು ಹಚ್ಚಿ ತಿಕ್ಕಬೇಕು

೩ ಮೂಗಿನಿಂದ ರಕ್ತವು ಬೀಳುತ್ತಿರುವಾಗ ಹೊಸದಾಗಿ ಕಾಯಿಸಿದ ಆಕಳಿನ ತುಪ್ಪವನ್ನು ಮೂಗಿನಲ್ಲಿ ಬಿಡಬೇಕು

೪ ಬಿಕ್ಕಳಿಕೆಯು ವಿಶೇಷವಾಗಿ ಬರುತ್ತಿದ್ದರೆ ಹಳೆ ಅಕ್ಕಿಯ ಬಿಸಿಯ ಅನ್ನದಲ್ಲಿ ಆಕಳಿನ ತುಪ್ಪವನ್ನು ಹಾಕಿ ಬಿಸಿಯಾಗಿರುವಾಗಲೇ ಭುಂಜಿಸಬೇಕು. ಅಥವಾ ಬಿಸಿಯಾಗಿರುವ ಆಕಳ ತುಪ್ಪವನ್ನಾದರೂ ಕುಡಿಯಬಹುದು. ಅಥವಾ ಆಕಳಿನ ತುಪ್ಪದಲ್ಲಿ ಸೈಂಧವಲವಣದ ಚೂರ್ಣವನ್ನು ಹಾಕಿ ಮೂಗಿನಲ್ಲಿ ನಸ್ಯದಂತೆ ಏರಿಸಬೇಕು. ಈ ಮೂರು ಉಪಾಯಗಳಲ್ಲಿ ಯಾವದಾದರೊಂದರಿಂದ ಬಿಕ್ಕಳಿಕೆಯು ಅವಶ್ಯವಾಗಿ ನಿಲ್ಲುತ್ತದೆ. ಈ ಬಿಕ್ಕಳಿಕೆಯ ರೋಗವು ಅತಿ ಭಯಂಕರವಾದುದು. ಹೆಚ್ಚಾದರೆ ಕ್ಷಣಮಾತ್ರದಲ್ಲಿಯೇ ಮನುಷ್ಯನ ಇಹಲೋಕಯಾತ್ರೆಯನ್ನು ಕೊನೆಗಾಣಿಸುತ್ತದೆ

೫ ದಕ್ತುರಿಯ ಅಥವಾ ರಸಕರ್ಪೂರದ ವಿಷವಾಗಲಿ ಅಥವಾ ಮತ್ತಾವುದೇ ಸ್ಥಾವರ ವಿಷವಾಗಲಿ ಹೊಟ್ಟೆಯಲ್ಲಿ ಸೇರಿದಾಗ ತುಪ್ಪವನ್ನು ಯಥೇಷ್ಟವಾಗಿ ಕುಡಿಸುವುದರಿಂದ ವಿಷವೇಗವು ನಿವೃತ್ತಿಯಾಗುತ್ತದೆ

೬ ವಿಶೇಷ ಮದ್ಯಪಾನದಿಂದ ವಿಕೃತಿಯುಂಟಾದಾಗ ೨ ತೊಲೆ ತುಪ್ಪದೊಡನೆ ೨ ತೊಲೆ ಸಕ್ಕರೆಯನ್ನು ಕೂಡಿಸಿ ಸೇವಿಸಬೇಕು

೭ ಮಕ್ಕಳ ಎದೆಯೊಳಗೆ ಶ್ಲೇಷ್ಮವು ಹೆಚ್ಚಾಗಿ ಬಾಧಿಸುತ್ತಿರುವಾಗ ಆಕಳಿನ ತುಪ್ಪವನ್ನು ಎದೆಗೆ ಹಚ್ಚಿ ತಿಕ್ಕಬೇಕು

೮ ರಕ್ತವು ಕೆಟ್ಟು ಶರೀರದಲ್ಲಿ ನಾನಾವಿಧ ಕುರುಗಳುಂಟಾದಾಗ ನೂರು ಸಲ ನೀರಿನಿಂದ ತೊಳೆದ ೫ ತೊಲೆ ತುಪ್ಪಕ್ಕೆ

ಕಾಲದ ಮೇಲಿಟ್ಟು ಅದಕ್ಕಾಗಿ ಮಾಡಿರುವ ಚಟಿಕದ ೨ ತೊಲಿ ರ್ಗಳನ್ನು ಕೂಡಿಸಿ ಚೆನ್ನಾಗಿ ಅರೆದು ಗಾಜಿನ ಶೀಶೆಯಲ್ಲಿಟ್ಟುಕೊಂಡು ದಿನಕ್ಕೆರಡು ಸಲದಂತೆ ಹಚ್ಚಬೇಕು. ನೂರು ಸಲ ತೊಳೆದ ತುಪ್ಪವು ವಿಷತುಲ್ಯವಾಗಿರುವುದರಿಂದ ಇದು ಹೊಟ್ಟೆಗೆ ಸೇವಿಸದಂತೆ ಎಚ್ಚರಿಕೆಯಾಗಿರಬೇಕಾದುದು ಅತ್ಯವಶ್ಯಕವಾಗಿರುತ್ತದೆ.

೯ ಗರ್ಭಿಣಿಸ್ತ್ರೀಯರಿಗೆ ಅಕಸ್ಮಾತ್ತಾಗಿ ರಕ್ತಸ್ರಾವವು ಸಂಭವಿಸಿದಾಗ ನೂರು ಸಲ ನೀರಿನಿಂದ ತೊಳೆದ ಆಕಳ ತುಪ್ಪವನ್ನು ಕಟಿಪ್ರದೇಶಕ್ಕೆಲ್ಲ ಹಚ್ಚಿ ತಿಕ್ಕಬೇಕು.

೧೦ ಶರೀರದಲ್ಲಿ ಯಾವ ಕಾರಣದಿಂದಾಗಲಿ ನವೆಯುಂಟಾಗಿದ್ದರೆ ಅಥವಾ ಕೆಂಪು ಬಣ್ಣದ ಬೊಕ್ಕೆಗಳಾಗಲಿ ಉಂಟಾಗಿದ್ದರೆ ನೂರು ಸಲ ನೀರಿನಿಂದ ತೊಳೆದ ಆಕಳ ತುಪ್ಪವನ್ನು ಹಚ್ಚಿ ಸ್ವಲ್ಪ ಹೊತ್ತಿನ ನಂತರ ಗೋಧಿಯ ಹಿಟ್ಟನ್ನು ಹಚ್ಚಿ ತಿಕ್ಕಿ ಸ್ವಲ್ಪ ಹೊತ್ತಿನ ಮೇಲೆ ಕಡ್ಲೇ ಹಿಟ್ಟು ಅಥವಾ ಉಗುರು ಬೆಚ್ಚಗಾಗುವ ನೀರಿನಿಂದ ಕಡಲೆಹಿಟ್ಟನ್ನು ಹಚ್ಚಿಕೊಂಡು ಸ್ನಾನಮಾಡಬೇಕು. ಈ ವಿಧಿಯಿಂದ ಒಂದು ವಾರದೊಳಗಾಗಿ ವ್ಯಾಧಿ ನವೆಯು ನಾಶವಾಗುತ್ತದೆ.

(ಸಶೇಷ)

ಕಾಶೀ ಶ್ರೀ ೧೦೮ ಜಗದ್ಗುರು ಪಂಚಾಕ್ಷರಶಿವಾಚಾರ್ಯಭಗವತ್ಪಾದರವರ ನಾಲ್ಕನೆಯ ವರ್ಧಂತ್ಯುತ್ಸವ.

ಈ ನಮ್ಮ ಶ್ರೀ ಜಗದ್ಗುರು ಭಗವತ್ಪಾದರವರು ಜ್ಞಾನಸಿಂಹಾಸನವನ್ನಾರೋಹಿಸಿ ಇದೇ ಭಾವಸಂವತ್ಸರದ ಮಾಘ ಶುದ್ಧ ೧೩ ಶುಕ್ರವಾರಕ್ಕೆ (೧೫-೨-೩೫) ಕ್ಕೆ ಮೂರು ಸಂವತ್ಸರಗಳು ಮುಗಿದು ನಾಲ್ಕನೆಯ ಸಂವತ್ಸರವು ಆರಂಭಿಸಿದುದರಿಂದ ಈ ಶುಭದಿನದಲ್ಲಿ ಶ್ರೀ ಜಗದ್ಗುರುಗಳವರ ವರ್ಧಂತ್ಯುತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಈ ಆನಂದಮಯವಾದ ಶುಭದಿವಸದ ಪ್ರಾತಃಕಾಲದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯಮಹಾಪೀಠಕ್ಕೆ ಗುರುಕುಲವಾಸಿಗಳಾದ ಶಾಸ್ತ್ರಿಗಳಿಂದ ಏಕಾದಶವಾರ ಮಹಾರುದ್ರಾಭಿಷೇಕವು ವಿಧ್ಯುಕ್ತಪ್ರಕಾರವಾಗಿ ಆಚರಿಸಲ್ಪಟ್ಟಿತು. ಅನಂತರ ಮಧ್ಯಾಹ್ನ ಸಮಯದಲ್ಲಿ ಸಂಸ್ಥಾನದ ಸಕಲ ಭಕ್ತಮಾಹೇಶ್ವರ ಜನಗಳು ಮತ್ತು ವಿದ್ಯಾರ್ಥಿಗಳು ಸಂಸ್ಥಾನದಲ್ಲಿ ಸಿದ್ಧಗೊಳಿಸಲ್ಪಟ್ಟಿದ್ದ ನಾನಾವಿಧ ಭಕ್ಷ್ಯಭೋಜ್ಯಾದ್ಯನಂತ ಪಕ್ವಾನ್ನಗಳಿಂದೊಡಗೂಡಿದ ದಿವ್ಯ ಶಿವ ಸುಭೋಜನದಿಂದ ಅತ್ಯಾನಂದವನ್ನು ಹೊಂದಿದರು.

ಸಾಯಂಕಾಲದ ೫ ಗಂಟೆಗೆ ವಿದ್ಯುದ್ದೀಪಗಳಿಂದಲಂಕೃತವಾಗಿದ್ದ ಚಿತ್ರಭವನ (ದರ್ಬಾರ್‌ಹಾಲ್)ದಲ್ಲಿ ಸಭೆಯು ನೆರೆಯಿತು. ೫ ಗಂಟೆಗೆ ಸರಿಯಾಗಿ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಸನ್ನಿಧಿಯ ಆಸ್ಥಾನಪಂಡಿತರಾದ ಶ್ರೀ ಫಾಲಾಕ್ಷಶಾಸ್ತ್ರಿಗಳೂ ಪಂಡಿತಮಂಡಲಿಯಿಂದಲೂ ಮೇಣ ಗೌರವಾರ್ಹರಿಂದಾಗಲಿ ಶಿಷ್ಟ ಪ್ರಕರದಿಂದಲೂ ಸ್ಥಳೀಯ ಮಹಾಜನಗಳಿಂದಲೂ ಕೂಡಿ ಅತಿ ರಮಣೀಯವಾದ ಸಭಾಮಂದಿರಕ್ಕೆ ಬಿಜಯಂಗೈಯಲು ಗುರುದರ್ಶನವನ್ನೇ ನಿರೀಕ್ಷಿಸುತ್ತಿದ್ದ ಸಭಿಕರ ಆನಂದಸೂಚಕವಾದ ಜಯಜಯಘೋಷವು ದಿಙ್ಮಂಡಲವನ್ನು ವ್ಯಾಪಿಸುತ್ತಿರುವ ಶುಭಮುಹೂರ್ತದಲ್ಲಿ ಶ್ರೀಗಳವರು ಪ್ರಸನ್ನಮುಖಮುದ್ರೆಯೊಡನೆ ರಜತಮಯವಾದ ದಿವ್ಯಸಿಂಹಾಸನವನ್ನಾರೋಹಿಸಿದರು. ಈ ಸಭೆಯು ನಾನಾದೇಶದ ಗಣ್ಯಗಣ್ಯರಿಗೆ ಸೇರಿದ ಸಲಗದ ಮಹಾ ವೀರಗೋತ್ರಾನುವರ್ತಿಗಳಾದ ಕಾಶೀನಾಥ ಶ್ರೀ||ಶ||ಬ್ರ|| ಗಂಗಾಧರಸ್ವಾಮಿಗಳು ವಿರಾಜಮಾನರಾಗಿದ್ದುದರಿಂದ ಸಭೆಯು ಶೋಭೆಯು ಇಮ್ಮಡಿಯಾಗಿದ್ದಿತು.

ಪ್ರಥಮದಲ್ಲಿ ಗುರುಕುಲದ ಪಂಡಿತವರ್ಗದ ಶ್ರುತಿಮಧುರವಾದ ಆಚಾರ್ಯ ಭಜನೆಯು ಗೀತವಾದ್ಯಗಳೊಂದಿಗೆ ನಡೆದು ವಿಸರ್ಜನವಾದನಂತರ ಸಭೆಯ ಕಾರ್ಯಕ್ರಮವು ಆರಂಭವಾಯಿತು. ಮೊದಲು ಬೆಂಗಳೂರು ಶ್ರೀ ಶಿವಕುಮಾರಸ್ವಾಮಿಗಳು ತಮ್ಮಿಂದ ರಚಿಸಲ್ಪಟ್ಟ ಸಂಸ್ಕೃತ ಪದ್ಯಗಳನ್ನು ಪಠಿಸಿದರು. ಅನಂತರ ಕಾವ್ಯತೀರ್ಥ ಸಾಹಿತ್ಯಾಚಾರ್ಯ ಬಿರುದಾಂಕಿತರಾದ ಮುಪ್ಪಿನಸ್ವಾಮಿ ಶ್ರೀ ವಾಗೀಶಶಿವಾಚಾರ್ಯರು ತಮ್ಮಿಂದ ರಚಿಸಲ್ಪಟ್ಟ ಕನ್ನಡ ಪದ್ಯಗಳನ್ನು ಪಠಿಸಿದರು. ಅನಂತರ ತಿಕ್ಕಮ ಸ್ವಾಮಿ ಶ್ರೀ ಗುರುದೇವಶಿವಾಚಾರ್ಯರು ತಮ್ಮಿಂದ ರಚಿಸಲ್ಪಟ್ಟ ಸಂಸ್ಕೃತ ಪದ್ಯಗಳನ್ನು ಪಠಿಸಿದರು. ಕವಿತಾಪ್ರವೀಣರಾದ ಮಿತ್ರ ಪಂಡಿತ ವೀರಭದ್ರಶಾಸ್ತ್ರಿಗಳು ಸಾರ್ವಜನಿಕ, ಧಾರ್ಮಿಕ ಮತ್ತು ಗುರುಕುಲದ ಅಭ್ಯುದಯವನ್ನು ಮುಗಿಸಿದರು. ಸದ್ದೇಶಕ್ಕೆ ತೋರಿದನಂತರ ಪಂಡಿತರು ನೂತನವಾಗಿ ನಾವ ಗುರುಸೇವೆ ಮುಂತಾದ ಕಾರ್ಯಗಳು ಇವೇ ಮೊದಲಾದ ವಿಷಯಗಳಿಂದೊಡಗೂಡಿದ 'ಪ್ರಬೋಧ' ವೆಂಬ ಸಕ್ಕರೆಯಂತಹ ಮಧುರವಾದ ವ್ಯಾಖ್ಯಾನವನ್ನು ೩೦ ನಿಮಿಷಗಳವರೆಗೆ ಹಿಂದೀ ಭಾಷೆಯಿಂದ ಮಾಡಿ ನೆರೆದಿದ್ದ ಸಭಿಕರನ್ನು ಆನಂದಸಾಗರದಲ್ಲಿ ಮುಳುಗಿಸಿದರು.

ಅನಂತರ ಶ್ರೀ ಜಗದ್ಗುರು ವಿಶ್ವಾರಾಧ್ಯಗುರುಕುಲದಲ್ಲಿ ಕಾಲದಿಂದ ವಾಸಿಸಿ ಗುರುಕುಲದ ನಿಯಮವನ್ನನುಸರಿಸುತ್ತ ವಿಚಾರದಿಂದಲೂ ವಿಶೇಷ ಪರಿಶ್ರಮದಿಂದಲೂ ನಾನಾ ಶಾಸ್ತ್ರಗಳನ್ನಧ್ಯಯನಮಾಡಿ ಉನ್ನತಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಈ ವರುಷದಲ್ಲಿ ಸ್ವದೇಶವನ್ನು ಕುರಿತು ತೆರಳತಕ್ಕವರಾಗಿರುವ ಕೆಲವು ಪಂಡಿತರ ಪರಿಶ್ರಮ, ಪಾಂಡಿತ್ಯ, ಸರ್ವತೋಮುಖವಾಗಿರುವ ಅವರ ಉನ್ನತಿ, ಇವುಗಳನ್ನವಲೋಕಿಸಿ ಅತ್ಯಾನಂದಭರಿತರಾದ ಶ್ರೀ ಜಗದ್ಗುರು ಭಗವತ್ಪಾದರವರು ಆ ಪಂಡಿತರಿಗೆ ಯೋಗ್ಯಗಳಾದ ಪ್ರಶಸ್ತಿಗಳನ್ನು ದಯಪಾಲಿಸಬೇಕೆಂಬ ತಮ್ಮ ಇಚ್ಛೆಯನ್ನು ಪ್ರಕಟಿಸಿದರು. ಅದರಂತೆ ಮುಪ್ಪಿನಸ್ವಾಮಿ ಶ್ರೀ ವಾಗೀಶಶಿವಾಚಾರ್ಯರು ಶ್ರೀ ಜಗದ್ಗುರುಗಳ ಆಜ್ಞಾನುಸಾರವಾಗಿ ಆ ಸ್ವದೇಶಗಾಮಿಗಳಾಗಿರುವ ಪಂಡಿತರ ಪಾಂಡಿತ್ಯಾದಿ ವಿಷಯಗಳನ್ನು ಸಭಿಕರಿಗೆ ಸಂಕ್ಷೇಪದಿಂದ ಪರಿಚಯಮಾಡಿಕೊಟ್ಟು ಶ್ರೀ ಭಗವತ್ಪಾದರ ಶ್ರೀಮುಖದ ಅಮೃತವಾಣಿಯಿಂದ ಪಠಿಸಿದ ಪ್ರಶಸ್ತಿಪತ್ರಗಳನ್ನೊಂದೊಂದು ಪ್ರಶಸ್ತಿಯನ್ನು ಪುಷ್ಪಫಲಗಳೊಡನೆ ಈ ಕೆಳಗೆ ಕಾಣಿಸುವಂತೆ ಅವರವರಿಗೆ ಒಪ್ಪಿಸಿದರು.

ವ್ಯಾಕರಣ ನ್ಯಾಯಶಾಸ್ತ್ರಗಳಲ್ಲಿ ಮಹೋಪಾಧ್ಯಾಯರೆನ್ನಿಸಿ ಕೊಂಡಿರುವ ವೇದಾಂತಶಾಸ್ತ್ರದಲ್ಲಿ ಮೂರ್ಧನ್ಯಪಂಡಿತರಾಗಿರುವ ವೇದಾಂತಾಚಾರ್ಯ ಶಾಸ್ತ್ರತೀರ್ಥ ಪದವಿಗಳಿಂದ ವಿಭೂಷಿತರಾಗಿರುವ ಇದೇ ಭಾವಸಂವತ್ಸರದ ಪಂಡಿತ ನೀಲಕಂಠಶಾಸ್ತ್ರಿಗಳಿಗೆ 'ವೇದಾಂತಶಿರೋಮಣಿ' ಎಂಬ ಪ್ರಶಸ್ತಿಯನ್ನೂ ಸಾಹಿತ್ಯ ಮತ್ತು ವೇದಾಂತಶಾಸ್ತ್ರದಲ್ಲಿ ಯಥೋಚಿತ ಪಾಂಡಿತ್ಯವನ್ನು ಸಂಪಾದಿಸಿರುವ ಕಳೆದ ಡಿಸೆಂಬರ್ ೩೧ರಲ್ಲಿ ಹುಬ್ಬಳ್ಳಿಯಲ್ಲಿ ನೆರವೇರಿದ ಅಖಿಲಕರ್ನಾಟಕಾಯುರ್ವೇದ ಪರಿಷತ್ತಿನವರಿಂದ ವಿಶೇಷ ಸನ್ಮಾನಿತರಾಗಿರುವ ಆಯುರ್ವೇದಾಚಾರ್ಯ ಪದವಿ ವಿಭೂಷಿತರಾದ ಬೆಂಗಳೂರು ಮುತ್ತಿನಕಂತೆ ಮಠದ ಶ್ರೀ ಶಿವಕುಮಾರಸ್ವಾಮಿಗಳಿಗೆ 'ವೈದ್ಯಭೂಷಣ' ವೆಂಬ ಪ್ರಶಸ್ತಿಯನ್ನೂ ವೇದತೀರ್ಥ ಕಾವ್ಯತೀರ್ಥ ಸ್ಮೃತಿತೀರ್ಥ ದರ್ಶನತೀರ್ಥ ಸಾಹಿತ್ಯವಿಶಾರದ, ಧರ್ಮಾಚಾರ್ಯ ಪದವಿಮಾಲಿಕೆಯಿಂದ ವಿಭೂಷಿತರಾದ ಮತ್ತು ಇತಿಹಾಸ ಪುರಾಣಗಳಲ್ಲಿ ವಿಶೇಷಯೋಗ್ಯತೆಯನ್ನು ಹೊಂದಿರುವ ಪಂಡಿತ ವೀರಭದ್ರಶಾಸ್ತ್ರಿಗಳು ಜಿನಿಕೆಮಠ ಇವರಿಗೆ 'ವಿದ್ಯಾನಿಧಿ' ಎಂಬ ಪ್ರಶಸ್ತಿಯನ್ನೂ ಸಾಹಿತ್ಯ ಪುರಾಣಗಳಲ್ಲಿ ಕುಶಲರಾಗಿರುವ ಕಾವ್ಯತೀರ್ಥ ತರ್ಕತೀರ್ಥ ಪದವಿಗಳಿಂದ ವಿಭೂಷಿತರೂ ಆದ ಗೊಬ್ಬೂರು ಬೃಹನ್ಮಠದ ಶ್ರೀ ವೃಷಭಲಿಂಗಶಿವಾಚಾರ್ಯರಿಗೆ 'ತರ್ಕರತ್ನ' ಎಂಬ ಪ್ರಶಸ್ತಿಯನ್ನೂ ಒಪ್ಪಿಸಿದರು.

ಪ್ರಶಸ್ತಿಸಮರ್ಪಣೆಯ ಕಾರ್ಯವು ಮುಗಿದನಂತರ ಪ್ರಾಜ್ಞರಾದ ಪಂಡಿತರೂ ವಿಚಕ್ಷಣರೂ ಆದ ಪಂಡಿತ ಫಾಲಾಕ್ಷಶಾಸ್ತ್ರಿಗಳವರು ತಮ್ಮ ವಾರ್ಧಕ್ಯದಿಂದುಂಟಾಗಿರುವ ಅಶಕ್ತತೆಯನ್ನು ಲೆಕ್ಕಿಸದೆ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಅಪ್ಪಣೆಯ ಮೇರೆಗೆ ಸ್ನಾತಕರ (ಗುರುಕುಲದ ವಿದ್ಯಾಧ್ಯಯನವನ್ನು ಮುಗಿಸಿ ಪದವಿ (ಡಿಗ್ರಿ) ಗಳನ್ನು ಪಡೆದಿರುವವರು)ರಿಗೆ ಅತ್ಯಂತ ಗಂಭೀರವಾಣಿಯಿಂದ ಸ್ವದೇಶಕ್ಕೆ ತೆರಳುವವರಾಗಿರುವ ಪದವೀಧರರು ತಮ್ಮ ಮುಂದಿನ ಉನ್ನತಿಮಾರ್ಗಗಳಲ್ಲಿ ವಿಶೇಷ ಜಾಗ್ರತರಾಗಿರುವಂತೆ ಎಚ್ಚರಗೊಳಿಸಿದರು. ಕಡೆಗೆ ತಮಗುಂಟಾಗಿದ್ದ ಅಸಾಧ್ಯವಾದ ರೋಗವು ಯಾವ ಔಷಧೋಪಚಾರಗಳಿಂದಲೂ ಶಾಂತವಾಗದೆ ಕೇವಲ ಶ್ರೀ ಜಗದಾಚಾರ್ಯರ ಮಹೋನ್ನತಾಶೀರ್ವಾದ ಪ್ರಭಾವದಿಂದಲೇ ನಿವಾರಣವಾಗಿರುವ ವಿಷಯವನ್ನು ತಮ್ಮ ಅನೇಕವಿಧ ಅನುಭವಗಳೊಡನೆ ಚರ್ಚಿಸಿ ದಯಾಮಯರೂ ಶಿಷ್ಯಾನುಗ್ರಹಪ್ರಿಯರೂ ಜಗದ್ವಂದ್ಯರೂ ಅಘಟನಘಟನಾಪಟುಗಳೂ ಆದ ಆ ಜಗದಾಚಾರ್ಯ ಭಗವತ್ಪಾದರ ಸಕಲೇಷ್ಟಾರ್ಥದಾಯಕ ದಿವ್ಯಚರಣಸರೋರುಹಗಳಲ್ಲಿ ಸಕಲಮಾನವರು ಅನನ್ಯಭಕ್ತಿಯನ್ನಿಟ್ಟು ಅಮೂಲ್ಯ ಮಾನವಜನ್ಮವನ್ನು ಸಾರ್ಥಕಗೊಳಿಸಿಕೊಳ್ಳುವುದರಲ್ಲಿ ಪ್ರಯತ್ನಶೀಲರಾಗಬೇಕೆಂದು ಹೇಳಿ ತಮ್ಮ ಆವೇಶಪೂರ್ಣ ಭಾಷಣವನ್ನು ಸಮಾಪ್ತಿಗೊಳಿಸಿದರು.

ಅನಂತರ ಮುಪ್ಪಿನಸ್ವಾಮಿ ಶ್ರೀ ವಾಗೀಶಶಿವಾಚಾರ್ಯರು ಶ್ರೀ ಜಗದ್ಗುರು ಭಗವತ್ಪಾದರವರ ವರ್ಧಂತ್ಯುತ್ಸವ ಸಮಾರಂಭದಲ್ಲಿ ಭಾಗಿಗಳಾಗಿ ಶ್ರೀ ಜಗದ್ಗುರು ದರ್ಶನಾಶೀರ್ವಾದಗಳಿಗೆ ಪಾತ್ರರಾದ ಸಮಸ್ತ ಸಭಿಕರಿಗೆ ಭಕ್ತಮಂಡಳದ ಪರವಾಗಿ ಅನಂತ ಹಾರ್ದಿಕಧನ್ಯವಾದಗಳನ್ನು ಒಪ್ಪಿಸಿ ಜಗದಾಚಾರ್ಯ ಜಯಘೋಷದೊಡನೆ ಸಭೆಯ ಸಮಾಪ್ತಿಯನ್ನು ಸೂಚಿಸಿದರು.

ಅನಂತರ ಶ್ರೀ ಜಗದ್ಗುರು ಭಗವತ್ಪಾದರವರ ಭವ್ಯಚರಣಸರೋಜಗಳಿಗೆ ಬಗೆಬಗೆ ಪುಷ್ಪಾಂಜಲಿಗಳನ್ನರ್ಪಿಸಿ ನೆರೆದಿದ್ದ ಸಭಿಕರಿಗೆ ಶ್ರೀ ಜಗದ್ಗುರು ಮಹಾಶೀರ್ವಾದರೂಪವಾದ ಪ್ರಸಾದವನ್ನು ವಿನಿಯೋಗಿಸಿ ಅಂತ್ಯದಲ್ಲಿ ಜಗದಾಚಾರ್ಯರ ತ್ರಿವಾರ ಜಯಘೋಷದೊಡನೆ ಸಭೆಯ ಕಾರ್ಯಕ್ರಮವು ವಿಸರ್ಜಿಸಲ್ಪಟ್ಟಿತು.

ಸೆಕ್ರೆಟರಿ
ಕಾಶೀ ವೀರಶೈವ ವಿದ್ವತ್ಸಂಘ

ಸೊಲ್ಲಾಪುರ.

ತಾ|| ೧೯-೨-೧೯೩೫ ನೇ ಆದಿತವಾರ ದಿವಸ ಇಲ್ಲಿಯ ನೂತನ ಸಂಗೀತ ಥಿಯೇಟರದಲ್ಲಿ ಕರ್ನಾಟಕ ಭಾಗ್ಯೋದಯ ನಾಟಕಮಂಡಲಿಯವರ ಇಷ್ಟಲಿಂಗಪೂಜೆಯ ಹೇಮರೆಡ್ಡಿ ಮಲ್ಲಮ್ಮನ ನಾಟಕದ ಪ್ರಯೋಗವು ಅಸಂಖ್ಯಜನ ಪ್ರೇಕ್ಷಕ ಸಮುದಾಯದ ಕಣ್ಣಮುಂದೆ ಬಹು ರಮ್ಯವಾಗಿ ಅಭಿನಯಿಸಲ್ಪಟ್ಟಿತು. ಇವರು ಪ್ರತಿನಿತ್ಯ ನಾಟಕವನ್ನಭಿನಯಿಸುತ್ತಿದ್ದರೂ ಜನಪ್ರಿಯತೆಯು ಹೆಚ್ಚುತ್ತಲೇ ಇದ್ದು ಸುತ್ತಲಿನ ಹಳ್ಳಿಗಳಿಂದ ಜನರು ಮೋಟಾರುಗಳಿಂದ ಬರುತ್ತಿರುವರು. ಚಿತ್ರಪ್ರಧಾನವಾದ ಮಲ್ಲಮ್ಮನ ಚರಿತ್ರದಿಂದ ಮುಗ್ಧರಾಗಿ ಎಲ್ಲ ಜಾತಿಯ ಸ್ತ್ರೀಯರು ಮುತ್ತಿಗೆ ಹಾಕುತ್ತಿರುವರು. ಇಂದಿನ ನಾಟಕಕ್ಕೆ ಹೋಟಗಿ ಬೃಹನ್ಮಠಾಧ್ಯಕ್ಷರಾದ ಪಟ್ಟದ ಮಹಾಸ್ವಾಮಿಗಳವರು ಆಗಮಿಸಿದ್ದರು. ಮಲ್ಲಮ್ಮನ ನಾಟಕದ ಕಥಾಸಂದರ್ಭವನ್ನು ನೋಡಿ ಸಂತುಷ್ಟರಾಗಿ ಈ ಅತ್ಯಾಕರ್ಷಣೀಯವಾದ ಕಥಾಸಂದರ್ಭದಲ್ಲಿ ನಾಟಕ ಪ್ರಶಂಸೆಯನ್ನು ಮಾಡಿದರು. ಹಾಗೂ ಮಹಾರಾಷ್ಟ್ರ ನಾಟ್ಯಮಂಡಲಿಗಳು ಕುಮನೋಹರಸ್ವರೂಪದಲ್ಲಿ ಪ್ರೇಕ್ಷಕರನ್ನು ಹಾಗು ಬರಿಸಿದ ಸೊಲ್ಲಾಪುರದ ರಂಗಭೂಮಿಯಲ್ಲಿ ಕನ್ನಡ ನುಡಿಯ ಹೇಮರೆಡ್ಡಿ ಮಲ್ಲಮ್ಮನ ನಾಟಕದ ಅಭಿನಯವನ್ನು ಮರಿಸುವಂತಹ ದಿವ್ಯ ಶೈಲಿಯಿಂದಲೂ ಕನ್ನಡದ ಸಂಬಂಧದಿಂದ ನಿರಾಶಾಮಯ ವಾತಾವರಣವಿರುವ ಸಮಯಕ್ಕೆ ತಂದು ಮುಂದಿರುವ ಪ್ರೇಕ್ಷಕರನ್ನು ಕರೆತಂದು ಕನ್ನಡ ಸಾಹಿತ್ಯದ ಅಮೃತರಸವನ್ನು ಸುರಿಸಿದರು. ಕನ್ನಡ ಭಾಷೆಯು ಸವಿಗರೆಯುತ್ತಿರುವದನ್ನು ನೋಡಿದರೆ ಸೊಲ್ಲಾಪುರಕ್ಕೆ ತನ್ನ ಹುಟ್ಟೂರಿಯಾಯಿತು ಎಂದೆನಿಸುವ ಭಾವನೆಯು ಈಗ ಮೂಡಿಸಲ್ಪಟ್ಟಿರುವುದು ಇನ್ನು ಇಲ್ಲಿಯ ಕನ್ನಡಿಗರ ಭಾವೀ ಶುಭಚಿಹ್ನವೆಂದು ಊಹಿಸಬಹುದು. ಇತ್ಯಾದಿ ಸಂದರ್ಭಗರ್ಭಿತವಾದ ಭಾಷಣದಿಂದ ಜನರ ಆದರಾಭಿಮಾನವನ್ನು ಸಂತೋಷಪಡಿಸಿದರು. ಮತ್ತು ಈ ನಾಟಕವನ್ನು ಬರೆದ ಶ್ರೀ||ಶ್ರೀಕಂಠಶಾಸ್ತ್ರಿ ಅಮರಾಯ ಹಿರೇಮಠ ಕರ್ನಾಟಕ ಕವಿರತ್ನ ಸಲವಡಿ ಇವರ ನಾಟಕರಚನೆಯನ್ನು ವಿಶೇಷವಾಗಿ ಪ್ರಶಂಸಿಸಿದರು. ಇದೇ ಸಮಯದಲ್ಲಿ ಇಲ್ಲಿಯ ಶ್ರೀಮಂತ ನಾಗಪ್ಪ ಅಬ್ದುಲ್‌ಪುರಕರ ಇವರು ಈ ನಾಟ್ಯಮಂಡಲದ ಉತ್ತೇಜನಾರ್ಥವಾಗಿ ಹೋಟಗಿ ಶ್ರೀ ಪೂಜ್ಯಪಾದರ ಹಸ್ತದಿಂದ ೨೫ ರೂಪಾಯಿಗಳನ್ನು ಪಾರಿತೋಷಕವಾಗಿ ಕೊಟ್ಟರು. ಆ ಮೇಲೆ ಶ್ರೀಗಳವರಿಗೆ ಪುಷ್ಪಮಾಲಾದಿಗಳು ಅರ್ಪಿಸಲ್ಪಟ್ಟವು.

Sadashivaya, Veeraya
Talikotimeth

ಪರಿಣಾಮವಾದ.

೨೦-೨-೩೫ ರಲ್ಲಿ ಮೈಸೂರು ಇಂಟರ್ ಮೀಡಿಯೇಟ್ ಕಾಲೇಜಿನ ಪಾಪ್ಯುಲರ್ ಸೈನ್ಸ್ ಅಸೋಸಿಯೇಷನ್ನಿನ ಆಶ್ರಯದಲ್ಲಿ ಡಾ|| ಬಿ ತಿರುಮಲಾಚಾರ್ ಎಂ.ಎಸ್.ಸಿ., ಯವರು 'ಪರಿಣಾಮವಾದ' ಎಂಬ ವಿಷಯವಾಗಿ ಉಪನ್ಯಾಸಮಾಡಿದರು. ವಿಷಯಕ್ಕೆ ಸಂಬಂಧಪಟ್ಟ ಚಿತ್ರಗಳೂ ಪ್ರದರ್ಶಿಸಲ್ಪಟ್ಟವು. ಉಪನ್ಯಾಸದ ಸಾರಾಂಶವಿದು—

ಜಗತ್ತಿನಲ್ಲಿರುವ ಪ್ರತಿಯೊಂದು ಜೀವಿಯೂ ಅತಿಸಣ್ಣ ಸಜೀವ ವಸ್ತುವಾದ ಅಮೀಬ ಎಂಬುದರಿಂದ ಉಂಟಾಗಿದೆ. ಇದು ಸಾಮಾನ್ಯವಾಗಿ ನೀರಿನಲ್ಲಿ ವಾಸಿಸುತ್ತದೆ. ಈ ಜೀವಾಣುವಿನ ರೂಪಭೇದದಿಂದಲೇ ಎಲ್ಲಾ ಪ್ರಾಣಿಗಳೂ ಸಸ್ಯಗಳೂ ಉಂಟಾದುವು. ಈ ಸಣ್ಣ ಅಣುವು ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸಬಲ್ಲುದು. ಆಹಾರವನ್ನು ಜೀರ್ಣಿಸಿಕೊಳ್ಳಬಲ್ಲುದು. ತನ್ನಲ್ಲಿ ಉತ್ಪತ್ತಿಯಾದ ನಿರುಪಯೋಗ ಪದಾರ್ಥಗಳನ್ನು ಹೊರಗೆ ಚೆಲ್ಲಬಲ್ಲುದು. ತನ್ನಂತಹ ಅಣುಗಳನ್ನೇ ಸೃಷ್ಟಿ ಮಾಡಬಲ್ಲುದು. ಆದುದರಿಂದ ಇವುಗಳನ್ನು ಒಂದಂಶದ ಪೂರ್ಣಜೀವಿಗಳೆಂದು ಕರೆಯಬಹುದು.

ಇಂಥಹ ಅನೇಕ ಜೀವಾಣುಗಳು ಸೇರಿ (ಅನೇಕವು ಒಂದೇ ಜೀವಿಯಂತೆ) ಇರುವುದಕ್ಕೆ ಮೊದಲಾಗುವುದು. ಇಂತಹ ಜೀವಿಯಲ್ಲಿ ಒಂದೊಂದು ಭಾಗದ ಅಣುಗಳೂ ಒಂದೊಂದು ತರಹದ ಕೆಲಸದಲ್ಲಿ ಹೆಚ್ಚು ಸಾಮರ್ಥ್ಯ, ಚಟುವಟಿಕೆಗಳನ್ನು ಹೊಂದುವುವು. ಇಂತಹ ಬದಲಾವಣೆಯೇ ನಮ್ಮ ದೇಹದಲ್ಲಿ ಬಿಟ್ಟಿಕ ಮತ್ತು ಅನೈಚ್ಛಿಕ ನರಗಳು ಇರುವುದಕ್ಕೆ ಕಾರಣವೆಂದೂ ಊಹಿಸಬಹುದು.

ಪರಿಣಾಮವಾದದ ಮುಖ್ಯ ಅಂಗಗಳಾವುವೆಂದರೆ—ವಾತಾವರಣವು ಒಂದು ಪ್ರಾಣಿವರ್ಗದ ಬೆಳವಣಿಗೆ ಶರೀರರಚನೆಗಳಲ್ಲಿ ದೊಡ್ಡ ಪರಿಣಾಮವನ್ನುಂಟುಮಾಡುವುದು. ಅಥವಾ ವಾತಾವರಣದ ಪರಿಣಾಮವೇನೂ ಇಲ್ಲದೆ ಪ್ರಾಣಿಗಳಲ್ಲೇ ಸಹಜವಾದಸ್ವಭಾವದಿಂದ ಅವುಗಳಲ್ಲಿ ಅನೇಕ ಪರಿಣಾಮಗಳುಂಟಾಗಬಹುದು.

ಪ್ರತಿಯೊಂದು ಪ್ರಾಣಿಯೂ ಯಾವಾಗಲೂ ಯಾವ ವಿಧವಲ್ಲದರೂ ಬದಲಾವಣೆಯನ್ನು ಹೊಂದುತ್ತಲೇ ಇರುತ್ತದೆ. ಅಲ್ಲದೆ ಪ್ರತಿಯೊಂದು ಪ್ರಾಣಿವರ್ಗವೂ ತನ್ನದೇ ಆದ ಸ್ವಭಾವಗಳನ್ನು ಹೊಂದಿರುತ್ತದೆ. ಈ ಸ್ವಭಾವಗಳು ತಂದೆತಾಯಿಗಳಿಂದ ಮಕ್ಕಳು ಮೊಮ್ಮಕ್ಕಳಿಗೆ ಕ್ರಮವಾಗಿ ಬರುತ್ತಲೇ ಇರುತ್ತವೆ. ಇವಲ್ಲಿ ನಾವು ಗಮನಿಸಬೇಕಾದ ವಿಷಯವೇನೆಂದರೆ—ತಂದೆತಾಯಿಗಳಿಗೆ ಪ್ರಾಯಶಃ ಉಪಯೋಗಕ್ಕೆ ಬಾರದ ಅಂಗಗಳು ಅವುಗಳ ಮರಿಗಳಲ್ಲಿ ಇನ್ನೂ ಕ್ಷೀಣವಾದಂತಾಗಿ ಹತ್ತಾರು ಇಲ್ಲವೇ ನೂರಾರು ತಲೆಗಳಾಗುವುದರೊಳಗೆ ಆ ಅಂಗದ ಕುರುಹು ಮಾತ್ರ ಉಳಿಯುವ ಹಾಗಾಗಬಹುದು.

ಪ್ರತಿಯೊಂದು ಗಂಡು ಅಥವಾ ಹೆಣ್ಣು ಪ್ರಾಣಿಯೂ ತನಗೆ ಬೇಕಾದ ಹೆಣ್ಣು ಅಥವಾ ಗಂಡು ಸಂಗಾತಿಯನ್ನು ಪಡೆಯಲು ಅನೇಕ ಪ್ರಕೃತಿಸಿದ್ಧವಾದ ಅನುಕೂಲಗಳನ್ನು ಹೊಂದಿರುತ್ತದೆ. ಉದಾಹರಣೆಗಾಗಿ ಗಂಡುಕೋಗಿಲೆಯು ಹೆಣ್ಣನ್ನು ಒಲಿಸಿಕೊಳ್ಳುವುದಕ್ಕಾಗಿ ಮನೋಹರವಾಗಿಯೂ ಇಂಪಾಗಿಯೂ ಹಾಡುತ್ತದೆ. ನವಿಲು ತನ್ನ ಗರಿಗಳಿಂದಲೂ ರಾಜಹಂಸವು ನಡಿಗೆಯಿಂದಲೂ ತನ್ನ ಸಂಗಾತಿಯನ್ನು ಆಕರ್ಷಿಸುತ್ತದೆ. ಚಿಟ್ಟೆಗಳೂ ಕೂಡ ವಿವಿಧವಾದ ಬಣ್ಣಗಳುಳ್ಳ ರೆಕ್ಕೆಗಳಿಂದ ಗಂಡುಚಿಟ್ಟೆಯನ್ನು ಹೊಂದುತ್ತವೆ. ಕೆಲವು ಪಕ್ಷಿಗಳು ತಮ್ಮ ವಿವಿಧ ಬಣ್ಣದ ರೆಕ್ಕೆಪುಕ್ಕಗಳಿಂದ ಹೆಣ್ಣುಹಕ್ಕಿಗಳನ್ನು ಆಕರ್ಷಿಸುವುವು. ಆಸ್ಟ್ರೇಲಿಯಾದೇಶದ ಒಂದು ತರಹದ ಪಕ್ಷಿಯು ತನ್ನ ಗೂಡಿನ ಮುಂದೆ ಬಣ್ಣಬಣ್ಣದ ಹೂಗಳನ್ನು ಕಂಡಿಟ್ಟು ಹೆಣ್ಣನ್ನು ಮೋಹಗೊಳಿಸುವುದಂತೆ!

R. K. S.

ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವ

ಮಹಾಶಿವರಾತ್ರಿ.



ಭರತಖಂಡದಲ್ಲಿರುವ ಸಮಸ್ತ ವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವುದೇ ಆಸ್ತಿಕಮತಾನುಯಾಯಿಗಳ ಮುಖ್ಯಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಆ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯವೈಭವದೊಡನೆ ಮಹೋತ್ಸವವನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು ! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು !

ಸೂಚನೆ

ಪ್ರತಿವರ್ಷದ ಪದ್ಧತಿಯಮೇರೆಗೆ ಮಹಾಶಿವರಾತ್ರಿಯ ನಿಮಿತ್ತವಾಗಿ ಮುಂದಿನ ಮಾರ್ಚ್ ೩ ನೆಯ ತಾರೀಖಿನ ಪತ್ರಿಕೆಯು ಹೊರಡುವದಿಲ್ಲವೆಂಬ ವಿಷಯವನ್ನು ಚಂದಾದಾರರೆಲ್ಲರೂ ತಿಳಿಯತಕ್ಕದ್ದು

ಸಂ

ವರ್ತಮಾನಸಂಗ್ರಹ.

ಸ್ಟೀವ್‌ಕಿಟ್ಲಿ ಎಂಬ ಹೆಸರಿನ ಮಾಂಟ್ರೀಲ್ ಪಟ್ಟಣದ ಹೋಟೆಲ್ ಮಾಲೀಕನು ಒಟ್ಟಿಂಕುಗಳನ್ನು ಸಂಬಡೆ ಹಣವನ್ನೆಲ್ಲಾ ತನ್ನ ಮರದಕಾಲಿನಲ್ಲಿ ಮುಚ್ಚಿಟ್ಟಿದ್ದನು ಇವನು ಮಲಗುವಾಗ ಯಾರೋ ಈ ಮರದ ಕಾಲಿನಿಂದ 400 ಪೌಂಡುಗಳಿಗಿಂತ ಹೆಚ್ಚು ಹಣವನ್ನು ಕದ್ದಿರುವುದಾಗಿ ಪೋಲೀಸರಲ್ಲಿ ಕಂಪ್ಲೇಂಟ್ ಕೊಟ್ಟಿರುವನು

ನಿದ್ರೆ ಬರುವ ಔಷಧಿಯಿಂದ ಮರಣ.

ಲಿಸ್ಟರಿನ ಡಚೆಸ್ ಎಚ್‌ರಿಚ್ ಎಂಬಾಕೆಯು ನಿದ್ರೆಬರುವ ಔಷಧವನ್ನು ಹೆಚ್ಚಾಗಿ ಸೇವಿಸಿದ್ದರಿಂದ ಮೃತಪಟ್ಟಳಂತೆ !

ನಿಧಿಯ ಶೋಧನೆ !

ಕೋಕಸ್ ದ್ವೀಪದಲ್ಲಿ ೨ ಕೋಟಿ ಪೌಂಡು ಬೆಲೆಯುಳ್ಳ ನಿಧಿ ಇದೆ ಎಂದು ನಂಬಿ ಒಂದು ಸಂಸ್ಥೆಯವರು ಕೋಸ್ಟಾರೀಕಾ ಸರ್ಕಾರದ ಅನುಮತಿಯನ್ನು ಪಡೆದು ಹುಡುಕಲು ಹೊರಟಿದ್ದಾರೆ

ಆತ್ಮಹತ್ಯೆ !

ಜೋಂಬಾಯಿಯಲ್ಲಿ ೪೬ ವರ್ಷ ವಯಸ್ಸಿನ ಗಸ್ಪವ ಜೆರಾರ್ಡ್ ಎಂಬ ಆಂಗ್ಲೋ ಇಂಡಿಯನ್ನನು ತಾನು ವಿಷಪಾನಮಾಡಿ ತನ್ನ ಇಬ್ಬರು ಮಕ್ಕಳಿಗೂ ಕೊಟ್ಟನಂತೆ ! ಎಲ್ಲರೂ ಸತ್ತರು. ಕಾರಣವು ತಿಳಿದಿಲ್ಲ

ಕೊಲೆ.

ಲಕ್ನೋ ಕಂಟೋನ್ಮೆಂಟು ಕೋರ್ಟ್ ಕ್ಲಾರ್ಕರವರ ಬಟ್ಲರನ ಹೆಂಡತಿಯನ್ನು ಕ್ಲಾರ್ಕರವರ ಮನೆಯಲ್ಲಿ ಅವರ ಬಂದೂಕದಿಂದಲೇ ಯಾರೋ ದುಷ್ಟರು ಕೊಲೆ ಮಾಡಿ ಪರಾರಿಯಾಗಿದ್ದಾರೆ ಪೋಲೀಸು ಶೋಧನ ನಡೆಯುತ್ತಿದೆ

ಏಟುಬಿದ್ದುದರಿಂದ ದೇಹವು ಬೆಳೆಯಿತು

ಮಹಮದ್ ಪಾಶಾ ಎಂಬ ಒಬ್ಬ ಗಾರೆಯ ಕೆಲಸದವನು ಗೋಡೆಯ ಮೇಲಿನಿಂದ ಬಿದ್ದು ಬಹಳ ಪೆಟ್ಟಾದರೂ ಪ್ರಾಣಾಪಾಯವಾಗದೆ ಉಳಿದುಕೊಂಡನು. ಆದರೆ ಅವನು ಬಿದ್ದುದಕ್ಕೆ ಒದಲಾಗಿ ೭ ಅಡಿ ಎತ್ತರ ಬೆಳೆದಿರುವನಂತೆ !

ರಾಮರಾಜ್ಯ

ಪೋರ್ಚುಗೀಸ ಸರ್ಕಾರದವರು ಪ್ರಜೆಗಳೆಲ್ಲರೂ ಬಡವಬಲ್ಲಿದವನೆಂಬ ಹೆಚ್ಚು ಕಡಿಮೆ ಇಲ್ಲದೆ ಒಂದೇ ಸಮನಾಗಿ ಕಾಣುವುದರಿಂದ ಸರಕಾರದ ಎಷಯದಲ್ಲಿ ಪ್ರಜೆಗಳು ವಿಶ್ವಾಸವನ್ನು ಹೊಂದಿ ರಾಮರಾಜ್ಯವೆನಿಸಿದೆಯೆಂದು ಸಯ್ಯದ್‌ರಜಾಕ್ ಅಲಿಯವರು ಹೇಳುತ್ತಾರೆ

ಕಾಮಪ್ರೇಮಿಕ್ಕೋಸ್ಕರ ಆತ್ಮಹತ್ಯೆ !

ನಾಗಪುರದ ಎಕ್ಸಿಕ್ಯೂಟಿವ್ ಇಂಜಿನಿಯರರ ಮಗನಾದ ಚರ್ಮಲಾಲ್‌ಧಾವಡ ಎಂಬ ಯುವಕನೂ ಅಲ್ಲಿಯ ಅ| ಸರ್ಜನರ ಮಗಳಾದ ಮಿಸ್ ಪೆರಿಷ್‌ಘೋಷ ಎಂಬ ಯುವತಿಯೂ ಅಲ್ಲಿಯ ಮೋರಿಸ್ ಕಾಲೇಜಿನ ಒಂದೇ ಕ್ಲಾಸಿನಲ್ಲಿ ಓದುತ್ತಿದ್ದು ಪರಸ್ಪರ ಪ್ರೀತಿಗೆ ಒಳಗಾಗಿ, ತಮ್ಮ ವಿವಾಹವು ಅಸಾಧ್ಯವೆಂದು ತಿಳಿದದ್ದರಿಂದ ಆ ಊರಿನ ಕೆರೆಯಲ್ಲಿ ಇಬ್ಬರೂ ಬಿದ್ದು ಆತ್ಮಹತ್ಯೆ ಮಾಡಿಕೊಂಡರು

ಗ್ರಹಣಗಳು !

ಈ ವರ್ಷ ೫ ಸೂರ್ಯಗ್ರಹಣಗಳೂ ೨ ಚಂದ್ರಗ್ರಹಣಗಳೂ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಕಾಣಿಸುವುವಂತೆ! ಇನ್ನು ೫೦೦ ವರ್ಷಗಳ ವರೆಗೆ ಈ ರೀತಿ ಒಂದು ವರ್ಷದಲ್ಲಿ ೭ ಗ್ರಹಣಗಳು ಕಾಣಿಸುವುದಿಲ್ಲವೆಂದು ಪಾಶ್ಚಾತ್ಯ ಖಗೋಳಶಾಸ್ತ್ರಜ್ಞರು ಹೇಳುತ್ತಾರೆ.

ಹೆಂಗಸಿನ ಧೈರ್ಯ !

ಪ್ರತಾಪಗಢದ ಬಳಿ ಪೆಟ್ರೋಲ್ ಹಾಕುವಾಗ ಲಾರಿಯೊಂದು ಹತ್ತಿಕೊಂಡು ಭಸ್ಮವಾಯಿತು. ಅದರಲ್ಲಿದ್ದವರಲ್ಲಿ ಒಬ್ಬ ಹೆಂಗಸು ತಾನು ಬೆಂಕಿ ಹತ್ತಿ ಸುಟ್ಟುಹೋಗುತ್ತಿದ್ದರೂ ಭಯಪಡದೆ ತನ್ನ ಸಂಗಡವಿದ್ದ ಮಗುವನ್ನು ಹೊರಕ್ಕೆ ಹೊತ್ತು ಹಾಕಿ ತಾನು ಪ್ರಾಣಬಿಟ್ಟಳು.

ಕ್ಷಾಮದ ಅದ್ಭುತ ದೃಶ್ಯ

ಜಪಾನಿನ ತೋಕೋ ಜಿಲ್ಲೆಯಲ್ಲಿ ಆಹಾರಕ್ಕೆ ತುಂಬಾ ಕ್ಷಾಮಬಂದಿರುವುದರಿಂದ ಜನಗಳು ಮಾನ ಮರ್ಯಾದೆಗಳನ್ನು ಲಕ್ಷ್ಯಮಾಡದೆ ತಮ್ಮ ಹೆಣ್ಣುಮಕ್ಕಳನ್ನು ಕಾಮಾರ್ಥಿಗಳಿಗೂ ವೇಶ್ಯಾಸ್ತ್ರೀಯರಿಗೂ ಮಾರುತ್ತಿದ್ದಾರಂತೆ! ಇದುವರೆಗೆ ೩ ಸಾವಿರ ಹೆಣ್ಣುಮಕ್ಕಳು ಈ ದುರ್ದಶೆಗೆ ಗುರಿಯಾಗಿರುತ್ತಾರೆಂದು ವರದಿ ಬಂದಿದೆ.

ಕಳ್ಳರು ಸಂಗ್ರಹಿಸಿದ್ದ ನಿಧಿಯ ಪತ್ತೆ !

ದಿಲ್ಲಿ ಸಮೀಪದ ಒಂದು ಗುಡ್ಡದ ಬುಡದಲ್ಲಿ ಗೃಹ ಪದಾರ್ಥದಿಂದ ಕೂಡಿದ ನೆಲಮನೆಯ ಕೋಣೆಗಳಲ್ಲಿ ಒಂದು ಕಳ್ಳರ ಗುಂಪಿನವರು ತಾವು ಕದ್ದ ನಗ ನಾಣ್ಯ ಬಟ್ಟೆಬರೆಗಳನ್ನು 27 ಲೋಹದ ಟ್ರಂಕುಗಳಲ್ಲಿ ತುಂಬಿಟ್ಟಿದ್ದುದು ಪತ್ತೆಯಾಗಿರುತ್ತದೆ. ಈ ಸಂಬಂಧದಲ್ಲಿ 10 ಜನ ಹಿಂದೂಜನಗಳನ್ನೂ 3 ಜನ ಮುಸಲ್ಮಾನರನ್ನೂ ದಸ್ತಗಿರಿಮಾಡಿರುತ್ತಾರೆ.

ಲಂಡನ್ನಿನಲ್ಲಿ ಯೋಗಸಾಧನೆಯ ಕಾಲೇಜು

ಒಂದೆರಡು ದಿನ ಪೆಟ್ಟಿಗೆ ಇದ್ದು, ಮತ್ತೆ ಜೀವಿಸುವದು, ಮಂಜಿನಗಡ್ಡೆಯ ಶೈತ್ಯದಲ್ಲಿ ಬಹುಕಾಲ ಇಟ್ಟುಕೊಳ್ಳುವುದು, ಪದ್ಮಾಸನದಲ್ಲಿ ಕುಳಿತು ಶ್ವಾಸ ಬಂಧನದಿಂದ ಭೂಮಿಯನ್ನು ಬಿಟ್ಟು ಹಲವು ಅಡಿಗಳು ಮೇಲೆ ಏಳುವದು ವಿಷಪಾನಮಾಡಿ ಜೀರ್ಣಿಸಿಕೊಳ್ಳುವುದು, ಇವೇ ಮೊದಲಾದ ಯೋಗದಿಂದ ಸಿದ್ಧಿಸತಕ್ಕ ಹಲವು ಆಶ್ಚರ್ಯವಾದ ವಿಷಯಗಳನ್ನು ಕಂಡ ನಾರಾಯಣಸ್ವಾಮಿ ಯಾತ್ರಿಕರ ಉಪದೇಶದಿಂದ ಲಂಡನ್ನಿನಲ್ಲಿ ಒಂದು ಯೋಗಸಾಧನೆಯ ಕಾಲೇಜು ಈ ವರುಷ ಸ್ಥಾಪಿಸಲ್ಪಡಬಹುದೆಂದು ತಿಳಿದುಬರುತ್ತದೆ.

ಬಂಗಾರ ತಯಾರು ಮಾಡುವಗುಟ್ಟು !

ಒರುವ ಸಮ್ರಾಟ ಚಕ್ರವರ್ತಿಯ ಪಟ್ಟಾಭಿಷೇಕ ಮಹೋತ್ಸವಕಾಲಕ್ಕೆ ಲಂಡನ್ನಿನಲ್ಲಿ ವಾಸವಾಗಿರುವ ಹಿಂದೂ ಜಾದೂಗಾರರೊಬ್ಬರು ತಾವು ಕಷ್ಟಪಟ್ಟು ಕಲಿತಿರುವ ಬಂಗಾರವನ್ನು ತಯಾರಿಸುವ ವಿಧಾನವನ್ನು ಚಕ್ರವರ್ತಿಯವರಿಗೆ ಹೇಳಿ ಕೊಡುತ್ತಾರಂತೆ! ಈ ವಿದ್ಯೆಯು ಸ್ವಂತಕ್ಕಾಗಿ ಪ್ರಯೋಜನವಿಲ್ಲವೆಂದೂ ಮುಂದುವರೆಯುವ ಬ್ರಿಟಿಷ್ ಜನಾಂಗಕ್ಕೆ ಇದರಿಂದ ಬಹು ಪ್ರಯೋಜನವಾಗುವುದೆಂದೂ ಹೇಳುತ್ತಾರೆ. ಇವರ ಹೆಸರು ರಾಜಾಅಲಾಲಾ ಕೃಷ್ಣ ರಾಘು ರಾಮುಸಿಂಗ್. ಇವರ ವಯಸ್ಸು ಗೊತ್ತಿಲ್ಲ. ಅದನ್ನು ಇವರು ಹೇಳುವದಿಲ್ಲವಂತೆ!

ಚೈನಾಕ್ಕೆ ಜಪಾನಿನ ಆಹ್ವಾನ

ಜಪಾನ್ ವಿದೇಶಗಳ ಮಂತ್ರಿಗಳಾದ ಮಿ|| ಹಿರೋಟರು ಚೀನಾಮಂತ್ರಿಗಳನ್ನು ಕುರಿತು ಪಾಶ್ಚಾತ್ಯರೊಡನೆ ಸಹಕರಿಸುವುದನ್ನು ಬಿಟ್ಟು ತಮ್ಮ ಸಂಗಡ ಸೇರಿ ನಾಂಕಿಂಗಿನ ಗೌರ್ನಮೆಂಟಿನ ಸ್ವಾತಂತ್ರ್ಯವನ್ನು ಒಪ್ಪಿ ಸೈನ್ಯದಲ್ಲಿರುವ ಪಾಶ್ಚಾತ್ಯ ಅಧಿಕಾರಿಗಳನ್ನು ತೆಗೆದು ಜಪಾನೀಯರನ್ನು ಸೇರಿಸಿಕೊಂಡರೆ ಇದಕ್ಕೆ ಪ್ರತಿಯಾಗಿ ಜಪಾನರು ಪಾಶ್ಚಾತ್ಯರಿಂದ ಉಂಟಾಗ ಬಹುದಾದ ತೊಂದರೆಗಳನ್ನು ತಪ್ಪಿಸಿ ಅವರಿಗೆ ಬೇಕಾದ ಆರ್ಥಿಕಸಹಾಯಗಳನ್ನು ಒಪ್ಪಿಸಿಕೊಡುವುದಲ್ಲದೆ ಚೈನಾದ ಕಡೆಗೆ ರಾಜವಿಸ್ತಾರವಾಗುವುದನ್ನು ನಿಲ್ಲಿಸಿ ದೇಶದ ಮತ್ತು ಅತ್ತ ಪ್ರಗತಿಗೆ ತಮ್ಮ ಬೆಂಬಲ ಪೂರ್ಣ ಸಹಾಯವನ್ನು ಕೊಡುವೆವೆಂದು ಹೇಳುತ್ತಿದ್ದಾರೆ.

ಪತಿಯೊಡನೆ ಮರಣ !

ಮದರಾಸು ಶಾಸನ ಸಭಾ ಸದಸ್ಯರಾದ ಗಂಗಾಧರಸ್ವಾಮಿ ಮಿಶ್ರ ಎಂಬವರು ಮರಣ ಹೊಂದಿದರು. ಅವರ ಶವವನ್ನು ಸ್ಮಶಾನಕ್ಕೆ ಒಯ್ದಾಗ ಅವರ ಪತ್ನಿಯು ಶವದ ಜೊತೆ ಬಂದಿದ್ದಳು. ಆಕೆಯು ಪತಿಯೊಡನೆ ತನ್ನನ್ನೂ ದಹನ ಮಾಡಲು ಕೇಳಿಕೊಂಡಳು. ಆದಕ್ಕೆ ಯಾರೂ ಒಪ್ಪಲಿಲ್ಲ. ಇಷ್ಟರಲ್ಲಿಯೇ ನೆರೆದವರಲ್ಲಿ ಒಬ್ಬರು ಆವಳ ಮಗನಲ್ಲಿ ವಿಧವೆಯಾಗದೇ ಕೊಂದು ಬಂದಿದೆ ಇಲ್ಲದಿದ್ದರೆ ಮೊದಲೇ ಸತ್ತುಹೋಗುತ್ತಿದ್ದಳೆಂದು ನುಡಿದರು. ಈ ಮಾತಿಗಾಗಿ ಅವಳು ಸಿಟ್ಟಿಗೆದ್ದು ನನಗೆ ವಿಧವೆಯೆಂದು ಯಾರು ಅನ್ನುವರು? ನನ್ನ ಜೀವವು ಪತಿಯೊಡನೆ ಸಂಲಗ್ನವಾಗಿದೆ ಎಂದು ಉತ್ತರಕೊಟ್ಟು ಪ್ರಾಣವನ್ನು ಬಿಟ್ಟಳಂತೆ. ಈಕೆಯಲ್ಲವೇ ಮಹಾಪತಿವ್ರತಾಶಿರೋಮಣಿಯು?

ಬಾಲೆಯ ಗಿಡದ ಪರಿಶೋಧನೆಯ ಕಾರ್ಯ

ಮದ್ರಾಸ ಕೃಷಿ ಇಲಾಖೆಯ ಡೈರೆಕ್ಟರು ಇಂಪೀರಿಯಲ್ ಕೌನ್ಸಿಲಿನವರಿಗೆ ಹಲವು ಜಾತಿಯ ಬಾಳೆಗಿಡಗಳನ್ನು ಪರೀಕ್ಷಾರ್ಥವಾಗಿ ಒಪ್ಪಿಸಿದರು. ಈಗ ಈ ವಿಷಯದಲ್ಲಿ ದಕ್ಷಿಣ ಹಿಂದೂಸ್ಥಾನದಲ್ಲಿ ಪರಿಶೋಧನಾ ಕಾರ್ಯವು ನಡೆಯಬೇಕೆಂದು ನಿರ್ಧರವಾಗಿ ಒಂದು ಸ್ಕೀಮು ತಯಾರಾಗಿರುವುದಲ್ಲದೆ ಇಂಪೀರಿಯಲ್ ಕೌನ್ಸಿಲು ೫೦ ಸಾವಿರದ ಗ್ರ್ಯಾಂಟನ್ನು ಮಂಜೂರು ಮಾಡುವುದರಲ್ಲಿದೆ. ಇದರ ಪರಿಶೋಧನೆಯು ಆರಂಭದಲ್ಲಿ ಕೊಯಮುತ್ತೂರಿನಲ್ಲಿ ನಡೆದುದರಿಂದ ಅಲ್ಲಿಯೇ ಇನ್ನೂ ಇದರ ಬಹು ಭಾಗದ ಕೆಲಸವೂ ನಡೆಯಬೇಕೆಂದು ಗೊತ್ತಾಗಿದೆ. ಮುಖ್ಯವಾಗಿ ಬಾಳೆಯ ಬೆಳೆಯು ದ ಉತ್ತರ ಹಿಂದೂಸ್ಥಾನದಲ್ಲಿ ಯಾವ ರೀತಿಯಾದರೂ ಅದನ್ನು ಅಲ್ಲಿ ಬೆಳೆಸಲು ಸಾಧ್ಯವಿದೆಯೋ ಎಂದು ಯತ್ನಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ವಿಚಿತ್ರವೃತ್ತಿ !

ಅಮೇರಿಕಾದೇಶದ ನ್ಯೂಯಾರ್ಕ್‌ಪಟ್ಟಣದಲ್ಲಿ ಒಬ್ಬಳು 1833ರಲ್ಲಿ ೫ ಜನ ಗಂಡುಮಕ್ಕಳನ್ನು ಹೆತ್ತಳು. ಈ ಮಕ್ಕಳೆಲ್ಲಾ ಒಂದೇ ರೀತಿಯಲ್ಲಿದ್ದು ಇವರನ್ನು ಗುರುತು ಹಚ್ಚುವದೇ ಕಷ್ಟವಾಯಿತು. ಈ ಮಕ್ಕಳು ದೊಡ್ಡವರಾದ ಮೇಲೆ ಹವಾನಾದಿ ಒಂದು ಹೋಟೆಲಿನಲ್ಲಿ ಕೆಲಸಕ್ಕೆ ಸೇರಿದರು. ಅಲ್ಲಿಯ ಜನರಿಗೆ ಇವರನ್ನು ಬೇರೆ ಬೇರೆಯಾಗಿ ಗುರುತು ಹಿಡಿಯುವದು ಕಷ್ಟವಾಯಿತು. ಆಗ ಈ ಐವರೂ ಆಲೋಚಿಸಿ ತಾವು ಐವರೂ ತಮ್ಮ ಹೆಸರಿನ ಮೊದಲನೆಯ ಅಕ್ಷರದಂತೆ ಗಡ್ಡ ಮೀಸೆಗಳನ್ನು ಕತ್ತರಿಸಿಕೊಳ್ಳಬೇಕೆಂದು ನಿರ್ಧರಿಸಿದರು. ಹ್ಯಾರಿಯು ತನ್ನ ಹೆಸರಿನ ಮೊದಲನೆಯ ಇಂಗ್ಲೀಷ್ ಅಕ್ಷರವಾದ H ಆಕಾರದಲ್ಲಿಯೇ ಮೀಸೆ ಗಡ್ಡಗಳನ್ನು ಕತ್ತರಿಸಿಕೊಂಡನಂತೆ. ಥಾಮಸ್ ಎಂಬುವನು ತನ್ನ ಹೆಸರಿನ ಮೊದಲನೆಯ ಅಕ್ಷರ T ಆಕಾರದಂತೆ, ಜೇಮ್ಸ್ ರೀತಿ ಕತ್ತರಿಸಿಕೊಂಡನಂತೆ. ವರ್ನನ್ ಎಂಬಾತನು V ಅಕ್ಷರದಂತೆ ಕತ್ತರಿಸಿ ಕೊಂಡನಂತೆ!

ಬಳ್ಳಾರಿ ಜಿಲ್ಲೆಯಲ್ಲಿ ಕಂದಾಯದ ರಿಯಾಯತಿ

ಬಳ್ಳಾರಿ ಜಿಲ್ಲೆಯಲ್ಲಿ ಅನಾವೃಷ್ಟಿಯ ಮೂಲಕ ಪರಿಸ್ಥಿತಿಯು ನೆಟ್ಟಗಿಲ್ಲದ್ದರಿಂದ ರೆವಿನ್ಯೂ ಬೋರ್ಡಿನವರು 100 ಕ್ಕೆ ೫ ರಿಂದ ೫೦ರ ವರೆಗೆ ತಗಿಯನ್ನು ವಜಾಮಾಡಬೇಕೆಂದು ಶಿಫಾರಸು ಮಾಡಿದ್ದಾರೆ. ಜಿಲ್ಲೆಯ ಎಲ್ಲಾ 8 ತಾಲೂಕುಗಳಲ್ಲಿರುವ 770 ಹಳ್ಳಿಗಳಲ್ಲಿಯ ಮಾಮೂಲು ಖುಷ್ಕಿಭೂಮಿ ತೋಟಗಳು ಮತ್ತು ಬಾವಿಗಳಿಂದ ಸಂರಕ್ಷಿಸಲ್ಪಟ್ಟ ಭೂಮಿಗಳನ್ನು ಬಿಟ್ಟು ಉಳಿದ ಎಲ್ಲ ಭೂಮಿಗಳ ಪಟ್ಟಿ ವಜಾಮಾಡಬೇಕೆಂದು ಶಿಫಾರಸು ಮಾಡಿದಂತೆ ಇವುಗಳಲ್ಲಿ 5 ಇನಾಮು ಗ್ರಾಮಗಳು ಒಂದು ಶ್ರೋತ್ರಿಯಂ ಹಳ್ಳಿ ಶಿರಗುಪ್ಪಿ ಮತ್ತು ಹೊಸಪೇಟೆ ತಾಲೂಕುಗಳಲ್ಲಿಯ ೨೪ ಹಳ್ಳಿಗಳು ಸೇರಿದ್ದಿಲ್ಲ. ಈ ೨೪ ಹಳ್ಳಿಗಳಲ್ಲಿ ಸರ್ಕಾರ ಪೂರ್ಣವಾಗಿಯು ಈ ವರ್ಷ ಸಾಕಷ್ಟಿವೆ. (1) ಬಳ್ಳಾರಿ ಶಿರಗುಪ್ಪಿ ಆಲೂರು ರಾಯದುರ್ಗ ಹರಪನಹಳ್ಳಿ ಹಡಗಲಿ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿರುವ 167 ಹಳ್ಳಿಗಳಲ್ಲಿ 100 ಕ್ಕೆ ೫ ರಾಶಿಯೂ ( ) ಇವೇ ತಾಲೂಕುಗಳಲ್ಲಿಯ ಬೇರೆ ೨8 ಹಳ್ಳಿಗಳಲ್ಲಿ 100 ಕ್ಕೆ ೨0 ರಾಶಿಯೂ, (೩) ಮತ್ತು ಈ ತಾಲೂಕುಗಳಲ್ಲಿಯ ಬೇರೆ 103 ಹಳ್ಳಿಗಳಲ್ಲಿ ೨೫ ರೂಪಾಯಿಯೂ ವಜಾಮಾಡಬೇಕೆಂದು ಶಿಫಾರಸು ಮಾಡಿದ್ದಾರೆ. ಸರಕಾರದವರು ಬೋರ್ಡಿನವರ ಅಭಿಪ್ರಾಯದಂತೆ ಅಧಿಕಾರಿಗಳಿಗೆ ಹುಕುಂ ಕೊಟ್ಟಿರುವರೆಂದು ತಿಳಿದು ಬಂದಿದೆ.

ಸ್ವೀಕಾರ

ಧಾರವಾಡ ಜಿ|| ಗದಗ ಬೆಟಗೇರಿ ನಿವಾಸಿಗಳಾದ ಮ|| ರಾ| ಕರಿಯಪ್ಪ ಕೊರ್ಲಹಳ್ಳಿ ಇವರ ಪುತ್ರಿ ಚಿ|| ಕುಂ|| ಸೌ|| ವೀರವ್ವನನ್ನು ಗದಗಿನಲ್ಲಿರುವ ಮ|| ರಾ|| ಮಲಕಪ್ಪ ಕಪ್ಲಿ ಇವರ ಪುತ್ರ ಚಿ| ಸ|| ವೀರಪ್ಪನಿಗೆ ಕೊಟ್ಟು ನೆರವೇರಿಸಿದ ದೊಡ್ಡ ಕಾರಣದಲ್ಲಿ ವರದಕ್ಷಿಣೆಯಿಂದ ತೆಗೆಯಿಸಿದ 2 ರೂ ಕನ್ಯೆಯಿಂದ ತೆಗೆಯಿಸಿದ 1 ರೂ ಇದೇ ಗ್ರಾಮದಲ್ಲಿರುವ ಅಂಗಡಿ ಚಿಕ್ಕಯ್ಯನವರ ಮಕ್ಕಳವರಾದ ಮ|| ರಾ|| ಮಲ್ಲಪ್ಪನ ಪುತ್ರಿಯನ್ನು ಯಾವಗಲ್ಲು ಗ್ರಾಮದಲ್ಲಿರುವ ಮ|| ರಾ|| ತಿಪ್ಪಣ್ಣನ ಪುತ್ರ ವೀರಪ್ಪನಿಗೆ ಕೊಟ್ಟು ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ವಧೂವರರಿಂದ ತೆಗೆಯಿಸಿದ 2 ರೂ ಒಟ್ಟು 5 ರೂ ಗಳು ಬೆಟಗೇರಿ ಹಿರೇಮನಿ ಪಾಟೀಲ ಮ|| ರಾ|| ಸಿದ್ದಪ್ಪಗೌಡರ ದ್ವಾರಾ ತಲ್ಪಿರುತ್ತವೆ.

ಗದಗ ಶಹರ ನಿವಾಸಿಗಳಾದ ವೇ|| ಶಿವಲಿಂಗಾರ್ಯ ಸಿದ್ಧಶಿವಾರ್ಯ ಗುರುಸ್ವಾಮಿ ಮಠ ಇವರ ಪುತ್ರ ಚಿ| ಶ್ರೀಕರನಿಗೆ ೮ ವರ್ಷಗಳು ಮುಗಿದು ಇದೇ ಪುಷ್ಯ ಬ|| ೭೦ ತಿಥಿಗೆ ಒಂಭತ್ತನೆಯ ವರ್ಷವು ಪ್ರಾರಂಭವಾಗಿ ನೆರವೇರಿದ ವರ್ಧಂತ್ಯುತ್ಸವದ ಸಮಾರಂಭಕಾಲದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂಪಾಯಿಗಳು ಶ್ರೀ|| ಷ|| ಬ್ರ|| ಹಡಗಲಿ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ನಿ ವೇ ದ ನ.

ಕಡೂರು ತಾಲ್ಲೂಕು ಕಂಚಾಗರದ ಎಸ್ಟೇಟ್ ಶಿವಾನಂದಾಶ್ರಮದಲ್ಲಿ 193೫ನೇ ಮಾರ್ಚಿ ೩೧ನೇ ತಾರೀಖು ಏಪ್ರಿಲ್ 1 ವಾರದವರಿಗೆ ನಡೆಯುವ ಶ್ರೀ ಮರುಳಸಿದ್ಧೇಶ್ವರಸ್ವಾಮಿಯವರ ಜಾತ್ರೆಕಾಲದಲ್ಲಿ ದನ ಮತ್ತು ಕುರಿಗಳ ಪ್ರದರ್ಶನವು ಸಾಹಿತ್ಯ ಮತ್ತು ವೀರಶೈವ ಸಮ್ಮೇಳನಗಳು ನಡೆಯುವಂತೆ ಏರ್ಪಡಿಸಿರುವುದಾಗಿ ಈ ಹಿಂದೆ ಪ್ರಕಟಿಸಿದ್ದು ಸರಿಯಷ್ಟೆ!

ಕಡೂರು ಡಿಸ್ಟ್ರಿಕ್ಟಿನಲ್ಲಿ ಕೆಲವು ಕಡೆ ಪ್ಲೇಗು ಮತ್ತು ಸಿಡುಬಿನ ಉಪದ್ರವವು ಇರುವುದರಿಂದ ಸಾರ್ವಜನಿಕ ಆರೋಗ್ಯಕ್ಕೆ ಭಂಗಬರುವುದೆಂದು ತಿಳಿದು ಜನಗಳ ಸಮೂಹವು ಸೇರುವುದಕ್ಕೆ ಅವಕಾಶವಿಲ್ಲದಂತೆ ಅಂತಗಟ್ಟೆ ಕಳಸ ವಗೈರೆ ಜಾತ್ರೆಗಳನ್ನು ಸರಕಾರದವರು ನಿಲ್ಲಿಸಿರುತ್ತಾರೆ. ಪ್ರಯುಕ್ತ ಈ ಸಮ್ಮೇಳನಗಳಿಗೆ ಸಂಬಂಧಪಟ್ಟ ಸ್ವಾಗತಸಂಘದವರು 17 2 35 ರಲ್ಲಿ ಆಶ್ರಮದಲ್ಲಿ ನಡೆಯಿಸಿದ ಮೀಟಿಂಗಿನಲ್ಲಿ ಈ ಮೇಲ್ಕಂಡ ಕಾರಣಗಳಿಂದ ಜಾತ್ರೆ ಮತ್ತು ಸಮ್ಮೇಳನಗಳನ್ನು ಮಾರ್ಚಿ ತಿಂಗಳಲ್ಲಿ ನಡೆಯಿಸುವುದಕ್ಕೆ ಬದಲಾಗಿ ಏಪ್ರಿಲ್ 2 ನೇ ವಾರದಲ್ಲಿ ನಡಯಿಸಬೇಕೆಂದು ತೀರ್ಮಾನಮಾಡಿರುತ್ತಾರೆಂಬ ವಿಷಯವನ್ನು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸಿರುತ್ತೇವೆ.

ಚಿಕ್ಕಮಗಳೂರು, 20-2 35 } ಬಿ ಬಸವಲಿಂಗಯ್ಯ, ಸೆಕ್ರಟರಿ

ನಮಃ ಶಿವಜಗದ್ಗುರುಭ್ಯಃ

ಏಕೇಶ್ವರೀಭಕ್ತಿ.

(ಹಿಂದಿನಿಂದ ಮುಂದೆ ಸಾಗಿದುದು)

ಇಲ್ಲ ನನಗೆ ಫಲವು ಸಿಕ್ಕುವದೋ ಇಲ್ಲ ಸಿಕ್ಕುವದೋ ಎಂದು ಭ್ರಾಂತಿಪಡುವವರಿಗೆ 'ಅಗಸನ ನಾಯಿಯು ಹಳ್ಳವನ್ನೂ ಕಾಯಲಿಲ್ಲ ಮನೆಯನ್ನೂ ಕಾಯಲಿಲ್ಲ' ಎಂಬ ನಾಣ್ಣುಡಿಯಂತೆ ದುಃಖಿಗಳಾಗುವದರಲ್ಲಿ ಸಂಶಯವಿಲ್ಲ. ಉದಾಹರಣಾರ್ಥವಾಗಿ—ಒಂದು ನದಿಯ ದಂಡೆಯ ಮೇಲೆ ೫ ಜನರು ಕುಳಿತಿದ್ದು ನದಿಯನ್ನು ದಾಟುವ ಯುಕ್ತಿಯಲ್ಲಿದ್ದರು. ನದಿಯು ಸಂಪೂರ್ಣ ತುಂಬಿತ್ತು. ದಾಟಲು ನೌಕೆಯ ಸಹಾಯವಿದ್ದಿಲ್ಲ. ಅವರಿಗೆ ನದಿಯ ಆಚೆಗೆ ಹೋಗದೆ ಗತ್ಯಂತರವಿರಲಿಲ್ಲ. ದೇವರ ಇಚ್ಛೆ ಇದ್ದಂತಾಗಲೆಂದು ನಾಲ್ಕು ಜನರು ಎದ್ದರು. ಒಬ್ಬನು ಪರಮಶಿವಭಕ್ತನಾದುದರಿಂದ 'ಹರಹರ ಮಹಾದೇವ' ಎನ್ನುತ್ತಲೂ ಇನ್ನೊಬ್ಬನು ವೈಷ್ಣವನಾದುದರಿಂದ 'ನಾರಾಯಣ' ಎನ್ನುತ್ತಲೂ ಮೂರನೆಯವನು ಕೇವಲ ಪಾರ್ವತೀಭಕ್ತನಾದುದರಿಂದ 'ಜಯ ಭವಾನಿ' ಎನ್ನುತ್ತಲೂ ನಾಲ್ಕನೆಯವನು ಮಹಮ್ಮದೀಯನಾದುದರಿಂದ 'ಅಲ್ಲಾ ಹೋ ಅಕಬರ' ಎನ್ನುತ್ತಲೂ ತಮ್ಮ ತಮ್ಮ ಮುಖ್ಯದೇವತೆಗಳನ್ನು ಸ್ಮರಿಸುತ್ತಾ ಆಚೆಯ ದಡವನ್ನು ಸೇರಿದರು. ಐದನೆಯವನು ಇವರನ್ನು ನೋಡಿ ಆಶ್ಚರ್ಯವಾಗಿ ನಾಲ್ಕು ಜನರು ದಾಟಿದರು ನನಗೆ ದಾಟಲಿಕ್ಕೆ ಬರುವದಿಲ್ಲವೇ ನಾನೂ ಹಾಗೆಯೇ ಅನ್ನುತ್ತ ದಾಟುವೆನೆಂದು ಸಿದ್ಧನಾದನು. ಇವನು ಶಿವಭಕ್ತನಾದುದರಿಂದ ಮೊದಲು 'ಹರಹರ ಮಹಾದೇವ' ಎಂದನು, ಮೊಳಕಾಲಿಗೆ ನೀರು ಬರಿತು. ಈ ನಾಮದಲ್ಲಿ ಏನು ಶಕ್ತಿಯಿಲ್ಲವೆಂದು ಭಾವಿಸಿ 'ಹರಿನಾರಾಯಣ' ಎಂದನು. ಸೊಂಟಕ್ಕೆ ನೀರು ಹತ್ತಿತು. ಆ ಮೇಲೆ 'ಜಯ ಭವಾನಿ' ಎಂದನು. ಎದೆಗೆ ಬಂದಿತು. ಇದೇನು ಆ ನಾಲ್ವರು ಭೂಮಿಯ ಮೇಲೆ ನಡೆದಂತೆ ನಡೆಯುತ್ತಾ ಹೋದರು. ನಾನು ಆಯಾ ದೇವರ ಹೆಸರನ್ನು ಹಿಡಿಯುತ್ತ ಬಂದಹಾಗೆಲ್ಲ ನೀರು ಮೇಲೆ ಏರಹತ್ತಿತು. ಈ ನಾಮಗಳಲ್ಲಿ ಏನೂ ಅರ್ಥವಿಲ್ಲವೆಂದು 'ಅಲ್ಲಾ ಹೋ ಅಕಬರ' ಎಂದು ನುಡಿದನು. ಆಗ ಕಂಠಕ್ಕೆ ನೀರು ಬಂದು ಹರಿದುಹೋದನೆಂದು ಒಂದು ಕಥೆಯುಂಟು. ಅದರಂತೆ ಈ ಭವಸಾಗರವನ್ನು ದಾಟಲು ದೇವರ ಧ್ಯಾನವು ಅವಶ್ಯವಾಗಿರುತ್ತದೆ. ಆದರೆ ಅದು ಏಕರೂಪ ಧ್ಯಾನವಾಗಿರಬೇಕು. ಆದ್ದರಿಂದ ವೀರಶೈವ ಮತದ ಗುರುಗಳಾದ ನಾವು ಈಶ್ವರನ ಹೊರತು ಅನ್ಯದೇವತೆಗಳ ಸ್ಮರಣವನ್ನು ಎಂದೂ ಮಾಡಬಾರದು. ಹೀಗೆ ಅನೇಕ ದೇವತೆಗಳ ಬೆನ್ನುಬಿದ್ದರೆ ಆ ನದಿ ದಾಟುವ ಐದನೆಯವನ ಗತಿಯಾಗುವದು.

ನಮ್ಮ ಭರತಖಂಡದಲ್ಲಿ ನಡೆವ ಹಬ್ಬಗಳೆಲ್ಲ ಈಶ್ವರನ ಹಬ್ಬಗಳೇ ಆಗಿರುತ್ತವೆ. ಯುಗಾದಿ ಹಬ್ಬವು—ಪೂರ್ವದಲ್ಲಿ ದೇವತೆಗಳೂ ದೈತ್ಯರೂ ಸಮುದ್ರವನ್ನು ಮಂಥನಮಾಡಿದಾಗ್ಗೆ ಹಾಲಾಹಲ ವಿಷವು ಉತ್ಪನ್ನವಾಯಿತು. ಆಗ ಪರಶಿವನು ಅದನ್ನು ಕುಡಿದನು. ಆ ಸ್ಮಾರಕವಾಗಿ ಈ ಯುಗಾದಿ ಹಬ್ಬದಲ್ಲಿ ಸರ್ವರೂ ಬೇವಿನ ಎಲೆಗಳನ್ನು ತಿನ್ನುವರು. ವಿಷವು ಕಹಿಯಾಗಿರುವದರಿಂದ ಕಹಿಯಾದ ಬೇವನ್ನು ತಿನ್ನುವರು.

ವೈಶಾಖಮಾಸದಲ್ಲಿ ಪರಮಾತ್ಮನ ಪ್ರೀತಿಪಾತ್ರರಾದ ಶ್ರೀ ಜಗದ್ಗುರು ಏಕೋರಾಮಾರಾಧ್ಯರೂ ಶ್ರೀ ಜಗದ್ಗುರು ಮರುಳಾರಾಧ್ಯರೂ ಅವತರಿಸಿರುವಂತೆ ಕೇವಲ ಈಶ್ವರನ ಧ್ಯಾನಿಗಳೂ ಶಿವನನ್ನು ಸ್ಮರಿಸುವ ಶಂಕರಾಚಾರ್ಯರೂ ಅವತರಿಸಿರುತ್ತಾರೆ. ಈ ಅವತಾರಿಗಳ ಜಯಂತೀರೂಪ ಹಬ್ಬಗಳು ಅಟ್ಟಹಾಸದಿಂದ ನೆರವೇರುತ್ತವೆ.

ತಾರಕಾಸುರನೆಂಬ ರಾಕ್ಷಸನು ವಿಶೇಷ ರೀತಿಯಿಂದ ಜಗತ್ತಿಗೆ ಬಾಧಿಸುತ್ತಿರುವಾಗ್ಗೆ ಸರ್ವರೂ ಪರಶಿವನ ಮೊರೆಯಿಡಲು ಆಗ್ಗೆ ಪರಶಿವನು ಈ ರಾಕ್ಷಸನ ವಧೆಯನ್ನು ಮಾಡಲಿಕ್ಕೆ ಯಾರು ಹೋಗುತ್ತೀರೆಂದು ಎಲ್ಲಾ ದೇವತೆಗಳನ್ನು ವಿಚಾರಿಸಲು ಆ ರಾಕ್ಷಸನು ಮಹಾದುಷ್ಟನಿರುವ ಮೂಲಕ ಯಾರೂ ಏಳಲಿಲ್ಲ. ಆಗ ಪರಶಿವನು ನಾನು ಹುಗ್ಗಿಯಲ್ಲಿ ಹೊನ್ನಿನ ಉಂಗುರವನ್ನು ಹಾಕಿ ನೀಡಿಸುವೆನು. ಆ ಉಂಗುರವು ಯಾರ ಪಾಲಿಗೆ ಬರುವದೋ ಅವರು ಆ ರಾಕ್ಷಸನನ್ನು ಕೊಲ್ಲಲಿಕ್ಕೆ ಹೋಗಿಯೇ ತೀರಬೇಕೆಂದು ಕಟ್ಟಪ್ಪಣೆಮಾಡಿ ಹುಗ್ಗಿಯನ್ನು ನೀಡಿಸಲು ಆ ಹೊನ್ನಿನ ಉಂಗುರವು ನಂದೀಶ್ವರನಿಗೆ ಬರಲು ಅವನು ಆಶೀರ್ವಾದವನ್ನು ಪಡೆದು ರಾಕ್ಷಸನ ಸಂಹಾರಕ್ಕೋಸುಗ ಹೊರಟನು. ನಂದಿಯು ರಾಕ್ಷಸನೊಡನೆ ಘೋರವಾದ ಯುದ್ಧವನ್ನು ಮಾಡಿ ಅವನನ್ನು ಕೊಂದು ಅವನ ಶರೀರವನ್ನು ತನ್ನ ಕೋಡಿನಲ್ಲಿಟ್ಟುಕೊಂಡು ಬಂದು ಪರಮಾತ್ಮನಿಗೆ ನಮಿಸಲು ಪರಶಿವನು ಆನಂದಭರಿತನಾದನು. ಈ ಸ್ಮಾರಕವಾಗಿ ಭೂಲೋಕದಲ್ಲಿ "ಕಾರಹುಣ್ಣಿವೆ" ಯೆಂದು ಪ್ರಸಿದ್ಧವಾಯಿತು. ಕಾರಹುಣ್ಣಿವೆಯ ಮೊದಲಿನ ದಿವಸವು "ಹೊನ್ನುಗ್ಗಿ" ಎಂದು ಪ್ರಸಿದ್ಧವಿದೆ. ಕಾರಹುಣ್ಣಿವೆಯ ದಿವಸ ನಂದಿ ಸ್ವರೂಪಿಗಳಾದ ಎತ್ತುಗಳನ್ನು ಶೃಂಗರಿಸಿ ಪೂಜಿಸಿ ವಿಶೇಷ ವೈಭವದೊಡನೆ ಮೆರೆಯಿಸುವರು.

ಓರ್ವ ರಾಜನಿಗೆ ಬಹು ದಿವಸಗಳಿಗೆ ಒಬ್ಬನೇ ಪುತ್ರನು ಹುಟ್ಟಿದ್ದ, ಅವನ ಜಾತಕದಲ್ಲಿ ಹುಲಿಯನ್ನು ನೋಡಿದರೆ ಇವನಿಗೆ ಮರಣವೆಂದು ಬರೆದಿತ್ತು. ಆದ್ದರಿಂದ ರಾಜನು ತನ್ನ ಮಗನನ್ನು ಎಲ್ಲಿಯೂ ಕಳಿಸುತ್ತಿರಲಿಲ್ಲ. ಆ ಹುಡುಗನು ೧೬ ವರ್ಷದವನಾದನು. ಪರಮ ಶಿವಭಕ್ತನಾದ ರಾಜನು ತನ್ನ ಮನೆಯ ಹೊಂದಿಗೆ 'ಶಂಕರಲಿಂಗ' ವೆಂಬ ದೇವಾಲಯವನ್ನು ಕಟ್ಟಿಸಿದ್ದನು. ಆ ದೇವರ ದರ್ಶನಕ್ಕೆಂದು ಹೋದ ಅವನ ಮಗನು ದೇವರ ದರ್ಶನವನ್ನು ಹೊಂದಿ ಮರಳಿ ಬರುವಾಗ್ಗೆ ಗೋಡೆಯ ಮೇಲಿರುವ ಚಿತ್ರಗಳನ್ನೆಲ್ಲ ನೋಡುತ್ತ ನೋಡುತ್ತ ಅಲ್ಲಿ ಬರೆದ ಹುಲಿಯ ಚಿತ್ರವನ್ನು ನೋಡಿ ಮರಣಹೊಂದಿದನು. ಇದನ್ನು ಕೇಳಿ ವೃದ್ಧನಾದ ಅರಸನು ದುಃಖಿತನಾಗಿ ಅಂತ್ಯವಿಧಿಯಲ್ಲಿ ಅಶಕ್ತನಾದನು. ಕೆಲವು ಪುರಜನರು ರಾಜನನ್ನು ಕುರಿತು—ಎಲೈ ರಾಜನೇ! ನಿನ್ನ ಪುತ್ರನಿಗೆ ಲಗ್ನಮಾಡಬೇಕೆಂದು ನಮ್ಮ ಇಚ್ಛೆಯುಂಟಿರಲು—ಈ ಶವಕ್ಕೆ ವಿವಾಹ ಮಾಡಿದರೆ ಯೋಗ್ಯವಾದೀತೇ? ನಾನು ಮಾಡಲಿಕ್ಕೆ ಸಿದ್ಧನಾದರೆ ಮಾಡಿಕೊಳ್ಳುವವರಾರು? ವಧುವನ್ನು ಕೊಡುವವರಾರು? ಎಂದು ನುಡಿದನು. ಆಗ ರಾಜಾಜ್ಞಾನುಸಾರವಾಗಿ "ರಾಜನ ಮೃತಪುತ್ರನಿಗೆ ಮದುವೆ ಮಾಡುವದಿದೆ. ಯಾರು ಹೆಣ್ಣು ಕೊಡುವರೋ ಅವರಿಗೆ ಆ ಹೆಣ್ಣಿನ ತೂಕ ಹಣವನ್ನು ಕೊಡುವೆವು" ಎಂದು ಡಂಗುರ ಹೊಯಿಸಲು ಇದನ್ನು ಕೇಳಿದ ಓರ್ವ ಬಡವನು ತನ್ನ ಅಷ್ಟ ಪುತ್ರಿಯರಲ್ಲಿ ೯ ವರ್ಷದವಳೊಬ್ಬಳನ್ನು ಕೊಟ್ಟನು. ಲಗ್ನಾಂತ ಮೇಲೆ ಮೆರವಣಿಗೆಯನ್ನು ತೆಗೆದು ಕಡೆಗೆ ಸ್ಮಶಾನಕ್ಕೆ ಒಯ್ದರು. ಆಗ್ಗೆ ಧ್ರುಂಧುರ ಮಾರುತವು ಬೀಸಿ ಸರ್ವರ ಕಣ್ಣು ಮುಚ್ಚಿಬಿಟ್ಟಿತು. ತರುವಾಯ ದೊಡ್ಡ ಮಳೆಯು ಬರಲು ಮಕ್ಕಳಾಗಲು ಎಲ್ಲರೂ ಶವ ಸಂಸ್ಕಾರವನ್ನು ನೆರವೇರಿಸದೆ ಬಿಟ್ಟೋಡಿದರು. ಮೃತನಾದ ಪತಿಯ ಸಮೀಪದಲ್ಲಿ ಆ ೯ ವರ್ಷದ ಹುಡುಗಿಯು ಶೋಕಿಸುತ್ತ ಕುಳಿತಿರೆ ರಾತ್ರಿ ೧೨ ಘಂಟೆಯಾಗಿದ್ದು ಕಗ್ಗತ್ತಲೆಯಾಗಿದೆ. ಆಗಾಗ್ಗೆ ಕೋಲು ಮಿಂಚು ಹೊಡೆಯುತ್ತಿದೆ. ಆಗ ಆ ಬಾಲೆಯು ಮಣ್ಣಿನ ನಂದಿಮೂರ್ತಿಯನ್ನು ಮಾಡಿ ಅದಕ್ಕೆ ತನ್ನ ಕೊರಳಲ್ಲಿರುವ ಆಭರಣಗಳನ್ನೆಲ್ಲ ಹಾಕಿ ಭಕ್ತಿಪುರಸ್ಸರವಾಗಿ ಭಜಿಸಲು ನಂದೀಶ್ವರನು ಪ್ರತ್ಯಕ್ಷನಾಗಿ ಬಾಲೆಯ ಇಚ್ಛೆಯಂತೆ ಮೃತನಾದ ಪತಿಯು ಜೀವಿತನಾಗಿ ಆತಾ ನಂದಿಯಿಂದ ರಾಜ್ಯವಾಳಿದನಂತೆ. ಆ ಬಾಲೆಯು ಮಣ್ಣಿನ ಎತ್ತನ್ನು (ನಂದಿಯನ್ನು) ಮಾಡಿ ಪತಿಯನ್ನು ಪಡೆದುದಕ್ಕಾಗಿ ಮಣ್ಣೆತ್ತಿನ ಅಮಾವಾಸ್ಯೆ ಪ್ರಸಿದ್ಧವಿರುವದು. ಈ ಹುಡುಗಿಯ ಹೆಸರು ಗುಳ್ಳವ್ವ. ಇದರಿಂದ ಈಗಲೂ ಮಹಾರಾಷ್ಟ್ರ ಭಾಗದಲ್ಲಿ ಗುಳ್ಳವ್ವನ ಆಡಲಾಕ ಹೋಗುತೀನಿ ಎಂದು ಚಿಕ್ಕ ಹುಡುಗಿಯರು ಮಣ್ಣಿನ ಗೊಂಬೆಗಳನ್ನು ಮಾಡಿ ಅದಕ್ಕೆ ಗುಲಗಂಜಿ ಕಣ್ಣಿರಿಸಿ ಹಚ್ಚಿ ಆಡುವ ಸಂಪ್ರದಾಯವಿದೆ.

ಶ್ರಾವಣಮಾಸದಂತೂ ಕೇವಲ ಈಶ್ವರನ ಮುಖ್ಯ ಹಬ್ಬವಾಗಿದೆ. ಹಾಲು ಸೇವಿಸಿ ಕೇವಲ ಅರಳೆಯ ಚಂದಿಯನ್ನು ಸುತ್ತಿಕೊಂಡು ಕಾಲವನ್ನು ಕಳೆಯುವ ಯೋಗಿಗೆ ವಿಷವನ್ನುಂಟುಮಾಡುವದಕ್ಕೆ ನಾಗೇಂದ್ರಕುಲವು (ಐದು ಸರ್ಪಗಳು) ಬರಲು ಅವುಗಳನ್ನು ಸುಟ್ಟು ಜೋಳದ ಅರಳುಮಾಡಿದನಂತೆ. ಆ ಸರ್ಪಗಳ ಹೆಡೆಗಳು ಕೊಟ್ಟು ಬಿಟ್ಟು ಬಾಗಿಳಾದವಂತೆ. ಅನಂತರ ಶಿವನು ಮೆಚ್ಚಿ ವರವನ್ನಿತ್ತನಂತೆ. ಇದು "ನಾಗಪಂಚಮಿ" ಎಂದು ಪ್ರಸಿದ್ಧವಿದೆ.

(ಸಶೇಷ)

ಶ್ರೀ ಪಟ್ಟಾಭಿಷಿಕ್ತ ಬಸಪ್ಪರ ಹೋಟಗಿ

ಶ್ರೀ ಜಗದ್ಗುರು ದಾರುಕಾಚಾರ್ಯೇಭ್ಯೋ ನಮಃ

ಮಹನೀಯರ ಹಿತೋಕ್ತಿಗಳು

೧ ಎಷ್ಟೇ ಶೋಷವಾಗಲಿ ನಿನ್ನ ಮನೋವಾಂಛೆಯಗಳಲ್ಲಿ ಯುಕ್ತ ಮಾಡಿಸಾಗಿರುವುದೆಷ್ಟು ಅಭ್ಯಾಸವಾಗಲಿ.

೨ ನಿನ್ನ ಆಯುರ್ದಾಯದಲ್ಲಿ ಬರುವ ಸುಖದುಃಖಗಳಿಂದ ತಿಳುವಳಿಕೆಯೂ ವಿವೇಕವೂ ಬರುವವು. ತನ್ನಲ್ಲಿ ಅಡಗಿದ ಶಕ್ತಿ ವಿವೇಕಗಳನ್ನು ವೃದ್ಧಿಪಡಿಸಿಕೊಳ್ಳುವುದಕ್ಕಾಗಿ ಈ ಕಷ್ಟಸುಖಗಳು ಸಹಾಯವಾಗುವವು.

೩ ನಿನಗೇನಾದರೂ ಸಂಕಟಬಂದರೆ ಪರರ ಸಂಕಟಗಳನ್ನು ಅರಿಯುವ ಶಕ್ತಿಯು ನಿನಗೆ ಬರುವುದಕ್ಕಾಗಿ ಅದು ಬಂದಿದೆ ಎಂದು ತಿಳಿ. ನೀನು ಅಂಥ ಸಂಕಟವನ್ನು ಅನುಭವಿಸಿರುವುದರಿಂದ ಇತರರಿಗೆ ಅವಿಧವಾದ ಸಂಕಟವು ಬಂದಾಗ ಅವನ್ನು ದರೂ ನೀನು ತಿಳಿದುಕೊಳ್ಳಬಹುದು.

೪ ನಿನಗೆ ಭಗವಂತನು ಅನುಗ್ರಹಿಸಿದ ಶಕ್ತಿಯಿದ್ದಮಟ್ಟಿಗೆ ಜ್ಞಾನ ಬುದ್ಧಿಯಿಂದಲೂ ನಿರಭಿಮಾನದಿಂದಲೂ ಪರಮಾತ್ಮನ ಸೇವೆಯನ್ನು ಮಾಡುತ್ತಿರು. ಪ್ರತಿಯೊಬ್ಬನಲ್ಲಿಯೂ ದೈವತ್ವ ಮತ್ತು ಮಗಳಿಂದ ವರ್ತಿಸುವ ಸದ್ಗುಣಗಳನ್ನು ವೃದ್ಧಿಗೊಳಿಸುತ್ತಿರು.

೫ ನಮ್ಮ ಎಷ್ಟನ್ನು ಅನ್ಯರಿಗೆ ಬಿಟ್ಟುಕೊಡುವುದರಿಂದ ಅವರಿಗೇನಾದರೂ ಸಂತೋಷವೂ ಸುಖವೂ ಉಂಟಾಗುವದಾದರೆ ಹಾಗೆ ಮಾಡುವದೇ ಒಳ್ಳೆಯದು. ಇದು ಉತ್ತಮರ ಲಕ್ಷಣವು.

೬ ಒಂದೆ ನಡೆವಷ್ಟನ್ನು ಯೋಚಿಸಿಕೊಳ್ಳುವಳಿಯದನ್ನು ಅದರಿಂದ ಬರಿಯ ಆಯಾಸವು ಆಗುವದೆಂಬ ತಿಳುವಳಿಕೆಯಿಂದಲೂ ಏನಾದರೂ ದೊರಕಿದರೆ ಆಗುವ ಅತಿಹರ್ಷವು ಅದಕ್ಕೆ ಸಂಕಟವಾಗಲುಹುದೆಂಬ ಬುದ್ಧಿಯು ದಲೂ ಮುಂದೆ ಏನಾಗುವದೋ ಎಂಬ ಚಿಂತೆಯನ್ನು ಪ್ರಪಂಚಕರ್ಮದಂತೆ ... ಎಂಬ ಅರಿವಿನಿಂದಲೂ ತಿಳಿದುಕೊ.

೭ ದುಃಖವು ಸಂಕಟಗಳು ಅತ್ಯಂತ ತೀವ್ರವಾಗಿ ಪರಿಣಮಿಸಿದರೆ ಅತಿಹಿತಕರವಾದ ಒಂದು ಮಾರ್ಗವು ಉದಯವಾಗುತ್ತಲಿದೆ ಎಂದು ತಿಳಿ.

೮ ನಾವೀ ಜಗತ್ತಿಗೆ ... ಬಂದಿರುವೆವು ಮತ್ತು ಇಲ್ಲಿಂದ ... ಎಂಬುದನ್ನು ಮರೆಯಲಾಗದು ... ಲಕ್ಷ್ಯವನ್ನು ಸೋದರ ಮಿತ್ರ ಮೊದಲಾದ ಸಂಬಂಧಿಕರನ್ನು ಎಂದಿಗೂ ನಮ್ಮೊಡನೆ ತರುವುದಿಲ್ಲ. ಈ ಲೌಕಿಕ ಜೀವನವನ್ನು ಮುಗಿಸಿಕೊಂಡು ಹೋಗುವಾಗ ಅವನ್ನು ನಮ್ಮ ಸಂಗಡ ತೆಗೆದುಕೊಂಡು ಹೋಗುವುದೂ ಇಲ್ಲ.

೯ ಸೂರ್ಯನಿಲ್ಲದ ಹಗಲು ಹೇಗೆ ಪ್ರಕಾಶಿಸಲಾರದೋ ಹಾಗೆಯೇ ಪರೋಪಕಾರವಿಲ್ಲದೆ ನಮ್ಮ ಜನ್ಮವು ಪ್ರಕಾಶಿಸಲಾರದು.

೧೦ ನಾವು ಸಾವಿರಾರು ವರ್ಷ ಬದುಕಲಿಕ್ಕೂ ಇಚ್ಛಿಸಿ ಯಾವತ್ತೂ ಸಾಂಸಾರಿಕವಸ್ತುಗಳನ್ನು ಹೊಂದಲಿಕ್ಕೂ ಅವೆಲ್ಲವೂ ಲೌಕಿಕ ವಸ್ತುಗಳನ್ನು ಅನುಭವಿಸಬೇಕೆಂಬ ಇಚ್ಛೆ ನಾಶವಾಗುವವರೆಗೆ ನಾವು ಎಂದಿಗೂ ಸುಖಿಗಳಾಗಲಾರೆವು.

೧೧ ಶಾಶ್ವತನಾಗಿರುವುದಕ್ಕೆ ನಾಶವಿಲ್ಲ, ನಶ್ವರವಸ್ತುವು ನಾಶವಾಗದೆ ಇರುವುದಿಲ್ಲ. ಆದುದರಿಂದ ಮುದುಹೋದವರಿಗಾಗಿ ಮರುಗುವುದೇತಕ್ಕೆ? ಮರಣವೂ ಜನ್ಮವೂ ನಮಗೆ ಸತ್ಯಬೋಧವನ್ನುಂಟುಮಾಡುತ್ತಿರುವವು. ಅದುಕಾರಣ ಈ ಸಂಘಟನೆಗಳೆಲ್ಲವೂ ನಮ್ಮ ಹಿತಕ್ಕೇ ಆಗುವವೆಂದು ತಿಳಿ.

೧೨ ನಿನಗೆ ಮೂವರೊಳಗೆ ಅರು ಹಿತರು? ನಾರಿಯೋ ಧಾರಿಣಿಯೋ? ಬಲುಧನದ ಸಿರಿಯೋ? ಈ ಮೂವರೂ ನಶ್ವರವಾದವುಗಳು. ಮೋಕ್ಷದಾಯಕನಾದ ಸದ್ಗುರುವೇ ಹಿತಕರನು.

೧೩ ಮುತ್ತನ್ನು ತೆಗೆದಿಟ್ಟುಕೊಂಡು ಮುತ್ತನ್ನು ಬಿಸಾಡುವಂತೆ ನೀನು ನಿನ್ನ ಗುರುಗಳ ಮುಕ್ತೋಪದೇಶವಂತೆ ನಡೆದುಕೊಂಡು ಮುಕ್ತನಾಗು ಮತ್ತು ಅವರ ಗುಣದೋಷಗಳನ್ನು ಗಣನೆಗೆ ತಾರದಿರು.

೧೪ ಕಣ್ಣು ಕಿವಿಗಳನ್ನು ತೆರೆದಿಡಬೇಕು. ನಾಲಗೆಯನ್ನು ಮಾತ್ರ ಬಿಗಿಹಿಡಿಯಬೇಕು. ಅಯೋಗ್ಯವೆಂದು ಕಂಡುಬಂದರೆ ಕಿವಿಯಿಂದ ಕೇಳಿದ್ದನ್ನೂ ಕಣ್ಣಿನಿಂದ ಕಂಡದ್ದನ್ನೂ ಬಾಯಿಯಿಂದ ಆಡಲಾಗದು.

೧೫ ಎರಡನೆಯವರ ತಪ್ಪುಗಳನ್ನು ಹೊರಗೆಡಹುವುದರಲ್ಲಿ ನಮ್ಮ ಕುಶಲತೆಯನ್ನು ತೋರಿಸುವುದಕ್ಕಿಂತಲೂ ನಮ್ಮ ತಪ್ಪುಗಳನ್ನು ನೋಡಿ ತಿದ್ದಿಕೊಂಡು ಸಜ್ಜನರ ಗುಣಶೀಲಾದಿಗಳನ್ನು ಅನುಕರಣ ಮಾಡುವುದರಲ್ಲಿ ಜಾಣ್ಮೆಯನ್ನು ತೋರಿಸಬೇಕು.

೧೬ ಪರರಿಗೆ ಕೇಡಾಗುವ ಯೋಚನೆಯನ್ನು ತ್ಯಜಿಸು. ನಿನ್ನ ಆಲೋಚನೆಗಳು ನಿರ್ದುಷ್ಟವಾಗಿಯೂ ಇರಲಿ. ನಿನ್ನ ಮಾತೂ ಸಹ ಹಾಗೆಯೇ ಇರಬೇಕು. ನಿನ್ನ ಸುಖಕ್ಕಾಗಿ ಇತರರಿಗೆ ತೊಂದರೆಕೊಡಬೇಡ.

೧೭ ಕುಗ್ಗುವದನ್ನೂ ಹಿಗ್ಗುವದನ್ನೂ ಬಿಡು. ಮಧ್ಯಮಾರ್ಗವನ್ನು ಹಿಡಿ. ಪರರು ನಿನಗೆ ಮಾಡುವ ಕೆಡುಕಿನವಿಷಯದಲ್ಲಿ ನಿನ್ನ ಆಗ್ರಹವನ್ನು ತಗ್ಗಿಸು. ಕರ್ಮಾನುಗುಣವಾಗಿ ಭಗವಂತನಿಂದ ಕೊಡಲ್ಪಟ್ಟ ಫಲದಲ್ಲಿ ಸಂತೃಪ್ತನಾಗಿರು.

೧೮ ಜನಗಳ ನಿಂದೆಯನ್ನೂ ನಿಂದೆಯನ್ನೂ ಕಾಗೆಗೂಗೆಗಳ ಕೂಗಿಗೆ ಸಮಾನವೆಂದು ತಿಳಿದು ಅಲಕ್ಷ್ಯಮಾಡಿದಿರು.

೧೯ ಒಂದು ಕಾಲದಲ್ಲಿ ಆನೆಯಮೇಲೆ ಮೆರೆಸುವ, ಒಂದು ಕಾಲದಲ್ಲಿ ಬರಿಗಾಲಲಿ ನಡೆಸುವ, ಒಂದು ಕಾಲದಲ್ಲಿ ಅಮೃತ ಉಣಿಸುವ, ಒಂದುಕಾಲದಲ್ಲಿ ಉಪವಾಸವಿರಿಸುವ ಶ್ರೀ ಪರಮೇಶ್ವರನ ಲೀಲೆಯು ವಿಚಿತ್ರವಾದುದು.

೨೦ ಜಗತ್ಪ್ರಭುವಿಗೆ ಎರಡು ಸಂದರ್ಭಗಳಲ್ಲಿ ನಗುಬರುವದು. ಒಂದನೆಯದು—ಒಡಹುಟ್ಟಿದವರು 'ಇದು ನನ್ನದು ಅದು ನನ್ನದು' ಎಂದು ಹೇಳುತ್ತ ಪಿತ್ರಾರ್ಜಿತ ಆಸ್ತಿಯನ್ನು ವಿಭಾಗಮಾಡಿಕೊಳ್ಳುವ ಕಾಲದಲ್ಲಿ. ಎರಡನೆಯದು—ವೈದ್ಯನು ಸಾಯುವ ರೋಗಿಯನ್ನು ನೋಡಿ, 'ಅವನನ್ನು ಬದುಕಿಸುವೆನು' ಎಂದು ನುಡಿಯುವ ಸಮಯದಲ್ಲಿ.

೨೧ ಸಾಲವನ್ನು ತರುವಾಗ ಇರುವ ನಯವಿನಯವಿರಾಜಿತ ಸಾಧುತ್ವವು ಸಾಲತೀರಿಸುವಾಗಲೂ ಇರಬೇಕು.

೨೨ ಸನ್ಮಾರ್ಗದಲ್ಲಿ ಉಪಯೋಗಿಸದ ಮನುಜನ ಸಾಮರ್ಥ್ಯವು ವ್ಯರ್ಥವು ಮತ್ತು ಅಪಾಯವು. ಏಕೆಂದರೆ ಅದು ದುರ್ಮಾರ್ಗದಲ್ಲಿ ಪ್ರವರ್ತಿಸಿ ಸುತ್ತಮುತ್ತಲಿರುವವರಿಗೂ ಕೊನೆಗೆ ಲೋಕಕ್ಕೂ ಅಪಾಯವನ್ನುಂಟುಮಾಡುವುದು.

೨೩ ನಾನು ನಿರಹಂಕಾರಿ ಪರೋಪಕಾರಿ ಎಂದು ತಿಳಿದುಕೊಂಡರೂ, ಅದಿದ್ದರೂ ಕೊನೆಗೆ ಅದು ನಾನು ಇಂಥವನು ಎಂಬ ಸ್ವಗುಣಸ್ತುತಿಯ ಅಹಂಕಾರವೆನಿಸಿಕೊಳ್ಳುತ್ತದೆ. ಆದ್ದರಿಂದ ಅಹಂಭಾವವನ್ನು ನಾಶಮಾಡು.

೨೪ ನೀನಾಚರಿಸುವ ಪರೋಪಕಾರಕಾರ್ಯಗಳ ವಿಷಯದಲ್ಲಿ ಪರರ ಅಭಿಪ್ರಾಯಕ್ಕಿಂತಲೂ ನಿನ್ನಂತರಂಗದಲ್ಲಿರುವ ಮನಸ್ಸಾಕ್ಷಿಯ ಅಭಿಮತವು ಬಹಳ ಮುಖ್ಯವಾದುದು.

೨೫ ತ್ಯಾಗವೆಂಬುದು ಯಾರಿಂದಲಾದರೂ ಕೊಂಡುಕೊಳ್ಳುವ ಅಥವಾ ಯಾರಿಗಾದರೂ ಕೊಡತಕ್ಕ ವಸ್ತುವಲ್ಲ. ನಮ್ಮ ಸಂಘರ್ಷ ಆತ್ಮವನ್ನೇ ಭಗವಂತನಿಗೂ ಆತನ ಸೇವೆಗೂ ಅರ್ಪಿಸುವದೇ ವೈರಾಗ್ಯವು. ಅದು ನಿನ್ನ ಹೃದಯದೊಳಗಿನಿಂದಲೇ ಸ್ವಾಭಾವಿಕವಾಗಿ ಉದ್ಭವಿಸುವ ಉಚ್ಚಭಾವನಾತರಂಗವಾಗಿದೆ.

೨೬ ಮನುಷ್ಯನು ಈಗ ಆಚರಿಸುವ ಕರ್ಮಗಳಿಂದ ಮುಂದಿನ ಜನ್ಮದ ಅನುಕೂಲ ಪ್ರತಿಕೂಲಗಳು ನಿರ್ಧರಿಸಲ್ಪಡುವವು. ಆದುದರಿಂದ ಆ ಮುಂದಣ ಜನ್ಮದ ಸಮಯದಲ್ಲಿ ಸಂದರ್ಭಗಳನ್ನು ತಾನು ಈಗ ಮಾಡುವ ಕರ್ಮಗಳಿಂದ ಇಷ್ಟಬಂದಂತೆ ಮಾರ್ಪಡಿಸಿಕೊಳ್ಳಲು ಸಾಮರ್ಥ್ಯವುಂಟು.

೨೭ ನಿನಗೆ ಕರ್ಮಮಾಡುವುದರಲ್ಲಿ ಅಧಿಕಾರವೇ ಹೊರತು ಫಲವನ್ನು ಹೊಂದುವುದರಲ್ಲಿಲ್ಲ. ಆದ್ದರಿಂದ ಕರ್ಮಫಲವನ್ನು ಅಪೇಕ್ಷಿಸಬೇಡ. ಆದರೂ ಕರ್ಮವನ್ನು ತ್ಯಜಿಸಬೇಡ.

೨೮ ಕೊಳೆಗಳನ್ನು ತೊಳೆಯುವುದರಿಂದ ಬಟ್ಟೆಗಳು ಬೆಳ್ಳಗಾಗಿ ಬೆಳಗುವಂತೆ ಆಗಿ ಧೂಳಿಯನ್ನು ತಕ್ಕವಾಗಿಯಾಗಿ ಕಳೆಗಳು ಶಾಶ್ವತವಾಗಿಯೇ ಬೆಳೆಯುತ್ತವೆ. ಅದರಂತೆ ನೀನು ಮನಸ್ಸಿನಲ್ಲಿ ಸದ್ಗುಣಗಳನ್ನು ಶ್ರದ್ಧೆಯಾಗಿ ಬೇರೂರಿಸಿ ವೃದ್ಧಿಪಡಿಸುತ್ತ ಬಂದರೆ ನೀಚ ಗುಣಗಳು ಒಂದೊಂದಾಗಿ ನಾಶವಾಗಿ ಸದ್ಗುಣಗಳು ವೃದ್ಧಿಯಾಗುವವು.

೨೯ ನೀನು ವ್ಯವಹಾರಗಳಲ್ಲಿ ಮಾಡಬೇಕಾದ ಧರ್ಮವನ್ನಾಚರಿಸುವುದರಲ್ಲಿಯೂ ಪರೋಪಕಾರಮಾಡುವುದರಲ್ಲಿಯೂ ಮಾತ್ರ ಆಸಕ್ತಿಯನ್ನು ವ್ಯಯಮಾಡಬಾರದೇ ಹೊರತು ಸಕ್ರಿಯ ಕಾರ್ಯಗಳಲ್ಲಾಗಲಿ, ಪಾಪಕಾರ್ಯಗಳಲ್ಲಾಗಲಿ ಅನ್ಯರಿಗೆ ಕೇಡು ಬಗೆಯುವ ವಿಷಯದಲ್ಲಾಗಲಿ, ವಿನಿಯೋಗಿಸಬೇಡ.

೩೦ ಎಲೈ ಮಾನವನೇ! ನೀನು ಯಾರಿಗೂ ತಿಳಿಯದಂತೆ ಕಳವು ಹಾಗೆ ಮೋಸದ ಮಾರ್ಗದಿಂದ ಏನು ಬೇಕಾದರೂ ಮಾಡಬಹುದು. ಆದರೆ ಹೃದಯದಲ್ಲಿ ಸಾಕ್ಷೀಭೂತನಾಗಿ ಕುಳಿತಿರುವ ಪರಮಾತ್ಮನನ್ನು ಮಾತ್ರ ಎಂದಿಗೂ ವಂಚಿಸಲಾರೆ.

ಎಂ. ಮಲ್ಲಿಕಾರ್ಜುನಾರಾಧ್ಯ,
ರಾಣೆಬೆನ್ನೂರು ಮಳೆಮಠ ಶಿಷ್ಯರು.

IN THE COURT OF THE DISTRICT JUDGE OF KURNOOL

A. S. No. **42 of 1928** M. P. **89 of 1928**

Kurnool Sub-Court O.S **10 of 1926**
E. P. **6 of 1928**

Petitioner—Sri Giri Raja Surya Simhasana Sthirapattadhyaksha Nagaloti Bhiksha vrithi Mahaswamulavaru

Respondents—Kadaloor Veerabhadrayya and others

Petition on behalf of the Petitioner under order **41** Rule **5** C. P. C.—

Adverting to the facts set forth in the affidavit hereto annexed it is hereby prayed that the honourable Court may be pleased to order stay of the Execution of the lower Courts decree in O. S. No. 10 of 1926 E. P. 6 of 1928 on the file of the Sub Court, Kurnool till the disposal of this appeal.

(*Sd*) S. NARASIMHALU, Pleader
Pleader for Petitioner

Seal.

District and Sessions Court,
Kurnool
Received 20th June 1928.
(*Sd*) M. G. Sheristadar.

(*True Copy*)

IN THE DISTRICT COURT OF KURNOOL

Friday the 31st day of August 1928

Present—**Ananta Narayana Ayangar Esqr.,**
District Judge

Civil Miscellaneous Petition No. **89 of 1928**

Appeal No. **42 of 1928**

Sri Giri Raja Surya Simhasana Sthira pattadhyaksha Nagaloti Bhikshavrithi Mahaswamulavaru. Petitioner

VERSUS

Kadaloor Veerabhadrayya and others
Respondents

Application dated 20 6 1928 under order 41 Rule 5 of the Code of Civil Procedure praying to order stay of execution of the decree in E. P. No 6 of 1928 in O S. No. 10 of 1926 on the file of the Sub-Court, Kurnool, till the disposal of this appeal.

This application comming on for hearing on this day upon perusing the petition and affidavit and upon hearing the arguments of Mr S. Narasimhalu Pleader for the Petitioner and the respondents and Vakil being absent, the Court made the following

Order

The order for stay is made absolute.

(*Sd*) A. N. AIYENGAR,
District Judge

(*True Copy*)

ಕರ್ನೂಲ್ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಆಗಸ್ಟು 31 ನೇ ಶುಕ್ರವಾರ 1928

ಡಿಸ್ಟ್ರಿಕ್ಟ್ ಜಡ್ಜಿ
ಮೆ|| ಅನಂತನಾರಾಯಣಯ್ಯಂಗಾರ್ಯರವರ
ಸಮ್ಮುಖದಲ್ಲಿ—

ಸಿವಿಲ್ ಮಿಸಲೇನಿಯಸ್ ಅರ್ಜಿ ನಂ 89—1928

ಅಪೀಲ್ ನಂ 42 of 1928

ವಾದಿ ಯು—ಶ್ರೀ ಗಿರಿರಾಜಸೂರ್ಯಸಿಂಹಾಸನ ಸ್ಥಿರ ಪಟ್ಟಾಧ್ಯಕ್ಷ ನಾಗಲೋಟಿ ಭಿಕ್ಷಾವೃತ್ತಿ ಮಹಾಸ್ವಾಮಿಗಳು

V S

ಪ್ರತಿವಾದಿಗಳು—ಕಾಡಲೂರು ವೀರಭದ್ರಯ್ಯ ಮತ್ತು ಇತರರು

ಕರ್ನೂಲು ಸಬ್ ಕೋರ್ಟಿನ E P No 6 of 1928—O S No 10 of 1926 ನೇ ಫೈಲ್‌ನಲ್ಲಿ ನಮೂದಿಸಿರುವ ಕೆಳಗಿನ ಡಿಕ್ರಿಯ ಎಕ್ಸಿಕ್ಯೂಷನ್ ಬಗ್ಗೆ ಈ ಅಪೀಲು ತೀರ್ಮಾನವಾಗುವವರೆಗೆ ಸ್ಟೇ ಆರ್ಡರ್ ಕೊಡಬೇಕೆಂದು ಆರ್ಡರ್ 41 ಸಿವಿಲ್ ಪ್ರೊಸೀಜರ್ ಕೋಡು ರೂಲು 5 ನ್ನು ಅನುಸರಿಸಿ ಕೊಟ್ಟಿರುವ 20 6 1928 ರ ಅಪ್ಲಿಕೇಷನ್ ವಿಷಯ.

ಈ ಅಪ್ಲಿಕೇಷನ್ನು (ಇತ್ಯರ್ಥದ ಬಗ್ಗೆ) ಈ ದಿವಸ ವಿಚಾರಣೆಗೆ ಬಂದಿತು. ಅರ್ಜಿ ಮತ್ತು ಅಫಿಡವಿಟ್ಟುಗಳನ್ನು ನೋಡಿಯೂ ಅರ್ಜಿದಾರರ ಪರ ವಕೀಲರು ಮಿ|| ಎಸ್ ನರಸಿಂಹಲುರವರ ವಾದವನ್ನು ಕೇಳಿ, ಪ್ರತಿವಾದಿಗಳೂ ಅವರ ಪರ ವಕೀಲರೂ ಗೈರುಹಾಜರಾಗಿದ್ದುದರಿಂದ ಕೋರ್ಟಿನವರು ಈ ಕೆಳಗೆ ಕಂಡ ಆರ್ಡರು ಮಾಡಿದರು —

'ಸ್ಟೇ' ಆರ್ಡರು ಕೊಟ್ಟಿರುತ್ತದೆ.

(*Sd*) A N ಅಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜಿ

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು

ಇಸ್ತಿಹಾರ್.

ಶ್ರೀ ಜಗದ್ಗುರು ಶ್ರೀ ಗಿರಿರಾಜಸೂರ್ಯಸಿಂಹಾಸನ ಶ್ರೀಶೈಲಪತ್ಯಕಸಂಸ್ಥಾನ ಪವಂಟದ ಆಫೀಸಿನಿಂದ—

ಸಮಸ್ತ ದೇಶದ ವೀರಶೈವರುಗಳಲ್ಲಿಯೂ ವೀರಶೈವ ಮತಾನುಯಾಯಿಗಳಾದ ಅಷ್ಟಾದಶವರ್ಣದ ಸದ್ಭಕ್ತಾದಿಗಳಿಗೂ ಸಹ ತಿಳಿಯಪಡಿಸುವದೇನೆಂದರೆ—

ಕರ್ನೂಲ್ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟ್
AS. No 42 M. P. No. 89

ಪಿಟಿಷನರ್.

ಶ್ರೀ ಗಿರಿರಾಜಸೂರ್ಯಸಿಂಹಾಸನ ಸ್ಥಿರಪಟ್ಟಾಧ್ಯಕ್ಷ ನಾಗಲೋಟಿ ಭಿಕ್ಷಾವೃತ್ತಿ ಮಹಾಸ್ವಾಮಿಗಳವರು

ರೆಸ್ಪಾಂಡೆಂಟ್.

ಕಾಡಲೂರು ವೀರಭದ್ರಯ್ಯ ವಗೈರೆ

ಸಿವಿಲ್ ಪ್ರೊಸಿಜರ್ ಕೋಡ್ 41 ನೇ ಸೆಕ್ಷನ್ 5 ನೇ ರೂಲ್ ಮೇರೆಗೆ ರೆಸ್ಪಾಂಡೆಂಟ್ ಕಾಡಲೂರು ವೀರಭದ್ರಯ್ಯ ಸ್ವಾಮಿಯ ವಿರುದ್ಧವಾಗಿ ಕರ್ನೂಲ್ ಸಬಾರ್ಡಿನೇಟು ಜಡ್ಜರ ಕೋರ್ಟಿನಲ್ಲಿ OSNo 10/26 ನೇ ಡಿಕ್ರಿ ಜಡ್ಜ್‌ಮೆಂಟು ಬರಲ್ಪಟ್ಟದ ಡಿಕ್ರಿ ಹೋಲ್ಡರ್ ಆಗಿರುವವರ ಮೇಲೆ ಅಪ್ಪೀಲ್ ದಾಖಲಾಗಿ ಡಿಕ್ರಿ ಜಡ್ಜ್‌ಮೆಂಟು ಜಾರಿ ಕ್ರಮ ಅಪೀಲ್ ಇತ್ಯರ್ಥವಾಗುವವರೆಗೂ ನಡೆಸಬಾರದೆಂದು ತಾ|| 31 8 1928 ರಲ್ಲಿ ಘನವನ್ನು ಹೊಂದಿದ ಕರ್ನೂಲ್ ಡಿಸ್ಟ್ರಿಕ್ಟ್ ಜಡ್ಜರವರು ಆರ್ಡರ್ ಮಾಡಿರುವ ಇಂಗ್ಲೀಷ ಅಫಿಡವಿಟ್ ಮತ್ತು ಆರ್ಡರ್ ಸಹ ಸರ್ಕಾರ ತಿಳುವಳಿಕೆ ಬಗ್ಗೆ ಯಥಾರ್ಥ ಇಂಗ್ಲೀಷು ಆರ್ಡರ್ ಕಾಪಿಯನ್ನು ಲೋಕಮಾನ್ಯವಾದ ಮೈಸೂರು ಪಂಚಾಚಾರ್ಯ ಪ್ರಭಾ ಪತ್ರಿಕೆಯಲ್ಲಿ ಪ್ರಕಟಿಸಿರುತ್ತದೆ ಮತ್ತು ತಾ||11 2 1929 ನೇ ಈ ಪಂಚಾಚಾರ್ಯ ಪ್ರಭಾ ಪತ್ರಿಕೆಯಲ್ಲಿ AS 42/28 ರ ಅಪೀಲ್ ಗ್ರೌಂಡ್ಸ್ ಇಂಗ್ಲೀಷು ಕನ್ನಡ ತರ್ಜುಮೆಯಿಂದ ಪ್ರಕಟಗೊಳಿಸಿರುತ್ತದೆ.

ಸಬಾರ್ಡಿನೇಟ್ ಜಡ್ಜರ ಕೋರ್ಟ್ O S 10/26 ನೇ ಡಿಕ್ರಿ ಜಾರಿ ಕ್ರಮ ಪ್ರತಿವಾದಿಯು E P 6/28 ರ ಪಿಟಿಷನ್‌ಗೆ ಪ್ರತಿಕೂಲಿಸಿ ಘನವನ್ನು ಹೊಂದಿದ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟ್ ಅಪೀಲ್ ನಂಬರು 42/28 ರ M P 89/28 ರಲ್ಲಿ ಲೋವರ್ ಕೋರ್ಟ್ ಡಿಕ್ರಿ ಜಾರಿತಾರದಂತೆ ಸ್ಟೇ ಆರ್ಡರ್ ಕಳಿಸಲಾಗಿರುತ್ತದೆ.

1 ನೆ ರೆಸ್ಪಾಂಡೆಂಟನಿಗೆ—ಸ್ಟೇ ಆರ್ಡರ್ ಸಂಗತಿಯು ಗೊತ್ತಿದ್ದರೂ ಕೂಡ ಅಪೀಲ್ ವಾದಿಯರಿಗೆ ಉಪದ್ರವಪಡಿಸುವ ದುರುದ್ದೇಶದಿಂದ ನೂತನವಾದ ಪ್ರಾಂತಗಳಲ್ಲಿ ಹೋಗಿ ಸ್ಟೇ ಆರ್ಡರ್ ಮರೆಮಾಚಿಕೊಂಡು ತಾನು ಪಟ್ಟವಾದವನೆಂದು ಶಾಸನ ವಗೈರೆ ತಕರಾರು ಮಾಡುತ್ತಾನೆ. ಈತನು ಅಕ್ರಮಾಧಿಕಾರದ ಚರಮೂರ್ತಿ ಅಲ್ಲವೆಂದು ಶ್ರೀ ಜಗದ್ಗುರು ಪಂಚಾಚಾರ್ಯರ ಮಹಾಸಭೆಯಲ್ಲಿ ದೃಢವಾಗಿದ್ದಾಗ್ಯೂ ಕಾಡದ ಸ್ಥಳಾಂತರಗಳಲ್ಲಿ ವೇಷಧಾರಣವೃತ್ತಿಯಿಂದ ತಿರುಗುತ್ತಾನೆಂದು ಅರ್ಜಿಗಳು ಬಂದಿವೆ.

1ನೇ ರೆಸ್ಪಾಂಡೆಂಟನು ಶ್ರೀಶೈಲ ಪರ್ವತ ಪೀಠದ ಧರ್ಮಕರ್ತೃತ್ವದ ವಿವಾದದಲ್ಲಿ ಸ್ವಾತಂತ್ರ್ಯದವರ ಮೇಲೆ ಜಯಪ್ರದ ಹೊಂದಿರುತ್ತೇನೆಂದು ಜನರಿಗೆ ಸುಳ್ಳು ಹೇಳಿ ಭ್ರಾಂತಿಗೊಳಿಸುತ್ತಿರುತ್ತಾನೆ.

ಘನವನ್ನು ಹೊಂದಿದ ನ್ಯಾಯಾಂಗಕಾರ್ಯದಲ್ಲಿ ಈತನು ಬಿರುದಾವಳಿ ರಹಿತನಾಗಿ ಪಡೆದದ್ದನ್ನು ತಾ|| 2 4 32 ರಲ್ಲಿ ರಾಯಚೂರ ಜಿಲ್ಲಾ ಅಸಿಸ್ಟೆಂಟ್ ಕಾಲೆಕ್ಟರ್ (ಕಲೆಕ್ಟರ್) ಸಾಹೇಬರಲ್ಲಿ ಅರ್ಜಿ ಕೊಟ್ಟ ತನಾಮಾರಿ ರಸ್ತೆ ಜಡಿಸಿರುತ್ತದೆ.

ಈತನ ಸಂಚಾರದಿಂದ ಗ್ರಾಮಾಂತರಗಳಲ್ಲಿ ಪಕ್ಷಭೇದಗಳು ಬೆಳೆಯುವವಲ್ಲದೆ ಈ ಪೀಠದ ಶಿಷ್ಯ ಪ್ರಶಿಷ್ಯಾದಿಗಳು ಕಷ್ಟನಷ್ಟಕ್ಕೆ ಗುರಿಯಾಗಿ ಜನಾಂಗದಲ್ಲಿ ನೆಮ್ಮದಿಗೆ ಭಂಗವೂ ಪ್ರಸಿದ್ಧವಾದ ಈ ಪೀಠದ ಘನತೆಗೆ ಕುಂದಕವೂ ಉಂಟಾಗಿ ರಾಂಶಕಾರ್ಯಂಗಳಿಗೆ ಅವಕಾಶವಾಗಿರುತ್ತದೆ.

ಈ 1ನೇ ರೆಸ್ಪಾಂಡೆಂಟನು ಮತ್ತು ಈತನ ಇಲಾಖೆಯವರೆಂದು ತಿರುಗುವ ಚಿಲ್ಲರೆ ಗುಂಪಿನವರನ್ನು ಅಪರಾಧಿಸ್ಥಾನಕ್ಕೆ ಸೇರಿಸಿ ಕ್ರಮವಾದ ಕೋರ್ಟಿನಲ್ಲಿ ಕ್ರಿಮಿನಲ್ ಫಿರ್ಯಾದ್ ನಡೆಸಲು ಧಾರವಾಡ ಜಿಲ್ಲಾ ಕಲೆಕ್ಟರ್ ಸಾಹೇಬರವರು No M. A G S 1023/34 ಸ್ಯಾಂಕ್ಷನ್ ಮಾಡಿರುತ್ತಾರೆ.

ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಸಹ ಸದರಿ ರೆಸ್ಪಾಂಡೆಂಟನ ಇಲಾಖೆಯವರು ಕರ್ನೂಲ್ ಡಿಸ್ಟ್ರಿಕ್ಟ್ ಕೋರ್ಟ್ ಅಪೀಲ್ ಇತ್ಯರ್ಥವಾಗುವವರೆಗೂ ಮುಖಬೀರದ ಅಡ್ಡಸ್ ವಗೈರೆ ಉಪಯೋಗಿಸಬಾರದೆಂದು ಡಿಸ್ಟ್ರಿಕ್ಟ್ ಪೋಲೀಸು ಸೂಪರಿಂಟೆಂಡೆಂಟರವರ ಮೂಲಕ ಎನ್ಕ್ವೈರಿ ಮಾಡಿಸಿ ಆರ್ಡರ್ ಮಾಡಿರುತ್ತಾರೆ.

ಇಂಥ ಕ್ರಮವಾದ ವಿಧಾನಗಳನ್ನೆಲ್ಲಾ ಮರೆಮಾಚಿಕೊಂಡು ತಿರುಗುತ್ತಾ ಇದ್ದಷ್ಟು ಕಾಲವು ನ್ಯಾಯಾಂ ಸ್ಟೇಟು ಕಷ್ಟಗಿ ತಾಲೂಕು ಮುನಸೀಫರ ಕೋರ್ಟಿನಿಂದ ವಶ್ರಗಿರಿ ನಾರಾಂಟು ಆದಳಿತದಲ್ಲಿ ಆ ಪ್ರಾಂತವನ್ನು ಬಿಡಬೇಕಾಯಿತು.

ಮುಖ ಶ್ರೀಶೈಲದ ವಿವಾದವನ್ನು ನಡೆಸುತ್ತೇನೆಂದು ಅನೇಕ ಪ್ರಾಂತ್ಯಗಳಲ್ಲಿ ಧನಸಂಗ್ರಹಮಾಡಿ ತನ್ನ ಸ್ವಂತ ಸಯೋಜನಕ್ಕೆ ಸ್ಥಿರಚರ ಆಸ್ತಿ ಸಂಗ್ರಹಿಸಲು ಅನುಕೂಲವಾಗಿ ಶ್ರೀಶೈಲದ ವ್ಯಾಜ್ಯ ಕೈಬಿಟ್ಟದ್ದರಿಂದ ಸರ್ಕಾರದವರು ಶ್ರೀಶೈಲ ಪರಿಪಾಲನ ಸಂಘವನ್ನು ಏರ್ಪಡಿಸಿ ಪ್ರೆಸಿಡೆನ್ಸಿಯಿಂದ ಸರ್ಕಾರಿ ದೇವಸ್ಥಾನ ಆಡಳಿತಕ್ಕೆ ಒಳಪಡಿಸಿಕೊಂಡಿರುತ್ತಾರೆ. ಅಸಲ್ ಧರ್ಮಕರ್ತೃತ್ವದ ವ್ಯಾಜ್ಯ ಪುಷ್ಪಗಿರಿ ಮಠದವರ ಹೆಸರಿನಲ್ಲೇ ಇರುತ್ತದೆ.

ಈ ಪೀಠದ ಹೆಸರಿನ ಮೇಲೆ ಬರತಕ್ಕಂಥವರು ವೇಷಧಾರಿಗಳೇ ಅಥವಾ ಸಹಜವಾದವರೇ ಎಂಬುವದನ್ನು ನಿರ್ಧರಿಸಿ ಸಂಸ್ಥಾನ ಗೌರವ ಕಟ್ಟುತಿಯಂತೆ ಆಚರಿಸಲು ತಾ|| 31 12 34 ರಲ್ಲಿ ಪಂಚಾಚಾರ್ಯಪ್ರಭಾ ಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ಜಾಗರೂಕರಾಗಿರಬೇಕೆಂದು ತಿಳುಹಿಸಿದೆ.

ತಾ|| 16-2 1935 (Sd.) ಆರ್ ಸಿ ಆರಾಧ್ಯಸ್ವಾಮಿ.
ಮುಕ್ಕಾಂ ಗುಂತಕಲ್ಲು ಹಿರೇಮಠ ಎ.
ಸಂಸ್ಥಾನಮಠ ಶ್ರೀ ಜಗದ್ಗುರು ಸಂಸ್ಥಾನ
ಜಿಲ್ಲಾ ಅನಂತಪುರ ಏಜಂಟ್.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೬×೧೪ ಬೆಲೆ	೦—೧—೬
ಸದ್ಯ ಶ್ರೀಶಾಲೋಹಣವಮಾಡಿದವರ್ಶ ಪವಗು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೬ ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಡಿತಾರಾಧ್ಯಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಧೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನಡೆದಿರುವ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು, ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸ್ವಾಂತರಾರುಗಳಾಗಿ, ಯೋಗ್ಯತಾಪತ್ರ

ಗಳನ್ನು ಕೊಟ್ಟಿರು ಪ್ರಸಿದ್ಧವಾದ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ —ಶಿರಶಿ ಉಬ್ಬು ತಲೆನೋವು, ತಲೆಯ ಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಚಳಿದೋಷ ಮೊದಲಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಉತ್ಪತ್ತಿಯಾದ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಪಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಮುಗ ತಮ್ಮ ಗೃಹದಲ್ಲಿ ಕುಟುಂಬದವರಾಗಿ ಉಪಯೋಗಿ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಒಬ್ಬಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦ ೪ .

ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ. ಪ್ರತ್ಯೇಕ

ನಿಮ್ಮ ಅಡ್ರಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೩] ಪೋ. ಬಾ. ೫೧೦, ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಮನೀಷಾ (೧ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರತಾಪ (೧ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಳಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ತ್ವದರ್ಪಣ (೬ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಶಿವಶಕ್ತಿವಿಲಾಸ	೩ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ವೀರಶೈವಮತಸಿದ್ಧಾಂತ	೩ ಆಣೆ
ವೀರಶೈವಾಚಾರವಿಧಿ (೧ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೪ ಆಣೆ
ಸನ್ಯಾಸಶಾಸ್ತ್ರದ ವಿಮರ್ಶ ತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಪುರಾಣದ ದಿವಾಕರ (೨ನೆಯ ಆವೃತ್ತಿ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As
ವೀರಶೈವರತ್ನ (೬ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೬ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
लिंगधारणचंद्रिका (संस्कृत)	३ रु
महानारायणोपनिषत् (वीरशैवभाष्य-संस्कृत)	१ रु
वीरशैवानंदचंद्रिका (संस्कृत)	१ रु

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಕ್ಷರಾದ ವೇ|| ಬ್ರ|| ಪಂಡಿತ ಶಿವ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯರಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಕ್ಷರೀಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ — ಬಿಡಿ ಪ್ರತಿ ೧ಕ್ಕೆ ೯ ಪೈ — ಪರಸ್ಥಳದವರಿಗೆ ೨ ರೂ ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೧ ನೇ ಮಾರ್ಚಿ ೧೯೩೫ [ಸಂಚಿಕೆ ೪೨

ಶ್ರೀಗುರುರೇವಣಸಿದ್ಧಃ ಪ್ರಸೀದತು

ಅಡ್ಡಪಲ್ಲಕ್ಕಿ ಮಹೋತ್ಸವ ಮತ್ತು ರಥೋತ್ಸವ.

ವಿಜಾಪೂರ ಜಿಲ್ಲಾ ಮುದ್ದೇಬಿಹಾಳ ತಾಲೂಕು ನ್ಯಾಮಣಿಹಾಳ ಉರ್ಫ ಗಗನಾಪೂರದಲ್ಲಿ ಶ್ರೀಗಂಗಾಧರನ ಜಾತ್ರೆಯು ಪದ್ಧತಿಪ್ರಕಾರ ಈ ವರ್ಷವೂ ವಿಜೃಂಭಣೆಯಿಂದ ಜರುಗಿತು. ಮಾಘ ಶು|| ೯ ಸೋಮವಾರ ದಿವಸ ಮುದ್ದೇಬಿಹಾಳ ನಗರ ನಾಲತವಾಡದ ಶ್ರೀಮಂತ ಶಂಕರರಾವ ನಾಡಗೌಡರು ನಾಲತವಾಡದ ಹಿರೇಮಠಾಧ್ಯಕ್ಷರಾದ ಪಟ್ಟಾಧ್ಯಕ್ಷ ಶ್ರೀಗಂಗಾಧರಸ್ವಾಮಿಗಳನ್ನು ಅಡ್ಡಪಲ್ಲಕ್ಕಿ ಮಹೋತ್ಸವದೊಡನೆ ಕರೆದುಕೊಂಡು ಬಂದು ಪಾದಪೂಜೆಮಾಡಿ ಭಕ್ತಮಾಹೇಶ್ವರರಿಗೆ ಸಂತರ್ಪಣೆ ನಡೆಸಿ ಯಥೋಚಿತ ದಕ್ಷಿಣಾತಾಂಬೂಲಾದಿಗಳಿಂದ ಸತ್ಕರಿಸಿದರು.

ಮಾಘ ಶು|| ೧೦ ಮಂಗಳವಾರ ಸಾಯಂಕಾಲ ನೂತನವಾಗಿ ಶೃಂಗರಿಸಲ್ಪಟ್ಟ ಪುಷ್ಪರಥದಲ್ಲಿ ಶ್ರೀಸ್ವಾಮಿಗಳು ಮೂರ್ತವಾದನಂತರ ಸಕಲ ಬಿರುದಾವಳಿಯೊಡನೆಯೂ ಅನಂತ ವಾದ್ಯವೈಭವದೊಡನೆಯೂ ರಥವು ಸಾಗಿ ಪಾದಗಟ್ಟೆಗೆ ಹೋಗಿ ಸ್ವಸ್ಥಾನವನ್ನು ತಲ್ಪಿದನಂತರ ಶ್ರೀಗಳು ಬಿರುದಾವಳಿ ಸಮೇತ ಸ್ವಸ್ಥಾನಕ್ಕೆ ದಯಮಾಡಿಸಿದರು. ಈ ವರ್ಷ ರಥೋತ್ಸವ ಕಾಲಕ್ಕೆ ೮೦೦೦ ಸಹಸ್ರಜನರು ಕೂಡಿದ್ದರು. ನಮ್ಮ ತಾಲೂಕಿನ ೨ ನೇ ವರ್ಗ ಮ್ಯಾಜಿಸ್ಟ್ರೇಟ ರಾವಸಾಹೇಬ ಮೋಟಗಿ ಮತ್ತು ವಕೀಲರು ವತನದಾರರು ಶೆಟ್ಟಿ ಸಾಹುಕಾರರು ವಗೈರೆ ಪ್ರಮುಖ ಜನರು ಬಂದಿದ್ದರು. ಉತ್ಸವಕಾಲದಲ್ಲಿ ಪೋಲೀಸಿನವರ ಉಸ್ತುವಾರಿಯು ಸಮರ್ಪಕವಾಗಿದ್ದಿತು. ಶ್ರೀಮಂತ ನಾಡಗೌಡರು ಪ್ರತಿವರ್ಷ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಉತ್ಸವಮಾಡುತ್ತ ಸಾವಿರಾರು ಜನರಿಗೆ ಅನ್ನ ಸಂತರ್ಪಣೆ ಮಾಡುತ್ತಿರುವದು ಸ್ತುತ್ಯವಾಗಿದೆ. ಶ್ರೀ ಗಂಗಾಧರನು ಈ ಮಹಾಶಯರಿಗೆ ದೀರ್ಘಾಯುರಾರೋಗ್ಯ ಸಂತತಿಸಂಪತ್ತುಗಳನ್ನು ಕರುಣಿಸಲೆಂದು ಹಾರೈಸುವ

ಓರ್ವ ಪ್ರತ್ಯಕ್ಷದರ್ಶಿ

ವೀರಶೈವ ಪಂಡಿತರಿಗೆ ಕಾಶೀ ಪಂಡಿತಸಭೆಯಿಂದ ಸನ್ಮಾನ

ಕಾಶಿಯಲ್ಲಿ ಸಂಸ್ಕೃತ ಸಾಹಿತ್ಯ ಸಮಾಜದ ೧೦ ನೆಯ ವಾರ್ಷಿಕಮಹೋತ್ಸವವು ಪಂಡಿತ ಪ್ರವರ ಮಹಾಮಹೋಪಾಧ್ಯಾಯ ಶ್ರೀಮಾನ್ ಮುಕುಂದ ಝಾ ಬಕ್ಷಿಯವರ ಅಧ್ಯಕ್ಷತೆಯಿಂದ ಇದೇ ತಿಂಗಳಿನ ೧೨ ನೆಯ ತಾರೀಖುಗಳಲ್ಲಿ ಅತಿಸಂಭ್ರಮದೊಡನೆ ಜರುಗಿತು. ಸಭೆಗೆ ಕಾಶಿಯ ಅನೇಕ ಸುಪ್ರತಿಷ್ಠಿತ ಪಂಡಿತರೂ, ಅನೇಕ ಕವಿಗಳೂ, ದೊಡ್ಡ ದೊಡ್ಡ ಸರ್ಕಾರಿಯ ಉದ್ಯೋಗಿಗಳೂ ಆಗಮಿಸಿದ್ದರು. ಮೊದಲನೆಯ ದಿನ ನಡೆದ ಕವಿಸಮ್ಮೇಳನದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲವಾಸಿಗಳಾದ ಬಂಗಳೂರಿನ ಆಯುರ್ವೇದಾಚಾರ್ಯ, ವೈದ್ಯಮಾರ್ತಂಡ ಶ್ರೀ ಶಿವಕುಮಾರಸ್ವಾಮಿಗಳಿಗೆ ಸಮಸ್ಯಾಪೂರ್ತಿಗಾಗಿ ಇಟ್ಟಿದ್ದ "ಸಾಹಿತ್ಯಪಾರಿತೋಷಕ"ವು ಕೊಡಲ್ಪಟ್ಟಿತು. ೨ ನೆಯ ದಿನ ನಡೆದ ಸಭೆಯಲ್ಲಿ ಕಾಶಿಯ ಅನೇಕ ಪ್ರತಿಷ್ಠಿತ ಪಂಡಿತರಿಗೆ ಕಾಶೀ ಪಂಡಿತಸಭೆಯ ದ್ವಾರಾ ಸನ್ಮಾನಸೂಚಕಗಳಾದ ಬಿರುದುಗಳನ್ನು ಕೊಡುವ ಸಮಯದಲ್ಲಿ ಮೇಲ್ಕಂಡ ಗುರುಕುಲದಲ್ಲಿ ವಾಸಿಸುತ್ತಿರುವ ಚಿಪರಿಕೆರೆಯ ಪಂ. ವೀರಭದ್ರಶಾಸ್ತ್ರಿಗಳು ವೇದ ಕಾವ್ಯ ಸ್ಮೃತಿ ದರ್ಶನತೀರ್ಥ, ಧರ್ಮಾಚಾರ್ಯ, ಸಾಹಿತ್ಯವಿಶಾರದ ವಿದ್ಯಾನಿಧಿ, ಇವರಿಗೆ 'ವಿದ್ಯಾರತ್ನ' ವೆಂಬ ಬಿರುದೂ, ಬೆಂಗಳೂರಿನ ಮೋಕ್ಷಾಂಶ ಶ್ರೀ ಶಿವಕುಮಾರಸ್ವಾಮಿಗಳಿಗೆ 'ಭಿಷಗ್ರತ್ನ' ವೆಂಬ ಬಿರುದೂ ಕೊಡಲ್ಪಟ್ಟಿತು. ಈ ವಿಷಯವಾದ ಬಹುಮಾನ ಪತ್ರವು ಪಂಡಿತ ಮಂಡಲಿಯ ಮೇಲ್ಕಂಡ ಉಭಯ ಪಂಡಿತರಿಗೆ ದೊರೆತಿರುವುದು ವೀರಶೈವ ಸಮಾಜಕ್ಕೇ ಗೌರವಾಸ್ಪದವಾಗಿದೆಯೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ.

ಓರ್ವ ಪ್ರತ್ಯಕ್ಷದರ್ಶಿ

ಶ್ರೀಮತ್ಶ್ರೀ ಜಗದ್ಗುರು ಪಂಡಿತಾರಾಧ್ಯರ ಸಮ್ಮುಖದಲ್ಲಿ

ಶಿವರಾತ್ರಿಮಹೋತ್ಸವ.

ಧಾರವಾಡ ಜಿಲ್ಲಾ ಗೆಜ್ಜಲಗಟ್ಟಿ ಸಂಸ್ಥಾನದ ರಾಜಾ ವೆಂಕಟರಾವ್ ಬಹದ್ದೂರರವರು ಪದ್ಧತಿಗನುಸಾರವಾಗಿ ಇದೇ ಯುವನಾಮಸಂವತ್ಸರ ಮಾಘ ಬ|| ೧೪ ಶಿವರಾತ್ರಿಯ ದಿವಸ ತಮ್ಮ ಗುರುಗಳಾದ ಧರ್ಮಸಿಂಗೂರು ದೇಶಿಕ ಮಠಾಧಿಪ ಆಮರಣಾಸಾದ ಶ್ರೀಗಳವರನ್ನು ಕರೆಯಿಸಿಕೊಂಡು ಪ್ರತ್ಯಕ್ಷವಾಗಿ ಸಭಕ್ತಿ ಪೂಜಾರ್ಚನೆಯಿಂದ ಶ್ರೀಗಳವರ ಪಾದಪೂಜೆಯನ್ನು ರಾಣಿ ನೀಲಮ್ಮನವರು ಮತ್ತು ಜ್ಯೇಷ್ಠ ಪುತ್ರರಾದ ಶರಣಬಸವರಾಜಾ ಇವರುಗಳ ಸಹಿತ ಪರಮಭಕ್ತಿಯಿಂದ ಆಚರಿಸಿ ಜಗದ್ಗುರು ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತಿಮಹೋತ್ಸವವನ್ನು ಮಾಡಿ ಬಂದ ಊರಿಗಣಂಗಳ ಸಮುದಾಯಕ್ಕೆ ಅನ್ನಸಂತರ್ಪಣೆ ತಾಂಬೂಲಾದಿಗಳನ್ನು ಕೊಟ್ಟು ತೃಪ್ತಿಪಡಿಸಿದರು. ಮತ್ತು ಗುರುಗಳಿಗೆ ಗೋದಾನವನ್ನು ಕೊಟ್ಟು ಪುಣ್ಯಭಾಗಿಗಳಾದರು. ಗುರುಗಳ ಅನ್ನಛತ್ರಕ್ಕೆ ಪ್ರಚಾರಪೋಷಣಕ್ಕಾಗಿ ೧ ರೂಪಾಯಿಯು ಸಮರ್ಪಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ

ನೋಟೀಸ್

ದನಗಳ ಪ್ರದರ್ಶನ

ನಂಜನಗೂಡು ಮುನಿಸಿಪಾಲಿಟಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಈ ವರ್ಷದ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ದೊಡ್ಡ ಜಾತ್ರೆಯಲ್ಲಿ, ಮಾರ್ಚಿ 16, 17, 18, 19, 20 ತಾರೀಖುಗಳಲ್ಲಿ ದನಗಳ ಪ್ರದರ್ಶನವು ನೆರವೇರುವುದು. ಉತ್ತಮವಾದ ರಾಸುಗಳಿಗೂ, ಕರೆಯುವ ಹಸುಗಳಿಗೂ ಸರ್ಟಿಫಿಕೇಟುಗಳೂ, ಪದಕಗಳೂ ಸಹ ಕೊಡಲ್ಪಡುವುವು. ಜಿಲ್ಲೆಯ ದಿವಾನ್ ರಾವ್ ಸಾಹುಕಾರ್ ಜೆ ನಂಜುಂಡಪ್ಪ ಅಂಡ್ ಬ್ರದರ್ಸ್‌ರವರು ಉತ್ತಮವಾದ ಹೋರಿಗಾಗಿ ಒಂದು ಬೆಳ್ಳಿಯ 'ಕಪ್' ಬಹುಮಾನವನ್ನು ಕೊಡುವವರಾಗಿರುವರು.

ಪ್ರದರ್ಶನಕ್ಕೆ ಬರುವ ರಾಸುಗಳಿಗೆ ಸುಂಕ ವಗೈರೆ ಯಾವವಿಧವಾದ ತೆರಿಗೆಯೂ ಇಲ್ಲ. ನೆರಳಿನ ಕೋವೂ ನದಿಯ ದಡವೂ ನೀರಿಗೆ ಸೌಕರ್ಯವೂ ಇರುತ್ತೆ. ಗ್ರಾಮಾಂತರದ ರೈತರು ತಮ್ಮ ದನಗಳನ್ನು ಪ್ರದರ್ಶನಕ್ಕೆ ತರಬೇಕೆಂದು ಕೋರಿದೆ.

ಕಾವೇರಿ ನದಿಯಿಂದ ದಕ್ಷಿಣಕ್ಕೆ ದನಗಳ ಪ್ರದರ್ಶನಕ್ಕೆ ಇದೊಂದೇ ಪ್ರಶಸ್ತವಾದ ಸ್ಥಳ. ಒಳ್ಳೆಯ ವ್ಯಾಪಾರದ ಗಿರಾಕಿಗಳು ಬರುವ ಸಂಭವವುಂಟು. ನಮ್ಮ ಪ್ರಾಂತದ ರೈತರು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವರೆಂದು ನಂಬಿರುತ್ತೇನೆ.

ನಂಜನಗೂಡು, 26-2-35 — ಕೆ. ಕೃಷ್ಣರಾವ್, ಅಧ್ಯಕ್ಷ.

ಶ್ರೀಮದ್ರಂಭಾಪುರಿ ಜಗದ್ಗುರುಗಳವರು ರಾಜಧಾನಿಯಿಂದ ಸಂಸ್ಥಾನಮಠಕ್ಕೆ ದಯಮಾಡಿಸುವರು

ಶ್ರೀಮಜ್ಜಗದ್ಗುರು ಮಹಾಸ್ವಾಮಿಗಳವರನ್ನು ಇದುವರೆವಿಗೂ ನಂಜನಗೂಡು ಉಲ್ಲಹಳ್ಳಿ ಚಾಮರಾಜನಗರ, ಮಾಂಬಳ್ಳಿ, ಎಳಂದೂರು ಮುಂತಾದ ಅನೇಕ ಗ್ರಾಮಗಳ ಭಕ್ತಾದಿಗಳು ವಿಶೇಷವಾದ ಭಕ್ತಿಯಿಂದ ತಮ್ಮ ತಮ್ಮ ಗ್ರಾಮಗಳಿಗೆ ಬಿಜಮಾಡಿಸಿಕೊಂಡು ಹೋಗಿ ಗುರುಸೇವೆಯನ್ನು ಮಾಡಿ ಪವಿತ್ರ ಜೀವಿಗಳಾದರು. ಇನ್ನು ಅನೇಕ ಗ್ರಾಮಗಳ ಭಕ್ತಾದಿಗಳು ಚಕೋರಪಕ್ಷಿಯು ಚಂದ್ರನನ್ನು ನಿರೀಕ್ಷಿಸುವಂತೆ ತಮ್ಮ ತಮ್ಮ ಗ್ರಾಮಗಳಿಗೆ ಬಿಜಮಾಡಿಸಿಕೊಳ್ಳಲು ಸಿದ್ಧರಾಗಿದ್ದರು. ಇಷ್ಟರಲ್ಲಿ ಸಂಸ್ಥಾನಮಠದಲ್ಲಿ ನಡೆಯುವ ಮಹಾರಥೋತ್ಸವಕ್ಕೆ ಪದ್ಧತಿಪ್ರಕಾರ ದಯಮಾಡಿಸಬೇಕಾದ್ದರಿಂದ ೧ನೇ ತಾರೀಖು ಸೋಮವಾರ ದಿವಸ ರಾಜಧಾನಿಗೆ ದಯಮಾಡಿಸಿರುತ್ತಾರೆ. ಇದೇ ತಿಂಗಳು 16ನೆಯ ತಾರೀಖು ಶುಕ್ರವಾರ ದಿವಸ ಮಧ್ಯಾಹ್ನ 3 ಘಂಟೆ ಸಮಯಕ್ಕೆ ಶ್ರೀ ಮಹಾಪ್ರಭುಗಳಿಂದ ದಯಪಾಲಿಸಲ್ಪಡುವ ಯಥಾಪೂರ್ವ ಅಖಿಲ ರಾಜಮರ್ಯಾದೆಯೊಡನೆ ನಗರದ ಪ್ರಮುಖ ಮಹಾಶಯರು ಶ್ರೀಗಳವರನ್ನು ಮಹೋತ್ಸವದೊಡನೆ ರಾಜಧಾನಿಯಿಂದ ಕಳುಹಿಸಿಕೊಡುವರು. ಆದಿವಸ ಸಾಯಂಕಾಲ ಪಶ್ಚಿಮವಾಹಿನಿಯಲ್ಲಿದ್ದು ಪ್ರಾತಃಕಾಲ ಸ್ನಾನ ಪೂಜಾದಿಗಳು ತೀರಿದ ಬಳಿಕ ಪ್ರಯಾಣ ಬೆಳೆಸಿ ಸಾಯಂಕಾಲ ಸಂಸ್ಥಾನಮಠವನ್ನು ಸೇರುವರು.

ಸಂ—

ಶ್ರೀಮದ್ರಂಭಾಪುರಿ ಜಗದ್ಗುರುಗಳವರು ನಿನ್ನೆ ಸಾಯಂಕಾಲ 6 ಘಂಟೆ ಸಮಯದಲ್ಲಿ ಅರಮನೆಯಲ್ಲಿ ಶ್ರೀಮನ್ಮಹಾರಾಜರವರನ್ನು ಸಂದರ್ಶಿಸಿದರೆಂದೂ ಪರಸ್ಪರ ಸಂಭಾಷಣೆಗಳು ನಡೆದವೆಂದೂ ತಿಳಿದುಬರುತ್ತದೆ.

ಪತ್ರವ್ಯವಹಾರ

[illegible]

ಕಾಶೀ ಜಗದ್ಗುರುಗಳವರ ಪರ್ಯಟನ ... ಬಾಲ ಸ್ವರಾಜ್ಯ ...

[illegible]

ನಮ್ಮ ವಿದ್ಯಾಸಂಪಾದನ ಮುಖ್ಯ ... ಮಹಾನ್ಯಾನವನ್ನು ಅಧ್ಯಯನಿಸಿದ ... ಕರ್ತವ್ಯವಾಗಿದೆ.

ನನಗೆ ... ವರ್ಷಗಳಿಂದ ಪ್ರಾಪ್ತವಾಗಿದ್ದ ಅರ್ಧಾಂಗಿ ವಾಯು ... ಕರ್ಮೇಂದ್ರಿಯ ... ಉಪನಿಷತ್ತು ... ಆಲೋಚಿಸಿದರೆ ಅವರು ... ಶ್ರೀ ಪಂಚಾಚಾರ್ಯ ... ಉಪನಿಷತ್ ವಾಕ್ಯದಿಂದ

[illegible]

ಶ್ರೀ ... ರೇಣುಕ ...

[illegible]

ಬಸವೇಶ್ವರೀಚಕ್ರ

(... ಮುಂದುವರಿದ ...)

[illegible]

ಸ್ವರೂಪವೇ ಶಿವಲಿಂಗವೆನಿಸುವದು. ಶಿವರಾತ್ರಿಯ ಮಹಿಮೆಯನ್ನು ಅರಿಯುದವರಾರು? ಇದೇ ದಿವಸದಲ್ಲಿ ವೀರಶೈವ ಮತಸ್ಥಾಪಕರಾದ ಶ್ರೀ ೧೦೦೮ ಜಗದ್ಗುರು ಪಂಡಿತಾರಾಧ್ಯ ಮಹಾ ... ದೀರ್ಘ ಪೂಜ್ಯಪಾದರ ಅವತಾರವಾಗಿದೆ.

ಫಾಲ್ಗುನ ಮಾಸದಲ್ಲಿ ಪರಮಾತ್ಮನು ಮನ್ಮಥನನ್ನು ದಹನ ಮಾಡಿದ ... ಹೋಳಿಹುಣ್ಣಿವೆಯು ... ಈಗಿನ ... ಅಜ್ಞಾನಗಳು ಈ ಹಬ್ಬದ ... ಮಾಡುವದು. ಫಾಲ್ಗುನ ಶು|| ೧೩ ಮಿತಿಗೆ ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರ ಅವತಾರವಾಗಿದೆ.

[illegible] ... ಪುರಾಣಗಳಲ್ಲಿ ೧೦ ಪುರಾಣಗಳು ... ಶಿವನೇ ... ಆದುದರಿಂದ ಶಿವನನ್ನೇ ... ಶಿವನು ಬ್ರಾಹ್ಮಣನು, ವಿಷ್ಣುವು ಕ್ಷತ್ರಿಯನು, ಬ್ರಹ್ಮನು ವೈಶ್ಯನು, ಇಂದ್ರನು ಶೂದ್ರನು ... ಶಿವನು ... ಶಿವನಿಗೆ ...

[illegible] ... ಶಿವನನ್ನು ಬಿಟ್ಟು ವಿಷ್ಣುವಿನನ್ನು ... ದಂಡಿಸಲ್ಪಟ್ಟನು.

[illegible] ... ಶ್ರೀ ಜಗದ್ಗುರು ರೇವಣಸಿದ್ಧೇಶ್ವರರು ... ಶ್ರೀ ರೇಣುಕರು ... ಜಗದಾಚಾರ್ಯ ಶ್ರೀ ರೇವಣಸಿದ್ಧೇಶ್ವರರ ... ಶಿವನೇ ಸರ್ವೋತ್ತಮನು ... ಭಕ್ತಿಯು.

(ಸಶೇಷ)

ಶ್ರೀ ಪಟ್ಟಾಧ್ಯಕ್ಷ ಬೃಹನ್ಮಠ ಹೋಟಗಿ

ಆಯುರ್ವೇದಪರಿಚಯ.

ಆರೋಗ್ಯಮಾರ್ಗ

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ ಬೆಂಗಳೂರು

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ಶ್ರೀಕ್ಷೇತ್ರಕಾಶಿ

ಆಹಾರ ನಿಯಮಗಳು.

ಹಳೆಯ ತುಪ್ಪ—ತುಪ್ಪವು ಎಷ್ಟು ಹಳೆಯದಾದರೆ ... ಇಷ್ಟು ... ದಾಗುವುದು ... ತತ್ತ್ವ ... ಹಳೆಯದೆಂಬ ಸಂಜ್ಞೆ ... ೧೦೦ ವರ್ಷಗಳವರೆಗಿಟ್ಟಿದ್ದ ತುಪ್ಪಕ್ಕೆ ... ಸಂಜ್ಞೆಯನ್ನು ಹೊಂದುವುದು ... ತುಪ್ಪವು "ಮಹಾಘೃತ" ... ಹೊಂದುತ್ತದೆ. ಇದು ... ತ್ರಿದೋಷ ... ಗ್ರಹ ... ಗ್ರಹಾವೇಶ ... ಸ್ತ್ರೀಯರ ಗುಹ್ಯಾಂಗರೋಗಗಳು ... ಕಣ್ಣು ... ಮುಂತಾದ ... ರೋಗಗಳನ್ನು ... ಕೀ ...

ಗಳ [illegible] ನಾಶಗೊಳಿಸುತ್ತದೆ. ಈ [illegible] ಪ್ರಸವ ಉನ್ಮಾದ ರೋಗದಲ್ಲಿ ಅತ್ಯಧಿಕವಾದ [illegible] ಮಾಡುವುದೆಂದು [illegible] [illegible] ಕಣ್ಣು [illegible] ಇವುಗಳನ್ನು [illegible] ಎಂದು [illegible] ಕೇವಲ [illegible] (ಗುದದ್ವಾರದಿಂದ [illegible]) [illegible] (ಕಣ್ಣುಗಳಲ್ಲಿ [illegible]) [illegible] ಇವುಗಳ [illegible]

ನೀರು

[illegible] ಪ್ರಾಣಿಗಳು [illegible] ಜೀವ [illegible] ನೀರು [illegible]

ಅನ್ನೇನ ವಿನಾ ಏಂತಂ ಪ್ರಾಣ [illegible]

ತೋಯಾಭಾವಾತ್ [illegible]

[illegible]

[illegible] ಲೋಕದಲ್ಲಿಯಾದರೂ ನೀರು [illegible] ನಮಗೆ [illegible] ಗೊತ್ತಾಗುವುದು [illegible] ರಕ್ತವು [illegible] ಶರೀರದಲ್ಲಿ [illegible] ರಕ್ತ [illegible] ನೀರು [illegible]

ನಾವು [illegible] ಈ [illegible] ; ಒಳಗ [illegible] ; ಒಳಗ

[illegible] ಇದ [illegible] ನಮ್ಮ ಶರೀರದಲ್ಲಿ [illegible] ನೀರು [illegible] ಪ್ರಾಣಿಗಳ [illegible] ಸಂಸರ್ಗ [illegible] ಸಂಸರ್ಗ [illegible] ಇಂತಹ ನೀರು [illegible]

ಶ್ರೀ ಜಗದ್ಗುರು [illegible] ವಾಗೀಶಪಂಡಿತಾರಾಧ್ಯರು ಒಪ್ಪಿಸಿದ ಕನ್ನಡ ಪದ್ಯಗಳು

ಕಂದ|| [illegible] ||೧||

[illegible] ||೨||

[illegible] ||೩||

[illegible] ||೪||

[illegible] ||೫||

ಕಂದ|| [illegible] ||೬||

[illegible] ||೭||

[illegible] ||೮||

[illegible] ||೯||

[illegible] ||೧೦||

ಇತಿ ಶ್ರೀಗುರುಪಾದ [illegible] ವಿರಚಿತಂ

[illegible] ಸಮಯದಲ್ಲಿ [illegible]

ಪದ್ಯಪುಷ್ಪಗಳು

[illegible] ||೧||

[illegible] ||೨||

[illegible] ||೩||

[illegible] ||೪||

[illegible] ||೫||

ಇತಿ ಶ್ರೀ ಶಿವಕುಮಾರಸ್ವಾಮಿ ವಿರಚಿತಂ

ಪತ್ರವ್ಯವಹಾರ.

ಪತ್ರೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಕಾಶೀ ಜಗದ್ಗುರುಗಳವರ ವರ್ಧಂತ್ಯುತ್ಸವದಲ್ಲಿ ವೇ|| ಪಂ|| ಬಾಲಾಕ್ಷಶಾಸ್ತ್ರಿಗಳವರು ಮಾಡಿದ ಭಾಷಣ.

ಭೋಮಹಾಶಯರೆ ಇಂದಿನ ದಿನವು ಬಹು ಸುದಿನವೆಂದು ತಿಳಿಯುತ್ತೇನೆ. ಯೋಗಿಗಳೂ ಜಗದ್ಗುರುಗಳೂ ರಾಜಾಧಿರಾಜರೂ ಪುಣ್ಯವಂತರೂ ಜನ್ಮವೆತ್ತಿದ ಕಾಲದಲ್ಲಿಯಾಗಲಿ ಅವರ ವರ್ಧಂತಿಯ ಕಾಲದಲ್ಲಾಗಲಿ ಅವರು ಮಾಡತಕ್ಕ ನೈಮಿತ್ತಿಕ ಕಾರ್ಯ ಮಹೋತ್ಸವದಲ್ಲೇ ಆಗಲಿ ಪೃಥ್ವಿಯ ಪಂಚಭೂತಗಳೂ ಪ್ರಸನ್ನವಾಗಿ ತಮ್ಮ ತಮ್ಮ ಯೋಗ್ಯ ಗುಣಗಳನ್ನೇ ಜಗತ್ತಿಗೆ ತೋರಿಸುವವು ಎಂಬಂತೆ ಈ ದಿನ ಭೂದೇವಿಯು ಅಕಾಲವೃಷ್ಟಿ ಪ್ರಬಂಧವಾಗಿರುತ್ತ ಇವುಗಳಿಂದ ಪೀಡಿತವಾಗದೆ ಈ ಮಹಾಸಂಸ್ಥಾನ ಸಂಬಂಧಿಯಾದ ಆನಂದವನವಿರಾಜಿತ ಭೂದೇವಿಯು ತನ್ನ ಸ್ವಚ್ಛಗುಣವನ್ನೇ ತೋರಿಸುತ್ತಿದ್ದಾಳೆ. ವಾಹಿನೀಕುಲವಳಲಾದ ನದಿಗಳ ಜಲವು ಮಾಲಿನ್ಯದೋಷಗಳನ್ನು ತ್ಯಜಿಸಿ ಸ್ವಚ್ಛವಾಗಿರುತ್ತದೆ. ಅಗ್ನಿರೂಪಗಳಾದ ದೀಪಗಳು ದೇವಮಂದಿರಗಳಲ್ಲಿ ಧೂಪವಾದಿಗಳಿಂದ ವ್ಯಾಪ್ತವಾಗದೆ ಪ್ರದಕ್ಷಿಣಾಕಾರವಾಗಿ ಊರ್ಧ್ವಗಮನವನ್ನೇ ಮಾಡುತ್ತಿವೆ. ವಾಯುವು ದಕ್ಷಿಣಮಲಯಾಚಲದಿಂದ ಹೊರಟು ಅಷ್ಟದಿಕ್ಕುಗಳಲ್ಲಿ ಸುಗಂಧಗುಣವನ್ನೇ ಹರಡುತ್ತಿದೆ. ಆಕಾಶವು ಮೋಡವಿಲ್ಲದೆ ಸ್ವಚ್ಛವಾಗಿದೆ. ಸೂರ್ಯನು ಮೇಘದಿಂದಾವೃತನಾಗದ ತನ್ನ ದಿವ್ಯಕಿರಣಗಳನ್ನು ಎಲ್ಲಾ ಕಡೆಯ ಪ್ರಕಾಶಗೊಳಿಸುತ್ತಿದ್ದಾನೆ. ಮತ್ತು ಎರಡನೆಯ ಕಾರಣವೇನೆಂದರೆ—ನಮ್ಮ ಸಂಸ್ಕೃತ ವಿದ್ಯಾಭ್ಯಾಸ ಮಾಡಿ ಉತ್ತಮ ಪರೀಕ್ಷೆಯಾಗದಾದ ಕೆಲವರು ಗಾನದಿಂದಲೂ ನಾದದಿಂದಲೂ ಕವಿತಾ ಪಾಠಗಳಿಂದಲೂ ಭಾಷಣಗಳಿಂದಲೂ ಸಭಾಸದರನ್ನು ಸಂತೋಷಪಡಿಸಿದ್ದಾರೆ. ಮೂರನೆಯ ಕಾರಣವೇನೆಂದರೆ—ಮಹಾಸಂಸ್ಥಾನಕ್ಕೆ ಅನೇಕ ತೊಂದರೆಗಳು ಇದ್ದಾಗ್ಯೂ ನಮ್ಮ ಜಗದ್ಗುರುಗಳವರು ಹಿಂದಿನಂತೆ ಪ್ರತಿ ವರ್ಷವೂ ಅನುಗ್ರಹಿಸಿದ ಅನ್ನದಾನದಿಂದಲೂ ಅತಿಥಿ ಅಭ್ಯಾಗತ ಸಾಧುಸತ್ಪುರುಷರ ಪರಿಪಾಲನೆಯಿಂದಲೂ ಮರೆದ ಚಿನ್ನಪಾತ್ರದಿಂದಲೂ ಒಡಗೂಡಿ ಉತ್ತಮ ತತ್ವಸ್ಥಿತಿಯನ್ನಿಟ್ಟು ಆನಂದಪಡಿಸುವವರು ಹಾಗೆಯೇ ಈ ದಿವಸದಲ್ಲಿಯೂ ನಮ್ಮ ಪಂಡಿತರಿಗೆ ಯೋಗ್ಯಪ್ರಶಸ್ತಿಗಳನ್ನು ಕೊಟ್ಟು ಆನಂದಪಡಿಸುತ್ತಾರೆ. ನಾಲ್ಕನೆಯ ಕಾರಣವೇನೆಂದರೆ—ದಕ್ಷಿಣದೇಶದಿಂದ ಯಾತ್ರಾರ್ಥಿಗಳಾಗಿ ಬಂದಿರುವ ವಿರಕ್ತೋತ್ತಮರಾದ ಕಲುಬುರ್ಗಾ ಜಿಲ್ಲಾ ಸೈಕಿ ಸಳಗದ ಮಠಾಧೀಶ ಶ್ರೀ|| ಷ|| ಬ್ರ|| ಸಂಬಯ್ಯಸ್ವಾಮಿಗಳು ಈ ಮಹೋತ್ಸವದಲ್ಲಿ ಭಾಗಿಗಳಾಗಿ ಮಹಾಸಂಸ್ಥಾನದ ಸೇವೆಯನ್ನು ಸದಾ ಮಾಡುತ್ತ ಇರುವೆವೆಂದು ಸೂಚಿಸಿರುವರು. ಈ ಎಲ್ಲಾ ಕಾರಣಗಳಿಂದ ವೇದಾಂತದವರಿಗೆ ದೀಕ್ಷೆಹಾಯುವು ಅಧಿಕವೆಂದೂ ಆ ದೇವಾನುಗ್ರಹದಿಂದಲೇ ಜಗತ್ತು ಸ್ವಾಧೀನವಾಗುವುದೆಂದೂ ತಿಳಿಯಬರುವುದರಿಂದ ಈ ದಿನವು ಅತ್ಯಂತ ಪವಿತ್ರವಾದುದೆಂದು ಹೇಳಬಯಸುತ್ತೇನೆ.

ಆದರೆ ಪ್ರಕೃತ ಸಮಯದಲ್ಲಿ ವಿದ್ಯಾವಂತರು ವಿದ್ಯಾಪಂಡಿತರಾಗಿ ಪರೀಕ್ಷೆಯನ್ನು ಕೊಟ್ಟು ಪ್ರಶಸ್ತಿಗಳನ್ನು ಪಡೆದು ಗುರುಕುಲವಾಸವನ್ನು ಬಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋದ ಮೇಲೆ ಮಾಡತಕ್ಕ ಕರ್ತವ್ಯವೇನೆಂದರೆ—ವಿದ್ಯಾರ್ಥ್ಯನ ಕಾಲದಲ್ಲಿ ಬ್ರಹ್ಮಚರ್ಯವ್ರತದಿಂದ ಇದ್ದಂತೆ ಜನ್ಮಪರ್ಯಂತ ಬ್ರಹ್ಮಚಾರಿಯಾಗಿದ್ದರೂ ಸರಿಯೇ! ಗೃಹಸ್ಥಾಶ್ರಮವನ್ನು ತೆಗೆದುಕೊಂಡರೂ ಸರಿಯೇ! ಅಥವಾ ಜಿತೇಂದ್ರಿಯರಾಗಿ ಮಠಾಧಿಕಾರಿಗಳಾದರೂ ಸರಿಯೇ! ಕಲಿಯುಗದ ಕಾರಣದಿಂದ ಬಹುಜನಗಳಿಗೆ ತಿಳಿಯದೆ ಇರತಕ್ಕ ಆಯಾ ಮತತತ್ವವನ್ನು ಸತ್ಯವಾಗಿ ನಡೆಯುವಂತಾದ ಗೃಹಸ್ಥಾಶ್ರಮ ಧರ್ಮಗಳನ್ನೂ ಉಪದೇಶಿಸಿ ಕಟ್ಟುಕೊಡತಕ್ಕ ನಮ್ಮ ಬಂಧುಮಹಾಶಯರನ್ನು ಸನ್ಮಾರ್ಗಾನುವರ್ತಿಗಳನ್ನಾಗಿ ಮಾಡತಕ್ಕದ್ದೇ ಪ್ರಥಮ ಕರ್ತವ್ಯವು.

ನಾವು ವಿದ್ಯಾಸಂಪಾದನ ಮಾಡುವುದಕ್ಕೋಸ್ಕರ ಯಾವ ಮಹಾಸ್ಥಾನವನ್ನು ಆಶ್ರಯಿಸಿದೆವೋ ಆ ಸ್ಥಾನವನ್ನು ಮರೆಯದೆ ಜನ್ಮಪರ್ಯಂತವಾಗಿ ಸ್ಮರಣೆ ಮಾಡುವುದೇ ಅವರ ಮುಖ್ಯ ಕರ್ತವ್ಯವಾಗಿದೆ.

ನನಗೆ ಮೂರು ವರ್ಷಗಳಿಂದ ಪ್ರಾಪ್ತನಾಗಿದ್ದ ಅರ್ಧಾಂಗವಾಯುರೋಗವು ವಾಗಿಂದ್ರಿಯವಾದ ಕರ್ಮೇಂದ್ರಿಯವನ್ನಾಕ್ರಮಿಸಿ ಮಾತನಾಡುವುದಕ್ಕೆ ಬಹು ಕಷ್ಟವನ್ನು ಕೊಡುತ್ತಿದ್ದಿತು. ಔಷಧವನ್ನು ತೆಗೆದುಕೊಳ್ಳುವುದಕ್ಕೆ ಉದ್ಯುಕ್ತನಾಗಿ ಪ್ರಾಚೀನ ಅನುಭವಶಾಲಿಗಳಾದ ವೈದ್ಯರೂ ಡಾಕ್ಟರರೂ ಇವರೊಡನೆ ಆಲೋಚಿಸಿದರೆ ಅವರು ಸಾವಿರಾರು ರೂಪಾಯಿಗಳನ್ನು ಬೇಡುತ್ತಿದ್ದರು. ಆಮೇಲೆ ಅಲ್ಪಮತಿಯಾದ ನಾನು ನಿಶ್ಚಯಿಸಿದ್ದೇನೆಂದರೆ—ಅನಾಥರಕ್ಷಕನಾದ ಪರಮಾತ್ಮನೂ ಆತನ ಮುಖೋದ್ಭವರಾದ ಶ್ರೀ ಪಂಚಾಚಾರ್ಯ ಜಗದ್ಗುರುವರ್ಯರೇ ನನಗೆ ಗತಿಯು. ಅವರು ಭಕ್ತಿಶ್ರದ್ಧಾವಿಶೇಷ ಸಹ್ಯ ಮೊದಲಾದ ಸನ್ಮಾರ್ಗಯುಕ್ತವಾದ ಆಜೀವನವನ್ನು ಉದ್ಧರಿಸಿ ಅಂತ್ಯದಲ್ಲಿ ಶಿವಶಾಂಭವಜೀವನವನ್ನು ಪರಮಾತ್ಮನು ತನ್ನಲ್ಲಿ ಐಕ್ಯಮಾಡಿಕೊಳ್ಳುವನೆಂದು 'ಶಕ್ತಮುಸಿ' ಎಂಬ ಉಪನಿಷದ್ವಾಕ್ಯದಿಂದ ನಿಶ್ಚಯಿಸಿಕೊಂಡಾಗ್ಯೂ ಮಾರ್ಗಶೋಧವೆ ಅನ್ನಂತ ಮಾತ್ರಳು ಚಿತ್ತದಿಂದ ತಿರುಗಿ ಭಾವಶಿವತ್ವದ ಆಷಾಢ ಬಹುಳ ದ್ವಾದಶೀ ಸೋಮವಾರ ಪಕ್ಷದ ರಾತ್ರಿ ಬ್ರಾಹ್ಮೀಮುಹೂರ್ತ ಸಮಯದಲ್ಲಿ ಸ್ವಪ್ನವಾದ ಸ್ಥಳದಲ್ಲಿ ಪರಮಾತ್ಮ ಮುಖೋದ್ಭವರಾದ ಶ್ರೀ ವಿಶ್ವಾರಾಧ್ಯ ಜಗದ್ಗುರು ಪುಂಗವರು ಜಟಾಮಕುಟ ಭಸ್ಮ ರುದ್ರಾಕ್ಷ ಶಿವಲಿಂಗ ಕಾಷಾಯವಸ್ತ್ರ ದಂಡಕಮಂಡಲುಯುಕ್ತರಾಗಿ ದಿವ್ಯಶರೀರದೇಹದ ದರ್ಶನ ಕೊಟ್ಟು ಮಂತ್ರೋಪದೇಶವನ್ನು ಮಾಡಿ ಸ್ವಲ್ಪ ಸಮಯದಲ್ಲಿಯೇ ಅಂತರ್ಧಾನವಾದರು. ಆಗಿನಿಂದ ಆ ಮಂತ್ರ ಜಪ ಕರ್ತವ್ಯ ಶ್ರೀಗುರು ಚರಣಾನುಗ್ರಹ ಶಿವಕೃಪೆ ಶ್ರೀ ಜಗದ್ಗುರುಗಳ ಅನುಗ್ರಹವೇ ಆ ಮಹಾಪ್ರಸಾದವೇ ಕಾರಣವಾದವು. ಸಂಸಾರ ವಿನಾಶವಾಗುವುದಕ್ಕೆ ಉದ್ಯುಕ್ತನಾಗಿ ಈ ವರ್ಷ ಶುದ್ಧ ದಶಮಿಗೆ ೬|| ತಿಂಗಳಾಯಿತು. ಈವಾಗ ಆ ಪ್ರಚಂಡವಾಯುರೋಗವು ಎಂಟಾಣೆ ಭಾಗ ಕಡಿಮೆಯಾಗಿದೆ. ಅವಶಿಷ್ಟಭಾಗವು ಜಗದ್ಗುರುಗಳ ಕೃಪೆಯಿಂದ ಶೀಘ್ರ ನಾಶವಾಗುವುದೆಂದು ನಂಬಿ ಅದೇ ವ್ರತವನ್ನೇ ಆಚರಿಸುತ್ತಿರುವೆನು. ಈ ಶಿವಭಕ್ತ ಜನ್ಮಕ್ಕೆ ಒಂದುಕೋಟಿ ಜನ್ಮಾಂತರ ಪುಣ್ಯದಿಂದ ಶಿವನೇ ಅಧಿಕ. ಶಿವನನ್ನು ಬಿಟ್ಟು ನಮಗೆ ಮೋಕ್ಷವಿಲ್ಲವೆಂದು ತಿಳಿದಾಗ್ಯೂ ಕಷ್ಟಕರ ಸಂಸಾರದ ದುಃಖ ಪರಮಾನಂದವನ್ನು ಕೊಡತಕ್ಕದ್ದೆಂದು ಭಾವಿಸುವಂತೆ ನಾವೆಲ್ಲರೂ ಸಂಸಾರ ಕೂಪದಲ್ಲಿ ಬಿದ್ದು ಹೊರಳಾಡುತ್ತೇವೆ. ಆದಕಾರಣ ನಮ್ಮ ತಪ್ಪನ್ನು ನಾವು ತಿಳಿದುಕೊಂಡು ಬ್ರಹ್ಮಜ್ಞಾನವನ್ನು ಕೊಡಲು ಅರ್ಹನಾದ ಪರಮಾತ್ಮನು ಬಹು ದಯಾಪಾತ್ರನೆನಿಸಿಕೊಂಡು ಹುಟ್ಟುವುದು ಸಾಯುವುದು ಪವಿತ್ರರಾಗುವುದು ಪಾಪಿಗಳಾಗುವುದು ಸರಿಯಲ್ಲ. ಪರಮಾತ್ಮ ನಿರ್ಮಲ ಸ್ವತಂತ್ರ ನಾವು ವನ್ನು ಹೊಂದುವ ಸದ್ಗುರು ಕರುಣಾಕರನನ್ನು ಒಲಿಸಿಕೊಳ್ಳುವುದು ಉಚಿತವೆಂದು ಭಾವಿಸಿ ಶಿವನಾಮವನ್ನು ತ್ರಿಕರಣಪೂರ್ವಕವಾಗಿ ನಂಬಿದ್ದೇನೆ. ಆದರೆ ಆ ಶಿವನೇ ತನ್ನ ಅಂಶಭೂತರಾದ ಗುರುಗಳನ್ನು ತೋರಿಸುತ್ತಾನೆ. ಅಂತಹ ಗುರುಗಳಿಂದಲೇ ಮೋಕ್ಷವುಂಟಾಗುತ್ತದೆ. ಆದ್ದರಿಂದ ಎಲ್ಲರೂ ಗುರುಗಳನ್ನೇ ಆಶ್ರಯಿಸಿರಿ.

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ |
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ||

ನಮಃ ಪಂಚಜಗದ್ಗುರುಭ್ಯಃ

ಸರ್ವೋತ್ಕೃಷ್ಟಭಕ್ತಿ.

(ಹಿಂದಿನಿಂದ ಮುಂದೆ ಸಾಗಿದುದು)

ಶ್ರಾವಣ ಮಾಸವು ಕೇವಲ ಈಶ್ವರನ ಮುಖ್ಯ ಹಬ್ಬವೇ ಎಂದು ಹೇಳಿ ಬರೆಯಬೇಕಾಗಿಲ್ಲ. ಈ ಸಮಯದಲ್ಲಿ ಎತ್ತ ನೋಡಿದತ್ತ ಈಶ್ವರಮೂರ್ತಿಗಳಿಗೆ ರುದ್ರಾಭಿಷೇಕಾದಿಗಳಿಂದ ಪೂಜೆಯು ನಡೆಯುತ್ತಿದೆ. ವಿಶೇಷವಾಗಿ ಗುರುವಾರದ ಪೂಜೆಯು ಸಹಸ್ರ ಬಿಲ್ವದಲಗಳಿಂದ ಸರ್ವತ್ರ ಸಾಗುತ್ತದೆ. ಕೌರವರು ಗಜಗೌರೀ ವ್ರತವನ್ನು ನೆರವೇರಿಸಿದ ಕಾರಣವಾಯು ಕುಂತಿಯು ಇಚ್ಛಾಪ್ರಕಾರ ಇಂದ್ರನ ಐರಾವತವನ್ನು ತಂದು ಪೂಜಿಸಿದ ಸಮಯವೂ ಇದೇ ಆಗಿದೆ. ಪಾಂಡವರ ಅಭೀಷ್ಟಾರ್ಥದ ಸಂಗಡ ಪೂಜೆಯೂ ನೆರವೇರುತ್ತದೆ.

ಭಾದ್ರಪದದಲ್ಲಿ ಪಾರ್ವತೀದೇವಿಯು ಉಸುಕಿನ ಲಿಂಗವನ್ನು ಮಾಡಿ ಪೂಜಿಸಿ ಪರಮಶಿವನನ್ನು ಒಲಿಸಿಕೊಂಡು ಪತಿತ್ವವನ್ನು ಸ್ವೀಕರಿಸಿದ್ದರಿಂದ ಭಾದ್ರಪದ ಶು|| ೩ ತದಿಗೆಯಲ್ಲಿ 'ಹರಿತಾಳಿಕಾಪೂಜೆ' ಎಂದು ಉಸುಕಿನ ಲಿಂಗವನ್ನು ಮಾಡಿ ಪೂಜಿಸುವ ಸಂಪ್ರದಾಯವಿದೆ. ಈ ಮಾಸದಲ್ಲಿಯೇ ಶ್ರೀ ಪಾರ್ವತೀದೇವಿಯವರ ಪ್ರಿಯಪುತ್ರನೂ ಸರ್ವವಿಘ್ನಸಂಹರ್ತೃವೂ ಆದ ವಿಘ್ನೇಶ್ವರನ ಅವತಾರವೂ ಆಗಿದೆ. ಮತ್ತು ನಾದ ಗಜಾಸುರನ ವಧೆಯನ್ನೂ ಪರಶಿವನು ಇದೇ ಸಮಯದಲ್ಲಿಯೇ ಮಾಡಿರುತ್ತಾನೆ.

ಆಶ್ವಯುಜ ಮಾಸದಲ್ಲಿ ಶುಂಭನಿಶುಂಭರೆಂಬ ರಕ್ಕಸರನ್ನು ಕೊಂದು ಜೋಕಲಾ ದಸರ್ರಂಟುಮಾಡಿದ ಪಾರ್ವತೀದೇವಿಯ ಹಬ್ಬವು ಇದೇ ಮಾಸದಲ್ಲಿ. ಅರ್ಜುನನು ಶಮೀವೃಕ್ಷದ ಕೆಳಭಾಗದಲ್ಲಿ ಕೊಂದು ವಿಜಯವಾದ ಆನಂದವಾರ್ತೆಯನ್ನು ಪರಶಿವನಿಗೆ ತೋರಿಸುವುದಕ್ಕಾಗಿ ದಶಮಿಯನ್ನು ಒಯ್ಯು ಇದೇ "ವಿಜಯದಶಮಿಯು" ಎಂದಳಂತೆ! ತಮ್ಮ ಬಾಣ ಬತ್ತಳಿಕೆಗಳನ್ನು ಶಮೀವೃಕ್ಷದಲ್ಲಿಟ್ಟು ಅಜ್ಞಾತವಾಸದಲ್ಲಿದ್ದು ಅನಂತರ ಆ ಶಮೀವೃಕ್ಷದಲ್ಲಿರುವ ಶಸ್ತ್ರಗಳನ್ನೆಲ್ಲ ತೆಗೆದುಕೊಂಡು ಗೋವುಗಳನ್ನು ಹಿಡಿದೊಯ್ದ ಕೌರವರನ್ನು ಜಯಿಸಿ ಅಣ್ಣನಾದ ಧರ್ಮನನ್ನು ಅರ್ಜುನನು ಸಂತೋಷಗೊಳಿಸಿದ ಸಮಯವೂ ಇದೇ ವಿಜಯದಶಮಿಯು.

ತಾರಕಾಸುರನನ್ನು ಕೊಂದು ಬಂದ ಪುತ್ರನಾದ ಕಾರ್ತಿಕೇಯ (ಷಣ್ಮುಖ)ನ ಮೇಲಿರುವ ಪ್ರೇಮದಿಂದ ಪಾರ್ವತೀದೇವಿಯು ಅನೇಕಾನೇಕ ದೀಪಗಳನ್ನು ಬೆಳಗಿದಳಂತೆ! 'ಅದೇ ದೀಪಾವಳಿಯು' ಕಾರ್ತಿಕ ಎಂಬ ನಾಮಾಭಿಧಾನವಾದುದು ಕಾರ್ತಿಕ ಮಾಸವು. ಗೌರೀಹುಣ್ಣಿಮೆಯಲ್ಲಿ ಗೌರೀದೇವಿಯನ್ನು ಕೂಡ್ರಿಸಿ ಒಳ್ಳೇ ವೈಭವದಿಂದ ಪೂಜಿಸುವರು.

ಮಹಾಶಿವರಾತ್ರಿಯನ್ನು ಪಾಲಿಸದವರಾರು? ಆ ದಿನದ ಪಾಪಿಯೂ ಕೂಡ "ಶಿವ" ಎಂಬ ಎರಡಕ್ಷರಗಳನ್ನಾದರೂ ನುಡಿಯುವನು. ಅಥವಾ ಶಿವಪೂಜೆಯನ್ನಾದರೂ ನೋಡುವನು. ಇಲ್ಲವೇ ಶಿವಕಥೆಯನ್ನಾದರೂ ಕೇಳುವನು. ಇವುಗಳನ್ನೆಲ್ಲ ತಿರಸ್ಕರಿಸಿ ನಾಟಕಾದಿಗಳಿಗೆ ಹೋದರೆ ಅಲ್ಲಿಯೂ ಶಿವರಾತ್ರಿ ಮಹಿಮೆಯು ವಿಷಯವೇ ಇರುತ್ತದೆ. ಒಟ್ಟಿನ ಮೇಲೆ ಆ ದಿವಸ ಸರ್ವತ್ರ ಶಿವಸ್ಮರಣವೇ ತುಂಗೊಳಿಸುವದು. ಶಿವರಾತ್ರಿಯ ಮಹಿಮೆಯನ್ನು ಅರಿಯದವರಾರು? ಇದೇ ದಿವಸದಲ್ಲಿ ವೀರಶೈವ ಮತಸ್ಥಾಪಕರಾದ ಶ್ರೀ ೧೦೮ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯ ಪೂಜ್ಯಪಾದರ ಅವತಾರವಾಗಿದೆ.

ಫಾಲ್ಗುನ ಮಾಸದಲ್ಲಿ ಪರಮಾತ್ಮನು ಮನ್ಮಥನನ್ನು ದಹನ ಮಾಡಿದ ದ್ಯೋತಕವಾಗಿ "ಹೋಳಿಹುಣ್ಣಿಮೆಯು" ಸಿದ್ಧವಿದೆ. ಈಗಿನ ಕೆಲವು ಅಜ್ಞಾನಿಗಳು ಈ ಹಬ್ಬದ ದುರುಪಯೋಗವನ್ನು ಮಾಡುವರು. ಫಾಲ್ಗುನ ಶು|| ೧೩ ಮಿತಿಗೆ ಕೊಲ್ಲಿಪಾಕೀಯ ಸೋಮೇಶ್ವರಲಿಂಗದಲ್ಲಿ ಉದ್ಭವರಾದ ಶ್ರೀಜಗದ್ಗುರು ರೇಣುಕಾಚಾರ್ಯ ಭಗವತ್ಪಾದರ ಅವತಾರವಾಗಿದೆ.

ಇದರ ಮೇಲಿಂದ ನೋಡಿದರೆ ಸರ್ವಲೌಕಿಕ ಹಬ್ಬಗಳೂ ಕೂಡ ಪರಶಿವನ ಪರವಾಗಿಯೇ ಇರುತ್ತವೆಂದು ಕಾಣುತ್ತದೆ. ಅಲ್ಲದೆ ವ್ಯಾಸಕೃತ ೧೮ ಪುರಾಣಗಳಲ್ಲಿ ೧೦ ಪುರಾಣಗಳು ಪರಶಿವನ ಪರವಾಗಿದ್ದು ಉಳಿದ ೮ ಪುರಾಣಗಳು ವಿಷ್ಣು, ದೇವಿ, ಸೂರ್ಯ ಇತ್ಯಾದಿ ದೇವತೆಗಳ ಪರವಾಗಿರುತ್ತವೆ. ಈ ಪ್ರಕಾರ ಶಿವನೇ ಸರ್ವೋತ್ತಮನಿದ್ದರೂ ಅಜ್ಞರು ಇತರ ಕ್ಷುಲ್ಲಕ ದೇವತೆಗಳ ಬೆನ್ನು ಹತ್ತುವದೆಂದರೆ—ಕಾಮಧೇನುವನ್ನು ಬಿಟ್ಟು ಗೊಡ್ಡೆಮ್ಮೆಯನ್ನು ಸಾಕಿದಂತೆಯೇ ಸರಿ! ಆದುದರಿಂದ ಶಿವನನ್ನೇ ಸ್ಮರಿಸತಕ್ಕದ್ದು. ಶಿವನು ಬ್ರಾಹ್ಮಣನು, ವಿಷ್ಣುವು ಕ್ಷತ್ರಿಯನು, ಬ್ರಹ್ಮನು ವೈಶ್ಯನು, ಇಂದ್ರನು ಶೂದ್ರನು. ಇತರ ನರದೇವತೆಗಳು ಸಂಕರರಾಗಿರುತ್ತಾರೆ. ಹೀಗೆ ಶಾಸ್ತ್ರಗಳಲ್ಲಿ ಬಲವತ್ತರವಾದ ಆಧಾರಗಳಿರುತ್ತವೆ. ಬ್ರಾಹ್ಮಣರಾದ ವೀರಶೈವರು ಬ್ರಾಹ್ಮಣನಾದ ಶಿವನನ್ನೇ ಧ್ಯಾನಿಸಿರಿ. ಇತರ ದೇವತೆಗಳನ್ನು ಸ್ವಪ್ನದಲ್ಲಿಯೂ ಕೂಡ ನೆನಸಬೇಡಿರಿ. ಶಿವನು ನಿಮ್ಮ ಸರ್ವೇಚ್ಛೆಗಳನ್ನು ಕೊಡಲು ಸಮರ್ಥನಿದ್ದಾನೆ. ಆದ್ದರಿಂದ ಶಿವನನ್ನೇ ಮೊರೆಹೊಕ್ಕು ಭವಬಂಧನವನ್ನು ಕಳೆದುಕೊಳ್ಳಿರಿ. ಇದೇ ನಿಜವಾದ ಏಕೇಶ್ವರೀಭಕ್ತಿಯು.

ಹಿರಣ್ಯಕಶಿಪು ಎಂಬ ರಾಕ್ಷಸನು ಪರಮಶಿವಭಕ್ತನು. ಅವನ ಮಗನಾದ ಪ್ರಹ್ಲಾದನು ಕ್ಷುದ್ರದೈವನಾದ ವಿಷ್ಣುವನ್ನು ಶಿವನನ್ನು ಬಿಟ್ಟು ಭಜಿಸಿದ. ಪ್ರಹ್ಲಾದನಿಗೆ ವಿಷ್ಣುವು ನೃಸಿಂಹಾವತಾರವನ್ನು ತಾಳಿ ಉದ್ಧರಿಸಿದನು. ನೃಸಿಂಹನು ಶರಭಾವತಾರದಿಂದ ದಂಡಿಸಲ್ಪಡಲಿಲ್ಲವೇ?

ಕಾಂಚೀ ಕ್ಷೇತ್ರದಲ್ಲಿ ಶ್ರೀ ಜಗದ್ಗುರು ರೇವಣಸಿದ್ಧೇಶ್ವರರು ಹುಬ್ಬಕ್ಕಂತೆ ಚಲಿಸುವಾಗ್ಗೆ ಕೆಲವೈಷ್ಣವರು, ಅವರನ್ನು ಬಲಾತ್ಕಾರದಿಂದ ಕರೆದೊಯ್ದು ವಿಷ್ಣುಮೂರ್ತಿಗೆ ನಮಿಸೆಂದು ಕಲಿಯನ್ನು ಬಗ್ಗಿಸುವ ಯತ್ನದಲ್ಲಿರಲು ಶ್ರೀ ರೇವಣರು ತಮ್ಮಯ ತಲೆಯನ್ನು ಬಲಿಸಲು ಅಲ್ಲಿರುವ ವಿಷ್ಣುಮೂರ್ತಿಯ ತಲೆಯು ಬಾಗುವದನ್ನು ನೋಡಿ ರಾಜನಿಂದಲೂ ಮಂತ್ರಿ ಯಂತ್ರಾದಿಗಳಿಂದಲೂ ನಿವಾರಿಸಲು ಬಲವು ನಿಲ್ಲದಿರಲು, ಕಡೆಗೆ ಆ ರಾಜನು ಶಿವಕಾಂಚಿಯಲ್ಲಿ 'ಏಕಾಮ್ರೇಶ್ವರ'ನನ್ನು ರುದ್ರಾಭಿಷೇಕಾದಿಗಳಿಂದ ಪೂಜಿಸಿ ಭಜಿಸಿದನಂತರ ಜಗದಾಚಾರ್ಯ ಶ್ರೀ ರೇವಣಸಿದ್ಧೇಶ್ವರರ ವರದ ಹಸ್ತದಿಂದ ವರದರಾಜನ ಶಿರಃಕಂಪನವು ಸ್ಥಿರಗೊಂಡಿತು. ಏಕಾಮ್ರೇಶ್ವರನನ್ನು ಸ್ಮರಿಸಿದ್ದರೆ ಶಿರಃಕಂಪನವು ನಿಲ್ಲುತ್ತಿರಲಿಲ್ಲ. ಆದ್ದರಿಂದ ಶಿವನೇ ಸರ್ವೋತ್ತಮನು. ತದೇಕ ಚಿತ್ತಯೋ ಏಕೇಶ್ವರೀ ಭಕ್ತಿಯು.

(ಸಶೇಷ)

ಶ್ರೀ ಪಟ್ಟಾಧ್ಯಕ್ಷ ಬೃಹನ್ಮಠ ಹೊಟಗಿ

ಆಯುರ್ವೇದಪರಿಚಯ.

ಆರೋಗ್ಯಮಾರ್ಗ.

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ
ಬೆಂಗಳೂರು
ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ
ಶ್ರೀಕ್ಷೇತ್ರಕಾಶೀ

ಆಹಾರ ನಿಯಮಗಳು.

ಹಳೆಯ ತುಪ್ಪ—ತುಪ್ಪವು ಎಷ್ಟು ಹಳೆಯದಾದರಷ್ಟು ಉತ್ಕೃಷ್ಟಗುಣವುಳ್ಳದಾಗುವುದು. ಮತ್ತು ಬಹು ಬೆಲೆಯುಳ್ಳದಾಗುತ್ತದೆ. ಹತ್ತು ವರ್ಷಗಳವರೆಗಿಟ್ಟಿದ್ದ ತುಪ್ಪವೇ ಹಳೆಯದೆಂಬ ಸಂಜ್ಞೆಯನ್ನು ಹೊಂದುವುದು, ೧೦೦ ವರ್ಷಗಳವರೆಗಿಟ್ಟಿದ್ದ ತುಪ್ಪವು "ಕುಂಭ" ವೆಂಬ ಸಂಜ್ಞೆಯನ್ನು ಹೊಂದುವುದು. ಇದರ ಮೇಲ್ಪಟ್ಟ ತುಪ್ಪವು "ಮಹಾಘೃತ" ವೆಂಬ ಸಂಜ್ಞೆಯನ್ನು ಹೊಂದುತ್ತದೆ. ಇದು ಅಮೃತಕ್ಕೆ ಸಮಾನವಾಗಿರುವುದಾಗಿದೆ. ಸಾಮಾನ್ಯವಾಗಿ ಹಳೆಯ ತುಪ್ಪವು ಅತ್ಯಂತ ತೀವ್ರರೇಚನಕಾರಿ, ವಮನಕಾರಿ. ಹಗುರ, ಗಾಯಿಗಳನ್ನ ತೀವ್ರಗತಿಯಿಂದ ಗುಣಪಡಿಸುವುದು ಮತ್ತು ಸ್ತ್ರೀಯರ ಗುಪ್ತಾಂಗರೋಗ ಗುಲ್ಮ-ಚಾಪ-ಮೂರ್ಛೆ-ದಮ್ಮು-ಕೆಮ್ಮು-ಮೂಲವ್ಯಾಧಿ-ಪೀನಸ-ಕುಷ್ಠ-ಉನ್ಮಾದ ಇವುಗಳನ್ನು ನಿರ್ಮೂಲಗೊಳಿಸುವುದಲ್ಲದೆ ಸಾಂಕ್ರಾಮಿಕರೋಗಗಳನ್ನುಂಟುಮಾಡುವ ಕೀಟಾಣು

ಗಳ ಕುಲವನ್ನು ನಾಶಗೊಳಿಸುತ್ತದೆ. ಈ ಹಳೆಯ ತುಪ್ಪವು ಉನ್ಮಾದ ರೋಗದಲ್ಲಿ ಅತ್ಯದ್ಭುತವಾದ ಫಲವನ್ನುಂಟುಮಾಡುವುದೆಂದು ಪ್ರಸಿದ್ಧಿಗೊಂಡಿದೆ. ಮತ್ತು ಸನ್ನಿಪಾತ-ಶೂಲ-ಕಣ್ಣುಬೇನೆಗಳಿವುಗಳ ವಿಷವಿಕಾರ ಇವುಗಳನ್ನು ತ್ವರಿತ ಶೀಘ್ರದಿಂದ ಗುಣಪಡಿಸುತ್ತದೆ ಆದರೆ ಇದು ಕೇವಲ ಹೊರಗಡೆಯ ಅವಯವಗಳ ಮೂಲಕ ಶರೀರದಲ್ಲಿ ಪ್ರವೇಶಿಸಲ್ಪಡುವುದಲ್ಲದೆ ಹೊಟ್ಟೆಯೊಳಗೆ ಸೇವಿಸಲ್ಪಡುವುದಿಲ್ಲ. ಆಯುರ್ವೈದ್ಯ ಶಾಸ್ತ್ರದಲ್ಲಿ ಬಸ್ತಿ (ಗುದದ್ವಾರದಿಂದ ಪ್ರವಿಷ್ಟವಾಗುವುದು) ನಸ್ಯ (ಮೂಗಿನಿಂದ ಪ್ರವಿಷ್ಟವಾಗುವುದು) ಅಕ್ಷಿಪೂರಣ (ಕಣ್ಣುಗಳಲ್ಲಿ ತುಂಬುವುದು) ಮರ್ದನ (ಶರೀರಕ್ಕೆ ಹಚ್ಚಿ ತಿಕ್ಕುವುದು) ಇವುಗಳ ಮೂಲಕವೇ ಹಳೆಯ ತುಪ್ಪದ ಪ್ರಯೋಗವು ವಿಧಿಸಲ್ಪಟ್ಟಿರುತ್ತದೆ ವ್ರಣಕುಷ್ಠ ಮುಂತಾದ ಹೊರಗಿನ ವ್ಯಾಧಿಗಳಲ್ಲಿ ವಿದ್ಯುಚ್ಛಕ್ತಿಯಂತೆ ಕಾರ್ಯವನ್ನು ಮಾಡುವುದಾಗಿರುತ್ತದೆ ಈ ತುಪ್ಪದೊಡನೆ ಹಿಂಗನ್ನು ಅರೆದು ಮೂಗಿನಿಂದ ಸೇದುವುದಾದರೆ ಚಾತುರ್ಥಿಕಜ್ವರ (ನಾಲ್ಕು ದಿನಗಳಿಗೊಮ್ಮೆ ಬರುವ ಜ್ವರ) ವು ಅವಶ್ಯವಾಗಿ ನಿಲ್ಲುತ್ತದೆ

ನೀರು.

ಚರಾಚರಾತ್ಮಕ ಪ್ರಾಣಿಗಳ ಪ್ರಾಣರಕ್ಷಣೆಯಲ್ಲಿ ಅಗ್ರಸ್ಥಾನವನ್ನು ಹೊಂದಿರುವ ನೀರು "ಜೀವನ" ಎಂಬ ಸಾರ್ಥಕ ನಾಮದಿಂದಲಂಕೃತವಾಗಿದೆ ಪ್ರಾಣಿಗಳು ತಮ್ಮ ಆಹಾರವನ್ನು ಹೊಂದಲು ಸ್ವಲ್ಪ ತಡವಾದರೂ ಕಷ್ಟದಿಂದ ಪ್ರಾಣಗಳನ್ನು ಧರಿಸಿರಬಹುದು ಆದರೆ ನೀರಡಿಕೆಯುಂಟಾದಾಗ ನೀರು ದೊರೆಯದಿದ್ದರೆ ಮಾತ್ರ ಒಂದು ನಿಮಿಷವಾದರೂ ಪ್ರಾಣಗಳನ್ನು ಧರಿಸಲಾರವು ಅದು ಕಾರಣವೇ ಹಾರೀತನು ಸಹ "ತೃಷಿತೋ ಮೋಹಮಾಯಾತಿ ಮೋಹಾತ್ ಪ್ರಾಣಾನ್ ವಿಮುಂಚತಿ" ಎಂದು ಹೇಳಿರುತ್ತಾನೆ ನೀರಡಿಸಿದ ಪ್ರಾಣಿಗಳು ನೀರನ್ನು ಹೊಂದದೆ ಮೂರ್ಛೆಗೊಂಡು ತಮ್ಮ ಅಮೂಲ್ಯಗಳಾದ ಪ್ರಾಣಗಳನ್ನು ಕ್ಷಣಮಾತ್ರದಲ್ಲಿ ನೀಗುವುವು. ಆಹಾರಕ್ಕಿಂತಲೂ ನೀರು ಪ್ರಾಣರಕ್ಷಣೆಗೆ ಮುಖ್ಯಕಾರಣವಾಗಿರುವುದೆಂದು ಬಾಪಮಿಶ್ರಪಂಡಿತನು,

ಅನ್ನೇನಾಪಿ ವಿನಾ ಜಂತುಃ ಪ್ರಾಣಾನ್
ಧಾರಯತೇ ಚಿರಂ|
ತೋಯಾಭಾವಾತ್ಪಿಪಾಸಾರ್ತಃ
ಕ್ಷಣಾತ್ಪ್ರಾಣೈರ್ವಿಮುಚ್ಯತೇ|

ಎಂಬ ಶ್ಲೋಕದಿಂದ ಪ್ರಾಣಾಧಾರವಾಗಿರುವ ನೀರನ್ನು ವರ್ಣಿಸಿರುವನು. ಲೋಕದಲ್ಲಿಯಾದರೂ ನೀರು ಪ್ರಾಣರಕ್ಷಕವಾದ ಅತ್ಯವಶ್ಯಕ ವಸ್ತುವೆಂಬುದು ಸರ್ವಜನ ಪ್ರಸಿದ್ಧವಾಗಿರುತ್ತದೆ. ನಮಗೆ ಪುನಃಪುನಃ ನೀರಡಿಕೆಯುಂಟಾಗುವುದರ ರಹಸ್ಯವು ಸ್ವಲ್ಪ ವಿಚಾರಮಾಡಿ ನೋಡಿದರೆ ಗೊತ್ತಾಗಬಹುದು. ನಾವು ಸೇವಿಸುವ ಆಹಾರವು ಉದರಗತವಾಗಿ ರಸರೂಪವನ್ನು ಹೊಂದಿ ಯಕೃತ್, ಪ್ಲೀಹ, ಗುಲ್ಮ ಸ್ಥಾನಗಳಲ್ಲಿ ಪ್ರವೇಶಿಸಿ ರಕ್ತವಾಗುವುದೆಂದು ಹಿಂದೆಯೇ ಬರೆದಿರುವುದಾಗಿದೆಯಷ್ಟೆ! ಆ ರಕ್ತವು ನರಗಳ ಮೂಲಕ ಹರಿದು ಸಂಪೂರ್ಣಶರೀರವನ್ನು ವಿಶ್ರಾಂತಿಯಿಲ್ಲದೆ ಸುತ್ತುತ್ತಿರುವುದು ಈ ತೆರನಾದ ವಿಶೇಷ ಪರಿಶ್ರಮದಿಂದ ರಕ್ತದಲ್ಲಿನ ದ್ರವಭಾಗವು ಕಡಿಮೆಯಾಗಲು ರಕ್ತದ ಬಲದಿಂದಲೇ ಇರುವ ಶರೀರದಲ್ಲಿ ಶುಷ್ಕತೆಯುಂಟಾಗಿ ನೀರಡಿಕೆಯಾಗುತ್ತದೆ. ಆ ಸಮಯದಲ್ಲಿ ನೀರನ್ನು ಕುಡಿಯದಿದ್ದರೆ ರಕ್ತವು ಗಟ್ಟಿಯಾಗಿ ನರಗಳಲ್ಲಿ ಪ್ರವಹಿಸಲು ಅಸಮರ್ಥವಾಗುತ್ತದೆ ನಮ್ಮ ಶರೀರದಲ್ಲಿ ಕೂದಲಿಗಿಂತಲೂ ಸೂಕ್ಷ್ಮಗಳಾದ ಕೆಲವು ನರಗಳಿರುವುವು ಆ ಸೂಕ್ಷ್ಮನರಗಳಲ್ಲಿ ರಕ್ತವು ನಿರಾತಂಕವಾಗಿ ಸಂಚರಿಸಬೇಕಾದರೆ ರಕ್ತದಲ್ಲಿನ ದ್ರವಭಾಗವು ಪೂರ್ಣವಾಗಿದ್ದೇ ತೀರಬೇಕಾಗುತ್ತದೆ ರಕ್ತದ ಶುಷ್ಕತೆಯ ಸಮಯದಲ್ಲಿ ಉಂಟಾದ ನೀರಡಿಕೆಯಲ್ಲಿ ನಾವು ಕುಡಿದ ನೀರು ರಕ್ತನಾಳಗಳಲ್ಲಿ ಸೇರಿ ಕಡಿಮೆಯಾಗಿರುವ ದ್ರವಭಾಗವನ್ನು ಪೂರ್ತಿಗೊಳಿಸಿ ರಕ್ತದ ನಿರಾತಂಕ ಸಂಚಾರಕ್ಕೆ ಸಹಾಯವನ್ನಿತ್ತು ಶರೀರದಲ್ಲಿ ಚೈತನ್ಯವನ್ನುಂಟುಮಾಡುತ್ತದೆ

ನಾವು ಸ್ವಲ್ಪ ವಿಚಾರಮಾಡಿ ನೋಡುವುದಾದರೆ ಈ ಭೂಮಂಡಲದಲ್ಲಿ $\frac{3}{4}$ ಭಾಗ ಜಲವೂ $\frac{1}{4}$ ಭಾಗ ಭೂಮಿಯೂ ಇರುವುದೆಂದು ತಿಳಿಯಬಹುದು. ನಮ್ಮ ಶರೀರದಲ್ಲಿಯಾದರೂ ಜಲಭಾಗವೇ ಹೆಚ್ಚಾಗಿರುತ್ತದೆ ಶರೀರವು ತೂಕದಲ್ಲಿ ೧೦೦ ಸೇರಿದ್ದರೆ ಅದರಲ್ಲಿ ೭೦ ಸೇರು ಜಲಾಂಶವೂ ೩೦ ಸೇರು ಮಾಂಸ ಮತ್ತು ಎಲುಬುಗಳಿಂದ ಕೂಡಿದ ಘನಾಂಶವೂ ಇರುತ್ತದೆ ಹೀಗಿರುವಾಗ ನಮಗೆ ನೀರಿನ ಆವಶ್ಯಕತೆಯು ಎಷ್ಟರಮಟ್ಟಿಗಿರುವುದೆಂಬುದನ್ನು ವಾಚಕರೇ ಊಹಿಸಬಹುದು

ಪ್ರಾಣಿಗಳು ನೀರಿಲ್ಲದೆ ಜೀವಿಸಲಾರವೆಂಬ ವಿಷಯವನ್ನು ಸಾಮಾನ್ಯವಾಗಿ ಎಲ್ಲರೂ ಬಲ್ಲರು. ಆದರೆ ಎಂತಹ ನೀರು ಪ್ರಾಣರಕ್ಷಕವಾಗಿರುವುದೆಂಬುದನ್ನು ಮಾತ್ರ ಅರಿತಿರುವ ಜನರು ಬಹು ಸ್ವಲ್ಪರೇ ಇರುತ್ತಾರೆ ನೀರಿನ ಶುದ್ಧತೆಯ ಕಡೆಗೆ ಯಾರೂ ವಿಶೇಷವಾಗಿ ಲಕ್ಷ್ಯವನ್ನು ಕೊಡುವುದಿಲ್ಲ ಈ ಕಾರಣದಿಂದಲೇ ಅನೇಕ ಸಂದರ್ಭಗಳಲ್ಲಿ ಸಾಂಕ್ರಾಮಿಕ ರೋಗಜನಕಗಳಾದ ಕ್ರಿಮಿಜೀವಾಣುಗಳು ನೀರಿನೊಡನೆ ಹೊಟ್ಟೆಯಲ್ಲಿ ಸೇರಿ ಮಹಾಮಾರಿ, ಅತಿಸಾರ, ಅಜೀರ್ಣ ಮೊದಲಾದ ಅಸಾಧ್ಯ ರೋಗಗಳನ್ನುಂಟುಮಾಡಿ ಮಾನವ ಜೀವನವನ್ನು ದುಃಖಮಯವನ್ನಾಗಿ ಮಾಡುತ್ತದೆ ಆದುದರಿಂದ ಆರೋಗ್ಯಾಭಿಲಾಷಿಗಳು ಹಿತಕಾರಕ ಭೋಜನದೊಂದಿಗೆ ನೀರಿನ ಪರಿಶುದ್ಧತೆಯ ಕಡೆಗೆ ವಿಶೇಷ ಧ್ಯಾನವನ್ನಿತ್ತು ಯಾವಾಗಲೂ ನಿರ್ದೋಷವಾದ ನೀರನ್ನು ಪಾನಮಾಡುತ್ತ ಅಮೂಲ್ಯವಾದ ಮಾನವ ಜೀವನವನ್ನು ಸುಖಮಯವನ್ನಾಗಿ ಮಾಡಿಕೊಳ್ಳಲು ಯತ್ನಿಸಬೇಕಾದುದುಚಿತವಾಗಿರುತ್ತದೆ

ವೈದ್ಯಶಾಸ್ತ್ರವು ನೀರಿನ ಅನಂತಭೇದಗಳನ್ನು ವರ್ಣಿಸುತ್ತದೆ ಆದರೆ ಆ ಸಕಲವಿಧ ನೀರೂ ಈಗಿನ ಕಾಲದಲ್ಲಿ ಯಾರಿಂದಲೂ ಉಪಯೋಗಿಸಲ್ಪಡುವುದಿಲ್ಲವಾದ ಕಾರಣ ನಮ್ಮ ಸಕಲ ದೇಶಗಳಲ್ಲಿ ವಿಶೇಷ ರೀತಿಯಲ್ಲಿರುವ ನದಿ, ಬಾವಿ ಮತ್ತು ಸ್ವಲ್ಪ ಕಾಲದಿಂದ ಪ್ರಚಲಿತವಾಗಿರುವ ಕೊಳಾಯಿ ಇವುಗಳ ನೀರಿನ ಗುಣದೋಷಗಳನ್ನು ಮಾತ್ರ ಇಲ್ಲಿ ವಿವೇಚಿಸುವುದಾಗುತ್ತದೆ

ನದಿಯ ನೀರು ಯಾವಾಗಲೂ ಹರಿಯುತ್ತಿರುವುದರಿಂದ ಹಗುರವೂ, ಕಫ-ಪಿತ್ತನಾಶಕವೂ, ವಾತಕರವೂ, ಅಗ್ನಿದೀಪಕವೂ ಆಗಿರುತ್ತದೆ ಅದರಲ್ಲಿಯೂ ವೇಗದಿಂದ ಹರಿಯುತ್ತಿರುವ ನದಿಯ ನಿರ್ಮಲವಾದ ನೀರು ಬಹಳ ಹಗುರವೂ, ವಿಶೇಷಾರೋಗ್ಯದಾಯಕವೂ ಆಗಿರುತ್ತದೆ ಮಂದಗತಿಯಿಂದ ಹರಿಯುತ್ತಿರುವ ನದಿಯ ನೀರು ಭಾರವಾಗಿರುವುದರಿಂದ ಆರೋಗ್ಯಪ್ರದವಾದುದಲ್ಲ ಮಳೆಗಾಲದಲ್ಲಿ ನದಿಯ ನೀರು ಅನೇಕವಿಧ ಜಲಚರ ಪ್ರಾಣಿಗಳ ಮಲಮೂತ್ರಾದಿಗಳ ಸಂಸರ್ಗದಿಂದಲೂ ಹುಲ್ಲು-ಕಸ-ಕಡ್ಡಿ-ಎಲೆ ಮುಂತಾದುವುಗಳು ಕೊಳೆಯುವುದರಿಂದುಂಟಾದ ದುರ್ಗಂಧದ ಸಂಸರ್ಗದಿಂದಲೂ, ದೂಷಿತವಾಗುವುದಾದ ಕಾರಣ ಇಂತಹ ನೀರು ಶರೀರದ ಹೊರಗಡೆಯಲ್ಲಿ ಕಜ್ಜಿ ತದ್ದು-ತುರಿ ಕುಷ್ಠ ಮುಂತಾದ ನಾನಾವಿಧ ಚರ್ಮರೋಗಗಳನ್ನೂ ಶರೀರದೊಳಗಡೆಯಲ್ಲಿ ಅಜೀರ್ಣ ಅತಿಸಾರ ಮಂದಾಗ್ನಿ ಮುಂತಾದ ಉದರರೋಗಗಳನ್ನೂ ಹುಟ್ಟಿಸುತ್ತದೆ. ಆದುದರಿಂದ ಮಳೆಗಾಲದಲ್ಲಿ ನದಿಯ ನೀರನ್ನು ಸ್ನಾನಪಾನಾದಿಗಳಿಗುಪಯೋಗಿಸುವುದನುಚಿತವಾಗಿದೆ

ಶ್ರೀ ಜಗದ್ಗುರು ಸನ್ನಿಧಿಯಲ್ಲಿ

ವಾಗೀಶಶಿವಾಚಾರ್ಯರು ಒಪ್ಪಿಸಿದ ಕನ್ನಡ ಪದ್ಯಗಳು

ಕಂದ|| ಆಗಮತತ್ತ್ವವಿಚಾರಂ |
ಯೋಗಿಜನಂ ಧಾರವಾಕ್ತ್ವ ವಿದ್ಯಾಧೀಶಂ ||
ರಾಗವಿದೂರಂ ಭವಭಯ |
ಸಾಗರತರಣಕ್ಕೆ ಶರಣರು ನಾನ್ನೆ | ||೧||

ಭಾ ಷ|| ಸುಂದರೈವಮಾತಾಬ್ಧಿಚಂದ್ರನೆ |
ಶಾರದಾಂಗವಾಹನನೆ |
ಭೂರಿಮುನಿವರನಾದನೆ ಕರುಣಾಕರನೆ ಹರನೆ ||
ಶ್ರೀಮದುಮಿಪ್ರಾಣನೆ ನೀ |
ನೇರಿರುವ ಸುಜ್ಞಾನಪೀಠವ |
ತೋರು ನಮ್ಮಾಗ್ರಸಿಸು ಸುಜ್ಞಾನವನು ಬೀರುಗಿತ ||೨||

ನ್ನರಿವೀಯುವ ವೀರರಿಗೆ ತಾ |
ನಿಂದಮಿದು ಎಂಡಿತುವು ನಾಟಿದ್ದು ಬ |
ಧರೆರಾಜಿಸಿಯುಕ್ತೊಂದು ಬಿಜಯವ ಹೊಂದುತಿಹ ನಾವು ||
ಶೋಭಿಸುವುದು ಕರ್ನಾಟಕಗಳೊಳ್ ನೀ |
ತೋರುತಿಹ ಧನರಾಶಿಯನ್ನಿತ್ತೆ |
ನರರಿಂದೊಲಿದೆ ಮುದದಿ ತಿಂದೊಸಗೆಯನಿತ್ತ ಚಿತ್ತದಿಂ ||೩||

ಗುರುವುಮದಕೆ ಬರುತಿಹ ಕಲ್ಪದ |
ಕರಕೆಡಿಸಿ ವಿದ್ಯಾಧೀಶನಹನ |
ಪೊಸದ ಭಾರವನೆ ದಿಗ್ ಕೊಟ್ಟಿಹುದು ವಿಶ್ವೇಶಂ ||
ಕರುಣವಿಶ್ವಾರಾಧ್ಯನಹ ತಾ |
ಹರಸಿ ಮುದದೊಳಗಿರಲು ಕಳುಹಿದ |
ನರರೆ ! ನಾವೀ ಸ್ವಾಮಿಯಾಜ್ಞೆಯ ಶಕ್ತಿಸಲೆ ನಮ್ಮಂ ||೪||

ಕಂದ|| ವಿದ್ಯಾರಾಧ್ಯನ ಪಾದವ |
ನಿಕ್ಕದಿ ಧುರಂಧರನಮದಾಖನ ಪೀಠಂ ||
ನಾಕ್ಕಿ ಕರೆನಾಮದು ಕಲ್ಪಯ |
ಭಾಸ್ಕರವಾದ ಯುಗ್ಮ ದಾಹೋದಯದಿಂ ||೫||

ರಾಜಾಜಿತು ಗುರುವರ್ಯನೆ |
ವಾನಾರಿಯ ಕೃಪೆಯನಾಂತು ಹರಸಿರೆಂದೆಲ್ ||
ನೀರಾಜನವೆ ! ನಲ್ಲಯು |
ತೋರುವ ದಿವ್ಯಾಂಘ್ರಿಗಿಂದು ಪಂಚಾಕ್ಷರನೆ ||೬||

ವಿದ್ಯಾರಾಧ್ಯಗುರೋತ್ತಮಃ ಶ್ರುತಮತೋ ಯಃ ಪೀಠಸಂಸ್ಥಾಪಕಃ | ಸೋಽಯಂ ತ್ವಂ ಭವ ಯೋಗಿರಾಜ ಭವತೋ ಲೀಲಾಂ ಭವೇ ... || ಭಕ್ತಾನಾಂ ಭಜತಾಮಭೀಷ್ಟಮುದಿತಂ ಪಾತ್ರಂ ... | ... ಗುರುವರ ಶ್ರೀಪಂಚಾಕ್ಷರ ||೧||

ಯಸ್ಯಾಸ್ತಿ ... ಪಂಚಾಕ್ಷರಂ ... | ... ಪರಾತ್ಮ ಶ್ರೀ ... || ... | ... ಸುಜ್ಞಾನ ... ||೨||

ಶ್ರೀಪಾದೇ ... | ... || ... ಪಂಚಾಕ್ಷರ ... ||೩||

ವಿದ್ಯಾ ... | ... || ... ಪಂಚಾಕ್ಷರ ... ||೪||

ಯಸ್ಯ ಶ್ರೀಗುರುಪುಂಗವಸ್ಯ ಭಜನಾತ್ ... | ... || ... ಜಗದ್ಗುರುವರ ಪಂಚಾಕ್ಷರೋ ಯೋಗಿರಾಟ್ ||೫||

ಇತಿ ಶ್ರೀಗುರುಪಾದ ಶಿವಾಚಾರ್ಯ ವಿರಚಿತಂ.

ಶಾಲಿ ೧೮೫೬ ಜಗದ್ಗುರುಗಳವರ ವರ್ಧಂತ್ಯುತ್ಸವ ಸಮಯದಲ್ಲಿ ಅರ್ಪಿಸಿದ

ಪದ್ಯಪುಷ್ಪಗಳು

ಗಂಗಾತೀರಯುತರಂಗಸಂಗಮ ... |
ಭಕ್ತ್ಯಾ ... ಶ್ರೀ ... ||
ವಿದ್ಯಾರಾಧ್ಯಜಗದ್ಗುರೋಃ ... |
... ಗುರುವರಃ ಪಂಚಾಕ್ಷರೋ ರಾಜತೇ

ಸುಜ್ಞಾನಸಿಂಹಾಸನ ... |
ರಾಜತ್ಪದಾಬ್ಜಂ ... ||
... |
ಪಂಚಾಕ್ಷರಂ ಶ್ರೀಗುರುರಾಜಮೀಡೇ ||೨||

... |
... ||
ಪಂಚಾಕ್ಷರಂ ... |
... ||೩||

ವಿದ್ಯಾರಾಧ್ಯಗುರು ... ಶ್ರೀ ... |
... ಪಂಚಾಕ್ಷರಂ ... |
... |
... ಪಂಚಾಕ್ಷರೋ
ಯೋಗಿರಾಟ್ ||

... |
... ಭಾರತೀ ||

ಅನಂತ ... |
... ಯುಗ್ಮಃ ||
ಪಂಚಾಕ್ಷರಃ ಶ್ರೀಗುರುಸಾರ್ವಭೌಮಃ |
ಜೀಯಾಚ್ಚಿರಂ ... ||೬||

ಇತಿ ಶ್ರೀ ಶಿವಕುಮಾರಸ್ವಾಮಿ ವಿರಚಿತಂ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು.

ಫಾಲ್ಗುಣ ಶುದ್ಧ ಚತುರ್ದಶಿ (18-3-35) ಸೋಮವಾರ

ಶ್ರೀ ಕೊಲ್ಲಿಪಾಕ ಸೋಮನಾಥಲಿಂಗದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಅವತಾರವು

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುಣ ಶುದ್ಧ ಚತುರ್ದಶಿ ಸೋಮವಾರ **(18-3-35)** ದಿವಸ ಭರತಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು. ಶ್ರೀ ರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಚ್ಛಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಆ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಕಳೆದ ಶುಕ್ರವಾರ 8ನೆಯ ತಾರೀಖಿನ ದಿವಸ ಧಾರವಾಡ ಜಿಲ್ಲೆ ಪ್ರಾಂತಗಳ ಕಡೆಗೆ ಪ್ರಯಾಣಮಾಡಿದರು

ಶ್ರೀಮದ್ರಂಭಾಪುರಿ ಜಗದ್ಗುರುಗಳವರನ್ನು ಸಿ ಬಸವಲಿಂಗಶೆಟ್ಟಿ ರಿ ಟಿ ಸ್ಕೂಲ್ ಇನ್‌ಸ್ಪೆಕ್ಟರರವರು ನಿನ್ನೆ ದಿವಸ ರಾಜಮರ್ಯಾದೆಯೊಡನೆ ವೈಭವದಿಂದ ತಮ್ಮ ಮನೆಗೆ ಬಿಜಮಾಡಿಸಿಕೊಂಡು ಪಾದಪೂಜೆಯನ್ನು ಮಾಡಿ ಗುರುಕಾಣಿಕೆಯನ್ನೊಪ್ಪಿಸಿದರು

೩ ೩ 35 ನೇ ಸಂಜೆ ವಾಣೀವಿಲಾಸ ಚಿಕಿತ್ಸಾಲಯದ ಆರಂಭಮಹೋತ್ಸವವನ್ನು ಶ್ರೀಮನ್ಮಹಾರಾಜರು ಮಹಾವೈಭವದಿಂದ ನೆರವೇರಿಸಿದರು. ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಸುಂದರ ಚಪ್ಪರದಲ್ಲಿ ಅನೇಕ ಮಂದಿ ಅಧಿಕಾರಿ ವರ್ಗದವರೂ, ನಿವೃತ್ತ ಅಧಿಕಾರಿಗಳೂ ನಗರಪ್ರಮುಖರೂ, ಪರ್ತಕಪ್ರಮುಖರೂ ಇತರ ದೊಡ್ಡ ಮನುಷ್ಯರೂ ಸೇರಿದ್ದರು ಶ್ರೀಮನ್ಮಹಾರಾಜರು ರಾಜ ಮೆರವಣಿಗೆಯೊಡನೆ ಬಂದು ವಾಣೀ ಚಿಕಿತ್ಸಾಲಯದ ಆರಂಭೋತ್ಸವ ನಡೆದ ಮೆರವಣಿಗೆಯಲ್ಲಿಯೇ ಹಿಂತಿರುಗಿದರು

ನಡುಹಗಲಿನಲ್ಲಿ ಕೊಲೆ

ರಾಜಧಾನಿಯ ಮಂಡಿಪೇಟೆಯಲ್ಲಿರುವ ಸೌದೆ ಒಡೆಯುವ ಕುರುಬರವನೊಬ್ಬನ ಪತ್ನಿಯ ಸಂಗಡ ಅದೇ ಪೇಟೆಯಲ್ಲಿ ತಿಂಡಿ ವ್ಯಾಪಾರ ಮಾಡುತ್ತಿದ್ದ ಲಿಂಗಾಯತನೊಬ್ಬನು ಗುಪ್ತಸಂಬಂಧ ಬೆಳಸಿದನೆಂಬುದು ಗಂಡನಿಗೆ ತಿಳಿದುಬಂದುದರಿಂದ ನಡುಹಗಲಿನಲ್ಲಿ ಲಿಂಗಾಯತವ್ಯಾಪಾರಿಯನ್ನು ಕೊಡ್ಲಿಯಿಂದ ಹೊಡೆದು ಹತ್ಯೆಮಾಡಿದನೆಂದು ತಿಳಿದುಬಂದಿದೆ

ಕಳ್ಳನ ಪತ್ತೆ

ಬೆಂಗಳೂರು ದಂಡಿನ ವರ್ತಕರು ಮೆ|| ಅಬ್ದುಲ್ ... ಸೇಟ್ ಅಂಡ್ ಬ್ರದರ್ಸ್ ಎಂಬವರಲ್ಲಿ ತಾರೀಖು 11— —35 ರಲ್ಲಿ ಕಳುವು ಮಾಡಿ ತಪ್ಪಿಸಿಕೊಂಡು ತಾರೀಖು 18 3 3೫ ನೇ ಸಾಯಂಕಾಲ ಬೆಂಗಳೂರು ಎಕ್ಸ್‌ಪ್ರೆಸ್ ರೈಲಿನಲ್ಲಿ ಮೈಸೂರಿಗೆ ಬಂದ ಕೇಡಿಯನ್ನು ರೈಲ್ವೆ ಪೋಲೀಸು ಸಾರ್ಜಂಟರು ಎ|| ಮಹಂಬರ್ ಖಾನ್ ಎಂಬುವರು ಗುರ್ತಿಸಿ ಮೈಸೂರು ಸ್ಟೇಷನ್ನಲ್ಲಿ ದಸ್ತಗಿರಿಮಾಡಿ, ಸದರಿ ಕೇಡಿಯ ಮೇಲೆ ಪೆಂಡಿಂಗ್ ಆಗಿದ್ದ ಹಲವು ಕೇಸುಗಳ ವಿಚಾರಣೆಗೋಸ್ಕರ ಸಿಟಿಕ್ರೈಂಬ್ರಾಂಚಿನವರ ವಶಪಡಿಸಿದರೆಂದು ತಿಳಿದುಬಂದಿರುತ್ತೆ. ಕಳ್ಳನು ಮೈಸೂರಿನವನೆಂದೂ ಇವನು ಅನೇಕ ಸಾರಿ ಶಿಕ್ಷಿಸಲ್ಪಟ್ಟವನೆಂದೂ ತಿಳಿದು ಬಂದಿದೆ

ವರ್ತಮಾನಸಂಗ್ರಹ.

ಇಂಗ್ಲೆಂಡುದೇಶದಲ್ಲಿ ಸರಿಯಾದ ಕೆಲಸ ಸಿಕ್ಕದ್ದರಿಂದ ಹತ್ತು ಸಾವಿರಾರು ಹೆಂಗಸರು ದಿನಕ್ಕೆ ಎರಡುಕಾಸು ... ತೆಗೆದುಕೊಂಡು ಹುಲ್ಲಿನ ಸಾಮಾನು ತಯಾರಿಸುವ ಕಂಪೆನಿಗಳಲ್ಲಿ ಕೆಲಸಮಾಡುತ್ತಿದ್ದಾರೆ

ಜರ್ಮನಿಯ ಮಾಜಿ ಚಕ್ರವರ್ತಿ ಕೈಸರನು ತನ್ನ ... ಜೀವಿತವನ್ನು ಜರ್ಮನಿಯಲ್ಲಿ ಕಳೆಯಬೇಕೆಂದು ... ಹಿಟ್ಲರನಿಗೆ ಕೇಳಿಕೊಂಡಿದ್ದನು ಪ್ರೆಂಚ್ ಗವರ್ನಮೆಂಟಿನವರು ಅನುಮೋದಿಸಲಿಲ್ಲವಾಗಿ ಬೇಡಿಕೆಯು ನಿರಾಕರಿಸಲ್ಪಟ್ಟಿತು

ಸಾರ್ ಪ್ರಾಂತ್ಯವು ಜರ್ಮನಿಗೆ ಸೇರಿದ ಸಂತೋಷದ ವಾರ್ತೆಗಾಗಿ ನೂರಾರು ಮಂದಿ ರಾಜಕೀಯ ಖೈದಿಗಳನ್ನು ಬಿಡುಗಡೆಮಾಡಿದ್ದಾರೆ ಮತ್ತು ಸಾರಿನ ಪ್ರಜೆಗಳು ಜರ್ಮನಿಯ ಸಾಮಾನುಗಳನ್ನೇ ಕೊಳ್ಳುವಂತೆ ... ಅಂಗಡಿಗಳ ಮುಂದೆ ಜರ್ಮನ್ ಅಂಗಡಿ ಎಂಬ ದೊಡ್ಡ ಬೋರ್ಡುಗಳನ್ನು ಹಾಕಿಸಿದ್ದಾರೆ

... ಪೋಲೀಸಿನವರು 1934 ನೇ ಇಸವಿಯಲ್ಲಿ ಮಗುವಿನ ಅಪಹಾರಕ್ಕೆಂದು ಹುಟ್ಟಿದ ಪಾಲಿಸಿ ಮೀರಿ 70 ವರ್ಷ ವಯಸ್ಸಿನ ಮುದುಕನನ್ನು ಈಗ ದಸ್ತಗಿರಿ ಮಾಡಿರುತ್ತಾರೆ ಅಪಹಾರವಾದ ಮಗುವು ಈಗ 3೫ ವರ್ಷ ವಯಸ್ಸಿನ ಮದುವೆಯಾದ ಯುವಕನಾಗಿದ್ದಾನೆ. ಮುದುಕನಿಗೆ ಏನು ಶಿಕ್ಷೆ ಮಾಡುತ್ತಾರೆಯೋ ?

ಲಂಡನ್ ಪಟ್ಟಣದ ಮೃಗಾಲಯದಲ್ಲಿ ವಿಚಿತ್ರವರ್ಣಗಳ 3 ಪಕ್ಷಿಗಳಿವೆ ಅವು ಹಿಮಾಲಯ ಪರ್ವತದಲ್ಲಿ 1೭ ಸಾವಿರ ಅಡಿ ಎತ್ತರದಲ್ಲಿ ವಾಸವಾಗಿದ್ದುವಂತೆ ಇವುಗಳು ಹಣ್ಣು ಹಂಪಲುಗಳನ್ನು ಮಾತ್ರ ತಿನ್ನುತ್ತವಲ್ಲದೇ ಮಾಂಸವನ್ನು ಮುಟ್ಟುವುದಿಲ್ಲ ... ಈ ವರ್ಗಕ್ಕೆ ಸೇರಿದ ಪ್ರಾಣಿಯು ಮನುಷ್ಯನ ಕೈಗೆ ಸಿಕ್ಕಿರುವುದಿಲ್ಲವೆಂದು ತಿಳಿದುಬರುತ್ತದೆ

ಸರದಾರ ವಲ್ಲಭಭಾಯಿ ಪಟೇಲರು ಅವರ ಮಗಳು ಮಣಿಬೇನ ಪಟೇಲರು ಮತ್ತು ಅಬ್ದುಲ್ ಗಫಾರಖಾನರ ಅಣ್ಣನ ಮಕ್ಕಳಾದ ಸಾದುಲ್ಲಾ ಖಾನರು ಇಂದು ಸಬರಮತಿ ಜೈಲಿಗೆ ಹೋಗಿ 'ಗಡಿನಾಡಿನ ಗಾಂಧಿ' ಯವರನ್ನು ನೋಡಿದರು. ಖಾನಸಾಹೇಬರ ಆರೋಗ್ಯವು ನೆಟ್ಟಗಿಲ್ಲ ಇಲ್ಲಿಯ ಆಹಾರ ಮತ್ತು ಹವೆಯು ಹಿಡಿಸುವುದಿಲ್ಲವೆಂದು ಸರದಾರರು ಪ್ರಕಟಿಸಿದ್ದಾರೆ ಖಾನರನ್ನು ಇಲ್ಲಿಂದ ಬೇಗ ಗುಜರಾತಿಗೆ ಕಳಿಸುವ ನಿರೀಕ್ಷಣೆಯಿದೆ

ಗಂಡನಿಗೆ ವಿಷ ಕೊಟ್ಟವಳು

ಬೇಗಂ ಪರೀದ್ ... ಎಂಬವಳು ಕೈಪ್ಯಟಿಕಲೆಕ್ಟರಾಗಿದ್ದ ತನ್ನ ಗಂಡನಿಗೆ ವಿಷಕೊಟ್ಟು ಕೊಂದದ್ದು ವಿಚಾರಣೆಯಾಗಿ ಬೆಹೋಬಾದ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವಳಿಗೆ 14 ವರ್ಷ ಕಠಿಣ ಶಿಕ್ಷೆ ವಿಧಿಸಿದರು

ಪ್ರಪಂಚದಲ್ಲೆಲ್ಲಾ ದೊಡ್ಡ ವಿಗ್ರಹ

ಜಪಾನಿಗೆ ಸೇರಿದ ಟೋಕಿಯೋದಲ್ಲಿ 80 ಅಡಿ ಇರುವ ಪ್ರಪಂಚದಲ್ಲೆಲ್ಲಾ ದೊಡ್ಡದಾದ ಬುದ್ಧನ ವಿಗ್ರಹವನ್ನು ತಯಾರಿಸುತ್ತಿರುವರು ಇನ್ನೇನು ... ಯವುದರಲ್ಲಿದ ದೊಡ್ಡ ಬೆಟ್ಟವನ್ನೇ ಕೊರೆದು ಈ ವಿಗ್ರಹವನ್ನು ಮಾಡಿದ್ದಾರೆ

ಲಂಚ ಕೊಡಲು ಪ್ರಯತ್ನಿಸಿದ್ದಕ್ಕೆ 5 ರೂಪಾಯಿ ಜುಲ್ಮಾನೆ.

ಕಲ್ಕತ್ತದಲ್ಲಿ ರಮಣಯ್ಯ ನಾಗಸುಬ್ರಹ್ಮಣ್ಯನೆಂಬೊಬ್ಬ ದೊಡ್ಡ ಮನುಷ್ಯನು ತನ್ನ ಸಂಬಂಧಿಕನೊಬ್ಬನ ದಸ್ತಗಿರಿಯನ್ನು ತಪ್ಪಿಸುವ ಉದ್ದೇಶ್ಯ ಪೋಲೀಸು ಕಾನ್‌ಸ್ಟೇಬಲನಿಗೆ 1 ರೂಪಾಯಿ ಲಂಚಕೊಡಲು ಪ್ರಯತ್ನ ಮಾಡಿದ್ದಕ್ಕೆ ೫ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟನು

8 ವರ್ಷ ವಯಸ್ಸಿನ ಬಾಲಕನ ಹುಲಿಶಿಕಾರಿ

ಧಾಟಿಯಾ ಮಹಾರಾಜರ ಮಕ್ಕಳು 8 ವರ್ಷ ವಯಸ್ಸಿನ ಬಸವಂತಸಿಂಗರೆಂಬುವರು ... ರಪುರದ ಕಾಡಿನಲ್ಲಿ 9 ಅಡಿ ಇದ್ದ ಹೆಣ್ಣು ಹುಲಿಯನ್ನು ಬಂದೂಕದಿಂದ ಹೊಡೆದು ಕೊಂದರು. ಕಳೆದ ವರ್ಷ ಇವರು ಒಂದು ಹುಲಿಯನ್ನು ಕೊಂದಿದ್ದರೆಂದು ತಿಳಿದುಬರುತ್ತದೆ

ಸೂಕ್ಷ್ಮಶಬ್ದಶ್ರವಣಯಂತ್ರ

ನ್ಯೂಯಾರ್ಕ್ ವಿಶ್ವವಿದ್ಯಾಲಯದ ವಿಜ್ಞಾನಶಾಸ್ತ್ರಜ್ಞರು ಒಂದು ಹೊಸಮಾದರಿಯ ಯಂತ್ರವನ್ನು ತಯಾರುಮಾಡಿರುತ್ತಾರೆ ಇದರ ಸಹಾಯದಿಂದ ಇರುವೆ, ಹುಳುಗಳು ಮೊದಲಾದ ಸಣ್ಣ ಪ್ರಾಣಿಗಳು ಮಾಡುವ ಶಬ್ದವನ್ನು ಕೂಡ ಸ್ಪಷ್ಟವಾಗಿ ಕೇಳಬಹುದಂತೆ।

ಮನುಷ್ಯತಲೆಯ ಎಮ್ಮೆಕರು

ಮುಂಬಯಿ ನಗರಿಗೆ ಕೋಣದ ತಲೆ ಇತ್ತಂತೆ ಆ ರೀತಿ ಪಾಟಣ್ಣದ ಹತ್ತಿರ ಒಂದು ಹಳ್ಳಿಯಲ್ಲಿ ಹುಟ್ಟಿದ ಎಮ್ಮೆಯ ಕರುವಿಗ ಮನುಷ್ಯ ಮುಖವಿತ್ತು. ಹುಟ್ಟಿದಾಗ ಇದು ಸತ್ತಂತೆ ಇದ್ದು ಹೂಳುವುದಕ್ಕೆ ಹೋದಾಗ ಪ್ರಾಣ ಕೂಡಿಕೊಳ್ಳಲು ಮೊದಲೇ ಇದರ ಆಕೃತಿಗ ... ಗುಂಡ ಹೆದರಿದ್ದ ಜನಗಳು ಮತ್ತಷ್ಟು ಗಾಬರಿಪಟ್ಟು ಇದನ್ನು ಜೀವಸಹಿತ ಹೂತುಹಾಕಿದರೆಂದು ಕೇಳುತ್ತೇವೆ

ಹಡಗಿನ ಅಪಾಯ

'ಬ್ಲೇರ್‌ಗೋರಿ' ಎಂಬ ಗ್ಲಾಸ್ಗೊ ಹಡಗು ಸುಂಟರಗಾಳಿಗೆ ಸಿಕ್ಕಿ ಅಪಾಯಕ್ಕೆ ಗುರಿಯಾಗಿದೆ ಇದರ ವೈರ್‌ಲೆಸ್‌ನಿಂದ ಕಳುಹಿಸಿದ ಅಪಾಯ ಸೂಚಕ ಸುದ್ದಿಯನ್ನು ಕೇಳಿ 'ಯೂರೋಪಾ' ಎಂಬ ದೊಡ್ಡ ಹಡಗು ರಾತ್ರಿಯೆಲ್ಲಾ ಅದನ್ನು ಹುಡುಕಿದಾಗ್ಯೂ ಅದರ ನೆಲೆಯೇ ತಿಳಿದುಬರಲಿಲ್ಲ ಅದರಲ್ಲಿದ್ದ 26 ಮಂದಿ ಪ್ರಯಾಣಿಕರೂ ಮತ್ತು ಕೆಲಸಗಾರರೂ ನೀರಿನ ಪಾಲಾಗಿರಬೇಕೆಂದು ಯೋಚಿಸಲಾಗಿದೆ ಹುಡುಕುವ ಪ್ರಯತ್ನವು ಇನ್ನೂ ನಡೆಯುತ್ತಿದೆ

ಸ್ವೀಕಾರ

ಧಾರವಾಡ ಜಿ|| ಗದಗಬೆಟಗೇರಿ ನಿವಾಸಿಗಳಾದ ಮ|| ರಾ|| ಮುದಗಲ್ಲ ಶಂಕರಪ್ಪನವರ ಪುತ್ರ ಚಿ|| ರಾ|| ಅಯ್ಯಪ್ಪನಿಗೂ, ನಿಡಗುಂದಿ ತಾಲೂಕ ... ಗ್ರಾಮದ ಮ|| ರಾ|| ಕೋರಾದಿನ್ನಿ ಗುಂಡಪ್ಪನವರ ಪುತ್ರಿ ಚಿ|| ಸೌ|| ಚನ್ನಬಸವ್ವನಿಗೂ ಮತ್ತು ಸದರಿ ಮ|| ರಾ|| ಶಂಕರಪ್ಪನವರ ಪುತ್ರ ಚಿ|| ರಾ|| ಬಸಪ್ಪನಿಗೂ, ಬೆಟಗೇರಿ ಮ|| ರಾ|| ... ತಪ್ಪ ಕೋಟಪ್ಪ ಬೇಲೇರಿ ಇವರ ಪುತ್ರಿ ಚಿ|| ಸೌ|| ಪಾರ್ವತವ್ವನಿಗೂ ನೆರವೇರಿದ ವಿವಾಹ ಸಮಯದಲ್ಲಿ ಪ್ರಭಾ ಪ್ರೋತ್ಸಾಹಕ್ಕೋಸ್ಕರ ವಧೂವರರಿಂದ ಸಮರ್ಪಿಸಲ್ಪಟ್ಟ 6 ರೂ ಗಳು ಮ|| ರಾ|| ಸಂಗನಬಸಪ್ಪ ಕೋಟಪ್ಪ ಬೇಲೇರಿ ಇವರ ದ್ವಾರಾ ತಲ್ಪಿರುತ್ತವೆ

ಶ್ರೀ ಕಾಶೀಕ್ಷೇತ್ರನಿವಾಸಿಗಳಾದ ವೇ|| ಪಂ|| ಘಾಟಾಕ್ಷರಶಾಸ್ತ್ರಿಗಳವರಿಗೆ ಪ್ರಾಪ್ತವಾಗಿದ್ದ ಅಸಾಧ್ಯ ವಾತರೋಗವು ಜಗದಾಚಾರ್ಯರ ಅನುಗ್ರಹಬಲದಿಂದ ಗುಣವಾದ ಸಂತೋಷಕ್ಕಾಗಿ ಶ್ರೀ ಕಾಶೀ ಜಗದ್ಗುರುಗಳ ವರ್ಧಂತ್ಯುತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಕಳಿಸಿದ 2 ರೂ ಗಳು ಮುದೇನೂರು ಶ್ರೀ ವಾಗೀಶ ಶಿವಾಚಾರ್ಯರ ದ್ವಾರಾ ತಲ್ಪಿರುತ್ತವೆ

ಧಾರವಾಡ ಜಿ|| ಬಂಕಾಪುರಗ್ರಾಮದ ಅರಳಲೆ ಮಠದ ಶ್ರೀ|| ಷ|| ಬ್ರ|| ಷಟ್‌ಸ್ಥಲಾಧ್ಯಕ್ಷಸ್ವಾಮಿಗಳವರ ಮಠದಲ್ಲಿ ಸಿಗ್ಗಲಿ ಕೂಡಲಮಠದ ವೇ|| ಸಿದ್ಧಯ್ಯನವರ ಪುತ್ರ ಚಿ|| ಮುರಿಗಯ್ಯನ ಉಪನಯನ ಶಿವದೀಕ್ಷಾ ಸಮಯದಲ್ಲಿ ಸಮರ್ಪಿಸಿದ 2 ರೂ ಗಳು ಮ|| ರಾ|| ಕುಂಬಾರ ಮಹಾದೇವಪ್ಪನವರ ದ್ವಾರಾ ತಲ್ಪಿರುತ್ತವೆ

ಮಿರಜ ಸಂಸ್ಥಾನ ಲಕ್ಷ್ಮೇಶ್ವರ ಹಿರೇಮಠದ ವೇ|| ಗಂಗಾಧರಯ್ಯನವರ ಪುತ್ರಿ ಚಿ|| ಸೌ|| ಅನ್ನಪೂರ್ಣವ್ವನನ್ನು ಎಳಹೊಳೆ ಗ್ರಾಮದ ಹಿರೇಮಠದ ವೇ|| ದೊಡ್ಡಬಸವಯ್ಯನವರ ಪುತ್ರ ಚಿ|| ರಾ|| ಮಹೇಶ್ವರಯ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ರೂ ಯು ವೇ|| ... ತಪ್ಪಯ್ಯನವರ ದ್ವಾರಾ ತಲ್ಪಿರುತ್ತದೆ

ರಾಯಚೂರುಜಿಲ್ಲಾ ಗೆಜ್ಜಲಗಟ್ಟದ ಸಂಸ್ಥಾನದ ರಾಜಾ ವೆಂಕಟರಾವ್ ಬಹದ್ದೂರರವರು ಇದೇ ಶಿವರಾತ್ರಿ ದಿವಸ ನಡೆಸಿದ ಗುರುಪಾದಪೂಜಾ ಮಹೋತ್ಸವ ಸಂಭ್ರಮದಲ್ಲಿ ಪ್ರಭಾಪ್ರೋತ್ಸಾಹಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ವೇ|| ಮಠದ ಮುದ್ದಯ್ಯನವರ ದ್ವಾರ ತಲಪಿರುತ್ತದೆ

ಸೇಲಂ ಜಿ|| ಹೊಸೂರು ಟವನ್ನಿನಲ್ಲಿರುವ ಮ|| ರಾ|| ಎ ಭದ್ರಶೆಟ್ಟಿಯವರ ಪುತ್ರ ಚಿ|| ವೇಲಾಯುಧನಿಗೆ ಚಿ|| ಸೌ|| ನಂಜಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ರೂ ಯು ಮ|| ರಾ|| ಬಿ ಅರುಣಗಿರಿಯವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಶ್ರೀ ಜಗದ್ಗುರು ಪಂಚಾಚಾರ್ಯರ ಸಮಯ

ಮಹನೀಯರ ಹಿತೋಕ್ತಿಗಳು.

೧ ಜ್ಞಾನವಿನಯವೇದಾಧ್ಯಯನ ಸಂಪನ್ನನಾದ ಉತ್ತಮವರ್ಣದವನಲ್ಲಿಯೂ ಕನಿಷ್ಠವರ್ಣದವನಲ್ಲಿಯೂ ಕ್ರಿಮಿಕೀಟಾದಿ ಜೀವಿಗಳಲ್ಲಿಯೂ ಒಬ್ಬ ಆತ್ಮನೇ ವ್ಯಾಪಕನಾಗಿರುವನೆಂಬ ಅನುಭವವನ್ನು ಪಡೆಯುವದೇ ಜ್ಞಾನವು ಹೀಗೆ ಎಲ್ಲವನ್ನೂ ಆತ್ಮದೃಷ್ಟಿಯಿಂದ ನೋಡದೆ ಶರೀರದೃಷ್ಟಿಯಿಂದ ನೋಡುತ್ತಿರುವುದರಿಂದಲೇ ಒಬ್ಬನು ಸಕಲ ದುಃಖಗಳಿಗೆ ಗುರಿಯಾಗುತ್ತಾನೆ ಆದ್ದರಿಂದ ಪ್ರತಿಯೊಬ್ಬನೂ ಆತ್ಮಜ್ಞಾನವನ್ನು ಸಂಪಾದಿಸುವದೇ ಪರಮಮಂಗಲಪ್ರದವು

೨ ಲೋಭವು ಜ್ಞಾನವನ್ನು ನಾಶಮಾಡುವದು. ಹೋದಜ್ಞಾನವು ಲಜ್ಜೆಯನ್ನು ಕಡಿಸುವದು ಹೋದಲಜ್ಜೆಯು ಧರ್ಮವನ್ನು ಕೆಡಿಸುವದು ನಾಶವಾದ ಧರ್ಮವು ಲಕ್ಷ್ಮಿಯನ್ನು ದೂಲಗಿಸುವದು ಹೀಗೆ ಸರ್ವಾನರ್ಥಕ್ಕೂ ಲೋಭವೇ ಮೂಲವಾದುದರಿಂದ ದುರಾಶೆಯನ್ನು ತ್ಯಜಿಸು ಲೋಭಃ ಪಾಪಸ್ಯ ಹೇತುಃ ' ಎಂಬ ವಾಕ್ಯದ ಗುಟ್ಟನ್ನು ಮಾತ್ರ ಮರೆಯಲಾಗದು

೩ ಪ್ರಾಮಾಣಿಕತೆಗೆ ಮನಸ್ಸು ಮಾತು ಕರ್ಮ (ನಡವಳಿಕೆ) ಇವು ಮೂರು ಏಕರೀತಿಯಾಗಿರುವವು ಅಪ್ರಾಮಾಣಿಕನಿಗಾದರೋ ಒಂದಕ್ಕೊಂದು ಸಂಬಂಧವಿರುವದಿಲ್ಲ

೪ ಸ್ನೇಹಿತನು ಪ್ರೀತಿಯ ರಸಾಯನ, ನೇತ್ರಮನಂಗಳಿಗೆ ಆನಂದವನ್ನುಂಟುಮಾಡತಕ್ಕವನು ಮನೋರೋಗಕ್ಕೆ ಔಷಧರೂಪನು ಸುಖದುಃಖಗಳಲ್ಲಿ ಏಕರೀತಿಯಾಗಿರುವನು ಇಂಥ ಸನ್ಮಿತ್ರನೇ ಪರಮಾಪ್ತನು ಅಲ್ಲದೆ ಇನ್ನು ಕಲವರು ಹಣದಿದ್ದಾಗಲೂ, ಸ್ವಕಾರ್ಯ ಸಾಧನೆಯಲ್ಲಿ ಮಾತ್ರ ಒಲ್ಮೆಸುವರು ಕಷ್ಟಕಾಲವೇ ಸುಮಿತ್ರಕುಮಿತ್ರರನ್ನು ಪರೀಕ್ಷಿಸುವ ಒರೆಗಲ್ಲು

೫ ಪ್ರತಿಯೊಬ್ಬನಿಗೂ ಕಷ್ಟಸುಖಗಳು ಅವನವನ ಕರ್ಮಾನುಗುಣವಾಗಿ ಯಾವನಾದರೂ ನಿಮಿತ್ತ ಮೂಲಕವಾಗಿ ಭಗವತ್ಪ್ರೇರಣೆಯಿಂದ ಉಂಟಾಗುತ್ತವೆ ಪ್ರತಿಯೊಂದು ಜೀವಿಯೂ ಜಗನ್ನಿಯಾಮಕನಿಗೆ ಉಪಕರಣಿಯು ಆದ್ದರಿಂದ ಇಂಥವನು ಪ್ರಭಾ ಕೊಂದರಣಹುತಾತ್ಮನೆಂದು ತಿಳಿಯುವದು. ಮಂದತನವು ತನಗೆ ಮತ್ತೊಬ್ಬನಿಂದ ಎಷ್ಟೇ ಕೊಂದರೆಗಳು ಒಂದರೂ ತಾನುಮಾತ್ರ ಪ್ರತಿಯಾಗಿ ಯಾವ ಕಡಕಸ್ನೂ ಮಾಡಬಾರದು ಕೊನೆಗೆ ಮನಸ್ಸು ನೋಯುವಂಥ ಮಾತನ್ನೂ ಆಡಬಾರದು

೬ ಒಕ್ಕಲಿಗನು ಜಮೀನನ್ನು ಉತ್ತು ಬಿತ್ತಿ ಕಳೆ ತೆಗೆದು ಇನ್ನೂ ಅನೇಕ ವಿಧವಾದ ಪ್ರಯತ್ನ ಮಾಡದಲ್ಲವೇ ದೈವಿಕವಾದ ಕಾಲವರ್ಷಗಳು ಸಸ್ಯಗಳನ್ನು ಫಲಿಸುವಂತೆ ಮಾಡಬಲ್ಲವು ಒಂದು ಚಕ್ರದೊಡನೆ ಗಾಡಿಯು ಹೇಗೆ ನಡೆಯುವದಿಲ್ಲವೋ ಹಾಗೆಯೇ ಪುರುಷಪ್ರಯತ್ನವಿಲ್ಲದೆ ಕೇವಲ ದೈವಸಹಾಯದಿಂದ ಫಲವು ಸಿದ್ಧಿಸುವದಿಲ್ಲವು ಅಂತೆಯೇ ಮೋಕ್ಷಕ್ಕಾದರೂ ಕರ್ಮಜ್ಞಾನಗಳೆರಡೂ ಅವಶ್ಯಕವು

೭ ಮನುಷ್ಯನಸ್ವಭಾವವು ಸಂಕಲ್ಪಗಳಿಂದ ಮಾಡಲ್ಪಟ್ಟದ್ದಾಗಿರುವದು ಪ್ರತಿಯೊಬ್ಬ ಮನುಷ್ಯನು ಸರ್ವದಾ ಸತ್ಯ, ಪೂತದಯೆ ಶಾಂತಿ ಮೊದಲಾದ ಸದ್ಗುಣಗಳನ್ನು ಮನನಮಾಡುತ್ತಿದ್ದರೆ ಕಾಲಕ್ರಮದಲ್ಲಿ ಸತ್ಸ್ವಭಾವವುಳ್ಳವನಾಗುವನು ಹಾಗೇ ಈಶ್ವರಭಕ್ತಿಯು ಗಳು, ಪರೋಪಕಾರ, ಲೋಭ ಮೊದಲಾದ ದುರ್ಗುಣಗಳನ್ನು ಮನನಮಾಡುತ್ತಿದ್ದರೆ ಕ್ರಮವಾಗಿ ದುಸ್ಸ್ವಭಾವವುಳ್ಳವನಾಗುವನು ಆದ್ದರಿಂದ "ಕೀಟಭ್ರಮರನ್ಯಾಯದಂತೆ" ನೀನು ಸದಾ ಶಿವೋಹಂ ಶಿವೋಹಂ" ಎಂದು ಮನನ ಮಾಡುತ್ತ ಬಂದರೆ ಅವನೇ ನೀನಾಗುವಿ

೮ ಮನುಷ್ಯನು ಕಾರ್ಯಾರ್ಥವಾಗಿ ಒಂದು ದೇಶದಲ್ಲಿಯಾಗಲಿ, ಒಂದು ಕಾಲದಲ್ಲಿಯಾಗಲಿ, ಒಂದು ಗ್ರಾಮದಲ್ಲಿಯಾಗಲಿ ವಾಸಮಾಡಿ ಆ ಕಾರ್ಯವು ಪರಿಸಮಾಪ್ತಿಯಾಗುತ್ತಲೇ ಆಯಾಸ್ಥಳವನ್ನು ಬಿಟ್ಟು ಸ್ವದೇಶಕ್ಕೆ ಬರುವ ರೀತಿಯಲ್ಲಿ ಒಬ್ಬನು ಈ ಸಂಸಾರದಲ್ಲಿ ಮಾಡಬೇಕಾದ ಕಾರ್ಯವನ್ನೆಲ್ಲಾ ಮಾಡಿದ ಮೇಲೆ ಆ ಶರೀರವನ್ನು ಬಿಟ್ಟು ದೇಹಾಂತರವನ್ನು [illegible] ಒಬ್ಬನು ಮರಣವೆನ್ನುವನು [illegible] ಹಳೆಯವಾದ [illegible] ಹಾಕಿಕೊಂಡು [illegible] ಶರೀರವನ್ನು ಧರಿಸುವನು [illegible]

೯ [illegible] ಇಹಪರಲೋಕಗಳ ಸುಖಗಳಲ್ಲಿ [illegible] ತನ್ನ ಹೆಂಡತಿ, ಮಕ್ಕಳು, [illegible] ಯೋಚಿಸಿಕೊಳ್ಳುತ್ತಿ, ಈ ದೇಹವು ಎಲ್ಲಿ [illegible] ಹೋಗುವದೋ ಎಂದು [illegible] ಅವನು ಮಾಡುವ ಕಾರ್ಯವೆಲ್ಲಕ್ಕೂ [illegible] ಆಯಾಸವೇ ಫಲವು

೧೦ [illegible] ತನಗೆ ಹೇಗೆ ಬೇಕು [illegible] ಹಾಗೆಯೇ ಎಂದು ತನ್ನಂತೆಯೇ ಎಲ್ಲರನ್ನೂ ನೋಡುವವನು ಪರಮಯೋಗಿಯು.

೧೧ ಸೂರ್ಯೋದಯಕಾಲದ [illegible] ಮನುಷ್ಯ [illegible] ಕಡಿಮೆ [illegible] ಬರುತ್ತದೆ. ಪುನಃ ಸಾಯಂಕಾಲವಾಗುತ್ತ ಒಂದ ಹಾಗೆ ಅದೇ ನೆರಳು [illegible] ಹೀಗೆಯೇ ಉತ್ತಮರ ಸಂಗವು ಆದಿಯಲ್ಲಿ ಸ್ವಲ್ಪವಿದ್ದರೂ ಒದಗುತ್ತ ವೃದ್ಧಿಯಾಗುವದು. ಇದರ ಅಧಮರ ಸಹವಾಸವಾದರೋ ಆದಿಯಲ್ಲಿ ವಿಶೇಷವಿದ್ದು ಕ್ರಮಕ್ರಮವಾಗಿ ನಾಮಮಾತ್ರವಾಗುವದು. ಉತ್ತಮರ, ಅಧಮರ ವಿಮರ್ಶೆಗೆ ಇದೊಂದು ಒರೆಗಲ್ಲು!

೧೨ ಅಯ್ಯೋ ನನಗೆ ಅದು ಬೇಕು, ಇದು ಬೇಕು ಎಂದು ತವಕಿಸ ಬೇಡ ನಿನ್ನ [illegible] ದುರಾಗ್ರಹ [illegible] ಒಂದರಿಂದಲೂ ತೃಪ್ತಿಪಡದೆ ಒಂದರ ತರುವಾಯ ಒಂದು ಕೆಲಸಕ್ಕೆ ಹರಿದಾಡು ನಿನ್ನ ಬಲ್ಲಿದ ಹೊರಗಿನ ಪದಾರ್ಥಗಳಲ್ಲಿ 'ನಾನು ನನ್ನದು' ಎಂದ ಹೀಗೆ ಗಂಟುಹಾಕಿಕೊಂಡಿರುವ ನಿನ್ನ ಮನಸ್ಸಿನ ಕೊಡಕನ್ನು ಬಿಚ್ಚಿಕೊಂಡು, ನಿನ್ನ ಪ್ರಾರಬ್ಧಕರ್ಮಫಲದಿಂದಲೇ ತೃಪ್ತಿಹೊಂದಿ ಶಾಂತಿಯಿಂದ ವರ್ತಿಸುವದೇ ಜಾಣತನವು

೧೩ ಕರ್ತವ್ಯಕರ್ಮವು ಬಲಾತ್ಕಾರದಿಂದ ಮಾಡುವುದನ್ನು, ಪ್ರೇಮವು ತಾನಾಗಿಯೇ ಮಾಡುವದು ಅದು ತಾನು ಮಾಡಿದ್ದಕ್ಕೆ ತಗಲಿದ ವೆಚ್ಚವನ್ನಾಗಲಿ ಲೆಕ್ಕಿಸುವದಿಲ್ಲ ಪ್ರೇಮವೆಂಬುದು ಮಹಾತ್ಮನ ಕೈಯಲ್ಲಿರುವ ಯುಕ್ತಿಣಿಯ ಕೋಲು, ಇದರ ಬಲದಿಂದಲೇ ಜಗತ್ತನ್ನು ವಶಮಾಡಿಕೊಳ್ಳುವನು ಪ್ರೇಮವೆಂಬುದು ವಿಶ್ವಾತ್ಮನ ತಿರುಳು, ಜಗತ್ತಿನ ಜೀವಾಳ, ಇಂಥ ನಿರ್ಮಲ ಪ್ರೇಮವನ್ನು ಸಂಪಾದಿಸು ಮತ್ತು ನಿನಗೆ ಯಾವಾಗಲೂ ಸುಖವನ್ನೇ ಹೊಂದಬೇಕೆಂಬ ಇಚ್ಛೆಯಿದ್ದರೆ "ಕನಸಿನಲ್ಲಿ ಕಂಡದ್ದೆಲ್ಲವೂ ಸುಳ್ಳಷ್ಟೆ? ಎಚ್ಚರದಲ್ಲಿಯೂ ಅನುಭವಿಸುವದು ಹಾಗೆಯೇ ಸರಿ ಎಂದು ಜ್ಞಾನಿಗಳು ಹೇಳುತ್ತಿರುವರು '

೧೪ ನಿತ್ಯವಸ್ತುವಾದ ಆತ್ಮಜ್ಞಾನವನ್ನು ಪಡೆಯದವನಿಗೆ, ಆ ನಿತ್ಯವಸ್ತುವಿನ ವಿಕಾರಗಳೆನಿಸುವ ಬಾಹ್ಯವಸ್ತುಗಳ ನಿಜವಾದ ಜ್ಞಾನವು ಹ್ಯಾಗಾಗಬೇಕು? [illegible] ಜ್ಞಾನವೇ ತಗಲ್ಲದರಿಗೆ ಪರರ ಜ್ಞಾನವಾಗುವದೇ? ಚಿನ್ನಕ್ಕಿಂತ ಚಿನ್ನದಿಂದಾದ ಒಡವೆಗಳಲ್ಲಿಯೂ ಹತ್ತಿಗಿಂತ ಹತ್ತಿಯಿಂದಾದ ಮನೋಹರ ವಸ್ತ್ರಗಳಲ್ಲಿಯೂ ಆಕರ್ಷಕವು ಹೆಚ್ಚು ಇರುವಂತೆ ಮೂಲವಾದ ಆತ್ಮವಸ್ತುವಿಗಿಂತ ಅದರ ವಿಕಾರಗಳೆನಿಸುವ ಪ್ರಪಂಚ ಪದಾರ್ಥಗಳಲ್ಲಿ ಜನರ ಪ್ರೇಮವು ಹೆಚ್ಚಾಗಿರುವದು ಮೂಲ ಆತ್ಮವಸ್ತು ಸಾಕ್ಷಾತ್ಕಾರವಾಗುವದೇ ಶ್ರೇಯಸ್ಕರವು

೧೫ [illegible] ಮನದ [illegible] ಕೃತ್ರಿಮತೆಗಳನ್ನು [illegible] ಪ್ರಯತ್ನದಿಂದ ಅವನ್ನು [illegible] ನಡೆಹದು ಆದರೆ ನೂಕ್ಕದ ಗ್ರೇಷಕ್ಕೆ [illegible] ಮಾತ್ರ [illegible] ಎಂದೆಂದಿಗೂ ಮಾಡುವದಿಲ್ಲ ಆದ್ದರಿಂದ ಯಾವ ಪ್ರಸಂಗದಲ್ಲಿಯೂ ಯಾರಿಗೂ ತೀಕ್ಷ್ಣವಾದ ಕಠಿನೋಕ್ತಿಗಳನ್ನು ಆಡಬಾರದು.

೧೬ ಎಲೈ ಮಾನವನೇ? ಮೂರ್ತಿಪೂಜೆಯನ್ನು ಮಾಡುವಗುಟ್ಟೇನೆಂಬುದನ್ನು ಒಲ್ಲಿಯಾ? ಕೋಲಿನಿಂದ ವಸಂತಿಕಾಗಮನದ ಬೋಧೆಯಾಗುವಂತೆ ಒಂದು ವಸ್ತುವು ಮತ್ತೊಂದಕ್ಕೆ ಗುರುತಾಗಿರುವದು. ಕಣ್ಣು ವುದರ ಸಹಾಯದಿಂದ ಕಾಣದುದನ್ನು ಗ್ರಹಿಸುವವ ಬಾಹ್ಯವಸ್ತುವನ್ನು ನೋಡಿ ಅಂತರ್ಗತವಾದುದನ್ನು ನೆನೆಯುವವು ಮೂರ್ತಿಪೂಜೆಯು ಸ್ಫೂರ್ತಿಯನ್ನುಂಟುಮಾಡುವದು ಇದೇ ಮೂರ್ತಿಪೂಜೆಯಗುಟ್ಟು

೧೭ ಯಾವುದು ಬಾಯಿಯೊಳಕ್ಕೆ ಹೋಗುವದೋ ಅದು ಹೊಟ್ಟೆಯನ್ನು ಹೊಕ್ಕು ಈಚೆಗೆ ಒಂದು ಬಿಡುವದು ಆದರೆ ಬಾಯಿಯಿಂದ ಹೊರಕ್ಕೆ ಬರುವದೆಲ್ಲ ಹೃದಯದಿಂದ ಬಂದಿರುತ್ತದೆ ಅವು ಮನುಷ್ಯನನ್ನು ಮೈಲಿಗೆ ಮಾಡುತ್ತವೆ ಹೃದಯದಿಂದ ಕೆಟ್ಟ ಯೋಚನೆಗಳು ಅಸೂಯೆ, ಖೂನಿ, ವ್ಯಭಿಚಾರ ಬ್ರಹ್ಮಚರ್ಯದ ಅತಿಕ್ರಮ, ಕಳವು, ಸುಳ್ಳುಸಾಕ್ಷಿಗಳು ಗುರುನಿಂದೆ ಇವೆಲ್ಲ ಬರುತ್ತವೆ ಇವುಗಳಿಂದಲೇ ಮನುಷ್ಯನಿಗೆ ಮೈಲಿಗೆಯಾಗುತ್ತದೆ. ಕೈತೊಳೆಯದೆ ಏನನ್ನಾದರೂ ಮುಟ್ಟಿದರಾಗಲಿ ತಿಂದರಾಗಲಿ ಮೈಲಿಗೆಯಾಗುವದಿಲ್ಲ ಆದರೆ 'ಮಡಿ ತಾನಾ ನಿರ್ಮಲತೆ ಪ್ರೈ ಪಂಚರಾ ಶ್ರೀಚನ್ನಸೋಮೇಶ್ವರ' ಎಂಬುದನ್ನು ಮಾತ್ರ ಮರೆಯಲಾಗದು.

೧೮ ನಿನ್ನೊಳಗಿನ ನಿಜವನ್ನು ನೀನು ಅರಿತಾಗಲೇ ನಿನಗೆ ನಿಜವಾದ ಶಾಂತಿಯು ದಕ್ಕುವದು ಸಾಧುಸಂಗದಿಂದ ಸಂತೋಷವನ್ನು ಪಡೆಯಬೇಕೆಂಬ ಆಶೆಯೂ ಹೋಗಬೇಕು, ಏಕೆಂದರೆ ಹೊರಗಿನ ವಸ್ತುಗಳ ಸಂಸ್ಪರ್ಶದಿಂದಲೂ ಸಂಗದಿಂದಲೂ ಪಡೆಯುವ ಭೋಗವೆಲ್ಲ ಅನಿತ್ಯವೇ ಅನಿತ್ಯವಾದ ನಿನ್ನ ಹೃದಯದಲ್ಲಿಯೇ ನೆಲೆಸಿದ ನಿತ್ಯವಾದ ಸುಖಶಾಂತಿಗಳನ್ನು ಹೊಂದಿಕೊಂಡಿರು ಮುಖ್ಯವಾಗಿ ಇದರ ಗುಟ್ಟೇನೆಂದು ಹೊರಗಿನ ನಾಮರೂಪಗಳನ್ನು ನೋಡಬೇಕೆಂದು ತಹತಹ ಪಡುವದು ನಿಂತಕ್ಷಣದಲ್ಲಿಯೇ ಆತ್ಮಾನಂದವು ಪ್ರಾಪ್ತವಾಗುವದು ಏಕೆಂದರೆ ಮನಸ್ಸಿನ ಕಾಮ (ಇಚ್ಛೆ) ಗಳೆಲ್ಲ ತೊಲಗಿದರೆ ಒಳಗಿನ ಕಣ್ಣು ತೆರೆದುಕೊಳ್ಳುವದು. ಆಗ ನಿಮ್ಮ ಪರಮಾತ್ಮಸ್ವರೂಪವಾದ ಅಮೃತಾನಂದವೇ ನೀವೆಂಬುದು ಗೋಚರವಾಗುವದು ಪರಲೋಕರಾಜ್ಯವೆಂಬುದು ನಿನ್ನ ಒಳಗೆ ಹುಡುಕಿಕೊಂಡಾಗ ಮಾತ್ರ ದೊರೆಕೀತು.

೧೯ ಎಲೈ ಮನುಷ್ಯನೇ? ಯಾವಾಗಲೂ ಹಣ ಹಣವೆಂದು ಬಾಯಿ ಬಾಯಿ ಬಿಡುತ್ತಿಯಲ್ಲವೆ ಯಾವನು ಧನವನ್ನಪೇಕ್ಷಿಸುವನೋ ಅವನಿಗೆ ಅವನ ಕರ್ಮಾನುಸಾರ ಧನವು ಲಭಿಸುವದು ಹೆಚ್ಚು ಬರಬೇಕೆಂದು ಆಶಿಸಬಾರದು ವೃಥಾ ಕ್ಲೇಶ ಮಾತ್ರ ಉಂಟಾಗುವದು

ಹಣ ಸಂಪಾದಿಸುವದು ಕಷ್ಟ, ಕಾಪಾಡುವದು ಕಷ್ಟ, ಕರ್ಚಾದರೆ ಕಷ್ಟ, ಹಾಳಾದರೂ ಕಷ್ಟ ಆದ್ದರಿಂದ ದ್ರವ್ಯದ ವ್ಯವಹಾರವೆಲ್ಲ ಕಷ್ಟಮಯವೇ ದ್ರವ್ಯದಿಂದಲೇ ಸುಖವು ಬರುವುದಾದರೆ, ತೃಷ್ಣೆಯ ಮನೆ ಇಟ್ಟುಕೊಂಡು ನಾನಾಕಾರಣಗಳಿಂದ ಕೊರಗುತ್ತಿರುವವರನ್ನು ನಾವು ನಿತ್ಯವೂ ನೋಡುತ್ತಿಲ್ಲವೇ? ಇವರಿಗೆ ಮನೋವ್ಯಾಕುಲವೇಕೆ? ಇದರಿಂದಲೇ ಸುಖವೆಂಬುದು ಹೊರಗಿನ ವಸ್ತು ಪ್ರಾಪ್ತಿಯಿಂದ ಬರತಕ್ಕದ್ದಲ್ಲವೆಂತಲೂ, ಅದು ಕೇವಲ ಮನಸ್ಸಿನ ಶಾಂತಸ್ಥಿತಿಯೆಂತಲೂ ತಿಳಿದುಕೊಳ್ಳಬೇಕು ದ್ರವ್ಯವಿದ್ದಲ್ಲಿ ಚಿಂತೆ ಹುಟ್ಟುವುದೇ ವಿನಾ ಮನಸ್ಸಿಗೆ ಶಾಂತಿಯಿಲ್ಲ, ಇದಕ್ಕೆ ಉದಾಹರಣೆಗಾಗಿ ಹಿಂದೆ ಅಮೇರಿಕಾಖಂಡದ ಒಬ್ಬನು ಪ್ರದೇಶದ ಧನಿಕನಾಗಿ ಆ ದ್ರವ್ಯವನ್ನು ಜೋಪಾನಮಾಡುವದು ಹೇಗೆಂಬ ಯೋಚನೆಯಿಂದಲೇ ಕೊರಗಿ ಕೊರಗಿ ಸಾಯಿತೆ ಎದ್ದು ನಡೆ ಹೋದನೆಂಬ ಉದಾಹರಣೆ ಇದೆ ಆದ್ದರಿಂದ ಇಂಥ ಚಿಂತಾದಾಯಕವಾದ ಹಣದ ಆಸೆಗೆ ಬಾಯಿಬಿಡದೆ ಸುಖವೆ ಜ್ಞಾನಧನವನ್ನು ಸಂಪಾದಿಸುವದರಲ್ಲಿ ತತ್ಪರನಾಗು.

ಎಂ ಮಲ್ಲಿಕಾರ್ಜುನಾರಾಧ್ಯ,

ರಾಣೇಬೆನ್ನೂರು ಮಳೇಮಠ, ತಿಪಟೂರು

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಏಕಾಂತರ ಪ್ರಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೨೦ ಪುಟಗಳುಳ್ಳದಾಗಿದ್ದು ಅತ್ಯುತ್ತಮವಾದ ಕಾಗದದಿಂದಲೂ ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಪ್ರವೃತ್ತಿಸುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಕಾಶಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ಬರೆದಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೆ ಕೂಡ ಅಸಾಧ್ಯವಾಗುತ್ತಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಸ್ತಾರವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೫೨ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೬೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥದ ಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮ ಸ್ವಾಮಿಯವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ನೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವದಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೬೮೪ ಪುಟಗಳಿಂದ ಕೂಡಿದ್ದು ಬಹಳ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ** ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಗಳು

ಧಾತುಪುಷ್ಟಿಲೇಹ.

1 ಇದು ಬಲಹೀನ ದೇಹಗಳಿಗೆ ಅದ್ಭುತವಾದ ಔಷಧಿ, ಇದರ ಸೇವನೆಯಿಂದ ಮಲಬದ್ಧತೆ, ಒಳಜ್ವರ, ಅಜೀರ್ಣ, ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶ್ಶಕ್ತಿ, ಕಾಲು ಕೀಳುವಿಕೆ, ರಕ್ತಹೀನತೆ, ಬೆನ್ನು ನೋವು, ತಲೆ ನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಸ್ವಪ್ನಾವಸ್ಥೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಯೋಗಶಕ್ತಿಯು ಕುಂದಿರುವಿಕೆ, ಶರೀರದ ಉಷ್ಣತೆ ಇವುಗಳನ್ನೆಲ್ಲಾ ಹೋಗಲಾಡಿಸಿ ರಕ್ತವೃದ್ಧಿಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಡಬ್ಬಿ 1ಕ್ಕೆ 2—8—0 3ಕ್ಕೆ 7—0—0

2 **ಮೇಹಕುಠಾರಪ್ರಮೇಹ** ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ್ಗ ಒಂದು ತಡೆಯಿಲ್ಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು. ಡಬ್ಬಿ 1ಕ್ಕೆ 2—8—0. 3ಕ್ಕೆ 7—0—0

3 **ಮಲೇರಿಯಾ ನಿವಾರಿಣಿ** ಇದು ಮಲೇರಿಯಾ ದಿನಬಿಟ್ಟು ಬರುವ ಜ್ವರ ಚಳಿಜ್ವರ, ಇಂಫ್ಲುಯಂಜಾ, ನ್ಯೂಮೋನಿಯಾ, ಕಫಜ್ವರ ಜ್ವರಗೆಡ್ಡೆ ಮುಂತಾದವುಗಳಿಗೆ ದಿವ್ಯೌಷಧಿ ಬಾಟ್ಲಿ 1ಕ್ಕೆ 1—8—0 ಸಣ್ಣ ಬಾಟ್ಲಿಗೆ 0—13—0. 3ಕ್ಕೆ 4—0—0 ಸಣ್ಣ ಬಾಟ್ಲಿ 3ಕ್ಕೆ 2—4—0

ಕ್ಯಾಟಲಾಗ್ ಬಿಟ್ಟಿ ರವಾನಿಸಲಾಗುತ್ತೆ. ಬಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ರವಾನಿಸಲಾಗುತ್ತೆ. ನಮಗೆ ಬರೆಯಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ ರಥಬೀದಿ, ನಂಬರು 271 ಮಂಗಳೂರು

ಔಷಧಿ ಸಿಕ್ಕುವ ಸ್ಥಳಗಳು— **ಮೆಸ್ಸರ್ಸ್ ಪಟಕಸ್ ಬ್ರದರ್ಸ್,** 91 ಚಿಕ್ಕಪೇಟೆ ಬೆಂಗಳೂರು ಸಿಟಿ

12

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಸಿಂಹಾಸನದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಅನುಕೂಲಕ್ಕನುಸರಿಸಿ ಶಿಷ್ಯರ ಹೆಸರನ್ನು ವಿಷಯಗಳನ್ನು ಬರೆದಿಡದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ನಮ್ಮ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಕಡಿಮೆ ಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೨—೦—೦
೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೨—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹರತಾಳಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦\೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦\೪ ಬೆಲೆ	೦—೧—೬
ಸದ್ಯಃ ಶೀತಾರೋಹಣವಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪\೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪\೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦\೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣವಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನದ ಧರ್ಮಶಾಲೆಯ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಹಾಪುರದಲ್ಲಿ ನಿಂತಿರುವ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವದಕ್ಕಾಗುವದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ... ಕಂಡುಹಿಡಿಯಲ್ಪಟ್ಟು ಸಾವಿರಾರುಮಂದಿಗಳು ಇದ... ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿದ್ದಾರೆ. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ಪಷ್ಟವಾಗುವ ವ್ಯಾಧಿಗಳು ಯಾವವೆಂದರೆ —ಪಿನಸಿ, ಒಟ್ಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾ

ಗತಕ್ಕ ಸರ್ವವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ... ಲ್ಪಟ್ಟ ೧೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ ಮೂರುಪಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ...ವ ಪರಿಮಳವಾಗುವುದು ಇದನ್ನು ಅನೇಕ ಪ್ರ...ರ ತಮ್ಮ ಗೃಹದಲ್ಲಿ ಕುಟುಂಬಸಮೇತವಾಗಿ ಉಪಯೋಗ... ಸುತರಾಂ ಮಾಡಲಿಕ್ಕೆ ಪ್ರಗಸಟ್ಟಿ ಕಳುಹಿಸಿರಿ...

ಬುಡ್ಡಿ ಒಂದಕ್ಕೆ ಕ್ರಯ ರೂ ೦ ४ ೦ ವಿ. ಪಿ ೦ ४ ...
ಡಜ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ. ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ

[10] ಪೋ ಬಾ ೫೧೦, ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಮಾಲೆ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ಸಿದ್ಧತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ವೀರಶೈವಮತವಿಮಾವಾಂಸಾ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ತ್ವ ...ೀಕರಣ (೨ ನೆ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ
पंडित श्रीकाशीनाथशास्त्री यांचें भाषण (मराठी)	८ आ
Speeches by Pandit Shri Kashinatha Shastri (*English*)	12 A
ವೀರಶೈವರತ್ನ (೪ನೆಯ ಆವೃತ್ತಿ) ...	೧೨ ಆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) ...	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨ ಆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) ..	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ..	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ ಸಹಿತ) ..	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಸಂಜರಿ (ಕನ್ನಡವ್ಯಾಖ್ಯಾನ ೧೩೩ ಪುಟ) ..	೮ ರೂ
लिंगधारणचंद्रिका (संस्कृत)	३
महानारायणोपनिषत् (वीरशैवभाष्य-संस्कृत)	१
वीरशैवदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ... ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ತ್ಯಾನವಿದ್ವಾನ್ ವೇ|| ಬ್ರ|| ಪಂಡಿತ ಶಿವ ಗುರುಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ । ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ॥
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ । ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ವದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ತಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ ನೇ ಮಾರ್ಚಿ ೧೯೩೫ [ಸಂಚಿಕೆ ೪೩

ಶ್ರೀ ಜಗದ್ಗುರು ಪಂಚಾಚಾರ್ಯೋತ್ಸವ ೩

ಶ್ರೀ ಜಗದ್ಗುರು ಪಂಡಿತಾರಾಧ್ಯರ ವಿಶ್ವಾರಾಧ್ಯರ ಜಯಂತಿಮಹೋತ್ಸವ

ಕರ್ನೂಲು ಟವನ್ ಆಲೂರು ಶ್ರೀಶೈಲಂ ಸಂಡಲ ಮಠದ ಗುರುಬಸವಸ್ವಾಮಿಯವರ ಮಹತಿ ಮೇಲೆ ತಾರೀಕು ೩-೩-೩೫ ನೇ ಬೊಸುವಾರ ಪ್ರಾತಃಕಾಲ ನೇತ್ರಾನಂದಕರವಾಗಿ ಉಭಯ ಜಗದ್ಗುರು ಮೂಲ ಲಿಂಗೋದ್ಭವ ಮೂರ್ತಿಗಳನ್ನು ಸಿಂಹಾಸನಾರೋಹಣಮಾಡಿಸಿ ಷೋಡಶೋಪಚಾರಂಗಳಿಂದ ಅಷ್ಟೋತ್ತರ ಶತನಾಮಾವಳಿಸ್ತೋತ್ರಗಳಿಂದ ಬಿಲ್ವಪತ್ರಾದಿ ನಾನಾವಿಧಪುಷ್ಪಾದಿಗಳಿಂದ ಅರ್ಚಿಸಿ ಸಾಯಂಕಾಲ ಸ್ಥಳದ ಭಕ್ತಮಹೇಶ್ವರರು ದೈವಾರಂ ಶೆಟ್ಟಿಯವರು ಮಠಾಧಿಕಾರಿಗಳು ಮುಂತಾದ ಅನೇಕ ಮಹಾಜನಗಳು ಸಭೆಯನ್ನು ಅಲಂಕರಿಸಿದ್ದರು ಸಂಡೂಲು ಮಠದವರ ಮೂಲಕ ಶ್ರೀ ಜಗದ್ಗುರು ಶ್ರೀಶೈಲಪರ್ವತ ಸಂಸ್ಥಾನದ ಏಜೆಂಟ್ ವೇ॥ ಆರಾಧ್ಯಸ್ವಾಮಿಯವರು ವಿಸ್ತರಣೆಯಿಂದ ಮಂಗಳಾರತಿ ಕಾರ್ಯವನ್ನು ನಡೆಸಿದರು ಅಲ್ಲದೆ ಮೈಸೂರು ಪಂಚಾಚಾರ್ಯಪ್ರಭಾಪತ್ರಿಕೆಯಲ್ಲಿ ತಾ॥ 25-1-35 ರಲ್ಲಿ ಪ್ರಕಟಿಸಿರುವ ಮೇರೆ ನಿಜವಾದ ವೀರಶೈವ ಲಿಂಗಾಂಗಿ ದರ್ಶದವರು ಮೇಲ್ಕಂಡ ಜಯಂತಿಮಹೋತ್ಸವಗಳನ್ನು ಗುರುಭಕ್ತಿನಿಷ್ಠರಾಗಿ ಆಚರಿಸಿ ಧನ್ಯರಾಗಬೇಕೆಂದು ಹೇಳಿದರು ಮತ್ತು ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭೂಷಣ ಎಂಬ ಪುಸ್ತಕದಲ್ಲಿ ತೆಲುಗುಭಾಷೆಯಿಂದ ರಚಿಸಿರುವ ಮೇರೆ ಶ್ರೀ ಜಗದ್ಗುರು ಮಹಾಮಹಿಮಾಪನ್ನರಾದ ಪಂಚಾಚಾರ್ಯರ ನಿವಾಸಸ್ಥಾನಗಳನ್ನು ಅವರ ಮಹಿಮಾತಿಶಯವನ್ನೂ ಮತ್ತು ವೀರಶೈವಮತದ ಸಿದ್ಧಾಂತವನ್ನೂ ವಿವರಿಸಿ ಸಂಡೂಲು ಮಠ ಗುರುಬಸವಸ್ವಾಮಿಯವರು ತೆಲುಗು ಭಾಷೆಯಿಂದ ಸಭಾಸದರಿಗೆ ಹೃದಯಂಗಮವಾಗುವಂತೆ ಬೋಧಿಸಿದರು

ಇದರಂತೆ ಇನ್ನು ಮುಂದೆ ಜಗದ್ಗುರು ಪೀಠಾಧ್ಯರ ಜಯಂತಿ ಮಹೋತ್ಸವಗಳನ್ನು ಅತ್ಯಂತ ಸಡಗರದಿಂದ ಆಚರಿಸುವ ಏರ್ಪಾಟುಮಾಡುವವರಾಗಿ ದೈವಾರಂ ಸೋಮಶೆಟ್ಟಿ ಬಸಪ್ಪನವರು ಕೈಯತ್ತಿ ಸೂಚಿಸಿದರು ಸಭಾಸದರು ಗುರುಭಕ್ತಿನಿಷ್ಠರಾಗಿ ಕರತಾಡನ ಪುಳಕ ತಮ್ಮ ಒಪ್ಪಿಗೆಗಳನ್ನು ವ್ಯಕ್ತಪಡಿಸಿದರು

ಅನಂತರ ಜಗದ್ಗುರು ಉಭಯ ಪೀಠಾಚಾರ್ಯರಿಗೆ ಸಪ್ತಾಂಗಗಳಿಂದ ಪಂಚಾರತಿಮಹಾಮಂಗಳಾರತಿ ಫಲಸ್ವೀವ್ಯಾದಿ ಸಮರ್ಪಣೆಗಳು ನಡೆದು ವೇದೋಕ್ತ ಜಯಾಶೀರ್ವಾದಮಂತ್ರದೊಡನೆ ಪುಷ್ಪಾಂಜಲಿಯನ್ನು ಅರ್ಪಿಸಿ ಜಗದ್ಗುರು ಪಂಚಾಚಾರ್ಯ ಮಹಾರಾಜಕಿ ಜೈ ಮತ್ತು ಬ್ರಿಟಿಷ್ ಗೌರ್ನಮೆಂಟು ಸಾರ್ವಭೌಮಚಕ್ರವರ್ತಿ ಮಹಾರಾಜಕಿ ಜೈ! ಎಂಬ ಜಯಘೋಷದೊಡನೆ ಸಭೆಯು ಮುಕ್ತಾಯವಾದ ಆಯಿತು

B. N.—ಜಗದ್ಗುರು ಮಹಾಪ್ರತಿಷ್ಠಾಪಕರಾದ ಪಂಚಾಚಾರ್ಯರ ಮಹಿಮಾತಿಶಯಗಳನ್ನು ಮತ್ತು ವೀರಶೈವ ಧರ್ಮಶಾಸ್ತ್ರಗಳನ್ನೂ ಪ್ರಸಿದ್ಧಗೊಳಿಸುವ ಮೈಸೂರು ಪಂಚಾಚಾರ್ಯಪ್ರಭಾ ಪತ್ರಿಕೆಗೆ ಪರಾಧಿಕಾರಿಗಳ ಪತ್ರ ಬೇಕಾದ ಗಣೇಶರಾಯ ಏಜಂಟರವರ ಅರ್ಪಣೆಮಾಡಿದುದನ್ನು ಅನುಮೋದಿಸಿ ಕರ್ನೂಲು ಆಲೂರು ಶ್ರೀಶೈಲಂ ಸಂಡ ಬಸವರಾಜ ಗುರು ಬಸವಸ್ವಾಮಿ ಮತ್ತು ಕರ್ನೂಲು ಜಿಲ್ಲಾಬೋರ್ಡು ಮೆಂಬರು ಲಿಂಗದ ಕಲಿಗೋಟಯ್ಯನವರ ಪುತ್ರ ಶಿವಮೂರ್ತಯ್ಯನವರು ವರ್ಗಣಿ ಸೇರುವುದು ಪೂರ್ಣವಾಗಿ ಮಾಡವರಾಗಿ ಒಪ್ಪಿಕೊಂಡಿದ್ದಾರೆ

ಇದು ಶ್ಲಾಘನೀಯವಾದ್ದರಿಂದ ಅಂಧ್ರಭಾಷೆಯಲ್ಲಿ ಈ ಪತ್ರಿಕೆ ಹೊರಡುವದಾದರೆ ಅನೇಕರು ಚಂದಾದಾರರಾಗಲು ಆಶಿಸುತ್ತಾರೆ

ಸುಜಾಸ್ತ್ರಾರ

ಎನ್ ಸೂಗೂರಯ್ಯ ಮಟಪತ್ತಿ

ಗ್ರಾಂಟು ಎ ಸ್ಕೂಲ್ ಹೆ॥ ಮಾಸ್ಟರ್

ಚಾಮರಾಜನಗರದ ತಾಲ್ಲೂಕಿನ ಕಂದಾಯದ ವಸೂಲಿ

ರೆವಿನ್ಯೂ ಪ್ರೆಸಿಡೆಂಟ್ ಕೋಡಿನ ಎಲ್ಲಾ ರೂಲ್ಸುಗಳೂ ಈ ತಾಲ್ಲೂಕಿನಲ್ಲಿ ಹಾಲಿ ಜಾರಿಯಲ್ಲಿವೆ ತಾಲ್ಲೂಕು ಅಮಲ್ದಾರರು ಸರ್ಕಾರದ ಕೆಲಸದಲ್ಲಿ ವಿಚಕ್ಷಣೆಯನ್ನು ತೋರಿಸುತ್ತಿರುವರಾದರೂ ಪ್ರಜಾವೃಷ್ಟಿಯಿಂದ ಕಠಿಣಾತ್ಮರಾಗಿ ಪರಿಣಮಿಸಿದ್ದಾರೆ ೩೩-೩೪ ನೇ ಸಾಲಿನ ಬಾಕಿದಾರರಿಗೆಲ್ಲಾ ಮುಂಜಾಗ್ರತೆ ನೋಟೀಸ್ ಜಾರಿಮಾಡಿ ೧೯೩೪ ನೇ ಸಾಲಿನ ಕಂದಾಯವನ್ನೂ ಸೇರಿ ರೈತನ ಅಲ್ಪಸ್ವಲ್ಪ ಫಸಲನ್ನು ಜಫ್ತಿಮಾಡಿ ಜುಲ್ಮಾನೆ ಸಹಿತವಾಗಿ ೧೯೩೫ ನೇ ಜನವರಿಯಲ್ಲಿ ಕಠಿನರೀತಿಯಿಂದ ವಸೂಲುಮಾಡಿ ಬಿಟ್ಟಿರು ರಾಮಸಮುದ್ರದ ಕರೆಬೈಲಿನಲ್ಲಿ ಗದ್ದೆಗಳು ಬೆಳೆಯೇ ಆಗಿಲ್ಲ ಬಂಧಜಮೀನುಗಳಿಗೆ ನ್ಯಾಯವಾಗಿ ಕಂದಾಯ ರಿಮಿಷನ್ ಮಾಡಬೇಕಾದ್ದು ಧರ್ಮವಾಗಿದೆಯಾದರೂ ಆ ಜಮೀನು ಕಂದಾಯಗಳಿಗೂ ನೋಟೀಸ್—ಜಫ್ತಿ ವಗೈರೆ ಕ್ರಮಗಳಿಗೆ ಆರಂಭವಾಗಿವೆ ರೈತರ ಗೋಳನ್ನು ಕೇಳುವವರೇ ಇಲ್ಲ ಮೇಲಿನ ಅಧಿಕಾರಿಗಳಾದರೂ ಅಲ್ಪಸ್ವಲ್ಪವಾದರೂ ಕನಿಕರವನ್ನು ತೋರಿಸದೆ ಕಂದಾಯಕ್ಕೆ ವಾಯಿದೆ ಕೊಡದೆ ಹೋದರೆ ರೈತರನ್ನು ಜಗದೀಶನೇ ಕಾಪಾಡಬೇಕು ಧಾರಣೆವಾಸಿಯು ದಿನೇ ದಿನೇ ಏರುತ್ತಿದೆ ಬಿಸಿಲು ಮೇಗ ಸಹಿಸಲಸದಳ ಈ ವೇಗಕ್ಕಿಂತಲೂ ಕಂದಾಯದ ವಸೂಲೀ ವೇಗವು ತೀಕ್ಷ್ಣಗತಿಯಿಂದ ಸಾಗುತ್ತಿದೆ.

ಸ್ವೀಕಾರ

ಶಿವಮೊಗ್ಗದಲ್ಲಿರುವ ಮ॥ ರಾ॥ ಶೇಷಾದ್ರಿ ರುದ್ರಪ್ಪನವರ ತಮ್ಮ ಮ॥ ರಾ॥ ಚೆನ್ನಯ್ಯನವರ ಪುತ್ರಿ ಹ॥ ಕುಂ॥ ಶೋ॥ ಚಿ॥ ಸೌ॥ ಸರ್ವಮಂಗಳಮ್ಮನನ್ನು ತಿಪಟೂರು ತಾಲ್ಲೂಕು ಸಂಘ ಹಳ್ಳಿಮಠದ ವೇ॥ ವೀರಭದ್ರಯ್ಯನವರ ಪುತ್ರ ಚಿ॥ ಸ॥ ಶಿವಯ್ಯನೆಂಬ ವರನಿಗೆ ಕೊಟ್ಟು ವಿವಾಹ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ತೀರ್ಥಹಳ್ಳಿ ತಾಲ್ಲೂಕು ಮೇಲಿನಮಠದ ಶ್ರೀಗಳವರ ದ್ವಾರಾ ತಲ್ಪಿರುತ್ತವೆ

ಶಿವಮೊಗ್ಗದಲ್ಲಿರುವ ಮ॥ ರಾ॥ ಹಗಲುಚುಕ್ಕಿ ಮರಿಯಪ್ಪನವರ ಪುತ್ರ ಚಿ॥ ಸ॥ ಶಾಂತಣ್ಣನವರಿಗೂ, ಮ॥ ರಾ॥ ಸೊಂಡೂರು ಸೆಟ್ಟರು ಗುಂಡಪ್ಪನವರ ಪುತ್ರಿ ಹ॥ ಚಿ॥ ಸೌ॥ ಪಾರ್ವತಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ಮ॥ ರಾ॥ ಸಿ ಕೆ ಕೆಂಪಣ್ಣನವರ ಮೂಲಕ ತಲುಪಿರುತ್ತವೆ.

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲ್ಲೂಕು ಅರಸಿಕೇರಿಯಲ್ಲಿರುವ ಕೋತಿಕಾಸಿ ಮ॥ ರಾ॥ ಶಿವಪ್ಪನವರ ಪುತ್ರ ಚಿ॥ ಅಜ್ಜಪ್ಪನವರ ವಿವಾಹಪ್ರಸ್ತಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಕುಡಿತಿನಿಮಠದ ವೇ॥ ಚೆನ್ನಬಸವಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಚೀನವು ಜಪಾನಿನ ಮಿತ್ರತ್ವವನ್ನು ಒಪ್ಪುವಂತಿದೆ.

ಪಾಶ್ಚಿಮಾತ್ಯ ವಿಳೇಜನಗಳನ್ನೆಲ್ಲಾ ಹೊರಗೆ ಕಳುಹಿಸಿ ಅವರಿಗೆ ಬದಲು ಜಪಾನೀಯರನ್ನು ಇಟ್ಟುಕೊಳ್ಳುವುದಾದರೆ, ಚೀನಾದವರ ಅಭಿವೃದ್ಧಿಗೆ ಬೇಕಾದ ಸಹಾಯಮಾಡುವುದಲ್ಲದೆ ಸ್ನೇಹದಿಂದ ನಡೆದುಕೊಳ್ಳುವುದಾಗಿ ತಿಳಿಸಿದ್ದ ಜಪಾನ್ ಮಂತ್ರಿಗಳ ಸಲಹೆಗೆ ಚೀನರು ಒಪ್ಪುವಂತಿದೆ, ಈಗಾಗಲೇ ಚೀನಾಧ್ಯಕ್ಷರಾದ ಮಾರ್ಷಲ್ ಚಿಂಗ್‌ಕಾಯ್‌ಷೆಕ್ ಎಂಬುವರು ಜಪಾನರನ್ನು ಶತ್ರುಗಳಂತೆ ಕಾಣಬಾರದೆಂಬ ಆದೇಶವನ್ನು ತಮ್ಮ ಜನಗಳಿಗೆ ತಿಳಿಸಿರುವುದಲ್ಲದೇ ಜಪಾನ್-ಚೀನಾರಾಜ್ಯಗಳಲ್ಲಿ ಸಹಾನುಭೂತಿಯುಂಟಾಗುವಂತೆ ತನ್ನ ಕೈಲಾದ ಪ್ರಯತ್ನಗಳನ್ನೆಲ್ಲಾ ಮಾಡುವುದಾಗಿ ಜಪಾನಿಗೆ ತಿಳಿಸಿದ್ದಾರೆ.

ಪತ್ರವ್ಯವಹಾರ.

ಪತ್ರಿಕೆದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಚಯ.

ಆರೋಗ್ಯಮಾರ್ಗ

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ ವಿ. ಗರೂರು

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ಶ್ರೀಕ್ಷೇತ್ರಕಾಶಿ

ಆಹಾರ ನಿಯಮಗಳು

ಬಾವಿಯ ನೀರು ನಯಿಯಾಗಿದ್ದು ತ್ರಿದೋಷಗಳನ್ನು ಶಾಂತಗೊಳಿಸುವದು. ಜಠರಾಗ್ನಿಯನ್ನು ವಾತಕಫಗಳನ್ನು ಶಾಂತಗೊಳಿಸಿ ಪಿತ್ತವನ್ನು ಹೆಚ್ಚಿಸುವುದು. ಬಹಳ ಆಳವಾಗಿರುವ ಬಾವಿಯ ನೀರು ಆರೋಗ್ಯಪ್ರದವಾಗಿರುವುದು. ಅದರಿಂದ ಬಾವಿಯು ಸುತ್ತಲೂ ಕಟ್ಟಿದ್ದು ಬಾಯಿಯುಳ್ಳದಾಗಿದ್ದು ಸಮೀಪದಲ್ಲಿ ಹೊಲಸು ಸ್ಥಳಗಳಿಲ್ಲದಿದ್ದರೆ ಸ್ವಲ್ಪ ಆಳವಾಗಿದ್ದ ಬಾವಿಯ ನೀರಾದರೂ ಆರೋಗ್ಯದಾಯಕವೇ ಆಗಿರುವುದು. ಮೋರಿಗಳ ಹೊಲಸು ನೀರು ಹೋಗುವ ನೆಲದಲ್ಲಿ ಬಾವಿಯೊಳಗೆ ಪ್ರವೇಶಿಸಿ ನೀರನ್ನು ಕಲುಷಿತಗೊಳಿಸುವುದು. ಬಾವಿಯ ಮೇಲೆ ಮನುಷ್ಯರು ಪಾತ್ರೆಗಳನ್ನು ತೊಳೆಯುವುದು, ಉಪಯೋಗಿಸಿ ಮುಸುರೆಯನ್ನು ಚೆಲ್ಲುವುದು, ಬಾವಿಯ ಮೇಲೆ ನಿಂತು ಸ್ನಾನ ಮಾಡುವುದು, ಬಟ್ಟೆಗಳನ್ನು ಒಗೆಯುವುದು ಇವೇ ಮುಂತಾದ ದುಷ್ಪದ್ಧತಿಗಳಿಂದ ಕಲುಷಿತವಾದ ನೀರು ಬಾವಿಯೊಳಗೆ ಯಾವಾಗಲೂ ಸೇರುತ್ತ ಕಪ್ಪಾದ ಮತ್ತು ಕೆಂಪುಬಣ್ಣದ ಒಂದು ಜಾತಿಯ ಹುಳುಗಳನ್ನು ಹುಟ್ಟಿಸುವುದು. ಈ ಹುಳುಗಳು ಬಹು ಸೂಕ್ಷ್ಮಗಳಾಗಿರುವುದರಿಂದ ಸೂಕ್ಷ್ಮವಸ್ತುದರ್ಶಕಯಂತ್ರದ ಸಹಾಯವಿಲ್ಲದೆ ಕಾಣಿಸಲಾರವು. ಇವು ನೀರಿನೊಡನೆ ಪ್ರಾಣಿಗಳ ಹೊಟ್ಟೆಗೆ ಸೇರಿ ಅನೇಕ ವಿಧ ಸಾಂಕ್ರಾಮಿಕ ರೋಗಗಳನ್ನುಂಟುಮಾಡುತ್ತವೆ. ಎಷ್ಟೋ ಜನರು ಕೊಡಗಳನ್ನೂ ತಂಬಿಗೆಗಳನ್ನೂ ಮಣ್ಣಿನಿಂದ ಬೇಗ ಹಾಗೆಯೇ ಬಾವಿಯಲ್ಲಿ ಬಿಡುತ್ತಾರೆ. ಮತ್ತು ಎಷ್ಟೋ ಜನರು ನೈವೇದ್ಯದ ನೆಪದಿಂದ ಅನ್ನ ರೊಟ್ಟಿ ಅಕ್ಕಿ ಮುಂತಾದ ಪದಾರ್ಥಗಳನ್ನು ಬಾವಿಯಲ್ಲಿ ಚೆಲ್ಲುತ್ತಾರೆ. ಈ ಕಾರಣಗಳಿಂದಲೂ ನೀರು ಕೆಡುತ್ತದೆ. ಬಾವಿಯ ಮೇಲೆ ಗಿಡಗಳಿದ್ದರೆ ಎಲೆಗಳು ನೀರಿನಲ್ಲಿ ಬಿದ್ದು ಕೊಳೆತು ನೀರನ್ನು ದುರ್ಗಂಧವನ್ನಾಗಿ ಮಾಡುವುವು. ಆದುದರಿಂದ ಮೊದಲು ಮೇಲಿನ ದುಷ್ಟಪದ್ಧತಿಗಳು ನಡೆಯದಂತೆ ಮಾಡಿ ಅನಂತರ ಕಸಕಡ್ಡಿ ಎಲೆಗಳು ಬಾವಿಯಲ್ಲಿ ಬೀಳದಿರುವುದಕ್ಕನುಕೂಲಗಳಾದ ಉಪಾಯಗಳನ್ನು ಕಲ್ಪಿಸಿ ಮತ್ತು ಯಾವ ವಿಧದಿಂದಲೂ ಹೊಲಸು ನೀರು ಬಾವಿಯಲ್ಲಿ ಸೇರದಿರುವುದಕ್ಕಾಗಿ ಬಾವಿಯ ಸುತ್ತಲೂ ಕಲ್ಲುಗಳನ್ನು ಹಾಕಿ ಸ್ನಾನಾದಿ ಕಾರ್ಯಗಳಿಗೆ ಉಪದ್ರವರಹಿತವಾದೊಂದು ಸ್ಥಳವನ್ನು ನಿಯಮಿಸಿ ಸಕಲರೀತಿಯಿಂದಲೂ ಬಾವಿಯ ನೀರು ಹೊಲಸಾಗದಂತೆ ಕಾಪಾಡಿಕೊಳ್ಳತಕ್ಕದ್ದು ಮುಖ್ಯ ಕರ್ತವ್ಯವಾಗಿರುತ್ತದೆ.

ಗಳಲ್ಲಿ ಮಲದ ಕ್ರಿಮಿಗಳು ಸನ್ನಿಪಾತ (ಟೈಫಾಯಿಡ್ ಫೀವರ್) ರೋಗಕ್ಕೆ ಕಾರಣವಾಗುವುವೆಂದು ನಿರ್ಧರಿಸಿದ್ದಾರೆ. ಇದರಿಂದ ನಲ್ಲಿಯ ನೀರನ್ನಾದರೂ ಶುದ್ಧೀಕರಿಸದವನ್ನಾಗಿ ಕುಡಿಯುವುದು ಸಮಂಜಸವಾಗಿರುತ್ತದೆ.

ದೂಷಿತವಾಗಿರುವ ನೀರನ್ನು ಶುದ್ಧಪಡಿಸಿಕೊಳ್ಳಲು ವೈದ್ಯಶಾಸ್ತ್ರವು ಅನೇಕ ಮಾರ್ಗಗಳನ್ನು ತೋರಿಸುತ್ತದೆ. ಸುಶ್ರುತ ಮಹರ್ಷಿಯು:—

ವ್ಯಾಪನ್ನಸ್ಯಾಗ್ನಿಕ್ವಥನಂ ಸೂರ್ಯಾತಪ
ಪ್ರತಾಪನಂ
ತಪ್ತಾಯಃಪಿಂಡಸಿಕತಾಲೋಷ್ಟ್ರಾಣಾಂ ವಾ
ನಿರ್ವಾಪಣಂ
ಪ್ರಸಾದನಂ ಚ ಕರ್ತವ್ಯಂ ನಾಗಚಂಪಕೋತ್ಪಲ
ಪಾಟಲ
ಪುಷ್ಪಪ್ರಭೃತಿಭಿಶ್ಚಾಧಿವಾಸನಮಿತಿ || ಸು ಸೂ ಅ೪೫

ಎಂದು ದೂಷಿತ ಜಲಶೋಧನ ವಿಧಿಯನ್ನು ಹೇಳಿರುತ್ತಾನೆ. ನೀರನ್ನು ಬೆಂಕಿಯಿಂದ ಕಾಯಿಸುವುದರಿಂದಲೂ ಬಿಸಿಲಿನಲ್ಲಿಡುವುದರಿಂದಲೂ ಬೆಂಕಿಯಲ್ಲಿ ಕಾಯಿಸಿದ ಕಬ್ಬಿಣ ಮರಳು ಇಟ್ಟಿಗೆ ಅಥವಾ ಮಣ್ಣಿನ ಹೆಂಟೆ ಇವುಗಳಲ್ಲಿ ಯಾವುದಾದರೊಂದನ್ನು ನೀರಿನಲ್ಲಿ ಹಾಕುವುದರಿಂದಲೂ ನೀರಿನ ಸಕಲ ದೋಷಗಳು ದೂರವಾಗುವುವು. ಅನಂತರ ಈ ವಸ್ತುಗಳ ಸಂಬಂಧದಿಂದ ಉಂಟಾಗುವ ವಾಸನೆಯು ನಿವಾರಣೆಯಾಗಲು ನಾಗಕೇಸರ ಸಂಪಿಗೆಹೂವು ಕನ್ನೈದಿಲೆ ಪಾದರಿಹೂವು ಮುಂತಾದ ಸುಗಂಧ ಪುಷ್ಪಗಳಲ್ಲಿ ಯಾವುದಾದರೊಂದು ಜಾತಿಯ ಪುಷ್ಪಗಳನ್ನು ನೀರಿನಲ್ಲಿ ಹಾಕಬೇಕು. ಈ ವಿಧದಿಂದ ನೀರು ನಿರ್ಮಲವೂ ಸುಗಂಧಯುಕ್ತವೂ ಆಗುತ್ತದೆ. ಮತ್ತು ನೀರನ್ನು ಬಟ್ಟೆಯಿಂದ ಶೋಧಿಸಿದರೂ ಉಳಿದ ಸೂಕ್ಷ್ಮ ಕಸವುಳಿದದುಂಟು. ಇವುಗಳನ್ನು ನೀರಿನಲ್ಲಿ ಹಾಕಿದರೆ ನೀರಿನ ದೋಷವು ಪರಿಹಾರವಾಗುವುದು. ದೃಷ್ಟಿದೋಷದ ನಿವಾರಣೆಗಾಗಿ ನೀರಿನಲ್ಲಿ ಗೋಮೇದಕಮಣಿ ಮುತ್ತು ಸ್ಫಟಿಕಮಣಿ ಮೊದಲಾದುವನ್ನು ಹಾಕಬೇಕೆಂದು ಸುಶ್ರುತಮಹರ್ಷಿಯು ಹೇಳಿರುತ್ತಾನೆ. ಮೇಲೆ ಬರೆದಿರುವ ಯಾವುದಾದರೊಂದು ಪದಾರ್ಥದ ಸಂಬಂಧದಿಂದ ಯಾವಾಗಲೂ ನೀರನ್ನು ಶೋಧಿಸಿಕೊಂಡೇ ಪಾನಮಾಡಬೇಕಲ್ಲದೆ ದೂಷಿತವಾಗಿರುವ ನೀರನ್ನು ಹಾಗೆಯೇ ಎಂದಿಗೂ ಪಾನಮಾಡಬಾರದು. ಶೋಧನೆಯಲ್ಲಿ ಆಲಸ್ಯವನ್ನು ತಾಳಿದವರಿಗೆ ಸಂಭವಿಸುವ ರೋಗಗಳನ್ನು ಸುಶ್ರುತ ಮಹರ್ಷಿಯು:—

ವ್ಯಾಪನ್ನಂ ಸಲಿಲಂ ಯಸ್ತು ಪಿಬತೀಹಾಪ್ರಸಾಧಿತಂ
ಶ್ವಯಥುಂ ಪಾಂಡುರೋಗಂ ಚ ತ್ವಗ್ದೋಷಮ
ಪಾಚಕತಾಂ ||
ಶ್ವಾಸಕಾಸಪ್ರತಿಶ್ಯಾಯ ಶೂಲಗುಲ್ಮೋದರಾಣಿ ಚ
ಅನ್ಯಾನ್ ವಾ ವಿಷಮಾನ್ ರೋಗಾನ್ ಪ್ರಾಪ್ನುಯಾ
ದಚಿರೇಣ ಸಃ || ಸು ಸೂ ಅ೪೫

ಎಂದು ಹೇಳಿರುವನು. ಕಲುಷಗೊಂಡಿರುವ ನೀರನ್ನು ಕುಡಿಯುತಕ್ಕವರು ಬಾವು ಕಾಮಾಲೆ ಕುಷ್ಠ ಮುಂತಾದ ಚರ್ಮರೋಗ ಅಜೀರ್ಣ ದಮ್ಮು ಕೆಮ್ಮು ನೆಗಡಿ ಹೊಟ್ಟೆಶೂಲೆ ಗುಲ್ಮ ಜಲೋದರ ಇವೇ ಮುಂತಾದ ನಾನಾವಿಧ ಅಸಾಧ್ಯರೋಗಗಳಿಂದ ಒಮ್ಮೆಬೇಗನೆ ಆಕ್ರಮಿಸಲ್ಪಡುತ್ತಾರೆ. ಆದುದರಿಂದ ನೀರಿನ ಪರಿಶುದ್ಧತೆಯ ಕಡೆಗೆ ವಿಶೇಷಲಕ್ಷ್ಯವನ್ನು ಕೊಡತಕ್ಕದ್ದು ವಿಹಿತವಾಗಿರುತ್ತದೆ.

ಓಡಿಸುವುದೂ, ವಾದವಿವಾದಗಳನ್ನು ಮಾಡುವುದೂ, ಅತ್ಯಂತ ಹಾನಿಕರವಾಗಿರುತ್ತದೆ.

ಬೆಂಕಿಯಿಂದ ಕಾಯಿಸಿ ಆರಿಸಿದ ನೀರು ತ್ರಿದೋಷಗಳನ್ನು ಶಮನಮಾಡಿ ಶರೀರದಲ್ಲಿ ಹುಮ್ಮಸ್ಸನ್ನುಂಟುಮಾಡುತ್ತದೆ. ಹಗಲಿನಲ್ಲಿ ಕಾಯಿಸಿದ ನೀರನ್ನು ರಾತ್ರಿಯಲ್ಲಿಯೂ, ರಾತ್ರಿಯಲ್ಲಿ ಕಾಯಿಸಿದ ನೀರನ್ನು ಮರುದಿವಸದಲ್ಲಿಯೂ, ಕುಡಿಯಬಾರದು. ಇಂತಹ ನೀರು ಭಾರವಾಗಿರುವುದರಿಂದ ಬೇಗನೆ ಜೀರ್ಣಿಸುವುದಿಲ್ಲ. ತಣ್ಣೀರು ೨ ಪ್ರಹರ (೬ ಗಂಟೆ) ಗಳಲ್ಲಿಯೂ, ಕಾಯಿಸಿ ಆರಿಸಿದ ನೀರು ೧ ಪ್ರಹರ (೩ ಗಂಟೆ)ದಲ್ಲಿಯೂ ಸಾಧಾರಣ ಬಿಸಿಯಾಗಿರುವ ನೀರು ೨ ಗಂಟೆಗಳಲ್ಲಿಯೂ, ಜೀರ್ಣವಾಗುತ್ತದೆ.

ಮೂರ್ಛೆ-ಪಿತ್ತವಿಕಾರ ಪ್ರಮೇಹ ಮೈಉರಿ ರಕ್ತವಿಕಾರ ಮದ್ಯವಿಕಾರ-ವಮನ-ರಕ್ತಪಿತ್ತ ವಿಷವಿಕಾರ, ಇವುಗಳಿಂದ ಪೀಡಿತರಾದವರಿಗೆ ತಣ್ಣೀರು ಹಿತಕರವಾಗಿರುತ್ತದೆ. ನೆಗಡಿ ವಾತರೋಗ-ಗಂಟಲಿನರೋಗ ನೂತನಜ್ವರ ಕೆಮ್ಮು ಬಿಕ್ಕಳಿಕೆ ಪಾರ್ಶ್ವಶೂಲೆ ಇವುಗಳಿಂದ ಪೀಡಿತರಾದವರಿಗೆ ಮತ್ತು ವಿರೇಚನವನ್ನು ಸೇವಿಸಿದವರಿಗೆ ತುಪ್ಪ ಎಣ್ಣೆ ಮುಂತಾದ ಜಿಡ್ಡಿನ ವಸ್ತುಗಳನ್ನು ಸೇವಿಸಿದಾಗ, ತಣ್ಣೀರು ಹಿತಕರವಲ್ಲ.

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವರ್ಣದ್ವೇಷ.

ಸಂಸ್ಕೃತ ವಿದ್ಯಾಭ್ಯಾಸವಾಸಕಲೆಂಬ ಉದಾರವಾದ ಧ್ಯೇಯದಿಂದ ಮೈಸೂರು ದಯಾಳು ಸರ್ಕಾರದವರು ಅನ್ನಛತ್ರ ದಯಪಾಲಿಸಿ ೬೦ ವರ್ಷಗಳಾಗುತ್ತಾ ಬಂದಿತು. ಇದುವರೆಗೂ ಒಂದು ಕೋಮಿನವರು ಮಾತ್ರ ದೊಡ್ಡ ದೊಡ್ಡ ಸ್ಕಾಲರ್ ಷಿಪ್ ಪಡೆದುಕೊಂಡು ಉನ್ನತ ತರಗತಿಗಳಲ್ಲಿ ವ್ಯಾಸಂಗಮಾಡುತ್ತಾ ಎಲ್ಲಾ ಪ್ರಯೋಜನವನ್ನೂ ಹೊಂದುತ್ತಿದ್ದಾರೆ. ಮತ್ತೊಂದು ಕೋಮಿನವರು ಕಾವ್ಯಪರೀಕ್ಷೆ ಅಥವಾ ಚಂಪೂನಾಟಕ ಪರೀಕ್ಷೆಯ ಮೇಲೆ ಒಬ್ಬ ವಿದ್ಯಾರ್ಥಿಯೂ ಕೂಡ ಹೋಗಿಯೇ ಇಲ್ಲ. ಇದನ್ನು ನೋಡಿದರೆ ಬಹಳ ವ್ಯಸನಪಡಬೇಕಾಗುತ್ತೆ. ಅಥವಾ ಅವರು ಕಷ್ಟಪಟ್ಟು ವ್ಯಾಸಂಗಮಾಡುವುದಿಲ್ಲವೆಂದರೆ ಹಾಗೆ ಹೇಳುವುದಕ್ಕೆ ಆಗುವುದಿಲ್ಲ. ಯಾತಕ್ಕೆಂದರೆ ದೊಡ್ಡ ದೊಡ್ಡ ಕಾಲೇಜುಗಳಲ್ಲಿ ಎಲ್ಲಾ ಕೋಮಿನವರು ಸಮಾನವಾಗಿ ಡಿಗ್ರಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಸಂಸ್ಕೃತಕಾಲೇಜಿನಲ್ಲಿ ಮಾತ್ರ ಈ ರೀತಿಯಾದ ಅನ್ಯಾಯ ನಡೆಯುವುದಕ್ಕೆ ಏನೋ ಕಾರಣವಿರಬಹುದೆಂಬ ವಿಷಯವು ಚೆನ್ನಾಗಿ ವ್ಯಕ್ತವಾಗುತ್ತೆ. ಮೇಲಾದ ವಿದ್ಯಾರ್ಥಿಗಳ ಪೈಕಿ ಬೇಕಾದವರಿಗೆ ಸ್ಕಾಲರ್ ಷಿಪ್ ಕರುಣಿಸಿಕೊಡುತ್ತಲೂ ಬೇಡವಾದ ವಿದ್ಯಾರ್ಥಿಗಳಿಗೆ ಸ್ಕಾಲರ್ ಷಿಪ್ ಕರುಣಿಸಿಕೊಡದೆ ಅವರ ಉತ್ಸಾಹಕ್ಕೆ ಭಂಗವನ್ನುಂಟುಮಾಡುತ್ತಿದ್ದಾರಾಗಿ ನಮ್ಮಗಳ ತಿಳುವಳಿಕೆಗೆ ಬಂದಿರುತ್ತೆ. ಸರ್ಕಾರದವರು ವಿದ್ಯಾರ್ಥಿಗಳ ಹಿತಕ್ಕಾಗಿ ಮಂಜೂರುಮಾಡಿರುವ ಹಣದಲ್ಲಿ ಸ್ವಲ್ಪ ಹಣವನ್ನು ನಿಲ್ಲಿಸಿ ಗೌರ್ನಮೆಂಟಿಗೆ ಆದಾಯಮಾಡುವವರಂತೆ ನಟಿಸಿ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆ ಉಂಟುಮಾಡುತ್ತಿರುತ್ತಾರಂತೆ. ಕಾಲೇಜಿನ ಪಂಡಿತರ ಪೈಕಿ ಬೇಕಾದವರಿಗೆ ಸೀನಿಯಾರಿಟಿ ನೋಡದೆ ಪ್ರಮೋಷನ್ ಮಾಡಿಸಿಕೊಡುತ್ತ ಬೇಡವಾದ ಪಂಡಿತರಿಗೆ ಬಹ

ಗಳಿಗೆ ತುಂಬಾ ತೊಂದರೆ ಆಗುತ್ತಿರುವದರಿಂದ ವಿದ್ಯಾಭ್ಯಾಸದ ಇಲಾಖೆಯವರು ಈ ತೊಂದರೆಯನ್ನು ತಪ್ಪಿಸಿ ಅನುಕೂಲಮಾಡುತ್ತಾರೆಂದು ನಂಬಿರುತ್ತೇವೆ

ಓರ್ವ ಪ್ರತ್ಯಕ್ಷದರ್ಶಿ

ನಮಃ ಶಂಭು ಜಗದ್ಗುರುಭ್ಯಃ

ಜಯಂತೀಮಹೋತ್ಸವ
ಸೋಲಾಪುರ.

ಮಾನವನ ಮುಖ್ಯಾಧಿದೇವತೆಯೆಂದರೆ ಸದ್ಗುರುನಾದನೆಂದೇ ಸಕಲ ಶಾಸ್ತ್ರಗಳು ಉದ್ಘೋಷಿಸುತ್ತಿರುತ್ತವೆ ಪ್ರಾಚೀನಕಾಲದ ಮಹರ್ಷಿಗಳಾಗಲಿ ಇಲ್ಲವೇ ಮಾನವ ಮಾನವ, ದೇವರ್ಷಿಗಳಾಗಲೀ ಸದ್ಗುರುವಿನಾದನಿಂದಲೇ ನೈಜಸೌಖ್ಯವನ್ನು ಹೊಂದಿರುತ್ತಾರೆ ಈ ತತ್ವವನ್ನರಿತ ಬ್ರಾಹ್ಮಣರು ತಮ್ಮ ಧರ್ಮಾಚಾರ್ಯರ ಸ್ತೋತ್ರಗಳಲ್ಲಿ ಈಗಲೂ ಸನ್ನದ್ಧರಿದ್ದಾರೆ ಈ ಪದ್ಧತಿಯು ಪೂರ್ವದಲ್ಲಿ ವೀರಶೈವರಲ್ಲಿ ಸಂಪೂರ್ಣವಾಗಿ ನೆಲೆಗೊಂಡಿದ್ದಿತು. ಅದ್ದರಿಂದಲೇ ಆ ಸಮಯದಲ್ಲಿ ಎಷ್ಟೋ ಜನರು ಸತ್ಪುರುಷರಾಗಿದ್ದರಲ್ಲದೆ ವೀರಶೈವ ಧರ್ಮವು ವಿಶಾಲತ್ವವನ್ನು ಹೊಂದಿ ಸರ್ವವರ್ಣಗಳಲ್ಲಿ ಮಿಗಿಲೆನಿಸಿಕೊಂಡಿತು ಪರಂತು ಆ ಧರ್ಮವು ಧರ್ಮಾರಕ್ಷಕರ ಅಜಾಗರೂಕತೆಯಿಂದ ಶಿಥಿಲವಾಗಿ ನಷ್ಟವೆಂದೆಯೆನಿಸುವದನ್ನು ಹೇಳಲು ಅಸಮರ್ಥನಾಗಿರುತ್ತೇನೆ. ಹೀಗಾದಮೇಲೆ ತನ್ನ ನೈಜಶಕ್ತಿಯನ್ನೇ ವಹಿಸುವವರಿಲ್ಲದಂತಾದೀತೆಂಬುವ ಭಯದಿಂದ, ಪರಮಾತ್ಮನು ಕುಟಿಲನಾದ ದಕ್ಷಬ್ರಹ್ಮನು ಪರಮಾತ್ಮನ ವಿರುದ್ಧ ಯಜ್ಞವನ್ನು ಮಾಡಲು ಅದರ ವಿಧ್ವಂಸಕ್ಕಾಗಿ ತನ್ನ ಪಾಲೋದಕದಿಂದ ವೀರಭದ್ರನನ್ನು ಹುಟ್ಟಿಸಿ ಆ ಕುಟಿಲನ ಗರ್ವವನ್ನು ಹರಣಮಾಡಿದಂತೆ ತನ್ನ ಅಂಶೀಭೂತ ಪಂಡಿತ ಕಾಶೀನಾಥಶಾಸ್ತ್ರಿಗಳವರನ್ನು ಉದಯಗೊಳಿಸಿ ತದ್ವಾರಾ ಕುಟಿಲರ ಚಟುವಟಿಕೆಯನ್ನು ನಷ್ಟಮಾಡಿದನು

ಈ ವರ್ಷ ಸೋಲಾಪುರದಲ್ಲಿ ತಾ|| ೩-೨-೩೫ ಕ್ಕೆ ಶ್ರೀ ಜಗದ್ಗುರು ಪಂಡಿತಾರಾಧ್ಯರ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿಮಹೋತ್ಸವವನ್ನು ಕಸಬಾಪೇಟೆಯಲ್ಲಿರುವ ಶ್ರೀಮಲ್ಲಿಕಾರ್ಜುನ ದೇವಾಲಯದಲ್ಲಿ ಶ್ರೀ ಸಿದ್ಧೇಶ್ವರ ವ್ಯಾಸಾದಿಕ ಜನಮಂಡಳಿಯವರು ಒಳ್ಳೇ ವೈಭವದಿಂದ ನೆರವೇರಿಸಿದರು. ಆ ಸಮಯದಲ್ಲಿ ಮೊದಲೇ ಪ್ರಸಿದ್ಧಪಡಿಸಿದ್ದಂತೆ ಶ್ರೀ||ಷ|| ಬ್ರ|| ಚನ್ನವೀರಶಿವಾಚಾರ್ಯರು ಬೃಹನ್ಮಠ ಹೋಟಗಿ ಈ ಬಾಲತಪಸ್ವಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿತು ಮೊದಲೇ ಭವ್ಯವಾದ ರಾಜಮಂದಿರದಂತೊಪ್ಪುವ ದರ್ಶನಮಾತ್ರದಿಂದಲೇ ಭಕ್ತಿಯನ್ನು ಹುಟ್ಟಿಸುವ ಶ್ರೀಮಲ್ಲಿಕಾರ್ಜುನ ದೇವಾಲಯವು ಎಲೆಕ್ಟ್ರಿಕ್ ದೀಪಾವಳಿಗಳಿಂದ ಮತ್ತಿಷ್ಟು ಶೋಭೆಯನ್ನು ಹೊಂದಿತ್ತು ಗುಂಭಾ ಸನದ ಮೇಲೆ ಶ್ರೀ ಜಗದಾಚಾರ್ಯರ ಲಿಂಗೋದ್ಭವ ರಜತಮೂರ್ತಿಯನ್ನು ಸ್ಥಾಪಿಸಿರುವದನ್ನು ನೋಡಿದರಂತೂ ಎಂಥ ನಾಸ್ತಿಕನಿಗೂ ಆ ಸಮಯವು ಆಸ್ತಿಕಭಾವವನ್ನು ಹುಟ್ಟಿಸದೆ ಬಿಡುತ್ತಿರಲಿಲ್ಲ 'ಕರ್ಣಾಟಕ ಕವಿಚಂದ್ರ' ನವಲಗುಂದ ಹಿರೇಮಠದ ಶ್ರೀ ಕಂಠಶಾಸ್ತ್ರಿಗಳವರು. 'ಜಗದಾಚಾರ್ಯರ ಜಯಂತಿ' ಬಗ್ಗೆ ಸುಮನೋಹರವಾಗಿ ೧ ತಾಸುಕಾಲ ಬೋಧಿಸಿದರು ಶ್ರೀ ರೇವಣಸಿದ್ಧಪ್ಪ ದುಲಂಗೆಯವರು ಗುರುಮಹತ್ವ ವಿಷಯದಲ್ಲಿ ಚನ್ನಾಗಿ ಮಾತಾಡಿದರು ಅನಂತರ ಅಧ್ಯಕ್ಷರು 'ಜಯಂತಿಯನ್ನು ಯಾಕೆ ಆಚರಿಸಬೇಕು' ಎಂಬ ವಿಷಯವನ್ನು ೧ ತಾಸುಪರ್ಯಂತರ ಚನ್ನಾಗಿ ಉಪದೇಶಿಸಿದರು ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು ಈ ಸಾರೆ ಜಯಂತಿಯಲ್ಲಿ ೬೦೦ ಜನಗಳವರೆಗೆ ನೆರೆದಿದ್ದರು

ಆ ಮೇಲೆ ಮಹಾಶಿವರಾತ್ರಿಯ ಮಹದ್ವ್ರತವಾದ ಲಿಂಗಪೂಜೆಯನ್ನೂ ಗುರುಪೂಜೆಯನ್ನೂ ಪೂರೈಸಿ ಗುರುಸಾರ್ವಭೌಮ ಜರಚಕ್ರವರ್ತಿ ಜಗದ್ಗುರು ಶ್ರೀ ರೇವಣಸಿದ್ಧೇಶ್ವರ ದರ್ಶನಕ್ಕಾಗಿ ಅದೇ ರಾತ್ರಿಯ ಬೆಳಗಿನ ೩ ಘಂಟೆಗೆ ಒಂದೇಬಂದಾದ ಉಟ್ಟಮಡಿವಸ್ತ್ರದಿಂದಲೇ ಈ ಸದ್ಭಕ್ತಮಂಡಳಿಯು ಹೊರಟಿತು ಈ ಕಾರ್ಯದಲ್ಲಿ ಮುಖ್ಯತ್ವೇನ ಶ್ರೀ ರೇವಣಸಿದ್ಧಪ್ಪ ಹಿರೇಹಬ್ಬು ಶ್ರೀ ಸಿದ್ಧರಾಮಪ್ಪ ಜಗಡೆ ಆನಂದರಾವ ದಗೊರ್ಣೀಪಾಟೀಲ ಶಂಕರರಾವಪಾಟೀಲ ಗು.ರು.ಪಾದಪ್ಪ ಕಮಟಿ ಇವರು ಕಾರ್ಯಭಾರವನ್ನು ವಹಿಸಿದ್ದರು ಜಗದ್ಗುರುವಿನ ದರ್ಶನವನ್ನು ಗ್ರಾಮದೇವತೆಯಾದ ಶ್ರೀ ಸಿದ್ಧರಾಮನ ದರ್ಶನವನ್ನೂ ಗುರುಭೆಟ್ಟಿಯನ್ನೂ ಮಾಡಿ ಬರುವದಕ್ಕೆ ೭ ಘಂಟೆಯಾಯಿತು ಇದಲ್ಲದೇ ಶಿವರಾತ್ರಿ ವ್ರತಾಚರಣೆಯು ಇದಲ್ಲದೇ ಗುರುಭಕ್ತಿಯು ಇದಲ್ಲವೇ ಸನ್ಮಾರ್ಗದ ಹೆಗ್ಗುರುತು ಚನ್ನಾಗಿ ಫಲಾಹಾರಾದಿಗಳನ್ನು ತಿಂದು ಉಪವಾಸವೆಂದು ಬಿಂಬಿಸಿ ರಾತ್ರಿಯನ್ನು ನಿದ್ರೆಯಲ್ಲಿ ಕಳೆಯುವ ಮಹನೀಯರೇ ಸದರೀ ಸಿದ್ಧೇಶ್ವರ ವ್ಯಾಸಾದಿಕ ಜನ ಮಂಡಳಿಯವರ ಪಾಠವನ್ನು ಕಲಿಯುವಾ ಬನ್ನಿರಿ

ಓರ್ವ ಪ್ರತ್ಯಕ್ಷದರ್ಶಿ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಜಯಂತಿ ಮಹೋತ್ಸವ

ಮಿರಜನಂಸ್ಥಾನಸ್ಥಿತ ಲಕ್ಷ್ಮೇಶ್ವರದಲ್ಲಿ ಪದ್ಧತಿಯ ಪ್ರಕಾರ ಈ ಬಾವನಾನ ಸಂವತ್ಸರ ಮಾಘ ಬಹುಳ ೧ಳ ಭಾನುವಾರ ಶ್ರೀಗಂಗಲ ಜಗದ್ಗುರು ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತ್ಯುತ್ಸವವು ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ದೀಕ್ಷಾದಿಗಳಿಂದ ಪವಿತ್ರಗೊಳಿಸಿ ಲಿಂಗಧಾರಣೆ ಮಂತ್ರೋಪದೇಶಗಳನ್ನು ಮಾಡಿ ಮುಕ್ತಿ ಮಾರ್ಗವನ್ನು ಪದೇಶಿಸಿದ ಗುರುಗಳಿಗೆ ಕೃತಜ್ಞತೆಯನ್ನು ತೋರಿಸುವದು ಪ್ರತಿಯೊಬ್ಬನ ಕರ್ತವ್ಯವು ಈ ಊರಲ್ಲಿ ೨೩ ಸಾವಿರ ಲಿಂಗಾಂಗಿಗಳು ಇದ್ದು ಕೆಲವು ಅಭಿಮಾನಿಗಳು ಗುರುಜಯಂತಿಯನ್ನು ಮಾಡಬೇಕೆಂದು ಭಗೀರಥ ಪ್ರಯತ್ನ ಮಾಡಿದರೂ ಆಗಲಿಲ್ಲ ವೆ|| ಪಕ್ಕೀರಯ್ಯನವರು ಮಾಲಿಂಗಯ್ಯನವರು ಪುರಾಣಿಕಮಠ ಇವರಿಗೆ ಗುರುಪ್ರೇರಣೆಯಾಗಿ ಈ ಊರೊಳಗಿನ ಪ್ರತಿಯೊಂದು ಓಣಿಯಲ್ಲಿ ದ್ರವ್ಯವ್ಯಯ ಶರೀರ ಶ್ರಮಗಳನ್ನು ಲಕ್ಷಿಸದೆ ಅಂತ್ಯಜ ಹಸರುಗಳಿಂದ ಜನಸಂಘಗಳನ್ನು ಸ್ಥಾಪಿಸಿ ಅವರಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿ ಕೊಟ್ಟು ಈ ಉತ್ಸವಕ್ಕೆ ೭ ಜನರ ಮೇಳಗಳನ್ನು ತಯಾರು ಮಾಡಿದರು ಈ ದಿವಸ ಸ್ವಾಟಿ ಮಸ್ಸಿಸ್ಥರೇ ಊರಪ್ರಮುಖರೂ ಬಜಾರವನ್ನೆಲ್ಲಾ ಕದಳಿಸ್ತಂಬದಿಂದಲೂ ಆಮ್ರಪಲ್ಲವಗಳಿಂದಲೂ ವಿಜಯಪತಾಕೆಗಳಿಂದಲೂ, ಅಲಂಕರಿಸಿದ್ದರು ಶಿವಯೋಗಯ್ಯನವರು ಮುರಿಗೆಯ್ಯನವರು ಹಿರೇಮಠ, ಮಠದಲ್ಲಿ ಸೂರ್ಯೋದಯದೊಳಗಾಗಿ ಲಿಂಗೋದ್ಭವ ಆಚಾರ್ಯರ ರಜತ ವಿಗ್ರಹಗಳಿಗೆ ರುದ್ರಾಭಿಷೇಕದಿಂದ ಪೂಜಿಸಿ ಅಂದೋಳಿಕೆಯಲ್ಲಿ ಪ್ರತಿಷ್ಠಿಸಿ ಊರಲೆಲ್ಲ ದೇಶಿ ವಿದೇಶಿ, ವಾದ್ಯ ವೈಭವದೊಡನೆ ಮೆರವಣಿಗೆಯನ್ನು ಮಾಡಿದರು ಭಜನಾಸಂಘದವರು ಪ್ರೇಕ್ಷಕರಿಗೆ ಗುರುಭಕ್ತಿಯು ಅಂಕುರಿಸುವಂತೆ ಆಚಾರ್ಯರ ಗುಣಗಾನವನ್ನು ಮಾಡುತ್ತಿದ್ದರು ಮಧ್ಯಾಹ್ನ ೧೨ ಗಂಟೆಗೆ ಉತ್ಸವವು ಸದರಿ ಮಠಕ್ಕೆ ಬಂದ ಕೂಡಲೇ ಮ|| ರಾ|| ಚನ್ನಪ್ಪನವರು ಗಾಂಜಿ ಇವರ ಅಧ್ಯಕ್ಷತೆಯ ಕೆಳಗೆ ಸಭಾ ಕಾರ್ಯ ಪ್ರಾರಂಭವಾಯಿತು ವೇ|| ವೀರಸೋಮಯ್ಯನವರು ಹಿರೇಮಠ ಇವರು ಆಚಾರ್ಯರ ಜಯಂತಿಗಳ ಆವಶ್ಯಕತೆಯ ವಿಷಯವಾಗಿ ಎಲ್ಲರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಭಾಷಣಮಾಡಿದರು. ರಾ|| ಶಿವಯೋಗಪ್ಪ ಮಾಯಜನಶೆಟ್ರ ಇವರು ಅತ್ಯವಿಶ್ವಾಸಬಲದಿಂದ ಬೇಕಾದ ಕಾರ್ಯಗಳು ಆಗುತ್ತವೆ ಆದ್ದರಿಂದ ಮುಕ್ತಿದಾತೃಗಳಾದ ನಮ್ಮ ಆಚಾರ್ಯ ಜಗದ್ಗುರುಜಯಂತ್ಯುತ್ಸವಗಳನ್ನು ಆಚರಿಸುವದು ಲಿಂಗಾಂಗಿಗಳ ಮುಖ್ಯಧರ್ಮವಾಗಿದೆ ಎಂಬ ವಿಷಯವಾಗಿ ಗಂಭೀರವಾದ ಭಾಷಣಮಾಡಿದರು ಸಭೆಯಲ್ಲಿ ಕೂಡಿದ್ದ ಮಹಾಜನಗಳೆಲ್ಲರೂ ಆನಂದಭರಿತರಾಗಿ ಮುಂದಿನ ರೇಣುಕರ ಜಯಂತಿಯನ್ನು ನಾವೆಲ್ಲರೂ ವೈಭವದಿಂದ ನೆರವೇರಿಸುತ್ತೇವೆಂದು ಕೂಡಿದ ಜನರಲ್ಲಿ ಅಂದುಕೊಳ್ಳುತ್ತಿದ್ದರು ಕಡೆಗೆ ಶಿ|| ಕಾಶಪ್ಪಯ್ಯನವರು ಹಿರೇಮಠ ಇವರು ಈ ಮಠಕ್ಕೆ ಪಂಚಾಚಾರ್ಯರೇ ಜಗದ್ಗುರುಗಳೆಂಬ ವಿಷಯದಲ್ಲಿ ಯುಕ್ತಿಯುಕ್ತವಾಗಿ ದೀರ್ಘವಾದ ಭಾಷಣಮಾಡಿದರು. ಅನಂತರ ಮಂಗಳಾರತಿಯಾಗಿ ಪ್ರಸಾದವಿನಿಯೋಗವಾಯಿತು.

ಪ್ರತ್ಯಕ್ಷದರ್ಶಿ

ಎಂ ಸಿ ಗಾಂಜಿವೈದ್ಯ, ಲಕ್ಷ್ಮೇಶ್ವರ

ಅಖಿಲಕರ್ಣಾಟಕ ದ್ವಿತೀಯ
ಜ್ಯೋತಿಷಿಕ ಸಮ್ಮೇಳನ.
ಮೈಸೂರು.

ಅಸ್ಟ್ರಾಲಾಜಿಕಲ್ ಮ್ಯಾಗಜಿನ್ ಪತ್ರಿಕೆಯ 1934 ನೆಯ ಇಸವಿ ಅಕ್ಟೋಬರ್ ನವಂಬರ್ ಸಂಚಿಕೆಯಲ್ಲಿ ಮ|| ರಾ|| ಶ್ರೀ|| ವಿ ಸೂರ್ಯನಾರಾಯಣರಾವ್ ಎಂಬವರು ತಾ|| 13-10-34 ರಿಂದ, 16-10-34 ರ ವರೆಗೆ ಮೈಸೂರು ರಾಜಧಾನಿಯಲ್ಲಿ ನಡೆದ ಅಖಿಲ ಕರ್ಣಾಟಕ ದ್ವಿತೀಯ ಜ್ಯೋತಿಷಿಕ ಸಮ್ಮೇಳನದ ವಿವರದಲ್ಲಿ ಆದಿಕೃತರಾದ ದೊಡ್ಡ ಮನುಷ್ಯರನ್ನು ಉದ್ದೇಶಿಸಿ, ತಮ್ಮ ಎಲ್ಲೆಯನ್ನು ಮೀರಿ ಕೆಲವು ಅಡ್ಡ ಮಾತುಗಳನ್ನು ಆಡಿರುವರು ಈ ಮಹಾಶಯರು ಪ್ರತಿಯೊಬ್ಬರಿಗೂ ಇಂತಹ ವಿಷಯಗಳಲ್ಲಿ ಇಷ್ಟಿಷ್ಟೇ ಯೋಗ್ಯತೆಗಳು ಇರುತ್ತವೆಂದು ನಿರ್ಣಯಿಸಬೇಕಾದರೆ ಇವರಲ್ಲಿ ಸರ್ವಾತಿಶಯವಾದ ಶಕ್ತಿವಿಶೇಷವು ಇರಬೇಕಾಗುತ್ತದೆ. ಇವರಿಗೆ ಈ ಸಭಾಮೂಲಕವಾಗಿ ಆಹ್ವಾನಪತ್ರಿಕೆಯನ್ನು ಕಳುಹಿಸಿದ್ದಾಗ್ಯೂ ಸಭೆಗೆ ದಯಮಾಡದೆಯೂ ಮೇಲ್ಕಂಡ ಪತ್ರಿಕೆಯಲ್ಲಿ ನಮೂದಿಸಿರುವ ಪ್ರಶ್ನೆಗಳಿಗೆ ಯಾವ ಉತ್ತರವನ್ನೂ ಬರೆದು ಕಳುಹಿಸದೇ ಇರುವದೂ ಸಹಾ ನಮ್ಮ ದೌರ್ಭಾಗ್ಯವೇ ಸರಿ ಆದರೆ ಇಂಥಾ ಅದ್ವಿತೀಯ ಪಂಡಿತರು ಸಮಾವದಲ್ಲಿದ್ದಾಗ್ಯೂ ಇಷ್ಟು ಔದಾಸೀನ್ಯವನ್ನು ವಹಿಸಿರುವ ವಿಷಯಕ್ಕಾಗಿ ಸರ್ವರೂ ಆಶ್ಚರ್ಯಪಡುತ್ತಿದ್ದಾರೆ ಮತ್ತು ಶಿವಮೊಗ್ಗ ಕಾಲೇಜ ಈ ಸ್ಥಳಗಳಲ್ಲಿ ತಾವು ಅಧ್ಯಕ್ಷರಾಗಿಯೂ ಸೆಕ್ರೆಟರಿಯಾಗಿಯೂ ಇದ್ದ ವಿಷಯವು ಇವರ ಲೇಖನದಿಂದ ವ್ಯಕ್ತಪಡುತ್ತದೆ ಮುದ್ರಿತವಾಗಿರುವ ಇವರ ಭಾಷಣ ಮತ್ತು ಕೆಲವು ಪುಸ್ತಕಗಳನ್ನು ನೋಡಿದ್ದರಲ್ಲಿ ಅವುಗಳಲ್ಲಿ ತನ್ನ ಶಾಸ್ತ್ರಪಾಂಡಿತ್ಯವನ್ನು ತೋರ್ಪಡಿಸುವ ಅಪೂರ್ವವಿಷಯವು ಯಾವದೊಂದೂ ಕಂಡುಬರದೇ ಇದ್ದಾಗ್ಯೂ ಬರೀ ಆತ್ಮಶ್ಲಾಘನೇ ಮಾತ್ರ ತುಂಬಿಕೊಳ್ಳುತ್ತಿರುತ್ತದೆ

ತೂರ್ಪು ಗೋದಾವರೀ ಜಿಲ್ಲೆಯಿಂದ ಅನೇಕ ದೊಡ್ಡ ಜ್ಯೋತಿಶ್ಶಾಸ್ತ್ರಜ್ಞರು ತಮಗೆ ಆಹ್ವಾನವಿಲ್ಲದೇನೇ ಸಭೆಗೆ ದಯಮಾಡಿಸಿ, ತಮ್ಮ ಅಪಾರವಾದ ಶಾಸ್ತ್ರಪಾಂಡಿತ್ಯವನ್ನು ತೋರ್ಪಡಿಸಿರುವದನ್ನು ನೋಡಿದರೆ ಅವರಿಗೆ ಈ ಶಾಸ್ತ್ರದಲ್ಲಿರುವ, ಅಭಿಮಾನವನ್ನು ಎಷ್ಟು ವರ್ಣಿಸಿದಾಗ್ಯೂ ಸಾಲದಾಗಿರುತ್ತೆ ಹೀಗಿರುವಲ್ಲಿ ಇವರು ಆಹೂತರಾಗಿದ್ದಾಗ್ಯೂ ತನ್ನ ನಿಜವಾದ ಪಾಂಡಿತ್ಯವನ್ನು ಸಭೆಯಲ್ಲಿ ತೋರ್ಪಡಿಸದೆ ಇರುವದನ್ನು ನೋಡಿದರೆ ಈ ಶಾಸ್ತ್ರದಲ್ಲಿ ಇವರಿಗೆ ಇರತಕ್ಕ ಅಭಿಮಾನವು ಎಷ್ಟರಮಟ್ಟಿಗೆ ಇರುತ್ತೆಂಬ ವಿಷಯವನ್ನು ಬುದ್ಧಿವಂತರೇ ಯೋಚಿಸತಕ್ಕದ್ದು ಮತ್ತು ಇವರಿಗೆ ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಪರಿಚಯ ಇರಬಹುದೆಂದು ಕೇಳಿದ್ದೇನೆ.

ಈ ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರೂ ಮಠಾಧಿಪತಿಗಳೂ ಮತ್ತು ಪುರಪ್ರಮುಖರೂ ಶಾಸ್ತ್ರಾಭಿಮಾನಿಗಳೂ ಅವರುಗಳ ಉದಾರ ಧನಸಹಾಯದಿಂದ ಬಹಳ ವಿಜೃಂಭಣೆಯಿಂದ ನಡೆದ ಸಮ್ಮೇಳನವನ್ನು ಇವರು ನೋಡಿ ಅಥವಾ ಕೇಳಿ ಸಂತೋಷಿಸದೆ ನಮ್ಮಗಳಿಗೆ ಸಹಾನುಭೂತಿಯನ್ನು ಸಹಾ ತೋರದೆ ಬರೀ ಅಸಹನೆಯಿಂದ ಬರೆದಿರುವ ಆತ್ಮಶ್ಲಾಘನೆ. ಪರನಿಂದೆ, ಇವುಗಳಿಂದ ತುಂಬಿರುವ ಪೊಳ್ಳು ಟೊಳ್ಳು ಹರಟೆಯ ಬರವಣಿಗೆಗೆ ಮೇಧಾವಿಗಳು ಗಮನಕೊಡದೆ ಕೂಡದೆಂಬುದಾಗಿ ನನ್ನ ಕೋರಿಕೆ.

ಸೈವಾದಿ.

ಪಂಚಾಚಾರ್ಯ ಪ್ರಭಾ.

೧೯೩೧ನೇ ಮಾರ್ಚಿ ತಾ|| ೧೬ನೇ ಸೋಮವಾರ.

ರ್ನಾಟಕ ರಾಜಧಾನಿಯಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ರಜತಾಂದೋಲಿಕೋತ್ಸವ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಕಳೆದ ೧೬ನೆಯ ತಾರೀಖು ಶುಕ್ರವಾರ ಮಧ್ಯಾಹ್ನ ೪ ಘಂಟೆಗೆ ರಾಜಧಾನಿಯಿಂದ ಪ್ರಯಾಣ ಬೆಳೆಸಿದರು. ಆ ದಿವಸ ಪ್ರಾತಃಕಾಲ ರಾಜಬಂಧುಗಳೂ ಸರಕಾರಿ ಅಧಿಕಾರಿಗಳೂ ಅರಮನೆಯ ಅಧಿಕಾರಿಗಳೂ ಸ್ಥಳಪರಸ್ಥಳಗಳಿಂದ ಬಂದ ಮಹಾಜನಗಳೂ ದರ್ಶನಾಶೀರ್ವಾದಗಳನ್ನು ಪಡೆದ ಬಳಿಕ ಪಾರಮಾರ್ಥಿಕ ನಿತ್ಯಕರ್ಮಗಳನ್ನು ತೀರಿಸುವುದರೊಳಗಾಗಿ ಪ್ರಯಾಣದ ನಿಯಮಿತಕಾಲವು ಸಮೀಪಿಸಿತು. ಅಷ್ಟರೊಳಗಾಗಿ ಸಾಕ್ಷಾದ್ಧರ್ಮಾವತಾರಿಗಳಾದ ನಮ್ಮ ಮಹಾಪ್ರಭುಗಳವರಿಂದ ದಯಪಾಲಿಸಲ್ಪಟ್ಟ ಸಮಸ್ತ ರಾಜಮರ್ಯಾದೆಗಳು ಸಿದ್ಧವಾಗಿದ್ದವು. ರಾಜಧಾನಿಯ ಪ್ರಮುಖ ಗುರುಭಕ್ತರೂ, ಕಮಿಟಿಯವರೂ ಮತ್ತು ಮಾಂಬಳ್ಳಿ, ಕಡೇರು, ನಂಜನಗೂಡು, ಹಲ್ಲಿಹಳ್ಳ, ಚಾಮರಾಜನಗರ, ಎಳಂದೂರು, ಮುಡಿಗುಂಡ, ಬಿಸದಿ, ಬೆಂಗಳೂರು ಯಡತೊರೆ ಮುಂತಾದ ಸ್ಥಳಗಳಿಂದ ಅನೇಕ ಗುರುಭಕ್ತರು ಉತ್ಸವದಲ್ಲಿ ಭಾಗಿಗಳಾಗಿದ್ದರು.

ಮಹಾಪ್ರಭುಗಳು ಒಂದು ಬೆಳ್ಳಿ ಸವಾರಿ ಆನೆಯು ಒಂದು ನಿಶಾನಿ ಆನೆಯು ನಲ್ಕು ಅಲಂಕಾರದ ಕುದುರೆಗಳೂ ಆ ಆರೋಹಕರೂ ಇಬ್ಬರು ಬೆಳ್ಳಿ ಸೋಟಾದವರೂ ಒಬ್ಬ ಚೋಪದಾರರು ಎರಡು ಛತ್ರಿಗಳು ಎರಡು ಬೆಳ್ಳಿಯ ಕಂಬಗಳು ಎರಡು ಚೌರಿಗಳು ಎರಡು ಚಾಮರಗಳು ೧೨ ಜನ ಬಾರ್‌ಗೀರ್ ... ಗಳು ಆವರ ಮೇಲ್ಪಟ್ಟ ಹುದ್ದೇದಾರರು ೧೨ ಜನ ಬ್ಯಾಂಡಿನವರು ಒಂದು ಪಾಲಿಗದ ಸೆಟ್ಟು ೧೨ ಜನ ಹಸರು ಬಲ್ಲೆಯವರು ೧೬ ಜನ ಬೆಳ್ಳಿ ಕಟ್ಟಿಗೆಯವರು ೧೬ ಜನ ಗಗ್ರಿಬಲ್ಲೆಯವರು ಇಂಗು ತಾಸಾ ಮಾರ್ಫಾ ವಾದ್ಯಗಳೂ ಹಗಲು ದೀವಿಟಿಗೆಗಳು ಮೊದಲಾದ ಮುಂತಾದ ರಾಜಮರ್ಯಾದೆಗಳನ್ನು ದಯಪಾಲಿಸಿದ್ದರು. ಮತ್ತು ಇವುಗಳ ಮೇಲ್ಪಟ್ಟ ಆಫೀಸರುಗಳು ಹುದ್ದೇದಾರರೂ ದಫೇದಾರರು ಹರಿಕಾರರು ಉತ್ಸವವು ಮುಗಿಯುವವರಿವಿಗೂ ತಮ್ಮ ತಮ್ಮ ಕರ್ತವ್ಯಗಳಲ್ಲಿ ನಿರತರಾಗಿದ್ದರು. ಜಗದ್ಗುರುಗಳ ಬಿಡಾರದಿಂದ ಉಕ್ಕಡದವರಿವಿಗೂ ಗವರ್ನಮೆಂಟಿನವರು ಪೋಲೀಸ್ ಬಂದೋಬಸ್ತನ್ನು ಬಹಳ ಸಮರ್ಪಕವಾಗಿಟ್ಟಿದ್ದರು. ಮುನಿಸಿಪಾಲಿಟಿಯವರು ನೀರಿನ ಬಸ್ಸುಗಳನ್ನು ತಿರುಗಾಡಿಸುತ್ತಾ ಉತ್ಸವಬೀದಿಗಳನ್ನೆಲ್ಲಾ ಜಲಮಯಗಳನ್ನಾಗಿ ಮಾಡಿದ್ದರಿಂದ ಪ್ರೇಕ್ಷಕರಿಗೆ ಬಿಸಿಲಿನ ತಾಪವು ಎಷ್ಟು ಮಾತ್ರವೂ ತೋರಲಿಲ್ಲ. ಪ್ರತಿಯೊಬ್ಬ ಗುರುಭಕ್ತರೂ ತಮ್ಮ ತಮ್ಮ ಮನೆಗಳ ಮುಂಭಾಗಗಳನ್ನು ರಂಭಾಸ್ತಂಭಪಲ್ಲವಾದಿಗಳಿಂದಲಂಕರಿಸಿ ಉತ್ಸವದ ಆಗಮನವನ್ನೇ ನಿರೀಕ್ಷಿಸುತ್ತಿದ್ದರು. ಉಭಯಪಾರ್ಶ್ವಗಳ ಮಹಡಿಯ ಮೇಲೂ ಫುಟ್‌ರೋಡುಗಳಲ್ಲೂ ಜನಗಳ ಸಂದಣಿಯು ವಿಶೇಷವಾಗಿ ಕೂಡಿದ್ದಿತು. ಜಗದ್ಗುರುಗಳು ರಜತಾಂದೋಲಿಕೆಯಲ್ಲಿ ಕಿರೀಟಧಾರಿಗಳಾಗಿ ಮೂರ್ತಮಾಡಿದರು. ಶ್ರೀಮಾನ್ ಸರ್ದಾರ್ ಲಕ್ಷ್ಮೀಕಾಂತರಾಜ ಅರಸರವರು ಮುಂತಾದ ರಾಜಬಂಧುಗಳಿಗೆಲ್ಲಾ "ಪುಷ್ಪಹಾರವಿನಿಯೋಗವು ನಡೆಯಿತು" ಶ್ರೀ ಜಗದ್ಗುರು ಪಂಚಾಚಾರ್ಯಮಹಾರಾಜಕೀ ಜೈ" ಎಂಬ ಜಯಜಯಕಾರಗಳು ನಭೋಮಂಡಲವನ್ನು ವ್ಯಾಪಿಸಿದವು. ೩ 30 ಘಂಟೆಗೆ ಸರಿಯಾಗಿ ಎಂ ವಿ ಸಂಜೀವರಾಜ ಅರಸರವರ ರಾಜಭವನದಿಂದ ಉತ್ಸವವು ಹೊರಟಿತು. ವಾಣೀವಿಲಾಸರೋಡು, ಹಳೆ ಅಗ್ರಹಾರ ಅಂಗಡಿಬೀದಿ, ಸಂತೇಪೇಟೆ, ದೇವರಾಜಮಾರ್ಕೆಟ್ ಗಾಂಧಿಚೌಕಮಾರ್ಗವಾಗಿ ಪ್ರವೇಶಿಸಿ ಉತ್ಸವವು ೬ ಘಂಟೆಗೆ ಸರಿಯಾಗಿ ದೊಡ್ಡಗಡಿಯಾರದ ಬಳಿಗೆ ಬಂದಿತು. ಅಷ್ಟರಲ್ಲಿ 11 ತೋಪುಗಳು ಹಾರಿಸಲ್ಪಟ್ಟವು. ನಭೋಮಂಡಲವನ್ನು ವ್ಯಾಪಿಸಿದ ತೋಪಿನ ಶಬ್ದವನ್ನು ಕೇಳಿದೊಡನೆ ಅಖಿಲಗುರುಭಕ್ತರು ಆನಂದಸಾಗರದಲ್ಲಿ ಲೋಲಾಡುತ್ತ "ಗುರುಮಹಾರಾಜಕೀ ಜೈ" ಎಂಬ ಶಬ್ದೋದ್ಗಾರವನ್ನು ಮಾಡಿದರು. ಅಲ್ಲಿಂದ ಉತ್ಸವವು ದೊಡ್ಡಪೇಟೆ ಮಾರ್ಗದಿಂದ 6 30 ಕ್ಕೆ ನಗರದ ಎಲ್ಲೆಯನ್ನು ತಲ್ಪಿತು. ಅಲ್ಲಿ ತಳಿರುತೋರಣಗಳಿಂದಲಂಕರಿಸಿದ್ದ ಮಂಟಪದಲ್ಲಿ ಆಂದೋಲಿಕೆಯು ಇಳಿಸಲ್ಪಟ್ಟಿತು. ರಾಜಬಂಧುಗಳಿಗೂ, ಸರ್ಕಾರಿ ಉದ್ಯೋಗಿಗಳಿಗೂ, ಸ್ಥಲಪರಸ್ಥಳದವರಿಗೂ, ಕಮಿಟಿಯವರಿಗೂ ಶ್ರೀಗಳವರು ಫಲಮಂತ್ರಾಕ್ಷತೆಗಳನ್ನಾಶೀರ್ವದಿಸಿ ವ್ಯಾನಾದಲ್ಲಿ ಮೂರ್ತಮಾಡಿ ಮುಂದಕ್ಕೆ ಪ್ರಯಾಣಬೆಳೆಯಿಸಿದರು. ಅಖಿಲ ಗುರುಭಕ್ತರು ಈಗ ಆರು ತಿಂಗಳಿಂದ ಗುರುಸೇವೆಯಲ್ಲಿ ನಿರತರಾಗಿದ್ದು ಈ ದಿವಸ ಗುರುಗಳ ವಿಯೋಗವನ್ನು ಸಹಿಸದವರಾಗಿ ಬಹು ಯೋಚನಾಪರರಾಗಿ ಹಿಂದಿರುಗಿದರು.

ಹೀಗೆ ನೂರಾರು ವರ್ಷಗಳಿಂದಲೂ ವೀರಶೈವಮತದ ಪೀಠಾಚಾರ್ಯರಾರೂ ರಾಜಧಾನಿಗೆ ದಯಮಾಡಿಸಿ ಮಹಾಪ್ರಭುಗಳಿಂದ ವಿಶೇಷವಾದ ರಾಜಮರ್ಯಾದೆಯನ್ನು ಪಡೆಯುವ ಸನ್ನಿವೇಶವು ದೊರೆಯದೆ ಈಗ ರಾಜಧಾನಿಯ ಗುರುಭಕ್ತರ ಭಾಗ್ಯೋದಯದಿಂದ ಅಸಾಧಾರಣಪಂಡಿತರೂ, ತೇಜಸ್ವಿಗಳೂ, ಪ್ರಜಾಲೋಲರೂ ಆಗಿರುವ ವೀರಸಿಂಹಾಸನಾಧಿಪತಿಗಳು ರಾಜಧಾನಿಗೆ ದಯಮಾಡಿ ಮಹಾಪ್ರಭುಗಳ ಸಂಪೂರ್ಣ ಕಟಾಕ್ಷವನ್ನಾರ್ಜಿಸಿ ವೀರಸಿಂಹಾಸನಪೀಠಕ್ಕೆ ಅಪಾರವಾದ ... ವನ್ನುಂಟುಮಾಡಿದರು. ಮತ್ತು ಸ್ವಮತ ಪರಮತದವರಿಗೆ ವೀರಶೈವ ಸಿದ್ಧಾಂತಸ್ವರೂಪವನ್ನು ... ಹಿಂದಿನ ಆಚಾರ್ಯರು ಆಗಾಗ್ಯೆ ದಿಗ್ವಿಜಯ ಮಾಡಿಸುತ್ತ ಅಲ್ಲಲ್ಲಿ ಧರ್ಮ ... ಕ್ರಮೋನ್ನತಿಗೆ ಏರ್ಪಡಿಸಿದಂತೆ ವೀರಶೈವದ ಅಭ್ಯುದಯವನ್ನು ... ದಲ್ಲಿ ... ವ್ಯಂತರವಿಲ್ಲ. ಈ ರೀತಿಯಾಗಿ ವೀರಶೈವ ... ಸಿಂಹಾಸನರಿಗೆ ಅಸಾಧಾರಣವಾದ ಗೌರವವನ್ನಿತ್ತ ... ಧರ್ಮಾವತಾರಿಗಳು ಸನಾತನವೈದಿಕಧರ್ಮ ... ಕದ ... ವರರು ಅದ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳಿಗೆ ... ಆಯುರಾರೋಗ್ಯಭಾಗ್ಯ ... ಪರಂಪರೆಯನ್ನಿತ್ತು ... ಭೂಮಂಡಲವಿದ್ದಷ್ಟು ... ಆಚಂದ್ರಾರ್ಕವಾಗಿ ... ಮಂತೆ ... ಶ್ರೀ ... ಪ್ರಾರ್ಥಿಸುತ್ತೇವೆ.

ಬೆಂಕಿಯ ಅನಾಹುತ.

ಕಳೆದ ಶನಿವಾರ ಸಾಯಂಕಾಲ 5 30 ಘಂಟೆ ಸಮಯದಲ್ಲಿ ಹಳೆಅಗ್ರಹಾರದ ಅಂಗಡಿಬೀದಿ ಸಾಹುಕಾರ ಚೌಕದ ಬಳಿಯಲ್ಲಿರುವ ಮ|| ಕಡಲೆಪುರಿ ನಂಜುಂಡಪ್ಪನವರ ಪಟಾರದಲ್ಲಿ ಮರದ ಡಿಪೋಗಳನ್ನಿಟ್ಟಿದ್ದ ಮ|| ಯಾಕೂಬರಾವುತ ಮತ್ತು ಚಿಕ್ಕರಿ ಅಂಗಡಿ ಕೈ|| ದಾಸಪ್ಪನವರ ಮಕ್ಕಳು ಮ|| ತಮ್ಮಯ್ಯನವರ ಗಳುವಿನ ಅಂಗಡಿಗೆ ಅಕಸ್ಮಾತ್ ಬೆಂಕಿಹತ್ತಿ ಎರಡು ಅಂಗಡಿಗಳಲ್ಲಿಟ್ಟಿದ್ದ ಭಾರಿಭಾರಿ ನಾಟಾ, ದೊಂಬು, ಗಳು, ಮತ್ತು ಕೊಯ್ದ ಮರಮುಟ್ಟುಗಳೆಲ್ಲಾ ನಿಶ್ಶೇಷವಾಗಿ ಭಸ್ಮವಾದವು. ಮೊದಲು ಯಾಕೂಬರಾವುತರ ಅಂಗಡಿಯ ಅಂಗಳದಲ್ಲಿ ಹಾಕಿದ್ದ ಮಟ್ಟಿಗುಡಿಸಲಿಗೆ ಬೆಂಕಿಹತ್ತಿ ಆರಿಸಲು ಅವಕಾಶವಿಲ್ಲದಂತಾಗಿ ಜನಸಂದಣಿಯು ಸೇರಿ ನೀರಿನ ಅನುಕೂಲತೆಯನ್ನು ಮಾಡಿಕೊಳ್ಳುವುದರೊಳಗಾಗಿ ಉರಿಯು ಅದ್ಭುತಾಕಾರವಾಗಿ ವ್ಯಾಪಿಸಿ ಪಕ್ಕದಲ್ಲಿರುವ ತಮ್ಮಯ್ಯನವರ ಅಂಗಡಿಗೂ ಪ್ರವೇಶಿಸಿತು. ಆಕಾಶವನ್ನು ಕವಿದ ಧೂಮಮಿಶ್ರವಾದ ಆ ಮಹಾಜ್ವಾಲೆಯನ್ನು ನೋಡಿ ಅನೇಕ ಕಡೆಗಳಲ್ಲಿರುವ ಹತ್ತಾರುಸಾವಿರ ಜನಗಳು ಭಯಾಕ್ರಾಂತರಾಗಿ ಓಡಿಬಂದರು. ಅಕ್ಕಪಕ್ಕಗಳಲ್ಲಿರುವ ನಲ್ಲಿಗಳನ್ನೆಲ್ಲಾ ಒಡೆದು ನೀರನ್ನು ಹಾಕಿದರೂ ಅಗ್ನಿದೇವನು ಶಾಂತನಾಗಲಿಲ್ಲ. ಅಷ್ಟರಲ್ಲಿ ಸರ್ಕಾರಿ ಬೆಂಕಿ ಆರಿಸುವ ಯಂತ್ರ ಮತ್ತು ಬಸ್ಸುಗಳು ನೀರನ್ನು ಒದಗಿಸಿ ಬಹಳವಾಗಿ ಸಹಾಯಮಾಡಿದ್ದರಿಂದ ಅಕ್ಕಪಕ್ಕಗಳಲ್ಲಿರುವ ಮನೆಗಳಿಗೆ ಬೆಂಕಿಯು ವ್ಯಾಪಿಸಲಿಲ್ಲವು. ಸ್ವಲ್ಪ ಆಲಸ್ಯವಾಗಿದ್ದರೆ ಅಗ್ನಿಪ್ರಳಯವೇ ಆಗುವ ಸಂಭವವಿತ್ತು. ಈಶ್ವರಕೃಪೆಯಿಂದ ಬಂದ ಕಂಟಕವು ಇಷ್ಟಕ್ಕೆ ದೂರವಾಯಿತು. ಇದರಿಂದ ಯಾಕೂಬರಾವುತರಿಗೆ 5-6 ಸಾವಿರ ರೂಪಾಯಿಗಳ ನಷ್ಟವೂ ತಮ್ಮಯ್ಯನವರಿಗೆ ೧೦ ಸಾವಿರ ರೂಪಾಯಿಗಳ ನಷ್ಟವೂ ನಂಜುಂಡಪ್ಪನವರಿಗೆ ಸಾವಿರಾರು ರೂಪಾಯಿಗಳ ನಷ್ಟವೂ ಸಂಭವಿಸಿತೆಂದು ತಿಳಿದುಬರುತ್ತದೆ.

ಒಳದೇಶದ ವೃತ್ತಾಂತಗಳು.

ಚಿಕ್ಕಬಳ್ಳಾಪುರದ ಮುನಸೀಫ್ ಕೋರ್ಟು ಪ್ರೋಸೆಸ್‌ಸರ್ವರ್ ಕೆ ನಾರಣಪ್ಪ ಎಂಬುವರನ್ನು ಫೋರ್ಜರಿ ಆಪಾದನೆಯ ಮೇಲೆ ಕೆಲಸದಿಂದ ವಜಾಮಾಡಿದರೆಂದು ತಿಳಿದುಬಂದಿದೆ.

ನಮ್ಮ ಶ್ರೀಮನ್ಮಹಾರಾಜರು ಈ ತಿಂಗಳು 10ನೇ ತಾರೀಕಿನಲ್ಲಿ ಬೆಂಗಳೂರಿನಿಂದ ಪರಿವಾರ ಸಮೇತ ರಾಜಧಾನಿಗೆ ದಯಮಾಡಿಸಿ ಪುನಃ ಮುಂಬೈ ಕಡೆಗೆ ಪ್ರಯಾಣ ಬೆಳೆಯಿಸಿದರೆಂದು ತಿಳಿದುಬರುತ್ತದೆ.

ಪ್ರೈಮರಿ ಸ್ಕೂಲುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗ ವಸೂಲುಮಾಡುತ್ತಿರುವ 8 ಆಣೆ ಫೀಜಿನ ಬದಲು ೧ ಆಣೆ ಮಾತ್ರ ವಸೂಲುಮಾಡತಕ್ಕದ್ದೆಂದು ಸರ್ಕಾರದವರು ಹುಕುಂಮಾಡಿರುತ್ತಾರೆ.

ಕಳೆದ 11ನೇ ತಾರೀಕು ಕೋಲಾರದ ಗಣಿಯಲ್ಲಿ ಬಂಡೆಯು ಸಿಡಿದು ಕೆಲಸಮಾಡುತ್ತಿದ್ದ ಸಿಂಗಾರಂ ಎಂಬುವನು ಸತ್ತುಹೋದನು. ಮೆಸ್ತ್ರಿ ಮೊಹಿದ್ದೀನ್ ಷರೀಫ್ ಎಂಬುವನಿಗೆ ವಿಶೇಷ ಗಾಯಗಳಾಗಿವೆಯೆಂದು ತಿಳಿದುಬಂದಿದೆ.

ಅನೇಕದಿನಗಳಿಂದಲೂ ತಪ್ಪಿಸಿಕೊಂಡಿದ್ದ ಲಿಂಗಪ್ಪನೆಂಬುವನನ್ನು ಮೈಸೂರು ರೈಲ್ವೆ ಪೋಲೀಸರು ದಸ್ತಗಿರಿ ಮಾಡಿ ನಂಜನಗೂಡು ಪೋಲೀಸರ ವಶಪಡಿಸಿರುತ್ತಾರೆ. ಇವನನ್ನು ದಸ್ತಗಿರಿ ಮಾಡುವಂತೆ ಕೆಲವು ತಿಂಗಳ ಕೆಳಗೆ ವಾರೆಂಟು ಜಾರಿಯಾಗಿತ್ತು.

ಕಳೆದವಾರ ರಾಜಧಾನಿಯ ವೀರನಗೆರೆಯಲ್ಲಿರುವ ರೋಮನ್‌ಚರ್ಚ್ ಕಾಂಪೌಂಡಿನಲ್ಲಿ ಹಾಕಿದ್ದ ಟೆಂಟಿರಿ ಗುಡಿಸಲಿಗೆ ಬೆಂಕಿಬಿದ್ದು ಸುಟ್ಟುಹೋಯಿತು. ಕಾವಲಾಗಿ ಮಲಗುತ್ತಿದ್ದ ಮುದುಕನು ಉರಿಗೆ ಸಿಕ್ಕಿ ಸುಟ್ಟುಹೋದನು. ಗುಡಿಸಲು ಹತ್ತಿಕೊಳ್ಳಲು ಕಾರಣ ಗೊತ್ತಾಗಿರುವುದಿಲ್ಲ.

ಬೆಂಗಳೂರು ಕೋಟೆಯಲ್ಲಿ ಹೊಸದಾಗಿ ಪ್ರಾರಂಭಿಸಿದ ಹೆರಿಗೆ ಆಸ್ಪತ್ರೆಯಲ್ಲಿಯ ಮೊದಲನೇ ಹೆಂಗಸು ಮಗುವಿನ ತಾಯಿಗೆ ಬೆಳ್ಳಿ ಪಾತ್ರೆಯನ್ನು ಬಹುಮಾನವಾಗಿ ಕೊಡುವುದಾಗಿ ನಿಶ್ಚಯಿಸಿದ್ದಂತೆ ಆಸ್ಪತ್ರೆಯು ತೆರೆದ 2 ನೇ ದಿವಸವೇ ಹೆಣ್ಣುಮಗುವಿಗೆ ಜನ್ಮಕೊಟ್ಟ ಶ್ರೀ ಕಮಲ ಎಂಬ ಬ್ರಾಹ್ಮಣ ಹೆಂಗಸಿಗೆ ಬಹುಮಾನವು ಕೊಡಲ್ಪಟ್ಟಿತು.

ಕೃಷ್ಣರಾಜ ಮೊಹಲ್ಲಾ ದೀಪಟಗೆ ಬೀದಿಯಲ್ಲಿರುವ ಸಿದ್ದಪ್ಪ ಎಂಬವನು ಬೆರಳೆ ಕುಕ್ಕ ಪಸಾರುತ್ತಿದ್ದನೆಂಬ ಆಪಾದನೆಯ ಮೇಲೆ ಮುನಿಸಿಪಾಲಿಟಿಯವರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಿದ ಮೊಕದ್ದಮೆಯು ರುಜುವಾತಾಗಿ ಮ್ಯಾಜಿಸ್ಟ್ರೇಟರು 15 ರೂಪಾಯಿಗಳು ಜುಲ್ಮಾನೆ ತಪ್ಪಿದರೆ ಒಂದುವಾರ ಸಾದಾಸಜಾ ವಿಧಿಸಿದರು.

ಕಮಿಟಿಯ ಪ್ರೆಸಿಡೆಂಟರಾದ ಡಾಕ್ಟರ್ ಬಿ ಎಸ್ ಸಿದ್ದಪ್ಪನವರು ಶ್ರೀಮದ್ರಂಭಾಪುರಿ ಮಹಾಸ್ವಾಮಿಗಳವರನ್ನು ಎರಡನೆ ಸಾರಿ ತಾ|| 14-3-35 ಗುರುವಾರದಿವಸ ವಿಹಿತವಾದ ರಾಜಮರ್ಯಾದೆಯೊಡನೆ ತಮ್ಮ ಬಂಗಲೆಗೆ ವಿಜಯಮಾಡಿಸಿಕೊಂಡು ರೇವಣಸಿದ್ಧನ ಅಷ್ಟೋತ್ತರ ಶತನಾಮಗಳನ್ನುಚ್ಚರಿಸುತ್ತ ೧೦೮ ರೂಪಾಯಿಗಳಿಂದ ಪಾದಪೂಜೆಯನ್ನು ಮಾಡಿದರು ಆಹೂತರಾದ ಇಷ್ಟಮಿತ್ರರನ್ನು ಅಲ್ಪಾಹಾರದಿಂದ ಸಂತುಷ್ಟಿಪಡಿಸಿದರು

ಬೆಂಗಳೂರಿನ ಸೌದೆ ವ್ಯಾಪಾರಿ ಮಹಮದ್‌ಗೌಸ್ ಎಂಬವನಲ್ಲಿಗೆ ಒಬ್ಬ ಮುಸಲ್ಮಾನನು ಹೋಗಿ ತಾನು ಮಿಲಿಟರಿ ಸ್ಟೋರು ಗುಮಾಸ್ತನೆಂದೂ 100 ರೂಪಾಯಿ ಡಿಪಾಜಿಟ್ ಕೊಡುವುದಾದರೆ ಸೌದೆ ಕಂಟ್ರಾಕ್ಟ್ ಕೊಡಿಸುವುದಾಗಿಯೂ ಆಶೆತೋರಿಸಿ ರೂಪಾಯಿಗಳನ್ನು ತೆಗೆದುಕೊಂಡು ಅವನನ್ನು ಒಂದು ಆಫೀಸಿಗೆ ಕರೆದುಕೊಂಡುಹೋಗಿ, ಅರ್ಜಿ ಬರೆದುಕೊಂಡು ಬರುತ್ತೇನೆ ನೀನು ರುಜುಮಾಡುವೆಯಂತೆ ಇಲ್ಲಿಯೇ ಕಾದಿರು ಎಂದು ಹೇಳಿ ಒಳಕ್ಕೆ ಹೋದವನು ಎಷ್ಟು ಹೊತ್ತಾದರೂ ಬಾರದ್ದರಿಂದ ಮಹಮದ್ ಗೌಸನು ಪೋಲೀಸಿಗೆ ಪಿರ್ಯಾದು ಮಾಡಿರುತ್ತಾನೆಂದು ಕೇಳುತ್ತೇವೆ.

ಸರ್ಕಾರಿ ನೌಕರರು ಸಾಲಸೋಲಗಳನ್ನು ಮಾಡಿಕೊಂಡು ತೀರಿಸಲಾರದೆ ಕೋರ್ಟು ಕಚೇರಿಗಳ ತೊಡಕಿಗೆ ಸಿಕ್ಕಿ ಡಿಕ್ರಿದಾರರ ಅಮಲ್ ಜಾರಿಗೆ ಒಳಪಡಬೇಕಾಗಿ ಬಂದಾಗ ಅಂಥ ನೌಕರರ ತಲಬು ಮಾಹೆಯಾನ ಇಪ್ಪತ್ತು ರೂಪಾಯಿಗಳಿಗೆ ಕಡಿಮೆಯಾಗಿದ್ದರೆ ಅವರ ಸಂಬಳವು ಡಿಕ್ರಿಗೆ ಅಟ್ಯಾಚ್ ಆಗಕೂಡದೆಂಬ ರೂಲನು ಹಾಲಿ ನಮ್ಮ ದೇಶದಲ್ಲಿ ಜಾರಿಯಲ್ಲಿದೆ ಈಚೆಗೆ ಮದರಾಸ್ ಸರ್ಕಾರದವರು ಅಂಥಾ ನೌಕರರ ತಲಬು ಮಾಹೆಯಾನಾ ನಲವತ್ತು ರೂಪಾಯಿ ಆಗಿರತಕ್ಕದೆಂದು ಗೊತ್ತುಮಾಡಿದಾರೆ ನಮ್ಮ ಸಂಸ್ಥಾನದಲ್ಲೂ ಅದೇ ಕ್ರಮವನ್ನು ಅನುಸರಿಸಿ ಇನ್ನು ಮೇಲೆ ನಲವತ್ತು ರೂಪಾಯಿಗೆ ಕಡಿಮೆ ಸಂಬಳ ಪಡೆಯುವವರು ಡಿಕ್ರಿ ಅಮಲ್ ಜಾರಿಯಿಂದ ತಮ್ಮ ಸಂಬಳವನ್ನು ಕಡಮೆ ಮಾಡಿಕೊಳ್ಳುವ ಭಯವನ್ನು ತಪ್ಪಿಸುವರಾಗಿವಾರೆಂದೂ, ಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಈ ಚರ್ಚೆಗೆ ಬರುವುದೆಂದೂ ಹೇಳಲಾಗಿದೆ

ತಾ|| 14-3-35 ನೆಯ ಗುರುವಾರ ಸಾಯಂಕಾಲ 5 ಘಂಟೆ ಸಮಯದಲ್ಲಿ ಜಗದ್ಗುರುಗಳವರ ಬಿಡಾರದಲ್ಲಿ ಸಭೆಯು ನಡೆಯಿತು ಶ್ರೀಗಳವರು ಪೀಠವನ್ನಲಂಕರಿಸಿದ್ದರು ಅಸ್ಥಾನಸಂಗೀತವಿದ್ವಾನ್ ಮ|| ರಾ|| ದೇವೇಂದ್ರಪ್ಪನವರ ಸಂಗೀತ ಪ್ರವಚನಾನಂತರ ಸಿ ಲಿಂಗಪ್ಪಯ್ಯನವರು ಕಮಿಟಿಯಪರವಾಗಿ ಪಾದುವರೆಗೆ ಗುರುಗಳನ್ನು ದಯಮಾಡಿಸುವವಕ್ಕೆ ಸಹಾಯವನ್ನು ಕೊಟ್ಟ ಮಹಾಜನಗಳಿಗೆಲ್ಲಾ ಕೃತಜ್ಞತೆಯನ್ನು ಅರ್ಪಿಸಿದರು ಪಂಡಿತರಿಗೂ ವೈದಿಕರಿಗೂ ಶ್ರೀಗಳವರು ಶಾಲುಗಳನ್ನು ದಯಪಾಲಿಸಿ ಇದುವರೆಗೂ ಕಮಿಟಿಯವರು ಗುರುಭಕ್ತರು ಅಸಾಧಾರಣವಾದ ಗುರುಸೇವೆಯನ್ನು ಮಾಡಿ ಶ್ರೀರೇವಣಸಿದ್ಧನ ಕೃಪೆಗೆ ಸಂಪೂರ್ಣಭಾಗಿಗಳಾದ್ದರಿಂದ ಇವರಿಗೆ ಆಯುರಾರೋಗ್ಯಸಂಪತ್ಸಮೃದ್ಧಿಯನ್ನು ಅನುಗ್ರಹಿಸಲೆಂದು ಹರಸಿ ತಮ್ಮ ಪ್ರಯಾಣವನ್ನು ಸೂಚಿಸಿ ಎಲ್ಲರಿಗೂ ಫಲಮಂತ್ರಾಕ್ಷತೆಗಳನ್ನು ದಯಪಾಲಿಸಿದರು ಈ ಸಮಯದಲ್ಲಿ ನ್ಯಾಯತೀರ್ಥ ಅಸ್ಥಾನ ವಿದ್ವಾನ್ ಶಾಂತರಾಜ ಶಾಸ್ತ್ರಿಗಳವರು ದೇವರಿಗಿಂತಲೂ ಗುರುವು ಹೇಗೆ ದೊಡ್ಡವರಾದರೆಂಬ ವಿಷಯದ ಮೇಲೆ ಒಂದು ಚಿಕ್ಕ ಭಾಷಣವನ್ನು ಮಾಡಿದರು.

ರಾಜಧಾನಿಯ ದೇವರಾಜ ಮಾರ್ಕೆಟ್ಟಿನ ಎದುರಿಗೆ ಶ್ರೀರಾಮಪೇಟೆಯಲ್ಲಿರುವ ಮ|| ವಿ. ನಾಗಪ್ಪಶೆಟ್ಟರ ಪರ್ಚೇಸಾರಿ ಅಂಗಡಿಗೆ ಕಳೆದ ಶನಿವಾರ ರಾತ್ರಿ ಕಳ್ಳರು ಕನ್ನ ಕೊರೆದು ನುಗ್ಗಿ ಸುಮಾರು ಮೂವತ್ತು ರೂಪಾಯಿ ಚಿಲ್ಲರೆಯನ್ನೂ, ಸಾಬೂನು, ಸಿಗರೇಟು, ಬೀಡಿ, ಗುಲ್ಕನ್ ಇವೇ ಮುಂತಾದ ಒಟ್ಟು ಸುಮಾರು 200 ರೂಪಾಯಿ ಬೆಲೆಬಾಳುವ ಹಲವು ಸಾಮಾನುಗಳನ್ನೂ ದೋಚಿಕೊಂಡು ಹೋಗಿರುತ್ತಾರೆ ಈ ಕಳ್ಳರು ಅಂಗಡಿಯೊಳಕ್ಕೆ ಪ್ರವೇಶಿಸಿರುವ ರೀತಿಯು ಬಹಳ ವಿಚಿತ್ರವಾಗಿದೆ ಶೆಟ್ಟರ ಅಂಗಡಿಯ ಮುಂದೂ, ಅಕ್ಕಪಕ್ಕಗಳ ಅಂಗಡಿಯ ಮುಂದೂ ದೊಡ್ಡ ಬಚ್ಚಲಿದೆ ಇದರ ಮೇಲೆ ಚಪ್ಪಡಿಗಳನ್ನು ಹಾಕಿ ಮುಚ್ಚಿಬಿಟ್ಟದಾರೆ ಕಳ್ಳರು ಈ ಬಚ್ಚಲ ಒಳಗೇ ನುಗ್ಗಿಕೊಂಡು ಹೋಗಿ ಅಂಗಡಿಯ ಜೋಕಟ್ಟಿನ ಕೆಳಗೆ ಚರಂಡಿಯೊಳಗೇ ಭೂಮಿಯನ್ನು ನೇರವಾಗಿ ಕೊರೆದು ಅನಂತರ ಅಂಗಡಿಯ ನೆಲಕ್ಕೆ ಹಾಕಿರುವ ಕಾಂಕ್ರೀಟ್ ಗಾರೆಯನ್ನೂ ಒಳಗಿನಿಂದ ಮೇಲಕ್ಕೆ ಕೊರೆದುಕೊಂಡು ಬಂದು ಆ ಕನ್ನದಿಂದ ಅಂಗಡಿಯೊಳಕ್ಕೆ ಪ್ರವೇಶಿಸಿರುತ್ತಾರೆ ಪೋಲೀಸಿನವರು ಪತ್ತೆತರಲೂ ನಡೆಸುತ್ತಿರುವರು

ವರ್ತಮಾನಸಂಗ್ರಹ.

ರಂಗೂನ್ ಬ್ರಾಂಚ್ ಛಾಕಸ್ಸಿನ ಪೋಲೀಸು ಇನ್ಸ್‌ಪೆಕ್ಟರು ಮಿ|| ವಿ ಕ್ರಾಲಿವರ್ ಎಂಬುವರು ಇದ್ದಕ್ಕಿದ್ದಂತೆ ಅದೃಶ್ಯರಾಗಿದ್ದಾರೆ ಪೋಲೀಸಿನವರು ಪತ್ತೆತರಲೂ ನಡೆಸುತ್ತಿದ್ದಾರೆ

ಪ್ರಯಾಣಿಕರ ಒಂದು ವಿಮಾನವು ಪೆರುದೇಶವನ್ನು ಬಿಟ್ಟು ಸ್ವಲ್ಪ ಹೊತ್ತಿನಲ್ಲಿ ಪ್ರಯಾಣಿಕರಲ್ಲಿ ಒಬ್ಬನಿಗೆ ಬುದ್ಧಿಭ್ರಮಣೆಯಾಗಿ, ನಡೆಸುತ್ತಿದ್ದವನ ಮೇಲೆ ಬಿದ್ದನು ವಿಮಾನ ನಡೆಸುವವನು ಬಿಡದೇ ಹುಚ್ಚನೊಡನೆ ಹೊಡೆದಾಡಿ ಅವನನ್ನು ಕೆಳಕ್ಕೆ ಉರುಳಿಸಿದನು ಅಷ್ಟರಲ್ಲಿ ಇತರ ಪ್ರಯಾಣಿಕರು ಸಹಾಯಕ್ಕೆ ಬಂದದ್ದರಿಂದ ಅಪಾಯವಿಲ್ಲದೇ ವಿಮಾನವು ಪ್ರಯಾಣದ ಅಂತ್ಯವನ್ನು ಮುಟ್ಟಿತು

ಸರ್ಕಾರಿ ಹಣದ ದುರುಪಯೋಗ

ಕಪೂರದಾಲ ಸಂಸ್ಥಾನದ ಮುಖ್ಯ ಮಂತ್ರಿಗಳ ಗುಮಾಸ್ತನನ್ನು ಸರ್ಕಾರಿ ಹಣವನ್ನು ದುರುಪಯೋಗಪಡಿಸಿದನೆಂಬ ಆಪಾದನೆಯ ಮೇಲೆ ದಸ್ತಗಿರಿ ಮಾಡಲಾಗಿದೆ

ಆತ್ಮಹತ್ಯೆ

ಬೆಜವಾಡದ ಮ್ಯೂನಿಯಂ ರಸ್ತೆಯ ಪಕ್ಕದಲ್ಲಿ ಪ್ರಕಾಶರಾವ್ ಎಂಬ ತರುಣನು ಸತ್ತುಬಿದ್ದಿದ್ದನು ಮರಣಕ್ಕೆ ಆತ್ಮಹತ್ಯೆಯೇ ಕಾರಣವೆಂದು ಊಹಿಸಲಾಗಿದೆ

ಕಡಿಯುವ ಅಭ್ಯಾಸವನ್ನು ಬಿಡಲಾರದವಳು

ಕಳೆದ 33 ವರ್ಷಕಾಲ ಶಿಕ್ಷೆಯನ್ನು ಅನುಭವಿಸಿ ಈಗ ಬಿಡುಗಡೆಯಾಗಿದ್ದ ಮಿಸ್ಸಿಜೋಗಂ ಎಂಬ 100 ವರ್ಷ ವಯಸ್ಸಿನ ಮುದುಕಿಯು ತನ್ನ ಕೆಟ್ಟ ಅಭ್ಯಾಸ ಬಿಡಲಾರದೆ ಪುನಃ ಕಳ್ಳತನ ಮಾಡಿದ್ದರಿಂದ ಲಾಹೋರು ನ್ಯಾಯಾಧೀಶರು ಈಕೆಗೆ 2 ವರ್ಷ ಶಿಕ್ಷೆಯನ್ನು ವಿಧಿಸಿದರು

ಕರಡಿಯ ಹಾವಳಿ

ನಾಗಪುರದಲ್ಲಿ ಒಂದು ಕರಡಿಯು ಊರಿಗೆ ನುಗ್ಗಿ ದಾರಿಯಲ್ಲಿ ಹೋಗುತ್ತಿದ್ದ 5-6 ಮಂದಿಗೆ ಘಾಯಿಮಾಡಿ ಮೋಟರೊಂದನ್ನು ಉರುಳಿಸಿ ಒಬ್ಬ ಡಾಕ್ಟರ ಮನೆಗೆ ನುಗ್ಗಿ ಮುದುಕಳಾದ ಅವರ ತಾಯಿಯನ್ನು ತಳ್ಳಿ ಕೊನೆಗೆ ರಾಜಾ ಲಕ್ಷ್ಮಣರಾವ್ ಭೋಂಸ್ಲೆಯವರ ಅರಮನೆಗೆ ನುಗ್ಗಿ ಕಾವಲುಗಾರರ ಗುಂಡಿನೇಟಿಗೆ ಆಹುತಿಯಾಯಿತೆಂದು ತಿಳಿದುಬಂದಿದೆ

ಆಕಸ್ಮಿಕ ಮರಣ

ಕಲ್ಕತ್ತಾ ವಿಶ್ವವಿದ್ಯಾಲಯದ ಗಣಿತಶಾಸ್ತ್ರಾಧ್ಯಾಪಕರಾದ ಮಿ|| ಗಣೇಶಪ್ರಸಾದರು ಆಗ್ರಾ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಕೌನ್ಸಿಲ್ ಮೀಟಿಂಗಿನಲ್ಲಿ ಸಣ್ಣ ಭಾಷಣವೊಂದನ್ನು ಮಾಡಿ ಹಠಾತ್ತಾಗಿ ಕೆಳಕ್ಕೆ ಬಿದ್ದರು ತತ್‌ಕ್ಷಣವೇ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿದರೂ ಪ್ರಯೋಜನವಾಗದೇ ಮೃತಪಟ್ಟರು. ಮೆದುಳಿನ ರಕ್ತನಾಳ ಒಡೆದದ್ದರಿಂದ ಮರಣ ಉಂಟಾಯಿತೆಂದು ಹೇಳುತ್ತಾರೆ

ಹೊಸಮಾದರಿ ವೃತ್ತಪತ್ರಿಕೆ

ಏಶ್ಯದ ರಷ್ಯದಲ್ಲಿ ಹೊಸಮಾದರಿಯ ವೃತ್ತಪತ್ರಿಕಾ ಪ್ರಕಟನ ಪದ್ಧತಿಯನ್ನು ಪ್ರಯತ್ನಿಸಿ ನೋಡುತ್ತಿದ್ದಾರೆ ಅಂದರೆ ಕೈಯಲ್ಲಿ ಬರೆದ ಒಂದು ಪ್ರತಿಯನ್ನು ಕೆಲವು ಖಾಲಿ ಪುಟಗಳ ಸಮೇತ ಒಂದು ಸ್ಥಳಕ್ಕೆ ಕಳಿಸುವುದು ಅಲ್ಲಿಯವರೆಲ್ಲಾ ಅದನ್ನು ಓದಿದ ನಂತರ ತಮಗೆ ತಿಳಿದ ಸಮಾಚಾರಗಳನ್ನೂ ಖಾಲಿ ಪುಟದಲ್ಲಿ ಒಂದು ಕಡೆ ಬರೆದು ಮುಂದಿನೂರಿಗೆ ಕಳುಹಿಸುವುದು. ಆ ಊರಿನವರೂ ಇದೇ ರೀತಿ ಮಾಡುವುದಂತೆ! ಇದು ಹ್ಯಾಗೆ ನಡೆಯುತ್ತದೆಯೋ ನೋಡಬೇಕು

ಅದೃಷ್ಟ

ಲಂಡನ್ನಿನ ಪ್ರಿಮಿಯರ್ ಒಡಾಡರವರು ಪಾರ್ಲಿಮೆಂಟ್ ಫಲಹಾರಮಂದಿರದಲ್ಲಿ ತಿಂಡಿ ತಿನ್ನುತ್ತಿರುವಾಗ ಕಲ್ಲಿನಂಥ ಪದಾರ್ಥವು ಆಹಾರದೊಡನಿದ್ದುದನ್ನು ಕಂಡು ಅಜಾಗರೂಕತೆಯ ವಿಷಯವನ್ನು ಅಧಿಕಾರಿಗಳಿಗೆ ತಿಳಿಸಬೇಕೆಂದು ಯೋಚಿಸುವಷ್ಟರಲ್ಲಿ ಅದು ಒಂದು ಬಹಳ ಅಂದವಾದ ಮುತ್ತೆಂದು ತಿಳಿದದ್ದರಿಂದ ಸುಮ್ಮನಾದರು ಈಗ ಅವರ ನೆಕ್‌ಟೈಯಲ್ಲಿ ದಿವ್ಯವಾದ ಒಂದು ಮುತ್ತಿನ ಸೂಜಿಯು ಪ್ರಕಾಶಿಸುತ್ತಿದೆ.

ಸಣ್ಣ ಕೊಳವು ಮೂರು ಮಂದಿಯನ್ನು ನುಂಗಿತು!

ಅಜ್ಮೀರಕ್ಕೆ ಸೇರಿದ ಅರ್ಜುನಪುರವೆಂಬಲ್ಲಿ ಒಂದು ಸಣ್ಣ ಕೊಳದ ಸುತ್ತಲಿನ 20 ಗಜದಷ್ಟು ಭೂಮಿಯು ಅಕಸ್ಮಾತ್ ಕುಸಿದು, ಸ್ನಾನ ಮಾಡುತ್ತಿದ್ದವನು ಒಬ್ಬನು, ಪಕ್ಕದ ತೋಟದಲ್ಲಿ ಗಿಡಗಳಿಗೆ ನೀರು ಹಾಕುತ್ತಿದ್ದವನೊಬ್ಬನು ಮತ್ತು ಪಕ್ಕದ ಗಿಡದ ಕೊಂಬೆಗೆ ಕಟ್ಟಿದ್ದ ತೊಟ್ಟಿಲಲ್ಲಿ ನಿದ್ರಿಸುತ್ತಿದ್ದ ಮಗು ಈ ಮೂವರೂ ಗಿಡ ಸಹಿತ ನೀರಿನ ಪಾಲಾದರು ಈ ವಿಚಿತ್ರ ದೃಶ್ಯವನ್ನು ನೋಡುವುದಕ್ಕೆ ಅನೇಕರು ಹೋಗುತ್ತಿದ್ದಾರೆ

ಪ್ರಪಂಚದಲ್ಲೆಲ್ಲಾ ಅತಿ ತೂಕವಾದ ಮಗು.

ಲೋಸ್ಯಾಂಪ್ ಎಂಬಲ್ಲಿಯ ಮಿಸೆಸ್ ಬವರ್ಸ್ ಎಂಬುವಳ ಲೆಸ್ಲಿ ಎಂಬ 3 ವರ್ಷ 9 ತಿಂಗಳು ವಯಸ್ಸಿನ ಗಂಡುಮಗುವು 105 ಪೌಂಡು ತೂಕವಿದೆ ಇದರ ಎತ್ತರ 3 ಅಡಿಗೆ ಸ್ವಲ್ಪ ಹೆಚ್ಚು ಮೊಳೆಗಳ ಜೀವನಿಗೆ ಇತರ ಮಕ್ಕಳಂತೆಯೇ ಇದೆ ಇದು ಹುಟ್ಟಿದಾಗ 7 ಪೌಂಡು ಮಾತ್ರವಿದ್ದು 6 ತಿಂಗಳಲ್ಲಿ 30 ಪೌಂಡು ಹೆಚ್ಚಿತು 2 ವರ್ಷಗಳಲ್ಲಿ 76 ಪೌಂಡು ತೂಗಲಾಯಿತು. ಡಾಕ್ಟರುಗಳೆಲ್ಲಾ ಈ ರೀತಿ ತೂಕ ಹೆಚ್ಚಾಗಲು ಕಾರಣ ಗೊತ್ತಾಗದೇ ಆಶ್ಚರ್ಯಪಡುತ್ತಿದ್ದಾರೆ

ಚೀನದ ಪರಿಸ್ಥಿತಿ

ಚೀನ ಜಪಾನುಗಳು ಒಂದಾಗಬಹುದೆಂಬ ಭೀತಿಯು ಪಾಶ್ಚಿಮಾತ್ಯರಿಗೆ ಬಹಳವಾಗಿದೆ ಚೀನರಿಗೆ ಬೇಕಾದ ಸಹಾಯವನ್ನೆಲ್ಲಾ ಒದಗಿಸಿಕೊಡುವುದಾಗಿ ಇಂಗ್ಲೆಂಡ್ ಅಮೇರಿಕ ಮೊದಲಾದ ಎಲ್ಲ ರಾಜ್ಯಗಳೂ ತಮ್ಮ ರಾಯಭಾರಿಗಳ ಮೂಲಕ ಹೇಳಿಕಳಿಸಿದ್ದಾರೆ ಆದರೆ ಪಕ್ಕದಲ್ಲೇ ಸೈನ್ಯಸಿದ್ಧತೆಯಿಂದಿರುವ ಜಪಾನು ಏನುಮಾಡುವುದೋ ಎಂಬ ಹೆದರಿಕೆಯೂ ಮತ್ತು ಅವರ ಸ್ನೇಹದಿಂದ ಉಂಟಾಗಬಹುದಾದ ಅನುಕೂಲಗಳೂ ಚೈನವನ್ನು ಜಪಾನಿನಕಡೆಗೆಳೆಯುತ್ತಿವೆ. ಜಪಾನರ ಸ್ನೇಹ ಸ್ವಾತಂತ್ರ್ಯಗಳಿಗೆ ಚೈನವು ಒಪ್ಪಿದರೆ ಅಲ್ಲಿರುವ ಅನ್ಯದೇಶೀಯರೆಲ್ಲರೂ ಗಂಟುಮೂಟೆ ಕಟ್ಟಿ ಹೊರಗೆ ಹೊರಡಬೇಕಾದ ಕಾಲವು ಬಂದಿದೆಯಾಗಿ ಚೀನರು ಏನುಮಾಡುತ್ತಾರೆಂಬುದನ್ನು ಪ್ರಪಂಚವೇ ಕುತೂಹಲದಿಂದ ನಿರೀಕ್ಷಿಸುತ್ತಿದೆ.

ಕಡೂರು ಡಿಸ್ಟ್ರಿಕ್ಟಿನ ಜನಗಳ ಪ್ರದರ್ಶನ ಶ್ರೀ ನಿಜಗುಣ ಶಿವಯೋಗಿಗಳ ಸ್ಮಾರಕಮಹೋತ್ಸವವು ಸಾಹಿತ್ಯಸಮ್ಮೇಳನ ಮತ್ತು ವೀರಶೈವ ಸಮ್ಮೇಳನವು

ಈ ಹಿಂದೆ ಕಡೂರು ಡಿಸ್ಟ್ರಿಕ್ಟಿನ ಜನಗಳ ಪ್ರದರ್ಶನವನ್ನು ಶ್ರೀ ನಿಜಗುಣ ಶಿವಯೋಗಿಗಳ ಸ್ಮಾರಕೋತ್ಸವ ಸಾಹಿತ್ಯಸಮ್ಮೇಳನ ಮತ್ತು ವೀರಶೈವಸಮ್ಮೇಳನವನ್ನು ಮಾರ್ಚಿ ತಿಂಗಳು 3 ರಿಂದ 10 ನೇ ತಾರೀಖಿನಲ್ಲಿ ನಡೆಯಬೇಕೆಂದಿದ್ದುದನ್ನು ಏಪ್ರಿಲ್ [illegible] ನೆ ವಾರಕ್ಕೆ ಮುಂದುವರಿಸಿರುವುದಾಗಿ ಪ್ರಕಟಿಸಲಾಗಿತ್ತು. ಈಗ ಈ ಕಾರ್ಯಗಳನ್ನು ತಾ|| 8-4 ರಿಂದ 12-4 ರವರೆಗೆ ನಡೆಸಬೇಕೆಂದು ನಿರ್ಧರಿಸಿರುತ್ತದೆ. ಹೆಚ್ಚು ಸಂಗತಿಗಳನ್ನು ಮುಂದಕ್ಕೆ ಪ್ರಚಾರಮಾಡಲಾಗುವುದು.

ಚಿಕ್ಕಮಗಳೂರು 1/3 1935 — ಬಸವಲಿಂಗಯ್ಯ, ಸಕ್ರೆಟರಿ

ಓಂ ಪರಮ [illegible] ನಮಃ

ಪ್ರಕಟನೆ
ನೈಜಾಂ ಶ್ರೀಮದ್ವೀರಶೈವ ವೇದಪಾಠಶಾಲಾ, ತಾಂಡೂರು

ನೈಜಾಂ ಇಲಾಖೆಯ ಸಮಸ್ತ ವೀರಮಾಹೇಶ್ವರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ತಾಂಡೂರಲ್ಲಿ ಶ್ರೀಮದ್ವೀರಶೈವ ವೇದಪಾಠಶಾಲೆಯು ಸ್ಥಾಪಿಸಲ್ಪಟ್ಟು ಬಹು ದಿನಗಳಾದರೂ [illegible] ಕಾರಣಾಂತರಗಳಿಂದ ಸ್ವಲ್ಪದಿನಗಳ ಹಿಂದೆ ನಿಂತುಹೋಗಿತ್ತು. ಈಗ ದೈವಸಂಕಲ್ಪದಿಂದ ಸುಸಂಧಿಯು ಒದಗಿದ್ದರಿಂದ ಇದೇ ಯುವನಾಮಸಂವತ್ಸರದ ಫಾಲ್ಗುಣ ಶು|| ಪಂಚಮಿ ಮೈಸೂರು ಇಲಾಖೆ [illegible] ಪುರವಾಸಿ ಮಂಗಲಪುರಮಠದ ಬ್ರ|| ಶ್ರೀ|| ಸಿದ್ಧಾಂತಿ ಪಂಡಿತ ಚಂದ್ರಶೇಖರಶಾಸ್ತ್ರಿಗಳವರ ಅಧ್ಯಾಪಕತ್ವದಲ್ಲಿ ಶ್ರೀಮದ್ವೀರಶೈವ ವೇದಪಾಠಶಾಲೆಯು ಪ್ರಾರಂಭಿಸಲ್ಪಟ್ಟಿರುತ್ತದೆ. ಈ ಪಾಠಶಾಲೆಯಲ್ಲಿ ವೇದ ಜ್ಯೋತಿಷ ಸಂಸ್ಕೃತ ಕನ್ನಡ ಇಂಗ್ಲೀಷ್ ಮುಂತಾದ ವಿದ್ಯೆಗಳು ಕಲಿಸಲ್ಪಡುತ್ತವೆ. ಆದಕಾರಣ ವಿದ್ಯಾಪೇಕ್ಷಿಗಳಾದ ನಮ್ಮ ವೀರಶೈವಬಾಂಧವರು ೧೨ ವರ್ಷದ ಮೇಲ್ಪಟ್ಟು ವಯಸ್ಸುಳ್ಳವರನ್ನಾಗಿ ಓದು ಬರೆಹ ಬರುವ ತಮ್ಮ ಮಕ್ಕಳನ್ನು ವಿದ್ಯಾರ್ಜನೆಗಾಗಿ ಕಳುಹಿ ವಿದ್ಯಾಲಾಭವನ್ನು ಪಡೆದುಕೊಳ್ಳುವಂತೆ ಮಾಡಿ ವೀರಶೈವಸಮಾಜದಲ್ಲಿ ತಮ್ಮ ಪುತ್ರರನ್ನು ಕೀರ್ತಿಯವರನ್ನಾಗಿ ಮಾಡಿಸಬೇಕೆಂಬುದಾಗಿ ಅತ್ಯಂತ ವಿನಯಪೂರ್ವಕವಾದ ವಿನಂತಿ.

ವಿದ್ಯಾರ್ಥಿಗಳಿಗೆ ಭೋಜನದ ವ್ಯವಸ್ಥೆಯು ಮಾಡಲ್ಪಡುವದಲ್ಲದೆ ಅನಾಥ ವಿದ್ಯಾರ್ಥಿಗಳಿಗೆ ಬಟ್ಟೆ ಪುಸ್ತಕ ಮೊದಲಾದವುಗಳು ಕೂಡ ಧರ್ಮಾರ್ಥವಾಗಿ ಕೊಡಲ್ಪಡುತ್ತವೆ.

ಹಿರೇಮಠದ ನೀಲಕಂಠಯ್ಯನವರು
ತಾಂಡೂರು
ಪಾಠಶಾಲಾ ವ್ಯವಸ್ಥಾಪಕರು

ಶ್ರೀ ಜಯಚಾಮರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು

ಮೇಲ್ಕಂಡ ಸೊಸೈಟಿಯ ಹನ್ನೊಂದನೇ ವಾರ್ಷಿಕ ಜನರಲ್ ಮೀಟಿಂಗ್ 10-3-35 ನೆಯ ಭಾನುವಾರ ಮಧ್ಯಾಹ್ನ 3-30 ಘಂಟೆಗೆ ಮ|| ರಾ|| ರಾವ್ ಸಾಹೇಬ್ ಎಮ್ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ದೇವತಾಪ್ರಾರ್ಥನೆಯಾದನಂತರ ಅಧ್ಯಕ್ಷರು ಸೊಸೈಟಿಯು ಇದುವರೆವಿಗೆ ನಡೆಸಿರತಕ್ಕ ಕೆಲಸಗಳನ್ನು ಸಭಿಕರಿಗೆ ತಿಳಿಯಪಡಿಸಿದ್ದಲ್ಲದೆ ಸೊಸೈಟಿಯ ಉದ್ದೇಶವು ಎಷ್ಟರಮಟ್ಟಿಗೆ ನೆರವೇರಿರುತ್ತೆಂಬುದೂ ಸೊಸೈಟಿಯು ಇನ್ನು ಮೇಲೆ ಯಾವ ರೀತಿ ಅಭಿವೃದ್ಧಿಗೆ ಬರುವುದೆಂಬುದೂ ಆಡಳಿತ ರಿಪೋರ್ಟಿಗೆ ಲಗತ್ತಿಸಿರುವ ತಖ್ತೆಪಟ್ಟಿಯಿಂದ ವಿಶದವಾಗುತ್ತದೆಂಬುದಾಗಿ ವಿವರಿಸಿದರು.

ನಂತರ ರಿಪೋರ್ಟು ಸಭೆಗೆ ತೆಗೆದುಕೊಳ್ಳಲ್ಪಟ್ಟು ಸದಸ್ಯರುಗಳಿಗೆ ಬೇಕಾದ ಕೆಲವು ವಿವರಗಳನ್ನು [illegible] ಮತ್ತು ಆಡಿಟರ [illegible] ಇತರ ಪತ್ರಿಕೆಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು.

[illegible] ಸಭೆಗೆ ಒಂದು ಕೆಲವು [illegible] ಉಳಿದ ಭಾಗಗಳನ್ನು [illegible] ಸಲ 1 [illegible] ಭಾನುವಾರ ಮಧ್ಯಾಹ್ನ 4 ಘಂಟೆಗೆ ಪುನಃ ಸೇರತಕ್ಕದ್ದೆಂತ ತೀರ್ಮಾನವಾಯಿತು.

ನಂತರ ಆ ದಿವಸದ ಅಧ್ಯಕ್ಷರನ್ನೂ ಮತ್ತು ವಿಶೇಷವಾಗಿ ಸೊಸೈಟಿಯನ್ನು ಈ ರೀತಿ ಅಭಿವೃದ್ಧಿಗೆ ತಂದಿರುವ [illegible] ವಂದಿಸಿ ಶ್ರೀಮನ್ಮಹಾರಾಜರವರ ಮತ್ತು ರಾಜಕುಟುಂಬದವರ ಶ್ರೇಯಃಪ್ರಾರ್ಥನೆಯಾದನಂತರ ಸಭೆಯು ಮುಗಿಯಿತು.

ಕನ್ನಡಭಾಷೆ ಮತ್ತು ಸಾಹಿತ್ಯ

ತಾ|| ೩.೩.೧೯೩೫ ನೇ ಭಾನುವಾರ ಮೈಸೂರು ಟ್ರೇನಿಂಗ್ ಕಾಲೇಜಿನ ವಿದ್ಯಾರ್ಥಿ ಉಪಾಧ್ಯಾಯರ ಸಂಘದ ಆಶ್ರಯದಲ್ಲಿ ಶ್ರೀ ಎ ಎನ್ ಶ್ರೀಕಂಠಯ್ಯನವರು 'ಕನ್ನಡಭಾಷೆ ಮತ್ತು ಸಾಹಿತ್ಯ' ಎಂಬ ವಿಷಯವಾಗಿ ಮಾತನಾಡಿದರು. ಉಪನ್ಯಾಸಕರು ತಮ್ಮ ಭಾಷಣದಲ್ಲಿ ಕನ್ನಡದ ಚರಿತ್ರೆ ವ್ಯಾಪನೆಗಳನ್ನು ತಿಳಿಸುತ್ತ ಕನ್ನಡನಾಡಿನ ಸುತ್ತಲೂ ಇರುವ ಮಹಾರಾಷ್ಟ್ರ, ಆಂಧ್ರ ಮತ್ತು ತಮಿಳು ದೇಶಗಳಲ್ಲಿ ಆಯಾ ಜನರ ಮಹಾರಾಷ್ಟ್ರ ತೆಲುಗು ಮತ್ತು ತಮಿಳು ಭಾಷೆಗಳ ಪ್ರಚಾರದಲ್ಲಿ ಅವರು ತಮ್ಮ ಭಾಷಾಭಿವೃದ್ಧಿಗಾಗಿ ಪತ್ರಿಕೆಗಳ ಮತ್ತು ಗ್ರಂಥಗಳ ಪ್ರಚಾರವನ್ನು ಕ್ರಮೇಣ ಹೆಚ್ಚಿಸುತ್ತಿದ್ದಾರೆ. ಆದರೆ ಕನ್ನಡದಲ್ಲಿ ಒಂದು ಗ್ರಂಥವನ್ನಾಗಲೀ ಒಂದು ಪತ್ರಿಕೆಯನ್ನಾಗಲೀ ಹೊರಡಿಸಿದರೆ ಅದರ ಖರ್ಚೇ ಏಳದಿದ್ದರೆ ಇನ್ನು ಸಾಹಿತ್ಯದ ಮಾತೇಕೆ? ಕರ್ನಾಟಕದ ಗಡಿನಾಡುಗಳಲ್ಲಿ ಈಗಲೂ ಕನ್ನಡಕ್ಕೂ ಅಲ್ಲಿಯ ಭಾಷೆಗೂ ಹೋರಾಟವು ನಡೆದು ನಡೆಯುತ್ತಲೂ ಇದೆ. ಅಲ್ಲಿನ ಜನರು ಆಡುವ ಭಾಷೆ ಕನ್ನಡವಾಗಿದ್ದರೂ ಅವರು ವ್ಯವಹಾರಕ್ಕಾಗಿಯೂ ಇತರರೊಡನೆ ಸಂಭಾಷಣೆಗಾಗಿಯೂ ಬೇರೆ ಭಾಷೆಯನ್ನಿಟ್ಟುಕೊಂಡಿದ್ದಾರೆ. ಅವರಿಗೆ ಕನ್ನಡದಲ್ಲಿ ಅಭಿಮಾನ [illegible] ಇವೆ. ಆದರೆ ಅವು ಹೊರಗೆ ಬರಲು ಅವಕಾಶವಿಲ್ಲ. ಅವರ ತಾಯ್ನುಡಿಯಾದ ಕನ್ನಡದ ಅಭಿವೃದ್ಧಿ ಪ್ರಚಾರಗಳು ಗಡಿನಾಡುಗಳಲ್ಲಿ ನಡೆಯುತ್ತಿಲ್ಲ' ಎಂದರು.

ಕನ್ನಡನಾಡು ಬಡನಾಡಲ್ಲ. [illegible] ಶಕ್ತಿ [illegible] ರಸಿಕತೆ ಇವುಗಳ [illegible] ಭಕ್ತಿಯ [illegible] ಆದರೆ ಈಗಿನ ಕರ್ನಾಟಕವು ಒಡೆದುಹೋಗಿದೆ. ಒಂದು ಭಾಗದ ಕನ್ನಡಿಗರು ತಮ್ಮ ದೃಷ್ಟಿಯನ್ನು ಮುಂಬಯಿಕಡೆಗೂ ಮತ್ತೊಂದು ಭಾಗದವರು ಮದ್ರಾಸಿನ ಕಡೆಗೂ ಕೇಂದ್ರೀಕರಿಸಿದ್ದಾರೆ. ಹೀಗಾಗಿ ಅವರು ಮರಾಠಿ ಅಥವಾ ತೆಲುಗು ಭಾಷೆಯನ್ನು ತಿಳಿದಿರುವರೇ ಹೊರತು ಕನ್ನಡದ [illegible] ಅರಿತಿರುವುದಿಲ್ಲ. ಈ ರೀತಿಯಾಗಿ [illegible] ಕರ್ನಾಟಕವನ್ನು [illegible] ಸಾಹಿತ್ಯಗಳನ್ನು [illegible] ಮಾಡಿಕೊಂಡಿರುವರಾಗಿ

ಇತರ [illegible] ಕನ್ನಡ ಭಾಷಾ ಪ್ರಚಾರ [illegible] ಕನ್ನಡಿಗರು [illegible] ಪ್ರಚಾರವು [illegible] ದಕ್ಷಿಣ [illegible] ರಾಷ್ಟ್ರಕ್ಕೆ ಸೇರಿಕೊಂಡು [illegible] ಆಂಧ್ರರ ಕಡೆಗೆ [illegible] ಆದರೂ ನಮ್ಮ ಮೇಲೆ ಕಣ್ಣು. ಅರ್ಧಕ್ಕಿಂತ ಹೆಚ್ಚು ಪಾಲು ಜನರು ತೆಲುಗರಾಗಿದ್ದಾರೆ. ಅಥವಾ ಅದನ್ನು ವ್ಯವಹಾರದಲ್ಲಿ ಉಪಯೋಗಿಸುತ್ತಿದ್ದಾರೆ. ಆ ದೇಶವು ತಮ್ಮದು ಎಂದು ಹೋರಾಡುವವರಿದ್ದಾರೆ. ನಮ್ಮ ದೇಶದಲ್ಲಿಯೂ ಅಂತಹ ಚಳುವಳಿಯು ನಡೆಯಬೇಡವೆ?

ಒಂದು ಸಾಹಿತ್ಯದ ಬೆಳವಣಿಗೆಗೆ, ಏಳಿಗೆಗೆ ಇತರ ಸಂಸ್ಕೃತಿಯ ಅಥವಾ ಸಂಸ್ಕೃತಿಗಳ ಸಂಪರ್ಕವಿದ್ದೇ ಇರಬೇಕು. ಹಾಗಿಲ್ಲದಿದ್ದರೆ ಅದು ನಿಂತ ನೀರಿನಂತಾಗಿ ಕೊಳೆತು ಯಾವ ಉಪಯೋಗಕ್ಕೂ ಬರುವುದಿಲ್ಲ. ಕನ್ನಡವು ಪ್ರಾಕೃತ ಕನ್ನಡ ಮತ್ತು ಸಂಸ್ಕೃತ ಈ ಸಂಸ್ಕೃತಿಗಳ ಬೆರಕೆಯಿಂದ ಬಂದಿದೆ. ಇಷ್ಟು ವಿಪುಲವಾದ ಶಬ್ದಸಂಪತ್ತಿಯಿದ್ದರೂ, ಈಗೀಗ ಹೊಸ ಸಂಸ್ಕೃತಿಯ (ಇಂಗ್ಲೀಷಿನ) ಸಂಪರ್ಕವು ಬೆಳೆದೊಡನೆ ಕನ್ನಡದಲ್ಲಿ ಬೇಕಾದಷ್ಟು ಪದಗಳಿಲ್ಲದೆ ಅವುಗಳ ಅಭಾವವು ಅಲ್ಲಲ್ಲಿ ಕಾಣುತ್ತಿದೆ. ಅಲ್ಲದೆ ಕನ್ನಡದಲ್ಲಿಯೇ ನಮಗೆ ಬೇಡದ ಜನಸಾಮಾನ್ಯಕ್ಕೆ ತಿಳಿಯದ ಪದಗಳೆಷ್ಟೋ ಇವೆ. ಅಂತಹ ಪದಗಳನ್ನು ತ್ಯಜಿಸಿ ನಮಗೆ ಬೇಕಾದ ಪದಗಳನ್ನು ಔಚಿತ್ಯವರಿತು ಸಂಸ್ಕೃತದಿಂದಲಾಗಲೀ ಇಲ್ಲವೇ ಇಂಗ್ಲೀಷಿನಿಂದಲಾಗಲಿ ತೆಗೆದುಕೊಳ್ಳಬೇಕು. ಎಂದರೆ ನಾವು ಭಾಷೆಯನ್ನು ಸತ್ತ್ವಪುಷ್ಟವನ್ನಾಗಿ ಮಾಡಬೇಕು. ಬರಿ ರಂಗು ಗೊತ್ತಿಲ್ಲದ ಗೊಬ್ಬರದ ರಾಶಿಯನ್ನಾಗಿ ಮಾಡಬಾರದು. ನಮ್ಮ ಜನಗಳಲ್ಲಿ ಜ್ಞಾನಪ್ರಚಾರಕ್ಕೆ ಸರಳವಾಗಿ ಸುಲಭವಾಗಿ ಬರೆಯಬೇಕು. ಇತರ ಸಂಸ್ಕೃತಿಗಳಲ್ಲಿ ಹೆಚ್ಚು ಪರಿಶ್ರಮವುಳ್ಳವರು ಅವುಗಳಲ್ಲಿರುವ ಅವಶ್ಯವಾದ ವಿಷಯಗಳನ್ನು ತಮ್ಮ ಜನರ ಮುಂದಿಡಬೇಕು. ಎಲ್ಲರಿಗೂ ಅರ್ಥವಾಗುವಂತೆ ಬರೆಯುವುದು ಲೇಖಕನ ಧ್ಯೇಯವಾಗಿರಬೇಕು. ತನ್ನ ಪಾಂಡಿತ್ಯವನ್ನು ಶಬ್ದಸಂಪತ್ತಿಯನ್ನು ಪ್ರದರ್ಶಿಸುವುದು ಅವನ ಗುರಿಯಾಗಿರಬಾರದು.

ಬೆಲೆಯಿಲ್ಲದ ಶುಷ್ಕ ಪಾಂಡಿತ್ಯದಿಂದ ಆಗುವ ಉಪಯೋಗವು ಬಹುಕಡಿಮೆ. ಒಂದು ಸಾಹಿತ್ಯವು ಜನರ ಏಳಿಗೆಯನ್ನು ಮತ್ತು ಅವರಲ್ಲಿ ಜ್ಞಾನಪ್ರಚಾರವನ್ನು ಅದರ ದೃಷ್ಟಿಯಲ್ಲಿಟ್ಟಿರಬೇಕು. ಅಲ್ಲದೆ ಕನ್ನಡಿಗರಿಗೆ ಕನ್ನಡದಲ್ಲಿ ಹೆಚ್ಚು ಮಮತೆಯೂ ಹೆಮ್ಮೆಯೂ ಅಭಿಮಾನವೂ ಇರಬೇಕು. ಅದರ ಅಭ್ಯುದಯಕ್ಕೆ ಅಡ್ಡ ಬರುವ ಮತ್ತಾವ ಭಾಷೆಯನ್ನು ತಡೆಯಲು ಸಿದ್ಧರಾಗಿರಬೇಕು. ಅದಕ್ಕೆ ಬೆಂಬಲವಾಗಿರುವ ಭಾಷೆಯನ್ನು ಕೃತಜ್ಞತಾದೃಷ್ಟಿಯಿಂದ ಕಂಡು ಅದರ ಸಹಾಯವನ್ನು ಸ್ವೀಕರಿಸಬೇಕು.

ಕಾಲವು ಬದಲಾದ ಹಾಗೆಲ್ಲ ಜನರ ದೃಷ್ಟಿಯು ಬದಲಾಗುವುದು. ಒಂದು ಕಾಲದಲ್ಲಿ ಅತ್ಯಂತ ಸುಂದರವಾದುದು ಇನ್ನೊಂದು ಕಾಲದಲ್ಲಿ ಬಹು ವಿಕಾರವೆಂದು ಎಣಿಸಲ್ಪಡಬಹುದು. ಅಲ್ಲದೆ ಭಿನ್ನರುಚಿಗಳು ಇರುತ್ತವೆ. ಉದಾಹರಣೆಗಾಗಿ ಪೂರ್ವದಲ್ಲಿ ಕಾವ್ಯಲೇಖಕರು ಸ್ತ್ರೀವರ್ಣನೆ ಮಾಡುವಾಗ ಅವಳ ಪ್ರತಿಯೊಂದು ಅಂಗವನ್ನೂ ವರ್ಣಿಸುತ್ತಿದ್ದರು. ಅದೇ ಸೌಂದರ್ಯವೆಂದು ಗಣಿಸಲ್ಪಟ್ಟಿತ್ತು. ಆದರೆ ಈಗ ಅಂತಹ ವರ್ಣನೆಯು ತೀರ ಹೊಲಸಾಗಿ ಕಾಣುತ್ತದೆ. ಇದು ಹಳೆಯದನ್ನು ಅಲ್ಲಗಳೆಯುವ ಮಾತಲ್ಲ. ಹಳೆದು ಹೊಸದು ಇವುಗಳ ವಿಮರ್ಶೆಯಲ್ಲಿ ಎಚ್ಚರವಿರಬೇಕೆಂದು ಹೇಳುವ ಮಾತು. ಸಾಹಿತ್ಯವಿಮರ್ಶೆಯಲ್ಲಿ ಹೊಸದು ಹಳೆಯದು ಎಂಬುದನ್ನು ಗಣಿಸಬಾರದು. ಹಳೆಯದೆಲ್ಲ ಸತ್ಯ ಹೊಸದೆಲ್ಲ ಅಸತ್ಯ ಎಂಬ ಮೂಢನಂಬಿಕೆಯನ್ನು ಬಿಡಬೇಕು. ಸಾಮಾನ್ಯ ದೃಷ್ಟಿಯಿಂದ ಸತ್ಯವಾದುದು ಸೌಂದರ್ಯವಾದುದು ಏನು ಎಂಬುದನ್ನು ನೋಡಬೇಕು. ಈ ದೃಷ್ಟಿಯಿಂದ ಕೆಲವು ಪ್ರಾಚೀನ ಕನ್ನಡ ಕವಿಗಳ ಕೃತಿಗಳಲ್ಲಿಯೂ ನಿಸ್ಸಾರವಾದ ಭಾಗಗಳು ಅನೇಕ ಇವೆ.

ಆದುದರಿಂದ ಕನ್ನಡ ಭಾಷಾಭಿಮಾನಿಗಳೆ ಸಾರವತ್ತಾದುದನ್ನು ಆರಿಸಿ ನಿಮ್ಮ ಜನದ ಮುಂದಿಡಿ. ನಿಸ್ಸಾರವಾದುದನ್ನು ತೆಗೆದುಹಾಕಿ. ಎಲ್ಲಿಯಾದರೂ ಸಾರವಸ್ತುವು ಇರುವುದಾದರೆ ಅದನ್ನು ನಿಮ್ಮ ಜನರಿಗೆ ಹಂಚುವ ಯತ್ನವನ್ನು ಮಾಡಿರಿ. ಕನ್ನಡಕ್ಕೆ ಯಾವ ಕಡೆಯಿಂದ ಸಹಾಯದೊರೆತರೂ ಅದನ್ನು ಸ್ವೀಕರಿಸಿ.

(ಕೃಷ್ಣ)

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ …ಸ ಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ …ಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಪ್ರಕಟಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾ…ರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನದ ರೂಪವಾಗಿರುವ್ಯ…ದರಿಂದ ಇದು **"ವೀರಶೈವರತ್ನ"** ಎಂಬ ನಾಮದಿಂದ ಪ್ರಸಿದ್ಧವಾಗಿದೆ. …ವ್ಯಾಸ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೩೨೦ ಪುಟಗಳುಳ್ಳದಾಗಿದ್ದು ಅತ್ಯುತ್ತಮವಾದ ಕಾಗದದಿಂದಲೂ ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ …ಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿ ತಿಳಿದು ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಒಪ್ಪುತ್ತಿರುವುದು ಎಲ್ಲರಿಗೂ ತಿಳಿದ …ಷಯವಾಗಿದೆ. ಈ ಗ್ರಂಥವನ್ನು ಕಾಶಿ ಜಂಗಮವಾಡಿ ಮಠದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು …ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ…ರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ …ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ …ನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲಗ್ರಂಥವು ಕೇವಲ ಕೆಲ ಪುಟಗಳಿಂದ ಕೂಡಿದ್ದರೂ ಇದಕ್ಕೆ …ನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಟೀಕಾಗ್ರಂಥದ ದ್ವಾರಾ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮ ಪ್ರಿಯ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು …ಡು ಹೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಅಮೂಲ್ಯವಾದ …ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರುವದೆಂಬ …ಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ …ರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗ…ಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ…ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿ…ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ಸಾಲ್ಯಾಗುವಂತೆ …ಕಮಿಷನ್ ವಜಾ ಹೋಗಲಾಗಿ **೭ ರೂ** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಗಳು

ಧಾತುಪುಷ್ಟಿಲೇಹ.

1 ಇದು ಬಲಹೀನ ದೇಹಗಳಿಗೆ ಅದ್ಭುತವಾದ ಔಷಧಿ, ಇದರ ಸೇವನೆಯಿಂದ ಮುಪ್ಪಿನಲ್ಲಿ ಬರುವ ಜ್ವರ …ರ್ಣ, ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶ್ಶಕ್ತಿ, ಕಾಲು ಸೆಳೆತ, ಕೈ ಜೋಮು, ಬೆನ್ನು ನೋವು, … ನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಸ್ವಪ್ನಾವಸ್ಥೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, … ಗಳ ದುರ್ಬಲತೆ, ಸಂಯೋಗಶಕ್ತಿಯು ಕಡಿಮೆಯಾಗುವಿಕೆ, ಶರೀರದ ಬಿಸಿ ಇವುಗಳನ್ನೆಲ್ಲಾ ಹೋಗಲಾಡಿಸಿ, … ವೃದ್ಧಿಯನ್ನೂ ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಡಬ್ಬಿ 1ಕ್ಕೆ 2—8—0 …ಕ್ಕೆ 7—0—0

2 **ಮೇಹಕುಠಾರಪ್ರಮೇಹ** ಮೂತ್ರ ಹೋಗದಿರುವಿಕೆ ಮೂತ್ರ ಹೋಗುವಾಗ ಉರಿ ಮೂತ್ರ…ಕೃಛ್ರದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ್ಗೆ ಒಂದು ತಡೆಯಲಿಕ್ಕೆ … ಸಾಮರ್ಥ್ಯವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು. ಶೀಷೆ 1ಕ್ಕೆ 2—8—0 3ಕ್ಕೆ 7—0—0

3 **ಮಲೇರಿಯಾ ನಿವಾರಿಣಿ** ಇದು ಮಲೇರಿಯಾ ದಿನಬಿಟ್ಟು ಬರುವ ಜ್ವರ, ಚಳಿಜ್ವರ, ಇಂಫ್ಲು…ಯೆಂಜಾ, ನ್ಯೂಮೋನಿಯಾ, ಕಫಜ್ವರ, ಜ್ವರಗಡ್ಡೆ ಮುಂತಾದವುಗಳಿಗೆ ದಿವ್ಯೌಷಧಿ. ಬಾಟ್ಲಿ 1ಕ್ಕೆ 1—8—0 … ಬಾಟ್ಲಿಗೆ 0—13—0 3ಕ್ಕೆ 4—0—0 ಸಣ್ಣ ಬಾಟ್ಲಿ 3ಕ್ಕೆ 2—4—0

…ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ರವಾನಿಸಲಾಗುತ್ತೆ. ಕ್ಯಾಟಲಾ…ಗಿಗೆ ಬರೆಯಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ ರಥವೀದಿ ನಂಬರು 271 ಮಂಗಳೂರು

ಔಷಧಿ ಸಿಕ್ಕುವ ಸ್ಥಳಗಳು— **ಮೆಸ್ಸರ್ಸ್ ಪಟೇಲ್ ಬ್ರದರ್ಸ್,** 91 ಚಿಕ್ಕಪೇಟೆ ಬೆಂಗಳೂರು ಸಿಟಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಸಿಂಹಾಸನದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಮನೆತನ ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಿಸಿಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿ ಬರೆದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಕೆಡದಂಥ ಕಾಗದಗಳನ್ನು ಉಪಯೋಗಿಸುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೌಲ್ಯ
ಸುವರ್ಣ ಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೫—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಯಶದಭಸ್ಮ	೧	೦—೮—೦
ಕಾಂತಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣ ಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೫—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೪	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ವಿಭೀಷಣ ವ್ಯಾಸ ಸಾನಂದ ರೂಪಾರ್ಣ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಪಂಚ ಪೀಠಾಧೀಶರಾದ ಪಂಚಾಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೪	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೪	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೪	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೪	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ವರಾಹ ... ಅತ್ಯಂತ ಸುಂದರವಾದ ಫೋಟೋ ೧೪	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ... ಕಟ್ಟಡದ ಸುಂದರ ಫೋಟೋ ೧೪	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಶ್ರೀಶೈಲ ಸಿಂಹಾಸನದ ದರ್ಶನೀಯವಾದ ಸುಂದರ ಫೋಟೋ	೦—೦—೯
ಉಮಾಪತಿ ... ಶ್ರೀ ಕಾಶೀನಾಥಶಾಸ್ತ್ರಿಗಳು ಮಂಡಿಸಿದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ... ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ —**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯನ್ನು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವ ಈ ಪ್ರಸಿದ್ಧವಾದ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸ, ಒಳ್ಳೆ ತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ... ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಮುಖರು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦ ೪ ...

ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ. ಪಿ. ೮ ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[11] ಪೋ ಬಾ ೫೧೦ ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮಹಾಲಿಂಗೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಮೀಮಾಂಸಾ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಒಸವಾದಿ ಸಿದ್ಧತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ವೀರಶೈವಮತವಿಚಾರಮೀಮಾಂಸಾ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	ಆಣೆ
ಸನ್ಯಾಸಶಾಸ್ತ್ರಮ ವಿಮರ್ಶ ತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಆಗಮಪರಿಜ್ಞಾನ	೬ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೬ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೬ ಆಣೆ
ವೇದೋಕ್ತ ಶಿವಪೂಜಾವಿಧಿ	೧೨ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವರ ಭಾಷಣಮು (ತೆಲುಗು)	೮ ಆ
पंडित श्रीकाशीनाथशास्त्री यांचे भाषण (मराठी)	८ आ
Speeches by Pandit Shri Kashinatha Shastri (*English*)	12 A
ವೀರಶೈವಪರತ್ವ (೪ನೆಯ ಆವೃತ್ತಿ)	೧೨ ಆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಶಿವಾಗಮಸಿದ್ಧಾಂತದರ್ಪಣ	೧೨ ಆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೩೧ ಪುಟ)	೮ ರೂ
लिंगधारणचन्द्रिका (संस्कृत)	३
महानारायणोपनिषत् (वीरशैवभाष्य-संस्कृत)	१
वीरशैवरत्नशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಮಹ್ಮದಸ್ಥಾನ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ... ಪಂಡಿತ ... ಗುರುಪಂಚಾಕ್ಷರಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯರು ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಾಶಜನಿತಾ ಪಂಚಾಸ್ಯಪೀಠಾಧಿಪಾ | ಪಂಚಕ್ಲೇಶವಿನಾಶಕಾ ಪರತರಶ್ರೀಪಂಚಲಿಂಗೋದ್ಭವಾ ||
ಪಂಚಾಚಾರಪರಾಯಣಾ ಪರಿಲಸತ್ಪಂಚಾಕ್ಷರೀಬೋಧಕಾ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಂತ್ವದೀಯೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ತಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೨ ಕ್ಕೆ ೧ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ ನೇ ಮಾರ್ಚಿ ೧೯೩೫ [ಸಂಚಿಕೆ ೪೪

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ.

ತಿರೋಳ.

ಧಾರವಾಡ ಡಿ|| ತಿರೋಳ ಹಿರೇಮಠದಲ್ಲಿ ವಾರ್ಷಿಕ ಪದ್ಧತಿಯಂತೆ ಈ ವರುಷ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಫಾಲ್ಗುಣ ಶುಕ್ಲ ೧೪ ಸೋಮವಾರ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ವೀರಶೈವಮತಸ್ಥಾಪನಾಚಾರ್ಯರೂ, ಸಮಸ್ತ ಪ್ರಪಂಚವಂದ್ಯರೂ, ಜಗದುದ್ಧಾರಕರೂ ಆದ ಶ್ರೀಜಗದ್ಗುರು ರೇಣುಕಾಚಾರ್ಯ ಭಗವತ್ಪಾದರ ಪರಮ ಪವಿತ್ರ 'ಜಯಂತೀ' ದಿನಾಚರಣೆಯನ್ನು ಮಾಡುವದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿದೆ ಮಹಾಚಾರ್ಯರಿಂದ ಸ್ಥಾಪಿತವಾದ ವೀರಶೈವಮತ ಪ್ರಾಶಸ್ತ್ಯವನ್ನು ಸಾಕ್ಷಾತ್ ಆ ಪರಶಿವವಾಣಿಯಾದ ಪಾರಮೇಶ್ವರಾಗಮಾದಿಗಳು 'ನವೀರಶೈವ ಸದೃಶಂ ಮತಮಸ್ತಿ ಜಗತ್ರಯೇ' ಎಂದು ಉದ್ಘೋಷಿಸುತ್ತಿರುವವಷ್ಟೆ? ಇಂತು ಘನತೆಯನ್ನು ಪಡೆದ ವೀರಶೈವಮತೀಯರು ತಮ್ಮ ಮತಸ್ಥಾಪನಾಚಾರ್ಯರ ಜಯಂತೀ ದಿನಾಚರಣೆಯನ್ನು ಮಾಡದಿದ್ದಲ್ಲಿ ಇವರು 'ವೀರಶೈವ'ರೆಂದು ಹೇಳಿಸಿಕೊಳ್ಳಲಾರರು ಅದಿರಲಿ, ನಮ್ಮ ಊರ ಬೃಹನ್ಮಠ (ಹಿರೇಮಠ) ದಲ್ಲಿ ನೆರವೇರಿದ ಜಯಂತ್ಯುತ್ಸವದ ಪರಮಾನಂದದಾಯಕ ಸುದ್ದಿಯನ್ನು 'ಪ್ರಭಾ' ವಾಚಕರಿಗೆ ತಿಳಿಸಲು ಪರಮಸಂತೋಷವಾಗುತ್ತಲಿದೆ 'ಜಯಂತೀ' ದಿನಾಚರಣೆಯೆಂದರೆ ಕೇವಲ ಬಾಹ್ಯಾಡಂಬರ ವಾದ್ಯವೈಭವದ ಮೆರವಣಿಗೆ ಮಾತ್ರವಲ್ಲ, ಜಗದಾಚಾರ್ಯರ ಅಮೋಘವಾದ ವೀರಶೈವ ಮತಸಿದ್ಧಾಂತತತ್ತ್ವರತ್ನಗಳನ್ನು ಬಾಹ್ಯಾಂತರಂಗದಿಂದ ಪ್ರಕಾಶಿಸುವಂತೆ ಮಾಡುವದಾಗಿದೆ. ಈ ಮಹೋತ್ಸವಕ್ಕೆ ಸುಪ್ರಸಿದ್ಧ ಹೂಲಿ ಸಾಂಬಯ್ಯಸ್ವಾಮಿ ಮಠದ ಶ್ರೀ|| ಷ|| ಬ್ರ|| ಚರಮೂರ್ತಿಸ್ವಾಮಿಗಳವರು ದಯಮಾಡಿಸಿದ್ದರು ಈ ಮಹಾಸ್ವಾಮಿಗಳವರ ಅಘಟಿತಘಟನಾಮಹಿಮಾತಿಶಯಗಳು ಈ ಮೊದಲೇ ಪ್ರಭಾಪತ್ರಿಕಾ ವಾಚಕರಿಗೆ ತಿಳಿದ ವಿಷಯವಾಗಿದೆ. ಕೇವಲ ಚಿಕ್ಕವಯಸ್ಸಿನವರೂ ಪರಮವೈರಾಗ್ಯಮೂರ್ತಿಗಳೂ, ಬ್ರಹ್ಮತೇಜೋವಿಶಿಷ್ಟರೂ, ದರ್ಶನಮಾತ್ರದಿಂದ ಪ್ರಾಣಿಗಳನ್ನು ಉದ್ಧರಿಸುವ ಮಹಿಮಾಶಾಲಿಗಳೂ ಆದ ಈ ಗುರುಪುಂಗವರ ಆಗಮನದಿಂದ ನಮ್ಮ ಗ್ರಾಮದಲ್ಲಿ ನೆರವೇರಿದ ಜಯಂತ್ಯುತ್ಸವಕ್ಕೆ ಸಾಕ್ಷಾತ್ ಆ ರೇಣುಕಾರ್ಯರ ಪ್ರತಿಬಿಂಬವೇ ಪ್ರಾದುರ್ಭವಿಸಿದಂತಾಗಿತ್ತು ಈ ಶ್ರೀಗಳವರಿಂದ ವೀರಶೈವಸಿದ್ಧಾಂತ, ಭಕ್ತಿ, ಜ್ಞಾನ, ವೈರಾಗ್ಯಾದಿ ವಿಚಾರಗಳ ಅಮೃತಸದೃಶ ದಿವ್ಯೋಪದೇಶದ ಲಾಭವು ನಮ್ಮೆಲ್ಲರಿಗೂ ದೊರಕಿದುದು ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪಾವಿಶೇಷವೆಂದೇ ಹೇಳಬೇಕಾಗಿದೆ

ಈ ಪೂಜ್ಯಪಾದರ ಆಗಮನದಿಂದ ನಮ್ಮ ಗ್ರಾಮವೇ ಆನಂದ ಸಾಗರದಲ್ಲಿ ಲೋಲಾಡುತ್ತಲಿತ್ತು, ಆದಕಾರಣ ನಮ್ಮ ಗ್ರಾಮದ ಬೃಹನ್ಮಠಾ (ಹಿರೇಮಠ) ಧಿಕಾರಿಗಳಾದ ವೇ|| ಪಂಚಾಕ್ಷರಶಾಸ್ತ್ರಿಗಳವರು ತಮ್ಮ ಮಠದಲ್ಲಿ ಪದ್ಧತಿಯಂತೆ ಶ್ರೀ ಜಗದ್ಗುರು ರೇಣುಕಾಚಾರ್ಯರ ರಜತಭಾವಪಟಕ್ಕೆ ವಿದ್ಯುಕ್ತ ಪೂಜೋಪಚಾರಗಳನ್ನು ಹೂಲಿ ಮಹಾಸ್ವಾಮಿಗಳವರ ಪಾದಪೂಜೋತ್ಸವವನ್ನೂ ಜರುಗಿಸಿದ ನಂತರ ಮಾಹೇಶ್ವರಾರಾಧನೆಯನ್ನು ನೆರವೇರಿಸಿದರು ಇಂದಿನ ಈ ಪೂಜಾಮಹೋತ್ಸವಕ್ಕೆ ಗ್ರಾಮದ ಪ್ರಮುಖರು, ಶ್ರೀಮಂತರು ಮೊದಲಾದ ಸಮಸ್ತರೂ ಭಕ್ತಿತತ್ಪರರಾಗಿ ಬಂದಿದ್ದರು ಮಾಹೇಶ್ವರ ಸಮುದಾಯದ ಅಗ್ರಭಾಗದಲ್ಲಿ ಶೋಭಿಸುತ್ತಲಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಚಿತ್ರವು ಪ್ರತಿಯೊಬ್ಬರ ಹೃದಯದ ಪಟಲದ ಮೇಲೆ ಬಿತ್ತರಿಸಿದಂತಿತ್ತು ಇದರಲ್ಲಿ ಬಾಲಯೋಗಿಗಳಾದ ಬ್ರಹ್ಮತೇಜೋಮೂರ್ತಿ ಹೂಲಿ ಚರಮೂರ್ತಿಯರ ದಿವ್ಯತೇಜಸ್ಸಿನ ಪ್ರಭೆಯು ಸಮಸ್ತರನ್ನು ಗುರುಭಕ್ತಿಶೀಲರನ್ನಾಗಿ ಮಾಡುತ್ತಿತ್ತು ಧನ್ಯ! ಧನ್ಯ! ಈ ಪೂಜೋತ್ಸವದಲ್ಲಿ ಭಾಗಿಗಳಾದವರೇ ಪರಮಧನ್ಯರು ಪೂಜನಾದ್ಯುಪಚಾರದಿಂದಲೂ ಶ್ರೀಗಳವರ ದಿವ್ಯದರ್ಶನೋಪದೇಶದಿಂದಲೂ ಈ ಸಾರೆ ನಮ್ಮಲ್ಲಿಯ ಜಯಂತಿಮಹೋತ್ಸವವು ಜರುಗಿತು ಜಗದಾಚಾರ್ಯ ರೇಣುಕಾಚಾರ್ಯರ ಮಂಗಲನೀರಾಜನವು ಆದನಂತರ ಫಲಪ್ರಸಾದವು ಹಂಚಲ್ಪಟ್ಟಿತು ಜಗದ್ವಿಭೂತಿಯಾದ ಜಗದ್ಗುರುವರೇಣ್ಯ ರೇಣುಕಾಚಾರ್ಯ ಭಗವತ್ಪಾದರು ಸಮಸ್ತರಿಗೂ ಸುಖವನ್ನೀಯಲೆಂದು ಪ್ರಾರ್ಥಿಸುವ

ತಿರೋಳ ಜಯಂತ್ಯುತ್ಸವದ ಕಾರ್ಯಭಾಗಿ

ಸೂಚನೆ.

1935 ನೇ ಮಾರ್ಚಿ 30 ನೇ ತಾರೀಖು ಆಗಾಯ್ತು ನಡೆಯತಕ್ಕ ಲೋವರ್ ಸೆಕೆಂಡರಿ ಪರೀಕ್ಷೆಗೆ ದೊಡ್ಡಬಳ್ಳಾಪುರ ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ದೊಡ್ಡಬಳ್ಳಾಪುರದ ಮಹಂತಯ್ಯನವರ ವೀರಮೂರ್ತಿ ಬಸವಾರಾಧ್ಯ, ರಿಟೈರ್ಡ್ ಹೆಡ್‌ಮಾಸ್ಟರವರು ಸ್ವಂತ ಖರ್ಚಿನಿಂದ ತಮ್ಮ ಮಠದಲ್ಲಿ ಭೋಜನಕ್ಕೆ ಏರ್ಪಡಿಸಿರುತ್ತಾರಾಗಿ ಬರತಕ್ಕ ವಿದ್ಯಾರ್ಥಿಗಳು ಮೂರು ದಿನ ಮುಂಚಿತವಾಗಿ ಸದರಿಯವರಿಗೆ ಪತ್ರವನ್ನು ಬರೆಯತಕ್ಕದ್ದು

ಹುಲಿಯ ಹಾವಳಿ

ಮಿ|| ಹ್ಯಾರಿ ಪಟಲ್‌ವರ್ತ್ ಎಂಬುವರು ಶಿವಮೊಗ್ಗ ಡಿ|| ಶಿಕಾರಿಪುರದ ಅರಣ್ಯದಲ್ಲಿ ಬೇಟೆಗೆ ಹೋಗಿ ಪ್ಪಾಗ್ಯೆ ಹಿಂದೆ ಇವರಿಂದ ಏಟು ತಿಂದಿದ್ದ ಒಂದು ಹೆಣ್ಣು ಹುಲಿಯು ಇವರ ಮೇಲೆ ಹಾರಿ ಮೈಯಲ್ಲಾ ಗಾಯಪಡಿಸಿ ಓಡಿಹೋಯಿತು ಪಟಲ್‌ವರ್ತರು ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆಕೊಂಡುತ್ತಿದ್ದಾರೆ

ಸ್ವೀಕಾರ

ಮ|| ರಾ|| ಶಿವಣ್ಣ ಹಂಚಿನಮನಿಯವರ ನೂತನಗೃಹಪ್ರವೇಶಕಾಲಕ್ಕೆ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ಮತ್ತು ಸಾಗರದ ವಂಡೆಪ್ಪ ಹಂಚಿನ ಇವರ ಧರ್ಮಪತ್ನಿಯವರ ಗರ್ಭಾಸ್ಥ ಲಿಂಗಧಾರಣ ಮತ್ತು ಗ್ರಹಶಾಂತಿಕಾಲಕ್ಕೆ ಪ್ರಭಾಪೋಷಣೆಗಾಗಿ ಸಮರ್ಪಿಸಿದ 1 ರೂ ಯು ಒಟ್ಟು 3 ರೂ ಗಳು ವೇ|| ಚನ್ನವೀರಾರಾಧ್ಯ ಬರೇಮಠ ಮಾಸೂರು ಇವರ ಮುಖಾಂತರ ತಲ್ಪಿರುತ್ತವೆ

ಜಂಬಿಕೆರೆ ತಾಲ್ಲೂಕು ದಿಬ್ಬೂರಿನಲ್ಲಿ ನಡೆದ ಶ್ರೀ ರೇಣುಕಜಯಂತಿ ಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ ಯು ಮ|| ರಾ|| ವಿ ಚನ್ನಪ್ಪ ಮಾಸ್ಟರವರ ದ್ವಾರಾ ತಲುಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಜರ್ಮನ್ ಹೊಸಚಳುವಳಿ

ಜರ್ಮನ್ ರಾಜ್ಯದಲ್ಲೆಲ್ಲಾ ಬಲಾತ್ಕಾರವಾದ ಸೈನ್ಯಶಿಕ್ಷಣವಿಧಿಯನ್ನು (ವಾರ್ಸೇಲ್ ಒಪ್ಪಂದಕ್ಕೆ ವ್ಯತಿರಿಕ್ತವಾಗಿ) ಜಾರಿಯಲ್ಲಿ ತರುವ ಹಿಟ್ಲರನ ಪ್ರಕಟನೆಯನ್ನು ನೋಡಿ ಇಂಗ್ಲೆಂಡ್, ಫ್ರಾನ್ಸ್ ಮತ್ತು ಇಟಲಿದೇಶದ ರಾಜನೀತಿವಿಶಾರದರೆಲ್ಲಾ ಭಯಾಶ್ಚರ್ಯಗಳಿಂದ ಕೂಡಿದ್ದಾರೆ ಮತ್ತು ಇದಕ್ಕೆ ಏನು ಮಾಡಬೇಕೆಂದು ಎಲ್ಲರೂ ಸೇರಿ ಯೋಚಿಸುವುದರಲ್ಲಿದ್ದಾರೆ

ಇಬ್ಬರು ಅಮೇರಿಕ ಯುವತಿಯರ ವಿಚಿತ್ರ ಆತ್ಮಹತ್ಯೆ

ಇಟಲಿಯಲ್ಲಿರುವ ಐಶ್ವರ್ಯವಂತನಾದ ಅಮೇರಿಕದ ರಾಯಭಾರಿಯ ಇಬ್ಬರು ಹೆಣ್ಣುಮಕ್ಕಳು ಅಪ್ರಿಟ್ಟ್ ಎಂಬಲ್ಲಿಂದ ಪ್ಯಾರಿಸ್‌ನಗರಕ್ಕೆ ಹೋಗಬೇಕೆಂದು ಬೇರೆ ವಿಮಾನವನ್ನು ಗೊತ್ತುಮಾಡಿ, ವಿಮಾನವು ಹಾರುತ್ತಿರುವಾಗ ಮೇಲಿನಿಂದ ಧುಮುಕಿ ಆತ್ಮಹತ್ಯೆ ಮಾಡಿಕೊಂಡರು ಇವರು ಮದುವೆಯಾಗಬೇಕೆಂದಿದ್ದ ಯುವಕರಿಬ್ಬರೂ ಕೆಲವು ದಿವಸಗಳ ಹಿಂದೆ ವಿಮಾನದ ಅನಾಹುತದಲ್ಲಿ ಮರಣಹೊಂದಿದ್ದರಿಂದ ವ್ಯಥೆಯನ್ನು ಸಹಿಸದೇ ತಾವೂ ಅದೇರೀತಿ ಆತ್ಮಹತ್ಯೆಮಾಡಿಕೊಂಡರೆಂದು ಊಹಿಸಲಾಗಿದೆ

ಪತ್ರವ್ಯವಹಾರ.

ಬಹಿಶ್ಶೀಲವಾದವರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಚಯ.

ಆರೋಗ್ಯಮಾರ್ಗ

ಶ್ರೀ ಬಿಳಿ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿಗಳವರು

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ

ಶ್ರೀಕ್ಷೇತ್ರಕಾಶಿ

ಶುದ್ಧವಾಯು.

ಮನುಷ್ಯನ ಪ್ರಾಣಧಾರಣೆಗೆ ಆಹಾರಜಲಗಳು ಎಷ್ಟು ಅವಶ್ಯಕವಾಗಿರುವುವೋ ಶುದ್ಧವಾಯು ಅದಕ್ಕಿಂತಲೂ ಅತ್ಯವಶ್ಯಕವಾಗಿರುತ್ತದೆ. ಮನುಷ್ಯನು ಹುಟ್ಟಿದಂದಿನಿಂದ ಸಾಯುವವರೆಗೂ ಒಂದು ಕ್ಷಣವಾದರೂ ವಿಶ್ರಮಿಸದೆ ಅವನಲ್ಲಿ ಶ್ವಾಸೋಚ್ಛ್ವಾಸಕ್ರಿಯೆಗಳು ನಡೆಯುತ್ತಲೇ ಇರುವುವು. ಒಂದು ಈ ಕ್ರಿಯೆಯು ಸ್ವಲ್ಪವಾಗಲಿ ನಿಂತರೆ ಮನುಷ್ಯನು ತನ್ನ ಜೀವಿತಯಾತ್ರೆಯನ್ನು ಮುಗಿಸುವನೆಂಬ ವಿಷಯವು ಸರ್ವಸಾಮಾನ್ಯವಾಗಿದೆ. ನಾವು ಒಂದು ದಿನದಲ್ಲಿ ಎರಡು ಅಥವಾ ಮೂರು ಸಲ ಆಹಾರಜಲಗಳನ್ನು ಸೇವನೆ ಮಾಡಿದರೆ ವಾಯು (ಶ್ವಾಸ)ವನ್ನು ಒಂದು ನಿಮಿಷದಲ್ಲಿ ೧೮ ರಿಂದ ೨೦ ಸಲ ಸೇವಿಸಬೇಕಾಗುವದು. ಇದರಿಂದ ನಮಗೆ ವಾಯುವಿನ ಆವಶ್ಯಕತೆಯು ಎಷ್ಟರಮಟ್ಟಿಗಿರುವುದೆಂಬುದು ಗೊತ್ತಾಗುತ್ತದೆ. ನಾವು ಉಸಿರ್ಗಳೆದುಕೊಳ್ಳುವಾಗ ಹೊರಗಿನ ಶುದ್ಧವಾಯುವು ಶ್ವಾಸದಲ್ಲಿ ಪ್ರವೇಶಿಸಿ ರಕ್ತನಾಳಗಳನ್ನು ವ್ಯಾಪಿಸಿ ರಕ್ತವನ್ನು ನಿರ್ಮಲಗೊಳಿಸುವುದು. ಉಸಿರನ್ನು ಹೊರಗೆ ಬಿಡುವಾಗ ಶರೀರದೊಳಗಿನ ದೂಷಿತವಾಯುವು ಹೊರಗೆ ಬರುವುದು. ಈ ಕಾರಣದಿಂದಲೇ ನಮ್ಮ ಶರೀರವು ಆರೋಗ್ಯದಿಂದ ಇರಬೇಕಾದರೆ ನಾವು ಯಾವಾಗಲೂ ಶುದ್ಧವಾಯು ಸಂಚಾರವುಳ್ಳ ಸ್ಥಳದಲ್ಲಿಯೇ ವಾಸಿಸಬೇಕಾಗುತ್ತದೆ.

ಜನಸಂದಣಿಯುಳ್ಳ ದೊಡ್ಡ ದೊಡ್ಡ ಪಟ್ಟಣಗಳ ಎಡೆಬಿಡದೆ ಎತ್ತರವಾದ ಮನೆಗಳಲ್ಲಿ ವಾಸಿಸುವ ಜನರ ಆರೋಗ್ಯವು ಕೆಟ್ಟಿರುವದು. ಜನಸಂದಣಿಯುಳ್ಳ ವಿಶಾಲಪಟ್ಟಣಗಳಲ್ಲಿ ವಾಸಿಸುವ ಜನಗಳು ತಮ್ಮ ಉದರಂಭರಣ ಕಾರ್ಯದಲ್ಲಿಯೇ ಮಗ್ನರಾಗಿರುವರು. ಅನ್ನ ಮತ್ತು ಹಣದ ಚಿಂತೆ ಇವರ ಪ್ರಧಾನ ಚಿಂತೆ. ಸಮಸ್ತಕಾಲವನ್ನೂ ಇವರು ಶುದ್ಧವಾಯುವಿನ ಹೆಸರನ್ನೇ ಮರೆತು ಅನುಕೂಲವಾದ ಮಾನವಶರೀರವನ್ನು ಅನಾರೋಗ್ಯದ ಕಂದರದಲ್ಲಿ ಹಾಕಿಬಿಡುವರು. ಇಂತಹ ಜನಗಳು ಆಫೀಸುಗಳಲ್ಲಿಯೋ ಅಥವಾ ದಸ್ತಿಕಾರಗೃಹಗಳಲ್ಲಿಯೋ ಒಂದೆಡೆಯಲ್ಲಿಯೇ ಕುಳಿತು ದೂಷಿತವಾಯುವನ್ನೇ ಸೇವಿಸುತ್ತಿರುವುದು ಇವರ ಜನ್ಮಸಿದ್ಧ ಅಧಿಕಾರವಾಗಿರುತ್ತದೆ.

ವಾಯುವಿನ ದುಷ್ಟತೆಗೆ ಅನಂತ ಕಾರಣಗಳಿರುವುವು. ಅವು ಸಾಮಾನ್ಯ, ವಿಶೇಷ ಭೇದಗಳಿಂದೆರಡು ಬಗೆಯಾಗಿವೆ. ಸಾಮಾನ್ಯಕಾರಣಗಳ ಸ್ವರೂಪವನ್ನು ಪ್ರಾಯಃ ಅನೇಕರು ಅರಿತಿರಬಹುದು. ಆದರೆ ವಿಶೇಷ ಕಾರಣದ ರಹಸ್ಯವನ್ನರಿತವರು ಮಾತ್ರ ಅತ್ಯಂತ ವಿರಳವಾಗಿರುತ್ತಾರೆ. ಮನೆಯ ಸುತ್ತಮುತ್ತ ಕಸ, ಕಡ್ಡಿ, ಹಣ್ಣುಗಳ ಸಿಪ್ಪೆ, ಮುಂತಾದ ವಸ್ತುಗಳು ಕೊಳ್ಳುಗೊಳ್ಳುವುದು, ಮನೆಯ ಸಮೀಪದ ಮೋರಿಗಳಲ್ಲಿ ನೀರು ನಿಲ್ಲುವುದು, ಸಿಕ್ಕಿದ ಕಡೆ ಉಗುಳುವುದು, ಮತ್ತು ಮಲಮೂತ್ರಗಳನ್ನು ವಿಸರ್ಜಿಸುವುದು, ಇವೇ ಮುಂತಾದ ಸಾಮಾನ್ಯಕಾರಣಗಳಿಂದ ವಾಯುವು ದೂಷಿತವಾಗಿ ಸಾಮಾನ್ಯರೋಗಗಳನ್ನು ಹುಟ್ಟಿಸುತ್ತದೆ. ವಿಶೇಷ ಕಾರಣದಿಂದ ದೂಷಿತವಾದ ವಾಯುವು ದೇಶವ್ಯಾಪಿಗಳಾದ ನಾನಾವಿಧ ಸಾಂಕ್ರಾಮಿಕ ರೋಗಗಳನ್ನು ಹುಟ್ಟಿಸಿ ಅನೇಕ ಕಾಲದಲ್ಲಿಯೇ ಸಾವಿರಾರು ಜನಗಳನ್ನು ಯಮಲೋಕದ ಅತಿಥಿಗಳನ್ನಾಗಿ ಮಾಡುತ್ತದೆ. ಪಾಶ್ಚಾತ್ಯ ಚಿಕಿತ್ಸಾಪಟುಗಳಾದ ಡಾಕ್ಟರುಗಳು ಈ ಸಾಂಕ್ರಾಮಿಕ ರೋಗಜನಕವಾದ ವಾಯುವಿನ ದುಷ್ಟತೆಗೆ ಅನಂತ ಕಾರಣಗಳನ್ನು ಹೇಳಬಹುದು. ಆದರೆ ನಮ್ಮ ಆಯುರ್ವೇದ ಚಿಕಿತ್ಸಾಪದ್ಧತಿಯನ್ನನುಸರಿಸಿ ಯಥಾರ್ಥರೀತಿಯಿಂದ ವಿಚಾರಮಾಡಿದರೆ ಆ ಡಾಕ್ಟರು ಗಳು ಹೇಳುವ ಸಮಸ್ತ ಕಾರಣಗಳಿಗೂ ಮೂಲಭೂತವಾಗಿರುವ ಮತ್ತೊಂದು ವಿಶಿಷ್ಟಕಾರಣವು ಇರುವುದೆಂಬುದು ಆಯುರ್ವೇದ ಚಿಕಿತ್ಸಾಪ್ರಣಾಳಿಯಲ್ಲಿ ಸಂಚರಿಸದವರಿಗೆ ಗೊತ್ತಾಗಲಾರದು. ಒಂದೊಂದು ದೇಶವನ್ನೇ ಧ್ವಂಸಗೊಳಿಸಲು ರಾಕ್ಷಸರಂತೆ ಬಾಯ್ದೆರೆದು ಕಾದಿರುತ್ತಿರುವ ಮಹಾಮಾರಿ, ಪ್ಲೇಗು, ಮುಂತಾದ ಭಯಂಕರ ರೋಗಗಳನ್ನುಂಟುಮಾಡುವ ವಾಯುವಿನ ದುಷ್ಟತೆಯ ವಿಶಿಷ್ಟಕಾರಣವು ಚರಕಸಂಹಿತೆಯ "ಜನಪದೋಧ್ವಂಸನೀಯ" ವೆಂಬ ವಿಮಾನಸ್ಥಾನದಲ್ಲಿ ಅತಿವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿರುತ್ತದೆ.

ಏವಮಸಾಮಾನ್ಯವತಾಂ ಹ್ಯಗ್ನಿವೇಶ ಪ್ರಕೃತ್ಯಾದಿಭಿ
ರ್ಭಾವೈರ್ಮನುಷ್ಯಾಣಾಂ ಯೇ ಅನ್ಯೇ ಭಾವಾಃ ಸಾಮಾನ್ಯಾಃ
ತದ್ವೈಗುಣ್ಯಾತ್ ಸಮಾನಕಾಲಾಃ ಸಮಾನ ಲಿಂಗಾಶ್ಚ |
ವ್ಯಾಧಯೋಽಭಿನಿರ್ವರ್ತಮಾನಾ ಜನಪದಮುದ್ಧ್ವಂ ಸಯಂತಿ |
ತೇ ತು ಖಲ್ವಿಮೇ ಭಾವಾಃ ಸಾಮಾನ್ಯಾಃ ಜನಪದೇಷು ಭವಂತಿ ತದ್ಯಥಾ ವಾಯುರುದಕಂ ದೇಶಃ ಕಾಲ ಇತಿ ||

ಚ ವಿಮಾನ. ಅ ೩

ಮನುಷ್ಯರು ಪ್ರಕೃತಿ ಆಹಾರ, ದೇಹ, ಬಲ, ವಯಸ್ಸು ಇವು ಮೊದಲಾದ ಭಿನ್ನಭಿನ್ನ ಸ್ವಭಾವದವರಾಗಿದ್ದರೂ ವಾಯು, ಜಲ, ಭೂಮಿ, ಕಾಲ (ವಸಂತಾದಿ ಋತು) ಗಳ ವಿಶೇಷ ದೂಷಣೆಯಿಂದುದಯಿಸುವ ಅನಂತವಿಧ ರೋಗಗಳ ಬಲೆಯಲ್ಲಿ ಬಿದ್ದು ಒಂದೇ ಸಮಯದಲ್ಲಿ ಸಾವಿರಾರು ಜನರು ಮೃತ್ಯುವಿನ ಬಾಯಿಗೆ ತುತ್ತಾಗುವರು. ಮೊದಲು ವಾಯುವು ದೂಷಿತವಾಗಿ ಅನಂತರ ಕ್ರಮದಿಂದ ಜಲಭೂಮಿ ಕಾಲಗಳು ದೂಷಿತಗಳಾಗಿ ಸಮಾನಲಕ್ಷಣಗಳಿಂದ ಕೂಡಿದ ಅನಂತವಿಧ ಭಯಂಕರ ರೋಗಗಳು ದೇಶದಲ್ಲಿ ವ್ಯಾಪಿಸುತ್ತವೆ.

ವಾಯು ಜಲ ಭೂಮಿ ಕಾಲಗಳು ವಿಶೇಷ ದೂಷಿತಗಳಾಗಲು ಯಾವ ರಹಸ್ಯಕಾರಣವಿರಬಹುದೆಂಬುದನ್ನರಿಯದ 'ಅಗ್ನಿವೇಶ' ಮುನಿಯು 'ಅಥ ಖಲ್ವೇಷಾಂ ಮೂಲಮೇತೇಷಾಂ ವಾಯ್ವಾದೀನಾಂ ವೈಗುಣ್ಯಮುತ್ಪದ್ಯತೇ ಯೇನೋಪಸನ್ನಾ ಜನಪದಮುದ್ಧ್ವಂಸಯಂತಿ' ಎಂದು ಮಾಡಿದ ಪ್ರಶ್ನೆಗೆ ಗುರುವಾದ 'ಆತ್ರೇಯ' ಮಹರ್ಷಿಯು

ಸರ್ವೇಷಾಮಪ್ಯಗ್ನಿವೇಶ ! ವಾಯ್ವಾದೀನಾಂ ವೈಗುಣ್ಯ ಮುತ್ಪದ್ಯತೇ ಯತ್ ತಸ್ಯ ಮೂಲಮಧರ್ಮಃ ಯದಾ
ವೈ ದೇಶನಗರ ನಿಗಮಜನಪದ ಪ್ರಧಾನಾ ಧರ್ಮ ಮುತ್ಕ್ರಮ್ಯ |
ಪ್ರಜಾಂ ವರ್ತಯಂತಿ ತದಾ ಆಶ್ರಿತೋಪಾಶ್ರಿತಾಃ ಪೌರ |
ಜಾನಪದಾ ವ್ಯವಹಾರೋಪಜೀವಿನಶ್ಚ ತಮಧರ್ಮ ಮಭಿವರ್ಧಯಂತಿ |
ತತಃ ಸೋಽಧರ್ಮಃ ಪ್ರಸಭಂ ಧರ್ಮಮಂತರ್ಧತ್ತೇ |
....ತಾಸಾ ನ ಸಮ್ಯಗಭಿವಾಂತಿ, ಕ್ಷಿತಿರ್ನ್ಯಾಪದ್ಯತೇ ಸಲಿಲಾ
ನ್ಯುಪಶುಷ್ಯಂತಿ, ಓಷಧಯಃ ಸ್ವಭಾವಂ ಪರಿಹಾಯಾಪದ್ಯಂತೇ, ವಿಕೃತಿಂ
ತತ ಉದ್ಧ್ವಂಸಂತೇ ಜನಪದಾಃ ಸ್ಪೃಶ್ಯಾ ಭ್ಯವಹಾರ್ಯದೋಷಾತ್

ಚ ವಿಮಾನ ಅ೩

ಎಂದು ಅತಿಗಂಭೀರವಾದುತ್ತರವನ್ನಿತ್ತಿರುವನು. ಯಾವಾಗ ರಾಜರು ಪ್ರಜೆಗಳ ಕ್ಷೇಮಕ್ಕೆ ಧರ್ಮವೇ ಮೂಲವೆಂಬ ವಿಷಯವನ್ನು ಮರೆತು ರಾಜ್ಯವನ್ನಾಳುವರೋ ಆಗ ಅಧರ್ಮವು ರಾಜರನ್ನಾಕ್ರಮಿಸುವುದು. ರಾಜರ ಸಂಬಂಧವಾದ ಆ ಅಧರ್ಮವು ಸಮೀಪಬಂಧುಗಳಾದ ರಾಜವರ್ಗದವರಲ್ಲಿಯೂ ಮಂತ್ರಿಯೇ ಮೊದಲಾದ ರಾಜ್ಯದ ಮುಖ್ಯಾಧಿಕಾರಿಗಳಲ್ಲಿಯೂ ವ್ಯಾಪಿಸಿ ಅನಂತರ ಪಟ್ಟಣಿಗರಲ್ಲಿಯೂ, ದೇಶದ ಸಕಲ ಪ್ರಜೆಗಳಲ್ಲಿಯೂ, ನಾನಾವಿಧ ವ್ಯವಸಾಯಗಳಿಂದ ಜೀವಿಸುವ ಜನಗಳಲ್ಲಿಯೂ, ವ್ಯಾಪಿಸಿ, ರಾಜ್ಯದಲ್ಲಿ ಪ್ರತಿಕ್ಷಣದಲ್ಲಿಯೂ ಬೆಳೆದು, ಧರ್ಮವನ್ನು ಬಲಾತ್ಕಾರವಾಗಿ ಆಕ್ರಮಿಸಿ, ಧರ್ಮದ ಹೆಸರನ್ನೇ ಲೋಪಗೊಳಿಸುವುದು. ಯಾವಾಗ ಧರ್ಮವು ನಷ್ಟವಾಯಿತೋ ಆಗಲೇ ವಾಯುವು ತನ್ನ ಸಹಜಗುಣವನ್ನು ಬಿಟ್ಟು ವಿಕಾರವನ್ನು ಹೊಂದುವುದು. ಅಲ್ಲಿಂದ ಭೂಮಿಯೂ, ಜಲವೂ, ವಿಕಾರವನ್ನು ಹೊಂದಿ ಸಕಲವಿಧ ಬೆಳೆಗಳೂ ವಿಕಾರವನ್ನು ಹೊಂದುವುವು. ಆ ವಿಕೃತಗಳಾದ ಬೆಳೆಗಳಿಂದಾಗುವ ಧಾನ್ಯಾದಿ ದೂಷಿತಪದಾರ್ಥಗಳನ್ನು ಸೇವಿಸುವುದರಿಂದಲೂ ಮತ್ತು ಅವುಗಳನ್ನು ಮುಟ್ಟುವುದರಿಂದಲೂ, ನಾನಾವಿಧ ಸಾಂಕ್ರಾಮಿಕ ರೋಗಗಳು ಹುಟ್ಟಿ ದೇಶದಲ್ಲಿ ಹಾಹಾಕಾರವನ್ನುಂಟುಮಾಡುತ್ತವೆ. ಆ ರೋಗಗಳಿಂದ ಆಕ್ರಾಂತರಾಗಿರುವ ಜನಗಳ ಸಂಪರ್ಕದಿಂದ ದೇಶದ ಅಸಂಖ್ಯ ಜನಗಳ ಕಾಲನ ಘೋರಕೋರದಲ್ಲಿ ಲಯವಾಗುವರು.

ಆಯುರ್ವೇದದ ಈ ಗೂಢ ವಿಷಯವನ್ನು ವಿವೇಚಿಸುವುದರಿಂದ ವಾಯುವು ವಿಶೇಷ ದೂಷಿತವಾಗಲು 'ಅಧರ್ಮ' ವೆಂಬ ವಿಶೇಷ ಕಾರಣವೇ ಮೂಲಭೂತವಾಗಿರುವುದೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಡಾಕ್ಟರುಗಳು ಹೇಳುತ್ತಿರುವ ಸಾಂಕ್ರಾಮಿಕ ಕೀಟಾಣುಗಳ ಉತ್ಪತ್ತಿಗಾದರೂ ಅತಿ ರಹಸ್ಯಮಯವಾದೀ ಅಧರ್ಮವೇ ಆದಿಕಾರಣವಾಗಿರುವುದೆಂಬುದು ನಿರ್ವಿವಾದವಾಗಿರುತ್ತದೆ. ವಾಚಕರು ಅತಿ ಸೂಕ್ಷ್ಮದೃಷ್ಟಿಯಿಂದ ಈ ವಿಷಯವನ್ನು ವಿಚಾರಮಾಡಿದರೆ ಅಧರ್ಮದಿಂದಲೇ ವಾಯುವು ವಿಕಾರಮಯವಾಗುವುದೆಂಬುದು ತಿಳಿಯದಿರಲಾರದು. ಇಷ್ಟೇಕೆ? ಜಗತ್ತಿನ ಸೃಷ್ಟಿಗೆ ಮೂಲಭೂತಗಳಾದ ಪಂಚಮಹಾಭೂತಗಳೂ ಅಧರ್ಮದಿಂದಲೇ ವಿಕೃತಗಳಾಗುವುವೆಂಬ ವಿಷಯವೂ ಮನಸ್ಸಿಗೆ ಬಾರದಿರಲಾರದು. ವಿಶಾಲಮತಿಯುಳ್ಳ ವಾಚಕರು ಆಗಿಂದಾಗ ದೇಶದಲ್ಲುಂಟಾಗುತ್ತಿರುವ ಭೂಕಂಪ, ಬಿರುಗಾಳಿ, ಅತಿವೃಷ್ಟಿ ಮೊದಲಾದ ದೇಶಧ್ವಂಸಕರ ಉಪದ್ರವಗಳನ್ನು ನೋಡುತ್ತಲೇ ಇರುವರಾದುದರಿಂದ ಅಂತಹ ವಾಚಕರಿಗೆ ಈ ವಿಷಯವಾಗಿ ಹೆಚ್ಚು ಬರೆಯಬೇಕಾಗಿರುವುದಿಲ್ಲ. ಎಂತಹ ನಾಸ್ತಿಕನಾದರೂ ಪ್ರಾಣಸಂಕಟಕ್ಕೆ ಸಿಕ್ಕಿದಾಗ ಮತ್ತಾವ ಮಾರ್ಗವನ್ನೂ ತನ್ನ ಜೀವರಕ್ಷಣೆಗೆ ಗುರಿಮಾಡಲಾರದೆ ದೇಶದಲ್ಲಿನ ಈ ಉಪದ್ರವಗಳಿಗೆ ಅಧರ್ಮವೇ ಮೂಲವೆಂಬುದನ್ನು ಯಥಾರ್ಥವಾಗಿ ಒಪ್ಪಲೇ ಬೇಕಾಗುತ್ತದೆ. ಧರ್ಮವೆಂಬ ಒಂದು ವಸ್ತುವು ಜಗತ್ತಿನಲ್ಲಿ ಸ್ವಲ್ಪವಾದರೂ ಇರುವುದರಿಂದಲೇ ಆ ಧರ್ಮದ ಪ್ರಭಾವದಿಂದ ಜಗತ್ತಿನ ಸ್ಥಿತಿಯನ್ನು ಇನ್ನೂ ನೋಡುತ್ತಿರುವೆವು. ಇಲ್ಲವಾದರೆ ಎಂದೋ ಈ ಜಗತ್ತು ಮಾಯವಾಗಿ ಹೋಗುತ್ತಿದ್ದಿತು.

ಆಯುರ್ವೇದದ ಅತಿಗಂಭೀರವಾದೀ ಪ್ರಾಚೀನ ಸಿದ್ಧಾಂತವು ಆಧ್ಯಾತ್ಮಿಕತತ್ತ್ವ ವಿವೇಚನೆಯ ಗಂಧವನ್ನೇ ಅರಿಯದೆ ಕೇವಲ ವೈಜ್ಞಾನಿಕ ಸಿದ್ಧಾಂತವನ್ನೇ ಅವಲಂಬಿಸಿ ಧರ್ಮದ ಸ್ವರೂಪವನ್ನರಿಯದ ಪಾಶ್ಚಾತ್ಯ ಶಿಕ್ಷಣಪದ್ಧತಿಯನ್ನನುಸರಿಸಿರುವ ಈಗಿನ ನವೀನ ನಾಗರಿಕರಿಗೆ ಮನಸ್ಸಿಗೆಯಾಗದಿರಬಹುದು. ಈ ನವೀನ ನಾಗರಿಕರು ತಮ್ಮ ಕನುಮನಗಳನ್ನು ವಿಜ್ಞಾನವೆಂಬ ಮನೋವಿನೋದಕರವಾದ ಬಣ್ಣದಿಂದ ಉಜ್ವಲಗೊಳಿಸಿಕೊಂಡಿರುವವರಾದ ಕಾರಣ ತಮ್ಮ ದೇಶದ ಪ್ರಾಚೀನ ಸಂಸ್ಕೃತಿಯನ್ನೂ, ತಮ್ಮ ದೇಶದ ಆಧ್ಯಾತ್ಮಿಕತತ್ತ್ವಗಳಿಂದ ಮಹೋನ್ನತವಾದ ಧಾರ್ಮಿಕಭಾವನೆಯನ್ನೂ ಮರೆತುಹೋಗಿರುತ್ತಾರೆ. ಮತ್ತೊಮ್ಮೆ ತಮ್ಮ ಆ ಪ್ರಾಚೀನ ಮಹರ್ಷಿಗಳ ಸಿದ್ಧಾಂತವನ್ನೂ, ಪ್ರಾಚೀನ ಸಂಸ್ಕೃತಿಯನ್ನು ವಿವೇಚಿಸುವುದಾದರೆ ಧರ್ಮದಿಂದಲೇ ವಾಯು, ಜಲ, ಭೂಮಿ ಕಾಲಗಳು ತಮ್ಮ ನಿಜಸ್ಥಿತಿಯನ್ನು ಹೊಂದಿರಲು ಸಮರ್ಥಗಳಾಗುವುವೆಂತಲೂ, ಅಧರ್ಮದಿಂದಲೇ ಆ ವಾಯು ಮೊದಲಾದುವುಗಳು ದೂಷಿತಗಳಾಗಿ ದೇಶದಲ್ಲಿ ನಾನಾ

ಕರ ದೋಷಗಳನ್ನುಂಟುಮಾಡುವುದೊಂದಲ್ಲದೆ, ಮನವ ಕ್ಲೇಶವಾಗುವುದು.

ದೇಶದಲ್ಲಿ ಆಗಿಂದಾಗ ಹುಟ್ಟಿ ಜನಗಳನ್ನು ಹಾಳು ಮಾಡುವ ಈ ರೋಗಗಳ ಉತ್ಪತ್ತಿಗೆ ಕಾರಣಗಳಾದ ವಾಯು ಮೊದಲಾದುವುಗಳು ತಮ್ಮ ನಿಜಸ್ಥಿತಿಯನ್ನೇ ಹೊಂದಿರುವುದಕ್ಕಾಗಿ ರಾಜರು ಮತ್ತು ಪ್ರಜೆಗಳು ಆಚರಿಸಬೇಕಾದ ಸದಾಚಾರಗಳನ್ನು ಆಯುರ್ವೇದವು ಅತಿಗಂಭೀರವಾಗಿ ಬೋಧಿಸುತ್ತದೆ.

ಸತ್ಯಂ ಭೂತೇ ದಯಾದಾನಂ ಬಲಯೋ

ದೇವತಾರ್ಚನಂ |

ಸದ್ವೃತ್ತಸ್ಯಾನುವೃತ್ತಿಶ್ಚ ಪ್ರಶಮೋಗುಪ್ತಿರಾತ್ಮನಃ ||

ಹಿತಂ ಜನಪದಾನಾಂ ಚ ಶಿವಾನಾಮುಪಸೇವನಂ |

ಸೇವನಂ ಬ್ರಹ್ಮಚರ್ಯಸ್ಯ ತಥೈವ ಬ್ರಹ್ಮ

ಚಾರಿಣಾಂ |

ಸಂಕಥಾ ಧರ್ಮಶಾಸ್ತ್ರಾಣಾಂ ಮಹರ್ಷೀಣಾಂ

ಜಿತಾತ್ಮನಾಂ |

ಧಾರ್ಮಿಕೈಸ್ಸಾತ್ವಿಕೈರ್ನಿತ್ಯಂ ಸಹಾಸ್ಯಾ ವೃದ್ಧ

ಸಮ್ಮತೈಃ |

ಇತ್ಯೇತದ್ಭೇಷಜಂ ಪ್ರೋಕ್ತಮಾಯುಷಃ ಪರಿಪಾಲನಂ|

ಯೇಷಾಮನಿಯತೋ ಮೃತ್ಯುಸ್ತಸ್ಮಿನ್ ಕಾಲೇ

ಸುದಾರುಣೇ ||

ಚ ವಿಮಾನ ಅ ೩

ಯಾವಾಗಲೂ ಸತ್ಯವನ್ನೇ ನುಡಿಯುವುದು, ಪ್ರಾಣಿಗಳಲ್ಲಿ ದಯೆಯನ್ನು ತೋರಿಸುವುದು ಸತ್ಪಾತ್ರದಲ್ಲಿ ದಾನಮಾಡುವುದು, ಬ್ರಹ್ಮಚಾರಿಗಳ ಮತ್ತು ಬ್ರಾಹ್ಮಣರ ಭೂರಿಸಂತರ್ಪಣೆಯ ಮೂಲಕ ದೇವತೆಗಳನ್ನು ಸಂತೋಷಗೊಳಿಸುವುದು ಇಷ್ಟದೇವತಾರ್ಚನೆಯನ್ನು ಯಾವಾಗಲೂ ಬಿಡದಿರುವುದು, ಯಾವಾಗಲೂ ವೇದಾಗಮಸಮ್ಮತಗಳಾದ ಸದಾಚಾರಗಳನ್ನೇ ಆಚರಿಸುತ್ತಿರುವುದು, ಹಿತ ಮತ್ತು ಮಿತಗಳಾದ ಪರಿಶುದ್ಧಾಹಾರಗಳ ಸೇವನೆಯ ಮೂಲಕ ಶರೀರಾರೋಗ್ಯವನ್ನು ಕಾಪಾಡಿಕೊಳ್ಳುವುದು, ಉಪದ್ರವರಹಿತವಾದ ಮತ್ತು ವಾಯು ಜಲಗಳ ಪರಿಶುದ್ಧತೆಯಿಂದ ಕೂಡಿರುವ ನಿರ್ಮಲದೇಶದಲ್ಲಿ ವಾಸಿಸುವುದು ಬ್ರಹ್ಮಚರ್ಯವನ್ನು ರಕ್ಷಿಸಿಕೊಳ್ಳುವುದು, ಬ್ರಹ್ಮಚಾರಿಗಳನ್ನು ಸೇವಿಸುವುದು, ಧರ್ಮಶಾಸ್ತ್ರಗಳ ಚರ್ಚೆ ಮತ್ತು ಯಾವಾಗಲೂ ಜಿತೇಂದ್ರಿಯರಾದ ಮಹರ್ಷಿಗಳನ್ನೂ ಸನ್ಮಾರ್ಗಪ್ರದರಾದ ಗುರುಪುಂಗವರನ್ನೂ ಭಜಿಸುತ್ತಿರುವುದು, ಧರ್ಮಮಾರ್ಗವನ್ನನುಸರಿಸುತ್ತಿರುವ ಸತ್ವಗುಣಸಂಪನ್ನರಾದ ಜ್ಞಾನವೃದ್ಧರಿಂದ ಶ್ಲಾಘಿತರಾದ ಸತ್ಪುರುಷರೊಡನೆ ಸಂವಾದದಲ್ಲಿಯೇ ಕಾಲವನ್ನು ಕಳೆಯುವದು ಇವೇ ಮುಂತಾದ ಸದಾಚಾರಗಳೆಂಬ ದಿವ್ಯೌಷಧಗಳು ಅಕಾಲಮೃತ್ಯುವಿನಿಂದ ರಕ್ಷಿಸಲು ಸಮರ್ಥಗಳಾಗುತ್ತವೆ. ಈ ಮಹೌಷಧಗಳು ದೇಶದಲ್ಲಿನ ವಾಯು ಜಲಭೂಮಿ ಕಾಲಗಳ ಸ್ವಭಾವಸ್ಥಿತಿಯನ್ನು ಕಾಪಾಡುತ್ತ ಯಾವ ಉಪದ್ರವಕ್ಕೂ ಅವಕಾಶವನ್ನೀಯದೆ ರಾಜಪ್ರಜೆಗಳನ್ನು ಸುಖಸಾಗರದಲ್ಲಿ ಮುಳುಗಿಸುವುವು ಮತ್ತು ಒಂದುವೇಳೆ ಅಂತಹ ವ್ಯಾಪಕರೋಗಗಳುಂಟಾದಾಗಲೂ ರೋಗಾಕ್ರಮಣಕ್ಕಿಂತ ಮೊದಲೇ ಸಿದ್ಧಗೊಳಿಸಲ್ಪಟ್ಟಿರುವ ಔಷಧದ ಸೇವನೆಯೊಂದಿಗೆ ಈ ಸದಾಚಾರಗಳು ಸೇರಿ ದೇಶದ ಸಕಲ ಪ್ರಜೆಗಳನ್ನು ರೋಗಮುಕ್ತರನ್ನಾಗಿ ಮಾಡಿ ಅಕಾಲಮರಣವನ್ನು ದೂರಮಾಡುತ್ತವೆ.

ಆದುದರಿಂದ ಆರೋಗ್ಯಾಭಿಲಾಷಿಗಳಾದ ಮಾನವರು ವಾಯುವಿನ ಸಾಮಾನ್ಯ ದೂಷಣೆಯ ಕಾರಣಗಳನ್ನೂ, ವಿಶೇಷ ದೂಷಣೆಯ ವಿಶೇಷಕಾರಣವನ್ನೂ, ಸಾವಧಾನದಿಂದ ಪರ್ಯಾಲೋಚಿಸಿ ಅವುಗಳ ಪರಿಹಾರಕ್ಕಾಗಿ ಮೊದಲು ಯತ್ನವನ್ನು ಮಾಡಿ ಅನಂತರ ಪ್ರತಿದಿನದ ಪ್ರಾತಃಕಾಲ ಸಾಯಂಕಾಲಗಳಲ್ಲಿ ಆರೋಗ್ಯವರ್ಧನಕ್ಕಾಗಿ ಜನಸಂದಣಿಯಿಲ್ಲದಿರುವ ಮತ್ತು ನಾನಾವಿಧ ಗಿಡಗಳಿಂದಲೂ ಬಳ್ಳಿಗಳಿಂದಲೂ ರಮಣೀಯವಾಗಿರುವ ನಿರ್ಮಲ ಪ್ರದೇಶದಲ್ಲಿ ಸಂಚರಿಸುತ್ತ ಅಲ್ಲಿಯ ಪರಿಶುದ್ಧವಾಯುವನ್ನು ಸೇವಿಸುವುದಾದರೆ ಶರೀರದಲ್ಲಿನ ರಕ್ತವು ಶುದ್ಧವಾಗಿ ಮನಸ್ಸು ಮತ್ತು ಇಂದ್ರಿಯಗಳಲ್ಲಿ ವಿಶೇಷಸ್ಫೂರ್ತಿಯುಂಟಾಗಿ ಶಾರೀರಿಕ ಮಾನಸಿಕ ಬಲಗಳು ಸ್ಥಿರಗೊಳ್ಳುತ್ತವೆ.

(ಸಶೇಷ)

ಶ್ರೀ ಮಹಾಬಲೇಶ್ವರಾಯ ನಮಃ

ಗೋಕರ್ಣದಲ್ಲಿ ವೀರಶೈವಮಠದ ಉದಯ.

ಗೋಕರ್ಣವು ಪುಣ್ಯಕ್ಷೇತ್ರವು ಮಾನವಕೋಟಿಗಳ ಆಸನಾಶಿಯು ಪರಮಾತ್ಮನ ರೂಪವು ನೆಲೆಗೊಂಡ ಸ್ಥಳವು ಹಿಂದೂ ಜನರ ಆದರ ಮತ್ತು ಅಭಿಮಾನದ ಬೀಡು ದಧೀಚಿ ಮೊದಲಾದ ಋಷಿವರ್ಯರು ಶ್ರೀ ಶಂಕರಾಚಾರ್ಯರು ಮೊದಲಾದ ಆಚಾರ್ಯರೂ ಶ್ರೀ ನೀಲಕಂಠ ಹರದತ್ತ ಮೊದಲಾದ ವೀರಶೈವ ಶಿವಾಚಾರ್ಯರೂ ಆ ಸ್ಥಾನದಲ್ಲಿ ತಪಸ್ಸು ಮಾಡಿದ್ದರಿಂದ ಬಂಗಾರಕ್ಕೆ ಕುಂದಣಹಾಕಿದಂತಾಗಿದೆ ಗೋಕರ್ಣವು ಪುಣ್ಯ ಮತ್ತು ಪವಿತ್ರಸ್ಥಾನವೆಂಬುದಕ್ಕೆ ಅದರ ಹೆಸರು ತೆಗೆದಾಗ್ಗೆ ನಮ್ಮ ಮನಸ್ಸಿನಲ್ಲಿ ಸ್ವಾಭಾವಿಕವಾಗಿ ಹುಟ್ಟುವ ಭಕ್ತಿಭಾವವೇ ಇದಕ್ಕೆ ಸಾಕ್ಷಿ. ಮಾನವಕೋಟಿಯು ಆಯುಷ್ಯದಲ್ಲಿ ಪುಣ್ಯಪಡೆಯಲು ಮಾಡುವ ಸಾಧನಗಳಲ್ಲಿ ಪುಣ್ಯಸ್ಥಾನಗಳ ದರ್ಶನ ಮತ್ತು ವಾಸ ಇವು ಒಳ್ಳೇ ಹಿರಿಗಳಾದ ಸಾಧನಗಳಾಗಿವೆಯಲ್ಲವೆ

ಇಂಥ ಅತುಲ ಪುಣ್ಯಸ್ಥಾನದಲ್ಲಿ ಶ್ರೀ|| ಜ|| ಬ್ರ|| ಮುಡಿವಾಳಸ್ವಾಮಿ ಚರಮೂರ್ತಿಗಳು ಹನ್ನೆರಡುಮಠ ಹುಬ್ಬಳ್ಳಿ ಜಿ ಧಾರವಾಡ ಇವರು ಮಠವನ್ನು ಕಟ್ಟಿಸಲು ಪ್ರಯತ್ನ ನಡಿಸಿದ್ದಾರೆ ಆ ಬಗ್ಗೆ ಸರಕಾರದವರು ಶ್ರೀ ಸ್ವಾಮಿಗಳವರಿಗೆ ಜಾಗವನ್ನು ಕೊಟ್ಟಿದ್ದಾರ ಶ್ರೀಗಳವರು ವೀರಶೈವ ಯಾತ್ರಿಕರಿಗೆ ಬಹು ಕಾಲದಿಂದ ಆಗುವ ಎಡರು ತೊಡರುಗಳನ್ನು ನೋಡಿ ವ್ಯಾಕುಲಗೊಂಡು ತಮ್ಮ ಮಠವನ್ನು ಕಟ್ಟಿಸಿ ಎಲ್ಲ ವೀರಶೈವರಿಗೆ ಅನುಕೂಲತೆಗಳನ್ನು ಒದಗಿಸಿಕೊಡುವ ಘನವಾದ ಕಾರ್ಯವನ್ನು ಕೈಕೊಂಡಿರುವದನ್ನು ನೋಡಿದರೆ ಪ್ರತಿಯೊಬ್ಬನು ಸಹಾನುಭೂತಿಯನ್ನಿತ್ತು ಸಹಾಯಮಾಡದಿರಲಾರನು ಕಾರ್ಯವು ಘನವಾಗಿದ್ದರೂ ಮಹಾಜನಗಳ ಉದಾರಾಶ್ರಯದಿಂದ ಹಗುರಾಗುವದು

ಎಲ್ಲ ಮಹಾಜನಗಳಿಗೆ ವಿಶೇಷತಃ ವೀರಶೈವರಿಗೆ ಅಪಂಪ್ರಾರ್ಥವಾಗಿ ಪುಣ್ಯಗಳಿಸಲು ಇದು ಒಳ್ಳೇ ಸಮಯ ಅವರ ದೇಣಿಗೆಯು ಧರ್ಮ ಮತ್ತು ಪುಣ್ಯ ಕಾರ್ಯಗಳ ಒಡ್ಡೋಲಗವಾಗಿ ಸನಾತನದು ಪುಣ್ಯಮಂದಿರಕ್ಕೆ ಸಲ್ಲುವವು. ಅವರ ಸಹಾಯವು ಯೋಗಿಗಳು ಮತ್ತು ಜಂಗಮರು ಬಂದು ವಾಸಮಾಡುವ ಪವಿತ್ರ ಜಪಸ್ಥಕ್ಕೆ ಮುಟ್ಟುವದು ಅವರ ದುಡ್ಡು ಧರ್ಮಸೇವೆ, ಯೋಗಸಿದ್ಧಿ ಪುಣ್ಯಕಾರ್ಯ ಮುಂತಾದವುಗಳಿಗೆ ಮುಟ್ಟುವದು

ನಮ್ಮಿಂದ ಮಠ ಮಾನ್ಯ ಛತ್ರ ಮೊದಲಾದವುಗಳನ್ನು ಕಟ್ಟಿಸಿ ಇತುಪರಗಳಲ್ಲಿ ಅಚಂದ್ರಾರ್ಕ ಮತ್ತು ಅಮೋಘ ಪುಣ್ಯವನ್ನು ಪಡೆಯುವಷ್ಟು ಬಲವಿಲ್ಲದಿದ್ದರೂ ಅಂಥ ಕಾರ್ಯಗಳು ಅಕಸ್ಮಾತ್ತಾಗಿ ಮಹಾನುಭಾವರಿಂದ ನಡೆದರೆ ನಮ್ಮ ಶಕ್ತ್ಯನುಸಾರವಾಗಿ ಅವುಗಳಿಗೆ ಸಹಾಯಮಾಡಿದರೆ ಆ ಸಹಾಯದ ಪುಣ್ಯವು ದಿವ್ಯಫಲವಾಗಿ ಪರಿಣಮಿಸುವದು

ಈ ವಿಷಯವನ್ನು ತಿಳಿದು ಮೊದಲೇ ಶ್ರೀ ಮಹಾಸ್ವಾಮಿಗಳವರ ಕಾರ್ಯಕ್ಕೆ ಸ್ವಲ್ಪ ದಿವಸಗಳಲ್ಲಿಯೇ ಹುಬ್ಬಳ್ಳಿಯ ಮತ್ತು ಬೇರೆ ಗ್ರಾಮದ ಮಹಾಶಯರು ಜಾಗ ಖರೀದಿಮಾಡಲಿಕ್ಕೆ ಆ ಜಾಗದಲ್ಲಿ ಸರಿಯಾದ ಭಿತ್ತಿ ಕಡಿಸಲಿಕ್ಕೆ ಮತ್ತು ಪಕ್ಕವಾಗಿ ಕಟ್ಟಿಸುವ ಮಠಕ್ಕೆ ಹತ್ತುವಷ್ಟು ಕಟ್ಟಿಗೆಗಳನ್ನು ಪೂರವರಮಾಡಿ ಕೊಡಲಿಕ್ಕೆ ಗುರುಮಂದಿರ ಮತ್ತು ಬೇರೆ ಖೋಲಿಗಳನ್ನು ಕಟ್ಟಿಸಲಿಕ್ಕೆ ವಾಗ್ದಾನಮಾಡಿ ಕೆಲವುಮಟ್ಟಿಗೆ ಸಹಾಯಮಾಡಿದ್ದು ನೋಡಿದರೆ ಶ್ರೀ ಸ್ವಾಮಿಗಳವರ ತಪಃಪ್ರಭಾವವು ಮತ್ತು ಪುಣ್ಯಕಾರ್ಯದ ಬಲುಮೆಯೂ ಎಷ್ಟಿದೆಯೆಂಬುದು ಒಡೆದು ಕಾಣುತ್ತದೆ

ಶ್ರೀ ಸ್ವಾಮಿಗಳವರು ಗೋಕರ್ಣದಲ್ಲಿ ಜಾಗದ ಸಲುವಾಗಿ ಪ್ರಯತ್ನಮಾಡುವಾಗ್ಗೆ ಬ್ರಾಹ್ಮಣ ಮೊದಲಾದ ಪರಮತೀಯ ಬಂಧುಗಳು ವಿಶೇಷವಾಗಿ ಸಹಾಯಮಾಡಿ ವೀರಶೈವ ಮಠವನ್ನು ಕಟ್ಟಿಸಲು ಪ್ರೋತ್ಸಾಹ ಕೊಟ್ಟದ್ದರಿಂದ ಮತಸಹಿಷ್ಣುವ ಪುಣ್ಯಕಾರ್ಯದಲ್ಲಿ ಅವರೂ ಭಾಗಿಗಳಾಗಿದ್ದಾರೆಂಬುದಕ್ಕೆ ಏನೂ ಅಡ್ಡಿಯಿಲ್ಲ

ಆದ್ದರಿಂದ ವೀರಶೈವರ ಅಭ್ಯುದಯವನ್ನೇ ಬಯಸುವ ಭಕ್ತಿಯುತರಾದ ಮಹಾಜನಗಳು ಮಹಾಸ್ವಾಮಿಗಳವರ ಧರ್ಮ ಮತ್ತು ಪುಣ್ಯಕಾರ್ಯದ ಧುರಿಯಲ್ಲಿ ತಮ್ಮ ದೇಣಿಗೆ ಸಹಾಯವನ್ನಿತ್ತು ತೀವ್ರದಲ್ಲಿಯೇ ಗೋಕರ್ಣಕ್ಷೇತ್ರದಲ್ಲಿ ವೀರಶೈವ ಮಠದ ಉದಯವಾಗಲೆಂದು ಅಂತಃಕರಣದಿಂದ ಬಯಸಿ ಅದರಂತೆ ನೆರವಾಗಿ ಹೆಚ್ಚಿನ ಪುಣ್ಯ ಮತ್ತು ಕೀರ್ತಿಯನ್ನು ಪಡೆಯಬೇಕಾಗಿ ನಮ್ಮ ಸವಿನಯದ ಬೇಡಿಕೆ

ತಮ್ಮ ಬಂಧು,

ಪಟ್ಟದಸ್ವಾಮಿ ಹಿರೇಮಠ,

ಹೈಕೋರ್ಟ ವಕೀಲ್ ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿರುವ ಹನ್ನೆರಡು ಮಠದ ಶ್ರೀ|| ಜ|| ಬ್ರ|| ಮಡಿವಾಳಸ್ವಾಮಿ ಚರಮೂರ್ತಿಗಳು ಅತ್ಯಾದರದಿಂದ ಪ್ರಸಿದ್ಧವಾದ ಗೋಕರ್ಣಕ್ಷೇತ್ರದಲ್ಲಿ ವೀರಶೈವ ಮಠವನ್ನು ಕಟ್ಟಿಸಬೇಕೆಂದು ಕಾರ್ಯಾರಂಭಮಾಡಿರುವ ಸಮಯದಲ್ಲಿ ಇದುವರೆಗೆ ಭಕ್ತಿಯಿಂದ ಧನಸಹಾಯಮಾಡಿದವರ ಹೆಸರುಗಳು

೨೫ ರೂ ವೆ|| ರೇವಣಯ್ಯ ಶಂಕ್ರಯ್ಯ ಚಿಕ್ಕಮಠ, ೨೫ ರೂ ವೇ|| ಚನ್ನಬಸವಯ್ಯನವರು ಸಂಸ್ಥಾನಮಠ, ೨೫ ರೂ ವೇ|| ರುದ್ರಯ್ಯನವರು ಅಥಣಿ ೨೫ ರೂ ವೇ|| ಶಿವಮೂರ್ತಯ್ಯನವರು, ಹಿರೇಮಠ ೨೫ ರೂ. ಗಂಗವ್ವ ಕೋಂ ಕಲ್ಲಯ್ಯ ಗೋಕಲಮಠ, ೧೨೫ರೂ ಬಿ ಕೆ ಕೆಂಚಪ್ಪ ಮುನವಳ್ಳಿ ಮತ್ತಿಕಾಳಯ್ಯನವರು, ೨೫ ರೂ ರಾ|| ಮಹಾರುದ್ರಪ್ಪನವರು ಗಣೇಶಪೇಟಶೆಟ್ಟರ ೨೫ರೂ ರಾ|| ಶಿವಪ್ಪನವರು ಗಣೇಶಪೇಟಶೆಟ್ಟರ, ೨೫ ರೂ ರಾ|| ಗುರುಸಿದ್ದಪ್ಪನವರು ಅಂಗಡಿ ಗಣೇಶಪೇಟ ೨೫ ರೂ ರಾ|| ರಾಚಪ್ಪನವರು ಹುಬ್ಬಳ್ಳಿ ೧೦೦ ರೂ ರಾ|| ಲೋಚನಪ್ಪನವರು ಗೂಗವಾಡ ೨೫ರೂ ರಾ|| ಬಸವಲಿಂಗಪ್ಪನವರು ತಾಳಿಕೋಟ ೨೫ ರೂ ಶಿವಲಿಂಗವ್ವನವರು ಬಡಾವಗಲ್ಲ, ೨೫ ರೂ ರೇವವ್ವ ಉಮಚಗಿ ೨೫ ರೂ ರಾ|| ವೀರಪ್ಪನವರು ಪಾಣಿಶೆಟ್ಟರ, ೨೫ ರೂ ರಾ|| ಮಲ್ಲಪ್ಪನವರು ಮೆಣಸಿಗಿ ೨೫ ರೂ ಶಿವಗಂಗವ್ವ ನಶಿಕಟ್ಟನ ೨೫ ರೂ ರಾ|| ಸಂಗಪ್ಪನವರು ಕೊಪ್ಪ ೨೫ ರೂ ರಾ|| ವೀರಪ್ಪನವರು ಬೆಟಗೇರಿ ೨೫ ರೂ ಶಿವರುದ್ರನವರು, ೨೫ ರೂ ರಾ|| ಚನ್ನಬಸಪ್ಪನವರು ಹಿಂಡಿಗಿ ೨೫ ರೂ ರಾ|| ಲಿಂಗಪ್ಪನವರು ಅಳಗುಂಡಿಗಿ ೨೫ ರೂ ರಾ|| ಗುರುಸಿದ್ದಪ್ಪ ನಂ೩, ೨೫ ರೂ ರಾ|| ಅಡಿವೆಪ್ಪನವರು ಹುಬ್ಬಳ್ಳಿ ೨೫ ರೂ ಗುರುಪಾದವ್ವ ಕೊಂಬಳಿ ೨೫ ರೂ ಗಂಗವ್ವ ಕೋಂ ಸಿದ್ಧಪ್ಪ ಕಿತ್ತೂರ ೨೫ ರೂ ಬಸಪ್ಪನವರು ಗಣೇಶಪೇಟ ೨೫ ರೂ ಮುರಿಗೆಪ್ಪನವರು ಕವಲೂರಶೆಟ್ಟರ, ೨೫ ರೂ ಬಸಪ್ಪನವರು ಬ್ಯಾಳಿ ೨೫ ರೂ ಮಲ್ಲೇಶಗೌಡ ಬಸವನ್ನಾ ಪೊಲೀಸಪಾಟೀಲ, ೨೫ ರೂ ಶಿವರಾಮಾಪ್ಪನವರು ಕಂಬಳಿ ರುದ್ರಪ್ಪನವರು ಹಿರೇಹಾಳ,

ಬೇರೆಕಡೆಯಿಂದ ಕಾಣಿಕೆಕೊಟ್ಟವರು

೨೧ ರೂ ಶ್ರೀ ಸಿದ್ದಪ್ಪನವರು ಕೆಂಬಾರ ಹುಬ್ಬಳ್ಳಿ ೨ ರೂ. ಶ್ರೀ ಶಿವಲಿಂಗಯ್ಯನವರು ಗದ್ದನಕೇರಿ ೧ ರೂ, ಶ್ರೀ ಚನ್ನಪ್ಪಶೆಟ್ಟರ, ೨ ರೂ ಶ್ರೀ ರಾಚಪ್ಪ ಕರವೀರಶೆಟ್ಟಿ ೧ ರೂ ಶ್ರೀ ಗಂಗಪ್ಪ ಕೋರಿ ೨ ರೂ ಚನ್ನಬಸಯ್ಯನವರು ಸಂಸ್ಥಾನಮಠ, ೫ ರೂ ಗುರುಪಾದಪ್ಪನವರು ಹಾವಣಗಿ, ೧ ರೂ ವೀರಪ್ಪ ಕಮತಿ ನರೆಯಕಾರ್ಯದಲ್ಲಿ ೧೭|| ರೂ ಸಿದ್ದೇಶ್ವರ ಕಂಪನಿ ಕೊಡೆಕಾರರಿಂದ ೧೨ ರೂ ಬಸವಣ್ಣೆವ್ವ ೧೧| ರೂ. ಅಡಿವೆಪ್ಪ ಹುರಕಡ್ಲಿ ೧೦ ರೂ ಮಹಾರುದ್ರಪ್ಪ ಶೀಲವಂತರ ೧೦ ರೂ ಯಲ್ಲರಡ್ಡಿ ಹಾಲಕಟ್ಟಿ ೨ ರೂ ಗಣಪತಿ ಗಣೇಶಭಟ್ಟ ಕೋಟೆ ಗೋಕರ್ಣ, ೨ ರೂ ಅಮರಪ್ಪ ಬೆಳ್ಳುಳ್ಳಿ ೨ ರೂ ಸಂಪಗಿ ಶಾ ಬ್ಯಾಡಗಿ, ೧ರೂ ಚನ್ನವೀರಪ್ಪ ನಾಗನೂರ ೧ರೂ. ಗಣಪತಪ್ಪ ನಾಮದೇವಪ್ಪ ಉಂಡಿ ೫ ಸಾತಾರ,

ಇದಲ್ಲದೆ ಇಲ್ಲಿಯ ಶ್ರೀಮಂತ ಬಸಪ್ಪಣ್ಣಾ ಮೆಣಸಿನಕಾಯಿ ದಲಾಲ ಗೋಕರ್ಣದ ಮಠಸ್ಥಾನದಲ್ಲಿ ಭಾವಿತೆಗಿಸಲಿಕ್ಕೆ ಪ್ರಾರಂಭಿಸಿದ್ದಾರೆ ಇನ್ನು ಕೆಲವು ಮಹಾಶಯರು ಮಠಸ್ಥಾನದಲ್ಲಿ ಕೋಣೆಗಳನ್ನು ಕಟ್ಟಿಸಲಿಕ್ಕೂ ಏರೆಕರಧ ಸಹಾಯಮಾಡಲಿಕ್ಕೂ ಒಪ್ಪಿಕೊಂಡಿರುತ್ತಾರೆ ಮೇಲ್ಕಂಡ ಮಹಾಶಯರಿಗೆ ಜಗನ್ನಿಯಾಮಕನಾದ ಶ್ರೀ ಮಹಾಬಲೇಶ್ವರನು ಶುಭಾನುಗ್ರಹವನ್ನು ಮಾಡಲೆಂದು ಆಶೀರ್ವದಿಸುತ್ತೇನೆ

ಸೂಚನೆ—ದೇಣಿಗೆಗಳನ್ನು ಸ್ವೀಕಾರ ಮಾಡಲು ಶ್ರೀ ಸ್ವಾಮಿಗಳ ಹೆಸರಿನ ಪಾವತಿ ಪುಸ್ತಕಗಳುಂಟು ಮತ್ತು ಪ್ರತಿಯೊಂದು ಪಾವತಿ ಮೇಲೆ ಮುದ್ರೆ ಮತ್ತು ಹಿಂಭಾಗದಲ್ಲಿ ಶ್ರೀಗಳವರ ಸಹಿಯುಂಟು ಉದಾರಾಶ್ರಯರು ಅವುಗಳನ್ನು ನೋಡಿ ತಮ್ಮ ದೇಣಿಗೆಯನ್ನೀಯಬೇಕು. ಮತ್ತು ಯಾತ್ರಾಕಾಲಕ್ಕೆ ಶ್ರೀ ಸ್ವಾಮಿಗಳ ಮುಂದುಗಡೆಯಲ್ಲಿ ಇಟ್ಟಿರುವ ಪೆಟ್ಟಿಗೆಯಲ್ಲಿಯೇ ಹಣವನ್ನು ಹಾಕಿ ಅಧಿಕಾರದ ಪಡೆದುಕೊಳ್ಳತಕ್ಕದ್ದು

ಚರಮೂರ್ತಿಗಳು,

ಹನ್ನೆರಡುಮಠ ಹುಬ್ಬಳ್ಳಿ.

ಪಂಚಾಚಾರ್ಯ ಪ್ರಭಾ.

೧೯೩೫ನೇ ಮಾರ್ಚ ತಾ|| ೨೫ನೇ ಸೋಮವಾರ

ಗೋಕರ್ಣಕ್ಷೇತ್ರದಲ್ಲಿ ವೀರಶೈವ ನೂತನ ಮಠವು.

ಹುಬ್ಬಳ್ಳಿಯಲ್ಲಿರುವ ಹನ್ನೆರಡು ಮಠದ ಷ|| ಬ್ರ|| ಶ್ರೀ|| ಚರಮೂರ್ತಿಗಳವರು ಗೋಕರ್ಣಕ್ಷೇತ್ರದಲ್ಲಿ ವೀರಶೈವರ ಅನುಕೂಲಕ್ಕಾಗಿ ಒಂದು ನೂತನ ಮಠವನ್ನು ನಿರ್ಮಾಣ ಮಾಡುವ ಕಾರ್ಯದಲ್ಲಿ ತೊಡಗಿರುವರೆಂಬ ವಿಷಯವನ್ನು ಕೇಳಿ ಬಹಳ ಸಂತೋಷವಾಗುತ್ತದೆ. ಗೋಕರ್ಣವೆಂಬುದು ಪುರಾಣಪ್ರಸಿದ್ಧವಾದ ಶಿವಕ್ಷೇತ್ರವು. ಈ ಕ್ಷೇತ್ರವು ಉತ್ತರ ಕನ್ನಡ ಜಿಲ್ಲೆಯ ಸಮುದ್ರ ತೀರದಲ್ಲಿ ಶೋಭಾಯಮಾನವಾಗಿರುವದು. ಇಲ್ಲಿ ಕೈಲಾಸ ಧಿಪತಿಯಾದ ಈಶ್ವರನು ಮಹಾಬಲೇಶ್ವರ ಎಂಬ ಹೆಸರಿನಿಂದ ಭಕ್ತರ ಅಭೀಷ್ಟಗಳನ್ನು ನೆರವೇರಿಸುವುದರಲ್ಲಿ ಯಾವಾಗಲೂ ಉಭಯಹಸ್ತವನ್ನು ನೀಡಿರುವನು. ಈ ಕ್ಷೇತ್ರದಲ್ಲಿ ಪ್ರತಿವರ್ಷದ ಮಹಾಶಿವರಾತ್ರಿ ಸಮಯದಲ್ಲಿ ವಿಶೇಷವಾದ ಜಾತ್ರೆಯು ನಡೆಯುತ್ತದೆ. ಈ ಜಾತ್ರೆಗೆ ದೂರದೂರ ದೇಶದಿಂದ ಬಹುಜನ ವೀರಶೈವರು ಹೋಗಿ ದೇವರ ಸೇವೆಯನ್ನು ಮಾಡುವ ಸಂಪ್ರದಾಯವು ಅನಾದಿಕಾಲದಿಂದ ಬಂದಿರುತ್ತದೆ. ಕಾಶೀ, ರಾಮೇಶ್ವರ, ಶ್ರೀಶೈಲ ಮುಂತಾದ ಕ್ಷೇತ್ರಮಾಲಿಕೆಯಲ್ಲಿ ಇದೊಂದು ಮುಖ್ಯ ಕ್ಷೇತ್ರವಾಗಿ ಪರಿಗಣಿತವಾಗಿದೆ. ಈ ಕ್ಷೇತ್ರಕ್ಕೆ ಜಾತ್ರೆಯ ಕಾಲದಲ್ಲೂ ಇತರ ಕಾಲದಲ್ಲೂ ಬಹುಜನ ವೀರಶೈವರು ಇತರರೂ ಹೋಗಿ ಸಮುದ್ರಸ್ನಾನಮಾಡಿ ಶ್ರೀ ಮಹಾಬಲೇಶ್ವರಲಿಂಗವನ್ನು ಸಂದರ್ಶಿಸುವರು. ಆದರೆ ಅಂಥ ಸುಪ್ರಸಿದ್ಧವಾದ ಶಿವಕ್ಷೇತ್ರದಲ್ಲಿ ಒಂದೆರಡು ವೀರಶೈವ ಜನಸಂಖ್ಯೆಯಾಗಲಿ ಅಥವಾ ವಾಸಕ್ಕೆ ಯೋಗ್ಯವಾದ ಒಂದು ಗುರುಮಠವಾಗಲಿ ಇದುವರೆಗೂ ಇಲ್ಲದೆ ಇರುವುದರಿಂದ ಯಾತ್ರಾರ್ಥಿಗಳಾದ ವೀರಶೈವರಿಗೆ ಆಚಾರವಿಚಾರ ವಿಷಯದಲ್ಲಿ ಅನೇಕ ವಿಧವಾದ ತೊಂದರೆಯುಂಟಾಗಿರುವದನ್ನು ಪೂಜ್ಯರೂ ಸಮದರ್ಶಿಗಳೂ ಗುಣಯುತರೂ ಆದ ಶ್ರೀ ಚರಮೂರ್ತಿಗಳವರು ಪರಿಶೀಲಿಸಿ ಈ ಕ್ಷೇತ್ರದಲ್ಲಿ ಬಹುಕಾಲದಿಂದ ನೆಲೆಗೊಂಡಿರುವ ಈ ನ್ಯೂನತೆಯನ್ನು ಹೋಗಲಾಡಿಸಬೇಕೆಂಬ ದಯಾದೃಷ್ಟಿಯಿಂದ ಒಂದು ನೂತನ ಗುರುಮಠವನ್ನು ಕಟ್ಟಿಸಲು ಸಿದ್ಧಗೊಳಿಸುತ್ತಿರುವುದನ್ನು ನೋಡಿದರೆ ಪ್ರತಿಯೊಬ್ಬ ವೀರಶೈವರೂ ಸಂತೋಷಸಾಗರದಲ್ಲಿ ಮುಳುಗೇಳಬೇಕಾಗಿದೆ.

> ಶಿವಸ್ಥಾನಾನಿ ತೀರ್ಥಾನಿ ವಿಶಿಷ್ಟಾನಿ ಶಿವಾಲಯಾಃ |
> ಶಿವಯಾತ್ರೋತ್ಸವಂ ನಿತ್ಯಂ ಸ ವೀಕ್ಷ ಪರಯಾ ಮುದಾ ||
> ಶಿವಕ್ಷೇತ್ರಸ್ಥೇ ಮಹಾಯಾತ್ರಾದರ್ಶನಕಾಂಕ್ಷಿಣಾಂ |
> ಮಾರ್ಗೇನ್ನಪಾನದಾನಂಚ ಕುರ್ಯಾನ್ಮಹೇಶ್ವರೋ ಜನಃ ||

ಶಿವಾರ್ಚಕನಾದ ಮಾನವನು ಕಾಶೀ, ಕೇದಾರ, ರಾಮೇಶ್ವರ, ಶ್ರೀಶೈಲ, ಗೋಕರ್ಣಾದಿ ಮಹಾಕ್ಷೇತ್ರಗಳಿಗೂ, ಗಂಗಾ ಯಮುನಾದಿ ಮಹಾತೀರ್ಥಗಳಿಗೂ ಆಯಾಯ ನೈಮಿತ್ತಿಕ ಕಾಲಗಳಲ್ಲಿ ವಿಶೇಷವಾದ ಸಂತೋಷದಿಂದ ಶಿವಕ್ಷೇತ್ರಯಾತ್ರೆಯನ್ನು ಮಾಡತಕ್ಕದ್ದು ಮತ್ತು ಇಂಥಮಹಾಕ್ಷೇತ್ರಗಳಲ್ಲಿ ವಿರಾಜಮಾನಗಳಾದ ಮಹಾಲಿಂಗಗಳನ್ನು ದರ್ಶನಮಾಡಲಿಚ್ಛೆಯಿಂದ ಪ್ರಯಾಣ ಮಾಡುತ್ತಿರುವ ಜನಗಳಿಗೆ ದಾರಿಯುದ್ದಕ್ಕೂ ಸೌಕರ್ಯಗಳನ್ನು ಕಲ್ಪಿಸುತ್ತ, ವಸತಿ ಅನ್ನಪಾನಾದಿಗಳಿಂದುಪಚರಿಸುವುದೊಂದು ವೀರಶೈವರ ಮುಖ್ಯ ಧರ್ಮವೆಂದು ಶ್ರೀ ಭಗವತ್ಪಾದ ರೇಣುಕಶಿವಾಚಾರ್ಯರು ಅಗಸ್ತ್ಯಮಹರ್ಷಿಗಳನ್ನು ಕುರಿತು ಬೋಧಿಸಿರುತ್ತಾರೆ. ಆದುದರಿಂದ ಇಂತಹ ಶಿವಕ್ಷೇತ್ರಗಳಲ್ಲಿ ಮಠಮಾನ್ಯಗಳನ್ನು ಕಟ್ಟಿಸಿ ಯಾತ್ರಿಕರಿಗೆ ಸೌಕರ್ಯವನ್ನು ಕಲ್ಪಿಸಿಕೊಡುವುದಕ್ಕಿಂತಲೂ ಮತ್ತೊಂದು ವಿಶೇಷವಾದ ಪುಣ್ಯಕಾರ್ಯವು ಜಗತ್ತಿನಲ್ಲಿಲ್ಲವು. ಈ ಪುಣ್ಯಕಾರ್ಯನಿರ್ವಾಹದಲ್ಲಿ ಒದ್ದದೀಕ್ಷೆಯುಳ್ಳ ಶ್ರೀ ಚರಮೂರ್ತಿಗಳಿಗೆ ಜಗತ್ತಿನಲ್ಲಿರುವ ಎಲ್ಲ ವೀರಶೈವರೂ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಸ್ವಲ್ಪಸ್ವಲ್ಪವಾಗಿ ಧನಸಹಾಯಮಾಡಿದರೂ 'ಬಹೂನಾಮಲ್ಪಸಾರಾಣಾಂ ಸಮವಾಯೋ ದುರತ್ಯಯಃ' ಎಂಬ ನೀತಿವಚನ ನುಸಾರವಾಗಿ ಅದೊಂದು ದೊಡ್ಡನಿಧಿಯಾಗಿ ಪರಿಣಮಿಸಿ ಕಾರ್ಯವು ಸುಲಲಿತವಾಗಿ ನಡೆಯುವದು. ಸರ್ಕಾರದವರು ಈಗಾಗಲೇ ಮಠವನ್ನು ಕಟ್ಟುವದಕ್ಕಾಗಿ ಖಾಲಿ ನಿವೇಶನವನ್ನು ಕೊಟ್ಟಿರುವರೆಂದು ನಾವು ಬೇರೆ ಕಡೆಯಲ್ಲಿ ಕೊಟ್ಟಿರುವ ಸದರಿಯವರ ಪ್ರಸಿದ್ಧಪತ್ರಿಕೆಯಿಂದ ಗೊತ್ತಾಗುತ್ತದೆ. ಮತ್ತು ಈ ಕಾರ್ಯಕ್ಕಾಗಿ ಅನೇಕ ವೀರಶೈವಮಹಾಶಯರು ಧನಸಹಾಯಮಾಡಿರುವ ಚಂದಾಪಟ್ಟಿಯನ್ನು ಸಹ ನಮ್ಮ ಪತ್ರಿಕೆಯೊಂದೆಡೆಯಲ್ಲಿ ಕೊಟ್ಟಿರುತ್ತೇವೆ. ಇದರಂತೆ ಅನೇಕ ಮಹಾಕ್ಷೇತ್ರಗಳಲ್ಲಿ ವೀರಶೈವಮಠಗಳು ಇಲ್ಲದೆ ಇರುವುದರಿಂದ ಯಾತ್ರಾರ್ಥಿಗಳಾಗಿ ಹೋದ ವೀರಶೈವರು ಬಹಳ ಕಷ್ಟಪಡುತ್ತಿರುವರಲ್ಲದೆ ಅಲ್ಲಲ್ಲಿ ಮಾಡಬೇಕಾದ ವೈದಿಕಕರ್ಮಗಳನ್ನು ಪರಮುಖಿಯಿಂದ ಮಾಡಿಸಿಕೊಳ್ಳುವ ಪ್ರಸಂಗವುಂಟಾಗಿರುವದು. ಸದ್ಯಃ ಒಂದು ವೀರಶೈವವ್ಯಕ್ತಿಯೂ ಇಲ್ಲದಿರುವ ರಾಮೇಶ್ವರವೆಂಬ ಮಹಾಕ್ಷೇತ್ರದಲ್ಲಿ ಅನೇಕರು ಹೋಗಿ ಬಹಳ ಕಷ್ಟಪಡುತ್ತಿರುವದನ್ನು ನೋಡಿ ಒಬ್ಬ ಮಾಹೇಶ್ವರರು ಹೋಗಿ ಈಗ ಕೆಲವುದಿವಸಗಳಿಂದ ಆ ಕ್ಷೇತ್ರದಲ್ಲಿ ಒಂದು ಸ್ಥಾನವನ್ನೇರ್ಪಡಿಸಿ ಬಂದವರ ಯೋಗಕ್ಷೇಮವನ್ನು ನೋಡುತ್ತಿರುವದರಿಂದ ಯಾತ್ರಾರ್ಥಿಗಳಾದ ವೀರಶೈವರಿಗೆ ಎಷ್ಟೋ ಅನುಕೂಲವಾಗಿದೆಯೆಂದು ಅನೇಕರ ಬಾಯಿಂದ ಕೇಳುತ್ತೇವೆ. ಹೀಗೆ ವೀರಶೈವಜನರಿಲ್ಲದಿರುವ ಕ್ಷೇತ್ರಗಳಲ್ಲಿ ಮಠಗಳನ್ನು ಕಟ್ಟಿ ಕ್ರಿಯಾನಿಷ್ಠರಾದವರನ್ನು ಆ ಮಠಗಳಲ್ಲಿ ಸ್ಥಾಪಿಸಿದಲ್ಲಿ ತೀರ್ಥಯಾತ್ರೆಗಳಲ್ಲಿ ಕುತೂಹಲವುಳ್ಳ ವೀರಶೈವರಿಗೆ ವಿಶೇಷವಾದ ಸೌಲಭ್ಯಗಳುಂಟಾಗುವುದಲ್ಲದೆ ಮಠವನ್ನು ಕಟ್ಟುವುದರಲ್ಲಿ ಭಾಗಿಗಳಾಗುವ ಮೂಲಕ ಮಹಾಜನಗಳು ವಿಶೇಷವಾದ ಪುಣ್ಯಭಾಗಿಗಳಾಗುವುದರಲ್ಲಿ ಸಂಶಯವಿಲ್ಲ. ಪ್ರಕೃತದಲ್ಲಿ ಹುಬ್ಬಳ್ಳಿಯ ೧೨ ಮಠದ ಶ್ರೀಗಳವರು ಕೈಕೊಂಡ ಕಾರ್ಯವು ಅತ್ಯಂತ ಶ್ಲಾಘ್ಯವೂ ಶಿವಪ್ರೀತಿಕರವೂ ಆದುದರಿಂದ ಶ್ರೀರೇಣುಕಾದಿ ಪಂಚಾಚಾರ್ಯ ಭಗವತ್ಪಾದರು ಸಕಲ ಭಕ್ತಮಾಹೇಶ್ವರ ಹೃದಯದಲ್ಲಿ ಪ್ರೇರಣೆಯನ್ನುಂಟುಮಾಡಿ ಪ್ರಾರಂಭಿಸಿದ ಕಾರ್ಯವು ಜಯಪ್ರದವಾಗಿ ಗೋಕರ್ಣಕ್ಷೇತ್ರಯಾತ್ರಾರ್ಥಿಗಳಾದ ವೀರಶೈವರಿಗೆ ಅನುಕೂಲವಾಗಲೆಂದು ಪ್ರಾರ್ಥಿಸುವೆವು.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಬೊಂಬಾಯಿಯಿಂದ ಕಳೆದ ಶುಕ್ರವಾರ ರಾಜಧಾನಿಗೆ ದಯಮಾಡಿಸಿದರು.

ಶ್ರೀಮಾನ್ ಎಂ ಎ ಶ್ರೀನಿವಾಸನ್‌ರವರ ರಾಜೀನಾಮೆ ಪೌರಸಭಾ ಧ್ಯಕ್ಷರಾಗಿ [illegible] ಯವಿಕಲ್ಪಕರಿದ್ದರೆ.

ಶ್ರೀಮಾನ್ [illegible] ಕೇಶವಯ್ಯ [illegible] ಮಂದಿನ ತಿಂಗಳು ಮೈಸೂರ [illegible] ಗುವರು.

ಮೈಸೂರು [illegible] ಜಯ [illegible] ದೇಶಪಟ್ಟಿ ಮ|| ರ|| [illegible] ಚನ್ನಪ್ಪಶೆಟ್ಟರವರು ಕೆಲವು ದಿವಸಗಳಿಂದ ಅಸ್ವಸ್ಥರಾಗಿದ್ದು [illegible] ವಿಷಾದಿಸುತ್ತೇವೆ.

ಬೆಂಗಳೂರು ಪೋಲೀಸರು 14 ವರ್ಷದ ಸಿದ್ದ ಮತ್ತು 16 ವರ್ಷ ವಯಸ್ಸಿನ ರುದ್ರನೆಂಬ ಇಬ್ಬರು ಹುಡುಗರನ್ನು ಸಂದೇಹದ ಮೇಲೆ ದಸ್ತಗಿರಿ ಮಾಡಿ ವಿಚಾರಣೆ ನಡೆಸುವಾಗ್ಯೆ ಇವರ ಬಳಿ ಬೆಂಗಳೂರಿನಲ್ಲಿ ಕೆಲವು ದಿನಗಳ ಕೆಳಗೆ ನಡೆದ ಅನೇಕ ಕಳುವಿನ ಮಾಲುಗಳು ದೊರಕಿದವೆಂದು ತಿಳಿದುಬಂದಿದೆ.

ಭದ್ರಾವತಿಯಲ್ಲಿ ಉಕ್ಕಿನ ತಯಾರಿಯನ್ನು ಪ್ರಾರಂಭಿಸುವದಕ್ಕೆ ಅಲ್ಲಿನ ಕಾರ್ಖಾನೆಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿಮಾಡುವುದಕ್ಕೆ ಮೈಸೂರಿನಿಂದ ಭದ್ರಾವತಿಗೆ ಸಿಂಹದ ತಂತಿಗಳನ್ನು ಹಾಕುತ್ತಿರುವುದರಿಂದ ದಾರಿಯಲ್ಲಿ ಸಿಕ್ಕುವ ಕೃಷ್ಣರಾಜನಗರ, ಹೊಳೆನರಸೀಪುರ, ಹಾಸನ, ಬೇಲೂರು, ಚಿಕ್ಕಮಗಳೂರು, ತರೀಕೆರೆ, ಶಿವಮೊಗ್ಗ, ದಾವಣಗೆರೆ ಇತ್ಯಾದಿ ಸ್ಥಳಗಳಿಗೂ ವಿದ್ಯುದ್ದೀಪಗಳನ್ನು ಹಾಕಲು ಅಂದಾಜು ತಯಾರಾಗಿರುತ್ತದೆ.

ಮೈಸೂರು ಡಿಸ್ಟ್ರಿಕ್ಟಿನ ಹಲವು ಕಡೆಗಳಲ್ಲಿಯೂ ವಿಶೇಷವಾಗಿ ಮೈಸೂರು ತಾಲ್ಲೂಕಿನಲ್ಲಿಯೂ ಕ್ಷಾಮ ಪ್ರಾಪ್ತವಾಗಿರುವುದರಿಂದಲೂ, ದನಕರುಗಳಿಗೆ ಮೇವಿಲ್ಲದೆಯೂ, ಪ್ಲೇಗ್ ಉಪದ್ರವು ತಲೆದೋರುವುದರಿಂದಲೂ ಸುಮಾರು 3,000 ಜನರು ಜೀವನಕ್ಕಾಗಿ ಕಾಫೀ ತೋಟಗಳಿಗೂ ಇರ್ವಿನ್ ನಾಲಾ ಆಸರೆಯಲ್ಲಿರುವ ಜಮೀನುಗಳಲ್ಲಿ ಕೂಲಿಮಾಡುವುದಕ್ಕೂ ಹೊರಟು ಹೋಗಿರುತ್ತಾರೆಂದೂ ಈ ಪ್ರದೇಶದ ದುಃಸ್ಥಿತಿಯನ್ನು ಕಣ್ಣಾರ ನೋಡಲು ಈ ಡಿಸ್ಟ್ರಿಕ್ಟಿನಲ್ಲಿ ಸಂಚರಿಸುತ್ತಿರುವ ರೆವಿನ್ಯೂ ಕಮಿಷನರು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ನಾಗಮಂಗಲದ ತಾಲ್ಲೂಕಿನಲ್ಲೂ ಅದರ ಸುತ್ತಮುತ್ತ ಇರುವ ಕೆಲವು ಹಳ್ಳಿಗಳಲ್ಲಿಯೂ ಶೇಕಡ ೫೦ರಷ್ಟು ಕಂದಾಯ ಮಾಫಿ ಮಾಡತಕ್ಕದ್ದೆಂದು ಸರಕಾರದವರಿಗೆ ಶಿಫಾರಸುಮಾಡಿರುತ್ತಾರೆಂದೂ ಈ ಪ್ರಾಂತ್ಯಗಳಲ್ಲಿ ಕ್ಷಾಮನಿವಾರಣಾ ಕಾರ್ಯಗಳನ್ನು ನಡಸಲು ರೆವಿನ್ಯೂ ಕಮಿಷನರವರು ಸರ್ಕಾರದವರೊಡನೆ ಯೋಚಿಸುತ್ತಿದ್ದಾರೆಂದೂ ಹೇಳಲಾಗಿದೆ.

ಚಾಮರಾಜನಗರದ ತಾಲೋಕು ರಾಮಸಮುದ್ರದಲ್ಲಿ ಕಳೆದ ಅಕ್ಟೋಬರ್ ತಿಂಗಳಲ್ಲಿ ಲಿಂಗ, ರಾಮ, ಗುಂಡ ಗೋಪಾಲರಂಗ ಸಿದ್ಧ, ಸಂಜೀವರಂಗ ಎಂಬುವರು ದೊಂಬಿಯನ್ನು ನಡೆಯಿಸಿ ದೊಡ್ಡಮುತ್ತ ಎಂಬುವನನ್ನು ಹೊಡೆದು ಕೊಂದರೆಂಬ ಆರೋಪದಿಂದ ಪೋಲೀಸಿನವರು ಹಾಕಿದ್ದ ಕೇಸು ನಂಜನಗೂಡು ಮ್ಯಾಜಿಸ್ಟ್ರೇಟ್ ಕೋರ್ಟಿನಿಂದ ಮೈಸೂರು ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಗೆ ಬಂದಿದ್ದು ನ್ಯಾಯಾಧೀಶರು ಕೇಸನ್ನು ಆಮೂಲಾಗ್ರವಾಗಿ ವಿಚಾರಣೆಮಾಡಿ ಈ ತಿಂಗಳು ೨೨ನೆಯ ತಾರೀಖಿನ ದಿವಸ ಆರೋಪಿಗಳನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಿದರು. ಈ ಕೇಸಿನಲ್ಲಿ ನಂಜನಗೂಡು ವಕೀಲರಾದ ಶ್ರೀಮಾನ್ ಎಂ ಎಲ್ ಲಿಂಗಪ್ಪನವರು ಆಪಾದಿತರ ಪರವಾಗಿ ವಕಾಲತ್ತನ್ನು ವಹಿಸಿ ಯುಕ್ತಿಯುಕ್ತವಾಗಿಯೂ ನ್ಯಾಯಸಮ್ಮತವಾಗಿಯೂ ಧೈರ್ಯದಿಂದ ವಾದಿಸಿ ವೃಥಾ ವ್ಯಸನಕ್ಕೀಡಾದ ಅಪರಾಧಿಗಳನ್ನು ವಿಮೋಚನೆಗೊಳಿಸಿ ಜಯಶೀಲರಾದುದಕ್ಕಾಗಿ ಸಂತೋಷಪಡುತ್ತೇವೆ.

ವರ್ತಮಾನಸಂಗ್ರಹ.

ಪಂ|| ಜವಾಹರಲಾಲರವರು ಒಪ್ಪಿದರೆ ಅವರು ತಮ್ಮ ಪತ್ನೀಸಹಿತ ವಿದೇಶಕ್ಕೆ ಹೋಗಲು ಏನೂ ಅಡ್ಡಿಯಿರಬಾರದೆಂದು ಸರ್ ಎಚ್ ಕ್ರೇಕರು ಅಸೆಂಬ್ಲಿಯಲ್ಲಿ ತಿಳಿಸಿರುವರು.

ಹೈದರಾಬಾದ್ ಇಂಪೀರಿಯಲ್ ಪೋಸ್ಟಾಫೀಸ ಬೀಗಗಳನ್ನು ಒಡೆದು ಇಪ್ಪತ್ತು ಪಾರ್ಸೆಲ್‌ಗಳು ಮತ್ತು ನಗದು 4,000 ರೂ ಗಳನ್ನು ಯಾರೋ ಅಪಹರಿಸಿರುತ್ತಾರೆ. ಪತ್ತೆ ಪ್ರಯತ್ನಗಳು ನಡೆಯುತ್ತಿದೆ.

ಬಕರೀದ್ ಹಬ್ಬದಲ್ಲಿ ಪ್ರಾಣಿವಧೆಯನ್ನು ಮಾಡಬಾರದೆಂದು ಲಕ್ನೋದಲ್ಲಿ ಗೌರ್ನಮೆಂಟು ಹುಕುಂ ಆಗಿರುವುದರಿಂದ ಅಲ್ಲಿಯ ಮಹಮ್ಮದರಿಗೆ ಅಸಂತೋಷವುಂಟಾಗಿರುವುದರಿಂದ ಗವರ್ನರ್ ಬಳಿಗೆ ಡೆಪ್ಯುಟೇಷನ್ ಹೋಗಿ ಕೇಳಿಕೊಳ್ಳುವವರಾಗಿದ್ದಾರೆ.

ಫ್ರೆಂಚ್ ಆಫ್ರಿಕಾ ಗೌರ್ನರ್‌ಜನರಲ್ ಎಂ ವರ್ಡ್ಯಾರ್ಡ್ ರೈನಾಲ್ಡ್‌ರೂ ಅವರ ಪತ್ನಿಯೂ ಮತ್ತು ಪರಿವಾರವು ಸಹ ಚಾಡ್ ಪ್ರದೇಶಕ್ಕೆ ಹೋದವರು, ಅದೃಶ್ಯರಾಗಿರುತ್ತಾರೆ. ಅವರನ್ನು ಹುಡುಕುವುದಕ್ಕಾಗಿ ಕಾಂಗೋ ನದೀತೀರದಲ್ಲೆಲ್ಲಾ ಶೋಧನಡೆಯುತ್ತಿದೆ.

ಲಕ್ನೋ ಪ್ರಾಂತದಲ್ಲಿ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರನು ಒಬ್ಬ ಕೊಲೆಗಾರನನ್ನು ಕೈದುಮಾಡಿದ ಸಂದರ್ಭದಲ್ಲಿ ಆತನು ಕೂಗಲು ಗ್ರಾಮಸ್ಥರು ಆ ಕೂಗಾಟವನ್ನು ಕೇಳಿ ಗುಂಪುಕೂಡಿ ಸಬ್ ಇನ್ಸ್‌ಪೆಕ್ಟರನನ್ನು ಚೆನ್ನಾಗಿ ಹೊಡೆದರು. ಇದರಿಂದ ಇನ್ಸ್‌ಪೆಕ್ಟರು ಆಸ್ಪತ್ರೆಯಲ್ಲಿ ಮೃತಪಟ್ಟರು. ಹೊಡೆದವರನ್ನು ಕೈದುಮಾಡಿದ್ದಾರೆ.

ಕಲ್ಕತ್ತೆಯ ಮೇಯರರಾದ ಶ್ರೀ ನಳಿನೀರಂಜನ ಸರ್ಕಾರರವರು, ದೂರದ ತಮ್ಮ ಸೋದರ ಸೊಸೆಯೂ, ಕಾಲೇಜ್ ಪ್ರೊಫೆಸರ್ ಶ್ರೀ ಪ್ರೇಮನಾಥ ಸರ್ಕಾರರ ಪತ್ನಿಯೂ ಆದ ಶ್ರೀಮತಿ ವೀಣಾ ಎಂಬಾಕೆಯೊಡನೆ ಗುಪ್ತಸ್ನೇಹ ಬೆಳೆಸಿದರೆಂಬ ಆರೋಪಕ್ಕೆ ಗುರಿಯಾಗಿ ಕಲ್ಕತ್ತೆಯ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಯಾಗುತ್ತಿದೆ.

ಮೂಡಿಗೆರೆ ತಾಲ್ಲೂಕಿಗೆ ಸೇರಿದ ಸಮಸೆ ಮತ್ತು ನಾವಿನಕೆರೆ ಅಪ್ ಪಾಸ್ ಮೂರು ಮೈಲಿಗಳೂ, ಹಗರ ಸ್ಟೇಟ್ ಫಾರೆಸ್ಟಿನಲ್ಲಿಯೂ, ಬೇಲೂರು ತಾಲ್ಲೂಕಿಗೆ ಸೇರಿದ ಮೂದಿಹಳ್ಳಿ ಮತ್ತು ಹಳೇಬೀಡು ಹೋಬಳಿಯ ಅಸ್‌ವಾಸಿನಲ್ಲಿಯೂ ಹಾವಳಿ ಮಾಡುತ್ತಿರುವ ಹುಲಿಗಳನ್ನು ಯಾರು ಬೇಕಾದರೂ ಶಿಕಾರಿ ಮಾಡಬಹುದೆಂದು ಸರ್ಕಾರದವರು ಮೂರು ತಿಂಗಳ ಅವಧಿ ಕೊಟ್ಟಿದ್ದಾರೆ.

ಹೈದರಾಬಾದಿನ ಕೊಪ್ಪಳ ಜಿಲ್ಲೆಯಲ್ಲಿ ಬರಗಾಲ ಬಂದಿದೆ. ಈ ಜಿಲ್ಲೆಗೆ ಸೇರಿದ 250 ಊರುಗಳಲ್ಲಿಯೂ ಬೆಳೆ ಆಗಿರುವುದಿಲ್ಲ. ಜನರು ಬಹಳ ದುಃಖಕ್ಕೀಡಾದ್ದರಿಂದ ಸ್ಥಳಬಿಡಹತ್ತಿರುತ್ತಾರೆ. ಈಗಾಗಲೇ 10-20 ಗ್ರಾಮಗಳು ಹಾಳುಬಿದ್ದಿವೆ. 20 ಗ್ರಾಮಗಳಲ್ಲಿಯ ಎಲ್ಲಾ ಜನರು ಈಗ ಊರುಬಿಟ್ಟು ಹೋಗಿರುವರು. ಜನಕರುಗಳನ್ನು ಮನಸ್ಸಿಗೆ ಬಂದಂತೆ ಕಟುಕರಿಗೆ ಕೊಡಹತ್ತಿರುತ್ತಾರೆ. ಈಗ ನಾಲ್ಕನೆಯ ಒಂದು ಪಾಲು ದನಗಳೂ ಉಳಿದಿರುವದಿಲ್ಲ. ಎಷ್ಟೋ ಜನರು ತಮ್ಮ ತಾಯಿತಂದೆಗಳನ್ನು ಸಹ ಬಿಟ್ಟು ಹೊಟ್ಟೆಯ ಪಾಡಿಗೆ ಓಡಿ ಹೋಗಿರುವರು.

ಬ್ರಿಟಿಷ್ ಪಾರ್ಲಿಮೆಂಟಿನ ಹಿಂದಿನ ಸಭಾಸದರಾದ ಕ್ರೋಟನ್ ವುಡ್ ಎಂಬುವರು ಹೊಸದಿಲ್ಲಿಯ ಇಂಪೀರಿಯಲ್ ಹೋಟೆಲಿನಲ್ಲಿ ಬಂದಿಳಿದಿದ್ದರು. ಅವರು ಎಲ್ಲಿಗೋ ಹೊರಗೆ ಹೋದಾಗ ಅವರು ಇಳಿದ ಕೋಣೆಗೆ ಯಾರೋ ಕನ್ನವನ್ನು ಕೊರೆದು ಅವರ ಹ್ಯಾಂಡಬ್ಯಾಗ್ ಅಪಹರಿಸಿಕೊಂಡು ಹೋಗಿದ್ದಾರೆ. ಬ್ಯಾಗಿನಲ್ಲಿ 10,000 ಪೌಂಡು ಬೆಲೆಬಾಳುವ ಫ್ರೆಂಚ್ ನಾಣ್ಯಗಳೂ, 300 ಪೌಂಡು ಬೆಲೆಯ ಒಂದು ಚೈನು ಮತ್ತು ಇತರ ವಸ್ತುಗಳೂ ಇದ್ದವು. ಅವರು ತಿರುಗಿ ಬಂದು ನೋಡುವಲ್ಲಿ ಹ್ಯಾಂಡು ಬ್ಯಾಗು ಇರಲಿಲ್ಲ. ಪೋಲೀಸರು ಪತ್ತೆ ಹಚ್ಚುವದು ನಡೆಸುತ್ತಿದ್ದಾರೆ.

ನೂರಾರು ವರ್ಷಗಳಿಂದ ಮನುಷ್ಯರು ರೆಕ್ಕೆ ಕಟ್ಟಿಕೊಂಡು ಹಾರಲು ಪ್ರಯತ್ನಿಸುತ್ತಿದ್ದರು. ಈ ಪ್ರಯತ್ನದಲ್ಲಿ ಒಬ್ಬಿಬ್ಬರು ಪ್ರಾಣಗಳನ್ನು ಕೂಡಾ ಕಳೆದುಕೊಂಡಿದ್ದಾರೆ. ಈಗ ಡಿಟೋನಾ ಎಂಬಲ್ಲಿ (ಒಬ್ಬನು ಈ ಪ್ರಯತ್ನದಲ್ಲಿ ಕೃತಕೃತ್ಯನಾಗಿದ್ದಾನೆ) 20 ವರ್ಷ ವಯಸ್ಸಿನ ಕ್ಲೆಂಸೋರ್ ಎಂಬ ಧೈರ್ಯಶಾಲಿಯು ಅವನಿಂದಲೇ ನಿರ್ಮಿಸಲ್ಪಟ್ಟ ರೆಕ್ಕೆಗಳನ್ನು ಕಟ್ಟಿಕೊಂಡು ವಿಮಾನದಲ್ಲಿ ಕುಳಿತು 12 ಸಾವಿರ ಅಡಿ ಎತ್ತರಕ್ಕೆ ಹೋಗಿ ಅಲ್ಲಿಂದ ಧುಮುಕಿ, ರೆಕ್ಕೆಗಳ ಸಹಾಯದಿಂದ ಹಾರುವುದು, ಕುಣಿಯುವುದು, ಲಾಗಹಾಕುವುದು, ಮನಸ್ಸು ಬಂದಂತೆ ತಿರುಗುವುದು ಮೊದಲಾದವೆಲ್ಲದರಲ್ಲಿಯೂ ಕೃತಕೃತ್ಯನಾಗಿ 6000 ಅಡಿಗಳ ಎತ್ತರಕ್ಕೆ ಬಂದಮೇಲೆ ತನ್ನ ಬಳಿ ಇಟ್ಟುಕೊಂಡಿದ್ದ ಪ್ಯಾರಾಶೂಟನ್ನು ಬಿಚ್ಚಿ ಸೌಖ್ಯವಾಗಿ ಭೂಮಿಗಿಳಿದನು.

ವಿಮಾನದ ಅಪಘಾತ.

ಬೊಂಬಾಯಿ ವಿಮಾನ ಕ್ಲಬ್ಬಿನ ಡೊನಾಲ್ಡ್ ಲಿಸ್ಟ್ರಾಂಜ್ ಎಂಬ 35 ವರ್ಷ ವಯಸ್ಸಿನ ಯೂರೋಪಿಯನ್ ಯುವಕನು ವಿಮಾನದಲ್ಲಿ ಹಾರುತ್ತಿರುವಾಗ ವಿಮಾನಕ್ಕೆ ಬೆಂಕಿ ಬಿದ್ದುದರಿಂದ ಕೆಳಕ್ಕೆ ಬಿದ್ದು ಮೃತಪಟ್ಟನು.

ಬಾಣಬಿರುಸುಗಳ ಅಪಘಾತ.

ಕಲ್ಕತ್ತೆಯಲ್ಲಿ ಒಂದು ಮೆರವಣಿಗೆಯ ಕಾಲದಲ್ಲಿ ಉಪಯೋಗಿಸುತ್ತಿದ್ದ ಬಾಣಬಿರುಸುಗಳ ಚೀಲಕ್ಕೇ ಬೆಂಕಿ ಬಿದ್ದು ಸಿಡಿದದ್ದರಿಂದ ಅನೇಕರಿಗೆ ಅಪಾಯಕರವಾದ ಏಟುಗಳು ಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ.

ಮೋಟಾರ್ ಅಪಘಾತ.

ವಿಷ್ಣುಪುರದಲ್ಲಿ ಜನಗಳ ಗುಂಪನ್ನು ತಡೆಯಲು ಬಂದ ಒಂದು ಪೋಲೀಸರ ಲಾರಿಯು ಮರಕ್ಕೆ ಡಿಕ್ಕಿ ಹೊಡೆದದ್ದರಿಂದ 3 ಮಂದಿ ಪೋಲೀಸು ಕಾನ್‌ಸ್ಟೇಬಲ್ಲುಗಳು ಮೃತರಾದರು. ಒಬ್ಬನು ಆಸ್ಪತ್ರೆಯಲ್ಲಿ ಸತ್ತನೆಂದು ತಿಳಿದು ಬರುತ್ತದೆ.

ಡಕಾಯಿತಿ.

ಪ್ರೊದ್ದತ್ತೂರಿನಿಂದ ಎರ್ರಗುಂಟ್ಲ ರೈಲ್ವೆಸ್ಟೇಷನ್ನಿಗೆ ಗಾಡಿಗಳಲ್ಲಿ ಬರುತ್ತಿದ್ದ ಪ್ರಯಾಣಿಕರನ್ನು ಸ್ಟೇಷನ್ನಿಂದ 4 ಮೈಲು ದೂರದಲ್ಲಿ ಡಕಾಯಿತರು ತಡೆದು ಅವರಲ್ಲಿದ್ದ ಸುಮಾರು ಒಂದು ಸಾವಿರ ರೂಪಾಯಿಗಳಷ್ಟು ಪದಾರ್ಥಗಳನ್ನು ಅಪಹರಿಸಿರುತ್ತಾರೆ.

ಇಬ್ಬರು ಯೂರೋಪಿಯನ್ನರ ಪ್ರಾಣಸಂರಕ್ಷಣೆಕ್ಕೆ ಹಿಂದುವು ಬಲಿಯಾದನು

ದಕ್ಷಿಣ ಆಫ್ರಿಕದಲ್ಲಿ ರೈಲ್ವೆಗೇಟ್‌ಕೀಪರ್ ಡೂಕಿ ಎಂಬ ಒಬ್ಬ ಹಿಂದುವು ರೈಲು ಬರುವ ಸಮಯದಲ್ಲಿ ಬಾಗಿಲು ಹಾಕುವುದರೊಳಗೆ ಸೈಕಲ್ ಸವಾರಿ ಮಾಡಿಕೊಂಡು ನುಗ್ಗಿ ಒಂದು ರೈಲ್ವೆ ಕಂಬಿಗಳ ಮೇಲೆ ಜಾರಿ ಬಿದ್ದ ಇಬ್ಬರು ಯೂರೋಪಿಯನ್ನರನ್ನು ಅಪಾಯದಿಂದ ತಪ್ಪಿಸಲು ಓಡಿಬಂದು ಕಂಬಿಗಳ ಮೇಲಿನಿಂದ ಅವರನ್ನು ದೂರಕ್ಕೆ ತಳ್ಳಿದನು. ಅಷ್ಟರಲ್ಲಿ ಬಂದ ರೈಲು ಆಗ ತೆಗೆದಿದ್ದ ಬಾಗಿಲಿಗೆ ತಗಲಿದ್ದರಿಂದ ಆ ಬಾಗಿಲು ಡೂಕಿಗೆ ತಗುಲಿ ನಡು ಮುರಿದು ಆ ಕ್ಷಣವೇ ಮೃತನಾದನು.

ಲಕ್ಷಾಧೀಶ್ವರರಾಗಲು ಹೊರಟಿರುವರು

ಡೆಲ್ಲಿಯ ಮೂರು ಮಂದಿ ಕಾಲೇಜು ಹುಡುಗರು ತಾವು ಲಕ್ಷಾಧೀಶರರಾಗಿ ಹಿಂತಿರುಗುವುದಾಗಿ ತಮ್ಮ ತಂದೆತಾಯಿಗಳಿಗೆ ತಿಳಿಸಿ ಎಲ್ಲಿಗೋ ಹೊರಟಿರುತ್ತಾರೆ. ಅವರಲ್ಲಿ ಒಬ್ಬನು ಲಾಯರ ಮಗನು. ಪಿಟೀಲುವಾದಕನಾಗಿ ಮನೆಯಿಂದ ಸ್ವಲ್ಪ ಹಣವನ್ನೂ ಎರಡನೆಯ ವ್ಯಾಪಾರಿಯ ಮಗನು ತಾನಾಗಿ ಬೇಕಾದ ಬಟ್ಟೆಬರೆಗಳನ್ನೂ ಮೂರನೆಯವನು ವೃತ್ತಪತ್ರಿಕೆಗಳಿಗೆ ಬತ್ತಿ ಕೊಡುವವನ ಮಗನು ಬರಿ ಕೈಯ್ಯಲ್ಲಿಯೂ ಹೊರಟಿದ್ದಾರೆ. ಅವರ ತಾಯಿತಂದೆಗಳನೇಕರು ಎಲ್ಲರೂ ಬರಿಕೈಯಲ್ಲಿ ಶೀಘ್ರದಲ್ಲೇ ಹಿಂತಿರುಗುತ್ತಾರೆಂದು ನಿಶ್ಚಯಿಸಿದ್ದಾರೆ.

ಬಲಿಷ್ಠನನ್ನು ಕಂಡುಹಿಡಿಯುವ ಸ್ಪರ್ಧೆ

ಪ್ರಪಂಚದಲ್ಲಿ ಯಾರು ಹೆಚ್ಚು ಬಲಿಷ್ಠರೆಂಬುವದನ್ನು ಕಂಡುಹಿಡಿಯುವ ಸ್ಪರ್ಧೆಯೊಂದು ಶೀಘ್ರದಲ್ಲೇ ಬ್ರಿಟನ್ನಿನಲ್ಲಿ ನಡೆಯಲಿದೆ. ಇದಕ್ಕೆ ಎಲ್ಲಾ ದೇಶಗಳಿಂದಲೂ ಉಮೇದುವಾರರು ಸೇರುತ್ತಾರೆ. ಈ ಸ್ಪರ್ಧಿಗಳಲ್ಲಿ ಒಬ್ಬನು 1000 ಪುಟಗಳ ಪುಸ್ತಕವನ್ನು ಅನಾಯಾಸವಾಗಿ ಬೆರಳುಗಳಿಂದ ಹರಿಯಬಲ್ಲನಂತೆ. ಕಬ್ಬಿಣದ ಗಡಾರಿಯನು ಮೊಣಕಾಲ ಮೇಲೆ ಒತ್ತಿ ಬಗ್ಗಿಸುವದು, ಕಬ್ಬಿಣದ ಸಲಾಕೆಗಳನ್ನು ಹಲ್ಲುಗಳಿಂದ ಬಗ್ಗಿಸುವದು, 6 ಅಂಗುಲ ಮೊಳೆಯನ್ನು ನಾಲ್ಕುಮರದ ಹಲಗೆಗಳ ಮುಖಾಂತರ ಬರಿಕೈಯಿಂದ ನೂಕುವುದು, ಒಂದು ಅಂಗುಲ ದಪ್ಪ ಕಬ್ಬಿಣದ ಪಟ್ಟಿಯನ್ನು ತನ್ನ ಗಂಟಲ ಮೇಲಿಟ್ಟು ಇಬ್ಬರಿಂದ ಅದನ್ನು ಬಗ್ಗಿಸುವದೇ ಮೊದಲಾದ ಸಾಹಸಗಳನ್ನು ಮಾಡಬಲ್ಲನಂತೆ. ಇವನಿಗೆ ಪ್ರತಿಸ್ಪರ್ಧಿಗಳು ಎಂಥವರು ಬರುವರೋ ನೋಡಬೇಕು.

ಬ್ರಹ್ಮಚಾರಿಗಳಿಗೆ ಎಚ್ಚರಿಕೆ!

ಹೈದರಾಬಾದಿನಲ್ಲಿ ಅನಿಲ್ ಪಂಚಾಯಿತಿ ಎಂಬ ಒಂದು ಸಂಸ್ಥೆ ಇದೆ. ಆ ಸಂಸ್ಥೆಯು ಈಗ ಬ್ರಹ್ಮಚಾರಿಗಳ ವಿರುದ್ಧವಾಗಿ ಒಂದು ಚಳವಳವನ್ನು ಹೂಡಿದೆ. ಹೈದರಾಬಾದಿನ ಎಲ್ಲ ಆಫೀಸುಗಳಲ್ಲಿ ಬ್ರಹ್ಮಚಾರಿಗಳಾಗಿ ಸಂಬಳವುಳ್ಳ ಉದ್ಯೋಗಿಗಳಿಗೆ ಇನ್ನುಮುಂದೆ ಯಾವ ಬಡತಿಯನ್ನೂ ಕೊಡಕೂಡದೆಂದು ಆ ಸಂಸ್ಥೆಯ ಒಂದು ಠರಾವು! ಇವರು ಮದುವೆಯಾಗದೆ, ಸಂಸಾರಪೋಷಣೆಯನ್ನು ನಿರ್ವಹಿಸಿದ ತಪ್ಪಿಗಾಗಿ ಇವರಿಗೀ ದಂಡನೆ. ಒಂದು ರೀತಿಯಲ್ಲಿ ಇದು ಸರಿ. ಕಾರಣ, ಮಿತಸಂತಾನದ ಶಾಸ್ತ್ರದ ಪ್ರಚಾರ ಹೆಚ್ಚುತ್ತಿರುವಂತೆ ಅಮಿತ ಸಂತಾನವೂ ಬೆಳೆದು ಪ್ರತಿಯೊಂದು ಸಂಸಾರದಲ್ಲಿಯೂ ಬೆಳೆದು ನಿಂತ ಪ್ರಾಯ ಬಂದ ಮದುವೆಯಾಗದ ಹೆಣ್ಣುಮಕ್ಕಳು. ಹೈದರಾಬಾದಿನಲ್ಲೇ ಏನೋ ಎಲ್ಲಿಲ್ಲ ಎಷ್ಟಿಲ್ಲ? ಅನ್ನುವಾಗ ಈ ಚಳವಳವು ಇತರ ಕಡೆಗೂ ಹಬ್ಬಿದರೆ ಲೇಸು! ಬ್ರಹ್ಮಚಾರಿಗಳಿಗೆ ಪ್ರಾಣಸಂಕಟವಾದರೂ, ಕನ್ನಿಕೆಯರು ಬದುಕಿಕೊಂಡಾರು.

ವಾಯುಮಂಡಲಕ್ಕಿಂತ ಮೇಲೆ ಸಂಚರಿಸುವ ವಿಮಾನಗಳು

ಬೆಲ್ಜಿಯಂ ಮತ್ತು ಇಟಲಿಯ ಒಂದು ಕಂಪೆನಿಯವರು ವಾಯುಮಂಡಲಕ್ಕಿಂತ ಮೇಲೆ ಹೆಚ್ಚು ಎತ್ತರದಲ್ಲಿ ಸಂಚರಿಸುವ ವಿಮಾನವನ್ನು ತಯಾರಿಸಿರುವರಂತೆ. ಇದರಲ್ಲಿ 21 ಪ್ರಯಾಣಿಕರು ಕೂತ ಕೊಳ್ಳಲು ಸ್ಥಳವಿದ್ದು ಘಂಟೆಗೆ 200 ಮೈಲು ಹೋಗುವುದು. ವಾಯುಮಂಡಲವನ್ನು ಬಿಟ್ಟಮೇಲೆ ಉಸಿರಾಡುವುದಕ್ಕೆ ಪ್ರತಿಯೊಬ್ಬ ಪ್ರಯಾಣಿಕನಿಗೂ ಬೇರೆ ಬೇರೆ ಆಮ್ಲಜನಕವನ್ನು ಒದಗಿಸುವ ಕೊಳವೆಗಳಿರುತ್ತವೆ. ಇದರ ಸಹಾಯದಿಂದ ಗಾಳಿಯಿಲ್ಲದ ಅಷ್ಟು ಎತ್ತರದಲ್ಲಿಯೂ ಅವರು ಸುಖವಾಗಿ ಉಸಿರಾಡಬಹುದು. ಶಾಖವನ್ನು ಉತ್ಪತ್ತಿ ಮಾಡುವ ಯಂತ್ರಸಹಾಯದಿಂದ ಆ ಚಳಿಪ್ರದೇಶದಲ್ಲಿಯೂ ಹಿತಕರವಾದ ಉಷ್ಣತೆಯನ್ನು ಉಂಟು ಮಾಡುತ್ತಾರೆ. ಈ ಎತ್ತರದಲ್ಲಿ ಭೂಮಿಯು ಮಸಕಾಗಿ ಕಾಣುವುದಲ್ಲದೆ ಪ್ರದೇಶಗಳನ್ನು ಗುರ್ತಿಸಲಾಗುವುದಿಲ್ಲ. ಮತ್ತು ಮೋಡಗಳು ಬಹಳ ಕೆಳಗೆ ಇರುವುದರಿಂದ, ಮಳೆಗಾಳಿಗಳ ತೊಂದರೆಗಳೊಂದೂ ಇರುವುದಿಲ್ಲವೆಂದು ಹೇಳುತ್ತಾರೆ. ಈ ವಿಧವಾದ ವಿಮಾನಗಳನ್ನು ತಯಾರಿಸಿರುವುದು ಇದೇ ಮೊದಲು.

ಕರಾಚಿಯಲ್ಲಿ ಮಹಮ್ಮದೀಯರ (ಗಲಾಟೆ) ದೊಂಬಿ

ನಾಥೂರಾಮರನ್ನು ಕೊಲೆಮಾಡಿದ್ದ ಅಬ್ದುಲ್ ಖಯ್ಯಂ ಎಂಬ ಮಹಮ್ಮದೀಯನನ್ನು ಕಳೆದವಾರ ಗಲ್ಲಿಗೇರಿಸಿದರು. ಮತ್ತು ಇವನ ಶವವನ್ನು ಸಂಬಂಧಿಗಳವಶಕ್ಕೆ ಕೊಟ್ಟರೆ ಮೆರವಣಿಗೆ ಮೊದಲಾದುವನ್ನು ಮಾಡುವುದರಿಂದ ಹಿಂದೂ ಮುಸ್ಲಿಂ ಗಲಾಟೆಯು ಸಂಭವಿಸಬಹುದೆಂದು ಶವವನ್ನು ಪೆಟ್ಟಿಗೆಯಲ್ಲಿಟ್ಟು ಪೋಲೀಸು ಕಾವಲಿನೊಂದಿಗೆ ಸ್ಮಶಾನಕ್ಕೆ ಸಾಗಿಸಿದರು. ಮೃತನ ಮನೆಯವರು ಶವದ ಮುಖವನ್ನು ನೋಡದೇ ಹೂಳಕೂಡದೆಂದು ಹಠಮಾಡಿದ್ದರಿಂದ ಅಲ್ಲಿ ನೆರೆದಿದ್ದ ಸಾವಿರಾರು ಮಹಮ್ಮದೀಯರು ಪೋಲೀಸರು ಎಷ್ಟು ತಡೆದರೂ ಶವವನ್ನು ತಮ್ಮ ವಶಪಡಿಸಿಕೊಳ್ಳಲು ಮುಂದೆ ನುಗ್ಗಿ ಶವರಕ್ಷಣೆಗೆ ಬಂದಿದ್ದ ಅಲ್ಪಸಂಖ್ಯೆಯ ಪೋಲೀಸರಿಂದ ಹೆಣವನ್ನು ವಶಪಡಿಸಿಕೊಂಡು ಪಕ್ಕದ ಮೈದಾನದಲ್ಲಿಟ್ಟು ಮೃತನ ಆತ್ಮಶಾಂತಿಗಾಗಿ ಪ್ರಾರ್ಥನೆ ನಡೆಸಿದರು. ಅನಂತರ ಪೋಲೀಸರು ಚದುರಬೇಕೆಂದು ಎಷ್ಟುಬಗೆಯಾಗಿ ಪ್ರಾರ್ಥಿಸಿದರೂ ಕೇಳದೆ ಊರಿನ ಮುಖ್ಯ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಲೇಬೇಕೆಂದು ಸಿದ್ಧವಾದರು. ಇದರಿಂದ ಮುಂದೆ ಗಲಭೆಯಾಗಬಹುದೆಂದು ಹೆದರಿದ್ದ ಮ್ಯಾಜಿಸ್ಟ್ರೇಟರೆ ಮಂತ್ರಾದವರು ಸೈನ್ಯ ಸಹಾಯಕ್ಕೆ ಹೇಳಿಕಳುಹಿಸಿದ್ದರಿಂದ ದೊಂಬಿಯನ್ನು ತಡೆಯಲು ಪಟ್ಟಣದ ಆಯಕಟ್ಟಿನ ಸ್ಥಳಗಳಲ್ಲಿ ಸೈನ್ಯ ಸಿದ್ಧತೆಗಳನ್ನು ಮಾಡಿದರು. ಸೋಲ್ಜರುಗಳಿಂದ ತುಂಬಿದ ಲಾರಿಯು ಬಂದು ಜನಗಳನ್ನು ಚದರುವಂತೆ ಆಜ್ಞಾಪಿಸಿದರು. ಇವರ ಮಾತನ್ನು ಕೇಳದೆ ಕೂಡಿದ ಜನರು ಕಲ್ಲನ್ನು ಎಸೆಯಲು ಪ್ರಾರಂಭಿಸಿದರು. ಸೋಲ್ಜರುಗಳು ತಮ್ಮ ಬಂದೂಕಗಳನ್ನು ಆಕಾಶದ ಕಡೆಗೆ ಹಾರಿಸಿ ಎಚ್ಚರಿಸ ಹತ್ತಿದರು. ಆದರೂ ಜನಗಳು ಚದುರದೇ ಮೇಲೆ ಬಿದ್ದದ್ದರಿಂದ ಗುಂಡು ಹಾರಿಸಬೇಕಾಯಿತು. ಇದರಿಂದ 910 ಜನರಿಗೆ ಪ್ರಾಣಾಪಾಯವಾದುದಲ್ಲದೇ ನೂರಾರು ಮಂದಿಗೆ ಗಾಯಗಳಾದವು. ಆಮೇಲೆ ಜನವು ಚದುರಿತು. ಸೈನ್ಯವು ಪಟ್ಟಣದಲ್ಲಿ ದೊಂಬಿಯಾಗದಂತೆ ನೋಡಿಕೊಳ್ಳುತ್ತಿದೆ. ಗಾಯಪಟ್ಟವರೆಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದಾರೆ. ಅನೇಕರು ಅಪಾಯ ಸ್ಥಿತಿಯಲ್ಲಿದ್ದಾರೆ. ಏಟು ತಿಂದವರಲ್ಲಿ ಬಹುಮಂದಿ ಪರಸ್ಥಳೀಯರೆಂದು ತಿಳಿದುಬಂದಿದೆ.

ನಮಃ ಪಂಚಜಗದ್ಗುರುಭ್ಯಃ

ಏಕೇಶ್ವರೀಭಕ್ತಿ.

(ಹಿಂದಿನಿಂದ ಮುಂದೆ ಸಾಗಿದುದು)

ಈ ಪ್ರಕಾರ ಈಶ್ವರನ ಮಹಿಮೆಯು ಅನೇಕರೀತಿಯಿಂದ ಲೌಕಿಕೋದಾಹರಣಗಳಲ್ಲಿ ಕಂಡು ಬಂದುದಲ್ಲದೆ ಶಾಸ್ತ್ರಗಳಲ್ಲಿಯೂ ಶಿವನೇ ಸರ್ವೋತ್ತಮನೆಂಬ ಬಗ್ಗೆ ಅನೇಕಾನೇಕ ಪ್ರಮಾಣಗಳುಂಟು ಕೆಲವು ಮಟ್ಟಿಗೆ ಅವುಗಳನ್ನು ಇಲ್ಲಿ ನಿವೇದಿಸುವೆನು ಶಿವನಿವ ಸದಾಧ್ಯೇಯಸ್ಸರ್ವಸಂಸಾರಮೋಚಕಃ ||

(ಶಿವಬೋಧಕಶಾಸ್ತ್ರ)

ಭವಬಂಧನವಿಮೋಚಕನಾದ ಶಿವನೊಬ್ಬನೇ ಯಾವಾಗಲೂ ಧ್ಯಾನಿಸಲು ಯೋಗ್ಯನು

ಮಹಾದೇವಂ ವಿಜಾನಾತಿ ಮುಚ್ಯತೇ ಭವಬಂಧನಾತ್ ||೧||

(ಸೂತಸಂಹಿತಾ)

ಮಹಾದೇವನನ್ನು ಯಾವನು ವಿಶೇಷವಾಗಿ ತಿಳಿಯುತ್ತಾನೆಯೋ (ಭಕ್ತಿಯಿಂದ ಭಜಿಸುತ್ತಾನೆಯೋ) ಅವನು ಈ ಭವಪಾಶದಿಂದ ಬಿಡಲ್ಪಡುತ್ತಾನೆ

ನಿಟಟಾ ಏವಮ್ಮೃತ್ಯಂತೇ ಕೃತಾಂತನಗರದ್ರುಮಾಃ |
ಶಿವಂ ಸ್ಮರ ಶಿವಂ ಧ್ಯಾಯ ಶಿವಂ ಚಿಂತಯ ಸರ್ವದಾ ||೨||

(ಸೌರಪುರಾಣ ಅಧ್ಯಾಯ ೪೭)

ಯಮನ ನಗರದ ವೃಕ್ಷಗಳು ಸಮೀಪದಲ್ಲಿಯೇ ಕಾಣಿಸುತ್ತಿವೆ ಆದಕಾರಣ ಮೃತ್ಯುವು ಸಮೀಪಿಸುತ್ತಿದೆ ಅದ್ದರಿಂದ ಯಾವಾಗಲೂ ಶಿವನನ್ನು ಸ್ಮರಿಸು ಶಿವನನ್ನು ಧ್ಯಾನಿಸು ಶಿವನನ್ನೇ ಚಿಂತಿಸು (ಪ್ರಾರ್ಥಿಸು)

ಗಚ್ಛಂಸ್ತಿಷ್ಠನ್ ಸ್ವಪನ್ ಜಾಗ್ರನ್ಮಿಷನ್ನುನ್ಮಿಷನ್ನಪಿ |
ಶುಚಿರ್ವಾಪ್ಯಶುಚಿರ್ವಾಪಿ ಶಿವಂ ಸರ್ವತ್ರ ಚಿಂತಯೇತ್ ||೪||

(ಶಿವಧರ್ಮಪುರಾಣ ಅಧ್ಯಾಯ ೧೧)

ನಡೆಯುವಾಗಲೂ, ನಿಲ್ಲುವಾಗಲೂ ಮಲಗಿದಾಗಲೂ ಎಚ್ಚತ್ತಾಗಲೂ ರೆಪ್ಪೆ ಬಡಿಯುವಾಗಲೂ ರೆಪ್ಪೆ ತೆರೆಯುವಾಗಲೂ ಶುದ್ಧನಾಗಿರುವಾಗಲೂ ಅಶುದ್ಧನಾಗಿರುವಾಗಲೂ ಯಾವಾಗಲೂ ಶಿವನನ್ನು ಧ್ಯಾನಿಸಬೇಕು

ನಾಸ್ತಿ ಶರ್ವಸಮೋ ದೇವೋ ನಾಸ್ತಿ ಶರ್ವಸಮಾ ಗತಿಃ |
ನಾಸ್ತಿ ಶರ್ವಸಮೋ ದಾನೀ ನಾಸ್ತಿ ಶರ್ವಸಮೋ ರಣೇ ||೮

(ಮಹಾಭಾರತ ಅನುಶಾಸನಪರ್ವ ೧೫ ೧೧)

ಶಿವನ ಸಮಾನರಾದ ದೇವರಿಲ್ಲ ಶಿವನ ಸಮಾನವಾದ ಗತಿಯಿಲ್ಲ ಶಿವನ ಸಮಾನರು ದಾನಿಗಳಿಲ್ಲ ಶಿವನ ಸಮಾನರು ರಣದಲ್ಲಿಲ್ಲ

ರುದ್ರೋ ಮಹೇಶ್ವರಃ ... ಪ್ರಕೃತಃ |
ರುದ್ರ ಇತ್ಯುಚ್ಯತೇ ತಸ್ಮಾತ್ ಶಿವಃ ಪರಮಕಾರಣಂ ||೫||

ರುದ್ರ್ ದುಃಖವನ್ನಾಗಲೀ ದುಃಖಕಾರಣವನ್ನಾಗಲೀ ದ್ರಾವಯತಿ ನಾಶಮಾಡುತ್ತಾನೆ, ಆದ್ದರಿಂದ ರುದ್ರನೆಂಬುವ ನಾಮವು ಪ್ರಾಪ್ತವಾಗಿದೆ ಆದಕಾರಣ ಸಮಸ್ತ ಪ್ರಪಂಚದ ಈ ಶಿವನೇ ಸರ್ವಕಾರಣನೆನಿಸುವನು

ಪಿನಾಕಪಣಿ ... |
ಪವರ್ಗರಚಿತಾಮೂರ್ತಿಃ ... |

ಪಿ-ಕ, ಪಣಿ ... ಭಸ್ಮ ಮಂದಾಕಿನೀ (ದೇವಗಂಗೆ) ಯೆಂದ ಕೂಡಿದ ಪವರ್ಗವು (ಪ ಫ ಬ ಭ ಮ) ರಚಿಸಿದ ಮೂರ್ತಿಯು ... ಮೋಕ್ಷದ ಪದವಾಗಲಿ (ಮೋಕ್ಷವನ್ನು ಕೊಡಲಿ) (ಪಿನಾಕವೆಂಬಲ್ಲಿ ಪ ಇದೆ ಫಣಿಯೆಂಬಲ್ಲಿ ಫ ಇದೆ ಬಲೀಂದ್ರ ಎಂಬಲ್ಲಿ ಬ ಇದೆ ಭಸ್ಮವೆಂಬಲ್ಲಿ ಭ, ಮಂದಾಕಿನೀ ಎಂಬ ಪದದಲ್ಲಿ ಮ ಕಾರವಿದೆ ಹೀಗೆ ಪ ಫ ಬ ಭ ಮ ಈ ಪವರ್ಗವನ್ನು ರಚಿಸಿದ ಶಿವನು ನಮ್ಮಗಳಿಗೆ ಮೋಕ್ಷವನ್ನು ಕೊಡಲಿ)

ತೀರ್ಥೇ ತೀರ್ಥೇ ನಿರ್ಮಲಂ ಬ್ರಹ್ಮವೃಂದಂ |
ವೃಂದೇ ವೃಂದೇ ತತ್ತ್ವಚಿಂತಾನುವಾದಃ ||
ವಾದೇ ವಾದೇ ಜಾಯತೇ ತತ್ತ್ವಬೋಧಃ |
ಬೋಧೇ ಬೋಧೇ ಭಾಸತೇ ಚಂದ್ರಚೂಡಃ ||೬||

(ಶುಕದೇವ ಕೃತಸ್ತುತಿಃ)

ಪ್ರತಿಯೊಂದು ತೀರ್ಥಗಳಲ್ಲಿ ನಿರ್ಮಲವಾದ ಬ್ರಹ್ಮನನ್ನು ತಿಳಿದ ಯೋಗಿವೃಂದವಿರುತ್ತದೆ ಆಯಾ ಬ್ರಹ್ಮವೃಂದದಲ್ಲಿ ತತ್ತ್ವಚಿಂತನೆಯ ವಾದವು ನಡೆಯುತ್ತಿರುತ್ತದೆ ಆಯಾ ವಾದದಲ್ಲಿ ತತ್ತ್ವಬೋಧವಾಗುತ್ತದೆ ಇಂಥಾ ಪ್ರತಿಯೊಂದು ಬೋಧದಿಂದ ಚಂದ್ರಚೂಡನು ಪ್ರಕಾಶಿಸುತ್ತಾನೆ ಅರ್ಥಾತ್ ಪರಶಿವನ ತತ್ವ ತಿಳಿದು ಅತನ ಒಲುಮೆಯಾಗುತ್ತದೆಂದು ಶುಕಮುನಿಯು ಹೇಳುತ್ತಾನೆ

ರಾಮಪ್ರಿಯಾಯ ರಘುನಾಥವರಪ್ರದಾಯ |
ನಾಮಪ್ರಿಯಾಯ ನರಕಾರ್ಣವತಾರಣಾಯ ||
ಪುಣ್ಯೇಷು ಪುಣ್ಯಭರಿತಾಯ ಸುರಾರ್ಚಿತಾಯ |
ದಾರಿದ್ರ್ಯದುಃಖದಹನಾಯ ನಮಃಶಿವಾಯ ||೮||

(ವಶಿಷ್ಠಮಹರ್ಷಿಕೃತಸ್ತುತಿಃ)

ರಾಮನಿಗೆ ಪ್ರಭುವೂ ವರವನ್ನು ಕೊಟ್ಟವನೂ ನಾಮಪ್ರಿಯನೂ, ನರಕಸಮುದ್ರವನ್ನು ದಾಟಿಸುವವನೂ ಪುಣ್ಯಗಳಲ್ಲಿ ಪುಣ್ಯಗಳಿಂದ ತುಂಬಿದವನೂ ಸರ್ವದೇವತೆಗಳಿಂದ **ಪೂಜಿಸಲ್ಪಟ್ಟ**ವನೂ ದಾರಿದ್ರ್ಯದುಃಖವನ್ನು ಸುಡುವವನೂ ಆದ ಶಿವನಿಗೋಸ್ಕರ ನಮಸ್ಕಾರವು

ರಕ್ಷಾಸ್ತ್ರಾಮುಕರಾಸನಂ ರಜತಾದ್ರಿ ಶೃಂಗನಿಕೇತನಂ |
... ಮುಷ್ಯ ... ಸಾಯಕಂ ||
ಕ್ಷಿಪ್ರದಗ್ಧಪುರತ್ರಯಂ ತ್ರಿದಿವಾಲಯೈರಭಿವಂದಿತಂ |
ಚಂದ್ರಶೇಖರಮಾಶ್ರಯೇ ಮಮ ಕಿಂ ಕರಿಷ್ಯತಿ ವೈ ಯಮಃ ||೯||

(ಮಾರ್ಕಂಡೇಯಕೃತಸ್ತುತಿಃ)

ರತ್ನಕಿತ್ತ ... ರಜತಾಚಲವೇ ಧ್ವಜ ಆದಿಶೇಷನೇ ಸಿಂಜಿನಿ ವಿಷ್ಣುವೇ ಬಾಣ ಈ ಪ್ರಕಾರ ಯುದ್ಧಸಾಮಗ್ರಿಗಳಿಂದ ತ್ರಿಪುರವನ್ನು ನಾಶಮಾಡಿದ ದೇವಸಮೂಹಗಳಿಂದ ವಂದಿತನಾದ ಚಂದ್ರಶೇಖರನನ್ನು ಆಶ್ರಯಿಸುತ್ತೇನೆ ಆ ಮೇಲೆ ನನಗೆ ಯಮನು ಏನುಮಾಡುವನು?

ಅಸಿತಗಿರಿಸಮಂ ಸ್ಯಾತ್ಕಜ್ಜಲಂ ಸಿಂಧುಪಾತ್ರೇ |
ಸುರತರುವರಶಾಖಾ ಲೇಖನೀ ಪತ್ರಮುರ್ವೀ ||
ಲಿಖತಿ ಯದಿ ಗೃಹೀತ್ವಾ ಶಾರದಾ ಸರ್ವಕಾಲಂ |
ತದಪಿ ತವ ಗುಣಾನಾಮೀಶ ಪಾರಂ ನ ಯಾತಿ ||೧೦||

(ಪುಷ್ಪದಂತಕೃತಸ್ತುತಿಃ)

ಗುಡ್ಡದಷ್ಟು ಕಾಡಿಗೆಯನ್ನು ಸಮುದ್ರವೆಂಬ ಪಾತ್ರದಲ್ಲಿ (ದೌತಿ) ಹಾಕಿ ಮಸಿಮಾಡಿ ಕಲ್ಪವೃಕ್ಷದ ಟೊಂಗೆಯನ್ನೇ ಲೇಖನಿಯನ್ನಾಗಿ ಭೂಮಿಯನ್ನೇ ಕಾಗದವನ್ನಾಗಿ ಮಾಡಿ ಸರಸ್ವತಿಯು ಸರ್ವದಾ (ಅನಂತಕಾಲ) ಬರೆದರೂ ಈಶ್ವರನೇ ನಿನ್ನಯ ಗುಣಗಳ ಮಹಿಮೆಯು ಸಮಾಪ್ತಿಯನ್ನು ಹೊಂದುವದಿಲ್ಲ

ಕದಾ ನಿಲಿಂಪನಿರ್ಝರೀ ನಿಕುಂಜಕೋಟರೇ ವಸನ್ |
ವಿಮುಕ್ತದುರ್ಮತಿಃ ಸದಾ ಶಿರಸ್ಥಮಂಜಲಿಂ ವಹನ್ ||
ವಿಮುಕ್ತಲೋಲಲೋಚನೋ ಲಲಾಮಭಾಲಲಗ್ನಕಃ |
ಶಿವೇತಿ ಮಂತ್ರಮುಚ್ಚರನ್ ಕದಾ ಸುಖೀ ಭವಾಮ್ಯಹಂ ||೧೧||

(ರಾವಣಕೃತಸ್ತುತಿಃ)

ಯಾವಾಗ್ಗೆ ದೇವಪಿಟ್ಟ (ಕೈಲಾಸ) ವೆಂಬ ಲತಾಗೃಹದ ಪೊದರಿನಲ್ಲಿ ಇದ್ದು ದುರ್ಗತಿಗಳನ್ನೆಲ್ಲ ದೂರಮಾಡಿ ಯಾವಾಗಲೂ ಬದ್ಧಾಂಜಲಿಯಾಗಿ ನೇತ್ರಗಳನ್ನು ಸ್ಥಿರಗೊಳಿಸಿ ಪ್ರಭಾವಶಾಲಿಯಾಗಿ ನಾನು ಶಿವ ಎಂಬ ಮಂತ್ರವನ್ನು ಉಚ್ಚರಿಸಿ ಯಾವಕಾಲಕ್ಕೆ ಸುಖಿಯಾಗವೆನು? (ಸಶೇಷ)

ಶ್ರೀ ಪಟ್ಟಾಧ್ಯಕ್ಷ ಬ. ಹ. J ಹೋಟಗಿ

ಶ್ರೀಜಗದ್ಗುರು ರೇಣುಕಾಚಾರ್ಯರ ಪ್ರಸಾದಕ್ಕೆ

ಶ್ರೀ ರೇಣುಕಜಯಂತಿ ಮಹೋತ್ಸವ, ದಾವಣಗೆರೆ.

ಈ ಊರಿನ ಶ್ರೀಮದುಭಯವರೇಣುಕ ವೀರಶೈವ ವಿದ್ಯಾವರ್ಧಕ ಸಂಘದವರ ಉದಾರಸಹಾಯಸಂಪತ್ತಿಯಿಂದ ಪದ್ಧತಿಪ್ರಕಾರ ಇದೇ ಭಾವಸಾಮ ಸಂ|| ಫಾಲ್ಗುಣ ಶು|| ೧೨ (ತಾ|| 1(3 3) ಶನಿವಾರದಿಂದ ಮೂರುದಿನಗಳವರೆಗೂ ಕಾಯಿಪೇಟೆಯಲ್ಲಿರುವ ಹಿರೇಮಠ ವರ್ಗದ ಬೃಹನ್ಮಠದ ಮುಂಬಾಗದಾವರಣದಲ್ಲಿ ಅಲಂಕರಿಸಿದ್ದ ಪವ್ಯಮಂಟಪದಲ್ಲಿ ಜಯಂತಿಯು ನಡೆಯಿಸಲ್ಪಟ್ಟಿತು ಶ್ರೀ ಸೋಗಿಪುರವರ್ಗದ ಕಟ್ಟೀಮನಿ ಬೃಹನ್ಮಠದ ಶ್ರೀ ಪಟ್ಟಾಧ್ಯಕ್ಷರು ಕೋಟೂರು ಶ್ರೀ ಪಟ್ಟೇ ಬೃಹನ್ಮಠದ ಪಟ್ಟಾಧ್ಯಕ್ಷರು ಶ್ರೀಮದ್ರಂಭಾಪುರೀ ಮಹಾಸಂಸ್ಥಾನದ ಆಸ್ಥಾನ ಪುರಾಣ ರತ್ನ ಪಂಡಿತ ವೇ|| ಒಸವಲಿಂಗಶಾಸ್ತ್ರಿಗಳವರೂ ಶ್ರೀಮದುಜ್ಜಯಿನೀ ಮಹಾಸಂಸ್ಥಾನದ ಆಸ್ಥಾನವಿದ್ವಾನ್ ಪಂಡಿತರತ್ನ ವೇ|| ಶಂಕರಶಾಸ್ತ್ರಿಗಳವರೂ ಇವರ ಆಗಮನವಿಶೇಷದಿಂದ ಜಯಂತಿಮಹೋತ್ಸವಕ್ಕೆ ವಿಶೇಷವಾದ ಕಳೆಯುಂಟಾಗಿದ್ದಿತು ಪ್ರಥಮದಿನ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರವನ್ನು ಅಲಂಕೃತವಾದ ಅಂದೋಲಿಕೆಯಲ್ಲಿ ಮೂರ್ತಿಗೊಳಿಸಿ ವಾದ್ಯವೈಭವದಿಂದ ಸಕಲಬಿರುದಾವಳಿಗಳೊಡನೆ ಹಳೇಪೇಟೆಯಲ್ಲಿರುವ ಶ್ರೀ ... ಬೃಹನ್ಮಠದಿಂದ ಕಾಯಿಪೇಟೆಯಲ್ಲಿರುವ ಹಿರೇಮಠ ... ಬೃಹನ್ಮಠಕ್ಕೆ ... ಕೀರ್ತನಕ್ಕಾಗಿ ಆಹೂತರಾಗಿದ್ದ ಕೀರ್ತನಕೇಸರಿ ಗುಬ್ಬಿ ಶಿವರುದ್ರಶಾಸ್ತ್ರಿಗಳು ಜಗದ್ಗುರು ರೇಣುಕಾಚಾರ್ಯರ ಅದ್ಭುತ ಲೀಲೆಯನ್ನು ವೀರಶೈವ ಧರ್ಮಪ್ರತಿಪಾದನೆಯೊಡನೆ ಬಹು ಸರಸವಾಗಿ ... ಜನರನ್ನು ಆನಂದಗೊಳಿಸಿದರು ತೃತೀಯ ದಿನ ಫಾಲ್ಗುಣ ಶು|| ೧೪ (ತಾ|| 19 3 35) ... ಕಾಲ ಭದ್ರಪೀಠದಲ್ಲಿ ... ಶ್ರೀಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಷೋಡಶಪೂಜೆಗಳೂ ಅಷ್ಟವಿಧಾರ್ಚನೆಗಳೂ ವೇ|| ಷಡಕ್ಷರಾರ್ಯರು ಹಿರೇಮಠ ಇವರ ಪೌರೋಹಿತ್ಯದಲ್ಲಿ ನಡೆಸಲ್ಪಟ್ಟವು ತರುವಾಯ ಕೀರ್ತನವು ನಡೆದು ಸಮಾಪ್ತಿಯಾಗಿ ವೇ|| ಆಸ್ಥಾನ ವಿದ್ವಾಂಸರಾದ ಉಭಯ ಪಂಡಿತಶ್ರೇಷ್ಠರೂ ಕೀರ್ತನಕಾರರ ಕಥಾಸಂವಿಧಾನಕ್ಕೆ ಮೆಚ್ಚಿ ತಮ್ಮ ಸಂತೋಷವನ್ನು ಪ್ರದರ್ಶನಗೊಳಿಸಿದರು. ಸಾಯಂಕಾಲ 8 ಗಂಟೆಯಿಂದ ತಳಿರುತೋರಣಾದಿಗಳಿಂದ ಅಲಂಕೃತವಾದ ರಾಜವೀಧಿಗಳಲ್ಲಿ ಶೃಂಗರಿಸಲ್ಪಟ್ಟ ಅಂದೋಲಿಕೆಯಲ್ಲಿ ಶ್ರೀ ರೇಣುಕ ಗುರುಸಾರ್ವಭೌಮರ ಭಾವಚಿತ್ರವನ್ನು ಮೂರ್ತಿಗೊಳಿಸಿ ವಾದ್ಯವೈಭವದಿಂದ ಸಮಸ್ತ ಬಿರುದಾವಳಿಗಳೊಡನೆ ಮಹೋತ್ಸವವು ನಡೆದು ಹಳೇಪೇಟೆ ಹಿರೇಮಠಕ್ಕೆ ಬಿಜಯಂಗೈಸಲ್ಪಟ್ಟು ಜಯಘೋಷವನ್ನು ಮಾಡಿದರು ಇಂತಹ ಮಹೋತ್ಸವವನ್ನು ಪ್ರತಿಸಂವತ್ಸರವೂ ನೋಡಿ ಆನಂದಿಸುವ ಭಾಗ್ಯವನ್ನು ನಮ್ಮಗಳಿಗೆಲ್ಲಾ ದೊರಕಿಸಿಕೊಡುತ್ತಿರುವ ಶ್ರೀಮದುಭಯವರೇಣುಕ ವೀರಶೈವ ವಿದ್ಯಾವರ್ಧಕ ಸಂಘದವರಿಗೆ ಶ್ರೀಜಗದ್ಗುರು ರೇಣುಕ ಶಿವಾಚಾರ್ಯ ಭಗವತ್ಪಾದರವರು ಇತೋಪ್ಯತಿಶಯವಾದ ಸುಖವನ್ನೀಯಲೆಂದು ಅನನ್ಯಭಕ್ತಿಯಿಂದ ಪ್ರಾರ್ಥಿಸುವ

ಓರ್ವ ಗುರುಚರಣಸೇವಾಭಿಲಾಷಿ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ. ಪಂಚನಹಳ್ಳಿ.

ಇದೇ ಭಾವನಾಮ ಸಂವತ್ಸರದ ಫಾಲ್ಗುಣ ಶುದ್ಧ ಚತುರ್ದಶಿ ಸೋಮವಾರ (ತಾ|| 18—3—35) ಅರಸೀಕೆರೆ ತಾಲ್ಲೂಕು ಪಂಚನಹಳ್ಳಿ ಗ್ರಾಮದ ಮಠದ ಗದ್ದಿಗಪ್ಪಯ್ಯನವರ ಮಕ್ಕಳು ವೇ|| ಮರುಳಸಿದ್ಧಯ್ಯನವರು ಸದರಿ ಗ್ರಾಮಸ್ಥರನ್ನು ಕೂಡಿಕೊಂಡು ರೇಣುಕ ಜಯಂತಿಯನ್ನು ವೈಭವದಿಂದ ನೆರವೇರಿಸಿದರು.

ಆ ದಿವಸ ಗ್ರಾಮವು ತಳಿರುತೋರಣಗಳಿಂದ ಅಂದವಾಗಿ ಶೃಂಗರಿಸಲ್ಪಟ್ಟಿದ್ದಿತು. ಸರ್ವಮತೀಯರೂ ಉತ್ಸವಕ್ಕೆ ಭಾಗಿಗಳಾಗಿದ್ದರು. ಶ್ರೀ ರಂಭಾಪುರಿ ಶಾಖಾಮಠವಾದ ನಿಡುವಳ್ಳಿ ಮಠದ ಸಾಹುಕಾರ ಮರುಳಸಿದ್ಧಯ್ಯನವರು ಅಸಾಧಾರಣ ಭಕ್ತಿಯಿಂದ ಸ್ವಪರಸ್ಥಳಗಳಿಂದ ತಮ್ಮ ಬಂಧುಮಿತ್ರ ಮುಖಂಡರನ್ನು ಸೇರಿಸಿಕೊಂಡು ಶ್ರೀ ಜಗದಾಚಾರ್ಯರ ಮೂರ್ತಿಯನ್ನು ಷೋಡಶೋಪಚಾರಗಳಿಂದ ವಿಧ್ಯುಕ್ತವಾಗಿ ಪೂಜಿಸಿ ತಮ್ಮ ಗೃಹದಲ್ಲಿ ವೇ|| ಮುದ್ದೇನಹಳ್ಳಿ ಮಠದ ನಂಜುಂಡಯ್ಯನವರ ಮಕ್ಕಳು ಪಂಚನಹಳ್ಳಿ ಗ್ರಾಮದ ಎಲಿಮೆಂಟರಿ ಸ್ಕೂಲ್ ಹೆಡ್‌ಮಾಸ್ಟರ್ ಎಂ ಎನ್ ಮರುಳಸಿದ್ಧಯ್ಯನವರಿಂದ ಶ್ರೀ ವೀರಶೈವ ಮತಸ್ಥಾಪಕರಾದ ಜಗದಾರ್ಯರ ಮಹಿಮೆಯನ್ನು ವೇದಾಗಮೋಕ್ತವಾದ ವೀರಶೈವಮತದ ಸ್ವರೂಪವನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸಮಾಡಿಸಿದರು. ಈ ಸಭೆಗೆ ಮ|| ರಾ|| ಪಂಚನಹಳ್ಳಿ ಶಾನುಭೋಗ ಸೂರ್ಯನಾರಾಯಣಪ್ಪನವರು ಅಧ್ಯಕ್ಷರೂ ... ಮನ್ ಮರುಳೇಗೌಡರು ಉಪಾಧ್ಯಕ್ಷರೂ ಪ|| ... ಪ್ಪನವರು ಕಾರ್ಯದರ್ಶಿಗಳೂ ಆಗಿದ್ದರು ಮತ್ತು ಅಧ್ಯಕ್ಷರ ಭಾಷಣಾನಂತರ ಮಹಾಮಂಗಳಾರತಿ ಪ್ರಸಾದವಿನಿಯೋಗವಾಗಿ ಎಲ್ಲರಿಗೂ ಮೊದಲೇ ವೇ|| ಮರುಳಸಿದ್ಧಯ್ಯನವರಿಂದ ಏರ್ಪಡಿಸಿದ್ದ ವಾಸಕ ಫಲಾಹಾರ ತಾಂಬೂಲ ಹೂ ಗಂಧ ವಿನಿಯೋಗವಾಗಿ ಸಭೆಯು ವಿಸರ್ಜನೆಯಾಯಿತು ಒಟ್ಟಿನಲ್ಲಿ ವೇ|| ಮರುಳಸಿದ್ಧಯ್ಯನವರು ಈ ಕಾರ್ಯವನ್ನು ಅಸಾಧಾರಣಭಕ್ತಿಯಿಂದ ನೆರವೇರಿಸಿದ್ದಕ್ಕಾಗಿ ಶ್ರೀ ಜಗದ್ಗುರು ಪಂಚಾಚಾರ್ಯರು ಸದರಿಯವರಿಗೆ ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಭಗವಂತನನ್ನು ಪ್ರಾರ್ಥಿಸುವ.

ಓರ್ವ ಗುರುಭಕ್ತ

ದಾವಣಗೆರೆಗೆ ಶ್ರೀ ರಾಜಪ್ರತಿನಿಧಿಗಳ ಆಗಮನ.

೨ ನೇ ಕೌನ್ಸಿಲರಾದ ರಾಜಮಂತ್ರಪ್ರವೀಣ ಎಸ್ ಸಿ ರಾಜಗೋಪಾಲಾಚಾರ್ಯ ಬಿ ಎ, ಬಿ ಎಲ್ ರವರು ತಾ|| 21-3-1936 ರ ಗುರುವಾರ ಸಾಯಂಕಾಲ 5 ಘಂಟೆಗೆ ದಾವಣಗೆರೆಯಲ್ಲಿ ಕಟ್ಟಲ್ಪಡುತ್ತಿರುವ ಶ್ರೀ ಜಗದ್ಗುರು ಅಭಿನವರೇಣುಕ ಮಂದಿರಕ್ಕೆ ದಯಮಾಡಿಸಿದ್ದರು ತಳಿರುತೋರಣಗಳಿಂದಲಂಕರಿಸಿದ ಭವ್ಯವಾದ ಮಂಟಪದಲ್ಲಿ ವಿಶ್ರಮಿಸುತ್ತಿರುವಾಗ ಇವರ ಆಗಮನದ ಸಂತೋಷಸೂಚನಾದವಾಗಿ ತೋಪಿನಂತೆ ಶಬ್ದವಾಗುತ್ತಿರುವ ಥಟಾಕೆಗಳನ್ನು ಹಾರಿಸಿದರು ಬಳಿಕ ಇಲ್ಲಿಯ ಶ್ರೀ ಜಗದ್ಗುರು ಅಭಿನವರೇಣುಕ ವಿ ವಿ ಸಂಘದವರು ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿ ಫಲತಾಂಬೂಲ ಹಾರತುರಾಯಿಗಳಿಂದ ಸತ್ಕರಿಸಿದರು ಅನಂತರ ಮೇಲ್ಕಂಡ ಸಂಘದವರ ಮತ್ತು ಅನೇಕಾನೇಕ ಇತರ ಪುರಪ್ರಮುಖರ ಸಂಗಡ ಶ್ರೀ ವ ಹಾಸ್ಟಲಿಗ ಳವರ ಮುಖ್ಯಾಂ ವಿಷಯವಾಗಿಯೂ ತಾವು ಹಿಂದೆ ಶ್ರೀ ಬಾಳೇಹೊನ್ನೂರು ಸಂಸ್ಥಾನಮಠಕ್ಕೆ ದಯಮಾಡಿಸಿ ಪರಾಂಬರಿಸಿಕೊಂಡು ಬಂದ ವಿಷಯವಾಗಿಯೂ ಕೆಲವು ಹೊತ್ತು ಸಂಭಾಷಿಸಿ ಹಿಂದಿರಿಗಿದರು

ಓರ್ವ ಪ್ರತ್ಯಕ್ಷದರ್ಶಿ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ.

ಶಿವಮೊಗ್ಗ ಡಿ|| ಶಿಕಾರಿಪುರ ತಾಲ್ಲೂಕು ಟವರ್ ನಿವಾಸಿಗಳು ತಾ|| 1933 ನೆಯ ಸೋಮವಾರ ಪ್ರಾತಃಕಾಲ ಇಲ್ಲಿಯ ದೇವಸ್ಥಾನದಲ್ಲಿ ಜಗದ್ಗುರು ವಿನ ಮೂಲಲಿಂಗೋದ್ಭವಮೂರ್ತಿಯನ್ನು ಸಿಂಹಾರೋಹಣಮಾಡಿಸಿ ಷೋಡಶೋಪಚಾರಗಳಿಂದಲೂ, ಅಷ್ಟೋತ್ತರಶತಸಹಸ್ರನಾಮಾವಳಿಸ್ತೋತ್ರಗಳಿಂದಲೂ ಬಿಲ್ವಪತ್ರಾದಿ ನಾನಾ ವಿಧಪುಷ್ಪಗಳಿಂದಲೂ ಅರ್ಚಿಸಿದುದಲ್ಲದೆ, ಊರನ್ನು ನಾನಾವಿಧವಾದ ತಳಿರುತೋರಣಗಳಿಂದ ಅಲಂಕರಿಸಿದ್ದರು ಸಾಯಂಕಾಲ ಆರು ಗಂಟೆಗೆ ಉತ್ಸವವು ಹೊರಟು 10 ಗಂಟೆಗೆ ಪುನಃ ದೇವಸ್ಥಾನಕ್ಕೆ ತಲಪಿತು ಈ ಉತ್ಸವದಲ್ಲಿ ಸ್ಥಳಪರಸ್ಥಳಗಳ ಮಹಾಜನಗಳು ಭಾಗಿಗಳಾಗಿದ್ದರಲ್ಲದೆ ದಾವಣಗೆರೆ ವೇ|| ಗುರುಸಿದ್ಧಶಾಸ್ತ್ರಿಗಳು ದಯಮಾಡಿಸಿ ಸುಮಾರು 1¼ ಗಂಟೆಗಳ ಕಾಲ ಪಂಚಪೀಠಗಳ ವಿಷಯವಾಗಿ ಭಾಷಣಮಾಡಿ ಸಭಿಕರನ್ನು ಆನಂದಗೊಳಿಸಿದರು ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಳವನ್ನೀಯಲೆಂದು ಹಾರೈಸುತ್ತೇವೆ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಿಸಿರುತ್ತೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿ ವೃತ್ತಾಂತ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ

ಬೆಲೆ ೧೨ ಆಣೆ.

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಕಾಶಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲಗ್ರಂಥವು ಕೇವಲ ೪೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೭೨ ಪುಟಗಳಷ್ಟಾಗಿದೆ ಈ ಮಹಾಗ್ರಂಥದ ಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮ ಸ್ವಾಮಿಗಳಾದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಡಿತೇಪನ್ನಿಗೆ ಅಪ್ಪಣೆಯನ್ನಿತ್ತಿರುವದಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವನೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೯೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು ವಿ ಪಿ ಚಾರ್ಜಿ ೧ ರೂ ೫ ಆಣೆ ಪ್ರತ್ಯೇಕ

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೬—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಒಸ್ತುಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುತ್ತಿನಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಅ ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳ ಲಿಂಗದಿಂದ ಉದಿಸಿದ ಫೋಟೋ ಸೈಜು ೨೦\೧೫ ಬೆಲೆ ಗಳ್ಳೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಕರವಾದ ಅಗಸ್ತ್ಯ ಮಹರ್ಷಿ ವ್ಯಾಸ ದಾನೇಂದ್ರ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦\೧೫ ಬೆಲೆ	೦—೨—೬
ಪಟ್ಟ (?) ಶೀಕಾರೋಹಣನಾತ್ಮರಕರ್ತ ಐವರು ಆಚಾರ್ಯರು ಒಂದಾಗಿ ಕುಳಿತಿರುವ ಫೋಟೋ ಸೈಜು ೧೫\೧೦ ಬೆಲೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೫\೧೦ ಬೆಲೆ ಗಳ್ಳೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦\೮ ಬೆಲೆ ಗಳ್ಳೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಿ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಟೋತ್ಕಚನಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನಿ ಶ್ರೀ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಗಳ್ಳೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀ ನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀ ನಾಥಶಾಸ್ತ್ರಿಗಳವರ ಫೋಟೋ ಬೆಲೆ ಗಳ್ಳೆ ..	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಗಳ್ಳೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಗಳ್ಳೆ	೦—೦—೯
ಶ್ರೀ ಜಗದ್ಗುರು ರ ಪಾದಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಿಪಾಕದಲ್ಲಿ ನಿರುವ ರೇವಣಸಿದ್ಧ ಜಗದ್ಗುರುಗಳವರ ಅದ್ಭುತವಾದ ಸೋಮೇಶ್ವರದ ಫೋಟೋ	೦—೦—೯

ಸೂಚನೆ :—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು.

(Registered Trade Mark)

ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ನೆಗಡಿ, ಒಂದು ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಒಡದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರಿಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವು ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ. ಪಿ. ೦-೬-೦

ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[12] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಮಾಲಿಕೆ .	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ .	೧ ಆಣೆ
ಗೋತ್ರಸೂತ್ರಪಟ (೩ನೆಯ ಆವೃತ್ತಿ) .	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ...	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ) .	೧ ಆಣೆ
ಒಸವಾದಿ ಶಿವತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯ ಚರಿತ್ರೆ (೨ನೆಯ ಆವೃತ್ತಿ) ...	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವ ಪದಗಳು	೨ ಆಣೆ
ವೀರಶೈವಮತಸಾರಮಾಲಾ	೩ ಆಣೆ
ವೀರಶೈವಾಚಾರಪದ್ಧತಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶೆ ಪತ್ರಸ್ಪಷ್ಟೀಕರಣ (೨ನೆಯ ಆವೃತ್ತಿ)....	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣಮು (ತೆಲುಗು)	೬ ಆ…
पंडित श्रीकाशीनाथशास्त्री यांचें भाषण (मराठी) ..	८ आणे
Speeches by Pandit Shri Kashinatha Shastri (*English*)	12 As.
ವೀರಶೈವರತ್ನ (೪ನೆಯ ಆವೃತ್ತಿ)	೧೨ ಆ…
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ…
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ…
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ…
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨ ಆ…
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ…
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ...	೧ ರೂ…
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ…
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕೆ)	೧ ರೂ…
ವೀರಶೈವಸಿದ್ಧಾಂತಸುಧಾಕರ	೨ ರೂ…
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ…
लिंगधारणचंद्रिका (संस्कृत)	३ रु…
महानारायणोपनिषत् (वीरशैवभाष्य-संस्कृत)	१ रु…
वीरशैवचूडामणि (संस्कृत)	१ रु…

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆನ್ಯಾನಿಬ್ಯಾಸ್ ತಾ|| ೨೫|| ಪಂಡಿತ ಶ್ರೀ ಗುರುಪಾದಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಂತ್ವಿದಂ ಲೋಕಕಮ್ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ ನೇ ಏಪ್ರಿಲ್ ೧೯೩೫ [ಸಂಚಿಕೆ ೪೫

ಶ್ರೀ ಜಗದ್ಗುರವೇ ನಮಃ

ಶ್ರೀ ಜಗದ್ಗುರು ರೇಣುಕಜಯಂತ್ಯುತ್ಸವವು

ವರೂರು

ಹುಬ್ಬಳ್ಳಿ ತಾಲೂಕ ಪೈಕಿ ವರೂರ ಗ್ರಾಮದಲ್ಲಿ ಶ್ರೀಮಜ್ಜಗದ್ಗುರು ರೇಣುಕಜಯಂತಿಯು ಫಾಲ್ಗುಣ ೧೮ ಸೋಮವಾರದ ದಿವಸ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಪ್ರಾತಃಕಾಲ ೭ ಘಂಟೆಯಿಂದ ೯ ಘಂಟೆಯವರೆಗೆ ಶ್ರೀ ಶಿವಕುಮಾರಸ್ವಾಮಿ ಬೃಹನ್ಮಠ ಇವರ ಅಪ್ಪಣೆಯಮೇರೆಗೆ ಶ್ರೀ ವೇ|| ಚನ್ನವೀರಶಾಸ್ತ್ರೀ ನರೇಗಲ್ಲ ಶ್ರೀಯುತ ಸಿದ್ಧಲಿಂಗಶರ್ಮಾ ವಿಳವಣಿಕೆ ಇವರು ವಿಧ್ಯುಕ್ತ ರೇಣುಕಮೂರ್ತಿಗೆ ರುದ್ರಾಭಿಷೇಕಮಾಡಿದರು. ಅನಂತರ ಗಣಸಂತೃಪ್ತಿಯು ಪೂರೈಸಿತು. ಸಾಯಂಕಾಲ ೬|| ಘಂಟೆಗೆ ಕರಡಿ ಕಾಳ ಭಜಂತ್ರಿ ಮೊದಲಾದ ಮಂಗಲವಾದ್ಯಗಳಿಂದ ಸಂಭ್ರಮಸ್ತಂಭ ತೋರಣಾದಿಗಳಿಂದ ಅಲಂಕೃತಗಳಾದ ಮುಖ್ಯಮುಖ್ಯ ಬೀದಿಗಳಲ್ಲಿ ಮೆರವಣಿಗೆಯು ಹೊರಟಿತು. ದಾರಿಯುದ್ದಕ್ಕೂ ಭಕ್ತಾದಿಗಳು ಕಾಯಿ ಕರ್ಪೂರ ಹಣ್ಣುಗಳನ್ನು ಒಪ್ಪಿಸಿ ದರ್ಶನಾಶೀರ್ವಾದಗಳನ್ನು ಪಡೆದರು. ಉತ್ಸವಕ್ಕೆ ಜನಸಂದಣಿಯು ವಿಶೇಷವಾಗಿ ಕೂಡಿದ್ದಿತು. ಉತ್ಸವವು ೯ ಘಂಟೆಗೆ ಬೃಹನ್ಮಠಕ್ಕೆ ಬಂದು ತಲ್ಪಿದನಂತರ ಶ್ರೀ ಶಿವಕುಮಾರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ವೇ|| ಚನ್ನವೀರಶಾಸ್ತ್ರೀ ಸಿದ್ಧೇಶೋಪಾಧ್ಯ ಬೃಹನ್ಮಠ ಸಾ|| ನರೇಗಲ್ಲ ಪಾರದ ಸಂಸ್ಕೃತ ಪಾಠಶಾಲಾ ಇವರು ಗುರು ಲಿಂಗ ಜಂಗಮರ ವಿಷಯವಾಗಿಯೂ ಸಿದ್ಧಲಿಂಗಶರ್ಮಾ ಕುಲಗೇರಿ ಬೃಹನ್ಮಠ ಇವರು ದೀಕ್ಷಾವಿಷಯವಾಗಿಯೂ ಸಭಿಕರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಭಾಷಣಮಾಡಿದರು. ಆ ಮೇಲೆ ಅಧ್ಯಕ್ಷರ ಸಮಯೋಚಿತ ಭಾಷಣವಾಗಿ ಜಗದ್ಗುರು ರೇಣುಕರ ಜಯಜಯಕಾರದೊಡನೆ ಸಭಾವಿಸರ್ಜನೆಯಾಯಿತು.

ವರ್ತಕ ಉಳವನಗೌಡ

ಮರಣವಾರ್ತೆ

ದಾವಣಗೇರಿಯಲ್ಲಿ ವಾಸವಾಗಿದ್ದ ಮಾಗಾನಹಳ್ಳಿ ಶ್ರೀಮಾನ್ ಷಡಕ್ಷರಪ್ಪನವರು ಕಳೆದ ತಿಂಗಳು 28-3-35 ಗುರುವಾರ ಸಾಯಂಕಾಲ 7.30 ಘಂಟೆಗೆ ಪಾರ್ಥಿವಶರೀರವನ್ನು ಬಿಟ್ಟರೆಂದು ಕೇಳಿ ನಾವುಗಳು ಬಹಳವಾಗಿ ವಿಷಾದಿಸುತ್ತೇವೆ. ಈ ಮಹೋದಯರು ಅಸಾಧಾರಣ ಗುರುಭಕ್ತರಾಗಿದ್ದರಲ್ಲದೆ ಮೇಧಾವಿಗಳೂ ಸುಪ್ರಸಿದ್ಧ ವರ್ತಕರೂ ಆಗರ್ಭಶ್ರೀಮಂತರೂ ಆಗಿದ್ದರು. ಆದರೆ ಇವರಿಗೆ ಸಂಪೂರ್ಣ ವಾರ್ಧಕಾವಸ್ಥೆಯು ಪ್ರಾಪ್ತವಾದ್ದರಿಂದ ಕೈಲಾಸವಾಸಿಗಳಾಗಬೇಕಾಲವ್ಯಾಪ್ತಿಯಾಗಿದ್ದರೂ ಈ ಕಾಲದಲ್ಲಿ ಇಂಥ ಆಸ್ತಿಕಶಿರೋಮಣಿಗಳನ್ನು ನೋಡುವದು ಅತಿದುರ್ಲಭವಾಗಿರುವುದರಿಂದ ಈ ಮಹೋದಯರ ವಿಯೋಗವು ನಮ್ಮ ವೀರಶೈವಸಮಾಜಕ್ಕೇ ವ್ಯಸನವನ್ನುಂಟುಮಾಡಿದೆ. ಕರುಣಾಸಮುದ್ರನಾದ ಪರಮೇಶ್ವರನು ಇವರ ಆತ್ಮಕ್ಕೆ ಶಾಂತಿಯನ್ನೀಯುವುದಲ್ಲದೆ, ಇವರ ಕುಟುಂಬವರ್ಗದವರಿಗುಂಟಾದ ಮಹಾದುಃಖವನ್ನು ಶಮನಗೊಳಿಸಲಿ.

ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ಜಯಂತೀ ಮಹೋತ್ಸವ ಕೋಲ್ಯ, ಕ್ಯಾಲನಹಳ್ಳಿ.

ಕೋಲ್ಯದ ಸಮೀಪದಲ್ಲಿರುವ ಕ್ಯಾಲನಹಳ್ಳಿ ಎನ್ನುವ ಗುಡ್ಡದ ಮೇಲೆ ಕಲ್ಲಿನಾದ ಬೇಸಿಗೆಯಲ್ಲಿಯೂ ಒಣಗದೇ ಶಾಶ್ವತವಾಗಿ ಬರುತ್ತಿರುವ ಗಂಗೆಯ ಸಮೀಪಸ್ಥಳದಲ್ಲಿ ಸೋಮಂಗಲ್ಯ ಗ್ರಾಮದ ರಾ|| ರಾ|| ವೈದ್ಯ ಲಿಂಗಯ್ಯನವರ ಪುತ್ರ ಶ್ರೀಮಾನ್ ಗುರುಸ್ವಾಮಿ ಅಯ್ಯನವರು ಕಟ್ಟಿಸಿರುವ ಅಗಸ್ತ್ಯಾಶ್ರಮ ಎನ್ನುವ ಸಿದ್ಧೇಶ್ವರಾಲಯದಲ್ಲಿ ಶ್ರೀ ಜಗದ್ಗುರು ರೇವಣಸಿದ್ಧೇಶ್ವರನು ಅಗಸ್ತ್ಯ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸಿದ ಕಾಲನಿಯ ಮಹಾಪುರುಷರ ಒಂದು ದೃಶ್ಯವೆನ್ನಿಸ ಒಂದಿಯಲ್ಲಿ ಶ್ರೀ ರೇವಣಸಿದ್ಧನು ಗಗನಮಾರ್ಗದಿಂದ ಬಂದು ಅಗಸ್ತ್ಯಮಹರ್ಷಿಗಳಿಗೆ ಉಪದೇಶ ಮಾಡಿದ್ದನ್ನು ವ್ಯಕ್ತ ಪತ್ನಿಯಾದ ಲೋಪಾಮುದ್ರೆಯನ್ನೂ ಶಿವಲಿಂಗವನ್ನೂ ನಾದಿ ಶ್ರೀ ಪತ್ರವನ್ನೂ, ಆಶ್ರಮವನ್ನೂ ಬರೆಸಿರುವ ಸ್ಥಳದಲ್ಲಿ ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ಜಯಂತಿಯನ್ನು ಇದೇ ಬಿಸಿದರು. ಕಳೆದ ತಾ|| 18-3-35 ಸೋಮವಾರದ ಉದಯಕ್ಕೆ ಸದರಿ ಮೂರ್ತಿಗಳಿಗೆ ರುದ್ರಾಭಿಷೇಕವನ್ನು ಮಾಡಿಸಿ ಸಹಸ್ರಬಿಲ್ವಾರ್ಚನೆಯೂ ಷೋಡಶೋಪಚಾರ ಪೂಜಾಪದ್ಧತಿಯಾಗಿ 11 ಗಂಟೆವರೆಗೆ ನಡೆಯಿಸಿ ವಸಂತರ ಗಣಾರಾಧನೆ ಮಾಹೇಶ್ವರರ ಪೂಜಾದಿ ಕೃತ್ಯಗಳು ಮುಗಿದವು. ಮಧ್ಯಾಹ್ನ 2½ ಗಂಟೆಗೆ ಸಭೆ ಸೇರಿ ನಮ್ಮ ಕುಲೋದ್ಧಾರದ ನಿಮಿತ್ತವಾಗಿ ಮಠಾಶ್ರಯವನ್ನು ನೇರಿಸಬೇಕೆಂದು ತೀರ್ಮಾನವಾದನಂತರ ಮಂಗಳಾರತಿಯಾಗಿ ಸಭೆಯು ಮುಕ್ತಾಯವಾಯಿತು. ಈ ಉತ್ಸವಕ್ಕೆ ಪರಸ್ಥಳದವರೂ ಭಾಗಿಗಳಾಗಿದ್ದರು. ಪ್ರತಿವರ್ಷದ ಮಾಮೂಲ್ ಪ್ರಕಾರ ಈ ಜಯಂತ್ಯುತ್ಸವವನ್ನು ಮಾಡಿಸಿದ ಶ್ರೀಮಾನ್ ಗುರುಸ್ವಾಮಿ ಅಯ್ಯನವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಕಟಾಕ್ಷವುಂಟಾಗಬೇಕೆಂದು ಪ್ರಾರ್ಥಿಸುವ,

ಕೆ ಅರುಣಾಚಲಯ್ಯ

ದುಷ್ಟಮೃಗಗಳಿಂದಲೂ, ವಿಷಸರ್ಪಗಳಿಂದಲೂ 1931 ನೇ ಇಸವಿಯಲ್ಲಿ ಸೆಂಟ್ರಲ್ ಬಿಹಾರ್ ಪ್ರಾಂತ್ಯದಲ್ಲಿ 1,350 ಜನರು ಮರಣಹೊಂದಿರುತ್ತಾರೆಂದೂ, ಹುಲಿಯಿಂದ ೨೦ ಜನರೂ, ಕಿರಬ ಮತ್ತು ಚಿರತೆಗಳಿಂದ 23 ಜನರೂ, ಹಾವು ಕಡಿದು 1,293 ಜನರೂ ಮರಣಹೊಂದಿರುತ್ತಾರೆಂದೂ, ಇತರ ದುಷ್ಟ ಜಂತುಗಳಿಂದ ಅಂದರೆ ಕಾಡುಕೋಣ, ಕಾಡುಹಂದಿ ಇವುಗಳಿಂದ 30 ಜನರು ತೀರಿಹೋದರೆಂದೂ, ಸಾಗೂರ್ ಎಂಬ ಹಳ್ಳಿಯಲ್ಲಿ ಒಂದು ವರ್ಷದಲ್ಲಿ 173 ಜನರು ಹಾವು ಕಡಿದು ಸತ್ತುಹೋದರೆಂದೂ ತಿಳಿದುಬಂದಿದೆ.

ಮೊಗಾಡಿಸ್ಕೋ ಎಂಬ ಊರಿನಿಂದ ತಿಳಿದುಬಂದ ಸಮಾಚಾರದಲ್ಲಿ ಇಟಲಿಯವರಿಗೂ ಅಬ್ಬಿಸೀನಿಯಾ ದೇಶದವರಿಗೂ ಗಡಿನಾಡಿನ ವಿಷಯದಲ್ಲಿ ಮತ್ತೆ ಕಲಹವಾಯಿತೆಂದೂ, ಶಸ್ತ್ರಾಸ್ತ್ರಗಳಿಂದ ಕೂಡಿದ ಕೆಲವು ಮಂದಿ ಅಬ್ಬಿಸೀನಿಯಾ ದೇಶದವರು ಇಟಲಿ ದೇಶದ ಸರಹದ್ದನ್ನು ಆಗಬ್ಲಿ ಎಂಬಲ್ಲಿ ಪ್ರವೇಶಿಸಿ 100 ಒಂಟೆಗಳನ್ನು ವಶಪಡಿಸಿಕೊಂಡರೆಂದೂ ಇವರುಗಳನ್ನು ಇಟಲಿ ದೇಶದ ಸೈನಿಕರು ಹಿಂದಕ್ಕೆ ಓಡಿಸಿದರೆಂದೂ ತಿಳಿದುಬಂದಿದೆ. ಇಟಲಿ ದೇಶದವರು ತಮಗೆ ಅಬ್ಬಿಸೀನಿಯಾ ದೇಶದವರಿಂದ ಉಂಟಾಗಿರುವ ನಷ್ಟವನ್ನು ಕೊಡಿಸಿಕೊಡಬೇಕೆಂದು ಜನಾಂಗಸಂಯೋಜನಕೂಟದವರನ್ನು ಕೇಳುತ್ತಿದ್ದಾರೆಂದು ಪ್ರಕಟವಾಗಿದೆ.

ಬ್ರಿಟಿಷ್-ಜರ್ಮನ್ ಸಂಧಾನ.

ಸರ್ ಜಾನ್ ಸೈಮನ್ನರು ಇಂದು ಲಂಡನ್ನನ್ನು ಬಂದು ಸೇರಿದರು. ಬರ್ಲಿನ್ನನ್ನು ಇವರು ಬಿಡುವ ಮುನ್ನ ಜರ್ಮನಿಯ ವಿದೇಶ ವ್ಯವಹಾರ ಸಚಿವ ಶ್ರೀ ವಾನ್ ನ್ಯೂರಾತರೂ ಬರ್ಲಿನ್ನಿನಲ್ಲಿರುವ ಬ್ರಿಟಿಷ್ ರಾಯಭಾರಿ ಸರ್ ಎರಿಕ್ ಫಿಪ್ಸರೂ ಟೆಂಪಲ್ ಹಾಫ್ ವಿಮಾನಕ್ಷೇತ್ರದಲ್ಲಿ ಇವರನ್ನು ಬೀಳ್ಕೊಟ್ಟರು. ಇವರು ವಿಮಾನಾರೋಹಣ ಮಾಡುವಾಗ ಹೆರ್ ಹಿಟ್ಲರವರ ಸ್ವಂತ ಅಂಗರಕ್ಷಕರು ರಾಜಮರ್ಯಾದೆ ಮಾಡಿದರು.

ಬ್ರಿಟಿಷ್ ಮಂತ್ರಿಮಂಡಲವು 40 ನಿಮಿಷಗಳಕಾಲ ಕೂಡಿತ್ತು. ಸರ್ ಸೈಮನ್ನರು ಬರ್ಲಿನ್ ಸಂಧಾನದ ವಿಷಯವನ್ನು ವರದಿಮಾಡಿದರು. ಅದರಮೇಲೆ ಯಾವ ನಿರ್ಧಾರವೂ ಆಗಲಿಲ್ಲ. ಶೀಘ್ರವಲ್ಲೇ ಸರ್ ಜಾನ್ ಸೈಮನ್ನರು ಬರ್ಲಿನಿನ ಸಂಧಿಸಂಧಾನ ಕುರಿತ ವಿಷಯಕುರಿತ ಬಿಳಿಪತ್ರವನ್ನು ಸಿದ್ಧಮಾಡುವರೆಂದು ಕಾಣುತ್ತದೆ. ನಾಳೆ ಸಾಮಂತಸಭೆಯಲ್ಲಿ ಈ ವಿಚಾರವಾಗಿ ಒಂದು ಸಣ್ಣ ಹೇಳಿಕೆಯನ್ನು ಕೊಡುವರು. ಇದೇ ಸಂಬಂಧವಾಗಿ ಇವರೊಡನೆ ವಿಚಾರಮಾಡಲು ಫ್ರಾನ್ಸ್ ಬೆಲ್ಜಿಯಂ ಮತ್ತು ಇಟಲಿಗಳ ರಾಯಭಾರಿಗಳು ಸರ್ ಜಾನ್ ಸೈಮನ್ನರನ್ನು ಸಂದರ್ಶಿಸಿದರು. ವಿಚಾರವಾದ ಅಂಶಗಳೆಲ್ಲವೂ ಗೋಪ್ಯವಾಗಿಡಲಾಗಿದೆ.

ಸ್ವೀಕಾರ

ವೇ|| ಸಿದ್ಧಲಿಂಗಯ್ಯನವರು ಮಠದ ವಕೀಲ್ ಕುಷ್ಟಗಿ ಇವರಿಗೆ ಪುತ್ರರತ್ನ ಜನನವಾದ ಸಂತೋಷ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ಸಮರ್ಪಿಸಿದ 1 ರೂ ಯು ವೇ|| ಹಂಚಿನಾಳ ಹಿರೇಮಠದ ರುದ್ರಯ್ಯನವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಜಿಲ್ಲಾ ಹಿರೆನರ್ತಿಗ್ರಾಮದ ಹಿರೇಮಠ ಮಹಾಂತಯ್ಯ ತಲಾಠಿ ಕುಲಕರ್ಣಿ ಇವರ ಚಿ|| ಗುರುಶಾಂತಪ್ಪನಿಗೆ ಉಂಟಾಗಿದ್ದ ಬಾಯಿಲೆಯು ಆಚಾರ್ಯ ಅನುಗ್ರಹದಿಂದ ಗುಣವಾದುದರಿಂದ ಪ್ರಭಾ ಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 1 ರೂ. ಯು ವೇ|| ಬಸವಲಿಂಗಯ್ಯ ಹಿರೇಮಠ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪತ್ರವ್ಯವಹಾರ.

ಪತ್ರಕಾರರು ಪ್ರಕಟಿಸುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಾಗಿರುವುದಿಲ್ಲ. ಈ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸನ್ನ

ಶ್ರೀ ರೇಣುಕ ಜಯಂತೀಮಹೋತ್ಸವ ಸಂಘ ಬೆಂಗಳೂರು

ಭಾವನಾಮ ಸಂ|| ಫಾಲ್ಗುಣ ಶುದ್ಧ ೧೩ (1 3 5) ಭಾನುವಾರ [illegible] ಶ್ರೀ ಮಹೇಶನ ರಥ ಮೇಲಿನ ಚಪ್ಪರದಲ್ಲಿ ಮ|| ರಾ|| ದಿವಾನ್ ಬಹದ್ದೂರ್ ಸರ್ ಕೆ ಪಿ ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಸೇರಿದ್ದ ಶ್ರೀ ರೇಣುಕಜಯಂತಿ ಮಹೋತ್ಸವದ ಸಮಾರಂಭದ ಸಭೆಯಲ್ಲಿ ಕಾರ್ಯನಿರ್ವಾಹಕ ಸಂಘದ ಪರ ಬೆಂಗಳೂರಿನ ಚಾಮರಾಜಪೇಟೆ [illegible] ವೇ|| ಎಸ್ ರುದ್ರಯ್ಯನವರು ಓದಿ ಹೇಳಿದ ವರದಿ

ಪೂಜ್ಯಪಾದರಾದ ಶ್ರೀ ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರು ಅಧ್ಯಕ್ಷರು ಮತ್ತು ಸಭಿಕ ಮಹಾಜನರಲ್ಲಿ ವಿಜ್ಞಾಪನೆಗಳು

ಕಳೆದ ಶ್ರೀಮುಖನಾಮ ಸಂವತ್ಸರದ ಫಾಲ್ಗುಣ ಶುದ್ಧ ೧೩ ದಿನ ನಡೆದ ಶ್ರೀ ರೇಣುಕ ಜಯಂತಿ ಮಹೋತ್ಸವದ ಜಮಾ ಖರ್ಚಿನ ರಿಪೋರ್ಟು ಮುದ್ರಣಗೊಳಿಸಿ ಇವರೆಗೆ ಚಂದಾ ಕೊಟ್ಟಿರುವ ಮಹನೀಯರಿಗೆ ಹಂಚಲ್ಪಟ್ಟಿರುತ್ತೆ. ಸದರೀ ವರುಷದಲ್ಲಿ ಚಂದಾ ವಸೂಲಿ ಮತ್ತು ಖಜಾನೆ ಟ್ರೆಜರಿ ಗ್ರೇಸ್ ಮರ್ಚೆಂಟ್ ಬ್ಯಾಂಕಿನಿಂದ ಬಂದ ಬಡ್ಡಿ ಸಹ ಸೇರಿ ಜಮಾ

ಬಾಬ್ತು	ರೂ	38[illegible]—[illegible]—0
ಸದರಿವರ್ಷದಲಿ ಖರ್ಚಾದ ಬಾಬ್ತುಗಳು		[illegible]5[illegible]—6—0
ಈ ಜಮಾಖರ್ಚು ಖಜಾನೆ ಟ್ರೆಜರಿಯಲ್ಲಿರುವುದು		1 00—0—0
[illegible] ಮರ್ಚೆಂಟ್ಸ್ ಕೋ ಆಪರೇಟಿವ್		
ಬ್ಯಾಂಕ್ ನಲ್ಲಿರುವುದು		[illegible]0—0—0
[illegible] ಪ್ರಯಾಣದಲ್ಲಿ ಶಿಲ್ಕು ಇರುವುದು		3—1[illegible]—
ಒಟ್ಟು		14[illegible]—1[illegible]—1

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಧರ್ಮಗ್ರಂಥ ಭಂಡಾರದಲ್ಲಿ ಈಗ ೨೦ ಪುಸ್ತಕಗಳು ಇರುತ್ತವೆ. ಈ ಹಿಂದೆ ಸದರಿ ಫಂಡಿನ ವ್ಯವಸ್ಥಾಪಕರಿಂದ ಸಿದ್ಧಾಂತ ಶಿಖಾಮಣಿಯನ್ನು ಮುದ್ರಿಸಲಾಗುತ್ತೆ ಮತ್ತು ಪಂಡಿತ ವೇ|| ಉಮಾಪತಿ ಶಂಕರಶಾಸ್ತ್ರಿಗಳಿಂದ ವೀರಶೈವಭಾಷ್ಯ ಎಂಬ ವ್ಯಾಖ್ಯಾನವನ್ನು ಬರೆಸಿ 100 ರೂ ಬಹುಮಾನ ಕೊಟ್ಟಿರುತ್ತದೆ. ಅಲ್ಲದೆ ದೇವನಾಗರಿ ಅಕ್ಷರದ ವ್ಯಾಖ್ಯಾನಸಹಿತವಾದ ಲಿಂಗಪುರಾಣ ಮಹಾಶಿವಪುರಾಣ ಗ್ರಂಥಗಳನ್ನು ಬೊಂಬಾಯಿಯಿಂದ ತರಿಸಿರುತ್ತೆ. ಷಟ್ಸ್ಥಲ ಬ್ರ|| ಶ್ರೀ|| ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರು ಪುರಾತನ ಗ್ರಂಥಗಳನ್ನು ಪರಿಶೋಧಿಸುತ್ತಿರುವುದರಲ್ಲಿ ಉತ್ತಮ ಗ್ರಂಥಗಳನ್ನು ಮುದ್ರಣಮಾಡಿಸಲು ಏರ್ಪಾಡು ಮಾಡಲ್ಪಡುತ್ತದೆ. ಸದರಿ ಗ್ರಂಥಭಂಡಾರದ ಅಧ್ಯಕ್ಷರಾದ ಸರ್ ಕೆ ಪಿ ಪುಟ್ಟಣ್ಣಶೆಟ್ಟರವರ ಹೆಸರಿನಲ್ಲಿ ಮೈಸೂರು ಬ್ಯಾಂಕಿನಲ್ಲಿ 1400 ರೂ ಫಿಕ್ಸೆಡ್ ಡಿಪಾಜಿಟ್ಟಿನಲ್ಲಿಟ್ಟಿರುತ್ತೆ. ಗ್ರಂಥಭಂಡಾರದ ಕೋಶಾಧ್ಯಕ್ಷರಾದ ಮ|| ರಾ|| ಸರಾಫ್ ಬಿ ಬಸಪ್ಪನವರಲ್ಲಿ ರೂ 32—[illegible]—1 ಶಿಲ್ಕು ಇದೆ.

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತ ವಿದ್ಯಾರ್ಥಿಗಳ ಫ್ರೀಬೋರ್ಡಿಂಗ್ ಸಂಸ್ಥೆಯು ಶ್ರೀಮದ್ರಂಭಾಪುರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಕೃಪಾಪೋಷಕತ್ವದಲ್ಲಿ ಸ್ಥಾಪಿಸಲ್ಪಟ್ಟು 6 ವರ್ಷಗಳಾಯಿತು. ಈ ಸಂಸ್ಥೆಯು ದಿನೇದಿನೇ ಅಭಿವೃದ್ಧಿಯಾಗುತ್ತಿರುವುದು.

ತಾ|| 22 11 1925 ರಲ್ಲಿ ನಡೆದ ಶ್ರೀ ಜಗದ್ಗುರುಗಳವರ ಪಟ್ಟಾಧಿಕಾರ ಸತ್ಕಾರ್ಯ ಸಮಾರಂಭದಲ್ಲಿ ಶ್ರೀಗಳವರ ಸಮ್ಮುಖದಲ್ಲಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಶಾಲೆ ಜಗದೀಶ್ವರ ವ್ಯಾಖ್ಯಾನ ಮಾಡಿದ ಮಹಾಜನರಲ್ಲಿ ಒಬ್ಬರಾದ ಧರ್ಮಾತ್ಮರಾದ ಬೆಂಗಳೂರು ಶ್ರೀ|| [illegible]ಪ್ಪನವರ ಬಾಳ್ವಿಕ ಸುಮಾರು 25 000 ರೂಪಾಯಿ ಬೆಲೆಬಾಳುವ ತಮ್ಮ ಚರಸ್ಥಿರಾಸ್ತಿಯನ್ನೆಲ್ಲ ಟ್ರಸ್ಟ್ ಡೀಡ್ ಮೂಲಕ ಶ್ರೀ ಜಗದ್ಗುರುಗಳವರಿಗೆ ರಿಜಿಸ್ಟರ್ ಮಾಡಿಕೊಟ್ಟು ತಾವು ಜೀವಂತರಾಗಿರುವವರೆವಿಗೂ ಇತರ ಟ್ರಸ್ಟಿಗಳ ಜೊತೆಗೆ ತಾವೊಬ್ಬರು ಕಾರ್ಯದರ್ಶಿಗಳಾಗಿ ಬೋರ್ಡಿಂಗ್ ಮ್ಯಾನೇಜು ಮಾಡುತ್ತಿದ್ದು ಈಗ್ಗೆ 6 ತಿಂಗಳಲ್ಲಿ ಶಿವಸಾಯುಜ್ಯವನ್ನು ಹೊಂದಿದರು. ಈ ಧರ್ಮಪುರುಷರಿಗೆ ನಮ್ಮ ವೀರಶೈವ ಸಮಾಜವೇ ಋಣಿಯಾಗಿದೆ.

6 ತಿಂಗಳಿಂದೀಚೆಗೆ ಈ ಸಂಸ್ಥೆಗೆ ಸೇರಿದ 2 ಮನೆಗಳನ್ನು 2 ಅಂಗಡಿಗಳನ್ನೂ ಬಡಾವಣೆ ಮಾಡಿರುತ್ತೆ. ಈಗ ಈ ಕಟ್ಟಡಗಳಿಂದ ತಿಂಗಳೊಂದಕ್ಕೆ 65 ರೂಪಾಯಿ ಬಾಡಿಗೆ ಬರುತ್ತದೆ. ಈ ತಿಂಗಳ ಕಡೆಗೆ ಒಂದು ಅಂಗಡಿ ಕಾಮಗಾರಿ ಪೂರೈಸಿದ ಕೂಡಲೆ ಮಾಹೆಯಾನ 115 ರೂಪಾಯಿ ಬಾಡಿಗೆ ಬರುತ್ತದೆ. ಈ ಬಾಡಿಗೆ ಬರುವುದರಲ್ಲಿ ಮುಖ್ಯಭಾಗವನ್ನು ಬಡಾವಣೆಗಾಗಿ ಖರ್ಚಾಗಿರುವ 3000 ರೂಪಾಯಿಗಳ ಬಾಕಿಗೆ ಸಲ್ಲಿಸುವುದಲ್ಲದೆ ಈ ಧರ್ಮ ಸ್ಥರ ಜೀವಿತೋದ್ದೇಶವನ್ನು ಬರೆಸುತ್ತಲಿದೆ. ಇದನ್ನು ಸದ್ಯದಲ್ಲಿಯೆ ವಿದ್ಯಾರ್ಥಿಗಳ ಸರ್ವರ ಅವಗಾಹನೆಗಾಗಿ ಹಂಚಲ್ಪಡುತ್ತದೆ.

ಈ ಬೋರ್ಡಿಂಗಿನಲ್ಲಿರುವ 16 ಜನ ಸಂಸ್ಕೃತ ವಿದ್ಯಾರ್ಥಿಗಳೂ ವೇದವಾಂಗಶಾಲೆ ಮತ್ತು ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿಗೂ ಅಭ್ಯಾಸಕ್ಕೆ ಹೋಗುತ್ತಲಿದ್ದಾರೆ. ಇವರ ಪೈಕಿ ಒಬ್ಬ ವಿದ್ಯಾರ್ಥಿಯು ಬೆಂಗಳೂರು ೪ ಜನ ವಿದ್ಯಾರ್ಥಿಗಳು, ಕಾವ್ಯ ವಿದ್ಯಾರ್ಥಿಗಳು ಪ್ರಥಮ ಕ್ಲಾಸಿನಲ್ಲಿ ಅಭ್ಯಾಸಮಾಡುತ್ತಿದ್ದಾರೆ. ಅಲ್ಲದೆ ಇಂಟರ್‌ಮೀಡಿಯಟ್ ಹಾಗು ಎಸ್ ಎಸ್ ಎಲ್ ಸಿ ಕ್ಲಾಸುಗಳಲಿ ಅಭ್ಯಾಸಮಾಡುತ್ತಿರುವ 5 ಜನ ವಿದ್ಯಾರ್ಥಿಗಳಿಗೆ ಬೋರ್ಡಿಂಗಿನಲ್ಲಿ ಅವಕಾಶಕೊಟ್ಟಿರುತ್ತದೆ. ಇದೂ ಅಲ್ಲದೆ [illegible] ಜನ ವಿದ್ಯಾರ್ಥಿಗಳಿಗೆ ಕೆಲವು ವಾರಗಳು ಮಾತ್ರ ಭೋಜನಕ್ಕೆ ಏರ್ಪಡಿಸಿರುತ್ತೆ. ಬೋರ್ಡಿಂಗಿನಲ್ಲಿ ಸರಾಸರಿ 23 ವಿದ್ಯಾರ್ಥಿಗಳಿರುತ್ತಾರೆ. ಒಬ್ಬ ವಿದ್ಯಾರ್ಥಿಗೆ ಮಾಹೆಯಾನ 4 ರೂಪಾಯಿ ಖರ್ಚಾಗುತ್ತಲಿದೆ. ಕಟ್ಟಡಗಳ ಬಾಡಿಗೆಯು ಪೂರ್ತಿಯಾಗಿ ಉಪಯೋಗಿಸದಿರುವುದರಿಂದ ಈ ಕೆಳಗೆ ಕಂಡ ಮಹನೀಯರುಗಳು ಧಾನ್ಯರೂಪವಾಗಿಯೂ ದವಸರೂಪವಾಗಿಯೂ ಸಹಾಯಮಾಡಿ ನಡೆಸುತ್ತಿರುವರು.

ಮ|| ರಾ|| ಶ್ರೀಗಳವರ

ಮೊತ್ತಮೊದಲನೆ ಕೆ ನಂಜುಂಡಪ್ಪನವರು ಸರಾಫ್ ಬಿ ಬಸಪ್ಪನವರು ಅಗ್ರಹಾರ ಕೆ ನಾಗಪ್ಪ ಚಂದ್ರಶೇಖರಪ್ಪನವರು ಅಡಿಕೆಮಂಡಿ ದೊಡ್ಡರಂಗಪ್ಪ ಅಪ್ಪಾಜಪ್ಪನವರು, ಬಿ ನಂಜಪ್ಪನವರು ಎ ಮರಿಯಪ್ಪನವರು ಮಂಡಿ ತಾಲಗೆರೆ ಮುಪ್ಪವೀರಪ್ಪನವರು ಮಂಡಿ ಕೆ ಎಸ್ ಅಯ್ಯಣ್ಣಶೆಟ್ಟರು, ದೇಶದ ಯಜಮಾನರು ಪುಟ್ಟಪ್ಪನವರು ಅಕ್ಕೀಪೇಟೆ ಸಿದ್ಧರಾಮಪ್ಪನವರು ಅಕ್ಕೀಪೇಟೆ ಟಿ ಸಂಗಪ್ಪನವರು ಅಕ್ಕಿಪೇಟೆ ಬಿ ಸಿ ಅಡವಿಯಪ್ಪನವರು ಗ್ರಂಥಿಗೆ ಗುರುಸಿದ್ಧಪ್ಪನವರು ಗುಡೇಮಾರನಹಳ್ಳಿ ಮರಿಗಂಗಪ್ಪನವರು ಸಾಹುಕಾರ ಜಿ ಕೆ ರುದ್ರಾರಾಧ್ಯರು ಸಾಹುಕಾರ [illegible] ಮರಿಯಪ್ಪನವರು, ಮಂಡಿ ಪಿ ಶಿವಣ್ಣನವರು ವೇ|| [illegible] ನಂಜಪ್ಪನವರು ವಿಶ್ವನಾಥಶಾಸ್ತ್ರಿಗಳು ಟಿ ಪಿ ಅಂಗಡಿ ಎಸ್ ಸಿ ಬಸಪ್ಪನವರು [illegible] ಎಂ ಕೆಂಚಪ್ಪ ಬಡಗನವರು

ಈ ಮಹನೀಯರುಗಳು ದ್ರವ್ಯ ಮತ್ತು ಧಾನ್ಯರೂಪವಾಗಿ ಪ್ರತಿ ತಿಂಗಳಲ್ಲಿಯೂ ಸಹಾಯಮಾಡುತ್ತಲಿರುವರು. ಈ ಮಹನೀಯರಿಗೆಲ್ಲಾ ಬೋರ್ಡಿಂಗಿನ ಪರವಾಗಿ ವಂದನೆಗಳನ್ನರ್ಪಿಸುತ್ತೇನೆ. ಇನ್ನೂ ಅನೇಕ ಪುಣ್ಯಾತ್ಮರು ಈ ಧರ್ಮಕಾರ್ಯಕ್ಕೆ ಸಹಾಯಮಾಡಿ ವಿದ್ಯಾದಾನಮಾಡಿದ ಪುಣ್ಯಕ್ಕೆ ಭಾಗಿಗಳಾಗಬೇಕೆಂದು ಹಾರೈಸುತ್ತೇನೆ ಮತ್ತು ಶ್ರೀ ರಂಭಾಪುರೀ ಜಗದ್ಗುರುಗಳವರ ಅಪ್ಪಣೆಮೇರೆಗೆ ಈ ವ್ಯವಹಾರಶಾಲೆಯನ್ನು ಶೀಘ್ರವಾಗಿ ಬೋರ್ಡಿಂಗಿನಲ್ಲಿಯೇ ಸ್ಥಾಪಿಸುವುದಾಗುತ್ತದೆ.

ಮಹನೀಯರೆ ಮತ್ತೊಂದು ವಿಶೇಷಸಂಗತಿಯನ್ನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಈ ಮಹಾಸಂಸ್ಥೆಗೋಸ್ಕರ ಎಲಿಫೆಂಟ್ ಎಸ್ಟೇಟ್ [illegible] ರೋಡ್ [illegible]ನಲ್ಲಿ 16 ನೇ ನಂಬರ್ ಬಂಗಲೆಯನ್ನು ರಿಟೈರ್ಡ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ಸ್ ಜಡ್ಜ್ ಮ|| ರಾ|| ಬಿ ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್ರವರಿಂದ ಖರೀದಿಗೆ ಕೊಂಡುಕೊಂಡು ಈಗಾಗಲೆ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಮಹಾಸ್ವಾಮಿಗಳವರು 10 000 ರೂಪಾಯಿಗಳನ್ನು ನಗದಾಗಿ ಒಪ್ಪಿಸಿಕೊಟ್ಟಿರುತ್ತಾರೆ. ಈ ಹತ್ತುಸಾವಿರ ರೂಪಾಯಿಗಳ ಪೈಕಿ ಮ|| ರಾ|| ಸರಾಫ್ ಬಿ ಬಸಪ್ಪನವರು 5 000 ರೂಪಾಯಿಗಳನ್ನು ಕೊಟ್ಟವರಾಗಿರುತ್ತಾರೆ.

ಅಲ್ಲದೆ ಹಲ್ಕೂರು ಸಾಹುಕಾರ್ ಮ|| ರಾ|| ಕೊಡಚಪ್ಪಶೆಟ್ಟರು ತಮ್ಮ ಆಸಾಮಿಗಳ ಬಾಬತ್ತು ಬಾತ್ಮೀದಾರರ ಮೇಲಿರುವ 11 000 ರೂಪಾಯಿ ಪ್ರಾಮಿಸರಿಗಳನ್ನು ಮತ್ತು ಇನ್ನು ಕೆಲವರ ಬಾಬತ್ತು 5000 ರೂಪಾಯಿಗಳ ಪ್ರಾಮಿಸರಿ ನೋಟುಗಳನ್ನು ಶ್ರೀ ಜಗದ್ಗುರುಗಳವರ ಈ ಮಹಾಸಂಸ್ಥೆಗೋಸ್ಕರ ಕಳುಹಿಸಿರುತ್ತಾರೆ. ಈ ಬಾಬತ್ತು ಕೆಲವು ವಸೂಲಿಕ್ರಮ ನಡೆಸಿರುತ್ತೆ.

ಇದೂ ಅಲ್ಲದೆ ಮ|| ರಾ|| ಮಧುಗಿರಿ ಪಿ ರಥದ್ಯಪ್ಪನವರು ತಮ್ಮ ಬಾಬತ್ತು ಚಿಕ್ಕಪೇಟೆಯಲ್ಲಿರುವ ಮಾಹೆಯಾನ 85 ರೂಪಾಯಿ ಬಾಡಿಗೆ ಬರುವ ಮತ್ತು ಮಧುಗಿರಿಯಲ್ಲಿ 15 ರೂಪಾಯಿ ಉತ್ಪತ್ತಿ ಬರುವ ಆಸ್ತಿಯನ್ನು ಸಹಾ ಈ ದೊಡ್ಡ ಸಂಸ್ಥೆಗೋಸ್ಕರ ಶ್ರೀಗಳವರಿಗೆ ಅರ್ಪಿಸಿ ಸ್ವಾಧೀನಕ್ಕೆ ಕೊಡಿಸುತ್ತೇವೆಂದು ಅದನ್ನು ಶೀಘ್ರದಲ್ಲಿಯೆ ರಿಜಿಸ್ಟರ್ ಮಾಡಿಕೊಡುವವರಾಗಿದ್ದಾರೆ.

ಇನ್ನೂ ಶಿಡ್ಲಘಟ್ಟದ ಕೆ|| ವೇ|| ಗುಡಿ ಮುನಿಸಪ್ಪಶೆಟ್ಟರ [illegible] ತಮ್ಮ ಅವಸಾನಕಾಲದಲ್ಲಿ ಸುಮಾರು 9000 ರೂಪಾಯಿ ಬೆಲೆಬಾಳುವ 2 ಮನೆಗಳನ್ನು ವಿಲ್ ಬರೆದಿಟ್ಟು ಹೋಗಿರುವರು. ಇದೆಲ್ಲವನ್ನೂ ಶ್ರೀಗಳವರು ಈ ಸಂಸ್ಥೆಗಾಗಿ ಈಗಾಗಲೆ ಮುಕ್ತಿಪಾಲು [illegible] ದವರಿಗೂ ಆಸ ಕಾಲವಾಗಿರುತ್ತದೆ.

ಸಭಿಕಮಹಾಶಯರೆ

ಮತ್ತೊಂದು ಸಂತೋಷ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಈ ಬೆಂಗಳೂರು ನಗರದಲ್ಲಿ ಅನ್ನದಾನವನ್ನು ಮಾಡಿ ಪ್ರಸಿದ್ಧಿಗೊಂಡಿರುವ ಮನೆತನದವರಾದ ಒಬ್ಬ ದೊಡ್ಡ ಮನುಷ್ಯರು ಕಾಸ್ಮೋಪಾಲಿಟನ್ ಕ್ಲಬ್ಬಿನ ಬಳಿ ಕಟ್ಟಿಸಿಕೊಂಡಿರುವ ಬಂಗಲೆಯಲ್ಲಿ ಜಂಗಮರಿಗಾಗಿ ಒಂದು ಭಾಗವನ್ನು ಕಟ್ಟಿಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ.

ಈ ಬಂಗಲೆಯ ಪ್ಲಾನ್ ಮತ್ತು ಅಲ್ಲಿ ಇನ್ನೂ ಹೊಸದಾಗಿ ಕಟ್ಟಬೇಕಾಗಿರುವ ಕಟ್ಟಡಗಳ ಪ್ಲಾನನ್ನು ಸದ್ಯದಲ್ಲಿಯೆ ತಯಾರಿಸಿ ಬ್ಲಾಕ್ ಮಾಡಿಸಿ ವರ್ತಮಾನ ಪತ್ರಿಕೆಗಳಲಿ ಪ್ರಕಟಿಸುವುದರ ಮೂಲಕ ಸರ್ವರ ಅವಗಾಹನೆಗೆ ತರುವುದಾಗುತ್ತೆ. ಸದರಿ ಸಂಸ್ಥೆಗೆ ಸಹಾಯಮಾಡಿದವರ ಹೆಸರುಗಳನ್ನು ಅಲ್ಲಿಯ ಕಟ್ಟಡದ ಶಿಲೆಯಮೇಲೆ ಶಾಶ್ವತವಾಗಿರುವಂತೆ ಕೆತ್ತಿಸಲು ತೀರ್ಮಾನಿಸಿ 500 ರೂಪಾಯಿಗಳ ಮೇಲ್ಪಟ್ಟು ಒಂದೊಂದು ರೂಮಿಗೆ ಆಗುವ ವೆಚ್ಚಕ್ಕೋಸ್ಕರ ಸಹಾಯಮಾಡಿದವರ ಹೆಸರುಗಳನ್ನು ಆಯಾ ರೂಮುಗಳ ದ್ವಾರಗಳ ಮೇಲ್ಭಾಗದಲ್ಲಿ ಶಿಲೆಗಳಲ್ಲಿ ಕೆತ್ತಿಸುವ, ಹಾಗೂ 5000 ರೂಪಾಯಿಗಳ ಮೇಲ್ಪಟ್ಟು ಸಹಾಯಮಾಡಿದ ಧರ್ಮಪುರುಷರ ಜೀವನ ಚರಿತ್ರೆಯನ್ನು ಬರೆಸುವಂತೆಯೂ ಶ್ರೀಗಳವರ ಅಪ್ಪಣೆಯಾಗಿರುತ್ತೆ.

ಪ್ರಪಂಚದಲ್ಲಿರುವ ಸಹಸ್ರಾರು ಭಾಷೆಗಳಲ್ಲಿ 'ಮಾತೃಭಾಷೆ'ಯಾದ ಮತ್ತು 'ದೇವಭಾಷೆ' ಯೆನಿಸಿಕೊಂಡಿರುವ 'ಗೀರ್ವಾಣಭಾಷಾ' ಪ್ರಚಾರಕ್ಕೋಸ್ಕರ ಏರ್ಪಡಿಸಲ್ಪಟ್ಟಿರುವ ಈ ಮಹಾಸಂಸ್ಥೆಗೆ ಧನಿಕರಾದ ಮಹೋದಯರು ತಮ್ಮ ತಮ್ಮ ಶಕ್ತ್ಯನುಸಾರ ಉದಾರಬುದ್ಧಿಯಿಂದ ಶೀಘ್ರವಾಗಿಯೆ ಸಹಾಯಮಾಡುವುದರ ಮೂಲಕ ಪುಣ್ಯಶಾಲಿಗಳಾಗಬೇಕೆಂದು ಪ್ರಾರ್ಥಿಸುತ್ತೇನೆ.

ನಮ್ಮ ಸಮಾಜದಲ್ಲಿ ಅಗ್ರಗಣ್ಯರೂ ಶಿಕ್ಷಾಪ್ರಿಯರಾದ ಈ ಸಭಾಧ್ಯಕ್ಷರಾದ ಮ|| ರಾ|| ಕೆ ಪಿ ಪುಟ್ಟಣ್ಣಶೆಟ್ಟರವರು ಭಗವತ್ಪಾದರಾದ ಶ್ರೀ ರೇಣುಕಾಚಾರ್ಯ ಜಯಂತೀಮಹೋತ್ಸವ ಸಮಾರಂಭದ ಸಭೆಗೆ ಪ್ರತಿವರ್ಷವೂ ಅಧ್ಯಕ್ಷರಾಗಿ ದಯಮಾಡುತ್ತಿದ್ದು ಕೇವಲ ಉಪಯುಕ್ತವೂ ಆದ ಅಮೋಘ ಉಪದೇಶವನ್ನು ಕೊಟ್ಟು ಸರ್ವರಿಗೂ ಸಂತೋಷವನ್ನುಂಟುಮಾಡುತ್ತಿರುವುದಕ್ಕಾಗಿಯೂ ಇವರಲ್ಲಿ ನೆಲೆಸಿರುವ ಶ್ರೀಮದ್ರೇಣುಕಾಚಾರ್ಯರ ಅಖಂಡ ಭಕ್ತಿಭಾವನೆಗಾಗಿಯೂ ಪ್ರತಿಭಾಶಾಲಿಗಳಾದ ಇವರನ್ನು ಈ ಸಭಾಸದರ ಪರವಾಗಿ ವಂದಿಸುತ್ತೇನೆ. ಶ್ರೀ ರೇಣುಕಾದಿ ಪಂಚಾಚಾರ್ಯರು ಈ ಮಹೋದಯರಿಗೆ ಆರೋಗ್ಯಭಾಗ್ಯವನ್ನೂ ದೀರ್ಘಾಯುಸ್ಸನ್ನೂ ದಯಪಾಲಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸಿ ಈ ವರದಿಯನ್ನು ವಿನಯಪೂರ್ವಕವಾದ ಭಾಷಣವನ್ನು ಮುಗಿಸುತ್ತೇನೆ.

ವೇ|| ಎಸ್ ರುದ್ರಯ್ಯನವರು ಈ ವರದಿಯನ್ನು ಓದಿ ಹೇಳಿದ ಕೂಡಲೆ ಸಭಿಕರ ಕರತಾಡನವಾಯಿತು. ಆ ಬಳಿಕ ಪೇಟೆ ಮ|| ರಾ|| ಸಿದ್ಧಬಸಪ್ಪಶೆಟ್ಟರು ಎದ್ದು ಶ್ರೀಮದಾಚಾರ್ಯರನ್ನೂ ಅಧ್ಯಕ್ಷರನ್ನೂ ಸಭಿಕರನ್ನೂ ಸಂಬೋಧಿಸಿ ಎಸ್ ರುದ್ರಯ್ಯನವರು ಶ್ರೀ ರೇಣುಕಜಯಂತಿ ಸತ್ಕಾರ್ಯಸಂಘದ ಸೆಕ್ರೆಟರಿಗಳಾಗಿರುವುದು ನಮ್ಮೆಲ್ಲರಿಗೂ ತೃಪ್ತಿಕರವೂ ಆನಂದಕರವೂ ಆದ ಸಂಗತಿಯಾಗಿದೆ. ಶ್ರೀಮದಾಚಾರ್ಯ ಕಾರ್ಯಸತ್ತರಾದಿವರು ಈ ಜಯಂತಿ ಕಾರ್ಯನಿರ್ವಹಣೆ ಮಾಡುವುದರಲ್ಲಿ ಕೇವಲ ಉತ್ಸಾಹಶಾಲಿಗಳೂ ಉದಾರಬುದ್ಧಿಯುಳ್ಳವರೂ ಸಮರ್ಥರೂ ಆಗಿರುತ್ತಾರೆ.

ಇವರು ಇಲ್ಲಿ ಸ್ಥಾಪಿಸಲ್ಪಡುವ ಸಂಸ್ಕೃತ ವಿದ್ಯಾಸಂಸ್ಥೆಗೆ 1000 ರೂಪಾಯಿಗಳನ್ನು ಉದಾರವಾಗಿ ಕೊಟ್ಟಿರುವುದಲ್ಲದೆ ಸಂಸ್ಕೃತ ವಿದ್ಯಾರ್ಥಿಗಳ ಬೋರ್ಡಿಂಗಿಗಾಗಿ ಪ್ರತಿ ತಿಂಗಳೂ ಉದಾರವಾಗಿ ಚಂದಾ ಕೊಡುತ್ತಿರುವರಾದರೂ ತಮ್ಮ ಹೆಸರನ್ನೂ ತಮ್ಮ ಧರ್ಮಪ್ರಸಂಗವನ್ನೂ ಅತ್ತಮುತ್ತ ತಿಳಿಸಬೇಕೆಂದು ಇವರ ವರದಿಯಲ್ಲಿ ಸೂಚಿಸದೆ ಮರೆಮಾಚಿದ್ದಾರೆಂದು ರುದ್ರಯ್ಯನವರ ಗುಣಕಥನವನ್ನು ಮಾಡಿದರು. ಇದಕ್ಕಾಗಿ ಸಭಿಕರಿಂದ ಕರತಾಡನಗಳಾದವು. ಅಧ್ಯಕ್ಷರಿಗೂ ಆಹೂತರಾದ ಸರಕಾರಿ ಕಾರಿಗಳಿಗೂ ಸಭಿಕರಿಗೂ ಗಂಧಪುಷ್ಪ ಹಾರಾದಿಗಳು ಹಂಚಲ್ಪಟ್ಟು ನಮ್ಮ ನಾಡಿನ ಶ್ರೀಮನ್ಮಹಾರಾಜರವರ ಶ್ರೇಯಸ್ಸನ್ನೂ ಶ್ರೀ ರೇಣುಕಾಚಾರ್ಯರ ಮಂಗಳವನ್ನೂ ಆದರಿಸಿ ಮಹಾಂತಿನಮರದ ದ್ವಾರದಲ್ಲಿ ವರ್ಣನಮಾಡಿದ್ದ ಅಸಂಖ್ಯಾತ ಮಹಾಜನರಿಗೆ ಶ್ರೇಯಾನಂದಕರವಾಗಿ ಅಸಾಧಾರಣ ಕೀರ್ತಿಯನ್ನು ಪಡೆದು ಸಿದ್ಧವಾಗಿದ್ದ ಪುಷ್ಪರಥದಲ್ಲಿ ಮೂರ್ತಿಗೊಂಡ ಶ್ರೀ ರೇಣುಕಾಚಾರ್ಯರ ಮಹೋತ್ಸವ ಸಮಾರಂಭವನ್ನು ಸೂಚಿಸುವ ಮಂಗಳವಾದ್ಯಗಳು ಮೊಳಗುತ್ತಿರಲು ಸಭೆಯು ಭರ್ಜರಿಯಾಯಿತು.

ಪ್ರತ್ಯಕ್ಷದರ್ಶಿ

ಶ್ರೀ ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ.

ವಿರಾಜ ಸಂಸ್ಥಾನದ ಲಕ್ಷ್ಮೇಶ್ವರದಲ್ಲಿ ಶಿವ[illegible] ಪ್ರಕಾರ ಫಾಲ್ಗುಣ ಶುದ್ಧ ೧೩ ಸೋಮವಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವು ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ವೇ|| ಶಿಕ್ಷಕಯ್ಯನವರು ಮಹಾಲಿಂಗಯ್ಯನವರು ಪುರಾಣಿಕರಮಠ ಇವರ ಮಠದಲ್ಲಿ ಶ್ರೀ ರೇಣುಕಲಿಂಗಮೂರ್ತಿ ಮೂರ್ತಿಗೆ ವಿಧ್ಯುಕ್ತವಾಗಿ ರುದ್ರಾಭಿಷೇಕವು ನೆರವೇರಿಸಲ್ಪಟ್ಟಿತು. ಅನಂತರ ಸ್ತೋತ್ರಪಠನದಿಂದ ಬಂದ ಭಕ್ತಮಾಹೇಶ್ವರರಿಗೆ ಗಣಾರಾಧನೆ ನಡೆದು ಸಾಯಂಕಾಲ ನಾಲ್ಕು ಘಂಟೆಗೆ ರಾಮಗೇರಿ ಓಣಿ ಇವುಗಳಿಂದ ಬಂದ ಎರಡು ಭಜನಾ ಸಂಘಗಳ ಮತ್ತು ಇಲ್ಲಿಯ ಎಂಟು ಭಜನಾ ಸಂಘಗಳ ಭಜನೆಯು [illegible] ದಿಂದಲೂ ದೇಶೀಯ ವಾದ್ಯವೈಭವದಿಂದಲೂ ಅಲಂಕೃತವಾದ ಮುಖ್ಯಮುಖ್ಯ ಬೀದಿಗಳಲ್ಲಿ ಮೆರವಣಿಗೆ. ಸಾಯಂಕಾಲ ೭ ಘಂಟೆಗೆ ಪ್ರಸ್ಥಾನವನ್ನು ಕಳೆದು ಭವ್ಯವಾಗಿ ಶೃಂಗರಿಸಿದ ಮಂಟಪದಲ್ಲಿ ಸಿಂಹಾಸನದ ಮೇಲೆ ರೇಣುಕಮೂರ್ತಿಯು ಸ್ಥಾಪಿಸಲ್ಪಟ್ಟಿತು. ಸಭೆಯ ಕಾರ್ಯವು ಪ್ರಾರಂಭವಾಯಿತು. [illegible] ಕೃಪಯ ಹನ್ನೆರಡು ಮಠದ ಶ್ರೀ ಚಂದ್ರಶೇಖರಯ್ಯನವರು [illegible]

ಪ್ರಾರ್ಥನೆಯ ಮೇರೆ ಉಪ್ಪಿನಬೆಟಗೇರಿ ಶಿ|| ವಿಶ್ವೇಶ್ವರ ಶಾಸ್ತ್ರಿಗಳು ಕಾವ್ಯತೀರ್ಥ ವ್ಯಾಕರಣರತ್ನ ಇವರನ್ನು ಕೇಳಿಕೊಂಡಿದ್ದಕ್ಕಾಗಿ ನಾವು ಆಭಾರಿಗಳಾಗಿದ್ದೇವೆ ಶ್ರೀ|| ಭೂಸನೂರಮಠ ವೀರ ಅಳವಡಿ ಮಠದ ಪಟ್ಟಾಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸಿದರು ಶ್ರೀ|| ವೀರಯ್ಯನವರು ಹಿರೇಮಠ ಕೆಂಚನಾಳ ಇವರ ಚಿ|| ಒಂಭತ್ತು ವರ್ಷದ ಶಾಂತಾಚಾರ್ಯರೆಂಬ ವಿದ್ಯಾರ್ಥಿಯು ಜಗದ್ಗುರುಗಳಾರು? ವೀರಶೈವಮತತತ್ವವೇನು? ಎಂಬುವ ವಿಷಯಗಳ ಮೇಲೆ ಅರ್ಥಗರ್ಭಿತವಾಗಿ ಭಾಷಣಮಾಡುತ್ತ ಎಲ್ಲಾ ಪುರಾಣಶಾಸ್ತ್ರಗಳಲ್ಲಿಯೂ ವಾಲ್ಮೀಕಿರಾಮಾಯಣದಲ್ಲಿಯೂ ಗಾಯನಾದಿ ಇತರಗಳಲ್ಲಿಯೂ ಭಾರತೀಯ ಪ್ರಾಚೀನ ದಾಖಲೆಗಳಲ್ಲಿಯೂ ಈ ಗುರುಗಳನ್ನು ಕುರಿತ ಅನೇಕ ಸ್ತೋತ್ರಗಳು ಸಮ್ಮತಗ್ರಂಥಗಳಲ್ಲಿ ಅಡ್ಡಗೊಂಡಿರುವುದು ಪ್ರಮಾಣಗ್ರಂಥಗಳಿಂದ ಸ್ಪಷ್ಟವಾಗಿ ತಿಳಿಯಬರುತ್ತದೆ ಅದರೂ ಅವರಿಗೆ ಮೋಕ್ಷಸಾಧನವಾದ ಸರ್ವಸ್ವಾತಂತ್ರ್ಯವು ಇತರ ಮತಸ್ಥಾಪನಾಚಾರ್ಯರಿಂದ ಕೊಡಲ್ಪಟ್ಟಿಲ್ಲ ವೀರಶೈವಮತಸ್ಥಾಪಕರಾದ ಜಗದ್ಗುರುಗಳಾದರೋ ಶಿವದೀಕ್ಷಾ ಅಷ್ಟಾವರಣ ಪಂಚಾಚಾರ್ಯ ಷಟ್‌ಸ್ಥಲ ಲಿಂಗಾಂಗಸಾಮರಸ್ಯ ಮುಂತಾದ ಮುಕ್ತಿಸಾಧನಗಳೆಲ್ಲಾ ಪುರುಷರಂತೆ ಸ್ತ್ರೀಯರಾದ ನಮ್ಮಗಳಿಗೂ ಕೊಟ್ಟು ಉದ್ಧರಿಸಿದ್ದರಿಂದ ನಮ್ಮ ಗುರುಗಳ ಜಯಂತಿಗಳಲ್ಲಿ ಸ್ತ್ರೀಯರಾದ ನಾವುಗಳು ಪುರುಷರಂತೆ ಭಾಗವಹಿಸಿ ಸೇವಾ ಕರ್ತವ್ಯಗಳನ್ನು ಮಾಡಿ ಗುರುಗಳ ಉಪಕಾರವನ್ನು ಸ್ಮರಿಸುವದು ಶ್ರೇಯಸ್ಕರ ವೀರಶೈವ ಸ್ತ್ರೀಯರ ಆದ್ಯಕರ್ತವ್ಯವೆಂಬುದನ್ನು ಸಭಿಕರಿಗೆ ಹೃದಯಂಗಮವಾಗುವಂತೆ ಹೇಳಿದಳು ಈ ಬಾಲೆಯ ಭಾಷಣವನ್ನು ಕೇಳಿ ಸಭಿಕರು ಕಳೆಕಾಣಿಸಿದರು ಅನಂತರ ಮ|| ರಾ|| ಜೋಗಪ್ಪ ಮಹಾಜನಶೆಟ್ರು ಇವರು ಶಕ್ತಿವಿಶಿಷ್ಟಾದ್ವೈತಸಿದ್ಧಾಂತದಮೇಲೂ ವೇ|| ಕಾಶಯ್ಯ ಹಿರೇಮಠ ಇವರು ಲಿಂಗಾಂಗಸಾಮರಸ್ಯದ ಮೇಲೂ ಭಾಷಣಮಾಡಿದರು ತರುವಾಯ ವೇ|| ವಿಶ್ವೇಶ್ವರ ಶಾಸ್ತ್ರಿಗಳ ಭಾಷಣವು ಆರಂಭವಾಯಿತು ಇವರ ರಸಭರಿತವಾದ ವಾಣಿಯು ಸಹಸ್ರಾವಧಿ ಸಭಿಕರನ್ನು ಚಿತ್ರದ ಬೊಂಬೆಗಳಂತೆ ನಿಶ್ಚಲಗೊಳಿಸಿತು ಆಚಾರ್ಯರ ಅವತಾರದಲ್ಲಿ ಭಕ್ತ್ಯುದ್ರೇಕವನ್ನುಂಟುಮಾಡಿತು ಕಾಲಾತೀತವಾದ್ದರಿಂದ ಮಂಗಳಾರತಿಯಾಗಿ ಪ್ರಸಾದ ವಿನಿಯೋಗ ನಡೆಯಿತು ಶ್ರೀ ಭಕ್ತರ ಅಭೀಷ್ಟದಂತೆ ೨೧ ನೇ ತಾರೀಖಿನವರೆಗೂ ಶಾಸ್ತ್ರಿಗಳು ಭಾಷಣದಿಂದ ಸಂತೋಷಗೊಳಿಸಿದರು ಹೀಗೆ ಜಯಂತಿಯ ಕಾರ್ಯವು ವರ್ಷವರ್ಷ ಅಭಿವೃದ್ಧಿಯಾಗುತ್ತ ಗುರುಭಕ್ತಿಯು ಹೆಚ್ಚುತ್ತಿರುವದೊಂದು ನಮ್ಮ ಗ್ರಾಮದ ಶುಭೋದಯವೇ ಸರಿ ಮುಂದಿನ ವರ್ಷ ಇದಕ್ಕಿಂತಲೂ ಅತಿವೈಭವದಿಂದ ಜಯಂತಿಯ ಕಾರ್ಯವನ್ನು ನೆರವೇರಿಸಬೇಕೆಂದೂ ಆಗ್ಗೆ ಷ|| ಬ್ರ|| ಶಾಸ್ತ್ರಿಗಳನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರನ್ನು ಶ್ರೀಶೈಲ ಕೊಪ್ಪದ ಶ್ರೀಗಳವರನ್ನೂ ಕರೆಯಿಸುವದಕ್ಕಾಗಿ ಈಗಿನಿಂದಲೇ ಪ್ರಯತ್ನಿಸಬೇಕೆಂದು ಸಮಸ್ತ ಭಕ್ತಮಂಡಲಿಯು ನಿರ್ಣಯಿಸಿ ಜಯಜಯಕಾರದೊಡನೆ ಸಭಾಕಾರ್ಯವು ಮುಕ್ತಾಯಮಾಡಲ್ಪಟ್ಟಿತು

ಪ್ರತ್ಯಕ್ಷದರ್ಶಿ
ಎಸ್. ಸಿ ಗೌಂಡ ಆಯುರ್ವೇದವೈದ್ಯ
ಲಕ್ಷ್ಮೇಶ್ವರ

ಶ್ರೀಮದ್ರೇಣುಕಾಚಾರ್ಯರ ಜಯಂತೀ ಮಹೋತ್ಸವ ಶಿಗ್ಗಾವಿ ಜಿಲ್ಲಾ ಧಾರವಾಡ

ಫಾಲ್ಗುಣ ಶುದ್ಧ ೧೩ ದಿವಸ ಶ್ರೀಮದ್ರೇಣುಕಾಚಾರ್ಯರ ಜಯಂತಿ ಮಹೋತ್ಸವವು ಶಿಗ್ಗಾವಿಯಲ್ಲಿ ವಿಜೃಂಭಣೆಯಿಂದ ಜರುಗಿತು ಸಕಲ ವೀರಶೈವರೂ ಅಲ್ಲದೆ ಇತರರೂ ಸಹ ಈ ಉತ್ಸವದಲ್ಲಿ ಭಾಗವಹಿಸಿದ್ದರು. ಫಾಲ್ಗುಣ ಶುದ್ಧ ೧೩ ಸೋಮವಾರ ಮಧ್ಯಾಹ್ನ ೩ ಘಂಟೆಗೆ ಸಮಸ್ತರೂ ಶುಚಿರ್ಭೂತರಾಗಿ ವೀರಶೈವ ತರುಣಸಂಘ ಕಾರ್ಯಾಲಯದಲ್ಲಿ ನೆರೆದರು. ಶೃಂಗರಿಸಿದ್ದ ಪಲ್ಲಕ್ಕಿಯಲ್ಲಿ ಶ್ರೀಮದ್ರೇಣುಕಾಚಾರ್ಯ ಮೂರ್ತಿಯನ್ನು ಮೆರವಣಿಗೆಯು ಹೊರಟಿತು ಬಾಲಬಾಲಿಕೆಯರು ಧ್ವಜಾಸ್ತ್ರಧಾರಿಗಳಾಗಿ, ಪಂಚಾಚಾರ್ಯರ ಮಂಗಲಗೀತೆಗಳನ್ನೂ, ಜಯಜಯಕಾರಗಳನ್ನೂ ಮಾಡುತ್ತ ಹಿಸ್ತಿನಿಂದ ಹೋಗುತ್ತಿದ್ದರು ನಾನಾವಿಧಮಂಗಲವಾದ್ಯಧ್ವನಿಗಳೂ ಭಜನಾಮಂಡಳದವರ ಭಜನೆಯನಿನಾದವು ಆಸ್ತಿಕ್ಯಭಾವನೆಯನ್ನು ಉದ್ರೇಕಗೊಳಿಸುತ್ತಿದ್ದುವು ತಳಿರು ತೋರಣಗಳಿಂದಲಂಕೃತಗಳಾದ ಪ್ರಮುಖಬೀದಿಗಳೊಳಗೆ ಪ್ರತಿಯೊಂದು ಮನೆಯವರು ಭಕ್ತಿಪುರಸ್ಸರವಾಗಿ ರೇಣುಕಮೂರ್ತಿಗೆ ಕಾಯಿಕರ್ಪೂರಗಳನ್ನರ್ಪಿಸುತ್ತ ಸುಮಂಗಲೆಯರು ಆರುತಿಯನ್ನೆತ್ತುತ್ತಿದ್ದರು ಉತ್ಸವವು ಹಿಂತಿರುಗಿ ಮೂರ್ತಿಯನ್ನು ಮಂಟಪದಲ್ಲಿ ಪ್ರತಿಷ್ಠಿಸಿದರು. ಅನಂತರ ಸಭಾಕಾರ್ಯವು ಆರಂಭವಾಯಿತು. ವೀರಶೈವ ತರುಣಸಂಘದ ಸದಸ್ಯರಾದ ಮ|| ಹನುಮಂತಗೌಡರು ಪಾಟೀಲ, ಮ|| ಬಸಪ್ಪ ಕೆಂಪುಸಪ್ಪನವರು ಇವರಿಬ್ಬರು ಈ ದಿವಸದ ಸಭೆಯ ಉದ್ದೇಶಗಳನ್ನು ಜನರಿಗೆ ತಿಳಿಸಿದರು ಅನಂತರ ಕನ್ನಡ ಶಾಲಾಧ್ಯಾಪಕರಾದ ಶ್ರೀ|| ಸಿ ಪ ಬಂಡಿವಾಡ ಇವರು ಪಂಚಾಚಾರ್ಯರ ಉತ್ಪತ್ತಿ ಅವರು ತೋರಿಸಿದ ಅದ್ಭುತಲೀಲೆ ದಿಗ್ವಿಜಯ ಸ್ವಮತಸಿದ್ಧಾಂತ ಮಂಡನ ಗುರುಜನ ರತ್ನ ಪತ್ನೀ ಪರಮಾಚಾರ್ಯಸೇವೆಯೇ ಈಶ್ವರಸೇವೆ ಮುಂತಾದ ವಿಷಯಗಳ ಮೇಲೆ ಶ್ರೋತೃಗಳ ಮನಸ್ಸಿಗೆ ಆನಂದವನ್ನುಂಟುಮಾಡುವಂತೆ ಗಂಭೀರವಾಗಿ ಭಾಷಣಮಾಡಿದರು ಅನಂತರ ವೀರಶೈವ ತರುಣಸಂಘದ ಸದಸ್ಯರಾದ ಸಿದ್ಧಯ್ಯನವರು ಹಿರೇಮಠ ಇವರು ನಮ್ಮಗಳ ಮನೆಗಳಲ್ಲಿ ನಡೆಯುತ್ತಿರುವ ಶುಭಕಾರ್ಯಗಳಲ್ಲಿ ಶಾಸ್ತ್ರೀಯವಾಗಿ ಆಚರಿಸಲ್ಪಡುತ್ತಿರುವ ಪಂಚಕಲಶಸ್ಥಾಪನಾದಿ ಕರ್ಮಗಳನ್ನು ನೋಡಿದರೆ ವೀರಶೈವಮತಕ್ಕೆ ಪಂಚಾಚಾರ್ಯರೇ ಮೂಲಗುರುಗಳೆಂಬುದೂ ಇವರಾದರೂ ಗುರುಗಳಾಗಿರುತ್ತಾರೆಂಬುದೂ ಸ್ಪಷ್ಟವಾಗುತ್ತದೆಂದು ಆವೇಶಭರಿತವಾದ ವಾಣಿಯಿಂದ ಹೇಳಿ ಜನರ ಮನಸ್ಸಿನಮೇಲೆ ಪರಿಣಾಮವನ್ನುಂಟುಮಾಡಿದರು. ಅನಂತರ ಕುಂದೂರ ಪಟೇಲರು ಮಹಾಸ್ತರ ಸಿದ್ಧಲಿಂಗಯ್ಯನವರು ಸದರಿ ಉತ್ಸವಕ್ಕೆ ಸಂಬಂಧಿಸಿದ ಕೆಲವು ಮಾತುಗಳನ್ನು ಹೇಳಿದ ಮೇಲೆ ವೇ|| ಚರಮೂರ್ತಿಗಳವರು ವೀರಶೈವನಾದವನು ಗುರುಗಳ ಜಯಂತಿಯನ್ನು ಮಾಡಲೇಬೇಕೆಂದೂ ಈಗಿನ ಕಾಲದಲ್ಲಿ ಜನಿವಾರಗಳಿಗಾಗಿರುವ ವೀರಶೈವರ ತಂಟಾಟಗಳನ್ನು ಗುರುವಿನ ಸ್ವರೂಪವನ್ನು ಇಂತಹ ಜಯಂತಿಗಳ ಮೂಲಕವಾಗಿ ಸರ್ವರೂ ತಿಳಿದುಕೊಂಡು ಧನ್ಯರಾಗಬೇಕೆಂದು ಉಪದೇಶಮಾಡಿದ ಬಳಿಕ ಮಂಗಳಾರತಿಯಾದ ನಂತರ ಸಭೆ ವಿಸರ್ಜಿಸಲ್ಪಟ್ಟಿತು

ಜನಸೇವಾ ಮನಸ್ಸ್ಯ ಯಲವಿಗಿ
ಕಾರ್ಯದರ್ಶಿ ವೀರಶೈವ ತರುಣಸಂಘ

ಶ್ರೀ ಜಗದ್ಗುರು ಪಂಚಾಚಾರ್ಯ ವಿಜಯತೇ

ಶ್ರೀ ಜಗದ್ಗುರು ರೇವಣಸಿದ್ಧೇಶ್ವರರ ಜಯಂತ್ಯುತ್ಸವ ನಾಲತವಾಡ.

ಶ್ರೀ ಜಗದ್ಗುರು ರೇವಣಸಿದ್ಧ ಶಿವಾಚಾರ್ಯ ಮಹಿಮೆಯ ಗುರುಪರಂಪರಾಗತ ನಾಲತವಾಡ ಗ್ರಾಮ ಅಧ್ಯಕ್ಷರು ತಮ್ಮ ಶ್ರೀ ಅಮರೇಶ್ವರ ಡಿಸ್ಪೆನ್ಸರಿಯಲ್ಲಿ ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ಜಯಂತಿ ಮಹೋತ್ಸವವನ್ನು ಇದೇ ಫಾಲ್ಗುಣ ಶು|| ೧೩ ಸೋಮವಾರ ದಿವಸ ಬಹು ವಿಜೃಂಭಣೆಯಿಂದ ಮಾಡಿಸಿದರು

ಪ್ರಾತಃಕಾಲ ಶ್ರೀ ಜಗದ್ಗುರುಗಳ ಭಾವಚಿತ್ರವನ್ನು ಅಲಂಕರಿಸಲ್ಪಟ್ಟ ಉಚ್ಚಸ್ಥಾನದಲ್ಲಿ ಸ್ಥಾಪಿಸಿ ವೇದೋಕ್ತಮಂತ್ರಗಳಿಂದರ್ಚಿಸಿ ಅಷ್ಟೋತ್ತರ ಶತನಾಮೋಚ್ಚಾರಣ ಪೂರ್ವಕ ಬಿಲ್ವಪತ್ರಗಳನ್ನು ಧರಿಸಿ ಪುಷ್ಪಾಂಜಲಿಯನ್ನಿತ್ತು, ಜಯಘೋಷಮಾಡಲ್ಪಟ್ಟಿತು. ಅನಂತರ ಮಹಾಜಗನ್ಮಾತಾರಾಧನೆಯಾಗಿ ಯಥೋಚಿತ ದಕ್ಷಿಣ ತಾಂಬೂಲಾದಿಗಳ ವಿನಿಯೋಗವು ನಡೆಯಿತು

ಸಾಯಂಕಾಲ ೫ ಘಂಟೆಗೆ ಶ್ರೀ ಅಮರೇಶ್ವರ ಡಿಸ್ಪೆನ್ಸರಿಯ ಹಾಲಿನಲ್ಲಿ ಡಾಕ್ಟರ ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ಸ್ಥಳದ ಚಿತ್ತಮಹೇಶ್ವರರು ಸಭೆಯನ್ನು ಅಲಂಕರಿಸಿದ್ದರು ವೇ|| ಶಾ|| ಶಾಂತಪ್ಪಶಾಸ್ತ್ರಿಗಳು ಮೈಸೂರ ಪಂಚಾಚಾರ್ಯಪ್ರಭೆಯಲ್ಲಿ ಪ್ರಕಟಿಸಿರುವ ಮೇರೆ ನಿಜವಾದ ವೀರಶೈವ ಲಿಂಗಾಂಗಿಧರ್ಮದವರುಮೇಲ್ಕಂಡ ಜಯಂತೀ ಮಹೋತ್ಸವವನ್ನು ಗುರುಭಕ್ತಿ ನಿಷ್ಠರಾಗಿ ಆಚರಿಸಿ ಧನ್ಯರಾಗಬೇಕೆಂದೂ, ವೀರಶೈವರಿಗೆ ಪಂಚಾಚಾರ್ಯರ ವಿನಾ ಅನ್ಯ ಗುರುಗಳೇ ಇಲ್ಲವೆಂತಲೂ ಹೇಳಿದರು ಬಳಿಕ ಶ್ರೀ ಜಗದ್ಗುರು ರೇವಣಸಿದ್ಧೇಶ್ವರರ ಭಾವಚಿತ್ರವನ್ನು ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿರಿಸಿ ಅನಂತ ವಾದ್ಯವೈಭವಗಳಿಂದಲೂ ಸಮಸ್ತ ಬಿರುದಾವಳಿಗಳಿಂದಲೂ ಮೆರವಣಿಗೆಯು ಹೊರಟು ಊರೊಳಗಿನ ಹಿರೇಮಠಕ್ಕೆ ತಲ್ಪಿ ಅಲ್ಲಿದ್ದ ಮೂಲಕರ್ತೃ ಗದ್ದುಗೆಗೆ ಮಂಗಲಾರತಿ ಕಾಯಿಕರ್ಪೂರವನ್ನು ಮಾಡಿಸಿ ಅಲ್ಲಿಂದಾ ಹೊರಟು ಸ್ವಸ್ಥಾನಕ್ಕೆ ಮೆರವಣಿಗೆಯು ಬಂದು ತಲ್ಪಿತು

ಉತ್ಸವಕಾಲದಲ್ಲಿ ಊರು ತಳಿರುತೋರಣಗಳಿಂದಲೂ ಧ್ವಜಪತಾಕಗಳಿಂದಲೂ ಶೃಂಗರಿಸಲ್ಪಟ್ಟಿತ್ತು. ಅನೇಕ ಮುತ್ತೈದೆಯರು ಮಂಗಳಾರತಿಯನ್ನು ತಂದಿದ್ದರು ಸ್ಥಳದ ಮತ್ತು ಭಕ್ತಮಹೇಶ್ವರರು ಉತ್ಸವದಲ್ಲಿ ಭಾಗವಹಿಸಿದ್ದರು ಸ್ಥಾನಿಕ ಪೋಲೀಸಿನವರ ಬಂದೋಬಸ್ತು ವಾಲಿಯ ಜನರಿಗಾಗಿ ಇರಿಸಲ್ಪಟ್ಟಿದ್ದಿತು

ಪ್ರತ್ಯಕ್ಷದರ್ಶಿ

ಜಯಂತೀಮಹೋತ್ಸವ
ಗರುಗದಹಳ್ಳಿ

ಕಡೂರು ತಾಲೂಕು ಗರುಗದಹಳ್ಳಿ ಗ್ರಾಮದಲ್ಲಿ ಇದೇ ಭಾವನಾಮ ಸಂವತ್ಸರದ ಫಾಲ್ಗುಣ ಶುದ್ಧ ೧೪ (ತಾ|| 18 3 33) ನೇ ಸೋಮವಾರದ ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವವನ್ನು ಮಾಸ್ಟರ್ ಎ ಚನ್ನಪ್ಪನವರು ಅತ್ಯಂತ ಗುರುಭಕ್ತಿಯಿಂದ ನೆರವೇರಿಸಿದರು. ಈ ಮಹೋತ್ಸವಕ್ಕೆ ಸುತ್ತಮುತ್ತಣ ಗ್ರಾಮಗಳಿಂದ ಅನೇಕ ಜನ ವೀರಶೈವೇತರರೂ ಆಹ್ವಾನಿಸಲ್ಪಟ್ಟಿದ್ದರು ಸದರಿ ಉತ್ಸವಕ್ಕಾಗಿ ಬುದ್ಧಿವಂತ ಕಲ್ಲಪ್ಪನವರ ಮನೆಯು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿದ್ದಿತು.

ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಭಾವಪಟವನ್ನು ಮಂಟಪದಲ್ಲಿರಿಸಿ ಗಂಧಾಕ್ಷತೆಗಳಿಂದಲೂ ಪತ್ರೆ ಪುಷ್ಪಾದಿಗಳಿಂದಲೂ ವಿಧ್ಯುಕ್ತವಾಗಿ ಪೂಜಿಸಿ ಧೂಪ ದೀಪ ನೈವೇದ್ಯಾದಿಗಳನ್ನು ಅರ್ಪಿಸಿದಮೇಲೆ ಮಹಾ ಮಂಗಳಾರತಿಯನ್ನು ಮಾಡಿ ಜಗದಾಚಾರ್ಯರ ಚಿತ್ರಪಟವನ್ನು ಪಲ್ಲಕ್ಕಿಯಲ್ಲಿರಿಸಿ ಛತ್ರಿಚಾಮರ ವಾದ್ಯವೈಭವದೊಡನೆ ಮೇಲ್ಕಂಡ ಕಲ್ಲಪ್ಪನವರ ಮನೆಯಿಂದ ರಾತ್ರಿ ಸುಮಾರು 8 ಘಂಟೆಗೆ ಸರಿಯಾಗಿ ಉತ್ಸವವು ಹೊರಟು ಗ್ರಾಮದ ಶ್ರೀ ವೀರಭದ್ರೇಶ್ವರ ದೇವಾಲಯದಲ್ಲಿ ಮಂಗಳಾರತಿಯಾಗಿ ಗ್ರಾಮದಲ್ಲೆಲ್ಲ ಮೆರವಣಿಗೆ ಮಹೋತ್ಸವವು ನಡೆದು ಸ್ವಸ್ಥಾನಕ್ಕೆ ಬಂದಮೇಲೆ ಸರ್ವರೂ ಶ್ರೀ ಜಗದ್ಗುರುವಿನ ಜಯಘೋಷವನ್ನು ಮಾಡಿದರು ಈ ಉತ್ಸವಕ್ಕೆ ಭಾಗಿಗಳಾಗಿದ್ದ ಎಲ್ಲಾ ಮಹನೀಯರಿಗೂ ಮನೋಜ್ಞವಾದ ವಿಚಾರಗಳು ತೃಪ್ತಿಕರವಾಗಿತ್ತು. ಪರಮಪವಿತ್ರವಾದ ವೀರಶೈವ ಮತವನ್ನು ಜಗದಾದಿಯಲ್ಲಿ ಯಾವ ಮಹಾತ್ಮನು ಸ್ಥಾಪಿಸಿದನೋ ಅಂಥ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಪ್ರತಿವರ್ಷವೂ ತಪ್ಪದೆ ಆಚರಿಸುತ್ತಿರುವ ಮಾಸ್ಟರ್ ಎ ಚನ್ನಪ್ಪನವರಿಗೂ ಮತ್ತು ಮ|| ರಾ|| ಬುದ್ಧಿವಂತ ಕಲ್ಲಪ್ಪನವರಿಗೂ ಜಿ ಎಂ ರಾಮಪ್ಪನವರಿಗೂ ಅಪಾರಮಹಿಮಾಗಾರನಾದ ಶ್ರೀ ರೇವಣಸಿದ್ಧನು ಆಯುರಾರೋಗ್ಯಭಾಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ,

ಓರ್ವ ಗುರುಭಕ್ತ,

ಜಯಂತೀಮಹೋತ್ಸವ
ಸೊರಬ ತಾಲ್ಲೂಕು ಅರೆಕೊಲಗದ್ದಿ.

ಈ ಗ್ರಾಮದ ರಾ|| ಮ|| ವೀರದೇವಒಡೆಯರ್‌ರವರು ಪ್ರತಿಯೊಬ್ಬನೂ ಮತಸ್ಥಾಪಕರಾದ ರೇಣುಕಾದಿ ಭಗವತ್ಪಾದರ ಜಯಂತಿಯನ್ನು ಮಾಡಲೇಬೇಕೆಂದೂ ಆಯಾಯ ಮತೀಯರು ಆಯಾಯ ಮತದ ಗುರುಗಳ ಜಯಂತಿಯ ಮೂಲಕ ಗುರುಸೇವೆಯನ್ನು ಮಾಡದಿದ್ದಲ್ಲಿ ಆ ಮತದಲ್ಲಿ ಜನ್ಮವನ್ನು ಧರಿಸಿದ್ದು ವ್ಯರ್ಥವೆಂದು ಆಗಾಗ್ಯೆ ಜನಗಳಿಗೆ ಬೋಧೆಯನ್ನು ಮಾಡುತ್ತಿರುವುದಲ್ಲದೆ ಕಳೆದ 18 ನೆಯ ತಾರೀಖು ಸೋಮವಾರ ದಿವಸ ತಮ್ಮ ಮನೆಯಲ್ಲಿ ಶ್ರೀ ರೇಣುಕಮೂರ್ತಿಯನ್ನು ಷೋಡಶೋಪಚಾರಗಳಿಂದರ್ಚಿಸಿ ಭಜನೋತ್ಸವಾದಿಗಳನ್ನು ನೆರವೇರಿಸಿದರು ಮತ್ತು ಇವರ ನೇತೃತ್ವವನ್ನನುಸರಿಸಿ ಮ|| ರಾ|| ಮಲ್ಲಪ್ಪಗೌಡರು, ಬೀಗಲಿ ಪಟೇಲ್ ಬಸಪ್ಪಗೌಡರು ಸಹ ಈ ಜಯಂತೀಮಹೋತ್ಸವವನ್ನು ದೊಡ್ಡಹಬ್ಬದಂತೆ ವಿಜೃಂಭಣೆಯಿಂದ ಆಚರಿಸಿ ಗುರುಕೃಪೆಗೆ ಪಾತ್ರರಾದರು.

ಪ್ರತ್ಯಕ್ಷದರ್ಶಿ.

ಪಂಚಾಚಾರ್ಯ ಪ್ರಭಾ.

೧೯೩೫ನೇ ಏಪ್ರಿಲ್ ತಾ|| ೧ನೇ ಸೋಮವಾರ

ಯುವಸಂವತ್ಸರಾರಂಭವು.

ಕರುಣಾಸಮುದ್ರನಾದ ಶ್ರೀ ಜಗದೀಶ್ವರನ ಕೃಪೆಯಿಂದ ನಾವು ಭಾವಸಂವತ್ಸರವನ್ನು ಸೌಖ್ಯದಿಂದ ಕಳೆದೆವು. ತಾ|| ೪ನೇ ಗುರುವಾರದಿಂದ ನೂತನವಾದ ಶ್ರೀ ಯುವಸಂವತ್ಸರವು ಈ ಭೂಮಂಡಲದಲ್ಲಿ ಪದಾರ್ಪಣಮಾಡುವದು. ನಮ್ಮ ಭಾರತೀಯರ ಶಾಸ್ತ್ರಾನುಸಾರವಾಗಿ ಈ ದಿವಸವನ್ನು (ಚೈತ್ರಶುದ್ಧ ಪ್ರತಿಪದ) ಹೊಸದಿವಸವನ್ನಾಗಿ ಪರಿಭಾವಿಸುತ್ತಾರೆ. ಭಾರತೀಯರಲ್ಲಿ ನಡೆಯಬೇಕಾದ ಹಬ್ಬಗಳಲ್ಲೆಲ್ಲಾ ಈ ದಿವಸ ನಡೆಯುವ ಹಬ್ಬವೇ ಶ್ರೇಷ್ಠಸ್ಥಾನವನ್ನು ಹೊಂದಿರುತ್ತದೆ. ಈ ಹೊಸದಿವಸವು ಬರುತ್ತಲೇ ಹಿರಿಯರಿಗೂ ಕಿರಿಯರಿಗೂ ಆನಂದವು ಉಕ್ಕೇರುತ್ತದೆ. ಪ್ರತಿಯೊಬ್ಬ ಭಾರತೀಯನು ತಮ್ಮ ತಮ್ಮ ಮನೆಗಳನ್ನು ತೋರಣಾದಿಗಳಿಂದಲಂಕರಿಸಿ ಈ ಯುಗಾದಿಯನ್ನು ನಂಟನನ್ನೋಪಾದಿಯಲ್ಲಿ ಬಹುಸಂಭ್ರಮದಿಂದ ಸತ್ಕರಿಸುವನು. ವನದೇವತೆಯು ಸಹ ತನ್ನ ಮಿತ್ರನಾದ ವಸಂತನನ್ನು ಜೊತೆಯಲ್ಲಿ ಕರೆದುಕೊಂಡು ಬರುವನೆಂಬ ಸಂತೋಷದಿಂದ ಈ ಯುಗಾದಿಯನ್ನು ಆರಕ್ತವಾದ ಚಿಗುರುಗಳಿಂದಲೂ ನೂತನ ಪುಷ್ಪಫಲಗಳಿಂದಲೂ ಸ್ವಾಗತಿಸುತ್ತಾಳೆ. ಹುಡುಗರೂ ದೊಡ್ಡವರೂ ಸ್ತ್ರೀಯರೂ ಬಡವರೂ ಒಬ್ಬರೂ ಆದಿಯಾಗಿ ಈ ಹಬ್ಬವನ್ನು ಬಹು ಸಂತೋಷದಿಂದ ಆಚರಿಸುವ ಸಂಪ್ರದಾಯವು ನಮ್ಮ ಭರತಖಂಡದಲ್ಲಿ ಅನಾದಿಸಂಸಿದ್ಧವಾಗಿ ಬಂದಿರುತ್ತದೆ. ಈ ದಿವಸ ಪ್ರತಿಯೊಬ್ಬ ಆಸ್ತಿಕರೂ ತಮ್ಮ ತಮ್ಮ ಮನೆಮುಂದಿರುವ ಗಳನ್ನು ಸಾರಣೆತೋರಣೆಗಳಿಂದಲೂ ನವಪಲ್ಲವಾವಲಿಯಿಂದಲೂ ಅಲಂಕರಿಸಿ ಪ್ರಾತಃಕಾಲ ತೈಲಾಭ್ಯಂಗವನ್ನು ಮಾಡಿ ತನ್ನ ನಿತ್ಯಕರ್ಮಗಳನ್ನೆಲ್ಲಾ ಮುಗಿಸಿ ಗುರುಪೂಜೆಯನ್ನೂ ಇಷ್ಟದೇವತಾಪೂಜೆಯನ್ನೂ ಅತಿವೈಭವದಿಂದ ಮಾಡಿ ನಿಂಬಪತ್ರವನ್ನು ಭುಂಜಿಸಿ ತನ್ನ ಇಷ್ಟಮಿತ್ರರೊಂದಿಗೆ ಹೊದಿನ ಕಷ್ಟಗಳನ್ನೆಲ್ಲಾ ಮರೆತು ಸುಖಭೋಜನವನ್ನು ಮಾಡಿ ಆ ವರ್ಷವೆಲ್ಲಾ ಜಗದೀಶ್ವರನು ನಮ್ಮಗಳಿಗೆ ಆಯುರಾರೋಗ್ಯ ಸಂಪತ್ತುಗಳನ್ನೂ ನಾವು ಪ್ರಾರಂಭಿಸಿದ ಕಾರ್ಯದಲ್ಲಿ ವಿಜಯವನ್ನೂ ಕೊಡಲೆಂದು ಪ್ರಾರ್ಥಿಸುತ್ತಾ ಇರುವದು ನಮ್ಮ ಆರ್ಯಸಂಪ್ರದಾಯವಾಗಿರುತ್ತದೆ. ಈ ದಿವಸವೇ ಸೃಷ್ಟಿಸ್ಥಿತಿ ಸಂಹಾರಕರ್ತನಾದ ಶ್ರೀ ಪರಮೇಶ್ವರನು ತನ್ನಲ್ಲಿ ಅವಿನಾಭಾವಸಂಬಂಧದಿಂದಿರುವ ನಿಜಶಕ್ತಿಯ ವಿಕಾಸಾವಸ್ಥೆಯಿಂದ ಸ್ಥಾವರ ಜಂಗಮಾತ್ಮಕವಾದ ಜಗತ್ತನ್ನು ಸೃಷ್ಟಿಮಾಡಿ ಲೋಕವ್ಯವಹಾರಾರ್ಥವಾಗಿ ವರ್ಷ ಋತು ಮಾಸ ಪಕ್ಷ ಸಂವತ್ಸರ ಗ್ರಹ ಕಾಲ ಗಣನಾದಿಗಳನ್ನು ಬ್ರಹ್ಮ ಇಂದ್ರಾದಿ ದೇವತೆಗಳನ್ನು ಕರೆದು ಅವರಿಗೆ ಜಗದ್ರಕ್ಷಣಾಧಿಕಾರವನ್ನು ವಹಿಸಿದನು. ಆ ದೇವತೆಗಳೆಲ್ಲರೂ ಈಶ ರಾಜಾಜ್ಞಾಪಾಲನಾರ್ಥವಾಗಿ ಅವಿಲಂಬದಿಂದ ಒಂದು ತಮ್ಮ ತಮ್ಮ ಕಾರ್ಯಗಳನ್ನು ಆರಂಭಮಾಡಿದ ಈ ಚೈತ್ರಶುದ್ಧಪ್ರತಿಪತ್ತನ್ನೇ ಯುಗಾದಿಯೆಂದೂ ಹೊಸದಿವಸವೆಂದೂ ಹೇಳುತ್ತಾರೆ. ಇಂಥ ಸೃಷ್ಟಿಯದಿವಸವೆನಿಸಿದ ಈ ಹೊಸದಿವಸವನ್ನು ವರ್ಷಕ್ಕೊಮ್ಮೆ ನಾವು ಕಾಣುವೆವು. ಪುನಃ ಇನ್ನೊಂದು ವರ್ಷದವರೆಗೂ ಕಾಣುವಂತಿಲ್ಲವು. ದೈವಯೋಗದಿಂದ ಘಟಿಸಿದ ಈ ಶುಭದಿವಸವಾದರೂ ನಾವುಗಳೆಲ್ಲಾ ಹಿಂದೆ ಕಾರಣಾಂತರಗಳಿಂದುಂಟಾದ ಪರಸ್ಪರ ವೈಷಮ್ಯಗಳನ್ನು ಬಿಟ್ಟು ಒದಗಿದ್ದ ಸಾಂಸಾರಿಕ ದುಃಖಗಳನ್ನೆಲ್ಲಾ ಒತ್ತರಿಸಿ ಭವಿಷ್ಯತ್ತಿನ ಹಿತಸಾಧನವಾದ ಗುರುದೇವತಾಭಕ್ತಿಯುತರಾಗಿ ಆನಂದದಿಂದ ಕಾಲಯಾಪನೆ ಮಾಡಿದರೆ ಈ ಯುವಸಂವತ್ಸರವು ಮುಗಿಯುವವರೆಗೂ ಲಕ್ಷ್ಮಿಯು ಅಭಿಮುಖಳಾಗಿ ಪ್ರಾರಂಭಿಸಿದ ಕಾರ್ಯದಲ್ಲಿ ವಿಜಯವನ್ನು ಪಡೆಯುವೆವು.

ಸಂವತ್ಸರ ಫಲ.

ಪ್ರಶಸ್ತಮುಕ್ತಿರ್ಗುಣವಾನ್ ವಿಜಿತಃ |
ಶಾಂತಶ್ಚ ದಾನಾಭಿರತೋ ಜಿತಾಂತಃ ||
ಸುಧೀಃ ಸ್ಥಿರಾಯುರ್ದ್ವಿಜದೇವಭಕ್ತಃ |
ಜಾತೋ ಯುವಾಬ್ದೇ ಪುರುಷಸ್ತಪಸ್ವೀ ||

ಈ ಯುವಸಂವತ್ಸರದಲ್ಲಿ ಹುಟ್ಟುವ ಮನುಷ್ಯನು ಸುಂದರನೂ ಗುಣಾಢ್ಯನೂ ನಮ್ರನೂ ಶಾಂತನೂ ದಾನಿಯೂ ಮೇಧಾವಿಯೂ ದೀರ್ಘಾಯುಷ್ಯುಳ್ಳವನೂ ಬಲಶಾಲಿಯೂ ಆಗುವನು.

ಪ್ರಭೂತಕಾಮಾಃ ಪ್ರಮದಾ ಯುವಾಬ್ದೇ |
ಗೋಧೂಮಶಾಲೀಕ್ಷು ಫಲಾಶಭುಂಕ್ತಾ ||
ಚೋರಾಮಯ ವ್ಯಾಳಭಯಂ ಪ್ರಭೂತಂ |
ತಥಾಪಿ ವಿಂದಂತಿ ನವೋತ್ಸವಾನ್ ತಾಃ ||

ಈ ಸಂವತ್ಸರದಲ್ಲಿ ಸ್ತ್ರೀಯರು ಅಧಿಕ ಆಶೆಯುಳ್ಳವರಾಗುವರು. ಗೋಧಿ ಅಕ್ಕಿ ಬೆಲ್ಲ ಸಕ್ಕರೆ ಹಣ್ಣುಗಳನ್ನು ವಿಶೇಷವಾಗಿ ಸೇವಿಸುವರು. ಕಳ್ಳರಕಾಟವು ರೋಗಬಾಧೆಯೂ ವಿಷಜಂತುಗಳ ಭಯವೂ ಹೆಚ್ಚುತ್ತವೆ. ಸ್ತ್ರೀಯರು ಸೌಖ್ಯದಿಂದ ಇರುವರು.

ಈ ವರ್ಷ ಗುರುವು ರಾಜನಾಗಿರುವುದರಿಂದ ದ್ವಿಜರಿಗೆ ಸತ್ಕಾರ್ಯದಲ್ಲಿ ಪ್ರವೃತ್ತಿಯುಂಟಾಗುವದು. ರಾಜರು ನ್ಯಾಯದಿಂದ ರಾಜ್ಯರಕ್ಷಣೆಮಾಡುವರು. ಪ್ರಜೆಗಳು ರೋಗಾದಿ ಉಪದ್ರವವಿಲ್ಲದೆ ಆರೋಗ್ಯದಿಂದ ಇರುವರು. ಮಳೆಯು ಚನ್ನಾಗಿ ಆಗುವದು. ಧಾನ್ಯಗಳು ಹೇರಳವಾಗಿ ಬೆಳೆದು ಪದಾರ್ಥಗಳು ಅಗ್ಗವಾಗುತ್ತವೆ.

ಶನಿಯು ಮಂತ್ರಿಯಾಗಿರುವುದರಿಂದ ಭೂಮಿಯಲ್ಲಿ ಬೆಳೆಯೂ ಮಳೆಯೂ ಕಡಿಮೆ. ಆಕಾಶವು ಮೇಘಾವೃತವಾಗಿ ಕಾಂತಿಶೂನ್ಯವಾಗುವದು.

ಶನಿಯು ಸೇನಾಧಿಪತಿಯಾಗಿರುವದರಿಂದ ರಾಜರು ಸೇನೆಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಪ್ರಜೆಗಳು ಅಧರ್ಮದಲ್ಲಿ ಪ್ರವರ್ತಿಸುತ್ತಾರೆ. ಭೂಮಿಯಲ್ಲಿ ಕಪ್ಪುಧಾನ್ಯಗಳು ಫಲಿಸುತ್ತವೆ. ವಾಕ್ಯರೀತಿಯಾಗಿ ಶುಕ್ರನು ಸೇನಾಧಿಪತಿಯಾಗಿರುವುದರಿಂದ ಸುವೃಷ್ಟಿಯೂ, ಸಸ್ಯವೃದ್ಧಿಯೂ ಸುಭಿಕ್ಷವೂ, ಪದಾರ್ಥಗಳಿಗೆ ಬೆಲೆ ಕಡಿಮೆಯೂ, ಸ್ತ್ರೀಪುರುಷರಲ್ಲಿ ಕಾಮಾಸಕ್ತಿಯು ಉಂಟಾಗುವುದು.

ಕುಜನು ಸಸ್ಯಾಧಿಪತಿಯಾಗಿರುವುದರಿಂದ ಕೆಂಪುಭತ್ತವೂ ದೊಡ್ಡಭತ್ತವೂ, ತೊಗರಿ ಕಡಲೆ ಮುಂತಾದ ಕೆಂಪು ಧಾನ್ಯಗಳು ಕೆಂಪುಭೂಮಿಯೂ ವಿಶೇಷವಾಗಿ ಫಲಿಸುವವು.

ಸೂರ್ಯನು ಧಾನ್ಯಾಧಿಪತಿಯಾಗಿರುವುದರಿಂದ ಮಳೆಬೆಳೆಗಳು ಕಡಿಮೆ. ಪದಾರ್ಥಗಳಿಗೆ ಬೆಲೆ ಹೆಚ್ಚುವುದು. ಪ್ರಜೆಗಳಿಗೆ ಭಯವುಂಟಾಗುವದು. ಕೆಂಪು ಪೈರುಗಳು ವಿಶೇಷವಾಗಿ ಬೆಳೆಯುತ್ತವೆ. ಸಿದ್ಧಾಂತರೀತಿಯಾಗಿ ಶನಿಯು ಅರ್ಘಾಧಿಪತಿಯಾದ್ದರಿಂದ ಮಳೆಯಾಗುವದು. ಕಳ್ಳರಬಾಧೆಯು, ಬೆಂಕಿಯ ಬಾಧೆಯು, ಕ್ಷಾಮಬಾಧೆಯು ಹೆಚ್ಚುತ್ತದೆ. ಕಪ್ಪುಧಾನ್ಯಗಳು ಫಲಿಸುತ್ತವೆ.

ವಾಕ್ಯರೀತಿಯಾಗಿ ಶುಕ್ರನು ಅರ್ಘಾಧಿಪತಿಯಾದ್ದರಿಂದ ಧಾನ್ಯಗಳಿಗೆಲ್ಲಾ ಬೆಲೆಯು ಕಡಿಮೆ. ಬಿಳಿಯ ಧಾನ್ಯಗಳು ಫಲಿಸುವವು. ಭೂಮಿಯಲ್ಲಿ ಸುಭಿಕ್ಷೆಯುಂಟಾಗುವದು.

ಸಿದ್ಧಾಂತರೀತಿಯಾಗಿ ಶನಿಯು ಮೇಘಾಧಿಪತಿಯಾದ್ದರಿಂದ ಬೆಳೆ ಕಡಿಮೆ. ಪದಾರ್ಥಗಳಿಗೆ ಬೆಲೆ ಹೆಚ್ಚು. ಖಂಡವೃಷ್ಟಿ. ಕಪ್ಪುಧಾನ್ಯಗಳು ಫಲಿಸುತ್ತವೆ.

ವಾಕ್ಯರೀತಿಯಾಗಿ ಶುಕ್ರನು ಮೇಘಾಧಿಪತಿಯಾದ್ದರಿಂದ ಕೆಲವು ಕಡೆ ಅತಿವೃಷ್ಟಿಯೂ ಸುಭಿಕ್ಷವೂ ಸಸ್ಯವೃದ್ಧಿಯೂ, ಜನಗಳಿಗೆ ಸೌಖ್ಯವೂ ಉಂಟಾಗುವದು.

ಗುರುವು ರಸಾಧಿಪತಿಯಾದ್ದರಿಂದ ಸುವೃಷ್ಟಿಯು ಸುಭಿಕ್ಷವೂ ಉಂಟಾಗುವದು. ಮರಗಳು ಬೆಳೆಯುತ್ತವೆ. ಪ್ರಜೆಗಳು ಆರೋಗ್ಯದಿಂದಿರುತ್ತಾರೆ.

ಕುಜನು ನೀರಸಾಧಿಪತಿಯಾದ್ದರಿಂದ ಚಂದನ, ಅಗರು, ಕಸ್ತೂರಿ, ಹವಳ, ಕೆಂಪುಬಟ್ಟೆ ಇವುಗಳಿಗೆ ಬೆಲೆ ಕಡಿಮೆ.

ಗೋಪಾಲನು ಪಶುನಾಯಕನಾಗಿರುವುದರಿಂದ ಪಶುವೃದ್ಧಿಯೂ ಸುಭಿಕ್ಷವು ಉಂಟಾಗುವದು. ಪೈರುಗಳು ಚನ್ನಾಗಿ ಬೆಳೆಯುತ್ತವೆ. ಪದಾರ್ಥಗಳು ಅಗ್ಗವಾಗುತ್ತವೆ. ಹುಲ್ಲು ಸಮೃದ್ಧಿಯಾಗುತ್ತದೆ.

ಉಪನಾಯಕರ ಫಲ.

ಕಾರು ಬೆಳೆಯು. ಭತ್ತ ತೊಗರಿ ಮುಂತಾದ ಧಾನ್ಯಗಳು ಚನ್ನಾಗಿ ಫಲಿಸುತ್ತವೆ. ಮಳೆ ಕಡಿಮೆ. ಪದಾರ್ಥಗಳಿಗೆ ಬೆಲೆ ಹೆಚ್ಚು, ಜನಗಳಿಗೆ ಕ್ಷಾಮಭೀತಿಯೂ, ರಾಜರುಗಳಿಂದ ಪ್ರಜೆಗಳಿಗೆ ಪೀಡೆಯೂ, ಪರದೇಶಗಳಲ್ಲಿ ಯುದ್ಧಭಯ, ಮೂರು ರಾಷ್ಟ್ರದವರು ಪ್ರವೇಶಿಸಿ ಉಭಯಪಕ್ಷದವರಿಗೂ ರಾಜಿಮಾಡುವರು. ವರ್ತಕರಿಗೆ ದ್ರವ್ಯಲಾಭ, ರಾಜರುಗಳು ವಿಶೇಷವಾಗಿ ಯುದ್ಧಸಾಮಗ್ರಿಯನ್ನು ಶೇಖರಿಸುವರು. ಧರ್ಮವು ಗ್ಲಾನಿಹೊಂದುವದು. ಬಟ್ಟೆಗಳಿಗೆ ಬೆಲೆ ಹೆಚ್ಚುವದು. ಜನಗಳಿಗೆ ಉಷ್ಣಸಂಬಂಧ ವ್ಯಾಧಿಗಳು ಸಂಭವಿಸುತ್ತವೆ. ಈ ವರ್ಷ ಕುಜ ಮತ್ತು ಯಮ ಇವರನ್ನು ಪ್ರಾರ್ಥಿಸುತ್ತಿದ್ದರೆ ಜನಗಳಿಗೆ ಕ್ಷೇಮವುಂಟಾಗುವದು.

ಈ ರೀತಿಯಾಗಿ ಸಂಕ್ಷೇಪವಾಗಿ ಪಂಚಾಂಗಫಲವು ಶ್ರುತವಾಗಿದ್ದರೂ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಬಲದಿಂದ ಕಳೆದ ವರ್ಷದಂತೆ ನಮ್ಮ ಭಾರತೀಯರು ಯಾವ ವಿಪತ್ತಿಗೂ ಸಿಕ್ಕದೆ ದೀರ್ಘಾಯುರಾರೋಗ್ಯಾದಿ ಸಕಲ ಭಾಗ್ಯಪರಂಪರೆಯನ್ನು ಹೊಂದಲೆಂದು ಪ್ರಾರ್ಥಿಸುವೆವು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ |
ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾಃ ||
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ |
ಲೋಕಾಸ್ಸಮಸ್ತಾಸ್ಸುಖಿನೋ ಭವಂತು ||
ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ |
ದೇಶೋಯಂ ಕ್ಷೋಭರಹಿತಃ ಬ್ರಾಹ್ಮಣಾಸ್ಸಂತು ನಿರ್ಭಯಾಃ |
ಅಪುತ್ರಾಃ ಪುತ್ರಿಣಸ್ಸಂತು ಪುತ್ರಿಣಸ್ಸಂತು ಪೌತ್ರಿಣಃ
ಅಧನಾಸ್ಸಧನಾಸ್ಸಂತು ಜೀವಂತು ಶರದಾಂ ಶತಂ ||

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಈ ತಿಂಗಳು ಕೆಮ್ಮಣ್ಣುಗುಂಡಿಗೆ ದಯಮಾಡಿಸಿ ಅಲ್ಲಿ ಕೆಲವು ದಿವಸ ವಿಶ್ರಮಿಸಿದ್ದು ಪುನಃ ರಾಜಧಾನಿಗೆ ಹಿಂದಿರುಗುವರೆಂದು ತಿ ದುಬರುತ್ತದೆ.

ಬೆಂಗಳೂರು ಮಲ್ಲೇಶ್ವರದ ಬಡಾವಣೆಯಲಿ ಕೊಲೆಯಾದ ಹೆಂಗಸಿನ ಶವವು ದೊರೆತಿದೆ. ಹೆಂಗ ಯಾರೆಂದು ತಿಳಿದಿಲ್ಲ. ಪೋಲೀಸರು ಕೊಲೆಪಾತಕಿ ಪತ್ತೆಕ್ರಮ ನಡೆಸುತ್ತಿದ್ದಾರೆ.

ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವ ಶ್ರೀಮದ್ಯುವರಾಣಿಯವರೂ ಪರಿವಾರರಾಗಿ ತಿಂಗಳು ನೀಲಗಿರಿಗೆ ವಿಶ್ರಾಂತಿಗೋಸ್ಕರ ಪ್ರಯಾ ಬೆಳೆಯಿಸುವರೆಂದು ಕೇಳುತ್ತೇವೆ.

ಅರಸೀಕೆರೆ ಹಾಸನ ರಸ್ತೆ ಪಕ್ಕದಲ್ಲಿರುವ ಜಲ ಕೆರೆ ಬಡಾವಣೆಯಲ್ಲಿ ಬಾವಿ ತೋಡುತ್ತಿದ್ದ ಮರಿಯ ಮತ್ತು ವೇಲೂ ಎಂಬುವರಿಗೆ ಡೈನಾಮೈಟ್ ಸಿಡಿದ ರಿಂದ ಗಾಯಗಳಾದವು. ಮರಿಯಪ್ಪನನ್ನು ಬೆ ಳೂರು ಆಸ್ಪತ್ರೆಗೆ ಸಾಗಿಸಿದಾರೆ.

ಕೋಲಾರದ ಗಣಿಯ ರಾಬರ್ಟ್‌ಸನ್ ಪೇಟೆ ರೈ ಸ್ಟೇಷನ್ನಲ್ಲಿ ಕುಳಿತಿದ್ದ ತಂಜಾವೂರು ಹೆಂಗಸೊಬ್ಬ ಟ್ರಂಕನ್ನು ಯಾರೋ ದುಷ್ಟರು ಕದ್ದಿರುತ್ತಾರೆ. ರಲ್ಲಿ ನಗದು 150 ರೂ ಗಳಿತ್ತಂತೆ. ಪೋಲೀಸ ಪತ್ತೆಕ್ರಮ ನಡೆಸುತ್ತಿದ್ದಾರೆ.

ಕೊಪ್ಪದಿಂದ ತೀರ್ಥಹಳ್ಳಿಗೆ ಬರುತ್ತಿದ್ದ ಸರ್ವಿಸ್ ಬಸ್ಸು ತೀರ್ಥಹಳ್ಳಿಗೆ 2 ಮೈಲು ದೂರ ಮುಂದಿನ ಒಂದು ಚಕ್ರ ಕಳಚಿಬಿದ್ದ ಕಾರಣ ಹಳ್ಳ ಬಿದ್ದಿತು. ಬಸ್ಸಿನಲ್ಲಿದ್ದ 10 ಮಂದಿ ಗಂಡಸರಿಗೂ ೪ ಹೆಂಗಸರಿಗೂ ಬಹಳ ಗಾಯಗಳಾಗಿವೆ. ಪ್ರಾಣಾಪಾ ವೇನೂ ಇಲ್ಲ.

ವಿಶ್ರಾಂತಿಸೌಖ್ಯವನ್ನು ಪಡೆಯಲು ಸಿದ್ಧರಾಗಿ ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀಮಾನ್ ಸಿ. ಎ ಕುಪ್ಪಸ್ವಾಮಿ ಅಯ್ಯಂಗಾರ್ಯರನ್ನು ಮೈಸೂ ಡಿಸ್ಟ್ರಿಕ್ಟ್ ಆಟೋಮೊಬೈಲ್ ಅಸೋಸಿಯೇ ನವರು ನಾಳೆದಿವಸ ಶ್ರೀರಂಗಪಟ್ಟಣದ ಸ್ನಾ ಬಂಗಲೆಯಲ್ಲಿ ಸತ್ಕರಿಸುವರು.

ಕಳೆದವಾರ ಹೆಗ್ಗಡದೇವನಕೋಟೆ ತಾಲೋಕು ಅಮಲ್ದಾರ್ ಮ॥ ಗೋಪಾಲಕೃಷ್ಣನಾಯಕರು ಗ್ರಾಮದಲ್ಲಿ ಕಂದಾಯದ ಬಾಕಿ ವಸೂಲಿಗಾಗಿ ಹೋಗಿದ್ದು ವಾಪಸ್ ಬರುತ್ತಿರುವಾಗ ದಾರಿಯಲ್ಲಿ ಯಾರೋ ಕೃದ್ಧಗಟ್ಟ ದೊಣ್ಣೆಯಿಂದ ಹೊಡೆದು ಘಾಯಗೊಳಿಸಿ ಫರಾರಿಯಾಗಿದ್ದಾರೆಂದು ಕೇಳುತ್ತೇವೆ.

ಮಧ್ಯಪ್ರಾಂತ್ಯದಲ್ಲಿರುವ ದತಿಯಾ ಸಂಸ್ಥಾನದ ಮಹಾರಾಜರವರು ಕಳೆದ ತಾ॥ 25 ನೇ ಸೋಮವಾರ ರಾಜಧಾನಿಗೆ ದಯಮಾಡಿಸಿದರು ಗೌರವಾರ್ಥವಾದ ೧೦ ತೋಪುಗಳು ಹಾರಿಸಲ್ಪಟ್ಟವು ಇವರು ನಮ್ಮ ಮಹಾರಾಜರವರ ಅತಿಥಿಗಳಾಗಿದ್ದು, ಶಿಕಾರಿಗಾಗಿ ಕಾರಾಪುರದ ಕ್ಯಾಂಪಿಗೆ ಹೋಗಿರುತ್ತಾರೆಂದು, ತಿಳಿದು ಬಂದಿದೆ

ಎಂ ಬಿ ಬಿ ಎಸ್. ಪರೀಕ್ಷೆಯಲ್ಲಿ ಕೂತಿದ್ದ ಹೊಳೆನರಸೀಪುರದ ರಾಮಸ್ವಾಮಯ್ಯಂಗಾರ್ ಎಂಬುವರು ರಾಜಧಾನಿಯ ಕುಕ್ಕನಹಳ್ಳಿ ಕೆರೆಯಲ್ಲಿ ಬಿದ್ದು ಮೃತಿ ಹೊಂದಿದರು ಮೊನ್ನೆ ಶನಿವಾರ ದಿವಸ ಹೆಣವು ತೇಲುತ್ತಿದ್ದುದನ್ನು ನೋಡಿ ಇಂಥವರೆಂದು ಗೊತ್ತು ಮಾಡಲ್ಪಟ್ಟಿತು ಪರೀಕ್ಷಾ ನ್ಯೂನತೆಯೇ ಈ ಆತ್ಮಹತ್ಯೆಗೆ ಕಾರಣವೆಂದು ತಿಳಿದುಬರುತ್ತದೆ

ಶ್ರೀಮಾನ್ ಸರ್ದಾರ್ ಲಕ್ಷ್ಮೀಕಾಂತರಾಜ ಅರಸರವರು ಮತ್ತು ಇವರ ಧರ್ಮಪತ್ನೀ ಶ್ರೀಮನ್ಮಹಾರಾಜಕುಮಾರೀ, ಶ್ರೀಮತೀ ಚೆಲುವಾಜಾಂಬಿಕಾ ಅಮ್ಮಣ್ಣಿದೇವಿಯವರೂ ಪರಿವಾರದೊಡನೆ ಈ ತಿಂಗಳು ೯ ನೆಯ ತಾರೀಖಿನ ದಿವಸ ಸ್ಪೆಶಲ್ ಟ್ರೈನಿನಲ್ಲಿ ಶ್ರೀ ಜಗದ್ಗುರು ರಂಭಾಪುರೀ ಸಂಸ್ಥಾನದ ಶ್ರೀ ಪೀಠಕರ್ತರದರ್ಶನಾರ್ಥವಾಗಿ ದಯಮಾಡಿಸುವರೆಂದು ಕೇಳುತ್ತೇವೆ

ರಾಜಧಾನಿಯ ಅರಮನೆಯ ಸುತ್ತಲೂ ಕೋಟೆಯ ನಾಲ್ಕು ದಿಕ್ಕುಗಳಿಗೂ ಇರುವ ಹೆಬ್ಬಾಗಿಲುಗಳಲ್ಲಿ ಒಂದು ಹೆಬ್ಬಾಗಿಲಿಗೆ ಬಲರಾಮ ಎಂತಲೂ, ಮತ್ತೊಂದಕ್ಕೆ ಜಯರಾಮ ಎಂತಲೂ, ಇನ್ನೊಂದಕ್ಕೆ ಬ್ರಹ್ಮಪುರಿ ಎಂತಲೂ, ಮತ್ತೊಂದಕ್ಕೆ ವರಾಹ ಎಂತಲೂ, ನೂತನವಾಗಿ ಕಟ್ಟಿರುವದಕ್ಕೆ ಜಯಮಾರ್ತಾಂಡ ಎಂತಲೂ ನಾಮಕರಣಗಳು ಮಾಡಲ್ಪಟ್ಟು ಅಲ್ಲಲ್ಲಿ ಬೋರ್ಡುಗಳು ಹಾಕಲ್ಪಟ್ಟವೆ.

ರಾಜಧಾನಿಯಲ್ಲಿ ಸುಪ್ರಸಿದ್ಧ ಆಸ್ಥಾನ ಸಂಗೀತ ವಿದ್ವಾಂಸರಾದ ಮ॥ ರಾ॥ ಸುಂದರಶಾಸ್ತ್ರಿಗಳು ತಮ್ಮ ವಾರ್ಧಕಾವಸ್ಥೆಯಿಂದ ಕೆಲವು ದಿವಸ ಅಸ್ವಸ್ಥರಾಗಿದ್ದು ನಾಲ್ಕಾರು ದಿವಸಗಳ ಹಿಂದೆ ವಿಧಿವಶರಾದರೆಂಬ ವಿಷಯವು ವಿಷಾದಜನಕವಾಗಿದೆ ಇವರು ಸಂಗೀತ ಶಾಸ್ತ್ರದ ಲಕ್ಷ್ಯಲಕ್ಷಣವನ್ನು ಚೆನ್ನಾಗಿ ತಿಳಿದವರಾಗಿದ್ದರು ಈಗಿನಕಾಲದಲ್ಲಿ ಇಂಥ ಪ್ರಾಮಾಣಿಕಪಂಡಿತರು ನಮ್ಮ ಭರತಭೂಮಿಯಲ್ಲಿ ಜನ್ಮವನ್ನೆತ್ತುವದು ದುರ್ಲಭವೇ ಸರಿ

ಕಳೆದ ಗುರುವಾರ ದಿವಸ ಮಧ್ಯಾಹ್ನ ರಾಜಧಾನಿಯ ಕೋಟೆಯ ಹಿಂಭಾಗದ ಮಾರಮ್ಮನ ಗುಡಿ ಮುಂಭಾಗದ ರೋಡಿನಲ್ಲಿ ಸೆಂಟ್ ಫಿಲೋಮಿನ ಚರ್ಚಿನಲ್ಲಿ ಕಂಟ್ರಾಕ್ಟರಾಗಿರುವ ಶ್ರೀ॥ ಪುಟ್ಟಸ್ವಾಮಿಯವರ ಮೋಟಾರು ಸೈಕಲ್ಲಿಗೂ ಮಾಜಿ ಪೋಲೀಸ್ ನೌಕರರಾದ ಶ್ರೀ॥ ಹೊನ್ನಪ್ಪನವರ ಗಾಡಿಗೂ ತಾಕುಬಡಿದು ಉಭಯರಿಗೂ ಸ್ವಲ್ಪ ಜಖಂ ಆಗಿ ಕುದುರೆಯು ಮಾತ್ರ ಸತ್ತುಹೋಯಿತು ಜಟಕಾದಲ್ಲಿ ಕುಳಿತಿದ್ದವರು ಸುಖವಾಗಿರುವರು

ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿ ನಿವಾಸಿ ಸಾಬ್ಜಾನ್ ಎಂಬ ಮುಹಮ್ಮದೀಯ ಯುವಕನು ಕಳೆದ ತಾ॥ 19 ನೇ ಮಂಗಳವಾರ ಅದೇ ಊರಿನ ಹೋಟೇಲ್ ಮಾಲೀಕನಾದ ರಾಮಕೃಷ್ಣಪ್ಪನ ಹನ್ನೆರಡು ವರ್ಷದ ಮೈನರ್ ಹುಡುಗಿಯನ್ನು ಅಪಹರಿಸಿಕೊಂಡು ಹೋಗಿದ್ದನೆಂದೂ, ಇವನನ್ನು ಕಳೆದ ಗುರುವಾರ ಬೆಂಗಳೂರಿನಲ್ಲಿ ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆಂದೂ. ದೇವನಹಳ್ಳಿ ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರ್ ಮ॥ ಶಾಮಅಯ್ಯಂಗಾರರವರು ತನಿಖೆ ಕ್ರಮ ನಡೆಸುತ್ತಿದ್ದಾರೆಂದೂ ತಿಳಿದುಬಂದಿದೆ.

ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಗಾಗಿ ಧನಿಕರು ದ್ರವ್ಯ ಸಹಾಯಮಾಡಬೇಕೆಂದೂ, ಹಣ ಒದಗುವವರೆಗೆ ಉಪವಾಸವ್ರತವನ್ನು ಆಚರಿಸುತ್ತೇನೆಂದೂ ಸಂಕಲ್ಪಿಸಿ ಮ॥ ತಗಡೂರು ರಾಮಚಂದ್ರರಾಯರು ಬೆಂಗಳೂರಿನಲ್ಲಿ ಒಂಭತ್ತು ದಿನಗಳು ಉಪವಾಸ ಮಾಡಲು ಆ ಊರಿನ ಕೆಲವು ಮಹನೀಯರು ತಾವು ಚಂದಾ ಎತ್ತಿ ಸುಮಾರು 3,00 ರೂಪಾಯಿ ಕೂಡಿಸಿಕೊಡುತ್ತೇವೆಂದು ಮ॥ ರಾಮಚಂದ್ರರಾಯರಿಗೆ ವಚನ ಕೊಡಲು ಅವರು ಕಳೆದ ಸೋಮವಾರ ತಮ್ಮ ವ್ರತವನ್ನು ನಿಲ್ಲಿಸಿದರೆಂದೂ, ಈ ಉಪವಾಸವನ್ನು ಮಹಾತ್ಮಾ ಗಾಂಧಿಯವರು ಖಂಡಿಸಿರುತ್ತಾರೆಂದೂ ತಿಳಿದುಬಂದಿದೆ

ನಂಜನಗೂಡು ಕರ್ನಾಟಕ ಸಂಘದ ಮೂರನೆಯ ಅಧಿವೇಶನದ ಆಶ್ರಯದಲ್ಲಿ ತತ್ವಶಾಸ್ತ್ರ ಮಹಾಸಭೆಯು ಮೊದಲೇ ನಿರ್ಧರಿಸಿದಂತೆ ಕಳೆದ 30 ನೆಯ ತಾರೀಖು ಶನಿವಾರದಿಂದ ಶ್ರೀಮಾನ್ ಎ ಸುಬ್ರಹ್ಮಣ್ಯಯ್ಯರ್ ಬಿ ಎ ರವರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಟೌನ್‌ಹಾಲಿನಲ್ಲಿ ಪ್ರಾರಂಭವಾಗಿರುವದು ಈ ತಿಂಗಳು ತಾ॥ 3 ನೇ ಬುಧವಾರದವರೆಗೂ ನಡೆಯುತ್ತದೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ, ಜೈನಸಿದ್ಧಾಂತ, ಇಸ್ಲಾಂ ಮುಂತಾದ ಸಕಲ ಮತತತ್ವಗಳನ್ನು ತಿಳಿದ ಆಯಾಯಮತದ ವಿದ್ವಾಂಸರುಗಳು ಭಾಷಣ ಮಾಡುವರು ಪ್ರತಿಯೊಂದು ಭಾಷಣಾಂತದಲ್ಲಿ ಪ್ರತಿದಿವಸವೂ ವಿದ್ವಾಂಸರ ಗಾನಾಲಾಪಗಳು ನಡೆಯುತ್ತಲಿವೆ

ವರ್ತಮಾನಸಂಗ್ರಹ.

ಬೋಗ್ರಾ ಪ್ರಾಂತದ ಒಂದು ಹಳ್ಳಿಯಲ್ಲಿ ಒಂದು ಪ್ರಾಚೀನ ದೇವಾಲಯವು ದೊರಕಿದೆ ಅದು ಆರನೆಯ ಶತಮಾನದ್ದೆಂದು ನಿರ್ಧರಿಸಲಾಗಿದೆ

ರಷ್ಯದಲ್ಲಿ ಗುಪ್ತಚಾರರ ಪ್ರಚಾರಕರೆಂಬ ಸಂಶಯದಿಂದ ಲೆನಿನ್‌ಗ್ರೇಡಿನಲ್ಲಿ ಸುಮಾರು 1 ಸಾವಿರಕ್ಕೂ ಹೆಚ್ಚು ಕೈದುಗಳಾಗಿವೆ ಇದರಲ್ಲಿ ೪೭ ಮಂದಿ ಮಾಜಿ ರಾಜಕುಮಾರರೂ, 33 ಮಂದಿ ಕೌಂಟರೂ, ೭೦ ಮಂದಿ ಬೇರನರೂ, ೯00 ಮಂದಿ ಮಾಜಿ ಜನರಲರೂ, ಇತರ ಆಪೀಸರರೂ ಇದ್ದಾರೆ

ಫ್ರಾನ್ಸಿನಲ್ಲಿ ಒಂದು ಹೊಸ ಮೋಟಾರ್‌ಕಾರ್ ತಯಾರಾಗಿ ಇಂಗ್ಲೆಂಡಿಗೆ ಪರೀಕ್ಷಾರ್ಥವಾಗಿ ಬಂದಿದೆ ಇದೊಂದು ಚಿಕ್ಕ ರೈಲಿನ ಆಕಾರದಲ್ಲಿದೆ ನೀಳವಾಗಿದೆ ಇದರ ವೇಗತೆ ಗಂಟೆಗೆ ೮೦ ಮೈಲು ಅಲ್ಲದೆ, ಇಟಲಿಯಲ್ಲಿ ಗಂಟೆಗೆ ೩೦೦ ಮೈಲು ವೇಗವುಳ್ಳ ಒಂದು ಹೊಸ ಕಾರೂ ತಯಾರಾಗುತ್ತಿದೆ

ಹೆಜಾಜಿನ ಅರಸರಾದ ಇಬ್ನ ಸಾದೂರವರೂ, ಯುವರಾಜರಾದ ಅಮೀರ್ ಸಾದೂರವರೂ ಮಕ್ಕದ ಮಸೀದಿಯಲ್ಲಿ ಕಾಬಾವನ್ನು ಸಂದರ್ಶಿಸಲು ಬಂದಿದ್ದಾಗ, ಕೆಲವುಮಂದಿ ದುಷ್ಟರು ನುಗ್ಗಿ ಅವರನ್ನು ಇರಿದು ಕೊಲ್ಲಲೆತ್ನಿಸಲು ಆ ಪ್ರಯತ್ನವು ವಿಫಲವಾಗಿ ಕೊನೆಗೆ ಕೊಲೆಗಡುಕರೇ ಅಂಗರಕ್ಷಕರ ಗುಂಡಿನೇಟಿನಿಂದ ಮೃತರಾದರೆಂದು ತಿಳಿಯಬಂದಿದೆ

ಟೋಕಿಯೋ ಸಮೀಪದಲ್ಲಿ ಬಹಳವಾಗಿ ಚಿಕ್ಕ ಪುಟ್ಟ ಕಳ್ಳತನಗಳು ನಡೆಯುತ್ತಿದ್ದುವು ಏನು ಮಾಡಿದರೂ ಕಳ್ಳರ ಪತ್ತೆಯಿಲ್ಲ ಹೀಗಿರುವಲ್ಲಿ ಸಿಂಚಿ ಓಯಮ್ ಎಂಬವನೂ ಅವನ ಹೆಂಡತಿಯೂ ಸೇರಿ ಕಳ್ಳರನ್ನು ನಿರ್ಧರಿಸಲು ದೇವಸ್ಥಾನದಲ್ಲಿ ಓಟು ತೆಗೆಯೋಣ ಎಂದರು ಹಾಗೆ ಓಟು ತೆಗೆದಾಗ ಬಹು ಸಂಖ್ಯೆಯ ಓಟುಗಳು ಸಿಂಚಿ ಓಯಮ್ ಮತ್ತೂ ಅವನ ಹೆಂಡತಿಗೆ ದೊರಕಿ ಅವರೇ ಕಳ್ಳರೆಂದು ಗೊತ್ತುಮಾಡಲಾಯಿತು

ಬರೋಡ ಸಂಸ್ಥಾನಕ್ಕೆ ಸೇರಿದ ಮೇದ ಎಂಬ ಗ್ರಾಮಕ್ಕೆ ಸುಮಾರು ೨೦ ಮಂದಿ ಸಶಸ್ತ್ರ ದರೋಡೆಕೋರರು ನುಗ್ಗಿ ಊರನ್ನು ಕೊಳ್ಳೆ ಹೊಡೆದರು ಹಳ್ಳಿಗರ ಮೇಲೆ ಚಕ್ರಾಯುಧ ಪ್ರಯೋಗಮಾಡಿದರು ಕೂಡಲೆ ಗ್ರಾಮಿಣವರು ದರೋಡೆಕೋರರನ್ನು ಮುತ್ತಿ, ಹೊಡೆದಾಟಕ್ಕೆ ಪ್ರಾರಂಭಿಸಿದರು. ಮೂವರು ಢಕಾಯಿತರೂ ಮತ್ತು ನಾಲ್ವರು ಗ್ರಾಮಸ್ಥರೂ ಸತ್ತರು. ಉಳಿದ ಕಳ್ಳರು ಫರಾರಿಯಾದರು. ಬರೋಡ ಪೋಲೀಸರು ಈಗ ಆ ಗ್ರಾಮಕ್ಕೆ ಬಂದು ತನಿಖೆ ನಡೆಯಿಸುತ್ತಿದ್ದಾರೆ.

ಮಿದುಳಿನ ಜ್ವರ.

'ಸೆರಿಬ್ರಲ್ ಸ್ಪೈನಲ್ ಫೀವರ್' (ಮಸ್ತಿಷ್ಕ, ಬೆನ್ನಲವುಗಳಿಗೆ ಸಂಬಂಧಪಟ್ಟ ಜ್ವರ) ಎಂಬುದು ೧೦ ಮಂದಿಗೆ ಕಾಣಿಸಿಕೊಂಡುದನ್ನು ಬೇರಾ ಇಸ್ಮೇಲ್ ಖಾನಿನಲ್ಲಿ ಕಂಡುಹಿಡಿಯಲಾಯಿತು. ಅವರಲ್ಲಿ ೪ ಮಂದಿ ಪ್ರಾಣ ಬಿಟ್ಟರೆಂದು ವರದಿ ಬಂದಿದೆ.

ಜರ್ಮನಿಯ ಹೊಸ ಕ್ಯಾಲೆಂಡರು.

ಜರ್ಮನಿಯ ನಾಜಿ ವ್ಯವಸಾಯ ಮಂತ್ರಿಗಳು ಹೊಸ ಮಾದರಿ ಕ್ಯಾಲೆಂಡರನ್ನು ಹೊರಡಿಸಿರುತ್ತಾರೆ. ಇದರಲ್ಲಿ ಕ್ರಿಶ್ಚಿಯನ್ ಹಬ್ಬಗಳನ್ನೆಲ್ಲಾ ಬಿಟ್ಟು ಅದಕ್ಕೆ ಬದಲಾಗಿ ಪೂರ್ವದ ಸ್ಯಾಕ್ಸನರ ಕಾಲದ ಚರಿತ್ರಾರ್ಹವಿಷಯಗಳನ್ನು ಜ್ಞಾಪಕ ಕೊಡುವ ದಿನಾಚರಣೆಗಳನ್ನು ನಮೂದಿಸಿದ್ದಾರೆ ಇದರಿಂದ ಅಲ್ಲಿನ ಕ್ಯಾಥೊಲಿಕ್ ಕ್ರೈಸ್ತ ಸಂಗಡದವರಿಗೆ ತುಂಬಾ ಅಸಮಾಧಾನವಾಗಿರುತ್ತದೆ

ಸತ್ತು 3 ದಿನದ ಮೇಲೆ ಬದುಕಿದಳು.

ಆಫ್ಘನಿಸ್ಥಾನದ ಹೆಂಗಸೊಬ್ಬಳು ಮರಣ ಹೊಂದಿ ಹೋಲ್ಪಟ್ಟ ಮೂರುದಿನಗಳ ಮೇಲೆ ಬಂಧುವರ್ಗದವರಲ್ಲೊಬ್ಬನು ಮೃತಳ ಆತ್ಮ ಶಾಂತಿಗಾಗಿ ಕುರಾನ್ ನನ್ನು ಪಠಿಸಲು ಗೋರಿಯಬಳಿಗೆ ಹೋದಾಗ ಒಳಗಿನಿಂದ ಕೇಳಬಂದ ಶಬ್ದವನ್ನು ಕೇಳಿ ಹೆದರಿ ಹಳ್ಳಿಗೆ ಹೋಗಿ ಇತರರಿಗೆ ತಿಳಿಸಲು ಅವರು ಈ ಆಶ್ಚರ್ಯ ವಿಷಯವನ್ನು ಪರಿಶೀಲಿಸಲು ಸಮಾಧಿಯನ್ನು ಅಗೆಯಲು ಮೃತಳು ಜೀವಂತಳಾಗಿ ಹೊರಗೆ ಬಂದಳು

ದಾದಿಯ ದಾನ.

ಮೇಲ್ಬೋರ್ನ್ ಆಸ್ಪತ್ರೆಯ ಎಲಿಜಬೆತ್‌ಕೆನ್ನಿ ಎಂಬ ದಾದಿಯು ಅವಳಿಗೆ ತಿಳಿದಿದ್ದ ಮಕ್ಕಳ ಪಾರ್ಶ್ವವಾಯುಗಳನ್ನು ಗುಣಪಡಿಸುವ ಔಷಧವನ್ನು ಹೇಳಿಕೊಟ್ಟರೆ ೨0 ಸಾವಿರ ಪೌಂಡು ಕೊಡುವುದಾಗಿ ಕೇಳಿದವರಿಗೆಲ್ಲಾ 'ಬಡವರಿಗೆ ಉಪಕಾರವಾಗಬೇಕೇ ವಿನಹಾ ಅದನ್ನು ನಾನು ಮಾರುವದಿಲ್ಲ' ಎಂದು ಹೇಳಿ ಅದನ್ನು ಅಲ್ಲಿಯ ಸಾರ್ವಜನಿಕ ಸರ್ಕಾರಕ್ಕೆ ದಾನವಾಗಿ ಕೊಟ್ಟಿರುತ್ತಾಳೆ ಈ ಔಷಧವನ್ನು ಉಪಯೋಗಿಸಿದ ಕಡೆಯೆಲ್ಲಾ ಗುಣವಾಗುತ್ತಿದೆ.

ದ್ರವಿಸುವ ವಿಚಿತ್ರ ಚಿತ್ರಪಟ.

ಅಲೆಕ್ಸಾಂಡ್ರಿಯದಲ್ಲಿ ಕ್ರಿಸ್ತನನ್ನು ಎತ್ತಿಕೊಂಡಿರುವ ಮೇರಿಯ ಒಂದು ಚಿತ್ರವಿರುವುದಂತೆ ಇದರಿಂದ ಆಗಾಗ್ಗೆ ನೀರು ದ್ರವಿಸುವುದಂತೆ ಈ ನೀರಿನಿಂದ ಅನೇಕರ ವ್ಯಾಧಿಗಳು ಗುಣವಾಗುತ್ತದೆಂದು ತಿಳಿದು ನೂರಾರು ಜನರು ಇಲ್ಲಿ ಬಂದು ಸೇರುತ್ತಿದ್ದಾರೆ ಸರ್ಕಾರದವರು ಇದರ ನಿಜಸ್ಥಿತಿಯನ್ನು ತಿಳಿಯಲು ಕಳುಹಿಸಿದ್ದ ಪತ್ತೇದಾರನು ಪಟವನ್ನು ಬಟ್ಟೆಯಿಂದ ಚೆನ್ನಾಗಿ ಶುದ್ಧಿ ಮಾಡಿದಾಗ್ಯೂ ಸ್ವಲ್ಪ ಹೊತ್ತಿಗೆ ಎಂದಿನಂತೆ ನೀರು ಬರುವುದಕ್ಕೆ ಮೊದಲಾಯಿತು. ಕಾರಣ ತಿಳಿಯದೇ ಎಲ್ಲರೂ ಆಶ್ಚರ್ಯಗೊಂಡಿದ್ದಾರೆ

ಪ್ರಪಂಚದಲ್ಲೆಲ್ಲ ದೊಡ್ಡ ಗಡಿಯಾರ

ಈಗ ಇರುವ ಬಿಗ್‌ಬೆನ್ ಗಡಿಯಾರಕ್ಕೆ 6 ರಷ್ಟು ದೊಡ್ಡ ಗಡಿಯಾರವನ್ನು ಮಾಂಟ್ರಿಲ್ ನಗರದ ಭಟ್ಟಿಇಳಿಸುವ ಕಾರ್ಖಾನೆಯ 60 ಅಡಿ ಎತ್ತರದ ಶಿಖರದ ಮೇಲೆ ಇಡುವರು. ಇದರ ಮುಖಗಳು 60 ಅಡಿ ಅಗಲವಿದ್ದು 10 ಮೈಲು ದೂರದವರೆಗೂ ಇದರ ಗಂಟೆಗಳು ಕಾಣಬರುತ್ತವಂತೆ. ಇದರ ಮಿನಿಟ್ ತೂಕ ೬ ಟನ್ನು ನಿಮಿಷ ತೋರಿಸುವ ಮುಳ್ಳಿನ ಉದ್ದ 30 ಅಡಿ, ತೂಕ 2500 ಪೌಂಡು, ಗಂಟೆ ತೋರಿಸುವ ಮುಳ್ಳು 30 ಅಡಿ ಉದ್ದ, ಇಂಥಾಭಾರಿ ಗಡಿಯಾರದ ಬಿಡಿಭಾಗಗಳು ಇಂಗ್ಲೆಂಡಿನಲ್ಲಿಯೂ ಇತರ ಭಾಗಗಳು ಅಮೇರಿಕದ ಕೆನಡಾದಲ್ಲಿಯೂ ತಯಾರಾಗುತ್ತಿವೆ.

ನಮಃ ಶಿವಜಗದ್ಗುರುಭ್ಯಃ

ಏಕೇಶ್ವರೀಭಕ್ತಿ.

(ಹಿಂದಿನಿಂದ ಮುಂದೆ ಸಾಗಿದುದು)

ಈಶ್ವರಃ ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ | ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ | ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ ||೯||

(ಭಗವದ್ಗೀತಾ ೧೮ ಅ.)

ಎಲೈ ಅರ್ಜುನನೇ! ಹೃದಯದಲ್ಲಿ ಸರ್ವ ಭೂತಗಳಿಗೂ ಒಡೆಯನಾದವನಿದ್ದಾನೆ. ಸರ್ವ ಪ್ರಕಾರದಿಂದ ಆತನನ್ನೇ ಶರಣುಹೊಂದು. ಎಲೈ ಅರ್ಜುನನೇ! ಆತನ ಅನುಗ್ರಹದಿಂದ ಶ್ರೇಷ್ಠವಾದ ಶಾಂತಿಯನ್ನೂ ಶಾಶ್ವತವಾದ ಸ್ಥಾನವನ್ನೂ ಹೊಂದುವಿ, ಎಂದು ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸುತ್ತಾನೆ.

ಈಶ್ವರ ಎಂಬ ಶಬ್ದವು ಶಿವನೊಬ್ಬನಿಗೆ ವಾಚಕ ಎಂಬರ್ಥವನ್ನು ಕೊಡುವದಲ್ಲದೆ ಕೇವಲ ವಿಷ್ಣುವಿ ನಲ್ಲಿಯೇ ಅನ್ವಯಿಸದೆ, ಸರ್ವದೇವತೆಗಳಲ್ಲಿಯೂ ಈ ಈಶ್ವರ ಶಬ್ದವು ಅನ್ವಯಿಸುತ್ತದೆ ಎಂದು ಕೆಲವರನ್ನಬಹುದು. ಈಶ್ವರ ಎಂಬ ಶಬ್ದವು ಶಿವನನ್ನೇ ಬೋಧಿಸುವದಲ್ಲದೆ, ಇತರರನ್ನು ಬೋಧಿಸುವದಿಲ್ಲ. ಕಾರಣ— 'ಈಶ್ವರಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ' ಎಂದು ಶಿವನ ಪರವಾಗಿ ಹೇಳಲ್ಪಡಲ್ಪಟ್ಟಿದೆ ಅಮರಸಿಂಹನೂ ಕೂಡ— 'ಈಶ್ವರಃ ಸರ್ವ ಈಶಾನಃ ಶಂಕರಶ್ಚಂದ್ರಶೇಖರಃ' ಎಂದು ಹೇಳಿರುವದರಿಂದಲೂ ಈಶ್ವರ ಪದವು ಶಿವನನ್ನೇ ಬೋಧಿಸುವದು.

ಮಯಾಪರ್ಷಸಹಸ್ರಾಂತಂ ಸಹಸ್ರಾಬ್ಧೈಸ್ತಥಾಸ್ತಥಂ | ಭಕ್ತ್ಯಾ ಸಂಪೂಜಿತೋऽಪೀಶ ಪಾದೋ ನೋದರ್ಶಿತಸ್ತ್ವಯಾ ||೧೪||

(ಪದ್ಮಪುರಾಣ ಪಾತಾಳ ೭೯, ೨೯೬)

ಸಾವಿರಾರು ವರ್ಷ ಪರ್ಯಂತರ ಸಾವಿರಾರು ಕಮಲಗಳಿಂದ ಭಕ್ತಿ ಪುರಃಸರ ಪೂಜಿಸಲ್ಪಟ್ಟರೂ, ಎಲೈ ಈಶ್ವರನೇ! ನೀನು ನನಗೆ ಪಾದವನ್ನು ತೋರಿಸಲಿಲ್ಲ ಎಂದು ವಿಷ್ಣುಮೂರ್ತಿಯು ತನ್ನ ಕ್ಲೇಶವನ್ನು ತೋರ್ಪಡಿಸಿದ್ದಾನೆ.

ಗಮಿಷ್ಯಾಮ್ಯಹಮದ್ಯೈವ ದ್ರಷ್ಟುಂ ಶಂಕರಮವ್ಯಯಂ | ಪಚತೋ ಪಾಸ್ಯತೇ ಪುತ್ರಂ ತೋಷಿತಸ್ತಪಸಾ ಮಯಾ ||೧೫||

(ಮಹಾಭಾರತ ಖಿಲಪರ್ವ, ಹರಿವಂಶ, ಭವಿಷ್ಯಾಂತರ್ಗತ ಕೈಲಾಸಯಾತ್ರೆಯ ೭೩ ಅಧ್ಯಾಯ)

ಇಷ್ಟು ದಿವಸಗಳಾದರೂ ನಮಗೆ ಪುತ್ರಸೌಭಾಗ್ಯವಿಲ್ಲ. 'ಅಪುತ್ರಸ್ಯ ಗತಿರ್ನಾಸ್ತಿ' ಎನ್ನುವಂತೆ ನಮಗೆ ಗತಿ ಇಲ್ಲದಕಾರಣ ಮುಂದೇನು ಸ್ಥಿತಿಯೆಂದು ಪ್ರಾರ್ಥಿಸುವ ರುಕ್ಮಿಣಿಯನ್ನು ಕುರಿತು ಶ್ರೀ ವಿಷ್ಣುವು ಹೇಳುವುದೇನೆಂದರೆ— ನಾಶರಹಿತನಾದ ಶಂಕರನನ್ನು ಸಂದರ್ಶಿಸುವದಕ್ಕೋಸ್ಕರ ನಾನು ಈಗಲೇ ಹೋಗುತ್ತೇನೆ. ತಪಸ್ಸಿಂದ ಸಂತೋಷಗೊಳಿಸುತ್ತೇನೆ. ಶಿವನು ನನಗೆ ಪುತ್ರನನ್ನು ದಯಪಾಲಿಸುವನು.

ತಪಸಾತ್ಯೇಕವರ್ಷೇಣ ದೃಷ್ಟ್ವಾದೇವಂ ಮಹೇಶ್ವರಂ| ಸಾಂಬಂ ನಗಣಮವ್ಯಗ್ರಂ ಲಬ್ಧವಾನ್ ಪುತ್ರಮಾತ್ಮನಃ ||೧೬||

(ಲಿಂಗಪುರಾಣ ಪೂರ್ವಾರ್ಧ ೧೦೮. ೯)

ಶ್ರೀ ವಿಷ್ಣುಮೂರ್ತಿಯು ಒಂದು ವರ್ಷ ಘೋರ ತಪಸ್ಸಿನಿಂದ ದೇವನಾದ ಮಹೇಶ್ವರನನ್ನು ನೋಡಿ, ತನಗೆ ಸಮಾನನಾದ ಯೋಗ್ಯನಾದ ಸಾಂಬನೆಂಬುವ ಪುತ್ರನನ್ನು ಹೊಂದಿದನು. ಸಾಂಬನ (ಅಂಬಯಾ-ಪಾರ್ವತ್ಯಾ-ಸಹಿತಃ ಸಾಂಬಃ) ವರದಿಂದ ಹುಟ್ಟಿದ ಪುತ್ರನಿಗೆ ಸಾಂಬನೆಂದೇ ಹೆಸರಿಟ್ಟು ಪ್ರೀತಿಸುತ್ತಿದ್ದನು.

ಮಹಾದೇವಂ ವಿನಾ ಯೋ ಮಾಂ ಭಜತೇ ಶ್ರದ್ಧಯಾನ್ವಿತಃ | ನಾಸ್ತಿ ತಸ್ಯ ವಿನಿರ್ಮೋಕ್ಷಃ ಸಂಸಾರಾಜ್ಜನ್ಮಕೋಟಿಭಿಃ ||೮||

(ಸ್ಕಂದಪುರಾಣಾಂತರ್ಗತ ಸೂತಸಂಹಿತೆಯ ಯಜ್ಞವೈಭವಖಂಡದ ೨ ನೇ ಅಧ್ಯಾಯ ೫೩ ಶ್ಲೋಕ)

ಮಹಾದೇವನನ್ನು ಬಿಟ್ಟು ಯಾವನು ನನ್ನನ್ನು ಭಕ್ತಿಯುಕ್ತನಾಗಿ ಭಜಿಸುತ್ತಾನೆಯೋ ಕೋಟಿಜನ್ಮಗಳನ್ನು ತಾಳಿದರೂ ಅವನಿಗೆ ಈ ಸಂಸಾರದಿಂದ ಮೋಕ್ಷವು ಆಗದು. (ಸಿಗುವದಿಲ್ಲ) ಈ ಪ್ರಕಾರವಾಗಿ ವಿಷ್ಣುವು ಮುಮುಕ್ಷುವಾದ ಸುದಾಮನಿಗೆ ಬೋಧಿಸಿದನು. ಅನಂತರ ಆ ಸುದಾಮನು ಕೇದಾರೇಶ್ವರನ ಸ್ಮರಣೆಯಿಂದ ಮೋಕ್ಷವನ್ನು ಹೊಂದಿದನು.

ವೃಕ್ಷಮೂಲಸ್ಯ ಸೇಕೇನ ಶಾಖಾಃ ಪುಷ್ಯಂತಿ ವೈ ಯಥಾ | ಶಿವಸ್ಯಪೂಜಯಾ ತದ್ವತ್ ಪುಷ್ಯತ್ಯಸ್ಯ ವಪುರ್ಜಗತ್ ||೮||

ಗಿಡದ ಬುಡಕ್ಕೆ ನೀರೆರೆಯುವದರಿಂದ ಟೊಂಗೆಗಳೆಲ್ಲಾ ಹೇಗೆ ವೃದ್ಧಿಯನ್ನು ಹೊಂದುವವೋ? ಹಾಗೆ ಶಿವನ ಪೂಜೆಯಿಂದ ಪರಮಾತ್ಮನ ಶರೀರವಾದ ಈ ಜಗತ್ತು ವೃದ್ಧಿ ಹೊಂದುತ್ತದೆ.

ಮಹಾದೇವ ಮಹಾದೇವ ಮಹಾದೇವೇತಿಕೀರ್ತನಾತ್ | ಪಶ್ಚಾಂ ಗೌರಿವ ಗೌರೀಶೋ ಧಾವಂತಮನುಧಾವತಿ ||೧೮||

ಮಹಾದೇವ, ಮಹಾದೇವ, ಮಹಾದೇವ ಎಂದು ಯಾರು ಸ್ತುತಿಸುವರೋ ತಾಯಿಯಾದ ಗೋವು ಮುಂದೋಡುವ ಕರುವನ್ನು ಹಿಂಬಾಲಿಸಿ ಓಡುವಂತೆ ಮಹಾದೇವನೂ ಅವರನ್ನು ಹಿಂಬಾಲಿಸುತ್ತಾನೆ. ಸರ್ವಸೌಖ್ಯಗಳನ್ನೂ ಕೊಡುತ್ತಾನೆ.

ಯಾವಯಾವ ಪದಾರ್ಥದಲ್ಲಿ ಯಾವಯಾವ ಶಕ್ತಿಯು ಹೇಳಲ್ಪಟ್ಟಿದೆಯೋ ಅದೆಲ್ಲವೂ ಸರ್ವೇಶ್ವರಿಯಾದ ಪಾರ್ವತಿಯು. ಆಯಾಪದಾರ್ಥಗಳೆಲ್ಲವೂ ಮಹೇಶ್ವರನು.

ನಾರ್ಚಯೇದನ್ಯದೇವಾಂಸ್ತು ನ ಸ್ಮರೇನ್ನಚ ಕೀರ್ತಯೇತ್ | ನ ತನ್ನಿವೇದ್ಯಮಶ್ನೀಯಾಚ್ಛಿವ ಭಕ್ತೋ ದೃಢವ್ರತಃ ||೨೦||

ಯದ್ಗೃಹೇಷ್ವನ್ಯದೇವೋऽಸ್ತಿ ತದ್ಗೃಹಾಣಿಪರಿತ್ಯಜೇತ್ | ನಾನ್ಯದೇವಾರ್ಚಕಾನ್ಮರ್ತ್ಯಾನ್ ಪೂಜಾಕಾಲೇ ನಿರೀಕ್ಷಯೇತ್ ||೨೧||

(ಸಿದ್ಧಾಂತಶಿಖಾಮಣಿ ೯ ನೇ ಪರಿಚ್ಛೇದ ಶ್ಲೋಕ ೩೧ ೩೨)

ಶಿವನಲ್ಲಿ ದೃಢವಾದ ವ್ರತವುಳ್ಳ ವೀರಶೈವನು ಶಿವನ ಹೊರತು, ಇತರ ದೇವತೆಯ ಪೂಜೆಯನ್ನು ಮಾಡಬಾರದು. ಇತರ ದೇವತೆಯನ್ನು ಸ್ಮರಿಸಕೂಡದು, ಸ್ತುತಿಸಕೂಡದು ಮತ್ತು ಇತರ ದೇವತೆಗೆ ಅರ್ಪಿತವಾದ ಯಾವ ವಸ್ತುವನ್ನೂ ಭುಂಜಿಸಕೂಡದು, ಯಾವ ಮನೆಯಲ್ಲಿ ಶಿವನಹೊರತು ಇತರ ದೇವತೆಗಳಿರುವರೋ ಆ ಮನೆಯನ್ನೇ ಬಿಡಬೇಕು. ಶಿವಭಕ್ತನು, ಶಿವನ ಹೊರತು ಇತರ ದೇವತೆಗಳನ್ನು ಪೂಜಿಸುವ ಮಾನವರನ್ನು ಶಿವಪೂಜಾಸಮಯದಲ್ಲಿ ನೋಡಲಾಗದು ಹೀಗೆ ವೀರಶೈವ ಮತಸ್ಥಾಪಕರಾದ ಶ್ರೀಮದ್ಭಗವತ್ಪಾದ ಶ್ರೀ ೧೦೮ ಜಗದ್ಗುರು ರೇಣುಕಾಚಾರ್ಯರು, ಮುನಿಪುಂಗವನಾದ ಅಗಸ್ತ್ಯಮಹಾಯೋಗಿಗೆ ಬೋಧಿಸಿರುವರಲ್ಲದೆ.

ಪತಿಂ ವಿನಾ ಯಥಾ ಸ್ತ್ರೀಣಾಂ ಸೇವಾನ್ಯಸ್ಯತು ಗರ್ಹಿತಾ | ಶಿವಂ ವಿನಾ ತಥಾನ್ಯೇಷಾಂ ಸೇವಾ ನಿಂದಾತ್ಯತಾತ್ಮನಾಂ ||೨೨||

(ಸಿದ್ಧಾಂತ ಶಿಖಾಮಣಿ ಶೀಲಸಂಪಾದನಸ್ಥಲ ೧೩ ಪರಿಚ್ಛೇದ ಶ್ಲೋಕ ೬)

ಸ್ತ್ರೀಯರಿಗೆ ಪತಿಯ ಸೇವೆಯು ಹೊರತು ಇತರ ಪುರುಷರ ಸೇವೆಯು ಹೇಗೆ ಉಚಿತವಲ್ಲವೋ? ಹಾಗೆಯೇ ವೀರಶೈವರಿಗೆ ಶಿವನ ಹೊರತು ಇತರ ದೇವತೆಗಳ ಪೂಜಾದಿಗಳು ಉಚಿತವಲ್ಲವು. (ಪರಪುರುಷನ ಸೇವಾಸಕ್ತಳಿಗೆ ಇಹಪರಸೌಖ್ಯವು ಹೇಗೆ ಸಿಕ್ಕದೋ? ಹಾಗೆಯೇ ಶಿವವ್ಯತಿರಿಕ್ತದೇವತೆಗಳನ್ನು ಪೂಜಿಸುವ ವೀರಶೈವರಿಗೆ ಇಹಪರಗಳಲ್ಲಿ ಸೌಖ್ಯವಿಲ್ಲವೆಂದು ಬೋಧಿಸಿರುತ್ತಾರೆ. (ಸಶೇಷ).

ಶ್ರೀ ಪಟ್ಟಾಧ್ಯಕ್ಷ ಬೃಹನ್ಮಠ, ಹೋಟಗೀ.

ಶ್ರೀ ರೇಣುಕಾಚಾರ್ಯಾಯ ನಮಃ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ, ಬಳ್ಳಾರಿ.

ಇದೇ ಫಾಲ್ಗುಣ ಶುದ್ಧ ೧೪ ಸೋಮವಾರ ಬಳ್ಳಾರಿಯ ಸಕ್ಕರಿ ಕರಿಬಸ್ಸಪ್ಪನವರ ಚಾಳಿಯಲ್ಲಿರುವ ಗುರುನಿವಾಸ ಸ್ಕೂಲಿನ ವಿದ್ಯಾರ್ಥಿಗಳಿಂದ ಜಗದ್ಗುರು ರೇಣುಕಾಚಾರ್ಯರ ಜಯಂತಿಯು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಶಾಲಾಗೃಹವು ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟಿದ್ದಿತು. ಹತ್ತು ಘಂಟೆಗೆ ಸರಿಯಾಗಿ ಎಲ್ಲಾ ವಿದ್ಯಾರ್ಥಿಗಳು ರೇಣುಕಾಚಾರ್ಯರ ರಜತಮೂರ್ತಿಯನ್ನು ವೇದೋಕ್ತವಿಧಿಯಿಂದ ಅರ್ಚಿಸಿದರು. ಪ್ರೇಕ್ಷಕರು ಕಿಕ್ಕಿರಿದಿದ್ದರು ಎಲ್ಲಾ ಭಕ್ತಗಣವು ಪುಷ್ಪಫಲಾದಿಗಳನ್ನರ್ಪಿಸಿ ತಮ್ಮ ಭಕ್ತಿಯನ್ನು ವ್ಯಕ್ತಗೊಳಿಸಿದರು. ಆ ಮೇಲೆ ನಾಲ್ಕು ಘಂಟೆಯಿಂದ ಎಂಟು ಘಂಟೆಯವರೆಗೆ ಶ್ರೀ ರೇಣುಕಾಚಾರ್ಯರ ಚರಿತ್ರೆಯನ್ನು ಸಮಸ್ತ ಭಕ್ತಮಂಡಲಿಗೂ ಅರುಹಬೇಕೆಂಬ ಸದುದ್ದೇಶದಿಂದ ಸಭೆಯನ್ನು ಕೂಡಿಸಿದ್ದರು. ಊರೊಳಗಿನ ಅನೇಕ ಜನರು ಸಭೆಗೆ ಆಗಮಿಸಿದ್ದರು. ಇಲ್ಲಿಯ ವಿದ್ಯಾರ್ಥಿಗಳ ಪ್ರಾರ್ಥನೆಯ ಮೇರೆಗೆ ಪಂಡಿತ ಸೋಮಶೇಖರಶಾಸ್ತ್ರಿಗಳು ಅಧ್ಯಕ್ಷತೆಯನ್ನು ವಹಿಸಿದ್ದರಿಂದ ಸಭೆಗೆ ಒಂದು ವಿಧವಾದ ಮನೋಹರತ್ವವು ಪ್ರಾಪ್ತವಾಗಿದ್ದಿತು. ಅಧ್ಯಕ್ಷರ ಪ್ರಾರಂಭ ಭಾಷಣೆಯಾದನಂತರದಲ್ಲಿ ಬೈರಾಪುರದ ಶಿತಿಕಂಠಶಾಸ್ತ್ರಿಗಳು ಜಯಂತಿ ಅಂದರೇನು? ಅದನ್ನು ಮಾಡುವದರಿಂದ ನಮಗೇನು ಪ್ರಯೋಜನವು ಎಂಬ ವಿಷಯವನ್ನು ಅತಿವಿಶದವಾಗಿ ಹೇಳಿದ್ದಲ್ಲದೆ 'ಕುಲಾಚಾರಯುತಶ್ಚಾರ್ಯಃ ಶುಚಿತ್ವೇಲಾದಿ ವರ್ಣನಂ | ಕ್ರಿಯತೇऽನೇಕರೂಪಂ ಯತ್ರದೇವ ಬಹುಸಮ್ಮತಂ || ಅಥವಾ ಪ್ರತಿಸಕ್ತಸ್ಯ ವರ್ಣಯಿತ್ವಾಗುಣಾನ್ ಬಹೂನ್ ತಜ್ಜಯಾನ್ತಾ ಯತೋತ್ಸರ್ಪವರ್ಣನಂಚ ಮತಂ ಕೃತಂ' ಎಂಬ ವರ್ಣನಾವಿಧಿಯನ್ನು ಅನುಸರಿಸಿ ಅನ್ಯ ನೋಡಲಾದವರ ಗುಣಾತಿಶಯಗಳನ್ನು ವರ್ಣಿಸಿ ಆ ಮೇಲೆ ಇಂಥಾ ಮಹದ್ಗುಣವಿಶಿಷ್ಟರಿಗೆ ರೇಣುಕಾಚಾರ್ಯರು ಶಿವಾದ್ವೈತವನ್ನು ಬೋಧಿಸಿ ಲಿಂಗಸ್ವದಾನವನ್ನು ಮಾಡಿ ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರೆಂದು ಸ್ವಾರಸ್ಯವಾಗಿ ಹೇಳಿದರು.

ಆ ಮೇಲೆ ಇದೇ ಸ್ಕೂಲಿನ ಮುಖ್ಯ ಪಂಡಿತರಾದ ಕೆ. ಹಯಗ್ರೀವಾಚಾರ್ಯ ನ್ಯಾಯಶಿರೋಮಣಿ ಇವರು ಮೋಕ್ಷವೆಂದರೇನು? ವೀರಶೈವರು ಯಾವುದನ್ನು ಮೋಕ್ಷವೆಂದು ಹೇಳುವರು. ಅದರ ಸಂಘಟನೆಯು ಹೇಗೆ ಎಂಬ ವಿಷಯವನ್ನು ಶಾಸ್ತ್ರೀಯಗಳಾದ ಯುಕ್ತಿಯುಕ್ತವಚನಗಳಿಂದ ಸರ್ವಜನಮನೋನಂದವಾಗುವಂತೆ ಬೋಧಿಸಿದರು. ಇವರ ಭಾಷಣಾನಂತರದಲ್ಲಿ ಶ್ರೀ ಎಂ. ಸೊಗವೀರಶರ್ಮ ಇವರು ಗುರುವಿಷಯವಾಗಿ ಭಾಷಣೆಯನ್ನು ಮಾಡುತ್ತಾ, ಯಾವ ಮತವೇ ಆಗಲಿ ವೃದ್ಧಿಯನ್ನು ಹೊಂದಬೇಕಾದರೆ ಆ ಆ ಮತದ ಗುರುಗಳೇ ಮೂಲಕಾರಣರಾಗಿರುವರಾದ್ದರಿಂದ ಈ ಮತದ ಮುಖ್ಯ ಗುರುಗಳಾದ ಗುರುವರ್ಗದ ಮಠಾಧಿಕಾರಿಗಳು ವಿದ್ಯಾವಂತರಾಗಿ ಪೂರ್ವಾಚಾರ್ಯರ ಮತತತ್ವಗಳನ್ನು ವಿಚಾರಿಸುವದು ಮೊದಲನೆಯ ಕರ್ತವ್ಯವಾಗಿದೆ ಎಂದು ಅತ್ಯಂತ ಕಳಕಳಿಯಿಂದ ಹೇಳಿದರು. ಆ ಮೇಲೆ ಅಧ್ಯಕ್ಷರು ಈ ಸರ್ವರ ವ್ಯಾಖ್ಯಾನಗಳ ಮುಖ್ಯಾಂಶಗಳನ್ನು ವಿಮರ್ಶಿಸುತ್ತಾ, ಜಯಂತಿ ಎಂಬ ಶಬ್ದದ ಅರ್ಥವನ್ನು ಅತಿಮನೋಹರವಾಗಿ ಸರ್ವಜನರಿಗೂ ತಿಳಿಯುವಹಾಗೆ ಹೇಳಿ ಭಕ್ತಿ ಎಂದರೆ ಏನು ಅದು ಎಷ್ಟು ವಿಧವಾಗಿರುವದು ಎಂಬ ವಿಷಯವನ್ನು ಅತಿವಿಸ್ತಾರವಾಗಿ ವಿಮರ್ಶಿಸಿ ಸರ್ವ ಜನರಿಗೂ ಹರ್ಷವನ್ನುಂಟು ಮಾಡಿದರು. ಆ ಮೇಲೆ ಆನಂದಯುಕ್ತಗಳಾದ ಹರ್ಷ ತಾಡನೆಗಳೊಡನೆ ಮಂಗಲಪೂರ್ವಕವಾಗಿ ಶ್ರೀರೇಣುಕಾಚಾರ್ಯಮಹಾರಾಜಕೀಜೈ ಎಂಬ ಜಯಘೋಷದೊಡನೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಎಂ. ಚನ್ನಯ್ಯ, ಬದನೇಹಾಳ

ಶ್ರೀ ವೀರೇಶಾಯ ನಮಃ

ಶಿಂಗಟಾಲೂರು ಶ್ರೀವೀರಭದ್ರಸ್ವಾಮಿ ದೇವಾಲಯದ ಪಂಚಕಮಿಟಿಯಿಂದ.

ಯಾವತ್ತು ಜನರಿಗೆ ವಿನಯ ಸೂಚನೆ—

ಪುರಾತನಪದ್ಧತಿಗನುಸರಿಸಿ ನಮ್ಮ ದೇವಸ್ಥಾನದಲ್ಲಿ ಇದೇ ಯುವನಾಮ ಸಂ|| ರದ ಚೈತ್ರ ಶು|| ೧ ರಿಂದ ಶು|| ೫ ರ ವರೆಗೆ ರಥೋತ್ಸವಕ್ಕೆ ಸಮ್ಮಂಧಪಟ್ಟ ಪೂರ್ವೋಕ್ತಕರ್ಮಗಳು ಹಾಗೂ ಶ್ರೀರುದ್ರಾಭಿಷೇಕವು ವಿಧ್ಯುಕ್ತಪ್ರಕಾರ ನಡೆದು ಶು|| ೫ ಸೋಮವಾರ ತಾ|| ೮-೪-೩೫ ದಿವಸ ಸಾಯಂಕಾಲ ೫ ಘಂಟೆಗೆ ರಥೋತ್ಸವವು ಶು|| ೬ ಮಂಗಳವಾರ ಉದಯಕ್ಕೆ ಅಗ್ನಿ ಕುಂಡ ಮಹೋತ್ಸವವು, ಸಾಯಂಕಾಲ ೪ ಘಂಟೆಗೆ ಜನರಲ್ ಕಮಿಟಿಯು ಶು|| ೭ ಬುಧವಾರ ವಸಂತೋತ್ಸವವು ನಡೆಯುವದು. ಸರ್ವರು ತಪ್ಪದೆ ಸಕಾಲಕ್ಕೆ ಆಗಮಿಸಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ

ಇಲ್ಲಿಗೆ ಬಂದ ಜನರು ಪಾಲಿಸತಕ್ಕ ನಿಯಮಗಳು.

೧ ವ್ಯಾಪಾರಿ ಜನರು ಜಹಾದ ಅಂಗಡಿಯವರು ಮತ್ತು ನಾಟಕ ಕಂಪನಿಯವರು ಕಮಿಟಿಯವರ ಪರವಾನಗಿ ಶಿವಾಯ ಗುಡಾರ ಹೊಡೆಯಬಾರದು

೨. ಅಗ್ನಿ ಕುಂಡದಲ್ಲಿ ದೇವರನ್ನು ಧರಿಸಿದವರು ಮತ್ತು ದೇವರ ಜಿರುದಾವಳಿ ನಾವಮಾಸು ಹಿಡಿದವರ ಶಿವಾಯ ಇತರರನ್ನು ಖಂಡಿತವಾಗಿ ಬಿಡುವದಿಲ್ಲ. ಅಗ್ನಿ ಕುಂಡದಲ್ಲಿ ಯಾರೂ ತೆಂಗಿನಕಾಯಿಗಳನ್ನು ಒಗೆಯಬಾರದು.

೩. ನದಿಯ ತೀರದಲ್ಲಿ ಮಲಮೂತ್ರವಿಸರ್ಜನೆ ಮಾಡಬಾರದು. ಜನದ ಸಂದಣಿಯನ್ನು ಬಿಟ್ಟು ೨ ಪರ್ಲಾಂಗದೂರ ಹೋಗತಕ್ಕದ್ದು. ಜನರು ಸ್ನಾನ ಮಾಡಲಿಕ್ಕೂ ದನಗಳಿಗೆ ನೀರು ಕುಡಿಸಲಿಕ್ಕೂ ಮತ್ತು ದನಗಳ ಮೈ ತೊಳೆಯಲಿಕ್ಕೂ, ನದಿಯಮೇಲ್ಭಾಗದಲ್ಲಿ ಪ್ರತಿಬಂಧವದೆ. ಈ ಎಲ್ಲಾ ನಿಯಮಗಳನ್ನೂ ಸರ್ವರೂ ದಯವಿಟ್ಟು ಪಾಲಿಸಬೇಕು. ತದ್ವಿರುದ್ಧ ವರ್ತಿಸಿದವರನ್ನು ಖಂಡಿತವಾಗಿ ಪೋಲೀಸರ ವಶಪಡಿಸಲಾದೀತು.

ಜಿಲ್ಲಾ ಬೋರ್ಡಿನವರು ಹೋದವರ್ಷ ನಮ್ಮ ಜಾತ್ರೆಯಲ್ಲಿ ವಾಹನಗಳ ಮೇಲೆ ಮತ್ತು ಗುಡಾರದವರ ಮೇಲೆ ಹಾಕಿದ್ದ ಟ್ಯಾಕ್ಸನ್ನು ಈ ವರುಷ ಸಂಪೂರ್ಣ ತೆಗೆದುಹಾಕಿ ಶ್ರೀ ಸ್ವಾಮಿಯ ಕೃಪೆಗೂ ಲೋಕಾದರಕ್ಕೂ ಪಾತ್ರರಾಗಿರುತ್ತಾರೆ.

ಪಂಚಕಮಿಟಿಯ ಪ್ರೆಸಿಡೆಂಟ,
S. V. Kubasad.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಬಹುದು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಿಸಿಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಪಂಕಭಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಆಕಸ್ಮಿಕ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕಂದಾಶಿಸುತ್ತೇವೆ

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿವಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೭೫ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಮನಗಂಡು ಪಂಡಿತರನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಿಂದ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಬುದ್ಧಿವಿಕಸನಕ್ಕೆ ದೃಷ್ಟಿಯನ್ನಿಟ್ಟು ಈ ಗ್ರಂಥರತ್ನವನ್ನು ತರಿಸಿ ಓದಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ ಪಿ ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೩೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ. ಪೈ.
ಶ್ರೀ ರೇಣುಕಾಚಾರ್ಯರ ಬಂಧನ್ತು ಅಮೃತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ ವ್ಯಾಸ ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೦×೧೪ ಬೆಲೆ ..	೦—೧—೬
ಪಕ್ಷೀ ಶೀಕಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ ..	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ...	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ ...	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ...	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ...	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ ..	೦—೦—೯

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪಿನಸಿ, ಒಂಟಿ ತಲೆನೋವು, ತಲೆಯೊಳಗಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರಲ್ಪಟ್ಟ ಆ ವ್ಯಾಧಿಗಳನ್ನು ಸ್ಪಷ್ಟಪಡಿಸಿ ಜ್ಞಾಪಕಶಕ್ತಿಯನ್ನೂ ಬಹು ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವಿ. ಪಿ. ೦-೪-೨
ಡಜನ್ ಒಂದಕ್ಕೆ ಕ್ರಯ ರೂ ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[13] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಒನವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)....	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ) ...	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As
ವೀರಶೈವರತ್ನ (೪ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ...	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಿತ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ
लिंगधारणचंद्रिका (संस्कृत)	३ रु
महानारायणोपनिषत् (वीरशैवभाष्य-संस्कृत)	१ रु
वीरशैवेंदुशेखर (संस्कृत)	१ रु

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ[illegible] ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ[illegible]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿವ ಗುರುಬಸವಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ[illegible]

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ ನೇ ಏಪ್ರಿಲ್ ೧೯೩೫ [ಸಂಚಿಕೆ ೪೬

ಶ್ರೀ ಕೇದಾರನಾಥ ಮಹಾಮಂದಿರದ ಕವಾಟೋದ್ಘಾಟನ ಮಹೋತ್ಸವ.

ಶ್ರೀ ಶಾಲೀವಾಹನ ಶಕ ೧೮೫೭ ನೆಯ ಚೈತ್ರ ಕೃಷ್ಣ ೧೧ ತಾರೀಖು ೨೯-೪-೧೯೩೫ ನೆಯ ಸೋಮವಾರ ಪ್ರಾತಃಕಾಲ ವೃಷಭಲಗ್ನಯುಕ್ತ ಪವಿತ್ರ ಮುಹೂರ್ತದಲ್ಲಿ ಪ್ರಾಚೀನ ಪದ್ಧತಿಯಂತೆ ಕವಾಟೋದ್ಘಾಟನ ಸಮಾರಂಭವು ವಿಜೃಂಭಣೆಯಿಂದ ನೆರವೇರುವದು.

ಈ ಶ್ರೀ ಕೇದಾರನಾಥ ಮಹಾಯಾತ್ರೆಗೆ ಶ್ರೀ ಟೆಹರಿದರಬಾರ ಮಹಾರಾಜರ ಪುರೋಹಿತರು, ಶ್ರೀ ಕೇದಾರ ಜಗದ್ಗುರು ಮಹಾಸಂಸ್ಥಾನದ ಪುರೋಹಿತರು, ಅರ್ಚಕರು, ಅನೇಕ ಮಾಹೇಶ್ವರರು, ಗೌರ್ನಮೆಂಟ ಅಧಿಕಾರಿಗಳು, ಶ್ರೀ ಕೇದಾರನಾಥ ಸೇವಾಮಂಡಲಿಯವರು ಓಖೀಮಠ ಮಹಾಸಂಸ್ಥಾನದಿಂದ ತಾ|| ೨೮-೪-೩೫ ಕ್ಕೆ ಪ್ರಯಾಣಮಾಡುವರು. ಶ್ರೀ ಕೇದಾರನಾಥ ಜ್ಯೋತಿರ್ಲಿಂಗದ ಮಹಾಪೂಜೆಯು ಸದರಿ ಮುಹೂರ್ತದಲ್ಲಿ ಪ್ರಾರಂಭವಾಗಿ ಕಾರ್ತೀಕ ಶು|| ೨ ದ್ವಿತೀಯಾ ತಿಥಿಯವರಿಗೆ ನಡೆಯುವದು. 'ಹಿಮಾಲಯೇತು ಕೇದಾರಂ' ಈ ಆರ್ಯೋಕ್ತಿಯಂತೆ ಹಿಮಾಲಯದಲ್ಲಿ ಶ್ರೀ ಕೇದಾರನಾಥ ಜ್ಯೋತಿರ್ಲಿಂಗವು ವಿರಾಜಿಸುತ್ತಲಿರುವದೆಂಬುದು ಸಮಸ್ತ ಭಾರತೀಯರಿಗೆ ವಿದಿತವಷ್ಟೆ! ಈ ಮಹಾಲಿಂಗದ ಪ್ರಾಚೀನ ಇತಿಹಾಸವು ವೇದವ್ಯಾಸಪ್ರಣೀತ ಸಕಲಪುರಾಣೇತಿಹಾಸಗಳಲ್ಲಿಯೂ ಕಂಡುಬರುತ್ತಾಗಿದೆ. ಈ ಜ್ಯೋತಿರ್ಲಿಂಗವನ್ನು ಚತುರ್ಯುಗಗಳಲ್ಲಿಯೂ ರಾಜಾಧಿರಾಜರೂ, ಮಹರ್ಷಿಗಳೂ ಪೂಜಿಸುತ್ತ ಬಂದಿರುತ್ತಾರೆ. ಸತ್ಯಯುಗದಲ್ಲಿ ಸಗರನೆಂಬೀಯ ಸಾರ್ವಭೌಮರಾದ ಮಾಂಧಾತೃ ಪ್ರಭೃತಿ ಮಹಾರಾಜರೂ, ಸತ್ಯವ್ರತ ಚಕ್ರವರ್ತಿಗಳೂ, ಉಪಮನ್ಯು ಪ್ರಭೃತಿ ರಾಜ್ಞೀ ಮಹಾರಾಜ್ಞಿಯವರೂ ಉಪಮನ್ಯು ಪ್ರಭೃತಿ ಮಹರ್ಷಿಗಳೂ ಸಂಪೂಜಿಸಿ ಶಿವಸಾಯುಜ್ಯವನ್ನು ಪಡೆದು ಧನ್ಯರಾದರು. ದ್ವಾಪರದಲ್ಲಿ ವೇದವ್ಯಾಸಮುನೀಯು ಸ್ಕಂದಪುರಾಣದ 'ಕೇದಾರಖಂಡ'ದಲ್ಲಿ ಈ ಜ್ಯೋತಿರ್ಲಿಂಗದ ಎಲ್ಲಾ ಉಪಲಿಂಗಗಳ ತೀರ್ಥಕ್ಷೇತ್ರಗಳ ಮಹಿಮೆಯನ್ನು ತೋರಿಸಿರುವರು. ಈ ಮಹಾಪುರಾಣದ ಪ್ರಾಚೀನ ಹಸ್ತಲಿಖಿತ ಪುಸ್ತಕವು ಜೀರ್ಣಶೀರ್ಣವಾಗಿ ಓಖೀಮಠ ಮಹಾಪೀಠದಲ್ಲಿ ಈಗಲೂ ರಾರಾಜಿಸುತ್ತಲಿದೆ. ಈ ಪ್ರತಿಯಿಂದಲೇ ಮುಂಬಯಿ ವೆಂಕಟೇಶ್ವರ ಮುದ್ರಣಾಲಯಾಧಿಪತಿಗಳು ಹಿಂದೀವ್ಯಾಖ್ಯಾನದೊಡನೆ ಈ ಪುರಾಣವನ್ನು ಮುದ್ರಿಸಿರುವರು. ಈ ಕೇದಾರಪೀಠದ (೨೨) ಮಠಮಂದಿರಗಳಲ್ಲಿ ಮುಖ್ಯವಾದ ಕೆಲವು ಚಿತ್ರಗಳನ್ನು ಮೈಸೂರು ರಾಜಧಾನಿಯಲ್ಲಿರುವ ಶ್ರೀ ಪಂಚಾಚಾರ್ಯ ಮುದ್ರಣಾಲಯಾಧಿಪತಿಗಳಾದ ವೇ|| ಸಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಬ್ಲಾಕ್ ಮಾಡಿ ಮುದ್ರಿಸಿದ್ದಾರೆ. ಶ್ರೀ ಕೇದಾರನಾಥ ಮಂದಿರವು ಬರ್ಫ (ಹಿಮ) ದ ಮಹಾಪರ್ವತ ಶಿಖರಭಾಗದಲ್ಲಿ ನಿರ್ಮಿತವಾಗಿದ್ದು ಗಂಗಾ, ಮಂದಾಕಿನೀ, ಕ್ಷೀರಗಂಗಾ, ಮಧುಗಂಗಾ ಸಂಗಮದಲ್ಲಿ ನಿರ್ಮಿತವಾಗಿದೆ. ಮಂದಿರದ ಮಹಾದ್ವಾರವು ಪಶ್ಚಿಮಾಭಿಮುಖವಾಗಿದೆ. ಮಹಾದ್ವಾರದಲ್ಲಿ ಬೃಹತ್ ಘಂಟೆಯು ಇದೆ. ಅದರ ಶಬ್ದವು ೬ ಮೈಲುಗಳವರೆಗೂ ಕೇಳುತ್ತಲಿದೆ. ಇದು ನೇಪಾಲ ಮಹಾರಾಜರಿಂದ ಅರ್ಪಿಸಲ್ಪಟ್ಟಿದೆ. ಮಂದಿರದ ಅಂಗಣದಲ್ಲಿ ವೃಷಭದಾಕೃತಿಯ ನಂದಿಮೂರ್ತಿಯಿದೆ. ಇದು ಅತಿಶಯ ಪ್ರಾಚೀನಮೂರ್ತಿಯಾಗಿದೆ. ಈ ಮೂರ್ತಿಯ ಮುಂಭಾಗದಲ್ಲಿಯೇ ಈ ವರ್ಷ ನೇಪಾಲ ಸರಕಾರದವರು ಮತ್ತೊಂದು ದೊಡ್ಡ ಘಂಟಾಮಂದಿರವನ್ನು ನಿರ್ಮಿಸಿದ್ದಾರೆ. ಈ ಮಂದಿರದ ನಾಲ್ಕು ಕಡೆಗೂ ಪ್ರಾಕಾರಗಳು ನೂತನವಾಗಿ ಕಟ್ಟಲು ಪ್ರಾರಂಭವಾಗಿವೆ. ಈ ಕೇದಾರನಾಥ ಜ್ಯೋತಿರ್ಲಿಂಗ ಗರ್ಭಗುಡಿಯು ನಾಲ್ಕು ಸಾವಿರ ವರ್ಷಕ್ಕಿಂತಲೂ ಮುಂಚಿನದೆಂದು ಐತಿಹ್ಯವಿದೆ. ಟೆಹರಿ ರಾಜ್ಯದ ವಜೀರ ಸಂ|| ಹರಿಕೃಷ್ಣ ರತೂಡಿ ಸಾಹೇಬರು 'ಗಢವಾಲ ಇತಿಹಾಸ' ವೆಂಬ ಗ್ರಂಥದಲ್ಲಿ ಶ್ರೀ ಕೇದಾರನಾಥ ಮಂದಿರದ ಹಾಗೂ ಶ್ರೀ ಕೇದಾರಪೀಠದ ಆಚಾರ್ಯ ಭೂಕೈಲಾಸ ಶಿವಾಚಾರ್ಯರ ಕಾಲನಿರ್ಣಯವನ್ನು 'ಸರ್ ಐಸ್‌ಟೆಟ್ಸನ್' ರವರ ಗ್ರಂಥಾಧಾರದಿಂದಲೂ ಶ್ರೀ ಕೇದಾರಪೀಠದ ಶಾಸನಗಳಿಂದಲೂ ಭಾರತ ಯುದ್ಧವಾದ ಬಳಿಕ ಪಾಂಡವರ ಸ್ವರ್ಗಾರೋಹಣಕಾಲ ನಿರೂಪಣವಾಗಿ ಉಲ್ಲೇಖಿಸಿದ್ದಾರೆ. ಪಾಂಡವರು ಪುನಃ ರಾಜ್ಯ ಸಂಪಾದಿಸಿ ಆಬಳಿಕ ಪರೀಕ್ಷಿತನಿಗೆ ರಾಜ್ಯವನ್ನು ಒಪ್ಪಿಸಿ ಗೋತ್ರಹತ್ಯಾದೋಷನಿವೃತ್ತಿಗಾಗಿ ವ್ಯಾಸಮುನೀಂದ್ರರ ಉಪದೇಶಾನುಸಾರವಾಗಿ ಮಹಾಪ್ರಸ್ಥಾನವನ್ನು ಮಾಡಿದರೆಂದು ಕೇದಾರಖಂಡ ಪುರಾಣವು ಬೋಧಿಸುತ್ತದೆ. ಈ ಕಲಿಯುಗದ ಚರಿತ್ರವೇನೆಂದರೆ, ಶಿವಾಂಶಸಂಭೂತನಾದ ಭೀಮನು ಭ್ರಾತೃಬಂಧುಗಳೊಡನೆ ಸ್ವರ್ಗಾರೋಹಣಕ್ಕಾಗಿ ಸುವರ್ಣಗಂಗೆಯೆಂಬ (ಸೋನಗಂಗಾ) ದಲ್ಲಿ 'ಪಾರ್ವತೀಪತಿಯು' ಮಹಿಷಾಕೃತಿಯಿಂದ ಮಾರ್ಗದರ್ಶಕನಾಗಿ ಪರ್ವತಗಳ ಶ್ರೇಣಿಯಲ್ಲಿ ಧಾವಿಸುತ್ತ ನಡೆದನು. ಇತ್ತ ಭೀಮಸೇನನು ಆತನ ಮಹಿಷಾಕೃತಿ ಮೂರ್ತಿಯನ್ನು ಅನುಧಾವಿಸುತ್ತ ನಡೆದನು. ಈ ರೀತಿಯಾಗಿ ಕಡೆಗೆ ಮಂದಾಕಿನಿ ಗಂಗೆಯ ಸ್ವರ್ಗಗಂಗೆಯ ಉಗಮಸ್ಥಾನದ ಬಳಿಯಲ್ಲಿ ಅನುಧಾವಿಸುವ ಭೀಮನನ್ನು ವಂಚಿಸಿ ಭೂಗರ್ಭದೊಳಗೆ ಅದೃಶ್ಯನಾಗುತ್ತಿರುವ ಪಾರ್ವತೀಪತಿಯನ್ನು ಭೀಮನು ಭಕ್ತಿಭರದಿಂದ ಅನುಧಾವಿಸಿ ಪೃಷ್ಠಭಾಗದಲ್ಲಿ ಗದಾಪ್ರಹಾರದಿಂದ ಸ್ಥಿರಗೊಳಿಸಿ ಯುಧಿಷ್ಠಿರಾದಿ ಬಂಧುಗಳನ್ನು ಭಕ್ತ್ಯುದ್ರೇಕ ಉದ್ರೇಕದಿಂದ ಹಸ್ತಸನ್ನೆಮಾಡಿ "ನೋಡಿರಿ" "ಈತನೇ ಕೇದಾರನಾಥನು" ಎಂದು ತೋರಿಸಿದನು. ಆಗ್ಗೆ ಸರ್ವಬಂಧುಗಳೂ ಭಗವಂತನನ್ನು ಸಂದರ್ಶಿಸಿ ಸಂತರ್ಪಣವಂಮಾಡಿ ಗೋತ್ರಹತ್ಯಾದೋಷದಿಂದ ವಿಮುಕ್ತರಾದರು. ಬಳಿಕ ಅನೇಕ ದಿವಸ ನಿವಾಸಮಾಡಿ ಈಗಲೂ ವಿರಾಜಿಸುವ ಶ್ರೀ ಕೇದಾರನಾಥನ ಗರ್ಭಗುಡಿಯನ್ನು ನಿರ್ಮಿಸಿದರು. ಈ ಪೃಷ್ಠಭಾಗವೇ "ಕೇದಾರನಾಥ"ನೆಂದೂ ಮುಖಭಾಗವೇ "ಪಶುಪತಿನಾಥ"ನೆಂದೂ ಕ್ರಮವಾಗಿ ಕೇದಾರ ನೇಪಾಳಗಳಲ್ಲಿ ಉಭಯ ಲಿಂಗಗಳು ಪ್ರಸಿದ್ಧವಾಗಿವೆ. ಈ ಚರಿತ್ರವು ಲೋಕವಿಖ್ಯಾತವಿರುವದು. ಈ ಕೇದಾರಮಹತ್ತ್ವವು "ಕೇದಾರೋದಕಂಪೀತ್ವಾ ಪುನರ್ಜನ್ಮ ನ ವಿದ್ಯತೇ" ಎಂಬ ವ್ಯಾಸೋಕ್ತಿಯಿಂದ ವ್ಯಕ್ತವಾಗಿದೆ. ಈ ಕೇದಾರಮಹಾಯಾತ್ರೆಯು ಮೊದಲು ಅತಿ ಕಠಿಣವಾಗಿತ್ತು. ಈಗ ಅತಿ ಸುಲಭವಾಗಿದೆ. ಶ್ರೀ ಕೇದಾರನಾಥಮಂದಿರವು ಹರಿದ್ವಾರ ರೈಲ್ವೆಸ್ಟೇಷನ್ನಿನಿಂದ ೧೪೯ ಮೈಲು ಅದೆ. ಹರಿದ್ವಾರದಿಂದ ೫೬ ಮೈಲಿನವರೆಗೂ ಮೋಟಾರ್ ಸರ್ವಿಸ್ ನೂತನವಾಗಿ ದೇವಪ್ರಯಾಗವೆಂಬ ಭಾಗೀರಥೀ ಅಲಕನಂದಾ ಸಂಗಮವಿರುವ ಸ್ಥಳದವರೆಗೂ ಆಗಿರುತ್ತದೆ. ಈ ಸರ್ವಿಸ್ಸನ್ನು ಟೆಹರೀ ಸರಕಾರದವರು ಏರ್ಪಡಿಸಿರುತ್ತಾರೆ. ದೇವಪ್ರಯಾಗದಿಂದ ಶ್ರೀನಗರವೆಂಬ ಪಟ್ಟಣವಿದೆ. ಅಲ್ಲಿಂದ ಮಂದಾಕಿನೀ ಅಲಕನಂದಾಸಂಗಮಸ್ಥಳವಾದ 'ರುದ್ರಪ್ರಯಾಗ' ವೆಂಬ ತೀರ್ಥವಿದೆ. ಇದರ ಸಮೀಪದಲ್ಲಿ 'ಗೌಚರ'ವೆಂಬಲ್ಲಿಗೆ ಹೋಗುವ ವರ್ಷದಿಂದ ಬದರೀನಾರಾಯಣ ಯಾತ್ರಿಕರ ಸಲುವಾಗಿ ಆಕಾಶ ವಿಮಾನವು ಬರುತ್ತಲಿದೆ. ಈ ವರ್ಷ ಮೊದಲಿಯಿಂದ ಶ್ರೀ ಕೇದಾರನಾಥ ಜ್ಯೋತಿರ್ಲಿಂಗದ ಮಹಾಯಾತ್ರಾರ್ಥಿಗಳ ಸಲುವಾಗಿ 'ಅಗಸ್ತ್ಯಮುನಿ' ಎಂಬ ಸ್ಥಳಕ್ಕೆ ವಿಮಾನವು ಬರುವ ಸಂಭವ ಏರ್ಪಟ್ಟು ಆಗಿರುವದು. ಅಗಸ್ತ್ಯಮುನಿಯಿಂದ ಗುಪ್ತಕಾಶಿ ಓಖೀಮಠಗಳು ೧೨ ಮೈಲಿನೊಳಗೆ ಅವೆ. ಈ ವರ್ಷ ಕೇದಾರಪೀಠದ ವತಿಯಿಂದ ಮಠದವರು ಧರ್ಮೋಪದೇಶಕರು ಗುಪ್ತಕಾಶೀ ಓಖೀಮಠ ಮುಂತಾದ ಸ್ಥಳಗಳಲ್ಲಿರುವರು. ಈ ಸ್ಥಳಗಳಲ್ಲಿ ಔಷಧಾಲಯಗಳೂ ಅವೆ. ಹಾಗೂ ಕೇದಾರನಾಥ ಸೇವಾಮಂಡಲಿಯೆಂಬ ಸ್ವಯಂಸೇವಕರು ಸಂಸ್ಥಾನದ ವತಿಯಿಂದ ಅಲ್ಲಲ್ಲಿ ಯಾತ್ರಿಕರ ಸುಖದುಃಖವಿಚಾರಣೆ ಮಾಡುವರು. ಮತ್ತು 'ಕೇದಾರನಾಥ'ದಲ್ಲಿ ಪೋಸ್ಟಾಫೀಸ್ ಇರುವದು. ರುದ್ರಪ್ರಯಾಗದಲ್ಲಿ ಟೆಲಿಗ್ರಾಫ್ ಆಫೀಸು ಇರುವದು. (ಗುಪ್ತಕಾಶಿ ಟೆಲಿಫೋನ್ ಆಫೀಸ್ ಆಗುವದಿದೆ) ಹಾಗೆ ವಹಿಸಿ ಪೋಲೀಸ್ ಇನ್ಸ್‌ಪೆಕ್ಟರ್, ಹೆಲ್ತ್ ಆಫೀಸರ್, ಸಿವಿಲ್ ಸರ್ಜನರು ಬಂಗಲೆಗಳು ಬಾಬಾಕಾಲೀಕಮಲಿಯವರ ಅನ್ನಛತ್ರ ಧರ್ಮಶಾಲೆಗಳೂ ಇರುವವು. ಅಲ್ಲಲ್ಲಿ ನೀರಿನ ನಲ್ಲಿಗಳೂ, ಇಳಿದುಕೊಳ್ಳಲಿಕ್ಕೆ ಮನೆಗಳೂ ಅಂಗಡಿಗಳೂ ಇರುವವು. ಹಾಲು ತುಪ್ಪ ಮುಂತಾದ ಭೋಜನದ ಎಲ್ಲಾ ಸಾಮಾನುಗಳೂ ಪಾತ್ರೆಗಳೂ ದೊರೆಯುವವು. ಕೂಲಿಯ ಜನರೂ, ಕುದುರೆಗಳೂ, ಪಾಲಕಿಗಳೂ ಸಿಗುವವು. ಚೌಕಿಯೆಂಬ ಸರ್ಕಾರದ ಮನುಷ್ಯರು ಪ್ರತ್ಯೇಕ ಸ್ಥಳದಲ್ಲಿ ಕೂಲಿಯವರ ಯೋಗ್ಯ ವ್ಯವಸ್ಥೆಯನ್ನು ಮಾಡುವರು. ಮತ್ತು ವಿಶೇಷ ಮಾತ್ರದ ಒಂದು ಸಂಗತಿಯು ಈ ವರ್ಷ ಸಂಭವಿಸುವುದೇನಂದರೆ—ಈ ಕೇದಾರನಾಥನಲ್ಲಿ ಆರುತಿಂಗಳ ಮೇಲ್ಪಟ್ಟು ಕಾರ್ತೀಕ ಶು|| ೨ ದ್ವಿತೀಯದ ಬಳಿಕ ನರರು ವಾಸಮಾಡುವದು ವಾಡಿಕೆಯಾಗಿರುವದಿಲ್ಲ. ಆದಾಗ್ಯೂ ಈ ವರುಷ ಹಿಮದ ಆಗ್ರಹದಿಂದ ವಾಸಮಾಡಿದರು. ಆ ಮಹಾತ್ಮರ ಯೋಗ್ಯತೆಯು 'ದೇವರ್ಲೋಕಕ್ಕೆ ತೆರೆದನು' ಮತ್ತು ರ್ಮಾಸ ಗಾರಿಕ್ಕೆ ಒಂದು ತಲ್ಲ ಆಶ್ಚರ್ಯಕರವಾದ ವಿಷಯವನ್ನು ಹೇಳುವದೇನಂದರೆ—ಮನೆಯೊಳಗೆ ಕುಳಿತಾಗ್ಗೆ ಗಂಧರ್ವರ ಗಾನ ಪೂಜಾಧ್ವನಿಗಳು ಪ್ರಾತಃಕಾಲಗಳಲ್ಲಿ ಕೇಳುವವು. ಕೇಳುತ್ತಿದ್ದರೂ ಹೊರಗೆ ಬಂದು ನೋಡಿದರೆ ಯಾರನ್ನೂ ಕಾಣುತ್ತಿರಲಿಲ್ಲವಂತೆ!! ಈ ದಿವ್ಯ ಕೇದಾರನಾಥನ ಮಹಿಮೆಯು ಎಷ್ಟು ಅಗಾಧವಾಗಿದೆ? ಸಾರಾಂಶ—ಆರುತಿಂಗಳ ದೇವತೆಗಳಿಂದಲೂ ಆರು ತಿಂಗಳ ಮಾನವರಿಂದಲೂ ಪೂಜಿಸಲ್ಪಡುವ ಶ್ರೀ ಕೇದಾರನಾಥ ಮಹಾಜ್ಯೋತಿರ್ಲಿಂಗವನ್ನೂ ಹಾಗೂ ಪೂರ್ವಕಾಲದಲ್ಲಿ ಪರಂಪರೆಯಿಂದ ಸಂರಕ್ಷಿತವಾದ ಅಖಂಡ ಶ್ರೀ ಜ್ಯೋತಿರ್ವಿಕಾಸವನ್ನೂ ಯಾತ್ರಾರ್ಥಿಗಳು ಸನಾತನ ಬಂಧುಗಳು ತಮ್ಮ ತಮ್ಮ ಗೃಹದಿಂದ ಶ್ರೀ ಕೇದಾರನಾಥನನ್ನು ಧ್ಯಾನಿಸುತ್ತ ಚೈತ್ರ ಶುದ್ಧದಲ್ಲಿಯೇ ಹೊರಟು ಉಕ್ತಮುಹೂರ್ತದಲ್ಲಿ ಸಂದರ್ಶನವನ್ನು ಮಾಡಿ ಧನ್ಯರಾಗಬೇಕೆಂದು ನಿವೇದಿಸುವ,

ಶ್ರೀ ಕೇದಾರನಾಥಮಂದಿರದ ವ್ಯವಸ್ಥಾಪಕ
ಸಂ|| ಕದಾನಂದಜೀ.

ಸ್ವೀಕಾರ

ದಾವಣಗೆರೆ ನಿವಾಸಿಗಳಾದ ಶ್ರೀಮಾನ್ ಮಾಗಾನಹಳ್ಳಿ ಪರಕ್ಷಪ್ಪನವರು ಶಿವಾಧೀನರಾದ ನಿಮಿತ್ತವಾಗಿ ನೆರವೇರಿದ ಕೈಲಾಸಗಣಾರಾಧನೆಯ ಸಮಯದಲ್ಲಿ ಶ್ರೀ ಜಗದಾಚಾರ್ಯರ ಹೆಸರಿನಿಂದ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 5 ರೂ. ಗಳು ಮಳೆಬೆನ್ನೂರು ಮಠದ ಹಾಲಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿ|| ಹಾವೇರಿಯ ನಡುವಿನಮಠದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೀಮಹೋತ್ಸವದಲ್ಲಿ ತೆಗೆಯಿಸಿದ 1 ರೂ ಯು ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ ಸೆಕ್ರೆಟರಿಗಳ ದ್ವಾರಾ ತಲ್ಪಿರುತ್ತದೆ.

ಶಿರಹಟ್ಟಿ ತಾ|| ಲಕ್ಷ್ಮೇಶ್ವರ ಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೀಮಹೋತ್ಸವದಲ್ಲಿ ತೆಗೆಯಿಸಿದ 1 ರೂ ಯು ವೇ|| ಹಿರೇಮಠದ ಕಾಶಪ್ಪಯ್ಯನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ರಾಜಧಾನಿಯಲ್ಲಿ ನೆರವೇರಿದ ತತ್ತ್ವಶಾಸ್ತ್ರಮಹಾಸಭೆಯಲ್ಲಿ

ನಾಗನೂರು ಬೃಹನ್ಮಠಾಧ್ಯಕ್ಷರಾದ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಮಾಡಿದ ಭಾಷಣ.

(ತಾ|| ೨—೪—೧೯೩೫)

ಶಕ್ತಿವಿಶಿಷ್ಟಾದ್ವೈತಸಿದ್ಧಾಂತನಿರೂಪಣ

ಪಂಚಾಸ್ಯವದನೋದ್ಭೂತಾನ್ ಪಂಚತತ್ತ್ವಾಧಿನಾಯಕಾನ್ |
ಪಂಚಬ್ರಹ್ಮಮಯಾನ್ನೌಮಿ ಪಂಚಾಚಾರ್ಯಾನ್ ಜಗದ್ಗುರೂನ್ ||

ತತ್ತ್ವಶಾಸ್ತ್ರೀಯವಿಷಯಶ್ರವಣೋತ್ಸುಕರಾದ ಸಭಿಕಮಹಾಶಯರೇ! ತತ್ತ್ವಶಾಸ್ತ್ರಜ್ಞರಿಂದ ಪರಿಶೋಭಿತವಾದೀ ತತ್ತ್ವಶಾಸ್ತ್ರಮಹಾಸಭೆಯಲ್ಲಿ ತಮ್ಮೆಲ್ಲರ ಅಭಿಪ್ರಾಯದಂತೆ ನಾನು "**ಶಕ್ತಿವಿಶಿಷ್ಟಾದ್ವೈತಸಿದ್ಧಾಂತ**" ಸ್ವರೂಪವನ್ನು ಸಂಕ್ಷೇಪವಾಗಿ ಪ್ರತಿಪಾದಿಸತಕ್ಕವನಾಗಿದ್ದೇನೆ. ತಾವುಗಳೆಲ್ಲರೂ ಶಾಂತಮನಸ್ಸಿನಿಂದ ಈ ಸಿದ್ಧಾಂತಸ್ವರೂಪವನ್ನು ಮನನಮಾಡಿಕೊಳ್ಳಬೇಕೆಂದಾಶಿಸುತ್ತೇನೆ.

ನಿಗಮಾಗಮಪ್ರಸಿದ್ಧವಾದೀ ವೀರಶೈವಮತವು ಅನಾದಿಯಾಗಿರುವುದು. ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಚತುರ್ಯುಗಗಳಲ್ಲಿಯೂ ದಿವ್ಯದೇಹಧಾರಿಗಳಾಗಿ ಶಿವಲಿಂಗಮುಖದಿಂದ ಅವತರಿಸಿ ಈ ಮತವನ್ನು ಸ್ಥಾಪಿಸಿದರೆಂದು ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತಿರುವವು. ಈ ಆಚಾರ್ಯರ ಪರಮಪೀಠಗಳು ರಂಭಾಪುರಿ, ಉಜ್ಜಯಿನಿ, ಕೇದಾರ, ಶ್ರೀಶೈಲ, ಕಾಶಿ ಎಂಬ ಪಂಚಪುಣ್ಯಕ್ಷೇತ್ರಗಳಲ್ಲಿ ಅನಾದಿಕಾಲದಿಂದ ಈ ಹೊತ್ತಿನವರೆಗೂ ಪರಿಶೋಭಿಸುತ್ತಿರುವವು. ಈ ಮಹಾಚಾರ್ಯರು ನಿಗಮಾಗಮಗಳಲ್ಲಿ ಪ್ರತಿಪಾದಿತವಾಗಿರುವ "ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ"ವನ್ನು ಮಾನವಪ್ರಾಣಿಗಳ ಉದ್ಧಾರಕ್ಕೋಸ್ಕರ ಈ ಭೂಮಂಡಲದಲ್ಲಿ ನೆಲೆಗೊಳಿಸಿದರು. ಈ ಮಹನೀಯರು ಶಿವಸೂತ್ರ ಬ್ರಹ್ಮಸೂತ್ರಗಳ ಮೇಲೆ ಭಾಷ್ಯಗಳನ್ನು ಬರೆದು ತಮ್ಮ ಸಿದ್ಧಾಂತವನ್ನು ಸರ್ವತ್ರ ಪ್ರಕಾಶಪಡಿಸಿದರು. ಆ ಪೂಜ್ಯಪಾದರ ಸಿದ್ಧಾಂತಸ್ವರೂಪವು ಸದ್ಯಃ ಸಂಕ್ಷೇಪವಾಗಿ ವಿವರಿಸಲ್ಪಡುವುದು.

ಶಕ್ತಿವಿಶಿಷ್ಟಾದ್ವೈತವೆಂದರೆ—ಶಕ್ತಿವಿಶಿಷ್ಟಜೀವನಿಗೂ ಶಕ್ತಿವಿಶಿಷ್ಟಶಿವನಿಗೂ ಸಾಮರಸ್ಯವೆಂದರ್ಥವು. "**ಶಕ್ತಿಶ್ಚ ಶಕ್ತಿಶ್ಚ-ಶಕ್ತೀ-ತಾಭ್ಯಾಂ ವಿಶಿಷ್ಟೌ ಜೀವೇಶೌ-ತಯೋಃ ಅದ್ವೈತಂ ಶಕ್ತಿವಿಶಿಷ್ಟಾದ್ವೈತಂ**" ಎಂದು ಪೂರ್ವಾಚಾರ್ಯರು ಶಕ್ತಿವಿಶಿಷ್ಟಾದ್ವೈತಪದದ ವ್ಯುತ್ಪತ್ತಿಯನ್ನು ತೋರಿಸಿರುವರು. ಶಕ್ತಿಯು ಸ್ಥೂಲಚಿದಚಿದಾತ್ಮಕಶಕ್ತಿ ಸೂಕ್ಷ್ಮಚಿದಚಿದಾತ್ಮಕಶಕ್ತಿ ಎಂದು ಎರಡು ಪ್ರಕಾರವಾಗಿರುವುದು. ಜೀವನು ಸ್ಥೂಲಚಿದಚಿದಾತ್ಮಕಶಕ್ತಿಯುಕ್ತನಾಗಿರುವನು, ಶಿವನು ಸೂಕ್ಷ್ಮಚಿದಚಿದಾತ್ಮಕಶಕ್ತಿಯುಕ್ತನಾಗಿರುವನು. ಈ ಉಭಯವಿಧ ಶಕ್ತಿಗಳಿಂದ ಯುಕ್ತರಾದ ಜೀವ ಮತ್ತು ಶಿವರ ಅದ್ವೈತವೇ (ಸಾಮರಸ್ಯವೇ) ಶಕ್ತಿವಿಶಿಷ್ಟಾದ್ವೈತವೆನಿಸುವುದು. ಶಕ್ತಿಯು ಪರಶಿವಬ್ರಹ್ಮದಲ್ಲಿ ಅವಿನಾಭಾವಸಂಬಂಧದಿಂದಿದ್ದು ನಿತ್ಯವೆನಿಸಿರುವುದು. ಈ ವಿಷಯವನ್ನು ಶ್ವೇತಾಶ್ವತರಶ್ರುತಿಯು—

ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ||

ಎಂಬ ವಾಕ್ಯದಿಂದ ಸಾರುತ್ತಿರುವುದು. ಈ ಮಂತ್ರಾರ್ಥವನ್ನು ಪರ್ಯಾಲೋಚಿಸಿದರೆ, ಪರಬ್ರಹ್ಮದಲ್ಲಿ ಶಕ್ತಿಯು ಸ್ವಭಾವಸಿದ್ಧವಾಗಿರುವುದೆಂದೂ, ಈ ಶಕ್ತಿಯು ಜ್ಞಾನಶಕ್ತಿ-ಕ್ರಿಯಾಶಕ್ತ್ಯಾದಿರೂಪದಿಂದ ನಾನಾ ಪ್ರಕಾರವಾಗಿರುವುದೆಂದೂ ಸಿದ್ಧವಾಗುತ್ತದೆ. "**ಸ್ವಾಭಾವಿಕೀ**" ಎಂಬ ಪದವು ಶಕ್ತಿ ನಿತ್ಯತ್ವವನ್ನು ಘಂಟಾಘೋಷವಾಗಿ ಉದ್ಘೋಷಿಸುತ್ತಿರುವುದು. ಇದೇ ವಿಷಯವನ್ನು ಇದೇ ಶ್ರುತಿಯು ಮತ್ತೊಂದೆಡೆಯಲ್ಲಿ—

ಯದಾ ತಮಸ್ತನ್ನ ದಿವಾ ನ ರಾತ್ರಿರ್ನಸನ್ನಚಾಸಚ್ಛಿವ ಏವ ಕೇವಲಃ |
ತದಕ್ಷರಂ ತತ್ಸವಿತುರ್ವರೇಣ್ಯಂ ಪ್ರಜ್ಞಾ ಚ ತಸ್ಮಾತ್ ಪ್ರಸೃತಾ ಪುರಾಣೀ ||

ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿರುವುದು. ಪುರಾಣೀ ಅನಾದಿಸಂಸಿದ್ಧವಾದ, ಪ್ರಜ್ಞಾ-ಚಿಚ್ಛಕ್ತಿಯು, ಆ ಪರಶಿವಬ್ರಹ್ಮದಿಂದ, ಪ್ರಸೃತಾ ಕ್ರಿಯಾಶಕ್ತ್ಯಾದ್ಯನಂತರೂಪದಿಂದ ಪ್ರಸರಣವಾಯಿತು ಎಂದು ಬೋಧಿಸುವುದು. ಈ ಶ್ರುತಿವಾಕ್ಯದಲ್ಲಿ ಶಕ್ತಿವಿಕಾಸವು ಸ್ಫುಟವಾಗಿ ತೋರಿಸಲ್ಪಟ್ಟಿರುವುದು.

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ ||

ಎಂಬ ಮಂತ್ರವೂ ಸಹ ಪರಮಾತ್ಮನು ಶಕ್ತಿವಿಶಿಷ್ಟನೆಂದು ಬೋಧಿಸುತ್ತದೆ. ಪೂರ್ವಾಚಾರ್ಯರು ಮಾಯಾಶಬ್ದಕ್ಕೆ "**ಮಾಂ-ಶಿವಂ-ಅಯತಿ-ಸ್ವಭಾವತಃಪ್ರಾಪ್ನೋತೀತಿ ಮಾಯಾ**" ಎಂದು ನಿರ್ವಚನವನ್ನು ಮಾಡಿರುವುದರಿಂದ ಈ ಮಾಯೆಯು ಅದ್ವೈತಿಗಳು ಹೇಳುವಂತೆ ಮೂಲಾವಿದ್ಯಾರೂಪಮಾಯೆಯಾಗಿರದೆ, ವಿಮರ್ಶಶಕ್ತಿರೂಪಮಾಯೆಯಾಗಿರುವುದು. ಈ ಮಂತ್ರಾಭಿಪ್ರಾಯವನ್ನು ಸಿದ್ಧಾಂತಾಗಮವು—

ಯಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ |
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮಶಿಷ್ಟಾ ಸನಾತನೀ ||

ಎಂಬೀ ಶ್ಲೋಕದಿಂದ ಬೋಧಿಸುತ್ತಿರುವುದು.

ಅಮ್ಬಿಕೇ ರುದ್ರ ಪಶುಪ್ತಿಂ ಜುಷಸ್ವೈಷ ತೇ ರುದ್ರಭಾಗಃ ಸಹ ಸ್ವಸ್ರಾಂಬಿಕಯಾ ತಂ ಜುಷಸ್ವ ||

ಎಂಬೀ ಯಜುರ್ವೇದಮಂತ್ರದಲ್ಲಿರುವ "**ಸ್ವಸ್ರಾ—ಅಂಬಿಕಯಾ**" ಎಂಬ ಪದಗಳನ್ನು ಪರ್ಯಾಲೋಚಿಸಿದರೆ, ಪರಮಾತ್ಮನಲ್ಲಿ ಶಕ್ತಿಯು ಸ್ವಾಭಾವಿಕವಾಗಿರುವುದೆಂದು ಸಿದ್ಧವಾಗುವುದು.

"ನಮಃ ಸೋಮಾಯ ಚ ರುದ್ರಾಯ ಚ"

ಎಂಬ ಶ್ರೀರುದ್ರಮಂತ್ರವೂ ಸಹ ಪರಮೇಶ್ವರನು ಉಮಾರೂಪಶಕ್ತಿಯಿಂದ ಯುಕ್ತನಾಗಿರುವನೆಂದು ಬೋಧಿಸುತ್ತಿರುವುದು. ಇದೇ ಅಭಿಪ್ರಾಯವನ್ನು ಕೈವಲ್ಯಶ್ರುತಿಯು—

"ಉಮಾಸಹಾಯಂ ಪರಮೇಶ್ವರಂ ಪ್ರಭುಂ"

ಎಂಬ ಮಂತ್ರದಿಂದ ಸಮರ್ಥಿಸುತ್ತಿರುವುದು. ಇದೇ ರೀತಿಯಾಗಿ ಅನೇಕ ಶ್ರುತಿವಾಕ್ಯಗಳು ಶಕ್ತಿನಿತ್ಯತ್ವವನ್ನೂ, ಶಿವಸಮವೇತತ್ವವನ್ನು ಪ್ರತಿಪಾದಿಸುತ್ತಿರುವವು.

ತದೀಯಾ ಪರಮಾಶಕ್ತಿಃ ಸಚ್ಚಿದಾನಂದಲಕ್ಷಣಾ |
ಸಮಸ್ತಲೋಕನಿರ್ಮಾಣಸಮವಾಯಸ್ವರೂಪಿಣೀ ||
ತದಿಚ್ಛಯಾಭವತ್ಸಾಕ್ಷಾತ್ತತ್ಸ್ವರೂಪಾನುಕಾರಿಣೀ ||

ಎಂದು ಶ್ರೀ ರೇಣುಕಭಗವತ್ಪಾದರು ಅಪ್ಪಣೆಕೊಡಿಸಿದಂತೆ ಸಚ್ಚಿದಾನಂದರೂಪವಾದ ಪರಶಿವನ ಶಕ್ತಿಯು ಸಮಸ್ತಲೋಕಗಳ ನಿರ್ಮಾಣಕ್ಕಾಗಿ ಅವನಲ್ಲಿ ಸಮವಾಯಸಂಬಂಧದಿಂದಿದ್ದು, ಅವನ ಇಚ್ಛೆಗನುಸಾರವಾಗಿ ಸಾಕ್ಷಾತ್ ಅವನ ಸ್ವರೂಪವೇ ಆಗುವುದು. ಅರ್ಥಾತ್ ವಿಮರ್ಶಶಕ್ತಿಯು ಪರಶಿವನಿಗೆ ಅಭಿನ್ನವಾಗಿದ್ದು ವಿಶ್ವೋತ್ಪಾದನಕಾರಣೀಭೂತವಾಗಿರುವುದು.

ಲೋಕವಿಖ್ಯಾತನಾದ ಕಾಲಿದಾಸಮಹಾಕವಿಯು ತನ್ನಿಂದ ರಚಿಸಲ್ಪಟ್ಟ ರಘುವಂಶ ಕಾವ್ಯದ ಆರಂಭದಲ್ಲಿ—

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ |
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ||

ಎಂದು ಮಂಗಲವನ್ನಾಚರಿಸಿ, ಈ ಮಂಗಲಶ್ಲೋಕದಲ್ಲಿ ಪಾರ್ವತೀಪರಮೇಶ್ವರರು ಶಬ್ದಾರ್ಥದಂತೆ ನಿತ್ಯಸಂಬಂಧದಿಂದಿರುವರೆಂದು ಉಲ್ಲೇಖಿಸಿರುತ್ತಾನೆ. ಪಾರ್ವತೀಪರಮೇಶ್ವರರೆಂದರೆ ಶಕ್ತಿ ಶಿವರೆಂದರ್ಥವು. ಶಬ್ದವನ್ನು ಬಿಟ್ಟು ಅರ್ಥವು ಹೇಗೆ ಇರುವುದಿಲ್ಲವೋ, ಅರ್ಥವನ್ನು ಬಿಟ್ಟು ಶಬ್ದವು ಹೇಗೆ ಇರುವುದಿಲ್ಲವೋ ಹಾಗೆ ಶಿವನನ್ನು ಬಿಟ್ಟು ಶಕ್ತಿಯೂ, ಶಕ್ತಿಯನ್ನು ಬಿಟ್ಟು ಶಿವನೂ ಇರುವುದಿಲ್ಲವೆಂದು ಈ ಮಹಾಕವಿಯ ಅಭಿಪ್ರಾಯವಾಗಿರುವುದು.

ವೀರಶೈವಸಿದ್ಧಾಂತದಲ್ಲಿ ಶಕ್ತಿ ಮತ್ತು ಶಕ್ತಿಮತ್ಪದಾರ್ಥಗಳಿಗೆ ಭೇದಾಭೇದಗಳು ಹೇಳಲ್ಪಟ್ಟಿರುವುವು.

ಏಷಾ ಶಕ್ತಿಃ ಶಿವಾಖ್ಯೇತಚ್ಛಕ್ತಿಮಾನುಚ್ಯತೇ ಶಿವಃ |
ಶಕ್ತಿಶಕ್ತಿಮತೋರ್ಭೇದಂ ವದಂತಿ ಪರಮಾರ್ಥತಃ ||
ಅಭೇದಂ ಚಾನುಪಶ್ಯಂತಿ ಯೋಗಿನಸ್ತತ್ತ್ವಚಿಂತಕಾಃ ||

ಎಂಬ ಕೂರ್ಮಪುರಾಣವಾಕ್ಯಾನುಸಾರವಾಗಿ ಶಿವಶಕ್ತಿಯರಿಗೆ ಪಾರಮಾರ್ಥಿಕವಾಗಿ ಭೇದಾಭೇದಗಳು ಉಕ್ತವಾಗಿರುವುವು.

ವೀರಶೈವಸಿದ್ಧಾಂತದಲ್ಲಿ ಬ್ರಹ್ಮವು ನಿರ್ವಿಶೇಷವಾಗಿರದೆ ಸವಿಶೇಷವಾಗಿರುವುದು. ಪರಶಿವಬ್ರಹ್ಮವು ಶಕ್ತಿವಿಶಿಷ್ಟವಾದುದರಿಂದ ಸವಿಶೇಷವೆನಿಸಿಕೊಳ್ಳುವುದು. ಬ್ರಹ್ಮವು ಸವಿಶೇಷವಾದುದರಿಂದಲೇ ಚರಾಚರಾತ್ಮಕಜಗದುತ್ಪತ್ತಿಕಾರಣೀಭೂತವಾಗಿರುವುದು. ಶಕ್ತಿವಿಶಿಷ್ಟವಾದ ಬ್ರಹ್ಮದಿಂದುತ್ಪನ್ನವಾದ ಜಗತ್ತೂ ಕೂಡ ಶಕ್ತಿವಿಶಿಷ್ಟವಾಗಿರುವುದು. ಕಾರಣಗುಣಗಳು ಕಾರ್ಯದಲ್ಲಿ ಬರಬೇಕಷ್ಟೆ! ನಾವು ಈ ಜಗತ್ತಿನಲ್ಲಿರತಕ್ಕ ಪ್ರತಿಯೊಂದು ಪದಾರ್ಥವನ್ನೂ ಪರ್ಯಾಲೋಚಿಸಿದ್ದಾದರೆ ಪ್ರತಿಯೊಂದು ಪದಾರ್ಥದಲ್ಲಿಯೂ ಒಂದೊಂದು ತರಹದ ಶಕ್ತಿಯಿರುವುದು ಕಂಡುಬರುವುದು. ಪೃಥಿವಿಯಲ್ಲಿ ಧಾರಣಶಕ್ತಿಯೂ, ಜಲದಲ್ಲಿ ಆಪ್ಯಾಯನಶಕ್ತಿಯೂ, ತೇಜಸ್ಸಿನಲ್ಲಿ ಉಜ್ಜ್ವಲನಶಕ್ತಿಯೂ, ವಾಯುವಿನಲ್ಲಿ ಸ್ಪಂದನಶಕ್ತಿಯೂ, ಆಕಾಶದಲ್ಲಿ ವ್ಯಾಪನಶಕ್ತಿಯೂ, ಆತ್ಮನಲ್ಲಿ ಬುದ್ಧಿಶಕ್ತಿಯೂ ಇರುವವಷ್ಟೆ! ಅಲ್ಲದೆ ವೃಕ್ಷಾದಿಗಳಲ್ಲಿ ಜಲಾಕರ್ಷಣಾದಿಶಕ್ತಿಗಳೂ, ಅಗ್ನ್ಯಾದಿಗಳಲ್ಲಿ ದಾಹಾದಿಶಕ್ತಿಗಳೂ, ಸೂಜಿಗಲ್ಲಿನಲ್ಲಿ ಸೂಜಿಯನ್ನು ಆಕರ್ಷಿಸುವ ಶಕ್ತಿಯೂ, ಒಂಟೆಯಲ್ಲಿ ಶ್ವಾಸದ್ವಾರಾ ಸರ್ಪಾಕರ್ಷಣಶಕ್ತಿಯೂ, ಇದೇ ರೀತಿಯಾಗಿ ಬ್ರ

ಪ್ರಪಂಚಾಂತರ್ಗತ ಸಕಲಪದಾರ್ಥಗಳಲ್ಲಿಯೂ ಒಂದೊಂದು ವಿಧವಾದ ಶಕ್ತಿಯು ಇರುವುದು ಲೋಕದಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯಕ್ಷವಾಗಿ ಕಂಡುಬರುವುದಷ್ಟೆ! ಇದರಿಂದ ಸಕಲಚರಾಚರಾತ್ಮಕವಾದ ಜಗತ್ತು ಶಕ್ತಿವಿಶಿಷ್ಟವಾಗಿರುವುದೆಂದೂ, ಇಂಥ ಶಕ್ತಿವಿಶಿಷ್ಟ ಜಗತ್ತನ್ನು ನಿರ್ಮಿಸಿದ ಬ್ರಹ್ಮವು ಅರ್ಥಾತ್ ಶಕ್ತಿವಿಶಿಷ್ಟವಾದುದೆಂದೂ ಸರ್ವರಿಗೂ ಅನುಭವದಿಂದ ಕಂಡುಬರುವುದು

ಸತ್ ಚಿತ್-ಆನಂದರೂಪವಾದ ಬ್ರಹ್ಮವು **"ಅಸ್ಮಿ-ಪ್ರಕಾಶೇ-ನಂದಾಮಿ"** ಅಂದರೆ 'ನಾನು ಇದ್ದೇನೆ-ಪ್ರಕಾಶಿಸುತ್ತೇನೆ-ಆನಂದಿಸುತ್ತೇನೆ' ಎಂಬ ಅನುಭವದಿಂದ ಕೂಡಿರುವುದಷ್ಟೆ! ಈ ಅನುಭವವೇ ಆ ಬ್ರಹ್ಮದ ವಿಮರ್ಶಶಕ್ತಿಯು ಈ ಅನುಭವವು ಆ ಪರಬ್ರಹ್ಮದಲ್ಲಿರದಿದ್ದರೆ, ಆ ಬ್ರಹ್ಮಕ್ಕೆ ಪ್ರಕಾಶರೂಪವಾದ ಸ್ಫಟಿಕಶಿಲೆಯಂತೆ ಜಡವೆಂದು ಹೇಳಬೇಕಾಗುವ ಪ್ರಸಂಗವು ಬರುವುದು ಸೌಂದರ್ಯವಿಶಿಷ್ಟನಾದ ಅಂಧನಿಗೆ ತನ್ನ ಸೌಂದರ್ಯವನ್ನು ತಿಳಿಯುವ ಶಕ್ತಿಯಿಲ್ಲದಿರುವುದರಿಂದ ಅವನಿಗೆ ಅವನ ಸೌಂದರ್ಯವು ವ್ಯರ್ಥವಾಗುವಂತೆ, ಬ್ರಹ್ಮಕ್ಕೆ ತನ್ನ ಸಚ್ಚಿದಾನಂದ ಸ್ವರೂಪವನ್ನು ತಿಳಿಯುವ ಶಕ್ತಿಯಿಲ್ಲದಿದ್ದರೆ, ತನ್ನಲ್ಲಿರುವ ಸಚ್ಚಿದಾನಂದಸ್ವರೂಪಗಳು ವ್ಯರ್ಥಗಳಾಗುವುವಷ್ಟೆ! ಆದುದರಿಂದ ಬ್ರಹ್ಮದಲ್ಲಿ ಸಚ್ಚಿದಾನಂದರೂಪಾನುಭವಶಕ್ತಿಯನ್ನು ಒಪ್ಪಲೇಬೇಕಾಗುವುದು ಇದರಿಂದ ಬ್ರಹ್ಮವು ಶಕ್ತಿವಿಶಿಷ್ಟವೆಂದು ಸಿದ್ಧವಾಗುವುದು. ಬ್ರಹ್ಮನಿಷ್ಠವಾದ ವಿಮರ್ಶಶಕ್ತಿಯೇ ಸೂಕ್ಷ್ಮಚಿದಚಿದಾತ್ಮಕಶಕ್ತಿಯೆನಿಸುವುದು ಪರಶಿವಬ್ರಹ್ಮದ ಸೂಕ್ಷ್ಮಚಿಚ್ಛಕ್ತಿಯು ಸರ್ವಜ್ಞತಾರೂಪವಾಗಿರುವುದು ಸೂಕ್ಷ್ಮಾಚಿಚ್ಛಕ್ತಿಯು ಸರ್ವಕರ್ತೃತಾರೂಪವಾಗಿರುವುದು ಈ ಎರಡು ವಿಧವಾದ ಶಕ್ತಿಗಳಿಗೆ ಆಶ್ರಯವಾದ ಇಚ್ಛಾಶಕ್ತಿಯು ವಿಮರ್ಶಶಕ್ತಿರೂಪವಾಗಿರುವುದು ಈ ಸೂಕ್ಷ್ಮಚಿದಚಿದಾತ್ಮಕ ಶಕ್ತಿವಿಶಿಷ್ಟ ಪರಶಿವಬ್ರಹ್ಮವು **"ಅಥಾತೋ ಬ್ರಹ್ಮಜಿಜ್ಞಾಸಾ"** "ಚೈತನ್ಯಮಾತ್ಮಾ" ಇತ್ಯಾದಿ ಬ್ರಹ್ಮಸೂತ್ರ ಶಿವಸೂತ್ರಗಳಿಂದ ವೇದಾಂತಶಾಸ್ತ್ರಪ್ರತಿಪಾದ್ಯವಾಗಿರುವುದು

ಗುಣತ್ರಯಾತ್ಮಿಕಾ ಶಕ್ತಿರ್ಬ್ರಹ್ಮನಿಷ್ಠಾ ಸನಾತನೀ ||

ಎಂದು ವೀರಶೈವಮತಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಅಪ್ಪಣೆಕೊಡಿಸಿದಂತೆ ವಿಮರ್ಶಶಕ್ತಿಯು ಬ್ರಹ್ಮನಿಷ್ಠವೂ ಸನಾತನವೂ ಆಗಿರುವುದು ಈ ವಿಮರ್ಶಶಕ್ತಿಯಲ್ಲಿ ಮಯೂರಾಂಡರಸನ್ಯಾಯದಂತೆ (ನವಿಲಿನ ತತ್ತಿಯ ರಸದಲ್ಲಿ ಮುಂದೆ ಉತ್ಪನ್ನವಾಗುವ ನವಿಲಿನ ಪಾದರೆಕ್ಕೆ ನಾನಾವಿಧ ಬಣ್ಣಗಳು ಅಡಕವಾಗಿರುವಂತೆ) ಸಕಲ ಚರಾಚರಾತ್ಮಕವಾದ ಜಗತ್ತು ಅಡಕವಾಗಿರುವುದು. ಚರಾಚರವಿಶ್ವಾತ್ಮಕವಾದ ಆ ವಿಮರ್ಶಶಕ್ತಿಯು ಸ್ವವಿಭಾಗಪರಾಮರ್ಶದಶೆಯಲ್ಲಿ ಸತ್ವಗುಣ-ರಜೋಗುಣ-ತಮೋಗುಣರೂಪವುಳ್ಳುದಾಗುವುದು ಆ ವಿಮರ್ಶಶಕ್ತಿಯ ಅಂಶದಲ್ಲಿ ಉತ್ತಮಕರ್ತೃತ್ವವಿನಿರ್ಮುಕ್ತಜ್ಞಾನಾಂಶದಿಂದ ಸತ್ವಗುಣಾತ್ಮಕವಾದ ವಿದ್ಯಾಶಕ್ತಿಯು ಉತ್ಪನ್ನವಾಗುವುದು ಉತ್ತಮಜ್ಞಾತೃತ್ವ ವಿನಿರ್ಮುಕ್ತಕ್ರಿಯಾಂಶದಿಂದ ಕಿಂಚಿತ್ಸತ್ವತಮೋಗುಣಮಿಶ್ರವಾದ ರಜೋಗುಣಶಕ್ತಿಯು ಉತ್ಪನ್ನವಾಗುವುದು ಜ್ಞಾನಕ್ರಿಯೆಗಳಿಗೆ ಸ್ವಾಭಾವಿಕವಾಗಿ ಐಕ್ಯವಿದ್ದರೂ ಸೃಷ್ಟಿದಶೆಯಲ್ಲಿ ಜ್ಞಾನಶಕ್ತಿ ಕ್ರಿಯಾಶಕ್ತಿಗಳು ಪರಸ್ಪರವಾಗಿ ವಿಭಾಗವನ್ನು ಹೊಂದುವುದರಿಂದ "ಜ್ಞಾನಂ ಕ್ರಿಯಾ ನಭವತಿ ಕ್ರಿಯಾ ಜ್ಞಾನಂ ನಭವತಿ" ಜ್ಞಾನವು ಕ್ರಿಯೆಯಾಗುವುದಿಲ್ಲ, ಕ್ರಿಯೆಯು ಜ್ಞಾನವಾಗುವುದಿಲ್ಲವೆಂಬ ಭೇದಬುದ್ಧಿರೂಪವಾದ ತಮೋಗುಣಶಕ್ತಿಯು ಉತ್ಪನ್ನವಾಗುವುದು.

ಈ ತಮೋಗುಣಶಕ್ತಿಯೇ ಜಡವಾದ ಮಾಯೆಯೆನಿಸುವುದು ಸೂರ್ಯಕಿರಣವು ಸೂರ್ಯಕಾಂತಶಿಲೆಗೆ ಸ್ಪರ್ಶಿಸಿ ಪ್ರತಿಸ್ಫುರಣ (ಎದುರು) ಗತಿಯಿಂದ ಅಗ್ನಿಕಣರೂಪವಾಗಿ ಅರಳೆಯನ್ನು ಸೇರಿ ಅಗ್ನ್ಯಾಕಾರವನ್ನು ಧರಿಸುವಂತೆ, ಶಿವನ ವಿಮರ್ಶಶಕ್ತಿಯು ಜಡಮಾಯಾಶಕ್ತಿಯನ್ನು ಪ್ರತಿಸ್ಫುರಣಗತಿಯಿಂದ ಪ್ರವೇಶಿಸಿ ಸುಖದುಃಖಮೋಹಗಳನ್ನುಂಟುಮಾಡುವ ಸತ್ವರಜಸ್ತಮೋಗುಣಾತ್ಮಕವಾದ ಪ್ರಕೃತಿಯೆನಿಸುವುದು. ಈ ಪ್ರಕೃತಿಗೆ ವೀರಶೈವಾಚಾರ್ಯರು 'ಚಿತ್ತ'ವೆಂದು ಕರೆಯುವರು ಈ ಚಿತ್ತಶಕ್ತಿವಿಶಿಷ್ಟವಾದ ಶಿವಪ್ರಕಾಶರೂಪಶಿವಾಂಶವೇ ಜೀವನೆನಿಸುವನು ಈ ಜೀವನು ಸ್ಥೂಲಚಿದಚಿದಾತ್ಮಕಶಕ್ತಿವಿಶಿಷ್ಟನಾಗಿರುವನು ಜೀವನ ಸ್ಥೂಲಚಿಚ್ಛಕ್ತಿಯು ಕಿಂಚಿದ್ಜ್ಞತಾರೂಪವಾಗಿರುವುದು ಸ್ಥೂಲಾಚಿಚ್ಛಕ್ತಿಯು ಕಿಂಚಿತ್ಕರ್ತೃತಾರೂಪವಾಗಿರುವುದು ಜೀವನು ಈ ಎರಡು ವಿಧಶಕ್ತಿಗಳಿಗೆ ಆಶ್ರಯವಾದ ಇಚ್ಛಾಶಕ್ತಿಯಿಂದ ಕೂಡಿಕೊಂಡಿರುವನು ಅರ್ಥಾತ್ ಇಚ್ಛಾಶಕ್ತಿವಿಶಿಷ್ಟನಾಗಿರುವನು

"ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ"

ಎಂದು ಶ್ರೀ ರೇಣುಕಭಗವತ್ಪಾದರು ಅಪ್ಪಣೆಕೊಡಿಸಿದಂತೆ ಜೀವನು ಶಿವಾಂಶರೂಪನಾಗಿರುವನು. ಇದೇ ಅಭಿಪ್ರಾಯವನ್ನು ಬ್ರಹ್ಮಸೂತ್ರವು **"ಅಂಶೋ ನಾನಾವ್ಯಪದೇಶಾತ್"** ಎಂಬ ಸೂತ್ರದಿಂದ ಸಮರ್ಥಿಸುತ್ತಿರುವುದು

ಮುಂಡಕಶ್ರುತಿಯು:—

"ಯಥಾ ಸುದೀಪ್ತಾತ್ ಪಾವಕಾತ್ ವಿಸ್ಫುಲಿಂಗಾಃ ಸಹಸ್ರಶಃ ಪ್ರಭವಂತೇ ಸರೂಪಾಸ್ತಥಾಕ್ಷರಾದ್ವಿವಿಧಾಃ ಸೋಮ್ಯಭಾವಾಃಪ್ರಜಾಯಂತೇ ತತ್ರಚೈವಾಪಿಯಂತಿ"

ಅಗ್ನಿಯಿಂದ ಅಗ್ನ್ಯಂಶರೂಪಗಳಾದ ಅನಂತಾನಂತ ಅಗ್ನಿಕಣಗಳು ಹೇಗೆ ಆವಿರ್ಭವಿಸುವವೋ, ಹಾಗೆಯೇ ಪರಬ್ರಹ್ಮದಿಂದ ಅವನ ಅಂಶಭೂತರಾದ ಅನಂತಾನಂತ ಜೀವರು ಆವಿರ್ಭವಿಸುವರೆಂದೂ, ಅವನಲ್ಲಿಯೇ ಲಯವನ್ನು ಹೊಂದುವರೆಂದೂ ಸಾರುತ್ತಿರುವುದು.

ಅಗ್ನಿಯಿಂದಾವಿರ್ಭವಿಸಿದ ಅಗ್ನಿಕಣಗಳಿಗೂ ಅಗ್ನಿಗೂ ಅತ್ಯಂತ ಭೇದವನ್ನಾಗಲಿ ಅಥವಾ ಅತ್ಯಂತಾಭೇದವನ್ನಾಗಲಿ ಹೇಳಲಿಕ್ಕೆ ಬರುವುದಿಲ್ಲ ಆದರೆ ಭೇದಾಭೇದವನ್ನು ಮಾತ್ರ ಹೇಳಬೇಕಾಗುವುದು ಅದರಂತೆ ಶಿವನಿಂದಾವಿರ್ಭವಿಸಿ ಶಿವಾಂಶರೆನಿಸಿದ ಜೀವರಿಗೂ ಶಿವನಿಗೂ ಅತ್ಯಂತ ಭೇದವನ್ನಾಗಲಿ ಅಥವಾ ಅತ್ಯಂತಾಭೇದವನ್ನಾಗಲಿ ಹೇಳಲಿಕ್ಕಾಗುವುದಿಲ್ಲ ಆದರೆ ಭೇದಾಭೇದವನ್ನು ಮಾತ್ರ ಹೇಳಬೇಕಾಗುವುದು ಅಂಶಾಂಶಿಗಳಿಗೆ ಅತ್ಯಂತಾಭೇದವನ್ನು ಹೇಳಿದರೆ, ಅಗ್ನಿಯಿಂದಾಗುವ ಪಾಕಾದಿಕ್ರಿಯೆಗಳು ಅಗ್ನ್ಯಂಶಗಳಾದ ಕಿಡಿಗಳಿಂದಾದರೂ ಆಗಬೇಕಾದೀತು? ಅತ್ಯಂತ ಭೇದವನ್ನು ಹೇಳಿದರೆ ಅಗ್ನಿಗೆ ಅತ್ಯಂತ ಭಿನ್ನಗಳಾದ ಜಲಾದಿಗಳಿಂದ ದಾಹಕಾರ್ಯವಾಗದಿರುವಂತೆ ಅಗ್ನಿಯ ಕಿಡಿಗಳಿಂದಲೂ ದಾಹಕಾರ್ಯವಾಗದೆ ಹೋಗಬೇಕಾದೀತು? ಅಗ್ನಿಯ ಕಿಡಿಗಳು ಅರಳೆಯನ್ನು ಪ್ರವೇಶಿಸಿ ದಾಹಕಾರ್ಯವನ್ನುಂಟುಮಾಡುವುದು ಲೋಕಪ್ರಸಿದ್ಧವಷ್ಟೆ! ಇದರಂತೆ ಶಿವನಿಗೂ ಶಿವಾಂಶರೂಪರಾದ ಜೀವರಿಗೂ ಅತ್ಯಂತಾಭೇದವನ್ನು ಹೇಳಿದರೆ, ಶಿವನಲ್ಲಿರುವ ಸರ್ವಜ್ಞತ್ವ ಸರ್ವಕರ್ತೃತ್ವಾದಿಗಳು ಜೀವರಲ್ಲಿಯೂ ಇರಬೇಕಾದೀತು? ಅತ್ಯಂತ ಭೇದವನ್ನು ಹೇಳಿದರೆ ಶಿವನಿಗೆ ಭಿನ್ನಗಳಾದ ಘಟಪಟಾದಿಗಳಿಂದ ಜ್ಞಾನರೂಪಕಾರ್ಯವಾಗದಿರುವಂತೆ ಜೀವರಿಂದಲೂ ಆಗಬಾರದಾದೀತು? ಜೀವರಿಗೆ ಘಟಪಟಾದಿವಸ್ತುಗಳ ಜ್ಞಾನವಿರುವುದು ಸರಿಯಷ್ಟೆ! ಆದುದರಿಂದ ವೀರಶೈವಾಚಾರ್ಯರು ಶಿವನಿಗೂ ಜೀವನಿಗೂ ಪಾರಮಾರ್ಥಿಕ ಭೇದಾಭೇದವನ್ನು ಒಪ್ಪಿರುವರು ಇದರಿಂದಲೇ ವೀರಶೈವಮತಕ್ಕೆ ದ್ವೈತಾದ್ವೈತಮತವೆಂತಲೂ ನಾಮಾಂತರವು ಪ್ರಸಿದ್ಧವಾಗಿರುವುದು ಶ್ರುತಿಗಳಲ್ಲಿ **"ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ"** ಇತ್ಯಾದಿ ವಾಕ್ಯಗಳು ದ್ವೈತವನ್ನು ಪ್ರತಿಪಾದಿಸತಕ್ಕವುಗಳಾಗಿರುವುವು **"ತತ್ವಮಸಿ" "ಅಹಂ ಬ್ರಹ್ಮಾಸ್ಮಿ" "ನೇಹ ನಾನಾಸ್ತಿ ಕಿಂಚನ"** ಇತ್ಯಾದಿ ವಾಕ್ಯಗಳು ಅದ್ವೈತವನ್ನು ಪ್ರತಿಪಾದಿಸತಕ್ಕವುಗಳಾಗಿರುವುವು ಈ ಉಭಯವಿಧ ವಾಕ್ಯಗಳಿಗೂ ಸುಗಮಮಾರ್ಗದಿಂದ ಸಾರ್ಥಕ್ಯವನ್ನುಂಟುಮಾಡುವುದು ವೈದಿಕಮತಾನುಯಾಯಿಗಳ ಮುಖ್ಯಕರ್ತವ್ಯವಾಗಿರುವುದರಿಂದಲೂ, ಇದೇ ಮಾರ್ಗವನ್ನು ವೀರಶೈವಮತಾಚಾರ್ಯರು ಅನುಸರಿಸಿರುವುದರಿಂದಲೂ ಸರ್ವಶ್ರುತಿಸಮನ್ವಯವು ಈ ವೀರಶೈವಮತದಲ್ಲಿ ಆಗುವುದೆಂದು ಅತ್ಯಾನಂದದಿಂದ ಹೇಳಬೇಕಾಗಿದೆ.

ಇದೇ ವಿಷಯವನ್ನು ವೀರಶೈವಮತಭಾಷ್ಯಕಾರರಾದ ಶ್ರೀಪತಿಪಂಡಿತರು ತಮ್ಮಿಂದ ರಚಿಸಲ್ಪಟ್ಟ ಶ್ರೀಕರಭಾಷ್ಯದಲ್ಲಿ—

ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಿತೇ |
ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ ||

ಎಂದು ಉಲ್ಲೇಖಿಸಿರುವರು ಇದರಿಂದ ವೀರಶೈವಮತವು ಭೇದಾಭೇದಾತ್ಮಕವಾದುದೆಂದು ಸಿದ್ಧವಾಗುವುದು ಅಷ್ಟೆ!

ಪರಶಿವನು ಸಚ್ಚಿದಾನಂದರೂಪನೂ, ನಿತ್ಯನೂ, ನಿರ್ವಿಕಲ್ಪನೂ ಅಪ್ರಾಕೃತವ್ಯಾಪಕನೂ, ಉಪಮಾತೀತನೂ, ಸರ್ವಜ್ಞನೂ, ಶಾಂತನೂ, ಚರಾಚರಪ್ರಪಂಚವ್ಯಾಪಕನೂ, ಸರ್ವಶಕ್ತಿಸಮನ್ವಿತನೂ ಆಗಿರುವನ.

ಶಿವಾಂಶೀಭೂತನಾದ ಜೀವನು ಕಿಂಚಿದ್ಜ್ಞನೂ, ಕಿಂಚಿತ್ಕರ್ತೃವೂ, ಕಿಂಚಿಚ್ಛಕ್ತಿಸಮನ್ವಿತನೂ, ಅವಿದ್ಯಾಮೋಹಿತನೂ, ಬ್ರಹ್ಮೈಕ್ಯಜ್ಞಾನವರ್ಜಿತನೂ, ಘೋರಾಪಾರಭಿನ್ನರಸಂಸಾರತಾಪತ್ರಯಾನಲದಂದಹ್ಯಮಾನನೂ, ಜನನಮರಣಾನ್ವಿತನೂ, ಬದ್ಧನೂ ಆಗಿರುವನು

ಸಚ್ಚಿದಾನಂದರೂಪಿಯಾದ ಪರಶಿವಬ್ರಹ್ಮದಲ್ಲಿ ಅವಿನಾಭಾವಸಂಬಂಧದಿಂದಿರುವ ವಿಮರ್ಶಶಕ್ತಿಯ ಸ್ಫುರಣವೇ ಶಿವ ಶಕ್ತಿ ಸದಾಶಿವ-ಈಶ್ವರ-ಶುದ್ಧವಿದ್ಯಾಮಾಯಾ ಕಲಾ ವಿದ್ಯಾ ರಾಗ ಕಾಲ-ನಿಯತಿ-ಪುರುಷ-ಪ್ರಕೃತಿ ಬುದ್ಧಿ-ಅಹಂಕಾರ-ಮನಸ್ಸು ಶ್ರೋತ್ರ-ತ್ವಕ್-ನೇತ್ರ-ಜಿಹ್ವಾ ಘ್ರಾಣ ವಾಕ್-ಪಾಣಿ-ಪಾದ-ಪಾಯು ಉಪಸ್ಥ-ಶಬ್ದ ಸ್ಪರ್ಶ-ರೂಪ-ರಸ-ಗಂಧ-ಆಕಾಶ ವಾಯು ಅಗ್ನಿ ಜಲ-ಪೃಥಿವಿಗಳೆಂಬ ಮೂವತ್ತಾರು ತತ್ತ್ವರೂಪವಾಗಿ ಪರಿಣಮಿಸುವುದು ಈ ಮೂವತ್ತಾರು ತತ್ತ್ವಗಳು ಶ್ರುತಿಪ್ರಸಿದ್ಧಗಳಾಗಿರುವುವು

(೬ ನೆಯ ಪುಟವನ್ನು ನೋಡಿ.)

ವೀರಶೈವಮತದ ಒಂದು ಜ್ಯೋತಿಯು ಮಾಯವಾಯಿತು.

ವೀರಶೈವಮತಕ್ಕೆ ಜ್ಯೋತಿಸ್ವರೂಪರೂ ಪಂಚಪೀಠಗಳಿಗೆ ಪ್ರಾಣಸ್ವರೂಪರೂ ಗುರುಭಕ್ತಿಶೂನ್ಯರನ್ನು ನಿಕರಿಸುವರೂ, ಗುರುಭಕ್ತಿಯುಕ್ತ ಜನಮನೋರಂಜಕರೂ, ಗುರುಲಿಂಗಜಂಗಮ ಕರಣಸಂಯೋಜನಾಸಕ್ತರೂ ಸಾಮಾಜಿಕ ಆರ್ಥಿಕ ನೈತಿಕ ಧಾರ್ಮಿಕ ಕಾರ್ಯಗಳಲ್ಲಿ ವಿಚಕ್ಷಣರೂ, ದಾನಧರ್ಮಾಸಕ್ತರೂ, ಸನಾತನ ಧರ್ಮಾಚರಣದಕ್ಷಚಿತ್ತರೂ ಸತ್ಕುಲಪ್ರಸೂತರೂ ಧೀಮಂತರೂ, ಶ್ರೀಮಂತರೂ ಆದ ಶ್ರೀಮಾನ್ ಮಾಗಾನಹಳ್ಳಿ ಷಡಕ್ಷರಪ್ಪನವರು ಕಳೆದ ತಿಂಗಳು ೨೮ನೆಯ ತಾರೀಖಿನ ದಿವಸ ನಿವಾಸಸ್ಥಾನವಾದ ದಾವಣಗೆರೆಯಲ್ಲಿ ತಮ್ಮ ಭೌತಿಕಶರೀರವನ್ನು ತ್ಯಜಿಸಿದರೆಂಬ ವಿಷಯವನ್ನು ಕೇಳಿದರೆ ಯಾವ ವೀರಶೈವನಿಗೆ ವ್ಯಸನವೆನಿಸಲಿಕ್ಕಿಲ್ಲ? ಈ ಮಹಾಶಯರು ವೀರಶೈವಮತದಲ್ಲಿ ಮಹಾಮಣಿಯಂತೆ ಪ್ರಕಾಶಿಸುತ್ತಿದ್ದರು. ಮತಾಭಿಮಾನವಂತೂ ಇವರಲ್ಲಿ ತುಂಬಿ ತುಳುಕುತ್ತಿತ್ತು. ಸಂಕಷ್ಟದಲ್ಲಿರುವವರ ಸಹಾಯವೇ ಇವರ ಧ್ಯೇಯವಾಗಿತ್ತು. ಸಂಕಷ್ಟಿತರ ವಿಜಯವೇ ಇವರ ವಿಜಯವಾಗಿತ್ತು. ಇವರ ರೋಮರೋಮಕೂಪಗಳಿಂದಲೂ ಗುರುಭಕ್ತಿಯು ಹೊರಸೂಸುತ್ತಿತ್ತು. ಇವರು ವಾಸಿಸುವ ಪವಿತ್ರಮಂದಿರವು ಗುರುಭಕ್ತಿಯ ವೀಡಾಗಿತ್ತು. ಇವರ ಮನೋಮಂದಿರವು ಗುರುಪಾದಪಂಕಜಪುಂಜರಾಜಿತವಾಗಿತ್ತು. ಅಸಾಧಾರಣಸದ್ಗುಣಗಣಸಂಭರಿತರಾದ ಈ ಮಹಾಪುರುಷರ ವಿಯೋಗದಿಂದ ವೀರಶೈವಮತದ ಒಂದು ಕಳೆಯೇ ಕಳೆಚಿಬಿತ್ತೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಈ ಮಹಾಶಯರಿಗೆ ನಾಲ್ಕುಜನ ಸತ್ಪುತ್ರರೂ ೫೬ ಜನ ಪೌತ್ರರೂ ಇರುವರು. ಜಗದಾಚಾರ್ಯರ ಅನುಗ್ರಹಬಲದಿಂದ ಇವರಲ್ಲಿಯೂ ಆ ತಂದೆಯ ಅನುಪಮಶಕ್ತಿಯು ಪ್ರಾಪ್ತವಾಗಿ ಅವರ ವಂಶವು ಸರ್ವತೋಮುಖವಾಗಿ ಪ್ರಕಾಶಿಸಲೆಂದೂ, ಮೃತರ ಆತ್ಮನಿಗೆ ಶ್ರೀ ಜಗದಾಚಾರ್ಯರು ಶಾಂತಿಯನ್ನೀಯಲೆಂದೂ ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇವೆ.

ಶ್ರೀಮಾನ್ ಮಾಗಾನಹಳ್ಳಿ ಷಡಕ್ಷರಪ್ಪನವರ ನಿಧನ

ದಾವಣಗೆರೆ ನಿವಾಸಿಗಳಾದ ಗುರುಭಕ್ತಶಿಖಾಮಣಿ ಶ್ರೀಮಾನ್ ಮಾಗಾನಹಳ್ಳಿ ಷಡಕ್ಷರಪ್ಪನವರು ತಾ|| ೨೮—೩—೧೯೩೫ ಗುರುವಾರ ಸಾಯಂಕಾಲ ೭|| ಘಂಟೆಯ ಸಮಯದಲ್ಲಿ ಶಿವಾಧೀನರಾದರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ವಿಷಾದವೆನಿಸುತ್ತದೆ. ಇವರಿಗೆ ೭೬ ವರ್ಷ ವಯಸ್ಸಾಗಿತ್ತು. ಈ ಮಹಾಶಯರು ಸನ್ಮಾನಸಂಪನ್ನರೂ ಪುತ್ರಪುತ್ರೀಪೌತ್ರ ಸಮುದಾಯದಿಂದ ರಾರಾಜಿಸುತ್ತಿದ್ದರು. ಇವರ ಪೂರ್ವಜರು ಯಾವಾಗಲೂ ಗುರುಲಿಂಗಜಂಗಮಾರಾಧಕರೂ, ದಾನಧರ್ಮಾದಿ ರಸಿಕಾಗ್ರೇಸರರೂ ಸದಾಚಾರಿಗಳೂ, ಸದ್ಗುಣಿಗಳೂ ಕಾರ್ಯನಿರ್ವಾಹಕರೂ ಆಗಿರುವರು. ಇಂತಹ ಸತ್ಕುಲಪ್ರಸೂತರೆನಿಸಿದ ಶ್ರೀಮಾನ್ ಷಡಕ್ಷರಪ್ಪನವರಲ್ಲಿ ಕೈಕೊಂಡ ಕಾರ್ಯಸಾಧನಪ್ರಯತ್ನವು ಯಾವಾಗಲೂ ಒಂದು ರೀತಿಯಾಗಿಯೇ ಇದ್ದಿತು. ಸರ್ವಜನರಲ್ಲಿ ಗೌರವಾರ್ಹರಾಗಿ ಧನಿಮಹಾಶಯರೆನಿಸಿಕೊಂಡ ಕೀರ್ತಿಯನ್ನು ಪಡೆದಿದ್ದರು. ಗುರುವರ್ಗದಲ್ಲಿ ಅತ್ಯಂತ ಶ್ರದ್ಧಾನ್ವಿತರಿದ್ದು ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಸ್ವಾಮಿಗಳವರಿಗೆ ತಮ್ಮ ಮನಸ್ಸನ್ನು ಸಿಂಹಾಸನವನ್ನಾಗಿಯೇ ಮಾಡಿದ್ದರು. ಪಂಡಿತರಲ್ಲಿದ್ದ ಇವರ ಅಭಿಮಾನವು ಅವರ್ಣನೀಯವಾಗಿದ್ದಿತು. ಯಾರಾರನ್ನು ಹೇಗೆ ಗೌರವಿಸಬೇಕೆಂಬುದನ್ನು ಇವರಲ್ಲಿಯೇ ಕಲಿತುಕೊಳ್ಳಬೇಕಾಗಿದ್ದಿತು. ಶ್ರೀ ಜಗದ್ಗುರು ರಂಭಾಪುರೀ ಪೀಠದ ಕರ್ತೃತ್ವಾಧಿಕಾರ ನಿರ್ಣಯ ಸಮಯ ಮೊದಲುಗೊಂಡು ತೋರಿಸಿದ ತಮ್ಮ ಸಾಹಸಕ್ಕೆ ಮಹಾಸ್ವಾಮಿಗಳವರನ್ನು ತಮ್ಮಲ್ಲಿಗೆ ದಯಮಾಡಿಸಿಕೊಂಡು 'ನ ಗತೋ ನ ಭವಿಷ್ಯತಿ' ಎಂಬಂತೆ ಆಚಂದ್ರಾರ್ಕವಾಗಿ ಮರೆಯದಂತಹ ಉತ್ಸವವನ್ನಾಗಿ ಅದನ್ನೇ ಸಲವನ್ನಾಗಿ ಮಾಡಿ ವಿಖ್ಯಾತರಾಗಿದ್ದರು. ಇವರು ಶಿವಾನುಗ್ರಹದಿಂದ ಸರ್ವತ್ರ ಜಯವನ್ನೇ ಹೊಂದಿದರು. ಇಂತಹ ಚತುರಸ್ವಭಾವದವರಾದ ಷಡಕ್ಷರಪ್ಪನವರು ತಮ್ಮ ಅಶಕ್ತಸ್ಥಿತಿಯನ್ನು ತಿಳಿದುಕೊಂಡ ತಮ್ಮ ಉತ್ತರಕ್ರಿಯೆ ವಿಷಯದಲ್ಲಿಗೆ ಮನೆಯಲ್ಲಿ ರುದ್ರಾಭಿಷೇಕ, ಶಿವಸಹಸ್ರನಾಮಪಾರಾಯಣ, ಪುರಾಣಪ್ರವಚನ, ಒಂದೊಂದು ದಿನ ವಿಧವಿಧವಾದ ದಾನ ಮುಂತಾದ ಸತ್ಕಾರ್ಯಗಳನ್ನು ನಡೆಸಲು ಪುತ್ರರಿಗೆ ಅಪ್ಪಣೆಯನ್ನು ಮಾಡಿದ್ದರಿಂದ ಪಿತೃಭಕ್ತಿತತ್ಪರರಾದ ಪುತ್ರರು ಬಹುಶ್ರದ್ಧೆಯಿಂದ ಅವರ ಸಂಕಲ್ಪಕ್ಕೆ ಕೊರತೆಯಾಗದಂತೆ ಎಲ್ಲ ಸತ್ಕಾರ್ಯಗಳನ್ನು ನಡೆಸುತ್ತ ಬಂದರು. ಇದೆಲ್ಲವನ್ನು ನೋಡಿ ಸಂತೋಷಿಸಿ ತಾ|| ೨೭—೩—೧೯೩೫ ಬುಧವಾರ ಭೂರಿ ಅನ್ನಸಂತರ್ಪಣೆಯನ್ನು ಮಾಡಿಸಿ ಮಾಹೇಶ್ವರರನ್ನು ಭಕ್ತಿಪುರಸ್ಸರವಾಗಿ ತೃಪ್ತಿಪಡಿಸಿದರು. ತಾ|| ೨೮—೩—೩೫ ನೆಯ ಗುರುವಾರ ನಿತ್ಯಕರ್ಮಗಳನ್ನು ನಡೆಯಿಸುತ್ತಲೇ ಇದ್ದರು. ಸಾಯಂಕಾಲಕ್ಕೆ ಶ್ರೀ ಜಗದ್ಗುರು ರೇಣುಕ ವಿಜಯ ಪುರಾಣವು ನಿಯಮಿತ ವೇಳೆಗೆ ಆರಂಭವಾಗಿ ಕೆಲಹೊತ್ತು ನಡೆದ ಬಳಿಕ ಶರೀರಪ್ರಕೃತಿಯು ಬದಲಾಯಿಸುವ ಸ್ಥಿತಿಯು ತಿಳಿಯಲು ಪುರಾಣವನ್ನು ನಿಲ್ಲಿಸಿ ಪಂಚಾಕ್ಷರ ಮತ್ತು ಪರಶಿವನ ನಾಮೋಚ್ಚಾರಣ ಪೂರ್ವಕ ಜಯಘೋಷವನ್ನು ಮಾಡುತ್ತಿರಲು ಮಂಗಲಘೋಷವನ್ನು ಕೇಳುತ್ತಲೇ ೭|| ಘಂಟೆಗೆ ಭೌತಿಕ ಶರೀರವನ್ನು ಬಿಟ್ಟು ಶಿವನಲ್ಲಿ ಬೆರೆದರು. ಮುಂಜಾಗ್ರತೆಯಿಂದ ಸಂಕಲ್ಪವನ್ನು ನೆರವೇರಿಸಿಕೊಂಡು ಮುಕ್ತರಾದುದು ಜನ್ಮಾಂತರ ಸಂಸ್ಕಾರಬಲವೆಂದೇ ಹೇಳಬೇಕು. ಎಲ್ಲಿಯಲ್ಲಿ ಶಕ್ತರಾದ ಅನುಕೂಲ ಪುತ್ರರೂ ಅವರ ಸಂಕಲ್ಪದ ಪ್ರಕಾರ ಕಾರ್ಯವನ್ನು ಸಾಗಿಸಿ ಪಿತೃಭಕ್ತಿಯನ್ನು ತೋರ್ಪಡಿಸಿದುದು ಇವರ ಉತ್ತರೋತ್ತರ ಅಭಿವೃದ್ಧಿಗೆ ಕಾರಣವಾಗಿರುವುದು. ತಾ|| ೨೯—೩—೩೫ ಶುಕ್ರವಾರ ದೇಹದ ಸ್ನಾನವು ನಡೆದು ಬಡವರಿಗೆ ವಿಶೇಷವಾಗಿ ಧಾನ್ಯವು ಕೊಡಲ್ಪಟ್ಟಿತು. ಬಳಿಕ ಪೇಟೆಯ ಎಲ್ಲ ಬೀದಿಗಳಲ್ಲಿ ಉತ್ಸವವು ಸಹಸ್ರಾರು ಜನಸಮುದಾಯದಲ್ಲಿ ಹೊರಟಿತು. ಅನೇಕರು ಕಾಯಿಕಪೂರ್ವಾರತಿಯಿಂದ ಗೌರವಿಸಿದರು. ಹೀಗೆ ಉತ್ಸವವು ನಡೆದು ಶಿವಾನಂದಾಶ್ರಮಭೂಮಿಗೆ ಸಾಗಿಸಲ್ಪಟ್ಟಿತು. ಕೆಲವು ವರ್ಷಗಳ ಹಿಂದೆಯೇ ವಿರಚಿತವಾಗಿದ್ದ ಸಮಾಧಿಯಲ್ಲಿ ಶರೀರವು ವಿಧ್ಯುಕ್ತವಾಗಿ ನಿಕ್ಷೇಪಿಸಲ್ಪಟ್ಟಿತು. ಅಲ್ಲಿಯೂ ದಾನಧರ್ಮಗಳು ನಡೆದವು. ಮತಭೇದವಿಲ್ಲದೆ ಸಕಲ ಮತದವರೂ ಆಗಮಿಸಿದ್ದರು. ಇಂತಹ ಉದಾರಪುರುಷನ ವಿಯೋಗವು ಬಂಧುವರ್ಗಕ್ಕಲ್ಲದೆ ಸಮಾಜಕ್ಕೂ ವಿಷಾದದಾಯಕವೇ ಆಗಿರುತ್ತದೆ. ಶ್ರೀ ಜಗದ್ಗುರು ಪಂಚಾಚಾರ್ಯರು, ಷಡಕ್ಷರಪ್ಪನವರಲ್ಲಿದ್ದ ಅದ್ಭುತ ಗುರುಭಕ್ತಿ ಸಾಹಸಾದಿ ಗುಣಗಳನ್ನು ಅವರ ಪುತ್ರರಿಗೂ ಕರುಣಿಸಿ, ಸಮಾಜ ಹಿತಾಪೇಕ್ಷಿಗಳನ್ನಾಗಿ ಮಾಡಿ ಸಕಲೇಷ್ಟಾರ್ಥಗಳಿಂದ ರಕ್ಷಿಸುವದಲ್ಲದೆ ಮೃತರಾದ ಪುಣ್ಯಜೀವಿ ಷಡಕ್ಷರಪ್ಪನವರ ಆತ್ಮಕ್ಕೂ ಶಾಂತಿಯನ್ನು ಪರಶಿವನು ದಯಪಾಲಿಸುವಂತೆ ಕೃಪೆಗೈಯಲೆಂದು ಬೇಡುತ್ತೇನೆ. ತಾ|| ೧೯—೪—೩೫ ಸೋಮವಾರ ಯಜಮಾನರ ಕೈಲಾಸಸಮಾರಾಧನೆಯೂ ಅಟ್ಟಹಾಸದಿಂದ ನೆರವೇರಿತು.

ದಾವಣಗೆರೆ

ತಾ|| ೩—೪—೩೫, ಮ|| ಮ|| ಹಾಲಸಿದ್ಧಯ್ಯ.

ಶ್ರೀ ಮಾಗಾನಹಳ್ಳಿ ಷಡಕ್ಷರಪ್ಪನವರ ನಿಧನದ ಬಗ್ಗೆ ಜಗದ್ಗುರುಗಳ ಮತ್ತು ಇತರ ಮಹಾಶಯರ ಅಭಿಪ್ರಾಯಗಳು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾ || || ಸ್ವಾಮಿಗಳವರು.

"ಶ್ರೀಮಾನ್ ಮಾಗಾನಹಳ್ಳಿ ಷಡಕ್ಷರಪ್ಪನವರು ಕೇವಲ ಗುರುಭಕ್ತಶಿರೋಮಣಿಗಳೂ ಪೀಠಾಭಿಮಾನಿಗಳೂ ನಿಃಸ್ಪೃಹರೂ ಆಗಿದ್ದರು"

Dewan Bahadur Rajasabhabhushana Sir K P. Puttana Chetty Kt C I E

"Mr Maganahalli Shadaksharappa was a respectable and respected member of the Lingayat Community and a capable man of business. His death is a great loss to the community as well as to the trade of Davangere'

Dewan Bahadur Shantaveerappa Menasinkai Retired Deputy Collector Dharwar

"Sorry for his unexpected death

ಬೆಂಗಳೂರು ವೆ|| ಜಿ. ಕೆ. ರುದ್ರಾಯ್ಯರು

"ನಮ್ಮ ಸಮಾಜದಲ್ಲಿ ಹುಲಿಯಂತಿದ್ದ ಆಪ್ತಸ್ನೇಹಿತರನ್ನು ಕಳೆದುಕೊಂಡದ್ದು ನಮ್ಮೆಲ್ಲರ ದೌರ್ಭಾಗ್ಯವೇ ಸರಿ. ಅಂಥ ಪ್ರಾಣಿಯು ನಮ್ಮಲ್ಲಿ ಹುಟ್ಟುವುದು ಕಷ್ಟ! ಅವರು ತಮ್ಮ ಜನ್ಮವನ್ನೇ ಅನೇಕ ಕಷ್ಟಬಾಧೆಗಳಿಗೆ ಒಳಪಡಿಸಿಕೊಂಡು ಬಾಳಿಹೋದ್ದಾರು. ಪೀಠಕ್ಕೆ ಗಂಧದಂತೆ ತೇದಿರುತ್ತಾರೆ. ಅವರ ಜನ್ಮವೇನೋ ಆಚಂದ್ರಾರ್ಕವಾಗಿ ಚರಿತ್ರಾರ್ಹವಾಗಿ ನಿಂತಿತು !!

ಬೆಂಗಳೂರು ಮ|| ರಾ|| ಸರಾಫ್ ಬಿ ಬಸಪ್ಪನವರು

"ಒಟ್ಟಿನಮೇಲೆ ಇವರ ಮರಣದಿಂದ ಇಡೀ ಸಮಾಜಕ್ಕೆ ವ್ಯಾಕುಲವಾಗಿರುತ್ತದೆ'

ಬೆಂಗಳೂರು ಶ್ರೀಯುತ ಮಂಡಿ ಹರಿಯಣ್ಣನವರು

"ಮಾಗಾನಹಳ್ಳಿ ಷಡಕ್ಷರಪ್ಪನವರು ಹೋದ ತಿಂಗಳು ೨೮ ನೆಯ ತಾರೀಖಿನ ದಿವಸ ಶಿವಾಧೀನರಾದದ್ದು ತಿಳಿದು ವ್ಯಾಕುಲವಾಗಿರುತ್ತದೆ ಶ್ರೀ ಪರಮೇಶ್ವರನು ಅವರ ಆತ್ಮಕ್ಕೆ ಶಾಂತಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ."

Mr B Narayana Murti B.A., LL B, Advocate Shimoga writes—

"As I think of Mr. Maganahalli Shadaksharappa his Excellent qualities come up to my mind, and it is no flattery to say he had very rare qualities that would adorn man When one like me feels so much for the loss of such an Excellent man, it can be imagined how much more his sons and the rest of his family must be feeling for the loss."

ಪಂಚಾಚಾರ್ಯ ಪ್ರಭಾ.

೧೯೩೧ನೇ ಏಪ್ರಿಲ್ ತಾ|| ೬ನೇ ಸೋಮವಾರ

ತತ್ತ್ವಶಾಸ್ತ್ರಮಹಾಸಭೆ.

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ತತ್ತ್ವಶಾಸ್ತ್ರ ಮಹಾಸಭೆಯು ರಾಜಧಾನಿಯ ಟೌನ್‌ಹಾಲಿನಲ್ಲಿ ಕಳೆದ ತಿಂಗಳು 30 ನೆಯ ತಾರೀಖು ಸೋಮವಾರ ಮಧ್ಯಾಹ್ನದಿಂದ ಪ್ರಾರಂಭವಾಗಿ ಈ ತಿಂಗಳು 3 ನೆಯ ತಾರೀಖು ಬುಧವಾರದ ವರೆಗೂ ಶ್ರೀ|| ಎ. ಸುಬ್ರಹ್ಮಣ್ಯಯ್ಯರ್ ಬಿ.ಎ., ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೊದಲನೆಯ ದಿವಸ 4 ಘಂಟೆಗೆ ದೇವತಾಪ್ರಾರ್ಥನೆಯಾದೊಡನೆ ಸ್ವಾಗತಾಧ್ಯಕ್ಷರಾದ ವೇದವಿದ್ವಾನ್ ಶ್ರೀ|| ಬಿ. ವಿ. ಪಂಡಿತರವರು ಸ್ವಾಗತ ಭಾಷಣ ಮಾಡಿದರು. ಬಳಿಕ ಶ್ರೀ|| ಎ. ವಾಡಿಯಾ, ಬಿ.ಎ., ಶ್ರೀಮನ್ಮಹಾರಾಜರವರ ಕಾಲೇಜು ಪ್ರೊಫೆಸರ್‌ರವರು ಮತ್ತು ಅಧ್ಯಕ್ಷರವರು ಪ್ರಾಸ್ತಾವಿಕ ಭಾಷಣ ಮಾಡಿದರು. ಬಳಿಕ ಶ್ರೀ|| ಎ. ಸುಬ್ರಹ್ಮಣ್ಯಯ್ಯರ್ ಬಿ.ಎ. ಇವರು ತತ್ತ್ವಶಾಸ್ತ್ರವೆಂದರೇನು? ಎಂಬ ವಿಚಾರವನ್ನು ಸ್ಪಷ್ಟಪಡಿಸಿದರು. ಪ್ರತಿದಿವಸ 4 ಘಂಟೆಯಿಂದ ಸಾಯಂಕಾಲ 8 ಘಂಟೆಯ ವರೆಗೂ ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ, ಪೂರ್ವಮೀಮಾಂಸಾ, ಸಾಂಖ್ಯ, ಯೋಗ, ಜೈನ, ಬೌದ್ಧ ತತ್ತ್ವ, ನ್ಯಾಯ, ವೈಶೇಷಿಕ, ಕ್ರೈಸ್ತ, ಇಸ್ಲಾಂ, ಆರ್ಯಸಮಾಜ, ಥಿಯಾಸಫಿ ಮೊದಲಾದ ತತ್ತ್ವಶಾಸ್ತ್ರಗಳಲ್ಲಿ ನೈಪುಣ್ಯವನ್ನು ಪಡೆದ ವಿದ್ವಾಂಸರು ನಿಯಮಿತವಾದ ತಮ್ಮ ತಮ್ಮ ಕಾಲಗಳಲ್ಲಿ ತಮ್ಮ ತಮ್ಮ ಮತತತ್ತ್ವಗಳನ್ನು ಸಪ್ರಮಾಣವಾಗಿ ಪ್ರತಿಪಾದಿಸಿದರು. ಮಧ್ಯಮಧ್ಯದಲ್ಲಿ ಸಂಗೀತ ವಿದ್ವಾಂಸರು ತಮ್ಮ ಮಧುರವಾದ ಗಾನಾಲಾಪನೆಯಿಂದ ಸಭಿಕರಿಗುಂಟಾದ ಆಲಸ್ಯವನ್ನು ದೂರಮಾಡುತ್ತ ಪುನಃ ಭಾಷಣಶ್ರವಣಕುತೂಹಲಿಗಳನ್ನಾಗಿ ಮಾಡುತ್ತಿದ್ದರು. ಈ ರೀತಿಯಾಗಿ ಆಯಾಯ ತತ್ತ್ವಗಳ ಯಾಥಾರ್ಥ್ಯವನ್ನು ಪ್ರತಿಪಾದಿಸುವ ಮೂಲಕ ಪ್ರತಿಯೊಂದು ಮತೀಯರಿಗೂ ಒಬ್ಬರಿಗೊಬ್ಬರಿಗೆ ಸೌಹಾರ್ದವುಂಟಾಗಲು ಅವಕಾಶವನ್ನು ಕಲ್ಪಿಸಿಕೊಟ್ಟ ನಂಜನಗೂಡಿನ ಕರ್ನಾಟಕಸಂಘದವರು ಅತ್ಯಂತ ಪ್ರಶಂಸನೀಯರಾಗಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ಈ ವಿಧವಾದ ತತ್ತ್ವಸಮ್ಮೇಳನವು ಎಲ್ಲಿಯೂ ನಡೆಯದೆ ಈ ಸಂಘದ ಆಶ್ರಯದಲ್ಲಿ ನಡೆದುದೊಂದು ಶ್ಲಾಘನೀಯವಾದ ವಿಷಯವೇ ಸರಿ! ಬಹುಕಾಲದಿಂದ ಒಂದು ಮತದ ತತ್ತ್ವವು ಇನ್ನೊಂದು ಮತದವರಿಗೆ ಗೊತ್ತಿಲ್ಲದೆ ಇದ್ದುದರಿಂದ ತಾವು ತಿಳಿದ ತತ್ತ್ವವೇ ನಿಜವಾದ ತತ್ತ್ವವೆಂದು ಕೂಪಮಂಡೂಕಗಳಂತೆ ಭಾವಿಸುತ್ತ ಮತ್ತೊಂದು ತತ್ತ್ವವು ಎಷ್ಟು ಸುಶುದ್ಧವಾಗಿದ್ದರೂ ಅದರಲ್ಲಿ ಅನಾದರಣೆಯನ್ನು ತೋರಿಸುತ್ತ ಬರುವುದೊಂದು ಭಾರತೀಯರಲ್ಲಿ ರೂಢಮೂಲವಾಗಿ ಬಂದ ಸಂಪ್ರದಾಯವಾಗಿ ಹೋಗಿರುತ್ತದೆ. ಇಂಥ ಅಸತ್ಸಂಪ್ರದಾಯವನ್ನು ತೆಗೆದು ಹಾಕಿ ಪ್ರತಿಯೊಂದು ಮತದ ತತ್ತ್ವಾರ್ಥಗಳನ್ನು ತಿಳಿಸುವುದಕ್ಕೆ ಇಂಥ ಸಭೆಗಳು ಈ ಕಾಲದಲ್ಲಿ ಅತ್ಯವಶ್ಯಕಗಳಾಗಿರುತ್ತವೆ. ಪರಿಶುದ್ಧವಾದ ಭಾರತಭೂಮಿಯಲ್ಲಿ ವಾಸವಾಗಿದ್ದ ಸಕಲ ಮತೀಯರಲ್ಲಿಯೂ ಬಹುಕಾಲದಿಂದ ಶಾಖೋಪಶಾಖೆಗಳಿಂದ ಸಹಿತ ವಿಸ್ತೃತವಾಗಿ ಬೆಳೆದಿರುವ ಪರಸ್ಪರ ದ್ವೇಷವೆಂಬ ವಿಷವೃಕ್ಷವನ್ನು ಸಮೂಲವಾಗಿ ನಾಶಗೊಳಿಸಿ ತತ್ತ್ವಶಾಸ್ತ್ರಗಳ ಏಕೀಕರಣದ್ವಾರಾ ಪರಸ್ಪರ ಸೌಹಾರ್ದವೆಂಬ ಅಮೃತವೃಕ್ಷದ ಬೀಜವನ್ನು ನಿಖಿಲ ಭಾರತೀಯರ ಹೃದಯಕ್ಷೇತ್ರದಲ್ಲಿ ಬಿತ್ತಿ ಅವ್ಯಾಹತವಾಗಿ ಬೆಳೆಯುವಂತೆ ಮಾಡಬೇಕೆಂಬುದೇ ಈ ಕರ್ನಾಟಕಸಂಘದವರು ಆಚರಿಸಿದ ಈ ತತ್ತ್ವಶಾಸ್ತ್ರಸಭೆಯ ಉದ್ದೇಶವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ, ಈ ಐದು ದಿವಸಗಳಲ್ಲಿ ನಡೆದ ಆಯಾಯ ತತ್ತ್ವಶಾಸ್ತ್ರಜ್ಞರುಗಳ ಪ್ರಮಾಣಯುಕ್ತ್ಯನುಭವಗಳಿಂದ ಕೂಡಿದ ಉಜ್ವಲಭಾಷಣಗಳ ಸಾರಾಂಶವನ್ನೆಲ್ಲಾ ಒಟ್ಟಾಗಿ ಸಂಗ್ರಹಿಸುತ್ತ ಬಂದಲ್ಲಿ ಸಕಲ ತತ್ತ್ವಶಾಸ್ತ್ರಗಳೂ ದೇವರುಂಟು, ಜೀವರು ಜಗತ್ಕರ್ತನು; ದೇವರಾಜ್ಞೆಗೆ ವಿರೋಧವಾದ ಪಾಪಗಳನ್ನು ಮಾಡಬಾರದು, ಪುಣ್ಯಕರ್ಮಗಳನ್ನಾಚರಿಸುವುದರಿಂದ ಜೀವಾತ್ಮನು ಅನಾದಿಕಾಲದಿಂದ ಬಂದ ಅಜ್ಞಾನದಿಂದ ಬಿಡುಗಡೆ ಹೊಂದಿ ಮುಕ್ತನಾಗುವನು, ಪಾಪಕರ್ಮಗಳು ದೇವರಿಗೆ ಸಮ್ಮತವಲ್ಲವು, ಪುಣ್ಯಕರ್ಮಗಳೇ ದೇವರಿಗೆ ಸಂತೋಷವನ್ನುಂಟುಮಾಡುತ್ತವೆ ಎಂಬ ವಿಷಯಗಳನ್ನೇ ಬಹಳವಾಗಿ ಪುಷ್ಟೀಕರಿಸುತ್ತವಲ್ಲದೆ, ಮೋಕ್ಷವೆಂಬ ಮಹಾಪುರುಷಾರ್ಥವನ್ನು ಮುಖ್ಯಧ್ಯೇಯವನ್ನಾಗಿ ಪ್ರತಿಪಾದಿಸುತ್ತವೆ. ಆದರೆ ಒಂದೊಂದು ತತ್ತ್ವಶಾಸ್ತ್ರದಲ್ಲಿ ಒಂದೊಂದು ಉಪಾಸನಾವಿಧಾನವು ಹೇಳಲ್ಪಟ್ಟಿರುವುದರಿಂದ ಉಪಾಸನೆಯನ್ನು ಮಾಡುವ ರೀತಿಗಳು ಮಾತ್ರ ಬಿನ್ನಬಿನ್ನವಾಗಿ ತೋರಿದರೂ ಆಯಾಯ ಉಪಾಸನೆಗಳಿಂದಾಗುವ ಫಲವೆನ್ನೋ ಒಂದೇ ಎಂದು ಸಕಲ ಪಂಡಿತೋತ್ತಮರೂ ಏಕಮುಖದಿಂದ ತಮ್ಮ ತಮ್ಮ ತತ್ತ್ವಶಾಸ್ತ್ರವಿಚಾರದಿಂದ ಪ್ರತಿಪಾದಿಸಿದ್ದನ್ನು ನೋಡಿದರೆ ಯಾವ ಮತಗಳೂ ತಿರಸ್ಕರಣೀಯಗಳಲ್ಲ. ಅನೂಚಾನವಾಗಿ ಬಂದ ತಮ್ಮ ತಮ್ಮ ಮತಗಳಲ್ಲಿ ಶ್ರದ್ಧೆಯುಳ್ಳ ಮನುಜರುಗಳಲ್ಲಿ ಸಹಿಷ್ಣುತೆಯನ್ನು ಹೊಂದಿ ನಡೆಯುತ್ತಿರುವುದರಿಂದ ಆತ್ಮೋದ್ಧಾರವಾಗುವುದಲ್ಲದೆ ಪ್ರಪಂಚೋದ್ಧಾರವೂ ಆಗುವುದು.

ಎಲ್ಲಾ ಮತಗಳಲ್ಲಿಯೂ ಒಂದೊಂದು ಪದವಾದ ನಿಜಾಂಶವು ತೋರಬರುವುದರಿಂದ ಒಂದು ಮತವನ್ನು ಬಿಟ್ಟು ಮತ್ತೊಂದು ಮತವನ್ನು ಅವಲಂಬಿಸಬೇಕಾಗಿಲ್ಲವು. ಮತ್ತು ನೂತನ ಮತವನ್ನು ಸ್ಥಾಪಿಸಬೇಕಾಗಿಲ್ಲವು. ಹಾಗೆ ಮತ್ತೊಂದು ಮತವನ್ನು ಅವಲಂಬಿಸುವವನು ತನ್ನ ಮತತತ್ತ್ವದ ಸ್ವರೂಪವನ್ನು ಚೆನ್ನಾಗಿ ತಿಳಿಯದವನೆಂದು ಸ್ಪಷ್ಟವಾಗುತ್ತದೆ. ಹಿಂದೆ ತತ್ತ್ವಶಾಸ್ತ್ರಪ್ರವರ್ತಕರಾದ ಮಹಾತಾತ್ವಿಕರೆಲ್ಲರೂ ಸಂಪೂರ್ಣ ವಿದ್ವಾಂಸರೂ ಅನುಭವಿಗಳಾಗಿರುವುದರಿಂದ ಅವರಾಡಿದ ವಚನಗಳೆಲ್ಲವೂ ಆತ್ಮೋದ್ಧಾರ ಮೂಲಕ ಜಗದುದ್ಧಾರ ಸಾಧನಗಳಾಗಿರುವವಲ್ಲದೆ ಅವ್ವ ಆಚಾರ್ಯರು ಜೊಳ್ಳುನಾತುಗಳನ್ನಾಡಿಲ್ಲವೆಂಬ ವಿಷಯವು ನಡೆಯುತ್ತಿರುವ ಕಾರ್ಯಗಳಿಗೆಲ್ಲಾ ಸ್ಪಷ್ಟವಾಗಿ ಮನನ ಮಾಡಬೇಕಾಗಿದೆ. ಸಾಧಕವಾಡುವ ರೀತಿಗಳು ಬಿನ್ನಬಿನ್ನಗಳಾಗಿದ್ದರೂ ಸಾಧಕಕಾರ್ಯವೆನ್ನೋ ಒಂದೇ ಆಗಿರುವಂತೆ ಮತಗಳೂ, ಉಪಾಸನೆಗಳೂ, ಸಾಧನಗಳೂ ಆಯಾಯರ ಬುದ್ಧಿಶಕ್ತ್ಯನುಸಾರವಾಗಿ ಬೇರೆ ಬೇರೆಯಾಗಿ ಪ್ರತಿಪಾದಿತಗಳಾಗಿದ್ದರೂ ಆತ್ಮೋದ್ಧಾರವೆಂಬ ಫಲವು ಮಾತ್ರ ಒಂದೇ ಎಂದು ಧೃವಪಡುವುದು. ಇಂದ ತತ್ತ್ವಶಾಸ್ತ್ರಸಭೆಗಳು ಆಗಾಗ್ಗೆ ನಡೆಯುತ್ತ ಬಂದು ಬಿನ್ನಬಿನ್ನಮತದ ಮಹಾಪಂಡಿತರು ಕಲೆತು ಚರ್ಚಿಸುವುದರಿಂದ ಇರುವ ಪರಸ್ಪರ ವೈಮನಸ್ಯಭಾವವು ತೊಲಗಿ ಪ್ರೇಮಬಾವವು ಹೆಚ್ಚುತ್ತ ಎಲ್ಲಾ ಮತಗಳ ಸ್ವರೂಪವು ಪ್ರಕಾಶವನ್ನು ಹೊಂದುವುದರಲ್ಲಿ ಅನ್ಯಂತರವಿಲ್ಲ. ಪ್ರಕೃತ ನಂಜನಗೂಡು ಕರ್ನಾಟಕಸಂಘದವರು ನಿಖಿಲಮತತತ್ತ್ವಶಾಸ್ತ್ರ ರಹಸ್ಯವನ್ನು ಹೊರಪಡಿಸುವ ಉದ್ದೇಶದಿಂದ ಈ ಸಾರಿ ರಾಜಧಾನಿಯಲ್ಲಿ ಮಾಡಿದ ತತ್ತ್ವಶಾಸ್ತ್ರಮಹಾಸಭೆಯು ಜನಾಂಗದಲ್ಲಿ ಬಹುಮಟ್ಟಿಗೆ ಫಲಕಾರಿಯಾಗಿರುವುದರಿಂದ ಈ ಸಂಘದವರು ಮಾಡಿದ ಮಹೋಪಕಾರವು ಪ್ರತಿಯೊಬ್ಬನಿಂದಲೂ ಚಿರಸ್ಮರಣೀಯವಾಗಿರುತ್ತದೆ. ಈ ಸಂಘದವರ ಧೀಶಕ್ತಿಯನ್ನು ಅನುಸರಿಸಿ ಅಲ್ಲಲ್ಲಿ ಇಂಥ ತತ್ತ್ವಶಾಸ್ತ್ರಸಭೆಗಳನ್ನು ಮಾಡುತ್ತ ಬಂದಲ್ಲಿ ಅನಾದಿಕಾಲದಿಂದ ಮತಮತಾಂತರಗಳಲ್ಲಿ ಬೇರೂರಿ ನಿಂತಿರುವ ಮತದ್ವೇಷಾಂಕುರವು ನಿರ್ನಾಮವಾಗಿ ತತ್ತ್ವಶಾಸ್ತ್ರಗಳು ಪ್ರಕಾಶ ಹೊಂದುವುದರ ಮೂಲಕ ಆತ್ಮೋದ್ಧಾರವಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದ ಇಂಥ ತತ್ತ್ವಶಾಸ್ತ್ರಸಭೆಗಳಿಗೆ ಪ್ರತಿಯೊಬ್ಬನೂ ಉತ್ತೇಜನವನ್ನು ಕೊಡುವುದು ಮಹಾತ್ಪುಣ್ಯದಾಯಕವು. ಈಶ್ವರಕೃಪೆಯಿಂದ ಈ ವರ್ಷ ಉದಯವಾದ ಈ ತತ್ತ್ವಶಾಸ್ತ್ರಸಭೆಯೆಂಬ ತೇಜಸ್ವಿಯಾದ ಶಿಶುವು ದಿನೇದಿನೇ ಅಭಿವೃದ್ಧಿಯಾಗಿ ವಿಶ್ವತೋಮುಖವಾಗಿ ಬೆಳೆಯುವಂತೆ ಆ ಪರಮೇಶ್ವರನು ಅನುಗ್ರಹಿಸಲೆಂದು ಕೋರುತ್ತೇವೆ.

ರಾಜಧಾನಿಯಲ್ಲಿ ನೆರವೇರಿದ ತತ್ತ್ವಶಾಸ್ತ್ರಮಹಾಸಭೆಯಲ್ಲಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ತಮ್ಮ ಸಂಚಾರವನ್ನು ಮುಗಿಯಿಸಿಕೊಂಡು ಇದೇ ತಿಂಗಳು 1 ನೆಯ ತಾರೀಖಿನ ದಿವಸ ರಾಜಧಾನಿಗೆ ಆಗಮಿಸಿದರು. 2 ನೆಯ ತಾರೀಖಿನ ದಿನವ ರಾಜಧಾನಿಯಲ್ಲಿ ನೆರವೇರಿದ ತತ್ತ್ವಶಾಸ್ತ್ರಮಹಾಸಭೆಯಲ್ಲಿ 'ಶಕ್ತಿವಿಶಿಷ್ಟಾದ್ವೈತಸಿದ್ಧಾಂತ' ವಿಷಯವಾಗಿ ಭಾಷಣಮಾಡಿದರು. ಈ ವಾರದ ಪತ್ರಿಕೆಯಲ್ಲಿ ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಅವರ ಭಾಷಣವು ಪೂರ್ತಿಯಾಗಿ ಮುದ್ರಿಸಲ್ಪಟ್ಟಿದೆ. ಸರ್ವರೂ ಸಂಪೂರ್ಣವಾಗಿ ಓದಿನೋಡಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ಸ್ವರೂಪವನ್ನು ತಿಳಿದುಕೊಳ್ಳಬೇಕೆಂದಾಶಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಚಾಮರಾಜಪೇಟೆಯ ವಕೀಲ ಮ|| ಎಂ ರಾಮಯ್ಯ ಎಂಬವರ ಮನೆಯಲ್ಲಿ ಕೆಲಸಕ್ಕಿದ್ದ ತಿಮ್ಮಕ್ಕ ಎಂಬವಳು ಅವರಮನೆಯಿಂದ ಸುಮಾರು 2000 ರೂಪಾಯಿಗಳ ಒಡವೆಗಳನ್ನು ಕದ್ದುಕೊಂಡು ಹೋದಳೆಂದು ಪೋಲೀಸರು ಹಿಡಿದು ವಿಚಾರಣೆ ಮಾಡಿದ್ದಾರೆ. ಮ್ಯಾಜಿಸ್ಟ್ರೇಟರು ಅವಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆಂದು ತಿಳಿದು ಬಂದಿದೆ.

ರಾಜಧಾನಿಯಲ್ಲಿ ಅಲ್ಲಲ್ಲಿ ಕಳ್ಳತನಗಳು ಹೆಚ್ಚಾಗುತ್ತಿರುವುದಾಗಿ ತಿಳಿದು ಬರುತ್ತದೆ. ಕಳ್ಳರು ಧೈರ್ಯವಾಗಿ ದೊಡ್ಡ ದೊಡ್ಡ ಬೀದಿಯಲ್ಲಿರುವ ಅಂಗಡಿಗಳ ಬಾಗಿಲುಗಳನ್ನೂ ಕೂಡ ಒಡೆದು ಒಳನುಗ್ಗುವ ಪ್ರಯತ್ನಗಳು ನಡೆಯುತ್ತಿವೆ. ಇಷ್ಟರಲ್ಲೇ ಪೋಲೀಸರು ಮುಂಜಾಗ್ರತೆವಹಿಸಿ ಜನಸಾಮಾನ್ಯಕ್ಕೆ ಉಂಟಾಗಲಿರುವ ತೊಂದರೆಯನ್ನು ತಪ್ಪಿಸುತ್ತಾರೆಂದು ನಂಬಿದ್ದೇವೆ.

ವರ್ತಮಾನಸಂಗ್ರಹ.

ಬರ್ಲಿನ್ ನಗರದ ಮಿಸೆಸ್, ಫ್ರಿಡಾ ವಿರ್ಟರ್ ಎಂಬ 27 ವರುಷ ವಯಸ್ಸಿನ ತರುಣಿಯು ಆ ದೇಶದ ಸೈನ್ಯ ಸಂಬಂಧವಾದ ಕೆಲವು ಗುಪ್ತವಿಷಯಗಳನ್ನು ಹೊರಗೆಡವಿದಳೆಂದು ಜರ್ಮನ್ ಸರ್ಕಾರದವರು ಅವಳಿಗೆ 12 ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಟ್ರೆಜರಿಯಲ್ಲಿ ಕಳವು.

ಕೊಲ್ಲಾಪುರದ ಮಹಾರಾಜರ ಅರಮನೆಯ ಸರಕಾರಿ ಟ್ರೆಜರಿಯಲ್ಲಿ 6000 ರೂಪಾಯಿಗಳ ನೋಟುಗಳು ಕಳುವಾಗಿವೆ. ಈ ಸಂಬಂಧದಲ್ಲಿ ಪೋಲೀಸರು ರಾಧಾನಗರಿಯ ಗಣಪತಿ ಎಂಬವನನ್ನು ಸಂದೇಹದ ಮೇಲೆ ದಸ್ತಗಿರಿ ಮಾಡಿರುತ್ತಾರೆಂದು ತಿಳಿದುಬಂದಿದೆ.

ಜರ್ಮನಿಯಲ್ಲಿ ಕಠೋರಶಿಕ್ಷೆ!

ಲಿಥೂನಿಯಾ ರಾಜ್ಯವನ್ನು ಜರ್ಮನಿಗೆ ಸೇರಿಸುವುದಕ್ಕೆ ಗುಪ್ತಸನ್ನಾಹ ನಡೆಸುತ್ತಿದ್ದರೆಂದು ಅಲ್ಲಿಯ ಸರ್ಕಾರದವರು ನಾಲ್ಕು ಜನ ನಾಜಿಗಳಿಗೆ ಮರಣದಂಡನೆಯನ್ನೂ ಇಬ್ಬರಿಗೆ ಜೀವಾಂತ ಶಿಕ್ಷೆಯನ್ನೂ ವಿಧಿಸಿದ್ದಾರೆ. ಈ ನಡವಳಿಕೆಯು ಜರ್ಮನ್ ಪ್ರಜೆಗಳನ್ನೆಲ್ಲಾ ಬಹಳ ಉದ್ರೇಕಗೊಳಿಸಿರುತ್ತದೆ.

ವಿಮಾನದ ಅಪಾಯ.

ಅಫ್ರಿಕೆಯ ಫ್ರೆಂಚ್‌ಗೌರ್ನರ ಮಿ|| ಎಡ್ವರ್ಡ್ ರೇನಾರ್ಡ್‌ರವರು, ಇವರ ಪತ್ನಿ ಮತ್ತು ಪರಿವಾರದ 5 ಜನರು ಕೂಡಿ ಪ್ರಯಾಣಮಾಡುತ್ತಿದ್ದ ವಿಮಾನವು ಬಿರುಗಾಳಿಗೆ ಸಿಲುಕಿ ಹತೋಟಿ ತಪ್ಪಿ ಬೆಲ್ಜಿಯನ್ ಕಾಂಗೋ ಬಳಿ ನೆಲಕ್ಕೆ ಬಿದ್ದು ಚೂರುಚೂರಾದ್ದರಿಂದ ಒಳಗಿದ್ದ ಏಳು ಜನರೂ ಮರಣ ಹೊಂದಿದರೆಂದು ಪ್ರಕಟವಾಗಿದೆ.

(೩ ನೇ ಪುಟದಿಂದ ಮುಂದುವರಿದುದು)

ವೃದ್ಧಜಾಬಾಲೋಪನಿಷತ್ತಿನಲ್ಲಿ—

"ಪುನಸ್ತಂ ಹೋವಾಚ ಕಾನಿ ಷಟ್ತ್ರಿಂಶತ್ತತ್ತ್ವಾನೀತಿ ಸ ತಸ್ಮೈ ಆಹ ಶಿವಶಕ್ತಿಸದಾಶಿವೇಶ್ವರಶುದ್ಧವಿದ್ಯಾ ಏತಾನಿ ಶುದ್ಧಾನಿ ಪಂಚತತ್ತ್ವಾನಿ ಮಾಯಾ ಕಾಲೋ ನಿಯತಿಃ ಕಲಾ ವಿದ್ಯಾ ರಾಗಃ ಪುರುಷ ಇತಿ ಶುದ್ಧಾಶುದ್ಧಾನಿ ಸಪ್ತ ತತ್ತ್ವಾನಿ"

ಇತ್ಯಾದಿಯಾಗಿ ಮೂವತ್ತಾರು ತತ್ತ್ವಗಳು ವರ್ಣಿಸಲ್ಪಟ್ಟಿರುವುವು ಮಹಾನಾರಾಯಣೋಪನಿಷತ್ತಿನಲ್ಲಿಯೂ ಈ ಮೂವತ್ತಾರು ತತ್ತ್ವಗಳು ವರ್ಣಿಸಲ್ಪಟ್ಟಿವೆ

ಶಕ್ತಿವಿಶಿಷ್ಟಪರಶಿವಬ್ರಹ್ಮವು **"ಬಹುಸ್ಯಾಂ ಪ್ರಜಾಯೇಯ"** ಎಂಬ ಶ್ರುತಿವಾಕ್ಯಾಭಿಪ್ರಾಯಾನುಸಾರವಾಗಿ ಸೃಷ್ಟಿಗುನ್ಮುಖವಾಗಲು, ತನ್ನಿನ್ನವಾದ ವಿಮರ್ಶಶಕ್ತಿಯೇ ಇಚ್ಛಾಶಕ್ತಿರೂಪವಾಗಿ ಪರಿಣಮಿಸುವುದು

ಅನಾದಿನಿಧನಾಚ್ಛಂಭೋಶ್ಚಿನ್ನಾತ್ಪರಮಕಾರಣಾತ್ ।
ಇಚ್ಛಾಶಕ್ತಿರ್ವಿನಿಷ್ಕ್ರಾಂತಾ ತತೋ ಜ್ಞಾನಂ ತತಃ ಕ್ರಿಯಾ ॥
ತತ್ಪ್ರೋತ್ಪನ್ನಾನಿ ಭೂತಾನಿ ಭುವನಾನಿ ಚತುರ್ದಶ ॥

ಎಂಬ ಶಿವಾಗಮಪ್ರಮಾಣಾನುಸಾರವಾಗಿ ಉತ್ಪತ್ತಿನಾಶರಹಿತನೂ ಪರಮಕಾರಣನೂ, ಶಾಂತನೂ ಆದ ಶಿವನಿಂದ ಮೊದಲು ಇಚ್ಛಾಶಕ್ತಿಯೂ, ಅದರಿಂದ ಜ್ಞಾನಶಕ್ತಿಯೂ ಕ್ರಿಯಾಶಕ್ತಿಯೂ ಆವಿರ್ಭವಿಸುವುವು ಆ ಇಚ್ಛಾಶಕ್ತಿಗೆ ಜ್ಞಾನಶಕ್ತಿಯು ಅಂತರಂಗವಾಗಿಯೂ, ಕ್ರಿಯಾಶಕ್ತಿಯು ಬಹಿರಂಗವಾಗಿಯೂ ಇರುವುವು ಪರಶಿವನು ಜ್ಞಾನಶಕ್ತಿಯಲ್ಲಿ ಬೆರೆತು "ನಾನು ಸರ್ವಜ್ಞನು" ಎಂಬ ಅಭಿಮಾನವುಂಟಾಗಲು **"ಶಿವತತ್ತ್ವ"** ವೆನಿಸುವನು ಕುಂಭಕ್ಕೆ ಕುಲಾಲನು ನಿಮಿತ್ತಕಾರಣನಾದಂತೆ, ಈ ಶಿವತತ್ತ್ವವೇ ಚರಾಚರಪ್ರಪಂಚಕ್ಕೆ ನಿಮಿತ್ತಕಾರಣವಾಗುವುದು

ಪರಶಿವನು ಕ್ರಿಯಾಶಕ್ತಿಯಲ್ಲಿ ಬೆರೆತು ಅವನಿಗೆ "ನಾನು ಸರ್ವಕರ್ತೃವು" ಎಂಬ ಅಭಿಮಾನವುಂಟಾಗಲು **"ಶಕ್ತಿತತ್ತ್ವ"** ವೆನಿಸುವುದು ಘಟಕ್ಕೆ ಮೃತ್ತಿಕೆಯು ಉಪಾದಾನಕಾರಣವಾದಂತೆ ಈ ಶಕ್ತಿತತ್ತ್ವವೇ ಚರಾಚರಪ್ರಪಂಚಕ್ಕೆ ಉಪಾದಾನಕಾರಣವಾಗುವುದು

ಈ ಶಕ್ತಿತತ್ತ್ವವು ಇಚ್ಛಾಶಕ್ತಿಗೆ ಅಂತರಂಗವಾದ ಜ್ಞಾನಶಕ್ತಿಯ ಉದ್ರೇಕಾವಸ್ಥೆಯನ್ನು ಪ್ರವೇಶಿಸಿ, ಜಲಾದಿಗಳಿಂದ ಅಂಕುರೋನ್ಮುಖವಾದ ಉಬ್ಬಿದ ಕಡಲೆಯಂತಾಗುವುದು ಈ ವಿಧವಾದ ಉದ್ರಿಕ್ತಜ್ಞಾನಶಕ್ತಿಯನ್ನು ಗರ್ಭದಲ್ಲಿ ಸ್ವಭಾವದ ಚೀಲದಂತೆ ಧರಿಸಿ "ಅಹಮಿದಂ" "ನಾನು ಈ ಪ್ರಪಂಚವು" ಎಂದು ಅಭಿಮಾನಿಸುತ್ತದೆ **"ಸದಾಶಿವತತ್ತ್ವ"** ವೆನಿಸುವುದು

ಆ ಶಕ್ತಿತತ್ತ್ವವು ಇಚ್ಛಾಶಕ್ತಿಗೆ ಬಹಿರಂಗಭೂತವಾದ ಉದ್ರೇಕವಶೆಯನ್ನು ಹೊಂದಿದುದೂ ಆದ ಕ್ರಿಯಾಶಕ್ತಿಯಲ್ಲಿ ಪ್ರವೇಶಿಸಿ, ಸುಕ್ಷೇತ್ರದಲ್ಲಿ ಬಿತ್ತಿದ ಸುಬೀಜದಂತೆ ಅಂಕುರಾವಸ್ಥೆಯನ್ನು ತಾಳಿರುವ "ಇದಂ" ಶಬ್ದವಾಚ್ಯವಾದ ಪ್ರಪಂಚವನ್ನು "ಅಹಮಿದಂ" ನಾನೇ ಈ ಪ್ರಪಂಚಸ್ವರೂಪನು, ಎಂದು ಅಭಿಮಾನಿಸುವುದೇ **"ಈಶ್ವರತತ್ತ್ವ"** ವೆನಿಸುವುದು.

ಸಾಗರತರಂಗನ್ಯಾಯದಂತೆ (ಸಮುದ್ರಕ್ಕೂ ಸಮುದ್ರದಲ್ಲಿರುವ ತೆರೆಗಳಿಗೂ ಅಭೇದವಿರುವಂತೆ) 'ಅಹಮಿದಂ' ನಾನು ಎಂಬ ಅಹಂಕಾರಕ್ಕೂ ಇದಂ ಎಂಬ ಪ್ರಪಂಚಕ್ಕೂ ಇರುವ ಅಭೇದಜ್ಞಾನವೇ **"ಶುದ್ಧವಿದ್ಯಾತತ್ತ್ವ"** ವೆನಿಸುವುದು ಇದಕ್ಕೇನೇ ಶಾಸ್ತ್ರಕಾರರು ಶಬ್ದವಾದ ಮುಕ್ತಿಹೇತುಭೂತತತ್ತ್ವಜ್ಞಾನವೆನ್ನುವರು

ಈ ಶುದ್ಧವಿದ್ಯಾತತ್ತ್ವವು ವಟಬೀಜನ್ಯಾಯದಂತೆ (ಆಲದ ಬೀಜದಲ್ಲಿ ವೃಕ್ಷವರ್ಣವ್ಯಕ್ತ್ಯಾದಿಗಳು ಬೀಜರೂಪವಾಗಿ ಸೂಕ್ಷ್ಮರೂಪದಿಂದಿರುವಂತೆ) ತನ್ನಲ್ಲಡಗಿರುವ ಚರಾಚರಪ್ರಪಂಚನಿರ್ಮಾಣಕಾರಣೀಭೂತಸೂಕ್ಷ್ಮಪದಾರ್ಥಗಳಲ್ಲಿ ಅನ್ಯೋನ್ಯಾಭಾವರೂಪಭೇದಬುದ್ಧಿಯೇ ಪ್ರಧಾನವುಳ್ಳದಾಗಿ **"ಮಾಯಾತತ್ತ್ವ"** ವೆನಿಸುವುದು

ಕಲಾ-ವಿದ್ಯಾ-ರಾಗ-ಕಾಲ-ನಿಯತಿಗಳೆಂಬ ಪಂಚತತ್ತ್ವಗಳು ಪುರುಷನಿಗೆ ಕಂಚುಕರೂಪಗಳಾಗಿರುವುದರಿಂದ, ಮೊದಲು ಕಂಚುಕಿಯಾದ ಪುರುಷತತ್ತ್ವವನ್ನು ನಿರೂಪಿಸಿ, ಬಳಿಕ ಕಲಾದಿ ಪಂಚತತ್ತ್ವಗಳನ್ನು ನಿರೂಪಿಸುವುದಾಗುವುದು

ಕಾಷ್ಠಯೋಗದಿಂದ ಅಗ್ನಿಕಣಗಳು ಆವಿರ್ಭವಿಸುವಂತೆ, ಪರಶಿವನ ಇಚ್ಛಾಶಕ್ತಿಯ ಯೋಗದಿಂದ ಆವಿರ್ಭವಿಸುವ ಶಿವಾಂಶವೇ ಮಾಯಾಶಕ್ತಿಯಲ್ಲಿ ಪ್ರವೇಶಿಸಿ **"ಪುರುಷತತ್ತ್ವ"** ವೆನಿಸುವುದು ಈ ಪುರುಷತತ್ತ್ವವು, ಮಾಯಾಮಲಾವೃತವಾದುದರಿಂದ ಆತ್ಮನಲ್ಲಿ ಅನಾತ್ಮಜ್ಞಾನವೂ, ಅನಾತ್ಮವಸ್ತುಗಳಲ್ಲಿ ಆತ್ಮಜ್ಞಾನವೂ, "ನಾನು ಸುಖಿಯು, ನಾನು ದುಃಖಿಯು" ಎಂಬ ಬುದ್ಧಿಯೂ ಉತ್ಪನ್ನವಾಗುವುವು ಪುರುಷನು ಈ ರೀತಿಯಾಗಿ ಆಣವಾದಿಮಲಗಳಿಂದ ಯುಕ್ತನಾಗುವುದರಿಂದ ಸಂಸಾರಿಯೆನಿಸುವನು

ಈ ಪುರುಷನು ಮಾಯಾವೃತನಾಗಿ ತನ್ನ ಸರ್ವಕರ್ತೃತ್ವಾದಿಶಕ್ತಿಗಳನ್ನು ಕಳೆದುಕೊಂಡು ಕಿಂಚಿತ್ಕರ್ತೃತ್ವಾದಿ ಶಕ್ತಿಗಳಿಂದ ಯುಕ್ತನಾದುದರಿಂದ ಈ ಕಿಂಚಿತ್ಕರ್ತೃತ್ವರೂಪಶಕ್ತಿಯೇ **"ಕಲಾತತ್ತ್ವ"** ವೆನಿಸುವುದು ಕಿಂಚಿಜ್ಜ್ಞತ್ವರೂಪಶಕ್ತಿಯೇ **"ವಿದ್ಯಾತತ್ತ್ವ"** ವೆನಿಸುವುದು ಸ್ರಕ್ಚಂದನವನಿತಾದಿ ವಿಷಯಗಳಲ್ಲಿ ಪ್ರೀತಿಯನ್ನಿಡುವುದೇ **"ರಾಗತತ್ತ್ವ"** ವೆನಿಸುವುದು ಭೂತಭವಿಷ್ಯದ್ವರ್ತಮಾನಕಾಲಗಳ ವ್ಯವಹಾರಕ್ಕೆ ಕಾರಣವಾದುದೇ **"ಕಾಲತತ್ತ್ವ"** ವೆನಿಸುವುದು ಈ ಕಾರಣದಿಂದ ಈ ಕಾರ್ಯವೇ ಹುಟ್ಟುವುದು, ಮತ್ತೊಂದು ಹುಟ್ಟುವುದಿಲ್ಲವೆಂಬ ನಿಯಮಕ್ಕೆ ಕಾರಣವಾದುದೇ **"ನಿಯತಿತತ್ತ್ವ"** ವೆನಿಸುವುದು

ಕಾರ್ಯೋನ್ಮುಖಗರ್ಭಿತವಾದ ಇಚ್ಛಾಶಕ್ತಿಯು ತನ್ನಲ್ಲಿರುವ ಜ್ಞಾನಶಕ್ತಿ ಕ್ರಿಯಾಶಕ್ತಿಗಳ ಅನ್ಯೋನ್ಯಾಭಾವಭೇದಬುದ್ಧಿರೂಪವಾದ **ಮಾಯಾತತ್ತ್ವ**ದಲ್ಲಿ ಪ್ರತಿಸ್ಫುರಿಸಲು **"ಪ್ರಕೃತಿತತ್ತ್ವ"** ವೆನಿಸುವುದು ಈ ಪ್ರಕೃತಿತತ್ತ್ವವು ಸುಖದುಃಖಮೋಹಗಳಿಗೆ ಕಾರಣಗಳಾದ ಸತ್ತ್ವರಜಸ್ತಮೋಗುಣಗಳ ಸಾಮ್ಯಾವಸ್ಥಾರೂಪವಾಗಿದ್ದು, ಮಹತ್ತತ್ತ್ವವೇ ಮೊದಲ್ಗೊಂಡು ಪೃಥಿವ್ಯಂತಗಳಾಗಿರುವ ತತ್ತ್ವಗಳಿಗೆ ಮೂಲಕಾರಣವಾಗಿರುವುದು "ಇದಮಿತ್ಥಂ" ಇದು ಹೀಗೆಯೇ ಸರಿ ಎಂಬ ನಿಶ್ಚಯಕ್ಕೆ ಕಾರಣವಾದುದೇ **"ಬುದ್ಧಿತತ್ತ್ವ"** ವೆನಿಸುವುದು ಇದಕ್ಕೆ ಮಹತ್ತತ್ತ್ವವೆಂಬ ನಾಮಾಂತರವುಂಟು 'ನಾನು—ನನ್ನದು' ಎಂಬ ಅಹಂಕಾರ ಮಮಕಾರಗಳಿಗೆ ಕಾರಣವಾದುದೇ **"ಅಹಂಕಾರತತ್ತ್ವ"** ವೆನಿಸುವುದು "ಸ್ಥಾಣುರ್ವಾ ಪುರುಷೋ ವಾ" ಎಂಬ ಸಂಕಲ್ಪವಿಕಲ್ಪಗಳಿಗೆ ಕಾರಣವಾದುದೇ **"ಮನಸ್ತತ್ತ್ವ"** ವೆನಿಸುವುದು. ಬುದ್ಧ್ಯಹಂಕಾರಮನಸ್ತತ್ತ್ವಗಳು ಶರೀರದೊಳಗಿರುವುದರಿಂದ ಈ ಮೂರು ಕೂಡಿ **"ಅಂತಃಕರಣ"** ವೆನಿಸುವುದು ಈ ಅಂತಃಕರಣವು ಇಚ್ಛಾಶಕ್ತಿಪ್ರಧಾನವಾಗಿರುವುದು ಈ ಮೊದಲು ಹೇಳಿದ ಶಕ್ತಿತತ್ತ್ವವು ಬಾಹ್ಯಶರೀರವನ್ನವಲಂಬಿಸಿ ಶಬ್ದಜ್ಞಾನಕ್ಕೆ ಸಾಧನವಾಗಿ **"ಶ್ರೋತ್ರತತ್ತ್ವ"** ವೆಂದೂ, ಸ್ಪರ್ಶಜ್ಞಾನಕ್ಕೆ ಸಾಧನವಾಗಿ **"ತ್ವಕ್‌ತತ್ತ್ವ"** ವೆಂದೂ, ರೂಪಜ್ಞಾನಕ್ಕೆ ಸಾಧನವಾಗಿ **"ನೇತ್ರತತ್ತ್ವ"** ವೆಂದೂ, ರಸಜ್ಞಾನಕ್ಕೆ ಸಾಧನವಾಗಿ **"ಜಿಹ್ವಾತತ್ತ್ವ"** ವೆಂದೂ, ಗಂಧಜ್ಞಾನಕ್ಕೆ ಸಾಧನವಾಗಿ **"ಘ್ರಾಣತತ್ತ್ವ"** ವೆಂದೂ ಹೇಳಿಸಿಕೊಳ್ಳುವುದು ಈ ಐದು ಇಂದ್ರಿಯಗಳು ಜ್ಞಾನಶಕ್ತಿಪ್ರಧಾನಗಳಾದುದರಿಂದ ಜ್ಞಾನೇಂದ್ರಿಯಗಳೆಂದು ಹೇಳಿಸಿಕೊಳ್ಳುವುವು

ಪೂರ್ವೋಕ್ತಶಕ್ತಿತತ್ತ್ವವು ಉಚ್ಚಾರಣಕ್ರಿಯೆಗೆ ಹೇತುವಾದುದರಿಂದ **"ವಾಕ್ತತ್ತ್ವ"** ವೆಂದೂ, ದಾನಾದಾನಾದಿಕ್ರಿಯೆಗಳಿಗೆ ಹೇತುವಾದುದರಿಂದ **"ಪಾಣಿತತ್ತ್ವ"** ವೆಂದೂ, ಗಮನಾಗಮನಕ್ರಿಯೆಗಳಿಗೆ ಹೇತುವಾದುದರಿಂದ **"ಪಾದತತ್ತ್ವ"** ವೆಂದೂ, ಮಲಪರಿತ್ಯಾಗಕ್ಕೆ ಸಾಧನವಾದುದರಿಂದ **"ಪಾಯುತತ್ತ್ವ"** ವೆಂದೂ, ರೇತೋಮೂತ್ರಪರಿತ್ಯಾಗಕ್ಕೆ ಸಾಧನವಾದುದರಿಂದ **"ಉಪಸ್ಥತತ್ತ್ವ"** ವೆಂದೂ ಹೇಳಿಸಿಕೊಳ್ಳುವುದು ಈ ಐದು ಇಂದ್ರಿಯಗಳು ಕ್ರಿಯಾಶಕ್ತಿಪ್ರಧಾನಗಳಾದುದರಿಂದ ಕರ್ಮೇಂದ್ರಿಯಗಳೆಂದು ಹೇಳಿಸಿಕೊಳ್ಳುವುವು ಮೇಲೆ ಹೇಳಿದ ಬುದ್ಧಿತತ್ತ್ವಾದಿತ್ರಯೋದಶತತ್ತ್ವಗಳು ಇಚ್ಛಾಜ್ಞಾನಕ್ರಿಯಾತ್ಮಕಗಳಾಗಿರುವುವು

ಕೇವಲ ಶ್ರೋತ್ರೇಂದ್ರಿಯದಿಂದ ಗ್ರಹಿಸಲು ಯೋಗ್ಯವಾದುದು **"ಶಬ್ದತತ್ತ್ವ"** ವೆಂದೂ, ಕೇವಲತ್ವಗಿಂದ್ರಿಯದಿಂದ ತಿಳಿಯಲು ಯೋಗ್ಯವಾದುದು **"ಸ್ಪರ್ಶತತ್ತ್ವ"** ವೆಂದೂ, ಕೇವಲ ನೇತ್ರೇಂದ್ರಿಯದಿಂದ ತಿಳಿಯಲು ಯೋಗ್ಯವಾದುದು **"ರೂಪತತ್ತ್ವ"** ವೆಂದೂ, ಕೇವಲ ಜಿಹ್ವೇಂದ್ರಿಯದಿಂದ ತಿಳಿಯಲು ಯೋಗ್ಯವಾದುದು **"ರಸತತ್ತ್ವ"** ವೆಂದೂ, ಕೇವಲ ಘ್ರಾಣೇಂದ್ರಿಯದಿಂದ ತಿಳಿಯಲು ಯೋಗ್ಯವಾದುದು **"ಗಂಧತತ್ತ್ವ"** ವೆಂದೂ ಹೇಳಿಸಿಕೊಳ್ಳುವುವು ಶಬ್ದದಲ್ಲಿ ಧ್ವನ್ಯಾತ್ಮಕ ವರ್ಣಾತ್ಮಕಶಬ್ದವೆಂದೂ, ಸ್ಪರ್ಶದಲ್ಲಿ ಶೀತೋಷ್ಣಸ್ಪರ್ಶವೆಂದೂ, ರೂಪದಲ್ಲಿ ನೀಲಪೀತಾದಿರೂಪವೆಂದೂ, ರಸದಲ್ಲಿ ಮಧುರಾಮ್ಲಾದಿರಸವೆಂದೂ, ಗಂಧದಲ್ಲಿ ಸುಗಂಧ ದುರ್ಗಂಧವೆಂದೂ ವಿಭಾಗವಿಲ್ಲದೆ ಸಾಮಾನ್ಯರೂಪಗಳಾಗಿರುವುದರಿಂದ ಶಬ್ದಾದಿಗಳು **"ತನ್ಮಾತ್ರ"** ಗಳೆಂದು ಹೇಳಿಸಿಕೊಳ್ಳುವುವು

ವಾಯು ಅಗ್ನಿ ಜಲ ಪೃಥಿವೀತತ್ತ್ವಗಳಿಗೆ ಅವಕಾಶವನ್ನುಂಟುಮಾಡುವುದಾಗಿಯೂ, ಕೇವಲ ಶಬ್ದಗುಣವುಳ್ಳುದಾಗಿಯೂ ಇರುವ ತತ್ತ್ವವೇ **"ಆಕಾಶತತ್ತ್ವ"** ವೆನಿಸುವುದು ಕಂಪನ-ಭ್ರಮಣ-ಶೋಷಣ ವೇಗಕ್ರಿಯೆಗಳುಳ್ಳುದಾಗಿಯೂ, ಕೇವಲ ಸ್ಪರ್ಶಗುಣವುಳ್ಳುದಾಗಿಯೂ ಇರುವ ತತ್ತ್ವವೇ **"ವಾಯುತತ್ತ್ವ"** ವೆನಿಸುವುದು ದಹನ-ಪಚನಕ್ರಿಯೆಗಳುಳ್ಳುದಾಗಿಯೂ ಕೇವಲ ರೂಪಗುಣವುಳ್ಳುದಾಗಿಯೂ ಇರುವ ತತ್ತ್ವವೇ **"ತೇಜಸ್ತತ್ತ್ವ"** ವೆನಿಸುವುದು ದ್ರವಪ್ಲವನಾಪ್ಯಾಯನಾದಿಗಳುಳ್ಳುದಾಗಿಯೂ, ಕೇವಲ ರಸಗುಣವುಳ್ಳುದಾಗಿಯೂ ಇರುವ ತತ್ತ್ವವೇ **"ಜಲತತ್ತ್ವ"** ವೆನಿಸುವುದು ಎಲ್ಲಾ ತತ್ತ್ವಗಳಿಗಾಧಾರಭೂತವಾಗಿಯೂ, ಛೇದನಯೋಗ್ಯವಾಗಿಯೂ, ಕೇವಲ ಗಂಧಗುಣವುಳ್ಳುದಾಗಿಯೂ ಇರುವ ತತ್ತ್ವವೇ **"ಪೃಥಿವೀತತ್ತ್ವ"** ವೆನಿಸುವುದು ಈ ಆಕಾಶಾದಿಪಂಚತತ್ತ್ವಗಳು ಮಹಾಭೂತಗಳೆಂದು ಹೇಳಿಸಿಕೊಳ್ಳುವುವು

ಶಕ್ತ್ಯಂಡಮೃತ್ಪಿಂಡಮುಪಾದದಾನೋ ।
ಮಾಯಾಂಡಚಕ್ರಭ್ರಮಣಕ್ರಮೇಣ ॥
ಮೂಲಾಂಡದಂಡೇನ ಮುಹುರ್ವಿಧತ್ತೇ ।
ಬ್ರಹ್ಮಾಂಡಭಾಂಡಂ ಭಗವಾನ್ ಕುಲಾಲಃ ॥

ಎಂಬೀ ಶ್ಲೋಕದಲ್ಲಿ ಷಟ್ತ್ರಿಂಶತ್ತತ್ತ್ವಾತ್ಮಕ ಜಗತ್ಸೃಷ್ಟಿವಿಷಯವೆಲ್ಲವೂ ... ನಾಗಿದೆ ನಿಗಮಾಗಮ ಪ್ರಸಿದ್ಧಗಳಾದೀ ಮೂವತ್ತಾರು ತತ್ತ್ವಗಳು ಸಚ್ಚಿದಾನಂದರೂಪನಾದ ಚಿಚ್ಛಕ್ತಿವಿಶಿಷ್ಟಪರಶಿವಬ್ರಹ್ಮದ ಪರಿಣಾಮರೂಪಗಳಾಗಿರುವುದರಿಂದ ವೀರಶೈವಮತವು ಪರಿಣಾಮವಾದವನ್ನೂ ಜಗತ್ಸತ್ಯತ್ವವಾದವನ್ನೂ ಬೋಧಿಸುತ್ತಿರುವುದು

ಅಸ್ತು! ವೀರಶೈವಸಿದ್ಧಾಂತದಲ್ಲಿ ಪರಶಿವಬ್ರಹ್ಮವು **"ಸ್ಥಲ"** ಎಂಬ ಅಭಿಧಾನದಿಂದ ನಿರ್ದೇಶಿಸಲ್ಪಟ್ಟಿರುವುದು

ಸ್ಥೀಯತೇ ಲೀಯತೇ ಯತ್ರ ಜಗದೇ ತಚ್ಚರಾಚರಂ ।
ತದ್ಬ್ರಹ್ಮ ಸ್ಥಲಮಿತ್ಯುಕ್ತಂ ಸ್ಥಲತತ್ತ್ವವಿಶಾರದೈಃ ॥

ಚರಾಚರಾತ್ಮಕವಾದೀ ಜಗತ್ತು ಯಾವುದರಲ್ಲಿ ಉತ್ಪತ್ತಿಲಯಗಳನ್ನು ಹೊಂದುವುದೋ ಆ ಬ್ರಹ್ಮವು "ಸ್ಥಲ" ವೆಂದು ಹೇಳಿಸಿಕೊಳ್ಳುವುದು ಈ ಸ್ಥಲರೂಪ ಪರಶಿವಬ್ರಹ್ಮವು ಸ್ವಲೀಲೆಯಿಂದ ಅಂಗಸ್ಥಲ-ಲಿಂಗಸ್ಥಲವೆಂ

ಎರಡು ಪ್ರಕಾರವಾಗುವುದು. ಪೂರ್ವೋಕ್ತಚಿಚ್ಛಕ್ತಿವಿಶಿಷ್ಟಜೀವನೇ ಅಂಗಪದವಾಚ್ಯನೆನಿಸುವನು. ಚಿಚ್ಛಕ್ತಿವಿಶಿಷ್ಟಪರಶಿವನೇ ಲಿಂಗಪದವಾಚ್ಯನೆನಿಸುವನು. ಲಿಂಗವು ಭಕ್ತಾನುಗ್ರಹಕ್ಕಾಗಿ ಸ್ಥೂಲ-ಸೂಕ್ಷ್ಮ-ಕಾರಣ ಶರೀರಸ್ಥಾನಭೇದದಿಂದ ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗವೆಂದು ಮೂರು ಪ್ರಕಾರವಾಗುವುದು. ಅಂಗವಾದರೂ ತ್ಯಾಗಾಂಗ-ಭೋಗಾಂಗ-ಯೋಗಾಂಗವೆಂದು ಮೂರು ಪ್ರಕಾರವಾಗುವುದು. ಇಷ್ಟಲಿಂಗವು—ಆಚಾರಲಿಂಗ-ಗುರುಲಿಂಗವೆಂದೂ, ಪ್ರಾಣಲಿಂಗವು—ಶಿವಲಿಂಗ-ಚರಲಿಂಗವೆಂದೂ, ಭಾವಲಿಂಗವು—ಪ್ರಸಾದಲಿಂಗ-ಮಹಾಲಿಂಗವೆಂದೂ ಆರು ಪ್ರಕಾರವಾಗುವುವು. ಇದರಂತೆ ತ್ಯಾಗಾಂಗವು—ಭಕ್ತ-ಮಹೇಶನೆಂದೂ, ಭೋಗಾಂಗವು—ಪ್ರಸಾದಿ-ಪ್ರಾಣಲಿಂಗಿಯೆಂದೂ, ಯೋಗಾಂಗವು—ಶರಣ-ಐಕ್ಯನೆಂದೂ ಆರು ಪ್ರಕಾರವಾಗುವುವು. ಅಂಗಸ್ಥಲವು ಅವಾಂತರಭೇದದಿಂದ ೪೪ ಪ್ರಕಾರವಾಗುವುದು. ಲಿಂಗಸ್ಥಲವು ಅವಾಂತರಭೇದದಿಂದ ೫೭ ಪ್ರಕಾರವಾಗುವುದು. ಈ ಎರಡು ಸ್ಥಲಗಳೂ ಸೇರಿ ಒಟ್ಟಿಗೆ ೧೦೧ ಸ್ಥಲಗಳಾಗುವುವು. ಏಕೋತ್ತರಶತಸ್ಥಲಾತ್ಮಕವಾದೀ ಅಂಗಲಿಂಗಗಳ ಸಾಮರಸ್ಯಜ್ಞಾನವೇ ಮೋಕ್ಷಮೂಲಭೂತವಾಗಿದೆ. ಸದ್ಯಃ ಲಿಂಗಸ್ಥಲ ವಿಷಯವನ್ನು ವಿಮರ್ಶಿಸೋಣ!

ಇಷ್ಟಲಿಂಗಮಿದಂ ಸ್ಥೂಲಂ ಯದ್ಬಾಹ್ಯೇ ಧಾರ್ಯತೇ ತನೌ ।
ಪ್ರಾಣಲಿಂಗಂ ತು ತತ್ ಸೂಕ್ಷ್ಮಂ ಯದಂತರ್ಭಾವನಾಮಯಂ ।
ಪರಾತ್ಪರಂ ತು ಯತ್ಪ್ರೋಕ್ತಂ ತೃಪ್ತಿಲಿಂಗಂ ತದುಚ್ಯತೇ ॥

ಸ್ಥೂಲದೇಹದಲ್ಲಿ ಧರಿಸಲ್ಪಡುವುದೇ ಇಷ್ಟಲಿಂಗವೆಂದೂ, ಸೂಕ್ಷ್ಮಶರೀರದಲ್ಲಿ ಧರಿಸಲ್ಪಡುವುದೇ ಪ್ರಾಣಲಿಂಗವೆಂದೂ, ಕಾರಣಶರೀರದಲ್ಲಿ ಧರಿಸಲ್ಪಡುವುದೇ ಭಾವಲಿಂಗವೆಂದೂ ಹೇಳಿಸಿಕೊಳ್ಳುವುವು. ಈ ತ್ರಿವಿಧಲಿಂಗಗಳಿಂದ ಆರು ಬಗೆಯಾಗಿರುವ ಆಚಾರಾದಿಲಿಂಗಗಳ ಸ್ವರೂಪವೆಂತೆಂದರೆ—

ಆಚಾರಲಿಂಗಂ ಘ್ರಾಣಾಖ್ಯಂ ಭಕ್ತಸ್ಥಲಸಮಾಶ್ರಯಂ ।
ನಿವೃತ್ತಿಕಲಯೋಪೇತಂ ಗಂಧಗ್ರಹಣಸಾಧನಂ ॥೧॥
ಗುರುಲಿಂಗಂ ತು ಜಿಹ್ವಾಖ್ಯಂ ಮಾಹೇಶಸ್ಥಲಸಂಶ್ರಯಂ ।
ಪ್ರತಿಷ್ಠಾಕಲಯೋಪೇತಂ ರಸಗ್ರಹಣಸಾಧನಂ ॥೨॥
ಶಿವಲಿಂಗಂ ತು ನೇತ್ರಾಖ್ಯಂ ಪ್ರಸಾದಿಸ್ಥಲಸಂಶ್ರಯಂ ।
ವಿದ್ಯಾಕಲಾಸಮಾಯುಕ್ತಂ ರೂಪಗ್ರಹಣಸಾಧನಂ ॥೩॥
ತ್ವಗಾಖ್ಯಂ ಜಂಗಮಂ ಲಿಂಗಂ ಪ್ರಾಣಲಿಂಗಿಸ್ಥಲಾಶ್ರಯಂ ।
ಶಾಂತ್ಯಾಖ್ಯಕಲಯೋಪೇತಂ ಸ್ಪರ್ಶಗ್ರಹಣಸಾಧನಂ ॥೪॥
ಪ್ರಸಾದಲಿಂಗಂ ಶ್ರೋತ್ರಾಖ್ಯಂ ಶರಣಸ್ಥಲಸಂಶ್ರಯಂ ।
ಶಾಂತ್ಯತೀತಕಲೋಪೇತಂ ಶಬ್ದಗ್ರಹಣಸಾಧನಂ ॥೫॥
ಮಾನಸಂ ತು ಮಹಾಲಿಂಗಮೈಕ್ಯಸ್ಥಲಸಮಾಶ್ರಯಂ ।
ಶಾಂತ್ಯತೀತೋತ್ತರೋಪೇತಂ ಸರ್ವಗ್ರಹಣಸಾಧನಂ ॥೬॥

ಘ್ರಾಣರೂಪವಾದ ಆಚಾರಲಿಂಗವು ಭಕ್ತಸ್ಥಲವನ್ನಾಶ್ರಯಿಸಿ, ನಿವೃತ್ತಿಕಲಾಯುಕ್ತವಾಗಿ, ಗಂಧಗ್ರಹಣಸಾಧನವಾಗಿರುವುದು. ಘ್ರಾಣವು ಇಡಾಪಿಂಗಳಾನಾಡೀದ್ವಾರಾ ಪ್ರಾಣವಾಯುವಿನ ಸಂಚಾರಕ್ಕೆ ಆಶ್ರಯವಾಗಿರುವುದರಿಂದಲೂ ದೇಹಶುದ್ಧಿಗೆ ಹೇತುಭೂತವಾದ ಪ್ರಾಣಾಯಾಮಾಚರಣೆಗೆ ಸಾಧನವಾದುದರಿಂದಲೂ ಇದಕ್ಕೆ "**ಆಚಾರಲಿಂಗ**"ವೆಂಬ ನಾಮವು ಪ್ರಾಪ್ತವಾಗಿದೆ.

ಜಿಹ್ವಾರೂಪವಾದ ಗುರುಲಿಂಗವು ಮಹೇಶ್ವರಸ್ಥಲವನ್ನಾಶ್ರಯಿಸಿ, ಪ್ರತಿಷ್ಠಾಕಲಾಯುಕ್ತವಾಗಿ ರಸಗ್ರಹಣಸಾಧನವಾಗಿರುವುದು. ಜಿಹ್ವೆಯು ಷಡಕ್ಷರಮಂತ್ರದ ಉಚ್ಚಾರಕ್ಕೆ ಸಾಧನವಾದುದರಿಂದಲೂ, ಈ ಮಹಾಮಂತ್ರವು ಮಂತ್ರವರ್ತಿಯಾದ ಗುರುವಿನ ಮುಖದಿಂದ ಪ್ರಾಪ್ತವಾಗುವುದರಿಂದಲೂ ಇದಕ್ಕೆ "**ಗುರುಲಿಂಗ**"ವೆಂಬ ನಾಮವು ಪ್ರಾಪ್ತವಾಗಿದೆ.

ನೇತ್ರರೂಪವಾದ ಶಿವಲಿಂಗವು ಪ್ರಸಾದಿಸ್ಥಲವನ್ನಾಶ್ರಯಿಸಿ, ವಿದ್ಯಾಕಲಾಯುಕ್ತವಾಗಿ, ರೂಪಗ್ರಹಣಸಾಧನವಾಗಿರುವುದು. ನೇತ್ರವು ತನ್ನ ಗೋಳಕದಲ್ಲಿರುವ ಶಿವಪ್ರಕಾಶದಿಂದ ಸಂಯುಕ್ತವಾಗಿ ಸಕಲರೂಪಪದಾರ್ಥಪ್ರಕಾಶಕ್ಕೆ ಸಾಧನವಾದುದರಿಂದ ಇದಕ್ಕೆ "**ಶಿವಲಿಂಗ**"ವೆಂಬ ನಾಮವು ಪ್ರಾಪ್ತವಾಗಿದೆ.

ತ್ವಗ್ರೂಪವಾದ ಚರಲಿಂಗವು ಪ್ರಾಣಲಿಂಗಿಸ್ಥಲವನ್ನಾಶ್ರಯಿಸಿ, ಶಾಂತಿಕಲಾಯುಕ್ತವಾಗಿ, ಸ್ಪರ್ಶಗ್ರಹಣಸಾಧನವಾಗಿರುವುದು. ತ್ವಕ್ಕು ಸರ್ವಾಂಗವನ್ನು ವ್ಯಾಪಿಸಿ ಶೀತಸ್ಪರ್ಶಾದಿಜ್ಞಾನಕ್ಕೆ ಸಾಧನವಾದುದರಿಂದಲೂ, ಇದು ಸಂಚರಣಶೀಲವಾದ ವಾಯುವಿನ ಅಂಶವಾಗಿರುವುದರಿಂದಲೂ ಇದಕ್ಕೆ "**ಚರಲಿಂಗ**"ವೆಂಬ ನಾಮವು ಪ್ರಾಪ್ತವಾಗಿದೆ.

ಶ್ರೋತ್ರರೂಪವಾದ ಪ್ರಸಾದಲಿಂಗವು ಶರಣಸ್ಥಲವನ್ನಾಶ್ರಯಿಸಿ, ಶಾಂತ್ಯತೀತಕಲಾಯುಕ್ತವಾಗಿ ಶಬ್ದಗ್ರಹಣಸಾಧನವಾಗಿರುವುದು. ಶ್ರೋತ್ರವು ಶಬ್ದಗ್ರಹಣಕ್ಕೆ ಸಾಧನವಾದುದರಿಂದಲೂ, ನಾದ-ಸುನಾದ-ನಿನಾದ-ಮಹಾನಾದರೂಪಪರಾ-ಪಶ್ಯಂತೀ-ಮಧ್ಯಮಾ-ವೈಖರೀಕ್ರಮದಿಂದ ಪ್ರಾಪ್ತವಾಗುವ ಅನುಗ್ರಹರೂಪಪ್ರಸಾದಕ್ಕೆ ಹೇತುವಾಗಿರುವುದರಿಂದಲೂ ಇದಕ್ಕೆ "**ಪ್ರಸಾದಲಿಂಗ**"ವೆಂಬ ನಾಮವು ಪ್ರಾಪ್ತವಾಗಿದೆ.

ಮನೋರೂಪವಾದ ಮಹಾಲಿಂಗವು ಐಕ್ಯಸ್ಥಲವನ್ನಾಶ್ರಯಿಸಿ, ಶಾಂತ್ಯತೀತೋತ್ತರಕಲಾಯುಕ್ತವಾಗಿ, ಸರ್ವಗ್ರಹಣಸಾಧನವಾಗಿರುವುದು. ಮನಸ್ಸು ಶ್ರೋತ್ರಾದೀಂದ್ರಿಯಗಳಂತೆ ಒಂದೊಂದು ವಿಷಯವನ್ನು ಗ್ರಹಿಸದೆ ಸರ್ವವಿಷಯಗಳನ್ನೂ ಗ್ರಹಿಸುವುದರಿಂದಲೂ, ಇಂದ್ರಿಯಗಳಿಗೆಲ್ಲಾ ಮಹಾರಾಜನಾಗಿರುವುದರಿಂದಲೂ ಇದಕ್ಕೆ "**ಮಹಾಲಿಂಗ**"ವೆಂಬ ನಾಮವು ಪ್ರಾಪ್ತವಾಗಿದೆ.

ಇನ್ನು ಅಂಗಸ್ಥಲವಿಷಯವನ್ನು ವಿಮರ್ಶಿಸೋಣ!

ಅಂಗಸ್ಥಲಂ ತಥಾ ಪ್ರೋಕ್ತಮಾಚಾರ್ಯೈಃ ಸೂಕ್ಷ್ಮದರ್ಶಿಭಿಃ ।
ಯೋಗಾಂಗಂ ಪ್ರಥಮಂ ಪ್ರೋಕ್ತಂ ಭೋಗಾಂಗಂ ಚ ದ್ವಿತೀಯಕಂ ॥
ತ್ಯಾಗಾಂಗಂ ಚ ತೃತೀಯಂ ಸ್ಯಾದಿತ್ಯೇವಂ ತ್ರಿವಿಧಂ ಸ್ಮೃತಂ ॥

ಅಂಗಸ್ಥಲವು ಯೋಗಾಂಗ-ಭೋಗಾಂಗ-ತ್ಯಾಗಾಂಗವೆಂದು ಮೂರು ವಿಧವಾಗಿರುವುದು. ವೀರಶೈವನು ತನಗೂ ಗುರುಲಿಂಗಜಂಗಮರಿಗೂ ಐಕ್ಯಯೋಗಾನುಸಂಧಾನವನ್ನು ಮಾಡುವುದರಿಂದ ಇದಕ್ಕೆ "**ಯೋಗಾಂಗ**"ವೆಂಬ ನಾಮವು ಪ್ರಾಪ್ತವಾಗಿದೆ. ಗುರುಲಿಂಗಜಂಗಮರಿಗರ್ಪಿತಪ್ರಸಾದಸ್ವೀಕಾರದ್ವಾರಾ ಸುಖಭೋಗವನ್ನನುಭವಿಸುವುದರಿಂದ ಇದಕ್ಕೆ "**ಭೋಗಾಂಗ**"ವೆಂಬ ನಾಮವು ಪ್ರಾಪ್ತವಾಗಿದೆ. ಗುರುಲಿಂಗಜಂಗಮರಿಗೆ ನಿರ್ವಂಚನೆಯಿಂದ ತನುಮನೋಧನಗಳನ್ನು ತ್ಯಾಗಮಾಡುವುದರಿಂದ ಇದಕ್ಕೆ "**ತ್ಯಾಗಾಂಗ**"ವೆಂಬ ನಾಮವು ಪ್ರಾಪ್ತವಾಗಿದೆ.

ಸದಾಚಾರಃ ಶಿವೇ ಭಕ್ತಿರ್ಲಿಂಗೇ ಜಂಗಮೇ ಏಕಧೀಃ ।
ಲಾಂಛನೇ ಶರಣೇ ಭಕ್ತಿರ್ಭಕ್ತಸ್ಥಲಮನುತ್ತಮಂ ॥
ಕೇವಲೇ ಸಹಜೇ ದಾನೇ ನಿಷ್ಣಾತಃ ಶಿವತತ್ಪರಃ ।
ಬ್ರಹ್ಮಾದಿಸ್ಥಾನವಿಮುಖೋ ಭಕ್ತೋ ಮಾಹೇಶ್ವರಃ ಸ್ಮೃತಃ ॥
ಮನಃಪ್ರಸಾದಸಿದ್ಧ್ಯರ್ಥಂ ನಿರ್ಮಲಜ್ಞಾನಕಾರಣಂ ।
ಶಿವಪ್ರಸಾದಂ ಸ್ವೀಕುರ್ವನ್ ಪ್ರಸಾದೀತ್ಯೇಷ ಕಥ್ಯತೇ ॥
ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ ।
ತದ್ರೂಪಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ ॥
ಸತೀವಾಹಂ ಪತಿರ್ಲಿಂಗಂ ಹೃದಿ ಯುಕ್ತಃ ಸ್ವಯಂ ಪ್ರಭುಃ ।
ಪ್ರಾಪಂಚಿಕಸುಖಂ ನಾಸ್ತಿ ಶರಣಸ್ಥಲಮುತ್ತಮಂ ।
ಪ್ರಾಣಲಿಂಗಾದಿಯೋಗೇನ ಸುಖಾತಿಶಯಮೇಯಿವಾನ್ ।
ಶರಣಾಖ್ಯಃ ಶಿವೇನೈಕ್ಯಭಾವನಾದೈಕ್ಯವಾನ್ ಭವೇತ್ ॥

ಸದಾಚಾರಶೀಲನೂ, ಶಿವನಲ್ಲಿ ಭಕ್ತಿಯುಳ್ಳವನೂ, ಗುರುಲಿಂಗಜಂಗಮರಲ್ಲಿ ಒಂದೇ ನಿಷ್ಠವಾದ ಬುದ್ಧಿಯುಳ್ಳವನೂ, ಶಿವಲಾಂಛನದಲ್ಲಿಯೂ ಶಿವಶರಣರಲ್ಲಿಯೂ ಭಕ್ತಿಯುಳ್ಳವನೂ "**ಭಕ್ತ**"ನೆನಿಸುವನು. ಸಹಜ ದಾನದಲ್ಲಿ ನಿಷ್ಣಾತನೂ, ಶಿವಾಸಕ್ತನೂ, ಬ್ರಹ್ಮಾದಿಸ್ಥಾನವಿಮುಖನೂ ಆದ ಭಕ್ತನೇ "**ಮಾಹೇಶ್ವರ**"ನೆನಿಸುವನು. ಈ ಮಹೇಶ್ವರನು ತನ್ನ ಮನಃಪ್ರಸನ್ನತೆಗಾಗಿ ನಿರ್ಮಲಜ್ಞಾನಕಾರಣವಾದ ಶಿವಪ್ರಸಾದವನ್ನು ಸ್ವೀಕರಿಸುವುದರಿಂದ "**ಪ್ರಸಾದಿ**"ಯೆನಿಸುವನು. ಪರಶಿವಬ್ರಹ್ಮವು ಚಿತ್ಸ್ವರೂಪವೆಂದೂ, ಆ ಪರಶಿವಬ್ರಹ್ಮದಲ್ಲಿರುವ ಶಕ್ತಿಯು ಪ್ರಾಣಸ್ವರೂಪವೆಂದೂ, ಲಿಂಗವು ಈ ಎರಡರಸ್ವರೂಪವಾಗಿರುವುದೆಂದೂ ತಿಳಿಯುವ ಪ್ರಸಾದಿಯೇ "**ಪ್ರಾಣಲಿಂಗಿ**"ಯೆನಿಸುವನು. ಲಿಂಗವು ಪತಿಯೆಂದೂ, ತಾನು ಸತಿಯೆಂದೂ ಭಾವಿಸಿ ಪ್ರಾಪಂಚಿಕಸುಖಶೂನ್ಯನಾಗಿರುವ ಪ್ರಾಣಲಿಂಗಿಯೇ "**ಶರಣ**"ನೆನಿಸುವನು. ಈ ಶರಣನು ಪ್ರಾಣಲಿಂಗಾದಿಯೋಗದಿಂದ ಸುಖಾತಿಶಯವನ್ನು ಹೊಂದಿ ಶಿವೋಹಂಭಾವನೆಯಿಂದ ಶಿವನಲ್ಲಿ ಏಕತ್ವವನ್ನು ಹೊಂದುವುದರಿಂದ "**ಐಕ್ಯ**"ನೆನಿಸುವನು. ಈ ಭಕ್ತಾದಿ ಷಟ್ಸ್ಥಲಗಳು ಜಾತಿವಾಚಕಗಳಾಗಿರದೆ ಮುಕ್ತಿಸೋಪಾನರೂಪಗಳಾಗಿರುವುವು.

ಅಂಗಸ್ಥಲಪ್ರತಿಪಾದ್ಯನಾದ ಭಕ್ತನು ಲಿಂಗಸ್ಥಲಪ್ರತಿಪಾದ್ಯವಾದ ಆಚಾರಲಿಂಗಕ್ಕೆ ಅಂಗವಾಗಿರುವುದರಿಂದ, ಈ ಭಕ್ತನು ಆಚಾರಲಿಂಗದಲ್ಲಿ ಸಾಮರಸ್ಯವನ್ನು ಹೊಂದುವನು. ಇದರಂತೆ ಮಹೇಶ್ವರನು ಗುರುಲಿಂಗದಲ್ಲಿಯೂ, ಪ್ರಸಾದಿಯು ಶಿವಲಿಂಗದಲ್ಲಿಯೂ, ಪ್ರಾಣಲಿಂಗಿಯು ಜಂಗಮಲಿಂಗದಲ್ಲಿಯೂ, ಶರಣನು ಪ್ರಸಾದಲಿಂಗದಲ್ಲಿಯೂ, ಐಕ್ಯನು ಮಹಾಲಿಂಗದಲ್ಲಿಯೂ ಸಾಮರಸ್ಯವನ್ನು ಹೊಂದುವರು.

ಇದೇರೀತಿಯಾಗಿ ಆಚಾರಲಿಂಗವು ಗುರುಲಿಂಗದಲ್ಲಿಯೂ, ಗುರುಲಿಂಗವು ಶಿವಲಿಂಗದಲ್ಲಿಯೂ, ಶಿವಲಿಂಗವು ಜಂಗಮಲಿಂಗದಲ್ಲಿಯೂ, ಜಂಗಮಲಿಂಗವು ಪ್ರಸಾದಲಿಂಗದಲ್ಲಿಯೂ, ಪ್ರಸಾದಲಿಂಗವು ಮಹಾಲಿಂಗದಲ್ಲಿಯೂ, ಮಹಾಲಿಂಗವು ಪರಶಿವರೂಪಘನಲಿಂಗದಲ್ಲಿಯೂ ಸಾಮರಸ್ಯವನ್ನು ಹೊಂದಿ ಅಖಂಡಾನಂದಾನುಭವವುಳ್ಳದಾಗುವುದು.

"ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ, ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಂ"

ಎಂಬ ಮುಂಡಕಶ್ರುತ್ಯಭಿಪ್ರಾಯಾನುಸಾರವಾಗಿ ನದಿಗಳು ಸಮುದ್ರದಲ್ಲಿ ಸೇರಿ ನಾಮರೂಪಗಳನ್ನು ಬಿಟ್ಟು ಸಾಮರಸ್ಯವನ್ನು ಹೊಂದುವಂತೆ, ಶಿವಜ್ಞಾನವುಳ್ಳ ವೀರಶೈವನು ನಾಮರೂಪಗಳಿಂದ ವಿಮುಕ್ತನಾಗಿ ಪರಶಿವನಲ್ಲಿ ಸಾಮರಸ್ಯವನ್ನು ಹೊಂದುವನು.

ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಂ ।
ಮಾನವಃ ಶಿವಯೋಗೇನ ಶಿವೋ ಭವತಿ ಕೇವಲಂ ॥

ಕೀಟವು ಭ್ರಮರಸಂಬಂಧದಿಂದ ಭ್ರಮರವಾಗುವಂತೆ, ಈ ಪೂರ್ವೋಕ್ತಷಟ್ಸ್ಥಲಾತ್ಮಕ ಶಿವಯೋಗದಿಂದ ಮಾನವನು ಕೇವಲ ಶಿವನೇ ಆಗುವನೆಂದು ಶಿವಾಗಮಾದಿಗಳು ಸಾರುತ್ತಿರುವುದರಿಂದ, ಲಿಂಗಾಂಗಿಯಾದ ವೀರಶೈವನು ಷಟ್ಸ್ಥಲಾಚರಣೆಯಿಂದ ಶಿವಸಾಯುಜ್ಯವನ್ನು ಹೊಂದುವನು. ಶುದ್ಧಾತ್ಮನಾದ ಅಂಗನಾಮಕಜೀವನು ಲಿಂಗನಾಮಕಶಿವನಲ್ಲಿ ಸಾಮರಸ್ಯವನ್ನು ಹೊಂದುವುದರಿಂದ ಇದೇ ಲಿಂಗಾಂಗಸಾಮರಸ್ಯವೆನಿಸುವುದು. ಇದೇ ಶಿವಜೀವೈಕ್ಯವೆನಿಸುವುದು. ಇದೇ ಶಕ್ತಿವಿಶಿಷ್ಟಾದ್ವೈತವೆನಿಸುವುದು.

ಶಿವಂಭೂಯಾತ್! ಶಿವಂಭೂಯಾತ್!! ಶಿವಂಭೂಯಾತ್!!!

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ, ಹಾವೇರಿ

ಧಾರವಾಡ ಜಿ|| ಹಾವೇರಿ ನಗರನಿವಾಸಿಗಳಲ್ಲಿ ಸಂಸ್ಕೃತ ಪದ್ಧತಿಯಂತೆ ಈ ವರ್ಷವೂ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಫಾಲ್ಗುಣ ಶುದ್ಧ ೧೪ ನೇ ಬುಧವಾರ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ವೀರಶೈವ ಮತಸ್ಥಾಪನಾಚಾರ್ಯರೂ ಸಮಸ್ತ ಪ್ರಪಂಚವಂದ್ಯರೂ ಜಗದುದ್ಧಾರಕರೂ ಆದ ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರ ಪರಮಪವಿತ್ರ ಜಯಂತಿ ದಿನಾಚರಣೆಯನ್ನು ಮಾಡುವದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿದೆ. ಮಹಾಚಾರ್ಯರಿಂದ ಸ್ಥಾಪಿತವಾದ ವೀರಶೈವಮತಪ್ರಾಶಸ್ತ್ಯವನ್ನು ಸಾಕ್ಷಾತ್ ಆ ಪರಶಿವನಾಣೆಯಾದ ಪಾರ್ವತಿ ದೇವಿಯರು [illegible] "ವೀರಶೈವಸದೃಶಂ ಮತಮನ್ಯತ್ ಜಗತ್ತ್ರಯೇ" ಎಂದು ಉದ್ಘೋಷಿಸುತ್ತಿರುವರಷ್ಟೆ! ಇಂತಹ ಘನತೆಯನ್ನು ಪಡೆದ ವೀರಶೈವ ಮತೀಯರು ತಮ್ಮ ಮತಸ್ಥಾಪನಾಚಾರ್ಯರ ಜಯಂತಿ ದಿನಾಚರಣೆಯನ್ನು ಮಾಡದಿದ್ದಲ್ಲಿ ಅವರು ವೀರಶೈವರೆಂದು ಹೇಳಿಸಿಕೊಳ್ಳಲಾರರು. ಜಯಂತಿಯಾಚರಣೆಯೆಂದರೆ ಕೇವಲ ಬಾಹ್ಯಾಡಂಬರವಾದ ವೈಭವದ ಮೆರವಣಿಗೆ ಮಾತ್ರವಲ್ಲ! ಜಗದಾಚಾರ್ಯರ ಅಮೋಘವಾದ ವೀರಶೈವಮತಸಿದ್ಧಾಂತತತ್ತ್ವರತ್ನಗಳನ್ನು ಉಪನ್ಯಾಸರಂಗದಿಂದ ಪ್ರಕಾಶಿಸುವಂತೆ ಮಾಡುವುದಾಗಿದೆ. ಆ ದಿವಸ ಗ್ರಾಮವೆಲ್ಲ ತಳಿರು ತೋರಣಗಳಿಂದ ಚಂದವಾಗಿ ಶೃಂಗರಿಸಲ್ಪಟ್ಟಿದ್ದಿತು. ಇಲ್ಲಿಯ ಶ್ರೀ ರಂಭಾಪುರಿ ಶಾಖಾಮಠದವಾದ ನಡುವಿನಮಠದಲ್ಲಿ ಪದ್ಧತಿಯಂತೆ ಶ್ರೀ ಜಗದ್ಗುರು ರೇಣುಕಾಚಾರ್ಯರ ರಜತಭಾವಚಿತ್ರಕ್ಕೆ ವಿಧ್ಯುಕ್ತ ಪೂಜೋಪಚಾರಗಳು ನಡೆದನಂತರ ಮಹಾಮಂಗಳಾರಾಧನೆಯನ್ನು ನೆರವೇರಿಸಿದರು. ಇಂದಿನ ಈ ಪೂಜಾಮಹೋತ್ಸವಕ್ಕೆ ಗ್ರಾಮದ ಪ್ರಮುಖರೂ ಶ್ರೀಮಂತರೂ ಮೊದಲಾದ ಸಮಸ್ತರೂ ಭಕ್ತಿಪರರಾಗಿ ಬಂದಿದ್ದರು. ಮಹೇಶ ಸಮುದಾಯದ ಅಗ್ರಭಾಗದಲ್ಲಿ ಶೋಭಿಸುತ್ತಲಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲಾಚಿತ್ರವು ಪ್ರತಿಯೊಬ್ಬರ ಹೃದಯದ ಪಟಲದ ಮೇಲೆ ಚಿತ್ರಿಸಿದಂತಿತ್ತು. ಧನ್ಯ! ಧನ್ಯ! ಈ ಪೂಜೋತ್ಸವದಲ್ಲಿ ಭಾಗಿಗಳಾದವರೇ ಪರಮ ಧನ್ಯರು. [illegible] ಶ್ರೀಗಳವರ ದಿವ್ಯದರ್ಶನೋಪದೇಶದಿಂದಲೂ ಈ ಸಾರೆ ನಮ್ಮಲ್ಲಿಯ ಜಯಂತೀಮಹೋತ್ಸವವು ವೈಭವದಿಂದ ಜರುಗಿತು. ರೇಣುಕಾಚಾರ್ಯಭಗವತ್ಪಾದರು ಸಮಸ್ತರಿಗೂ ಸುಖವನ್ನೀಯಲೆಂದು ಪ್ರಾರ್ಥಿಸುವ — ಪಂಚಾಚಾರ್ಯಭಜನಾಸಂಘ ಸೆಕ್ರೆಟರಿ ಹಾವೇರಿ

ಗರ್ಭಾವಸ್ಥೆಯ ಲಿಂಗಧಾರಣವೂ ಸಂತತಿಸಸ್ಯಕ್ಕೆ ಗ್ರಹಶಾಂತಿಯೂ

[illegible] ತಾಲ್ಲೂಕು ನಾಗವಂದ ಗ್ರಾಮದಲ್ಲಿರುವ [illegible] ಬಸಪ್ಪ ಪಂಚನಮನಿ ಇವರ ಧರ್ಮಪತ್ನಿಗೆ [illegible] ೮-೧೦ ವರುಷಗಳ ಪರ್ಯಂತ ಮಕ್ಕಳು [illegible] ಬಹಳ ವ್ಯಸನ ಮಾಡುತ್ತಿದ್ದು ಈವರ್ಷ ಗರ್ಭಿಣಿಯಾಗಿದ್ದು ಸುಖವಾಗಲೆಂಬ ಸಂಕಲ್ಪ ಪ್ರಕಾರ [illegible] ಭಾವಸಂವತ್ಸರದ [illegible] ಶು|| ೧೩ [illegible] ದಿವಸ ವೇ|| ಚನ್ನವೀರಶಾಸ್ತ್ರಿಗಳು ಹಿರೇಮಠ ಮಾಸೂರ [illegible] ಮತ್ತು ಶ್ರೀಮತಿ [illegible] ಗರ್ಭಧಾರಣವಾದ್ದರಿಂದ ಶಾಸ್ತ್ರೋಕ್ತ ಲಿಂಗಧಾರಣವು ಸಹ ಮಾಡಿಸಲ್ಪಟ್ಟಿತು. ಆ ಸಮಯದಲ್ಲಿ [illegible] ಜಗದಾಚಾರ್ಯರ ನಾಮಸ್ಮರಣಪೂರ್ವಕವಾಗಿ ಶ್ರೀ [illegible] ನಡೆಯಿಸಲ್ಪಟ್ಟವು. ಅವರ ಸಂಕಲ್ಪದಂತೆ [illegible] ಸುಖವಾಗಿ ಇಬ್ಬರು ಶಿಶುವನ್ನು ಪಡೆದರು. ಶಿಶುವು ಆರೋಗ್ಯದಿಂದ ಇರುವುದು. [illegible] ವೇ|| ಪುರೋಹಿತ [illegible] ಶ್ರೀ ಜಗದಾಚಾರ್ಯರು ಇವರ [illegible] ಶುಭವನ್ನೂ ಆಯುಷ್ಯವನ್ನೂ ಕೊಡಲೆಂದು ಪ್ರಾರ್ಥಿಸೆ

ಕಾರ್ಯದರ್ಶಿ ನಾಗವಂದ

ನೂತನಗೃಹಪ್ರವೇಶ

ಧಾರವಾಡ ಜಿಲ್ಲಾ ಹಿರೇಕೆರೂರ ನಿವಾಸಿ ಮ|| ರಾ|| ರೇವಣಸಿದ್ದಪ್ಪ ಪಂಚನಮನಿ ನಾಗವಂದ ಇವರು ಶ್ರೀಭಾವ ಸಂ|| ಮಾಘ ಶು|| ೧೦ ಬುಧವಾರ ಶುಭಾಂಶದಲ್ಲಿ ತಮ್ಮ ನೂತನ ಗೃಹಪ್ರವೇಶವನ್ನು [illegible] ಮಠದ ವೇ|| ಬ್ರ|| ಸಿದ್ಧಲಿಂಗಸ್ವಾಮಿಗಳಿಂದ ವಿಧ್ಯುಕ್ತಪ್ರಕಾರ ನೆರವೇರಿಸಿದರು. ಆ ಸಮಯಕ್ಕೆ ರುದ್ರಾಭಿಷೇಕವೂ ನಡೆಯಿತು. ಬಂದ ಹಿರೇಕೆರೂರು ಭಕ್ತಮಹಾಶಯರಿಗೆಲ್ಲ ಅನ್ನಸಂತರ್ಪಣೆಯು ನಡೆಯಿತು. ಶ್ರೀಗಳು ಅಪ್ಪಣೆಕೊಟ್ಟ ಪ್ರಕಾರ ಪಂಚಾಚಾರ್ಯ ಪ್ರಭಾ ಪೋಷಣಕ್ಕಾಗಿ ೧ ರೂಪಾಯಿಯು ವೇ|| ಸಿದ್ಧಾಂತಿ ಚನ್ನವೀರಶಾಸ್ತ್ರಿಗಳು ಹಿರೇಮಠ ಮಾಸೂರು ಇವರ ಕಡೆಗೆ ಕೊಡಲ್ಪಟ್ಟಿತು. ಶ್ರೀ ಜಗದಾಚಾರ್ಯವರ್ಯರು ಸಪರಿವಾರಿಗೆ ಸುಖವನ್ನೂ ಅಭಿವೃದ್ಧಿಯನ್ನೂ ಉಂಟುಮಾಡಲಿ. — ಶಿವಗುರುಭಕ್ತ

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ — ಪೀನಸಿ, ಒಂದು ತಲೆನೋವು, ತಲೆಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಒಂದೋಷ ಮೊದಲಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ [illegible] ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಟಿನ್ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ [illegible] ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ. ಪಿ. ೦ ೪ ೦
ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ. ಪಿ. ೮ [illegible]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[14] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೇಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಮವಿಮರ್ಶ (೩ನೇಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೇಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಳಸ್ತೋತ್ರಾವಳಿ (೭ನೇಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೇಯ ಆವೃತ್ತಿ)	೧ ಆಣೆ
ಬಸವಾದಿ ಸಿಬತತ್ತ್ವದರ್ಪಣ (೪ನೇಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೇಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೩ ಆಣೆ
ವೀರಶೈವಮತಮೀಮಾಂಸಾ	೫ ಆಣೆ
ವೀರಶೈವಾಚಾರವಿಧಿ (೩ನೇಯ ಆವೃತ್ತಿ)	೫ ಆಣೆ
ವಿವಾಹವಿಧಿ (೨ನೇಯ ಆವೃತ್ತಿ)	೫ ಆಣೆ
ಸನ್ಯಾಸಶಾಸ್ತ್ರಮವಿಮರ್ಶ ತತ್ತ್ವಸ್ಥಿರೀಕರಣ (೨ನೇಯ ಆವೃತ್ತಿ)	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ನಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೇಯ ಆವೃತ್ತಿ)	೮ ಆಣೆ
ವೇದೋಕ್ತ ಶಿವಪೂಜಾವಿಧಿ	೧೦ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As.
ವೀರಶೈವತತ್ತ್ವ (೪ನೇಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೇಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೇಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩-೨೩ ಪುಟ)	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಕ್ಷರಾದ ವೇ|| ಬ್ರ|| ಪಂಡಿತ ಹಿರೇ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಭವಾತ್ಮಜನಿಕಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂನ್ ಭಜತ ಸದ್ಭಕ್ತಾಃ ಶ್ರಿಯೇಲೋಕದಾನ್ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೫ ನೇ ಏಪ್ರಿಲ್ ೧೯೩೫ [ಸಂಚಿಕೆ ೪೭

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘ ಸ್ಥಾಪನೆ.

ಬಳ್ಳಾರಿ ಜಿ|| ಹಡಗಲಿ ತಾ|| ಹಿರೇಹಡಗಲಿ ಗ್ರಾಮದ ಪ್ರಮುಖರೂ ಶರಣಸಂಘದವರೂ ವೆ|| ರಾ|| ಒನ್ನಿಮಠದ ಚನ್ನಬಸವನವರ ಮಂದಿರದಲ್ಲಿ ಸಭೆಕೂಡಿ ಇದೇ ಗ್ರಾಮದ ಪುರಾಣಿಕ ಮಠದ ವೇ|| ವಿರೂಪಾಕ್ಷಶಾಸ್ತ್ರಿಗಳವರಿಂದ ಶಿವ ಕೀರ್ತನವನ್ನು ಹೇಳಿಸಿದರು ಕೀರ್ತನದಲ್ಲಿ ಪ್ರತಿಯೊಬ್ಬ ಮಾನವನೂ ಸತ್ಕಾರ್ಯಗಳನ್ನು ಮಾಡುತ್ತ ಸತ್ಸಂಗ ಗುರುಭಕ್ತಿ ಸಕ್ತರಾಗಿದ್ದು ಜನ್ಮ ಸಾರ್ಥಕತಮಾಡಿಕೊಳ್ಳಬೇಕೆಂದು ಬೋಧಿಸಿದರು ಇದೇ ಸಮಯಕ್ಕೆ ಹನ್ನಿಗಿಯಿಂದಾಗಮಿಸಿದ್ದ ವೆ|| ರಾ|| ಗುರುಭಕ್ತಕೇಸರಿ ಶಾಂತಪ್ಪನವರು ಶ್ರೀ ಜಗದ್ಗುರು ಪಂಚಾಚಾರ್ಯ ಮಹಾನುಭಾವರ ಮಹಿಮಾತಿಶಯಗಳನ್ನು ಭಾಷಣಮೂಲಕ ಪ್ರಕಟಿಸಿ ಭಜನಾಸಂಘವನ್ನು ಏರ್ಪಡಿಸಬೇಕೆಂದು ಸೂಚನೆಯನ್ನು ಕೊಟ್ಟರು ಅದಕ್ಕೆ ಸಭಿಕರು ಆನಂದಪಟ್ಟು ಭಜನಾಸಂಘವನ್ನು ಏರ್ಪಡಿಸುವುದು ಸರ್ವಾನುಮತದಿಂದ ಒಪ್ಪಿಗೆಯಾಗಿ 'ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘ' ಎಂಬ ನಾಮಕರಣವನ್ನು ಮಾಡಿದರು ಈ ಬಗ್ಗೆ ಬೇಕಾಗುವ ಮೃದಂಗ ತಾಳ ಮೊದಲಾದವುಗಳನ್ನು ವೇ|| ಹಟ್ಟಿ ಮಠದ ಕೊಟ್ರಯ್ಯನವರೂ ವೇ|| ಕೌಲೂರು ಲಿಂಗರಾಜಯ್ಯನವರ ತೋಟಪ್ಪನವರೂ ಅನುಕೂಲಮಾಡಿಕೊಟ್ಟರು ಈ ಸಂಘವು ಮುಂದೆ ನಿರಾತಂಕವಾಗಿ ನಡೆಯುವುದಕ್ಕೋಸುಗ ಮುಖ್ಯವಾದ ನಿಯಮಗಳನ್ನು ಮಾಡಿ ಸರ್ವರೂ ಗುರುಭಕ್ತಿಯುಕ್ತರಾಗಿ ಭಜನಾಸಂಘವನ್ನು ನಡೆಯಿಸುತ್ತಿರುವರು

ಓರ್ವ ಗುರುಭಕ್ತ

ಜಯಂತೀ ಮಹೋತ್ಸವಗಳು.

ಬಳ್ಳಾರಿ ಜಿ|| ಹೂವಿನ ಹಡಗಲಿ ತಾಲೂಕು ಹಿರೇಹಡಗಲಿ ಗ್ರಾಮದ ಭಜನಾಸಂಘದವರು ಊರಲ್ಲಿ ಡಂಗುರವನ್ನು ಹೊಡೆಯಿಸಿದ ಪ್ರಕಾರ ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಗಳನ್ನು ಸಾರಣೆಕಾರಣೆಗಳಿಂದಲೂ ಹಳದಿ ತೋರಣಗಳಿಂದಲೂ ಅಲಂಕರಿಸಿಕೊಂಡಿದ್ದರು ಅಲಂಕರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಶ್ರೀ ಜ|| ಪಂಚಾಚಾರ್ಯ ವಿಶ್ವಾರಾಧ್ಯರ ಭಾವಚಿತ್ರಗಳನಿಟ್ಟು ಈ ಭಾವ ಸ || ಮಾಘ ಬ|| ೧೪ ರವಿವಾರ ಜಯಂತೀ ಮಹೋತ್ಸವವನ್ನು ಅತ್ಯಂತ ವೈಭವದಿಂದ ಜರುಗಿಸಿದರು

ಫಾಲ್ಗುಣ ಶು|| ೧೩ ಚಂದ್ರವಾರ ನಾನಾವಿಧದಿಂದ ಶೃಂಗರಿಸಲ್ಪಟ್ಟ ಆಂದೋಲಿಕೆಯಲ್ಲಿ ಶ್ರೀ|| ಜ|| ರೇಣುಕಾಚಾರ್ಯರ ಭಾವಚಿತ್ರವನ್ನಿರಿಸಿ ಆ ದಿವಸ ಉದಯ ೭ ಘಂಟೆಗೆ ಉತ್ಸವ ಹೊರಟು ಭಜನಾಸಂಘದ ಬಾಲಕರ ಸುಸ್ವರದ ಗಾಯನದಿಂದಲೂ ಕಲ್ಲುಮಠ ಮಠದ ವೇ|| ಚನ್ನವೀರಯ್ಯನವರ ವೇದಘೋಷದಿಂದಲೂ ವಾದ್ಯವೈಭವಗಳಿಂದಲೂ ಮೆಲ್ಲಮೆಲ್ಲಗೆ ಸಾಗುತ್ತ ಪುರವೀಧಿಗಳಲ್ಲಿ ಬರುತ್ತಿರಲು ಗುರುಭಕ್ತರೆಲ್ಲರು ಅಲ್ಲಲ್ಲಿ ಕಾಯಿಕರ್ಪೂರ ಫಲಪುಷ್ಪಾದಿಗಳನ್ನರ್ಪಿಸಿ ಮಂಗಲ ಮಾಡುತ್ತಿದ್ದರು ಉತ್ಸವವು ಮಧ್ಯಾಹ್ನ 12 ಘಂಟೆಗೆ ವೆ|| ಕೌಲೂರು ಲಿಂ|| ವ| ತೋಟಪ್ಪಯ್ಯನವರ ಮಂದಿರಕ್ಕೆ ತಲಪಿತು ಸದರಿಯವರು ವಿಶೇಷ ಭಕ್ತಿಯಿಂದ ಶ್ರೀ ಗುರುಪೂಜಾದಿಗಳನ್ನು ನೆರವೇರಿಸಿ ಗಣಾರಾಧನೆಯನ್ನು ಮಾಡಿ ಸಂತೋಷ ಪಡಿಸಿದರು ಸಾಯಂಕಾಲಕ್ಕೆ ಪುನಃ ಸರ್ವರೂ ಸೇರಿದರು ವೇ|| ಪುರಾಣಿಕ ಮಠದ ವಿರೂಪಾಕ್ಷಶಾಸ್ತ್ರಿಗಳು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಯ ವಿಷಯವನ್ನೂ ಗುರುಭಕ್ತಿಯನ್ನೂ ಬೋಧಿಸಿದರು ಆಗ ಸದರಿ ತೋಟಯ್ಯನವರ ಪುತ್ರ 10 ವರ್ಷದ ಬಾಲಕನು ತನಗೆ ಇಟ್ಟಿರುವ ಮುದ್ದಿನ ಹೆಸರನ್ನು ತೆಗೆದು ಸ್ಮರಣೆಯಾದ ನಾಮಕರಣವನ್ನು ಮಾಡಬೇಕೆಂದು ವಿನಂತಿಮಾಡಿಕೊಳ್ಳಲು ಸರ್ವರೂ ಆನಂದಪಟ್ಟು ಸದರಿ ಬಾಲಕನಿಗೆ "ರೇವಣಸಿದ್ಧಪ್ಪ" ನೆಂಬ ಶುಭನಾಮವನ್ನಿಟ್ಟರು ಆದರೂ ಈ ಪಲ್ಲಕ್ಕಿಯು ಮಹೋತ್ಸವದೊಡನೆ ಹೊರಟು ಭಜನಾಮಂದಿರಕ್ಕೆ ಸಲ್ಲಿತು ಆ ಮೇಲೆ ಸರ್ವರೂ ಪ್ರಸಾದವನ್ನು ಸ್ವೀಕರಿಸಿ ಗುರು ಭಜನಾನಂದದ ಶಕ್ತನ್ನು ನಾನಮಾಡಿ ಆನಂದದಿಂದ ತೆರಳಿದರು ಇದರಂತೆ ಪ್ರತಿಯೊಂದು ಗ್ರಾಮದವರೂ ಗುರು ಭಜನಾಸಂಘವನ್ನು ಸ್ಥಾಪನೆಮಾಡಿಕೊಂಡು ಜಗದ್ಗುರು ಪಂಚಾಚಾರ್ಯರ ಜಯಂತಿಮಹೋತ್ಸವಗಳನ್ನು ಭಕ್ತಿಯಿಂದ ನೆರವೇರಿಸುತ್ತಾ ಇಹದಲ್ಲಿ ಸುಖವನ್ನೂ ಪರದಲ್ಲಿ ಮುಕ್ತಿಯನ್ನೂ ಪಡೆಯ ಬೇಕಾಗಿರುವುದೆಂದು ಬಯಸುತ್ತೇನೆ

ಹಾಲಪ್ಪ ಕಪಟ ಹಿರೇಗಾಣಿ

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವ, ಹುಬ್ಬಳ್ಳಿ.

ಪ್ರತಿವರ್ಷ ಪದ್ಧತಿಪ್ರಕಾರ ಜಯಂತಿ ಮಹೋತ್ಸವವು ೧೮೫೬ ನೆಯ ಭಾವನಾಮ ಸಂವತ್ಸರ ಫಾಲ್ಗುಣ ಶು|| ೧೪ ಸೋಮವಾರ ದಿವಸ ಬಹಳ ವಿಜೃಂಭಣೆಯಿಂದ ನೆರವೇರಿತು ಮೊದಲೇ ಪ್ರಸಿದ್ಧಿಸಲ್ಪಟ್ಟ ಪ್ರಕಾರ ಪಟ್ಟದ ಸ್ವಾಮಿಗಳು ಹಿರೇಮಠ ಬ್ಯಾಹಟ್ಟಿ, ಗುರುಸಿದ್ಧಯ್ಯನವರು ನರೇಂದ್ರಮಠ ಬಸಲಿಂಗಯ್ಯನವರು ಶಾಸ್ತ್ರಿ ಪ್ರ ಫ ವಕೀಲ ಬಿ ಎಸ್ ಶಿವಶಂಕರ ಪಾಟೀಲ ವಕೀಲ ತೋಟಪ್ಪನವರು ಅಂಗಡಿ ಮತ್ತು ಮಹಾಲಿಂಗಪ್ಪನವರು ಸೊಪ್ಪಿನ ಶಿವಯ್ಯನವರು ಹಿರೇಮಠ ಅನ್ನದಾನಯ್ಯನವರು ಚೌಕಿಮಠ ಜಿ ವಿ ಹಿರೇಮಠ ವಕೀಲ ಎಂ ಬಿ ಹುಲಗೇರಿ ಪ್ಲಿ ಡ ಎಂ ಆರ್ ಪಾಟೀಲ ವ ವಿರೂಪಾಕ್ಷಪ್ಪನವರು ನಾಲ್ವಡೆ ಚನ್ನಪ್ಪ ಕಂಬಾರ ಬಸಪ್ಪನವರು ಮೊದಲಿನವರಿಂದ ಧರ್ಮದರ್ಶಿ ಪಟ್ಟದ ಹಿರೇಮಠ ಪ್ರಕೋಷ್ಠದ ಮಂದಿರದ ಇತ್ಯಾದಿ ಜನರ ಸಹಾಯದಲ್ಲಿ ಜಯಂತಿಯ ಕಾರ್ಯಗಳು ನೆರವೇರಿದವು ಸಾಯಂಕಾಲ ೭ ಘಂಟೆಗೆ ಸರಿಯಾಗಿ ಹುಬ್ಬಳ್ಳಿಯ ಹಿರೇಮಠದಿಂದ ಶ್ರೀ ಜಗದ್ಗುರು ರೇಣುಕರ ಮೂರ್ತಿಯಿಂದ ಯುಕ್ತವಾದ ಪಲ್ಲಕ್ಕಿ ಮಹೋತ್ಸವವು ಸದರಿ ಮಠದ ಸ್ವಾಮಿಗಳವರ ಪ್ರಸ್ಥಾನಮಹೋತ್ಸವವು ಶೃಂಗರಿಸಲ್ಪಟ್ಟ ಎತ್ತುಗಳಿಂದ ಅನೇಕ ವಿಧವಾದ ವಾದ್ಯಗಳಿಂದ ಬಾಜಿ ಕಲ್ಲಿಯ ಮತ್ತು ಪಟ್ಟದಿಂದ ಬಂದ ಭಜನಾಸಂಘಗಳು ಹೊಲದ ಕಲ್ಲಿಯ ಪ್ರಾಂತ ವಿದ್ಯಾರ್ಥಿಗಳಿಂದಲೂ ಕೂಡಿಕೊಂಡು ಬಹಳ ವಿಜೃಂಭಣೆಯಿಂದ ನಡೆಯಿತು ಉತ್ಸವವು ಕದಳೀತೋರಣಗಳಿಂದ ಅಲಂಕರಿಸಲ್ಪಟ್ಟ ದೊಡ್ಡ ದೊಡ್ಡ ಬೀದಿಗಳಲ್ಲಿ ಹಾಯ್ದು ಬರುವಾಗ ಅಲ್ಲಲ್ಲಿ ಜನರು ಫಲಪುಷ್ಪಾದಿಗಳನ್ನು ಸಮರ್ಪಿಸಿ ತಮ್ಮ ತಮ್ಮ ಭಕ್ತಿಯನ್ನು ತೋರಿಸುತ್ತಿದ್ದರು ಈ ಮಹೋತ್ಸವದಲ್ಲಿ ಸಾವಿರಾರು ಜನರು ಭಾಗಿಗಳಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಾರಾಜಕೀ ಜೈ ಎಂದು ಜಯಘೋಷವನ್ನು ಮಾಡುತ್ತಿದ್ದರು ಈ ಉತ್ಸವ ಸಮಯದಲ್ಲಿ ಮಂಗಲವನ್ನು ವ್ಯಸನಿಸುತ್ತ ಉತ್ಸವವು ಮಠಕ್ಕೆ ಬಂದು ತಲ್ಪಿದನಂತರ ವಿ ಎಸ್ ಹಿರೇಮಠ ಇವರು ಜಯಂತಿಯ ಮಹತ್ವವನ್ನು ವಿವರಿಸಿದರು

ಈ ಜಯಂತಿ ಮಹೋತ್ಸವವನ್ನು ಶ್ರೀ ರೇಣುಕನಲ್ಲಿ ಅತ್ಯಂತ ಭಕ್ತಿಯುಳ್ಳವರೂ ಚಿಕ್ಕಮಯ್ಯನವರೂ ಜಗಳೂರು ಮಂಡಲದ ಮೇಘಾವಿಗಳೂ ಆದ ನರೇಂದ್ರಮಠದ ಗುರುಸ್ವಾಮಿಯವರು ಮತ್ತು ಚೌಕಿಮಠದ ಅನ್ನದಾನಯ್ಯನವರು ಮೊದಲಿನವರೂ ವಿಶೇಷ ಶ್ರಮವಹಿಸಿ ಗುರುಕಾರ್ಯವನ್ನು ನೆರವೇರಿಸಿದರು ಶ್ರೀ ಜಗದ್ಗುರು ರೇಣುಕಾಚಾರ್ಯರು ಇವರೇ ಮೊದಲಾದ ಉತ್ಸವ ಭಾಗಿಗಳೆಲ್ಲರಿಗೂ ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದಾಶಿಸುವ

ತತ್ವದರ್ಶಿ

ಆನೆಕಲ್ಲಿನ ಭಯಂಕರ ಅನಾಹುತ ತಾಳೂರು.

ಬಳ್ಳಾರಿ ಜಿ|| ಹೊಸಪೇಟೆ ತಾಲೂಕು ತಾಳೂರು ಗ್ರಾಮದಲ್ಲಿ ಭಾವನಾಮ ಸಂ|| ರದ ಫಾಲ್ಗುಣ ಬ|| ೩೦ ಬುಧವಾರ ಸಾಯಂಕಾಲ 1 ಘಂಟೆಯಿಂದ ೮ ಘಂಟೆಯವರೆಗೂ, ದೊಡ್ಡ ಶಿಲಾವೃಷ್ಟಿ ಸುರಿಯಿತು. ಈ ವೃಷ್ಟಿಯಿಂದ ಗ್ರಾಮದಲ್ಲಿ ಮನೆಗಳೊಳಗೆ ನೀರು ಹೊಕ್ಕು ಅದರೊಂದಿಗೆ ಆನೆಕಲ್ಲುಗಳು ಅತಿಶಯವಾಗಿ ತುಂಬಲು ಅದರ ಹೆಚ್ಚಾದ ತಂಪಿನಿಂದ ಒಟ್ಟು ಈ ಗ್ರಾಮದಲ್ಲಿ 40 ದನಗಳು ೫0 ಕುರಿಗಳು ನಾಶ ಹೊಂದಿರುತ್ತವೆ ಇಲ್ಲಿಯ ವೀಳ್ಯದೆಲೆ ತೋಟಗಳು ಯಾವತ್ತೂ ನಾಶಹೊಂದಿ ಗ್ರಾಮದ ಜನರಿಗೆ ಜೀವಮಾನನಡೆಯುವುದು ಬಹಳ ಕಷ್ಟವಾಗಿದೆ ಒಟ್ಟು ಈ ಅನಾಹುತದಿಂದ 10 10 ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚು ನಷ್ಟವಾಗಿದೆಯೆಂದು ಜನರು ಊಹಿಸಿದ್ದಾರೆ ಕೆಲವು ಮನೆಗಳು ಕೂಡ ನಷ್ಟವಾಗಿವೆ ಕೆಲವು ಜನರು ಆನೆಕಲ್ಲಿನ ಹೊಡೆತಕ್ಕೆ ಸಿಕ್ಕು ಮೂರ್ಛೆಹೊಂದಿದ್ದರು ಪ್ರತ್ಯುಪಚಾರ ಮಾಡಿದ್ದರಿಂದ ಅವರಿಗೆ ಯಾವ ಅಪಾಯವಾಗಲಿಲ್ಲ ಈವರೆವಿಗೂ ಆನೆಕಲ್ಲುಗಳ ಗುಂಪು ಕರಗಿರುವದಿಲ್ಲ ಪರಮಾತ್ಮನ ಲೀಲೆಯು ವಿಚಿತ್ರವಾದುದು.

ಓರ್ವ ಗ್ರಾಮವಾಸಿ

ಶ್ರೀ ರಂಭಾಪುರೀ ಪೀಠದ ರಥೋತ್ಸವ.

ಪ್ರತಿವರ್ಷ ಪದ್ಧತಿಯಂತೆ ಈ ವರ್ಷ ಶ್ರೀ ರಂಭಾಪುರೀ ಸಂಸ್ಥಾನದಲ್ಲಿ ಶ್ರೀ ಸ್ವಾಮಿಯ ರಥೋತ್ಸವವು ಅತ್ಯಂತ ವೈಭವದಿಂದ ನಡೆಯಿತು. ರಥೋತ್ಸವಕ್ಕೆ ಸರಿಯಾಗಿ ಶ್ರೀ ಜಗದ್ಗುರುಗಳವರು ಮೈಸೂರಿನಿಂದ ದಯಮಾಡಿಸಿದ್ದರು. ಮೈಸೂರು, ನಂಜನಗೂಡು, ಕಡೂರು, ನೊಣಬಳ್ಳಿ, ಚಿಕ್ಕಮಗಳೂರು ಜಿಲ್ಲೆಗಳು, ಬಾಳೆಹಳ್ಳಿ, ಸ್ವಾವಿತಿ ಮೊದಲಾದ ಗ್ರಾಮಗಳಿಂದ ಅನೇಕ ಜನರು ಸೇರಿದ್ದರು ಈ ವರ್ಷ ಚಿಕ್ಕಮಗಳೂರಿನ ಎಂ ಎಲ್ ಸುಬ್ರಹ್ಮಣ್ಯರಾಜ ಅರಸಿನವರು ಆಗಮಿಸಿದ್ದರಿಂದ ರಥೋತ್ಸವಕ್ಕೆ ವಿಶೇಷ ಶೋಭೆಯುಂಟಾಗಿದ್ದಿತೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ ಯಾತ್ರಾರ್ಥಿಗಳಿಗಾಗಿ ಒಂದು ಸರ್ಕಲ್ ಇನ್ಸ್‌ಪೆಕ್ಟರ್ ಅಧಿಕಾರಿಗಳಾದ ಪಂ|| ಮಹೇಶ್ವರಶಾಸ್ತ್ರಿಗಳು ಅನುಕರಣೀಯವಾದ ವಸತಿಗೂ, ಭೋಜನಕ್ಕೂ ತಕ್ಕ ಅನುಕೂಲತೆಯನ್ನು ಕಲ್ಪಿಸಿಕೊಟ್ಟು ಸರ್ವರ ಪ್ರೀತಿಗೆ ಪಾತ್ರರಾದರೆಂದು ತಿಳುಹಿಸಲು ತುಂಬಾ ಸಂತೋಷವಾಗುತ್ತದೆ ೧೨ ವಾರಗಳಲ್ಲಿ ಮಹಾಸನ್ನಿಧಿಯವರು ಮೂಡಗೆರೆ ಸಕಲೇಶಪುರ ಪ್ರಾಂತಕ್ಕೆ ಸಂಚಾರ ದಯಮಾಡಿಸುವರೆಂದು ತಿಳಿದುಬರುತ್ತದೆ

ಪತ್ರವ್ಯವಹಾರ.

[illegible] ಪತ್ರಿಕಾಕರ್ತರು [illegible] ನಮ್ಮ ಸರ್ಗರೂ ಅಲ್ಲದಲ್ಲಿ [illegible]

ನಮ್ಮ ಕಂಠ ಜಗದ್ಗುರುಗಳ

ದರ್ಶನಾಳದಲ್ಲಿ ನಡೆದ ಎರಡನೆಯ ವೀರಶೈವಧರ್ಮೋನ್ನತಿಪರಿಷತ್ತಿನ ಕಾರ್ಯಕ್ರಮ

ವೀರಶೈವಧರ್ಮೋನ್ನತಿಗಾಗಿ ತಮ್ಮ ಕಪೋ [illegible] ಧಾರೆಯೆರೆಯುತ್ತಿರುವ ಬ್ರಹ್ಮ [illegible] ಶ್ರೀ ಚನ್ನವೀರ [illegible] ಚಾರ್ಯರೆಂಬ ಮಹಾ [illegible] ಧರ್ಮಾಚಾರ್ಯ [illegible] ದರ್ಶನ [illegible] ವೀರಶೈವಧರ್ಮೋನ್ನತಿಪರಿಷತ್ತು [illegible]

[illegible]

ಸಂಚಾರ, ಸದುಪದೇಶ ಮತ್ತು ಸನ್ಮಾನಗಳು

ಪಂಡಿತ ಶ್ರೀ ವೀರಭದ್ರ [illegible] ಗಳವರು [illegible]

[illegible]

ಕೃತಜ್ಞತೆ [illegible] ಪಂಡಿತ ಶ್ರೀ ಜಗದೀಶ ಶಾಸ್ತ್ರಿಗಳವರು [illegible] ವೀರಶೈವರೇ ಧನ್ಯರು

ತಾ|| [illegible] ‘ ಜೋಂಬರ ಜವಳಗಿ ’ [illegible]

ಮಹಕ ವಿಷಯ

[illegible]

ಆರಂಭದಲ್ಲಿ ಧನ್ಯವಾದಗಳು ಅಧ್ಯಕ್ಷಸ್ಥಾನದ ಸ್ವೀಕಾರದ ಬಗ್ಗೆ ಸೂಚಿಸಿದರು ಧ್ಯೇಯ ವಚನಗಳು ಅನುಮೋದನವನ್ನಿತ್ತರು ಪಂಡಿತ ಉಪಾಧ್ಯಾಯ ತಾ|| ಧ್ಯೇಯವರೆಗೂ ಸಾಗಿತು. ಶಿವ ಭಕ್ತಿಯನ್ನು ಕೇಳಿ ಸರ್ವರೂ ಚಕಿತರಾದರು. ಧರ್ಮದ ಪ್ರಾಚೀನತ್ವ ಪನ್ನು ಕೇಳಿ ಸರ್ವರೂ ಆನಂದೋದ್ರೇಕವನ್ನು ಪಡೆದರು. ಅಧ್ಯಕ್ಷರು ಈ ವಿಷಯದಲ್ಲಿ ಸ್ವಾಭಿಪ್ರಾಯವನ್ನಿತ್ತರು. ಅಧ್ಯಕ್ಷರ ದರ್ಶನದಿಂದ ಶ್ರೀ ಜಗದ್ಗುರು ವೀರಶೈವ ಮೂರ್ತಿಗಳು (ಧಾರ್ಮಿಕರು)—ಗುರುಗಳು ಹೇಳಬೇಕು ಶಿಷ್ಯರಾದ ನಾವು ಕೇಳಿ ನಡೆಸಬೇಕು. ನಮ್ಮ ಧರ್ಮವು ವಾದಮಾಡುವುದರಲ್ಲಿ ಏನೂ ಅರ್ಥವಿಲ್ಲ ಎಂದು ಹೇಳಿ ಆಧಾರವನ್ನು ಪ್ರದರ್ಶಿಸಿದರು. ಈ ಕಾರ್ಯಕ್ರಮವನ್ನು ಪೂರ್ವದಿಂದಲೂ ಪ್ರಸಿದ್ಧರೂ ಕಾರ್ಯದಕ್ಷರೂ ಆದ ಗುರುಭಕ್ತಾಗ್ರೇಸರರೂ ಆದ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಭಜನಾಸಂಘದವರು ನೆರವೇರಿಸಿದರು. ಈ ಭಜನಾಸಂಘದವರು ಅನೇಕ ಸೇವಾ ಕಾರ್ಯಗಳನ್ನು ಮಾಡಿರುತ್ತಾರೆ. ಈ ಸಂಘದವರು ಕಸಬಾಪೇಟೆಯಲ್ಲಿರುತ್ತಾರೆ. ಸೋಲಾಪುರದಲ್ಲಿ ಕಸಬಾಪೇಟೆಯು ಸುಪ್ರಸಿದ್ಧವಿರುತ್ತದೆ. ಈ ಪೇಟೆಯಲ್ಲಿಯೇ ಮಹತ್ವಪೂರ್ಣವಾದ ಶ್ರೀ ಸಿದ್ಧರಾಮನ ಮಂದಿರವೂ ಶ್ರೀ ರೇವಣಸಿದ್ಧೇಶ್ವರ ... ದೇವಾಲಯವೂ ಶ್ರೀ ಮಲ್ಲಿಕಾರ್ಜುನದೇವಾಲಯವೂ ಶ್ರೀ ... ಗೃಹವೂ ಈ ಕಸಬಾಪೇಟೆಯಲ್ಲಿಯೇ ಇರುತ್ತವೆ. ಶ್ರೀ ಸಿದ್ಧೇಶ್ವರ ಮತ್ತು ಮಲ್ಲಿಕಾರ್ಜುನ ಪೂಜಕರೂ ಈ ಪೇಟೆಯಲ್ಲಿಯೇ ಇರುತ್ತಾರೆ. ಅಷ್ಟೇಕೆ? ವೀರಶೈವ ಧರ್ಮಸಂರಕ್ಷಕರಾದ ಶ್ರೀ ಗುರು ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಮುಖ್ಯ ಮಠವೂ ಈ ಪೇಟೆಯಲ್ಲಿಯೇ ಇರುತ್ತದೆ. ... ಶ್ರೀ ... ಮಠದಲ್ಲಿ ಈ ಸಂಘದವರಿಂದ ಕೋಟಿಗ ಶ್ರೀಗಳವರ ಪಾದಪೂಜೆಯು ನಡೆದಾಗ್ಗೆ ಈವರೆಗೂ ಯಾರೂ ಮಾಡದಂಥ ಕಾರ್ಯವನ್ನು ತಮ್ಮ ... ದಿಂದ ಮಾಡಿ ತೋರಿಸಿದರು. ಅದಾವ ಕಾರ್ಯವೆಂದರೆ ದೀಕ್ಷಾ! ಎಂಬುವ ಮಹತ್ವಪೂರ್ಣ ವೀರಶೈವರ ಮುಖ್ಯ ಸಂಸ್ಕಾರವೊಂದು ಆನಂದದಿಂದ ಜರುಗಿತು. ಕೆಲವು ಜನ ಹೆಣ್ಣುಮಕ್ಕಳೂ ಕಲ್ಲುಗಳೇ ಸಾಕ್ಷಿ. ಧನ್ಯ! ಧನ್ಯ! ಕಸಬಾ ಪೇಟೆಯೇ ಧನ್ಯವು.

೧೯-೩-೩೫ನೇ ಸಾಯಂಕಾಲ ೪ ಘಂಟೆಗೆ ವೀರಶೈವ ... ಲಿಂಗ ಸಂಘದವರು ಆಗಮಿಸಿ ... ನೆರವೇರಿಸಿದರು. ... ವಿದ್ಯಾರ್ಥಿಗಳಿಗೆ ಸುಂದರ ಭಾಷಣವನ್ನು ಮಾಡಿದರು.

ಗಂಭೀರ ಹಿರೇಹಳ್ಳು ... ಸಾಯಂಕಾಲ ೬ ಘಂಟೆಗೆ ... ಹೊರಟು ಹೋಟಗಿಯಲ್ಲಿ ... ವೀರಶೈವರು ... ಶ್ರೀಗಳವರನ್ನು ಸ್ವಾಗತಿಸಿದರು. ... ಸಭೆಯ ಮುಂದೆ ... ಗುರುಸ್ತುತಿಯಾದ ಮೇಲೆ ... ಹೇಳಿದನು. ಶ್ರೀ ರೇವಣಸಿದ್ಧಸ್ವಾಮಿಗಳು ಸರ್ವರನ್ನು ಸ್ವಾಗತಿಸಿದರು. ಶ್ರೀ ಮಲ್ಲಿಕಾರ್ಜುನಸ್ವಾಮಿಗಳು ... ಮಾನಪತ್ರವನ್ನು ಓದಿದರು. ಪಂಡಿತರಿಂದ ಸುಂದರವಾದ ಉತ್ತರವು ದೊರೆಯಿತು. ಬಳಿಕ ಶ್ರೀಗಳವರು ಉಪದೇಶವನ್ನು ಮಾಡಿ ಸರ್ವರನ್ನು ಆನಂದಗೊಳಿಸಿದರು. ಹೋಟಗಿ ಶ್ರೀಗಳು ಆಭಾರವನ್ನು ಪ್ರದರ್ಶಿಸಿದ ಮೇಲೆ ಮಂಗಳ ... ಸಭೆಯು ಮುಕ್ತಾಯವಾಯಿತು.

೩೦-೩-೩೫ನೇ ಶನಿವಾರ ಸಭೆಯಲ್ಲಿ ಪಂಡಿತರು ವೀರಶೈವ ಸಿದ್ಧಾಂತ ... ಈ ವಿಷಯದಲ್ಲಿ ಮಹತ್ವಪೂರ್ಣ ಉಪನ್ಯಾಸವನ್ನು ಮಾಡಿದರು. ... ಶಿವಯೋಗಿ ಮಹಾಲಿಂಗಸ್ವಾಮಿಗಳು, ಶಂಕರಲಿಂಗ ... ಉಪನ್ಯಾಸಗಳಾದವು. ಹೋಟಗಿ ಶ್ರೀಗಳಿಂದ ಆಭಾರ ಪ್ರದರ್ಶನವಾಯಿತು.

೩೧-೩-೩೫ನೇ ಪಂಡಿತರು ... ಪ್ರಯಾಣಬೆಳೆಸಿದರು.

ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಸಭೆಯ ಪ್ರಚಾರಕ ಪಂಡಿತ ...

ವೀರಭದ್ರಸ್ವಾಮಿ ... ಮು|| ಹೋಟಗಿ ತಾ|| ಸೋಲಾಪುರ

ನಮಃ ಶಂಕರಾರ್ಧಶರೀರಿಣ್ಯೈ

ವೀರಶೈವ ಮಹಿಳಾಪರಿಷತ್ತು

ತಾ|| ೧೧-೩-೩೫ನೇ ಸೋಮವಾರ ೫ ಘಂಟೆಗೆ ... ಪ್ರಸಿದ್ಧ ... ಗುರುಭಕ್ತ ... ಶ್ರೀ ... ಅಧ್ಯಕ್ಷತೆಯಲ್ಲಿ ... ವೀರಶೈವ ಸ್ತ್ರೀಯರ ... ಈ ಸಭೆಯಲ್ಲಿ ... ಶ್ರೀಮತಿ ... ಪರಮ ಗುರುಭಕ್ತಳಾದ ... ವೀರಶೈವ ... ಯುವತಿ ... ಧರ್ಮ, ... ಮುಂತಾದ ವಿಷಯಗಳ ಮೇಲೆ ಸ್ತ್ರೀಯರು ... ಭಾಷಣಗಳನ್ನು ಮಾಡಿದರು.

ಸ್ವಾ|| ಕಾಶೀಬಾಯಿಯವರ ಕ|| ಚನ್ನಬಸಬಾಯಿ ಹಿರೇಮಠ, ಸ್ವಾ|| ಸುಶೀಲಾಬಾಯಿ ... ಹರ ... ಸ್ತುತಿಯನ್ನು ಮಾಡಿದರು. ... ವರ್ಣನೆಯನ್ನು ... ಕುಮಾರಿ ... ಸ್ತ್ರೀಯರು ಸರ್ವರೂ ... ಜಗದ್ಗುರುಗಳಿಂದಲೂ ... ಸಂಚಾರಿಸಿದರು ... ಕುಮಾರಿ ... ಈ ಬಾಲೆಗೆ ೧೧ ವಿವಾಹ ... ವಿಷಯವನ್ನು ... ತಿಳಿಸಿದರು.

ಸ್ವಾ|| ಕಾಶೀಬಾಯಿಯವರ ಕ|| ಚನ್ನಬಸಬಾಯಿ ಹಿರೇಮಠ ಇವರು ... ಈ ವಿಷಯದಲ್ಲಿ ಸಂಭಾಷಿಸಿದರು. ... ಇವರು ಧರ್ಮಧರ್ಮ ವಿಷಯದಲ್ಲಿ ಸಂಭಾಷಿಸಿದರು.

ಈ ಮಹಿಳಾ ಪರಿಷತ್ತಿನ ಅಧ್ಯಕ್ಷರಾದ ಸ್ವಾ|| ... ಇವರು ಮನೋಹರವಾಗಿಯೂ ... ಕರ್ತವ್ಯವನ್ನು ... ಸ್ತ್ರೀಯರಲ್ಲಿ ... ಈ ವಿಷಯಗಳನ್ನು ಚನ್ನಾಗಿ ಬೋಧಿಸಿದರು.

ಹೋಟಗಿ ಶ್ರೀಗಳ ... ಸ್ತ್ರೀಯರ ಸಭೆಗೆ ಈ ವಿಷಯವನ್ನು ಬೋಧಿಸಿದರು. ... ಮಂಗಳ ... ಪೂರೈಸಿತು.

ಈ ಸಭೆಗೆ ಸೋಲಾಪುರದಲ್ಲಿಯ ಶ್ರೀಮಂತ ... ಗಂಭೀರ ... ಹಿರೇಹಳ್ಳು ... ಇತ್ಯಾದಿ ಪ್ರಮುಖ ಸ್ತ್ರೀಯರು ... ಉಪಸ್ಥಿತರಾಗಿದ್ದರಿಂದ ... ವಿಶೇಷ ಶೋಭೆಯು ಪ್ರಾಪ್ತವಾಗಿತ್ತು.

ಸಭಾ ಕಾರ್ಯದರ್ಶಿ

ಯುವಸಂವತ್ಸರ ಫಲ

ಶಕಾಬ್ದ ೧೮೫೭ ಯುವನಾಮಕ ಸಂವತ್ಸರದಲ್ಲಿ ಮಂತ್ರೀ ... ಗ್ರಹಗಳು ...

ವರ್ಗ ನಿರೀಕ್ಷಣೆ:

ರಾಜಾ—ರಾಜಾ ...

ಮಂತ್ರೀ—ಮಂತ್ರಿ

ಶುಕ್ರ—... ಆಧಿಪತಿ ...

ಕುಜ—... ಅಧಿಪತಿ

ಬುಧ—ಧಾನ್ಯಾಧಿಪತಿ

ತಾ|| ೧೪-೩-೩೫ ರಿಂದ ೧೩-೪-೩೫ ರ ವರೆಗೆ ಚೈತ್ರಮಾಸ

ಸಕಲ ಮಳೆ ಪ್ರಜೆಗಳಿಗೆ ಯುದ್ಧ ಕಳವು ದುರ್ಭಿಕ್ಷ ... ತಾ|| ೧೪-೩-೩೫ ... ಸುಭಿಕ್ಷ ಪ್ರಜಾಕ್ಷೋಭ ... ಅಧಿಕ ... ಉಪ್ಪು ಇವುಗಳಿಗೆ ... ಸಮುದ್ರದ ಬೆಲೆ ... ತಾ|| ೧-೪-೩೫ ರಿಂದ ... ಒಳಗೆ ಒಳ್ಳೇ ಮಳೆ

ತಾ|| ೩-೪-೩೫—... ವೈಶಾಖಮಾಸ

ಧಾನ್ಯಗಳನ್ನು ಹತ್ತಿ ಉಪ್ಪು ಇವುಗಳಿಗೆ ಸಮನಾದ ಬೆಲೆ ... ದುರ್ಭಿಕ್ಷ ಯುದ್ಧ ಕಳವು ... ತಾ|| ೧೦-೫-೩೫ ರಿಂದ ... ಎಳ್ಳು ಇವುಗಳಿಗೆ ಬೆಲೆ ಹೆಚ್ಚು ... ತಾ|| ೧-೬-೩೫ ... ಸುಭಿಕ್ಷ ... ತಾ|| ೩೦-೪-೩೫ ರಿಂದ ೧೧-೫-೩೫ ... ಬೆಲೆ

ತಾ|| ೨-೬-೩೫—೩೦-೬-೩೫ ಜ್ಯೇಷ್ಠಮಾಸ

ವ್ಯಾಪಾರಿಗಳ ಅರ್ಥ ಬೆಳವಣಿಗೆ ತಾ|| ೨೦-೬-೩೫ ... ಎಳ್ಳು ... ಸಂಗ್ರಹಿಸಿ ೫ ತಿಂಗಳ ಮೇಲೆ ... ಪ್ರಜೆಗಳಿಗೆ ... ೨೫-೫-೩೫ ... ಎಳ್ಳು ಹತ್ತಿ ಉದ್ದು ಇವುಗಳಿಗೆ ... ಹೆಚ್ಚು ಬೆಲೆ ಒಳ್ಳೇ ಮಳೆ ... ಈ ತಿಂಗಳ ಕೊನೆಯಲ್ಲಿ ಮಳೆಗೆ ... ದಿನಗಳಿಗೆ ಬೆಲೆ ಕಡಮೆ

ತಾ|| ೧-೭-೩೫—೩೦-೭-೩೫ ಆಷಾಢಮಾಸ

ಸ್ವಲ್ಪ ಮಳೆ ಪ್ರಜೆಗಳಿಗೆ ಜಗಳ ಭಯ ಸುಭಿಕ್ಷ ಕಳವು ಸಮಯದಲ್ಲಿ ... ತಾ|| ೨೧-೭-೩೫ ರಲ್ಲು ಗೋಧಿ, ಎಳ್ಳು ಇವುಗಳನ್ನು ಸಂಗ್ರಹಿಸಿದರೆ ಕಾರ್ತೀಕದಲ್ಲಿ ಮೂರರಷ್ಟು ಲಾಭ, ಹೆಚ್ಚು ಮಳೆ

ತಾ|| ೩೧-೭-೩೫—೨೮-೮-೩೫ ಶ್ರಾವಣಮಾಸ

ಹೆಚ್ಚು ಮಳೆ ಹೆಸರು ಉದ್ದು ಎಳ್ಳು ಎಣ್ಣೆ ಗೋಧಿ ಹತ್ತಿ ಇವುಗಳಿಗೆ ಹೆಚ್ಚು ಬೆಲೆ ಪ್ರಜಾಸುಖ ರಾಜರಿಗೆ ಜಯ ... ಸಿಂಧುದೇಶದ ಜನರಿಗೂ ಮುಸಲ್ಮಾನರಿಗೂ ಸೌಖ್ಯ ... ತಿಂಗಳ ಕೊನೆಯಲ್ಲಿ ಸಕಲ ... ಮಳೆಗೆ ಪ್ರತಿಬಂಧಕ ... ಒಳ್ಳೇ ಮಳೆಯಾಗುತ್ತೆ

ತಾ|| ೨೯-೮-೩೫—೨೭-೯-೩೫ ಭಾದ್ರಪದಮಾಸ

ಪೇಶಾವರ್ ನಗರದಲ್ಲಿ ಅಗ್ನಿಭಯ ಲಾಟಿ, ಸಿಂಧು ದೇಶದಲ್ಲಿ ... ದೇಶದಲ್ಲಿ ಕಚ್ಚ ಗುಜರಾತಿನಲ್ಲಿಯೂ ದುರ್ಭಿಕ್ಷ ... ಇವುಗಳಿಗೆ ಬೆಲೆ ಕಡಮೆ ... ದಿನಗಳಿಗೆ ಹೆಚ್ಚು ಬೆಲೆ ... ಮಳೆ ... ಹೆಚ್ಚು ಬೆಲೆ ... ದೇಶಗಳಿಗೆ ಸುಭಿಕ್ಷ ... ಧಾನ್ಯಗಳನ್ನು ಸಂಗ್ರಹಿಸಿ ... ತಿಂಗಳಲ್ಲಿ ಮಾರಿದರೆ ಹೆಚ್ಚು ಲಾಭ ... ಹೆಚ್ಚು ಮಳೆ

ತಾ|| ೨೮-೯-೩೫—೨೭-೧೦-೩೫ ಆಶ್ವಯುಜಮಾಸ

ರಾಜರು ಮತ್ತು ... ಧನಾಸಕ್ತಿ ... ಜನ ... ಬೆಲೆ ... ಇವುಗಳಿಗೆ ಹೆಚ್ಚು ಬೆಲೆ ... ಸಮನಾದ ಬೆಲೆ ... ರಾಜರುಗಳಿಗೆ ಯುದ್ಧ ... ತಾ|| ೩-೧೦-೩೫ ರಲ್ಲಿ ಧಾನ್ಯ ಸಂಗ್ರಹಿಸಿದರೆ ೩ ನೆ ತಿಂಗಳಲ್ಲಿ ಲಾಭ ... ಹಸುಗಳಿಗೆ ಹೆಚ್ಚು ಬೆಲೆ ಸಾಧಾರಣವಾದ ಮಳೆ ಕಳವು ಸಮಯದಲ್ಲಿ ಪ್ರಜೆಗಳಿಗೆ ಹೆಚ್ಚು ನಷ್ಟ ರಾಜರಿಗೆ ಪೀಡೆ ಕಳವು ಸಮಯದಲ್ಲಿ ಒಳ್ಳೇ ಮಳೆಯೂ ಆಗುತ್ತೆ

ತಾ|| ೨೮-೧೦-೩೫—೨೬-೧೧-೩೫ ಕಾರ್ತೀಕಮಾಸ

ಎಣ್ಣೆ ಎಳ್ಳು ... ಇವುಗಳಿಗೆ ಸಮವಾದ ಬೆಲೆ ... ಹೆಚ್ಚು ... ರಾಜರಿಗೆ ... ಧಾನ್ಯಗಳು ... ಎಳ್ಳು ಉದ್ದು ಇವುಗಳಿಗೆ ... ಹಸುಗಳಿಗೆ ... ಸುಭಿಕ್ಷ ... ಪ್ರಜೆಗಳಿಗೆ ಹೆಚ್ಚು ಧನನಷ್ಟ ಕಳವು ಸಮಯದಲ್ಲಿ ಮಳೆಗೆ ಭಂಗ

ತಾ|| ೨೭-೧೧-೩೫—೨೫-೧೨-೩೫ ಮಾರ್ಗಶಿರಮಾಸ

ತಾ|| ೧೧-೧೨-೩೫ ರಲ್ಲಿ ... ಧಾನ್ಯಗಳು ... ಬೆಲೆ ... ಪ್ರಜಾರೋಗ, ಕಳವು ಸಮಯದಲ್ಲಿ ಪ್ರಜಾಸುಖ ... ಮಕ್ಕಳುಗಳಿಗೆ ... ಒಂದು ಸಮಯದಲ್ಲಿ ... ಗಳಿಗೆ ಬೆಲೆ ಕಡಮೆ ... ಒಳ್ಳೇ ಮಳೆ ಸಸ್ಯವೃದ್ಧಿ ರಾಜರುಗಳಿಗೆ ಯುದ್ಧ

ತಾ|| ೨೬-೧೨-೩೫—೨೪-೧-೩೬ ಪುಷ್ಯಮಾಸ

ಹೆಚ್ಚು ... ಸಸ್ಯ ... ಪ್ರಜೆಗಳಿಗೆ ... ಧಾನ್ಯಗಳಿಗೆ ಹೆಚ್ಚು ಬೆಲೆ ... ಇವುಗಳನ್ನು ಸಂಗ್ರಹಿಸಿದರೆ ೩ ತಿಂಗಳಲ್ಲಿ ಲಾಭ ಪ್ರಜಾರೋಗ ... ಧಾನ್ಯ ಸಮೃದ್ಧಿ ... ದಿನಗಳಿಗೆ ಈ ತಿಂಗಳಲ್ಲಿ ೪ ರಷ್ಟು ಲಾಭ ಸಕ್ಕರೆ ಬೆಲ್ಲಕ್ಕೆ ಸಮಬೆಲೆ ... ಇವುಗಳ ... ಹೆಚ್ಚು ಕಳವು ... ಹಸುಗಳಿಗೆ ... ಎಳ್ಳು ಇವುಗಳಿಗೆ ಹೆಚ್ಚು ಬೆಲೆ ಮಂತ್ರಿ ವಿರೋಧ ಕಷ್ಟಭಯ

ತಾ|| ೨೫-೧-೩೬—೨೨-೨-೩೬ ಮಾಘಮಾಸ

... ಧಾನ್ಯ ಸಮೃದ್ಧಿ ಪ್ರಜೆಗಳಿಗೆ ... ದಿನಗಳಿಗೆ ಬೆಲೆ ಕಡಮೆ ಒಳ್ಳೇ ಮಳೆ ರಾಜರಿಗೆ ಯುದ್ಧ ಎಳ್ಳು ಹತ್ತಿ ... ಇವುಗಳಿಗೆ ಬೆಲೆ ಹೆಚ್ಚು

ತಾ|| ೨೩-೨-೩೬—೨೩-೩-೩೬ ಫಾಲ್ಗುಣಮಾಸ

ದಿನಗಳಿಗೆ ಸಮಬೆಲೆ ಪ್ರಜಾಸುಖ ಸುಭಿಕ್ಷ ಕಳವು ಸಮಯದಲ್ಲಿ ದುರ್ಭಿಕ್ಷ ಕಳವು ಸಮಯದಲ್ಲಿ ಪ್ರಜಾರೋಗ

ತಾ|| ೧೩-೧೦-೩೪ ರಲ್ಲಿ ... ಜ್ಯೋತಿಷ ... ಯುವಸಂವತ್ಸರದ ... ಪ್ರಚಾರಪಡಿಸಲು ... ವರ್ಷಫಲದ ಸಾರಾಂಶವನ್ನು ಪತ್ರಿಕಾ ಮೂಲಕ ಪ್ರಕಟಪಡಿಸುತ್ತೇವೆ

ಶಿರಹಟ್ಟಿ ... ಸಂಸ್ಥಾನ ಮಹಾವಿದ್ವಾನ್ ... ಜ್ಯೋತಿಷ್ಯ ... ಸಂಸ್ಕೃತ ಮಹಾಪಾಠಶಾಲಾ

ಟಿ. ಎ. ... ಸಂಸ್ಥಾನ ಜ್ಯೋತಿರ್ವಿದ್ವಾನ್ ... ಶಾಸ್ತ್ರಿಗಳು ಮೈಸೂರು

ಪಂಚಾಚಾರ್ಯ ಪ್ರಭಾ

[illegible]

[illegible]

[illegible]

ಯಾವ [illegible] ಲಿಂಗವನ್ನು [illegible] ಶುಭಕರ್ಮಗಳಿಗೂ [illegible] ಸ್ಕಾಂದಲಿಂಗಪುರಾಣಾದಿಗಳಲ್ಲಿ [illegible] ಜಗದ್ಗುರು [illegible] —

[illegible] ಲಿಂಗಪೂಜಾಮಹಾತ್ಮ್ಯ [illegible] |
ಲಿಂಗಪೂಜಾಮಕೃತ್ವಾತು ಯೇ ಭುಂಜಂತಿ ಮಾನವಾಃ |
ತೇಷಾಂ ಮಹಾತ್ಮನಾಂ ಹಸ್ತೇ [illegible] |
[illegible] ಲಿಂಗೇ ನಿಯಮಪೂಜಿತೇ |
ಯೇ ದೇಹವೃತ್ತಿಂ ಕುರ್ವಂತಿ ಮಹಾಮಾಹೇಶ್ವರಾ ಹಿ ತೇ ||

ಮನೆಯಲ್ಲಿರುವ ಧನಕನಕಾದಿ ಸರ್ವಸ್ವವೂ ಸೂರೆಹೋದರೂ, ಶತ್ರುಗಳು ಬಂದು ಶಿರಸ್ಸನ್ನೇ ಕತ್ತರಿಸಿದರೂ, ಇನ್ನಾವ ಸಂಕಟ ಪ್ರಸಂಗಗಳು ಒದಗಿದರೂ ನಿತ್ಯಸಂಕಲ್ಪಿತವಾದ ಯಾವಜ್ಜೀವ ಕರ್ತವ್ಯವಾದ ಲಿಂಗಪೂಜೆಯೆಂಬ ಮಹಾವ್ರತವನ್ನು ಬಿಡಲಾಗದು. ಒಂದು ನಿಮಿಷವೂ ಸಹ [illegible] ಲಿಂಗವಿಯೋಗವಾಗಬಾರದು. [illegible] ಲಿಂಗಪೂಜೆಯನ್ನು [illegible] ಶಿವಲಿಂಗ [illegible] ತನ್ನ ಶರೀರಯಾತ್ರೆಯನ್ನು ಯಾವನು [illegible] ವೀರಶೈವನೆನಿಸಿಕೊಳ್ಳುವನೆಂದು [illegible] ಲಿಂಗಧಾರಣಪೂಜಾಮಹತ್ವವನ್ನು [illegible] ರುತ್ತಾರೆ. ಆದುದರಿಂದ ತೈತ್ತಿರೀಯಾ [illegible] "ಸರ್ವಲಿಂಗಂಸ್ಥಾಪಯತಿ" ಎಂಬ ವಾಕ್ಯದಿಂದ ದೇಹದಲ್ಲಿ ಲಿಂಗಧಾರಣವನ್ನೂ, 'ಪಾಣಿಮಂತ್ರಂ' ಎಂಬ ವಾಕ್ಯದಿಂದ ಹಸ್ತವೆಂಬ ಸಿಂಹಾಸನದಲ್ಲಿ ಆ ಶಿವಲಿಂಗದ ಪೂಜೆಯನ್ನೂ, ಪವಿತ್ರಂ ಎಂಬ ಪದದಿಂದ 'ಪವಿತ್ರಕರಣಾತ್ಪಂಸಾಂಪವಿತ್ರಮಿತಿಕಥ್ಯತೆ" ಎಂಬ [illegible] ಬೃಂಹಣವಾಕ್ಯಾನುಸಾರವಾಗಿ ಶುಚ್ಯಶುಚಿ ಸಾಧಾರಣ ಕಾಲಗಳಲ್ಲಿ ಆ ಶಿವಲಿಂಗಧಾರಣ ಪೂಜಾದಿಗಳನ್ನೂ ಪ್ರತಿಪಾದಿಸುತ್ತಿರುವುದು. ಇದರಿಂದ ಸಂಧ್ಯಾವಂದನಾದಿ ಕರ್ಮಗಳಂತೆ ಲಿಂಗಧಾರಣ ಲಿಂಗಪೂಜಾದಿಗಳು ನಿತ್ಯಕರ್ಮವೆಂದು ಸಿದ್ಧವಾಯಿತು.

ಯೋ ವಾಮಹಸ್ತಪೀಠಲಿಂಗಮೇಕಂ ಪರಾತ್ಪರಂ ಧಾರಯತೇ ಸತತಂ ಪವಿತ್ರೀ ಕ್ರಿಯೋ ವಾ | ಶರ್ವೈವ [illegible] ಮೋಕ್ಷಕೋಸೌ [illegible] ಪರಮಂ ಸಾಮ್ಯಮುಪೈತಿ ದಿವ್ಯಂ ||

ಅಂದರೆ ಶ್ರೀ ಗುರುವಿನಿಂದ ಶಿವದೀಕ್ಷಾಸಂಸ್ಕಾರಪೂರ್ವಕವಾಗಿ ಶಿಷ್ಯನ ಎಡಗೈಯಲ್ಲಿರಿಸಲ್ಪಟ್ಟ ತೇಜೋಮೂರ್ತಿಯಾದ ಶಿವಲಿಂಗವನ್ನು ಯಾವನು ಪ್ರತಿನಿತ್ಯವೂ ತನ್ನ ದೇಹದಲ್ಲಿ ಧರಿಸುತ್ತ ಪೂಜಿಸುತ್ತ ಬರುವನೋ ಅವನು ಪರಮೇಶ್ವರನಂತೆ ಸರ್ವಜ್ಞತ್ವಾದಿ [illegible] ಪ್ರಕಾಶಿಸುವನು ಎಂದು ಲಿಂಗಧಾರಣ [illegible] ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿ [illegible] ಹಸ್ತಪೀಠದಲ್ಲಿ ಶಿವಲಿಂಗಪೂಜೆಗೂ [illegible] ಲಿಂಗಧಾರಣಕ್ಕೂ ನಿತ್ಯತ್ವವು ಸಿದ್ಧವಾದ [illegible] ಅಪವಿತ್ರವಾದುದೆಂದೂ, ಶುಭ [illegible] ವಿನಿಯೋಗಾನರ್ಹವೆಂದೂ ಲೋಕಾನು [illegible] ಶಿವಲಿಂಗಪೂಜೆಯನ್ನು ಅಪಕೃಷ್ಟ [illegible] ಪೂಜಿಸುವುದೇಕೆಂಬ ಆಕ್ಷೇಪ [illegible] ವಾಮಹಸ್ತಕ್ಕೂ ದಕ್ಷಿಣ [illegible] ವಿನಿಯೋಗಾರ್ಹತೆಯನ್ನು [illegible]

'[illegible]' ಅಂಜಲಿಯಲ್ಲಿ ದಾನಮಾಡಬೇಕು ಎಂದು ಶ್ರುತಿಯಲ್ಲಿ [illegible] ಇಲ್ಲಿ ಅಂಜಲಿ (ಬೊಗಸೆ) [illegible] ಪ್ರಯೋಗಿಸಿರುವುದರಿಂದ ಎರಡು ಕೈಗಳು ಕೂಡಿದರೇನೆ ಅಂಜಲಿ ಎನಿಸಿಕೊಳ್ಳುತ್ತದಲ್ಲದೆ ಒಂದು ಕೈಗೆ 'ಅಂಜಲಿ' ಎಂಬ ವ್ಯವಹಾರವಿಲ್ಲ. ಆದುದರಿಂದ [illegible] ಪವಿತ್ರವೋ ವಾಮಹಸ್ತವೂ ಅಷ್ಟೇ ಪವಿತ್ರವಾದುದೆಂದು ಸ್ಪಷ್ಟವಾಗುವುದರಿಂದ ವಾಮಹಸ್ತಕ್ಕೆ [illegible] ಹೇಳುವುದು ಸರ್ವಥಾ ಉಚಿತವಲ್ಲ. ಹಾಗೆ ವಾಮಹಸ್ತಕ್ಕೆ [illegible] ಹೇಳಿದರೆ ವೈದಿಕಕರ್ಮಗಳಿಗೆಲ್ಲಾ ಲೋಪಪ್ರಸಕ್ತಿಯುಂಟಾಗುವುದು.

[illegible] ||

ಎದೆ, ತಲೆ, ದೃಷ್ಟಿ, ಮನಸ್ಸು, ವಚನ, ಕಾಲುಗಳು, [illegible] ಈ ಎಂಟು ಅಂಗಗಳಿಂದ ಕೂಡಿ [illegible] ನಮಸ್ಕರಿಸಬೇಕು. ಇದಕ್ಕೆ ಸಾಷ್ಟಾಂಗವೆಂದು ಹೆಸರು. ಎಂದು ಬೋಧಾಯನ [illegible] ರುದ್ರನ್ಯಾಸದಲ್ಲಿ ಹೇಳಿರುವುದನ್ನು ನೋಡಿದರೂ ದಕ್ಷಿಣಹಸ್ತದಂತೆ ವಾಮಹಸ್ತಕ್ಕೂ ಪರಶಿವನಿಗೆ ನಮಸ್ಕರಿಸುವ ಯೋಗ್ಯತೆಯುಂಟೆಂದು ಸ್ಪಷ್ಟವಾಗುತ್ತದೆ. ಮತ್ತು ಲಿಂಗಮೂರ್ತಿಯನ್ನು [illegible] ಪೂಜಿಸುವ ಶೈವರೂ ಸಹ ಲಿಂಗಮೂರ್ತಿಯನ್ನು ವಿಧ್ಯುಕ್ತವಾಗಿ ಪೂಜಿಸಿದ ಬಳಿಕ ಎರಡುಕೈಗಳಿಂದಲೂ ಪುಷ್ಪಗಳನ್ನು ಆ ಶಿವಲಿಂಗಕ್ಕೆ ಅರ್ಪಿಸುವರು. ಇದನ್ನು ಪುಷ್ಪಾಂಜಲಿಯೆಂದೇ ಕರೆಯುವ ಸಂಪ್ರದಾಯವಿರುತ್ತದೆ. ಹಾಗೆ ವಾಮಹಸ್ತಕ್ಕೆ ಯಾವಾಗಲೂ ಅಪವಿತ್ರತೆಯೇ [illegible] ವಿಧ್ಯುಕ್ತಗಳಾದ ಅಗ್ನಿ [illegible] ವೈದಿಕಕರ್ಮಗಳಿಗೇನೆ ಲೋಪ [illegible] ವಾಮಹಸ್ತಕ್ಕೆ [illegible] ಇಷ್ಟಲಿಂಗವನ್ನು [illegible] ಪೂಜಿ [illegible] ಮತ್ತು [illegible] ಶಂಕರಸಂಹಿತೆಯಲ್ಲಿ—

[illegible]
ಪ್ರಭಾಂ||

[illegible] "ಪಾಣಿಮಂತ್ರಂಪವಿತ್ರಂ" ಎಂಬ ತೈತ್ತಿರೀಯ ಶ್ರುತಿವಿಹಿತವಾದ ಲಿಂಗಧಾರಣ [illegible] ಮಹತ್ವ [illegible] ವಾಮಹಸ್ತದಲ್ಲಿ ಶಿವಲಿಂಗಪೂಜೆಯು ಶ್ರುತಿಸ್ಮೃತ್ಯಾಗಮ ಪುರಾಣೇತಿಹಾಸಾನುಭವಗಳಿಂದ ಸಿದ್ಧವಾಗುತ್ತದೆ.

ಕಳೆದ ತಿಂಗಳು ಬೆಂಗಳೂರು ಮಲ್ಲೇಶ್ವರದಲ್ಲಿ ಖೂನಿಯಾದ ಹೆಂಗಸಿನ ಶವವು ಸಿಕ್ಕಿದ್ದು, ಯಾರದೆಂಬುದೂ ಹತ್ಯಾಕಾರಿಯಾರೆಂಬುದೂ ತಿಳಿದಿರಲಿಲ್ಲ. ಇತ್ತೀಚೆಗೆ ಪೋಲೀಸರು ಶೇರಿನ ನಲ್ಲಿಯ ಹತ್ತಿರ ತಮ್ಮ ಸ್ನೇಹಿತರಲ್ಲೊಬ್ಬಳು ಕಣ್ಮರೆಯಾಗಿದ್ದಾಳೆಂದು ಮಾತನಾಡಿಕೊಳ್ಳುತ್ತಿದ್ದ ಹೆಂಗಸರ ಸಹಾಯದಿಂದ ಮೃತಳು ಇಂಥವಳೆಂದು ಗುರ್ತಿಸಿ ಗುಮಾನಿಯಮೇಲೆ ಅವಳ ಅಣ್ಣನಾದ ಪಕಾಲಿ ಎಂಬ ಆದಿಕರ್ಣಾಟಕ ಯುವಕನನ್ನು ದಸ್ತಗಿರಿಮಾಡಿರುತ್ತಾರೆ.

ವರ್ತಮಾನಸಂಗ್ರಹ.

ಜಪಾನು ಸಯಾಂದೇಶಗಳೊಳಗಿನ ವ್ಯಾವಹಾರಿಕ ಮತ್ತು ರಾಜಕೀಯ ಬಾಂಧವ್ಯವು ತೀರ ಸನಿಹವಾಗುತ್ತ ಬರುತ್ತಿದೆ. ಇನ್ನು ಅಲ್ಲಿ ಜಪಾನೀಯರು ಹೆಚ್ಚು ಸಂಖ್ಯೆಯಿಂದ ಹೋಗಿ ನೆಲಸಬಹುದೆಂದು ಊಹಿಸಬಹುದಾಗಿದೆ.

ವಿಮಾನಗಳ ಸಂಖ್ಯೆಯು ಬ್ರಿಟನ್ನಿನದೂ, ಜರ್ಮನಿಯದೂ ಸಮಾನವಾಗಿರುವುದೆಂದು ಪ್ರಕಟವಾಗಿದೆ. ಜರ್ಮನಿಯಲ್ಲಿ ಈಗ ಸುಮಾರು 1800 ವಿಮಾನಗಳಿರುವುವೆಂದೂ, ಈ ಸಂಖೆಯನ್ನು ಇನ್ನೂ ಹೆಚ್ಚಿಸಿ ಜರ್ಮನಿಯು ಫ್ರಾನ್ಸಿನ ಜತೆಗೆ ಏರಲಿರುವುದೆಂದೂ ತಿಳಿದುಬರುತ್ತಿದೆ.

ಕರಾಚಿಯಲ್ಲಿ ಸಿಂಧ್ ಕನ್ನೆಯರ ಖಾಸಗಿ ಸಭೆಯು ನಡೆಯಿತು. ಅದರಲ್ಲಿ 25 ಜನ ಸಿಂಧ್ ಕನ್ನೆಯರು ವರದಕ್ಷಿಣೆಯನ್ನಾಗಲಿ, ಹಣಸಹಾಯವನ್ನಾಗಲಿ ತಮ್ಮ ತಂದೆತಾಯಿಗಳಿಂದ ಕೇಳುವವರನ್ನು ಮದುವೆಯಾಗುವುದಿಲ್ಲ, ಹೀಗೆಯೇ ಇರುತ್ತೇವೆ. ಎಂಬ ಪ್ರಮಾಣವನ್ನು ಮಾಡಿರುತ್ತಾರೆ. ಮತ್ತು ಈ ರೀತಿಯ ಚಳವಳಿಯನ್ನು ಹೂಡಿ ಯುವಕರಿಗೆ ಬುದ್ಧಿಕಲಿಸಬೇಕೆಂದೂ ಇರುತ್ತಾರೆಂದು ತಿಳಿದುಬರುತ್ತದೆ.

ಜರ್ಮನಿಯ ಸೈನ್ಯ!

ಜರ್ಮನಿಯ ಸೈನ್ಯದಲ್ಲಿ ಸುಮಾರು 7,05,000 ಜನರಿದ್ದಾರೆಂದು ಪ್ರಕಟವಾಗಿದೆ.

ವಿದೇಶಗಳಲ್ಲಿ ನಿರುದ್ಯೋಗಿಗಳು.

ನಿರುದ್ಯೋಗಿಗಳ ಪ್ರಕೃತದ ಸಂಖ್ಯೆಯು ಜರ್ಮನಿಯಲ್ಲಿ 2,76,1000, ಗ್ರೇಟ್ ಬ್ರಿಟನಿನದು 2,27,2000 ಇಟಲಿಯದು 1,01,1000 ಎಂದು ಪ್ರಕಟವಾಗಿದೆ.

ದುರ್ಭಿಕ್ಷೆಯ ಭೀಕರದೃಶ್ಯ!

ಬಂಗಾಳ ಪ್ರಾಂತದ ಗೃಹಸ್ಥನೊಬ್ಬನು ಹೊಟ್ಟೆಗಿಲ್ಲದ್ದರಿಂದ ತನ್ನ ಎರಡು ಮಕ್ಕಳನ್ನು ಕೊಂದು ಹೆಂಡತಿಯೊಡನೆ ತಾನೂ ಆತ್ಮಹತ್ಯಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಈ ವಿಷಯವು ಕೂಡಲೇ ಪೋಲೀಸರಿಗೆ ತಿಳಿಯಲು ಪೋಲೀಸರು ಅವನನ್ನು ದಸ್ತಗಿರಿಮಾಡಿರುತ್ತಾರೆ.

ಮೆಕ್ಸಿಕೋದೇಶದಲ್ಲಿ ಸುವ್ಯವಸ್ಥೆ!

ಮೆಕ್ಸಿಕೋ ದೇಶದಲ್ಲಿ ಯಾವ ಪ್ರಜೆಯಾದರೂ ತನ್ನ ಸುಖದುಃಖಗಳ ವಿಚಾರವನ್ನು ಅಲ್ಲಿಯ ಪ್ರೆಸಿಡೆಂಟರಿಗೆ ತಂತೀ ಮೂಲಕ ಕಳುಹಿಸಬಹುದು, ಅಂತಹ ತಂತಿಗಳಿಗೆ ಅವನು ಛಾರ್ಜುಕೊಡಬೇಕಾಗಿಲ್ಲ. ಆ ತಂತಿಗಳನ್ನು ಪ್ರೆಸಿಡೆಂಟರು ತಾವೇ ಪರಾಮರ್ಶಿಸಿ ಉತ್ತರಗಳನ್ನು ಕೊಡುವರು.

ಸತ್ತವರನ್ನು ಬದುಕಿಸುವ ಪ್ರಯತ್ನ.

ಕ್ಯಾಲಿಫೋರ್ನಿಯಾದ ಡಾ|| ರಾಬರ್ಟ್ [illegible] ಎಂಬಾತನು ಸತ್ತವರನ್ನು ಬದುಕಿಸುವ ಔಷಧವನ್ನು ಕಂಡುಹಿಡಿದಿರುವನಂತೆ. ಇದನ್ನು ಪರೀಕ್ಷಿಸಲು ಅನೇಕ ಜನ ಸ್ತ್ರೀಪುರುಷರು ತಮ್ಮ ದೇಹವನ್ನು ಒಪ್ಪಿಸಲು ಸಿದ್ಧರಾಗಿದ್ದಾರೆ. ಈತನ ಪ್ರಯತ್ನವು ಸಫಲವಾದರೆ ಪ್ರಪಂಚದಲ್ಲೇ ನೂತನ ಸೃಷ್ಟಿಯು ಪ್ರಾರಂಭವಾಗುವುದೆಂದು ಧಾರಾಳವಾಗಿ ಹೇಳಬಹುದಾಗಿದೆ.

ವರದಕ್ಷಿಣೆ!

ಟರ್ಕಿಯಲ್ಲಿ ವಧೂವರರು ಭಾಗ್ಯಶಾಲಿಗಳು. ಅವರ ಹೆತ್ತವರು ಪುಣ್ಯವಂತರು. ಇಲ್ಲಿ 'ವರದಕ್ಷಿಣೆ'ಯಿಂದ ಮನೆ ಕಳೆದುಕೊಳ್ಳುವವರೆಷ್ಟೋ ಮಂದಿ. 'ವರದಕ್ಷಿಣೆ'ಯು ಕಾನೂನಿಗೆ ವಿರೋಧವಾಗಿದೆ. ಅಲ್ಲಿ 20 ವರ್ಷ ಕೆಳಗಿನ ಯುವಕನೂ, 20 ವರ್ಷದೊಳಗಿನ ಯುವತಿಯೂ ಮದುವೆಯಾಗಲೇ ಕೂಡದು. ಮದುವೆಯಾಗುವಾಗಲೂ ಉಭಯರೂ ಆರೋಗ್ಯವಂತರೆಂದು ಡಾಕ್ಟರರ ಸರ್ಟಿಫಿಕೇಟ್ ಬೇಕು.

ಶ್ರೀ ಜಗದ್ಗುರು ಪಂಚಾಚಾರ್ಯರ್ಾಃ ಪ್ರಸೀದಂತು.

ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಮಠಕ್ಕೆ ರಾಜಬಂಧುಗಳ ಶುಭಾಗಮನವು.

ವೀರಶೈವರಿಗೆ ಮುಕ್ತಿಕ್ಷೇತ್ರಗಳೆನಿಸಿದ ಪಂಚಪೀಠಗಳಲ್ಲಿ ಒಂದಾದ ಶ್ರೀ ರಂಭಾಪುರೀ (ಬಾಳೇಹೊನ್ನೂರು) ವೀರಸಿಂಹಾಸನ ಮಹಾಸಂಸ್ಥಾನ ಮಠಕ್ಕೆ ಶ್ರೀಮಾನ್ ಸರದಾರ್ ಎಂ. ಲಕ್ಷ್ಮೀಕಾಂತರಾಜ ಅರಸರವರು, ಇವರ ಧರ್ಮಪತ್ನಿಯವರಾದ ಮಹಾರಾಜಕುಮಾರಿ ಸೌ|| ಸೌ|| ಶ್ರೀಮತಿ ಚಲುವಾಜಮ್ಮಣ್ಣಿಯವರ ಮಹಾಸನ್ನಿಧಾನದ ಪರಿವಾರವೂ, ಇವರ ಅಳಿಯಂದಿರಾದ ಚಿಕ್ಕಮಗಳೂರು ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬ ಮೆ|| ಮದನಗೋಪಾಲರಾಜ ಅರಸರವರು, ಇವರ ಧರ್ಮಪತ್ನಿಯವರಾದ ಸೌ|| ಸೌ|| ಶ್ರೀಮತಿ ರಾಜಕುಮಾರಿ ಚನ್ನಮ್ಮಾಜಮ್ಮಣ್ಣಿಯವರು (ಸರದಾರರ ದ್ವಿತೀಯ ರಾಜಕುಮಾರಿಯವರು), ಲೇಟ್ ದಿವಾನ್ ಸರ್ ಎಂ. ಕಾಂತರಾಜ ಅರಸರವರ ಅಳಿಯಂದಿರಾದ ಮೆ|| ಕೆ. ಬಸವರಾಜ ಅರಸರವರು, ಇವರ ಧರ್ಮಪತ್ನಿಯವರಾದ ಸೌ|| ಸೌ|| ಶ್ರೀಮತಿ ರಾಜಕುಮಾರಿ ಲೀಲಾವತಿಯಮ್ಮಣ್ಣಿಯವರು, ಅರಮನೆ ಪೋಲೀಸಿನವರು ಮುನ್ಸಿಪಲ್ ಮೆಂಬರಾದ ಮ|| ರಾ|| ಎಂ. ಎಲ್. ಸುಬ್ಬರಾಜ ಅರಸರವರು, ಇವರ ಧರ್ಮಪತ್ನಿಯವರಾದ ಸೌ|| ಸೌ|| ಶ್ರೀಮತಿ ಸುಬ್ಬಮ್ಮ ಅಮ್ಮಣ್ಣಿಯವರು, ಇವರ ಮಕ್ಕಳಾದ ಮ|| ರಾ|| ಎಂ. ಎಲ್. ಸುಬ್ರಹ್ಮಣ್ಯರಾಜ ಅರಸರವರು ಮತ್ತು ಇತರ ರಾಜಬಂಧುವರ್ಗದವರು ಸಹ ಮೈಸೂರಿಂದ ತಾರೀಖು 7-4-35 ರಲ್ಲಿ ಸ್ಪೆಷಲ್ ಟ್ರೇನಿನಲ್ಲಿ ಪ್ರಾತಃಕಾಲ 8-30 ಕ್ಕೆ ಪ್ರಯಾಣ ಬೆಳಸಿ ಹಾಸನಕ್ಕೆ 11-45 ಕ್ಕೆ ತಲ್ಪಿ ಅಲ್ಲಿಂದ ಮೋಟಾರಿನಲ್ಲಿ ಚಿಕ್ಕಮಗಳೂರು, ಆಲ್ದೂರು, ಸಂಗಮೇಶ್ವರಪೇಟೆ ಮಾರ್ಗವಾಗಿ ಬಾಳೇಹೊನ್ನೂರಿಗೆ ದಯಮಾಡಿಸಿದರು. ಅಲ್ಲಿ ಟವನ್ನಿನಲ್ಲಿ ತಳಿರುತೋರಣಗಳಿಂದ ಅಲಂಕರಿಸಿದ್ದ ಭವ್ಯವಾದ ಚಪ್ಪರದಲ್ಲಿ ಕಾದಿದ್ದ ನರಸಿಂಹರಾಜಪುರ ತಾಲೂಕು ಕೊಪ್ಪ ತಾಲೂಕು ಅಮಲ್ದಾರ ಸಾಹೇಬರು ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಸಾಹೇಬರು ಇತರ ಪುರಪ್ರಮುಖರು ಶ್ರದ್ಧೆಯಿಂದ ಒಪ್ಪಿಸಿದ ಫಲಪುಷ್ಪತಾಂಬೂಲ ಪುಷ್ಪಹಾರ ಮೊದಲಾದವುಗಳನ್ನು ಪ್ರೀತಿಪೂರ್ವಕವಾಗಿ ಅಂಗೀಕರಿಸಿ ಟವನ್ನಿಗೆ ಒಂದುವರೆ ಮೈಲು ದೂರದಲ್ಲಿ ಮಲಯಪರ್ವತಮಧ್ಯದಲ್ಲಿ ಪ್ರಕಾಶಿಸುವ ಶ್ರೀ ಸಂಸ್ಥಾನಮಠಕ್ಕೆ ಶುಭಲಗ್ನ ಸಮಯದಲ್ಲಿ ದಯಮಾಡಿಸಿದರು. ಪದ್ಧತಿಯಂತೆ ಶ್ರೀ ಸಂಸ್ಥಾನದ ಏಜಂಟರು, ಆಸ್ಥಾನ ವಿದ್ವಾಂಸರೇ ಮೊದಲಾದ ಅಧಿಕಾರಿಗಳು ರಾಜಬಂಧುಗಳಿಗೆ ಫಲಮಂತ್ರಾಕ್ಷತೆಗಳನ್ನು ಒಪ್ಪಿಸಿ ಮಹಾಸಂಸ್ಥಾನದ ವಿಶಿಷ್ಟ ಬಿರುದಾವಳಿಗಳಿಂದ ಉತ್ಸವಪೂರ್ವಕ ದಯಮಾಡಿಸಿಕೊಂಡು ಬಂದರು. ಆ ಸಮಯದಲ್ಲಿ ಗೌರವಾರ್ಥವಾಗಿ ಹನ್ನೊಂದು ಗನ್ನುಗಳು ಹಾರಿಸಲ್ಪಟ್ಟವು. ವನರಾಜಲಕ್ಷ್ಮಿಯ ಸ್ವಾಭಾವಿಕ ಸ್ವಾಭಾವಿಕ ಸೃಷ್ಟಿಸೌಂದರ್ಯದ ಸೊಬಗಿನಿಂದಲೂ, ಮಧ್ಯ ಮಧ್ಯದಲ್ಲಿ ರಚಿಸಿದ ತಳಿರುತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ, ನಾನಾತರಹದ ಪತಾಕೆಗಳಿಂದಲೂ, ನಾನಾತರಹದ ಮಂಗಲವಾದ್ಯಗಳಿಂದಲೂ, ಉತ್ಸವವು ಪ್ರೇಕ್ಷಕರ ಮನಸ್ಸನ್ನು ಸಂತೋಷಗೊಳಿಸಿತು. ಈ ಅಭೂತಪೂರ್ವವಾದ ಉತ್ಸವದ ಸೊಬಗನ್ನು ನೋಡಲು ಅಕ್ಕಪಕ್ಕದ ಗ್ರಾಮಗಳಿಂದಲೂ ಸೀಗೋಡು, ಆಲ್ದೂರು, ಚಿಕ್ಕಮಗಳೂರು, ತರೀಕೆರೆ ಮೊದಲಾದ ಗ್ರಾಮಗಳಿಂದಲೂ ಸಾವಿರಾರು ಜನರು ಆಗಮಿಸಿದ್ದರು. ವೈದಿಕಮತಗಳ ಜೀರ್ಣೋದ್ಧಾರಕ್ಕಾಗಿ ಅವತಾರವಮಾಡಿದ ಧರ್ಮಮೂರ್ತಿಗಳಾದ ರಾಜರ್ಷಿಪುಂಗವ ಶ್ರೀಮನ್ಮಹಾರಾಜಾ ಸಾಹೇಬ ಒಡೆಯರವರ ಕೃಪಾಕಟಾಕ್ಷದಿಂದ ಜೀರ್ಣೋದ್ಧಾರವನ್ನು ಹೊಂದಿ ಸರ್ವವೈದಿಕ ಪೀಠಗಳಲ್ಲಿ ಪ್ರತಿಷ್ಠೆಯನ್ನು ಪ್ರಕಾಶವನ್ನೂ ಹೊಂದಿ ಹೊಂದುತ್ತಿರುವ ಸನಾತನ ವೈದಿಕಮತಕ್ಕೆ ಮೂಲಸ್ಥಾನವಾದ ಶ್ರೀಮದ್ರಂಭಾಪುರೀ ವೀರಪೀಠದ ಅಧಿಪತಿಗಳಾದ ಶ್ರೀಮದಘನವರೇಣ್ಯ, ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರನ್ನು ಸಮಸ್ತ ರಾಜಬಂಧುಗಳೂ ಫಲಪುಷ್ಪಾದಿಗಳೊಡನೆ ಸಂದರ್ಶಿಸಿ, ತಮಗುಂಟಾದ ಆನಂದಾತಿಶಯವನ್ನು ಪ್ರಕಟಮಾಡುತ್ತ ಭಗವತ್ಪಾದರ ಅನುಜ್ಞೆಯನ್ನು ಹೊಂದಿ ರಾಜಾರ್ಹವಾದ ತಮ್ಮ ತಮ್ಮ ಬಿಡಾರಗಳಿಗೆ ತೆರಳಿದರು.

ತಾ|| 8-4-35 ನೆಯ ಸೋಮವಾರ ಪ್ರಾತಃಕಾಲ ಸರ್ವ ರಾಜಬಂಧುಗಳು ಸ್ನಾನಪೂಜಾದಿಗಳನ್ನು ಪೂರೈಸಿಕೊಂಡು, ಶ್ರೀ ಮಹಾಸನ್ನಿಧಿಯವರ ಪ್ರಾತಃಕಾಲ ಪೂಜೆಯಲ್ಲಿ ಭಾಗಿಗಳಾಗಿ ಪೂಜಾ ಸಮಾಪ್ತಿಯಾದ ನಂತರ ಸರ್ವರೂ ಭಕ್ತಿಯಿಂದ ತೀರ್ಥಪ್ರಸಾದಗಳನ್ನು ಸೇವಿಸಿ ಮಹಾಸನ್ನಿಧಿಯವರೊಡನೆ ಶ್ರೀಕ್ಷೇತ್ರನಾಯಕನೂ, ಗೋತ್ರಾದಿನಾಥನೂ ಆದ ಶ್ರೀ ವೀರೇಶನನ್ನು ಸಂದರ್ಶಿಸಿ ತೀರ್ಥಪ್ರಸಾದಗಳನ್ನು ಸೇವಿಸಿ ಶ್ರೀ ರುದ್ರಾಕ್ಷಿಪರ್ವತವಾದ ಶ್ರೀ ರುದ್ರಮುನಿಶಿವಾಚಾರ್ಯರ ಪುಣ್ಯಾಶ್ರಮಕ್ಕೆ ದಯಮಾಡಿಸಿ ದರ್ಶನಮಾಡಿಕೊಂಡು ತಮ್ಮ ತಮ್ಮ ಬಿಡಾರಗಳಿಗೆ ದಯಮಾಡಿಸಿದರು. ಅದೇ ದಿವಸ ಸಾಯಂಕಾಲಕ್ಕೆ ಸಂಸಾರಪಾತಕಪ್ತಜೀವಕೋಟಿ ತಾಪವಿಧ್ವಂಸಿನಿ ಯಾದ ಭದ್ರಾನದಿಗೆ ಮೋಟಾರಿನಲ್ಲಿ ಪ್ರಯಾಣವನ್ನು ಬೆಳೆಸಿ ಸಂಧ್ಯಾಕರ್ಮವನ್ನು ಪೂರೈಸಿಕೊಂಡು ವಿಶ್ರಾಂತಿಯನ್ನು ಹೊಂದಿ ಪುನಃ ಶ್ರೀ ಸಂಸ್ಥಾನಮಠಕ್ಕೆ ದಯಮಾಡಿಸಿದರು.

ತಾ|| 9-4-35 ಮಂಗಳವಾರ ಎಲ್ಲಾ ರಾಜಬಂಧುಗಳು ಪ್ರಾತಃಕಾಲದಲ್ಲಿ ಸಮಯೋಚಿತವಾದ ನಿತ್ಯಕರ್ಮಗಳನ್ನು ಪೂರೈಸಿಕೊಂಡು ಯಥಾವತ್ ಶ್ರೀಗಳವರ ಪೂಜೆಗೆ ಭಾಗಿಗಳಾಗಿ ಶ್ರೀಗಳವರೊಡನೆ ಶ್ರೀ ವೀರೇಶ ದರ್ಶನಮಾಡಿಕೊಂಡು ತಮ್ಮ ತಮ್ಮ ಬಿಡಾರಗಳಿಗೆ ತೆರಳಿದರು. ಆ ದಿವಸ ಲೇಟ್ ದಿವಾನ್ ಸರ್. ಎಂ. ಕಾಂತರಾಜ ಅರಸರವರ ಅಳಿಯಂದಿರಾದ ಮೆ|| ಕೆ. ಬಸವರಾಜ ಅರಸರವರು ಶ್ರೀಕ್ಷೇತ್ರನಾಯಕನಾದ ಶ್ರೀ ವೀರೇಶನಿಗೆ ಏಕಾದಶರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಯನ್ನೂ ಶ್ರೀ ಭದ್ರಕಾಳೀದೇವಿಗೆ ಕುಂಕುಮಾರ್ಚನೆಯನ್ನೂ ವಿದ್ಯುಕ್ತವಾಗಿ ಮಾಡಿಸಿ, ಮಹಾಸನ್ನಿಧಿಗೆ ಅಮೂಲ್ಯಗಳಾದ ವಸ್ತ್ರಗಳನ್ನು ಒಪ್ಪಿಸಿ ಸಾವಿರಾರು ಜನಗಳನ್ನು ಮೃಷ್ಟಾನ್ನದಿಂದ ತೃಪ್ತಿಪಡಿಸಿ ಶ್ರೀ ಸ್ವಾಮಿಯ ಕೃಪಾಶೀರ್ವಾದಕ್ಕೆ ಪಾತ್ರರಾದರೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ದಯಾಪರಭಕ್ತರೂ ಚಕ್ರವರ್ತಿಗಳೂ, ವಿನಯವಿಶಿಷ್ಟರೂ ಆದ ಈ ದಂಪತಿಗಳಿಗೆ ಶ್ರೀ ವೀರೇಶನು ಇಷ್ಟಾರ್ಥ ಫಲವನ್ನು ಕರುಣಿಸಿ ಕಾಪಾಡಲಿ.

ತಾ|| 10-4-35 ಬುಧವಾರ ನಿತ್ಯದಂತೆ ರಾಜಬಂಧುಗಳು ಸ್ನಾನಪೂಜಾದಿಗಳನ್ನು ಪೂರೈಸಿಕೊಂಡು ಶ್ರೀಗಳವರ ದರ್ಶನವನ್ನು ಹೊಂದಿ ಇಲ್ಲಿಗೆ ೨ ಮೈಲು ದೂರದಲ್ಲಿರುವ ಮಾರ್ಕಂಡೇಯ ಮಹರ್ಷಿಯ ಪುಣ್ಯಾಶ್ರಮವಾದ "ಕಾಂತ್ಯ" ಎಂಬ ಸ್ಥಳಕ್ಕೆ ದಯಮಾಡಿಸಿ ಸರ್ವವನ್ನೂ ಪರಾಮರ್ಶಿಸಿ ಪುನಃ ಶ್ರೀ ಸಂಸ್ಥಾನಮಠಕ್ಕೆ ಆಗಮಿಸಿದರು.

ತಾ|| 11-4-35 ನೆಯ ಗುರುವಾರ ಪ್ರಾತಃಕಾಲ ಸರ್ವ ರಾಜಬಂಧುಗಳು ಸ್ನಾನಪೂಜಾದಿಗಳನ್ನು ಪೂರೈಸಿಕೊಂಡು ಮಹಾ ಸಂಸ್ಥಾನದ ನೂತನವಾದ ಶ್ರೀ ಶಿವಾನಂದ ಕಾಫಿ ಎಸ್ಟೇಟಿಗೆ ಮೋಟಾರಿನಲ್ಲಿ ಪ್ರಯಾಣ ಮಾಡಿ ಪರಾಮರ್ಶಿಸಿಕೊಂಡು ಬಂದರು.

ತಾ|| 12-4-35 ನೆಯ ಶುಕ್ರವಾರ ದಿವಸ ಬೆಳಗ್ಗೆ ಸರ್ವರಾಜಬಂಧುಗಳು ನಿತ್ಯದಂತೆ ಸ್ನಾನಪೂಜಾದಿಗಳನ್ನು ಪೂರೈಸಿಕೊಂಡು ಶ್ರೀಗಳವರ ದರ್ಶನವನ್ನು ಮಾಡಿ, ಶ್ರೀಗಳವರೊಡನೆ ಶ್ರೀ ವೀರೇಶನ ಮಂದಿರಕ್ಕೆ ದಯಮಾಡಿಸಿದರು. ಆ ದಿವಸ ಸರದಾರ್ ಎಂ. ಲಕ್ಷ್ಮೀಕಾಂತರಾಜ ಅರಸರವರು ಮತ್ತು ಇವರ ಧರ್ಮಪತ್ನಿ ಮಹಾರಾಜಕುಮಾರಿ ಸೌ|| ಸೌ|| ಶ್ರೀಮತಿ ಚಲುವಾಜಮ್ಮಣ್ಣಿಯವರು ಶ್ರೀ ವೀರೇಶನಿಗೂ ಶ್ರೀ ಭದ್ರಕಾಳೀದೇವಿಗೂ ಮಹಾ ರುದ್ರಾಭಿಷೇಕವನ್ನೂ ಕುಂಕುಮಾರ್ಚನೆಯನ್ನೂ ಸಹಸ್ರಬಿಲ್ವಾರ್ಚನೆಯನ್ನೂ ವಿಧ್ಯುಕ್ತವಾಗಿ ಮಾಡಿಸಿ ಅತ್ಯಂತ ಬೆಲೆಯುಳ್ಳ ಪಟ್ಟುಪೀತಾಂಬರಗಳನ್ನು ಒಪ್ಪಿಸಿ ಅನ್ಯಾದೃಶವಾದ ಭಕ್ತಿಯನ್ನು ತೋರ್ಪಡಿಸಿದರು ಮತ್ತು ಸರ್ವರಿಗೂ ದಿವ್ಯವಾದ ಸಂತರ್ಪಣೆಯನ್ನು ಮಾಡಿಸಿದರು.

ಕಲಿಕಾಲಪ್ರಾಬಲ್ಯದಿಂದ ನಾಸ್ತಿಕ ಸಂಘವು ತಲೆದೋರುವ ಈ ಸಮಯದಲ್ಲಿ ಪವಿತ್ರಕ್ಷತ್ರರಾದ ರಾಜಬಂಧುಗಳು ಭಕ್ತಿಪೂರ್ವಕವಾಗಿ ಜಗದ್ಗುರು ಪೀಠಕ್ಕಾಗಮಿಸಿ, ಪಿತೃತ್ಯೋತ್ಸವವನ್ನೂ ನಿತ್ಯಸಂತರ್ಪಣೆಯನ್ನೂ ಮಾಡಿಸುತ್ತ, ಶ್ರೀ ಸಂಸ್ಥಾನ ಮಠದಲ್ಲಿ ಅತ್ಯಾನಂದದಿಂದ ಇರುವುದನ್ನು ನೋಡಿದರೆ ಯಾರಿಗೆತಾನೇ ಆನಂದವಾಗಲಾರದು?

ಮಹಾರಾಜಕುಮಾರಿ ಸೌ|| ಸೌ|| ಶ್ರೀಮತಿ ಚಲುವಾಜಮ್ಮಣ್ಣಿಯವರು ಬಂಧುಪರಿವಾರದೊಡನೆ ಆಗಮಿಸಿ ಶ್ರೀ ಜಗದಾಚಾರ್ಯರ ಸೇವೆಯಲ್ಲಿ ನಿರತರಾಗಿ ಅವರು ತೋರ್ಪಡಿಸುವ ಭಕ್ತಿಯು ಲಿಂಗಧಾರಿಗಳಾದ ವೀರಶೈವರಿಗೆಲ್ಲಾ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಂತಾಗಿರುವದು. ಅಸಾಧಾರಣ ಗುರುಭಕ್ತಿನಿಷ್ಠಾಗರಿಷ್ಠರಾದ ಇವರಿಗೆ ಶ್ರೀ ಜಗದ್ಗುರು ರೇಣುಕಶಿವಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನೂ, ಪುತ್ರಪೌತ್ರಾದ್ಯಭಿವೃದ್ಧಿಯನ್ನೂ ದಯಪಾಲಿಸಿ ಕಾಪಾಡಲೆಂದು ಹಾರೈಸುವ,

ಓರ್ವ ಪ್ರೇಕ್ಷಕ.

ವಿದ್ಯುಚ್ಛಕ್ತಿಯ ಅನಾಹುತ.

ಬೆಂಗಳೂರಿನಲ್ಲಿ ವೀರಪ್ಪನೆಂಬ ಹುಡುಗನು ಮರದಮೇಲೆ ಹತ್ತಿ ಸೊಪ್ಪು ಕೊಯ್ಯುತ್ತಿದ್ದಾಗ ಕೊಂಬೆಯ ಸಮೀಪದಲ್ಲಿದ್ದ ವಿದ್ಯುಚ್ಛಕ್ತಿಯು ತಗುಲಿದ್ದರಿಂದ ಮರದಿಂದ ಕೆಳಕ್ಕೆ ಬಿದ್ದು ಮೃತನಾದನು.

ಪ್ರಪಂಚದಲ್ಲೇ ದೊಡ್ಡ ಸುರಂಗಮಾರ್ಗ!

ಮೊರಾಕೊದೇಶದಲ್ಲಿರುವ ಜಿಬ್ರಾಲ್ಟರ್ ಸುರಂಗ ಮಾರ್ಗವು ಸಮುದ್ರದ ಕೆಳಗೆ ರೈಲ್ ಸಂಚಾರಕ್ಕೆ ಯೋಗ್ಯವಾಗಿದ್ದು 20 ಮೈಲು ಉದ್ದವಾಗಿಯೂ ಹಲವೆಡೆಗಳಲ್ಲಿ ಸಾವಿರ ಅಡಿಗಳಷ್ಟು ಆಳವಾಗಿಯೂ ಇದೆಯೆಂದು ತಿಳಿದುಬಂದಿದೆ.

ಆನೆಯಿಂದ ಮರಣ!

ರಾಜಧಾನಿಗೆ ದಯಮಾಡಿಸಿದ್ದ ದತಿಯಾಮಹಾರಾಜರ ಸಂಗಡ ಶಿಕಾರಿಗೆ ಹೋಗಿದ್ದವರಲ್ಲಿ ಸುಮಾರು 35 ವಯಸ್ಸಿನ ವೆಂಕಟಸ್ವಾಮಿರಾಜು ಎಂಬವನು ಕಾಡಾನೆಯ ದಾರಿಗೆ ಸಿಕ್ಕಿದ್ದರಿಂದ ತಪ್ಪಿಸಿಕೊಳ್ಳಲು ಮರವನ್ನು ಹತ್ತಿದರೂ ಬಿಡದೆ ಆನೆಯು ಇವನು ಹಿಡಿದಿದ್ದ ಕೊಂಬೆಯನ್ನೇ ಮುರಿದು ನೆಲಕ್ಕೆ ಬೀಳಿಸಿ ಕೊಂದುಹಾಕಿತು.

ವಿಚಿತ್ರ ಆಕಳು.

ಡಾರ್ಜಲಿಂಗ್ ಡಿಸ್ಟ್ರಿಕ್ಟ್ ಸಮಸ್ತಿಪುರದ ಬಾಬೂ ಅತೀಂದ್ರನಾಥ ಮೊಹರೆ ಎಂಬವರಲ್ಲಿ ಒಂದು ಹಸು ಇದೆಯಂತೆ! ಅದು ಇಲ್ಲಿಯವರೆಗೂ ಕರುವನ್ನು ಹಾಕದಿದ್ದಾಗ್ಯೂ ಪ್ರತಿ ದಿನ 10 ಪೌಂಡು ಹಾಲನ್ನು ಕೊಡುತ್ತದೆ. ಹಾಲಿನಲ್ಲಿ ಕೆನೆಯು ವಿಶೇಷವಾಗಿದ್ದು, ಹೆಚ್ಚು ಬೆಣ್ಣೆಯು ಬರುತ್ತದೆ. ಇದು ಬೇಸಿಗೆಯಲ್ಲಿ ಹಾಲನ್ನು ಹೆಚ್ಚಾಗಿಯೂ, ಚಳಿಗಾಲದಲ್ಲಿ ಸ್ವಲ್ಪ ಕಡಿಮೆಯಾಗಿಯೂ ಕೊಡುತ್ತದೆಂದು ತಿಳಿದುಬಂದಿದೆ.

ಸ್ವೀಕಾರ

ನಾತಾರಾ ಡಿ|| ಕರ್ನಾಟಕದಲ್ಲಿರುವ ಶ್ರೀಮಾನ್ ಶಿವಪಾದ ಅಪ್ಪಯ್ಯಸಾವಗಾವೆ ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರ ಆಶೀರ್ವಾದ ಬಲದಿಂದ ಕರಾಡ್ ಸಬ್‌ಜಡ್ಜ್ ಕೋರ್ಟಿನಲ್ಲಿ ಕೆಲಸವು ದೊರೆತ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 5 ರೂ. ಗಳನ್ನು ಕಳುಹಿಸಿರುತ್ತಾರೆ.

ಈ ಮೇಲ್ಪಂತ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ಮಹನೀಯರ ಹಿತೋಕ್ತಿಗಳು.

೧ ಮಹಾಶಿವರಾತ್ರಿಯ ದಿವಸ ಊಟಮಾಡದಿರುವದೇ ಉಪವಾಸವೆಂತಲೂ, ನಿದ್ರೆಮಾಡದಿರುವದೇ ಜಾಗರಣವೆಂತಲೂ ಮರುದಿನ ಹೊಟ್ಟೆತುಂಬ ಊಟಮಾಡುವದೇ ಪಾರಣೆ ಎಂತಲೂ ಬಹು ಜನರು ತಿಳಿದುಕೊಂಡು ಸ್ಥೂಲಾರ್ಥದಲ್ಲಿಯೇ ಮಗ್ನರಾಗಿರುತ್ತಾರೆ. ಆದರೆ ಮುಖ್ಯ ಅಂಶವೇನೆಂದರೆ—ಕೋತಿಯಂತೆ ಹಾರಾಡುವ ಮನಸ್ಸನ್ನು ಆತ್ಮನಲ್ಲಿ ನಿಲ್ಲಿಸುವದೇ ಉಪವಾಸವಾಗಿ ಬಾಹ್ಯವ್ಯವಹಾರವನ್ನು ಮರೆತು ಪರಮಾತ್ಮಚಿಂತನೆಯಲ್ಲಿರುವದೆಂಬ ಜಾಗರಣೆಮಾಡಿ ಆ ಚಿಂತನೆಯಿಂದ ಕಂಡುಕೊಂಡ ತತ್ವದಲ್ಲಿ ನೆಲೆನಿಲ್ಲುವದರಿಂದಾಗುವ ನಿತ್ಯತೃಪ್ತಿ ಎಂಬ ಪಾರಣೆಮಾಡಿ ಆನಂದಹೊಂದುವದೇ ಮಹಾಶಿವರಾತ್ರಿಯ ವ್ರತದ ಮುಖ್ಯ ಧ್ಯೇಯವು.

೨ ಒಬ್ಬನು ಸಾವಿರಾರು ಅಥವಾ ಸಾವಿರಾರು ಜನಗಳನ್ನು ಜಯಿಸುತ್ತಾನೆ. ಮತ್ತೊಬ್ಬನು ಒಂದಾವರ್ತಿ ತನ್ನನ್ನು ತಾನೇ (ತನ್ನ ಇಂದ್ರಿಯಗಳನ್ನು) ಜಯಿಸಿಕೊಳ್ಳುತ್ತಾನೆ. ಇವರಿಬ್ಬರಲ್ಲಿ ಎರಡನೇಯವನೇ ಸರ್ವೋತ್ತಮನಾದ ಜಯಶಾಲಿಯು.

೩ ಯಾವ ಮನುಜನಾದರೂ ದುರಭಿಪ್ರಾಯದಿಂದ ಒಂದು ಕ್ರೂರವಾದ ಮಾತನ್ನೇ ಆಡಿದಲ್ಲಿ ಕೃತ್ಯವನ್ನೇ ಮಾಡಿದಲ್ಲಿ ಗಾಡಿಯನ್ನು ಎಳೆದುಕೊಂಡು ಹೋಗುವ ಎತ್ತಿನ ಕಾಲುಗಳ ಹಿಂದೆ ಆ ಗಾಡಿಯ ಚಕ್ರಗಳು ಹೇಗೆ ಹಿಂಬಾಲಿಸುವವೋ ಅದರಂತೆ ಅವಕ್ಕೆ ಸರಿಯಾದ ದುಃಖವು ಆ ಮಾತುಗಳನ್ನು ಮತ್ತು ಆ ಕೃತ್ಯಗಳನ್ನೂ ಸಹ ಹಿಂಬಾಲಿಸುತ್ತದೆ.

೪ ಕ್ರೂರವಾದ ಹುಲಿಯ ಬಾಯಿಗೆ ಸಿಕ್ಕಿ ಹಿಂದಿರುಗಬಹುದು ಮತ್ತು ಕಟುಗರ ತೀಕ್ಷ್ಣವಾದ ಆಯುಧದ ಅಲಗಿಗೆ ಸಿಕ್ಕಿ ಹಿಂದಿರುಗಬಹುದು. ಆದರೆ ಸ್ತ್ರೀಯರ ಸೌಂದರ್ಯವೆಂಬ ಬಲೆಗೆ ಬಿದ್ದು ಹಿಂದಿರುಗುವದು ಬಹು ದುರ್ಲಭವು. ಮನುಷ್ಯಗೆ ಮರುಳೆಂಬುದು ಇವರ ಸಹವಾಸವೇ.'

೫ ಕಾಮ ಕಬ್ಬಿಣದ ಅಗ್ನಿಗೆ ಸಿಗಲಿಕ್ಕೆ ಕಟ್ಟು ಇಂಗಿ ಹೋಗುವವು. ಆದರೆ [illegible] ಒಂದಾವರ್ತಿ ಮೋಹಪಾಶಕ್ಕೆ ಸಿಕ್ಕಿದವನು [illegible] ಬಿಡಿಸಿಕೊಳ್ಳುವನು.

೬ ಪುಣ್ಯವರ್ಗದಿಂದ ಮನುಷ್ಯವರ್ಗಕ್ಕೆ ಬಂದು ಮುಕ್ತಿಹೊಂದುವ ಅವಕಾಶದ ಮನುಜನು ಸಂಸಾರದಲ್ಲಿ ಸಿಕ್ಕು ಸಕಲ ಸುಖಗಳನ್ನು ಅನುಭವಿಸುತ್ತಾ ಇರುವ ಸ್ಥಿತಿಗೆ ಏನೆನ್ನಬೇಕು ಎಂದು ಹೇಳುತ್ತಾರೆ. ಈ ಜೀವನ ಯಾತ್ರೆಯಲ್ಲಿ ನಮ್ಮ ಅರಿಷಡ್ವರ್ಗದಲ್ಲಿ ಕಾಮಕ್ರೋಧಗಳನ್ನು ಜಯಿಸಿ ಉಪಾಧಿಗಳನ್ನು ಸ್ವಾಧೀನಪಡಿಸಿಕೊಂಡು ಆತ್ಮಭಾವನೆಯ ಸರ್ವಭೂತಗಳಲ್ಲಿಯೂ ಇರತಕ್ಕ ಪರಮಾತ್ಮನನ್ನು ತಿಳಿದುಕೊಂಡು ಮೋಕ್ಷವನ್ನು ಪಡೆಯುವದೇ ಮನುಷ್ಯಜನ್ಮದ ಉದ್ದೇಶವು.

೭ ನೀನು ಮಾಡುವ ಕೆಲಸವೆಲ್ಲವೂ ಸಕಲವಾಗಿರಲಿ. ನೀನು ಇಲ್ಲದ್ದನ್ನು [illegible] ಅಂದರೆ [illegible] ಸರ್ವಜನರನ್ನೂ ಪ್ರೀತಿಸುವಂತೆ ಸತ್ಪ್ರವೃತ್ತಿಯು ನಿನ್ನಲ್ಲಿ ನಿರ್ಮಲವಾಗಿ ಬೆಳೆಯಲಿ. ರಕ್ತಕ್ಕೆ ಕ್ಷತಮಿಲ್ಲದ [illegible] ವಿಷಯಾದಿಗಳು ಯಾವ ರೂಪದಲ್ಲಿದ್ದರೂ ಇವಕ್ಕೆ (ಸತ್ಪ್ರವೃತ್ತಿಗಳಿಗೆ) ವಿಘ್ನಕಾರಿಯಾಗುವವು.

೮ ಗಡಿಯಾರದಲ್ಲಿ ಗಂಟೆ [illegible] ಮುಳ್ಳುಗಳೆರಡೂ ಹನ್ನೆರಡಕ್ಕೆ ಸರಿಯಾಗಿ ಒಂದಾಗಿ ನಿಲ್ಲುವ ಲಕ್ಷಣವೇ ಪರಮಾತ್ಮ ಜೀವಾತ್ಮರುಗಳ ಐಕ್ಯದ ಲಕ್ಷಣವು.

೯ ನೀರೂ ನೀರುಳ್ಳೆಯೂ ಹೇಗೆ ಒಂದೇ ಎಂದರೆ ಗುಳ್ಳೆಯು ನೀರಿನಲ್ಲಿ ಹುಟ್ಟಿ ನೀರಿನ ಮೇಲೆ ತೇಲುತ್ತಾ ಕೊನೆಗೆ ನೀರಿನಲ್ಲಿ ಹೇಗೆ ಅಡಗುವದೋ ಅದರಂತೆ ಜೀವಾತ್ಮನೂ ಪರಮಾತ್ಮನೂ ಇಬ್ಬರೂ ಒಂದೇ. ಆದರೆ ಇವರಿಗೆ ಭೇದವೇನು? ಎನ್ನುವಿರೋ! ಒಬ್ಬನು ಕಿರಿಯನು ಮತ್ತೊಬ್ಬನು ಹಿರಿಯನು ಒಬ್ಬನು ಅಂತನು ಇನ್ನೊಬ್ಬನು ಅನಂತನು ಒಬ್ಬನು ಪರತಂತ್ರನು ಇನ್ನೊಬ್ಬನು ಸ್ವತಂತ್ರನು.

೧೦ ನಾವು ಹಿಂದಿನ ಮತ್ತು ಈಗಿನ ಬಂಧುಗಳಲ್ಲಿ ವಿಶೇಷ ಅಭಿಮಾನವಿಟ್ಟಿರುತ್ತೇವೆ. ಆದರೆ ನಮಗೂ ಅವರಿಗೂ ಶರೀರಕ್ಕೆ ಸಂಬಂಧವೇನು ವಿಚಾರಮಾಡಿದರೆ ಮರಣ ನಂತರ ಅವರು ಈ ದೇಹವನ್ನು ತ್ಯಜಿಸಿಬಿಡುವದರಿಂದ ಆ ಸಂಬಂಧವೆಲ್ಲವೂ ಹರಿದುಹೋಯಿತೆಂದೂ ಇದಾಗಿಗೆ [illegible] ನಡೆದುಬಂದ ಸತೀಪುತ್ರಾದಿಗಳ ಬಾಂಧವ್ಯವೆಲ್ಲವೂ ನಮ್ಮ ಆತ್ಮಕ್ಕೆ ಇಲ್ಲದೇ ಹೋಗಿ ಉಂಟಾದ್ದೆಂದೂ ಪರಸ್ಪರ ಜಾತರಿಗೆ ಇಲ್ಲವೆಂದೂ ಸ್ಪಷ್ಟವಾಗಿ ತಿಳಿಯಬರುವದು. ಅಲ್ಲದೆ ಸಂಗದ ಬಾಧೆಯೂ ಬರುವದಿಲ್ಲ. ಕಷ್ಟಗಳಿಗೆ ನೆರವಾಗುವದಿಲ್ಲ. ಆದ್ದರಿಂದ ತೋರಿ ಹಾರುವ ಸತೀಪುತ್ರರೆಂಬ ಭಾವವೆಲ್ಲ ಭ್ರಾಂತಿಮೂಲಕವಾದವು. ಆದಕಾರಣ ಈ ಪ್ರಪಂಚವನ್ನು ಬಿಟ್ಟು ಮೋಕ್ಷದಾಯಕನಾದ ಸದ್ಗುರುವಿನಿಂದ ಆತ್ಮಾನಾತ್ಮವಿಚಾರ ತಿಳಿದುಕೊಂಡು ಧನ್ಯರಾಗಿ ಮಾಡುವದು ಸಕಲರ ಆದ್ಯಕರ್ತವ್ಯವಾಗಿದೆ.

೧೧ ಮನುಷ್ಯನಿಗೆ ರಾತ್ರಿ ಮಲಗಿದಾಗ ಹೊರಗಿನ ಯೋಚನೆಗಳು ಹೆಚ್ಚಿದಂತೆಲ್ಲ ನಿದ್ರೆಯು ಮಾಯವಾಗುವದು. ಹಾಗೆಯೇ ದುಷ್ಟಭಾವನೆಗಳು ಹೆಚ್ಚಿದಂತೆ ಆನಂದವು ದೂರ ಸರಿಯುವದು. ಮರಕ್ಕೆ ನೆರಳು ಸ್ವಭಾವವಾಗಿರುವಂತೆ ಆನಂದಕ್ಕೆ ದುಃಖದ ನೆರಳೂ ಉಂಟು. ಈ ನೆರಳೂ, ದುಷ್ಟಭಾವನೆಗಳೂ ಬೇರೆಬೇರೆಯಲ್ಲ. ರಾಗ ದ್ವೇಷ ಲೋಭ, ಮೋಹ ಮದ ಮತ್ಸರ ಮುಂತಾದ ಭಾವನೆಗಳೇ ದುಃಖದ ನೆರಳನ್ನು ನಮಗೆ ಆಗಾಗ ಮಾಡಿಕೊಡುವವು. ಆದ್ದರಿಂದ ಸದ್ಭಾವನೆಗಳ ಅಭ್ಯಾಸವೂ ದುರ್ಭಾವನೆ ಬಂದರೆ ಬೆಳಗಾಗುತ್ತಲೇ ಪಿಶಾಚಿಗಳು ತೊಲಗುವಂತೆ ದುಷ್ಟಭಾವನೆಗಳು ತಮಗೆ ತಾವೇ ಕಣ್ಮರೆಯಾಗುವವು. ಆಗ ನಾವು ಆನಂದದ ದಡದಲ್ಲಿಯೇ ಇರುವೆವೆಂಬುದೂ ಮನದಟ್ಟಾಗುವದು.

೧೨ ಬರೆಯುವವನಿಗೆ ಒಂದು ಲೇಖನಿಯು ಕೆಟ್ಟಿತೋ ನಂತರ ಮತ್ತೊಂದರಿಂದ ತನ್ನ ಕೆಲಸವನ್ನು ಪೂರೈಸಿಕೊಳ್ಳುವಂತೆ ಜಗತ್ಕುಟುಂಬಿಯಾದ ಭಗವಂತನು ತಾನು ಸೃಷ್ಟಿಸಿರುವ ಪ್ರಾಣಿವರ್ಗದಲ್ಲಿ ಹಿಂದೆಯಾದವನು ಮತ್ತೊಬ್ಬನನ್ನು [illegible] ಇದ್ದರೆ ಇನ್ನೊಬ್ಬನ ಮೂಲಕ ನಡೆಸುತ್ತಾನೆ. ಹೀಗಿರಲಾಗಿ 'ನಾನು ಎಂದು ಹೆಮ್ಮೆ ಪಡುವದು ಶುದ್ಧ ಅವಿವೇಕತನವು. ಕೆಲಸಗಾರನಿಗೆ ಉಪಕರಣವು ಹ್ಯಾಗೋ ನಾವೆಲ್ಲರೂ ಪರಮಾತ್ಮನಿಗೆ ಹಾಗೆ.'

೧೩ ತಪಸ್ಸುಮಾಡತಕ್ಕಂಥ ಇಚ್ಛೆಯುಳ್ಳವರು ಶರೀರವನ್ನು ಕೃಶಮಾಡಿ ದುರ್ಬಲಮಾಡಿಕೊಳ್ಳಬಾರದು. ಕಾಯಕ್ಲೇಶಗಳಾದ ಉಪವಾಸವ್ರತಾದಿಗಳನ್ನು ಮಾಡುವುದರಿಂದ ದೇಹವು ದುರ್ಬಲವಾಗಿ ಮನಸ್ಸಿನ ಐಕ್ಯಕ್ಕೆ ವಿರೋಧವಾಗುವದು. ಧರ್ಮಾಚರಣೆಗೆ ಶರೀರವೇ ಮುಖ್ಯಸಾಧನವಾದದರಿಂದ ಜಾಣನ ಕುದುರೆಯನ್ನು ಸ್ಥೂಲವಾಗದೆ ಕೃಶವಾಗದೆ ಶಕ್ತಿಯನ್ನೂ ಶರೀರಲಾಘವವನ್ನೂ ಹೊಂದಿ ವೇಗವಾಗಿ ಓಡುವಂತೆ ಯಾವ ರೀತಿ ನಿಯಮದಿಂದ ಕಾಪಾಡುತ್ತಾರೋ ಅದರಂತೆ ಸಾತ್ವಿಕವಾದ ಪುಷ್ಟಿ ಆಹಾರಗಳನ್ನು ಸಕಾಲದಲ್ಲಿ ಈ ಶರೀರಕ್ಕೆ ಕೊಟ್ಟು ತನ್ನ ವಶವರ್ತಿಮಾಡಿಕೊಳ್ಳಬೇಕು.

೧೪ ಪ್ರಪಂಚದಲ್ಲಿ ಅಸತ್ಯದಿಂದ ಆಲೋಚನೆಗಳೂ ಮೂಢಭಕ್ತಿಯನ್ನಾಶ್ರಯಿಸಿರುವ ಮಿಥ್ಯಾಭಾವನೆಗಳೂ ಅನೇಕವಾಗಿವೆ. ಬಹುಜನರು ಅಭಿಪ್ರಾಯಪಡುತ್ತಾರೆಂದಾಗಲಿ ನೂರಾರು ವರ್ಷಗಳಿಂದ ಆಚರಣೆಯಲ್ಲಿರುವುದೆಂದಾಗಲಿ ಗ್ರಂಥಗಳಲ್ಲಿ ಹೇಳಿದೆ ಎಂದಾಗಲಿ ದುರಭಿಮಾನಕ್ಕೊಳಪಟ್ಟಾಗಲಿ ಜನರ ದಾಕ್ಷಿಣ್ಯಕ್ಕೊಳಪಟ್ಟು ಎಲ್ಲದಕ್ಕೂ ಮೂಕಕುರಿಯಂತೆ ತಲೆ ಹಾಕಿ ನಂಬಿಡದೆ ಈಶ್ವರನು ಎಲ್ಲಾ ಪ್ರಾಣಿಗಳಿಂತಲೂ ಮನುಷ್ಯನಿಗೆ ಹೆಚ್ಚಾಗಿ ಜ್ಞಾನವನ್ನು ಕೊಟ್ಟಿರುವುದರಿಂದ ವಿಷಯವನ್ನು ತನ್ನಲ್ಲಿ ಚನ್ನಾಗಿ ಮಥಿಸಿ ಇದು ಸರಿಯಾದ ಮಾರ್ಗವೇ ಎಂದು ಪರ್ಯಾಲೋಚಿಸಿ ತೀರ್ಮಾನಿಸಿ ಮೋಕ್ಷವನ್ನು ಪಡೆಯಬೇಕು. ಹೀಗೆ ಮಾಡದೆ ಮೂಢಭಕ್ತಿಯಿಂದ ನಂಬಿ ನಡೆಯುವದಾದರೆ 'ಬಳಿಗೆ ಬರುವವನು ಸೇರಿ ಹಳ್ಳಕ್ಕೆ ಬಿದ್ದು ಸತ್ತಂತೆ ಸರ್ವಜ್ಞ' ಎಂಬಂತಾಗಿ ಅದು ನಿನ್ನ ಅಭಿವೃದ್ಧಿಯನ್ನು (ಮೋಕ್ಷವನ್ನು) ಕೆಡಿಸುವದು. ಮುಖ್ಯವಾಗಿ 'ಪ್ರಪಂಚದಲ್ಲಿ ಮೂಢಭಕ್ತಿಗಿಂತಲೂ ಕೆಟ್ಟದ್ದು ಮತ್ತೊಂದಿಲ್ಲ' ಎಂದು ಅಭಿಪ್ರಾಯವು.

೧೫ ಉತ್ತಮವಾದ ನರಜನ್ಮ ಮತ್ತು ಇಂದ್ರಿಯಗಳನ್ನು ಪಡೆದಿದ್ದರೂ ಯಾರು ಆತ್ಮಸುಖವನ್ನು ತಿಳಿಯದಿರುವರೋ ಅಂಥವರು ಆತ್ಮಘಾತಕರು.

೧೬ ಯಾವನು ತನ್ನ ಜನ್ಮದ ಮುಖ್ಯೋದ್ದೇಶವನ್ನು ಮರೆತು ನಿಷ್ಪ್ರಯೋಜನವಾಗಿ ಬಾಹ್ಯವಿಷಯಸುಖಗಳಲ್ಲಿ ಕಾಲಕಳೆಯುತ್ತಿರುವನೋ ಮತ್ತು ಸತ್ಯಜ್ಞಾನವಿಲ್ಲದೆ ಇರುತ್ತಾನೋ ಅಂಥವನು ಕಾಲಾಂತರದಲ್ಲಿ ಜ್ಞಾನ ಸಂಪಾದಿಸಿದವರನ್ನು ಕಂಡು ಅಸೂಯೆ ಪಡುತ್ತಾನೆ (ತಾನು ಜ್ಞಾನ ಸಂಪಾದಿಸಲಿಲ್ಲವಲ್ಲ ಇತರರು ಸಂಪಾದಿಸಿದವರಲ್ಲ ಎಂದು ಹೊಟ್ಟೆಗಿಚ್ಚು ಪಡುವನು) ಇದು ಅವಿವೇಕತನವು.

೧೭ ಯಾವ ಮನುಷ್ಯನು ತಾನು ಮಾಡುವ ದುಷ್ಕೃತ್ಯಗಳ ವಿಷಯದಲ್ಲಿ ಅಲಕ್ಷ್ಯಮಾಡಿ ಇದೊಂದು ಕ್ಷುದ್ರದಿಂದ ನನಗೇನೂ ಬಾಧಕವಿಲ್ಲೆಂದು ಮನಸ್ಸಿನಲ್ಲಿ ಯೋಚಿಸತಕ್ಕದ್ದು. ಯಾಕೆಂದರೆ ಒಂದು ಪಾತ್ರೆಗೆ ಮಳೆಹನಿಯು ಒಂದೊಂದಾಗಿ ಬಿದ್ದರೂ ಹ್ಯಾಗೆ ತುಂಬುವದೋ ಅದರಂತೆ ಒಂದೊಂದು ಪಾಪಗಳೂ ಸೇರಿ ಕೊನೆಗೆ ಪೂರ್ಣಪಾಪಿಷ್ಠನನ್ನಾಗಿ ಮಾಡಿ ಪೂರ್ಣ ದುಃಖವನ್ನುಂಟುಮಾಡುತ್ತವೆ. ಸುಕೃತಗಳ ವಿಷಯದಲ್ಲಿಯೂ ಹೀಗೆಯೇ ಎಂದು ತಿಳಿದುಕೊಂಡು ಸನ್ಮಾರ್ಗದಲ್ಲಿ ವರ್ತಿಸುವದು ಯೋಗ್ಯತರವು.

೧೮ ಪಾಪಿಷ್ಠನು ತಾನು ಮಾಡುವ ಪಾಪಗಳು ಮೊದಲು ಮಧುವಿನ ಹಾಗೆ ಮಧುರವಾಗಿ ತೋರುತ್ತವೆ ಮತ್ತು ಅವು ಅವನಿಗೆ ತಕ್ಕ ಫಲವನ್ನು ಕೊಡುವವರೆಗೆ ಸಂತೋಷವೆಂದೇ ಭಾವಿಸುತ್ತಾನೆ. ಆದರೆ ಅದು ಫಲ ಕೊಡಲು ದೀರ್ಘದುಃಖವನ್ನುಂಟುಮಾಡಿದಾಗ ಅಯ್ಯೋ! ಇದು ಪಾಪಕೃತ್ಯವೆಂದು ಭಾವಿಸುತ್ತಾನೆ. ಅದರ ಹಾಗೆ ಸನ್ಮಾರ್ಗಿಯು ತಾನು ಮಾಡುವ ಧರ್ಮವು ಅವನಿಗೆ ಒಂದು ತೊಂದರೆ ಎಂದು ಭಾವಿಸುತ್ತಾನೆ. ಆದರೆ ಅದು ಒಳ್ಳೇ ಫಲವನ್ನುಂಟುಮಾಡಿದೊಡನೆ ಅದರ ಸದ್ಗುಣವು ಅವನಿಗೆ ತಿಳಿಯಾಗುವದು.

೧೯ ಗಾತ್ರವನ್ನು ನೋಡಿ ದೊಡ್ಡದು ಚಿಕ್ಕದೆಂದು ಹೇಳಲಾಗದು. ಪ್ರಪಂಚದಲ್ಲಿ ಜನರು ದೊಡ್ಡದೆಂದು ಹೇಳುವ ಒಂದು ದೊಡ್ಡ ಕೆಲಸಕ್ಕಿಂತಲೂ ಗುರುಗಳ ಕಾರ್ಯಕ್ಕೆ ಸಹಾಯವಾಗಿರುವ ಒಂದು ಸಣ್ಣ ಕಾರ್ಯವು ಎಷ್ಟೋ ಉತ್ತಮವಾದುದು. ಅದನ್ನು ಮಾಡಲು ಮಾಡಬೇಕು. ಇದು ಉಪಯೋಗ ಇದು ಅನುಪಯೋಗ ಎಂದು ತಿಳಿದ ಮಾತ್ರಕ್ಕೆ ಸಾಲದು. ಉಪಯೋಗವಾದವುಗಳಲ್ಲಿ ಯಾವುದು ಹೆಚ್ಚು ಉಪಯೋಗವಾದುದೆಂದು ತಿಳಿದುಕೊಳ್ಳಬೇಕು. ಬಡವರಿಗೆ ಅನ್ನದಾನಮಾಡುವದು ಸತ್ಕಾರ್ಯವೇ ಸರಿ. ಉಪಯೋಗವಾದ ಕೆಲಸವೇ ಹೌದು. ಆದರೂ ಅವರ ದೇಹವನ್ನು ಪೋಷಿಸುವುದಕ್ಕಿಂತಲೂ ಅವರ ಆತ್ಮಗಳನ್ನು ಪೋಷಿಸುವದು (ಆತ್ಮಜ್ಞಾನ ಉಂಟಾಗುವಂತೆ ಸದ್ಬೋಧಮಾಡುವದು) ಇದು ಶ್ರೇಷ್ಠವಾದುದು ಮತ್ತು ಹೆಚ್ಚು ಉಪಯೋಗವಾದುದು ಮತ್ತು ಏನಾದರೂ ದಾನಮಾಡುವಾಗ ಪಾತ್ರಾಪಾತ್ರವರಿತು ದಾನಮಾಡಬೇಕು.

೨೦ "ಬ್ರಾಹ್ಮಮುಹೂರ್ತದ ವಿಷಯದಲ್ಲಿ ಇದೊಂದು ಮಾತನ್ನು ನೆನಪಿನಲ್ಲಿಡಬೇಕು. ಬ್ರಾಹ್ಮಮುಹೂರ್ತದಲ್ಲಿ (ಬೆಳಗಿನ ಐದು ಘಂಟೆ) ನಿದ್ರೆಮಾಡುವದೆಂಬುದು ಆರೋಗ್ಯ ಮತ್ತು ಪರಮಾರ್ಥ ಈ ಎರಡು ದೃಷ್ಟಿಯಿಂದ ಬಹಳ ಹಾನಿಕರವಾಗಿರುತ್ತದೆ. ಹೀಗಿರುವುದರಿಂದಲೇ ಸೂರ್ಯೋದಯದಲ್ಲಿ ನಿದ್ರಿಸುತ್ತಿರುವದು ಬಹಳ ನಿಂದನೀಯವೆಂದು ಶಾಸ್ತ್ರಕಾರರು ಹೇಳುತ್ತಾರೆ. ಸೂರ್ಯೋದಯದಲ್ಲಿ ನಿದ್ರಿಸುತ್ತಿರುವುದರಿಂದ ಕಫವು ಹೆಚ್ಚಾಗಿ ತಮೋಗುಣವು ಬೆಳೆಯುವದು. ಇದೊಂದು ಅತ್ಯಂತ ಹಾನಿಕರವಾದ ಗುಣವಾಗಿರುತ್ತದೆ. ಇದರ ಕೆಟ್ಟ ಪ್ರಭಾವವು ಚಿತ್ತದ ಮೇಲೂ ಬೀಳುತ್ತದೆ. ತಮೋಗುಣವು ಹೆಚ್ಚುವುದರಿಂದ ಬೇನೆಯು ಉಂಟಾಗುವದು. ಇದಕ್ಕೆ ಬದಲಾಗಿ ೫ ಘಂಟೆಗೆ ಏಳುವುದರಿಂದ ಆಗಿನ ಉತ್ತಮ ವಾಯು ದೊರಕುವದು. ಆ ವಾಯುವಿನ ಶಕ್ತಿದಾಯಕ ಅಂಗವು ಹೆಚ್ಚಾಗಿರುತ್ತದೆ. ಆದ್ದರಿಂದ ಆರೋಗ್ಯದ ಸುಧಾರಣೆಯೂ ಆಗುವದಲ್ಲದೆ ಚಿತ್ತವೂ ಸ್ವಲ್ಪಮಟ್ಟಿಗೆ ಶಾಂತವಾಗುವದು. ಇಂಥ ಸಮಯದಲ್ಲಿ ಭಗವಚ್ಚಿಂತನವಾದರೆ ಅದರ ಪ್ರಭಾವವನ್ನಂತೂ ಹೇಳಬೇಕಾದದ್ದೇನಿದೆ?" ಆದ್ದರಿಂದ ಇಂಥ ಸುಸಮಯದಲ್ಲಿ ಏಳುವದು ಆರೋಗ್ಯಕ್ಕೂ ಪಾರಮಾರ್ಥಕ್ಕೂ ಸಾಧನವಾಗಿದೆ. "ಬ್ರಾಹ್ಮಮುಹೂರ್ತ" ಎಂಬ ಹೆಸರೂ ಸಹ ಅನ್ವರ್ಥಕವಾಗಿದೆ.

೨೧ ಮನುಷ್ಯನು ಹುಟ್ಟುವಾಗ ಮೃದುವಾಗಿ ಕೋಮಲವಾಗಿರುತ್ತಾನೆ. ಸತ್ತಮೇಲೆ ಗಟ್ಟಿಯಾಗಿ ಸೆಟೆದುಕೊಳ್ಳುತ್ತಾನೆ. ಎಲ್ಲವೂ ಹೀಗೆಯೇ. ಗಿಡಮರಗಳೂ ಬೆಳೆಯುತ್ತಿರುವಾಗ ಬಳುಕುತ್ತಾ ಕೋಮಲವಾಗಿರುತ್ತವೆ. ಸತ್ತಮೇಲೆ ಒಣಗಿಕೊಂಡು ಗಟ್ಟಿಯಾಗುವವು. ಹೀಗೆ ನೋಡಿದರೆ ಗಟ್ಟಿಯಾಗಿ ಬಲವಾಗಿರುವದು ಸಾವಿಗೆ ನೆರವು, ಮೃದುವಾಗಿ ಕೋಮಲವಾಗಿರುವದು ಜೀವನ ಜೊತೆಯಲ್ಲಿರುವದು. ಆದ್ದರಿಂದ ಯಾವನು ಬರಿಯ ಬಲವನ್ನೇ ನಂಬಿಕೊಂಡಿರುವನೋ ಅವನಿಗೆ ಜಯವಿಲ್ಲ. ಮರವು ಬಲವಾಗಿದ್ದರೆ ಕೊಡಲಿಯ ಪೆಟ್ಟು ಸಿದ್ಧ. ಆದ್ದರಿಂದ ಹಟಮಾಡಿ ಬಲಕ್ಕೆ ಕೆಳಗಿನ ಸ್ಥಾನ; ಶಾಂತಿಯುಳ್ಳವರದ್ದೇ ಉಚ್ಚಸ್ಥಾನ. ಒಬ್ಬನಲ್ಲಿ ವಿಚಾರಮಾಡಿ ನೋಡಿದರೆ ಪ್ರತಿಯೊಬ್ಬನೂ ಕಠಿಣತ್ವವನ್ನು ಬಿಟ್ಟು ಮೃದುತ್ವದಿಂದ ಕೂಡಿದ ಕೋಮಲಹೃದಯಿಯಾಗಿರಬೇಕು.

೨೨ ಎಲೈ ಮಾನವನೆ—ಶಸ್ತ್ರವು ನಮಗೆ ಆಗಾಗ್ಗೆ ಕೆಲವು ಎಚ್ಚರಿಕೆಗಳನ್ನು ಕೊಡುತ್ತಿರುವದು. ಅದೇನೆಂದರೆ—'ನಿಜವನ್ನು ಹೇಳು, ಸ್ವಾರ್ಥತೆಯನ್ನು ತೊರೆ, ಕಷ್ಟದಲ್ಲಿ ತಾಳು, ಧರ್ಮವನ್ನು ಕಾಯಿ, ಪರಹಿತಕ್ಕೆ ಸಾಯಿ, ನಿಷ್ಕಲ್ಮಷದಲ್ಲಿ ಬಾಳು.' ಆ ಶಸ್ತ್ರಸಾರವನ್ನು ಕೇಳು, ಕೇಳದಿದ್ದರೆ ನೀನು ಹಾಳು ಎಂದು ಉಚ್ಚರಿಸುವದೇ ಅದರ ಕೆಲಸವಾಗಿದೆ. ಹಾಗಾದರೆ ಅದು (ಶಸ್ತ್ರವು) ನಮಗೆ ಪ್ರತ್ಯಕ್ಷ ದೇವರಾಜ್ಞೆಯೇ ಸರಿ.

೨೩ ಧರ್ಮವು ಜಗತ್ತಿಗೆಲ್ಲ ಆಧಾರವಾಗಿರುವದು. ಧರ್ಮವನ್ನು ಕೊಂದರೆ ಅದು ನಮ್ಮನ್ನು ಕೊಲ್ಲುವದು. ಧರ್ಮವನ್ನು ಕಾಪಾಡಿದರೆ ಅದು ನಮ್ಮನ್ನು ಕಾಪಾಡುವದು. ಆದ್ದರಿಂದ ಧರ್ಮವನ್ನು ಕೊಂದರೆ ಅದು ನಮ್ಮನ್ನು ಕೊಂದೀತೆಂಬ ಭಯದಿಂದಲಾದರೂ ಧರ್ಮವನ್ನು ಮೀರಬಾರದು. ಧರ್ಮವೆಂಬುದೊಂದೇ ನಮ್ಮ ಗೆಳೆಯನು. ಏಕೆಂದರೆ ಬಿಟ್ಟದ್ದೆಲ್ಲವೂ ನಮ್ಮ ಶರೀರದೊಡನೆ ನಾಶವಾಗುವದು. ಧರ್ಮವು ಮಾತ್ರ ನಮ್ಮನ್ನು ಬಿಡದೆ ಹಿಂಬಾಲಿಸುವದು. ಮತ್ತು ಮಿಗಿಲಾಗಿ ಈ ಧರ್ಮಕ್ಕಾಗಿ ಯಾವನು ಧರ್ಮಾಚರಣೆ ಮಾಡುವನೋ ಅವನನ್ನು ಜನರೂ ಆಶ್ರಯಿಸುವರು; ಸೌಖ್ಯವೂ ದೊರಕುವದು.

ಎಂ. ಮಲ್ಲಿಕಾರ್ಜುನಾರಾಧ್ಯ
ರಾಣೇಬೆನ್ನೂರು ಮಠೀಮಠ ಶಿಷ್ಯರು

ನಮಃ ಪಂಚ ಜಗದ್ಗುರುಭ್ಯಃ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ.

ಮೊದಲೇ ಪ್ರಸಿದ್ಧಪಡಿಸಿದಂತೆ ಅಕ್ಕಲಕೋಟೆ ಸಂಸ್ಥಾನ [illegible] ದರ್ಶನಹಾಳ ಗ್ರಾಮದಲ್ಲಿ ತಾ|| ೧೮-೩-೩೫ ಸೋಮವಾರ ಪ್ರಾತಃಕಾಲ ೮ ಘಂಟೆಗೆ 'ಬೆಂಗಳೂರು ನಿವಾಸಿಗಳಾದ [illegible] ಮಾರನಹಳ್ಳಿ ಮಲ್ಲಿಕಾರ್ಜುನಪ್ಪನವರು ಈ ಪರಿಷತ್ತಿಗಾಗಿ [illegible] ಹಿಸಿದ ಜಗದಾಚಾರ್ಯ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕವೂ ಸಹಸ್ರಬಿಲ್ವಾರ್ಚನೆಯೂ ಸಹಸ್ರದೀಪಾರಾಧನೆಯೂ ನಡೆಯಿತು. ಮಾಹೇಶ್ವರಾರಾಧನೆಯಾಯಿತು. ರಾತ್ರಿ ೯ ಘಂಟೆ [illegible] ಮನೆಯಿಂದ ಜಗದಾಚಾರ್ಯಮೂರ್ತಿಯ ಪಲ್ಲಕ್ಕಿ ಮೆರವಣಿಗೆಯು ಹೊರಟಿತು. ವಾದ್ಯವೈಭವದಿಂದ ದರ್ಶನಹಾಳ ಮುಟ್ಟಿ ಮರಳಿ ಆದ ಮಠಕ್ಕೆ ಬಂದಿತು. ಮಂಗಳ [illegible] ಇವರು ಜೋಗುಳವನ್ನು ಹಾಡಿದರು. ಅನಂತರ ಶ್ರೀ|| [illegible] ಬ್ರ|| ಪಟ್ಟಾಧ್ಯಕ್ಷ ಮುಳ್ಳೂರು ಇವರ ಅಧ್ಯಕ್ಷತೆಯಲ್ಲಿ [illegible] ಸಂ|| ಶ್ರೀ|| ಷ|| ಬ್ರ|| ಸುತ್ತಗಟ್ಟಿ ಶ್ರೀಗಳೂ, ಹುಬ್ಬಳ್ಳಿ ಶ್ರೀಗಳೂ ಸಾ|| ಶ್ರೀ ಭಾಗೀರಥೀಬಾಯಿ [illegible] ಜಯಂತೀ ವಿಷಯಕ್ಕೆ ವ್ಯಾಖ್ಯಾನಗಳನ್ನು ಮಾಡಿದರು. ವಿಷಯವನ್ನೇ ಅಧ್ಯಕ್ಷರು ಸಮರ್ಥಿಸಿದರು. ಮಂಗಲ ಘೋಷದೊಡನೆ ಕಾರ್ಯವು ಸಮಾಪ್ತಿಹೊಂದಿತು.

ಪ್ರತ್ಯಕ್ಷದರ್ಶಿ

ಶ್ರೀ ಕಲ್ಲೇಶ್ವರಸ್ವಾಮಿಯ ರಥೋತ್ಸವ ಮತ್ತು ದನಗಳ ಪ್ರದರ್ಶನ.

ಜಗಳೂರು ತಾಲ್ಲೂಕು ಕಲ್ಲೇದೇವರಪುರದ ಶ್ರೀಕಲ್ಲೇಶ್ವರಸ್ವಾಮಿಯ ರಥೋತ್ಸವವು ಪ್ರತಿವರ್ಷದಂತೆ ಈ ವರ್ಷವೂ ಯುವನಾಮ ಸಂ|| ರದ ಚೈತ್ರಬಹುಳ ೧ ನೇ ಶುಕ್ರವಾರದ ಹಾಲುರುದ್ರಾಭಿಷೇಕಾನಂತರ ಶಂಕರಧಾರದಾ ಉತ್ಸವ ಮೊದಲ್ಗೊಂಡು, ಬಹುಳ ೩ ನೇ ಶನಿವಾರ ಗಜಾರೋಹಣೋತ್ಸವ, ಬಹುಳ ೪ ನೇ ಭಾನುವಾರ ಅಶ್ವಾರೋಹಣೋತ್ಸವ, ಬಹುಳ ೫ ನೇ ಸೋಮವಾರ ವೃಷಭಾರೋಹಣೋತ್ಸವ ಬಹುಳ ೫ ನೇ (ತಾ|| 23 1 35) ನೇ ಮಂಗಳವಾರ ಮಹಾರಥೋತ್ಸವ ಬಹುಳ ೬ನೇ ಬುಧವಾರ ಓಕಳಿ ಬಹುಳ ೭ ನೇ ಗುರುವಾರ ದಂದು ಆಂದೋಳಿಕೋತ್ಸವ ಕ್ರಮವಾಗಿ ನಡೆಯುವುದು.

ಮತ್ತು ಇಲ್ಲಿ ಇರುವರೆಗೂ ಗ್ರಾಮಸ್ಥರಿಂದ ನಡೆಯುತ್ತಿದ್ದ ದನದ ಪ್ರದರ್ಶನವನ್ನು ಗ್ರಾಮಸ್ಥರ ಪ್ರಾರ್ಥನೆಯಂತೆ ಈ ವರ್ಷ ಮುಂದೆ ಘನತೆಯಿಂದ ಡಿಸ್ಟ್ರಿಕ್ಟ್ ಬೋರ್ಡಿನವರು ವಹಿಸಿಕೊಂಡು ನಡೆಸಲು ಒಪ್ಪಿರುವರೆಂಬ ವಿಚಾರವನ್ನು ತಿಳಿಸಲು ಬಹಳ ಸಂತೋಷವಾಗುತ್ತದೆ. ಈ ವರ್ಷದ ದನಗಳ ಪ್ರದರ್ಶನವನ್ನು ಘನವಾದಂಗಳ ಕೋರಿಕೆಯಂತೆ ತಾ|| 24-4 35 ನೇ ಬುಧವಾರ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಾದ ಮ|| ರಾ|| ಶ್ರೀ ಜಿ ಚನ್ನಪ್ಪ ಬಿ.ಎ ಎಸ್ ಎಲ್ ಬಿ ಯವರು ನಡೆಸಲು ತಮ್ಮ ಘನವಾದ ಒಪ್ಪಿಗೆಯನ್ನು ಕೊಟ್ಟಿರುತ್ತಾರೆ. ಇದಕ್ಕೆ ಬೋರ್ಡಿನವರಿಗೂ ಮತ್ತು ಪ್ರೆಸಿಡೆಂಟರವರಿಗೂ ತುಂಬಾ ಕೃತಜ್ಞರಾಗಿರುತ್ತೇವೆ.

ಈ ಪ್ರದೇಶದಲ್ಲಿ ಯಾವ ವಿಧವಾದ ಸಾಂಕ್ರಾಮಿಕ ರೋಗಗಳಿಲ್ಲದೆ ನೀರು ನೆರಳಿಗೆ ತುಂಬಾ ಅನುಕೂಲವಾಗಿರುವುದರಿಂದ ಪ್ರಯುಕ್ತದವರಿಟ್ಟು ಸರ್ವರೂ ದಾತುಗಳ ಸಮೇತ ಬಂದು ಕ್ಷೇತ್ರನಾಥನ ಕೃಪೆಗೆ ಪಾತ್ರರಾಗಬೇಕಾಗಿ ಕೋರುತ್ತೇವೆ.

ಶ್ರೀ ದೇವಸ್ಥಾನದ ಧರ್ಮದರ್ಶಿಗಳು—

ಕೆ ದೊಡ್ಡಲಿಂಗಪ್ಪ ಪಟೇಲ್ ಜೆ ಎಸ್ ಮಹಾಲಿಂಗಪ್ಪ ಶಾನುಭೋಗರು, ಕಲ್ಲಪ್ಪ, ಪೂಜಾರಿ ಕಲ್ಲಪ್ಪ ಬಳಿ ದ್ಯಾಮಲಿಂಗಪ್ಪ

ಧರ್ಮಸಹಾಯ.

ಚಿತ್ರದುರ್ಗದ ಸಂತೇಪೇಟೆಯಲ್ಲಿರುವ ಚಿಕ್ಕಮ್ಮನಹಳ್ಳಿ ಸಾಹುಕಾರ್ ಮ|| ರಾ|| ಬಿ ಟಿ ಶಂಕರಪ್ಪನವರು ಈ ವರ್ಷ ಚಿತ್ರದುರ್ಗದ ಕೋಟೆಗೆ ರೋಟರಿ ಕ್ಲಬ್ ವರ್ಷಕ್ಕೊಂದು ಸಲ ಬರುವ ಶಿವರಾತ್ರಿಗಾಗಿ ಬಂದ ವೀರಶೈವ ವಿದ್ಯಾರ್ಥಿಗಳಿಗೂ ಅವರ ಪೋಷಕರಿಗೂ ಮತ್ತು ಈ ವೀರಶೈವರಲ್ಲಿ ಊಟವಿಲ್ಲದ ಎಲ್ಲಾ ಮಠದ ವಿದ್ಯಾರ್ಥಿಗಳಿಗೂ ಅವರ ಪೋಷಕರು ಉಪಾಧ್ಯಾಯರುಗಳಿಗೂ ಸಹ ಸಂತೇಪೇಟೆಯಲ್ಲಿರುವ ತಮ್ಮ ಗೃಹದಲ್ಲಿ ಉದಾರವಾದ ಧರ್ಮಬುದ್ಧಿಯಿಂದ ಉಚಿತವಾಗಿ ಊಟದ ಏರ್ಪಾಟನ್ನು ಇಟ್ಟು ತಾ|| 29 3 35 ರಿಂದ 3-4 35ರ ವರೆಗೆ ಊಟೋಪಚಾರಗಳಿಂದ ಸತ್ಕರಿಸಿದರು. ಈ ವಿಧವಾದ ಇವರ ಉದಾರಬುದ್ಧಿಯನ್ನು ನೋಡಿ ಇಲ್ಲಿಯ ಸಮಸ್ತರೂ ಶ್ಲಾಘಿಸಿದರು. ಈ ಸತ್ಕಾರ್ಯದಲ್ಲಿ ಊಟದ ವ್ಯವಸ್ಥೆಯನ್ನು ಸರಿಯಾಗಿ ನೋಡಿಕೊಂಡ ವೀರಶೈವ ಹಾಸ್ಟಲ್ ವಿದ್ಯಾರ್ಥಿಗಳ ಶ್ರಮವು ಕೊಂಡಾಡತಕ್ಕದ್ದಾಗಿತ್ತು. ಮ|| ರಾ|| ಸಾಹುಕಾರ್ ಶಂಕರಪ್ಪನವರು ಅವಶ್ಯವಾಗಿ ಇನ್ನು ಮುಂದೆ ಬಂದು ವಿದ್ಯಾರ್ಥಿಗಳಿಗೆ ಅನ್ನದಾನ ಮಾಡಿ ಧನ್ಯತೆ ಪಡೆಯಲಿ. ಈ ಮಹಾಶಯರಿಗೆ ಶ್ರೀ ಪರಮೇಶ್ವರನು ಆರೋಗ್ಯೈಶ್ವರ್ಯಾದಿ ಸಮಸ್ತ ಸುಖಗಳನ್ನು ಕೊಟ್ಟು ಕಾಪಾಡಲೆಂದೂ ಇವರು ಮುಂದೆಯೂ ಇಂತಹ ಧರ್ಮಕಾರ್ಯಗಳನ್ನು ಮಾಡಲೆಂದೂ ಬೇಡುತ್ತೇನೆ.

ಯಂ ಗುರುಬಸವಯ್ಯ,

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರೆಯಲ್ಲಿ ಉಳಿದಿರುವ ಪ್ರತಿಯೊಂದು ಗುರುವರ್ಗದ ಮಠಾಧಿಪತಿಗಳು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧೀಶರುಗಳು ಐದು ವರ್ಷಕ್ಕೋ ಹತ್ತು ವರ್ಷಕ್ಕೋ ಒಂದು ಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಆಚಾರ್ಯತ್ವಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯತಕ್ಕ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಕೆಡದಂಥ ಕಾಗದವನ್ನು ಉಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಉಪನ್ಯಾಸಗಳನ್ನು ಲಿಂಗಾಂಕಿತರ ಬಗ್ಗೆ ಪ್ರಮುಖ ಪರಮತೀಯರು ಓದಿನೋಡಿ ಆ ಉಪನ್ಯಾಸಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು ಅತ್ಯುತ್ತಮವಾದ ಕಾಗದದಿಂದಲೂ ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿ ತಿಳಿದು ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಪ್ರಖ್ಯಾತಿಯಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಕಾಶಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ರಚನೆಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೪೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೬೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೮ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಬುದ್ಧಿನಕಟೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ ಪಿ ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸ್ವಾಮಿಗಳವರ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂದೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಔಷಧಿ ಹೆಸರು	ತೊಲ	ಮೌಲ್ಯ
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೧—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೬—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ [illegible] ಬೆಲೆ ೧ಕ್ಕೆ	೦—೩—೦
ಶ್ರೀ [illegible] ಮೊದಲಾದ [illegible] ಬೆಲೆ	೦—೧—೬
ಸತ್ಯ [illegible] ಫೋಟೊ [illegible] ಬೆಲೆ	೦—೧—೬
ಶ್ರೀ [illegible] ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು [illegible] ಫೋಟೊ [illegible] ಬೆಲೆ ೧ಕ್ಕೆ	೦—೦—೯
ಶ್ರೀ [illegible] ಫೋಟೊ	೦—೦—೯
ಶ್ರೀಮದುಜ್ಜಯಿನಿ [illegible] ಫೋಟೊ	೦—೦—೯
ಶ್ರೀ ಜಗದ್ಗುರು [illegible] ಅವತರಿಸುವ ಫೋಟೊ	೦—೦—೯
ಶ್ರೀ ರೇಣುಕಾಚಾರ್ಯರು [illegible] ಫೋಟೊ	೦—೦—೯
ಶ್ರೀ ರೇಣುಕಾಚಾರ್ಯರು [illegible] ಗುರುರೂಪವನ್ನು ಧಾರಣಮಾಡಿ [illegible] ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು [illegible] ಅನುಗ್ರಹಿಸುವ ಫೋಟೊ	೦—೦—೯
ಶ್ರೀಮದುಜ್ಜಯಿನಿ ಜಗದ್ಗುರುಗಳವರ [illegible] ಕುಳಿತುಕೊಂಡಿರುವ ಫೋಟೊ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ [illegible] ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನಿ [illegible] ಸುಂದರವಾದ ಫೋಟೊ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನಿ [illegible] ಸುಂದರ ಫೋಟೊ ೧ಕ್ಕೆ	೦—೦—೯
ಶ್ರೀ ಜಗದ್ಗುರು [illegible] ಸುಂದರವಾದ [illegible]	೦—೦—೯
ಶ್ರೀ ಜಗದ್ಗುರು [illegible] ಸುಂದರ ಫೋಟೊ	೦—೦—೯
ಹಿಮವತ್ಕೇದಾರದ ಮಧ್ಯದಲ್ಲಿ [illegible] ಫೋಟೊ	೦—೦—೯
ಕೊಲ್ಲಾಪುರದ [illegible] ಜಗದ್ಗುರುಗಳವರ [illegible] ಫೋಟೊ	೦—೦—೯

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ [illegible] ವಿ. ಪಿ. [illegible] ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೆ [illegible] ೧ ರೂಪಾಯಿಗೆ ೯ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ[illegible] ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ[illegible] ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ[illegible]

ಗಳನ್ನು ಕೊಟ್ಟಿ[illegible] ರು. ಪ್ರಸಿದ್ಧವಾದ[illegible] ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದ[illegible]ರೆ.—ಪಿನಸಿ, ಒಂಟ[illegible] ತಲೆನೋವು, ತಲೆ[illegible]ಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ [illegible]ಲ್ಪಟ್ಟ [illegible] ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಟ್ಟಿ[illegible] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ [illegible] ಪರಿಮಳವಾಗುವುದು. ಇದನ್ನು ಅನೇಕ ಪ್ರಜೆಗ[illegible] ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ[illegible] ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗು[illegible]

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ ಪಿ ೦ ೪[illegible]

ಸೀಸೆ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ. ಆ[illegible]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[1೨] ಪೋ. ಬಾ. ೫೧೦, ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೩ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಮನಿಮರ್ಶ (೪ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಳಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಶಿವಶಕ್ತಿವಿಲಾಸ	೩ ಆಣೆ
ಶ್ರೀಗುರುತತ್ವ[illegible]	೩ ಆಣೆ
ಗುರುಸ್ಥಲೋಪನ್ಯಾಸದೀಪಿಕೆ	೩ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೪ ಆಣೆ
ಸನ್ಯಾಸಶಾಸ್ತ್ರಮ [illegible] ತತ್ವ [illegible]ಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ[illegible]
पंडित श्रीकाशीनाथशास्त्री यांचे भाषण (मराठी)	८ आणे
Speeches by Pandit Shri Kashinatha Shastri (*English*)	12 as.
ವೀರಶೈವರತ್ನ (೪ನೆಯ ಆವೃತ್ತಿ)	೧೨ ಆ[illegible]
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ[illegible]
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ[illegible]
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ[illegible]
ವಿಶಾಸೋತ್ತ[illegible] ಸಿದ್ಧಾಂತದರ್ಪಣ	೧೨ ಆ[illegible]
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ[illegible]
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ರೇಣುಕವಿಜಯ ಮಹಾಪುರಾಣ (ಕನ್ನಡ [illegible])	[illegible]
ವೀರಶೈವಸಿದ್ಧಾಂತಸುಧಾಕರ	೨ ರೂ[illegible]
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ [illegible] ಪುಟ)	[illegible]
लिंगधारणचंद्रिका (संस्कृत)	३ रु[illegible]
महानारायणोपनिषत् (वीरशैवभाष्य-संस्कृत)	१ रु[illegible]
वीरशैवेन्दुशेखर (संस्कृत)	१ रु[illegible]

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ[illegible] ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ [illegible] ವ್ಯಾಪಾರಿಗಳಿಗೂ ೧ ರೂ ಗೆ ೯ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಸಿಸ್ಟೆಂಟ್ [illegible] ಪಂಡಿತ [illegible] ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ[illegible]

REGISTERED No M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂನ್ ಮಠವರಾನ್ ಪಾಲಿಷ್ಣುವೀರೋಕಸಃ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳವರ್ಗ ೧ ರೂ ೧೧ ಆಣೆ | ಬಿಡಿ ಪ್ರತಿ ೧ಕ್ಕೆ ೯ ಪೈ | ಪರಸ್ಥಳದವರಿಗೆ ೨ ರೂ. ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ ನೇ ಏಪ್ರಿಲ್ ೧೯೩೫ [ಸಂಚಿಕೆ ೫೮

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ರೇಣುಕಾದ್ಯಾಃ ಪಂಚಾಚಾರ್ಯಾಃ ಶಿವಾಚಾರ್ಯಶಿಖಾಮಣೀಃ |
ಯೇ ವೀರಶೈವಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ||

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸುವರ್ಣರಜತಾಂದೋಲಿಕೋತ್ಸವಾಹ್ವಾನ ಪತ್ರಿಕಾ.

ಆಸ್ತಿಕರ ಜನಗಳಲ್ಲಿ ವಿಜ್ಞಾಪನೆ—

ಮರಡಿಗೆರೆ ತಾಲೂಕಿನ ಪುರಸ್ಥರೂ ಯಜಮಾನರೂ ಶಿಷ್ಯರೂ ಭಕ್ತರೂ ಮತ್ತು ಸ್ವಾಗತಕಮಿಟಿಯವರೂ ಇವರ ಪ್ರಾರ್ಥನೆಯ ಮೇರೆಗೆ ಶ್ರೀ ಜಗದ್ಗುರುಗಳವರ ಸ್ವಾರಿಯು ಮರಡಿಗೆರೆ ಟವನ್ನಿಗೆ ಇದೇ ಯುವನಾಮಸಂವತ್ಸರದ ಜ್ಯೇಷ್ಠ ಬ॥ ೧೦ (ತಾ॥ ೨೬-೪-೩೫) ಭಾನುವಾರ ಪ್ರಾತಃಕಾಲ ೯ ½ ಘಂಟೆಯ ದ ಸಾಕ್ಷಾತ್ ಧರ್ಮಾವತಾರರುಗಳಾದ ನಮ್ಮ ಮಹಾಪ್ರಭುಗಳವರು ದಯಪಾಲಿಸಿರುವ ಸಮಸ್ತ ಬಿರುದಾವಳಿಗಳೊಡನೆ ಮಹೋತ್ಸವಪೂರ್ವಕವಾಗಿ ದಯಮಾಡಿಸುವುದರಿಂದ ಆ ಕಾಲಕ್ಕೆ ತಾವು ತಮ್ಮ ಪುತ್ರಮಿತ್ರ ಕಳತ್ರಬಂಧುಬಾಂಧವರೊಡನೆ ಆಗಮಿಸಿ ಶ್ರೀ ಮಹಾಸನ್ನಿಧಿಯ ದರ್ಶನಾಶೀರ್ವಾದಗಳನ್ನು ಪಡೆವುದರ ಮೂಲಕ ನಮ್ಮುಗಳನ್ನು ಸಂತೋಷಪಡಿಸಬೇಕಾಗಿ ಕೋರುವ,

ಪ್ರೊಫೆಸರ್ ಪಟೇಲ್ ದೇವಪ್ಪ ಗೌಡರು.
ಸ್ವಾಗತಕಮಿಟಿಯ ಅಧ್ಯಕ್ಷ

ಮರಡಿಗೆರೆ, 20-4-35

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಮಠಕ್ಕೆ ರಾಜಬಂಧುಗಳ ಶುಭಾಗಮನ.

ಹಿಂದಿನವಾರದ ಪತ್ರಿಕೆಯಲ್ಲಿ ವಾಚಕರ ಪಾಠಕರು ಈ ವಿಷಯವನ್ನು ಪರಾಮರ್ಶಿಸಿರಬಹುದು ಸದ್ಯಃ ಮುಂದಿನ ನಡೆದ ವಿಷಯವನ್ನು ಪ್ರಕಟಿಸುವುದಾಗುವುದು.

ತಾರೀಖು 13-4-35 ಶನಿವಾರ ಪ್ರಾತಃಕಾಲ ಸರ್ವ ರಾಜಬಂಧುಗಳು ನಿತ್ಯದಂತೆ ಸ್ನಾನ ಪೂಜಾದಿಗಳನ್ನು ಪೂರೈಸಿಕೊಂಡು ತೀರ್ಥಪ್ರಸಾದವನ್ನು ಭಕ್ತಿಪೂರ್ವಕವಾಗಿ ಸ್ವೀಕರಿಸಿದರು. ಸಾಯಂಕಾಲ ಸರ್ವರೂ ಪವಿತ್ರವಾದ ಭದ್ರಾನದಿಗೆ ದಯಮಾಡಿಸಿ ವಿಶ್ರಾಂತಿಯನ್ನು ಹೊಂದಿ ಅಲ್ಲಿಯ ಸೃಷ್ಟಿ ಸೌಂದರ್ಯವನ್ನು ನೋಡಿ ಆನಂದಪಟ್ಟು ಆಕಾಶವನ್ನು ಚುಂಬಿಸುವ ವೃಕ್ಷಗಳಿಂದ ದಟ್ಟವಾಗಿ ಕಾಣಿಸುವ ಮಲಯಪರ್ವತದ ಮಧ್ಯದಲ್ಲಿ ಒಂದೇ ಒಂದಾಗಿ ಪ್ರಕಾಶಿಸುವ ಶ್ರೀ ರೇಣುಕಾಚಾರ್ಯರ ಪುಣ್ಯಾಶ್ರಮದ ಮಹಿಮಾತಿಶಯವನ್ನು ಕೊಂಡಾಡುತ್ತ ಶ್ರೀ ಸಂಸ್ಥಾನ ಮಠಕ್ಕೆ ಆಗಮಿಸಿದರು

ಸಾಯಂಕಾಲ ಕೀರ್ತನಕಾರ ಪ್ರಾಣದಾಸ ಬೊಮ್ಮಯ್ಯನವರು ಅಂಜನಾದೇವಿಯ ಕಥೆಯನ್ನು ಮನೋಹರವಾಗಿ ಮಾಡಿದರು ಸನ್ನಿಧಿಯವರು ಸಂಸ್ಥಾನ ಪದ್ಧತಿಗನುಸರಿಸಿ ಶಾಲು ಜೋಡಿಯನ್ನು ಆಶೀರ್ವಾದ ಮಾಡಿದರು

ತಾ॥ 14-4-35 ಭಾನುವಾರ ಪ್ರಾತಃಕಾಲ ಸರ್ವ ರಾಜಬಂಧುಗಳು ನಿತ್ಯದಂತೆ ಸ್ನಾನಪೂಜಾದಿಗಳನ್ನು ಪೂರೈಸಿಕೊಂಡು ಶ್ರೀ ಜಗದ್ಗುರುಗಳವರ ದರ್ಶನ ಹೊಂದಿ 9½ ಘಂಟೆಗೆ ಅಲ್ಲಿಗೆ 24 ಮೈಲು ದೂರದಲ್ಲಿರುವ ನರಸಿಂಹರಾಜಪುರಕ್ಕೆ ಮೋಟಾರಿನಲ್ಲಿ ದಯಮಾಡಿ ಅಲ್ಲಿಯ ಪ್ರಾಚೀನವಾದ ಬಸ್ತಿಯನ್ನು ಪರಾಮರ್ಶಿಸಿಕೊಂಡು ಮಧ್ಯಾಹ್ನಕ್ಕೆ ಪುನಃ ಶ್ರೀ ಸಂಸ್ಥಾನ ಮಠಕ್ಕೆ ದಯಮಾಡಿಸಿದರು ಸಾಯಂಕಾಲ 5½ ಘಂಟೆಗೆ ಕಡೂರು ಡಿ॥ ಡೆಪ್ಯುಟಿಕಮೀಷನರ್ ಸಾಹೇಬರವರು ಶ್ರೀ ಸಂಸ್ಥಾನ ಮಠಕ್ಕೆ ಆಗಮಿಸಿ ಶ್ರೀ ಜಗದ್ಗುರುಗಳವರ ದರ್ಶನಹೊಂದಿ ರಾಜಬಂಧುಗಳಿಗೆ ಮಾಡಿರುವ ಸುವ್ಯವಸ್ಥೆಯನ್ನು ಪ್ರತ್ಯಕ್ಷ ನೋಡಿ ಸಂತೋಷಪಟ್ಟು ಫಲಮಂತ್ರಾಕ್ಷತೆಯನ್ನು ಸ್ವೀಕರಿಸಿ ಶ್ರೀಮಾನ್ ಸರದಾರ್ ಎಂ ಲಕ್ಷ್ಮೀಕಾಂತರಾಜ ಅರಸರವರನ್ನೂ ಮೆ॥ ಕೆ ಬಸವರಾಜ ಅರಸರವರನ್ನೂ ಭೆಟ್ಟಿಯಾಗಿ ಕೊಪ್ಪಕ್ಕೆ ದಯಮಾಡಿಸಿದರು

15-4-35 ಸೋಮವಾರ ನಿತ್ಯದಂತೆ ಸರ್ವ ರಾಜಬಂಧುಗಳು ಸ್ನಾನ ಪೂಜಾದಿಗಳನ್ನು ಪೂರೈಸಿಕೊಂಡು ಮಹಾಸನ್ನಿಧಿಯವರ ದರ್ಶನಹೊಂದಿ ವೀರಶೈವಮತ ಸಿದ್ಧಾಂತ, ಈ ಮಠದ ಪ್ರಾಚೀನತ್ವ, ಅಷ್ಟಾವರಣ ಪಂಚಾಚಾರ ಷಟ್‌ಸ್ಥಲ ಮೊದಲಾದ ಮತಸಂಬಂಧವಾಗಿ ಪ್ರಮಾಣಪೂರ್ವಕ ಅಪ್ಪಣೆಕೊಡಿಸಿದ ವಿಷಯಗಳನ್ನು ಆದರದಿಂದ ಕೇಳಿ ಮತಪ್ರಾಶಸ್ತ್ಯವನ್ನೂ ಮತದ ರಹಸ್ಯವನ್ನೂ ಕೊಂಡಾಡುತ್ತ ಹರ್ಷಪೂರಿತರಾಗಿ ಮಧ್ಯಾಹ್ನದ ಭೋಜನಕ್ಕೆ ತಮ್ಮ ತಮ್ಮ ವಸತಿಗೆ ದಯಮಾಡಿಸಿದರು ಆ ದಿವಸ ಸರದಾರ್ ಎಂ ಲಕ್ಷ್ಮೀಕಾಂತರಾಜ ಅರಸರವರೂ ಅವರ ಧರ್ಮಪತ್ನಿಯವರೂ ಕ್ಷೇತ್ರನಾಯಕನಾದ ಶ್ರೀ ವೀರೇಶನಿಗೆ ಏಕಾದಶ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆ ಭದ್ರಕಾಳೀದೇವಿಗೆ ಕುಂಕುಮಾರ್ಚನೆ ಶ್ರೀ ರುದ್ರಮುನಿ ಶಿವಾಚಾರ್ಯರಿಗೆ ರುದ್ರಾಭಿಷೇಕವನ್ನು ಮಾಡಿಸಿ ಸಾವಿರಾರು ಜನರಿಗೆ ಅನ್ನಸಂತರ್ಪಣೆಯನ್ನು ಮಾಡಿಸಿ ಅಮೂಲ್ಯಗಳಾದ ವಿಲ್ಲತ್ತುಗಳನ್ನು ಮಹಾಸನ್ನಿಧಿಗೆ ಸಮರ್ಪಿಸಿದರು ಮತ್ತು ಈಗಿರುವ ಸುವರ್ಣ ಕಿರೀಟಕ್ಕೆ ಅಮೂಲ್ಯಗಳಾದ ವಜ್ರ-ರತ್ನ-ಮುತ್ತುಗಳನ್ನು ಕೆತ್ತಿಸಿ ಸಮರ್ಪಿಸಿದರು

ರಾಜಬಂಧುಗಳ ಶುಭಾಗಮನದ ಸನ್ನಿವೇಶದಲ್ಲಿ ತಮಗುಂಟಾದ ಆನಂದವನ್ನು ವ್ಯಕ್ತಮಾಡುವುದಕ್ಕಾಗಿ ಶ್ರೀ ಜಗದ್ಗುರುಗಳವರ ಆಂದೋಲಿಕೋತ್ಸವವನ್ನು ಟವನ್ನಿನಲ್ಲಿ ನಡೆಯಬೇಕೆಂದು ಬಾಳೆಹೊನ್ನೂರಿನ ಎಲ್ಲ ಮತೀಯರೂ ಸನ್ನಿಧಿಗೆ ಅರಿಕೆಮಾಡಿಕೊಂಡು ಅಪ್ಪಣೆಯನ್ನು ಹೊಂದಿ ಉತ್ಸವಕಾಲದೊಡನೆ ಹಾಜರಿದ್ದರು. ಶ್ರೀ ಜಗದ್ಗುರುಗಳವರು ಸಂಸ್ಥಾನ ಮಠದಿಂದ 6-30 ಕ್ಕೆ ದಯಮಾಡಿ ಸರ್ವರ ಪ್ರಾರ್ಥನೆಯಂತೆ ಪಲ್ಲಕ್ಕಿಯಲ್ಲಿ ಮೂರ್ತಿಮಾಡಿದರು ಉತ್ಸವವು ಸಕಲ ಬಿರುದಾವಳಿಗಳೊಡನೆ ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟ ಟವನ್ನಿನ ಎಲ್ಲ ಬಾಗಗಳಲ್ಲಿ ಬಹು ಶಾಂತವಾಗಿ ಬಹು ವಿಜೃಂಭಣೆಯಿಂದ ಜರುಗಿತು ರಾಜಬಂಧುಗಳು ಮೋಟಾರಿನಲ್ಲಿ ಕುಳಿತು ಉತ್ಸವದ ನೋಟಗಳನ್ನು ನೋಡುತ್ತಿದ್ದುದರಿಂದ ಅವರಲ್ಲಿ ನೆಲೆಗೊಂಡ ಗುರುಭಕ್ತಿಯನ್ನು ಕಂಡು, ಉತ್ಸವದಲ್ಲಿದ್ದ ಜನರೆಲ್ಲಾ ಕರತಾಡನದ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು

16-4-35 ಮಂಗಳವಾರ ಸರ್ವ ರಾಜಬಂಧುಗಳು ನಿತ್ಯದಂತೆ ನಿತ್ಯಕರ್ಮಗಳನ್ನು ಪೂರೈಸಿಕೊಂಡು ಭಗವತ್ಪಾದರ ದರ್ಶನವನ್ನು ಹೊಂದಿ ಜಗವತ್ಪಾದ ಶ್ರೀ ರೇಣುಕಶಿವಾಚಾರ್ಯರ ಧ್ಯಾನದಲ್ಲಿ ನಿರತರಾದರು ಆ ದಿವಸ ಅರಮನೆ ಮೋತೀಖಾನೆ ಮುನಿಸಿಪಲ್ದಾದ ಮೆ॥ ರಾ॥ ಸುಬ್ಬರಾಜ ಅರಸರವರೂ ಇವರ ಧರ್ಮಪತ್ನಿಯವರಾದ ಕುಂ॥ ಸೌ॥ ಸುಬ್ಬಮ್ಮಣ್ಣಿಯವರೂ ಮಕ್ಕಳಾದ ಸುಬ್ರಹ್ಮಣ್ಯರಾಜ ಅರಸರವರು ಸಹ ಕ್ಷೇತ್ರನಾಯಕನಾದ ಶ್ರೀ ವೀರೇಶನಿಗೆ ಏಕಾದಶ ರುದ್ರಾಭಿಷೇಕವನ್ನೂ, ಸಹಸ್ರ ಬಿಲ್ವಾರ್ಚನೆಯನ್ನೂ, ಭದ್ರಕಾಳೀದೇವಿಗೆ ಕುಂಕುಮಾರ್ಚನೆಯನ್ನೂ ಶ್ರೀ ರುದ್ರಮುನಿಶಿವಾಚಾರ್ಯರಿಗೆ ರುದ್ರಾಭಿಷೇಕವನ್ನೂ ಮಾಡಿಸಿ ಅನ್ನಸಂತರ್ಪಣೆಯನ್ನು ಮಾಡಿಸಿ ಶ್ರೀ ಮಹಾಸನ್ನಿಧಿಗೆ ವಿಲ್ಲತ್ತನ್ನೂ ಕಾಣಿಕೆಯನ್ನೂ ಸಮರ್ಪಿಸಿ ಧನ್ಯರಾದರು ಮೆ॥ ರಾ॥ ಸುಬ್ರಹ್ಮಣ್ಯರಾಜ ಅರಸರವರು ಮೈಸೂರಿಗೆ ಮಹಾಸನ್ನಿಧಿಯವರು ಮೊದಲು ದಯಮಾಡಿಸಿದಂದಿನಿಂದ ಇಂದಿನ ವರೆಗೂ ಮಹಾಸನ್ನಿಧಿಯ ಸೇವೆಯಲ್ಲಿ ಬಾಗಿಗಳಾಗಿ ಮನಃಪೂರ್ವಕವಾಗಿ ಮಾಡುತ್ತಿರುವ ಸೇವೆಯು ಅತ್ಯಂತ ಸ್ತೋತ್ರಾರ್ಹವಾಗಿರುತ್ತದೆ ಭಗವಂತನು ಇವರಿಗೆ ದೀರ್ಘಾಯುಷ್ಯವನ್ನೀಯಲಿ

ತಾ॥ 17-4-35 ಬುಧವಾರ ಪ್ರಾತಃಕಾಲ ರಾಜಬಂಧುಗಳು ಸ್ನಾನಪೂಜಾದಿಗಳನ್ನು ಪೂರೈಸಿಕೊಂಡು ಭಗವತ್ಪಾದರ ಪ್ರಾತಃಕಾಲಪೂಜೆಗೆ ಭಾಗಿಗಳಾಗಿ ತೀರ್ಥಪ್ರಸಾದವನ್ನು ಸೇವಿಸಿದರು ಆ ದಿವಸ ಶ್ರೀಜಗದ್ಗುರುಗಳವರು ಶ್ರೀಮಾನ್ ಸರದಾರ್ ಎಂ ಲಕ್ಷ್ಮೀಕಾಂತರಾಜ ಅರಸರವರಿಗೂ ಇವರ ಧರ್ಮಪತ್ನಿ ಮಹಾರಾಜಕುಮಾರಿ ಕುಂ॥ ಸೌ॥ ಚಲುವಾಜಮ್ಮಣ್ಣಿ ಸನ್ನಿಧಾನದವರಿಗೂ ಮತ್ತು ಇತರ ರಾಜಬಂಧುವರ್ಗಕ್ಕೂ ಬೆಲೆಬಾಳುವ ವಿಲ್ಲತ್ತುಗಳೊಡನೆ ರಾಜಾಶೀರ್ವಾದವನ್ನು ದಯಪಾಲಿಸಿ ಇದೇ ಸಮಯದಲ್ಲಿ ಮಹಾಪ್ರಭುಗಳ ಚಿರಕಾಲ ಅಭ್ಯುನ್ನತಿಗೆ

(೪ನೇ ಪುಟವನ್ನು ನೋಡಿ)

ವಿಮಾನಗಳ ಮೂಲಕ

ಶ್ರೀ ಕೇದಾರನಾಥನ ಮಹಾಯಾತ್ರೆ.

ಚೈತ್ರ ಬ|| ೧೧ (29—4—35) ಸೋಮವಾರದಿಂದ
ಮಾರ್ಗಶಿರ ಶು|| ೭ (28—11—35) ಗುರುವಾರದವರೆಗೆ.



ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುತ್ತಿರುವ
ಶ್ರೀ ಕೇದಾರನಾಥ ಜ್ಯೋತಿರ್ಲಿಂಗದ ದೇವಾಲಯ.

ಸೌರಾಷ್ಟ್ರೇ ಸೋಮನಾಥಂ ಚ ಶ್ರೀಶೈಲೇ ಮಲ್ಲಿಕಾರ್ಜುನಂ |
ಉಜ್ಜಯಿನ್ಯಾಂ ಮಹಾಕಾಲಮೋಂಕಾರಮಮಲೇಶ್ವರಂ ||೧||
ಪರಲ್ಯಾಂ ವೈದ್ಯನಾಥಂ ಚ ಡಾಕಿನ್ಯಾಂ ಭೀಮಶಂಕರಂ |
ಸೇತುಬಂಧೇ ತು ರಾಮೇಶಂ ನಾಗೇಶಂ ದಾರುಕಾವನೇ ||೨||
ವಾರಾಣಸ್ಯಾಂ ತು ವಿಶ್ವೇಶಂ ತ್ರ್ಯಂಬಕಂ ಗೌತಮೀತಟೇ |
ಹಿಮಾಲಯೇ ತು ಕೇದಾರಂ ಘುಸೃಣೇಶಂ ಶಿವಾಲಯೇ ||೩||
ಏತಾನಿ ಜ್ಯೋತಿರ್ಲಿಂಗಾನಿ ಸಾಯಂಪ್ರಾತಃ ಪಠೇನ್ನರಃ |
ಸಪ್ತಜನ್ಮಕೃತಂ ಪಾಪಂ ಸ್ಮರಣೇನ ವಿನಶ್ಯತಿ ||೪||

ದ್ವಾದಶಮಹಾಶಿವರ ಅಖಿಲಭಾರತವರ್ಷದಲ್ಲಿ ಶ್ರೀ ಕೇದಾರನಾಥ ಜ್ಯೋತಿರ್ಲಿಂಗವು ಮಹಾವೈಭವದಿಂದ ಪ್ರಕಾಶಿಸುತ್ತಿರುವ ವಿಷಯವು ಸನಾತನ ಧರ್ಮಾವಲಂಬಿಗಳಿಗೆ ತಿಳಿದ ವಿಷಯವಷ್ಟೆ. ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಜಗದ್ಗುರು ಏಕೋರಾಮಾರಾಧ್ಯರು ಇಲ್ಲಿ ಧರ್ಮಪೀಠವನ್ನು ಸ್ಥಾಪಿಸಿ ಈ ಮತಾನುಯಾಯಿಗಳನ್ನುದ್ಧರಿಸಿದರು. ಕೆಲವು ಕಾಲದ ಹಿಂದೆ ಹೀನಸ್ಥಿತಿಯಲ್ಲಿದ್ದ ಈ ಏಕೋರಾಮ ಪೀಠವು ಶ್ರೀಮಜ್ಜಗದ್ಗುರು ಕಾಲಿಕೇಶ್ವರಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಜೀರ್ಣೋದ್ಧಾರವಾಗಲ್ಪಟ್ಟಿತು. ಈ ಪೀಠಾಧಿಪತಿಗಳು ಗೌರ್ನಮೆಂಟಿನಿಂದ ಮುಂಜೂರಾದ ರಾಜಬಿರುದುಗಳಿಂದ ಜಗತ್ತಿನಲ್ಲೆಲ್ಲಾ ಸಂಚರಿಸಿ ಭಕ್ತಾದಿಗಳಿಗೆ ಸನಾತನಧರ್ಮವಿಷಯಗಳನ್ನು ತಮ್ಮ ಅಮೃತ ವಾಣಿಯಿಂದ ಬೋಧಿಸಿ ಭಕ್ತರನ್ನು ಕೃತಕೃತ್ಯರನ್ನಾಗಿಮಾಡಿ ಶ್ರೀ ವೀರಶೈವ ಮತಸಿದ್ಧಾಂತವನ್ನು ಜಗತ್ತಿನಲ್ಲಿ ಸ್ಥಿರಗೊಳಿಸಿದ ವಿಚಾರವು ಸರ್ವರಿಗೂ ಸ್ಮೃತವಷ್ಟೆ.

ಈ ಉತ್ತರ ಖಂಡವು ಅನೇಕ ವಿಧವಾದ ಮುಕ್ತಿದಾಯಕ ತೀರ್ಥಗಳಿಂದ ಕೂಡಿ ಶೋಭಿಸುತ್ತಿರುವದು. ಪೂರ್ವಕಾಲದಲ್ಲಿ ಪಾಂಡವರು ಯುದ್ಧದಲ್ಲಿ ಪಾಪ ಮಾಡಿದ ಗೋಹತ್ಯಾದಿ ಘೋರ ಪಾಪಗಳ ನಿವಾರಣಾರ್ಥವಾಗಿ ಶ್ರೀ ವ್ಯಾಸಮಹರ್ಷಿಗಳ ಅಪ್ಪಣೆಯ ಪ್ರಕಾರ, ಶ್ರೀ ಕೇದಾರೇಶ್ವರನನ್ನು ಕುರಿತು ತಪಸ್ಸನ್ನಾಚರಿಸಿದುದರಿಂದ ಶಿವನಾತ್ಮನು ಅವರ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಅಭೀಷ್ಟವಿತ್ತು ಕೈಲಾಸಕ್ಕೆ ಹೋಗಲಿಕ್ಕೆ ಮಾರ್ಗವನ್ನು ತೋರಿಸಿ ಅಂತರ್ಧಾನನಾದನು. ಅಂದಿನವರೆಗೂ ಆ ಪಾಂಡವರು ಹೋದ ದಾರಿಗಳಾಗಿ ಹೋದ ಸ್ವರ್ಗದ ಹಾದಿಯ ಪಾವಟಿಗೆಗಳು ಸ್ಪಷ್ಟವಾಗಿ ಕಾಣಿಸುತ್ತಿವೆ. ಅಂದಿನಿಂದ ಸನಾತನಧರ್ಮಾವಲಂಬಿಗಳು ತಮ್ಮ ಮನಸಿನ ಸತ್ಸಂಕಲ್ಪಗಳ ಸಾಫಲ್ಯತಾರ್ಥವಾಗಿ ಒಂದೊಂದು ತಪಗಳನ್ನು ಅನುಷ್ಠಿಸುತ್ತ ಹಿಮಾಚಲದಲ್ಲಿ [illegible] ಶ್ರೀ ಕೇದಾರೇಶ್ವರನ ದರ್ಶನಾರ್ಥವಾಗಿ ಬರುತ್ತಿರುವರು. ಆದ್ದರಿಂದ ಉತ್ತರಖಂಡವು ಮೋಕ್ಷಸ್ಥಾನವೆಂದು ಪ್ರಸಿದ್ಧವಾಗಿದೆ. ಈ ಉತ್ತರ ತೀರ್ಥದಿಂದ ದಲ್ಲಿ ಶ್ರೀ ಕೇದಾರೇಶ್ವರನ ದೇವಸ್ಥಾನ ಶ್ರೀ ಬದರಿನಾಥನ ದೇವಸ್ಥಾನ ಈ ಎರಡು ದೇವಸ್ಥಾನಗಳು ಬಹಳ ಪ್ರಸಿದ್ಧವಾಗಿವೆ. ಈ ಮಂದಿರಗಳಲ್ಲಿ ೬ ತಿಂಗಳುಗಳವರೆಗೆ ಮನುಷ್ಯರಿಂದ ಪೂಜಾದಿಗಳು ನಡೆಯುತ್ತಿರುವವು ಮತ್ತೆ ೬ ತಿಂಗಳು ದೇವತೆಗಳಿಂದ ಪೂಜಾದಿಗಳು ನಡೆಯುತ್ತಿರುವವು ಎಂದು ಪ್ರಸಿದ್ಧವಿದೆ.

ಪ್ರತಿವರ್ಷದಂತೆ ಶ್ರೀ ಕೇದಾರೇಶ್ವರನ ಬಾಗಿಲು ತಾ|| 29 4 35 ರಲ್ಲಿಯೂ ಶ್ರೀ ಬದರೀನಾಥನ ಬಾಗಿಲು ತಾ|| 9 5 35 ರಲ್ಲಿಯೂ ತೆಗೆಯುವದಾಗಿ ನಿಶ್ಚಯಿಸಲ್ಪಟ್ಟಿದೆ. ಈ ವರ್ಷ ಯಾತ್ರಿಕರ ಸುಖಕ್ಕಾಗಿ ರುದ್ರಪ್ರಯಾಗದಿಂದ ಗುಪ್ತಕಾಶಿ ಶ್ರೀ ಕೇದಾರನಾಥ ತ್ರಿಯುಗೀನಾರಾಯಣ ಗೌರೀಕ್ಷೇತ್ರ ಓಖಿಮಠ ತುಂಗನಾಥ ಕ್ಷೇತ್ರದವರೆಗೂ ಸುಮಾರು ೬೦ ಮೈಲುಗಳ ಮಧ್ಯದಲ್ಲಿ ಯಾತ್ರಿಕರಿಗೆ ಔಷಧಿಯನ್ನು ಕೊಡುವದಕ್ಕಾಗಿ ಇಬ್ಬರು ವೈದ್ಯರು ಮತ್ತು 4 ಜನ ಉಪವೈದ್ಯರು ಶ್ರೀ ಜಗದ್ಗುರು ಕಾಲಿಕೇಶ್ವರ ಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ವತಿಯಿಂದ ನೇಮಿಸಲ್ಪಟ್ಟಿದ್ದಾರೆ. ಹರದ್ವಾರದಿಂದ ಶ್ರೀ ಕೇದಾರನಾಥ ಮತ್ತು ಶ್ರೀ ಬದರಿನಾಥನ ಯಾತ್ರೆ ಮುಗಿಸಿಕೊಂಡು ತಿರುಗಿ ಸ್ಟೇಷನ್ನಿಗೆ ಮುಟ್ಟಬೇಕಾದರೆ 400 ಮೈಲುಗಳ ಪ್ರಯಾಣ ಮಾಡಬೇಕಾಗುತ್ತದೆ. ಇದಲ್ಲದೆ ಸುಮಾರು 2 3 ತಿಂಗಳು ಹತ್ತುವದು. ಇದರಿಂದ ಯಾತ್ರಿಕರಿಗೆ ಬಹಳ ತೊಂದರೆಗಳು ಆಗುವವು. ಇದಲ್ಲದೆ ಅನೇಕ ಪರ್ವತಗಳನ್ನು ಹತ್ತಿ ಇಳಿಯುವುದರಿಂದ ಯಾತ್ರಿಕರಿಗೆ ಬಹಳ ಕಷ್ಟವಾಗುವದು. ಇಂಥ ಕಷ್ಟಗಳು ಯಾತ್ರಿಕರಿಗೆ ಸಂಭವಿಸಬಾರದೆಂಬ ಉದ್ದೇಶದಿಂದ ಈ ವರ್ಷ ವಾಯುಯಾನವನ್ನು (ವಿಮಾನ) ಸಿದ್ಧಪಡಿಸಿದ್ದಾರೆ. ವಿಮಾನಗಳು ಇಳಿಯಲಿಕ್ಕೆ ಸ್ಟೇಷನ್ನುಗಳು (1) ನಕ್ಕಿಬಿಲ್ಲಿ (2) ಹರದ್ವಾರ (3) ಅಗಸ್ತ್ಯಮುನಿ (4) ಶ್ರೀ ಕೇದಾರನಾಥ (5) ಶ್ರೀ ಬದರೀನಾಥ ಹೀಗೆ ಏರ್ಪಡಿಸಲ್ಪಟ್ಟಿರುತ್ತವೆ. ಹರದ್ವಾರದಿಂದ ಯಾತ್ರಿಕರು ಬೆಳಿಗ್ಗೆ ಹೊರಟು ಶ್ರೀ ಕೇದಾರನಾಥ ಬದರೀನಾಥನ ಯಾತ್ರೆ ತೀರಿಸಿಕೊಂಡು ಅದೇ ದಿವಸವೇ ವಾಪಸ್ ಹರದ್ವಾರಕ್ಕೆ ಬಂದು ತಲ್ಪುವರು. ಅತ್ತಕಡೆ ಮಳೆಬೆಳೆಗಳು ಸೌಖ್ಯಕರವಾಗಿದ್ದು ಯಾವ ಪ್ರಕಾರವಾದ ರೋಗಾದಿಗಳೂ ಇರುವದಿಲ್ಲ. ಶ್ರೀ ಕ್ಷೇತ್ರಗಳ ದರ್ಶನಾಪೇಕ್ಷೆಯುಳ್ಳವರು ಇದೇ ಏಪ್ರಿಲ್ ತಿಂಗಳಲ್ಲಿ ಹೊರಡತಕ್ಕದ್ದು.

ಜೆ. ಎಂ. ಸಿದ್ಧಮರಿಸ್ವಾಮಿ ಸೆಕ್ರೆಟರಿ
ಶ್ರೀ ಕೇದಾರನಾಥ ಮಂದಿರ, ಹಿಮಾಲಯ.

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ಮಹನೀಯರ ಹಿತೋಕ್ತಿಗಳು.

೧ ಸದ್ಗುರು ಕೃಪಾಕಟಾಕ್ಷದ ಒಂದು ಕಿರಣವು ನಮ್ಮ ಹೃದಯವೆಂಬ ಗುಹೆಯ ಮುಂದೆ ಸಣ್ಣ ದಾರಿಯನ್ನು ಒಡೆದು ಪ್ರವೇಶಿಸಿದ ಹೊರತು ಆ ಹೃದಯದಲ್ಲಿರುವ ಅಜ್ಞಾನವೆಂಬ ಕತ್ತಲೆಯು ಮಾಯವಾಗಿ ಅಲ್ಲೆಲ್ಲ ಬೆಳಕೇ ಬೆಳಕಾಗುತ್ತದೆ. ಆದರೆ ಇಂಥ ಸದ್ಗುರು ಕೃಪಾಕಟಾಕ್ಷ ಕಿರಣಕ್ಕೆ ಸೂರ್ಯನ ಹೋಲಿಕೆ ಕೊಡುವದು ಒಂದು ನ್ಯೂನತೆಯೇ ಸರಿ. ಏಕೆಂದರೆ ಸೂರ್ಯನು ಉದಯವಾಗುತ್ತಲೇ ಕತ್ತಲೆಯು ಮಾಯವಾಗಿ ರಾತ್ರಿ ಕಾಲಬರುತ್ತಲೆ ಪುನಃ ಬಂದು ಗಂಟುಬೀಳುವದು. ಸದ್ಗುರು ಕೃಪಾಕಿರಣವಾದರೋ ಹೃದಯದಲ್ಲಿರುವ ಅಜ್ಞಾನಾಂಧಕಾರವನ್ನು ಸುಟ್ಟು ಬೂದಿಯು ಕೂಡ ಇಲ್ಲದಂತೆ ಮಾಡುವುದರಿಂದ ಅಜ್ಞಾನ ಕತ್ತಲೆಯು ಪುನಃ ಬರುವ ಸಂಭವವೇ ಇಲ್ಲ. ಈ ರೀತಿಯಾಗಿ ಸದ್ಗುರು ಕೃಪಾಕಟಾಕ್ಷ ಕಿರಣವು ಸೂರ್ಯನ ಸಹಸ್ರ [illegible]ಗಿಂತ ಕೋಟಿಪಾಲು ಹೆಚ್ಚಿನ ಪ್ರಭಾವವುಳ್ಳದ್ದಾಗಿರುವದು. ಅಲ್ಲದೆ ಅನೇಕ ಮಹನೀಯರು ಸದ್ಗುರುವಿಗೆ ಗಂಗಾ ಸಾಗರ ಆಕಾಶ ಮೇರುಪರ್ವತ ಭೂಮಿ ಅಮೃತ ಕಾಮಧೇನು ಕಲ್ಪವೃಕ್ಷ ವೇದ ಸ್ವರ್ಣ ಚಿಂತಾಮಣಿ ಇತ್ಯಾದಿ ವಸ್ತುಗಳೊಂದಿಗೆ ತುಲನೆಮಾಡಿ ಹೋಲಿಕೆ ಕೊಡುವದನ್ನು [illegible] ಅಭಿಪ್ರಾಯಪಡುತ್ತಾರೆ. ಆದ್ದರಿಂದ 'ನ ಗುರೋರಧಿಕಂ ನ ಗುರೋರಧಿಕಂ' ಎಂದು ಶ್ರುತಿಯು ಸಾರುತ್ತಿದೆ. ಇಂಥ ಸದ್ಗುರು ಕೃಪೆಯನ್ನು ಪಡೆಯುವದು ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ.

೨ ಕ್ಷಣಭಂಗುರವಾದ ಈ ಸಂಸಾರದಲ್ಲಿ [illegible] ನಲ್ಲಿ ಒಬ್ಬನ ಕ್ಷಣಿಕ [illegible] ಗಳಲ್ಲವೇ? ಒಂದು ಕ್ಷಣದ ಪರಿಚಯವಾಗಿ ಎರಡನೆಯ ಕ್ಷಣದಲ್ಲಿ [illegible] ಆಗುವವನಿಗೆ ಸಹೋದರರನ್ನು ಬಳಗವನ್ನು [illegible] ಅಷ್ಟರಲ್ಲಿಯೇ ವಿಯೋಗವಾಗುವುದು. ಪ್ರತಿಯೊಬ್ಬನು [illegible] ಸ್ನೇಹದಲ್ಲಿ ಇರುತ್ತಾರೆ. ಆಗ [illegible] ದವರಿಗೆ ಇಂದಿನ ವಿಷಯದಲ್ಲಿ ಯಾವ ಯೋಚನೆಯೂ ಇಲ್ಲದೆ [illegible] ಸ್ನೇಹವನ್ನು ಹಿಂದಿನ ಹಾಗೆಯೇ [illegible] ಸಂಪಾದಿಸಿ ಕ್ಷಣದಲ್ಲಿ ಕಳೆದುಕೊಂಡು ಈ ಸಂಯೋಗಗಳಲ್ಲಿ [illegible] ಸ್ಥಿರವಾದ ಸುಖದುಃಖಗಳನ್ನು ಹೊಂದದೆ ತಾವು [illegible] ತಮ್ಮ ತಮ್ಮ ಊರುಬಂದಾಗ ಇಳಿದು [illegible] ಹೀಗೆಯೇ ಜೀವರೂ ಸಹ ಜನ್ಮದಿಂದ ಜನ್ಮಕ್ಕೆ [illegible] ಜನ್ಮಗಳಲ್ಲಿ ಒದಗಿದ ಹೆಂಡತಿ ಮಕ್ಕಳು ಮಿತ್ರರು ಎಂಬ ಸಂಬಂಧಗಳಿಂದ ತಾತ್ಕಾಲಿಕ ಸುಖದುಃಖಗಳನ್ನು ಹೊಂದಿ ತಮ್ಮ ತಮ್ಮ ಕರ್ಮಾನುಸಾರವಾಗಿ ಕಾಲಬರಲು ಯಾವ ಯೋಚನೆಯೂ [illegible] ಇಲ್ಲದೆ ಮುಂದಿನ ಜನ್ಮಕ್ಕೆ ಸಾಗುವರು.

[illegible] |
[illegible] ||

೩ ಪುನರ್ಜನ್ಮದ ಅಸ್ತಿತ್ವದ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ಜನ್ಮಿಸಿದ ಪ್ರತಿಪ್ರಾಣಿಗೂ ಮರಣವು ಸಿದ್ಧವಾಗಿರುವಂತೆ ಮರಣಾನಂತರ ಪುನರ್ಜನ್ಮವೂ ಸಿದ್ಧವಾಗಿರುವದು. ಈ ಜನನ ಮರಣಗಳು ಅಪವರ್ಗದಲ್ಲಿ (ಮೋಕ್ಷದಲ್ಲಿ) ಅಂತ್ಯವಾಗುವವು. ಜನನವಿದ್ದರೆ ಮರಣವಿರುವಂತೆ, ಮರಣವಿದ್ದರೆ ಅದು ಜನನವು ಬೇಕಾದುದವಶ್ಯಕವು. [illegible] ಮೋಕ್ಷವೆಂದು ಮತ್ತೊಂದು ಹೆಸರುಂಟು. ಈ ಮೋಕ್ಷ ಲಾಭವಾಗುವವರೆಗೂ ಜನನಮರಣಗಳು ತಪ್ಪಲಾರವು. ಜೀವದ ಜನನಮರಣರೂಪವಾದ ಕಾರ್ಯಗಳಿಗೆ ಕಾರಣವಿದ್ದೇ ಇರುವುದು. ಅದೇ ಕರ್ಮಸಂಸ್ಕಾರವು. ಈ ಕಾರಣ (ಕರ್ಮ)ವು ನಾಶವಾಗುವ ತನಕ ಜನನಮರಣಗಳು ತಪ್ಪಲಾರವು. ಎಲ್ಲಿ ಸ್ವಾಭಿಮಾನವಿರುವದೋ, ಅಲ್ಲಿ ಮನಸ್ಸಿರುವದು; ಎಲ್ಲಿ ಮನಸ್ಸಿರುವದೋ ಅಲ್ಲಿ ಕರ್ಮವಿರುವದು; ಎಲ್ಲಿ ಕರ್ಮವಿರುವದೋ ಅಲ್ಲಿ ಭೋಗವಿರುವದು. ಜೀವ ಮತ್ತು ಕರ್ಮಗಳು 'ಬೀಜವೃಕ್ಷನ್ಯಾಯ'ದಂತಿರುವವು.

೪ ಮೋಹಪಾಶಬದ್ಧರಾದವರು ತಮ್ಮ ಅಭೀಷ್ಟವನ್ನು ಕೈಗೊಳ್ಳುವದಕ್ಕಾಗಿ ಮೋಸವನ್ನು ಪ್ರಯೋಗಿಸುವರು. ಅಂಥ ಮನುಷ್ಯರು ಎಷ್ಟು ಐಶ್ವರ್ಯವಂತರಾದರೂ ವಿದ್ಯಾವಂತರಾದರೂ ಶ್ರೇಷ್ಠರಾದ ಮಹಾತ್ಮರಾದರೂ ಕಡೆಗೆ ದೇವರಾದರೂ ಸರಿಯೆ ದಂಡನೆಯುಳ್ಳವರಾಗುವರು ಮತ್ತು ಪ್ರತಿಫಲವಾದ ಕಷ್ಟನಷ್ಟಗಳನ್ನು ಅನುಭವಿಸುವದೂ ಸಿದ್ಧವು.

೫ ಕಟ್ಟಿಗೆಯಿಲ್ಲದಿದ್ದರೆ ಬೆಂಕಿಯು ತನಗೆ ತಾನೇ ಆರಿಹೋಗುವಂತೆ ಚಪಲವಾದ ಮನಸ್ಸಿಲ್ಲದಿದ್ದರೆ [illegible] ತನಗೆ ತಾನೇ [illegible] ನೋಡಬೇಕು [illegible] ಧ್ಯಾನಯೋಗದಿಂದ ಆತ್ಮಜ್ಞಾನದಿಂದ ಕೂಡಿದವನಾಗಿದ್ದರೆ [illegible] ದಲ್ಲಿ [illegible] ಲೀನವಾಗುವಂತೆ ಜೀವನು ಶುದ್ಧಸತ್ವವಾದ ಪರಮಾತ್ಮನಲ್ಲಿ ಲೀನನಾಗಿ, ಅಜ್ಞಾನವೆಂಬ [illegible]

[illegible]

(ಸಂ. ಪ)

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂತು

ಸೊಲ್ಲಾಪುರದಲ್ಲಿ ಪುರಾಣಪ್ರವಚನ

[illegible]

ಶ್ರೀ ಕೇದಾರ ಜಗದ್ಗುರುಗಳ ಶುಭಾಗಮನ, ನೆಟ್ರಿ.

[illegible] ... 1934 ನೇ ... 11 ಘಂಟೆಗೆ ... 6 ಘಂಟೆಗೆ ... 8 ಘಂಟೆಗೆ ... [illegible]

ಪ್ರಾರ್ಥನೆ.

[illegible] ... ಇದೇ 1934 ನೇ ... (Observation) ... [illegible]

ಓಂ ಜ್ಯೋತಿಶಾಸ್ತ್ರಭವನ

ಪಂಚಾಚಾರ್ಯ ಪ್ರಭಾ.

[illegible]

ಸೂತಕವಿಚಾರ.

[illegible] ... ನಿತ್ಯಕರ್ಮಗಳನ್ನು ವಿಧಿಸುತ್ತವೆ.

[illegible]

ಇತ್ಯಾದಿ ಪ್ರಮಾಣಗಳು [illegible] ಮಾಡುತ್ತವೆ.

[illegible] |

ಇತ್ಯಾದಿ ಪ್ರಮಾಣಗಳು ಲಿಂಗವನ್ನು ಧರಿಸದೆ ಭೋಜನಾದಿ ವ್ಯವಹಾರಗಳನ್ನು ಮಾಡಲಾಗದೆಂದೂ ಹಾಗೆ ಮಾಡಿದಲ್ಲಿ ಮಹಾದೋಷವು ಪ್ರಾಪ್ತವಾಗುವುದೆಂದೂ ಪ್ರತ್ಯವಾಯವನ್ನು ಹೇಳುವುವು. ಇದರಂತೆ ಇಷ್ಟಲಿಂಗಪೂಜೆಯನ್ನು ಮಾಡದಿದ್ದವನು ಮಹಾಪಾಪಿಯಾಗುವನೆಂದು ಅನಂತ ಪ್ರಮಾಣಗಳು ಉದ್ಘೋಷಿಸುತ್ತವೆ. ಇದರಿಂದ ವೀರಶೈವನ ದೀಕ್ಷಿತನಾದ ಮಾನವನು ಸದಾ ಲಿಂಗಸಂಬಂಧವುಳ್ಳವನಾಗಿರಬೇಕೆಂದೂ ಪ್ರತಿನಿತ್ಯವೂ ಆ ಇಷ್ಟಲಿಂಗವನ್ನು ಪೂಜಿಸುತ್ತಿರಬೇಕೆಂದೂ ಸಿದ್ಧವಾಗುವುದು. ಆದರೆ ಆಸ್ತಿಕನಾದ ಮಾನವನಿಗೆ ಶುಚಿಕಾಲವೆಂತಲೂ ಅಶುಚಿಕಾಲವೆಂತಲೂ ಎರಡು ಕಾಲಗಳು ಸನ್ನಿಹಿತವಾಗುತ್ತವೆ. ದೇವತಾದರ್ಶನ ದೇವತಾರ್ಚನಾದಿ ಸತ್ಕರ್ಮಗಳನ್ನು ಶುಚಿಕಾಲಗಳಲ್ಲಿ ಆಚರಿಸಬೇಕಲ್ಲದೆ ಅಶುಚಿಕಾಲಗಳಲ್ಲಿ ಆಚರಿಸಲಾಗದೆಂದು ಧರ್ಮಶಾಸ್ತ್ರದ ನಿಬಂಧನೆಯುಂಟು. ಲಿಂಗಧಾರಣ ಲಿಂಗಪೂಜಾದಿ ಕರ್ಮಗಳನ್ನು ವೀರಶೈವನಾದವನು ತನ್ನ ಪ್ರಾಣವಿರುವವರೆಗೂ ಪ್ರತಿದಿವಸವೂ ಆಚರಿಸಲೇಬೇಕೆಂದೂ, ತಪ್ಪಿದಲ್ಲಿ ವ್ರತಲೋಪವು ಪ್ರಸಕ್ತವಾಗುತ್ತದೆಂದೂ ಸಿದ್ಧಾಂತದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುತ್ತದೆ. ಹೀಗಿರುವಲ್ಲಿ ಧರ್ಮಶಾಸ್ತ್ರಕ್ಕೆ ವಿರೋಧವಾಗಿ ಅಶುಚಿಕಾಲದಲ್ಲಿ ದೇವತಾಧಾರಣವನ್ನೂ ದೇವತಾಪೂಜೆಯನ್ನೂ ಮಾಡುವುದಕ್ಕೆ ಆಗುವುದಿಲ್ಲವಷ್ಟೆ!

ಇಲ್ಲಿ ಧರ್ಮಶಾಸ್ತ್ರರೀತಿಯಾಗಿ ಅಶುಚಿಕಾಲವೆಂದರೆ ಸೂತಕಗಳಿಂದೊಡಗೂಡಿದ ಕಾಲವು. ಆ ಸೂತಕಗಳು ರಜಸ್ಸೂತಕ, ಜನನಸೂತಕ, ಉಚ್ಛಿಷ್ಟಸೂತಕ, ಜಾತಿಸೂತಕ, ಪ್ರೇತಸೂತಕ ಎಂದು ಐದು ಪ್ರಕಾರವಾಗಿರುತ್ತವೆ. ಈ ಐದುಪ್ರಕಾರಗಳಾದ ಸೂತಕಗಳೂ ದೇವತಾರಾಧನಾದಿಗಳಿಗೆ ಪ್ರತಿಬಂಧಕಗಳಾಗಿರುವವು. ಈ ಐದು ಸೂತಕಗಳಲ್ಲಿ ರಜಸ್ಸೂತಕವೆಂಬುದಂತೂ ಅತೀವದೋಷಾವಹವಾದುದೆಂದು ವೇದದಲ್ಲಿ ಕಂಡುಬರುತ್ತದೆ. ಅಂದರೆ ಹಿಂದೆ ಇಂದ್ರನು ವಿಶ್ವರೂಪನೆಂಬವನನ್ನು ಕೊಂದದ್ದರಿಂದ ತನ್ನನ್ನಾವರಿಸಿದ ಬ್ರಹ್ಮಹತ್ಯಾದೋಷವನ್ನು ಸ್ತ್ರೀಯರಲ್ಲಿ ಮಾಸಿಕರಜೋರೂಪದಿಂದಿರಿಸಿದನೆಂದೂ, ಆ ಕಾಲದಲ್ಲಿ ಸ್ತ್ರೀಯರು ಯಾವುದೊಂದು ಕಾರ್ಯಕ್ಕೂ ಅರ್ಹರಾಗದೆ ನಾಲ್ಕನೆಯ ದಿವಸ [illegible] ಸ್ನಾನಮಾಡುವವರೆಂಗೂ ತೈತ್ತಿರೀಯ [illegible] ಇತ್ಯಾದಿ [illegible] ಇದೇ ಅರ್ಥವು

[illegible] |
[illegible] ||

[illegible] ದಿವಸಗಳವರೆಗೂ [illegible] ನಾಲ್ಕನೆಯ ದಿವಸ ಸ್ನಾನದಿಂ [illegible] ಐದನೆಯ ದಿವಸದಿಂದ [illegible] ಯೋಗ್ಯರಾಗುತ್ತಾ [illegible] ಧರ್ಮಶಾಸ್ತ್ರವು ವೀರ [illegible] ಈ ನಿರೋಧಭಾವವನ್ನು [illegible]

[illegible] ಅಪವಾದಶಾಸ್ತ್ರವೆಂದು ಎರಡು ಪ್ರಕಾರವುಂಟು. ಈ ಎರಡು ಶಾಸ್ತ್ರ [illegible] ಉತ್ಸರ್ಗ ಶಾಸ್ತ್ರವು [illegible]. ಅಪವಾದಶಾಸ್ತ್ರವು [illegible] ಉತ್ಸರ್ಗಶಾಸ್ತ್ರವು ಪ್ರವರ್ತಿಸುವುದಿಲ್ಲ [illegible] "ಮಾ ಹಿಂಸ್ಯಾತ್ಸರ್ವಾಭೂತಾನಿ" ಯಾವ ಪ್ರಾಣಿಗಳ ಹಿಂಸೆಯನ್ನು ಮಾಡಬಾರದೆಂಬುದೇ ಉತ್ಸರ್ಗಶಾಸ್ತ್ರವು. ಅಗ್ನೀಷೋಮೀಯಂ ಪಶುಮಾಲಭೇತ [illegible] ಅಪವಾದಶಾಸ್ತ್ರವು. ಈ ಅಪವಾದಶಾಸ್ತ್ರವು ಪ್ರವರ್ತಿಸುವ ಸಮಯದಲ್ಲಿ ಅದೊಂದರಲ್ಲಿ ಮಾತ್ರ ಉತ್ಸರ್ಗಶಾಸ್ತ್ರವು ಪ್ರವರ್ತಿಸುವುದಿಲ್ಲ [illegible] ನ್ಯಾಯವಿರುವಂತೆ ಇಲ್ಲಿ ಧರ್ಮ [illegible] ಆಶೌಚಕಾಲದಲ್ಲಿ ದೇವತಾದರ್ಶನ ದೇವತಾಪೂಜಾದಿಗಳನ್ನು ಮಾಡಕೂಡದೆಂದು ಸಾಮಾನ್ಯನಿಷೇಧವಿದ್ದರೂ—

[illegible] |
[illegible] ||
[illegible],
[illegible] |
[illegible] |
[illegible] ||

ಎಂಬ ವೀರಶೈವಸಿದ್ಧಾಂತಸಂಸ್ಥಾಪಕರಾದ ಶ್ರೀ ರೇಣುಕ ಭಗವತ್ಪಾದರ ಉಕ್ತಿಯಿಂದಲೂ ಯಾವಾಗಲೂ ಶಿವಾರ್ಚನಾಸಕ್ತರಿಗೂ ಯಾವಜ್ಜೀವವೂ ಅಗ್ನಿಹೋತ್ರ ಕರ್ಮವನ್ನು ಮಾಡುತ್ತೇನೆಂದು ದೀಕ್ಷೆವಹಿಸಿದವನಿಗೂ ಬ್ರಹ್ಮಚಾರಿ ಸನ್ಯಾಸಿಗಳಿಗೂ ಸೂತಕಗಳಿರುವುದಿಲ್ಲ. ಲಿಂಗಾರ್ಚನೆಯಲ್ಲಿಯೇ ಯಾವಾಗಲೂ ಆಸಕ್ತರಾದ ಸ್ತ್ರೀಯರು ಸೂರ್ಯ ಅಗ್ನಿ ವಾಯುಗಳಿಗಿಂತಲೂ ಕೋಟಿಪಾಲು ಪರಿಶುದ್ಧರಾಗಿರುವರು. ಇಂಥ ಲಿಂಗಧಾರಿಸ್ತ್ರೀಯರಿಗೆ ರಜಸ್ವಲಾದಿ ಯಾವ ಆಶೌಚಗಳು ಪ್ರಾಪ್ತವಾಗಿದ್ದರೂ ಯಾವಜ್ಜೀವ ದೀಕ್ಷಾಪ್ರಭಾವದಿಂದ ಲಿಂಗಾಂಗಿಯಾದ ದೇಹವು ಅಪವಿತ್ರವಾಗದಿರೋಣದರಿಂದ ವೀರಶೈವದೀಕ್ಷೆಯನ್ನು ಪಡೆದ ಸ್ತ್ರೀಪುರುಷರು ಜನನಾದಿ ಯಾವ ಸೂತಕಗಳೊದಗಿದ್ದರೂ ಶಿವಲಿಂಗವನ್ನು ಧರಿಸಿರಬೇಕು. ಮತ್ತು ಪೂಜಿಸುತ್ತಿರಬೇಕು. ತಾನು ಇರುವವರೆಗೂ ಅಗ್ನಿಹೋತ್ರವನ್ನು ಮಾಡುವೆನೆಂದು ಮಹಾಸಂಕಲ್ಪಮಾಡಿ ದೀಕ್ಷೆವಹಿಸಿದವನು ಮಧ್ಯದಲ್ಲಿ ಯಾವ ಸೂತಕಗಳು ಬಂದರೂ ತನ್ನ ಅಗ್ನಿಹೋತ್ರ ಕರ್ಮವನ್ನು ಬಿಡದೆ ಸಾಗಿಸುವಂತೆ ಸ್ಥೂಲದೇಹವಿರುವವರೆಗೂ 'ಯಾವಜ್ಜೀವಮಿದಂದತ್ತಂ ಇಷ್ಟಲಿಂಗಂ ಸಮರ್ಚಯ ||' ಎಂದು ಶ್ರೀಗುರುವಿನ ಆಜ್ಞಾನುಸಾರವಾಗಿ ಯಾವಜ್ಜೀವ ದೀಕ್ಷೆಯನ್ನು ವಹಿಸಿ, ನಾನಿರುವವರೆಗೆ ಲಿಂಗವನ್ನು ಪೂಜಿಸುತ್ತಿರುವೆನು, ಧರಿಸುತ್ತಿರುವೆನು ಎಂದು ಮಹಾಸಂಕಲ್ಪಮಾಡಿ ಕಾರ್ಯಾರಂಭಮಾಡಿದನಂತರ ಮಧ್ಯದಲ್ಲಿ ಸೂತಕಗಳು ಪ್ರಾಪ್ತವಾದರೂ ತನ್ನ ಲಿಂಗವ್ರತವನ್ನು ಬಿಡದೆ ನಡೆಯಿಸುತ್ತಿರಬೇಕು. ಪ್ರಾಣಲಿಂಗಾಂಗಿಯಾದವನಿಗೆ ಪರಮಾರ್ಥತಃ ಜನನಸೂತಕಾದಿ ದೋಷಗಳು ಇಲ್ಲವಾದ್ದರಿಂದ ಇಂಥ ಸೂತಕಗಳು ದೇವತಾದರ್ಶನ ದೇವತಾ ಪೂಜಾದಿಗಳಿಗೆ ಪ್ರತಿಬಂಧಕವನ್ನುಂಟುಮಾಡಲಾರವೆಂದು—

ತಸ್ಮಾತ್ ಸೂತಕಂ ನಾಸ್ತಿ ಪ್ರಾಣಲಿಂಗಾಂಗಿನಃ |
ಜನಸೂತಕಂ ಮೃತಸೂತಕಂ ನಾ ವಿದ್ಯತೆ ಪರಮಾರ್ಥತಃ ||
ಜಾತಕೇ ಮೃತಕೇ ವಾಪಿ ನ ತ್ಯಾಜ್ಯಂ ಶಿವಪೂಜನಂ |

ವೀರಶೈವ ಮತಸ್ಥಾಪಕರಾದ ಶ್ರೀ ರೇಣುಕಾಚಾರ್ಯರು ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ತೋರಿಸಿರುವರು. ಆದುದರಿಂದ ಲಿಂಗಾಂಗಿಗಳಾದ ಸ್ತ್ರೀಪುರುಷರು ಮಧ್ಯಕಾಲದಲ್ಲಿ ಬಂದೊದಗುವ ರಜಸ್ಸೂತಕಾದಿ ಪಂಚದೋಷಗಳಿಂದ ದೂಷಿತರಾಗಿರುವೆವೆಂಬ ಭಾವನೆಯನ್ನುಮಾಡದೆ ತಮ್ಮ ನಿತ್ಯಕರ್ಮಾಂಗವೆನಿಸಿದ ಸ್ನಾನಾದಿಗಳಿಂದ ಪರಿಶುದ್ಧಿಗೊಂಡು ಶಿವಲಿಂಗವನ್ನು ದೇಹದಿಂದ ಅಗಲಿಸದೆ ಯಾವಜ್ಜೀವವೂ ಲಿಂಗಪೂಜೆಯೆಂಬ ಮಹಾವ್ರತವನ್ನು ಪರಿಪಾಲಿಸುತ್ತಿರಬೇಕು. ಇದೇ ವೀರಶೈವನ ಪ್ರಥಮೋಪಾದೇಯವಾದ ಧರ್ಮವು. ಅನೇಕರು ಈ ಶಾಸ್ತ್ರನಿಯಮವನ್ನರಿಯದವರಾಗಿದ್ದುದರಿಂದ ಲಿಂಗಧಾರಣಲಿಂಗಪೂಜಾದಿಗಳೆಂಬ ಮಹಾವ್ರತನಿರ್ವಾಹಮಾಡುವುದರಲ್ಲಿ ಮಾತ್ರ ಪ್ರವರ್ತಿಸುವ 'ನತಸ್ಯ ಸೂತಕಂ ವಶ್ಚ' ಇತ್ಯಾದಿ ವಾಕ್ಯಗಳಿಗೆ ಸಾಮಾನ್ಯವಾಗಿ ವೀರಶೈವರಿಗೆ ಯಾವ ಕಾಲದಲ್ಲಿಯೂ ಸೂತಕಗಳೇ ಇಲ್ಲವೆಂದು ಅಪಾರ್ಥಮಾಡುತ್ತಾರೆ. ಇದರ ನಿಜಾಂಶವನ್ನು ಶಾಸ್ತ್ರದೃಷ್ಟಿಯಿಂದ ಮುಂದೆ ವಿವರಿಸುವದಾಗುವುದು.

ಒಳದೇಶದ ವೃತ್ತಾಂತಗಳು.

ಜಗದ್ವಿಖ್ಯಾತರಾದ ಸರ್ ಎಂ ವಿಶ್ವೇಶ್ವರಯ್ಯನವರನ್ನು ಇಂದೋರ್ ಸರಕಾರದವರು ಬರಮಾಡಿಕೊಂಡಿದ್ದಾರೆ. ಡ್ರೇನೇಜ್, ನೀರುಸರಬರಾಯಿ, ಯಶವಂತಸಾಗರದ ಅಣೆಕಟ್ಟು, ಮತ್ತು ಸಹಸ್ರಧಾರಾ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ತೆಗೆಯುವದು ಈ ವಿಷಯಗಳಿಗಾಗಿ ಕರೆಯಿಸಿಕೊಂಡಿರುವರೆಂದು ತಿಳಿದುಬಂದಿದೆ.

ಒಡೆಯರ ಚಕ್ರವರ್ತಿಗಳ ಜ್ಯೂಬಿಲಿ ಸಮಾರಂಭದಲ್ಲಿ ಸಂತೋಷದಲ್ಲಿ ವಿದ್ಯುಚ್ಛಕ್ತಿಯುಳ್ಳ ಕಡೆಗಳಲ್ಲೆಲ್ಲಾ ಪ್ರಜೆಗಳು ದೀಪೋತ್ಸವಗಳನ್ನು ನಡೆಸಲು ಅನುಕೂಲಿಸುವಂತೆ ಮೇ ತಾರೀಖು 6 ರಿಂದ 3 ದಿನಗಳವರೆಗೆ ಉಪಯೋಗಿಸುವ ವಿದ್ಯುಚ್ಛಕ್ತಿಯ ದರವನ್ನು ಯೂನಿಟ್ ಒಂದಕ್ಕೆ 3 ಕಾಸಿನ ಮೇರೆಗೆ ಚಾರ್ಜು ಮಾಡುವದಾಗಿ ಎಲೆಕ್ಟ್ರಿಕ್ ಆಫೀಸಿನವರು ಪ್ರಸಿದ್ಧಪಡಿಸಿದ್ದಾರೆ.

ಬೆಂಗಳೂರು ಕೆಂಗೇರಿ ಸ್ಟೇಷನ್ ಬಳಿ ವಾಸವಾಗಿದ್ದ ದೇವಮ್ಮನೆಂಬವಳು ತನ್ನ ಎರಡು ಮಕ್ಕಳನ್ನು ಬಾವಿಗೆ ಹಾಕಿ ತಾನೂ ಬಿದ್ದು ಪ್ರಾಣ ಕಳೆದುಕೊಳ್ಳಲು ಪ್ರಯತ್ನಪಡಲು ಅಕ್ಕಪಕ್ಕದವರು ಇದನ್ನು ನೋಡಿ ಆಕೆಯನ್ನು ಬಾವಿಯಿಂದ ಮೇಲಕ್ಕೆತ್ತಿ ಉಳಿಸಿದರು. ಮಕ್ಕಳು ಮಾತ್ರ ಸತ್ತುಹೋಗಿದ್ದವು. ಪೋಲೀಸರು ದೇವಮ್ಮನನ್ನು ಖೂನಿ ಮತ್ತು ಆತ್ಮಹತ್ಯದ ಅಪಾದನೆಯ ಮೇಲೆ ಚಾರ್ಜು ಮಾಡಿರುತ್ತಾರೆಂದು ತಿಳಿದುಬಂದಿದೆ.

ತರೀಕೆರೆ ರೈಲ್ವೆ ನೊಕದ್ದಮೆಯು ಚಿಕ್ಕಮಗಳೂರು ಫಸ್ಟ್‌ಕ್ಲಾಸ್ ಕೋರ್ಟಿನಲ್ಲಿ ನಡೆದು ಮ್ಯಾಜಿಸ್ಟ್ರೇಟರು ಗಾರ್ಡ್ ಎಂ ಪಿ ಪ್ರಸಾದ್, ಡ್ರೈವರ್ ಶಿವಾನಂದಂ ಎಂಬಿಬ್ಬರಿಗೂ ತಲಾ 4 ತಿಂಗಳ ಶಿಕ್ಷೆ ಮತ್ತು 100 ರೂಪಾಯಿ ಜುಲ್ಮಾನೆಯನ್ನು ವಿಧಿಸಿದ್ದರು. ಈ ಕೇಸು ಹೈಕೋರ್ಟಿಗೆ ಅಪೀಲ್ ಆಗಲು, ಜಸ್ಟಿಸ್ ಎನ್. ಕೆ ಶ್ರೀನಿವಾಸರಾಯರು ಕೆಳಗಿನ ಕೋರ್ಟಿನವರು ಗಾರ್ಡಿಗೆ ವಿಧಿಸಿದ್ದ ಶಿಕ್ಷೆಯನ್ನು 6 ತಿಂಗಳಿಗೆ ಹೆಚ್ಚಿಸಿ, ಡ್ರೈವರನ ಶಿಕ್ಷೆಯನ್ನು ಕಾಯಂ ಮಾಡಿದ್ದಾರೆ.

ಮೈಸೂರು ಕೃಷ್ಣರಾಜೇಂದ್ರ ಮಿಲ್ಲಿನ ಸೇರು ಹೋಲ್ಡರುಗಳ ಜನರಲ್ ಮೀಟಿಂಗಿನಲ್ಲಿ ಒಪ್ಪಿಗೆಯಾದಂತೆ ಸದರಿ ಮಿಲ್ಲಿನ ಮ್ಯಾನೇಜ್‌ಮೆಂಟ (ಆಡಳಿತ)ವನ್ನು ಮೆಸರ್ಸ್ ಎಚ್ ಸಿರೂರ್ ಅಂಡ್ ಕಂಪೆನಿಯವರು ಇದೇ ಏಪ್ರಿಲ್ 11 ನೇ ತಾರೀಖಿನಿಂದ ಒಪ್ಪಿಸಿರುವದರಿಂದ ಮುಂದೆ ಮಿಲ್ಲಿಗೆ ಸಂಬಂಧಪಟ್ಟ ಎಲ್ಲಾ ಪತ್ರವ್ಯವಹಾರಗಳನ್ನೂ ಮೆಸರ್ಸ್. ಎಚ್. ಸಿರೂರ್ ಅಂಡ್ ಕಂಪೆನಿ, ಮ್ಯಾನೇಜಿಂಗ್ ಏಜಂಟ್ಸ್ ಶ್ರೀ ಕೃಷ್ಣರಾಜೇಂದ್ರಮಿಲ್ಸ್ ಲಿಮಿಟೆಡ್, ಮೈಸೂರು ಇವರ ಹೆಸರಿನಲ್ಲಿ ನಡೆಯಿಸಬೇಕೆಂದು ತಿಳಿಯಪಡಿಸಿದ್ದಾರೆ.

ವರ್ತಮಾನಸಂಗ್ರಹ.

ಜೆಕೋಸ್ಲೊವಿಯಾ ರಾಜ್ಯದವರು ತಮ್ಮ ಸುತ್ತಲಿನ ಪ್ರಬಲ ರಾಜ್ಯಗಳು ಮಾಡುತ್ತಿರುವ ಯುದ್ಧಸನ್ನಾಹವನ್ನು ನೋಡಿ ಹೆದರಿ ತಾವು ಸುಮ್ಮನಿರುವುದು ಯೋಗ್ಯವಲ್ಲವೆಂದೂ, ತಮ್ಮ ದೇಶದ ತರುಣರು 2 ವರ್ಷ ಸೈನ್ಯ ಶಿಕ್ಷಣವನ್ನು ಪಡೆಯಲೇಬೇಕೆಂದೂ ಕಾನೂನು ಮಾಡಿದ್ದಾರೆ

ಸಾರ್ ಪ್ರಾಂತ್ಯದಲ್ಲಿ ಅಂತಃಕಲಹ!

ಸಾರ್ ಸ್ವಾತಂತ್ರ್ಯವು ಒಡಂಬಡಿಕೆಯಿಂದ ಜರ್ಮನಿಗೆ ಬಂದರೂ ಕೆಲವು ಫ್ರಾನ್ಸ್ ಸಿಪಾಯಿಗಳಿಂದ ಅಂತಃಕಲಹಗಳು ಪ್ರಾರಂಭವಾಗಿವೆಯೆಂದು ತಿಳಿದುಬರುತ್ತದೆ

ಬಾಲ್ಯವಿವಾಹದ ಮೇಲೆ ಫಿರ್ಯಾದಿ!

ಬರೋಡಾ ನಗರದ ಯುವಕಸಂಘದ ಕಾರ್ಯದರ್ಶಿಯು ಬಾಲ್ಯವಿವಾಹದ ತಪ್ಪಿಗಾಗಿ 16 ಜನ ದಂಪತಿಗಳು ಮತ್ತು ಅವರ ಗಾರ್ಡಿಯನ್‌ಗಳೂ ಫಿರ್ಯಾದಿಗೆ ಗುರಿಪಡಿಸಲ್ಪಟ್ಟಿರುತ್ತಾರೆ

ವಿಷವಾಯುನಾಶಕ ಸಾಧನಗಳು.

ಬ್ರಿಟಿಷ್ ಸರ್ಕಾರವು ವಿಮಾನಯುದ್ಧದಲ್ಲಿ ಒದಗಬಹುದಾದ ವಿಷವಾಯುವಿನ ಅಪಾಯವನ್ನು ತಪ್ಪಿಸುವದಕ್ಕಾಗಿ ಹೋಮ್ ಆಫೀಸ್ ಕೆಲಸಗಾರರಿಗೆ ಸಾಧನಗಳನ್ನು ಒದಗಿಸಲು 92 ಸಾವಿರ ಪೌಂಡುಗಳನ್ನು ಮಂಜೂರು ಮಾಡಿರುತ್ತದೆ

ನರಬಲಿ.

ಮಧ್ಯಪ್ರಾಂತದ ಕಿರುಕ ಜಮೀನುದಾರನಿಗೆ ಸೇರಿದ ಗ್ರಾಮವೊಂದರಲ್ಲಿ ಮಂತ್ರವಾದಿಯು ಒಬ್ಬ ಮನುಷ್ಯನನ್ನು ದೇವತೆಗೆ ಬಲಿಗೊಟ್ಟನೆಂದೂ, ಪೋಲೀಸರು ಅಪರಾಧಿಗಳನ್ನು ದಸ್ತಗಿರಿಮಾಡಿ ತನಿಖೆ ನಡೆಸುತ್ತಿರುವರೆಂದೂ ತಿಳಿದುಬರುತ್ತದೆ

ಬಂಗಾಳದಲ್ಲಿ ಪ್ರವಾಹದ ಹಾವಳಿ.

ಬಂಗಾಳದ ಕುರಿಗ್ರಾಂ ಎಂಬ ಪಟ್ಟಣವನ್ನು ನೀರಿನ ಅಪಾಯದಿಂದ ಕಾಪಾಡಲು ಪ್ರಯತ್ನಗಳು ನಡೆಯುತ್ತಿವೆ ಪಕ್ಕದಲ್ಲಿರುವ ಧರಲಾನದಿಯಲ್ಲಿ ಹೆಚ್ಚುತ್ತಿರುವ ಪ್ರವಾಹವನ್ನು ತಡೆಗಟ್ಟಲು ಲಕ್ಷಾಂತರ ಗೋಣಿಚೀಲಗಳೂ ಹುಲ್ಲಿನ ಹೊರೆಗಳೂ ಉಪಯೋಗಿಸಲ್ಪಟ್ಟಿವೆ

ಪೋಲೀಸರು ತಾವು ಹಾಕಿದ ಬಾಂಬಿನಿಂದ ತಾವೇ ಅಪಾಯಕ್ಕೊಳಗಾದರು

ಕ್ಯಾಲಿಫೋರ್ನಿಯಾ ಎಂಬಲ್ಲಿ ಕಳ್ಳರನ್ನು ಅಟ್ಟಿಸಿಕೊಂಡು ಹೋಗುತ್ತಿದ್ದ ಪೋಲೀಸರ ಮೋಟಾರು, ಮುಂದೆ ಮೋಟಾರಿನ ಮೇಲೆ ಹೋಗುತ್ತಿದ್ದ ಕಳ್ಳರ ಮೇಲೆ ಎಸೆದ ಬಾಂಬಿನ ಮೇಲೆ ತಮ್ಮ ಮೋಟಾರೇ ಹತ್ತಿದ್ದರಿಂದ ಬಾಂಬು ಸಿಡಿದು, ಒಬ್ಬ ಆಫೀಸರು ಸತ್ತುಹೋದನು ಮೂರು ಜನಗಳಿಗೆ ಗಾಯಗಳಾಗಿವೆ. ಪೋಲೀಸ ಮೋಟಾರಿಗೆ ಬೆಂಕಿ ಹತ್ತಿದ್ದರಿಂದ ಕಳ್ಳರು ತಪ್ಪಿಸಿಕೊಂಡರು

ತಲೆಕೂದಲನ್ನು ಕತ್ತರಿಸಿದ್ದಕ್ಕೆ 400 ಪೌಂಡು ದಂಡ.

ಗವರ್ನರ್ ಎಂಬಲ್ಲಿ ಬಹಳ ಲಕ್ಷಣವಾದ ಕೂದಲುಳ್ಳವಳೆಂದು ಪ್ರಸಿದ್ಧಳಾಗಿದ್ದ ಹುಡುಗಿಯೊಬ್ಬಳನ್ನು ಕ್ಷೌರಿಕ ಬಾಲಕನೊಬ್ಬನು ಕೂದಲನ್ನು ಮೋಟಾಗಿ ಕತ್ತರಿಸಿಕೊಂಡರೆ ಮದುವೆಯಾಗುವೆನೆಂದು ಹೇಳಿ, ಅವಳ ಕೂದಲನ್ನು ಕತ್ತರಿಸಿದನು. ಕೂದಲು ಕತ್ತರಿಸಿದ ಸ್ವಲ್ಪದಿನಗಳಲ್ಲೇ ಮದುವೆಯಾಗಲು ಒಪ್ಪಲಿಲ್ಲವಾದ್ದರಿಂದ ತನ್ನ ಕೂದಲನ್ನು ಹಾಳುಮಾಡಿದನೆಂದು ಆ ಹುಡುಗಿಯು ಅವನಮೇಲೆ 8000 ರೂ. ಗಳ ನಷ್ಟಕ್ಕೆ ದಾವಾಮಾಡಿರುತ್ತಾಳೆ.

ವಜ್ರಗಳ ಕಳವು!

Mahabir — *Complainant*

Vs

Raghubir and others — *Accused*

Charged under sections 4 and 6 Marriage Restraint Act

[illegible] Mahabir has stated on oath that [illegible] Mst Chutana on basant Panchami [illegible] the girl returned to [illegible] The custom is that [illegible] about 6 months [illegible] The *Bhanwar* [illegible] Accused No 1 [illegible] He proved No 1 and [illegible] present at the Shadi [illegible] *Pairpuja* [illegible]

The guardian [illegible] which he [illegible] instituted [illegible] Chief Court [illegible] Raghubir and not the complainant [illegible] guardian of the girl He [illegible] to the year and not longer [illegible] married his grand daughter [illegible] Ankotwa and he [illegible] 10 years old [illegible] to take place till the girl [illegible] grows up

Mahabir further stated that he was the father of Mst Chutana and Ram [illegible] and that he had stated before the judge

Din [illegible] Prasad [illegible] produced [illegible] stated that he was present at the Shadi [illegible] that *Bhanwar* and *Pairpuja* were performed He gave out the *Ritual* When cross examined he said he did not see the Bhanwar and Pairpuja performed

Gaya din Kurmi stated that he was present at the Shadi and that he saw Bhanwar and Pairpuja performed When cross examined could not say whether Mahabir went in to the Bhanwar and Pairpuja He was not participator in the marriage only a spectator

Bhudhar Pas said that parties were married

The accused did not wish to produce any evidence and relied their case on the fact that the ceremony which had been performed was only a *preliminary* and did *not* constitute a *marriage* as contemplated under the Child Marriage Restraint Act

The position of the complainant is quite clear He has given out that he is the putative father of the 2 girls and that is why he is interested in them After litigation which went up to Chief Court, Raghubir was appointed guardian of the two girls and not the complainant

The complainant now attempts his revenge Raghubir admits quite frankly that a *shadi* was performed but the girl is still with him and he maintains that she will not be sent to her husband for another 6 years She will no longer be a child then as her present age is about 12 years

Jagannath pleads not guilty of the offence on the same grounds and also that he is a child under the act and that the marriage was arranged by his father and Raghubir

So far as the custom among the Kurmis goes it has been shown the complainant himself had his grand daughter married when she was quite a child but the *Gauna* ceremony has not yet been performed though the *shadi* took place two years ago The complainant cannot make out that he is any more virtuous than the accused

If the object of the Act was stated to be the prevention of child motherhood there will be no case against the accused' However, the Act was passed to restrain the solemnisation of child-marriage. But no greater punishment is provided for the person who solemnises the marriage

In the present case, the marriage has not been consummated No charge has been brought against the Pandit who has solemnised the marriage

The usual forms of marriage seem to have been completed in the present case but it is provided that a marriage may be completed by the performance of other ceremonies according to the customs of the casts to which the parties belong

The evidence of the custom among these particular Kurmies is not extensive in this case but there is enough to show that a subsequent *Gauna* is performed before the *marriage* is *completed* and the bride goes to her husband

So I hold that the *marriag* has *not* been *completed* and consequently the accused are acquitted If the marriage be completed while either of the contracting parties is still a child it will be an offence under the Act.

The Rupees hundred security deposited is to be returned to the complainant

(Sd) H E BARLOW I C S
District Magistrate

IV CHIEF COURT S JUDGMENT

Judgment of Chief Judge

In re

Mahabir Vs *Raghubir*

This is a reference under section 38 of Crim Pro Code by the Learned Sessions Judge of Kheri recommending that the order of acquittal passed by the Learned District Magistrate dated the 15th June 1934 be set aside and retrial ordered

Ko[illegible] died leaving a minor daughter Mst Chutana aged 10 years and Raghubir was appointed her guardian by the District Judge of Sitapur

It appears that Mahabir brought to the notice of the earned District Judge Sitapur that Raghubir was contemplating to celebrate the marriage of the minor girl The learned District Judge on 13 1 '34 issued prohibitory order restraining Raghubir the guardian from marrying the minor girl till she comes of age

On the 1st of May 1934 Mahabir filed a complaint in the court of the District Magistrate of Kheri against Raghubir Rom Bux Jagannath and Bhagawandin alleging that Raghubir and others had celebrated the marriage of Mst Chutana on 20 1 1934 in spite of the prohibitory order of the District Judge and that they were guilty under section 6 of the Child Marriage Restraint act 19 of 1929

The learned District Magistrate *discharged* Ram Bux and Bhagawandin under section 203 Crim Pro Code and, after hearing the evidence on behalf of the prosecution *acquitted* the remaining two accused Raghubir and Jagannath He held that "the usual forms of marriage seem to have been completed but it has not been completed He was further of opinion that the evidence there was a custom to have subsequent *gauna* ceremony performed before the marriage was completed and the bride sent to the husband In other words, his finding was that marriage was not completed and he consequently acquitted the accused

It is admitted before me by the learned counsel for the complainant that Bam Bux and Bhagawandin had practically taken no part They were simply present at the *marriage* Jagannath who is the husband of the girl is himself a minor He has pressed the case against Raghubir only As pointed before, the learned District Magistrate has acquitted the accused and not discharged Raghubir

The question is, how far will I be justified in interfering on a reference when the Local Government under S 417 Crim Pro Code has not preferred an appeal against the order of acquittal?

The High Court has jurisdiction under section 439 Crim Pro Code to entertain an application in revision of all orders of acquittal when the Crown has not preferred appeal. It is ordinarily not open to private persons to have an order of acquittal set aside in revision. The power to appeal against an order of acquittal is given to the Crown under sec 417 Crim Pro Code and I am of opinion that the High Court should very sparingly interfere in application against orders of acquittal by private persons.

The learned District Magistrate in his judgment finds that because Raghubir was appointed guardian of the minor girl and not the complainant the complainant is taking his revenge.

It may be that the view of law taken by the learned District Magistrate is wrong but I give no definite finding on that point. I am not prepared to encourage private applications against the order of acquittal. With this view I am not prepared to accept the recommendation of the learned Assistant Sessions Judge. I accordingly reject it and direct that the file be returned to court concerned.

(Sd) G THOMAS
26—10—34

ಶಾರದಾಬಿಲ್ಲಿನ ಮೇಲೆ ಅತ್ಯುತ್ತಮವಾದ ತೀರ್ಮಾನ!

ಡಿ|| ಮ್ಯಾಜಿಸ್ಟ್ರೇಟರು ಸನಾತನಧರ್ಮವನ್ನು ಪ್ರತಿಪಾದಿಸಿದರು

ಶಾರದಾಬಿಲ್ಲಿಗೆ ಬಾಲ್ಯಗರ್ಭಧಾರಣವು ವಿರೋಧವಲ್ಲದೆ ಧರ್ಮಸಮ್ಮತವಾದ ವಿವಾಹವು ವಿರೋಧವಲ್ಲ!

ಹೈಕೋರ್ಟಿನವರು ಇದರಲ್ಲಿ ಪ್ರವೇಶಿಸಲು ತಿರಸ್ಕರಿಸಿದರು

ಮಿ|| ಹೆಚ್ ಇ ಬಾರ್ಲೋ ಐ ಸಿ ಎಸ್ ಫಸ್ಟ್ ಕ್ಲಾಸ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮೀರಟ್ (U P) ಇವರು ಶಾರದಾ ಆಕ್ಟಿಗೆ ಸಂಬಂಧಪಟ್ಟ ಒಂದಾನೊಂದು ಕೇಸಿನಲ್ಲಿ ಈ ಕೆಳಗೆ ಕಂಡಂತೆ ತೀರ್ಮಾನ ಮಾಡಿದರು

ವಿದ್ಯಮಾನಗಳು

ಈ ಕೇಸಿನಲ್ಲಿ ಮುಖಬೀರನು ಫಿರ್ಯಾದಿಯ ರಘುಬೀರನ ಅಪರಾಧಿಯ

ರಘುಬೀರನು ತನ್ನ ವಶದಲ್ಲಿದ್ದ ಒಬ್ಬ ಹುಡುಗಿಯ ಮದುವೆಯನ್ನು ಆಕೆಗೆ ವಯಸ್ಸು ಬರುವವರೆಗೂ ಮಾಡಕೂಡದೆಂದು ಫಿರ್ಯಾದಿಯ ಒಪ್ಪಿಗೆಯ ಮೇಲೆ ಡಿಸ್ಟ್ರಿಕ್ಟ್ ಜಡ್ಜರು ರಘುಬೀರನಿಗೆ ಅಪ್ಪಣೆಮಾಡಿದರು

ಆದರೆ ರಘುಬೀರನು ಡಿ|| ಜಡ್ಜರವರ ಅಪ್ಪಣೆಗೆ ವ್ಯತಿರಿಕ್ತವಾಗಿ ಆ ಹುಡುಗಿಗೆ ಕಳೆದ ವಸಂತ ಪಂಚಮಿ (೬-೧-೩೪) ದಿವಸ ಲಗ್ನವನ್ನು ಮಾಡಿದನು ಅದರ ಮೇಲೆ ಮೀರಟಿಯ ಫಸ್ಟ್‌ಕ್ಲಾಸ್ ಡಿ|| ಮ್ಯಾಜಿಸ್ಟ್ರೇಟ್ ಎಚ್ ಇ ಬಾರ್ಲೋ ಐ ಸಿ ಎಸ್ ಇವರಲ್ಲಿ ಶಾರದಾ ಆಕ್ಟು 4 ಮತ್ತು 6 ನೇ ಸೆಕ್ಷನ್ ಪ್ರಕಾರ ಹುಡುಗಿಯ ಗಾರ್ಡಿಯನ್ ರಘುಬೀರ್ ಕುರ್ಮಿ ಮತ್ತು ಹುಡುಗಿಯ ಗಂಡ ಜಗನ್ನಾಥ ಕುರ್ಮಿ ಇವರ ಮೇಲೆ ಕ್ರಿಮಿನಲ್ ಕಂಪ್ಲೇಂಟ್ ದಾಖಲಾಯಿತು

ಅಪರಾಧಿಗಳು ಫಿರ್ಯಾದಿಯ ಕಂಪ್ಲೇಂಟಿಗೆ ಪ್ರತಿಯಾಗಿ ಹೇಳಿದ್ದೇನೆಂದರೆ ಮದುವೆಯು ನಡೆದದ್ದು ನಿಜವೆಂದು ಒಪ್ಪಿ ನಾವು ಮಾಡಿರುವ ವಿವಾಹವು ರೂಲಿಗೆ ವಿರುದ್ಧವಲ್ಲವೆಂಬುದನ್ನು ತೋರಿಸಲುದ್ಯುಕ್ತರಾದರು ಮದುವೆಯೆಂಬುದು ಒಂದು ವಿಧಾನದ ಮತಸಂಬಂಧವಾದ ಸಂಸ್ಕಾರವೇ ಹೊರತು ಶಾರದಾ ಆಕ್ಟಿನಲ್ಲಿ ಹೇಳಿರುವಂತಹ ಮದುವೆಯಲ್ಲ ಯಾಕೆಂದರೆ ಮದುವೆಯಾದರೂ ಮುಂದೆ ನಡೆಯುವ ಗರ್ಭಾದಾನ ಅಥವಾ ನಿಷೇಕವು ಮದುವೆಯಾದ ಎಷ್ಟೋ ವರ್ಷಗಳ ಮೇಲೆ ನಡೆಯುವುದೆಂದೂ, ಗರ್ಭಧಾರಣವೇ ಶಾರದಾ ಆಕ್ಟಿನ ರಹಸ್ಯವೆಂದೂ ಇತ್ಯಾದಿಯಾಗಿ ವಾದಿಸಿದರು

ಡಿ|| ಮ್ಯಾಜಿಸ್ಟ್ರೇಟರು ಅಪರಾಧಿಗಳ ಈ ವಾದಕ್ಕೆ ಒಪ್ಪಿ ಗರ್ಭಾದಾನಾದಿ ಕ್ರಿಯೆಗಳು ನಡೆಯದೆ ಕೇವಲ ಮದುವೆಯು ಮಾತ್ರ ನಡೆದಿರುವುದು ಶಾರದಾ ಆಕ್ಟಿಗೆ ವ್ಯತಿರಿಕ್ತವಾಗಿಲ್ಲವೆಂದೂ, ಅರ್ಥರಿಸಲ್ಲಿ ಸ್ಪಷ್ಟವಾಗಿ ಗರ್ಭೋತ್ಪತ್ತಿಯಾದ ಕಾಲಕ್ಕೆ ವಧೂವರರು ವಯಸ್ಕರಾಗಿರದೆ ಬಾಲ್ಯಾವಸ್ಥೆಯಲ್ಲಿದ್ದರೆ ಶಾರದಾ ಆಕ್ಟಿಗೆ ವಿರೋಧವಾಗುತದಲ್ಲದೆ ಇಲ್ಲದಿದ್ದರಿಲ್ಲವೆಂದು ಹೇಳಿ ಎಂದು ತೀರ್ಪುಕೊಟ್ಟರು

ಇದರ ಮೇಲೆ ಫ್ರಾಸಿಕ್ಯೂಟರಿ ಆರ್ಡರು ಕೊಟ್ಟದ್ದ ಮೀರಟಿಯ ಸೆಷನ್ಸ್ ಜಡ್ಜರು ಹೈಕೋರ್ಟಿಗೆ ಬರೆದು ಕ್ರಿ ಪ್ರೊ ಕೋಡ್ 438 ನೇ ಸೆಕ್ಷನ್ ಪ್ರಕಾರ ಪುನರ್ವಿಚಾರಣೆಯಾಗಬೇಕೆಂದು ಕೇಳಿದರು ಆದರೆ ಹೈಕೋರ್ಟಿನವರು ಫಿರ್ಯಾದಿಯು ಗವರ್ನಮೆಂಟಲ್ಲದೆ ಹೊರಗಿನವನಾದ್ದರಿಂದ ತಾವು ಇದರಲ್ಲಿ ಪ್ರವೇಶ ಮಾಡಲಾಗುವುದಿಲ್ಲವೆಂದು ಹೇಳಿಬಿಟ್ಟರು.

ಮೀರಟಿ ಡಿಸ್ಟ್ರಿಕ್ಟಿನ ಫಸ್ಟ್‌ಕ್ಲಾಸ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಎಚ್. ಇ. ಬಾರ್ಲೊ ಎಸ್ಕ್ವೈರ್, ಐ.ಸಿ.ಎಸ್. ರವರು ಕೊಟ್ಟ ಆರ್ಡರಿನ ಸಾರಾಂಶ.

ಕೇಸ್ ನಂ 1 15 6 34 ರಲ್ಲಿ ತೀರ್ಮಾನಿಸಲ್ಪಟ್ಟಿತು

ಮುಖಬೀರ್ ಫಿರ್ಯಾದಿ ರಘುಬೀರ್ ಮತ್ತು ಇತರರು ಅಪರಾಧಿಗಳು

ಶಾರದಾ ಆಕ್ಟಿನ 4 ಮತ್ತು 6 ನೇ ಸೆಕ್ಷನ್ ಪ್ರಕಾರ ಛಾರ್ಜುಮಾಡಿದ್ದು

ಫಿರ್ಯಾದಿಯ ಹೇಳಿಕೆಯಲ್ಲಿ ಜಗನ್ನಾಥನು ವಸಂತ ಪಂಚಮಿಯ ದಿವಸ ಮದುವೆಯಾದನು ಮದುವೆಯು 2 ದಿನ ನಡೆದನಂತರ ಹುಡುಗಿಯು ರಘುಬೀರನ ಮನೆಗೆ ಬಂದಳು ಆಕೆಯು ಇನ್ನೂ ಮೈನರು (ವಯಸ್ಕಳಾಗಿಲ್ಲ) ಮೈನರುಗಳ ಮದುವೆಯಾದರೆ 6 ತಿಂಗಳನಂತರ ಗಂಡನ ಮನೆಗೆ ಕಳುಹಿಸಿಕೊಡುವ ಪದ್ಧತಿ ಮದುವೆಯಲ್ಲಿ ಸೇಟರ ಸವಾರಿ ಧನ ನಡೆಯಿತು 1 ನೇ ಅಪರಾಧಿಯು ಚಾಲಿಮನೆಂಬವನು ವಧೂವರರ ಪೂಜೆಮಾಡಿದನೆಂದು ಹೇಳಿದನು ಕ್ರಾಸ್ ಎಕ್ಸಾಮಿನೇಶನ್ನಿನಲ್ಲಿ ಮದುವೆಯಲ್ಲಿ ಒಂಧು ಮತ್ತು ವಧೂವರರ ಪೂಜೆಯು ರಘುಬೀರನ ಸ್ಥಳದಲ್ಲಿ ನಡೆದಾಗ ತಾನೂ ಇದ್ದೆನೆಂದು ಹೇಳಿದನು

1½ ವರ್ಷದ ಕೆಳಗೆ ಮೊದಲಾದ ಗಾರ್ಡಿಯನ್‌ಶಿಪ್ ಕೇಸಿನಲ್ಲಿ ಚೀಫ್ ಕೋರ್ಟಿನವರು ತನ್ನನ್ನು ಬಿಟ್ಟು ರಘುಬೀರನನ್ನು ಗಾರ್ಡಿಯನ್ನಾಗಿ ನೇಮಿಸಿದರೆಂದೂ, ಮದುವೆಯಾದ ಮೇಲೆ 6 ತಿಂಗಳು ಅಥವಾ 1 ವರ್ಷದೊಳಗಾಗಿ ಗರ್ಭಾದಾನವು ನಡೆಯುವುದೆಂದೂ, 2 ವರ್ಷಗಳ ಹಿಂದೆ ತನ್ನ ಮೊಮ್ಮಗಳ ಮದುವೆ ನಡೆಯಿತೆಂದೂ, ಆಗ ಆಕೆಗೆ 10 ವರ್ಷವಾಗಿತ್ತೆಂದೂ, ಆ ಸಂದರ್ಭದಲ್ಲಿ ಆಕೆಯು ವಯಸ್ಕಳಾಗುವವರೆಗೂ ನಿಷೇಕವು ನಡೆಯುವುದಿಲ್ಲವೆಂದೂ ತಾನು ಏ ಸೆಸ್ ಚೇತನಾ ಮತ್ತು ರಾಮೇಶ್ವರ ತಂದೆಯೆಂದೂ ಹೇಳಿದನು

ದಿನವ ಸಿ ಎಂಬುವನು ಮದುವೆಯಾದಾಗ ತಾನು ಹಾಜರಾಗಿದ್ದೆನೆಂದೂ ಸೇಟರ ಮತ್ತು ವಧೂವರರ ಪೂಜೆಯು ನಡೆಯಿತೆಂದೂ ತಾನು ಪತ್ತಲ ಕೊಟ್ಟೆನೆಂದೂ ಹೇಳಿದನು ಕ್ರಾಸ್ ಮಾಡಿದಾಗ ತಾನು ಸೇಟರ ಮತ್ತು ವಧೂವರರ ಪೂಜೆ ನೋಡಲಿಲ್ಲವೆಂದು ಹೇಳಿದನು

ಗಯಾದಿನ್ ಕುಮಿ ಎಂಬುವರ ಹೇಳಿಕೆಯಲ್ಲಿ ಮದುವೆಯಾದಾಗ ತಾನು ಹಾಜರಿದ್ದೆನೆಂದೂ ಸೇಟರ ಮತ್ತು ವಧೂವರರ ಪೂಜೆ ನಡೆದದ್ದು ನೋಡಿದೆನೆಂದೂ ಹೇಳಿದನು ಕ್ರಾಸ್ ಮಾಡಿದಾಗ ಮುಖಬೀರನು ಸೇಟರ ಮತ್ತು ವಧೂವರರ ಪೂಜೆಯಲ್ಲಿ ಭಾಗವಹಿಸಿದನೋ ಇಲ್ಲವೋ ತಿಳಿಯದು ತಾನು ನೋಡುವುದಕ್ಕೆ ಬಂದಿದ್ದನಲ್ಲದೆ ಹೆಚ್ಚಾಗಿ ನಿಲ್ಲಿಸಲು ಕಾರಣವಿಲ್ಲವೆಂದು ಹೇಳಿದನು

ರಾಧಾರ್‌ಸಿ ಎಂಬುವನು ವಧೂವರರಿಗೆ ಮದುವೆಯಾಯಿತೆಂದು ಮಾತ್ರ ಹೇಳಿದನು ಅಪರಾಧಿಯು ಯಾವ ಸಾಕ್ಷ್ಯಗಳನ್ನೂ ಕರೆದೆ ನಡೆದದ್ದಲ್ಲವು ವಿವಾಹಾಂಗಗಳೇ ಹೊರತು ಬಾಲ್ಯವಿವಾಹನಿರೋಧ ಆಕ್ಟಿನಲ್ಲಿ ಹೇಳಿರುವಂತೆ ಪೂರ್ಣವಿವಾಹವಲ್ಲವೆಂಬ ಒಂದೇ ವಿಷಯವನ್ನು ಪ್ರತಿಪಾದಿಸಿದನು

ಮೇಲ್ಕಂಡ ಆ ಕಾಗದಿಂದ ಫಿರ್ಯಾದಿಯ ಸ್ಥಿತಿಯು ಚೆನ್ನಾಗಿ ಸ್ಥಿರಪಟ್ಟಿರತ್ತದೆ ಆತನು ಮದುವೆಯಾದ ಮತ್ತು ಇನ್ನೊಬ್ಬ ಹುಡುಗಿಯ ಜನಕ ತಂದೆಯೆಂದು ಹೇಳಿದ್ದಾನೆ ಆದ್ದರಿಂದ ಅವರ ವಿಷಯದಲ್ಲಿ ಸ್ನೇಹಮಂತನವಿರಬೇಕಾದದ್ದೇ ಆಗಿದೆ ಚೀಫ್‌ಕೋರ್ಟಿಗೆ ಹತ್ತಿದ ಲಿಟಿಗೇಶನ್ ಕೇಸಿನ ನಂತರ ಕೋರ್ಟಿನವರು ಮುಖಬೀರನನ್ನು ಬಿಟ್ಟು, ರಘುಬೀರನನ್ನು ಗಾರ್ಡಿಯನ್ ಆಗಿ ನೇಮಿಸಿದರು

ಫಿರ್ಯಾದಿಯು ತನ್ನ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸಿದ್ದಾನೆ ರಘುಬೀರನ ವರೆಗೂ ಸ್ಪಷ್ಟವಾಗಿ ಮದುವೆಯಾಯಿತೆಂದೂ ಆದರೆ ಹುಡುಗಿಯು ತನ್ನ ಮನೆಯಲ್ಲೇ ಇದ್ದಳೆಂದೂ ಆಕೆ ಗಂಡನ ಮನೆಗೆ ಇನ್ನೂ 6 ವರ್ಷಗಳವರೆಗೂ ಹೋಗುವುದಿಲ್ಲವೆಂದೂ ಒಳ್ಳಗೆ 18 ವರ್ಷ ವಯಸ್ಸಾಗುವುದೆಂದೂ ಹೇಳುತ್ತಾನೆ

ಲಗ್ನವಾದ ಜಗನ್ನಾಥನಾದರೂ ತಾನು ತಪ್ಪಿತಸ್ಥನಲ್ಲವೆಂದು ರೂಲು ಅನುಸರಿಸಿ ತಾನಿನ್ನೂ ಬಾಲಕನೆಂದೂ ತನ್ನ ಮದುವೆಯು ತಮ್ಮ ತಂದೆ ಮತ್ತು ರಘುಬೀರ್ ಇವರಿಂದ ನಿಶ್ಚಯಿಸಲ್ಪಟ್ಟಿತೆಂದೂ ಹೇಳುತ್ತಾನೆ

ಹಾಗೂ ಕುರ್ಮಿಗಳಲ್ಲಿ ನಡೆದುಬಂದಿರುವ ಪದ್ಧತಿ ಪ್ರಕಾರ ಫಿರ್ಯಾದಿಯೂ ಕೂಡ ತನ್ನ ಮಕ್ಕಳಿಗೆ ಬಾಲ್ಯದಲ್ಲೇ ಮದುವೆ ಮಾಡಿದ್ದಾನೆ ಆದರೆ ಮದುವೆಯಾಗಿ 8 ವರ್ಷವಾದರೂ ಇನ್ನೂ ನಿಷೇಕವಾಗಿರುವುದಿಲ್ಲ ಆದರೆ ಫಿರ್ಯಾದಿಯು ಅಪರಾಧಿಗಳಿಗಿಂತ ತಾನು ಉತ್ತಮನೆಂದು ತೋರಿಸಿಕೊಂಡಿರನು

ಶಾರದಾ ಆಕ್ಟಿನ ಆಶಯವು ಬಾಲ್ಯಗರ್ಭಧಾರಣವನ್ನು ತಪ್ಪಿಸುವುದು ಮಾತ್ರವೆಂದಿದ್ದರೆ ಅಪರಾಧಿಯ ಮೇಲೆ ಯಾವ ತಪ್ಪೂ ಇರುವುದಿಲ್ಲ ಬಾಲ್ಯವಿವಾಹ ನಿರೋಧಕ್ಕಾಗಿ ರೂಲು ಹುಟ್ಟದೆಯಿಲ್ಲದೆ ವಿವಾಹವನ್ನು ಆಚರಿಸುವವರಿಗೆ ಹೆಚ್ಚು ಶಿಕ್ಷೆಯನ್ನೇನೂ ವಿಧಿಸಿರುವುದಿಲ್ಲ

ಈಗಿನ ಸಂದರ್ಭದಲ್ಲಾದರೋ ಮದುವೆಯು ಪೂರ್ಣವಾಗಿ ನಡೆದಿರುವುದಿಲ್ಲ ಮದುವೆ ಮಾಡಿಸಿದ ಪಂಡಿತನ ಮೇಲೆ ಯಾವವಿಧವಾದ ಅಪಾದನೆಯೂ ಬಂದಿಲ್ಲ

(ಇದರ ಮುಂದಿನ ಭಾಗವನ್ನು ನೋಡಿ)

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯ ಜನ್ಮವೆತ್ತಿ ಎಳೆ [illegible] ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಎಲ್ಲರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ಮರೆಯದೆ ಬರೆಯುವದು [illegible] ತಿಳಿಸಿದ್ದರೆ ತೊಂದರೆಯಾಗದು.

ಸಂ —

ಪಂಚಾಚಾರ್ಯ ಪ್ರಭಾ.

೧೯೩೫ನೇ ಮೇ ತಾ|| ೬ನೇ ಸೋಮವಾರ

ಎಂಟನೆಯ ವರ್ಷದ ಸಮಾಪ್ತಿ.

ಸನ ೧೯೨೭ನೇ ಇಸವಿಯಲ್ಲಿ [illegible] ಸಂವತ್ಸರದಲ್ಲಿ ಮೂಲಸ್ಥಾನವಾಗಿ ಪರಮ ಪ್ರಸಿದ್ಧವೆನಿಸಿಕೊಂಡಿರುವ ಪ್ರಭವ ನಾಮ ಸಂವತ್ಸರದ ವೈಶಾಖ ಶುದ್ಧ ೩ ಶನಿವಾರದಲ್ಲಿ ಪ್ರಾಪ್ತವಾಗಿದ್ದ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವದ ಪುಣ್ಯದಿವಸದಲ್ಲಿ ವೀರಶೈವ ಮತೋದ್ಧಾರಕ್ಕಾಗಿ ಜನ್ಮವೆತ್ತಿದ ಪಂಚಾಚಾರ್ಯ ಪ್ರಭಾ ಎಂಬ ಹೆಸರಿನ ಈ ಪತ್ರಿಕೆಗೆ ಈ ಶ್ರೀ ಯುವನಾಮ ಸಂವತ್ಸರದ ವೈಶಾಖ ಶುದ್ಧ ೩ ಸೋಮವಾರಕ್ಕೆ ಎಂಟು ವರ್ಷಗಳು ತುಂಬಿ ಒಂಭತ್ತನೆಯ ವರ್ಷವು ಪ್ರಾಪ್ತವಾಗುವುದು. ವೀರಶೈವಮತಸ್ಥಾಪನರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಉಪದೇಶ ರತ್ನಗಳನ್ನು ಅವರಿಂದ ಸ್ಥಾಪಿತವಾದ ವರ್ಣಾಶ್ರಮ ಧರ್ಮಪ್ರತಿಪಾದಕ ವೀರಶೈವ ಮತದ ತತ್ವಗಳನ್ನೂ ಜಗತ್ತಿನಲ್ಲೆಲ್ಲಾ ಪ್ರಕಾಶಿಸುವಂತೆ ಮಾಡಬೇಕೆಂಬ ಸದುದ್ದೇಶದಿಂದ ಜನ್ಮವೆತ್ತಿರುವ ಈ ಪತ್ರಿಕೆಯು ಆ ಪೂಜ್ಯಪಾದರ ಮಹಿಮಾತಿಶಯಗಳನ್ನು ಲೋಕದಲ್ಲೆಲ್ಲಾ ತಿಳಿಯಪಡಿಸಿ ಸರ್ವರನ್ನೂ ಅವರಲ್ಲಿ ಭಕ್ತಿಯುಳ್ಳವರನ್ನಾಗಿ ಮಾಡಿ ತನ್ನ ಪವಿತ್ರಾಭಿಧಾನವನ್ನು ಅನ್ವರ್ಥಮಾಡಿಕೊಂಡಿರುವುದು. ಜಗದ್ವಿಖ್ಯಾತರಾದ ಪಂಚಾಚಾರ್ಯ ಪೂಜ್ಯಪಾದರು ಗಗನಮಾರ್ಗದಿಂದ ಸೇತುಶೀತಾಚಲಪರ್ಯಂತವಾಗಿ ಸಂಚರಿಸಿ, ತಮ್ಮ ಪವಿತ್ರಪಾದವಿನ್ಯಾಸದಿಂದ ಅನೇಕ ಸ್ಥಲಗಳನ್ನು ಪವಿತ್ರಕ್ಷೇತ್ರಗಳನ್ನಾಗಿ ಮಾಡಿದ ವಿಷಯವು ಈ ಪತ್ರಿಕೆಯ ದ್ವಾರಾ ಸರ್ವರಿಗೂ ವೇದ್ಯವಾದುದಾಗಿದೆ. ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮೊದಲಾದ ಮಹರ್ಷಿಪುಂಗವರಿಗೂ, ವಿಭೀಷಣ, ವಿಕ್ರಮಾರ್ಕ, ನೀಲಗಲ, ಚೋಳ, ದೇವನಂದನ, ಗೌತಮೇಂದ್ರ, ಜಯನಂದದೇವ, ಮೊದಲಾದ ಚಕ್ರವರ್ತಿಗಳಿಗೂ ಶಿವಸಿದ್ಧಾಂತವನ್ನು ಉಪದೇಶಿಸಿ ಇವರೆಲ್ಲರನ್ನೂ ಯಾವ ಮಹಾತ್ಮರು ಶಿಷ್ಯರನ್ನಾಗಿ ಮಾಡಿಕೊಂಡು ತಮ್ಮ ಪವಿತ್ರ ಕೀರ್ತಿಯನ್ನು ಜಗತ್ತಿನಲ್ಲೆಲ್ಲಾ ಪ್ರಸರಿಸಿದರೋ, ಅಂಥ ಲೋಕವಂದ್ಯ ಜಗದಾಚಾರ್ಯರ ನಾಮಸಂಕೀರ್ತನವೇ ಈ ನಾಸ್ತಿಕಕಾಲದಲ್ಲಿ ಲುಪ್ತಪ್ರಾಯವಾಗಿದ್ದುದನ್ನು ಕಂಡು, ಆ ಜಗದಾಚಾರ್ಯರ ಪವಿತ್ರಾಭಿಧಾನವನ್ನು ಪ್ರಾರಂಭಮಾಡಿದ ಈ ಪತ್ರಿಕೆಯು ಧರ್ಮಶಾಸ್ತ್ರಾನುಸಂಧಾನ ತನ್ನಲ್ಲಿ ತೋರಡುವ ಅತ್ಯುಜ್ವಲಲೇಖಗಳ ದ್ವಾರಾ ಆ ಮಹಿಮರ ಪುಣ್ಯನಾಮಸಂಕೀರ್ತನವನ್ನು ಜನರೆಲ್ಲರ ನಾಲ್ಗೆಯಲ್ಲಿ ಹರಡುವಂತೆ ಮಾಡಿ, ಆಸ್ತಿಕ ಜನಮನಸ್ಸನ್ನಾನಂದಗೊಳಿಸಿತು. [illegible] ವಿಷಯವನ್ನು ನೋಡಿ ಸಂತೋಷಪಡತಕ್ಕದಾಗಿದೆ. ಜಾತಿಸಾಂಕರ್ಯದ ಪ್ರಭಾವದಿಂದ ಉತ್ತರೋತ್ತರ ಜರ್ಝರಿತವಾಗುತ್ತಿರುವ ಸನಾತನ ಧರ್ಮದ ರಕ್ಷಣೆಯ ಬಗ್ಗೆ ಅನೇಕ ಲೇಖಗಳನ್ನು ಪ್ರಕಟಮಾಡಿ, ಜಾತಿಸಾಂಕರ್ಯವಾದಿಗಳ ದುರಭಿಪ್ರಾಯವನ್ನು ಖಂಡಿಸಿ ಜಾತಿಭೇದವು ನಮ್ಮ ಭರತಖಂಡದಲ್ಲಿ ಅನಾದಿಕಾಲದಿಂದಲೂ ರೂಢಮೂಲವಾಗಿರುವುದೆಂದು ಸಪ್ರಮಾಣವಾಗಿ ಪ್ರತಿಪಾದಿಸುತ್ತ ಜನರ ಮನಸ್ಸನ್ನು ಸನಾತನಧರ್ಮದ ವಿಷಯದಲ್ಲಿ ಅತ್ಯಾದರವುಳ್ಳದ್ದನ್ನಾಗಿ ಮಾಡಿತು. ಪ್ರತಿಯೊಬ್ಬರ ಹೃದಯಭೂಮಿಯಲ್ಲಿ ಗುರುದೇವತಾಭಕ್ತಿರೂಪಬೀಜವನ್ನು ಬಿತ್ತಿ ಅಂಕುರಿಸಿ ಪಲ್ಲವಿಸಿ ಸಲಿಸುವಂತೆ ಮಾಡಿತು. ಈ ಮತದ ಬಗ್ಗೆ ಅನ್ಯಮತೀಯರಲ್ಲುಂಟಾಗಿದ್ದ ನಾನಾ ತರಹದ ಸಂದೇಹಗಳನ್ನು ದೂರಮಾಡಿ ಈ ಮತದ ಉದಾತ್ತತತ್ವಗಳನ್ನು ಸರ್ವರಿಗೂ ತಿಳಿಸಿ, ಸರ್ವಮತೀಯರನ್ನೂ ಆನಂದತುಂದಿಲಹೃದಯರನ್ನಾಗಿ ಮಾಡಿತು. ಅತ್ಯಂತ ಕಠಿನವಾದ ಧರ್ಮಶಾಸ್ತ್ರದ ರಹಸ್ಯವನ್ನು ತಿಳಿಯಲು ಅಸಮರ್ಥರಾದವರೆಲ್ಲರಿಗೂ ತನ್ನ ಸರಳವಾದ ವಾಕ್ಯರಚನೆಯಿಂದ ಈ ಮತದ ಸಿದ್ಧಾಂತವನ್ನು ಮರ್ಮಗಳನ್ನು ಬೋಧಿಸಿ ಅನೇಕರನ್ನು ಮತತತ್ವಜ್ಞರನ್ನಾಗಿ ಮಾಡಿತು. ಈ ರೀತಿಯಾಗಿ ಈ ಪತ್ರಿಕೆಯು ತಾನು ಜನ್ಮವೆತ್ತಿದಂದಿನಿಂದ ಮತೋದ್ಧಾರ [illegible] ಗಳನ್ನು ಸರ್ವತೋಮುಖವಾಗಿ ಮಾಡಿ ಭರತಖಂಡದಲ್ಲಿರುವ ಸಮಸ್ತ ಸತ್ಪುರುಷರ ಪ್ರಶಂಸೆಗೆ ಪಾತ್ರವಾಗಿರುವುದು. ಕೇವಲ ಮತೋದ್ಧಾರಕ್ಕಾಗಿಯೇ ಜನ್ಮವೆತ್ತಿ ಅದರಂತೆ ಕಾರ್ಯವನ್ನು ಕೈಕೊಂಡಿರುವ ಈ ಪತ್ರಿಕೆಯ ಸದುದ್ದೇಶವನ್ನು ಕಂಡು ಅನೇಕಜನ ಗುರುಭಕ್ತರು ಹಗಲಿರುಳೂ ಇದರ ಅಭಿವೃದ್ಧಿಗಾಗಿ ತನುಮನೋಧನಗಳನ್ನರ್ಪಿಸಿ ಪ್ರೀತಿಯಿಂದ ಕಾರ್ಯಮಾಡುತ್ತಿರುವರು. ಮತಸ್ಥಾಪನಾಚಾರ್ಯರ ಪವಿತ್ರಾಭಿಧಾನದಿಂದ ಪ್ರಕಾಶಿಸುತ್ತಿರುವ ಈ ಪತ್ರಿಕೆಯು ಚಿರಕಾಲವಾಗಿ ಬಾಳಿ ಮತೋದ್ಧಾರ ಕಾರ್ಯವನ್ನು ಮಾಡಲೆಂಬ ಸದುದ್ದೇಶದಿಂದ ಭರತಖಂಡದಲ್ಲಿರುವ ಅನೇಕಜನ ಗುರುಭಕ್ತಿ ಪರಾಯಣರು ಈ ಪತ್ರಿಕೆಯ ಅಭಿವೃದ್ಧಿಗಾಗಿ ಲಿಂಗಧಾರಣ ದೀಕ್ಷಾ, ವಿವಾಹ, ಗಣಾರಾಧನ ಮೊದಲಾದ ಶುಭಕಾರ್ಯಗಳಲ್ಲಿ ತಮ್ಮ ತಮ್ಮ ಶಕ್ತ್ಯನುಸಾರವಾಗಿ ದ್ರವ್ಯವನ್ನು ಸಮರ್ಪಿಸಿ ಕಳುಹಿಸುತ್ತಿರುವ ವಿಷಯವು ಪ್ರತಿಪತ್ರದಲ್ಲಿಯೂ ಪ್ರಕಟವಾಗುತ್ತಿರುವ ಸ್ವೀಕಾರದಿಂದಲೇ ವ್ಯಕ್ತವಾಗುವದು. ಇದರಂತೆಯೇ ಪ್ರತಿಯೊಬ್ಬ ಗುರುಭಕ್ತರೂ ಈ ಪತ್ರಿಕೆಯ ಅಭಿವೃದ್ಧಿಗಾಗಿ ಸರ್ವರೀತಿಯಿಂದಲೂ ಸಹಾಯಮಾಡಿ ಶ್ರೀ ಜಗದಾಚಾರ್ಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದಾಶಿಸುತ್ತೇವೆ. ವೀರಶೈವಮತದಲ್ಲಿ ಧರ್ಮಶಾಸ್ತ್ರಾನುಸಾರವಾಗಿ ವರ್ಣಾಶ್ರಮಧರ್ಮಗಳನ್ನು ಪ್ರತಿಪಾದನಮಾಡಿ ಈ ಮತದ ನಿಜಸ್ವರೂಪವನ್ನು ಬೋಧಿಸುವ ಪತ್ರಿಕೆಯೆಂದರೆ ಇದೊಂದೇ ಆಗಿದೆ. ಸದಾ ವೀರಶೈವ ಮತದ ವಿಷಯದಲ್ಲಿ ಶಾಸ್ತ್ರಸಮ್ಮತವಾದ ಲೇಖಗಳನ್ನು ಪ್ರಕಟಿಸಿ, ಸಕಲರಿಗೂ ಧರ್ಮತತ್ತ್ವಮಹತ್ವವನ್ನು ಪಾನಮಾಡಿಸಿ ಸರ್ವರನ್ನೂ ಧರ್ಮನಿರತರನ್ನಾಗಿ ಮಾಡಲು ಪ್ರಯತ್ನಿಸುತ್ತಿರುವ ಈ ಪತ್ರಿಕೆಯ ವಿಷಯದಲ್ಲಿ ಪ್ರತಿಯೊಬ್ಬರೂ ನಿರತಿಶಯವಾದ ಪ್ರೀತಿಯನ್ನಿಟ್ಟು ಚಂದಾದಾರರಾಗಿ ಇದರ ಅಭಿವೃದ್ಧಿಯನ್ನು ಕೋರಬೇಕೆಂದು ಬಯಸುತ್ತೇವೆ. ಜಗದಾಚಾರ್ಯರು ಯಾವಾಗಲೂ ತಮ್ಮ ಸೇವೆಯಲ್ಲಿಯೇ ಕಾಲವನ್ನು ಕಳೆಯುತ್ತಿರುವ ಈ ಪತ್ರಿಕೆಗೆ ಜಯಾಶೀರ್ವಾದಗಳನ್ನನುಗ್ರಹಿಸಿ ಇದರ ವೈಭವವು ಸರ್ವತ್ರ ವ್ಯಾಪಿಸುವಂತೆ ಮಾಡಲೆಂದು ಆ ಪೂಜ್ಯಪಾದರನ್ನು ಅನನ್ಯಸಾಧಾರಣವಾದ ಭಕ್ತಿಭಾವದಿಂದ ಭಜಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ನಿನ್ನೆಯ ದಿವಸ ಬಳ್ಳಾರಿಪ್ರಾಂತದ ಕಡೆಗೆ ಪ್ರಯಾಣ ಮಾಡಿದರು.

ಕಾಂಗ್ರೆಸ್ಸಿನ ಅಧ್ಯಕ್ಷರಾದ ಬಾಬೂ ರಾಜೇಂದ್ರಪ್ರಸಾದರವರು ಮಂಗಳೂರಿಗೆ ಹೋಗುವ ನಿಮಿತ್ತವಾಗಿ ಈ ವಾರದಲ್ಲಿ ರಾಜಧಾನಿಗೆ ಆಗಮಿಸುವರೆಂದು ತಿಳಿದುಬರುತ್ತದೆ.

ಚಕ್ರವರ್ತಿಯವರ ರಜತೋತ್ಸವ ನಿಧಿಗಾಗಿ ಏರ್ಪಡಿಸಲಾಗಿದ್ದ ಸಮಿತಿಯ ಪ್ರಕಟನೆಯ ಪ್ರಕಾರ ಈ ಮೈಸೂರು ಸೀಮೆಯಲ್ಲಿ ಒಟ್ಟು ೩೮,೫೫೧ ರೂಗಳು ಇಲ್ಲಿ ವಸೂಲಾಗಿವೆಯೆಂದು ತಿಳಿದುಬರುತ್ತದೆ.

ನಮ್ಮ ಸರ್ಕಾರದವರು ಗಂಧದ ಮರಕ್ಕೆ ಗಿರಾಕಿಯು ಹೆಚ್ಚಾಗಲೆಂಬ ಉದ್ದೇಶದಿಂದ ಚಿಲ್ಲರೆ ಮತ್ತು ಒಟ್ಟು ಬಿಕರಿ ಬೆಲೆಯನ್ನು ಏಪ್ರಿಲ್ 1 ನೇ ತಾರೀಖಿನಿಂದ 1 ವರ್ಷದ ವರೆಗೆ ಬಹಳವಾಟ್ಟಿಗೆ ಇಳಿಸುತ್ತಾರೆ.

ಮುಂದಿನ ತಿಂಗಳು ೩, ೪ ಮತ್ತು ೫ ನೆಯ ತಾ|| ಗಳಲ್ಲಿ ಮೈಸೂರು ಇಂಜಿನಿಯರುಗಳ ೨೭ ನೆ ವಾರ್ಷಿಕ ಸಮ್ಮೇಳನವು ನಡೆಯುವುದು. ದಿವಾನ್ ಬಹದ್ದೂರ್ ಎನ್ ಎನ್ ಅಯ್ಯಂಗಾರರು ಪ್ರಾರಂಭ ಭಾಷಣವನ್ನು ಮಾಡುವರೆಂದೂ ರಾಜಮಂತ್ರಿಪ್ರವೀಣ ದಿವಾನ್ ಬಹದ್ದೂರ್ ಕೆ ಮ್ಯಾಥನ್‌ರವರು ಅಧ್ಯಕ್ಷರಾಗುವರೆಂದೂ ತಿಳಿದುಬರುತ್ತದೆ.

ತುಮಕೂರು ಡೆಪ್ಯುಟಿ ಕಮಿಷನರ್ ಮಿ|| ಟಿ ಅಬ್ದುಲ್ ಖಾದರ್ ಬಿ ಎ, ಇವರಿಗೆ ಏಪ್ರೆಲ್ ೨೨ ನೆ ತಾರೀಖಿನಿಂದ 13 ದಿವಸ ಪ್ರಿವಿಲೇಜ್ ರಜಾ ಮಂಜೂರಾಗಿರುತ್ತದೆ. ಇವರ ರಜಾ ಕಾಲದಲ್ಲಿ ಅಸಿಸ್ಟೆಂಟ್ ಕಮಿಷನರ್ ಮಿ|| ಕೆ ಶೇಷಾದ್ರಿ ಅಯ್ಯರ್ ಬಿ ಎ, ಇವರು ತಮ್ಮ ಕೆಲಸಗಳ ಜೊತೆಗೆ ಡೆಪ್ಯುಟಿ ಕಮಿಷನರ ಕೆಲಸವನ್ನೂ ನೋಡಿಕೊಳ್ಳುತ್ತಾರೆ.

ಜಾರ್ಜಸಾರ್ವಭೌಮರವರ ಜ್ಯುಬಿಲಿ ಮಹೋತ್ಸವ.

ಜಾರ್ಜ್‌ಸಾರ್ವಭೌಮರವರು ಚಕ್ರವರ್ತಿ ಪಟ್ಟಾಧಿಕಾರವನ್ನು ವಹಿಸಿ ಇಂದಿಗೆ ೨೫ ವರ್ಷಗಳು ಪೂರ್ತಿಯಾದುವು. ಈ ಸಂತೋಷಕ್ಕಾಗಿ ಯೂರೋಪ್ ಖಂಡದಲ್ಲೂ ಭರತಖಂಡದಲ್ಲೂ ಈ ದಿವಸ ಅಸಾಧಾರಣ ವೈಭವದಿಂದ ಸಮಸ್ತ ಪ್ರಜೆಗಳೂ ಚಕ್ರವರ್ತಿಯವರ ಶ್ರೀಯುತ್ಸ್ಮರಣೆಯನ್ನು ಮಾಡುವರು. ಜಾರ್ಜ್ ಚಕ್ರವರ್ತಿಗಳವರು ೨೫ ವರ್ಷಗಳವರೆಗೆ ಅವಿಚ್ಛಿನ್ನವಾಗಿ ರಾಜ್ಯಭಾರಮಾಡಿದ ವಿಷಯವು ಈ ಪ್ರಪಂಚದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕದಾಗಿದೆ. ಇವರ ರಾಜ್ಯಭಾರದಲ್ಲಿ ದೇಶಮಧ್ಯದಲ್ಲಿ ಸುಖಶಾಂತಿಗಳು ನೆಲಸಿ ದೇಶಕ್ಕೆಲ್ಲಾ ಕ್ಷೇಮವಾಗಿದೆ. ಸರ್ವಪ್ರಜೆಗಳನ್ನೂ ಪುತ್ರವಾತ್ಸಲ್ಯದಿಂದ ಪರಿಪಾಲಿಸುತ್ತಿರುವ ಈ ಸಾರ್ವಭೌಮರ ರಾಜ್ಯಭಾರವು ಇನ್ನೂ ಅನೇಕ ವರ್ಷಗಳವರೆಗೆ ನೆರವೇರಲೆಂದೂ, ಶ್ರೀ [illegible] ದೀಶ್ವರನು ಈ ಚಕ್ರವರ್ತಿಯವರಿಗೂ ಚಕ್ರವರ್ತಿನಿಯವರಿಗೂ, ಅವರ ಪುತ್ರಪೌತ್ರಾದಿಗಳಿಗೂ ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದೂ ಆ [illegible]ನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ಭೂಮಿಯಲ್ಲಿ ನಿಧಿಯು ಸಿಕ್ಕಿತು.

ಸ್ಪೇನ್ ದೇಶದ ವೆಲೆನ್ಸಿಯ ಎಂಬಲ್ಲಿ [illegible]ಯೊಬ್ಬನು ಒಂದು ಹಳೇ ಮನೆಯ ನೆಲವನ್ನು [illegible]ಯುತ್ತಿದ್ದಾಗ್ಗೆ ಒಂದು ವಿಚಿತ್ರ ಶಬ್ದವನ್ನು [illegible] ನೋಡುವಲ್ಲಿ ನೆಲದಲ್ಲಿ ಹೂತಿದ್ದ ಒಂದು ಮಣ್ಣಿನ ಪಾತ್ರೆಯನ್ನು ತಾನು ಒಡೆದುಹಾಕಿರುವುದು [illegible] ಬಂದಿತು. ಆ ಪಾತ್ರೆಯಲ್ಲಿ 3,00,000 ರೂಪಾಯಿ ಬೆಲೆಬಾಳುವ ಚಿನ್ನ ಮತ್ತು ನಾಣ್ಯಗಳು ಇದ್ದವೆಂದು ತಿಳಿದುಬಂದಿದೆ.

ವರ್ತಮಾನಸಂಗ್ರಹ.

ಮುಲ್ತಾನಿನಲ್ಲಿ ವೀರಬ್ರ ಎಂಬ ಹಿಂದೂ ವ್ಯಾಪಾರಿಯನ್ನು ಒಬ್ಬ ಮುಸ್ಲಿಮನು ಕಳೆದ ತಿಂಗಳು ೨೩ನೇ ತಾರೀಖಿನ ದಿವಸ ರಾತ್ರಿ ಕೊಲೆಮಾಡಿದ್ದರಿಂದ ಎಲ್ಲೆಲ್ಲೂ ಕೋಲಾಹಲವೆದ್ದಿತು. ಹಿಂದೂ ಮುಸಲ್ಮಾನ ಗಲಭೆಗಳಾಗಬಹುದೆಂಬ ಹೆದರಿಕೆಯಿಂದ ಅಧಿಕಾರಿಗಳು ಜಾಗ್ರತೆಯಾಗಿ ಪೋಲೀಸು ಬಂದೋಬಸ್ತು ಮಾಡಿದ್ದರಿಂದ ಪರಿಸ್ಥಿತಿಯು ಶಾಂತವಾಗಿದೆ ಈ ಸಂದರ್ಭದಲ್ಲಿ 3 ಜನರನ್ನು ದಸ್ತಗಿರಿಮಾಡಿದ್ದಾರೆ

ಗಾಳಿಯಿಂದ ವಿದ್ಯುತ್.

ಕೇವಲ ಗಾಳಿಯಿಂದಲೇ ವಿದ್ಯುಚ್ಛಕ್ತಿಯನ್ನುಂಟು ಮಾಡುವ ಒಂದು ಯಂತ್ರವು ಬೆಲ್‌ಗ್ರೇಡಿನಲ್ಲಿ ತಯಾರಾಗುತ್ತಿದೆ ಇದು ಸರಿಯಾಗಿ ಕೆಲಸಮಾಡುವುದಾದರೆ ಪ್ರಪಂಚಕ್ಕೆ ಮಹೋಪಕಾರವಾಗುವುದರಲ್ಲಿ ಸಂಶಯವಿಲ್ಲ

ಪ್ಯಾರಿಸ್ ಮಹಿಳೆಯರ ಹಿಂದೀ ಅನುಕರಣ!

ಪ್ಯಾರಿಸ್ಸಿನ ಮಹಿಳೆಯರು ಹಿಂದೂ ಸ್ತ್ರೀಯರ ವೇಷವನ್ನು ಅನುಕರಣ ಮಾಡುತ್ತಿರುವರು ಇವರು ಹಿಂದೂ ಸ್ತ್ರೀಯರಂತೆ ಸೀರೆಯನ್ನುಟ್ಟುಕೊಂಡು ಪಾದರಕ್ಷೆ ಧರಿಸುವುದಲ್ಲದೆ ಕಾಲಿಗೆ ಪೆಟ್ಟನ್ನು ಹಾಕಿ ಅವರಂತೆ ನಡಿಗೆಯನ್ನೂ ಅಭ್ಯಾಸಿಸುತ್ತಿರುವರು.

ಹಿಂದೂ ದೇವಾಲಯಕ್ಕೆ ಮಹಮ್ಮದೀಯರ ಸಹಾಯ!

ಉತ್ತರ ಆರ್ಕಾಟ್ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಮಿ|| ಸಿ ಅಬ್ದುಲ್ ಹಕೀಂ ಎಂಬುವರು ತಿರುವಣ್ಣಾಮಲೆಯ ಅರುಣಾಚಲೇಶ್ವರ ದೇವಸ್ಥಾನಕ್ಕೆ ಒಂದು ರಥವನ್ನು ಸಮರ್ಪಿಸಿದರಂತೆ! ಈ ಮಹಾಶಯರ ಸ್ವಧರ್ಮಸ್ಥಿತಿಯು ಪ್ರಶಂಸನೀಯವಾದುದಾಗಿದೆ

ಐರಿಷ್ ಸೈನ್ಯಾಧಿಕಾರಿಗೆ ಶಿಕ್ಷೆ!

ಐರಿಷ್ ರಿಪಬ್ಲಿಕ್ ಸೈನ್ಯದ ನಾಯಕರಾದ ಥಾಮಸ್ ಬ್ಯಾರಿ ಎಂಬುವರು 6 ತಿಂಗಳು ಕಠಿಣಶಿಕ್ಷೆಗೆ ಗುರಿಯಾಗಿದ್ದಾರೆ. ಈ ರಿಪಬ್ಲಿಕನ್ ಸೈನ್ಯವು ಬ್ರಿಟಿಷರನ್ನು ಐರ್ಲೆಂಡಿನಿಂದ ಸಂಪೂರ್ಣ ಹೊರಗೆ ಹಾಕಬೇಕೆಂದು ಪ್ರಯತ್ನಿಸುತ್ತಿದೆಯಂತೆ! ಈ ಸಂಸ್ಥೆಯು ಕಾನೂನಿಗೆ ವಿರುದ್ಧವಾದುದೆಂದು ಪ್ರಕಟವಾಗಿರುತ್ತದೆ

ಪ್ರಸವವೇದನೆಯನ್ನು ಕಡಿಮೆ ಮಾಡಲು ಪ್ರಯತ್ನ!

ಹೆರಿಗೆಯ ಕಾಲದ ಯಾತನೆಯನ್ನು ತಪ್ಪಿಸಿ ಅನಂತರ ದೇಹಕ್ಕೆ ಯಾವ ವಿಧವಾದ ತೊಂದರೆಯನ್ನೂ ಕೊಡದಿರುವ ಔಷಧವನ್ನು ಕಂಡುಹಿಡಿಯಲು ಬ್ರಿಟಿಷ್ ಹೆಲ್ತ್ ಲೀಜನವರು ವಿಶ್ವಪ್ರಯತ್ನವನ್ನು ನಡೆಯಿಸುತ್ತಿದ್ದಾರೆ ಇವರ ಪ್ರಯತ್ನವು ಯಶಸ್ವಿಯಾದರೆ ಪ್ರಪಂಚಕ್ಕೆ ಮಹೋಪಕಾರವಾಗುವುದರಲ್ಲಿ ಸಂಶಯವಿಲ್ಲ

ಜೂಜುಕೋರರ ದಸ್ತಗಿರಿ.

ತ್ರಿಚಿನಾಪಲ್ಲಿಯ ರೈಲ್ವೆಸ್ಟೇಷನ್ ಎದುರಿಗೆ ತೋಪಿನೊಳಗೆ ಇದ್ದ ಮನೆಯೊಂದರಲ್ಲಿ ಬಹಳ ದಿನಗಳಿಂದ ರಹಸ್ಯವಾಗಿ ನಡೆಯುತ್ತಿದ್ದ ಜೂಜಿನವಿಷಯವು ಪೋಲೀಸರಿಗೆ ತಿಳಿದಿದ್ದರಿಂದ 5 ಜನ ಸಬ್ ಇನ್ಸ್‌ಪೆಕ್ಟರು ಮತ್ತು ಹಲವು ಕಾನ್‌ಸ್ಟೇಬಲುಗಳೂ ಮನೆಯನ್ನು ಮುತ್ತಿಗೆಹಾಕಿ ಆಡುತ್ತಿದ್ದ 15 ಜನ ಹಿಂದೂ ಮುಸಲ್ಮಾನರನ್ನು ಹಿಡಿದು ಛಾರ್ಜುಮಾಡಿರುತ್ತಾರೆ

ಆಕಾಶದಲ್ಲಿ ಸಂಚರಿಸುವ ಮೋಟಾರ್ ಸೈಕಲ್.

ಹೊಸಬರೂ ಕೂಡ ನಡೆಯಿಸಬಲ್ಲ ಆಕಾಶದಲ್ಲಿ ಸಂಚರಿಸುವ ಮೋಟಾರ್ ಸೈಕಲ್ಲು ಲಂಡನ್ನಿನಲ್ಲಿ ಪ್ರದರ್ಶಿಸಲ್ಪಟ್ಟಿತು ಇದರ ಬೆಲೆ ಈಗ 375 ಪೌಂಡುಗಳಾದರೂ ಹೆಚ್ಚುಸಂಖ್ಯೆಯ ಮಿಷನ್‌ಗಳು ತಯಾರಾದ ಕೂಡಲೇ ಇಳಿಸಲ್ಪಡಬಹುದು ಇದು ಗಂಟೆಗೆ 75 ಮೈಲು ಹೋಗುತ್ತಿದ್ದು, ಇಷ್ಟು ಮೈಲುಗಳಿಗೆ ಒಟ್ಟು 180 ಪೆಟ್ರೋಲ್ ಮಾತ್ರ ಖರ್ಚಾಗುತ್ತದೆಂದು ತಿಳಿದುಬಂದಿದೆ

ಬೆಂಕಿಯ ಅನಾಹುತ.

ಕಲ್ಕತ್ತಾದ ಗಂಗಾಶಿಣಬಿನ ಕಾರ್ಖಾನೆಗೆ ಬೆಂಕಿ ಬಿದ್ದು 1 ಲಕ್ಷ ರೂಪಾಯಿಗಳವರೆಗೂ ನಷ್ಟವಾಗಿರುತ್ತದೆ. ಬೆಂಕಿಯು ಮೊದಲು ನೆಯ್ಗೆಯ ಕೊಠಡಿಯಲ್ಲಿ ಬಿದ್ದು ಗಾಳಿಯಿದ್ದದ್ದರಿಂದ ಮಿಲ್ಲನ್ನೆಲ್ಲಾ ಆಕ್ರಮಿಸಿ ೧ ಗಂಟೆಗಳ ಕಾಲ ಉರಿಯಿತು ಅನಂತರ ಬೆಂಕಿಯನ್ನಾರಿಸುವ ಯಂತ್ರವು ಬಂದು ಬೆಂಕಿಯನ್ನು ಆರಿಸಿತು ಈ ಮಿಲ್ಲು ಹೌರಾದ ಕಸ್ತೂರಚಂದ್ ಭಗವಾನ್ ದಾಸರವರಿಗೆ ಸೇರಿದ್ದೆಂದು ತಿಳಿದುಬಂದಿದೆ

ರೇಲ್ವೆಗಾಡಿಯಲ್ಲಿ ಆತ್ಮಹತ್ಯೆ.

ಬ್ಲೂಮೌಂಟೆನ್ ಎಕ್ಸ್‌ಪ್ರೆಸ್ ರೈಲು ಸೇಲಮ್ಮಿಗೆ ಸೇರಿದ ಬೊಮ್ಮಿಡಿ ಸ್ಟೇಷನ್‌ಬಳಿ ಹೋಗುತ್ತಿರುವಾಗ, ೩ ನೇ ತರಗತಿಯ ಗಾಡಿಯೊಂದರಿಂದ ಗುಂಡುಹಾರಿಸಿದ ಶಬ್ದವು ಕೇಳಬಂದಿತು ರೈಲನ್ನು ನಿಲ್ಲಿಸಿ ನೋಡಿದಾಗ, ಕೊಯಿಮತ್ತೂರು ಮೋಟರ್ (ವೇಹಿಕಲ್ಸ್) ಇನ್ಸ್‌ಪೆಕ್ಟರ್ ಮಿ|| ಬ್ಯಾಸ್ಕೆಟರು, ರಿವಾಲ್ವರಿನಿಂದ ಸುಟ್ಟುಕೊಂಡು ಆತ್ಮಹತ್ಯೆಮಾಡಿಕೊಂಡಿದ್ದರು ಇವರು ತಮ್ಮ ಸಂಸಾರಸಮೇತ ಪ್ರಯಾಣಮಾಡುತ್ತಿದ್ದರೆಂದೂ ಆತ್ಮಹತ್ಯಾಕಾರಣವು ತಿಳಿದಿಲ್ಲವೆಂದೂ ವೇದ್ಯವಾಗುತ್ತದೆ

ಕ್ಷಯರೋಗಕ್ಕೆ ರಕ್ತ ಚಿಕಿತ್ಸೆ.

ಕ್ಷಯರೋಗ ಪೀಡಿತರಿಗೆ ರಕ್ತ ಚಿಕಿತ್ಸೆಯನ್ನು ಮಾಡಲೇ ಕೂಡದೆಂದು ಸಿದ್ಧಾಂತವಾಗಿದ್ದರೂ ಅದಕ್ಕೆ ವ್ಯತಿರಿಕ್ತವಾಗಿ ಹೊಸ ರಕ್ತವನ್ನು ಕೊಡುವುದರಿಂದ ರೋಗವು ಗುಣವಾಗುವುದಾಗಿ ರಷ್ಯಾದ ಡಾಕ್ಟರುಗಳು ಪತ್ತೆಮಾಡಿದ್ದಾರೆ ಬದುಕುವ ಆಶೆಯನ್ನೇ ಬಿಟ್ಟಿದ್ದ ಅನೇಕ ರೋಗಿಗಳು ಇದರಿಂದ ಗುಣಹೊಂದಿದ್ದಾರೆ ಮಾಸ್ಕೋ ನಗರದ ರಕ್ತ ಚಿಕಿತ್ಸಾಲಯದಲ್ಲಿ 3100 ಕ್ಕಿಂತ ಹೆಚ್ಚು ಸಮರ್ಪಕವಾದ ರಕ್ತ ಚಿಕಿತ್ಸೆಯು ನಡೆದಿದೆ ರಕ್ತಕೊಡುವವನ ದೇಹದಿಂದ ತೆಗೆದ ರಕ್ತವನ್ನು 20 ದಿನಗಳವರೆಗೂ ಕೆಡದಂತೆ ಇಡುವ ವಿಧಾನವನ್ನು ಕಂಡು ಹಿಡಿದಿದ್ದಾರೆ ಈ ರಕ್ತ ಚಿಕಿತ್ಸಾ ವಿಧಾನವನ್ನು ಸ್ಥಿರೀಕರಿಸುವುದಕ್ಕೆ ಎಲ್ಲಾ ದೇಶದ ಶಾಸ್ತ್ರಜ್ಞರೂ, ಮಾಸ್ಕೋವಿನಲ್ಲಿ ಸಭೆಸೇರಲಿದ್ದಾರೆ

ಮದ್ರಾಸ ಇಲಾಖೆಯಲ್ಲಿ ಅಕ್ಕಿಯ ಹುಟ್ಟುವಳಿ.

ಭತ್ತ ಬೆಳೆಯುವವರಿಗೆ ಈಗಿನ ಕಡಿಮೆಧಾರಣೆಯ ಸಲುವಾಗಿ ಹಾನಿಯಾಗಹತ್ತಲು, ಇದರ ವಿಚಾರಣೆ ಮಾಡಲು ಮದ್ರಾಸ ಸರಕಾರದವರು ಒಬ್ಬ ಸ್ಪೆಷಲ್ ಆಫೀಸರರನ್ನು ನೇಮಿಸಿದರು ಅವರು ತಮ್ಮ ವರದಿಯಲ್ಲಿ ಹಿಂದುಸ್ಥಾನದಲ್ಲಿ ಭತ್ತ ಬೆಳೆಯುವ ಪ್ರಾಂತಗಳಲ್ಲಿ ಮದ್ರಾಸ ಇಲಾಖೆಯು ೧ ನೇ ನಂಬರು ಆಗಿದೆಯೆಂದೂ, ಆದರೂ ಅದಕ್ಕೆ ಸಾಕಾದಷ್ಟು ಅಕ್ಕಿಯು ಇಲ್ಲಿ ಆಗುವದಿಲ್ಲವೆಂದೂ, ಆದ್ದರಿಂದ ಹೊರಗಿನಿಂದ ಅಕ್ಕಿಯು ಇಲ್ಲಿ ಬರಲೇಬೇಕೆಂದೂ, ಸಯಾಮದ ಅಕ್ಕಿಯು ದೊಡ್ಡಪ್ರಮಾಣದಿಂದ ಇಲ್ಲಿ ಬರಹತ್ತಿದೆಯೆಂದೂ ಆದರೆ ಅದರ ಬೆಲೆ ಕಡಿಮೆ ಇರುವುದರಿಂದ ಅದು ಬರುವದನ್ನು ನಿಲ್ಲಿಸಬೇಕೆಂದೂ, ಶಿಫಾರಸಮಾಡಿರುವರು ಸರಕಾರಕ್ಕೆ ಇದರ ನಿಜಸ್ಥಿತಿಯನ್ನು ತಿಳಿಯಲಿಕ್ಕೆ ೭ ತಿಂಗಳು ಹತ್ತಿದವು

ಗಂಡನು ಹೆಂಗಸಾದನು!

ಸಿಂಧ್‌ಶಿಕಾರಿಪುರದಲ್ಲಿ ಕೆಲವು ದಿವಸಗಳಿಂದ ಒಬ್ಬ ಹೆಂಗಸು ಮನೆ ಮನೆಗೆ ತಿರುಗಿ ಕೆಲವು ದೊಡ್ಡ ಮನೆತನಸ್ಥರ ಮಕ್ಕಳಿಗೆ ಪಾಠ ಹೇಳುವುದನ್ನು ಗೊತ್ತುಮಾಡಿಕೊಂಡಿದ್ದಳು. ಆದರೆ ಕೆಲವರಿಗೆ ಆಕೆಯ ಶಬ್ದ ನುಡಿಗಳಲ್ಲಿ ಸಂಶಯ ಬಂದು ವಿಚಾರಿಸುವಲ್ಲಿ ಆಕೆಯು ಹೆಂಗಸಾಗಿರದೆ ಬೊಂಬಾಯಿ ಯೂನಿವರ್ಸಿಟಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಯುವಕನೆಂದೂ, ಕೆಲಸ ಸಿಕ್ಕದೇ ಆಹಾರಕ್ಕೆ ಅಭಾವವಾದ್ದರಿಂದ ಹೀಗೆ ವೇಷಬದಲಾಯಿಸಿದನೆಂದೂ ತಿಳಿಯಬಂದಿತು ನಿರುದ್ಯೋಗದ ಪ್ರಭಾವವು ಏನನ್ನು ಮಾಡಲಾರದು?

(೧ ನೆಯ ಪುಟದಿಂದ ಮುಂದುವರಿದುದು)

ಗೌರವ ಸಮಾರಂಭಗಳು ಜರುಗಿದವು ಮುಂತಾದ ಧೈವಿಕವನ್ನು ಇಷ್ಟಕಪಾಲದೊಡನೆ ಶ್ರೀ ಜಗದ್ಗುರುಗಳವರಿಗೆ ಸಹಿತ ಕಾಣಿಕೆಯನ್ನೊಪ್ಪಿಸಿದ ತರುವಾಯ ವೆ|| ಬೀಳಗಿ ಊರು ಮಠದ ಕರಿಬಸಯ್ಯನವರು ಮತ್ತು ವೇ|| ಬೀಳಗಿ ಮಠದ ಮಹಾದೇವಶಾಸ್ತ್ರಿಗಳವರು ಗ್ರಾಮಪತ್ರವನ್ನು ಮಹಾಸ್ವಾಮಿಗಳವರಿಗೆ ಅರ್ಪಿಸಿದರು ಶ್ರೀ ಜಗದ್ಗುರುಗಳವರು ಪಲ್ಲಕ್ಕಿಯಲ್ಲಿ ಮಂಗಲವಾದ್ಯಗಳು ಭೋರ್ಗರೆಯುತ್ತಿರಲು ಮೆರವಣಿಗೆಯಾಗಿ ಸಮಸ್ತ ಜಗದಾಚಾರ್ಯರ ಜಯಜಯಕಾರವನ್ನು ಮಾಡುತ್ತಿರಲು ಬಹು ಮನೋಹರವಾಗಿ ಅಲಂಕರಿಸಲ್ಪಟ್ಟ ರಾಜಬೀದಿಯಲ್ಲಿ ಉತ್ಸವವು ಮುಂದಕ್ಕೆ ಸಾಗಿತು. ಈ ರೀತಿಯಾಗಿ ಈ ಮಹೋತ್ಸವವು ವೈಭವದಿಂದ ದೇವಾಂಗ ಗುರುಭಕ್ತ ಶ್ರೇಷ್ಠರ ಬಸಪ್ಪನವರ ಗೃಹದ ಮುಂಭಾಗದಲ್ಲಿ ರಚಿಸಲ್ಪಟ್ಟ ಸಭಾಮಂಟಪಕ್ಕೆ ಬಂದು ತಲುಪಿತು ಶ್ರೀ ಜಗದ್ಗುರುಗಳವರು ಪಲ್ಲಕ್ಕಿಯಿಂದಿಳಿದು ಸಭಾಮಂಟಪದಲ್ಲಿ ಸುಂದರವಾಗಿ ಅಲಂಕರಿಸಲ್ಪಟ್ಟಿದ್ದ ಸಿಂಹಾಸನವನ್ನಾರೋಹಣಮಾಡಲು ಸಕಲ ಜಗದಾಚಾರ್ಯರ ಜಯ ಜಯಕಾರವು ದಿಗ್ದಿಗಂತವನ್ನು ವ್ಯಾಪಿಸಿತು ಅನಂತರ ಸ್ವಾಗತ ಸಮಿತಿಯವರ ಪರವಾಗಿ ಕಾಲೇಜ ವಿದ್ಯಾರ್ಥಿ ವೆ|| ಬಿ ಎಂ ಮಹೇಶ್ವರಯ್ಯನವರು ಸ್ವಾಗತಪತ್ರವನ್ನೋದಿ ಸಮರ್ಪಿಸಿದರು ಆ ದಿವಸ ಮಹಾ ಸ್ವಾಮಿಗಳವರು ಗುರುಭಕ್ತಿಯ ವಿಷಯವಾಗಿ ಲೌಕಿಕ ಧಾರ್ಮಿಕ ಮತ್ತು ಪಾರಮಾರ್ಥಿಕ ಉದಾಹರಣಸಹಿತವಾಗಿ ಅಪ್ಪಣೆಕೊಡಿಸಿದರು ಅಷ್ಟಕ್ಕೆ ಸಭೆಯು ಸಮಾಪ್ತಿಗೊಂಡಿತು ಅಲ್ಲಿಂದ ಶ್ರೀಗಳವರು ಪ್ರತಿನಿತ್ಯವೂ ಸಾಯಂಕಾಲದಲ್ಲಿ ಆಷ್ಟಾವರಣ ಪಂಚಾಚಾರ ಷಟ್‌ಸ್ಥಲ ಮೊದಲಾದ ವೀರಶೈವ ಸಿದ್ಧಾಂತವನ್ನು ಸುಲಭಶೈಲಿಯಲ್ಲಿ ಸವಿಸ್ತಾರವಾಗಿ ಬೋಧಿಸುತ್ತಿರುವಲ್ಲಿ ತಾ|| 24-4-35 ಬುಧವಾರ ಶ್ರೀ ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ ಚರಪಟ್ಟಾಧ್ಯಕ್ಷ ಶ್ರೀ ೧೦೦೮ ಜಗದ್ಗುರು ಭೀಮಾಶಂಕರ ಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಶ್ರೀ|| ಮಹಾಸನ್ನಿಧಿಯ ದರ್ಶನಕ್ಕೋಸ್ಕರ ದಯಮಾಡಿಸಿ ಪುರದ ಹೊರಗಡೆ ಇರುವ ಬಿಲ್ವವೃಕ್ಷದ ಬಳಿ ಮುಂಚಿತರಲು ಶ್ರೀ ಜಗದ್ಗುರುಗಳವರು ಗ್ರಾಮಸ್ಥರೊಂದಿಗೆ ಎದುರುಗೊಂಡು ಕುಶಲಪ್ರಶ್ನೆಗಳಾದ ತರುವಾಯ ಉಭಯ ಜಗದ್ಗುರುಗಳನ್ನು ಎರಡು ಪಲ್ಲಕ್ಕಿಗಳಲ್ಲಿ ಮೂರ್ತಿಮಾಡಿಸಿಕೊಂಡು ಅಲಂಕೃತವಾದ ಪುರವೀಥಿಯಲ್ಲಿ ಮೆರವಣಿಗೆ ನಡೆಸಿ ಆತಿ ವಿಜೃಂಭಣೆಯಿಂದ ವೇ|| ಬಿ ಎಂ ಮಹಾದೇವಶಾಸ್ತ್ರಿಗಳವರ ಸ್ವಾಗತ ಪೂಜಾಸಮಾರಂಭಕ್ಕೆ ಇದಿರಿಸುವರ ಮನೆಗೆ ದಯಮಾಡಿಸಿ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಪಾದಪೂಜಾ ವಗೈರೆ ಆದ ತರುವಾಯ ನೆರೆದಿದ್ದ ಗೃಹಮಹೇಶ್ವರರಿಗೆ ಅನ್ನ ಸಂತರ್ಪಣೆ ನಡೆಸಲ್ಪಟ್ಟಿತು ಆ ದಿವಸ ಸಾಯಂಕಾಲದ ಸಭೆಯಲ್ಲಿ ಉಭಯ ಜಗದ್ಗುರುಗಳವರು ಗುರುಭಕ್ತಿ ವಿಚಾರವಾಗಿ ಸಪ್ರಮಾಣವಾಗಿ ಬೋಧಿಸಿ ಸರ್ವರನ್ನು ಆನಂದಸಾಗರದಲ್ಲಿ ಓಲಾಡುವಂತೆ ಮಾಡಿದರು ಮರುದಿವಸ ಪೂಜಾಸಮಾರಂಭಗಳನ್ನು ತೀರಿಸಿಕೊಂಡು ಕೇದಾರ ಜಗದ್ಗುರುಗಳವರು ತಮ್ಮ ಮೊಕ್ಕಾಂ ಸ್ಥಳವಾದ ಕಲಬುರ್ಗಿಗೆ ದಯಮಾಡಿಸಿದರು ಉಭಯ ಮಹಾಸನ್ನಿಧಿಯಲ್ಲಿ ಹಿರೇಹಡಗಲಿ ಪುರಾಣಿಕಮಠದ ವೆ|| ಬಿದರಿಕಲ್ಲ ಶಾಸ್ತ್ರಿಗಳವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಮಹತ್ವ ಮತ್ತು ಮಹಿಮೆಗಳನ್ನು ಶಿವಕೀರ್ತನಮೂಲಕ ಪ್ರಕಟಪಡಿಸಿದರು ಅಷ್ಟರಲ್ಲೇ ಮಹಾಶಿವರಾತ್ರಿಯ ವೈಶಾಖ ಶು|| ೩ ಯಲ್ಲಿ ಜರಗುವ (ಶ್ರೀ ದಾರುಕ ಜಯಂತಿ) ಶ್ರೀ ಮರುಳಸಿದ್ಧೇಶ್ವರ ರಥೋತ್ಸವವನ್ನು ನೆರವೇರಿಸುವುದಕ್ಕಾಗಿ ಉಜ್ಜಯಿನಿಗೆ ದಯಮಾಡಿಸಲಿಕ್ಕಿದ್ದಾರೆ.

ಕಳೆದ ವರುಷ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಸಹ ನಮ್ಮ ಗ್ರಾಮಕ್ಕೆ ದಯಮಾಡಿಸಿದ ವಿಷಯವು ಸರ್ವರಿಗೂ ವಿದಿತವೇ ಇದೆ ಆದರೆ ಕೇವಲ ಅಲ್ಪಾವಧಿಯಲ್ಲಿಯೇ ಶ್ರೀ ಶ್ರೀಶೈಲ ಜಗದ್ಗುರುಗಳವರು ದಯಮಾಡಿಸಿ ದರ್ಶನಾಶೀರ್ವಾದಗಳನ್ನಿತ್ತು ನಮ್ಮನ್ನು ಉದ್ಧಾರಮಾಡಿದ್ದು ನಮ್ಮ ಪೂರ್ವಾರ್ಜಿತಪುಣ್ಯವಿಶೇಷವೆಂದೇ ಭಾವಿಸಬೇಕಾಗಿದೆ ಈ ಮಹೋತ್ಸವದ ವೈಭವವನ್ನು ಕಣ್ಣಾರೆ ಕಂಡ ಭಕ್ತರುಗಳೇ ಧನ್ಯ! ಗುರುಬೋಧೆಯನ್ನು ಕೇಳಿದ ಕರ್ಣಗಳೇ ಪವಿತ್ರ! ಈ ಗುರುಸೇವೆಯನ್ನು ಪಡೆದ ನಮ್ಮ ಜನ್ಮವೇ ಸಾರ್ಥಕ!!

ಭಕ್ತಕಿಂಕರ.

(೩ನೇ ಪುಟದಿಂದ ಮುಂದುವರಿದುದು)

ಈಗಿನ ಸಂದರ್ಭದಲ್ಲಿ ವಿವಾಹದ ಸಮಾನ್ಯವಿಧಿಗಳೆನಿಸಿ [illegible] ಕಾಣುತ್ತದೆ ಅದರ ಆಯಾ ಮತಾಚಾರಗಳಿಗೆ ಅನುಸರಿಸಿ [illegible] ಮದುವೆಯನ್ನು ಪೂರ್ಣಮಾಡಿ [illegible]

ಈ ಕುಟುಂಬಗಳ ಆಚಾರವಿಚಾರ ಸಂಪ್ರದಾಯ [illegible] ಮದುವೆಯು ಪೂರ್ಣವಾಗ [illegible] ಗಂಡನ ಮನೆಗೆ ಹೋಗುವ ಮೊದಲು ವಿಶೇಷವು ನಡೆಯಬೇಕೆಂಬ ದೇನೂ ಸಾಕ್ಷ್ಯ ಸ್ಥಿರಪಟ್ಟಿದೆ

ಮೇಲ್ಕಂಡ ಕಾರಣಗಳ ದೆಸೆಯಿಂದ ಮದುವೆಯು ಪೂರ್ಣವಾಗಲಿಲ್ಲವೆಂದು ಹೇಳುತ್ತೇನೆ ಆದಕಾರಣ ಆಪಾದಿತರು ವಿಚಾರಣೆಮಾಡಲ್ಪಟ್ಟಿದ್ದಾರೆ [illegible] ಇಲ್ಲ [illegible] ಮದುವೆಯು ಪೂರ್ಣವಾದರೆ ಮಾತ್ರ ಶಾರದಾ ಆಕ್ಟಿನ ಪ್ರಕಾರ ಶಿಕ್ಷಿತರಾಗುತ್ತಾರೆ

ಫಿರ್ಯಾದಿಯು ಸೆಕ್ಯೂರಿಟಿಯಾಗಿ ಕೊಟ್ಟಿದ್ದ 100 ರೂ [illegible] ಹಿಂತಿರುಗಿ ಕೊಟ್ಟುಬಿಡತಕ್ಕದ್ದು

(Sd) H. I. BARLOW I.C.S.

Dist. Magistrate

ಚೀಫ್‌ಕೋರ್ಟಿನ ಚೀಫ್‌ಜಡ್ಜರವರ ಜಡ್ಜ್‌ಮೆಂಟ್

ಅಕ್ಟೋಬರ್ 15 [illegible]

ಈ ಕೇಸು ಕ್ರಿ. ಪ್ರೊ. ಕೋಡ್ 135ನೇ ಸೆಕ್ಷನ್ [illegible] 10-3-1 ರಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು [illegible] ಸೆಟ್ ಅಸೈಡ್ ಮಾಡಿ [illegible] ಕಾರ್ಯ [illegible]

[illegible] ಡಿಸ್ಟ್ರಿಕ್ಟ್ ಜಡ್ಜರಿಂದ [illegible]

[illegible] ಡಿಸ್ಟ್ರಿಕ್ಟ್ ಜಡ್ಜರು [illegible] ಮಾಡಕೂಡದೆಂದೂ [illegible] 31-1-3 ರಲ್ಲಿ [illegible]

[illegible] 193 [illegible] 17 [illegible] ರಾಂಬಕ್ಸ್, [illegible] ಡಿಸ್ಟ್ರಿಕ್ಟ್ ಜಡ್ಜರ ಆಜ್ಞೆಗೆ ವ್ಯತಿರಿಕ್ತವಾಗಿ [illegible] 13 ರಲ್ಲಿ

ನಡೆಸಿದರೆಂದೂ ಶಾರದಾಬಾಲ್ಯವಿವಾಹದ ಆಕ್ಟಿಗನುಸಾರವಾಗಿ ಇವರು ಶಿಕ್ಷ [illegible] ರಾಗಿದ್ದಾರೆಂದೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ರಾಂಬಕ್ಸ್ ಮತ್ತು ಭಗವಾನ್ [illegible] ಇವರನ್ನು ಕ್ರಿ|| ಪ್ರೊ|| ಕೋಡು 201 ಸೆಕ್ಷನ್ ಅನುಸರಿಸಿ ಖುಲಾಸೆಮಾಡಿದ್ದ [illegible] ರಘುವೀರ್ ಮತ್ತು ಜಗನ್ನಾಥ್ ಇವರ ವಿಷಯದ ವಿದ್ಯಮಾನಗಳನ್ನು ವಿಚಾರಿಸಿ ಮದುವೆಯು ನಡೆಸಲ್ಪಟ್ಟಿಂತ ಕಾಣುಬಂದರೂ ವಿಶೇಷವನ್ನು ನಡೆಯಿಸಿ ಗಂಡನ ಮನೆಗೆ ಹುಡುಗಿಯನ್ನು ಕಳಿಸುವುದು ನಡೆದಿಲ್ಲವಾದ್ದರಿಂದ ಮದುವೆಯು ಸಾಂಗವಾಗಿ ಪೂರ್ತಿಯಾಗಲಿಲ್ಲವೆಂದೂ ಆದ್ದರಿಂದ ಅವರು ಶಿಕ್ಷೆಗೆ ಒಳಪಡಲಿಲ್ಲವೆಂದೂ ಹೇಳಿ ಆಪಾದಿತರನ್ನು ಬಿಡುಗಡೆಮಾಡಿದರು

ನನ್ನ ಸಮ್ಮುಖದಲ್ಲೇ ಫಿರ್ಯಾದಿಕಡೆ ಲಾಯರು ರಾಮಬಕ್ಸ್ ಮತ್ತು ಭಗವಾನ್‌ದಾಸ್ ರು ಬರೀ ಪ್ರೇಕ್ಷಕರಾಗಿದ್ದರೇ ಹೊರತು ವಿವಾಹದಲ್ಲಿ ಭಾಗವಹಿಸಲಿಲ್ಲವೆಂದು ಒಪ್ಪಿಕೊಂಡಿದ್ದಾರೆ ಹುಡುಗಿಯ ಗಂಡನಾದ ಜಗನ್ನಾಥನಾದರೋ ತಾನು ಮೈನರ್ ಎಂದು ಹೇಳಿ ಜವಾಬ್ದಾರಿಯನ್ನೆಲ್ಲಾ ರಘುವೀರನ ಮೇಲೆ ಹಾಕಿ [illegible] ಡಿಸ್ಟ್ರಿಕ್ಟ್‌ಮ್ಯಾಜಿಸ್ಟ್ರೇಟರಾದರೋ ರಘುವೀರನನ್ನು ವಿಚಾರಣೆಮಾಡಿ ಖುಲಾಸೆಮಾಡಿದ್ದಾರಲ್ಲದೆ ತಪ್ಪೇ ಇಲ್ಲವೆಂದು ಡಿಸ್ಚಾರ್ಜ್‌ಮಾಡಿರುವುದಿಲ್ಲ

ಲೋಕಲ್ ಗವರ್ನ್‌ಮೆಂಟಿನವರೇ ಆಪಾದಿಯು ಬಿಡುಗಡೆಯ ವಿಷಯದಲ್ಲಿ ಕ್ರಿ|| ಪ್ರೊ|| ಕೋಡು 417 ನೇ ಸೆಕ್ಷನ್ ಪ್ರಕಾರ ಅಪೀಲುಮಾಡದೆ ಸುಮ್ಮನಿರುವಲ್ಲಿ ನಾನು ಇದರಲ್ಲಿ ಪ್ರವೇಶಮಾಡುವುದು ಎಷ್ಟರಮಟ್ಟಿಗೆ ನ್ಯಾಯಸಮ್ಮತವೆಂಬುದನ್ನು ಯೋಚಿಸಬೇಕಾಗಿದೆ

ಸರ್ಕಾರವು ಇಷ್ಟಪಟ್ಟರೆ ಕೆಳಗಿನ ಕೋರ್ಟಿನ ತೀರ್ಮಾನವನ್ನು ಪುನರ್ವಿಮರ್ಶೆ ಮಾಡುವ ಅಧಿಕಾರವನ್ನು ಕ್ರಿ. ಪ್ರೊ. ಕೋಡು 439 ನೇ ಸೆಕ್ಷನ್ ಪ್ರಕಾರ ಹೈಕೋರ್ಟು ಹೊಂದಿದೆ ಆದರೆ ಈ ಅಪೀಲಿನ ಅಧಿಕಾರವು ಸರ್ಕಾರಕ್ಕೆ [illegible] ಸಾಮಾನ್ಯಜನರಿಗಿರುವುದಿಲ್ಲ ಮತ್ತು ಈ ಅಧಿಕಾರವನ್ನು ಇತರರ [illegible] ಯ ವಲ್ಲಿ ಸಮಯ ನೋಡಿ ಮಾತ್ರ ಈ ಕೋರ್ಟು ಉಪಯೋಗಿಸಬೇಕು

ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮೈನರ ಹುಡುಗಿಗೆ ರಘುವೀರನ [illegible] ಸೇರಿಸಲ್ಪಟ್ಟಿಲ್ಲವೆಂಬ ಕಾರಣದಿಂದ ಫಿರ್ಯಾದಿಯು [illegible] ಈ ಕೇಸು [illegible] ತೋರಿಸಿದ್ದಾರೆ

[illegible] ವಿಷಯದಲ್ಲಿ [illegible] ಆದರೆ ಕೇಸು ವಜಾಮಾಡುವಲ್ಲಿ ಪಾರ್ಟಿಗಳ ಸ್ವಂತ [illegible] ತೋರಿಸುವುದು ಸರಿಯಲ್ಲ [illegible] ಈ ಕೇಸನ್ನು ತೆಗೆದುಕೊಳ್ಳಲು ಸಿದ್ಧನಿಲ್ಲವಾಗಿ [illegible] ಮತ್ತು [illegible] ಫೈಲನ್ನು ಆದಕ್ಕೆ [illegible] ಕೋರ್ಟಿಗೆ ವಾಪಸು ಕಳುಹಿಸಲ್ಪಡತಕ್ಕದ್ದು

(Sd) ಜೆ. ಥಾಮಸ್

ಶ್ರೀ ಜಗದ್ಗುರು [illegible]

ಮಹನೀಯರ ಹಿತೋಕ್ತಿಗಳು

೨೯ ನಮ್ಮ [illegible] ಸನಾತನ [illegible] ಕಲ್ಲಿ ಕನ್ಯಾದಾನವು [illegible] ದಾನವು ದಾನವನ್ನು [illegible] ದಕ್ಷಿಣಸಹಿತ ದಾನವನ್ನು [illegible] ದಾನ [illegible] ದೆಂದು [illegible] ಧರ್ಮವಿಧಿಯು [illegible] ಶ್ರೀಕೃಷ್ಣ [illegible] ಶ್ರೀಕೃಷ್ಣ [illegible] ಈ ವಿಷಯದಲ್ಲಿ [illegible] ಕಟುಕರನ್ನು [illegible] ಮಾಡುವ ಜೀವಹಿಂಸೆ [illegible] ವ್ಯಕ್ತಿಗಳ [illegible] ಇವರ ವ್ಯಕ್ತಿಯು [illegible] ಮಾಡುವುದು [illegible] ಎಂದು ಹೇಳುತ್ತಾರೆ ಮತ್ತು [illegible] ಕನ್ಯಾವಿಕ್ರಯ [illegible] ಈ ಸಭ್ಯತೆಯನ್ನು [illegible]

೩೦ [illegible] ಭೂಮಿಯ [illegible] ನ್ಯಾಯವಾಗಿ [illegible] ಮತ್ತು [illegible] ಕಲ್ಲುಕಂಬದಂತೆ [illegible] ಕಲ್ಲು ಕಂಬವು [illegible] ಧೈರ್ಯದಿಂದ ಸಹಿಸಿಕೊಂಡಿದ್ದು ಸಹನೆ ಅಸಾಧ್ಯವಾದರೆ ಒದೆಯುತ್ತಿರುವವನು

೩೧ 'ಬಡ ಹುಟ್ಟು ಬಡವ ಕಟ್ಟ' ಎಂಬ ನಾಣ್ಣುಡಿಯು ಬಡವನಿಗೆ ಮಾತ್ರವೇ ಸಲ್ಲತಕ್ಕದ್ದಲ್ಲ ಸಾಮಾನ್ಯವಾಗಿ ಬಡವ [illegible] ಭಾಗ್ಯವಂತನಾಗಲಿ [illegible] ಬಿಡುಗಡೆ [illegible] ಸುಲಭಸಾಧ್ಯವಲ್ಲ [illegible] ಬಡವರಿಗೂ ಭಾಗ್ಯವಂತರಿಗೂ ಒಂದೇ ತೆರನಾದ ದುಃಖವುಂಟು [illegible] ಈ ಬಗೆಯಿಂದ [illegible] ಮನಸ್ಸು ಆವಶ್ಯಕವು [illegible] ಸಾಲವು [illegible] ಸುವರ್ಣ [illegible] ಕೊನೆಗೆ ತನ್ನ ಆಸ್ತಿಯನ್ನು ಕಳೆದುಕೊ [illegible] ಆದ್ದರಿಂದ [illegible] ಸಾಲವು [illegible] ವಿಷಯ [illegible]

೩೨ ಮನುಷ್ಯನು [illegible] ನಮ್ಮ [illegible] ಪೌರುಷವೆ? [illegible] ಮಿತ್ರದ್ರೋಹವಾತ್ರವು ಎಂದೆಂದಿಗೂ ಹೋಗುವದಿಲ್ಲ ಅದಕ್ಕೆ ಪರಿಹಾರವೂ ಇಲ್ಲವೆಂದು [illegible] ಅಭಿಮತವಿದೆ ಮತ್ತು 'ಮಿತ್ರದ್ರೋಹೀ ಕೃತಘ್ನಶ್ಚ ಯಶ್ಚ ವಿಶ್ವಾಸಘಾತಕಃ | ತ್ರಯಸ್ತೇ ನರಕಂ ಯಾಂತಿ ಯಾವಚ್ಚಂದ್ರದಿವಾಕರೌ' ಅಂದರೆ ಸ್ನೇಹಿತರಿಗೆ ದ್ರೋಹಮಾಡುವವನು ನಂಬಿದವರಿಗೆ ವಿಶ್ವಾಸಘಾತಕ ಮಾಡುವವನು ಉಪಕಾರವನ್ನು ಮರೆಯುವವನು [illegible] ಈ ಮೂವರೂ ಸೂರ್ಯಚಂದ್ರರಿರುವವರೆಗೆ ನರಕದಲ್ಲಿ ವಾಸಮಾಡುತ್ತಾರೆಂದು ಮಹನೀಯರ ಅಭಿಪ್ರಾಯವು ಆದ್ದರಿಂದ ಇಂಥ [illegible] ಯಾರೂ ಆಶ್ರಯದಾಯಕರಾಗಬಾರದೆಂದು ನನ್ನ ಕಳಕಳಿಯ ಸೂಚನೆಯು

೩೩ ಮನುಷ್ಯನು [illegible] ಕೊಳ್ಳುವುದಕ್ಕೆ ಮುಖ್ಯವಾದ ಉಪಾಯವೆಂದರೆ [illegible] ಸೇವೆಯನ್ನು ಮಾಡುವುದು ಎಂದರೆ ತನ್ನ ಶಕ್ತಿಗನುಸಾರ [illegible] ಹಸಿದವನಿಗೆ ಅನ್ನವನ್ನು ನೀರಡಿಸಿದವನಿಗೆ ನೀರನ್ನು ಬಟ್ಟೆ ಇಲ್ಲದವನಿಗೆ ಬಟ್ಟೆಯನ್ನು ಬಡವನಿಗೆ ಹಣವನ್ನು, [illegible] ವಿದ್ಯೆಯನ್ನು [illegible] ಔಷಧವನ್ನು [illegible] ಬಲವನ್ನು ಅಜ್ಞಾನಿಗಳಿಗೆ ಜ್ಞಾನವನ್ನು ಕೊಟ್ಟು [illegible] ನಮಗೆಲ್ಲಿ [illegible] ತನ್ನ ಬಳಿಗೆ ಬಂದರೆ ಅವರ [illegible] ಸೇವೆಯು [illegible] ಸಾಧನಗಳಾಗಿವೆ

೩೪ ಆಧ್ಯಾತ್ಮಜೀವನವೆಂದರೆ ತಿಳಿದು ಮಾಡುವ [illegible] ಲೋಕವೆಲ್ಲ [illegible] ಮನುಜರೆಲ್ಲ [illegible] 'ಎಂಬ [illegible] ಈ ಧ್ಯಾನವನ್ನು ಅಭ್ಯಾಸ [illegible] ನಿಮ್ಮ [illegible] ಕೇವಲ [illegible] ಯಿಂದ ಮನಃಪೂರ್ವಕವಾಗಿ 'ಎಲ್ಲರೂ ಸುಖಿನಃ [illegible] ಶಾಂತಿಃ ಶಾಂತಿಃ' ಎಂದು ಉಚ್ಚರಿಸಿರಿ

೩೫ ಈ ಲೋಕಕ್ಕೆ ಬೇಕಾಗಿರುವದು ಭ್ರಾತೃತ್ವ [illegible] ಒಂದೇ ಬಗೆಯ [illegible] ಜನಾಂಗದ ಭ್ರಾತೃತ್ವ [illegible] ಧರ್ಮಭ್ರಾತೃತ್ವ [illegible] ಎಲ್ಲಾ ಮಾನವರ ಭ್ರಾತೃತ್ವ [illegible] ಭ್ರಾತೃತ್ವಗಳು ಬೇಕಾಗಿರುವವು, ಈ ಭ್ರಾತೃತ್ವವೆಂಬುದು [illegible] ವ್ಯಾಪಿಸಿಕೊಂಡಿರುವದು ಮನುಷ್ಯರ [illegible] ಮಾನವ ಭ್ರಾತೃತ್ವದ [illegible] ಮಾನವ ಭ್ರಾತೃತ್ವ [illegible] ಒಂದೇ 'ಮಾನವನ ಸ್ವರಾಜ್ಯ' ವೆಂದೂ ಒಂದೇ [illegible] ಭ್ರಾತೃತ್ವವೆಂದರೂ ಒಂದೇ ಭೂಮಂಡಲದಲ್ಲಿಯೇ [illegible] ಗೋಚರವಾದ 'ದೇವರಾಜ್ಯ' ವೆಂದರೂ ಒಂದೇ [illegible] ವಿಶ್ವಭ್ರಾತೃತ್ವವೆನ್ನುವರು

೩೬ ಸಂಶೋಧಿತ ತತ್ವವು ಯಾವುದು ಸುಮ್ಮನೆ [illegible] ಕೊಂಡಿರುವ ಕಲ್ಪನೆ ಯಾವುದು ಎಂಬುದು [illegible] ಸ್ತ್ರೀಯು ಬೇಗನೆ ತಿಳಿಯುವದು. ವ್ಯವಹಾರದಲ್ಲಿ [illegible] ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದು [illegible]

ಬಿಟ್ಟ ತೀರುವವರು ಯಾವರು ಕುಂದರಾಗಿರುವರು, ಯಾವರು ದುಃಖಕರಾಗಿರುವರು ಎಂಬುದು ಲಾವಣ್ಯ ಸಂಸ್ಕಾರಯುಕ್ತವಾಗಿಯುಂಟು ಎಂದು ಅಶ್ವಘೋಷನಲ್ಲಿ ಈ ಬೋಧಧರ್ಮಿಗಳಲ್ಲಿ ಧರ್ಮಕರವಾಗಿರುವುದು ಅವರ ಅದು ಅವರ ಮೇಲಲ್ಲಿ ಹೋಗಿ ಸ್ವತಂತ್ರ ದೃಷ್ಟಿಯಿಂದ ನೋಡುವರು ಎಲ್ಲದರಲ್ಲಿಯೂ ಪರಮಾತ್ಮ ಸ್ವರೂಪವೆಂದೇ ಎಂಬುದನ್ನು ಕಂಡಿರುವರು ಈ ಒಂದು ಸತ್ಯವು 'ಸತ್ಯಂ, ಶಿವಂ ಸುಂದರಂ' ಎಂಬ ಸ್ವರೂಪವುಳ್ಳದ್ದಾಗಿರುವುದು ಅದು ಒಂದೇ ಒಂದು ಪರಮಾರ್ಥಸತ್ಯವು, ಮಂಗಳಕರವಾದ ಪ್ರೇಮವು ಸೌಂದರ್ಯರಾಶಿಯು

೩೭. ಆತ್ಮಜ್ಞಾನವನ್ನು ಪಡೆದಿರತಕ್ಕವರು ಯಾರು? ಎಲ್ಲ ಸಂಸ್ಕೃತದ ಮೂಲದ ಭಾಷೆಗಳಲ್ಲಿರುವ ಶಾಸ್ತ್ರಗಳನ್ನು ಚನ್ನಾಗಿ ಓದಿಕೊಂಡಿರುವಾತನೂ ಕೂಡ ತಾನು ನಿಶ್ಚಯದಿಂದ ಹಾಗೆ ಹೇಗೆ ಗಾಂಧರ್ವದಲ್ಲಿರುವ ಮನುಷ್ಯರನ್ನು ಎಲ್ಲ ಕಾಲದಲ್ಲೋ ಅದೇ ಮೋಹವೆಂಬ ಕುಸ್ತಿಯಲ್ಲಿರುವನೋ ಅದರಿಂದ ಮನುಷ್ಯರಿಗೆ ಆತ್ಮವಿರೋಧಿಯನ್ನು ಪಡೆಯಲು ಶಕ್ತನಾಗುವದಿಲ್ಲ. ತಾನು ಇಂಥವನು ಎಂದು ತಿಳಿದುಕೊಳ್ಳುವುದಕ್ಕೆ ಅವನಿಗೆ ಗುರು ಓದದವನಾದರೂ ಎಲ್ಲ ಧರ್ಮಗಳನ್ನು ತಿಳಿದವನಾದರೆ ನಿಶ್ಚಯವಾದ ಸ್ವರೂಪವರು ಓದಿದವರಾಗಲಿ ಓದದವರಾಗಲಿ ಅವರನ್ನು ಹೇಗೆ ಎಲ್ಲಿ ನಡೆಯಲಿಲ್ಲ, ಅದರಂತೆ ಶಾಸ್ತ್ರಜ್ಞಾನವಿಲ್ಲದಿದ್ದರೂ ಆತ್ಮಜ್ಞಾನಿಯಾಗಿರುವಾತನು ವಿದ್ವಾಂಸರಿಗಿಂತ ವಿದ್ಯೆಯಿಲ್ಲದವನೆ ಸ್ವಾನುಭವ ಸಾಕ್ಷಾತ್ಕಾರ ಉಂಟುಮಾಡುವುದಕ್ಕೆ ಸಮರ್ಥನಾಗುವನು

೩೮. ಮಾನವನು ಆತ್ಮದೋ ಅಜ್ಞಾನಾಂಧಕಾರದ ಕತ್ತಲೆಯಿಂದ ಆವೃತನೋ ಅಜ್ಞಾನಪಥದವನಾಗಿ ಅಭ್ಯಾಸ ದ ಹಾಗೆ ಆತ್ಮಜ್ಞಾನವಿಲ್ಲದಿದ್ದರೂ ಭವರಂಗದಲ್ಲಿ ಬಂದುಹೋಗುವ ಶರೀರ ವರ್ಗಗಳು ಮಾತ್ರ ನಶ್ವರವೆಂದು ಅನಂತರ ಆತ್ಮದೋ ನಶ್ವರ ಮಾಡುವ ಗೊತ್ತುಗುರಿಯಿಲ್ಲದ ಹಾಗೆ ಹೇಗೋ ಎಲ್ಲಿಗೋ ಅಂತರ್ಧಾನವಾಗುವನು ಆಗ ಬಹುವಿಧವಾಗಿ ಜೀವ ಕೋಟಿಗಳು ಬಗೆಬಗೆಯಾದ ಅನುಭವಗಳನ್ನು ಮಾಡಿದರೂ ಅವನು ಹಿಂದಿರುಗುವುದಿಲ್ಲ ಈ ಮರ್ತ್ಯಲೋಕದಲ್ಲಿ ಯಾರನ್ನು ತನ್ನ ಪ್ರಾಣಪ್ರಿಯರೆಂದು ಭ್ರಮಿಸಿ ಕಳಕೊಂಡನೋ, ಯಾರನ್ನು ತನ್ನ ಸಲುವಾಗಿ ತನ್ನ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧನಾಗಿದ್ದನೋ ಅವರೆಲ್ಲರನ್ನು ಬಿಟ್ಟುಕೊಟ್ಟು ಹೋಗುವನು ಪುನಃ ಹಿಂತಿರುಗಿಯೂ ನೋಡುವದಿಲ್ಲ. ಒಂದು ಮುಹೂರ್ತಮಾತ್ರ ನಿಂತು ಒಂದು ಮಾತನ್ನು ಆಡುವದಿಲ್ಲ! ಹಾಗಾದರೆ ಎಲ್ಲಿಂದ ಬಂದನು ಎಲ್ಲಿಗೆ ಹೋದನು? ಹೀಗೆ ಬಂದು ಹೋಗುವ ಈ ಸಮಯದ ಹಿಂದೆ ವಿಶ್ವದಲ್ಲಿ ಮಾನವ ಜೀವನದಲ್ಲಿ ಆವುದಾದರೂ ಇಲ್ಲವೆ? ಅದಿಲ್ಲದಿದ್ದರೆ ಸುಮ್ಮನೆ ಬಂದು ಹೋಗುವದೇಕೆ? ಎಂಬುದು ಯೋಚಿಸತಕ್ಕ ವಿಷಯವೇ ಸರಿ

೩೯. ಮಾನವನ ಗಮನಾಗಮನಕ್ಕೆ ಉದ್ದೇಶವಿಲ್ಲದೆ ಇಲ್ಲ ಮುಕ್ತಿಯೇ ಉದ್ದೇಶವು ಮುಕ್ತಿ ಎಂದರೆ ಬಿಡುಗಡೆಯು ಪ್ರಕೃತಿಯ ಪಾಶಬಂಧನದಿಂದ ಬಿಡುಗಡೆಯನ್ನು ಹೊಂದಿ ಆತ್ಮ ಸ್ವರೂಪವನ್ನರಿಯುವದೇ ಮುಕ್ತಿಯು ಮಾನವರು ಮಹಾಮಾಯೆಯ ಉಪರಮದಲ್ಲಿ ಶ್ರದ್ಧೆಯಾಗಿ ಜೀವನ್ಮುಕ್ತರಾಗಿರುವನು ಆ ಮಾಯೆಯ ವಿಕಾರವಾದ ಕಟ್ಟಿನಿಂದ ಉದ್ಧಾರವಾಗಿ ಆತ್ಮನ ಅಪಾರವಾದ ಅರಿವಿನಲ್ಲಿ ಬದ್ಧರಾದರೆ ಮುಕ್ತನಾಗುವನು ಅದರಿಂದ ಒಳಹು ಮತ್ತು ಅಂತಃಪ್ರಕೃತಿಯನ್ನು ಸ್ವಾಧೀನಪಡಿಸಿಕೊಂಡು ಆತ್ಮಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಜೀವಿಯ ಲಕ್ಷ್ಯ ಮತ್ತು ಉದ್ದೇಶವೆಂದು ಸರ್ವರೂ ಅರಿತುಕೊಳ್ಳುವರು

ಎಂ. ಮಲ್ಲಿಕಾರ್ಜುನಾರಾಧ್ಯ, ರಂಗಭೂಮಿವಾಸಿಗಳು,
ಮಳವಳ್ಳಿ, ಶಿಷ್ಯರು

ವೀರಶೈವರತ್ನ

ವೇ| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಬೋಧಿಸಿ ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೫೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕಾಗಿ ಆಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಉತ್ಕೃಷ್ಟವಾದುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕರ್ಣಾಟಕದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೆಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೦ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಹೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವದಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ಕರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೬೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ಸಾತತ್ಯನೆಯಂತೆ ಕನ್ಸೆಷನ್ ವಜಾ ಹೋಗಲಾಗಿ **೭ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಗುರುಗಳಾಗಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರು ತಮ್ಮ ಶಿಷ್ಯರ ಪಟ್ಟಿಯನ್ನಿಟ್ಟು ಶಿಷ್ಯರ ಮನೆತನಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಸರಿಪಡಿಸುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವುವು

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೫೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಳಿಗಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ. ಆ. ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮುನೀಂದ್ರರಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಪಟ್ಟ ನಿರಾಲೋಚನವಾತಿಶಯ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಶ್ರೀ ಪಾದಂಗಳವರ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಶ್ರೀ ಪಾದಂಗಳ ಸಂಸ್ಥಾನದ ಮರುಳಸಿದ್ಧನ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ :—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯುವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು.

(Registered Trade Mark)

ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸಿ, ಒಂದು ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸ್ಥಿತಿ ಕೂಡ್ಡ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಪಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಮುಖರು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗುವದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[18] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡನೆಯ ಆವೃತ್ತಿ)	೧ ಆಣೆ
ಸಿದ್ಧಾಂತಶಾಸ್ತ್ರಮಹಿಮೆ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ಥಲಪಟ್ಟಾಭಿದೀಪಿಕೆ	೨ ಆಣೆ
ವೀರಶೈವಮತಸಿದ್ಧಾಂತ	೩ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸಿದ್ಧಾಂತಶಾಸ್ತ್ರದ ವಿಮರ್ಶ ತತ್ತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕಸಾಹಿತ್ಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಪದಚ್ಛೇದ ಸಹಿತ)	೮ ಆಣೆ
ಬಸವಧರ್ಮಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As
ವೀರಶೈವಧರ್ಮ (೪ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य–संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶ್ರೀ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ

9

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯರ್ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿಶರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ ನೇ ಮೇ ೧೯೩೫ [ಸಂಚಿಕೆ ೧

ಪ್ರಸಿದ್ಧಪತ್ರಿಕೆ.

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜು ಫ್ರೀ ಬೋರ್ಡಿಂಗ್ ಸಂಸ್ಥೆಯು.

ಮೇಲ್ಕಂಡ ಸಂಸ್ಥೆಯು ಶ್ರೀ ಜಗದ್ಗುರು ರಂಭಾಪುರಿ ಮಹಾಸ್ವಾಮಿಗಳವರ ಪೋಷಕತ್ವದಲ್ಲಿ ಸ್ಥಾಪಿಸಲ್ಪಟ್ಟು ಅವರ ಆಜ್ಞೆ ಮೇರೆಗೆ ನಡೆಸಲ್ಪಡುತ್ತಿದೆ

ಸದರೀ ಸಂಸ್ಥೆಯಲ್ಲಿ ಸಂಸ್ಕೃತ ಗ್ರಂಥವಿದ್ಯಾಭ್ಯಾಸ ಮತ್ತು ವೇದಾಧ್ಯಯನಮಾಡಬೇಕೆಂಬುವ ವೀರಶೈವವಿದ್ಯಾರ್ಥಿಗಳಿಗೆ ಉಚಿತ ಅಶನ ಮತ್ತು ವಸತಿಗಳನ್ನು ಏರ್ಪಾಡುಮಾಡಿದೆ

ಕಾವ್ಯ, ತರ್ಕ, ವ್ಯಾಕರಣ ಇತ್ಯಾದಿ ಸಂಸ್ಕೃತ ಗ್ರಂಥ ವಿದ್ಯಾಭ್ಯಾಸಮಾಡತಕ್ಕವರಿಗೆ ಮೊದಲು ಸ್ಥಳ ಕೊಡಲಾಗುತ್ತದೆ

ಇಚ್ಛೆಯುಳ್ಳವರು, ಇದೇ ಮೇ ತಿಂಗಳು 31ನೇ ತಾರೀಖಿನೊಳಗಾಗಿ ಮೇಲ್ಕಂಡ ಸಂಸ್ಥೆಯ ಕಾರ್ಯದರ್ಶಿಗಳಿಗೆ ದರಖಾಸ್ತು ಹಾಕಿಕೊಳ್ಳತಕ್ಕದ್ದು. ಈ ತಾರೀಖಿನನಂತರ ಬಂದ ದರಖಾಸ್ತುಗಳಿಗೆ ಗಮನಕೊಡಲಾಗುವುದಿಲ್ಲ.

ಹಿಂದಿನ ಸಾಲು ಸದರೀ ಸಂಸ್ಥೆಯಲ್ಲಿದ್ದುಕೊಂಡು ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳೂ ಸಹ ಈ ಸಾರಿ ಹೊಸದಾಗಿ ದರಖಾಸ್ತು ಹಾಕಿಕೊಳ್ಳತಕ್ಕದ್ದು.

ಶ್ರೀಮಠಾಂತಿಕದ ಚಿಕ್ಕಪೇಟೆ
ಬೆಂಗಳೂರು ಸಿಟಿ (Sd) ಯನ್. ರುದ್ರಯ್ಯ,
ತಾ|| 3-5-35. ಗೌ|| ಕಾರ್ಯದರ್ಶಿ.

ಮಹನೀಯರ ಹಿತೋಕ್ತಿಗಳು.

(ಹಿಂದಿನಿಂದ ಮುಂದೆ ಸಾಗಿದುದು)

೪೦. ಆತ್ಮನು ಯಾರು ಎಂದು ತಿಳಿದುಕೊಳ್ಳುವುದು ಮುಖ್ಯ ವಿಷಯವಾಗಿರುವುದು. ಆತ್ಮನೆಂದರೆ, ಯಾವನು ಶರೀರವಲ್ಲವೋ, ಇಂದ್ರಿಯವಲ್ಲವೋ, ಇಂದ್ರಿಯ ಸಮುಚ್ಚಯವೂ ಅಲ್ಲವೋ ಯಾವನು ಸುಷುಪ್ತಿಕಾಲದಲ್ಲಿಯೂ, ಪ್ರಳಯಕಾಲದಲ್ಲಿಯೂ, ಏಕಮಾತ್ರಾವಶಿಷ್ಟವಸ್ತುವಾಗಿರುವನೋ, ಯಾವನು ಬುದ್ಧ್ಯಾದಿ ಅಂತಃಕರಣವರ್ಗವನ್ನು ಪ್ರಕಾಶಿಸುತ್ತಿರುವನೋ, ಅವನೇ ಆತ್ಮಪುರುಷನು. ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಮೊದಲಾದವುಗಳು ಯಾವನ ಸನ್ನಿಧಾನಸ್ವಭಾವದಿಂದ ಪ್ರೇರಿತಗಳಾಗಿ ಭೃತ್ಯರ ಹಾಗೆ ತಂತಮ್ಮ ವಿಷಯಗಳಲ್ಲಿ ಪ್ರವೃತ್ತಗಳಾಗಿವೆಯೋ ಅವನೇ ಆತ್ಮನು, ಅಹಂಕಾರಾದಿ ದೇಹಪರ್ಯಂತ ಸಮಸ್ತ ಪದಾರ್ಥಗಳೂ, ಸುಖದುಃಖಾದಿ ವಿಷಯಗಳೂ ಘಟಪಟಗಳಂತೆ ಯಾವನಿಂದ ವಿದಿತವಾಗುತ್ತವೆಯೋ, ಆ ನಿತ್ಯಬೋಧಸ್ವರೂಪನಾದ ಪುರುಷನೇ ಆತ್ಮನು. ಅವನು ಬ್ರಾಹ್ಮಣ ಕ್ಷತ್ರಿಯಾದಿ ಯಾವ ವರ್ಣಾಂತರಗಳವನೂ ಅಲ್ಲ. ಅವನಿಗೆ ವರ್ಣಾಶ್ರಮ ವಿಹಿತವಾದ ಆಚಾರ ವ್ಯವಹಾರಗಳಾವವೂ ಇಲ್ಲ. ಅವನಿಗೆ ಧಾರಣಧ್ಯಾನಾದಿ ಯಾವ ಯೋಗವೂ ಇಲ್ಲ. ಅವನು ಈ ದೇಹಾತ್ರಯವೂ ಅಲ್ಲ. ಮಾಯೆಯು ಅಪಸಾರಿತವಾದರೆ ಅವನು ಮಾತ್ರ ಅವಶಿಷ್ಟನಾಗಿ ಉಳಿಯುವನು. ಅವನಿಗೆ ತಂದೆತಾಯಿಗಳಿಲ್ಲ. ಸ್ವರ್ಗಾದಿ ಲೋಕಗಳಿಲ್ಲ; ವೇದವಿಲ್ಲ; ಯಜ್ಞತೀರ್ಥಗಳಿಲ್ಲ; ಸುಷುಪ್ತಿಕಾಲದಲ್ಲಿ ಎಲ್ಲವೂ ವಿಲಯವಾಗಿ ಹೋದರೂ ಅವನು ಮಾತ್ರ ಅವಶಿಷ್ಟನಾಗಿರುವನು. ಅವನು ಸಚ್ಚಿದಾನಂದಮಯನು ಸ್ವಪ್ರಕಾಶದಿಂದ ನಿಖಿಲವಿಶ್ವವನ್ನು ಪ್ರಕಾಶಗೊಳಿಸುತ್ತ, ಸತ್ವಸ್ವಭಾವನಾದ ಧೀಗುಹೆಯ ಅಭ್ಯಂತರವರ್ತಿಯಾದ ಅವ್ಯಾಕೃತಾಕಾಶದಲ್ಲಿ ಸೂರ್ಯನ ಹಾಗೆ ಪ್ರಕಾಶಿಸುತ್ತಿರುವನು. ಘಟವು ಭಗ್ನವಾದರೆ ತನ್ಮಧ್ಯವರ್ತಿಯಾದ ಆಕಾಶವು ಹೇಗೆ ವಿನಷ್ಟವಾಗುವದಿಲ್ಲವೋ, ಹಾಗೆಯೇ ಜನನ-ಹಾನಿಗಳು ನಾಶವಾದರೂ ಅವನು ಮಾತ್ರ ನಾಶವಾಗನು. ನಿತ್ಯನಾಗಿದ್ದಾನೆ. ಇಂಥ ಆತ್ಮನನ್ನು ಸಾಕ್ಷಾತ್ಕಾರಮಾಡಿಕೊಳ್ಳುವದು ಸರ್ವರ ಕರ್ತವ್ಯವು.

೪೧. ಮನುಷ್ಯನು ಸಚ್ಚಿದಾನಂದಮಯನಾದ ಆತ್ಮನನ್ನು ಮರೆತು ಮಾಯಾಪ್ರಪಂಚದಲ್ಲಿ ಪ್ರವೃತ್ತನಾಗಿದ್ದಾನೆ. ಮಾಯಾವರಣವೆಂದರೆ ಕೇವಲ ಭ್ರಾಂತಿಯು. ಇಂದ್ರಿಯಗಳು ಸರ್ವದಾ ಮನುಷ್ಯನನ್ನು ಬಹಿರ್ಮುಖನನ್ನಾಗಿ ಎಳೆದುಕೊಂಡು ಹೋಗುತ್ತಿರುವವು. ಯಾವ ಸ್ಥಾನದಲ್ಲಿ ತಿಳಿದಾತ್ಮನಿದ್ದಾನೋ ಆ ಸ್ಥಾನದಲ್ಲಿಯೇ ಅವನು ಸುಖವನ್ನು ಹುಡುಕುತ್ತಿದ್ದಾನೆ. ದೃಶ್ಯವಸ್ತುಗಳಿಂದ ಸುಖವು ದೊರೆಯುವುದಿಲ್ಲವೆಂಬ ಉಪದೇಶವನ್ನು ಅನೇಕ ಮಹಾತ್ಮರುಗಳಿಂದಲೂ ಕೇಳುತ್ತಿದ್ದಾನೆ, ಆದರೂ ಅದನ್ನು ಗ್ರಹಿಸಿಕೊಳ್ಳಲಿಲ್ಲ. ಸಾಮಾನ್ಯವಾಗಿ ಸ್ವಾನುಭವವಾದ ಹೊರತು ಯಾವುದೂ ದೃಢವಾಗುವದಿಲ್ಲ. ಪತಂಗವು ದೀಪವನ್ನು ಹಣ್ಣೆಂದು ಭ್ರಮಿಸಿ ಅದರಲ್ಲಿ ಹೇಗೆ ಹೋಗಿ ಬೀಳುವದೋ, ಹಾಗೆ ಮಾನವನು ಆಧಾರ ವಿಷಯಸಮೂಹವನ್ನು ಸುಖಜನಕವೆಂದು ಭ್ರಮಿಸಿ ಅದರಲ್ಲಿ ಆಸಕ್ತನಾಗುವನು. ಕೊನೆಗೆ ಘಾತಪ್ರತಿಘಾತಗಳನ್ನು ಹೊಂದಿ ಮಡಿದುಹೋಗುವನು. ಇದೇ ಮಹಾಮಾಯೆಯು ಕಾರ್ಯವು. ಮಾನವನು ಸರ್ಪವನ್ನು ಹಗ್ಗವೆಂದು ಭ್ರಮಿಸಿ ಅದನ್ನು ಹಿಡಿದುಕೊಳ್ಳುವ ಸಲುವಾಗಿ ಓಡುತ್ತಿರುವನು ಆದರೆ.

೪೨. ಮಹಾಮಾಯೆಯು ಮುಗ್ಧಮಾನವನ ಕಾಲನು ಎಲ್ಲರನ್ನೂ ಗ್ರಾಸಮಾಡುತ್ತಿರುವನು. ಪಾಪಾತ್ಮರನ್ನೂ, ಪುಣ್ಯಾತ್ಮರನ್ನೂ, ಪ್ರಜೆಗಳನ್ನೂ ಎಲ್ಲರನ್ನೂ ಗ್ರಾಸಮಾಡುತ್ತಿರುವನು. ಯಾರನ್ನೂ ಬಿಡುವುದಿಲ್ಲ. ಎಲ್ಲರೂ ವಿನಾಶವೆಂಬ ಚರಮಗತಿಯ ಕಡೆಗೆ ಹೋಗುತ್ತಿರುವರು. ನಮ್ಮ ಜ್ಞಾನ, ಶಿಲ್ಪ, ವಿಜ್ಞಾನ ಮೊದಲಾದವುಗಳೆಲ್ಲವೂ ಈ ಅನಿವಾರ್ಯವಾದ ಗತಿಯನ್ನೇ ಹೊಂದಬೇಕಾಗಿದೆ. ಯಾರೂ ಈ ಕರಂಗಗಳಿಗೆ ಬಂಧಕವನ್ನು ಹಾಕುವ ಮಾಡಲಾರರು. ಈ ವಿನಾಶಾಭಿಮುಖಿಯಾದ ಗತಿಯನ್ನು ಯಾರೂ ಒಂದು ಮುಹೂರ್ತಕಾಲದವರೆಗಾದರೂ ನಿಲ್ಲಿಸಲಾರರು. ಮಾನವನಿಗೆ ಈ ರಹಸ್ಯವು ತಿಳಿದಿದ್ದರೂ ಮರವೆಯಲ್ಲಿ ಮಗ್ನನಾಗಿರುವನು. ಇಂದ್ರಿಯಭೋಗದೊಳಗಿರುವುದರಿಂದ ಅದು ಅವನ ಸ್ಮೃತಿಪಥದಲ್ಲಿ ಕಾಲಿಡುವುದಿಲ್ಲ. ಆದರೆ 'ಮೊನ್ನೆ ಮದುವೆಯಾದೆನು ಕರೆದ ಒಂದೆರಡೆಮ್ಮೆ ನನ್ನ ಕೊಂಡೆನು, ಹೊನ್ನು ಬಹುಳುಂಟೆನಗೆ ಸಾಯಲಾರೆನಲು, ಬೆನ್ನ ಬಿಡುವಳೆ ಮೃತ್ಯು ವ್ಯರ್ಥ ಜೀವಾತ್ಮ' ಎಂಬಂತೆ ಕಾಲನು ಮಾತ್ರ ಮಾನವನನ್ನು ಎಂದಿಗೂ ಮರೆಯುವದಿಲ್ಲ. ಆದ್ದರಿಂದ ಎಲೈ ಮನುಜರೇ! ಸಿದ್ಧರಾಗಿರಿ, ನಿಮ್ಮ ಪಾಶವ ಜೀವನಕ್ಕೆ ಉಪರತಿಯನ್ನು ಕಲ್ಪಿಸಿರಿ. ನಿಮ್ಮ ನಿಮ್ಮ ಸ್ವರೂಪವನ್ನು ತಿಳಿಯಿರಿ. ಬಹುದುಃಖಪೂರ್ಣವಾದ ಈ ಜಗತ್ತಿನಲ್ಲಿ ಅಖಂಡೈಕಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಯೋಗಸಾಧನೆಯೇ ಏಕಮಾತ್ರಸಾಧನವಾಗಿರುವುದರಿಂದ ಅದನ್ನು ಅಭ್ಯಾಸಿಸುವುದಕ್ಕೆ ಮೊದಲು ಸಿದ್ಧರಾಗಿರಿ 'ಈಶನ ಕರುಣೆಯು ನಾಶಿಸು ವಿಷಯದ ವಾಸನಹಾಗೆಯೇ' ಸಾಮನವೆ

೪೩. ಉತ್ತಮವಾದ ನರಜನ್ಮ ಮತ್ತು ಇಂದ್ರಿಯಗಳನ್ನು ಪಡೆದು ಈ ಭೂಮಿಯಮೇಲೆ ಜನ್ಮವೆತ್ತಿದ ಯಾವನು, ಸಂಸಾರವೆಂಬ ಸಾಗರದಲ್ಲಿ ಜಾರಿಬಿದ್ದು ಮುಳುಗಿ ತೇಲುತ್ತ ಕಂಗಾಲಾಗಿ ಸಾಯಲಾರದೆ ಕಣ್ಣುಕಣ್ಣು ಬಿಡುತ್ತಿರುವವರನ್ನು ದಡಕ್ಕೆ ತಂದುಹಾಕಿ ಜೀವದಾನವನ್ನು ಮಾಡುವ ಸಾಮರ್ಥ್ಯವುಳ್ಳಂಥ ಆತ್ಮಜ್ಞಾನವನ್ನು ಪಡೆಯುತ್ತಾನೋ ಅವನು ಮಾತ್ರ ಹುಟ್ಟಿದ್ದಕ್ಕೆ ಸಾರ್ಥಕನಾಯಿತು ಹಾಗಲ್ಲದೆ ಮನುಷ್ಯಜನ್ಮವನ್ನು ಪಡೆದೂ ಕೂಡ ಆತ್ಮಜ್ಞಾನದ ಕಡೆಗೆ ಮನಸ್ಸು ಒಲಿಯದೆ ಯಾವನು ಬರಿಯ ಸಂಸಾರದ ರುಚಿಯನ್ನೇ ಚಪ್ಪರಿಸುವನೋ ಅಂಥವನು ಹುಟ್ಟಿದ್ದು ವ್ಯರ್ಥ, ಮತ್ತು ಆತ್ಮಘಾತುಕನು.

೪೪. ಮಾತಾಪಿತೃಗಳನ್ನು ತನ್ನ ಕಾಮಭೋಗಗಳಿಗಾಗಿ ಮಾಡುವ ಪೋಷಣ ಒಳಸಂಚುಗಳಿಂದ ಉಪಯೋಗಿಸಿಕೊಂಡು ಮರೆಯುವ ನೀಚನಾದ ಬಸ್ಸ್ವರ್ಗದಲ್ಲಿ ಹೊರಳಾಡುವುದಕ್ಕೇ ಕಲಿತ ದಟ್ಟದಾರಿದ್ರ್ಯದಿಂದಲೇ ಕಾಲಹಾಕುತ್ತಿದ್ದ ಯಾರದಾದರೂ ಬಾರದಂತೆ ಯಾವುದೋ ಒಂದು ಮೂಲೆಯಲ್ಲಿ ಬಿದ್ದು ಸಾಯುವುದೇ ಲೇಸು?

ಎಂ. ಮಲ್ಲಿಕಾರ್ಜುನಾರಾಧ್ಯ, ರಾಜೇಪಲ್ಲಿ ರು,
ಮಾಗಡಿ ತಾಲ್ಲೂಕು

ಸ್ವೀಕಾರ

ರಾಯಚೂರಿಗೆ ಸೇರಿದ ಜಿಲ್ಲಾ ಲೇಬರ್ ಸಾವಿರದೇವರಮಠದ ಪಟ್ಟಾಧಿಕಾರಮಹೋತ್ಸವಕಾಲದಲ್ಲಿ ನೂತನವಾಗಿ ಅಧಿಕಾರಾರೂಢರಾಗಿರುವ ಶ್ರೀ|| ಷ|| ಬ್ರ|| ವೃಷಭಲಿಂಗ ಶಿವಾಚಾರ್ಯರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 20 ರೂಪಾಯಿಗಳು ಆಯುರ್ವೇದಾಚಾರ್ಯ ಶ್ರೀ|| ಶಿವಕುಮಾರಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಶ್ರೀ ಜಗದ್ಗುರು ರಂಭಾಪುರೀ ಮಹಾಸ್ವಾಮಿಗಳವರು ಮೂಡಗೆರೆ ಡಾಕ್ಟರ್ ಎಂ ಸಿ ನಂಜಪ್ಪನವರ ಗೃಹಕ್ಕೆ ತಾ|| 3-5-35 ರಲ್ಲಿ ಪಾದಪೂಜಾ ನಿಮಿತ್ತವಾಗಿ ದಯಮಾಡಿಸಿದ ಜ್ಞಾಪಕಾರ್ಥವಾಗಿ ಪಂಚಾಚಾರ್ಯಪ್ರಭಾ ಪೋಷಣೆಗಾಗಿ ಸಮರ್ಪಿಸಿದ 2 ರೂಪಾಯಿಗಳು ಇವರ ತೀ|| ಮ|| ರಾ|| ಎಂ. ಸಿ. ಚನ್ನಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹೂವಿನಹಡಗಲಿ ನಿವಾಸಿಗಳಾದ ಸೊಪ್ಪಿನ ಆಡಿವೆಪ್ಪನವರು ತಮ್ಮ ಮೊಮ್ಮಗಳು ಚಿ|| ಕುಂ|| ಸೌ| ಪಕ್ಕೀರವ್ವನನ್ನು ಬಳ್ಳಾರಿ ಡಿ|| ಹರಪನಹಳ್ಳಿ ತಾಲೂಕು ಪೈಕಿ ಶಿವಲಿಂಗನಹಳ್ಳಿ ಗ್ರಾಮದ ಮಾ|| ರಾ|| ಮಲ್ಲಿಕಾರ್ಜುನಪ್ಪನವರ ಸುಪುತ್ರ ಚಿ|| ಚನ್ನಬಸಪ್ಪನಿಗೆ ಕೊಟ್ಟು ವಿವಾಹಮಹೋತ್ಸವವನ್ನು ನಡೆಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರ ಕಡೆಯಿಂದ ಸಮರ್ಪಿಸಲ್ಪಟ್ಟ 1-2-0 ರೂ. ಗಳು ಹೂವಿನಹಡಗಲಿ ಗುರುಸೇವಾಕಿಂಕರ ಶ್ರೀಯುತ ಸೊಪ್ಪಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪ್ರಪಂಚದಲ್ಲಿ ಬರವಣಿಗೆಯಲ್ಲಿ ಮೊದಲನೆಯವನು.

ಮಣಿಪುರದ ಮ|| ರಾ|| ಸಿ. ಲಾಲ್ ಎಂಬುವರು ಮಧ್ಯೆ ನಿಲ್ಲಿಸದೆ ನಿರಾಯಾಸವಾಗಿ ೧೯ ಘಂಟೆ 30 ನಿಮಿಷ 15 ಸೆಕೆಂಡುಗಳಲ್ಲಿ 1000 ಪುಟಗಳನ್ನು ಬರೆದು ಪ್ರಪಂಚದಲ್ಲೆಲ್ಲಾ ಬರವಣಿಗೆಯಲ್ಲಿ ಮೊದಲನೆಯವನೆಂಬುದನ್ನು ಸ್ಥಾಪಿಸಿದರು. ಮೇಲ್ಕಂಡ ಸಮಯದಲ್ಲಿ ಇವರು 125 ಮುಳ್ಳುಗಳನ್ನು ಮುರಿದು 10 ಬುಡ್ಡಿ ಮಸಿಯನ್ನು ಮುಗಿಸಿದರು.

ಪತ್ರವ್ಯವಹಾರ.

ಪಾತ್ರಿಕಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯವರ್ಯ ಶ್ರೀಮಜ್ಜಗದ್ಗುರು ಭಗವತ್ಪಾದ ರೇಣುಕಾಚಾರ್ಯ ಜಯಂತೀಮಹೋತ್ಸವವು.

ಬೆಂಗಳೂರು

[illegible] ಸರ್ವವ್ಯಾಧಿಗಳ [illegible] ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಷ [illegible] ವ್ಯಾಧಿಗಳನ್ನು ಸ್ವಸ್ಥಪಡಿಸಿ [illegible] ಯನ್ನು ಸಹ ಹೆಚ್ಚು ಮಾಡುತ್ತದೆ ಮೂರುಬಿಟ್ಟಿ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಕಿಯನ್ನು ಮಿಶ್ರಮಾಡಿದರೆ ಎಲ್ಲವ [illegible] ವಾಗುವುದು. ಇದನ್ನು [illegible] ಪ್ರತಿ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋ [illegible]

ಬುಡ್ಡಿ ಒಂದಕ್ಕೆ ಕ್ರಯ ರೂ ೦–೬–೦ [illegible]

[illegible] ಒಂದಕ್ಕೆ ಕ್ರಯ ರೂ ೨–೮–೦ [illegible]

ನಿಮ್ಮ ವಿಳಾಸವನ್ನು [illegible]

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[illegible] ಫೋ [illegible] ೫೧೧೦ ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು [illegible]	೨ [illegible]
ಮತ [illegible]	೧ ೬
ಗೀತಾ [illegible]	೧ ಆಣೆ
ಸಿದ್ಧಾಂತ [illegible]	೧ ಆಣೆ
[illegible]	೧ ಆಣೆ
ಶ್ರೀ [illegible] (ಹೊಸ ಆವೃತ್ತಿ)	೧ ಆಣೆ
[illegible] ಶಿವಪೂಜಾ [illegible] (ಹೊಸ ಆವೃತ್ತಿ)	೧ ಆಣೆ
ಬಸವಾದಿ [illegible] (ಹೊಸ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯ ಶತಕ (ಹೊಸ ಆವೃತ್ತಿ)	೨ ಆಣೆ
[illegible]	೨ ಆಣೆ
ಶಿವಶಕ್ತಿ [illegible]	೨ ಆಣೆ
ಶ್ರೀಗುರುತತ್ತ್ವ [illegible]	೨ ಆಣೆ
ಗುರುಪರಂಪರಾ [illegible]	೨ ಆಣೆ
[illegible]	೩ ಆಣೆ
[illegible] (ಹೊಸ ಆವೃತ್ತಿ)	೩ ಆಣೆ
[illegible] (ಹೊಸ ಆವೃತ್ತಿ)	೩ ಆಣೆ
[illegible] (ಹೊಸ ಆವೃತ್ತಿ)	೪ ಆಣೆ
[illegible]	೪ ಆಣೆ
[illegible]	೮ ಆಣೆ
[illegible] ([illegible])	೮ ಆಣೆ
ಬಸವಸಿದ್ಧಾಂತ [illegible] (ಹೊಸ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವು (ಕನ್ನಡ)	೮ ಆಣೆ
पंडित श्रीकाशीनाथशास्त्री यांचें भाषण (मराठी)	आणे
Speeche by Pandit Shri Kashinatha Shastri (English)	12 A.
[illegible] (ಹೊಸ ಆವೃತ್ತಿ)	೧೨ ಆ
ಶ್ರೀ ಜಗದ್ಗುರು [illegible]	೧೨ [illegible]
[illegible] (ಹೊಸ ಆವೃತ್ತಿ)	೧೨ [illegible]
[illegible] (ಶ್ರುತಿ [illegible])	೧೨ ಆ
[illegible]	೧೨ [illegible]
ಸಚಿತ್ರ [illegible] (ಹೊಸ ಆವೃತ್ತಿ)	೧ ರೂ
[illegible] ([illegible])	೧ ರೂ
[illegible] ([illegible])	೧ ರೂ
[illegible] (ಕನ್ನಡ [illegible])	೧ ರೂ
[illegible]	೨ ರೂ
ಶಿವಾದ್ವೈತ [illegible] (ಕನ್ನಡ [illegible])	೮ ರೂ
लिंगधारणचंद्रिका (संस्कृत)	३ रू
महानारायणोपनिषत् (वीरशैवभाष्य संस्कृत)	१ रू
वीरशैवेंदुशेखर (संस्कृत)	१ रू

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ [illegible] ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಪ್ರಕಾಶಕರು—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರಸ್ತೆ [illegible] ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ್ ಪಂಚಾಕ್ಷಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಕೈಲದವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ. ಪಿ ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೭ ನೇ ಮೇ ೧೯೩೫ [ಸಂಚಿಕೆ ೩

ವಡಗೆರೆಯಲ್ಲಿ ಸಮಾಪಿಸಿದ
ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ
ಶ್ರೀ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ

ಸ್ತೋತ್ರರತ್ನಾಷ್ಟಕ

|| ಕಂದ ||

ವಿಲಸದ್ರಂಭಾಪುರಿವರ |
ನಿಲಯನಮಾನಂದಮಯನಸುಸುಸವ ಸುಹರ್ಷೋ ||
ಜ್ವಲಸಫಿನಪರೀಣಾಕನಂ |
ಸಲೆ ಭಜಿಸಲದೆಂತು ದುರಿತಮಿದ ಪುದಿಳೆಯೊಳ್ ||೧

ಅಭಿನವರೇಣುಕ ಯತಿಪ್ರೇ |
ವಿಭವ ಶಿವಾನಂದರಾಜವರ್ಯ ಶಿವಾಖ್ಯ ||
ಅಭಯವನಿತ್ತುರೆ ಸಲಪ್ಪೆ |
ಶುಭದಾಯಕ ವೀರಸಿಂಹಪೀಠಾಧೀಶಾ ||೨

ನಶ್ವರಮಾದೀಜಗಮಂ |
ಶಾಶ್ವತಸುಖಮಯವಗೆಯ್ವ ನೀನೊಲವಿಂದಂ ||
ಈಶ್ವರನಾಜ್ಞೆಯನಾಂತೀ
ವಿಶ್ವಗುರುತ್ವವನು ಪಡೆದುದೆಮ್ಮಯ ಭಾಗ್ಯಂ ||೩||

ದೊರಕುವದೇನಿಹಪರಸುಖ |
ಮರಿಯಲ್ಗುರುಚರಣಭಕ್ತಿ ಪೂರ್ಣಾತ್ಮರಿಗೆ ||
ಹರನಿಂದಧಿಕಂ ಗುರುವೆಂ |
ದೊರೆವುವು ವೇದಾಗಮಾದಿವಚನಸಮುದಯಂ ||೪||

|| ಭಾಮಿನೀ ||

ವೀರಸಿಂಹಾಸನದ ಗುರು ನಿ |
ವಾರಿಪೈ ಪಾಪೌಘವನು ಮಿಗೆ |
ತೋರಿಪೈ ಸುಜ್ಞಾನವನು ಸಲೆ ಬಿತ್ತಿ ಕರುಣೆಯಿಂದೈ ||
ಸಾರಿಪೈ ನಿಗಮೋಕ್ತಿಯನು ಸುಖ |
ದೋರಿಪೈ ಮಿಥ್ಯಾನುಭವವನು |
ದೂರಿಪೈ ಸದ್ಧರ್ಮನಿಯಮಂಗಳನ್ನು ಪಾಲಿಸಿಪೈ ||೫||

ಕುಟಿಲಬಂಧುಗಳಿಂದೆನಗೆ ಸಂ |
ಘಟಿಸಿರುವ ದುಷ್ಕ್ರಾಂತಿಶಿಖಿಯಿಂ |
ಘಟವು ಸುಡುತಿರಲೈದುವರ್ಷಗಳವ ಕಡುನೊಂದು ||
ಚಟುಲಶಕ್ತಿಯು ಕುಂದಿರುವದಿದು |
ದಿಟವು ಗುರುಸನ್ನಿಧಿಯೊಳಿಂದಂ |
ಸಟೆಯನುಡಿಯೆನಿದರ ರಹಸ್ಯವು ಭೀಕರವೆನಿಪುದು ||೬||

|| ಕಂದ ||

ಪಾರನಹಳ್ಳಿಯೊಳಪ್ಪ ನಿ |
ಚಾರಪ್ಪದಯದೊಳು ಸುಜನಾಶ್ರಯದಿಂ ಸಂ ||
ಸಾರಸಮೇತಂ ತವ ಸವ |
ಕಾರುಣ್ಯಕಟಾಕ್ಷದಿಂದ ಪರ್ಷಪ್ಪಯದಿಂ ||೭||

ತಾಪಿಸು ಗುರುರಾಯಾ ಬಹು |
ತಾಪದಿ ನಾಂ ಬಳಲುತಿರ್ಪೆ ಯತಿತತಿಗೇಯಾ ||
ಪಾಪವಿಗತ ನಿರ್ಮಾಯಾ |
ರೂಪಿ ನವನೀತನವನು ನಿರ್ಮಲಕಾಯಾ ||೮||

ಗುಬ್ಬಿ, ಶಿವಕಥಾಪಂಡಿತ ಶಿವರುದ್ರಶಾಸ್ತ್ರಿ,
ತುಮಕೂರು ಗಂಟೇದೇವರ ಮಠ, ಪಾರನಹಳ್ಳಿ

ಹೆಂಗಸು ಧೈರ್ಯವಾಗಿ ಸಿಂಹವನ್ನು ಎದುರಿಸಿದಳು

ಕೊಲ್ಹಾಪುರದ ಒಂದು ಸಿನಿಮಾಕಂಪನಿಯವರು ಚಿತ್ರ ತೆಗೆಯುತ್ತಿದ್ದಾಗ್ಗೆ, ಅದಕ್ಕಾಗಿ ತಂದಿದ್ದ ಸಿಂಹಗಳಲ್ಲೊಂದು ಫಿಲ್ಮಿನ ನಟರಾದ ಮಾರುತಿರಾವ್ ಎಂಬುವರಮೇಲೆ ಬಿದ್ದು ಅವರ ತೋಳನ್ನು ಹಿಡಿದೆಳೆದು ಕೆಡವಿತು ಆಗ ಸಮೀಪದಲ್ಲಿದ್ದ ಮಿಸೆಸ್ ದುರ್ಗಾಬಾಯಿಖೋಟೆಯವರು ಧೈರ್ಯದಿಂದ ಆ ಸಿಂಹದ ಬಾಲವನ್ನು ಹಿಡಿದೆಳೆದು ತಾವು ಗಾಯಗೊಂಡರು ಇಷ್ಟರಲ್ಲಿ ಸಿಂಹಗಳ ಪಾಲಕನು ಬಂದು ಕಷ್ಟದಿಂದ ಸಿಂಹವನ್ನು ಹಕ್ಕೊಟಿಗೆ ತಂದನು ಶ್ರೀಮತಿ ದುರ್ಗಾಬಾಯಿಯವರ ಧೈರ್ಯದಿಂದ ಮಾರುತಿರಾಯರ ಪ್ರಾಣ ಉಳಿಯಿತು

ಜರ್ಮನಿಯ ಪ್ರಚಾರಕಾರ್ಯ

ಜರ್ಮನಿಯವರು ೨೪ ಪುಟಗಳುಳ್ಳ ಎರಡು ಕೋಟಿ ಪುಸ್ತಕಗಳನ್ನು ಅಚ್ಚುಹಾಕಿಸಿ ಪ್ರಜೆಗಳಿಗೆ ಹಂಚುತ್ತಿರುವರಂತೆ ಶತ್ರುಗಳು ವಿಮಾನಗಳ ಮೂಲಕ ಜರ್ಮನ್ ನಗರಗಳನ್ನು ಮುತ್ತಿ ಸಿಡಿಮದ್ದುಗಳನ್ನು ಸುರಿಸುವಾಗ ಪ್ರಜೆಗಳು ಅಪಾಯಕ್ಕೆ ಸಿಕ್ಕದೆ ಹೇಗೆ ತಪ್ಪಿಸಿಕೊಳ್ಳಬೇಕೆಂದು ಈ ಪುಸ್ತಕದಲ್ಲಿ ವಿವರವಾಗಿ ತಿಳಿಸಿರುತ್ತಾರೆ ದೀಪಗಳನು ಆರಿಸುವುದು, ಧೈರ್ಯದಿಂದ ಶಾಂತಚಿತ್ತರಾಗಿ ವರ್ತಿಸುವುದು ವಿಷವಾಯುವಿನ ತೊಂದರೆಯಿಲ್ಲದಂತೆ ಮುಸುಕುಹಾಕಿಕೊಳ್ಳುವುದು, ಇವೆಲ್ಲ ಯುದ್ಧಕಾಲದಲ್ಲಿ ಪ್ರಜೆಗಳು ತಿಳಿದಿರಬೇಕಾದ ವಿಷಯಗಳು—ಹೌಸ್ ಸೂಪರಿಂಟೆಂಡೆಂಟ್ ಎಂಬ ಅಧಿಕಾರಿಯು ಈ ಭಾಗದಲ್ಲಿ ಜನರಿಗೆ ತಿಳುವಳಿಕೆಯನ್ನು ಕೊಡುವನು

ಬ್ರಿಟಿಷ್ ಸ್ತ್ರೀಯ ಸಹಗಮನ

ಇಂಗ್ಲೆಂಡಿನ ಮೇಫೇರ್ ಎಂಬಲ್ಲಿ 31ವರ್ಷ ವಯಸ್ಸಿನ ಹೆಲನ್ ಎಂಬ ಯುವತಿಯು ಗಂಡನೊಂದಿಗೆ ಅನ್ಯೋನ್ಯ ಪ್ರೀತಿಯಿಂದ ಸಂಸಾರಮಾಡಿಕೊಂಡಿದ್ದಳು ಆರ್ಥಿಕದುರ್ದಶೆಗೆ ಸಿಕ್ಕಿ ಈತನು ಬ್ರೈಟನ್ ಎಂಬಲ್ಲಿಯ ಹೋಟೆಲೊಂದರಲ್ಲಿ ವಿಷಪಾನ ಮಾಡಿ ಪ್ರಾಣಬಿಟ್ಟನು ಗಂಡನಲ್ಲಿ ಅತ್ಯಂತ ಪ್ರೀತಿ ಇಟ್ಟಿದ್ದ ಹೆಲನಳು ಗಂಡನನ್ನು ಬಿಟ್ಟು ತಾನು ಜೀವಿಸಿರಲು ಇಷ್ಟವಿಲ್ಲದೆ ತನ್ನ ಗಂಡನು ಪ್ರಾಣಬಿಟ್ಟ ಹೋಟಲಿಗೆ ತಾನೂ ಹೋಗಿ ಅವನ ಕೊಟಡಿಯಲ್ಲಿ ಬಾಗಿಲು ಹಾಕಿಕೊಂಡು ಅವನ ರೇಷ್ಮೆವಸ್ತ್ರದಿಂದಲೇ ನೇಣುಹಾಕಿಕೊಂಡು ಪ್ರಾಣಬಿಟ್ಟಳು ಇವಳ ಕೋರಿಕೆಯಂತೆ ಗಂಡಹೆಂಡರಿಬ್ಬರನ್ನೂ ಒಂದೇ ಸಮಾಧಿಯಲ್ಲಿ ಇಡಲಾಯಿತು ಅವಳ ಮರಣಪತ್ರದಲ್ಲಿ 'ನಾನು ನನ್ನ ಗಂಡನನ್ನು ಆತ್ಮಸಾಕ್ಷಿಯಾಗಿ ಪ್ರೀತಿಸುವೆನಾದ್ದರಿಂದ ಅತನನ್ನು ಸೇರಲು ಹೋಗುವೆನು ಎಂದು ಬರೆದಿದ್ದಾಳೆ ಯಾವ ಜನಾಂಗದವರೇ ದರೂ ನಿಜವಾದ ಸತಿಯು ಪತಿಯನ್ನು ಅನುವರ್ತಿಸುವಳು

ರಷ್ಯನರು ತಮ್ಮ ವಿಜ್ಞಾನ ಶಾಸ್ತ್ರಜ್ಞನನ್ನು ಹೊರಗೆ ಕಳುಹಿಸಲು ಒಪ್ಪಲಿಲ್ಲ

ಪ್ರೊಫೆಸರ್, ಕಾಪಿಟ್ಸ ಎಂಬ ಅತಿ ಕುಶಲನಾದ ರಷ್ಯನ್ ಯುವಕ ವಿಜ್ಞಾನಶಾಸ್ತ್ರಜ್ಞನು ಈಗ ಕೆಲವು ವರ್ಷಗಳಿಂದ ಕೇಂಬ್ರಿಡ್ಜಿನ ಲಾರ್ಡ್ ರೂಥರ್ ಫರ್ಡ್ ಎಂಬ ವಿಜ್ಞಾನಪಂಡಿತರ ಬಳಿ ಕೆಲಸಮಾಡುತ್ತಿದ್ದನು ಈತನ ಶೋಧನಾಶಕ್ತಿಯನ್ನು ನೋಡಿ ಆಶ್ಚರ್ಯಗೊಂಡಿದ ಬ್ರಿಟಿಷ್ ರಾಯಲ್ ಸೊಸೈಟಿಯವರು ಇವನಿಗಾಗಿ ಪ್ರತ್ಯೇಕ ಸಂಶೋಧನಾಲಯವನ್ನೇ ಕಟ್ಟಿಕೊಟ್ಟಿದ್ದರು ಈತನು ವಿಶ್ರಾಂತಿಗಾಗಿ ಸ್ವಲ್ಪಕಾಲ ರಷ್ಯಕ್ಕೆ ಹೋದವನು ಹಿಂತಿರುಗಿ ಬರಲಿಲ್ಲ ರಷ್ಯನರು ತಮ್ಮ ದೇಶದ ವೈಜ್ಞಾನಿಕರ ಸಹಾಯವು ತಮಗೇ ಬೇಕಾಗಿರುವುದರಿಂದ ಆತನು ಅನ್ಯದೇಶಕ್ಕೆ ಹೋಗಕೂಡದೆಂದು ತಡೆದು ಆತನಿಗೋಸ್ಕರ ಮಾಸ್ಕೋ ನಗರದಲ್ಲಿ ಒಂದು ಹೊಸವಸ್ತುಶೋಧನಾಲಯವನ್ನು ಕಟ್ಟಿಸುತ್ತಿದ್ದಾರೆಂದು ತಿಳಿದುಬರುತ್ತದೆ

ಸ್ವೀಕಾರ

ಹಾವೇರಿಯಲ್ಲಿರುವ ಮ|| ರಾ|| ರಾ|| ಚನ್ನಪ್ಪ ಉರುಫ್ ಪುಟ್ಟಪ್ಪ ಮಹಲಿಂಗಶೆಟ್ಟಿಯವರಿಗೂ ಮ|| ರಾ|| ಕರಬಸಪ್ಪ ಸೂರಣಗಪ್ಪ ಯರೇಶೀಮೆ ಹಾವೇರಿ ಇವರ ಪುತ್ರಿ ಚಿ|| ಸೌ|| ಗಂಗವ್ವನಿಗೂ ನಡೆದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ ವರನ ಕಡೆಯಿಂದ 2 ರೂ ಗಳೂ ವಧುವಿನ ಕಡೆಯಿಂದ 1 ರೂ ಯು ಒಟ್ಟು 3 ರೂ ಗಳು ಶ್ರೀ|| ಷ|| ಬ್ರ|| ಚರಪಟ್ಟಾಧ್ಯಕ್ಷ ಶ್ರೀ ಚನ್ನಮಲ್ಲಸ್ವಾಮಿಗಳು ಹೊರಸೂರ ಬಣ್ಣದ ಮಠ ಹಾವೇರಿ ಇವರ ದ್ವಾರಾ ತಲ್ಪಿರುತ್ತವೆ

ಈ ವರ್ಷದ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಕಾಶೀವಿಶ್ವಾರಾಧ್ಯ ಗುರುಕುಲವಾಸಿಗಳು ಬಂಕಾಪುರ ಅರಳೆಲೆ ಮಠದ ಶ್ರೀ ಸಿದ್ಧಲಿಂಗಶರ್ಮರು ರೇಣುಕ ವೈದ್ಯಾಲಯವನ್ನು ಸ್ಥಾಪಿಸಿದ ಜ್ಞಾಪಕಾರ್ಥವಾಗಿ ಪ್ರಭಾಪೋಷಣೆಗೆ ಸಮರ್ಪಿಸಿದ 1 ರೂಪಾಯಿ ತಲ್ಪಿರುತ್ತದೆ

ನಾಗಮಂಗಲದಲ್ಲಿರ ವೇ ಮ|| ರಾ|| ಕುರುವೇಕೆರೆ ರುದ್ರಪ್ಪನವರಿಂದ ಶಿವಗಂಗೆ ಶ್ರೀ ಶಿವರುದ್ರಯ್ಯನವರ ಸೋದರಸೊಸೆ ಹೊನ್ನಮ್ಮನ ಲಗ್ನಕಾಲದಲ್ಲಿ ವಧೂವರರ ಪರವಾಗಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ಶಿವಗಂಗೆ ದೇಶದಶೆಟ್ಟರು ಪುಟ್ಟಹೊನ್ನಶೆಟ್ಟರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪತ್ರವ್ಯವಹಾರ.

ವಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

—

ಶ್ರೀಗುರವೇ ನಮಃ

ಜಗದಾಚಾರ್ಯರ ಜಯಂತಿಯೋ ಅಥವಾ ಜಾತ್ರೆಯೋ

ಹಾಂಗಿ

—

ಪ್ರಿಯ ಅನುಕೂಲವಾಗಿರುವರೇ! ಈಗಿನ ಕಾಲದಲ್ಲಿ ಹಲಕೆಲವರು ಪ್ರತಿವರ್ಷವೂ ವೇದಶಾಸ್ತ್ರ ಪುರಾಣಗಳನ್ನು ಎಲ್ಲಾ ಸುಳ್ಳು ಸುಖವೇ ಸ್ವರ್ಗ ದುಃಖವೇ ನರಕ ಮರಣವೇ ಮೋಕ್ಷ ಎಂದು ನಾಸ್ತಿಕಮತವನ್ನು ಹರಡಿಸುತ್ತಿದ್ದಾರೆ. ಅದು ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿಯೂ ನಮ್ಮ ಸಮಾಜದ ಭಕ್ತಿಯಿಂತೆ ಈ ವರುಷವೂ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಜಯಂತ್ಯುತ್ಸವಗಳು ಅತಿ ವೈಭವದಿಂದ ನೆರವೇರಿಸಲ್ಪಟ್ಟವು. ಪಾರ್ಶ್ವದಲ್ಲಿಯ ಪ್ರಕಾರ ಈ ವರುಷವಾದರೂ ಚೈ|| ಬ|| ೩೦ ಅಮಾವಾಸ್ಯೆ ಮೊದಲುಗೊಂಡು ವೈ|| ಶು|| ಪಂಚಮಿ ಪರ್ಯಂತ ಪ್ರತಿದಿವಸದಲ್ಲಿ ಗುಡಿ ಮಾರನಹಳ್ಳಿ ಮಲ್ಲಿಕಾರ್ಜುನಪ್ಪನವರು ಬೆಂಗಳೂರು ಈ ಸದ್ಭಕ್ತಶಿರೋಮಣಿಗಳು ಭಕ್ತಿಪುರಸ್ಸರವಾಗಿ ಅರ್ಪಿಸಿದ ಶ್ರೀ ಜಗದಾಚಾರ್ಯರ ಪಂಚಲೋಹದ ಲಿಂಗೋದ್ಭವ ಮೂರ್ತಿಗಳೂ ಹಾಗೂ ಸುಸಜ್ಜಿತರಾಗಿ ದಿವ್ಯದೇಹಧಾರಿಗಳಾಗಿ ತೋರುವ ಶ್ರೀ ಚನ್ನಬಸವಸ್ವಾಮಿಗಳವರ ಪಿ ರೇಷ್ಮೆ ರುದ್ರಾಭಿಷೇಕವು ನಡೆದು ಪ್ರತಿದಿವಸದಲ್ಲಿಯೂ ಅಪರಿಮಿತ ಭಕ್ತವಾಗೋಷ್ಠರರು ಪಂಚಾಮೃತದಿಂದ ಸಂತೃಪ್ತರಾಗುತ್ತಿದ್ದರು. ವೈಶಾಖ ಶು|| ೪ ಬುಧವಾರ ತಾ|| ೨೨-೪-೩೧ ನೆಯ ದಿವಸ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯ ಮಹೋತ್ಸವನಿಮಿತ್ತವಾಗಿ ಬಂಗಳೂರಿನ ಶ್ರೀ ರೇವಣಸಿದ್ಧೇಶ್ವರ ವಾಚನಾಲಯದ ಕಾರ್ಯಕಾರಿಮಂಡಳಿಯವರು ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘವನ್ನು ಮತ್ತು ಶಿವಾನಂದಿ ಕೋಲಾಟವನ್ನು ಗಣಾರಾಧನೆ, ಅನ್ನಸಂತರ್ಪಣೆಗಳೊಂದಿಗೆ ಬಂದರು. ಹಾಗೂ ಚಿಕ್ಕಲಾಲ್‌ಬಾಗಿಯ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘದವರ ಆಗಮಿಸಿದ್ದರು. ಆ ದಿವಸ ರಾತ್ರಿ ೮ ಘಂಟೆಗೆ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಮೂರ್ತಿಗೊಳಿಸಿ ಅದ್ದೂರಿಯ ಮಹೋತ್ಸವವನ್ನು ವೈಭವದಿಂದ ನೆರವೇರಿಸಿದರು. ಈ ದಿವಸವಂತೂ ಸಾವಿರಾರು ಜನರು ಸಂತೃಪ್ತರಾದರು. ವೈಶಾಖ ಶು|| ೫ ಮಂಗಳವಾರ ತಾ|| ೨೩-೪-೩೧ ನೆಯ ದಿವಸ ಯಥಾಪ್ರಕಾರ ರುದ್ರಾಭಿಷೇಕಾದಿಗಳಿಂದ ಪೂಜೆಯಾಗಿ ೩ ಸಾವಿರ ಜನರು ಸಂತೃಪ್ತರಾದರು. ದಿಂಡೂರ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘದ ಮುಖ್ಯರಾದ ಶ್ರೀ ಸಿದ್ದಗಂಗಾಸ್ವಾಮಿಗಳವರು ಒಂದೇ ಪ್ರಸಿದ್ಧ ಭಜನಾಸಂಘದವರನ್ನು ತಂದಿದ್ದರು. ಹುಡುಗರು ತಮ್ಮ ಕೋಮಲವಾದ ಕಂಠದಿಂದ ಸರ್ವರನ್ನು ಆನಂದಗೊಳಿಸಿದರು. ಚಿಕ್ಕಲಗಾಂವ (ದೀಕ್ಷಿತ ಸೆ ಪಾಠಸಂಘ)ದವರು ಶ್ರೀ ಜಗದಾಚಾರ್ಯ ಲಿಂಗೋದ್ಭವಮೂರ್ತಿಯವನ್ನು ಅತ್ಯಂತ ಸುಂದರವಾಗಿ ಒಡೆಯುವ ಜಗದಾಚಾರ್ಯರ ದ್ಯೋತಕಧ್ವಜ (ಪಂಚರಂಗಿಯು)ವನ್ನು ಮತ್ತು ನಿಶಾನೆಗಳನ್ನೂ ಪ್ರತ್ಯೇಕವಾಗಿ ಹಿಡಿದಿದ್ದರು. ನಿಶಾನೆಯನ್ನು ಹಿಡಿದ ವಟುಗಳ ಆಚಾರ ಶಾಸ್ತ್ರಾನುಸಾರವಾದ ಸ್ವರೂಪವನ್ನು ನೋಡಿದ ಜನರೆಲ್ಲರು ನಮ್ಮ ಜನ್ಮವು ನೇತ್ರಗಳು ಸಫಲಗಳಾದವೆಂದು ಹೇಳುತ್ತಿದ್ದರು. ಈ ಚಿಕ್ಕಲಗಾಂವದ ಜಗದಾಚಾರ್ಯರ ಭಜನಾಸಂಘದವರಲ್ಲಿ ಶ್ರೀ ವಿಶ್ವನಾಥಸ್ವಾಮಿ ಮತ್ತು ಭೀಮಯ್ಯನವರು ಮತ್ತು ನಾಗಪ್ಪಾ ರೇವಣಪ್ಪಾ ಮುಂತಾದವರು ಮನೋಹರವಾಗಿ ಆಚಾರ್ಯರ ಸ್ತುತಿಯನ್ನು ಹಾಡಿದರು. ದರ್ಶನಪಾಳ್ಯದ ಜಗದಾಚಾರ್ಯರ ಭಜನಾಸಂಘದವರಲ್ಲಿ ಮಲ್ಲಿಕಾರ್ಜುನಪ್ಪಾ ಕಲ್ಲಿಶೆಟ್ಟಿ ಇವರು ಅತ್ಯುತ್ತಮವಾಗಿ ಹಾಡಿದರು. ಬೆಂಬೋಳಿ ಭಜನಾಸಂಘದವರು ಕೋಲಾಟದಿಂದ ಕಣೆಯುಕ್ತ ಹಗ್ಗವನ್ನು ಸುತ್ತಿಬಿಚ್ಚಿ ತೋರಿಸಿದರು. ಈ ರೀತಿ ಕಾರ್ಯಕ್ರಮಗಳು ಪೂರೈಸಿ ಈ ದಿವಸ ಸಾಯಂಕಾಲ ೭ ಘಂಟೆಗೆ ಸೋಲಾಪುರದಿಂದ ಬಂದ ವೀರಬಸಪ್ಪಾ ಇವರು ಕೀರ್ತನವನ್ನು ಮಾಡಿದರು. ಅನಂತರ ಮಾಳಕಟ್ಟಿ ಶ್ರೀ ಪಂಚಾಕ್ಷರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿತು. ಅಧ್ಯಕ್ಷತಪ್ಪಾಗಿ ಆಗಮಿಸಿದ ಶಾರದಾಪಾಠಶಾಲಾ ಮುಖ್ಯೋಪಾಧ್ಯಾಯರಾದ ವೇ|| ಶ್ರೀ ನಾಗವಾರ ಜಗದೀಶರಾಸ್ತ್ರಿಗಳು ಯಾರು ನವೀನಮತವನ್ನಾಗಲೀ ಇಲ್ಲವೇ ರಾಜ್ಯವನ್ನಾಗಲೀ ಸ್ಥಾಪಿಸಿರುವರೋ, ಯಾರ ಉತ್ಪತ್ತಿಯಲ್ಲಿ ವೈಶಿಷ್ಟ್ಯವಿದೆಯೋ ಅವರ ಜಯಂತಿಯನ್ನೇ ಮಾಡಬೇಕು. ಉಳಿದವರ ಪುಣ್ಯತಿಥಿಗಳನ್ನು ಮಾಡಬೇಕಲ್ಲದೆ ಜಯಂತಿಯನ್ನು ಮಾಡಲಾಗದೆಂದು ಅನೇಕ ಯುಕ್ತಿ ಅನುಭವಪ್ರಮಾಣಗಳಿಂದ ಬೋಧಿಸಿದರು. ಆ ಮೇಲೆ ರಾಯಚೂರ ಶಿವರ ಮಠದ ಸಿದ್ಧಾಂತಿ ಶ್ರೀ ಸಿದ್ಧರಾಮಯ್ಯನವರು ಶರಣಾರ್ಯ ಅಟಲೀರಿ ಕಾವ್ಯತೀರ್ಥ ಇವರೂ ಶರಣಾರ್ಯ ಅರಳೇರಿ ಇವರೂ ಉತ್ತಮವಾದ ಭಾಷಣಗಳನ್ನು ಮಾಡಿದರು. ಅನಂತರ ಸುಗ್ಗಲಾದೇವಿ ಎಂಬ ಚಿಕ್ಕ ಬಾಲಿಕೆಯು ದೀಕ್ಷಾವಿಷಯದಲ್ಲಿಯೂ, ಕೀರ್ತನಕೊಡುವ ಸೌ|| ಶ್ರೀ ಭಾಗೀರಥೀಬಾಯಿ ಕಟಾಬಿ ಇವರು ಗುರುಜಯಂತಿಯ ವಿಷಯದಲ್ಲಿಯೂ ಚಿಕ್ಕಲಗಾಂವ ಬಸವಣ್ಣೆಪ್ಪಾ ಪಾಟೀಲರು ಧರ್ಮಕ್ಕಾಗಿ ಪ್ರಾಣವನ್ನಾದರೂ ಒಪ್ಪಿಸಲು ಹಿಂಜರಿಯಬಾರದೆಂಬ ವಿಷಯದಲ್ಲೂ ಚಿಕ್ಕಲಗಾಂವ ಶ್ರೀ ರೇವಣಯ್ಯನವರ ಪುತ್ರನಾದ ನಾಗಯ್ಯನೆಂಬ ಬಾಲಕನು 'ಸ್ವಧರ್ಮಾಭಿಮಾನ' ಎಂಬ ವಿಷಯದಲ್ಲಿಯೂ ಭಾಷಣಮಾಡಿದರು. ಜಿವಣ್ಣಾ, ಪಕ್ಕಲಾ ಈ ಬಾಲಕೆಯರು ದಾರುಕಾಚಾರ್ಯರ ಮಹತ್ವವಿಷಯದಲ್ಲಿ ಪರಸ್ಪರ ಸಂವಾದ ನಡೆಸಿದರು. ಸಿದ್ಧರಾಮಪ್ಪಾ ಹಟ್ಟಿ ಇವರು ಬಾಪಶೆಟರ ಜಟ್ಟಿ(?) ಉತ್ಸವದ ದೆಶೆಯಿಂದ ಆನಂದಪಡುತ್ತಿದ್ದವರು. ಅದೇ ಪಂಢರ ಶ್ರೀ|| ಪ|| ಬ್ರ|| ಪಟ್ಟದ್ದೇವರು ಹೋಟಗಿ ಇವರು ಚಕ್ಕಲಕೊಂಟಿ ಪುರಾಣಿ ಓಂಕಾರೆಪ್ಪನ ನಿಧನಕ್ಕಾಗಿ ದುಃಖಪ್ರದರ್ಶನವನ್ನು ಮಾಡಿದರು. ಮತ್ತು ಇದಲ್ಲದೆ ಈ ಸಭೆಗೆ ಗುರುಸ್ವಾಮಿ ಜೈನಾಪೂರ ಪಟ್ಟದ್ದೇವರು ಚೆಂವರಗಿ ಧೇನುಕರುಸ್ವಾಮಿ ಸೋಲಾಪುರ, ಗುರುಲಿಂಗಸ್ವಾಮಿ ರಾಯಚೂರ ಶಿವರಮಠ ಪಂಚಾಕ್ಷರಸ್ವಾಮಿ ಮಾಳಕಟ್ಟಿ ಈ ಮಹನೀಯರೂ ಕೂಡ ಆಗಮಿಸಿದ್ದರು. ಆ ಮೇಲೆ ಹೋಟಗಿ ಶ್ರೀಗಳು ಅಧ್ಯಕ್ಷರ ಪರವಾಗಿ ಭಾಷಣಮಾಡಿದ ಮೇಲೆ ಜಗದಾಚಾರ್ಯರ ಮಂಗಲಜಯಘೋಷದೊಡನೆ ಸಭಾಕಾರ್ಯವು ಪೂರೈಸಿತು.

ಮೂರನೇ ದಿವಸ ತಾ|| 8-5-35 ನೆಯ ಪ್ರಾತಃಕಾಲ 8 ಘಂಟೆಗೆ ಪಲ್ಲಕ್ಕಿಯ ಉತ್ಸವವು ಬೃಹನ್ಮಠದಿಂದ ಹೊರಟು 9 ಘಂಟೆಗೆ ಸ್ವಸ್ಥಾನವನ್ನು ಸೇರಿದ ಮೇಲೆ ಆಚಾರ್ಯಮೂರ್ತಿಯನ್ನು ತೊಟ್ಟಿಲಲ್ಲಿರಿಸಿ ಸೌ|| ಮಂಗಳವ್ವಾ ಇವರು ಜೋಗುಳವನ್ನು ಹಾಡಿದರು. ಮತ್ತು ಮಾಳಕಟ್ಟಿ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಪುನಃ ಸಭೆಸೇರಿ ಅಲ್ಲಪ್ರಭು ಆಲೂರ ಮಲ್ಲಯ್ಯಾ ಹೋಟಗಿ ಈ ಪಾರಂಪರ್ಯದ ವ್ಯಾಖ್ಯಾನಗಳಾದವು. ಆ ಮೇಲೆ ಧೋತ್ರಿಸ ಪೂರ ಸೆಕ್ರೆಟರಿಗಳಾದ ಶ್ರೀ ಗೌಡಪ್ಪಾ ಗುರುಮೂರ್ತಿ ಪಾಟೀಲ ಇವರು ಒಬ್ಬರಿಗಾದ ಜನ್ಮಬಿಲಿಯಮ ಮಿಶ್ರದಿಂದ ಗುರುವಿನಲಿ ದೃಢಭಕ್ತಿಯಂತೆ ರಾಜನಲ್ಲಿಯೂ ಇರತಕ್ಕದ್ದು ಎಂದು ಹೇಳಿ ತಮ್ಮ ರಾಜನಿಷ್ಠೆಯನ್ನು ತೋರ್ಪಡಿಸಿದರು. ಸೌ|| ಭಾಗೀರಥೀಬಾಯಿ ಕಟಾಬಿ ಇವರ ರಾಯಚೂರ ಶಿವರದ ಪಟ್ಟದಸ್ವಾಮಿಗಳ ಗುರುಸಿದ್ಧಪ್ಪಾ ವಹಾರಂಜಿ ದೊಡ್ಡಿ ಇವರ ವ್ಯಾಖ್ಯಾನಗಳಾದ ಮೇಲೆ ಸಭಾ ಬರಖಾಸ್ತಾಯಿತು. ಪ್ರತಿವರುಷದಂತೆಯೂ ಈ ವರುಷ ಸೋಲಾಪುರ ಶ್ರೀ ಸಿದ್ಧೇಶ್ವರ ಸ್ವಾಮಿಯ ಭಜನಾಮಂಡಳದವರು ಬಂದುದರಿಂದ ಜಯಂತಿಗೆ ವಿಶೇಷ ಶೋಭೆಯು ಪ್ರಾಪ್ತವಾಗಿತ್ತು. ಈ ವರುಷ ಈ ಜಯಂತ್ಯುತ್ಸವಕ್ಕೆ ಸೋಲಾಪುರ ಕುಂಬಾರಿ ಮುಗಳನಹಳ್ಳಿ, ಧೋತ್ರಿ ದರ್ಶನಪಾಳ್ಯ ಅಕ್ಕಲಕೋಟ ಮಾಶಾಳ ಬೆಂಬಳಿ ಶಿವಪುರ ದಿಂಡೂರ ಮರಗಿ ತೀರ್ಥ ಲಾನಾಪುರ ಮೋಘ ಬಡಿಗೇರ ಇತ್ಯಾದಿ ಗ್ರಾಮಗಳಿಂದ ಅನೇಕಾನೇಕ ಜನರು ಆಗಮಿಸಿದ್ದರು.

ಹೀಗೆ ಪ್ರತಿವರ್ಷವೂ ಗುರುಕಾರ್ಯವನ್ನು ನೆರವೇರಿಸುತ್ತಿರುವ ಹೋಟಗಿ ದೀಕ್ಷೆಯವರೆ ಧನ್ಯರು! ಇವರಿಗೆ ಜಗದಾಚಾರ್ಯರು ದೀರ್ಘಾಯುರಾರೋಗ್ಯಾದಿಗಳನ್ನೀಯಲೆಂದು ಹಾರೈಸುವ

ಓರ್ವ ಪ್ರತ್ಯಕ್ಷದರ್ಶಿ

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತಕಾಲೇಜ್ ಫಂಡ್.

ಸ್ವೀಕಾರ

—

ಶಿವಮೊಗ್ಗ ಸೆಂಡುಗಾರ ಅಡಿಕೆಮಂಡಿ ವ|| ರಾ|| ರುದ್ರಪ್ಪನವರು ತಮ್ಮ ಪುತ್ರಿಯ ಲಗ್ನಕಾಲದಲ್ಲಿ ಸಮರ್ಪಿಸಿದ **5** ರೂಪಾಯಿಗಳು ವಕೀಲ್ ಮ|| ರಾ|| ಮರುಳಯ್ಯ ಬಿ ಎ, ಬಿ ಎಲ್, ಇವರ ಮತ್ತು ಎಚ್ ಎಂ ರುದ್ರಾರಾಧ್ಯರ ದ್ವಾರ ಬಂದದ್ದನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದೆ

ಹುಲಸೂರು ಮಠದ ವೇ|| ವೀರಭದ್ರಾರಾಧ್ಯರು ತಮ್ಮ ಪುತ್ರ, ಪುತ್ರಿಯರ ವಿವಾಹಕಾಲದಲ್ಲಿ ಸಮರ್ಪಿಸಿದ **3** ರೂಪಾಯಿಗಳನ್ನೂ, ಬೆಂಗಳೂರು ಸಿಟಿ ಹೊಸಕೋಟೆ ಮಠದ ವೇ|| ಎಚ್ ಪಿ ರುದ್ರಾರಾಧ್ಯರು ತಮ್ಮ ವಿವಾಹಕಾಲದಲ್ಲಿ ಸಮರ್ಪಿಸಿದ **2** ರೂಪಾಯಿಗಳನ್ನೂ, ವಂದನಾಪೂರ್ವಕವಾಗಿ ಸ್ವೀಕರಿಸಿದೆ

ಈ ಮಹನೀಯರುಗಳಿಗೆ ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲಿ.

ಇದೇ ರೀತಿಯಲ್ಲಿ ಆಸ್ತಿಕಮಹಾಜನರು ಈ ಮೂಲಧನಕ್ಕೆ ಉದಾರಸಹಾಯಮಾಡಿ, ತನ್ಮೂಲಕ ಧರ್ಮವಿದ್ಯೆಗೆ ಪ್ರೋತ್ಸಾಹಕೊಡಬೇಕಾಗಿ ಪ್ರಾರ್ಥನೆ.

ಎಚ್ ರುದ್ರಯ್ಯ,
ಸೆಕ್ರೆಟರಿ
ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ,
ಫ್ರೀ ಬೋರ್ಡಿಂಗು ಸಂಸ್ಥೆ

ಪಂಚಾಂಗ ಗಣಿತ ಶೋಧನೆ.

—

ತಾ|| 13-10-31 ರಲ್ಲಿ ಮೈಸೂರು ರಾಜಧಾನಿಯಲ್ಲಿ, ಸಂಸ್ಕೃತ ಮಹಾಪಾಠಶಾಲೆಯಲ್ಲಿ ನಡೆಸಿದ ಅಖಿಲಕರ್ಣಾಟಕ ದ್ವಿತೀಯ ಜ್ಯೌತಿಷಿಕ ಸಮ್ಮೇಳನದಲ್ಲಿ ಕೇಳಿರುವ ಪ್ರಶ್ನೆಗಳಿಗೆ ಪ್ರತ್ಯುತ್ತರವಾಗಿ ತಾ|| 15-10-31 ರಲ್ಲಿ—ಮೈಸೂರು ಕಾಶೀಪತಿಶಾಸ್ತ್ರಿಗಳವರ ಛಾಯೆಯದಲ್ಲಿರುವ, ಆಸ್ಥಾನ ಜ್ಯೋತಿಷವಿದ್ವಾನ್ ಟಿ ವಿ ನರಸಿಂಹಾಚಾರ್ಯರು ಮಾಡಿದ ಉಪನ್ಯಾಸ ಮತ್ತು ಅದರ ಸಾರಾಂಶ—

ಶ್ಲೋ|| ಯತ್ಕೋವಿಯಾಸ್ತಪದ್ಮಯೋ
ಸುರಮುಕುಟನಿಘೃಷ್ಟಚರಣಕಮಲೇ ವಿ |
ಕುಪುತೇಂಬಾಲಿಕಾ ವಿರಿಂಚಿ
ಸಜಮತಿಧಾಮ್ನಾಂ ನಿಧಿಃ ಸೂರ್ಯಃ ||

ಮಹನೀಯರ ಸನ್ನಿಧಿಯಲ್ಲಿ ಅಲ್ಪಜ್ಞನಾದ ನಾನು ಆಹ್ವಾನಪತ್ರಿಕೆಯಲ್ಲಿ ಕಂಡ ಪ್ರಶ್ನೆಗಳಿಗೆ ತಿಳಿದಮಟ್ಟಿಗೆ ಉತ್ತರವನ್ನು ಕೊಡಲು ಉದ್ಯುಕ್ತನಾಗಿದ್ದೇನೆ—

ಅಖಿಲಕರ್ಣಾಟಕ ದ್ವಿತೀಯ ಜ್ಯೌತಿಷಿಕ ಸಮ್ಮೇಳನದಲ್ಲಿ ಕೇಳಿರುವ 10 ಪ್ರಶ್ನೆಗಳ ವಿವರ—

1 ಅಯನಾಂಶಗಣನದಲ್ಲಿ ಎಷ್ಟು ರೀತಿಗಳಿವೆ. ಯಾವ ಅಯನಾಂಶವು ಗ್ರಾಹ್ಯ?

2 ಪ್ರಾಚೀನ ನವೀನ ಸಿದ್ಧಾಂತಗಳ ರೀತಿಯಾಗಿ ಮಾಡಲ್ಪಡುವ ಗ್ರಹಸ್ಪಷ್ಟಗಳಲ್ಲಿ ಗ್ರಹಣ ಉದಯ ಅಸ್ತಮಯಾದಿಗಳಲ್ಲಿ ಎಷ್ಟುಮಟ್ಟಿಗೆ ವ್ಯತ್ಯಾಸಗಳು ಕಂಡುಬರುತ್ತವೆ?

3 ಸೌರವರ್ಷದ ಸಾವನದಿನಪ್ರಮಾಣವು ಕಾಲಭೇದದಿಂದ ವ್ಯತ್ಯಸ್ತವಾಗುತ್ತದೆಯೆ? ವ್ಯತ್ಯಸ್ತವಾಗುವುದಾದರೆ ಪ್ರಾಚೀನದ ಸ್ಥಿರಾಂಕೋಕ್ತವು ಗ್ರಾಹ್ಯವೆ? ಅಥವಾ ಪರಿಶೋಧಿಸಲ್ಪಡುವುದೆ?

4 ತಿಥ್ಯಾದಿ ಸಾಧನದಲ್ಲಿ ರವಿಚಂದ್ರರಿಗೆ ಬೀಜಸಂಸ್ಕಾರವನ್ನು ಪ್ರಾಚೀನಜ್ಯೋತಿಷಾಚಾರ್ಯರು ಒಪ್ಪಿರುವುದು ಸರಿಯೆ ಇಲ್ಲವೆ?

5 ತಿಥಿಯ ಘಟಿಕಾ ಪರಮಪ್ರವೃತ್ತಿಗಳಲ್ಲಿ ತತ್ಕಾಲಾನುಗುಣವಾದ ಗಣಿತವು ವ್ಯವಸ್ಥಿತವೆ? ಅಥವಾ ನಿಬಂಧನಕಾರರ ವಚನಗಳೆ? ಆ ವಚನಗಳಿಗೆ ಪರಸ್ಪರ ವಿರೋಧವಿದ್ದಲ್ಲಿ ಅದರ ಪರಿಹಾರೋಪಾಯವೇನು?

6 ತ್ರೈರಾಶಿಕ ವಕ್ರಪಕ್ಷಗಳ ಸ್ವರೂಪವೇನು? ಈ ಎರಡು ಪಕ್ಷಗಳಿಂದ ಕಂಡುಬರುವ ಗಣಿತಭೇದಗಳು ಯಾವುವು?

7 ಧರ್ಮಶಾಸ್ತ್ರಕ್ಕೆ ಭೇದ ಅಥವಾ ಅಭೇದವು ಪ್ರಾಚೀನಸಮ್ಮತವೆ? ಈ ವಿಷಯಗಳಲ್ಲಿ ಮೂಲಾಧಾರ ವಚನಗಳು ಯಾವುವು? ಈ ಭೇದಾಭೇದ ಪಕ್ಷಗಳಿಂದ ಉಂಟಾಗುವ ವ್ಯತ್ಯಾಸವೇನು?

8 ಪಂಚಾಂಗಗಳು ಪ್ರಸಿದ್ಧವಾದ ಯಾವ ಪದ್ಧತಿಯಿಂದ ಮಾಡಲ್ಪಡುತ್ತವೆ? ಆ ಪದ್ಧತಿಗಳು ಕಾಲಾನುಗುಣವಾಗಿ ಪರಿಶೋಧಿಸಲ್ಪಟ್ಟಿವೆಯೆ?

9 ಒಂದೇ ವೇಳೆಗೆ ಸಂಬಂಧಪಟ್ಟ ಪಂಚಾಂಗಗಳಲ್ಲಿ ವ್ಯತ್ಯಾಸಕ್ಕೆ ಕಾರಣವೇನು? ಸಮೀಕರಣಮಾಡುವ ರೀತಿ ಹೇಗೆ?

10 ಯಂತ್ರಾಪೇಕ್ಷೆಯಿಲ್ಲದೆ ಗಣಿತಶೋಧನವು ಸಾಧ್ಯವೆ ಇಲ್ಲವೆ? ಯಂತ್ರಗಳು ಅವಶ್ಯಕವಾದರೆ ಅವುಗಳಲ್ಲಿ ಮುಖ್ಯವಾದುವು ಯಾವುವು? ಪಂಚಾಂಗಕರ್ತರಿಗೆ ಯಂತ್ರನಿರ್ಮಾಣ ಮತ್ತು ಗ್ರಹವೇಧ ಇವುಗಳಿಗೆ ಸಹಕಾರಿಯಾದ ಕಾರ್ಯಭ್ಯಾಸಕ್ರಮವೇನು?

ಪ್ರಶ್ನೆ 1 ಕ್ಕೆ ಉತ್ತರ—ಯಾವ ಬಿಂದುವಿನಿಂದ ರವಿಯು ದಕ್ಷಿಣ ಮತ್ತು ಉತ್ತರಗತಿಯು ಪ್ರಾರಂಭಿಸುವದೋ ಅದಕ್ಕೆ ಅಯನ ಬಿಂದು ಎಂದು ಹೆಸರು. ಆ ಅಯನ ಬಿಂದುವು ಎಷ್ಟು ಭಾಗಗಳು ನಿರಯಣವಾದ ಕರ್ಕಾದಿ ಮತ್ತು ಮಕರಾದಿಯಿಂದ ಹಿಂದಕ್ಕೆ ಚಲಿಸುತ್ತದೋ ಅದೇ ಅಯನಾಂಶ.

ಸೂರ್ಯನು ಯಾವ ವೃತ್ತದಲ್ಲಿ ಸಂಚರಿಸಿದರೆ ದಿನರಾತ್ರಿ ಪ್ರಮಾಣವು ಸಮವಾಗುವದೋ ಅದೇ ವಿಷುವದ್ವೃತ್ತ—

ಕ್ರಾಂತಿವೃತ್ತವೆಂದರೆ, ಸೂರ್ಯನು ಪ್ರತಿದಿವಸವೂ ಸಂಚರಿಸುವ ವೃತ್ತ—

ವಿಷುವದ್ವೃತ್ತ ಕ್ರಾಂತಿವೃತ್ತಗಳ ಸಂಪಾತಬಿಂದು ಅಂದರೆ ಕ್ರಾಂತಿಪಾತವು ಅಷ್ಟೇ ಭಾಗ ಪ್ರಮಾಣಾಂತರದಲ್ಲಿ ಹಿಂದೆ ಚಲಿಸುತ್ತದೆ ಇದೂ ಅಯನಾಂಶವೇ—

ಉದಗಯನ ಬಿಂದು, ರಾ 8 ಭಾ 7 ಕ 5—

ದಕ್ಷಿಣಾಯನಬಿಂದು ರಾ 2 ಭಾ 7 ಕ 5—

ನಿರಯಣಮಕರಾದಿ ಅಂದರೆ 9-0-0 ಇಂದ, ಹಿಂದಕ್ಕೆ ಭಾ 22 ಕ 55 ಚಲಿಸಿರುವುದರಿಂದ ರಾ 8 ಭಾ 7 ಕ 5 ಉದಗಯನ ಬಿಂದು ಎಂದು ವ್ಯವಹರಿಸಲ್ಪಡುತ್ತೆ.

ನಿರಯಣಕರ್ಕಾದಿ ಅಂದರೆ 3-0-0 ಇಂದ ಹಿಂದಕ್ಕೆ 22 ಭಾಗ 55 ಕಲೆ ಚಲಿಸಿರುವದರಿಂದ ರಾ 2 ಭಾ 7 ಕ 5 ದಕ್ಷಿಣಾಯನ ಬಿಂದು ಎಂದು ವ್ಯವಹರಿಸಲ್ಪಡುತ್ತೆ.

ನಿರಯಣಮೇಷಾದಿ, ಅಂದರೆ 12-0-0 ಇಂದ ಹಿಂದಕ್ಕೆ ಭಾ 22 ಕ 55 ಚಲಿಸಿರುವದರಿಂದ ರಾ 11 ಭಾ 7 ಕ 5 ಪೂರ್ವ

ನಂಜನಗೂಡು ತಾಲ್ಲೂಕು ಒಳಗೆರೆ ಇನಾಂಗ್ರಾಮದಲ್ಲಿ ಚಿನ್ನದಗಣಿ ಇರುವುದಾಗಿಯೂ ಅದರಲ್ಲಿ ಚಿನ್ನ ತೆಗೆಯಲು ಮದರಾಸಿನ ಮೆ|| ನಾರಾಯಣದಾಸ್ ಎಂಬ ಸಾಹುಕಾರರು ಇನಾಂದಾರರ ಸಂಗಡ ಪತ್ರ ವ್ಯವಹಾರ ನಡೆಸುತ್ತಿರುವುದಾಗಿಯೂ ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟ್ ನ್ಯಾಮತಿಯಲ್ಲಿರುವ ಕುದರೆಕೊಂಡವೆಂಬ ಗುಡ್ಡದಲ್ಲಿ ಚಿನ್ನ ಸಿಕ್ಕುತ್ತದೆಂದೂ ಲಕ್ಕವಳ್ಳಿ ಗ್ರಾಮದಲ್ಲಿ ಈ ಲೋಹವನ್ನು ಗಣಿಯಿಂದ ತೆಗೆಯಲು ಏರ್ಪಾಡು ನಡೆಯುತ್ತಿರುವುದೆಂದೂ ವರ್ತಮಾನವಿದೆ

ವರ್ತಮಾನಸಂಗ್ರಹ.

ಪೋರ್ಚುಗೀಸ್ ಸರ್ಕಾರವನ್ನು ಎತ್ತಿಹಾಕಬೇಕೆಂದು ಒಳಸಂಚು ನಡೆಸುತ್ತಿದ್ದರೆಂದು ಲಿಸ್ಬನ್ ಮತ್ತು ಇತರ ಕಡೆಗಳಲ್ಲಿ ಸುಮಾರು ೩೦೦ ಜನರ ದಸ್ತಗಿರಿಯಾಗಿದೆ ಈ ಪೈಕಿ ೨ ಮಂದಿ ಅಧಿಕಾರಿಗಳೂ ಸೇರಿರುತ್ತಾರೆ

ಜರ್ಮನಿಯ ಸರ್ಕಾರವೂ ವರ್ಸೇಲ್ಸ್ ಒಪ್ಪಂದವನ್ನು ತಿರಸ್ಕರಿಸಿ ತನ್ನ ಸೈನ್ಯವನ್ನೂ, ವಿಮಾನಬಲವನ್ನೂ ಅನುಕೂಲಕ್ಕೆ ತಕ್ಕಂತೆ ಹೆಚ್ಚಿಸಲು ಮೊದಲು ಮಾಡಿದೆ ಎಲ್ಲ ರಾಷ್ಟ್ರಗಳು ಒಂದಾದ ಮೇಲೊಂದು ವರ್ಸೇಲ್ಸ್ ಒಪ್ಪಂದವನ್ನು ಮುರಿಯುವುದೇ ಪದ್ಧತಿಯಾದಂತಿದೆ

ಪೂರ್ವ ಆಫ್ರಿಕಾ ದೇಶದಲ್ಲಿ ಅಬಿಸೀನಿಯಾ ಗಲಭೆಯ ಸಂಬಂಧವಾಗಿ ಇಟಲಿಯು ಮಾಡಿರುವ ಯುದ್ಧಸನ್ನಾಹದ ಸಲುವಾಗಿ ಈಗಿನವರೆಗೆ 10 000,000 ಪೌಂಡು ಗಳ ಖರ್ಚಾಗಿದೆ ಇದರಿಂದಲೇ ಇಟಲಿಯ ಆಯವ್ಯಯದಲ್ಲಿ ಇಳಿತಾಯ ವಾಗಿದೆಯೆಂದು ಹಣಕಾಸಿನ ಮಂತ್ರಿಗಳು ತಿಳಿಸಿದಾರೆ

ಬೆಂಗಳೂರಿನ ಅಬ್ದುಲ್ಲ ಮತ್ತು ಷಾ ಆಲಿ ಎಂಬುವರನ್ನು ಕಳವುಮಾಲು ಕೊಂಡ ಆಪಾದನೆ ಗುರಿಮಾಡಿದ್ದರಲ್ಲಿ, ನಿನ್ನೆಯ ದಿನ ಸಿಟಿಮ್ಯಾಜಿಸ್ಟ್ರೇಟರು ವಿಚಾರಣೆ ನಡಸಿ, ಅವರಿಬ್ಬರಿಗೂ ತಲಾ ಒಂಬತ್ತು ತಿಂಗಳ ಕಠಿಣ ಶಿಕ್ಷೆ ವಿಧಿಸಿದರು ಅಪರಾಧಿಗಳಿಬ್ಬರೂ ಸಂಜಾಬಿನ ನಿವಾಸಿಗಳೆಂದು ಹೇಳಿಕೆ ಕೊಟ್ಟರೆಂದು ತಿಳಿದಿದೆ

ಇಟಲಿಯಿಂದ ಬೆಳ್ಳಿಯನ್ನು ಹೊರಕ್ಕೆ ಕಳುಹಿಸಕೂಡದೆಂದು ಸರ್ಕಾರದ ಆಜ್ಞೆಯಾಗಿದೆ ಉತ್ತರ ಆಫ್ರಿಕದಲ್ಲಿರುವ ಇಟಲಿಯ ಸ್ವಾಸ್ಥ್ಯಗಳಿಗೆ ಬೆಳ್ಳಿಯ ಆವಶ್ಯಕತೆ ಇರುವುದರಿಂದ ಬೇರೆ ಎಲ್ಲಿಗೂ ನಾಣ್ಯರೂಪದಿಂದಲಾಗಲಿ, ಪದಾರ್ಥರೂಪದಿಂದಲಾಗಲಿ ಬೆಳ್ಳಿಯನ್ನು ಕಳುಹಿಸಕೂಡದೆಂದು ಆಜ್ಞೆಮಾಡಿದ್ದಾರೆ

ಆಗ್ರಾವಿನಿಂದ ತನ್ನ ಹಳ್ಳಿಗೆ ಹೋಗುತ್ತಿದ್ದ ಬಾಬೂ ಶಿವರಾಮ ಎಂಬಾತನನ್ನು ದಾರಿಯಲ್ಲಿ ಡಕಾಯಿತರು ತಡೆದು ಗುಂಡಿನಿಂದ ಹೊಡೆದು ಕೊಂದುಬಿಟ್ಟರು ಹಿಂದೆ ಒಂದು ಡಕಾಯಿತಿ ಮೊಕದ್ದಮೆಯಲ್ಲಿ ಇವನು ಪ್ರಾಸಿಕ್ಯೂಷನ್ ಪರ ಸಾಕ್ಷಿ ಹೇಳಿದ್ದರಿಂದ ಆ ಸೇಡು ತೀರಿಸಿಕೊಳ್ಳಲು ಇವನನ್ನು ಕೊಂದರೆಂದು ತಿಳಿದುಬರುತ್ತದೆ

ಜರ್ಮನಿಯಲ್ಲಿ ನಿರುದ್ಯೋಗಿಗಳಾಗಿದ್ದರುವ ಅನೇಕ ಮಾಜಿ, ಸೈನಿಕರೂ ಡಾಕ್ಟರರೂ, ವೈರ್‌ಲೆಸ್, ಕೆಲಸಗಾರರೂ, ಅಬಿಸೀನಿಯಾ ಸೈನ್ಯದಲ್ಲಿ ಕೆಲಸಕ್ಕೆ ಅರ್ಜಿ ಹಾಕಿದ್ದರು. ಅದಕ್ಕೆ ಅಬಿಸೀನಿಯಾ ಸರ್ಕಾರದವರು ತಮ್ಮ ಸೈನ್ಯದಲ್ಲಿ ಕೆಲಸ ಖಾಲಿ ಇಲ್ಲವೆಂದೂ ತಾವು ಯೂರೋಪಿಯನರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲವೆಂದೂ ಉತ್ತರಕೊಟ್ಟಿರುತ್ತಾರೆ

ಯು ಪಿ ವ್ಯಾಪಾರಸಂಘದ ಸೆಕ್ರೆಟರಿಗಳು ಇಂಡಿಯದ ವ್ಯಾಪಾರಿಗಳ ಹೆಸರುಗಳನ್ನು ಛಾಪಿಸಿದ ಬ್ರಿಟಿಷ್ ಬಟ್ಟೆಗಳು ಇಂಡಿಯದಲ್ಲಿ ಬಹಳ ಮಾರಾಟವಾಗುತ್ತಿವೆಯೆಂದೂ, ನ್ಯಾಯವಾಗಿ ತಯಾರಾದ ದೇಶದ ಹೆಸರನ್ನು ಮರೆಸಿಟ್ಟು ಹೀಗೆ ಮಾರಾಟಮಾಡುವುದರಿಂದ ಇಂಡಿಯಕ್ಕೆ ಬಹಳ ಅನ್ಯಾಯವಾಗುತ್ತಿರುವುದರಿಂದ ಇದನ್ನು ನಿಲ್ಲಿಸಬೇಕೆಂದು ಇಂಡಿಯ ಸರ್ಕಾರವನ್ನು ಪ್ರಾರ್ಥಿಸಿದ್ದಾರೆ

ಮಾಂಚೂರಿಯದಲ್ಲಿಯ ಪಾಶ್ಚಿಮಾತ್ಯ ಪೆಟ್ರೋಲ್ ಎಣ್ಣೆ ವ್ಯಾಪಾರಿಗಳೆಲ್ಲರೂ ತಮ್ಮ ಅಂಗಡಿಗಳನ್ನು ಮುಚ್ಚಿ ಸ್ವದೇಶಕ್ಕೆ ಹೊರಟುಹೋಗಲು ಸ್ಥಿರಮಾಡಿದ್ದಾರಂತೆ ಅಲ್ಲಿನ ವ್ಯಾಪಾರಸ್ಥರೆಲ್ಲರೂ ಜಪಾನರಿಂದಲೇ ಅಗ್ಗವಾಗಿ ಕೊಂಡು ಮಾರಲು ಪ್ರಾರಂಭಿಸಿದ್ದರಿಂದ ಇತರ ಕಂಪೆನಿಗಳಿಗೆ ತುಂಬಾ ನಷ್ಟವಾಗಿದೆ ಅವರು ಜಪಾನ ಸರ್ಕಾರವನ್ನು ಎಷ್ಟು ಪ್ರಾರ್ಥಿಸಿದರೂ ಪ್ರಯೋಜನವಾಗಲಿಲ್ಲವಾದ್ದರಿಂದ ತಮ್ಮ ವ್ಯಾಪಾರವನ್ನೇ ಮುಕ್ತಾಯಗೊಳಿಸಲಿದ್ದಾರೆ

ಮಿಸ್ ಪಾರ್ಕಿನ್ಸ್ ಎಂಬುವ ಚಿಕ್ಕಬಾಲಿಕೆಯೊಬ್ಬಳು ಲೈಸನ್ಸಿಲ್ಲದೆ ರಿವಾಲ್ವರನ್ನು ಹಿಡಿದಿದ್ದಳೆಂದು, ಪೋಲೀಸರಿಂದ ಚಾರ್ಜುಮಾಡಲ್ಪಟ್ಟಿದ್ದು, ಈ ದಿನ ಬೆಂಗಳೂರು ದಂಡಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮಿ|| ಎಫ್ ಆರ್ ಬಿಸ್ಲೀ ಎಂಬುವರು ತೀರ್ಪನ್ನು ಹೇಳುತ್ತಾ, ನೀನು ನಿರ್ದೋಷಿಯಾಗಿರುವುದರಿಂದ 10ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿರುತ್ತೇನೆಂದೂ, ಅದನ್ನು ಪಾವತಿ ಮಾಡಲು ೩ ದಿನಗಳ ಅವಧಿಯನ್ನು ಕೊಟ್ಟಿರುವೆನೆಂದೂ ಹೇಳಿದರು

ಲಂಡನ್ನಿನ ಕಾಮನ್ಸ್ ಸಭೆಯಲ್ಲಿ ಮಿ|| ಬಾಲ್ಡ್‌ವಿನ್ನರು ಭಾಷಣಮಾಡುತ್ತಾ ಜರ್ಮನಿಯ ಹೆರ್ ಹಿಟ್ಲರರು ಕೇಳುವುದು ನ್ಯಾಯವಾಗಿದೆ ಆದ್ದರಿಂದ ನಿಷ್ಪಕ್ಷಪಾತದಿಂದ ನ್ಯಾಯವರಿತು ಅವರೊಡನೆ ಸಹಕರಿಸಬೇಕು ಇತರ ರಾಷ್ಟ್ರಗಳಂತೆ ವಿಮಾನಬಲ ವಿಚಾರದಲ್ಲಿ ಸಮಾನತೆ ದೊರೆತರೆ ಒಪ್ಪಂದಕ್ಕೆ ಒದಲು ಅಡ್ಡಿಯಿಲ್ಲವೆಂದು ಜರ್ಮನಿಯು ಹೇಳಿದೆ ಜರ್ಮನಿಗೆ ನ್ಯಾಯಸಿಕ್ಕಿ ಸಮಾನವಾದ ಹಕ್ಕು ದೊರೆಯುವವರಿವಿಗೂ ಶಾಂತಿಪ್ರಯತ್ನಕ್ಕೆ ಅಡ್ಡಿ ಬಂದೇ ಬರುವುದು ಆದ್ದರಿಂದ ಈಗಿನ ಅಸಮಾನತೆಯನ್ನು ತೊಲಗಿಸಿ ಜರ್ಮನಿಗೂ ಸಹಾ ಸಮಾನತ್ವವನ್ನು ಕೊಡಿ ಎಂದು ಹೇಳಿದರು

ಹೊಸ ಬೆಳ್ಳಿನಾಣ್ಯ.

ಬೆಳ್ಳಿಯ ಬೆಲೆಯು ಬಹಳ ಹೆಚ್ಚುತ್ತಿರುವುದರಿಂದ ನಮ್ಮ ಇಂಡಿಯಾ ಸರ್ಕಾರದವರು ಈಗ ಚಲಾವಣೆಯಲ್ಲಿರುವ ರೂಪಾಯಿಗಳನ್ನು ಹಿಂದಕ್ಕೆ ತೆಗೆದುಕೊಂಡು ಬದಲಿಗೆ ಕಮ್ಮಿಬೆಳ್ಳಿಯ ನಾಣ್ಯಗಳನ್ನು ಪ್ರಚಾರಗೊಳಿಸಬೇಕೆಂದು ಆಲೋಚಿಸಿದ್ದಾರಂತೆ

ದುಃಖದಿಂದ ಆತ್ಮಹತ್ಯೆ.

ರಾಮನಾಡಿನಲ್ಲಿ ನಾಜರ್‌ವಂಶದ ಒಬ್ಬ ಶ್ರೀಮಂತನ ಹೆಂಡತಿಯು ತನ್ನ ಒಬ್ಬನೇ ಮಗನ ಮರಣದಿಂದುಂಟಾದ ವ್ಯಸನವನ್ನು ತಡೆಯಲಾರದೆ ಅರ್ಧರಾತ್ರಿಯಲ್ಲಿ ಸ್ಮಶಾನಕ್ಕೆ ಹೋಗಿ ಉರಿಯುತ್ತಿದ್ದ ಮಗನ ಚಿತೆಯಲ್ಲಿ ತಾನೂ ಬಿದ್ದು ಪ್ರಾಣತ್ಯಾಗಮಾಡಿದಳು

ಬೆಂಕಿಯ ಭಯ.

ಸಿಮ್ಲಾದಲ್ಲಿಯ ವಿದೇಶ ಮತ್ತು ರಾಜ್ಯಾಂಗಕ್ಕೆ ಸಂಬಂಧಪಟ್ಟ ಆಫೀಸುಗಳ ಕಡೆ ಬೆಂಕಿ ಬಿದ್ದದ್ದರಿಂದ ಕೆಲಸ ಮಾಡುತ್ತಿದ್ದವರೆಲ್ಲರೂ ಹೆದರಿ ಹೊರಕ್ಕೆ ಓಡಿದರು ಸಕಾಲಕ್ಕೆ ನೀರಿನ ಯಂತ್ರಗಳೂ ಬೆಂಕಿ ಆರಿಸುವವರೂ ಬಂದದ್ದರಿಂದ ಚಿಮ್ನಿಗೆ ಹೊರತು ಉಳಿದ ಯಾವುದಕ್ಕೂ ಹೆಚ್ಚು ಅಪಾಯವಾಗದಂತೆ ಬೆಂಕಿಯು ಆರಿಸಲ್ಪಟ್ಟಿತು

ಕತ್ತಲೆಯಲ್ಲಿ ಗುರಿಹೊಡೆಯಬಹುದಾದ ರಿವಾಲ್ವರು.

ಅಮೇರಿಕದ ಸಿನಿಮಾ ಆಕ್ಟರ್ ವಾರ್ನರ್ ಬಾಕ್ಸ್ಟರ್ ಎಂಬುವನು ಕತ್ತಲಲ್ಲಿ ಗುರಿಹೊಡೆಯಬಲ್ಲ ಒಂದು ಹೊಸ ಮಾದರಿಯ ರಿವಾಲ್ವರನ್ನು ತಯಾರಿಸಿದ್ದಾನೆ ಇದನ್ನು ಲಾಸೇಂಜಲ್ಸ್ ಪೋಲೀಸಿನವರು ಪರೀಕ್ಷಿಸುತ್ತಿದ್ದಾರೆ ಈ ರಿವಾಲ್ವರಿನ ತುದಿಯಲ್ಲಿ ಒಂದು ಸಣ್ಣ ಸರ್ಚ್‌ಲೈಟ್ ದೀಪವಿದ್ದು ಯಾವ ಸ್ಥಳಕ್ಕೆ ಗುಂಡು ತಗಲುತ್ತದೆಯೋ ಅಲ್ಲಿಗೆ ಸರಿಯಾಗಿ ಬೆಳಕಿನ ಕಿರಣವು ಬೀಳುವುದಂತೆ!

ಬೆಂಕಿಯ ಅನಾಹುತ

ತಂಜಾವೂರು ರೇಲ್ವೆಸ್ಟೇಷನ್ ಒಳಿ ಇರುವ 'ಆನಂದ ಲಾಡ್ಜ್' ಎಂಬ ಹೋಟಲಿನ ಹಣ್ಣಿನ ಅಂಗಡಿಗೂ ಇದರ ಪಕ್ಕದ ಗುಡಿಸಲುಗಳಿಗೂ ಬೆಂಕಿಬಿದ್ದು ಸುಟ್ಟುಹೋದವು ಪೋಲೀಸರೂ ನೆರೆಯವರೂ ಬಂದು ಬೆಂಕಿಯನ್ನು ಆರಿಸಿದರು ಪ್ರಾಣಾಪಾಯವೇನೂ ಆಗದಿದ್ದರೂ ಅಪರಿಮಿತವಸ್ತುಗಳು ನಷ್ಟವಾಗಿವೆಯೆಂದು ತಿಳಿದುಬಂದಿದೆ

ರೀವಾ ಸಂಸ್ಥಾನದ ಹೊಸಕಾಯಿದೆ.

ಜಮೀನು ಸಾಗುವಳಿಮಾಡಲು ಮೊದಲು ಮಾಡುವ ವಿದ್ಯಾವಂತರಿಗೆಲ್ಲಾ ಅವರ ವಿದ್ಯೆಗೆ ಅನುಸರಿಸಿ ಜಮೀನು ಕಂದಾಯವನ್ನು ಕಡಿಮೆ ಮಾಡಿಕೊಡುವುದಾಗಿ ಕಾಯಿದೆ ಮಾಡಬೇಕೆಂದಿದ್ದಾರೆ ವಿದ್ಯಾವಂತರಾದ ನಿರುದ್ಯೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೂ ಅವರಿಗೆ ಕೈಲಾದ ಅನುಕೂಲಗಳನ್ನು ಮಾಡಿಕೊಡುವುದಕ್ಕೂ ಈ ಉಪಾಯ ವನ್ನು ಹುಡುಕಿದ್ದಾರೆ

ಮೋಸ

ಲಾಹೋರ್ ಇಜಿಪ್ಷಿಯನ್ ಫೋಟೋ ಕಂಪನಿಯ ಎಸ್ ಎಂ ಕಟ್ಟಿ ಎಂಬವರಲ್ಲಿಗೆ ಅಬ್ದುಲ್ ಇಸ್ಲಾಂ ಎಂಬ ಯುವಕನು ಬಂದು ಫೋಟೊ ತೆಗೆಸಿದ್ದಲ್ಲದೇ, ತನಗೆ ಬೊಂಬಾಯಿ ಇಂಪೀರಿಯಲ್ ಬ್ಯಾಂಕಿನಿಂದ ಸಾಯಂಕಾಲ ಟೆಲಿಗ್ರಾಂ ಮನಿಯಾರ್ಡರು ಬರುತ್ತದೆ ಒಂದಕೂಡಲೆ ವಾಪ್ಸು ಕೊಡುವುದಾಗಿ ಹೇಳಿ 20 ರೂಪಾಯಿ ಸಾಲವನ್ನು ತೆಗೆದುಕೊಂಡು ಪರಾರಿಯಾಗಿದ್ದಾನೆ. ಪೋಲೀಸರಿಂದ ಪತ್ತೆ ಪ್ರಯತ್ನಗಳು ನಡೆಯುತ್ತಿವೆ

ಭಾರಿ ವಿಮಾನ ಅನಾಹುತ ೪೮ ಜನರ ಮರಣ.

ಪ್ರಪಂಚದಲ್ಲೆಲ್ಲಾ ಭಾರಿ ವಿಮಾನವಾದ ಮ್ಯಾಕ್ಸಿಂ ಗಾರ್ಕಿಯೆಂಬುದು ಮಾಸ್ಕೋ ಒಳಿ ಹಾರುತ್ತಿದ್ದಾಗ ಶಿಕ್ಷಣಕ್ಕಾಗಿ ಏರ್ಪಟ್ಟಿದ್ದ ಒಂದು ವಿಮಾನಕ್ಕೆ ಢಿಕ್ಕಿ ಹೊಡೆದು ಕೆಳಕ್ಕೆ ಬಿದ್ದಿತು ಈ ಅನಾಹುತದಿಂದ ೪೯ ಜನರು ಮರಣ ಹೊಂದಿದ್ದಾರೆ ಮ್ಯಾಕ್ಸಿಂಗಾರ್ಕಿ ವಿಮಾನದಲ್ಲಿದ್ದ 11 ಜನ ವಿಮಾನ ಕೆಲಸಗಾರರೂ 30 ಜನ ಪ್ರಯಾಣಿಕರೂ, ಇನ್ನೊಂದು ವಿಮಾನದ ಪೈಲಟ್ಟರಾದ ಎಂ ಬ್ಲಾಗಿನ್‌ರವರೂ ಮರಣಹೊಂದಿರುವರು

ಮನುಷ್ಯನ ಹೊಟ್ಟೆಯಲ್ಲಿ ಮೊಟ್ಟೆಗಳಿದ್ದವು.

ಬಂಕೂರಾದ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯನ್ನು ಹೊಂದಿದ ರೋಗಿಯೊಬ್ಬನ ಹೊಟ್ಟೆಯಲ್ಲಿ ನೂರಾರು ಸಣ್ಣಸಣ್ಣ ಮೊಟ್ಟೆಗಳು ಸಿಕ್ಕಿದ ವಿಚಿತ್ರವನ್ನು ನೋಡುವುದಕ್ಕೆ ಅನೇಕರು ಅಲ್ಲಿಗೆ ಹೋಗುತ್ತಿದ್ದಾರೆ ಈ ಸಣ್ಣ ಮೊಟ್ಟೆಗಳಲ್ಲಿ ಯಾವುದೋ ಒಂದು ವಿಧದ ದ್ರವ ತುಂಬಿದೆ ಅದರಲ್ಲಿ ಕೆಲವನ್ನು ಕೆಡದಂತೆ ಪ್ರತ್ಯೇಕಿಯಲ್ಲಿ ಇನ್ನೂ ಕಾಪಾಡಿಟ್ಟಿದ್ದಾರಂತೆ ಆಪರೇಷನ್ ಆದ ಸ್ವಲ್ಪಹೊತ್ತಿಗೆ ರೋಗಿಯು ಸತ್ತುಹೋದನು ಎಂದು ಕೇಳುತ್ತೇವೆ

ಅಬ್ಸೀನಿಯದ ಯುದ್ಧಸಿದ್ಧತೆ.

ಕೆಲವು ಯೂರೋಪಿಯನ್ ರಾಷ್ಟ್ರಗಳು ಅಬ್ಸೀನಿಯಕ್ಕೆ ಮದ್ದುಗುಂಡುಗಳನ್ನು ಸರಬರಾಜು ಮಾಡಿದ್ದಕ್ಕೆ ಇಟಲಿಗೆ ಕೋಪಬಂದಿದೆ ಅಲ್ಲದೆ ಆ ಯುದ್ಧಸಾಮಗ್ರಿಗಳೆಲ್ಲವೂ ಇಟಾಲಿಯನ್ನರಿಗೂ ಸಂಬಂಧಿಸಿದ ರೈಲಿನಲ್ಲೆ ಕಳಿಸಲ್ಪಟ್ಟವೆಂಬುದನ್ನು ತಿಳಿದಮೇಲಂತೂ ಅವರ ಕೋಪವು ಮಿತಿಮೀರಿದೆ ಅಬ್ಸೀನಿಯದ ಚಕ್ರವರ್ತಿಯವರು ಮದ್ದುಗುಂಡುಗಳನ್ನು ಬಹಿರಂಗವಾಗಿ ಕೊಂಡದ್ದಲ್ಲವೇ ತಾನೇ ಖುದ್ದು ಫ್ರೆಂಚ ರೈಲ್ವೆ ಸ್ಟೇಷನ್ನಿಗೆ ಹೋಗಿ ಜೂಕೋಸ್ಲೋವೋಕಿಯ ಮತ್ತು ಬೆಲ್ಜಿಯಂಗಳಿಂದ ತಯಾರಾಗಿ ಬಂದ 400 ಮಿಷನ್ ಬಂದೂಕ 20000 ರೈಫಲ್ 6000000 ತೋಟಾಗಳನ್ನು ಬೆಲವರಿ ತೆಗೆದುಕೊಂಡಿರುತ್ತಾರೆ.

ಶ್ರೀ ಕೇದಾರಪ್ರಾಂತೀಯ ಸಮಾಚಾರ.

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ ಉಷಾಮಠದಲ್ಲಿ ವಿಜೃಂಭಣಾಪೂರ್ವಕ ಸಾಮ್ರಾಟ್ ಪಂಚಮ ಜಾರ್ಜ್ ಸಿಲ್ವರ್ ಜ್ಯೂಬಿಲಿ ಮಹೋತ್ಸವವು ಅನುಷ್ಠಿಸಲ್ಪಟ್ಟಿತು. ತಾ|| ೬-೫-೩೫ ನೇ ದಿವಸ ಏಕೋರಾಮಾರಾಧ್ಯರ ಜಯಂತಿ ಮಹೋತ್ಸವವು ಗತವರ್ಷದಂತೆ ಅತಿವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ದಿವಸವು ಪುಣ್ಯದಿವಸವಾದ್ದರಿಂದ ಪಂಡಿತ ಸಿದ್ಧೇಶ್ವರಲಿಂಗರವರನ್ನು ಸಂಸ್ಥಾನದ ಪಟ್ಟಶಿಷ್ಯರ ಮಹಾಂಪಿಠಕ್ಕೆ ಶಿಷ್ಯರನ್ನಾಗಿ ಪಟ್ಟಾಭಿಷೇಕವಾಯಿತು ಮತ್ತು ಅನೇಕ ಪಂಡಿತಜನರು ಈ ಶುಭಕಾರ್ಯಕ್ಕೆ ಆಗಮಿಸಿದ್ದರು. ಕಾರ್ಯಕ್ರಮ ತಾ|| ೧೧-೫-೩೫ ಕ್ಕೆ ನಿಶ್ಚಯಿಸಲ್ಪಟ್ಟಿತು. ಸಿಲ್ವರ್ ಜ್ಯೂಬಿಲಿಯ ಕಾರ್ಯಕ್ರಮಪ್ರಾರಂಭ—ಉದಯ ೪ ಘಂಟೆಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸಾಮ್ರಾಟ್ ಸಾರ್ವಭೌಮರ ಚಿರಾಯುರಾರೋಗ್ಯಕ್ಕಾಗಿ ಹವನವನ್ನು ಮಾಡಿದರು. ಸಂಸ್ಥಾನಕ್ಕೆ ಒಳಪಟ್ಟ ಕೇದಾರಕ್ಷೇತ್ರ ಮುಂತಾದ 22 ಕ್ಷೇತ್ರಗಳ ಸಂಸ್ಥಾನದ ಪುರೋಹಿತ ಪಂಡಿತರು ದೇವಾಗಾರದಲ್ಲಿ ರುದ್ರಾಭಿಷೇಕ ಜಪ ತಪ ಪೂಜಾದಿಗಳನ್ನು ಮಾಡಿದರು. ಇದೇ ದಿವಸ ಉದಯ 6 ಘಂಟೆಯ ಸಮಯಕ್ಕೆ ಸಮಸ್ತ ರಾಜಬಿರುದಾವಳಿಗಳೊಡನೆ ಮಹಾಸ್ವಾಮಿಯವರು ಸಕಲ ಪರಿವಾರ ಜನಸಮೂಹದೊಡನೆ ಸಂಸ್ಥಾನದಿಂದ … 'ಸಾಮ್ರಾಟ್ ಪಂಚಮ ಜಾರ್ಜ್ ಸಿಲ್ವರ್ ಜ್ಯೂಬಿಲಿ' ಯ ಸ್ಮಾರಕಕ್ಕಾಗಿ ಹೊಸದಾಗಿ ಕಟ್ಟಿಸಲ್ಪಟ್ಟಿದ್ದ ಘಂಟಾಗೃಹ (ಟವರ್) ಗೆ ದಯಮಾಡಿಸಿದರು. ಆ ಸ್ಥಳದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಹವನ ಪೂಜಾದಿಗಳನ್ನು ಪೂರೈಸಿದ ನಂತರ ಶ್ರೀ ಜಗದ್ಗುರು ಮಹಾಸನ್ನಿಧಿಯವರ ಕರಕಮಲದಿಂದ ಪುಷ್ಪವೃಷ್ಟಿಯು ಮಹದ್ವಾರದಲ್ಲಿ ಸಾಮ್ರಾಟ್ ಪಂಚಮ ಜಾರ್ಜ್ ಸಿಲ್ವರ್ ಜ್ಯೂಬಿಲಿ ಟವರ್ (ಗೋಪುರ) ಎಂಬ ಬೋರ್ಡ್ ಸ್ಥಾಪಿಸಲ್ಪಟ್ಟಿತು. ಅನೇಕ ಪಂಡಿತರ ಭಾಷಣಗಳಾದನಂತರ ಸರ್ವರಿಗೂ ಸಿಹಿಯು ಹಂಚಲ್ಪಟ್ಟಿತು. ಪುನಃ ಪುಷ್ಪವಾಟಿಕೆಯಿಂದ ಸಂಸ್ಥಾನಕ್ಕೆ ದಯಮಾಡಿಸಿ ಸಭಾಭವನದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಮಿಡಲ್ ಸ್ಕೂಲ್ ಆಫ್ … ವಿದ್ಯಾರ್ಥಿಗಳ ಗಾಯನ … ನಡೆದನಂತರ ಭೋಜನಸಮಯವು ಸನ್ನಿಧಿಯಿಂದ … ಪುನಃ ೧ ಘಂಟೆಯಿಂದ ಸಮಯ … ಘಂಟೆಯಿಂದ ೫ ಘಂಟೆಯವರೆವಿಗೂ ವಿದ್ಯಾರ್ಥಿಗಳ … ಘಂಟೆಯಿಂದ ೬ ಘಂಟೆ ವರೆವಿಗೂ … ಶಾಸ್ತ್ರಾರಂಭವಾಗಿ ಪಂಡಿತರು … ಸಮಾಪ್ತಿಯನ್ನು … ಸಭೆಯು ವಿಸರ್ಜನೆಯಾಯಿತು. ಪುನಃ ಇದೇ ದಿವಸ ರಾತ್ರಿ … ಘಂಟೆಯಿಂದ ೩ ಘಂಟೆಯವರೆವಿಗೂ ಪ್ರೊಫೆಸರ್ ಸಿದ್ಧೇಶ್ವರಲಿಂಗರವರು ಸ್ಥಾಪಿಸಿದ ಮಹಾವಿದ್ಯಾಲಯದ ನಾಟಕಮಂಡಳಿಯವರು 'ಮಯೂರಧ್ವಜ' ನಾಟಕವನ್ನು ಪ್ರೇಕ್ಷಕರ ಚಿತ್ತಕ್ಕೆ ಸಂತೋಷವಾಗುವಂತೆ ಸ್ತೋತ್ರಾರ್ಹವಾಗಿ ಪ್ರದರ್ಶಿಸಿದರು. ತಾ|| ೭-೫-೩೫ ರಲ್ಲಿ ನಡೆದ ಕಾರ್ಯಕ್ರಮ: ಈ ದಿವಸ ಉದಯ … ಘಂಟೆಯಿಂದ ೧ ಘಂಟೆಯವರೆವಿಗೂ ಮಿಡಲ್ ಸ್ಕೂಲಿನ ಮತ್ತು ಪಾಠಶಾಲೆಯ ಗ್ರಾಮದಲ್ಲಿರುವ ಓಲ್ಡ್ ಬಾಯ್ಸ್ ವಿದ್ಯಾರ್ಥಿಗಳೊಡನೆ ಫುಟ್‌ಬಾಲ್ ಕ್ರಿಕೆಟ್ ಮ್ಯಾಚ್ ನಡೆಯಿತು. ಪುನಃ 3 ಘಂಟೆಯಿಂದ 6 ಘಂಟೆಯವರೆವಿಗೂ ಸಂಸ್ಕೃತ ವಿದ್ಯಾಲಯದ ಮಿಡಲ್ ಸ್ಕೂಲ್ ವಿದ್ಯಾರ್ಥಿಗಳ ಸ್ಪೋರ್ಟ್ಸ್ ಮುಂತಾದ ಆಟಗಳು ನಡೆದುವು. ಇದೇ ದಿವಸ … ಘಂಟೆಯಿಂದ 9 ಘಂಟೆಯ ವರೆವಿಗೂ ದೀಪಾವಳಿಯ ಕಾರ್ಯವು ಮತ್ತು ಮದ್ದುಗುಂಡು ಸುಡುವಿಕೆ (ಆತಷಬಾಜಿ) ಮುಂತಾದ ಕಾರ್ಯಗಳು ನಡೆದನಂತರ ರಾತ್ರಿ 10 ಘಂಟೆಯಿಂದ 3 ಘಂಟೆಯವರೆವಿಗೂ ಮೊದಲಿನಂತೆ ನಾಟಕಮಂಡಳಿಯವರು 'ಬಿಲ್ವಮಂಗಲ' ಎಂಬ ನಾಟಕವನ್ನು ದರ್ಶಕರ ಚಿತ್ತಕ್ಕೆ ಸಂತೋಷವನ್ನುಂಟುಮಾಡುವಂತೆ ಮಾಡಿದರು. ಈ ನಾಟಕವನ್ನು ನೋಡುವದಕ್ಕೆ 30-40 ಮೈಲುಗಳಿಂದ ಜನರು ಬಂದಿದ್ದರು. ಈ ಚಿಕ್ಕ ಬಾಲಕರು ಪ್ರೇಕ್ಷಕರ ಚಿತ್ತಕ್ಕೆ ಸಂತೋಷವನ್ನುಂಟುಮಾಡಿದ್ದಕ್ಕಾಗಿಯೂ ಮತ್ತು ಪ್ರೊಫೆಸರ್ ಸಂಗೀತವಿದ್ವಾನ್ ಸಿದ್ಧೇಶ್ವರಲಿಂಗರವರು ಶ್ರಮವಹಿಸಿ ಈ ಬಾಲಕರಿಗೆ ಈ ನಾಟಕಗಳನ್ನು ಕಲಿಸಿದ್ದಕ್ಕಾಗಿಯೂ ಬಂದ ಪ್ರೇಕ್ಷಕ ಮಹಾಶಯರು … ಸೂತ್ರಧಾರಿಗಳಿಗೂ ಸುವರ್ಣ ಮತ್ತು ರಜತ ಪದಕಗಳನ್ನು ಅರ್ಪಿಸಿದ್ದಲ್ಲದೆ ಅನೇಕ ಧನ್ಯವಾದಗಳನ್ನಿತ್ತರು. ತಾ|| ೬-೫-೩೫ ನೇ ದಿವಸ ಸಕಲ ವಿದ್ಯಾರ್ಥಿಗಳಿಗೂ ಶಿವಸಮ್ಮೇಳನದಲ್ಲಿ ಸಮಸ್ಯೆಯನ್ನು ಪೂರ್ತಿಗೊಳಿಸಿದ ಸಂಸ್ಕೃತ ಹಿಂದೀ ಕವಿಗಳಿಗೆ ಸಂಸ್ಥಾನದ ಪಕ್ಷದಿಂದ ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರಾದ ಪಂ. ಅನುಸೂಯಾಪ್ರಸಾದ ಬಿ.ಎ., ಎಲ್.ಎಲ್.ಬಿ. ವಕೀಲ ಇವರ ಹಸ್ತದಿಂದ ಸುವರ್ಣಪದಕಗಳೂ ಮತ್ತು ಚಿಕ್ಕದೊಡ್ಡ ಇನಾಮುಗಳು ಕೊಡಲ್ಪಟ್ಟವು. ಇದಲ್ಲದೆ 5 ಘಂಟೆಯಿಂದ 9 ಘಂಟೆಯವರೆವಿಗೂ ಬಡವರಿಗೆ ಅನ್ನವಸ್ತ್ರಾದಿಗಳು ಹಂಚಲ್ಪಟ್ಟವು. ಈ ಮಹೋತ್ಸವಾರಂಭವು ಪೂರೈಸುವ ವರೆವಿಗೂ ಸಬ್ ಇನ್ಸ್‌ಪೆಕ್ಟರ್ ಪೋಲೀಸ್ ರೆವಿನ್ಯೂ ಇನ್ಸ್‌ಪೆಕ್ಟರ್ ಸಬ್ ಅಸಿಸ್ಟೆಂಟ್ ಸರ್ಜನ್ ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಎಕ್ಸಿಕ್ಯೂಟಿವ್ ಇಂಜನಿಯರ P.W.D. ಓವರ್‌ಸಿಯರ್ ಮುಂತಾಗಿ ಅನೇಕ ಮಹಾಶಯರು ಆಗಮಿಸಿದ್ದರು.

ಓರ್ವ ಪ್ರತ್ಯಕ್ಷದರ್ಶಿ

ಮಹನೀಯರ ಹಿತೋಕ್ತಿಗಳು

(ಮುಂದೆ ಸಾಗಿದುದು)

54 ಈ ಪ್ರಪಂಚದಲ್ಲಿ ಸುಖವೆನ್ನುವುದು ದೊರಕಿತೆಂದು ಹಿಗ್ಗದಿರು. ಏಕೆಂದರೆ ಪ್ರಪಂಚಸುಖವೆಂಬುದು ಮಳೆಗಾಲದಲ್ಲಿ ಕಾಣುವ ಮೋಡದಂತಿರುವದು. ಅದನ್ನು ಯಾವ ಚಟ್ಟವೂ ತಡೆದಿಟ್ಟುಕೊಳ್ಳಲರಿಯದು. ಐಶ್ವರ್ಯವು ಬಂತೆಂದು ಹಿಗ್ಗದಿರು. ಏಕೆಂದರೆ ಕೊನೆಗೆ ನೀನು ಇದೆಲ್ಲವನ್ನೂ ಬಿಟ್ಟು ತೆರಳಬೇಕಾಗುವದು.

ಒಳ್ಳೆಯ ನೆಂಟರೂ ಉತ್ತಮವಾದ ಕುಲವೂ ನಿನಗಿರುವದೆಂದು ಹಿಗ್ಗದಿರು. ಏಕೆಂದರೆ ಕೊನೆಗೆ ನಿನ್ನ ಕರ್ಮವೇ ನಿನ್ನನ್ನು ಕಾಪಾಡಬೇಕಾಗುವದು. ನಾನು ಬದುಕಿದೆನೆಂದು ಹಿಗ್ಗದಿರು. ಏಕೆಂದರೆ ಕೊನೆಗೆ ನಿನಗೆ ಸಾವು ಬಂದೇ ತೀರುವದು. ನಾಶವಾಗದ ಕಂದ ಭಾಗವೆಲ್ಲ ನೆಲಸ್ಥಿರವಾಯಿತೇ ತೀರುವದು. ಈ ಪ್ರಪಂಚದಲ್ಲಿ ಯಾವುದನ್ನೂ ನಂಬುವುದಕ್ಕಾಗುವದಿಲ್ಲ.

55 ಜಾಗ್ರತ್ಪ್ರದೇಶದಲ್ಲಿ ಎಷ್ಟು ಮಾಳಬದ್ಧತೆ ಹ್ಯಾಗೆ ವ್ಯರ್ಥವೋ ಹಾಗೆಯೇ ವಿವೇಕಶೂನ್ಯತೆ ಅಜ್ಞತೆ ಅಸೂಯೆ ಕಪಟ ರಾಗದ್ವೇಷಗಳಿಂದ ಕೂಡಿ ಮನಸ್ಸಿನಿಂದ ಎಷ್ಟು ಸ್ನಾನ ಜಪ ತಪ ಪೂಜಾದಿಗಳನ್ನು ಮಾಡಿದರೂ ವೇದಶಾಸ್ತ್ರಗಳನ್ನು ಉಸುರುತ್ತಿದ್ದರೂ ಪರನಿಂದೆ ಮಾಡಿದರೂ ವ್ಯರ್ಥವೆ. ಇದರಿಂದ ಆತ್ಮಸಂಬಂಧವಾದ ಉನ್ನತಿಯು ಆಗಲಾರದು. ಇಂಥವರ ಆಚರಣೆಯು ಡಂಭಾಚಾರವಾಗುವದಲ್ಲದೆ ಹೆಳವನು ಹೇಡಿ ಹಾಕುವದು ಗಾಳಿ ಎಂಬ ಗಾದೆಯಂತಾಗುವದು. ಮುಖ್ಯವಾಗಿ ಯಾವುದಕ್ಕೂ ಅಂತರಂಗದ ಭಾವಶುದ್ಧಿಯಿರಬೇಕು.

56 ಅಯ್ಯಾ ನೀನು ನಿಜಶಾಂತಿಯನ್ನು ಪಡೆಯಬೇಕೆಂದರೆ ಹೊರಗಿನ ವಿಷಯಗಳಿಂದ ಅದನ್ನು ಗಳಿಸಿಕೊಳ್ಳಬೇಕೆಂದು ಏಕೆ ಹವಣಿಸುತ್ತಿದ್ದೀಯೆ? ಅದು ಹೊರಗಿನಿಂದ ಸಿಕ್ಕಲಾರದು. ಅದು ಯಾವಾಗಲೂ ನಿನ್ನಲ್ಲಿ ಇದ್ದುಕೊಂಡೇ ಇರುವದು. ನೀನು ಬಂದರೆ ನಾಕೆಂದು ಅದು ಕಾದುಕೊಂಡಿರುವದು. ಅದು ಎಂದೆಂದಿಗೂ ನಿನ್ನಲ್ಲಿಯೇ ನೆಲೆಯಾಗಿರುವದು. ನೀನು ಎಚ್ಚರದಿಂದ ಕನಸಿಗೆ ಹೋಗುವಾಗ ಅದರ ಮೂಲಕವಾಗಿಯೇ ಹೋಗಬೇಕಾಗಿರುವದು. ಅದನ್ನು ಮನಸ್ಸಿನಲ್ಲಿ ಯೋಚಿಸು. ಅದೇ ನಿನ್ನ ತನಗಿರುವ ನಿಜವಾದ ವಿಶ್ರಾಂತಿಯು. ಮತ್ತೆ ಮತ್ತೆ ಏಕೆ ಅದನ್ನು ಕಳೆದುಕೊಳ್ಳುತ್ತೀಯೆ? ನಿನಗೆ ಅದರ ತಿಳುವಳಿಕೆಯಿದ್ದರೆ ಅದನ್ನು ಬಿಟ್ಟು ಮತ್ತೇಕೆ ಹೊರಕ್ಕೆ ಬಂದು ಚಿಕ್ಕವಿಲ್ಲದ ಪ್ರಪಂಚದ ಪದಾರ್ಥಗಳಲ್ಲಿ ಚಿಕ್ಕಸಿಕೊಳ್ಳುತ್ತೀಯೆ?

57 ಮನುಷ್ಯನಲ್ಲಿ ದುರ್ವ್ಯಕ್ತಿಯು ಬೆಳೆದ ಹಾಗೆಲ್ಲ ವೃದ್ಧಿಯಾಗುವದು. ಅದರೂ ಇದು ದುರ್ವೃತ್ತಿ ಎಂದು ತಿಳಿದು ಉತ್ಸಾಹವಿಲ್ಲದೆಯೇ ಅದನ್ನು ಬಿಡಬೇಕು, ಪಾಪ ಜಾಗ್ರತನವು.

58 ಹೀಗಿದ್ದಲ್ಲಿ ನನ್ನದು ಬೇರೆ ಪರರದು ಬೇರೆ ಎಂದೂ ಆತನ ವಿಷಯದಲ್ಲಿ ನಾನು ಬೇರೆ ಅವನು ಬೇರೆ ಎಂಬ ಭೇದಭಾವನೆಯೇ ದ್ವೇಷಭಾವಗಳಲ್ಲಿಯೂ ಸಮತ್ವಬುದ್ಧಿಯು ಹುಟ್ಟುವವನಿಗೆ ಶಾಂತತೆಯು ಬಂದಿರುವದೋ ಅವನೇ ಸದ್ಭಕ್ತನು.

59 ಯಾರೊಬ್ಬರ ಮೇಲೆಯೂ ಹಗೆತನ ಮಾಡದೆ ಎಲ್ಲರಲ್ಲಿಯೂ ಮೈತ್ರಿಯನ್ನೂ ಕರುಣೆಯನ್ನೂ ತೋರಿಸುತ್ತ ನಾನು ನನದೆಂಬುವನ್ನು ಬಿಟ್ಟು ಸುಖದುಃಖಗಳನ್ನು ಸಮವಾಗಿ ತಿಳಿಯುತ್ತ ಕ್ಷಮೆಯುಳ್ಳವನಾಗಿ ಯಾವಾಗಲೂ ತೃಪ್ತನಾಗಿ ಮನಸ್ಸನ್ನು ಸ್ವವಶಪಡಿಸಿಕೊಂಡು ಮನಸ್ಸಿನಮೇಲೆ ಅಧಿಕಾರವನ್ನು ನಡೆಸುತ್ತ ದೃಢನಿಶ್ಚಯವುಳ್ಳವನಾಗಿ ಪರಮಾತ್ಮನಲ್ಲಿಯೇ ಮನೋಬುದ್ಧಿಗಳನ್ನು ಇಟ್ಟಿರುವವನೇ ಶಿವಪ್ರಿಯನು.

60 ರಾಜದರ್ಶನವನ್ನು ಪಡೆಯಬೇಕಾದರೆ ಅಲ್ಲಿರುವ ಊಳಿಗದವರ ಮತ್ತು ಪರಿವಾರದವರ ವಿಶ್ವಾಸವು ಹ್ಯಾಗೆ ಅವಶ್ಯಕವೋ ಹಾಗೆಯೇ ಮೋಕ್ಷವನ್ನು ಅಪೇಕ್ಷಿಸುವವರು ಮೋಕ್ಷದ ದ್ವಾರಪಾಲಕರಂತಿರುವ ಶಾಂತಿ ಸಂತೋಷ ವಿವೇಕ ಸತ್ಸಂಗವೆಂಬೀ ನಾಲ್ಕು ಜನರ ಸ್ನೇಹವನ್ನು ಮಾಡಿಕೊಳ್ಳಬೇಕು. ಈ ನಾಲ್ಕು ಜನರ ಅಭಿಮಾನವನ್ನು ಸಂಪಾದಿಸಲಾರದವನು ಇವರಲ್ಲಿ ಒಬ್ಬನ ಅಭಿಮಾನವನ್ನಾದರೂ ಸಂಪಾದಿಸಬೇಕು. ಶಾಂತಿ ಸಂತೋಷ ವಿವೇಕ ಇವು ದೊರೆಯದಿದ್ದರೂ ಈ 'ಸಾಧುಸಂಗ' ಎಂಬುವನ ವಿಶ್ವಾಸವನ್ನು ಹೊಂದುವುದಕ್ಕೆ ಪ್ರಯತ್ನಪಡಬೇಕು. ಈತನ ಸ್ನೇಹವು ಬಹು ಸುಲಭವು. ಕಾಲಕ್ರಮದಲ್ಲಿ ಇತರರ ವಿಶ್ವಾಸವನ್ನು ಮಾಡಿಕೊಂಡು ಬಹು ಸುಲಭವಾಗಿ ಮೋಕ್ಷಗೃಹವನ್ನು ಪ್ರವೇಶಿಸಬಹುದು. ಇಂದ್ರಿಯನಿಗ್ರಹವನ್ನು ಸಂಪಾದಿಸಿ ವಿಷಯಗಳನ್ನು ಪರಿತ್ಯಜಿಸಿ ದೈವಸಂಪತ್ತನ್ನು ಸಂಪಾದಿಸಿದವನು ಜ್ಞಾನಿ (ಸಾಧು) ಎನಿಸಿಕೊಳ್ಳುವನು. ಸತ್ಸಂಗದಿಂದ ಉಂಟಾಗುವ ಫಲವೇನೆಂದರೆ—(ಸತ್ಸಂಗತ್ವೇ ನಿಸ್ಸಂಗತ್ವಂ ನಿಸ್ಸಂಗತ್ವೇ ನಿರ್ಮೋಹತ್ವಂ || ನಿರ್ಮೋಹತ್ವೇ ನಿಶ್ಚಲತತ್ತ್ವಂ ನಿಶ್ಚಲತತ್ತ್ವೇ ಜೀವನ್ಮುಕ್ತಿಃ ||)

61 ಈ ಶರೀರೋತ್ಪತ್ತಿಗೆ ಕಾರಣವಾಗಿಯೂ ಈ ಲೋಕದಲ್ಲಿ ಸುಖದುಃಖಾದಿಗಳನ್ನು ಕೊಡತಕ್ಕದಾಗಿಯೂ ಇರುವ ಯಾವ ಕರ್ಮವಿದೆಯೋ ಅದೇ ಪ್ರಾರಬ್ಧಕರ್ಮವು. ಈ ಪ್ರಾರಬ್ಧಕರ್ಮವು ಅನುಭವಿಸುವುದರಿಂದಲೇ ನಷ್ಟವಾಗುವದು ಹೇಗೆಂದರೆ—(ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ | ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ ||) ಎಂದರೆ ಪೂರ್ವದಲ್ಲಿ ಮಾಡಿದ ಶುಭಾಶುಭಕರ್ಮಗಳ ಫಲವನ್ನು ಅನುಭವಿಸಿಯೇ ತೀರಬೇಕು. ಇಲ್ಲವಾದರೆ ಕೋಟಿಜನ್ಮಗಳನ್ನು ಧರಿಸಿದರೂ ಅದು ನಾಶವಾಗುವುದಿಲ್ಲವು. ದುರ್ಭಾಗ್ಯಶಾಲಿಯು ಕಲ್ಪವೃಕ್ಷದ ಬಳಿಗೆ ಹೋದರೂ ಯಾವ ಪ್ರಯೋಜನವೂ ಆಗುವದಿಲ್ಲ. ಭಾಗ್ಯವಂತರು ಹೋದಕಡೆಯಲ್ಲೆಲ್ಲ ಋದ್ಧಿಸಿದ್ಧಿಗಳನ್ನು ಪಡೆಯುವರು.

62 ಸಾಮಾನ್ಯವಾಗಿ ಸ್ತ್ರೀಪುರುಷರು ಒಬ್ಬರನ್ನೊಬ್ಬರು ಅಗಲಲಾರದಷ್ಟು ಪ್ರೇಮಾತಿಶಯವುಳ್ಳವರಾಗಿರುವರಷ್ಟೆ! ಇದಕ್ಕೆ ಕಾರಣವೇನೆಂದು ಯೋಚಿಸಿದರೆ ಒಬ್ಬರ ಪ್ರೇಮವು ಐಶ್ವರ್ಯವನ್ನೂ ಮತ್ತೊಬ್ಬರ ಪ್ರೇಮವು ಸೌಂದರ್ಯವನ್ನೂ ಆಶ್ರಯಿಸಿಕೊಂಡಿರುವದೆಂದು ಸ್ಪಷ್ಟವಾಗುವದು. ಇಂಥ ಪ್ರೇಮಕ್ಕೆ ವಿಷಯವಾದ ವಸ್ತುವು ಕಾಲಗತಿಯಿಂದ ಅದೃಶ್ಯವಾದರೆ ಆಗ ಪ್ರೇಮಕ್ಕೆ ಬದಲಾಗಿ ವೈರವು ನೆಲೆಗೊಳ್ಳುವದೆಂಬುದು ಲೌಕಿಕರೆಲ್ಲ ಅನುಭವಕ್ಕೆ ಬಂದ ವಿಷಯವಾಗಿರುವದು. ಭಕ್ತಿಗೆ ವಿಷಯವಾದ ವಸ್ತುವಿನಲ್ಲಿ ಸುಂದರತೆ ಧನಾಢ್ಯತೆ ಸೃಷ್ಟಿಸ್ಥಿತಿಲಯಗಳ ಕರ್ತೃತ್ವ ದಾತೃತ್ವ ಸರ್ವಜ್ಞತ್ವ ಸರ್ವಶಕ್ತಿತ್ವ ಇವೇ ಮೊದಲಾದ ಯಾವ ಉಪಾಧಿಯೂ ಇರಬೇಕಾದ ದಿಲ್ಲ. ಪ್ರೇಮಸ್ವರೂಪನಾದ ನಿತ್ಯವಸ್ತುವೇ ಭಕ್ತಿಗೆ ವಿಷಯವು.

63 ಪ್ರೇಮಶಾಸ್ತ್ರದಲ್ಲಿ ಪ್ರಥಮತಃ ದ್ವೈತಭಾವವು ಪ್ರಾರಂಭವಾಗುವದು. ಭಗವಂತನು ಪೃಥಕ್ಸ್ಥನೆಂದೂ ನಾವು ಆತನಿಗೆ ಅನ್ಯರೆಂದೂ ಭಾವಿಸುವೆವು. ಆಗ ಪ್ರೇಮವು (ಭಕ್ತಿಯು) ಭಗವಂತನಿಗೂ ನಮಗೂ ಮಧ್ಯದಲ್ಲಿ ಬಂದು ಇಂತು ಉಭಯರನ್ನು ಏಕತ್ರ ಸೇರಿಸಲು ಯೋಚಿಸುವುದು. ಕೂಡಲೆ ಮಾನವನು ಸಾಂಸಾರಿಕಸಂಬಂಧವಾದ ಮಾತಾ ಪಿತಾ ಪುತ್ರ ಸಖ ಪ್ರಭು ಪತ್ನೀ ಮೊದಲಾದ ಭಾವನೆಗಳಿಂದ ಪ್ರೇಮಾಧಾರವಾದ ವಸ್ತುವನ್ನು ಪ್ರತೀತಗೊಳಿಸುವನು. ಅಂಥವನಿಗೆ ಭಗವಂತನ ಸರ್ವತ್ರ ಕಾಣಿಸಲೇ ಬೇಕು. ಅದರೆ ಸಂಸಾರಕ್ಕೆ ಸಂಬಂಧಿಸಿರುವ ಕ್ಷುದ್ರವಾದ ಅಹಂಕಾರವು ಮೊದಮೊದಲು ಕಳೆದು ಅನಂತರ ಪವಿತ್ರವಾದ ಪ್ರೇಮವನ್ನು ಸ್ವಾರ್ಥರಹಿತನಾಗಿ ಮಾಡುವನು. ಆದರೇನು? ಪ್ರೇಮದ ಪರಾಕಾಷ್ಠೆಯು ಅತಿಶಯವಾದುದರಿಂದ ಕೊನೆಗೆ ಆ ಕ್ಷುದ್ರವಾದ ಅಹಂಭಾವವು ಆ ಪ್ರೇಮದಲ್ಲಿ ಅಂತರ್ಹಿತವಾಗುವದು. ಆಗ ಮಾನವನು ಉಪಾಸ್ಯವಸ್ತುವಿನಲ್ಲಿ ಲೀನನಾಗುವನು. ಅವನ ಅಂತಃಕರಣದಿಂದ ಸಕಲ ಮಲಗಳೂ ಸಕಲ ವಾಸನೆಗಳೂ ಲಯವಾಗಿ ಪೂಜ್ಯ ಪೂಜಕ ಪೂಜೆಗಳೆಂಬ ಭೇದಭಾವನೆಗಳಿಲ್ಲದೆ ಎಲ್ಲವೂ ಒಂದೇ ಎಂಬ ತತ್ತ್ವವು ವ್ಯಕ್ತವಾಗುವದು. ಇದೇ ಭಕ್ತಿಯ ಆದರ್ಶವಾದ ಚರಮಸ್ಥಾನವು. ಶಿವನೊಲುಮೆಗೆ ಭಕ್ತಿಯೇ ಶ್ರೇಯಸ್ಕರ.

64 ನಾವು ಜ್ಞಾನವನ್ನು ಹೊಂದುವುದಕ್ಕೆ ಮೂರು ಹಾದಿಗಳುಂಟು. ಅನುಭವದ ಹಾದಿಯು ಒಂದು. ಇದು ಅತ್ಯಂತ ಕಷ್ಟವಾದ ಮಾರ್ಗವು. ಮತ್ತೊಬ್ಬರಿಂದ ಉಪದೇಶಹೊಂದುವದು. ಇದು ಅತ್ಯಂತ ಸುಲಭವಾದ ಮಾರ್ಗವು. ವಿಚಾರಮಾಡುವದೊಂದು ಹಾದಿಯು. ಇದೇ ಎಲ್ಲಕ್ಕಿಂತಲೂ ಘನವಾದ ಮಾರ್ಗವು.

65 ಯಾವನೊಬ್ಬನೂ ಇಬ್ಬರು ಧಣಿಗಳ ಸೇವೆಯನ್ನು ಮಾಡಲಾರನು. ಅವನು ಅವರಲ್ಲಿ ಒಬ್ಬನನ್ನು ಪ್ರೀತಿಸಿ ಮತ್ತೊಬ್ಬನನ್ನು ದ್ವೇಷಿಸುವನು. ಅಥವಾ ಒಬ್ಬನನ್ನು ಅಂಟಿಕೊಂಡು ಮತ್ತೊಬ್ಬನನ್ನು ಕಡೆಗಣಿಸುವನು. ಇದರಂತೆ ನೀವು ಪರಮೇಶ್ವರ ಐಶ್ವರ್ಯದೇವತೆ ಇಬ್ಬರನ್ನೂ ಒಟ್ಟಿಗೆ ಸೇವಿಸುವದು ಆಗಲಾರದು. ಪರಮಾತ್ಮನನ್ನು ಸಂಪೂರ್ಣ ಆರಾಧಿಸುವವನಿಗೆ ಧನಸಂಗ್ರಹಮಾಡುವದಕ್ಕೆ ಅವಕಾಶವಿರುವುದಿಲ್ಲ. ಆದಕಾರಣವೇ ನಮ್ಮ ಸಾಧುಸಂತರುಗಳಿಗೆ ದಾರಿದ್ರ್ಯವೇ ಧ್ವಜವಾಗಿಬಿಟ್ಟಿದೆ.

66 ಸಮಸ್ತ ಸಂಕಷ್ಟಗಳಿಗೂ ಪರಿಸ್ಥಿತಿಗಳಿಗೂ ಎಡೆಗೊಡುವಂತಹ ಪರಮಾತ್ಮನಲ್ಲಿರುವ ಘೋರತ್ವಕ್ಕಿಂತಲೂ ಮಿಗಿಲಾದ ಪ್ರಾಪ್ತಿಯು ಈ ಜೀವಮಾನದಲ್ಲಿ ಬೇರೊಂದಿಲ್ಲ. ತನ್ನ ನೆರೆಯವನನ್ನು ಪ್ರೀತಿಯಿಂದ ಕಾಣುವದೇ ತನ್ನ ಪರಮಾತ್ಮನನ್ನು ಪ್ರೀತಿಸುವದಾಗಿದೆ. ನನ್ನ ನೆರೆಯವನಿಗೆ ಹೊರಟ್ಟಾಗಿರುವ ಪರಮಾತ್ಮನು ಪರಮಾತ್ಮನಲ್ಲ. ಆದ್ದರಿಂದಲೇ 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಣವಕ್ಕು ಸರ್ವಜ್ಞ' ಎಂದು ಸರ್ವಜ್ಞಮೂರ್ತಿಗಳು ಹೇಳಿದ್ದಾರೆ.

67 ಜ್ಞಾನಿಯಾದವನು ಮಹಾಕರ ಸೆಯುಳ್ಳವನಾಗಿರುತ್ತಾನೆ. ಅವನಿಗೆ ತಾನೊಬ್ಬನು ಸರಿಯಾದ ಹಾದಿಯಲ್ಲಿ ಸಂಚರಿಸುತ್ತಿರುವೆನೆಂಬುದರಿಂದ ಸಂತೃಪ್ತಿಯಿಲ್ಲ. ತನ್ನಂತೆ ಎಲ್ಲರೂ ಅಜ್ಞಾನನಿದ್ರೆಯಿಂದ ಎಚ್ಚತ್ತು ಅಧ್ಯಾತ್ಮದ ಹಿತಕರವಾದ ಬೆಳಕಿನ ಆನಂದದಿಂದ ಅಡ್ಡಾಡುತ್ತಿರಲೆಂಬ ಆಸೆಯು ಅವನಿಗೆ ಉತ್ಕಟವಾಗಿರುವದು. ಅದಕ್ಕಾಗಿ ತನ್ನ ಕೈಯಲ್ಲಾಗುವ ಸಹಾಯವನ್ನೆಲ್ಲ ಮತ್ತೊಬ್ಬರಿಗೆ ಮಾಡುವುದಕ್ಕೆ ಸಿದ್ಧನಾಗಿರುವನು. ಅವನ ಅಮೃತವಾಣಿಯು ನಮ್ಮ ಕಿವಿಯೊಳಗೆ ಬಿದ್ದರೆ ಸಾಕು. ಗರುಡನು ಚಿಮುಕಿಸಿದ ಅಮೃತಬಿಂದುಗಳಿಂದ ಇಂದ್ರಜಿತುವಿನ ಮಾಯಾಯುದ್ಧದಲ್ಲಿ ಮೂರ್ಛೆಹೋಗಿದ್ದ ರಾಮನ ಸೈನಿಕರು ಎಚ್ಚತ್ತ ಹಾಗೆ ನಾವು ಚಟ್ಟನೆ ಎಚ್ಚತ್ತು ಜೀವನದ ಸಂಗ್ರಾಮಕ್ಕೆ ಸನ್ನದ್ಧರಾಗೋಣ. ಆಗ ನಮ್ಮ ಜೀವನದ ತೊಡಕುಗಳೆಲ್ಲ ಬಿಡಿಸಿಕೊಂಡು ಹಿಡಿಯಲ್ಲಿಗೂ ನಮ್ಮನ್ನು ಕಾಡುತ್ತಿರುವ ಚಿಂತೆ ರೋಗ ಮೃತ್ಯು ಬಡತನ ಅವಮಾನ ಕಲಹ ಮುಂತಾದವುಗಳೆಲ್ಲ ಮಾಯವಾಗುವವು.

68 ತಾಳ್ಮೆಯಲ್ಲಿ ಎರಡು ಪ್ರಕಾರಗಳಿರುವವು. ಸಂಕಟವನ್ನು ಯತ್ನ ಜನಸ್ಪ್ರೇರಣೆಯಿಂದ ಸಹನಮಾಡಿಕೊಳ್ಳುವದು ಕನಿಷ್ಠತರಗತಿಯ ತಾಳ್ಮೆಯು. ವಿಪತ್ಕಾಲದಲ್ಲಿ ಕಿಂಚಿತ್ತಾದರೂ ವ್ಯಸನಪಡದೆ ಯಥಾಸ್ಥಿತಿಯಿರುವುದು ಶ್ರೇಷ್ಠತರಗತಿಯ ತಾಳ್ಮೆಯು.

69 ನಿಜವಾಗಿಯೂ ದಾರಿದ್ರ್ಯವು ಮಹಾಮಹಿಮೆಯುಳ್ಳದ್ದಾಗಿದೆ. ದರಿದ್ರರೇ ಧನ್ಯರು. ಏಕೆಂದರೆ ಬೇಗನೆ ಭಗವಂತನನ್ನು ಸೇರುವರು. ಅವರು ತಾಪತ್ರಯಗಳ ತಾಪದಿಂದ ಅರಿತೂ ಅರಿಯದೆಯೋ ಆಗಾಗ್ಗೆ ಭಗವಂತನ ನಾಮೋಚ್ಚಾರಣೆಮಾಡು

ರುವನು. ಒಬ್ಬನು ಸ್ನಾನಮಾಡುವ ಉದ್ದೇಶದಿಂದ ನದಿಯಲ್ಲಿ ಮುಳುಗುತ್ತಾನೆ. ಇನ್ನೊಬ್ಬನು ಕಾಲುಜಾರಿ ನೀರಿನಲ್ಲಿ ಬಿದ್ದು ಮುಳುಗುತ್ತಾನೆ. ಇಬ್ಬರಿಗೂ ಒಂದೇ ವಿಧವಾದ ಸ್ನಾನವಾಗುವದು.

70 ನಮ್ಮೆಲ್ಲರಿಗೂ ಶರೀರವೆಂಬ ಪಂಜರವನ್ನು ಕಟ್ಟಿಕೊಂಡಿರುವ ... ಅಜ್ಞಾನವು ಹೋಗಲಿ ... ಬಾಹ್ಯ ... ಯಾತನೆ ... ನಮ್ಮ ಪ್ರಯತ್ನದ ಕ್ರಮವು ... ಅವನು ... ಅವರೆ ನಮ್ಮನ್ನು ನೋಡಿರಿ! ಒಳಗಿರುವ ಬೆಳಕನ್ನು ... ವಿಷಯಗಳ ಕಗ್ಗತ್ತಲೆಯು ಕವಿದಿರುವದು ... ಆದರೆ ನಮ್ಮ ಮನಸ್ಸಿನ ಸ್ಥಿತಿಯನ್ನು ಮಾರ್ಪಡಿಸಿ ... ನಮ್ಮೊಳಗೆ ... ಸಾಧ್ಯವಾಗ ವದು

71 ನಾವು ಕ್ರೋಧ ... ಭಾಗಗಳ ಹಿಡಿತದಿಂದ ... ನಮ್ಮನ್ನು ... ನೀಡಿಸಲ್ಪಡು

ನದಿಗೆ ನೀರನ್ನು ತೊಂದರೆ ಬಂದರೆ ಅವನು ಹೀಗೆ ಮಾಡಿದನು, ಅವನು ಹಾಗೆ ಮಾಡಿದನು, ಅದ್ದರಿಂದ ನನಗೆ ಈ ಕಷ್ಟ ಪ್ರಾಪ್ತವಾಯಿತು ಎಂದು ... ಅಂಥವನನ್ನು ದ್ವೇಷಿಸುವದೂ ... ಹ್ಯಾಗೆಂದರೆ—ತಂದೆ ತಾಯಿ ಮಕ್ಕಳು ಅಣ್ಣತಮ್ಮಂದಿರು ... ಮಿತ್ರರು ಇವರೆಲ್ಲ ಇತರ ಬಾಂಧವರು ಪರಸ್ಪರ ಪ್ರೇಮದಿಂದಿರುವದು ಸಹಜವಷ್ಟೆ. ಆದರೆ ... ದುಃಖವನ್ನು ಪ್ರಸಂಗ ... ಕಲಹ

ಮಾಡಿ ನಮಗುಂಟಾದ ... ಕರ್ತವ್ಯವನ್ನು ... ನಮ್ಮ ... ಕೆಲವೆಲ್ಲ ... ಗುಣ ... ವಿರೋಧಿಗಳಾಗುತ್ತಿರುವಾಗ ನಮ್ಮ ವಿರೋಧಿಗಳಾಗಲು ಅವಶ್ಯ ವೇನು? ಅನುಕೂಲ ಪ್ರತಿಕೂಲಗಳು ಅವರವರ ಕರ್ಮಕ್ಕನು ಸಾರವಾಗಿ ... ಉಂಟಾಗುತ್ತವೆ. ಅದ್ದರಿಂದ ... ಪೂರ್ವಾರ್ಜಿತವಿಲ್ಲದೆ ... ದ್ವೇಷ ... ವಿಚಾರವನ್ನು ಪ್ರತಿ ... ಅನುಭವದಿಂದ ...

73 ನಾವ್ ಒಂದು ... ಇಲ್ಲವೆ ... ಒಪ್ಪಿದರೆ ... ಎಷ್ಟು ... ನಮ್ಮ ... ಅದು ಎಲ್ಲಿಯೂ ... ಗುತ್ತಿಲ್ಲ ... ಯೋಚನೆ ... ಒಂದು ... ನಮ್ಮಲ್ಲಿಗೆ ... ಹಗೆತನ, ... ನಮ್ಮಲ್ಲಿಗೆ ... ಅದ್ದರಿಂದ ... ಅಪ್ಪಗಳನ್ನು ... ಅಪರಾಧ ... ಸತ್ಯ ... ಪರಿಣಾಮ ... ಅನುಭವಿಸುವ ... ಲ್ಲವು ... (ಸಶೇಷ)

ಎಂ. ಮಲ್ಲಿಕಾರ್ಜುನಾರಾಧ್ಯ ... ಮಳವಳ್ಳಿ ...

ವೀರಶೈವರತ್ನ

ವೇ| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಪೀಠದ ಮಾಡಿದ ಎರಡು ಭಾಷಣಗಳನ್ನು ... ಪರಮಶೀವ ... ಆ ಭಾಷಣಗಳ ಮಹತ್ವವನ್ನು ... ವಿಷಯವು ... ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ ಬಹು ಸುಂದರವಾದ ಟೈಪಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯ ವಿಷಯಗಳನ್ನು ಓದಿ ... ಪಡೆಯಬೇಕೆಂದು ಪ್ರಾರ್ಥಿಸುತ್ತೇವೆ.

ಬೆಲೆ ೧೨ ಆಣೆ

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ... ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶೀ ... ಶಿವಾಚಾರ್ಯ ... ವರು ... ದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ... ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ... ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲಗ್ರಂಥವು ಕೇವಲ ... ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ... ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ... ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರಿಗೆ ಅಪ್ಪಣೆಯನ್ನಿತ್ತಿರುವವಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಸಿಂಹಾಸನದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಂಬಂಧಪಟ್ಟ ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಸಂಚಾರಕಾಲದಲ್ಲಿ ಶಿಷ್ಯರ ಮನೆಗಳ ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠಗಳಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಮನಗಂಡು ... ಪುಸ್ತಕವನ್ನು ಹೊಸದಾಗಿ ಮುದ್ರಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ... ಗುರುವರ್ಗದವರೂ ಕೊಂಡು ... ಪುಸ್ತಕವಾಗಿ ... ತರಿಸಿಕೊಳ್ಳಬೇಕು. ಇದಕ್ಕಾಗಿ ಎಂಥಾ ... ಕಾಗದಗಳನ್ನು ಉಪಯೋಗಿಸಿರುವದಲ್ಲದೆ ... ರವಾದ ಮತ್ತು ... ವನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಬದರಿನಾಥ ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೫೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂದೂರ	೧	೨—೦—೦
ಮಲ್ಲಸಿಂದೂರ	೧	೪—೦—೦
ತಾಮ್ರಸಿಂದೂರ	೧	೪—೦—೦
ಶಿಲಾಸಿಂದೂರ	೧	೪—೦—೦
ಸ್ವರ್ಣವಂಗ	೧	೬—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೨—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿರಾತೀಭಸ್ಮ	೧	೦—೮—೦
ಕಾಂತಿಭಸ್ಮ	೧	೦—೮—೦
[illegible]	೧	೦—೮—೦
[illegible]	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಸ್ಫಟಿಕಭಸ್ಮ	೧	೧—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸ್ವರ್ಣಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಊಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅಪ್ಪುತಲ್ಪರೆಗಿಂದ ತೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ .	೦—೧—೬
ಪಂಚಾಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ .	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ . .	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ .	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .	೦—೦—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಪಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು

ಪ್ರಸಿದ್ಧವಾದ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ —ಶೀತ, ಜ್ವರ, ತಲೆನೋವು ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಡದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಪಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಪಟಿಕೆಯನ್ನು ಮಿಶ್ರಮಾಡಿದರೆ ಎಲ್ಲವು ಪರಿಮಳವಾಗುವುದು. ಇದನ್ನು ಅನೇಕ ಪ್ರಮುಖರು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪-೦ ವಿ ಪಿ ೦ ೪ ೦

ಡಜನ್ ಒಂದಕ್ಕೆ ಕ್ರಯ ರೂ ೨ ೮-೦ ವಿ ಪಿ ೮ ೦

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[21] ಪೋ ಬಾ. ೫೧೨, ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮುರುಳಸಿದ್ಧೇಶ್ವರಸ್ತೋತ್ರ ..	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ತ್ವದರ್ಪಣ (೪ನೆಯ ಆವೃತ್ತಿ) ..	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ವರೂಪಸ್ವರೂಪದೀಪಿಕೆ	೨ ಆಣೆ
ವೀರಶೈವಮತಮಿಮಾಂಸಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ತ್ವಸ್ಥಿರೀಕರಣ (೨ನೆಯ ಆವೃತ್ತಿ)....	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವರ ಭಾಷಣವು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी) .	८ आणे
Speeches by Pandit Shri Kashinatha Shastri (*English*)	12 As
ವೀರಶೈವರತ್ನ (೪ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮಸೂತ್ರಸಿದ್ಧಾಂತದರ್ಪಣ .	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ...	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಪಟ್ಟಿ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೪ ಪುಟ) ..	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವದಿಲ್ಲ ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ವಾಮಿದ್ವಾರ್ ವೇ|| ಬ್ರ|| ಪಂಡಿತ ಶಿವ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿತ್ವದೀಲೋಕಕಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ ನೇ ಜೂನ್ ೧೯೩೫ [ಸಂಚಿಕೆ ೪

ಹೊಸಸ್ಕೂಲ್ ಪ್ರವೇಶೋತ್ಸವ

ದಾವಣಗೆರೆ ತಾಲೂಕು ಮಳ್ಳೆಕಟ್ಟೆ ಗ್ರಾಮದಲ್ಲಿ ಹೊಸ ಸ್ಕೂಲು ಕಟ್ಟಡದ ಪ್ರವೇಶೋತ್ಸವವು ದಾವಣಗೆರೆ ರೇಂಜು ಸ್ಕೂಲ್‌ಇನ್ಸ್‌ಪೆಕ್ಟರ್ ಅಸಿಸ್ಟೆಂಟ್ ಕೆ ಕೃಷ್ಣಸ್ವಾಮಯ್ಯಂಗಾರ್ ಎಂ. ಎ., ಬಿ. ಟಿ. ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಸುತ್ತಮುತ್ತಿನ ಶಾಲಾ ಉಪಾಧ್ಯಾಯರೆಲ್ಲಾ ಸೇರಿದ್ದರು. ಇದರ ಶಾಲಾ ಉಪಾಧ್ಯಾಯರಾದ ಕೆ ವೀರಬಸಪ್ಪನವರು ಸ್ಕೂಲ್ ರಿಪೋರ್ಟನ್ನು ಓದಿದರು. ಆಣಜಿ ಶಾಲಾ ಸಹಾಯೋಪಾಧ್ಯಾಯರಾದ ಪಿ ಹೊನ್ನೂರ ಸಾಹೇಬರು ವಿದ್ಯಾಭ್ಯಾಸದ ವಿಷಯದಲ್ಲಿ ಚನ್ನಾಗಿ ಭಾಷಣ ಮಾಡಿದರು. ಕೊನೆಗೆ ಅಧ್ಯಕ್ಷಮಹಾಶಯರು ತಮ್ಮ ಗಂಭೀರವಾದ ವಾಣಿಯಿಂದ ಗ್ರಾಮಸ್ಥರು ಉಪಾಧ್ಯಾಯರು ಸಹಕರಿಸಿ ಶಾಲಾಭಿವೃದ್ಧಿ ಪಡಿಸುವ ವಿಚಾರದಲ್ಲಿ ಸಭಿಕರ ಮನಸ್ಸನ್ನು ಆನಂದಪಡಿಸುವಂತೆ ಭಾಷಣ ಮಾಡಿದರು. ಅನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಯು ಮುಕ್ತಾಯವಾಯಿತು.

ಸಿ ಚೆನ್ನಬಸಯ್ಯ,
ಮಳ್ಳೆಕಟ್ಟೆ

ಶ್ರೀ ಜಗದ್ಗುರು ಪಂಚಾಚಾರ್ಯರ್ಪ್ರಸೀದಂತು.

ದೀಕ್ಷಾ ಸಮಾರಂಭ ಹಾಗೂ ವಿವಾಹ ಮಹೋತ್ಸವ, ಬಿಜ್ಜೂರು.

ಧಾರವಾಡ ಡಿ|| ಹಾವೇರಿ ತಾಲೂಕ ಪೈಕಿ ಬಿಜ್ಜೂರು ಗ್ರಾಮದ ಸುಪ್ರಸಿದ್ಧ ಶ್ರೀಮಂತ ಗುರುಪಾದಯ್ಯನವರು ತಮ್ಮ ಉದ್ಯಾನವನದಲ್ಲಿ ನೂತನವಾಗಿ ನಿರ್ಮಿಸಿರುವ ಭವ್ಯಭವನದಲ್ಲಿ ವೈಶಾಖ ಶುದ್ಧ ೧೦ ಬುಧವಾರ ದಿವಸ ತಮ್ಮ ಮನೆಯ ಗುರುಗಳಾದ ಹೂಲಗೇರಿ ಮತ್ತು ಹಡಗಲಿ ಬೃಹನ್ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಸಂಗನೇಶ್ವರ ಪಟ್ಟದ ಸ್ವಾಮಿಗಳ ಗುರುತ್ವದಲ್ಲಿ ಹತ್ತು ಜನ ಮಾಹೇಶ್ವರ ವಟುಗಳಿಗೆ ವಿಧಿಪೂರ್ವಕ ಮಾಹೇಶ್ವರ ದೀಕ್ಷೋಪನಯನವನ್ನು ಬಹು ವೈಭವದೊಡನೆ ನೆರವೇರಿಸಿದರು. ಮಾಹೇಶ್ವರಾದಿಯಾಗಿ ಸಹಸ್ರ ಜನರವರೆಗೂ ಮೃಷ್ಟಾನ್ನಭೋಜನದಿಂದ ತೃಪ್ತಿಪಡಿಸಿದರು. ತದನಂತರ ವೈಶಾಖ ಶು|| ೧೨ ಗುರುವಾರ ಸಾಯಂಕಾಲ ಧರ್ಮಲಗ್ನದಲ್ಲಿ ಇವರ ಪುತ್ರನಾದ ಚಿ|| ಸಿದ್ಧರಾಮಯ್ಯನಿಗೆ ಕಲಘಟಗಿ ತಾಲೂಕಿನ ಡಿ|| ಎಲ್|| ಬಿ|| ಮೆಂಬರರಾದ ಬೊಮ್ಮಿಗಟ್ಟಿ ಗ್ರಾಮದ ಶ್ರೀಮಂತ ರುದ್ರಪ್ಪಗೌಡರ ಪುತ್ರಿಯನ್ನು ಕೊಟ್ಟು ವಿವಾಹಮಹೋತ್ಸವವು ಬಹು ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಈ ಮಹೋತ್ಸವಕ್ಕೆ ಅನೇಕಜನ ವಕೀಲರು, ಸುಪ್ರಸಿದ್ಧ ನಾಯಕರು, ದೊಡ್ಡ ಮನುಷ್ಯರು ಆದಿಯಾಗಿ ಎರಡು ಮೂರು ಸಾವಿರ ಜನಸಮುದಾಯವು ಕೂಡಿತ್ತು. ಈ ಶುಭಮಹೋತ್ಸವ ಕಾರ್ಯದಲ್ಲಿ ಗುರುವರ್ಯ ಶ್ರೀ ಸಂಗನೇಶ್ವರ ಪಟ್ಟದ ಸ್ವಾಮಿಗಳ ಅಪ್ಪಣೆಯಮೇರೆಗೆ ಶ್ರೀ ಪಂಚಾಚಾರ್ಯ ಪ್ರಭಾಪೋಷಣಕ ಶ್ರೀಮಂತ ಗುರುಪಾದಯ್ಯನವರಿಂದ ಎರಡು ರೂಪಾಯಿಗಳು ಸಮರ್ಪಿಸಲ್ಪಟ್ಟವು.

ಒಬ್ಬ ಉತ್ಸವಾರ್ಥಿ.

ಶ್ರೀ ಜಗದ್ಗುರು ಪಂಚಾಚಾರ್ಯೋ ಜಯತು

ಆಗ್ನನೂರು ವಿವಾಹಸಮಾರಂಭ

ವೈಶಾಖ ಬ|| ೧೦ ಸೋಮವಾರ ದಿವಸ ಆಗ್ನನೂರು ಅಡಿವಯ್ಯನವರ ಪೌತ್ರ ಬಸವರಾಜಪ್ಪನ ಪಾಣಿಗ್ರಹಣಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ತಾಂಡೂರು ವೇದಪಾಠಶಾಲಾಧ್ಯಾಪಕರಾದ ಜ್ಯೋತಿಷ್ಪುರದ ಬ್ರ|| ಶ್ರೀ| ಸಿದ್ಧಾಂತಿ ಚಂದ್ರಶೇಖರ ಶಾಸ್ತ್ರಿಗಳವರು ಪೌರೋಹಿತ್ಯವನ್ನು ನಡೆಸಿದ್ದರು. ವೇದಪಾಠಶಾಲಾವಿದ್ಯಾರ್ಥಿಗಳಿಂದ ಜಗದ್ಗುರು ಪಂಚಾಚಾರ್ಯರ ಮಹತ್ವ ವಿಷಯವಾಗಿಯೂ, ಅಷ್ಟಾವರಣಗಳ ವಿಷಯವಾಗಿಯೂ ಉಪನ್ಯಾಸಗಳು ಜರುಗಿದವು. ಈ ವಿದ್ಯಾರ್ಥಿಗಳ ವಾಕ್ಚಾತುರ್ಯವನ್ನು ನೋಡಿ ಅಡಿವಯ್ಯನವರ ಪುತ್ರರಾದ ವೀರಯ್ಯನವರು ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ವಾಲಂಟಿಯರ್ ಡ್ರೆಸ್ಸನ್ನು ತಯಾರಿಸಿ ಕೊಟ್ಟರಲ್ಲದೆ ಉಪನ್ಯಾಸದಲ್ಲಿ ಮೇಲ್ದರಗತಿಯಲ್ಲಿ ಬಂದ ಇಬ್ಬರು ವಿದ್ಯಾರ್ಥಿಗಳಿಗೆ ಮೆಡಲ್ಲುಗಳನ್ನು ಕೊಟ್ಟರು ಹಾಗೂ ಪಾಠಶಾಲೆಗೆ ನಮ್ಮ ಕೈಲಾದಷ್ಟು ಸಹಾಯ ಮಾಡುತ್ತೇನೆಂಬುದಾಗಿ ಅಭಿವಚನವನ್ನು ಮಾಡಿದರು. ಇವರ ದ್ವಿತೀಯಪುತ್ರರಾದ ಚಿ|| ಶಿವರಾಮಪ್ಪನವರು ಶಾಸ್ತ್ರಿಗಳ ಕರ್ತವ್ಯದಕ್ಷತೆಯನ್ನು ನೋಡಿ ಇದೇರೀತಿಯಾಗಿ ವಿದ್ಯಾರ್ಥಿಗಳನ್ನು ಪ್ರತಿಯೊಬ್ಬ ಶಾಸ್ತ್ರಿಗಳೂ ತಯಾರುಮಾಡುತ್ತಾ ಬಂದರೆ ನಮ್ಮ ವೀರಶೈವಮತಕ್ಕೆ ಭೂಷಣವುಂಟಾಗುವದೆಂದು ಹೇಳಿ ಶಾಸ್ತ್ರಿಗಳ ಆಭಾರವನ್ನು ಮನ್ನಿಸಿದರು. ಈ ಮಹಾಶಯರು ಈ ಲಗ್ನದ ಸಂಗಡ ಮೂರು ಲಗ್ನಗಳನ್ನು ಧರ್ಮಾರ್ಥವಾಗಿ ಮಾಡಿಕೊಟ್ಟರು. ಪರಮೇಶ್ವರನು ಇವರಿಗೆ ದೀರ್ಘಾಯುವನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ,

ಹಿರೇಮಠದ ನೀಲಕಂಠಯ್ಯ. ತಾಂಡೂರು

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವೀರಮಾಹೇಶ್ವರ ದೀಕ್ಷಾಮಹೋತ್ಸವ ಹೊಳೆ ಆಲೂರು.

ಅಖಿಲ ವೀರಶೈವ ಪ್ರಪಂಚೋದ್ಧಾರಕ್ಕಾಗಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಭಗವತ್ಪಾದರು ಗುರುವರ್ಗವೆಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಶಾಖೋಪಶಾಖೆಗಳನ್ನೆಲ್ಲಾ ಭಾರತದ ಸಮಸ್ತಭಾಗದಲ್ಲಿ ವಿರಾಜಿಸುವಂತೆ ಮಾಡಿರುವದು ಸುಪ್ರಸಿದ್ಧವಷ್ಟೆ! ಈ ಗುರುವರ್ಗದ ಮಾಹೇಶ್ವರರು ಧರ್ಮಶಾಸ್ತ್ರಾನುಸಾರವಾಗಿ ಹೊಂದುವ ವೀರಮಾಹೇಶ್ವರ ದೀಕ್ಷಾಸಂಸ್ಕಾರ ಪದ್ಧತಿಯು ಅನೂಚಾನವಾಗಿ ಬಂದುದಾಗಿದೆ. ಅದರಂತೆ ರೋಣ ತಾಲೂಕ ಪೈಕಿ ಹೊಳೆ ಆಲೂರು ಗ್ರಾಮದ ಚಿಕ್ಕಾನರ್ತಿ ಹಿರೇಮಠದ ವೇ|| ರೇವಣಸಿದ್ಧಯ್ಯನವರು ತಮ್ಮ ಸುಪುತ್ರನಾದ ಚಿ|| ಗುರುಶಾಂತಮೂರ್ತಿಗೆ ಇದೇ ವೈಶಾಖ ಬ|| ೨ ಗುರುವಾರ ದಿವಸ ವೀರಮಾಹೇಶ್ವರ ದೀಕ್ಷಾಸಂಸ್ಕಾರ ಮಹೋತ್ಸವವನ್ನು ವೈಭವದಿಂದ ನೆರವೇರಿಸಿದರು. ಈ ದೀಕ್ಷೋಪನಯನ ಕಾರ್ಯಕ್ಕೆ ಹೂಲಗೇರಿ ಮತ್ತು ಹಡಗಲಿ ವಗೈರೆ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಸಂಗನೇಶ್ವರ ಪಟ್ಟದ ಮಹಾಸ್ವಾಮಿಗಳವರು ದಯಮಾಡಿಸಿದ್ದರು. ಬ್ರಹ್ಮತೇಜೋನಿಧಿಗಳಾದ ಈ ಸ್ವಾಮಿಗಳವರ ಗುರುತ್ವದಲ್ಲಿ ಈ ಮಹೋತ್ಸವವು ಬಹುರಮಣೀಯವಾಗಿ ಸಾಗಿತು. ವೇ|| ರೇವಣಸಿದ್ಧಯ್ಯನವರು ತಮ್ಮ ಚಿರಂಜೀವಿಯೊಡನೆ ೧೧ ಜನ ಮಾಹೇಶ್ವರ ವಟುಗಳಿಗೆ ದೀಕ್ಷೋಪನಯನವನ್ನು ಧರ್ಮಾರ್ಥವಾಗಿ ಮಾಡಿಸಿದ್ದುದು ಸಂತೋಷದ ಸಂಗತಿಯಾಗಿದೆ. ಶಿವಾಗಮೋಕ್ತವಾದ ಈ ಸಂಸ್ಕಾರ ವಿಧಿಯು ಕಾರ್ಯಕ್ರಮಗಳು ರೋಣದ ಸಂಸ್ಕೃತ ವೈದಿಕ ಪಾಠಶಾಲಾಧ್ಯಾಪಕರಾದ ವೇ|| ಮೂ|| ರಾಜಶೇಖರ ಶಾಸ್ತ್ರಿಗಳಿಂದಲೂ ನರಗುಂದದ ವೇ|| ವಿರೂಪಾಕ್ಷಶಾಸ್ತ್ರಿಗಳು ಸಾಹಿತ್ಯತೀರ್ಥ ಇವರಿಂದಲೂ ಶಾಸ್ತ್ರೀಯವಾಗಿ ಸಾಗಿದವು. ಇತ್ತೀಚೆಗೆ ಕೆಲವರು ಬೋಳಪಂಥಿಗಳ ಬಲಿಗೆ ಸಿಕ್ಕುಬಿದ್ದು ಮಾಹೇಶ್ವರ ದೀಕ್ಷಾಕಾರ್ಯದಲ್ಲಿ ವಟುಗಳಿಗೆ ಅಮಂಗಲವಾದ ಬೋಳವಲೆಯಿಂದ ಸಂಸ್ಕಾರಮಾಡಲು ಪ್ರಯತ್ನಿಸುತ್ತಿದ್ದಾರೆ. ವಿಜಾತಿವಿರೋಧಿಗಳಾದ ಕೆಲಜನ ಮುಂದಿಗಳು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಂದ ಸ್ಥಾಪಿತವಾದ ಮತಸಿದ್ಧಾಂತವನ್ನು ಅಲ್ಲಗಳೆದು ಜಾತಿಸಾಂಕರ್ಯಕಾರಿಯಾದ ಬೋಳಸಂಘದ ಕುಲಘಾತಕ ತತ್ವ ಪ್ರಚಾರದ ಯ ವಚನಗಳ ಗಂಟನ್ನು ಮುಗ್ಧ ಭಕ್ತರ ಮುಂದೆ ಬಿಚ್ಚುತ್ತಿರುವದು ಬಹುಶೋಚನೀಯವಾದ ಸಂಗತಿಯಾಗಿದೆ ಇರಲಿ! ನಮ್ಮ ಊರ ಮಠಾಧಿಕಾರಿಗಳಾದ ವೇ|| ರೇವಣಸಿದ್ಧಯ್ಯನವರು ಮತಧರ್ಮಸಿದ್ಧಾಂತದಂತೆ ತಮ್ಮ ಮಠದಲ್ಲಿ ಈ ಸಮಾರಂಭವನ್ನು ಜರಗಿಸಿದ್ದು ಅತ್ಯಂತ ಸಂತೋಷದ ಸಂಗತಿಯಾಗಿದೆ. ಈ ಸಮಯದಲ್ಲಿ ಶ್ರೀ ಸಂಗನೇಶ್ವರ ಪಟ್ಟಾಧ್ಯಕ್ಷ ಸ್ವಾಮಿಗಳ ಆಜ್ಞೆಯ ಪ್ರಕಾರ ಮತೋದ್ಧಾರಕ್ಕಾಗಿ ಜನ್ಮವೆತ್ತಿದ ಪಂಚಾಚಾರ್ಯಪ್ರಭಾ ಪತ್ರಿಕೆಗೆ ೧ ರೂಪಾಯಿ ಪೋಷಣ ದ್ರವ್ಯವು ಸಮರ್ಪಿಸಲ್ಪಟ್ಟಿತು.

ಒಬ್ಬ ಪ್ರತ್ಯಕ್ಷದರ್ಶಿ

ನೀಲಿ ಕುಟಿಯ ಮೋಸಗಾರತಿ!

ಬ್ಯಾಂಕಿಗೆ ಬರುವ ಹಣವನ್ನು ಅಪಹರಿಸುವುದರಲ್ಲಿ ಪ್ರಸಿದ್ಧಳಾದ ಸ್ತ್ರೀಯೊಬ್ಬಳನ್ನು ಪತ್ತೆಮಾಡುವುದಕ್ಕೆ ಲಂಡನ್ನಿನ ೭೦೦ ಜನ ಪೋಲೀಸರು ನೇಮಿಸಲ್ಪಟ್ಟಿದ್ದಾರೆ. ಪೋಲೀಸರೂ ಮತ್ತು ಹಣ ಕಳೆದುಕೊಂಡವರೂ ಸಹ ಅವಳನ್ನು ನೀಲಿಕುಟಿ ಮತ್ತು ಕೆಂಪುಹಸ್ತವುಳ್ಳ ಮಾಯಗಾರತಿಯೆಂದು ಹೇಳುತ್ತಾರೆಯೇ ಹೊರತು 7 ತಿಂಗಳುಗಳಿಂದ ಪ್ರಯತ್ನಪಟ್ಟರೂ ಇನ್ನೂ ಅವಳ ಪತ್ತೆಯಾಗಿರುವುದಿಲ್ಲ.

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ಪಂಚಾಂಗ ಗಣಿತ ಶೋಧನೆ.

(ಹಿಂದಿನಿಂದ ಮುಂದುವರಿದುದು)

ತಾ|| 13 10 34 ರಲ್ಲಿ ಮೈಸೂರು ರಾಜಧಾನಿಯಲ್ಲಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ ನಡೆಸಿದ ಅಖಿಲ ಕರ್ನಾಟಕ ದ್ವಿತೀಯ ಜ್ಯೋತಿಷಿಕ ಸಮ್ಮೇಳನದಲ್ಲಿ ಕೇಳಿರುವ ಪ್ರಶ್ನೆಗಳಿಗೆ ಪ್ರತ್ಯುತ್ತರವಾಗಿ ತಾ|| 15 10 34 ರಲ್ಲಿ ಮೈಸೂರು ಶಾಂತಿಶಾಸ್ತ್ರಿಗಳವರ ಛಾಯೆಯಲ್ಲಿರುವ ಆಸ್ಥಾನ ಜ್ಯೋತಿಷವಿದ್ವಾನ್ ಟಿ ವಿ ನರಸಿಂಹಾಚಾರ್ಯರು ಮಾಡಿದ ಉಪನ್ಯಾಸ ಮತ್ತು ಇದರ ಸಾರಾಂಶ

ಶಾಕಲ್ಯಬ್ರಹ್ಮಸಿದ್ಧಾಂತರೀತ್ಯಾ ಯುಗಭಗಣಮಾನ

ರವಿ—	43 20 000
ಚಂ—	5 77 53 336
ಕು—	22 96 832
ಗು—	3 64 220
ಶ—	1 46 568
ಚಂದ್ರೋಚ್ಚ—	4 88 203
ಚಂದ್ರಪಾತ—	2 32 238
ಬುಧಶೀಘ್ರೋಚ್ಚ—	1 79 37 060
ಶುಕ್ರಶೀಘ್ರೋಚ್ಚ—	70 22 376
ಅರ್ಕಸಾವನ—	1 57 71 17 828
ಭಭ್ರಮ—	1 58 22 37 828
ಸೌರಮಾಸಾಃ—	5 18 40 000
ಅಧಿಮಾಸಾಃ—	15 93 336
ಚಾಂದ್ರದಿನಾನಿ—	1 60 30 00 080
ಅವಮದಿನಾನಿ—	2 50 82 252

ಆರ್ಯಭಟೀಯರೀತ್ಯಾ ಯುಗಭಗಣಮಾನ ಮತ್ತು ಅಂತರ

ರ—	43 20 000	ಇಲ್ಲ	ಸಮಾನ
ಚಂ—	5 77 53 336		
ಕು—	22 96 824	ಅಂತರ	8
ಗು—	3 64 224		4
ಶ—	1 46 564		4
ಚಂ ಉ—	4 88 259		56
ಚಂ ಪಾ—	2 32 226		12
ಬು ಶೀ—	1 79 37 020		40
ಶು—	70 22 388	,	12
ಅ—	1 57 79 17 500		328
ಭ—	1 58 22 37 500	,	328
ಸೌ—	5 18 40 000	,,	ಇಲ್ಲ
ಅಧಿ—	15 93 336		
ಚಾಂ—	1 60 30 00 080		
ಅವ	2 50 82 580		328

ಶಾಕಲ್ಯಬ್ರಹ್ಮಸಿದ್ಧಾಂತ ಮತ್ತು ಆರ್ಯಭಟೀಯ ಈ ಎರಡು ಸಿದ್ಧಾಂತಗಳಿಗೆ ಭಗಣಸಂಖ್ಯಾದಿಗಳಲ್ಲಿ ಬಹಳ ಸಾಮ್ಯವಿರುವದ್ದರಿಂದ ಆರ್ಯಭಟೀಯಕ್ಕೆ ಶಾಕಲ್ಯಬ್ರಹ್ಮಸಿದ್ಧಾಂತವೇ ಮೂಲವಾಗಿರುತ್ತೆ

ಶ್ಲೋ|| ಆರ್ಯಭಟೀಯಂ ನಾಮ್ನಾ ಪೂರ್ವಂ ಸ್ವಾಯಂಭುವಂ | ಎಂಬದಾಗಿ ಆರ್ಯಭಟಾಚಾರ್ಯರು ಹೇಳಿರುತ್ತಾರೆ

43 20 000 ಮಹಾಯುಗವರ್ಷಕ್ಕೆ 1 57,79 17 828 ಅರ್ಕಸಾವನದಿನಗಳಾದರೆ 1 ವರ್ಷಕ್ಕೆ ಎಷ್ಟು ಎಂಬ ಅನುಪಾತದಿಂದ ಬಂದ ಲಬ್ಧವೇ ಒಂದು ಸೌರಾಬ್ದದ ಸಾವನದಿನಪ್ರಮಾಣವಾಗುತ್ತೆ

ಶಾಲೀವಾಹನಶಕ 421 ರಲ್ಲಿ ಅಂದರೆ ಕ್ರಿಸ್ತಶಕ 499 ರಲ್ಲಿ ಆರ್ಯಭಟಾಚಾರ್ಯರು ಆರ್ಯಭಟೀಯವೆಂಬ ಗ್ರಂಥವನ್ನು ಬರೆದಿರುತ್ತಾರೆ

ಸೂರ್ಯಸಿದ್ಧಾಂತರೀತ್ಯಾ—ಸಾವನದಿನಪ್ರಮಾಣ	365 15 31 31
ಶಾಕಲ್ಯಬ್ರಹ್ಮಸಿದ್ಧಾಂತರೀತ್ಯಾ—	365 15 31 31
ಆರ್ಯಭಟೀಯರೀತ್ಯಾ	365 15 31 15
ಬ್ರಹ್ಮಗುಪ್ತಾದಿಸಿದ್ಧಾಂತರೀತ್ಯಾ—	365 15 30 23

ಶಾಕಲ್ಯಬ್ರಹ್ಮಸಿದ್ಧಾಂತಕ್ಕೂ—ಆರ್ಯಭಟೀಯಕ್ಕೂ 16 ಪ್ರ ವಿಘಟೀ ವ್ಯತ್ಯಾಸ

ಶಾಕಲ್ಯಬ್ರಹ್ಮ ಸಿದ್ಧಾಂತಕ್ಕೂ—ಬ್ರಹ್ಮಗುಪ್ತಾದಿ ಸಿದ್ಧಾಂತಕ್ಕೂ 1 ವಿಘಟೀ 8 ಪ್ರವಿಘಟೀ ವ್ಯತ್ಯಾಸ

ಬ್ರಹ್ಮಗುಪ್ತಾದಿ ಸ್ವೀಕೃತ ಬ್ರಹ್ಮಸಿದ್ಧಾಂತಕ್ಕೂ ಶ್ರೀ ವೇಂಕಟೇಶ ಕೇತಕರ ಚಿತ್ರಾಪಕ್ಷೀಯ ಗಣಿತಕ್ಕೂ—$8\frac{1}{3}$ ವಿನಾಡೀವ್ಯತ್ಯಾಸ ಈ ವ್ಯತ್ಯಾಸವು ವೇಧದಿಂದ ಕಂಡು ಬರುತ್ತದೆ

ವೇಧವನ್ನು ಮಾಡುವಕ್ರಮ

ಸಮಭೂಮಿಯಲ್ಲಿ 3438 ಅಂಗುಲ ಪರಿಮಿತವಾದ ಕರ್ಕಟಕ ಅಂದರೆ (ಕಾಂಪಸ್) ನಿಂದ ಒಂದು ವೃತ್ತವನ್ನು ಬರೆದು ಅದರಲ್ಲಿ 4 ದಿಕ್ಕುಗಳನ್ನು ಸಾಧಿಸಿ ನಂತರ 21600 ಕಲೆಗಳನ್ನು ಗುರ್ತು ಮಾಡಿಕೊಳ್ಳುವದು ನಂತರ ಉತ್ತರಾಯಣದಲ್ಲಿ ವೃತ್ತಮಧ್ಯದಲ್ಲಿ ಸ್ಥಾಪಿಸಿರುವ ಶಂಕುವಿನಿಂದ ದೃಷ್ಟಿ ಇಡಿಸಿ ಚತುಷ್ಕೋನ ಸಮುದ್ರದಲ್ಲಿ ವೃತ್ತಪರಿಧಿಯಲ್ಲಿ ಸೂರ್ಯೋದಯವನ್ನು ವೇಧಿಸುವದು ಈ ಪ್ರಕಾರವಾಗಿ ವರ್ಷವೆಲ್ಲವೂ ಸೂರ್ಯೋದಯಗಳನ್ನು ವೇಧಿಸಿದರೆ 365 ಸೂರ್ಯೋದಯಗಳು ಆಗುವವು 366 ನೇ ಸೂರ್ಯೋದಯವು ಮೊದಲನೇ ದಿವಸದ ಸೂರ್ಯೋದಯಕ್ಕಿಂತ ದಕ್ಷಿಣದಲ್ಲೇ ಆಗುವುದು 367 ನೇ ದಿವಸದ ಸೂರ್ಯೋದಯವು ಪೂರ್ವೋದಯಸ್ಥಾನಕ್ಕಿಂತ ಉತ್ತರದಲ್ಲೇ ಆಗುವದು

ಪೂರ್ವ ಸೂರ್ಯೋದಯಸ್ಥಾನಕ್ಕೂ 366 ನೇ ದಿವಸದ ಸೂರ್ಯೋದಯ ಸ್ಥಾನಕ್ಕೂ ಇರುವ ಅಂತರ ಮಾಡುನೆಯದು

ಪೂರ್ವ ಸೂರ್ಯೋದಯಸ್ಥಾನಕ್ಕೂ 367 ನೇ ದಿವಸದ ಸೂರ್ಯೋದಯಸ್ಥಾನಕ್ಕೂ ಇರುವ ಅಂತರ ಎರಡನೆಯದು

ಈ ಎರಡು ಅಂತರಗಳ ಮಧ್ಯದಲ್ಲಿರುವ ಒಟ್ಟು ಕಲೆಗಳಿಗೆ 60 ಘಳಿಗೆ ಆದರೆ ಮೊದಲನೆಯ ಅಂತರದ ಕಲೆಗಳಿಗೆ ಎಷ್ಟು ಎಂಬ ಅನುಪಾತದಿಂದ ಘಳಿಗೆ 15 ವಿಘಳಿಗೆ 30 ಪ್ರವಿಘಳಿಗೆ $22\frac{1}{2}$ ಎಂದು ಬರುತ್ತೆ

ಇದರಿಂದ ಕೂಡಿ ಬರುವ 365 ದಿವಸಗಳ (365 15 30 $22\frac{1}{2}$) ಒಂದು ಸೌರವರ್ಷದ ಸಾವನ ದಿನಪ್ರಮಾಣವೆಂದು ಭಾಸ್ಕರಾಚಾರ್ಯರು ಹೇಳಿರುತ್ತಾರೆ ಆದ್ದರಿಂದ ಸಾವನ ದಿನಪ್ರಮಾಣವು ಕಾಲದ ಭೇದದಿಂದ ವ್ಯತ್ಯಸ್ತವಾಗುತ್ತೆಂದು ಕಂಡುಬರುತ್ತೆ

ಸೂರ್ಯಸಿದ್ಧಾಂತದಲ್ಲಿ ಹೇಳಿರುವ ಸಾವನದಿನ ಪ್ರಮಾಣದಲ್ಲಿ ಪ್ರತಿವರ್ಷವೂ $8\frac{1}{2}$ ವಿಘಳಿಗೆಯನ್ನು ಕಮ್ಮಿ ಮಾಡಬೇಕಾಗುತ್ತೆ

ಸೂರ್ಯಸಿದ್ಧಾಂತ ರೀತಿಯಾಗಿರುವ ಸೌರವರ್ಷದ ಸಾವನದಿನಪ್ರಮಾಣವನ್ನು ಅಂಗೀಕರಿಸುವ ಪಕ್ಷದಲ್ಲಿ ಇದು ಪ್ರತ್ಯಕ್ಷ ವಿರುದ್ಧ ಆದ್ದರಿಂದ ವೇಧ ಶೂಲಬ್ಧವೇ ಗ್ರಾಹ್ಯ

ಪ್ರಶ್ನೆ 4ಕ್ಕೆ ಉತ್ತರ—ಎಲ್ಲಾ ವರಾಹಮಿಹಿರ ಬ್ರಹ್ಮಗುಪ್ತ ಶ್ರೀಪತಿ ಭಾಸ್ಕರಾಚಾರ್ಯರೇ ಮೊದಲಾದವರು ತಮ್ಮ ತಮ್ಮ ಗ್ರಂಥಗಳಲ್ಲಿ ಮಧ್ಯಮಾಧಿಕಾರದಲ್ಲಿ ಮಧ್ಯಗ್ರಹಗಳನ್ನು ಸಾಧಿಸುವುಗಳಲ್ಲಿ ಬೀಜಸಂಸ್ಕಾರವನ್ನು ಮಾಡಿಯೇ ಸ್ಪಷ್ಟೀಕರಣವನ್ನು ಮಾಡಿರುತ್ತಾರೆ ಪ್ರಾಚೀನ ಜ್ಯೋತಿಷಾಚಾರ್ಯರಲ್ಲಿ ಯಾರೊಬ್ಬರೂ ರವಿ ಚಂದ್ರರಿಗೆ ಬೀಜಸಂಸ್ಕಾರವನ್ನು ನಡೆಸಿರಲಿಲ್ಲ ಶಾಲೀ 1442 ರಲ್ಲಿ ಕ್ರಿಸ್ತಶಕ 1520 ರಲ್ಲಿ ಇದ್ದ ಗಣೇಶ ದೈವಜ್ಞನು

ಶ್ಲೋ|| ಸೌರೋಕ್ತೋಪಿ ವಿಧೂಚ್ಚ ಮುಂಕಕಲಿಕೋ
ನಾಭಿಜ್ಞಕೋ ಗುರುಸ್ತ್ವಾರ್ಯಜೋ |
ಸ್ವಗ್ರಾಹ್ಯಾಂಶ ಕ ಜಜ್ಞಕೇಂದ್ರಕಮುಥಾರ್ಧ್ಯಂ
ಸೋಸು ಭಾಗಶ್ಚನಿ ||
ಶೀಘ್ರಂಕೇಂದ್ರಮಜಾರ್ಯ ಮಧ್ಯಗಮಿತೋ
ಯಾಂತಿವೃತ್ಯುತಾಂ ||
ಸಿದ್ಧೈಸ್ತ್ರೈರಿಹಪರ್ವಧರ್ಮನಯ
ತಾತ್ಕಾಲಿಕಂ ತ್ವಾದಿತೋ ||

ಎಂಬ ಶ್ಲೋಕದಿಂದ ಸೂರ್ಯಸಿದ್ಧಾಂತರೀತಿಯಾಗಿ ಮಧ್ಯಮರವಿ ಚಂದ್ರೋಚ್ಚ 9 ಲಿಪ್ತಕಳೆದಿರುವ ಚಂದ್ರಮಧ್ಯ ಇವುಗಳನ್ನು ಆರ್ಯಭಟೀಯರೀತ್ಯಾ ಕುಜ ಗುರು ರಾಹು ಮತ್ತು 5 ಭಾಗ ಕೂಡಿಸಿದ ಶನಿಮಧ್ಯವನ್ನೂ ಬ್ರಹ್ಮಸಿದ್ಧಾಂತ ರೀತಿಯಾಗಿ ಬುಧಕೇಂದ್ರವನ್ನೂ ಬ್ರಹ್ಮಸಿದ್ಧಾಂತರೀತ್ಯಾ ಮತ್ತು ಆರ್ಯಭಟೀಯರೀತ್ಯಾ ಶುಕ್ರಕೇಂದ್ರವನ್ನೂ ಸಾಧಿಸಿ ಇವೆರಡರ ಯೋಗವನ್ನು ಅರ್ಧೀಕರಿಸಿ ಬಂದ ಶುಕ್ರಕೇಂದ್ರ ಇವುಗಳಲ್ಲವನ್ನಿಟ್ಟುಕೊಂಡು ಇವುಗಳಿಗೆ ಸ್ಪಷ್ಟೀಕರಣವನ್ನು ಮಾಡಿದರೆ, ದೃಗ್ಗೋಚರವಾಗುತ್ತವೆ ಎಂದು ಕಂಠೋಕ್ತವಾಗಿ ಹೇಳಿರುತ್ತಾನೆ ಆದ್ದರಿಂದ ಗಣೇಶ ದೈವಜ್ಞನು ರವಿ ಚಂದ್ರರಿಗೆ ಬೀಜಸಂಸ್ಕಾರಸಾಧನವನ್ನು ಮಾಡಿಲ್ಲವಷ್ಟೆ ಮತ್ತು ಶಾಲೀವಾಹನಶಕ 1648 ರಲ್ಲಿ ಪಿಲಗಾಂನಲ್ಲಿ ನಡೆದಿರುವ ಜ್ಯೋತಿಷಶಾಸ್ತ್ರ ಸಭಾಕಾಲಕ್ಕೆ 600 ವರ್ಷದ ಹಿಂದೆ ಇತ್ತೆಂದು ಹೇಳಿದ ದೃಗ್ಗಣಿತಪ್ರಧಾನ ಗ್ರಂಥವು ಗ್ರಹಲಾಘವಗ್ರಂಥಕ್ಕೆ ಪ್ರಾಚೀನವಾಗಿರುತ್ತೆ ಆ ಗ್ರಂಥದಲ್ಲಿ ಬೀಜಸಂಸ್ಕಾರವನ್ನು ತಿಥ್ಯಾದಿಗಳಲ್ಲಿ ಮಾಡತಕ್ಕದ್ದೆಂದೂ ಸೂರ್ಯಸಿದ್ಧಾಂತರೀತಿಯಾಗಿಯೇ ತಿಥ್ಯಾದಿ ಸಾಧನವನ್ನು ಮಾಡಬೇಕೆಂದೂ ಹೇಳಿರುವ ವಿಚಾರ ಶಾಸ್ತ್ರಸಮ್ಮತವಾಗಿರುವಪಕ್ಷದಲ್ಲಿ ಗಣೇಶದೈವಜ್ಞನು ಅದನ್ನು ಗಣಿಸಿಗೆ ತಾರದೇ ಸೌರೋಕ್ತೋಪಿ ವಿಧೂಚ್ಚಂ ಯೆಂದು ಯಾಕೆ ಹೇಳಿರುತ್ತಾನೆ

ಲಲ್ಲಾಚಾರ್ಯರು ಯಂತ್ರದೀಪಿಕಾ ವ್ಯಾಖ್ಯಾನದಲ್ಲಿ—

ಶ್ಲೋ|| ಶೃಂಗೋನ್ನತಾ ಗ್ರಹಯುಕ್ ಗ್ರಹಣೋದಯಾಸ್ತೇ
ಛಾಯಾದಿರೀಕ್ಷ ಅವಿಧಾವುದಯೇಪ್ರದೇಯಂ |
ಬೀಜಂ ಫಲಂ ತಿಥಿಭಯೋಗವಿಧೌ ನದೇಯಂ
ಚಂದ್ರೇತ್ರದೇಯಮಖಿಲಂ ಕ್ಷಿತಿಜಾದಿಕೇಷು ||

ಎಂಬದಾಗಿ ತಿಥ್ಯಾದಿಸಾಧನದಲ್ಲಿ ರವಿಚಂದ್ರರಿಗೆ ಬೀಜಸಂಸ್ಕಾರವನ್ನು ನಿಷೇಧಿಸಿದವರು ತಮ್ಮ ಶಿಷ್ಯಧೀ ವೃದ್ಧಿದ ಎಂಬ ಗ್ರಂಥದಲ್ಲಿ ಸೂರ್ಯಾದಿಗ್ರಹಗಳಿಗೆ ಸಾಮಾನ್ಯವಾಗಿ ಬೀಜಸಂಸ್ಕಾರವನ್ನು ಮಾಡಿ ಸ್ಪಷ್ಟೀಕರಣವನ್ನು ಮಾಡಿರುವದು ಸ್ವೋಕ್ತಿವಿರೋಧವಲ್ಲವೆ

ಪ್ರಶ್ನೆ 5 ಕ್ಕೆ ಉತ್ತರ—

ಶ್ಲೋ|| ಕಿನ್ನಂತೇ ಕಲಯಾಯಸ್ಮಾತ್ ತಸ್ಮಾತ್ತಾಸ್ತಿಥಯಸ್ಮೃತಾಃ

ಎಂಬ ಕಾಲಮಾಧವೀಯ ವಚನಾನುಸಾರವಾಗಿ ಯಾವ ಕಾಲದಿಂದ ಚಂದ್ರನ ಕಲಾವೃದ್ಧಿಕ್ಷಯಗಳು ಉಂಟಾಗುವವೋ, ಆ ಕಾಲವೇ ತಿಥಿಯೆಂದು ಸ್ಪಷ್ಟಪಡುವದರಿಂದ ತಿಥಿಯು ಪ್ರತ್ಯಕ್ಷವು ಈ ತಿಥಿಯ ಕಾಲಾನುಗುಣವಾದ ವೃದ್ಧಿಕ್ಷಯಗಳಲ್ಲಿ ಗಣಿತವೆ ವ್ಯವಸ್ಥಾಪಕವು ಪ್ರತ್ಯಕ್ಷ ಭೂತರಾದ ಸೂರ್ಯ ಚಂದ್ರರ ಅಂತರವಲ್ಲವೆ ತಿಥಿ ನಿಬಂಧನಕಾರರು ತಮ್ಮ ಕಾಲದಲ್ಲಿ ಪ್ರಚಾರದಲ್ಲಿದ್ದ ಗಣಿತದ ಸಂಖ್ಯೆಯನ್ನನುಸರಿಸಿ ಅದಕ್ಕನುಗುಣವಾಗಿ ತಿಥಿಯ ವೃದ್ಧಿ 65 2 ಕ್ಷಯ 51 12 ಎಂದೂ ಮತ್ತು ಕೆಲವರು ವೃದ್ಧಿ 60 15 ಕ್ಷಯ $51\frac{1}{2}$ ಎಂದೂ ಭಿನ್ನಭಿನ್ನವಾಗಿ ಹೇಳಿರುತ್ತಾರೆ ಆದರಲ್ಲಿ ಯಾವ ತಿಥಿಯ ವೃದ್ಧಿಕ್ಷಯಗಳು ಈ ಕಲೆಯನ್ನು ಪೂರೈಸುವವರೆಗೂ ಒಂದೇ ರೀತಿಯಾಗಿರುತ್ತೆಂದು ಹೇಳಿರುವದಿಲ್ಲ

ಆದುದರಿಂದ ದೃಗ್ಗಣಿತದಿಂದ ನಿರ್ಣಯಿಸಲ್ಪಡಬೇಕಾದ ತಿಥಿಯ ಹ್ರಾಸವೃದ್ಧಿಗಳನ್ನು ವ್ಯವಸ್ಥೆಮಾಡುವುದರಲ್ಲಿ ನಿಬಂಧನಕಾರರಿಗೆ ಯಾವ ಸ್ವಾತಂತ್ರ್ಯವೂ ಇರುವದಿಲ್ಲ ಕಾಲನಿರ್ಣಯಾರ್ಥವಾಗಿ ಹೊರಟಿರುವ ಜ್ಯೋತಿಷಸ್ಕಂಧಕ್ಕೂ ನಿಬಂಧನಕಾರರ ವಚನಗಳಿಗೆ ಪ್ರಾಧಾನ್ಯವನ್ನು ಕೊಡುವದು ಸುತರಾಂ ನ್ಯಾಯವಿರುದ್ಧ

ಪ್ರಶ್ನೆ 6 ಕ್ಕೆ ಉತ್ತರ—ಕ್ರಾಂತಿವೃತ್ತಕ್ಕೆ ದಕ್ಷಿಣ ದಿಕ್ಕಿನಲ್ಲಿ 173 ಕಲೆ ಅಂತರದಲ್ಲಿ ಅಶ್ವಿನ್ಯಾರಂಭದಿಂದ 180 ಭಾಗ ಅಂತರದಲ್ಲಿ ಬಹಳ ಕಾಲ ಸಮಾನವಾಗಿ ಒಂದೇ ಒಂದಾಗಿರುವ ಚಿತ್ರಾನಕ್ಷತ್ರವನ್ನು ಆರಂಭಿಸಿಮಾಡುವ ಗಣಿತವೇ ಚೈತ್ರಪಕ್ಷ

ಕ್ರಾಂತಿವೃತ್ತಕ್ಕೆ ದಕ್ಷಿಣ ದಿಕ್ಕಿನಲ್ಲಿ 13 ಕಲೆ ಅಂತರದಲ್ಲಿರುವ ರೇವತೀಯೋಗ ತಾರೆಯನ್ನಾರಂಭಿಸಿ ಮಾಡುವ ಗಣಿತವೇ ರೈವತಪಕ್ಷ

ಚೈತ್ರಪಕ್ಷದಲ್ಲಿ 27 ರ ಮೇಲೆ 23ರ ರ ಒಳಗೆ ಅಯನಾಂಶವು ಬರುತ್ತದೆ ಇದಕ್ಕಿಂತ 4 ಭಾಗ ಕಡಮೆಯಾಗಿ ರೈವತ ಪಕ್ಷದಲ್ಲಿ ಅಯನಾಂಶವು ಬರುತ್ತದೆ

ಚೈತ್ರಪಕ್ಷ ರೀತಿಯಾಗಿ ನಮ್ಮ ದೇಶಗಳಲ್ಲಿ ಪ್ರಚಾರದಲ್ಲಿರುವ ಪಂಚಾಂಗಗಳಲ್ಲಿ ಬರೆಯುವ ನಿರಯಣವಾದ ಮೇಷ ವೃಷಭಾದಿ ಸಂಕ್ರಮಣ ದಿವಸಗಳಿಗೆ 1 ದಿವಸ ಮುಂಚಿತವಾಗಿಯೇ ರೈವತಪಕ್ಷೀಯ ಪಂಚಾಂಗದಲ್ಲಿ ನಿರಯಣ ಸಂಕ್ರಮಣವು ಬರುತ್ತದೆ ನಕ್ಷತ್ರಯೋಗಗಳಲ್ಲಿ ಸುಮಾರು 18 20 ಘಳಿಗೆ ವ್ಯತ್ಯಾಸವು ಬರುತ್ತದೆ ಪಾದಚಾರಗಳಲ್ಲಿ ಎಲ್ಲಾ ಗ್ರಹಗಳಿಗೂ ಒಂದು ಪಾದ ಹಿಂದು ಮುಂದಾದ ವ್ಯತ್ಯಾಸವೂ ಅಧಿಮಾಸವ್ಯತ್ಯಾಸ ಇವೇ ಮೊದಲಾದವು ಕಂಡು ಬರುತ್ತವೆ

ಪ್ರಶ್ನೆ 7 ಕ್ಕೆ ಉತ್ತರ—ಭಮಧ್ಯ ಭೂಮಧ್ಯಗಳಿಗೆ ಅಭೇದವೇ ಪ್ರಾಚೀನಸಂಮತ ಈ ವಿಷಯದಲ್ಲಿ ಮೂಲಾಧಾರವಚನಗಳು ಆರ್ಯಭಟೀಯ ನಿ ತಿಕಾಪಾದ

ಶ್ಲೋ 18|| ತಸ್ಮಾನ್ಮಂಡಲತುಲ್ಯಂ ಸ್ವಂಸ್ವಂ ಪ್ರತಿಮಂಡಲಂ ಭವತ್ಯೇಷಾಂ | ಪ್ರತಿಮಂಡಲಸ್ಯಮಧ್ಯಂ ಘನಭೂಮಧ್ಯಾದತಿಕ್ರಾಂತಂ ||

ಎಂಬದಾಗಿ ಆರ್ಯಭಟಾಚಾರ್ಯರು ಗ್ರಹಗಳ ಪ್ರತಿವೃತ್ತಮಧ್ಯ ಭೂಮಧ್ಯ ಎರಡೂ ಬೇರೆ ಬೇರೆ ಎಂಬದಾಗಿ ಹೇಳಿ ಉತ್ತರಗ್ರಂಥದಲ್ಲಿ

ಶ್ಲೋ|| ವೃತ್ತಭಪಂಜರಮಧ್ಯೇ ಕಕ್ಷ್ಯಾ ಪರಿವೇಷ್ಟಿತಃ ಖಮಧ್ಯಗತಃ | ಮೃಜ್ಜಲಶಿಖಿವಾಯುಮಯೋ ಭೂಗೋಲಸ್ಸರ್ವತೋ ವೃತ್ತಃ ||

ಎಂಬ ಶ್ಲೋಕದಿಂದ ಭಮಧ್ಯ ಭೂಮಧ್ಯ ಎರಡೂ ಒಂದೇ ಕಡೆ ಇದೆ ಅಂದರೆ ಈ ಎರಡಕ್ಕೂ ಅಭೇದವೆಂಬದಾಗಿ ಹೇಳಿರುತ್ತಾರೆ ಇದಕ್ಕನುಸಾರವಾಗಿ ಶ್ರೀಭಾಸ್ಕರಾಚಾರ್ಯರು

ಗೋಲಾಧ್ಯಾಯದಲ್ಲಿ ಶ್ಲೋ|| "ಭೂಮೇರ್ಮಧ್ಯೇ ಖಲುಭವಲಯಸ್ಯಾಪಿಮಧ್ಯಂಯತಃಸ್ಯಾತ್ | ಯಸ್ಮಿನ್ವೃತ್ತೇಭ್ರಮತಿಖಚರೋ ನಾಸ್ಯಮಧ್ಯಂಕುಮಧ್ಯೇ || ಭೂಸ್ಥೋದ್ರಷ್ಟಾನಹಿಭವಲಯೇಮಧ್ಯಂಗಂತುಲ್ಯಂಪ್ರಪಶ್ಯೇತ್ | ತಸ್ಮಾತ್ ತಜ್ಜ್ಞೈಃ ಕ್ರಿಯತಉಪರಿದೋಃಫಲಂಮಧ್ಯಖೇಟೇ |"

ಎಂದೂ "ಭವೇದಿಮಿಲೋದ್ವ್ಯತರಾಭಿಧಶ್ಚೇ"

ಎಂಬ ಚಿ ಜೋಪನಯ 54 ನೇ ಶ್ಲೋಕದ ವಾಸನಾಭಾಷ್ಯದಲ್ಲಿ 'ಕಿಂತು ಭಗಣಾಶ್ರಿತ ನೇಮಿಕತ್ವಾತ್ ಭಗೋಲನಾಮಕಂ ಚಕ್ರಂ ನಿರಾಧಾರಂ ತಸ್ಯನಾಭಿಂ ಭೂಗರ್ಭೇಸಂಯೋಜ್ಯ" ಎಂಬದಾಗಿಯೂ ಭಮಧ್ಯಭೂಮಧ್ಯಗಳಿಗೆ ಅಭೇದವನ್ನು ಸ್ಪಷ್ಟವಾಗಿ ಹೇಳಿರುತ್ತಾರೆ

ಕೆಲವರು ಪ್ರತಿವೃತ್ತ ಮಧ್ಯ ಭೂಮಧ್ಯ ಎರಡೂ ಬೇರೆ ಎಂಬದಾಗಿ ಅರ್ಥವನ್ನು ಬೋಧಿಸುವ

ತಸ್ಮಾನ್ಮಂಡಲತುಲ್ಯಂ ಸ್ವಂಸ್ವಂ

ಎಂಬ ಆರ್ಯಭಟೀಯ ಶ್ಲೋಕಕ್ಕೆ ಭಮಧ್ಯ ಭೂಮಧ್ಯ ಬೇರೆ ಬೇರೆ ಎಂಬುವುದರಲ್ಲಿ ತಾತ್ಪರ್ಯವೆಂದು ಹೇಳುವರು. ಅದು ಸುತರಾಂ ಸಮಂಜಸವಲ್ಲ ಭಮಧ್ಯ ಭೂಮಧ್ಯಗಳಿಗೆ ಭೇದವನ್ನು ಹೇಳಿರುವ ಕೇರಳೀಯರ ಪಕ್ಷದಲ್ಲಿ ಭಮಧ್ಯಸ್ಪಷ್ಟ ಭೂಮಧ್ಯಸ್ಪಷ್ಟ ಎಂಬ ಎರಡು ಬಗೆಯಾದ ತಿಥಿಯು ಏರ್ಪಡುತ್ತೆ ಅದರಲ್ಲಿ ಮೊದಲನೆಯ ತಿಥಿಯು ಅಪ್ರತ್ಯಕ್ಷ ಅದರಲ್ಲಿಯೇ ಕರ್ಮಾನುಷ್ಠಾನವು ಮಾಡತಕ್ಕದ್ದು

ಪ್ರತ್ಯಕ್ಷವಾದ ಎರಡನೆ ತಿಥಿಯು ಉಪರಾಗಾದಿಗಳಲ್ಲಿ ಗ್ರಹಿಸತಕ್ಕದ್ದು ಎಂಬದಾಗಿ ಚಂದ್ರಸ್ಫುಟದಲ್ಲಿ ದೈವಜ್ಞರು ವಿಸ್ತರಿಸುತ್ತೆ

ಇದು ಪ್ರಾಚೀನಸಮ್ಮತವಲ್ಲ ಮತ್ತು ಆರ್ಯಭಟೀಯಕ್ಕೂ ವಿರುದ್ಧವಾಗಿರುತ್ತೆ

ದಿವಸ ಪ್ರಾತಃಕಾಲ ಹತ್ತುಘಂಟೆಗೆ ಬೇಲೂರು ಗ್ರಾಮಕ್ಕೆ ದಯಮಾಡಿಸಿದರು ಅಲ್ಲಿಯ ಗುರುಭಕ್ತರು ಮಹೋತ್ಸವದೊಡನೆ ಚತುರಂಗಬಲಸಮೇತ ಮಹಾ ಸನ್ನಿಧಿಯನ್ನು ಬರಮಾಡಿಕೊಂಡು ಗುರುಸೇವೆಯಿಂದ ಕೃತಾರ್ಥರಾದರೆಂದು ತಿಳಿದುಬರುತ್ತದೆ ಸದರಿ ಬೇಲೂರು ವೀರಶೈವಮಹಾಜನಗಳು ಮಹಾ ಸನ್ನಿಧಿಗೆ ಭಕ್ತಿಪೂರ್ವಕವಾಗಿ ಒಪ್ಪಿಸಿದ ಅಭಿನಂದನಪತ್ರಿಕೆಯನ್ನು ಈ ಪತ್ರಿಕೆಯ ಒಂದೆಡೆಯಲ್ಲಿ ಹಾಕಿರುತ್ತೇವೆ

ವರ್ತಮಾನಸಂಗ್ರಹ.

ಶಾಮಿಲ್ಲ ವಿಕ್ಟೋರಿಯಾ ಕಾಲೇಜಿನ ಮೂಲಕ ಇಂಟರ್‌ಮಿಡಿಯೆಟ್ ಪರೀಕ್ಷೆಗೆ ಕುಳಿತಿದ್ದ ತಾಯಿಯೂ ಮಗಳೂ ಇಬ್ಬರೂ ಉತ್ತೀರ್ಣರಾದರು ತಾಯಿಯ ವಯಸ್ಸು ೪೧, ಈಕೆಯ ಹೆಸರು ನಳಿನೀದತ್ತಳು ಮಗಳ ಹೆಸರು ಅನಿಲಾದತ್ತಳು

. ವಿರೆಗುಲಾ ಎಂಬ ಪ್ರದೇಶದಲ್ಲಿ ಜಪಾನಿಗೆ ವ್ಯತಿರಿಕ್ತವಾಗಿ ಚಳವಳಿ ನಡೆಯುತ್ತಿರುವುದೆಂದು ಬೇಹಾಲಿನಲ್ಲಿದ್ದ ಜಪಾನ್ ಸೈನ್ಯವು ಚೀನದ ಗಡಿಯೊಳಗೆ ಪ್ರವೇಶಿಸಿ ಅಲ್ಲಿದ್ದ 400 ಜನ ಚೀಣಾ ದೇಶದ ಸೈನಿಕರ ಮೇಲೆ ನುಗ್ಗಿದ್ದರಿಂದ ಯುದ್ಧವಾಗಿ 300 ಜನ ಚೀಣಾ ಸೈನಿಕರು ಮೃತರಾದರು ಜಪಾನಿನ ಕಡೆ ೬ ಜನರು ಮಾತ್ರ ಸತ್ತಿರುವರೆಂದು ತಿಳಿದುಬಂದಿದೆ

ಹಣದಾಸೆಯಿಂದ ಪ್ರಾಣಹಾನಿ

ಜಂಕಾರ್ ಎಂಬ ಗ್ರಾಮದಲ್ಲಿ ಬೆಂಕಿ ಬಿದ್ದು ಸುಮಾರು ೯೦ ಮನೆಗಳು ಸುಟ್ಟುಹೋದವು ಈ ಸಂದರ್ಭದಲ್ಲಿ ತಾನು ಶೇಖರಿಸಿಟ್ಟಿದ್ದ ಹಣವನ್ನು ಬಿಡಲಾರದೆ ಅದನ್ನು ತೆಗೆಯಲು ಹೋದ ಹೆಂಗಸೊಬ್ಬಳು ಬೆಂಕಿಗೆ ಸಿಕ್ಕಿ ಸುಟ್ಟುಹೋದಳು

ಚೀನಾರಾಜ್ಯದಲ್ಲಿ ಬೆಳ್ಳಿಯ ನಿರ್ಬಂಧ!

ಸರ್ಕಾರದ ಅನುಮತಿ ಇಲ್ಲದೆ ಚೀನಾ ರಾಜ್ಯದಿಂದ ಬೆಳ್ಳಿಯನ್ನು ಹೊರಕ್ಕೆ ಯಾರಾದರೂ ತೆಗೆದುಕೊಂಡು ಹೋದರೆ ಅಂಥವರಿಗೆ ಮರಣದಂಡನೆಯೋ ಅಥವಾ ೩ ವರ್ಷಕ್ಕಿಂತ ಹೆಚ್ಚಿನ ಕಾರಾಗೃಹವಾಸಶಿಕ್ಷೆಯೋ ವಿಧಿಸಲಾಗುವುದೆಂದು ಅಲ್ಲಿಯ ಸರ್ಕಾರದವರು ಪ್ರಕಟಿಸಿದ್ದಾರಂತೆ!

ಆತ್ಮರಕ್ಷಣೆಗೆ ಆಯುಧಗಳನ್ನು ಕೊಡಬೇಕು

ಸೇಟಾಲಿನಲ್ಲಿರುವ ಹಿಂದೂಮತದವರ ಮೇಲೆ ಕೊಲೆ, ಕಳವು ಇತ್ಯಾದಿ ಅತ್ಯಾಚಾರಗಳು ಆಗಾಗ್ಗೆ ನಡೆಯುತ್ತಿರುವುದರಿಂದ, ಅಲ್ಲಿಯ ಇಂಡಿಯನ್ ಕಾಂಗ್ರೆಸ್ಸಿನವರು, ಹಿಂದುಗಳು ಆತ್ಮಸಂರಕ್ಷಣೆಗಾಗಿ ಮದ್ದುಗುಂಡಿನ ಆಯುಧಗಳನ್ನು ಇಟ್ಟುಕೊಳ್ಳಲು ಅಪ್ಪಣೆಕೊಡಬೇಕೆಂದು ಅಲ್ಲಿಯ ಡಿಫೆನ್ಸ್ ಸೆಕ್ರೆಟರಿಗಳನ್ನು ಪ್ರಾರ್ಥಿಸಿಕೊಂಡಿರುತ್ತಾರೆ

ಸೂರ್ಯಗತಿಯನ್ನನುಸರಿಸಿ ತಿರುಗುವ ಮನೆ!

ಇಟಲಿಯ ಮಾಸ ೀಲ್ಸ್ ಪಟ್ಟಣದ ಗೃಹಸ್ಥನೊಬ್ಬನು ತಿರುಗುವ ಮನೆಯೊಂದನ್ನು ಕಟ್ಟಿದ್ದಾನೆ ಸದಾಕಾಲದಲ್ಲಿಯೂ ಸೂರ್ಯರಶ್ಮಿಯು ಮನೆಯೊಳಗೆ ಬೀಳುತ್ತಿರಬೇಕೆಂಬುದೇ ಇವನ ಇಷ್ಟ ಇದಕ್ಕಾಗಿ ಮನೆಯು ಛಾವಣಿಯು ನಿದಾನವಾಗಿ ಸುತ್ತುತ್ತಿರುವಂತೆ ಮಾಡಿರುವುದರಿಂದ ಯಾವಾಗಲೂ ಮನೆಯೊಳಗೆ ಬಿಸಿಲು ಬೀಳುವುದಂತೆ!

125 ವರುಷ ವಯಸ್ಸಿನ ಮುದುಕ!

ಕಾಬೂಲ್ ಬಳಿಯಲ್ಲಿ ಅಬ್ದುಲ್ ರಸೂಲ್ ಖಾನ್ ಎಂಬ ಮುದುಕನಿದ್ದಾನೆ ಅವನಿಗೆ 125 ವರ್ಷ ವಯಸ್ಸಾಗಿದೆಯಂತೆ! 30 ಜನ ಮಕ್ಕಳಿದ್ದಾರೆ. ಅವನ ಜೀವಮಾನದಲ್ಲಿ ೪ ಜನ ಹೆಂಡತಿಯರನ್ನು ಮಾತ್ರ ಮದುವೆಯಾದನು ಅವನಿಗೆ ಇನ್ನೂ ಕಣ್ಣು ಕೈಕಾಲುಗಳು ಗಟ್ಟಿಮುಟ್ಟಾಗಿರುವುದಲ್ಲದೆ ಎಂಥ ಪ್ರಯಾಸ್ಥರ ವಾಗಡಲಾದರೂ ನಡೆಯಬಲ್ಲನೆಂದು ತಿಳಿದುಬಂದಿದೆ

ಒಂದೇದಿನ ಎರಡುಸಾರಿ ಮದುವೆಯಾದಳು.

ಕಂಡಿ ಎಂಬಲ್ಲಿರುವ ಒಬ್ಬ ಕ್ಷೌರಿಕನ ಮಗಳ ಮದುವೆಯ ಕಾಲಕ್ಕೆ ಹುಡುಗಿಯ ತಂದೆಗೆ ಕೊಡಬೇಕಾಗಿದ್ದ ಓಲಿಯನ್ನು ಕೊಡುವುದಕ್ಕೆ ವರದಕ್ಷಿಣೆಗನ ಕೈಲಿ ಆಗದಿದ್ದುದರಿಂದ ಮನಸ್ತಾಪವುಂಟಾಯಿತು ಆದರೆ ಇಟ್ಟ ಲಗ್ನವನ್ನು ನಿಲ್ಲಿಸಲು ಮನೆಯ ಹೆಂಗಸರು ಇಷ್ಟಪಡಲಿಲ್ಲವಾದುದರಿಂದ ವಿವಾಹವು ಮುಂದುವರಿಯಿತು ಅಷ್ಟರಲ್ಲಿ ಹುಡುಗಿಯ ತಂದೆಗೆ ಬೇಕಾಗಿದ್ದ ಇನ್ನೊಬ್ಬ ವರನು ತನ್ನ ಸ್ನೇಹಿತರೊಡನೆ ಬಂದು ಮೊದಲನೆಯವನನ್ನು ಹೊರಡಿಸಿ ಆ ಹುಡುಗಿಯನ್ನು ಮದುವೆಯಾದನು

ಇಂಡಿಯಾದ ಪದಾರ್ಥಗಳಿಗೆ ಇರಾನಿನ ಬಹಿಷ್ಕಾರ.

ಇರಾನ್ ಸರ್ಕಾರದವರು ಇಂಡಿಯಾದ ಪದಾರ್ಥಗಳು ತಮ್ಮಲ್ಲಿಗೆ ಮಾರಾಟಕ್ಕೆ ಬರಕೂಡದೆಂದು ಅಪ್ಪಣೆ ಮಾಡಿದ್ದಾರೆ ಇದರಿಂದ ಇಂಡಿಯಾದೇಶದ, ಬಟ್ಟೆ ವ್ಯಾಪಾರಿಗಳಿಗೆ ಒಳ್ಳೆ ಏಟು ಬಿದ್ದಂತಾಗಿದೆ ಈ ಅಪ್ಪಣೆಯಂತೆ, ತಮ್ಮ ಮಾರುವಿಕೆಗೆ ಸರಿಯಾಗಿ ಇರಾನಿನ ಪದಾರ್ಥಗಳನ್ನು ಕೊಂಡುಕೊಳ್ಳುವುದಾಗಿ ಒಪ್ಪಿ ಲೈಸೆನ್ಸ್ ಪಡೆದಿರುವ ಕೆಲವರನ್ನು ಬಿಟ್ಟು ಇತರರಾರೂ ಇರಾನಿಗೆ ಪ್ರವೇಶಮಾಡಕೂಡದಂತೆ! ಈ ಕರಾರಿಗೆ ಇಂಡಿಯಾ ಗೌರ್ನಮೆಂಟಿನವರು ಒಪ್ಪಿಗೆ ಕೊಡುವದು ಅಸಂಭವವಾಗಿ ತೋರುತ್ತದೆ

ರಷ್ಯನರ ಕೃತ್ರಿಮ ರಬ್ಬರ್ ತಯಾರಿಕೆ

ರಷ್ಯನರು ಎರಡು ವಿಧ ಕೃತ್ರಿಮ ರಬ್ಬರನ್ನು ತಯಾರಿಸುವ ವಿಧಾನವನ್ನು ಕಂಡುಹಿಡಿದಿದ್ದಾರೆ ಕೆಲಸಕ್ಕೆ ಬಾರದೆಂದು ಬಿಸಾಡುವ ಎಣ್ಣೆಯ ವಸ್ತುವನ್ನು ವಿಜ್ಞಾನಶಾಸ್ತ್ರರೀತ್ಯಾ ಪಾಕಮಾಡುವುದರಿಂದ ಉತ್ಕೃಷ್ಟವಾದ ರಬ್ಬರಾಗುತ್ತದೆಯಂತೆ! ೧ ಟನ್ ಎಣ್ಣೆಯನ್ನು ಶುದ್ಧಿಮಾಡಿದ ವಸ್ತುವಿನಿಂದ 3೦ ಪೌಂಡು ರಬ್ಬರ್ ಆಗುವುದಂತೆ! ಇನ್ನೊಂದು ವಿಧವೆಂದರೆ ನಾವು ಉರಿಸಲು ಉಪಯೋಗಿಸುವ ಕಾರ್ಬೈಡ್ ಗ್ಯಾಸನ್ನು ಪಾಕಶಾಸ್ತ್ರರೀತ್ಯಾ ಪಾಕಮಾಡುವುದರಿಂದ ರಬ್ಬರ್ ದೊರೆಯುವುದಂತೆ! ಹೀಗೆ ತಯಾರುಮಾಡಿದ ರಬ್ಬರುಗಳು ಮರದಿಂದ ಸಿಕ್ಕುವ ರಬ್ಬರಿಗಿಂತ ಅಗ್ಗವಾಗಿಯೂ ಗಟ್ಟಿಯಾಗಿಯೂ ಇರುವುವಂತೆ!

ಇಂಗ್ಲೆಂಡಿನ ಕಪ್ಪು ರಾಜಪುತ್ರನ ಸಮಾಧಿಯ ಮೇಲಿನ ಪ್ರತಿಮೆಯು ಚಿನ್ನದ್ದಂತೆ!

ಕ್ಯಾಂಟರ್‌ಬರಿ ಚರ್ಚಿನಲ್ಲಿರುವ ಕಪ್ಪು ರಾಜಪುತ್ರನೆಂದು ಪ್ರಸಿದ್ಧನಾದವನ ಸಮಾಧಿಯ ಮೇಲೆ ಇಟ್ಟಿರುವ ಮನುಷ್ಯಾಕೃತಿಯ ಪ್ರತಿಮೆಯು ಚಿನ್ನದ್ದೆಂಬುದು ಈಗ ಕಂಡುಬಂದಿದೆ ಈ ಪ್ರತಿಮೆಯು ನೂರಾರು ವರ್ಷಗಳಿಂದ ಕಪ್ಪಾಗಿತ್ತು ಹೆಸರಿಗೆ ತಕ್ಕಂತಿದೆ ಎಂದು ಯಾರೂ ಅದರಕಡೆ ಗಮನಕೊಟ್ಟಿರಲಿಲ್ಲ ಆದರೆ ಕಳೆದ ತಿಂಗಳು ಪ್ರತಿಮೆಯನ್ನು ಸ್ವಚ್ಛಪಡಿಸುವಾಗ ಅದರ ಮೇಲಿದ್ದ ಕೊಳೆಯೂ ಮತ್ತು ಕೆಡದಂತೆ ಕೊಟ್ಟಿದ್ದ ಕಲಾಯಿಯೂ ಹೋಗಿ ಅಚ್ಚಬಂಗಾರದ ಪ್ರತಿಮೆಯೆಂದು ಕಂಡುಬಂದಿತು ಇದು ಸಮಾಧಿಯ ಮೇಲೆ 550 ವರ್ಷಗಳಿಂದ ಇದ್ದು 14 ನೇ ಶತಮಾನದ ಕುಶಲಕಲೆಯ ಗುರುತಾಗಿದೆ

ಅನುಪಮವಾದ ವಜ್ರ!

1934 ನೇ ಇಸವಿ ಜನವರಿ ತಿಂಗಳಲ್ಲಿ ಪ್ರಿಟೋರಿಯಾ ಬಳಿ ಇರುವ ಎಲ್ಲಿಂಡ್‌ಫಾಂಟಿ ಎಂಬಲ್ಲಿ ಜಕೊಬಸ್ ಜಾಂಕರ್ ಎಂಬ ಒಬ್ಬ ಬಡ ರೈತನಿಗೆ ಪ್ರಪಂಚದಲ್ಲಿ ಈಗ ಇರುವ ವಜ್ರಗಳಲ್ಲೆಲ್ಲಾ ಅತ್ಯಂತ ಅಮೂಲ್ಯವಾದ ಒಂದುವಜ್ರವು ಸಿಕ್ಕಿತು ಅದರ ತೂಕ ಐದು ಔನ್ಸುಗಳು ಆ ವಜ್ರವನ್ನು ಡೈಮಂಡ್ ಕಾರ್ಪೋರೇಷನ್ ಛೇರ್ಮನರಾದ ಸರ್ ಅರ್ನೆಸ್ಟ್ ಓಪನ್ ಹೈಮರ್ ಎಂಬವರು 70 ಸಾವಿರ ಪೌಂಡು ಕೊಟ್ಟು ಕೊಂಡುಕೊಂಡರು ಅನಂತರ ಅವರಿಂದ ನ್ಯೂಯಾರ್ಕಿನ ಮಿ|| ಹ್ಯಾರಿ ವಿನ್ ಸ್ಟನ್ ಎಂಬವರು 1,50,000 ಪೌಂಡುಗಳಿಗೆ ಕೊಂಡರು. ಈ ವಜ್ರವು ಚರಿತ್ರಾರ್ಹವಾದ ಕೊಹಿನೂರ್ ವಜ್ರಕ್ಕೆ ಸಮಾನವಾಗಿದೆಯೆಂದೂ ಈಗ ಹಾಲಿ ಸಿಕ್ಕಿರುವ ವಜ್ರಗಳಲ್ಲೆಲ್ಲಾ ಇದೇ ಬಹಳ ಬೆಲೆಯುಳ್ಳದ್ದೆಂದೂ ರತ್ನಪರಿವ್ಯಾಪಾರಿಗಳು ಅಭಿಪ್ರಾಯಪಟ್ಟಿರುತ್ತಾರೆ ಈ ವಜ್ರವನ್ನು ಮಾರಿ ಇನ್ನೂ ವಿಶೇಷ ಲಾಭ ಸಂಪಾದಿಸುವ ಉದ್ದೇಶದಿಂದ ಮಿ|| ವಿನ್ಸ್ಟನ್‌ರವರು ಅದನ್ನು ಲಂಡನ್ ಪಟ್ಟಣಕ್ಕೆ ತೆಗೆದುಕೊಂಡು ಹೋಗಿದ್ದಾರೆ

ಸ್ವೀಕಾರ

ಬೆಳಗಾಂವ ಡಿ|| ತೇರದಾಳದ ಮಹಾಲಿಂಗಪ್ಪ ಸಬರದ ಇವರ ಪುತ್ರಿ ಚಿ| ಸೌ|| ಅನ್ನವ್ವನನ್ನು ಮ||ರಾ|| ಅಲ್ಲಪ್ಪ ಧೋಳಶೆಟ್ಟಿ ಇವರ ಪುತ್ರ ಚಿ| ಸ|| ಅಪ್ಪಯ್ಯನಿಗೆ ಕೊಟ್ಟು ನಡೆಯಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ರೂ ತೇರದಾಳದ ಮ|| ಧರಪ್ಪ ಗದಗಿ ಇವರ ಪುತ್ರ ಚಿ| ಸ| ಕಲ್ಲಪ್ಪನ ವಿವಾಹಸಮಯದಲ್ಲಿ ವಧೂವರರ ಕಡೆಯಿಂದ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಮ|| ದುಂಡಪ್ಪ ಮಹಾರುದ್ರಪ್ಪ ಅವರಾದಿ ಇವರ ಪುತ್ರರಾದ ವೀರಪ್ಪ ವ ರುದ್ರಪ್ಪ ಈ ಉಭಯರ ಲಗ್ನಸಮಾರಂಭದಲ್ಲಿ ಸಮರ್ಪಿಸಿದ 2 ರೂ ಒಟ್ಟು 5 ರೂಪಾಯಿಗಳು ತೇರದಾಳದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳು ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಜಿಲ್ಲಾ ರೋಣ ತಾಲ್ಲೂಕು ಹೊಳೆ ಆಲೂರು ಗ್ರಾಮದ ಪಕ್ಷಾಸ್ಪತ್ರಿ ಹಿರೇಮಠದ ವೇ|| ರೇವಣಸಿದ್ಧಯ್ಯನವರ ತಮ್ಮ ಪುತ್ರ ಚಿ|| ಗುರುಶಾಂತನಿಗೆ ದೀಕ್ಷಾಸಂಸ್ಕಾರವನ್ನು ಮಾಡಿಸಿದ ಸಮಯದಲ್ಲಿ ಪ್ರಭಾಪೋಷಣೆಗಾಗಿ ಸಮರ್ಪಿಸಿದ 1 ರೂಪಾಯಿ, ಧಾರವಾಡ ಜಿಲ್ಲಾ ಎಚ್ಚೂರು ಗ್ರಾಮದ ಶ್ರೀಮಂತ ಗುರುಪಾದಯ್ಯನವರು ತಮ್ಮ ಪುತ್ರ ಚಿ|| ಸಿದ್ಧರಾಮಯ್ಯನ ವಿವಾಹಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 2 ರೂ ಒಟ್ಟು 3 ರೂಪಾಯಿಗಳು ಶ್ರೀ| ಷ| ಬ್ರ|| ಸಂಗಮೇಶ್ವರ ಪಟ್ಟದಸ್ವಾಮಿಗಳು ಹಿರೇಮಠ ಹರ್ಲಿ ಇವರ ದ್ವಾರಾ ತಲ್ಪಿರುತ್ತವೆ

ಗೋಬಿಚಿನನೂರು ತಾಲೂಕು ನಾರಸಿಂಹನಹಳ್ಳಿಯಲ್ಲಿರುವ ಎನ್ ನಂಜುಂಡಾರಾಧ್ಯರ ತಮ್ಮ ನೀಲಾರಾಧ್ಯನೆಂಬ ವರನಿಗೂ ಪಾತ್ರಲಹಳ್ಳಿಯಲ್ಲಿರುವ ಮಠದ ವೀರಭದ್ರಯ್ಯನವರ ಪುತ್ರಿ ಹ| ಕು|| ಶೋ|| ಚಿ| ಸೌ| ಗೌರಮ್ಮನೆಂಬ ವಧುವಿಗೂ ನಡೆದ ವಿವಾಹ ಸಮಾರಂಭದಲ್ಲಿ ಪ್ರಭಾ ಪೋಷಣೆಗಾಗಿ ವರನ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ ಗಳು ಮೈಸೂರು ಮಹಾರಾಣಿ ಕಲ್ಯಾಣಮ ಅರಸು ಗರ್ಲ್ಸ್ ಸ್ಕೂಲ್ ಅ|| ಮಿ|| ಶ್ರೀಮತಿ ಜಿ ಕೋಟದಮ್ಮನವರ ದ್ವಾರಾ ತಲ್ಪಿರುತ್ತವೆ

ವೇ|| ಹೊಳಲೂರು ಮಠದ ಈಶ್ವರಪ್ಪಯ್ಯನವರ ದ್ವಿತೀಯ ಪುತ್ರ ಚಿ| ಸ| ಶೇಖರಯ್ಯನಿಗೆ ಕುಂಸಿ ತಾಲ್ಲೂಕು ತಮ್ಮಡಿಹಳ್ಳಿ ವಾಸಿ ಕಂಬಾಳಮಠದ ವೇ|| ಶಿವಪ್ಪಯ್ಯನವರ ಜ್ಯೇಷ್ಠಪುತ್ರಿ ಚಿ| ಸೌ|| ಗಿರಿಜಮ್ಮನನ್ನೂ ಹೊಳಲೂರು ಮಠದ ವೇ|| ಶಿವಲಿಂಗಯ್ಯನವರ ಜ್ಯೇಷ್ಠ ಪುತ್ರ ಚಿ| ಸ| ಚನ್ನಯ್ಯನಿಗೆ ಸೂಗನೂರು ದಾರುಕೇಶ್ವರ ಮಠದ ವೇ|| ಬಸಪ್ಪಯ್ಯನವರ ಜ್ಯೇಷ್ಠ ಪುತ್ರಿ ಚಿ| ಸೌ|| ಬಸಮ್ಮನನ್ನೂ ಕೊಟ್ಟು ನಡೆಸಿದ ವಿವಾಹಸಮಯದಲ್ಲಿ ಮಳಲಿಮಠದ ಶ್ರೀ ನಾಗಭೂಷಣ ಶಿವಾಚಾರ್ಯಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕಾಗಿ ಶ್ರೀ|| ಎಸ್ ಎಂ ರುದ್ರಪ್ಪಯ್ಯ ಬ್ರದರ್ಸ್ ದಾರುಕೇಶ್ವರ ಮಠ ಸೂಗೂರು ಇವರಿಂದ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ತಲ್ಪಿರುತ್ತವೆ

ಅಗ್ಗನೂರು ಅಡಮಯ್ಯನವರ ಪುತ್ರ ಬಸವರಾಜಪ್ಪನ ಲಗ್ನದಲ್ಲಿ ತಾಂಡೂರು ವೇದಪಾಠಶಾಲಾಧ್ಯಾಪಕರಾದ ಬ್ರ|| ಶ್ರೀ|| ಸಿದ್ಧಾಂತಿ ಚಂದ್ರಶೇಖರಶಾಸ್ತ್ರಿಗಳವರು ಪಂಚಾಚಾರ್ಯಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1 ರೂ ಯು ತಾಂಡೂರು ಹಿರೇಮಠದ ನೀಲಕಂಠಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಜಗದ್ಗುರು ರೇಣುಕಾಚಾರ್ಯಾಃ ಪ್ರಸೀದತು

ಜೀಯಾಚ್ಛ್ರೀರೇಣುಕಾಚಾರ್ಯಃ ಶಿವಾಚಾರ್ಯಶಿಖಾಮಣಿಃ |
ಯೇನ ವೀರಶೈವಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ||

ಶ್ರೀಮದ್ವೇದವೇದಾಂತಸಿದ್ಧಾಂತಪುರಾಣಾಗಮೇತಿಹಾಸ
ಸಕಲಶಾಸ್ತ್ರಪ್ರಸಿದ್ಧ ಶ್ರೀಮದ್ವೀರಶೈವ ಮತಾನುಮತ
ಸ್ಥಾಪನಾಚಾರ್ಯವರ್ಯ ಸತ್ಪವಿತ್ರಪದ
ವಿಶ್ವಪಾವನ ಶೀಲ

ಶ್ರೀಮತ್ಸ್ವಕ್ಷಾದ್ರಂಭಾಪುರೀ
ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು
ಶಿವಾನಂದರಾಜೇಂದ್ರ ಶಿವಾಚಾರ್ಯ
ಮಹಾಸ್ವಾಮಿಗಳವರ

ದಿವ್ಯಶ್ರೀಚರಣಾರವಿಂದಗಳಲ್ಲಿ
ಬೇಲೂರು ತಾಲೂಕಿನ ಶಿಷ್ಯ ವೀರಶೈವರು ಭಕ್ತಿಯ
ವಿನಮ್ರಭಾವದಿಂದ ಸಮರ್ಪಿಸುವ
ಬಿನ್ನಹ

ಮಹಾಸ್ವಾಮಿ!

ಮಹಾಸನ್ನಿಧಿಯವರ ... ಹಾಸನ ... ದಂದಿನ ... ವಾರಾದ ... ಗಿ ... ಪ್ರಮುಖ ಸ್ಥಳಗಳನ್ನು ದಿವ್ಯಪಾದಸ್ಪರ್ಶದಿಂದ ಪಾವನಗೊಳಿಸಿ ಬೇಲೂರಿಗೆ ... ಪುರದ ... ಭಕ್ತರು ... ಯ ಪ್ರಾರ್ಥನೆಯನ್ನು ... ಅಂಗೀಕರಿಸಿ ಚಿತ್ತೈಸಿ ಈ ಪ್ರಾಂತದ ... ಶಾಸ್ತ್ರಪುರಾಣ ... ಮಂದಿಯನ್ನು ತಮ್ಮ ದಿವ್ಯಜ್ಞಾನ ... ಪ್ರಕಾಶ... ದಿಂದ ... ನಮ್ಮ ... ಗಳವರಿಂದ ... ರಾಜಮನ್ನಣೆ ... ಮಹಾಶಿವನ ಪ್ರಾಚೀನ ... ಮಲೆನಾಡಿನ ... ದೀನವೀರಶೈವ ... ದಯೆಯನ್ನು ... ಸಲಹುವ ... ರದಲ್ಲಿ ನಮ್ಮ ... ಭಕ್ತಿಪೂರ್ವಕವಾದ ... ವನ್ನು ಈ ಮೂಲಕ ವ್ಯಕ್ತಪಡಿಸಲು ಮಹಾಸನ್ನಿಧಿಯ ಅಪ್ಪಣೆಯನ್ನು ಬೇಡಿಕೊಳ್ಳುತ್ತೇವೆ ಮಹಾಸ್ವಾಮಿ

ಮಹಾಸನ್ನಿಧಿಯವರ ... ಪ್ರಕಾಶಿತವಾದ ... ವೀರಶೈವಮತದ ... ಮುಖವಾಗಿ ಪ್ರಕಾಶಿತವಾದ ... ಈ ಮಹಾಪೀಠದ ಪ್ರಾಚೀನ ... ನಡೆಗೊಂಡುದು ಮಹಾಸನ್ನಿಧಿಯವರು ಅನೇಕ ಸಂದರ್ಭಗಳಲ್ಲಿ ಅಪ್ಪಣೆ ಕೊಡಿಸಿರುವ ... ವಾಗಿರುವ ಸನಾತನಸನ್ಮತಾಭಿವೃದ್ಧಿಯನ್ನುಂಟುಮಾಡತಕ್ಕ ಭಾಷಣಗಳು ಎಲ್ಲರ ಹೃದಯದ ... ಗಿರುವುವು ಸಂಸ್ಕೃತ ವಿದ್ಯಾಭ್ಯಾಸಕ್ಕೆ ತಕ್ಕ ಅವಲಂಬನೆಯು ಪ್ರಾಪ್ತವಾಗಿರುವುದು ಆಂಗ್ಲವಿದ್ಯಾಭ್ಯಾಸಕ್ಕೂ ಮಹಾಸನ್ನಿಧಿಯಿಂದ ಪ್ರೇರಣೆ ದೊರೆಯುತ್ತಿರುವುದರಿಂದ ... ಯ ವಿದ್ಯಾಭ್ಯಾಸಕ್ಕೂ ಸಹ ... ಒತ್ತಾಸೆಯುಂಟಾಗಿರುವುದು ಇವೆಲ್ಲವುಗಳೂ ನಮ್ಮಗಳ ಸರ್ವತೋಮುಖವಾದ ಅಭಿವೃದ್ಧಿಯನ್ನು ಸೂಚಿಸುವುವಾಗಿವೆ ಈ ಸಂದರ್ಭದಲ್ಲಿ ಈ ಮಲೆನಾಡಿನ ಧರ್ಮ ... ಕಾರಿಗಳಿಂದ ಕೆಲವು ಪ್ರಾರ್ಥನೆಗಳನ್ನು ಮಹಾಸನ್ನಿಧಾನದ ಅವಗಾಹನೆಗೆ ತರಲು ಆಶಿಸುತ್ತೇವೆ ಮಹಾಸ್ವಾಮಿ

ಈ ಮಲೆನಾಡಿನ ಭಕ್ತಮಂಡಲಿಯು ತಕ್ಕ ಸುಧಾರ ... ಧಾರ್ಮಿಕ ... ಮತ್ತು ಸಾಮಾಜಿಕ ವಿಷಯ ... ಹಿಂದುಳಿದಿರುವುದರಿಂದ ಈ ಪ್ರಾಂತಕ್ಕೆ ... ಉಪದೇಶಕರನ್ನು ನಿಯಮಿಸುವಂತೆ ಅಪ್ಪಣೆ ... ಬೇಡುತ್ತೇವೆ ಮಹಾಸ್ವಾಮಿ

... ವೈದಿಕಕರ್ಮ ... ಕೆಲವು ವಿಧಗಳಿಂದ ಧರ್ಮ ... ಉಪಕಾರವಿರುವ ... ಅವರು ಇನ್ನು ... ಮಾಡಿಕೊಳ್ಳುವಂತೆ ಪ್ರಾರ್ಥನೆ ... ಮಹಾಸ್ವಾಮಿ

ಈ ಮಲೆನಾಡಿನ ... ಸ್ಮೃತಿಗೆ ಆಧಾರವಾಗಿರುವ ಶ್ರೀ ... ಬಹಳ ... ವಸತಿಗೆ ... ವಿಷಯವನ್ನು ಮಹಾಸನ್ನಿಧಾನದಲ್ಲಿ ಅತ್ಯಂತ ವಿನಯಪೂರ್ವಕವಾಗಿ ಅರಿಕೆಮಾಡಿಕೊಳ್ಳುವೆವಲ್ಲದೆ, ಈ ಮಠಕ್ಕೆ ಮಹಾಸಂಸ್ಥಾನದ ಉದಾರಾಶ್ರಯವನ್ನಿತ್ತು ಉದ್ಧಾರಮಾಡಬೇಕಾಗಿ ಬೇಡುತ್ತೇವೆ ಮಹಾಸ್ವಾಮಿ

ಒಟ್ಟಿಗೆ ಮಹಾಸನ್ನಿಧಾನದ ದಿವ್ಯದರ್ಶನಲಾಭದಿಂದ ನಾವುಗಳೆಲ್ಲರೂ ಧನ್ಯರಾದೆವು ಮತ್ತು ನಮ್ಮ ವೀರಶೈವ ಸಮಾಜದ ಭವಿಷ್ಯದ್ಭ್ಯುದಯದಲ್ಲಿ ತುಂಬ ಭರವಸೆಯುಳ್ಳವರಾಗಿರುವೆವಲ್ಲದೆ ನಮ್ಮ ದೀನ ಬಿನ್ನಪವನ್ನಂಗೀಕರಿಸಿ, ದರ್ಶನಲಾಭವನ್ನಿತ್ತುದಕ್ಕಾಗಿ ನಮ್ಮೀ ಪ್ರಾಂತದ ಸಕಲ ವೀರಶೈವರಪರವಾಗಿ ಭಕ್ತಿಪೂರ್ವಕವಾದ ಸಾಷ್ಟಾಂಗಪ್ರಣಾಮಗಳನ್ನು ಈ ಮೂಲಕ ಅರ್ಪಿಸುತ್ತೇವೆ ಮಹಾಸ್ವಾಮಿ

ಬೇಲೂರು } ಬೇಲೂರು ತಾಲೂಕು
ತಾ|| ...—೬—... } ಸ್ವಾಗತಸಮಿತಿಯ ಸದಸ್ಯರುಗಳು.

ಮಹನೀಯರ ಹಿತೋಕ್ತಿಗಳು

—

೭೪ ಮನುಷ್ಯನಿಗೆ ಶುಚಿಯು ಒಳಗಣದೆಂದೂ ಹೊರಗಣದೆಂದೂ ಎರಡು ಬಗೆಯಾಗಿರುವವು ಸ್ನಾನಾದಿಗಳಿಂದ ದೇಹವನ್ನು ಶುಚಿಯಾಗಿಟ್ಟುಕೊಂಡಿರುವದು ಹೊರಗಣ ಶುಚಿತ್ವವು ಎಲ್ಲರಲ್ಲಿಯೂ ಸ್ನೇಹ ಕಪಟವಿಲ್ಲದ ಮೃದುವಾದ ನಡತೆಗೊಂಡವರಲ್ಲಿ ಇತರ ಜನರು ಸುಖವಾಗಿದ್ದರೆ ಸಂತೋಷ ತೃಪ್ತಿ, ಪಾಪಭೀರುವಾಗಿರುವದು ಕೆಟ್ಟವರವಿಷಯದಲ್ಲಿ ಉಪೇಕ್ಷೆ ಈ ಸದ್ಗುಣಗಳಿಂದ ಕೂಡಿರುವದು ಒಳಗಣ ಶುಚಿತ್ವವು (ಅಂತಃಕರಣಶುದ್ಧಿ) ಅಂತಃಶುದ್ಧಿಯು ಬಹಿಃಶುದ್ಧಿಗಿಂತಲೂ ಉತ್ತಮವೇ ಸರಿ ಆದರೆ ಎರಡೂ ಅವಶ್ಯಕವೆ ಅಂತಃಶುದ್ಧಿಯಿಲ್ಲದೆ ಸ್ನಾನಾದಿಗಳಿಂದ ದೇಹವನ್ನು ಚನ್ನಾಗಿ ತೊಳೆದು ಶುಭ್ರವಾದ ಬಟ್ಟೆಗಳನ್ನು ಹಾಕಿಕೊಂಡು ಡಂಭಾಚಾರದ ಮಾತುಗಳನ್ನಾಡುತ್ತಾ ನಾನು ಶುಚಿಯಾಗಿದ್ದೇನೆಂದು ಜನರ ಕಣ್ಣಿಗೆ ತೋರಿಸುವುದು ಹೀಗೆ ... ಯಾಗುವದು ಹೇಗಾಗುವದೆಂದರೆ—'ಹಿಡಿಯೊಳಗಿನ ಜಿರಳೆಯಂತೆ ... ಹೊರಗೆ ... ಶುದ್ಧನಪ್ಪನೆ ... ಶ್ರೀ ಚನ್ನಸೋಮೇಶ್ವರ' ಎಂಬ ಮಹಾಂತ್ಮರ ವಾಕ್ಯದಂತಾಗುತ್ತದೆ

೭೫ ಊರು ಜ್ಞಾನಿಗಳ ಗುರುಗಳ ಸ್ತುತಿ ಸೇವೆ ಪೂಜೆ ಮಾಡುವರೋ ಅವರಿಗೆ ಅವರಿಂದ ಮಾಡಲ್ಪಟ್ಟ ಅಗಾಧಪುಣ್ಯವು ಪ್ರಾಪ್ತವಾಗುವದು ಯಾರು ಅವರನ್ನು ನಿಂದಿಸಿ ದ್ವೇಷಿಸಿ ತಾಪವನ್ನುಂಟುಮಾಡುವರೋ ಅಂಥವರಿಗೆ ಅವರಿಂದ ಮಾಡಲ್ಪಟ್ಟ ಅಗಾಧ ಪಾಪವು ಬಂದು ಸೇರುವದು ಅದುಕಾರಣವೇ 'ಮಾಡಿದವರ ಪಾಪ ಆಡಿದವರ ಬಾಯಿಯಲ್ಲಿ' ಎಂಬ ವಾಕ್ಯವಿರುವದು ಅಲ್ಲದೆ ನಿಂದಿಸಿ ನುಡಿಯದಿರಾರನು' ಎಂದು ಶ್ರೀ ... ಹೇಳಿರುತ್ತಾರೆ ಧರ್ಮಸೂಕ್ಷ್ಮವು ಹೀಗಿರಲಾಗಿ ಇದನ್ನು ತಿಳಿದೂ ಕೂಡ ಜ್ಞಾನಿಗಳನ್ನೂ ಗುರುಗಳನ್ನೂ ನಿಂದಿಸುವದೂ ದ್ವೇಷಿಸುವದೂ ಹೇಗಾಗುವದೆಂದರೆ ಇಲ್ಲಿಂದ ಕಾಶಿಗೆ ಹೋಗಿ ಶುಭ್ರವಾದ ಗಂಗಾಜಲವನ್ನು ಬಿಟ್ಟು ಬಚ್ಚಲ ಕೊಚ್ಚೆಯಲ್ಲಿ ಮಿಂದು ಬಂದಂತಾಗುವದು

೭೬ ಬರಹದ ... ಬಂಧುಗಳ ಮರಣ ಕಷ್ಟ ... ಗಳು ಮನುಜನಿಗೆ ತಿಳಿವಳಿಕೆಯನ್ನುಂಟುಮಾಡಿ ಆತ್ಮಶಕ್ತಿಯನ್ನು ಹೆಚ್ಚಿಸುವವು ಬರಹದಿಂದ—ಉಪಯೋಗವಾಗಿರುವದನ್ನೂ ವಿಶದ್ಧವಾದವನ್ನೂ ಕಲಿಯಬಹುದು ಕಾಯಿಲೆಯಿಂದ—ದುರಾಹಾರಗಳನ್ನು ಬಿಟ್ಟು ಒಳ್ಳೆಯ ಆಹಾರಗಳನ್ನು ಮಿತವಾಗಿ ತಿನ್ನುವದನ್ನೂ ದುರಾಚಾರಗಳಲ್ಲಿ ಪ್ರವೃತ್ತನಾಗದೆ ಸದಾಚಾರದಲ್ಲಿದ್ದುಕೊಂಡು ದೃಢಕಾಯದವನಾಗಿರಬೇಕೆಂಬುದನ್ನೂ ಕಲಿಯಬಹುದು ಮರಣದಿಂದ ಹುಟ್ಟಿದ ಪ್ರತಿಯೊಂದು ಪ್ರಾಣಿಯು ಸಾಯತಕ್ಕದ್ದೆಂದೂ ಒಂದಿಲ್ಲೊಂದು ದಿನವಾದರೂ ಅದೇ ಮಾರ್ಗವನ್ನು ಅನುಸರಿಸತಕ್ಕವರೆಂದೂ ಮರಣಕ್ಕಾಗಿ ಭಯಪಡಬೇಕಾದ್ದಿಲ್ಲವೆಂದೂ ಮರಣಹೊಂದಿದವರಿಗಾಗಿ ಮರುಗುವ ಕಾರಣವಿಲ್ಲವೆಂದೂ ತಿಳಿಯಬಹುದು ಕಷ್ಟಗಳಿಂದ—ಪ್ರಪಂಚಜ್ಞಾನವನ್ನೂ ನಮಗೆ ಹಿತಾಹಿತಜನರು ಯಾರೆಂಬುದನ್ನೂ ತಿಳಿಯಬಹುದು ಮತ್ತು ಅನೇಕ ತೊಂದರೆಗಳಿಂದ ಪೂಜಾಯೋಗ್ಯವಾಗುವ ಶಿಲೆಯಂತೆ ಅನೇಕ ತೊಂದರೆಗಳಿಂದ ಮನುಷ್ಯನು ನಿಜವಾದ ಮನುಷ್ಯನಾಗುವನು ಎಂಬುದನ್ನು ತಿಳಿಯಬಹುದು

೭೭ ಯಾವುದಾದರೊಂದು ವಿಚಾರವು ಒಂದುರೀತಿ ಆಗುವದೆಂದು ನೀವು ಹಿಂದೆಯೇ ಎಚ್ಚರಿಕೆಕೊಟ್ಟು ನುಡಿದದ್ದು ಅದು ಹಾಗೆಯೇ ನಡೆದರೆ ನಾನು ಮೊದಲು ಹೇಳಲಿಲ್ಲವೇ ನೋಡು ಎಂದು ಮೇಲೆ ಮೇಲೆ ಎನ್ನಬೇಡಿ ಅದು ಉಪಕಾರಿಗಳ ಲಕ್ಷಣವಲ್ಲವು ಏಕೆಂದರೆ ನಿಮ್ಮ ಸ್ನೇಹಿತರಿಗೆ ಕೋಪಬರಬಹುದು ಅಲ್ಲದೆ ಆತನು ವಿವೇಕಶಾಲಿಯಲ್ಲದಿದ್ದರೆ ತಾನು ಮಾಡಿದ ತಪ್ಪನ್ನು ತಿಳಿದುಕೊಂಡು ಅದರ ಫಲವಾಗಿ ಬಂದ ಜ್ಞಾನದಿಂದ ಲಾಭ ಪಡೆಯದೇ ಹೋಗಬಹುದು

೭೮ ಬರಹದಿಂದಾಗಲಿ ಹರಕುಬಟ್ಟೆಗಳಿಂದಾಗಲಿ ನಮಗೆ ಅವಮಾನವಲ್ಲ 'ಅರಿದರಿವಾಪದಿಂ ಮರಣಮಿನ್ನುಟಿ' ಎಂಬಂತೆ ಜನಗಳ ಮುಖಗಳನ್ನು ಕಂಡರೆ ಮುಖ ತಗ್ಗಿಸುವಂಥ ಕೆಟ್ಟ ಚಾಳಿಯಿಂದ ಮಾತ್ರ ಅವಮಾನ ಕೆಟ್ಟನಡತೆಯಿಂದ ಅವಮಾನ ದೇವರು ಬರಹವಕೊಟ್ಟರೆ ಕೆಟ್ಟನಡತೆಯ ಕೊಡ ಹ್ತಾನೆಯೆ? ನಮ್ಮ ಯತ್ನದಿಂದ ಬರಹವನ್ನು ನಿವಾರಿಸಿಕೊಳ್ಳಬಹುದು ಬಡವನ ಗರ್ವವನ್ನು ನಾವು ಮನ್ನಿಸಬೇಕು ಅವನಲ್ಲಿ ಅದು ಗುಣವೆ ಆದರೆ ಭಾಗ್ಯವಂತನ ಗರ್ವವು ಸಹಿಸಲು ಅಸಾಧ್ಯವಾದದ್ದು ಅಸಹ್ಯಕರವಾದ ದುರ್ಗುಣವು

೭೯ ನೀವು ಒಳ್ಳೆಯವರಾಗಿರಬೇಕಾದುದು ಇತರರಿಗೋಸ್ಕರವಾಗಿಯಲ್ಲ ಲೋಕದ ಕಣ್ಣಿಗಾಗಿಯಲ್ಲ ನಿಮ್ಮ ಮೇಲ್ಗಾಗಿಯೇ ಎಲ್ಲಾ ವಿಪತ್ತುಗಳು ಬಂದು ಆವರಿಸಿಕೊಂಡರೂ ಏನುಮಾಡಲಿ ಹೇಗೆ ಮಾಡಲಿ ಎಂಬ ದಿಗ್ಭ್ರಾಂತಿಯಂತಾದವರಾದರೂ ಧರ್ಮವನ್ನು ನಂಬಿ ಆಚರಿಸಿರಿ ಧರ್ಮಕ್ಕೇ ಜಯವಾಗುವದು ನೀವು ಬದುಕಬೇಕು ಲೋಕವೆಲ್ಲವೂ ಬದುಕಬೇಕು ನಿಮಗೆ ಹಲ್ಲುಬಾಧ್ಯಕವಾಗಿರುವಂತೆ ಇತರರಿಗೂ ಇವೆ ಎಂದು ತಿಳಿದು ಉದಾರಮನಸ್ಸಿನಿಂದ ಬಾಳಿ ಬದುಕಿರಿ ನಿಮ್ಮ ಮನಸ್ಸು ದೃಷ್ಟಿ ಯೋಚನೆಗಳು ಎಲ್ಲಾ ವಿಶಾಲವಾಗಿರಲಿ ನಿಮ್ಮ ಕಾರಣವು ಏನಾದರೇ ಆಗಿರಲಿ ಎಲ್ಲಿಯೂ ನೀವು ಪ್ರಾಮಾಣಿಕರೆಂದೂ ವಿಶ್ವಾಸಾರ್ಹರೆಂದೂ ಉಪಕಾರಿಗಳೆಂದೂ ಸಾತ್ವಿಕರೆಂದೂ ಧೈರ್ಯಶಾಲಿಗಳೆಂದೂ ಕೀರ್ತಿಪಡೆಯಿರಿ ದೇವರೊಬ್ಬನಿರುವನು ಅವನು ಒಳ್ಳೆಯವನು ಯಾರನ್ನು ವಂಚಿಸಿದರೂ ಅವನನ್ನೂ, ನಿಮ್ಮ ಆತ್ಮವನ್ನೂ ವಂಚಿಸಲು ಅಸಾಧ್ಯವು ಸತ್ಯವೆ ಸರಿಯಾದುದು ಸತ್ಯವೇ ಧರ್ಮ ಇಂದಿಲ್ಲದಿದ್ದರೆ ನಾಳೆ ಯಾದರೂ ಸತ್ಯಧರ್ಮಗಳಿಗೆ ಜಯವಿದೆ ಎಂದು ದೃಢವಾಗಿ ನಂಬಿಕೆಲಸಮಾಡಿರಿ ನಂಬಿ ನಂಬಿದರೆ ಮನವೆ ಹಂಬಲಿಸದಿರು ಬರಿದೆ ನಂಬಿಗೆಯು ಕಾರಣವು ಸಾಂಬನೊಲಿವುದಕೆ ಎಂದು ಮಹನೀಯರು ಸಾರಿರುತ್ತಾರೆ

೮೦ ಇಂದು ಏನೋ ಮಾಡತಕ್ಕದಿದೆವು ಅದು ಏನೋ ಆಗಹೋಯಿತು ಇಂದು ಏನೋ ಮಾಡತಕ್ಕದಾಗಿರುವೆವು ನಾಳೆ ಇದೆ ನಾಗಿ ಪರಿಣಮಿಸಬಹುದೋ ತಿಳಿಯಬಲ್ಲವರಾರು? ದೇಹಧಾರಿಗಳಾದ ನಾವು ಶಸ್ತ್ರಾಸ್ತ್ರಾದಿ ಧನಗಳ ಸಹಿತವಾಗಿ ಶುದ್ಧರಹಿತವಾಗಿ ಸ್ವಾರ್ಥಸಾಧನೆಗಾಗಿ ಪತಿತರಂಗಳು ಪ್ರಾರಂಭಿಸುವೆವು ಏನೇನೋ ಮರೆತವು ಏನೇನೋ ಕಲಿತವು ಕಲಿತವನ್ನು ಕಳ್ಳಿ ಕುಸ್ತಿಯನ್ನು ತಪ್ಪಿದು ತೊಳಲಿ ಬಳಲಿ ... ತ್ತವು ನಡೆದು ಹೋದುದಕ್ಕೆ ನುಡಿದು ಫಲವೇನು? ... ಗುಣವಾಗಿಯೇ ಇರಬಹುದು ... ವರಾರು? ಆದರೆ ಒಂದು ಮಾತು—ಇಷ್ಟು ಜನ್ಮವೆತ್ತಿದರೂ ಇಷ್ಟಾರ್ಥಸಿದ್ಧಿಯಾಗದಿರುವಲ್ಲಿ ಜೀವನಯಾತ್ರೆಯನ್ನು ಪ್ರಾರಂಭಿಸಿ ನಡೆಸುವವರೊಡನೆ ನಕ್ಕು ಅಳುವವರೊಡನೆ ಅತ್ತು ವೇಳೆಯನ್ನು ವ್ಯರ್ಥಕಳೆಯಬಹುದೇ?

೮೧ ಮೌನವು ಸೃಷ್ಟಿಮಾಡುವಂಥಾದ್ದು ಏಕಾಗ್ರತೆಯಿಲ್ಲದೆ ಸೃಷ್ಟಿಯಾಗಲಾರದು ಮೌನವಿಲ್ಲದೆ ಏಕಾಗ್ರತೆಯಾಗಲಾರದು ನಿಮ್ಮಲ್ಲಿ ಪ್ರಕಾಶಮಯವಾಗಿ ಶ್ರೇಯೋಮಯವಾಗಿ ಶಾಂತಿಮಯವಾಗಿರುವ ನಿಜವಾದ ಆತ್ಮವು ಸೃಷ್ಟಿಯಾಗಬೇಕೆಂದು ನಿಮಗೆ ಅಭಿಲಾಷೆಯಿದ್ದರೆ ಸುಮ್ಮನಿರುವುದನ್ನು ಕಲಿತುಕೊಳ್ಳಿರಿ ನಿಮ್ಮ ಒಡನಾಡಿಗಳ ಜೊತೆಯಲ್ಲಿರುವಾಗ ಮೌನವಾಗಿರಬೇಕು ಮಹಾತ್ಮರ ಮುಂದಿರುವಾಗಲೂ ಮೌನವಾಗಿರಬೇಕು ಪರಮೇಶ್ವರನ ಆರಾಧನೆಯಲ್ಲಿರುವಾಗಲೂ ಮೌನವಾಗಿರಬೇಕು ಮೌನವೇ ಸ್ವರಾಜ್ಯಕ್ಕೆ ಹಾದಿಯು ಮೌನದಿಂದ ಚೆಲುವೆಯುಂಟಾಗುವದು ಮೌನದಿಂದ ಶಾಂತಿಯುಂಟಾಗುವದು ನೀವು ಎಂದಾದರೂ ಜಪಾನಿಗೆ ಹೋದರೆ ಆ ಜಪಾನಿಗರು ಎಷ್ಟು ಬಲಿಷ್ಠರಾಗಿ ಎಷ್ಟು ಮೌನವಾಗಿ ಎಷ್ಟು ಏಕಾಗ್ರವಾಗಿರುವರೆಂಬುದು ನಿಮಗೆ ಗೊತ್ತಾಗುವದು ರೈಲ್ವೆ ಸ್ಟೇಷನ್ನುಗಳಲ್ಲೆಲ್ಲಾ ನೋಡಿ ಸಾವಿರಾರು ಪಾದುಕೆಗಳು ಚಟಚಟ ಎನ್ನುವದು ಮಾತ್ರ ಕೇಳಬರುತ್ತದೆ ಆದರೆ ಒಂದು ಮಾತಿಲ್ಲ ಆ ಜಪಾನಿಗರು ಎಷ್ಟೋ ಶತಮಾನಗಳಿಂದ ಹೀಗೆ ಆತ್ಮಸಂಯಮದಿಂದಲೂ ಶಾಂತಿಯಿಂದಲೂ ನಡೆದುಕೊಳ್ಳುವುದನ್ನು ಕಲಿತಿದ್ದಾರೆ ಏಷಿಯಾ ಖಂಡದಲ್ಲಿ ನಿಜವಾಗಿ ಸ್ವತಂತ್ರವಾಗಿರುವ ರಾಜ್ಯವೆಂದರೆ ಅದೊಂದೆ

೮೨ ಜನರನ್ನು ತಳಮಳಗೊಳಿಸದೆ ತಾನೂ ತಳಮಳಗೊಳ್ಳದೆ ಹರ್ಷ ಸಿಟ್ಟು ಭಯ ತಳಮಳ ಇವುಗಳಿಗೆ ಆಶ್ರಯನಾಗದೆ ಕೊಡದೆ ಅಪೇಕ್ಷೆಯಿಲ್ಲದವನಾಗದೆ ಶುಚಿಯಾಗಿ ದಕ್ಷನಾಗಿ ಯಾವುದರಲ್ಲಿಯೂ ಆಸಕ್ತಿಯನ್ನು ವಹಿಸದೆ ಯಾವುದರಿಂದಲೂ ಮನಸ್ಸು ವಿಕಾರವನ್ನು ಹೊಂದದೆ ಕಾಮ್ಯಕರ್ಮಗಳನ್ನೆಲ್ಲ ಬಿಟ್ಟಿರುವವನೆ ಶಿವಪ್ರಿಯನು

೮೩ ಯಾರೂ ಯಾವುದರಿಂದಲೂ ದ್ವೇಷಿಸದೆ ಯಾವುದನ್ನೂ ಹಗೆಸದೆ ಯಾವುದಕ್ಕೂ ಕಣ್ಣೀರು ಬಿಡದೆ ಯಾವುದಕ್ಕೂ ಬಯಸದೆ ಶುಭಾಶುಭಫಲಗಳನ್ನು ಲಕ್ಷ್ಯಮಾಡದೆ ಶತ್ರುಮಿತ್ರರಲ್ಲಿಯೂ ಮಾನಾಪಮಾನಗಳಲ್ಲಿಯೂ ಶೀತೋಷ್ಣ ಸುಖದುಃಖಗಳಲ್ಲಿಯೂ ಸಮಚಿತ್ತನಾಗಿ ಯಾವುದರಲ್ಲಿಯೂ ಆಸಕ್ತನಾಗದೆ ಮೂರುಲೋಕಗಳ ವೈಭವವೂ ತನಗೆ ಒಲಿದು ಬರುತ್ತಿದ್ದರೂ ಅದರ ಕಡೆಗೆ ಮನಸ್ಸು ಹಾಕದೆ ನಿಂದೆಸ್ತುತಿಗಳನ್ನು ಸಮವಾಗಿ ಭಾವಿಸುತ್ತ ಮನಸ್ಸಿನಲ್ಲಿ ಪರಮಾತ್ಮವಿಚಾರವನ್ನಿಟ್ಟುಕೊಂಡವನಾಗಿ ಏನುಸಿಕ್ಕಿದರೂ ಸಂತುಷ್ಟಚಿತ್ತನಾಗುತ್ತ ಶಾಂತಿಯಿಂದ ಇರುವ ಭಕ್ತನೇ ಶಿವಪ್ರಿಯನು

[illegible] ಶಿವನಾದ ಭಕ್ತನು 'ನಾನು ನನ್ನದು' ಎಂಬ ಭಾವನೆ[illegible]ನ್ನು ಬಿಟ್ಟು ಬಿಡುವನು ಮತ್ತು ತನ್ನ ಯಾವತ್ತು ಕ್ರಿಯೆ[illegible]ಯೂ ಶಿವನಾಜ್ಞೆಯ ಆಧಯುಕ್ತವಿರುವುದನ್ನು ಅರಿತಿರುವನು. [illegible] ತನಗೆ ಲಾಭವಾದರೆ ಹಿಗ್ಗುವುದಿಲ್ಲ ನಷ್ಟವಾದರೆ ಕುಗ್ಗು[illegible] ಅವನಿಗೆ ಶಿವಯೋಗದಲ್ಲಿರುವ ನಂಬಿಕೆಯು ಎಷ್ಟು[illegible]ಧವೆಂದರೆ ತನ್ನನ್ನು ಶಿವನು ಯಾವ ಸ್ಥಾನದಲ್ಲಿಟ್ಟರೆ ಅಷ್ಟ[illegible] ಯಾವಾಗಲೂ ಸಂತೃಪ್ತನಾಗಿರುವನು ಮತ್ತು 'ದೇವ[illegible]ನ್ನು ನೀನು ನಿನ್ನ ಇಚ್ಛೆಯಂತೆ ವಿನಿಯೋಗಿಸು. ನಾನು [illegible] ನಿನ್ನನ್ನು ಬಿಡುವದಿಲ್ಲ' ಎಂದು ದೃಢಪ್ರತಿಜ್ಞನಾಗಿ[illegible]ರುವನು.

೮೫ ಬೀಸಿದ ಪದಾರ್ಥವನ್ನು ಜರಡಿ ಹಿಡಿದರೆ ಹಿಟ್ಟನ್ನು [illegible] ಬಿಟ್ಟು ತರಿಯನ್ನು ತನ್ನಲ್ಲಿಟ್ಟುಕೊಳ್ಳುವಂತೆ ದುಷ್ಟಸ್ವಭಾವದವರು ಸುಗುಣಗಳನ್ನು ತ್ಯಜಿಸಿ ಹೊರಗೊಡೆದು ತಮ್ಮ ಹೃದಯದಲ್ಲಿ ದುರ್ಗುಣಗಳನ್ನೇ ತುಂಬಿಕೊಂಡಿರುವರು.

೮೬ ಕೆಟ್ಟದುದನ್ನು ಬಿಟ್ಟು ಒಳ್ಳೆಯದನ್ನು ತನ್ನಲ್ಲಿಟ್ಟುಕೊಳ್ಳುವುದು ಮೊರದ ಸ್ವಭಾವವಷ್ಟೆ! ಭಕ್ತಶ್ರೇಷ್ಠರು ಮೊರದಂತೆ ಇರುವರು. ಅಂದರೆ ಅವರ ಹೃದಯದಲ್ಲಿ ಸುಗುಣಗಳೇ ತುಂಬಿರುತ್ತವೆ. ಫಲಭಾರಕವೃಕ್ಷಗಳು ಬಾಗುತ್ತವೆ. ಹಾಗೆಯೇ ಸತ್ಪುರುಷರು ಸಂಪತ್ಕಾಲದಲ್ಲಿ ನಮ್ರರಾಗಿಯೂ ಕರುಣಾಶಾಲಿಗಳಾಗಿಯೂ ಇರುವರು.

೮೭ ಜನರು ಸುಖ ಸುಖವೆಂದು ಯಾವಾಗಲೂ ಹಂಬಲಿಸುತ್ತಿರುತ್ತಾರೆ. ಹಾಗಾದರೆ ಸುಖವೆಲ್ಲಿರುವದೆಂದರೆ ಶಾಂತಿಯಲ್ಲಿರುವದು. ಮನುಷ್ಯನಿಗೆ ಅನುಕೂಲತೆಗಳು ಹೆಚ್ಚಿದಂತೆ ವಿಷಯ ಭೋಗಾಪೇಕ್ಷೆಯು ಹೆಚ್ಚಿ ಲಾಲಸೆಯು ಪ್ರಬಲವಾಗುವದು. ಆಸೆ ಹೆಚ್ಚಿದಲ್ಲಿ ತೃಪ್ತಿಗೆ ಸ್ಥಳವೇ ಇಲ್ಲ. ತೃಪ್ತಿಯಿಲ್ಲದವನಿಗೆ ಶಾಂತಿಯಿಲ್ಲ, ಸುಖವಿಲ್ಲ. ಇನ್ನು ಪ್ರತಿಕೂಲಗಳು ಹೆಚ್ಚಿದಂತೆ ಮನ[illegible]ಸ್ಸು ಸ್ಥಿರವಾಗಿ ಒಂದು ಸ್ಥಾಯಿಗೆ ಬಂದು ಕಾ[illegible] ಕರ್ಮಫಲದಲ್ಲಿ ನಂಬಿಗೆ ಹುಟ್ಟಿ [illegible] ಫಲಭೋಗದಲ್ಲಿ ತೃಪ್ತಿಯುಂಟಾಗಿ ಶಾಂತಿ ಸುಖ ದೊರೆಯುವದು. ಪ್ರತಿಕೂಲತೆಯು [illegible] ಬಾಗಿಲು [illegible] ಸ್ವಾತಂತ್ರ್ಯವಾಗಿರುವದು. 'ಪ್ರತಿಕೂಲದ ಫಲವು [illegible]ಕರವಾದದ್ದು' ಎಂಬ ನಿಶ್ಚಯದ [illegible] ಅನುಕೂಲಗಳು ಹೆಚ್ಚಿದಂತೆ ಸುಖವೂ ಪ್ರತಿಕೂಲಗಳು ಹೆಚ್ಚಿದಂತೆ ದುಃಖವೂ ಉಂಟಾಗುವದೆಂದು ಬಹುಜನರ ಎಣಿಕೆ. ವಿಚಾರಮಾಡಿ ನೋಡಿದರೆ ಅನುಕೂಲಗಳಿಗಿಂತಲೂ ಪ್ರತಿಕೂಲದಲ್ಲಿಯೇ ಹೆಚ್ಚು ಸುಖವಿರುವದೆಂಬುದು ನಿರ್ವಿವಾದವಾದದ್ದು. ಆದ್ದ[illegible]ನಲ್ಲಿರುವವರು ವಿಮರ್ಶನೆಮಾಡಿ ಯಾವುದರಲ್ಲಿ ಸುಖವಿದೆಯೆಂಬುದನ್ನು ತಿಳಿಯಬೇಕು.

೮೮ ನಮ್ಮ [illegible]ಗಳಿಗೆ ಧನವಾಗಲೀ ಪ್ರಭುತ್ವವಾಗಲೀ ಅಲ್ಪಕಾಲ ಸಿಕ್ಕಿ ಅಲ್ಪಸುಖವನ್ನು ಕೊಡತಕ್ಕದು. ಇದಕ್ಕೋಸ್ಕರವೇ ನಮ್ಮ ಬುದ್ಧಿಯನ್ನೆಲ್ಲಾ ಹಾಳುಮಾಡಿಬಿಟ್ಟರೆ ಮನುಷ್ಯಜನ್ಮ ಸಾರ್ಥಕವಾಗುವದಿಲ್ಲವು. ಯಾವುದು ಅತಂದ್ರಾರ್ಥವಾಗಿ ನ್ಯಾಯಯುತವಾದ ನಿತ್ಯಸುಖವನ್ನು ಕೊಟ್ಟು ದೈವಪ್ರೀತಿಗೆ ಪಾತ್ರನನ್ನಾಗ ಮಾಡುವದೋ ಅಂತಹ ಜೀವನವನ್ನು ಸತ್ಪ್ರವೃತ್ತಿಗಳಿಗೆ ವಿನಿಯೋಗಿಸುವದು ಬಹುಶ್ರೇಯಸ್ಕರವು. ಆದ್ದರಿಂದ ದೇವರು ನಮಗೆ ಅನುಗ್ರಹಿಸಿರುವ ಬುದ್ಧಿಯನ್ನು [illegible] ಸುಖಸಾಧನಕ್ಕಾಗಿ ವಿನಿಯೋಗಿಸಿ ನಾವೆಲ್ಲರೂ ಆತನ ಪ್ರೀತಿಗೆ ಪಾತ್ರರಾಗುವದು ನ್ಯಾಯವಾದ ಕರ್ತವ್ಯವಾಗಿರುವದು. ಹಾಗಿಲ್ಲದಿದ್ದರೆ ನಾವು ಆತ್ಮದ್ರೋಹಿಗಳೂ ದೈವದ್ರೋಹಿಗಳೂ ಆಗಿ ನರಕಭಾಜನರಾಗುವುದಲ್ಲದೆ ಸಂಪತ್ತು ವಿದ್ಯೆ ಮತ್ತು [illegible] ಸಹ ಕ್ರಮೇಣ ನಮ್ಮಿಂದ ದೂರವಾಗುವುವು' ಎಂದು ಹೇಳಿದ[illegible]

(ಸಶೇಷ)

ಎಂ. ಮಲ್ಲಿಕಾರ್ಜುನಾರಾಧ್ಯ, [illegible]
ಮಳವಳ್ಳಿ [illegible]

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರಣಿಮಂಡಲದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಪ್ರವಾಸವಾಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಾನುಸಾರ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಅದಕ್ಕಾಗಿ ಎಂಥಾ ಕೆಲಸದಂಥ ಕಾಗದಗಳನ್ನು ಉಪಯೋಗಿಸುವದಲ್ಲದೆ ಸುಂದರವಾದ ಮತ್ತು ಗಟ್ಟಿಯಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸೋವಿ ಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೨೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂದೂರ	೧	೨—೦—೦
ಮಲ್ಲಸಿಂದೂರ	೧	೬—೦—೦
ತಾಲಸಿಂದೂರ	೧	೬—೦—೦
ಶಿಲಾಸಿಂದೂರ	೧	೬—೦—೦
ಸ್ವರ್ಣವಂಗ	೧	೪—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೬೦—೦—೦
ರಜತಭಸ್ಮ	೧	೬—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹರಿತಾಳಭಸ್ಮ	೧	೦—೮—೦
ಕಾಂತಿಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೨—೦—೦
ಮುಕ್ತಾಭಸ್ಮ	೧	೬೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖೀಮಠ, ಜಿಲ್ಲಾ ಗಢವಾಲ್ ಯು. ಪಿ.

ವೀರಶೈವರತ್ನ

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಉಪನ್ಯಾಸಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಉಪನ್ಯಾಸಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಉಪನ್ಯಾಸಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವನ್ನು ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರೋಪನ್ಯಾಸಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು ಅತ್ಯುತ್ತಮವಾದ ಕಾಗದದಿಂದಲೂ ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪುತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದು ಆಶಿಸುತ್ತೇವೆ.

ಬೆಲೆ ೧೨ ಆಣೆ ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಪ್ರವೃತ್ತಿಸಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಆ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಆ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೬೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥದ ಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಸಂತೋಷಪೂರ್ವಕವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೯೪ ಪುಟಗಳಿಂದ ಕೂಡಿದ್ದು ಬಹಳ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೪ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮೀಷನ್ ವಜಾ ಹೋಗಲಾಗಿ **೩ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಏಂಥಳು ಅಮೃತದ ಬಿಳಿಗಂಧ ಕೆಂಪಿನ ಫೋಟೋ ಸೈಜು ೨೦×೧೪ ಚಿಕಿ ಗಳ್ಳೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲಿಂಗವಿಯ್ಯಾಕರ ವ ಅಗಸ್ತ್ಯ ಮಹರ್ಷಿ ವ್ಯಾಸ ನಾದಿಂದ ದುಷಾರ್ಗ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೦×೧೪ ಚಿಕಿ	೦—೧—೬
ಶ್ರೀ ರೇಣುಕರೊಡಗೂಡಿದ ಪಂಚಾಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಚಿಕಿ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಚಿಕಿ ಗಳ್ಳೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಚಿಕಿ ಗಳ್ಳೆ ...	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನಿ ಕ್ಷೇತ್ರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ... ಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಗಳ್ಳೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಚಿಕಿ ಗಳ್ಳೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಗಳ್ಳೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ... ಕಟ್ಟಡದ ಸುಂದರ ಫೋಟೋ ಗಳ್ಳೆ	೦—೦—೯
ಶ್ರೀ ಜಗದ್ಗುರು ಶ್ರೀ ಪಾದಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ ..	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ... ಕೇದಾರನಾಥಸ್ವಾಮಿಯ ದೇವಾಲಯದ ಸುಂದರ ಫೋಟೋ	೦—೦—೯
ಶಿವಾಶ್ರಮದಲ್ಲಿ ನಡೆದ ... ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ಕೊಂಡುಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯರ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗೆಲು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾ ...

ಗಳನ್ನು ಕೊಟ್ಟಿರು. ಪ್ರಸಿದ್ಧವಾದ ನಶ್ಯದ ಪುಡಿಯು ಸ್ವಸ್ಥವಾಗುವ ... ಡಿಗಳು ಯಾವುವೆಂದರೆ —ಪೀನಸಿ, ... ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ... ಗಳಕ್ಕೆ ಸರ್ವವ್ಯಾಧಿಗಳು, ಜಡತೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ತಲೆಯಲ್ಲಿ ... ಲ್ಪಟ್ಟ ... ವ್ಯಾಧಿಗಳನ್ನು ಸ್ವಸ್ಥಪಡಿಸಿ ಬುದ್ಧಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಪಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ... ಪರಿಮಳವಾಗುವುದು. ಇದನ್ನು ಅನೇಕ ಪ್ರಸಿದ್ಧ ... ತಮ್ಮ ಗೃಹದಲ್ಲಿ ಕುಟುಂಬಪೂರ್ವದವರಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ ಪಿ ೦-೧ ... ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ೮-...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[22] ಪೋ ಬಾ ೫೧೦, ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ ...	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ .	೧ ಆಣೆ
ಗೋತ್ರಸೂತ್ರಪಟ (೨ನೆಯ ಆವೃತ್ತಿ) .	೧ ಆಣೆ
ಸನ್ಯಾಸಶಾಸ್ತ್ರಮಹಾಮುಕುರ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೪ನೆಯ ಆವೃತ್ತಿ) .	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೨ನೆಯ ಆವೃತ್ತಿ) ..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ) ...	೧ ಆಣೆ
ಬಸವಾದಿ ಸಿದ್ಧತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ವರೂಪಪತ್ರಿಕಾದೀಪಿಕೆ	೨ ಆಣೆ
ವೀರಶೈವಮತಪ್ರಾಚೀನತಾ	೩ ಆಣೆ
ವೀರಶೈವಾಚಾರಪಥ (೩ನೆಯ ಆವೃತ್ತಿ)	೩ ಆಣೆ
ಶಿವಾಷ್ಟಕ (೨ನೆಯ ಆವೃತ್ತಿ)	೩ ಆಣೆ
ಸಿದ್ಧಾಂತ ... ತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)...	೪ ಆಣೆ
ವೈದಿಕವಾಕ್ಯ	೪ ಆಣೆ
ಆಗಮಸಾರ	೮ ಆಣೆ
ಶಿವಾಧಿಕ್ಯರತ್ನಾವಳಿ (... ಕೃತ)	೮ ಆಣೆ
ಸಿದ್ಧಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೮ ಆ
पंडित श्रीकाशीनाथशास्त्री यांचें भाषण (मराठी)	८ आ
Speeches by Pandit Shri Kashinatha Shastri (*English*)	12 A
ವೀರಶೈವರತ್ನ (೪ನೆಯ ಆವೃತ್ತಿ)	೧೨ ಆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .	೧೨ ಆ
ಶಿವಾಗಮೋಕ್ತಸಿದ್ಧಾಂತದರ್ಪಣ	೧೨ ಆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ..	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರದ) ..	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೨೩೩ ಪುಟ) ...	೮ ರೂ
लिंगधारणचंद्रिका (संस्कृत)	३ रु
महानारायणोपनिषत् (शारदाभाष्य-संस्कृत)	१ रु
वीरशैवेंदुशेखर (संस्कृत)	१ रु

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿವ ಗುರುಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ

REGISTERED No M. 2266 || ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ಪ್ರಸೀದಂತು || REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಚಪಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ. ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ನೇ ಜೂನ್ ೧೯೩೫ [ಸಂಚಿಕೆ ೫

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ನಾನಾವಿಧ ಮಂಗಲಕಾರ್ಯ ಮಹೋತ್ಸವ.

ಉಚ್ಚಂಗಿದುರ್ಗ.

ಬಳ್ಳಾರಿ ಡಿ|| ಹರಪನಹಳ್ಳಿ ತಾ|| ಉಚ್ಚಂಗಿದುರ್ಗದಲ್ಲಿರುವ ಮ|| ರಾ|| ಯಂ ಸಿದ್ದನಗೌಡರು ಇದೇ ವೈಶಾಖಮಾಸದಲ್ಲಿ ನೂತನ ಧರ್ಮಛತ್ರ ಪ್ರವೇಶ ಲಿಂಗಸ್ಥಾಪನ ದೀಕ್ಷಾ ವಿವಾಹಾದಿ ನಾನಾವಿಧವಾದ ಮಂಗಲಕಾರ್ಯಗಳನ್ನು ನೆರವೇರಿಸಿದರೆಂಬ ವಿಷಯವನ್ನು ಬರೆಯಲು ಅತ್ಯಾನಂದವೆನಿಸುತ್ತದೆ. ವೈಶಾಖ ಶು|| ೫ ಮಂಗಳವಾರ ದಿವಸ ತಾವು ೭೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಭವ್ಯವಾಗಿ ಕಟ್ಟಿಸಿದ ಧರ್ಮಛತ್ರದ ಪ್ರವೇಶೋತ್ಸವವನ್ನು ಮಾಡಿದರು. ವೈಶಾಖ ಶು|| ೭ ಗುರುವಾರ ದಿವಸ ಇದೇ ಧರ್ಮಛತ್ರದಲ್ಲಿ ನೂತನವಾಗಿ ನಿರ್ಮಿತವಾಗಿರುವ ದೇವಾಲಯದಲ್ಲಿ ಶ್ರೀ ಕಾಶೀಕ್ಷೇತ್ರದಿಂದ ತರಿಸಲ್ಪಟ್ಟ ನರ್ಮದಾಬಾಣರೂಪವಾದ ಶಿವಲಿಂಗವು ಸ್ಥಾಪಿಸಲ್ಪಟ್ಟಿತು. ಅನಂತರ ಅನೇಕ ಜನ ಮಾಹೇಶ್ವರ ವಟುಗಳಿಗೆ ಶಿವದೀಕ್ಷಾ ಸಂಸ್ಕಾರವು ನೆರವೇರಿತು. ವೈಶಾಖ ಶು|| ೧೦ ಸೋಮವಾರ ತಮ್ಮ ಪುತ್ರ ಚಿ|| ಸಾ|| ಮರುಳಸಿದ್ಧಗೌಡನಿಗೆ ಹರಿಹರದ ಗ|| ಮ|| ಮುರಿಗಪ್ಪನವರ ಪುತ್ರಿ ಹ|| ಕುಂ|| ಸೌ|| ಚಿ|| ಸೌ|| ಸಾವಿತ್ರಮ್ಮನನ್ನು ತಂದು ಅಪೂರ್ವವಾದ ವೈಭವದಿಂದ ವಿವಾಹಮಹೋತ್ಸವವನ್ನು ನೆರವೇರಿಸಿದರು. ಈ ಮಂಗಲಕಾರ್ಯಕ್ಕಾಗಿ ಕೊಟ್ಟೂರು, ದಾವಣಗೆರೆ, ಗುಡಾಳು, ಮೊದಲಾದ ಗ್ರಾಮಗಳ ಪ್ರಮುಖರೂ, ಹರಪನಹಳ್ಳಿ ತಾಲೂಕಿನ ತಹಶೀಲದಾರಸಾಹೇಬರೂ ಆಗಮಿಸಿದ್ದರು. ಅಲ್ಲದೆ ಹರಪನಹಳ್ಳಿ ಗುರುಪಾದದೇವರ ಮಠದ ಶ್ರೀ ಪಟ್ಟದ ಸ್ವಾಮಿಗಳವರು, ಹಸುಗೋಡು ಶ್ರೀ ಪಟ್ಟದ ಸ್ವಾಮಿಗಳವರು, ರಾಮಘಟ್ಟದ ಶ್ರೀ ಪಟ್ಟದ ಸ್ವಾಮಿಗಳವರು, ತೌಡೂರು ಶ್ರೀ ಚರಮೂರ್ತಿಸ್ವಾಮಿಗಳವರು, ವೇ|| ಪಂಡಿತ ಉಮಚಗಿ ಶಂಕರಶಾಸ್ತ್ರಿಗಳವರು, ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು, ವೇ|| ಪಂ|| ಬಿದರಿ ಬಸವಲಿಂಗಶಾಸ್ತ್ರಿಗಳವರು, ವೇ|| ಕಂಪಳಾಪುರ ಗುರುಬಸವ ಶಾಸ್ತ್ರಿಗಳು ಇವರೇ ಮೊದಲಾದ ವೈದಿಕರು ಆಗಮಿಸಿದ್ದರು. ಬೀರೂರು ಶಿವಕಥಾಪಂಡಿತ ವೇ|| ನಂಜುಂಡಾರಾಧ್ಯರು ೩ ದಿವಸಗಳವರೆಗೆ ಶಿವಕಥೆಯನ್ನು ಬಹುಮನೋಹರವಾಗಿ ಮಾಡಿದರು. ಇವರ ಪುತ್ರ ೧೩ ವರ್ಷವಯಸ್ಸಿನ ಶಿವಲಿಂಗಾರಾಧ್ಯನೆಂಬ ಬಾಲಕನು ಮೊದಲನೆಯ ದಿವಸ "ರೇಣುಕವಿಜಯ" ವೆಂಬ ಕೀರ್ತನವನ್ನು ಮಾಡಿ ಸಭಿಕರನ್ನು ಆನಂದಗೊಳಿಸಿದನು. ಈ ಬಾಲಕನಲ್ಲಿ ಕೀರ್ತನ ಶೈಲಿಯು ನೆಲೆಗೊಂಡಿರುವುದು ಗುರುಕೃಪಾವಿಶೇಷವೆಂದೇ ಹೇಳಬೇಕಾಗಿದೆ. ಸಭಿಕರೆಲ್ಲರೂ ಈ ಬಾಲಕನ ಕೀರ್ತನಕ್ಕೆ ಸಂತುಷ್ಟರಾಗಿ ಜಗದಾಚಾರ್ಯರ ಕೃಪೆಯಿಂದ ಈತನಲ್ಲಿರುವ ಕೀರ್ತನಕಲೆಯು ಉತ್ತರೋತ್ತರವಾಗಿ ಅಭಿವೃದ್ಧಿಯನ್ನು ಹೊಂದಲೆಂದು ಹಾರೈಸಿದರು. ನಾಲ್ಕನೆಯ ದಿವಸ ವೇ|| ಪಂ|| ಬಿದರಿ ಬಸವಲಿಂಗಶಾಸ್ತ್ರಿಗಳವರು 'ರೇಣುಕವಿಜಯಪುರಾಣ' ವನ್ನು ಬಹು ಮನೋಹರವಾಗಿ ಬೋಧಿಸಿದರು. ಸೋಮವಾರ ದಿವಸ ಅಕ್ಷತಾರೋಪಣವಾದ ಮೇಲೆ ಹಸುಗೋಡು ಶ್ರೀ ಪಟ್ಟದಸ್ವಾಮಿಗಳವರು ಮತ್ತು ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಧಾರ್ಮಿಕ ವಿಷಯದ ಮೇಲೆ ಸಮಯೋಚಿತವಾದ ವ್ಯಾಖ್ಯಾನಗಳನ್ನು ಮಾಡಿದರು. ಒಟ್ಟಿಗೆ ಈ ಎಲ್ಲಾ ಮಂಗಲಕಾರ್ಯಗಳು ವಿಶೇಷ ವೈಭವದಿಂದ ನೆರವೇರಿದವು. ಈ ಸಮಯದಲ್ಲಿ ಮ|| ರಾ|| ಶ್ರೀಮಂತ ಯಂ ಸಿದ್ದನಗೌಡರು ಪ್ರಭಾಪ್ರೋತ್ಸಾಹಕ್ಕಾಗಿ ೨೦ ರೂಗಳನ್ನು ಸಮರ್ಪಿಸಿದರು. ಮೇಲ್ಕಂಡ ಈ ಎಲ್ಲಾ ಕಾರ್ಯಗಳನ್ನು ಹರಿಹರದ ಗ|| ಮ|| ಕೃಷ್ಣಪ್ಪನವರು ಬಹು ವಿಶದವಾಗಿ ನಡೆಸಿದರು. ಮ|| ರಾ|| ಯಂ ಸಿದ್ದನಗೌಡರು ತಮ್ಮ ಜೀವಿತಕಾಲದಲ್ಲಿ ಅನೇಕಾನೇಕ ಧರ್ಮಕಾರ್ಯಗಳನ್ನು ಮಾಡಿದ್ದಾರೆ. ಇವರ ವರ್ತನವು ಸ್ತೋತ್ರಾರ್ಹವಾಗಿದೆ. ಈ ಧರ್ಮಾತ್ಮರಿಗೆ ಶ್ರೀ ಜಗದಾಚಾರ್ಯರು ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಸದ್ಗತಿಯನ್ನೂ ಕೊಟ್ಟು ರಕ್ಷಿಸಲೆಂದೂ ವಧೂವರರಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದೂ ಕೋರುವ,

ಒಬ್ಬ ಪತ್ರಿಕಾಪ್ರೇಮಿ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಮಾಹೇಶ್ವರ ದೀಕ್ಷೋಪನಯನ ಮಹೋತ್ಸವ ಕೊಟ್ಟೂರು

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿರುವ ಸುಪ್ರಸಿದ್ಧ ಶ್ರೀಮಂತರಾದ ಮಿರಾಳಘಟ್ಟಮಠದ ವೇ|| ಜಾಗಟಗೇರಿ ಸಣ್ಣವೀರಪ್ಪಯ್ಯನವರು ಮತ್ತು ಚನ್ನವೀರಪ್ಪಯ್ಯನವರು ಕೈ|| ದೊಡ್ಡವೀರಪ್ಪಯ್ಯನವರ ಪೌತ್ರನಾದ ಚಿ|| ಸದ್ಯೋಜಾತಮೂರ್ತಿಯ ಮಾಹೇಶ್ವರದೀಕ್ಷೋಪನಯನ ಮಹೋತ್ಸವವನ್ನು ಅಸಾಧಾರಣ ವೈಭವದಿಂದ ನೆರವೇರಿಸಿದರು. ಈ ಮಂಗಲಕಾರ್ಯಕ್ಕಾಗಿ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಬಿಜಯಂಗೈಸಿದ್ದರು. ಅಲ್ಲದೆ ಹಸುಗೋಡ ಶ್ರೀಪಟ್ಟದ ಸ್ವಾಮಿಗಳವರು, ಜಮಖಂಡಿ ಶ್ರೀ ಚರಮೂರ್ತಿಸ್ವಾಮಿಗಳವರು, ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು, ವೇ|| ಪಂ|| ಬಿದರಿ ಬಸವಲಿಂಗಶಾಸ್ತ್ರಿಗಳವರು, ವೇ|| ಚಿಟಗೇರಿ ವಾಮದೇವಶಾಸ್ತ್ರಿಗಳವರು ಆಗಮಿಸಿದ್ದರು. ವೈಶಾಖ ಶು|| ೧೩ ಬುಧವಾರ ದಿವಸ ಈ ಮಂಗಲಕಾರ್ಯವು ಶಾಸ್ತ್ರವಿಧಿಗನುಸಾರವಾಗಿ ನೆರವೇರಿತು. ಈ ಕಾರ್ಯದಲ್ಲಿ ಬೇರೆ ಕೆಲಜನ ವಟುಗಳ ಸಂಸ್ಕಾರವೂ ನೆರವೇರಿಸಲ್ಪಟ್ಟಿತು. ಶುಕ್ರವಾರ ದಿವಸ ವೇ|| ಸಣ್ಣವೀರಪ್ಪಯ್ಯನವರು ಶ್ರೀ ಜಗದ್ಗುರುಗಳವರನ್ನು ಆಂದೋಲಿಕೋತ್ಸವದೊಡನೆ ಅಸಾಧಾರಣವೈಭವದಿಂದ ತಮ್ಮ ಗೃಹಕ್ಕೆ ಬಿಜಮಾಡಿಸಿಕೊಂಡು ಬಂದರು. ಈ ಮಹೋತ್ಸವವು ಗೃಹಕ್ಕೆ ಬಂದು ತಲುಪಿದಮೇಲೆ ಶ್ರೀ ಜಗದ್ಗುರುಗಳವರು ಸಿಂಹಾಸನವನ್ನಾರೋಹಣಮಾಡಿ ತಮ್ಮ ಅಮೃತತುಲ್ಯವಾದ ದಿವ್ಯವಾಣಿಯಿಂದ ಗುರುಮಹತ್ವವನ್ನು ಭಕ್ತಸಮೂಹಕ್ಕೆ ಬೋಧಿಸಿ, ಸರ್ವರನ್ನೂ ಆನಂದತುಂದಿಲಹೃದಯರನ್ನಾಗಿ ಮಾಡಿದರು. ಬಳಿಕ ವೇ|| ಸಣ್ಣವೀರಪ್ಪಯ್ಯನವರು ತಮ್ಮ ಸಂಬಂಧಿಗಳಲ್ಲಿ ಮರಣೋನ್ಮುಖವಾಗಿ ಬಿದ್ದಿದ್ದ ಒಂದು ಚಿಕ್ಕಶಿಶುವು ಶ್ರೀ ಜಗದ್ಗುರುಗಳವರ ನಾಮಸಂಕೀರ್ತನಮಹಿಮಾಬಲದಿಂದ ಬದುಕಿದ ವಿಷಯವನ್ನು ಸಭಿಕರಿಗೆಲ್ಲಾ ತಿಳಿಸಿ ಭಗವತ್ಪಾದರ ಮಹಿಮೆಯನ್ನು ಕೊಂಡಾಡಿದರು. ಬಳಿಕ ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಜಾಗಟಗೇರಿಯವರ ಮನೆತನದ ಶಿವಾಚಾರ್ಯ ವಿಷಯವನ್ನೆತ್ತಿಕೊಂಡು, ಈ ಮನೆತನದಲ್ಲಿ ರಾಜಪುತ್ರನಂತೆ ಜನಿಸಿ ತಮ್ಮ ಬುದ್ಧಿಪ್ರಭಾವದಿಂದ ಜಗದ್ವಿಖ್ಯಾತರಾಗಿ ಹೋದ ಧರ್ಮಮೂರ್ತಿ ಕೈ|| ದೊಡ್ಡವೀರಪ್ಪಯ್ಯನವರ ವಿಷಯವನ್ನು ಬಹು ಹೃದಯಂಗಮವಾಗಿ ವರ್ಣಿಸಿದರು. ಹಾಗೂ ಉಜ್ಜಯಿನೀ ಜಗದ್ಗುರುಗಳವರ ಮಹಿಮಾಪ್ರಭಾವದಿಂದ ವೇ|| ಸಣ್ಣವೀರಪ್ಪಯ್ಯನವರ ಪುತ್ರ ಚನ್ನಬಸವಪ್ಪಯ್ಯನವರಿಗೆ ಇಬ್ಬರು ಪುತ್ರರು ಉದಯಿಸಿ ಈ ಮನೆತನದ ಸಂತತಿಯು ಅಭಿವೃದ್ಧಿಯಾದ ವಿಷಯವನ್ನು ಹೇಳಿ ಸಭಿಕರನ್ನು ಸಂತೋಷಸಾಗರದಲ್ಲಿ ಓಲಾಡುವಂತೆ ಮಾಡಿದರು. ಬಳಿಕ ಶ್ರೀ ಜಗದ್ಗುರುಗಳವರ ಪಾದಪೂಜಾದಿಕ್ರಿಯೆಗಳು ನೆರವೇರಿ ಸರ್ವರಿಗೂ ತೀರ್ಥಪ್ರಸಾದ ವಿನಿಯೋಗವಾಯಿತು. ಆದಿವಸ ಮನೆಯ ಯಜಮಾನರು ಕೊಟ್ಟೂರುಗ್ರಾಮದ ಭಕ್ತಮಾಹೇಶ್ವರರಿಗೆ ದೊಡ್ಡ ಸಮಾರಾಧನೆಯನ್ನು ನೆರವೇರಿಸಿದರು. ಬಡಬಗ್ಗರಾದಿಯಾಗಿ 3 4 ಸಾವಿರ ಜನಗಳವರೆಗೆ ಸರ್ವರನ್ನೂ ಅನ್ನದಾನದಿಂದ ತೃಪ್ತಿಪಡಿಸಿದರು. ಒಟ್ಟಿಗೆ ಈ ಶುಭಕಾರ್ಯವನ್ನು ವೇ|| ಸಣ್ಣವೀರಪ್ಪಯ್ಯನವರು ಮತ್ತು ಚನ್ನವೀರಪ್ಪಯ್ಯನವರು ನೆರವೇರಿಸಿ ಈ ಪ್ರಾಂತದ ಜನಗಳಿಗೆ ಮಾರ್ಗದರ್ಶಕರಾದರೆಂದು ಅತ್ಯಾನಂದದಿಂದ ಹೇಳಬೇಕಾಗಿದೆ. ಈ ಮಂಗಲಕಾರ್ಯ ಸಮಾರಂಭದಲ್ಲಿ ಪ್ರಭಾ ಪ್ರೋತ್ಸಾಹಕ್ಕಾಗಿ ೨೫ ರೂ ಗಳು ಸಮರ್ಪಿಸಲ್ಪಟ್ಟವು. ಜಗದಾಚಾರ್ಯರ ಅನುಗ್ರಹವಿಶೇಷದಿಂದಾವಿರ್ಭವಿಸಿದ ಚಿ|| ಸದ್ಯೋಜಾತಮೂರ್ತಿ, ಚಿ|| ಪ್ರಾಣಲಿಂಗ, ಚಿ|| ಶಿವಾನಂದ ಎಂಬೀ ಬಾಲಕರು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ ಕೈ|| ದೊಡ್ಡವೀರಪ್ಪಯ್ಯನವರಲ್ಲಿದ್ದ ವರ್ಚಸ್ಸು ಇವರೆಲ್ಲರನ್ನೂ ವ್ಯಾಪಿಸಿ ಈ ಮನೆತನವು ಆಚಂದ್ರಾರ್ಕವಾಗಿ ಈ ಭೂಮಂಡಲದಲ್ಲಿ ಬೆಳಗಲೆಂದು ಭಗವತ್ಪಾದ ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಅನನ್ಯಸಾಧಾರಣ ಭಕ್ತಿಯಿಂದ ಭಜಿಸುವ,

ಕಂಬಳಿಮಠದ ಪತ್ರಯ್ಯ

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ ಅಥವಾ ವೇದಪರಿಚಯ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು
ಬೃಹನ್ಮಠ, ವಿಜಾಪುರ

ತೃತೀಯೋಲ್ಲಾಸವು

(ಹಿಂದಿನಿಂದ ಮುಂದುವರಿದುದು)

ಅಧ್ಯಾತ್ಮವಿದ್ಯೆಯನ್ನು ಬೋಧಿಸುವ ವಿಷಯದಲ್ಲಾದರೋ ಅಧಿಕಾರಿಯ ಲಕ್ಷಣವು ಹೀಗೆ ಹೇಳಲ್ಪಡುವುದು. (ಮುಂಡ ೧.೨.೧೩)—

ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್ ಪ್ರಶಾಂತ
ಚಿತ್ತಾಯ ಶಮಾನ್ವಿತಾಯ |
ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚ
ತಾಂ ತತ್ತ್ವತೋ ಬ್ರಹ್ಮವಿದ್ಯಾಮ್ ||

ಅಂದರೆ ಯಥಾವಿಧಿ ಉಪಸನ್ನ (ಶರಣ ಹೊಕ್ಕವ) ನೂ ಪ್ರಶಾಂತಬುದ್ಧಿಯುಳ್ಳವನೂ, ಶಮದಮಾದಿಸಂಪನ್ನನೂ ಆದ ಶಿಷ್ಯನಿಗೆ ಕ್ರಿಯಾವಂತನೂ ಶ್ರೋತ್ರಿಯನೂ ಬ್ರಹ್ಮ (ಲಿಂಗ) ನಿಷ್ಠನೂ ಆದ ಆಚಾರ್ಯನು ಬ್ರಹ್ಮವಿದ್ಯೆಯನ್ನು (ಶಾಂಭವಜ್ಞಾನವನ್ನು) ಉಪದೇಶಿಸತಕ್ಕದ್ದು. ಆ ಶಿಷ್ಯನು ಯಾವ ಜ್ಞಾನದಿಂದ ಸತ್ಯನೂ ಅಕ್ಷರನೂ ಆದ ಪುರುಷ (ಪರಶಿವ) ನನ್ನು ಸ್ವಸ್ವರೂಪಭೂತನನ್ನಾಗಿ ಸಾಕ್ಷಾತ್ಕರಿಸಿಕೊಳ್ಳುವನೋ ಆ ಜ್ಞಾನವನ್ನೇ ಬೋಧಿಸತಕ್ಕದ್ದು.

ಮತ್ತು ಅನಧಿಕಾರಿಗಳ ವಿಷಯದಲ್ಲಿ "ಇದಂ ತೇ ನಾತಪಸ್ಕಾಯ" ಎಂಬುದಾಗಿ ಗೀತೆಯಲ್ಲಿ ಹೇಳಲ್ಪಟ್ಟಂತೆ ವಸಿಷ್ಠಾದಿಮಹರ್ಷಿಗಳು ಪರಾಮರ್ಶಿಸಿದ್ದಾರೆ. ಸಾರಾಂಶ—ಈ ಮೇಲಿನ ವಾಕ್ಯಗಳು ಅಧಿಕಾರಿಯಾದ ಶಿಷ್ಯನಲ್ಲಿ ಯಾವ ವ್ಯಾಸಂಗಶೀಲತೆ ಯಾವ ಗುಣಗಳು ಅವಶ್ಯವಾಗಿ ಇರತಕ್ಕವು ಎಂಬ ಬಗ್ಗೆ ಒಳ್ಳೆಯ ಹಿರಿಯ ಮತಗಳಾದ ಪ್ರಮಾಣಗಳೊಡನೆ ನಿರೂಪಿಸಲ್ಪಟ್ಟಿವೆ. ವೇದಶಾಸ್ತ್ರಾಧ್ಯಯನಾಸಕ್ತನಾದ ಪ್ರತಿಯೊಬ್ಬ ವಿದ್ಯಾರ್ಥಿಯೂ ಆ ವಾಕ್ಯಗಳನ್ನು ಅವಶ್ಯವಾಗಿ ನೆನಪಿನಲ್ಲಿಟ್ಟುಕೊಂಡು ನಡೆವುದು ಶ್ರೇಯಸ್ಕರವಾಗಿದೆ. ಯಾವ ವಿದ್ಯೆಯನ್ನು ಅಭ್ಯಾಸಮಾಡುವಲ್ಲಿಯೂ ಬ್ರಹ್ಮಚರ್ಯಾದ್ಯುತ್ತಮ ಗುಣಗಳ ಆವಶ್ಯಕತೆಯುಂಟೆಂಬುದನ್ನು ಯಾರೂ ಅಲ್ಲಗಳೆಯಲಾರರಷ್ಟೇ? ಅದುಕಾರಣ—

ಸಂತ್ಯಜ್ಯಮಾನಮವಲಂಬ್ಯ ಗುರೂಪದೇಶಂ |
ಸಂಪ್ರಾಪ್ತಮಪ್ಯವಿಗಣಯ್ಯ ವಹಾಸ್ತ್ರರಾಯಂ ||
ಶಾಂತ್ಯಾನಿಲಾಸಮುಪಹಾಯ ಲಭೇತ ವಿದ್ಯಾಂ |
ನೋ ಬೃಹಸ್ಪತಿಸಮುದಾಹರಣಂ ಕಚೋಽಸ್ಮಿನ್ ||

ಎಂಬ ಸ್ಮೃತಿವಚನವಾದರೂ ಸುಪ್ರಸಿದ್ಧವಾಗಿರುತ್ತದೆ. ಈ ವಚನಾರ್ಥದಲ್ಲಿ ಉದಾಹರಣರೂಪನಾದ ಕಚನ (ಬೃಹಸ್ಪತಿಪುತ್ರನ) ಉಪಾಖ್ಯಾನವು ಮಹಾಭಾರತದ ಆದಿಪರ್ವದಲ್ಲಿ (ಅ ೭೬) ಪ್ರತಿಪಾದಿಸಲ್ಪಟ್ಟಿದೆ.

ಈ ವಿದ್ಯಾಸಂಪ್ರದಾಯ ವಿಷಯದಲ್ಲಿ ಇಂಥ ಪ್ರಮಾಣವಚನಗಳು ವಿಪುಲವಾಗಿವೆ. ಅವೆಲ್ಲವನ್ನೂ ಏಕತ್ರಗೊಳಿಸಿದರೆ ಅದೂ ಒಂದು ಗ್ರಂಥವೇ ಆಗಬಹುದು. ಗುರುಸಂಪ್ರದಾಯದಿಂದ ಸಂಪಾದಿಸಲ್ಪಟ್ಟ ವಿದ್ಯೆಯು ಎಷ್ಟು ತೇಜಸ್ವಿಯಾಗಿರುವದೆಂಬ ಸಂಗತಿಯಾದರೂ ಈಗಲೂ ಪ್ರತ್ಯಕ್ಷಾನುಭವಗಮ್ಯವಾಗಿರುವುದು. ಸಂಪ್ರದಾಯಿಕ ಗುರುವಿನ ಮುಖದಿಂದ ವೇದಾಗಮಗಳನ್ನು ಯಾರು ಅಧ್ಯಯನ ಮಾಡಿರುವರೋ ಅವರಲ್ಲಿ ತದ್ವಿಷಯಕವಾದ ಜ್ಞಾನವು ಎಷ್ಟು ನಿರ್ದುಷ್ಟವಾಗಿರುವುದೆಂಬುದನ್ನೂ ಯಾರು ಅಸಾಂಪ್ರದಾಯಿಕಶಿಕ್ಷಕರ ಮುಖದಿಂದಾಗಲಿ ಕೇವಲ ಪುಸ್ತಕಗಳ ಸಹಾಯದಿಂದಾಗಲಿ ಕೇವಲ ಮತಿಗಳಾಗಿರುವರೋ ಅವರ ವಿಚಾರವು ತರ್ಕಪ್ರಧಾನವಾಗಿಯೂ ಸಂದಿಗ್ಧವಾಗಿಯೂ ಇರುವುದೆಂಬುದನ್ನೂ ಪ್ರತ್ಯಕ್ಷವಾಗಿ ಅರಿತುಕೊಳ್ಳಬಹುದಾಗಿದೆ.

ವೇದಾಗಮಗಳಲ್ಲಿರುತ್ತಿರುವ ಮೂಲಭೂತವೇ ಮುಂತಾದ ಪರಿಶಿವಾಚಾರ್ಯರುಗಳನ್ನು ಸಹ ನಿರರ್ಥಕವಾದವುಗಳೆಂದು ನಿರ್ಧರಿಸಿ ಹೇಳಲು ಹೊರಡುತ್ತಿರುವ ಪಾಶ್ಚಾತ್ಯರಲ್ಲಿ ವೈದಿಕವಿದ್ಯೆಯ ಸಂಪ್ರದಾಯವು ಎಷ್ಟರಮಟ್ಟಿಗೆ ಶುದ್ಧವಾಗಿರುವುದೆಂಬುದಾದರೋ ಆಂಗ್ಲವಿದ್ಯಾಲಯಗಳಲ್ಲಿ ಅವರ ಶಿಕ್ಷಣಕ್ಕೆ ಬಾಯ್ದೆರೆದ ಭಾರತೀಯ ವಿದ್ಯಾರ್ಥಿಗಳ ವಿಚಾರಸರಣಿಯನ್ನು ವಿಚಾರಿಸಿದರೆ ವಿದಿತವಾಗುವುದು. ಮತ್ತು ಈಗಿನ ಸಂಸ್ಕೃತಪಾಠಶಾಲೆಗಳಲ್ಲಿ ಶಿಕ್ಷಣಕ್ರಮವು ಪ್ರಾಚೀನ ಗುರುಕುಲಪದ್ಧತಿಯನ್ನನುಸರಿಸಿರುವುದಿಲ್ಲ. ಸ್ವಶಾಖಾಧ್ಯಯನದ ಮಟ್ಟಿಗಾದರೂ ವೈದಿಕಶಿಕ್ಷಣವು ಬೇಡವೇ? ವೃತ್ತಿಶಾಸ್ತ್ರಗಳನ್ನೇ ಓದತಕ್ಕದೆಂದು ನಾವು ಹೇಳುವುದಿಲ್ಲ. ಸ್ವಾಧ್ಯಾಯವನ್ನು ದುರ್ಲಕ್ಷಿಸಿ ಕೇವಲ ವ್ಯಾಕರಣಾದಿ ವೃತ್ತಿಶಾಸ್ತ್ರಗಳನ್ನು ಕಲಿಯುವುದರಲ್ಲಿಯೇ ತಮ್ಮ ಇಡೀ ಆಯುಷ್ಯವನ್ನು ಕಳೆದು ಸ್ವಾಧ್ಯಾಯಪ್ರವಚನವಿಮುಖರಾಗಿ ಬರುವುದನ್ನು ತಿಳಿದು ಮರೆವುದು ಸಲ್ಲದು. ಹಾಗೆಯೇ ಈ ಕಾಲದಲ್ಲಿ ಕೇವಲ ವೈದಿಕವಿದ್ಯೆಯಿಂದ ಉದರನಿರ್ವಾಹವಾಗುವಂತಿಲ್ಲವೆಂದು ನುಡಿವ ಗೃಹಸ್ಥರು ಸ್ವಧರ್ಮಾಚರಣೆಗಳಿಗೆ ವಿರೋಧವಾದ ವ್ಯವಹಾರಿಕವಿದ್ಯೆಯನ್ನಾದರೂ ಕಲಿಯಬಹುದು. ಆದರೆ ಈ ನೆಪದಿಂದ ಸ್ವಾಧ್ಯಾಯವಿಮುಖರಾಗುವುದು ಹಿತವಲ್ಲ. ಇನ್ನು ಕೆಲಂಬರು ಅಂದರೆ ಕುಕ್ಕುಟಪಾದಮಿತ್ರ ಪ್ರಸಹಾಧ್ಯಾಯಿಗಳು—

ವಿದ್ಯಾಮದೇನ ಕತಿಚಿದ್ಬಹುಮನ್ಯಮಾನಾ |
ಸ್ವಾತ್ಮನಮೇವ ನ ಗುರೂನಪಿ ಸನ್ನಮಂತಿ ||
ಸಲ್ಲಾಪಮಾತ್ರಮಪಿ ಸಾದರಮಾಗತೇಷು |
ಸಾಮ್ರಾಜ್ಯದಾನಮಿವ ದುರ್ಲಭತಾಂ ನಯಂತಿ ||

ಎಂಬ ವಾಕ್ಯನ್ಯಾಯಬೋಧಕರಾಗಿ ಧೂರ್ತ ಕರ್ಮೋಧಿತವೇದಾಗಮಸಂಹಿತಾಧ್ಯಯನಾಭಾವವುಳ್ಳವರಾಗಿ ಪ್ರಾಕೃತಜನಮೆಚ್ಚುವರೆನಿಸಿದ್ದಾರೆ. ಇದಲ್ಲಿ ಇಮದುಕಾಲದ ಮಹಿಮೆಯು. ಆದರೂ ಅದರಿಂದ ವಿದ್ಯಾಸಂಪ್ರದಾಯದ ಮಹತ್ವವು ಕಡಿಮೆಯಾಗುವುದಿಲ್ಲ. ಸಂಪ್ರದಾಯದ ಬಲವು ಅವರ್ಣನೀಯವಾದುದು. ಸಂಪ್ರದಾಯರಹಿತವಾದ ಜ್ಞಾನದಲ್ಲಿ ನಿಶ್ಚಯಾತ್ಮಕತೆಯುಂಟು. ಪುರುಷನು ತನ್ನ ಬುದ್ಧಿಯಿಂದ ತಿಳಿಯಲ್ಪಟ್ಟ ಜ್ಞಾನದಲ್ಲಿ ವಿವಿಧತೆಯಿರುವುದು. ಇಂಥ ಸ್ವತಂತ್ರಜ್ಞಾನವೇ ಸ್ವತಂತ್ರವಿಚಾರವೆಂಬುದಾಗಿ ಆಧುನಿಕಶಿಕ್ಷಿತರಿಂದ ಗೌರವಿಸಲ್ಪಡುತ್ತದೆ. ಆದರೆ ಅದು ಅನುಸರಣೀಯವಾದುದು ಹೇಗೆಂದರೆ, ಸ್ವತಂತ್ರವಿಚಾರವೆಂಬುದು ಅನ್ವೀಕ್ಷಿಕಿ ತರ್ಕವು. ಅತೀಂದ್ರಿಯಗಳಾದ ಧರ್ಮಬ್ರಹ್ಮಗಳು ಆ ತರ್ಕಕ್ಕೆ ವಿಷಯಗಳಾಗಲಾರವು. ಮನುಷ್ಯರಿಂತ ಹೀನವಾದುವಾದು ಹೇಳಲ್ಪಡತಕ್ಕ ಪಶುಪಕ್ಷಿಗಳಿಗಿಂತಲೂ ಮನುಷ್ಯನಿಗೆ ಬುದ್ಧಿಯು ವಿಶೇಷವಾದದೆಂಬಲ್ಲಿ ಸಂದೇಹವಿಲ್ಲ. ಆದರೂ ಅದಕ್ಕೂ ಮಿತಿಯುಂಟಲ್ಲವೆ? ಮನುಷ್ಯನಲ್ಲಿಯೇ ಬುದ್ಧಿಯ ತರತಮಭಾವವು ಹಲವು. ಮನುಷ್ಯ ಮನುಷ್ಯರಲ್ಲಿಯೇ ಬುದ್ಧಿಯ ತಾರತಮ್ಯವು ಕಾಣಬರುತ್ತಿರಲು ಮನುಷ್ಯರು ಮೊದಲಾಗಿ ಬ್ರಹ್ಮದೇವರವರೆಗಿನ ಜೀವರ ಪರ್ಯಂತ ಆ ಬುದ್ಧಿಯು ಅಧಿಕಾಧಿಕವು. ಅಧಿಕತಮವಾದ್ದಾಗಿ ಇರುವುದು ಸರ್ವಜ್ಞನು. ಆದರೆ ಆ ಸರ್ವಜ್ಞನೇ ನಮ್ಮಂಥವರಾಗಿರುವ ಮಾನವರಿಗೆ ಈ ಧರ್ಮವು ಕಾಣದು. ಏಕೆಂದರೆ ಅವರು ಅಲ್ಪಜ್ಞರು. ಕಣ್ಣಿಗೆ ಕಾಣಬರುವ ಗಿಡಮರಗಳೇ ಮೊದಲಾದ ಪದಾರ್ಥಗಳ ಕಡೆ ಇಲ್ಲ ಎಂಬ ತಿಳುವಳಿಕೆಯು ಎಲ್ಲರಿಗುಂಟು. ಆದರಿಂದ ಮನುಷ್ಯರಿಗೆ ಕೇವಲ ಬುದ್ಧಿಬಲದಿಂದ ಧರ್ಮಬ್ರಹ್ಮಗಳು ಅತೀಂದ್ರಿಯಗಳಾದ ಪದಾರ್ಥಗಳ ಜ್ಞಾನವುಂಟಾಗಲು ಸಾಧ್ಯವಿಲ್ಲ. ಮತ್ತು ಮಲಿನವಾದ ಬುದ್ಧಿಯಲ್ಲಿ ಧರ್ಮದ ಸೂಕ್ಷ್ಮವಿಷಯಗಳನ್ನು ತಿಳಿಯುವುದಕ್ಕೆ ಸಾಮರ್ಥ್ಯವಾದರೂ ಇರುವುದಿಲ್ಲ. ಸದಾಚಾರ ಸ್ವಾಧ್ಯಾಯ ಪ್ರವಚನ ಶಿವಾರ್ಚನಾದಿಗಳಿಂದ ಶುದ್ಧವಾದ ಬುದ್ಧಿಯಲ್ಲಿಯೇ ಆ ಸೂಕ್ಷ್ಮಾರ್ಥವು ವ್ಯಕ್ತವಾಗುವುದು. ಈ ಕಾರಣವೇ ಸಂಪ್ರದಾಯಶುದ್ಧವಾದ ವೇದಾಗಮಗಳ ಅರ್ಥಜ್ಞಾನವೂ ತದನುರೂಪವಾದ ಅನುಷ್ಠಾನವೂ ಎಂಬಿವುಗಳಿಂದೇ ಧರ್ಮಬ್ರಹ್ಮಗಳ ಜ್ಞಾನವುಂಟಾಗುವುದಕ್ಕೋಸ್ಕರ ವಿದ್ಯಾಸಂಪ್ರದಾಯದ ಆವಶ್ಯಕತೆಯುಂಟು.

ಕೇವಲ ಶಿವಾದ್ಯರ್ಥಜ್ಞಾನವು ಪುಸ್ತಕಗಳ ಸಹಾಯದಿಂದುಂಟಾಗುವುದು. ಆದರೆ ಗುರುಪರಂಪರೆಯಿಂದ ನಿಯಮಪೂರ್ವಕವಾಗಿ ನಡೆಯಲಡುವ ಸ್ವಾಧ್ಯಾಯದಿಂದುಂಟಾಗುವ ಧರ್ಮಪ್ರವೃತ್ತಿಯು ಅದರಿಂದುಂಟಾಗದು. ಧರ್ಮಪ್ರವೃತ್ತಿಯಿಲ್ಲದೆ ಚಿತ್ತಶುದ್ಧಿಯೇ ಸಂಭವಿಸದು. ಚಿತ್ತಶುದ್ಧಿಯಿಲ್ಲದಿರಲು ಪರಮಶಿವಸಂಬಂಧಿಯಾದ ಜ್ಞಾನವು ದೊರೆಯದು. ಜ್ಞಾನವಿಲ್ಲದಿರಲು ಮೋಕ್ಷವಿಲ್ಲ. ಮೋಕ್ಷವಿಲ್ಲವೆಂದರೆ ದುಃಖದ ನಿವೃತ್ತಿಯೇ ಆಗದು.

ಪಶ್ವಾದಿಗಳಲ್ಲಿ ಧರ್ಮವನ್ನೂ ಜ್ಞಾನವನ್ನೂ ಸಂಪಾದಿಸುವ ಯೋಗ್ಯತೆಯಿರುವುದಿಲ್ಲ. ಸಕಾಮಧರ್ಮಾಚರಣವರಾದವರಿಗೆ ಫಲಭೋಗಕ್ಕೋಸ್ಕರ ದೇವಾದಿಯೋನಿಗಳು ಪ್ರಾಪ್ತವಾಗುವುದರಿಂದ ಅವರಿಗಾದರೂ ಮೋಕ್ಷಸಾಧನಭೂತವಾದ ಜ್ಞಾನವು ಲಾಭವಾಗುವುದಿಲ್ಲ. ಅವರ ಧರ್ಮಾರ್ಜಿತ ಸುಖೋಪಭೋಗದಲ್ಲಿಯೇ ವ್ಯತೀತವಾಗುವುದು. ಹೀಗೆ ಪಶ್ವಾದಿ ಅನಿಷ್ಟಜನ್ಮಗಳೂ ದೇವಾದಿ ಇಷ್ಟಜನ್ಮಗಳೂ ದುಃಖರೂಪವಾದ ಸಂಸಾರದ ನಿವೃತ್ತಿಗೆ ಕಾರಣಗಳಾಗಿರದೆ ಅದರ ಪ್ರವೃತ್ತಿಗೆ ಹೇತುಗಳಾಗಿವೆ. ಜನ್ಮಮರಣ ಸುಖದುಃಖಪ್ರಾಪ್ತಿರೂಪವಾದ ಸಂಸೃತಿಯು ಕೊನೆಗಾಣುವವರೆಗೆ ನಿತ್ಯಸುಖದ ಪ್ರಾಪ್ತಿಯಾಗುವುದು ಶಕ್ಯವೇ ಇಲ್ಲ. ನಿತ್ಯಸುಖದ ಪ್ರಾಪ್ತಿಯೇ ಮೋಕ್ಷವು. ನಿಷ್ಕಾಮಬುದ್ಧಿಯಿಂದನುಷ್ಠಿಸಲ್ಪಡುವ ಶಿವಾರ್ಚನಾದಿ ಸತ್ಕ್ರಿಯೆಗಳಿಂದ ಚಿತ್ತಶುದ್ಧಿಯನ್ನು ಪಡೆದು ಬ್ರಹ್ಮಾತ್ಮೈಕ್ಯಬೋಧಕ ಲಿಂಗಾಂಗಸಾಮರಸ್ಯಜ್ಞಾನಾನುಸಂಧಾನಾಸಕ್ತನಾಗುವನೇ ನಿತ್ಯಸುಖಪ್ರಾಪ್ತಿಯ ಉಪಾಯವು. ಮಾನವಜನ್ಮವೇ ಮೋಕ್ಷವನ್ನು ಪಡೆಯಲರ್ಹವಾದುದು. ವೀರಮಾಹೇಶ್ವರನ ಜನ್ಮವಾದರೋ ಕೇವಲ ಮೋಕ್ಷಸಾಧಕವಾದ ಶಿವಜ್ಞಾನವನ್ನು ಸಂಪಾದಿಸುವದಕ್ಕೋಸ್ಕರವೇ ಇರುವುದು. ಆ ಜ್ಞಾನವಾದರೋ ವಿದ್ಯಾಸಂಪ್ರದಾಯವಿಲ್ಲದೆ ಉಂಟಾಗಲಾರದು. ವಿದ್ಯಾಸಂಪ್ರದಾಯವು ಅವಿಚ್ಛಿನ್ನವಾಗಿ ಉಳಿದರೇನೇ ಜ್ಞಾನವು ಲಭಿಸುವುದೇ ಹೊರತು! ಆದ್ದರಿಂದ ಗುರುವರ್ಗದ ಪ್ರತಿಯೊಬ್ಬನೂ ವಿದ್ಯಾಸಂಪ್ರದಾಯವು ವಿಚ್ಛಿನ್ನವಾಗದಂತೆ ತನುಮನಧನಗಳಿಂದ ಯಥಾಶಕ್ತಿ ಪ್ರಯತ್ನಿಸತಕ್ಕದ್ದು.

ವಿದ್ಯಾಸಂಪ್ರದಾಯವು ಅವಿಚ್ಛಿನ್ನವಾಗಿ ಉಳಿಯಬೇಕಾದರೆ ಅನುಶಾಸನಪದ್ಧತಿಯೂ ಆವಶ್ಯಕವಾಗಿರಬೇಕಾದುದಲ್ಲವೇ? ಅದು ಕಾರಣವೇ ವಿದ್ಯಾರ್ಥಿಗೆ ಸಂಪ್ರದಾಯಶುದ್ಧನಾದ ಆಚಾರ್ಯನ ಉಪಸನ್ನತೆಯು ವಿಹಿತವಾಗಿರುವಂತೆ, ಆಚಾರ್ಯನಾದರೂ ವಿದ್ಯಾರ್ಥಿಯ ಕುಲಶೀಲಾದಿಗಳನ್ನು ವಿಚಾರಿಸುವುದು ಯುಕ್ತವಾಗಿರುವದು. ಲೌಕಿಕ ವಿದ್ಯೆಗಳನ್ನು ಕಲಿಸತಕ್ಕ ಸಾತ್ವಿಕಲ್ಲವರೂ ವಿದ್ಯಾರ್ಥಿಯ ಗುಣಾವಗುಣಗಳ ವಿಷಯದಲ್ಲಿ ತಕ್ಕಮಟ್ಟಿಗಾದರೂ ವಿಚಾರಿಸುವದುಂಟು. ಅಸಾಮಾನ್ಯವಾದ ವೈದಿಕವಿದ್ಯೆಯ ವಿಷಯವಾಗಿ ಅಧಿಕಾರಿಯ ಬಗ್ಗೆ ವಿಚಾರಮಾಡಬೇಕಾದುದು ಉಚಿತವೇ ಸರಿ. ಆದ್ದರಿಂದ ವೈದಿಕ ಸಾಹಿತ್ಯರೂಪಗಳಾದ ಬಹುಶಃ ಸಮಸ್ತ ಸಂಸ್ಕೃತಗ್ರಂಥಗಳ ಪ್ರಾರಂಭದಲ್ಲಿ ಸರ್ವಗ್ರಂಥಕಾರರೂ ಅಧಿಕಾರಿ, ವಿಷಯ, ಸಂಬಂಧ ಪ್ರಯೋಜನವೆಂಬ ಅನುಬಂಧ ಚತುಷ್ಟಯವನ್ನು ಹೇಳುವುದು ವಾಡಿಕೆಯಾಗಿದೆ. **[ಅನುಬಂಧಃ ಪುರುಷಮನುಬಧ್ನಾತಿ, ಸ್ವಜ್ಞಾನೇನ ಪ್ರೇರಯತೀತ್ಯನುಬಂಧಃ । ಅನುಬಂಧತ್ವಂಚ ಗ್ರಂಥಪ್ರವೃತ್ತಿಪ್ರಯೋಜಕಜ್ಞಾನ ವಿಷಯತ್ವಂ ||]** ಅಂದರೆ ಗ್ರಂಥದಲ್ಲಿ ಪುರುಷನ ಪ್ರವೃತ್ತಿಯು ಯಾವುದರ ಜ್ಞಾನದಿಂದುಂಟಾಗುವುದೋ ಅದು ಅನುಬಂಧವೆಂದು ಹೇಳಲ್ಪಡುವುದು. ಈ ಅನುಬಂಧವೆಂಬುದು ಮೇಲೆ ಹೇಳಿರುವಂತೆ ಅಧಿಕಾರಿ ಮೊದಲಾಗಿ ನಾಲ್ಕು ವಿಧವಾಗಿರುವುದು. ಇದೇ ಮೇರೆಗೆ 'ವೇದಪರಿಚಯ'ಕ್ಕೆ ಅಧಿಕಾರಿ ಯಾವನು? ವೇದದಲ್ಲಿ ಯಾವ ವಿಷಯವಿದೆ? ಸಂಬಂಧವಾವುದು? ವೇದದ ಪ್ರಯೋಜನವೇನು? ಎಂಬ ಅನುಬಂಧಚತುಷ್ಟಯ ವಿಚಾರಾವಸರದಲ್ಲಿ ಅಧಿಕಾರಿಯ ಪ್ರಸಕ್ತಿಯು ಮೊದಲನೆಯದಾಗಿರುತ್ತದೆ.

ಹೀಗೆ ಅಧಿಕಾರಿಯ ವಿಷಯದಲ್ಲಿ ವೇದಾಗಮಗಳ ನಿರ್ಬಂಧಗಳಿರುವಷ್ಟು ಹಾಗೇ ಆಚಾರ್ಯನ ಕರ್ತವ್ಯ ವಿಷಯದಲ್ಲಿಯೂ ಶಾಸ್ತ್ರೀಯ ನಿರ್ಬಂಧಗಳಿರುತ್ತವೆ. "**ಅಷ್ಟವರ್ಷಂ ಬ್ರಾಹ್ಮಣಮುಪನೀಯತ ತಮಧ್ಯಾಪಯೀತ**" ಅಂದರೆ ಎಂಟು ವರ್ಷಗಳ ವಯಸ್ಸಿನ ಬ್ರಾಹ್ಮಣಬಾಲಕನಿಗೆ ಉಪನಯನವನ್ನು ಮಾಡಿ ಅವನಿಗೆ ವೇದಶಾಸ್ತ್ರಗಳನ್ನು ಬೋಧಿಸತಕ್ಕದ್ದು. ಯಾಜ್ಞವಲ್ಕ್ಯನು (೧-೧೫)

ಉಪನೀಯ ಗುರುಃ ಶಿಷ್ಯಂ ಮಹಾವ್ಯಾಹೃತಿಪೂರ್ವಕಮ್ |
ವೇದಮಧ್ಯಾಪಯೇದೇನಂ ಶೌಚಾಚಾರಾಂಶ್ಚ ಶಿಕ್ಷಯೇತ್ ||

ಆಚಾರ್ಯನು ಶಿಷ್ಯನಿಗೆ ಸ್ವಶಾಖೆಯ ಗೃಹ್ಯಸೂತ್ರೋಕ್ತ ವಿಧಿಯಿಂದ ಉಪನಯನವನ್ನು ಮಾಡಿ ಅವನಿಗೆ ವೇದವನ್ನು ಕಲಿಸಿರು. ಅಂದರೆ 'ಓಂ ಭೂಃ' ಮೊದಲಾದ ಮಹಾವ್ಯಾಹೃತಿಗಳನ್ನು ಮೊದಲು ನುಡಿದ ಪೂರ್ವಕವಾಗಿ ವೇದಾಧ್ಯಯನವನ್ನು ಮಾಡಿಸತಕ್ಕದ್ದು. ಮತ್ತು ಶೌಚಾಚಾರಗಳನ್ನೂ ಬೋಧಿಸತಕ್ಕದ್ದು.

ಎಂಬುದಾಗಿ ಹೇಳುವನಾದ್ದರಿಂದ ಉಪನಯನಾನಂತರವೇ ವೇದಾಧ್ಯಯನವು ಸಿದ್ಧಿಸುವದು. ಸಾಂಗವೇದಗಳ ಅಧ್ಯಯನದ ವಿಷಯದಲ್ಲಿ ಇಂಥ ವಾಕ್ಯಗಳನೇಕವಾಗಿವೆ. ಉಪನಿಷದಾದಿಗಳಲ್ಲಿ "**ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಮ್**" "**ಸ್ವಾಧ್ಯಾಯೋಽಧ್ಯೇತವ್ಯಃ**" '**ಋತಂಚ ಸ್ವಾಧ್ಯಾಯಪ್ರವಚನೇಚ**' ಇತ್ಯಾದಿವಚನಗಳು ಪ್ರಾಮುಖ್ಯವಾಗಿ ಕಾಣಬರುವವು. 'ತಾನು ನಿತ್ಯದಲ್ಲಿಯು ವೇದಾಧ್ಯಯನವನ್ನು ಮಾಡುವುದೂ ಶಿಷ್ಯರಿಗೂ ಅದನ್ನು ಬೋಧಿಸುವುದೂ ಎಂಬೀ ಕರ್ತವ್ಯದಲ್ಲಿ ಪ್ರಮಾದವು ಸಲ್ಲದು,' ಎಂಬುದೇ ಆ ವಾಕ್ಯಗಳ ಸಾರಭೂತವಾದರ್ಥವು. ಶ್ರುತಿಯಾದರೋ—"**ವಸಂತೇ ಬ್ರಾಹ್ಮಣಮುಪನೀಯತ, ಗ್ರೀಷ್ಮೇ ರಾಜನ್ಯಂ, ಶರದಿ ವೈಶ್ಯಂ।**" ಎಂಬುದಾಗಿ ತ್ರೈವರ್ಣಿಕರಿಗೆ ಉಪನಯನವನ್ನು ವಿಧಿಸುವುದು. ಆದ್ದರಿಂದ ಉಪನಯಸಂಸ್ಕಾರಾನರ್ಹನಾದ ಶೂದ್ರನಿಗೆ ವೇದಾಧ್ಯಯನಾಧಿಕಾರವಿಲ್ಲವೆಂಬುದು ಸ್ಪಷ್ಟವು. ಬಾದರಾಯಣಮುನಿಯು (ಬ್ರ. ಸೂ. ೧-೩-೩೮) "**ಶ್ರವಣಾಧ್ಯಯನಾರ್ಥ ಪ್ರತಿಷೇಧಾತ್ ಸ್ಮೃತೇಶ್ಚ**" ಎಂದು ಸೂತ್ರಿಸಿದ್ದಾನೆ. ಈ ಸೂತ್ರಾರ್ಥವೇನೆಂದರೆ ವೇದಶ್ರವಣವೂ ಅಧ್ಯಯನವೂ ಅರ್ಥಗ್ರಹಣವೂ ವೇದಾರ್ಥಪೂರ್ವಕವಾದ ಅನುಷ್ಠಾನವೂ ಎಂಬಿವುಗಳನ್ನು ನಿಷೇಧಿಸತಕ್ಕ ಸ್ಮೃತಿಯಿರುವುದರಿಂದ ಶೂದ್ರನಿಗೆ ವೇದಶ್ರವಣಾದಿಕವು ನಿಷೇಧಿಸಲ್ಪಡುವುದು.

ಉಪನಯನವು ಅಂದರೆ ಗೃಹ್ಯಸೂತ್ರದಲ್ಲಿ ಹೇಳಲ್ಪಡುವ ಯಾವ ಕರ್ಮಮೂಲಕವಾಗಿ ಬಾಲಕನು ವೇದಾಧ್ಯಯನಕ್ಕೋಸ್ಕರ ಆಚಾರ್ಯನ ಬಳಿಗೊಯ್ಯಲ್ಪಡುವನೋ ಆ ಕರ್ಮವು 'ಉಪನಯನ'ವೆಂದು ಹೇಳಲ್ಪಡುವುದು. ಉಪನಯನವೆಂಬುದು ಶಿಕ್ಷಣಸಂಸ್ಕಾರವು. ಈ ಸಂಸ್ಕಾರದಲ್ಲಿ ಗಾಯತ್ರೀಮಂತ್ರೋಪದೇಶವೂ ಯಜ್ಞೋಪವೀತಧಾರಣವೂ ಆಚಾರ್ಯನು ವಟುವನ್ನು ಸ್ವೀಕರಿಸುವುದು ಎಂಬಿವು ಮೂರುವಿಧಿಗಳು ಪ್ರಧಾನವಾದುವು. ವಿಸ್ಮೃತವಾಗಿ ಉಪನಯನ ಸಂಸ್ಕಾರವು ನೆರವೇರಿಸಲ್ಪಡುವುದು ಮುಗಿದಾಕ್ಷಣವೇ ಬಾಲಕನು ವೇದಾಧ್ಯಯನಾದಿ ವೈದಿಕಶಿಕ್ಷಣವನ್ನು ಪಡೆಯಲು ಗುರುಗೃಹಕ್ಕೆ ಕಳುಹಲ್ಪಡುತ್ತಾನೆ.

[illegible]

(ಕರೀಷ)

ಜಪಾನಿನ ಅಭಿವೃದ್ಧಿ.

[illegible] ... (೨೪ ಮಿಲಿಯನ್) ... (೯೩ ಮಿಲಿಯನ್) ... [illegible]

[illegible] ... ವರ್ಸೈಲ್ಸ್ (Versailles) ... [illegible]

[illegible] ... ಕೋರಿಯಾ (Korea) ... [illegible]

R. K. S.

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಎಂಟುವರ್ಷಗಳು ತುಂಬಿ ಒಂಭತ್ತನೇ ವರ್ಷವು ಪ್ರಾರಂಭವಾಗಿರುವುದು. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೩ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೬ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಕೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು.

ಸಂ —

ಪಂಚಾಚಾರ್ಯ ಪ್ರಭಾ.

೧೯೩೪ ನೇ ಜೂನ್ ತಾ|| ೧೧ ನೇ ಸೋಮವಾರ

ಲಿಂಗಧಾರಣವು ವೇದೋಕ್ತವಾದುದು.

ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ಪ್ರತರೇದಿತಿ |
ಇತಿಹಾಸಪುರಾಣಾಭ್ಯಾಂ ವೇದಾರ್ಥಮುಪಬೃಂಹಯೇತ್ ||
ವೇದಾರ್ಥೋಽಯಂ ಸ್ವಯಂ ಜ್ಞಾತುಂ ಶಕ್ಯಂ ಜ್ಞಾನಂ ಭವೇದಪಿ |
ಮುನಿಭಿರ್ನಿಶ್ಚಿತೇ ತಸ್ಮಿನ್ ಕಾ ಶಂಕಾ ಸ್ಯಾನ್ಮಹಾತ್ಮನಾಂ ||

ಸ್ವಲ್ಪ ಸ್ವಲ್ಪ ಓದಿ ವೇದಾರ್ಥದ ನಿಶ್ಚಯಕ್ಕೆ ಹೊರಟಿರುವ ಮೂಢನನ್ನು ನೋಡಿ ನನ್ನ ನಿಜವಾದ ಅಭಿಪ್ರಾಯವನ್ನು ವಂಚಿಸಿ ತನ್ನ ಮನಸ್ಸಿಗೆ ತೋರಿದಂತೆ ಅಪಾರ್ಥಗಳನ್ನು ಮಾಡಿ ಎಲ್ಲಿ ನನ್ನನ್ನು ವಂಚಿಸುವನೋ ಎಂಬ ಶಂಕೆಯಿಂದ ಶ್ರುತಿದೇವಿಯು ಅಲ್ಪಜ್ಞನನ್ನು ನೋಡಿ ಹೆದರುವಳು. ಆದದರಿಂದ ಯಾರೇ ಆಗಲಿ ತಾವು ಪಂಡಿತರಾದೆವೆಂದು ಸ್ವತಂತ್ರಿಸಿ ವೇದಾರ್ಥನಿಶ್ಚಯಕ್ಕೆ ಹೊರಡಬಾರದು. ಹಾಗೆ ವೇದಾರ್ಥವನ್ನು ನಿಶ್ಚಯಗೊಳಿಸಬೇಕಾದರೆ, ಸರ್ವಜ್ಞರಾದ ಮಹರ್ಷಿಗಳಿಂದ ಪ್ರಣೀತಗಳಾದ ಇತಿಹಾಸ ಪುರಾಣಾದಿ ವಾಕ್ಯಗಳನ್ನು ಪರಾಮರ್ಶಿಸಿ ಈ ಶ್ರುತಿಗೆ ಇದೇ ಅರ್ಥವೆಂದು ನಿಶ್ಚಯಿಸಿಕೊಳ್ಳಬೇಕು. ಋಷಿಗಳಿಂದ ನಿಶ್ಚಿತವಾದ ಮೇಲೆ ಯಾರೂ ಶಂಕೆಮಾಡಕೂಡದೆಂದು ಮಹಾಭಾರತದಲ್ಲಿ ವೇದಗಳ ಅರ್ಥವನ್ನು ನಿಶ್ಚಯಮಾಡಿಕೊಳ್ಳುವ ರೀತಿಯು ಸ್ಪಷ್ಟವಾಗಿ ಹೇಳಲ್ಪಟ್ಟಿರುತ್ತದೆ. ಇಲ್ಲಿ "ನಮೋ ಬ್ರಹ್ಮಣೇ ಧಾರಣಂ ಮೇ ಅಸ್ತು" ಎಲೈ ಗುರುವೆ? ನನ್ನನ್ನು ಲಿಂಗಧಾರಣದಿಂದ ಪರಿಶುದ್ಧಗೊಳಿಸೆಂದು ಶಿಷ್ಯನು ಗುರುಗಳನ್ನು ಪ್ರಾರ್ಥಿಸಿರುವ ಈ ತೈತ್ತಿರೀಯ ಶ್ರುತಿವಾಕ್ಯವು ಅಂಗದಲ್ಲಿ ಲಿಂಗಧಾರಣವನ್ನು ವಿಧಿಸುವುದೆಂದು ವೀರಶೈವಭಾಷ್ಯಕಾರರ ಅಭಿಪ್ರಾಯವಾಗಿರುವುದಷ್ಟೆ! ಆದರೆ ಈ ಮಂತ್ರಕ್ಕೆ ಇತರ ದೇವತಾಪರವಾಗಿಯಾಗಲಿ ಅಥವಾ ಶಂಖಚಕ್ರಧಾರಣಪರವಾಗಿಯಾಗಲಿ ಅರ್ಥಮಾಡಲು ಅವಕಾಶವಿರುವುದರಿಂದ ಲಿಂಗಧಾರಣ ಪರವಾಗಿಯೇ ಏಕೆ ಅರ್ಥಮಾಡಬೇಕೆಂಬ ಆಕ್ಷೇಪವುಂಟಾಗುವುದು. ಈ ಆಕ್ಷೇಪವನ್ನು ಪರಿಹರಿಸಿಕೊಂಡು ಈ ಶ್ರುತಿಗೆ ಲಿಂಗಧಾರಣಪರವಾಗಿಯೇ ಅರ್ಥನಿಶ್ಚಯಮಾಡಿಕೊಳ್ಳಬೇಕಾದರೆ ಸರ್ವಜ್ಞರೂ ಮಹಾತ್ಮರೂ ಆದ ಮಹರ್ಷಿಗಳ ಅನುಮತಿಯನ್ನು ಪಡೆದುಕೊಳ್ಳಬೇಕಾಗುವುದು. "ನಮೋ ಬ್ರಹ್ಮಣೇ ಧಾರಣಂ" ಎಂಬ ಮಂತ್ರದ ವ್ಯಾಖ್ಯಾನವು ವ್ಯಾಸಮಹರ್ಷಿಗಳಿಂದ ಲಿಂಗಧಾರಣಪರವಾಗಿ ಮಾಡಲ್ಪಟ್ಟಿರುವುದ.

ಬ್ರಹ್ಮಾಂಡಪುರಾಣದಲ್ಲಿ—

ನಮೋಽಸ್ತು ಬ್ರಹ್ಮಣೇ ತುಭ್ಯಂ ನಾಮಾಚಾರ್ಯಾಯ ಮಹಾತ್ಮನೇ |
ಅನ್ನಿರಾಕರಣಂ ನಿತ್ಯಂ ಅಸ್ಮತ್ಪ್ರಾಣ್ಯತ್ವ ಸ್ಮೃತೌ ಪರೌ ||
ಅನಿರಾಕರಣಂ ಬ್ರಹ್ಮ ಕಾರಣತ್ವಾಚ್ಚ ರಂಜನಂ |
ಅನಿರಾಕರಣಂ ಮೇಽಸ್ತು ಧಾರಣಂ ದೇಶಿಕೋಕ್ತವತ್ |
ವೇದಶಾಸ್ತ್ರಪುರಾಣೇಷು ಪ್ರಸಿದ್ಧಂ ಕರ್ಣಯೋಃ ಶ್ರುತಂ |
ಅಹಂ ಧಾರಯಿತಾ ದೇವಂ ಭೂಯಾಸಂ ಸರ್ವಕಾರಣಂ ||
ಬ್ರಹ್ಮವಿಷ್ಣ್ವಾದಯೋ ದೇವಾಃ ಪ್ರಸಿದ್ಧಾಶ್ಚ ತಥಾ ಶ್ರುತಾಃ |
ತೇ ನಿರಾಕರಣಾಃ ಸರ್ವೇ ಮೃತ್ಯುನಾ ಸರ್ವಶತ್ರುಣಾ ||
ಮೇ ನಿರಾಕರಣಾಸ್ತೇ ತು ನ ಧಾರ್ಯಾಃ ಕದಾಚನ ||
ನಾಹಂ ಧಾರಯಿತಾ ದೇವಾನ್ ಭೂಯಾಸಂ ಮಜ್ಜ ಪಸ್ತುರಾನ್ |
ನ ಶಕ್ನುವಂತಿ ಮಾಂ ಕರ್ತುಂ ಮುಕ್ತಂ ಮೃತ್ಯುಸಾಗರೇ |
ಊರ್ಧ್ವಂ ಮಮೋದಯೋಽಂಗೀ ಮಾಂ ತ್ರಾಯಸ್ವ ಶಿವಾತ್ಮಯ ||

ಎಲೈ, ಗುರುವರ್ಯನೆ! ಬ್ರಹ್ಮಸ್ವರೂಪನೂ ಮಹಾತ್ಮನೂ ಆದ ನಿನ್ನನ್ನು ವಂದಿಸುವೆನು. ಪರಿದೃಶ್ಯಮಾನವಾದೀ ಪ್ರಪಂಚವು "ಜಾತಸ್ಯ ಮರಣಂ ಧ್ರುವಂ" ಎಂಬ ನಿಯಮದಿಂದ ಒಂದು ಕಾಲದಲ್ಲಿ ಉತ್ಪತ್ತಿಯಾಗಿರುವುದರಿಂದ ಒಂದು ಕಾಲದಲ್ಲಿ ಮೃತ್ಯುವಿನಿಂದ ನಿರಾಕರಿಸಲ್ಪಟ್ಟಿರುವದು. ಸೃಷ್ಟಿಸ್ಥಿತಿಸಂಹಾರ ಕರ್ತೃವಾದ ಶಿವಲಿಂಗ (ಬ್ರಹ್ಮ) ನಾವುದೋ ಇವೆಲ್ಲಕ್ಕೂ ಮೂಲಕಾರಣವಾದದರಿಂದ ಯಾವುದರಿಂದಲೂ ನಿರಾಕರಿಸಲ್ಪಡುವುದಿಲ್ಲ. ಆದದರಿಂದ ಬ್ರಹ್ಮರೂಪವಾದ ಲಿಂಗವೊಂದೇ ಅನಿರಾಕರಣವೆನಿಸಿಕೊಳ್ಳುವುದು. ಅಂತಹ ಬ್ರಹ್ಮರೂಪಲಿಂಗದ ಹೊರತು ಇತರ ದೇವತೆಗಳೆಲ್ಲರೂ ನಿರಾಕರಣೀಯರೇ ಆಗುತ್ತಾರೆ. ತ್ರಿಕಾಲಬಾಧ್ಯವೂ ಸಚ್ಚಿದಾನಂದಸ್ವರೂಪಿಯೂ ಆದ ಅಂತಹ ಬ್ರಹ್ಮರೂಪವಾದ ಶಿವಲಿಂಗವನ್ನು ಧರಿಸಿಕೊಳ್ಳುವೆನಲ್ಲದೆ ಇತರ ದೇವತೆಗಳನ್ನು ಧರಿಸಲು ನಾನು ಇಚ್ಛಿಸುವುದಿಲ್ಲ. ವೇದಶಾಸ್ತ್ರಪುರಾಣಾದಿಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವ ಈ ಶಿವಲಿಂಗವನ್ನು ನನ್ನ ಅಂಗದಲ್ಲಿ ಧರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡು. ಬ್ರಹ್ಮಾದಿ ಇತರ ದೇವತೆಗಳೆಲ್ಲರೂ ತ್ರಿಮೂರ್ತ್ಯತೀತವಾದ ಆ ಪರಶಿವಲಿಂಗದಿಂದ ಉತ್ಪನ್ನರಾದುದರಿಂದ ನಿರಾಕರಣಪದವಾಚ್ಯರಾಗುವರಲ್ಲದೆ ಅನಿರಾಕರಣಪದವಾಚ್ಯರಾಗುವುದಿಲ್ಲ. ಇಂಥ ನಿರಾಕರಣ ಪದವಾಚ್ಯರಾದ ಇತರ ದೇವತೆಗಳನ್ನೆಂದೂ ನಾನು ಧರಿಸುವುದಿಲ್ಲ. ಧರಿಸಲು ಅಪೇಕ್ಷಿಸುವುದೂ ಇಲ್ಲ. ಜನನಮರಣರೂಪವಾದ ಸಂಸಾರದಲ್ಲಿ ಮಗ್ನರಾದ ಆ ದೇವತೆಗಳು ನನ್ನನ್ನು ಮೃತ್ಯುಸಮುದ್ರದಿಂದ ದಾಂಟಿಸಬಲ್ಲರೆ? ಆದುದರಿಂದ ಓಂಕಾರಪದವಾಚ್ಯನಾದ ಶಿವಲಿಂಗವನ್ನು ಧರಿಸಿ ನನ್ನನ್ನುದ್ಧರಿಸು ಎಂದು ಶಿಷ್ಯನು ಗುರುವನ್ನು ಪ್ರಾರ್ಥಿಸಿರುವನು. ಈ ಪುರಾಣ ಶ್ಲೋಕಗಳಲ್ಲಿ "ನಮೋ ಬ್ರಹ್ಮಣೇ ಧಾರಣಂ" ಎಂಬ ಮಂತ್ರದಲ್ಲಿರುವ "ನಮಃ, ಬ್ರಹ್ಮಣೇ, ಧಾರಣಂ, ಭೂಯಾಸಂ, ಅನಿರಾಕರಣಂ, ಓಂ" ಮುಂತಾದ ಶಬ್ದಗಳೇ ಕಂಡುಬರುವುದರಿಂದಲೂ ಮತ್ತು ಶಿವಲಿಂಗದ ಹೊರತು ಇತರ ದೇವತೆಗಳನ್ನು ಅಂಗದಲ್ಲಿ ಧರಿಸಲಾಗದೆಂದು ಸ್ಪಷ್ಟೋಕ್ತಿಯಿರುವುದರಿಂದಲೂ, "ನಮೋ ಬ್ರಹ್ಮಣೇ ಧಾರಣಂ" ಎಂಬ ಮಂತ್ರವು ಶಿವಲಿಂಗಧಾರಣವನ್ನೇ ವಿಧಿಸುವುದಲ್ಲದೆ ಇತರ ದೇವತೆಗಳ ಮತ್ತು ಇತರ ದೇವತಾಚಿಹ್ನಗಳ ಧಾರಣವನ್ನು ವಿಧಿಸುವುದಿಲ್ಲವೆಂದು ನಿಶ್ಚಯವಾಗಿ ಹೇಳಬಹುದಾಗಿದೆ. ಮತ್ತು—

ಸ್ಕಂದಪುರಾಣದ ಕುಮಾರಸಂಹಿತೆಯ ಯಾತ್ರಾಖಂಡದಲ್ಲಿ—

ಮಹಾತಪಸ್ವಿನಾಂ ಚೈವ ಯತೀನಾಂ ಯೋಗಿನಾಂ ತಥಾ |
ಶಾಂಭವಾನಾಂ ದ್ವಿಜಾತೀನಾಂ ಶೈವಾನಾಂ ಲಿಂಗಧಾರಿಣಾಂ ||
ಮಹಾಪಾಶುಪತಾನಾಂ ಚ ಮನ್ನಾಮವ್ರತಧಾರಿಣಾಂ |
ಮೃತ್ಯುಂಜಯವ್ರತಾನಾಂ ಚ ಬ್ರಾಹ್ಮಣಾನಾಂ ಮಹಾತ್ಮನಾಂ |
ಪಂಚಾಕ್ಷರರತಾನಾಂ ಚ ಮತ್ಪ್ರೀತ್ಯಾ ದ್ವಿಜಸೇವಿನಾಂ |
ಸರ್ವೇಷಾಮಪಿ ವಿದ್ವಾನಾಂ ನಿತ್ಯಂ ದೇಯಂ ಗಿರೀಶ್ವರ |
ಲಿಂಗಧಾರಣಕಂ ನಾಮ ವ್ರತಂ ಮಾಹೇಶ್ವರಾಭಿಧಂ ||
ಯೇ ಧಾರಣಂ ಪ್ರಕುರ್ವಂತಿ ತೇ ಯಾಂತಿ ಶಿವಮಂದಿರಂ |
ವ್ರತಂ ಪಾಶುಪತಂ ನಾಮ ಶಿವಲಿಂಗಾರ್ಚನಂ ಶುಭಂ ||
ಪಾಟ್ಯಾಲಿಕಂ ತ್ರಿಕಾಲಂ ವಾ ಏಕಕಾಲಂ ಮಹೇಶ್ವರಂ |
ಯೇ ಪೂಜಯಂತಿ ವಿಪ್ರರ್ಷೇ ತೇ ಯಾಂತಿ ಶಿವಮಂದಿರಂ ||

ಎಲೈ ಬ್ರಾಹ್ಮಣೋತ್ತಮನೆ! ತಪಸ್ವಿಗಳಾಗಲಿ, ಸನ್ಯಾಸಿಗಳಾಗಲಿ ಯೋಗಿಗಳಾಗಲಿ, ಲಿಂಗಧಾರಿಗಳಾಗಲಿ, ಪಾಶುಪತರಾಗಲಿ, ದ್ವಿಜಾತಿಗಳಾಗಲಿ, ಶೈವರಾಗಲಿ, ಶಿವವ್ರತಿಗಳಾಗಲಿ, ಮೃತ್ಯುಂಜಯ ವ್ರತಿಗಳಾಗಲಿ ಬ್ರಾಹ್ಮಣರಾಗಲಿ, ಪಂಚಾಕ್ಷರಮಂತ್ರಾಸಕ್ತರಾಗಲಿ ಇವರೆಲ್ಲರಿಗೂ ಲಿಂಗಧಾರಣವೆಂಬ ಮಾಹೇಶ್ವರವ್ರತವನ್ನು ಯಾವಾಗಲೂ ಅನುಗ್ರಹಿಸ. ಯಾರು ಈ ಲಿಂಗಧಾರಣವ್ರತವನ್ನು ಮಾಡುವರೋ ಯಾರು ಈ ಶಿವಲಿಂಗವನ್ನು ಆರುಕಾಲಗಳಲ್ಲಿಯಾಗಲಿ ಮೂರುಕಾಲಗಳಲ್ಲಾಗಲಿ ಒಂದು ಕಾಲದಲ್ಲಿಯಾಗಲಿ ಪೂಜಿಸುವರೋ ಅವರು ಪವಿತ್ರಾತ್ಮರಾಗಿ ಅಕ್ಷರಳ ಶಿವಾನಂದವನ್ನು ಪಡೆಯುವರು. ದೇಹಾವಸಾನದಲ್ಲಿ ಆ ಶಿವನಲ್ಲಿ ಏಕೀಭವಿಸುವರು ಎಂದು ಈ ಲಿಂಗಧಾರಣದ ಮಹತ್ವವನ್ನು ಬಹಳವಾಗಿ ವರ್ಣಿಸಿರುವುದರಿಂದ "ನಮೋ ಬ್ರಹ್ಮಣೇ ಧಾರಣಂ" ಎಂಬ ಮಂತ್ರಕ್ಕೆ ವೀರಶೈವಮತಾಚಾರ್ಯರು ಲಿಂಗಧಾರಣಪರವಾಗಿ ಅರ್ಥವನ್ನು ಮಾಡಿರುವದು ಯುಕ್ತಿ ಅನುಭವ ಪ್ರಮಾಣಗಳಿಂದೊಡಗೂಡಿರುತ್ತದೆಂಬುದು ನಿರ್ವಿವಾದವಾದುದು.

ಒಳದೇಶದ ವೃತ್ತಾಂತಗಳು.

ಮೈಸೂರು ಕತ್ತವಾಡಿಪುರ ಅಗ್ರಹಾರದಲ್ಲಿರುವ ಜೋತಿಷಿನೆ ಗುಮಾಸ್ತ ನರಸಿಂಹಾಚಾರ್ಯರ ಮನೆಯ ಹಿತ್ತಲುಗೋಡೆಯನ್ನು ಹಾರಿ ಮನೆಗೆ ಪ್ರವೇಶಿಸಲು ಪ್ರಯತ್ನಿಸಿದ 15 ವರ್ಷ ವಯಸ್ಸಿನ ಜವರನೆಂಬುವನನ್ನು ಪೋಲೀಸರು ಹಿಡಿದು ಮೊಕದ್ದಮೆ ಹೂಡಿದ್ದು, ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ತೀರ್ಪುಮಾಡಿ ಅಪರಾಧಿತನು ಇನ್ನೂ ಚಿಕ್ಕವಯಸ್ಸಿನವನೆಂದು ೩ ಛಡಿ ಏಟಿನ ಶಿಕ್ಷೆಯನ್ನು ವಿಧಿಸಿದರು.

ಮೈಸೂರು ಪೌರಸಭೆಯ ಸುಮಾರು 600 ಮಂದಿ ಝಾಡಮಾಲಿಗಳು ತಮ್ಮ ತಿಂಗಳು ಸಂಬಳವನ್ನು 12 ರೂ ಗಳಿಂದ 15 ರೂ ಗಳಿಗೆ ಹೆಚ್ಚಿಸಬೇಕೆಂದೂ ಸ್ತ್ರೀಝಾಡಮಾಲಿಗಳು ಗರ್ಭವತಿಯರಾದರೆ ಪ್ರಸವಕಾಲಕ್ಕೆ ಕೊಡುತ್ತಿದ್ದ 15 ದಿನಗಳ ರಜವನ್ನು 1 ತಿಂಗಳಿಗೆ ಹೆಚ್ಚಿಸಬೇಕೆಂದೂ, ಇವುಗಳಿಗೆ ಒಪ್ಪಿಗೆ ಬರುವವರೆಗೂ ತಾವು ಕೆಲಸಮಾಡುವುದಿಲ್ಲವೆಂದೂ ಮುಷ್ಕರ ಹಿಡಿದಿದ್ದಾರೆ. ಪೌರಸಭೆಯ ಅಧಿಕಾರಿಗಳು ಇವರುಗಳನ್ನು ಕೆಲಸಮಾಡುವಂತೆ ಪ್ರೇರೇಪಿಸಲು ಅನೇಕ ಉಪಾಯಗಳನ್ನು ಮಾಡುತ್ತಿದ್ದಾರೆ.

ಶಿವನಸಮುದ್ರದ ಬಳಿ ವಿದ್ಯುಚ್ಛಕ್ತಿಯ ಉತ್ಪತ್ತಿಗಾಗಿ ಕಾವೇರಿ ನದೀನೀರನ್ನು ಸಣ್ಣ ಅಣೆಕಟ್ಟು ಹಾಕಿ ಉಪಯೋಗಿಸಿಕೊಳ್ಳುತ್ತಿರುವುದಕ್ಕಾಗಿ ಮೈಸೂರು ಸರ್ಕಾರವು ಮದ್ರಾಸು ಸರ್ಕಾರಕ್ಕೆ 73 ಸಾವಿರ ರೂಪಾಯಿಗಳನ್ನು ರಾಜಧಾಯ ಕೊಡುತ್ತಿರುವದನ್ನು ಇನ್ನು ಮುಂದೆ ಕೊಡಲಾಗುವುದಿಲ್ಲವೆಂದು ಹೇಳಿದ್ದರಮೇಲೆ ಮೈಸೂರು ಮತ್ತು ಮದರಾಸ ಸರ್ಕಾರಗಳ ವಾದವಿವಾದಗಳು ನಡೆದು ಇತ್ಯರ್ಥವಾಗದಿಲ್ಲವಾದಕಾರಣ, ತೀರ್ಮಾನದ ಬಗ್ಗೆ ಉಭಯ ಸರ್ಕಾರದವರೂ ಕೇಂದ್ರಸರ್ಕಾರವನ್ನು ಬೇಡಿದ್ದಾರೆ. ಕೇಂದ್ರಸರ್ಕಾರದವರು, ಎರಡು ಸರ್ಕಾರಗಳಿಗೂ ಸಂಬಂಧಪಡದ ಬುದ್ಧಿವಂತರಾದ ಇಬ್ಬರು ಇಂಜನಿಯರುಗಳನ್ನು ಪರಿಶೀಲನೆಗಾಗಿ ಕಳುಹಿಸಿ, ಅನಂತರ ತಮ್ಮ ತೀರ್ಮಾನವನ್ನು ಹೇಳುವರೆಂದು ತಿಳಿದುಬಂದಿದೆ.

ಶ್ರೀಮನ್ಮಹಾರಾಜರವರ ವರ್ಧಂತೀಮಹೋತ್ಸವ

ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ೫೧ನೆಯ ವರ್ಷದ ವರ್ಧಂತೀಮಹೋತ್ಸವವು ಇದೇ ತಿಂಗಳು 18 ನೆಯ ತಾರೀಖಿನ ದಿವಸ ವಿಶೇಷ ವೈಭವದಿಂದ ನೆರವೇರುವುದು. ಮಹಾಪ್ರಭುಗಳವರಿಗೆ ಶ್ರೀ ಜಗದೀಶ್ವರನು ದೀರ್ಘಾಯುರಾರೋಗ್ಯಭಾಗ್ಯಾದಿಗಳನ್ನು ದಯಪಾಲಿಸಿ ಕಾಪಾಡಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ಬೆಲೂಚಿಸ್ಥಾನದ ರಾಜಧಾನಿಯಾದ ಕ್ವೆಟ್ಟಾನಗರದಲ್ಲಿ ಭೂಕಂಪದಿಂದ ೫೬೦೦೦ ಜನರು ಮಡಿದರು.

ನಗರವೆಲ್ಲಾ ಸ್ಮಶಾನಸದೃಶವಾಗಿದೆ.

೨೦೦ ಜನ ಬ್ರಿಟಿಷರು ಸತ್ತರು ಆಸ್ಪತ್ರೆಯೊಂದು ನಾಶವಾಗಿ ೨೦೦ ಜನ ರೋಗಿಗಳು ಪ್ರಾಣಬಿಟ್ಟರು.

೧೦೦ ಭಾರತೀಯ ಸಂಸಾರಗಳೂ, ೨೦ ಬ್ರಿಟಿಷ್ ಸಂಸಾರಗಳೂ ಸಂಪೂರ್ಣವಾಗಿ ನಾಶವಾಗಿವೆ.

ಕಲತ್ ನಗರವು ಹಾಳುಬಿದ್ದಿದೆ ಖಾನರ ಅರಮನೆಯೂ ಸಹ ಉರುಳಿ ಬಿದ್ದಿದೆ ಆದರೆ ಕಲತ್ತಿನ ರಾಜರೂ ಅವರ ಸಂಸಾರದವರೂ ಕ್ಷೇಮವಾಗಿದ್ದಾರೆ

ಕ್ವೆಟ್ಟಾ ನಗರವು ಬೆಲೂಚಿಸ್ಥಾನದ ರಾಜಧಾನಿಯು ಭೂಕಂಪದಿಂದ ನಗರದ ಪೋಲೀಸು ಪಡೆಯೆಲ್ಲ ನಿರ್ನಾಮವಾಗಿದೆ ಅಡಂತದ ಕೀಲುಗಳೆಲ್ಲ ಕಳಚಿಬಿದ್ದಿವೆ ಆದಕಾರಣ ನಗರದಲ್ಲಿ ಲೂಟಿಯಾಗದಂತೆ ಸರಕಾರದವರು ಸಂಗ್ರಾಮಶಾಸನವನ್ನು ಪ್ರಕಟಿಸಿದ್ದಾರೆ

“ಒಂದುಸಾರೆ ಭೂಮಿಯು ನಡುಗಿತು! ಕ್ವೆಟ್ಟಾ ನಗರದ ಮುಕ್ಕಾಲು ಭಾಗವು ಮಣ್ಣುಪಾಲಾಯಿತು ನಗರನಿವಾಸಿಗಳಲ್ಲಿ ಅನೇಕರು ಮಣ್ಣೊಳಗೆ ಹೂತುಹೋಗಿರುವರಂತೆ! ಕ್ವೆಟ್ಟಾನಗರವೆಲ್ಲಾ ಸ್ಮಶಾನಭೂಮಿಯಂತಿದೆ ಜನರ ಗೋಳನ್ನು ಹೇಳತೀರದು ಹುಚ್ಚರಂತೆ ಬೀದಿಗಳಲ್ಲಿ ಅಲೆಯುತ್ತಿದ್ದಾರೆ ಅನೇಕರ ಮೈಮೇಲೆ ಬಟ್ಟೆಗಳೇ ಇಲ್ಲ ಸುಮಾರು ೯ ಕೋಟಿ ರೂಪಾಯಿಗಳ ವಸ್ತುಗಳು ಹಾಳಾಗಿವೆ

ಕ್ವೆಟ್ಟಾದ ಸುತ್ತುಮುತ್ತಿನ ಪ್ರದೇಶಗಳಲ್ಲಿ ಸೈನಿಕರು ಸರ್ಪಕಾವಲು ಮಾಡುತ್ತಿರುವರು ಪ್ರಭುತ್ವದವರಿಂದ ರಹದಾರಿ ಪಡೆಯದಿರುವವರಿಗೆ ಭೂಕಂಪವಾದ ಪ್ರದೇಶಕ್ಕೆ ಹೋಗಲು ಅವಕಾಶವನ್ನು ಕೊಡುವುದಿಲ್ಲ ಇದೇ ಸಮಯವೆಂದು ಲೂಟಿಮಾಡಲು ಬರುವವರಿಗೆ ಅವಕಾಶವಿರದಂತೆ ಮಾಡಬೇಕೆಂಬುದೇ ಉದ್ದೇಶವಾಗಿದೆ

ಈ ಮಧ್ಯೆ ಹಲವರ ಸೇವೆಯ ಕೆಲಸವನ್ನು ಸೈನಿಕರೇ ನಡೆಯಿಸುತ್ತಿದ್ದಾರೆ ನರಳುತ್ತಿರುವವರ ರಕ್ಷಣಾರ್ಥವಾಗಿ ಹಲವು ವಿಮಾನಗಳು ಆಹಾರವನ್ನು ತಂದು ಸರಬರಾಯಿ ಮಾಡುತ್ತಿವೆ ರೆಡ್‌ಕ್ರಾಸ್ ಸೊಸೈಟಿಯವರು ಹಲವು ವೈದ್ಯರ ಸಹಾಯದಿಂದ ಗಾಯಗೊಂಡವರಿಗೆ ಚಿಕಿತ್ಸೆ ನಡೆಸುವ ಕಾರ್ಯದಲ್ಲಿ ತೊಡಗಿದ್ದಾರೆ

ಕ್ವೆಟ್ಟಾ ನಗರದಲ್ಲಿ ಮರಣಹೊಂದಿದವರಲ್ಲದೆ, ಸುತ್ತುಮುತ್ತಲಿರುವ ಜಿಲ್ಲೆಗಳಲ್ಲಿ ಭೂಕಂಪದ ದೆಸೆಯಿಂದ ಮರಣಹೊಂದಿದವರ ಸಂಖ್ಯೆ ೩೦ ಸಾವಿರವೆಂದು ಸರಕಾರದ ಅಧಿಕಾರಿಗಳ ಕಡೆಯಿಂದ ವರ್ತಮಾನವು ಬಂದಿದೆ ಕ್ವೆಟ್ಟಾ ನಗರದಲ್ಲಿ ಸತ್ತವರನ್ನು ಸೇರಿಸಿದರೆ ಭೂಕಂಪದ ದೆಸೆಯಿಂದ ಒಟ್ಟು ಮರಣ ೫೬,೦೦೦

ಭೂಕಂಪವಾದ ಮೇಲೆ ಎರಡು ಗಂಟೆಗಳಲ್ಲಿ ಮಿಲ್ಟರಿ ಸೈನಿಕರು ಜೀವಂತರಾದ ೧೦,೫೦೦ ಮಂದಿ ಪ್ರಜೆಗಳನ್ನು ಈಚೆಗೆಳೆದು ರಕ್ಷಿಸಿದರು ‘ರೇಸ್‌ಕೋರ್ಸಿ’ ನಲ್ಲಿರುವ ಕ್ಯಾಂಪುಗಳಲ್ಲಿ ೭೦,೦೦೦ ಮಂದಿ ನಿರಾಶ್ರಿತರು ಬಿಡಾರ ಮಾಡಿಕೊಂಡಿರುವರು ಅವರಿಗೆ ಬೇಕಾಗುವಂತೆ, ಜಿಗುಪ್ಸೆ ಹುಟ್ಟದ ಹಾಗೆ ಮಾಡಲು ಫೋರ್ಸ್ ಸೈನಿಕರ ‘ಬ್ಯಾಂಡ್’ ರಾತ್ರಿಯೆಲ್ಲಾ ಆಗುತ್ತಿರುವುದು

ವರ್ತಮಾನಸಂಗ್ರಹ.

ಪ್ರೆಸಿಡೆಂಟ್ ರೂಸ್‌ವೆಲ್ಟ್‌ರವರು ಕಿಂಗ್ ಎಂಪರರವರಿಗೆ ಒಂದು ಕೇಬಲ್ ಸಂದೇಶವನ್ನು ಕಳುಹಿಸುತ್ತ, ಬೆಲೂಚಿಸ್ಥಾನದಲ್ಲಿ ಉಂಟಾದ ಭೂಕಂಪದ ಅನಾಹುತದ ವಿವರವನ್ನು ಕೇಳಿ ನಮಗೆ ಬಹಳ ವಿಷಾದವಾಗಿದೆಂದು ಸೂಚಿಸಿರುವರು

ಲಂಡನ್ನಿನ ಕಣ್ಣಿನ ಆಸ್ಪತ್ರೆಯ ಡಾಕ್ಟರರು ಬಹಳ ದಿನಗಳಿಂದ ಕುರುಡಿಯಾಗಿದ್ದ ಹೆಂಗಸೊಬ್ಬಳಿಗೆ ಅವಳ ಕಣ್ಣಿನಲ್ಲಿ ಕೆಟ್ಟಿದ್ದ ಭಾಗವನ್ನು ತೆಗೆದು ಪ್ರತಿಯಾಗಿ ಕಣ್ಣಿಗೆ ಏಟುಬಿದ್ದಿದ್ದ ಬೇರೊಬ್ಬನ ಕಣ್ಣಿನ ಭಾಗವನ್ನು ತೆಗೆದು ಹಚ್ಚಿದ್ದರಿಂದ ಕಣ್ಣು ಬಂದಿತೆಂದು ಪ್ರಸಿದ್ಧವಾಗಿದೆ

ರಾಜಕುಮಾರಿಯ ವಿವಾಹ.

ಸ್ವೀಡನ್ನಿನ ರಾಜಕುಮಾರಿ ಇನ್‌ಗ್ರಿಡ್‌ರವರಿಗೂ ಡೆನ್ಮಾರ್ಕಿನ ಕ್ರೌನ್‌ಪ್ರಿನ್ಸ್ ಫೆಡ್ರಿಕ್‌ರವರಿಗೂ ವಿವಾಹಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು ಸ್ವೀಡನ್, ಡೆನ್ಮಾರ್ಕ್ ಮತ್ತು ಬೆಲ್ಜಿಯಮ್ಮಿನ ಅರಸರೆಲ್ಲರೂ ಈ ವಿವಾಹದಲ್ಲಿ ಕೂಡಿದ್ದರು

— ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿಯ ಶಾಂತಮ್ಮ ಎಂಬ ೧೬ ವರ್ಷ ವಯಸ್ಸಿನ ಕನ್ಯೆಯನ್ನು ಅಪಹಾರ ಮಾಡಿದನೆಂಬ ಆಪಾದನೆಗಾಗಿ ಸಾಬ್‌ಜಾನ್ ಎಂಬವನಿಗೆ ಬೆಂಗಳೂರು ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ೨ ವರ್ಷಗಳ ಕಠಿಣಶಿಕ್ಷೆ ವಿಧಿಸಿದರು

ಡಾಕ್ಟರಿಗೆ ಶಿಕ್ಷೆ.

ಆಗ್ರಾ ಸೆಂಟ್ರಲ್ ಜೈಲಿನಲ್ಲಿ ಖೈದಿಯೊಬ್ಬನು ಕರಿನರರೋಗದಿಂದ ನರಳುತ್ತಿದ್ದಾಗಲೂ ಕೂಡ ಜೈಲಿನ ಡಾಕ್ಟರು ಅವನಿಗೆ ಚಿಕಿತ್ಸೆಮಾಡದೆ ಧಿಕ್ಕರಿಸಿದರೆಂದು ಡಾಕ್ಟರರಿಗೆ ಸಸ್ಪೆಂಡ್ ಆಗಿದೆ

ಮರಣ ದಂಡನೆ.

ರಾವಲ್ಪಿಂಡಿಯಲ್ಲಿ ಅನೇಕ ಮಕ್ಕಳನ್ನು ಕೊಲೆಮಾಡಿ ತಪ್ಪಿಸಿಕೊಂಡಿದ್ದು ಬಹಳ ಕಷ್ಟದಿಂದ ದಸ್ತಗಿರಿ ಮಾಡಲ್ಪಟ್ಟ ವಲ್ಲಿ ಮಹಮ್ಮದ್ ಎಂಬ ಅಪರಾಧಿಗೆ ಸೆಷನ್‌ಜಡ್ಜರು ಮರಣದಂಡನೆ ವಿಧಿಸಿರುವರು

ಜರ್ಮನಿಯ ಹೊಸಪ್ರಕಟನೆ.

ಹೆರ್‌ಹಿಟ್ಲರರ ಮೇಲೆ ನಡೆಸುವ ಎಲ್ಲಾ ಪ್ರಾಣಾಪಾಯಕರವಾದ ಪ್ರಯತ್ನಗಳಿಗೂ ಮರಣದಂಡನೆಯೇ ಶಿಕ್ಷೆ. ಜರ್ಮನಿಯ ರಾಷ್ಟ್ರಚಿಹ್ನಗಳನ್ನು ಅವಮಾನಗೊಳಿಸುವವರಿಗೂ, ಜರ್ಮನಿಯ ಪದ್ಧತಿಗಳನ್ನು ಕುರಿತು ದೂಷಿಸುವವರಿಗೂ ಕಠಿಣಶಿಕ್ಷೆ ಕೊಡಲಾಗುವುದೆಂದು ಪ್ರಕಟಿಸಿದ್ದಾರೆ

ಚೇಳಿನ ಕಷಾಯ.

ಬೊಂಬಾಯಿಯಲ್ಲಿ ಬಹಳ ದಿನಗಳಿಂದ ವಾಸಿಯಾಗದ ಕಠಿಣವ್ಯಾಧಿಯಿಂದ ನರಳುತ್ತಿದ್ದ ಒಬ್ಬ ಚೀನಾದೇಶದವನು ಅವನ ದೇಶದ ಹಳೇ ನಂಬಿಕೆಯಂತೆ ತನ್ನ ವ್ಯಾಧಿಗೆ ಚೇಳಿನ ಕಷಾಯವೇ ಸರಿಯಾದ ಔಷಧಿಯೆಂದು ನಿರ್ಧರಿಸಿ ಅನೇಕ ಚೇಳುಗಳನ್ನು ಬೇಯಿಸಿ, ಅದರ ಕಷಾಯವನ್ನು ಕುಡಿದು ಮರಣಹೊಂದಿದನು ವ್ಯಾಧಿಭಯವೇ ತಪ್ಪಿದಂತಾಯಿತು

ಮನುಷ್ಯರಕ್ತಕ್ಕೆ ಪ್ರತಿಯಾಗಿ ಸಸ್ಯರಸದ ಉಪಯೋಗ.

ರಕ್ತಚಿಕಿತ್ಸೆಯಲ್ಲಿ ಒಬ್ಬರ ದೇಹರಕ್ತನ್ನು ಮತ್ತೊಬ್ಬರ ದೇಹಕ್ಕೆ ಪ್ರಯೋಗಿಸುವುದರಿಂದ ಹಲಕೆಲವು ಅಪಾಯ ಗಳಾಗುತ್ತಿದ್ದವು ಆದರೆ ಈಗ ರಕ್ತಕ್ಕೆ ಬದಲು ಸಸ್ಯರಸವನ್ನು ಉಪಯೋಗಿಸಬಹುದೆಂದು ಕಂಡು ಹಿಡಿದಿದ್ದಾರೆ ಉಷ್ಣದೇಶಗಳಲ್ಲಿ ಹೆಚ್ಚಾಗಿ ಬೆಳೆಯುವ ‘ಲಿಯನ್’ ಎಂಬ ಬಳ್ಳಿಯ ರಸವನ್ನು ಇದಕ್ಕೆ ಉಪಯೋಗಿಸುತ್ತಾರೆ ಸಸ್ಯಗಳಲ್ಲಿರುವ ಕ್ಲೋರೋಫಿಲ್ ಎಂಬ ಪದಾರ್ಥವೂ ಮನುಷ್ಯರಕ್ತದಲ್ಲಿರುವ ಹೀಮೋಗ್ಲೋಬಿನ್ ಎಂಬ ಪದಾರ್ಥವೂ ಎರಡೂ ಒಂದೇ ಮಾದರಿಯವಂತೆ!

ಸ್ವೀಕಾರ

ಬಳ್ಳಾರಿ ಡಿ| ಕೊಟ್ಟೂರು ಗ್ರಾಮನಿವಾಸಿಗಳಾದ ವೇ|| ಮಿ|| ಪಟ್ಟಮಠದ ಜಾಗಟಗೇರಿ ಸಣ್ಣವೀರಪ್ಪಯ್ಯನವರು ತಮ್ಮ ಪೌತ್ರ ಚಿ| ಸದ್ಯೋಜಾತಮೂರ್ತಿಯ ದೀಕ್ಷೋಪನಯನವನ್ನು ಇದೇ ವೈಶಾಖ ಶು|| ೧೭ ದಿವಸ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 25 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಚಿತ್ರದುರ್ಗ ಡಿ|| ಹರಪನಹಳ್ಳಿ ತಾ|| ಉಚ್ಚಂಗಿದುರ್ಗದಲ್ಲಿರುವ ಮ| ರಾ| ಯಂ ಸಿದ್ದನಗೌಡರು ತಮ್ಮ ಪುತ್ರ ಚಿ|| ಮರುಳಸಿದ್ಧಗೌಡನಿಗೆ ಹರಿಹರದಲ್ಲಿರುವ ಗ| ಮ|| ಮರಿಗಪ್ಪನವರ ಪುತ್ರಿ ಹ|| ಕು|| ಶೋ|| ಚಿ|| ಸೌ|| ಸಾವಿತ್ರಮ್ಮನನ್ನು ತಂದು ವೈಶಾಖ ಶು|| ೧೦ ದಿವಸ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 20 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಧಾರವಾಡ ಡಿ|| ಗದಗ ಬೆಟಗೇರಿ ನಿವಾಸಿಗಳಾದ ಮ|| ರಾ|| ಗದಗಿನ ಗುಂಡಪ್ಪನವರ ಪುತ್ರ ಚನ್ನಬಸಪ್ಪನವರ ಪುತ್ರ ಚಿ| ಸ|| ಕಾಡಪ್ಪನಿಗೆ ನರಗುಂದ ಪೇಟಾ ಬನ್ನಿಹಟ್ಟಿಗ್ರಾಮದ ಮ|| ರಾ|| ಕೊಡ್ಲಿವಾಡದ ಬಸಮಂತಪ್ಪನವರ ಪುತ್ರಿ ಚಿ|| ಸೌ|| ಕೊಟ್ರವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವರನಕಡೆಯಿಂದ ಸಮರ್ಪಿಸಿದ 2 ರೂ ಕನ್ಯೆಯ ಕಡೆಯಿಂದ ಸಮರ್ಪಿಸಿದ 1 ರೂ ಮತ್ತು ಇದೇ ಗ್ರಾಮದಲ್ಲಿರುವ ಲಿಂಬನಗೌಡರ ಮುದಿಗೌಡರ ಪುತ್ರಿ ಚಿ|| ಸೌ|| ಚನ್ನವ್ವನನ್ನು ಸೂಡಿಗ್ರಾಮದಲ್ಲಿರುವ ಮ|| ರಾ|| ಅಡಗತ್ತಿ ಸಿದ್ದಪ್ಪನವರ ಪುತ್ರ ಚಿ| ತೋಂಟಪ್ಪನಿಗೆ ಕೊಟ್ಟು ನಿಶ್ಚಯ ಮಾಡಿದ ಸಮಯದಲ್ಲಿ ವರನಕಡೆಯಿಂದ ಸಮರ್ಪಿಸಿದ 2 ರೂ ಕನ್ಯೆಯ ಕಡೆಯಿಂದ ಸಮರ್ಪಿಸಿದ 1 ರೂ ಒಟ್ಟು 6 ರೂ ಗಳು ಮ|| ರಾ|| ಗದಗ ಬೆಟಗೇರಿ ಹಿರೇಮನಿ ಪಾಟೀಲ ನೀಲಪ್ಪಗೌಡರ ದ್ವಾರಾ ತಲ್ಪಿರುತ್ತವೆ

ಹುಬ್ಬಳ್ಳಿ ಶಹರದಲ್ಲಿರುವ ವೇ|| ನಂದಿಕೇಶ್ವರಮಠದ ವಿರೂಪಾಕ್ಷಯ್ಯನವರು ವೈಶಾಖ ಶು|| ೫ ದಿವಸ ತಮ್ಮ ಗೃಹದಲ್ಲಿ ಶ್ರೀ ಜಗದ್ಗುರುಗಳವರ ಲಿಂಗೋದ್ಭವಮೂರ್ತಿಯನ್ನು ಪ್ರತಿಷ್ಠಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಧಾರವಾಡ ಡಿ|| ಗದಗ ತಾ|| ಹಮ್ಮಿಗಿಯಲ್ಲಿ ಹಾವನೂರು ವೇ|| ಹಾಲಯ್ಯನವರಿಗೂ ಹಮ್ಮಿಗಿ ಕಲ್ಲಿಮಠದ ಕೈ|| ರಾಚಯ್ಯನವರ ಪುತ್ರಿ ಚಿ|| ಸೌ|| ರುದ್ರವ್ವನಿಗೂ ಗುರುಭಕ್ತಕೇಸರಿಯವರ ಗೃಹದಲ್ಲಿ ನೆರವೇರಿದ ವಿವಾಹಸಮಯದಲ್ಲಿ ವರನ ಕಡೆಯಿಂದ ತೆಗೆಯಿಸಿದ 2 ರೂ ಗಳು ವೇ|| ಹಮ್ಮಿಗಿ ಶಿರಹಟ್ಟಿ ಸಿದ್ಧಲಿಂಗಯ್ಯನವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಮಹನೀಯರ ಹಿತೋಕ್ತಿಗಳು

89 ನಿಮಗೆ ಯಾರಿಂದಲಾದರೂ ಏನಾದರೂ ತೊಂದರೆ ಸಂಭವಿಸಿದರೆ, ಅದು ನಿಮ್ಮ ಸತ್ವಪರೀಕ್ಷೆಗೆ ಬಂದಿರುವುದೆಂದೂ ಮತ್ತು ನಿಮ್ಮ ಅವರ ಗುಣಾವಗುಣಗಳನ್ನು ತೋರಿಸುವುದಕ್ಕೆ ಬಂದಿರುವುದೆಂದೂ ತಿಳಿದುಕೊಂಡು ಶಾಂತಿಯಿಂದ ಸಹನೆಮಾಡಿಕೊಂಡರೆ ಪರಿಣಾಮದಲ್ಲಿ ಒಳ್ಳೆದೇ ಆಗುವದು. ಹ್ಯಾಗೆಂದರೆ ವಿಶ್ವಾಮಿತ್ರನು ಹರಿಶ್ಚಂದ್ರನಿಗೆ ತಂದ ಸದೆ ಕೊಟ್ಟದ್ದರಲ್ಲಿ ಹರಿಶ್ಚಂದ್ರನ ಸತ್ಯ ಸಹನಶೀಲತೆ ಚಂದ್ರಮತಿಯ ಪತಿಭಕ್ತಿ ವಿಶ್ವಾಮಿತ್ರನ ನಿಷ್ಠುರತೆ [illegible] ವ್ಯಕ್ತವಾದವು. ಕೈಕೇಯಿಯು ರಾಮನನ್ನು ವನವಾಸಕ್ಕೆ ಕಳಿಸಿದ್ದರಿಂದ ರಾಮನ ಪಿತೃಭಕ್ತಿ ಸಹನಗುಣ [illegible] ಭ್ರಾತೃವಾತ್ಸಲ್ಯ ಭರತನ ಬಂಧುಪ್ರೇಮ ನಿಸ್ವಾರ್ಥತೆ ಸೀತೆಯ ಪತಿವ್ರತಾಧರ್ಮ [illegible] ಯನ ಸ್ವಾಮಿಭಕ್ತಿ, ವಿಭೀಷಣನ ಧರ್ಮನಿಷ್ಠೆ ಕೈಕೇಯಿಯ ಸ್ವಾರ್ಥತೆಯು ನಿಷ್ಠುರತೆ ರಾವಣನ [illegible] ವ್ಯಕ್ತವಾದವು. ದುರ್ಯೋಧನನು ಪಾಂಡವರನ್ನು ವನವಾಸಕ್ಕೆ ಕಳಿಸಿದ್ದರಿಂದ ಧರ್ಮರಾಯನ ಸತ್ಯ ಸಹನಗುಣವೂ ಭೀಮಾರ್ಜುನರ ಭ್ರಾತೃಭಕ್ತಿಯೂ [illegible] ದ್ರೌಪದಿಯ ಪತಿವ್ರತಾಗುಣವೂ ಕೌರವರ ದುರಾಶೆಯೂ [illegible] ವ್ಯಕ್ತವಾದವು. [illegible] ರಕ್ಷಿತೆಯು ಮಹಮ್ಮದನ ಕಣ್ಣನ್ನು ಕೀಳಿಸಿದ್ದರಿಂದ ಅಶೋಕನು ತನ್ನ ಹೆಂಡತಿ ಎಂದು ಅಭಿಮಾನವಿಲ್ಲದೆ ನಿಷ್ಪಕ್ಷಪಾತದಿಂದ ಅಹಿಂಸಾವ್ರತನಿಷ್ಠನಾಗಿದ್ದರೂ ಮುದ್ರಿತ [illegible] ಸಿದ್ಧರಿಂದ ಅವನ ನಿಷ್ಪಕ್ಷಪಾತವನ್ನು [illegible] ಆದಕ್ಕೆ ಸತ್ಯ [illegible] ವ್ಯಕ್ತವಾದವು. ಅದರಿಂದ ಏನು ಬಂದರೂ ಸಮುದ್ರದಂತೆ [illegible] "ನಿಂದಕರಾಚಿ ಘರ್ ಶೇಖಾರಿ ಅಕ್ಖಾಣೆ" ಎಂಬ ಮರಾಠಿ [illegible] ದರೂ ಹೇಳಿದ ವಿಷಯ [illegible] ಸಿದ್ಧವಾಗುತ್ತದೆ.

90 [illegible] ವನೇ ಸರಿ. ಆದರೆ ಬಯಸುವ [illegible] ದಲ್ಲಿ [illegible] ವಾಗಲೀ ಸರಿ [illegible] ಸ್ವಪಿಗೆ [illegible] ದೇವರು ಬಿಸಿಲು [illegible] ಸತ್ತು ಬರುವ [illegible] ಮತ್ತು ಯಾವೂ [illegible] ಈಗ [illegible] ರಿಕೆಗಳ ತೃಪ್ತಿಗಾಗಿಯೇ

91 ನನು ಹೃದಯದಲ್ಲಿರುವ ವಿವೇಕವನ್ನು ಒಂದು ದರ್ಪಣಕ್ಕೆ ಹೋಲಿಸಬಹುದು. ಸಂಭಾಷಣೆ [illegible] ಒಂದು ಕನ್ನಡಿಯಲ್ಲಿ ಮುಖ ನೋಡಲು [illegible] ವಿವೇಕದರ್ಪಣದಲ್ಲಿ ಪ್ರತಿಮಾನವನ [illegible] ಗಳು [illegible] ಪ್ರತಿಬಿಂಬಿಸುವವು. ಮುಖವನ್ನೋಲು [illegible] ಕಾಣದೆ ಹೊರಗೆ ಹೋದವನು [illegible] ದಿರುವರೇ? ಹೊರಗೆ ಹೋಗುವುದಕ್ಕೆ ಮೊದಲು ಕನ್ನಡಿಯೊಳಗೆ ಮುಖಕಳೆಯನ್ನು ತಿಳಕೊಂಡಿದ್ದರೆ ಆ ಅಪಹಾಸ್ಯಕ್ಕೆ ಗುರಿಯಾಗುತ್ತಿದ್ದನೇ? ಎಂದಿಗೂ ಇಲ್ಲ. ಇದೇ ರೀತಿಯಲ್ಲಿ ಪ್ರತಿಮನುಷ್ಯನೂ ಯಾವುದಾದರೊಂದು ಕೆಲಸ ಪ್ರಾರಂಭಿಸುವಾಗಲೂ ಏನಾದರೂ ಮಾತಾಡುವುದಕ್ಕೆ ಉಪಕ್ರಮಿಸುವಾಗಲೂ ಮೊದಲು ಅದನ್ನು ವಿವೇಕದರ್ಪಣದ ಮುಂದಿಟ್ಟು ನೋಡಿ ಮುಂದಿನ ಕಾರ್ಯದಲ್ಲಿ ಮುಂದುವರಿಯಬೇಕು. ಹೀಗೆ ಮಾಡದೆ ಪೂರ್ವಾಪರ ವಿಚಾರವಿಲ್ಲದೆ ಮನಸ್ಸಿಗೆ ತೋರಿದ ಹಾಗೆಲ್ಲ ಪ್ರವರ್ತಿಸಿದರೆ ಮಸಿಯಿಂದ ಕೆಡಿಸಿದ ಮುಖದಂತೆ ಮನುಷ್ಯನು ಹಾಸ್ಯಾಸ್ಪದನಾಗುವಂತೆ ಪರದೇಶಿಗೆ ಗುರಿಯಾಗುವನು. ಜಲವು ಮಲಿನವಸ್ತುವನ್ನು ಶುದ್ಧಿಮಾಡುವಂತೆ ವಿವೇಕವು [illegible] ನನ್ನು ಸುಗುಣಿಯನ್ನಾಗಿ ಮಾಡುವದು.

92 ಮನುಷ್ಯನು ಯಾವಾಗಲೂ ಇಹಲೋಕದ ಸುಖವನ್ನೇ ಪ್ರಾಧಾನವಾಗಿ ತಿಳಿದಿದ್ದರೆ ಅಂಥವನಿಗೆ ನೆಮ್ಮದಿಯು ಲಭಿಸುವದಿಲ್ಲವು. ಏಕೆಂದರೆ ನೆಮ್ಮದಿ [illegible] ಸುಖಕ್ಕೂ ಇಹಸುಖಕ್ಕೂ ಅಜಗಜಾಂತರವಷ್ಟು ವ್ಯತ್ಯಾಸವಿದೆ. ನಾವು ಇಹದಲ್ಲಿ ಅನುಭವಿಸುವ ಸುಖವು ನೆಮ್ಮದಿಯಾಂತವುಳ್ಳ ದುಃಖವಾಗಿಯೇ ಪರಿಣಮಿಸುವದು. ಇಹಸುಖವು ಅಲ್ಪಕಾಲ ನಿಲ್ಲತಕ್ಕದ್ದು. ಪರಸುಖವು [illegible] ಇಹಸುಖವು ಆದಿಯಲ್ಲಿ ಆನಂದವಾಗಿರುವದು. ಪರಸುಖವು ಅಂತ್ಯದಲ್ಲಿ ಆನಂದದಲ್ಲಿ ನಿಲ್ಲತಕ್ಕದ್ದಾಗಿದೆ. ಸಂಸಾರದಲ್ಲಿ ತೊಳಲಿ ಬಳಲಿ ಧನಾರ್ಜನೆಗೋಸುಗ ಮಾಡಬಾರದುದನ್ನೆಲ್ಲಾ ಮಾಡಿ ಸುಖವನ್ನಪೇಕ್ಷಿಸುವ ಇಹದಲ್ಲಿ? ಮಾಯೆಯನ್ನು ಬಿಟ್ಟು ಪರೋಪಕಾರವನ್ನೇ ಬೋಧಿಸುವ ವೇದಾಂತದಲ್ಲಿ? ಇದರಿಂದಲೇ ಪಾರಲೌಕಿಕಸುಖವು ಅನೇಕರಿಗೆ ಲಭ್ಯವಾಗುವುದಿಲ್ಲವು. ಆದ್ದರಿಂದ ಆಸ್ತಿಕ ಧರ್ಮಾವಲಂಬಿಯಾದ ಮನುಷ್ಯನು ದೈವಜ್ಞಾನವನ್ನು ಸಂಪಾದಿಸಿ ಪರಲೋಕದ ದಾರಿಯನ್ನು ಹಿಡಿಯಬೇಕು. ಪರೆ ಅಂತರ್ಮುಖಿ ದೃಷ್ಟಿಯಲ್ಲಿಯೇ ವರ್ತಿಸಬೇಕು. ಶ್ರೀನಿಜಗುಣ ಶಿವಯೋಗಿಗಳು "ಪಂಚವನ್ನು ದೂರದಿಂದುರೆ ಜಾಗ್ರತೆಯುಂಟೆ" ಎಂದು ಹೇಳಿರುವರು.

93 ಐದು ಇಂದ್ರಿಯಗಳನ್ನು ಸುಖಸಾಧನಗಳ ಕಡೆಗೆ ಒಂದು ಬಿಡಲಾಗದು. ಹಾಗೆ ಬಿಟ್ಟರೂ, ಒಳಗಿನ ಬುದ್ಧಿಯಲ್ಲಿ ಒಂದು ತೆರವು ದ್ದರೂ ಅದರಲ್ಲಿರುವ ಪ್ರವಸ್ತು ತೋರಿಬರದಾಗುವಂತೆ ಆವನ ಜ್ಞಾನವು ನಾಶಿಹೋಗುವದು.

94 ಮಾನವರು ಕಾಮಿನೀಕಾಂಚನವೆಂಬ ರಸದಿಂದ ಅಭಿಷಿಕ್ತರಾಗಿರುವರು. ಆ ರಸವು ಶುಷ್ಕವಾದ ಹೊರತು ಈಶ್ವರ ಸಿದ್ಧಿಯಾಗುವದಿಲ್ಲವು.

95 ಈ ಜಗತ್ತಿನಲ್ಲಿ ವಿವೇಕಿಗಳಾದವರು ಸ್ವದೇಶ, ಸ್ವಗ್ರಾಮ, ಸ್ವಗೃಹ, ಸ್ವಧರ್ಮ, ಸ್ವಜಾತಿ, ಸ್ವಜನ, ಸ್ವಭಾಷೆ, ಸ್ವಾಭಿಮಾನ ಇವುಗಳಲ್ಲಿ ಅತಿಶಯವಾದ ಪ್ರೇಮವನ್ನಿಟ್ಟಿರುತ್ತಾರೆ. ಪ್ರತಿಯೊಬ್ಬರೂ ಹೀಗಿರಬೇಕೆಂದದ್ದೇ ಧರ್ಮವು. ಜನರಿಗೆ ಸ್ವದೇಶವು ತಾಯಿಯು ಹೊಟ್ಟೆಯಂತಿರುವುದು. ಅನ್ಯದೇಶ ವಾಸಿಗಳ್ಯಾರೂ ಸ್ವದೇಶವಾಸವು ಒಂದಕ್ಕೆ ಹತ್ತರಷ್ಟು ಸುಖದಾಯಕವಾದದ್ದು. ಅನ್ಯದೇಶದಲ್ಲಿ ಜನರು ಪುಷ್ಕಳಧರ್ಮವನ್ನು ಸಂಪಾದಿಸಿ [illegible] ಉಪಕಾರಿಗಳಾಗಿದ್ದರೂ, ಕೊನೆಗೆ ಒಂದು ದಿವಸ ಸ್ವದೇಶಕ್ಕೆ ಬಂದು ಪೂರ್ವದಲ್ಲಿದ್ದ ತಮ್ಮ ಸಾಧಾರಣವಾದ ಮನೆಯನ್ನೇ ಅರಮನೆಯೆಂದು ತಿಳಿದು ಸುಖವಾಗಿರುವರು. ಎಷ್ಟು ದಿವಸ ಎಲ್ಲಿದ್ದರೂ ಹುಟ್ಟಿಬೆಳೆದದೇಶಕ್ಕೆ ಹೋಗಬೇಕೆಂಬ ಆಸೆ ಬಿಡಲಾರದು. ಸ್ವದೇಶವೆಂದರೆ ಅಷ್ಟು ಅಭಿಮಾನವಿರುವದು. 'ಇದ್ದ ಊರಿನ ನಷ್ಟ, ಪರ ಊರಿನ ಅದೃಷ್ಟ' ಎರಡೂ ಒಂದೇ ಎಂಬ ಗಾದೆಯಾದರೂ ಸ್ವದೇಶಾಭಿಮಾನವನ್ನೇ ಸೂಚಿಸುವದು. ಅನ್ಯದೇಶದಲ್ಲಿ ಅನ್ಯಗ್ರಾಮದಲ್ಲಿ ಒಂದೇ ಗ್ರಾಮ ದೇಶದವರು ಪರಸ್ಪರ ಭೆಟ್ಟಿಯಾದಾಗಲೂ ಬಿನ್ನ ಬಿನ್ನ ದೇಶದವರು ಪರಸ್ಪರ ದೇಶಗಳ ರೀತಿನೀತಿ ನಡಾವಳಿಗಳ ವಿಷಯವಾಗಿ ಮಾತಾಡುತ್ತಿರುವಾಗಲೂ ಸ್ವದೇಶಾಭಿಮಾನವು ಚೆನ್ನಾಗಿ ವ್ಯಕ್ತವಾಗುವದು ಸರ್ವರಿಗೂ ಅನುಭವವಾದ ವಿಷಯವಾಗಿರುವದು. ಸಾಮಾನ್ಯವಾಗಿ ಪಶು ಪಕ್ಷಿ ಮೃಗಾದಿಗಳಲ್ಲಿ ಸ್ವಜಾತಿ ಸ್ವಾಭಿಮಾನವು ಇರುವುದನ್ನು ನಾವು ನೋಡುತ್ತಿಲ್ಲವೇ? 'ಜನನೀಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂದು [illegible] ವಾದ ವಸ್ತುವೊಂದುಂಟೆ?

96 ಎಷ್ಟೇ ಕಷ್ಟಬರಲಿ ಗೋಳಾಡುವಾರದು. ಮನುಷ್ಯರಿಗೆ ಒದಗುವ [illegible] ಯಾವಾಗಲೂ ಮನಸ್ಸಿನ ಅಸಮಾಧಾನವೇ [illegible] ಯಾವ ಪ್ರಯೋಜನವೂ ಇಲ್ಲ. ಅಂಥವನು [illegible] ಅಳುಬುರುಕರನ್ನಾಗಿ ಮಾಡುವನು. [illegible] ಅಂಥವನನ್ನು ಕಂಡಾಗ [illegible] ಬಂದಿತು? ಎಂದು [illegible] ನಮಗೆ [illegible] ಕೇಳಿದರೆ [illegible] ಆಡಿಕೊಂಡು ಆರೆರನ್ನು [illegible] ಅವನ ಸುಖಕ್ಕೆ ಅಡ್ಡಿಯಾದವನು ನೀನು [illegible] ನಮಗೆ [illegible] ಇತರರು [illegible] 'ಅಯ್ಯೋ [illegible]' ಎಂದು ಕೊರಗಬೇಡಿರಿ. ನಿಮ್ಮ [illegible] ನಂತರ [illegible] ಇತರರ ಆದರ ವಿಶ್ವಾಸ ಮನ್ನಣೆಯನ್ನು ಸಂಪಾದಿಸಿ. ಎಂಥ ಸಮಯವೇ ಬರಲಿ ಸುಮ್ಮನೆ [illegible] ಬಂದುದನ್ನು ಧೈರ್ಯಸ್ಥೈರ್ಯಗಳಿಂದ ಅನುಭವಿಸುವುದನ್ನು ಕಲಿಯಿರಿ. ಕಷ್ಟದಿಂದಲೇ ಪ್ರಪಂಚಜ್ಞಾನವಾಗುವದು. ಆ ಕಷ್ಟ ಸಮಯದಲ್ಲಿ ಸತ್ಯಹರಿಶ್ಚಂದ್ರನ ಧರ್ಮಪತ್ನಿಯಾದ ಚಂದ್ರಮತಿದೇವಿಯು 'ಅಮ್ಮಾ ಮಗನೆ' ನೀನು ಅಂಥ ಸೂರ್ಯವಂಶದಲ್ಲಿ ಹುಟ್ಟಿದ್ದರೂ ನಿನಗೆ ಇಂಥ ಗತಿ ಬಂತೆ? ನಾ ಹರಿಶ್ಚಂದ್ರನ ಮಗನಾಗಿ ಹುಟ್ಟಿದರೂ ಒಂದು ತುತ್ತು ಅನ್ನ [illegible] ಗತಿಯಿಲ್ಲದೆ ಹೋಯಿತೇ? ಚಕ್ರವರ್ತಿಯ ಕೈಹಿಡಿದರೂ ನನ್ನ ಗತಿ ಹೀಗಾಯಿತೆ! ಎಂದು ಪ್ರಲಾಪಿಸಿರುತ್ತಾಳೆ. ಇಂಥಿಂಥವರ ಗತಿಗಳು ಹೀಗಾಗಿರುವಾಗ ನಮ್ಮಂಥ ಸಾಮಾನ್ಯರ ಕಷ್ಟಗಳು ಎಷ್ಟರವು?

97 ಭಕ್ತಿಮಾರ್ಗದಲ್ಲಿರುವವಗೆ ಕನಗೆ ಕೇವಲ ಜ್ಞಾನವು ಸಾಕಾಗದು ಮಾತ್ರವಲ್ಲ. ಅದು ಅನೇಕವೇಳೆ ಅಪಾಯಕರವಾಗಿಯೂ ಇರುವುದು. ಆದರೆ ಜ್ಞಾನವು ಭಕ್ತಿಪ್ರೇಮಗಳೊಡನೆ ಸಂಯುಕ್ತವಾಗಿರಬೇಕು.

98 ಸುಜೀವನವು ಎಂದರೆ ಯಾವುದು? ಹೊಟ್ಟೆಬಟ್ಟೆಗಳಿಗೆ ಕೊರತೆಯಾಗದಂತೆ ವಸಾಹತವನ್ನು ಏರ್ಪಡಿಸಿಕೊಂಡಿರುವುದಲ್ಲ. ಏಕೆಂದರೆ ಅದೊಂದು ವ್ಯಕ್ತವ್ಯಾಪಾರವು. ಯಾವಯಾವ ಸುಖಸಾಧನಗಳು ಬೇಕೆಂದರೆ ಅದನ್ನೆಲ್ಲ ಪೂರ್ಣಗೊಳಿಸಿಕೊಳ್ಳಬಹುದಾದ ಸಾಮಗ್ರಿಗಳನ್ನು ಒದಗಿಸಿಕೊಂಡು ದಿಲಖುಷಿಯಿಂದ ಕಾಲಹಾಕುವದಲ್ಲ. ಏಕೆಂದರೆ ಅದೊಂದು ಬಗೆಯ ಸನ್ನಿಯು. ನಾಳಿಗೇನು ನಾಡದ್ದೇನು ಎಂದು ಚಿಂತಿಸುತ್ತಾ ಕೊರಗುತ್ತಿರುವದೂ ಅಲ್ಲ. ಏಕೆಂದರೆ ಅದೊಂದು ಬಗೆಯ ಚಿತ್ತವಿಕ್ಷೇಪವು. ವೃಥಾಕಾಲಕ್ಷೇಪವು, ಪರಮಾರ್ಥದ ಸತ್ಸಂಕಲ್ಪದಿಂದಾಗಿರುವ ಈ ಪ್ರಪಂಚದಲ್ಲಿ ಶುದ್ಧಸಾತ್ವಿಕನಾಗಿದ್ದುಕೊಂಡು ಪರಮೇಶ್ವರನ ದಿವ್ಯಶಕ್ತಿಯನ್ನು ಸ್ಪರ್ಶಮಾಡುವದು ಅದೇ ಸುಜೀವನ.

99 ಸದಾಚಾರವೆಂಬ ಪರುಷಿಗೆ ಪಲವು ಪೂಜ್ಯತ್ವ. ಆ ಪರುಷ ಸದಾಚಾರಪರಾಯಣನಾದ ನರನು ಪೂಜ್ಯತಮನಾಗುವನು. ನಿಸ್ವಾರ್ಥತೆ ಕೊಳೆಯಿಲ್ಲದಿರುವಿಕೆ ಚಿತ್ತಶುದ್ಧಿ ನಿಜಸ್ಥಿತಿಯಿಲ್ಲದ ದುಷ್ಟವಾದ ಸಾತ್ವಿಕಭಾವ ಅಸುರಭಾವವು ತೊಲಗಿ ದೇವಭಾವದ ಅಧಿಷ್ಠಾನ, ಸ್ವಭಾವಜಾತ ಪಾಶವಪ್ರವೃತ್ತಿಯನ್ನು ದಮನಮಾಡಿ ಜ್ಞಾನಲಾಭದ ದಾರಿಯನ್ನು ತೋರುವಿಕೆ ಈ ದಾರಿಯನ್ನು ಹಿಡಿಯುವುದಕ್ಕೆ ಶರೀರದ ಅನಾಟವ, ಬುದ್ಧಿಯ ಜಡತೆ, ಮನದ ಚಾಂಚಲ್ಯ, ಕಾಮದ ಪ್ರಾಬಲ್ಯ ಈ ನಾಲ್ಕು ತೊಂದರೆಗಳು ವಿಘ್ನಕಾರಿಗಳಾಗಿವೆ. ಈ ವಿಘ್ನಗಳನ್ನು ಸದಾಚಾರದ ಮೂಲಕ ನಿರ್ಮೂಲವಾಗಿ ತೊಲಗಿಸಿಕೊಳ್ಳಬಹುದೆಂದು ಪೂರ್ವಾಚಾರ್ಯರ ಮತವು.

100 ಸದಾಚಾರವೆಂದರೇನು? ಮತ್ತು ಅದರಿಂದಾಗುವ ಪರಿಣಾಮವೇನು? ಅಂದರೆ ರಜೋಗುಣ ತಮೋಗುಣ ಚಾಂಚಲ್ಯ ಆಲಸ್ಯಾದಿಗುಣಗಳನ್ನು ತೊಳೆದು ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ [illegible] ಅಭ್ಯಾಸವು ಸದಾಚಾರವೆನಿಸುವದು.

(ಸಶೇಷ)

ಎಂ. ಮಲ್ಲಿಕಾರ್ಜುನಾರಾಧ್ಯ, ರಾಣೆಬೆನ್ನೂರು
ಮಳೆ ಮಠ, ತಿಪ್ಪೂರು

ಬೆಂಗಳೂರು ಸಿಟಿ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿತೋಟದಪ್ಪನವರ ಸ್ಟೂಡೆಂಟ್ಸ್ ಫ್ರೀ ಬೋರ್ಡಿಂಗ್ ಹೋಂ.

ಮೇಲ್ಕಂಡ ಬೋರ್ಡಿಂಗಿಗೆ ಸೇರಬೇಕೆನ್ನುವ ಮೈಸೂರು ದೇಶದ ಎಲ್ಲಾ ವೀರಶೈವ ವಿದ್ಯಾರ್ಥಿಗಳೂ (including the past students of the Home) ಕೆಳಗೆ ಕಂಡ ತಾರೀಖು 15 6 1933 ರೊಳಗಾಗಿ ಗೊತ್ತಾದ ಫಾರಂನಲ್ಲಿ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಅರ್ಜಿದಾರರು ಕಡೇ ಪಕ್ಷ ಎಸ್. ಎಸ್. ಎಲ್. ಸಿ. (E.C & PS) ಪರೀಕ್ಷೆಗೆ ತೇರ್ಗಡೆಹೊಂದಿದವರಾಗಿರಬೇಕು. ಹೈಸ್ಕೂಲ್ ತರಗತಿಯಲ್ಲಿ ವ್ಯಾಸಂಗಮಾಡತಕ್ಕಂಥ ಬೆಂಗಳೂರು ಡಿಸ್ಟ್ರಿಕ್ಟಿನ ವಿದ್ಯಾರ್ಥಿಗಳಿಗೆ ತಕ್ಕ ಸೌಕರ್ಯಗಳು ಇಲ್ಲದೆ ಇರೋಣದರಿಂದ ಅಂಥ ವಿದ್ಯಾರ್ಥಿಗಳಿಗೂ ಸಹ ಕೆಲವು ಸೀಟುಗಳು ಕೊಡಲ್ಪಡುವವು. ಆ ವಿದ್ಯಾರ್ಥಿಗಳು ಮಾತ್ರ 'ಹೋಂ' ಹೆಸರಿಗೆ ಅಯ್ಕೆಂಡೆಂಟ್‌ಗೆ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು.

ಕಾಲೇಜುಗಳಲ್ಲಿಯೂ ಟೆಕ್ನಿಕಲ್ ಸ್ಕೂಲುಗಳಲ್ಲಿಯೂ ಮತ್ತು ಸಂಸ್ಕೃತ ಕಾಲೇಜಿನಲ್ಲಿಯೂ ಓದತಕ್ಕ ವಿದ್ಯಾರ್ಥಿಗಳು ಸಹ ಸೀಟಿಗೋಸ್ಕರ ಅಪ್ಲಿಕೇಷನ್ ಹಾಕಿಕೊಳ್ಳಬಹುದು.

ಅಪ್ಲಿಕೇಷನ್ ಜೊತೆಯಲ್ಲಿ ಆರು ರೂಪಾಯಿಗಳನ್ನು (ಅಪ್ಲಿಕೇಷನ್ ಫೀ ಒಂದು ರೂಪಾಯಿ ಮತ್ತು ಅಡ್ಮಿಷನ್ ಫಿ [illegible] ರೂಪಾಯಿಗಳನ್ನು) ಕಳುಹಿಸತಕ್ಕದ್ದು. [illegible] ಅಡ್ಮಿಷನ್ ಫಿ ಐದು ರೂಪಾಯಿಗಳು ಮಾತ್ರ ವಾಪಸ್ ಮಾಡಲ್ಪಡುತ್ತೆ.

ಪಬ್ಲಿಕ್ ಪರೀಕ್ಷೆಯಲ್ಲಿ ಪಡೆದ ಪ್ರತಿಯೊಂದು ಸಬ್ಜೆಕ್ಟ್ ನಂಬರುಗಳನ್ನು ಸಹ ಕಳುಹಿಸತಕ್ಕದ್ದು. ತಾರೀಖು 25 6 33 ರಲ್ಲಿ ಭೇಟಿಗಾಗಿ (interview) ಬರತಕ್ಕದ್ದು.

ಅಪ್ಲಿಕೇಷನ್ ಫಾರಂಗಳನ್ನು ಬಯಸುವವರು ಒಂದಾಣೆ ಸ್ಟಾಂಪನ್ನು ಕಳುಹಿಸತಕ್ಕದ್ದು. ಬೇರೆ ಕಾಗದಗಳಲ್ಲಿ ಬರೆದ ಅಪ್ಲಿಕೇಷನ್‌ಗಳಿಗೆ ಗಮನಕೊಡಲ್ಪಡುವದಿಲ್ಲ. ಮೇಲ್ಕಂಡ ತಾರೀಖಿನ ನಂತರ ಬರತಕ್ಕ ಅಪ್ಲಿಕೇಷನ್‌ಗಳನ್ನು ಅಂಗೀಕರಿಸಲಾಗುವುದಿಲ್ಲ.

ಬೋರ್ಡಿಂಗ್ ಹೋಮಿನಿಂದ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಲೈಟು ಮಂಚ ವಗೈರೆ ಸಾಮಾನುಗಳನ್ನೂ ಚಿಟ್ಟಿ ಬಟ್ಟೆ ಬಟ್ಲೇಟು ಮೊದಲಾದವುಗಳನ್ನು ಕೊಡಲಾಗುತ್ತದೆ.

ಸ್ಥಳ ದೊರೆತ ಪ್ರತಿಯೊಬ್ಬ ವಿದ್ಯಾರ್ಥಿಯೂ ಬೋರ್ಡಿಂಗ್ ಹೋಮಿನ ವಿಧಿಗಳಿಗೆ ಬದ್ಧರಾಗಿರಬೇಕು. ತರಗತಿಗೆ ಸಂಬಂಧಪಟ್ಟ ಎಲ್ಲಾ ಪುಸ್ತಕಗಳನ್ನೂ ಕೊಂಡುಕೊಂಡಿರಬೇಕು.

(ಸಹಿ) ಎಸ್. ಶಿವಲಿಂಗಪ್ಪ
ಆನರರಿ ಸೆಕ್ರೆಟರಿ

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಫಂಡ್.

ಸ್ವೀಕಾರ.

ಸಬ್‌ಜಡ್ಜ್ ಶ್ರೀಮಾನ್ ಹೆಚ್. ಕೆ. ವೀರಭದ್ರಪ್ಪನವರು ಬಿ.ಎ. ಬಿ.ಎಲ್. ಇವರು ತಮ್ಮ ದ್ವಿತೀಯ ಪುತ್ರ ರಾ|| ರಾ|| ಶಿವಮೂರ್ತಿಪ್ಪನವರಿಗೆ ಆಲೂರು ಸಾಹುಕಾರ್ ಶ್ರೀಮಾನ್ ಎ. ನಂಜುಂಡಪ್ಪನವರ ದ್ವಿತೀಯ ಪುತ್ರಿ ಸೌ|| ಸರ್ವಮಂಗಳಮ್ಮನವರನ್ನು ತಂದು ನೆರವೇರಿಸಿದ ವಿವಾಹಮಹೋತ್ಸವಕಾಲದಲ್ಲಿ ಈ ಫಂಡಿಗೆ ಸಮರ್ಪಿಸಿದ 5 ರೂಪಾಯಿಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದೆ.

ಮಲೆಬೆನ್ನೂರು? ದಾವಣಗೆರೆ ಮಠದ ಮೈಲಟ್ಟಿದಾರ್ ಶ್ರೀಮಾನ್ ಮಲ್ಲಿಕಾರ್ಜುನಯ್ಯನವರ ಪುತ್ರಿ ಸೌ|| ಸಂಜಮ್ಮನವರನ್ನು ಕೋಡಿಹಳ್ಳಿ ಅಪ್ಪಣ್ಣನವರ ಪುತ್ರ ರಾ|| ಬಸವಣ್ಣನಿಗೆ ಕೊಟ್ಟು ನಡೆಸಿದ ವಿವಾಹಸಮಯದಲ್ಲಿ ಫಂಡಿಗೆ ಸಮರ್ಪಿಸಿದ 2 ರೂಪಾಯಿಗಳು ಮುಳ್ಳಿಗೆರೆ ಮಠದ ಚರಮೂರ್ತಿಗಳವರ ದ್ವಾರಾ ಬಂದಿರುವುದನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದೆ.

ಈ ನೂತನ ದಂಪತಿಗಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಒ. ರುದ್ರಯ್ಯ ಸೆ||
ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯ
ಸಂಸ್ಕೃತಕಾಲೇಜ್ ಫ್ರೀ ಬೋರ್ಡಿಂಗ್ಸ್
ಶ್ರೀ ಮಹಂತಿನಮಠ ಚಿಕ್ಕಪೇಟೆ
ಬೆಂಗಳೂರು ಸಿಟಿ

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಆಲಿಸಿದ ಹಲವು ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೨೦ ಪುಟಗಳುಳ್ಳದಾಗಿದ್ದು ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹು ಕಠಿಣವಾದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೪೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೭೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥವನ್ನು ಪ್ರಯೋಜಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೯೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹು ಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಅರ್ಹತೆಗನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ದೇಶನಾಯಕರೂಪವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦ ೧೨—೦
ಮಂಡೂರಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಸುಂಗಾರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦ ೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಬೇರು, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ಒಳ್ಳೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೬
ಶ್ರೀ ಶಿವಾದ್ವೈತಸಿದ್ಧಾಂತ ಸಂಪ್ರದಾಯದ ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ಒಳ್ಳೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ಒಳ್ಳೆ	೦—೦—೪.
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೪
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೨—೪
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೪
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೊ	೦—೦—೪
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುವಚನವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಒಳ್ಳೆ	೦—೦—೪
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೪
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೪
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಒಳ್ಳೆ	೦—೦—೪
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಳ್ಳೆ	೦—೦—೪
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಳ್ಳೆ	೦—೦—೪
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೊ	೦—೦—೪
ಶ್ರೀ ಜಗದ್ಗುರು ಕೇದಾರಮಹಾಸನ್ನಿಧಿಯವರ ಧರ್ಮಶಾಲೆಯ ಸುಂದರ ಫೋಟೋ	೦—೦—೪
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೪
ಕೊಲ್ಲಿಪಾಕದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೪

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೊ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿದ್ದಾರೆ. ರು. ಪ್ರಸಿದ್ಧವಾದ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪಿನಿಸಿ, ಒ... ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಒಂದೋಷ ಮೊದಲಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಪಾಲು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಒಳ್ಳೆ ಪರಿಮಳವಾಗುವುದು ಇದನ್ನು ಅನೇಕ ಪ್ರಜೆಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸುವುದಿಲ್ಲ

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ ಪಿ ...

ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[23] ಪೋ. ಬಾ ೫೧೦ — ದರ...

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಕಾಸು
ಮಲ್ಲಿಕಾರ್ಜುನ ಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಆರನೇ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (ಎರಡನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (ಎರಡನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (ಎರಡನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (ಎರಡನೆಯ ಆವೃತ್ತಿ) .	೧ ಆಣೆ
ಬಸವಾದಿ ಶಿವತತ್ತ್ವದರ್ಪಣ (ಎರಡನೆಯ ಆವೃತ್ತಿ) .	೨ ಆಣೆ
ಶ್ರೀ ರೇಣುಕಾಚಾರ್ಯಶತಕ (ಎರಡನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ ..	೨ ಆಣೆ
ಶಿವಶಕ್ತಿವಿಲಾಸ . ..	೨ ಆಣೆ
ಶ್ರೀಗುರು ತತ್ತ್ವಪದಗಳು ...	೨ ಆಣೆ
ಗುರುಸ್ವರೂಪಸ್ತೋತ್ರದೀಪಿಕೆ . ..	೨ ಆಣೆ
ವೀರಶೈವಮತಪ್ರಮಾಣ	೩ ಆಣೆ
ವೀರಶೈವಾಚಾರವಿಧಿ (ಎರಡನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (ಎರಡನೆಯ ಆವೃತ್ತಿ) ..	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ತ್ವಸ್ಪಷ್ಟೀಕರಣ (ಎರಡನೆಯ ಆವೃತ್ತಿ)....	೪ ಆಣೆ
ವೈದಿಕಪಾಶುಪತಪದ್ಧತಿ	೪ ಆಣೆ
ಆಗಮಪರಿಭಾಷೆ	೮ ಆಣೆ
ಶಿವಾದಿತ್ಯರತ್ನಾವಳಿ (ನಾಗಸ್ವರ ಕೃತಿ)	೮ ಆಣೆ
ಬಸವವ್ಯಾಂತ ದಿವಾಕರ (ಎರಡನೆಯ ಆವೃತ್ತಿ) . .	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವು (ತೆಲುಗು)	೮ ...
पंडित श्रीकाशीनाथशास्त्री यांचें भाषण (मराठी)	८ आ
Speeches by Pandit Shri Kashinatha Shastri (*English*)	12
ವೀರಶೈವರತ್ನ (ಆರನೆಯ ಆವೃತ್ತಿ) ..	೧೨
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಮಾಹೇಶ್ವರ ದೀಕ್ಷಾವಿಧಿ (ಎರಡನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ..	೧೨
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨
ಸಚಿತ್ರ ರೇಣುಕವಿಜಯ (ಎರಡನೆಯ ಆವೃತ್ತಿ) ..	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ...	೧
ಕೇನೋಪನಿಷತ್ (ವೀರಶೈವಭಾಷ್ಯ) ..	೧
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ) ..	೧
ವೀರಶೈವಸಿದ್ಧಾಂತಸುಧಾಕರ	೨
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .	೮
लिंगधारणचंद्रिका (संस्कृत)	३
महानारायणोपनिषत् (वीरशैवभाष्य संस्कृत)	१
वीरशैवेंदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿವ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M 2266 ॥ ಶ್ರೀ ಜಗದ್ಗುರು ಪಂಚಾಚಾರ್ಯೋಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ ಪಂಚಾಖ್ಯಪೀಠಾಧಿಪಾ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಯಿಸ್ಸುದೀರ್ಲೋಕಮಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ವರ್ಷವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ ನೇ ಜೂನ್ ೧೯೩೫ [ಸಂಚಿಕೆ ೬

ಶ್ರೀಮನ್ ಮಹಾರಾಜರವರ ಆಳ್ವಿಕೆ

ಏಷ್ಯಾಟಿಕ್ ರೆವ್ಯೂಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಆಧಾರದ ಮೇಲೆ ಅನುವಾದಮಾಡಿದುದು

(ಸರ್ ಸ್ಟೂವರ್ಟ್ ಫ್ರೇಸರ್ ಕೆ ಸಿ ಎಸ್ ಐ, ಸಿ ಐ ಇ ಇವರಿಂದ)

(ಈ ಲೇಖಕರಾದ ಸರ್ ಸ್ಟೂವರ್ಟ್ ಫ್ರೇಸರ್‌ರವರು ನಮ್ಮ ಮಹಾಪ್ರಭುಗಳವರಿಗೆ ಅಧ್ಯಾಪಕರೂ ಮತ್ತು ಪ್ರೈವೇಟ್ ಸೆಕ್ರೆಟರಿಯವರೂ ಆಗಿದ್ದರು ಶ್ರೀಮನ್ಮಹಾರಾಜರು ಮಿತಭಾಷಿಗಳೆಂದೂ ಉನ್ನತವಾದ ಆದರ್ಶಗಳನ್ನು ಹೊಂದಿರುವವರೆಂದೂ ಲೇಖಕರು ವಿವರಿಸಿದ್ದಾರೆ ಉನ್ನತವಾದ ದೇಶಾಭಿಮಾನ, ಅತ್ಯುತ್ಕಟ ಪ್ರಜಾಪ್ರೇಮ, ಪ್ರಗತಿಯಲ್ಲಿ ತೀವ್ರವಾದ ಅಭಿಲಾಷೆ ಇವು ಶ್ರೀಮನ್ಮಹಾರಾಜರವರಲ್ಲಿ ಕಂಡುಬರುವ ಗುಣಗಳು ಮಾತು ಸ್ವಲ್ಪವಾಗಿರಬೇಕು, ಕೆಲಸವು ಹೆಚ್ಚಾಗಿರಬೇಕು ಎಂಬುದೇ ಅವರ ಜೀವನಮಂತ್ರ ಆತ್ಮಪ್ರಶಂಸೆ ಮತ್ತು ಮುಖಸ್ತುತಿ ಇವು ನಮ್ಮ ಪ್ರಭುಗಳಿಗೆ ರುಚಿಸುವುದಿಲ್ಲ)

ಮೈಸೂರು ದೇಶದ ಮಹಾರಾಜರಾದ ಸರ್ ಕೃಷ್ಣರಾಜ ಒಡೆಯರು ೧೯೦೨ ರಲ್ಲಿ ಅಂದರೆ ತಮ್ಮ ೧೮ನೆಯ ವಯಸ್ಸಿನಲ್ಲಿ ಸಿಂಹಾಸನಾರೂಢರಾದರು ನಮ್ಮ ದೇಶೀಯ ಸಂಸ್ಥಾನಗಳು ಫೆಡರೇಷನ್ನಿಗೆ ಸೇರಬೇಕೆಂಬ ವಿಚಾರವು ಬಹಳ ಮುಖ್ಯವಾಗಿರುವುದರಿಂದ ಶ್ರೀಮನ್ ಮಹಾರಾಜರವರ ವಿಚಾರಗಳೂ ಮತ್ತು ಅವರ ಗುಣಗಳೂ ಮೈಸೂರು ದೇಶದವರಿಗೂ ಹೊರಗಿನವರಿಗೂ ಉಪಯುಕ್ತವಾಗಿವೆ

ಇಂಡಿಯಾ ದೇಶದ ದೇಶೀಯ ಸಂಸ್ಥಾನಗಳು ತಮ್ಮ ರಾಜ್ಯಭಾರ ಕ್ರಮದಲ್ಲಾಗಲಿ ಅಥವಾ ರಾಜರುಗಳಲ್ಲಿಯಾಗಲಿ ಒಂದೇ ಬಗೆ ಒಂದು ಇಲ್ಲ ಯಾವುದಾದರೂ ಒಂದು ಸಂಸ್ಥಾನವನ್ನು ಮಾದರಿಯಾಗಿ ತೆಗೆದುಕೊಂಡು ಇದು ಹೀಗೆ ಮತ್ತೆಲ್ಲಾ ಇವೆ ಎಂದು ಹೇಳುವಂತೆ ಇಲ್ಲ ಮೈಸೂರು ಸಂಸ್ಥಾನದ ಹೆಸರು ಇತರ ಸಂಸ್ಥಾನಗಳಿಗೆ ಇಲ್ಲ ಎಂಬುದು ಸ್ಪಷ್ಟವಾಗಿದೆ ಮೈಸೂರಿನ ಜನಗಳು ಮಾದರಿ ಸಂಸ್ಥಾನವೆಂದು ಹೇಳುತ್ತಾರೆ ಈ ಕೆಳಗಿನ ಅಂಶಗಳಿಂದ ಇದು ಎಷ್ಟರ ಮಟ್ಟಿಗೆ ನಿಜವೆಂಬುದು ವ್ಯಕ್ತವಾಗುವುದಲ್ಲದೆ ಈ ಸಂಸ್ಥಾನವು ಮಹಾರಾಜರ ಆಳ್ವಿಕೆಯಲ್ಲಿ ಎಷ್ಟು ಮಟ್ಟಿಗೆ ನೈತಿಕ ಮತ್ತು ಪ್ರಾಪಂಚಿಕ ರೀತಿಯಲ್ಲಿ ಮುಂದುವರಿದಿದೆ ಎಂಬುದೂ ವ್ಯಕ್ತವಾಗುವುದು

ಇಂಗ್ಲೆಂಡ್ ದೇಶದ ಜನರಿಗೆ ಮೈಸೂರು ಮಹಾರಾಜರು ಅಪರಿಚಿತರಾಗಿಲ್ಲ ಏಕೆಂದರೆ—ಅವರು ಈವರೆಗೆ ಇಂಗ್ಲೆಂಡಿಗೆ ಬಾರದೆ ಇರುತ್ತಿರುವ ದೇಶೀಯ ಸಂಸ್ಥಾನದ ರಾಜರ ಗುಂಪಿಗೆ ಸೇರಿದವರಲ್ಲ ಇಂಡಿಯಾದೇಶದಲ್ಲಿ ಈ ಮಹಾರಾಜರವರಷ್ಟು ವೈಸ್‌ರಾಯರೊಂದಿಗೆ ಮತ್ತು ಗೌರ್ನರ್ ಜನರಲ್ಲುಗಳೊಂದಿಗೆ ಸ್ನೇಹದಿಂದ ವರ್ತಿಸುತ್ತಿರುವವರು ಇನ್ನೊಬ್ಬರಿಲ್ಲ ಚಕ್ರವರ್ತಿ ಮನೆತನದವರು ಕೂಡ ಮೈಸೂರಿಗೆ ಹೋಗಿದ್ದಾರೆ ಮಹಾರಾಜರವರ ವಿಚಾರದಲ್ಲಿ ಅವರ ಅಭಿಪ್ರಾಯವಾದರೂ ಇದೇ ರೀತಿಯದು ನಂಬಲು ಸಾಕಷ್ಟು ಕಾರಣಗಳಿವೆ ಮಹಾರಾಜರು ಮತ್ತು ಭಾಷಣಗಳಲ್ಲಿ ಅನೇಕ ಕಡೆ—ಮೈಸೂರು ರಾಜರಿಗೂ ಬ್ರಿಟಿಷ ಆಂಗ್ಲೇಯ ಸ್ನೇಹಿತರಿಗೂ ಬಹುಕಾಲದಿಂದ ನಡೆದುಬಂದಿರುವ ಸ್ನೇಹವನ್ನೂ ಸಾರ್ವಭೌಮಸರ್ಕಾರದ ಅಧಿಕಾರಿಗಳಿಗೂ ತಮಗೂ ಇರುವ ಸಂಬಂಧದ ವೈಶಿಷ್ಟ್ಯವನ್ನೂ ಕುರಿತು ಹೇಳಿದ್ದಾರೆ. ಮೈಸೂರನ್ನು ಅನೇಕ ಕಷ್ಟಗಳಿಂದ ತಪ್ಪಿಸಿ ಅದನ್ನು ಹಿಂದೂ ರಾಜರಿಗೆ ಹಿಂತಿರುಗಿಸಿಕೊಟ್ಟುದಕ್ಕೆ, ಬ್ರಿಟಿಷರಲ್ಲಿ ಅವರಿಗೆ ಇರುವ ಕೃತಜ್ಞತೆಯೇ ಈ ವಿಶ್ವಾಸದ ಸಂಬಂಧಕ್ಕೆ ಮುಖ್ಯಕಾರಣವಾಗಿದೆ ಮೈಸೂರುದೇಶವು ಈಗಿನ ಹಿಂದೂರಾಜರ ಮನೆತನಕ್ಕೆ ಸೇರಿದ ಚರಿತ್ರೆಯು ರಸವತ್ತಾದುದರಿಂದ ಅದನ್ನು ಇಲ್ಲಿ ಜ್ಞಾಪಕಕ್ಕೆ ತಂದುಕೊಳ್ಳುವುದು ಯೋಗ್ಯವಾಗಿದೆ

ಸಾಹಸಿಯಾದ ಹೈದರ್‌ಅಲಿಯು ೧೭೬೧ ನೇ ಇಸವಿಯ ಹೊತ್ತಿಗೆ ಮೈಸೂರನ್ನು ಪೂರ್ತಿಯಾಗಿ ಆಕ್ರಮಿಸಿಕೊಂಡನು ಆಗಿನ ಮೈಸೂರು ಮಹಾರಾಜರು ಹೈದರನ ಆಜ್ಞೆಯ ಪ್ರಕಾರ ಉಸಿರು ಬಿಟ್ಟುಕೊಳ್ಳಬೇಕಾಗಿತ್ತು ಈ ಮಹಾರಾಜರ ಸ್ಥಾನದಲ್ಲಿ ಹೆಸರಿಗೆ ಮಾತ್ರ ರಾಜರಾಗಿ ಇಡಲ್ಪಟ್ಟವರು ೧೭೭೬ ರಲ್ಲಿ ಮಕ್ಕಳಿಲ್ಲದೆ ಕಾಲವಾದರು ಹೀಗಾಗಿ ೧೭೮೦ ನೇ ಇಸವಿಯಿಂದ ಈ ರಾಜ್ಯವು ರಾಜರ ಸ್ವಂತ ಮಕ್ಕಳಿಲ್ಲದೆ ಮನೆತನದ ಸಾಲ ಹೊರಗಿನವರೊಬ್ಬರನ್ನು ರಾಜರನ್ನಾಗಿಮಾಡುವ ಪದ್ಧತಿಯನ್ನು ಹಿಡಿದು ಆಗ ಯಾವರೀತಿಯಾಗಿ ರಾಜರನ್ನು ಆರಿಸಿದರೆಂಬುದು ಈ ಕೆಳಗಿನ ಕಥೆಯಿಂದ ವ್ಯಕ್ತವಾಗುತ್ತದೆ

ರಾಜಮನೆತನದ ಎಲ್ಲಾ ಮಕ್ಕಳೂ ಆಟದ ಸಾಮಾನುಗಳು ಹಣ್ಣು ಹಂಪಲುಗಳು ವಿಧವಿಧ ಇವುಗಳಿಂದ ಕೂಡಿದ ಒಂದು ದೊಡ್ಡ ಆವರಣದಲ್ಲಿ ಕೂಡಿಸಲ್ಪಟ್ಟರು ಈ ಸಾಮಾನುಗಳನ್ನು ಆರಿಸಿಕೊಳ್ಳುವಾಗ ಒಬ್ಬ ಚಿಕ್ಕ ಹುಡುಗನು ಒಂದು ಕೈಯಲ್ಲಿ ಕನ್ನಡಿಯನ್ನೂ ಒಂದು ಕಠಾರಿಯನ್ನೂ ತೆಗೆದುಕೊಂಡನು ಇದನ್ನು ನೋಡಿ ಹೈದರನು ಸಂತೋಷಪಟ್ಟು ಇವನೇ ರಾಜನು ಎಂದು ಘೋಷಿಸಿದನು ಈ ರಾಜನ ಭಾವನೆಯು ಬಹುಬೇಗ ಸತ್ಯವಾಗಿರಲಿ ಮೈಸೂರಿನ ಹಿಂದೂರಾಜ್ಯವು ಮುಂದುವರಿಯಲು ಇವನು ಸಹಕಾರಿಯಾಯಿತು

ಯಾಕೆಂದರೆ, ಹೀಗೆ ಆರಿಸಲ್ಪಟ್ಟ ಮಹಾರಾಜರಿಗೆ ಒಂದು ಗಂಡು ಮಗುವಾಯಿತು ೧೭೯೯ ರಲ್ಲಿ ಟಿಪ್ಪುಸುಲ್ತಾನನು ಅರಮನೆಯಿಂದ ಹಿಂದೂ ಮನೆತನದ ಎಲ್ಲರನ್ನೂ ಹೊರಮಾಡಿದಾಗ ಅದೃಷ್ಟವಶಾತ್ ಈ ಮಗುವು ಕೊಲ್ಲಲ್ಪಡಲಿಲ್ಲ ೧೭೯೯ ರಲ್ಲಿ ಶ್ರೀರಂಗಪಟ್ಟಣವನ್ನು ಬ್ರಿಟಿಷರು ಜಯಿಸಿದಾಗ ಆ ರಾಜಕುಮಾರನು ಕೋಟೆಯ ಹೊರಗಿನ ಒಂದು ಗುಡಿಸಲಿನಲ್ಲಿ ಸಿಕ್ಕಿದನು. ಪುರಾತನ ಮನೆತನದ ಈ ರಾಜಪುತ್ರನಿಲ್ಲದಿದ್ದರೆ ಮೈಸೂರು ರಾಜ್ಯವು ಈಸ್ಟ್ ಇಂಡಿಯಾ ಕಂಪೆನಿಗೂ ಮತ್ತು ನಿಜಾಮರಿಗೂ ವಿಭಾಗವಾಗಿ ಹೋಗುತ್ತಿತ್ತು ಈ ಬಾಲಕನೇ ಈಗಿನ ಮಹಾರಾಜರ ತಾತನು ೧೯೧೫ ರಲ್ಲಿ ಈ ಬಾಲಕನು ಹುಟ್ಟಿದ ಸ್ಥಳದಲ್ಲಿ ಶ್ರೀರಂಗಪಟ್ಟಣದಲ್ಲಿ ಆತನ ಸ್ಮಾರಕವಾಗಿ ಒಂದು ಮೆಮೋರಿಯಲ್ ಈಗಿನ ಮಹಾರಾಜರಿಂದ ಸ್ಥಾಪಿತವಾಯಿತು ರಾಜಮನೆತನದ ಬಾಲಕನು ಬದುಕಿದ್ದುದು ಮೈಸೂರಿನ ಅದೃಷ್ಟ ಹೈದರ್ ಮತ್ತು ಟಿಪ್ಪುಸುಲ್ತಾನರು ಮೈಸೂರಿನಲ್ಲಿ ಎಲ್ಲಾ ರೀತಿಯಿಂದಲೂ ತಾವೇ ರಾಜರಾಗಿದ್ದರೆಂಬುದು ಚರಿತ್ರೆಯಿಂದ ತಿಳಿದು ಬರುತ್ತದೆ ಟಿಪ್ಪುವು ಮೂರ್ಖತೆಯಿಂದ ನಾಲ್ಕನೆಯ ಮೈಸೂರು ಯುದ್ಧಕ್ಕೆ ಇಂಗ್ಲೀಷರನ್ನು ಉದ್ರೇಕಿಸಿದ್ದರಿಂದ ರಾಜ್ಯವು ಇಂಗ್ಲೀಷರ ಸ್ವಾಧೀನಕ್ಕೆ ಬಂದಿತು ಅಮೇಲೂ ಕೂಡ ಟಿಪ್ಪುವಿನ ಮಗನಿಗೆ ರಾಜ್ಯವನ್ನು ವಹಿಸಬೇಕೋ ಅಥವಾ ಹಿಂದೂ ವಂಶದ ರಾಜಕುಮಾರನಿಗೆ ವಹಿಸಬೇಕೋ ಎಂಬುದು ಚರ್ಚಾಸ್ಪದವಾಗಿದ್ದಿತು ಕೊನೆಗೆ ಗೌರ್ನರ್ ಜನರಲ್ ಲಾರ್ಡ್ ವೆಲ್ಲಿಂಗ್‌ಟನ್‌ನು ರಾಜಕಾರಣದೃಷ್ಟಿಯಿಂದಲೂ ಔದಾರ್ಯ ಮತ್ತು ದಯೆಯಿಂದಲೂ ಹಿಂದೂರಾಜಮನೆತನಕ್ಕೆ ರಾಜ್ಯವನ್ನು ವಹಿಸಬೇಕೆಂದು ತೀರ್ಮಾನಿಸಿದನು ಈಸ್ಟ್ ಇಂಡಿಯಾ ಕಂಪೆನಿಯವರು ಹಿಂದೂವಂಶದ ರಾಜರುಗಳೊಡನೆ ಹೋರಾಡುತ್ತಿದ್ದ ಆ ಕಾಲದಲ್ಲಿ ತಾವೇ ಸೃಷ್ಟಿಸಿದ ಮೈಸೂರು ರಾಜ್ಯದ ವಿಷಯದಲ್ಲಿ ಮೈಸೂರಿಗೆ ಬಹಳ ಅನುಕೂಲಗಳು ಒದಗುವಂತಹ ನಿಯಮಗಳನ್ನು ೧೮೦೧ ನೇ ಇಸವಿಯಲ್ಲಿ ರಾಜರೊಂದಿಗೆ ಸಬ್‌ಸಿಡಿಯರಿ ಕೌಲ್ ಮಾಡಿಕೊಂಡರು ಆಗಿನ ಮಹಾರಾಜರು ಜನರಿಗೆ ವಿಕಟವಾದ ರೀತಿಯಲ್ಲಿ ವರ್ತಿಸುವುದರಿಂದ ೧೮೩೧ರಲ್ಲಿ ದೇಶದಲ್ಲಿ ಉಂಟಾದ ದಂಗೆಯನ್ನು ಅಡಗಿಸಲು ಗೌರ್ನರ್ ಜನರಲ್‌ರವರು ಪ್ರವೇಶಿಸಬೇಕಾಯಿತು ಇದರಿಂದ ಮೈಸೂರಿಗೆ ದೊಡ್ಡ ಸಹಾಯವಾಯಿತು ಆಗ ಮಹಾರಾಜರು ಸಿಂಹಾಸನದಿಂದ ಇಳಿಸಲ್ಪಟ್ಟರು ಅವರ ಸಂಸ್ಥಾನವನ್ನು ಬ್ರಿಟಿಷ್ ಇಂಡಿಯಾಕ್ಕೆ ಸೇರಿಸಿಕೊಳ್ಳದೆ ಕಂಪೆನಿಯವರು ತಮ್ಮ ಪ್ರತ್ಯಕ್ಷ ಆಡಳಿತದಲ್ಲಿ ಇಟ್ಟುಕೊಂಡರು ಅವರ ಮೈಸೂರಿನ ನೆರವಿನ ಕೊನೆಗೆ ಮೂರು ವರುಷಗಳ ಮೇಲೆ ಇದೇ ಗತಿಯು ಬಂದಿತು ಕೊನೆಗೆ ಕೌಲಿನ ನಿಬಂಧನೆಗೆ ಅನುಸಾರವಾಗಿ ರಾಜನು ನಡೆಯದೆ ದುರ್ಮಾರ್ಗಿಯಾದನು ಅವನಿಗೆ ಸಹಾಯಮಾಡಲು ಗೌರ್ನರ್‌ಜನರಲ್ಲರಿಗೆ ಅಧಿಕಾರವಿರಲಿಲ್ಲ ಅದರಿಂದ ಗವರ್ನರ್ ಜನರಲ್ಲರು ಕೊನೆಗೆ ಪ್ರವೇಶಿಸಿದಾಗ ಅವರಿಗೆ ಯಾವ ದಾರಿಯೂ ತೋರದೆ ಅದನ್ನು ಜಯಿಸಿ ಬ್ರಿಟಿಷ್ ಇಂಡಿಯಾಕ್ಕೆ ಸೇರಿಸಿಬಿಟ್ಟರು ಮೈಸೂರು ದೇಶವು ಬ್ರಿಟಿಷರಿಗೆ ಸೇರಿದ್ದು ಇದ್ದುದಕ್ಕೆ ಸಿಂಹಾಸನಚ್ಯುತರಾದ ರಾಜರು ದೀರ್ಘಕಾಲಬದುಕಿದ್ದುದೂ ಒಂದು ಕಾರಣವಾಗಿದ್ದಿತು ಅವರೇನಾದರೂ ಲಾರ್ಡ್ ಡಾಲ್‌ಹೌಸಿಯ ಕಾಲದಲ್ಲಿ ಅಥವಾ ಅದಕ್ಕಿಂತ ಮುಂಚೆ ಸ್ವರ್ಗಸ್ಥರಾಗಿದ್ದರೆ ಆಗ ಸರಕಾರದ ಪದ್ಧತಿಯಂತೆ ಮೈಸೂರು ದೇಶವು ಬ್ರಿಟಿಷ್ ಇಂಡಿಯಾಕ್ಕೆ ಸೇರಿಬಿಡುತ್ತಿತ್ತು ಮತ್ತು ಆ ರಾಜರಿಗೆ ೧೮೬೫ ನೇ ವರ್ಷದವರೆಗೆ ದತ್ತುಸ್ವೀಕಾರಮಾಡಲು ಸರಕಾರದವರು ಅವಕಾಶವನ್ನು ಕೊಡದೆ ಇದ್ದುದು ಅವರ ದತ್ತಪುತ್ರ ರಾಜನಿಗೆ ಬಹಳ ಅನುಕೂಲವಾಗಿದ್ದಿತು ಅವರ ರಾಜರು ತಮ್ಮ ೭೪ ನೇ ವರ್ಷದವರೆಗೆ ಅಂದರೆ ೧೮೬೮ ರವರೆಗೆ ಬದುಕಿಯೇ ಇದ್ದರು ಆ ಕಾಲಕ್ಕೆ ಸಿಪಾಯಿ ದಂಗೆಯು ಮುಗಿದಿದ್ದಿತು ಆ ವೇಳೆಗೆ ಚೆನ್ನಾಗಿ ಆಳಲ್ಪಡುವ ದೇಶೀಯ ಸಂಸ್ಥಾನವು ಬ್ರಿಟಿಷ್ ಸರಕಾರದ ಬಲಕ್ಕೆ ಸಾಧಕವಾದುದೆಂಬ ಭಾವನೆಯು ಇಂಗ್ಲೀಷ್ ರಾಜಕಾರಣ ಪಟುಗಳ ಮನಸ್ಸಿಗೆ ಹೊಳೆದಾಗಿ ಬರತೊಡಗಿದ್ದಿತು ೧೮೬೭ ರಲ್ಲಿ ಅಂದರೆ ರಾಜರು ಸ್ವರ್ಗಸ್ಥರಾಗುವುದಕ್ಕೆ ಒಂದೇ ವರ್ಷ ಮುಂಚೆ ಬ್ರಿಟಿಷ್ ಸರಕಾರದವರು ತೀರ್ಮಾನವನ್ನು ಕುರಿತು ಮತ್ತೆ ಆಲೋಚಿಸಿದರು ಹಿಂದಿನ ರಾಜರಿಗೆ ಮತ್ತೆ ರಾಜ್ಯವನ್ನು ಕೊಡಬೇಕೆಂಬುದೇ ನಿರ್ಧಾರವಾಯಿತು ಅವರ ಪ್ರಜೆಗಳಿಗೆ ಒಳ್ಳೆ ರಾಜ್ಯಭಾರವನ್ನೂ ಬ್ರಿಟಿಷರ ಹಕ್ಕು ಮತ್ತು ಹಿತಗಳಿಗೆ ರಕ್ಷಣೆಯನ್ನೂ ಕೊಡತಕ್ಕ ನಿಬಂಧನೆಗಳಿಗೆ ಸಮ್ಮತಿಸುವ ಶರತ್ತಿನ ಮೇಲೆ ಸ್ವೀಕಾರಕ್ಕೆ ಅವರಿಗೆ ಅಧಿಕಾರವನ್ನೂ ಕೊಡಬೇಕೆಂದೂ ತೀರ್ಮಾನವಾಯಿತು ಗವರ್ನರ್ ಜನರಲ್ ಮತ್ತು ವೈಸ್‌ರಾಯರ ಆಜ್ಞೆಯಂತೆ ಈಗಿನ ಮಹಾರಾಜರ ತಂದೆಯವರನ್ನು ಸಿಂಹಾಸನದ ಮೇಲೆ ೧೮೮೧ ರಲ್ಲಿ ಕುಳ್ಳಿರಿಸಿದಾಗ ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್ ಎಂಬ ಹೆಸರಿನಲ್ಲಿ ಆ ರಾಜರು ಯಾವ ನಿಯಮಗಳಿಗನುಸಾರವಾಗಿ ಮೈಸೂರು ರಾಜ್ಯವನ್ನು ಅನುಭವಿಸಬಹುದೋ ಆ ನಿಯಮಗಳೆಲ್ಲಾ ಬರೆಯಲ್ಪಟ್ಟವು ೧೯೧೩ ನೆಯ ಸಂವತ್ಸರದಲ್ಲಿ ಈಗಿನ ಮಹಾರಾಜರು ಬ್ರಿಟಿಷ್ ಸರಕಾರಕ್ಕೂ ಅವರಲ್ಲಿ ಉಂಟಾದ ಸಂಧಿಯು ಪರಿವರ್ತನವಾಗಿ ಈ ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರನ್ನು ಬೇರೆ ಕಾಗದದಿಂದ ಬದಲಾಯಿಸಿಕೊಂಡರು

(೬ ನೆಯ ಪುಟವನ್ನು ನೋಡಿ)

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಬಜೆಟ್ ಅಧಿವೇಶನದಲ್ಲಿ ದಿವಾನ್‌ಸಾಹೇಬರವರು ಅಪ್ಪಣೆ ಕೊಡಿಸಿದ ಭಾಷಣ.

19 ನೆಯ ಇಸವಿ ಜೂನ್ 13 ನೆಯ ತಾರೀಖು

ಕ್ವೆಟ್ಟಾದಲ್ಲಿ ನಡೆದ ವಿಷಾದ ಘಟನೆ

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿರಾ

[illegible]

ಚಕ್ರವರ್ತಿ ಸಾರ್ವಭೌಮರ ಆಳ್ವಿಕೆಯ ರಜತೋತ್ಸವ.

[illegible]

1934-35ನೆಯ ಮತ್ತು 1935-36ನೆಯ ಸಾಲುಗಳ ಆಯವ್ಯಯಗಳು

[illegible]

ದೈವದತ್ತವಾಗಿ ಲಭಿಸಿರುವ ಭಾಗ್ಯವಾಗಿರುವ ಬಾಬುಗಳು.

[illegible]

ಸಾಧು ಗಣಿಗಳ ಕಂಪನಿಗಳ ... [illegible] ... ವಿಧ್ಯಮಾನಗಳ ಫಲಿತಾಂಶವಾಗಿ ನಮಗೆ 1934-35 ನೆಯ ಸಾಲಿನಲ್ಲಿ 9,80,000 ರೂಪಾಯಿಗಳಷ್ಟು ಹೆಚ್ಚಿಗೆ ರಾಜಾದಾಯವು ಬಂದಿದೆ ... [illegible] ... 1,63,000 ರೂಪಾಯಿಗಳಷ್ಟು ನೊಬಲಗೂ ... [illegible] ... 1,15,000 ರೂಪಾಯಿಗಳಷ್ಟು ... [illegible] ... 10,000 ರೂಪಾಯಿಗಳಷ್ಟು ನೊಬಲಗು ಹೆಚ್ಚಾಗಿ ಬರುತ್ತವೆ ಎಂದರೆ 1935-36 ನೆಯ ಸಾಲಿಗೆ ಒಟ್ಟು 12,68,000 ರೂಪಾಯಿಗಳ ವರಮಾನವು ಬರುವಂತಾಯಿತು.

[illegible] ... 1,17,000 ರೂಪಾಯಿಗಳು ... [illegible] ... ಈ ಬಾಬಲುಗಳು 1933-34 ನೆಯ ಸಾಲಿನಲ್ಲಿ 3,41,000 ರೂಪಾಯಿಗಳು 1934-35 ನೆಯ ಸಾಲಿನಲ್ಲಿ 1,82,000 ರೂಪಾಯಿಗಳು

ಕೃಷ್ಣರಾಜಸಾಗರ ವಿದ್ಯುಚ್ಛಕ್ತಿಯ ಮತ್ತು ನೀರಾವರಿಯ ಕಾರ್ಖಾನೆಗಳು.

[illegible] ... 1932-33 ನೆಯ ಸಾಲಿನಲ್ಲಿ ... 33 ಲಕ್ಷ ರೂಪಾಯಿಗಳಾಗಿದ್ದಿತು 1933-34 ನೆಯ ಸಾಲಿನಲ್ಲಿ ಅದು 35 ಲಕ್ಷ ರೂಪಾಯಿಗಳೂ ಮತ್ತು 1934-35 ನೆಯ ಸಾಲಿನಲ್ಲಿ 37 ಲಕ್ಷ ರೂಪಾಯಿಗಳೂ ಆಗಿದ್ದಿತು 1935-36 ನೆಯ ಸಾಲಿನಲ್ಲಿ ಈ ಕಾರ್ಖಾನೆಗಳಿಂದ 38 ಲಕ್ಷ ರೂಪಾಯಿಗಳ ನಿವ್ವಳ ವರಮಾನವು ಬರಬಹುದೆಂದು ಅಂದಾಜುಮಾಡಿದೆ. ... [illegible] ... 1935-36 ನೆಯ ಸಾಲಿನಲ್ಲಿ ... [illegible] ... 1936 ನೆಯ ... [illegible]

[illegible]

ಮೈಸೂರು ರೈಲ್ವೆಗಳು.

[illegible]

(ಸಶೇಷ)

ಮಹನೀಯರ ಹಿತೋಕ್ತಿಗಳು.

(ಹಿಂದಿನಿಂದ ಮುಂದುವರಿದುದು)

ಸದಾಚಾರದ ಮುಖ್ಯ ಲಕ್ಷಣಗಳು [illegible] ಮತ್ತು [illegible] ಆಗುವದು

ಸದಾಚಾರವು [illegible] ಇಂದ್ರಿಯಗಳು [illegible]

ಸದಾಚಾರದಿಂದ ಸ್ವಭಾವಜನ್ಯವಾದ ಶಕ್ತಿಯು [illegible]

[illegible]

101 [illegible]

102 [illegible]

103 "ವಿಷಯೇಂದ್ರಿಯಗಳ ಸಂಯೋಗದಿಂದ [illegible]

104 [illegible]

105 [illegible]

106 [illegible]

107 [illegible]

108 [illegible]

(೬ನೇ ಪುಟವನ್ನು ನೋಡಿ)

ಶ್ರೀಮನ್ಮಹಾರಾಜರವರ
೫೨ ನೆಯ ವರ್ಧಂತೀ ಮಹೋತ್ಸವ

ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್
ಮಹಾಪ್ರಭುಗಳವರು

ಪಂಚಾಚಾರ್ಯ ಪ್ರಭಾ.

೧೯೩೫ ನೇ ಜೂನ್ ತಾ|| ೧೭ ನೇ ಸೋಮವಾರ

ಶ್ರೀಮನ್ಮಹಾರಾಜರವರ
೫೨ ನೆಯ ವರ್ಧಂತೀಮಹೋತ್ಸವ

ಧರ್ಮಾವತಾರಿಗಳಾಗಿ ಅವತರಿಸಿ ಮೈಸೂರು ಮಹಾ ಸಂಸ್ಥಾನವನ್ನಾಳುತ್ತಿರುವ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ., ಜಿ.ಬಿ.ಇ. ಮಹಾಪ್ರಭುಗಳವರ ೫೨ ನೆಯ ವರ್ಷದ ವರ್ಧಂತ್ಯುತ್ಸವವು ಇದೇ ತಿಂಗಳು ೧೫ನೆಯ ತಾರೀಖು ಶನಿವಾರ ದಿವಸ ರಾಜಧಾನಿಯಲ್ಲಿ ಬಹು ವೈಭವದಿಂದ ನೆರವೇರಿತು. ಪ್ರಾತಃಕಾಲ ಮಂಗಳಸ್ನಾನ ನಂತರದಲ್ಲಿ ಮಹಾಪ್ರಭುಗಳವರ ಆಯುರ್ವರ್ಧನ ಸೂಚಕಗಳಾದ ೫೨ ತೋಪುಗಳು ಹಾರಿಸಲ್ಪಟ್ಟವು. ಶ್ರೀಮನ್ಮಹಾರಾಜರವರು ಗುರುದೇವತಾಪೂಜಾದರ್ಶನೋಚಿತವಾದ ಉಡುಪಿನಿಂದೊಡಗೂಡಿ ತಮ್ಮ ನಿತ್ಯಕರ್ಮಗಳನ್ನು ಮುಗಿಸಿಕೊಂಡು ೧೦|| ಘಂಟೆಗೆ ಸರಿಯಾಗಿ ಕಲ್ಯಾಣಮಂಟಪಕ್ಕೆ ದಯಮಾಡಿಸಿ ಭದ್ರಸಿಂಹಾಸನವನ್ನಲಂಕರಿಸಿದರು. ಅಖಿಲ ರಾಜಬಂಧುಗಳೂ ಸಚಿವೋತ್ತಮ ಸಚಿವರೂ ಸರ್ಕಾರಿ ಉದ್ಯೋಗಿಗಳೂ ನಗರಪ್ರಮುಖರೂ ರಾಜಭಕ್ತಿದ್ಯೋತಕಗಳಾದ ಮುದ್ರೆಗಳಿಂದೊಡಗೂಡಿ ಮಹಾಪ್ರಭುಗಳಿಗೆ ಕ್ರಮದಿಂದ ಮುಜರೆಯನ್ನು ಮಾಡಿ ಅವರವರ ನಿಯಮಿತ ಸ್ಥಳಗಳಲ್ಲಿ ಕುಳಿತರು. ಶ್ರಾವ್ಯಗಳಾದ ವಾದ್ಯಧ್ವನಿಗಳೂ, ಗಾನಾಲಾಪಗಳೂ, ಜಯಧ್ವನಿಗಳೂ ಭೂಮ್ಯಂತರಿಕ್ಷಗಳನ್ನು ವ್ಯಾಪಿಸಿದ್ದುವು. ಕ್ರಮದಿಂದ ವಂದಿಮಾಗಧರ ಮತ್ತು ವೈದಿಕೋತ್ತಮರ ಆಶೀರ್ವಾದಗಳು ನಡೆದವು. ಆಲಿ ಸಂಗೀತ ಮತ್ತು ಸೈನಿಕರ ಮುಜರೆಗಳು ನಡೆದುವು. ತರುವಾಯ ಸಭಿಕರಿಗೆ ಪುಷ್ಪಗಂಧಾದಿ ವಿನಿಯೋಗವಾಗಿ ಸಭೆಯು ವಿಸರ್ಜಿತವಾಯಿತು.

ಮಧ್ಯಾಹ್ನ ೬ ಘಂಟೆಗೆ ಸರಿಯಾಗಿ ಮಹಾಪ್ರಭುಗಳವರ ಜನ್ಮಮಹೋತ್ಸವವು ಅರಮನೆಯಿಂದ ದೊಡ್ಡ ಮೆರವಣಿಗೆಯಾಗಿ ಹೊರಟಿತು. ಮಹಾಪ್ರಭುಗಳವರು ರತ್ನಖಚಿತ ಸುವರ್ಣಾಭರಣಗಳಿಂದಲಂಕೃತನಾದ ಪಟ್ಟದಾನೆಯನ್ನು ಆರೋಹಣ ಮಾಡಿದ್ದರು. ಭಾವಿಪ್ರಭುಗಳಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರು ದಿವ್ಯಾಶ್ವವನ್ನಾರೋಹಣ ಮಾಡಿ ಮಹಾಪ್ರಭುಗಳವರ ಪಾರ್ಶ್ವದಲ್ಲಿ ಶೋಭಿಸುತ್ತಿದ್ದರು. ಚತುರಂಗಸೈನ್ಯವು ಒಳ್ಳೆ ಶಿಸ್ತಿನಿಂದ ಮುಂದರಿಯಿತು. ಮಹಾಪ್ರಭುಗಳವರ [illegible] ಧಾರಿಯು ಪ್ರತ್ಯಕ್ಷವಾಗಿ ಉಭಯಪಾರ್ಶ್ವಗಳಲ್ಲಿಯೂ ಅಂಜಲಿಬದ್ಧರಾಗಿ ನಿಂತಿದ್ದ ಅಸಂಖ್ಯ ಪ್ರಜೆಗಳ ಮೇಲೆ ಪ್ರವಹಿಸುತ್ತಲಿತ್ತು. ಪ್ರೇಕ್ಷಕಮಹಾಶಯರು ರಾಜಭಕ್ತಿಪ್ರೇರಕದಿಂದ ಜಯಜಯ ಶಬ್ದಗಳನ್ನುಚ್ಚರಿಸುತ್ತ ಹಸ್ತತಾಡನವಮಾಡುತ್ತಿದ್ದರು. ಉತ್ಸವವು ದೊಡ್ಡಗಡಿಯಾರದ ಸಮೀಪಕ್ಕೆ ಬಂದೊಡನೆಯೇ ಯೂರೋಪಿಯನ್ನರು ಮಹಡಿಯ ಮೇಲಿಂದ ಪುಷ್ಪವೃಷ್ಟಿಗರೆದರು. ದೊಡ್ಡಪೇಟೆಯಲ್ಲಿರುವ ಪ್ರಮುಖವರ್ತಕಮಹಾಶಯರು ದಾರಿಯುದ್ದಕ್ಕೂ ತಮ್ಮ ತಮ್ಮ ಮನೆಗಳ ಮುಂಭಾಗದಲ್ಲಿ ನಾನಾ ತೋರಣಗಳನ್ನೊಪ್ಪಿಸಿ ರಾಜಭಕ್ತಿಯನ್ನು ತೋರಿಸುತ್ತಿದ್ದರು. ಅಷ್ಟರಲ್ಲಿ ಮೇಘಮಾಲೆಗಳು ಆಕಾಶವೆಲ್ಲ ಆವರಿಸಿ ತುಂತುರುಹನಿಗಳನ್ನು ಸುರಿಸಲಾರಂಭಿಸಿದುವು. ಆ ಮೇಘಾವರಣವು ಉತ್ಸವಕ್ಕಾಗಿ ಬಂದ ಲಕ್ಷಾಂತರ ಜನಗಳಿಗೆ ಭೀತಿಯನ್ನುಂಟುಮಾಡಿತು. ತತ್ಕ್ಷಣದಲ್ಲಿಯೇ ಮೇಘರಾಜನು ಮಾಯವಾಗಿ ಜನಗಳಿಗೆ ಸಂತೋಷವನ್ನುಂಟುಮಾಡಿದನು. ಉತ್ಸವವು ಗೌರ್ನಮೆಂಟ್ ಹೌಸನ್ನು ತಲ್ಪಿ ಸ್ವಲ್ಪ ಪರ್ಯಾಯ ನಡೆದಬಳಿಕ ಉಭಯಮಹಾಪ್ರಭುಗಳು ಆನೆಗಳ ದಿಳಿದು ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ತೆಗೆದುಕೊಂಡರು. ಬಂದ ಅತಿಥಿಗಳೆಲ್ಲಾ ಅಲ್ಪಾಹಾರಪಾನೆಯಿಂದ ತೃಪ್ತಿಪಡೆದರು. ರಾತ್ರಿ ೯ ಘಂಟೆಯ ಸಮಯಕ್ಕೆ ವಿದ್ಯುದ್ದೀಪಮಾಲೆಯಿಂದಲೂ ಪುಷ್ಪಮಾಲಿಕೆಗಳಿಂದಲೂ ಭವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಮೋಟಾರಿನಲ್ಲಿ ಉಭಯಮಹಾಪ್ರಭುಗಳು ದಯಮಾಡಿಸಿದರು. ಉತ್ಸವವು ಗೌರ್ನಮೆಂಟ್ ಹೌಸಿನ ಮುಂಭಾಗದಲ್ಲಿರುವ ಹೆಬ್ಬಾಗಿಲಿನಿಂದ ಹೊರಟು ನಕ್ಷತ್ರಮಾಲಿಕೆಗಳಂತೆ ಶೋಭಿಸುತ್ತಿರುವ ವಿದ್ಯುದ್ದೀಪಮಾಲಿಕೆಗಳಿಂದೊಡಗೂಡಿದ ದೊಡ್ಡಪೇಟೆಯ ಮಾರ್ಗವಾಗಿ ಹತ್ತು ಘಂಟೆಯ ಸಮಯಕ್ಕೆ ಅರಮನೆಯನ್ನು ತಲ್ಪಿತು.

ಈ ವರ್ಷದ ವರ್ಧಂತೀ ಮಹೋತ್ಸವ ಸಮಯದಲ್ಲಿ ಕಲ್ಲಿಕೋಟೆ ರಾಜರು, ವೆಂಕಟಗಿರಿ ಮಹಾರಾಜರು, ಬೊಬ್ಬಿಲಿ ರಾಜರು, ಕೊಲಂಕರಾಜರು ಆಗಮಿಸಿದ್ದಲ್ಲದೆ, ಶ್ರೀ ಭೂಲಾಭಾಯಿ ದೇಸಾಯಿಯವರು, ಬೊಂಬಾಯಿ ವಿಶ್ವವಿದ್ಯಾಲಯದ ಮೆಡಿಕಲ್ ಕಾಲೇಜ್ ಪ್ರೊ|| ಎ|| ಆರ್. ವಾಜಿಫ್‌ದಾರ್‌ರವರೂ, ಡಾ|| ಮೌಂತ ವಿಶ್ವವಿದ್ಯಾಲಯದ ಡಾ|| ಜೋಷಿಯವರು, ಕೇಂದ್ರ ಶಾಸನಸಭೆಯ ಸದಸ್ಯರಾದ ಮಿ|| ಜೇಮ್ಸ್‌ರವರು, ಬೊಂಬಾಯಿಯ ಶ್ರೀ ಇಸಾಜಿಯವರು, ಮದ್ರಾಸಿನ [illegible]ರಾದ ಮಿ|| ನ್ಯೂಜೆಂಟ್ ಗ್ರಾಂಟರವರು, ಲಂಡನ್ ಫಿಲ್ಮ್ ಕಂಪೆನಿಯ ಓಸ್ಮಾಂಡ್‌ರವರು, ಮದ್ರಾಸ್ ಪೋಸ್ಟ್‌ಮಾಸ್ಟರ್ ಜನರಲ್‌ರವರು, ಚನ್ನ್ಯರು ಲೆಸ್ಟರ್ ಮುಂತಾದ ಅನೇಕ ಮಹಾಶಯರು ಆಗಮಿಸಿದ್ದರು.

ಪಾತ್ರೇ ತ್ಯಾಗೀ ಗುಣೇ ರಾಗೀ ಭೋಗೀ ಪರಿಜನೈಸ್ಸಹ ।
ಭಾವಬೋದ್ಧಾ ರಣೇ ಯೋದ್ಧಾ ಪ್ರಭುಃ ಪಂಚಗುಣೋ ಭವೇತ್ ॥

ಸತ್ಪಾತ್ರದಲ್ಲಿ ತ್ಯಾಗವೂ, ಗುಣಾಢ್ಯರಲ್ಲಿ ಪ್ರೀತಿಯೂ, ಪರಿಜನಗಳೊಡನೆ ಸುಖಾನುಭವವೂ, ಪ್ರಜೆಗಳ ಇಂಗಿತವನ್ನರಿಯುವುದೂ, ಪರಾಕ್ರಮವೂ ಈ ಐದು ಗುಣಗಳು ರಾಜಗುಣಗಳೆಂಬ ರಾಜನೀತಿಯು. ನಮ್ಮ ಮಹಾಪ್ರಭುವರ್ಯರು ಈ ಗುಣಮಾಲಿಕೆಯನ್ನು ಸದಾ ಧರಿಸಿರುವರಲ್ಲದೆ, ಪರಮಾಸ್ತಿಕ್ಯವೆಂಬ ಶಿರೋರತ್ನದಿಂದ ಭೂಷಿತರಾಗಿರುವುದರಿಂದ ಮೈಸೂರು ರಾಜ್ಯವು ದ್ವಿತೀಯ ರಾಮರಾಜ್ಯವೆಂದು ಖ್ಯಾತಿವಡೆದಿರುತ್ತದೆ. ಈ ಧವಳ ಮೂರ್ತಿಗಳ ಆಳ್ವಿಕೆಯ ಮೈಸೂರು ರಾಜ್ಯದ ಪ್ರಜೆಗಳು ಯಾವ ಕೊರತೆಗಳ ಸ್ಪರ್ಶವೂ ಇಲ್ಲದೆ ಸದಾ ಸಂತೋಷಚಿತ್ತರಾಗಿರುವುದನ್ನು ಕೇಳಿ ಅನೇಕ ದೇಶೀಯ ವಿದೇಶೀಯ ನರಪಾಲಕರುಗಳು ನಮ್ಮ ಮಹಾಪ್ರಭುಗಳ ರಾಜ್ಯಪಾಲನ ಚಾತುರ್ಯವನ್ನೂ, ಆಧ್ಯಾತ್ಮಬಲವನ್ನೂ ನೋಡಿಕೊಂಡು ಹೋಗುತ್ತಿರುವುದೇ ನಿದರ್ಶನವಾಗಿರುತ್ತದೆ. ಪ್ರಾಚೀನ ಕಾಲದಲ್ಲಿ ಪ್ರತಿಷ್ಠಿತ್ಯವಲಂಬಿಯಾದ ನಮ್ಮ ಭಾರತಾಂಗನೆಯು ಪರಮಾಸ್ತಿಕರೂ ದೈವನಿಷ್ಠರೂ ಧರ್ಮೈಕಶರಣರೂ ಮಹಾವೀರರೂ ಆದ ಮಹಾರಾಜರನ್ನು ತಾಯಿ ಹಿಡಿದು [illegible]. ಇಂಥ ಭಾರತಮಾತೆಯ ಗರ್ಭಜಾತರೆಲ್ಲರೂ ಆಸ್ತಿಕರೂ ದೇವಭಕ್ತರೂ ಧರ್ಮನಿಷ್ಠರೂ ಆಗಿದ್ದರು. ಇಂಥ ಪವಿತ್ರವಾದ ಧರ್ಮವು ಈಗಿನ ನವೀನವಾತಾವರಣಕ್ಕೆ ಸಿಲುಕಿ ಜರ್ಝರಿತವಾಗುತ್ತಿರುವಲ್ಲಿ ಧಾರ್ಮಿಕ ನೈತಿಕ ರಕ್ಷಣೆಯ ವಿಧ್ಯುಕ್ತನೈಪುಣ್ಯವನ್ನು ಪಡೆದ ಇಂಥ ಮಹಾಪ್ರಭುವರ್ಯರ ಆಳ್ವಿಕೆಗೆ ಸಂಬಂಧಪಟ್ಟ ಪ್ರಜೆಗಳ ಭಾಗ್ಯೋದಯವನ್ನು ಎಷ್ಟು ವರ್ಣಿಸಿದರೂ ತೀರದು. ಸಕಲಸದ್ಗುಣಗಣಮಂಡಿತರಾದ ನಮ್ಮ ಮಹಾಪ್ರಭುಗಳವರಿಗೆ ಇಂತಹ ವರ್ಧಂತೀಮಹೋತ್ಸವಗಳು ಅನೇಕಾನೇಕವಾಗಿ ನೆರವೇರಿ ಮೈಸೂರುದೇಶದ ಪ್ರಜೆಗಳಿಗೆ ಮಹಾಪ್ರಭುಗಳಿಂದ ಇನ್ನೂ ಅನೇಕ ವಿಧವಾದ ಸುಖಗಳುಂಟಾಗುವಂತೆ ಮಾಡಲೆಂದು ಜಗನ್ನಿಯಾಮಕನಾದ ಆ ಪರಮೇಶ್ವರನನ್ನು ಅನನ್ಯಸಾಧಾರಣ ಭಾವದಿಂದ ಭಜಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಈ ವಾರ ರಾಜಧಾನಿಯಲ್ಲಿ ಉತ್ತಮವಾದ ಮಳೆಯಾಯಿತು ಇತರ ಕಡೆಗಳಲ್ಲಿಯೂ ಮಳೆಯು ವಿಶೇಷವಾಗಿ ಆಯಿತೆಂದು ತಿಳಿದುಬರುತ್ತದೆ

ಶ್ರೀಮನ್ಮಹಾರಾಜರವರು ಕೈಟ್ಟಾ ಭೂಕಂಪದಲ್ಲಿ ಸಿಲುಕಿ ದುಃಖಪಡುತ್ತಿರುವವರ ಸಹಾಯಕ್ಕಾಗಿ 10000 ರೂಪಾಯಿಗಳನ್ನು ದಯಪಾಲಿಸಿರುವರೆಂದು ತಿಳಿದುಬರುತ್ತದೆ

ಇದೇ ತಿಂಗಳು 13 ನೆಯ ತಾರೀಖಿನಿಂದ ರಾಜಧಾನಿಯಲ್ಲಿ ಪ್ರಜಾಪ್ರತಿನಿಧಿಸಭೆಯು ಪ್ರಾರಂಭವಾಗಿದ್ದು ಪ್ರತಿದಿವಸವೂ ರಾಜಕೀಯ ವಿಷಯಗಳ ಬಗ್ಗೆ ಚರ್ಚೆಗಳು ನಡೆಯುತ್ತಿರುವುವು

ಬರುವ ಜುಲೈ 1 ನೆಯ ತಾರೀಖಿನಿಂದ ನಂಜನಗೂಡಿಗೆ ರೈಲು ಅಥವಾ ... ದಿಗಳಲ್ಲಿ ಹೋಗುವ ಪ್ರತಿಯೊಬ್ಬರಿಂದಲೂ ೧ ಕಾಸಿನ ತೆರಿಗೆ ಯಾತ್ರಾ ... ಯನ್ನು ವಸೂಲು ಮಾಡತಕ್ಕದ್ದೆಂದು ಸರ್ಕಾರದವರು ಪ್ರಕಟಣೆ ಮಾಡಿರುತ್ತಾರೆ

ಹಾಸನ ತಾ|| ಯಲಿಯೂರಿನಲ್ಲಿ ಗ ದನಮನೆಯಲ್ಲಿ ಸಂಸಾರ ಮಾಡುತ್ತಿದ್ದ ನಂಜಮ್ಮನೆಂಬ ಮೈನರ್ ಹುಡುಗಿಯನ್ನು ಮಾಯಾಚಾರಿಎಂಬವನು ಅಪಹರಿಸಿದನೆಂದು ವಿಚಾರಣೆಯಾಗಿ ಮೈಸೂರ ಸರ್ಕನ್ ಜಡ್ಜರು ಆಪರಾಧಿಗೆ ೩ ವರ್ಷ ಕಠಿಣಶಿಕ್ಷೆ ವಿಧಿಸಿದರು

ಕಳೆದ ಸೋಮವಾರ ಮಿಲ್ಲಿನ ಕೆಲಸಗಾರರು ತಮಗೆ ಪ್ರತಿವರ್ಷ ಕೊಡುತ್ತಿದ್ದ ಬೋನಸ್ಸನ್ನು ಕೊಡಲಿಲ್ಲವೆಂದು ಕೆಲಸಕ್ಕೆ ಹೋಗದೆ ಸ್ಟ್ರೈಕ್ ಹೂಡಿದರು ಪೋಲೀಸರು ಬಂದು ತಕ್ಕ ಬಂದೋಬಸ್ತು ಮಾಡಿದ್ದರಿಂದ ಗಲಭೆ ಏನೂ ನಡೆಯಲಿಲ್ಲ ಈಗ ಕೆಲಸಗಾರರು ಎಂದಿನಂತೆ ಪುನಃ ಕೆಲಸಕ್ಕೆ ಹೋಗುತ್ತಿದ್ದಾರೆ

ಕೋಲಾರದ ಚಿನ್ನದ ಗಣಿಯಲ್ಲಿ ಕೆಲಸಮಾಡುವ ರಾಜಾರಾವ್ ಎಂಬವರ ಮನೆಯಲ್ಲಿ ಕೆಲಸಮಾಡಿಕೊಂಡಿದ್ದ ಜೀವರತ್ನಮ್ಮ ಎಂಬ 10 ವರ್ಷದ ಅನಾಥ ಹುಡುಗಿಗೆ ಎಷ್ಟು ಹೇಳಿಕೊಟ್ಟರೂ ತಮಿಳಿನಲ್ಲಿ 'ಸದನಾರ್' ಎಂಬ ಹೆಸರನ್ನು ಬರೆಯಲು ಬರಲಿಲ್ಲವೆಂದು ಗಂಡಹೆಂಡರು ಸೇರಿ ಕೈಕಾಲುಗಳನ್ನು ಕಟ್ಟಿ ಸಲಾಕೆಯನ್ನು ಕಾಯಿಸಿ ಮೈ ಕೈಗೆ ಬರೆ ಹಾಕಿದರಂತೆ! ಆಗ ಆ ಹುಡುಗಿಯ ಆರ್ತಸ್ವರವನ್ನು ಕೇಳಿ ನೆರೆಹೊರೆಯವರು ಕೂಡಲು ಪೋಲೀಸರು ಬಂದು ಆಪ್ರಾಧಿಗಳನ್ನು ಸ್ಟೇಷನ್ನಿಗೆ ಸಾಗಿಸಿ ವಿಚಾರಣೆ ಮಾಡುತ್ತಿದ್ದಾರೆಂದು ತಿಳಿದುಬಂದಿದೆ

ಮೈಸೂರು ಕಪ್ ಸ್ವೀಪ್ ಲಾಟರಿಯಲ್ಲಿ ಮೊದಲನೇ ಬಹುಮಾನವು 7478 ರೂ ಗಳು ... ಜಗನ್ನಿವಾಸ ಸೇಟ್ ಇಂಜನಿಯರಿಂಗ್ ಕಂಪೆನಿ ಶ್ರೀ ಎಂ ರಾಮರಾಯರವರ ಪತ್ನಿಯವರಿಗೂ, ಎರಡನೇ ಬಹುಮಾನವು 3239 ರೂ ಗಳು ಮಡಕೇರಿಯ ರೈಟರ್ ಒಬ್ಬರಿಗೂ, ಮೂರನೇ ಬಹುಮಾನವು 1869 ರೂ ಗಳು ಮದರಾಸಿನ ಮಾಣಿಕ್ಯವೇಲುಮೊದಲಿಯಾರರಿಗೂ ಉಳಿದವರಿಗೆ ನೂರು ನೂರು ರೂ ಗಳೂ ದೊರೆತವು

ವರ್ತಮಾನಸಂಗ್ರಹ.

ಜನಶಪುರ ಮತ್ತು ಬಳ್ಳಾರಿ ಡಿಸ್ಟ್ರಿಕ್ಟುಗಳಲ್ಲಿ ಸುಮಾರು 90 ಸಾವಿರ ಜನ ಕ್ಷಾಮ ಪೀಡಿತರಿಗೆ ಕಳೆದ ವಾರ ಸರ್ಕಾರದವರು ಕ್ಷಾಮ ನಿವಾರಣಾರ್ಥವಾಗಿ ಸಹಾಯ ಮಾಡಿದರೆಂದು ಕೇಳುತ್ತೇವೆ

ಕಳೆದ 7 ನೇ ತಾರೀಖಿನ ದಿವಸ ರಾತ್ರಿ ಬಳ್ಳಾರಿಗೆ ಸುಮಾರು 5 ಮೈಲು ದೂರದಲ್ಲಿರುವ ಕಪ್ಪಗಲ್ಲು ಎಂಬಲ್ಲಿ ಈಡಿಗರ ರಾಮಯ್ಯನೆಂಬವನ ಮನೆಗೆ ಸಿಡಿಲು ಬಿಡಿದು ಹಿತ್ತಲಲ್ಲಿ ಕಟ್ಟಿದ್ದ 2 ಎಮ್ಮೆ, ಎತ್ತು ೩ ಕರುಗಳು ಸತ್ತವು ಮನೆಯವರಿಗೆ ಕೆಲವು ಘಂಟೆಗಳ ಕಾಲ ಸ್ಮೃತಿತಪ್ಪಿದ್ದು ಅನಂತರ ಎಲ್ಲರೂ ಚೇತರಿಸಿಕೊಂಡರು ಅದೃಷ್ಟವಶದಿಂದ ಯಾರಿಗೂ ಅಪಾಯವಾಗಿರುವುದಿಲ್ಲವೆಂದು ತಿಳಿದುಬಂದಿದೆ

ಕೈಟ್ಟಾನಗರದಲ್ಲಿ ವಿವಾಹಮಾಡುವ ಉದ್ದೇಶದಿಂದ ಸುಮಾರು 70 ಜನರು ಪರಸ್ಥಳದಿಂದಬಂದು ಒಂದು ಧರ್ಮಶಾಲೆಯಲ್ಲಿ ಇಳಿದು ರಾತ್ರಿ ಸುಮಾರು 1 ಘಂಟೆಯವರೆಗೂ ವಿನೋದವಾಗಿ ಕಾಲಕಳೆದು ಮಲಗಿದ್ದರು ಬೆಳಗಾಗ ವಲ್ಲಿ ವರನೊಬ್ಬನನ್ನು ಬಿಟ್ಟು ಉಳಿದವರೆಲ್ಲರೂ ಭೂಕಂಪದಿಂದ ಮೃತರಾದರು ಬೀರಿಕೊಠಡಿಯಲ್ಲಿ ಮಲಗಿದ್ದ ವರನನ್ನುಮಾತ್ರ ಯಾರೋ ಮಣ್ಣಿನಿಂದ ಮೇಲಕ್ಕೆತ್ತಿ ಬದುಕಿಸಿದರಂತೆ!

ದೈವಲೀಲೆ!

ಕ್ವೆಟ್ಟಾ ಭೂಕಂಪ ಸಮಯದಲ್ಲಿ ಭೂಮಿಯ ಬಿರುಕಿನಲ್ಲಿ ಸಿಕ್ಕಿಹೋಗಿದ್ದ ಹೆಂಗಸೊಬ್ಬಳನ್ನು 3 ದಿನಗಳ ಮೇಲೆ ಅಗೆದು ತೆಗೆಯಲು ಆಕೆಯು ಜೀವಂತಳಾಗಿದ್ದಳು. ಈಕೆಯು ಗರ್ಭಿಣಿಯಾಗಿದ್ದುದರಿಂದ ಅಲ್ಲಿಯೇ ಮಗುವನ್ನು ಹೆತ್ತಿದ್ದಳು ತಾಯಿಮಕ್ಕಳಿಬ್ಬರೂ ಸುರಕ್ಷಿತರಾಗಿದ್ದಾರೆಂದು ತಿಳಿದುಬರುತ್ತದೆ

ಮನುಷ್ಯನ ಜೀವಿತಪ್ರಮಾಣವನ್ನು ಕಂಡುಹಿಡಿಯುವ ಯಂತ್ರ!

ಡಾ|| ಬರ್ನ್ಹಸ್ಟರ್ ಎಂಬ ಜರ್ಮನ್ ವಿಜ್ಞಾನಶಾಸ್ತ್ರಜ್ಞರು ಒಂದು ವಿಚಿತ್ರಯಂತ್ರವನ್ನು ಕಂಡುಹಿಡಿದಿರುವರಂತೆ! ಇದರ ಸಹಾಯದಿಂದ ಮನುಷ್ಯನ ಆಯುಃಪರಿಮಾಣವನ್ನು ಕಂಡು ಹಿಡಿಯಬಹುದಾಗಿದೆ ಈ ಯಂತ್ರವು ಮನುಷ್ಯನ ಸಂತ್ರಶಕ್ತಿಯನ್ನು ಪರೀಕ್ಷಿಸಿ ಆತನು ಇನ್ನೆಷ್ಟು ಕಾಲ ಜೀವಿಸಬಲ್ಲನೆಂಬುದನ್ನು ತಿಳಿಸುವುದಂತೆ

ಲಂಡನ್ನಿನಲ್ಲಿ ಬಾಲ್ಯವಿವಾಹ

ಇಂಡಿಯಾದೇಶದಲ್ಲಿ ಬಾಲ್ಯವಿವಾಹ ಪದ್ಧತಿಗೆ ಪ್ರತಿಬಂಧಕಗಳನ್ನು ತಂದೊಡ್ಡುತ್ತಿರುವ ಕಾಲದಲ್ಲಿ ಲಂಡನ್ನಿನಲ್ಲಿ ಇಂಪೀರಿಯಲ್ ಕಾಂಗ್ರೆಸ್ಸು ಈ ಬಾಲ್ಯವಿವಾಹಗಳನ್ನು ಜಾರಿಗೆ ತರಲು ವಿಶೇಷಪ್ರಯತ್ನಗಳನ್ನು ನಡೆಸುತ್ತಿದೆ ಬಾಲ್ಯವಿವಾಹಸಂಬಂಧದ ಕಾಯಿದೆ ಕಾನೂನುಗಳನ್ನು ಮುರಿದು ಪ್ರೌಢವಿವಾಹಗಳನ್ನು ನಿರುತ್ಸಾಹಗೊಳಿಸುವುದೇ ಈ ಸಂಘದ ಉದ್ದೇಶವಂತೆ!

ಹಾವಿನಕಾಟ

ತಲಚೇರಿಯಲ್ಲಿ ಒಬ್ಬ ವಿದ್ಯಾರ್ಥಿಯನ್ನು ಅವನ ಮನೆಯ ಅಂಗಳದಲ್ಲಿ ಒಂದು ನಾಗರಹಾವು ಕಚ್ಚಿಕೊಂದಿತು ಇದು ಕೆಲವು ದಿವಸಗಳ ಹಿಂದೆ ಆ ಹುಡುಗನ ತಮ್ಮನನ್ನು ಅದೇ ಸ್ಥಳದಲ್ಲಿ ಕೊಂದಿದ್ದಿತಂತೆ! ಮನೆಯಲ್ಲಿ ಸೇರಿಕೊಂಡಿರುವ ಹಾವು ಎಷ್ಟು ಪ್ರಯತ್ನಪಟ್ಟರೂ ಸಿಕ್ಕಿರುವುದಿಲ್ಲ ಜ್ಯೋತಿಷಿಕರು ಅದು ಇನ್ನೂ ಇಬ್ಬರನ್ನು ಅದೇ ಸ್ಥಳದಲ್ಲಿ ಕೊಲ್ಲುವುದೆಂದು ಹೇಳುತ್ತಾರೆ

ರೈಲಿನಲ್ಲಿ ಸಿನಿಮಾ

ಲಂಡನ್ ಪಟ್ಟಣದ ಕೆಲವು ರೈಲುಗಳಲ್ಲಿ ಪ್ರಯಾಣಿಕರು ಪ್ರಯಾಣಮಾಡುತ್ತಿರುವಾಗಲೇ ಸಿನಿಮಾ ನೋಡಲು ಅನುಕೂಲಿಸುವಂತೆ 44 ಜನರು ಕುಳಿತುಕೊಳ್ಳಲು ಅನುಕೂಲವಾದ ಸಿನಿಮಾ ಗಾಡಿಗಳನ್ನು ಇಟ್ಟಿರುತ್ತಾರೆ ಪ್ರೇಕ್ಷಕರು ತಾವು ಗಾಡಿಯಲ್ಲಿ ಪ್ರಯಾಣಮಾಡುತ್ತಿರುವದನ್ನು ಮರೆತುಬಿಡುವ ಮಟ್ಟಿಗೆ ಹೊರಗಿನ ಶಬ್ದ ಮತ್ತು ಗಾಡಿಯ ಅಲುಗಾಟವನ್ನು ಕಡಿಮೆ ಮಾಡಿದ್ದಾರಂತೆ!

ಬ್ಯಾರಿಸ್ಟರನಿಗೆ ಶಿಕ್ಷೆ!

ರಂಗೂನಿನ ಬ್ಯಾರಿಸ್ಟರ್ ಮಿ|| ರಾ|| ಎಚ್ ಎಚ್ ಬಾಜೋರಿಜಿ ಎಂಬವರು ಕಕ್ಷಿಗಾರನ ಸುಮಾರು 30 ಸಾವಿರ ರೂಪಾಯಿಗಳನ್ನು ದುರುಪಯೋಗಪಡಿಸಿದರೆಂದೂ ಮಿಸ್ ಜೆ ಜೆ ವಿಲ್ಲ ಎಂಬಾಕೆಗೆ ಕೊಡಬೇಕಾಗಿದ್ದ ೨, ಸಾವಿರ ರೂಪಾಯಿಗಳನ್ನು ಕೊಡದೆ ಮೋಸಪಡಿಸಿದರೆಂದೂ ಮೊಕದ್ದಮೆಯಾಗಿ, ತಪ್ಪು ರುಜುವಾತಾದ್ದರಿಂದ ಮ್ಯಾಜಿಸ್ಟ್ರೇಟರು ಅವರಿಗೆ 18 ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು

ಇಂಗ್ಲೆಂಡಿನ ಮುಖ್ಯಮಂತ್ರಿಗಳು ಮಂತ್ರಿಪದವಿಯಿಂದ ನಿವೃತ್ತರಾದರು

ಇಂಗ್ಲೆಂಡಿನ ಮುಖ್ಯಮಂತ್ರಿಗಳಾದ ಮಿ ರಾಮ್ಸೆ ಮ್ಯಾಕ್ಡೊನಾಲ್ಡರವರು ಕಳೆದವಾರ ತಮ್ಮ ಕೆಲಸದಿಂದ ನಿವೃತ್ತರಾದರು ಇವರು ಕೆಲವು ವರ್ಷಗಳವರೆಗೆ ಮುಖ್ಯಮಂತ್ರಿಗಳಾಗಿದ್ದು ತಮ್ಮ ಕಾರ್ಯವನ್ನು ಸರ್ವಸಮರ್ಪಕವಾಗುವಂತೆ ಮಾಡಿ ಸರ್ವರ ಪ್ರೀತಿಗೂ ಪಾತ್ರರಾಗಿದ್ದರು ಸದ್ಯಃ ಅವರ ಸ್ಥಾನವನ್ನು ಚಕ್ರವರ್ತಿಗಳ ಅಪ್ಪಣೆಯ ಮೇರೆಗೆ ಮಿ ಸ್ಟಾನ್ಲಿ ಬಾಲ್ಡ್ವಿನ್‌ರವರು ಅಲಂಕರಿಸಿದ್ದಾರೆ

ಲಂಡನ್ನಿಗೆ ಮೋಟಾರಿನಿಂದ ಪ್ರಯಾಣ!

ಬೊಂಬಾಯಿಯ ಪ್ರಸಿದ್ಧಬ್ಯಾರಿಸ್ಟರ್ ವಿ|| ಎ ಎಚ್ ಖಾಸಗಿವಾಲಾ ಎಂಬವರು ಭೂಮಾರ್ಗವಾಗಿ ಪೂನಾದಿಂದ ಲಂಡನ್ನಿಗೆ /300 ಮೈಲುಗಳನ್ನು ಮೋಟಾರಿನಲ್ಲಿ ಪ್ರಯಾಣಮಾಡಿ 29 ದಿವಸ 8 ಘಂಟೆಗಳಲ್ಲಿ ತಲುಪಿದರು ಅವರು ಪುನಃ ಇಂಡಿಯಾಕ್ಕೆ ಬರಲು ಮೋಟರಿನಲ್ಲೇ ಹೊರಟಿರುತ್ತಾರೆ ಲಂಡನ್ನಿನಿಂದ ಕ್ವೆಟ್ಟಾಕ್ಕೆ ಆಗುವ 5000 ಮೈಲುಗಳನ್ನು 24 ದಿನಗಳ ಪ್ರಯಾಣದಲ್ಲಿ ಮುಗಿಸಬೇಕೆಂದು ಉದ್ದೇಶಿಸಿದ್ದಾರೆ

ಅದ್ಭುತವಾದ ಹಡಗು

ಫ್ರಾನ್ಸ್ ದೇಶದವರು ನಾರ್ಮಂಡಿ ಎಂಬ ದೊಡ್ಡದೊಂದು ಹಡಗನ್ನು ಕಟ್ಟಿದ್ದಾರೆ ಇದು ಕಳೆದ ವಾರ ಸೌತ್ ಹ್ಯಾಂಪ್ಟನ್ನಿಂದ ಹೊರಟು ನ್ಯೂಯಾರ್ಕಿಗೆ 107 ಘಂಟೆಗಳಲ್ಲಿ ತಲುಪಿತು ಅಂದರೆ ಇದು ಹಿಂದೆ ಜರ್ಮನ್ ದೇಶದ ಹಡಗು ಬ್ರೆಮನ್ನಿಗಿಂತಲೂ ಮೂರು ಘಂಟೆಗಳ ಕಾಲ ಬೇಗನೆ ಸಂಚರಿಸಿದೆಯೆಂದು ಹೇಳಲಾಗಿದೆ ಈ ಹಡಗಿನಲ್ಲಿ 2,13೭ ಮಂದಿ ಪ್ರಯಾಣಿಕರಿಗೆ ಅನುಕೂಲವಾದ ವಸ್ತು ಸ್ಥಳವಸತಿಗಳು ಇವೆ. ಅದನ್ನು ತೇಲಾಡುವ ಒಂದು ಹಳ್ಳಿಯೆಂದೇ ಹೇಳಬಹುದು ಅದರಲ್ಲಿ ರಸ್ತೆಗಳೂ ಚೌಕಗಳೂ, ಅಂಗಡಿಗಳೂ, ವಿವಿಧ ವಿನೋದಗಳು ನಡೆಯುವ ಭವನಗಳೂ, ಸಿನಿಮಾ ಮಂದಿರ, ಒಂದು ಕ್ರೈಸ್ತ ದೇವಾಲಯ, ಈಜಾಡಲು ಕೊಳ, ಆಸ್ಪತ್ರೆ, ಮಕ್ಕಳ ಆಟದಬೈಲು, ಆಟಪಾಟಗಳಿಂದ ವಿನೋದವಾಗಿ ಕಾಲಕಳೆಯಲು ಯೋಗ್ಯವಾದ ಕ್ಲಬ್ಬುಗಳು, ನೂರು ಮೋಟಾರುಗಳನ್ನು ಇಡಲು ಸಾಕಾದಷ್ಟು ಗ್ಯಾರೇಜುಗಳೂ, 100 × 70 ಅಡಿ ಅಗಲವಿರುವ ಉದ್ಯಾನ, ಸಾವಿರ ಜನರು ಕುಳಿತು ಏಕಕಾಲದಲ್ಲಿ ಊಟಮಾಡಲು ಅವಕಾಶವಿರುವಂಥ ಅಂಗಳ, ಇತ್ಯಾದಿ ಸಮಸ್ತ ಆಧುನಿಕ ಸಹಾಯಸಂಪತ್ತುಗಳನ್ನು ಕಲ್ಪಿಸಿಕೊಡಲಾಗಿದೆಯೆಂದು ತಿಳಿದುಬರುತ್ತದೆ

ಜ್ಞಾಪಕಶಕ್ತಿ ಯಂತ್ರ!

ಮೋಟಾರುಗಳನ್ನು ಕದಿಯುವವರು ಇನ್ನುಮುಂದೆ ಬಹಳ ಎಚ್ಚರದಿಂದಿರಬೇಕಾಗಿದೆ ಯಾಕೆಂದರೆ— ಜನೆ ರಿಂದ ಕ್ಯಾಲಿಫೋರ್ನಿಯಾದವನೊಬ್ಬನು ಸದ್ಯಃ ಜ್ಞಾಪಕಶಕ್ತಿಯ ಯಂತ್ರವನ್ನು ತಯಾರಿಸಿದ್ದಾನೆ ಇದು ಒಂದು ಸಾರಿ ಬರೆದು ತೋರಿಸಿದ ಸಂಖ್ಯೆಯನ್ನು ಎಷ್ಟು ಕಾಲವಾದರೂ ಮರೆಯದೆ ಪುನಃ ಆ ಸಂಖ್ಯೆಯನ್ನು ತೋರಿಸಿಕೊಡಲು ಗುರುತಿಸುವುದು ಈ ಯಂತ್ರಗಳನ್ನು ಸಾಕುವೆಗಳ ಬಲ ಆಯಕಟ್ಟಿನ ಸ್ಥಳಗಳಲ್ಲಿಟ್ಟು ಕಳುವಾದ ಮೋಟಾರಿನ ನಂಬರುಗಳನ್ನೆಲ್ಲಾ ಬರೆದು ಅದರಲ್ಲಿ ಇಡುವುದರಿಂದ ಆ ನಂಬರುಗಳ ಮೋಟರುಗಳ ಪೈಕಿ ಯಾವುದಾದರೂ ಸೇತುವೆಯನ್ನು ದಾಟುವುದಕ್ಕಾಗಿ ಈ ಯಂತ್ರದ ಮುಂದೆ ಹಾಯ್ದ ಕೂಡಲೆ ಇದು ನಂಬರನ್ನು ಗುರುತಿಸಿ ಗಟ್ಟಿಯಾಗಿ ಗಂಟೆಯನ್ನು ಬಾರಿಸುವುದಲ್ಲದೆ ಸೇತುವೆಯ ಕೊನೆಯಲ್ಲಿರುವವರಿಗೆ, ಬೆಳಕಿನ ಸಂಜ್ಞೆಯನ್ನೂ ತೋರಿಸಿ ಮೋಟಾರು ಸೇತುವೆಯನ್ನು ದಾಟುವುದರೊಳಗಾಗಿ ಅದನ್ನು ಹಿಡಿಯುವಂತೆ ಮಾಡುವುದು ಈ ಯಂತ್ರವನ್ನು ಈ ಕಾರ್ಯಕ್ಕಲ್ಲದೆ ಜ್ಞಾಪಕಶಕ್ತಿ ಇರಬೇಕಾದ ಇನ್ನೂ ಅನೇಕ ಕೆಲಸಗಳಿಗೆ ಉಪಯೋಗಿಸಬಹುದಾಗಿದೆ

(ಮೊದಲನೇ ಪುಟದಿಂದ ಮುಂದುವರಿದುದು)

ಮಹಾರಾಜರ ವಿಚಾರಗಳನ್ನು ತಿಳಿಯಬೇಕಾದರೆ ಮೈಸೂರಿನ ಹಿಂದಿನ ಈ ಚರಿತ್ರೆಯನ್ನು ತಿಳಿಯಬೇಕು. ಅವರ ತಂದೆಯವರು ಬ್ರಿಟಿಷ್ ಸರಕಾರವು ೫೦ ವರ್ಷಗಳ ಕಾಲ ಮೈಸೂರು ರಾಜ್ಯವನ್ನು ಆಳಿದುದರಿಂದ ಮೈಸೂರಿಗೆ ಅನೇಕ ಒಳ್ಳೆಯ ಸಂಸ್ಥೆಗಳೂ ಆಡಳಿತ ಕ್ರಮಗಳೂ ಅವುಗಳನ್ನು ತಿಳಿದ ಹಿಂದೂ ಅಧಿಕಾರಿಗಳೂ ದೊರೆತರು. ಆ ಕಾಲದಲ್ಲಿ ಹಿಂದೂ ದೇಶದಲ್ಲಿ ಮತ್ತಾವ ದೇಶಕ್ಕೂ ಈ ಸೌಭಾಗ್ಯಗಳು ದೊರೆಯಲಿಲ್ಲ. ಆ ಕ್ರಮಗಳೇ ಹಿಂದಿನ ಮಹಾರಾಜರಿಂದ ಅನುಸರಿಸಲ್ಪಟ್ಟವು. ಅವರ ಮರಣಾನಂತರ ಮಹಾರಾಣೀ ರೀಜೆಂಟರವರು ಶಕ್ತರಾದ ದಿವಾನರ ಸಹಾಯದಿಂದ ಆ ಶಿಸ್ತನ್ನು ಕಾಪಾಡಿಕೊಂಡು ಬಂದರು. ಆ ದಿವಾನರಲ್ಲಿ ಸರ್ ಶೇಷಾದ್ರಿ ಅಯ್ಯರವರು ಬಹು ಮುಖ್ಯರಾದವರು.

ಈ ರೀತಿ ಮಹಾರಾಜರ ವಂಶಕ್ಕೆ ಅವರು ವಹಿಸಿಕೊಂಡ ರಾಜ್ಯದ ವಂಶಾನುಕ್ರಮವಾದ ಯೋಗ್ಯತೆಯು ಸಾಮಾನ್ಯವಾದುದಲ್ಲ! ಆ ಕಳಶವು ಮೇಲೆ ಶಿಸ್ತನ್ನು ರಾಜ ಒಡೆಯರು ಹೊಸ ಕಾಲಕ್ಕೂ ಹೊಸ ಆಶೆಗಳಿಗೂ ಹೊಸ ಆವಶ್ಯಕತೆಗಳಿಗೂ ಒಪ್ಪುವ ಹೊಸ ಆಡಳಿತಕ್ರಮವನ್ನು ಏರ್ಪಡಿಸಿದರು. ಜನರ ಯೋಗ್ಯತೆಯನ್ನು ಚೆನ್ನಾಗಿ ತಿಳಿದವರಾಗುವುದರಿಂದ ಮಹಾರಾಜರು ತಮ್ಮ ಅಧಿಕಾರಿಗಳ ಆಯ್ಕೆಯಲ್ಲಿ ಜಾತಿ ಮತ್ತು ಮತದ ವ್ಯತ್ಯಾಸವನ್ನು ಗಣನೆಗೆ ತೆಗೆದುಕೊಂಡಿಲ್ಲ. ಉದಾಹರಣೆಗೆ ಅವರ ಈಗಿನ ಪ್ರಸಿದ್ಧರಾದ ದಿವಾನರು ಮಹಮ್ಮದೀಯರು. ಅವರ ಪ್ರೈವೇಟ್ ಸೆಕ್ರೆಟರಿಯವರು ಇಂಡಿಯನ್ ಸಿವಿಲ್ ಸರ್ವಿಸ್ಸಿನಲ್ಲಿ ನಿವೃತ್ತರಾದ ಕ್ರೈಸ್ತ ಅಧಿಕಾರಿಗಳು. ಮೈಸೂರು ರಾಜ್ಯದಲ್ಲಿ ಇವರಲ್ಲದೆ ಇನ್ನೂ ಅನೇಕ ಬ್ರಿಟಿಷ್ ಅಧಿಕಾರಿಗಳು ನೇಮಕವಾಗಿದ್ದಾರೆ.

ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಅವರ ಆಶೆಗಳನ್ನೂ ತಮ್ಮ ಆಳಿಕೆಯ ೩೦ ವರ್ಷಗಳಲ್ಲಿ ಎಷ್ಟರಮಟ್ಟಿಗೆ ಆ ಆಶೆಗಳು ಪೂರ್ಣವಾಗಿವೆ ಎಂಬುದನ್ನೂ ತಿಳಿಯಬಹುದು. ಈ ಭಾಷಣಗಳ ಭಾಷೆಯು ಸರಳವಾದುದಾಗಿದೆ. ಅವರ ಸ್ವಭಾವವೂ ಹಾಗೆಯೇ ಇದೆ. 'ಎಷ್ಟು ಕಡಿಮೆಯೋ ಅಷ್ಟೇ ಮಾತನಾಡು, ಎಷ್ಟು ಹೆಚ್ಚೋ ಅಷ್ಟೇ ಕೆಲಸ ಮಾಡಿ ತೋರು' ಎಂಬುದೇ ಅವರ ತತ್ವ. ಈ ತತ್ವವನ್ನೇ ಅವರು ಮೈಸೂರು ಯೂನಿವರ್ಸಿಟಿಯ ಗ್ರ್ಯಾಜುಯೇಟುಗಳಿಗೆ ಉಪದೇಶಿಸಿದ್ದಾರೆ. ಮಹಾರಾಜರಿಗೆ ಸಾರ್ವಜನಿಕ ಗೌರವ ಸ್ವಂತ ಮಹಿಮೆಯನ್ನು ಬಹಿರಂಗವಾಗಿ ಆಡಂಬರದಿಂದ ಪ್ರಕಟಿಸಿಕೊಳ್ಳಬೇಕೆಂಬುದಾಗಲಿ ಇಷ್ಟವಿಲ್ಲ. ಅವರ ಸ್ವಭಾವವು ಸಂಕೋಚವಾದುದು ಎಂಬುದು ಅವರ ಸ್ನೇಹಿತರಿಗೆಲ್ಲಾ ತಿಳಿದಿದೆ.

ತಮ್ಮ ಪ್ರಜೆಗಳಿಗೆ ಬೇಕಾದ ವಿದ್ಯೆಗೆ ಮಹಾರಾಜರಿಗಿರುವ ಆಶೆಯು ಈ ಭಾಷಣಗಳಲ್ಲಿ ಅಲ್ಲಲ್ಲಿ ತೋರುವುದು. ಮೈಸೂರು ರಾಜ್ಯವು ವಿದ್ಯೆಯಲ್ಲಿ ಬಹಳ ಮುಂದುವರಿದಿದೆ. ಅಲ್ಲಿಯೇ ದಿವಂಗತರಾದ ಜೆ. ಎನ್. ಟಾಟಾರವರಿಂದ ಸ್ಥಾಪಿಸಲ್ಪಟ್ಟ 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್' ಎಂಬುದು ಇದೆ. ಟಾಟಾರವರ ಪ್ರತಿಮೆಯನ್ನು ಶ್ರೀಮನ್ಮಹಾರಾಜರವರು ೧೯೨೨ರಲ್ಲಿ ಅನಾವರಣ ಮಾಡಿದರು. ಈಚೆಗೆ ಇಂಡಿಯನ್ ಇನ್ಸ್ಟಿಟ್ಯೂಟಿಗೆ ಮೈಸೂರು ಸರಕಾರದಿಂದ ಅನೇಕ ತರದ ಸಹಾಯಗಳಾಗಿವೆ. ಬ್ರಿಟಿಷ್ ಇಂಡಿಯಾ ದೇಶವನ್ನು ಬಿಟ್ಟರೆ ೧೯೧೬ರಲ್ಲಿ ಮೊದಲನೆಯ ವಿಶ್ವವಿದ್ಯಾಲಯವು ಇಲ್ಲಿ ಸ್ಥಾಪಿಸಲ್ಪಟ್ಟಿತು. ಮೈಸೂರು ಮಹಾರಾಜರೇ ಅದರ ಛಾನ್ಸಲರ್ ಆಗಿದ್ದಾರೆ.

ಮೈಸೂರಿನ ವಿದ್ಯಾಸಂಸ್ಥೆಗಳಲ್ಲಿ ಮತ್ತು ಕಾಶೀ ವಿದ್ಯಾಪೀಠದಲ್ಲೂ ಮಹಾರಾಜರವರು ಕೊಟ್ಟ ಅನೇಕ ಭಾಷಣಗಳಲ್ಲಿ "ಇಂದಿನ ವಿಶ್ವವಿದ್ಯಾಲಯದ ವಿದ್ಯಾಭ್ಯಾಸದಲ್ಲಿ ಪೂರ್ವದೇಶಗಳ ಅತ್ಯುತ್ತಮ ಸಂಸ್ಕೃತಿಯೂ ಪಾಶ್ಚಾತ್ಯ ದೇಶಗಳ ಕಾರ್ಯಕಾರಿಯಾದ ಶಿಸ್ತೂ ಸೇರಬೇಕೆಂದು" ಹೇಳಿದ್ದಾರೆ. ಶ್ರೀಮನ್ಮಹಾರಾಜರವರು ಕಾಶಿಯಲ್ಲಿ ಕೊಟ್ಟ ಒಂದು ಭಾಷಣದಲ್ಲಿ "ಹಿಂದೂ ದೇಶದ ವಿಶ್ವವಿದ್ಯಾಲಯಗಳು ಉತ್ತಮವಾದ ಪ್ರಜೆಗಳನ್ನು ತಯಾರು ಮಾಡುವುದರ ಕಡೆಗೆ ಮುಖ್ಯ ಲಕ್ಷ್ಯವನ್ನು ಕೊಡಬೇಕು. ಜಾತಿ ಮತಗಳ ವೈಮನಸ್ಯದಿಂದ ವಿಚ್ಛಿದ್ರವಾದ ಫಲವಂತವಾಗಿರುವ ಹಿಂದೂ ದೇಶದ ದೇಶಭಕ್ತಿಯ ರಾಷ್ಟ್ರ ಜೀವನವೂ ಚೆನ್ನಾಗಿ ಬೆಳೆಸಲ್ಪಡಬೇಕು" ಎಂಬುದಾಗಿ ಹೇಳಿದ್ದಾರೆ.

ಶ್ರೀಮನ್ಮಹಾರಾಜರವರ ಆಳಿಕೆಯಲ್ಲಿ ಎಲ್ಲಾ ಮತಗಳಿಗೂ ಸಂಘಗಳಿಗೂ ಇತರ ವ್ಯವಸ್ಥೆಗಳಿಗೂ ಅವುಗಳ ಆಗಿರತಕ್ಕ ವಿಶ್ವಾಸ ಹೆಚ್ಚಾಗಿದೆ. ಆದುದರಿಂದ ಹಿಂದುಗಳು ಅವರನ್ನು ಹಿಂದುವೆಂದು ಗೌರವಿಸುತ್ತಿರುವಾಗ ಅವರು ಬೇರೆ ಬೇರೆಯಾದುದರ ಮೂಲಭೂತವಾದ ಐಕ್ಯವನ್ನು ನೋಡುವ ದೃಷ್ಟಿಯಿಂದ ಪ್ರಶಂಸೆಗೆ ಕ್ರೈಸ್ತ ವಿದ್ಯಾರ್ಥಿಗಳ ಸಮ್ಮೇಳನದಲ್ಲೂ, ಜೈನರ ಸಮ್ಮೇಳನದಲ್ಲೂ ಮಸೀದಿಯನ್ನು ತೆರೆಯುವಾಗಲೂ ಕ್ರಿಸ್ತದೇವಾಲಯದ ಕಳಶದಿಯನ್ನು ಹಾಕುವಾಗಲೂ ತಮ್ಮ ಈ ಅಭಿಪ್ರಾಯವನ್ನು ಸೂಚಿಸಿದ್ದಾರೆ.

ಪ್ರಜಾಪ್ರತಿನಿಧಿಸಭೆಯ ವಿಚಾರವಾಗಿ ನಾಲ್ಕು ಮಾತುಗಳನ್ನು ಹೇಳುವುದು ಆವಶ್ಯಕವಾಗಿದೆ. ಈ ಸಭೆಯು ೧೮೮೧ನೇ ಸಂವತ್ಸರದಲ್ಲಿ ಪ್ರಸಿದ್ಧ ದಿವಾನರಾದ ರಂಗಾಚಾರ್ಲುರವರ ಆಜ್ಞೆಯಿಂದ ಸ್ಥಾಪಿಸಲ್ಪಟ್ಟಿತು. ಸರಕಾರದ ಅಭಿಪ್ರಾಯಗಳನ್ನು ಪ್ರಜೆಗಳಿಗೆ ತಿಳಿಯಪಡಿಸುವುದೂ ಸರಕಾರದ ವಿಚಾರದಲ್ಲಿ ಪ್ರಜೆಗಳಿಗೆ ಇರತಕ್ಕ ದುರಭಿಪ್ರಾಯಗಳನ್ನು ಹೋಗಲಾಡಿಸುವುದೂ ಅದರ ಆಗಿನ ಮುಖ್ಯ ಉದ್ದೇಶವಾಗಿದ್ದಿತು. ಆ ಮೇಲೆ ಚುನಾವಣೆಗೆ ಅವಕಾಶಕೊಡಲಾಯಿತು. ಪ್ರಜೆಗಳ ತಮ್ಮ ಅಹವಾಲುಗಳನ್ನು ಸಭೆಯಲ್ಲಿ ಹೇಳಿಕೊಳ್ಳುವುದಕ್ಕೂ ಬಜೆಟ್ ವಿಚಾರದಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸುವುದಕ್ಕೂ ಅವಕಾಶವು ದೊರೆಯಿತು. ಪ್ರಜಾಪ್ರತಿನಿಧಿ ಸಭೆಯು ಈ ಜವಾಬ್ದಾರಿಗಳನ್ನು ಮಿತಿಯನ್ನು ಮೀರದೆ ನಡೆಸಿಕೊಂಡು ಬಂದುದರಿಂದ ಪ್ರಜೆಗಳಿಗೂ ಸರಕಾರಕ್ಕೂ ಬಾಂಧವ್ಯವು ಬೆಳೆಯಿತು. ಪ್ರಜೆಗಳಿಗೆ ರಾಜಕೀಯ ಕ್ಷೇತ್ರದಲ್ಲಿ ತಿಳುವಳಿಕೆಯು ದೊರೆಯಿತು. ಮೈಸೂರಿನ ಪ್ರಾಮುಖ್ಯವಾದ ಹಬ್ಬವಾದ ನವರಾತ್ರಿಯಲ್ಲಿ ಈ ಸಭೆಯು ಸೇರುವುದೂ ಕೂಡ ಇದರ ಬೆಳವಣಿಗೆಗೂ ಜನಕ್ಕೂ ಬಹುಮಟ್ಟಿಗೆ ಕಾರಣವಾಯಿತು. ಆ ಕಾಲದಲ್ಲಿ ಹತ್ತು ದಿನಗಳು ಹಗಲೂ ರಾತ್ರಿಯೂ ಮಹಾರಾಜರಿಗೂ ಪ್ರಜೆಗಳಿಗೂ ಹಬ್ಬ. ಆ ಹಬ್ಬದಲ್ಲಿ ಮಹಾರಾಜರವರೇ ಪ್ರಜೆಗಳ ದೇವರು. ದೇವರಲ್ಲ ಪ್ರಜೆಗಳ ಪ್ರತಿನಿಧಿಯೆಂಬ ಭಾವನೆಯು ಎಲ್ಲೆಲ್ಲೂ ತೋರುತಿರುತ್ತದೆ. ರಾಜರಲ್ಲಿ ಪ್ರಜೆಗಳಿಗೆ ಈ ಗೌರವವಿಲ್ಲದೆ ಬರಿಯ ರಾಜಕಾರಣ ದೃಷ್ಟಿಯಿಂದ ಇಂಥಹ ಸಭೆಗಳನ್ನು ಬ್ರಿಟಿಷ್ ಇಂಡಿಯಾದಲ್ಲಾಗಲಿ ಅಥವಾ ಮತ್ತಾವ ದೇಶೀಯ ಸಂಸ್ಥಾನಗಳಲ್ಲಾಗಲಿ ಜಾರಿಯಲ್ಲಿ ತಂದರೆ ಅದು ಹೆಚ್ಚು ಫಲಕಾರಿಯಾಗುವುದಿಲ್ಲ.

ಒಂದು ಕಾಲದಲ್ಲಿ ಹಿಂದೂ ದೇಶದ ಮತ್ತು ಬ್ರಿಟನ್ನಿನ ರಾಜನೀತಿಜ್ಞರು ಪ್ರಜಾಪ್ರತಿನಿಧಿ ಸಭೆಗಳ ವಿಚಾರದಲ್ಲಿ ಬಹಳ ತಪ್ಪು ಅಭಿಪ್ರಾಯವನ್ನು ಇಟ್ಟುಕೊಂಡಿದ್ದರು. ಅದಕ್ಕೆ ಆ ಹಿಂದಿನ ಅಸೆಂಬ್ಲಿಯೇ ಮುಖ್ಯ ಕಾರಣ. ಸರ್ ಚಾರ್ಲ್ಸ್ ಡಿಲ್ಕ್‌ರವರು ಒಂದು ಸಲ ಪ್ರಜಾಪ್ರತಿನಿಧಿ ಸಭೆಯಲ್ಲಿ ಹಿಂದೂ ದೇಶಕ್ಕೆ ಜವಾಬ್ದಾರಿ ಸರಕಾರದ ಬಿಜನಿಸೆಯೆಂದು ಹೇಳಿದರು. ಇವೆಲ್ಲಾ ಅತಿಶಯೋಕ್ತಿ; ಇಂತಹ ಅತಿಶಯೋಕ್ತಿಗಳು ಮೈಸೂರು ಸರಕಾರದಿಂದ ಹುಟ್ಟಿದವಲ್ಲ. "ಪ್ರಜಾಪ್ರತಿನಿಧಿ ಸಭೆಯು ಮಹಾರಾಜರ ಮಾತಿನಲ್ಲಿ ಪ್ರಜೆಗಳ ಅಹವಾಲುಗಳನ್ನು ಹೇಳತಕ್ಕ ಸರಕಾರದೊಂದಿಗೆ ಸಹಕರಿಸಿ ಕೆಲಸ ಮಾಡತಕ್ಕ ಸಂಸ್ಥೆ". ಹೊಸ ಸುಧಾರಣೆಗಳಿಂದ ಪ್ರಜಾಪ್ರತಿನಿಧಿ ಸಭೆಯ ಯೋಗ್ಯತೆಯು ಹೆಚ್ಚಾಯಿತು. ಅದಲ್ಲದೆ ಅದಕ್ಕೆ ಒಂದು ಸ್ಪಷ್ಟವಾದ ಸ್ಥಾನವು ದೊರೆಯಿತು. ಪ್ರಜಾಪ್ರತಿನಿಧಿ ಸಭೆಯ ಅನುಮತಿಯಿಲ್ಲದೆ ಯಾವ ಹೊಸ ತೆರಿಗೆಯನ್ನೂ ಸರಕಾರದವರು ಹಾಕುವುದಿಲ್ಲ. ಬಜೆಟಿನ ಮೇಲೆ ಗಾಸನ ಮಾಡುವುದಕ್ಕೂ ಕೆಲವು ವಿಷಯಗಳನ್ನು ಹೊರತು ಸಭೆಗೆ ಅಧಿಕಾರವಿದೆ ಎಂಬುವನ್ನು ಕೊಡುವವರು ಆದರ ಪಟ್ಟದ ವಿಷಯದಲ್ಲಿ ಕೆಲವು ಮಾರ್ಗಗಳನ್ನಾದರೂ ಅಧಿಕಾರವನ್ನು ಕೊಡಬೇಕೆಂದು ಕೇಳುತ್ತಾ ಬಂದುದನ್ನು ಸರಕಾರವು ಅಂಗೀಕರಿಸಿದೆ. ರಾಜದಲ್ಲಿ ಹೊಸ ಕಾನೂನುಗಳನ್ನು ಮಾಡುವುದರಲ್ಲೂ ಪ್ರತಿನಿಧಿ ಸಭೆಗೆ ಹೊಸ ಸ್ಥಾನವಿದೆ. ಸರಕಾರದವರು ಶಾಸನ ಯೋಜನೆಯ ಕರಡನ್ನು ಜಾರಿಗೆ ತರುವ ಮೊದಲು ಆ ಸಭೆಯ ಅನುಮತಿಯಿಲ್ಲದೆ ಪಾಸಾಗುತ್ತದೆ.

೧೯೦೭ರಲ್ಲಿ ನ್ಯಾಯವಿಧಾಯಕ ಸಭೆಯು ಸ್ಥಾಪಿಸಲ್ಪಟ್ಟಿತು. ರಾಜ್ಯದ ಆಡಳಿತದಲ್ಲಿ ಅಧಿಕಾರಿಗಳಿಂದ ಮತ್ತು ಅಧಿಕಾರಿಗಳಲ್ಲದ ಕೆಲವು ಮಹಾಶಯರನ್ನು ಸೇರಿಸಿಕೊಳ್ಳುವುದೇ ಈ ಸಭೆಯನ್ನು ಸ್ಥಾಪಿಸಿದ ಉದ್ದೇಶವಾಗಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಧ್ಯಮ ತರಗತಿಯ ಕೆಳ ತರಗತಿಯ ರೈತರ ಪ್ರತಿನಿಧಿಗಳೇ ಹೆಚ್ಚಾಗಿರುತ್ತಾರೆ. ಆದರೆ ನ್ಯಾಯವಿಧಾಯಕ ಸಭೆಯಲ್ಲಿ ವಿದ್ಯಾವಂತರು ಹೆಚ್ಚಾಗಿದ್ದಾರೆ. ಹೊಸ ಸುಧಾರಣೆಗಳು ಬರುವವರೆಗೆ ನ್ಯಾಯವಿಧಾಯಕ ಸಭೆಗೆ ಯಾವ ಅಧಿಕಾರವೂ ಇರಲಿಲ್ಲ. ಈಚೆಗೆ ಅದರ ಸದಸ್ಯರ ಸಂಖ್ಯೆಯು ಹೆಚ್ಚಾಗಿದೆ. ಸಾರ್ವಜನಿಕ ಬಹುಮತವು ದೊರೆಯುವಷ್ಟು ಚುನಾಯಿತ ಸದಸ್ಯರು ಅದರಲ್ಲಿ ಇದ್ದಾರೆ. ಬಜೆಟಿನಲ್ಲಿ ಕೆಲವು ವಿಷಯಗಳನ್ನು ಹೊರತು ಉಳಿದವುಗಳ ಮೇಲೆ ಅದು ತನ್ನ ವೋಟ್ ಕೊಡಬಹುದು. ನ್ಯಾಯವಿಧಾಯಕ ಸಭೆಯು ಗ್ರಾಂಟುಗಳನ್ನು ಕಡಿಮೆ ಮಾಡುವುದಕ್ಕೂ ಅಥವಾ ನಿರಾಕರಿಸುವುದಕ್ಕೂ ಅಧಿಕಾರವನ್ನು ಹೊಂದಿದೆ. ಆದರೆ ಖರ್ಚು ಆವಶ್ಯಕವೆಂದು ತೋರಿದರೆ ಸರಕಾರದವರು ಅದರ ಅಭಿಪ್ರಾಯವನ್ನು ಉದಾಸೀನ ಮಾಡಿ ಖರ್ಚು ಮಾಡಬಹುದು.

ನ್ಯಾಯವಿಧಾಯಕ ಸಭೆಯು ನ್ಯಾಯಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸಗಳನ್ನೂ ಮಾಡುತ್ತದೆ. ದಿವಾನರ ಅಪ್ಪಣೆಯಿಲ್ಲದೆ ಯಾವ ಕಾನೂನನ್ನೂ ಸಭೆಯಲ್ಲಿ ಚರ್ಚಿಸಲು ಅವಕಾಶವಿಲ್ಲ. ಮಹಾರಾಜರ ಸಮ್ಮತಿ ದೊರೆತ ಹೊರತು ಯಾವ ಬಿಲ್ಲೂ ಕಾನೂನಾಗುವುದಿಲ್ಲ. ನ್ಯಾಯವಿಧಾಯಕ ಸಭೆಯು ಚರ್ಚಿಸಬಾರದ ಭಾಗಗಳು ಹೆಚ್ಚಾಗಿಲ್ಲ. ಆ ಭಾಗಗಳ ವಿಷಯದಲ್ಲಿ ಸರಕಾರದವರೇ ಬೇಕಾದ ತೀರ್ಮಾನಕ್ಕೆ ಬರುತ್ತಾರೆ. ಮಹಾರಾಜರ ಅನುಮತಿಯಿಂದ ಅದೇ ಕಾನೂನಾಗುತ್ತದೆ.

ರಾಜ್ಯದ ಆಡಳಿತಕ್ಕೆ ಆವಶ್ಯಕವಾದ ಮುಖ್ಯ ವಿಷಯಗಳ ತೀರ್ಮಾನದಲ್ಲೂ ಚರ್ಚೆಯಲ್ಲೂ ಪ್ರಜೆಗಳ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕೆಂಬ ತತ್ವವನ್ನು ಮೈಸೂರು ಸರ್ಕಾರವು ಅಂಗೀಕರಿಸಿದೆ. ಅದಕ್ಕಾಗಿ ಸರಕಾರದವರು ಪ್ರಜೆಗಳನ್ನೂ ಅಧಿಕಾರಿಗಳನ್ನೂ ಒಳಗೊಂಡ ಅನೇಕ ಸಮಿತಿಗಳನ್ನು ಏರ್ಪಡಿಸಿದ್ದಾರೆ. ಅವುಗಳ ಸಲಹೆಯು ಸರಕಾರಕ್ಕೂ ನ್ಯಾಯವಿಧಾಯಕ ಸಭೆಗೂ ಉಪಯೋಗಕರವಾಗಿ ದೊರೆಯುತ್ತದೆ. ಕೊನೆಯದಾಗಿ ಮೈಸೂರು ಸಂಪದಭಿವೃದ್ಧಿಗೆ ಸಂಬಂಧಪಟ್ಟ ಸಮಿತಿಗಳೆಲ್ಲಾ ನ್ಯಾಯವಿಧಾಯಕ ಸಭೆಗೂ ಪ್ರಜಾಪ್ರತಿನಿಧಿಸಭೆಗೂ ಬಹಳ ಸಹಾಯವನ್ನು ಮಾಡುತ್ತವೆ.

ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ನಿದರ್ಶನವೆಂದರೆ ಭೂಕಂದಾಯವನ್ನು ಕೊಡುವವರಿಗೆಲ್ಲಾ ಓಟಿನ ಅಧಿಕಾರವು ಕೊಡಲ್ಪಟ್ಟಿತು. ಓಟುಮಾಡಲು ಸ್ತ್ರೀಯರಿಗಿದ್ದ ತೊಂದರೆಗಳೆಲ್ಲಾ ನಿವಾರಣೆಯಾದುವು. ಇದರಿಂದ ೨೮ ಸಾವಿರ ಓಟುದಾರರಿದ್ದ ಕಡೆ ಒಂದು ಲಕ್ಷ ಹತ್ತು ಸಾವಿರ ಓಟುದಾರರಾದರು. ಚಿಕ್ಕ ಚಿಕ್ಕ ಸಂಘಗಳಿಗೆ ಸರಕಾರದ ಸಭೆಗಳಲ್ಲಿ ಪ್ರಾತಿನಿಧ್ಯವು ದೊರೆಯಿತು. ಮೈಸೂರು ಸರಕಾರವು ದೇಶದ ಕೈಗಾರಿಕೆಗಳಿಗೆಲ್ಲಾ ಬಹಳ ಸಹಾಯವನ್ನು ಮಾಡುತ್ತಿದೆ. ಪ್ರತಿನಿಧಿಸಭೆಯಲ್ಲಿ ಕಾಫಿ ತೋಟಗಾರರ ಸಂಘಕ್ಕೂ ಕೋಲಾರದ ಚಿನ್ನದ ಗಣಿಯ ಸಭೆಗೂ ಮೈಸೂರು ಛೇಂಬರ್ ಆಫ್ ಕಾಮರ್ಸ್‌ಗೂ ಪ್ರಾತಿನಿಧ್ಯವಿದೆ. ಕಾರ್ಖಾನೆಯ ಕೂಲಿಗಾರರಿಗೂ ಪ್ರಾತಿನಿಧ್ಯವಿದೆ. ಕೋಮುವಾರು ಪ್ರಾತಿನಿಧ್ಯದ ವಿಷಯದಲ್ಲಿ ಬೇರೆಬೇರೆ ಸಂಘಗಳನ್ನು ಏರ್ಪಡಿಸಿ ತಮ್ಮ ತಮ್ಮ ಕೋಮಿನ ಹಿತವನ್ನು ಅವರು ಕಾಯ್ದುಕೊಳ್ಳುವ ಅವಕಾಶವನ್ನು ಕಲ್ಪಿಸಲಾಯಿತು. ಸರಕಾರದವರು ಮುಸಲ್ಮಾನರಿಗೂ ಹಿಂದುಳಿದ ಸಂಘಗಳಿಗೂ ಕ್ರೈಸ್ತರಿಗೂ ಅವರವರಿಗೆ ಆವಶ್ಯಕವಾದಷ್ಟು ಪ್ರಾತಿನಿಧ್ಯವು ನ್ಯಾಯವಿಧಾಯಕ ಸಭೆಯಲ್ಲೂ ಪ್ರಜಾಪ್ರತಿನಿಧಿ ಸಭೆಯಲ್ಲೂ ದೊರೆಯುವಂತೆ ಮಾಡಿದರು.

ಮೈಸೂರು ಐವತ್ತೊಂದು ವರ್ಷಗಳ ಹಿಂದೆ ಹಿಂದೂರಾಜನ ರಾಜಾಂಗದ ವಶಕ್ಕೆ ಈ ರೀತಿ ತನ್ನ ಭಾಗವನ್ನು ಸೇರಿಸಿತು.

ಅಖಿಲಭಾರತ ಸಮಸ್ಯೆಗಳಲ್ಲಿ ದೇಶೀಯ ಸಂಸ್ಥಾನಗಳಿಗೂ ಗೌರವವಾದ ಸ್ಥಳವು ದೊರೆತು ಇತರ ಪ್ರಾಂತಗಳಂತೆ ಅವುಗಳೂ ಅಖಿಲಭಾರತದ ಆಡಳಿತದಲ್ಲಿ ಭಾಗವಹಿಸಬೇಕೆಂಬುದೇ ಮೈಸೂರು ಮಹಾರಾಜರ ಇಷ್ಟ! ಈ ವಿಷಯವನ್ನು ಅವರು ೧೯೨೭ರಲ್ಲಿ ಕೊಟ್ಟ ಭಾಷಣದಲ್ಲಿಯೇ ತಿಳಿಸಿದರು. ಲಾರ್ಡ್ ಕರ್ಜನ್ನರು ದೇಶೀಯ ಸಂಸ್ಥಾನಗಳು ಸಾಮ್ರಾಜ್ಯವೆಂಬ ಛಪ್ಪರಕ್ಕೆ ಕಂಬಗಳೆಂದು ಹೇಳಿದರು. ಈಚೆಗೆ ಈ ಕಂಬಗಳ ಜವಾಬ್ದಾರಿಯು ಕರ್ಜನರು ಊಹಿಸಿದುದಕ್ಕಿಂತ ಬಹಳ ದೊಡ್ಡದಾಗಿ ಬೆಳೆದಿದೆ. ಆದರೆ ಈಚೆಗೆ ಕೆಲವು ಸಂಸ್ಥಾನಗಳಲ್ಲಿ ನಡೆದ ಕೆಲವು ಸಂಗತಿಗಳಿಂದ ಈ ಕಂಬಗಳ ಗಳಹದಿಯ ವಿಚಾರದಲ್ಲಿ ಅನೇಕ ಸಂಶಯಗಳುಂಟಾಗಿವೆ. ಆದರೆ ಮೈಸೂರಿನ ವಿಚಾರದಲ್ಲಿ ಅಂತಹ ಸಂದೇಹಕ್ಕೆ ಅವಕಾಶವಿಲ್ಲ. ಮೈಸೂರು ದೇಶದ ಪ್ರಜೆಗಳಿಗೆ ಅವರ ರಾಜರಲ್ಲಿ ಆಡಳಿತಕ್ರಮದಲ್ಲೂ ದೊಡ್ಡ ಗೌರವವಿದೆ. ಮೈಸೂರು ಫೆಡರೇಷನ್ನಿನಲ್ಲಿ ಭಾಗಿಯಾಗಿ ಬ್ರಿಟಿಷ್ ಸಂಬಂಧವು ಹಿಂದೂದೇಶಕ್ಕೆ ಇರಬೇಕೆಂಬ ಅಭಿಪ್ರಾಯವನ್ನು ಅನುಮೋದಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.

(೩ನೆಯ ಪುಟದಿಂದ ಮುಂದುವರಿದುದು)

ಗೊಡೆಯನಾದ ಆ ಭಗವಂತನ ಇಚ್ಛೆ ನಿರ್ಧಾರಗಳಿಗೆ ಒಳಪಟ್ಟು ಎಲ್ಲಾ ನೋವು ಸಂಕಟಗಳನ್ನು ಸಹಿಸಿಕೊಳ್ಳುವುದು.

100 ಹಗಲೂ ರಾತ್ರಿಗಳೂ ಸಾಯಂಕಾಲ ಪ್ರಾತಃಕಾಲಗಳೂ ಶಿಶಿರ ವಸಂತ ಋತುಗಳೂ ಸಹ ತಿರುಗಿ ತಿರುಗಿ ಬರುತ್ತಲೇ ಇರುತ್ತವೆ. ಕಾಲಚಕ್ರವೂ ತಿರುಗುತ್ತಲೇ ಇರುತ್ತದೆ. ಆಯುಸ್ಸೂ ಕಳೆದುಹೋಗುತ್ತದೆ. ಹೀಗಿದ್ದಾಗ್ಯೂ ಆಸೆಯೆಂಬ ಪಿಶಾಚವು ಮಾತ್ರ ಬಿಡುವುದೇ ಇಲ್ಲವು. ಇನ್ನು ಸ್ವಲ್ಪ ಕಾಲ ಅನುಭವಿಸಿಬಿಟ್ಟು ಆಸೆಯನ್ನು ಬಿಡುತ್ತೇನೆ. ಇಂದಿನ ವರ್ಷ ಆಯಿತು ವರ್ಷ ಬಿಡುತ್ತೇನೆಂದು ಊಹಿಸಿಕೊಳ್ಳುವುದು ಬಹಳ ತಪ್ಪು. ವಿಷಯಭೋಗವನ್ನು ಎಷ್ಟು ಹೆಚ್ಚು ಕಾಲ ಅನುಭವಿಸಿದರೆ ಅಷ್ಟು ಅದರಲ್ಲಿ ಆಸೆ ಅಭಿವೃದ್ಧಿಯಾಗುವುದೇ ವಿನಾ ಕಡಿಮೆಯಾಗುವುದಿಲ್ಲ. ಬಹುಕಾಲ ಅನುಭವಿಸಿದರೆ ಬಲಿಷ್ಠವಾಗುವುದು. ಆಗ ಅದನ್ನು ಓಡಿಸುವುದು ಕಷ್ಟವಾಗುವುದು. ಎಷ್ಟು ದಿನಕ್ಕೂ ಅದು ತಾನಾಗಿಯೇ ನಮ್ಮನ್ನು ಬಿಟ್ಟು ಹೋಗುವುದಿಲ್ಲ. ಅದನ್ನು ಸಾಕಪ್ಪ ಬಿಟ್ಟರೆ ಕ್ರಮವಾಗಿ ಓಡಿಸುವುದಕ್ಕೆ ಸುಲಭವಾಗುವುದು. ಆದ್ದರಿಂದ ಸರ್ವಪ್ರಯತ್ನದಿಂದಲೂ ಅದನ್ನು ತೊಲಗಿಸುವುದು ಜಾಣತನವು.

110 ಜನನು ಹುಡುಗನಾಗಿರುವಾಗ ದೇವರ ಧ್ಯಾನವನ್ನೂ ಆತ್ಮಜ್ಞಾನವನ್ನೂ ಸಂಪಾದಿಸು ಎಂದರೆ ಸ್ವಲ್ಪ ಕಾಲ ಆಟಪಾಟಗಳನ್ನಾಡಿ ಯೌವನಸ್ಥನಾದ ಮೇಲೆ ಆ ಕೆಲಸ ಮಾಡುತ್ತೇನೆನ್ನುತ್ತಾನೆ. ಯೌವನಕಾಲದಲ್ಲಿ ಈಗ ಸ್ವಲ್ಪ ಕಾಲ ಸಂಸಾರ ಸುಖವನ್ನು ಅನುಭವಿಸಿ ಬಿಟ್ಟು ಇಂದ್ರಿಯಗಳು ಮುದಿಯಾಗಿ ಮುದಿತನ ಬಂದರೆ ಮಾಡುತ್ತೇನೆನ್ನುತ್ತಾನೆ. ಮುದುಕನಾದ ಮೇಲೆ ಈಗ ನನಗೆ ಅನೇಕ ಅಶಕ್ತತೆಗಳಿವೆ. ಇವೆಲ್ಲಾ ತೀರಲಿ ಆ ಮೇಲೆ ಮಾಡುತ್ತೇನೆನ್ನುತ್ತಾನೆ. ಹಾಗಾದರೆ ಅವು ತೀರುವುದೂ ಇಲ್ಲ, ಅವು ಆಗುವುದೂ ಇಲ್ಲ. ಸಮುದ್ರದ ಅಲೆ ನಿಂತ ಮೇಲೆ ಸ್ನಾನ ಮಾಡುತ್ತೇನೆಂದು ಹೇಳುವವನಂತೆ ಇವನ ಬಾಳೂ ಆಗುವುದು. ಆದುದರಿಂದ ಬಾಲ್ಯ, ಯೌವನ, ಮುದಿತನ, ಸಂಸಾರತಾಪತ್ರಯ ಇವುಗಳೆಲ್ಲವನ್ನೂ ಲಕ್ಷ್ಯ ಮಾಡದೆ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳಬೇಕು.

(ಸಶೇಷ)

ಎಂ. ಮಲ್ಲಿಕಾರ್ಜುನಾರಾಧ್ಯ, ರಾಣೆಬೆನ್ನೂರು
ಮಳೇಮಠ ತಿಪ್ಪೂರು

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಏಕಾಗ್ರಚಿತ್ತದಿಂದ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರ ಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೩೦೦ ಪುಟಗಳುಳ್ಳದಾಗಿದ್ದು ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕೊಂಡುಕೊಂಡು ಅದರಲ್ಲಿಯ ಅನುಪಮ ವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಉತ್ಕೃಷ್ಟವಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥದ ಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ನಿಸ್ಸಂಕೋಚವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರನ್ನು ಗೌರವಿಸಿದ್ದಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮೀಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ ಪಿ ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುಮಠದ ಮುಕ್ಕಿ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ತಿಳಿದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ಕೊಡಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಿಂಹಾಸನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭವ್ಯಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಷಡ್ಗುಣಬಲಿಜಾರಿತರಸಸಿಂಧೂರ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೩ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಒಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಭೂ ಕೈ ಲಾ ಸ ನಾ ಟ ಕ.

ಮೈಸೂರು ರಾಜಧಾನಿಯಲ್ಲಿ "ಸರಸ್ವತೀ ವಿಲಾಸ ನಾಟಕಮಂಡಳಿ" ಎಂಬ ಹೆಸರಿನಿಂದ ಒಂದು ನಾಟಕ ಕಂಪನಿಯು ನೂತನವಾಗಿ ಸ್ಥಾಪಿತವಾಗಿರುವುದು. ಮ|| ರಾ|| ಆರ್ ನಾಗೇಂದ್ರರಾವ್, ಎ. ವಿ ಸುಬ್ಬಯ್ಯನವರು ಈ ಕಂಪನಿಯನ್ನು ಸ್ಥಾಪಿಸಿರುವರು. ಈ ಉಭಯರೂ ಸುಪ್ರಸಿದ್ಧ ನಟರಾಗಿದ್ದು ಕರ್ನಾಟಕದೇಶದಲ್ಲೆಲ್ಲಾ ವಿಶೇಷ ಖ್ಯಾತಿಯನ್ನು ಪಡೆದಿರುವರು. ಇವರು "ಭೂಕೈಲಾಸ"ವೆಂಬ ಒಂದು ನಾಟಕವನ್ನು ನೂತನವಾಗಿ ಸಿದ್ಧಪಡಿಸಿ ಸದ್ಯಃ ರಾಜಧಾನಿಯಲ್ಲಿ ಅಭಿನಯಿಸುತ್ತಿರುವರು. ರಾವಣನು ತನ್ನ ತಾಯಿಗಾಗಿ ಶ್ರೀ ಶಂಕರನನ್ನು ಕುರಿತು ಉಗ್ರವಾದ ತಪವನ್ನಾಚರಿಸಿ, ಆತ್ಮಲಿಂಗವನ್ನು ಪಡೆದು ಗೋಕರ್ಣಕ್ಷೇತ್ರವನ್ನು ಭೂಕೈಲಾಸವನ್ನಾಗಿ ಮಾಡುವ ಪೌರಾಣಿಕ ಕಥೆಯೇ ಈ ನಾಟಕದ ಕಥಾಭಾಗವು.

ಈ ನಾಟಕದಲ್ಲಿ ರಾವಣ ನಾರದ ಎಂಬ ಈ ಉಭಯ ಪಾತ್ರಗಳೇ ಪ್ರಧಾನಪಾತ್ರಗಳಾಗಿರುವುವು. ಮ|| ರಾ|| ಸುಬ್ಬಯ್ಯನಾಯುಡುರವರು ರಾವಣನ ಪಾತ್ರವನ್ನೂ ಮ|| ರಾ|| ನಾಗೇಂದರಾಯರು ನಾರದನ ಪಾತ್ರವನ್ನೂ ವಹಿಸುವರು. ಈ ಉಭಯರೂ ನಾಟ್ಯಕಲೆಗನುಗುಣವಾಗಿ ಅಭಿನಯಿಸುವ ರೀತಿಯು ಅಸದೃಶವಾಗಿದ್ದು ಪ್ರೇಕ್ಷಕರನ್ನು ಆನಂದಸಾಗರದಲ್ಲಿ ಓಲಾಡಿಸುತ್ತಿರುವುದು. ರಾವಣನ ವೀರರಸಪ್ರಧಾನೋಕ್ತಿಗಳೂ, ನಾರದನ ಹಾಸ್ಯ ಚತುರೋಕ್ತಿಗಳೂ ಮನೋಹರವಾಗಿವೆ. ಪದಲಾಲಿತ್ಯವು ಪ್ರಶಂಸನೀಯವಾಗಿದೆ. ಅಲ್ಲದೆ ರಾವಣನ ಜನನಿಯಾದ ಕೈಕಸೆಯ ಪಾತ್ರವನ್ನು ವಹಿಸಿದ ಮ|| ರಾ|| ಎಂ ಬೋಧರಾಯರು, ಪಾರ್ವತಿಯ ಪಾತ್ರವನ್ನು ವಹಿಸಿದ ಶ್ರೀಮತಿ ... ಮಂಡೋದರಿಯ ಪಾತ್ರವನ್ನು ವಹಿಸಿದ ಲಕ್ಷ್ಮೀಬಾಯಿ, ಮಾಯೆಯ ಪಾತ್ರವನ್ನು ವಹಿಸಿದ ... ಗಣಪತಿಯ ಪಾತ್ರವನ್ನು ವಹಿಸಿದ ಮ|| ರಾ|| ರಾಮಚಂದ್ರರಾವ್ ಮತ್ತು ಇತರ ... ಪಾತ್ರಗಳನ್ನು ವಹಿಸಿರುವವರು ಇವರೆಲ್ಲರೂ ತಮ್ಮ ತಮ್ಮ ಪಾತ್ರಗಳನ್ನು ಬಹು ಮನೋಹರವಾಗಿ ಅಭಿನಯಿಸುತ್ತಿರುವರು. ಈ ನಾಟಕದಲ್ಲಿ ಪಾತ್ರಗಳನ್ನು ವಹಿಸಿರುವವರೆಲ್ಲರೂ ಅಪಶಬ್ದಗಳಿಗೆ ಅವಕಾಶವನ್ನು ಕೊಡದೆ ವಾಕ್ಯಗಳನ್ನು ಸ್ಪಷ್ಟವಾಗಿ ನುಡಿಯುತ್ತಿರುವುದು ಕಬ್ಬಿನಮೇಲೆ ಜೇನಿಟ್ಟಂತಾಗಿದೆ. ಅಸ್ತು!

ಈ ಕಂಪನಿಯ ಮಾಲೀಕರು ಲಕ್ಷ್ಯಾಂತರ ದ್ರವ್ಯವನ್ನು ವೆಚ್ಚ ಮಾಡಿ ಬರೆಯಿಸಿರುವ ಸುಂದರತರವಾದ ಸೀನರಿಗಳೂ, ಚಿತ್ರವಿಚಿತ್ರಗಳಾದ ವಿದ್ಯುದ್ದೀಪಗಳೂ, ಅಮೂಲ್ಯಗಳಾದ ವಸ್ತ್ರಾಭರಣಗಳೂ ಪ್ರೇಕ್ಷಕರ ಹೃದಯವನ್ನಾಕರ್ಷಿಸುತ್ತಿರುವುವು. ಒಟ್ಟಿಗೆ ಈ ನಾಟಕವು ಸರ್ವಾಂಗಸುಂದರವಾಗಿದ್ದು, ಸರ್ವಜನಮನಸ್ಸಂತೋಷಕರವಾಗಿರುವುದರಿಂದ ಕರ್ನಾಟಕ ರಾಜ್ಯದಲ್ಲಿ ಇದೊಂದು ಮಾದರಿಯ ನಾಟಕವೆಂದೇ ಹೇಳಬಹುದಾಗಿದೆ. ಪ್ರತಿದಿವಸವೂ ನಾಟಕ ಮಂದಿರದಲ್ಲಿ ನಾಟಕಕ್ಕಾಗಿ ಕಿಕ್ಕಿರಿದು ನೆರೆಯುತ್ತಿರುವ ಜನಸ್ತೋಮವೇ ಈ ವಿಷಯದಲ್ಲಿ ಬಲವಾದ ಸಾಕ್ಷಿಯಾಗಿದೆ. ಇಂತಹ ಸರ್ವಗುಣಾಲಂಕೃತವಾದ ಕಂಪನಿಯು ಚಿರಕಾಲ ... ದಿನೇದಿನೇ ಅಭಿವೃದ್ಧಿಯನ್ನು ಹೊಂದಲೆಂದೂ ತಮ್ಮ ಒಡ್ಡ ಪ್ರತಿಭಾವಿಶೇಷದಿಂದ ಇಂತಹ ಭವ್ಯಕಂಪನಿಯನ್ನು ಸ್ಥಾಪಿಸಿ ... ಉಭಯ ಮಾಲೀಕರಿಗೂ ಶ್ರೀ ತ್ರಿಲೋಕೇಶ್ವರನು ಆಯುರಾರೋಗ್ಯ ಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದೂ ಹಾರೈಸುತ್ತೇವೆ.

ಡಾಕ್ಟರ್ ಜೇ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು.

(Registered Trade Mark)

ಪ್ರಸಿದ್ಧವಾದ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪಿನಸಿ, ಒಂ ತಲೆನೋವು, ತಲೆ ಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಒಂದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಿಲ್ಲೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ ೦ ...
ಡಜನ್ ಒಂದಕ್ಕೆ ಕ್ರಯ ರೂ ೩ ೮ ೦ ವಿ. ಪಿ ೮ ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಒಂದಿಸಿ

ಗುರುಸ್ವಾಮಿ ಅಂಡ್ ಕಂಪೆನಿ ಲಿಮಿಟೆಡ್,

[24] ಪೋ. ಬಾ. ೫೧೦ ಮದರಾ...

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ		೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ		೧ ಆಣೆ
ಗೋತ್ರಸೂತ್ರಪಟ (೨ನೆಯ ಆವೃತ್ತಿ)	.	೧ ಆಣೆ
ಸನ್ಯಾಸಶಾಸ್ತ್ರಮಹಿಮೆ (೩ನೆಯ ಆವೃತ್ತಿ ಸಂಸ್ಕೃತ)		೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೨ನೆಯ ಆವೃತ್ತಿ)		೧ ಆಣೆ
ಶ್ರೀ ಪಂಚಾಚಾರ್ಯ ಮಂಗಳಸ್ತೋತ್ರಾವಳಿ (೭ನೆಯ ಆವೃತ್ತಿ)	..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	...	೧ ಆಣೆ
ಬಸವಾದಿ ಶಿವತತ್ವದರ್ಪಣ (೪ನೆಯ ಆವೃತ್ತಿ)	..	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	. .	೨ ಆಣೆ
ಪಂಚಾಚಾರ್ಯ ಪ್ರಭಾಕರ	. .	೩ ಆಣೆ
ಶಿವಶಕ್ತಿವಿಲಾಸ	...	೨ ಆಣೆ
ಶ್ರೀಗುರುತತ್ವಪದಗಳು	....	೨ ಆಣೆ
ಗುರುಸ್ಮರಣ ಪಸ್ತಪದೀಪಿಕೆ	.	೨ ಆಣೆ
ವೀರಶೈವಮತಸಿದ್ಧಾಂತ	....	೪ ಆಣೆ
ವೀರಶೈವಾಚಾರವಿಧಿ (೫ನೆಯ ಆವೃತ್ತಿ)	....	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	... .	೪ ಆಣೆ
ಸನ್ಯಾಸಶಾಸ್ತ್ರದ ವಿಮರ್ಶ ತತ್ವಪ್ರಕಾಶೀಕರಣ (೨ನೆಯ ಆವೃತ್ತಿ)	..	೬ ಆಣೆ
ವೈದಿಕವಾಙ್ಮಯರಹಸ್ಯ	...	೬ ಆಣೆ
ಆಗಮಪರಿಜ್ಞಾನ	....	೮ ಆಣೆ
ಶಿವಾಧಿಕ್ಯರತ್ನಾವಳಿ (ಪಡಕ್ಷರ ಕವಿಕೃತ)	....	೮ ಆಣೆ
ಬಸವಧರ್ಮಾಂಕ ಪ್ರಭಾಕರ (೨ನೆಯ ಆವೃತ್ತಿ)	....	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವು (ತೆಲುಗು)		೮ ಆ...
पंडित श्रीकाशीनाथशास्त्री यांचे भाषण (मराठी)	...	८ आ...
Speeches by Pandit Shri Kashinatha Shastri (*English*)		12 ...
ವೀರಶೈವರತ್ನ (೪ನೆಯ ಆವೃತ್ತಿ)	....	೧೨ ...
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ		೧೨
ವಿನಾಯಕೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	....	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	೧೨
ಶಿವಾಗಮೋಕ್ತಸಿದ್ಧಾಂತದರ್ಪಣ		೧೨
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) ..	..	೧ ...
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	...	೧ ...
ಕೇನೋಪನಿಷತ್ (ವೀರಶೈವಭಾಷ್ಯ)		೧ ...
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಪಟ್ಟಿ)	...	೧
ವೀರಶೈವಸಿದ್ಧಾಂತಸುಧಾಕರ	....	೩
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೩೩ ಪುಟ)	..	೮
लिंगधारणचंद्रिका (संस्कृत) ...	...	३
महानारायणोपनिषत् (वीरशैवभाष्य–संस्कृत)	....	१
वीरशैवेंदुशेखर (संस्कृत)	....	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ ಕಳುಹಿಸುವ... ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು... ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ...

ಮೈಸೂರು ಪಬ್ಲಿಕಹಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

EGISTERED No M 2266 || ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂಶು || REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಕದವರಿಗೆ ೧ ರೂ ೧೧ ಆಣೆ | ಬಿಡಿ ಪ್ರತಿ ೧ಕ್ಕೆ ೯ ಪೈ | ಪರಸ್ಥಳದವರಿಗೆ ೨ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೪ ನೇ ಜೂನ್ ೧೯೩೫ [ಸಂಚಿಕೆ ೭

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂಶು

(ಇಲ್ಲಿ ನೋಟೀಸ್ ಇದೆ)

ಶ್ರೀಮದ್ವೇದವೇದಾಂತಸಿದ್ಧಾಂತಾಗಮ ಸುಶ್ರೀಮದ್ಧ ಶ್ರೀಮ ...ಪಕ್ಷಿಯ ಮಹಾಮಹಸ್ಥಾಪನಾಚಾರ್ಯ ಶ್ರೀಮತ್ತ್ರಿಭುವನ ...ದಾರಾಧ್ಯಾಚಾರ್ಯ ಪರಂಪರಾಗತ ಶ್ರೀಮದುಜ್ಜಯಿನೀ ...ಮರ್ಕಸಿಂಹಾಸನಾಧೀಶರ ಶ್ರೀ ಜಗದ್ಗುರು ಚರಣ ಧ್ಯಕ್ಷ ಶ್ರೀ ಸಿದ್ಧಲಿಂಗರಾಜದೇಶಿಕೇಂದ್ರ ಮಹಾಸ್ವಾಮಿನಾಂ ದಿವ್ಯ ...ಸ್ಥಾನದಿಂದ—

ಶ್ರೀಮದ್ವೀರಶೈವ ಚತುರ್ಥರ ಮಠಂತ ವ ಘಳ ...ಯವರಾಪರಾದ ಚೋರಸವು ಓದ ದ ರವ ಪಟ್ಟಾಧಿಕಾರಿಗ ...ದ ಮರುಳಸಿದ್ಧದೇವರಿಗೆ ಲಭಿಸಿದ ಅಮೋಘಾಶೀರ್ವಾದನ ...ಹುಕುಂ ಅದಾಗಿ—

...ದ ಮಹಾಸಂಸ್ಥಾನದ ದೀಕ್ಷಾರಾಧನೆ ಕಾಣಿಕೆಯನ್ನು ...ವರಲ್ಲಿ ವಸೂಲಾದ ಒಂದೆ ಹಣವನ್ನು ಆಯಾಂಗ ...ಸನ್ನಿಧಿಗೆ ಸಲ್ಲಿಸಿ ಲೆಕ್ಕವನ್ನು ಒಪ್ಪಿಸಿ ಪುನಃ ಎರಡನೆಯ ...ಪಡೆದು ಆಜ್ಞಾನುಸಾರ ಕಾರ್ಯದಲ್ಲಿ ತತ್ಪರರಾಗಿರ ... ಸೂಕ್ತವಾದ ಆಚಾರವ್ಯವಹಾರಗಳನ್ನು ವಿಚಾರಿಸಿ ...ರ್ಯ ಮಾಡಿಕೊಂಡು ತಂದು ಒಪ್ಪಿಸಬೇಕು ಈ ಹುಕ್ಕುಂ ತಾ|| 9 6 35 ರಿಂದ ತಾ|| 9 12 35 ರ ವರೆಗಿನ ...ದೆ ಕೊಟ್ಟಿದೆ ಇದರ ಮೇಲೆ ಈ ಹುಕುಂ ಮುಂದೂ ...ವದಿಲ್ಲ ಈ ಬಗ್ಗೆ ಗುರುಸೇವಾಸಕ್ತರಿಗೆ ಬಹುಳ್ಯವಾಗಿ ...ದಿಸಿಕೊಂಡಿದೆ

ಇತ್ಯಾಶೀಃ

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂಶು

ಪಟ್ಟಾಭಿಷೇಕಮಹೋತ್ಸವ

...ಳಗಾವ ಜಿಲ್ಲಾ ಸಂಪಗಾವ ತಾ|| ಬೈಲ ಹೊಂಗಲ ...ಮಠದಲ್ಲಿ ತಾ|| ೧೧ ೬ ೩೫ ದಿವಸ ವೇ|| ಚನ್ನಬಸಯ್ಯ ...ಯ್ಯ ಹಿರೇಮಠ ಇವರ ಚಿ|| ಬಸವಣ್ಣಯ್ಯ ಎಂಬ ವಟುವಿಗೆ ...ಧಿಕಾರವನ್ನು ಕೊಡುವದರಲ್ಲಿ ಬಂದಿರು ಸದಾ ಮಹೋ ... ಶ್ರೀ|| ಷ|| ಬ್ರ|| ಚರಮೂರ್ತಿಗಳು ಯಾದಗೊಂಬೇ ವರ ...ದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಬೃಹನ್ಮಠ ಶಾಖಾ ... ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಬೃಹನ್ಮಠ, ಹಣಬರಟ್ಟಿ ಷ|| ಬ್ರ|| ಗುರುಪಾದಸ್ವಾಮಿ ಬೃಹನ್ಮಠ ಸುತಗಟ್ಟಿ ... ಆಗಮಿಸಿದ್ದರು ತಾ|| ೧೨ ೬ ೩೫ ದಿವಸ ಪಲ್ಲಕ್ಕಿ ...ಉತ್ಸವವು ಅತಿವಿಜೃಂಭಣೆಯಿಂದ ಮಠದಿಂದ ಹೊರಟು ...ಓಣಿ ಆಲಾಪುರದೋಣಿ ಗೌಡರೋಣಿ ಇಟನಾಳವರೋಣಿ ...ಬಜಾರ, ದೇಸಾಯಿಯವರೋಣಿ ಮೊದಲಾದ ಓಣಿಗಳಲ್ಲಿ ... ಮಠಕ್ಕೆ ಬಂದುಕಲ್ಲಿಸು ಈ ಉತ್ಸವದಲ್ಲಿ ಊರ ...ದೈವದವರು ತಮ್ಮ ತನುಮನೋಧನಗಳಿಂದ ಕಾರ್ಯಭಾಗಿ ...ಗುರುಕಾರ್ಯವನ್ನು ಅತಿಸಂತೋಷದಿಂದ ಪೂರೈಸಿದರು ...ಉತ್ಸವದ ಸಮಯದಲ್ಲಿ ವೇ|| ಚನ್ನಬಸಯ್ಯ ಅವರ ...ಹಿರೇಮಠ ಇವರು ೫ ರೂಪಾಯಿಗಳನ್ನು ಪ್ರಭಾಪೋಷಣೆ ...ಸಮರ್ಪಿಸಿದರು ಈ ಮಹೋದಯರಿಗೆ ಜಗದ್ಗುರು ...ಚಾರ್ಯರು ಆಯುರಾರೋಗ್ಯಾದಿ ಸಕಲ ಸಂಪತ್ತುಗಳನ್ನು ...ಲಿಸಲೆಂದು ಕೋರುತ್ತೇನೆ

ಓರ್ವ ಗುರುಭಕ್ತ

ಕೇದಾರಪ್ರಾಂತ ಸಮಾಚಾರ

ಶ್ರೀ ಸಂಸ್ಥಾನ ಏಕೋರಾಮಪೀಠ ಉಖಾಮಠದಿಂದ

ತಾ|| 3 6 35 ರಲ್ಲಿ ಉದಯ 6 ಘಂಟೆಗೆ ದಿವ್ಯಶ್ರೀಯ ಕೇದಾರ ಮಧ್ಯಮೇಶ್ವರ ಪಂಚಾಸ್ವಾಮಿ ಸಹಿತವೀಯ ಸಂಸ್ಥಾನದ ಅಧಿಕಾರಿಗಳೊಂದಿಗೆ ದಯಮಾಡಿಸಿ ತಾ|| 6 6 35 ರ ಮಧ್ಯಾಹ್ನ 2 ಘಂಟೆಗೆ ಕ್ಷೇತ್ರಕ್ಕೆ ತಲ್ಪಿ ಶುಭಮುಹೂರ್ತದಲ್ಲಿ ದೇವಾಲಯದ ಬಾಗಿಲು ತೆಗೆಯಲ್ಪಟ್ಟಿತು ಈ ಮಹಾಕ್ಷೇತ್ರ ದರ್ಶನಕ್ಕೆ ಕೇವಲ ಈ ಪವಿತ್ರಪ್ರದೇಶದ ಜನರ ಹೊರತು ಅನ್ಯದೇಶೀಯ ಯಾತ್ರಿಕರು ಹೋಗಲು ಶಕ್ಯವಿಲ್ಲ ಈ ಕ್ಷೇತ್ರದ ಮಾರ್ಗವು ಅತ್ಯಂತ ಕಷ್ಟತರವಾಗಿರುವುದು ಈ ದೇವರ ಪೂಜೆಯು 6 ತಿಂಗಳು ದೇವತೆಗಳಿಂದಲೂ, 6 ತಿಂಗಳು ವೀರಶೈವ ಮಾಹೇಶ್ವರರಿಂದಲೂ ನಡೆಯುವುದು

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿ ಶಾಸ್ತ್ರಾಭ್ಯಾಸಮಾಡುತ್ತಿರುವ ಶ್ರೀ ಜಗದ್ಗುರು ಏಕೋರಾಮ ವೈರಾಗ್ಯಸಿಂಹಾಸನ ಶಾಖಾನುವರ್ತಿಗಳಾದ ಶ್ರೀ ಗುರುಶಾಂತ ಶಿವಾಚಾರ್ಯ ಸ್ವಾಮಿ ಮುತನಾಳ ಇವರು ಶ್ರೀ ಕೇದಾರ ಮಹಾಕ್ಷೇತ್ರಕ್ಕೆ ದಯಮಾಡಿಸಿ ಕೇದಾರೇಶ್ವರ ಜ್ಯೋತಿರ್ಲಿಂಗಕ್ಕೆ ರುದ್ರಾಭಿಷೇಕ ಮಹಾಪೂಜಾದಿಗಳನ್ನು ಮಾಡಿಸಿ ಏಕೋರಾಮ ಪೀಠಕ್ಕೆ ತಲ್ಪಿದರು ಇಲ್ಲಿ ಜಗದ್ಗುರು ಮಹಾಸನ್ನಿಧಿಯವರ ಪಾದಪೂಜಾ ರುದ್ರಾಭಿಷೇಕಾದಿಗಳನ್ನು ಮಾಡಿಸಿ ಮಹಾಗುರುಗಳ ಪಾದಕ್ಕೆ ಶಕ್ತ್ಯನುಸಾರ ಕಾಣಿಕೆಯನ್ನಿತ್ತು ಮಹಾಸನ್ನಿಧಿಯವರ ಆಶೀರ್ವಾದವನ್ನು ಪಡೆದು ಪುನಃ ಕಾಶಿಗೆ ದಯಮಾಡಿಸಿದರು

ತಾ|| 6 6 35 ರಲ್ಲಿ ಗೊಂಡಾದ ರಾಣಿ ಸಾಹೇಬರು ಮತ್ತು ತಾ|| 8 6 35 ರಲ್ಲಿ ನೇಪಾಳದೇಶದ ಚಿಕ್ಕರಾಣಿ ಸಾಹೇಬರು ಶ್ರೀ ಕೇದಾರನಾಥ ಜ್ಯೋತಿರ್ಲಿಂಗದ ಪೂಜೆಯನ್ನು ಪೂರೈಸಿಕೊಂಡು ಏಕೋರಾಮಪೀಠ ಮಹಾಸಂಸ್ಥಾನಕ್ಕೆ ದಯಮಾಡಿಸಿ ಮಹಾಸನ್ನಿಧಿಯವರ ಪೀಠಕ್ಕೆ ದರ್ಶನ ಕಾಣಿಕಾದಿಗಳನ್ನು ಅರ್ಪಿಸಿ ಆಶೀರ್ವಾದವನ್ನು ಪಡೆದು ಮುಂದಕ್ಕೆ ದಯಮಾಡಿಸಿದರು ಇದರಂತೆ ಸಮಸ್ತ ಸದ್ಭಕ್ತಶಿರೋಮಣಿಗಳು ದೇವದರ್ಶನಮಾಡಿಕೊಂಡು ಧನ್ಯರಾಗಬೇಕೆಂದು ಇಚ್ಛಿಸುವ,

ಎಸ್ ಶಿದ್ಧಲಿಂಗಶರ್ಮಾ,
ವೃಷಾಮಠ

ಜರ್ಮನ್ ಮೋಟಾರ್ ಕಾರ್

ಇದೇ ಜೂನ್ 4 ನೇ ತಾರೀಖಿನ ದಿವಸ ಜರ್ಮನ್ ಮೋಟಾರುಗಳು ಮದರಾಸಿಗೆ ಬಂದಿವೆ ಈಗ ಬಂದಿರುವುದು 7 ಅಶ್ವಶಕ್ತಿಯಿಂದ ಕೂಡಿದ ಸಿಡಾನ್ ಗಾಡಿ 1 ಗ್ಯಾಲನ್ ಪೆಟ್ರೋಲಿಗೆ 40 ಮೈಲು ಹೋಗುತ್ತದೆಯಂತೆ

ಸ್ವೀಕಾರ

ಬೆಳಗಾಂವ ಜಿ|| ಸಂಪಗಾಂವ ತಾ|| ಹುಣಸಿಕಟ್ಟಿ ಹಿರೇಮಠದ ವೇ|| ಒಡೆಯರ್ಯನವರ ತಮ್ಮ ಪುತ್ರ ಬಸವಣ್ಣಯ್ಯನವರಿಗೆ ನೆರವೇರಿಸಿದ ಪಟ್ಟಾಧಿಕಾರ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 5 ರೂಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ರಾಜಧಾನಿಯ ರೀಡ್ಸ್ ವರ್ಕ್‌ಷಾಪಿನಲ್ಲಿರುವ ಮ|| ರಾ|| ಮಹಾದೇವಪ್ಪನವರ ಪುತ್ರಿ ಚಿ|| ಸೌ|| ಲಲಿತಾಂಬೆಯನ್ನು ಚಿ|| ಸೌ|| ಬಸವಣ್ಣನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರ ಕಡೆಯವರು ಸಮರ್ಪಿಸಿದ 2 ರೂಗಳು ಮ|| ರಾ|| ಮಹಾದೇವಪ್ಪನವರ ದ್ವಾರಾ ತಲ್ಪಿರುತ್ತವೆ

ವಿಜಾಪುರ ನಿವಾಸಿಗಳಾದ ವೇ|| ಕರ್ಪೂರ ಮಠದ ದುಂಡಯ್ಯನವರು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಗಳು ಮ|| ರಾ|| ಅಂಬಲಿ ಗುರುಲಿಂಗಪ್ಪನವರ ದ್ವಾರಾ ತಲ್ಪಿರತ್ತವೆ

ಬಳ್ಳಾರಿ ಜಿ| ಉಚ್ಚಂಗಿ ದುರ್ಗದ ಶ್ರೀಮಂತ ಮ|| ರಾ| ಎಂ ಸಿ ಸಿದ್ಧನಗೌಡರ, ಶಿವದೀಕ್ಷಾದ ಸಮಯದಲ್ಲಿ ಅವರ ಪುತ್ರ ಮ|| ರಾ|| ಮರುಲಸಿದ್ಧನಗೌಡರು 2 ರೂ ಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಮೂಡಗೆರೆ ಮಹಾಂತಿನಮಠದ ವೇ|| ಮಲ್ಲಿಕಾರ್ಜುನಯ್ಯನವರ ಪುತ್ರ ಚಿ|| ಸಿದ್ಧಲಿಂಗಯ್ಯನಿಗೆ ನೆರವೇರಿಸಿದ ಶಿವದೀಕ್ಷಾ ಸಮಯದಲ್ಲಿ ಸಮರ್ಪಿಸಿದ 2 ರೂ ಗಳು ಮ|| ರಾ|| ವ್ಯಾಕ್ಸಿನೇಟರ್ ಡಿ ನಂಜಪ್ಪನವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ|| ಜೋರನೂರು ಮಠದ ಶ್ರೀ ಪಟ್ಟದ ಸ್ವಾಮಿಗಳವರು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಗಳು ಉಜ್ಜಯಿನಿಯಲ್ಲಿರುವ ವೇ|| ನಾಗರಕಟ್ಟೆ ಮಠದ ರಾಚೋಟಯ್ಯನವರ ದ್ವಾರಾ ತಲ್ಪಿರುತ್ತವೆ

ಗೌರಿಬಿದನೂರು ತಾಲೂಕು ಮುದುಗೆರೆ ಮಠದ ವೇ|| ರುದ್ರಯ್ಯನವರ ಪುತ್ರಿ ಸೌ|| ರುದ್ರಾಣಿ ಎಂಬ ವಧುವಿಗೂ ಮೈಸೂರು ವಾಣೀವಿಲಾಸ ಅರಸು ಗರ್ಲ್ಸ್ ಸ್ಕೂಲಿನ ಅ|| ಟೀಚರ್ ಶ್ರೀಮತಿ ಜಿ ಶೋಟಿದಮ್ಮನವರ ಪುತ್ರ ಸದಾಶಿವಸ್ವಾಮಿ ಎಂಬ ವರನಿಗೂ ನಡೆಯಿಸಿದ ವಿವಾಹ ಸಮಯದಲ್ಲಿ ವರನ ಕಡೆಯಿಂದ ಸಮರ್ಪಿಸಿದ 1 ರೂಪಾಯಿಯು ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಒಡ್ಡೋಲ್ ಅಧಿವೇಶನದಲ್ಲಿ ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿದ ಭಾಷಣ

——

[illegible]

——

[illegible]

ಮೈಸೂರು ಸಂಸ್ಥಾನದ ಕಬ್ಬಿಣದ ಕಾರ್ಖಾನೆ.

[illegible]

ಮೈಸೂರು ಸಂಸ್ಥಾನದ ಸಕ್ಕರೆ ಕಾರ್ಖಾನೆ

ಸಕ್ಕರೆಯ ಕಾರ್ಖಾನೆಯ ಕೆಲಸವು [illegible] 1934 [illegible] ವರ್ಷವು ಪೂರೈಸಿತು. ಈ ಅವಧಿಯಲ್ಲಿ ಈ ಕಂಪೆನಿಯ [illegible] 10 ರಷ್ಟು ಲಾಭವು ದೊರೆತಿದೆ. ಈ [illegible] ಫಲಪ್ರದವಾಗಿ ಕೆಲಸ ನಡೆಯುತ್ತಿರುವುದರಿಂದ ಉತ್ತೇಜನಗೊಂಡು ಆ ಕಂಪೆನಿಯು ಆವರಣವನ್ನು ವಿಸ್ತರಿಸುವುದಕ್ಕಾಗಿ ನಿರ್ಣಯವನ್ನು ಮಾಡಿದ್ದಾರೆ. ಆ ಕಂಪೆನಿಯು ಬಂಡವಾಳವನ್ನು 30 ಲಕ್ಷ ರೂಪಾಯಿಗಳಿಂದ 40 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಅವರು ಹೊಸ ಯಂತ್ರವನ್ನು ಸ್ಥಾಪಿಸುವುದಕ್ಕಾಗಿ ಭಾರಿ ಯತ್ನವನ್ನು ಪ್ರಾರಂಭಿಸಿದ್ದಾರೆ. ಕಡೆಯಲ್ಲಿ ಈ ಹೊಸ ಯಂತ್ರವು ಸ್ಥಾಪಿತವಾದಮೇಲೆ ವರ್ಷಕ್ಕೆ 12 000 ಟನ್ನುಗಳಿಗೆ ಕಡಮೆಯಿಲ್ಲದಷ್ಟು ಸಕ್ಕರೆಯನ್ನು ತಯಾರಿಸಲು ಸಾಧ್ಯವೆಂದು ಅವರು ನಂಬಿರುತ್ತಾರೆ. ಅದು ಸಾಧ್ಯವಾದ ಮೇಲೆ ಮೈಸೂರು ಸಂಸ್ಥಾನದ ಸಕ್ಕರೆಯ ಕಾರ್ಖಾನೆಯು ಇಂಡಿಯಾ ದೇಶದಲ್ಲಿಯೇ ಅತ್ಯಂತ ದೊಡ್ಡದಾದ ಸಕ್ಕರೆಯ ಕಾರ್ಖಾನೆಯೆನಿಸುವುದೆಂದು ನನಗೆ ತೋರುತ್ತದೆ. ಈ ಕಾರ್ಖಾನೆಯು ಕೆಲಸ ನಡೆಯುತ್ತಿರುವುದರಿಂದ ರೈತರುಗಳಿಗೆ ಎಷ್ಟರ ಮಟ್ಟಿಗೆ ಪ್ರಯೋಜನವುಂಟಾಗಿದೆಯೆಂಬುದಕ್ಕೆ ಅವರು ಹೋದ ವರ್ಷ ಬೆಳೆದ ಕಬ್ಬಿನ ಫಸಲಿನಲ್ಲಿಯೇ ಸುಮಾರು 6½ ಲಕ್ಷ ರೂಪಾಯಿಗಳಷ್ಟು ಬೆಲೆಗಳು ಕಬ್ಬಿನ ಬೆಳೆಯ ರೂಪದಲ್ಲಿ ಅವರಿಗೆ ಸಂದಾಯವಾಗಿರುವುದೇ ನಿದರ್ಶನವಾಗಿದೆ. ಕಬ್ಬಿನ ಸಾಗುವಳಿ ವಿಸ್ತಾರವು ಹೆಚ್ಚಿ ಮುಂದಿನ ಅಕ್ಟೋಬರ್ ತಿಂಗಳಲ್ಲಿ ಕೊನೆಯಾಗುವ ಕಬ್ಬಿನ ಬಾಬತು ಬೆಳೆಯ ರೂಪದಲ್ಲಿ ಅವರಿಗೆ ಸಂದಾಯವಾಗುವ ಮೊಬಲಗು ಇದರ ಎರಡರಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ. ಇದರ ಜೊತೆಗೆ, ಸಕ್ಕರೆಯ ಕಾರ್ಖಾನೆಯವರು ಸಂಸ್ಥಾನದಲ್ಲಿರುವ ಮಾದಕದ್ರವ್ಯಗಳ ಅಂಗಡಿಗಳಿಗೆ ಸಾರಾಯಿ ಮುಂತಾದ ಮಾದಕದ್ರವ್ಯಗಳನ್ನು ಸರಬರಾಯಿ ಮಾಡಬಹುದೆಂದು ಅವರಿಗೆ ಲೈಸೆನ್ಸನ್ನು ಕೊಡಲಾಗಿದೆ. ಈ ಉದ್ದೇಶಕ್ಕಾಗಿ ಕಾರ್ಖಾನೆಯವರು ಭಟ್ಟಿ ಇಳಿಸುವ ಯಂತ್ರಗಳನ್ನು ಸ್ಥಾಪಿಸಿರುತ್ತಾರೆ. ಈಗಾಗಲೇ ಆ ಯಂತ್ರಗಳಿಂದ ಕೆಲಸವು ನಡೆಯುತ್ತಿದೆ. ಸಕ್ಕರೆಯು ತಯಾರಾಗುವಲ್ಲಿ ಸಕ್ಕರೆ ಕಾರ್ಖಾನೆಯಿಂದ ದೊರೆಯುವ ಉಪವಸ್ತುಗಳಿಗೂ (ಎಂದರೆ ಕೈಗಾರಿಕೆಗಳಿಗೆ ಉಪಯೋಗವಾಗುವ ಆಲ್ಕೋಹಾಲ್‌ಸ್ಪಿರಿಟ್ ಮತ್ತು ಕಾಕಂಬಿ ಮುಂತಾದ ಪದಾರ್ಥಗಳಿಗೂ) ಸಹ ಲಾಭದಾಯಕವಾದ ಗಿರಾಕಿಗಳನ್ನೊದಗಿಸಲು ಪ್ರಯತ್ನವು ನಡೆಯುತ್ತಿದೆ. ಕಾಕಂಬಿಯನ್ನು ಜನಗಳ ಉಪಯೋಗಕ್ಕನುಕೂಲವಾಗುವಂತೆ ಮಾರಾಟಮಾಡುವ ಪ್ರಯತ್ನವೂ ಮತ್ತು ರಸ್ತೆಗಳಿಗೆ ಗಟ್ಟಿ ಮಾಡುವುದಕ್ಕೆ ಟಾರಿಗೆ ಬದಲಾಗಿ ಕಾಕಂಬಿಯನ್ನೇ ಉಪಯೋಗಿಸುವ ಪ್ರಯತ್ನವೂ ಸ್ವಲ್ಪಮಟ್ಟಿಗೆ ಫಲಕಾರಿಯಾಗಿ ಪರಿಣಮಿಸಿದೆ.

ಸಣ್ಣಪುಟ್ಟ ಕೈಗಾರಿಕೆಗಳ ಉದ್ಯಮಗಳು.

ಕೇವಲ ಲಾಭದ ದೃಷ್ಟಿಯಿಂದಲೇ ನೋಡುವುದಾದರೆ, ಶ್ರೀ ಚಾಮರಾಜೇಂದ್ರ ಅಲಂಕಾರದ ಕಾರ್ಖಾನೆಯು ಲಾಭದಾಯಕವಲ್ಲದ ಮತ್ತೊಂದು ಉದ್ಯಮವೆಂಬುದಾಗಿ ಹೇಳಬಹುದಾಗಿದೆ. ಈ ಕಾರ್ಖಾನೆಯು ಸಂಪೂರ್ಣವಾಗಿ ಮುಗಿಯುವುದಕ್ಕೆ ಮುಂಚೆಯೇ ಅನಿರೀಕ್ಷಿತವಾಗಿ ವಿಶೇಷ ಮಳೆಯಾಗಿ ಭಾರಿ ಪ್ರವಾಹವು ಬಂದುದರಿಂದ ಕಟ್ಟಡವು ಬಹುಮಟ್ಟಿಗೆ ಕೊಚ್ಚಿಕೊಂಡು ಹೋಯಿತು. ಇದರ ಪರಿಣಾಮವಾಗಿ ಈ ಕಾರ್ಖಾನೆಯ ಬಂಡವಾಳದ ವೆಚ್ಚವು ಹೆಚ್ಚಾಯಿತು. ಈ ಉದ್ಯಮವು ಅಷ್ಟು ಲಾಭದಾಯಕವಾಗಿಲ್ಲದಿರುವುದಕ್ಕೆ ಇದೇ [illegible] ವಸೂಲಾಗಬೇಕಾದ ಬಾಕಿ ಮೊಬಲಗುಗಳ [illegible] ಬಹಳ ಹೆಚ್ಚಾದ ಮೊಬಲಗು ವಸೂಲಾಗಿದೆ. [illegible] ಅಂದಾಜಿನಲ್ಲಿ ಅದು [illegible]

[illegible] ಈ ಕಾರ್ಖಾನೆಯಿಂದ [illegible] 36 ಲಕ್ಷ ರೂಪಾಯಿಗಳ ಪಟ್ಟಿಯವರೆಗೂ ಬರುವುದೆಂದು ನಾವು ನಿರೀಕ್ಷಿಸಿ [illegible] ಈ ಕಾರ್ಖಾನೆ [illegible] ಮೇಲೆ ವೆಚ್ಚ ಮಾಡಿರುವ ಬಂಡವಾಳದ ಮೇಲೆ ಇದು ಅತ್ಯಲ್ಪವಾದ ಬಡ್ಡಿಯೆಂಬುದೇನೋ [illegible] ಆದರೆ ಇಂತಹ ಉದ್ಯಮವನ್ನು ಸಂಪೂರ್ಣವಾಗಿ ಲಾಭದ ದೃಷ್ಟಿಯಿಂದಲೇ ನೋಡಬಾರದು. ಈ ಕಾರ್ಖಾನೆಯಿಂದ [illegible] ವೆಚ್ಚಕ್ಕೆ ತಕ್ಕುದಾದ [illegible] ಲಭಿಸುತ್ತಿರುವ ಅಪಾರವಾದ [illegible] ಸಹಾಯ [illegible]

ಗಂಧದ ಎಣ್ಣೆಯ ವ್ಯಾಪಾರದ ವಿಷಯದಲ್ಲಿ ನಾವು ಪ್ರಪಂಚದ [illegible] ಗಣನೆಗೆ ತಗೆದ ಕೊಳ್ಳಬೇಕಾಗಿದೆ. [illegible] ಎಣ್ಣೆಯ ವ್ಯಾಪಾರಕ್ಕೆ ಸಂಬಂಧಪಟ್ಟ ಲೆಕ್ಕಗಳನ್ನು ಪರಿಶೀಲಿಸಿದರೆ 1932 33 ನೆಯ ಸಾಲಿನಲ್ಲಿ ಮಾರಾಟವಾದ ಗಂಧದ ಎಣ್ಣೆಯ ಪರಿಮಾಣವು [illegible] 13 ಪೌಂಡುಗಳಷ್ಟಿದು 1934 35 ನೆಯ ಸಾಲಿನಲ್ಲಿ [illegible] ಪೌಂಡುಗಳಿಗೆ ಹೆಚ್ಚಿರುವುದು ಕಂಡುಬರುತ್ತದೆ. ಈ ಬಾಬತು ನಿವ್ವಳ ಹುಟ್ಟುವಳಿಯು [illegible] ನೆಯ ಸಾಲಿನಲ್ಲಿ 23 33 ಲಕ್ಷ ರೂಪಾಯಿಗಳೂ [illegible] ನೆಯ ಸಾಲಿನಲ್ಲಿ 1 03 ಲಕ್ಷ ರೂಪಾಯಿಗಳೂ [illegible] ನೆಯ ಸಾಲಿನಲ್ಲಿ [illegible] 10 ಲಕ್ಷ ರೂಪಾಯಿಗಳು ಮಾತ್ರ ಬರುವುದೆಂದು [illegible] ಗಂಧದ ಎಣ್ಣೆಯ [illegible] ಮಾರಾಟವು [illegible] ಮತ್ತು [illegible] ಹೆಚ್ಚಿನ ಕಡಮೆಯಾಗಿದೆ.

ಸಣ್ಣಪುಟ್ಟ ಕೈಗಾರಿಕೆಯ ಉದ್ಯಮಗಳ ಹುಟ್ಟುವಳಿಗಳನ್ನು ಕುರಿತು ವಿವರವಾಗಿ ಪ್ರಸ್ತಾಪಿಸಬೇಕಾದುದು ಅವಶ್ಯಕವೆಂದು ನನಗೆ ತೋರುವುದಿಲ್ಲ. ಸಾಬೂನು ಕಾರ್ಖಾನೆಯಿಂದ ಬಂದ ಲಾಭವು ಹಿಂದೆ ಬರುತ್ತಿದ್ದಷ್ಟು ಹೆಚ್ಚಾಗಿಲ್ಲವಾದರೂ ಈ ಕಾರ್ಖಾನೆಯಿಂದ ವಿಶೇಷವಾಗಿ ಕುಂಟು ಲಾಭವೇ ಬರುತ್ತಿರುವುದು ಸಂತೋಷಕರವಾದ ಸಂಗತಿಯಾಗಿದೆ. ಪಿಂಗಾಣಿಯ ಕಾರ್ಖಾನೆಯಲ್ಲಿ ಲಾಭದಾಯಕವಾಗಿ ಕೆಲಸ ನಡೆಯುತ್ತಿದೆ. ವೈದ್ಯದ ಇಲಾಖೆ ಮುಂತಾದವುಗಳಿಗೆ ಬೇಕಾದ ಸಾಮಾನುಗಳನ್ನು ತಯಾರಿಸಿ ಕಳುಹಿಸುವುದಕ್ಕಾಗಿಯೂ ಸರಕಾರಿ ಇಲಾಖೆಗಳಿಗೆ ಖರೀದಿಯಾಗಿ ಬರುವ ಸಾಮಾನುಗಳ ಮಾದರಿಗಳನ್ನು ಶಾಸ್ತ್ರೀಯ ಪ್ರಕ್ರಿಯೆಗಳಿಂದ ಪರೀಕ್ಷಿಸಿ ಅವು ಯಾವ ಯೋಗ್ಯತೆಯವೆಂದು ತಿಳಿಸುವುದಕ್ಕಾಗಿಯೂ ಅಷ್ಟುಮಟ್ಟಿನ ಯೋಗ್ಯತೆಯುಳ್ಳವುಗಳಾಗಿವೆಯೋ ಎಂಬುದನ್ನು ತಿಳಿಸುವುದಕ್ಕಾಗಿಯೂ 'ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲೆಬೊರಟರಿ' ಎಂಬ ಪ್ರಯೋಗಶಾಲೆಯು ಏರ್ಪಟ್ಟಿರುವುದು ಸರಿಯಷ್ಟೆ. ಅದರ ಆಯವ್ಯಯಗಳ ಲೆಕ್ಕಗಳನ್ನು ಪ್ರತ್ಯೇಕವಾಗಿ ತೋರಿಸಲಾಗಿದೆ. ಅವುಗಳನ್ನು ಪ್ರತ್ಯೇಕವಾಗಿ ತೋರಿಸಿರುವುದು ಇದೇ ಮೊದಲು. ಈ ಬಾಬಿನಲ್ಲಿ 4 000 ರೂಪಾಯಿಗಳ ಸ್ವಲ್ಪ ಲಾಭವು ದೊರೆಯುವುದಾಗಿ ಲೆಕ್ಕಗಳಿಂದ ಕಂಡುಬಂದಿದೆ. ಆದರೆ ಮೈಸೂರು ರೇಷ್ಮೆಯ ಕಾರ್ಖಾನೆ, ಮತ್ತು ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪು ಈ ಬಾಬುಗಳಲ್ಲಿ ಸ್ವಲ್ಪಮಟ್ಟಿಗೆ ನಷ್ಟವೇ ಉಂಟಾಗಿದೆ. ಇವೆಲ್ಲ ಬಾಬುಗಳ ವಿಷಯದಲ್ಲಿಯೂ ಜಾಹೀರಾತಿನ ಕೆಲಸಗಳನ್ನು ಹೆಚ್ಚು ಹೆಚ್ಚಾಗಿ ನಡೆಯಿಸುವುದರ ಮೂಲಕ ಆಯಾ ಉದ್ಯಮಗಳಲ್ಲಿ ತಯಾರಾದ ವಸ್ತುಗಳಿಗೆ ಗಿರಾಕಿಯು ಹೆಚ್ಚುವಂತೆ ಅವುಗಳನ್ನು ಪ್ರಚಾರಗೊಳಿಸುವುದಕ್ಕಾಗಿ ವಿಶೇಷ ಹಣವನ್ನು ವೆಚ್ಚಮಾಡಬೇಕಾಯಿತು. ಇದರಿಂದ ಈ ಉದ್ಯಮಗಳ ಸಂಬಂಧದಲ್ಲಿ ಕೆಲಸ ನಡೆಯಿಸುವ ವೆಚ್ಚವು ಹೆಚ್ಚಿರುತ್ತದೆ. ಈ ಅಂಶವು ತಮ್ಮ ಗಮನಕ್ಕೆ ಬಂದೇ ಇದೆಯೆಂಬುದರಲ್ಲಿ ಸಂಶಯವಿಲ್ಲ. ಈ ಪ್ರಚಾರಕಾರ್ಯದ ಫಲಿತಾಂಶಗಳು ಈಗಾಗಲೇ ನಮಗೆ ಕಂಡುಬರುತ್ತಿವೆ. ಸರ್ಕಾರದವರು ನಡೆಯಿಸುತ್ತಿರುವ ಕಾರ್ಖಾನೆಗಳಲ್ಲಿಯೂ ಮತ್ತು ಸಂಸ್ಥಾನದಲ್ಲಿರತಕ್ಕ ಖಾಸಗಿ ಉದ್ಯಮಗಳಲ್ಲಿಯೂ ತಯಾರಾಗುವ ವಸ್ತುಗಳ ಪರಿಚಯವು ಜಾಹೀರಾತುಗಳ ಮೂಲಕ ಜನಗಳಲ್ಲಿ ಹೆಚ್ಚು ಹೆಚ್ಚಾಗಿ ಉಂಟಾಗಿರುವುದಲ್ಲದೆ ಆ ವಸ್ತುಗಳು ಜನಗಳಲ್ಲಿ ಹೆಚ್ಚು ಹೆಚ್ಚಾಗಿ ಬಳಕೆಗೆ ಬರುತ್ತ ಅವರ ಮೆಚ್ಚಿಗೆಯನ್ನೂ ಪಡೆದಿವೆ. ಜಾಹೀರಾತು ಕಾರ್ಯವನ್ನು ನಡೆಯಿಸಿದರೂ ಲಾಭಕ್ಕೆ ಮಾರ್ಗವೆಂಬ ವಿಷಯ ಸ್ಪಷ್ಟವಾದುದೆಂದು ನಮಗೆ ಇದರಿಂದ ಕಂಡುಬರುತ್ತದೆ.

ಪ್ರಜೆಗಳಿಂದ ಬರುವ ತೆರಿಗೆಗಳ ಹುಟ್ಟುವಳಿ ಬಾಬು.

ಸರ್ಕಾರಕ್ಕೆ ಪ್ರಜೆಗಳಿಂದ ಕಂದಾಯ ಮುಂತಾದವುಗಳ ರೂಪದಲ್ಲಿ ಬಾವತಿಯಾಗತಕ್ಕ ಹುಟ್ಟುವಳಿಯ ಮೊಬಲಗು ಆಯಾ ವರ್ಷದ ಮಳೆಬೆಳೆಗಳ ಪರಿಸ್ಥಿತಿಯನ್ನು ಬಹಳ ಮಟ್ಟಿಗೆ ಅವಲಂಬಿಸುತ್ತದೆ. ಹಿಂದಿನ ವರುಷ ಸಂಸ್ಥಾನದಲ್ಲಿ ಮಳೆಯು ಬಹಳ ಕಡಮೆ ವರ್ಷಾಂತ್ಯ [illegible] ಬೀಳುವದಕ್ಕಿಂತ [illegible] ಕಡಮೆಯಾಗಿದ್ದಿತು. ಮುಂಗಾರು ಮಳೆಯೂ ಮತ್ತು ಹಿಂಗಾರು ಮಳೆಯೂ ಎರಡೂ ಬಹಳ ಕಡಮೆಯಾಗಿದ್ದುವು. ಅದರಲ್ಲಿಯೂ ಮುಖ್ಯವಾಗಿ ಹಿಂಗಾರು ಮಳೆಯಂತೂ ಬೀಳಲೇ ಇಲ್ಲವೆಂದು ಹೇಳಿದರೂ ಸರಿಯೇ. ಇದರ ಪರಿಣಾಮವಾಗಿ ಸಂಸ್ಥಾನದಲ್ಲಿ ಸಾಧಾರಣವಾಗಿ ಸಾಗುವಳಿ ಮಾಡುತ್ತಿದ್ದ ಪ್ರದೇಶದಲ್ಲಿ ಜೋಳ, ರಾಗಿ ಮುಂತಾದ ಮುಖ್ಯವಾದ ಆಹಾರಪದಾರ್ಥಗಳ ಫಸಲನ್ನಿಟ್ಟು ಸಾಗುವಳಿ ಮಾಡಲು ಸಾಧ್ಯವಾಗಲಿಲ್ಲ. ಮತ್ತು [illegible] ಪ್ರದೇಶದಲ್ಲಿಯೂ ಕೂಡ ತಕ್ಕಷ್ಟು ಬೆಳೆಯು ಬರಲಿಲ್ಲ. ಇದರ ಜೊತೆಗೆ ಮೈದಾನ ಡಿಸ್ಟ್ರಿಕ್ಟುಗಳಲ್ಲಿ ಇರತಕ್ಕ ಅನೇಕ ಕೆರೆಗಳಿಗೆ ನೀರೇ ಬರಲಿಲ್ಲ. ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಂತೂ ಡಿಸೆಂಬರ್ ತಿಂಗಳ ಅಂತ್ಯದ ಹೊತ್ತಿಗೆ ಪರಿಸ್ಥಿತಿಯು ಬಹಳ ದುರವಸ್ಥೆಗೀಡಾಯಿತು. ಇದರ ಪರಿಹಾರಾರ್ಥವಾಗಿ ವಿಶೇಷರೀತಿಯ ಏರ್ಪಾಡುಗಳನ್ನು ನಡೆಯಿಸಬೇಕಾಯಿತು.

ಈ ರೀತಿಯಾಗಿ ಮಳೆಬೆಳೆಗಳ ಪರಿಸ್ಥಿತಿಯು ಪ್ರಕೃತದಲ್ಲಿ ಅನುಕೂಲವಾಗಿಲ್ಲದೆ ಇದ್ದುದು ಸರಿಯಷ್ಟೆ. ಇದರ ಹಿಂದಿನ ಸಾಲಿನಲ್ಲಿಯೂ ಸಹ [illegible] ಇದರ ಜೊತೆಗೆ ಪ್ರಸಕ್ತವರ್ಷ ಧಾರಣೆಗಳೂ ಸಹ ಬಹಳ ಮಟ್ಟಿಗೆ ಇಳಿದು ಹೋಗಿದ್ದುವು. ಇವೆಲ್ಲದರ ಪರಿಣಾಮವಾಗಿ ಪ್ರಸಕ್ತ ಸಾಲಿನಲ್ಲಿ ರೈತರುಗಳಿಗೂ ಮತ್ತು ಸರ್ಕಾರದವರಿಗೂ ಇಬ್ಬರಿಗೂ ಕೂಡ ಬಿಕ್ಕಟ್ಟಾದ ಪರಿಸ್ಥಿತಿಯು ಒದಗಿಬಂದು [illegible] ರೈತರ ಕಷ್ಟವನ್ನು ಪರಿಹರಿಸುವುದಕ್ಕಾಗಿ ಜಮೀನು ಕಂದಾಯದ ಬಾಬಿನಲ್ಲಿ ಸುಮಾರು [illegible] ರೂಪಾಯಿಗಳಷ್ಟು ಭಾರಿ ಮೊಬಲಗನ್ನು ಮಾಫಿ ಬಿಡಬೇಕಾಯಿತು. ಹೀಗೆ ಮಾಫಿ ಬಿಟ್ಟ ಮೊಬಲಗು ವಸೂಲಾಗಬೇಕಾಗಿದ್ದ ಒಟ್ಟು ಮೊಬಲಗಿನ [illegible] ಕಂದಾಯಗಳನ್ನು ಮಾಫಿ ಬಿಡುವುದರ ಜೊತೆಗೆ ರೈತರಿಗೆ ಕೂಲಿಯ ಕೆಲಸಗಳು ದೊರೆತು ಅವರ ಕಷ್ಟವು ನಿವಾರಣೆಯಾಗುವುದಕ್ಕೆ ಸಾಧಕವಾಗುವಂತೆ ಕೆಲವು ವಿಶೇಷ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಯಿತು. ಅಲ್ಲದೆ ಅಗ್ಗವಾದ ದರಗಳಲ್ಲಿ ರೈತರುಗಳಿಗೆ ಮೇವನ್ನು ಒದಗಿಸುವುದೂ ಅವಶ್ಯಕವಾಯಿತು. [illegible] ರೀತಿ ಭಾರಿಯಾದ ಕಂದಾಯದ ಮೊಬಲಗುಗಳನ್ನು ಮಾಫಿ ಬಿಟ್ಟಾಗ್ಯೂ ಕೂಡ ಕಂದಾಯಗಳು ವಸೂಲಾಗುವುದು ದುಸ್ತರವಾಗಿದೆ. ವಸೂಲಾಗಬೇಕಾಗಿದ್ದ ಕಂದಾಯದ ಮೊಬಲಗು [illegible] 3 01 ಲಕ್ಷ ರೂಪಾಯಿಗಳಿಂದ 120 41 ಲಕ್ಷ ರೂಪಾಯಿಗಳಿಗೆ ಎಂದರೆ ಸುಮಾರು ಶೇಕಡ 10 ರಷ್ಟು ತಗ್ಗಿಸಿದ್ದಾಗ್ಯೂ ಕೂಡ ಚಾಲ್ತಿಸಾಲಿನ ಮತ್ತು ಹಿಂದಿನ ಸಾಲುಗಳ ಬಾಬತು 26 04 ಲಕ್ಷ ರೂಪಾಯಿಗಳಷ್ಟು ಭಾರಿ ಮೊಬಲಗು ವಸೂಲಾಗದೆ ಇನ್ನೂ ಹಾಗೆಯೇ ನಿಂತಿದೆ. ಹಣದ ವಸೂಲಿ ದುಸ್ತರವಾಗಿರುವುದೇ ಇದಕ್ಕೆ ಕಾರಣವಾಗಿದೆ. ಈ ರೀತಿಯ ವಿದ್ಯಮಾನಗಳಲ್ಲಿ ಸಂಸ್ಥಾನದ ಹುಟ್ಟುವಳಿಗಿಂತ ವೆಚ್ಚವು ಅಧಿಕವಾಗಿ ಏರಿಹೋಗಬೇಕಾಗಿದ್ದಿತು. ಆದರೆ ಹುಟ್ಟುವಳಿಯ ವೆಚ್ಚವು ಹೆಚ್ಚಾಗಿರುವುದು ಅಷ್ಟೊಂದು ಏರಿಹೋಗದೆ ಈ ಮಟ್ಟಿಗೆ ನಿಂತಿದೆಯಲ್ಲಾ—ಎಂದು ಆಶ್ಚರ್ಯಪಡಬೇಕಾಗಿದೆ.

ಮುಂದೆಯೂ ಮಳೆಬೆಳೆಗಳೂ ಮತ್ತು ಧಾರಣೆಗಳೂ ಈಗಿನಷ್ಟು ಕಡೆಯಾಗಿಲ್ಲದೆ ಸ್ವಲ್ಪ ಉತ್ತಮಗೊಳ್ಳುವೆಂದೂ ಮತ್ತು ಕೊನೆಯಪಕ್ಷ ಈಗಿನ ಪರಮಾವಧಿ ದುರ್ಗತಿ ಸ್ಥಿತಿಯಿಂದಲಾದರೂ ಪಾರಾಗಬಹುದೆಂದೂ ನಿರೀಕ್ಷಿಸಿದ್ದೇವೆ. ಆದುದರಿಂದ ಮುಂದಿನ ಸಾಲಿನ ಬಜೆಟ್ಟಿನಲ್ಲಿ 9½ [illegible] ರೂಪಾಯಿಗಳಷ್ಟು ಹೆಚ್ಚು ಹುಟ್ಟುವಳಿಯು ಬರುವುದೆಂದು ಅಂದಾಜು ಮಾಡಿದ್ದೇವೆ. ರೈತರುಗಳು ತಾವು ಬಾಕಿ [illegible] ಬೇಕಾಗಿರತಕ್ಕ ಕಂದಾಯದ ಮೊಬಲಗಿನ ಪೈಕಿ ಯುಕ್ತವಾದಷ್ಟು ಹೆಚ್ಚಾದ ಮೊಬಲಗನ್ನು ಪಾವತಿಮಾಡುವ ಶಕ್ತಿಯುಳ್ಳವರಾಗಿರುವಂತೆ ಕಂಡುಬರುವುದಾದರೆ ಈಗ ಅಂದಾಜು ಮಾಡಿರುವುದಕ್ಕಿಂತಲೂ ಹೆಚ್ಚು ಹುಟ್ಟುವಳಿಯೇ ಬರುವುದಾಗಿ ನಾವು ನಿರೀಕ್ಷಿಸಬಹುದಾಗಿದೆ.

ಎಕ್ಸೈಜು ಬಾಬಿನ ಹುಟ್ಟುವಳಿಯೂ ಕಡಮೆಯಾಗುತ್ತಲಿದೆ. ಹೊಟ್ಟೆಬಟ್ಟೆಗಳಿಗಾದು ಕಳೆದು ಉಳಿದ ಹಣವು ಮಾತ್ರವೇ ಮದ್ಯಪಾನಕ್ಕೆ ವಿನಿಯೋಗವಾಗಬೇಕಾಗುತ್ತದೆ. [illegible] ಬೆಳೆಗಳು ಸರಿಯಾಗಿ ಆಗದೆ ಹೊಟ್ಟೆಬಟ್ಟೆಗಳ ಬಾಬು [illegible] ಹೆಚ್ಚು ಹಣವು ಉಳಿಯದೆ ಸ್ಥಿತಿಯೊದಗಿದುದರಿಂದ ಎಕ್ಸೈಜು ಹುಟ್ಟುವಳಿಯು ಕಡಮೆಯಾಯಿತು. ಈಚಿನ ವರುಷಗಳ ಅಂಕಿಪ್ರಕಾರವಾಗಿ ಈ ಬಾಬಿನ ಹುಟ್ಟುವಳಿಯು ಕಡಮೆಯಾಗುತ್ತಿದೆ. ಚಾಲ್ತಿ ಸಾಲಿನಲ್ಲಿ 55 ಲಕ್ಷ ರೂಪಾಯಿ ಹುಟ್ಟುವಳಿಯು ಬರಬಹುದೆಂದು ನಿರೀಕ್ಷಿಸಿ ಅದನ್ನು ಬಜೆಟ್ಟಿನಲ್ಲಿ ನಮೂದಿಸಲಾಗಿದ್ದಿತು. ಆದರೆ ಅಷ್ಟು ಹುಟ್ಟುವಳಿಯೂ ಬರುವ ಸಂಭವವಿಲ್ಲವಾದ ಕಾರಣ ಆ ಮೊಬಲಗು 52 19 ಲಕ್ಷ ರೂಪಾಯಿಗಳೆಂದು ತಿದ್ದುಪಾಟಾದ ಅಂದಾಜಿನಲ್ಲಿ ನಮೂದಿಸಬೇಕಾಯಿತು. ಈ ಬಾಬಿನ ಹುಟ್ಟುವಳಿ ಮತ್ತಷ್ಟು ಕಡಮೆಯಾಗುವುದೆಂದು ನಿರೀಕ್ಷಿಸಿ 1935 36 ನೆ ಸಾಲಿನ ಬಜೆಟ್ಟಿನಲ್ಲಿ 50 91 ಲಕ್ಷ ರೂಪಾಯಿಗಳನ್ನು ಮಾತ್ರ ನಮೂದಿಸಲಾಗಿದೆ. ಈ ರೀತಿ ಹುಟ್ಟುವಳಿಯಲ್ಲಿ ಮತ್ತೂ ಕಡಮೆ ಬೀಳುವುದಕ್ಕೆ, 'ದುಕಾನು' ಗಳ ಬಾಡಿಗೆಗಳ ರೂಪದಲ್ಲಿ ವಸೂಲಾಗುವ ಮೊಬಲಗು ಕಡಮೆ ಬೀಳುವುದೆಂದು ನಿರೀಕ್ಷಿಸಿರುವುದೇ ಮುಖ್ಯಕಾರಣವಾಗಿದೆ.

...ಸ್ತ್ರೀಪುರುಷರ ವಸ್ತು ರಿಜಿಸ್ಟ್ರೇಶನ್ ಬಾಬಿನಲ್ಲಿ ಚಾಲ್ತಿ ಸಾಲಿನಲ್ಲಿ ಹೆಚ್ಚು ಹುಟ್ಟುವಳಿಯಾಗಿರುತ್ತದೆ. ಈ ವಿಷಯವನ್ನು ಸ್ಪಷ್ಟರೀತಿಯಿಂದ ಈ ಕೆಳಗೆ ಸೂಚಿಸುತ್ತೇನೆ. ಚಿಕ್ಕ ದೇಶಗಳ ಪ್ರಯಾಣ ಕೆಲಸದಿಂದಾಗಿ ಒದಗಿಸಿಕೊಟ್ಟ ಕಂಟ್ರಾಕ್ಟರರ ಸಂಬಂಧದಲ್ಲಿ ಒಂದು ಹೊಸ ಈ ಹೆಚ್ಚು ಹುಟ್ಟುವಳಿಗೆ ಕಾರಣ. 1935-36 ನೆಯ ಸಾಲಿನಲ್ಲಿ ಈ ಬಾಬಿನಲ್ಲಿ ಯಾವ ಹೆಚ್ಚಿನ ಉತ್ಪನ್ನ ಹುಟ್ಟುವಳಿಯು ಬರುವದೆಂದು ನಿರೀಕ್ಷಿಸಿ ಒದಗಿಸಿ ... ಅದಕ್ಕನುಸಾರವಾಗಿ ಕಡಿಮೆ ಮೊಬಲಗನ್ನು ತೋರಿಸಲಾ[ಗಿದೆ].

ಇನ್ನು, ಫೀಜು ಇಲಾಖೆಯ ಹುಟ್ಟುವಳಿಯ ವಿಚಾರ ... ಎಣ್ಣೆ ಮತ್ತು ಗಂಧದ ಮರ ಈ ಬಾಬಿನಲ್ಲಿ ಹೊಸಕು ... ಇಲಾಖೆಯ ಇತರ ಬಾಬುಗಳಲ್ಲಿ ಚಾಲ್ತಿ ಸಾಲಿನ ಹುಟ್ಟುವಳಿಯು ಮುಖ್ಯವಾಗಿ ಹೆಚ್ಚು ಕಡಿಮೆಯಾಗಿರುವುದಕ್ಕೆ ಲೆಕ್ಕಗಳ ... ವಿಧಾನದಲ್ಲಿ ಬದಲಾವಣೆಗಳೇ ಕಾರಣ. ಈ ಬಾಬಿನಲ್ಲಿ ... ಮುಂದಿನ ಸಾಲಿಗೆ ಚಾಲ್ತಿ ಸಾಲಿನಷ್ಟು ಹುಟ್ಟುವಳಿ ಮೊಬಲನ್ನು ಅಂದಾಜಿಸಿಲ್ಲ. ಶೇಂದಿ ಚಕ್ಕೆಯಿಂದ ಬರತಕ್ಕ ವರಮಾನ ... ಕಳೆದ ಕೆಲವು ವರುಷಗಳಿಂದಲೂ ಏರಿಳಿಯುತ್ತಿದ್ದು ಕಡಿಮೆಯಾಗುತ್ತ ಬರುತ್ತಿದೆ. ಆದಕಾರಣ ಶೇಂದಿ ಚಕ್ಕೆಯಿಂದ ಬರುವ ಹುಟ್ಟುವಳಿಯು ಇನ್ನೂ ಕಡಿಮೆ ಬೀಳುವುದೆಂದು ನಿರೀಕ್ಷಿಸಿ, ಆ ರೀತಿ ಕಡಿಮೆ ಮೊಬಲಗನ್ನು ಬಡ್ಜೆಟ್ಟಿನಲ್ಲಿ ನಮೂದಿಸಲಾಗಿದೆ.

ವಿವಿಧ ಬಾಬುಗಳ ತೆರಿಗೆಗಳ ಹುಟ್ಟುವಳಿಯ ಹೆಚ್ಚಳವು ... ಚೀಕಟವಾಗಿದೆ. ಬೆಂಕಿಕಡ್ಡಿ ಮತ್ತು ಸಕ್ಕರೆಯ ಮೇಲಿನ ... ಸುಂಕಗಳೂ ಮತ್ತು ಇವುಗಳಿಂದ ಬರುವ ಮೇಲಿನ ... ಈ ಬಾಬುಗಳಲ್ಲಿ ಸರಿಯಾದ ಹಿಡುವಳಿಯ ... ಬಜೆಟಿನಲ್ಲಿ 4.15 ಲಕ್ಷ ರೂಪಾಯಿ ಹುಟ್ಟುವಳಿಯು ಹೆಚ್ಚಾಗುವದೆಂದು ನಮೂದಾಗಿದೆ. ಇದು ಎಂಟು ತಿಂಗಳುಗಳಿಗೆ ಮಾತ್ರ. ಬೆಂಕಿಕಡ್ಡಿಗಳ ಮೇಲೆ ವಿಧಾಯಕವಾದಿದ ಸುಂಕದ ಬಾಬಿನಲ್ಲಿ ಬಂದ ಹುಟ್ಟುವಳಿ ಮುಂದಿನ ಸಾಲಿನಲ್ಲಿ ಪೂರ್ತಿ ಸಾಲಿನ ಸುಂಕಗಳಿಂದ ಹುಟ್ಟುವಳಿ ಬರುತ್ತದೆ. ಆದಕಾರಣ ಅವಕ್ಕನುಸಾರವಾಗಿ 8.16 ಲಕ್ಷ ರೂಪಾಯಿಗಳ ಹುಟ್ಟುವಳಿಯನ್ನು ನಿರೀಕ್ಷಿಸಿ ಬಡ್ಜೆಟ್ಟಿನಲ್ಲಿ ಹೆಚ್ಚು ಮೊಬಲಗನ್ನು ತೋರಿಸಲಾಗಿದೆ.

ವೆಚ್ಚದ ಬಾಬುಗಳು

ಇಲ್ಲಿಯವರೆಗೂ ಆಯವ್ಯಯಗಳಿಂದಲೂ ಆರ್ಥಿಕ ಇಲಾಖೆಗಳ ವಿಷಯಗಳನ್ನು ಸಭ್ಯರೆಲ್ಲರಿಗೂ ತಿಳಿಸಿದೆನು. ಹುಟ್ಟುವಳಿಯೇ ಸೂಚಿಸಿದ ವೆಚ್ಚಗಳು ಮಾತ್ರವೇ ಆಗಬೇಕಾಗಿರುವ ಇಲಾಖೆಗಳ ವಿಷಯದಲ್ಲಿ ಕೆಲವು ಅಂಶಗಳನ್ನು ಸಂಕ್ಷೇಪವಾಗಿ ಸೂಚಿಸಲಿಚ್ಛಿಸುವೆನು.

ಸಾಮಾನ್ಯಾಡಳಿತದ ವಿಷಯದಲ್ಲಿ ಒಂದು ಮುಖ್ಯಾಂಶವನ್ನು ತಮ್ಮ ಅವಗಾಹನೆಗೆ ತರಬೇಕಾಗಿದೆ. ಸರಕಾರಿ ಉದ್ಯೋಗಸ್ಥರ ಸಂಬಳಗಳನ್ನು ಜೋಡಿಸಿದ್ದಾಗಿದ್ದರೂ ಆ ಚಾಲ್ತಿ ಸಾಲಿನಲ್ಲಿ ಇದನ್ನು ಯಥಾಪ್ರಕಾರ ಆಚರಣೆಯಲ್ಲಿಡಲು ನಮಗೆ ಇಷ್ಟವಿಲ್ಲದ್ದು, ನಿರ್ವಾಹವಿಲ್ಲದೆ ಆ ರೀತಿ ಮಾಡಬೇಕಾಯಿತು. ಮುಂದಿನ ಸಾಲಿನಲ್ಲಿ ಸಂಬಳಗಳ ಬೋನಸನ್ನು ತಗ್ಗಿಸಿ ಈ ಕೆಳಗಿನ ಸಂಬಳದಾರರುಗಳಲ್ಲಿ ಮಾತ್ರವೇ ಉಳಿಸಬೇಕೆಂದು ಉದ್ದೇಶಿಸಿರುತ್ತೇವೆ:

100 ರೂಪಾಯಿಗಳವರೆಗೆ ಸಂಬಳ ಬರುವವರಿಗೆ ಸಂಬಳದ ಬೋನಸ್ ಇಲ್ಲ. 100 ರೂಪಾಯಿಗಳಿಗಿಂತ ಹೆಚ್ಚಾಗಿ ಅಂದರೆ 350 ರೂಪಾಯಿಗಳವರೆಗೆ ಸಂಬಳ ಬರುವವರಿಗೆ ಸೆಕಡ 3; 350 ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳ ಬರುವವರಿಗೆ ಸೆಕಡ 5.

ನಿವ್ವಳ ಫಲಿತಾಂಶ—1935-36ನೇಯ ಸಾಲಿನಲ್ಲಿ ಸ್ವಲ್ಪ ಮೊಬಲಗಿನ ಉಳಿತಾಯ

ಒಟ್ಟಿನಲ್ಲಿ 1934-35ನೆಯ ಸಾಲಿನ ಆಯವ್ಯಯದ ಲೆಕ್ಕಗಳನ್ನು ಅಖೈರಾಗಿ ಪರಿಶೀಲಿಸಿ ನೋಡಿದಾಗ ಹುಟ್ಟುವಳಿಯು ನಿರೀಕ್ಷಿಸಿದ್ದಕ್ಕಿಂತಲೂ 5 ಲಕ್ಷ ರೂಪಾಯಿಗಳಷ್ಟು ಕಡಿಮೆ ಬೀಳಬಹುದೆಂದು ತೋರಬಂದಿದೆ. 1935-36 ನೆಯ ಸಾಲಿನ ಅಖೈರಿನಲ್ಲಿ ಆಗಿರುವ ವೆಚ್ಚಕ್ಕಿಂತಲೂ ಹುಟ್ಟುವಳಿಯು ಸ್ವಲ್ಪಮಟ್ಟಿಗೆ ಹೆಚ್ಚಾಗಿದ್ದು ಸುಮಾರು 10ಲಕ್ಷ ರೂಪಾಯಿಗಳಷ್ಟು ಹಣವು ಉಳಿತಾಯವಾಗಬಹುದೆಂದು ನಿರೀಕ್ಷಿಸಲಾಗಿದೆ. ಇದನ್ನು ಸ್ಥೂಲವಾಗಿ ನೋಡಿದರೆ ನಮ್ಮ ಸಂಸ್ಥಾನದ ಆಯವ್ಯಯ ಪರಿಸ್ಥಿತಿಯು ಉತ್ತಮವಾಗಿರುವ ವಿಷಯದಲ್ಲಿ ಉತ್ಸಾಹಪಡುವುದಕ್ಕಾಗಲಿ ... ಆದರೆ ಪ್ರಪಂಚದ ಇತರ ದೇಶಗಳ ಪರಿಸ್ಥಿತಿಗಳನ್ನೂ ಮತ್ತು ಹಿಂದೂದೇಶದಲ್ಲಿಯ ಇತರ ಸರಕಾರಗಳ ಬಡ್ಜೆಟ್ಟುಗಳನ್ನೂ ಪರಿಶೀಲಿಸಿ ನೋಡಿದ ಪಕ್ಷದಲ್ಲಿ ನಾವು ಆ ರೀತಿ ನಿರುತ್ಸಾಹಿಗಳಾಗಬೇಕಾದ ಅವಶ್ಯಕತೆಯೇನೂ ಇಲ್ಲವೆಂದು ನನಗೆ ತೋರುತ್ತದೆ. ನಾವು ದಿನದಿನವೂ ವರ್ತಮಾನ ಪತ್ರಿಕೆಗಳನ್ನು ಓದುತ್ತಿರುವುದರಲ್ಲಿ ನಮಗೆ ಏನೇನು ಕಂಡುಬರುತ್ತದೆ ಅಂತೀರಾ? ಕೆಲವು ದೇಶಗಳ ಆರ್ಥಿಕಸ್ಥಿತಿಯು ಕೇವಲ ಹೀನದಶೆಗೆ ಬಂದು ಅವು ಹಣಕಾಸಿನ ಮುಗ್ಗಟ್ಟಿನ ವಿಷಮಾವಸ್ಥೆಗೆ ಸಿಕ್ಕಿಯಾಗಿ ದಿವಾಳಿಗೆ ಬರುತ್ತಿರುವುದೊಂದು ಕಡೆ. ಇನ್ನು ಕೆಲವು ರಾಷ್ಟ್ರಗಳವರು ಇತರ ರಾಷ್ಟ್ರಗಳಿಂದ ತಾವು ತೆಗೆದುಕೊಂಡಿರತಕ್ಕ ಭಾರಿ ಭಾರಿ ಸಾಲಗಳನ್ನು ತೀರಿಸುವುದಿಲ್ಲವೆಂಬುದಾಗಿ ಹೇಳುತ್ತಿರುವುದೊಂದು ಕಡೆ. ಮತ್ತೆ ಕೆಲವು ರಾಷ್ಟ್ರಗಳಲ್ಲಿ ವೆಚ್ಚಕ್ಕಿಂತಲೂ ವರಮಾನವು ಅತ್ಯಂತವಾಗಿ ಕಡಿಮೆಯಾಗಿರುವ ದುರವಸ್ಥೆಯೊಂದು ಕಡೆ. ಇಂಥ ಸಂಗತಿಗಳನ್ನು ಪ್ರತಿದಿನವೂ ನಾವು ವರ್ತಮಾನ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಅಮೇರಿಕಾ ದೇಶದ ಸಂಯುಕ್ತ ಸಂಸ್ಥಾನಗಳಲ್ಲಿ ಕೂಡ ಆಯವ್ಯಯದ ಸ್ಥಿತಿಯು ಸಮಾಧಾನಕ್ಕೆ ಬರದೆ ಹುಟ್ಟುವಳಿಗಿಂತಲೂ ವೆಚ್ಚವು ವಿಪರೀತ ಹೆಚ್ಚುತ್ತ ಬರುತ್ತಿದೆ. ಸುಪ್ರಸಿದ್ಧವಾದೊಂದು (ವ್ಯಾಂಕರ್ಸ್ ರಿವ್ಯೂ) ಪತ್ರಿಕೆಗಳಲ್ಲಿ ಹೇಳಿರುವಂತೆ ಅಲ್ಲಿ ಮಿಕ್ಕ ವರಮಾನವು ವೆಚ್ಚಕ್ಕಿಂತ ಹುಟ್ಟುವಳಿಯು ಅನೇಕ ಕೋಟಿ ಕೋಟಿ ಡಾಲರುಗಳು ಕಡಿಮೆ ಬೀಳುತ್ತದೆ. ಇನ್ನು ನಮ್ಮ ಭರತಖಂಡದ ಪರಿಸ್ಥಿತಿಯನ್ನು ಗಮನಿಸಿ ನೋಡಿದರೆ ನಾನಾ ಪ್ರಾಂತಗಳಲ್ಲಿಯೂ ಹೊಸಹೊಸದಾಗಿ ತೆರಿಗೆಗಳನ್ನು ವಿಧಿಸಬೇಕೆಂಬ ಪ್ರಸ್ತಾಪಗಳು ನಡೆಯುತ್ತಿವೆ. ಚಿಕ್ಕ ಚಿಕ್ಕ ಹೊಗೆಸೊಪ್ಪು ಬೆಳೆದ ಪಿತ್ರಾರ್ಜಿತ ಇವುಗಳ ಮೇಲೆ ತೆರಿಗೆಯನ್ನು ಹೊಸದಾಗಿ ಹಾಕುವುದು ಮತ್ತು ಸ್ಟಾಂಪು ಹಾಕಲುಗಳು ಕೋರ್ಟು ಫೀಜುಗಳು ಮೋಟಾರು ಮುಂತಾದ ವಾಹನಗಳ ಮೇಲಿನ ತೆರಿಗೆಗಳು ಇವುಗಳ ದರದಲ್ಲಿ ವಿಧಿಸತಕ್ಕ ತೆರಿಗೆಗಳನ್ನು ಹೆಚ್ಚಿಸುವುದು ಇದೇ ರೀತಿ ಯೋಚನೆಗಳು ನಡೆದು ಅವುಗಳಲ್ಲಿ ಕೆಲವಕ್ಕನುಗುಣವಾಗಿ ಹೊಸ ತೆರಿಗೆಯನ್ನು ಹಾಕಿ ಅಥವಾ ಇದ್ದ ತೆರಿಗೆಯನ್ನು ಹೆಚ್ಚಿಸಿ ಶಾಸನಗಳು ಮಂಜೂರಾಗಿವೆ. ನಮ್ಮ ಸಂಸ್ಥಾನದಲ್ಲಿಯೂ ಕೆಲವು ಬಾಬುಗಳಲ್ಲಿ ಹೊಸ ತೆರಿಗೆಯನ್ನು ವಿಧಿಸಬೇಕಾಗಿ ಬಂದಿತ್ತು ಅತ್ಯಂತ ಸೂಕ್ಷ್ಮವಾದ ತೆರಿಗೆಯೆಂದರೆ ಹೊಗೆಸೊಪ್ಪಿನ ಮೇಲಿನ ತೆರಿಗೆ. ಇಂಡಿಯಾದೇಶವನ್ನು ಬಿಟ್ಟು ಸಲ್ಪ ಹೆಚ್ಚು ಕಡಿಮೆ ಪ್ರಪಂಚದ ಇತರ ಎಲ್ಲ ಭಾಗಗಳಲ್ಲಿಯೂ ಹೊಗೆಸೊಪ್ಪಿನ ಮೇಲೆ ಬಹಳ ಭಾರಿ ತೆರಿಗೆಯನ್ನೇ ವಿಧಿಸಿರುತ್ತಾರೆ. ಆದಾಗ್ಯೂ ನಾವು ಈ ಮೊದಲೇ ತಿಳಿಸಿರುವಂತೆ ದೈವವಶಾತ್ತಾಗಿ ನಮಗೆ ಬೇಕಾದಕ್ಕೆ ಸಂಪತ್ತಿನ ಸಾಧನಗಳ ದೆಸೆಯಿಂದ ನಮ್ಮಕ್ಕೆ ನಮ್ಮ ಆಯವ್ಯಯಗಳನ್ನು ಸರಿತೂಗಿಸುವ ಮಟ್ಟದ ಸ್ಥಿತಿಯುಳ್ಳದ್ದರಿಂದ ನಾವು ಇನ್ನೂ ಇಷ್ಟೇ ನಮ್ಮ ಸುಸ್ಥಿರವಾಗಿರುವ ಪರಿಸ್ಥಿತಿಗಳನ್ನು ಪರಿಶೀಲಿಸಿದಾಗ ನಿಜ ದಿಶೆಯಲ್ಲಿ ಮೈಸೂರು ಸಂಸ್ಥಾನವು ಅಭ್ಯುದಯವನ್ನು ಪಡೆಯುತ್ತಿರುವ ನಿದರ್ಶನಗಳು ಹೇರಳವಾಗಿ ಕಂಡುಬರುತ್ತವೆ. ಹೊಂದು ಆದಾಯವು ಸ್ಥಿರಗೊಳಿಸಿರುವುದನ್ನು ಸೂಚಿಸತಕ್ಕ ಕುರುಹುಗಳು ನಮ್ಮಲ್ಲಿ ಕಂಡುಬರುವುದಿಲ್ಲ. ನಗರ ನಿರ್ಮಾಣದಲ್ಲಿಯೂ ಮತ್ತು ನಗರಗಳನ್ನು ಶೃಂಗಾರಗೊಳಿಸುವ ಕಾರ್ಯದಲ್ಲಿಯೂ ನಾವು ಎಷ್ಟು ಮಟ್ಟಿಗೆ ಮುಂದುವರಿದ್ದೇವೆಂಬುದನ್ನು ತಾವು ಈ ಸಂದರ್ಭದಲ್ಲಿ ವಿಶೇಷವಾಗಿ ಗಮನಿಸಬೇಕಾಗಿದೆ. ಈ ಬಗೆಯ ಅಭಿವೃದ್ಧಿಗಳನ್ನು ಕೇವಲ ಸರಕಾರದವರು ಮಾತ್ರವೇ ನಡೆಯಿಸುತ್ತಿಲ್ಲವೆಂಬ ಅಂಶವನ್ನು ಒತ್ತಿಹೇಳಲು ನಾನು ಇಚ್ಛಿಸುತ್ತೇನೆ. 'ಬ್ಯಾಂಕ್ ಆಫ್ ಮೈಸೂರ್' ಎಂಬ ವಾಣಿಜ್ಯಸಂಘ, ಜೀವವಿಮೆಯ ಕಂಪೆನಿಗಳು ಮುಂತಾದ ಸಾರ್ವಜನಿಕಸಂಸ್ಥೆಗಳಿಗಾಗಿ ವಿಶಾಲವಾದ ಕಟ್ಟಡಗಳು ಎದ್ದು ನಿಂತಿವೆ, ನಮ್ಮ ನಗರಗಳ ಬೀದಿಗಳನ್ನು ಅಲಂಕರಿಸುತ್ತಿರುವುದನ್ನು ನೋಡಿದರೆ ಹೃದಯಕ್ಕೆ ಹರ್ಷವಾಗದಿರದು. ನಮ್ಮ ಹಳ್ಳಿ ಕಡೆಗಳಲ್ಲಿಯೂ ನಮ್ಮ ಪೂರ್ವಿಕರು ಎಂದೂ ಕಾಣದಿದ್ದ ಸುಖಸಾಧನಗಳಿಂದ ತುಂಬಿದ ಮನೆಗಳೂ ಸೌಧಗಳೂ ನಿರ್ಮಾಣವಾಗುತ್ತಿರುವುದು ನಮ್ಮ ಹೃದಯಕ್ಕೊಂದು ಆನಂದ. ಈ ರೀತಿ ಸುಂದರವಾದ ಕಟ್ಟಡಗಳೂ ಸೌಧಗಳೂ, ವಾಸದ ಮನೆಗಳೂ ಏಕಪ್ರಕಾರವಾಗಿ ನಿರ್ಮಿತವಾಗುತ್ತಲೂ ವೃದ್ಧಿಯಾಗುತ್ತಲೂ ಹೋಗಲೆಂದು ನಾನು ಮನಃಪೂರ್ವಕವಾಗಿ ಹಾರೈಸುತ್ತೇನೆ. ನಗರ ನಿವಾಸಿಗಳು ಸುಖಜೀವನಕ್ಕೆ ಅನುಕೂಲವಾದ ಮನೆಗಳನ್ನು ಕಟ್ಟಿಕೊಳ್ಳುವುದರಿಂದ ಅವರ ಆರೋಗ್ಯಕ್ಕೆ ಸಾಧಕವಾಗುತ್ತದೆ. ಅಲ್ಲದೆ ಸೊಗಸಾದ ಮನೆಗಳು ತಮ್ಮದೆಂಬ ಹೆಮ್ಮೆಯುಂಟಾಗಿ ಅವರ ಆತ್ಮಗೌರವವು ಹೆಚ್ಚುತ್ತದೆ. ಸೊಗಸಾಗಿ ಕಟ್ಟಿರುವ ತಮ್ಮ ಮನೆಗಳನ್ನು ಕಂಡು ಹೆಮ್ಮೆ ಪಡುವವರು ಆ ಮನೆಗಳಿರುವ ಬೀದಿಗಳೂ ಅಂಥ ಬೀದಿಗಳಿರುವ ಒಟ್ಟು ಪಟ್ಟಣವೂ ಸೊಗಸಾಗಿರಬೇಕೆಂದು ಬಯಸಿ ಹೆಮ್ಮೆಯಿಂದ ಆ ವಿಷಯಗಳಲ್ಲಿ ಕೃಷಿಮಾಡತೊಡಗುತ್ತಾರೆ. ಮನೆಗಳು ಸೊಗಸಾಗಿರಬೇಕೆಂಬ ಭಾವನೆಯು ಪಟ್ಟಣಗಳಿಂದ ಗ್ರಾಮಗಳಿಗೂ ಹರಡಲೆಂದು ಕೋರುವೆನು. ಅದರ ಪರಿಣಾಮವಾಗಿ ಗುಡಿಸಲು ಜೋಪಡಿಗಳಿಗೆ ಬದಲು ಹೆಂಚಿನ ಮನೆಗಳೂ ಮಣ್ಣುಗೋಡೆಗಳಿಗೆ ಬದಲು ಇಟ್ಟಿಗೆ ಗೋಡೆಗಳೂ ಹೆಚ್ಚಾಗಿ ಕಂಡುಬರುವಂತಾಗಲಿ ಎಂದು ಹಾರೈಸುವೆನು. ಈ ಸಂಬಂಧದಲ್ಲಿ ಗ್ರಾಮಪಂಚಾಯಿತಿಗಳವರ ಮೇಲೆ ಒಂದು ಗುರುತರ ಹೊಣೆಯೊಂದು ಬೀಳುತ್ತದೆ. ಗ್ರಾಮಸ್ಥರು ಒಳ್ಳೆಯ ಮನೆಗಳನ್ನು ಕಟ್ಟಲು ಪ್ರೋತ್ಸಾಹಿಸಬೇಕಲ್ಲದೆ ಗ್ರಾಮಪಂಚಾಯಿತಿಗಳವರು ಗ್ರಾಮಗಳ ಬೀದಿಗಳ ನೈರ್ಮಲ್ಯವನ್ನೂ ಹೆಚ್ಚಿಸುತ್ತ ಬರಬೇಕು. ಗ್ರಾಮಸ್ಥರಲ್ಲಿ ಈ ಜಗತ್ತಿನಲ್ಲಿ ನಮಗೂ ಒಂದು ಸ್ಥಾನವುಂಟು. ನಾವೂ ಬಾಳಿ ಸುಖವನ್ನು ಕಾಣಬೇಕು ಎಂಬ ಭಾವನೆಯು ಬಲಿತು ಅವರ ಆತ್ಮಗೌರವವು ವೃದ್ಧಿಯಾದಂತೆಲ್ಲ ಸಮುದಾಯ ಜೀವನಕ್ಕೆ ಅವಶ್ಯವಾದ ಸುಖಸಾಧನಗಳು ಹೆಚ್ಚಲನುಕೂಲಿಸುವುದು. ಅನುಕೂಲವಾದ ಬಾವಿಗಳನ್ನು ಕಟ್ಟಿಕೊಳ್ಳುವುದು, ಗ್ರಾಮಗಳಲ್ಲಿ ಉದ್ಯಾನಗಳನ್ನೂ ಹಣ್ಣಿನ ತೋಟಗಳನ್ನೂ ಏರ್ಪಡಿಸಿಕೊಳ್ಳುವುದು, ಸ್ಕೂಲುಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು, ಆರೋಗ್ಯಸಾಧಕವಾದ (ಸ್ಯಾನಿಟರಿ) ಸೌಕರ್ಯಗಳನ್ನು ಕಲ್ಪಿಸಿಕೊಳ್ಳುವುದು, ಹೊಸದಾಗಿ ರಸ್ತೆಗಳನ್ನೂ ಮಾಡಿಸಿಕೊಳ್ಳುವುದು ಇವೇ ಮುಂತಾದ ಬಗೆಬಗೆಯ ಅನುಕೂಲಗಳೂ ಸಮುದಾಯ ಜೀವನದ ನೀತಿಯು ಮುಂತಾದ ಲಕ್ಷಣಗಳು ಅವುಗಳನ್ನು ಗ್ರಾಮಸ್ಥರುಗಳೇ ಸ್ವಾವಲಂಬನದಿಂದ ಒದಗಿಸಿಕೊಂಡು ಅನುಭವಿಸಬೇಕು.

ಆಸ್ತಿಯರೂಪದ ಸ್ವತ್ತುಗಳ ಮತ್ತು ದೇಣಗಳ ವಿವರ

ಮಹಾಸ್ವಾಮಿ ಮತ್ತು ಮಹನೀಯರೇ, ಆಯವ್ಯಯಗಳ ಲೆಕ್ಕಗಳ ಸಂಬಂಧದ ಅಂಶಗಳನ್ನು ಮುಗಿಸುವುದಕ್ಕೆ ಮೊದಲು ನಮ್ಮ ಸಂಸ್ಥಾನದ ಆಸ್ತಿಯರೂಪದ ಸ್ವತ್ತುಗಳ ಮತ್ತು ದೇಣಗಳ ವಿವರವನ್ನು ಸ್ವಲ್ಪಮಟ್ಟಿಗೆ ಸೂಚಿಸಬಯಸುವೆನು. ಆ ವಿವರವು ಬಹು ಸಾಂದರ್ಭಿಕವಾಗಿದೆ. ಅದು ಫೈನಾನ್ಶಿಯಲ್ ಸೆಕ್ರೆಟರಿಗಳು ಸಾದರಪಡಿಸಿದ ಮೆಮೊರಾಂಡಮಿನ ಕನ್ನಡ ತರ್ಜುಮೆಯ 46 ಮತ್ತು 47 ನೆಯ ಪುಟಗಳಲ್ಲಿ ಅಡಕವಾಗಿದೆ. ಅದನ್ನು ಪರಿಶೀಲನೆಮಾಡುವುದಕ್ಕೆ ಮುಂಚೆ ಅದರ ಸಂಬಂಧವಾಗಿ ಮೆಮೊರಾಂಡಮಿನ 54ನೆಯ ಪ್ಯಾರಾದಲ್ಲಿ ಕೊಟ್ಟಿರತಕ್ಕ ವಿವರಣೆಯನ್ನು ಸಾವಧಾನವಾಗಿ ಓದಬೇಕೆಂದೂ ಸಭ್ಯರನ್ನು ಬಿನ್ನವಿಸುತ್ತೇನೆ. 1934ನೆಯ ಇಸವಿ ಜುಲೈ 1ನೆಯ ತಾರೀಖಿನ ದಿನ ನಮ್ಮ ಲಿಕ್ವಿಡ್ ನಗದು ಮೊಬಲಗೂ ಬಡ್ಡಿಗಾಗಿ ಹಾಕತಕ್ಕ ಮೊಬಲಗುಗಳೂ ಮತ್ತು ಕೋರಿದಾಗ ನಗದಿಗೆ ಪರಿವರ್ತಿಸಿಕೊಳ್ಳಬಹುದಾದ ಸಾಧನಗಳೂ ಸೇರಿ ಒಟ್ಟು 5 ಕೋಟಿ 7 ಲಕ್ಷ ರೂಪಾಯಿಗಳಾಗಿದ್ದವೆಂದೂ, 1936ನೆಯ ಇಸವಿ ಜುಲೈ 1ನೆಯ ತಾರೀಖಿನ ಹೊತ್ತಿಗೆ ಆ ಬಗೆಯ ಒಟ್ಟು ಮೊಬಲಗು 5 ಕೋಟಿ 30 ಲಕ್ಷ ರೂಪಾಯಿಗಳಿಗೆ ಹೆಚ್ಚುವುದಾಗಿ ನಿರೀಕ್ಷಿಸಲಾಗಿದೆಯೆಂದೂ ಆ ವಿವರಣೆಯಿಂದ ಕಂಡುಬರುತ್ತದೆ. ಸಾಲದ ವಾಯಿದೆ ನಿಧಿಯನ್ನೇನೂ ಪರಿಗಣಿಸದೆ ನೋಡಿದರೆ, ಸಾಲದ ಮೊಬಲಗು 1934ನೆಯ ಇಸವಿ ಜುಲೈ 1ನೆಯ ತಾರೀಖಿನ ದಿನ 4 ಕೋಟಿ 88 ಲಕ್ಷ ರೂಪಾಯಿಗಳು ಆಗಿದ್ದವೆಂದೂ ಮತ್ತು 1936 ನೆಯ ಇಸವಿ ಜುಲೈ 1ನೆಯ ತಾರೀಖಿನ ಹೊತ್ತಿಗೆ ಅದು 5 ಕೋಟಿ 34 ಲಕ್ಷ ರೂಪಾಯಿಗಳ[ಷ್ಟು] ಆಗಬಹುದೆಂಬ ನಿರೀಕ್ಷೆಯಿದೆಯೆಂದೂ ಆ ವಿವರಣೆಯಿಂದ ಕಂಡುಬರುತ್ತದೆ. ಎಂದರೆ ಸರಕಾರದಲ್ಲಿ ಠೇವಣಿಗಳನ್ನು ಇಟ್ಟಿರುವ ಜನರೆಲ್ಲರೂ ಏಕಕಾಲದಲ್ಲಿ ಅವರವರ ಠೇವಣಿಗಳನ್ನು ಹಿಂದಕ್ಕೆ ಕೊಡಬೇಕಾದ ಅವಶ್ಯಕತೆಯೇ ಬಂದೊದಗುವದೆಂದು ಊಹಿಸಿಕೊಳ್ಳೋಣ. ಒಂದುವೇಳೆ ಅಂಥಾ ಸಂದರ್ಭವೇ ಬಂದೊದಗಿದರೂ ಸಹ ಆ ಠೇವಣಿದಾರರುಗಳ ಪೈಕಿ ಅಕಸ್ಮಾತ್ತು ಸಂಖ್ಯೆಯು ಜನರ ವಿಷಯದಲ್ಲಿ ಹೊರತಾಗಿ ಇತರ ಎಲ್ಲ ಠೇವಣಿದಾರರುಗಳಿಗೂ ಅವರವರ ಹಣಗಳನ್ನು ವಾಪಸು ಮಾಡಿ ಪಾವತಿಮಾಡುವುದಕ್ಕಾಗಿ ಸುಲಭವಾಗಿ ನಗದಿಗೆ ಪರಿವರ್ತನೆಗೊಳಿಸಬಹುದಾದ ಸಾಧನ ಸಂಪತ್ತುಗಳು ನಮ್ಮಲ್ಲಿ ಸಾಕಾದಷ್ಟಿವೆ. ಇದು ನಗದಿನ ಮತ್ತು ಕೋರಿದಾಗ ನಗದಿನ ರೂಪಕ್ಕೆ ಪರಿವರ್ತಿಸಿಕೊಳ್ಳಬಹುದಾದ ಸಾಧನ ಸಂಪತ್ತುಗಳ ವಿವರವಾಯಿತು. ಮೂಲಧನದ ವೆಚ್ಚದಿಂದ ಕೆಲವು ಕಾರ್ಖಾನೆಗಳನ್ನು ಸಂಸ್ಥಾನದಲ್ಲಿ ನಡೆಯಿಸುತ್ತಿರುವುದು ಸರಿಯಷ್ಟೆ. ಹೀಗೆ ಮಾಡಿರತಕ್ಕ ಮೂಲಧನದ ವೆಚ್ಚವು 1934ನೆಯ ಇಸವಿ ಜುಲೈ 1ನೆಯ ತಾರೀಖಿನಲ್ಲಿ 15 ಕೋಟಿ 35 ಲಕ್ಷ ರೂಪಾಯಿಗಳಾಗಿದ್ದಿತೆಂದು ಲೆಕ್ಕಗಳಿಂದ ತಿಳಿಯುತ್ತದೆ. ಮೂಲಧನದ ವೆಚ್ಚವು 1936ನೆಯ ಇಸವಿ ಜುಲೈ 1ನೆಯ ತಾರೀಖಿನ ವೇಳೆಗೆ 16 ಕೋಟಿ 16 ಲಕ್ಷ ರೂಪಾಯಿಗಳಿಗೆ ಹೆಚ್ಚಬಹುದೆಂದು ನಿರೀಕ್ಷಿಸಲಾಗಿದೆ. ಮೂಲಧನದ ಕಾರ್ಯಗಳಿಗಾಗಿ ವೆಚ್ಚಮಾಡಿರುವ ಇಷ್ಟು ಮೊಬಲಗಿಗೆ ಪ್ರತಿಯಾಗಿ ಈ ಸಂಬಂಧವಾಗಿ ಜನರಿಂದ ನಾವು ಸಾಲ ಪಡೆದಿರುವ ಮೊಬಲಗು 1934ನೆಯ ಇಸವಿ ಜುಲೈ 1ನೆಯ ತಾರೀಖಿನಲ್ಲಿ 9 ಕೋಟಿ 53 ಲಕ್ಷ ರೂಪಾಯಿಗಳು. ಈ ಸಾಲದ ಮೊಬಲಗು 1936ನೆಯ ಇಸವಿ ಜುಲೈ 1ನೆಯ ತಾರೀಖಿನಲ್ಲಿ 8 ಕೋಟಿ 45 ಲಕ್ಷ ರೂಪಾಯಿಗಳು ಮಾತ್ರವೇ ಆಗಿರಬಹುದೆಂದು ನಿರೀಕ್ಷಿಸಿದ್ದೇವೆ. ಎಂದರೆ (ಫೈನಾನ್ಶಿಯಲ್ ಸೆಕ್ರೆಟರಿಯವರ ಮೆಮೊರಾಂಡಮಿನ 51ನೆಯ ಪ್ಯಾರಾದಲ್ಲಿ ನಮೂದಿಸಿರುವ ಆಸ್ತಿಯ ರೂಪದ ಸ್ವತ್ತುಗಳೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಬಿಟ್ಟುಬಿಟ್ಟಾಗಲೂ ಕೂಡ) ನಾವು ಪಾವತಿಮಾಡಬೇಕಾಗಿರುವ ದೇಣೆಯ ಮೊಬಲಗಿಗಿಂತಲೂ ಆಸ್ತಿಯರೂಪದ ಸ್ವತ್ತುಗಳ ಬಾಬತು ಮೊಬಲಗು 4 ಕೋಟಿ 86 ಲಕ್ಷ ರೂಪಾಯಿಗಳಷ್ಟು ಹೆಚ್ಚಾಗುತ್ತದೆ. ಮೂಲಧನದ ಕಾರ್ಖಾನೆಗಳಿಂದ 1935-36 ನೆಯ ಸಾಲಿನಲ್ಲಿ ಹುಟ್ಟುವಳಿಯಾಗುವುದಾಗಿ ನಿರೀಕ್ಷೆಯಾದ ಒಟ್ಟು ಮೊಬಲಗು 60.38 ಲಕ್ಷ ರೂಪಾಯಿಗಳು. ಎಂದರೆ ಅವುಗಳಿಗಾಗಿ ವೆಚ್ಚಮಾಡಿದ ಮೂಲಧನದ ಮೇಲೆ ಸೇಕಡ 3.74 ರಷ್ಟು ಪ್ರತಿಫಲವು ಆ ಕಾರ್ಖಾನೆಗಳಿಂದ ಬಂದಹಾಗಾಗುತ್ತದೆ. ನಾವು ತೆಗೆದುಕೊಂಡಿರತಕ್ಕ ಸಾಲದ ಮೊಬಲಗುಗಳ ಸಂಬಂಧದಲ್ಲಿ 1935-36 ನೆಯ ಸಾಲಿನಲ್ಲಿ ನಾವು ಪಾವತಿಮಾಡಬೇಕಾಗಿರುವ ನಿವ್ವಳ ಬಡ್ಡಿಯ ಮೊಬಲಗು 34.16 ಲಕ್ಷ ರೂಪಾಯಿಗಳಷ್ಟಾಗುತ್ತದೆ. ಈ ಮೊಬಲಗು ಮೂಲಧನದ ಕಾರ್ಖಾನೆಗಳಿಂದ ಬರುವ ನಿವ್ವಳ ಹುಟ್ಟುವಳಿಯ ಮೊಬಲಗಿಗಿಂತಲೂ 26.22 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಿದೆ. ಆದಕಾರಣ ಒಟ್ಟಿನಲ್ಲಿ ನಮ್ಮ ಸಂಸ್ಥಾನದ ಆಯವ್ಯಯದ ಸ್ಥಿತಿಯು ಸಮಾಧಾನಕರವಾಗಿರುತ್ತದೆಂದು ಧಾರಾಳವಾಗಿ ಹೇಳಬಹುದು. ಇದೇ ಅಂಶವನ್ನು ಒಂದು ಉಪಮಾನದ ಮೂಲಕ ವಿಶದಪಡಿಸಬಹುದಾಗಿದೆ. ಹೇಗೆಂದರೆ ನಮ್ಮ ಸಂಸ್ಥಾನವನ್ನೇ ಒಂದು ಕಂಪೆನಿಗೆ ಹೋಲಿಸೋಣ. ಮತ್ತು ಇಲ್ಲಿ ನಾವುಗಳು ಸೇರಿರತಕ್ಕ ಸಭೆಯು ಕಂಪೆನಿಯ ಷೇರುದಾರರುಗಳು ಅವರ ಜಮಾ ಖರ್ಚುಗಳ ಸಂಬಂಧದಲ್ಲಿ ವಾರ್ಷಿಕ ಜಮಾವಟ್ಟಿನ ಪಟ್ಟಿಯನ್ನು (ಬ್ಯಾಲೆನ್ಸ್ ಷೀಟ್) ಪರಿಶೀಲಿಸುವುದಕ್ಕಾಗಿ ನೆರೆದಿರತಕ್ಕ ಸಭೆಯನ್ನು ಹೋಲುವುದಾಗಿ ಬೇಕೆಂದೂ ಭಾವಿಸೋಣ. ಹೀಗೆ ಹೋಲಿಸುವ ಪಕ್ಷದಲ್ಲಿ, ನಾವು ಜವಾಬ್ದಾರರಾಗಿರುವ ಈ ಭಾರೀ ಕಂಪೆನಿಯ ಆಯವ್ಯಯದ ಆಡಳಿತವನ್ನು ಈಗ ಒದಗಿರುವ ಮಹತ್ತರವಾದ ಆರ್ಥಿಕ ದುರವಸ್ಥೆಯ ಭೀಕರ ಪರಿಸ್ಥಿತಿಯಲ್ಲಿಯೂ ಸಹ ಇದುವರೆಗೆ ಸುಸೂತ್ರವಾಗಿಯೂ ನಿರಾತಂಕವಾಗಿಯೂ ನಡೆಯಿಸಿಕೊಂಡು ಬಂದಿರುವುದು ಮಾತ್ರವೇ ಅಲ್ಲದೆ ಇನ್ನು ಮುಂದೆ ಯಾವ ಪ್ರತಿಕೂಲಗಳೇ ಬಂದೊದಗಿದ್ದಾಗ್ಯೂ ಅವುಗಳನ್ನು ಎದುರಿಸಲು ತಕ್ಕ ಸಾಧನ...

(ಒನೆಯ ಪುಟವನ್ನು ನೋಡಿ)

ಪಂಚಾಚಾರ್ಯ ಪ್ರಭಾ.

——

೧೯೩೩ನೇ ಜೂನ್ ತಾ|| ೨೬ನೇ ಸೋಮವಾರ

ಲಿಂಗಧಾರಣವು ವೇದೋಕ್ತವಾದುದು.

——

ಯಶ್ಛಂದಸಾಮೃಷಭೋ ವಿಶ್ವರೂಪಃ ಛಂದೋಭ್ಯೋಧ್ಯಮೃತಾತ್ಸಂಬಭೂವ ಸಮೇಂದ್ರೋ ಮೇಧಯಾ ಸ್ಪೃಣೋತು ಅಮೃತಸ್ಯ ದೇವಧಾರಣೋ ಭೂಯಾಸಂ ಶರೀರಂ ಮೇ ವಿಚರ್ಷಣಂ ಜಿಹ್ವಾ ಮೇ ಮಧುಮತ್ತಮಾ ಕರ್ಣಾಭ್ಯಾಂ ಭೂರಿವಿಶ್ರುವಂ ಬ್ರಹ್ಮಣಃ ಕೋಶೋಸಿ ಮೇಧಯಾ ಪಿಹಿತಃ ಶ್ರುತಂ ಮೇ ಗೋಪಾಯ

ಅರ್ಥ—ಯಃ= ಯಾವ ಛಂದಸಾಂ= ಸಮಸ್ತ ವಿದ್ಯೆಗಳಿಗೆ ಆದವಾದ ವೇದಗಳಿಗೆ, ಋಷಭಃ= ವೇದಕರ್ತನಾದ್ದರಿಂದಲೂ ಪ್ರೋಕ್ತನಾದ್ದರಿಂದಲೂ ಸ್ವಾಮಿಯಾಗಿರುವನೋ, ಚ= ಮತ್ತು ವಿಶ್ವರೂಪಃ= ಸರ್ವಾತ್ಮಕನೂ ಮೂರ್ತಿಯಾಗಿರುವನೋ, ಅಮೃತಾತ್= ಮೋಕ್ಷಕ್ಕೋಸ್ಕರವಾಗಿ ಛಂದೋಭ್ಯಃ= ವೇದಗಳಿಂದ, ಅಧಿಸಂಬಭೂವ= ಅಧಿಕವಾಗಿ ಪ್ರತಿಪಾದಿಸಲ್ಪಟ್ಟವನಾಗಿರುವನೋ, ಸಃ ಇಂದ್ರಃ= ಪರಮೈಶ್ವರ್ಯಶಾಲಿಯಾದ ಆ ಪರಶಿವನು, ಮಾ= ನನ್ನನ್ನು ಮೇಧಯಾ= ಶಿವಲಿಂಗವನ್ನು ಧರಿಸಬೇಕೆಂಬ ಬುದ್ಧಿಯಿಂದ, ಸ್ಪೃಣೋತು= ಸಂತೋಷಗೊಳಿಸಲಿ ಅಥವಾ ಬಲವನ್ನುಂಟುಮಾಡಲಿ ಅಮೃತಸ್ಯ= ಮೋಕ್ಷಸ್ವರೂಪನಾಗಿಯೂ, ದೇವಧಾರಣಃ= ದೇವಶಬ್ದವಾಚ್ಯನಾದ ಶಿವಲಿಂಗವನ್ನು ಧರಿಸುವವನಾಗಿಯೂ ಭೂಯಾಸಂ= ಆಗುವೆನು ಅತಃ= ಈ ದೇವಸ್ವೀಕಾರದಿಂದ ಇಷ್ಟಲಿಂಗವನ್ನು ಧರಿಸಿರುವುದರಿಂದ, ಮೇ= ನನ್ನ= ಶರೀರಂ= ದೇಹವು ವಿಚರ್ಷಣಂ= ಪಾಪರಹಿತವಾಗಲಿ, ಮೇ= ನನ್ನ, ಜಿಹ್ವಾ= ನಾಲಗೆಯು, ಮಧುಮತ್ತಮಾ= ಅತಿಶಯವಾಗಿ ಮಧುರವಾದ ಮಾತುಗಳನ್ನಾಡಲಿ, ಕರ್ಣಾಭ್ಯಾಂ= ಎರಡು ಕಿವಿಗಳಿಂದ, ಭೂರಿವಿಶ್ರುವಂ= ಶಿವಜ್ಞಾನಕ್ಕೆ ಯೋಗ್ಯವಾದ ತಾಯ ಕಾರಣಗಳ ಸಮೂಹವುಳ್ಳವನಾಗುವೆನು ಬ್ರಹ್ಮಣಃ= ಶಿವನಿಗೆ, ಕೋಶೋಸಿ= ಖಡ್ಗಕ್ಕೆ ಆಶ್ರಯವಾದ ಒರೆಯಂತೆ ಅಧಿಷ್ಠಾನನಾಗಿರುವಿ, ಮೇಧಯಾ= ಮಾಯಾವೃತವಾದ ಲೌಕಿಕಪ್ರಜ್ಞೆಯಿಂದ, ಪಿಹಿತಃ= ಆವರಿಸಲ್ಪಟ್ಟವನಾಗಿರುತ್ತೀಸೆ, ಶ್ರುತಂ ಮೇ= ನನಗೆ ಶ್ರವಣಪೂರ್ವಕವಾಗಿ ಭಕ್ತಿಜ್ಞಾನಾದಿಗಳನ್ನನುಗ್ರಹಿಸಿ, ಗೋಪಾಯ= ಶಿವಪ್ರಾಪ್ತಿಗೆ ವಿಸ್ಮೃತಿಯುಂಟಾಗದಂತೆ ರಕ್ಷಿಸು

ಎಂಬುದಾಗಿ ಈ ತೈತ್ತಿರೀಯಶಾಖೆಯ ಮಂತ್ರಕ್ಕೆ ವೀರಶೈವ ಭಾಷ್ಯಕಾರರು ಶಿವಲಿಂಗಧಾರಣಪರವಾಗಿ ವ್ಯಾಖ್ಯಾನಮಾಡಿರುವುದಲ್ಲದೆ ಭಗವಾನ್ ವೇದವ್ಯಾಸನೂ ಸಹ ಸ್ಪಷ್ಟನಾಗಿ ಹೇಳಿರುತ್ತಾನೆ ಈ ಮಂತ್ರದಲ್ಲಿ ಸ್ಪಷ್ಟವಾದ ಲಿಂಗಶಬ್ದವಿಲ್ಲದಿದ್ದರೂ "ದೇವಧಾರಣೋ ಭೂಯಾಸಂ" ಎಂಬುವ ವಿಶೇಷ ವಾಕ್ಯದಲ್ಲಿರುವ 'ದೇವ' ಶಬ್ದಕ್ಕೆ ಅವಯವಶಕ್ತಿಯಿಂದ ಲಿಂಗವೆಂದು ಅರ್ಥವಾಗುವುದರಿಂದ ಈ ಮಂತ್ರವು ಲಿಂಗಧಾರಣಪರವಾದುದೆಂದು ಹೇಳಬೇಕಾಗಿದೆ ಮತ್ತು ದೇವಶಬ್ದವು ಪರಶಿವನೊಬ್ಬನಲ್ಲಿಯೇ ರೂಢವಾಗಿರುತ್ತದೆ 'ತಂ ದೇವತಾನಾಂ ಪರಮಂ ಚ ದೈವತಂ' 'ತಸ್ಮಾದ್ದೇವಶ್ಶಿವಸ್ಸ್ಮೃತಃ' ಇತ್ಯಾದಿ ಅನಂತ ಪ್ರಮಾಣವಾಕ್ಯಗಳೂ ಸಹ ದೇವಶಬ್ದವು ಶಿವಲಿಂಗವೆಂಬ ಅರ್ಥವನ್ನೇ ಕೊಡುತ್ತವೆ ಇದಲ್ಲದೆ 'ದೇವಧಾರಣೋ ಭೂಯಾಸಂ' ಎಂಬಲ್ಲಿ ದೇವಶಬ್ದದ ಮುಂದುಗಡೆಯಲ್ಲಿಯೇ ಧಾರಣಶಬ್ದವೂ ಸಹ ಇರುವುದರಿಂದ ಶಿವಲಿಂಗವನ್ನು ಧರಿಸುವೆನೆಂದು ಅರ್ಥಮಾಡುವುದೇ ಯುಕ್ತವಾಗಿದೆ ಹಾಗಿಲ್ಲದೆ ಈ ಮಂತ್ರದಲ್ಲಿರುವ ದೇವ ಸಾಮಾನ್ಯವಾಚಕವಾದ ದೇವಶಬ್ದವಿರುವುದರಿಂದ ಶಿವಲಿಂಗದ ಹೊರತು ಬೇರೆ ವಿಷ್ಣ್ವಾದಿದೇವತೆಗಳನ್ನು ಧರಿಸುವೆನೆಂದು ಅರ್ಥಮಾಡುವಪಕ್ಷದಲ್ಲಿ ಹಾಗೆ ಶಿವಲಿಂಗದ ಹೊರತು ಬೇರೆ ದೇವತೆಗಳನ್ನು ದೇಹದಲ್ಲಿ ಧರಿಸಬೇಕೆಂದು ಯಾವ ಶ್ರುತಿಸ್ಮೃತ್ಯಾದಿ ಪ್ರಮಾಣವಾಕ್ಯಗಳಾಗಲಿ, ಮತ್ತು ಇತರ ದೇವತೆಗಳನ್ನು ದೇಹದಲ್ಲಿ ಧರಿಸುವ ಅಂಥ ಲೋಕವ್ಯವಹಾರಗಳಾಗಲಿ ಎಲ್ಲಿಯೂ ಕಂಡುಬರುವದಿಲ್ಲ 'ಶಿವಲಿಂಗವನ್ನು ಕಂಠದಲ್ಲಿ ಧರಿಸಬೇಕೆಂಬುವ ವಿಷಯದಲ್ಲಾದರೂ ಅನಂತಶ್ರುತಿಗಳೂ ಪುರಾಣಗಳೂ ಆಗಮಗಳೂ ಉದ್ಘೋಷಿಸುವುವಲ್ಲದೆ ರೇಣುಕಾದಿ ಮಹಾಚಾರ್ಯರು ಭೂಲೋಕದಲ್ಲಿ ಅವತರಿಸಿ ಅಂಥ ಲಿಂಗಧಾರಿಮತವನ್ನು ಸ್ಥಾಪಿಸಿ ಶಿವಲಿಂಗಧಾರಣನಿಯಮವನ್ನು (ಪಾಶುಪತವ್ರತವನ್ನು) ಜಗತ್ತಿನಲ್ಲಿ ರೂಢಿಗೆ ತಂದಿರುತ್ತಾರೆ ಈ ಲಿಂಗಧಾರಣವ್ರತವನ್ನೇ ಪಾಶುಪತವ್ರತವೆಂದು ಕರೆಯುವರು

ವ್ರತಮೇತತ್ಪಾಶುಪತಂ ಪಶುಪಾಶವಿಮೋಕ್ಷಾಯ ವ್ರತಮೇತದ್ಧಿ ಭಗವತಃ ಪಾಶುಪತಸ್ಯ ಮುಮುಕ್ಷುರ್ಭಸ್ಮಧಾರಣಾದ್ಯೈತಿ ಸ್ವಯಮೇತಸ್ಮಾತ್ ಬ್ರಹ್ಮವಿದಾಂವರ ತಸ್ಯೈತೇ ಕಥಿತಾಃ ಸರ್ವೇ ಪ್ರಕಾರಾಃ ಮಹಾತ್ಮನಃ

ಎಂದು ಕೈವಲ್ಯ, ಅಥರ್ವಶಿರಃ ಕಾಲಾಗ್ನಿರುದ್ರಮುಂಡಕಾದಿ ಉಪನಿಷತ್ತುಗಳಲ್ಲಿ ಪಾಶುಪತವ್ರತವನ್ನವಲಂಬಿಸಿದವನೇ ಬ್ರಹ್ಮವಿದ್ಯೆಯಲ್ಲಿ ಅಧಿಕಾರಿಯಾಗುವನೆಂದು ಸ್ಪಷ್ಟವಾಗಿ ಹೇಳಿರುತ್ತದೆ ಇದರಿಂದ ಪಾಶುಪತವ್ರತವೆಂಬ ಪರ್ಯಾಯನಾಮವುಳ್ಳ ಲಿಂಗಧಾರಣ ದೀಕ್ಷೆಯನ್ನು ಪಡೆದವನೇ ಬ್ರಹ್ಮವಿದ್ಯಾಧಿಕಾರಿಯಾಗುವನೆಂದು ತಾತ್ಪರ್ಯವು ಈ ವಿಷಯದಲ್ಲಿ—

ಲಿಂಗಾಂಗಸಂಗಿನಾಂ ಚೈವ ಪುನರ್ಜನ್ಮ ನ ವಿದ್ಯತೇ |
ಏಷ ಪಾಶುಪತೋ ಯೋಗಃ ಪಶುಪಾಶವಿಮುಕ್ತಯೇ ||
ಸರ್ವವೇದಾಂತಸಾರೋಯಂ ಅತ್ಯಾಶ್ರಮ ಇತಿ ಸ್ಮೃತಿಃ |
ಪಶುಬ್ರಹ್ಮಪದಂ ಲಿಂಗಂ ಶಾಂಭವಂ ಪರಮೇಶ್ವರಂ ||
ಶಿವೋ ಧಾರಯತೇ ಯಸ್ತು ಸ ಪಾಶುಪತ ಉಚ್ಯತೇ |
ನ ಶಕ್ರಶ್ಚ ಪಶುಸ್ತಸ್ಯ ಲಿಂಗಂ ಪಾಶವಿನಾಶಕಂ ||
ಯಸ್ತು ಧಾರಯತೇ ಲಿಂಗಂ ಸ ಪಾಶುಪತ ಉಚ್ಯತೇ |
ಲಿಂಗಂ ಶಿವಂ ಭವೇತ್ ಕ್ಷೇತ್ರಂ ಲಿಂಗಂ ಸಂಯೋಗ ಆಶ್ರಯಃ ||
ತಸ್ಮಾಲ್ಲಿಂಗಾಂಗಸಂಯುಕ್ತೋ ಯಃ ಸ ಪಾಶುಪತೋ ಭವೇತ್ |
ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥೋ ಯತಿಸ್ತಥಾ ||
ಪಶುರ್ಲಿಂಗಾಂಗಸಂಯುಕ್ತಃ ಸ ಪಾಶುಪತ ಉಚ್ಯತೇ |

ಲಿಂಗಾಂಗಿಗಳಿಗೆ ಪುನರ್ಜನ್ಮವಿಲ್ಲ ಪಶುಪಾಶನಿವೃತ್ತಿಗಾಗಿ ಲಿಂಗಧಾರಣವೇ ಸಮಸ್ತ ವೇದಾಂತದ ಸಾರವು ದೀಕ್ಷೆಯನ್ನು ವಹಿಸುವುದೇ ಅತ್ಯಾಶ್ರಮವು ಯಾವನು ಬಂಧವಿಚ್ಛೇದಕಾರಿಯಾದ ಅಂಥ ಶಿವಲಿಂಗವನ್ನು ಭಕ್ತಿಯಿಂದ ಧರಿಸುವನೋ ಯಾವನು ಮೂರು ಶರೀರಗಳಲ್ಲಿ ಇಷ್ಟಪ್ರಾಣಭಾವವೆಂಬ ಲಿಂಗಗಳನ್ನು ಕ್ರಮದಿಂ ಧರಿಸುತ್ತಾನೆಯೋ ಅವನೇ ಪಾಶುಪತದೀಕ್ಷೆಯುಳ್ಳವನು ಲಿಂಗವೆಂದರೆ ಶಿವನು, ಲಿಂಗವೇ ಕ್ಷೇತ್ರವು ಇತ್ಯಾದಿ ಲೈಂಗ್ಯಸ್ಕಾಂದ ಕೂರ್ಮಪುರಾಣಗಳ ಪರ್ಯಾಲೋಚನೆಯಿಂದ ಅತ್ಯಾಶ್ರಮಿ ಪಾಶುಪತಿಶಬ್ದಗಳು ಲಿಂಗಧಾರಿಶಬ್ದಕ್ಕೆ ಪರ್ಯಾಯನಾಮಗಳಾದ್ದರಿಂದ ಲಿಂಗಧಾರಣವ್ರತವೇ ಪಾಶುಪತವ್ರತವೆನಿಸಿಕೊಳ್ಳುವುದೆಂದು ಸ್ಪಷ್ಟವಾಯಿತು ಮತ್ತು

ಅಂತರ್ಧಾರಣಶಕ್ತೋ ವಾ ಹ್ಯಶಕ್ತೋ ವಾ ದ್ವಿಜೋತ್ತಮಃ |
ಸಂಸ್ಕೃತ್ಯ ಗುರುಣಾ ದತ್ತಂ ಕೃತಂ ಲಿಂಗಮುರಸ್ಥಲೇ ||
ಧಾರ್ಯಂ ವಿಪ್ರೇಣ ಮುಕ್ತ್ಯರ್ಥಮೇವಂ ವೇದವಿದೋ ವದಂತಿ ||

ಬ್ರಾಹ್ಮಣನು ಜ್ಯೋತಿರ್ಲಿಂಗವನ್ನು ಧರಿಸುವ ಸಾಮರ್ಥ್ಯವುಳ್ಳವನಾಗಿರಲಿ ಅಥವಾ ಅಂಥ ಸಾಮರ್ಥ್ಯವಿಲ್ಲದವನಾಗಿರಲಿ ಆಚಾರ್ಯನಿಂದ ಸಂಸ್ಕರಿಸಿ ಕೊಡಲ್ಪಟ್ಟ ಶಿವಲಿಂಗವನ್ನು ಮಾತ್ರ ಕಂಠದಲ್ಲಿ ಧರಿಸಬೇಕೆಂದು ಸಾಮುಚ್ಚಿಗೀಷೀಯಶಾಖೆಗೆ ಸೇರಿರುವ ಸದಾನಂದೋಪನಿಷತ್ತಿನಲ್ಲಿಯೂ ಹೇಳಲ್ಪಟ್ಟಿದೆ ಮತ್ತು

ಯೋ ವಾಮಹಸ್ತೇ ಶಿವಲಿಂಗಮೀಶಂ ಪರಾತ್ಪರಂ | ಧಾರಯತೇ ಸಕಲಂ ವಿಪ್ರಃ ಕ್ಷತ್ರಿಯೋ ವಾ | ತಸ್ಯೈವ ಲಭ್ಯಃ ಪರಮೇಶ್ವರೋಸೌ ನಿರಂಜನಃ ಪರಮಂ ಸಾಮ್ಯಮುಪೈತಿ ದಿವ್ಯಂ ||

ಬ್ರಾಹ್ಮಣನಾಗಲಿ ಕ್ಷತ್ರಿಯನಾಗಲಿ ಗುರುವಿನಿಂದ ವಿಧ್ಯುಕ್ತವಾಗಿ ಸಂಸ್ಕರಿಸಿ ಕೊಡಲ್ಪಟ್ಟ ಇಷ್ಟಲಿಂಗವನ್ನು ಯಾವನು ಧರಿಸಿರುತ್ತಾನೆಯೋ ಅಂಥವನೇ ಮುಕ್ತಿಯನ್ನು ಹೊಂದುವನೆಂದು ಅಥರ್ವಣಕ್ಕೆ ಸೇರಿದ ಇಶ್ವರ್ಯಶಾಖೆಯಲ್ಲಿಯೂ ಸ್ಪಷ್ಟವಾಗಿ ಹೇಳಿರುತ್ತದೆ ಆದ್ದರಿಂದ 'ದೇವಧಾರಣಃ' ಎಂಬಲ್ಲಿ 'ದೇವಂಧರತೀತಿದೇವಧಾರಣಃ' ಎಂಬ ವ್ಯುತ್ಪತ್ತಿಯಿಂದ ಮೋಕ್ಷಾಪೇಕ್ಷೆಗಳಾದವರು ದೀಕ್ಷಾಪೂರ್ವಕವಾಗಿ ದೇವಶಬ್ದವಾಚ್ಯನಾದ ಶಿವಲಿಂಗವನ್ನು ಧರಿಸಿಕೊಂಡು ಶರೀರವನ್ನು ಪರಿಶುದ್ಧಿಗೊಳಿಸಿ ನಾಲಗೆಯಲ್ಲಿ ಯಾವಾಗಲೂ ಶಿವಸಂಬಂಧಗಳಾದ ಸ್ತೋತ್ರಗಳನ್ನು ಮಾಡುವಂತೆಯೂ ಕಿವಿಗಳಿಂದ ಶಿವಸಂಬಂಧಗಳಾದ ಸತ್ಕಥಾಶ್ರವಣ ಮಾಡುವಂತೆಯೂ ಮನಸ್ಸಿನಲ್ಲಿ ಆ ಶಿವಲಿಂಗದ ನಿಜಾಕಾರವನ್ನು ಧ್ಯಾನಿಸುವಂತೆಯೂ ಮಾಡಿ ಅನಾದಿಕಾಲದಿಂದ ಬಂದ ಜನ್ಮಹೇತುವಾದ ಕರ್ಮಪಾಶವನ್ನು ನಾಶಗೊಳಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡೆಂದು ವೀರಶೈವಮತಾಚಾರ್ಯರು ಮಾಡಿದ ವ್ಯಾಖ್ಯಾನದಿಂದ ಈ ಮಂತ್ರವು "ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ" ಎಂಬ ಅದೇ ತೈತ್ತಿರೀಯವಾಕ್ಯದಲ್ಲಿ ವಿಧಿಸಿರುವ ಆ ಇಷ್ಟಲಿಂಗಧಾರಣವನ್ನೇ ಅನುವದಿಸಿ, ಆ ಇಷ್ಟಲಿಂಗಧಾರಣದಿಂದಾಗುವ ಮೋಕ್ಷರೂಪವಾದ ಮಹಾಫಲವನ್ನು ವಿಧಿಸಿ ತತ್ಸಾಧನವಾದ ಪ್ರಜ್ಞಾಬಲವನ್ನೂ ಇಂದ್ರಿಯಬಲವನ್ನು ಪ್ರಾರ್ಥಿಸಿರುತ್ತದೆ ಹೀಗೆ ಈ ಮಂತ್ರವು ಇಷ್ಟಲಿಂಗಧಾರಣಫಲವಿಧಾಯಕವಾದುದೆಂಬುವಲ್ಲಿ ಅನೇಕ ಪೂರ್ವಾಚಾರ್ಯರ ಮತ್ತು ವ್ಯಾಸಾದಿ ಮಹರ್ಷಿಗಳ ಉಪಷ್ಟಂಭಕವಾಕ್ಯಗಳೂ ಬಲವಾದ ಆಧಾರವಾಗಿರುವುದರಿಂದ ಲಿಂಗಧಾರಣದಲ್ಲಿಯೇ ಈ ಶ್ರುತಿಯ ತಾತ್ಪರ್ಯವಲ್ಲದೆ ಮತ್ತೊಂದರಲ್ಲಿ ತಾತ್ಪರ್ಯವಿಲ್ಲವೆಂದು ನಿರ್ಧಾರವಾಗುತ್ತದೆ

ಒಳದೇಶದ ವೃತ್ತಾಂತಗಳು.

——

ರಾಮನಾದಪುರದ ಬಳಿ ಕಾವೇರಿನದಿಗೆ ಹೊಸ ಸೇತುವೆ ಕಟ್ಟಬೇಕೆಂದು, ಇದಕ್ಕಾಗಿ ಇಂಡಿಯಾ ಸರ್ಕಾರದವರು 1½ ಲಕ್ಷ ರೂಪಾಯಿ ಮಂಜೂರು ಮಾಡಿರುತ್ತಾರೆಂದು ಕೇಳುತ್ತೇವೆ

ಕಳೆದವಾರ ನಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಶ್ರೀನಿವಾಸ ದಾಂಪತ್ಯರವರ ಆತ್ಮಹತ್ಯೆಯ ವಿಷಯಕ ಲೇಖನವು ಬೆಂಗಳೂರ "ತಾಯಿನಾಡು" ಪತ್ರಿಕೆಯಿಂದ ತೆಗೆದುಕೊಳ್ಳಲ್ಪಟ್ಟಿತು.

ಮಳವಳ್ಳಿ ತಾಲ್ಲೂಕ ರೊಟ್ಟಿಕಟ್ಟೆ ಬಳಿ ರಸ್ತೆ ಮಗ್ಗುಲಲ್ಲಿ ಯಾರೋ ಸತ್ತುಬಿದ್ದಿದ್ದರು ವಾರಸುದಾರರಿಲ್ಲದೆ ಅವರ್‍ಯಾರೆಂಬುದು ಪತ್ತೆ ಇಲ್ಲ. ಪೋಸ್ಟುಮಾರ್ಟಂ ಮಾಡಿ ಅನಂತರ ಅಂತ್ಯಕ್ರಿಯೆ ಜರುಗಿತು.

ನೆಲಮಂಗಲದ ತಾಲ್ಲೋಕು ಅವೇರಹಳ್ಳಿ ಗ್ರಾಮದ ಒಡ್ಡರಜಾತಿ ಪುಟ್ಟನೆಂಬುವನು ತನ್ನ ಹೆಂಡತಿಯನ್ನು ಕೊಂದನೆಂಬ ಅಪಾದನೆಯ ಮೇಲೆ ದಸ್ತಗಿರಿ ಮಾಡಲ್ಪಟ್ಟಿದ್ದಾನೆಂದು ಕೇಳುತ್ತೇವೆ

ಮೈಸೂರು ಮೋಟರ್ ರೆಗ್ಯುಲೇಷನ್ ಪ್ರಕಾರ ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್ ರಸ್ತೆಗಳಲ್ಲಿ ಮೋಟರನ್ನು ಘಂಟೆಗೆ 20 ಮೈಲಿಗಳಿಗಿಂತ ಹೆಚ್ಚು ವೇಗವಾಗಿ ನಡೆಸಕೂಡದೆಂದು ಅಪ್ಪಣೆಯಾಗಿದೆ

ಅರಕಲಗೂಡು ತಾಲ್ಲೂಕು ರಾಮನಾಥಪುರದ ರಾಮೇಶ್ವರ ದೇವಸ್ಥಾನದ ಬಳಿ ಇರುವ ಸರೋವರದಲ್ಲಿಯೂ ಮತ್ತು ದೇವಸ್ಥಾನಕ್ಕೆ 1 ಫರ್ಲಾಂಗು ಅಂತರದಲ್ಲಿ ಯಾರೂ ಮೀನು ಹಿಡಿಯಕೂಡದೆಂದು ಸರ್ಕಾರದವರು ಅಪ್ಪಣೆ ಮಾಡಿದ್ದಾರೆ

ವಡೆ ಚಕ್ಕುಲಿ ಮುಂತಾದುವುಗಳನ್ನು ನೊಣಗಳು ಮುತ್ತುವಂತೆ ಇಟ್ಟು ಮಾರುತ್ತಿದ್ದಳೆಂದು ಮಲ್ಲಮ್ಮನೆಂಬುವಳ ಮೇಲೆ ಮೊಕದ್ದಮೆಯಾಗಿ ಸಿಟಿ ಮ್ಯಾಜಿಸ್ಟ್ರೇಟರು ಅವಳಿಗೆ 5 ರೂಪಾಯಿ ದಂಡ ಇಲ್ಲದಿದ್ದರೆ ಒಂದು ವಾರ ಸಾದಾಶಿಕ್ಷೆ ವಿಧಿಸಿದರು

ಮೈಸೂರು ಗಾಂಧಿ ಚೌಕದಲ್ಲಿರುವ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡಕ್ಕೆ ಬದಲಾಯಿಸಿ ಈ ಕಟ್ಟಡವನ್ನು ಮಾರಿಬಿಡುತ್ತಾರಂತೆ ಈ ಕಟ್ಟಡದಲ್ಲಿ ಸುಮಾರು 70 ವರ್ಷಗಳಿಂದ ಸಿಟಿ ಕೋರ್ಟು ನಡೆಯುತ್ತಿತ್ತೆಂದು ಕೇಳುತ್ತೇವೆ

ಪ್ರಸಿದ್ಧ ಕೇಡಿ ಮೈಸೂರಿನ ರಂಗಯ್ಯ ಎಂಬವನು ಬೆಂಗಳೂರು ಶಿವಾನಂದ ಥಿಯೇಟರಿನ ಬಳಿ ಒಬ್ಬರ ಜೇಬಿನಿಂದ ಕದಿಯುತ್ತಿದ್ದುದನ್ನು ಎಲಹಂಕ ಗೇಟ್ ಪೋಲೀಸರು ನೋಡಿ ಅವನನ್ನು ದಸ್ತಗಿರಿ ಮಾಡಿ ಕೋರ್ಟಿಗೆ ಹಾಜರ್ಮಾಡಿದರು ನ್ಯಾಯಾಧೀಶರು ವಿಚಾರಣೆ ಮಾಡಿ ಅಪರಾಧಿಗೆ 2 ವರ್ಷ ಕಠಿಣ ಶಿಕ್ಷೆ ವಿಧಿಸಿದರು.

ವರ್ತಮಾನಸಂಗ್ರಹ.

ಝಾಂಡ್ಸ ಪಟ್ಟಣದ ನಿರುದ್ಯೋಗಿ ಮುಸ್ಲಿಮ ತರುಣನೊಬ್ಬನು ಆ ಊರಿನ ದೊಡ್ಡ ಗಡಿಯಾರದ ಬಳಿಯಂತು ಬೆಂಕಿಬಿದ್ದಿರುವುದಾಗಿ ಗಲಭೆ ಹಚ್ಚಿದನು. ಸುತ್ತಮುತ್ತಿನ ಜನಗಳೂ, ಪೋಲೀಸರೂ, ಬಂದು ಊರಿನ ಎಲ್ಲಿ ಬೆಂಕಿಬಿದ್ದಿದೆಯೆಂದು ವಿಚಾರಿಸುವಲ್ಲಿ ತರುಣನು ಉದ್ಯೋಗ ಸಿಕ್ಕದಕಾರಣ ತನ್ನ ಹೊಟ್ಟೆಯಲ್ಲಿ ಉರಿಎದ್ದಿರುವುದಾಗಿ ಹೇಳಿದನು. ಸುಳ್ಳು ಗಲಭೆ ಹಚ್ಚಿದನೆಂದು ಪೋಲೀಸರು ಈ ತರುಣನನ್ನು ದಸ್ತಗಿರಿ ಮಾಡಿದ್ದಾರೆ.

12 ವರ್ಷ ವಯಸ್ಸಿನ ಆಕಾಶವಾರ್ತಾಯಂತ್ರ ಪ್ರವೀಣಳು.

ಕ್ವೀನ್ಸ್ಲ್ಯಾಂಡಿನ ಮಾಡಲೈನ್ ಮಕೆಂಜೆ ಎಂಬ 12 ವರ್ಷ ವಯಸ್ಸಿನ ಕನ್ಯೆಯು ಆಕಾಶವಾರ್ತಾಯಂತ್ರ ವಿಷಯಗಳಲ್ಲಿ ಬಹಳ ಪ್ರಸಿದ್ಧಿಗೆ ಬಂದಿದ್ದಾಳೆ. ಬ್ರಿಟಿಷ್ ಚಕ್ರಾಧಿಪತ್ಯದ ಆಕಾಶವಾರ್ತಾಯಂತ್ರ ನಡೆಸುವ ಲೈಸೆನ್ಸ್ (ಅಪ್ಪಣೆ) ಪಡೆದಿರುವವರಲ್ಲೆಲ್ಲಾ ಇವಳೇ ಅತ್ಯಂತ ಚಿಕ್ಕವಳು.

ಕಲ್ಲುಗಳ ಬೀಳುವಿಕೆ

ನಾಗಪಟ್ಟಣದ ದೇವಸ್ಥಾನದ ಒಂದು ಭಾಗದಲ್ಲಿ ಈಗ ಕೆಲವು ದಿನಗಳಿಂದ ಎಲ್ಲಿಂದಲೋ ಕಲ್ಲುಗಳು ಬೀಳುತ್ತಿವೆಯಂತೆ! ಎಲ್ಲಿಂದ ಬೀಳುತ್ತವೆ? ಯಾರು ಹಾಕುತ್ತಾರೆಂಬುದು ತಿಳಿಯದ್ದರಿಂದ ಏನೋ ಮಂತ್ರಪ್ರಭಾವವಿರಬೇಕೆಂದು ಇದನ್ನು ನೋಡಲು ನಿತ್ಯವೂ ಸಾವಿರಾರು ಜನರು ಬಂದುಹೋಗುತ್ತಿದ್ದಾರೆ.

ಎಲೆಕ್ಟ್ರಿಕ್ ಗಡಿಯಾರಗಳು

ಬರ್ಲಿನ್ ಪಟ್ಟಣದಲ್ಲಿ 40300 ಎಲೆಕ್ಟ್ರಿಕ್ ಗಡಿಯಾರಗಳನ್ನು ನ್ಯೂಬೇಬಲ್ಸ್ಬರ್ಗ್ ಅಬ್ಸರ್ವೇಟರಿಯವರು ಎಲೆಕ್ಟ್ರಿಕ್ ಕರೆಂಟಿನಿಂದ ನಡೆಸುತ್ತಿದ್ದಾರೆಯಂತೆ. ಈ ಮಾದರಿಯ ಇನ್ನೂ ಅನೇಕ ಗಡಿಯಾರಗಳನ್ನು ಎಲ್ಲಾ ಕಡೆಗಳಲ್ಲೂ ಸ್ಥಾಪಿಸಿ, ಯಾರೊಬ್ಬರೂ ಗಡಿಯಾರವನ್ನು ಇಟ್ಟುಕೊಳ್ಳುವ ಅವಶ್ಯಕತೆಯನ್ನೇ ತಪ್ಪಿಸಲು ಯೋಚಿಸಿದ್ದಾರಂತೆ.

ಜನರಿಂದ ನಡೆಸಲ್ಪಡುತ್ತಿದ್ದ ಗುಪ್ತ ಪೋಸ್ಟಾಫೀಸು

ಸೂರತ್ತಿನಲ್ಲಿ ಕೆಲವು ಜನರು ಸೇರಿ ಖಾಸಗೀ ಪ್ರೈವೇಟ ಪೋಸ್ಟು ನಡೆಸುತ್ತಿರುವುದು ಪೋಲೀಸರ ಗಮನಕ್ಕೆ ಬಂದು, ಅಲ್ಲಿ ಎಕ್ಸ್‌ಪ್ರೆಸ್ ಮತ್ತು ಇತರ ಪತ್ರಗಳನ್ನು ಹುಡುಕಿ ಸ್ಟಾಂಪಿಲ್ಲದೇ ಸಾಗಿಸಲ್ಪಡುತ್ತಿದ್ದ ಅನೇಕ ಕಾಗದಗಳನ್ನು ವಶಪಡಿಸಿಕೊಂಡರು ಮತ್ತು ಪೋಸ್ಟು ಆಕ್ಟಿಗೆ ವಿರೋಧವಾಗಿ ವರ್ತಿಸಿದವರು 3 ಜನರನ್ನು ದಸ್ತಗಿರಿ ಮಾಡಿದ್ದಾರೆ.

ಅತ್ಯಂತ ವೇಗವುಳ್ಳ (ರಿವಾಲ್ವರ್) ಕೈಕೋವಿ

ಸದ್ಯಃ ಪ್ರಪಂಚದಲ್ಲಿ ಇರುವ ರಿವಾಲ್ವರುಗಳೆಲ್ಲಕ್ಕಿಂತಲೂ ಹೆಚ್ಚು ಶಕ್ತಿಯುಳ್ಳ ಎಂತಹ ಲೋಹದ ಕವಚಗತವನ್ನೂ ಭೇದಿಸಿಕೊಂಡು ಹೋಗಬಲ್ಲ ಹೊಸ ಮಾದರಿಯ ರಿವಾಲ್ವರು ತಯಾರಿಸಲ್ಪಟ್ಟಿದೆ. ಇದರಿಂದ ಹೊರಟ ಗುಂಡುಗಳು, ಸೆಕೆಂಡಿಗೆ 1500 ಅಡಿಗಳಷ್ಟು ವೇಗವಾಗಿ ಎಸೆಯಲ್ಪಟ್ಟು ಎಂತಹ ಲೋಹಕವಚವನ್ನಾದರೂ ಭೇದಿಸುವುದಂತೆ!

800 ಪೌಂಡು ಹತ್ತಿರ ಇದ್ದು ಬಡತನದಲ್ಲಿ ಪ್ರಾಣಬಿಟ್ಟನು.

ಸಿಲ್ವರ್‌ಹಿಲ್ ಎಂಬಲ್ಲಿ ಜೋಸೆಫ್ ಡ್ಯಾನಿಯಲ್ಸ್ ಎಂಬ 69 ವರ್ಷ ವಯಸ್ಸಿನ ರೈತನು ಅತ್ಯಂತ ಬಡತನದಿಂದ ಕಷ್ಟಪಟ್ಟು ಮರಣ ಹೊಂದಿದನು. ಮರಣಾನಂತರ ನೆರೆಹೊರೆಯವರು ಅವನ ಗುಡಿಸಿಲಿನ ಸಾಮಾನುಗಳನ್ನು ಹುಡುಕಿದಾಗ ಅನೇಕ ಸುವರ್ಣಗಳ ಜೊತೆಗೆ ಸುಮಾರು 800 ಪೌನುಗಳು ಸಿಕ್ಕಿದವಂತೆ. ಹಣವಿದ್ದರೇನು ಅನುಭವಿಸುವ ಅದೃಷ್ಟವಿರಬೇಕು.

ಅಸೂಯೆಯನ್ನು ನಾಶಮಾಡಬಹುದಂತೆ

ಇತರರನ್ನು ನೋಡಿ ಹೊಟ್ಟೆಕಿಚ್ಚುಪಡುವುದು ಒಂದು ವ್ಯಾಧಿಯೆಂದೂ ಅದನ್ನು ನಾಶಮಾಡಬಹುದೆಂದೂ ರೋಮ್‌ನ ಡಾಕ್ಟರೊಬ್ಬರು ಹೇಳಿರುತ್ತಾರೆ. ಹೊಟ್ಟೆಕಿಚ್ಚು ಪಡುವುದು ಪಿತ್ತಕೋಶವ್ಯಾಧಿಯಂತೆ. ಪಿತ್ತಕೋಶವು ಸರಿಯಾಗುವಂತೆ ಮಾಡಿದರೆ ಈ ವ್ಯಾಧಿಯು ಗುಣವಾಗುವುದೆಂದೂ, ತಾವು ಎಷ್ಟೋ ಜನರಿಗೆ ಗುಣಪಡಿಸಿರುವುದಾಗಿಯೂ ಹೇಳುತ್ತಾರೆ.

ಕಿವುಡರ ಸಿನಿಮಾ.

ಅಮೇರಿಕದ ಚಿಕಾಗೋವಿನಲ್ಲಿ ಸುಮಾರು 30000 ಸಾವಿರದವರಿಗೆ ಕಿವುಡರಿರುವರೆಂದು ತಿಳಿದು ಅಲ್ಲಿಯ ಕೆಲವು ವರ್ತಕರು ಈ ಕಿವುಡರು ಕೇಳಬಹುದಾದ ಸಿನಿಮಾ ಮಂದಿರವನ್ನು ಸ್ಥಾಪಿಸಿದ್ದಾರೆ. ಈ ಮಂದಿರದಲ್ಲಿಯ ಪ್ರತಿಯೊಂದು ಆಸನದ ಬಳಿಯೂ ಕಿವುಡರು ಕೇಳಬಹುದಾದ ಯಂತ್ರಸಾಧನವನ್ನು ಇಟ್ಟಿದ್ದಾರೆ. ಪ್ರತಿಯೊಬ್ಬನೂ ಇದನ್ನು ತಮ್ಮ ತಲೆಯ ಪಕ್ಕಕ್ಕೆ ಒತ್ತಿಹಿಡಿಯುವುದರಿಂದ ಶಬ್ದವನ್ನು ಕೇಳಬಹುದಂತೆ.

ಮದುವಣಗಿತ್ತಿಯು ಮೇನೆಯಲ್ಲಿ ಮರಣ ಹೊಂದಿದಳು

ಎಟಾವಾ ಎಂಬಲ್ಲಿಂದ ಬಂದ ಹೃದಯವಿದ್ರಾವಕ ಸಮಾಚಾರವು: ವಿವಾಹಾನಂತರ ಪಲ್ಲಕ್ಕಿಯಲ್ಲಿ ಕುಳಿತು ತನ್ನ ಗಂಡನ ಮನೆಗೆ ಹೊರಟ ಹುಡುಗಿಯು ಮನೆಯ ಬಳಿ ಇಳಿಸಿಕೊಳ್ಳುವುದಕ್ಕೆ ಪಲ್ಲಕ್ಕಿಯ ಹೊದಿಕೆ ತೆಗೆದು ನೋಡುವಲ್ಲಿ ಸತ್ತುಬಿದ್ದಿದ್ದಳು. ಕಡೆಯುಬಾರದವನ್ನು ಬಿಸಿಲಿನ ತಾಪವಾದರೂ ಮೇಲಿನ ಹೊದ್ದಿಕೆ ತೆಗೆಯಬಾರದ ಗೋಷಾಪದ್ಧತಿಯ ಪರಿಣಾಮವಾಗಿ ಮರಣವು ಸಂಭವಿಸಿತೆಂದು ತಿಳಿದುಬಂದಿದೆ.

ಮುಸ್ಲಿಂ ಸಂಸಾರವನ್ನು ಉಳಿಸಲು ಹಿಂದೂ ಯುವಕನು ಪ್ರಾಣಕೊಟ್ಟನು.

ಆಳ್ವಾರಿನ ಪ್ರಸಿದ್ಧ ಗಾಯಕನೂ ಜನಗಳ ಪ್ರೀತಿಗೆ ಪಾತ್ರನೂ ಆಗಿದ್ದ ಅಶ್ವಿನೀಕುಮಾರನೆಂಬ ಹಿಂದೂ ಯುವಕನು ಭಯಂಕರವಾಗಿ ಉರಿಯುತ್ತಿದ್ದ ಮುಸ್ಲಿಮರ ಮನೆಯಿಂದ ಬಂದ ಆರ್ತನಾದವನ್ನು ಕೇಳಿ ಅವರ ಸಹಾಯಕ್ಕಾಗಿ ಉರಿಯಲ್ಲಿ ನುಗ್ಗಿದ್ದರಿಂದ ಮೈಯೆಲ್ಲವೂ ಸುಟ್ಟು ಆಸ್ಪತ್ರೆಯಲ್ಲಿ ಮೃತನಾದನು. ಈತನ ಮೇಲಿನ ವಿಶ್ವಾಸದಿಂದ ನೂರಾರು ಜನ ಮುಸಲ್ಮಾನರು ಪ್ರೇತಭೂಮಿಯವರೆಗೂ ಹಿಂಬಾಲಿಸಿದರು.

ಮದುವೆಯಲ್ಲಿ ಅನಾಹುತ

ಕರಾಚಿಯ ಬಳಿ ಹಳ್ಳಿಯೊಂದರಲ್ಲಿ ನಡೆದ ಮದುವೆಗೆ ಬಂದಿದ್ದ ಅತಿಥಿಗಳಲ್ಲೊಬ್ಬನು ಸಂಗಡ ತಂದಿದ್ದ ಮದ್ದುತುಂಬಿದ ಕೋವಿಯನ್ನು ಮಂಚದಮೇಲೆ ಒಂದು ಮೂಲೆಯಲ್ಲಿಟ್ಟಿದ್ದನು. ಅಷ್ಟರಲ್ಲಿ ಅಲ್ಲಿಗೆ ಬಂದ ಮತ್ತೊಬ್ಬನು ಕೋವಿಯನ್ನು ನೋಡುವ ಕುತೂಹಲದಿಂದ ಅದನ್ನು ಮೇಲಕ್ಕೆ ಎತ್ತುವಲ್ಲಿ ಅದರಲ್ಲಿದ್ದ ಗುಂಡು ಹಾರಿ ಹತ್ತಿರ ಮಲಗಿದ್ದ ಒಬ್ಬ ಹುಡುಗನಿಗೂ ಮತ್ತು ಹುಡುಗಿಗೂ ತಗುಲಿತು. ಹುಡುಗನು ಮೃತನಾದನು. ಹುಡುಗಿಯು ಅಪಾಯಸ್ಥಿತಿಯಲ್ಲಿದ್ದಾಳೆ.

ಫ್ರೆಂಚ್ ನೌಕಾಸೈನ್ಯಕ್ಕೆ ಜರ್ಮನ್ ಸಹಕಾರ.

ಪ್ರಪಂಚದಲ್ಲೆಲ್ಲಾ ಹೆಚ್ಚು ಭಾರವನ್ನು ಎತ್ತುವ ಕಪ್ಪಿಯಂತ್ರವನ್ನು (Crane) ಫ್ರೆಂಚ್ ನೌಕಾದಳಕ್ಕೆ ಜರ್ಮನರು ಮಾರಿದ್ದಾರೆ. ಈ ಯಂತ್ರವು 350 ಟನ್ ತೂಕವನ್ನು ಎತ್ತಬಲ್ಲದು. ಪ್ರಪಂಚದ ಯಾವ ಹಡಗು ಪಡೆಯೂ ಇಷ್ಟು ದೊಡ್ಡ ಯಂತ್ರವನ್ನು ಹೊಂದಿರುವುದಿಲ್ಲ. ಇದನ್ನು ಫ್ರೆಂಚ್ ಇಂಜನಿಯರುಗಳು ಜರ್ಮನ್ ಕಂಪೆನಿಯೊಂದಕ್ಕೆ ಹೇಳಿ ಮಾಡಿಸಿದರಂತೆ! ಡನ್‌ಕರ್ಕ್ ಎಂಬ ಹೊಸ ಯುದ್ಧದ ಹಡಗನ್ನು ಸಿದ್ಧಪಡಿಸುವುದಕ್ಕೆ ಇದನ್ನು ಉಪಯೋಗಿಸುತ್ತಾರಂತೆ!

ಕಾಳಿಯ ಪ್ರಾರ್ಥನೆಮಾಡುವಾಗ ಕೊಲ್ಲಲ್ಪಟ್ಟನು

ಕಾನ್ಪುರದ ಬಳಿ ಒಂದು ಹಳ್ಳಿಯ ಬ್ರಾಹ್ಮಣನೊಬ್ಬನು ತನ್ನ ಮಗನಿಗೆ ಸಿಡುಬು ಎದ್ದು ಸಂಕಟಪಡುವುದನ್ನು ನೋಡಿ ಸಹಿಸಲಾರದೇ, ಕಾಳಿಕಾದೇವಿಯ ಆಗ್ರಹದಿಂದ ತನಗೆ ಇಂಥಾ ತೊಂದರೆ ಬಂದಿರುವುದೆಂದು ಯೋಚಿಸಿ, ದೇವಿಯನ್ನು ಪ್ರಾರ್ಥಿಸಲು ನಿರ್ಜನಸ್ಥಳಕ್ಕೆ ಹೋಗಿ ತನಗೊದಗಿದ ಸಂಕಟವನ್ನು ಪಾರುಮಾಡಬೇಕೆಂದು ಪ್ರಾರ್ಥಿಸುತ್ತಿರುವ ಸಮಯಕ್ಕೆ ಯಾರೋ ಕ್ರೂರಿಗಳು ಹಿಂದಿನಿಂದ ಆತನ ತಲೆಯನ್ನು ಕಡಿದು ಕೊಂದರೆಂದು ತಿಳಿದುಬಂದಿದೆ.

ಪ್ರಪಂಚದ ಅತ್ಯಂತ ಶೀತಪ್ರದೇಶ.

ರಷ್ಯಕ್ಕೆ ಸೇರಿದ ಶೀತವಲಯದಲ್ಲಿರುವ ಓಇಮೆಕಾನ್ ಎಂಬ ಪ್ರದೇಶವೇ ಪ್ರಪಂಚದಲ್ಲೆಲ್ಲಾ ಅತ್ಯಂತ ಶೀತಪ್ರದೇಶವೆಂಬುದು ಸ್ಥಿರಪಟ್ಟಿರುತ್ತದೆ. ಇಲ್ಲಿಯ ವಾಯುಮಾನವು ಯಾವಾಗಲೂ ಶೂನ್ಯಡಿಗ್ರಿಗಿಂತ ಕಡಿಮೆಯಾಗಿದೆಯಂತೆ! ರಾತ್ರಿಯಲ್ಲಿ ನೀರನ್ನು ಹೊರಕ್ಕೆ ಚಲ್ಲಿದರೆ ಅದು ಕೆಳಕ್ಕೆ ಬೀಳುವುದರೊಳಗೆ ಆನೆಕಲ್ಲಾಗಿ ನೆಲಕ್ಕೆ ಬೀಳುವುದಂತೆ! ಆದರೆ ಅಲ್ಲಿಯ ಗಾಳಿಯಲ್ಲಿ ನೀರಿನಭಾಗವಿಲ್ಲದಿರುವುದರಿಂದಲೂ ಬಿರುಗಾಳಿ ಇಲ್ಲದಿರುವುದರಿಂದಲೂ ಇತರ ಸ್ಥಳಗಳಲ್ಲಿ ವಾಸಿಸುವಂತೆ ಜನರು ಇಲ್ಲೂ ವಾಸಮಾಡಬಹುದಾಗಿದೆ.

ಇರುವೆಯನ್ನು ತಿನ್ನುವ ಇರುವೆ

ಸಿಂಹ, ಹುಲಿ, ನಾಯಿ ಮೊದಲಾದ ಯಾವುವೂ ಸಜಾತಿ ಪ್ರಾಣಿಯನ್ನು ತಿನ್ನುವುದಿಲ್ಲ. ಆದರೆ ಕ್ಯೂಬಾದೇಶದ "ಲಿಯೋನಾಸ್" ಎಂಬ ಇರುವೆಗಳು ಇತರ ಇರುವೆಗಳನ್ನು ತಿನ್ನುತ್ತವೆಯಂತೆ. ಇದರಿಂದ ದಕ್ಷಿಣಅಮೇರಿಕದ ಅರ್ಜೆಂಟೈನ್ ದೇಶದವರು ತಮ್ಮ ದೇಶದಲ್ಲಿರುವ, ಹಸುವೇ ಮೊದಲಾದ ರಾಸುಗಳನ್ನು ಕಡಿದು ಹಿಂಸಿಸುವ ಇರುವೆಗಳ ಬಾಧೆಯನ್ನು ತಪ್ಪಿಸುವದಕ್ಕಾಗಿ ಕ್ಯೂಬಾದೇಶದಿಂದ ದೊಡ್ಡ ನೊಣಗಳಂತಿರುವ ಪೋಲ್ಯಂಡ ಜಾತಿಯ ಇರುವೆಗಳನ್ನು ತಮ್ಮ ದೇಶಕ್ಕೆ ತರಿಸಿಕೊಂಡು ತಮ್ಮ ದೇಶದ ಇರುವೆಗಳಿರುವಲ್ಲಿ ಇವುಗಳನ್ನು ಬಿಟ್ಟು ಕೊಲ್ಲಿಸುತ್ತಾರೆ.

12 ವಯಸ್ಸಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದನು

ಬೊಂಬಾಯಿಯ ಡಿ. ಬಿ. ಮುಹಾತ್ಮೆಯೆಂಬ ಹುಡುಗನು ತನ್ನ 12 ವರ್ಷ ವಯಸ್ಸಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಾನೆ. ಅವನ ವಿದ್ಯಾಭ್ಯಾಸದ ಪ್ರಗತಿಯು ಅತ್ಯಂತ ಆಶ್ಚರ್ಯಕರವಾಗಿದೆ. ಅವನು 1929 ರಲ್ಲಿ ಅಕ್ಷರಾಭ್ಯಾಸವ ಮೊದಲುಮಾಡಿದನು. ಪ್ರೈಮರಿ ವಿದ್ಯಾಭ್ಯಾಸವನ್ನೆಲ್ಲಾ 1930 ರ ವೇಳೆಗೆ ಮುಗಿಸಿದನಂತೆ. ಮಾಧ್ಯಮಿಕ ಶಿಕ್ಷಣವನ್ನು 1931 ರಲ್ಲಿ ಮುಗಿಸಿ 1932 ರ ವೇಳೆಗೆ IV ಫಾರಂ ಸ್ಟ್ಯಾಂಡರ್ಡಿಗೇರಿದನು. 1933 ರಲ್ಲಿ 6 ನೇ ಅಥವ ಮೆಟ್ರಿಕುಲೇಷನ್ ಸ್ಟ್ಯಾಂಡರ್ಡಿಗೆ ಬಂದನು. ಇವನ ವಿದ್ಯಾಭ್ಯಾಸವು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದೆ.

ಸಾರ್ ಪ್ರಾಂತದ ಎಲ್ಲೆಕಟ್ಟಿನ ತೊಂದರೆ.

ಸಾರ್ ಪ್ರಾಂತವನ್ನು ಜರ್ಮನಿಗೆ ಬಿಟ್ಟುಕೊಟ್ಟ ಕಾರಣ ಅದರ ಎಲ್ಲೆಗಳ ವಿಚಾರದಲ್ಲಿ ಬಹಳ ತೊಂದರೆಗಳಾಗಿವೆ. ಇವರುಗಳ ಭಾವನೆಯಂತೆ ಸಾರಿಗೂ ಮತ್ತು ಫ್ರಾನ್ಸಿಗೂ ಮಧ್ಯದ ಒಂದು ಹಳ್ಳಿಯ ಅರ್ಧಭಾಗವು ಜರ್ಮನಿಗೂ ಉಳಿದ ಅರ್ಧಭಾಗವು ಫ್ರಾನ್ಸಿಗೂ ಸೇರಿರುವುದು. ಒಂದೇ ಬೀದಿಯಲ್ಲಿ ಒಂದು ಭಾಗದಲ್ಲಿ ವಾಸಮಾಡಿದರೆ, ಜರ್ಮನ್ ಪ್ರಜೆಯೆಂದೂ ಇನ್ನೊಂದು ಭಾಗದಲ್ಲಿದ್ದರೆ ಫ್ರೆಂಚ್ ಪ್ರಜೆಯೆಂದೂ ಪರಿಗಣಿಸಲ್ಪಡಬೇಕಾಗಿದೆ. ಈ ಗ್ರಾಮದಲ್ಲಿ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಬೇಕಾದರೆ ಸಂಬಂಧಪಟ್ಟ ಸರ್ಕಾರದ ರಹದಾರಿಯನ್ನು ಪಡೆಯಬೇಕಂತೆ. ಇದರ ಕೆಲವೆಡೆಗಳಲ್ಲಿರುವ ಯಂತ್ರ ಕಾರ್ಖಾನೆಗಳ ಕೆಲವು ಭಾಗವು ಜರ್ಮನ್ ಪ್ರದೇಶದಲ್ಲೂ ಮತ್ತೆ ಕೆಲವು ಫ್ರೆಂಚ್ ಪ್ರದೇಶದಲ್ಲೂ ಇವೆ. ಇನ್ನು ಕೆಲವು ಕಡೆ ಒಂದು ಮನೆಯ ಜನಗಳಲ್ಲಿ ಕೆಲವರು ಫ್ರೆಂಚ್ ರಾಷ್ಟ್ರಕ್ಕೆ ಸೇರಿದ ಕೊಠಡಿಗಳಲ್ಲೂ ಇತರರು ಜರ್ಮನಿಗೆ ಸೇರಿದ ಭಾಗದಲ್ಲಿಯೂ ಮಲಗಿದಂತೆ ಆಗುತ್ತದಂತೆ. ವಿಚಿತ್ರ ತೊಡಕುಗಳು.

(೩ನೇ ಪುಟದಿಂದ ಮುಂದುವರಿದುದು)

ಸಾಮಗ್ರಿಗಳನ್ನೂ ಸಜ್ಜುಗೊಳಿಸಿಕೊಂಡು ಸಾರ್ವ ಸಿದ್ಧವಾಗಿದ್ದೇವೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ

ಪರಿಸಮಾಪ್ತಿ

ಹಣದ ಮುಗ್ಗಟ್ಟೂ, ಆರ್ಥಿಕ ಮುಗ್ಗಟ್ಟುಗಳೂ, ನಮ್ಮನ್ನು ಕಾಡುತ್ತಿರುತ್ತಿದ್ದರೂ ಸಹ ಆದಾಗ್ಯೂ ಅವುಗಳೆಲ್ಲವನ್ನೂ ಎದುರಿಸಿ ಏಕಪ್ರಕಾರವಾಗಿ ನಮ್ಮ ಸಂಸ್ಥಾನವು ಸರ್ವತೋಮುಖವಾಗಿ ಅಭಿವೃದ್ಧಿ ಸಾಧನೆಮಾಡುತ್ತ ಬಂದಿದೆಯೆಂದು ಹೇಳುವುದಕ್ಕೆ ಖಂಡಿತವಾಗಿಯೂ ಯುಕ್ತಕಾರಣವಿದೆ. ಬ್ರಿಟಿಷ್ ಚಕ್ರಾಧಿಪತ್ಯದಲ್ಲಿಯೂ ಮತ್ತು ಒಟ್ಟು ಪ್ರಪಂಚದಲ್ಲಿಯೂ ಮೈಸೂರು ಸಂಸ್ಥಾನಕ್ಕೆ ಗಣ್ಯವಾದ ಸ್ಥಾನವು ದೊರೆತಿದೆ. ಹೀಗೆ ಗಣ್ಯವಾದ ಸ್ಥಾನವು ದೊರೆತಿರುವ ಈಗಿನ ಸ್ಥಿತಿಗೆ ಸರ್ಕಾರದವರ ಪ್ರಯತ್ನವು ಮಾತ್ರವೇ ಕಾರಣವಲ್ಲ ಪ್ರಜೆಗಳ ಪ್ರಯತ್ನವೂ ಅದಕ್ಕೆ ಸಾಧಕವಾಗಿದೆ. ಮೈಸೂರು ಸಂಸ್ಥಾನದ ಪ್ರಜೆಗಳು ತಮ್ಮ ಸಂಸ್ಥಾನಕ್ಕೆ ತಮ್ಮಿಂದ ಸಾಧ್ಯವಾದ ಸಮಸ್ತ ಸೇವೆಗಳನ್ನೂ ಸಮರ್ಪಿಸಿ, ಅದರ ಪುರೋಭಿವೃದ್ಧಿಗಾಗಿ ಶ್ರಮಿಸಿ, ಅದರ ಕೀರ್ತಿಯು ಹೆಚ್ಚುವಂತೆ ಮಹಾ ಉತ್ಸಾಹ ಅಭಿಲಾಷೆಯುಳ್ಳವರಾಗಿ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದಾರೆ. ಇದು ನಮ್ಮ ಸಂಸ್ಥಾನದ ಜನಜೀವನದಲ್ಲಿ ಸೂಚಿಸುವ ಅತ್ಯಂತ ಸಂತೋಷಕರವಾದ ಮುಖ್ಯಲಕ್ಷಣವಾಗಿದೆ. ಸಂಸ್ಥಾನದೊಳಗೆ ನೋಡಿದರೆ ಅನೇಕಮಂದಿ ಪ್ರಜಾಸ್ವತ್ತರು ತಮ್ಮ ದೇಶಬಾಂಧವರ ಸುಖಕ್ಕೂ ಅಭ್ಯುದಯಕ್ಕೂ ಸಾಧಕವಾಗುವ ಸತ್ಕಾರ್ಯಗಳಿಗೆ ಧನಸಹಾಯ ಮಾಡುತ್ತಲೂ, ಧರ್ಮಾರ್ಥವಾಗಿ ರಮ್ಯವಾದ ಕಟ್ಟಡಗಳನ್ನು ಕಟ್ಟಿಸಿಕೊಡುತ್ತಲೂ ತಮ್ಮಿಂದ ಸಾಧ್ಯವಾದಷ್ಟು ಸೇವೆಯನ್ನು ಸಮರ್ಪಿಸುತ್ತಿದ್ದಾರೆ. ಸಂಸ್ಥಾನದ ಹೊರಗೆ ನೋಡಿದರೆ ಮೈಸೂರಿನ ಖ್ಯಾತಿ ಗೌರವಗಳು ದಿನದಿನಕ್ಕೂ ವೃದ್ಧಿಯೊಂದಲು ಅನುಕೂಲಿಸುವಂತೆ ಲಂಡನ್ ಕಲ್ಕತ್ತಾ ಮುಂಬಾಯಿ ಮದರಾಸು ಮುಂತಾದ ನಾನಾ ನಗರಗಳಲ್ಲಿಯೂ ಮೈಸೂರು ದೇಶೀಯರಾದ ಅನೇಕಮಂದಿ ಮಹನೀಯರು ಆಸ್ಥೆಯಿಂದ ಕೆಲಸಮಾಡುತ್ತಿದ್ದಾರೆ. ಅವರಲ್ಲಿ ಕೆಲವರು ಐ.ಸಿ.ಎಸ್. ಎಫ್.ಸಿ.ಎಸ್. ಮುಂತಾದ ಅಖಿಲ ಭಾರತೀಯ ಸ್ಪರ್ಧಾಪರೀಕ್ಷೆಗಳಲ್ಲಿ ಉತ್ತಮ ಸ್ಥಾನಗಳನ್ನು ಪಡೆದು ತೇರ್ಗಡೆಹೊಂದಿ ಬ್ರಿಟಿಷ್ ಇಂಡಿಯಾದಲ್ಲಿಯ ಭಾರಿಭಾರಿ ಹುದ್ದೆಗಳನ್ನಲಂಕರಿಸಿರತಕ್ಕ ಮೇಧಾವಿಗಳು. ಭರತಖಂಡಕ್ಕೆ ಇತರಲ್ಲಿಯೇ ಸಂಯುಕ್ತ ರಾಜ್ಯಾಂಗವ್ಯವಸ್ಥೆಯೊಂದು ಏರ್ಪಡುವುದಕ್ಕೆ ಮೈಸೂರು ಸಂಸ್ಥಾನದ ಪ್ರತಿನಿಧಿಗಳು ಅದರಲ್ಲಿ ಭಾಗಿಗಳಾಗಿ ಅತ್ಯಂತ ಪ್ರಯೋಜನಕರವಾದ ರೀತಿಯಲ್ಲಿ ಕೆಲಸಮಾಡುವುದರಿಂದಲೂ ಮೈಸೂರು ದೇಶೀಯರಲ್ಲಿ ದೇಶಾಭಿಮಾನಿಗಳೂ ಮೇಧಾವಿಗಳೂ ಆದ ಮಹನೀಯರನೇಕರು ಭರತಖಂಡದ ಇತರ ಪ್ರಾಂತಗಳಲ್ಲಿಯೂ ವಿದೇಶಗಳಲ್ಲಿಯೂ ಅತೋಽಧಿಕವಾಗಿ ಶ್ರದ್ಧಾಪರರಾಗಿ ಶ್ರಮಿಸುವುದರಿಂದಲೂ ಭರತಖಂಡದ ಭಾಗ್ಯಸಂಪತ್ತಿಯನ್ನು ಉನ್ನತಪದವಿಗೆ ತರುಗಿಸುವ ಮಹತ್ಕಾರ್ಯದಲ್ಲಿ ಮೈಸೂರು ಸಂಸ್ಥಾನದಿಂದಲೂ ಮುಂದಿನ ವರುಷಗಳಲ್ಲಿ ಗಣನೀಯವಾದ ಸೇವೆಯು ಸಮರ್ಪಿತವಾಗಿ ಭಾರತೀಯರ ಸುಖಸಂತೋಷಗಳು ಹೆಚ್ಚಲು ಕಾರಣವಾಗಲೆಂದು ನಾವೆಲ್ಲರೂ ಹೃತ್ಪೂರ್ವಕವಾಗಿ ಹಾರೈಸೋಣ

ಮಿರ್ಜಾ ಎಂ ಇಸ್ಮಾಯಿಲ್,
ಮೈಸೂರು ಸಂಸ್ಥಾನದ ದಿವಾನ್‌ರವರು

ಮಹನೀಯರ ಹಿತೋಕ್ತಿಗಳು.

(ಹಿಂದಿನಿಂದ ಮುಂದುವರಿದುದು)

111 ಎಲೈ ಭೂಲೋಕದ ಜನರೇ! ತ್ವರೆಮಾಡಿರಿ ಅಲಭ್ಯವಾದದ್ದಾದರೂ ಅತಿ ಸುಲಭವಾಗಿ ದೊರೆಯುವ ಬ್ರಹ್ಮಾನಂದಾಮೃತವನ್ನು ಸೂರೆಗೊಳ್ಳಿರಿ ಅತಿ ಭಯಂಕರವಾಗಿರುವ ಸಂಸಾರತಾಪತ್ರಯಗಳನ್ನು ಮರೆಯಿರಿ ನೀರಿನಲ್ಲಿರುವ ತಾವರೆಯ ಎಲೆಯಂತೆ ಇರಿ ಹಿಂದಾದುದನ್ನೆಲ್ಲಾ ಮರೆಯಿರಿ ನಾಳೆಯ ಯೋಚನೆಯನ್ನು ತೊರೆಯಿರಿ ಸದ್ಯಃ ಕ್ಷಣದಿಂದ ಆನಂದಚಿತ್ತರಾಗಿರಲು ಪ್ರಯತ್ನಪಡಿರಿ ಜೀವಿಯ ಸಮಸ್ತ ಕಷ್ಟಗಳನ್ನು ಮರೆಯಿರಿ. ನಿಮ್ಮ ಈ ಪಾತ್ರವು ಬರಿದೆಂಬುದನ್ನು ತಿಳಿಯಿರಿ ಕಠಿಣಪ್ರಯತ್ನಶಾಲಿಗಳಾಗಬೇಡಿರಿ. ಕೈಯಳತೆ ದಮ್ಮಟಿಗೆ ಪರಿಹಿತನಾಗಿರಿ ಶಿವನು ಕೊಟ್ಟದ್ದರಲ್ಲಿ ತೃಪ್ತಿಹೊಂದಿರಿ ದುರಾಶೆಯನ್ನು ತೊರೆಯಿರಿ. ಆತುರತೆಯನ್ನು ನೀಗಿರಿ ಪೂಜ್ಯರನ್ನು ಸೇವಿಸಿರಿ. ತತ್ವವಿಚಾರ ವಿಮರ್ಶಕರಾಗಿರಿ ತ್ಯಾಗಪರ್ಯವಸಾಯಿಗಳಾಗಿ ಮರುಗಿರಿ. ಆಖಂಡಬ್ರಹ್ಮಾನಂದವನ್ನು ನಿಮ್ಮ ಹಸ್ತಗತಮಾಡಿಕೊಳ್ಳಿರಿ ಋಷಿಗಳ ಬೋಧೆಯನ್ನು ಕೈಸೇರಿಸಿಕೊಳ್ಳಿರಿ. ಪರಬ್ರಹ್ಮವನ್ನು ಸಾಕ್ಷಾತ್ತಾದವೆಂದು ತಿಳಿಯಿರಿ. ಪೂರ್ವಗೆ ಬಂದುದಕ್ಕೆ ಸಾರ್ಥಕವಮಾಡಿಕೊಳ್ಳಿರಿ ಮಾಡಿ ಮೌನವನ್ನು ತೊರೆಯಿರಿ ಮಹನೀಯರ ಹಿತೋಕ್ತಿಗಳಂತೆ ನಿಮ್ಮ ನಡೆನುಡಿಗಳನ್ನು ಸುಧಾರಿಸಿಕೊಳ್ಳಿರಿ ಇಲ್ಲವಾದರೆ ನಿಮ್ಮ ಕರ್ತವ್ಯ ಮಗುಗಾಗುವ ದಾರಿಯನ್ನು ಹಿಡಿಯಿರಿ ಇದೇ ಶಿವನ ಮಾರ್ಗವೆಂದು ತಿಳಿಯಿರಿ

112, ವಿವೇಕಿಯಾದವನು ಒಂಟಿಯಾಗಿದ್ದರೂ ತಾನೊಬ್ಬನೇ ಸಂತೋಷವನ್ನು ಕಲ್ಪಿಸಿಕೊಳ್ಳಬಹುದು ಭಗವದ್ವಿಷಯಕವಾದ ವಿಷಯಗಳನ್ನೂ, ಅವನ ಅಪಾರಮಹಿಮೆಯನ್ನೂ, ಪ್ರಪಂಚದ ಸ್ಥಿತಿಗತಿಗಳನ್ನೂ ದುರಹಂಕಾರದಿಂದೆಳೆಯುವ ದುಷ್ಟಪರಿಣಾಮಗಳನ್ನೂ, ಶ್ರೇಯಸ್ಸಿಗೆ ಒದಗಬಹುದಾದ ವಿಘ್ನಗಳನ್ನೂ, ದುಷ್ಕಾರ್ಯಗಳಿಗೆ ಲೋಕವು ಎಷ್ಟು ಪ್ರೋತ್ಸಾಹಗೊಳ್ಳುತ್ತಿರುವುದೆಂಬುದನ್ನೂ ಇವೇ ಮೊದಲಾದ ತನ್ನ ಜೀವನ ಸಂಸ್ಕಾರದ ವಿಷಯಗಳನ್ನು ಬುದ್ಧಿಯಲ್ಲಿ ಚಿಂತಿಸಿಬಿಡಲಿ ಮನಸ್ಸು ಅದರ ಪ್ರತಿಯೊಂದರ ಸೂಕ್ಷ್ಮಾಂಶವನ್ನು ಅಡಿಗಡಿಗೆ ಸ್ಪರ್ಶಿಸುತ್ತಾಯಿರಲಿ ಆಗ ಏಕಾಂತಿಗೆ ಎಂತಹ ಸಂತೋಷವು ದೊರೆಯುವಂತಾಗುವದೋ ಅದು ತಾನಾಗಿಯೇ ಗೊತ್ತಾಗುವದು

113 ಮಾನವನ ಜೀವಮಾನದ ಕಾಲದಲ್ಲಿ ಬಾಲ್ಯಕಾಲವೇ ಅತ್ಯುತ್ತಮವಾದದ್ದು ಅದೇ ಸುಖಕಾಲ ಆನಂದಕಾಲ ನಿಶ್ಚಿಂತೆಯ ಕಾಲ ಅವನನ್ನೂ ಈ ವಯಸ್ಸಿನ ಸಂಪತ್ಸ್ವರೂಪದ ಭಾವವು ಬೀಳುವವರೆಗೂ ಅಡವಿಯಲ್ಲಿರುವ ಚಿಗರಿಯಂತೆ ಹಿಂದುಮುಂದು ನೋಡದೆ ದುಂಡಾಗಿ ಆನಂದದಿಂದಿರುತ್ತಾನೆ ಅವನು ಪ್ರಾಯಸ್ಥನಾಗುತ್ತಲೇ ಅತಿ ಕಟುತರವಾದ ವಿವಾಹಸಂಬಂಧಕ್ಕೆ ಕಟ್ಟುಬಿದ್ದು ಯಾವಾಗ ಗೃಹಸ್ಥಾಶ್ರಮಿಯ ಕರ್ತವ್ಯದಲ್ಲಿ ಕಾಲಿಡುವನೋ ಆ ಬೀ ಅವನ ಉತ್ಸಾಹವೆಲ್ಲ ಹಾರಿಹೋಗಿಬಿಡುವದು ಬಸವ ಚಿಂತೆ ವ್ಯಾಕುಲತೆ ಇವು ಅವನನ್ನು ಕೊರಗಿಸಿ ಹಣ್ಣುಹಣ್ಣು ಮಾಡಿಬಿಡುತ್ತವೆ ಅಲ್ಲದೆ ದೇಹಸ್ಥಾಕೃಶವಾಗಿ ಮುಖವು ಸುಕ್ಕುಕೊಂಡು ಚರ್ಮವು ನರಿಗೆಗಟ್ಟುವದು ಆದರೆ ಮಾನವನು ಪ್ರಪಂಚದ ಗಾಳಿಯಂತೆ ನಿರ್ಮೋಹಿಯಾಗಿ ಆಗ ತಾನೆ ಅರಳಿದ ಹೂವಿನಂತೆ ಉಲ್ಲಾಸಿಯಾಗಿ ಮಂಜಿನ ಹನಿಯಂತೆ ಶುದ್ಧನಾಗಿ ಜೀವಮಾನವೆಲ್ಲಾ ಹುಡುಗತನದಲ್ಲಿಯೇ ಇರುವನೋ ಅವನೇ ಧನ್ಯನು. ಹೀಗಿರುವುದರಿಂದ ನಮ್ಮ ಪೂರ್ವಿಕರು ಬ್ರಹ್ಮಚರ್ಯಕ್ಕೆ ಮಹತ್ವಕೊಟ್ಟಿರುವುದು ಶ್ಲಾಘನೀಯವಾಗಿರುವದು

114 ಒಂದು ಸಾರೆ ಒಬ್ಬ ರಾಜನು ಒಬ್ಬ ಸಾಧುವನ್ನು ತನ್ನಲ್ಲಿಗೆ ಬರಮಾಡಿಕೊಂಡು ದೇವರವಿಷಯವಾಗಿ ಅನೇಕಪ್ರಶ್ನೆ ಮಾಡಿದನು ಅದಕ್ಕೆ ಸಾಧುವು ಈ ಪ್ರಶ್ನೆಯನ್ನು ಕೇಳುವುದಕ್ಕೆ ಮೊದಲು ಸ್ವಲ್ಪಹೊತ್ತು ನನ್ನನ್ನು ನಿನ್ನ ಸಿಂಹಾಸನದಲ್ಲಿ ಕುಳ್ಳಿರಿಸಬೇಕೆಂದು ಕೇಳಿದನು ರಾಜನು ಅದಕ್ಕೊಪ್ಪಿ ಅವರಂತೆಮಾಡಿ ತಾನು ಆ ರಾಜಾಸನದ ಕೆಳಗೆ ನಿಂತು ಈಗ ಉತ್ತರವನ್ನು ಹೇಳೆಂದನು ಆಗ ಆ ಸಾಧುವು "ಯಾರು ಉನ್ನತದಲ್ಲಿರುವನೋ ಅವನೇ ದೇವರು ಮನಸ್ಸು ಬಂದರೆ ಕಿರುಕನನ್ನ ಅರಸನನ್ನಾಗಿಯೂ ಅರಸನನ್ನು ಕಿರುಕನನ್ನಾಗಿಯೂ ಹೀಗೆ ಮಾಡಬಲ್ಲನು" ಎಂದು ರಾಜನಿಗೆ ದೇವರ ಸರ್ವಶಕ್ತಿತ್ವವನ್ನು ಮನಗಾಣಿಸಿದನು

115 ಸುಖಸಾಧನಗಳನ್ನು ಪಡೆಸುಕೊಳ್ಳಬೇಕೆಂದು ಇಂದ್ರಿಯಗಳು ಕಾತರಿಸುವಾಗ, ಆ ಸಾಧನಗಳು ಇಂದಿಲ್ಲ ನಾಳೆ ಕಳೆದುಹೋಗತಕ್ಕವುಗಳೆಂಬ ಮುಂದಾದ ದೋಷಗಳನ್ನು ಮನಸ್ಸಿಗೆ ತಂದುಕೊಂಡು ಗಾಡಿಯವನು ಕುದುರೆಗಳನ್ನು ಬಿಗಿಹಿಡಿಯುವಂತೆ, ಜಾಣನು ಇಂದ್ರಿಯಗಳನ್ನು ಬಿಗಿಹಿಡಿಯಬೇಕು ಸುಖಸಾಧನಗಳು ಕಣ್ಣಿಗೆ ಬೀಳದಂತೆ ಮಾಡುವದು ಸಾಧ್ಯವಲ್ಲ ಆ ಸುಖಸಾಧನಗಳನ್ನು ಯಾವಾಗಲೂ ದೋಷದೃಷ್ಟಿಯಿಂದ ನೋಡುತ್ತಿರುವುದರಿಂದ ಮಾತ್ರ ಅವುಗಳ ಬಲೆಗೆ ಬೀಳದಂತೆ ಇರಬಹುದು ಮತ್ತು ಇಂದ್ರಿಯಗಳು ಬಗೆಬಗೆಯ ಸುಖಸಾಧನಗಳಲ್ಲಿ ಆಸಕ್ತವಾಗಿದ್ದರೆ ಅದರಿಂದ ನಿಸ್ಸಂದೇಹವಾಗಿ ದೋಷಗಳನ್ನು ಪಡೆಯುತ್ತವೆ ಅವುಗಳನ್ನು ಬಿಗಿಹಿಡಿದರೆ ಅದರಿಂದ ಮನಸ್ಸಿಗೊಂದು ಹೆಚ್ಚಿನ ಯೋಗ್ಯತೆಯು ಬರುವದು

116 ಜೀವವೆಂಬ ಬೆಕ್ಕಿಯುಳ್ಳ ಧನಕ್ಕೆ ಈ ಶರೀರವೆಂಬುದು ಕಬ್ಬಿಣದ ಪೆಟ್ಟಿಗೆಯಂತೆ ಪ್ರಾಣವೆಂಬುದು ಪೆಟ್ಟಿಗೆಯೊಳಗಿರುವ ಕೀಲುವಾದ ಬೀಗದಂತೆ ಬೆಲೆಯುಳ್ಳ ಧನವು ಕಳುವಾಗುವಾಗ ಕಬ್ಬಿಣದ ಪೆಟ್ಟಿಗೆಯೇ ಕಳುವಾಗುವದಿಲ್ಲ. ಅದರೊಳಗಿನ ಬೀಗಗಳು ಹಣದೊಂದಿಗೆ ಹೋಗುತ್ತವೆ ಅದರಂತೆ ಈ ಶರೀರದಲ್ಲಿರುವ ಜೀವವೆಂಬ ಬೆಲೆಯುಳ್ಳ ಧನವು ಹೋಗುವಾಗ ಶರೀರವು ಕಬ್ಬಿಣದ ಪೆಟ್ಟಿಗೆಯಂತೆ ಇದ್ದಲ್ಲಿಯೇ ಬಿದ್ದಿರುವದು ಅದರೊಳಗಿನ ಪ್ರಾಣವೆಂಬ ಬೀಗವು ಜೀವವೆಂಬ ಹಣದೊಡನೆ ಸ್ಥಲಾಂತರಕ್ಕೆ ಹೋಗಿಬಿಡುವುದು. ಆ ಪ್ರಾಣವನ್ನು ಸೂಕ್ಷ್ಮಶರೀರವೆನ್ನುತ್ತಾರೆ ನಮ್ಮ ಚೇತನಶಕ್ತಿಯೆಲ್ಲಾ ಆ ಸೂಕ್ಷ್ಮಶರೀರದಲ್ಲಿರುವದು. ಮರಣವೆಂದರೆ ಸೂಕ್ಷ್ಮಶರೀರವು ಹೋಗಿಬಿಟ್ಟ ಸ್ಥೂಲಶರೀರವು ಹೆಣವೆನಿಸಿಕೊಳ್ಳುವದು ಆ ಸೂಕ್ಷ್ಮಶರೀರವು ಶರೀರದಿಂದ ಶರೀರಕ್ಕೆ ಹೋಗುವಾಗಲೂ ಬರುವಾಗಲೂ ವಾಯುವು ಹೂವಿನ ಗಂಧವನ್ನು ಸೆಳೆದುಕೊಂಡು ಹೋಗುವಹಾಗೆ ಜೀವವು ಜ್ಞಾನೇಂದ್ರಿಯಗಳನ್ನೂ, ಮನಸ್ಸನ್ನೂ ಕೂಡ ಕೂಡಿಕೊಂಡೇ ಸಾಗುವುದು

117 ಮನಸ್ಸು ಏಕಾಗ್ರತೆಯನ್ನು ಮಾಡಿಕೊಳ್ಳುವುದಕ್ಕೆ ಸಿದ್ಧೋಪಾಯವೇನೆಂದರೆ— ಈ ವಿಶ್ವದ ಸಮಸ್ತ ವ್ಯಾಪಾರಗಳಿಗೂ ಪ್ರೇರಕನಾಗಿ ಅವುಗಳನ್ನು ಆಳುತ್ತಿರುವ ಪರಮೇಶ್ವರನ ಸಂಕಲ್ಪಕ್ಕೂ ಆತನ ಲೀಲೆಗೂ ಅನುಗುಣವಾಗಿ ಶಾಂತತೆಯಿಂದ ನಡೆಯುತ್ತಿರುವದೇ ಏನೇನು ಬರುತ್ತದೋ ಎಲ್ಲ ಒಳ್ಳೆಯದೆಂದು ಎಣಿಸಿಕೊಳ್ಳಿರಿ ಅವನು ಕರುಣಾಸಾಗರನೆಂದೂ ದಯಾಮಯನೆಂದೂ ನಂಬಿರಿ ಯಾವಾಗಲೂ ಧೈರ್ಯದಿಂದಲೂ ಆನಂದದಿಂದಲೂ ಕೂಡಿಕೊಂಡಿರಿ ನಮ್ಮ ನಿತ್ಯದ ಜೀವನದಲ್ಲಿ ಬಂದುಹೋಗುವ ಬಿರುಗಾಳಿಗೆ ಮರುಳಾಗಬೇಡಿರಿ ಯಾವ ಸಂದರ್ಭದಲ್ಲಿಯಾದರೂ ಚಟುವಟಿಕೆಯಿಂದ ನೀವು ಮಾಡುವುದೆಲ್ಲ ಪರಮಾತ್ಮನ ಸೇವೆಯೆಂದು ಭಾವಿಸಿ ಕೆಲಸಮಾಡಿರಿ ನಿಮ್ಮ ಪ್ರಯತ್ನಗಳೆಲ್ಲ ಆನಂದವು ತುಂಬಿತುಳುಕುತ್ತಿರಲಿ; ಎಂದರೆ ಏನಾಗುವದೋ ಎಂಬ ಯೋಚನೆಯಾಗಲಿ ಬೇಗ ಫಲವಾಗಲಿಲ್ಲವಲ್ಲ ಎಂಬ ಆತುರವಾಗಲಿ ಇಲ್ಲದಿರಲಿ ಜನರ ಅಭಿಪ್ರಾಯಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿರಿ ನಿಮ್ಮೊಳಗೆ ವಾಸವಾಗಿರುವ ಮಹಾಸತ್ಯಕ್ಕಾಗಿ ಜೀವಿಸಿರಿ. ಶಿವನು ಸಾವಿಲ್ಲದ ಆನಂದಮಯವಾದ ಆತ್ಮನೆಂಬುದನ್ನು ಮರೆಯದಿರಿ ನಿಮ್ಮೊಳಗೆ ಧೃಢಸಂಕಲ್ಪವೂ ಅಚಲವಾದ ಶಕ್ತಿಯೂ ಇದ್ದುಕೊಂಡಿರುವವು ಎದೆಬಿರಿದ ನೆಲಕ್ಕೆ ತಂದುಕೊಳ್ಳುವುದರಿಂದಲೂ ಧ್ಯಾನಮಾಡುವುದರಿಂದಲೂ ಇದನ್ನು ನಿಮ್ಮ ಮನಸ್ಸಿನಲ್ಲಿ ನಿಲ್ಲುವಂತೆ ಮಾಡಿಕೊಳ್ಳಿರಿ

118 'ವಿಶ್ವಾಸ ಫಲದಾಯಕ' ಎಂಬಂತೆ ಆತ್ಮವಿಶ್ವಾಸವನ್ನು ನಂಬು, ನೀನು ದೀನನಲ್ಲ, ಹೀನನಲ್ಲ, ನೀನು ಶುದ್ಧನು ಬುದ್ಧನು, ಸಾವಿಲ್ಲದವನು, ದೊಡ್ಡವನು; ನಿನ್ನಲ್ಲಿ ಪರಮಾತ್ಮಶಕ್ತಿಯು ತುಂಬಿರುವದು ನಿನಗೆ ಮನಸ್ಸು ಬಂದರೆ ಏನುಬೇಕಾದರೂ ಮಾಡಬಹುದು ಬೇರೊಂದು ಸೃಷ್ಟಿಯನ್ನು ಮಾಡಿದ ವಿಶ್ವಾಮಿತ್ರನು ಸತ್ತವರನ್ನು ಬದುಕಿಸಿದ ಶುಕ್ರಾಚಾರ್ಯನು ಕಲ್ಲಿನಲ್ಲಿ ಪ್ರತ್ಯಕ್ಷವಾಗಿ ಸಶರೀರ ಭಗವಂತನನ್ನು ಪ್ರಕಟಗೊಳಿಸಿದ ಮಾರ್ಕಂಡೇಯನು ಕಂಬದಲ್ಲಿ ಶಿವನನ್ನು ಪ್ರಕಟಗೊಳಿಸಿದ ಪ್ರಹ್ಲಾದನು, ಬೆಣ್ಣೆಯನ್ನು ತೋರಿಸಿ ತೋರಿಸಿ ಕೃಷ್ಣನನ್ನು ಅಂಗಳದಲ್ಲಿ ಕುಣಿದಾಡಿಸಿದ ಗೋಪಿಯರು—ಇವರಿಗೂ ನಿನಗೂ ನಿಜವಾಗಿಯು ಯಾವ ಭೇದವೂ ಇರುವುದಿಲ್ಲ. ಅವರೆಲ್ಲರೂ ಭಗವಂತನಿಗೆಷ್ಟು ಪ್ರಿಯರಾಗಿದ್ದರೋ ನೀನೂ ಅಷ್ಟೇ ಪ್ರಿಯನಾಗಿರುವೆ ನಿನಗೆ ಆ ವಿಷಯದಲ್ಲಿ ಶ್ರದ್ಧೆಯಿಲ್ಲ ಇದೊಂದೇ ಕಡಿಮೆಯಾಗಿರುವುದು ಪೂರ್ಣವಾಗಿ ನಂಬಿದರೆ ಸರಿ, ಅವರಂತೆಯೇ ಭಗವಂತನ ಪ್ರೇಮವನ್ನು ಆರ್ಜಿಸಿಕೊಂಡು ಪರಮಸುಖಿಯಾಗಬಹುದು ಆತ್ಮವಿಶ್ವಾಸವೇ ಕಾರ್ಯಸಫಲವಾಗುವುದಕ್ಕೆ ಬೀಗದ ಕೈ. ಅದು ವಿಜಯದ ಮೂಲಮಂತ್ರವು ಪರಮಾತ್ಮನ ಕೃಪೆಯನ್ನು ಆಕರ್ಷಿಸುವ ಚುಂಬಕವು ಎಂಬುದನ್ನು ನೆನಪಿನಲ್ಲಿಡು, ಇದನ್ನು ನಂಬು, ಜಗತ್ತಿನಲ್ಲಿ ನಿನಗೆ ದೊರಕಲಾರದ ವಸ್ತುವಿಲ್ಲ, ಸ್ಥಾನವಿಲ್ಲ, ವಿದ್ಯೆಯಿಲ್ಲ, ಸ್ಥಿತಿಯಿಲ್ಲ, ಆತ್ಮನ ಶಕ್ತಿಯಲ್ಲಿ ವಿಶ್ವಾಸವನ್ನಿಡು ಅದನ್ನು ಚನ್ನಾಗಿ ನಿಶ್ಚಯಿಸಿಕೋ; ಆ ಮೇಲೆ ನೋಡು ಕಾರ್ಯಸಾಫಲ್ಯವು ನಿನ್ನ ಕಾಲ ಮೇಲೆ ಬಿದ್ದು ಹೊರಳಾಡುತ್ತಿರುವದು ನಿನ್ನ ಮನಸ್ಸಿನಲ್ಲಿರುವ ವಸ್ತು ನಿನ್ನ ವಶಕ್ಕೆ ಬರುವುದರಿಂದಲೇ ನಿನ್ನ ಜೀವನವು ಸಫಲವಾಯಿತೆಂದು ತಿಳಿಯಬಹುದು ಇನ್ನು ಮೇಲೆ ನಿನ್ನ ಆತ್ಮಶಕ್ತಿಗೆ ಅಸಾಧ್ಯವಾದದ್ದು ಏನೊಂದೂ ಇರುವುದಿಲ್ಲ

(ಸಶೇಷ)

ಎಂ ಮಲ್ಲಿಕಾರ್ಜುನಾರಾಧ್ಯ, ರಾಣೆಬೆನ್ನೂರ
ಮಳೀಮಠ ಕಪ್ಪುತು.

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಫಂಡ್.

ಸ್ವೀಕಾರ.

ಮಾಲೂರಿನಲ್ಲಿರುವ ದೇಶದಶೆಟ್ಟಿ ಮ|| ರಾ|| ನಂಜುಂಡಪ್ಪನವರ ತಮ್ಮನ ಕುಮಾರ ರಾ|| ಕಂಠಶೆಟ್ಟಿ ಎಂಬ ವರನಿಗೆ ಪಕೋರಶೆಟ್ಟಿ ಮ|| ರಾ|| ಶಿವಲಿಂಗಪ್ಪನವರ ಸೋದರಸೊಸೆ ಶ್ರೀ|| ಗೌರಮ್ಮನೆಂಬ ವಧುವನ್ನು ಕೊಟ್ಟು ನಡೆಸಿದ ವಿವಾಹಸಮಯದಲ್ಲಿ ಸವ ಹಿಸಿದ 1 ರೂಪಾಯಿಯೂ, ಪಕೋರಶೆ ಮ|| ರಾ|| ಬಸವಲಿಂಗಶೆಟ್ಟಿ ಸಾಕುಮಗಳಾದ ಸೌ|| ಲಲಿತಾಂಬೆ ಎಂಬ ವಧುವನ್ನು, ಮಾಲೂರು ದೇಶದ ಶೆಟ್ಟಿ ಮ|| ರಾ|| ನಂಜುಂಡಶೆಟ್ಟಿ ಕುಮಾರ ರಾ|| ಕಪ್ಪಣ್ಣ ಎಂಬ ವರನಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಕಾಲದಲ್ಲಿ ಸಮರ್ಪಿಸಿದ 1 ರೂಪಾಯಿಯೂ, ಜುಂಲಾ 2 ರೂಪಾಯಿಗಳು. ಗಂ|| ಸೂ|| ಮ|| ರಾ|| ಚನ್ನಬಸಪ್ಪನವರ ದ್ವಾರಾ ಬಂದಿರುವುದನ್ನು ಮಂದಹಾಸಪೂರ್ವಕವಾಗಿ ಸ್ವೀಕರಿಸಿದೆ.

ಶಿರೀಕೆರೆ ಚಿಕ್ಕಾಪುರ ಪಟೇಲ್ ಮ|| ರಾ|| ಬಸಪ್ಪನವರ ಜ್ಯೇಷ್ಠಪುತ್ರ ರಾ|| ಬಿ ಬಿ ಬಸವರಾಜಪ್ಪ, ಮೈಸೂರು ಅಬ್ಕಾರಿ ಕಂಟ್ರಾಕ್ಟರ್ ಲೇಟ್ ರುದ್ರಪ್ಪನವರ ಕುಮಾರರಾದ, ಮ|| ರಾ|| ಯಜಮಾನ್ ಬಿ ಚಿಕ್ಕರಾಚಪ್ಪನವರ ದ್ವಿತೀಯ ಪುತ್ರಿ, ಸೌ|| ಲಲಿತಾಂಬ, ಇವರ ಪಾಣಿಗ್ರಹಣ ಮಹೋತ್ಸವ ಕಾಲದಲ್ಲಿ ಸಮರ್ಪಿಸಿದ 5 ರೂಪಾಯಿಗಳು ಕಂಟ್ರಾಕ್ಟರ್ ಮ|| ರಾ|| ಯನ್ ಕಪ್ಪಣ್ಣನವರ ಮೂಲಕ ಈ ಸಂಸ್ಥೆಯ ಟ್ರೆಜರರ್ ಮ|| ರಾ|| ಸರಾಫ ಬಿ ಬಸಪ್ಪನವರ ದ್ವಾರಾ ಬಂದಿರುವುದನ್ನು ಮನಃಪೂರ್ವಕವಾಗಿ ಸ್ವೀಕರಿಸಿದೆ.

ಈ ನೂತನ ದಂಪತಿಗಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರ ಸತ್ಕೃಪಾಮಂಗಲವಾಗಲೆಂದು ಹಾರೈಸುತ್ತೇವೆ

ಯನ್. ರುದ್ರಯ್ಯ, ಸೆಕ್ರೆಟರಿ,
ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯ
ಸಂಸ್ಕೃತಕಾಲೇಜ್, ಫ್ರೀ ಬೋರ್ಡಿಂಗ್ ಹೌಸ್
ಶ್ರೀ ಮಹಂತಿನಮಠ, ಚಿಕ್ಕಪೇಟೆ
ಬೆಂಗಳೂರು ಸಿಟಿ.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕೊಂಡೊಂದು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ

ಬೆಲೆ ೧೨ ಆಣೆ. ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ **ರೂ.** ಗೆ ದೊರೆಯುವದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ನಾಲ್ಕುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ-ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೂಲ್ಯ
ಸ್ವರ್ಣಮಕರಧ್ವಜ	೧	೭೦—೦—೦
ಸ್ವರ್ಣಚಂದ್ರೋದಯ	೧	೧೨—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೮—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯತಾಪಿ	೧	೧—೦—೦
ಶಿಲಾಜಿತ ಅಗ್ನಿತಾಪಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಒಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಹಿಂಭಾಗ್ಯ ಅತ್ಯುತ್ತಮ ರೀತಿಯ ಫೋಟೋ ಸೈಜು ೨೦×೧೪ ಬೆಲೆ ೧೪	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ರುದ್ರ ಕನಿ… ತಲ ಪ ಅಗಸ್ತ್ಯ ಮಹರ್ಷಿ ವ್ಯಾಸ ನಾರದ, ದೂರ್ವಾಸ ಮುನಿಗಳಿಗೆ ಶಿವದೀಕ್ಷೆಯನ್ನು ಬೋಧಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ರೇಣುಕಾಚಾರ್ಯರು … ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ … ಫೋಟೋ ಸೈಜು ೧೪×೧೦ ಬೆಲೆ ೧೪	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ … ಫೋಟೋ ಸೈಜು ೧೦×೮ ಬೆಲೆ ೧೪	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನಿ … ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು … ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು … ಕಾರಣವಾದ … ಫೋಟೋ ೧೪	೦—೦—೯
ಶ್ರೀ ರೇಣುಕಾಚಾರ್ಯರು … ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ … ಶ್ರೀ ಕಾಶೀನಾಥ ಶಾಸ್ತ್ರಿಗಳವರು … ಫೋಟೋ	೦—೦—೯
ಪಂಡಿತ ಶ್ರೀ … ಬೆಲೆ ೧೪	೦—೦—೯
ಶ್ರೀ ಜಗದ್ಗುರು … ಫೋಟೋ ೧೪	೦—೦—೯
ಶ್ರೀ ಜಗದ್ಗುರು … ಫೋಟೋ ೧೪	೦—೦—೯
ಶ್ರೀ ಜಗದ್ಗುರು … ಫೋಟೋ	೦—೦—೯
ಶ್ರೀ ಜಗದ್ಗುರು … ಫೋಟೋ	೦—೦—೯
… ಫೋಟೋ	೦—…
… ಫೋಟೋ	೦—…

ಸೂಚನೆ —… ಆರ್ಡರುಗಳಿಗೆ … ಕಳುಹಿಸುವವು … ಗುವವು

ದೊರೆಯುವ ಸ್ಥಳ— ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ವೀ ಪಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು … ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು … ಯೋಗ್ಯತಾಪತ್ರಗಳನ್ನು ಕೊಟ್ಟಿದ್ದಾರೆ.

(Registered Trade Mark)

ಈ ಪ್ರಸಿದ್ಧವಾದ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ … ತಲೆನೋವು, ತಲೆಯಲ್ಲಿಯ ರೋಗಗಳು … ಗೆಲ್ಲ … ಸರ್ವವ್ಯಾಧಿಗಳು … ಈ ಸುಗಂಧ ನಶ್ಯದಪುಡಿ … ಉಪಯೋ… …

ಗುರುಬಸವ … ಅಂಡ್ ಕಂಪೆನಿ …

… ಹಾರ … ದರ …

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ಸುಪ್ರಭಾತ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಸ್ಥಲ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಳಸ್ತೋತ್ರಾದಿಗಳು (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಒಸವಾದಿ ಸಿದ್ಧತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಾದರ್ಶ	೨ ಆಣೆ
ಗುರುಸ್ವರ ಪರಿಚಯ	೨ ಆಣೆ
ವೀರಶೈವಮತಪ್ರಭಾವ	೩ ಆಣೆ
ವೀರಶೈವಾಚಾರ (… ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೨ ಆಣೆ
ಸನ್ಯಾಸಾತ್ರಮ ವಿಮರ್ಶ ತತ್ತ್ವಪರೀಕ್ಷೆ (೨ನೆಯ ಆವೃತ್ತಿ)	೪ ಆಣೆ
ವೈದಿಕವಾದ್ಮಯದರ್ಪಣ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಕನ್ನಡ ಸಹಿತ)	೮ ಆಣೆ
ಒಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಯವರ ಭಾಷಣಗಳು (ಕನ್ನಡ)	೬ ಆಣೆ
पण्डित श्रीकाशीनाथशास्त्री यांचें भाषण (मराठ)	८ आणे
Speeches by Pandit Shri Kashinatha Shastri (English)	12 As
ವೀರಶೈವಧರ್ಮ (೩ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಪರಮೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಶಿಖಾಮಣಿ (ತ್ರಿಲೋಚನ … ಸಂಸ್ಕೃತ)	೧೨ ಆಣೆ
ಶಿವಾದ್ವೈತ ಸಿದ್ಧಾಂತದರ್ಪಣ	೧೨ ಆಣೆ
ಸೂತ್ರ … (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖಾಮಣಿ … (ವೀರಶೈವ …)	೧ ರೂ
… (ವೀರಶೈವ …)	೧ ರೂ
ರೇಣುಕ … ಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ವೀರಶೈವ ಸಿದ್ಧಾಂತ …	… ರೂ
… (… ಪುಟ)	೮ ರೂ
लिंगधारणचन्द्रिका (संस्कृत)	३ रु
महानारायणोपनिषत् (भाष्य संस्कृत)	१ रु
वीरशैवेन्दुशेखर (संस्कृत)	१ रु

೧ ರೂಪಾಯಿಯಿಂದಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ … ಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ … ಆಣೆಯಂತೆ ಕಮೀಷನ್ ಕೊಡಲಾಗುವುದು

ಮ್ಯಾನೇಜರ್— ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು … ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ … ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು

REGISTERED No M 2266 || ಶ್ರೀ ಜಗದ್ಗುರು ಪಂಚಾಚಾರ್ಯರು ಪ್ರಸೀದಂತು || REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಕಲಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಶಿವಸ್ವಂಚಾಸ್ತ್ರೀದೇಶಕಾನ್ | ಪಂಚಾಚಾರ್ಯಜಗದ್ಗುರೂನ್ ತ್ರಿಭುವನಪ್ರಖ್ಯಾತಕೀರ್ತೀನ್ ಭಜೇ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು

ವರ್ಷಕ್ಕೆ ಪಡೆವರಿಗೆ ೧ ರೂ ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜ್ ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ನೇ ಜುಲೈ ೧೯೩೫ [ಸಂಚಿಕೆ ೮

ಶ್ರೀ ವೃಷಭೇಶ್ವರ ಪ್ರತಿಷ್ಠಾಮಹೋತ್ಸವ

ನರಸಿಂಹರಾಜಪುರ

ಕರ್ನಾಟಕದಲ್ಲಿ ಸುಪ್ರಸಿದ್ಧರೂ ಗುರುಭಕ್ತಿಪರರೂ ಉದಾರಿಗಳೂ [illegible] ಶ್ರೀಮಾನ್ [illegible] ಮ|| ರಾ| [illegible] ಧರ್ಮಪತ್ನಿಯವರ [illegible] ಶೆಟ್ಟರವರು [illegible] ಧರ್ಮಕಾರ್ಯಗಳನ್ನು ಮಾಡಿರುವ ಸಂಗತಿಯು [illegible] ವಿದಿತವೇ ಇದೆ. [illegible] ಈ ಮಹೋತ್ಸವವು ಇದೇ [illegible] ತಾ|| ೧೩ [illegible] ನರಸಿಂಹರಾಜಪುರದ ಶ್ರೀ ವೃಷಭೇಶ್ವರ [illegible] ಶುಭಕಾರ್ಯಗಳನ್ನು ಅತ್ಯಂತ ಉತ್ಸಾಹದಿಂದ ನೆರವೇರಿಸಿದ [illegible] ವಿಷಯವನ್ನು ತಿಳಿಸಲು ಸಂತೋಷವೆನಿಸುತ್ತದೆ. ಸದರಿ ಪ್ರತಿಷ್ಠಾಕಾರ್ಯವನ್ನು ಬೆಂಗಳೂರಿನಿಂದ ಬರಮಾಡಿಕೊಂಡಿದ್ದ ಶ್ರೀ|| ಗುರುಲಿಂಗಶಾಸ್ತ್ರಿಗಳವರು [illegible] ಶ್ರೀ| [illegible] ಬಸವಶಾಸ್ತ್ರಿಗಳವರು [illegible] ಮಠದ ಶ್ರೀ|| [illegible] ಅವರುಗಳಿಂದ ವಿಧ್ಯುಕ್ತಪ್ರಕಾರ ನೆರವೇರಿಸಲ್ಪಟ್ಟಿತು. [illegible] ಕಾರ್ಯಕ್ಕೆ [illegible] ಶಿವಾನಂದಾಶ್ರಮದ ಶ್ರೀ [illegible] ಚನ್ನಬಸವಶಿವಾಚಾರ್ಯಸ್ವಾಮಿಗಳವರು [illegible] ಶ್ರೀ ಪ್ರಭುಸ್ವಾಮಿಗಳವರು [illegible] ಆನೇಕ ಭಕ್ತಮಹಾಶಯರು ಆಗಮಿಸಿದ್ದರು. ಆ ದಿವಸದ ಕಾರ್ಯವು ಶಿವಗಣಾರಾಧನಪೂರ್ವಕ ಸಾಂಗವಾಗಿ ನಡೆಯಿತು. ಮಾರುದಿವಸ ಸಾಯಂಕಾಲ [illegible] ಘಂಟೆಯಿಂದ ಸದರಿ ದೇವಸ್ಥಾನದಲ್ಲಿ ಸಭೆ ಸೇರಿಸಿ [illegible] ಅಮಲ್ದಾರರವರೂ [illegible] ವರ್ತಕರೂ ಮೊದಲಾದವರನ್ನು ಬರಮಾಡಿಕೊಂಡು [illegible] ಗುಬ್ಬಿ ಶ್ರೀ|| ಶಿವರುದ್ರಶಾಸ್ತ್ರಿಗಳವರಿಂದ ಶಿವಕಥಾ ಪ್ರವಚನವು ನಡೆಸಲ್ಪಟ್ಟಿತು. [illegible] ಶಿವಕಥೆಯನ್ನು ಮನೋರಂಜಕವಾಗಿ ಮಾಡಿದರು. ಕಡೆಗೆ ಅಮಲ್ದಾರರವರು ಮ|| ರಾ|| ಶೆಟ್ಟರವರ ಗುರುಭಕ್ತಿಯನ್ನು [illegible] ಅವರ ಬಂಧುಗಳಿಗೂ ಆಯುರಾರೋಗ್ಯಭಾಗ್ಯಾದಿಗಳನ್ನು ದಯಪಾಲಿಸಲೆಂದು ಭಗವಂತನನ್ನು ಪ್ರಾರ್ಥಿಸಿದರು. [illegible] ವಿದ್ವಾಂಸರುಗಳನ್ನು ಆಗಮಿಸಿಕೊಂಡು ಶ್ರೀ|| ಶಿವಕಥಾ [illegible] ವೇ|| [illegible] ಸಂಭಾಷಣೆಯನ್ನು ಮಾಡಿದರು. [illegible] ಸರ್ವರೂ ಸಂತೋಷಪಟ್ಟರು. ಬಳಿಕ ಯಜಮಾನ್ [illegible] ಶೆಟ್ಟರವರು ತಮ್ಮ [illegible] ಸಭೆಯಲ್ಲಿ ಸ್ವಲ್ಪ [illegible] ತಮ್ಮ ಧರ್ಮಕಾರ್ಯದ ಸದುದ್ದೇಶಗಳನ್ನು [illegible] ಸರ್ವರೂ [illegible] ನೆರವೇರಿಸಿಕೊಂಡು ಹೋಗುವುದಾಗಿ ನಮ್ರಭಾವದಿಂದ ಪ್ರಾರ್ಥಿಸಿಕೊಂಡರು. [illegible] ಸರ್ವರಿಗೂ ಗಂಧಪುಷ್ಪ ತಾಂಬೂಲವು ಸಮರ್ಪಿಸಲ್ಪಟ್ಟಿತು. ಈ ಸಮಯದಲ್ಲಿ ಪ್ರಭಾ [illegible] ಗಳು ತೆಗೆದು ಕಳುಹಿಸಲ್ಪಟ್ಟವು.

ಈ ಮಹೋತ್ಸವದಲ್ಲಿ ಮ|| ರಾ|| ಯಜಮಾನರವರ ಮಕ್ಕಳ [illegible] ಚಂದ್ರಶೇಖರಪ್ಪನವರು ಮತ್ತು [illegible] ಮ|| ರಾ|| ಸಿದ್ಧಪ್ಪನವರು [illegible] ರಾಧವರು ಮಹಾಶಯರ ಯಜಮಾನ್ [illegible] ಶೆಟ್ಟರವರ ಸ್ವಭಾವದ ಶಿವಭಕ್ತಿಯನ್ನು ಎಷ್ಟು ವರ್ಣಿಸಿದರೂ [illegible] ದಿನಗಳು ತಮ್ಮ ಗೃಹದಲ್ಲಿಯೂ ದೇವಸ್ಥಾನದಲ್ಲಿಯೂ ನಡೆದ ಮಂಗಲಕಾರ್ಯಕ್ಕೆ ಮಳೆಯಿಲ್ಲದೆ [illegible] ಸರ್ವರೂ ಆಕಾಶವನ್ನೇ ಎದುರುನೋಡುತ್ತಿದ್ದರು. ಈ ಸಂದರ್ಭದಲ್ಲಿ ಭಕ್ತವತ್ಸಲನಾದ ಶ್ರೀ ಶಿವನೊಬ್ಬನ ಅನುಗ್ರಹದಿಂದ ಮೂರುದಿವಸಗಳವರೆಗೆ ಮಳೆಯಾಗಿ [illegible] ಆ ಜನರ ಆನಂದಕ್ಕೆ ಪಾರವೇ ಇರಲಿಲ್ಲ. ಜನಗಳು ಶ್ರೀಮಾನ್ [illegible] ಶೆಟ್ಟರವರ [illegible] ಸ್ವಭಾವದ ಭಕ್ತಿಯನ್ನೂ ಸದ್ಗುಣಗಳನ್ನೂ [illegible] ಕೊಂಡಾಡಿದರು.

ಕೆ ಎಂ ಮರುಳಾರಾಧ್ಯ

ಸಿಂಗಟಾಲೂರು

ಗದಗ ತಾಲೂಕು ಸಿಂಗಟಾಲೂರು ಗ್ರಾಮದ ಸಕಲ ಸದ್ಭಕ್ತರು [illegible] ಶ್ರೀ ಜಗದ್ಗುರು [illegible] ರಾಜ [illegible] ಉತ್ಸವ ಕಾರ್ಯದ ದಿವಸಗಳಲ್ಲಿ [illegible] ವೇ|| [illegible] ಸಿದ್ಧಲಿಂಗ ಗಂಗಾಧರಶಾಸ್ತ್ರಿಗಳವರ ಅಧ್ಯಕ್ಷತನದಲ್ಲಿ [illegible] ಪ್ರತಿವರ್ಷದಂತೆ ಈ ವರ್ಷ [illegible] ನೆರವೇರಿಸಿದರು. [illegible] ವೈಭವಯುಕ್ತವಾಗಿ [illegible] ಮಹೋತ್ಸವವು ಸಿಂಗಟಾಲೂರಿನ [illegible] ಈ ಹಿಂದೆ ಎಂದೂ ಕಂಡಿರಲಿಲ್ಲವೆಂದು ಹೇಳಬಹುದು. ಆ ಸಮಯದಲ್ಲಿ ವೇ|| ಬ|| ಶ್ರೀ|| ಸಿದ್ಧಲಿಂಗ ಗಂಗಾಧರಶಾಸ್ತ್ರಿಗಳು [illegible] ಅವರನ್ನು ಆದರದಿಂದ ಬರಮಾಡಿಕೊಂಡು [illegible] ಶ್ರೀಮದಾಚಾರ್ಯರ ಭಾವಚಿತ್ರಕ್ಕೆ [illegible] ಪೂಜಾದಿಗಳನ್ನು ನೆರವೇರಿಸಿದರು. ಈ [illegible] ಕಾರ್ಯವನ್ನು [illegible] ವೇ| ರುದ್ರಮುನಿ [illegible] ಎಚ್ ಎಂ [illegible] ಗುರುಲಿಂಗಪ್ಪ [illegible] ಈ ಕಾರ್ಯದಲ್ಲಿ [illegible] ವೇ|| [illegible] ವೇ|| ಅನ್ನದಾನಯ್ಯ [illegible] ಈ ಶುಭಸಮಯದಲ್ಲಿ ಶ್ರೀಜಗದಾಚಾರ್ಯರು ಮಂಗಳವನ್ನೀಯಲಿ.

ಗುರುಶಂಕರ
ಗುಂಡಪ್ಪ ಬೆಳಮಗ್ಗದ ಸಿಂಗಟಾಲೂರು

ಅಬ್ಸೀನಿಯದ ಭವಿಷ್ಯವು ಬ್ರಿಟಿಷರ ಕೈಯಲ್ಲಿದೆ

ಜನಾಂಗ ಸಂಘದ ಇಷ್ಟರಲ್ಲಿಯ ನಿಬಂಧನೆಗಳಿಗೂ ವ್ಯತಿರಿಕ್ತವಾಗಿ ನಡೆಯಲಿರುವ ಇಟಲಿ ಅಬ್ಸೀನಿಯಾ ಯುದ್ಧವನ್ನು ನಿಲ್ಲಿಸಲು ಬ್ರಿಟಿಷರೊಬ್ಬರೇ ಸಮರ್ಥರು. ಇಟಲಿ ಅಬ್ಸೀನಿಯದ ಜಲಮಾರ್ಗವಾದ ಮೆಡಿಟರೇನಿಯನ್ ಮತ್ತು ಕೆಂಪು ಸಮುದ್ರ ಪ್ರದೇಶಗಳಲ್ಲಿ ಬ್ರಿಟಿಷರ ಆಜ್ಞೆಗೆ ವಿರೋಧವಾಗಿ ವರ್ತಿಸುವವರಾರೂ ಇಲ್ಲ. ಎಲ್ಲ ಮುಖ್ಯಬಂದರುಗಳೂ ಆಯಕಟ್ಟಿನ ಸ್ಥಳಗಳೂ ಅವರ ಅಧಿಕಾರಕ್ಕೊಳಪಟ್ಟಿವೆ. ಮುಖ್ಯವಾಗಿ ಸೂಯೆಜ್ ಕಾಲುವೆಯು ಈಗವು ಬ್ರಿಟಿಷರ ಕೈಯಲ್ಲಿರುವುದರಿಂದ ಯುದ್ಧಕಾಲದಲ್ಲಿ ಇಟಲಿಯ ಹಡಗುಗಳನ್ನು ಅಲ್ಲಿಂದ ಬಿಡುವುದಿಲ್ಲವೆಂದು ಹೇಳಿದರೆ ಸಾಕು. ಯುದ್ಧಸಾಮಗ್ರಿಗಳ ಸಹಾಯವು ಸಮಯಕ್ಕೆ ಒದಗುವದಿಲ್ಲವೆಂದು ಯುದ್ಧದ ಯೋಚನೆಯೇ ನಿಂತುಹೋಗುವುದು. ಯುದ್ಧವೆಂಬ ಕಾಡ್ಗಿಚ್ಚು ಒಂದುಕಡೆ ಹತ್ತಿದರೆ ಅದು ಯಾವ ರೂಪಾಂತರವನ್ನು ಹೊಂದಿ ಎಷ್ಟು ಜನರನ್ನು ನುಂಗುವುದೋ ಹೇಳಲಾಗುವುದಿಲ್ಲ. ಆದ್ದರಿಂದ ಕಿಚ್ಚು ಹತ್ತುವುದಕ್ಕೆ ಮೊದಲೇ ಅದನ್ನು ನಿರ್ನಾಮಮಾಡಿ ಪ್ರಪಂಚವನ್ನು ಉಳಿಸುವ ಭಾರವು ಬ್ರಿಟಿಷರ ಮೇಲಿದೆ. ಇವರು ಏನುಮಾಡುವರೆಂಬುದನ್ನು ಪ್ರಪಂಚವೇ ಕಾತುರತೆಯಿಂದ ನಿರೀಕ್ಷಿಸುತ್ತಿದೆ.

ಸ್ವೀಕಾರ

ಬೆಂಗಳೂರು ಸಿಟಿ ನಿವಾಸಿಗಳಾದ ಮ|| ರಾ|| ಜಿ ಎಸ್ ಮಲ್ಲಿಕಾರ್ಜುನಪ್ಪನವರ ಧರ್ಮಪತ್ನಿಯವರಾದ ಸೌ|| ವೀರಮ್ಮನವರು ಶಿವಾಧೀನರಾದ ಸಮಯದಲ್ಲಿ ಅವರ ಆತ್ಮಶಾಂತಿಗೋಸ್ಕರ ಶ್ರೀ ಜಗದಾಚಾರ್ಯರ ಹೆಸರಿನಿಂದ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ರುಪ್ಸೂರು ಮಠದ ಶ್ರೀ ಚಂದ್ರಶೇಖರಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿ|| ಸೂಡಿ ಗ್ರಾಮದಲ್ಲಿರುವ ಮ|| ರಾ|| ನರಗುಂದ ಗುರಪ್ಪನವರ ಪುತ್ರಿ ಚಿ|| ಕುಂ|| ಚಿ| ಸೌ|| ಬಸವನ್ನನ್ನು ಮ|| ರಾ|| ಗುರುಬಸಪ್ಪನವರು ಬೆಳವಣಿಕಿ ಇವರ ಪುತ್ರ ಚಿ| ಫಕೀರಗೌಡನಿಗೆ ನಿಶ್ಚಯಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವರನ ಕಡೆಯಿಂದ ಮ|| ರಾ|| ಮಾರನಬಸರಿ ವೀರಭದ್ರಪ್ಪನವರು ತೆಗೆಯಿಸಿದ 2 ರೂ ಗಳು ವೇ|| ಎರೆಹಂಚಿನಹಾಳ ಹಿರೇಮಠದ ರುದ್ರಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿಸ್ಟ್ರಿಕ್ಟ್ ಹರಪನಹಳ್ಳಿ ತಾಲೋಕು ಮಾಸುವನೆ ಕಲ್ಲಹಳ್ಳಿಯಲ್ಲಿರುವ ಮ|| ರಾ|| ಒಡೆಯರ ಮರಿಬಸಪ್ಪನವರ ಜ್ಯೇಷ್ಠಪುತ್ರರಾದ ಹಿರೇಹಡಗಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮ|| ರಾ|| ಚನ್ನಬಸವಪ್ಪನವರಿಗೆ ಕೋಗಳಿ ಗ್ರಾಮದಲ್ಲಿರುವ ಮ|| ರಾ|| ಶೆಟ್ಟರ ನಂದಿಹಳ್ಳಿ ಚನ್ನಪ್ಪನವರ ಜ್ಯೇಷ್ಠಪುತ್ರಿ ಹ|| ಕುಂ|| ಶೋ|| ಚಿ| ಸೌ|| ಚನ್ನಮ್ಮನನ್ನು ಕೊಟ್ಟು ನಿಶ್ಚಿತಕಾರ್ಯ ನಡೆಸಿದ ಸಮಯದಲ್ಲಿ ಸಮರ್ಪಿಸಿದ 2 ರೂಪಾಯಿಗಳು ಕೋಗಳಿ ಗರ್ಲ್ಸ್ ಸ್ಕೂಲು ಹೆಡ್ಮಾಸ್ಟರ್ ವೇ|| ಎಚ್ ಎಮ್ ಬಸವಯ್ಯನವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಶ್ರೀಯುತ ಎಸ್ ಡಿ ಮುರಗೇಂದ್ರಯ್ಯನವರ ಪುತ್ರಿ ಚಿ|| ಸೌ|| ಜಯಲಕ್ಷ್ಮಮ್ಮನನ್ನು ಶ್ರೀಯುತ ಚಂದ್ರಶೇಖರಶಾಸ್ತ್ರಿಗಳಿಗೆ ಕೊಟ್ಟು ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ ಯು ಮ|| ರಾ|| ದೇಶದಶೆಟ್ಟರ ಸಿದ್ಧಬಸವಪ್ಪಶೆಟ್ಟರ ದ್ವಾರಾ ತಲ್ಪಿರುತ್ತದೆ.

ವಿಜಾಪೂರ ಜಿ|| ಗುಳೇದಗುಡ್ಡ ಶಹರ ನಿವಾಸಿಗಳಾದ ಮ|| ರಾ| ಜಿಡಿಗಿ ತಿಪ್ಪಣ್ಣಪ್ಪನವರ ಪುತ್ರ ಚಿ| ಶಿವಪ್ಪನಿಗೆ ಇದೇ ಗ್ರಾಮದ ಮ|| ರಾ|| ಒಣರೊಟ್ಟಿ ಸಿದ್ಧಪ್ಪನವರ ಪುತ್ರಿ ಚಿ|| ಸೌ|| ಶಿವಲಿಂಗವ್ವನನ್ನು ತಂದು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಸಮರ್ಪಿಸಿದ 1 ರೂಪಾಯಿಯು ಶ್ರೀಜಗದ್ಗುರು ಪಂಚಾಚಾರ್ಯ ಪೌರಾಣಿಕ ಸಂಘದ ಸೆಕ್ರೆಟರಿ ಜಿ ಬಿ ದೊಡ್ಡಮನಿ ಮಾಸ್ತರರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ ಅಥವಾ ವೇದಪರಿಚಯ.

ಲೇಖಕರು — ಶ್ರೀ ಶಂಭುಲಿಂಗಶಿವಾಚಾರ್ಯರು
ಬ್ರಹನ್ಮಠ ವಿಜಾಪುರ

ತೃತೀಯೋಲ್ಲಾಸವು

(ಹಿಂದಿನಿಂದ ಮುಂದುವರಿದುದು)

ರಿಂದ ಈ ಯ ಶ್ರಾಂತಿಯಿಂದೋ ಅವೈದಿಕಧರ್ಮದವರ ಹಾವಳಿಯು ಹೆಚ್ಚಾದುದರಿಂದೋ ಮತ್ತಾವ ಕಾರಣದಿಂದೋ ತ್ರೈವರ್ಣಿಕರಾದ ಕೆಲವರಲ್ಲಿ ಈ ಉಪನಯನ ಸಂಸ್ಕಾರವಿದ್ದ ತೆಯು ಈಗಲೂ ಕಾಣಬರುವುದಿಲ್ಲ ಆ ಮೂಲಕವಾಗಿ ಅವರು ಹಾಗಿರುತ್ತಿರುವುದು ಧರ್ಮದೃಷ್ಟಿಯಿಂದ ವಿರುದ್ಧವಾದ ಪ ನಿಗ್ರಹ ಹುವರ್ಣಿಸುವುದು ಎಕೆಂದರೆ ಶಾಸ್ತ್ರ ವೇದಮಂತ್ರಗಳು ವಿಂದ (ವೈದಿಕಧರ್ಮಾನುವರ್ತಿಗಳೆಂದು) ಉತ್ತಮತರ ಆ ವೆ ವಿರುದ್ಧ ಪರಿಣಾಗುತ್ತದು ವೈದಿಕಧರ್ಮದ ಹ್ರಾಸಕ್ಕೆ ಕಾರಣವಲ್ಲದೆ ಮತ್ತೇನು? ಆದ್ದರಿಂದ ತ್ರೈವರ್ಣಿಕರೆನಿಸುವವರೆಲ್ಲ ವ ನ ದಿಗಿರತಕ್ಕವರು ಶಾಸ್ತ್ರೋಕ್ತ ಪೂರ್ವಕವಾಗಿ ಉಪನಯನಸಂಸ್ಕಾರವನ್ನು ಪಡೆದು ವೇದದ ಜೊತೆ ಇದನ್ನು ಕೈಕೊಳ್ಳುವುದು ಅತಿಶಯವಾಗಿ ಅವಶ್ಯವಾದ ನಿಯಮವಲ್ಲ ಉಪನಯನ ಸಂಸ್ಕಾರದ ಬಿಡುಗಡೆಯವರೆಗೆ ಇಷ್ಟೇ ಅಲ್ಲ ಪಿತಾಮಹ ಪ್ರಪಿತಾಮಹ ಹಾಗಿರುವ ಕಾಲದಿಂದಲೂ ಲುಪ್ತವಾಗಿದ್ದರು ಇಂಥ ಅವರ ಮೂಲವರ್ಣವೆಂಬುದು ನಷ್ಟವಾಗುತ್ತದೆ ಪ್ರಾಯಶ್ಚಿತ್ತಾನಂತರದಲ್ಲಿ ಆ ವಾಕ್ ರ ಕನು ನ್ನು ಮೂಲವರ್ಣದವರೆನಿಸುವರು ಈ ವಿಷಯಕ್ಕಾಗಿ ... ಪ್ರಾಯಶ್ಚಿತ್ತವು ... ಸ್ಮೃತಿವಿಚಾರತ ... ಸಮಾಹಾರವಾಗಿ ನಿರೂಪಿಸಲ್ಪಟ್ಟಿದೆ

ಇನ್ನು ಯಜ್ಞೋಪವೀತದ ಸ್ವರೂಪವನ್ನು ಕುರಿತು ವಿ ... ಸುವ. 'ಯಜ್ಞೋಪವೀತ' ವೆಂಬ ಶಬ್ದವು ಯಜ್ಞಕ್ಕೋಸ್ಕರವಾಗಿ ಉಪನೀತವು ಅಥವಾ ... ದ ಉಪವೀತವು ಎಂಬುದಾಗಿ ಎರಡು ಅರ್ಥಗಳಿವೆ ಪಾರಿಜಾತ ಸ್ಮೃತಿಯಲ್ಲಿ —

ಯಜ್ಞಾರ್ಥಂ ಪರಮಾತ್ಮಾನಂ ಉಚ್ಯತೇಽಸ್ಯೈವ ಹೋತೃಭಿಃ |
ಉಪವೀತಂ ಯತೋಽಸ್ಯೇದಂ ತಸ್ಮಾದ್ಯಜ್ಞೋ ಪವೀತಕಂ ||

ಯಜ್ಞೋ ವೈ ವಿಷ್ಣುಃ — ಯಜ್ಞೋ ವೈ ಪ್ರಜಾಪತಿಃ ಎಂಬ ಮೊದಲಾದ ವೇದವಾಕ್ಯಾನುಸಾರವಾಗಿ ಪರಮಾತ್ಮನೇ ಯಜ್ಞವೆಂದು ಹೇಳಲಡುತ್ತಾನೆ ಇದು ಅವನ ಉಪವೀತವೆನಿಸುವುದರಿಂದ ಇದಕ್ಕೆ ಯಜ್ಞೋಪವೀತವೆನ್ನುತ್ತಾರೆ ಎಂದು ಶ್ರುತಿಪಾದಿಸಲ್ಪಟ್ಟಿದೆ ಇದೇ ಅರ್ಥವು ಬ್ರಹ್ಮೋಪನಿಷತ್ತಿನಲ್ಲಿ (೯) —

ಯಜ್ಞೋಪವೀತಂ ಪರಮಂ ಪವಿತ್ರಂ |
ಪ್ರಜಾಪತೇರ್ಯತ್ಸಹಜಂ ಪುರಸ್ತಾತ್ ||
ಆಯುಷ್ಯಮಗ್ರ್ಯಂ ಪ್ರತಿಮುಂಚಶುಭ್ರಂ |
ಯಜ್ಞೋಪವೀತಂ ಬಲಮಸ್ತು ತೇಜಃ ||

ಅತ್ಯಂತ ಪವಿತ್ರವೂ ಪ್ರಜಾಪತಿಯ (ಪರಮಾತ್ಮನ) ಅಂಗಭೂತವೂ ಆಯುಷ್ಯವನ್ನು ಬೆಳೆಸುವುದೂ ಶ್ರೇಷ್ಠವೂ ಆದ ಯಜ್ಞೋಪವೀತವು ನಮ್ಮ ಅಜ್ಞಾನವನ್ನು ಹೋಗಲಾಡಿಸಲಿ ಮತ್ತು ನಮ್ಮ ಸಾಮರ್ಥ್ಯವನ್ನೂ ತೇಜಸ್ಸನ್ನೂ ಅಭಿವೃದ್ಧಿಗೊಳಿಸಲಿ.

ಎಂಬ ಈ ಯಜ್ಞೋಪವೀತಧಾರಣಮಂತ್ರದ ಪೂರ್ವಾರ್ಧದಿಂದಲೂ ಅರಿಯಲ್ಪಡುವುದು ಯಜ್ಞೋಪವೀತವು ಧರಿಸಲ್ಪಡುವುದರ ಹೇತುವು ತೈತ್ತಿರೀಯಾರಣ್ಯಕದಲ್ಲಿ (೨೧) ಹೀಗೆ ಹೇಳಲ್ಪಟ್ಟಿದೆ —

ಪ್ರಸೃತೋ ಹ ವೈ ಯಜ್ಞೋಪವೀತಿನೋ
ಯಜ್ಞೋಽಪ್ರಸೃತೋಽನುಪವೀತಿನೋ ಯತ್ಕಿಂಚ
ಬ್ರಾಹ್ಮಣೋ ಯಜ್ಞೋಪವೀತ್ಯಧೀತೇ ಯಜತ
ಏವ ತತ್, ಇತಿ |
ತಸ್ಮಾದ್ಯಜ್ಞೋಪವೀತ್ಯೇವಾಧೀಯೀತ ಯಾಜಯೇ
ದ್ಯಜೇತ ವಾ ಯಜ್ಞಸ್ಯ ಪ್ರಸೃತ್ಯೈ, ಇತಿ ||

ಯಜ್ಞೋಪವೀತವನ್ನು ಧರಿಸುವಾತನ ಯಜ್ಞವು (ಯಜನವು) ಸಫಲವಾಗುವುದು ಯಜ್ಞೋಪವೀತವನ್ನು ಧರಿಸದವನಿಂದಿರುವಾತನ ಯಜ್ಞವು ಫಲಿಸದು. ಯಜ್ಞೋಪವೀತವಾದ ಬ್ರಾಹ್ಮಣನಿಂದ ಅನುಷ್ಠಿಸಲ್ಪಡುವ ಅಧ್ಯಯನವು ಯಾಗಾನುಷ್ಠಾನವೆನಿಸುವುದು ಆದ್ದರಿಂದ ಯಜ್ಞಸಿದ್ಧಿಗಾಗಿ ಯಜ್ಞೋಪವೀತವನ್ನು ಧರಿಸಿಯೇ ಅಧ್ಯಯನ ಯಜನಾದಿಗಳಲ್ಲಿ ಪ್ರವೃತ್ತನಾಗತಕ್ಕದ್ದು.

ಮತ್ತು ಯಜ್ಞೋಪವೀತಧಾರಣಪ್ರಕಾರವೂ ಮುಂದಿನ ಮಂತ್ರದಿಂದ ಪ್ರತಿಪಾದಿಸಲ್ಪಡುತ್ತದೆ —

ಅಜಿನಂ ವಾಸೋ ವಾ ದಕ್ಷಿಣತಃ ಉಪವೀಯ ಇತಿ |

ಕೃಷ್ಣಮೃಗದ ಚರ್ಮವನ್ನಾಗಲಿ ವಸ್ತ್ರವನ್ನಾಗಲಿ ಎಡಭುಜದ ಮೇಲಿನಿಂದ ಬಲಗಡೆಯ ಸೊಂಟದ ಕೆಳಗೆ ಬರುವಂತೆ ಧರಿಸುವುದು

ಹೀಗೆ ವೈದಿಕವಾಕ್ಯದ ಪ್ರಸಿದ್ಧವಾದ ಯಜ್ಞೋಪವೀತವನ್ನು ಕನ್ನಡದಲ್ಲಿ 'ಜನಿವಾರ' ವೆಂದು ಹೇಳುತ್ತಾರೆ ಜನಿವಾರವೆಂಬುದು ಯಜ್ಞೋಪವೀತ ಶಬ್ದದ ಅಪಭ್ರಂಶವು ಈ ಉಪವೀತವು ಪ್ರಾಚೀನಕಾಲದಲ್ಲಿ ಈಗಿನಂತೆ ಸೂತ್ರಮಯವಾಗಿರಲಿಲ್ಲ ಚರ್ಮ ಅಥವಾ ವಸ್ತ್ರವಾಗಿದ್ದಿತು ಅದು ಹೇಗೆಂದರೆ ಉಪ — ವೇ — ಎಂಬ ಧಾತುವಿನಿಂದ ಉಪವೀತವೆಂಬ ಶಬ್ದ ಸಿದ್ಧವಾಗಿದೆ ಉಪ — ಸಮೀಪದಲ್ಲಿ ವೇ — ಇಟ್ಟುಕೊಳ್ಳುವಿಕೆ ಎಂಬರ್ಥದಿಂದ ಉಪವೀತವೆಂದರೆ ಮೈಮೇಲೆ ಹೊದ್ದುಕೊಳ್ಳುವ ಬಟ್ಟೆಯು ಆದಕ್ಕೆಂಬುದು — ವೇದವಿದರಿಗೆ ಗೊತ್ತಿರುವುದರಿಂದ ಅಥರ್ವ ... ದೇವತೆಗಳಿಗೂ ಮಂತ್ರಗಳಿಗೂ ... ಅರ್ಪಿಸುವ ... ಯಜನಾದಿಗಳಲ್ಲಿಯೂ ... ಅಗ್ನಿಹೋತ್ರಾದಿಗಳಲ್ಲಿಯೂ ಇತರ ಪ್ರಸಂಗಗಳಲ್ಲಿಯೂ ಉಪವೀತಧಾರಣವು ವಿಹಿತವಾದುದು ಎಂದು ಹೇಳುತ್ತಾನೆ ಇದರಿಂದ ಮೇಲೆ ತೋರಿಸಲ್ಪಟ್ಟ ಪ್ರಸಂಗಗಳು ... ಗದ ಬಳಿಕ ಅಂದರೆ ಚರ್ಮವಸ್ತ್ರಾದಿಗಳ ಕಾಲದ ... ಉಪವೀತವಿದ್ದದೆ ಇದ್ದದ್ದರಿಂದ ಅಧ್ಯಯನಾದಿಗಳು ... ಎಂದು ಆಕ್ಷೇಪಿಸುವುದರಲ್ಲಿ ತಿಲಮಾತ್ರವೂ ಸತ್ಯಾಂಶವಿರುವುದಿಲ್ಲ ಏಕೆಂದರೆ ಜಾಬಾಲೋಪನಿಷತ್ತಿನಲ್ಲಿ —

ಅಥೈನಮತ್ರಿಃ ಪಪ್ರಚ್ಛ — ಯಾಜ್ಞವಲ್ಕ್ಯ ಪೃಚ್ಛಾಮಿ ತ್ವಾ — ಯಾಜ್ಞವಲ್ಕ್ಯ, ಅಯಜ್ಞೋಪವೀತೀ ಕಥಂ ಬ್ರಾಹ್ಮಣಃ?

ಅತ್ರಿಯು ಯಾಜ್ಞವಲ್ಕ್ಯನನ್ನು ಕೇಳಿದನು — ಎಲೈ ಯಾಜ್ಞವಲ್ಕ್ಯನೇ ಯಜ್ಞೋಪವೀತವಿಲ್ಲದವನು ಅದು ಹೇಗೆ ಬ್ರಾಹ್ಮಣನು ಎಂದು ಆಕ್ಷೇಪಿಸುವನು.

ಮತ್ತು ಆಪಸ್ತಂಬ ಗೃಹ್ಯಸೂತ್ರದಲ್ಲೂ ಪ್ರಾಚೀನದಲ್ಲಿ ಯಜ್ಞೋಪವೀತವನ್ನು ಯಾವಾಗಲೂ ಧರಿಸುತ್ತಿದ್ದರೆಂದು ... ಅಪಸ್ತಂಬ ... ಹಾಗೆ ಉಲ್ಲೇಖಿಸಲ್ಪಟ್ಟಿರುವುದರಿಂದ ಯಜ್ಞೋಪವೀತದ ಆವಶ್ಯಕತೆಯನ್ನು ತೋರಿಸುವ ಪ್ರಮಾಣವಿದೆ ಕೇವಲ ಆ ... ಕಾಲದಲ್ಲಿ ಮಾತ್ರ ಯಜ್ಞೋಪವೀತವನ್ನು ಧರಿಸಬೇಕೆಂಬ ಉದ್ದೇಶವಿಲ್ಲ

ತೈತ್ತಿರೀಯಸಂಹಿತೆಯಲ್ಲಿ (೬೧೧) —

ನಿವೀತಂ ಮನುಷ್ಯಾಣಾಂ ಪ್ರಾಚೀನಾವೀತಂ
ಪಿತೄಣಾ ಮುಪವೀತಂ ದೇವಾನಾಂ |

ಎಂಬ ಉಲ್ಲೇಖವಿದೆ ಈ ವಾಕ್ಯದೊಳಗಿನ ... ಗಳ ಸಂಬಂಧವು ವಸ್ತ್ರದೊಡನೆ ಇರುವುದು ... ಜನಿವಾರದೊಡನಿರುವುದಲ್ಲವೆಂದು ವಿದ್ವಾಂಸರು ಹೇಳುತ್ತಾರೆ —

ತತ್ರ ಸ್ಮೃತೀನಾಂ ಮಾನಂ ಪ್ರಾಚೀನಾವೀತಂ ... ವಿಷಯಂ | ನ ತ್ರಿವೃತ್ಸೂತ್ರವಿಷಯಂ | ಅಜಿನಂ ವಾಸೋ ವಾ ದಕ್ಷಿಣತಃ ಉಪವೀಯ (ತೈ ಆ ೨೧) ಇತ್ಯನೇನ ಸದೃಶತ್ವಾತ್ |

ಬಟ್ಟೆಯಲ್ಲಿ ... ಗಳೂ ವಿಹಿತಕರ್ಮಾನುಷ್ಠಾನ ನಡೆಯುವಾಗ ಆ ಪ್ರಾಚೀನರಿಗೆ ಉಪವೀತವನ್ನು ... ಮೇಲೆ ಧರಿಸುವ ಕಾಲದ ಪ್ರಸಂಗವು ಹೆಚ್ಚಿದ ಹಾಗೆಲ್ಲ ಈಗಿನ ಎಳೆಗಳ ... ಎಂದು ಎಡಬಲಗಳ ಧರಿಸುವ ಅವಶ್ಯಕತೆಯುಂಟಾಯಿತೆಂದು ... ಲಭ್ಯಂತರವಿಲ್ಲ ಹೀಗೆ ಸಂಕೋಚಗೊಳಿಸಲ್ಪಟ್ಟ ಉಪವೀತ ವಸ್ತ್ರವು ಸ್ಮೃತಿಕಾರರ ಕಾಲದಲ್ಲಿ ಬಳಕೆಯಲ್ಲಿದ್ದುದರಿಂದ ದೇವಲನೇ ಮೊದಲಾದವರು —

ಯಜ್ಞೋಪವೀತಂ ಕುರ್ವೀತ ಸೂತ್ರಾಣಿ ನವತಂತವಃ|

ಎಂಬುದಾಗಿ ಪ್ರತಿಪಾದಿಸಿದರು ಮತ್ತು —

ಯಜ್ಞೋಪವೀತಂ ಕುರ್ವೀತ ಸೂತ್ರಂ
ವಸ್ತ್ರಂ ವಾಪಿ ಕುಶರಜ್ಜುಮೇವ |

(ಗೋಭಿಲಗೃಹ್ಯಸೂ. ೨—೧)

ನಿತ್ಯಮುತ್ತರಂ ವಾಸಃ ಕಾರ್ಯಂ |
ಅಪಿ ವಾ ಸೂತ್ರಮೇವೋಪವೀತಾರ್ಥೇ ||

(ಆಪಸ್ತಂಬ ಧರ್ಮ ಸೂ ೧೧—೨)

ಎಂಬ ಮುಂತಾದ ಉಲ್ಲೇಖಗಳಿಂದ ಸ್ಮೃತಿಕಾಲದಲ್ಲಿಯೇ ಸೂತ್ರಮಯಯಜ್ಞೋಪವೀತವಿದ್ದಿತೆನ್ನುವಹಾಗಿಲ್ಲ ಸೂತ್ರಕಾಲದಲ್ಲಿಯೂ ಸೂತ್ರಮಯವಾದ ಯಜ್ಞೋಪವೀತವಿದ್ದಿತೆಂದು ತಿಳಿಯಲ್ಪಡುವುದು ಯಜ್ಞೋಪವೀತವನ್ನು ಕೊರಳಿನಲ್ಲಿ ಧರಿಸಿಕೊಳ್ಳುವ ಪದ್ಧತಿಯು ಉಪವೀತ, ನಿವೀತ ಪ್ರಾಚೀನಾವೀತವೆಂದು ಮೂರು ಪ್ರಕಾರವಾಗಿರುವುದು ಅವುಗಳಲ್ಲಿ ಉಪವೀತ — ಎಡಗಡೆಯ ಹೆಗಲಮೇಲಿಂದ ಬಲ ಸೊಂಟದ ಕೆಳಗೆ ಜೋತಾಡುವಂತೆ ಜನಿವಾರವನ್ನು ಹಾಕಿಕೊಳ್ಳುವುದು ಅನಿವಾರವನ್ನು ಯಜ್ಞಾಗಲೂ ಹೀಗೆ ಧರಿಸಿಕೊಂಡಿರಬೇಕೆಂಬ ಸಾಧಾರಣವಾದ ನಿಯಮವು

ಬೌಧಾಯನಗೃಹ್ಯಪರಿಶಿಷ್ಟದಲ್ಲಿ —

ಸದೋಪವೀತಿನಾ ಭಾವ್ಯಂ ಸದಾ ಬದ್ಧಶಿಖೇನ ಚ |
ವಿಶಿಖೋ ವ್ಯುಪವೀತಶ್ಚ ಯತ್ಕರೋತಿ ನ
ತತ್ಕೃತಮ್ ||

ಎಂಬುದಾಗಿ ವಿಧಿಸಲ್ಪಡುವುದನ್ನು ತ್ರೈವರ್ಣಿಕರು ಮರೆಯಕೂಡದು ನಿವೀತ — ಜನಿವಾರವನ್ನು ಹೂವಿನಮಾಲೆಯಂತೆ ಕೊರಳೊಳಗೆ ಹಾಕಿಕೊಳ್ಳುವುದು ಪ್ರಾಚೀನಾವೀತ — ಬಲಗಡೆಯ ಹೆಗಲಮೇಲಿಂದ ಎಡಸೊಂಟದ ಕೆಳಗೆ ಜನಿವಾರವನ್ನು ಹಾಕಿಕೊಳ್ಳುವುದು ಹೀಗೆ ಪಿತೃಕಾರ್ಯಮಾಡುವುದರಲ್ಲಿ ಹಾಕಿಕೊಳ್ಳತಕ್ಕದ್ದು ಇದಕ್ಕೆ ಅಪಸವ್ಯವೆನ್ನುವರು ಆತನು ಜೀವಚ್ಛ್ರಾದ್ಧನಾಗಿದ್ದರೆ ಎಡಗೈ ಹೆಬ್ಬೆರಳಿನಲ್ಲಿ ಜನಿವಾರವನ್ನು ತೊಡಿಸಿಕೊಳ್ಳುವನು ಜೀವತ್ಪಿತೃಕನಲ್ಲದಿದ್ದರೆ ಎಲ್ಲವನ್ನೂ ಎಡಕ್ಕೆ ಹಾಕಿಕೊಳ್ಳುವುದೂ ಒಳಿತಲ್ಲದೆ

ಯಜ್ಞೋಪವೀತವನ್ನು ಮಾಡುವ ರೀತಿಯು ಒಂದೆ ಸ್ನಾನದ ಕುಲೀನಸ್ತ್ರೀಯರಿಂದಾಗಲಿ ಬ್ರಾಹ್ಮಣರಿಂದಾಗಲಿ ಸುಚಿರ್ಭೂತರಾಗಿಯೇ ಅದನ್ನು ಮಾಡತಕ್ಕದ್ದು ಅಪವಿತ್ರಜನರಿಂದ ಅನಿಷ್ಟಕಾಲದಲ್ಲಿ ಮಾಡಲ್ಪಟ್ಟದ್ದು ಯೋಗ್ಯವಾದುದಲ್ಲ ಗಿರಣಿಯ ನೂಲನ್ನು ಉಪಯೋಗಿಸದೆ ಹತ್ತಿಯ ... ತಂಗುವುದ ... ಮೂರು ಎಳೆಗಳನ್ನು ಹೊಸೆದ ದಾರದ ಮೂರು ಸರಗಳ ಜೋಡಣೆಯನ್ನು ನಾಭಿಯವರೆಗೆ ಜೋತಾಡುವಂತೆಯೂ ಸ್ತನಗಳ ಮೇಲಾಕ್ಕೆ ಬರದಂತೆಯೂ ಸರಿಪಡಿಸಿ ಬ್ರಹ್ಮಗ್ರಂಥಿಯುಳ್ಳ ಸಂಯೋಜನೆಗೊಳಿಸಿದಾಗಿಯುಳ್ಳ ಬ್ರಹ್ಮಸೂತ್ರ (ಜನಿವಾರ)ವಾಗುತ್ತದೆ ಹಳೆಯ ಗ್ರಂಥಗಳಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯರೆಂಬವರು ಅನುಕ್ರಮವಾಗಿ ಹತ್ತಿ ರೇಶಿಮೆ ಉಣ್ಣೆಗಳಿಂದ ಮಾಡಲ್ಪಟ್ಟ ಜನಿವಾರಗಳನ್ನು ಧರಿಸಬೇಕೆಂದು ಹೇಳಿದೆ ಈ ಮಾತ್ರ ಹಾಗೆ ಬಳಕೆಯಲ್ಲಿದ್ದುದಾಗಿ ಎಲ್ಲಿಯೂ ಕಾಣಬರುವುದಿಲ್ಲ ತ್ರೈವರ್ಣಿಕರೆಲ್ಲ ಹತ್ತಿಯ ಜನಿವಾರವನ್ನೇ ಧರಿಸುತ್ತಾರೆ ಕೆಲವೆಡೆಯಲ್ಲಿ ಜನಿವಾರವು ಬಂಗಾರದ ಎಳೆಯಿಂದ ಮಾಡಲ್ಪಡುತ್ತದೆಂದು ಹೇಳಿದೆ ಅದಾಗಲೀ ಬಳಕೆಯಲ್ಲಿ ಇರುತ್ತಿಲ್ಲವು

ಒಂದೊಂದು ಪ್ರಸಂಗದಲ್ಲಿ ಯಜ್ಞೋಪವೀತವನ್ನು ಕೊರಳಿನಿಂದ ಕಡೆಗೆ ತೆಗೆಯಬೇಕಾದರೂ ... ಧಾನುಸಾರವಾಗಿ ಬಂಧಿಸುವುದೆಂದು ಸ್ಮೃತಿಕಾರರು ಸೂಚಿಸುತ್ತಾರೆ —

ತ್ರೈತ್ತಿರೀಯಾ ಕರೇ ಕಣ್ವಾಃ ಶಿರಸಾ ವಾಜ
ಸನೇಯಿನಃ |
ಕಂಠೇ ದುತ್ತಿರೀಯ ಸೂತ್ರಂ ತು ಕುರ್ಯಾತ್ಪ್ರ
ಕ್ಷಾಲನಂ ದ್ವಿಜಾಃ |

ತೈತ್ತಿರೀಯರು ಕರ ಕಣ್ವ ಚರಕ ವಾಜಸನೇಯಿ ಎಂಬ ... ಶಾಖೆಯ ದ್ವಿಜರು ಯಜ್ಞೋಪವೀತವನ್ನು ತಮ್ಮ ಕಂಠದಿಂದ ಕಡೆಗೆ ತೆಗೆದು ತೊಳೆಯತಕ್ಕ ಅಡಿಯಲ್ಲ ಹಾಗೆ ದಿನಗಳೂ ನಾಮವೆ ದಿನಗಳೂ ... ಹೇಳಲ್ಪಟ್ಟವರಿಗಿಂತ ಬೇರೆಯಾದ ಯಾವ ... ಗಳೂ ಯಜ್ಞೋಪವೀತವನ್ನು ಕೊರಳಿನಿಂದ ಕಡೆಗೆ ತೆಗೆದು ಅದನ್ನು ಪಳಿಕೆಸಿಮಾಡಿ ತೆಗೆದು ಹೊಸದನ್ನು ಮಂತ್ರ ಸಂಸ್ಕಾರಪೂರ್ವಕವಾಗಿ ಧರಿಸಬೇಕು ಇನ್ನು ಅಭ್ಯಂಗಸ್ನಾನವು ಪ್ರಸ್ತಾವಿತ ಯಾಕೆಂದರೆ ಶ್ರಾದ್ಧ ದಿವಸಗಳಲ್ಲಿ ಜನಿವಾರವನ್ನು ಕೊರಳಿನಿಂದ ಕಡೆಗೆ ತೆಗೆದು ಸ್ವಚ್ಛಮಾಡಬಹುದು ಅದರ ಕೊರಳಿನಿಂದ ಕಡೆಗೆ ... ಲ್ಪಟ್ಟ ಜನಿವಾರವು ಕೈಬಿಟ್ಟು ಕಡೆಗೆ ಹೋ ದಂತೆ ಎಚ್ಚರವಿರಬೇಕು ಜನಿವಾರವು ಯಾವಾಗಲೂ ಸ್ವಚ್ಛವಾಗಿರಬೇಕಾದುದು ಸರಿಯೇ ಆದರೂ ಯಾವಾಗಲೂ ... ಜನಿವಾರವನ್ನು ಜೋಕೆಯಿಂದಿಟ್ಟುಕೊಳ್ಳಬೇಕು ಪರಮಪವಿತ್ರವಾದ ಯಜ್ಞೋಪವೀತಕ್ಕೆ ಬಗೆದ (ಕೀಲಿಯ) ಕೈಗೊಂಚಲವನ್ನು ತೂಗಿಸುವುದೂ ಆ ಜನಿವಾರದಲ್ಲೇ ಅನ್ಯ ಸ್ವಚ್ಛತೆಗಳು ಮೊದಲಾದವುಗಳನ್ನು ಇಟ್ಟುಕೊಳ್ಳುವುದೂ ಮೊದಲಾದ ಕೃತಿಗಳು ನಿಷಿದ್ಧವಾಗಿವೆ ಮೃಚ್ಛಕಟಿಕ ನಾಟಕದಲ್ಲಿ —

ಏತೇನ ಮಾಪಯತಿ ಭಿತ್ತಿಷು ಕರ್ಮಮಾರ್ಗಂ |
ಏತೇನ ಮೋಚಯತಿ ಭೂಷಣಸಂಪ್ರಯೋಗಾನ್ |
ಉದ್ಘಾಟಕೋ ಭವತಿ ಯನ್ತ್ರದೃಢೇ ಕವಾಟೇ |
ದಷ್ಟಸ್ಯ ಕೀಟಭುಜಗೈಃ ಪರಿವೇಷ್ಟನಂ ಚ ||

ಎಂಬುದಾಗಿ ಶರ್ವಿಲಕನು ಯಜ್ಞೋಪವೀತದ ಉಪಯೋಗವನ್ನು ಹೇಳುವುದರ ಪರಿಯು ಹೇಗಿದೆ ನೋಡಿರಿ!

ಯಜ್ಞೋಪವೀತವನ್ನು ವರ್ಷಕ್ಕೆ ಎರಡು ಸಾರಿಯಾದರೂ ಬದಲಾಯಿಸುವುದರಲ್ಲಿ ಶ್ರಾವಣ ಮಾಘಮಾಸಗಳೆಂಬ ಧಾರ್ಮಿಕ ಕಾಲಗಳು ನಿಯಮಿಸಲ್ಪಟ್ಟಿವೆ ಶ್ರಾವಣಮಾಸದಲ್ಲಿ ಮಾಡಲ್ಪಡುವ ವಿಧಿಗೆ 'ಉಪಾಕರ್ಮ' ವೆಂದೂ ಮಾಘಮಾಸದ ವಿಧಿಗೆ 'ಉತ್ಸರ್ಜನ' ವೆಂದೂ ಹೇಳುತ್ತಾರೆ. ಆದರೆ ಈಗ ಈ ಎರಡೂ ವಿಧಿಗಳು ಶ್ರಾವಣ ತಿಂಗಳಲ್ಲಿಯೇ 'ಶ್ರಾವಣೀ' ಎಂಬುದಾಗಿ ಒಂದೇ ಸಾರೆ ಮಾಡಲ್ಪಡುವ ಪದ್ಧತಿಯುಂಟು ಉಪಾಕರ್ಮವು ಅಂದರೆ ಉತ್ಸರ್ಜನಮಾಡಲ್ಪಟ್ಟ ವೇದಾಧ್ಯಯನವನ್ನು ಆರಂಭಿಸುವುದು ಅದು ಶ್ರವಣನಕ್ಷತ್ರಯುಕ್ತವಾದ ಶ್ರಾವಣ ಪೌರ್ಣಿಮೆಯಲ್ಲಾಗಲಿ ಹಸ್ತನಕ್ಷತ್ರಯುಕ್ತ ಶ್ರಾವಣ ಪಂಚಮಿಯಲ್ಲಾಗಲಿ ಮಾಡಲ್ಪಡುವುದು ಉತ್ಸರ್ಜನವು ಅಂದರೆ

ಬಾಧ್ಯಯನವನ್ನು ಕಲ್ಪಿಸುವುದು ಪಾಶ್ಚಾತ್ಯರ ಕೃತ್ಯ— ಪೌರುಷಸ್ಯ ಲೋಹಿತಸ್ಯ ಮಧ್ಯಮಾಯಾಂ ಕ್ಷಾಯಾಯಾಂ" (೨-೧೩) ಎಂಬುದಾಗಿ ಉಲ್ಲೇಖ ವಿಷ್ಣುವನ್ನು ತೋರಿಸಿದ್ದಾರೆ.

ವಕ್ತವ್ಯ ಗ್ರಹ ಪರ್ವತ ಸತತ ಅವಿಚ್ಛಿನ್ನ ಗಳಿಂದ ಲಿಂಗಧಾರಣದ ಪ್ರತ್ಯಕ್ಷ ಸಂಬಂಧವಾಗುವುದು, ಲಿಂಗದ ಹೊರಗಿನ ಒಂದು ವಸ್ತುವಿನ ಹಾಗೆ ಲಿಂಗ ಇಲ್ಲದೇ ತಾಗಿದರೆ ಎಂಬ ಪ್ರಸಂಗದಲ್ಲಿ ಮೂರ್ತಿ ಕಲ್ಪನೆಯ ಕಡೆ ಲಿಂಗವನ್ನು ಧರಿಸಿದ ದೇಹವು ಹಸಿ ಹೊಂದಿ ಹೋಗಿದರೆ ಲಿಂಗವು ಬೇರೆ ಕಡೆ ಹೋಗುವುದು. ಲಿಂಗವನ್ನು ಕಟ್ಟಿಕೊಂಡು ಅದರ ಸಂಬಂಧದಿಂದ ಇಷ್ಟಲಿಂಗ ಧಾರಣೆ ಮಾಡುವುದು ... ಲಿಂಗಧಾರಣವನ್ನು ನಿಷೇಧಿಸುವುದು ... ಮುಕ್ತಿ ಸಾಧನವಾದ ಪ್ರಸಂಗಗಳಲ್ಲಿ ಲಿಂಗಧಾರಣೆಯನ್ನು ವಿಧಿಸಿದ ಮೂಲ ಗ್ರಂಥಗಳು ... ಲಿಂಗಧಾರಣೆಯ ಆವಶ್ಯಕತೆಯನ್ನು ಪ್ರತಿಪಾದಿಸುವ ಶ್ರುತಿಗಳು ಪ್ರಮಾಣವಾಗಿರುವುವೆಂದು ಸ್ಪಷ್ಟವು.

(ಸಶೇಷ)

ಮಹನೀಯರ ಹಿತೋಕ್ತಿಗಳು.

(ಹಿಂದಿನಿಂದ ಮುಂದುವರಿದುದು)

119 ಈ ದೇಹವು ಅಸ್ಥಿ ಮಜ್ಜಾ ರಕ್ತ ಮಾಂಸ ಅಸ್ಥಿ ಮೊದಲಾದ ಹೇಯವಸ್ತುಗಳ ಸಂಚಯವಾಗಿರುವುದು. ಇಂಥ ದೇಹದಲ್ಲಿ ಅಭಿಮಾನವನ್ನಿಟ್ಟು ... ಪರಮಾತ್ಮನ ಧ್ಯಾನವನ್ನು ಮರೆತು ... ಆಧ್ಯಾತ್ಮಿಕ ಅಧಿಭೌತಿಕ ಆಧಿದೈವಿಕ ... ತಾಪತ್ರಯಗಳಿಂದ ... ಶರೀರವೇ ನಾನೆಂದು ತಿಳಿದು ... ಮುಕ್ತಿ ಮಾರ್ಗವನ್ನು ಹಿಡಿದು ಸಾಧಿಸುವ ಸಂಗತಿ ... ಅದನ್ನು ಬಿಡುವರು.

120 ಜನನ ಮೃತ್ಯು ಎನ್ನುವ ನಾನು ಹುಟ್ಟಿದವನು ಎಂದು ನೀನು ಹೇಳಿಕೊಂಡು ಮರೆತರೆ ನಿನ್ನನ್ನು ... ನಿನ್ನ ಗತಿ ಏನು? ... 'ನನ್ನ ಗೃಹ, ನನ್ನ ಮಕ್ಕಳು' ಎಂಬ ಪ್ರಪಂಚದಲ್ಲಿ ಮೋಹಿತರಾಗಿ ... 'ನನ್ನ ಕೀರ್ತಿಯಿಂದಲೇ ಈ ಜಗತ್ತೆಲ್ಲಾ ಬೆಳಗುವುದು' ಎಂಬ ಹೆಮ್ಮೆಯಿಂದ ಮೆರೆಯುವನು ... ಈ ಪ್ರಪಂಚದ ವ್ಯಾಮೋಹ ... ಧರ್ಮದಿಂದ ನಡೆಯದೇ ... ಆತನು ಮರಣ ಎಂಬುದು ನನ್ನ ಸಂಪತ್ತನ್ನು ಕೊಂಡು ಹೋಗದಿರದು ಅಲ್ಲದೆ—

ಎಲ್ಲರಿಗೆ ಭೋಗ ಬಾರದು ಸ್ಥಿರವಲ್ಲ ಸಂಪತ್ತೆ ... |
ನರಪಾರಾರ್ಥರ ... ಸಾವದರಿಂದ ... ||
... ||

ಎಂದು ಬಸವ ಪುರಾಣದಲ್ಲಿ ಹೇಳಿರುವ ... ರಲ್ಲಿ ನಾವು ಪ್ರಪಂಚದಲ್ಲಿರುವರು.

121 ಎಲೈ ಮನಸ್ಸೇ 'ನನ್ನನ್ನು ಅನಿತ್ಯದಿಂದ ನಿತ್ಯಕ್ಕೆ ... ಅಂಧಕಾರದಿಂದ ಬೆಳಕಿಗೆ ... ಕೊಂಡು ಹೋಗು' ಎಂದು ... ಬೇರೆ ಯಾವ ಧನ ... ಪ್ರಾರ್ಥಿಸಬೇಡ.

122 ಕನ್ನಡವನ್ನು ಪಡೆದ ... ಯೋಗಿಗಳು ... ಆತ್ಮನನ್ನು ನೋಡಿದರೆ ... ಪರಮಾತ್ಮನ ಸಿದ್ಧಿಗೆ ... ಅನುಗ್ರಹವೆಂದು ತಿಳಿಯಬೇಕು ... ಪರಮಾತ್ಮನನುಗ್ರಹವೆಂದು ತಿಳಿ ಯಾವುದು ದೊರೆತರೂ ಅದು ಪರಮಾತ್ಮನ ಅನುಗ್ರಹವೆಂದು ತಿಳಿ.

123 'ಶರೀರವನ್ನು ... ನಾನೆಂಬ ...' ಎಂಬ ... ಅರ್ಥ ... ಶರೀರವನ್ನು ಬೆಳೆಸುವುದಕ್ಕಾಗಿ ... ನಮ್ಮ ಆತ್ಮನ ... ಧರ್ಮಮಾರ್ಗದಿಂದ ... ಜ್ಞಾನ ... ದೇಹವು ... ನಿಜವಾದ ... ಜ್ಞಾನವನ್ನು ಸಂಪಾದಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿರುವುದು. ಮತ್ತು—

ಜೀವನ ಜೀವ ... ಪ್ರತ್ಯಕ್ಷ ... |
... ||

ಎಂಬ ಅರ್ಥವನ್ನು ತಿಳಿಯುವುದು.

124 ಎಲೈ ಮನಸ್ಸೇ! ಯಾರ ... ಯಾರು ಪರಿಣಾಮವನ್ನು ... ತಿಳಿಯದಿರುವರೋ ... ವಿಷಯದಲ್ಲಿ ಸಕ್ತರಾಗಿ ... ಯಾರು ... ಅತ್ಯಂತ ... ಜ್ಞಾನವನ್ನು ... ಅಂಥವರಿಗೆ ಮುಕ್ತಿ ದೊರೆಯುವುದಿಲ್ಲ.

125 ಈ ಶರೀರವು ... ಎಂಬುದನ್ನು ... ಪ್ರತಿಯೊಂದು ... ದೇಹದ ... ಸುಖ ... ಪರಮಾರ್ಥ ... ಗುಣಗಳಿಂದ ... ಮನುಷ್ಯನು ... ಈ ಸಂಸಾರದಲ್ಲಿ ... ಶ್ರೇಯಸ್ಕರವು.

126 ನಮಗಿರುವ ಕರ್ತವ್ಯಗಳಲ್ಲಿ ನಮ್ಮ ಮುಖ್ಯ ಸಂಕಲ್ಪಗಳಿಂದ ... ಪರಮಾತ್ಮನ ... ಸಾಕ್ಷಾತ್ಕಾರ ... ನಿಶ್ಚಯವಾಗಿ ... ಸುಖವಾಸನೆಗಳನ್ನು ... ಮನಸ್ಸನ್ನು ... ಭಾವನೆ ... ಉಪಾಯವು ... ವೈರಾಗ್ಯಭಾವನೆಯೇ ... ಸಾಧನವು ನಮಗಿಂತ ಉತ್ತಮಸ್ಥಿತಿಗೆ ಬಂದವರನ್ನು ನೋಡಿ ... ಅಂಥವರನ್ನು ಕಂಡು ... ನಮ್ಮ ... ಅಭ್ಯಾಸ ... ಪ್ರಯತ್ನವನ್ನು ... ಉತ್ತಮರಾಗುವ ... ಆಶ್ರಯ ... ಅಸತ್ಯ ... (ಅಸತ್ಯದಿಂದ ... ದೊರೆಯುತ್ತದೆ) ಎಂಬ ಶ್ರುತಿಗೆ ... ಕಳೆದುಕೊಳ್ಳಬೇಕೆನ್ನುವವರಿಗೆ ಸತ್ಸಂಗದ ಬಲವೇ ಬಲವು.

(ಸಶೇಷ)

ಎಂ. ಮಲ್ಲಿಕಾರ್ಜುನಾರಾಧ್ಯ ... ಮಳೀಮಠ ...

ವಿವಾಹಮಹೋತ್ಸವವು

ಗುಳೇದಗುಡ್ಡ

——

ಶಾಸ್ತ್ರೋಕ್ತವಿರುವ ಷೋಡಶಸಂಸ್ಕಾರಗಳಲ್ಲಿ ವಿವಾಹಸಂಸ್ಕಾರವು ಅತ್ಯಂತ ಮಹತ್ವದ್ದಾಗಿದೆ. ಈ ವಿವಾಹಸಂಸ್ಕಾರವು ಐಹಿಕ ಪಾರಮಾರ್ಥಿಕ ಫಲಪ್ರದಾಯಕವಾಗಿರುವುದು ಆದುದರಿಂದಲೇ ಶ್ರುತಿಯು "ಪಶ್ಚಾತ್ ಗೃಹಸ್ಥಃ ಸ್ಯಾತ್" ಎಂದು ಅನುಮೋದಿಸಿರುವುದು. ಅಸ್ತು.

ವಿಜಾಪೂರ ಜಿ|| ಗುಳೇದಗುಡ್ಡ ಶಹರದಲ್ಲಿ ಮ|| ರಾ|| ಶಿವಲಿಂಗಪ್ಪನವರು ಜಿಗಿ ... ಪುತ್ರ ಚಿ|| ಶಿವಪ್ಪನಿಗೆ ... ಮ|| ರಾ|| ಸಿದ್ದಪ್ಪನವರ ... ಪುತ್ರಿ ಸೌ|| ಶಿವಲಿಂಗವ್ವನನ್ನು ... ಜೇ|| ಶು|| ... ಸೋಮವಾರ ದಿವಸ ವಿವಾಹಮಹೋತ್ಸವವನ್ನು ನೆರವೇರಿಸಿದರು. ಮ|| ರಾ|| ಸಿದ್ದಪ್ಪನವರು ತಮ್ಮ ... ಶ್ರೀ ... ದಾನವನ್ನು ಮಾಡಿ ... ವಿವಾಹಸಂಸ್ಕಾರವಿಧಿಗಳು ಸಶಾಸ್ತ್ರೀಯವಾಗಿ ನಡೆದವು. ಈ ಸಂಸ್ಕಾರವು ... ಮ|| ಪಂಚಾಚಾರ್ಯರಪ್ಪನವರಿಂದ ನೆರವೇರಿಸಲ್ಪಟ್ಟಿತು. ಈ ವಿವಾಹಮಹೋತ್ಸವದಲ್ಲಿ ಇಲ್ಲಿಯ ಸುಪ್ರಸಿದ್ಧ ಶ್ರೀಮಂತರೂ ... ಸಭೆಗೆ ಬಂದಿದ್ದರು. ಈ ವಿವಾಹಮಹೋತ್ಸವ ಸಮಾರಂಭದಲ್ಲಿ ಇಲ್ಲಿಯ ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಚಾರಕರ ... ಶ್ರೀ ಜಗದ್ಗುರು ಪಂಚಾಚಾರ್ಯರು ...

ಓರ್ವ ಪ್ರತ್ಯಕ್ಷದರ್ಶಿ

——

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಶಸ್ತಿ ಮತ್ತು

ವಿವಾಹಮಹೋತ್ಸವ.

——

ಗದಗ ನಿವಾಸಿಗಳಾದ ಶ್ರೀ|| ವಿ ... ನಿವಾಸಿ ... ಮ|| ರಾ|| ... ಚಿ|| ... ರವರ ... ಸೌ|| ... ಎಂಬ ವಧುವನ್ನು ... ದಿವಸ ... ಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿತು. ... ಶ್ರೀ|| ಗುರುಪಾದಸ್ವಾಮಿಗಳವರು ... ಶ್ರೀ|| ಗುರು ಸಿದ್ಧಲಿಂಗಾರಾಧ್ಯರವರು ... ಮ|| ರಾ|| ... ವಿವಾಹಮಹೋತ್ಸವ ... ಪಂಚಾಚಾರ್ಯ ... ಲಗ್ನ ... ಶ್ರೀ ಜಗದ್ಗುರು ಪಂಚಾಚಾರ್ಯರ ... ಶ್ರೀ ಪಟ್ಟಾಧ್ಯಕ್ಷ ... ವಿದ್ವಾಂಸರು ... ರಾತ್ರಿ 7 ಘಂಟೆಗೆ ... ಶ್ರೀ ಜಗದ್ಗುರು ಪಂಚಾಚಾರ್ಯರ ... ಸಂಚಿಕೆ ... ಹಣವನ್ನು ... ಶ್ರೀ ಜಗದ್ಗುರು ಪಂಚಾಚಾರ್ಯಪ್ರಭಾ ಪತ್ರಿಕೆಗೆ ... ರೂಪಾಯಿಗಳನ್ನು ... ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ... 2 ರೂಪಾಯಿಗಳನ್ನು ... ಸಂಘಕ್ಕೆ ... ಕೊಟ್ಟರು.

ಪ್ರತ್ಯಕ್ಷದರ್ಶಿ

ಪಂಚಾಚಾರ್ಯ ಪ್ರಭಾ

—

೧೯೨೫ನೇ ಜುಲೈ ತಾ|| ೧ನೇ ಸೋಮವಾರ

ಲಿಂಗಧಾರಣವು ವೇದೋಕ್ತ ವಾದುದು.

ಯಚ್ಛಂದಸಾಮೃಷಭೋ ಎಂಬ ತೈತ್ತಿರೀಯ ಶ್ರುತಿಯು ಮೋಕ್ಷವನ್ನು ಸಾಧಿಸುವುದಕ್ಕಾಗಿ ಏವ ಲಿಂಗಧಾರಣದಿಂದಾಗುವ ಸುಜ್ಞಾನವನ್ನು ವಿಧಾನಮಾಡಿರುವುದು. ಈ ಶ್ರುತಿಯನ್ನು ಹೇಳುವುದಕ್ಕೆ ಮುಂಚೆ ತೈತ್ತಿರೀಯದಲ್ಲಿ ದಹರಂ ವಿಪಾಪ್ಮಂ ಪರವೇಶ್ಮಭೂತಂ ಇತ್ಯಾದಿ ವಾಕ್ಯಗಳಿಂದ ಹೃದಯ ಕಮಲವನ್ನೂ ತಸ್ಯಾಂತೇ ಸುಷಿರಂ ... ಹೃದಯಾಕಾಶದೊಳಗೆ ಒಂದು ಅತಿ ಸೂಕ್ಷ್ಮವಾದ ಪ್ರದೇಶವುಂಟೆಂಬುದಾಗಿಯೂ ಅದನ್ನು ತಸ್ಯ ಮಧ್ಯೇ ವಹ್ನಿಶಿಖಾ ಎಂದು ವರ್ಣನಮಾಡಿ ತಸ್ಯಾಃ ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ' ಬ್ರಹ್ಮರಂಧ್ರದಲ್ಲಿ ಪರಮಾತ್ಮನಿರುವನೆಂದು ಹೇಳಿರುವುದು. ಈ ದಿವಸವಾಕ್ಯಗಳನ್ನು ಪರಿಶೀಲನೆ ಮಾಡಿದ್ದಾದರೆ ಮುಂದೆ ಬರುವ 'ಅಮೃತಸ್ಯ ದೇವಧಾರಣೋ' ಎಂಬ ಈ ತೈತ್ತಿರೀಯ ಶ್ರುತಿಯ ಮಂತ್ರಕ್ಕೂ, ದೇವಶಬ್ದವಾಚ್ಯನಾದ ಜ್ಯೋತಿರೂಪನಾದ ಪರಮಾತ್ಮನ ಸ್ವರೂಪವನ್ನು ಸಾಕ್ಷಾತ್ಕಾರವಾಗಿ ಧರಿಸಬೇಕೆಂಬ ಏತದ್ವಿಷಯದ ವಿಚಾರವೇ ವಿಷಯವೆಂದು ಜ್ಯೋತಿರ್ಗಮ್ಯವಾದ ಮೋಕ್ಷ ವಿಷಯದಿಂದ ಆ ದಿವಸ ಶ್ರುತಿವಾಕ್ಯಗಳಿಗೂ ಸಮಂಜಸವಾಗುತ್ತದೆ. ಹಾಗಿಲ್ಲದೆ ಇದೆಲ್ಲ ಕೇವಲ ಸೂಕ್ಷ್ಮಬ್ರಹ್ಮೋಪಾಸನವನ್ನು ಹೇಳುವ ಮುಂದಿನ ಯಚ್ಛಂದಸಾಂ ಎಂಬ ಶ್ರುತಿಗೆ ಇಷ್ಟಲಿಂಗೋಪಾಸನೆಯನ್ನು ಹೇಳಿದರೆ ಪೂರ್ವಾಪರ ವಿರೋಧವುಂಟಾಗುವುದೆಂದೂ ಈ ಶ್ರುತಿಯಲ್ಲಿ 'ಲಿಂಗ' ಎಂಬ ವಿಶೇಷ ಶಬ್ದ ಪ್ರಯೋಗವು ಕಂಡುಬರುವುದಿಲ್ಲವಾದುದರಿಂದ ಶರೀರದಲ್ಲಿ ಮೋಕ್ಷಕ್ಕಾಗಿ ಇಷ್ಟಲಿಂಗವನ್ನು ಧರಿಸುವೆನೆಂದು ಇಷ್ಟಲಿಂಗ ಧಾರಣಪರವಾಗಿಯೇ ನಿಯಮದಿಂದ ಅರ್ಥಮಾಡುವುದು ಸರಿಯಾದುದಲ್ಲವೆಂದೂ ಶಂಕಿಸಬಹುದು. ಏಕೆಂದರೆ—'ಅಮೃತಸ್ಯ ದೇವಧಾರಣೋ ಭೂಯಾಸಂ' ಎಂಬ ವಾಕ್ಯಕ್ಕೆ ಗುರುವಿನಿಂದ ದೀಕ್ಷಾಪೂರ್ವಕವಾಗಿ ಕೊಡಲ್ಪಟ್ಟ ಇಷ್ಟಲಿಂಗವನ್ನು ದೇಹದಲ್ಲಿ ಧರಿಸುವೆನೆಂದು ಅರ್ಥಮಾಡುವುದೇ ಯುಕ್ತವಾದುದೆಂಬುದು ವೀರಶೈವ ಭಾಷ್ಯಕಾರರ ಆಶಯವಾಗಿದೆ. 'ಪದ್ಮಕೋಶಪ್ರತೀಕಾಶಂ' 'ತಸ್ಯಾಂತೇ ಸುಷಿರಂ', 'ತಸ್ಯಾಃ ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ' ಇತ್ಯಾದಿ ಸೂಕ್ಷ್ಮಬ್ರಹ್ಮೋಪಾಸನೆಯನ್ನು ವಿಧಿಸುವ ವಾಕ್ಯಗಳು ಮಾತ್ರ 'ಯಚ್ಛಂದಸಾಂ' ಎಂಬ ಶ್ರುತಿಗೆ ನಿಯಮದಿಂದ ಪೂರ್ವಶ್ರುತಿಯು ಪುರೋವಾದವೆಂದು ಹೇಳಲು ಆಗುವುದಿಲ್ಲ. ಆದರೆ ಸೂಕ್ಷ್ಮಬ್ರಹ್ಮವನ್ನು ತೋರಿಸುವ ಈ ಶ್ರುತಿಗಳು ಹೇಗೆ ಪೂರ್ವ ಶ್ರುತಿಗಳೆನಿಸುತ್ತವೆಯೋ ಹಾಗೆಯೇ 'ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ' ಇತ್ಯಾದಿ ಶ್ರುತಿಗಳು ಹಿಂದೆ ಹೇಳಲ್ಪಟ್ಟಿವೆ. ಈ ಶ್ರುತಿಗಳು ದೇಹದಲ್ಲಿ ಇಷ್ಟಲಿಂಗಧಾರಣವನ್ನು ವಿಧಾನಮಾಡುವದರಿಂದ ಈ ಶ್ರುತಿಗಳೇ ಪೂರ್ವಶ್ರುತಿಯ ಪುರೋವಾದವಾಗುತ್ತವೆ. ಇಂಥ 'ಸರ್ವಲಿಂಗಂ ಸ್ಥಾಪಯತಿ' ಎಂಬ ಹಿಂದಿನ ಶ್ರುತಿಯು ಇಷ್ಟಲಿಂಗ ಧಾರಣವನ್ನು ಮಾತ್ರ ವಿಧಾನಮಾಡಿತಲ್ಲದೆ, ಈ ಲಿಂಗ ಧಾರಣದಿಂದಾಗುವ ಫಲವನ್ನು ವಿಧಾನಮಾಡಿಲ್ಲವು. ಲಿಂಗಧಾರಣದಿಂದ ಪ್ರಯೋಜನವಿಲ್ಲದಿದ್ದರೆ ಯಾವ ಮನುಷ್ಯನಿಗೂ ಅಂಥ ಲಿಂಗಧಾರಣದಲ್ಲಿ ಪ್ರವೃತ್ತಿಯು ಹುಟ್ಟುವುದಿಲ್ಲ. ಹಿಂದಿನ ಸರ್ವಲಿಂಗವಾಕ್ಯದಿಂದ ಇಷ್ಟಲಿಂಗಧಾರಣವು ವಿಧಾನಮಾಡಲ್ಪಟ್ಟ ಮೇಲೆ ಲಿಂಗಧಾರಣದ ಫಲವು ವಿಧಾನಮಾಡಲ್ಪಡಬೇಕಾದುದು ಅವಶ್ಯಕವಾದ್ದರಿಂದ 'ಯಚ್ಛಂದಸಾಂ ... ಅಮೃತಸ್ಯದೇವಧಾರಣೋ ಭೂಯಾಸಂ' ಎಂಬ ಉತ್ತರಶ್ರುತಿಯು ಆದೇ ಲಿಂಗಧಾರಣವನ್ನು ಅನುವಾದಮಾಡಿ ಮೋಕ್ಷರೂಪವಾದ ಮಹಾಫಲವನ್ನು ವಿಧಿಸಿರುತ್ತದೆ. ಆದ್ದರಿಂದ ಪೂರ್ವವಾಕ್ಯ ಉತ್ತರವಾಕ್ಯಗಳಿಗೆ ಯಾವ ವಿರೋಧವೂ ಸಂಭವಿಸಲಾರದು. ಹಾಗಿಲ್ಲದೆ ದಹರಂ ಕಂಪದಲ್ಲಿ ಸೂಕ್ಷ್ಮಬ್ರಹ್ಮೋಪಾಸನಪರವಾಗಿ ಅಥವಾ ಇತರ ದೇವತಾಪರವಾಗಿ ಅರ್ಥವಾಗುವುದಾದರೆ ಪ್ರಕರಣವಿರೋಧವು ಸಂಭವಿಸುವುದಲ್ಲದೆ ಹಿಂದಿನ 'ಸರ್ವಲಿಂಗಂ' ಇತ್ಯಾದಿ ವಾಕ್ಯಗಳಿಗೆ ಯಾವ ಪ್ರಯೋಜನವೂ ಇಲ್ಲದಂತಾಗುವುದು. ಆದ್ದರಿಂದ 'ಯಚ್ಛಂದಸಾಂ' ಎಂಬ ಶ್ರುತಿಗೆ 'ತಸ್ಯಾಃ ಶಿಖಾಯಾ ಮಧ್ಯೇ' ಇತ್ಯಾದಿ ವಾಕ್ಯಗಳು ಪುರೋವಾದಗಳಾಗದೆ 'ಸರ್ವಲಿಂಗಂ ಸ್ಥಾಪಯತಿ' ಇತ್ಯಾದಿ ದೇಹದಲ್ಲಿ ಇಷ್ಟಲಿಂಗವನ್ನು ಧರಿಸಬೇಕೆಂಬ ವಾಕ್ಯಗಳೇ ಪುರೋವಾದಗಳೆನಿಸುತ್ತವೆ. ಇಂಥ ಪುರೋವಾದದಿಂದ ಸಿದ್ಧವಾದ ಸ್ಥೂಲಲಿಂಗಧಾರಣವನ್ನು ಈ 'ಯಚ್ಛಂದಸಾಂ' ಎಂಬ ಶ್ರುತಿಯು ಅನುವಾದಮಾಡಿಕೊಂಡು 'ಅಮೃತಸ್ಯ ದೇವಧಾರಣೋ ಭೂಯಾಸಂ' ಎಂಬ ವಾಕ್ಯಗಳಿಂದ ಮೋಕ್ಷರೂಪವಾದ ಫಲವನ್ನು ವಿಧಾನಮಾಡಿದೆಯೆಂದು ಸ್ಪಷ್ಟವಾಗುತ್ತದೆ. 'ಅಮೃತಸ್ಯ ದೇವಧಾರಣಃ' ಎಂಬ ವಾಕ್ಯವು ದೇಹದಲ್ಲಿ ಇಷ್ಟಲಿಂಗಧಾರಣವನ್ನು ವಿಧಾನಮಾಡುವುದಕ್ಕಾಗಿ ಹೊರಟಿರುವುದಲ್ಲದೆ ಲಿಂಗಧಾರಣದ ಫಲವನ್ನು ವಿಧಾನಮಾಡುವುದಕ್ಕೆ ಒಂದುದಲ್ಲವೆಂದು ಆಕ್ಷೇಪಿಸುವುದಾದರೆ ಮುಂದೆ ಅದೇ ತೈತ್ತಿರೀಯದಲ್ಲಿ "ಸರ್ವಲಿಂಗಂ ಸ್ಥಾಪಯತಿ" ಎಂಬ ವಾಕ್ಯದಿಂದಲೇ ಅಂಗದಲ್ಲಿ ಇಷ್ಟಲಿಂಗಧಾರಣವು ವಿಧಾನಮಾಡಲ್ಪಟ್ಟಿರುತ್ತದೆಂದು ವೀರಶೈವಾಚಾರ್ಯರು ಲಿಂಗಧಾರಣ ವಿಧಿಯ ಯುಕ್ತತ್ವವನ್ನು ಸ್ಥಾಪಿಸಿರುವರು. ಮತ್ತೊಂದು ಪುನಃ 'ಅಮೃತಸ್ಯ ದೇವಧಾರಣೋ ಭೂಯಾಸಂ' ಎಂದು ಅದೇ ಶ್ರುತಿಯು ಹೇಳುವುದರಿಂದ ಲಿಂಗಧಾರಣ ವಿಧಿಯ ತತ್ವವನ್ನು ಅಂಗೀಕಾರ ಮಾಡುವುದಾದರೆ ಪ್ರಮಾಣಾಂತರಗಳಿಂದಲೂ ಲಿಂಗಧಾರಣವು ವಿಧಾನಮಾಡಲ್ಪಟ್ಟಂತಾಗುವುದು. ಆಗ ಅಪ್ರಾಪ್ತಪ್ರಾಪಕವಾದ ವಿಧಿಲಕ್ಷಣಕ್ಕೆ ಭಂಗ ಉಂಟಾಗಬೇಕಾಗುವುದು. ಇದಲ್ಲದೆ ಈ ವಾಕ್ಯವು ಲಿಂಗಧಾರಣವನ್ನು ವಿಧಿಸುವುದೆಂದರೆ ಹಿಂದೆ ಸಿದ್ಧವಾದ ಲಿಂಗಧಾರಣ ವಿಧಿ ನಿಷ್ಪ್ರಯೋಜನವಾಗುವುದು. 'ಅಮೃತಸ್ಯ ದೇವಧಾರಣಃ' ಎಂಬ ವಾಕ್ಯವೇ ವ್ಯರ್ಥವಾಗಿ ಹೋಗಬೇಕಾಗುವುದು. ಹೀಗೆ ಒಂದು ವಾಕ್ಯವನ್ನೇ ವ್ಯರ್ಥಮಾಡುವುದಕ್ಕಿಂತ ಆ ವಾಕ್ಯದೊಳಗಣ ಯಾವುದಾದರೂ ಒಂದು ಪದಕ್ಕೆ ಲಕ್ಷಣೆಯನ್ನು ಕಲ್ಪಿಸಿ ಆ ವಾಕ್ಯವನ್ನು ಬದುಕಿಸುವುದು ಶ್ರೇಯವು. ಮೀಮಾಂಸಕಾರರು 'ಏಕದಶಪಾಲೋಪೂರ್ವದ್ವಾನಿತ್ಯಸಿದ್ಧಿರವಪ್ಯತಿ' ಎಂದು ಪದಸಂಬಂಧವನ್ನು ಹೇಳಿ ಅದನ್ನು ಕೊಡಬೇಕೆಂದು ವಿಧಿಸುವ ಸಂದರ್ಭದಲ್ಲಿ 'ದಿವಪ್ಯತಿ' ಎಂಬ ಉತ್ತರವಾಕ್ಯಕ್ಕೆ ವೈಯರ್ಥ್ಯವು ಒದಗುವುದರಿಂದ ಒಂದ ವೈಯರ್ಥ್ಯವನ್ನು 'ಪಚ ವತ್ಸ್ಯೈವ ವಪಾ ಕಂಯಾ" ಎಂಬ ವಾಕ್ಯದಲ್ಲಿರುವ ವಪಾ ಪದವೊಂದಕ್ಕೆ ಲಕ್ಷಣೆಯನ್ನು ಸ್ವೀಕಾರಮಾಡುವ ಮೂಲಕವಾಗಿ "ದ್ವಿರವದ್ಯತಿ" ಎಂಬ ವಾಕ್ಯಕ್ಕೆ ಬರುವ ವ್ಯರ್ಥತೆಯನ್ನು ಪರಿಹರಿಸಿರುತ್ತಾರೆ. ಆದರಿಂದ 'ಅಮೃತಸ್ಯದೇವಧಾರಣೋಭೂಯಾಸಂ' ಎಂಬುವ ವಾಕ್ಯಕ್ಕೆ ಸಂಭವಿಸುವ ವೈಯರ್ಥ್ಯವನ್ನು ಯಾವುದಾದರೂ ಒಂದು ಪದಕ್ಕೆ ಲಕ್ಷಣಾಸ್ವೀಕಾರ ಮಾಡುವ ಮೂಲಕ ಪರಿಹರಿಸಿಕೊಳ್ಳಬೇಕಾಗಿಲ್ಲವು. ಅಂಥ ಲಕ್ಷಣಾಸ್ವೀಕಾರವಮಾಡದೆ ಆ ವಾಕ್ಯವೈಯರ್ಥ್ಯವನ್ನು ಪರಿಹಾರಮಾಡಿಕೊಳ್ಳಲು ಉಪಾಯವು ಇರುವಲ್ಲಿ ಜಘನ್ಯವಾದ ಲಕ್ಷಣಾವೃತ್ತಿಯನ್ನು ಸ್ವೀಕಾರಮಾಡುವುದುತ್ತಮವು. ಆದುದರಿಂದ 'ಅಮೃತಸ್ಯದೇವಧಾರಣೋ ಭೂಯಾಸಂ' ಎಂಬ ವಾಕ್ಯಕ್ಕಿಂತ ಮುಂಚಿತವಾಗಿಯೇ ಅದೇ ಶ್ರುತಿಯಲ್ಲಿ ಹೇಳಿದ 'ಸರ್ವಲಿಂಗಂ ಸ್ಥಾಪಯತಿ' ಎಂಬ ವಾಕ್ಯವು ಅಂಗದಲ್ಲಿ ಶಿವಲಿಂಗಧಾರಣವನ್ನು ವಿಧಾನಮಾಡಿ ಮೋಕ್ಷರೂಪವಾದ ಮಹಾಫಲವನ್ನು ವಿಧಾನಮಾಡುವುದಕ್ಕಾಗಿಯೇ 'ಅಮೃತಸ್ಯ ದೇವಧಾರಣೋ ಭೂಯಾಸಂ' ಮೋಕ್ಷವನ್ನು ಪಡೆಯುವುದಕ್ಕಾಗಿ ಲಿಂಗವನ್ನು ಧರಿಸುವೆನು ಎಂದು ಅರ್ಥಮಾಡುವುದರಿಂದ ಪೂರ್ವೋತ್ತರ ವಾಕ್ಯಗಳಿಗೆ ಅನುಕೂಲತೆಯುಂಟಾಗಿ ಯಾವ ವಾಕ್ಯಗಳೂ ವ್ಯರ್ಥಗಳಾಗಲಾರವು. ಆದುದರಿಂದ 'ಯಚ್ಛಂದಸಾಮೃಷಭೋ' ಎಂಬ ಮಂತ್ರದಲ್ಲಿರುವ 'ಅಮೃತಸ್ಯ ದೇವಧಾರಣೋ ಭೂಯಾಸಂ' ಎಂಬ ವಾಕ್ಯವು ಸರ್ವಲಿಂಗಾದಿ ಪೂರ್ವವಾದದಿಂದ ವಿಧಿವಿಹಿತವಾದ ಲಿಂಗಧಾರಣವನ್ನು ದೇವಧಾರಣಪದದಿಂದ ಅನುವಾದಮಾಡಿ 'ಅಮೃತಸ್ಯ' ಎಂಬ ಪದದಿಂದ ಭವನಿವೃತ್ತಿರೂಪವಾದ ಮೋಕ್ಷಫಲವನ್ನು ತೋರಿಸುವುದಕ್ಕಾಗಿಯೇ ಹೊರಟಿರುವುದೆಂದು ಪೂರ್ವಾಪರಮಂತ್ರವಿಚಾರದಿಂದ ಯಚ್ಛಂದಸಾಂ—ಅಮೃತಸ್ಯ—ದೇವಧಾರಣಂ ಶರೀರಂ ಮೇ ವಿಚರ್ಷಣಂ ಜಿಹ್ವಾ ಮೇ ಮಧುಮತ್ತಮಾ ಕರ್ಣಾಭ್ಯಾಂ ಭೂರಿವಿಶ್ರುತಂ' ಎಂಬ ಸ್ಥೂಲ ಶರೀರದಲ್ಲಿ ಶಿವದೀಕ್ಷಾಪೂರ್ವಕವಾಗಿ ಶಿವಲಿಂಗವನ್ನು ಧರಿಸುವುದರಿಂದ ಈ ಸ್ಥೂಲಶರೀರವು ಪರಿಶುದ್ಧವಾಗುವುದು. ನಾಲಿಗೆಯಲ್ಲಿ ಶಿವಸಂಬಂಧವಾದ ಮಧುರವಾಕ್ಯಗಳು ಹೊರಡುವವು. ಕಿವಿಗಳಿಂದ ಶಿವಜ್ಞಾನಯೋಗ್ಯಗಳಾದ ಕಾರ್ಯಕಾರಣಸಮೂಹವೂ ಶ್ರುತವಾಗುವುದು. ಶರೀರಾಂತ್ಯವಿಯೋಗಾವಸರದಲ್ಲಿ 'ಯಥಾ ನದ್ಯಃ ಸ್ಯಂದಮಾನಾಃ' ಎಂಬ ಶ್ರುತಿಗನುಗುಣವಾಗಿ ಗಂಗಾದಿನದಿಗಳು ಸಮುದ್ರಕ್ಕೆ ಸೇರಿ ತಮ್ಮ ತಮ್ಮ ನಾಮರೂಪಕ್ರಿಯೆಗಳನ್ನು ತ್ಯಜಿಸಿ ಸಮುದ್ರಾಕಾರವಾಗುವಂತೆ ಅಂಗಶಬ್ದವಾಚ್ಯನಾದ ಜೀವಾತ್ಮನು ಪರಮಾತ್ಮನ ಏಕೀಕರಿಸುವುದೇ ಈ ದೇಹದಲ್ಲಿ ಸ್ಥೂಲಲಿಂಗಧಾರಣದ ಪರಮೋದ್ದೇಶವಾಗಿದೆಯೆಂದು ಈ ಶ್ರುತಿ ಆಶಯವಾಗಿದೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಕಳೆದ ದ್ವಾದಶೀ ದಿವಸ ಮಹಾಮಾತೃಶ್ರೀಯವರ ವಾರ್ಷಿಕ ಶ್ರಾದ್ಧ ಕ್ರಿಯೆಗಳನ್ನು ತೀರಿಸಿಕೊಂಡು, ಬೆಂಗಳೂರಿಗೆ ಪ್ರಯಾಣಮಾಡಿದರು.

ಶ್ರೀಯುತ ಎಂ ಸಿದ್ಧಲಿಂಗಯ್ಯನವರನ್ನು ಶಿಕ್ಷಣ ಪ್ರೊಫೆಸರರನ್ನಾಗಿ ನಿಯಮಿಸಿ ಮಹಾರಾಜಾ ಕಾಲೇಜಿಗೆ ವರ್ಗಾಯಿಸಿದ್ದಾರೆ.

ಸಬ್ ಜಡ್ಜರಾಗಿರವ ಶ್ರೀಯುತ ಎಂ ಎಸ್ ಸುಬ್ಬಣ್ಣನವರಿಗೆ ಹಿಂದಿನ ರಜೆಯು ಜತೆಗೆ ಸೆಪ್ಟಂಬರ್ ೧೨ ರವರೆಗೆ ಸಂಬಳವಿಲ್ಲದೆ ರಜಾಕೊಟ್ಟಿದೆ.

ಕೃಷ್ಣರಾಜೇಂದ್ರ ನೆಯ್ಗೆ ಶಿಕ್ಷಣ ಶಾಲೆಗೆ ಪ್ರಧಾನ ಅಧಿಕಾರಿಯೊಬ್ಬರು ಬೇಕಾಗಿದೆಯೆಂದೂ ಆ ಕೆಲಸಕ್ಕೆ ಸೇರಲಿಚ್ಛೆಯುಳ್ಳವರು ೧೯೨೫ ಜುಲೈ ೨೫ ರೊಳಗಾಗಿ ಅರ್ಜಿಗಳನ್ನು ಜನರಲ್ ಸಕ್ರೆಟರಿಗಳಿಗೆ ಕಳುಹಿಸಬೇಕೆಂದು ಪ್ರಭುತ್ವದ ಅಪ್ಪಣೆಯಾಗಿದೆ.

ಒನ್ನಿಯರ್ ಸಂಸ್ಥಾನದ ರಾಜಕುಮಾರರೂ ಮತ್ತು ಬ್ರಾವಲ್ ಸಂಸ್ಥಾನದ ರಾಜರೂ ಬೆಂಗಳೂರಿಗೆ ಆಗಮಿಸಿದ್ದಾರೆ. ದೇಶದ ಆಡಳಿತಗಳನ್ನು ಹೇಗೆ ನಡೆಯಿಸಬೇಕೆಂಬುದನ್ನು ತಿಳುದುಕೊಳ್ಳುವುದೇ ಇವರ ಆಗಮನ ಕಾರಣವೆಂದು ತಿಳಿದುಬರುತ್ತದೆ.

ಬೆಂಗಳೂರು ದಂಡಿನ ಬ್ಯಾಂಕರ್ ಎಂ ಎಚ್ ಕುಂದನ್‌ಮಲ್ ಎಂಬವರು ತಮ್ಮ ಮೋಟಾರನ್ನು ಓಲ್ಡ್‌ಬಾಗ್‌ರೋಡಿನಲ್ಲಿ ವೇಗವಾಗಿ ನಡೆಸಿ ಒಬ್ಬ ಹುಡುಗಿಯಮೇಲೆ ಬಿಟ್ಟರೆಂದು ಹಲಸೂರು ಗೇಟ್ ಪೋಲೀಸರು ಇವರ ಮೇಲೆ ಮೊಕದ್ದಮೆಮಾಡಿದ್ದಾರೆ.

ಈಗ ಕೆಲವು ದಿವಸಗಳ ಹಿಂದೆ ಜೈಲಿನಿಂದ ಬಿಡಲ್ಪಟ್ಟ ಮುನಿಯಪ್ಪ ಮತ್ತು ಮುನಿಗಂಡ ಎಂಬವರು ಪೆನುಗೊಂಡೆ ತಿಮ್ಮರೆಡ್ಡಿ ಎಂಬವರ ಜೇಬಿನಿಂದ ೧ ರೂ ಗಳನ್ನು ಅಪಹರಿಸಿದರೆಂದು ಪೋಲೀಸರಿಂದ ಹಿಡಿಯಲ್ಪಟ್ಟು ಕೋರ್ಟಿಗೆ ಹಾಜರ್ಮಾಡಲ್ಪಟ್ಟಿದ್ದಾರೆ. ವಿಚಾರಣೆಯು ನಡೆಯುತ್ತಿದೆ.

ಬೆಂಗಳೂರು ಆರ್ಕಾಟ್ ಶ್ರೀನಿವಾಸಾಚಾರ್ ಬೀದಿಯಲ್ಲಿ ಡಿಸೋಜಾ ಅಂಡ್ ಬ್ರದರ್ಸ್ ಎಂಬವರ ಬಳಿಯಲ್ಲಿ ಕಳ್ಳತನವಾಗಿ ಸುಮಾರು ೬-೮-೦ ಬಾಳುವ ಬಟ್ಟೆಬರೆಗಳು ಮಾತ್ರ ಹೋಗಿವೆ. ಆರೋಗ್ಯಸ್ವಾಮಿಯೆಂಬವನು ಕಳ್ಳತನಮಾಡಿದವನೆಂದು ಸಂದೇಹದ ಮೇಲೆ ಪೋಲೀಸರು ಅವನನ್ನು ದಸ್ತಗಿರಿಮಾಡಿ ತನಿಖೆ ನಡೆಸುತ್ತಿದ್ದಾರೆ.

ರಾಜಧಾನಿಯ ಮುಂಡಿಮೊಹಲ್ಲಾದಲ್ಲಿದ್ದ ಬಸಪ್ಪ ಬುಂತನನ್ನು ಮಾದ ಎಂಬವನು ಕಳೆದ ಮಾರ್ಚಿ ಗಳಲ್ಲಿ ಕೊಡಲಿಯಿಂದ ಹೊಡೆದು ಸಾಯಿಸಿದನೆಂಬ ಾದನೆಯ ಮೇಲೆ ಹೂಡಲಾಗಿದ್ದ ಸೆಷನ್ಸ್ ಮೊಕ ಮೆಯು ರುಜು ವಾತಾದುದರಿಂದ ಸೆಷನ್ಸ್ ಜಡ್ಜರವರು ಪರಾಧಿಗೆ ೫ ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿ ದರು.

ಸಾಂಗ್ಲಿ ಮಹಾರಾಜರು ಬೆಂಗಳೂರಿಗೆ ಆಗಮಿಸಿ ದ್ದರೆ ಇವರು ಅರಸೀಕೆರೆಯಲ್ಲಿ ನಡೆಯುತ್ತಿ ್ಯಾಯವಿಧಾಯಕಸಭೆಗೆ ದಯಮಾಡಿಸಿದ್ದರು. ಇವ ಗೆ ಒಂದುವಿಧಹೃದಯ ಬಾಧೆಯಿರುವುದರಿಂದ ಮಹ ಯ ಮೆಟ್ಟಿಲನ್ನು ಹತ್ತಲಾರದೆ ಹೋದರೆಂದೂ ಅವ ನ್ನು ಕುರ್ಚಿಯಲ್ಲಿ ಕುಳ್ಳಿರಿಸಿ ಸಭಾಭವನಕ್ಕೆ ಒಯ್ದ ದೂ ಕೇಳುತ್ತೇವೆ. ಇಲ್ಲಿಯ ವ್ಯವಸ್ಥೆಗಳನ್ನು ೋಡಿಕೊಂಡು ಹೋಗಿ ಇವರು ತಮ್ಮ ಸಂಸ್ಥಾನ ಯೂ ಸಹ ಇದೇ ರೀತಿ ನ್ಯಾಯವಿಧಾಯಕ ಸಭೆ ನ್ನು ಸ್ಥಾಪಿಸಲು ಯೋಚಿಸಿದ್ದಾರೆಂದು ತಿಳಿದು ರುತ್ತದೆ

ವರ್ತಮಾನಸಂಗ್ರಹ.

ರಾಂಚಿಯಲ್ಲಿ ರಾಮದಾಸನೆಂಬ ಯುವಕನು ಪೋ ೀಸರ ಆಜ್ಞೆಗೆ ವಿರುದ್ಧವಾಗಿ ಬಿಲ್ಲನ್ನೂ 11 ಬಾಣ ಳನ್ನೂ ಧರಿಸಿದ ದಕ್ಕಾಗಿ 3 ತಿಂಗಳ ಕಠಿಣಶಿಕ್ಷೆಗೆ ಗುರಿಯಾದನು

ಲಂಡನ್ ನಗರದ ಪ್ರಸಿದ್ಧ ವೈದ್ಯರೊಬ್ಬರು ತೋಳ ನ್ನು ಕಳೆದುಕೊಂಡ ಒಬ್ಬ ಹುಡುಗಿಗೆ ಹೊಸತೋಳನ್ನು ಜೋಡಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಇದಕ್ಕಾಗಿ ವಳಿಗೆ ಅದೇ ವಯಸ್ಸಿನ, ಕೆಟ್ಟವ್ಯಾಧಿಯಿಲ್ಲದೆ ಮರಣ ಶಯಲ್ಲಿರುವ ಬೇರೊಬ್ಬ ಹುಡುಗಿಯ ತೋಳನ್ನು ಗೆದುಕೊಳ್ಳಲು ಅಪ್ಪಣೆ ಬೇಕಂತೆ! ಈ ಉದ್ಯಮದಲ್ಲಿ ವರು ಯಶಸ್ವಿಗಳಾದರೆ ಶಸ್ತ್ರಚಿಕಿತ್ಸೆಯಲ್ಲಿ ಹೊಸ ುಗವೊಂದು ಬಂದಂತಾಗುವುದು!

ನೀರಿನಲ್ಲಿ ವೇಗವಾಗಿ ಹೋಗುವ ವಿಮಾನ!

ವಿಮಾನಗಳಲ್ಲೆಲ್ಲಾ ಅತ್ಯಂತ ವೇಗವಾಗಿ ಹೋಗುವ ಮಾನು 'ಮಾರ್ಕಿಲ್' ಎಂಬುದು. ಇದು ಒಂದು ಂಟೆಗೆ 60 ಮೈಲುಗಳವರೆಗೆ ಈಜುವುದಂತೆ!

ಸಾವಕಾಶವಾಗಿ ಹಾರತಕ್ಕ ವಿಮಾನ!

ಪೆಡಿಂಗ್‌ಟನ್ನಿನ ನ್ಯಾಷನಲ್ ಫಿಜಿಕಲ್ ಲ್ಯಾಬೊ ೇಟರಿಯವರು ಒಂದು ವಿಮಾನವನ್ನು ಕಂಡು ಹಿಡಿದಿ ುವರು ಇದು ಬಹಳ ಸಾವಕಾಶವಾಗಿ ಏನೂ ಹೆಚ್ಚು ಡಿಮೆಯಾಗದಂತೆ ಮೇಲಕ್ಕೆ ಹಾರುವುದಂತೆ!

ಸ್ತ್ರೀಯಳು ೩೯|| ಸಾವಿರ ಅಡಿ ಮೇಲಕ್ಕೆ ಹಾರಿದಳು

ಇಟಲಿಯ ವೈಮಾನಿಕಳಾದ ಮಾರ್ಕೆಸ್ ಕುಡಿ ಾನೆಗ್ರೋನ್ ಎಂಬಾಕೆಯು 39,000 ಅಡಿಗಳ ಎತ್ತರ ಕಾಶಕ್ಕೆ ಹಾರಿರುವಳು ಸ್ತ್ರೀಯರು ಇಷ್ಟು ಮೇಲ ್ಕ ಹಾರಿರುವುದು ಇದೇ ಮೊದಲು

ವಿಮಾನ ಅಪಾಯ.

ದಕ್ಷಿಣಅಮೇರಿಕದ ಕೊಲಂಬಿಯಾ ಪ್ರಾಂತದಲ್ಲಿ ುವ ಮಾಡಲಿನ್ ವಿಮಾನಕ್ಷೇತ್ರದಲ್ಲಿ ಎರಡು ವಿಮಾನ ಳು ಒಂದಕ್ಕೊಂದು ತಾಕಿದುದರಿಂದ 17 ಜನರು ್ರುತರಾದರು ಸದರಿ ವಿಮಾನ ಕಂಪೆನಿಯ ಡೈರೆಕ್ಟರು ಈ ಅಪಾಯದಲ್ಲಿ ಮರಣ ಹೊಂದಿರುವುದಾಗಿ ್ರಕಟವಾಗಿದೆ

ಬೆಂಕಿಯ ಅಪಾಯ.

ಪೆಷಾವರ್ ನಗರದಲ್ಲಿ ಖಾದರ್‌ಖಾನ್ ಚೌಕದ ಬಳಿ ಬೆಂಕಿ ಬಿದ್ದು ೪ ಸಾವಿರ ಮನೆಗಳು ಭಸ್ಮವಾಗಿ ುಮಾರು 60 ಲಕ್ಷ ರೂಪಾಯಿಗಳ ನಷ್ಟವಾಗಿರು

ತ್ತದೆ ದಂಡಿನವರೂ ಬೆಂಕಿ ಆರಿಸುವ ಯಂತ್ರದವರೂ ಬಹಳ ಸಹಾಯ ಮಾಡಿದ್ದರಿಂದ ಪ್ರಾಣಾಪಾಯ ವೇನೂ ಆಗಲಿಲ್ಲ

ಹೊಸ ವಿಮಾನನಿರ್ಮಾಣ

ಜರ್ಮನರು ಅತ್ಯಂತ ವೇಗಶಾಲಿಗಳಾದ ಮತ್ತು ಹೆಚ್ಚುಶಕ್ತಿಯುಳ್ಳ ೨ ದೊಡ್ಡ ಜಪ್ಲಿನ್ ವಿಮಾನಗಳನ್ನು ಉತ್ತರದಕ್ಷಿಣ ಅಮೇರಿಕೆಯ ಸಂಗಡ ವ್ಯಾಪಾರ ಕ್ಕಾಗಿ ಕಟ್ಟುತ್ತಾರಂತೆ! ಇದಕ್ಕೆ ತಗಲುವ ಖರ್ಚಿನಲ್ಲಿ ಅರ್ಧಭಾಗವನ್ನು ಪ್ರಜೆಗಳೂ ಉಳಿದರ್ಧವನ್ನು ಸರ್ಕಾ ರದವರೂ ವಹಿಸುವರಂತೆ!

ಪರ್ವತಾರೋಹಣ

ಕೆಲವು ಜರ್ಮನ್ ಜೋಡಿಯರು ಹಿಂದೂಕುಷ್ ಪರ್ವತಶಿಖರವನ್ನು ಹತ್ತಿ ಪರೀಕ್ಷಿಸಲು ಹೊರಟಿರು ತ್ತಾರೆ ಈ ಪರ್ವತವನ್ನು ಹತ್ತಲು ಕೆಲವುಕಡೆ ಆಫ್ಘನ್ ಸರ್ಕಾರಕ್ಕೆ ಸೇರಿದ ಭಾಗಗಳನ್ನು ದಾಟಬೇಕಾಗಿರು ವುದರಿಂದ ಆ ಸರ್ಕಾರದ ಅಪ್ಪಣೆಯನ್ನು ಪಡೆದಿರು ತ್ತಾರೆ

ಹಾವನ್ನು ಕಚ್ಚಿ ಕಣ್ಣು ಕಳೆದುಕೊಂಡನು!

ಕಲ್ಲಿಕೋಟೆಗೆ ಸೇರಿದ ವಳಿ ಪ್ರಾನ್ ಎಂಬಲ್ಲಿಯ ರೈತನೊಬ್ಬನು ಭತ್ತದ ಗದ್ದೆಗೆ ಹೋಗಿದ್ದಾಗ್ಗೆ ಒಂದು ಹಾವು ಇವನನ್ನು ಕಚ್ಚಲು ಅದೇ ಹಾವನ್ನು ಕಚ್ಚಿ ದರೆ ಗುಣವಾಗುವುದೆಂಬ ಹಳೇನಂಬಿಕೆಯ ಮೇಲೆ ಇವನು ಹಾವನ್ನು ಹಿಡಿದು ಕಚ್ಚಿದನು ವೈದ್ಯಸಹಾ ಯದಿಂದ ಇವನು ಬದುಕಿದರೂ ಕಣ್ಣುಮಾತ್ರ ಹೋ ಗಿರುವುದು.

ಸಸ್ಯಪದಾರ್ಥಗಳಿಂದ ಮಾಡತಕ್ಕ ಹಾಲು!

ಕಡಲೆ ಯಿಂದ ಗಲಿ ತೆಂಗಿನಕಾಯಿಯಿಂದ ಗಲಿ ನಿರ್ಮಾಣಮಾಡಿದ ಹಾಲು ಮಕ್ಕಳಿಗೆ ಬಹಳ ಒಳ್ಳೆಯದೆಂದು ಈಗೀಗ ಕಂಡುಹಿಡಿದಿದ್ದಾರೆ ಹಸು ವಿನ ಹಾಲನ್ನು ಕುಡಿಯದಿರುವ ಮಕ್ಕಳುಗಳು ಈ ಕೃತಕಹಾಲನ್ನು ಕುಡಿದು ಸುಲಭವಾಗಿ ಅರಗಿಸಿ ಕೊಳ್ಳುವವಲ್ಲದೆ ಸುಖವಾಗಿರುವವಂತೆ!

ಭಯಂಕರವಾದ ಬಿರುಗಾಳಿ!

ಆಗ್ರಾಪ್ರಾಂತದಲ್ಲಿ ಬಿರುಗಾಳಿ ಎದ್ದು ಬಹಳ ನಷ್ಟ ವನ್ನುಂಟುಮಾಡಿರುತ್ತದೆ ಫರೂಬಾದ್ ಸ್ಟೇಷನ್ನಿ ನಲ್ಲಿ ನಿಲ್ಲಿಸಿದ ಒಂದು(ವ್ಯಾಗನ್) ಗಾಡಿಯು ಸುಮಾರು 10 ಮೈಲುಗಳವರೆಗೂ ತಳ್ಳಲ್ಪಟ್ಟು ಅದನ್ನು ಎಳೆದು ಕೊಂಡು ಬರಲು ಬೇರೆ ಇಂಜನ್ನುಗಳನ್ನು ಕಳುಹಿಸ ಬೇಕಾಯಿತಂತೆ ಇದರ ದೆಸೆಯಿಂದ ಆಗ್ರಾ ಮೈಲು 5 ಘಂಟೆಗಳ ಸಾವಕಾಶವಾಗಿ ಬಂದು ತಲಪಿತು

ಚೀನಾ ಜಪಾನ್ ಗಲಭೆ

ಉತ್ತರ ಚೈನಾದ ಗಡಿನಾಡಿನಲ್ಲಿ ಪುನಃ ಗಲಭೆಯು ನಡೆದಿದೆ 80 ಮಂದಿ ಜಪಾನಿ ಪೆಟ್ರೋಲ್ ಸೈನಿಕ ರನ್ನು ೨00 ಜನ ಚೀನಿ ಸೈನಿಕರು ಮುತ್ತಲು ಹೊಡೆ ದಾಟಗಳು ನಡೆದವು ಇದರಿಂದ ಜಪಾನ್ ಅಧಿಕಾರಿ ಗಳು ಚಹೋರ್ ಪ್ರಾಂತದಲ್ಲಿದ್ದ ಮಾಂಚುಕೋಬ್ರಿ ಗೇಡ್ ಸೈನ್ಯವನ್ನು ಈ ಘಟನೆ ನಡೆದ ಸ್ಥಳಕ್ಕೆ ಹೋಗಿ ಹೆಚ್ಚು ಗಲಭೆಗವಕಾಶಕೊಡದಂತೆ ನೋಡಿಕೊಳ್ಳಬೇ ಕೆಂದು ಆಜ್ಞೆಮಾಡಿದ್ದಾರೆ.

ವಿಮಾನಮಾರ್ಗದ ವಿದ್ಯುದ್ದೀಪಗಳಿಗಾಗಿ ೪ ಲಕ್ಷ ರೂಪಾಯಿಗಳ ವೆಚ್ಚ!

'ಟ್ರಾನ್ಸ್ ಇಂಡಿಯನ್' ವಿಮಾನ ಮಾರ್ಗದಲ್ಲಿ ವಿದ್ಯುದ್ದೀಪದ ವ್ಯವಸ್ಥೆಯನ್ನು ಮಾಡುವದಕ್ಕಾಗಿ ಇಂಡಿಯಾ ಸರಕಾರದವರು ಈ ರೀತಿಯಾಗಿ ತಿಳಿಯ ಪಡಿಸಿದ್ದಾರೆ 'ಫ್ಲಡ್‌ಲೈಟುಗಳು' ದಾರಿತೋರಿಸುವ ದೀಪಗಳು, ಫ್ಲಡ್‌ಲೈಟ್ ಬೀಕನ್‌ಗಳು ಗಡಿದೀಪಗಳು

ಮತ್ತು ತೊಂದರೆಯುಂಟಾಗಿದೆಯೆಂದು ಎಚ್ಚರಿಸುವ ದೀಪಗಳು ಇವುಗಳನ್ನೆಲ್ಲ ಇಡಬೇಕೆಂದು ವ್ಯವಸ್ಥೆ ಮಾಡಲಾಗಿದೆ ಈ ವ್ಯವಸ್ಥೆಗೆ ಒಟ್ಟು ಖರ್ಚು ೪ ಲಕ್ಷ ರೂ ಗಳಾಗಬಹುದೆಂದು ಅಂದಾಜು ಮಾಡ ಲಾಗಿದೆ

ಸರ್ ಸಪ್ರೂರವರಿಗೆ ಅಂತರರಾಷ್ಟ್ರೀಯ ನ್ಯಾಯಸ್ಥಾನ!

ಹೇಗ್ (ಹಾಲೆಂಡ್) ನಗರದಲ್ಲಿ ಅಂತರರಾಷ್ಟ್ರೀ ಯ ನ್ಯಾಯಸ್ಥಾನವಿರುವುದು ಅನೇಕ ದೇಶಗಳ ನ್ಯಾ ಯಾಧೀಶರು ಆ ನ್ಯಾಯಸ್ಥಾನದ ನ್ಯಾಯಾಧೀಶರಾಗಿರು ವರು ಜಪಾನ್‌ದೇಶದ ನ್ಯಾಯಾಧೀಶರಾದ ಶ್ರೀ ಅಡಾಚಿ ಎಂಬವರು ಮರಣಹೊಂದಿದ ಕಾರಣ ಅವರ ಸ್ಥಾನಕ್ಕೆ ಒಬ್ಬ ನ್ಯಾಯಾಧೀಶರನ್ನು ನಿಯಮಿಸಬೇಕಾಗಿದೆ. ಏಷಿಯಾಖಂಡದ ಪರವಾಗಿ ಇಂಡಿಯಾ ಸರ್ಕಾರದವರು ಸರ್ ತೇಜ್ ಬಹದ್ದೂರ್ ಸಪ್ರುರವರನ್ನು ಉಮೇದು ವಾರರನ್ನಾಗಿ ನಿಯಮಿಸಿರುವರು ತಮ್ಮ ಉಮೇದು ವಾರಿಕೆಗೆ ಸರ್ ಸಪ್ರುರವರು ಸಮ್ಮತಿಯನ್ನಿತ್ತಿರು ವರಂತೆ!

ದರೋಡೆಕಾರನ ದಾವಳಿ ಹಿಡಿದವರಿಗೆ 1000 ರೂಪಾಯಿಗಳ ಬಹುಮಾನ

ಅಲಿಘರ್ ಕರ್ರಿಂಗ್ ಮೊದಲಾದ ಕಡೆಗೆ ಸೇರಿ ಕೊಂಡು ಬಹು ಧೈರ್ಯವಾಗಿ ಕೊಲೆ ಛಲಾಯಿತಗಳನ್ನು ನಡೆಸುತ್ತಿರುವ ಪಂಡಿತ ರಾಧಾಚರಣನೆಂಬವನನ್ನು ಹಿಡಿದುಕೊಡಲು ಸಹಾಯ ಮಾಡಿದವರಿಗೆ 1000 ರೂಪಾಯಿ ಬಹುಮಾನ ಕೊಡುವುದಾಗಿ ಸರ್ಕಾರದವರು ಪ್ರಕಟಿಸಿದ್ದಾರೆ ಇಲ್ಲಿಯವರೆಗೆ ಇವನು 56 ಜನರನ್ನು ಕೊಂದಿರುವನಂತೆ ಅನಿರವ ಸರ್ಕಲ್ಲಿನ ಪೋಲೀಸ್ ಇನ್ಸ್‌ಪೆಕ್ಟರನ್ನು ಇವನೇ ಕೊಂದನೆಂದೂ ಇವನ ವಿಷ ಯಗಳನ್ನು ತಿಳಿಯಲು ಹೋಗಿದ್ದ ಭೀಮಸಿಂಗ್ ಎಂಬಾತನಿಗೂ ಅದೇ ಗತಿಯಾಗಿರುವುದೆಂದೂ ತಿಳಿದು ಬಂದಿದೆ ಅಲ್ಲಲ್ಲಿ ಪೋಲೀಸರು ಕಾವಲಿದ್ದರೂ ಇವ ನನ್ನು ಬಂಧಿಸಲು ಸಾಧ್ಯವಾಗಿಲ್ಲ ಇವನಿಂದ ಆ ಪ್ರಾಂತವೇ ನಡುಗುತ್ತಿದೆ

ಗೆರುಸೊಪ್ಪೆ ಜಲಪಾತ

ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ ಕೆ ಚೆಂಗಲರಾಯರೆಡ್ಡಿಯವರು ಗೆರುಸೊಪ್ಪಾ ಜಲ ಪಾತಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆ ಹಾಕಿದರು.

ಅದಕ್ಕೆ ಶ್ರೀ ಎನ್ ಎನ್ ಅಯ್ಯಂಗಾರ್ಯರು "ಜಲಪಾತದ ಪ್ರಕೃತಿ ದೃಶ್ಯವನ್ನು ನಾಶಗೊಳಿಸದೆ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಲು ಸಾಧ್ಯವೇ? ಎಂಬ ವಿಚಾರವೆದ್ದಿದೆ ಅಲ್ಲಿ ವಿದ್ಯುಚ್ಛಕ್ತಿಯನ್ನು ತೆಗೆಯುವ ವಿಚಾ ರದಲ್ಲಿ ಸಂಧಾನಗಳೇನೋ ಹೆಚ್ಚು ಕಡಿಮೆ ಪೂರ್ತಿ ಯಾದಂತೆಯೇ ಸರಿ ಆದರೆ ಒಪ್ಪಂದದ ಕರಾರು ಗಳನ್ನು ಈಗ ತಿಳಿಸಲು ಸಾಧ್ಯವಿಲ್ಲ" ಎಂದು ಹೇಳಿ ದರು

ಶ್ರೀ ರೆಡ್ಡಿ—ಸಂಧಾನದ ವಿವರಗಳನ್ನು ಯಾವಾಗ ಮುಂದಿಡುವಿರಿ?

ಉ—ಸಂಧಾನವು ಮುಗಿದಮೇಲೆ

ಶ್ರೀ ರೆಡ್ಡಿ—ಇಂತಹ ಮುಖ್ಯ ವಿಚಾರವನ್ನು ಸ್ಥಾಯಿ ಸಮಿತಿಯ ಮುಂದಿಟ್ಟು ಅದರ ಒಪ್ಪಿಗೆಯನ್ನು ಪಡೆಯುವುದು ಉತ್ತಮವಲ್ಲವೆ?

ಅಧ್ಯಕ್ಷರು—ಆ ಸಮಿತಿಯ ಮುಂದಿಡುವಷ್ಟುಮ ಟ್ಟಿಗೆ ಈ ವಿಚಾರವು ಮುಂದುವರಿದಿಲ್ಲ. ಅಲ್ಲದೆ ಎಲ್ಲ ವಿಷಯಗಳನ್ನೂ ಅದರ ಮುಂದಿಡಲು ಸಾಧ್ಯವಿಲ್ಲ

"ಜೋಗ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ತೆಗೆಯಬೇಕಾದರೆ ಎಷ್ಟು ಹಣವು ಬೇಕಾಗುವುದು?" ಎಂದು ಕೇಳಿದ್ದಕ್ಕೆ "ಸುಮಾರು ೩ ಕೋಟಿ ರೂ. ಗಳು ಬೇಕಾಗುವುವು" ಎಂದು ಶ್ರೀ ಅಯ್ಯಂಗಾರ್ಯರು ಉತ್ತರ ಕೊಟ್ಟರು

೨೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೊಂಬಾಯಿ ಪಟ್ಟಣದಲ್ಲಿ

ಸಮಾಚಾರ ಪತ್ರಿಕೆ

ಬರುವ ಡಿಸೆಂಬರ್ ತಿಂಗಳಲ್ಲಿ ನಡೆಯಬೇಕಾಗಿರುವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬೊಂಬಾಯಿ ಪಟ್ಟಣಕ್ಕೆ ಆಹ್ವಾನಿಸಲಾಗಿದೆ. ಆ ಪಟ್ಟಣದ ಕನ್ನಡ ಪ್ರವಾಸಿ ಜನರು ಉದ್ದೇಶಪಟ್ಟು ಅದಕ್ಕೆ ಸಾರ್ವಜನಿಕ ಸ್ವರೂಪವನ್ನು ಕೊಡುವುದಕ್ಕಾಗಿ ಬೊಂಬಾಯಿ ಸರ್ಕಾರದ ವಿದ್ಯಾ ... [illegible] ... ಶ್ರೀಮಾನ್ ... ಅವರ ... [illegible] ... ಕರ್ನಾಟಕ ಸಾಹಿತ್ಯ ಸಮ್ಮೇಳನದ ... [illegible] ... ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯ ... [illegible] ... ಪರಿಷತ್ತಿನ ... [illegible] ... ಕೃತಜ್ಞತೆಯಿಂದ ಸ್ವೀಕರಿಸಿತು.

ಸಮ್ಮೇಳನವನ್ನು ಬರಮಾಡಿಕೊಳ್ಳಲು ಬೊಂಬಾಯಿಯಲ್ಲಿ ... [illegible] ... ಅವರಲ್ಲಿ ... [illegible] ... ವಾಗ್ದಾನ ... [illegible] ... ಬಂದಿರುವುದೆಂಬ ... [illegible]

ಸಮ್ಮೇಳನವು ... [illegible] ... ಕೊಂಡಿದೆ.

... [illegible] ... ಕನ್ನಡ ... [illegible] ... ಪುರೋಭಿವೃದ್ಧಿಗಾಗಿ ... [illegible] ... ಸಮ್ಮೇಳನ ... [illegible] ... ಕನ್ನಡದ ಅಭಿಮಾನಿಗಳು ... [illegible] ... ಬೇಕೆಂದು ಪರಿಷತ್ತು ವಿನಯದಿಂದ ವಿಜ್ಞಾಪಿಸುತ್ತದೆ.

ಹೊಸತನ

ಈ ಸಾರಿಯ ಸಮ್ಮೇಳನದ ಕ್ರಮದಲ್ಲಿ ಕೆಲವು ವಿಶೇಷಗಳುಂಟು. ಇನ್ನು ಮುಂದೆ ಸಮ್ಮೇಳನವನ್ನು ಕೊಡಿದ ಪಟ್ಟಣಗಳ ಭಾರತ ಸಯನ್ಸ್ ಕಾಂಗ್ರೆಸ್ಸು (Indian Science Congress) ಪ್ರಾಚ್ಯ ವಿದ್ಯಾ ಸಮ್ಮೇಳನ (Oriental Conference) ... [illegible] ... ಸಮ್ಮೇಳನದ ... [illegible] ... ಸಂಬಂಧಪಟ್ಟ ... [illegible] ... ಈ ಹೊಸ ವ್ಯವಸ್ಥೆಗೆ ಸಂಬಂಧಪಟ್ಟ ... [illegible] ... ಈ ಕೆಳಗೆ ಕಾಣಿಸಿದೆ.

(I) ... ಸಮ್ಮೇಳನವು ... [illegible] ... ಮೂರು ದಿವಸ ನಡೆಯತಕ್ಕದ್ದು. ಆ ದಿವಸಗಳಲ್ಲಿ ಸಮ್ಮೇಳನದ ಅಂಗವಲ್ಲದ ಇತರ ಯಾವ ... [illegible] ... ಕೂಡದು.

(II) ಸಮ್ಮೇಳನಕ್ಕೆ ಅಂಗವಾಗಿ ಈ ಕೆಳಗಿನ ಮತ್ತು ಇತರ ಗೋಷ್ಠಿಗಳನ್ನು ಏರ್ಪಡಿಸಬಹುದು.

(ಅ) ಕವಿಗೋಷ್ಠಿ

(ಆ) ಸಂಶೋಧಕರ ಗೋಷ್ಠಿ

(ಇ) ಅಪೇಕ್ಷಣೀಯವೆಂದು ತೋರುವ ಇತರ ಗೋಷ್ಠಿಗಳು

ಇವರೇ—ಇವುಗಳಿಗೆ ... [illegible] ... ಉಪನ್ಯಾಸ ... [illegible] ... ನಾಟಕ ... [illegible] ... ಸಾಹಿತ್ಯ ಸಂಬಂಧವಾದ ವಿಚಾರಗಳಿಗೆ ... [illegible]

... [illegible] ... ಭಾಷಾವಿಜ್ಞಾನ ... [illegible]

(III) ... [illegible] ... ವಿಷಯಗಳನ್ನು ... [illegible]

(IV) ... [illegible]

(V) ... [illegible]

(VI) ... [illegible] ... ಪರಿಷತ್ತಿನ ... [illegible]

(VII) ... [illegible] ... ಪ್ರಬಂಧ ... [illegible] ... ಸಮ್ಮೇಳನದ ... [illegible]

(VIII) ... [illegible]

(IX) ... [illegible]

ಪ್ರಬಂಧಗಳು

... [illegible] ... ಸಮ್ಮೇಳನಕ್ಕೆ ... [illegible] ... ಪ್ರಬಂಧ ... [illegible] ... ಪರಿಷತ್ತಿನ ... [illegible] ... ಪ್ರಕಟಿಸಬಹುದು. [ಒಂದು ಪ್ರತಿಗೆ ... [illegible] ... ಪರಿಷತ್ತಿನ ... [illegible] ...]

ಸಮ್ಮೇಳನಕ್ಕೆ ಸಂಬಂಧಪಟ್ಟ ಉಳಿದ ಸಮಾಚಾರಗಳನ್ನು ಆಗಿಂದಾಗ್ಗೆ ಪ್ರಕಟಿಸಲಾಗುವುದು.

ಮುಖ್ಯವಾಗಿ ಪ್ರಬಂಧ ಲೇಖಕರಿಗೆ ತಕ್ಕಷ್ಟು ಕಾಲಾವಕಾಶ ದೊರೆಯಬೇಕು ಎಂಬ ಉದ್ದೇಶದಿಂದ ಈ ಸಮಾಚಾರ ಪತ್ರಿಕೆಯನ್ನು ಮುಂಚಿತವಾಗಿ ಪ್ರಸಿದ್ಧಪಡಿಸಿದೆ.

ಸದಸ್ಯತ್ವ

ಪರಿಷತ್ತಿನ ಆಡಳಿತ ಪದಗಳಲ್ಲಿ ನಡೆಯುವ ಚುನಾವಣೆಗಳಲ್ಲಿಯೂ ... [illegible] ... ಭಾಗವಹಿಸಿ ಅಭಿಮತ (Vote) ಕೊಡುವ ಅಧಿಕಾರವನ್ನು ಬಯಸುವವರು ... [illegible] ... ಪರಿಷತ್ತಿನ ... [illegible] ... ಸಮ್ಮೇಳನದ ... [illegible] ... ಪರಿಷತ್ತಿಗೆ ... [illegible] ... ಕನ್ನಡಿಗರು ಕನ್ನಡದ ಪುರೋಭಿವೃದ್ಧಿಗೆ ಒಂದು ಹೊಸ ಮಟ್ಟವನ್ನು ಕಟ್ಟಿ ... [illegible] ... ಪರಿಷತ್ತಿನ ಈಗಿನ ದೌರ್ಬಲ್ಯವನ್ನು ನಮ್ಮ ದೇಶಭಾಷೆಯ ಏಳಿಗೆಗೆ ಬರಬೇಕಾದರೆ ಪರಿಷತ್ತಿಗೆ ದೊರೆಯಬೇಕಾಗಿರುವ ಪ್ರೋತ್ಸಾಹವನ್ನು ಕನ್ನಡ ಮಹಾಜನರು ಗಮನಿಸಲಿ ... [illegible] ... ಪರಿಷತ್ತಿನ ಸದಸ್ಯತ್ವಕ್ಕೆ ... [illegible] ... ಸೇರಬೇಕೆಂದು ಪರಿಷತ್ತು ಪ್ರಾರ್ಥಿಸುತ್ತದೆ.

ಸಮಸ್ತ ಕನ್ನಡ ಮಹಾಜನರೂ ಪರಿಷತ್ತಿಗೆ ನೆರವಾಗಿ ಬರುವ ... [illegible] ... ಸಮ್ಮೇಳನವು ಯಶಸ್ವಿಯಾಗುವಂತೆ ಸಹಕರಿಸಬೇಕೆಂದು ಪರಿಷತ್ತು ಹಾರೈಸಿಕೊಂಡಿರುತ್ತದೆ.

ಕರ್ನಾಟಕ ಸಾಹಿತ್ಯ ಪರಿಷತ್ತು, ... [illegible] ... ವೆಂಕಟರಾಮು, ಶ್ರೀಕೃಷ್ಣರಾಜೇಂದ್ರ ಪರಿಷನ್ಮಂದಿರ ... ಎಂ. ಎ. ಎಲ್. ಎಲ್. ಬಿ. ಚಾಮರಾಜಪೇಟೆ ಬೆಂಗಳೂರು ಸಿಟಿ ಗೌರವ ಕಾರ್ಯದರ್ಶಿ ತಾ|| ೧೬-೬-೩೫

ಶ್ರೀ ಜಗದ್ಗುರು ಪಂಚಾಚಾರ್ಯ ಪಾಠಶಾಲಾ ಸಂಸ್ಥೆಗೆ ಸ್ವೀಕಾರ

ಕಂ|| ಸದ್ಗುರುಡಖಿಲಜಗದ್ಗುರು | ಡೆಸಕು ಸಂತತೋಪಕಾರಿ ಮುನಿವಿ || ದ್ವದ್ಗುರುಡೆಸಕು ಕವಿಬುಧಹಿತ | ಮದ್ಗುರುಡು ಅಪಾರಧರ್ಮಮತಿಕಿನ್ ಕೃತಿಕಿನ್ ||೬೦|| (ಆಶ್ವಾಸ ೧)

'ಸದ್ಗುರುವೂ, ಅಖಿಲ ಜಗದ್ಗುರುವೂ, **ಸಂತತೋಪಕಾರಿಯೂ**, ಮುನಿವಿದ್ವದ್ಗುರುವೂ, **ಕವಿಬುಧಹಿತ** ಮದ್ಗುರುವೂ, ಅಪಾರಧರ್ಮಮತಿಯೂ ಆದ ಜಂಗಮ ಮಲ್ಲಿಕಾರ್ಜುನನಿಗೆ ನನ್ನ ಕೃತಿಯು **ಸಮರ್ಪಿತವಾಗಲಿ**." ಎಂದ ಮೇಲಿನ ಪದ್ಯದ ಅರ್ಥವಾಗುತ್ತದೆ.

ವೃ|| ಮನುಮುನಿನಿಭಚಾರುಚರಿತ್ರುಬವಿತ್ರು ಸಮಾನುಷಪೌರುಷವರ್ತಿ ಜಗ | ಜ್ಜನನುತಕೀರ್ತಿ ಲಕ್ಷ್ಮೀರಮಣಾನಿಭು ಶಾಶ್ವತಯೋಗಪದಸ್ಥಿರು ಸ|| ನ್ಮುನಿಜನಮುಖ್ಯು ಶಿವಾಗಮವೇದಿ ಸನೋಘವಚೋನಿಧಿ ಧೀನಿಧಿ ಬಾ | ವನತರಮೂರ್ತಿ ಸಮಸ್ತಜಗದ್ಗುರುವಂದ್ಯುಸನಿಂದ್ಯುಸದಾತ್ಮವಿದುನ್ || ||೨೮೦|| (ಆಶ್ವಾಸ ೧೧)

'ಮನುಮುನಿಸಮಾನ ಚರಿತ್ರನೂ, ಅಮಾನುಷಪೌರುಷಶಾಲಿಯೂ, ಜಗಜ್ಜನನುತನಿರ್ಮಲಕೀರ್ತಿರೂಪಲಕ್ಷ್ಮೀಪತಿಯೂ, ಶಾಶ್ವತಯೋಗಪದಸ್ಥಿರನೂ, ಸನ್ಮುನಿಜನಮುಖ್ಯನೂ, **ಶಿವಾಗಮಜ್ಞನೂ** ಅಮೋಘವಚೋನಿಧಿಯೂ, ಪವಿತ್ರಮೂರ್ತಿಯೂ, **ಸಮಸ್ತ ಜಗದ್ಗುರುವಂದ್ಯನೂ**, ಅನಿಂದ್ಯನೂ ಆದ ಶ್ರೀ ಮಲ್ಲಿಕಾರ್ಜುನನಿಗೆ ನಮಸ್ಕಾರವು

ಎಂದು ಈ ಪದ್ಯದ ಅರ್ಥವಾಗುತ್ತದೆ.

ಈ ಕೆಳಗೆ ಬರೆದಿರುವ ಪದ್ಯಗಳು ಈ ಗುರುಸಾರ್ವಭೌಮನು "**ಶಿವಯೋಗತತ್ಪರ**" ನೆಂದೂ, "**ಶಿವತತ್ತ್ವಪ್ರಕಾಶಕ**" ನೆಂದೂ ಸಾರುತ್ತವೆ.

ಕಂ|| ರಮಣೀರಮಣೀಯಸುರೂ | ಪಮಯಾಂಗಜಶಸ್ತ್ರವಜ್ರಪಂಜರನಿಭನ || ವಿಮಲಶಿವಯೋಗತತ್ಪರು | ಡಮಲಚರಿತ್ರುಂಡು ಮಲ್ಲಿಕಾರ್ಜುನುಡೆಂತಯುನ್ ||೨೪೨|| (ಆಶ್ವಾಸ ೨)

ಕಂ|| ಶ್ರೀಮದಶೇಷಮುನೀಂದ್ರ | ಗ್ರಾಮಣಿ ಸುಚರಿತು ವಿಗತಕಲ್ಮಷ ಶಿವತ|| ತ್ತ್ವಾಮಲಮತಿ ಪ್ರಕಾಶುಡ | ಯಾಮೃತಸರಸೀಜು ಮಲ್ಲಿಕಾರ್ಜುನದೇವುನ್ ||೩೬೭|| (ಆಶ್ವಾಸ ೪)

ಸ್ತ್ರೀಸೌಂದರ್ಯಕ್ಕೆ ಮನ್ಮಥನ ಅಸ್ತ್ರಕ್ಕೆ ವಜ್ರಪಂಜರನೂ, ವಿಮಲ **ಶಿವಯೋಗತತ್ಪರನೂ**, ಶುದ್ಧಚರಿತನೂ ಆದ ಮಲ್ಲಿಕಾರ್ಜುನನು ಇಲ್ಲಿ ವಿರಾಜಿಸುವನು.

ಅಶೇಷಮುನೀಂದ್ರಗ್ರಾಮಣಿಯೂ, ಸಚ್ಚರಿತ್ರನೂ, ನಿರ್ಮಲನೂ ಶಿವತತ್ತ್ವಪ್ರಕಾಶಕನೂ, ಕರುಣಾಮೃತಾಬ್ಧಿಯೂ ಆದ ಮಲ್ಲಿಕಾರ್ಜುನನನ್ನು ನಮಸ್ಕರಿಸುವೆನು.

ಎಂದು ಈ ಮೇಲಿನ ಪದ್ಯಗಳ ಅರ್ಥವಾಗುತ್ತದೆ.

ಈ ಕವಿರಾಜನು ಕೆಳಗಿನ ಪದ್ಯದಿಂದ ಶ್ರೀ ಮಲ್ಲಿಕಾರ್ಜುನ ಶಿವಯೋಗಿಯವರ ಮಹಾತ್ಮ್ಯಾಕಾರವನ್ನು ವರ್ಣಿಸಿ ಬಹುವಿಧವಾಗಿ ಕೊಂಡಾಡಿದ್ದಾನೆ.

ಕಂ|| ವಿನುತಬ್ರಹ್ಮರ್ಷಿಕಿನಿ | ತ್ಯನುಪಮಸಂಯಮಿಕಿ ಸಜ್ಜನಾಭರಣುನಕುನ್ || ಮನುಜಾಕಾರಮಹೇಶುನ | ಕನುಪಮಚರಿತುನಕು ಮಲ್ಲಿಕಾರ್ಜುನಮುನಿಕಿನ್ ||೬೬|| (ಆಶ್ವಾಸ ೧)

'ಬ್ರಹ್ಮರ್ಷಿಸ್ತುತನೂ, ಅನುಪಮಸಂಯಮಿಯೂ, ಸಜ್ಜನಾಭರಣನೂ, ಮಾನವಾಕಾರವನ್ನು ಧರಿಸಿದ ಮಹೇಶ್ವರನೂ, ಅನುಪಮಚರಿತ್ರನೂ ಆದ ಶ್ರೀ ಮಲ್ಲಿಕಾರ್ಜುನಮುನಿಗೆ ಸಮರ್ಪಿತವಾಗಲಿ"

ಎಂದು ಈ ಪದ್ಯದ ಅರ್ಥವಾಗುತ್ತದೆ.

ಈ ಕವಿರಾಜನು ಕೆಳಗೆ ಉದಾಹರಿಸಿದ ಪದ್ಯದಲ್ಲಿ ಶ್ರೀ ಮಲ್ಲಿಕಾರ್ಜುನ ಜಂಗಮ ಗುರುಸಾರ್ವಭೌಮನಿಗೆ "**ಬ್ರಾಹ್ಮಣಕುಲೋತ್ತಂಸ**" ಎಂಬ ವಿಶೇಷಣವನ್ನು ಕೊಟ್ಟಿರುತ್ತಾನೆ. ಈ ವಿಷಯವನ್ನು ಈಗಿನ ವರ್ಣಾಶ್ರಮಧರ್ಮಧ್ವಂಸಕರಾದ ಸಂಕರಜಾತಿಯವರು ಚೆನ್ನಾಗಿ ಪರಿಶೀಲಿಸಬೇಕು.

ಸ್ವ|| ಸುಶಿವಿಶ್ವತ್ಸ್ಯುದು ನಿತ್ಯದೂರ್ಜಿತುರು ಸುಶ್ಲೋಕೋಂಡಕೋಶೋಂಶು ಸ | ಸರ್ವಾಧಾರು ಸುಧೀರುದಾರ್ಯಾ ಜನತಾಪರ್ಯ್ಯಂದಪಾರ್ಯ್ಯಂದು ದ|| ಮರ್ಕಥಾಸಂಗುದಸಂಗುದಾದ್ಯುದು ಜಗನ್ನಾನ್ಯ್ಯಂದು ಧನ್ಯೋಂದು ಬ್ರ | ಹ್ಮಕುಲೋತ್ತಂಸುದು ಹಂಸುದುತ್ತಮಗಣಾಯತ್ತ್ಯಂದವಾತ್ಯಂದಷ್ಟ ನ್ || ೧೦೦೬ || (ಅಧ್ಯಾಯ ೧೨)

ಸತ್ಯವಿಸ್ತೃತ್ಯನೂ, ನಿತ್ಯನೂ, ಊರ್ಜಿತನೂ, ಸುಶ್ಲೋಕನೂ ಅಶೋಕನೂ (ಶೋಕರಹಿತನೂ) ಸರ್ವಾಧಾರನೂ, ಧೀರನೂ, ಆರ್ಯಜನತಾಪರ್ಯನೂ, ಅಪಾರ್ಯನೂ, ಧರ್ಮಕಥಾಸಂಗನೂ, ಅಸಂಗನೂ, ಅನ್ಯನೂ, ಜಗನ್ಮಾನ್ಯನೂ, ಧನ್ಯನೂ, ಬ್ರಹ್ಮಕುಲೋತ್ತಂಸನೂ, ಹಂಸನೂ, ಉತ್ತಮಗಣಾಯತ್ತನೂ, ಅನುತ್ತಮನೂ ಆದ ಮಲ್ಲಿಕಾರ್ಜುನಯೋಗಿಯು ವಿರಾಜಿಸುತ್ತಿರುವನು ”

ಎಂದು ಈ ಮೇಲಿನ ಪದ್ಯದ ಅರ್ಥವಾಗುತ್ತದೆ.

ಇದೇ ರೀತಿಯಾಗಿ ಈ ಕವಿರಾಜಚೂಡಾಮಣಿಯು ತನ್ನ ವಂಶದ ಮೂಲಗುರುವಾದ ಈ ಗುರುವರ್ಯರನ್ನು ನಾನಾವಿಧವಾಗಿ ಕೊಂಡಾಡಿದ್ದಾನೆ. ಅಲ್ಲದೆ,ತನ್ನ ಕುಮಾರಸಂಭವದ ಆರನೆಯ ಆಶ್ವಾಸದಲ್ಲಿ—

ಪಾರ್ವತಿಯು ತಪಸ್ಸಿಗೆ ಹೋಗುವ ಸಮಯದಲ್ಲಿ ಈ ಮಲ್ಲಿಕಾರ್ಜುನಶಿವಯೋಗಿಗಳು ತಮ್ಮ ಶಿಷ್ಯರಿಂದ ಆ ಶಿವಸಿದ್ಧಾಂತವನ್ನುಪದೇಶಿಸುತ್ತಿದ್ದುದನ್ನು ಕಂಡು, ಅದರಲ್ಲಿ ತನ್ನ ಮನೋಭಿಲಾಷೆಯನ್ನು ತಿಳುಹಿಸಿದಳೆಂದೂ, ಆಗ್ಗೆ ಈ ಆಚಾರ್ಯರು ಪಾರ್ವತೀದೇವಿಗೆ ಶಿವಜ್ಞಾನ ಶಿವಮಂತ್ರ, ಶಿವವ್ರತಾದಿಗಳ ವಿಷಯವನ್ನುಪದೇಶಿಸಿದರೆಂದೂ, ಮುಂದೆ ಶ್ರೀ ಪಾರ್ವತೀದೇವಿಯು ಅವರ ಅಪ್ಪಣೆಯಂತೆ ತಪಸ್ಸನ್ನಾಚರಿಸಿದಳೆಂದೂ ಉಲ್ಲೇಖಿಸಿದ್ದಾನೆ.”

ಈ ವಿಷಯವನ್ನು ಪರ್ಯಾಲೋಚಿಸಿದರೆ—ಈ ಆಚಾರ್ಯರು ಶ್ರೀ ಷಣ್ಮುಖಸ್ವಾಮಿಯ ಅವತಾರ ಕಾಲದಲ್ಲಿ ಶ್ರೀಶೈಲಧರ್ಮಪೀಠವನ್ನಲಂಕರಿಸಿದ್ದರೆಂದು ವ್ಯಕ್ತವಾಗುತ್ತದೆ. ಇದರಿಂದ ವೀರಶೈವಧರ್ಮಪೀಠಗಳು ಬಹಳ ಪ್ರಾಚೀನಕಾಲದಿಂದ ಈ ಭರತಖಂಡದಲ್ಲಿ ವಿರಾಜಿಸುತ್ತಿರುವುವೆಂಬ ವಿಷಯವು ಪ್ರತಿಯೊಬ್ಬರಿಗೂ ವೇದ್ಯವಾಗುವಂತಿದೆ. ಈ ಕವಿಯಾದರೂ ಸಾಮಾನ್ಯನಲ್ಲ! ಮಹಾರಾಜನಾಗಿದ್ದನು; ಅಲ್ಲದೆ ಪ್ರಾಮಾಣಿಕ ಕವಿಶಿರೋಮಣಿಯೆನಿಸಿ ಆಂಧ್ರದೇಶದಲ್ಲಿ ಪ್ರಖ್ಯಾತಿ ಗಳಿಸಿದ್ದಾನೆ ಮತ್ತು ಆಧುನಿಕನಲ್ಲ! ಕ್ರಿಸ್ತಶಕ ೯೪೦ ರಲ್ಲಿದ್ದವನು ಅಂದರೆ ಈಗ್ಗೆ ೧೦೦೦ ವರ್ಷಗಳ ಪೂರ್ವದಲ್ಲಿದ್ದನೆಂದು ಆಂಧ್ರದೇಶದ ಸುಪ್ರಸಿದ್ಧ ಚರಿತ್ರ ಶೋಧಕರೇ ನಿರ್ಣಯಿಸಿದ್ದಾರೆ. ಈ ವಿಷಯವು ನಿಜ ವೀರಶೈವರ ಮನಸ್ಸಿಗೆ ಅಪಾರವಾದ ಸಂತೋಷವನ್ನುಂಟು ಮಾಡತಕ್ಕುದಾಗಿದೆಯೆಂಬುದು ಅತ್ಯಾನಂದದಿಂದ ಹೇಳಬೇಕಾಗಿದೆ. ವೀರಶೈವಮತಸ್ಥಾಪನಾಚಾರ್ಯರಾದ ಶ್ರೀಜಗದ್ಗುರುಪಂಚಾಚಾರ್ಯರ ಧರ್ಮಪೀಠಗಳು ನಾಲ್ಕು ಯುಗಗಳಿಂದಲೂ ವಿರಾಜಿಸುತ್ತಿರುವುವೆಂಬ ವಿಚಾರವು ಪ್ರಾಮಾಣ್ಯವನ್ನು ಈ ಆಂಧ್ರಕುಮಾರಸಂಭವಕಾವ್ಯವು ಸಮರ್ಥಿಸುತ್ತಿರುವುದು

ಈ ಶ್ರೀಶೈಲಧರ್ಮಪೀಠದ ಪ್ರಾಚೀನತ್ವವು ವ್ಯಾಸ ಮಹರ್ಷಿಯಿಂದ ವಿರಚಿತವಾಗಿರುವ ಸ್ಕಂದಪುರಾಣಾಂತರ್ಗತ “**ಶಂಕರಸಂಹಿತೆ**” ಯಿಂದಲೂ ವೇದ್ಯವಾಗುವುದು

ತಸ್ಮಿಂಚ್ಛ್ರೀಪರ್ವತೇ ಪುಣ್ಯೇ ಸಂಸಾರಾಮಯ ಭೇಷಜೇ | ಅಸ್ತೀ ಲಿಂಗಾಂಗಸಂಬಂಧೀ ಸದಾನಂದಾಹ್ವಯೋ ಮುನಿಃ ||೯೧||

ಸರ್ವೋಪನಿಷದರ್ಥಜ್ಞಃ ಶಿವಧ್ಯಾನಪರಾಯಣಃ | ಭಸ್ಮಾವಲಿಪ್ತಸರ್ವಾಂಗೋ ರುದ್ರಾಧ್ಯಾಯಜಪಾಶ್ರಯಃ ||೯೨|| ರುದ್ರಾಕ್ಷಮಾಲಾಭರಣೋ ಧೃತಪಾಶುಪತವ್ರತಃ | ಅತಿವರ್ಣಾಶ್ರಮಿಯೋಗೀ ಜೀವನ್ಮುಕ್ತೋ ಜಗದ್ಗುರುಃ ||೯೩||

ಶಂಕರಸಂಹಿತೆಯ ೮೫ನೆಯ ಅಧ್ಯಾಯದಲ್ಲಿರತಕ್ಕ ಈ ಶ್ಲೋಕಗಳಿಂದ ಯುಗಾಂತರದಲ್ಲಿ ಶ್ರೀಶೈಲಧರ್ಮಪೀಠಕ್ಕೆ “**ಸದಾನಂದ**” ಎಂಬ ಹೆಸರಿನ ಜಗದ್ಗುರುಗಳು ಅಧಿಪತಿಗಳಾಗಿದ್ದರೆಂದು ತೋರಿಬರುತ್ತದೆ

ಇಲ್ಲಿಯವರೆಗೆ ನಾವು ವಿಚಾರಮಾಡಿದ ಎಲ್ಲಾ ವಿಷಯಗಳನ್ನು ಪರ್ಯಾಲೋಚಿಸಿದರೆ ಶ್ರೀಶೈಲ ಧರ್ಮಪೀಠವು ಬಹು ಪ್ರಾಚೀನವಾದುದೆಂದು ಸ್ಪಷ್ಟವಾಗಿ ತೋರಿಬರುತ್ತದೆ. ಈ ರೀತಿಯಾಗಿ ಭರತಖಂಡದಲ್ಲಿ ಅನಾದಿ ಕಾಲದಿಂದ ಪ್ರಜ್ವಲಿಸುತ್ತಿರುವ ಪಂಚ ಧರ್ಮಪೀಠಗಳ ವಿಷಯದಲ್ಲಿ ಸರ್ವರೂ ಅನನ್ಯವಾದ ಭಕ್ತಿಯನ್ನು ವಹಿಸಿ ಧನ್ಯರಾಗಬೇಕೆಂದು ಹಾರೈಸುತ್ತೇವೆ

ವರ್ತಮಾನಸಂಗ್ರಹ.

ಕಳೆದ ಮಹಾಯುದ್ಧದಲ್ಲಿ ಫಿರಂಗಿ ಸೈನ್ಯದ ಕಾಂಜಿಯರಾಗಿ ಕೆಲಸಮಾಡಿದ ಲಂಡನ್ನಿನ ಮಿ|| ಆರ್. ಡಬ್ಲ್ಯು ಆರ್ಲ್ ಎಂಬವರು ಹೊಸದಾದರಿಯ ಮಿಷನ್ ಬಂದೂಕವನ್ನು ಕಂಡುಹಿಡಿದಿದ್ದು, ಇದರಿಂದ ನಿಮಿಷಕ್ಕೆ ೩ ಸಾವಿರ ಗುಂಡುಗಳನ್ನು ಹೊಡೆಯಬಹುದಂತೆ!

ಕಳೆದವಾರ ಪೇಲರ್‌ಕೊಹ್ಲಾದಲ್ಲಿ ಮುಸ್ಲಿಮರು ದೇವಸ್ಥಾನದಲ್ಲಿ ಹಿಂದುಗಳು ಪ್ರಾರ್ಥನೆಮಾಡಲಾಗದೆಂದು ಆತಂಕಪಡಿಸಿದ್ದರಿಂದ ಮುಸ್ಲೀಮರಿಗೂ ಹಿಂದೂಗಳಿಗೂ ಭಯಂಕರ ಹೊಡೆದಾಟಗಳುಂಟಾಗಿರುತ್ತವೆ ಈ ಸಂದರ್ಭದಲ್ಲಿ ಹತ್ತು ಜನಗಳು ಗಾಯಗೊಂಡಿರುತ್ತಾರೆ 200 ಜನಗಳು ದಸ್ತಗಿರಿ ಮಾಡಲ್ಪಟ್ಟಿರುತ್ತಾರೆ

ಕಳೆದವರ್ಷ ರಶಿಯಾದೇಶದಲ್ಲಿ 100ಕ್ಕೆ 32 ಜನ ಸ್ತ್ರೀಪುರುಷರು ವಿವಾಹದಿಂದ ಬಿಡುಗಡೆಹೊಂದಿದ್ದರು ಈ ಚಾಳ್ಯವು ಬಲಿಯುತ್ತ ಕಳೆದ ಮೇ ತಿಂಗಳಲ್ಲಿ ಅದು 44 ಕ್ಕೇರಿತು. ಒಟ್ಟು ಈ ತಿಂಗಳಲ್ಲಿ 4381 ಮದುವೆಗಳು ಜರುಗಿ ಅವುಗಳಲ್ಲಿ 2040 ಮದುವೆಗಳು ವುಸಿಯಾದವು. ಆ ದೇಶದಲ್ಲಿ ಮದುವೆಮಾಡಿಕೊಂಡು ಬಿಡುಗಡೆಹೊಂದುವುದೆಂದರೆ ಅದೊಂದು ಬಾಲಕರ ಆಟವಾಗಿ ಪರಿಣಮಿಸಿಹೋಗಿದೆ ಇದರಿಂದ ಆ ದೇಶವು ಕಷ್ಟವಾಗಿರುವುದರಿಂದ ಸರ್ಕಾರದವರು ಈ ಅನಿಷ್ಟಕಾರಿಯಾದ ವಿವಾಹವಿಚ್ಛೇದನ ಕಾರ್ಯವನ್ನು ನಿಷೇಧಿಸಬೇಕೆಂದು ಯೋಚಿಸುತ್ತಿರುವರು

ಮೃಗಶಾಲೆಯಲ್ಲಿ ಮನುಷ್ಯರ ಪ್ರದರ್ಶನ.

ಸ್ವಿಟ್ಜರ್ಲೆಂಡಿನ, ಬಾಸೆಲ್ ಎಂಬಲ್ಲಿಯ ಮೃಗಶಾಲೆಯಲ್ಲಿ 65 ಮಂದಿ ಆಫ್ರಿಕದ ಕಾಡುಜನರನ್ನು ಪ್ರದರ್ಶಿಸಲು ಇಟ್ಟಿದ್ದಾರಂತೆ!

ಹೋತು ಹಾಲುಕೊಡುವುದಂತೆ!

ಕಾಂಗ್ರೆಸ್ ಕೆಲಸಗಾರರಾದ ಬಾಬುರಾಮ ಬಹದ್ದೂರ್ ಪ್ರಸಾದ್ ಎಂಬವರು ಮೋತಿಹರಿ ಎಂಬಲ್ಲಿಗೆ ಪಕ್ಕದ ಹಳ್ಳಿಯಿಂದ ಒಂದು ವಿಚಿತ್ರಹೋತನ್ನು ತಂದಿರುವರಂತೆ! ಅದು ದಿನಕ್ಕೆ ಒಂದುವರೆ ಸೇರು ಹಾಲು ಕೊಡುತ್ತದೆಂದು ಪ್ರಕಟವಾಗಿದೆ ದೈವಲೀಲೆಯು ವಿಚಿತ್ರವಾದುದು!

ಹಾವಿನ ವಿಷದಿಂದ 70 ಜನರ ಮರಣ!

ಕಳೆದವಾರ ಸಹರಾನ್ ಪುರದ ಬಳಿಯಿರುವ ಬಹದ್ದೂರ್‌ಪುರವೆಂಬ ಒಂದು ಗ್ರಾಮದಿಂದ ಅನೇಕರು ಮದುವೆಗಾಗಿ ಪೇರಿಯೆಂಬ ಗ್ರಾಮಕ್ಕೆ ಪ್ರಯಾಣಬೆಳೆಯಿಸಿದರು ದಾರಿಯಲ್ಲಿ ಒಂದು ಬೇವಿನಮರದ ಕೆಳಗೆ ಅಡಿಗೆಮಾಡಲು ಉಪಕ್ರಮಿಸಿದರು. ಒಲೆಯ ಮೇಲಿದ್ದ ಪಾತ್ರೆಗೆ ಯಾರೂ ಕಾಣದಂತೆ ಒಂದು ಹಾವು ಬಿದ್ದು ಪಾಕವೆಲ್ಲವೂ ವಿಷಮಯವಾಯಿತು ಎಲ್ಲರೂ ಕುಳಿತು ಊಟಕ್ಕೆ ಪ್ರಾರಂಭಮಾಡಲು 70 ಜನಗಳು ಕೂಡಲೇ ಮೃತಿಹೊಂದಿದರು. ಆಮೇಲೆ ಆ ಪಾತ್ರೆಯಲ್ಲಿ ಸತ್ತ ಹಾವು ಕಂಡುಬಂದಿತು.

ತಂದೆಯು ಕೊಡಬೇಕಾದ ಕಿರಿಗೆಗಾಗಿ ಮಗಳ ಬಂಧನ!

ರುಮೇನಿಯಾದೇಶದ ಮಾಕ್ರಿಸ್ತಿ ಎಂಬಲ್ಲಿ ಕಿರಿಗೆಯು ಕಲೆಕ್ಟರರೊಬ್ಬರು ರೈತನೊಬ್ಬನು ಕಾಲಕ್ಕೆ ಸರಿಯಾಗಿ ಕಿರಿಗೆಯನ್ನು ಕೊಡಲಿಲ್ಲವೆಂದು ಆತನ 17 ವರ್ಷ ವಯಸ್ಸಿನ ಹುಡುಗಿಯನ್ನು ಬಂಧಿಸಿದನು ಆ ರೈತನ ಮನೆಯಲ್ಲಿ ಸರಿಯಾದ ಬೆಲೆಬಾಳುವ ಪದಾರ್ಥಗಳಾವುವೂ ದೊರೆಯದಿದ್ದುದರಿಂದ ಹೀಗೆ ಮಾಡಬೇಕಾಯಿತಂತೆ!

ಹಾವಿನಕೋಪ.

ಆಸ್ಟ್ರೇಲಿಯಾದ ನೆವಿಲ್‌ಲೂವಿ ಎಂಬವನು ನೆಲವನ್ನು ಅಗೆಯುತ್ತಿದ್ದಾಗ ಒಂದು ಹಾವು ಸಿಕ್ಕಿ ಅದರ ಅರ್ಧಭಾಗವು ಕತ್ತರಿಸಿಹೋಯಿತು ಆದರೆ ಅದರ ತಲೆಯ ಕಡೆಯ ಅರ್ಧಭಾಗವು ಸಿಟ್ಟಿನಿಂದ ಅವನನ್ನು ಅಟ್ಟಿಕೊಂಡು ಬಂದಿತೆಂದೂ ಅವನು ಪುನಃ ಅದರ ತಲೆಯನ್ನು ಜಜ್ಜಿದನೆಂದೂ ತಿಳಿದುಬರುತ್ತದೆ ಹಾವಿನ ಸಿಟ್ಟೆಂದರೆ ಇದೇ ಅಲ್ಲವೇ?

ಸೋಮಾರಿತನದಿಂದ ಆಯುಸ್ಸು ವೃದ್ಧಿ!

ಅಮೇರಿಕದ ಕೆನಡಾದಲ್ಲಿ 102 ವರ್ಷ ವಯಸ್ಸಿನ ಮಿ|| ಟಿಮೋತಿಮೆಶ್ಚರ್ ಎಂಬ ವೃದ್ಧಳಿದ್ದಾಳೆ ಇಷ್ಟು ದೀರ್ಘಕಾಲ ಬದುಕಲು ಇವಳು ಏನುಮಾಡಿದಳೆಂದು ಕೆಲವರು ಕೇಳಿದ್ದಕ್ಕೆ ಅವಳು ತಾನು ತನ್ನ ಜೀವಮಾನದಲ್ಲೇ ಒಂದೂ ಕಷ್ಟದ ಕೆಲಸವನ್ನು ಮಾಡಿದವಳಲ್ಲವೆಂದೂ, ಸೋಮಾರಿತನವೇ ತನ್ನ ಪ್ರಥಮಗುಣವೆಂದೂ, ಲೆಮನೇಡ್ ಪಾನಕವೇ ತನ್ನ ಪಾನೀಯವಾಗಿತ್ತೆಂದೂ ಹೇಳಿದ್ದಾಳೆ

ಪ್ರಪಂಚದಲ್ಲೇ ಅತ್ಯಂತ ಚಿಕ್ಕಪಿಸ್ತೂಲು!

ಮೃಗಗಳನ್ನಾಗಲಿ ಮನುಷ್ಯರನ್ನಾಗಲಿ ಕೊಲ್ಲಬಲ್ಲ ಅತ್ಯಂತ ಸಣ್ಣ ಪಿಸ್ತೂಲು, ವೆಲ್ಫೋರ್ಡ್ ನಗರದ ಕೊಲೆಯೊಂದನ್ನು ಪತ್ತೆ ಮಾಡುತ್ತಿರುವ ಡಿಟೆಕ್ಟಿವ್‌ಗಳಿಗೆ ಸಿಕ್ಕಿರುತ್ತದೆ ಈ ಪಿಸ್ತೂಲು ಸುಲಭವಾಗಿ ಒಂದು ದೀಪದ ಕಡ್ಡಿಪೆಟ್ಟಿಗೆಯಲ್ಲಿ ಇಡಬಹುದಾದಷ್ಟು ಚಿಕ್ಕದಾಗಿದ್ದರೂ ದೊಡ್ಡ ಪಿಸ್ತೂಲುಗಳಷ್ಟೇ ಕೆಲಸ ಮಾಡಬಲ್ಲದಂತೆ!

ತಲೆದಿಂಬಿನಲ್ಲಿ ವಜ್ರಗಳು!

ಒಬ್ಬ ಚೀನಾದೇಶದವನು 2 ರೂಪಾಯಿಗೆ ಒಂದು ತಲೆದಿಂಬನ್ನು ಕೊಂಡು ಕೊಂಡನು ಉಪಯೋಗಿಸುವಾಗ ಅದು ತಲೆಗೆ ಒತ್ತಿದ್ದರಿಂದ ಒಳಗೆ ಏನೋ ಗಟ್ಟಿ ಪದಾರ್ಥವಿರಬೇಕೆಂದು ತಲೆದಿಂಬನ್ನು ಬಿಚ್ಚಿ ನೋಡುವಲ್ಲಿ ಉಣ್ಣೆಯಲ್ಲಿ ಸುತ್ತಿದ್ದ 10 ವಜ್ರಗಳು ಸಿಕ್ಕವು. ಇವುಗಳ ಬೆಲೆ ಸುಮಾರು 10 ಸಾವಿರ ರೂಪಾಯಿಗಳಾಗಬಹುದೆಂದೂ ಇವು ಯಾವಳೋ ಒಬ್ಬ ರಾಣಿಯಿಂದ ಕಳುವಾದ ಮಾಲೆಂದೂ ಊಹಿಸಲಾಗಿದೆ.

ಮುಂಗುಸಿಯಿಂದ ರಕ್ಷಿಸಲ್ಪಟ್ಟಳು.

ಮಧುಬಾನಿ ಎಂಬಲ್ಲಿಯ ಒಬ್ಬ ವಕೀಲರ ತಂಗಿಯು ಬೆಳಗ್ಗೆ ಎದ್ದು ಹೂ ತೋಟದಲ್ಲಿ ಹೋಗುತ್ತಿದ್ದಾಗ ಅಕಸ್ಮಾತ್ ಘಟಸರ್ಪವೊಂದು ಅವಳ ಮೇಲೆ ಬೀಳಲು ಬರುವುದನ್ನು ಕಂಡು ಓಡಿದಳು ಸರ್ಪವು ಅವಳನ್ನು ಹಿಂಬಾಲಿಸಿ 1 ಗಜ ದೂರದಲ್ಲಿ ಅವಳನ್ನು ಹಿಡಿಯುವುದರಲ್ಲಿದ್ದಿತು. ಅಷ್ಟರಲ್ಲೇ ಪಕ್ಕದ ಪೊದೆಯಿಂದ ಮುಂಗುಸಿ(ಮುಂಗಲಿ) ಯೊಂದು ಹಾವಿನ ಮೇಲೆ ಹಾರಿ ಅದನ್ನು ಕಚ್ಚಿಕೊಂದಿತು. ಹುಡುಗಿಯು ಬದುಕಿಕೊಂಡಳು. ವಿಧಿವಿಲಾಸವನ್ನು ಯಾರು ಬಲ್ಲರು?

ಮಹನೀಯರ ಹಿತೋಕ್ತಿಗಳು

(ಹಿಂದಿನಿಂದ ಮುಂದುವರಿದುದು)

27 ಶ್ರದ್ಧೆ ಎಂದರೆ— ಪರಮಾತ್ಮನ ಇಚ್ಛೆಗೆ ಮರುಮಾತಿಲ್ಲದೆ ಶರಣುಹೋಗುವುದು. ಎಲ್ಲ ಸಂಭವಿಸುವುದೂ ಪರಮಾತ್ಮನ ಕಾರ್ಯವೆಂದು ಭಾವಿಸುತ್ತಿರುವುದು. ಪರಮಾತ್ಮನು ಪರಮ ಶ್ರೇಷ್ಠನೂ ಒಳ್ಳೆಯವನೂ ದಯಾಳುವೂ ಎಂದು ತಿಳಿಯುವುದು. ಸಮಸ್ತ ವಿಷಯಗಳನ್ನೂ ನಿರ್ಧರಿಸುವವನು ಅವನೊಬ್ಬನೇ ಆಗಿರುವನು. ಎಲ್ಲಾ ಘಟನೆಗಳೂ ಬದಲಾವಣೆಗಳೂ ಚಲನೆಗಳೂ ಸೌಜನ್ಯತೆ ಪ್ರೇಮ ಕರುಣೆ ಮುಂತಾದ ಅಂತಃಕರಣದಿಂದಲೇ ಹೊರಡುವುದರಿಂದ ಗೊಣಗುಟ್ಟುವುದಕ್ಕೆ ಕಾರಣವಿಲ್ಲ. ಯಾವ ದೋಷವನ್ನು ಕಂಡುಹಿಡಿಯುವುದಕ್ಕೂ ಕಾರಣವಿಲ್ಲ. ಕೊರಗಲಿಕ್ಕೂ ತಳಮಳಪಡಲಿಕ್ಕೂ ಕಾರಣವಿಲ್ಲ. ಮತ್ತು ಯಾವುದಕ್ಕೂ ಭಯಪಡಬೇಕಾದುದಿಲ್ಲ. ಎಲ್ಲವೂ ಅವನ ಕೃತ್ಯವೇ, ಅವನು ಎಲ್ಲಾ ಗಳಿಗೆಯಲ್ಲಿಯೂ ಆನಂದವು ಆಗುವಂತೆಯೇ ವಿಚಾರಮಾಡುತ್ತಿದ್ದಾನೆ. ಆದುದರಿಂದ ಸಮಸ್ತ ವಸ್ತುಗಳ ಅಂತರ್ಯದಲ್ಲಿಯೂ, ಸಮಸ್ತ ಘಟನೆಗಳಲ್ಲಿಯೂ ಅವನೇ ಇದ್ದುಕೊಂಡು ಕೆಲಸ ಮಾಡುತ್ತಿರುವನು. ಈ ರೀತಿಯ ಶ್ರದ್ಧೆಯು ನಮ್ಮದಾಗಿರಲು ಪರಮಾತ್ಮನು ಎಂದೆಂದಿಗೂ ನಮ್ಮ ಕೈಬಿಡದ ಸಖನೂ ಮಾರ್ಗದರ್ಶಿಯೂ ರಕ್ಷಕನೂ ಆಗಿರುವನು. ಮತ್ತು ನಾವು ಎಲ್ಲ ಕರ್ಮಗಳನ್ನೂ ಅವನ ಪ್ರೇರಣೆಗೆ ಅನುಸಾರವಾಗಿಯೇ ಮಾಡುತ್ತಿರುವೆವು. ಅವನು ನಮ್ಮಲ್ಲಿಯೂ ನಮ್ಮ ಸುತ್ತುಮುತ್ತಲೂ ಎಲ್ಲೆಲ್ಲಿಯೂ ಇರುವನು. ಹೀಗಾಗಿ ನಮ್ಮ ಸಮಸ್ತ ಸಂಶಯ ಭಯಗಳೂ ಮಾಯವಾಗುವವು. ನಾವು ಸಂಪೂರ್ಣ ಶಾಂತಿ ಆನಂದವೆ ಆಗಿರುವ ಮನಃಸ್ಥಿತಿಯನ್ನು ಹೊಂದುವೆವು.

28 ಪರಮಾತ್ಮನ ಸಾಮೀಪ್ಯತೆ ಧ್ಯಾನದಿಂದ ಸಹ ತಿಳಿಯಾಗುವದೆಂದು ನಂಬುವದು ಹೇಗೆ ಎಂದು ಕೇಳಬಹುದು. ಈಗಿನ ಕಾಲದ ಪ್ರತಿಯೊಬ್ಬನಿಗೆ ಪ್ರತಿಯೊಂದೂ ಪ್ರತ್ಯಕ್ಷ ಪ್ರಮಾಣದಿಂದ ಸಿದ್ಧವಾಗಬೇಕು. ಇಲ್ಲವೆ ವಿಚಾರಶಕ್ತಿಯಿಂದ ಅನುಮಾನ ಪ್ರಮಾಣಕ್ಕೆ ಗುರಿಯಾಗಬೇಕು. ಪ್ರತ್ಯಕ್ಷ ಮತ್ತು ಅನುಮಾನ ಇವೆರಡರಿಂದಲೆ ನಮಗೆ ಜ್ಞಾನವೆಲ್ಲಾ ಸಿಗುವುದಿಲ್ಲ. ಆಪ್ತವಾಕ್ಯವೆಂಬುದನ್ನು ಪ್ರಮಾಣವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಒಬ್ಬನು ತನ್ನ ತಂದೆಯನ್ನು ತಂದೆ ಎಂದು ಪ್ರತ್ಯಕ್ಷದಿಂದ ತಿಳಿಯುವದೆಂತು ಶಕ್ಯವಿಲ್ಲ. ಏಕೆಂದರೆ ಗರ್ಭಕ್ಕೆ ಬಂದಾಗಿನ ಜ್ಞಾನ ಯಾರಿಗೂ ಇರುವುದಿಲ್ಲ. ಅನುಮಾನಕ್ಕೂ ಸಾಧನವಿಲ್ಲ. ಇನ್ನು ಆಪ್ತವಾಕ್ಯವೆಂದರೆ ನೆರೆಹೊರೆಯವರು ಹೇಳುವುದನ್ನು ನಂಬಿ ತಂದೆ ಎಂದು ನಿರ್ಧರಿಸಬಹುದು. ಇದರಂತೆ ಸದಸದ್ವಿಚಾರದಲ್ಲಿಯೂ ಪ್ರತ್ಯಕ್ಷದಿಂದ ತಿಳಿಯುವಂತಿಲ್ಲ. ಅನುಮಾನಕ್ಕೆ ತಕ್ಕ ಸಾಧನವಿಲ್ಲ. ಮಹರ್ಷಿಗಳು ದಿವ್ಯ ಜ್ಞಾನದೃಷ್ಟಿಯಿಂದ ನಮ್ಮ ಮೇಲೆ ಅನುಗ್ರಹಮಾಡಿ ಪ್ರಕಟಿಸಿರುವ ವೇದವನ್ನು ನಂಬಬೇಕು. ಬೇರೆ ಉಪಾಯವೇ ಇಲ್ಲ. ವೇದ ಮಂತ್ರಗಳು 'ನೈಷಾ ತರ್ಕೇಣ ಮತಿರಾಪನೇಯಾ' ಎಂಬ ಶ್ರುತಿಯಂತೆ ಬುದ್ಧಿಗೆ ನಿಲುಕತಕ್ಕವುಗಳಲ್ಲ. ಮತ್ತು ಗೀತೆಯಲ್ಲಿ 'ಅಶ್ರದ್ದಧಾನಾಃ ಪುರುಷಾಃ ಧರ್ಮಸ್ಯಾಸ್ಯ ಪರಂತಪ | ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯುಸಂಸಾರವರ್ತ್ಮನಿ' ಅಂದರೆ ಈ ಧರ್ಮದಲ್ಲಿ ಅಶ್ರದ್ಧೆಯನ್ನು ಮಾಡುವವರು ಭಗವಂತನನ್ನು ಪಡೆಯದೆ ಮೃತ್ಯುರೂಪವಾದ ಸಂಸಾರಕ್ಕೆ ತಿರುಗುವರು ಎಂದು ಹೇಳುತ್ತದೆ. ಆದರೆ "ಶ್ರದ್ಧಾವಾನ್ ಲಭತೇ ಜ್ಞಾನಂ" ಎಂಬ ಗೀತೋಕ್ತಿಯಂತೆ ದೇವರನ್ನು ಕಾಣುವುದಕ್ಕೆ ಶ್ರದ್ಧೆಯು ಬೇಕೇಬೇಕು.

29 ನಾವು ಕಾಪಾಡುತ್ತಿರುವ ದುರ್ಗುಣಗಳೆಂಬ ಜೋಡುಗಳಂತೆ ಪರಸ್ಪರ ವಿರೋಧವುಳ್ಳ ಸುಖದುಃಖ ಲಾಭನಷ್ಟ ಬೇಕುಬೇಡ ಮೊದಲಾದ ಜೋಡಿಗಳು ನಮ್ಮ ಮೇಲೆ ಕಾಲುಹಾಕಿಕೊಂಡು ನಮ್ಮನ್ನು ದುರ್ಬಲರನ್ನಾಗಿ ಮಾಡಿವೆ. ಆ ಜೋಡಿಗಳನ್ನು ಕಿತ್ತೊಗೆಯಬೇಕು. ಆ ಜೋಡಿಗಳ ಮೂಲವು ಪಾಪವು. ಪಾಪಕ್ಕೆ ಪ್ರತಿರೋಧ ಪುಣ್ಯವು. ಆದ್ದರಿಂದ ಪುಣ್ಯಕರ್ಮಗಳನ್ನು ಮಾಡಿ ಅದರ ವೇಗದಿಂದ ಪಾಪದ ಬಲವನ್ನು ಕಳೆಯಬೇಕು. ಆಗ ಆ ಜೋಡಿಗಳು ತಮಗೆ ತಾವೇ ಬಲವನ್ನು ಕಳೆದುಕೊಂಡು ಬಂದ ಹಾದಿಯನ್ನು ಹಿಡಿಯುವವು. ಆಮೇಲೆ ಮನಸ್ಸು ದೇವರ ಕಡೆಗೆ ಎಡೆಬಿಡದೆ ಹರಿಯುವುದಕ್ಕೆ ತಕ್ಕದ್ದಾಗುವುದು. ಮತ್ತು ಮೋಕ್ಷದ ಮಾರ್ಗವನ್ನು ತೋರಿಸುವುದು. ಹೀಗೆ ಮಹಾಮಾಯೆಯು ಪರಮಾತ್ಮನನ್ನು ಮರೆಮಾಡಿದೆ. ಮೋಡವು ಹೋದ ಮೇಲೆ ಸೂರ್ಯನ ದರ್ಶನವಾಗುವಂತೆ ಮಾಯೆಯು ತೊಲಗಿದರೆ ದೇವರ ದರ್ಶನವಾಗುವದು. ಹಾಗಾದರೆ ಮಾಯೆಯನ್ನು ತೊಲಗಿಸುವ ಬಗೆ ಹ್ಯಾಗೆಂದರೆ— 'ಅನುಕ್ಷಣಂ ಸಮಸ್ತ ಮಾಯೆ | ...ಲ್ಲ | ... ಭಯವೇ ... | ...' ಎಂಬಂತೆ "ನಾನು, ನೀನು, ಅದು" ಎಂಬ ಭಾವನೆಯು ಪೂರ್ಣವಾಗಿ ಅಳಿಯಬೇಕು. ಇದೇ ಮಾಯೆಯನ್ನು ಕಳೆಯುವ ಉಪಾಯವು.

30 ನಾಟಕಗಾರರು ವಿವಿಧವೇಷಾಂತರಗಳಿಂದ ತಮ್ಮ ತಮ್ಮ ಪಾತ್ರಗಳನ್ನು ಅಭಿನಯಿಸುವಂತೆ ಈ ಪ್ರಪಂಚವೆಂಬ ನಾಟಕ ರಂಗಸ್ಥಲದಲ್ಲಿ ಮಾನವರೂ ಸ್ವಲ್ಪ ಕಾಲ ನಟಿಸಿ ಅನಂತರ ತಮ್ಮ ತಮ್ಮ ವೇಷವನ್ನು ತಮಗೆ ತಾವೇ ತೆಗೆದು ಬಿಡುವರು.

31 ಸಿಟ್ಟು ಬಂದಾಗ ಸಮಾಧಾನ ಹೊಂದುವದು. ಪರಸ್ತ್ರೀಯನ್ನು ತಾಯಿಯಂತೆ ಕಾಣುವದು. ಪರದ್ರವ್ಯವನ್ನು ಪಾಷಾಣದಂತೆ ಭಾವಿಸುವದು, ಇವುಗಳೇ ಶ್ರೇಷ್ಠವಾದ ಪೌರುಷಧರ್ಮಗಳು.

32 ಮೂರ್ಖನು ಯಾವುದನ್ನು ವಿವೇಕವೆಂದು ಭಾವಿಸುವನೋ ಅದು ಪ್ರಾಯಶಃ ಅವಿವೇಕ ಅಥವಾ ವಿವೇಕಾಭಾಸವಾಗಿರುವದು. ವಿವೇಕದ ಯಥಾರ್ಥ ಸ್ವರೂಪ ಸಜ್ಜನರಿಗೆ ಮಾತ್ರ ವಿದಿತವಾಗಿರುವದು. ವಿವೇಕಾವಿವೇಕಗಳಿಗೆ ಪ್ರಕಾಶಾಂಧಕಾರಗಳಿಗಿರುವಷ್ಟು ಪರಸ್ಪರ ವಿರೋಧವಿದೆ. ಇದು ಸಾಮಾನ್ಯರಿಗೊಂದು ಸಮಸ್ಯೆ ಎಂದೇ ಹೇಳಬಹುದು.

ವಿವೇಕವೆಂದರೆ— ಸಂಸಾರವಿಷಯ ಕಾರ್ಯಗಳನ್ನು ... ಜ್ಞಾನವೇ ವಿವೇಕ. ತದ್ಭಿನ್ನವಾದುದೇ ಅವಿವೇಕ.

33 ಅಹಂಕಾರದಿಂದ ಒತ್ತಡಗಳನ್ನು ಮಾಡುವದು ಸುಲಭವಾದ್ದಲ್ಲ. ಕಷ್ಟಪ್ರತಿರೋಧಗಳ ವಿಚಾರವು ಇದ್ದೇ ಇರಬೇಕು. ವಾಯುವಿನಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದಿದ ಮನುಷ್ಯನು ಶಾಶ್ವತ ವಿಷಯಗಳಿಗೆ ಹೆಚ್ಚಾಗಿ ಬದುಕಲಾರನು. ಈ ಕಾಯದ ದೈಹಿಕ ವ್ಯಾಪಾರಗಳು ನಡೆಯುವುದಕ್ಕಾಗಿ ಕೊಂಚಮಟ್ಟಿಗೆ ವಾಯುಸಂಬಂಧವು ಇದ್ದೇ ತೀರಬೇಕು (ಇಲ್ಲಿ ವಾಯು ಎಂದರೆ ಆಸ್ತಿ) ಜಗತ್ತಿನಲ್ಲಿ ಅತ್ಯಂತ ಜಿಪುಣನಾದ ರಕ್ಷಕರು ... 'ಅನ್ನ ನೀರು ಮೃದುವಾಸವರಾಸು' (ಕಷ್ಟಪಟ್ಟು)

34 ಕಮ್ಮಾರನು ತಿದಿಯನ್ನು ಆಗಿಂದಾಗ್ಗೆ ಊದುವುದರ ಮೂಲಕ ಕುಲುಮೆಯಲ್ಲಿ ಬೆಂಕಿಯು ಆರದಂತೆ ಹೇಗೆ ನೋಡಿಕೊಳ್ಳುವನೋ ಹಾಗೆ ಧರ್ಮಾಚರಣೆಯಿಂದ ಮನಸ್ಸೆಂಬ ಅಗ್ನಿಯು ನಂದದೆ ಪ್ರಜ್ವಲಿಸುತ್ತಿರುವಂತೆ ನೋಡಿಕೊಳ್ಳಬೇಕು.

35 ನಮ್ಮ ತಪಸ್ಸು ಸತ್ಸಂಗಗಳು ಎಷ್ಟಿದ್ದರೂ ಕೂಡ ಮನಶ್ಶುದ್ಧಿ ಇಲ್ಲದೆ ಚಂಚಲಚಿತ್ತನಾಗಿರುವವರೆಗೂ ಆವ ಪ್ರಯೋಜನವೂ ಆಗುವದಿಲ್ಲವು.

36 ಗುರುಗಳಿಗೆ ನಮ್ಮ ಕಾಣಿಕೆ ಭಕ್ತಿಭಾವವಾಗಿ ಸಿಕ್ಕುವದು. ಆದರೆ ಸತ್ಸಂಗವು ದೊರೆಯುವದಿಗೆ ದುರ್ಲಭವು ಎಂಬುದು ಒಂದು ಪ್ರಾಚೀನವಚನ. ಅದರ ಅರ್ಥವೇನೆಂದರೆ ಬುದ್ಧಿವಾದವನ್ನು ಹೇಳುವವರು ಬಹುಮಂದಿ. ಅದರಂತೆ ನಡೆಯುವವರು ಕೆಲವು ಮಂದಿ ಮಾತ್ರ ಎಂದು ತಿಳಿದುಕೊ.

37 ಭತ್ತದ ಕಾಳಿನಲ್ಲಿ ಒಳಗಿರುವ ಅಕ್ಕಿಯು ಮಾತ್ರ ಮೊಳಕೆಗೂ ಮುಂದೆ ಅದರ ಬೆಳವಣಿಗೆಗೂ ಆವಶ್ಯಕವೆಂಬುದಾಗಿಯೂ ಮೇಲಿನ ಹೊಟ್ಟು ಮುಖ್ಯವಲ್ಲವೆಂಬುದಾಗಿಯೂ ಎಣಿಸಿದರೂ ಹೊಟ್ಟು ತೆಗೆದ ಕಾಳನ್ನು ಅಂದರೆ ಅಕ್ಕಿಯನ್ನು ಬಿತ್ತಿದರೆ ಅದು ಮೊಳಕೆ ಸ್ಫುರಿತವಾಗಿ ಭತ್ತದ ತೆನೆ ಬರುವುದಿಲ್ಲವಷ್ಟೆ. ಪೈರಾಗಲು ಹೊಟ್ಟಿರುವ ಕಾಳನ್ನೇ ಬಿತ್ತಬೇಕು. ಆದರೆ ಒಳಗಿನ ಅಕ್ಕಿಯು ಮಾತ್ರ ಬೇಕಾದರೆ ಭತ್ತದ ಹೊಟ್ಟನ್ನು ತೆಗೆಯಬೇಕು. ಹಾಗೆಯೇ ಕ್ರಿಯಾವಿಧಿಗಳು ಮೊದಲಾದವು ಮತಸ್ಥಾಪನೆಯ ಮತ್ತು ಬೆಳವಣಿಗೆಯ ಆವಶ್ಯಕವಾಗಿ ತತ್ವವೆಂಬ ತಿರುಳನ್ನು ಒಳಗೊಂಡಿರುವ ಹೊಟ್ಟಿನಂತಿರುವವು. ಆದುದರಿಂದ ಪ್ರಧಾನವಾದ ತತ್ವವನ್ನು ಮುಟ್ಟಲು ಅದನ್ನು ಅಡಗಿಸಿಕೊಂಡಿರುವ ಕ್ರಿಯಾವಿಧಿಗಳ ಮೂಲಕವೆ ಹೋಗಬೇಕಾಗಿರುವದು.

38 ಸ್ಪಂಜಿನ ದಿಂಬಿನ ಮೇಲೆ ಯಾರಾದರೂ ಕುಳಿತರೆ ಅದು ಕುಸಿದುಬೀಳುವದು. ಮೇಲಿನ ಭಾರವನ್ನು ತೆಗೆದರೆ ಸ್ಪಂಜು ಮೇಲಕ್ಕೆದ್ದು ದಿಂಬು ತನ್ನ ಪೂರ್ವದ ಆಕಾರವನ್ನು ಹೊಂದುತ್ತದೆ. ಹಾಗೆಯೇ ಧರ್ಮಶ್ರವಣವು ಕಿವಿಗೆ ಬೀಳುತ್ತಿರುವವರೆಗೂ ಲೌಕಿಕರು ಧರ್ಮಬುದ್ಧಿಯುಳ್ಳವರಾಗಿರುವರು. ಆದರೆ ಪ್ರಾಪಂಚಿಕ ವ್ಯವಹಾರಗಳಲ್ಲಿ ಪ್ರವೃತ್ತಿಸಿದ ಒಡನೆಯೇ ದೊಡ್ಡ ಯೋಚನೆಗಳೆಲ್ಲ ಮರೆತು ಮುಂಚಿನಂತೆ ಮಲಿನಚಿತ್ತರಾಗುವರು.

39 ಆಕಾಶಸಂಚಾರಿಗಳಾದ ಪಕ್ಷಿಗಳಲ್ಲಿ ಕಾಗೆಯೇ ಬಲು ಬುದ್ಧಿಶಾಲಿ ಎಂದು ಜನರು ತಿಳಿದುಕೊಂಡಿರುವರಲ್ಲದೆ ಕಾಗೆಯು ಮನಸ್ಸಿನಲ್ಲಿಯೂ ತಾನು ಹಾಗೆಯೇ ಎಂಬ ಯೋಚನೆಯೂ ಇರುವದು. ಅದು ಯಾವ ಜಾಲಕ್ಕೂ ಸಿಕ್ಕಿ ಬೀಳುವದಿಲ್ಲ. ಅಪಾಯ ಸಮೀಪಿಸುವುದಕ್ಕೆ ಮುಂಚೆಯೇ ಓಡಿ ಹೋಗುವದು. ಇಷ್ಟಾದರೂ ಅದರ ಜಾಣತನವು ಅದರ ಜೀವನಕ್ಕೆ ಕಲ್ಪಿಸಿಕೊಡುವುದೇನು! ತಿಪ್ಪೆ ಕೊಳೆತುನಾರುವ ವಸ್ತು ಹಲವುಗಳಲ್ಲದೆ ಮತ್ತೇನೂ ಇಲ್ಲವು. ಅಲ್ಪನ ಜಾಣತನವೂ ಕ್ಷುದ್ರ ವಿಷಯಗಳಲ್ಲಿಯೇ ವಿನಿಯೋಗವಾಗುವದು.

40 ನೊಣವು ಮನುಷ್ಯನ ಶರೀರದ ಮೇಲಿನ ಹೊಲಸು ಹುಣ್ಣಿನ ಮೇಲೆ ಕುಳಿತುಕೊಳ್ಳುತ್ತದೆ. ಒಡನೆಯೇ ದೇವತೆಯ ನೈವೇದ್ಯದ ಮೇಲೆ ಎರಗುತ್ತದೆ. ಈ ಪರಿಯಾಗಿ ಪ್ರಾಪಂಚಿಕನಾದ ಮಾನವನ ಮನಸ್ಸು ಒಂದು ಕಾಲದಲ್ಲಿ ಧರ್ಮವಿಷಯಗಳಲ್ಲಿ ಆಸಕ್ತಿಯುಳ್ಳದ್ದಾಗಿರುವದು. ಕ್ಷಣಾಂತರದಲ್ಲಿ ಕಾಮಿನೀ ಕಾಂಚನ ವಿಷಯ ಸುಖಗಳಲ್ಲಿ ನಿರತವಾಗುತ್ತದೆ.

41 ಓರ್ವನು ತನ್ನ ಕಾಲಿಗೆ ಚುಚ್ಚಿಕೊಂಡ ಮೊನೆಯಾದ ಮುಳ್ಳನ್ನು ಮತ್ತೊಂದು ಮುಳ್ಳಿನಿಂದ ಹೊರಗೆ ತೆಗೆದು ಅನಂತರ ಎರಡನ್ನೂ ಬಿಸಾಡುವಂತೆ ಆತ್ಮನನ್ನು ಮರೆಮಾಡುವ ಅವಿದ್ಯೆ ಎಂಬ ದ್ವಂದ್ವಾತ್ಮಕಜ್ಞಾನವನ್ನು ವಿದ್ಯೆಯೆಂಬ ದ್ವಂದ್ವಾತ್ಮಕ ಜ್ಞಾನವೇ ಹೋಗಲಾಡಿಸಬಲ್ಲದು. ಈ ಜ್ಞಾನಾಜ್ಞಾನಗಳೆರಡೂ ಅಜ್ಞಾನದಲ್ಲಿ ಅಡಗಿರುವ ಕಾರಣ ಪರಮಜ್ಞಾನವನ್ನು ಎಂದರೆ ನಿರ್ದ್ವಂದ್ವಜ್ಞಾನವನ್ನು ಪಡೆದವನೇ ದ್ವಂದ್ವಾತೀತನಾಗಿ ಕೊನೆಗೆ ವಿದ್ಯೆ ಅವಿದ್ಯೆಗಳೆರಡನ್ನೂ ಬಿಟ್ಟುಬಿಡುತ್ತಾನೆ.

42 ಮಾನುಷ ದೇಹವು ಕುದಿಯುವ ಪಾತ್ರೆಗೆ ಸಮಾನ. ಮನಸ್ಸೂ ಇಂದ್ರಿಯಗಳೂ ಪಾತ್ರೆಯಲ್ಲಿರುವ ನೀರು ಅಕ್ಕಿ, ತರಕಾರಿ ಮುಂತಾದುವುಗಳಂತೆ. ಈ ಸಾಮಗ್ರಿಗಳನ್ನು ಹಾಕಿ ಒಲೆಯ ಮೇಲಿಟ್ಟರೆ ಮುಟ್ಟಿದರೆ ಬೆರಳು ಸುಡುವಷ್ಟು ಕಾಯುವವು. ಆದರೆ ಆ ಬಿಸಿಯು ಪಾತ್ರೆಯಿಂದ ಬಂದುದೂ ಅಲ್ಲ, ಒಳಗಿರುವ ಪದಾರ್ಥಗಳಿಗೂ ಸೇರಿದ್ದಲ್ಲ. ಒಲೆಯಲ್ಲಿನ ಬೆಂಕಿಯಿಂದ ಬಂದಿರುವದು. ಈ ಪರಿಯಾಗಿ ಮನುಷ್ಯನಲ್ಲಿರುವ ಬ್ರಹ್ಮಶಕ್ತಿಯು ತನ್ನ ಬಿಸಿಯಿಂದ ಮನಸ್ಸು ಇಂದ್ರಿಯಗಳೂ ತಂತಮ್ಮ ವ್ಯಾಪಾರಗಳನ್ನು ನಡೆಯಿಸುವಂತೆ ಮಾಡುವದು. ಆ ಅಗ್ನಿಯ ಕೆಲಸನಿಂತರೆ ಇಂದ್ರಿಯಗಳ ವ್ಯಾಪಾರವೂ ನಿಲ್ಲುವದು.

43 "ನಾನು" ಎಂಬ ಅಹಂಭಾವವನ್ನು ನೀನು ಬಿಡಲಾರೆಯಾದರೆ ಅದು ದಾಸಭಾವದಿಂದಲೇ 'ಅಹಂ' ಎಂಬುದು 'ದಾಸೋಹಂ' ಭಗವದ್ದಾಸನು ನಾನು ಎಂದಿರಲಿ. ಯಾವ 'ನಾನು' ಎಂಬ ಅಹಂಭಾವವು "ಭಗವಂತನ ಸೇವಕನು ನಾನು, ಭಗವದ್ಭಕ್ತನು ನಾನು" ಎಂಬ ಸ್ಥಿತಿಯಲ್ಲಿರುವದೋ ಅಂಥ ಅಹಂಭಾವದಿಂದ ಕೆಡಕು ಉಂಟಾಗುವ ಭಯವಿಲ್ಲ. ಸಕ್ಕರೆಯಿಂದ ಮಿಶ್ರವಾದ ಮಿಠಾಯಿ ಅಜೀರ್ಣಕ್ಕೆ ಮೂಲ. ಆದರೆ ಕೇವಲ ಮಧುರವಾದ ಸಕ್ಕರೆಯು ಮಿಠಾಯಿಯಲ್ಲವಾದ್ದರಿಂದ ಅದಕ್ಕೆ ಈ ದುರ್ಗುಣವಿಲ್ಲವು. ಮತ್ತು ದಾಸನ 'ಅಹಂ' ಭಕ್ತನ 'ಅಹಂ' ವಿದ್ಯೆಯ 'ಅಹಂ' ಇವು ಪಕ್ವವಾದ 'ಅಹಂ' ಎಂಬುದರ ಹೆಸರುಗಳು.

44 ಕೆಳಕು ತಾನಾಗಿಯೇ ಕೆಳಗೆ ಬಿದ್ದ ಹಣ್ಣು ಬಹು ರುಚಿಯಾಗಿರುವದು. ಆದರೆ ಕಾಯಿಯಲ್ಲಿ ಕಿತ್ತು ಮಾಗಿಸಿದ ಹಣ್ಣು ಅಷ್ಟು ರುಚಿಯಾಗಿರದೆ ಬಾಡಿಕೊಂಡಿರುವದು. ಹಾಗೆಯೇ ಮನುಷ್ಯನು ಸರ್ವಭೂತಗಳಲ್ಲಿಯೂ ಏಕತ್ವಸಂಪ್ರಾಪ್ತಿಯನ್ನು ಮಾಡಿಕೊಂಡಾಗ ಅವನಿಗೆ ಭೇದವು ತೋರುವದು. ಆದರೆ ಈ ದಿವ್ಯಜ್ಞಾನಾವಸ್ಥೆಯನ್ನು ಸಂಪಾದಿಸುವವರೆಗೂ ಮೇಲು ಕೀಳು ಎಂಬವುಗಳ ಸೆಳೆತದಿಂದ ತಪ್ಪಿಸಿಕೊಳ್ಳಲು ಆರಿಂದಲೂ ಆಗದು. ಆದುದರಿಂದಲೇ ಅಂಥವನು ಕಟ್ಟಳೆಗಳಿಗೆ ಒಳಪಡಲೇಬೇಕು.

45 ಮನುಷ್ಯನಲ್ಲಿ ರಜೋಗುಣದ ಪ್ರಭಾವದಿಂದ ಕಾಮವು ಎಂದರೆ ಆಸೆಯು ಕಾಣಿಸಿಕೊಳ್ಳುವದು. "ಆಸೆಯೆಂಬ ಕೊಳ್ಳಿ ... ಕಲು ರೋಗವೆಂಬ ತಾಯಿ ಬಂದು ನಿಂದಿರಲು" ಎಂಬಂತೆ ಆ ಆಸೆಯು ಬಯಕೆಯು ಕೈಸೇರದೆ ಹೋಗಲು ಅದೇ ಕೋಪವಾಗಿ ಪರಿಣಮಿಸುವದು. ಆಸೆಯು ಹೊಟ್ಟೆಗೆ ಹಾಕಿ ಸಾಕೆನ್ನುವದು ಯಾರಿಂದಲೂ ಸಾಧ್ಯವಿಲ್ಲ. ಉರಿಯುತ್ತಿರುವ ಅಗ್ನಿಗೆ ತುಪ್ಪ ಹಾಕಿ ಆರಿಸುವದು ಯಾರಿಂದಾದೀತು? ಈ ಆಸೆಯ ಪಾಶಕ್ಕೆ ಕಾರಣವು 'ಆಶಾಯಾ ಯೇ ದಾಸಾಸ್ತೇ ದಾಸಾಃ ಸರ್ವಲೋಕಸ್ಯ' ಎಂಬ ಗೀತವಾಕ್ಯದಂತೆ ಆಸೆಗೆ ದಾಸರಾದವರು ಲೋಕಕ್ಕೂ ದಾಸರೆ, ಆಸೆಯಿಂದ ದಾಸನಾದವನು ಎಂಥ ಕಡುಕಷ್ಟ ಭಯಗಳನ್ನೂ ಪಡೆದು ಯಾಚನೆಮಾಡಿ ತನಗೆ ಬೇಕಾದ ಸುಖ ಸಾಮಗ್ರಿಗಳನ್ನು ಗಳಿಸಲು ಯತ್ನಿಸುವನು. ಎಂಥ ಕಷ್ಟ ಪ್ರದ ದೇವತೆಗಳಿಗಾದರೂ ಹರಕೆ ಹೊತ್ತು ತನ್ನ ಇಷ್ಟಕಾಮ್ಯಾರ್ಥಗಳನ್ನು ನೆರವೇರಿಸಿಕೊಳ್ಳಲು ತವಕಿಸುವನು. ಇಂಥವನಿಗೆ 'ಅಶಾಂತಸ್ಯ ಕುತಃ ಸುಖಂ' ಎಂಬಂತೆ ಸುಖವಿರುವುದೇ ಇಲ್ಲ. ವಾಸನೆಯು ದಿನೇ ದಿನೇ ವೃದ್ಧಿಯಾಗುತ್ತ ಹೋಗುತ್ತದೆ. ಮತ್ತು ಆಸೆಯ ದಾಸನಾದವನು ಧನಿಕನ ಬಳಿಗೆ ಯಾಚಿಸುವಾಗ ಎಂಟು ಗೇಣಿನ ದೇಹವನ್ನು ಒಂದುಹಿಡಿಯಾಗಿ ಕುಗ್ಗಿಸಿಕೊಂಡು ಹೋಗಬೇಕಾಗುವದು. ಸರ್ವವ್ಯಾಪಿಯಾದ ಶ್ರೀ ವಿಷ್ಣುವೂ ಸಹ ಬಲಿಯ ಭೂಮಿಗೆ ಆಸೆಮಾಡಿದಾಗ ತನ್ನ ಸರ್ವೇಶತ್ವವನ್ನು ಒಂದು ಮೂಲೆಯಲ್ಲಿಟ್ಟು ವಾಮನಾವತಾರವನ್ನು ಮಾಡಬೇಕಾಯಿತು. ಇನ್ನು ಪಾಮರರಾದ ಮನುಜರ ಪಾಡೇನು? ಲೋಕದ ದಾಸ್ಯವೂ ಮರಣವೂ ಒಂದೇ! ಆಸೆಗೊಳಗಾದ ಮನುಷ್ಯನು ಎಂಥ ದಾಸ್ಯಕ್ಕೂ ಹಿಂದುಮುಂದು ನೋಡುವುದಿಲ್ಲ. ಆದ್ದರಿಂದ ಆಸೆಯು ಆತ್ಮನಾಶಕವೆಂದು ಸಿದ್ಧವಾಗುವುದು. 'ಆಶಾಪಾಶವು ದುಃಖಂ'.

46. ಇಂದ್ರಿಯಾರ್ಥವಾದ ಆಸೆಯುಳ್ಳ ಧನಿಕ ಮನುಷ್ಯರನ್ನು ವಿವೇಕಿಗಳು ಬಹುದರಿದ್ರರೆಂದು ತಿಳಿಯುವರು. ಒಬ್ಬ ಮನುಷ್ಯನ ಐಶ್ವರ್ಯವು ಅವನಲ್ಲಿರುವ ಸಂಪತ್ತಿನ ಪ್ರಮಾಣದಿಂದಲೇ ಸಿದ್ಧವಾಗುವದಿಲ್ಲ. ಒಬ್ಬನು ಲಕ್ಷಾಧೀಶ್ವರನಾದರೂ ಅವನಿಗೆ ಇಂದ್ರಿಯಾರ್ಥವಾದ ಆಸೆ ಇದ್ದರೆ ಅವನು ದರಿದ್ರನೆ. ಯಾರಿಗೆ ಎಷ್ಟು ಹೆಚ್ಚಿನ ಆಸೆ ಇರುವದೋ ಅವನು ಅಷ್ಟು ದರಿದ್ರನೆಂದು ಭಾವನೆ. ಉದಾಹರಣೆಗಾಗಿ ಒಬ್ಬ ಧನಿಕಗೃಹಸ್ಥನು ಒಬ್ಬ ಮಹಾತ್ಮನಾದ ಭಿಕ್ಷುವನ್ನು ಆದರಪೂರ್ವಕವಾಗಿ ತನ್ನ ಮನೆಗೆ ಕರೆತಂದು ಉಚಿತಾಸನದಲ್ಲಿ ಕುಳ್ಳಿರಿಸಿ ಪಾದಪೂಜೆಯನ್ನು ಪ್ರಾರಂಭಿಸುವುದಕ್ಕೆ ಮೊದಲು 'ಆಯುರಾರೋಗ್ಯೈಶ್ವರ್ಯಾಭಿವೃದ್ಧ್ಯರ್ಥಂ ಪುತ್ರಪೌತ್ರಾದಿ ಸಂತಾನಪ್ರಾಪ್ತ್ಯರ್ಥಂ ಧರ್ಮಾರ್ಥಕಾಮಮೋಕ್ಷ ಚತುರ್ವಿಧ ಪುರುಷಾರ್ಥಸಿದ್ಧ್ಯರ್ಥಂ' ಎಂದು ಸಂಕಲ್ಪವನ್ನು ಹೇಳಿ ಮುಗಿಸುತ್ತಿರುವಷ್ಟರಲ್ಲಿ ಆ ಸನ್ಯಾಸಿಯು ಚಟ್ಟನೆ ಎದ್ದು ತನ್ನ ದಾರಿ ಹಿಡಿದನು. ಆಗ ಗೃಹಸ್ಥನು ಅಪಚಾರವೇನು ಮಹಾತ್ಮ? ಎಂದು ಕೇಳಲಾಗಿ ಅಪಚಾರವೇನೂ ಇಲ್ಲ. ಆದರೆ 'ಬಿಕ್ಷುಕರ ಮನೆಯಲ್ಲಿ ಭಿಕ್ಷೆಯನ್ನು ತೆಗೆದುಕೊಳ್ಳಬಾರದೆಂದು ನನ್ನ ವ್ರತ. ನೀನು ನನ್ನೆದುರಿನಲ್ಲಿಯೇ ಲೆಕ್ಕವಿಲ್ಲದಷ್ಟು ಬಿಕ್ಷೆಗಳನ್ನು ಬೇಡುತ್ತೀ. ಆದ್ದರಿಂದ ನಿನ್ನಲ್ಲಿ ಭಿಕ್ಷೆ ಬೇಡೆನು' ಎಂದು ಹೇಳಿಹೋದನೆಂಬ ಇತಿಹಾಸವಿರುವದು.

ನಾವು ಒಬ್ಬರಿಗೆ ಅವರಲ್ಲಿರುವ ಪೂಜ್ಯತೆಗಾಗಿ ಪೂಜೆಯನ್ನು ತೋರಿಸಬೇಕೇ ವಿನಾ ಐಹಿಕಫಲಗಳಿಗಾಗಿ ಪೂಜಿಸುವದು ಲೇವಡಿ ತಪ್ಪಾಗುವದು. ದೇವರ ಮುಂದೆ ಅತಿ ಕ್ಷುದ್ರವಾದ ಭೌತಿಕಫಲಗಳಿಗಾಗಿ ಬಾಯಿಬಿಡುವದು ಕೀಳುತನವು ಮತ್ತು 'ಕೃಪಣಾಃ ಫಲಹೇತವಃ' ಎಂಬ ಗೀತೋಕ್ತಿಯಂತೆ ನಾವು ಮಾಡುವ ಕರ್ಮಕ್ಕೆ ಫಲಾಪೇಕ್ಷೆಯನ್ನು ಮಾಡುವವರೆಲ್ಲರೂ ದೀನರೆಂದೇ ವ್ಯಕ್ತವಾಗುವದು.

(ಸಶೇಷ)

ಆರ್ ಎಂ ಮಲ್ಲಿಕಾರ್ಜುನಾರಾಧ್ಯ, ತಿಪಟೂರು

ರೇಣುಕವಿಜಯ ಮಹಾಪುರಾಣ.

(ಶ್ರಾವಣಮಾಸವು ಸಮೀಪಿಸಿತು.)

ಯಾವ ಮಹಾತ್ಮನು ಈ ಭೂಮಂಡಲದಲ್ಲಿ ಸೋಮೇಶ್ವರಲಿಂಗಮುಖದಿಂದವ ...ಸಿ ತನ್ನ ಮಹಿಮಾಪ್ರಭಾವದಿಂದ ಸಮಸ್ತ ಮಾನವಕೋಟಿಯನ್ನುದ್ಧರಿಸಿದನೋ, ... ಗುರುಸಾರ್ವಭೌಮನು ಶ್ರೀ ಜಗದ್ಗುರು ರೇಣುಕಾಚಾರ್ಯನ ಪುರಾಣವನ್ನು ತರಿಸಿ ...ಂಡು ಪುರಾತನಪದ್ಧತಿಯಂತೆ ಶ್ರಾವಣಮಾಸದಲ್ಲಿ ಪ್ರತಿಯೊಂದು ಗ್ರಾಮದ ...ಕ್ತಮಾಹೇಶ್ವರರೂ ಪ್ರಾರಂಭಮಾಡಿ ಆ ಮಹಿಮನ ಸಚ್ಚರಿತ್ರವನ್ನು ಕೇಳಿ ತಮ್ಮ ...ತ್ರಮವನ್ನೂ ತಮ್ಮ ವಂಶವನ್ನೂ ಪಾವನಗೊಳಿಸಿಕೊಳ್ಳಬೇಕೆಂದು ಕೋರಿಕೆ.

ಬೆಲೆ ೧ ರೂ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿವಾದ್ವೈತಸಿದ್ಧಾಂತಪ್ರವೃತ್ತಿಯುಳ್ಳದು ಎಲ್ಲರಿಗೂ ತಿಳಿದ ...ಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ...ಮಾಡಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿ...ಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ...ರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ...ಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾ...ನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ...ನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ...ವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ...ದ್ರಿತವಾಗಿಲ್ಲವೆಂದು ಪಂಚಾಶೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿ...ಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ...ಹು ನೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವದಲ್ಲದೆ ಈ ಗ್ರಂಥದಲ್ಲಿ ಸಿಯೋಜಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ...ಟೋಗ್ರಫನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ...ಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ...ಶೈವರೂ ಅವಶ್ಯವಾಗಿ ತರಿಸಿಕೊಂಡು ಇದರಲ್ಲಿನ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗ...ಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೭೧ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದ... ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ...ದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿ ...ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ...ಮಿಷನ್ ಸಹಾ ಜಂಗಮರಿಗೆ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರೆಯಲ್ಲಿರುವ ಪ್ರತಿಯೊಂದು ಗುರುಪೀಠದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಪತಿಗಳು ಐದುವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಅಧಿಕಾರಕ್ಕನುಸರಿಸಿ ಶಿಷ್ಯರ ಹೆಸರುಗಳು ವಿಷಯಗಳನ್ನು ಬರೆದ ಕೊಟ್ಟಿದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೌಲ್ಯದ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ಎಲ್ಲವನ್ನೂ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಕೆಡದಂಥ ಕಾಗದಗಳನ್ನು ಉಪಯೋಗಿಸಿ ಮಾಡಲ್ಪಟ್ಟದೆ. ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿಂಗಳಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೨—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೊಂಬಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಪ್ಪೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಪ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ	ಆ	ಪೈ
ಶ್ರೀ ರೇಣುಕಾಚಾರ್ಯರ ಒಂದಕ್ಕೆ ಅನ್ಯ ತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦	೩	೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಆಗಸ್ತ್ಯ ಮಹರ್ಷಿ ವ್ಯಾಸ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦	೧	೩
ಶ್ರೀ ಕಾಶೀಪೀಠದ ಈಗಿನ ಜಗದ್ಗುರುಗಳವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೮ ಬೆಲೆ	೦	೧	೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೨ ಬೆಲೆ ೧ಕ್ಕೆ	೦	೧	೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦	೦	೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦	೦	೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦	೦	೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦	೦	೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦	೦	೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುದೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦	೦	೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦	೦	೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦	೦	೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦	೦	೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦	೦	೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಲ್ಲಿನ ಸುಂದರ ಫೋಟೋ ೧ಕ್ಕೆ	೦	೦	೬
ಶ್ರೀ ಜಗದ್ಗುರು ಶ್ರೀ ಪಾದಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦	೦	೬
ಶ್ರೀ ಜಗದ್ಗುರು ಕೇದಾರಮಹಾಸಿಂಹಾಸನ ಧರ್ಮಪೀಠದ ಸುಂದರ ಫೋಟೋ	೦	೦	೬
ಅನುಭವಮಂಟಪದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦	೦	೬
ಕೊಲ್ಲಿಪಾಕದಲ್ಲಿ ನೆಲಸಿರುವ ಉಜ್ಜಯಿನೀ ಜಗದ್ಗುರುಗಳವರ ಅಪ್ಪಲ್ಲಕ್ಕಿಮಹೋತ್ಸವದ ಫೋಟೋ	೦	೦	೬

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ಗುರುದ್ವಿ ... ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ ... ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ... ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ...

(Registered Trade Mark)

ಗಳನ್ನು ಕೊಟ್ಟಿ... ರು ಪ್ರಸಿದ್ಧವಾ... ನಶ್ಯದ ಪುಡಿಯ... ಸ್ಪಷ್ಟವಾಗುವ ... ಧಿಗಳು ಯಾವವ... ಕೆ —ನೆಗಡಿ, ... ತಲೆನೋವು, ತಲ... ಲ್ಲಿಯ ರೋಗಗ... ಕಣ್ಣುಗಳಲ್ಲಿ ಉಂ... ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ... ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಪ್ಪಟ್ಟ ಇತರ ವ್ಯಾಧಿಗಳನ್ನು ಸ್ವಚ್ಛಪಡಿಸಿ ಜ್ಞಾಪಕಶ... ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಪ್ಪ... ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ... ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ... ಪರಿಮಳವಾಗುವುದು. ಇದನ್ನು ಅನೇಕ ಪ್ರ... ತಮ್ಮ ಗೃಹದಲ್ಲಿ ಕುಟುಂಬದವರಿಗಾಗಿ ಉಪಯೋ... ಸುತ್ತಾರೆ. ಪಾದರಿಗೀಸ ಪುಗಸಟ್ಟೆ ಕಳುಹಿಸಲಾಗು...

ಒಂದು ಡಬ್ಬಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦ ... ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ. ಪಿ. ೮ ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ ...

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[೩೧] ಫೋ. ಬಾ. ೫೧೦ ಮದರಾ...

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೪ನೆಯ ಆವೃತ್ತಿ) . ..	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) .	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ) ..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ) ..	೧ ಆಣೆ
ಒಸವಾದಿ ಶಿವತತ್ತ್ವದರ್ಪಣ (೪ನೆಯ ಆವೃತ್ತಿ) ...	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ವರೂಪಸ್ತವನಟೀಕ . ..	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತವಿಚಾರಮೀಮಾಂಸಾ ...	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) .. .	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ತ್ವಸ್ಥಿರೀಕರಣ (೨ನೆಯ ಆವೃತ್ತಿ) ...	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ) ...	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೮ ...
पंडित श्रीकाशीनाथशास्त्री यांचें भाषण (मराठी) ..	८ आ...
Speeches by Pandit Shri Kashinatha Shastri (*English*)	12...
ವೀರಶೈವರತ್ನ (೩ನೆಯ ಆವೃತ್ತಿ)	೧೨ ...
ಶ್ರೀ ಜಗದ್ಗುರು ಪಂಚಾಚಾರ್ಯ ಸುಪ್ರಭಾತಸ್ತೋತ್ರರತ್ನಾಕರ .	೧೨ ...
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ...
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ...
ಶಿವಾಗಮೋಕ್ತಸಿದ್ಧಾಂತದರ್ಪಣ	೧೨ ...
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ...
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ...	೧ ...
ಕೇನೋಪನಿಷತ್ (ವೀರಶೈವಭಾಷ್ಯ)	೧ ...
ರೇಣುಕವಿಜಯ ಮಹಾಪುರಾಣ (ಕನ್ನಡ ಟೀಕಾಸಹಿತ)	೧ ...
ವೀರಶೈವಸಿದ್ಧಾಂತಸುಧಾಕರ	೨ ...
ಶಿವಾದ್ವೈತಮಂಜರಿ (ಕನ್ನಡ ಟೀಕಾಸಹಿತ ೧೬೦ ಪುಟ)	೮ ...
लिंगधारणचंद्रिका (संस्कृत)	३
महानारायणोपनिषत् (वीरशैवभाष्य-संस्कृत)	१
वीरशैवेंदुशेखर (संस्कृत)	१

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ... ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು... ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ...

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಮಾನಿಯ್ಯಾ ಕ ತಾ|| ಪ್ರ|| ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿತ ಪ್ರಕಟಿತವಾ...

REGISTERED No. M 2266 || ಶ್ರೀ ಜಗದ್ಗುರು ಪಂಚಾಚಾರ್ಯರು ಪ್ರಸೀದಂತು || REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ ನೇ ಆಗಸ್ಟ್ ೧೯೩೫ [ಸಂಚಿಕೆ ೧೩

ಜೋಗುಳ ಪದಗಳು

(ಶ್ರೀ ಗುರು ಪಂಚಾಚಾರ್ಯರ ನಾಮವ—ಎಂಬಂತೆ)

ತೂಗಿರೆ ಯೋಗಿಯ ತೂಗಿರೆ ತ್ಯಾಗಿಯ | ತೂಗಿರೆ ಸದ್ಗುರುರಾಯನ || ತೂಗಿರೆ ಭೋಗಿಗೆ ಭೂಷಣ ಛತ್ರನ | ತೂಗಿರೆ ಪಂಡಿತಾರಾಧ್ಯನ ||ಪ|| ಶಿವನಾಜ್ಞೆಯಿಂದಲಿ ಶಿವಮತ ಪಾಲನೆಗೆ ಭುವಿಗವತರಿಸಿದ ದೇವನ | ಅವನಿಂದ ಭವಪಾಶ ನಾಶನ ಮಾಡುವ | ಶಿವರೂಪದಿಂದಲಿ ಮೆರೆದಿರುವ ||೧|| ಸಾನಂದ ಜೋಗಿಗೆ ಶಿವ ತತ್ತ್ವ ಬೋಧಿಸಿ | ಆನಂದಗೊಳಿಸಿದ ದೇವನ | ದಾನವ ಮಾನವ ಶಿಕ್ಷಕನಾದಂಥ | ಚಿನ್ಮಯರೂಪಿನ ಮಹಿಮನ ||೨|| ಪತಿತನು ನರರನ್ನು ಪೊರೆಯುವ ಸೇವದಿಂದ | ಧರಣಿಗೆ ಗುರು ರೂಪದಿಂದಲಿ | ಶರಣರ ಬಂಧಂಥ ಪರಿಹರಿಸುವ | ಪರಿಹಾರ ಮಾಡುವ ಗುರುವರನ ||೩|| ಭಕ್ತರ ಭಕ್ತಿಗೆ ಮೆಚ್ಚಿ ಬಂದು | ಮುಕ್ತಿಯ ಮಾರ್ಗವ ತೋರುವ | ಮುಕ್ತಿಗೆ ಸೂತ್ರ ಪಾಲಕ ಮಹಾ ಬಿ | ಶಕ್ತರ ವೃಂದದಿ ಪೂಜಿತ ||೪|| ಕ್ಷುದ್ರಗುಣಗಳನೆಲ್ಲ ಛೇದಿಸಿ ಜನರಿಗೆ | ರುದ್ರನ ರೂಪವ ತೋರಿದ | ಭದ್ರದಾಯಕ ವೀರಭದ್ರನ ದೇವನ | ವೃಂದಕೆ ಬಿನ್ನೈಪ ಜೋದರಿಗೆ ||೫|| ಸಾರಿದ ಆರು ಸ್ಥಲಗಳ ನಿರ್ಮಿಸಿ | ಆರು ಅಕ್ಷರ ಮಹಿಮ ಬೋಧಿಸಿ | ಆರು ವೈರಿಗಳ ಜೋರಿಲಿ ಮುರಿದೊತ್ತಿ | ವೀರಶೈವ ಮತಸ್ಥಾಪಿಸಿ ||೬|| ಅಷ್ಟಮದಗಳನ್ನು ಕುಟ್ಟಿ ಬಡಿದೋಡಿಸಿ | ಅಷ್ಟಾವರಣಗಳ ಸ್ಥಾಪಿಸಿ | ಸೃಷ್ಟಿಯೊಳು ಬಹು ಶ್ರೇಷ್ಠನಾಗಿ ಮೆರೆದಂಥ | ಶಿಷ್ಟ ಸಿದ್ಧಾರಾಧ್ಯ ಗುರು ದೇವನ ||೭|| ಭುವಿಯೊಳು ಬಿ ವರಗಿ ಗ್ರಾಮದ ಗುರುವಾದ | ಸೇವೆಯ ನೀಡಿ ಪಾಡುವ | ಶಿವಭಕ್ತವೃಂದಕ್ಕೆ ಶಿವಪದವೀಯುವ | ಪಾವನ ಮೂರ್ತಿ ಬಿರಾಗಿಯ ||೮||

ಶ್ರೀ ಗುರುಪಂಚಶಿವಾಚಾರರು ಬೃಹನ್ಮಠ
ಬೀದರಗಿ ಮು|| ಸೋಲಾಪೂರ

(ಭೋ ಭೋ ಶಾಂಭವ ಶಾಂಭವೀ ಪರಿಪಾಲಿಸುವದು ಎನ್ನನು—ಎಂಬಂತೆ)

ಬೇಗ ತೂಗಿ ತೂಗಿರೆ ನೀವು | ಪಂಚಾಚಾರ್ಯರ | ಆರ್ಯರ | ಗುರುವರ್ಯರ | ತೂಗಿರೇ ನೀವು ||ಪ|| ರೇಣುಕ ದಾರುಕ ಶ್ರೀ ಏಕೋರಾಮ ಪಂಡಿತರ | ವಿಶ್ವಾರಾಧ್ಯರ | ಸಂಭ್ರಮದ ತೂಗಿರೆ ನೀವು ||೧|| ಕಪ್ಪಿಲ ವೃಕ್ಷೋದ್ಭವನ | ಮುಕ್ತಿಗುಚ್ಛ ಪಂಚವರ್ಣ | ಸೂತ್ರಧರ | ತ್ರಿನೇತ್ರರ | ತೂಗಿರೆ ನೀವು ||೨|| ವೀರ ನಂದಿ ಭೃಂಗಿ ವೃಷಭಸ್ಕಂದ ಗೋತ್ರಪರ | ಗೋತ್ರಪರ | ಪವಿತ್ರರ | ತೂಗಿರೇ ನೀವು ||೩|| ಭಾಗೀರಥಿಯ ದಡದ | ಜಗದಿ ವೀರಶೈವ ಪಸರಿಸುವ | ಯೋಗಿಗಳ ಧರ | ತ್ಯಾಗಿಗಳ ತೂಗಿರೇ ನೀವು ||೪||

ಭಾಗೀರಥೀಬಾಯಿ ಕರ್ಜಗಿ
ಸೋಲಾಪೂರ

ಹುಲ್ಲಿನಿಂದ ದಾರದ ರಚನೆ

ಜಪಾನಿನ ಕಿಯೋಟೋ ಯೂನಿವರ್ಸಿಟಿಯ ಡಾಕ್ಟರ್ 'ಸೂಮಿಟೋಕ' ಎಂಬವರು ಹುಲ್ಲಿನಿಂದ ಹತ್ತಿ ದಾರದಂಥ ದಾರವನ್ನು ಮಾಡುವ ವಿಧಾನವನ್ನು ಕಂಡು ಹಿಡಿದಿದ್ದಾರೆ ಇದರಿಂದ ಪ್ರಪಂಚದ ಬಟ್ಟೆಯ ಬೆಲೆಯಲ್ಲಿಯೂ ದೊಡ್ಡ ಪರಿವರ್ತನವಾಗುವುದಲ್ಲದೆ, ಹತ್ತಿಯನ್ನು ಬೆಳೆಯುವವರಿಗೆ ಬಹಳ ನಷ್ಟವಾಗುವುದು ಇದನ್ನು ಸರಿಯಾಗಿ ಪ್ರಚಾರದಲ್ಲಿ ತರಬೇಕಾದರೆ ೩೦೦೦ ಪೌನುಗಳು ಬೇಕಾಗುವುವಂತೆ !

ಆಸ್ಥಾನ ಸಂಗೀತ ವಿದ್ವಾನ್
ಮ|| ರಾ|| ಬಿ ದೇವೇಂದ್ರಪ್ಪನವರು

ತಮ್ಮ ಸಂಗೀತಕಲಾಪ್ರಚಾರಕ್ಕಾಗಿ ದೇಶ ಪರ್ಯಟನಮಾಡಬೇಕೆಂದು ಪ್ರಯಾಣಿಸಿದ್ದರಾಗಿರುವ ಆಸ್ಥಾನ ಸಂಗೀತ ವಿದ್ವಾನ್ ಮ|| ರಾ|| ದೇವೇಂದ್ರಪ್ಪನವರಿಗೆ ಶುಭಾಶಂಸನಮಾಡುವುದಕ್ಕಾಗಿ ರಾಜಧಾನಿಯ ಸಮಾಜಸೇವಾ ಸಂಘದವರು ನಿನ್ನೆ ಸಾಯಂಕಾಲ ೯ ಘಂಟೆ ಸಮಯದಲ್ಲಿ ರಂಗಾಚಾರ್ಲು ಸ್ಮಾರಕಭವನದಲ್ಲಿ ಪೌರಸಭಾಧ್ಯಕ್ಷರಾದ ಶ್ರೀ ಎಂ ಎ ಶ್ರೀನಿವಾಸನ್ ಬಿ ಎ, ರವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ನಡೆಯಿಸಿದರು ದೇವತಾಪ್ರಾರ್ಥನಾನಂತರ ಮ|| ರಾ|| ದೇವೇಂದ್ರಪ್ಪನವರ ಶಿಷ್ಯಮಂಡಲಿಯ ಕಾನ್ಸರ್ಟ್ ನಡೆಯಿತು ತರುವಾಯ ಶ್ರೀಮಾನ್ ರಾವಸಾಹೇಬ ಎಂ ರಾಮಸ್ವಾಮಿಯವರು, ಆಸ್ಥಾನವಿದ್ವಾನ್ ಶಂಕರರಾಜಶಾಸ್ತ್ರಿಗಳು ಮುಂತಾದವರು ಮ|| ರಾ|| ದೇವೇಂದ್ರಪ್ಪನವರು ಮಾಡಿದ ಸಂಕಲ್ಪವನ್ನು ಬಹಳವಾಗಿ ಶ್ಲಾಘಿಸಿ, ಎಲ್ಲರು ಮರ್ಯಾದವರಿಗೂ ಸಂಕಲ್ಪಿಸಿದ ಇವರ ದೇಶಾಟನೆ ಕಾರ್ಯವು ಜಯಪ್ರದವಾಗಿ ಯಶಸ್ವಿಗಳಾಗಿ ಬರಲೆಂದು ಶುಭಾಶಂಸನವನ್ನು ಮಾಡಿದರು. ಅನಂತರ ಅಧ್ಯಕ್ಷರವರು ಪ್ರಾಸ್ತಾವಿಕ ಸಮಾರೋಪಭಾಷಣವನ್ನು ಮಾಡಿದ ಬಳಿಕ ಮ|| ರಾ|| ದೇವೇಂದ್ರಪ್ಪನವರು ಶ್ಲಾಘನೀಯ ಗಾನಾಲಾಪದಿಂದ ಸಭಿಕರನ್ನು ಆನಂದಗೊಳಿಸಿದರು ಈ ಆನಂದವನ್ನು ನೋಡುವುದಕ್ಕೆ ರಂಗಾಚಾರ್ಲು ಸ್ಮಾರಕಭವನವು ಹಿಡಿಸದಂತೆ ಅಸಂಖ್ಯ ಜನಗಳು ಆಗಮಿಸಿದ್ದರು ಶ್ರೀ|| ಕಾರ್ಯದರ್ಶಿ ಬಿ ಕೆ ಮಾಧವರಾವ್‌ರವರು ಬಹು ವಿಶದತೆಯಿಂದ ಸಭಾಕಾರ್ಯವನ್ನು ಪೂರ್ಣಗೊಳಿಸಿದರು

ಸ್ವೀಕಾರ

ಧಾರವಾಡ ಜಿ|| ನವಲಗುಂದ ತಾ|| ಶಿರೂರನಹಳ್ಳಿ ಹಿರೇಮಠದ ವೇ|| ಒಸವಯ್ಯನವರ ಮಾತೃಶ್ರೀ ನೀಲಮ್ಮನವರು ತಮ್ಮ ೭೦ನೆಯ ವರ್ಷ ವಯಸ್ಸಿನಲ್ಲಿ ಶಿವಾಧೀನರಾದ ಸಮಯದಲ್ಲಿ ಮೃತರ ಆತ್ಮಶಾಂತಿಗಾಗಿ ಜಗದಾಚಾರ್ಯರ ಹೆಸರಿನಿಂದ ತೆಗೆಯಿಸಿದ 2 ರೂ ಗಳು ಶ್ರೀ ಬ್ಯಾಹಟ್ಟಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಕೊಪ್ಪಳ ತಾ|| ಯರೆಹಂಚಿನಾಳ ಹಿರೇಮಠದ ವೇ|| ರುದ್ರಯ್ಯನವರ ಧರ್ಮಪತ್ನಿಯವರ ೮ ನೆಯ ತಿಂಗಳ ಗರ್ಭಕ್ಕೆ ವಿಧ್ಯುಕ್ತವಾಗಿ ಸೂಡಿ ಜುಗ್ಗಿಮಠದ ಶ್ರೀ|| ಷ|| ಬ್ರ|| ಉಮಾಪತಿಶಿವಾಚಾರ್ಯಸ್ವಾಮಿಗಳವರಿಂದ ಲಿಂಗಧಾರಣವು ನೇರವೇರಿದ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ತೆಗೆಯಿಸಿದ 1 ರೂ ಯು ಮ|| ರಾ|| ಹುವಿನಹಡಗಲಿ ಸೊಪ್ಪಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಶ್ರೀ ಕ್ಷೇತ್ರ ರಾಮೇಶ್ವರಕ್ಕೆ.
ಯಾತ್ರಾರ್ಥಿಗಳಾಗಿ ಬರತಕ್ಕ ವೀರಶೈವರಿಗೆ
ಸೂಚನೆ.

ಸುಪ್ರಸಿದ್ಧವಾಗಿರುವ ಶ್ರೀರಾಮೇಶ್ವರಕ್ಷೇತ್ರಕ್ಕೆ ಬರುವ ವೀರಶೈವರಿಗೆ ಯಾವ ಪ್ರಕಾರದ ಸೌಕರ್ಯವೂ ಇಲ್ಲದಿರುವದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ನಾವು ವೀರಶೈವರ ವಸತಿಗಾಗಿ "**ಜಂಗಮವಾಡಿ**" ಎಂಬ ಸ್ಥಳವನ್ನು ಏರ್ಪಡಿಸಿರುವೆವು ವೀರಶೈವರಿಗೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಕೊಡುವೆವಲ್ಲದೆ ದರ್ಶನಾದಿಗಳಿಗೆ ಬೇಕಾಗುವ ಸುವ್ಯವಸ್ಥೆಯನ್ನು ಕಲ್ಪಿಸಿಕೊಡುವೆವು ಮಾಹಿತಿಗಾಗಿ ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಕೋರಿಕೆ

ಗುರುಸಿದ್ಧಸ್ವಾಮಿ,
(-) ಜಂಗಮವಾಡಿ ಮಠ, ರಾಮೇಶ್ವರ,
ಪೋ|| ರಾಮೇಶ್ವರ (S I.Ry.)

ಕಳೆದ ೨೭ನೇ ತಾರೀಖಿನ ದಿವಸ ಕೃಷ್ಣರಾಜನಗರದಲ್ಲಿ ಒಬ್ಬನು ನೀರಿಗೋಸ್ಕರ ಗಾಡಿಯನ್ನು ತೆಗೆದುಕೊಂಡು ಸಮೀಪದ ಕಾಲುವೆಗೆ ಹೋಗಿದ್ದನೆಂದೂ, ಅಕಸ್ಮಾತ್ ನೀರು ಹೆಚ್ಚಾಗಿ ಬಂದದ್ದರಿಂದ ಗಾಡಿಯು ಸೆಳವಿಗೆ ಸಿಲುಕಿ ಕೊಚ್ಚಿ ಹೋಯಿತೆಂದೂ, ಅದರಲ್ಲಿದ್ದವನು ಹೆದರಿ ನೀರಿನಲ್ಲಿ ಬಿದ್ದು ಸತ್ತನೆಂದೂ, ಎತ್ತುಗಳು ಮಾತ್ರ ಜೀವಸಹಿತ ಉಳಿದಿರುವುವೆಂದೂ ತಿಳಿದು ಬಂದಿದೆ

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕೆ ಕರ್ತರು ಜವಾಬ್ದಾರರಾಗಿರುವುದಿಲ್ಲವೆಂಬ ವಿಷಯವನ್ನು ಓದುಗರು ಲಕ್ಷ್ಯದಲ್ಲಿಡತಕ್ಕದ್ದು

ಶ್ರೀ

ಭಾರತೀಯ ಜ್ಯೋತಿಷ

೧—೧೯೩೧ ರಲ್ಲಿ ಮೈಸೂರು ವಿಶ್ವವಿದ್ಯಾಲಯದವರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ಜ್ಯೋತಿಶ್ಶಾಸ್ತ್ರ ಪ್ರಧಾನಾಧ್ಯಾಪಕರಾದ ಆಸ್ಥಾನ ಮಹಾವಿದ್ವಾನ್ ಕರೂರು ಶೇಷಾಚಾರ್ಯರು ಮಾಡಿದ ಉಪನ್ಯಾಸ

ಭೂಭ್ರಮಣ

(ಹಿಂದಿನಿಂದ ಮುಂದುವರಿದುದು)

ಈಗ ಭೂಭ್ರಮಣ ವಿಚಾರದಲ್ಲಿ ಪ್ರಾಚೀನ ಜ್ಯೋತಿಷ್ಕರು ಹೇಳುವ ಮತವನ್ನು ಆರ್ಯಭಟೀಯ ಮತ ಭೂಭ್ರಮಣ ವಾದವ ನ್ನೇ ಕುರಿತು ಸ್ವಲ್ಪ ವಿವರಿಸುತ್ತೇನೆ. ... ಆರ್ಯಭಟೀಯದಲ್ಲಿ ... ಭೂಭ್ರಮಣವನ್ನು ಆರ್ಯಭಟನೇ ಮೊದಲು ... ೪೩೨೦೦೦೦ ವರ್ಷಗಳ ... ಭೂಮಿಯು ಪೂರ್ವಕ್ಕೆ ... ಭೂಭ್ರಮಣವಾದವನ್ನು ... ನಕ್ಷತ್ರ ಮಂಡಲವು ... ಆರ್ಯಭಟನ ವ್ಯಾಖ್ಯಾನದಲ್ಲಿ ಬರೆದಿರುತ್ತಾರೆ.

ಆರ್ಯಭಟೀಯ ಕಾಲಕ್ರಿಯಾಪಾದದಲ್ಲಿ ಮುಂದಿನ ಶ್ಲೋಕವು—

ಶ್ಲೋ|| ಅನುಲೋಮಗತಿರ್ನೌಸ್ಥಃ ಪಶ್ಯತ್ಯಚಲಂ ವಿಲೋಮಗಂ ಯದ್ವತ್ | ಅಚಲಾನಿ ಭಾನಿ ತದ್ವತ್ ಸಮಪಶ್ಚಿಮಗಾನಿ ಲಂಕಾಯಾಮ್ || ... ಭೂಭ್ರಮಣವು ... ಶ್ಲೋಕದ ... ಅಭಿಪ್ರಾಯ ...

"ಉದಯಾಸ್ತಮಯನಿಮಿತ್ತಂ ನಿತ್ಯಂ ಪ್ರವಹೇಣ ವಾಯುನಾ ಕ್ಷಿಪ್ತಃ | ಲಂಕಾಸಮಪಶ್ಚಿಮಗೋ ಭಪಂಜರಃ ಸಗ್ರಹೋ ಭ್ರಮತಿ ||" ... ಭೂಭ್ರಮಣ ... ವಾದವನ್ನು ...

ಹೀಗೆ ಉದಯಾಸ್ತಮಯನಿಮಿತ್ತಂ ಭಾನಾಮಥ ... ಎಂಬ ಶ್ಲೋಕಗಳ ವ್ಯಾಖ್ಯಾನದಲ್ಲೂ ಇದೇ ಅಭಿಪ್ರಾಯವನ್ನೇ ಸ್ಪಷ್ಟಪಡಿಸಿರುತ್ತಾರೆ ಮತ್ತು ತಾವು ಮಾಡಿದ ಗೋಳದೀಪಿಕಾ ಎಂಬ ಗ್ರಂಥದಲ್ಲಿ —

ಶ್ಲೋ|| ಪ್ರಾಣೇನೈತಿ ಕಲಾಂ ಭೂರ್ಯತ್ ... ಎಂಬ ಶ್ಲೋಕದಿಂದಲೂ ಇದೇ ಅಭಿಪ್ರಾಯ ...

... ಶ್ರೀಪತ್ಯಾದಿ ... ಗ್ರಂಥಕಾರರು ... ಭೂಭ್ರಮಣವಾದವನ್ನು ... ಖಂಡಿಸಿರುತ್ತಾರೆ.

ಇತ್ಯಾದಿ ಗ್ರಂಥಗಳಿಂದ ಭೂಭ್ರಮಣವನ್ನು ಖಂಡಿಸುತ್ತಾರೆ. ಆದರೆ ... ಭೂಮಿಯು ಪೂರ್ವಾಭಿಮುಖವಾಗಿ ... ಪೂರ್ವಕ್ಕೆ ... ಭೂಭ್ರಮಣವಾದವು ... ಭೂಭ್ರಮಣ ... ಸಿದ್ಧಾಂತ ...

ಭೂಪರಿಧಿವಿಚಾರ

ಭೂಪರಿಧಿ ಎಂದರೆ ಭೂಮಿಯ ಸುತ್ತಳತೆ ಆದುದರಿಂದ ... ಭೂಮಿಯ ವ್ಯಾಸ ... (ಕ್ಷೇತ್ರ) ... ಯೋಜನ ... ೧೯೩೦ ... ೧೦೯ ... ಭೂಪರಿಧಿ ... ಯೋಜನಗಳು ... ೨೦೨೧ ... ಸೆಪ್ಟೆಂಬರ್ ೨ ... ೨೪ ... (ಗಂಟೆ) ... ೧೨ ... ಭೂಪರಿಧಿ ... ಎಂದರೆ ... ಸಮತಳ ...

ಸ್ಫುಟಭೂಪರಿಧಿ—ಎಂದರೆ ಆ ದೇಶದ ಅಕ್ಷಾಂಶದಿಂದ ಸಂಸ್ಕರಿಸಿದ ಭೂಪರಿಧಿ ... ಸ್ಫುಟಭೂಪರಿಧಿ

ರೇಖಾಂಶ

ಲಂಕೆಯಿಂದ ಹೊರಟು ಉಜ್ಜಯಿನೀ ಕುರುಕ್ಷೇತ್ರ ಮೊದಲಾದ ದೇಶಗಳನ್ನು ಹಾದು ಮೇರುಪರ್ವತಕ್ಕೆ ಹೋಗುವ ದಕ್ಷಿಣೋತ್ತರ ರೇಖೆಯೇ ಭೂಮಧ್ಯರೇಖೆಯು ... ಪೂರ್ವ ... ರೇಖಾಂಶ ...

ಅತ್ತಗಳನ್ನು ತಿಳಿಯುವ ಉಪಾಯ—ಭೂಮಧ್ಯರೇಖೆಯಿಂದ ... ಚಂದ್ರಗ್ರಹಣದ ಸ್ಪರ್ಶಕಾಲವನ್ನು ... ಚಂದ್ರಗ್ರಹಣ ... ಗಣಿತ ... ಕಾಲ ... ಸ್ಪರ್ಶಕಾಲ ... ಗಳಿಗೆಗಳಿಗೆ ... ಕ್ಷಣಗಳಿಗೆ ... ಎಂಬ ಅನುಪಾತದಿಂದ ದೇಶಾಂತರ ಯೋಜ

ಗ್ರಹಗಳ ಕಕ್ಷ್ಯಾಕ್ರಮ ಮತ್ತು ಅವುಗಳ ಪರಿಧಿಗಳು.

ಭೂಗೋಳದ ಮೇಲೆ ಮೊದಲು ಚಂದ್ರ ಕಕ್ಷ್ಯೆಯೂ ಅನಂತರ ಬುಧ ಶುಕ್ರ ರವಿ ಕುಜ ಗುರು ಶನಿ ನಕ್ಷತ್ರ ಇವುಗಳ ಕಕ್ಷೆಗಳು ಒಂದರಮೇಲೊಂದು ಕ್ರಮವಾಗಿ ಎತ್ತರವಾಗಿರುವ ... ಇವುಗಳ ಸುತ್ತಳತೆಯು ... ಈ ಕೆಳಗೆ ಬರೆದಿರುವ ರೀತಿಯಾಗಿ ಹೇಳಲ್ಪಟ್ಟಿದೆ

ಭೂಗರ್ಭದಿಂದ ಕಕ್ಷ್ಯಾವೃತ್ತಗಳಿಗಿರುವ ಅಂತರ

ಚಂದ್ರಕಕ್ಷ್ಯಾ	ಯೋಜನಗಳು	ಯೋಜನಗಳು
ಪ್ರವಹ	37 000	51766
ಬುಧ	043711	166032
ಶುಕ್ರ	7064050	4 4088
ರವಿ	453 15 1	659377
ಕುಜ	5 409 6	12966 9
ಗುರು	3 571	8176538
ಶನಿ	1 66 5	7031907
ನಕ್ಷತ್ರ	3 5550 0	41352658

ಯೋಜನ ಲಕ್ಷಣ.

ಯೋಜನ ಎಂದು ಆರ್ಯಭಟರು ಒಂದು ಯೋಜನಕ್ಕೆ ೮೦೦೦ ನರ ಪ್ರಮಾಣವೆಂದು ಒಪ್ಪಿದ ಹಾಗೆ ... ೮ ಜವೆಗೋಧಿ ... ಅಂಗುಲವೆಂದರೆ ... ಎಂಟು ... ಒಂದು ಯವ ... ಅಂಗುಲವೆಂದು ... ಒಟ್ಟಿನಲ್ಲಿ ... ಎಂದು ಹೇಳುವರು

ಮೇಲ್ಕಂಡ ಗ್ರಹಕಕ್ಷ್ಯೆಗಳ ಪರಿಧಿ ಅವುಗಳ ವಿಸ್ತೃತಿ ಇವುಗಳನ್ನು ಕಂಡುಹಿಡಿಯುವ ಕ್ರಮ

ಮಿಕ್ಕ ... ಕಕ್ಷ್ಯೆ ... ೧೮ ೭೨ ೦೬ ೯೯ ೨೦ ೦೦ ೦೦ ೦೦೦ ಯೋಜನವೆಂದು ... (೪ ೩೨ ೦೦ ೦೦ ೦೦೦) ೩ ೨೪ ೦೦೦ ... ೫ ೩೩ ೦೦ ೦೦೦ ... ಚಂದ್ರಭಗಣಸಂಖ್ಯೆಯನ್ನು ಚಂದ್ರಕಕ್ಷ್ಯಾಪ್ರಮಾಣದಿಂದ ಗುಣಿಸಿದರೆ ಆಕಾಶಕಕ್ಷ್ಯಾಪ್ರಮಾಣವಾಗುತ್ತದೆ ... ಗ್ರಹಗಳ ಕಕ್ಷ್ಯಾಪ್ರಮಾಣವು ಸಿದ್ಧವಾಗುತ್ತದೆ

ಗ್ರಹ ಭಗಣಗಳು

ಚಂದ್ರಭಗಣ ಪ್ರಮಾಣ	57753300000
ಬುಧ	17936998984
ಶುಕ್ರ	702238940
ರವಿ	4320000000
ಕುಜ	2296828522
ಗುರು	364226455
ಶನಿ	146567298
ನಕ್ಷತ್ರ	1582236450000

3 ... ಯೋಜನ ... ೧೨ ೦ ... ಇದರಂತೆ ಆಯಾ ಗ್ರಹಗಳ ಕಕ್ಷ್ಯಾ ಪರಿಧಿ ... ಭೂಗರ್ಭದಿಂದ ಕಕ್ಷ್ಯೆ ... ಎಲ್ಲಾ ಗ್ರಹಗಳ ... ಅಂಕವನ್ನೇ ...

(ಸಶೇಷ)

ಯುವ ಸಂವತ್ಸರದ ಶ್ರಾವಣ ಶು|| ಗರಿಂದ ಫಾಲ್ಗುಣ ಮಾಸದವರೆಗೂ ನಡೆಯುವ

ಭವಿಷ್ಯತ್ಫಲವು.

ಯುವ ಸಂವತ್ಸರದಲ್ಲಿ ಲೋಕದಲ್ಲಿ ... ಜನರಿಗೆ ... ಸಂಭವಿಸ ... ಇತ್ಯಾದಿ

ಧಾನ್ಯಗಳು ಬೀಜಯಿಂದ ಮಾರಲ್ಪಡುವವು. ರಸಪದಾರ್ಥಗಳು ಸಮಧಾರಣೆಯಿಂದ ಇರುವವು. ಪಾಶ್ಚಾತ್ಯ ದೇಶದಲ್ಲಿ ಕೊಂಚ ಕೊಂಚ ದುರ್ಭಿಕ್ಷದ ಭಯವು, ಕ್ಷತ್ರಿಯರಿಗೆ ಕೊಂಚ ಕೊಂಚ ಸಮಾಧಾನ. ದೇಶಗಳಲ್ಲಿಯೂ [illegible] ಯೂ ಪಶ್ಚಿಮದೇಶದ ಕೆಲವು ಭಾಗಗಳಲ್ಲಿಯೂ ವಿಶೇಷ ಮಳೆಯಾಗಿಯೂ ಕೆಲವು ಕಡೆ ಮಳೆಯಿಲ್ಲದೆ [illegible] ದ ಭಿಕ್ಷೆಯು ಕಲೆಪೋಗುವದು. ಕೆಲವು ಕಡೆಗೆ ಮುಂಗಾರು ಬೆಳೆಯು ಅಲ್ಪವಾಗುವದು. ಧಾನ್ಯದ ಕೊರತೆಯಿಂದ ಜನರು ಪರದೇಶಕ್ಕೆ ಗಮನಮಾಡುವರು. ದಕ್ಷಿಣ ಮಧ್ಯ ದೇಶಗಳಲ್ಲಿ ಕೆಂಪುಜೋಳ ರಾಗಿ ಎಳ್ಳು ನೆಲಗಡಲೆ ಬೆಸರು ತಕ್ಕ ಮಟ್ಟಿಗೆ ಬೆಳೆಯುವವು. ಪೂರ್ವೋತ್ತರ ದೇಶದಲ್ಲಿ ಹಿಂಗಾರು ಬೆಳೆಯು ಅರ್ಧ ಬೆಳೆಯುವುದು. ಮಧ್ಯದಲ್ಲಿ ಮಳೆಯಿಲ್ಲದೆ [illegible] ಶಾಖದಿಂದ ತೊಂದರೆಯಾಗುವದು. ಪ್ರಜೆಗಳು ಒಣಗುವವು. ಕೆಲವು ಕಡೆಗೆ ವಿಶೇಷ ಮಳೆಯಾಗಿ ನಷ್ಟ ಸಂಭವಿಸುವದು. ಜಗತ್ತಿನಲ್ಲಿ ಈ ವರ್ಷ ಎಲ್ಲಾ ಭಾಗಗಳಲ್ಲೂ [illegible] ಶುಭ ಅಶುಭಗಳೇ ನಡೆಯುವವು.

ಜ್ಯೇಷ್ಠ ಆಷಾಢ ಮಾಸಗಳಲ್ಲಿ ಧಾನ್ಯ ವ್ಯಾಪಾರ

ಸಂಭಾರದ ಜೋಳ ಇವುಗಳು ರಸಪದಾರ್ಥಗಳ ವ್ಯಾಪಾರ ತೇಜಿಯಲ್ಲಿ ಇದ್ದು ಮುಂದುವರಿಯುವವು. ವಿಶೇಷವಾದ ವಾಯುವಿನಿಂದ ಹವೆ ಕೆಡುವುದು. ಜೇಷ್ಠ ಬ|| ೯ ರಿಂದ ಆಷಾಢ ಶುದ್ಧದವರೆಗೆ ಉತ್ತಮ ಮಳೆಯಾಗುವದು. ಆಷಾಢ ಶುದ್ಧದಲ್ಲಿ ಕೆಲವು ಕಡೆಗೆ ವಿಶೇಷ ಮಳೆಯಾಗಬಹುದು. ಬಹುಳ ೨ರಿಂದ ೧೩ರವರೆಗೆ ಉತ್ತಮ ಮಳೆಯಾಗುವದು. ಅನ್ನ ಧನಗಳಿಂದ ವಿಶೇಷವಾಗಿ ಕೆರೆಕಟ್ಟೆಗಳಿಗೆ ನೀರು ಬರುವದು. ಬಿತ್ತುವ ಕೆಲಸವು ಅತಿಜೋರಿನಿಂದ ಸಾಗುವದು. ಎರಡು ಸಾರಿ ಬಿತ್ತುವದು. ಉತ್ತರದ ಕಡೆ ಹಿಂಗಾರಿಯೇ ಉತ್ತಮ. [illegible] ಮಾಸಗಳಲ್ಲಿ ವಿಶೇಷ ವಾಯುವು ಬೀಸುವದು. ಧಾನ್ಯದ ವ್ಯಾಪಾರವು [illegible] ಜೂನ್ ೧ರಿಂದ [illegible] ಆಗುವುದು. ಶ್ರಾವಣ ಮಾಸದಲ್ಲಿ ಧಾನ್ಯದ ವ್ಯಾಪಾರ ಶ್ರಾವಣ ಶು|| ದಲ್ಲಿ 3457 ಮಿತಿಯಲ್ಲಿ ತಡೆಯು ಬಹು ಕಡಿಮೆಯಾಗುವ ಯೋಗವಿದೆ. ಪೂರ್ವಯು ನಕ್ಷತ್ರದಲ್ಲಿ ವಿಶೇಷ ಮಳೆಯಾಗಿ ಹಿಂಗಾರಿ ಬಿತ್ತುವುದಕ್ಕೆ ಅನುಕೂಲ. ಅಧಿಕಶ್ರಾವಣವು ಶ್ರಾವಣದ ಬ|| ದಲ್ಲಿ 567 ಅವಾಸ್ಯೆಯ ಹಿಂದೆ ಮುಂದೆ ಮಳೆಯಾಗುವ ಯೋಗವಿದೆ. ಕೆಲವು ದೇಶಗಳಲ್ಲಿ ನಷ್ಟ ಆಗುವದು. ಮಳೆಯಿಲ್ಲದೆ ಕೆಲವುಕಡೆಗೆ ಪ್ರಜೆಗಳು ಬಳಲುವವು.

ಆಶ್ವೀಜಮಾಸದ ಫಲವಿಚಾರ

ಎಲ್ಲಾ ಪದಾರ್ಥಗಳು ತೇಜಿ ಧೋರಣೆಯು ವಿಶೇಷ ಮಂದಿ [illegible] ಕೆಲವು ಕಡೆ ಸುಭಿಕ್ಷ ಕೆಲವು ಕಡೆ ದುರ್ಭಿಕ್ಷ. ಬ|| ೩ ರಿಂದ ೧೩ ವರೆಗಾಗಿ ಮಳೆಯಾಗುವ ಯೋಗವಿದೆ. ಆಗ್ನೇಯದಿಂದ ಮಳೆ ಅಲ್ಲಲ್ಲಿ ಮಳೆಯಾಗುವದು. ವಿಕ್ರಯ ಲಾಭ ಗಳು.

ಕಾರ್ತೀಕ ಮಾಸದ ಫಲ

ಹತ್ತಿ ಬೆಳೆ ಕೆಡುವುದು. ಧಾನ್ಯದ ವ್ಯಾಪಾರವು ಬೆಳ್ಳಿ ಬಂಗಾರದ ವ್ಯಾಪಾರವು ತೇಜಿ ಶು|| ೭ ರಿಂದ ೯ ರ ಮಧ್ಯೆ ಶ|| ೭ ೨ ಮ ಬ|| ೨೩೪ ಮಿತಿಗಳಲ್ಲಿ [illegible] ಮಳೆಯಾಗುವ ಯೋಗವಿದೆ.

ಮಾರ್ಗಶಿರ ಮಾಸದ ಫಲ

ಈ ತಿಂಗಳಲ್ಲಿ ಕೆಲವು ಕಡೆ ಮಳೆಯಾಗಿ ಸಸ್ಯಾದಿಗಳಿಗೆ ತೊಂದರೆಯಾಗುವದು. [illegible] ವಸ್ತುಗಳನ್ನು ಕರಿದಿಡಬೇಕು. ಈ ತಿಂಗಳಲ್ಲಿ ಮಾರುವುದರಿಂದ ಲಾಭ. ಹತ್ತಿ ಜವಳಿ ಹೆಸರು ಕಡಲೆ ಎಳ್ಳು [illegible] ಸಕ್ಕರೆ ಇವುಗಳು ತೇಜಿಯಿಂದ ಮಾರುವವು. ಬೆಳ್ಳಿ ಬಂಗಾರ ತೇಜಿಯು ಜನರಲ್ಲಿ ಪರಸ್ಪರ ವೈರವು ತೊಂದರೆಗಳು ಉಂಟಾಗುವವು. ಭೂಕಂಪವಾಗುವದು.

ಪುಷ್ಯ ಮಾಸದ ಫಲ

ಈ ತಿಂಗಳಲ್ಲಿ ಅಲ್ಲಲ್ಲಿ ಅಂಟುರೋಗ ಮೊದಲಾದವುಗಳು ಅಧಿಕವಾಗುತ್ತದೆ. ಜನರಿಗೆ ತೊಂದರೆಯಾಗುತ್ತದೆ. ಹತ್ತಿ ಅರಳೆ ಸಾಟು ಇವು ಮಂದಿ. ಬೆಳ್ಳಿಬಂಗಾರ ಮತ್ತು ಧಾನ್ಯ ಬಟ್ಟೆ ಧಾರಣೆ ತೇಜಿಯಾಗುವದು. ಶೀತಾಧಿಕ್ಯದಿಂದ ಅಕಾಲವೃಷ್ಟಿಯಾಗುವದು. ಕೆಲವು ಕಡೆ ದುರ್ಭಿಕ್ಷವು ಭಯ. ಈ ತಿಂಗಳಲ್ಲಿ ಮಿಶ್ರಫಲ.

ಮಾಘ ಮಾಸದ ಫಲ

ಈ ತಿಂಗಳಲ್ಲಿ ಜನರು ಕಷ್ಟಪಡುವರು. ಹಿಂಗಾರು ಬೆಳೆಕಡಿಮೆ. ಹತ್ತಿ ಅರಳೆ ಕಡಲೆ ಗೋಧಿ ಎಳ್ಳು ಕಿರಾಣಿ ಸಾಮಾನು ಬೆಲ್ಲ ಸಕ್ಕರೆ ತೇಜಿ. ರಸಪದಾರ್ಥಗಳ ವ್ಯಾಪಾರ ಬೆಳ್ಳಿ ವ್ಯಾಪಾರ ತೇಜಿ. ಈ ತಿಂಗಳಲ್ಲಿ ವ್ಯಾಪಾರದ ವಿಷಯದಲ್ಲಿ ಬಹಳ ಗಡಿಬಿಡಿಯಾಗುತ್ತದೆ. ದಂಗೆ ಪೊಂದಾಟ, ಕಲಹಗಳು ವಿಶೇಷ ಜರುಗುವವು. ದುರ್ಭಿಕ್ಷದ ಭಯ. ಕೆಲವು ಕಡೆ ಮಳೆಯಾಗುವದು.

ಫಾಲ್ಗುಣ ಮಾಸದ ಫಲ

ಈ ತಿಂಗಳಲ್ಲಿ ವಿನಾಶಕಾಲ್ಪಮಾವಾ ಶುಕ್ರವಾರದ ಪ್ರಭಾವದಿಂದ ಈ ಹೊತ್ತು ಧಾನ್ಯದ ವ್ಯಾಪಾರವು ಸಮವಾಗುವದು. ಕುದುರೆ ಒಂಟೆ ಕತ್ತೆ ಮುಂತಾದ ಪಶುಗಳು ಅಗ್ಗವಾಗಿ ಮಾರಲ್ಪಡುವವು. ಎಣ್ಣೆ ಧಾರಣೆಯು ಮುಂದೆ ಬೆಲ್ಲ ತೇಜಿಯಾಗುವದು. ಮಳೆ ಕೆಲವು ಕಡೆಗೆ ಆಗುವ ಯೋಗವಿದೆ. ಈ ಸಂವತ್ಸರದಲ್ಲಿ ಪ್ರತಿಯೊಬ್ಬರೂ ಧಾನ್ಯವನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದುತ್ತಮವು.

ಹೊರಟ್ಟಿಂದ ಹಿರೇಮಠದ ಸಿದ್ಧಾಂತಿ
ವೇ|| ಶಿವರುದ್ರಶಾಸ್ತ್ರಿ ಹರಪನಹಳ್ಳಿ ಕಾ|| ಕಲಗಿ

ಮಾನವಕರ್ತವ್ಯ ನಿರೂಪಣ.

ಸತ್ ಪುರುಷರ ಲಕ್ಷಣ ಏನೆಂದರೆ ಲೋಕೋಪಕಾರಕ್ಕಾಗಿ ಕೀರ್ತಿಗೂ ಮುಕ್ತಿಗೂ ಕಾರಣ ಸತ್ಕಾರ್ಯಗಳನ್ನು ನಡೆಸಿದ ಬಳಿಕ ದೃಢ ಮಾನವ ಸಹಜವೂ ಉದ್ದೇಶವೂ ಸಫಲತೆ [illegible] ಆಗಿ ಈ ಉಪಕಾರ ಕಾರ್ಯಾಚರಣೆಯಲ್ಲಿ ಅತ್ಯುತ್ತಮವಾದ ಅಷ್ಟ ಸಿದ್ಧಿಗಳು ದಾನವರಿಗೆ ಸಂಭವಿಸುವುದೇನೋ! ಅಥವಾ ಇವುಗಳಲ್ಲಿ ಲೌಕಿಕ [illegible] ಕರ್ತವ್ಯವೆಂದರೆ ಮಾನವರ ಮನಸ್ಸನ್ನು ಮುಂದರಿಸು ಹೊಗುವಂತೆ ಮಾಡುವುದು ಕರ್ತವ್ಯ [illegible] ಪಡೆದು ನಿಜ ಸುಖಿಗಳಾಗುತ್ತಾರೆ. [illegible]

[illegible] ಕರ್ತವ್ಯ ಇವುಗಳ [illegible] ಮಾನವರು [illegible] ತಮ್ಮ ಕರ್ತವ್ಯವನ್ನು ತಿಳಿದು ಅದರಂತೆ ನಡೆದರೆ [illegible]

ನಾವು ಶ್ರೇಷ್ಠತೆಯ ಕಾರ್ಯಗಳನ್ನು ಇದುವರೆಗೆ ಅದು ದೊಡ್ಡದು ಎಂಬ ಭಾವನೆಯು [illegible] ಸಂಪೂರ್ಣ ಸಂತೋಷ ಎಂಬ ಭಾವನೆ [illegible] ನಮಗೆ [illegible] ಕಾರ್ಯ [illegible]

ಅಷ್ಟೇ ಅಲ್ಲದೆ ಕ್ಷೇತ್ರ [illegible] ಕಾರ್ಯಗಳು ಪ್ರೀತಿ ಮತ್ತು ಕರ್ತವ್ಯ ಇವುಗಳ ಸಹಾಯದಿಂದ ನಡೆಸುವ [illegible] ಜನರು [illegible] ಕಾರ್ಯಗಳ [illegible] ಮನಸ್ಸಿನಲ್ಲಿ [illegible] ಕಾರ್ಯ [illegible]

[illegible] ಹಿಂದಿನ ಹೊರಟವರ ಕಡೆಗೆ ಹೇಗೆ [illegible] ನಾವು [illegible] ಕರ್ತವ್ಯ [illegible] ಸತ್ಕಾರ್ಯ [illegible] ಆತನ ಫಲವನ್ನು ಅನುಭವಿಸುವ ಲೋಕಕ್ಕೆ ಮಾರುವ ಸತ್ಕಾರ್ಯ [illegible]

ಅಸೀಮ ಫಲಗಳನ್ನು ಲೋಕಕ್ಕೆ ಕೊಟ್ಟು ಸುಖ ಸಂತೋಷಗಳಲ್ಲಿ ಮುಳುಗಿಸುವುದು. ನಮ್ಮ ಮನಸ್ಸಿಗೆ ಒಪ್ಪಿತವಾಗುವಂತೆ ಸದ್ವಿಚಾರದಿಂದ ಕಾರ್ಯಗಳನ್ನು ನಡೆಸಿ ಮತ್ತೆ ಸ್ವಾರ್ಥ ವಿಷ ಫಲಕ್ಕೆ ಲೋಕವನ್ನು ಗುರಿಪಡಿಸ [illegible] ನಡೆಸುವುದೇ ಮಹೋನ್ನತವು ಎಂದು ಹೇಳಬಹುದು. ಲೋಕದಲ್ಲಿ ಮುಕ್ತಿಯು [illegible]

ನಾಲ್ಕವರ್ಣ [illegible] ಮಾನವ ಶ್ರೇಷ್ಠತೆ [illegible] ಕರ್ತವ್ಯ [illegible] ಎಂಬುದು ತಿಳಿಯಬೇಕು.

ಗರ್ಭಿಣೀ ಸ್ತ್ರೀಯರಿಗೆ ಕೆಲವು ಸಲಹೆಗಳು.

ಸ್ತ್ರೀಯರು ಭಾವೀ ಪ್ರಜೆಗಳ ತಾಯಂದಿರು. ಮಕ್ಕಳನ್ನು ಹಡೆಯುವುದು [illegible] ಗರ್ಭವತಿಯರಾಗಿರುವಾಗ [illegible] ಆರೋಗ್ಯ [illegible] ಅನೇಕ ಕಷ್ಟಗಳಿಗೆ ಗುರಿಯಾಗುವರು. ಈ ಕೆಳಗೆ ಕಂಡ ಅಂಶಗಳನ್ನು ಚೆನ್ನಾಗಿ ತಿಳಿದುಕೊಂಡು ಅದರಂತೆ ನಡೆದುಕೊಂಡರೆ ಅವರ ಆರೋಗ್ಯವು ಸ್ವಾಸ್ಥ್ಯ ಹೆಚ್ಚಿ ಸುಖ ಪ್ರಸವವು ಆಗುವುದರಲ್ಲಿ ಯಾವ ಸಂದೇಹವೂ ಇರುವದಿಲ್ಲ.

ಸ್ತ್ರೀಯರಿಗೆ ಗರ್ಭಚಿಹ್ನೆಗಳು ಕಂಡೊಡನೆಯೇ ಅವರು ತಮ್ಮ ದೇಹಾರೋಗ್ಯ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು.

ಸುಲಭವಾಗಿ ಜೀರ್ಣವಾಗುವ ಹಾಗು ಪುಷ್ಟಿಕರವಾದ ಆಹಾರವನ್ನು ತೆಗೆದುಕೊಳ್ಳಬೇಕು. ಅತಿಯಾಗಿ ಊಟ ಮಾಡಬಾರದು. ಕಾಯಿಪಲ್ಯೆಗಳು ಸೊಪ್ಪು ಬಹಳ ಒಳ್ಳೆಯದು. ಶುದ್ಧವಾಗಿರುವ ನೀರನ್ನು ಯಥೇಚ್ಛವಾಗಿ ಕುಡಿಯಬೇಕು. ದಿನ ಒಂದಕ್ಕೆ ೮ ಲೋಟ ನೀರನ್ನು ಕುಡಿಯಬೇಕು. ಹಾಲು ಬಹಳ ಒಳ್ಳೆಯದು. ದಿನಕ್ಕೆ ೩ ಲೋಟ ಹಾಲು ಕುಡಿದರೆ ಬಹಳ ಒಳ್ಳೆಯದು. ಆದರೆ [illegible] ಆಹಾರದ ಪದಾರ್ಥಗಳನ್ನು ತಿನ್ನಬಾರದು.

ಗರ್ಭಿಣೀ ಸ್ತ್ರೀಯರಿಗೆ ೮ ಗಂಟೆಗಳ ಕಾಲ ನಿದ್ರೆಯು ಅವಶ್ಯಕವಾಗಿ ಬೇಕು. ಚೆನ್ನಾಗಿ ಗಾಳಿ ಬರುವ ಕೋಣೆಯಲ್ಲಿ ಮಲಗಬೇಕು. [illegible] ಮೈ ಕೈಗಳನ್ನು ಚೆನ್ನಾಗಿ [illegible] ಅಲ್ಲದೆ [illegible] ಗರ್ಭಿಣೀ ಸ್ತ್ರೀಯರಿಗೆ ಶಕ್ತಿ ವ್ಯಾಯಾಮವು ಅವಶ್ಯಕ. ದಿನದ ಕೆಲಸ ಹಾಗು ಸ್ವಾಯತ್ತ ಅಲ್ಲದೆ ಸ್ವಲ್ಪ ದೂರ ಒಳ್ಳೆಯ ಗಾಳಿಯಲ್ಲಿ ತಿರುಗಾಡಿಕೊಂಡು ಬರುವದು ಒಳ್ಳೆಯದು. ಆದರೆ ಶಕ್ತಿಮೀರಿ ಯಾವ ಕೆಲಸವನ್ನೂ ಮಾಡಬಾರದು. ಭಾರವಾದ ಪದಾರ್ಥಗಳನ್ನು ಎತ್ತಬಾರದು. ನಿತ್ಯವೂ ಸ್ನಾನವನ್ನು ಚೆನ್ನಾಗಿ ಮಾಡಬೇಕು. ಮೈಕೊಳೆ ಹೋಗುವಂತೆ ಚೆನ್ನಾಗಿ ಮೈಯುಜ್ಜಿ ಸ್ನಾನ ಮಾಡಬೇಕು. ಸಡಿಲವಾದ ಉಡುಪುಗಳನ್ನು ಧರಿಸಬೇಕು. [illegible] ಬಟ್ಟೆಗಳು ಉಪಯೋಗಿಸಬಾರದು. [illegible] ವಸ್ತ್ರದಿಂದ ಒರಸಿಕೊಳ್ಳಬೇಕು.

ಉಸಿರಾಟ ಶುದ್ಧವಾಗಿಯೂ ಸಡಿಲವಾಗಿಯೂ ಇರಬೇಕು. ಸದಾವನ್ನು ಬಿಗಿಯುವಂಥ ಅಂಗಿಗಳನ್ನು ಉಪಯೋಗಿಸಬಾರದು.

ದಂತಗಳು ಹಾಳಾಗಿ ಕೊಳೆತುಹೋಗಿರಬೇಕು. ಊಟವಾದ ಬಳಿಕ ಬಾಯಿಯನ್ನು ಚೆನ್ನಾಗಿ ಮುಕ್ಕಳಿಸಬೇಕು. ಹಲ್ಲುಜ್ಜುವ ಕಡ್ಡಿಯನ್ನು ಉಪಯೋಗಿಸಿ ಬಾಯಿಯನ್ನು ತೊಳೆಯುವದು ಒಳ್ಳೆಯದು.

ಗರ್ಭಿಣೀ ಸ್ತ್ರೀಯರಿಗೆ ಮಲಬದ್ಧತೆಯು ಸಹಜವಾಗಿ ಆಗಬಹುದು. ಮಲಬದ್ಧತೆಯನ್ನು ಹೋಗಲಾಡಿಸುವ ಆಹಾರ ಅಂದರೆ ಕಾಯಿಪಲ್ಯೆ ಹಣ್ಣುಗಳು ಮುಂತಾದವುಗಳನ್ನು ತಿನ್ನುವುದು ಬಹಳ ಒಳ್ಳೆಯದು. ಡಾಕ್ಟರರ ಸಲಹೆ ಇಲ್ಲದೆ ಯಾವ ಔಷಧವನ್ನು ಪ್ರತ್ಯೇಕಗಿ ತೆಗೆದುಕೊಳ್ಳಬಾರದು. ಎರಡು ಮೂರು ತಿಂಗಳಿಂದ [illegible] ಡಾಕ್ಟರರ ಸಲಹೆಯಂತೆ ನಡೆದುಕೊಳ್ಳಬೇಕು. [illegible] ಮುಂತಾದವುಗಳಿಗೆ ಹೋಗದೆ ಸಾಧ್ಯವಾದಮಟ್ಟಿಗೆ ಗಲಭೆಯುಳ್ಳ ಕೆಲಸಗಳಲ್ಲಿ ವಿರಾಮದ ಮನೆಯಲ್ಲಿಯೇ ಸುಖ ಸಂತೋಷಗಳಿಂದ ಇರುವುದು ಮೇಲು.

ಗರ್ಭಿಣೀ ಸ್ತ್ರೀಯರು ಮುಖ್ಯವಾಗಿ ಗಮನಿಸಬೇಕಾಗಿರುವ ಅಂಶಗಳೆಂದರೆ ಅಸಾಧಾರಣ ತಲೆನೋವು, ವಾಕರಿಕೆ, ವಾಂತಿ ಮುಖ ಕೈಕಾಲುಗಳು ಬಾತುಕೊಂಡಿರುವದು. ರಕ್ತಸ್ರವಿಸುವದು ಮುಂತಾದವು ಕಂಡು ಬಂದರೆ ಕೂಡಲೆ ಡಾಕ್ಟರರಲ್ಲಿ ಅಥವಾ ಲೇಡಿ ಡಾಕ್ಟರ ಸಲಹೆಯಂತೆ ಆಚರಿಸಬೇಕು.

ಪ್ರಸವ ಕಾಲದಲ್ಲಿ ಕಂಡು ಬಂದೊಡನೆಯೇ ಸಮೀಪದ ಆಸ್ಪತ್ರೆಯ ಸೂಲಗಿತ್ತಿಗೆ ತಿಳಿಸಬೇಕು. ಆಕೆಯು ಬರುವುದರೊಳಗಾಗಿ ಚೆನ್ನಾಗಿ ಕಾಯಿಸಿ ಆರಿಸಿದ ನೀರನ್ನು ಶುದ್ಧವಾಗಿಟ್ಟುಕೊಂಡಿರಬೇಕು.

ಪಂಚಾಚಾರ್ಯ ಪ್ರಭಾ.

೧೯೩೫ನೇ ಆಗಸ್ಟ್ ತಾ|| ೫ನೇ ಸೋಮವಾರ

ಲಿಂಗಧಾರಣವು ವೇದೋಕ್ತವಾದುದು.

ಋಗ್ವೇದದಲ್ಲಿ—

ಪವಿತ್ರಂತೇ ವಿತತಂ ಬ್ರಹ್ಮಣಸ್ಪತೇ | ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ || ಅತಪ್ತತನೂರ್ನತದಾಮೋ ಅಶ್ನುತೇ | ಶೃತಾಸ ಇದ್ವಹಂತಸ್ತತ್ಸಮಾಶತ |

ಅರ್ಥ—ಬ್ರಹ್ಮಣಸ್ಪತೇ ಲಿಂಗರೂಪ ಶರೀರದ ಅಧಿಷ್ಠಾತೃವಾದ ಪರಮಾತ್ಮನೇ, ತೇ ನಿನ್ನ ಪವಿತ್ರ ಬ್ರಹ್ಮಪದವಾಚ್ಯವಾದ ಲಿಂಗರೂಪ ಶರೀರವು, ಪವಿತ್ರಂ ಶುಚಿ ಅಶುಚಿ ಸಂಘರಣ ಬಗಳಲ್ಲಿಯೂ ಭಕ್ತರಿಂದ ಧರಿಸಲ್ಪಡತಕ್ಕುದ, ವಿತತಂ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮಹಾಲಿಂಗ ದಿ ಅನೇಕ ರೂಪದಿಂದಲಾಗಲಿ ಅಥವಾ ಪ್ರತಿರೂಪ ಭಕ್ತನ ಅಂಗದಲ್ಲಿ ಬೇರೆಬೇರೆಯಾಗಿ ಧರಿಸಲ್ಪಡುವುದರಿಂದ ಗಲಿ ಬಹುಪ್ರಕಾರವಾದದು ಪ್ರಭು ನಿಗ್ರಹಾನುಗ್ರಹ ಸಮರ್ಥನಾಗಿ ... ನೀನು, ವಿಶ್ವತಃ ಎಲ್ಲಾ ಕಡೆ ... ಗಾತ್ರಾಣಿ ಸ್ಥೂಲಾದಿ ಭಕ್ತಶರೀರಗಳನ್ನು, ಪರ್ಯೇಷಿ ಲಿಂಗರೂಪವಾದ ಶರೀರದ ದ್ವಾರ ವ್ಯಾಪಿಸಿಕೊಂಡಿರುತ್ತೀಯೆ ಅತಪ್ತತನೂಃ ಆಣವಾದಿ ಮಲಗಳನ್ನು ನಾಶಗೊಳಿಸುವ ಶಿವದೀಕ್ಷೆಯನ್ನು ಗುರುಗಳಿಂದ ಪಡೆಯದವನು, ತಪಶ್ಚರಣ ... ದೇಹವನ್ನು ಶುದ್ಧಿಗೊಳಿಸಿಕೊಳ್ಳದವನು, ತತ್ ಆ ಪರಶಿವಲಿಂಗಸ್ವರೂಪವನ್ನು ನ ಅಶ್ನುತೇ ಪಡೆಯಲಾರನು, ಇದ್ವಹಂತಃ ಶಿವಜ್ಞಾನವುಳ್ಳವರು, ಶೃತಾಸ ಆ ಶಿವಲಿಂಗವನ್ನಾಶ್ರಯಿಸಿದವರಾಗಿ, ತತ್ ಆ ಇಷ್ಟಲಿಂಗವನ್ನು, ಸಮಾಶತ ಹೊಂದಿದರು ಎಂದು ಸಾಮಾನ್ಯವಾಗಿ ಆ ಶ್ರುತಿಗೆ ಅರ್ಥವಾಗುತ್ತದೆ ಈ ಮಂತ್ರದಲ್ಲಿರುವ "ಬ್ರಹ್ಮಣಸ್ಪತೇ" ಎಂಬುವಲ್ಲಿರುವ 'ಬ್ರಹ್ಮಣಃ' ಎಂಬ ಪದಕ್ಕೆ ಇಷ್ಟಲಿಂಗವೆಂತಲೂ, ಪತಿ ಪದಕ್ಕೆ ಆ ಇಷ್ಟಲಿಂಗಾಧಿಷ್ಠಾತೃವಾದ ಪರಮಶಿವನೆಂತಲೂ ವೀರಶೈವಮತಾಚಾರ್ಯರು ವ್ಯಾಖ್ಯಾನ ಮಾಡಿರುತ್ತಾರೆ ವೀರಶೈವಮತಾಚಾರ್ಯರಾದ ಶ್ರೀ ರೇಣುಕಭಗವತ್ಪಾದರು 'ತಲ್ಲಿಂಗಂ ಬ್ರಹ್ಮಶಾಶ್ವತಂ ಲಿಂಗಂ ಬ್ರಹ್ಮಸನಾತನಂ" ಮುಂತಾದ ಅನೇಕ ವಾಕ್ಯಗಳಲ್ಲಿ ಬ್ರಹ್ಮವೆಂದರೆ ಲಿಂಗವೆಂದರ್ಥವನ್ನು ಸ್ಪಷ್ಟವಾಗಿ ತೋರಿಸಿರುವುದಲ್ಲದೆ ಶ್ರೀ ಶಂಕರಾಚಾರ್ಯರೂ ಸಹ ತಮ್ಮಿಂದ ರಚಿಸಲ್ಪಟ್ಟ ಅಪರಾಧಸ್ತವದಲ್ಲಿ 'ಲಿಂಗಂ ತದ್ಬ್ರಹ್ಮಸಂಜ್ಞಿತಂ" ಎಂದು ಲಿಂಗಪದವು ಬ್ರಹ್ಮವಾಚಕವೆಂದು ಹೇಳಿರುತ್ತಾರೆ ಮತ್ತು 'ಲೀನಮರ್ಥಂಗಮಯತೀತಿ ಲಿಂಗಂ' ಎಂಬ ವ್ಯುತ್ಪತ್ತಿಬಲದಿಂದಲೂ "ತದಧಿಕರಣತ್ವಾತ್ತದ್ವ್ಯಪದೇಶಃ" ಎಂಬುಕ್ತಿಬಲದಿಂದಲೂ ನಿಗೂಢವಾದ ಆ ನಿಷ್ಕಲ ಪರಮಾತ್ಮನಿಗೆ ಈ ಲಿಂಗವು ಶರೀರವಾದುದರಿಂದ ನಿಷ್ಕಲವಾದ ಬ್ರಹ್ಮತತ್ವವು ಇಂಥ ಲಿಂಗರೂಪ ಶರೀರಾಧಿಕರಣದಲ್ಲಿರುವುದರಿಂದ ಆ ಲಿಂಗರೂಪ ಶರೀರಕ್ಕೂ ಸಹ ಬ್ರಹ್ಮ ಎಂಬ ವ್ಯವಹಾರವು ಬಂದಿರುತ್ತದೆ ಮತ್ತು ಈ ಮಂತ್ರದಲ್ಲಿ 'ಅತಪ್ತತನೂ' ಎಂಬ ಪದವೊಂದು ಬ್ರಹ್ಮವಾಚ್ಯವಾದ ಲಿಂಗಪದವಲ್ಲಿ ವಿಶೇಷಣವಾಗಿರುವುದರಿಂದ ಅದು ವೀರಶೈವಸಿದ್ಧಾಂತರೀತಿಯಾಗಿ ಅಂಥ ಮುಕ್ತಿದಾಯಕವಾದ ಲಿಂಗವು ಶಿವದೀಕ್ಷೆಯಿಲ್ಲದವನಿಂದ ಧಾರಣಮಾಡಲ್ಪಡಲು ಯುಕ್ತವಲ್ಲವೆಂಬ ಅರ್ಥವನ್ನು ಕೊಡುತ್ತದೆ ಅದು ಹೇಗೆಂದರೆ 'ಅತಪ್ತತನೂಃ" ಎಂಬ ಪದಕ್ಕೆ "ತಪ್ತಾ ತನುರ್ಯಸ್ಯ ತಪ್ತತನುಃ ತಪ್ತತನುರ್ನಭವತೀತಿ ಅತಪ್ತತನೂಃ" ಎಂಬ ಸಮಾಸಬಲದಿಂದ ಶ್ರೀ ಗುರುವರ್ಯನು ಶಿಷ್ಯನ ಶಕ್ತಿಪಾತವನ್ನು ನೋಡಿ ವೇಧಾದೀಕ್ಷಾ, ಮನುದೀಕ್ಷಾ, ಕ್ರಿಯಾದೀಕ್ಷಾ ಎಂಬ ಮೂರು ದೀಕ್ಷೆಗಳಿಂದ ಸ್ಥೂಲಸೂಕ್ಷ್ಮಕಾರಣಗಳೆಂಬ ಮೂರು ಶರೀರಗಳಲ್ಲಿ ಅನಾದಿಕಾಲದಿಂದಲೂ ಸಂಬಂಧಿಸಿರುವ ಆಣವಮಲ ಮಾಯಾಯಮಲ ಕಾರ್ಮಿಕಮಲ ಎಂಬ ಭವಹೇತು ಗಳಾದ ಮೂರು ಮಲಗಳನ್ನು ನಾಶಗೊಳಿಸುವನು ಆಗ ... ಶಿಷ್ಯನು ತಪ್ತತನು ಎನಿಸುವನು ಇಂಥ ಶಿವಲಿಂಗಧಾರಣಯೋಗ್ಯವಾದ ಸಂಸ್ಕಾರವನ್ನು ಹೊಂದದವನು ಅತಪ್ತತನು ಎಂದು ... ಅವನು ಶ್ರೀಗುರುಗಳಿಂದ ... ದೀಕ್ಷಾಸಂಸ್ಕಾರಪೂರ್ವಕ ಶಿವಲಿಂಗವನ್ನು ... 'ಆಪ' ಎನಿಸಿಕೊ... ಅವನು ... ಪರಿಶುದ್ಧ ... ಕರಣನಾದವನು ... ಗಳೂ ... ಸಿಕೊಳ್ಳುವನು ... ಕಲಬದ್ಧವಾಗ ... ಪರಶಿವನ ನಿತ್ಯಶರೀರವಾದ ಲಿಂಗವನ್ನು ... ದಲ್ಲಿ ಧರಿಸಲು ಯೋಗ್ಯನಲ್ಲವೆಂದು ... ಮತ್ತು ಈ ಮಂತ್ರದ ಬ್ರಹ್ಮಣಸ್ಪತೇ ಎಂಬ ... ಪಲ್ಲಿರುವ ಬ್ರಹ್ಮಪದಕ್ಕೆ ಇಷ್ಟಲಿಂಗ ... ಮಾಡಿದಂತೆ ಭೂವಿಪ್ರ ... ವಂತಲೂ ಅರ್ಥಮಾಡಲು ... ಬ್ರಹ್ಮಣಸ್ಪತೇ ... ಪರಮಾತ್ಮನೇ ತೇ ನಿನ್ನ ಬ್ರಹ್ಮಪದವಾಚ್ಯ ... ವು ... ದುದು ವಿತತಂ ಭೂವಿಯಿಂದ ... ನ ಹಳೆಗಳಿಂದ ಪ್ರತಿಷ್ಠಿಸಿದ ... ರಿಂದ ಪ್ರತಿಷ್ಠಿಸಿದ ... ಮಂತ್ರವು ಸ್ಥಾವರಲಿಂಗ ... ಕೊಡುವುದರಿಂದ ... ದುದೇ ಎಂದು ... ಶಂಕೆಯುಂಟಾಗ ... ತ್ರಾಣಿ' ಎಂಬ ವಂತ ... ವಿಶ್ವತಃ" ಇಷ್ಟಲಿ ... ವ್ಯಾಪಿಸಿರುತ್ತಿ ಎಂಬ ಅರ್ಥ ... ವುದರಿಂದಲೂ ಸ್ಥಾವರಲಿಂಗ ... ಧರಿಸಲು ... ರುವ ... ಗಾತ್ರಾಣಿ ... ವಿಶೇಷ ಪದಗಳು ... ಸ್ಥಾವರಲಿಂಗವೂ ... ಪರಮಾತ್ಮನಿಗೆ ... ಆಗ ... ಬ್ರಹ್ಮವೇ? ನೀನು ... ಗಾತ್ರಾಣಿ ... ಭಕ್ತಶರೀರಗಳಲ್ಲಿ ವ್ಯಾಪಿಸಿರುತ್ತೀಯೆ ಎಂದು ಅರ್ಥವು ... ದ್ಧವಾಗ ವಲ್ಲಿ ಈ ಮಂತ್ರವು ಇಷ್ಟಲಿಂಗಧಾರಣವಿಧಾಯಕವೇ ಎಂದು ಹೇಳಲು ... ಮತ್ತೊಂದಾಕ್ಷೇಪವು ಮುಂದುವರಿದು ಬರುವ ... ಈ ಮಂತ್ರಕ್ಕೆ ಅರ್ಥ ಮಾಡಲು ಆಪಾತತಃ ಸ್ಥಾವರ ಲಿಂಗಪರವಾಗಿ ಅವಕಾಶವಿದ್ದರೂ ... ಮಂತ್ರದಲ್ಲಿರುವ 'ಗಾತ್ರಾಣಿ ಪರ್ಯೇಷಿ' ಎಂಬ ... ಪದಗಳಿಗೆ ಪ್ರಯೋಜನವೇ ಇಲ್ಲದಂತಾಗುತ್ತದೆ ಏಕೆಂದರೆ—ಅಣುರೇಣುತೃಣಕಾಷ್ಠಾದಿಗಳಲ್ಲಿಯೂ ವ್ಯಾಪಿಸಿಕೊಂಡಿರುವ ಅಪರಿಚ್ಛಿನ್ನವಾದ ಬ್ರಹ್ಮಪದವಾಚ್ಯಯಾದ ಆ ಬ್ರಹ್ಮಲಿಂಗವು ಸ್ಥಾವರಲಿಂಗರೂಪ ಶರೀರಾಂಶದ ದೃಷ್ಟಿಯಿಂದ ಭಕ್ತಶರೀರಗಳಲ್ಲಿ ಮಾತ್ರ ವ್ಯಾಪಿಸಿರುವುದೆಂದು ಹೇಳುವುದರಿಂದ ಅಖಿಲ ಬ್ರಹ್ಮಾಂಡಗಳನ್ನೇ ವ್ಯಾಪಿಸಿಕೊಂಡಿರುವ ವಸ್ತುವು ಸಂಸ್ಕಾರದಿಂದ ಪರಿಶುದ್ಧವಾದ ಭಕ್ತಶರೀರಗಳಲ್ಲಿ ಮಾತ್ರ ನಲಿಯಾಗಿ ನಿಂತಿರುವುದೆಂದು ಹೇಳುವುದು ಸಮಂಜಸವಾಗುವುದಿಲ್ಲ ಮತ್ತು ಅಖಂಡವಾದ ಆ ಬ್ರಹ್ಮಲಿಂಗಕ್ಕೆ ಸಂಕುಚಿತಭಾವವನ್ನು ಕಲ್ಪಿಸಿದಂತಾಗುತ್ತದೆ ಹೀಗೆ ಸಂಕೋಚಭಾವವನ್ನು ಕಲ್ಪಿಸುವುದರಿಂದ ಆವ ಪ್ರಯೋಜನವೂ ಕಂಡುಬರುವುದಿಲ್ಲ ಆದುದರಿಂದ "ಪವಿತ್ರಂ ತೇ ವಿತತಂ' ಎಂಬ ಈ ಋಗ್ವೇದಮಂತ್ರವು ಶ್ರೀ ರೇಣುಕಾದಿ ವೀರಶೈವಮತಾಚಾರ್ಯರು ವ್ಯಾಖ್ಯಾನಮಾಡಿರುವಂತೆ ಶ್ರೀ ಗುರುಗಳಿಂದ ಸಂಸ್ಕೃತರಾಗಿರುವ ಭಕ್ತಾಂಗಗಳಲ್ಲಿ ಇಷ್ಟಲಿಂಗಧಾರಣವನ್ನು ವಿಧಾನಮಾಡುತ್ತದೆಂದು ಹೇಳುವುದೇ ಯುಕ್ತಿಪ್ರಮಾಣಾನುಭವಗಳಿಂದ ಸಿದ್ಧವಾಗುತ್ತದೆ ಮತ್ತು ಈ ಮಂತ್ರವು ಇಷ್ಟಲಿಂಗಧಾರಣವಿಧಾಯಕವೇ ಅಲ್ಲದೆ ಸ್ಥಾವರಲಿಂಗವಿಧಾಯಕವಲ್ಲವೆಂಬ ವಿಷಯದಲ್ಲಿ ಅನೇಕ ಉಪಬೃಂಹಣವಾಕ್ಯಗಳನ್ನು ಕ್ರಮದಿಂದ ಮುಂದೆ ತೋರಿಸುತ್ತೇವೆ

ಒಳದೇಶದ ವೃತ್ತಾಂತಗಳು.

... ಎಂಬುವನ ವಿಚಾರವು ... ಪ್ರಕಾರ ಪಟವನ್ನು ಕದ್ದನೆಂದು ... ವಿಚಾರಣೆಯು ನಡೆಯುತಲಿದೆ

ಮೈಸೂರ ... ಮ್ಯಾಜಿಸ್ಟ್ರೇಟರು ರಾಜಧಾನಿ ... ಸತ್ಯ ಮತ್ತು ಪ್ರದೇಶ ... ಕಾಂಗ್ರೆಸ್ ಧ್ವಜವನ್ನು ... ಒಪ್ಪಿಗೆಮಾಡಿರುತ್ತಾರೆ

... ಯುವರಾಜ ... ಶ್ರೀ ಜಯಚಾಮರಾಜ ... ಸಂಗೀತಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ

... ಕಳ್ಳತನವಾದ ಸಂದ ... ವಸ್ತುಗಳು ಆ ಊರಿನ ... ಅನು ... ವಿಗಳನ್ನೆಲ್ಲಾ ... ಮಾಡಿದರೆಂದೂ ಒಂದು ಭಾವಿಯ ... ಸಾಗಿದ ಬಂಡು ... ಪೋಲೀಸರ ... ಪತ್ತೆ ಮಾಡುತ್ತಿರುವುದಾಗಿ ... ತ್ತದೆ

... ದಿವಸ ಪಟ್ಟ್ಯಾಕ್ಟ್ ... ಮುನಿಸಿಪಲ್ ಸ್ಯಾನಿ ... ಯರ ಮನೆಗೆ ... ೧೦ ರೂಪಾಯಿಗಳ ಬೆಲೆ ... ಅಪಹರಿಸಿರುತ್ತಾರೆ ... ಹೋಗಿದ್ದಾಗ ಅವರ ಪತ್ನಿ ... ಬಂಧುಗಳೊಬ್ಬರ ... ಬರವಲ್ಲಿ ಇದ್ದು ... ಪೋಲೀಸರು ಮುಚ್ಚಳು ... ಪತ್ತೆಮಾಡುವ ನಡೆಸುತ್ತಿದ್ದಾರೆ

... ದಿವಸಗಳ ... ಪ್ರತಿ ... ಸೋಮವಾರವೂ ಬೆಂಗಳೂರಿನ ... ಅರಮನೆಯ ... (...) ನಡೆಯುತ್ತಿರುವುದ ... ನೋಡಲು ಸಾವಿರಾರು ಜನಗಳು ... ಸರಿಯಷ್ಟೆ ಆದರೆ ಕಳೆದ ... ಸೋಮವಾರದ ದಿವಸ ... ಜನಗಳು ... ದೂರದಲ್ಲಿ ... ಜನಗಳಿಗೆ ಶ್ರವಣ ಸೌಕರ್ಯವನ್ನು ... ಸ್ಪೀಕರಗಳು ಇಡಲ್ಪಟ್ಟು ... ದಲ್ಲಿ ನಮ್ಮ ಮಹಾ ಪ್ರಭುವರ ... || ಗೋಪಾಲರಾಯರೊಡನೆ ... ದಯಮಾಡಿಸಿದರು ನೆರೆದಿದ್ದ ಜನಗಳು ... ದರ್ಶನಮಾಡಬೇಕೆಂಬ ಕುತೂಹಲದಿಂದ ಕಂದಕಂತವಾಗಿ ಮಹಾಪ್ರಭುಗಳ ... ಸಂಭ್ರಮದಿಂದ ಓಡಿಓಡಿ ... ಕುಳಿತಿದ್ದ ಮೋಟಾರು ... ಆಕಸ್ಮಿಕವಾಗಿ ... ಪ್ರಭುಗಳ ... ಸಂಭವಿಸಿದ್ದ ಅಲಕ್ಷ್ಯವು ... ಸಂಪೂರ್ಣ ಪರಿಹಾರ ... ಹೊಂದಿರುವುದನ್ನು ... ಪ್ರತ್ಯಕ್ಷತಃ ನೋಡಿ ಸಂತೋಷ ... ಆನಂದವನ್ನು ಹೊಂದಿದರೆಂದು ತಿಳಿಸಲು ಅತ್ಯಾನಂದವೆನಿಸುತ್ತದೆ

ಕೋಲಾರದ ಚಿನ್ನದಗಣಿಯಲ್ಲಿ ಮುಷ್ಕರ.

ಕಳೆದ ೧೧ ನೇ ತಾರೀಖಿನ ದಿವಸ ಚಿನ್ನದಗಣಿಯಲ್ಲಿ ಹೊಸ ಬೋನಸ್ ಕಾನೂನನ್ನು ಜಾರಿಗೆ ತಂದುದರಿಂದ ೩೧೦ ಜನ ಕೂಲಿಯವರು ಅಸಮಾಧಾನದಿಂದ ಕೆಲಸಕ್ಕೆ ಹೋಗದೆ ಮುಷ್ಕರಹಿಡಿದರು ಇವರ ಜೊತೆಗೆ ಕೆಲವು ನಿರುದ್ಯೋಗಿಗಳೂ ಸೇರಿ, ಮಾರಿಕೊಪ್ಪದ ಕಡೆ ಓಡಾಡುತ್ತಿದ್ದ ರೈಲಿಗೆ ಕಲ್ಲುಸೆಯುವುದು ಮತ್ತು ಕೈಗೆ ಸಿಕ್ಕಿದ ಸಾಮಾನುಗಳನ್ನು ಹಾಳುಮಾಡುವುದು ಮೊ

ನ್ನ ತೊಂದರೆ ಕೊಡಲು ಪ್ರಾರಂಭಮಾಡಿದರು ಜಿಲ್ಲಾ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರೂ, ಪೋಲೀಸ್ ಸೂಪರಿಂಟೆಂಡೆಂಟರೂ ಬಂದು ಎಷ್ಟು ಸಮಾಧಾನ ಹೇಳಿದರೂ ಕೇಳದೆ ಗಣಿಯ ಆಸ್ತಿಪಾಸ್ತಿಗಳನ್ನು ನಾಶ ಮಾಡಲು ಪ್ರಾರಂಭಿಸಿ ತಡೆಯಲು ಬಂದ ಅಧಿಕಾರಿಗಳ ಮೇಲೂ ಪೋಲೀಸಿನವರ ಮೇಲೂ ಕಲ್ಲುಗಳನ್ನೆಸೆದು ಮೇಲೆ ಬೀಳಲು ಬಂದದ್ದರಿಂದ, ಯತ್ನವಿಲ್ಲದೆ ಮ್ಯಾಜಿಸ್ಟ್ರೇಟರು ಗುಂಡು ಹಾರಿಸಲು ಅಪ್ಪಣೆಕೊಟ್ಟರು ಇದರಿಂದ 3 ಮಂದಿಗೆ ಗಾಯಗಳಾಗಿ ಗುಂಪು ಚದುರಿತು ತಿರುಗಿ 8 ಜನ ಪೋಲೀಸರೊಡನೆ ಮ್ಯಾಜಿಸ್ಟ್ರೇಟರು ಗಣಿಗಳ ಜನರಲ್ ಆಫೀಸಿಗೆ ಹೋದಾಗ ಮುಷ್ಕರಕಾರರು ಗುಂಪುಕೂಡಿ ಇವರುಗಳ ಮೇಲೆ ಕಲ್ಲುಗಳನ್ನೆಸೆಯಲು ಪ್ರಾರಂಭಿಸಿದುದರಿಂದ ಪೋಲೀಸರು ಗುಂಡು ಹಾರಿಸಬೇಕಾಯಿತು ಇದರಿಂದ 3 ಮಂದಿಗೆ ಗಾಯಗಳಾಗಿ ಒಬ್ಬನು ಮೃತಪಟ್ಟನು ಈಗ ಮುಷ್ಕರವು ಎಲ್ಲಾ ಗಣಿಗಳಿಗೂ ಪ್ರಸರಿಸಿದೆ ಕೆಲಸ ಮಾಡಲು ಇಷ್ಟಪಟ್ಟವರನ್ನು ಪೋಲೀಸು ರಕ್ಷಣೆಕೊಟ್ಟು ಕೆಲಸಕ್ಕೆ ಕಳುಹಿಸಿದೆ ಗುಂಡಿನೋಟಿನಿಂದ ಸತ್ತವನನ್ನು ಹೂಳಲು ತೆಗೆದುಕೊಂಡು ಹೋಗುವುದಕ್ಕೆ ಮುಷ್ಕರಕಾರರು ಅಡ್ಡಿಪಡಿಸಿದರು ಆದರೆ ಪೋಲೀಸರು ಬಲಪ್ರಯೋಗ ಮಾಡಿ ಇವರನ್ನು ಹೊಡೆದೋಡಿಸಿ ಹೆಣವನ್ನು ನಿಕ್ಷೇಪಮಾಡಿದರು ಪರಿಸ್ಥಿತಿಯು ಹತೋಟಿಯಲ್ಲಿದೆಯೆಂದು ತಿಳಿದ ಬರುತ್ತದೆ

ವರ್ತಮಾನಸಂಗ್ರಹ.

ಇಂಗ್ಲೆಂಡು ಜರ್ಮನಿಗೆ ವಿಮಾನಗಳನ್ನು ಒದಗಿಸಿತು.

ಇಂಗ್ಲೆಂಡು ದೇಶವು ಕಳೆದ 12 ತಿಂಗಳುಗಳಲ್ಲಿ ಜರ್ಮನ್‌ದೇಶಕ್ಕೆ ವಿಮಾನಗಳನ್ನೂ 30 ವಿಮಾನಗಳ ಎಂಜನ್ನುಗಳನ್ನೂ, ವಿಮಾನಕ್ಕೆ ಬೇಕಾದ ಇನ್ನೂ ಅನೇಕ ಭಾಗಗಳನ್ನೂ ಒದಗಿಸಿದೆಯೆಂದೂ, ಇವುಗಳ ಬೆಲೆ ಸುಮಾರು 173000 ಪೌನುಗಳಾಗುವುವೆಂದೂ ಪ್ರಕಟವಾಗಿದೆ

ಜೀವನವು ನಡೆಯದಿದ್ದುದಕ್ಕಾಗಿ ಆತ್ಮಹತ್ಯೆ!

ತಿನ್ನವೆಲ್ಲಿಯ ಸಮೀಪದ ಕುರುಚಿ ಎಂಬ ಗ್ರಾಮದಲ್ಲಿ 25 ವರ್ಷ ವಯಸ್ಸಿನ ಶಂಕರಲಿಂಗಾಚಾರಿ ಎಂಬ ಯುವಕನೂ, 21 ವಯಸ್ಸಿನ ಕುಪ್ಪಮ್ಮಾಳ್ ಎಂಬ ಇವನ ಹೆಂಡತಿಯೂ ವಿಷವನ್ನು ಕುಡಿದು ಪ್ರಾಣಬಿಟ್ಟಿರುತ್ತಾರೆ ಈ ವಿಧವಾದ ದುರ್ಮರಣಕ್ಕೆ ಮನೆಯ ಸಂಸಾರದಲ್ಲಿದ್ದ ತೊಂದರೆಯೇ ಕಾರಣವೆಂದು ಊಹಿಸಲಾಗಿದೆ

ಚಿತೆಯಲ್ಲಿಟ್ಟ ಶವದ ಪರೀಕ್ಷೆ!

ಕಳೆದ ತಿಂಗಳು ದಿಲ್ಲಿಯಲ್ಲಿ ಸ್ಮಶಾನದಲ್ಲಿ ಚಿತೆಯ ಲ್ಲಿಟ್ಟು ಸಂಸ್ಕರಿಸಲು ಸಿದ್ಧವಾಗಿದ್ದ ಹಿಂದೂ ತರುಣನ ಶವವನ್ನು ಪೋಲೀಸರು ಚಿತೆಯಿಂದ ಕೆಳಗೆ ತೆಗೆಯಿಸಿ ಡಾಕ್ಟರ್ ಪರೀಕ್ಷೆಗೆ ಕಳುಹಿಸಿದರು ಈತರುಣನು ಮನೆಯಲ್ಲಿ ಕಲಹದಿಂದ ವಿಷ ಕುಡಿದು ಆತ್ಮಹತ್ಯೆಮಾಡಿಕೊಂಡಿರಬೇಕೆಂದು ಸಂದೇಹ ಬಂದದ್ದರಿಂದ ಈ ರೀತಿ ನಡೆಯಿಸಿದರೆಂದು ತಿಳಿದುಬರುತ್ತದೆ

ಕ್ವೆಟ್ಟಾದಲ್ಲಿ ಪುನಃ ಭೂಕಂಪ!

ಕಳೆದ ಜುಲೈ 23 ನೇ ತಾರೀಖಿನ ದಿವಸ ಮಧ್ಯಾಹ್ನ ಕ್ವೆಟ್ಟಾದಲ್ಲಿ ಪುನಃ ಭೂಕಂಪವಾಗಿ ಕಳೆದುಳಿದ ಮನೆಗಳೂ ಅರ್ಧ-ಮರ್ಧ ನಿಂತಿದ್ದ ಗೋಡೆಗಳೂ ನೆಲಸಮವಾದವಂತೆ! ಜನಗಳು ಹೆದರಿ ಹೊರಗೆ ಓಡಿಬಂದದ್ದರಿಂದ ಪ್ರಾಣಾಪಾಯವೇನೂ ಆಗಲಿಲ್ಲವಂತೆ! ಅಲ್ಲಿ ವಾಸವಾಗಿರುವ ಜನರ ದುರ್ದೈವವನ್ನು ಎಷ್ಟು ಹೇಳಿದರೂ ತೀರದಾಗಿದೆ

ಅಬಿಸೀನಿಯಾಕ್ಕೆ ಸಹಾಯ!

ಕೇಪ್ ಟೌನಿನ ಬ್ರಿಟಿಷ್ ಪ್ರಜೆಗಳಲ್ಲಿ ಅನೇಕರು ಅಬಿಸೀನಿಯಾದೊಡನೆ ಸಹಕರಿಸಿ ಯುದ್ಧಮಾಡಲು ಸಿದ್ಧರಿರುವರೆಂಬ ವಿಷಯವನ್ನು ತಿಳಿದು ಅಂಥವರನ್ನು ತಮ್ಮಲ್ಲಿಗೆ ಕಳಿಸಿಕೊಡಬೇಕೆಂದು ಅಬಿಸೀನಿಯಾ ಚಕ್ರವರ್ತಿಗಳು ಅಲ್ಲಿಯ ಸರಕಾರಕ್ಕೆ ತಂತಿ ಕಳುಹಿಸಿರುವರೆಂದೂ ಅವರನ್ನು ಕೂಡಲೆ ಕಳುಹಿಸಿಕೊಡುವ ಪ್ರಯತ್ನಗಳು ನಡೆಯುತ್ತಿವೆಯೆಂದೂ ತಿಳಿದುಬಂದಿದೆ

ಹೈದರಾಬಾದ ಹೈಕೋರ್ಟಿಗೆ ಹಿಂದೂ ಜಡ್ಜರ ಆವಶ್ಯಕತೆ!

ಹೈದರಾಬಾದ್ ಹೈಕೋರ್ಟಿನ ಜಡ್ಜರು ಮರಣವಾಗಿ ಅವರ ಸ್ಥಾನವು ಖಾಲಿ ಬಿದ್ದಿರುವುದರಿಂದ ಆ ಸ್ಥಳಕ್ಕೆ ಬೇರೊಬ್ಬರನ್ನು ನೇಮಿಸುವಲ್ಲಿ ಒಬ್ಬ ಹಿಂದೂ ಜಡ್ಜರನ್ನೇ ನೇಮಿಸಬೇಕೆಂದು ಹಿಂದೂ ಲಾ ಸೊಸೈಟಿಯವರು ಪ್ರಾರ್ಥಿಸಿರುವರು ಹೈದರಾಬಾದ್ ಹಿಂದೂ ಪ್ರಜಾಮಂಡಲಿಯೂ ಕೂಡ ಆ ಸ್ಥಳಕ್ಕೆ ಒಬ್ಬ ಹಿಂದೂ ಜಡ್ಜರನ್ನೇ ನೇಮಿಸಬೇಕೆಂದು ಪ್ರಾರ್ಥಿಸಿರುವುದಾಗಿ ತಿಳಿದು ಬರುತ್ತದೆ

ಬೊಂಬಾಯಿಯಲ್ಲಿ ಕೊಲೆ.

ಕಳೆದ ತಿಂಗಳು 2 ನೇ ತಾರೀಖಿನ ದಿವಸ ರಾತ್ರಿ ಸುಮಾರು ಹತ್ತುಗಂಟೆಯ ಸಮಯದಲ್ಲಿ ಬೊಂಬಾಯಿ ಕೊಹಿನೂರು ಮಿಲ್ಲು ನೌಕರನಾದ ಶ್ರೀಪತಿವೆಂಕ ಎಂಬವನು ರಾತ್ರಿ ಕೆಲಸಕ್ಕೆ ಹೋಗುತ್ತಿರುವಾಗ ಇವನ ಮೇಲೆ ಕೆಲವು ದುಷ್ಟರು ಬಿದ್ದು ಚಾಕುವಿನಿಂದ ತಿವಿದು ಕೊಂದರು ಈ ಸಂಬಂಧದಲ್ಲಿ ಹಿರಾಜಿ ಪಾಂಡುರಂಗ ಮೊದಲಾದ 4 ಜನರ ದಸ್ತಗಿರಿಯಾಗಿದೆ ಅಪರಾಧಿಗಳಲ್ಲೊಬ್ಬನು ಕೆಲವು ದಿವಸಗಳ ಹಿಂದೆ ಮಿಲ್ಲಿಗೆ ಸಂಬಂಧಪಟ್ಟ ಯುವತಿಯೊಬ್ಬಳನ್ನು ಕೆಣಕಿದ ಕಾಲದಲ್ಲಿ ಅಡ್ಡಿಪಡಿಸಿದುದೇ ಈ ಅನಾಹುತಕ್ಕೆ ಕಾರಣವೆಂದು ಊಹಿಸಲಾಗಿದೆ ಮುಂದಿನ ವಿಚಾರಣೆಯು ನಡೆಯುತ್ತಿದೆ

ಮದ್ದಿನ ಕಾರ್ಖಾನೆಯಲ್ಲಿ ಅನಾಹುತ!

ಉತ್ತರ ಇಟಲಿಯಲ್ಲಿರುವ ಟ್ಯೂರಿನ್ ಎಂಬಲ್ಲಿಯ ಮದ್ದಿನ ಕಾರ್ಖಾನೆಯಲ್ಲಿ ಕಳೆದ 27 ನೇ ತಾರೀಖಿನ ದಿವಸ ಸಿಡಿತವಾಗಿ 3 ಜನ ಸ್ತ್ರೀಯರೂ 3 ಮಂದಿ ಪುರುಷರೂ ಮರಣಹೊಂದಿದರು ಇದರಿಂದ ಫ್ಯಾಕ್ಟರಿ ಮಾಡುವ ಕಟ್ಟಡದ ಭಾಗವೆಲ್ಲಾ ನೆಲಸಮವಾಯಿತು ಆಸ್ಫೋಟಕದ್ರವ್ಯಗಳನ್ನೊಳಗೊಂಡಿದ್ದ ಪೆಟ್ಟಿಗೆಯು ಪ್ಯಾಕು ಮಾಡುತ್ತಿರುವಾಗ ಜಾರಿ ಕೆಳಗೆ ಬಿದ್ದುದರಿಂದ ಇಷ್ಟು ಅನಾಹುತ ಉಂಟಾಯಿತೆಂದು ತಿಳಿದು ಬಂದಿದೆ ಈ ಫ್ಯಾಕ್ಟರಿಯಲ್ಲಿ ಸುಮಾರು 500 ಜನ ಕೆಲಸ ಮಾಡುತ್ತಿದ್ದರೆಂದೂ ಸಾಮಾನ್ಯವಾಗಿ ಉಳಿದವರೆಲ್ಲರೂ ಜೀವಸಹಿತ ಪಾರಾದರೆಂದೂ ತಿಳಿದುಬಂದಿದೆ

ಸರ್ಪದ ವಿಷಕ್ಕೆ ದಿವ್ಯೌಷಧ!

ಇಲ್ಲಿಯ ವರೆಗೂ ಹಾವಿನ ವಿಷಕ್ಕೆ ನಂಬಿಕೆಯಾದ ಔಷಧವಿರಲಿಲ್ಲ, ಈಗ ಪ್ಯಾರಿಸಿನ ಪ್ಯಾಶ್ಚರ್ ಇನ್ಸ್ಟಿಟ್ಯೂಟ್ ಶಾಸ್ತ್ರಜ್ಞರು ರೇಡಿಯೊ ಎಲಕ್ಟ್ರಿಕ್ ತರಂಗಗಳನ್ನು ಹಾವಿನಿಂದ ಕಚ್ಚಲ್ಪಟ್ಟವನ ಮೇಲೆ ಪ್ರಯೋಗಿಸುವುದರಿಂದ ಎಂಥ ವಿಷವಾದರೂ ಇಳಿದು ಗುಣವಾಗುತ್ತದೆಂಬುದನ್ನು ಕಂಡು ಹಿಡಿದಿರುತ್ತಾರೆ ಈಗಾಗಲೇ ಸರ್ಪಗಳಿರುವ ದೇಶಗಳಲ್ಲೆಲ್ಲಾ ಈ ಮಾದರಿಯ ಯಂತ್ರಗಳನ್ನು ಇಡಲು ಪ್ರಯತ್ನಗಳು ನಡೆಯುತ್ತಿವೆ ಈ ಮಹನೀಯರ ಶೋಧದಿಂದ ಸಮಸ್ತ ಪ್ರಪಂಚಕ್ಕೆ ಮಹಾ ಸುಖವುಂಟಾಯಿತೆಂದು ಹೇಳಬಹುದಾಗಿದೆ ಪ್ರಪಂಚದಲ್ಲಿ ಪ್ರತಿ ವರ್ಷವೂ ಲಕ್ಷಾಂತರ ಜನರು ಹಾವಿನಬಾಯಿಗೆ ತುತ್ತಾಗುತ್ತಿರುವರು ಆ ಪ್ರಾಣದಾನದ ಫಲವೆಲ್ಲಾ ಇವರಿಗೇನೇ ಸಲ್ಲತಕ್ಕುದಾಗಿದೆ

ಮೈಸೂರು ಹೈಕೋರ್ಟಿನಲ್ಲಿ ಬೂದಿಗೆರೆ ಖೂನಿ ಮೊಕದ್ದಮೆಯ ತೀರ್ಪು.

ಜುಲೈ 30 ನೆಯ ತಾರೀಖಿನ ದಿವಸ ಶ್ರೀಮತ್ ನ್ಯಾಯಾಧೀಶರಾದ ಶ್ರೀ ರೇಲಿ ಮತ್ತು ನ್ಯಾಯಾಧೀಶರಾದ ಶ್ರೀ ಎ ಎಸ್ ಆರ್ ಚಾರಿಯವರ ಮುಂದೆ ಈ ಅಪೀಲು ವಿಚಾರಣೆಗೆ ಬಂದಿತು

ಅಪರಾಧಿಯ ಪರವಾಗಿ ಶ್ರೀ ಎಲ್ ಎಸ್ ರಾಜು ರವರು ವಾದಿಸುತ್ತ—"ಅಪರಾಧಿಯು ಮಹಮ್ಮದೀಯನು ಅವನ ಮನೆಯ ಸುತ್ತಲೂ ಸುಮಾರು ೫೦-೬೦ ಜನಗಳು ಮುತ್ತಿಕೊಂಡಿದ್ದರು ಮೃತನಾದ ವೀರಭದ್ರಯ್ಯನು ಕೈಯಲ್ಲಿ ಒಂದು ಮಚ್ಚನ್ನು ಹಿಡಿದುಕೊಂಡು, ಅಪರಾಧಿಯ ಮನೆಯ ಅಂಗಳಕ್ಕೆ ನುಗ್ಗಿದನು ಅಪರಾಧಿಯ ಮನೆಯ ಹೆಂಗಸರು ಗೋಷಾ ಪದ್ಧತಿಯನ್ನು ಅನುಸರಿಸುತ್ತಿದ್ದುದರಿಂದಲೂ ಮತ್ತು ತನ್ನ ಆತ್ಮರಕ್ಷಣೆಗಾಗಿಯೂ ಅವನು ಮೃತನಾದ ವೀರಭದ್ರಯ್ಯನನ್ನು ಎದುರಿಸಬೇಕಾಯಿತು ಪ್ರಾಸಿಕ್ಯೂಷನ್ನಿನ ಪರವಾಗಿ ಅಪರಾಧಿಯು ಮೃತನಾದ ವೀರಭದ್ರಯ್ಯನನ್ನು ಗುಂಡಿನಿಂದ ಸುಟ್ಟನೆಂದು ಸಾಕ್ಷ್ಯಗಳಿವೆ. ಆದರೆ ಅಪರಾಧಿಯ ಬಳಿ ಬಂದೂಕವಿರಲಿಲ್ಲವೆಂದು ಕೆಲವು ಹೇಳಿಕೆಗಳು ಬಂದಿವೆ. ಹಾಗೆ ಬಂದೂಕಿನಿಂದ ಕೊಲ್ಲಲ್ಪಟ್ಟನೆಂದು ತಿಳಿದರೂ ಸಹ ಅಪರಾಧಿಯು ತನ್ನ ಆತ್ಮರಕ್ಷಣೆಗಾಗಿಯೇ ಅವನನ್ನು ಎದುರಿಸಿ ಸುಟ್ಟನು ಎಂಬುದಾಗಿ ಹೇಳಿ, ಒಬ್ಬ ಮನುಷ್ಯನಿಗೆ ಪ್ರಾಣಾಪಾಯವು ಸಂಭವಿಸಿರುವಾಗ ಅವನು ಆತ್ಮರಕ್ಷಣೆಗಾಗಿ ಮತ್ತೊಬ್ಬನ ಕೊಲೆಮಾಡಿದರೆ ಅದು ತಪ್ಪಾಗಲಾರದೆಂದು ಮದರಾಸು, ಅಲಹಾಬಾದ್ ಕೋರ್ಟುಗಳ ಕೆಲವು ತೀರ್ಪುಗಳನ್ನು ಓದಿದರು ಆದುದರಿಂದ ಅಪರಾಧಿಯು ಕೇವಲ ತನ್ನ ಆತ್ಮರಕ್ಷಣೆಗಾಗಿ ಕೃತ್ಯವನ್ನು ನಡೆಸಿದ್ದರಿಂದ ಅಪರಾಧಿಯನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸಿ ತಮ್ಮ ವಾದವನ್ನು ಮುಕ್ತಾಯಗೊಳಿಸಿದರು

ತರುವಾಯ ಪ್ರಾಸಿಕ್ಯೂಷನ್ ಪರವಾಗಿ ಸರಕಾರದ ವಕೀಲರಾದ ಶ್ರೀ ನ ಗೋಪಾಲಯ್ಯಂಗಾರ್‌ರವರು ವಾದಿಸುತ್ತ—"ಅಪರಾಧಿಯು ಕೇವಲ ಆತ್ಮರಕ್ಷಣೆಗಾಗಿ ತನ್ನ ಎದುರಾಳಿಯನ್ನು ಎದುರಿಸಿ ಒಂದೇ ಒಂದು ಸಲ ಗುಂಡನ್ನು ಹಾರಿಸಿದ್ದರೆ ಅದು ಒಪ್ಪಬಹುದಾಗಿತ್ತು ಆದರೆ ಅಪರಾಧಿಯು ಕೇವಲ ಗುಂಡನ್ನು ಎರಡು ಬಾರಿ ಹಾರಿಸಿದ್ದೂ ಅಲ್ಲದೆ, ಒಂದು ಕೊಡಲಿಯಿಂದ ಮೃತನ ದೇಹವನ್ನು ಕತ್ತರಿಸಿರುವುದನ್ನು ನೋಡಿದರೆ ಕೇವಲ ದ್ವೇಷದಿಂದಲೇ ಈ ರೀತಿಮಾಡಿರುವನೆಂದು ತಿಳಿಯುವುದು ಆದುದರಿಂದ ಸೆಷನ್ಸ್ ನ್ಯಾಯಾಧೀಶರು ಸರಿಯಾದ ರೀತಿಯಲ್ಲಿಯೇ ಮರಣ ಅಪರಾಧಿಗೆ ತಕ್ಕ ಶಿಕ್ಷೆಯನ್ನು ಕೊಟ್ಟಿರುವರು ಎಂದು ಹೇಳಿ ತಮ್ಮ ವಾದವನ್ನು ಮುಕ್ತಾಯಗೊಳಿಸಿದರು

ನ್ಯಾಯಾಧೀಶರ ತೀರ್ಪು.

ಅಪರಾಧಿಯಾದ ದಸ್ತಗೀರ್ ಎಂಬವನು 27 3 35 ರಲ್ಲಿ ದೇವನಹಳ್ಳಿ ತಾಲ್ಲೂಕು ಬೂದಿಗೆರೆಗ್ರಾಮದಲ್ಲಿ ವೀರಭದ್ರಯ್ಯನೆಂಬವನನ್ನು ಕೊಲೆಮಾಡಿದನೆಂಬುದೇ ಆತನ ಮೇಲಿನ ಆಪಾದನೆ ಅಪರಾಧಿಯು ತಮ್ಮ ಮೇಲೆ ವೀರಭದ್ರಯ್ಯನ ತಂದೆಯು ನಗರದ ನ್ಯಾಯಾಧೀಶರ ಕೋರ್ಟಿನಲ್ಲಿ ಒಂದು ಮೊಕದ್ದಮೆ ಹೂಡಿದ್ದಾಗ ನ್ಯಾಯಸ್ಥಾನದ ಬಳಿ ಅಪರಾಧಿಯು ವೀರಭದ್ರಯ್ಯನ ತಂದೆಯನ್ನು ಜೋಡಿಸಿಂದ ಹೊಡೆಯುವುದಾಗಿ ಬೈದನೆಂದು ರುಜುವಾತಾಗಿ, ಆ ವೈಷಮ್ಯದಿಂದ ವೀರಭದ್ರಯ್ಯ ಮತ್ತು ಇತರರೂ ಅಪರಾಧಿಯ ಮನೆಯನ್ನು 27 3 35 ರಲ್ಲಿ ಮುತ್ತಿದರೆಂದು ತಿಳಿದುಬಂದಿದೆ.

ಮೃತನಾದ ವೀರಭದ್ರಯ್ಯನು ಅಪ್ಪಣೆಯಿಲ್ಲದೆ ಹಿಂಸಾತ್ಮಕವಾದ ಆಯುಧವನ್ನು ಹೊಂದಿ ಅಪರಾಧಿಯ ಮನೆಯ ಅಂಗಳಕ್ಕೆ ನುಗ್ಗಿದುದು ತಪ್ಪು ಅಪರಾಧಿಯು ತನ್ನ ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದನು ಅಪರಾಧಿಯು ಕೇವಲ ತನ್ನ ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದ್ದರೆ ಒಪ್ಪಬಹುದಾಗಿತ್ತು ಆದರೆ ಅಪರಾಧಿಯು ಅಷ್ಟಕ್ಕೇ ಸಮಾಧಾನ ಹೊಂದದೆ ಒಂದು ಕೊಡಲಿಯಿಂದ ಅವನ ವಿದ್ವೇಷಿಯಾದ ವೀರಭದ್ರಯ್ಯನ ದೇಹವನ್ನು ಕತ್ತರಿಸಿರುವುದನ್ನು ನೋಡಿದರೆ ಕೇವಲ ದ್ವೇಷದಿಂದಲೇ ಈ ಕೃತ್ಯವನ್ನು ನಡೆಸಿದನೆಂದು ವೇದ್ಯವಾಗುವುದು ಆದುದರಿಂದ ಸೆಷನ್ಸ್ ನ್ಯಾಯಾಧೀಶರು ಐ ಪಿ ಸಿ 302 ರ ರೀತಿಯಾಗಿ ಅಪರಾಧಿಯು ತಪ್ಪಿತಸ್ಥನೆಂದು ಹೇಳುವುದನ್ನು ಒಪ್ಪಬೇಕು ಅವರು ವಿಧಿಸಿರುವ ಮರಣದಂಡನೆಯನ್ನು ತಗ್ಗಿಸಿ, ಅಪರಾಧಿಗೆ ಆಜನ್ಮಶಿಕ್ಷೆಯನ್ನು ವಿಧಿಸಲಾಗಿದೆ.

ಮಹನೀಯರ ಹಿತೋಕ್ತಿಗಳು

(ಹಿಂದಿನಿಂದ ಮುಂದುವರಿದುದು)

47 ಉತ್ತರವಾಯುವು ಉತ್ತರದಿಕ್ಕಿನ [illegible] ಬೀಸುವವರೆಗೆ [illegible] ಜೀವನವೆಂಬ ನಾವೆಗೆ [illegible] ಮನುಜನ ಮನಸ್ಸು [illegible] ಮುಂದುವರಿಯುವುದು [illegible] ಬಾಳುತ್ತಿರುವುದು.

48 [illegible] ಆಕಾಶದಲ್ಲಿ ಬಹು ಎತ್ತರದ [illegible] ದೃಷ್ಟಿಯು [illegible] ಮನಸ್ಸು [illegible] ಶುದ್ಧ ಮನಸ್ಸಿನ [illegible] ಯುಕ್ತವಾಗುತ್ತದೆ.

49 [illegible] ಮನಸ್ಸು ಉತ್ತಮವಾಗಿ [illegible] ಮನುಷ್ಯನು [illegible] ಮಾಡಿಕೊಳ್ಳುತ್ತಲೇ ಇರುವನು.

50 [illegible]

51 [illegible]

52 [illegible]

53 [illegible]

[illegible]

54 [illegible]

55 [illegible]

56 [illegible]

[illegible]

60 ಈ ಜಗತ್ತನ್ನು [illegible]

(ಸಶೇಷ)

ಆರ್. ಎಂ. [illegible]

ರೇಣುಕವಿಜಯ ಮಹಾಪುರಾಣ.

(ಶ್ರಾವಣಮಾಸವು ಪ್ರಾಪ್ತವಾಯಿತು.)

ಯಾವ ಮಹಾತ್ಮನು ಈ ಭೂಮಂಡಲದಲ್ಲಿ ಸೋಮೇಶ್ವರಲಿಂಗಮುಖದಿಂದವ ತರಿಸಿ ತನ್ನ ಮಹಿಮಾಪ್ರಭಾವದಿಂದ ಸಮಸ್ತ ಮಾನವಕೋಟಿಯನ್ನುದ್ಧರಿಸಿದನೋ, ಆ ಗುರುಸಾರ್ವಭೌಮ ಶ್ರೀ ಜಗದ್ಗುರು ರೇಣುಕಾಚಾರ್ಯನ ಪುರಾಣವನ್ನು ತರಿಸಿ ಕೊಂಡು ಪುರಾತನಪದ್ಧತಿಯಂತೆ ಶ್ರಾವಣಮಾಸದಲ್ಲಿ ಪ್ರತಿಯೊಂದು ಗ್ರಾಮದ ಭಕ್ತಮಾಹೇಶ್ವರರೂ ಪ್ರಾರಂಭಮಾಡಿ ಆ ಮಹಿಮನ ಸಚ್ಚರಿತ್ರವನ್ನು ಕೇಳಿ ತಮ್ಮ ಗ್ರಾಮವನ್ನೂ ತಮ್ಮ ವಂಶವನ್ನೂ ಪಾವನಗೊಳಿಸಿಕೊಳ್ಳಬೇಕೆಂದು ಕೋರಿಕೆ.

ಬೆಲೆ ೧ ರೂ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿವತತ್ವದಂತೆಯೆ ಶ್ರೇಷ್ಠವಾದುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತರಿಗೆ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿರುತ್ತಾರೆ ಈ ಮೂಲಗ್ರಂಥವು ಕೇವಲ ೩೦ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೯೨೫ ಪುಟಗಳಷ್ಟಾಗಿದೆ ಈ ಮಹಾಗ್ರಂಥದ ಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯುಳ್ಳ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಮುಕ್ತಕಂಠದಿಂದ ಹೇಳಬಹುದಾಗಿದೆ ನಮ್ಮ ಸ್ವಾಮಿಗಳವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೯೫೫ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ **೮ ರೂಪಾಯಿ** ಒಂದು ರೂಪಾಯಿಗೆ ಸಾಟಿಕ್ಟಿನಂತೆ ಕಾಪನ್ ಮಜಕೂರು ಹೋಗಬಾಗಿ **೬ ರೂ** ಗೆ ದೊರೆಯುವದು ವಿ ಪಿ ಚಾರ್ಜ ೧ ರೂ ೫ ಆಣೆ ಪ್ರತ್ಯೇಕ

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಶಿಷ್ಯರ ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಅದನ್ನು ಪರಿಹರಿಸುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಬೇರೆಯಾಗಿ ಕೊಡಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ಸಂಗ್ರಹಿಸಿಟ್ಟುಕೊಳ್ಳುವದರಿಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಅದಕ್ಕಾಗಿ ಎಂಟೂ ಕಲಮಿನಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭ ಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೫೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಳಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೫—೦—೦
ಕ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೬—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಶುಕ್ತಿಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೫—೦—೦
ಮುಕ್ತಾಭಸ್ಮ	೧	೬೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸುವರ್ಣಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ ಚೂರ್ಣ, ಗುಟಿಕಾ, ತೈಲ ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಉಖಿಮಠ, ಜಿಲ್ಹಾ ಗಢವಾಲ್ ಯು ಪಿ.

ಮನೋಹರವಾದ ಫೋಟೋಗಳು.

	ರೂ. ಆ. ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳುಳ್ಳ ಕಡಿತದ ಫೋಟೋ ಸೈಜು ೩೦×೧೪ ಬೆಲೆ ಒಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ನಾರದ ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಷಡ್ಯೋಗಿ ಶಿವಾಚಾರ್ಯರೂ ಬಹುಮಂದಿ ಶಿಷ್ಯರೂ ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ಒಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ಒಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಒಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ ..	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ...	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಹಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ಕೊಂಡುಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರ

ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾನಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಮೋತ್ತಮವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬದವರಿಗಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[31] ಪೋ. ಬಾ. ೫೧೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಳಸ್ತೋತ್ರಾವಳಿ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ವರೂಪಸ್ತವನಮೀಮಾಂಸೆ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತನಿರಾಮಯಾಂಸಾ	೩ ಆಣೆ
ವೀರಶೈವಾಚಾರಪದ್ಧತಿ (೩ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ತ್ವಸ್ಥಿರೀಕರಣ (೨ನೆಯ ಆವೃತ್ತಿ)....	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಭಾಷ್ಯಾಂತ ದಿವಾಕರ (೩ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಅವರ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As
ವೀರಶೈವತತ್ತ್ವ (೩ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸುಪ್ರಭಾತಸ್ತೋತ್ರ ...	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮತತ್ತ್ವಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾನುವಾದ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡ ... ಸಹಿತ)	೮ ರೂ.
लिंगधारणचंद्रिका (संस्कृत)	२ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಕ್ಷರಾದ ವೇ|| ಬ್ರ|| ಪಂಡಿತ ಶ್ರೀ ಗುರುಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯರ್ಗಳ್ ಪ್ರಸೀದಂತು || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಸಕಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ಪಾಲಿಶ್ಶ್ವವೀರೋತ್ತಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ ನೇ ಆಗಸ್ಟ್ ೧೯೩೫ [ಸಂಚಿಕೆ ೧೪

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದ ಪರೀಕ್ಷಾಫಲ.

ಕಾಶೀ ಗೌರ್ನಮೆಂಟ್ ಕಾಲೇಜು ಪರೀಕ್ಷೆ.

ವೇದಾಂತಾಚಾರ್ಯ

೧. ನೀಲಕಂಠಶಾಸ್ತ್ರಿಗಳು, ಭಾಸಾಪುರ, ಹಿರೇಮಠ.

ಕಲಕತ್ತಾ ಯುನಿವರ್ಸಿಟಿ ಪರೀಕ್ಷೆ.

ಮೀಮಾಂಸಾ ಮಧ್ಯಮಾ

೨. ವೀರಭದ್ರಶಾಸ್ತ್ರಿಗಳು, ಚಿದಿರೆಮಠ.

ವ್ರಜಮಂಡಲ ಯುನಿವರ್ಸಿಟಿ ಮಥುರಾಪರೀಕ್ಷೆ.

ವೇದಾಂತ ಸಂಪೂರ್ಣ ಶಾಸ್ತ್ರೀ (ಪ್ರಥಮ ಶ್ರೇಣಿ)

೩. ವಾಗೀಶಶಿವಾಚಾರ್ಯರು, ಮುದೇನೂರು, ಬೃಹನ್ಮಠ.

ವ್ಯಾಕರಣ ಸಂಪೂರ್ಣ ಮಧ್ಯಮಾ

೪. ಸದಾಶಿವಶಾಸ್ತ್ರಿಗಳು, ರಾಮಲಾಪುರ, ಹಿರೇಮಠ.

ಆಯುರ್ವೇದ ಮಧ್ಯಮಾ ೨ ಖಂಡ

೫. ಸಿದ್ಧಲಿಂಗದೇವರು, ಹೊಂಗಲ, ವಿರಕ್ತಮಠ.

Vasudeo Rao Diwan,
Agent,
Jangambadi Matha,
Benares City.

ಬ್ರ|| ಶ್ರೀ|| ವೇ|| ವೇದ, ಕಾವ್ಯ, ಸ್ಮೃತಿ, ದರ್ಶನ ತೀರ್ಥಾದಿ ಪಟ್ಟಾಂಚಿತರಾದ ಪಂಡಿತವರ್ಯ ಚಿದಿರೆಮಠದ ವೀರಭದ್ರಶರ್ಮರವರ ಶುಭಾಗಮನ.

ಕಳೆದ ಆಷಾಢ ಬ|| ೨ ರವಿವಾರ ಪಂಡಿತವರ್ಯರು ಹೈದರಾಬಾದಿನಿಂದ ಮಳಖೇಡಕ್ಕೆ ಆಗಮಿಸಿದರು. ಅಲ್ಲಿಯ ಸುಪ್ರಸಿದ್ಧ ವೈದಿಕಾಭಿಮಾನಿಗಳೂ ಕರ್ಮಠರೂ ಚಿರಕಾಲಪ್ರೋತ್ಸಾಹಕರೂ ಆದ ಶ್ರೀ|| ಮಾಸ್ತರ್ ಬಸವಲಿಂಗ ಶಾಸ್ತ್ರಿಗಳು ಅತ್ಯಂತ ಪ್ರೇಮದಿಂದ ಸ್ವಾಗತಮಾಡಿ ಸತ್ಕರಿಸಿದರು. ಮರುದಿವಸ ಸಾಯಂಕಾಲ ಬೃಹನ್ಮಠದಲ್ಲಿ ನೀರಲಗುಂಡದ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ಸಭೆಯಲ್ಲಿ ಪುರಪ್ರಮುಖರೂ ಮಠಾಧ್ಯಕ್ಷರಾದ ಶ್ರೀ ಚರವಸ್ತ್ರ ಶಿವಾಚಾರ್ಯರೂ ಮಂಡಿಸಿದ್ದರು. ಕುಶಸ್ತವನಾನಂತರದಲ್ಲಿ ಮಾಸ್ತರ ಶ್ರೀ|| ಬಸವಲಿಂಗಶಾಸ್ತ್ರಿಗಳು ಸಭಿಕರಿಗೆ ಪಂಡಿತರ ಪರಿಚಯ ಮಾಡಿಕೊಟ್ಟಬಳಿಕ ಪಂಡಿತರು 'ವೈದಿಕಧರ್ಮ' ಎಂಬುದರ ಮೇಲೆ ತಮ್ಮ ಅದ್ಭುತವೈದುಷ್ಯದಿಂದೊಡಗೂಡಿದ ಭಾಷಣವನ್ನು ಮಾಡಿ ಪರಮಾನಂದವನ್ನುಂಟುಮಾಡಿದರು. ಬಳಿಕ ಪೂರ್ವಾಧ್ಯಯನಸ್ಥಳವಾದ ನೀರಲಗುಂಡದ ಶ್ರೀಮಠವನ್ನು ಸಂದರ್ಶಿಸಿ, ಮಳಖೇಡ ಮುಂತಾದ ಕಡೆಗೂ ಧರ್ಮಪ್ರಚಾರವನ್ನು ಮಾಡಿ ಬ|| ೧೨ ಶನಿವಾರ ಸಾಯಂಕಾಲ ನಾರಾಯಣಪೇಟೆಗೆ ದಯಮಾಡಿದರು. ಅಲ್ಲಿ ಪುರಪ್ರಮುಖರೆಲ್ಲರೂ ವಾದ್ಯೋತ್ಸವದೊಡನೆ ಸ್ವಾಗತಿಸಿದರು. ಅಲ್ಲಿಯ ವೀರಶೈವರ ವೈಶ್ಯರ ಉಭಯದೇವಾಲಯಗಳಲ್ಲೂ ೩ ದಿವಸ ಬ್ರಹ್ಮವೈವರ್ತ ಪುರಾಣದ ಪಾರಾಶರ್ಯಮಹರ್ಷಿ ಸದಾಚಾರ ಮುಂತಾದವುಗಳ ಮೇಲೆ ಅತ್ಯುತ್ತಮವಾಗಿ ವ್ಯಾಖ್ಯಾನಗಳು ಜರುಗಿ ಸಭಿಕರಿಗೆ ಇದ್ದ ಅನೇಕ ಸಂಶಯಗಳು ನಿವೃತ್ತಿಗೊಂಡವು. ಇದರಿಂದ ಜನಾಂಗದ ಮೇಲೆ ಒಂದು ವಿಧವಾದ ಧಾರ್ಮಿಕಪರಿಣಾಮವಾಯಿತೆನ್ನುವುದರಲ್ಲಿ ಸಂಶಯವಿಲ್ಲ. ಜಗದೀಶ್ವರನು ಪಂಡಿತವರ್ಯರಿಗೆ ಯಾವಾಗಲೂ ಇದರಂತೆ ಧರ್ಮಪ್ರಚಾರವನ್ನು ಮಾಡುವ ಸುಯೋಗವನ್ನು ಕರುಣಿಸಲೆಂದು ಪ್ರಾರ್ಥಿಸುವ

ಓರ್ವ ಪ್ರತ್ಯಕ್ಷದರ್ಶಿ.

ಶ್ರೀಃ

ಭಾರತೀಯ ಜ್ಯೋತಿಷ.

9—2—1931 ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಜ್ಯೋತಿಶ್ಶಾಸ್ತ್ರ ಪ್ರಧಾನೋಪಾಧ್ಯಾಯರಾದ

ಆಸ್ಥಾನ ಮಹಾವಿದ್ವಾನ್ ಕರೂರು ಶೇಷಾಚಾರ್ಯರು ಮಾಡಿದ ಉಪನ್ಯಾಸ.

(ಹಿಂದಿನಿಂದ ಮುಂದುವರಿದುದು)

ಗ್ರಹಗಳೂ, ನಕ್ಷತ್ರಗಳೂ, ತಿರುಗುವ ಕ್ರಮ.

ಭೂಮಿಯ ಮೇಲೆ ಆವಹ, ಪ್ರವಹ, ಉದ್ವಹ, ಸಂವಹ, ಸುವಹ, ಪರಿವಹ, ಪರಾವಹ, ಎಂಬುವಾಗಿ ಏಳು ವಾಯುಸ್ಕಂಧಗಳಿವೆ. ಅದರಲ್ಲಿ ಎರಡನೆಯದಾದ ಪ್ರವಹವಾಯುವೇ ಈ ಗ್ರಹ ನಕ್ಷತ್ರಗಳ ಚಲನೆಗೆ ಕಾರಣವಾಗಿದೆ. ಈ ವಾಯುವು ಸಪ್ತಗ್ರಹಗಳ ಕಕ್ಷ್ಯೆಗಳನ್ನೂ ಒಳಗೊಂಡಿರುವ ಭಗೋಳವನ್ನು ಅರು ವತ್ತು ಘಳಿಗೆಗಳಿಗೊಂದಾವರ್ತ ಪಶ್ಚಿಮಾಭಿಮುಖವಾಗಿ ಸುತ್ತಿಸುತ್ತದೆ. ಹೀಗೆ ಸುತ್ತಿಸುವಾಗ ಪ್ರವಹವಾಯುವಿನ ವೇಗದ ಹೊಡೆತದಿಂದ ನಕ್ಷತ್ರ ಮಂಡಲವು ೬೦ ಘಳಿಗೆಗೆ ಸರಿಯಾಗಿ ಉದಯವಾಗುತ್ತದೆ. ಅನಂತರ ಇವರ ಕೆಳಕೆಳಗೆ ಇರತಕ್ಕ ಶನ್ಯಾದಿ ಕಕ್ಷ್ಯೆಗಳಲ್ಲಿಯೂ ಬಿಂಬಗಳಲ್ಲಿಯೂ ಪರಸ್ಪರ ತಾರತಮ್ಯವಿರುವುದರಿಂದ ಅದಕ್ಕನುಸಾರವಾಗಿ ಪ್ರವಹವಾಯುವಿನ ಹೊಡೆತವು ಹೆಚ್ಚು ಕಡಿಮೆಯಾಗುವುದರಿಂದ ಗ್ರಹೋದಯಗಳು ನಕ್ಷತ್ರೋದಯವಾದನಂತರ ಪ್ರತಿ ದಿವಸವೂ ವಿಳಂಬಿಸಿ ಉದಯವಾಗುತ್ತವೆ. ಈ ಲಂಬನಗತಿಯನ್ನೇ ಪೂರ್ವಗತಿಯೆಂದು ಹೇಳುತ್ತಾರೆ. ಭಾಸ್ಕರಾಚಾರ್ಯ ಪ್ರಭೃತಿಗಳ ಅಭಿಪ್ರಾಯವೇನೆಂದರೆ ಅತಿವೇಗವಾಗಿಯೂ ಅಪಸವ್ಯವಾಗಿಯೂ ಸುತ್ತುವ ಕುಂಬಾರನ ಚಕ್ರದಲ್ಲಿ ಯಾವುದಾದರೊಂದು ಕ್ರಿಮಿಯು ಸವ್ಯಮಾರ್ಗದಿಂದ ಸುತ್ತುತಿದ್ದರೂ ಅಪಸವ್ಯದಲ್ಲಿ ಸುತ್ತುವಂತೆಯೇ ತೋರುವುದೋ ಹಾಗೆಯೇ ಪ್ರವಹವಾಯುವಿನಿಂದ ಪಶ್ಚಿಮಾಭಿಮುಖವಾಗಿ ಸುತ್ತುತ್ತಿರುವ ಭಗೋಳದ ಕೆಳಭಾಗದಲ್ಲಿ ಸ್ವಗತಿಯಿಂದ ಪೂರ್ವಾಭಿಮುಖವಾಗಿ ನಿಧಾನವಾಗಿ ಗ್ರಹಗಳೂ ಸಹ ಸುತ್ತುತ್ತವೆಯೆಂದು ಅಭಿಪ್ರಾಯ ಪಡುತ್ತಾರೆ. ಇದರಿಂದ ಗ್ರಹಗಳ ಉದಯಾಸ್ತಮಯಗಳು, ಪ್ರವಹ ವಾಯುವಿನಿಂದಲೂ ಮೇಷಾದಿ ದ್ವಾದಶ ರಾಶಿ ಭೋಗಗಳು ಮತ್ತು ಗ್ರಹಣ, ಅಮಾವಾಸ್ಯಾ, ಪೂರ್ಣಿಮಾ ದಿಗಳು ಸಹ ಸ್ವಗತಿಯಿಂದಲೂ ಉಂಟಾಗುತ್ತವೆಂದು ಹೇಳಬೇಕಾಗುವುದು.

ಶೀಘ್ರೋಚ್ಚಮಂದೋಚ್ಚಗಳ ವಿಚಾರ.

ಇವು ಗ್ರಹಗಳನ್ನು ಶೀಘ್ರವಾಗಿಯೂ ಮಂದವಾಗಿಯೂ ಸೂಜಿಗಲ್ಲಿನಂತೆ ತಮ್ಮ ಕಡೆಗೆ ಆಕರ್ಷಿಸುವ ಸ್ಥಳವಿಶೇಷಗಳಾಗಿವೆ. ಆ ಸ್ಥಳವಿಶೇಷವನ್ನು ಸೂರ್ಯಸಿದ್ಧಾಂತಾದಿ ಗ್ರಂಥಕಾರರು ದೇವತಾವಿಶೇಷವೆಂದು ಒಪ್ಪಿರುವುದರಿಂದ ಅದಕ್ಕೆ ಆಕರ್ಷಣಶಕ್ತಿಯುಂಟೆಂದು ಹೇಳಬಹುದು. ಈ ಶೀಘ್ರೋಚ್ಚಮಂದೋಚ್ಚಗಳೆರಡೂ ಕುಜಾದಿ ಪಂಚಗ್ರಹಗಳ ಕಕ್ಷ್ಯೆಗಳಲ್ಲಿಯೇ ಇರೋದರಿಂದ ಆ ಗ್ರಹಗಳಿಗೆ ವಕ್ರಗತಿಯುಂಟಾಗುತ್ತದೆ. ಚಂದ್ರ ಸೂರ್ಯರ ಕಕ್ಷ್ಯೆಗಳಲ್ಲಿ ಕೇವಲ ಮಂದೋಚ್ಚವೇ ಇರೋದರಿಂದ ಅವರಿಗೆ ವಕ್ರಗತಿಯುಂಟಾಗಲು ಅವಕಾಶವಿಲ್ಲ. ಈ ಶೀಘ್ರೋಚ್ಚಮಂದೋಚ್ಚಗಳು ಗ್ರಹಗಳನ್ನು ಆಕರ್ಷಿಸುವ ಕ್ರಮವೆ ಹೇಗೆಂದರೆ ಗಣಿತಭೇದಗಳಿಂದ ತಿಳಿಯಲ್ಪಡುವ ತಮ್ಮ ಸ್ಥಾನಗಳಿಂದ ಮುಂಭಾಗದ ಆರು ರಾಶಿಗಳೊಳಗೆ ಇರುವ ಗ್ರಹಗಳನ್ನು ಪಶ್ಚಿಮಾಭಿಮುಖವಾಗಿಯೂ ಹಿಂಭಾಗದ ಆರು ರಾಶಿಗಳಲ್ಲಿ ಇರುವ ಗ್ರಹಗಳನ್ನು ಪೂರ್ವಾಭಿಮುಖವಾಗಿಯೂ ಎಳೆಯುತ್ತವೆ. ಇದರಿಂದ ಗ್ರಹಗಳ ಮಧ್ಯಗತಿಗೂ ಸ್ಫುಟಗತಿಗೂ ವ್ಯತ್ಯಾಸವು ತೋರುತ್ತದೆ. ಮಧ್ಯಗತಿಯೆಂದರೆ ಪ್ರತಿದಿನವೂ ಒಂದೇ ಕ್ರಮದ ಪ್ರಮಾಣದಿ ಉಂಟಾಗುವ ಸರಾಸರಿ ಗತಿಯು. ಈ ಶೀಘ್ರೋಚ್ಚಮಂದೋಚ್ಚಗಳ ಆಕರ್ಷಣೆಯಿಂದ ವ್ಯತ್ಯಾಸವಾಗಿ ಉಂಟಾಗುವ ಗತಿಯೇ ಸ್ಫುಟಗತಿಯು.

ಪಂಚಾಂಗ ಸ್ವರೂಪ.

ತಿಥಿ, ಕರಣ, ವಾರ, ನಕ್ಷತ್ರ, ಯೋಗ ಇವೇ ಪಂಚಾಂಗಗಳು. ತಿಥಿ ಎಂದರೆ ತನ್ಯತೇ, ವಿಸ್ತಾರ್ಯತೇ, ಚಂದ್ರಕಲಾ, ಅನೇನೇತಿ, ತಿಥಿಃ, ಎಂಬ ವ್ಯುತ್ಪತ್ತಿಯಿಂದ ಪೂರ್ವಾಭಿಮುಖವಾಗಿ ಮಂದ ಶೀಘ್ರಗತಿಗಳಿಂದ ಹೋಗುವ ಸೂರ್ಯಚಂದ್ರರಿಗೆ ಪೂರ್ವಪಶ್ಚಿಮವಾಗಿ ಉಂಟಾಗುವ ಹನ್ನೆರಡು, ಹನ್ನೆರಡು ಅಂತರಾಂಶಗಳಿಂದ ಒಂದೊಂದು ಚಂದ್ರಕಳೆಯು ಅಭಿವೃದ್ಧಿಯಾಗುವುದೆಂಬ ಅಂಶವು ಗೊತ್ತಾಗುತ್ತದೆ. ಹೀಗೆ ಚಂದ್ರಸೂರ್ಯರ ಅಂತರವೇ ತಿಥಿ ಎಂದಾಗುವುದು. ಮತ್ತು ಸೂರ್ಯನ 180 ಭಾಗದವರೆಗೆ ಹನ್ನೆರಡು ಭಾಗಕ್ಕೆ ಒಂದು ಕಳೆಯಂತೆ ವೃದ್ಧಿಯಾಗುವುದರಿಂದ, ಅಲ್ಲಿನವರೆಗೆ ಆಗುವ 15 ತಿಥಿಗಳ ಸಮುದಾಯಕ್ಕೆ ಶುಕ್ಲಪಕ್ಷವೆಂದೂ, 180 ಭಾಗದ ಮೇಲೆ 360 ಭಾಗದವರೆಗೆ ಉಂಟಾಗುವ 15 ತಿಥಿಗಳಲ್ಲಿ 12 ಭಾಗಕ್ಕೆ ಒಂದು ಕಳೆಯಂತೆ ಕ್ಷಯವೃದ್ಧಿಯಾಗುವುದರಿಂದ ಆ 15 ತಿಥಿಗಳಿಗೆ ಕೃಷ್ಣಪಕ್ಷವೆಂದೂ ಹೇಳಲ್ಪಟ್ಟಿದೆ. ಈ ಒಂದೊಂದು ತಿಥಿಗಳ ಅರ್ಧವೇ ಅಂದರೆ ಸೂರ್ಯಚಂದ್ರರಿಗೆ ಉಂಟಾಗುವ ಪೂರ್ವಪಶ್ಚಿಮಾಂತರವಾದ ಆರು. ಆರು ಭಾಗಗಳೇ ಒಂದೊಂದು ಕರಣವೆಂದು ತಿಳಿಯತಕ್ಕದ್ದು. ವಾರಗಳು ಚಂದ್ರ, ಬುಧ, ಶುಕ್ರ, ರವಿ, ಕುಜ, ಗುರು, ಶನಿ ಈ ರೀತಿಯಾಗಿ ಸಪ್ತಗ್ರಹಗಳ ಕಕ್ಷೆಗಳು ಕ್ರಮವಾಗಿದೆ ಎಂದು ಹಿಂದೆಯೇ ಹೇಳಲ್ಪಟ್ಟಿದೆಯಷ್ಟೆ. ಅದನ್ನೇ ಅನುಸರಿಸಿ ವಾರಗಳನ್ನೂ ಹೇಳಬಹುದು. ಹೇಗೆಂದರೆ ಮೇಲ್ಭಾಗದ ಕಕ್ಷೆಯಿಂದ ರವಿಕಕ್ಷ್ಯೆ ಕಡೆಯನ್ನು ಪ್ರಾರಂಭವಾಗಿಟ್ಟುಕೊಂಡು ನಾಲ್ಕುನಾಲ್ಕು ಗ್ರಹಗಳಂತೆ ಎಣಿಸಿದರೆ, ನಾಲ್ಕನೆಯ ಗ್ರಹವೇ ಕ್ರಮವಾಗಿ ವಾರಾಧಿಪತಿಯಾಗುತ್ತದೆ. ಹೇಗೆಂದರೆ ಶನಿಗೆ ನಾಲ್ಕನೆಯವನು. ಸೂರ್ಯ ಅವನಿಗೆ ನಾಲ್ಕನೆಯವನು ಚಂದ್ರ, ಚಂದ್ರನಿಗೆ ನಾಲ್ಕನೆಯವನು ಕುಜ ಇದೇ ರೀತಿಯಾಗಿ ವಾರಾಧಿಪತಿಗಳನ್ನು ತಿಳಿಯತಕ್ಕದ್ದು. ನಕ್ಷತ್ರಗಳು ನಕ್ಷರತೀತಿ ನಕ್ಷತ್ರಂ, ಎಂಬ ವ್ಯುತ್ಪತ್ತಿಯಿಂದ ಭಗೋಳದ ಕ್ರಾಂತಿವೃತ್ತದಲ್ಲಿ ಸ್ಥಿರವಾಗಿರುವ ಅಶ್ವಿನ್ಯಾದಿ 27 (ನಕ್ಷತ್ರ) ಜ್ಯೋತಿಸ್ಸುಗಳೇ ನಕ್ಷತ್ರಗಳು ಎಂದು ಗೊತ್ತಾಗುತ್ತದೆ. ಅವುಗಳಿಗೆ ಸ್ವಗತಿಯೂ, ಪತನವೂ ಇರುವುದಿಲ್ಲ. ಚಂದ್ರಗೋಳದ ಕೆಳಭಾಗದಲ್ಲಿ ಆವಹಪ್ರವಹವಾಯುವಿನ ಸಂಧಿಯಲ್ಲಿ ಇರುವ ಕೆಲವು ಜ್ಯೋತಿಸ್ಸುಗಳಿಗೆ ತಾರೆಗಳೆಂದು ಹೆಸರು. ಈ ತಾರೆಗಳು ಅತಿಯುತಗತಿಗಳುಳ್ಳದ್ದರಿಂದ, ಯಾವ ಗಣಿತದಿಂದಲೂ ಇದರ ಸ್ವರೂಪ

(ಆಚೆ ಪುಟವನ್ನು ನೋಡಿ.)

ಶಾಕುಂತಲ ನಾಟಕದ ಕಥಾಸಾರಾಂಶ.

(ಕನ್ನಡಕವಿ [illegible])

ಪೂರ್ವಕಾಲದ ರಾಜರಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದಿದ್ದ ದುಷ್ಯಂತನೆಂಬ ಭೂಪತಿಯು ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದನು ಈ ಭೂಪತಿಯು ತನ್ನ ವಿವೇಕದಿಂದಲೂ ರಾಜಧರ್ಮ ಪದ್ಧತಿಯಿಂದಲೂ ನಿಜರಾಜ್ಯದ ಸಕಲ ಭಾಗಗಳಿಂದಲೂ ಮರ್ಯಾದೆಯನ್ನೂ ಖ್ಯಾತಿಯನ್ನೂ ಸಂಪಾದಿಸಿದ್ದನು ಈ ಭೂವಲ್ಲಭನ ರಾಜ್ಯಭಾರದಲ್ಲಿ ಪ್ರಜೆಗಳು ಬಹಳ ಸೌಖ್ಯವನ್ನು ಪಡೆಯುತ್ತ ಅಭಿವೃದ್ಧಿ ಸ್ಥಿತಿಯಲ್ಲಿಯೇ ಇರುತ್ತಿದ್ದರು ಹೀಗಿರುವಲ್ಲಿ ಮಹಾರಾಜನು ಒಂದಾನೊಂದು ದಿವಸ ಬೇಟೆಯಾಡುವುದಕ್ಕೆ ಹೋಗಿದ್ದಾಗ ಒಂದು ದೊಡ್ಡ ಅಡವಿಯಲ್ಲಿ ಹೋಗೋಣವಾಗುತ್ತಿರಲು ತನ್ನ ಸೈನ್ಯವನ್ನು ಒಂದೆಡೆ ದೂರದಲ್ಲಿ ಬಿಟ್ಟು ಒಬ್ಬಂಟಿಯಾಗಿ ದೂರದಲ್ಲಿ ಕಾಣುತ್ತಿದ್ದ ಕಣ್ವಋಷಿಯ ಆಶ್ರಮಕ್ಕೆ ಹೋದನು.

ಆ ಆಶ್ರಮವು ಸುಂದರವಾದ ಉದ್ಯಾನವನದಂತೆ ನೋಡುವವರ ಮನಸ್ಸನ್ನು ಆಕರ್ಷಿಸುತ್ತಲಿದ್ದಿತು. ಅಲ್ಲಿ ಸಾಲಾಗಿ ಬೆಳೆದಿದ್ದ ವೃಕ್ಷಗಳ ಸುವಾಸನೆಯು ಎಲ್ಲ ಕಡೆಗಳಿಗೂ ಬೀರುತ್ತಲಿತ್ತು. ಚಿತ್ರವಿಚಿತ್ರವಾದ ನಾನಾವಿಧ ಬಣ್ಣದ ಪುಷ್ಪಗಳು ನೋಡುವವರಿಗೆ ಸೊಗಸನ್ನೂ ಮನಸ್ಸಿಗೆ ಆನಂದವನ್ನೂ ಉಂಟುಮಾಡುತ್ತಿದ್ದುವು. ಮಾರಿಯು ಇಂತಹ ಜಾಗವನ್ನು ನೋಡಿ ಮನಸ್ಸು ನಿಶ್ಚಲವಾಗಿ ತಾನು ಅಲ್ಲಿಯ ಸುಖವನ್ನು ಅನುಭವಿಸಬೇಕೆಂದು ಆ ಆಶ್ರಮದ ಸಮೀಪಕ್ಕೆ ಬರಲು, ಅಲ್ಲಿ ಸೌಂದರ್ಯವತಿಯರಾದ ಮೂವರು ತರುಣಿಯರು ಲತಾದಿಗಳಿಗೆ ನೀರೆರೆಯುತ್ತಿರುವುದನ್ನು ಕಣ್ಣಾರೆ ನೋಡಿದನು ಅವರಲ್ಲಿ ಒಬ್ಬಳು ಮಾತ್ರ ಅತಿ ರೂಪಸಂಪನ್ನೆಯಾಗಿದ್ದಳು ಆಕೆಯ ಲಾವಣ್ಯಾತಿಶಯಗಳನ್ನು ವರ್ಣಿಸಲು ಬಹಳ ಚತುರರಾದ ಕವಿಯಿಂದ ವರ್ಣಿಸಲ್ಪಡುವುದಕ್ಕೂ, ಬುದ್ಧಿಕೌಶಲದ ಚಿತ್ರಕಾರನಿಂದ ಆ ರೂಪವನ್ನು ಬರೆದು ತೋರಿಸುವುದಕ್ಕೂ ಅಸಾಧ್ಯವಾಗಿದ್ದಿತು ಆಕೆಯ ಸಖಿಯರು ಆಕೆಯನ್ನು ಶಕುಂತಳೆ ಎಂದು ಕರೆಯುತ್ತಿದ್ದರು

ಶಕುಂತಳೆಯು ಕಾಡಿನಲ್ಲಿ ಸ್ವಾಭಾವಿಕವಾಗಿ ಬೆಳೆದು ನಾನಾರೀತಿಯ ಕೊನೆಗೆ ಏರುವ ಕಮಲದಂತೆ ಮನೋಹರಳಾಗಿ ಪ್ರಕಾಶಿಸುತ್ತಿದ್ದಳು ವಿಶ್ವಾಮಿತ್ರನೆಂಬ ಋಷಿಯು ಮೇನಕೆಯಲ್ಲಿ ಸಂಜನಿಸಿದ ಶಕುಂತಳೆಯು ಜನನಕ್ಕೆ ವಿಶ್ವಾಮಿತ್ರನ ಸಂಯೋಗದಿಂದ ಜನಿಸಿದ ಈ ಶಕುಂತಳೆಯು ಮಾನವರಾಗಿ ಯಾವ ಕಾರಣದಿಂದ ಮೇನಕೆಯು ಸ್ವರ್ಗಲೋಕಕ್ಕೆ ಆಕೆಯನ್ನು ಕರೆದುಕೊಂಡು ಹೋಗುವುದಕ್ಕಾಗದೆ ಕಣ್ವಋಷಿಗಳಿಗೆ ತನ್ನ ಮಗಳಾದ ಶಕುಂತಲೆಯನ್ನು ಕಾಪಾಡಬೇಕೆಂದು ಬೇಡಿಕೊಂಡು ಹೊರಟುಹೋದಳು ಆದುದರಿಂದ ಕಣ್ವಋಷಿಯು ಶಕುಂತಳೆಗೆ ಸಾಕುತಂದೆಯಾದನು ಶಕುಂತಲೆಯಾದರೋ ಸತ್ಯಶೀಲೆಯಾಗಿಯೂ ರೂಪವತಿಯಾಗಿಯೂ ಇದ್ದುದರಿಂದ ಇವಳನ್ನು ವರ್ಣಿಸುವುದಕ್ಕೆ ಅಸಾಧ್ಯವಾಗಿದ್ದಿತು. ಆ ಉದ್ಯಾನವನದಲ್ಲಿ ಆಕೆಯು ಗಿಡಗಳಿಗೂ ಕೋಮಲವಾದ ಬಳ್ಳಿಗಳಿಗೂ ಮೊಳೆವ ಕಿರುಗಿಡಗಳಿಗೂ, ಗಂಭೀರವೃಕ್ಷಗಳಿಗೂ ನೋಟಕರ ಕಣ್ಮನಗಳನ್ನು ಸೆಳೆಯುತ್ತಿದ್ದುವು ಶಕುಂತಳೆಯು ಅಲ್ಲಿ ಬೆಳೆದಿರುವ ಪುಷ್ಪಿತಲತೆಗಳೇ ತನ್ನ ಚಿಕ್ಕ ತಂಗಿಯರೂ ಆಟವಾಡುತ್ತಿರುವ ಜಿಂಕೆ ಮೊದಲಾದ ಸಾಧುಮೃಗಗಳೇ ತನ್ನ ಒಡನಾಡಿಗಳಂತೆಯೂ ಭಾವಿಸಿ ಇನ್ನೂ ಇತರ ವಿಧವಾದ ಸ್ವಭಾವಜನ್ಯ ಪದಾರ್ಥಗಳಲ್ಲಿ ಸೋದರಭಾವವನ್ನೇ ಇಟ್ಟುಕೊಂಡು ಕಾಲಯಾಪನೆ ಮಾಡುತ್ತಿದ್ದಳು ಹೀಗಿರುವಲ್ಲಿ ಈ ಶಕುಂತಳೆಯು ಮನೋಹರವಾದ ಸಸಿಗಳಿಗೆ ಪ್ರೀತಿಯಿಂದ ಜಲವನ್ನು ಎರೆಯುತ್ತಿರುವುದನ್ನು ದುಷ್ಯಂತನು ನೋಡಿದನು

ದುಷ್ಯಂತನು ಇಂತಹ ಸೌಂದರ್ಯವತಿಯಾದ ಸ್ತ್ರೀಯನ್ನು ಇದುವರೆಗೂ ನೋಡಿರಲಿಲ್ಲ ಆಕೆಯ ರೂಪಾತಿಶಯವು ರಾಜನ ಮನಸ್ಸಿನಲ್ಲಿ ನೆಲೆಗೊಂಡು, ಅಧಿಕ ಸಂತೋಷದಿಂದ ಅವನ ಶರೀರವು ರೋಮಾಂಚನವಾಗುವಂತೆ ಮಾಡಿತು ಹೀಗಿರಲು ರಾಜನು ಒಂದು ಮರದಡಿಯಲ್ಲಿ ಮರೆಯಾಗಿ ನಿಂತಿದ್ದು ಆಕೆಯನ್ನೇ ನೋಡುತ್ತಿದ್ದನು ಹೀಗಿರುವಾಗ್ಗೆ ಒಂದು ಭ್ರಮರವು ಹಾರಾಡುತ್ತ ಅಲ್ಲಿಗೆ ಬಂದು ಅರಳಿರುವ ಕಮಲವೆಂಬ ಭ್ರಮೆಯಿಂದ ಶಕುಂತಳೆಯ ಮುಖದಮೇಲೆ ಕುಳಿತುಕೊಳ್ಳಲು ಪ್ರಯತ್ನಪಟ್ಟಿತು ಆಕೆಯು ಆ ಭ್ರಮರವನ್ನು ತನ್ನ ಸೆರಗಿನಿಂದ ನಿವಾರಿಸಿಕೊಂಡರೂ ಪುನಃ ಅದು ಅಲ್ಲಿಯೇ ಕುಳಿತುಕೊಳ್ಳುವುದಕ್ಕೆ ಆಕೆಯ ಸುತ್ತಲೂ ಹಾರಾಡುತ್ತಿದ್ದಿತು! ಶಕುಂತಳೆಯು ಭ್ರಮರಬಾಧೆಯನ್ನು ಸಹಿಸಲಾರದೆ ಸಖಿಯರನ್ನು ತನ್ನನ್ನು ಈ ಬಾಧೆಯಿಂದ ಬಿಡುಗಡೆ ಮಾಡಲೆಂದು ಕೂಗಿ ಬೇಡಿಕೊಂಡಳು ಇದನ್ನು ಕೇಳಿದ ಸಖಿಯರು ಬೇಗಬಂದು ಆ ಶಕುಂತಳೆಯನ್ನು ಅಪ್ಪಿಕೊಂಡು "ಪ್ರಿಯಶಕುಂತಳೆ! ನಾವು ನಿನ್ನ ತೊಂದರೆಗಳನ್ನು ನಿವಾರಿಸಲು ಶಕ್ತರೆ? ಈ ಆಶ್ರಮವು ದುಷ್ಯಂತಮಹಾರಾಜನ ಆಳಿಕೆಯಲ್ಲಿ ಇರುವುದು ಆದುದರಿಂದ ತೊಂದರೆಗಳಿಂದ ನಿನ್ನನ್ನು ಪಾಲಿಸುವುದಕ್ಕೆ ಆ ಮಹಾರಾಜನನ್ನೇ ಬೇಡಿಕೊ" ಎಂದು ಹೇಳಿದರು

ಇದನ್ನು ಆಲಿಸುತ್ತಿದ್ದ ದುಷ್ಯಂತರಾಜನಿಗೆ ಈ ಸಮಯವು ಬಹಳ ಒಳ್ಳೆಯದಾಗಿದ್ದರೂ ಸಖಿಯರು ಅಲ್ಲಿಯೇ ಸಮೀಪದಲ್ಲಿದ್ದುದರಿಂದ ತಾನು ಮರೆಯಾಗಿದ್ದನು ಅನಂತರ ರಾಜನು ಮರೆಯಾಗಿದ್ದ ಸ್ಥಳದಿಂದ ಹೊರಗೆ ಬಂದು—"ಯಾರು ನನ್ನ ಸಹಾಯವನ್ನಪೇಕ್ಷಿಸಿದವರು? ನಾನು ಇಲ್ಲಿಯೇ ಇರುವೆನಲ್ಲ!" ಎಂದು ಹೇಳಿದನು ಸಖಿಯರಾದರೋ, ತಮ್ಮ ತಮ್ಮ ಗೆಳತಿಯರೊಡನೆ ವಿನೋದದಿಂದಿದ್ದರು ಇವರು ದುಷ್ಯಂತಮಹಾರಾಜನು ನಿಜವಾಗಿಯೂ ಬರುವನೆಂದು ಎಂದಿಗೂ ತಿಳಿದಿರಲಿಲ್ಲ ಸಖಿಯರು ರಾಜನನ್ನು ನೋಡಿ ಹಿಂದುಹಿಂದಕ್ಕೆ ಜರುಗಿಕೊಂಡು ಹೋಗಿ, ಇಂತಹ ಸಮಯದಲ್ಲಿ ತಾವು ಏನು ಮಾಡಬೇಕೋ, ಏನು ಹೇಳಬೇಕೊ ಎಂಬುದನ್ನು ತಿಳಿಯದೆ ಲಜ್ಜಿತರಾಗಿದ್ದರು ಆದರೆ ಈ ಮಹಾರಾಜನ ದಯಾಳುತ್ವವೂ, ಮರ್ಯಾದೆಯೂ ಸಖಿಯರಲ್ಲಿ ನಂಬಿಕೆಯೂ ಧೈರ್ಯವೂ ಇಡುವಂತೆ ಮಾಡಿದುದರಿಂದ ಅವರು ತಮ್ಮ ಪೂರ್ವ ಸ್ನೇಹಿತನಂತೆ ಭಾವಿಸಿ ರಾಜನ ಸಂಗಡ ಮಾತನಾಡುತ್ತಿದ್ದರು

ಶಕುಂತಳೆಯು ದುಷ್ಯಂತನ ಮೇಲೆ ವ್ಯಾಮೋಹವನ್ನಿಟ್ಟುದುದು ಆಶ್ಚರ್ಯವಲ್ಲ ಆಕೆಯು ಗಂಭೀರವಾಗಿಯೂ ಧೈರ್ಯಯುಕ್ತವಾಗಿಯೂ ಅಹಂಕಾರಯುಕ್ತವಾಗಿಯೂ ಇರುವ ಸುಂದರವಾದ ಇಂತಹ ಮಾನವಾಕೃತಿಯನ್ನು ಇದುವರೆಗೂ ಆಕೆಯು ನೋಡಿರಲಿಲ್ಲ ಇದುವರೆಗೂ ಶಕುಂತಳೆಯು ತನ್ನ ತಂದೆಯ ಸುಕ್ಕುಬಿದ್ದಿರುವ ಮುಖವನ್ನೂ, ತಲೆಯಮೇಲೆ ಬೆಳೆದಿರುವ ಕೂದಲುಗಳು ಬಿಳಿಯದಾಗಿರುವುದನ್ನೂ ನೋಡುತ್ತಲೂ, ಒರಟಾದ ಧ್ವನಿಯನ್ನು ಕೇಳುತ್ತಲೂ ಸಹಜವಾದ ನೋಟವನ್ನು ನೋಡಿ ಸಂತೋಷಪಡುತ್ತಲೂ ಇದ್ದಳು ಆಕೆಯು ಆಗತಾನೆ ವಿಲಾಸವಂತನನ್ನು ನೋಡಿದ ಸಮಯಗಳಮೇಲೆ ಅಭಿರುಚಿಯುಂಟಾಗುವ ಮನೋವೃತ್ತಿಯುಳ್ಳವಳಾಗುತ್ತ ಬಂದಳು ಶಕುಂತಳೆಗೆ ಆ ಮಹಾರಾಜನಲ್ಲಿ ಪ್ರೀತಿ ಹುಟ್ಟಿದುದು ಏತಕ್ಕೋಸ್ಕರವೋ ತನಗೇ ಗೊತ್ತಾಗುತ್ತಿರಲಿಲ್ಲ ಮಹಾರಾಜನ ಮನೋವೃತ್ತಿಯಲ್ಲೂ ಆಕೆಯ ಮೇಲೆಯೇ ಇರುತ್ತಿದ್ದಿತು ಪರಸ್ಪರ ಪ್ರೀತಿಯಿಂದ ಆ ಉಭಯರೂ ಸಂಬಂಧಿಸಿದಿರಲು ಇದನ್ನು ಯಾರು ತಪ್ಪಿಸುವುದಕ್ಕಾದೀತು? ಅನಂತರ ಉಭಯರಿಗೂ ಗಾಂಧರ್ವವಿವಾಹವು ನಡೆಯಿತು! ಸ್ವಭಾವವಾಗಿ ಜನಿಸಿದ ವ್ಯಾಮೋಹದಿಂದಲೇ ಉಭಯರೂ ವಿವಾಹಮಾಡಿಕೊಂಡರು ಆಗ ಬಂಧುಜನಗಳಾಗಲಿ ಸ್ನೇಹಿತರಾಗಲಿ ಒಬ್ಬರೂ ಇರಲಿಲ್ಲ ಮಹಾರಾಜನೂ ಶಕುಂತಳೆಯೂ ಲತಾಮಂಟಪದ ಸಮೀಪದಲ್ಲಿ ಸೇರಿದ್ದರು ಅಲ್ಲಿ ಅರಳಿರುವ ಪುಷ್ಪಗಳೂ, ಎಲೆಗಳೂ, ಇದೇ ವಿವಾಹಮಂಟಪಕ್ಕೆ ಶೃಂಗಾರವಾಗಿಯೂ ಪಕ್ಷಿಗಳ ಇಂಪಾದ ಗಾನವೇ ಮಂತ್ರವಾಗಿಯೂ, ಲತಾಮಂಟಪದ ಸ್ಥಳವೇ ಹಸೆಮಣೆಯಾಗಿಯೂ, ಇದ್ದುವು ಆಹಾ! ಈ ದಂಪತಿಗಳು ಎಷ್ಟು ಸೌಖ್ಯಾನುಭವವನ್ನು ಪಡೆದಿರಬಹುದೋ ವಾಚಕರೇ ಊಹಿಸಬಹುದು

ಇತ್ತ ದುಷ್ಯಂತಮಹಾರಾಜನ ಸೈನ್ಯವೆಂಬ ನದಿಯಲ್ಲಿ ಆಜಾಡಿ ವ್ಯಾಮೋಹವೆಂಬ ಸುಳಿಗೆ ಸಿಕ್ಕಿಕೊಂಡು ಎಲ್ಲವನ್ನೂ ಮರೆತುಬಿಟ್ಟನು ಬೇಟೆಯಾಡುವುದನ್ನೂ ಮರೆತನು ದೂರದಲ್ಲಿ ನಿಲ್ಲಿಸಿದ್ದ ಸೈನ್ಯವನ್ನೂ, ಸ್ನೇಹಿತರನ್ನೂ, ಬಾಂಧವರನ್ನೂ ಪೂರ್ಣವಾಗಿ ಮರೆತುಬಿಟ್ಟನು ಹೀಗಿರಲು ಶಕುಂತಳೆಯ ತಪ್ಪೇನಿರುವುದು? ಶಕುಂತಳೆಯು ಸತ್ಯವನ್ನೂ ಸದ್ಗುಣವನ್ನೂ ಎಂತಹದೆಂದು ತಿಳಿಯಲು ಇತರರಿಗೆ ಕಾರಣಭೂತಳಾಗಿದ್ದಳು ಆಕೆಯು ಮೊದಲು ವ್ಯಾಮೋಹವೇ ಒಳಗಾಗಿದ್ದವಳಾಗಿರಲಿಲ್ಲ ಮೊದಲು ಆಕೆಯ ಮನಸ್ಸು ಬಹು ನೆಮ್ಮದಿಯಲ್ಲಿದ್ದಿತು. ತನ್ನ ಮನಸ್ಸು ಎಲ್ಲಿ ಪ್ರವೇಶಿಸುವುದೋ ಅದು ಆಕೆಗೆ ಗೊತ್ತಾಗುತ್ತಿರಲಿಲ್ಲ ಆಕೆಯ ಸಖಿಯರು ಆಕೆಯ ವ್ಯಾಮೋಹಕ್ಕೆ ಪ್ರತಿಬಂಧಕ ಮಾಡದೆ ಈ ವಿಷಯದಲ್ಲಿ ತಾವು ಸಹಕಾರಿಗಳಾಗಿದ್ದರು ಶಕುಂತಲೆಯು ವಿಷಯಸುಖಾನುಭವದಿಂದ ತೃಪ್ತಿಹೊಂದಿದಳು ನವದಂಪತಿಗಳಂತೆ ವನದಲ್ಲಿ ಸಂಚಾರಮಾಡಿಕೊಂಡು ವಿನೋದದಿಂದ ಎಡೆಬಿಡದೆ ಕೂಡಿಕೊಂಡು ಶಕುಂತಳೆಯೂ, ಮಹಾರಾಜನೂ ಹಗಲೆನ್ನದೆ, ರಾತ್ರಿಯೆನ್ನದೆ ಲತಾಮಂಟಪದಲ್ಲಿ ಸುಖದಿಂದ ತಮ್ಮ ಕಾಲವನ್ನು ಕಳೆದರು ಹೀಗಿರುವಲ್ಲಿ ದುಷ್ಯಂತಮಹಾರಾಜನು ತನ್ನ ಪಟ್ಟಣಕ್ಕೆ ಹೋಗಬೇಕೆಂದು ಜ್ಞಾಪಕಕ್ಕೆ ತಂದುಕೊಂಡನು

ವಿಯೋಗದುಃಖವನ್ನರಿಯದ ಶಕುಂತಳೆಯನ್ನು ಬಿಟ್ಟು ರಾಜನು ಹೇಗೆ ಹೋದನೆಂಬುದು ಯಾರಿಗೂ ತಿಳಿಯಲಿಲ್ಲ ಶಕುಂತಳೆಯು ತಾನು ತನ್ನ ಪ್ರಿಯನು ಇಬ್ಬರನ್ನುಳಿದು ಪ್ರಪಂಚವಿರುವುದೆಂದು ತಿಳಿದಿದ್ದಳು ಆಕೆಯು ತನಗೆ ಪ್ರಾಪ್ತವಾದ ಸುಖಗಳೆಲ್ಲ ತನ್ನ ಜೀವಮಾನದವರೆಗೂ ಇರುವುವೆಂದು ಯೋಚಿಸಿದ್ದಳು ಆದರೆ ಅಯ್ಯೋ! ದುಷ್ಯಂತಮಹಾರಾಜನು ತನ್ನ ರಾಜ್ಯಭಾರದ ಬಲಿಯಿಂದ ಕಷ್ಟನಿಷ್ಠುರಗಳನ್ನು ಅನುಭವಿಸಿರುವನಾದುದರಿಂದ ಶಕುಂತಳೆಯನ್ನು ಬಿಟ್ಟುಹೋದನು ರಾಜನು ತನ್ನ ಯುಕ್ತಿ, ಶಕ್ತಿಗಳನ್ನೆಲ್ಲಾ ಉಪಯೋಗಿಸಿ ಆ ಕಾಲದಲ್ಲಿ ಕೇವಲ ದುಃಖಕ್ಕೆ ಗುರಿಯಾಗದಿರುವುದಕ್ಕೆ ಪ್ರಯತ್ನಪಟ್ಟಿದ್ದನು ಮಹಾರಾಜನು ತನ್ನ ಬೆರಳನಲ್ಲಿಟ್ಟುಕೊಂಡಿದ್ದ ಉತ್ತಮವಾದ ಒಂದು ಉಂಗುರವನ್ನು ಶಕುಂತಳೆಯ ಬೆರಳಿನಲ್ಲಿ ಇಟ್ಟು ಆಕೆಯನ್ನು ಕುರಿತು—ಪ್ರಿಯೆ! ನಾನು ನನ್ನ ನಗರಕ್ಕೆ ಸೇರಿದಕೂಡಲೆ ನಿನ್ನನ್ನು ರಾಣಿವಾಸಕ್ಕೆ ಕರೆಕಳುಹಿಸಿಕೊಳ್ಳುತ್ತೇನೆ ನೀನೇ ನನ್ನ ಮುಖ್ಯಪ್ರೀತಿಗೆ ಪಾತ್ರಳಾದ ಸಹಧರ್ಮಿಣಿ, ನನ್ನ ಸರ್ವಸ್ವವೂ ನಿನ್ನದೇ, ಎಂದು ಹೇಳಿದುದನ್ನು ಕೇಳಿದರೂ ಶಕುಂತಳೆಗೆ ಏನೂ ತಿಳಿಯಲಿಲ್ಲ ಆದರೆ ಶಕುಂತಳೆಯು ತನ್ನನ್ನು ಸ್ವಲ್ಪ ದಿನಗಳಲ್ಲಿಯೇ ರಾಜನು ಬಿಟ್ಟುಹೋಗುವನೆಂತಲೂ, ಹೋಗುವುದಕ್ಕಿಂತ ಪೂರ್ವಭಾವಿಯಾಗಿಯೇ ತನ್ನನ್ನು ಕೇಳುವನೆಂತಲೂ ತಿಳಿದಿದ್ದರೂ ಪ್ರಿಯ ನನ್ನ ಕಳುಹಿಸಬೇಕಾಗಿರುವುದೆಂಬ ಚಿಂತೆಯಿಂದಿದ್ದಳು ಶಕುಂತಳೆಗೆ ಪುರುಷನಲ್ಲಿದ್ದ ವ್ಯಾಮೋಹವು ತನ್ನನ್ನು ಇಷ್ಟು ತೊಂದರೆಪಡಿಸುವುದೆಂದು ಮೊದಲು ತಿಳಿದಿರಲಿಲ್ಲ ಮುಖ್ಯವಾಗಿ ಸೌಖ್ಯದ ಕಾಲವು ಕಳೆದುಹೋಗಿ ವ್ಯಸನದಕಾಲವು ಪ್ರಾಪ್ತವಾಗಿದೆ, ಎಂದು ತಿಳಿದುಕೊಂಡಳು.

ಇತ್ತ ದುಷ್ಯಂತಮಹಾರಾಜನು ತನ್ನ ರಾಜಧಾನಿಗೆ ಹೋದನು ಶಕುಂತಳೆಗೆ ತನ್ನ ಪ್ರಿಯನ ವಿಯೋಗದಿಂದ ಏನೂ ಬೇಡವಾಗಿ, ಆಕೆಗೆ ಪ್ರೀತಿಯಿಂದ ಸಾಕುತ್ತಿದ್ದ ಪಕ್ಷಿಗಳನ್ನೂ ಪುಷ್ಪಲತೆಗಳನ್ನೂ ಪೋಷಿಸುವುದರಲ್ಲಿ ಅನಾದರಣೆಯೂ, ಸಸಿಗಳಲ್ಲಿ ಶ್ರದ್ಧೆಯೂ ಕಡಿಮೆಯಾಗುತ್ತಬಂದಿತು ಅಂತಹ ಆನಂದಮಯವಾದ ಲತಾಮಂಟಪದಲ್ಲಿದ್ದರೂ ಎಲ್ಲವೂ ವ್ಯತ್ಯಾಸವಾಗುತ್ತಾ ಬಂದುದರಿಂದ ತನ್ನ ಸೌಖ್ಯದ ಕಾಲವೆಲ್ಲ ಮಾಯವಾಯಿತು ಆಕೆಗೆ ತನ್ನ ದೇಹದ ಮೇಲೆ ಪ್ರಜ್ಞೆಯಿಲ್ಲದೆ ತನ್ನ ಪ್ರಿಯನ ವಿಷಯವಾಗಿಯೇ ಚಿಂತಿಸುತ್ತಿ

ದ್ದಳು. ಪ್ರಾಯದ ಸಂತೋಷವೂ ನಾಶವಾಯಿತು. ಮನಸ್ಸೆಲ್ಲಾ ತನ್ನ ಅತ್ಯಂತ ಸಂತೋಷಕ್ಕೆ ಕಾರಣನಾದವನ ಮೇಲೆಯೇ ಇದ್ದಿತು. ಒಂದಾನೊಂದು ದಿವಸ ಶಕುಂತಳೆಯು ಆಶ್ರಮದ ಬಾಗಿಲಲ್ಲಿ ಕುಳಿತಿರುವಾಗ್ಗೆ ದೂರ್ವಾಸನೆಂಬ ಒಬ್ಬ ಋಷಿಯು ಆಕೆಯ ಹತ್ತಿರಕ್ಕೆ ಬಂದು ತಾನು ಭೋಜನಕ್ಕೆ ಬರುವೆನೆಂದು ಹೇಳಿದನು. ಆಕೆಯು ಮನಸ್ಸೆಲ್ಲಾ ಬೇರೆಕಡೆಯಲ್ಲಿದ್ದುದರಿಂದ ಆಕೆಗೆ ಕೇಳಿಸಲಿಲ್ಲ ಇದನ್ನು ನೋಡಿ ಕೋಪದಿಂದ ದೂರ್ವಾಸನು—ಎಲೆ ಸ್ತ್ರೀಯೆ! ಇತರರ ಮೇಲಣ ಯೋಚನೆಯಿಂದ ನನ್ನನ್ನು ತಿರಸ್ಕರಿಸುವುದಕ್ಕೆ ನಿನಗೆ ಇಷ್ಟು ಧೈರ್ಯವುಂಟಾಯಿತೆ? ನೀನು ಯಾವನ ವಿಷಯವಾಗಿ ಚಿಂತಿಸುತ್ತ ದೇಹವನ್ನು ಪೋಷಿಸುತ್ತಿರುವೆಯೋ, ಅವನು ನಿನ್ನನ್ನು ಮರೆತು ಅನಾದರಿಸಲಿ, ಎಂದು ಶಾಪವನ್ನು ಕೊಟ್ಟನು. ಈ ವಾಕ್ಯವು ಹತ್ತಿರವಿದ್ದ ಶಕುಂತಳೆಯ ಸಖಿಯರ ಕಿವಿಗೆ ಬಿದ್ದಿತು. ಇದನ್ನು ಕೇಳಿ ಸಖಿಯರು ಋಷಿಯ ಪಾದಕಮಲಗಳ ಮೇಲೆ ಬಿದ್ದು ರೋದನಮಾಡಿ ವಂದಿಸಿ ಶಕುಂತಳೆಯ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಂಡರು. ಇದನ್ನು ನೋಡಿ ಶಕುಂತಳೆಯು ಎಚ್ಚರಗೊಂಡು ತನ್ನ ಸ್ಥಿತಿಯ ರೀತಿಯನ್ನು ತಿಳಿದು ಬೇಡಿಕೊಂಡಳು. ಅನಂತರ ರೋಷ ನಿವೃತನಾದ ಋಷಿಯು ಸ್ವಲ್ಪ ಶಾಂತನಾಗಿ ಶಕುಂತಳೆಯನ್ನು ಕುರಿತು—ಎಲೌ ಕುಮಾರಿಯೆ? ನನ್ನ ಶಾಪವು ಹಿಂದಿರುಗಲಾರದು. ನೀನು ಆವುದಾದರೂ ಒಂದು ಗುರುತು ತೋರಿಸಿದರೆ ನಿನ್ನ ಪತಿಯು ನಿನ್ನನ್ನು ಗುರುತು ಹಿಡಿದು ಅಂಗೀಕರಿಸುವನು ಎಂದು ಹೇಳಿ ಹೊರಟನು. ಶಕುಂತಳೆಯ ಕೈಯಲ್ಲಿ ರಾಜನ ನಾಮಾಂಕಿತವಾದ ಉಂಗುರವು ಗುರುತಾಗಿದ್ದುದರಿಂದ ಯಾವುದಕ್ಕೂ ಅಷ್ಟು ಚಿಂತಿಸಬೇಕಾಗಿರಲಿಲ್ಲ. ಎಷ್ಟು ಕಾಲವು ಕಳೆದರೂ ಶಕುಂತಳೆಯನ್ನು ಕರೆದುಕೊಂಡು ಹೋಗುವುದಕ್ಕೆ ರಾಜನ ಕಡೆಯಿಂದ ಯಾರೂ ಆಶ್ರಮಕ್ಕೆ ಬರಲಿಲ್ಲ. ಹೂವು ಕತ್ತಲೆಯಲ್ಲಿ ಬಾಡಿ ನಶಿಸಿಹೋಗುವಂತೆ ಶಕುಂತಳೆಯು ರಾಜನ ಯೋಚನೆಯಿಂದ ಕೃಶಳಾಗಿ ಕಳೆಗುಂದಿದಳು. ಆಕೆಯ ಮನೋರಥವು ಭಗ್ನವಾಗಿ ಸಂತೋಷವು ದೂರವಾಯಿತು.

ಇತ್ತ ಕಣ್ವಋಷಿಗಳು ತೀರ್ಥಯಾತ್ರೆಯನ್ನು ತೀರಿಸಿಕೊಂಡು ಹಿಂದಿರುಗಿ ಬಂದಮೇಲೆ ಆಶ್ರಮದಲ್ಲಿ ನಡೆದ ವಿಚಿತ್ರಸಂಗತಿಗಳೆಲ್ಲಾ ತಿಳಿದುಬಂದುವು. ಸಾಕುಮಗಳಾದ ಶಕುಂತಳೆಯು ದುಷ್ಯಂತಮಹಾರಾಜನನ್ನು ಪರಿಣಯ ಗಾಂಧರ್ವ ವಿಧಿಯಿಂದ ವಿವಾಹವಾದುದಕ್ಕೆ ಋಷಿಯು ವ್ಯಸನಪಡಲಿಲ್ಲ. ಅನಂತರ ಋಷಿಯು ಕ್ಷತ್ರಿಯ ವಂಶೋತ್ಪನ್ನನಾದ ದುಷ್ಯಂತನ ಗುಣಾತಿಶಯಗಳನ್ನು ಚೆನ್ನಾಗಿ ಅರಿತವನಾಗಿದ್ದುದರಿಂದ ವಿಳಂಬವಿಲ್ಲದೆ ರಾಜನ ಸಮೀಪಕ್ಕೆ ಶಕುಂತಳೆಯನ್ನು ಕಳುಹಿಸುವುದು ಯೋಗ್ಯವೆಂದು ಯೋಚಿಸಿದನು. ಅವರೆ ಬಹಳ ದಿನಗಳಾದುದರಿಂದ ಆಶ್ರಮದಲ್ಲಿ ಬಳೆಯುತ್ತಿದ್ದ ಕನ್ನಿಕೆಯನ್ನು ಮರೆತಿರಬಹುದೆಂದೂ ಊಹಿಸಿದ್ದನು. ಕೂಡಲೆ ಋಷಿಯು ಶಕುಂತಳೆಯನ್ನು ತನ್ನ ಶಿಷ್ಯರ ಜೊತೆಮಾಡಿ ದುಷ್ಯಂತಮಹಾರಾಜನ ರಾಜಧಾನಿಯಾದ ಹಸ್ತಿನಾಪುರಿಗೆ ಕಳುಹಿಸಿದನು. ಶಕುಂತಳೆಯು ಯೋಚಿಸುತ್ತಿದ್ದಂತೆಯೇ ಆಕೆಯು ತನ್ನ ಪ್ರಿಯನ ಅರಮನೆ ಹೊರಬಾಗ್ಗಿಲ್ಗೆ ಎಷ್ಟರಮಟ್ಟಿಗೆ ಆನಂದವುಂಟಾಗಿರಬಹುದು! ಹತ್ತಿರದಲ್ಲಿರುವ ತನಗೆ ಪ್ರೀತಿಪಾತ್ರರಾದ ಒಡನಾಡಿಯರನ್ನು ಬಿಟ್ಟು ಅಗಲಿದಾಗ ಶಕುಂತಳೆಯ ವ್ಯಸನವು ಎಷ್ಟೆಂದು ಹೇಳುವುದಕ್ಕಾದೀತು? ಸದಾ ತನ್ನ ಬಾಲ್ಯದಿಂದಲೂ ಜೊತೆಯಲ್ಲಿದ್ದು ಆಟವಾಡಿದ ಸಖಿಯರನ್ನು ತ್ಯಜಿಸಿ ದೂರದಲ್ಲಿ ಏಕಾಂಗಿಯಾಗಿರುವುದಕ್ಕೆ ಎಷ್ಟು ವ್ಯಸನವಾಗುವುದು! ಶಕುಂತಳೆಯು ಆಶ್ರಮದಲ್ಲಿ ಬೆಳೆದು ತನ್ನ ಪ್ರೀತಿಗೆ ಪಾತ್ರವಾಗಿರುವ ಎಲ್ಲಾ ಪದಾರ್ಥಗಳಿಗೂ ವಂದನೆಗಳನ್ನರ್ಪಿಸಿ, ತನ್ನ ತಂದೆಯ ಆಶ್ರಮವನ್ನು ಅಗಲಿ ಹೋಗಬೇಕೆಂಬ ವ್ಯಸನದಿಂದ ಕಂಬನಿಗಳನ್ನು ಸುರಿಸುತ್ತಾ ಪ್ರಯಾಣಮಾಡುತ್ತಿರಲು ಒಡನಾಡಿಯರು ಶಕುಂತಳೆಗೆ ಆಲಿಂಗನವನ್ನು ಮಾಡಿ, ಗಲ್ಲವನ್ನು ಚುಂಬಿಸಿ ಪ್ರಲಾಪಮಾಡಿದರು. ಶಕುಂತಳೆಯು ತನ್ನ ಪ್ರಾಣವೆಂದು ಪ್ರೀತಿಯಿಂದ ಸಾಕುತ್ತಿದ್ದ ಪಕ್ಷಿಗಳೂ, ಮೃಗಗಳೂ ಏನಾಗುವುವೋ ಎಂದು ತಿಳಿಯದೆ, ಶಕುಂತಳೆಯ ವದನಾರವಿಂದವನ್ನು ದೃಷ್ಟಿಸಿ ನೋಡುತ್ತಿದ್ದುವು. ಶಕುಂತಳೆಯು ಆಶ್ರಮವನ್ನು ಬಿಟ್ಟು ತೆರಳಿದಳು. ವನಲಕ್ಷ್ಮಿಯ ಕಾಂತಿಯು ಹೀನವಾಯಿತು. ಆಶ್ರಮದಲ್ಲಿ ಬೆಳೆದು ವಿಕಾಸಹೊಂದುತ್ತಿರುವ ಮನೋಹರಗಳಾದ ಪುಷ್ಪಾನ್ವಿತವಾದ ಗಿಡಗಳನ್ನು ರಾಜನ ಶೃಂಗಾರ ತೋಟದಲ್ಲಿಯೇ ನೆಲೆಗೊಂಡಿರಲೆಂದು ಋಷಿಯು ಅವುಗಳನ್ನು ಬಳುವಳಿಯಾಗಿ ಕಳುಹಿಸಿದನು. ಸ್ವಭಾವಜನ್ಯವಾದ ಶಕುಂತಳೆಯ ಸದ್ಗುಣಗಳೂ, ಸತ್ಯವೂ ಪ್ರಾಪಂಚಿಕವಾದ ಪಾಪಕೃತ್ಯಗಳಲ್ಲಿಯೂ, ಕೆಟ್ಟ ನಡತೆಯಲ್ಲಿಯೂ ಮಲಿನವಾಗಿರಲಿಲ್ಲ. ಶಕುಂತಳೆ ಮೊದಲಾದವರು ಪ್ರಯಾಣ ಮಾಡಿಕೊಂಡು ಹೋಗುತ್ತಿರುವ ಮಾರ್ಗದಲ್ಲಿ ಒಂದು ನದಿಯನ್ನು ಕಂಡು ಆಕೆಯು ಅಲ್ಲಿ ಸ್ನಾನಮಾಡಲು ಹೋದಳು. ಅದೃಷ್ಟವು ಶಕುಂತಳೆಗೆ ಅಲ್ಲಿ ವಿರೋಧವಾಗಿದ್ದಿತು. ರಾಜನಿಂದ ಪ್ರೀತಿಪುರಸ್ಸರವಾಗಿ ಕೊಡಲ್ಪಟ್ಟಿದ್ದ ಉಂಗುರವು ಹೇಗೋ ಬೆರಳಿನಿಂದ ಜಾರಿ ನೀರಿನಲ್ಲಿ ಬಿದ್ದು ಹೋಯಿತು. ಅಯ್ಯೋ! ಶಕುಂತಳೆಯು ಆತುರದಿಂದಲೂ ಭೀತಿಯಿಂದಲೂ ಅದನ್ನು ಹುಡುಕಿದಾಗ್ಯೂ ಆಕೆಯ ಪ್ರಯತ್ನಗಳೆಲ್ಲಾ ನಿಷ್ಫಲವಾದುವು.

ಶಕುಂತಳೆಯು ತನಗೆ ಸಂಭವಿಸಿದುದನ್ನು ಒಡನಿದ್ದ ವಟುಗಳಿಗೆ ಹೇಳಲಿಲ್ಲ. ಆದರೆ ಆಕೆಯು ತನ್ನ ಪ್ರೀತಿಪಾತ್ರನಾದ ದುಷ್ಯಂತ ಭೂಪತಿಯು ಆತುರದಿಂದಲೂ ಭೀತಿಯಿಂದಲೂ ಎಷ್ಟು ಹುಡುಕಿದಾಗ್ಯೂ ಒಂದು ವೇಳೆ ಆದು ಸಿಗದಿದ್ದ ಮಾತ್ರಕ್ಕೆ ಮರೆಯುತಕ್ಕವನಲ್ಲವೆಂದು ಬಹಳವಾಗಿ ನಂಬಿದ್ದಳು. ಅನಂತರ ಎಲ್ಲರೂ ಹಸ್ತಿನಾಪಟ್ಟಣಕ್ಕೆ ಬಂದು ಸೇರಿದರು. ವಟುಗಳು ದುಷ್ಯಂತ ಮಹಾರಾಜನ ಒಡ್ಡೋಲಗಕ್ಕೆ ಶಕುಂತಳೆಯನ್ನು ಕರೆದುಕೊಂಡು ಬಂದು ರಾಜನೆದುರಿಗೆ ತಂದು ನಿಲ್ಲಿಸಿದರು. ಶಕುಂತಳೆಯು ಅಂತಹ ವೈಭವದಿಂದ ಕೂಡಿದ ರಾಜಾಸ್ಥಾನವನ್ನು ಆದುವರೆಗೂ ನೋಡಿರಲಿಲ್ಲ; ಮತ್ತು ಅಷ್ಟು ಜನ ದೊಡ್ಡ ಮನುಷ್ಯರೆದುರಿಗೂ ಪರಾಕ್ರಮಶಾಲಿಗಳೆದುರಿಗೂ ನಿಂತಿರಲಿಲ್ಲ. ಅಂತಹ ಸ್ಥಳದಲ್ಲಿ ಶಕುಂತಳೆಯು ದೇಹಕಂಪನದಿಂದ ನಿಂತಿದ್ದಳು. ಹೀಗಿರಲು ಹತ್ತಿರ ನಿಂತಿದ್ದ ವಟುಗಳು ಮಹಾರಾಜನನ್ನು ಕುರಿತು—ಮಹಾರಾಜನೆ! ನೀನು ನಮ್ಮ ಗುರುಗಳ ಪುಣ್ಯಾಶ್ರಮಕ್ಕೆ ಬಿಜಯ ಮಾಡಿಸಿದಾಗ್ಗೆ ಪ್ರೀತಿಯಿಂದ ಗಾಂಧರ್ವವಿವಾಹ ಮಾಡಿಕೊಂಡ ಈ ಶಕುಂತಳೆಯನ್ನು ನಮ್ಮ ಸಂಗಡಲೇ ಕರೆದುಕೊಂಡು ಬಂದಿರುವೆವು. ಈಕೆಯು ನಮ್ಮ ಗುರುಗಳಾದ ಕಣ್ವಋಷಿಗಳ ಸಾಕುಮಗಳು. ಆದುದರಿಂದ ನೀನು ದಯಮಾಡಿ ನಿನ್ನ ಪತ್ನಿಯನ್ನು ಪರಿಗ್ರಹಿಸು. ಇನ್ನು ನಾವು ನಮ್ಮ ಆಶ್ರಮಕ್ಕೆ ತೆರಳುವೆವು ಎಂದು ಹೇಳಲು, ರಾಜನು ಇವರಾಡಿದ ಮಾತುಗಳನ್ನು ಕೇಳಿ ಆಶ್ಚರ್ಯಪಟ್ಟನು. ಸಭಿಕರಲ್ಲಿ ಒಬ್ಬರು ಮತ್ತೊಬ್ಬರ ಮುಖವನ್ನು ನೋಡಿಕೊಂಡರು. ಮತ್ತೆ ಕೆಲವರು ಆಶ್ಚರ್ಯಯುತರಾಗಿ ಆ ಋಷಿಕನ್ಯೆಯನ್ನು ನೋಡಲು ಆತುರಪಡುತ್ತಿದ್ದರು. ರಾಜನಾದರೋ, ವಟುಗಳಿಗೆ ಏನು ಉತ್ತರವನ್ನು ಹೇಳಬೇಕೋ ಅದೇ ತಿಳಿಯದೆ ಹುಬ್ಬು ಗಂಟುಹಾಕಿಕೊಂಡು ಮನಸ್ಸಿನಲ್ಲಿ ಬೇರೆ ವಿಧವಾಗಿ ತಿಳಿದು ವಟುಗಳನ್ನು ಕುರಿತು—

ರಾಜ—ಪೂಜ್ಯ ವಟುಗಳೆ! ತಾವು ಅಪ್ಪಣೆಕೊಡಿಸಿದ್ದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಗುತ್ತದೆ. ಸ್ವಲ್ಪ ದಿವಸಗಳ ಕೆಳಗೆ ಈಕೆಯನ್ನು ವಿವಾಹ ಮಾಡಿಕೊಂಡಿರುವುದೇ ನನಗೆ ಜ್ಞಾಪಕವಿಲ್ಲ! ಆದುದರಿಂದ ತಾವು ಈಕೆಯನ್ನು ಇಲ್ಲಿಗೆ ಕರೆದುಕೊಂಡು ಬಂದು ನನ್ನ ಸತಿಯೆಂದು ಹೇಳುತ್ತಿರುವಿರಿ. ಈಕೆಯನ್ನು ನೋಡಿದದ್ದು ಇವತ್ತೇ ಸರಿ, ಎಂದು ಹೇಳಿದನು. ವಟುಗಳು ರಾಜನಾಡಿದ ಮಾತುಗಳನ್ನು ಕೇಳಿ ಬಹಳ ಕುಪಿತರಾಗಿ ರಾಜನನ್ನು ಕುರಿತು,

ವಟು—ರಾಜಾಧಿರಾಜನೆ! ನಾವು ಸುಳ್ಳುಹೇಳುವೆವೆಂದು ಎಂದಿಗೂ ಭಾವಿಸಕೂಡದು. ಅಸಹಾಯಳಾದ ಈಕೆಯನ್ನು ನಿನ್ನ ವ್ಯಾಮೋಹವೆಂಬ ಬಲೆಯಲ್ಲಿ ಸಿಕ್ಕಿಸಿಕೊಂಡು ಈಕೆಯ ಸದ್ಗುಣಗಳನ್ನು ಕಳಂಕಿತವಾಗಿ ಮಾಡಿರುವುದರಿಂದ ನಿನ್ನಂತಹ ಮೋಸಗಾರನು ಎಲ್ಲಿ ಹುಡುಕಿದರೂ ಸಿಗುವಹಾಗಿಲ್ಲ, ಎಂದು ಹೇಳಿದನು. ಇವನ್ನೆಲ್ಲಾ ಕೇಳುತ್ತಿದ್ದ ಶಕುಂತಳೆಯು ತನ್ನ ಆಶೆಯು ಭಗ್ನವಾಗುವಂತೆ ತೋರಿಬರುತ್ತಿದ್ದರೂ ಕೈಯಲ್ಲಾದಮಟ್ಟಿಗೂ ಹೃದಯದಲ್ಲಿಯೇ ಅಡಗಿಸಿಕೊಂಡು ವಟುಗಳನ್ನು ಕುರಿತು,

ಶಕುಂತಳೆ—ಎಲೈ ವಟುಗಳಿರಾ? ಈ ಸ್ಥಳವನ್ನು ಬಿಟ್ಟು ಹೋಗೋಣ, ನಡೆಯಿರಿ. ಸುಮ್ಮನೆ ರಾಜನನ್ನು ಏಕೆ ದೂಷಣೆಗೆ ಗುರಿಮಾಡಬೇಕು? ಇದೆಲ್ಲಾ ನನ್ನ ದುರದೃಷ್ಟವೇ ಸರಿ! ಎಂದು ಹೇಳಲು, ಮತ್ತೊಬ್ಬ ವಟುವು ಕೋಪದಿಂದ ಮತ್ತೊಬ್ಬನನ್ನು ಕುರಿತು,

೧ನೆಯ ವಟು—ಇಲ್ಲಿ ನಾವು ಬಂದುದು ನಿನ್ನ ಹುಚ್ಚುತನವೂ, ಮೂರ್ಖತನವೂ ಕಾರಣವಾದುವು.

೨ನೆಯ ವಟು—ನಾವು ಇಲ್ಲಿ ಇದ್ದುದಾದರೆ ಪಾತಕವೇ ಸರಿ. ಹೋಗೋಣ ನಡೆ, ಎಂದು ಹೇಳಿ ಎಲ್ಲರೂ ರಾಜಾಸ್ಥಾನವನ್ನು ಬಿಟ್ಟು ತಮ್ಮ ಆಶ್ರಮಕ್ಕೆ ತೆರಳಿದರು. ಶಕುಂತಳೆಯು ವ್ಯಸನಾಕ್ರಾಂತಳಾಗಿ ಋಷಿಯ ಶಾಪವು ನಿಶ್ಚಯವಾಯಿತು, ಉಂಗುರವನ್ನು ಕಳೆದುಕೊಂಡಿರುವೆನು. ಈಗ ಏನು ಹೇಳಿದರೂ ರಾಜನು ಕೇಳುವಂತಿಲ್ಲ ಎಂದು ಯೋಚಿಸಿಕೊಂಡು ಹಿಂದಿರುಗಿದಳು. ಆಕೆಯ ಮನೋಗತಗಳೆಲ್ಲಾ ನಾಶವಾದುವು.

ಇತ್ತ ಶಕುಂತಳೆಯು ಕೆಲವು ಕಾಲದ ನಂತರ ಆಶ್ರಮದಲ್ಲಿ ಒಬ್ಬ ಕುಮಾರನನ್ನು ಪಡೆದಳು. ಇವನ ಹೆಸರು ದಮನಕ, ಈ ಕುಮಾರನ ಸರ್ವಾಂಗವೂ ದುಷ್ಯಂತ ಮಹಾರಾಜನ ಆಕೃತಿಯನ್ನೇ ಹೋಲುತ್ತಿದ್ದಿತು. ಕುಮಾರನು ಆರು ವರುಷ ವಯಸ್ಸಿನಲ್ಲಿ ಆಶ್ರಮದಲ್ಲಿದ್ದ ಹುಲಿ ಮರಿಗಳನ್ನೂ ಸಿಂಹದ ಮರಿಗಳನ್ನೂ ಅಟ್ಟಿಕೊಂಡು ಬಂದು ಅವುಗಳೊಡನೆ ವಿನೋದದಿಂದಾಡುತ್ತಿದ್ದನು. ಈ ಕುಮಾರನು ಆಶ್ರಮವಾಸಿಗಳಿಗೆ ನೇತ್ರಾನಂದಕರನಾಗಿದ್ದನು. ಕಣ್ವಋಷಿಯು ಆ ರಾಜಪುತ್ರನಿಗೆ ಬೇಕಾದ ವಿದ್ಯೆಯನ್ನು ಕಲಿಸಿದನು. ಹುಡುಗನು ಕ್ರಮೇಣ ಇದರಿಂದ ದೊಡ್ಡ ವಿದ್ಯಾವಂತನಾಗಿ ಯುದ್ಧದಲ್ಲಿ ಪರಾಕ್ರಮಶಾಲಿಯೆನಿಸಿ, ರಾಜ್ಯಾಧಿಕಾರದಲ್ಲಿ ಸಾಮರ್ಥ್ಯವನ್ನೂ ಹೊಂದಿದನು. ಹೀಗೆ ಅನೇಕ ವರುಷಗಳು ಕಳೆದುವು.

ದುಷ್ಯಂತಮಹಾರಾಜನು ಶಕುಂತಳೆಯ ವಿಷಯವಾಗಿ ಯೋಚನೆಯನ್ನೇ ಮಾಡಲಿಲ್ಲ. ಶಕುಂತಳೆಯು ನಿರ್ಜನಪ್ರದೇಶವಾದ ಅಡವಿಯಲ್ಲಿ ತನ್ನ ಆಶಾಭಂಗಗಳನ್ನೂ ಕಷ್ಟಗಳನ್ನೂ ಚಿಂತಿಸುತ್ತಾ ಬಹಳವಾಗಿ ನೊಂದಿದಳು. ಕೊನೆಗೆ ಉಂಗುರವು ಸಿಕ್ಕಿತು! ಶಕುಂತಳೆಯು ಹಿಂದೆ ಸ್ನಾನಮಾಡುತ್ತಿರುವಾಗ್ಗೆ ತನ್ನ ಬೆರಳಿನಿಂದ ಆ ಉಂಗುರವು ಜಾರಿಬೀಳಲು ಒಂದು ಮೀನು ಅದನ್ನು ನುಂಗಿತು. ಒಬ್ಬ ಬೆಸ್ತರವನಿಗೆ ಆ ಮೀನು ಸಿಕ್ಕಲು ಅದರ ಹೊಟ್ಟೆಯಲ್ಲಿ ಉಂಗುರವು ಕಾಣಿಸಿತು. ಈ ಉಂಗುರವು ರಾಜನು ಧರಿಸಲು ಯೋಗ್ಯವಾಗಿರುವುದೆಂದು ಯೋಚಿಸಿ ಬೆಸ್ತರವನು ಆ ಉಂಗುರವನ್ನು ಒಬ್ಬ ಸಾಹುಕಾರನ ಕೈಗೆ ಮಾರಲು ಕೊಡಲು, ಅವನು ಅದನ್ನು ಒಬ್ಬ ಸರ್ಕಾರದ ಉದ್ಯೋಗಸ್ಥನಿಗೆ ತೋರಿಸಿದುದರಿಂದ ಬೆಸ್ತರವನನ್ನು ಒಬ್ಬ ಕಳ್ಳನೆಂದು ದುಷ್ಯಂತ ಮಹಾರಾಜನ ಬಳಿಗೆ ಕರೆದುಕೊಂಡು ಹೋದನು. ದೊರೆಯು ಈ ಉಂಗುರವು ಸಿಕ್ಕ ರೀತಿಯನ್ನು ಹೇಳುವುದೆಂದು ಅಜ್ಞಾಪಿಸಿದನು. ದೊರೆಯ ದೃಷ್ಟಿಯು ಆ ಉಂಗುರದ ಮೇಲೆ ಬಿದ್ದಿತು. ಕೂಡಲೆ ಆತನ ಮುಖವು ಬಿಳುಪೇರಿ ಸ್ತಂಭೀಭೂತನಾದನು. ಕೊನೆಗೆ ಶಕುಂತಳೆಯ ವಿಷಯವು ಒಂದೊಂದಾಗಿ ಮನಸ್ಸಿಗೆ ಹೊಳೆಯಲಾರಂಭವಾಯಿತು. ರಾಜನು ಬೆಸ್ತರವನಿಗೆ ಮರ್ಯಾದೆಮಾಡಿ ಬಿಟ್ಟುಬಿಟ್ಟನು.

ರಾಜನ ಮನಸ್ಸಿಗೆ ಶಕುಂತಳೆಯನ್ನು ವಿವಾಹಮಾಡಿಕೊಂಡಿದುದೂ, ರಾಜಾಸ್ಥಾನದಿಂದ ಹೊರಡಿಸಿದುದೂ ತತ್‌ಕ್ಷಣವೇ ಹೊಳೆಯಿತು. ಕೊನೆಗೆ

(೬ನೆಯ ಪುಟವನ್ನು ನೋಡಿ)

ಪಂಚಾಚಾರ್ಯ ಪ್ರಭಾ.

೧೯೩೫ ನೇ ಆಗಸ್ಟ್ ತಾ॥ ೧೨ ನೇ ಸೋಮವಾರ

ಲಿಂಗಧಾರಣವು ವೇದೋಕ್ತವಾದುದು.

ಪವಿತ್ರಂ ತೇ [illegible] ಎಂಬೀ ಋಗ್ವೇದಮಂತ್ರವು ಕಂಠ [illegible] ಉತ್ತಮಾಂಗ[illegible]ಲ್ಲಿ ಇಷ್ಟಲಿಂಗವನ್ನು ಧರಿಸಬೇಕೆಂದೂ ಶಿವದೀಕ್ಷಾರಹಿತರಾದವನು ಇಂಥ ಲಿಂಗಧಾರಣಕ್ಕೆ ಅರ್ಹರಾಗುವುದಿಲ್ಲವೆಂದೂ ಪ್ರತಿಪಾದಿಸುವುದು ಅದರೆ ಈ ಮಂತ್ರವನ್ನು ಸೋಮರಸಪವಿತ್ರ[illegible] ಅಂದರೆ ಸೋಮಯಾಗವನ್ನು ಮಾಡ[illegible] ಪವಿತ್ರ ಎಂಬ ಹೆಸರು[illegible] ಒಪ್ಪಿಯಿಂದ ಸೋಮರಸವನ್ನು ಶೋಧಿಸುವ ಸಂದರ್ಭದಲ್ಲಿ ವಿನಿಯೋಗಮಾಡಿರುತ್ತಾರೆ ಯಾವ ಮಂತ್ರವನ್ನು ಯಾವ ಪ್ರಕರಣದಲ್ಲಿ ವಿನಿಯೋಗಮಾಡಿರುವರೋ ಆ ಮಂತ್ರಕ್ಕೆ ಆದೇ ಪ್ರಕರಣಕ್ಕನುಗುಣವಾದ ಅರ್ಥವನ್ನು [illegible] ನಿಯಮವಿರುತ್ತದೆ [illegible] ಯಜ್ಞಮಂಡಪದ [illegible]ವನ್ನು ಮಾಡುವ ಸಮಯದಲ್ಲಿ ವಿನಿಯೋಗಿಸಲ್ಪಡುವ [illegible] ಇತ್ಯಾದಿ ಮಂತ್ರ[illegible] [illegible]ದಲ್ಲ [illegible] ಆಯಾಯ ದೇವತಗಳ [illegible] ಅರ್ಥಮಾಡ[illegible] [illegible] ಸೋಮಯಾಗಪ್ರಕರಣದಲ್ಲಿ ವಿನಿಯೋಗವಾದ ಪವಿತ್ರಂ ತೇ ವಿತತಂ ಎಂಬ ಮಂತ್ರಕ್ಕೆ [illegible] ಅರ್ಥಮಾಡುವದನ್ನು ಬಿಟ್ಟು ಇಷ್ಟಲಿಂಗಧಾರಣಪರವಾಗಿ ಅರ್ಥಮಾಡಿದರೆ ಪ್ರಕರಣವಿರೋಧವು ಸಂಭವಿಸುವುದೆಂಬ ಶಂಕೆಯು [illegible] ಪವಿತ್ರಂ ತೇ ವಿತತಂ ಎಂಬ ಮಂತ್ರವನ್ನು ಸೋಮಯಾಗದಲ್ಲಿ ಸೋಮಲತೆಯ ರಸವನ್ನು [illegible] ಒಪ್ಪಿಯಲ್ಲಿ ಸೋಸುವ ಸಂದರ್ಭದಲ್ಲಿ ವಿನಿಯೋಗಿಸಿದ ಮಾತ್ರದಿಂದ ಈ ಮಂತ್ರವು ಸೋಮಯಾಗ ಪ್ರಕರಣಕ್ಕುಚಿತವಾದ ಅರ್ಥವನ್ನು ಕೊಡುವುದಿಲ್ಲ ಈ ಮಂತ್ರದಲ್ಲಿ [illegible] ಪ್ರತ್ಯಕ್ಷವಾದ ಇಷ್ಟಲಿಂಗವನ್ನು [illegible] ಅರ್ಥವು ಸ್ಪಷ್ಟವಾಗಿರುವಂತೆ ಸೋಮಯಾಗಪ್ರಕರಣ[illegible]ವಾದ ಅರ್ಥವು ಸ್ಪಷ್ಟವಾಗಿರುವುದಿಲ್ಲ [illegible] ಈ ಮಂತ್ರಕ್ಕೆ ಪೂರ್ವಾಚಾರ್ಯರು ಇಷ್ಟಲಿಂಗ[illegible]ಪರವಾಗಿ ಅರ್ಥಮಾಡಿರುವರಲ್ಲದೆ ಬೇರೆ ಯಾವ ವಿಧವಾಗಿಯೂ ಅರ್ಥಮಾಡಿಲ್ಲವಾದ್ದರಿಂದ ಈ ಮಂತ್ರವು ಲಿಂಗಧಾರಣವನ್ನೇ ವಿಧಿಸುತ್ತದೆಂದು ತಿಳಿಯಬೇಕು [illegible] ಯಾವ ಯಾವ [illegible] ಯಾವ ಯಾವ ದೇವತೆ[illegible]ಪರವಾಗಿ ಅರ್ಥವನ್ನು ಕೊಡುವುವೋ, ಆಯಾಯ ಮಂತ್ರ[illegible] ಆಯಾಯ ದೇವತೆ[illegible] ಆರಾಧಿಸುವ ಸಮಯದಲ್ಲಿಯೇ ವಿನಿಯೋಗಿಸಬೇಕೆಂಬ ನಿಯಮವೇನೂ ಇಲ್ಲ ಯಾವುದೋ ಒಂದು ಅರ್ಥವನ್ನು ಕೊಡುವ ಮಂತ್ರ[illegible] ಬೇರೆಬೇರೆ ಕರ್ಮಗಳಲ್ಲಿ ವಿನಿಯೋಗಿಸುವ ಸಂಪ್ರದಾಯವು ಒಂದಿರುತ್ತದೆ ಹೇಗೆಂದರೆ— 'ಅಗ್ನಿರ್ಮೂರ್ಧಾ ದಿವಃ ಕಕುತ್' ಎಂಬ ಮಂತ್ರವು ಅವಯವಶಕ್ತಿಯಿಂದ ಕೇವಲ ಅಗ್ನಿದೇವತಾ[illegible]ವಾಗಿದ್ದರೂ, ಈ ಮಂತ್ರವನ್ನು ಗ್ರಹಯಜ್ಞಮಾಡುವ ಸಮಯದಲ್ಲಿ ನವಗ್ರಹ[illegible] ಪೂಜೆಯಲ್ಲಿ ವಿನಿಯೋಗಮಾಡಿರುತ್ತಾರೆ ಮತ್ತು ಸಾಕ್ಷಾತ್ ಪರಮೇಶ್ವರನ ಸಹಸ್ರಶೀರ್ಷತ್ವಾದಿ ಅಸಾಧಾರಣ ಗುಣಗಳನ್ನು ಮಾತ್ರ ವರ್ಣಿಸುವ ಪುರುಷಸೂಕ್ತವನ್ನು—

" ಯಜೇತ್ ಪುರುಷಸೂಕ್ತೇನ ಧನದಂ ವಿತ್ತ [illegible]

ಎಂಬ ಪ್ರಮಾಣಕ್ಕನುಸಾರವಾಗಿ ಕುಬೇರನ ಪೂಜೆಯಲ್ಲಿ ವಿನಿಯೋಗಮಾಡಿರುತ್ತಾರೆ ಹೀಗೆ ಪುರುಷಸೂಕ್ತವನ್ನು ಕುಬೇರಪೂಜೆಯಲ್ಲಿ ವಿನಿಯೋಗಮಾಡಿದ ಮಾತ್ರದಿಂದಾಗಲಿ ಅಗ್ನಿದೇವತಾರ್ಥವುಳ್ಳ 'ಅಗ್ನಿರ್ಮೂರ್ಧಾ ದಿವಃ ಕಕುತ್' ಎಂಬ ಮಂತ್ರವನ್ನು ನವಗ್ರಹಪೂಜೆಯಲ್ಲಿ ವಿನಿಯೋಗಮಾಡಿದಮಾತ್ರದಿಂದಾಗಲಿ, ಕುಬೇರಪರವಾಗಿಯೂ ನವಗ್ರಹಪರವಾಗಿಯೂ ಆಯಾಯ ಮಂತ್ರ[illegible] ಅರ್ಥಮಾಡಲಾಗುವುದಿಲ್ಲ ಹೀಗೆ ಪ್ರಯೋ[illegible] [illegible] ಮಂತ್ರವನ್ನು [illegible] ವಿನಿಯೋಗಮಾಡಿದ್ದರೂ [illegible] ಆಯಾಯ ಮಂತ್ರ[illegible] [illegible] ಬದಲಾಯಿಸಲು [illegible] ಮಂತ್ರವು [illegible] ಪವಿತ್ರ[illegible] ವಿನಿಯೋಗಮಾಡಿದ್ದ ಮಾತ್ರದಿಂದ [illegible] ಇಷ್ಟಲಿಂಗ[illegible] [illegible] ಮಾಡುವ ಅರ್ಥಕ್ಕೆ [illegible] [illegible]ವಿಲ್ಲ.

ಯಾವ [illegible] [illegible] ಆ [illegible] ಅರ್ಥವನ್ನು [illegible] [illegible]ವನ್ನು [illegible]

ಆಯಾಯ ಪ್ರಕರಣ[illegible] [illegible] ಮಂತ್ರ[illegible] ಆಯಾಯ ದೇವತೆ[illegible] [illegible] ಪ್ರಕರಣ[illegible] [illegible]ವು ಆ [illegible]

[illegible] ಪ್ರಕರಣ[illegible]

[illegible]

ಯಾವ [illegible] [illegible] [illegible]ವನ್ನು [illegible] ಎಂದು [illegible] ತ್ರವೆ ನಿಜ ರಹಸ್ಯ[illegible] [illegible]ಲತೆಯೆಂಬುದು [illegible] [illegible] ಸೋಮಲತೆಯಿಂದ ಇಂದ್ರಾದಿದೇವತೆ[illegible] [illegible] ಕೇವಲ [illegible] [illegible]ಲ್ಲಿ ಸೋಮ ಎಂಬ ರಸವು [illegible] ಎಂಬ ವ್ಯುತ್ಪತ್ತಿಯಿಂದ [illegible]ವನ್ನು ಕೊಡುವುದು ಸೋಮಃ ಪವತೇ ಎಂಬ ಮಂತ್ರದಲ್ಲಿರುವ ಸೋಮಶಬ್ದಕ್ಕೆ [illegible] ಸೋಮಲತೆಯೆಂಬ ಅರ್ಥವನ್ನು ಬಿಟ್ಟು [illegible] ಮಾಡುವುದಾದರೆ ಈ ಮಂತ್ರಕ್ಕೆ [illegible] ಕತ್ವವು ಸಂಭವಿಸುವದು ಆ[illegible] ಲಿಂಗಧಾರಣಪ್ರಕರಣ[illegible] ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಎಂಬ ಮಂತ್ರವು ಸೋಮಪ್ರಕರಣದಲ್ಲಿ [illegible] ಸಿದ್ಧವಾಗುವುದರಿಂದ ಪ್ರಕರಣವಿರೋಧವು [illegible] ಸೋಮಯಾಗವು [illegible] ರುದ್ರದೇವತ್ಯ[illegible] ಹೊರತು ಅನ್ಯದೇವತಾತ್ಮಕವಲ್ಲ [illegible] ಸೋಮ[illegible] [illegible]ದರ್ಶನಂ " ಎಂಬ ಶ್ರುತಿವಾಕ್ಯ[illegible] ಸೋಮ[illegible] ಯಾಗವೆಂಬುದು ಕೇವಲ ಶಿವ[illegible] [illegible] ಸ್ಪಷ್ಟವಾಗುವುದರಿಂದಲೂ ಮತ್ತು ರುದ್ರ[illegible] ಎಂಬ ಶ್ರುತಿವಾಕ್ಯದ [illegible] ಸೋಮಪದ[illegible]ದಲ್ಲಿ [illegible]ವನ್ನು ಪ್ರಯೋಗಿಸಿದ [illegible] ಆ ಸೋಮರುದ್ರರೀರ್ವರೂ ಒಂದೇ ಸ್ವರೂಪವುಳ್ಳವರಾಗಿರುತ್ತಾರೆ ಮತ್ತು

ಅಹಂ ಹಿ ಸರ್ವಹವಿಷಾಂ ಭೋಕ್ತಾ ಚೈವ ಫಲಪ್ರದಃ ।
ಸರ್ವದೇವತನುರ್ಭೂತ್ವಾ ಸರ್ವಾತ್ಮಾ ಸರ್ವ[illegible] ॥

ಎಂದು ಕೂರ್ಮಪುರಾಣದಲ್ಲಿ ಸಮಸ್ತ ದೇವತಾ[illegible]ಕಾರಗಳಿಂದ ಸಮಸ್ತ ಹವಿಸ್ಸುಗಳನ್ನು ಭುಂಜಿಸುವವನೂ [illegible]ವನ್ನು ಕೊಡುವವನೂ ನಾನೊಬ್ಬನೇ ಆಗಿರುವನು [illegible] ಸರ್ವಕರ್ತನಾದ ಶಿವನು ಹೇಳುತ್ತಾನೆ. ಇದ[illegible] ಸೋಮಯಾಗವೆಂಬುದು ಸಹ ರುದ್ರದೇವತಾತ್ಮಕವೆಂದೇ ಸಿದ್ಧವಾಗುವುದರಿಂದ, ಅಂಥ ಸೋಮಪ್ರಕರಣದ[illegible] ಈ ಪವಿತ್ರಂ ತೇ ವಿತತಂ ಬ್ರಹ್ಮ[illegible] ಎಂಬ ಮಂತ್ರಕ್ಕೆ ಇಷ್ಟಲಿಂಗಧಾರಣಪರವಾಗಿ ಅರ್ಥ[illegible] ಪ್ರಕರಣವಿರೋಧವೆಂಬ ಶಂಕೆಗೆ [illegible] ಇಲ್ಲ ಆದುದರಿಂದ ಮಂತ್ರಕ್ಕೆ ಇಷ್ಟಲಿಂಗ[illegible] [illegible] ಆಚಾರ್ಯರು ಮಾಡಿದ [illegible] ಮತ್ತು ಈ [illegible] ಗುರು[illegible] ಇಂಥ [illegible] ಶಿವಲಿಂಗವನ್ನು ಕಂಠ[illegible] ಅನರ್ಹರೆಂದೂ ವ್ಯಾಸಾದಿ[illegible] ಸ್ಪಷ್ಟವಾಗಿ [illegible] ಹೇಳಿರುತ್ತಾರೆ ಈ ವಿಷಯವನ್ನು [illegible] ಪ್ರತಿಪಾದಿ[illegible]

ಒಳದೇಶದ ವೃತ್ತಾಂತಗಳು.

[illegible]ಯಿಂದ ಬೊಂಬಾ[illegible] ತಗಲಿಸಿದ್ದು, ಈ ದಿವಸ [illegible] ಕೇಳುತ್ತೇವೆ

[illegible] ನೌಕರರು ಚಕ್ರವರ್ತಿ[illegible] ಸಿದಿಯನ್ನು ಕೊಡಿಸಿ[illegible] ತೆಗೆದುಕೊಂಡು [illegible] ಹಸ್ತದಿಂದ [illegible] ಉಪಯೋಗಕ್ಕಾಗಿ [illegible]

[illegible] ದಿವಸ ಶಿವಮೊಗ್ಗ ಡಿಸ್ಟ್ರಿಕ್ಟ್ [illegible] ಹೆಣ್ಣುಮಗುವು [illegible] ಮಗುವಿಗೆ ಪ್ರಜ್ಞೆ [illegible] ಹತ್ತರ ಆಟವಾಡುತ್ತಿ[illegible] ಈ ಅನಾಹು[illegible] [illegible]

[illegible] ದಿವಸ [illegible] ಬೆಂಗಳೂರು [illegible] ನಡೆಯಿಸಿಕೊಂಡು [illegible] ಪುತ್ರಿಯವರು ಒಬ್ಬ[illegible] ತೀವ್ರ [illegible] ಆಸ್ಪತ್ರೆಗೆ ಸಾಗಿ[illegible] ಈ [illegible] ವಿವರವನ್ನು [illegible]

[illegible] ಎಂಬವರು ಇದೇ [illegible] ನೌಕರನ ಮೇಲೆ ಬಿದ್ದು [illegible] ಅತಿಕ್ರಮ ಪ್ರವೇಶ [illegible] ಮೊಕ[illegible] [illegible] ಮೇಲೆ [illegible] ಮಾಡಿ [illegible] 2 [illegible] ಜುಲ್ಮಾ[illegible]

[illegible] ಚಿಂತನಪಲ್ಲಿ [illegible] ನೇ ತಾರೀಖಿನ ದಿವಸ [illegible] ಸಪ್ತ[illegible] [illegible] ಬರಿಸಿದ್ದ [illegible] ಈ [illegible]ವನ್ನು [illegible] ಬಹುಮಾನ [illegible] ಆ[illegible] 84 [illegible] 1 [illegible] ಸತ್ತೆ ಮಾಡಿಕೊಟ್ಟರೆ [illegible], ಅನಂತರ ಸತ್ತೆ ಮಾ[illegible] 200 [illegible] ಬಹುಮಾನವೂ ದೊರ[illegible] [illegible] ಪೋಲೀಸು [illegible] ಪೋಲೀಸು ಕಮಿಷ[illegible] [illegible] ತಿಳಿಸಬೇಕೆಂದು ಪ್ರಕಟವಾಗಿದೆ

ವರ್ತಮಾನಸಂಗ್ರಹ.

ಇಂಡಿಯಾದಲ್ಲಿ ಉಕ್ಕಿನ ತಯಾರಿ!

ಜಪಾನರು ಅನ್ಯ ಕಸರದಲ್ಲಿ ಕಬ್ಬಿಣ, ಉಕ್ಕು ತಯಾರಿಸುವ ದೊಡ್ಡದೊಂದು ಕಾರ್ಖಾನೆಯನ್ನು ಸ್ಥಾಪಿಸಲು ಯೋಚಿಸುತ್ತಿರುವರೆಂದೂ, ಇದಕ್ಕಾಗಿ ಎಂಟುಕೋಟಿ ರೂಗಳ ಮೂಲಧನವನ್ನು ಹಾಕಿ ವರ್ಷ ಒಂದಕ್ಕೆ 50 ಸಾವಿರ ಟನ್ ಉಕ್ಕನ್ನು ತಯಾರಿಸಬೇಕೆಂದು ಸನ್ನಾಹಗಳನ್ನು ನಡೆಸುತ್ತಿರುವರೆಂದೂ ಅಮೇರಿಕದಿಂದ ಸುದ್ದಿಯು ಬಂದಿರುತ್ತದೆ

ಸ್ಟೇಟ್ ಖಜಾನೆಯಲ್ಲಿ ದರೋಡೆ.

ಕೊಮಿಲ್ಲಾದ ತ್ರಿಪುರಾಸ್ಟೇಟ್ ಖಜಾನೆಗೆ 10 ಜನ ಆಯುಧಪಾಣಿಗಳಾದ ಢಕಾಯಿತರು ನುಗ್ಗಿ, ಕಾವಲುಗಾರರನ್ನು ಬಂಧಿಸಿ, ಮ್ಯಾನೇಜರ್ ಮತ್ತು ಅವನ ಸಹಾಯಕರನ್ನು ಗುಂಡಿನಿಂದ ಗಾಯಗೊಳಿಸಿ, 600 ರೂಪಾಯಿಗಳನ್ನು ಅಪಹರಿಸಿಕೊಂಡು ಹೋದರೆಂದು ತಿಳಿದುಬಂದಿದೆ

ಸ್ತ್ರೀಯರ ಸಿಟ್ಟಿನ ಮಹಿಮೆ!

ಜೋಧಪುರದಲ್ಲಿ ಒಬ್ಬ ಕುಂಬಾರ ಜಾತಿಯ ಸ್ತ್ರೀಯು ತನ್ನ ಗಂಡನು ತನಗೆ ಕೊಡುತ್ತಿದ್ದ ಹಿಂಸೆಯನ್ನು ಸಹಿಸಲಾರದೆ ಉಟ್ಟ ಬಟ್ಟೆಗೆ ಬೆಂಕಿ ಹತ್ತಿಸಿಕೊಂಡು ಪ್ರಾಣಬಿಟ್ಟಳು ಸಾಯುವ ವೇಳೆಯಲ್ಲಿ 10 ರೂ ಗಳ ನೋಟುಗಳನ್ನು ಸಹ ತನ್ನ ಕೈಯಲ್ಲಿ ಹಿಡಿದು ಸುಟ್ಟು ಸತ್ತಳಂತೆ! ಸ್ತ್ರೀಕೋಪದ ಮಹಿಮೆಯು ಎಷ್ಟು ಮಟ್ಟಿಗಿರಬಹುದೆಂಬುದನ್ನು ಸರ್ವರೂ ಯೋಚಿಸಬೇಕಾಗಿದೆ

ಉಯ್ಯಾಲೆಯಾಡುತ್ತಿದ್ದ 3 ಜನ ಸ್ತ್ರೀಯರ ಮರಣ.

ಅಲಹಾಬಾದಿನ ಗ್ರಾಂಡ್ ಟ್ರಂಕ್ ರೋಡಿನಲ್ಲಿ ಒಂದು ಮರಕ್ಕೆ ಮೂವರು ಹೆಂಗಸರು ಒಂದು ಉಯ್ಯಾಲೆಯನ್ನು ಕಟ್ಟಿಕೊಂಡು ಆಟವಾಡುತ್ತಿದ್ದಾಗ ಒಕಸ್ಮಾತ್ ಉಯ್ಯಾಲೆಯನ್ನು ತೂಗು ಹಾಕಿದ್ದ ಮರದ ಕೊಂಬೆಯು ಮುರಿದು ಬಿದ್ದುದರಿಂದ ಆ ಮೂವರೂ ಮರಣ ಹೊಂದಿದರೆಂದು ಕೇಳುತ್ತೇವೆ ಉಯ್ಯಾಲೆಯಾಡುವವರು ಇತ್ತ ಲಕ್ಷ್ಯಗೊಡಬೇಕು

ಅಬಿಸೀನಿಯಕ್ಕೆ ಜಪಾನರ ಶಸ್ತ್ರಸಾಮಗ್ರಿ!

ಜಪಾನ್ ದೇಶವು ಅಬಿಸೀನಿಯಾ ಸೈನ್ಯಕ್ಕೆ ಹೊಸ ಮಾದರಿಯ ಶಸ್ತ್ರಗಳನ್ನು ಒದಗಿಸುವುದಂತೆ! ಮದ್ದುಗುಂಡುಗಳನ್ನು ಒದಗಿಸುವ ವಿಚಾರದಲ್ಲಿ ಅಬಿಸೀನಿಯಾದೊಡನೆ ಜಪಾನಿಗೂ ಒಪ್ಪಂದವಾಗಿದೆಯೆಂದೂ ಜಪಾನ್ ಸೈನ್ಯಾಧಿಕಾರಿಗಳ ಮತ್ತು ವ್ಯಾಪಾರಗಾರರ ಸಂಘದ ಪ್ರತಿನಿಧಿಗಳು ಅಬಿಸೀನಿಯಕ್ಕೆ ಹೋಗುವರೆಂದೂ ತಿಳಿದು ಬಂದಿದೆ ಆದರೆ ಜಪಾನ್ ಸರ್ಕಾರದವರು ಮೇಲಿನ ಸಂಗತಿಯು ನಿಜವಲ್ಲವೆಂದು ಪ್ರಕಟಿಸಿರುತ್ತಾರೆ

ಹೋಟಲ್ಲಿನ ಮಾಲಿಕನ ನೀಚಕೃತಿ!

ಕಳೆದ ಜುಲೈ 20 ನೇ ತಾರೀಖಿನ ದಿವಸ ರಾತ್ರಿ ಲಾಹೋರಿನ ಒಬ್ಬ ಹೋಟೆಲು ಮಾಲಿಕನು ತನ್ನ ಹೋಟಲಿನಲ್ಲಿ ವಾಸವಾಗಿದ್ದ ದಂಪತಿಗಳು ಮಲಗಿ ನಿದ್ರಿಸುತ್ತಿದ್ದಾಗ ಆ ಸ್ತ್ರೀಯ ಮೇಲೆ ಅತ್ಯಾಚಾರ ನಡೆಸಲು ಪ್ರಯತ್ನಿಸಿದನು ಆಗ ಆಕೆಯು ಕೂಗಿ ಗಲಾಟೆ ಹಚ್ಚಿದ್ದರಿಂದ ಆಕೆಯ ಗಂಡನು ಎಚ್ಚೆತ್ತು ಮಾಲಿಕನನ್ನು ಹಿಡಿಯಲೆಂದು ಬರಲು, ಹೋಟಲ್ಲಿನ ಮಾಲಿಕನು ಆಕೆಯ ಗಂಡನನ್ನು ಗುಂಡಿನಿಂದ ಸುಟ್ಟು ಗಾಯಪಡಿಸಿದನು ಅಷ್ಟರಲ್ಲಿ ಪೋಲೀಸರು ಪ್ರವೇಶಿಸಿ ಅತ್ಯಾಚಾರಿಯನ್ನು ಬಂದೂಕಿನ ಸಮೇತ ವಸ್ತಗಿರಿಮಾಡಿ, ಗಾಯಗೊಂಡವನನ್ನು ಆಸ್ಪತ್ರೆಗೆ ಸಾಗಿಸಿದ್ದಾರೆಂದು ಪ್ರಕಟವಾಗಿದೆ

ಜಪಾನ್ ಚಕ್ರವರ್ತಿಗಳಿಗೆ ಹಿಟ್ಲರನ ಬಹುಮಾನ

ಹೆರ್ ಹಿಟ್ಲರನು ಜಪಾನ್ ರಾಯಭಾರಿಯನ್ನು ಒರ ಮಾಡಿಕೊಂಡು ಜಪಾನ್ ಚಕ್ರವರ್ತಿಗಳಿಗೆ ಜರ್ಮನಿಯ ಪರವಾಗಿ ಬಹಳ ಹಿಂದಿನ ಕಾಲದಲ್ಲಿ ಜಪಾನಿನ ಪ್ರಸಿದ್ಧ ಕಯೋಟೋ ನಗರದ ದೇವಸ್ಥಾನದಿಂದ ತಂದು ಜರ್ಮನಿಯ ವಸ್ತುಪ್ರದರ್ಶನಾಲಯದಲ್ಲಿಡಲ್ಪಟ್ಟಿದ್ದ ಪುರಾತನ ಪಟವನ್ನು ಬಹುಮಾನವಾಗಿ ಕೊಟ್ಟಿರುತ್ತಾನೆ ಈ ಚಿತ್ರವು ಸೌಂದರ್ಯದಿಂದಲೂ, ಅವರ ಹಿಂದಿನ ಚರಿತ್ರೆಯಿಂದಲೂ ಮತವಿಷಯಕವಾದ ದೃಷ್ಟಿಯಿಂದಲೂ ಬಹಳ ಅಮೂಲ್ಯಪದಾರ್ಥವೆಂದು ಪರಿಗಣಿಸಲ್ಪಟ್ಟಿದೆ

ಬಸ್ ಡ್ರೈವರನ ನೀಚವೃತ್ತಿ!

ಸಿಂಧ್ ಪ್ರಾಂತದ ಬಸ್ ಡ್ರೈವರನೊಬ್ಬನು ತನ್ನ ಬಸ್ಸು ಕೆಟ್ಟಿರುವುದರಿಂದ ಮುಂದಿನ ಪ್ರಯಾಣಕ್ಕೆ ಉಪಯೋಗವಿಲ್ಲವೆಂದೂ, ಶೀಘ್ರವಾಗಿ ಬೇರೆ ಬಸ್ಸನ್ನು ಕಳುಹಿಸುವನೆಂದೂ ಹೇಳಿ 12 ಮಂದಿ ಪ್ರಯಾಣಿಕರನ್ನು ಅರಣ್ಯದ ನಡುವೆ ಇಳಿಸಿ, ಅವರ ಸಾಮಾನುಗಳೊಡನೆ ಅದೃಶ್ಯನಾಗಿದ್ದಾನೆ ಪ್ರಯಾಣಿಕರು 2½ ದಿನಗಳ ವರೆಗೆ ಅನ್ನನೀರಿಲ್ಲದೆ ಕಾದುಕಂಗೆಟ್ಟು ಪೋಲೀಸರಿಗೆ ವರದಿ ಕೊಟ್ಟಿರುತ್ತಾರೆಂದು ತಿಳಿದುಬಂದಿದೆ ಇಂತಹ ಡ್ರೈವರರ ವಿಷಯದಲ್ಲಿ ಸರ್ವರೂ ಜಾಗರೂಕರಾಗಿರಬೇಕಾಗಿದೆ

ತಾಯಿಯು ಮಕ್ಕಳನ್ನುಕೊಂದು ತಾನೂ ವಿಷಕುಡಿದಳು.

ಒಸಾಕಾ ಪಟ್ಟಣದ ಟ್ರಾಂವೆ ನಡೆಸುವ ಕೆಲಸದಲ್ಲಿರುವ ಒಬ್ಬನ ಹೆಂಡತಿಗೆ ತನ್ನ ಜೀವನದಲ್ಲಿ ಜಿಗುಪ್ಸೆ ಹುಟ್ಟಿ ತನ್ನ 7 ಮತ್ತು 4 ವರುಷದ ಗಂಡು ಮಕ್ಕಳನ್ನು ಕತ್ತು ಹಿಸುಕಿ ಕೊಂದು ತಾನೂ ವಿಷಕುಡಿದು ಸ್ವಲ್ಪ ಹೊತ್ತಿನ ಮೇಲೆ ಮನೆಗೆ ಬಂದ ಗಂಡನು ಈ ಅವಸ್ಥೆಯನ್ನು ಕಂಡು ಇನ್ನೂ ಬದುಕಿದ್ದ ಹೆಂಡತಿಗೆ ಉಪಚಾರ ನಡೆಸಿದ್ದರಿಂದ ಬದುಕಿದಳು ಈಗ ಅವಳು ಪೋಲೀಸರ ವಶದಲ್ಲಿದ್ದಾಳೆ ಕಳೆದ 10 ತಿಂಗಳಿಂದ ವ್ಯಾಧಿಗ್ರಸ್ತಳಾಗಿ ತನ್ನಿಂದ ತನ್ನ ಗಂಡನಿಗೆ ಬಹಳ ತೊಂದರೆಯಾಗುತ್ತಿರುವುದರಿಂದ ಮಕ್ಕಳೊಡನೆ ಪ್ರಾಣ ಬಿಡಲು ನಿಶ್ಚಯಿಸಿ ಹೀಗೆ ಮಾಡಿದೆನೆಂದು ಹೇಳಿಕೆಯನ್ನು ಕೊಟ್ಟಿರುತ್ತಾಳೆ

ರೈಲಿಗೆ ಕಳ್ಳರ ಕಾಟ

ಮಂಚುಕೋ ದೇಶದ ಹಿಸಿಂಕಿಂಗ್ ನಗರದ ಸಮೀಪದಲ್ಲಿ ರೈಲು ಒಂಡಿಯೊಂದಕ್ಕೆ ಕಳ್ಳರು ಮುತ್ತಿ ವಿಶೇಷ ಹಿನಾಶವನ್ನು ಉಂಟುಮಾಡಿರುವರು ಕಳ್ಳರು ಮೊದಲು ರೈಲುಬಂಡಿಯನ್ನು ಕಂಬಿಯಿಂದ ತಪ್ಪಿಸಿ ನಿಲ್ಲಿಸಿದರು ಇದರಿಂದ ಅನೇಕರಿಗೆ ಗಾಯಗಳಾದವು ಪ್ರಯಾಣಿಕರಲ್ಲಿ 22 ಜನರೂ, ರೈಲನ್ನು ನಡೆಸುತ್ತಿದ್ದವರ ಪೈಕಿ 10 12 ಜನರೂ ಕಳ್ಳರೊಡನೆ ಹೋರಾಡಿದರು ಆದರೆ ಸಾರ್ಥಕವಾಗಲಿಲ್ಲ 7 ಜನರು ಜಪಾನೀಯರೂ ಇಬ್ಬರು ಮಂಚುಕೋ ಜನರೂ ಮಡಿದರು ಅಷ್ಟರಲ್ಲಿ ಸಹಾಯಾರ್ಥವಾಗಿ ಎರಡು ರೈಲು ಗಾಡಿಗಳು ಆ ಸ್ಥಳಕ್ಕೆ ಹೋದವು ಜಪಾನ್ ಸೈನಿಕರು ಕಳ್ಳರನ್ನು ಬೆನ್ನಟ್ಟಿರುವರು

ಸಾಬೂನಿಗೆ ಆಲೂಗಡ್ಡೆಯ ಉಪಯೋಗ.

ಜರ್ಮನಿಯ ರಸಾಯನಿಕ ಸಂಘದವರು ಸಬೀನರಿ ಆಲೂಗಡ್ಡೆಯ ವಿಷಯವನ್ನು ಚರ್ಚಿಸಿ ಆಲೂಗಡ್ಡೆಯಲ್ಲಿ ಸಾಕಾದಷ್ಟು ಕೊಬ್ಬು ಇದೆಯೆಂದು ನಿಶ್ಚಯ ಮಾಡಿದರು ಬರ್ಲಿನ್ ನಗರದ ಡಾಕ್ಟರ್ ಸ್ಪಿನ್ಹಾಸರ "ಬಂದೆ ಆಲೂಗಡ್ಡೆಯನ್ನು ಉಪಯೋಗಿಸಿ ಸಾಬೂನನ್ನು ಅಗ್ಗವಾಗಿ ಮಾಡುತ್ತಿದ್ದರು ಈಗ ಅದನ್ನು ಉಪಯೋಗಿಸಿ ಸಾಬೂನಿನ ಗುಣವನ್ನೇ ಹೆಚ್ಚಿಸಬಹುದು ಜರ್ಮನಿಯಲ್ಲಿ 15,000,000 ಟನ್ನುಗಳ ಆಲೂಗಡ್ಡೆಯು ಬೆಳೆಯುತ್ತದೆ ಅದರಲ್ಲಿ 18,000,000 ಟನ್ನುಗಳ ಆಲೂಗಡ್ಡೆ ಉಪಯೋಗವಾಗುತ್ತದೆ ಉಳಿದುದನ್ನೆಲ್ಲ ಎಣ್ಣೆಗೆ ಬದಲಾಗಿ ಉಪಯೋಗಿಸಬಹುದು ಎಣ್ಣೆಯನ್ನು ಆಮದು ಮಾಡುವ ಆವಶ್ಯಕತೆಯೇ ಇಲ್ಲ ಇದರಿಂದ ಸಾಬೂನು ಮಾಡಬಹುದು" ಎಂಬುದಾಗಿ ಹೇಳಿದರು

ಶ್ರೀ|| ಎಂ ಸಿದ್ಧನಗೌಡರು, ಉಚ್ಚಂಗಿದುರ್ಗ.

ಹರಪ್ಪನಹಳ್ಳಿ ಡಿ|| ಹೊಸಹಳ್ಳಿ ತಾ|| ಉಚ್ಚಂಗಿದುರ್ಗ ಗ್ರಾಮದಲ್ಲಿ ಸುಪ್ರತಿಷ್ಠಿತರಾಗಿದ್ದ ಶ್ರೀ|| ಎಂ ಸಿದ್ಧನಗೌಡರು ದಿವಂಗತರಾದ ವಿಷಯವು ಸರ್ವರಿಗೂ ವೇದ್ಯವೇ ಆದೆ ಈ ಮಹಾಶಯರು ಚಿಕ್ಕಂದಿನಿಂದಲೂ ಬಹು ಕುಶಲಮತಿಗಳು ಇವರು ತಮ್ಮ ಬುದ್ಧಿಪ್ರತಿಭೆಯಿಂದ ವಿಶೇಷ ದ್ರವ್ಯವನ್ನು ಸಂಪಾದಿಸಿದರು ಸಂಪಾದನೆಗೆ ತಕ್ಕಂತೆ ಧರ್ಮಕಾರ್ಯಗಳನ್ನು ಮಾಡಿದರು ಈಗ್ಗೆ ೧೫ ೧೬ ವರ್ಷಗಳ ಪೂರ್ವದಲ್ಲಿ ಹರಪನಹಳ್ಳಿ ತಾ|| ಕಲ್ಲಹಳ್ಳಿ ಗ್ರಾಮದಲ್ಲಿ ೧೦೦೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಚಂದ್ರಮೌಳೀಶ್ವರ ದೇವಸ್ಥಾನವನ್ನೂ ಒಂದು ಛತ್ರವನ್ನೂ ಕಟ್ಟಿಸಿದರು ಅಲ್ಲಿ ಒಂದು ಬಹು ಮನೋಹರವಾದ ತೋಟವನ್ನು ಮಾಡಿರುವರು ಉಚ್ಚಂಗಿದುರ್ಗದಲ್ಲಿ ೧೦ ೧೨ ಸಾವಿರ ರೂ ಗಳನ್ನು ಖರ್ಚುಮಾಡಿ ಒಂದು ಧರ್ಮಛತ್ರವನ್ನೂ, ಒಂದು ಈಶ್ವರ ದೇವಾಲಯವನ್ನೂ ಕಟ್ಟಿಸಿ ಕೆಲವು ವರ್ಷಗಳ ಹಿಂದೆ ಲಿಂಗಸ್ಥಾಪನ ದೀಕ್ಷಾವಿಧಿಯನ್ನು ವೈಭವದಿಂದ ಮಾಡಿಸಿದರು ಆ ಸಮಯದಲ್ಲಿಯೇ ತಮ್ಮ ಚಿ|| ಮರುಳಸಿದ್ಧನಗೌಡರ ವಿವಾಹವನ್ನು ವಿಜೃಂಭಣೆಯಿಂದ ಮಾಡಿದರು ಇವರು ಅನೇಕ ಜನ ಬಡವರಿಗೆ ಆಶ್ರಯದಾತೃಗಳಾಗಿದ್ದರು ಇವರು ತಮ್ಮ ಪ್ರಾಂತದಲ್ಲಿ ತಮ್ಮ ಗುಣಾತಿಶಯದಿಂದ ವಿಶೇಷ ಕೀರ್ತಿಯನ್ನು ಪಡೆದಿದ್ದರು ಸರಕಾರಿ ಅಧಿಕಾರಿಗಳಲ್ಲಿಯೂ ಬಹಳ ಪ್ರೀತಿಯನ್ನು ಸಂಪಾದಿಸಿಕೊಂಡಿದ್ದರು ಆ ಪ್ರಾಂತದ ವೀರಶೈವಮಂಡಲಿಗೆ ಭೂಷಣಪ್ರಾಯರಾಗಿದ್ದರು ಇಂಥವರ ವಿಯೋಗವು ಈ ಸಮಾಜಕ್ಕೆ ಒಂದು ದೊಡ್ಡ ಕೊರತೆಯೆಂದೇ ಹೇಳಬೇಕಾಗಿದೆ ಶ್ರೀ ಜಗದೀಶ್ವರನು ಈ ಧರ್ಮಾತ್ಮರ ಆತ್ಮಕ್ಕೆ ಶಾಂತಿಯನ್ನು ಅನುಗ್ರಹಿಸಬೇಕೆಂದು ಕೋರುತ್ತೇವೆ

ಸ್ವೀಕಾರ

ಶಿವಮೊಗ್ಗ ಡಿ|| ಚನ್ನಗಿರಿ ನಿವಾಸಿಗಳಾದ ಮ|| ರಾ|| ಬಿ ಗೋಡು ರುದ್ರಪ್ಪನವರ ಪುಟ್ಟಪ್ಪನವರ ಚಿ|| ಸಿ. ವೀರಪ್ಪ ಮತ್ತು ಶ್ರೀನಿವಾಸ ಪುಟ್ಟಪ್ಪನವರು ತಮ್ಮ ಗ್ರಾಮದ ಕೆರೆಯ ದಡದಲ್ಲಿರುವ ಮಠ ನಂದಗಮ್ಮಗೆ ಮಠವನ್ನು ಜೀರ್ಣೋದ್ಧಾರಮಾಡಿ, ಈ ಮಠಕಾರ್ಯಕ್ಕಾಗಿ ತೀರ್ಥಹಳ್ಳಿ ತಾ|| ಮಳಲಿ ಮಠದ ಶ್ರೀ ನಾಗಾರ್ಜುನಸ್ವಾಮಿಗಳವರನ್ನು ಕರೆಮಾಡಿಕೊಂಡು ಶ್ರೀ ರುದ್ರಾಭಿಷೇಕಾದಿಗಳನ್ನು ನೆರವೇರಿಸುವ ಸಮಯದಲ್ಲಿ ಮ|| ರಾ|| ಸಿ ವೀರಪ್ಪನವರು ಪ್ರಭಾಪ್ರೋತ್ಸಾಹಕ್ಕಾಗಿ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಈ ಸದ್ಗೃಹಸ್ಥ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

(೨ನೇ ಪುಟದಿಂದ ಮುಂದುವರಿದುದು)

ಸಾವಿರಾರು ಬಾಣಗಳನ್ನು ಎದೆಗೆ ಬಿಟ್ಟಂತಾಯಿತು. ರಾಜನಿಗೆ ಒಳ್ಳೆಯ [illegible] ತುಂಬ ಮನಸ್ಸು [illegible] ತಾನು [illegible] ಆಶ್ರಮಕ್ಕೆ ಹೊರಡಲು ಉದ್ಯುಕ್ತನಾದನು. ರಾಜನು ಆ ದಿನ ಸಂಜೆಗೆ ತನ್ನ ಪರಿವಾರವನ್ನು ನಿಲ್ಲಿಸಿ ತಾನೊಬ್ಬನೇ ಪ್ರಿಯಳನ್ನು ಹುಡುಕಲು ಉದ್ಯುಕ್ತನಾದನು. ಕೊನೆಗೆ ರಾಜನು ಕಣ್ವಋಷಿಗಳ ಆಶ್ರಮಕ್ಕೆ ಬಂದನು. ಆ ಆಶ್ರಮವು ಮೊದಲಿಗೂ ಈಗ್ಗೂ ಏನೂ ವ್ಯತ್ಯಾಸವಾಗಿರುವಂತೆ ಕಾಣದಿದ್ದಿತು. ಅನ್ಯಾಗಿ ಬೆಳೆದಿದ್ದ ಪುಷ್ಪಸ್ಥಿತ ಗುಲ್ಮಗಳು ಶಕುಂತಳೆಯು ಪ್ರೋಷಣಾದಿ ಕ್ರೀಡೆ ಒಣಗಿಹೋಗಿರುವುದು ಮನಸ್ಸಿಗೆ ಭಾಸವಾಗುತ್ತಿದ್ದಿತು. ರಾಜನೂ ಶಕುಂತಳೆಯೂ ಸೇರಿದ ಮನೋಹರವಾಗಿದ್ದ ಲತಾಮಂಟಪವು ಎಲ್ಲಾ [illegible] ಹೋಗಿದ್ದಿತು. ಒಬ್ಬ ಕುಮಾರನ ಮಾತ್ರ ಕಣ್ವರ ಆಶ್ರಮದ ಬಾಗಿಲ ಹತ್ತಿರ ಒಂದು ಪಾರ್ಶ್ವದಿಂದ ಮತ್ತೊಂದು ಪಾರ್ಶ್ವಕ್ಕೆ ಕರಗಿಸುತ್ತಿದ್ದ ಹುಲಿಮರಿಯನ್ನು ಸವರಿಕೊಂಡು ಹೋಗುತ್ತಿರುವುದನ್ನು ಕಂಡನು. ಇಷ್ಟು ಸ್ಫುರ್ತಿವಂತನಾಗಿಯೂ, ಮನೋಹರವಾಗಿಯೂ ಇರುವ ಹುಡುಗನನ್ನು ಆವರೆಗೆ ರಾಜನು ನೋಡಿರಲಿಲ್ಲ. ಆ ಹುಡುಗನನ್ನು ನೋಡಿ ಹತ್ತಿರ ಕರೆದು ರಾಜನು ತನ್ನ ತಾಯಿಯ ಮೇಲೆ ಕೈಯಿಟ್ಟುಕೊಂಡು ಮುತ್ತಿಟ್ಟನು. ಸಂತೋಷವಡಬೇಕೆಂಬ ಆಸೆಯು ಹುಟ್ಟಿತು. ರಾಜನು ಮುಂದಕ್ಕೆ ನಡೆದು ಹುಡುಗನ ಹತ್ತಿರಕ್ಕೆ ಬಂದನು. ಹುಡುಗನು ಆಶ್ರಮದಲ್ಲಿ ರಾಜನ ಹತ್ತಿರವಿರುವುದನ್ನು ನೋಡಿ, ಹುಲಿಮರಿಯನ್ನು ಬಿಟ್ಟು ರಾಜನ ಮುಖವನ್ನೇ ನೋಡುತ್ತಿದ್ದನು. ರಾಜನು ಆ ಹುಡುಗನನ್ನು ನೋಡಿ—ಎಲೈ ಕುಮಾರನೆ! ನಿನ್ನ ಹೆಸರೇನು? ನಿನ್ನನ್ನು ಮಗನೆಂದು ಕರೆಯುವ ಪುಣ್ಯಪುರುಷನಾರು? ಎನಲು ಬಾಲಕ— ಸ್ವಾಮಿ! ನನ್ನ ಹೆಸರು ಸರ್ವದಮನ. ನನ್ನ ತಾಯಿಯ ಹೆಸರು ಶಕುಂತಳೆ. ನನಗೆ ತಿಳಿದುದು ಇಷ್ಟೇ. ನನ್ನ ತಂದೆಯು [illegible] ಹಿಡಿದು [illegible] ಅವಮಾನಪಡಿಸಿ ದುರ್ವರ್ತನ [illegible] ಗುಣವಂತನು? ತಾನ್ [illegible]? ಎನಲು ಆ ಬಾಲಕನ ಮಾತನ್ನು ಕೇಳುತ್ತಲೇ ರಾಜನ ಮನಸ್ಸು [illegible] ಗುಟ್ಟಿತು. ದೇಹದಲ್ಲಿ ರಕ್ತವು ವೇಗವಾಗಿ ಚಲಿಸಲಾರಂಭಿಸಿತು. ಆನಂತರ ಕುಮಾರನನ್ನು ನೋಡಿ— ಕುಮಾರನೆ! ನಿನ್ನ ತಂದೆಯಾರು? ಎಂದು ಕೇಳಿದಾಗ ರಾಜನ ದನಿಯು ಗದ್ಗದವಾಗಿತ್ತು.

ಕುಮಾರನು— ಸ್ವಾಮಿ! ಇದೋ ನೋಡಿ ನನ್ನ ತಾಯಿಯು ಬರುತ್ತಿರುವಳು ಎಂದು ಹೇಳಿ ಆಶ್ರಮದ ಬಾಗಿಲ ಹತ್ತಿರ ಬರುತ್ತಿರುವ ಶಕುಂತಳೆಯ ಕಡೆಗೆ ಓಡಿಹೋದನು.

ಆತ್ತ ಶಕುಂತಳೆಯು ರಾಜನ ಆಕೃತಿಯನ್ನು ನೋಡಿ ಸ್ತಂಭೀಭೂತಳಾಗಿ ನಿಂತುಕೊಂಡು, ಮರುಕ್ಷಣ ಒಂದು ಲಜ್ಜೆಯನ್ನೂ [illegible] ಒಂದು ಮಾತನ್ನೂ ಆಡಲಿಲ್ಲ! ದುಷ್ಯಂತಮಹಾರಾಜನು ಈಕೆಯ ಹತ್ತಿರ ಬಂದು ತನ್ನ ಪೂರ್ವದ ನಡತೆಯು ಹೀಗಾಗುವುದಕ್ಕೆ ವಿಸ್ಮರಣವೇ ಕಾರಣವೆಂದೂ, [illegible] ಬಿಸಿದ ಉಂಗುರವೇ ಕಾರಣವಾಗಿ, ನಾನೇ ಒಂದೆನು ಎಂದು ಹೇಳಿಕೊಂಡು ಅ[illegible] ಮರ್ಯಾದೆಯಾಗಿ ತಿರಸ್ಕರಿಸಿ ಕಳುಹಿಸಿದುದಕ್ಕೆ ತುಂಬ ಪಶ್ಚಾತ್ತಾಪ ಪಟ್ಟುಕೊಂಡನು. ಇದನ್ನು ಕೇಳಿದ ಶಕುಂತಳೆಯು ಪ್ರಿಯನೆ! ಆಶ್ರಮದಲ್ಲಿ ನಿನ್ನ ವಿಯೋಗ [illegible]ದಿಂದ ಕಳೆದಿರುವಾಗ್ಗೆ ಒಬ್ಬ ಋಷಿಯು ಬಂದು ಹತ್ತಿರದಲ್ಲಿ ನಿಂತಿದ್ದಾಗ್ಯೂ ನಾನು ಉಪ್ಪಸದೆ ಹೋಗಿ ಅವಮರ್ಯಾದೆ ಮಾಡಿದೆನೆಂಬ ಭಾವದಿಂದ ಆ ಋಷಿಯು— ಎಲೆ ಸ್ತ್ರೀಯೆ! ನೀನು ಅಜಾಗರೂಕತೆಯಿಂದಿರುತ್ತ ನನ್ನನ್ನು ಅಸಡ್ಡೆಯಿಂದ ನಿರ್ಲಕ್ಷ್ಯದಿಂದ ಕಂಡಪ್ರಯುಕ್ತ ನಿನ್ನ ಪ್ರಿಯನು ನಿನ್ನನ್ನು ಮರೆತು ಕೊನೆಗೆ ತಿರಸ್ಕಾರಮಾಡಲಿ" ಎಂದು ಶಾಪವನ್ನು ಕೊಟ್ಟನು. ನಾನು ಅವರನ್ನು ಬಹಳವಾಗಿ ಬೇಡಿಕೊಂಡದಕ್ಕೆ "ನೀನು ನಿನ್ನ ಗುರುತನ್ನು ಪತಿಗೆ ತೋರಿಸಿದಾಗ್ಗೆ ನಿನ್ನ ವಿಷಯವು ಜ್ಞಾಪಕಕ್ಕೆ ಬಂದು ನಿನ್ನನ್ನು ಪರಿಗ್ರಹಣಮಾಡಲಿ" ಎಂದು ಹೇಳಿದ ಮಾತು ಈಗ ಸ್ಮೃತಿಗೆ ಬಂದಿತು ಪ್ರಿಯನೆ! ಇದು ಗೋಪ್ಯದಲ್ಲಿ ನಡೆದ ವಿಷಯವು ಎಂದು ಹೇಳಲು ರಾಜನು ಮಿಕ್ಕ ವಿಷಯಗಳನ್ನೆಲ್ಲಾ ತಿಳಿದುಕೊಂಡು ಪ್ರಿಯಳನ್ನು ಒಳ್ಳೆವಾಗಿ ಸಂತೈಸಿ ಮಗುವನ್ನು ಎತ್ತಿ ಮುದ್ದಾಡಿ ತನ್ನ ಮಗನೆಂದು ಇವನೆಂದು ತಿಳಿದು ಕಣ್ವರ ಆಶ್ರಮಕ್ಕೆ ಹೋಗಿ ನಡೆದ ಸಂಗತಿಗಳನ್ನೆಲ್ಲಾ ವಿಜ್ಞಾಪಿಸಿಕೊಂಡು ತಾನು ಶಪಿತಸ್ಥನಲ್ಲವೆಂಬ ಒಗ್ಗೆ ಶಕುಂತಳೆಯ ಕೂಡ ನಡೆದ ಸಂಗತಿಗಳನ್ನು ಹೇಳಿಸಿದನು. ಕಣ್ವಋಷಿಯು ರಾಜನಿಗೆ ಆಶೀರ್ವದಿಸಿ, ತನ್ನ ಕುವರಿ ಶಕುಂತಳೆಯೊಡನೆ ರಾಜಧಾನಿಗೆ ಹೊರಡಬಹುದೆಂದು ಅಪ್ಪಣೆಕೊಟ್ಟನು. ಅನಂತರ ರಾಜನು ತನ್ನ ಪತ್ನಿಯನ್ನು ಹಸ್ತಿನಾಪಟ್ಟಣಕ್ಕೆ ಕರೆದುಕೊಂಡು ಹೋದನೆಂದು ಹೇಳಬೇಕಾಗಿಲ್ಲ. ಹಸ್ತಿನಾಪುರದ ಪ್ರಜೆಗಳೆಲ್ಲಾ ಶಕುಂತಳೆಯನ್ನು ನೋಡಿ ಬಹಳ ಸಂತೋಷಪಟ್ಟರು. ರಾಜನು ಆ ಸಂತೋಷದಲ್ಲಿ ಪ್ರಜೆಗಳನ್ನು ಭಾಗಿಗಳನ್ನಾಗಿ ಮಾಡಿಸಿ, ಅವರನ್ನು ಉಪಚಾರಗಳಿಂದ ತೃಪ್ತಿಪಡಿಸಿದನು. ಶಕುಂತಳೆಯ ಮಗನ ಹೆಸರು ಭರತನೆಂದು ಕರೆಯಲ್ಪಟ್ಟಿತು. ಪ್ರಜೆಗಳು ಈ ಬಾಲಕನೇ ಮುಂದಕ್ಕೆ ರಾಜ್ಯಾಧಿಪತಿಯಾಗುವುದಕ್ಕೆ ತಕ್ಕವನೆಂದು ನಿಶ್ಚಯಿಸಿದರು. ದುಷ್ಯಂತಮಹಾರಾಜನೂ, ಶಕುಂತಳೆಯೂ ಅನ್ಯೋನ್ಯಪ್ರೀತಿಯಿಂದ ಬಹುಕಾಲ ಸುಖದಿಂದ ಜೀವಿಸಿದ್ದರು.

ಶಿವಂಭೂಯಾತ್!

ನುಡಿನೀತಿಯ ಹಿತೋಕ್ತಿಗಳು

(ಹಿಂದಿನಿಂದ ಮುಂದುವರಿದುದು)

61 ಸಾಮಾನ್ಯವಾಗಿ ಕರ್ಮದಲ್ಲಿ ಬಂಧವನ್ನುಂಟುಮಾಡುವ ದೋಷವಿರುವದು [illegible] ಬುದ್ಧಿವಂತನಾದ ಶರೀರದಲ್ಲಿ [illegible] ಆಸೆಯು ಅದರ ಜೊತೆಗೆ ಸೇರಿ ಅದನ್ನು ವಿಷಮಯಮಾಡುವದು. ಮನುಷ್ಯನ ಆಸೆಯೊಂದಿಲ್ಲದಿದ್ದರೆ ಪಾಪವನ್ನೇ ಮಾಡುತ್ತಿರಲಿಲ್ಲ. ಕರ್ಮದಲ್ಲಿರುವ ದೋಷವನ್ನು ತಿಳಿದು ಅದರ ಪ್ರಯೋಜನವಾಡಿಕೊಳ್ಳಬೇಕಾದರೆ ಅವನು ಅದನ್ನು ಕರ್ತವ್ಯವಾಗಿ ಮಾಡದೆ ಕರ್ಮಯೋಗವಾಗಿ ಮಾಡಬೇಕು. ಫಲಾಪೇಕ್ಷೆಯಿಲ್ಲದೆ ಮಾಡುವದೇ ಕರ್ಮಫಲಾಶೆಯಿಲ್ಲದ ವಿಷಯವದೇ ಕರ್ತವ್ಯಯೋಗವು. ಹೀಗೆ ಕರ್ಮಯೋಗವನ್ನು ಮಾಡಿದರೆ ಬಂಧಕತ್ವವು ಹೋಗಿ ಹೋಗಿ ಶಾಂತಿಯು ದೊರೆಯುವದು. ಲೋಕಾನುಭವದಿಂದ ಭಾವಿಸಿದರೆ ಇಂಥ ಸ್ವಭಾವವು ಕಡಿಯುವದೆಂಬುವದು ಸಹಜವಾಗಿದೆ. ಆದರೆ ಅದರ ವಿಷದ ಹಲ್ಲನ್ನು ಮುರಿದರೆ ಅದರ ಬಂಧಕಗುಣವು ಹೋಗಿ ಅದು ಹಾವಾಡಿಗನ ಜೀವನೋಪಾಯಕ್ಕೆ ಸಾಧಕವಾಗುತ್ತದೆ. ಕರ್ಮವು ಹಾವಿನಂತಿರುವದು, ಫಲಾಶೆಯುಳ್ಳವನಿಗೆ ಅದು ತನ್ನ ವಿಷವನ್ನು ಏರಿಸದೆ ಬಿಡುವದಿಲ್ಲ. ನಾವು ಮನುಷ್ಯರಾಗಿದ್ದುದಕ್ಕೆ ಬದುಕಿರುವವರೆಗೆ ಆಶೆಯನ್ನು ಬಗೆಹರಿಸುವದರಲ್ಲಿ ನಮ್ಮ ಪೌರುಷವನ್ನು ತೋರಿಸಬೇಕು. ಈ ರೀತಿಯಲ್ಲಿ ಆಶೆಯನ್ನು ತೊರೆದವನನ್ನು ಗೀತೆಯು "ತಮಾಹುಃ ಪಂಡಿತಂ ಬುಧಾಃ" ಎಂಬ ವಾಕ್ಯದಿಂದ ಪಂಡಿತನೆಂದು ಹೇಳಿರುವದು. ಅನೇಕ ಗ್ರಂಥಗಳ ಅರ್ಥವನ್ನು ತಿಳಿಯುವ ಪಾಂಡಿತ್ಯವು ಪಾಂಡಿತ್ಯವಲ್ಲವು. ಇಂಥ ಪಂಡಿತರು ಬಹು ಜನರಿರುವರು. ಇಂದ್ರಿಯಾರ್ಥವಾದ ಆಶೆಯನ್ನು ಬಗೆಹರಿಯುವದೇ ನಿಜವಾದ ಪಾಂಡಿತ್ಯವು ಮತ್ತು ನಿಜವಾದ ಯೋಗವು. ಮನುಷ್ಯರಲ್ಲಿ ಪಂಡಿತನೆನಿಸಿಕೊಳ್ಳಬೇಕೆಂಬುವವನು ಈ ಯೋಗ್ಯತೆಯನ್ನು ಪಡೆಯಬೇಕು.

ಮತ್ತು 'ಅನಿಷ್ಟಮಿಷ್ಟಂ ಮಿಶ್ರಂಚ ತ್ರಿವಿಧಂ ಕರ್ಮಣಃ ಫಲಮ್, ಭವತ್ಯತ್ಯಾಗಿನಾಂ ಪ್ರೇತ್ಯ ನತು ಸನ್ಯಾಸಿನಾಂ ಕ್ವಚಿತ್' ಎಂಬ ಗೀತೋಕ್ತಿಯಂತೆ ಒಳ್ಳೆಯ ಫಲವಾಗಲಿ ಕೆಟ್ಟ ಫಲವಾಗಲಿ, ಎರಡೂ ಬೆರೆತ ಫಲವಾಗಲಿ ಈ ಮೂರು ಬಗೆಯ ಫಲಗಳೂ ಫಲಾಪೇಕ್ಷೆಯುಳ್ಳವರಿಗೆ ಗಂಟು ಬೀಳುವವೇ ಹೊರತು ಫಲತ್ಯಾಗಿಗಳಿಗೆ ಮಾತ್ರ ಎಳ್ಳಷ್ಟೂ ಇಲ್ಲ.

62 ಮನುಷ್ಯನಿಗೆ ಮೋಕ್ಷವನ್ನು ಕರ್ಮವೇ ಕಾರಣವಾಗಿರುವದು. ಆದರೆ ಮೊದಲು ಬಂಧಕವೆಂದು ಹೇಳಿದ ಕರ್ಮವೇ ಈಗ ಮೋಕ್ಷಕ್ಕೆ ಕಾರಣವಾಗುವದೇಕೆ ಎಂಬುದು ವಿಚಿತ್ರವಾಗಿ ತೋರಬಹುದು. ಇದು ಕೇವಲ ನಿರಾಧಾರವಾದ ಮಾತಲ್ಲ. 'ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ' [illegible] ಎಂದು ಗೀತೆಯು ಸಾರುತ್ತದೆ. ಇಲ್ಲಿ ಸನ್ಯಾಸವೆಂದರೆ ಫಲತ್ಯಾಗದಿಂದ ಮುಕ್ತಿಯು ದೊರೆಯುವದು. ಕರ್ಮದಿಂದಾದ ಬಂಧವನ್ನು ಕರ್ಮಯೋಗದಿಂದ ಕಳೆದುಕೊಳ್ಳಬೇಕು. [illegible] ಕ್ಷತ್ರಿಯ ಹುಟ್ಟಿದವನು [illegible] ಗುಣವಿಲ್ಲದೆ ಪಾಪಕ್ಕೆ [illegible] ಕೊಳೆಯನ್ನು ತೊಳೆಯುವದಕ್ಕೆ ಆದರ [illegible] ಬೇಕು. [illegible] ಎಂದರೆ ಆ ಎರಡರ [illegible] ಕೆಲವನ್ನು [illegible] ಪ್ರಾಂತವಾದ ಮನೆ [illegible] ಎಂಬುದು [illegible] ಆಗ್ರಹವಾದ ಆ ಕರ್ಮ ದೋಷಗಳನ್ನೆಲ್ಲಾ ಗಂಟು ಮನಸ್ಸು [illegible] ಆದರೆ ಕರ್ಮಫಲತ್ಯಾಗಗಳು ಒಡನೆ ಮನಶ್ಶಾಂತಿ ಮಾಡುವದು. [illegible] ಕರ್ಮವೆಂಬುದೊಂದು ಚಿಕಿತ್ಸೆಯು ಈ ರೀತಿ ಹಿಡಿದ ಮನಸ್ಸು ಶುದ್ಧವಾಗುವುದರಿಂದ ಆ ಕರ್ಮವು ಮೋಕ್ಷಕ್ಕೆ ಕಾರಣವು.

63 ಪ್ರತಿಯೊಬ್ಬನೂ ಸ್ವಾರ್ಥಪರನಾಗಿ ಇತರರ ಕಷ್ಟಸುಖಗಳನ್ನು ಲಕ್ಷಿಸದೆ ತನ್ನಷ್ಟಕ್ಕೆ ತಾನು ಜೀವಿಸುವದು ಒಂದು ದೊಡ್ಡ ತನವಲ್ಲ. ಜಾಣತನವೂ ಅಲ್ಲ. ಜನರು ಸ್ವದೇಶ ಸಭಾಷೆ ಸ್ವಧರ್ಮ ಇವುಗಳೆಲ್ಲದರ ವೃದ್ಧಿಗೆ ಬರಬೇಕೆಂಬ ಉದ್ದೇಶವನ್ನಿಟ್ಟುಕೊಂಡು ನಮ್ಮ ಕೈಲಾದ ಮಟ್ಟಿಗೆ ಪ್ರಯತ್ನಿಸುತ್ತ ಬಂದರೆ ಶೀಘ್ರದಲ್ಲಿಯೇ ದ [illegible] ಸಂಶಯವಿಲ್ಲ. ಹಾಗಲ್ಲದೆ "[illegible] ಇಲ್ಲದ ವಿಷಯಕ್ಕೆ ಹೋಗಬೇಡಿರಿ ದಿವಸ ಕಳೆಯಲು [illegible] ನಮ್ಮ ಪಕ್ಕ ನಾವಿದ್ದರಾಯಿತು [illegible] ಅದು ಗಟ್ಟಿಗರ ಕೆಲಸ ನಮ್ಮಿಂದೇನಾಗುತ್ತದೆ? ನಾವು ಎಲ್ಲರಿಗೂ ಒಳ್ಳೆಯವರಾಗಿದ್ದರಾಯಿತು" ಎಂದು ಹೇಳುತ್ತ ಪರಸ್ಪರ ದ್ವೇಷಾಸೂಯೆಗಳನ್ನಿಟ್ಟುಕೊಂಡು ಪರರು ಬದುಕಿದರೆ ನೋಡಿ ಸೈರಿಸದೆ [illegible] ತನವೇ ಬರಬೇಕೆಂದು ದುರಾಲೋಚಿಸುವ ನರಪಶುಗಳು ಈ ಭೂಮಿಯಲ್ಲಿದ್ದು ಫಲವೇನು? ಎಂತಹ ಮಹತ್ಕಾರ್ಯವಾದರೂ ಏಕಮತದಿಂದ ಸುಲಭಸಾಧ್ಯವಾಗುವದು. ಎರಡು ಕೈಗಳೂ ಕೂಡಿದರಲ್ಲವೇ ಚಪ್ಪಾಳೆ ಹಾಕುವದು? ದೇವಾಸುರರು ಒಂದಾಗಿ ಸಮುದ್ರವನ್ನು ಕಡೆಯದೆ ಇದ್ದರೆ ಅಮೃತವು ಸಿಕ್ಕುತ್ತಿತ್ತೆ? ಒಂದೇ ಎಂಬ ಕಾಗೆಯು ಗೂಗೆಗಳ ಗುಂಪಿಗೆ ಹೋಗಿ ಅವುಗಳ ಒಗ್ಗಟ್ಟನ್ನು ಮುರಿದದ್ದರಿಂದಲೇ ಅವುಗಳ ಸಂತತಿಯು ಹಾಳಾಯಿತಲ್ಲವೇ? ಆದರೆ ಒಗ್ಗಟ್ಟಿನಲ್ಲಿ ಬಲವಿದೆ ಎಂಬ ನಾಣ್ಣುಡಿಯನ್ನು ಯಾರೂ ಉದಾಸೀನ ಮಾಡತಕ್ಕದ್ದಲ್ಲವು. ಮುಂದಕ್ಕೆ ಬರತಕ್ಕವರಿಗೆ ಕೈಲಾದ ಮಟ್ಟಿಗೆ ಸಹಾಯ ಮಾಡಬೇಕಲ್ಲದೆ ಅವರ ಏಳಿಗೆಯನ್ನು ಯಾವ ವಿಧದಿಂದಲಾದರೂ ಮುರಿಯುವದು ಒಳಿತಲ್ಲವು.

"ಒಬ್ಬರಿಗಿಂತ ಇಬ್ಬರು ಲೇಸು ಹಬ್ಬಕ್ಕಿಂತ ಮದುವೆ ಲೇಸು."

ಸೂಚನೆ:—ಒಂದು ರೂಪಾಯಿಗಿಂತ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ನಾವಿರಾರುಗಳಾಗಿ, ಯೋಗ್ಯತಾಪತ್ರ

ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ — ಪೀನಸ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮೊದಲಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಡಬ್ಬಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಪೆಟ್ಟಿಗೆಯನ್ನು ಮಿಶ್ರಮಾಡಿದರೆ ಎಲ್ಲವೂ ಸುವಾಸನೆಯಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪ್ರಸಿದ್ಧ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೨೧] ಪೋ. ಬಾ. ೫೧೦ ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ ..	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡನೆಯ ಆವೃತ್ತಿ) ..	೧ ಆಣೆ
ಸನ್ಯಾಸಾಶ್ರಮನಿರ್ಣಯ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೨ನೆಯ ಆವೃತ್ತಿ) .	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ) ...	೧ ಆಣೆ
ಶಿವಾದ್ವೈತ ಸಿದ್ಧಾಂತದರ್ಪಣ (೪ನೆಯ ಆವೃತ್ತಿ) ...	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ) ..	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ವರೂಪಸ್ತವನದೀಪಿಕೆ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತವಿಚಾರಮೀಮಾಂಸಾ ..	೩ ಆಣೆ
ವೀರಶೈವಾಚಾರಪದ್ಧತಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) . ..	೪ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಸಟೀಕ ಕವಿಕೃತ)	೮ ಆಣೆ
ಜಾತಿವಿಧ್ವಂಸ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿ ಉಪನ್ಯಾಸ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री याचें भाषण (मराठी) .	८ आणे
Speeches by Pandit Shri Kashinatha Shastri (*English*)	12 As
ವೀರಶೈವಮತ (೪ನೆಯ ಆವೃತ್ತಿ)	೧೨ ಆಣೆ
ಪ್ರತಿಕಶಿವಪೂಜಾವಿಧಿ (ವೈದಿಕಸೂತ್ರಯುಕ್ತವಾದ ಅನೇಕ ಸುಂದರವಾದ ಚಿತ್ರ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸುಪ್ರಭಾತ ಸ್ತೋತ್ರ	೧೨ ಆಣೆ
ವೀರಶೈವ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾದ್ವೈತಸಿದ್ಧಾಂತದರ್ಪಣ ..	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಜಾಬಾಲ್ಯುಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ) .	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೦ ಪುಟ)	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಮಹಾರಾಜರ ರಸ್ತೆಯಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮ್ಯಾನೇಜರ್ ಶ್ರೀ|| ಬ್ರ|| ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಕ್ಷರ್ಯಾಸನಪಂಕಜಾತಜಭವರ್ ಪಂಚಾಕ್ಷಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ಬೆಳ್ಳಿ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ ನೇ ಸೆಪ್ಟೆಂಬರ್ ೧೯೩೫ [ಸಂಚಿಕೆ ೧೮

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯುವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸದೇ ಇಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯುವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧೨ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶ್ರೀ ಜಗದ್ಗುರು ರೇಣುಕಾಚಾರ್ಯಾಃ ಪ್ರಸೀದತು.

ಗುರುಪಾದಪೂಜೆಯೂ ರೇಣುಕವಿಜಯ ಪುರಾಣಶ್ರವಣವೂ.

ಪರಮಪವಿತ್ರವಾದ ಶಳಿಸ ಶ್ರಾವಣಮಾಸದಲ್ಲಿ ಶಿವಮೊಗ್ಗಾ ಜಿ|| ಆಯನೂರು ಮತ್ತು ಹಾರನಹಳ್ಳಿ ಗ್ರಾಮದ ಸದ್ಭಕ್ತ ಮಹಾಶಯರು ಶ್ರೀಮನ್ಮಹಲಿ ಬೃಹನ್ಮಠದ ಪಟ್ಟಾಧ್ಯಕ್ಷ ಶ್ರೀ ಗುರುನಾಗಾರ್ಜುನ ಶಿವಾಚಾರ್ಯಸ್ವಾಮಿಗಳವರನ್ನು ತಮ್ಮ ತಮ್ಮ ಗೃಹಗಳಿಗೆ ಬಿಜಯಂಗೈಸಿಕೊಂಡು ಪಾದಪೂಜೆಯನ್ನು ಮಾಡಿ ಕಾಣಿಕೆಯನ್ನು ಸಮರ್ಪಿಸಿದರು. ನಿತ್ಯವೂ ಸಾಯಂಕಾಲ ಆಯನೂರು ಗ್ರಾಮದಲ್ಲಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ವೇ|| ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರಿಂದ ಶ್ರೀ ರೇಣುಕವಿಜಯ ಪುರಾಣವನ್ನು ಶ್ರವಣಮಾಡಿ ಮಹಾ [illegible] ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯರ ಅದ್ಭುತ ಲೀಲೆಗಳನ್ನೂ [illegible]

[illegible] ಶ್ರೀಗುರುಸೇವಾದ್ವಾರಾ ಅಂತಹ ಸುಯೋಗವು ಲಭಿಸಿದುದಕ್ಕಾಗಿ ಗುರುಭಕ್ತಿಯುತರಾದ ಆನಂದೋದ್ಗಾರವನ್ನು [illegible] ಶ್ರೀಗಳವರ ತ್ರಿಕಾಲಪೂಜಾವೈಭವಕ್ಕೆ ಸಂತುಷ್ಟರಾಗಿ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಪುರಾಣವನ್ನು ಸಮಾಪ್ತಗೊಳಿಸಿದರು. ಈ ರೀತಿಯಾಗಿ ಶ್ರಾವಣಮಾಸದಲ್ಲಿ ನಡೆಯಿಸಿದ ಶ್ರೀಗುರು ಪಾದಪೂಜಾ ಹಾಗೂ ಪುರಾಣಶ್ರವಣದ [illegible] ಪಂಚಾಚಾರ್ಯ ಪ್ರಭಾಪೋಷಕರಾಗಿ [illegible] ವೇ|| ಶಿವಕಥಾ ಪಂಡಿತ ಶಿವರುದ್ರಶಾಸ್ತ್ರಿಗಳವರ ವಶಕ್ಕೆ ಕೊಟ್ಟರು. ಆಯನೂರು ಮತ್ತು ಹಾರನಹಳ್ಳಿ ಗ್ರಾಮದ ವೀರಶೈವ ಸದ್ಭಕ್ತರೇ ಧನ್ಯರು.

ಓರ್ವ ಗುರುಚರಣಸೇವಾಭಿಲಾಷಿ.

ಶ್ರೀ ರೇಣುಕವಿಜಯ ಮಹಾಪುರಾಣ ಸಮಾರಂಭ

[illegible]

[illegible] ಈ ಯುವಸಂವತ್ಸರ ಶ್ರಾವಣ ಶು|| ೮ ಗುರುವಾರದಿಂದ [illegible] ಶ್ರೀ ಪಂಚಾಚಾರ್ಯ ಭಜನಾಸಂಘದವರಿಂದ ೧ ಘಂಟೆಯವರೆಗೆ ಗುರುಭಜನೆಯೂ ನಡೆಸುತ್ತಿದ್ದರು. [illegible]

ಪ್ರತ್ಯಕ್ಷದರ್ಶಿ.

ಶ್ರೀಜಗದ್ಗುರು ಪಂಚಾಚಾರ್ಯರ ಮಹಿಮೆಯು.

[illegible] ಈ ಗ್ರಾಮಕ್ಕೆ ಮಳೆಯಾಗದೆ [illegible] ಶ್ರೀ ಗುರು ಸಾರ್ವಭೌಮ ಪಂಚಾಚಾರ್ಯರ ಭಜನೆಯನ್ನು [illegible] ತಾ|| ೧ ರಿಂದಲೂ ಪ್ರತಿ ದಿವಸ [illegible] ೬ ಘಂಟೆಯಿಂದ ೮ ಘಂಟೆಯವರೆಗೆ ನಾನಾವಿಧ ಸಂಗೀತ ವಾದ್ಯಗಳೊಡನೆ ಅನೇಕ ಜನ ಭಕ್ತಮಹೇಶ್ವರರೊಡಗೂಡಿಕೊಂಡು ಭಜನೆಯನ್ನು [illegible] ತಾ|| ೧೨, ೧೩, ೧೪, ತಿಥಿಗಳಲ್ಲಿ [illegible] ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆಯನ್ನು [illegible]

[illegible]

ಪತ್ರವ್ಯವಹಾರ.

ಬಾತ್ಮೀದಾರರು ಬರೆಯುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸಹೃದಯರು ಲಕ್ಷ್ಯವಿಟ್ಟಿರಬೇಕು

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಪುರಾಣಸಮಾಪ್ತಿ ಮಹೋತ್ಸವ
ಶ್ರೀ ನುಹಂತಿನಮಠ,
ಬೆಂಗಳೂರು ಸಿಟಿ

ಮುರ್ಖಂ ಪಾಪುಸ್ತು ನ್ಯಸ್ತ ಪನಸಂ ಚ ಕಲಾಪಕಂ
ಯೋ ನ ಜಾನಾತಿ ಹೇ ದೇವಿ ತೇ ನಾಂ ಜನ್ಮ ನಿರರ್ಥಕಂ

ಎಂದು ಶಿ ಪಾರ್ವತಿಗೆ ಶಿವನು ಹೇಳಿದ ಪ್ರಕಾರ ಪುರಾಣ ಶ್ರವಣದಿಂದ ಜ್ಞಾನವೂ ಧರ್ಮವೂ ಅದರ ಮೂಲಕ ಮೋಕ್ಷವೂ ದೊರೆಯುವವೆಂದು ಸಕಲ ವೇದಶಾಸ್ತ್ರಗಳಿಂದಲೂ ಶ್ರೀ ಪರಶಿವನಿಂದಲೂ ತಿಳಿಸಲ್ಪಟ್ಟಿದೆ. ಅವನ ಪವಿತ್ರವಾದ ಚರಿತ್ರೆಯನ್ನು ಹೇಳುವ ಪುರಾಣವನ್ನು ಕೇಳುವದರಿಂದ ಜನರಿಗೆ ನೀತಿಯೂ ಧರ್ಮವೂ ದೊರೆಯುವದೆಂಬುದು ನಿಶ್ಚಯವಾಗಿದೆ. ಆದರೆ ಅದನ್ನು ಕೇಳುವವರು ಶ್ರದ್ಧಾಭಕ್ತಿಗಳಿಂದ ಕೇಳಬೇಕು. ಆ ವಿಷಯದಲ್ಲಿ ಶ್ರವಣ ಭಕ್ತಿಯು ಮುಖ್ಯವಾದದ್ದು. (ಶ್ರವಣ ಭಕ್ತಿ) ಪುರಾಣ ಶ್ರವಣವಿಲ್ಲದೆ ಜ್ಞಾನವು ಆಗುವದು ಸಾಧ್ಯವಿಲ್ಲ. ಅದರಿಂದ ಶ್ರವಣ ಭಕ್ತಿಯು ಮುಖ್ಯವಾದುದು. ಅದಕ್ಕಾಗಿ ಶ್ರವಣವಿಲ್ಲದ ಜನರು ಜ್ಞಾನವನ್ನು ಹೊಂದಲಾರರು. ಅದರಿಂದ ಶ್ರೀ ಪರಶಿವನು ಶ್ರವಣ ಭಕ್ತಿಯನ್ನು ಹೇಳಿದ್ದಾನೆ. ಅದು ಹೇಗೆಂದರೆ ಶ್ರವಣವು ಜ್ಞಾನಕ್ಕೆ ಕಾರಣವಾಗಿದೆ. ಜ್ಞಾನದಿಂದ ಮುಕ್ತಿಯುಂಟಾಗುವದು. ಆದ್ದರಿಂದ ಸುಜ್ಞಾನಿಗಳಾದ ಪ್ರಾಚೀನರು ಶ್ರವಣವನ್ನು ಬಹಳವಾಗಿ ಹೊಗಳಿದ್ದಾರೆ. ಶಾಸ್ತ್ರವನ್ನು ಓದಲಾರದವರು ಅದರ ಅರ್ಥವನ್ನು ತಿಳಿಯಲಾರದವರು ಪುರಾಣ ಶ್ರವಣ ಮಾಡಿ ಜ್ಞಾನವನ್ನು ಹೊಂದಬಹುದು. ಹೀಗೆ ಜ್ಞಾನವನ್ನು ಹೊಂದಿದವರಿಗೆ ಪರಮಾತ್ಮನು ಪ್ರಸನ್ನನಾಗುವನು. ಶ್ರವಣದಿಂದ ಮನಸ್ಸು ಶುದ್ಧವಾಗಿ ಭಕ್ತಿಯು ಹೆಚ್ಚುವದು. ಶಿವನು ಕೊಟ್ಟ ಸಾಧನಗಳಾದ ಶ್ರವಣಾದಿಗಳು ಪರಮಾತ್ಮನಿಗೆ ಸಂತೋಷಕರಗಳಾದ ಕೃತಿಗಳಾದ ಕಾರಣ ಅವುಗಳನ್ನು ಆಚರಿಸುವವರಿಗೆ ಫಲವು ದೊರೆಯುವದು. ಆ ಮೇಲೆ? ಎಂದು ಮತ್ತೆ ಕೇಳಿದರೆ—ಅದಕ್ಕೆ ಆದ್ಯ ಆಚಾರ್ಯರು ಹೇಳಿರುವ ಉಪದೇಶವನ್ನು ಅವಲಂಬಿಸಿ ಶಿವನು ಸಕಲಾಧಾರವಾದ ಜೀವರಿಗೆ ಆಧಾರವನ್ನು ಕೊಟ್ಟಿರುವನು. ಪ್ರಾಣಿಗಳಿಗೆ ಹಿತವು ಯಾವುದರಿಂದಾಗುವದು ಎಂಬುದನ್ನು ಉಪದೇಶಗಳಿಂದ ತಿಳಿಸುವನು. ಅನ್ಯೋಪದೇಶಗಳಿಗೆ ಹಿತವು ಯಾವದರಿಂದ ಉಂಟಾಗಬೇಕು? ಎಂದು ಕೇಳಿದರೆ ಅದು ಮುಮುಕ್ಷುಗಳಾದ ಉತ್ತಮ ಭಕ್ತರಿಗೆ ಸಮಾನವಾಗಿರುವದು. ಆದುದರಿಂದ ಎಲ್ಲರಿಗೂ ಆಧ್ಯಾತ್ಮ ಜ್ಞಾನವೇ ಮುಖ್ಯ ಆಧಾರವಿಲ್ಲದಿದ್ದರೆ ಸ್ವಾತಂತ್ರ್ಯವು ದೊರೆಯದು. ಜ್ಞಾನಿಗಳಿಗೆ ಆಗಲೇ ಮುಕ್ತಿಯು ದೊರೆಯುವದೆಂಬುದು ಸಿದ್ಧವಾಗುತ್ತದೆ. ಹೀಗೆ ವಿಚಾರಿಸುತ್ತ ನೋಡಿದರೆ "ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ" ಎಂಬ ಉಪನಿಷದ್ವಾಕ್ಯಕ್ಕನುಸಾರವಾಗಿ ಶಿವನನ್ನು ತಿಳಿದ ಮುಮುಕ್ಷುಗಳೆಲ್ಲರೂ ಶಾಂತಿಯನ್ನು ಹೊಂದುವರು ಎಂಬುದು ಸ್ಪಷ್ಟವಾಗುತ್ತದೆ. ಹಾಗಾದರೆ ಆ ಶಿವಮಹಿಮೆಯನ್ನು ತಿಳಿಯುವ ಬಗೆ ಹೇಗೆ? ಎಂಬ ಪ್ರಶ್ನೆಯು ಉಂಟಾಗುವದು. ಅದನ್ನು ತಿಳಿಯಬೇಕಾದರೆ ಸದ್ಗುರುವಿನ ಉಪದೇಶವೇ ಸಾಧನವಾಗಿರುವದು. "ಯಥಾ ಜಾತ್ಯಂಧಸ್ಯ ರೂಪಜ್ಞಾನಂ ನ ವಿದ್ಯತೇ ತಥಾ ಗುರೂಪದೇಶೇನ ವಿನಾ ಕಲ್ಪಕೋಟಿಭಿಸ್ತತ್ತ್ವಜ್ಞಾನಂ ನ ವಿದ್ಯತೇ" ಎಂಬ ಶ್ರುತಿವಾಕ್ಯಾನುಸಾರವಾಗಿ ಹುಟ್ಟು ಕುರುಡನಿಗೆ ಹೇಗೆ ರೂಪಜ್ಞಾನವಿರುವದಿಲ್ಲವೋ ಹಾಗೆಯೇ ಗುರೂಪದೇಶವಿಲ್ಲದವನಿಗೆ ಅನೇಕ ಕೋಟಿ ಕಲ್ಪಗಳವರೆಗೂ ತತ್ತ್ವಜ್ಞಾನವು ಅಥವಾ ಶಿವಜ್ಞಾನವು ಆಗುವದಿಲ್ಲ. ಆದುದರಿಂದ ಗುರೂಪದೇಶವು ಅವಶ್ಯಕವಾದುದು. 'ಪ್ರಶಸ್ತಾ ಉಪಾಸನಾ ಆಚಾರ್ಯವಾನ್ ಪುರುಷೋ ವೇದ. ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಂ' ಇತ್ಯಾದಿ ವಿಷಯೋಕ್ತಿಗಳು ಅನೇಕ ಉಪದೇಶ ಎಂಬ ಪ್ರಕರಣದಲ್ಲಿಯು ಸದಾಚಾರವನ್ನು ಶಾಸ್ತ್ರಸಮ್ಮತವಾಗಿ ಗುರುವು ಶಿಷ್ಯನಿಗೆ ತಿಳಿಸಿಕೊಡುವದೇ ಉಪದೇಶವೆಂದು ಅರ್ಥವಾಗುತ್ತದೆ. ಶ್ರೀಗುರುವು ಶಿಷ್ಯನಿಗೆ ಹೇಳುವ ವಾಕ್ಯಸಮೂಹವೇ ಉಪದೇಶವಾಗಿರುವದು. ವಿಶೇಷವಾದ ಶ್ರದ್ಧೆಯಿಂದ ಕೇಳುವ ಶಿಷ್ಯನ ಹೃದಯಕ್ಕೆ ಅರಿಯುವಂತೆ ಪರಿಣಾಮಿಸುವಂತೆ ಆ ವಾಕ್ಯವು ಗುರುಮುಖದಿಂದ ಹೊರಡಬೇಕು. ಹಾಗೆ ಉಪದೇಶವೆಂದು ಹೇಳಿಕೊಂಡರೂ ಶಿಷ್ಯನ ಕರ್ಣದಲ್ಲಿ ಬೀಳುವಾಗ ಶ್ರವಣವಾಗಿ ಪರಿಣಮಿಸುವದು. ಹೇಳುವದು ಬಾಯಿಯಿಂದ ಆದ ಹಾಗೆ ಕಿವಿಯಿಂದಾಗದಂತೆ; ಕೇಳುವದು ಕಿವಿಯಿಂದಾದ ಹಾಗೆ ಬಾಯಿಯಿಂದಾಗುವುದೂ ಶಕ್ಯವಿಲ್ಲ. ಒಂದು ಪಕ್ಷದಲ್ಲಿ ನಾವು ಪ್ರತಿ ಶಿಷ್ಯನಿಗೂ ಗುರುಗಳು ಬೇರೆಯಾದರೂ ಗಮನಿಸಿದರೆ ಸಾಮಾನ್ಯವಾಗಿ ಒಂದೇ ಆದದ್ದಾಗಿ ಉಪದೇಶ ಶ್ರವಣಗಳೆರಡೂ ಘಟಿಸುವಂತೆ ನಾವು ಹೇಳುವಂತೆ ಉಪದೇಶವಾದರೂ ಉಪದೇಶ ಶ್ರವಣಗಳಿಗೆ ಸಾಧನಗಳಿಂದ ಬಾಯಿ ಕಿವಿಗಳೂ ಎಂದೂ ಒಂದಾಗುವದಿಲ್ಲ. ಕೊನೆಯಲ್ಲಿ ಉಪದೇಶವನ್ನು ಶ್ರವಣಮಾಡಿದನೆಂದು ಹೇಳುವ ಹಾಗೆ ಶ್ರವಣವನ್ನು ಉಪದೇಶಿಸಿದನೆಂದು ಯಾರೂ ಹೇಳರು ಅಷ್ಟೆ.

ಉಪದೇಶ ಶ್ರವಣವಿಲ್ಲದಿದ್ದರೆ ಯಾವ ಕಾರ್ಯವೂ ಸಾಗುವದಿಲ್ಲವೆಂದು ಎಲ್ಲರೂ ತಿಳಿಯುವದಾಗಿದೆ. ಹಾಗಾದರೆ ನಾವು ಅದಕ್ಕೆ ಶ್ರವಣವೆಂಬುವ ಇಲ್ಲದುದರಿಂದ ಸುಜ್ಞಾನಿಗಳಾದ ಪ್ರಾಚೀನ ಕಾಲದ ಗುರುಗಳು ಅಲ್ಲಿ ಶ್ರವಣವಿಲ್ಲದಿದ್ದರೂ ಕಾರ್ಯವಾಗಬಹುದೆಂದರೆ ಆ ಸೃಷ್ಟಿಯು ಶ್ರವಣದಿಂದಾದುದು ನಮಗೆ ವಿದಿತವಾಗುತ್ತದೆ. ಹೀಗೆ ತಿಳಿಯದಿದ್ದರೆ ಗತ್ಯಂತರವಿಲ್ಲ. ಮಾತು ನಾದದಿಂದ ಯಾವ ಶಬ್ದವೂ ನಮ್ಮ ಕಿವಿಯಲ್ಲಿ ಬಿದ್ದರೆ ಎಲ್ಲರೂ ಮೂಕರಾಗಿ ಜಗತ್ತೇ ಶಬ್ದಶೂನ್ಯವಾಗಿ ಪ್ರಪಂಚದಲ್ಲಿ ಏನೇನೋ ಅನರ್ಥಪರಂಪರೆಗಳು ಪಸರಿಸುತ್ತಿದ್ದವು. ಈಗಿನ ಕಾಲದಲ್ಲಿ ಕಲ್ಲು ಕಟ್ಟಿಗೆ ಶಬ್ದಗಳ ಮೊದಲಾದವುಗಳಲ್ಲಿಯೂ ಉಪದೇಶ ಶಕ್ತಿಯಿದ್ದು ಅವುಗಳನ್ನು ಮನಃಪೂರ್ವಕವಾಗಿ ಕೇಳುತ್ತಿದ್ದರೂ ಜನರು ತಾತ್ಪರ್ಯವಿಶಿಷ್ಟ ತಾಂತ್ರಿಕತೆ ಕಲಿತವರಾಗಿದ್ದರೂ ಈ ಉಪದೇಶ ಶ್ರವಣಗಳು ಜಗತ್ತಿನಲ್ಲಿ ಇಲ್ಲದಿದ್ದರೆ ಗತಿಯೇನು? ಈ ಉಪದೇಶ ಶ್ರವಣಗಳಿಂದಲೇ ಪ್ರಾಚೀನಕಾಲದಿಂದ ಇಲ್ಲಿಯವರೆಗೂ ಹರಿದು ಬಂದಿದೆ. ಇದಲ್ಲದೆ ಮುಂದೆ ಬರುವುದೂ ಹರಿಯುತ್ತಿರಬೇಕಾಗಿದೆ. ಇಲ್ಲಿಗೇ ನಿಲ್ಲದೆ ಕೆಂಪರೆ ನಿಲ್ಲುವದೂ ಇಲ್ಲ. ನಂತರ ಕೇಳಿದವು ಸಹ ಹಾಗೆಯೇ ಇಲ್ಲ. ಆದರೆ ಜ್ಞಾನಿಗಳು ಶ್ರವಣಮಾಡಿ ನಾದಿಯಲ್ಲಿ ಶ್ರವಣವನ್ನೇ ಮೊದಲು ಮಾಡಿರುವರು. ಶ್ರವಣವೂ ಉಪದೇಶಾಧೀನವಾಗಿರುವದು. ಲೋಕ ಸಾಧಕರ ಶ್ರವಣವು ಸಹಕಾರಿಯಾಗಿದೆ. "ಶ್ರುತ್ವಾ ಧರ್ಮಂ ವಿಜಾನಾತಿ ಶ್ರುತ್ವಾ ತ್ಯಜತಿ ದುರ್ಮತಿಂ | ಶ್ರುತ್ವಾ ಜ್ಞಾನಮವಾಪ್ನೋತಿ ಶ್ರುತ್ವಾ ಮೋಕ್ಷಂ ಚ ವಿಂದತಿ ||" ಎಂಬ ಶ್ರುತಿಯು ಶ್ರವಣದ ಮಹತ್ವವನ್ನು ತಿಳಿಸುತ್ತದೆ. ಆ ಶ್ರವಣದಿಂದ ಧರ್ಮವು ತಿಳಿಯುವದು (ಲೋಕ ಧರ್ಮ ವಿಜ್ಞಾನ) ದುರ್ಮತಿಯು ಹೋಗುವದು. ಆ ಶ್ರವಣದಿಂದ ಶಿವಜ್ಞಾನವೂ ದೊರೆಯುತ್ತದೆ. ಆ ಲೋಕಾನುಭವಗಳಿಂದ ಬೇರೆ ಕಾರ್ಯವನ್ನು ಸಾಧಿಸಬಹುದು. ಈ ಲೋಕವು ಕೇವಲ ಲೌಕಿಕ ಫಲಪ್ರಾಪ್ತಿಯನ್ನು ಬೋಧಿಸುತ್ತದೆ. ಸ್ಮೃತಿಪುರಾಣಾದಿಗಳಲ್ಲಿ ಸನಾತನ ವೃತ್ತಿಯುಳ್ಳ ಮೋಕ್ಷಪ್ರಾಪ್ತಿಯು ಲೋಕಾನುಭವವನ್ನು ಬಯಸುವದಿಲ್ಲ. ಆ ಲೋಕಾನುಭವಗಳಿಂದ ಯಾವ ಕಾರ್ಯವೂ ಸಾಧಿಸಬಹುದು. ಈ ಲೋಕವು ಕೇವಲ ಲೌಕಿಕಫಲಪ್ರಾಪ್ತಿಯನ್ನು ಬೋಧಿಸುತ್ತದೆ. ಸ್ಮೃತಿಪುರಾಣಾದಿಗಳಲ್ಲಿ ಸನಾತನವೃತ್ತಿಯುಳ್ಳ ಮೋಕ್ಷಪ್ರಾಪ್ತಿಯು ಲೋಕಾನುಭವವನ್ನು ಬಯಸುವದಿಲ್ಲ. ಆ ಲೋಕಾನುಭವಗಳಿಂದ ಅನಂತ ಸುಖವನ್ನು ಸಂಪಾದಿಸುವ ಹಂಬಲವೂ ನಮಗಿಲ್ಲ. ಅಂದರೆ ಜನರಲ್ಲಿ ಲೋಕವು ಬಾಧ್ಯವಾಯಿತೆಂದು ಅರ್ಥವಲ್ಲ, ಪರಂತು ಅದರ ಸರ್ವತೋವ್ಯಾಪ್ತಿಯುಳ್ಳ ಲೋಕಾನುಭವಗಳು ಅನುಷಂಗಿಕವಾಗಿರುವದೆಂಬ ಭಾವವು. ಪರಮಾರ್ಥದಿಂದ ಲೌಕಿಕಕ್ಕೆ ಇಳಿಯುವದಕ್ಕಿಂತಲೂ ಲೌಕಿಕದಿಂದ ಪರಮಾರ್ಥವನ್ನು ಸೇರುವದು ಸಮಂಜಸವೂ ರೀತಿಯೂ ಆಗಿದೆ. ನಿಜವು ಉತ್ಪನ್ನವಾಗದಿಲ್ಲದೆ ಉತ್ಪನ್ನವಾಗುವದು ವಿಹಿತವಾಗಿಲ್ಲ. ಅಂಕುರವು ಮರವಾಗುವ ಹಾಗೆ ಮರವು ಅಂಕುರಸ್ವರೂಪಕ್ಕೆ ಬರುವದಿಲ್ಲ. ಆದುದರಿಂದ ನಮಗೆ ಲೌಕಿಕದಿಂದ ಪರಮಾರ್ಥವನ್ನು ಸಂಪಾದಿಸುವದೇ ಹೆಚ್ಚು ರೀತಿಯಾಗಿ ತೋರುವದರಿಂದ ಅಂತಹ ಮಾರ್ಗವನ್ನೇ ಹುಡುಕುವಾ!

'ಶ್ರುತ್ವಾ ಧರ್ಮಂ ವಿಜಾನಾತಿ ಶ್ರುತ್ವಾ ತ್ಯಜತಿ ದುರ್ಮತಿಂ |
ಶ್ರುತ್ವಾ ಜ್ಞಾನಮವಾಪ್ನೋತಿ ಶ್ರುತ್ವಾ ಮೋಕ್ಷಂ ಚ ವಿಂದತಿ ||'

ಎಂಬ ಪ್ರಮಾಣವನ್ನು ಹಿಂಬಾಲಿಸಿದರೆ ಶ್ರವಣಬಲದಿಂದ ಇತರರೆಲ್ಲರನ್ನು ಅನಾಯಾಸವಾಗಿ ಸಂಪಾದಿಸಬಹುದಾಗಿದೆ. ಶ್ರವಣದಿಂದ ಮನುಷ್ಯನು ಧರ್ಮವನ್ನು ಅಂದರೆ ಕರ್ತವ್ಯಾಕರ್ತವ್ಯಗಳನ್ನು ತಿಳಿಯುತ್ತಾನೆ. ಕಾರ್ಯಾಕಾರ್ಯಗಳ ವಿಚಾರದಿಂದ ದುರ್ಮತಿಯನ್ನು ಬಿಡುತ್ತಾನೆ. ದುರ್ಮತಿಯು ಅಕಾರ್ಯಗಳ ಉಗಮಸ್ಥಲವಾಗಿದೆ. ಧರ್ಮಜ್ಞಾನದಿಂದ ದುರ್ಮತಿಯು ನಾಶವಾಗುತ್ತದೆ. ಎಲ್ಲಿಯವರೆಗೆ ದುರ್ಮತಿಯು (ವಿಪರೀತಭಾವನೆಯು) ನಾಶವಾಗುವದಿಲ್ಲವೋ ಅಲ್ಲಿಯವರೆಗೆ ಜ್ಞಾನೋದಯವಾಗುವದಿಲ್ಲ. ಜ್ಞಾನಿಯಾದ ಮನುಷ್ಯನಿಂದ ಅಕಾರ್ಯಗಳು ಘಟಿಸುವದಿಲ್ಲ. ಅಕಾರ್ಯಗಳು ಘಟಿಸದಿದ್ದಲ್ಲಿ ದುರ್ಬುದ್ಧಿಯೂ ಇರುವದಿಲ್ಲ. ಕೊನೆಯಲ್ಲಿ ರಾವ ಅಗ್ನಿಯು ಮೆಲ್ಲಮೆಲ್ಲನೆ ಅಂತರ್ಮುಖವಾಗುತ್ತ ಬೂದಿಯಾಗಿ ಸಾತ್ವಿಕಭಾವವನ್ನೇ ಹೊಂದುವದಾಗಿ ಅಕಾರ್ಯಗಳಿಲ್ಲದಲ್ಲಿ ದುರ್ಮತಿಯು ಇಲ್ಲವೆಂದು ಸ್ಪಷ್ಟವಾಗಿಯೇ ತಿಳಿಯಬರುತ್ತದೆ. ದುರ್ಮತಿ ಇಲ್ಲದಿರುವಿಕೆಯೇ ಜ್ಞಾನದ ಕುರುಹು. ಹೀಗಿಲ್ಲದೆ ಜ್ಞಾನಿಯಾಗಿಯೂ ದುಷ್ಕಾರ್ಯಗಳನ್ನು ಮಾಡುವದೆಂದರೆ 'ಜ್ಞಾನಂ ಭಾರಃ ಕ್ರಿಯಾಂ ವಿನಾ' ಎಂಬ ವಾಕ್ಯವನ್ನೇ ಅವಲಂಬಿಸಬೇಕಾಗುತ್ತದೆ. ಇನ್ನು ಜ್ಞಾನವಿಲ್ಲದಿದ್ದರೆ ಮೋಕ್ಷವೂ ಲಭಿಸುವದಿಲ್ಲ. 'ಜ್ಞಾನವಿಹೀನಃ ಸರ್ವಮತೇನ ಮುಕ್ತಿಂ ನ ಭಜತಿ ಜನ್ಮಶತೇನ' ಇತ್ಯಾದಿ ವಾಕ್ಯಗಳು ಅದಕ್ಕೆ ಪೋಷಕಗಳಾಗಿವೆ. ಮೋಕ್ಷಾಪೇಕ್ಷೆಯಿಲ್ಲದವನು ಮನುಷ್ಯನೇ ಅಲ್ಲ. ಯಾವ ಪ್ರಾಣಿಯೂ ಹೇಳಲಿಕ್ಕೆ ಬರುವಹಾಗಿಲ್ಲ. ಹೀಗೆ ಮೇಲುದಾಹರಿಸಿದ 'ಶ್ರುತ್ವಾ ಧರ್ಮಂ ವಿಜಾನಾತಿ' ಎಂಬ ಶ್ಲೋಕವನ್ನು ಸಮಾಲೋಚಿಸಿ ವಿಮರ್ಶಿಸಿದರೆ ಶ್ರವಣದ ಬಲದಿಂದ ಲೌಕಿಕ ಪಾರಮಾರ್ಥಿಕವಾದ ಧರ್ಮಜ್ಞಾನವೂ (ಕಾರ್ಯಾಕಾರ್ಯವಿಚಾರವೂ) ಹಾಗೆಯೇ ದುರ್ಮತಿಯ ಪರಿತ್ಯಾಗವೂ, ಅದರಿಂದ ಜ್ಞಾನೋದಯವೂ, ತನ್ಮೂಲಕ ಮೋಕ್ಷಪ್ರಾಪ್ತಿಯೂ ಆಗುವದೆಂದು ಶಾಸ್ತ್ರಸಮ್ಮತವಾಗಿ ಖಚಿತವಾಗುವದರಿಂದ ಸರ್ವಶ್ರೇಷ್ಠ ಶ್ರವಣವೇ ಮುಖ್ಯವಾಗಿದೆಯೆಂದು ಹೇಳಿದ ಹಾಗಾಗುತ್ತದೆ. ಇಂತಹ ಅನ್ಯಾದೃಶ ಶ್ರವಣದಲ್ಲಿ ಜನರ ಆಸಕ್ತಿಯು ಅನೇಕವಿಧವಾಗಿರುವದು. ಉಪದೇಶ ಶ್ರವಣಾದಿಗಳು ಕೇವಲ ಲೋಕಶ್ರವಣವಾಗಿರುವದಿಲ್ಲ. ತಮ್ಮ ಆಸ್ತಿಯ ಬಲವುಳ್ಳವರಿಗೆ ಬೇಕಾದ ಹಾಗೆ ಅಡಚಣೆಯಿಲ್ಲದಾಗಿಯೂ ಬಾಕಿ ಪ್ರವಚನಗಳಿರುವವು. ಮನೆಯಲ್ಲಿ ಹೊತ್ತುಹೋಗದೆ ಯುವಕರು ಸಾಧ್ಯವಿಲ್ಲದೆ ಜಾರಪಟ್ಟು ಏನೋ ಸ್ವಲ್ಪ ಸಮಯ ಕಳೆಯಲೆಂದು ಬರುವವರು ಕೆಲವರು. ಅಭಿಪ್ರಾಯವು ಕೆಲವರು ಮನೆಯಲ್ಲಿ ಮಾತಿಯಲಾರದೆ ಸಮುಪದೇಶದ ಶ್ರವಣಕ್ಕೆ ಕಿರಿದಿಂದ ಮನಸ್ಸನ್ನು ಬಿಡುವರು. ಇನ್ನು ಕೆಲವರು ಅರ್ಥವಿಲ್ಲದವರಿಗೆ ಮನಸ್ಸಿಗೆ ಬಂದುದೆಲ್ಲವನ್ನು ಮಾಡಿ ಗಂಟುಹೋಗಿ ಬೇಸರವಾದ ವೇಳೆ 'ವೃದ್ಧಾ ನಾರೀ ಪತಿವ್ರತಾ' ಎಂಬಂತೆ ಶ್ರವಣ ಸುಖವನ್ನು ಪಡೆಯಲು ಬರುವವರು ಕೆಲವರು. ನಾವು ಬಹಳ ಜನರಲ್ಲಿ ಕೇಳಿಸಿಕೊಂಡು ದೊಡ್ಡ ಮನುಷ್ಯರಾಗಬೇಕೆಂದು ಧರ್ಮ ಸಭೆಗಳಲ್ಲಿ ಆಸಕ್ತರಾಗುವರು. ಬೇರೆ ಕೆಲವರು 'ನಾವು ಪುರಾಣಪ್ರವಚನಗಳನ್ನು ಹೇಳಿಸಿದೆವು' ಎಂಬ ಕೀರ್ತಿಯನ್ನು ಪಡೆಯಲು ಸಮುಪದೇಶಕರಾಗುವರು. ಇನ್ನು ಕೆಲವು ಮಹಾಶಯರು 'ಶಿವಾ ಪತಿವ್ರತಾ ಭಾರ್ಯಾ ದಾತಾ ಚ ಕುಲಟಾಯತೇ' ಎಂಬಂತೆ ತಾವು ಮಾಡಿ-ಮಾಡುತ್ತಿರುವ ದುಷ್ಕಾರ್ಯಗಳನ್ನು ಮುಚ್ಚಿಕೊಳ್ಳುವದಕ್ಕಾಗಿ ಅಂತಹ ಸ್ಥಳಕ್ಕೆ ಬರುವರು. ಮತ್ತೆ ಕೆಲವರು ಪುರಾಣವೆತ್ತಿಯನ್ನು ತಿರಿಸಿ ಬಾಯಿ ಹೇಗೆ ಹೇಳುವರೆಂದು ಪರೀಕ್ಷಿಸಿ ಗುಣಗಳನ್ನು ಗ್ರಹಿಸದೆ ಅಲ್ಪದೋಷವೇನಾದರೂ ಇದ್ದರೆ ಅದನ್ನೇ ಪರ್ವತಾಕಾರವಾಗಿ ಮಾಡುತ್ತಾರೆ. ಮತ್ತೆ ಕೆಲವು ಮಹನೀಯರ ಸ್ಥಿತಿಯು "ವಿಷಯಾ ಲೋಕ ಶ್ರವಣಾ ಯೇಷಾಂ | ತೇ ಬಾಯಿಂಥಾ ಕಥಾ ಸಾಹತೀ" ಎಂಬ ವಾಕ್ಯಕ್ಕೆ ಗುರಿಯಾಗುವದು ಹೇಳುವರು ಗಾನದ ಅನೇಕ ಪ್ರಕಾರದ ಸ್ವಭಾವಭೇದಗಳು ಸಂಬಂಧಿಸುವದರಿಂದ ಅದರ ಏನೋ ಒಂದು ಬಗೆಯ ರಾಜಸ ವಿಲಾಸಕ್ಕಾಗಿ ತೋರಿಸಬೇಕಾಗಿದೆ. ಹೇಳಬೇಕಾದದರಿಂದ ಎಂತಹ ಸಜ್ಜನರು ಕರೆಕು ಅದರಂತೆ ನಡೆಯಬೇಕೆಂದ ಪರಿಮಿತವಾದ ಗುಣಶೀಲರಂತೆ ಒಬ್ಬರಿಗೊಬ್ಬರ ಸಂಬಂಧವುಳ್ಳಯುವದಿಲ್ಲ. ಮಾತು ತೆಗೆದುಕೊಂಡಿರುವೆನೆಂದು ಧಮ್ಕಿಯಾಗಿ ಹೇಳುವದಾದರೆ ಗಟ್ಟಿಯಾಗಿ ಕರೆದುಕೊಂಡು ಕೇಳುವದಾದರು ಮತ್ತು ಹೋಗಿರುವದೇಕೆ? ಕೊಡುವದರಲ್ಲಿ ಕಡಿಮೆಯಾದರೆ ಕೇಳುವದೂ ಇಲ್ಲ. ಹೇಳುವದು ಸಮ್ಮತವಾಗಿದೆ! ಹೋದ ಕೊಡುವದು ಇಲ್ಲದಿರುವಾಗ ಕೇಳುವದಂತೂ ದೂರ. ಅದು ಯಾವ ಇದೇ ಉಚಿತ ವಕ್ತೃ ಶ್ರೋತೃಗಳಲ್ಲಿಯು ವೈಚಿತ್ರ್ಯವಿರೆ ಸರ್ವ ಪರಂತು ಉಭಯರ ಹೃದಯವು ಶೂನ್ಯವಾಗಿರುವದರಿಂದ ಆ ಉಪದೇಶ ಶ್ರವಣಗಳು ಪವಿತ್ರ ರೋಗದ ಶಕನ, ಶಾಸನ ಕೌಮುದಿ ಪ್ರಭಾವವಾದ ಪ್ರಭೃತಿಗಳಂತೆ ನಿಷ್ಫಲಗಳಾಗುತ್ತಿರುವವು. ನಡೆದಿದೆ ಅದರ ಪರಿಣಾಮ ಹೀಗೆಯೇ ಶೂನ್ಯಹೃದಯರು ಇರುವರೆಂದು ಹೇಳುವ ಧೈರ್ಯವಿಲ್ಲದಿದ್ದರೂ ಬಹುಜನರು ಹಾಗಿರುವರೆಂದು ಸಾಂಪ್ರತಿಕವಾಗಿ ನಾವರಿತಿದ್ದೇವೆ. ತಿಳಿಯಬರುತ್ತದೆ. ರಾತ್ರಿ ಕಾಲೇಜು ಮೊದಲಾದ ಮಂದಿರಗಳಲ್ಲಿ ಎಲ್ಲಿ ನೋಡಿದರೂ ಸದಸ್ಯರ ಸಂಖ್ಯೆ ಸಾಗುತ್ತಲೇ ಇದೆ. ಆದರೂ "ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ ಮಹಾಜನೋ ಯೇನ ಗತಃ ಸ ಪಂಥಾಃ" ಎಂಬ ಹಾಗೆ ದಾಂಪತ್ಯಾದಿಗಳಿಗೆ ಬದಲಾಗಿ ಕೇಳಲಾಗದೆ ಪ್ರಶ್ನಿಸುವಾಗುತ್ತಿರುವದು. ಇದೆಲ್ಲವೂ ಶಾಸ್ತ್ರಮರ್ಮವನ್ನರಿಯದ ಅಂಧಾನುಕರಣವನ್ನು ಮಾಡುವವರ ಪ್ರಭಾವವಲ್ಲದೆ ಬೇರಾವುದೂ ಅಲ್ಲ. ಮಂದ್ಯಾನುಪಾಂಸುಕ್ರೀಡಾಯೋಗದಿಂದ ಸಾತ್ವಿಕ ಭಾವವೃದ್ಧಿಯಾಗದ ಹಾಗೆ ಕ್ಷಿತಿಕಾರಕವಾದ ವಕ್ತೃಶ್ರೋತೃಸಂಯೋಗದಿಂದ ಯಾವ ಪ್ರಯೋಜನವಾಗಬೇಕು? ಕೀರ್ತಿಧನದಾಯಕವಾದ ಅನ್ಯೋಪದೇಶಗಳ ಅವಶ್ಯಕತೆಯು ಪ್ರತಿಷ್ಠೆಯಲ್ಲಿಯೂ ನಮಗಿರುವ ಶಾಸ್ತ್ರೀಯ ವಾಕ್ಯಾನುಭವವೂ ಸದಾ ಇದೇ ಬೇಕಾಗುತ್ತದೆ. ವರ್ತನವೂ ಜನಪದ್ಧತಿಯೂ ಶಾಸ್ತ್ರಮಯವಾಗಿರುವದರಿಂದ ಅದನ್ನು ಬಿಟ್ಟುಬಿಡುವದಾದರೂ ಯಾವ ಬಗೆಯಿಂದ? ಒಂದು ಪಕ್ಷದಲ್ಲಿ ಅನ್ಯೋಪದೇಶಗಳನ್ನು ಕೆಲವು ದಿವಸಗಳವರೆಗೆ ಬಿಟ್ಟರು ಯಾವ ಬಾಧೆಯೂ ಇಲ್ಲ. ಪರಂತು ಶಾಸ್ತ್ರಮಾರ್ಗವನ್ನು ಪೂರ್ಣವಾಗಿ ಬಿಟ್ಟರೂ ವರ್ತನದ ಆಚರಣಗಳಿಗೆ ಚ್ಯುತಿಯುಂಟಾಗುವದು. ಹೀಗೆ ಉಭಯಭ್ರಷ್ಟನಾದವನಿಗೆ ಏನನ್ನಬೇಕು? ಸತ್ಯಾತ್ಮ ಪ್ರವಚನವೂ ತಪ್ಪು "ಶಿವಾಜ್ಞ ಮನ್ನಂ ಮೃಗತೃಷ್ಣಿಕಾರ್ಥಂ ಕಿಂ ತಸ್ಯ ಹಾರೀಯೋ ಮೃಗತೃಷ್ಣಿಕಾಂ || ಅಂಧಸ್ಯ ದೀಪೋ ಬಧಿರಸ್ಯ ಗೀತಂ | ಮೂರ್ಖಸ್ಯ ಕಿಂ ಶಾಸ್ತ್ರಕಥಾಪ್ರಸಂಗಃ ||" ಎಂಬ ತಿಳಿಯುವದಿಲ್ಲ. ಅಶುದ್ಧಿಯುಕ್ತರಾಗಿ ಅವರ ಪದದಲ್ಲಿ ಅವರ ಕ್ರೀಡಾಗುವರು. ಸತ್ಯಸ್ವರೂಪವು ಅಂಧದಲ್ಲಿ ವಿಷಯಾಸಕ್ತರಾಗಿದ್ದರೂ ಅವಸಾನದಲ್ಲಿ ಅವ್ಯಕ್ತ ಸ್ವರೂಪವಾಗಿರುವದು. ಇದನ್ನು ತಿಳಿಯುವ ಮಾರ್ಗ ಅದು ಮೋಕ್ಷಗಳುಳ್ಳವರು. ಸಾಂಪ್ರತಿಕ ಸುಧಾರಕಸಮುದಾಯದಲ್ಲಿ ಸ್ವಾತಂತ್ರ್ಯ ಪ್ರಿಯರಾದ ಧಾರ್ಮಿಕ ರಾಷ್ಟ್ರೀಯಲ್ಲಿಯು ಕವಲುಗಳ ಮುಖವನ್ನು ಮುಖಭಂಗ ಮಾಡಲಿಕ್ಕೆ ಮುಟ್ಟಾಗಿ ಕಾಣುತ್ತಿರುವ ಹಿಂದಿನ ಹಿರಿಯರ ಗ್ರಂಥಗಳ ಶಾಸ್ತ್ರಸೂಚನೆಗಳ ಹಾದಿಯನ್ನು ಸುಧಾರಕರೇ ಅಲ್ಲವಂತೆ! ನೂತನರು ತಮ್ಮ ಮಾರ್ಗದಿಂದ ಅವರನ್ನು ಪ್ರತ್ಯೇಕಿಸುವರು. ಮಾನವವರ್ಗದವರಲ್ಲವೆಂದೇ ತಿಳಿದು ಬಿಟ್ಟಿರುವರು. ಮುಮುಕ್ಷುತ್ವಯುಕ್ತರಾದ ಸಾತ್ವಿಕರಾದ ಸುಶಾಸ್ತ್ರವಿದ್ಯೆಯನ್ನು ಕೃತಾರ್ಥ ಉಚಿತ ಬಹುಭಾಗದ ಜನರು ಕಾದಂಬರೀ (ಮುದ್ರ)

ತಿಂತರಬೇಕಷ್ಟೇ ? ಕೈಕೊಳ್ಳುವರ ಫಲಾಪೇಕ್ಷೆಯಲ್ಲಿರುವರು. ಅಹಾ ಪ್ರಮಥರಾದ ಶಾಂಭವೀ ದೀಕ್ಷೆಯಿಂದ ಉತ್ಕೃಷ್ಟರೆನಿಸಿ ಉನ್ನತಪದವಾಗಿ ಪರಿಣಮಿಸುವರು ಉತ್ಕೃಷ್ಟಪದವನ್ನು ಎಣಿಸುವರೇನು ? ಅಯ್ಯೋ ! ಹತಭಾಗ್ಯರೇ, ಕಣ್ಣ ಮುಂದೆ ಕಾಣುವ ಅಮೃತಸೇವನಾರ್ಥವಾದ ಶಾಂಭವದೀಕ್ಷೆಯನ್ನು ಕಾಲಿಡಬೇಕಾಗಿ ಒಳ ರಂಗದಲ್ಲಿ ಮಹೋತ್ಸವರಾಗಿ, ಮೊದಲು ಮಧ್ಯಮರಾಗಿ ಅಂತರಂಗದಲ್ಲಿ ಪುರುಷರೂಪರಾದ ಅಂತರಂಗದಲ್ಲಿ ಅತೀತವಾದ ಪಾದ ವಿಚಾರಪರ ಗ್ರಂಥಗಳನ್ನು ಒತ್ತಿ ಓದುವ ದೀಪದ ಬೆಳಕಾಗಿ ಹೀನಾವಸ್ಥೆಯನ್ನು ಹೊಂದಿದ ಹಾಗಾಗುವದಿಲ್ಲವೇ ? ಅವರಲ್ಲಿ ಹಾದೀಪದಿಂದ ಬಹಳ ಸೋಗ ಸಂತೆ ! ಒಣಗಿದ ವನದಲ್ಲಿ ಅಗ್ನಿದೇವನ ಆಗಮನವಾದ ಹಾಗೆ ವೃತ್ತಿಹೀನಜನರೊಳಗೆ ಕಾದಂಬರಿ, ನಾಟಕ, ಸಿನಿಮಾಗಳಲ್ಲಿ ಎಷ್ಟು ಆಸಕ್ತಿ ಇರುವದೋ ! ಅದರಿಂದ ಎಷ್ಟು ಅನರ್ಥವನ್ನು ಹೊಂದುವರೋ ಹಾಗೆಯೇ ಒಳ್ಳೆಯ ವಿಷಯಗಳನ್ನು ತಿಳಿಸುವ ಉಪನಿಷದಾದಿ ಗ್ರಂಥಗಳ ಶ್ರವಣಮನನಾದಿಗಳಲ್ಲಿ ಮಗ್ನರಾಗಿ ಜೀವನ್ಮುಕ್ತರು ತಾತ್ಪರ್ಯದಿಂದ ದೂರದಾಗಿ ಶಾಂತಿಯನ್ನು ಪಡೆದರೆ ? ಅಂತಹುಗಳಿಗೆ ವ್ಯಯಿತವಾಗುವ ಸಮಯಸಾಧನಗಳನ್ನು ನಮ್ಮ ಪ್ರಾಚೀನಗ್ರಂಥಗಳ ಪ್ರಚಾರಕ್ಕಾಗಿ ವ್ಯಯಿಸಿದರೆ ಲೋಕಾಪದವು ಆಗಬಹುದು ಅಷ್ಟೆ !

ನಮ್ಮೆಲ್ಲರಿಗೂ ಬೇಕಾಗಿರುವದು ಭಕ್ತಿ ಜ್ಞಾನ ವೈರಾಗ್ಯಾದಿಗಳಿಗೆ ಸಾಧನೀಭೂತವಾದ ಧನವಾದ ಶಾಸ್ತ್ರೀಯಪ್ರವಚನವಲ್ಲದೆ ಜ್ಞಾನಪೂರ್ತಿ ಬೇಕಿಲ್ಲ ಈ ಪದ್ಧತಿಯು ಪೂರ್ವದಲ್ಲಿ ಮಹಾತ್ಮರಲ್ಲಿ ನಡೆಯುತ್ತಿದ್ದಿತೋ ಏನೋ ? ಈಗೀಗ ಮಹಾತ್ಮ ತಿಂಗಳ ಮುಂದವಾಗಿ ಜರುಗುತ್ತಲಿರುವದು ಕೆಲವೆಡೆಯಲ್ಲಿ ಯಾವಾಗಲೂ ನಡೆಯುತ್ತಲಿರಬಹುದು ಆದರೆ ಶ್ರಾವಣಮಾಸದಲ್ಲಿ ಮಹತ್ವ ಹಲವು ಸ್ಥಳಗಳಲ್ಲಿ ಈ ಕ್ರಮವು ಆಚರಣೆಯಲ್ಲಿದ್ದು ನಮ್ಮ ದೇಶ-ಶ್ರವಣವು ಜೀವಿತಾವಸ್ಥೆಯಲ್ಲಿರುವದು ಪ್ರಾಚೀನ ದಾಸ ಶ್ರೇಷ್ಠರುಗಳ ಸೌಭಾಗ್ಯವೆಂದೇ ಹೇಳಬೇಕಾಗಿದೆ. ಚರವಾಗ್ಮಿಗಳ ಮನ ನಾಗಿಸಬೇಕಾದ ಉದ್ದೇಶಗಳಿಗೆ ಈಗಿನ ದಿನದ ತಿಳಿ ವಾಸಿಸ ಅವಧಿಯು ಸಾಲದಾಗಿದೆ ಒಂದು ವರ್ಷದಲ್ಲಿ ನಮ್ಮ ಗ್ರಂಥಗಳು ಮುಕ್ತಿಪರ ಮನೋರಂಜಕವಿಷಯಗಳಿಗೇನೂ ಕೊರತೆ ಇಲ್ಲ ನಿಜಲಮಯರಿಗೂ ಕೆಲವು ಮಾಸಗಳಿಗೆ ಪ್ರಾಧಾನ್ಯವನ್ನು ಕೊಟ್ಟಿರುವರು ಅವುಗಳಲ್ಲಿಯೇ ಶ್ರಾವಣವಾಸವು ಒಂದಾಗಿರುವದು ಪೂರ್ವದಲ್ಲಿ ಶ್ರವಣಕ್ರಮವು ನಡೆಯುವದು ಕಡ್ಡಾಯವಿಲ್ಲದಿರುವದರಿಂದ ಪ್ರವಚನಕಾರರಿಗೊಂದು ಮಾತ್ರ ಹೇಳಿಯು ಪದ್ಧತಿಯು ಜನರು ಅನುಸರಿಸುತ್ತಿರುವರು ಇದೇ ಪದ್ಧತಿಯನ್ನನುಸರಿಸಿ ಬೆಂಗಳೂರು ಚಿಕ್ಕಪೇಟೆ ಶ್ರೀ ಮಹಂತಿನ ಮಠದ ಅಧ್ಯಕ್ಷರು ಶ್ರೀ ಮ|| ಬ್ರ|| ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳವರು ಭಕ್ತರ ಅಪೇಕ್ಷೆಯ ಮೇರೆಗೆ ತಮ್ಮ ಮಠದ ಲ್ಲಿಯೇ ಶ್ರಾವಣಮಾಸದಿಯಾಗಿ ಭಾದ್ರಪದ ದ್ವಿತೀಯವರೆಗೂ 'ವೀರಮಾಹೇಶ್ವರ ಸಂಗ್ರಹ' ವೆಂಬ ಗ್ರಂಥವನ್ನು ಶ್ರವಣರೂಪವಾಗಿ ಬೋಧಿಸುತ್ತಿದ್ದರು. ಸ್ವಮತ-ಪರಮತೀಯ ಅನೇಕ ಜನ ಸ್ತ್ರೀ ಪುರುಷರು ಶ್ರವಣೋತ್ಸುಕರಾಗಿ ಬರುತ್ತಿದ್ದರು ಸಮಾಪ್ತಿಯಾದ ದಿವಸ ಅಂದರೆ ಭಾದ್ರಪದ ಶುದ್ಧ ೨ ದಿವಸ ಪ್ರಾತಃಕಾಲ ೯|| ಘಂಟೆಯವರೆಗೂ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಮಹಾಪಾಠಶಾಲೆಯ ವಿದ್ಯಾರ್ಥಿಗಳಿಂದ ಶ್ರೀ ಮಹಂತೇಶ್ವರ ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯ ವಿಗ್ರಹಗಳಿಗೆ ರುದ್ರಾಭಿಷೇಕವೂ ಮಧ್ಯಾಹ್ನ ೧೨ ಘಂಟೆಯಿಂದ ೩ ಘಂಟೆಯ ವರೆಗೆ ಗಣಾರಾಧನೆಯೂ ನೆರವೇರಿದವು. ಸಾಯಂಕಾಲ ೬|| ಘಂಟೆಯಿಂದ ೮ ಘಂಟೆಯವರೆಗೆ ಶ್ರೀಗಳವರು ಒಂದು ತಿಂಗಳ ವರೆಗೆ ಜರುಗಿದ ಪುರಾಣದ ಸಾರಾಂಶವನ್ನು ಧರ್ಮಾಧರ್ಮ ವಿಮರ್ಶಪೂರ್ವಕವಾಗಿ ಸಕಲರಿಗೂ ತಿಳಿಯುವ ಹಾಗೆ ಸರಸ ಸರಳಭಾಷೆಯಲ್ಲಿ ಬೋಧಿಸಿದರು. ಅನಂತರ ಶ್ರೀ ಮಹಂತೇಶ್ವರ ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಗ್ರಹಗಳಿಗೆ ಮಂಗಲಾರತಿ ಯಾಗಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಪ್ರಸಾದವಿನಿಯೋಗವಾಗಿ ಹರ-ಗುರುಗಳ ಶ್ರಾವಣಜಯಘೋಷ ದೊಡನೆ ಶ್ರವಣೋತ್ಸವವು ಸಮಾಪ್ತಿಗೊಂಡಿತು ಎಲ್ಲ ಕಡೆಯಲ್ಲಿಯೂ ಸಚ್ಛಾಸ್ತ್ರಶ್ರವಣವು ಪಸರಿಸಿ ಸದ್ಧರ್ಮ ಜನತೆಯ ಮನೋಗತಿಯು ಸುಧಾರಿಸಿ ಸುಖಸಮಾಧಾನಗಳು ನೆಲೆಗೊಳ್ಳಲೆಂದು ದಯಾಘನನಾದ ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ.

ಓರ್ವ ಗುರುಭಕ್ತ

ಶ್ರೀ ಜಗದ್ಗುರು ದಾರುಕಾರಾಧ್ಯಾಯ ನಮಃ

ಮಹರ್ಷಿಯರ ಹಿತೋಕ್ತಿಗಳು.

(ಹಿಂದಿನಿಂದ ಮುಂದುವರಿದುದು)

೨೮. ಎಲೈ, ಮಾನವಶ್ರೇಷ್ಠನೆ ! ಆತ್ಮಶಕ್ತಿಯನ್ನು ಪರಿಪೂರ್ಣಗೊಳಿಸಿಕೊಳ್ಳಲು ಮಹರ್ಷಿಯರು ಕಂಡ ಕಂದಕಗಳೆಯಲ್ಲಿ ಕಲಿಯೋರುವುದಿಲ್ಲ ಕಾಡುಗಳೆಲ್ಲ ಕಲ್ಪವೃಕ್ಷಗಳಾಗುವದಿಲ್ಲ. ಊರುಗಳೆಲ್ಲ ಕಾನುಧೇನುಗಳಾಗುವದಿಲ್ಲ ಅವುಗಳು ಬಹುಮುಖ್ಯನೆ ಪ್ರಶಸ್ತಿಗಳಾದ ಸ್ಥಳಗಳನ್ನಾಶ್ರಯಿಸಿಕೊಂಡಿರುವವು ಅದರಂತೆ ಆತ್ಮಶಕ್ತಿ ಸಂಪನ್ನರು ಮೈದೋರುವರೆಂದು ಕಿರಿಸವಾಗಿ ಪತ್ತಂತವು ಅನ್ಯವಾಗಿರುವರು. ಪತ್ತಂತವೆಂದರೆ ದೈವಸಂಪತ್ತಿಪರರು ಪ್ರಕಟವಾಗಿರುವ ಮನೆಗಳ. ದೈವಸಂಪತ್ತಿನ ಲಕ್ಷಣವೆಂದರೆ ಶಮ, ಶಾಂತಿ ಕ್ಷಮೆ ದಯೆ ಮುಂತಾದ ಸದ್ಗುಣಗಳು ಅಂತಹ ಅವರೊಡನೆ ಮೊದಲಿಗೆ ಯಾವ ಮನೆತನದವರು ಅಲ್ಲಿ ಹಾಗೆ ಇಲ್ಲವು, ಸ್ವತಃ ಶ್ರದ್ಧೆ ಯ ಜ್ಞಾನವು ಕೊರತೆಯಿಲ್ಲವು, ಕರೆಯುವದಿಲ್ಲವು ; ಸಂಪದವಾರ ಚರಣೆಯು ಎಷ್ಟು ಜಾಯಮಾನರು ಕರೆದರೂ ಯಾರು ಸ್ವಧರ್ಮಾಚರಣೆಯ ಮುಂದೆ ಅದನ್ನು ಬಿಡಲಾರದು ತಿರಸ್ಕರಿಸುವರೋ, ಇತರರ ವಸ್ತುವನ್ನು ಸಂಗ್ರಹಿಸಲಿಚ್ಛಿಸದೆ ಯಾರು ತಮ್ಮದುದನ್ನು ಇತರರಿಗೆ ಕೊಡುವವರೆಂಬ ಬಿರುದನ್ನು ಪಡೆಯುವರೋ, ಅಭಿಲಾಷವಾಗಿ ಅನಂತಕರ್ಮಗಳನ್ನು ಮಾಡಿದರೂ ಯಾರು ಯಾವ ಕರ್ಮಕ್ಕೂ ಯಾವ ಫಲವನ್ನೂ ಬಯಸುವದಿಲ್ಲವೋ ವಿಷಯಗಳು ಎಲ್ಲ ಕಡೆಯಿಂದಲೂ ಜಗ್ಗಿದರೂ ಯಾರು ಯಾವ ಕಡೆಗೂ ಒಲಿಯದೆ ತಮ್ಮ ಪ್ರತಿಷ್ಠೆಯನ್ನು ಕಾದುಕೊಳ್ಳುವರೋ, ಅಥವಾ ಅಧರ್ಮವೆಂದರೆ ನಾಚಿಕೆಯಾಗಿ ಯಾವ ಕೈಕಾಲುಗಳೇಳುವದಿಲ್ಲವೋ, ಚಂಚಲತನ ದೇವತಾವಿಚಾರ, ದೇವತಾಪ್ರೀತ್ಯರ್ಥವಾದ ಆಚಾರ ಸತ್ಸಂಗ ಇವುಗಳು ಯಾರಿಗೆ ನಿತ್ಯನಿಯಮಿತಕಾರ್ಯಗಳಾಗಿರುವವೋ ಶರೀರವು ವಾಕ್ಕೂ ಮನಸ್ಸೂ ಯಾರಲ್ಲಿ ಹಾಲು ನೀರಿನಂತೆ ಒಂದಕ್ಕೊಂದು ಹೊಂದಿಕೊಂಡಿರುವವೋ, ಹಿಂಸೆ, ಸಟೆ ಕ್ರೋಧ, ದ್ರೋಹಬುದ್ಧಿ, ಗರ್ವ ದುರಾಸೆ, ಮತ್ಸರ ಚಪಲತನ ಇವು ಯಾರನ್ನು ಕಂಡರೆ ಕಂಗೆಟ್ಟು ಓಡುವವೋ ಶಾಂತಿ, ಉದಾರಬುದ್ಧಿ ದಯೆ, ತೇಜಸ್ಸು ಕ್ಷಮೆ, ಧೃತಿ ಶುಚಿ ತೃಪ್ತಿ, ನಿಸ್ವಾರ್ಥತೆ ಇವು ಯಾರಲ್ಲಿ ಮನೆಮಾಡಿಕೊಂಡಿರುವವೋ ಅವರೇ ದೈವಸಂಪತ್ತಿನವರು " ದೈವೀಸಂಪದ್ವಿಮೋಕ್ಷಾಯ " ಎಂಬ ಗೀತೋಕ್ತಿಯಂತೆ ಈ ದೈವಸಂಪತ್ತು ಮೋಕ್ಷಕ್ಕೆ ಸಾಧನವಾಗುವದು ಹೀಗೆ ಈ ಗುಣಗಳಿಗೆ ಮೋಕ್ಷಪ್ರಾಪ್ತಿಯೇ ಆಗುವದೆಂದು ಹೇಳಿದಮೇಲೆ ಈ ಲೋಕದಲ್ಲಿ ಅಸಾಧ್ಯವಾವುದಿರುವದು ? ಐಹಿಕವಾದ ಸರ್ವಸಂಪತ್ತೂ ಈ ದೈವಸಂಪತ್ತಿನ ಕಾಲಕಸವಾಗಿರುವದು ಆತ್ಮಶಕ್ತಿಯನ್ನು ಪೂರ್ಣಮಾಡಿಕೊಳ್ಳಬಲ್ಲವರ ಆವಿರ್ಭಾವಕ್ಕೆ ಈ ದೈವಸಂಪತ್ತಿನವರ ಮನೆತನವು ಒಳ್ಳೇ ಫಲವತ್ತಾದ ಭೂಮಿಯು ಆಕ್ಷೇತ್ರವನ್ನು ಹೊಂದುವುದಕ್ಕೆ ' ಅನೇಕಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಂ ' ಎಂಬಗೀತೋಕ್ತಿಯಂತೆ ಅನೇಕ ಜನ್ಮಗಳಲ್ಲಿ ಪ್ರಯತ್ನಪಡುತ್ತ ಈ ಸದ್ವಂಶದಲ್ಲಿ ಜನರು ಎಡೆಬಿಡದೆ ದೈವಸಂಪತ್ತನ್ನು ಸಾಧಿಸುತ್ತಿರುವರಷ್ಟೆ ! ಆದರೆ ಒಬ್ಬ ಒಂದೇ ಜನ್ಮದಲ್ಲಿ ಸಾಧ್ಯವಾಗುವ ನಿಯಮವಿರುವದಿಲ್ಲವು ಮತ್ತು ಒಂದು ಜನ್ಮದಲ್ಲಿ ಬಂದ ದೇಹವು ಮಣ್ಣುಗೂಡಿ ನಾಶವಾದರೂ ಅವನೇಳಗಿದ್ದ ಕರ್ಮದ ಸಾಧಿಸಿದ ಪ್ರಯತ್ನವು ನಾಶವಾಗುವದಿಲ್ಲ ' ನಹಿ ಕಲ್ಯಾಣಕೃತ್ಕಶ್ಚಿದ್ದುರ್ಗತಿಂ ತಾತ ಗಚ್ಛತಿ ' ಎಂಬ ಗೀತೋಕ್ತಿಯಂತೆ ಸತ್ಕರ್ಮವನ್ನು ಮಾಡಿದ ಮಾನವನು ದುರ್ಗತಿಗೆ ಹೋಗುವದಿಲ್ಲ ಸತ್ಕರ್ಮವು ತನ್ನ ಒಡೆಯನಿಗೆ ತನ್ನ ಫಲವನ್ನು ಹಾಗೆ ಕೊಡದೆ ಬಿಟ್ಟೀತು ? ಆದ್ದರಿಂದ ಆ ಕರ್ಮದ ಫಲವನ್ನು ಅನುಭವಿಸುವುದಕ್ಕಾಗಿ ಅವನು ಮತ್ತೆ ಹುಟ್ಟಿಯೇ ತೀರಬೇಕು ಅವನು ಹುಟ್ಟದೆ ಹೋದರೆ ಆ ಸತ್ಕರ್ಮವು ತನ್ನ ಫಲವನ್ನು ಯಾರಿಗೆ ಕೊಡಬೇಕು ? ಅದು ಶಕ್ಯವಲ್ಲವು ಯಾರು ಸತ್ಕರ್ಮವನ್ನು ಮಾಡುತ್ತಿದ್ದು ಅದರ ಪ್ರಯೋಜನವನ್ನು ಪರಿಪೂರ್ಣಮಾಡಿಕೊಳ್ಳದೆ ಪರಂಧಾಮವನೈದುವರೋ, ಅವರು ಮತ್ತೆ ಹುಟ್ಟಿ ಅವರ ಫಲವನ್ನನುಭವಿಸಬೇಕು ಅದರೆ ಅಂಥವರು ಹುಟ್ಟುವುದಕ್ಕೆ ಯೋಗ್ಯಸ್ಥಳವು ಯಾವುದು ? ಮಹಾಭೂಮಿಯಲ್ಲಿ ಕಲ್ಲು ಮುಳ್ಳೇ ಇಲ್ಲ ಆದರೆ ' ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ' ಎಂಬ ಗೀತೋಕ್ತಿಯಂತೆ ಒಳ್ಳೇ ಸುಶೀಲರಾದವರ ಮತ್ತು ಶ್ರೀಮಂತರಾದವರ ಮನೆತನದಲ್ಲಿ ಹುಟ್ಟುವರು ಜಗದ್ಭಕ್ತನಾದ ಚೆಂಜೀವಿಯಾದ ಸತ್ಯಾರ್ಥನು ಒಂದೇ ದಿವಸದಲ್ಲಿ ಬಾಲ್ಯ, ಯೌವನ ವಾರ್ಧಕ್ಯಗಳೆಂಬ ಮೂರವಸ್ಥೆಗಳನ್ನು ಹೊಂದುತ್ತಿರುವಾಗ ಕ್ಷಣಜೀವಿಗಳಾದ ಮನುಜರ ಪಾಡೇನು ?

೨೯. ಎಲೈ ಸ್ವಾರ್ಥತೆಯೆ ! ನಿನ್ನಂತಹ ನಿರ್ಘೃಣ(ದಯಾಶೂನ್ಯ)ನನ್ನು ನಾನೆಲ್ಲಿಯೂ ಕಾಣೆ ! ನೀನು ಸೇರಿದ ಕಡೆಯಲ್ಲೆಲ್ಲ ದುಃಖಭಾಜನವನ್ನೇ ಹೆಚ್ಚಿಸಿ ಸುಮತಿಗಳನ್ನೂ ಕ್ರೂರ ಕುಮತಿಗಳನ್ನಾಗಿ ಮಾಡುವೆಯಲ್ಲವೆ ! ಎಂಥ ಕೋಮಲಹೃದಯಿಯನ್ನೂ ವಜ್ರಹೃದಯಿಯನ್ನಾಗಿ ಮಾಡುವೆಯಲ್ಲವೆ ! ತಂದೆತಾಯಿಗಳನ್ನು ಗಂಡ ಹೆಂಡರನ್ನು, ಅಣ್ಣತಮ್ಮಂದಿರನ್ನು, ಬಂಧುಬಳಗದವರನ್ನು ಮಿತ್ರರನ್ನು, ವಿಶ್ವಭ್ರಾತೃಗಳನ್ನು ಕುಲಭ್ರಾತೃಗಳನ್ನು ವ್ಯವಹಾರಭ್ರಾತೃಗಳನ್ನು, ರಾಜರನ್ನು ಗುರುಗಳನ್ನು ಮರೆಯಿಸಿ ಎಂಥ ಘೋರತರಾಕೃತ್ಯಗಳನ್ನಾದರೂ ಮಾಡಿಸುವೆಯಲ್ಲವೆ ! ಮತ್ತು ಲೋಕದ (ಜನರ) ಅಂಜಿಕೆಯನ್ನು ತೊಲಗಿಸಿ ಕಡೆಗೆ ವಿಶ್ವಕ್ಕೆ ಒಡೆಯನಾದ ಪರಮಾತ್ಮನ ಧರ್ಮಶಾಸನವನ್ನೂ ಕೂಡ ಧಿಕ್ಕರಿಸುವಂತೆ ಮಾಡುವೆಯಲ್ಲವೆ ! ಅಹಾ ! ಸ್ವಾರ್ಥತೆಯೆ ! ಭಾವಿ ನಿನ್ನ ಮಹಿಮೆಯು ಸಹಸ್ರನಾಲಿಗೆಯ ಆದಿಶೇಷನಿಂದಲೂ ವಿವರಿಸಲು ಅಸದಳವು ಆದ್ದರಿಂದ ನಿನಗೆ ದೂರದಿಂದಲೇ ವಂದನೆಗಳು ಪ್ರಿಯಸಹೋದರರೆ ! ನಾವು ಕೂಡ ಸ್ವಾರ್ಥಬುದ್ಧಿಯಿಂದ ಈ ಕರ್ಮವ್ಯಾಪ್ತಿಯಲ್ಲೇ ಹೊರಡಿಸಿ ದೂರದಿಂದಲೇ ಕರೆದುಕೊಡೆ ಯುವದು ತರವಲ್ಲವೇ ? ಸ್ವಾರ್ಥತೆ ಮತ್ತು ದುರಾಸೆ ಇವೆರಡೂ ದಾಮ ಲಕ್ಷ್ಮಣರಂತೆ ಸಹೋದರರು

೩೦. ಪ್ರಿಯಮಿತ್ರರೆ ! ವೇದಗಳು ಬೋಧಿಸುವದು ಪರಸ್ಪರ ವಿರುದ್ಧವಾದ ಪ್ರವೃತ್ತಿಮಾರ್ಗಗಳ ಕರ್ಮಜ್ಞಾನಯೋಗಗಳನ್ನಲ್ಲ, ಶಾಸ್ತ್ರಕಾರರುಗಳ ಕೊನೆಗಾಣದ ವಿವಾದವನ್ನಲ್ಲ, ಆದರೆ ನಮ್ಮ ಜಡಜೀವಜಗತ್ತುಗಳಲ್ಲಿ ಅಂತರ್ವ್ಯಾಪಿಯಾಗಿರುವ ಪರಮಾತ್ಮತತ್ತ್ವವನ್ನು ಮತ್ತು ಯಾರಧರ್ಮದಿಂದ ಗಾಳಿಯು ಬೀಸುವದೊ, ಬೆಂಕಿಯು ಉರಿಯುವದೊ, ಮುಗಿಲು ಮಳೆಗರೆಯುವದೊ, ಸಾವು ತನ್ನ ಕಾರ್ಯವನ್ನು ನಡೆಸುವದೊ, ಅಂತಹ ಸರ್ವವ್ಯಾಪಿಯೂ ಸರ್ವಶಕ್ತನೂ ಸರ್ವಜ್ಞನೂ ಆಗಿರುವ ಪರಮಾತ್ಮನ ಸ್ವರೂಪವನ್ನು ಬೋಧಿಸುವವು. ಅವುಗಳು ಸಾಕ್ಷಾತ್ತಾಗಿ ಅಮೃತತ್ವಕ್ಕೆ ಮಾರ್ಗದರ್ಶಕಗಳಾಗಿ ಇರುತ್ತವೆ. ಅದನ್ನು ಅರಿಯದೆ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ಯೋಗ್ಯತೆಯುಳ್ಳವರಾಗಿ ! ಸ್ವರ್ಗದ ವಿಷಯದಲ್ಲಿ ಜನರು ಮನಸ್ಸು ಮಾಡುವರು ಮೋಕ್ಷವನ್ನು ಕಡೆಗಣಿಸುವ ಮಾನುಷರನ್ನು (ಸ್ವರ್ಗ) ಪರಮಪದವು ಅನುಗ್ರಹ (ನರಕ)

೩೧. ಈ ಬ್ರಹ್ಮಾಂಡದಲ್ಲಿ ಜನರು ದೇವರೆಂದರು, ಅಸುರರೆಂದರು ಇವುಗಳವರೆಗಿನ ಭೂಗೋಲದ ಸಂಗತಿಯನ್ನು ತಿಳಿಯುವುದಕ್ಕೆ ಮನಸ್ಸು ಮಾಡುವರು. ಕೋಟಿಗಟ್ಟಲೆ ಮೈಲು ದೂರದಲ್ಲಿರುವ ಸೂರ್ಯಚಂದ್ರ ಮೊದಲಾದ ಗ್ರಹಗಳ ಮತ್ತು ನಕ್ಷತ್ರಗಳ ಸ್ಥಿತಿಗತಿಗಳ ಬಗ್ಗೆ ವಿಚಾರಪರರಾಗುವರು ಜ್ಯೋತಿಷ, ಖಗೋಲ ಧಾತುವರ್ಗ ಮುಂತಾದ ಭೌತಿಕಭಾಗಗಳ ಅರಿವು ಹೊಂದಿರುವವನ್ನೂ, ಪಡೆಯಲು ಪ್ರಯತ್ನಿಸುತ್ತವೆ. ಹೋಗುವದು ಭೂಕಂಪ ಧನವೃದ್ಧಿ ಮುಂತಾದವುಗಳನ್ನಾಗಲಿ, ಬಾವಿಯಲ್ಲಿ ಹರಿವ ದೇಹವು ಸವಳ ಆಗಲಿ ಕೊನೆಗೆ ನಿಶ್ಚಿತ ಫಲವು ಇಲ್ಲದೆಯನ್ನಾಗಲಿ ಲಕ್ಷಿಸದೆ ಕೈಲು ಪಾಟಾಲು, ಹಡಗು, ವಿಮಾನ ಮೊದಲಾದವುಗಳ ಮೇಲೆ ಏರಿ ಪರ್ಯಾಟನ ಬೆಳೆಸಿ ಸೌರಮಂಡಲದ ಕೌತುಕವನ್ನು ಪಟ್ಟಾವತಾರ ದೇಶಾಂತರಗಳನ್ನು ನೋಡಲೆಳಸುವರು. ಸಮುದ್ರದಲ್ಲಿ ಮುಳುಗಿಯಾದರೂ ವಿಮಾನದಿಂದ ಅಂತರಿಕ್ಷದಲ್ಲಿ ಸಂಚರಿಸಿಯಾದರೂ ಪ್ರಪಂಚವೈಚಿತ್ರ್ಯಗಳನ್ನು ಪರೀಕ್ಷಿಸುವರು ಆದರೆ ಯಾವ ಕಾಸು ವೀಸದ ವೆಚ್ಚವೂ ಇಲ್ಲದೆ, ಎಳ್ಳಷ್ಟು ಆಯಾಸವೂ ಬೇಕಾಗಿಲ್ಲದೆ ಫಲವೂ ಅನಂತವಾಗಿರುವ ಪ್ರಯಾಣವೇ ಇಲ್ಲದೆ ತಮ್ಮ ತಮ್ಮಲ್ಲಿಯೇ ಕಂಡುಕೊಳ್ಳುವ ಸ್ವರೂಪದ ಕಡೆಗೆ ಆಗಾಗ್ಗೆ ಕಡೆಗಣ್ಣಾದರೂ ಹಾಕಿರೆಂದು ವೇದಶಾಸ್ತ್ರಗಳಲ್ಲಿ ಹೊಡೆಯುತ್ತಿರುವ ಭಗವಂತನ ಆಜ್ಞಾರೂಪವಾದ ಡಂಗುರಕ್ಕೆ ನಾವು ಮನಸ್ಸು ಕೊಡದ ಇದ ಎವು ವಿಷಾದಕರವೂ ಆಶ್ಚರ್ಯವೂ ಅಲ್ಲವೆ ? ' ಕಂಡುಕೇಳಿ ಮತ್ತೆ ಮೋಹಿಸಿ ಬಲ್ಲವರು ಭೂಮಂಡಲದ ಭೋಗಸ್ಥಾನವ ನೆ ತಿಳಿಯದೆ '

೩೨. ನಮ್ಮ ದೇಶದ ಸಾಧುಗಳಾದಿಯಾಗಿ ಬಹುಜನರು ಭಸ್ಮಧಾರಣ ಮಾಡುತ್ತಿರುವರು ಆದರೆ ಇದರ ರಹಸ್ಯವೇನೆಂದು ವಿಚಾರಮಾಡಿದರೆ ಸ್ವಸ್ವಸ್ಪಷ್ಟವಾಗಿ ವಿಭೂತಿಯು ಚಳಿಗಾಲದಲ್ಲಿ ಶಾಖವನ್ನೂ ಬಿಸಿಲುಕಾಲದಲ್ಲಿ ತಂಪನ್ನೂ ಉಂಟುಮಾಡುವದೆಂದು ವ್ಯಕ್ತವಾಗುವದು ಅದುಕಾರಣ ಸಾಧುಗಳು ಮೈಗೆಲ್ಲಾ ಭಸ್ಮವನ್ನು ಬಳಿದುಕೊಂಡು ಸದಾ ಬರಿಮೈಯಿಂದಲೇ ಇರುತ್ತಾರೆ ಭಸ್ಮವನ್ನು ತಯಾರಿಸುವಾಗ ಹಸುವಿನ ಸಗಣಿಯನ್ನು ಸುಡುವ ಉಪಾಸನೆಯಿಂದ ಜೀವನ ಇರುವ (ಅಜ್ಞಾನ) ವನ್ನು ನಾಶಮಾಡಿ ಕೇವಲವನ್ನು ಸೂಚಿಸುವದು ಸಗಣಿಯ ಉಂಡೆಗಳು ಜಡವನ್ನು ಸೂಚಿಸುತ್ತವೆ ಸ್ವಾತಿ ಉಂಡೆಯೂ ಬಿಸಿಲಲ್ಲಿ ಒಣಗಿ ಶುಭ್ರವಾಗಿರುವಂತೆ ಪ್ರತಿಜೀವನ ಅಜ್ಞಾನವೂ ಜ್ಞಾನ ಪ್ರಾಪ್ತಿಯಿಂದ ಒಣಗುತ್ತದೆ ಆ ಉಂಡೆಗಳು ನಿಷ್ಕಲಂಕವಾಗಿ ಯಜ್ಞಕುಂಡದಲ್ಲಿ ಬೀಳುವಂತೆ ಪ್ರತಿಜೀವನೂ ತನ್ನ ಜಡತ್ವವನ್ನು ನೀಗುವುದಕ್ಕಾಗಿ ಸರ್ವವ್ಯಾಪಕನಾದ ಅಗ್ನಿಸ್ವರೂಪನಾದ ಆತ್ಮವಿಚಾರದಲ್ಲಿ ಬೀಳಬೇಕು ಯಜ್ಞಕುಂಡದಲ್ಲಿ ಬಿದ್ದ ಸಗಣಿಯ ಉಂಡೆಗಳು ತಮ್ಮ ಮೊದಲಿನ ಬಣ್ಣದ ಗುರುತೂ ಸಹ ಇಲ್ಲದಂತೆ ಶುಭ್ರ (ಬಿಳಿ) ವರ್ಣಕ್ಕೆ ತಿರುಗುವಂತೆ ಪರಮಾತ್ಮ ಧ್ಯಾನದಲ್ಲಿ ಮುಳುಗಿದ ಜೀವರ ಕರ್ಮದೋಷಗಳೆಲ್ಲಾ ಅಳಿಗಿ ಹೋಗಿ ಪರಮಾತ್ಮನಿಗೆ ಅಭಿನ್ನರೆಂಬ ಸ್ವರೂಪಜ್ಞಾನವುಂಟಾಗುವದು ಮತ್ತು ಧರ್ಮಶಾಸ್ತ್ರಪ್ರಕಾರ ವಿಚಾರಮಾಡಿದರೆ ಇದರಿಂದ ಪವಿತ್ರವಾದ ಮತ್ತು ಸಮಾನಾಂತರಸರಳರೇಖೆಗಳಿಂದ ಸರ್ವಾಂಗಕ್ಕೂ ಧರಿಸುವುದರಿಂದ ಪರಬ್ರಹ್ಮವು ಸರ್ವವ್ಯಾಪಿ ಎಂಬುದನ್ನು ಸೂಚಿಸುವದು, ವಿಭೂತಿಗೆ ನೀರನ್ನು ಬೆರಸುವದು ಪರಬ್ರಹ್ಮ ಮತ್ತು ಪ್ರಕೃತಿಗಳ ಸಂಬಂಧವನ್ನು ತಿಳಿಸುವದು. ಹೀಗೆ ವಿಭೂತಿ ಧಾರಣೆಯಿಂದ ಪರಬ್ರಹ್ಮಸ್ವರೂಪ, ಜೀವಸ್ವರೂಪ ಮತ್ತು ಮೋಕ್ಷೋಪಾಯಗಳು ವ್ಯಕ್ತವಾಗುವವು ವಿಭೂತಿಯ ಸಮಾನಾಂತರಸರಳರೇಖಾತ್ರಯವನ್ನು ಉಪನಿಷತ್ತುಗಳು ಶಕ್ತಿತ್ರಯ, ಅಗ್ನಿತ್ರಯ, ಮಾತ್ರಾತ್ರಯ, ಗುಣತ್ರಯ ಲೋಕತ್ರಯ ಕಾಲತ್ರಯ ವೇದತ್ರಯಗಳನ್ನು ಸೂಚಿಸುವವು ಮತ್ತು ಭಸ್ಮಧಾರಣವು " ಲಲಾಟಪಟ್ಟ " ದಲ್ಲಿ ದೈವವು ಬರೆದ ದುರ್ವಿಧಿ ಅಂದರೆ ಹಣೆಯಲ್ಲಿ ಬರೆದಿರುವ ಅದೃಷ್ಟ ಬರವಣಿಗೆಯನ್ನು ನಾಶಮಾಡುವದೆಂದು ಅಭಿಪ್ರಾಯವು ಭಸ್ಮಧಾರಣ ಮಹಿಮೆಯು ಹೀಗಿರುವುದರಿಂದ ಸರ್ವರೂ ಧಾರಣಮಾಡುವದು ಅತ್ಯಗತ್ಯವಾದುದು.

೩೩. ಶ್ರೀವೈಷ್ಣವರು ಹಣೆಯಲ್ಲಿ ಧರಿಸುವ ಪಾಕ್ಷಿಗಳೆರಡು ಬಿಳೀ ರೇಖೆಗಳು ಮಧ್ಯದಲ್ಲೊಂದು ಕೆಂಪುರೇಖೆ ಹೀಗೆ ಧರಿಸಿ ಆ ಎರಡು ಬಿಳೀರೇಖೆಗಳನ್ನು ಕೆಳಗಡೆ ಬಿಳೀರೇಖೆಯಿಂದ ಸೇರಿಸುವದು ಆದರೆ ಅವರು ಉಪಯೋಗಿಸುವದು ಬಿಳುಪು ಕೆಂಪು ಈ ಎರಡು ಬಣ್ಣಗಳು ಇವುಗಳಲ್ಲಿ ಬಿಳೀಬಣ್ಣವು "ಚಿತ್" ಎಂಬುವದನ್ನೂ ಕೆಂಪು ಬಣ್ಣವು "ಅಚಿತ್" ಎಂಬುವದನ್ನೂ ಸೂಚಿಸುವುದು ಬಿಳೀರೇಖೆಗಳು ಎರಡಿರುವದು ಚಿತ್ತು ಅದರಕ್ಕೆ ತೀಲೂ ಪರಮಾತ್ಮನೊಳಗೂ ಎರಡಾಗಿ ತೋರುತ್ತಿರುವುದೆಂದು ತೋರಿಸುವದು ಮಧ್ಯೆ ಕೆಂಪು ರೇಖೆಯಿರುವದು ಅಚಿತ್ ಅಥವಾ ಪ್ರಕೃತಿಯು ಜೀವಾತ್ಮ ಪರಮಾತ್ಮರ ಭೇದವನ್ನು ಮಾಡಿ ತೋರಿಸುವುದೆಂದು ವ್ಯಕ್ತವಾಗುವದು. ಮತ್ತು ವೈಷ್ಣವರು ಗೋಪೀಚಂದನದ ರೇಖೆಯನ್ನು ಧರಿಸುವರು ಬಿಳುಪು ಮತ್ತು ಕೆಂಪು ಬಣ್ಣಗಳ ಮಿಶ್ರಣವಾದ ಗೋಪೀಚಂದನವು ಪುರುಷ ಮತ್ತು ಪ್ರಕೃತಿಯ ಸಂಯೋಗದಿಂದಾದ ಪ್ರಪಂಚ ಪರಿಣಾಮವನ್ನು ಈ ಕೊನೆಯಿಂದರ ರೇಖೆಯು ನಡುವಣ ಸ್ಥಳದಲ್ಲಿ ಸಂಯೋಗವು ಹೀಗಿರುವ ರೀತಿ ಮೂಲವಾಗಿರುವದೆಂಬ ವೇದಾರ್ಥವನ್ನು ಜ್ಞಾಪಿಸುವದು.

(ಇನ್ನೂ ಮುಂದಿನಸ್ಸು ಸೋಮ.)

ಪಂಚಾಚಾರ್ಯ ಪ್ರಭಾ.

೧೯೩೫ನೇ ಸಪ್ಟಂಬರ್ ತಾ|| ೯ನೇ ಸೋಮವಾರ

ಲಿಂಗಧಾರಣವು ವೇದೋಕ್ತವಾದುದು.

ಋಗ್ವೇದದ ಪವಿತ್ರಂತೇ ವಿತತಂಬ್ರಹ್ಮಣಸ್ಪತೇ ಎಂಬ ಮಂತ್ರದಿಂದ ಪ್ರತಿಪಾದ್ಯವೆನಿಸಿದ ... ಸಾಧನಾಚಾರ್ಯರ ... ವಾಗಿ ಲಿಂಗಧಾರಣವು ವೇದೋಕ್ತವೆಂದು ... ಇಷ್ಟಲಿಂಗಧಾರಣವು ... ಇನ್ನು ಋಗ್ವೇದದಲ್ಲಿರುವ 'ಅಯಂ ಮೇ ಹಸ್ತೋ' ಎಂಬ ಮಂತ್ರವು ಸಹ ಇಷ್ಟಲಿಂಗಧಾರಣವನ್ನು ಬೋಧಿಸುತ್ತದೆ

ಅಯಂ ಮೇ ಹಸ್ತೋ ಭಗವಾನಯಂ ಮೇ ಭಗವತ್ತರಃ । ಅಯಂ ಮೇ ವಿಶ್ವಭೇಷಜೋಯಂ ಶಿವಾಭಿಮರ್ಶನಃ । ಅಯಂ ವ ... ಅಯಂ ... ಇದಂ ... ಪ್ರಸರ್ಪಣಂ ... ॥

ಅರ್ಥ—ಅಯಂ ಭಗವಾನ್—ಲಿಂಗರೂಪನಾದ ಸದಾಶಿವನ ಬೋಧಕನು—ನನ್ನ ಹಸ್ತವನ್ನು ಸೇರಿದವನು ಅಯಮೇವ—ನನ್ನ ಹಸ್ತದಲ್ಲಿರುವ ಈ ಶಿವಲಿಂಗಮೂರ್ತಿಯು, ಮೇ ನನಗೆ ಭಗವತ್ತರಃ ಅತಿಶಯವಾದ ಐಶ್ವರ್ಯವನ್ನು ಕೊಡುವವನು. ಅಯಂ—ನನ್ನ ಹಸ್ತಗತವಾದ ಈ ಶಿವಲಿಂಗಮೂರ್ತಿಯು, ಮೇ—ನನಗೆ ವಿಶ್ವಭೇಷಜಃ—ಸಮಸ್ತ ಭವರೋಗಗಳಿಗೆ ವೈದ್ಯಸ್ವರೂಪನು. ಅಯಂ—ಈ ನನ್ನ ಹಸ್ತಪೀಠದಲ್ಲಿರುವ ಲಿಂಗರೂಪನಾದ ಸದಾಶಿವನು ಶಿವಾಭಿಮರ್ಶನಃ—ಸಮಸ್ತಕಲ್ಯಾಣಗಳನ್ನು ಕೊಡುವವನು ಅಯಂ—ಈ ಶಿವಲಿಂಗಮೂರ್ತಿಯು, ಮಾತಾ—ತಾಯಿಯಂತೆ ವಾತ್ಸಲ್ಯವುಳ್ಳವನು ಅಯಂ—ಈ ಲಿಂಗಮೂರ್ತಿಯು, ಪಿತಾ—ತಂದೆಯಂತೆ ರಕ್ಷಣೆಮಾಡುವವನು ಅಯಂ—ಈ ಶಿವಲಿಂಗಮೂರ್ತಿಯು, ಜೀವಾತುಃ—ಜೀವನಾಧಾರಭೂತನು, ಆಗಮಾತ್—ಶಿವಸ್ಪರ್ಶನಮಾತ್ರದಿಂದ ಹೇ ಸುಬಂಧೋ?—ನಿರುಪಾಧಿಕನಾದ ಪ್ರಾಣಬಂಧುವೇ ಏಹಿ—ಇಲ್ಲಿ ಆಗಮಿಸು ಇದಂ—ಈ ನನ್ನ ಹಸ್ತದಲ್ಲಿರುವ ಶಿವಲಿಂಗವು, ತವ—ನಿನಗೆ ಪ್ರಸರ್ಪಣಂ—ವಿಹಾರಸ್ಥಾನವಾಗಿರುವುದು ನಿರೀಕ್ಷಿತ—ಚಿತ್ತ ಚಲಿಸದಂತೆ ಈ ಇಷ್ಟಲಿಂಗದಲ್ಲಿ ಯಾವಾಗಲೂ ನೆಲೆಗೊಂಡಿರು ಎಂದು ಈ ಮಂತ್ರದಲ್ಲಿರುವ ಪದಗಳಿಗೆ ಅರ್ಥವಾಗುತ್ತದೆ ಈ ಮಂತ್ರದಲ್ಲಿರುವ 'ಭಗವಾನ್' ಎಂಬ ಪದಕ್ಕೆ ಲಿಂಗರೂಪನಾದ ಪರಶಿವನೆಂದು ಹೇಗೆ ಅರ್ಥವಾಗುವುದೆಂದು ಶಂಕಿಸಬಾರದು.

ಅಷ್ಟೈಸಂ ಭಗವಂತಂ ರುದ್ರಂ ಕುಮಾರಃ ಪಪ್ರಚ್ಛ ॥

ಷಣ್ಮುಖಸ್ವಾಮಿಯು ಭಗವಚ್ಛಬ್ದವಾಚ್ಯನಾದ ರುದ್ರನನ್ನು ಕುರಿತು ಪ್ರಶ್ನೆಮಾಡಿದನು

ಅಥ ಕಾಲಾಗ್ನಿರುದ್ರಂ ಭಗವಂತಂ ಸನತ್ಕುಮಾರಃ ಪಪ್ರಚ್ಛ ॥

ಸನತ್ಕುಮಾರಋಷಿಯು ಕಾಲಾಗ್ನಿರುದ್ರಸ್ವರೂಪ ಭಗವಂತನನ್ನು ಕೇಳಿದನು ಇವೇ ಮೊದಲಾದ ವೇದವಾಕ್ಯಗಳಲ್ಲಿ ಭಗವಚ್ಛಬ್ದಕ್ಕೆ ಲಿಂಗರೂಪಶಿವನೆಂಬ ಅರ್ಥವು ಸ್ಪಷ್ಟವಾಗಿ ಕಂಡುಬರುತ್ತದೆ ಮತ್ತು—

ಇತಿ ಸಂಸ್ತುತ್ಯಮಾನಸ್ತು ಭಗವಾನ್ ವೃಷಭಧ್ವಜಃ ॥

ಎಂದು ಹರಿವಂಶಾದಿಗಳಲ್ಲಿ ಶಿವನಲ್ಲಿಯೇ ಭಗವಚ್ಛಬ್ದವನ್ನು ಪ್ರಯೋಗಿಸಿರುವುದರಿಂದ ಈ ಮಂತ್ರದಲ್ಲಿರುವ "ಭಗವಾನ್" ಎಂಬ ಶಬ್ದಕ್ಕೆ ಲಿಂಗರೂಪಶಿವನೆಂದು ವೀರಶೈವಮತಾಚಾರ್ಯರು ಮಾಡಿರುವ ವ್ಯಾಖ್ಯಾನವು ನಿರ್ದೋಷವಾದುದು ಮತ್ತು—

ನಾರಾಯಣೋಽಪಿ ಭಗವಾನ್ ದೇವಕೀತನಯೋ ಹರಿಃ ।
ಕಶ್ಯಪ ಭಗವಾನ್ ಅಜ್ಞೇ ಬ್ರಹ್ಮಾ ಲೋಕಪಿತಾಮಹಃ ॥
ಸನತ್ಕುಮಾರೋ ಭಗವಾನ್ ,, ।

ಇವೇ ಮೊದಲಾದ ಪ್ರಮಾಣಗಳ ಆಧಾರದಿಂದ ನಾರಾಯಣನಲ್ಲಿಯೂ ಚತುರ್ಮುಖಬ್ರಹ್ಮನಲ್ಲಿಯೂ ಸನತ್ಕುಮಾರಾದಿ ಮಹರ್ಷಿಗಳಲ್ಲಿಯೂ "ಭಗವಾನ್" ಎಂಬ ವ್ಯವಹಾರವು ಕಂಡುಬರುವುದರಿಂದ ಅಂಥ ಸರ್ವಜೀವಸಾಧಾರಣವಾದ ಭಗವಚ್ಛಬ್ದಕ್ಕೆ ಹಸ್ತಕಮಲದಲ್ಲಿ ಧರಿಸಲ್ಪಟ್ಟ ಶಿವಲಿಂಗಪರವಾಗಿಯೇ ಹೇಗೆ ತಾನೇ ಅರ್ಥವಾದೀತೆಂದು ಶಂಕಿಸಿಕೊಂಡು ಮತಾಂತರ್ಯರು ವಿವಾದಾಂಶಾದ ಸ್ತಾಂತದಿಂದಲೂ ಪರಿಹಾರಗೊಳಿಸಿರುತ್ತಾರೆ ಅದು ಹೇಗೆಂದರೆ—

ಹಸ್ತೇನಾವದ್ಯತಿ ಸ್ರುವೇಣಾವದ್ಯತಿ ಸ್ವಧಿತಿನಾವದ್ಯತಿ

ಹಸ್ತದಿಂದ ಅವದಾನಮಾಡಬೇಕು ಸ್ರುವದಿಂದ ಅವದಾನಮಾಡಬೇಕು ಸ್ವಧಿತಿಯಿಂದ ಅವದಾನ ಮಾಡಬೇಕು ಎಂಬ ವಾಕ್ಯಗಳಲ್ಲಿ ಅವದಾನ ಮಾತ್ರ ಸಾಧಾರಣವಾಗಿ ಅವದ್ಯತಿ ಅವದ್ಯತಿ ಎಂದು ಏಕಾನುಪೂರ್ವಿಯಾಗಿ ಹೇಳಿದ್ದರೂ ಈ ಅವದ್ಯತಿ ಎಂಬ ಸಮಾನವಾದ ಪದದ ಸಮೀಪದಲ್ಲಿ ಭಿನ್ನಭಿನ್ನಾರ್ಥವುಳ್ಳ ಹಸ್ತ ಸ್ರುವ ಸ್ವಧಿತಿಪದಗಳು ಇರುವುದರಿಂದ "ಹಸ್ತೇನಾವದ್ಯತಿ" ಎಂಬಲ್ಲಿ ಹಸ್ತದಿಂದ ಪ್ರತಿಪಾದಿತ ಅವದಾನವನ್ನೂ 'ಸ್ರುವೇಣಾವದ್ಯತಿ' ಎಂಬಲ್ಲಿ ಸ್ರುವದಿಂದ ಕೃತ ಅವದಾನವನ್ನೂ, ಸ್ವಧಿತಿನಾವದ್ಯತಿ ಎಂಬಲ್ಲಿ ಸ್ವಧಿತಿಯಿಂದ ಅವದಾನವನ್ನೂ ಮಾಡಬೇಕೆಂದು ಪ್ರತ್ಯೇಕಪ್ರತ್ಯೇಕವಾಗಿ ಅವದಾನವು ತೋರುವಂತೆ ಇಲ್ಲಿ ಭಗವಚ್ಛಬ್ದವು ಇತರ ದೇವತಾಸಾಧಾರಣವೆಂದು ಒಪ್ಪಿಕೊಂಡರೂ 'ಅಯಂ ಮೇ ಹಸ್ತೋ ಭಗವಾನ್' ಎಂಬ ಮಂತ್ರದಲ್ಲಿರುವ 'ಭಗವಾನ್' ಎಂಬ ಭಗವಚ್ಛಬ್ದದ ಸಮೀಪದಲ್ಲಿಯೇ 'ಹಸ್ತ' ಎಂಬ ಪದವಿರುವುದರಿಂದಲೂ, ಆ ಹಸ್ತಸ್ಥಂಗಗಳಲ್ಲಿ ಇತರ ದೇವತೆಗಳನ್ನು ಧರಿಸುವ ವಿಧಿಯಾಗಲಿ ಪ್ರಸ್ತಾಪವಾಗಲಿ ಎಲ್ಲಿಯೂ ಕಂಡುಬಾರದ ಪದದಿಂದಲೂ ಈ ಮಂತ್ರದಲ್ಲಿರುವ ಭಗವಾನ್ ಎಂಬ ಶಬ್ದಕ್ಕೆ ಹಸ್ತದಲ್ಲಿ ಧರಿಸಲ್ಪಟ್ಟ ಪಂಚಸೂತ್ರಘಟಿತ ಶಿವಲಿಂಗವೆಂದರ್ಥವು ಸಿದ್ಧವಾಗುತ್ತದೆ ಹಾಗಾದರೆ ಈ ಮಂತ್ರದಲ್ಲಿ 'ಹಸ್ತಃ' ಎಂಬ ಪ್ರಥಮಾಂತವಾದ ಪದವಿರುವುದಲ್ಲದೆ ಹಸ್ತಗತಃ ಎಂಬ ಪದವಿರುವುದಿಲ್ಲ ಆದ್ದರಿಂದ ಹಸ್ತಪದಕ್ಕೆ 'ಕೈ' ಎಂಬ ಮಾತ್ರ ಅರ್ಥವಾಗುತ್ತದಲ್ಲದೆ ಕೈಯಲ್ಲಿ ಧರಿಸಲ್ಪಟ್ಟದ್ದೆಂಬ ಅರ್ಥವು ಸಿದ್ಧವಾಗುವುದಿಲ್ಲ ಹೀಗಿದ್ದರೂ ಭಗವಚ್ಛಬ್ದವಾಚ್ಯವಾದ ಶಿವಲಿಂಗವು ನನ್ನ ಹಸ್ತದಲ್ಲಿ ಧರಿಸಲ್ಪಟ್ಟಿರುವುದೆಂದು ಹೇಗೆ ತಾನೇ ಅರ್ಥ ಮಾಡಬಹುದೆಂದು? ಎಂಬ ಪಕ್ಷಾಂತರದ ಶಂಕೆಯುತ್ಪನ್ನವಾಗಬಹುದು 'ಹಸ್ತೋ ಭಗವಾನ್' ಎಂದು ಭಗವಚ್ಛಬ್ದದ ಅವ್ಯವಹಿತಪೂರ್ವದಲ್ಲಿಯೇ ಹಸ್ತಶಬ್ದವು ಇರುವುದನ್ನು ಪರ್ಯಾಲೋಚಿಸಿದರೆ ಹಸ್ತದಲ್ಲಿರುವ ಶಿವಲಿಂಗವೆಂದೇ ಅರ್ಥಮಾಡುವುದು ಯುಕ್ತವಾದುದು

ಆದಿತ್ಯೋ ಭಗವಾನ್ ಸೂರ್ಯೋ ನೀಲಗ್ರೀವಸ್ತ್ರಿಲೋಚನಃ ।
ಅಥ ಯತೋ ಸಹಸ್ರಾಂಶುಸ್ತ್ವದ್ಯಗಾಧ್ವಲ್ಯಪೂರ್ವಕಃ ।

ಭಗವಾನ್ ಸರ್ವವ್ಯಾಪಿಯಾದ ಪರಶಿವಲಿಂಗವು, ಆದಿತ್ಯಃ ಸೂರ್ಯಮಂಡಲದಲ್ಲಿರುವನು 'ನೀಲಗ್ರೀವಃ ತ್ರಿಲೋಚನಃ' ಎಂದು ತ್ರಿಲೋಚನಾದಿ ಶಬ್ದವಾಚ್ಯವಾದ ಶಿವಲಿಂಗವು, ಸೂರ್ಯಃ ಸೂರ್ಯಮಂಡಲಾಂತರ್ವರ್ತಿಯಾದುದು, ಎಂದು ಆದಿತ್ಯಪುರಾಣದಲ್ಲಿ ಸ್ಪಷ್ಟವಾಗಿ ಭಗವಚ್ಛಬ್ದ ನೀಲಗ್ರೀವತ್ರಿಲೋಚನಶಬ್ದಗಳ ಅತಿ ಸಮೀಪದಲ್ಲಿಯೇ ಇರುವ ಆದಿತ್ಯ ಸೂರ್ಯ ಪದಗಳಿಗೆ ಸೂರ್ಯಮಂಡಲದಲ್ಲಿರುವ ಸೂರ್ಯನಿಗಿಂತಲೂ ಭಿನ್ನವಾದ ಸರ್ವವ್ಯಾಪಕವಾದ ಪರಶಿವಲಿಂಗವೆಂಬ ಅರ್ಥದಲ್ಲಿ 'ಆದಿತ್ಯೋ ಭಗವಾನ್' ಎಂದು ಅಭೇದೋಪಚಾರವು ಮಾಡಲ್ಪಟ್ಟಿರುತ್ತದೆ

ಇತ್ಯಾದಿ ಅನಂತವಾಕ್ಯಗಳು ಈ ವಿಷಯದಲ್ಲಿ ಪ್ರಮಾಣಭೂತಗಳಾಗಿರುತ್ತವೆ ಇದರಂತೆ 'ಹಸ್ತೋ ಭಗವಾನ್' ಎಂಬ ಮಂತ್ರಸ್ಥವಾಕ್ಯದಲ್ಲಿ ಹಸ್ತಶಬ್ದಕ್ಕೂ ಭಗವಚ್ಛಬ್ದಕ್ಕೂ ಒಂದೇ ವಿಭಕ್ತಿಯು ಸ್ವಾರಸ್ಯದಿಂದ ಕೇವಲ ಅಭೇದವು ತೋರಿದರೂ ಆದಿತ್ಯೋ ಭಗವಾನ್ ಎಂಬಂತೆ 'ಹಸ್ತೋ ಭಗವಾನ್' ಎಂಬಲ್ಲಿ ಸರ್ವವ್ಯಾಪಕವಾದ ಪರಶಿವಲಿಂಗವು ಹಸ್ತಪೀಠದಲ್ಲಿ ಸದಾ ಪೂಜಿಸಲ್ಪತಕ್ಕದ್ದೆಂಬ ಅರ್ಥದಲ್ಲಿ 'ಹಸ್ತೋ ಭಗವಾನ್' ಎಂದು ಔಪಚಾರಿಕವಾದ ಅಭೇದವನ್ನು ತೋರಿಸಿರುತ್ತಾರೆ ಈ ಅಭೇದರೂಪವಾದ ಉಪಚಾರೋಕ್ತಿಯು ಹಸ್ತಕ್ಕೂ ಹಸ್ತದಲ್ಲಿ ಪೂಜಿಸಲ್ಪಡುವ ಶಿವಲಿಂಗಕ್ಕೂ ನಿತ್ಯಸಂಬಂಧವಿರುವುದೆಂಬ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತದೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಶುಕ್ರವಾರ ದಿವಸ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿಸಿದರೆಂದು ತಿಳಿದುಬರುತ್ತದೆ

ಈ ವಾರದಲ್ಲಿ ರಾಜಧಾನಿಯಲ್ಲಿಯೂ ಇತರ ಕಡೆಗಳಲ್ಲಿಯೂ ಮಳೆಯು ವಿಶೇಷವಾಗಿ ಜನಗಳಿಗೆಲ್ಲಾ ಮಹಾನಂದವನ್ನುಂಟುಮಾಡಿದೆ ಇದರಿಂದ ಧಾನ್ಯಾದಿಗಳು ವಿಶೇಷವಾಗಿ ಇಳಿದಿರುವುದು ಸರ್ವರಿಗೂ ಸಂತೋಷಕರವಾಗಿದೆ

ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ ಪಿ ಪುಟ್ಟಣ್ಣಚೆಟ್ಟರವರ ಹೆಸರಿನಿಂದ ಬೆಂಗಳೂರು ನಗರದಲ್ಲಿ ಕಟ್ಟಲ್ಪಟ್ಟಿರುವ ಪುರಭವನದ ಪ್ರಾರಂಭೋತ್ಸವವನ್ನು ಶ್ರೀಮದ್ಯುವರಾಜರವರು ಇದೇ ಸೆಪ್ಟೆಂಬರ್ 11 ನೆಯ ತಾರೀಖಿನ ದಿವಸ ನಡೆಯಿಸುವರೆಂದು ತಿಳಿದು ಬರುತ್ತದೆ

ಇದೇ ತಿಂಗಳು 1 ನೇ ತಾರೀಖಿನ ದಿನ ರಾಜಧಾನಿಯ ಕುಕ್ಕರಹಳ್ಳಿ ಕೆರೆಯಲ್ಲಿ 1-3 ತಿಂಗಳು ಮಗುವಿನ ಹೆಣವು ತೇಲುತ್ತಿದ್ದುದನ್ನು ಹೊರಕ್ಕೆ ತೆಗೆಯಿಸಿ ಪೋಲೀಸರು ಮಹಜರು ಕ್ರಮ ನಡೆಯಿಸಿ ಪೋಸ್ಟ್ ಮಾರ್ಟಂ ಪರೀಕ್ಷೆಗೆ ಆಸ್ಪತ್ರೆಗೆ ಕಳುಹಿಸಿರುವರಂತೆ ಈ ಕೃತ್ಯವನ್ನು ಯಾರು ಮಾಡಿರುವರೆಂಬುದು ಇನ್ನೂ ಹೊರಬಿದ್ದಿರುವುದಿಲ್ಲ

ಮೈಸೂರು ಪೌರಸಭೆಯ ಉಪಾಧ್ಯಕ್ಷರಾಗಿದ್ದ ಮಿ|| ಮಹಮದ್‌ಸೇಟರು ಮತ್ತು ಸದಸ್ಯರಾಗಿದ್ದ ಮಿ|| ಎ ಟಿ ಆರ್ಮುಗಂ ಮೊದಲಿಯಾರ್ರು ಪೌರಸಭೆಗೆ ಕೊಡಬೇಕಾದ ತೆರಿಗೆಯನ್ನು ಕೊಡಬೇಕೆಂದು 3 ತಿಂಗಳು ಮುಂದೆಯೇ ತಿಳಿಸಿದರೂ ಇದುವರೆಗೂ ಕೊಡದಿಲ್ಲವಾಗಿ ಪೌರಸಭೆಯ 12 ನೇ ವಿಧಿಯ ಪ್ರಕಾರ ಅವರನ್ನು ಸದಸ್ಯತ್ವದಿಂದ ವಜಾಮಾಡಿರುತ್ತಾರೆ

ಶ್ರೀಮನ್ಮಹಾರಾಜರವರ ಹುಜೂರ್ ಸೆಕ್ರೆಟರಿಗಳಾಗಿರುವ ಮಿ|| ತಂಬೂಚೆಟ್ಟಿಯವರ ಪುತ್ರಿ ಮಿಸ್ ಸಿಲೋಮಿನಾ ತಂಬೂಚೆಟ್ಟಿಯವರು ಪಿಟೀಲುವಾದನದಲ್ಲಿ ಅಸಾಧಾರಣವಾದ ನೈಪುಣ್ಯವನ್ನು ಪಡೆದಿದ್ದು ಸೀಮೆಗೆ ಹೋಗಿ ಚಕ್ರವರ್ತಿಗಳ ಎದುರಿನಲ್ಲಿ ತಮ್ಮ ಕಲಾನೈಪುಣ್ಯವನ್ನು ತೋರಿಸಿ, ಅವರ ಪ್ರೇಮಕ್ಕೆ ಪಾತ್ರರಾಗಿರುವರಲ್ಲದೆ, ವಿದೇಶಗಳ ಮಹಾಜನಗಳಿಂದ ಗೌರವವನ್ನು ಪಡೆದು ಈ ವಾರದಲ್ಲಿ ಸ್ವದೇಶಕ್ಕೆ ಆಗಮಿಸಿದರೆಂದು ಕೇಳುತ್ತೇವೆ.

ಸರ್ಕಾರದವರು ಬರುವ ದಸರಾಮಹೋತ್ಸವ ಕಾಲದಲ್ಲಿ ರಾಜಧಾನಿಗೆ ಆಗಮಿಸಿರುವ ಎಲ್ಲಾ ಹಿಂದೂ ಅತಿಥಿಗಳಿಗೂ ಸೌಕರ್ಯಗಳನ್ನು ಕಲ್ಪಿಸಿ ಆದರಿಸಲು, ಜನರಲ್ ರೆವಿನ್ಯೂ ಸೆಕ್ರೆಟೇರಿಯಟ್ ರಿಜಿಸ್ಟ್ರಾರರಾದ ಮಿ|| ಸಿ ಎಸ್ ಶ್ರೀನಿವಾಸಾಚಾರ್ ಬಿ ಎ, ಇವರನ್ನು ಸ್ಪೆಷಲ್ ಡ್ಯೂಟಿ ಆಫೀಸರನ್ನಾಗಿ ನೇಮಿಸಿರುವುದರಿಂದ ಅತಿಥಿಗಳು ತಮಗೆ ಬೇಕಾಗುವ ಸಹಾಯಕ್ಕೂ ಇತರ ಸಮಾಚಾರಗಳಿಗೂ ಮೇಲ್ಕಂಡವರನ್ನು ನೋಡಿ ಪಡೆಯಬಹುದೆಂದು ಪ್ರಕಟಿಸಿರುತ್ತಾರೆ

ಬೆಂಗಳೂರು ಚಿಕ್ಕಪೇಟೆಯ ಶ್ರೀ ಮಹಾಂತಿನ ಮಠದಲ್ಲಿರುವ ವಿದ್ಯಾರ್ಥಿಗಳು ಶ್ರೀ ವಿಘ್ನೇಶ್ವರಪ್ರೀತಿಗಾಗಿ ಮೊನ್ನೆ ಶನಿವಾರ ದಿವಸ ಆರಾಧನೆಯನ್ನು ಮಾಡಿಸಿ ವಿನಾಯಕಮೂರ್ತಿಯ ವಿಶೇಷ ಪೂಜೆಯನ್ನು ಜರುಗಿಸಿದರು ಸಾಯಂಕಾಲ ಶ್ರೀ ಮಹಾಂತಮಠಾಧ್ಯಕ್ಷರಾದ ಶ್ರೀ ಗಂಗಾಧರಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆಯು ಆರಂಭವಾಯಿತು ಪುರಪ್ರಮುಖರೂ ವಿದ್ಯಾರ್ಥಿಗಳೂ ಬಹಳವಾಗಿ ಸೇರಿದ್ದರು. ಅನೇಕರ ಭಾಷಣವಾದನಂತರ ಶ್ರೀ ಅಧ್ಯಕ್ಷರವರು 3 ಘಂಟೆ ಕಾಲ ಅಸ್ಖಲಿತವಾಣಿಯಿಂದ ವಿದ್ಯಾರ್ಥಿಗಳಿಗೆ ಸದ್ಬೋಧೆಯನ್ನು ಮಾಡಿದರು ಬಳಿಕ ವಿನಾಯಕನಿಗೆ ರಾಜೋಪಚಾರಾದಿಗಳು ನಡೆಯಿಸಲ್ಪಟ್ಟವು

ಸೊರಬ ತಾ|| ಬಿಳಗಲಿ ಗ್ರಾಮದ ಪಂಚಾಯತಿ ಆಫೀಸಿನವರು ವೀರದೇವ ಒಡೆಯರ ಅಧ್ಯಕ್ಷತೆಯಲ್ಲಿ ಕೈಬಿಟ್ಟ ಭೂಕಂಪಕ್ಕಾಗಿ 6 ರೂ ಗಳನ್ನು ಕಳುಹಿಸಿರುವರೆಂದು ಒಬ್ಬ ದಾತೃೀದಾರರು ತಿಳುಹಿಸುತ್ತಾರೆ

ವರ್ತಮಾನಸಂಗ್ರಹ.

ಬಳ್ಳಾರಿ ಡಿ|| ಹರಪನಹಳ್ಳಿ ತಾಲೂಕಿಗೆ ಸೇರಿದ ಬ್ಯಿನ ಮಲ್ಲೇಶ್ವರನ ಉತ್ಸವವು ಶ್ರಾವಣಮಾಸ ಸೋಮವಾರದಲ್ಲಿ ಪದ್ಧತಿಪ್ರಕಾರವಾಗಿ ನೆರವೇರಿತ್ತಿದ್ದೂ, ಅಗ್ನಿ ಮಳೆಯಿಂದ ಆಕಸ್ಮಿತ್ತಾಗಿ ಒಂದು ಸ್ತಂಭವು ಕುಸಿದು ತತ್‌ಕ್ಷಣವೇ ಇಬ್ಬರು ಮರಣ ಹೊಂದಿದರೆಂದೂ, ಮೂವರಿಗೆ ಗಾಯಗಳಾಗಿ ಹರಪನಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರೆಂದೂ ತಿಳಿದುಬಂದಿದೆ

ತಿರುವಾಂಕೂರಿಗೆ ವಿಮಾನ ಸರ್ವಿಸ್.

ಮುಂದಿನ ಅಕ್ಟೋಬರ್ ತಿಂಗಳಿನಿಂದ ಟಾಟಾ ಕಂಪನಿಯವರು ಮುಂಬಯಿಯಿಂದ ತಿರುವಾಂಕೂರಿಗೆ ವಿಮಾನ ಸರ್ವಿಸ್ ಇಡುವರಂತೆ! ವಿಮಾನಗಳು ಆ ಪ್ರತೀರದಲ್ಲಿಯೇ ಪ್ರಯಾಣಮಾಡುವವಂತೆ!

ದೋಣಿಯ ಅನಾಹುತ.

ಒಕ್ಕೋ ಬಳಿ ರಾಪ್ತಿ ಎಂಬ ನದಿಯಲ್ಲಿ ಸುಮಾರು ೧೮ ಮಂದಿಯನ್ನು ಕುಳ್ಳಿರಿಸಿಕೊಂಡು ಹೋಗುತ್ತಿದ್ದ ದೋಣಿಯು ಮಗುಚಿಕೊಂಡದ್ದರಿಂದ ಹೆಂಗಸರು ಮಕ್ಕಳನ್ನು ಸೇರಿಸಿ 13 ಮಂದಿ ನೀರಿನ ಪಾಲಾದರೆಂದು ತಿಳಿದುಬರುತ್ತದೆ

ಮಾರಿಸ್‌ವಿಲ್ಸನ್ನನ ದೇಹವು ಈಗ ಸಿಕ್ಕಿದೆ.

1934 ನೇ ಇಸವಿಯಲ್ಲಿ ಹಿಮಾಲಯದ ಗೌರೀಶಂಕರ ಶಿಖರವನ್ನೇರಲು ಪ್ರಯತ್ನಿಸಿ ಅದೃಶ್ಯನಾಗಿದ್ದ ಮಾರಿಸ್‌ವಿಲ್ಸನ್ ಎಂಬವನ ದೇಹವು ಈಗ ಸಿಕ್ಕಿರುತ್ತದೆ ಇದನ್ನು 2 ದಿನದ ಪ್ರಯಾಣದ ಎತ್ತರದ ಮೇಲೆ ಶಿಪ್ಟನ್ ಎಂಬವರು ಪತ್ತೆಮಾಡಿರುತ್ತಾರೆ

೧ ಘಂಟೆಗೆ ೧೧೪೦೦೦ ಟೆಲಿಗ್ರಾಮುಗಳು!

ಪ್ರಪಂಚದ ಎಲ್ಲ ಪೋಸ್ಟಾಫೀಸುಗಳಲ್ಲಿಯೂ ಕೂಡಿಸಿದರೆ ಒಂದು ಘಂಟೆಗೆ ಸುಮಾರು 114000 ಟೆಲಿಗ್ರಾಮುಗಳು ಕೊಡಲ್ಪಡುವುವೆಂದೂ, ಇದರಲ್ಲಿ ಅರ್ಧಭಾಗವು ವ್ಯಾಪಾರ ಸಂಬಂಧವಾಗಿದ್ದು ಉಳಿದ ಅರ್ಧಭಾಗವು ಜನರ ಖಾಸಗಿವಿಚಾರಗಳಿಗೆ ಸಂಬಂಧಿಸಿದುವೆಂದೂ ಊಹಿಸಲಾಗಿದೆ

೧ ಘಂಟೆಗೆ ೨೩೦೦ ಜನರ ಉತ್ಪತ್ತಿ!

ಈ ಪ್ರಪಂಚದಲ್ಲಿ ಪ್ರತಿಗಂಟೆಯಲ್ಲಿಯೂ ಸುಮಾರು 2300 ಜನರು ಹುಟ್ಟುತ್ತಾರೆಂದೂ ಸುಮಾರು 1530 ಜನರು ಸಾಯುತ್ತಾರೆಂದೂ, ಉಳಿದ 770 ಜನರು ಪ್ರಜಾಸಂಖ್ಯೆಯನ್ನು ಹೆಚ್ಚಿಸುತ್ತಿರುವರೆಂದೂ ಪರಿಗಣಿಸಲ್ಪಟ್ಟಿದೆ

೧ ಘಂಟೆಗೆ ೧೭೭೦೦೦ ಜನರಿಗೆ ಶಿಕ್ಷೆ!

ಪ್ರಪಂಚದ ಎಲ್ಲ ದೇಶಗಳ ಲೆಖ್ಖವನ್ನೂ ತೆಗೆದುಕೊಂಡರೆ ಘಂಟೆಗೆ ಸುಮಾರು 198000 ಅಪರಾಧಗಳ ನ್ಯಾಯವಿಮರ್ಶೆಯು ನಡೆದು ಸುಮಾರು 177000 ಅಪರಾಧಿಗಳು ಶಿಕ್ಷಿಸಲ್ಪಡುತ್ತಿರುವರೆಂದೂ, ಉಳಿದ 21000 ಅಪರಾಧಿಗಳು ನ್ಯಾಯದಂಡಕ್ಕೆ ಸಿಕ್ಕದೆ ತಪ್ಪಿಸಿಕೊಳ್ಳುತ್ತಿರುವರೆಂದೂ ಪರಿಗಣಿತವಾಗಿದೆ

ವ್ಯಾಪಾರನಷ್ಟದಿಂದ ಆತ್ಮಹತ್ಯೆ!

ಮದರಾಸಿನ ಭಾರಿವರ್ತಕರಾದ ಮಿ|| ಇ ಎಸ್ ಹಾಜಿಯೆಂಬವರು ವ್ಯಾಪಾರದಲ್ಲಿ ಬಹಳ ನಷ್ಟಹೊಂದಿ ಹಣದ ತೊಂದರೆಗೆ ಸಿಕ್ಕಿದ್ದರಿಂದ ಜೀವಿತದಲ್ಲಿ ಜುಗುಪ್ಸೆಹುಟ್ಟಿ, ಬದುಕಿರುವುದಕ್ಕಿಂತಲೂ ಸಾಯುವುದೇ ಲೇಸೆಂದು ಸಮುದ್ರದಲ್ಲಿ ಧುಮುಕಿ ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿದುಬರುತ್ತದೆ.

ಪ್ರವಾಹದ ಹಾವಳಿ.

ಬರ್ಮಾದಲ್ಲಿ ಪ್ರವಾಹದಿಂದ ಬಹಳ ನಷ್ಟವುಂಟಾಗಿದೆ [illegible] ಎಂಬಲ್ಲಿ 19000 ಭತ್ತದ ಚೀಲಗಳು ಹೋದವು ಅನೇಕ ದನಕರುಗಳೂ ಪ್ರಾಣಬಿಟ್ಟವೆ ಕೆಂದಿತ್ ಎಂಬಲ್ಲಿ 1000 ದನಕರುಗಳು ನಾಶವಾಗಿವೆ [illegible] ಜಿಲ್ಲೆಯಲ್ಲಿ ಸಿಟ್ಟಂಗ್‌ನದಿಯ ಸುತ್ತುಮುತ್ತ ಸುಮಾರು 6000 ಎಕರೆ ಜಮೀನು ನೀರಿನಲ್ಲಿ ಮುಳುಗಿದೆ ಎಂದು ತಿಳಿದುಬರುತ್ತದೆ

ತನ್ನ ಮಗಳನ್ನೇ ಭೋಗಿಸಿದ ಮಹಾಪುರುಷ!

ಸಿಂದ್‌ಹೈದರಾಬಾದಪ್ರಾಂತದಲ್ಲಿ ಎಡ್ಮಂಡ್ ಎಂಬ 45 ವರ್ಷವಯಸ್ಸಿನ ಆಂಗ್ಲೋಇಂಡಿಯನ್ನನು 19 ವರ್ಷ ವಯಸ್ಸಿನ ತನ್ನ ಸ್ವಂತ ಮಗಳ ಮೇಲೆ ಅತ್ಯಾಚಾರ ನಡೆಯಿಸಿದನೆಂದೂ, ಈ ವಿಚಾರವನ್ನು ಹೊರಗೆ ತಿಳಿಸಿದರೆ ಮಗಳನ್ನು ಕೊಲ್ಲುವುದಾಗಿ ಹೆದರಿಸಿದನೆಂದೂ ಅವನ ಹೆಂಡತಿಯು ಪೋಲೀಸರಿಗೆ ದೂರುಕೊಟ್ಟಿರುತ್ತಾಳೆ ಅದರ ಮೇಲೆ ಪೋಲೀಸರು ಅಪರಾಧಿಯನ್ನು ದಸ್ತಗಿರಿಮಾಡಿದ್ದಾರೆ ಕಲಿಯುಗದ ಮಹಿಮೆ!

ಪಂ|| ಜವಹಿರಲಾಲರು ಯೂರೋಪಿಗೆ ಪ್ರಯಾಣಮಾಡಿದರು

ಯೂರೋಪಿನಲ್ಲಿ ಚಿಕಿತ್ಸೆಹೊಂದುತ್ತಿರುವ ಪಂ|| ಜವಹಿರಲಾಲರವರ ಪತ್ನಿ ಶ್ರೀಮತಿ ಕಮಲಾನೆಹರೂರವರ ಆರೋಗ್ಯವು ಬಹಳ ಚಿಂತಾಜನಕವಾಗಿರುವುದೆಂದು ವೈಸ್‌ರಾಯರವರಿಗೆ ತಂತಿಬಂದದ್ದರಿಂದ ಸೆರೆಮನೆಯಲ್ಲಿದ್ದ ಜವಹಿರಲಾಲರನ್ನು ಅವರ ಪತ್ನಿಯ ಬಳಿಗೆ ಹೋಗಲು ಬಂಧಮುಕ್ತಮಾಡಿದರು ಜವಹಿರಲಾಲರು 4 ನೇ ತಾರೀಖಿನ ದಿವಸ ಇಂಪೀರಿಯಲ್ ಏರ್‌ವೇಸ್ ವಿಮಾನದ ಮೂಲಕ ಯೂರೋಪಿಗೆ ಪ್ರಯಾಣಮಾಡಿದರು

ಗಡಿನಾಡಿನ ಸ್ಥಿತಿ.

ಕೆಲವುದಿನಗಳಿಂದ ಗಡಿನಾಡಿನಲ್ಲಿ ಅರಾಜಕತೆಯ ಹಾವಳಿಯು ಹೆಚ್ಚುತ್ತಿದ್ದು ಅನೇಕ ಹಳ್ಳಿಗಳಲ್ಲಿ ಲೂಟಿಯು ನಡೆದಿದೆ ಕಳೆದ ೩ ನೇ ತಾರೀಖಿನ ದಿವಸ ಪೆಷಾವರ್ ಬ್ರಿಗೇಡ್ ಮತ್ತು ಸೈನ್ಯಪಡೆಯು ರಾತ್ರಿವೇಳೆ ಈ ಅರಾಜಕರ ಗುಂಪಿಗೆ ಮುಂದೆ ನುಗ್ಗಿ, ಬೆಳಗಾಗುವಲ್ಲಿ ಶತ್ರುಗಳನ್ನು ಆಕ್ರಮಿಸಿತು ಈ ಕದನದಲ್ಲಿ ಶತ್ರುಪಕ್ಷದ 21 ಜನರು ಸತ್ತರೆಂದೂ ೨೯ ಜನರಿಗೆ ಗಾಯಗಳಾಗಿವೆಂದೂ, ಉಳಿದವರು ಓಡಿಹೋದರೆಂದೂ ತಿಳಿದ ಬರುತ್ತದೆ

ಶೀತಾಧಿಕ್ಯದಿಂದ ವಿಷಕ್ರಿಮಿನಾಶ.

ಅಮೇರಿಕದ ಡಾ|| ರಾಲ್ಫ್, ವಿಲ್ಲರ್ಡ್ ಎಂಬುವರು ಸತ್ತುಹೋಗಿದ್ದ ಮಂಗವನ್ನು ಚಳಿಯಿಂದ ಜಿಡ್ಡುಗಟ್ಟಿ ಸಾಯುವಂತೆ ಮಾಡಿ 3 ದಿನಗಳನಂತರ ಬದುಕಿಸಿ ವೈದ್ಯಶಾಸ್ತ್ರ ಪ್ರಪಂಚವನ್ನೇ ಆಶ್ಚರ್ಯಪಡಿಸಿದ್ದಾರೆ ಶರೀರವನ್ನು ಆ ಮಂಜಿನಗೆಡ್ಡೆಯಂತೆ ತಣ್ಣಗೆ ಮಾಡುವುದರಿಂದ ಎಲ್ಲಾ ರೋಗಕ್ರಿಮಿಗಳೂ ನಾಶಹೊಂದಿ ಶರೀರವು ಶುದ್ಧವಾಗುವುದಂತೆ! ಇವರು ಈಗ ಒಬ್ಬ ಮನುಷ್ಯನನ್ನು ಈ ರೀತಿ ಮಂಜಿನ ಗೆಡ್ಡೆಯನ್ನು ಕೃತ್ಯದಲ್ಲಿಟ್ಟು ಅನಂತರ ಬದುಕಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ

ಕಾಮುಕನನ್ನು ಅಗ್ನಿಯಲ್ಲಿ ಚೆಲ್ಲಿದರು.

ಲಾಹೋರಿಗೆ ಸಮೀಪದ ದಹಾಳುಪುರವೆಂಬಲ್ಲಿ ಒಬ್ಬ ಮುಸಲ್ಮಾನ್ ತರುಣನು ಒಬ್ಬ ಸಿಖ್ ಯುವತಿಯ ಮೇಲೆ ಅತ್ಯಾಚಾರ ನಡೆಯಿಸಿದ್ದರಿಂದ, ಕೋಪಗೊಂಡ ಕೆಲವು ಸಿಕ್ಕರು ಆ ಯುವಕನನ್ನು ಜೀವಸಹಿತ ಸುಟ್ಟುಬಿಡಲು ಪ್ರಯತ್ನಿಸಲು ಹಳ್ಳಿಗರು ಬಂದು ಬಿಡಿಸಿದರು. ಅಷ್ಟರಲ್ಲಿ ಆವನ ಮೈ ಅನೇಕ ಕಡೆಗಳಲ್ಲಿ ಸುಟ್ಟು ವಿಶೇಷ ಗಾಯಗಳಾಗಿದ್ದವು ಪೋಲೀಸರು ಕೂಡಲೆ ಅಲ್ಲಿಗೆ ಹೋಗಿ, ಕೊಲೆಮಾಡಲು ಪ್ರಯತ್ನಿಸಿದರೆಂಬ ಅಪಾದನೆಯ ಮೇಲೆ ಹಲವು ಸಿಕ್ಕರನ್ನು ದಸ್ತಗಿರಿ ಮಾಡಿದರು

ಯುದ್ಧಸಿದ್ಧತೆ!

ಇಟಲಿದೇಶವು ಅಬಿಸೀನಿಯಾದೇಶದ ಮೇಲೆ ಯುದ್ಧ ಮಾಡಲು ಕಾಲು ಕೆರೆಯುತ್ತಿರುವುದು. ನಿಷ್ಕಾರಣವಾಗಿ ಯುದ್ಧಮಾಡಲು ಹೊರಟಿರುವ ಇಟಲಿದೇಶದ ಉನ್ಮತ್ತತೆಯನ್ನು ಎಲ್ಲಾ ದೇಶದವರು ಖಂಡಿಸುತ್ತಿರುವರು "ವಿನಾಶಕಾಲೇ ವಿಪರೀತಬುದ್ಧಿಃ" ಎಂಬಂತೆ ಇಟಲಿಗೆ ವಿನಾಶಕಾಲವು ಬಂದಂತೆ ತೋರುತ್ತದೆ ಈ ಹಿಂದಿನ ಯುದ್ಧದಲ್ಲಿ ಜರ್ಮನಿದೇಶವು ಹೀಗೆಯೇ ಮಾಡಿ ಹಾಳಾಗಿಹೋಯಿತು ಅದೇ ಗತಿಯು ಇಟಲಿಗೂ ಒದಗಬಹುದೆಂದು ಬಹುಜನರು ನುಡಿಯುತ್ತಿರುವರು

ಹಾವಿನವಿಷದಿಂದ ಪಾರಾದರು!

ಬಳ್ಳಾರಿ ಬ್ರೂಸಪೇಟೆಯಲ್ಲಿರುವ ವಿ ನಾಗಪ್ಪ ಎಂಬವರು ತಮ್ಮ ಮನೆಯಲ್ಲಿ ಶ್ರಾದ್ಧಮಾಡಿದ ಬಳಿಕ ಅವರೂ ಮತ್ತು ಇನ್ನೊಬ್ಬರೂ ಊಟಮಾಡಿದರು ಆ ಮೇಲೆ ಸಾರುಮಾಡಿದ ಪಾತ್ರೆಯ ತಳದಲ್ಲಿ ಒಂದು ಹಾವು ಸತ್ತಿರುವುದು ಕಂಡಿತು ಕೂಡಲೇ ಅವರಿಬ್ಬರನ್ನೂ ಆಸ್ಪತ್ರೆಗೆ ಸಾಗಿಸಿ ವಾಂತಿಗೆ ಕೊಟ್ಟು ಚಿಕಿತ್ಸೆ ಮಾಡಿದ್ದರಿಂದ ಬದುಕಿಕೊಂಡರು ಅಡಿಗೆಮಾಡಿದ ಮೇಲೆ ಸಾರಿನ ಪಾತ್ರೆಯನ್ನು ಮುಚ್ಚದೆ ಬಿಟ್ಟಿದ್ದರಿಂದ ಯಾವಾಗಲೋ ಮೇಲಿನಿಂದ ಹಾವು ಆ ಪಾತ್ರೆಯೊಳಗೆ ಬಿದ್ದು ಸತ್ತಿದ್ದಿತೆಂದು ಯೋಚಿಸಲಾಗಿದೆ

ಸ್ಟಾಂಪಿಗಾಗಿ ಶಿಕ್ಷೆ!

ಸಿಂಧೂದೇಶದ ಹೈದರಾಬಾದಿನಲ್ಲಿ ಮಹಮದೀಯ ಶಿರಸ್ತೆದಾರನೊಬ್ಬನು, ಉಪಯೋಗಿಸಿದ ಸ್ಟಾಂಪನ್ನು ಮತ್ತೆ ಉಪಯೋಗಿಸಿ ಸರ್ಕಾರಕ್ಕೆ ಮೋಸಪಡಿಸಿದನೆಂದು ಮ್ಯಾಜಿಸ್ಟ್ರೇಟರು ಅವನಿಗೆ 1 ವರುಷ ಕಠಿನಶಿಕ್ಷೆ ವಿಧಿಸಿದರು ಮತ್ತು ಮದರಾಸಿನಲ್ಲಿ ಸ್ಮಾಲ್‌ಕಾಜ್ ಕೋರ್ಟಿನ ಹಳೇ ರಿಕಾರ್ಡುಗಳಿಗೆ ಅಂಟಿಸಿದ್ದ ಕೋರ್ಟು ಸ್ಟಾಂಪುಗಳನ್ನು ಕಿತ್ತು ವಿಕರಿ ಮಾಡಿ ಸರ್ಕಾರಕ್ಕೆ 10000 ರೂ ಗಳವರೆಗೆ ಮೋಸಮಾಡಿದರೆಂದು ಆ ಕೋರ್ಟಿನ ಎಂಟು ಮಂದಿ ನೌಕರರನ್ನು ದಸ್ತಗಿರಿಮಾಡಿ ತನಿಖೆ ಮಾಡುತ್ತಿದ್ದಾರೆಂದು ತಿಳಿದುಬರುತ್ತದೆ

ಸ್ವೀಕಾರ

ಶಿವಮೊಗ್ಗ ಡಿ|| ಆಯನೂರು ಮತ್ತು ಹಾರನಹಳ್ಳಿ ಗ್ರಾಮದ ವೀರಶೈವ ಸದ್ಭಕ್ತರು ಕಳೆದ ಶ್ರಾವಣಮಾಸದಲ್ಲಿ ಶ್ರೀ ರೇಣುಕವಿಜಯ ಪುರಾಣಶ್ರವಣವನ್ನು ನಡೆಯಿಸಿದ ಸಂತೋಷಾರ್ಥವಾಗಿ ಪಂಚಾಚಾರ್ಯಪ್ರಭಾಪೋಷಣಕ್ಕೆ ಸಮಾಜದಿಂದ ಅರ್ಪಿಸಲ್ಪಟ್ಟ 1 ರೂ ಮತ್ತು ಹಾರನಹಳ್ಳಿಯಲ್ಲಿರುವ ಮುದಗಲ್ಲು ಸಂಗಪ್ಪನವರ ಪುತ್ರಿ ಚಿ| ಸೌ| ಪಾಲಮ್ಮನೆಂಬ ವಧುವಿಗೂ ಆಯನೂರಲ್ಲಿರುವ ಗಟ್ಟಿಪ್ಪರ ಸಂಗಪ್ಪನವರ ಪುತ್ರ ಚಿ| ರಾ|| ಗಟ್ಟೆಪ್ಪನೆಂಬ ವರನಿಗೂ ಆಯನೂರಲ್ಲಿರುವ ಬೆಲ್ಲದ ರುದ್ರಪ್ಪನವರ ಪುತ್ರಿ ಚಿ|| ಸೌ| ನಾಗಮ್ಮನೆಂಬ ವಧುವಿಗೂ ಹಾರನಹಳ್ಳಿಯಲ್ಲಿರುವ ಮುದಗಲ್ಲು ಸಂಗಪ್ಪನವರ ಪುತ್ರ ಚಿ| ರಾ|| ಪಾಲಪ್ಪನೆಂಬ ವರನಿಗೂ ನಡೆದ ವಿವಾಹಸಂಬಂಧವಾಗಿ ಹಾರನಹಳ್ಳಿ ಮುದಗಲ್ಲು ಸಂಗಪ್ಪನವರ ಗೃಹದಲ್ಲಿ ಕಳೆದ ಶ್ರಾವಣ ಬ|| ೭ ಬುಧವಾರ ಶ್ರೀ ರುದ್ರಾಭಿಷೇಕವೂ, ಶ್ರೀ ಮಳಲಿಮಠದ ಶ್ರೀಗಳವರ ಪಾದಪೂಜೆಯೂ ಸಹ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಕಾರ್ಯಕರ್ತರಾದ ಮ|| ರಾ|| ಆಯನೂರು ಬೆಲ್ಲದ ಸಿದ್ಧಪ್ಪನವರಿಂದ ಸಮರ್ಪಿಸಲ್ಪಟ್ಟ 2 ರೂ ಗಳು ಒಟ್ಟು 3 ರೂ ಗಳು ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ

ಕಲಘಟಗಿ ತಾ| ಬೆಲವಂತರದ ಶ್ರೀ ಶಿವಯೋಗಿಗಳವರ ಹಿರೇಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಶ್ರಾವಣಮಾಸದಲ್ಲಿ ಆ ಮಠದ ಶ್ರೀ ಸಿದ್ಧರಾಮಸ್ವಾಮಿಗಳು ಸ್ವತಃ ಪುರಾಣವನ್ನು ಹೇಳಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 1 ರೂ ಯನ್ನು ತೆಗೆಯಿಸಿ ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(ಕ್ರಿನೆಯ ಪುಟದಿಂದ ಮುಂದುವರಿದುದು)

ಶಿವ ಈ ಪ್ರಪಂಚವೆಂಬುದೆಂದು ಸತ್ಯ [illegible] ನನು ಶಿವನು [illegible] ದಾರಿತೋರಲಾಗಿ [illegible] ನಮ್ಮ ಉಪದೇಶಗಳನ್ನಾಗಿ [illegible] ಸಮರ್ಪಿಸಿದ್ದಾನೆ ಮತ್ತು ಅವುಗಳಿಂದ [illegible] ದಕ್ಕೆ ಕಣ್ಣು ಇಂದ್ರಿಯಗಳನ್ನು [illegible] ಅವನ ಸ್ವರೂಪ ವಸ್ತುಗಳಿಂದ ಪ್ರತ್ಯಕ್ಷವಾಗಿಯೂ ಆನಂದ ವನ್ನು [illegible] ಅವುಗಳ ಉಪಯೋಗದಿಂದಲೆ [illegible] ಜೀವನವು [illegible] ಈ [illegible] ಯುಷಮಾನವಾದ [illegible] ಗಳನ್ನು [illegible] ಗಳನ್ನು [illegible] [illegible]

ಇವ [illegible]

[illegible]

(ಸ್ ದ)

ಆರ್ ಎಂ [illegible]
[illegible]

ಮೈಸೂರು ಸರ್ಕಾರದ ಪ್ರಸಿದ್ಧಿಪತ್ರಿಕೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನ್ನುಗಳನ್ನು ಪರಿಶೀಲಿಸಿ ಅವುಗಳ ತಿದ್ದುಪಾಟುಮಾಡುವುದಕ್ಕೆ ಸಲಹೆ ಹೇಳುವ ಸಮಿತಿ

ಸಂಸ್ಥಾನದ ನ್ಯಾಯವಿಧಾಯಕ ಸಭೆಯು ಮತ್ತು ಪ್ರಜಾಪ್ರತಿನಿಧಿ ಸಭೆಯ [illegible] ಗಳಿಗೆ ಸಂಬಂಧಪಟ್ಟ ಈಗಿನ ನಿಬಂಧನೆಗಳನ್ನು, [illegible] ಹುಕುಮುಗಳನ್ನೂ ಪರಿಶೀಲಿಸಿ ಅವ ಶ್ಯಕವೆಂದು ಅಥವ [illegible] ತೋರಿಬರುವ [illegible] ತಿದ್ದು ಪಾಟುಗಳನ್ನು ಸೂಚಿಸುವುದಕ್ಕಾಗಿ ಸರ್ಕಾರ ಉದ್ಯೋಗಸ್ಥರೂ ಮಾಗಿ [illegible] ಸದಸ್ಯರಾಗಿರುವ ಒಂದು [illegible] ಸಮಿತಿಯನ್ನು ನೇಮಕಮಾಡುವುದಾಗಿ ಸರ್ಕಾರದವರು ಭರವಸೆ ಕೊಟ್ಟಿದ್ದರು. ಅದಕ್ಕನುಸಾರವಾಗಿ ಸರ್ಕಾರದವರು ಈ ಕೆಳಗೆ ಕಾಣಿಸಿರುವ [illegible] ಮಾಗಿ [illegible] ಮನುಷ್ಯರೂ ಸದಸ್ಯರಾಗಿರುವ ಒಂದು ಸಮಿತಿಯನ್ನು [illegible] ನೇಮಕಮಾಡಿರುತ್ತಾರೆ.

ಸಮಿತಿಯ ಮೆಂಬರುಗಳು—ಕೌನ್ಸಿಲಿನ ಎರಡನೆಯ ಮೆಂಬರು ರಾಜಮಂತ್ರಪ್ರವೀಣ [illegible] ರಾಜಗೋಪಾಲಾಚಾರಿಯವರು (ಅಧ್ಯಕ್ಷರು) ಮ|| ಗಳಾದ [illegible] ಅನಂತರಾವ್ [illegible] ರಾಮ ಅಯ್ಯರವರು ಎಸ್ ಎಸ್ ಸುಬ್ಬರಾಯರು ಎಂ ಜಿ ಮೈಕ್ರಿಯವರು [illegible] ಎಚ್ ಚಂದ್ರಶೇಖರಯ್ಯನವರು [illegible] ಮಹಮದ್ [illegible] ಎಚ್ ಸಿ [illegible] ಗುಂಡಪ್ಪನವರು [illegible] ಪೈರವರು [illegible] ಸುಬ್ರಹ್ಮಣ್ಯ ಐಯ್ಯರವರು (ಸೆಕ್ರೆಟರಿಯವರು)

ಅಧಿಕಾರವಿಷಯ—ಈ ಸಮಿತಿಯವರು ಈ ಕೆಳಗೆ ಕಾಣಿಸಿರುವ ವಿಷಯಗಳನ್ನು ಪರಿಶೀಲಿಸಿ ಅವುಗಳ ಸಂಬಂಧದಲ್ಲಿ ಯಾವುದಾದರೂ ತಿದ್ದುಪಾಟುಗಳ ಆವಶ್ಯಕವೆಂದು ತೋರಿದರೆ [illegible] ವಿ ಕೆಂದು ತೋರಿದ—(೧) [illegible] ಗಳ ಪ್ರತಿನಿಧಿಗಳ ಕಾರ್ಯಾವಧಿ ಪರಿಮಿತಿಯು 50 ಆಗಿರತಕ್ಕದ್ದೆಂದು ಗೊತ್ತುಮಾಡಿರುವ ಪ್ರಜಾಪ್ರತಿನಿಧಿ ಸಭೆಯ [illegible] ಪ್ರಕಾರದ ತಿದ್ದುಪಾಟು (೨) [illegible] ಸಭೆಯಿಂದ ನ್ಯಾಯವಿಧಾಯಕ ಸಭೆಗೆ ಸದಸ್ಯರನ್ನು ಚುನಾವಣೆಮಾಡುವ ವಿಧಾನವು ಈಗ ಜಾರಿಯಲ್ಲಿರುವುದು ಸರಿಯೆ ಇದೆ ಸಮಾಗಟನ್ನು ಇನ್ನು ಮುಂದೆಯೂ ಅನುಸರಿಸುವುದು ಯುಕ್ತವೆ ಎಂಬ ವಿಷಯವನ್ನು ಪರ್ಯಾಲೋಚಿಸುವುದು ಮತ್ತು [illegible] ಜಾರಿಯಲ್ಲಿ [illegible] ಸಭೆಯಲ್ಲಿ [illegible] ಸದಸ್ಯರಾಗಿರ [illegible] ವಿಚಾರಿಸುವುದು

ಪ್ರಶ್ನೆಗಳು—ಸದಸ್ಯರು [illegible] ಪ್ರಶ್ನೆಗಳನ್ನು [illegible] ಸಂಬಂಧದಲ್ಲಿ ಈಗ [illegible] ಜೊತೆಗೆ [illegible] ವಿಧಿಸುವ [illegible] ಎಂಬ ವಿಷಯ [illegible]

[illegible]

[illegible]

[illegible]

ಮಾಸಗಿ ಮಸೂದೆ [illegible] ಸದಸ್ಯರು ಒಂದು ಮಸೂದೆಯ [illegible] ಸಭೆಗೆ ಒಪ್ಪಿಸುವ ವಿಷಯ [illegible] ನ್ಯಾಯವಿಧಾಯಕ ಸಭೆಯ [illegible] ಆ ಮಸೂದೆಯ [illegible] ಒಪ್ಪಿಸಬೇಕೆಂಬ ಸಂಬಂಧದಲ್ಲಿಯೂ [illegible] ಒಂದು ಮಸೂದೆಯ [illegible] ನ್ಯಾಯವಿಧಾಯಕ ಸಭೆಯವರ [illegible] ಯೋಚನೆಗಾಗಿ [illegible] ಒಪ್ಪಿಸುವುದಕ್ಕೆ ಪೂರ್ವದಲ್ಲಿ [illegible] ಪ್ರಜಾಪ್ರತಿನಿಧಿ ಸಭೆಯವರ ಅಭಿಪ್ರಾಯಕ್ಕೆ [illegible] ಸಾಮಾನ್ಯ ನಿಯಮಗಳ ವಿವರವು ಬಂದಿರಬೇಕಾಗಿದ್ದಾಗ್ಯೂ ನ್ಯಾಯವಿಧಾಯಕ ಸಭೆಯವರ ಪರ್ಯಾಲೋಚನೆಗೆ ಅದನ್ನು ಒಪ್ಪಿಸುವುದಕ್ಕೆ ಅಡ್ಡಿ [illegible] ಮುಂಚಿತವಾಗಿ ಕೂಡ ಪ್ರಜಾಪ್ರತಿನಿಧಿ ಸಭೆಯ ಸದಸ್ಯರ ಪರ್ಯಾಲೋಚನೆಗಾಗಿ ಆ ಮಸೂದೆಯ [illegible] ಸಾಮಾನ್ಯ ನಿಯಮಗಳ ವಿವರಗಳನ್ನು ಒಪ್ಪಿಸಬೇಕೇ ಎಂಬ ಸಂಬಂಧದಲ್ಲಿಯೂ [illegible] ಕಾನೂನು [illegible] ವಿವರಗಳು.

ಖಾಸಗಿ ಸದಸ್ಯರು ತರುವ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗಿ ದಿನಗಳನ್ನು [illegible] ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ನ್ಯಾಯವಿಧಾಯಕ ಸಭೆಯಲ್ಲಿಯೂ ಖಾಸಗಿ ಸದಸ್ಯರು ತರುವ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗಿ ದಿನಗಳನ್ನು ಗೊತ್ತು ಮಾಡುವುದರ ಸಂಬಂಧದಲ್ಲಿ ನಿರ್ದಿಷ್ಟವಾದ ನಿಬಂಧನೆಗಳನ್ನು [illegible] ಹುಕುಮುಗಳನ್ನು ವಿಚಾರಿಸುವುದು

ಸದಸ್ಯ ಸ್ಥಾನಗಳನ್ನು ಖಾಲಿ ಮಾಡುವುದು— ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ, ನ್ಯಾಯವಿಧಾಯಕ ಸಭೆಯ ಸದಸ್ಯರೂ ಸಂಸ್ಥಾನದಿಂದ ದೀರ್ಘಕಾಲ ಗೈರುಹಾಜರಾದ ಸಂದರ್ಭಗಳಲ್ಲಿ ಅವರು ತಮ್ಮ ಸದಸ್ಯ ಸ್ಥಾನಗಳನ್ನು ಖಾಲಿ ಮಾಡುವ ವಿಷಯದಲ್ಲಿಯೂ ನಿಬಂಧನೆಗಳಲ್ಲಿಯೂ ಖಾಲಿ ಹುಕುಮುಗಳಲ್ಲಿಯೂ ತಕ್ಕ ನಿಯಮವನ್ನು ವಿಚಾರಿಸುವುದು

ಕ್ರಿಕೆಟ್ ಪಂದ್ಯ.

ಹೆಂಗಸರೇ ಜಯಶಾಲಿಗಳಾದರು

ಕಳೆದ ಶನಿವಾರ (ತಾ ೩೧) ರಾಜಧಾನಿಯಲ್ಲಿ ಸ್ತ್ರೀಯರ ಮತ್ತು ಪುರುಷರ ಕ್ರಿಕೇಟ ಆಟವಾಯಿತು ಈ ತರಹದ ಆಟವನ್ನು ಎಲ್ಲಿಯೂ ನೋಡಿಲ್ಲ ಮಹಿಳೆಯರು ಮೇಲೆ ಕಂಡ ಮ್ಯಾಚನ್ನು ನೋಡಲು ಕಂಠೋಕ್ತವಾಗಿ ಒಂದೇ ಸೇರಿದ್ದರು ಹನ್ನೊಂದು ಜನ ಯೂರೋಪ್ಯಿಯನ್ ಮಹಿಳೆಯರಿಂದ ಕೂಡಿದ್ದ ಟೀಮಿನ [illegible] ಕೆಲವು ಮಂದಿ ಹಿಂದೂ ಪತ್ನಿ ಕೆಲವು ಯೂರೋಪ್ಯಿಯನ್ ದಂಡ್ನ ಮನುಷ್ಯರಿಂದ ಕೂಡಿದ ಮತ್ತೊಂದು ಟೀಮಿನವರು ಹಿಂದೆ ಮಾಡಿದರು ರಾಜಧಾನಿಯ ಮಹಾರಾಜಾ ಕಾಲೇಜಿನ ಕ್ರಿಕೆಟ್ ಮೈದಾನದಲ್ಲಿ ಶನಿವಾರ ಮಧ್ಯಾಹ್ನ ೩ ೩೦ ಗಂಟೆಗೆ ಆಟವು ಪ್ರಾರಂಭವಾಯಿತು ಹೆಂಗಸರು ಮೊದಲು ಆಟವಾಡಲು ಉಪಕ್ರಮಿಸಿದರು ಗಂಡಸರಿಲ್ಲರೂ ಎಡಗೈಯಲ್ಲಿಯೇ ಚೆಂಡುಗಳನ್ನು ಹಿಡಿಯಬೇಕು, ಎಡಗೈಯಿಂದಲೇ ಬೌಲ್ ಮಾಡಬೇಕು ಎಡಗೈಯಲ್ಲಿಯೇ ಬ್ಯಾಟ್ ಹಿಡಿಯಬೇಕು. ಹೀಗೆಂದು ಕೆಲವು ನಿಯಮಗಳನ್ನು ಕಲ್ಪಿಸಿಕೊಂಡಿದ್ದರು ಹೆಂಗಸರು ಹನ್ನೊಂದು ಜನವೂ ಆಡಿ ೧೧೬ ರನ್ನುಗಳನ್ನು ಮಾಡಿದರು ಟೀ ಪಾನವಾದ ಅನಂತರ ಗಂಡಸರು ಆಟವಾಡಿದರು ಮಹಿಳೆಯರು ಫೀಲ್ಡ್ ಮಾಡಿದರು ಗಂಡಸರಲ್ಲರೂ ಎಡಗೈಯಲ್ಲಿಯೇ ಆಟವಾಡಿದರು ಕ್ರಿಕೆಟ್ ಬ್ಯಾಟಿನ ಬದಲು ಒಂದು ದೊಣ್ಣೆಯಂತಿರುವ ಬ್ಯಾಟಿನಿಂದ ಆಡಿದರು ಹೆಂಗಸರು ಚೆಂಡುಗಳನ್ನು ಓಡಾಡುತ್ತಿದ್ದದ್ದು ಪ್ರೇಕ್ಷಕರನ್ನು ವಿನೋದಪಡಿಸುತ್ತಿತ್ತು ಗಂಡಸರು ಹನ್ನೊಂದು ಜನರೂ ಆಡಿ ೧೧೯ ರನ್ನುಗಳನ್ನು ಮಾಡಿ ಸೋತು ಹೋದರು ಈ ಪಂದ್ಯವನ್ನು ನೋಡಲು ಸಹಸ್ರಾರು ಮಂದಿ ಗಂಡಸರೂ ಹೆಂಗಸರೂ ಅಲ್ಲಿ ಸೇರಿದ್ದರು ಶ್ರೀಮದ್ಯುವರಾಜರವರೂ ಕೆಲವು ಕಾಲ ಬಂದು ಆಟವನ್ನು ನೋಡಿದರು [illegible] ಫೋಟೋ ತೆಗೆಯುವ ಸಿನಿಮಾ ಕಂಪನಿಯವರು ಬಂದು ಆಟದ [illegible] ತೆಗೆದುಕೊಂಡರು ಈ ಪಂದ್ಯವನ್ನು ಏರ್ಪಡಿಸಿದ್ದು ಕೇವಲ ವಿನೋದಕ್ಕೋಸ್ಕರ ಇದನ್ನು ನೋಡಲು ಬಂದು ಸೇರುವ ಪ್ರೇಕ್ಷಕರಿಂದ ಯಥಾಶಕ್ತಿ ದ್ರವ್ಯವನ್ನು ಕೂಡಿಸಿ ಅದನ್ನು ಕ್ವೆಟ್ಟಾ ಭೂಕಂಪದ ಪರಿಹಾರನಿಧಿಗಾಗಿ ಕಳುಹಿಸಬೇಕೆಂದು ಅದರಂತೆಯೇ ದ್ರವ್ಯವನ್ನು ಕೂಡಿಸಿದರು ಆದರೆ ಪ್ರೇಕ್ಷಕರು ಯಥಾಶಕ್ತಿ ಸಹಾಯಮಾಡಲು ಅವರಿಗೆ ಅವಕಾಶಕೊಡದೆ ಇಷ್ಟು ಹಣಕ್ಕೆ ಕಡಮೆ ಹಾಕಬಾರದೆಂದು ಹೇಳಿದುದು ಎಷ್ಟೋ ಜನರಿಗೆ ವ್ಯಸನವನ್ನುಂಟುಮಾಡಿತು ಸುಮಾರು ೧೩ ರೂ ವಸೂಲಾಯಿತೆಂದೂ ಅದನ್ನು ಕ್ವೆಟ್ಟಾ ಫಂಡಿಗೆ ಕಳುಹಿಸಲಾಗುತ್ತದೆಂದೂ ಪ್ರಕಟವಾಗಿದೆ

ವೈ ಪ

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀ ಕ್ಷೇತ್ರ ರಾಮೇಶ್ವರಕ್ಕೆ ಯಾತ್ರಾರ್ಥಿಗಳಾಗಿ ಬರತಕ್ಕ ವೀರಶೈವರಿಗೆ

ಸೂಚನೆ.

ಸುಪ್ರಸಿದ್ಧವಾದ ಶ್ರೀರಾಮೇಶ್ವರಕ್ಷೇತ್ರಕ್ಕೆ ಬರುವ ವೀರಶೈವರಿಗೆ ಯಾವ ಪ್ರಕಾರದ ಸೌಕರ್ಯವೂ ಇಲ್ಲದಿರುವದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ನಾವು ವೀರಶೈವರ ವಸತಿಗಾಗಿ "ಜಂಗಮವಾಡಿ" ಎಂಬ ಸ್ಥಳವನ್ನು ಏರ್ಪಡಿಸಿರುವೆವು ವೀರಶೈವರಿಗೆ ಬೇಕಾಗುವ ಎಲ್ಲ ಸೌಕರ್ಯಗಳನ್ನು ಒದಗಿಸಿಕೊಡುವೆವಲ್ಲದೆ ದರ್ಶನಾದಿಗಳಿಗೆ ಬೇಕಾಗುವ ಸುವ್ಯವಸ್ಥೆಯನ್ನು ಕಲ್ಪಿಸಿಕೊಡುವೆವು ಮಾಹಿತಿಗಾಗಿ ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಕೋರಿಕೆ

(೩) ಗುರುಸಿದ್ಧಸ್ವಾಮಿ,
ಜಂಗಮವಾಡಿ ಮಠ, ರಾಮೇಶ್ವರ,
ಪೋ|| ರಾಮೇಶ್ವರ (S.I.Ry.)

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಓಕಸ್ಮಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚಿಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವನ್ನಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "ವೀರಶೈವರತ್ನ" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೩೦೦ ಪುಟಗಳುಳ್ಳುದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದು ಬಯಸುತ್ತೇವೆ.

ಬೆಲೆ ೧೨ ಆಣೆ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಪ್ರಖ್ಯಾತಿಹೊಂದಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಶಾಕ್ತೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತ-ಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ **ಟೀಕೆಯನ್ನು** ಬರೆಯುತಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ **ಟೀಕೆಯು** ೧೩೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ನಿಃಶಂಕೋಪನಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ತಮ್ಮ ಹೆಸರನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ಸೇರಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೭೧ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುದ್ದಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ ಪಿ ಚಾರ್ಜ ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಬರಕಾಲದಲ್ಲಿರುವ ಪ್ರಾಚೀನವು ಗುರುವರ್ಗದ **ಮುಖ್ಯ** ನಾವರಾಯ ಶಿಷ್ಯರ ಮನೆಗಳುತ್ತಿದ್ದು ಆ ಮಠಾಧಿಕಾರಿಗಳು ಪಿತೃವರ್ಗಕ್ಕೆ ಪಟ್ಟವರ್ಗಕ್ಕೆ ಒಂದೆ ಸಾರಿ ಹೋಗಿ **ಶಿಷ್ಯ**ರ ಮನೆ ಗಳನ್ನು ನೋಡಿಕೊಂಡು ಬರುತ್ತಿರುವರು. ಅವರಿಗೆ ಅವರು ತಮ್ಮ ಕರ್ತವ್ಯಕ್ಕನುಸಾರ ಶಿಷ್ಯರ ಮನೆಗಳು ವಿಷಯಗಳನ್ನು ಬರೆದುಕೊಳ್ಳತಕ್ಕ ನೋಟುಗಳು ನಾನಾ ತರಹಕೊಂಡು ಹೋಗಿಬರುವರು. ಈ ಅನುಕೂಲಕ್ಕಾಗಿ ಮುದ್ರಿಸಿದ ತಮ್ಮ ಶಿಷ್ಯರ ಮನೆಗಳ ಗುರುತಿಲ್ಲದೆ ಹೋಗಿವೆ. ಇವನ್ನು ಬರೆಯಬಹುದಕ್ಕೋಸ್ಕರ ಮುದ್ರಿಸಿದ ಪುಸ್ತಕವನ್ನು **ಹೊಸ**ದಾಗಿ ಮುದ್ರಿಸಲಾಗಿದೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಅದರಿಂದ ಈ **ಪುಸ್ತಕ**ವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಅವಶ್ಯಾಗಿ ಎಂದೂ **ಶಿಷ್ಯ**ರ ತೊಂದರೆಗಳನ್ನು ಪರಿಹರಿಸುವದಲ್ಲದೆ ಸುಂದರವಾದ ಮುಖ್ಯ ಧರ್ಮವಾದ ಪ್ರೇಮವನ್ನು ಪಡೆಯಿರಿ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೬—೦—೦
ರಸಸಿಂದೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೯—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೫—೦—೦
ತ್ರಿವಂಗ	೧	೧—೦—೦

ಭಸ್ಮಗಳು

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೯—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹರತಾಳಭಸ್ಮ	೧	೦—೮—೦
ಕಾಂಚನಭಸ್ಮ	೧	೦—೮—೦
ಯಶದಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೧
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕರ್ಪೂರ (೧ನೇ ನಂಬರ್)	೧	೩೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ [illegible]	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು [illegible] ವ ಹಸ್ತಗಳೇ [illegible]	೦—೧—೬
ಸದ್ಯಃ [illegible]	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ [illegible]	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ [illegible]	೦—೦—೯
ಶ್ರೀ [illegible] ಶ್ರೀ ಜಗದ್ಗುರು [illegible]	೦—೦—೯
ಶ್ರೀಮದುಜ್ಜಯಿನಿ [illegible] ಜಗದ್ಗುರು [illegible]	೦—೦—೯
ಶ್ರೀ ಜಗದ್ಗುರು [illegible] ಶಿವಾಚಾರ್ಯರು [illegible]	೦—೦—೯
ಶ್ರೀ ರೇಣುಕ [illegible]	೦—೦—೯
ಶ್ರೀ ರೇಣುಕಾಚಾರ್ಯರು [illegible] ಧಾರಣ [illegible]	೦—೦—೯
ಶ್ರೀ ರೇಣುಕಾಚಾರ್ಯರು [illegible]	೦—೦—೯
ಶ್ರೀಮದುಜ್ಜಯಿನಿ ಜಗದ್ಗುರುಗಳವರ [illegible]	೦—೦—೯
ಪಂಡಿತ [illegible]	೦—೦—೯
ಶ್ರೀ ಜಗದ್ಗುರು [illegible]	೦—೦—೯
ಶ್ರೀ ಜಗದ್ಗುರು [illegible]	೦—೦—೯
ಶ್ರೀ ಜಗದ್ಗುರು [illegible]	೦—೦—೯
ಶ್ರೀ ಜಗದ್ಗುರು [illegible]	೦—೦—೯
[illegible]	೦—೦—೯
[illegible] ಜಗದ್ಗುರುಗಳವರ [illegible]	೦—೦—೯

ಸೂಚನೆ:—[illegible]

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜೇ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯನ್ನು [illegible] ಉಪಯೋಗ [illegible], ಯೋಗ್ಯತಾಪತ್ರ

ಗಳನ್ನು ಕೊಟ್ಟಿರು [illegible] ಪ್ರಸಿದ್ಧವಾದ [illegible] ನಶ್ಯದ ಪುಡಿಯಿಂದ [illegible] ಸ್ವಸ್ಥವಾಗುವ [illegible] ಯಾವವು [illegible] ತಲೆನೋವು [illegible] ರೋಗಗಳು [illegible] ಕಣ್ಣುಗಳ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು [illegible] ವ್ಯಾಧಿಗಳು ಪರಿಹಾರವಾಗುವವಲ್ಲದೆ [illegible] ಸ್ವಸ್ಥಪಡಿಸಿ [illegible] ಯನ್ನೂ [illegible] ಮೂಗುಬಿಟ್ಟ [illegible] ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು [illegible] ಇದನ್ನು ಅನೇಕ [illegible] ತಮ್ಮ ಗೃಹದಲ್ಲಿ ಕುಟುಂಬಿಗಳ [illegible] ಉಪಯೋಗ [illegible]

ಒಟ್ಟು ಒಂದಕ್ಕೆ ಕ್ರಯ ರೂ ೦ ೯ ೦ ವಿ. ಪಿ ೦ ೪ ೦
ಡಜನ್ ಒಂದಕ್ಕೆ ಕ್ರಯ ರೂ ೩ ೮ ೦ ವಿ. ಪಿ ೮ ಆಣೆ

[illegible] ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೩೦] ಪೋ [illegible] ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯ [illegible]	೩ ಆಣೆ
ಮಹಾಲಿಂಗೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರ [illegible] (ಎರಡನೆಯ ಆವೃತ್ತಿ)	೧ ಆಣೆ
ಸನಾತನ ಶಾಸ್ತ್ರ [illegible] (ಎರಡನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ [illegible] (ಎರಡನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ [illegible] (ಎರಡನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (ಎರಡನೆಯ ಆವೃತ್ತಿ)	೧ ಆಣೆ
[illegible] (ಎರಡನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (ಎರಡನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತ್ಯುಪಾಸನೆ	೨ ಆಣೆ
ಶ್ರೀಗುರುತತ್ತ್ವ [illegible]	೨ ಆಣೆ
[illegible]	೨ ಆಣೆ
ಶ್ರೀ [illegible]	೨ ಆಣೆ
ವೀರಶೈವಮತ [illegible]	೩ ಆಣೆ
ವೀರಶೈವ [illegible] (ಎರಡನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (ಎರಡನೆಯ ಆವೃತ್ತಿ)	೮ ಆಣೆ
[illegible] (ಎರಡನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯ [illegible]	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ [illegible])	೮ ಆಣೆ
[illegible] ದಿವಾಕರ (ಎರಡನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पण्डित श्रीकाशीनाथशास्त्री यांचे भाषण (मराठी)	८ आणे
Speeches by Pandit Shri Kashinatha Shastri (English)	12 As
[illegible] (ಎರಡನೆಯ ಆವೃತ್ತಿ)	೧೨ ಆಣೆ
[illegible]	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ [illegible]	೧೨ ಆಣೆ
[illegible] (ಎರಡನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತ [illegible]	೧೨ ಆಣೆ
[illegible] ಸಿದ್ಧಾಂತ [illegible]	೧೨ ಆಣೆ
[illegible] (ಎರಡನೆಯ ಆವೃತ್ತಿ)	೧ ರೂ
ಸಿದ್ಧಾಂತ [illegible]	೧ ರೂ
[illegible]	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ [illegible])	೧ ರೂ
[illegible]	೨ ರೂ
[illegible]	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ [illegible] ಕಳುಹಿಸುವದಿಲ್ಲ [illegible] ರೂ [illegible] ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ [illegible] ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು [illegible] ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.

REGISTERED No M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ವಾಲಿಶ್ರುದೀಲೋಕಯಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೬ನೇ ಸೆಪ್ಟಂಬರ್ ೧೯೩೫ [ಸಂಚಿಕೆ ೧೯

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೌಲ್ಯಂತ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾ ವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳ ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ ಬೆಲೆ ೧೨ ಆಣೆ ವಿ ಪಿ ಚಾರ್ಜ ಪ್ರತ್ಯೇಕ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಗೋಕರ್ಣದ ವೀರಶೈವ ಮಠಕ್ಕೆ ಸ್ತುತ್ಯದಾನ

ಶ್ರೀ|| ಪ|| ಬ್ರ|| ಚರಪಟ್ಟಾಧ್ಯಕ್ಷರು ಹನ್ನೆರಡು ಮಠ ಹುಬ್ಬಳ್ಳಿ ಇವರು ಗೋಕರ್ಣದಲ್ಲಿ ವೀರಶೈವ ಮಠವನ್ನು ಕಟ್ಟಿಸುವ ಬಗ್ಗೆ ಜಾಗೃತರು ಕಟ್ಟಿಸಿಟ್ಟು ಈಗ ಕಾರ್ಯವನ್ನು ಕೈಕೊಂಡಿರುವರೆಂಬುದು ಈ ಮೊದಲೇ ಎಲ್ಲರಿಗೂ ತಿಳಿದ ಸಂಗತಿಯಾಗಿದೆಯಷ್ಟೆ! ಶ್ರೀ ಸ್ವಾಮಿಗಳವರ ಇಂಥ ಉದಾತ್ತಧರ್ಮಕಾರ್ಯಕ್ಕೆ ಸಹಾನುಭೂತಿಯನ್ನಿತ್ತು ಇತ್ತಂಡಲ್ಲಿಯೇ ಅನೇಕ ಉದಾರಚರಿತರುಗಳು ಮತ್ತು ಧರ್ಮಾಭಿಮಾನಿಗಳು ಶಕ್ತ್ಯನುಸಾರ ಧನಸಹಾಯವನ್ನು ಮಾಡಿದ್ದಾರಲ್ಲದೆ ತಮ್ಮ ಸೇವೆಯನ್ನು ಅರ್ಪಿಸಿದ್ದಾರೆ ಸಮಯೋಚಿತಸಹಾಯವನ್ನು ವೀರಶೈವರಿಷ್ಟೇ ಅಲ್ಲದೆ ಪರಮತೀಯರು ಸಹ ಮಾಡಿದ್ದರಿಂದ ಸ್ವಾಮಿಗಳ ಕಾರ್ಯವು ಈವರೆಗೆ ಯಶಸ್ವಿಯಾಗಿ ನಡೆದದೆ ಇಂಥ ಎಲ್ಲ ಮಹನೀಯರ ಸಹಾಯಕ್ಕೆ ಕೃತಜ್ಞತೆಯಿಂದ ಪ್ರಕಾಶಿಸುವ ಇಲ್ಲಿಯ ಶ್ರೀ ಬಸಪ್ಪನವರು ಮೆಣಸಿನಕಾಯಿ ವ್ಯಾಪಾರಸ್ಥರು ಇವರು ಗೋಕರ್ಣದಲ್ಲಿ ಈ ಮಠಕ್ಕೆ ಬರುವ ಯಾತ್ರಿಕರಿಗೆ ತೀರದ ಸೌಲಭ್ಯತೆ ದೊರೆಯಲು ಅಡಂಪ್ರಾಶಕಾಗಿ ಆಗಿಯುವ ಒಂದು ಛತ್ರದಾನ ಭೂಮಿಯನ್ನು ತೆಗೆದು ಕೆಲಸವನ್ನು ಕೈಕೊಂಡು ಈ ಸತ್ಪಾತ್ರದಾನದಿಂದ ತಮ್ಮ ಕುಲಕೋಟಿಯನ್ನು ಉದ್ಧಾರಮಾಡಿಕೊಂಡರಲ್ಲದೆ ಈ ಭೂಮಿಯನ್ನು ಕಟ್ಟಿಸಿ ಕಲ್ಲುಗಟ್ಟಿನ ಕಟ್ಟಡಮಾಡಿಸಲಿಕ್ಕೆ ಒಳ್ಳೆ ಹುರುಪಿನಿಂದ ಕೆಲಸ ನಡೆಸಿದ್ದಾರೆ ಈ ಕೆಲಸಕ್ಕೆ ಇಲ್ಲಿಯವರೆಗೆ ಈ ಮಹಾಶಯರು ತಮ್ಮ ಮುಕ್ತ ಹಸ್ತದಿಂದ ೧೨೦೦ (ಹನ್ನೆರಡು ನೂರು) ರೂಪಾಯಿಗಳ ವರೆಗೆ ಖರ್ಚುಮಾಡಿರುವರಲ್ಲದೆ ಮುಂದಿನ ಬಾಕಿ ಕೆಲಸವು ಯಾವಾಗ ಮುಗಿದೀತೆಂಬ ಕಳಕಳಿಯನ್ನು ತೋರಿಸುತ್ತಿದ್ದಾರೆ. ಇಂಥ ಮಹಾಶಯರ ಹೃದಯದಲ್ಲಿ ಹರಿಯುವ ಧನಸಹಾಯದ ಧುರಿಯು ಯಾರ ತಪೋಬಲದ ಮಹಿಮೆಯಿಂದುಂಟಾಗಿದೆ ಎಂದು ತಿಳಿಯಬೇಕು. ಅಥವಾ ಯಾವ ಪುಣ್ಯಸ್ಥಾನದ ಪ್ರಭೆಯಿಂದ ಉದಯಿಸಿದೆ ಎಂದು ಭಾವಿಸಬೇಕು ಎಂಬುದನ್ನು ತಾವೇ ಊಹಿಸಬೇಕು ಸ್ವಾಮಿಗಳ ಮತ್ತು ಧರ್ಮದ ಬೆಂಬಲಿಗರಾದ ತಾವು ಶ್ರೀ ಬಸಪ್ಪನವರ ಆದರ್ಶದ ಕಾರ್ಯದ ಸಹಾಯವನ್ನು ಮನ್ನಿಸಿ ತಮ್ಮ ಶಕ್ತ್ಯನುಸಾರವಾಗಿ ಸ್ವಾಮಿಕಾರ್ಯಕ್ಕೆ ಸಹಾಯಮಾಡಿ ಕೀರ್ತಿಭಾಜನರೂ ಧರ್ಮಪಾಲಕರೂ ಆಗಬೇಕಾಗಿ ತಮ್ಮ ಅಗ್ರಹದ ಬೇಡಿಕೆ

ಗುರುಸಿದ್ಧಯ್ಯ ಪಟೇಂದ್ರಮಠ ಹುಬ್ಬಳ್ಳಿ.
ಶೆಟ್ಟಿದಸ್ವಾಮಿ, ಹಿರೇಮಠ, ವಕೀಲ, ಹುಬ್ಬಳ್ಳಿ.
ಚೆನ್ನಮಂಗಗೌಡ ಪಾಟೀಲ, ಹುಬ್ಬಳ್ಳಿ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಸುವರ್ಣರಜತಾಂದೋಲಿಕೋತ್ಸವಾಹ್ವಾನ ಪತ್ರಿಕಾ.

ರಾಣೀಬೆನ್ನೂರು ಶಹರ ನಿವಾಸಿಗಳಾದ ವೀರಶೈವ ಮಂಡಲಿಯವರು ವಿನಯಪೂರ್ವಕವಾಗಿ ಪ್ರಕಟಿಸಿಕೊಳ್ಳುವದೇನೆಂದರೆ, ನಮ್ಮಗಳ ಪ್ರಾರ್ಥನೆಯ ಪ್ರಕಾರ ಶ್ರೀ ಜಗದ್ಗುರು ಮಹಾಸನ್ನಿಧಿಯವರು ಇದೇ ಯುವನಾಮಸಂವತ್ಸರ ಭಾದ್ರಪದ ಬಹುಳ ೧೧ ಸೋಮವಾರ (ತಾ|| ೨೩ ೯ ೧೯೩೫) ಪ್ರಾತಃಕಾಲ ೮ ಘಂಟೆಗೆ ಘನವನ್ಮೈಸೂರಿದ ನಮ್ಮ ಬ್ರಿಟಿಷಗವರ್ನಮೆಂಟಿನವರಿಂದ ದಯಪಾಲಿಸಲ್ಪಟ್ಟ ಅಡ್ಡಪಲ್ಲಕ್ಕಿ ಪಂಚಕಲಶ ಮೊದಲಾದ ಸಮಸ್ತ ಬಿರುದಾವಳಿಗಳೊಡನೆ ದಯಮಾಡಿಸುವದರಿಂದ ಈ ಮಹೋತ್ಸವಕ್ಕೆ ತಾವು ಪುತ್ರಮಿತ್ರಕಳತ್ರರೊಡನೆ ಅವಶ್ಯವಾಗಿ ಆಗಮಿಸಿ ಶ್ರೀ ಮಹಾಸನ್ನಿಧಾನದ ದರ್ಶನಾಶೀರ್ವಾದಕ್ಕೆ ಪಾತ್ರರಾಗಿ ನಮ್ಮಗಳಿಗೆ ಸಂತೋಷವನ್ನುಂಟುಮಾಡಬೇಕೆಂದು ಆಶಿಸುತ್ತೇವೆ

ರಾಣೀಬೆನ್ನೂರು, ವೀರಶೈವಮಂಡಳಿಯವರು
೧೧ ೯ ೩೫

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ
ಗುರುಮಹಿಮೆ

ವಿರಜ ಸಂಸ್ಥಾನ ಪೈಕಿ ಲಕ್ಷ್ಮೇಶ್ವರದಲ್ಲಿ ಇದೇ ಯುವಸಂವತ್ಸರದ ಶ್ರಾವಣಮಾಸದ ಆದಿಯಿಂದ ಅಂತ್ಯದವರೆಗೆ ಪ್ರತಿ ದಿವಸ ಬ್ರಾಹ್ಮಮುಹೂರ್ತದಲ್ಲಿ ಇಲ್ಲಿಯ ಪಂಚಾಚಾರ್ಯ ಭಜನಾಸಂಘದ ಎರಡು ಮೇಳದವರು ಗ್ರಾಮದ ಬೀದಿಗಳಲ್ಲೆಲ್ಲಾ ಪಾಪರೂಪ ತಮವನ್ನು ಹೊಡೆದೋಡಿಸುವರೇನೋ ಎಂಬಂತೆ ಒಳ್ಳೇ ಭಕ್ತಿಯಿಂದ ಭಜನೆಯನ್ನು ಪೂರೈಸಿದ್ದರಿಂದ ಈ ವರೆಗೂ ತಟಸ್ಥವಾಗಿದ್ದ ಮಳೆಯು ಸಾಕಷ್ಟು ಆಗಿದ್ದಕ್ಕೆ ಸರ್ವರಿಗೂ ಆತ್ಯಾನಂದವಾಗಿ ಶ್ರೀಗುರುನಾಮಶ್ರವಣಪ್ರಭಾವದಿಂದಲೇ ಮಳೆಯಾಯಿತೆಂದು ಶ್ರೀಗುರುಪರಮಾತ್ಮನನ್ನು ಶ್ಲಾಘಿಸುತ್ತ ಪೇಟಿಯೊಳಗಿನ ವ್ಯಾಪಾರಸ್ಥರು ಮತ್ತು ಬಸ್ತೀಕೇರಿಯೊಳಗಿನ ಸದ್ಭಕ್ತರು ಶ್ರಾವಣ ಬ|| ೩೦ ದಿವಸ ಮತ್ತು ಮರುದಿವಸ ಪ್ರತ್ಯೇಕ ಪ್ರತ್ಯೇಕವಾಗಿ ಎರಡೂ ಓಣಿಗಳಲ್ಲಿ ಸಾವಿರಾರು ಜನರವರೆಗೆ ಅನ್ನಸಂತರ್ಪಣೆಯನ್ನು ಮಾಡಿಸಿ ಕೃತಾರ್ಥರಾದರು ಶ್ರೀಗುರುನಾಮಮಹತ್ವವನ್ನು ಅನುಭವಕ್ಕೆ ತಂದುಕೊಟ್ಟ ಭಜನಾಸಂಘದವರಿಗೆ ಊರಜನರೆಲ್ಲರೂ ಋಣಿಯಾಗಬೇಕಾಯಿತು ಇದೆಲ್ಲಾ ಶ್ರೀಗುರುನಾಮಾಮೃತದ ಮಹಿಮಾತಿಶಯವಲ್ಲವೇ?

ಓರ್ವ ಗುರುಭಕ್ತ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

—

ವೀರಶೈವಸುಧಾರಣೆ

—

(ಲೇಖಕ—ಕಾವ್ಯತೀರ್ಥ ಸಾಹಿತ್ಯ ಚಾರ್ಯ [illegible] ಶ್ರೀ [illegible] ಶಿವಾಚಾರ್ಯ [illegible])

—

ಪಂಚಾಚಾರ್ಯನಾಮಾನಃ ಸರ್ವೇ ಸಿಂಹಾಸನಾಧಿಪಾಃ ।
ವೀರಶೈವಮತಾಚಾರ್ಯಾಃ ಜಗದ್ಗುರವಮಃ ಭವೇ ॥

ವೀರಶೈವರ ಸುಧಾರಣೆಗೆ ವಿದ್ಯೆ ಧರ್ಮ [illegible] ಪ್ರಗಾರಿಕೆಗಳು ಪ್ರಧಾನವಾದ ಅಂಗಗಳು [illegible] ಈ ಅಂಗಗಳಿಂದ ಪೂರ್ಣಗೊಂಡು [illegible] ಅಲ್ಲಿಯವರೆಗೆ ಅದು ಸುಧಾರಣೆಯು [illegible] ವೀರಶೈವರಾದ ನಾವುಗಳು [illegible] ಈ ವಿದ್ಯೆಯಲ್ಲಿ ಬಹಳ ಹಿಂದುಳಿದಿದ್ದೇವೆ. ನಮ್ಮ [illegible] ವಿಶೇಷವಾಗಿ [illegible] ಸುಸ್ಪಷ್ಟವಾಗಿದೆ.

ನಮ್ಮ ಭಾರತದೇಶವು [illegible] ಮಾತೃಭಾಷೆಗಳ [illegible] ದೃಷ್ಟಿಯಿಂದ ಅತ್ಯವಶ್ಯವು [illegible] ಆದರೆ [illegible] ತಾವಿಟ್ಟುಕೊಂಡು ಅವರಿಗೆ [illegible] ಕೊಟ್ಟುಬಿಟ್ಟರೆ [illegible]

[illegible]

[illegible]

ಕನ್ನಡನಾಡಿನಲ್ಲಿ ಹೊರಡುವ ಹಲಕೆಲವು ಪತ್ರಿಕೆಗಳು ಶುದ್ಧ ಭಾಷಾಶುದ್ಧಿಗಳನ್ನು ರಕ್ಷಿಸುವುದೇ ಇಲ್ಲ, ಅದುಹೋಗಲಿ ಭಾಷಾಶುದ್ಧರಾದ ಎಷ್ಟೋ ಮಂದಿ ವಾಚಕರು ಇದೇನು ಭಾಷೆ? ಇದೆಂತಹ ಬೆಳಗಾವಿಯ ಭಾಷೆ? [illegible] ವಿಜಾಪುರದ ಭಾಷೆ? ಮುಂತಾಗಿ ಗೊಣಗುಟ್ಟಿಕೊಳ್ಳುತ್ತಿರುವರು ಇದಕ್ಕೆ ಬದಲಾಗಿ ಅವರನ್ನು ಹಳಿಯಬೇಕೆಂದು ನಮ್ಮ ಧಾರವಾಡ—ಬೆಳಗಾವಿ—ವಿಜಾಪುರದವರು 'ಅಯ್ಯೋ! ಸ್ವಾಮಿ ಬಿಡಿ!' ಎಂದು ಸುಮ್ಮನೇ ಹಾಸ್ಯಮಾಡಿ ಅವರ ಭಾಷೆಯನ್ನು ಹೀಯಾಳಿಸುವರು. ಇವೆರಡೂ ನಮಗೆ ಸರಿಯಾಗಿ ತೋರುವುದಿಲ್ಲ. ಏಕೆಂದರೆ ಭಾಷಾಶುದ್ಧಿಯು ಆಯಾ ಜಿಲ್ಲೆಯ [illegible] ಅಥವಾ ದೇಶೀಯ [illegible] ಸುಧಾರಿಸಿಕೊಳ್ಳಬೇಕೆಂದು ಪ್ರಯತ್ನಪಡುವುದಾದರೆ ಆಯಾ ಪ್ರಾಂತಗಳಲ್ಲಿ ಹೊರಡುವ ಮುಖ್ಯಪತ್ರಿಕೆಗಳು [illegible] ಶುದ್ಧಿಯನ್ನು ಹೊಂದಬಹುದು, ಆದರೆ ನಮ್ಮವರು [illegible] ಲಕ್ಷ್ಯಗೊಡುವುದೇ ಸ್ವಲ್ಪ ಕಷ್ಟವಾಗಿದೆ. ವರ್ತಮಾನ ಪತ್ರಿಕೆಗಳು ಶುದ್ಧವಾದ ಭಾಷೆಯಲ್ಲಿ ಹೊರಡುವುದಕ್ಕೆ [illegible] ಇಂತಿಲ್ಲ. ನಾಳೆ ಅವಶ್ಯವಾಗಿಯೂ ಶುದ್ಧಭಾಷೆಯುಳ್ಳವರಾಗುವರೆಂದು ನನಗೆ ನಂಬಿಗೆಯಿದೆ. ಆದುದರಿಂದ ಭಾಷಾಶುದ್ಧಿಯ ಕಡೆಗೂ [illegible] ಶುದ್ಧಿಯ ಕಡೆಗೂ ಎಲ್ಲರಿಂದಲೂ [illegible] ಪತ್ರಿಕಾಕರ್ತರು ಲಕ್ಷ್ಯಗೊಡಬೇಕಾಗಿ ನಾನು ಅವರೆಲ್ಲರನ್ನು ಈ ಮೂಲಕ ಪ್ರೇಮದೊಡನೆ ಒತ್ತಾಯಪಡಿಸುತ್ತೇನೆ. ಹೀಗೆ ಅನೇಕ ಉಪಾಯಗಳಿಂದ ನಾವು ನಮ್ಮ ಮಾತೃಭಾಷೆಯಲ್ಲಿ ಪ್ರವೀಣರಾದೆವೆಂದರೆ ಸಾಹಿತ್ಯಸೇವೆಯನ್ನು ಮಾಡಲು ಸಮರ್ಥರಾಗಿ ಮುಂದೆ ಯಾವ ಭಾಷೆಯನ್ನಾದರೂ ತಿಳಿಯುವುದಕ್ಕೂ ಕಲಿಯುವುದಕ್ಕೂ ಯೋಗ್ಯರಾಗುವೆವು.

ನಾನಾದೇಶಗಳಲ್ಲಿರುವ ನಮ್ಮ ವೀರಶೈವರೂ ಅವರೊಳಗೂ ವಿಶೇಷವಾಗಿ ಮೊದಲು ಮಾತೃಭಾಷೆಯು ಬರಿಯುವುಳ್ಳವರಾಗಿಯೇ ಗೀರ್ವಾಣಭಾಷಾಭ್ಯಾಸವನ್ನು ಆರಂಭಮಾಡುವುದು ಲೇಸು. ಏಕೆಂದರೆ ನಾವು ಮಾತೃಭಾಷೆಯನ್ನರಿದ ಗೀರ್ವಾಣಭಾಷಾ [illegible] ಪಾಂಡಿತ್ಯವನ್ನು ಸಂಪಾದಿಸಿಕೊಂಡು ನಮ್ಮ ದೇಶದಲ್ಲಿ ಸಂಚರಿಸುವಾಗ ಆಯಾ ಮತಬಾಂಧವರು ಮಾತೃಭಾಷೆಯಿಂದ ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಮಾತೃಭಾಷೆಯಲ್ಲಿಯೇ ಅವರಿಗೆ ತಿಳಿಯುವಂತೆ ಹೇಳಬೇಕಾಗುತ್ತದೆ. ಒಂದುವೇಳೆ ನಾವು ಗೀರ್ವಾಣಭಾಷೆಯನ್ನೇ ಅವರೆದುರಿಗೆ ಆಡಬಹುದು. ಆದರೆ ಈ ಭಾಷೆಯನ್ನು ಕೆಲವರು ಮಾತ್ರ ತಿಳಿದುಕೊಳ್ಳಬಹುದು. ಇನ್ನುಳಿದವರು ಈ ಭಾಷೆಯನ್ನು ಕೇಳದೊಡನೆಯೇ [illegible] ಈ ಕಾರಣದಿಂದಲೂ ನಮಗೆ ಮಾತೃಭಾಷೆಯೇ ಮೊದಲು ಬರಬೇಕಾಗುವುದು. ನಮ್ಮ ಶರಣಾವೀರಶೈವರು ಎಲ್ಲಿಯವರೆಗೆ ಸ್ವದೇಶಭಾಷೆಯಲ್ಲಿ ಉತ್ತೀರ್ಣರಾಗುವುದಿಲ್ಲವೋ ಅಲ್ಲಿಯವರೆಗೆ ಅವರು ಸ್ವದೇಶವನ್ನೂ ಸ್ವಧರ್ಮವನ್ನೂ ರಕ್ಷಿಸಲು ಸಮರ್ಥರಾಗುವುದಿಲ್ಲವು. ಇದು ನಿಶ್ಚಯದ ಮಾತು.

ಇನ್ನು ನಮ್ಮ ವೀರಶೈವರಿಗೆ ಮಾತೃಭಾಷೆಯಂತೆ ಗೀರ್ವಾಣಭಾಷೆಯಾದರೂ ಎಷ್ಟರಮಟ್ಟಿಗೆ ಬೇಕಾಗುವುದೆಂಬುದನ್ನು ವಿಚಾರಮಾಡೋಣ. ಗೀರ್ವಾಣಭಾಷೆಯೆಂದರೆ ದೇವತೆಗಳಾಡುವ ನುಡಿಯು. ನಾವು ಈಶ್ವರನನ್ನು ಒಲಿಸಿಕೊಳ್ಳುವುದಕ್ಕೂ ಒಳ್ಳೆಯ ಫಲವನ್ನು ಹೊಂದುವುದಕ್ಕೂ ಈ ಗೀರ್ವಾಣವಾಣಿಯು ಅವಶ್ಯವಾಗಿ ಬೇಕಾಗುವುದು. ಏಕೆಂದರೆ ಮರಾಠಿಯನ್ನು ಮಾತಾಡುವ ಒಬ್ಬ ಗೃಹಸ್ಥನ ಮನೆಗೆ ಕನ್ನಡಿಗನೊಬ್ಬನು ಹೋಗಿ ತನ್ನ ಅಭಿಪ್ರಾಯವನ್ನು ಎಷ್ಟು ವಿಧವಾಗಿ ಹೇಳಿದರೂ [illegible] ಅದೇ ನಾಲ್ಕು ಮಾತು ಮರಾಠಿಯನ್ನಾಡಿದರೆ ಆಗಲೇ ಅವನ ಅಪೇಕ್ಷೆಯು ಫಲಿಸುವುದೆಂಬುದು ಎಲ್ಲರಿಗೂ ತಿಳಿದ ವಿಷಯವಷ್ಟೆ! ಹಾಗೆಯೇ ದೇವಭಾಷೆಯು ಸಂಸ್ಕೃತವಾಗಿರುವುದರಿಂದ ನಾವು ಬೇರೆ ಭಾಷೆಯಲ್ಲಿ ದೇವರನ್ನು ಎಷ್ಟು ಸ್ತೋತ್ರ ಮಾಡಿದರೂ ಷಡ್ರಸಾನ್ನಗಳನ್ನು ನೈವೇದ್ಯಮಾಡಿದರೂ ದೇವರಿಗೆ ಅವನ ಗೊತ್ತಾಗುವುದೇ ಇಲ್ಲ. ಅದೇ ನಾಲ್ಕು ಮಾತು "ಶಂಭೋ!" ದೇವೋಹಂ ಪಾಹಿ! ಎಂದು ಸಂಸ್ಕೃತದಿಂದ ಹೇಳಿಕೊಂಡರೆ ಆ ದೇವರಿಗೆ ನಮ್ಮ ಪ್ರೇಮದ ಗೊತ್ತಾಗಿ [illegible] ಕೊಡುವನು. ಆದುದರಿಂದ ನಾವು ದೇವರನ್ನು ಒಲಿಸುವ ಸಲುವಾಗಿ ಸತ್ಪುರುಷರು ಬರೆದ [illegible] ಸಂಸ್ಕೃತವಾಗಿರುವುದು. [illegible]

ಗೀರ್ವಾಣಭಾಷೆಯು [illegible] ನಮ್ಮ ಗುರುಗಳಾದರೂ ಉಪದೇಶಮಾಡುವ ಮಂತ್ರಗಳು ಇದೇ ಭಾಷೆಯಲ್ಲಿವೆ. ಶ್ರೇಷ್ಠವಾದ ಇಂತಹ ಭಾಷೆಯನ್ನು ವಿಶೇಷವಾಗಿ ಚೆನ್ನಾಗಿ ಅಧ್ಯಯನಮಾಡಿ ತಮ್ಮ ತಮ್ಮ [illegible] ಈ ಭಾಷೆಯು [illegible] ಈ ಗೀರ್ವಾಣಭಾಷೆಯಲ್ಲಿ ಯಾವ ವಿಷಯಗಳ ಮೇಲೆ ಬೇಕಾದರೂ ಗ್ರಂಥಗಳು ದೊರೆಯುತ್ತವೆ. ನಮ್ಮ ವೈದಿಕ [illegible]

ಭಾಯರ ಭಾಷ್ಯಾದಿಮಹಾಗ್ರಂಥಗಳೂ ವೇದಪುರಾಣಾದಿ ವ್ಯಾಕರಣಾದಿಗಳ ಮಹಾಭಾರತವೂ, ಬ್ರಹ್ಮಸೂತ್ರ ಇದಿಸೋಡು ಪುರಾಣಗಳೇ ಮುಂತಾಗಿ ಅನೇಕ ಗ್ರಂಥಗಳೂ ಈ ಸಂಸ್ಕೃತ ಭಾಷೆಯಲ್ಲಿಯೇ ರಚಿಸಲ್ಪಟ್ಟಿವೆ. ಎಂದಮೇಲೆ ಈ ಭಾಷೆ ಬಹಳ ವ್ಯಾಪಕವಾದುದೆಂದು ಎಲ್ಲರಿಗೂ ತಿಳಿಯುವುದು ಅಮೂಲ್ಯವಾದ ಇಂತಹ ಗೀರ್ವಾಣಭಾಷೆಯನ್ನು ಕಲಿಯದೆ ಹಿಂದೆ ನಮ್ಮ ಕನ್ನಡ ವೀರಶೈವಬಂಧುಗಳೂ ಇನ್ನಿತರರೂ ಸಹ ಬಿಟ್ಟಿರುವುದು ... ಯಾರು ಕಾಣೇ ಸಮರ್ಥರು? ಕೆಲವರು ಅವರು ಮಾಡಿದ ಸಾಹಸವೆಲ್ಲ ಹುಡುಗಾಟಿಕೆಯಾಗಿ ಪರಿಣಮಿಸಿತು ... ಮುಂತಾದರೂ ಈ ಭಾಷೆಯನ್ನು ಕಲಿಯಬೇಕೆನ್ನುವವರ ... ಎಂದು ತಿಳಿದುಕೊಳ್ಳಬೇಕು. ಗೀರ್ವಾಣ ಭಾಷೆಯಲ್ಲಿ ಇಷ್ಟೊಂದು ಮಹತ್ವವು ತುಂಬಿಕೊಂಡಿರುವುದರಿಂದಲೇ ಜರ್ಮನ್ ದೇಶದವರೂ ಕೂಡ ತಮ್ಮ ಸ್ಕೂಲುಗಳಲ್ಲಿ ಈ ಭಾಷೆಯನ್ನು ಅವಶ್ಯವಾಗಿ ಕಲಿಯಬೇಕೆಂಬುದಾಗಿ ನಿರ್ಬಂಧವನ್ನಿಟ್ಟಿದ್ದಾರೆ. ಗೀರ್ವಾಣ ಭಾಷೆಯು ನಮ್ಮದೆಂದು ಹೇಳಿಕೊಳ್ಳುತ್ತಿರುವ ನಾವು ಈ ಭಾಷಾ ವಿಷಯದಲ್ಲಿ ಪರದೇಶದವರು ಮಾಡುವಷ್ಟು ಪ್ರಯತ್ನವನ್ನು ಕೂಡ ಮಾಡದೆ ಹೋಗಿರುವೆವಲ್ಲಾ ಎಂದು ನಾಚಿಕೊಳ್ಳಬೇಕಾಗಿದೆ. ನಾವು ಕಣ್ಣಾರೆ ಕಾಣದ ಕೆಲವು ಸಂಸ್ಕೃತಗ್ರಂಥಗಳು ಇಂಗ್ಲಿಷಿನಲ್ಲಿಯೂ ಅನುವಾದ ಹೊಂದಿವೆ ಎಂದರೆ ಆಶ್ಚರ್ಯವಲ್ಲವೆ?

ನಮ್ಮೀ ಭಾರತದೇಶದಲ್ಲಿ ಒಂದು ಧರ್ಮದವರು ಮತ್ತೊಂದು ಧರ್ಮದವರನ್ನು ಹೀಯಾಳಿಸುವುದು ಇನ್ನೂ ಮುಗಿದೇ ಇಲ್ಲ. ಇದರ ದೆಸೆಯಿಂದಲೇ ಪರದೇಶದವರಾದ ಇಂಗ್ಲೀಷರು ಆಯಾ ಧರ್ಮಗಳ ಪರಸ್ಪರ ಹೋರಾಟವನ್ನೂ ಅವುಗಳ ಮಧ್ಯ ಭೇದವನ್ನೂ ಪ್ರಕಟಮಾಡಿಯೇ ಬಿಟ್ಟಿದ್ದಾರೆ. ನಮ್ಮ ಭಾರತದೇಶದಲ್ಲಿನ ಜನರ ಮೊದಲಿನ ಕುಶಾಗ್ರಬುದ್ಧಿಯೂ ಕುಶಲತೆಯೂ ಎತ್ತ ಹೋದವೋ ತಿಳಿಯದಂತಾಗಿದೆ. ಏಕೆಂದರೆ ಎಲ್ಲಿಯೋ ಒಬ್ಬ ಪುಣ್ಯಾತ್ಮರನ್ನು ಬಿಟ್ಟು ಉಳಿದವರೆಲ್ಲರೂ ಒಂದಲ್ಲೊಂದು ತರನಾಗಿ ಅನ್ಯಮತಗಳ ಮೇಲೆ ಬಿಡದೆ ... ಹೀಗೆ ಮಾಡುವುದರಿಂದ ಫಲವೇನೂ ಇಲ್ಲ. ಸಮತ್ವ ... ಆದರೆ ಇಂತಹ ಕೃತಿಯನ್ನು ಮಾಡುವವರು ಮಾತ್ರ ಪ್ರಸಂಗದಲ್ಲಿ ಮೋರೆಯನ್ನು ತಗ್ಗಿಸಬೇಕಾಗುವುದು. ನಾವು ನಮ್ಮ ಧರ್ಮಸ್ವಭಾವವನ್ನು ಚನ್ನಾಗಿ ತಿಳಿದುಕೊಳ್ಳಬೇಕಾದರೆ ಸಂಸ್ಕೃತಭಾಷೆಯಲ್ಲಿರುವ ನಮ್ಮ ಧರ್ಮಗ್ರಂಥಗಳೇ ಅವಶ್ಯವಾಗಿಯೂ ಆಧಾರವಾಗಬೇಕಾಗುವುದು. ಈ ಕಾರಣದಿಂದ ವೀರಶೈವರಿಗೆ ಸಂಸ್ಕೃತಭಾಷೆಯು ಎಷ್ಟು ಪ್ರಧಾನವಾಗಿದೆಯೋ ಸಂಸ್ಕೃತಭಾಷೆಯೂ ಅಷ್ಟೇ ಪ್ರಧಾನವಾಗಿರುವುದೆಂಬುದನ್ನು ಇನ್ನಾದರೂ ಎಲ್ಲರೂ ತಿಳಿದುಕೊಳ್ಳಬೇಕೆಂದು ಬಯಸುವೆವಲ್ಲದೆ ನಮ್ಮ ನಾಡಕಮಹಾಶಯರು ನಾಡಭಾಷೆಯ ಪ್ರಚಾರದ ಕುರಿತಾಗಿ ಹೇಗೆ ಪ್ರಯತ್ನಪಡುತ್ತಿರುವರೊ ಈ ಗೀರ್ವಾಣಭಾಷೆಯ ಪ್ರಚಾರಕ್ಕಾಗಿಯೂ ಸ್ವಲ್ಪ ಪ್ರಯತ್ನಪಟ್ಟು ಆ ಭಾಷೆಯಲ್ಲಿರುವ ಮಹತ್ಗ್ರಂಥಗಳ ಗೌರವವನ್ನು ಕಾಪಾಡಬೇಕೆಂದು ನಾವು ಒತ್ತಿ ಹೇಳಲು ಇಚ್ಛಿಸಿರುತ್ತೇವೆ.

(ಸಶೇಷ)

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ತಾಂಡೂರು ಶ್ರೀಮದ್ವೀರಶೈವ ವೇದಪಾಠ ಶಾಲೆಯ ಶ್ರಾವಣಮಾಸದ ಪುರಾಣಸಮಾರಂಭವು.

ಈದೇ ಯುವನಾಮ ಸಂವತ್ಸರದ ಶ್ರಾವಣ ಶುದ್ಧ ೧ ದಿಂದ ಅನಿವಾಸ್ಯೆಯ ವರೆಗೂ ವೇ|| ಸೀಲಕಂಠಯ್ಯನವರ ಹಿರೇಮಠದಲ್ಲಿ ಪುರಾಣಶ್ರವಣಸಮಾರಂಭವು ಬಹು ವಿಜೃಂಭಣೆಯಿಂದ ನಡೆಯಿತು. ವೇದಪಾಠಶಾಲೆಯ ವಿದ್ಯಾರ್ಥಿಗಳಾದ ಮುಗುಳ್ನಾಗಾವಿ ಪಟ್ಟದ್ದೇವರು ಮಲ್ಲಿಕಾರ್ಜುನರವರು ಪುರಾಣವನ್ನು ಜನರಿಗೆ ತಿಳಿಯುವ ರೀತಿಯಲ್ಲಿ ಮಧ್ಯೆ ಮಧ್ಯೆ ಅನೇಕ ಉಪಕಥೆಗಳಿಂದ ಆ ಸಮಯೋಚಿತವಾದ ಶ್ರಾಸ್ತ್ರ ವಿಶ್ಲೇಷಣೆಗಳಿಂದಲೂ ನಾನಾ ವಿಧವಾದ ಉದಾಹರಣೆಗಳಿಂದಲೂ ಹೇಳುತ್ತಿದ್ದರು. ಮತ್ತು ವೇದಪಾಠಶಾಲೆಯ ವಿದ್ಯಾರ್ಥಿಗಳಾದ ಅಪ್ಪಾಜಿಯವರ ಕಂಠಸ್ವರವು ಇವರು ಪುರಾಣವನ್ನು ಬಹು ಮನೋಹರವಾಗಿ ಭಿನ್ನಭಿನ್ನ ರಾಗಗಳಲ್ಲಿ ಓದಿ ಜನರನ್ನು ಸಂತೋಷಗೊಳಿಸುತ್ತಿದ್ದರು. ಮದ್ರಾಸ್ ವಿಶ್ವವಿದ್ಯಾನಿಲಯದ 'ವಿದ್ವಾನ್' ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ ಮಹಾವಿದ್ವನ್ಮಣಿಗಳೆನಿಸಿಕೊಂಡ ವೇದಪಾಠಶಾಲಾಧ್ಯಾಪಕರಾದ ಜ್ಯೋತಿಷ್ಯರವರಾಗಿ ಮುಂಗಾಪುರ ಮಠದ ಬ್ರಹ್ಮಶ್ರೀ ಸಿದ್ಧಾಂತಿ ವಿದ್ವಾನ್ ಪಂಡಿತ ಚಂದ್ರಶೇಖರ ಶಾಸ್ತ್ರಿಗಳವರು ಶ್ರಾವಣಮಾಸವು ಪೂರ್ತಿಗೊಳ್ಳುವವರೆಗೂ ನಿತ್ಯದಲ್ಲಿ ೧-೩ ತಾಸಿನ ಧಾರ್ಮಿಕ, ವೈದಿಕ, ನೈತಿಕ ಸಾಮಾಜಿಕವಿಷಯಗಳ ಮೇಲೆ ಬಹು ಮನೋಹರವಾದ ಉಪನ್ಯಾಸಗಳನ್ನು ಮಾಡುತ್ತಿದ್ದರು. ಇವರ ಉಪನ್ಯಾಸದ ವಾಗ್ಝರಿಯನ್ನೂ ವಾಕ್ಪ್ರೌಢಿಮೆಯನ್ನೂ ಹಾಗೂ ರಸಿಕತ್ವವನ್ನೂ ಕಂಡು ಜನರು ಕಿವಿಗೊಟ್ಟು ಕೇಳುತ್ತಿದ್ದರು. ಇವರ ಉಪನ್ಯಾಸಗಳನ್ನು ಕೇಳಿದ ಪ್ರತಿಯೊಬ್ಬರೂ ಸಂತೋಷಪಡುತ್ತಿದ್ದರು. ಇಂಥ ವಿದ್ವಾಂಸರು ದೊರೆತಿರುವುದು ನಮ್ಮ ವೀರಶೈವ ಸಮಾಜಕ್ಕೆ ಭೂಷಣಪ್ರದವೇ ಸರಿ. ಅಸ್ತು! ಪ್ರತಿಸೋಮವಾರವು ಪಾಠಶಾಲಾ ವಿದ್ಯಾರ್ಥಿಗಳಿಂದ ಸಂಗೀತಪಾಠಿಕ್ಷಯುತ ಶಿವಕೀರ್ತನೆಗಳು ಜನರ ಮನಸ್ಸನ್ನು ಸಮ್ಮೇಳಿಸುವಂತೆ ನಡೆಯುತ್ತಿದ್ದವು. ಪ್ರತಿಯೊಬ್ಬ ವಿದ್ಯಾರ್ಥಿಗಳೂ ನಿತ್ಯವು ಶಿವಪೂಜಾ ನಿರತರಾಗಿ ವೀರಶೈವ ಮತದ ಸತ್ಸೂತ್ರ ಪ್ರಕಾರ ಆಚಾರ, ಶೀಲ, ಪಟ್ಟ ... ವಿಷಯವಾಗಿಯೂ ಹಾಗೂ ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯ ಭಗವತ್ಪಾದರ ವಿಷಯವಾಗಿಯೂ ಸಭಿಕರಲ್ಲಿ ಭಕ್ತಿಯು ಅಂಕುರಿಸುವಂತೆ ವ್ಯಾಖ್ಯಾನಗಳನ್ನು ಮಾಡುತ್ತಿದ್ದರು. ಜನರಿಗೆ ಬಹು ಸುಲಭೋಪಾಯವಾಗಿ ಸತ್ಕರ್ಮಗಳನ್ನೂ ಧರ್ಮಗಳನ್ನೂ ಬೋಧಿಸುತ್ತಿದ್ದ ವಿದ್ಯಾರ್ಥಿಗಳ ಸಂಭಾಷಣೆಗಳು ಕೂಡ ಆಗಿಂದಾಗ್ಗೆ ನಡೆಯುತ್ತಿದ್ದವು. ವಿದ್ಯಾರ್ಥಿಗಳ ಇಂಪಾದ ವೇದಘೋಷವು ಕೂಡ ಆಗಾಗ ನಡೆಯುತ್ತಿದ್ದವು ... ಆನಂದಿಸುತ್ತಿದ್ದರು. ಈ ಪ್ರಕಾರವಾಗಿ ಕಾರ್ಯಕ್ರಮಗಳು ನಡೆದು ಪುರಾಣಸಮಾಪ್ತಿಯಾದ ಮರುದಿವಸ ಸೀಲಕಂಠಯ್ಯನವರ ಹಿರೇಮಠದಿಂದ ಬೆಳಗಿನ ೬ ಘಂಟೆಗೆ ಪುರಾಣದ ಮೆರವಣಿಗೆಯೂ ಅನೇಕ ವಾದ್ಯವೈಭವಗಳಿಂದಲೂ ವಿದ್ಯಾರ್ಥಿಗಳ ಭಜನಾಸಂಘಗಳಿಂದಲೂ ವೇದಘೋಷದಿಂದಲೂ ಇನ್ಸ್‌ಪೆಕ್ಟರ್ ಅನಂದರಾವ್ ಮೊದಲಾದ ಪೋಲೀಸ್ ಸಿಬ್ಬಂದಿಯ ಸಿಪಾಯಿಗಳ ... ಮುಖ್ಯ ಮುಖ್ಯ ರಾಜಬೀದಿಗಳಲ್ಲಿ ವಿಜೃಂಭಣೆಯಾಗಿ ನಡೆದು ಹತ್ತು ಘಂಟೆಗೆ ಮಠವನ್ನು ಸೇರಿತು. ಅದೇ ದಿವಸ ರಾತ್ರಿಯ ವಿದ್ಯಾರ್ಥಿಗಳಿಂದ ಮಹಾಶಿವಶರಣರಾದ 'ಶಿನ್ನರಿ ಬ್ರಹ್ಮದೇವನ' ಎಂಬ ನಾಟಕವನ್ನು ... ಆಡಿದರು. ಪಾತ್ರಗಳನ್ನು ವಹಿಸಿದ ಪ್ರತಿಯೊಬ್ಬ ವಿದ್ಯಾರ್ಥಿಗಳು ತೋರಿಸಿದ ಚಮತ್ಕಾರಗಳನ್ನು ನೋಡಿ ಜನಗಳು ಮಹದಾನಂದವನ್ನು ಹೊಂದುತ್ತಿದ್ದರು. ಇಂಥ ಆನಂದವನ್ನುಂಟುಮಾಡತಕ್ಕ ಯಾವ ಪುರಾಣ ಪ್ರವಚನ ವ್ಯಾಖ್ಯಾನ ಉಪನ್ಯಾಸ ಮೊದಲಾದವುಗಳನ್ನು ಕೇಳುವುದರ ಸಂತೋಷದಲ್ಲಿ ಶ್ರಾವಣಮಾಸದ ಒಂದು ತಿಂಗಳೊಂದು ನಾಲ್ಕೈದು ದಿವಸಗಳನ್ನು ಹೇಗೆ ಕಳೆದ ಹಾಗಾಯಿತು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಂಥ ಯಾವತ್ಕಾರ್ಯಕ್ರಮವನ್ನು ಮಾಡತಕ್ಕ ಪುರಾಣ ಪ್ರವಚನವನ್ನು ತಮ್ಮ ಮಠದಲ್ಲಿ ನಡೆಯಿಸಿ ಸತ್ಕಾರಗಳನ್ನು ... ಸಂಘಟಕ ಗುರು ಶಾಸ್ತ್ರ ವೇ|| ಸೀಲಕಂಠಯ್ಯನವರಿಗೆ ... ತೆಯಿಸಿ ಇವರು ವೈದಿಕವಿದ್ಯೆಯಲ್ಲಿ ... ಹಿಂದುಳಿದಿರುವ ನೈಜಾಂ ದೇಶದ ವೀರಶೈವರನ್ನು ವೇದವಿದ್ಯೆಯಲ್ಲಿ ಮುಂದಿಡಿಸಬೇಕೆಂಬ ಉತ್ಸಾಹದಿಂದ ತಾವು ಸ್ವಂತವಾಗಿಯೇ ತಮ್ಮ ಮಠದಲ್ಲಿ ವೇದಪಾಠಶಾಲೆಯನ್ನು ಸ್ಥಾಪಿಸಿ ಅದರ ಖರ್ಚುವೆಚ್ಚಾದಿಗಳನ್ನೆಲ್ಲಾ ತಾವೇ ವಹಿಸಿಕೊಂಡು ಸುಲಲಿತವಾಗಿ ನಡೆಯಿಸಿಕೊಂಡು ಹೋಗುವವನ್ನು ನೋಡಿದರೆ ಇವರಲ್ಲಿ ಮಹಾಭವಾನದ ಆಸ್ತಿಕತೆಯು ಎಷ್ಟರ ಮಟ್ಟಿಗೆ ತುಂಬಿ ತುಳುಕುತ್ತಿರುವದೆಂಬುವದು ವ್ಯಕ್ತವಾಗುತ್ತದೆ. ಈ ರೀತಿಯಾಗಿ ಮಹಾಮನೋಹರ ವ್ಯಕ್ತಿಗಳು ನಮ್ಮ ಸಮಾಜದಲ್ಲಿ ಇನ್ನೂ ಕೆಲವು ಜನರು ತಲೆದೋರಿದರೆ ಈ ಸಮಾಜವು ಬೇಗನೆ ಮುಂದುವರಿಯುವುದು. ಇವರು ಈ ... ಕಾರ್ಯಕ್ಕೆ ಸಹಾಯಕರಾಗಲಿ ಎಂದು ಶ್ರೀ ಜಗದ್ಗುರು ಪಂಚಾಚಾರ್ಯರ ಪಾದಾರವಿಂದಗಳಲ್ಲಿ ಬೇಡಿಕೊಳ್ಳುತ್ತೇವೆ.

ಹೇರೂರು ಚಂದ್ರಪ್ಪ ಬಸಪ್ಪ ತಾಂಡೂರು

ಕೋರವಾರ ಸಿದ್ದರಾಮಪ್ಪ ತಾಂಡೂರು

ಉದ್ಯಾನ್ ಪಂಚ್

ಶ್ರೀ ರೇಣುಕವಿಜಯ ಪುರಾಣಸಮಾಪ್ತಿ.

ಗಂಗಾವತಿ ತಾಲೂಕು ವೈಕಿ ಕಟನೂ ಬಸವಗುಪ್ಪಿ ನಾಲ್ಕು ಗ್ರಾಮಗಳ ಚರಪಟ್ಟಾಧ್ಯಕ್ಷ ರುದ್ರಮುನಿಸ್ವಾಮಿ ಸ್ವಾಮಿಗಳು ಭಕ್ತಾದಿಗಳ ಕೋರಿಕೆ ಪ್ರಕಾರ ಶ್ರಾವಣಮಾಸದ ಪುಣ್ಯಕಾಲದಲ್ಲಿ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಗಳನ್ನು ಈಗ ೧೪ ವರ್ಷಗಳಿಂದ ಮಾಡುತ್ತಾರೆ. ಈ ವರ್ಷ ಹಂಪೆಯವರಿಗೆ ... ಒಂದಾದ ಶಾಂತಿಧರ್ಮದೇವಾಲಯದಲ್ಲಿ ಶ್ರಾವಣ ಶು|| ೧ ದಿಂದ ಬಹುಳ ಅಮಾವಾಸ್ಯೆಯವರೆಗೂ ಬ್ರಾಹ್ಮೀಮುಹೂರ್ತದಲ್ಲಿ ತಮ್ಮ ಇಷ್ಟಲಿಂಗಕ್ಕೆ ರಾತ್ರಿ ೩ ಘಂಟೆಯಿಂದ ೭ ಘಂಟೆಯವರೆಗೂ ಮಹಾರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಯೂ, ೮ ಘಂಟೆಯಿಂದ ಶಾಂತಿಧರ್ಮೇಶ್ವರ ಪೂಜೆಯೂ ೧೦ ಘಂಟೆಗೆ ಗಣಸಂತರ್ಪಣವೂ ೩ ರಿಂದ ಶ್ರೀ ಜಗದ್ಗುರು ರೇಣುಕವಿಜಯಪುರಾಣಶ್ರವಣವು ೫ ಘಂಟೆಯವರೆಗೂ ನಿರಂತರವಾಗಿ ನಡೆದವು. ಮಹಾಪೂಜೆಗೂ ಪುರಾಣಶ್ರವಣಕ್ಕೂ ಪ್ರತಿದಿವಸ ೧೦೦-೨೦೦ ಜನರು ಬರುತ್ತಿದ್ದರು. ಈ ಪುರಾಣವನ್ನು ಸಂಗೀತದಿಂದ ಕೀರ್ತಿಸವಾಸ್ಥಿ ಹಿರೇಮಠ ಉದಯಶೀಲು ಓದುತ್ತಿದ್ದರು. ಗುರುಬಾಲಸ್ವಾಮಿ ವಕೀಲ ನಾಲಿ ಹಿರೇಮಠ ಇವರು ಸರಸವಾಗಿ ಅರ್ಥ ಹೇಳಿ ಜನರನ್ನು ಆನಂದಪಡಿಸುತ್ತಿದ್ದರು. ಭಾದ್ರಪದ ಶು|| ೩ ಶುಕ್ರವಾರ ದಿವಸ ೩-೪ ಸಾವಿರ ಜನರಿಗೆ ಅನ್ನಸಂತರ್ಪಣೆ ವಾಯಿತು. ಈ ಮಹಾಕಾರ್ಯವನ್ನು ಬಳ್ಳಾರಿ ಶಿರಗುಪ್ಪಿ ಹೊಸಪೇಟೆ ತೆಕ್ಕಲಕೋಟೆ, ಕಂಪ್ಲಿ, ಕೊಪ್ಪಳ ಕನಕಗಿರಿ ಉಳಿದ ... ಆನೆಗೊಂದಿ, ಹೇರೂರು ಗಂಗಾವತಿ ಮುಂತಾದ ಗ್ರಾಮಗಳ ಭಕ್ತಮಹೇಶ್ವರರು ಶ್ರಿಕರಣಪೂರ್ವಕವಾಗಿ ನೆರವೇರಿಸಿದರು. ಈ ಕಾರ್ಯಕ್ಕಾಗಿ ೩ ಸಾವಿರ ರೂಪಾಯಿಗಳು ಖರ್ಚಾಗಿರಬಹುದು. ಶ್ರಾವಣಮಾಸದ ರಾಜಯೋಗದಲ್ಲಿ ಮಾಡೋ ಸ್ಥಳ ಶಿವಪೂಜೆಯನ್ನು ಮಾಡುತ್ತಿದ್ದು ಬ್ರಹ್ಮೋಪದೇಶವು ಈ ಭಕ್ತರ ಬಲದಲ್ಲಿ ಆಗಿರಲು ಶ್ರೀ ಸ್ವಾಮಿಗಳು ಈ ಮಹಾಕಾರ್ಯವನ್ನು ಪೂರೈಸಿಕೊಂಡು ಗಂಗಾವತಿಗೆ ಬರುವ ಸಮಯದಲ್ಲಿ ಗಂಗಾವತಿ ಭಕ್ತಮಹೇಶ್ವರರು ಎದುರುಗೊಂಡು ಜನಗಳು ಸ್ವಾಮಿಗಳವರನ್ನು ಮೋಟಾರ್ ಕಾರಿನಲ್ಲಿ ಮೂರ್ತಿಮಾಡಿಸಿ 'ಪಂಚಾಚಾರ್ಯ ಮಹಾರಾಜಕೀ ಜೈ' ಎಂದು ಜಯಘೋಷದೊಡನೆ ಅದ್ಭುತಮಹೋತ್ಸವವನ್ನು ನಡೆಸಿದರು. ಬೀದಿಗಳು ರಂಭಾಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ಅಲಂಕರಿಸಲಾಗಿದ್ದವು. ಸುಮಂಗಲೆಯರು ಆರತಿಗೆಳುತ್ತಿದ್ದರು. ಜಗದ್ಗುರುಪಂಚಾಚಾರ್ಯರ ಜಯಘೋಷವು ನಭೋಮಂಡಲವನ್ನು ವ್ಯಾಪಿಸಿತು. ಈ ಉತ್ಸವಕ್ಕೆ ತಾಲೂಕಿನ ಬಹುತೇಕರಾಗಿದ್ದರು. ಮಹೋತ್ಸವವು ಶ್ರೀ ಭದ್ರದೇವಾಲಯಕ್ಕೆ ಬಂದನಂತರ ಶ್ರೀಗಳವರಿಗೆ ಕಾಣಿಕೆ ಪೂಜೆಗಳು ಸಮರ್ಪಿಸಲ್ಪಟ್ಟವು. ಬಳಿಕ ಶಿವಶಾಸ್ತ್ರಿಗಳು ಮುಡೆಪ್ಪ ಇವರು ಶ್ರೀಗುರುಮಹತ್ವವನ್ನೂ, ಶೀಲವಂತಶಾಸ್ತ್ರಿಗಳು ಮಹಾಮಠಗಳು ಹಿರೇಮಠ ಇವರು ಮತ್ತು ಶ್ರೀ ಗುರುಬಾಲಸ್ವಾಮಿ ವಕೀಲ ನಾಲಿ ಹಿರೇಮಠ ಇವರು ಜಗದ್ಗುರು ಪಂಚಾಚಾರ್ಯರ ವಿಷಯಗಳನ್ನು ಸರ್ವರಿಗೂ ತಿಳಿಯುವಂತೆ ಭಾಷಣಮಾಡಿದರು. ಈ ಮಹತ್ಕಾರ್ಯವನ್ನು ನೆರವೇರಿಸಿದ ಭಕ್ತಮಹೇಶ್ವರರಿಗೆ ಜಗದ್ಗುರು ಪಂಚಾಚಾರ್ಯರು ಸುಖಸಂಪತ್ತನ್ನು ಕೊಟ್ಟು ರಕ್ಷಿಸಲಿ.

ಓರ್ವ ಗುರುಭಕ್ತ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ರೇಣುಕವಿಜಯ ಮಹಾಪುರಾಣ, ಬಸನಾಳ.

ಯಾವ ಮಹಾತ್ಮರು ಶ್ರೀ ಕೊಲ್ಲಿಪಾಕೀ ಸೋಮೇಶ್ವರ ಲಿಂಗಮುಖದಿಂದವತರಿಸಿ ತಮ್ಮ ಮಹಿಮಾಪ್ರಭಾವದಿಂದ ಸಮಸ್ತ ಜನಾವಳಿಯುನ್ನು ದ್ಧರಿಸಿದರೊ ಆ ಗುರುಸಾರ್ವಭೌಮರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುರಾಣವು ಇದೇ ಶ್ರಾವಣ ಬ|| ೧೪ ನೆಯ ದಿವಸ ಪ್ರಾರಂಭವಾಯಿತು. ಶ್ರೀ ಪಂಚಲೋಹದ ಲಿಂಗೋದ್ಭವಮೂರ್ತಿಗೆ ಪ್ರಾತಃಕಾಲ ಶ್ರೀ ರುದ್ರಾಭಿಷೇಕವು ನೆರವೇರಿಸಿ ಧಾರವಾಡಜಿಲ್ಲಾ ಸಿಗ್ಗಾಂವ ತಾಲೂಕ ಸಕ ಬಸನಾಳ ಗ್ರಾಮದಲ್ಲಿ ಈ ಗ್ರಾಮದ ಮಠದವರಾದ ವೇ|| ರುದ್ರಾರಾಧ್ಯಶಾಸ್ತ್ರಿಗಳು ಅವರಪ್ಪಶಾಸ್ತ್ರಿಗಳು ೭ ವರ್ಷಗಳವರೆಗೆ ಹೊಸಳ್ಳಿ ಇವರು ಈ ಕಾರ್ಯವನ್ನು ಗ್ರಾಮಸ್ಥರನ್ನೊಳಗೊಂಡು ಪ್ರಾರಂಭಮಾಡಿದ್ದಾರೆ. ಈ ಪುರಾಣವನ್ನು ಸಕಲರೂ ಪ್ರತಿದಿವಸ ಸಾಯಂಕಾಲ ೬ ಘಂಟೆಯಿಂದ ೯ ಘಂಟೆಯವರೆಗೆ ಒಳ್ಳೇ ಭಕ್ತಿಯಿಂದ ಶ್ರವಣಮಾಡುತ್ತಿರುವರು. ಮುಗಿಯಲು ಪೂರೈಸುವವರೆಗೂ ಸರ್ವರೂ ಇದ್ದು ಪ್ರಸಾದವನ್ನು ಸ್ವೀಕರಿಸಿ ತಮ್ಮ ತಮ್ಮ ಗೃಹಗಳಿಗೆ ತೆರಳುವರು. ಈ ಗ್ರಾಮದ ಪ್ರಮುಖಜನ ಬಿನ್ನಹಪತ್ರಿಕೆಯ ಪ್ರಕಾರ ಶರೀಕರು, ಸಾಂಖ್ಯಯೋಗ ನ್ಯಾಯಮೀಮಾಂಸಕರು ವೇದಾಂತವಿಶಾರದ ಅತ್ಯಾಶ್ಚರ್ಯಕರವಾದ ಶ್ರೀವಿಶ್ವಪೂಜ್ಯ (ಹೂಲಿ) ಬೃಹನ್ಮಠದ ಶ್ರೀ ಜಂಗಮ ಶಿವಾಚಾರ್ಯಸ್ವಾಮಿಗಳವರು ಆಗಮಿಸಿ ದೀಕ್ಷಾ ಲಿಂಗಧಾರಣ ಇತ್ಯಾದಿ ವಿಷಯಗಳ ಮೇಲೆ ಒಳ್ಳೇ ಸರಳವಾಗಿ ಉಪದೇಶಮಾಡುತ್ತಿರುವರು. ಈ ಶ್ರವಣಕ್ಕೆ ಸ್ಥಳದ ಜನರು ಸಾವಿರಾರು ಸಂಖ್ಯೆಯಲ್ಲಿ ಕೂಡುತ್ತಿರುವರು. ಇದು ಈ ಗ್ರಾಮದ ಸುದೈವವೇ ಹೌದು. ಈ ಕಾರ್ಯದಲ್ಲಿ ನಿರತರಾದವರೆಲ್ಲರಿಗೂ ಶ್ರೀ ಜಗದಾಚಾರ್ಯರು ಆಯುರಾರೋಗ್ಯ ಭಾಗ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಕೋರುವ

ಓರ್ವ ಸದ್ಭಕ್ತ, ಬಸನಾಳ

ಶ್ರೀ ಜಗದ್ಗುರು ರೇಣುಕವಿಜಯ ಪುರಾಣಮಹೋತ್ಸವ

ವಿಜಾಪುರ ಜಿ|| ಮನಗೋಳಿ ಗ್ರಾಮದ ಹಿರೇಮಠದಲ್ಲಿ ಪ್ರತಿವರ್ಷದಂತೆ ಈ ಶ್ರಾವಣ ಶುದ್ಧ ೫ ಪಂಚಮಿಯಿಂದ ಜಗದಾಚಾರ್ಯರ ಪುರಾಣವು ಪ್ರಾರಂಭವಾಗಿ ಭಾದ್ರಪದ ಶುದ್ಧ ೪ ಸೋಮವಾರ ದಿವಸ ಪೂರ್ತಿಗೊಂಡು ಮಹಾಮಂಗಳಾರತಿ ನೆರವೇರಿತು. ಶು|| ೫ ಮಂಗಳವಾರ ೯ ಘಂಟೆಗೆ ಪುರಾಣ ಮೆರವಣಿಗೆಯು ನಡೆಯಿತು. ಅಗ್ನಿ ಶ್ರೀ|| ಸ|| ಬ್ರ|| ಕ್ರಿಯಾಮೂರ್ತಿಗಳಾದ ವಿಜಾಪುರ ವ ಚಿಮ್ಮಲಗಿ ಕಲ್ಯಾಣಮಠ ಅರಳೆರಿ ಮಠಾಧ್ಯಕ್ಷ ತಾಂಡವೀರ ಪಟ್ಟದಸ್ವಾಮಿಗಳವರನ್ನು ಅಂದೋಲಿಕೆಯಲ್ಲಿ ಮೂರ್ತಿಮಾಡಿಸಿ ತಳಿರು ತೋರಣ ರಂಭಾಸ್ತಂಭಗಳಿಂದ ಶೃಂಗರಿಸಲ್ಪಟ್ಟ ರಾಜಬೀದಿಯಲ್ಲಿ ಶ್ರೀ ಪಂಚಾಚಾರ್ಯ ಭಜನಾ ಸಂಘದವರೊಡನೆ ಅತ್ಯಂತವೈಭವದೊಡನೆ ನೆರವೇರಿತು. ಅಗ್ನಿ ವೇ|| ಮಾನವಲೀದಾರ (ವ) ಶ್ರೀ ಬಿದಾರ ಸಾಹೇಬರು ಈ ಗ್ರಾಮದ ಸಮಸ್ತ ದೈವದವರು ಅಜುಬಾಜು ಗ್ರಾಮಗಳ ಜನರು ವಿಶೇಷವಾಗಿ ಆಗಮಿಸಿದ್ದರು. ಉತ್ಸವವು ಮರಳಿ ಬಂದು ಸಭೆ ಸೇರಿದ ಮೇಲೆ ಅಧ್ಯಾಪಕರಸಂಬಂಧವಾಗಿ ಉಪನ್ಯಾಸಗಳು ನಡೆದು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಕಾರ್ಯವು ಸಮಾಪ್ತಿಗೊಂಡಿತು. ಸದರಿ ಗ್ರಾಮದ ಹಿರೇಮಠದವರಿಗೂ ಸ್ವಾಮಿಗಳವರು ಶಾಸ್ತ್ರಿಗಳಿಗೂ ಪುರಾಣಿಕರಿಗೂ ಅತಿ ಪ್ರೀತಿಯಿಂದ ಸಹಾಯಪೂರ್ವಕ ಮರ್ಯಾದೆಯನ್ನು ಮಾಡಿದವರು. ಇದೇ ಪ್ರಕಾರವಾಗಿ ಪ್ರತಿವರ್ಷವೂ ಶುಭಕಾರ್ಯವು ನೆರವೇರುವಂತೆ ಜಗದ್ಗುರು ಪಂಚಾಚಾರ್ಯರು ಅನುಗ್ರಹಿಸಲೆಂದು ಪ್ರಾರ್ಥಿಸುವ.

ಸಿದ್ಧಾಂತಿ ಗುರುಲಿಂಗಶಾಸ್ತ್ರಿ, ಬಬಲೇಶ್ವರ.

ಪಂಚಾಚಾರ್ಯ ಪ್ರಭಾ.

೧೯೩೫ನೇ ಸೆಪ್ಟಂಬರ್ ತಾ|| ೧೬ನೇ ಸೋಮವಾರ

ಲಿಂಗಧಾರಣವು ವೇದೋಕ್ತವಾದುದು.

ಯ ಏಷೋಂತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ |
(ಇತ್ಯಾದಿ) ಉಮಾಪತಯೇ ಪಶುಪತಯೇ ನಮೋ ನಮಃ

ಎಂಬುವವರೆಗೆ ಯಾವ ಪುರುಷನು ಸುವರ್ಣಭಾಯೆಯುಳ್ಳವನಾಗಿ ಯಾವಾಗಲೂ ಸೂರ್ಯಮಂಡಲದಲ್ಲಿ ಪ್ರಕಾಶಿಸುವನೋ ಅಂಥ ಉಮಾರೂಪಶಕ್ತಿಯಿಂದೊಡಗೂಡಿದ ಲಿಂಗರೂಪಿಯಾದ ಪರಶಿವನಿಗೆ ನಮಸ್ಕಾರವೆಂಬ ಅರ್ಥವುಳ್ಳ ತೈತ್ತಿರೀಯ ವಾಕ್ಯದ ಪರ್ಯಾಲೋಚನೆಯಿಂದಲೂ ಮತ್ತು—

[illegible] ಹಿರಣ್ಮಯ [illegible] ||

ಇತ್ಯಾದಿ ಆ ಮಂತ್ರದ ವನ್ನು ಸ್ಪಷ್ಟಪಡಿಸುವ ಉಪಬೃಂಹಣವಾಕ್ಯಗಳಿಂದಲೂ, ಶಕ್ತಿವಿಶಿಷ್ಟನಾದ ಪರಶಿವಬ್ರಹ್ಮಲಿಂಗವು ಯಾವಾಗಲೂ ಸೂರ್ಯಮಂಡಲದಲ್ಲಿ ಪ್ರಕಾಶಿಸುತ್ತಿದ್ದರೂ ಆ ಸೂರ್ಯಮಂಡಲಕ್ಕಿಂತ ಭಿನ್ನವಾದುದೆಂದು ಸ್ಪಷ್ಟವಾಗಿ ಕಂಡುಬರುವುದರಿಂದ 'ಆದಿತ್ಯಸ್ಯ ಲೋಚನಃ' ಆದಿತ್ಯೋ ಭಗವಾನ್" ಮುಂತಾದ ವಾಕ್ಯಗಳಲ್ಲಿ ಸೂರ್ಯನೇ ಪರಶಿವನೆಂದು ಸೂರ್ಯನಿಗೂ ಪರಶಿವನಿಗೂ ಸಮಾನ್ಯವಾಗಿ ತೋರುವ ಅಭೇದವು ಸೂರ್ಯ ಪರಮೇಶ್ವರರ ನಿತ್ಯಸಂಬಂಧವನ್ನು ತೋರಿಸುವುದಕ್ಕಾಗಿ ಹೇಳಲ್ಪಟ್ಟಿರುತ್ತದಲ್ಲದೆ ಸೂರ್ಯನೇ ಪರಶಿವನಲ್ಲವೆಂದು ನಿಣಯ ಮಾಡಲ್ಪಟ್ಟಿರುವಂತೆ 'ಅಯಂ ಮೇ ಹಸ್ತೋ ಭಗವಾನ್' ಎಂದು ಹಸ್ತಕ್ಕೂ ಆ ಹಸ್ತದಲ್ಲಿಟ್ಟು ಪೂಜಿಸಲ್ಪಡುತ್ತಿರುವ ಇಷ್ಟಲಿಂಗಕ್ಕೂ ಅಭಾಂಶಭೇದ ಭಾವವು ಇರುವುದರಿಂದ ಸ್ವಾಭಾವಿಕವಾಗಿ ಭೇದವೇ ಇದ್ದರೂ ಆ ಇಷ್ಟಲಿಂಗಧಾರಣವಾದ ಹಸ್ತಕಂಠ ಪ್ರದೇಶಗಳನ್ನು ಬಿಟ್ಟು ಆ ಲಿಂಗವು ದೇಹವಿರುವವರೆಗೂ ಅಗಲಬಾರದೆಂಬ ಅವಿಭಾಜ್ಯಸಂಬಂಧ (ನಿತ್ಯಸಂಬಂಧ) ವನ್ನು ತೋರಿಸುವುದಕ್ಕಾಗಿ "ಅಯಂ ಮೇ ಹಸ್ತೋ ಭಗವಾನ್" ಎಂಬ ಮಂತ್ರವು ಪರಶಿವನು ನನ್ನ ಹಸ್ತದಲ್ಲಿರುವನೆಂಬ ಸ್ಪಷ್ಟವಾದ ಅರ್ಥವನ್ನು ಕೊಡುವ "ಹಸ್ತಗತಃ ಭಗವಾನ್" ಎಂದ ಹೇಳದೆ "ಹಸ್ತೋ ಭಗವಾನ್" ನನ್ನ ಹಸ್ತವೇ ಶಿವಲಿಂಗವು ಎಂದು ಔಪಚಾರಿಕವಾದ ಅಭೇದವನ್ನು ತೋರಿಸಿರುತ್ತದೆ. ಹೀಗೆ ಅಭೇದಾರ್ಥವುಳ್ಳ ಹಸ್ತಃ ಭಗವಾನ್ ಎಂಬ ಪ್ರಥಮಾಂತಪದಗಳನ್ನು ಆ ಶ್ರುತಿಯಲ್ಲಿ ತೋರಿಸದಿದ್ದರೆ ಕರಕಂಠಾದ್ಯಂಗಗಳಲ್ಲಿ ಧರಿಸಲ್ಪಟ್ಟಿರುವ ಶಿವಲಿಂಗಕ್ಕೂ, ದೀಕ್ಷಿತವಾದ ದೇಹಕ್ಕೂ ಇರುವ ಅವಿಭಾಜ್ಯಸಂಬಂಧವೇ (ಅಂದರೆ ಒಂದು ನಿಮಿಷವೂ ಶಿವಲಿಂಗವನ್ನು ಬಿಟ್ಟು ಅಗಲಿರಬಾರದೆಂಬ ನಿಯಮವೇ) ಲೋಪವಾದಂತೆ ಆಗುತ್ತದೆ. ವೀರಶೈವ ಸಿದ್ಧಾಂತವಾದರೋ ಮುಕ್ತಿದಾಯಕವಾದ ಇಷ್ಟಲಿಂಗರೂಪಿಯಾದ ಶಿವನನ್ನು ಶಿಷ್ಯನು ಶ್ರೀ ಗುರುವಿನಿಂದ ದೀಕ್ಷಾಪೂರ್ವಕವಾಗಿ ಎಂದು ಪಡೆದನೋ ಅಂದಿನಿಂದಲೂ ಈ ಸ್ಥೂಲದೇಹವಿರುವವರೆಗೂ ಇಷ್ಟಲಿಂಗವು ದೇಹವನ್ನು ಬಿಟ್ಟು ಅಗಲಬಾರದು ದೇಹಕ್ಕೂ ಈ ಶಿವಲಿಂಗಕ್ಕೂ ವಿಯೋಗವಾಗುವದಾದರೆ ಶಿವಾಗಮಾದಿ ಗ್ರಂಥಗಳಲ್ಲಿಯೂ ಮಹಾಚಾರ್ಯಪ್ರಣೀತಗಳಾದ ಸಿದ್ಧಾಂತಗಳಲ್ಲಿಯೂ ಮಹತ್ತರವಾದ ದೋಷವು ಹೇಳಲ್ಪಟ್ಟಿರುತ್ತದೆ. ಈ ವಿಷಯದಲ್ಲಿ,

ಸಂಸ್ಕೃತ್ಯ ಗುರುಣಾ ದತ್ತಂ ಪಡಧ ನ್ಯಾಸಪೂರ್ವಕಂ |
ವಾಮಹಸ್ತಗತಂ ಲಿಂಗಂ ಸಾವಧಾನೇನ ಪೂಜಯೇತ್ ||
[illegible] ದತ್ತಂ [illegible] ಶಿವಾಂಶಜಂ |
[illegible] ಪರಶಿವಂ ಸದಾ ||
[illegible] ||
[illegible] ನಗರೂಪಿ ಸದಾಶಿವಃ |
[illegible] ನರಾಧಮಃ |
[illegible] |
[illegible] ಅಸ್ತಮಾನ [illegible] |
[illegible] |
[illegible] |
[illegible] |

ಶ್ರೀಗುರುವು ಶಿಷ್ಯನ ದೇಹ [illegible]ವನ್ನು ಪರೀಕ್ಷಿಸಿ ಯೋಗ್ಯಕಾಲದಲ್ಲಿ ಶಿವದೀಕ್ಷೆಯಿಂದ ಶಿಷ್ಯನ ಶರೀರವನ್ನು ಷಡಧ್ವನ್ಯಾಸಪೂರ್ವಕವಾಗಿ ಪವಿತ್ರಗೊಳಿಸಿ ಶಿಷ್ಯನ ನಾಭಿಕಮಲದಿಂದ [illegible] ಇಷ್ಟಲಿಂಗವನ್ನು [illegible] ಹಸ್ತದಲ್ಲಿರುವ ಶಿವಲಿಂಗವನ್ನು ಯಾವಾಗಲೂ [illegible]ದಿಂದ ಪೂಜಿಸ [illegible] ಆ ಶಿವಲಿಂಗವನ್ನು [illegible] ಹಸ್ತ [illegible] ಯಾವಾಗಲೂ ಧರಿಸತಕ್ಕದ್ದು. ಯಾವ ಶಿಷ್ಯನು ಗುರುವಿನಪ್ಪಣೆಯಂತೆ [illegible] ಇಷ್ಟಲಿಂಗಧಾರಣ ಪೂಜಾದಿಗಳಲ್ಲಿ [illegible] ಇರುವವನಾ [illegible] ಪಡೆದು [illegible] ಪರಮೇಶ [illegible] ಪ್ರಮಾದದಿಂದ [illegible] ವಿಯೋಗವಾದರೆ ಪ್ರಾಣವನ್ನು [illegible] ಯಾವನು [illegible] ಅವನು [illegible] ಪತಿತನೂ [illegible] ತೊಂದರನನ್ನು [illegible] ಯಾರೂ ಸ್ಮರಿಸಬಾರದು [illegible] ಪ್ರತಿ [illegible] ಪ್ರಾಣಲಿಂಗ ವನ್ನು [illegible] ಯಾವಾಗಲೂ [illegible] ಲಿಂಗ [illegible] ಶಂಕರನ [illegible] ಆಗಿರುತ್ತದೆ.

[illegible] ಪ್ರಸಂ |

ಅಂದರೆ, [illegible] ಲಿಂಗರೂಪಿಯಾದ ಪರಶಿವನನ್ನು ಶ್ರೀಗುರುವಿನಿಂದ ಪಡೆದು [illegible] ಅವನ ದೇಹ [illegible] (ಪ್ರಾಣಲಿಂಗ ಎಂಬ [illegible]) ಧನಶಬ್ದವು [illegible] ಹೇಳಿದ [illegible] ಇರುವ ನಿತ್ಯಸಂಬಂಧವನ್ನು [illegible] ಸ್ಪಷ್ಟಪಡಿಸುತ್ತದೆ. [illegible] ಹಸ್ತದಲ್ಲಿ ಧರಿಸಲ್ಪಟ್ಟಿರುವ [illegible] ಅವಿಭಾಜ್ಯ (ನಿತ್ಯ) ಸಂಬಂಧವನ್ನು [illegible] ಋಗ್ವೇದದ 'ಅಯಂ ಮೇ ಹಸ್ತೋ ಭಗವಾನ್' ಎಂಬ ಮಂತ್ರವು ಪ್ರತಿಪಾದಿಸುತ್ತದೆ. ಈ ಮಂತ್ರದಲ್ಲಿ 'ಶಿವಾಭಿಮರ್ಶನ' ಎಂಬ [illegible] ಪದವು ಇರುತ್ತದೆ. ಹಸ್ತದಲ್ಲಿರುವ ಭಗವಚ್ಛಬ್ದವಾಚ್ಯನಾದ ಪರಮಾತ್ಮನು, ಶಿವಾಭಿಮರ್ಶನಃ—ಶಿವ ಇತ್ಯಭಿಮರ್ಶನ ಇತಿ ಶಿವಾಭಿಮರ್ಶನಃ ಶಿವನೆಂದು ಪರಾಮರ್ಶಿಸಲ್ಪಡುವನು ಎಂಬುವ್ಯುತ್ಪತ್ತಿಗನುಸಾರವಾಗಿ "ಹಸ್ತೋ ಭಗವಾನ್" ಎಂಬ ವಾಕ್ಯದಲ್ಲಿರುವ ಸಾಮಾನ್ಯವಾದ ಭಗವಚ್ಛಬ್ದಕ್ಕೆ ಲಿಂಗರೂಪಿಯಾದ ಪರಶಿವನೆಂದೇ ನಿರ್ಧಾರವಾಗುತ್ತದೆ. "ವ್ರೀಹಿಭಿರ್ಯಜೇತ ಯವೈರ್ವಾ ಯಜೇತ" ವ್ರೀಹಿ ಧಾನ್ಯದಿಂದಾಗಲಿ ಯವಧಾನ್ಯದಿಂದಾಗಲಿ ಯಾಗವನ್ನು ಮಾಡಬೇಕು ಎಂಬುವಲ್ಲಿ ಯವ ಶಬ್ದವನ್ನು ಮ್ಲೇಂಛರು ಪ್ರಿಯಂಗು ಎಂಬ ಧಾನ್ಯದಲ್ಲಿ ಪ್ರಯೋಗಿಸುತ್ತಾರೆ. ಆರ್ಯರು ದೀರ್ಘಶೂಕಧಾನ್ಯದಲ್ಲಿ ಪ್ರಯೋಗಿಸುತ್ತಾರೆ. ಯವಶಬ್ದದಿಂದ ಯಾವ ಧಾನ್ಯವನ್ನು ಗ್ರಹಿಸಬೇಕೆಂಬ ಸಂಶಯವುಂಟಾಗಲಾಗಿ—

ಯತ್ರಾನ್ಯಾ ಓಷಧಯೋ ಮ್ಲಾಯಂತಿ |
ಅಥೈತೇ ಮೋದಮಾನಾಸ್ತಿಷ್ಠಂತಿ ||

ಎಂಬ ವಾಕ್ಯಶೇಷಬಲದಿಂದ ಯವಶಬ್ದದಿಂದ ದೀರ್ಘಶೂಕಧಾನ್ಯವನ್ನೇ ಗ್ರಹಣಮಾಡಿರುವಂತೆ "ಅಯಂ ಮೇ ಹಸ್ತೋ ಭಗವಾನ್' ಎಂಬ ವಾಕ್ಯದಲ್ಲಿರುವ ಭಗವಚ್ಛಬ್ದವು ಅನೇಕ ದೇವತಾದಿಗಳಲ್ಲಿ ಪ್ರಯೋಗಿಸಲ್ಪಟ್ಟಿದ್ದರೂ "ಶಿವಾಭಿಮರ್ಶನಃ' ಎಂಬ ವಾಕ್ಯಶೇಷಬಲದಿಂದ ಆ ಭಗವಚ್ಛಬ್ದಕ್ಕೆ ಹಸ್ತದಲ್ಲಿರುವ ಲಿಂಗರೂಪಿಯಾದ ಪರಶಿವನೆಂಬ ಅರ್ಥವೇ ನಿಶ್ಚಿತವಾಗುತ್ತದೆ. ಈ ಮಂತ್ರವು ಈ ರೀತಿಯಾಗಿ ಹಸ್ತಾದಿ ಸ್ಥಾನಗಳಲ್ಲಿ ಶಿವಲಿಂಗಧಾರಣವನ್ನು ವಿಧಾನಮಾಡಿ ಹಸ್ತದಲ್ಲಿ ಧರಿಸಲ್ಪಟ್ಟ ಇಂಥ ಶಿವಲಿಂಗವು ಸೃಷ್ಟಿಸ್ಥಿತಿಸಂಹಾರಗಳನ್ನು ಮಾಡುವ ಶಕ್ತಿಯುಳ್ಳುದೆಂದು ಮುಂದಿನಪದಗಳಿಂದ ತೋರಿಸಿರುತ್ತದೆ. ಹೇಗೆಂದರೆ, "ಅಯಂ ಮಾತಾಽಯಂ ಪಿತಾ" ಎಂಬ ವಾಕ್ಯಗಳು ಸೃಷ್ಟಿಕರ್ತೃತ್ವವನ್ನೂ "ಅಯಂ ವಿಶ್ವಭೇಷಜಃ" ಈ ನನ್ನ ಹಸ್ತಗತವಾದ ಇಷ್ಟಲಿಂಗರೂಪನಾದ ಪರಮಾತ್ಮನು ವಿಶ್ವಸ್ಯ—ಜನನಮರಣರೂಪವಾದ ಸಂಸಾರರೋಗವನ್ನು ಭೇಷಜಃ—ನಾಶಗೊಳಿಸುವನು ಎಂಬುವ ವಾಕ್ಯದಿಂದ ಸ್ಥಿತಿಕರ್ತೃತ್ವ ಸಂಹಾರಕರ್ತೃತ್ವಗಳನ್ನೂ ಬೋಧಿಸುತ್ತದೆ. ಹೀಗೆ 'ಅಯಂ ಮೇ ಹಸ್ತೋ ಭಗವಾನ್" ಎಂಬ ಋಗ್ವೇದಮಂತ್ರದ ಅಧ್ಯಂತಪದಗಳ ವಿಚಾರದಿಂದ ವಾಮಹಸ್ತಪೀಠದಲ್ಲಿ ಅನವರತವೂ ಪೂಜಿಸಲ್ಪಡುವ ಇಷ್ಟಲಿಂಗರೂಪಿಯಾದ ಪರಶಿವನನ್ನು ಬೋಧಿಸುವುದೆಂಬುದೇ ಈ ಮಂತ್ರದ ಮುಖ್ಯಾರ್ಥವೆಂದು ವೀರಶೈವಮತಾಚಾರ್ಯರ ಮುಖ್ಯಾಶಯವಾಗಿರುತ್ತದೆ.

ಒಳದೇಶದ ವೃತ್ತಾಂತಗಳು.

ಕಳೆದ ೯ನೇ ತಾರೀಖಿನ ದಿವಸ ತರಿಕೆರೆ ಮೇಲ್ ರೈಲಿನಲ್ಲಿ ಕನ್ನಂಬಾಡಿಗೆ ಹೊರಟ ಮಾಣಿಕಜಿರಾವ್ ಎಂಬ ಆತನ ರೈಲು ನಿಲ್ಲುವುದಕ್ಕೆ ಮೊದಲೇ ಗಾಡಿಯಿಂದ ಇಳಿಯಲು ಪ್ರಯತ್ನಿಸಿ ಬಿದ್ದು ರೈಲಿಗೆ ಸಿಲುಕಿ ಮರಣ ಹೊಂದಿದನೆಂದು ತಿಳಿದುಬರುತ್ತದೆ.

ಗುಂಡ್ಲುಪೇಟೆಯ ರಾಜನಾಯಕ ಎಂಬವನು ತನ್ನ ಹೆಂಡತಿಯನ್ನೂ ಅತ್ತೆಯನ್ನೂ ಮಚ್ಚಿನಿಂದ ಹೊಡೆದು ಗಾಯಪಡಿಸಿವನೆಂದು ಮೊಕದ್ದಮೆಯಾಗಿ ಸೆಷನ್ಸ್ ನ್ಯಾಯಾಧೀಶರು ಅಪರಾಧಿಯು ತಪ್ಪಿತಸ್ಥನೆಂದು ತೀರ್ಮಾನಿಸಿ, ಮೂರು ವರ್ಷ ಕಠಿನಶಿಕ್ಷೆಯನ್ನು ವಿಧಿಸಿದರು.

ಫ್ರೆಂಚ್‌ರಾಕ್ಸ್ ಬಳಿ ಕಡಕನಾಳು ಗ್ರಾಮದ ಶಿವಯ್ಯ ಎಂಬವನ ಮೇಲೆ ಕಬ್ಬು ತುಂಬಿದ ಗಾಡಿಯು ಹರಿದು ವಿಶೇಷ ಗಾಯಗೊಂಡದ್ದರಿಂದ ಸದರಿಯವನನ್ನು ಚಿಕಿತ್ಸೆಗಾಗಿ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರಿಗೆ ತಂದಿದ್ದರು. ಅವನು ಕಳೆದ 11 ನೇ ತಾರೀಖಿನ ದಿವಸ ಮೃತನಾದನು. ಪೋಲೀಸರು ಶವವನ್ನು ಪೋಸ್ಟ್ ಮಾರ್ಟಂ ಪರೀಕ್ಷೆಗೆ ಕಳಿಸಿರುವರು.

ಚಟ್ಟನಹಳ್ಳಿಯ ಮಾದ ಎಂಬವನು ರಹದಾರಿ ಇಲ್ಲದೆ ಸಿದಿಮದ್ದನ್ನು ತಯಾರಿಸಿ ಹಂದಿಗಳ ಬೇಟೆಗೆ ಉಪಯೋಗಿಸುತ್ತಿದ್ದನೆಂದು ಮೈಸೂರು ತಾಲೂಕು ಪೋಲೀಸರು ಮೊದಲನೇ ವರ್ಗದ ಸ್ಪೆಷಲ್ ಮ್ಯಾಜಿಸ್ಟ್ರೇಟರ ಮುಂದೆ ತಂದ ವ್ಯವಹಾರದಲ್ಲಿ ಅಪರಾಧಿಯು ತನ್ನ ತಪ್ಪಿತವನ್ನು ಒಪ್ಪಿಕೊಂಡಿದ್ದರ ಮೇಲೆ ನ್ಯಾಯಾಧೀಶರು ಅವನಿಗೆ 20 ರೂ ದಂಡವನ್ನು ವಿಧಿಸಿದರು.

ಕಳೆದ ೯ನೇ ತಾರೀಖಿನ ದಿವಸ ಮಧ್ಯಾಹ್ನ ಬೆಂಗಳೂರು ಲಾಲ್‌ಬಾಗ್ ರಸ್ತೆಯಲ್ಲಿ ಹೋಗುತ್ತಿದ್ದ ಒಬ್ಬ ಮುದುಕನು ಎದುರಿಗೆ ಬರುತ್ತಿದ್ದ ಮೋಟಾರನ್ನು ಗಮನಿಸದೆ ರಸ್ತೆಯ ಒಂದುಕಡೆಯಿಂದ ಮತ್ತೊಂದು ಕಡೆಗೆ ಹೋಗಲೆತ್ನಿಸಿದನು. ಇದರಿಂದ ಮೋಟಾರು ಮುದುಕನಿಗೆ ತಗಲಿ ತಲೆಯಮೇಲೆ ಸ್ವಲ್ಪ ಗಾಯವಾಯಿತು.

ತ್ರವನನ್ನು ಅದೇ ಮೋಟಾರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ಸೇರಿಸಿದರೆಂದು ತಿಳಿದುಬಂದಿದೆ.

ಮೈಸೂರು ಮಾರ್ಕೆಟ್ ಪೋಸ್ಟ್ ಆಫೀಸಿನ ಸಬ್ ಪೋಸ್ಟ್ ಮಾಸ್ಟರಾಗಿರುವ ಶ್ರೀ ಮಾಣಿಕ್ಯಶೆಟ್ಟರು ಪೋಸ್ಟಾಫೀಸಿಗೆ ಸೇರಿದಂತಿರುವ ಮನೆಯಲ್ಲಿ ವಾಸವಾಗಿದ್ದು ದೇಹಾಲಸ್ಯದಿಂದ ಕೆಲವು ದಿವಸ ರಜಪಡೆದು ಪರಸ್ಥಳಕ್ಕೆ ಹೋಗುವಾಗ್ಗೆ ತಮ್ಮ ಸಾಮಾನುಗಳನ್ನೆಲ್ಲಾ ಅವರ ಮನೆಯಲ್ಲಿರಿಸಿ ಬೀಗ ಹಾಕಿಕೊಂಡು ಹೋಗಿದ್ದರು. ೩ಳನೇ ತಾರೀಖಿನ ದಿವಸ ಹಿಂತಿರುಗಿ ಬಂದು ಮನೆಯ ಬೀಗವನ್ನು ತೆಗೆದು ನೋಡುವಲ್ಲಿ ತಾವು ಇಟ್ಟಿದ್ದ ಸುಮಾರು 150 ರೂಗಳ ಬೆಲೆಬಾಳುವ ಚಿನ್ನ ಬೆಳ್ಳಿ ಪದಾರ್ಥಗಳು ಮಾಯವಾಗಿರುವುದನ್ನು ಕಂಡರು. ಬಾಗಿಲಿನ ಬೀಗವು ಹಾಕಿದಂತಿದ್ದು ಒಳಗಿನ ಪದಾರ್ಥಗಳು ಮಾತ್ರ ಮಾಯವಾಗಿರುತ್ತವೆ. ಪೋಲೀಸರು ಪತ್ತೆತರದೂದು ನಡೆಸುತ್ತಿದ್ದಾರೆ.

ಬೆಂಗಳೂರು ನಗರದಲ್ಲಿ ದಿವಾನ್‌ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ಕಟ್ಟಿಸಿರುವ ಭವ್ಯವಾದ ನಗರಭವನೋದ್ಘಾಟನಸಮಾರಂಭವನ್ನು ಇದೇ ತಿಂಗಳು ೧೧ನೆಯ ತಾರೀಖಿನ ದಿವಸ ಶ್ರೀಮನ್ಮಹಾರಾಜರವರು ನೆರವೇರಿಸಿದರು. ಆ ಸಮಯಕ್ಕೆ ಸಿಟಿಮ್ಯುನಿಸಿಪಾಲಿಟಿ ಪ್ರೆಸಿಡೆಂಟರವರು ಸರ್ ಶೆಟ್ಟರ ಗುಣಗಾನರೂಪವಾದ ಭಾಷಣವನ್ನು ಮಾಡಿದರು. ಬಳಿಕ ಶ್ರೀಮನ್ಮಹಾರಾಜರವರು ಸಮಯೋಚಿತ ಭಾಷಣವನ್ನು ಮಾಡಿ ಸರ್ ಶೆಟ್ಟರ ಭಾವಚಿತ್ರವನ್ನು ನಗರಭವನದಲ್ಲಿ ಸ್ಥಾಪಿಸಿದರು. ಸರ್ ಶೆಟ್ಟರವರ ಧರ್ಮಕಾರ್ಯವು ಅತ್ಯಂತ ಸ್ತುತ್ಯವಾಗಿದೆ.

ಕಳೆದ 11ನೆಯ ತಾರೀಖಿನ ದಿವಸ ಶ್ರೀಮನ್ಮಹಾರಾಜರವರು ಬೆಂಗಳೂರು ಕೆಂಪೇಗೌಡನ ರಸ್ತೆಯಲ್ಲಿ ಹೊಸದಾಗಿ ಕಟ್ಟುತ್ತಿರುವ "ಏಷ್ಯಾಟಿಕ್" ಜೀವವಿಮಾ ಕಂಪನಿಯ ಕಟ್ಟಡದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಆ ಸಮಯಕ್ಕೆ ದಿವಾನರವರು, ಸರ್ ಪುರುಷೋತ್ತಮದಾಸ್, ಠಾಕೂರದಾಸ್, ಸರ್ ಮಹಮದ್ ಬಜುಲುಲ್ಲ ಮೊದಲಾದ ದೊಡ್ಡ ಮನುಷ್ಯರೂ ಅನೇಕ ಮಹಿಳೆಯರೂ ಆಗಮಿಸಿದ್ದರು.

ಚಾಮರಾಜಪೇಟೆ ಮಾಧ್ಯಮಿಕ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಂ. ವೆಂಕೋಬರಾಯರು ದೇವತಾಪ್ರಾರ್ಥನೆಯನ್ನು ಮಾಡಿದನಂತರ ಕಂಪನಿಯ ಅಧ್ಯಕ್ಷರಾದ ಶ್ರೀ ಪರ್ಶೋನರವರು ಬಿನ್ನವತ್ತಳೆಯನ್ನೊಪ್ಪಿಸಿದರು. ಮತ್ತು ಈ ಕಟ್ಟಡವನ್ನು ಕಟ್ಟುವ ವಿಷಯದಲ್ಲಿ ಸಲಹೆಗಳನ್ನು ಕೊಟ್ಟು ಸಹಾಯ ಮಾಡಿದುದಕ್ಕೆ ನಮ್ಮ ದಿವಾನರನ್ನು ಅಭಿನಂದಿಸಿದರು. ಶ್ರೀಮನ್ಮಹಾರಾಜರವರು ಆಧುನಿಕ ಪ್ರಪಂಚದಲ್ಲಿ ಜೀವವಿಮೆಯ ಆವಶ್ಯಕತೆಯೇ ಮೊದಲಾದ ವಿಷಯಗಳನ್ನು ಕುರಿತು ಭಾಷಣಮಾಡಿದನಂತರ ಕಟ್ಟಡದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಎಲ್ಲರಿಗೂ ಹಾರಾದಿಗಳನ್ನು ಅರ್ಪಿಸಿದನಂತರ ಸಭೆಯು ಮುಕ್ತಾಯವಾಯಿತು.

ವರ್ತಮಾನಸಂಗ್ರಹ.

ಲಾಹೋರಿನ ಷಾಹಿದ್‌ಗಂಜ್ ಮಸೀತಿಯನ್ನು ಮತ್ತೆ ವಶಪಡಿಸಿಕೊಳ್ಳಬೇಕೆಂಬ ವಿಷಯದಲ್ಲಿ ಮುಸ್ಲಿಮರ ಸಮ್ಮೇಳನವೊಂದು ರಾವಲ್ಪಿಂಡಿಯಲ್ಲಿ ನಡೆದು ಇದಕ್ಕಾಗಿ ಒಬ್ಬ ಡಿಕ್ಟೇಟರನ್ನು ನೇಮಕಮಾಡಿ ತಾ|| ೨೧-೯-೩೫ ರಿಂದ ಚಳುವಳಿಗೆ ಆರಂಭ ಮಾಡಬೇಕೆಂದು ಗೊತ್ತಾಗಿತ್ತು. ಇದನ್ನು ತಿಳಿದು ಸರ್ಕಾರದವರು ಈ ಸಮ್ಮೇಳನದಲ್ಲಿ ಪ್ರಮುಖಪಾತ್ರವನ್ನು ವಹಿಸಿದ್ದ ಮೂವರು ಮುಸ್ಲಿಂ ಮುಖಂಡರನ್ನು ಲಾಹೋರಿನಿಂದ ಬೇರೆ ಕಡೆ ಸಾಗಿಸಿ, ಬೇರೆಬೇರೆ ಕಡೆಗಳಲ್ಲಿಟ್ಟು ಸರ್ಕಾರಕ್ಕೆ ವ್ಯತಿರಿಕ್ತವಾದ ಕಾರ್ಯಗಳಲ್ಲಿ ಪ್ರವೇಶಿಸಕೂಡದೆಂದು ಆಜ್ಞೆಮಾಡಿರುತ್ತಾರೆ.

ಮಳೆಯಿಂದ ಉತ್ಪಾತಗಳು!

ಕಳೆದ ಸೋಮವಾರ ಕೋಮಿಲ್ಲಾ ಡಿಸ್ಟ್ರಿಕ್ಟಿಗೆ ಸೇರಿದ ಕೆಲವು ಹಳ್ಳಿಗಳಲ್ಲಿ ವಿಶೇಷ ಮಳೆಯಾಗಿ ೬೩ ಪೌಂಡು ತೂಕವುಳ್ಳ ಕೆಲವು ಉಲ್ಕಾಪಾತಗಳು ಬಿದ್ದವು. ಸರಕಾರದವರು ಅವುಗಳನ್ನೆಲ್ಲಾ ಕೂಡಿಸಿ ಭೂಗರ್ಭಶೋಧನಾಲಯಕ್ಕೆ ಕಳುಹಿಸಿಕೊಟ್ಟರೆಂದು ತಿಳಿದುಬರುತ್ತದೆ.

ಚೀನಾ ದೇಶಕ್ಕೆ ಬ್ರಿಟಿಷರ ಸಹಾಯ!

ಬ್ರಿಟಿಷರು ಚೀನಾದಲ್ಲಿ ಕಲ್ಲಿದ್ದಲಿನ ಕೈಗಾರಿಕೆಯ ಸಹಾಯಕ್ಕೆ 10 ಮಿಲಿಯನ್ ಡಾಲರುಗಳ ಸಾಲವನ್ನು ಏರ್ಪಡಿಸಿದ್ದಾರೆ. ಚೀನರ ಆರ್ಥಿಕ ಸಹಾಯದ ಬಗ್ಗೆ ಬ್ರಿಟಿಷರು ಕೈಕೊಂಡ ಕಾರ್ಯಕ್ರಮವು ಜಪಾನಿನಲ್ಲಿ ಬಹಳ ಅಸಮಾಧಾನವನ್ನುಂಟುಮಾಡಿದೆಯೆಂದು ತಿಳಿಯಬರುತ್ತದೆ.

ಹಿಂದೂ ಸ್ತ್ರೀಯಳ ಮೇಲೆ ಘೋರಕೃತ್ಯವನ್ನೆಸಗಿದ ೪೦ ಜನ ಮುಸಲ್ಮಾನರಿಗೆ ಭಯಂಕರಶಿಕ್ಷೆ!

ಧೋಕ್ರಾ ಎಂಬ ಗ್ರಾಮದಲ್ಲಿರುವ 40 ಜನ ಮುಸಲ್ಮಾನರು ಒಬ್ಬ ಹಿಂದೂ ಸ್ತ್ರೀಯಳನ್ನು ಒಕ್ಕಲೆಮಾಡಿ ಊರಲ್ಲೆಲ್ಲಾ ಮೆರೆಯಿಸಿ ಆಕೆಯ ಮಾನಭಂಗವನ್ನು ಮಾಡಿದ್ದರಿಂದ ರಾಜಷಾಹಿ ಸೆಷನ್ಸ್ ಜಡ್ಜರವರು 8 ಜನ ಅಪರಾಧಿಗಳಿಗೆ ಆಜನ್ಮ ಕರಿನಶಿಕ್ಷೆಯನ್ನೂ ಉಳಿದ 32 ಜನರಿಗೆ 10 ವರ್ಷ ಕಠಿಣಶಿಕ್ಷೆಯನ್ನೂ ವಿಧಿಸಿದರು.

ಪಾಶ್ಚಾತ್ಯರ ವಿಚಿತ್ರವಿವಾಹಪದ್ಧತಿ

ಕಳೆದ ವರ್ಷ ಅಮೇರಿಕೆಯ ನ್ಯೂಜೆರಿಯ ಎಂಬಲ್ಲಿ ಥಾಮಸ್ ಬಿ ಡೆಲ್ಕರ್ ಎಂಬ 6೦ ವರ್ಷ ವಯಸ್ಸಿನ ವೃದ್ಧನು 22 ವರ್ಷ ವಯಸ್ಸಿನ ಹುಡುಗಿಯನ್ನು ಮದುವೆಯಾದನು. ಈ ಹುಡುಗಿಯು ಈ ಮುದುಕನ ಸ್ವಂತ ಮಗಳ ಹೊಟ್ಟೆಯಲ್ಲಿ ಹುಟ್ಟಿದವಳಂತೆ! ಈ ಮದುವೆಯಿಂದ ತಂದೆಯಾದವನು ಮಗಳಿಗೆ ಅಳಿಯನಾದಂತಾಯಿತು. ಸುಧಾರಿಸಿದ ರಾಷ್ಟ್ರಗಳ ಸುಧಾರಣೆ!

ಇಟಲಿಯಲ್ಲಿ ಮಕ್ಕಳ ಅಭಿವೃದ್ಧಿ!

ಇಟಲಿದೇಶದಲ್ಲಿ ಮಕ್ಕಳ ಬೆಳವಣಿಗೆಗೆ ಈಗ ಗಮನ ಕೊಡುತ್ತಿರುವಷ್ಟು ಹಿಂದೆ ಯಾವಾಗಲೂ ಕೊಟ್ಟಿದ್ದಿಲ್ಲ. ಇದರಿಂದ ಈಗ ಆ ದೇಶದ ಮಕ್ಕಳೆಲ್ಲಾ ಗಟ್ಟಿಮುಟ್ಟಾಗಿಯೂ ಬಲಾಢ್ಯರಾಗಿ ಬೆಳೆಯುತ್ತಿದ್ದಾರೆ. ಸರಕಾರದವರು ಬಲಹೀನರಾದ ಮಕ್ಕಳನ್ನು ಬೆಟ್ಟ ಪ್ರದೇಶಗಳಿಗಾಗಲಿ ಸಮುದ್ರತೀರಪ್ರದೇಶಕ್ಕಾಗಲಿ ಕಳುಹಿಸಿಕೊಟ್ಟು ಅವರ ಊಟಕ್ಕೆ ಅಲ್ಲಿಯೇ ಅನುಕೂಲಪಡಿಸುವರಂತೆ!

ಮದ್ರಾಸ್ ಇಲಾಖೆಯಲ್ಲಿರುವ ರೈತರ ಸಾಲ 204 ಕೋಟಿ ರೂಪಾಯಿ

ಮದ್ರಾಸ್ ಸರಕಾರದವರು ತಮ್ಮ ಇಲಾಖೆಯಲ್ಲಿ ರೈತರ ಸಾಲವೆಷ್ಟಿರುವುದೆನ್ನುವುದನ್ನು ಪರಿಶೀಲಿಸುವುದಕ್ಕಾಗಿ ಶ್ರೀ ಸತ್ಯನಾಥನ್ ಎಂಬ ಅಧಿಕಾರಿಗಳನ್ನು ನಿಯಮಿಸಿದ್ದರು. ಅವರು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಇಲಾಖೆಯಲ್ಲಿರುವ ರೈತರಿಗೆ ಒಟ್ಟು ೨೦೪ ಕೋಟಿ ರೂಪಾಯಿಗಳ ಸಾಲವಿರುವುದೆಂದು ವರದಿಯನ್ನು ಒಪ್ಪಿಸಿದ್ದಾರೆ. ಇದರಿಂದ ಮದ್ರಾಸ್ ಇಲಾಖೆಯ ರೈತರ ಸ್ಥಿತಿಯು ಎಷ್ಟು ಚಿಂತಾಜನಕವಾಗಿದೆಯೆಂಬುದು ಸರ್ವರಿಗೂ ತಿಳಿಯುವಂತಿದೆ.

ಇಟಲಿ ಮತ್ತು ಅಬ್ಸೀನಿಯಾ ಯುದ್ಧಸೂಚನೆ!

ಇಟಲಿ ಅಬ್ಸೀನಿಯಾಗಳ ಪರಿಸ್ಥಿತಿಯು ಉತ್ಕಟಾವಸ್ಥೆಗೆ ಬಂದಿರುತ್ತದೆ. ಇಟಲಿ ಮತ್ತು ಅಬ್ಸೀನಿಯಕ್ಕೆ ನಡೆಯಲಿರುವ ಯುದ್ಧವನ್ನು ತಪ್ಪಿಸಿ ಸಮಾಧಾನಸ್ಥಿತಿಯುಳ್ಳ ಸಂಧಿಮಾಡಬೇಕೆಂದು ಜನಾಂಗಸಂಘದವರು ಮಾಡುತ್ತಿರುವ ಪ್ರಯತ್ನವು ಫಲಿಸುವದೆಂಬ ನಂಬಿಕೆಯು ಯಾರಿಗೂ ಇರುವಂತಿಲ್ಲ. ಈ ಸಂಧಿಗೋಸ್ಕರ ಪ್ರಯತ್ನಿಸಲು ಪಂಚಾಯಿತರಾದ ಇಂಗ್ಲೆಂಡ್, ಫ್ರಾನ್ಸ್, ಸ್ಪೈಯಿನ್, ಪೋಲೆಂಡ್ ಮತ್ತು ಟರ್ಕಿ ರಾಜ್ಯಗಳ ಪ್ರತಿನಿಧಿಗಳು ಸೇರಿ ಚರ್ಚಿಸಿದರೂ ಯಾವುದೊಂದೂ ಇತ್ಯರ್ಥವಾಗಲಿಲ್ಲ. ಪಂಚಾಯಿತರು ಹೇಳಿದಂತೆ ಕೇಳುವುದಾಗಿಯೂ ಅಲ್ಲಿಯವರೆಗೂ ತಾವು ಮುಂದುವರಿದು ಯಾವ ಕೆಲಸವನ್ನೂ ಮಾಡುವುದಿಲ್ಲವೆಂದೂ ಅಬಿಸೀನಿಯವು ಮಾತುಕೊಟ್ಟಿದೆ. ಆದರೆ ಇಟಲಿಯು ಮಾತ್ರ ಆ ರೀತಿ ಮಾತುಕೊಡಲು ಒಪ್ಪಲಿಲ್ಲ.

ಇದೇ ತಿಂಗಳು 21 ನೇ ತಾರೀಖಿನ ಯುದ್ಧಾರಂಭ ಮಾಡಲು ನಿಶ್ಚಯಿಸಿರುವುದಾಗಿ ಜನಜನಿತವಾದ ಸುದ್ದಿಯು ಹರಡಿರುತ್ತದೆ. ಆದರೆ ಇಟಲಿ ಸರ್ಕಾರವು ಮಾತ್ರ ಈ ಸುದ್ದಿಯು ನಿರಾಧಾರವಾದುದೆಂದು ಹೇಳುತ್ತದೆ. ಅಬ್ಸೀನಿಯಕ್ಕೆ ಈಶಾನ್ಯಭಾಗದಲ್ಲಿರುವ ಎರಿಟ್ರಿಯ ಎಂಬ ಕಡೆಯಿಂದ ಅಬ್ಸೀನಿಯದ ಮೇಲೆ ಬೀಳಲು ಸಕಲಸನ್ನಾಹಗಳು ನಡೆದಿರುತ್ತವೆ. ಅಬ್ಸೀನಿಯನ್ನರೂ ಸಹ ಶತ್ರುಗಳನ್ನೆದುರಿಸಲು ಸಿದ್ಧರಾಗಿದ್ದಾರೆ. ಅಬ್ಸೀನಿಯ ಸೈನ್ಯವನ್ನು ನಡೆಸಲು ಬೆಲ್ಜಿಯಂ ಸೈನ್ಯಾಧಿಕಾರಿಗಳು ನಿಯಮಿತರಾಗಿದ್ದಾರೆ. ಸುಮಾರು 120 ಜನ ಅಬ್ಸೀನಿಯನ್ನರು ಸೈನ್ಯಾಧಿಕಾರಗಳಿಗೆ ನಿಯಮಿಸಲು ಯೋಗ್ಯಶಿಕ್ಷಣವನ್ನು ಡಚ್ ಅಧಿಕಾರಿಗಳಿಂದ ಪಡೆಯುತ್ತಿದ್ದಾರೆ.

ಸ್ವೀಕಾರ

ಪಂಪಾಕ್ಷೇತ್ರದಲ್ಲಿರುವ ಪಾಣಿಪದ್ರೇಶ್ವರ ದೇವಾಲಯದಲ್ಲಿ ಬೂದಗುಪ್ಪೆ ನಾಲ್ಕುರಾಣ್ಯ ಮಠಾಧ್ಯಕ್ಷರಾದ ಶ್ರೀ ಚರಮೂರ್ತಿಸ್ವಾಮಿಗಳವರು ಶ್ರೀ ರೇಣುಕವಿಜಯ ಮಹಾಪುರಾಣವನ್ನು ಶ್ರವಣಮಾಡಿಸಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 2 ರೂ ಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಅರಸಿಕೆರೆ ತಾ|| ದಿಬ್ಬೂರು ಮಾಸ್ಟರ್ ಎ. ಚೆನ್ನಪ್ಪನವರು ಒಡೇರಹಳ್ಳಿ ಶ್ರೀ ವೀರೇಶನ ದೇವಾಲಯದಲ್ಲಿ ಶ್ರೀ ರೇಣುಕವಿಜಯ ಪುರಾಣವನ್ನು ಶ್ರವಣಮಾಡಿಸಿದ ಸಮಯದಲ್ಲಿ ಪಂಚಾಚಾರ್ಯ ಪ್ರಭಾಪೋಷಣೆಕ್ಕಾಗಿ ಸಮರ್ಪಿಸಿದ 1 ರೂ ಯು ಗರುಗದಹಳ್ಳಿ ಜಿ. ಎಂ. ರಾಮಪ್ಪನವರ ದ್ವಾರಾ ತಲ್ಪಿರುತ್ತದೆ.

ಬೆಳಗಾಂವ ಜಿ|| ಅಥಣಿಯ ವಿರಕ್ತಮಠದಲ್ಲಿ ನೆರವೇರಿದ ಶ್ರೀ ರೇಣುಕವಿಜಯ ಮಹಾಪುರಾಣಸಮಾಪ್ತಿ ಸಮಯದಲ್ಲಿ ಸಮರ್ಪಿಸಿದ 1-4-0 ನ್ನು ಲೇಸಪ್ಪನವರಮಠದ ಚನ್ನಬಸವಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ವಿಜಾಪುರ ಜಿ|| ಮನಗೋಳಿ ಹಿರೇಮಠದಲ್ಲಿ ನೆರವೇರಿದ ಶ್ರೀ ರೇಣುಕವಿಜಯ ಮಹಾಪುರಾಣ ಸಮಾಪ್ತಿಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1 ರೂ ಯು ಚಿಮ್ಮಲಗಿ ಅರಳೆಲೆ ಮಠದ ಶ್ರೀ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಕಡೂರು ತಾ|| ದೇವರಹೊಸಹಳ್ಳಿಯಲ್ಲಿರುವ ಮ|| ರಾ|| ಕೆ. ಯಂ. ಬಸವರಾಜಪ್ಪನವರು ಪ್ರಭಾಪೋಷಣಕ್ಕಾಗಿ 1 ರೂ ಯನ್ನು ಸಮರ್ಪಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತಕಾಲೇಜು ಫಂಡಿಗೆ ಸ್ವೀಕಾರ.

ಸುಳಕುಂಟೆಯಲ್ಲಿರುವ ಮ|| ರಾ|| ಲಿಂಗಪ್ಪನವರ ಪುತ್ರ ಚಿ|| ಸೌ|| ರಾಚಮ್ಮನನ್ನು ಬೆಂಗಳೂರು ವೀರಭದ್ರಪ್ಪನವರ ಪುತ್ರ ಚಿ|| ರಾ|| ರುದ್ರಪ್ಪನಿಗೆ ಕೊಟ್ಟು ನಡೆಸಿದ ವಿವಾಹಮಹೋತ್ಸವದಲ್ಲಿ ಬೆಂಗಳೂರು ದೊಡ್ಡಪೇಟೆ ಗ್ರಾಂ|| ಸುಳಕುಂಟೆ ಚನ್ನಬಸಪ್ಪನವರ ಮುಖಾಂತರ ಬಂದ ರೂಪಾಯಿ 4—0—0

ಶ್ರೀ ಜಗದ್ಗುರು ಪಂಚಾಚಾರ್ಯರು ಈ ನೂತನ ದಂಪತಿಗಳಿಗೂ ಮೇಲ್ಕಂಡ ಮಹಾಶಯರಿಗೂ ಸಹ ನಿತ್ಯಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಅಸಿಸ್ಟೆಂಟ್ ಸೆಕ್ರೆಟರಿ,
ಎಸ್. ಸುಬ್ಬಯ್ಯ.

ಶ್ರೀ ರೇಣುಕವಿಜಯ ಮಹಾಪುರಾಣ ಸಮಾಪ್ತಿ

ಅರಸಿಕೆರೆ ತಾ|| ಬಿಟ್ಟುರುವಾಸ್ಕಲ್ ಎ ಚನ್ನಪ್ಪನವರು ಶ್ರಾವಣಮಾಸದಲ್ಲಿಯೂ ರೇಣುಕವಿಜಯ ಮಹಾಪುರಾಣವನ್ನು ಶ್ರವಣಮಾಡುತ್ತಿರುವುದು ಅನೇಕ ಗುರುಭಕ್ತರ ಮಾತಿನಿಂದ ವೇದ್ಯವಾಗುತ್ತದೆ. ಅದರಂತೆ ಇವರು ಚನ್ನಪ್ಪನವರು ಈ ಶ್ರಾವಣಮಾಸದಲ್ಲಿ ತಮ್ಮ ತೋಟದ ಒಡೆಯ [illegible] ಶ್ರೀ [illegible] ದೇವಾಲಯದಲ್ಲಿ ಶ್ರೀ ರೇಣುಕವಿಜಯಪುರಾಣವನ್ನು ಶ್ರೀ|| ಕೆ ಯಂ ವೀರಭದ್ರಪ್ಪನವರಿಂದ ಶ್ರವಣಮಾಡಿಸಿ ಪುರಾಣ ಸಮಾಪ್ತಿಯ ದಿವಸ [illegible] ಸಂತೆಗೆ ಶ್ರೀ [illegible] ಸ್ವಾಮಿಗಳವರಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವ ಚಿತ್ರಕ್ಕೂ ಮತ್ತು ಶ್ರೀ [illegible] ಸಕಲ ಬಿರುದಾವಳಿಗಳನ್ನು ವಹಿಸಿ ಅನೇಕ ಭಕ್ತಮಾಹೇಶ್ವರರಿಗೆ [illegible] ನಡೆಯಿತು. ಶ್ರೀ ಜಗದ್ಗುರು ರೇಣುಕಾಚಾರ್ಯರ ಪಲ್ಲಕ್ಕಿಯನ್ನು ಮತ್ತು ಭಾವಚಿತ್ರಪಟವನ್ನು ಹಾಗೂ ರೇಣುಕವಿಜಯ ಮಹಾಪುರಾಣವನ್ನು ಸಹ ಪಲ್ಲಕ್ಕಿಯಲ್ಲಿರಿಸಿ ವಾದ್ಯವೈಭವಾದಿಗಳಿಂದಲೂ [illegible] ಮೆರವಣಿಗೆಯು ನೇತ್ರಾನಂದಕರವಾಗಿ ನೆರವೇರಿಸಲ್ಪಟ್ಟಿತು.

ಓರ್ವ ಉತ್ಸವಭಾಗಿ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ರೇಣುಕಾಚಾರ್ಯ ಪುರಾಣಮಹೋತ್ಸವವೂ ಮಹಾಗಣಾರಾಧನೆಯೂ,

ಬಾಗಲಕೋಟೆ

ವಿಜಾಪುರ ಜಿಲ್ಲಾ ಬಾಗಲಕೋಟೆ ಶಹರದಲ್ಲಿ ಶ್ರಾವಣ ಶು|| ೧ ರಿಂದ ಇದೇ ೧೬ ರವರೆಗೆ ಪುರಾಣ ಬಸವೇಶ್ವರನ ದೇವಾಲಯದಲ್ಲಿ ವೀರಶೈವ ತರುಣಸಂಘದವರು ಶ್ರೀ ರೇಣುಕಾಚಾರ್ಯರ ಪುರಾಣವನ್ನು ಪ್ರಾರಂಭಿಸಿದರು. ಪ್ರತಿದಿವಸ ರಾತ್ರಿ ೬ ಘಂಟೆಯಿಂದ ಪುರಾಣಶ್ರವಣಕ್ಕೆ ಅನೇಕ ಜನ ಭಕ್ತಮಹಾಶಯರೂ ಮಹಿಳೆಯರೂ ಕೇಳುತ್ತಿದ್ದರು. ಇದೇ ಗ್ರಾಮದ ಹಿರೇಮಠದ ವೇ|| ಅನ್ನದಾನಯ್ಯನವರು ಪುರಾಣದ ಪದಗಳನ್ನು ತಮ್ಮ ಕೋಮಲ ಕಂಠ ಸ್ವರದಿಂದ ಹಾಡುತ್ತಿದ್ದರು. ದೇವಣಗಾಂವಿ ವೇ|| ಸಿದ್ಧರಾಮಯ್ಯನವರು ತಮ್ಮ ಚತುರವಾಣಿಯಿಂದ ಜನಮನವೊಪ್ಪುವ ಸರಳರೀತಿಯಿಂದ ಪುರಾಣ ಪ್ರವಚನವನ್ನು ಮಾಡುತ್ತಿದ್ದರು. ಈ ಪ್ರಕಾರವಾಗಿ ಗಾನಾಲಾಪವನ್ನೂ ಮತ್ತು ಪ್ರವಚನವನ್ನೂ ಕೇಳಿ ಇಲ್ಲಿನ ಮಹಾಜನರು ಆನಂದದಿಂದ ಮಂಗಲವನ್ನು ಪೂರೈಸಿಕೊಂಡು ರಾತ್ರಿ ೮-೩೦ ಘಂಟೆಗೆ ತೆರಳುತ್ತಿದ್ದರು. ಇದೇ ಪ್ರಕಾರವಾಗಿ ಭಾದ್ರಪದ ಶು ೧೦ ರವರೆಗೆ ನಡೆದು ಇದೇ ಭಾದ್ರಪದ ಶು|| ೧೧ ಸೋಮವಾರ ತಾ ೯-೯-೩೫ ನೇ ದಿವಸ ಉದಯದ ೮ ಘಂಟೆಯಿಂದ ಪಂಚಕಲಶಯುಕ್ತವಾದ ಪಲ್ಲಕ್ಕಿಯಲ್ಲಿ ಶ್ರೀ ರೇಣುಕಾಚಾರ್ಯರ ಭಾವಚಿತ್ರವನ್ನಿರಿಸಿ ಪುರಾಣಬಸವೇಶ್ವರನ ದೇವಾಲಯದಿಂದ ಉತ್ಸವವನ್ನು ಹೊರಡಿಸಿದರು. ಪಲ್ಲಕ್ಕಿಯ ಹಿಂಭಾಗದಲ್ಲಿ ಸುಮಂಗಲೆಯರು ಕಲಶಗಳನ್ನು ಹಿಡಿದಿದ್ದರು. ಪಲ್ಲಕ್ಕಿಯ ಸುತ್ತಲೂ ಸ್ವಯಂಸೇವಕರು ಛತ್ರಚಾಮರಗಳನ್ನು ಹಿಡಿದಿದ್ದರು. ಮುಂದೆ ಭಜನಾಮೇಳದವರು ಗುರು ಶಿವ ಭಜನೆಗಳನ್ನು ಸಂಗೀತದಿಂದ ಮನೋಹರವಾಗಿ ಹಾಡುತ್ತಿದ್ದರು. ಮುಂದೆ ಬ್ಯಾಂಡಿನವರು ಕರಡಿಮಜಲಿನವರು ಮತ್ತು ಇತರ ವಾದ್ಯದವರು ತಮ್ಮ ತಮ್ಮ ವಾದ್ಯಕಲೆಗಳನ್ನು ತೋರಿಸುತ್ತ ಮುಂದೆ ಮುಂದೆ ಸಾಗುತ್ತಿದ್ದರು. ದಾರಿಯುದ್ದಕ್ಕೂ ಸಮುದ್ರೋಪಾದಿಯಲ್ಲಿ ಕೂಡುತ್ತಿದ್ದ ಜನಸಮೂಹವು ಜಯಜಯಕಾರಗಳನ್ನು ಮಾಡುತ್ತ ಮುಂದೆ ಸಾಗುತ್ತಿದ್ದಿತು. ಉತ್ಸವವು ತಮ್ಮ ತಮ್ಮ ಅಂಗಡಿಗಳ ಮುಂದೆಲ್ಲ ಬಂದಕೂಡಲೆ ಭಕ್ತಾದಿಗಳು ಶ್ರೀ ಜಗದ್ಗುರುಗಳಿಗೆ ಪುಷ್ಪ ಕಾಯಿ ಕರ್ಪೂರಗಳನ್ನು ಅರ್ಪಿಸುತ್ತಿದ್ದರು. ಈ ಪ್ರಕಾರವಾಗಿ ಉತ್ಸವವು ಮುಖ್ಯಮುಖ್ಯ ಬೀದಿಗಳಿಂದ ಹಳೆಪೇಟೆಯಲ್ಲಿ ಹಾಯ್ದು ಸ್ವಸ್ಥಾನವನ್ನು ಮಧ್ಯಾಹ್ನ ೧೧ ಘಂಟೆಗೆ ತಲುಪಿತು.

ಬಳಿಕ 11 ೩೦ ಘಂಟೆಯಿಂದ ಸಾಯಂಕಾಲ ೫ ಘಂಟೆಯವರೆಗೆ ಮಹಾಗಣಾರಾಧನೆಯು ನೆರವೇರಿತು. ತರುವಾಯ ರಾತ್ರಿ ೬ ಘಂಟೆಯಿಂದ ದೇವಾಲಯವನ್ನು ಕಳಶ ತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ನಾನಾವಿಧ ವಿದ್ಯುದ್ದೀಪಾವಳಿಯಿಂದಲೂ ಅಲಂಕರಿಸಿ ಪುರಾಣಪ್ರಾರಂಭವಾಗಿ ಮುಗಿಸಿದನಂತರ ಇಲಕಲ್ಲು ವೇ|| ಗೋವಿಂದಕೆರೆ ಶಾಸ್ತ್ರಿಗಳವರು ಭಾಷಣವನ್ನು ಮಾಡಿದರು. ಇವರು ತಮ್ಮ ಭಾಷಣದಲ್ಲಿ ನಾವೆಲ್ಲರೂ ಇಂದಿನವರೆಗೆ ಪರಮ ಪೂಜ್ಯ ಪಂಚಾಚಾರ್ಯರಲ್ಲೊಬ್ಬರಾದ ಶ್ರೀ ಜಗದ್ಗುರು ರೇವಣಸಿದ್ಧ ಶಿವಾಚಾರ್ಯರ ಪುರಾಣವನ್ನು ಕೇಳಿ ಧನ್ಯರಾದೆವು. ಈ ಮಹಾಮಹಿಮರು ಕೊಲ್ಲಿಪಾಕಿ ಸೋಮೇಶ್ವರ ಲಿಂಗದಿಂದವತರಿಸಿ ವೀರಶೈವ ಮತವನ್ನು ಸ್ಥಾಪಿಸಿ ಅನಂತಲೀಲೆಗಳನ್ನು ಮಾಡಿ ಶ್ರೀ ಶಂಕರಾಚಾರ್ಯರಿಗೆ ಶ್ರೀ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದರು. ಶ್ರೀ ಶಂಕರಾಚಾರ್ಯರು ತಮ್ಮ ತರುವಾಯ ತಮ್ಮ ಪಟ್ಟವನ್ನು ಶ್ರೀ ಸುರೇಶ್ವರಾಚಾರ್ಯರಿಗೆ ಕಟ್ಟಿ ಅವರಿಗೆ ಈ ಚಂದ್ರಮೌಳೀಶ್ವರಲಿಂಗದ ಮಹಿಮೆಯನ್ನು ಬೋಧಿಸಿ ಈ ಲಿಂಗವನ್ನು ನಿತ್ಯವೂ ಪೂಜಿಸಬೇಕೆಂದು ಅಪ್ಪಣೆಯನ್ನು ಕೊಟ್ಟರೆಂದು ಇವೇ ಮೊದಲಾದ ವಿಷಯಗಳನ್ನು ಹೇಳಿದರು. ತರುವಾಯ ಇದೇ ಗ್ರಾಮದ ವೇ|| ಶಿಲಿಗಣಾಥಶಾಸ್ತ್ರಿಗಳವರು ತಮ್ಮ ಭಾಷಣದಲ್ಲಿ ಪರಮಪೂಜ್ಯರಾದ ಪಂಚಾಚಾರ್ಯರು ಧರ್ಮಸಂಸ್ಥಾಪನೆಗೋಸ್ಕರ ಪಂಚಲಿಂಗಗಳಿಂದವತರಿಸಿ ಅನಂತಾನಂತ ಲೀಲೆಗಳನ್ನು ಗೈದು ಅಗಸ್ತ್ಯಾದಿ ಮಹರ್ಷಿಪುಂಗವರಿಗೂ ಶಿವಾದ್ವೈತೋಪದೇಶವನ್ನು ಮಾಡಿ ತಮ್ಮ ದಿವ್ಯಾತ್ಮಭಾವದಿಂದ ಶಿಷ್ಯರನ್ನಾಗಿ ಮಾಡಿಕೊಂಡು ಜಗತ್ಪೂಜ್ಯರಾದರೆಂದೂ ಈ ಮಹಾಮಹಿಮರ ಪುರಾಣಶ್ರವಣದಿಂದ ಸಮುಗುಂಟಾಗುವ ಲಾಭಗಳೇನೆಂಬುದನ್ನೂ [illegible] ಪೂಜ್ಯರಾದ ಶ್ರೀ ರೇವಣಸಿದ್ಧ ಶಿವಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದೂ ಈ ಪುರಾಣವನ್ನು ಈಗ್ಗೆ ಒಂದು ತಿಂಗಳ ಪರ್ಯಂತರ ಹೇಳಿಸಿದ ಯಜಮಾನ ಮು|| ರಾ|| ರೇವಣಶಿವಲಿಂಗಪ್ಪನವರಿಗೂ ಇವರ ಸಹಾಯಕ ವರ್ಗದವರಿಗೂ ಮತ್ತು ವೀರಶೈವ ತರುಣಸಂಘದವರಿಗೂ ಶ್ರೀ ರೇವಣಸಿದ್ಧ ಶಿವಾಚಾರ್ಯರು ಆಯುರಾರೋಗ್ಯಾದಿ ಸಕಲಸಂಪತ್ಸಮೃದ್ಧಿಯನ್ನೀಯಲೆಂದು ಕೋರಿದರು. ಬಳಿಕ ರಾತ್ರಿ ೧೦ ಘಂಟೆಗೆ ಮಂಗಳಾರತಿಯನ್ನು ಮಾಡಿ ಸಮಾಪ್ತಿಗೊಳಿಸಿದರು.

ಈ [illegible] ಭಾಗವತರೆ [illegible] ಸೋಮವಾರಕ್ಕೆ ಪಂಚಾಚಾರ್ಯ [illegible] ವೀರಶೈವ ಧರ್ಮವೂ ಥಮಾಂದಲ [illegible] ಈ ಕಾಲದಲ್ಲಿ ಇಷ್ಟು ಹುರುಪು [illegible] ಜಾಗೃತರಾದರೆ [illegible] ಇನ್ನಾದರೂ ಆ ಪೂಜ್ಯ [illegible] ವೀರಶೈವರೆಲ್ಲರೂ [illegible] ಹೊಂದಲೆಂದು ಪ್ರಾರ್ಥಿಸುವ

ನೆಲ್ಲಿಗೆ ಗುರುಲಿಂಗಪ್ಪ
[illegible] ಬಾಗಲಕೋಟೆ

ಶ್ರೀ ಜಗದ್ಗುರು [illegible] ನಮಃ

ಶ್ರೀ ರೇಣುಕವಿಜಯ ಮಹಾಪುರಾಣ ಸಮಾಪ್ತಿ ಸಮಾರಂಭ

[illegible]

ಜಗದ್ವಿಖ್ಯಾತರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಚರಿತ್ರೆಯನ್ನು [illegible] ಪರಮಪವಿತ್ರವಾದ [illegible] ಜಗದ್ಗುರುಗಳ [illegible] ಆ ಮಹಿಮರ [illegible] ಜನಮಾನ್ಯನಾಗಿ [illegible] ಜಗತ್ಪ್ರಸಿದ್ಧವಾದ ಇಂದಿನ [illegible] ಪುರಸಿದ್ಧಿಗೆ [illegible] ಸತ್ತಿಗೇರಿ ಹಿರೇಮಠದ ವೇ|| ರೇವಣಸಿದ್ಧಾರಾಧ್ಯರಿಂದ ವಿರಕ್ತಾಶ್ರಮ [illegible] ಗೊಳಸಂಗಿ ಮಠದಲ್ಲಿ ಕಳೆದ ತಿಂಗಳ ಶ್ರಾವಣ ಶು|| ೫ ದಿವಸ ಪ್ರಾರಂಭಿಸಿ, ಭಾದ್ರಪದ ಶು|| ೮ ದಿವಸ ಅತ್ಯಂತ ವೈಭವದಿಂದ ಸಮಾಪ್ತಿಗೊಳಿಸಿದರು.

ಸದರಿ ಆರಾಧ್ಯರು ತಮ್ಮ ಅಮೃತವಾಣಿಯಿಂದ ಪುರಾಣದಲ್ಲಿದ್ದ ಶ್ರೀ ರೇಣುಕಾಚಾರ್ಯರ ಮಹಿಮಾವಳಿಗಳನ್ನು ಭಕ್ತಿಭಾವವು ನೆಲೆಗೊಳ್ಳುವಂತೆ ಬೋಧಿಸುತ್ತಿದ್ದರಲ್ಲದೆ ಆಗಾಗ್ಗೆ ಜಗದಾಚಾರ್ಯರ ಜಯಘೋಷದೊಡನೆ ಸರ್ವರನ್ನೂ ಆನಂದಾಬ್ಧಿಯಲ್ಲಿ ಲೋಲಾಡಿಸುತ್ತಿದ್ದರು. ಅನೇಕ ಜನ ಸ್ತ್ರೀ-ಪುರುಷರ ಸಮುದಾಯದಿಂದಲೂ, ಕಳಶತೋರಣಾದಿಗಳಿಂದಲೂ, ವಿದ್ಯುಚ್ಛಕ್ತಿಯ ಪ್ರಕಾಶದಿಂದಲೂ, ರೇಣುಕರ ಕೀರ್ತಿಪ್ರಭಾವದಿಂದಲೂ ಪುರಾಣಮಂಟಪವು ಬಹುರಮಣೀಯವಾಗಿ ಪರಿಶೋಭಿಸುತ್ತಿತ್ತು.

ಪುರಾಣಸಮಾಪ್ತಿ ದಿವಸ ಮುಂಜಾನೆ ೧೧ ಘಂಟೆಯಿಂದ ಸಂಜೆ ೬ ಘಂಟೆಯವರೆಗೆ ಭೂರಿಗಣಾರಾಧನೆಯು ನಡೆದು ರಾತ್ರಿ ೮ ಘಂಟೆಗೆ ಪುರಾಣವನ್ನು ಮುಗಿಸುವ ಸಮಯಕ್ಕೆ ಶ್ರೀಮನ್ನಿರಂಜನ ಹಾವೇರಿ ಹುಕ್ಕೇರಿ ವಿರಕ್ತಮಠಾಧ್ಯಕ್ಷರಾದ ಶ್ರೀ ಶಿವಬಸವ ಸ್ವಾಮಿಗಳು, ಶಿವಯೋಗಮಂದಿರದ ಸೇವಕರು, ರಾಣೆಬೆನ್ನೂರು ವಿರಕ್ತಮಠದ ಸ್ವಾಮಿಗಳು, ಮಾಗಡಿ ವಿರಕ್ತಮಠದ ಹಾಲಪ್ಪನವರು, ಜಗಡಿ ವಿರಕ್ತಮಠದ ಮುಪ್ಪಿನ ಸ್ವಾಮಿಗಳು, ಬಸವನಬಾಗೇವಾಡಿ ಸಂಸ್ಕೃತಪಾಠಶಾಲಾಧ್ಯಾಪಕರಾದ ಪಂಡಿತ ಮಲ್ಲಾಪುರದ ರಾಜಶೇಖರಶಾಸ್ತ್ರಿಗಳು ಆಗಮಿಸಿದ್ದರಲ್ಲದೆ, ಅನೇಕ ಜನ ಪರಸ್ಥಳದವರೂ ಬಂದಿದ್ದರು. ಇಲ್ಲಿಯ ಮು|| ರಾ|| ಶೆಟ್ಟರು, ಮಹಾಜನರು ಮೊದಲಾದ ಸಮಸ್ತ ಭಕ್ತಮಾಹೇಶ್ವರರು ಕಾಯಿಕರ್ಪೂರಾದಿಗಳೊಂದಿಗೆ ಅಪೂರ್ವವಾದ ಭಕ್ತಿಯಿಂದ ಬಂದು ಮಹಾಪುರಾಣವನ್ನು ಕೇಳಿ ಮಂಗಲಪೂರ್ವಕ ಜಗದಾಚಾರ್ಯರ ಜಯಘೋಷದೊಡನೆ ಮುಗಿಸಿದರು.

ಆನಂತರ ಇಲ್ಲಿಯ ಹಿರೇಮಠದ ವೇ|| ವೀರಭದ್ರಶಾಸ್ತ್ರಿಗಳು ತಮ್ಮ ಅಸ್ಖಲಿತವಾದ ವಾಣಿಯಿಂದ ಶ್ರೀರೇಣುಕಾಚಾರ್ಯರ ಲೀಲಾವಿಷಯವನ್ನು ಕುರಿತು ಸರ್ವೋತ್ಕೃಷ್ಟವಾದ ವ್ಯಾಖ್ಯಾನವನ್ನು ಮಾಡಿದರು. ಆ ವೇಳೆ ಇಲ್ಲಿಯ ಇಂಗ್ಲೀಷಶಾಲಾವಿದ್ಯಾರ್ಥಿಗಳು ಪಾರ್ಮಿಕ ನೈತಿಕ-ಔದ್ಯೋಗಿಕ ಈ ವಿಷಯಗಳ ಸಲುವಾಗಿ ಅತ್ಯುತ್ತಮವಾದ ವ್ಯಾಖ್ಯಾನವನ್ನು ಮಾಡಿದರು. ತರುವಾಯ ಸೀಮಂತಿನಿಯರು ಕಲಶನೀರಾಜನವನ್ನು ಮಾಡಿ ಅನುಭವಪದ್ಯಗಳನ್ನು ಹೇಳಿದರು. ಜಗದಾಚಾರ್ಯರು ಇಲ್ಲಿಯ ಮಹಾಶಯರಿಗೂ ಭರತಖಂಡದ ವೀರಶೈವಸಮಾಜಕ್ಕೂ ಇದೇ ಪ್ರಕಾರವಾಗಿ ಪದೇಪದೇ ಈ ಮಹಾಪುರಾಣವನ್ನು ಹೇಳಿಸುವ ಸಮೃದ್ಧಿಯನ್ನೂ ಶಕ್ತಿಯನ್ನೂ ದಯಪಾಲಿಸಿ ರಕ್ಷಿಸಲೆಂದು ಪ್ರಾರ್ಥಿಸುವ,

ಲೋಕಪ್ಪನವರ ಮಠದ ಚನ್ನಬಸವಪ್ಪಯ್ಯ,
ಇಭಣಿ ಡಿ|| ಬೆಳಗಾಂವ.

ಆಂಧ್ರಸಾಹಿತ್ಯಪರಿಷತ್ತಿನಲ್ಲಿ ಪಂಡಿತ ಚಿ|| ಮ|| ವೀರಭದ್ರಶಾಸ್ತ್ರಿಗಳವರಿಗೆ ಗೌರವ.

ಆಂಧ್ರಸಾಹಿತ್ಯಪರಿಷತ್ತಿನ ವಾರ್ಷಿಕಾಧಿವೇಶನವು ಗೋದಾವರಿ ಜಿಲ್ಲಾ ಅಮಲಾಪುರ ತಾಲೂಕಿನಲ್ಲಿ, ಗತ ಜುಲೈತಿಂಗಳು ೨೧ ೨೦ ನೇ ತೇದಿಗಳಲ್ಲಿ ಸುಪ್ರಸಿದ್ಧ ವಿದ್ವಾಂಸರಾದ ಶತಾವಧಾನಿ ಶ್ರೀ ಕಾಶೀಕೃಷ್ಣಾಚಾರ್ಯರ ಅಧ್ಯಕ್ಷತೆಯ ಕೆಳಗೆ ಬಹಳ ವಿಜೃಂಭಣೆಯಿಂದ ನೆರವೇರಿತು. ಸಭೆಗೆ ಆಂಧ್ರದೇಶದ ದೊಡ್ಡದೊಡ್ಡ ಅನೇಕ ಜನ ಸಂಸ್ಕೃತಾಂಧ್ರ ಪಂಡಿತರು ಬಂದಿದ್ದರು. ಈ ಸಮಾರಂಭದಲ್ಲಿ ಪ್ರತ್ಯೇಕವಾಗಿ ಸತ್ಕಾರಪೂರ್ವಕ ಸಮಾಹೂತರಾದ ಪಂಡಿತ ಚಿ|| ಮ|| ವೀರಭದ್ರಶಾಸ್ತ್ರಿಗಳ ಪರಿಚಯವನ್ನು ಸಭಿಕರಿಗೆ ಸ್ವಾಗತಾಧ್ಯಕ್ಷರು ಮಾಡಿಕೊಡಲು "ಹೆಸರಿನಿಂದ ಮೊದಲೇ ನನಗೆ ಸುಪರಿಚಿತರಾದ ಈ ವಿಖ್ಯಾತವಿದ್ವಾಂಸರನ್ನು ಉಪನ್ಯಾಸಕ್ಕೋಸ್ಕರ ಸ್ವಾಗತಮಾಡುತ್ತಿರುವೆನು" ದೆ. ಸಭಾಧ್ಯಕ್ಷರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಆ ಮೇಲೆ ವೀರಭದ್ರಶಾಸ್ತ್ರಿಗಳು ಸಭಾವೇದಿಕೆಯ ಮೇಲೆ ನಿಂತು "ಉತ್ತರಕಾಲೀ-ಶಕ್ತಿಸ್ತಂಭಲೇಖ" ವೆಂಬ ವಿಷಯದ ಮೇಲೆ ಗಂಭೀರವಾಗಿಯೂ ಮಧುರವಾಗಿಯೂ ಉಪನ್ಯಾಸಮಾಡಿದರು. ಅವರ ಭಾಷಾಪ್ರೌಢಿ, ಪರಿಶೋಧನಾ ನೈಪುಣ್ಯ, ವಿವಿಧ ಪಾಂಡಿತ್ಯ ಮುಂತಾದವುಗಳನ್ನು ಕಂಡು ಸಭಿಕರು ಆನಂದತುಂದಿಲರಾದರು.

ಆ ಮೇಲೆ ೩1 ೭-35 ನೆಯ ಸಾಯಂಕಾಲ ಹೈಸ್ಕೂಲಿನಲ್ಲಿ "ಆರ್ಯಧರ್ಮ" ದ ವಿಷಯವಾಗಿ ಪಂಡಿತ ವೀರಭದ್ರಶಾಸ್ತ್ರಿಗಳ ಪ್ರತ್ಯೇಕವಾದ ಉಪನ್ಯಾಸ ಸಭೆಯು ಬಹಳ ಸುವ್ಯವಸ್ಥೆಯಿಂದ ಜರುಗಿತು. ಸಭೆಗೆ ಡೆಪ್ಯುಟಿ ಕಲೆಕ್ಟರರಾದ ಮ|| ರಾ|| ಬಿ ವೀರಭದ್ರಯ್ಯ ಬಿ ಎ, ಇವರು ಅಧ್ಯಕ್ಷರಾಗಿದ್ದರಲ್ಲದೆ, ಎಲ್ಲ ಸರಕಾರಿ ಅಧಿಕಾರಿಗಳೂ, ಪುರಪ್ರಮುಖರೂ, ಪ್ಲೀಡರರೂ ಮುಂತಾಗಿ ಬಹಳ ಜನರು ಬಂದಿದ್ದು ಪಂಡಿತರ ಅಮೋಘವಾದ ಭಾಷಣವನ್ನು ೩ ಘಂಟೆಯವರೆಗೆ ಕೇಳಿ ಅವರ ವಿಮರ್ಶನಪದ್ಧತಿಯಿಂದ ಸಂತುಷ್ಟರಾಗಿ ಬಹಳವಾಗಿ ಶ್ಲಾಘಿಸಿದರು. ಆಂಧ್ರಸಾಹಿತ್ಯ ಪರಿಷತ್ತಿನ ಮೂಲಕ ಈ ವಿಧವಾದ ಸನ್ಮಾನವು ವೀರಶೈವವಿದ್ವಾಂಸರಿಗೆ ಮೊದಲನೆಯದೆಂದು ಹೇಳಬಹುದು.

ಪ್ರತ್ಯಕ್ಷದರ್ಶಿ

ಸೌಕರ್ಯದ ಯಾತ್ರೆಗಳು ! **ಚಾರ್ಜು ಬಹಳೇ ಸುಲಭ !!** **ಪ್ರಸಿದ್ಧ ಪುಣ್ಯಕ್ಷೇತ್ರಗಳು !!!**

ಉತ್ತರ ಮತ್ತು ದಕ್ಷಿಣ ಹಿಂದೂಸ್ಥಾನ ಮಹಾಯಾತ್ರಾಪ್ರವಾಸ

ಶ್ರೀ ಕಾಶೀರಾಮೇಶ್ವರ ಮಹಾ ಯಾತ್ರೆಯು

ಈ ಮೊದಲು ಮೂರುಸಾರೆ ಸ್ಪೆಶಲ್ ಟ್ರೇನಿನಿಂದ ಮತ್ತು ಸ್ಪೆಶಲ್ ಡಬ್ಬಿಗಳಿಂದ ೫೦೦ ಜನರ ಯಾತ್ರೆಯು ಸುಖವಾಗಿ ಮುಗಿಸಲ್ಪಟ್ಟು ಯಾತ್ರಿಕರಿಂದ ಬಹುಮಾನಪಡೆದಿದೆ.

ಖಾತ್ರಿಯಿಂದ ಹೊರಡುವ ೪ ನೇ ಸಾರೆಯ ಯಾತ್ರೆಯು.

ಈ ಯಾತ್ರೆಯು ಸ್ಪೆಶಲ್ ಟ್ರೇನಿನಿಂದ (ಅಥವಾ ಸ್ಪೆಶಲ್ ಡಬ್ಬಿಗಳಿಂದ) ತಾ|| ೨೯-೧೨-೩೫ನೇ ದಿವಸ ಹೊರಡುವದು ಬೆಳಗಾಂವ ಮತ್ತು ಮಿರಜ ಮೇಲಿಂದ ಹಾಯ್ದು ಕೆಳಗೆ ಬರೆದಂತೆ ಜರಗುವುದು:

ಕ್ಷೇತ್ರಗಳು	ತಾರೀಖು	ಕ್ಷೇತ್ರಗಳು	ತಾರೀಖು	ಕ್ಷೇತ್ರಗಳು	ತಾರೀಖು	ಕ್ಷೇತ್ರಗಳು	ತಾರೀಖು
೧ ಪಂಢರಪುರ	೩೦ ಡಿಸೆಂಬರ್	೧೪ ಗೋಕುಲ	,,	೨೭ ಸಾರನಾಥ	,,	೪೦ ಮಧುರೆ (ಸುಂದರೇಶ್ವರಮೀನಾಕ್ಷಿ)	೫
೨ ನಾಸಿಕ	೩೧-೧ ಜನವರಿ	೧೫ ಗೋವರ್ಧನ	,,	೨೮ ವ್ಯಾಸಕಾಶೀ	,,	೪೧ ರಾಮೇಶ್ವರ (ಜ್ಯೋತಿರ್ಲಿಂಗ)	೬-೭ ೮
೩ ತ್ರ್ಯಂಬಕೇಶ್ವರ (ಜ್ಯೋತಿರ್ಲಿಂಗ)		೧೬ ದಿಲ್ಲಿ	೧೨-೧೩	೨೯ ಗಯಾ	೨೫-೨೬	೪೨ ಧನುಷ್ಕೋಟಿ (ಸೇತುಸ್ನಾನ)	,,
೪ ಪಂಚವಟಿ	,,	೧೭ ಹಸ್ತಿನಾವತಿ	,,	೩೦ ಪಾರ್ಶ್ವನಾಥ (ಸಮ್ಮೇದಶಿಖರ)	,,	೪೩ ತ್ರಿಚನಾಪಳ್ಳಿ (ಜಂಬುಕೇಶ್ವರ)	೯
೫ ಮುಂಬಯಿ	೨-೩-೪	೧೮ ಇಂದ್ರಪ್ರಸ್ಥ	,,	೩೧ ಕಲಕತ್ತಾ (ಕಾಲೀಘಾಟ)	೨೭-೨೮ ೨೯	೪೪ ಶ್ರೀರಂಗ	,,
೬ ಬಡೋದ	೫	೧೯ ಹರದ್ವಾರ (ಕೈಲಾಸಗಂಗಾ)	೧೪ ೧೫	೩೨ ಜಗನ್ನಾಥಪುರಿ (ಸಮುದ್ರಸ್ನಾನ)	೩೦	೪೫ ಬೆಂಗಳೂರು	೧೦
೭ ಮಾತೃಗಯಾ	,,	೨೦ ಋಷಿಕೇಶ	,,	೩೩ ಗೋದಾವರಿ	೩೧-೧ ಫೆಬ್ರವರಿ	೪೬ ಮೈಸೂರು	೧೧-೧೨-೧೩
೮ ಉಜ್ಜಯಿನಿ (ಜ್ಯೋತಿರ್ಲಿಂಗ)	೬-೭	೨೧ ಲಕ್ಷ್ಮಣಝೂಲಾ	,,	೩೪ ರಾಜಮಹೇಂದ್ರಿ	,,	೪೭ ಕನ್ನಂಬಾಡಿ	,,
೯ ಓಂಕಾರಮಾಂಧಾತ (ಜ್ಯೋತಿರ್ಲಿಂಗ)		೨೨ ಲಖನೌ	೧೬	೩೫ ಮದ್ರಾಸ್	೨-೩	೪೮ ಚಾಮುಂಡಿಬೆಟ್ಟ (ಶಕ್ತಿಪೀಠ)	,,
೧೦ ಆಗ್ರಾ	೮-೯	೨೩ ಅಯೋಧ್ಯೆ	೧೭	೩೬ ಚೆಂಗಲಪೇಟೆ (ಪಕ್ಷಿತೀರ್ಥ)	,,	೪೯ ಶ್ರೀರಂಗಪಟ್ಟಣ	,,
೧೧ ಸತ್ತೆ (ಫತೇಪುರಸಿಕ್ರಿ)	,,	೨೪ ಪ್ರಯಾಗ (ತ್ರಿವೇಣೀಸಂಗಮಸ್ನಾನ)		೩೭ ಶಿವಕಾಂಚಿ (ಪೃಥ್ವೀಲಿಂಗ)	೪	೫೦ ಪ್ರಣವಗೋಳ (ಪ್ರಣವಕ್ಷೇತ್ರ)	,,
೧೨ ಮಥುರಾ	೧೦-೧೧	೨೫ ಅಲಹಾಬಾದ	೧೮-೧೯	೩೮ ವಿಷ್ಣುಕಾಂಚಿ	,,	೫೧ ಹುಬ್ಬಳ್ಳಿ	೧೪
೧೩ ಬೃಂದಾವನ	,,	೨೬ ಶ್ರೀಕಾಶೀಕ್ಷೇತ್ರ (ಜ್ಯೋತಿರ್ಲಿಂಗ)	೨೦-೨೧-೨೨-೨೩-೨೪	೩೯ ಚಿದಂಬರಂ (ಆಕಾಶಲಿಂಗ)		೫೨ ಬೆಳಗಾಂವ	,,

ಈ ಎಲ್ಲ ಪುಣ್ಯಸ್ಥಳಗಳನ್ನು ಸುತ್ತುವರೆದು ತಾರೀಖು ೧೪-೨-೩೬ ನೇ ಇಸ್ವಿ ದಿವಸ ಟ್ರೇನು ಬೆಳಗಾಂವ ಪಟ್ಟಣಕ್ಕೆ ಬಂದು ಸೇರುವದು

ಮೇಲಿನ ಪ್ರೋಗ್ರಾಮಿನಲ್ಲಿ ತಾರೀಖುಗಳನ್ನು ಬರೆದ ಊರುಗಳಲ್ಲಿ ಮಾತ್ರ ಟ್ರೇನು ನಿಂತುಬಿಡುವುದು. ಉಳಿದ ದಿವಸಗಳ ಯಾತ್ರೆಯನ್ನು ಅದೇ ಮುಕ್ಕಾಮಿನಿಂದ ಯಾತ್ರಿಕರು ತಮ್ಮ ಸ್ವಂತ ಖರ್ಚಿನಿಂದ ಮಾಡಿಕೊಳ್ಳತಕ್ಕದ್ದು ಟ್ರೇನಿನಲ್ಲಿ (ಅಥವಾ ಸ್ಪೆಶಲ್ ಡಬ್ಬಿಗಳಲ್ಲಿ) ಒಬ್ಬರ ಒಂದು ಟಿಕೇಟಿನ ಖರ್ಚಿನಲ್ಲಿ ಇಬ್ಬರ ಸ್ಥಳವು (ಅಂದರೆ ಮೂರು ಅಂತಸ್ತಿನ ಡಬ್ಬಿಗಳಲ್ಲಿ ಒಂದು ಬ್ಯಾಂಕ ಒಬ್ಬರಿಗೆ) ಕೊಡಲ್ಪಡುವುದು. ಕುರುಡವಾಡಿಯಿಂದ

ಸೆಕಂಡ್‌ಕ್ಲಾಸ್ ೩೧೦ ರೂ ಥರ್ಡ್‌ಕ್ಲಾಸ್ ೧೪೦ ರೂ ಮಕ್ಕಳಿಗೆ ಅರ್ಧಚಾರ್ಜು

ಟಿಕೇಟು ಪಡೆಯುವರೀತಿ :— ೨೫ರೂ ಅಡ್ವಾನ್ಸ ಕಳಿಸಿದಲ್ಲಿ ಅವರ ಹೆಸರಿಗೆ ಟಿಕೇಟು ಕಳಿಸಲ್ಪಡುವದು ಉಳಿದ ಹಣವನ್ನು ಗಾಡಿ ಹತ್ತುವಾಗ ತಪ್ಪದೆ ಕೊಡತಕ್ಕದ್ದು.

ಭೋಜನ :— ಸ್ಮಾರ್ತಾದಿಗಳಿಗೂ, ವೀರಶೈವರಿಗೂ ಅಡಿಗೆಯವರಿಂದ ಪ್ರತ್ಯೇಕವಾಗಿ ಆಯಾಯ ಧರ್ಮಪದ್ಧತಿಯಂತೆ ಆರಿಸಿಕೊಂಡ ಸ್ಥಳದಲ್ಲಿ ಭೋಜನದ ವ್ಯವಸ್ಥೆ ಇದ್ದು ದಿನದಲ್ಲಿ ಮಧ್ಯಾಹ್ನದ ಊಟವು ಚಪಾತಿ, ಜೋಳ, ಸಕ್ಕರಿ, ಪಲ್ಯ, ಅನ್ನ, ಸಾರು, ಹಾಲು, ತುಪ್ಪಗಳಿಂದ ಕೂಡಿದ್ದು, ರಾತ್ರಿಯ ಊಟವು ಅನ್ನ, ಸಾರು, ಹಾಲು, ತುಪ್ಪಗಳಿಂದ ಕೂಡಿರುತ್ತದೆ. ಪ್ರವಾಸದ ೪೫ ದಿವಸಗಳ ಊಟದ ಚಾರ್ಜು ೩೫ ರೂ ಗಳು ಮಾತ್ರ ಪ್ರವಾಸದಲ್ಲಿ ಊಟದ ಗೈರಹಾಜರಿ ಹಿಡಿಯುವದಿಲ್ಲ ಕಂಪನಿಯಲ್ಲಿ ಆಕಸ್ಮಿಕವಾಗಿ ಬರುವ ಅಡಚಣೆಗಳಿಂದ ಊಟ ತಡವಾದಲ್ಲಿ ಅಥವಾ ಊಟ ಹೆಚ್ಚು ಕಡಿಮೆಯಾದಲ್ಲಿ ಊಟಮಾಡುವವರ ಯಾವ ತಕರಾರುಗಳನ್ನೂ ಕೇಳಲಿಕ್ಕಿಲ

ಪ್ರವಾಸ (ಪರಸ್ಥಳ) ವು ಕೇವಲ ಅಡಚಣೆಗಳುಳ್ಳದ್ದೇಯಿರುವದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ ಅದ್ದರಿಂದ ಶಾಂತ ಹಾಗೂ ಸಹ್ಯಾನೀತಿಯಿಂದ ವರ್ತಿಸಿ ಧರ್ಮಕಾರ್ಯಗಳ ಕಡೆಗೆ ದೃಷ್ಟಿಯನ್ನಿಟ್ಟು ಕ್ಷೇತ್ರಕಾರ್ಯಗಳನ್ನು ಮಾಡುವದರಲ್ಲಿಯೂ ನೋಡತಕ್ಕ ಸ್ಥಳಗಳನ್ನು ನೋಡುವದರಲ್ಲಿಯೂ ತೊಡಗಿರುವದು ಪ್ರತಿಯೊಬ್ಬ ಯಾತ್ರಿಕನ ಮುಖ್ಯಕರ್ತವ್ಯವಾಗಿರುತ್ತದೆ. ಟ್ರೇನು ಹೊರಡುವ ತಾರೀಖಿಗೆ ಒಂದುವಾರದ ಮೊದಲು ಪ್ರೋಗ್ರಾಮಪತ್ರಿಕೆಗಳು ಯಾತ್ರಿಕರಿಗೆ ಕಳಿಸಲ್ಪಡುವವು

ಮೇಲ್ಕಾಣಿಸಿದ ಪ್ರೋಗ್ರಾಮಿನಲ್ಲಿಯೂ, ಏರ್ಪಾಡುಗಳಲ್ಲಿಯೂ ಹೆಚ್ಚು ಕಡಿಮೆಮಾಡಲಿಕ್ಕೆ ಕಂಪನಿಯವರಿಗೆ ಪೂರ್ಣಸ್ವತಂತ್ರವಿದ್ದಿದೆ ಟ್ರೇನಿಗೆ ಸಾಕಷ್ಟುಜನರು ಬರದಿದ್ದಲ್ಲಿ ಸ್ಪೆಶಲ್ ಡಬ್ಬಿಗಳು ಹೊರಡುವ ಏರ್ಪಾಡಾಗುವದು. ಈ ಡಬ್ಬಿಗಳು ಬರಹೋಗುವ ಗಾಡಿಗಳಿಂದ ಒಯ್ಯಲ್ಪಡುವವು

ಲಂಕಾಕ್ಕೆ ಹಡಗದ ಏರ್ಪಾಡು ಮಾಡಿದೆ. ರಿಟರ್ನ್ ಟಿಕೇಟು ೩೫ ರೂ. ಗಳು ೩ ದಿವಸಗಳಲ್ಲಿ ಲಂಕಾಕ್ಕೆ ಹೋಗತಕ್ಕವರು ಗಾಡಿ ಹೊರಡುವ ಒಂದು ವಾರ ಮೊದಲು ತಿಳಿಸತಕ್ಕದ್ದು

ಯಾತ್ರಾಸ್ಪೆಶಲ್ ಟ್ರೇನು ಮತ್ತು ಹಡಗಗಳ ವಿಷಯದಲ್ಲಿ ಹೆಚ್ಚಿನ ಮಾಹಿತಿಗಾಗಿ ಪತ್ರವ್ಯವಹಾರಮಾಡತಕ್ಕದ್ದು.

ಮ್ಯಾನೇಜರ್,

ಆಫೀಸ್—**ಜಮಖಂಡಿ ರಸ್ತೆ ಮೋಟಾರ ಸ್ಟ್ಯಾಂಡ್ ಹತ್ತಿರ ಬಸ್ಟಿಟ್ಟಿ, M. S. M. Ry.**

ಟ್ರಾವಲಿಂಗ್ ಮ್ಯಾನೇಜರ್ **ಆರ್. ಟಿ. ಶೀಲಗಾರ, ಹುಬ್ಬಳ್ಳಿ.**

ಶ್ರೀ ಶಿವಾನಂದ ಕಂಪನಿ ಬಸ್ಟಿಟ್ಟಿ, ಎಸ್. ವ್ಹಿ. ಥಾಂಗ್, ಬಸ್ಟಿಟ್ಟಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಭಕ್ತರು ಅಮೃತಶಿಲೆಯಿಂದ ಕಟ್ಟಿಸಿದ ಫೋಟೋ ಸೈಜು ೩೦\೧೯ ಪಿಲಿಗಳ್ಳೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ಮಹರ್ಷಿ ವ್ಯಾಸ ಮಹರ್ಷಿ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦\೧೯ ಪಿಲಿ	೦—೧—೬
ಸದ್ಗುರು ಶ್ರೀ ರಾಜಯೋಗಿಶಿವಾನಂದರೆಂಬ ಉಪಾಧಿಯುಳ್ಳ ಅಚಾರ್ಯರು ಬಿ ವರಲ್ಲಿರುವ ಫೋಟೋ ಸೈಜು ೧೯\೧೦ ಪಿಲಿ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೯\೧೦ ಪಿಲಿಗಳ್ಳೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦\೯ ಪಿಲಿಗಳ್ಳೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಲಿಂಗಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಕಟ್ಟುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಲಂಕಾಪಟ್ಟಣದಲ್ಲಿ ಮೂರು ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಗಳ್ಳೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತಿರುವ ೨೮ರ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಪಿಲಿಗಳ್ಳೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಗಳ್ಳೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಗಳ್ಳೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಕಂಗೊಳಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಿಪಾಕಿಯಲ್ಲಿ ನೆರೆದಿದ್ದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಯ ಮಹೋತ್ಸವದ ಫೋಟೋ	೦—೦—೯

ಸೂಚನೆ :—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ನಶ್ಯದ ಪುಡಿಯಿಂ ಸ್ಪಷ್ಟವಾಗುವ ವ್ಯಾಧಿಗಳು ಯಾವವೆಂ ದರೆ.—ಪೀನಸಿ, ಒಂ ತಲೆನೋವು, ತಲೆ ಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾ

(Registered Trade Mark)

ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಪ್ರಾಪ್ತವಾದ ವ್ಯಾಧಿಗಳನ್ನು ಸ್ಪಷ್ಟಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಿಲ್ಲೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿ ಸುತ್ತಾರೆ ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾದೀತು

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦ ೪ ...

ಡಜನ್ ಒಂದಕ್ಕೆ ಕ್ರಯ ರೂ ೩-೮-೦. ವಿ. ಪಿ. ೮ ಆ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[31] ಪೋ ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆ
ಪರಶಿವಲಿಂಗಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಗುರುಸ್ವರೂಪಸ್ತವನದೀಪಿಕೆ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತವಿಚಾರಮೀಮಾಂಸಾ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೪ ಆಣೆ
ವೈದಿಕಸಾಹಿತ್ಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೩ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಯವರ ಭಾಷಣವು (ತೆಲುಗು)	೮ ಆ...
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Sri Kashinatha Shastri (*English*)	12 As
ವೀರಶೈವರತ್ನ (೪ನೆಯ ಆವೃತ್ತಿ)	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮೋಕ್ತಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಟೀಕಾಸಹಿತ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ರೂ.
लिंगधारणचंद्रिका (संस्कृत)	२ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಾಪಕರಾದ ವೇ|| ಬ್ರ|| ಪಂಡಿತ ಶಿವ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಭವಾಶ್ಚರಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ನೇ ಸೆಪ್ಟಂಬರ್ ೧೯೩೫ [ಸಂಚಿಕೆ ೨೦

ಶ್ರೀ ರೇಣುಕಾಲಯ.

ಸೊಲ್ಲಾಪುರ ತಾಲೂಕು ಪೈಕಿ ಲಿಂಬಿಚಿಂಚೋಳಿಯಲ್ಲಿ ಈಗ್ಗೆ ೧ ತಿಂಗಳಿಂದ ಶ್ರೀ ಜಗದ್ಗುರು ರೇವಣಸಿದ್ಧೇಶ್ವರಪುರಾಣವನ್ನು ಅಲ್ಲಮಪ್ರಭು ಅಲೂರು ಇವರು ಬಹು ಮನೋಹರವಾಗಿ ಹೇಳುತ್ತಿದ್ದು, ಗಂಗಾವತಿ ತಾಲೂಕ ಪೈಕಿ ಹೊಸಗೇರಿ ಹಿರೇಮಠದ ಶ್ರೀ ರುದ್ರಮುನಿ ಇವರು ಸಂಗೀತದಿಂದ ಅತ್ಯುತ್ತಮವಾಗಿ ಓದುತ್ತಿರುವರು. ಶ್ರೀ ಗುರುಸಿದ್ಧಪ್ಪ ರ್ಯಾವಳ್ ಇವರು ತಮ್ಮ ತೋಟದಲ್ಲಿರುವ ಬಿಲ್ವವನದಲ್ಲಿ ಒಂದು ಭವ್ಯವಾದ ಆಶ್ರಮವನ್ನು ನಿರ್ಮಿಸಿ ಅದರ ಶಾಂತಿಯನ್ನು ತಾ|| ೧೫-೯-೩೫ ರಲ್ಲಿ ಶ್ರೀ ಹೋಟಗಿ ಶ್ರೀಗಳವರಿಂದ ಮಾಡಿಸಿದರು. ಆಗ್ಗೆ ಹೋಟಗಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಲ್ಲಮಪ್ರಭು ಅಲೂರು ಇವರ ವ್ಯಾಖ್ಯಾನವಾಯಿತು. ಅಧ್ಯಕ್ಷರು ಆ ಆಶ್ರಮಕ್ಕೆ 'ಶ್ರೀ ರೇಣುಕಾಲಯ' ವೆಂಬ ಅಭಿಧಾನವನ್ನಿಟ್ಟರು. ಈ ಕಾರ್ಯದಲ್ಲಿ ತುಲಶಪ್ಪ ಕಲಶೆಟ್ಟಿ, ಭೀಮಶಾ ಕಲಶೆಟ್ಟಿ, ಗುರುಲಿಂಗ ಪಡೋಳೆ ಶೆಟ್ಟಿ ಇವರು ವಿಶೇಷ ಪ್ರಯತ್ನಪಟ್ಟರು. ಈ ಆಶ್ರಮದ ಸರ್ವ ಶ್ರೇಯಸ್ಸು ಶ್ರೀ ಪಾಂಡಯ್ಯನವರಿಗೆ ಸೇರಿರುತ್ತದೆ.

ರೇವಣಯ್ಯಸ್ವಾಮಿ, ಲಿಂಬಿಚಿಂಚೋಳಿ

ತ್ರಿವೇಣೀಸಂಗಮ, ದಿಂಡೂರು

ಸೊಲ್ಲಾಪುರ ತಾಲೂಕಿಗೆ ಸೇರಿದ ದಿಂಡೂರಿನಲ್ಲಿರುವ ಶ್ರೀ ನಿಜಗುಣಸ್ವಾಮಿಗಳ ಮಠದಲ್ಲಿ ಶ್ರೀ ಜಗದ್ಗುರು ರೇಣುಕವಿಜಯ ಪುರಾಣಪಠನವು, ಗುರುಪಾದಪೂಜೆಯೂ, ಹೋಟಗಿ ಶ್ರೀಗಳವರ ಶಿವಲಿಂಗಾನುಷ್ಠಾನವೂ ಒಳ್ಳೇ ಉತ್ತಮರೀತಿಯಿಂದ ಜರುಗಿದವೆಂದು ತಿಳಿಸಲು ಆನಂದವೆನಿಸುತ್ತದೆ. ಈ ತ್ರಿವೇಣೀಸಂಗಮದಲ್ಲಿ ಪಾಲ್ಗೊಂಡ ಜನರ ಭಾಗ್ಯಕ್ಕೆ ಎಣೆಯೇ ಇಲ್ಲವು. ಧನ್ಯ ಧನ್ಯ ದಿಂಡೂರವಾಸಿಗಳೇ ಧನ್ಯರು! ದಿಂಡೂರು ಗ್ರಾಮವು ಅತ್ಯಂತ ಚಿಕ್ಕದಾಗಿದ್ದು, ಕಡಿಮೆ ಜನಸಂಖ್ಯೆಯುಳ್ಳದ್ದಾಗಿರುವುದು ಅದರಲ್ಲಿ ಕೂಡ ವೀರಶೈವರ ವಸತಿಯು ಕಡಿಮೆ. ಈ ಗ್ರಾಮದಲ್ಲಿ ಶ್ರೀ ನಿಜಗುಣಸ್ವಾಮಿಗಳದೊಂದೇ ಮುಖ್ಯಮಠವಿರುತ್ತದೆ. ಈ ಮಠವು ಶ್ರೀ ಜಗದ್ಗುರು ಪಂಡಿತಾರಾಧ್ಯರ ಶಾಖೆಗೆ ಸೇರಿದ್ದು ಪವಿತ್ರ ಗುರುವಂಶದ ಮಠವಾಗಿರುತ್ತದೆ. ಪೂರ್ವದಿಂದಲೂ ಈ ಮಠದಲ್ಲಿ ಪಟ್ಟಾಧಿಕಾರವಿದ್ದು ಈಗ ೩ ತಲೆಗಳಿಂದ ಅಧಿಕಾರ ಆಗುವುದಿಲ್ಲ. ಈ ಮಠದಲ್ಲಿ ಯಾವಾಗಲೂ ದಾಸೋಹವು ನಡೆಯುತ್ತ ಬಂದಿದೆ. ಈಗಿನ ನಿಜಗುಣಸ್ವಾಮಿಗಳು ಒಳ್ಳೇ ಉದಾರಿಗಳೂ ಸ್ವಧರ್ಮಪ್ರೇಮಿಗಳೂ, ಸದಾಚಾರನಿರತರೂ ಆಗಿರುವಂತೆ ಅವರ ಧರ್ಮಪತ್ನಿಯವರಾದ ಪಾರ್ವತೀಬಾಯಿಯವರೂ ಕೂಡ ಅವರಿಗೆ ಅನುಗುಣವಾಗಿಯೇ ಇದ್ದು ಸಾಧ್ವೀಶಿರೋಮಣಿಗಳಾಗಿದ್ದಾರೆ. ಅವರಿಗೆ ಒಳ್ಳೆ ಶಿಷ್ಯವೃಂದವು ಈ ದಿಂಡೂರಲ್ಲಿಯುತ್ತದೆ. ಈ ಊರಲ್ಲಿರುವ ಶಿಷ್ಯರು ಯಾವ ಹೊಸ ಪದಾರ್ಥವನ್ನಾಗಲಿ ಗುರುಗಳಿಗೆ ಅರ್ಪಿಸದೆ ತಾವು ಸ್ವೀಕರಿಸುವದಿಲ್ಲ. ಶ್ರೀ ಧೊಂಡಪ್ಪ ಪಾಟೀಲ, ಸಿದ್ಧರಾಮಪ್ಪ ಹುಳ್ಳಿ, ಸಿದ್ದಪ್ಪ ಬಿಜ್ಜರ್ಗಿ ಇವರು ಗುರುವಿನ ವಿಷಯದಲ್ಲಿ ತಮ್ಮ ಪ್ರಾಣವನ್ನೇ ಕೊಡಲು ಸಿದ್ಧರಿದ್ದಾರೆ. ಇವರೇ ನಿಜವಾದ ಗುರುಭಕ್ತರು!

ಈ ಗ್ರಾಮದಲ್ಲಿ ಶ್ರೀ ನಿಜಗುಣಸ್ವಾಮಿಗಳವರ ಪ್ರಯತ್ನದಿಂದ "ಶ್ರೀ ಜಗದ್ಗುರು ಪಂಚಾಚಾರ್ಯಭಜನಾ ಸಂಘ" ವು ಸ್ಥಾಪಿತವಾಗಿ ೮-೧೦ ತಿಂಗಳುಗಳಲ್ಲಿಯೇ ಪವಿತ್ರ ಪ್ರಸಿದ್ಧಿಯನ್ನು ಹೊಂದಿ ೭ ಪಾರಿತೋಷಿಕ ಬಹುಮಾನಗಳನ್ನು ಪಡೆದಿದೆ. ನಿಜಗುಣಸ್ವಾಮಿಗಳು ಈ ಗ್ರಾಮದ ಪರವಾಗಿ ಹೋಟಗಿ ಶ್ರೀಗಳಿಗೆ [illegible] ಮಾಡಿರುತ್ತಾರೆ.

ಶ್ರೀ ಜಗದ್ಗುರು ರೇಣುಕವಿಜಯ ಪುರಾಣ.

ಮೊದಲೇ ಧರ್ಮಪ್ರಿಯರಾದ ನಿಜಗುಣಸ್ವಾಮಿಗಳ ಮನಸ್ಸಿನಲ್ಲಿ ಈ ವರ್ಷ ಪುರಾಣವನ್ನು ಪ್ರಾರಂಭಿಸಬೇಕೆಂದು ಇಚ್ಛೆಯುಂಟಾಗಲು, ಅದಕ್ಕೆ ಶ್ರೀಮಂತರಾದ ಸಂಗಯ್ಯಸ್ವಾಮಿಗಳವರ ಸಹಾಯವು ದೊರೆಯಿತು. ಭಕ್ತವೃಂದವು ಗುರುಸೇವೆಯನ್ನು ಮಾಡಿ ಧನ್ಯವಾಗಲಿಕ್ಕೆ ಸಿದ್ಧವಾಯಿತು. ಹೇಳುವದೇನು? ಸರ್ವ ಸಿದ್ಧತೆಯ ಸಮಯದಲ್ಲಿ ವಿಘ್ನಸಂತೋಷಿಗಳು ವಿಘ್ನವನ್ನುಂಟು ಮಾಡಹತ್ತಿದರು. ಆ ಸಮಯದಲ್ಲಿ ಹಾಲುಮತದವರಾದ ತೋಟಪ್ಪ ಮತ್ತು ಶೀಲವಂತಪ್ಪ ಎಂಬ ಇಬ್ಬರು ಶ್ರೀಮಂತರು ಎಷ್ಟೇ ಹಣವು ಖರ್ಚಾಗಲಿ, ಎಷ್ಟೇ ಶರೀರಕ್ಕೆ ತ್ರಾಸಾಗಲಿ ದುಡಿಯಲು ಹಣವನ್ನು ಕೊಡಲು ನಾವು ಸಿದ್ಧರಿದ್ದೇವೆ ಎಂದು ವಾಗ್ದಾನ ಮಾಡಿದ್ದರಿಂದಾಗಿ ಈ ದಿವಸ ಮೊದಲ್ಗೊಂಡು ಈ ಪುರಾಣಸಮಾಪ್ತಿಯವರೆಗೆ ನಮ್ಮ ಗೃಹಕಾರ್ಯವನ್ನೇ ನೋಡುವದಿಲ್ಲೆಂದು ನುಡಿದು ಬದ್ಧಕಂಕಣರಾಗಿ ಈ ಕಾರ್ಯವನ್ನು ನೆರವೇರಿಸಿದರು. ಶ್ರೇಯಸ್ಸೆಲ್ಲಾ ತೋಟಪ್ಪ ಮತ್ತು ಶೀಲವಂತಪ್ಪ ಇವರದೇ ಎನ್ನುವದಕ್ಕೆ ಯಾವ ಆತಂಕವೂ ಇಲ್ಲ.

ದಿಂಡೂರು ಗ್ರಾಮದ ಸರ್ವಜಾತೀಯ ಭಕ್ತರ ಪ್ರಾರ್ಥನೆಯ ಮೇರೆಗೆ ಹೋಟಗಿ ಶ್ರೀಗಳು ಆಗಮಿಸಿ ಶ್ರಾವಣ ಶುದ್ಧ ೧ ಗುರುವಾರದಿಂದ 'ಶ್ರೀ ರೇಣುಕವಿಜಯ' ಮಹಾಪುರಾಣವನ್ನು ಸಾಯಂಕಾಲ ೭ ಘಂಟೆಗೆ ಪ್ರಾರಂಭಿಸಿ ೧೦|| ಘಂಟೆಗೆ ಮುಗಿಸುತ್ತಿದ್ದರು. ಈ ಪುರಾಣಶ್ರವಣಕ್ಕಾಗಿ ಸುತ್ತಮುತ್ತ ೧೦ ೨೦ ಹಳ್ಳಿಗಳಿಂದ ಜನರು ಬರುತ್ತಿದ್ದರು. ಸೊಲ್ಲಾಪುರ ಅಕ್ಕಲಕೋಟ ವಳಸಂಗ ನಗರಗಳಿಂದ ಬಂದ ವಿದ್ವಾಂಸರು, ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಪ್ರಯತ್ನಕ್ಕೆ ತಲೆದೂಗುತ್ತಿದ್ದರು. ಅಕ್ಕಲಕೋಟೆ ಸಂಸ್ಥಾನದಲ್ಲಿ ಪ್ರಸಿದ್ಧ ವೈದ್ಯ ಮನೆತನದವರೂ ಪವಿತ್ರಮಹೇಶ್ವರವಂಶಜರೂ ಗುರುಭಕ್ತಿಪರಾಯಣರೂ ಆದ ಶ್ರೀ ಸದಾಶಿವಸ್ವಾಮಿ ಪವನೆ, ಪ್ರಸಿದ್ಧ ದೇಶಭಕ್ತರೂ ಆಗರ್ಭಶ್ರೀಮಂತರೂ ಆದ ರಾಚಪ್ಪ ಮೇಲಕೇರಿ ವಳಸಂಗ, ಕುಬೇರನಂತೆ ಸಂಪತ್ತುಳ್ಳ ಗುರಪ್ಪ ಮಜ್ಜಗಿ, ಸೊಲ್ಲಾಪುರ ಶ್ರೀ ಸಿದ್ಧೇಶ್ವರ ಪ್ರಾಸಾದಿಕ ಮಂಡಳಿ, ಶ್ರೀ|| ಸಾ|| ಭಾಗೀರಥೀಬಾಯಿ ಕಟಾರ ಇತ್ಯಾದಿ ಪ್ರಸಿದ್ಧ ಜನರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಪ್ರತಿದಿವಸ ಪರಗ್ರಾಮಗಳಿಂದ ೧೦೦ ಜನಕ್ಕಿಂತಲೂ ಹೆಚ್ಚು ಜನರು ಆಗಮಿಸುತ್ತಿದ್ದರು. ಬರುಹೋಗುವ ಜನರ ವ್ಯವಸ್ಥೆಯನ್ನು ದಿಂಡೂರು ಭಕ್ತರು ಬಹಳೇ ಚನ್ನಾಗಿ ಮಾಡುತ್ತಿದ್ದರು. ಪುರಾಣಕ್ಕಾಗಿ ಭವ್ಯವಾದ ಮಂಟಪವನ್ನು ರಚಿಸಿದ್ದರು.

ಶಿವಲಿಂಗಾನುಷ್ಠಾನ.

ಸಾರ್ವಜನಿಕರ ಇಚ್ಛೆಯಂತೆ ಈ ವರ್ಷವೂ ಹೋಟಗಿ 'ಶ್ರೀ ಬಾಲಶಾಸ್ತ್ರಿ' ಗಳು ತಮ್ಮ ತಪೋನುಷ್ಠಾನವನ್ನು ನೆರವೇರಿಸಿದರು. ಸದರಿ ಶ್ರೀಗಳು ರಾತ್ರಿ ೨ ಘಂಟೆಗೆ ಸ್ನಾನವಂಗೈದು ಅನುಷ್ಠಾನವನ್ನು ಆರಂಭಿಸಿ ಪ್ರಾತಃಕಾಲ ೬ ಘಂಟೆಗೆ ಮುಗಿಸಿ, ಪುನಃ ೧೧ ಘಂಟೆಗೆ ಸ್ನಾನಮಾಡಿ ಶಿವಲಿಂಗಾನುಷ್ಠಾನವನ್ನು ೪ ಘಂಟೆಗೆ ಮುಗಿಸಿ ೧ ಹಿಡಿ ಶೇಂಗಾದ ಕಾಳುಗಳನ್ನು ಮಾತ್ರ ಸ್ವೀಕರಿಸುತ್ತಿದ್ದರು.

ಪಾದಪೂಜೆ.

ಭಕ್ತರ ಅಪೇಕ್ಷೆಯಂತೆ ಪ್ರಾತಃಕಾಲ ೭ ಘಂಟೆಗೆ ಶ್ರೀ ಹೋಟಗಿ ಶ್ರೀಗಳವರ ಪಾದಪೂಜೆಯು ನಡೆದು ೧೦|| ಘಂಟೆಗೆ ಮುಗಿಯುತ್ತಿತ್ತು. ಈ ಪ್ರಕಾರ ೪೦ ದಿವಸಗಳವರೆಗೆ ನಡೆದು ೪೧ ನೆಯ ದಿವಸ ಭಾದ್ರಪದ ಶು|| ೧೧ ದಿವಸ ಹೋಟಗಿ ಶ್ರೀಗಳವರ ಮಹಾಪಾದಪೂಜೆಯು ಆಯಿತು. ಸಹಸ್ರ ದೀಪ, ಸಹಸ್ರಾರತಿಗಳಿಂದ ಒಳ್ಳೇ ಮನೋಹರವಾಗಿ ಜರುಗಿತು. ಪ್ರತಿದಿವಸ ಶ್ರೀ ಧೊಂಡಪ್ಪ ಪಾಟೀಲ ಇವರು ಪಾದಪೂಜೆಯನ್ನು ನೆರವೇರಿಸುತ್ತಿದ್ದರು.

ಈ ಪ್ರಕಾರವಾದ ತ್ರಿವೇಣೀಸಂಗಮವನ್ನು ದಿಂಡೂರು ಭಕ್ತರು ಒಳ್ಳೇ ಭಕ್ತಿಯಿಂದ ನೆರವೇರಿಸಿ ಭಾದ್ರಪದ ಶುದ್ಧ ೧೧ ದಿವಸ ಶ್ರೀ ಜಗದ್ಗುರು ರೇಣುಕರ ಇಷ್ಟಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕಾದಿಗಳನ್ನೂ ಗಣಾರಾಧನೆಯನ್ನೂ ನೆರವೇರಿಸಿ ಸಾಯಂಕಾಲ ೫ ಘಂಟೆಗೆ ಅಲಂಕೃತ ಪಲ್ಲಕ್ಕಿಯಲ್ಲಿ ಶ್ರೀ ರೇಣುಕರ ಮೆರವಣಿಗೆಯು ಹೊರಟು ಶ್ರೀ ನಾಗನಾಥದೇವಾಲಯಕ್ಕೆ ಮುಟ್ಟಿ ಅಲ್ಲಿ ಉತ್ಸವದ ಫೋಟೋ ತೆಗೆಯಲ್ಪಟ್ಟಿತು. ಹೋಟಗಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗುರುಸಿದ್ಧಪ್ಪ ಪರೀಕರ ರೇವಣಸಿದ್ಧಪ್ಪ ಮಾಲಿಂಗೆ ಸಿದ್ಧಪ್ಪ ಕಳಂತ್ರಿ ಇವರ ವ್ಯಾಖ್ಯಾನಗಳಾದವು. ಶ್ರೀ ಶಿವಲಿಂಗಪ್ಪ ಪಾಟೀಲ ಧೋತ್ರೀ ಇವರು ಬಿಸಂಗಜೀಬನ ಕಾಲದಲ್ಲಿ ಸ್ವಧರ್ಮಕ್ಕೆ ವಿಘ್ನಕ ವಿರೋಧಿಗಳು. ಸದಾ ನಮ್ಮನ್ನಾಳುವ ದಯಾಳು ಸರಕಾರದವರು ಸರ್ವಧರ್ಮದವರಿಗೂ ಯಾವ ಆತಂಕವನ್ನೂ ಮಾಡಿಲ್ಲ ಮಾಡುವದಿಲ್ಲ. ಆದ್ದರಿಂದ ನಮ್ಮ ವೀರಶೈವರೆಲ್ಲರೂ ತಮ್ಮ ಶಾಸ್ತ್ರಾನುಸಾರ ಗುರುಗಳಿಂದ ಶಿವದೀಕ್ಷೆಯಿಂದ ಪುನೀತರಾಗಬೇಕೆಂದು ಹೇಳಿದರು. ಅನಂತರ ಹೋಟಗಿ ಶ್ರೀಗಳವರು ಸಮಾರೋಪಭಾಷಣ ಮಾಡಿ ಬಂದ ಭಜನಾಸಂಘದವರಿಗೆಲ್ಲ ಪಾರಿತೋಷಕರೂಪದಿಂದ ವೀರಶೈವತತ್ವವೆಂಬ ಪಂ|| ಕಾಶೀನಾಥಶಾಸ್ತ್ರಿಗಳವರ ಹೃದ್ಗತವು ಬಹಿರಂಗದಲ್ಲಿ ಗ್ರಂಥರೂಪದಿಂದ ಪ್ರಕಾಶಿಸುವದನ್ನು ಹಂಚಿದರು. ಸರ್ವ ಭಜನಾಸಂಘದವರೂ 'ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜಯ' 'ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಾರಾಜಕೀ ಜಯ' 'ಪಂ|| ಕಾಶೀನಾಥಶಾಸ್ತ್ರೀಜೀಕೀ ಜಯ' 'ಬಾಲಶಾಸ್ತ್ರಿ ಚನ್ನವೀರಶಿವಾಚಾರ್ಯಜೀ ಕೀ ಜಯ' ಎಂದು ಜಯಘೋಷವನ್ನು ಮಾಡುತ್ತ ಮೆರವಣಿಗೆಯನ್ನು ಶ್ರೀ ನಿಜಗುಣಸ್ವಾಮಿಗಳವರ ಮಠಕ್ಕೆ ಮುಟ್ಟಿಸಿ ಮಂಗಳಾರತಿಯನ್ನು ಮಾಡಿ, ಶ್ರೀ ರೇಣುಕಪ್ರಸಾದವನ್ನು ಸ್ವೀಕರಿಸಿ ಆನಂದದಿಂದ ತಮ್ಮ ಗ್ರಾಮಗಳಿಗೆ ತೆರಳಿದರು.

ಈ ಪುರಾಣಸಮಾಪ್ತಿಗೆ ಶೀಘ್ರ ಚಪ್ಪಳಗಾಂವವಾಡೀ, ಬೋರೆಗಾಂವ ದೇವಂಬಿಜನವರಗ ಧೋತ್ರೀ ಮುಸ್ತಿ ಲಿಂಬಿಚಿಂಚೋಳಿ ವಡಗಾಂವ ಭಗನಹಳ್ಳಿ ಹೋಟಗಿ, ವಳಸಂಗ ರಾಮಪುರ ಸೊಲ್ಲಾಪುರ, ಅಕ್ಕಲಕೋಟೆ ಇತ್ಯಾದಿ ಗ್ರಾಮಗಳಿಂದ ೪ ಸಾವಿರಕ್ಕಿಂತಲೂ ಹೆಚ್ಚಿನ ಜನರು ಆಗಮಿಸಿದ್ದರು. ಈ ಕಾರ್ಯಕ್ಕೆ ಸಿಂದಖೇಡದ ಶ್ರೀಯುತ ಫಕೀರಯ್ಯಸ್ವಾಮಿಗಳು ೨ ಗ್ಯಾಸಬತ್ತಿಗಳನ್ನು ಪುಕ್ಕಟ್ಟೆಯಾಗಿ ಕೊಟ್ಟಿದ್ದರು. ಈ ಕಾರ್ಯವನ್ನು ಶ್ರೀ|| ವೇ|| ನಿಜಗುಣಸ್ವಾಮಿ ಹಿರೇಮಠ ಶ್ರೀ|| ವೇ|| ಸಂಗಯ್ಯಸ್ವಾಮಿ ಕೋರಗಿ, ರಾ|| ಧೊಂಡಪ್ಪ ಪಾಟೀಲ ಧೋಂಡಪ್ಪ ಪಾಟೀಲ ಸಿದ್ದಪ್ಪ ಬಿಜ್ಜರ್ಗಿ, ಸಿದ್ಧರಾಮಪ್ಪ ಹುಳ್ಳಿ, ಭೀಮಸೇನ ಶಿವಯೋಗಿ ಸಾತಪ್ಪ ಪಾಟೀಲ ದೊಡ್ಡಪ್ಪ ಹುಳ್ಳಿ, [illegible] ಬಸವಣ್ಣವಾರ ಚಂದ್ರಶೇಖರ ಬಿಜ್ಜರ್ಗಿ, ಧೊಂಡಪ್ಪ ಹುಳ್ಳಿ, ಅನುಬಸಪ್ಪ ಚಿಕಾಳೆ, ರಾಮಚಂದ್ರ ಚಿಕಾಳೆ, ರಾಮಚಂದ್ರ ವಡಗಾಂವಕರ ಭೀಮಣ್ಣ [illegible] ಕಾಶಪ್ಪ ಧಂಕಲಗಿ, ಭೀಮಾಶಂಕರ ದಾರಫಳೆ ಬಾಬೂರಾವ. ತೋಟಪ್ಪ ಮತ್ತು ಶೀಲವಂತಪ್ಪ ಮತ್ತು ವಾಡಿಯವರಾದ ಇವರು [illegible] ಇತ್ಯಾದಿ ಜನರ ವಿಶೇಷ ಪ್ರಯತ್ನದಿಂದ ಮಹಾಲಾಭದಾಯಕವಾಗಿದೆ. ಧನ್ಯ! ಧನ್ಯ!! ದಿಂಡೂರು ವೀರಶೈವರೇ ಧನ್ಯರು. ಲಿಂಬಿಚಿಂಚೋಳಿ ಶ್ರೀ ರೇವಣಸಿದ್ಧೇಶ್ವರ ಪಾಠಶಾಲಾ ಮುಖ್ಯರು, ಧೋತ್ರೀ ವೀರಶೈವಧರ್ಮಸುಧಾರಣಾಸಂಘದವರು ಪ್ರತ್ಯೇಕವಾಗಿ ಎರಡನೆಯ [illegible] ಬಂದವರು ಮೆರವಣಿಗೆಯು ವಿಶೇಷಶೋಭೆಯನ್ನು ಹೊಂದಿತು. ದಿಂಡೂರು ವೀರಶೈವ ಸ್ತ್ರೀಯರು [illegible] ಗುರುಭಕ್ತಿಯಲ್ಲಿ ಅಗ್ರೇಸರರಾಗಿದ್ದಾರೆ. ಈ [illegible] ೨ ರವಾಯಿಗಳು [illegible].

ಶ್ರೀ ವೀರಯ್ಯಸ್ವಾಮಿ, ಲಿಂಬಿಚಿಂಚೋಳಿ.
ಶ್ರೀ ರೇವಣಸಿದ್ಧೇಶ್ವರ ಪಾಠಶಾಲಾ, ಶಿಕ್ಷಕ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯರ ಪವಿತ್ರ

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳವರ ಸೇತ್ರದಲ್ಲಿ ಸ್ಥಾಪಿತವಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಕೃಪಾ ಪ್ರೋಷಿತ ಸಂಸ್ಕೃತ ಪಾಠಶಾಲೆಯ (ಕಾಲೇಜಿನ) ಸಂಬಂಧ

ಶ್ರೀ ಸಿದ್ಧಿವಿನಾಯಕಮೂರ್ತಿಯ ಮಂಗಲಮಹೋತ್ಸವವು

ಶ್ರೀಮಠದಲ್ಲಿ ಚತುರ್ಥಿ ದಿನ ನಡೆಯಿತು

ಆಸ್ತಿಕಮಹಾಶಯರೆ!

ಆರ್ಯಾವರ್ತಃ ಪುಣ್ಯಭೂಮಿಃ ಮಧ್ಯಂ ವಿಂಧ್ಯ ಹಿಮಾಗಯೋಃ, ಎಂಬ ಅಮರಸಿಂಹನ ವಾಕ್ಯಕ್ಕನುಸಾರವಾಗಿ [illegible]

[illegible]

ಸ್ಮೃತಿಗಳನ್ನು ಒಪ್ಪದವರು ಆಸ್ತಿಕರಲ್ಲವೆಂಬ ಆ ವಾಕ್ಯದಿಂದಲೇ [illegible]

[illegible]

ಹಾಗೆ ಅವರು ವರ್ತಿಸದಲ್ಲದೇ ಬೇರಾವ ಕಾರಣವೂ [illegible] ಸಾಂಪ್ರತಿಕಯುಗದಲ್ಲಿ ದೇಶವಿದೇಶಗಳ [illegible] ಇಲ್ಲದಿದ್ದರೆ ಆಗುವದೇ ಇಲ್ಲ. ನಮ್ಮ ಭಾರತೀಯರಿಗೆ [illegible] ಉದ್ಧಾರವಲ್ಲ ಬಹು ಕೌಶಲ, ಆದರೆ ಭಾರತೀಯ ಸಂಸ್ಕೃತಿಗಳನ್ನು ಇವರು ಎಂದೂ ಮರೆಯುವರು. [illegible]

[illegible]

ಅವನ್ನು ಕೆಲವರು ಬೇರೆಯಾಗಿ ವರ್ಣಿಸುವರು. ಅಂತೂ ಅವರ ಪ್ರವರ್ತನೆಯನ್ನು ನೋಡುವವರ್ಗೆ ಬದಲಾಗಿ ಅವನೊಬ್ಬನು ಅಸ್ತಿತ್ವಮಾನ್ಯನಾದ ಗಣ್ಯದೇವರೆಂದು ಹೇಳಿದರೆ ಸಾಕು. ಈ ಸಿದ್ಧಿವಿನಾಯಕವ್ರತವನ್ನು ವಾರ್ಷಿಕೋತ್ಸವಕ್ರಮಾನುಸಾರವಾಗಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳು ಸಂಸ್ಥೆಯ ಬಾಲಕ-ಬಾಲಕಿಯರ ಭಕ್ತಿವಿಶೇಷದಿಂದ ಸಹಾನುಭೂತಿಯನ್ನು ಹೊಂದಿ ಬಹುಜನರಿಂದ ನೆರವೇರಿಸಿದುದು ಕುಂಬಾಪ್ತಿಕರವಾದ ಸಂಗತಿಯಾಗಿದೆ. ವಿದ್ಯಾರ್ಥಿದೆಸೆಯು ಅತಿಥಿರೂಪವಾದ್ದರಿಂದ ಪವಿತ್ರವಾದುದಾಗಿರುವುದಲ್ಲದೆ ಜೀವಿತಾವಧಿಯ ಕಳಕಳಿಯನ್ನಿಟ್ಟು ಭವಿಷ್ಯತ್ಕಾಲೀನ ಸಂಸಾರದ ಸುಖಪ್ರವೃತ್ತಿಗಾಗಿ ಸಂಗ್ರಾಹ್ಯಗಳಿಂದ ಸಕಲ ಬಲಗಳನ್ನು ಸಂಪಾದಿಸುವ ಸಮಾಚೀನ ಅವ್ಯಕ್ತಸಮಯವಾಗಿದೆ. ಈಗಿನ ಬಾಲಕರೇ—ವಿದ್ಯಾರ್ಥಿಗಳೇ ಮುಂದಿನ ಜಗತ್ತಿನ ಭಾರವನ್ನು ವಹಿಸುವ ಧೀರ-ವೀರ ನವಪುಂಗವರಾಗಬೇಕಾಗಿದೆ. ಅದು ಕ್ರಮವಾಗಿ ಬಾಹ್ಯಾಭ್ಯಂತರಿಕ ಶರೀರಾತ್ಮಬಲಗಳನ್ನು ಬೆಳೆಸಲು ಈ ಅವಸ್ಥೆಯು ಮೂಲವಾಗಿದೆ. ಹೀಗಿದ್ದು ನಮ್ಮ ಈಗಿನ ಕೋಮಲ ಕೋಮಲ ಅದೂರದರ್ಶಿ-ಸೂಕ್ಷ್ಮಮತಿ-ಅಧೀರವೃತ್ತಿಯ ಮುಟ್ಟಿದರೆ ಬಾಡುವ ಗುಲಾಬಿ (ರೋಜಾ) ಹೂವಿನಂತಿರುವ ವಿದ್ಯಾರ್ಥಿಗಳ ಸ್ಥಿತಿಯು ಅಲೋಚನೀಯವಾಗಿದೆ. ಮುಂದಿನ ಆಯುಷ್ಯಕ್ಕೆ ಈಗಿನ ಇವರ ವರ್ತನವು ಪೂರ್ಣವಿರುದ್ಧವಾಗಿದೆ. ಅಂಧಾನುಕರಣದಿಂದ ಮೋಸಹೋಗಿರುವವರು ಯಾವಬಗೆಯ ಬಲವೂ ಇವರನ್ನು ಅಂಟಿಲ್ಲ. ನಮ್ಮ ಭಾರತೀಯರ ಧೈರ್ಯಕ್ಕೆ ಸಾಟಿಯೇ ಇಲ್ಲದಂತಾಗಿದೆ. ನಮ್ಮ ಹುಡುಗರಿಗೆ ಮಧ್ಯರಾತ್ರಿಯಲ್ಲಿ ಎಚ್ಚರಿಕೆಯಾದರೆ “ಏನೋ ಓಬಾಳಿಗೆ (ಮೂತ್ರವಿಸರ್ಜನಗೆ) ಹೋಗಬೇಕು ಸ್ವಲ್ಪ ಹಿಂದೆ ಬರುವೆಯಾ? ಭಯವಾಗುತ್ತದೆ” ಎಂದು ವಿನಯದಿಂದ ಕರೆಯುವ ಕಂಬಾರರು ಭಾರತದೇಶದಲ್ಲಿ ಮೆರೆಯುತ್ತಿರುವರು. ಬ್ರಹ್ಮಚರ್ಯ ಕಾರ್ಯದಕ್ಷತೆ ಶುದ್ಧಾಚಾರ ಗುರುದೈವಭಕ್ತಿ ವರಾಯಣತೆ, ಪಿತೃಸೇವೆ ಅಂಗಸಾಧನ ಪಾರ್ಶ್ವಗ್ರಂಥಾಸಕ್ತಿ ಮೊದಲಾದ ಗುಣಗಳು ಇವರಿಂದ ಬಹಿಷ್ಕರಿಸಲ್ಪಟ್ಟು ಆಲಸ್ಯ ಅನೃತ ನಾಟಕಾಸಕ್ತಿ, ಸಿನೇಮಾಸೇವನ ಬಹುಚರ್ಯಭಂಗ ಮೊದಲಾದ ವಿನಾಶಕ ವಿಷಯಗಳಲ್ಲಿಯೇ ಇವರು ತೇಲಾಡುತ್ತಿರುವರು. ಅದರಲ್ಲಿಯೂ ಕುಡ್ಡ ತಲೆಕ್ಕೆ ಮನೆಯಿಂದ ಸಹಾಯವಾಗುತ್ತಿರುವವರಂತೂ ಭೂಗತ ಸ್ವರ್ಗಸುಖವನ್ನೇ ಅನುಭವಿಸುತ್ತಿರುವರು. ಯಾವ ದೇಶದ ವಿದ್ಯಾರ್ಥಿಗಳು ಆಕ್ಷೇಪಕರಾಗಿರುವರೋ—ಚಾರಿತ್ರಹೀನರಾಗಿರುವರೋ ಆ ದೇಶವು ದಿನೇ ದಿನೇ ಬಲಹೀನವಾಗುತ್ತ ಸಕಲ ಸಂಪತ್ತುಗಳಿಂದ ದೂರವಾಗಿ ದೀನದಾಸ್ಯವನ್ನು ಹೊಂದುವದೆಂಬ ಮಾತನ್ನು ಎಲ್ಲರೂ ಒಪ್ಪಬೇಕಾಗಿದೆ. ಬೀಜಗಳು ಕೆಟ್ಟುಹೋದ ಮೇಲೆ ಅಂಕುರೋತ್ಪತ್ತಿಯೇ ಇಲ್ಲದಿರುವಾಗ ವೃಕ್ಷಸ್ವರೂಪವೆಲ್ಲಿಂದ ಬರಬೇಕು? ಫಲಗಳಂತೂ ಕನಸಿನ ಕನಸಿನ ಅನುಸಂಧಾನವೇ. ನಾವು ಯಾವ ದಳದಲ್ಲಿ ಹೋಗುತ್ತಿರುವವೆಂಬ ಅರಿವೇ ಅವರಿಗೆ ಇರುವದೇ ಇಲ್ಲ. ಮುಂದೆ ನಾವು ಹೋರಬೇಕಾಗಿರುವ ಪ್ರಪಂಚವು ಎಷ್ಟು ಕಠಿನತರವಾಗಿದೆ ಎಂಬುದನ್ನು ಸ್ವಪ್ನದಲ್ಲಿಯೂ ಸ್ಮರಿಸುವದಿಲ್ಲ. ಒಳ್ಳೇ ವೈಭವದಿಂದ ನೆರವೇರಿಸಲ್ಪಡಬೇಕಾದ ಬಾಲಸ ಭಾವೀ ವಿವಾಹದ ತುಂಬಿಯುವ ಪದಾರ್ಥಗಳನ್ನು ಸೇರಿಸಲಿಕ್ಕೆ ಬಂದವರೇ ತಿಂದು ತೀರಿಸಿಬಿಟ್ಟ ಹಾಗೆ ನಮ್ಮ ಸುಧಾರಿಸಿದ—ನವಯುಗದ ನೂತನ ವಿದ್ಯಾರ್ಥಿಗಳು ತಾವು ಪ್ರಪಂಚಕಭಾರವನ್ನು ಹೊರುವ ಮುಂಚೆಯೇ ಎಲ್ಲವನ್ನೂ ಅನುಭವಿಸಿ ಸಕಲವಿಧ ಸಾಮರ್ಥ್ಯಶೂನ್ಯರಾಗಿ ಕಪಟಿಗಳಾದ ಕಳ್ಳರ ಕೈಗೆ ಸಿಕ್ಕು ಸಂತೆಗೆ ಹೋಗುವ ಹಾದಿಕಾರನಂತೆ ದೊಡ್ಡವರೂ ಶೋಚನೀಯರೂ ದುರ್ಬಲರೂ, ಸಂದಾರರೂ ಆಗಬೇಕೆಂದು ಹಗಲಿರುಳು ಹವಣಿಸುತ್ತಿರುವದು ಕಾಮನಹಬ್ಬದಲ್ಲಿ ಹಳ್ಳಿಗಳಲ್ಲಿಟ್ಟಿರುವ ಹುಲಗಾಮನು ಸುಂದರಮನೋರಕ್ಷದ ರಮಣೀಯ ರತಿಸುಖವನ್ನು ಅನುಭವಿಸಲು ಆತುರಗೊಂಡಹಾಗಿದೆ. ಕುಟುಂಬಿಗಳಾಗುವದೆಂದರೆ ಇವರು ನಾಟಕಾಭಿನಯವೆಂದು ತಿಳಿದುಕೊಂಡಿರುವರು. ಬುದ್ಧಿವಂತರು ಬರೆದರೆ ವಿದ್ಯಾರ್ಥಿಗಳದೊಂದು ನವೀನಪುರಾಣವೇ ಆಗಬಹುದು. ಈಗಿನ ಅವನತಿಯನ್ನೂ ಮುಂದಿನ ಸ್ಥಿತಿಯನ್ನೂ ಮನಸಾ ವಿಚಾರಿಸಿ ಎದೆಯೊಡೆದು ಕಣ್ಣೀರಾಗಿ ನೇತ್ರದ್ವಾರಾ ಹೊರಹೊರಟು ನಿರ್ವಿಣ್ಣನಾಗಿ ನಮ್ಮ ವಿದ್ಯಾರ್ಥಿಗಳಿಗೆ ಹೇಳಬೇಕಾದ ‘ನೀವು ನಿರ್ಬಲವನ್ನು ಕಳೆದುಕೊಂಡು ಶನೈಃ ಶನೈಃ ದಿನೇದಿನೇ ದಾಸ್ಯವನ್ನು ಕೈಕೊಳ್ಳಬೇಡಿರೆಂ’ ಬ ಒಂದು ಮಾತನ್ನು ಮಾತ್ರ ಹೇಳಿ ಮುಗಿಸುತ್ತೇನೆ. ಅಸ್ತು!

ವಿದ್ಯಾರ್ಥಿಗಳೆಲ್ಲರೂ ಶ್ರೀ ಸಿದ್ಧಿವಿನಾಯಕನ ಸ್ಥಾಪನೆಗಾಗಿ ಸ್ವಯಂರಚಿತವಾದ ಸುಂದರ ಸಿಂಹಾಸನದಲ್ಲಿ ಹರಗುರು ಭಕ್ತಪರಾಯಣರೂ ಶ್ರೀ ರೇಣುಕರೇ ಪ್ರಾಣದರೆಂದಾಗಿ ಉಳ್ಳವರೂ ಆದ ಶ್ರೀ ಮಹಾನ್ ಗುಡೇಮಾರನಹಳ್ಳಿ ಮಲ್ಲಿಕಾರ್ಜುನಪ್ಪನವರು ಕೊಡಿಸಿದ ಭವ್ಯವಾದ ಶ್ರೀ ಸಿದ್ಧಿವಿನಾಯಕನ ಮನೋಹರ ಮೂರ್ತಿಯನ್ನು ಇದೇ ಭಾವನಾಮ ಸಂವತ್ಸರದ ಭಾ|| ಶು|| ೪ ತಾ|| 1-9-35ನೇ ಭಾನುವಾರ ದಿವಸ ಮಧ್ಯಾಹ್ನ ೧೨ ಘಂಟೆಗೆ ಯಥಾವಿಧಿಯಾಗಿ ಸ್ಥಾಪಿಸಿ ಪ್ರತಿನಿತ್ಯದಲ್ಲಿಯೂ ಸಾಯಂಪ್ರಾತಃಸಮಯಗಳಲ್ಲಿ ಸುಮಂಗಲ-ಸುಮಂಜುಳವಾದ ವೇದಘೋಷಾದಿಗಳಿಂದ ಪೂಜಿಸುತ್ತಿದ್ದರು. ಮೊದಲೇ ವೈದಿಕವೇಷ! ಅದರಲ್ಲಿ ತ್ರಿಪುಂಡ್ರಧಾರಣಾದಿಗಳ ಅಲಂಕಾರ, ಮೇಲೆ ಸುಶ್ರಾವ್ಯವಾದ ವೇದಘೋಷ ಶಿವಸ್ತುತಿಗಳಿಂದ ಮಹದಮ್ಯಂಗಾರವೆಲ್ಲವುಗಳಿಂದ ಆ ಸಮಯವು ಚಿತ್ತಾಕರ್ಷಕವೂ ಪ್ರತ್ಯಕ್ಷ ಸಹಾರಕವೂ ಆಗಿರುತ್ತಿತ್ತು. ಹೀಗೆ ೭ ದಿನಗಳವರೆಗೆ ಪೂಜೋತ್ಸವವು ಜರುಗಿ ಕಡೆಯಾದಿನ ಅಂದರೆ ಭಾದ್ರಪದ ಶುದ್ಧ ೯ (ತಾರೀಖು 7-6-35) ಶನಿವಾರ ಶ್ರೀ ಸಿದ್ಧಿವಿನಾಯಕಮೂರ್ತಿಯ ಮಂಗಳಾರತಿಯು ದಿವಸ ಪ್ರಾತಃಕಾಲದಿಂದಾಗಿ ಮಧ್ಯಾಹ್ನ ೩ ಘಂಟೆಯವರೆಗೆ ವಿಶೇಷ ಪೂಜಾ ಬೋಜನಾದಿಗಳು ನಡೆದನಂತರ ಸಾಯಂಕಾಲ ೬ ಘಂಟೆಗೆ ಸರಿಯಾಗಿ ಚೆಂಗಳಾಬು ಸಿಟಿ ಚಿಕ್ಕಪೇಟೆಯ ಮಹಂತಿನ ಮಠಾಧೀಶ ಶ್ರೀ|| ಷ|| ಬ್ರ|| ಷಟ್‌ಸ್ಥಲಬ್ರಹ್ಮ ಗಂಗಾಧರ ಶಿವಾಚಾರ್ಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭಾಕಾರ್ಯವು ಉಪಕ್ರಾಂತವಾಯಿತು. ಪ್ರಸಿದ್ಧ ಪುರವಾಸಿಗಳಾದ ಅನೇಕ ಜನರು ಆಹ್ವಾನಿಸಲ್ಪಟ್ಟಿದ್ದರು. ವಿದ್ಯಾರ್ಥಿಗಳ ಸಂಖ್ಯೆಯು (ವಿಶೇಷವಾಗಿದ್ದಿತು. ವೇದಘೋಷ ವಾಗುತ್ತಿರಲು ಶ್ರೀ ಸ್ವಾಮಿಗಳವರು ದಯಮಾಡಿಸಿ ಸಭಿಕರ ವಂದನ ಅಭ್ಯುತ್ಥಾನಗಳಿಂದ ಗೌರವಿಸಲ್ಪಟ್ಟು ಆಸನವನ್ನು ಅಲಂಕರಿಸಿದ ಮೇಲೆ ೧೦ ನಿಮಿಷಗಳವರೆಗೆ ವೇದಘೋಷ ಗುರುಸ್ತವನಾದಿಗಳು ಯಥಾಸಾಂಗವಾಗಿ ನಡೆದವು. ಅನಂತರ ರೇಣುಕಾದಿ ಪಂಚಾಚಾರ್ಯ ಮಹಾಪಾಠಶಾಲೆಯ ವೇದಾಧ್ಯಾಪಕರಾದ ಶ್ರೀ|| ವೇ|| ಸುಬ್ರಹ್ಮಣ್ಯಶಾಸ್ತ್ರಿಗಳವರ ಸೂಚನೆಯ ಮೇರೆಗೆ ಅಧ್ಯಕ್ಷರ ಒಪ್ಪಿಗೆಯಂತೆ ಅಹಿಂಸಾಪತ್ರಿಕೆಯ ಸಂಪಾದಕರಾದ ಕಲ್ಯಾಣಮಂಗಲಂ ಶ್ರೀ ಶ್ರೀಕಂಠಯ್ಯನವರು ವಿನಾಯಕನ ಸತ್ಪ್ರೇರಣೆ ಸೂಕ್ಷ್ಮ ತತ್ವಗಳನ್ನು ವ್ರತಾಚರಣೆಯ ಮಹತ್ವವನ್ನು ಬಹು ಸೊಗಸಾಗಿ ವರ್ಣಿಸಿ ವಿದ್ಯಾರ್ಥಿಗಳಿಗೆ ಆಸ್ತಿಕತೆಯುಂಟಾಗುವ ಹಾಗೆ ಬೋಧಿಸಿದರು. ಅನಂತರ ಶ್ರೀ ಸ್ವಾಮಿಗಳವರು ಪ್ರತ್ಯೇಕ ವಿನಾಯಕವ್ರತಗಳ ವಿಷಯಕವಾಗಿ ಕೆಲಹೊತ್ತಿನವರೆಗೆ ವಿವರಿಸಿ ಅನಂತರ ವಿದ್ಯಾರ್ಥಿಗಳ ಸ್ವಾಗತಗೀತಗಳನ್ನು ಮಾರ್ಮಿಕವಾಗಿ ವರ್ಣಿಸುತ್ತ ವಿದ್ಯಾರ್ಥಿಗಳಲ್ಲಿಯೂ ಮಾನವಲೋಕದಲ್ಲಿಯೂ ಇರಬೇಕಾದ ಹಾರ್ದಿಕ ಪ್ರೇಮಾನುಬಂಧವನ್ನು ಹೊಂದಿರತಕ್ಕ ಸವಿಸ್ತರವಾದ ಭಾಷಣವನ್ನು ಮಾಡಿದರು. ಅನಂತರ ಶ್ರೀ ವಿನಾಯಕ ಶ್ರೀ ರೇಣುಕರಿಗೆ ಮಹಾಮಂಗಲಾರತಿ ರಾಜೋಪಚಾರಗಳಾದಮೇಲೆ ಸರ್ವರಿಗೂ ಪುಷ್ಪ ವಿಭೂತಿ ಸುಗಂಧ ತೈಲಾದಿಗಳು ಅರ್ಪಿಸಲ್ಪಟ್ಟು ಪ್ರಸಾದ ವಿನಿಯೋಗವಾಯಿತು. ಆ ಮೇಲೆ ವಿದ್ಯಾರ್ಥಿದಶೆಯಲ್ಲಿರುವ ಕುತೂಹಲ ಗದ್ದಲಗಳ ಮಧ್ಯದಲ್ಲಿ ಸಭೆಯ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ರಂಭಾಪುರೀ ಜಗದ್ಗುರುಗಳಲ್ಲಿರುವ ಸೈದ್ಧಾಂತಿಕಭಕ್ತಿಯುತವೂ ವೈದಿಕಧರ್ಮೋದ್ಧಾರದಲ್ಲಿರುವ ಸಾಭಿಮಾನದ ಮಹತ್ವಾಕಾಂಕ್ಷೆಯನ್ನೂ ವಂದನಪೂರ್ವಕವಾಗಿ ಹೊಗಳಿ ಸಭಾಧ್ಯಕ್ಷರಿಗೂ ಸಭಿಕರ ಆ ಭಾರವನ್ನು ಮನ್ನಿಸಿ ಗುರುವೆ ಮಹಾನುಗ್ರಹಬಲವೂ ಇಂದಲೂ ಮಹಾಜನಗಳ ಸಹಾಯದಿಂದಲೂ ವರ್ಷಂಪ್ರತಿ ನಾವುಗಳು ನೆರವೇರಿಸುತ್ತಿರುವ ಮಂಗಳಮಹೋತ್ಸವಗಳೆಲ್ಲವೂ ಸಕಲರಿಗೂ ಶ್ರೀ ವಿದ್ಯಾಗಣಪತಿಯು ಸುಖಶಾಂತಿಯನ್ನೀಯಲೆಂದು ಪ್ರಾರ್ಥಿಸಿ ತಮ್ಮ ಕೃತಜ್ಞತೆಗಳನ್ನು ಅರ್ಪಿಸಿದ “ಸಂಸ್ಥೆಯ ಕಾರ್ಯಗಳನ್ನೇ ಸ್ವಕಾರ್ಯಗಳನ್ನಾಗಿ ಭಾವಿಸಿ ಹಗಲಿರುಳೂ ತಾಯಿತಂದೆ ಬಂಧುಬಳಗದವರನ್ನಗಲಿ ಬಂದ ನಮ್ಮಗಳ (ವಿದ್ಯಾರ್ಥಿಗಳ) ಅಶನಾಚ್ಛಾದನಾದಿಗಳ ಪೂರೈಕೆಯ ಕಾರ್ಯದಲ್ಲಿ ತನು ಮನ-ಧನಗಳನ್ನು ಸವೆಸುತ್ತಿರುವ ಸಂಸ್ಥೆಯ ಸೆಕ್ರೆಟರಿಗಳಾದ ಆ—ಮಂಡಿ ಎಸ್ ರುದ್ರಯ್ಯನವರಿಗೆ ದಯಾಘನನಾದ ದೇವರು ದೀರ್ಘಾಯುರಾರೋಗ್ಯಾದಿಗಳನ್ನೀಯುವದಲ್ಲದೆ ಪ್ರತ್ಯೇಕೋತ್ಸವ ಮೂರ್ತಿಯಾದ ಶ್ರೀ ವಿನಾಯಕನು ಇವರ ಸಾವಿರ ಜನ್ಮ ಸತೀಯು ಕಾರ್ಯಕಲಾಪದಲ್ಲಿ ನಿರ್ವಿಘ್ನತೆಯನ್ನುಂಟು ಮಾಡಲೆಂದು ಚಿಕ್ಕ ಭಾಷಣವನ್ನು ಮಾಡಿ ಶ್ರೀ ಸೆಕ್ರೆಟರಿಯವರಿಗೆ ವಿದ್ಯಾರ್ಥಿಗಳ ಪರವಾಗಿ ಪುಷ್ಪ ಮಾಲೆಗಳನ್ನು ಅರ್ಪಿಸಿದರು. ಶರಂಧಾಮಾಶ್ರಯರಾದ ಶ್ರೀಮಾನ್ ಬುಳ್ಳಪ್ಪನವರ ರಾಂಕಶೇಖರಪ್ಪನವರು ಸ್ವಯಾರ್ಜಿತ ಆಸ್ತಿಯನ್ನು ಪಾರಕ್ಯದ ಮಾತೃ ಸುಧಾರಣಾಬಿಲಾಷೆಯಿಂದ ವಿದ್ಯಾರ್ಥಿವಿಶಿಷ್ಟರಾಗಿ ಶ್ರೀಮದ್ರಂಭಾಪುರೀ ಜಗದ್ಗುರು ಮಹಾಸನ್ನಿಧಾನದಲ್ಲಿ ಧಾರಾದತ್ತವಾಗಿ ನಿರ್ಮಲಾಂತಃಕರಣದಿಂದ ಸಮರ್ಪಿಸಿದ್ದರಿಂದಲೇ ನಾವುಗಳು ಈ ಶುಭಸಮಾರಂಭಗಳನ್ನು ನೋಡುತ್ತಿರುವೆವೆಂದು ಸೆಕ್ರೆಟರಿಗಳವರು ಅವರ ಗುಣಗಾನವನ್ನು ಮಾಡಿದರು. ಈ ಸಮಯದಲ್ಲಿಯೇ ಹರಗುರು ರಾಜರ ಕುಶಲ ತ್ರಿವಾರ ಜಯಘೋಷವಾಯಿತು. ಅನಂತರ ಸಕಲರೂ ಶ್ರೀ ಸ್ವಾಮಿಗಳವರ ದರ್ಶನಾಶೀರ್ವಾದಗಳನ್ನು ಹೊಂದಿ ಪ್ರಫುಲ್ಲಾಂತಃಕರಣರಾಗಿ ತೆರಳಿದರು.

ಓರ್ವ ಪ್ರತ್ಯಕ್ಷದರ್ಶಿ

ರಷ್ಯಾದ ಮಹಾಪುರುಷ ಟಾಲ್‌ಸ್ಟಾಯ್.

(ಅನುವಾದಕರು—ಆರ್ ಎಸ್ ಆರಾಧ್ಯ, ಕುಂಸೂರು)

ಟಾಲ್‌ಸ್ಟಾಯಿಯು ಅಗರ್ಭಶ್ರೀಮಂತನಾಗಿ ಜನಿಸಿದನು. ರಷ್ಯಾದೇಶೀಯರಲ್ಲಿ ಎದೆಯುಕ್ಕೆನ್ನೂ ಸೋದರಭಾವವನ್ನೂ ಬೆಳೆಸಲು ಹೆಣಗಿದವರಲ್ಲಿ ಟಾಲ್‌ಸ್ಟಾಯಿಯು ಅಗ್ರಗಣ್ಯ. ಈತನಿಗೆ ಬೇಕಾದಷ್ಟು ಸಂಪತ್ತಿದ್ದಿತು 2 ಲಕ್ಷ 10 ಸಹಸ್ರ ಎಕರೆ ಜಮೀನಿಗೆ ಈತನು ಧನಿ. ಆದರೆ ಇವನಿಗೆ ತನ್ನ ಜೀವನದ ಸೌಖ್ಯದಲ್ಲಿ ಯಾವ ಸುಖವೂ ಕಂಡುಬರಲಿಲ್ಲ. ಪ್ರಪಂಚವೆಲ್ಲವೂ ಅಂಧಕಾರಮಯವಾಗಿರುವಂತೆ ಕಂಡುಬಂದಿತು.

ನಮ್ಮ ಜನಜೀವನದಲ್ಲಿ ಧನದಿಂದಾಗುವ ಪ್ರಯೋಜನವೇನು? ಕೀರ್ತಿಯಿಂದಾಗುವ ಲಾಭವೇನು? ಮಕ್ಕಳು ಮರಿಗಳಿಂದ ಆಗುವುದೇನು? ಎಂಬ ಸಂಶಯಗಳು ಟಾಲ್‌ಸ್ಟಾಯಿಯ ಮನಸ್ಸಿನಲ್ಲಿ ಮೂಡಿದುವು. ಇವುಗಳು ಒಂದಕ್ಕಿಂತ ಮತ್ತೊಂದು ಹೆಚ್ಚಾಗಿ ಹಿಂಸಿಸತೊಡಗಿದವು. ಇದರ ತತ್ವವನ್ನು ತಿಳಿಯಲೋಸುಗ ಆತನು ಮಹಾಧಿಕ ಶೋಧನೆಗಳು ಗಹನಾರ್ಥವಾದುವುಗಳು. ಮಾನವ ಜೀವನದ ಅರ್ಥವನ್ನು ವಿಚಾರಿಸುವ ಸಲುವಾಗಿ ಅನೇಕ ಮತಗ್ರಂಥಗಳನ್ನು ಪಠಿಸಿದನು. ವಿಧವಿಧವಾದ ಸಾಧನೆಗಳನ್ನು ಹುಡುಕತೊಡಗಿದನು. ತನ್ನ ರಚನೆಗಳಲ್ಲಿ ರಷ್ಯದೇಶದವರ ಜೀವನಚರಿತ್ರೆಗಳನ್ನೆಲ್ಲಾ ಚಿತ್ರಿಸಿದ್ದಾನೆ. ಈತನ ವರ್ಣನಶಕ್ತಿ ಭಾವನಾಶಕ್ತಿ ಕಲ್ಪನಾ ಸಾಮರ್ಥ್ಯಗಳಲ್ಲಿ ಯಾರೂ ಈತನನ್ನು ಮೀರಿಸುವಂತಿಲ್ಲ. ಈತನ ಕಲ್ಪನೆಗಳ ಕಡೆ ನೋಡುವುದಾದರೆ ಈತನು ತನ್ನ ಭೋಗ್ಯಭಾಗ್ಯಗಳನ್ನು ತ್ಯಜಿಸಿ ವಿರಕ್ತಜೀವನವನ್ನಾಶ್ರಯಿಸಿದ್ದನೆಂದು ಹೇಳಬಹುದು.

ಸಾವನ್ನು ಇಕರರು ಹೆಗೆ ನೋಡುತ್ತಾರೆಂಬುದನ್ನು ಪರೀಕ್ಷಿಸುವ ಸಲುವಾಗಿ ಟಾಲ್‌ಸ್ಟಾಯಿ ಹುಟ್ಟಿತು. ವಿಧವಿಧವಾದ ಧನಿಗಳನ್ನು ಮಾತನಾಡಿಸಿದನು. ಆದರೂ ಈತನಿಗೆ ಶಾಂತಿಸಿಗಲಿಲ್ಲ. ಹಾಗೆಯೇ ಯೋಚಿಸತೊಡಗಿದ ‘ನಮ್ಮ ಜೀವನವು ಒಂದು ಕನಸು. ಬಾಳಿನ ದೂರವಾದಿತೆಂದರೆ ಸಾವು ಬಾಗುವುದಿಲ್ಲ. ಇದೆಲ್ಲವೂ ನಶ್ವರವಾದುದು’ ಎಂದು ಹೇಳುವವನು ಜನರು ಇವರು ತನ್ನವರು ನಮ್ಮವರು ಎನ್ನುವರು. ಆದರೆ ಕೊನೆಗೆ ಎಲ್ಲರಿಗೂ ಮೃತ್ಯುವು ಸಿದ್ಧವಾಗಿದೆ. ಅದಕ್ಕಾಗಿ ನಾವು ಈ ಕ್ಷಣಗಳು ಹುಳನಲ್ಲಾ ಬರಿದಾಗುತ್ತಿಲ್ಲ. ಯುವಕರೂ ಮತ್ತು ಅಜ್ಞಾನಿಗಳೂ ಮೃತ್ಯುವನ್ನು ಲಕ್ಷಿಸದೆ ತೀವ್ರದ ಮೋಹವಾದ ಕೆಲಸಗಳನ್ನು ಮಾಡುತ್ತಿರುವದನ್ನು ನೋಡಿ ಟಾಲ್‌ಸ್ಟಾಯಿಯು ಬಹಳ ಕೊರಗುತ್ತಿದ್ದನು. ಆದರೆ ತಮ್ಮ ಜೀವನಯಾತ್ರೆಗಳನ್ನು ಸುಮ್ಮನಾಗಿ ಯಾರೂ ನಡೆಯಿಸುವುದಿಲ್ಲವೆಂದು ನಂಬಿದ್ದ. ಇವನಿಗೆ ಕ್ರಿಶ್ಚನರು ಅನುಸರಿಸುತ್ತಿರುವ ಮತವನ್ನು ಕಂಡು ಬಹಳವಾಗಿ ಹಿಗ್ಗಿದನು. ಮತವೆಂದರೆ ಸತ್ಯ. ಮತವೆಂದರೆ ನಮ್ಮ ಆತ್ಮಸಾಕ್ಷಾತ್ಕಾರ. ವಿಶ್ವನಾಯಕನಾದ ಪರಮಾತ್ಮನ ಸತ್ಯಸ್ವರೂಪವನ್ನು ದರ್ಶನಮಾಡುವುದೇ ಮಾನವ ಜೀವನದ ಪರಮಾರ್ಥ. ಮತವೆಂದರೆ ಕೇವಲ ಆಚಾರಮಾತ್ರವಲ್ಲ. ಸಮಾಜದಲ್ಲಿ ಗೌರವವನ್ನು ಸಂಪಾದಿಸಲು ಮಾಡುವ ನಟನೆಯಲ್ಲ. ಪ್ರತಿದಿನವೂ ನಾವು ಮಾಡುವ ಪಾಪದ ಪರಿಹಾರಕ್ಕಾಗಿ ಏರ್ಪಟ್ಟ ರೀತಿಯಲ್ಲ. ಸುಮ್ಮನೆ ಕಾಲಹರಣಮಾಡದೆ ದೇವರಲ್ಲಿ ಭಕ್ತಿಯನ್ನಿರಿಸಿ ನಮ್ಮ ಕರ್ತವ್ಯವನ್ನು ಸಾಧಿಸಿಕೊಳ್ಳಬೇಕು. ಇದೇ ಮಾನವಜನ್ಮದಲ್ಲಿ ಮಾಡಬೇಕಾದ ಕರ್ತವ್ಯ ಎಂಬುದನ್ನು ಕ್ರೈಸ್ತವರು ಚೆನ್ನಾಗಿ ಅರಿತಿರುವರೆಂದು ಟಾಲ್‌ಸ್ಟಾಯಿಯು ಕಂಡುಕೊಂಡನು.

ರೈತರ ಜೀವನಪಥದಲಿ ನಡೆಕೆ ಹುಟ್ಟಿ ತಾನೂ ಕೂಡ ತನ್ನ ಹಿಂದಿನ ಆಡಂಬರಗಳನ್ನೆಲ್ಲಾ ಬಿಟ್ಟು ರೈತರಂತೆ ಉಡಿಗೆ ತೊಡಿಗೆಗಳನ್ನು ಹಾಕಿಕೊಂಡು ಅವರಂತೆ ಕಷ್ಟಪಟ್ಟು ದುಡಿಯಲು ಮೊದಲುಮಾಡಿದನು. ನಿತ್ಯವೂ ತಪ್ಪದೆ ದೇವರ ಪ್ರಾರ್ಥನೆ ಇತ್ಯಾದಿ ಕಾರ್ಯಗಳನ್ನು ಮಾಡುವುದಕ್ಕೆ ಪ್ರಾರಂಭಮಾಡಿದನು. ಪ್ರಾರ್ಥನೆಗಳಲ್ಲಿ ಬಹಳ ದಯಾಪರನಾಗಿದ್ದನು. ಮಾಂಸಭಕ್ಷಣವನ್ನು ಬಿಟ್ಟನು. ಎಲ್ಲವನ್ನೂ ತ್ಯಜಿಸಿ ಕಾಯಿಪಲ್ಯಗಳ ಆಹಾರಕ್ಕೆ ತಿರುಗಿದನು. ಇವನು ಪಕ್ಕಾ ಕ್ರೈಸ್ತಮತದವನು. ಈ ಕ್ರೈಸ್ತಮತಗ್ರಂಥಗಳನ್ನು ಪಠಿಸಿ ಅದರಲ್ಲಿರುವ ಕುಂದುಕೊರತೆಗಳನ್ನು ತೆಗೆದು ಹಾಕಬೇಕೆಂಬ ಕುತೂಹಲದಿಂದ ಅನೇಕಗ್ರಂಥಗಳನ್ನು ಆಮೂಲಾಗ್ರವಾಗಿ ಓದಿದನು. ಅದರಲ್ಲಿರುವ ಕಲ್ಪನೆಗಳನ್ನು ನೋಡಿ ತನ್ನ ಸ್ವಂತ ಅನುಭವದ ಆಧಾರದಿಂದ ಸಾರತತ್ವವನ್ನು ಕಂಡುಹಿಡಿದನು. ಇದರಿಂದ ಇವನಿಗೆ ಸಮಾಜ ಬಹಿಷ್ಕಾರವೂ ಕೂಡ ಆಯಿತು. ಆದರೂ ಟಾಲ್‌ಸ್ಟಾಯಿಯು ಹಿಂದೆಗೆಯಲಿಲ್ಲ. ಅವನು ಈ ವಿಷಯದಲ್ಲಿ ಹೇಳುತ್ತಿದ್ದುದು ಇಷ್ಟೇ! ‘ಧಾರ್ಮಿಕಜೀವನವನ್ನು ನಡೆಯಿಸಲು ನಾನು ಪ್ರಯತ್ನಮಾಡಿದಾಗ ನನ್ನ ಬಂಧುಗಳೂ ಸ್ನೇಹಿತರೂ ನನ್ನನ್ನು ನೋಡಿ ಹಾಸ್ಯಮಾಡಿ ನಕ್ಕರು. ತಮ್ಮ ಮಾರ್ಗಕ್ಕೆ ನನ್ನನ್ನು ಸೆಳೆಯಲು ಪ್ರಯತ್ನಪಟ್ಟರು. ಪ್ರಾಪಂಚಿಕಸುಖವೇ ಅತ್ಯುತ್ತಮವಾದ ಸುಖವೆಂದು ಅವರ ವಾದ. ನನ್ನ ಅನುಭವದಲ್ಲಿ ಪ್ರಾಪಂಚಿಕಸುಖವು ಸುಖವಲ್ಲ. ಪಾಪವು ದುಃಖವಲ್ಲ. ಯಾರ ಅಂತರಾತ್ಮವು ಅವರು ಮಾಡುತ್ತಿರುವ ಕಾರ್ಯವನ್ನು ಒಪ್ಪುತ್ತದೆಯೋ ಅವರಿಗೆ ಶಾಂತಿದೊರೆಯುವುದು. ಯಾರ ಅಂತರಾತ್ಮವು ಅವರ ಕಾರ್ಯವನ್ನು ಒಪ್ಪುವುದಿಲ್ಲವೋ ಅವರಿಗೆ ಶಾಂತಿದೊರೆಯುವುದಿಲ್ಲ. ಈ ಪ್ರಾಪಂಚಿಕಸುಖವು ಅವರಿಗೆ ಯಥಾರ್ಥಶಾಂತಿಯನ್ನು ಕೊಡಲಾರದು.’

ಟಾಲ್‌ಸ್ಟಾಯಿಯು ತನ್ನ ಮತಗ್ರಂಥಗಳಲ್ಲಿ ಹಿಂದಿನವರ ದೋಷಗಳನ್ನೆಲ್ಲಾ ಕಂಡುಹಿಡಿದು ಅವುಗಳನ್ನು ಸರಿಪಡಿಸಿದ್ದಾನೆ. ಏಸುವು ಬೋಧಿಸಿದ ತತ್ವಗಳ ಸಾರವನ್ನು ತಿಳಿಯದೆ ಅನೇಕರು ವಿಪರೀತ ರೀತಿಯಲ್ಲಿ ವರ್ಣಿಸುವರು. ಆದರೆ ಈತನು ಅವರ ನಿಜಸಾರವನ್ನು ಕಂಡುಹಿಡಿದು ಹಿಂದಿನವರು ಮಾಡಿದ ತಪ್ಪುಗಳನ್ನು ಸ್ಪಷ್ಟವಾಗಿ ತೋರಿಸಿಕೊಟ್ಟನು. ಯಾವ ಮನುಷ್ಯನು ಕೋಪವನ್ನು ಕೊಂದು ಪರಿಶುದ್ಧಹೃದಯನಾಗಿ ಜಾತಿಭೇದಗಳಿಲ್ಲದೆ ಎಲ್ಲರನ್ನೂ ಸಹೋದರಭಾವದಿಂದ ನೋಡಿಕೊಂಡು ಬರುವುದಾದರೆ ಮಾನವಜೀವನದಲ್ಲಿ ಸೌಖ್ಯದೊರಕುವುದರಲ್ಲಿ ಸಂದೇಹವೇನಿದೆ? ಎಂಬುದೇ ಇವನ ವಾದ. ಅಹಿಂಸೆಯೂ ಭೂತಪ್ರೇಮವೂ ಮಾನವಕ್ಷೇಮದ ಮುಖ್ಯ ಕುರುಹೆಂಬುದೇ ಈತನ ಮತ. ಟಾಲ್‌ಸ್ಟಾಯಿಯ ಬೋಧನೆಯಂತೆ ನಡೆಯುವುದಾದರೆ ಪ್ರಪಂಚದಲ್ಲಿ ಶಾಂತಿಸ್ಥಾಪನೆಯಾಗುವುದರಲ್ಲಿ ಸಂದೇಹವೇನಿದೆ?

ಪಂಚಾಚಾರ್ಯ ಪ್ರಭಾ.

೧೯೩೫ನೇ ಸೆಪ್ಟಂಬರ್ ತಾ|| ೨೩ನೇ ಸೋಮವಾರ

ಶಿವಯೋಗ.

ಯೋಗಶಾಸ್ತ್ರ ಪ್ರವರ್ತಕರಾದ ಪತಂಜಲಿಮಹರ್ಷಿಗಳು 'ಯೋಗಶ್ಚಿತ್ತವೃತ್ತಿನಿರೋಧಃ' ಎಂಬ ಸೂತ್ರದಲ್ಲಿ ಚಿತ್ತವೃತ್ತಿಯನ್ನು ನಿರೋಧಮಾಡುವುದೇ 'ಯೋಗ' ವೆಂದು ಉಲ್ಲೇಖಿಸಿರುವರು ಚಿತ್ತವೃತ್ತಿನಿರೋಧ ಸಾಧನೀಭೂತವಾದ ಈ ಯೋಗವು 'ಮಂತ್ರಯೋಗ ಲಯಯೋಗ ಹಠಯೋಗ-ರಾಜಯೋಗ ಶಿವಯೋಗ' ವೆಂದು ಐದು ಪ್ರಕಾರವಾಗಿದೆ

[illegible]
[illegible]

ಏಕಾಕ್ಷರಾತ್ಮಕವಾದ 'ಓಂ' ಎಂಬ ಮಂತ್ರವನ್ನಾಗಲಿ, ದ್ವ್ಯಕ್ಷರಾತ್ಮಕವಾದ 'ಹಂಸ' ಅಥವಾ 'ಸೋಹಂ' ಎಂಬ ಮಂತ್ರವನ್ನಾಗಲಿ, ಷಡಕ್ಷರಾತ್ಮಕವಾದ 'ಓಂ ನಮಃ ಶಿವಾಯ' ಎಂಬ ಮಂತ್ರವನ್ನಾಗಲಿ, ಅಷ್ಟಾಕ್ಷರಾತ್ಮಕವಾದ 'ಓಂ ಹ್ರಾಂ ಹ್ರೀಂ ನಮಃ ಶಿವಾಯ' ಎಂಬ ಮಂತ್ರವನ್ನಾಗಲಿ ಮಂತ್ರಕ್ರಮವನ್ನನುಸರಿಸಿ ಮುಕ್ತಿಗೋಸ್ಕರ ಜಪಿಸುವುದೇ 'ಮಂತ್ರಯೋಗ' ವೆನಿಸುವುದು

[illegible] |
[illegible] ||

ಯಾವನ ಚಿತ್ತವು ತನ್ನ ಧ್ಯಾನಕ್ಕೆ ಯೋಗ್ಯವಾದ ಮೂರ್ತಿಯಲ್ಲಾಗಲಿ ಅಥವಾ ಪ್ರಾಣಾಯಾಮದಿಂದ ಅಭಿವ್ಯಕ್ತವಾದ ನಾದದಲ್ಲಿಯಾಗಲಿ ಮನೋವ್ಯಾಪಾರಗಳೊಡನೆ ಕೂಡಿ ಲಯವಾಗುವುದೋ ಅದೇ 'ಲಯಯೋಗ' ವೆನಿಸುವುದು

[illegible] |
[illegible]

ಯಮ ನಿಯಮ-ಆಸನ-ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿಗಳೆಂಬ ಅಷ್ಟಾಂಗಗಳಿಂದಾಗಲಿ, ಮಹಾಮುದ್ರಾ-ಮಹಾಬಂಧ ಮಹಾವೇಧ-ಖೇಚರೀ-ಉಡ್ಡಿಯಾಣ ಮೂಲಬಂಧ ಜಾಲಂಧರಬಂಧ ವಿಪರೀತಕರಣೀ-ವಜ್ರೋಳೀ ಶಕ್ತಿಚಾಲನಗಳೆಂಬ ದಶವಿಧ ಬಂಧಗಳಿಂದಾಗಲಿ, ಧೌತಿ-ಬಸ್ತಿ-ನೇತಿ ತ್ರಾಟಕ-ನೌಳಿ ಕಪಾಲಭಾತಿಗಳೆಂಬ ಷಟ್ಕರ್ಮಗಳಿಂದಾಗಲಿ ಅಥವಾ ರೇಚಕಪೂರಕ ಪ್ರಾಣಾಯಾಮಗಳಿಲ್ಲದೆ ಕೇವಲ ಕುಂಭಕಪ್ರಾಣಾಯಾಮದಿಂದಾಗಲಿ ವಾಯುವನ್ನು ವಶಮಾಡಿಕೊಳ್ಳುವುದು 'ಹಠಯೋಗ' ವೆನಿಸುವುದು

ತ್ರಿಷು ಲಕ್ಷ್ಯೇಷು ಯೋ ಬ್ರಹ್ಮ ಸಾಕ್ಷಾತ್ಕರ್ತುಂ ಸಮುದ್ಯತಃ |
ಜ್ಞಾನೇ ವಾಽಥ ಮನೋವ್ಯಾಪ್ತಿರಹಿತೋ ರಾಜಯೋಗವಿತ್ ||

ಯಾವನು ಬಾಹ್ಯಲಕ್ಷ್ಯ ಮಧ್ಯಲಕ್ಷ್ಯ-ಅಂತರ್ಲಕ್ಷ್ಯಗಳಿಂದಾಗಲಿ ಅಥವಾ ಅಮನಸ್ಕಜ್ಞಾನ (ಶಾಂಭವೀಮುದ್ರಾಜ್ಞಾನ)ದಿಂದಾಗಲಿ ಪರಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವನೋ, ಅವನು ಮನೋವ್ಯಾಪಾರರಹಿತನಾದ ರಾಜಯೋಗಿಯೆನಿಸುವನು ಈ ರೀತಿಯಾಗಿ ಆಚರಿಸುವುದೇ 'ರಾಜಯೋಗ'ವೆನಿಸುವುದು

ಈ ನಾಲ್ಕು ವಿಧವಾದ ಯೋಗಗಳಲ್ಲಿ ರಾಜಯೋಗವೇ ಶ್ರೇಷ್ಠವಾಗಿರುವುದು

ನ ಭೇದಃ ಶಿವಯೋಗಸ್ಯ ರಾಜಯೋಗಸ್ಯ ವಸ್ತುತಃ |
ಶಿವಾರ್ಥಿನಾಂ ತಥಾಪ್ಯೇವಮುಕ್ತೋ ಬುದ್ಧೇಃ ಪ್ರವೃದ್ಧಯೇ ||

ರಾಜಯೋಗಕ್ಕೂ ಶಿವಯೋಗಕ್ಕೂ ಪಾರಮಾರ್ಥಿಕವಾಗಿ ಯಾವ ಭೇದವೂ ಇರುವುದಿಲ್ಲ ಆದರೂ ಪರಶಿವಬ್ರಹ್ಮಸಾಕ್ಷಾತ್ಕಾರಾಪೇಕ್ಷಿಗಳಾದ ಮುಮುಕ್ಷುಗಳ ಜ್ಞಾನಾಭಿವೃದ್ಧಿಗೋಸ್ಕರ ಶಿವಯೋಗವು ಹೇಳಲ್ಪಟ್ಟಿದೆ

ಪ್ರತಿಪಾದ್ಯಸ್ತಯೋರ್ಭೇದಸ್ತಥಾ ಶಿವರತಾತ್ಮನಾಂ |
ತಸ್ಮಾನ್ಮನಃಸುಖಗ್ರಾಹ್ಯಃ ಶಿವಯೋಗಸ್ತು ಕೇವಲಃ ||

ಶಿವಸ್ವೀಕೃತಾತ್ಮರಿಗೆ ರಾಜಯೋಗ-ಶಿವಯೋಗಗಳಲ್ಲಿ ಭೇದವು ಹೇಳಲ್ಪಡಬೇಕಾಗಿದೆ ಆದುದರಿಂದ ಮೋಕ್ಷಾಪೇಕ್ಷಿಗಳು ಶಿವಯೋಗವನ್ನೇ ಆಚರಿಸಬೇಕು. ರಾಜಯೋಗಕ್ಕೂ ಶಿವಯೋಗಕ್ಕೂ ಇರುವ ಭೇದವೇನೆಂದರೆ—ಪಾತಂಜಲಯೋಗಶಾಸ್ತ್ರದಲ್ಲಿ ಗುಣತ್ರಯ ಸಾಮ್ಯಾವಸ್ಥೆಯೇ ಕಾರಣತ್ರಯವೆಂದೂ, ಪ್ರಕೃತಿಯಲ್ಲಿ ಪ್ರವಿಲಯವೇ ಅಮನಸ್ಕವೆಂದೂ ತಿಳಿದು ಪುರುಷಸಾಕ್ಷಾತ್ಕಾರವನ್ನು ಮಾಡಿಕೊಳ್ಳುವುದೇ ರಾಜಯೋಗವೆಂದು ಹೇಳಲ್ಪಡುವುದು ಆದರೆ ಶಿವಾಗಮಗಳಲ್ಲಿ ಶಿವಶಕ್ತ್ಯಾಧಾರವಾದ ಮಹಾಕುಂಡಲಿನೀಜನಿತತಾರತ್ರಯ ಸಾಕ್ಷಾತ್ಕಾರದ್ವಾರಾ ಆ ಶಕ್ತಿಯಲ್ಲಿ ವೃತ್ತಿಜ್ಞಾನವನ್ನು ಲಯಗೊಳಿಸಿ ಸರ್ವತೋಮುಖವಾಗಿ ವ್ಯಾಪ್ತವಾದ ಶಿವತತ್ತ್ವಾಭಿವ್ಯಕ್ತಿಯೇ 'ಶಿವಯೋಗ' ವೆಂದು ಹೇಳಲ್ಪಡುವುದು

[illegible] |
[illegible] |

ಈ ಶಿವಯೋಗವು—ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಪೂಜಾ ಎಂದು ಐದು ಬಗೆಯಾಗಿದೆ ಶಿವಪೂಜೆಯು ಶಿವಜ್ಞಾನಾದಿಗಳನ್ನು ಗರ್ಭೀಕರಿಸಿಕೊಂಡಿರುವುದರಿಂದ ಶಿವಪೂಜೆಯೇ ಮುಖ್ಯವಾಗಿ ಶಿವಯೋಗವೆನಿಸುವುದು.

[illegible] |
[illegible]

ಯಾವನು ಶಿವಪೂಜಾರೂಪವಾದ ಶಿವಯೋಗದಿಂದ ವಿಮುಖನಾಗಿ ಮನುಷ್ಯನೆನಿಸಿಕೊಳ್ಳುವನು ಅವನು ಈ ಸಂಸಾರಚಕ್ರದಲ್ಲಿ ಜನನಮರಣರೂಪದಿಂದ ಯಾವಾಗಲೂ ಪ್ರವರ್ತಿಸುತ್ತಿರುವನು.

[illegible] |
[illegible] |

ಶಿವಪೂಜೆಯು ಅಂತಃಪೂಜಾ ಬಹಿಃಪೂಜಾ ಎಂದು ಎರಡು ಬಗೆಯಾಗಿದೆ ಅಂತಃಪೂಜೆಯೇ ಮುಖ್ಯವಾದದು ಈ ಅಂತಃಪೂಜೆಯು ಬಾಹ್ಯಲಿಂಗಪೂಜೆಯಿಂದಲೇ ಉತ್ಪನ್ನವಾಗುವುದು ಬಾಹ್ಯವಾದ ಇಷ್ಟಲಿಂಗಪೂಜೆಯಿಲ್ಲದೆ ಅಂತರ್ಲಿಂಗಪೂಜೆಯು ಸಿದ್ಧಿಸುವುದಿಲ್ಲ ಅಂತರ್ಲಿಂಗಪೂಜೆಗೆ ಇಷ್ಟಲಿಂಗಪೂಜೆಯೇ ಮೂಲಸಾಧನವಾಗಿರುವುದು.

ತ್ರಿಣೇತ್ರಂ ತ್ರಿಗುಣಾಧಾರಂ ತ್ರಯಾಣಾಂ ಜನಕಂ ಪರಂ |
ವಾಮಾಂಗೇ [illegible] ಗಿರಿಜಾಂ [illegible] |
[illegible] ಹೃದಿ ಧ್ಯಾತ್ವಾ [illegible] |
ಪೂಜಯೇದಾಂತರದ್ರವ್ಯೈರ್ಭಾವನಯಾ [illegible] ||
ಶಾಂತ್ಯಂಬುಭಿರಭಿಷೇಚನಂ [illegible] |
ಶಕ್ತಿತ್ರಯಂ ಯಜ್ಞಸೂತ್ರಂ [illegible] |
ಸ [illegible] |
ಶಿವಾಯ [illegible] ಪ್ರಕಟಿತ [illegible] ಚ |

ಭಾವಮಾಂತರಮಾತ್ಮನಃ | [illegible] ಗುಣೋತ್ಕರೇಣ ಚ || [illegible] ಸುಖದುಃಖವರ್ಜಿತಂ | [illegible] ||

ರಜಸ್ತಮೋಗುಣ [illegible] ತಾಂಬೂಲಕಂ ಪ್ರಾಣಮಪ್ಯೇತಚ್ಚ | [illegible] ಪೂಜಾ [illegible] ಸಂಜ್ಞಿತಾ |

ತ್ರಿಣೇತ್ರಧಾರಿಯೂ, ತ್ರಿಗುಣಾಧಾರನೂ, ಆಣವಾದಿ ಮಲತ್ರಯನಾಶಕಾರಣನೂ, ತನ್ನ ವಾಮಭಾಗದಲ್ಲಿ ಉಮಾದೇವಿಯಿಂದ ಶೋಭಿಸುತ್ತಿರುವವನೂ ಆದ ಪರಶಿವನನ್ನು ಹೃತ್ಕಮಲದಲ್ಲಿ ಧ್ಯಾನಿಸುತ್ತ ನಿಶ್ಚಲಮನಸ್ಸುಳ್ಳವನಾಗಿ, ಆಭ್ಯಂತರೋಪಚಾರಗಳಿಂದ ಪೂಜಿಸಬೇಕು ಆಭ್ಯಂತರೋಪಚಾರಗಳಾವುವೆಂದರೆ—ಶಾಂತಿಯೇ ಅಭಿಷೇಕಜಲ, ವಿಶ್ವವ್ಯಾಪಕತಾಭಾವವೇ ವಸ್ತ್ರ, ಇಚ್ಛಾ-ಜ್ಞಾನ ಕ್ರಿಯೆಗಳೆಂಬ ಶಕ್ತಿತ್ರಯವೇ ಯಜ್ಞೋಪವೀತ, ಸ್ವಸ್ವರೂಪಜ್ಞಾನವೇ ಗಂಧಾನುಲೇಪನ, ಅಧಿಕವಾದ ಭೂತದಯೆಯೇ ಅಕ್ಷತ, ಪರಿಶುದ್ಧವಾದ ಭಕ್ತಿಯೇ ಪುಷ್ಪ, ಮನಸ್ಸು-ಬುದ್ಧಿ-ಅಹಂಕಾರ-ಪರಮಾಂತಃಕರಣ ಚತುಷ್ಟಯವೇ ಧೂಪ, ಇಂದ್ರಿಯಗುಣೋತ್ಕರವೇ ದೀಪ, ಸುಖದುಃಖವರ್ಜಿತವಾದ ಆತ್ಮಸ್ವರೂಪವೇ ನೈವೇದ್ಯ, ಸತ್ವರಜಸ್ತಮೋಗುಣಗಳೇ ತಾಂಬೂಲ, ಪ್ರಾಣವೇ ನಮಸ್ಕಾರ, ಈ ರೀತಿಯಾಗಿ ಆಭ್ಯಂತರೋಪಚಾರಗಳಿಂದ ಪರಶಿವನನ್ನು ಪೂಜಿಸಬೇಕು.

ಶಿವಯೋಗಸಾಧಕರಿಗೆ ಶಿವಯೋಗವು ಸಾಧ್ಯವಾಗಿಯೂ, ಹಠಯೋಗವು ಸಾಧನವಾಗಿಯೂ ಇರುವುದು ಹಠಯೋಗವು ಬಾಹ್ಯಾಷ್ಟಾಂಗ-ಅಂತರಾಷ್ಟಾಂಗಗಳಿಂದ ಕೂಡಿರುವುದು. ವೀರಶೈವನು ಅಂತರಾಷ್ಟಾಂಗಾತ್ಮದಲ್ಲಿ ಹಠಯೋಗದ್ವಾರಾ ಶಿವಯೋಗವನ್ನು ಸಾಧಿಸಬೇಕು

ಯಮನಿಯಮಗುಣೈರ್ಯತ್ ಸ್ವಾತ್ಮಶುದ್ಧಿಂ ವಿಧಾಯ |
ಸ್ವವಶಮಪಿ ಚ ಕೃತ್ವಾ ಭೂತ್ವಾ ಸ್ಥಿರಾತ್ಮಾ ||
ಅಸುನಿಯಮವಶೇನ ಸ್ನಾಪಯೇದ್ದಿವ್ಯಲಿಂಗಂ |
ಪ್ರಕಟಿತಚತುರಂಗಂ ಬಾಹ್ಯಮೇತದ್ವಿಧಾನಂ ||
ಶಂಭೋರ್ದತ್ತೇಂದ್ರಿಯಾರ್ಪಣಮೇವ ಗಂಧೋ |
ಧ್ಯಾನಂ ಪ್ರಸೂನನಿಚಯೋ ದೃಢಧಾರಣಾ ಸಾ ||
ದೀಪಃ ಸಮಾಧಿರಥ ಶುದ್ಧಮಥೋಪಹಾರ |
ಮಾಭ್ಯಂತರಾಖ್ಯಚತುರಂಗವಿಧಾನಮೇತತ್ ||
ಏವಮಷ್ಟಾಂಗಯೋಗೇನ ಸದಾಂತಃಪದ್ಮಸದ್ಮನಿ |
ಪೂಜಯೇತ್ ಪರಮಂ ದೇವಂ ಕಿಂ ಬಾಹ್ಯೈರ್ದೇವಪೂಜನೈಃ ||

ಯಮ-ನಿಯಮಗಳಿಗೆ ಸಂಬಂಧಪಟ್ಟ ಇಪ್ಪತ್ತು ಗುಣಗಳಿಂದ ಆತ್ಮಶುದ್ಧಿಯನ್ನು ಮಾಡಿಕೊಂಡು, ತನಗೆ ವಶಗಳಾದ ಪದ್ಮಾಸನಾದ್ಯಾಸನಗಳಿಂದ ಸ್ಥಿರವಾದ ದೇಹವುಳ್ಳವನಾಗಿ, ಪ್ರಾಣಾಯಾಮವೆಂಬ ಜಲದಿಂದ ದಿವ್ಯಲಿಂಗವನ್ನು ಅಭಿಷೇಚಿಸಬೇಕು. ಇದು ಬಾಹ್ಯಚತುರಂಗವೆನಿಸುವುದು ಶಿವನಿಗೆ ನೇತ್ರಾದಿಂದ್ರಿಯವಿಷಯನಿವೃತ್ತಿರೂಪಪ್ರತ್ಯಾಹಾರವೇ ಗಂಧವು, ಆ ಇಂದ್ರಿಯವಿಷಯನಿವೃತ್ತಿಯಿಂದ ಅಂತರ್ಮುಖವಾದ ಮನಸ್ಸಿನಲ್ಲಿ ಪ್ರವರ್ತಿಸುವ ಶಿವಧ್ಯಾನವೇ ಪುಷ್ಪವು, ಶಿವನನ್ನು ದೃಢವಾಗಿ ಧರಿಸುವುದೇ ಧಾರಣವು, ಜ್ಞಾತೃಜ್ಞಾನಜ್ಞೇಯರೂಪಸಮಾಧಿಯೇ ನೈವೇದ್ಯವು ಇದೇ ಆಭ್ಯಂತರಚತುರಂಗವೆನಿಸುವುದು ಶಿವಯೋಗಸಾಧಕನು ಈ ರೀತಿಯಾಗಿರುವ ಅಷ್ಟಾಂಗಯೋಗದಿಂದ ತನ್ನ ಹೃತ್ಕಮಲದಲ್ಲಿ ಶಿವನನ್ನು ಪೂಜಿಸಬೇಕು

ವೀರಶೈವಮತದಲ್ಲಿ ಶಿವಯೋಗಕ್ಕೆ 'ಭಕ್ತ-ಮಾಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ ಐಕ್ಯ' ಎಂಬ ಷಟ್ಸ್ಥಲಗಳೇ ಮುಖ್ಯಾಂಗಗಳಾಗಿರುತ್ತವೆ. ಯಮನಿಯಮಾದ್ಯಷ್ಟಾಂಗಗಳು ಈ ಆರು ಸ್ಥಲಗಳಲ್ಲಿಯೇ ಸಮಾವೇಶವಾಗುತ್ತವೆ

ಯಮೇನ ನಿಯಮೇನೈವ ಯುಕ್ತೋ ಭಕ್ತ ಇತಿ ಸ್ಮೃತಃ |
ಸ್ಥಿರಾಸನಸಮಾಯುಕ್ತೋ ಮಹೇಶಃ ಪರಿಕೀರ್ತಿತಃ ||
ಚರಾಚರಲಯಸ್ಥಾನಂ ಲಿಂಗಮಾಕಾಶಸಂಜ್ಞಕಂ |
ಪ್ರಾಣೇ ತಸ್ಮಿನ್ ಲಯಂ ಯಾತೇ ಪ್ರಾಣಲಿಂಗೀ ಭವೇತ್ ಪುಮಾನ್ |
ಪ್ರತ್ಯಾಹಾರೇಣ ಸಂಯುಕ್ತಃ ಪ್ರಸಾದೀತಿ ನ ಸಂಶಯಃ |
ಧ್ಯಾನಧಾರಣಸಂಪನ್ನಃ ಶರಣಸ್ತು ಭವೇತ್ ಸುಧೀಃ ||
ಲಿಂಗೈಕ್ಯಾನುಭವಾತ್ಮಾ ನಿಷ್ಕಲೈಕಸಮಾಧಿನಾ |
ಏವಮಷ್ಟಾಂಗಯೋಗೇನ ವೀರಶೈವೋ ಭವೇನ್ನರಃ ||

ಯಮನಿಯಮಗಳುಳ್ಳವನೇ 'ಭಕ್ತ' ನೆನಿಸುವನು ಆಸನದಿಂದ ಯುಕ್ತನಾದವನೇ 'ಮಹೇಶ್ವರ' ನೆನಿಸುವನು ಚರಾಚರಪ್ರಪಂಚಲಯಸ್ಥಾನಭೂತವಾದ ಲಿಂಗವೇ ಆಕಾಶವೆನಿಸುವುದು, ಇಂಥ ಆಕಾಶದಲ್ಲಿ ಪ್ರಾಣವು ಲೀನವಾಗಲು ಅವನು 'ಪ್ರಾಣಲಿಂಗಿ' ಯೆನಿಸುವನು. ಪ್ರತ್ಯಾಹಾರದಿಂದ ಕೂಡಿದವನು 'ಪ್ರಸಾದಿ' ಯೆನಿಸುವನು ಶಿವಧ್ಯಾನಧಾರಣಗಳಿಂದ ಕೂಡಿದವನು 'ಶರಣ' ನೆನಿಸುವನು. ನಿಶ್ಚಲಸಮಾಧಿಯಿಂದ ಕೂಡಿದವನು ಅದ್ವೈತಭಾವಾಪನ್ನನಾಗಿ 'ಐಕ್ಯ' ನೆನಿಸುವನು. ಈ ರೀತಿಯಾಗಿ ಅಷ್ಟಾಂಗರೂಪ ಷಟ್‌ಸ್ಥಲಗಳ ಆಚರಣೆಯುಳ್ಳವನೇ ವೀರಶೈವನೆನಿಸುವನೆಂದು ಲಿಂಗಪುರಾಣವು ಬೋಧಿಸುತ್ತಿರುವುದು.

ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಂ |
ಮಾನವಃ ಶಿವಯೋಗೇನ ಶಿವೋ ಭವತಿ ಕೇವಲಂ ||

ಕೀಟವು ಭ್ರಮರಯೋಗದಿಂದ ಸಾಕ್ಷಾತ್ ಭ್ರಮರವಾಗುವಂತೆ ಮಾನವನು ಶಿವಯೋಗದಿಂದ ಕೇವಲ ಶಿವನೇ ಆಗುವನು. ಇದೇ ಶಿವಯೋಗದ ರಹಸ್ಯವು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನ.

ಹರಿಹರ.

—

ಪೂರ್ವಗ್ರಾಂ ನಿಶ್ಚಯವಾದ ಪ್ರಕಾರ ಶ್ರೀಜಗದ್ಗುರುಗಳವರು ಹರಿಹರದ ವೀರಶೈವಮಂಡಳಿಯವರ ಪ್ರಾರ್ಥನೆಯಂತೆ ತಾ|| ೧೫—೯—೧೯೩೫ ಭಾನುವಾರ ಬೆಳಗ್ಗೆ ಎಂಟುಘಂಟೆಗೆ ಹರಿಹರ ಟೌನ್ನಿಗೆ ದಯಮಾಡಿಸಿದರು ಪುರವು ಚಪ್ಪರ ತಳಿರುತೋರಣಗಳಿಂದ ಕಂಗೊಳಿಸುತ್ತಿದ್ದಿತು. ಮಹಾಗುರುಗಳವರ ದರ್ಶನಾಪೇತ್ಯಾದರಕಾಂಕ್ಷೆಯಿಂದ ದೂರ ದೂರ ಪ್ರದೇಶಗಳಿಂದ ಶ್ರೀ ಪಟ್ಟಚರಾಧಿಕಾರಿಗಳೂ ವಿದ್ವಾಂಸರೂ ಭಕ್ತಮಾಹೇಶ್ವರರೂ ಸುಮಾರು ಹತ್ತುಸಾವಿರದವರೆಗೆ ಆಗಮಿಸಿದ್ದರು ಪುರಪ್ರಮುಖರಾದ ವೇ|| ಹೊಸಮಠದ ಚನ್ನಪ್ಪಯ್ಯನವರು, ವೇ|| ಚಂದ್ರಶೇಖರಪ್ಪಯ್ಯನವರು, ವೇ|| ಶಂಭುಲಿಂಗಪ್ಪಯ್ಯನವರು, ವೇ|| ಮೂಲಿಮಠದ ಸಿದ್ಧಪ್ಪಯ್ಯನವರು, ವೇ|| ಆಣಜಿಮಠದ ಚನ್ನಬಸವಪ್ಪಯ್ಯನವರು, ವೇ|| ಗಜಾಪುರಮಠದ ಗುರುಸಿದ್ಧಪ್ಪಯ್ಯನವರು, ವೇ|| ಗಜಾಪುರಮಠದ ಕೊಟ್ರಪ್ಪಯ್ಯನವರು, ಶ್ರೀಮಾನ್ ಬಾಸಿಂಗದ ಸಿದ್ಧಪ್ಪ, ಶ್ರೀಮಾನ್ ಮುದ್ವೀರಪ್ಪನವರ ವೀರಪ್ಪ, ಶ್ರೀಮಾನ್ ದಾವಣಗೇರಿ ಮಹಾದೇವಪ್ಪ, ಶ್ರೀಮಾನ್ ನಂದಿಗಾವಿ ಗೌಡ್ರ ಗುಂಡಪ್ಪ, ಶ್ರೀಮಾನ್ ಹೆಂಚಾಗರದ ಚನ್ನಪ್ಪ, ಶ್ರೀಮಾನ್ ಬೊಂಗಾಳಿ ಸುಬ್ಬಣ್ಣ, ಶ್ರೀಮಾನ್ ಮೇರಾಡಿ ರಾಚಪ್ಪ, ಶ್ರೀಮಾನ್ ಸೈಯ್ಯದ್ ಅಬ್ದುಲ್‌ರಬ್‌ಮುಲ್ಲಾ ಸಾಹೇಬರು, ಶ್ರೀಮಾನ್ ಮೌಲ್ವಿ ಅಬ್ದುಲ್‌ರಷೀದರು ಇವರೇ ಮೊದಲಾದ ಮಹಾಶಯರು ಅತ್ಯುತ್ಸಾಹದೊಡನೆ ನಿರ್ಮಾಣಮಂಟಪದಲ್ಲಿ ಇಸ್ತಕಬಾಲ ಸಮೇತವಾಗಿ ಸಮಯವನ್ನು ನಿರೀಕ್ಷಿಸಿಕೊಂಡಿದ್ದರು ಅಮಲ್ದಾರ್ ಸಾಹೇಬರವರು, ಪೋಲೀಸ್ ಇನಸ್ಪೆಕ್ಟರ್ ಸಾಹೇಬರವರು, ರೆವಿನ್ಯೂ ಇನಸ್ಪೆಕ್ಟರು, ಸಬ್ ಓವರ್ಸೀಯರು, ವೈಸ್‌ಪ್ರೆಸಿಡೆಂಟರು ಮುಂತಾದ ಅಧಿಕಾರಿಗಳು ಆಗಮಿಸಿದ್ದರು. ಶ್ರೀ ಜಗದ್ಗುರುಗಳವರು ದಯಮಾಡಿಸಿದ ಕೂಡಲೆ ಜನಸ್ತೋಮದ ಜಯಘೋಷವು ದಿಗಂತವನ್ನು ವ್ಯಾಪಿಸಿತು ಬಳಿಕ ಪೂಜ್ಯಪಾದರು ಸುವರ್ಣ ರಜತಾಂದೋಲಿಕೆಯನ್ನಾರೋಹಿಸಿದರು. ಸಕಲವಾದ್ಯಗಳು ಭೋರ್ಗರೆದವು ಹರಿಹರ, ನೀಮತಿ, ಯಳೆಹೊಳೆ, ತಿರಾಳಕೊಪ್ಪ ಮುಂತಾದ ಸ್ಥಳಗಳಿಂದ ಬಂದಿದ್ದ ಭಜನಮಂಡಲಿಯವರು ಮಂಜುಲವಾದ ಗಾನವೈಖರಿಯಿಂದ ಜಗದಾಚಾರ್ಯರ ಪದಗಳನ್ನು ತಾಳಮೇಳನದೊತನೆ ಪಠಿಸಲು ಆರಂಭಿಸಿದರು. ಎತ್ತನೋಡಿದತ್ತ ಶ್ರೀ ಜಗದಾಚಾರ್ಯರ ಸ್ತವನಧ್ವನಿಯೇ ತುಂಬಿದ್ದಿತು.

ಈ ಮಹೋತ್ಸವದಲ್ಲಿ ಅಮಲ್ದಾರ್ ಸಾಹೇಬರವರು ವಿಶೇಷಶ್ರಮವನ್ನು ಲೆಕ್ಕಿಸದೆ ಪ್ರಭುತ್ವದ ರಕ್ತಿಯಿಂದಲೂ ಸನಾತನಧರ್ಮಪ್ರೇಮದಿಂದಲೂ ಮಹೋತ್ಸವವನ್ನು ನಿರ್ವಿಘ್ನವಾಗಿ ಸಾಗಿಸಿದರು. ಈ ಮಹಾಶಯರ ಪ್ರಯತ್ನವು ಚಿರಸ್ಮರಣೀಯವಾಗಿರುವುದು ಹರಿಹರದ ಟೌನ್ನಿನ ವೀರಶೈವ ಸಮಾಜವು ಇವರಿಗೆ ವಂದನೆಯನ್ನರ್ಪಿಸುವುದು ಉತ್ಸವವು ಪ್ರಚಲಿತವಾಗಿ ಮುನ್ಸಿಪಾಲಿಟಿಯ ಚಪ್ಪರಕ್ಕೆ ಬಂದಕೂಡಲೆ ಮುನ್ಸಿಫಲ್ ಮೆಂಬರರು ಶ್ರೀ ಸನ್ನಿಧಾನಕ್ಕೆ ಹಾರ ತುರಾಯಿಗಳನ್ನರ್ಪಿಸಿ ಸನ್ಮಾನಿಸಿದರು. ಅಲ್ಲಿ ಶ್ರೀಮಾನ್ ವಾಸುದೇವಾಚಾರ್ಯರು ಸಂಸ್ಕೃತಪದ್ಯಗಳಿಂದ ಭಗವತ್ಪಾದರನ್ನು ಗೌರವಿಸಿ ಆನಂದವನ್ನುಂಟುಮಾಡಿದರು ಜಾಪದಿಮಖಾನದ ಚಪ್ಪರದಲ್ಲಿಯೂ ರಥ ಬೀದಿ ಮಖಾನದ ಮುಂದಿನ ಚಪ್ಪರದಲ್ಲಿಯೂ ಮಹಮ್ಮದೀಯ ಮಹಾಶಯರು ಮಹಾವಿಶ್ವಾಸದಿಂದ ಸಂಗೀತ ಸಮ್ಮೇಳನದೊಡನೆ ಶ್ರೀಮದಾಚಾರ್ಯರನ್ನು ಪದ್ಯರೂಪಸ್ತವನದಿಂದ ಗೌರವಿಸಿ ಹಾರ ತುರಾಯಿ ಮೊದಲಾದವುಗಳಿಂದ ತಮ್ಮ ವಿಶ್ವಾಸವನ್ನು ವ್ಯಕ್ತಗೊಳಿಸಿದರು ಪ್ರತಿವೀಧಿಗಳಲ್ಲಿಯೂ ತಮ್ಮ ತಮ್ಮ ಮನೆಯ ಮುಂದೆಯೂ ಸುಮಂಗಲೆಯರು ನೀರಾಜನವನ್ನೆತ್ತಿ ಫಲಾಶೀರ್ವಾದಗಳನ್ನು ಪಡೆಯುತ್ತಿದ್ದರು. ಈ ಶ್ರೀ ಮಹೋತ್ಸವದಲ್ಲಿ ಸ್ವಮತ ಪರಮತೀಯರು ಭಾಗಿಗಳಾಗಿದ್ದುದನ್ನು ನೋಡಿದರೆ ಅತ್ಯಾನಂದವೆನಿಸುತ್ತದೆ ಸಕಲ ಬೀದಿಗಳಲ್ಲಿಯೂ ಶ್ರೀ ಭಗವತ್ಪಾದರ ಆಂದೋಲಿಕೋತ್ಸವವು ಜರಗಿ ಹೊಸಮಠದ ಮುಂದೆ ವಿರಚಿತವಾಗಿದ್ದ ದರ್ಬಾರ್ ಮಂಟಪಕ್ಕೆ ಬಂದಿತು ಶ್ರೀಮದಾಚಾರ್ಯಭಗವತ್ಪಾದರು ಆಂದೋಲಿಕೆಯಿಂದವರೋಹಿಸಿ ಸಾಲಂಕೃತವಾದ ಸಿಂಹಾಸನವನ್ನಾರೋಹಿಸಿದರು. ಆಗ ಮಹಾಸಂಸ್ಥಾನದ ಪೌರಾಣಿಕರಾದ ಸುಣ್ಣಕಲ್ಲ ಬಿದರೆ ಆರಾಧ್ಯಮಠದ ವೇ|| ಪಂ|| ಬಸವಲಿಂಗಶಾಸ್ತ್ರಿಗಳು ಮನುಷ್ಯನ ಜನ್ಮಸಾಫಲ್ಯತೆಗೆ ಗುರುಸೇವೆಯೇ ಮುಖ್ಯವೆಂದು ಭಾಷಣಮಾಡಿದರು ಅನಂತರ ಸಮಾಜದ ಪರವಾಗಿ ಹೊಸಮಠದ ವೇ|| ಶಂಭುಲಿಂಗಯ್ಯನವರು ಅರ್ಪಣಪತ್ರಿಕೆಯನ್ನೋದಿ ಸಮರ್ಪಿಸಿದರು ಬಳಿಕ ಶ್ರೀ ಭಗವತ್ಪಾದರು ಸನಾತನಧರ್ಮಾಭಿಮಾನದಿಂದ ಸ್ವಮತಪರಮತವೆಂಬ ಭೇದವಿಲ್ಲದೆ ಹರಿಹರದ ಟೌನ್ನಿನ ಮಹಾಶಯರು ಪ್ರದರ್ಶಿಸಿದ ವಿಶ್ವಾಸಕ್ಕೆ ಆನಂದಭರಿತರಾಗಿ ಪ್ರಾಣಿಗಳ ಉದ್ಧಾರಕ್ಕೆ ಮಹಾತ್ಮರ ಅವತಾರವಿದ್ದು ಉದ್ಧಾರದ ಸಾಮಗ್ರಿಗಳು ಭಗವಂತನಿಂದ ಸಿದ್ಧಗೊಳಿಸಲ್ಪಟ್ಟಿದ್ದು ಸಂಪ್ರದಾಯಪ್ರಕಾರವಾಗಿ ಅವುಗಳನ್ನು ಲಕ್ಷ್ಯಿಸದೆ ಕೇವಲ ಐಹಿಕಸುಖಕ್ಕೆ ಮೋಹಿಸಿ ಕೆಡುವುದು ಯುಕ್ತವಲ್ಲವೆಂದೂ, ಈ ಸುಖದೊಡನೆ ಪಾರಮಾರ್ಥಿಕವಿಚಾರವನ್ನೇ ಮುಂದುವರಿಸಿ ಐಹಿಕಾಮುಷ್ಮಿಕಸುಖವನ್ನು ಪಡೆಯುವುದು ನರಜನ್ಮದ ಕರ್ತವ್ಯವೆಂದೂ, ಸರ್ವರೂ ಧರ್ಮಜಾಗ್ರತೆಗಾಗಿ ನಿಮ್ಮ ನಿಮ್ಮ ಮತಾಚಾರ್ಯರಲ್ಲಿ ಶ್ರದ್ಧಾನ್ವಿತರಾಗಿ ನಿಮ್ಮ ನಿಮ್ಮ ಆತ್ಮಧರ್ಮಗಳನ್ನು ಅನುಷ್ಠಿಸಿ ಕೃತಕೃತ್ಯರಾಗಿರಬೇಕೆಂದೂ ಉಪದೇಶಿಸಿದರು. ಅಷ್ಟಕ್ಕೆ ಸಮಯವು ಹೆಚ್ಚಾದುದರಿಂದ ಆಚಾರ್ಯರ ಜಯಘೋಷದೊಡನೆಯೂ, ರಾಜರ್ಷಿಪುಂಗವ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರ ಜಯಘೋಷದೊಡನೆಯೂ ಸಭೆಯು ವಿಸರ್ಜಿತವಾಯಿತು ಬಳಿಕ ಸಾಯಂಕಾಲಕ್ಕೆ ಆರುಘಂಟೆಗೆ ಸರಿಯಾಗಿ ಶ್ರೀ ಸನ್ನಿಧಾನದಲ್ಲಿ ದರ್ಬಾರು ನೆರೆಯಿತು ಬೆಂಗಳೂರು ಮಹಾಂತಿನ ಮಠಾಧ್ಯಕ್ಷ ಶ್ರೀ ಗಂಗಾಧರ ಶಿವಾಚಾರ್ಯರು ಭಕ್ತಿಯಿಲ್ಲದೆ ಐಹಿಕಾಮುಷ್ಮಿಕಫಲಗಳಾವುವೂ ಸಿದ್ಧಿಸುವದಿಲ್ಲವೆಂದೂ, ಲೌಕಿಕ ಪಾರಮಾರ್ಥಿಕಮಾರ್ಗಸಂಶೋಧನೆಗೂ ಉತ್ತರೋತ್ತರ ಶ್ರೇಯಃಪ್ರಾಪ್ತಿಗೂ ಗುರುಭಕ್ತಿಯೇ ಕಾರಣವೆಂದೂ ಸರ್ವರೂ ಸದ್ಭಾವನೆಯಿಂದ ಗುರುಸೇವೆಯನ್ನು ಮಾಡಿ ಕೃತಕೃತ್ಯರಾಗಬೇಕೆಂದೂ ಯುಕ್ತಿಪ್ರಮಾಣಗಳೊಡನೆ ಸಭಿಕರ ಮನೋವೃತ್ತಿಯು ಸಹಜಭಾವವನ್ನು ಕೈಕೊಳ್ಳುವಂತೆ ಲಲಿತವಾದ ಸರಣಿಯಿಂದ ಬೋಧಿಸಿದರು ಈ ವಿಷಯವನ್ನೇ ಮಹಾಗುರುಗಳವರು ಅಮೃತವಾಣಿಯಿಂದ ಸರ್ವರ ಮನಸ್ಸು ಪವಿತ್ರವಾಗುವಂತೆ ಸಮರ್ಥಿಸಿದರು. ಆ ದಿವಸದ ಕಾರ್ಯವು ಸಮಾಪ್ತಿಯಾಗಿ ಸಭೆಯು ವಿಸರ್ಜಿತವಾಯಿ.

ತಾ|| ೧೬ ರಲ್ಲಿ ಪುನಃ ಪ| ಬ್ರ|| ಗಂಗಾಧರ ಶಿವಾಚಾರ್ಯರ ಗುರುಮಹತ್ವದ ವಿಷಯದಲ್ಲಿ ವಿಸ್ತಾರವಾದ ಭಾಷಣವಾಗಿ ಸಭೆಯು ಮುಗಿಯಿತು. ತಾ|| ೧೭ ರ ಸಾಯಂಕಾಲ ಸನ್ನಿಧಾನದಲ್ಲಿ ಪುನಃ ದರ್ಬಾರ್ ನೆರೆಯಿತು. ಆದಿಯಲ್ಲಿ ಕರೂರುಮಠದ ಗವಯಿಗಳ ಸಂಗೀತವೂ, ಗುಬ್ಬಿ ಕೀರ್ತನಕೇಸರಿ ಶ್ರೀ ಶಿವರುದ್ರಶಾಸ್ತ್ರಿಗಳ ರೇಣುಕವಿಜಯದಲ್ಲಿ 'ಗೋರಕ್ಷ ಗರ್ವಭಂಗ' ಕೀರ್ತನವೂ ಜರಗಿ ಸಭೆಯು ವಿಸರ್ಜಿತವಾಯಿತು. ತಾ|| ೧೮ರಲ್ಲಿ ಶಿವಯೋಗಮಂದಿರದ ಪ್ರಸಿದ್ಧ ಗವಯಿಗಳಾದ ಪಂಚಾಕ್ಷರಗವಯಿಗಳ ಮಂಜುಳವಾದ ಗಾನವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು. ಪದ್ಧತಿಯಂತೆ ಪ್ರತಿನಿತ್ಯವೂ ಧರ್ಮೋಪನ್ಯಾಸ ಗಾನ ಕೀರ್ತನಪುರಾಣಗಳು ಜರಗುತ್ತಿರುವುವು ಮಹಾಗುರುಗಳನ್ನು ವೈಭವದಿಂದ ದಯಮಾಡಿಸಿಕೊಂಡು ಬಂದು ದರ್ಶನಾಶೀರ್ವಾದಗಳಿಗೆ ಸರ್ವರನ್ನೂ ಭಾಗಿಗಳನ್ನು ಮಾಡಿ ಧರ್ಮಶ್ರವಣದಿಂದ ಚಿತ್ತವೈಕಲ್ಯವನ್ನು ತೊಲಗಿಸಿ ಶ್ರೇಯಃಫಲಕ್ಕೆ ಅಧಿಕಾರಿಗಳನ್ನು ಮಾಡಿದ ಹರಿಹರ ಟೌನ್ನಿನ ವೀರಶೈವಸಮಾಜವೇ ಕೃತಕೃತ್ಯವೆಂದು ಆನಂದದಿಂದ ಹೇಳಬೇಕಾಗಿದೆ. ಈ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯ ಭಗವತ್ಪಾದರವರು ಸಕಲ ಸೌಖ್ಯಗಳನ್ನು ಕರುಣಿಸಿ ಕಲಿಕಾಲದಿಂದುಂಟಾದ ಧರ್ಮಹ್ರಾಸವನ್ನು ದೂರಮಾಡಿ ಸರ್ವತ್ರ ಗುರುದೈವತಾಭಕ್ತಿಯು ನೆಲೆಗೊಂಡು ಸುಖಸಿದ್ಧಿಯುಂಟಾಗುವಂತೆ ಜಗತ್ತನ್ನು ಪೊರೆಯಲೆಂದು ಭಗವಂತನನ್ನು ಅನನ್ಯಭಾವದಿಂದ ಪ್ರಾರ್ಥಿಸುವ,

ಗುರುಭಕ್ತ,
ಕೊಟ್ರಪ್ಪ, ಬೇವಿನಹಳ್ಳಿ.

ಸ್ವೀಕಾರ

—

ಸೊಲ್ಲಾಪುರ ತಾ|| ದಿಂಡೂರು ಗ್ರಾಮದಲ್ಲಿ ನೆರವೇರಿದ ಶ್ರೀ ರೇಣುಕವಿಜಯಪುರಾಣ ಸಮಾಪ್ತಿಸಮಾರಂಭ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ಮತ್ತು ಸೊಲ್ಲಾಪುರ ತಾ|| ವಡಗಾಂವದಲ್ಲಿ ನೆರವೇರಿದ ಶಿವದೀಕ್ಷಾಸಮಾರಂಭ ಸಮಯದಲ್ಲಿ ಸಮರ್ಪಿಸಿದ 1 ರೂ. ಒಟ್ಟು 3 ರೂ. ಗಳು ಶ್ರೀ|| ಷ|| ಬ್ರ|| ಹೋಟಗಿ ಬೃಹನ್ಮಠದ ಶ್ರೀ|| ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಜಿ|| ಗದಗ ತಾ|| ನಾರಾಯಣಪುರ ಗ್ರಾಮದಲ್ಲಿರುವ ವೇ|| ಹಿರೇಮಠದ ಅಡವಯ್ಯನವರು ಮತ್ತು ಮ|| ತಮ್ಮಪ್ಪ ಹಂಚಿನಾಳ ಇವರು ತಮ್ಮ ತಮ್ಮ ಗೃಹದಲ್ಲಿ ಶ್ರೀ ಜಗದ್ಗುರು ರೇಣುಕ ನಾಮ ಪಾರಾಯಣವನ್ನು ಮಾಡಿಸಿ ಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಉಭಯರೂ ಪ್ರಭಾಪೋಷಣಕ್ಕಾಗಿ ಒಂದೊಂದು ರೂಪಾಯಿಯಂತೆ 2 ರೂಪಾಯಿಗಳನ್ನು ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

೨೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ.

—

ಅಧ್ಯಕ್ಷರು—ಶ್ರೀಮಾನ್ ಎನ್ ಎಸ್ ಸುಬ್ಬರಾಯರವರು.

—

ಬರುವ ಡಿಸೆಂಬರ್ ತಿಂಗಳಲ್ಲಿ ಬೊಂಬಾಯಿಪಟ್ಟಣದಲ್ಲಿ ನಡೆಯಲಿರುವ ೨೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಬೇಕೆಂದು ಅಲ್ಲಿಯ ಸ್ವಾಗತ ಮಂಡಲಿಯೂ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯೂ ಬೇಡಿಕೊಂಡ ಮೇರೆಗೆ, ಮೈಸೂರು ಸಂಸ್ಥಾನದ ವಿದ್ಯಾಧಿಕಾರದ ಇಲಾಖೆಯ ಡೈರೆಕ್ಟರರಾದ ಶ್ರೀಮಾನ್ ಎನ್. ಎಸ್ ಸುಬ್ಬರಾವ್ ಎಂ.ಎ (ಕ್ಯಾಂಟಬ್), ಬಾರ್ ಅಟ್ ಲಾ, ಅವರು ಅನುಗ್ರಹಮಾಡಿ ಒಪ್ಪಿರುತ್ತಾರೆ ಘನವಿದ್ವಾಂಸರೂ ವಿದ್ಯಾಸೇವಾದಕ್ಷರೂ ಆಗಿ ಸಕಲ ಭಾರತದ ವಿದ್ವನ್ಮಂಡಲಿಯಲ್ಲಿ ಮನ್ನಣೆ ಪಡೆದಿರುವ ಈ ಮಹಾಶಯರು ಮುಂದಿನ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿರುವುದು ಎಲ್ಲ ಕರ್ನಾಟಕರಿಗೂ ಸಂತೋಷಪ್ರದವಾಗಿರುವುದು.

ಸಾಹಿತ್ಯ ಸಮ್ಮೇಳನದ ಜೊತೆಗೆ ಕಲಾಪ್ರದರ್ಶನ ಮೊದಲಾದ ಅನೇಕ ಆಕರ್ಷಕವಾದ ಉತ್ಸವಗಳನ್ನು ಏರ್ಪಡಿಸಬೇಕೆಂದು ಬೊಂಬಾಯಿ ಸ್ವಾಗತ ಮಂಡಲಿಯವರು ಉದ್ಯುಕ್ತರಾಗುತ್ತಿದ್ದಾರೆ. ಎಲ್ಲ ಕನ್ನಡಿಗರೂ ಅಲ್ಲಿಗೆ ದಯಮಾಡಿ ಉತ್ಸವವನ್ನು ಯಶಸ್ವಿಯನ್ನಾಗಿಸಬೇಕೆಂದು ಪರಿಷತ್ತು ಬೇಡುತ್ತದೆ.

ಬೆಂಗಳೂರು ಸಿಟಿ
ತಾ|| ೧೩-೯-೧೯೩೫

A. ಕೆ. ವೆಂಕಟರಾಮಯ್ಯ,
ಗೌರವ ಕಾರ್ಯದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯರ [illegible]

ಸಾರ್ವಜನಿಕ ಗಜಾನನ ಮಹೋತ್ಸವ ಕುಂದಗೋಳ.

ಕುಂದಗೋಳ ಪ್ರಮುಖರಾದ ಸಮಸ್ತ ಹಿಂದೂಪರ ಜನವರು ಸಾರ್ವಜನಿಕ ಗಜಾನನೋತ್ಸವವನ್ನು [illegible] ವಿಧ್ಯುಕ್ತವಾಗಿ [illegible] ಶ್ರೀಯುತ [illegible] ಮುನಿಸಿಪಾಲಿಟಿ ಚೇರಮನ್ ಎಚ್. ಎಸ್. [illegible] ಎಲ್ ಎಲ್ ಬಿ ಮತ್ತು [illegible] ಮೊದಲಾದ ಮುಖಂಡರು ಸಮಸ್ತ ಹಿಂದೂ ಸಮಾಜದವರ ಸಹಾನುಭೂತಿಯನ್ನು ಹೊಂದಿ ಇಲ್ಲಿ ಶ್ರೀ ಭೂತೇಶ್ವರ [illegible] ದಲ್ಲಿ [illegible] ಶ್ರೀ ಗಜಾನನನ ಮಂಗಲಮೂರ್ತಿಯನ್ನು ಪ್ರತಿಷ್ಠಿಸಿ [illegible] ಮಾಡಿದರು.

ಪ್ರತಿವರ್ಷವು ಉತ್ಸವದ [illegible] ಆದರೆ ಈ ವರ್ಷದ [illegible] ಸರ್ವಜನರಿಗೂ [illegible] ಉತ್ತರ [illegible] ಸೌಕರ್ಯವನ್ನೂ [illegible] ದಿವಸ ಉತ್ಸವ ಸಮಿತಿಯವರ [illegible] ಶ್ರೀ [illegible] ಬೃಹನ್ಮಠದ [illegible] "ಶ್ರೀ ಗಣೇಶನ [illegible]" ವನ್ನು [illegible] ಉಪದೇಶಮಾಡಿದರು. [illegible] ದಿವಸ [illegible] ಮುನಿಸಿಪಾಲಿಟಿ ಚೇರಮನ್ನರಾದ ಶ್ರೀ [illegible] ಸ್ವದೇಶವ್ರತ [illegible] ಉಪದೇಶ ಮಾಡಿದರು. [illegible] ದಿವಸ [illegible] ಕರ್ನಾಟಕ [illegible] ಶ್ರೀ [illegible] 'ವಿಜಯನಗರದ [illegible]' ವಿಷಯವನ್ನು [illegible] ಉಪದೇಶಮಾಡಿದರು. [illegible] ದಿವಸ ಶ್ರೀ [illegible] ಬೃಹನ್ಮಠದ [illegible] 'ಹಿಂದೂಸಂಘಟನ' [illegible] ಉಪದೇಶಮಾಡಿದರು. [illegible] ದಿವಸ ಅಂದರೆ ಶ್ರೀ ಗಜಾನನ ವಿಸರ್ಜನೆಯ ದಿವಸ ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಶ್ರೀ [illegible] ಸತ್ಯಾಗ್ರಹ [illegible] ಮತ್ತು [illegible] ಆನಂದಗೊಳಿಸಿದರು. ಅನಂತರ [illegible] ಅಧ್ಯಕ್ಷರಾದ ಶ್ರೀ [illegible] ಶ್ರೀಮಂತ [illegible] ಶ್ರೀ ಗಜಾನನ [illegible] ಸಭಾಕಾರ್ಯವನ್ನು ಸಮಾಪ್ತಿಗೊಳಿಸಿದರು. ಅನಂತರ [illegible] ವಿವಿಧ ಮಂಗಲವಾದ್ಯ ವೈಭವದೊಡನೆ ಮಂಗಲಮೂರ್ತಿಯ ಮೆರವಣಿಗೆಯನ್ನು ಹೊರಡಿಸಿ [illegible] ಬೃಹನ್ಮಠದ ಹೊಂಡದಲ್ಲಿ ಶ್ರೀ ಗಜಾನನಮೂರ್ತಿಯನ್ನು ವಿಸರ್ಜನ ಮಾಡಿ ಪ್ರಸಾದಾಶೀರ್ವಾದದಿಂದ ಸಮಸ್ತರೂ [illegible] ಈ ವರ್ಷದ ಉತ್ಸವಕ್ಕೆ ಸಮಸ್ತ ಧರ್ಮದವರೂ [illegible] ಸಹಕಾರವನ್ನಿತ್ತು [illegible] ಜಾಗೃತಿಯುಂಟಾಯಿತನ್ನಲಿಕ್ಕೆ [illegible] ಶ್ರೀ ಗಣೇಶನು [illegible] ಕುಂದಗೋಳದ ಪ್ರಮುಖರಿಗೆ [illegible] ಅನುಗ್ರಹಿಸಿ [illegible] ಶ್ರೀ ಗಣಾಧಿನಾಥನನ್ನು ಪ್ರಾರ್ಥಿಸುತ್ತೇನೆ.

ಓರ್ವ ಶ್ರೀಗಜಾನನ ಭಕ್ತ

೨೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೊಂಬಾಯಿ ಪಟ್ಟಣದಲ್ಲಿ

೨ನೆಯ ಸಮಾಚಾರ ಪತ್ರಿಕೆ.

೧ನೆಯ ಸಮಾಚಾರ ಪತ್ರಿಕೆಯಲ್ಲಿ ತಿಳಿಸಿದಂತೆ ಬೊಂಬಾಯಿ ಪಟ್ಟಣದಲ್ಲಿ ನಡೆಯಲು ನಿಶ್ಚಯವಾಗಿರುವ ೨೧ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬೇಕಾದ ಸನ್ನಾಹಗಳು ತೃಪ್ತಿಕರವಾಗಿ ಜರುಗುತ್ತಿವೆಯೆಂದು ಆ ಪಟ್ಟಣದಿಂದ ಪ್ರತಿವಾರವೂ ವರ್ತಮಾನ ಬರುತ್ತಿದೆ.

ಸ್ವಾಗತ ಮಂಡಳಿ

ಈ ಬಗೆ ಅಲ್ಲಿ ಏರ್ಪಟ್ಟಿರುವ ಸ್ವಾಗತ ಮಂಡಳಿಯು [illegible] ಕೆಲಸ ಮಾಡುತ್ತಿದೆ. ಬೊಂಬಾಯಿ ಸರಕಾರದ ವಿದ್ಯಾ [illegible] ದಿವಾನ್‌ಬಹದ್ದೂರ ಎಸ್. ಟಿ. ಕಂಬಳಿ ಎಂ. ಎ. ಎಲ್ ಎಲ್ ಬಿ ಅವರು ಸ್ವಾಗತ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ಸಮ್ಮೇಳನದ ಏರ್ಪಾಟು [illegible] ಬಹು ವಿಚಕ್ಷಣೆಯಿಂದ ನಡೆಯುತ್ತಿವೆ.

ಕಾರ್ಯಕ್ರಮಗಳು

೧೯೩೫ನೆಯ ಡಿಸೆಂಬರ [illegible] ೨೭ನೆಯ ತಾರೀಖುಗಳು [illegible] ಸಮ್ಮೇಳನ ನಡೆಯುವುದು ಗೊತ್ತಾಗಿದೆ.

ಬಿಡಾರ—ಸಂಚಾರ

ಸಮ್ಮೇಳನಕ್ಕಾಗಿ ಬೊಂಬಾಯಿಗೆ ಬರುವ [illegible] ಪ್ರತಿನಿಧಿಗಳು [illegible] ಗೊತ್ತುಮಾಡುವುದಾಗಿ ಸ್ವಾಗತ ಮಂಡಳಿಯವರು ಬರೆಯುತ್ತಾರೆ.

ಬೊಂಬಾಯಿ ಪಟ್ಟಣದಲ್ಲಿ [illegible] ಬಿಡಾರದಿಂದ ಸಮ್ಮೇಳನ [illegible] ಸ್ವಾಗತ ಮಂಡಳಿಯವರು [illegible] ಮಾಡಲಿದ್ದಾರೆ.

ಸಮ್ಮೇಳನಕ್ಕೆ [illegible] ಅನುಕೂಲಗಳನ್ನು [illegible] ಸ್ವಾಗತ ಮಂಡಳಿಯು [illegible] ವ್ಯವಸ್ಥೆ ಮಾಡಲು ಆಲೋಚಿಸುತ್ತಿದ್ದಾರೆ.

ಪ್ರತಿನಿಧಿತ್ವ (Delegateship)

ಸಮ್ಮೇಳನದ ಬಗೆ [illegible] ಪ್ರತಿನಿಧಿಗಳಾಗಬಹುದೆಂಬುದನ್ನು ಪರಿಷತ್ತಿನ [illegible] ಬೊಂಬಾಯಿ ಸ್ವಾಗತ ಮಂಡಳಿಯು [illegible] ನಿರ್ಧರಿಸಿರುತ್ತದೆ:—

'ಕರ್ನಾಟಕ ಸಾಹಿತ್ಯ ಸಮ್ಮೇಳನದ ಉದ್ದೇಶಗಳನ್ನು [illegible] ಸಮ್ಮೇಳನದ ಕಾರ್ಯಗಳಲ್ಲಿ ಭಾಗವಹಿಸಲು [illegible] ಸ್ವಾಗತಮಂಡಳಿಯ [illegible] ಪ್ರತಿನಿಧಿಗಳು [illegible] ಪ್ರತಿನಿಧಿಗಳು [illegible] ಸಮ್ಮೇಳನದಲ್ಲಿ [illegible] ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸಲು ಅರ್ಹರಾಗಿರುವರು.'

ಆದರೆ ಹೀಗೆ ಸಮ್ಮೇಳನದ ಪ್ರತಿನಿಧಿಯಾದ ಮಾತ್ರದಿಂದ [illegible] ಕರ್ನಾಟಕ ಸಾಹಿತ್ಯ ಪರಿಷತ್ತಿನ ಸದಸ್ಯರೆಂತೆ ಭಾವಿಸಲ್ಪಡಲಾರರು.

ಈ ಮೇಲಿನ ನಿಯಮವು ಪರಿಷತ್ತಿನ ಅಂಗಸಂಸ್ಥೆಗಳ ಪ್ರತಿನಿಧಿಗಳಿಗೆ [illegible] ಅನ್ವಯಿಸುವುದು.

ಪ್ರಬಂಧಗಳು

ಸಮ್ಮೇಳನಕ್ಕೆ [illegible] ಪ್ರಬಂಧಗಳನ್ನು ಕಳುಹಿಸಬೇಕೆಂದಿರುವವರು ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ [illegible] ಮೇಲಿನ ತೀರ್ಮಾನದಿಂದ ಸ್ಪಷ್ಟವಾಗಿದೆ.

೧ನೆಯ ಸಮಾಚಾರ ಪತ್ರಿಕೆಯಲ್ಲಿ ತಿಳಿಸಿರುವ ಮೇರೆಗೆ [illegible] ವಿಷಯಗಳನ್ನು [illegible] ಪ್ರಬಂಧಗಳಿಗಾಗಿ ಅವುಗಳ ಸ್ವಭಾವವನ್ನನುಸರಿಸಿ [illegible] ಗೋಷ್ಠಿಗಳನ್ನು ಏರ್ಪಡಿಸಬೇಕಾಗುತ್ತದೆ. ಆ ಬಗೆ ಕಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕಾಗಿ ಪ್ರಬಂಧಗಳು ಎಷ್ಟೆಷ್ಟು ಬರಬಹುದು ಮತ್ತು ಯಾವಯಾವ ಜಾತಿಯವಿರಬಹುದು—ಎಂಬ ವಿವರವನ್ನು ಕಾರ್ಯನಿರ್ವಾಹಕ ಮಂಡಲಿ ಸ್ವಾಗತ ಮಂಡಲಿಗಳು ಆದಷ್ಟು ಬೇಗ ಮುಂದಾಗಿ ತಿಳಿಯುವುದು ಅವಶ್ಯವಾಗಿದೆ. ಆದಕಾರಣ ಪ್ರಬಂಧಗಳನ್ನು ಕಳುಹಿಸಬೇಕೆಂದಿರುವವರು ಈ ಸಮಾಚಾರ ಪತ್ರಿಕೆಯನ್ನು ಕಂಡ ಕೂಡಲೆ ತಮ್ಮ ಉದ್ದೇಶವನ್ನು [illegible] ಪರಿಷತ್ತಿಗೆ ತಿಳಿಯಪಡಿಸಿದಲ್ಲಿ ನಮಗೆ ದೊಡ್ಡ ಉಪಕಾರವಾಗುವುದು. ಪ್ರಬಂಧಗಳ ಸಂಗ್ರಹಗಳನ್ನು ಕಳುಹಿಸಲು ಆಕ್ಟೋಬರು ಕಡೆಯವರೆಗೂ ಅವಕಾಶವಿರುವುದಾದರೂ ತಮ್ಮ ಉದ್ದೇಶವನ್ನು ಮಾತ್ರ ಸಾಕಷ್ಟು ಮುಂಚಿತವಾಗಿ ಈಗಲೇ ಪರಿಷತ್ತಿಗೆ ತಿಳಿಯಪಡಿಸಬೇಕೆಂದು ಬೇಡುತ್ತೇನೆ.

ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಸೇರಲಿಚ್ಛಿಸುವ ಅಭಿಮಾನಿಗಳೂ ಸಮ್ಮೇಳನದ ಏರ್ಪಾಟುಗಳನ್ನಾಗಲಿ ಇತರ ಯಾವ ವಿವರಗಳನ್ನಾಗಲಿ ತಿಳಿಯಬಯಸುವವರೂ ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯತಕ್ಕದ್ದು:—

ಶ್ರೀನಿವಾಸ ಜಿ. ಕೆ. ಬೆಟಗೇರಿ, ಬಿ. ಎ. ಎಲ್ ಎಲ್ ಬಿ
ಗೌ|| ಕಾರ್ಯದರ್ಶಿ ಸ್ವಾಗತಮಂಡಲಿ,
೨೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ
ನಂ. ೮, ದ್ವಾರಕಾದಾಸ್ ಮ್ಯಾನ್ಷನ್
ಬೆನ್‌ಹ್ಯಾಮ್ ಹಾಲ್ ಲೇನ್ ಗಿರಗಾಂ ಬೊಂಬಾಯಿ.

ಪರಿಷತ್ತಿನ ವಾರ್ಷಿಕ ಸಭೆ

ಪರಿಷತ್ತಿನ ನಿಬಂಧನೆಗಳ ಪ್ರಕಾರ ಕರ್ನಾಟಕ ಸಾಹಿತ್ಯ ಪರಿಷತ್ತಿನ ೨೦ನೆಯ ವಾರ್ಷಿಕಾಧಿವೇಶನವು ಬರುವ ಡಿಸೆಂಬರ್ ೨೭ನೆಯ ತಾರೀಖು ಗೊತ್ತಾದ ನಡೆಯುವುದು. ಅದಕ್ಕೆ ಕ್ರಮವಾಗಿ ಆಹ್ವಾನ ಪತ್ರಿಕೆಯನ್ನು (Notice) ಬೇರೆ ಕಾಲದಲ್ಲಿ ಕಳುಹಿಸಲಾಗುವುದು. ಆ ವಾರ್ಷಿಕಾಧಿವೇಶನದ ತೀರ್ಮಾನಗಳಲ್ಲಿಯೂ ಚುನಾವಣೆಗಳಲ್ಲಿಯೂ ಅಭಿಮಾನಿಗಳು ಭಾಗವಹಿಸಬೇಕೆಂದು ಬಯಸುವವರು ಆ ಅಧಿವೇಶನದ ಆಹ್ವಾನ ಪತ್ರಿಕೆಯ (Notice) ತಾರೀಖಿಗೆ ಎರಡು ತಿಂಗಳ ಹಿಂದಿನಿಂದಲೂ ಸದಸ್ಯರಾಗಿರಬೇಕೆಂದು ನಿಬಂಧನೆ (೨೭ ಕ ಹೊಸದು) ಇರುತ್ತದೆ. ಮುಂದಿನ ವಾರ್ಷಿಕಾಧಿವೇಶನದ ಆಹ್ವಾನಪತ್ರಿಕೆಯು ನಿಬಂಧನೆಯ ಪ್ರಕಾರ ನವೆಂಬರ್ ೧೪ನೆಯ ತಾರೀಖು ಹೊರಡಬೇಕಾಗುವುದು. ಆದಕಾರಣ ಇನ್ನು ಮುಂದೆ ಪರಿಷತ್ತಿನ [illegible] ತೀರ್ಮಾನಗಳಲ್ಲಿ ಭಾಗವಹಿಸಬೇಕೆಂದು ಇಚ್ಛಿಸುವ (ಇದುವರೆಗೆ ಸದಸ್ಯರಾಗದೆ ಇರುವ) ಅಭಿಮಾನಿಗಳು ೧೯೩೫ನೆಯ ಸೆಪ್ಟೆಂಬರ್ ೧೪ನೆಯ ತಾರೀಖಿನೊಳಗಾಗಿ ಸದಸ್ಯರಾಗಿ ಸೇರಬೇಕು. [illegible] ಅಭಿಮಾನಿಗಳೂ ಇದನ್ನು ಕೃಪೆಯಿಂದ ಗಮನಿಸಿ [illegible] ಸದಸ್ಯತ್ವದ ಅಪೇಕ್ಷಾಪತ್ರಗಳನ್ನು ಚಂದಾ ಹಣದೊಡನೆ ಪರಿಷತ್ತಾಫೀಸಿಗೆ ಕಳುಹಿಸಬೇಕೆಂದು ಬೇಡುತ್ತೇನೆ.

ಚಂದಾ ಬಾಕಿ

ಆಜೀವ ಸದಸ್ಯರು—ಪರಿಷದಧಿವೇಶನದ ತೀರ್ಮಾನ ಚುನಾವಣೆಗಳಲ್ಲಿ ಭಾಗವಹಿಸಲಿಚ್ಛಿಸುವ ಸದಸ್ಯರು ತಮ್ಮಿಂದ ಪರಿಷತ್ತಿಗೆ ಸಲ್ಲಬೇಕಾದ ಎಲ್ಲ ಹಣವನ್ನೂ ಅಧಿವೇಶನದ ವೇಳೆಗೆ ಪೂರ್ತಿ ಸಲ್ಲಿಸಿರಬೇಕೆಂದು ಪರಿಷತ್ತಿನ ೨೭ (ಕ) ನಿಬಂಧನೆ (ಹೊಸದು) ಹೇಳುತ್ತದೆ. ಈ ವಿಚಾರದಲ್ಲಿ ಆಜೀವ ಸದಸ್ಯರಿಗೆ ಸಂಬಂಧಪಟ್ಟ ಏರ್ಪಾಟು ಈ ಕೆಳಗಿನಂತೆ ಇರತಕ್ಕದ್ದೆಂದು ಕಾರ್ಯನಿರ್ವಾಹಕ ಮಂಡಲಿ (ತಾ|| [illegible] ರಲ್ಲಿ) ತೀರ್ಮಾನಿಸಿರುತ್ತದೆ:—

'ಪರಿಷತ್ತಿನ ಆಜೀವ ಸದಸ್ಯರುಗಳು ಕೊಡಬೇಕಾದ ಹಣವನ್ನು [illegible] ಒಂದೇ ವೇಳೆಗೆ [illegible] ಕಂತುಗಳಲ್ಲಿ [illegible] ಕಂತುಗಳನ್ನು ಸಲ್ಲಿಸತಕ್ಕದ್ದು. [illegible] ಅಂಥವರು [illegible] ಕಂತುಗಳನ್ನು ಸಲ್ಲಿಸದೇ ಇದ್ದರೆ, ಅದನ್ನು ೨೭ (ಕ) ನಿಬಂಧನೆಯ ಅರ್ಥವಾಗುವ ಸಂದರ್ಭದಲ್ಲಿ 'ಬಾಕಿ' ಎಂದು ಪರಿಗಣಿಸತಕ್ಕದ್ದು.'

ಇದುವರೆಗೆ ಆಜೀವ ಸದಸ್ಯರಾದವರಲ್ಲಿ ಕೆಲವರು ತಮ್ಮ ಚಂದಾ ಹಣವನ್ನು ಕಂತುಗಳಲ್ಲಿ ಕೊಡುವ ರಿಯಾಯಿತಿಯನ್ನು ಪಡೆದುಕೊಂಡವರಾಗಿರುತ್ತಾರೆ. ಅಂಥವರು ವಿಶೇಷಾಧಿವೇಶನಗಳಲ್ಲಿ ಅಭಿಮತಕೊಡುವ ಮತ್ತು ಅಧ್ಯಕ್ಷರಿಯಾಗುವ ಅಧಿಕಾರವನ್ನು ಉಪಯೋಗಿಸಬೇಕಾದರೆ ಮೇಲಿನ ನಿಬಂಧನೆಯ ಪ್ರಕಾರ 'ಸಲ್ಲಬೇಕಾದ'—ಎಂದರೆ ಗೊತ್ತಾಗಿರುವ—ಕಂತುಗಳನ್ನು ಸಲ್ಲಿಸುವುದು ಅವಶ್ಯವಾಗುತ್ತದೆ.

ಮೇಲಿನ ಕಂತು ಪದ್ಧತಿಯು ತೀರ್ಮಾನವು ಲಿಖಿತವಾಗಿದ್ದ ಬಂದಿರುವುದು ಈಗಲೇ ಆಗಿದ್ದರೂ, ಅದು ಬಹು ದಿವಸದಿಂದ ಕಾರ್ಯನಿರ್ವಾಹಕ ಮಂಡಲಿಯ ನಡವಳಿಕೆಯಲ್ಲಿ ಬಾಳುತ್ತಾ ಬಂದಿದ್ದಾಗಿದೆ. [illegible] ಸಂದರ್ಭಗಳು [illegible] ಸಂದರ್ಭಗಳೂ ಒದಗಿದ್ದು ಇರುವುದಕ್ಕೆ ಕಾರ್ಯನಿರ್ವಾಹಕ ಮಂಡಲಿಯ ಮೇಲಿನ ತೀರ್ಮಾನವು ಅಂಥ ಸಂದರ್ಭಗಳಿಗೂ ಅನ್ವಯಿಸತಕ್ಕದ್ದಾಗಿದೆ. ಹಿಂದಿನ ಏರ್ಪಾಟು [illegible] ಎಲ್ಲ ಬಾಕಿಯ ಸಂದರ್ಭಗಳಿಗೂ ಮೇಲಿನ ತೀರ್ಮಾನವನ್ನು ಅನ್ವಯಿಸುವುದು ಲೆಕ್ಕಗಳ ದೃಷ್ಟಿಯಿಂದಲೂ ಕಾರ್ಯದೃಷ್ಟಿಯಿಂದಲೂ ಅನುಕೂಲವಾಗುವುದು. ತಮ್ಮ ಚಂದಾ ಹಣವನ್ನು ಇನ್ನೂ ಪೂರ್ತಿಯಾಗಿ ಸಲ್ಲಿಸದಿರುವ ಎಲ್ಲ ಆಜೀವ ಸದಸ್ಯರುಗಳೂ ಇದನ್ನು ಕೃಪೆಯಿಂದ ಗಮನಕ್ಕೆ ತಂದುಕೊಳ್ಳಬೇಕೆಂದು ನಂಬಿದ್ದೇನೆ.

ವಾರ್ಷಿಕ ಸದಸ್ಯರು—'ವರ್ಷದ [illegible] ಚಂದಾ ಕೊಡತಕ್ಕ ಸದಸ್ಯರಲ್ಲಿ ಯಾರು ತಮ್ಮ ಸದಸ್ಯತ್ವ ಪ್ರಾರಂಭದ ತಾರೀಖಿನಿಂದ ಹನ್ನೆರಡು ತಿಂಗಳುಗಳೊಳಗಾಗಿ ತಮ್ಮ ಚಂದಾಹಣವನ್ನು ಪೂರ್ತಿಯಾಗಿ ಸಲ್ಲಿಸಿರುವುದಿಲ್ಲವೋ ಅಂಥವರಿಂದ ಬರಬೇಕಾಗಿರುವ ಹಣವನ್ನು ಮೇಲಿನ ೨೭ (ಕ) (ಹೊಸದು) ನಿಬಂಧನೆಗೆ ಸಂಬಂಧಪಟ್ಟಂತೆ ಬಾಕಿ ಎಂದು ಪರಿಗಣಿಸತಕ್ಕದ್ದು.'

ಸಾಮಾನ್ಯ ಸದಸ್ಯರೆಲ್ಲರೂ ಈ ತೀರ್ಮಾನವನ್ನು ಮಾತ್ರವಲ್ಲದೆ ಪರಿಷತ್ತಿಗಿರುವ ದ್ರವ್ಯಕಷ್ಟವನ್ನೂ ತಮ್ಮ ಕೃಪಾಪೂರ್ವಕವಾದ ಗಮನಕ್ಕೆ ತಂದುಕೊಂಡು ಪರಿಷತ್ತಿಗೆ ನೆರವಾಗಿ ಬರಬೇಕೆಂದು ಬೇಡುತ್ತೇನೆ.

ಕರ್ನಾಟಕ ಸಾಹಿತ್ಯ ಪರಿಷತ್ತು
ಶ್ರೀಕೃಷ್ಣರಾಜೇಂದ್ರ ಹಂಪಸ್ಸಂದಿರ
ಚಾಮರಾಜಪೇಟೆ, ಬೆಂಗಳೂರು ನಗರ
ತಾ|| ೩೧—೮—೧೯೩೫

ಬಿ. ಕೆ. ವೆಂಕಟರಾಮಯ್ಯ
ಎಂ.ಎ. ಎಲ್ ಎಲ್ ಬಿ.
ಗೌರವಕಾರ್ಯದರ್ಶಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೌಲ್ಯವುಳ್ಳ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧೨ ಆಣೆ. ವಿ ಪಿ ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಕಾಶಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ **ಟೀಕೆ**ಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ **ಪುಟ**ಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ **ಟೀಕೆ**ಯು ೧೩೫ **ಪುಟ**ಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಮುಕ್ತಕಂಠದಿಂದ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರನ್ನಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೭೪ **ಪುಟ**ಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವುದು. ವಿ. ಪಿ ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಗಳಿಗ್ಗೇ ಹತ್ತುವರ್ಷಕ್ಕೇ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಅದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಗಳು ಅತಿ ಸುಲಭಕ್ರಯದಲ್ಲಿ ದೊರೆಯುವುವು.

ಔಷಧಿ ಹೆಸರು	ತೊಲ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ [illegible]	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ [illegible]	
ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ [illegible]	೦—೧—೬
ಸದ್ಯಃ ಪಿಠಾರೋಹಣಮಾಡಿರತಕ್ಕ ಐವರು ಆಚಾರ್ಯರು [illegible]	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರ [illegible]	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲೀಲಾ [illegible]	೦—೦—೯
ಶ್ರೀ [illegible]	೦—೦—೯
ಶ್ರೀಮದುಜ್ಜಯಿನಿ [illegible]	೦—೦—೯
ಶ್ರೀ ಜಗದ್ಗುರು [illegible]	೦—೦—೯
ಶ್ರೀ ರೇಣುಕ [illegible]	೦—೦—೯
ಶ್ರೀ [illegible]	
[illegible]	೦—೦—೯
ಶ್ರೀ [illegible]	೦—೦—೯
ಶ್ರೀ [illegible]	೦—೦—೯
[illegible]	೦—೦—೯
ಶ್ರೀ [illegible]	೦—೦—೯
ಶ್ರೀ [illegible]	೦—೦—೯
ಶ್ರೀ [illegible]	೦—೦—೯
[illegible]	೦—೦—೯
[illegible]	೦—೦—೯
[illegible]	೦—೦—೯

[illegible]

[illegible] — ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುತ್ತಾರೆ. ಪ್ರಸಿದ್ಧವಾದ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ — ಶಿರಶೂಲೆ, ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು ಒಂದೇ ಪ್ರಕಾರ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂಗುಬಟ್ಟಿ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿ ಬೇಕಾದವರು [illegible] ಕಳುಹಿಸಿಕೊಡಬೇಕು.

ಒಂದು ಡಬ್ಬಿಯ ಕ್ರಯ ರೂ ೦ ೪ ೦ [illegible]

ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ. ಪಿ. [illegible]

ನಿಮ್ಮ ವಿಳಾಸವನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[ ] ಪೋ ಬಾ ೫೧೦ ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ [illegible]	೩ ರೂ
ಮು[illegible]	ರೂ
ಗೋ[illegible]	೧ ರೂ
ಸಿದ್ಧಾಂತ ಶಿಖಾಮಣಿ ([illegible])	ರೂ
ಪಂಚ[illegible] ([illegible])	೧ ರೂ
ಶ್ರೀ [illegible]	೧ ರೂ
ಸಂಕ್ಷಿಪ್ತ ಶಿವಪೂಜಾ ([illegible])	೧ ಆಣೆ
ಬಸವಾದಿ [illegible] ([illegible])	೩ ಆಣೆ
ಶ್ರೀ ರೇಣುಕ [illegible] ([illegible])	೨ ಆಣೆ
ಪಂಚಾಚಾರ್ಯ [illegible]	೩ ಆಣೆ
ಶಿವಶಕ್ತಿ [illegible]	೨ ಆಣೆ
ಶ್ರೀಗುರುತತ್ತ್ವ[illegible]	೩ ಆಣೆ
ಗುರುಸ್ತೋತ್ರ [illegible]	೩ ಆಣೆ
ಶ್ರೀ ರುದ್ರ[illegible]	೨ ಆಣೆ
ವೀರಶೈವದ ತತ್ತ್ವ[illegible]	೫ ಆಣೆ
ವೀರಶೈವಾಚಾರವಿಧಿ ([illegible] ಆವೃತ್ತಿ)	೫ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೮ ಆಣೆ
ಶೈವವ್ಯಾಸಾತ್ರಮ ವಿಮರ್ಶ [illegible] (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಚಯ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಾದ್ವೈತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣಗಳು (ತೆಲುಗು)	೮ ಆಣೆ
पंडित श्रीकाशीनाथशास्त्री याचें भाषण (मराठी)	८ आणे
Speeches by Pandit Shri Kashinatha Shastri (English)	12 As
[illegible] ([illegible] ಆವೃತ್ತಿ)	೧೩ ಆಣೆ
[illegible] ವಿಧಿ ([illegible])	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
[illegible] (೨ನೆಯ ಆವೃತ್ತಿ)	೧೨ ಆಣೆ
[illegible] (ತ್ರಿಲೋಚನ[illegible] ಕೃತ)	೧೨ ಆಣೆ
[illegible]	೧೨ ಆಣೆ
[illegible] (೨ನೆಯ ಆವೃತ್ತಿ)	೧ ರೂ
[illegible] (ಸಂಸ್ಕೃತ[illegible])	೧ ರೂ
[illegible] ([illegible])	೧ ರೂ
[illegible] (ಕನ್ನಡ [illegible])	೧ ರೂ
[illegible]	೨ ರೂ
[illegible] ([illegible])	೮ ರೂ
लिंगधारणचन्द्रिका (संस्कृत)	१ रु.
महानारायणोपनिषत् (वीरशैवभाष्य-संस्कृत)	१ रु.
वीरशैवेन्दुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂನ್ ಪ್ರತಿದಿನಂ ವಂದೇ ... ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೦ನೇ ಸೆಪ್ಟೆಂಬರ್ ೧೯೩೫ [ಸಂಚಿಕೆ ೨೧

ರಷ್ಯಾದ ಮಹಾಪುರುಷ ಲೆನಿನ್

—

(ಅನುವಾದಕರು ಆರ್ ಎಸ್ ಆರಾಧ್ಯ ಕುಂಸೂರು)

ಲೆನಿನ್ನನು ರಷ್ಯಾದೇಶದಲ್ಲಿ ಒಂದು ಹೊಸ ಬೀಜವನ್ನು ಬಿತ್ತಿದವನು ಅವನು ಮಾರ್ಕ್ಸನ ಸಾಮ್ಯವಾದದ ತಳಹದಿಯಮೇಲೆ ಒಂದು ಹೊಸ ರಷ್ಯಾ ಕಟ್ಟಡವನ್ನು ಕಟ್ಟಬೇಕೆಂಬುದೇ ಅವನ ಅಪೇಕ್ಷೆ ಕ್ರಾಂತಿಯೇ ಅವನ ಧರ್ಮ ರಷ್ಯಾವನ್ನು ರೊಮೊನಾಫು ವಂಶಸ್ಥರಿಂದ ವಿಮುಕ್ತವನ್ನಾಗಿ ಮಾಡುವುದೇ ಅವನ ಕರ್ತವ್ಯವಾಗಿದ್ದಿತು ಕ್ರಾಂತಿಜ್ವಾಲೆಯನ್ನುರಿಸಿದ ಹೊರತು ಮತ್ತು ಭಯಾನಕ ಉಲ್ಲೋಲ ಕಲ್ಲೋಲವನ್ನುಂಟುಮಾಡಿದ ಹೊರತು ರಷ್ಯಾದೇಶವು ಸಾಮ್ರಾಜ್ಯವಾದ ಬಂಧನದಿಂದ ಬಿಡುಗಡೆಹೊಂದಲಾರದೆಂಬುದೇ ಅವನ ಅಭಿಪ್ರಾಯ ಅವನು ಕಾರ್ಯದಕ್ಷನೇಹೊರತು ಬರೀಮಾತಿನವನಲ್ಲ

ಲೆನಿನ್ನನಿಗೆ ದೊಡ್ಡದೊಡ್ಡ ಭಾಷಣಗಳನ್ನು ಮಾಡುವುದಕ್ಕೆ ಬರುತ್ತಿರಲಿಲ್ಲ ಅಲಂಕಾರಪೂರ್ಣ ಶೈಲಿಯಲ್ಲಿ ಲೇಖನಗಳನ್ನು ಬರೆಯುವುದಕ್ಕೂ ಬರುತ್ತಿರಲಿಲ್ಲ ಅಥವಾ ಅವನ ಉಡಿಗೆತೊಡಿಗೆಗಳಲ್ಲಿ ಯಾವತರಹದ ಥಳುಕುಮಿಣುಕೂ ಇರಲಿಲ್ಲ ನೋಡಿಮೋಹಗೊಳ್ಳಲು ಯೋಗ್ಯವಾದ ಸುಂದರಮುಖವು ಸಹ ಇರಲಿಲ್ಲ ಲೆನ್ನಿನ್ನನು ನಿಷ್ಕಪಟಸ್ವಭಾವದವನು ಕೂಲಿಕಾರರ ಉನ್ನತಿಗಾಗಿ ಅವನು ಇತರರಿಗಿಂತಲೂ ಅಧಿಕಪರಿಶ್ರಮ ಪಡುತ್ತಿದ್ದನು ಇತರರಿಗಿಂತ ಇವನು ಬಹಳ ನಿಃಸ್ವಾರ್ಥಿಯಾಗಿದ್ದನು ಮತ್ತು ದೇಶಕಾಲ ತಂತ್ರಗಳನ್ನರಿತು ಕೆಲಸಮಾಡುವ ಬುದ್ಧಿಯೂ ಇತರರಿಗಿಂತಲೂ ಇವನಲ್ಲಿ ಅಧಿಕವಾಗಿದ್ದಿತು ಈ ಗುಣಗಳ ಸಹಾಯದಿಂದಲೇ ಅವನು ರಷ್ಯಾದೇಶದ ಕೂಲಿಗಳ ರಾಷ್ಟ್ರವನ್ನು ಜಗತ್ತಿನ ಇತರ ದೊಡ್ಡದೊಡ್ಡ ರಾಷ್ಟ್ರಗಳ ಸಾಲಿಗೇರಿಸಿದ್ದನೆ

ಲೆನಿನ್ನನ ವಿಷಯವಾಗಿ ಅರಿತುಕೊಳ್ಳುವ ಮುಂಚೆ ಅವನ ಜನನಕ್ಕೆ ಮೊದಲು ರಷ್ಯಾದ ಪರಿಸ್ಥಿತಿಯು ಹೇಗಿದ್ದಿತೆಂಬುದನ್ನೂ ಪರಿಶೀಲಿಸುವುದು ಅತ್ಯವಶ್ಯ ರಷ್ಯಾದೇಶವು ಇವನ ಜನನಕ್ಕೆ ಮುಂಚೆ ಉಲ್ಲೋಲ ಕಲ್ಲೋಲವಾಗಿದ್ದಿತು ಶಾಂತತೆಯೆಂಬುದಿಲ್ಲ ಒಂದೆಡೆ ಜನಗಳು ತಿಂದುತೇಗುತ್ತಿದ್ದರು ಮತ್ತೊಂದು ಕಡೆ ತಿಂಡಿಯಿಲ್ಲದೆ ಸಾಯುವಸ್ಥಿತಿಯಿದ್ದಿತು ಪೀಟರ್ ಮಹಾಶಯನು ರಷ್ಯಾದ ಭವಿಷ್ಯಮಾರ್ಗವನ್ನು ನಿರ್ಣಯಿಸಿದನು ಪೀಟರ್ ಮಹಾಶಯನ ಉದ್ದೇಶವು ಬೇರೆಯಿದ್ದಾಗ್ಯೂ ಫ್ರಾನ್ಸ್‌ದೇಶದ ರಾಜ್ಯಕ್ರಾಂತಿಯ ಪರಿಣಾಮವನ್ನು ನೋಡಿ ತನ್ನ ದೇಶವನ್ನೂ ಅದೇರೀತಿ ಮಾರ್ಪಡಿಸಬೇಕೆಂಬ ಕುತೂಹಲವುಳ್ಳವನಾಗಿದ್ದನು

ರಷ್ಯಾದೇಶವು ಆಗಿನ ಸ್ಥಿತಿಯಲ್ಲಿ ಬಹಳ ನಾಜೂಕಾಗಿ ತನ್ನ ಕಾರ್ಯವನ್ನು ನಡೆಯಿಸಬೇಕೆಂದು ಹೇಳಬಹುದು ಸಾಮಾಜಿಕಕ್ರಾಂತಿಯನ್ನು ನಡೆಯಿಸಲೋಸುಗ ರಷ್ಯಾದೇಶವು ಎರಡು ದಳವಾಗಿ ವಿಭಾಗಗೊಂಡಿತು ಒಂದು ದಳವು ಪೂರ್ವಕ್ಕೂ ಮತ್ತೊಂದು ಪಶ್ಚಿಮಕ್ಕೂ ಹರಡಿತು ಎರಡು ದಳಗಳಲ್ಲಿಯೂ ಗದ್ದಲವು ಪ್ರಾರಂಭವಾಗಹತ್ತಿತು ಒಂದೇ ವರೆಯಲ್ಲಿ ಎರಡು ಕತ್ತಿಗಳು ಹಿಡಿಸಲಾರವು ಸುಧಾರಣೆಯ ಆವಶ್ಯಕತೆಯು ಎರಡು ಪಕ್ಷಕ್ಕೂ ತಿಳಿದುಬಂದಾಗ್ಯೂ ಸಹ ಉದ್ದೇಶಪೂರ್ತಿಯ ಬಗ್ಗೆ ಭಿನ್ನಭಿನ್ನೋಪಾಯಗಳನ್ನು ಅವಲಂಬಿಸಬೇಕೆಂಬುದೇ ಅವುಗಳ ಆಶೆ ಇದೇ ಸಮಯದಲ್ಲಿ ಯಾವದೋ ಒಂದು ದೈವಶಕ್ತಿಯು ಈ ಸಮಸ್ಯೆಯನ್ನು ಪರಿಹರಿಸಲೋಸುಗ 'ಲೆನಿನ್' ರೂಪದಲ್ಲಿ ಅವತಾರವೆತ್ತಿತೆಂದು ಹೇಳಬಹುದು ಉತ್ತಮ ಮತ್ತು ಮಧ್ಯಮವರ್ಗದವರನ್ನು ದೂರ ಸರಿಸಿ ಕೇವಲ ಒಂದು ಜನತೆಯ ಸಾಮ್ರಾಜ್ಯವನ್ನು ಸ್ಥಾಪನಮಾಡಬೇಕೆಂಬುದೇ ಇವನ ಇಚ್ಛೆ ರಷ್ಯಾದಲ್ಲಿ ಆಗಿನ ಮುಖಂಡರ ಒಗ್ಗಟ್ಟು ಕೊಂಚ ನೋಡುವುದಾದರೆ ಲೆನಿನ್ನನ ಪ್ರಯತ್ನವು ಫಲದಾಯಕವಾಗುವುದೆಂದು ಹೇಳುವುದಕ್ಕೆ ಆಗುತ್ತಿರಲಿಲ್ಲ

ಯಾವುವು ಫಲದಾಯಕವಾಗಲಾರವೆಂದು ತಿಳಿದಿದ್ದರೋ ಆ ಕಾರ್ಯಗಳು ಇಂದು ರಷ್ಯಾದಲ್ಲಿ ಫಲದಾಯಕವಾಗಿವೆ' ಲೆನಿನ್ನನು ರಷ್ಯದಲ್ಲಿ ಬಡವರ ರಾಜ್ಯವನ್ನು ಸ್ಥಾಪನಮಾಡಿ ಕೃತಕಾರ್ಯನಾಗುವನೆಂದು ಯಾರೂ ನಂಬಿರಲಿಲ್ಲ ಆದರೆ ಲೆನಿನ್ನನು ತನ್ನ ಮೃತ್ಯುವಿನ ಮೊದಲೇ ರಷ್ಯಾದಲ್ಲಿ ಪಾಶ್ಚಾತ್ಯ ಔದ್ಯೋಗಿಕ ತಳಹದಿಯನ್ನು ಹಾಕಿದನು ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿದ್ದವು ಹಳ್ಳಿಗಳಲ್ಲಿಯೂ ಸಹ ವಿದ್ಯುಚ್ಛಕ್ತಿಯ ದೀಪಗಳು ಮಿಂಚಿಸತೊಡಗಿದ್ದವು ಮತ್ತು ಕೃಷಿಸಂಬಂಧವಾದ ಹೊಸಹೊಸ ಪಾಶ್ಚಾತ್ಯ ವ್ಯವಸಾಯಗಳ ಸಂಶೋಧನಗಳೂ ಬರತೊಡಗಿದ್ದವು ಇಷ್ಟೇ ಅಲ್ಲ ಲೆನಿನ್ನನು ಸುಪ್ರಸಿದ್ಧ ಎಂಜನಿಯರ ಮತ್ತು ಶಿಲ್ಪಿಕಾರರನ್ನು ಕರೆಯಿಸಿ ಅವರಿಂದ ರಷ್ಯಾಕ್ಕೆ ಬಹಳ ಪ್ರಯೋಜನವಾಗುವಂತೆ ಮಾಡಿದನು ಇದರಿಂದ ಇಂದು ರಷ್ಯಾದೇಶವು ಔದ್ಯೋಗಿಕ ಉನ್ನತಿಯಲ್ಲಿ ಯೂರೋಪಿನ ಯಾವದೇಶಗಳಲ್ಲಿಯೂ ಹಿಂಬಳಿಯಲಿಲ್ಲ ಲೆನಿನ್ನನು ರಷ್ಯವನ್ನು ಕೂಲಿಕಾರರ ರಾಷ್ಟ್ರವನ್ನಾಗಿ ಮಾಡಿದ್ದನೆ ಇಂದು ರಷ್ಯದಲ್ಲಿ ದೊಡ್ಡದೊಡ್ಡ ಕಾರ್ಖಾನೆಗಳಿವೆ ಪ್ರಪಂಚದಲ್ಲೆಲ್ಲಾ ದೊಡ್ಡದೆಂದೆನಿಸಿಕೊಳ್ಳುವಂತಹ ದೊಡ್ಡ ಕಾರ್ಖಾನೆಗಳೂ ಸಹ ಇಲ್ಲಿವೆ ಲೆನಿನ್ನನು ಹಾಕಿದ ಬೀಜವು ಯಾವರೀತಿ ಬೆಳೆದು ಮರವಾಗಿದೆಯೆಂಬುದನ್ನು ಇಂದು ನೋಡಬಹುದಾಗಿದೆ

ರಷ್ಯಾದೇಶವು ತನ್ನ ಪ್ರಾಚೀನ ಇತಿಹಾಸದಿಂದ ಕಲಿತುಕೊಳ್ಳಬೇಕಾದುದೇನೂ ಇರಲಿಲ್ಲ ಅಲ್ಲದೆ ಅದನ್ನೇ ಮಾದರಿಯನ್ನಾಗಿಟ್ಟುಕೊಂಡು ಅದರ ತಳಹದಿಯಮೇಲೆ ರಷ್ಯಾದ ಕಟ್ಟಡವನ್ನು ಸಹ ಕಟ್ಟುವಷ್ಟು ಮಹತ್ವಪೂರ್ಣವಾದುದಾಗಿಯೂ ಇರಲಿಲ್ಲ ಮೊದಲು ಎಂದೂ ಬಿತ್ತದೆ ಇದ್ದಂತಹ ಒಂದಾನೊಂದು ಹೊಸಕ್ಷೇತ್ರವನ್ನು ಲೆನಿನ್ನನು ಫಲವತ್ತಾಗಿ ಮಾಡಿ ಅಲ್ಲಿ ಬೀಜವನ್ನು ಬಿತ್ತಿದನು ಇದಕ್ಕೆ ಮೊದಲು ಆ ಕ್ಷೇತ್ರವು ಬಿತ್ತಿರಲಿಲ್ಲ ಮತ್ತು ಯಾವ ಬೀಜವನ್ನು ಯಾವರೀತಿ ಬಿತ್ತಬೇಕೆಂಬುದನ್ನು ಯಾರೂ ಅರಿತಿರಲಿಲ್ಲ ರಷ್ಯಾದಲ್ಲಿ ಸಾಮ್ಯವಾದ ಬೀಜಾರೋಪಣವನ್ನು ಮಾಡಲು ಸಮಯ ದೊರಕಿದುದೇ ಕಾರಣ ಹೊಸತಳಹದಿಯ ಮೇಲವನು ರಷ್ಯಾ ಕಟ್ಟಡವನ್ನು ಕಟ್ಟಿಬಿಟ್ಟನು

ಸ್ವಾರ್ಥಕ್ಕೆ ತಿಲಾಂಜಲಿಯನ್ನು ಕೊಟ್ಟು ಮಾನವಜಾತಿಯ ಉಪಕಾರಕ್ಕಾಗಿ ಸರ್ವಸ್ವವನ್ನೂ ಅರ್ಪಿಸಿದ ಮಹಾತ್ಮರಲ್ಲಿ ಲೆನಿನ್ನನೊಬ್ಬನು ಮಾನವಜಾತಿಗೆ ಸರ್ವಸ್ವವನ್ನೂ ತ್ಯಜಿಸಿದನು ಲೆನಿನ್ನನ ದಿವ್ಯಜ್ಯೋತಿಯು ದೇಶವಿದೇಶಗಳಲ್ಲಿಯೂ ಸಹ ಮಹಾಪ್ರಕಾಶದಿಂದ ಬೆಳಗುತ್ತಲಿದೆಯೆಂದು ಹೇಳಬಹುದಾಗಿದೆ.

ಸ್ವೀಕಾರ

—

ಕೊಪ್ಪಳ ತಾ|| ಗೊಂಡಬಾಳ ಗ್ರಾಮದ ಮ|| ರಾ| ಪಂಚಪ್ಪನವರು ಲಕ್ಕುಂಡಿ ಇವರ ಪುತ್ರರಾದ ಮ|| ರಾ|| ದೊಡ್ಡಬಸಪ್ಪನವರಿಗೆ ಆಷಾಢ ಶು|| ೧೫ ದಿವಸ ಪುತ್ರರತ್ನವು ಜನಿಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಗಳು ವೇ|| ಬನ್ನಿಕೊಪ್ಪ ಹಿರೇಮಠದ ಶಿವಯ್ಯನವರು ಸ್ಕೂಲ್‌ಮಾಸ್ಟರ್ ಅಳವುಂಡಿ ಇವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಶ್ರೀ ಕ್ಷೇತ್ರ ರಾಮೇಶ್ವರಕ್ಕೆ ಯಾತ್ರಾರ್ಥಿಗಳಾಗಿ ಬರತಕ್ಕ ವೀರಶೈವರಿಗೆ

ಸೂಚನೆ.

—

ಸುಪ್ರಸಿದ್ಧವಾಗಿರುವ ಶ್ರೀರಾಮೇಶ್ವರಕ್ಷೇತ್ರಕ್ಕೆ ಬರುವ ವೀರಶೈವರಿಗೆ ಯಾವ ಪ್ರಕಾರದ ಸೌಕರ್ಯವೂ ಇಲ್ಲದಿರುವದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ನಾವು ವೀರಶೈವರ ವಸತಿಗಾಗಿ "ಜಂಗಮವಾಡಿ" ಎಂಬ ಸ್ಥಳವನ್ನು ಏರ್ಪಡಿಸಿರುವೆವು ವೀರಶೈವರಿಗೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುವೆವಲ್ಲದೆ ದರ್ಶನಾದಿಗಳಿಗೆ ಬೇಕಾಗುವ ಸುವ್ಯವಸ್ಥೆಯನ್ನು ಕಲ್ಪಿಸಿಕೊಡುವೆವು ಮಾಹಿತಿಗಾಗಿ ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಕೋರಿಕೆ

ಗುರುಸಿದ್ಧಸ್ವಾಮಿ,

(೬) ಜಂಗಮವಾಡಿ ಮಠ, ರಾಮೇಶ್ವರ,

ಪೋ|| ರಾಮೇಶ್ವರ (S I R))

ಪತ್ರವ್ಯವಹಾರ

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಸಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಶುದ್ಧವಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಪ್ರವೃತ್ತಿಯಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೨೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಸಂತೋಷಪೂರ್ವಕವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರನ್ನಿಗೆ ಅಪ್ಪಣೆಯನ್ನಿತ್ತಿರುವದಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೫೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂದನ್ನು ಅವರ ಶಿಷ್ಯರೊಂದಿಗೆ ಕೂಡಿದ ಫೋಟೋ ಸೈಜು ೨೦×೧೫ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ಮಹರ್ಷಿ ವ್ಯಾಸ ಸನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೦×೧೪ ಬೆ	೦—೧—೬
ಸದ್ಯಃ ಶ್ರೀ ರಾಂಭಾಪುರಿ ಪೀಠದಲ್ಲಿರುವ ಜಗದ್ಗುರುಗಳವರು ಆಚಾರ್ಯರು ಪಿಂಡದಲ್ಲಿ ಕುಳಿತ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಪೂಜಾ ಸಮಯದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾರ್ಚನಾ ಸಮಯದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನಿ ಸಿಂಹಾಸನಾಧೀಶರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರೇವಣಸಿದ್ಧ ಶಿವಾಚಾರ್ಯರು ಭೂಮಿಯಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ಮತ್ತು ಮುನೀಶ್ವರ ಶಿವಾಚಾರ್ಯರಿಗೆ ಶಿಷ್ಯಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಲಿಂಗಗಳನ್ನು ಧಾರಣವಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥ ಶಾಸ್ತ್ರಿಗಳವರು ಕುಳಿತ ಫೋಟೋ	೦—೦—೯
ಪಂಡಿತ ಶ್ರೀ ಕಾ. ಶಿ. ಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನಿ ಪೀಠದ ಮುಖಮಂಟಪದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನಿ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪೀಠದ ಮರುಳಸಿದ್ಧೇಶ್ವರನ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಶ್ರೀ ಮರುಳಸಿದ್ಧೇಶ್ವರನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಕೇದಾರದ ಮಠದ ಶ್ರೀ ಭೀಮಾಶಂಕರಲಿಂಗ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ	೦—೦—೯

ಸೂಚನೆ :— ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ಕರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

(೧ನೆಯ ಪುಟದಿಂದ ಮುಂದುವರಿದುದು)

...ಸಿದ್ಧನ ವಿಜಯಮಹೋತ್ಸವವನ್ನು ಮಾಡುತ್ತ ಪ್ರವೇಶಮಾಡಿತು. ಶ್ರೀ ಜಗದ್ಗುರು ರೇಣುಕನ ವಿಜಯ ಧ್ವಜವೇರಿದುದಕ್ಕಾಗಿ ಈ ಪ್ರಾಂತದಲ್ಲಿರುವ ಗುರುಭಕ್ತರ ಆನಂದಕ್ಕೆ ಮೇರೆಯೇ ಇಲ್ಲದಂತಾಗಿದೆ. ಶ್ರೀ ಜಗದ್ಗುರು ರಂಭಾಪುರಿ ಮಹಾಸ್ವಾಮಿಗಳವರು ಎಂಟು ಒಂಭತ್ತು ವರ್ಷಗಳಿಂದಲೂ ಮೈಸೂರು ದೇಶದಲ್ಲಿ ಸಂಚಾರವಿಜಯವನ್ನು ಹೊಂದಿ ಭಕ್ತರನ್ನು ದರ್ಶನಾಶೀರ್ವಾದಗಳಿಂದ ಪುನೀತರನ್ನಾಗಿ ಮಾಡಿ ಈಗ ವೀರಶೈವರಿಂದ ನಿಬಿಡವಾದ ವಿಶಾಲವಾದ ಮುಂಬೈ ಪ್ರಾಂತವನ್ನು ಸಂಚರಿಸುವುದಕ್ಕಾಗಿ ಆ ಪ್ರಾಂತಕ್ಕೆ ಹೆಬ್ಬಾಗಿಲಿನಂತಿರುವ ರಾಣೆಬೆನ್ನೂರ ಪಟ್ಟಣವನ್ನು ಪ್ರವೇಶಿಸಿದರು. ಮುಂದೆ ಬರಬಹುದಾದ ವಿಘ್ನಪರಂಪರೆಯು ಶ್ರೀ ಜಗದ್ಗುರು ರೇವಣಸಿದ್ಧನ ಕೃಪೆಯೆಂಬ ನಿಶಿತವಾದ ವಜ್ರಾಘಾತದಿಂದ ನಿರ್ಮೂಲವಾಯಿತು. ಈಗ ನಡೆದ ಸಮಾರಂಭವು ಒಂದು ಶುಭಸೂಚನೆಯೆಂದು ಹೇಳಬೇಕಾಗಿದೆ.

ಗುರುಕಿಂಕರ, ರಾಣೇಬೆನ್ನೂರು

ಸ್ವೀಕಾರ

ಶ್ರೀ ಕಾಶೀಕ್ಷೇತ್ರದಲ್ಲಿರುವ ರಾವಲುಡಕಿ ಹಿರಿಯ ಮಠದ ವೇ|| ಸದಾಶಿವರವರು ಪ್ರಭಾಪೋಷಣಕ್ಕಾಗಿ 1 ರೂ. ಯನ್ನು ಕಳುಹಿಸಿದ್ದಾರೆ.

ಕಮೂರು ಜಿ|| ಅಳ್ಳೂರು ಗ್ರಾಮದಲ್ಲಿರುವ ಮ|| ರಾ|| ಎ. ಪಿ. ಮಲ್ಲಪ್ಪರಟ್ಟಿರು ತಮ್ಮ ಕೃ|| ಪುತ್ರಿಯ ಸಮಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಮ|| ರಾ|| ಎ. ವಿ. ಅಪ್ಪುಶೆಟ್ಟರ ದ್ವಾರಾ ತಲುಪುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮಪ್ರಸಂಗ (೪ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಬಸವಾದಿ ಸಿದ್ಧಾಂತದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ವರೂಪಸ್ತವನದೀಪಿಕಾ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತವಿಮರ್ಶಾ	೩ ಆಣೆ
ವೀರಶೈವಾಚಾರಪದ್ಧತಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೩ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರ ಭಾಷಣವು (ತೆಲುಗು)	೮ ಆಣೆ
पंडित श्रीकाशीनाथशास्त्री यांचे भाषण (मराठी)	८ आणे
Speeches by Pandit Shri Kashinatha Shastri (English)	12 As
ವೀರಶೈವಸರ್ವಸ್ವ (೪ನೆಯ ಆವೃತ್ತಿ)	೧೨ ಆಣೆ
ವೈದಿಕಶಿವಪೂಜಾವಿಧಿ (ವ್ಯಾಖ್ಯಾನಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸುಪ್ರಭಾತ ಸ್ತೋತ್ರ	೧೨ ಆಣೆ
ಮಹಾಲಿಂಗ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಶಿಖಾಮಣಿ (ಶ್ರೀ ರೇಣುಕಾಚಾರ್ಯ ಕೃತ)	೧೨ ಆಣೆ
ಶಿವಾದ್ವೈತಸಿದ್ಧಾಂತದರ್ಪಣ	೧೨ ಆಣೆ
ಪವಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ ಸಹಿತ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡ ವ್ಯಾಖ್ಯಾನ ೭೩೬ ಪುಟ)	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य–संस्कृत)	१ रु.
वीरशैवेन्दुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಹರ್ಡೀಕರ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಪೃಶ್ಯವರ್ಗದ ವೇ|| ಬ್ರ|| ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ

REGISTERED No M. 2266 ‖ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ‖ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ‖
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ ಭಾಲಿಪ್ಪದೀಲೋಕಮಂ ‖

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೨ ರೂ ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೧ನೇ ಅಕ್ಟೋಬರ್ ೧೯೩೫ [ಸಂಚಿಕೆ ೨೪

ಪಂಡಿತ ಶ್ರೀ ಕಾಶೀನಾಥ ವಾಚನಾಲಯ. ಮೋಘಾ.

ಹುಮನಾಬಾದ ತಾಲ್ಲೂಕಿನೊಳಗಿನ ಮೋಘಾಗ್ರಾಮದಲ್ಲಿ ಮೋಟಗಿ ಶ್ರೀಬಾಲತಪಸ್ವಿಗಳವರ ಅಧ್ಯಕ್ಷತೆಯಲ್ಲಿ ತಾ|| ೨೦ ೯ ೩೫ ನೆಯ ದಿವಸ ಸಭೆ ಸೇರಿ ಸಮಾಜ ಸುಧಾರಣೆಯ ದೆಶೆಯಿಂದ ವಾಚನಾಲಯವು ಸ್ಥಾಪಿಸಲ್ಪಟ್ಟಿತು ಯಾವ ಮಹನೀಯನಿಂದ ಗುರುವರ್ಗವು ಎಚ್ಚತ್ತು ಗೊಂಡಿತೋ, ಯಾವ ಸೂರ್ಯನಿಂದ ನಿಶಾಚರರ ಆರ್ಭಟವು ತಗ್ಗಿತೋ, ಯಾವ ಮೋಘಾಸ್ತ್ರದಿಂದ ಸಾಂಕರ್ಯಗ್ರಸ್ತರ ಪದಗಿತೋ, ಯಾವಾತನ ಪಾಂಡಿತ್ಯ ಪ್ರಭಾವದಿಂದ ಮುಂಡಿಗಳ ಮೊಂಡತನವು ಖಂಡಿತವಾಯಿತೋ, ಕಿಂಬಹುನಾ ಸದ್ಯಃ ಯಾವಾತನ ಪ್ರಭೆಯಿಂದ ವೀರಶೈವ ಮತವು ನಿತ್ಯನೈಮಿತ್ತಿಕಾದಿಕಾರ್ಯಗಳಲ್ಲಿ ತೊಡಗಿದೆಯೋ, ಅಂಥ ಪೂಜ್ಯ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ದಿವ್ಯ ನಾಮದಿಂದ ವಾಚನಾಲಯವು ಸ್ಥಾಪಿಸಲ್ಪಟ್ಟಿತು

ಆಶ್ರಯದಾತರು

ಮೋಟಗಿ ಶ್ರೀಗಳು, ಕೆಲವುಗ್ರಂಥಗಳನ್ನು ಅನುಗ್ರಹಿಸಿದರು. ಶ್ರೀ ಭಾಪೂರಾವ ಇವರು, ಪಂಚಾಚಾರ್ಯ ಪ್ರಭಾ ರಾಮಚಂದ್ರಪ್ಪ, ವೀರಶೈವಗರ್ಜನಾ, ಶಿವಲಿಂಗಪ್ಪ ತಂಗಶೆಟ್ಟಿ ಬಿಳಂಬಾ, ರಾಮಚಂದ್ರಪ್ಪ ಪಾಟೀಲ ದೇವಂತಿಗಿ, ಈಶ್ವರಪ್ಪ ಪಾಟೀಲ ಕಠಾಪೂರ, ಮಲಕಪ್ಪ ಬಸವಂತರಾವ ಗಳೂರಗಿ, ಹಣಮಂತರಾವ ಪಾಟೀಲ, ಅಪ್ಪಾರಾವಪಾಟೀಲ, ಇವರು ರೂಪಾಯಿಗಳನ್ನು ಕೊಟ್ಟರು ಅಣ್ಣಾರಾವ ಖಾನಾಪೂರಪಾಟೀಲ ಶಿವಲಿಂಗಪ್ಪ ಘೋತ್ರಿ, ಇವರು ಫೋಟೋ ಪುಸ್ತಕಗಳನ್ನು ಕೊಟ್ಟರು

ಅಧ್ಯಕ್ಷರು—ಗುರುಶಾಂತಯ್ಯನವರು, ಉಪಾಧ್ಯಕ್ಷ—ಸಾಬಣ್ಣ ಮುಲಗೆ, ಸಕ್ರೆಟರಿ—ಶಿವರಾಯ ಶಿಖಾರ, ಆಡಿಟರ—ಅಪ್ಪಾರಾವ ಪಾಟೀಲ

ಕಾರ್ಯಕಾರಿ ಮಂಡಳಿ

ಸಾತಯ್ಯ ಹಿರೇಮಠ, ಧರ್ಮರಾವ ಪಾಟೀಲ, ಮಲಕಪ್ಪ ಪಾಟೀಲ, ಶಿವಲಿಂಗಪ್ಪಪಾಟೀಲ, (ದೇವಂತಿಗಿ) ರಾಮಚಂದ್ರಪ್ಪ ಪಾಟೀಲ, ಬಾಪೂರಾವ ಪಾಟೀಲ, ಅಂಬಿಪ್ಪಶೆಟಿ ಗಾದ, ಶಂಕರ ಭೀಮರಾವ ಮುಲಗೆ, ತಲಕಪ್ಪ ಕಲ್ಲಪ್ಪ ಮುಲಗೆ, ಅಪ್ಪಾರಾವ ನಾಗಪ್ಪ ಆಳಂದ ಗುಂಡೇರಾವ ಮಾಧವರಾವ ಸರದೇಶಮುಖ (ಬ್ರಾಹ್ಮಣ), ಮೌಲಾಸಾಹೇಬ ಸಕ್ಕರಗೀಕರ (ಮುಸಲ್ಮಾನ).

ಈ ವಾಚನಾಲಯವು ಉತ್ತರೋತ್ತರಾಭಿವೃದ್ಧಿಯನ್ನು ಹೊಂದಲೆಂದು ಜಗದಾಚಾರ್ಯರನ್ನು ಸ್ಮರಿಸುವ

ಶಿವಲಿಂಗಪ್ಪ ಪಾಟೀಲ, ಘೋತ್ರಿ.

ಶ್ರೀಸಮುದ್ರಂಭಾಪುರೀ ಜಗದ್ಗುರುಗಳವರ ಆಗಮನ, ದಾವಣಗೆರೆ

ತಾ|| 10 9 35 ರಲ್ಲಿ ಶ್ರೀ ಜಗದ್ಗುರುಗಳವರ ಸವಾರಿಯು ಹರಿಹರ ಮೊಕ್ಕಾಮಿನಿಂದ ದಾವಣಗೆರೆಗೆ ಉತ್ಸವ ಪೂರ್ವಕವಾಗಿ ದಯಮಾಡಿಸಿ ನಾಗಾನಹಳ್ಳಿ ಷಡಕ್ಷರಪ್ಪನವರ ಬಂಗ್ಲೆಯಲ್ಲಿ ಪೂಜೆಯನ್ನು ತೀರಿಸಿಕೊಂಡು ಸಾಯಂಕಾಲ 5 ಘಂಟೆಗೆ ಅಭಿನವರೇಣುಕಾಲಯದ ಕಾಂಪೌಂಡಿನಲ್ಲಿ ಏರ್ಪಡಿಸಿದ್ದ ಸಭಾಮಂಟಪದಲ್ಲಿ ಮೂರ್ತಮಾಡಿ ದಾವಣಗೆರೆ ಸ್ವಾಗತ ಸಂಘದವರು ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಯನ್ನು ಸ್ವೀಕರಿಸಿದರು

ಮಹಾ ಸನ್ನಿಧಿಯವರ ಭಾಷಣವನ್ನು ಕೇಳಬೇಕೆಂದು ಸರ್ಕಾರಿ ಆಫೀಸರುಗಳೂ, ವರ್ತಕರೂ, ದೊಡ್ಡ ಮನುಷ್ಯರೂ, ಸಭಾಮಂದಿರವನ್ನು ಅಲಂಕರಿಸಿದ್ದರು ಸನ್ನಿಧಿಯವರು ಭಕ್ತ ಮಂಡಲಿಯವರ ಅಪೇಕ್ಷೆಯಂತೆ ಸ್ವಲ್ಪ ಹೊತ್ತು ಉಪನ್ಯಾಸಮಾಡುತ್ತ ಭಕ್ತಿ ವಿಷಯವನ್ನು ಸೂಚಿಸುವ ಕಾಲದಲ್ಲಿ ಮೈಸೂರು ಡಾ|| ಟಿ ಎಸ್ ಸಿದ್ಧಪ್ಪನವರ ಪರಿಚಯವನ್ನು ಸಭಿಕರಿಗೆ ಉಂಟುಮಾಡಿದರು ಆಗ್ಗೆ ಸನ್ನಿಧಿಯವರು ಅಪ್ಪಣೆ ಕೊಡಿಸಿದ್ದೇನೆಂದರೆ ಮ|| ರಾ|| ಡಾಕ್ಟರರು ಜಪಾನು, ಜೈನಾದೇಶಗಳಲ್ಲಿ ಸಂಚರಿಸಿ ಅಲ್ಲಿಂದ ಸೀದಾ ತುಂಗಾನದೀತೀರದಲ್ಲಿ ಇರುವ ಪುಣ್ಯಕ್ಷೇತ್ರವಾದ ಹರಿಹರಕ್ಕೆ ಪತ್ನೀಸಮೇತರಾಗಿ ಬಂದಿದ್ದಾರೆ “ ಮೈಸೂರು ಪಟ್ಟಣಕ್ಕೆ ನಮ್ಮ ಸವಾರಿಯು ದಯಮಾಡಿಸಿದ ಕಾಲದಲ್ಲಿ ಅಲ್ಲಿಯ ಸ್ವಾಗತ ಮಂಡಲಿಯ ಪ್ರೆಸಿಡೆಂಟರಾಗಿ ಇದ್ದುಕೊಂಡು ತುಂಬಾ ಶ್ರಮವಹಿಸಿ, ಸರ್ವ ಕಾರ್ಯಗಳನ್ನು ನಿರ್ವಿಘ್ನವಾಗಿ ನಡೆಯುವಂತೆ ಮಾಡಿ ರೇಣುಕರ ಕೃಪೆಗೆ ಪಾತ್ರರಾದರು ಇವರು ತಮ್ಮ ಸ್ವಂತ ಖರ್ಚಿನಿಂದ ಒಂದು ರೇಣುಕಮಂದಿರವನ್ನು ಮೈಸೂರಿನಲ್ಲಿ ಕಟ್ಟಿಸಬೇಕೆಂಬ ಅಭಿಲಾಷೆಯನ್ನು ಶ್ರೀ ಸನ್ನಿಧಿಯಲ್ಲಿ ಸೂಚಿಸಿದಾಗ ಇವರ ಪತ್ನಿಯವರು ‘ ಅದನ್ನು ಕಟ್ಟಿಸುವುದಕ್ಕೆ ಕೆಲವು ಕಾಲ ಬೇಕಾಗುತ್ತದೆ, ದೇಹವು ಶಾಶ್ವತವಲ್ಲ, ಮನಸ್ಸು ಚಂಚಲವಾದುದರಿಂದ ಬದಲಾಯಿಸಬಹುದು, ಆದ್ದರಿಂದ ಈಗ ಕಟ್ಟಿರುವ ಕಟ್ಟಡವನ್ನೇ ಒಪ್ಪಿಸಿಬಿಡಬೇಕು ” ಎಂದು ಅಭಿಪ್ರಾಯಪಟ್ಟ ಪ್ರಕಾರ ಆ ಕಟ್ಟಡವನ್ನೇ ನಮಗೆ ವಹಿಸಿದರು ಇತ್ಯಾದಿ ವಿಷಯಗಳನ್ನು ಅಪ್ಪಣೆಕೊಡಿಸಿದರು

ಓರ್ವ ಪ್ರತ್ಯಕ್ಷದರ್ಶಿ

ಕೃಷ್ಣರಾಜನಗರಕ್ಕೆ ಸರ್. ಕೆ. ಪಿ. ಪುಟ್ಟಣ್ಣ ಶೆಟ್ಟರವರ ಆಗಮನ.

ರಾಜಸಭಾಭೂಷಣ ದಿವಾನ್‌ಬಹದ್ದೂರ್ ಸರ್ ಕೆ ಪಿ ಪುಟ್ಟಣ್ಣಶೆಟ್ಟರವರು ತಮ್ಮ ಪತ್ನೀಪುತ್ರಸಮೇತರಾಗಿ ಮ|| ರಾ|| ಸಾಹುಕಾರ್ ಬಳೆ ಸಿದ್ಧಲಿಂಗಶೆಟ್ಟರವರ ಕೋರಿಕೆಯ ಪ್ರಕಾರ ತಾ|| 10 10-35 ನೇ ಗುರುವಾರ ಬೆಳಗ್ಗೆ 9 ಘಂಟೆಗೆ ಮೈಸೂರಿಂದ ಕಾರಿನಲ್ಲಿ ಸಾಹುಕಾರರ ಬಂಗಲೆಗೆ ದಯಮಾಡಿಸಿದರು ಮಂಗಳವಾದ್ಯಸಮೇತ ಸಾಹುಕಾರರು ಮತ್ತು ಕುಟುಂಬವರ್ಗದವರು ಸರ್ ಶೆಟ್ಟರವರಿಗೆ ಹಾರತುರಾಯಿಗಳನ್ನು ಒಪ್ಪಿಸಿ ಸುಸ್ವಾಗತವನ್ನು ಬಯಸಿದರು ಸರ್ ಶೆಟ್ಟರವರು ಟೀ ತೆಗೆದುಕೊಂಡು ಸಾಹುಕಾರರ ಜೊತೆಯಲ್ಲಿ ಚುಂಚನಕಟ್ಟೆಗೆ ದಯಮಾಡಿಸಿ ಪ್ರೇಕ್ಷಣೀಯಸ್ಥಳಗಳನ್ನು ಪರಾಮರ್ಶಿಸಿ ಶ್ರೀ ದೇವಸ್ಥಾನದಲ್ಲಿ ಮಂಗಳಾರತಿ ತೆಗೆದುಕೊಂಡು ವಾಪಸ್ ಕೃಷ್ಣರಾಜನಗರಕ್ಕೆ ಬಂದು, ಸಾಹುಕಾರರು ನೂತನವಾಗಿ ಕಟ್ಟಿಸಿರುವ ಹೆರಿಗೆ ಆಸ್ಪತ್ರೆಯನ್ನು ಪರಾಮರ್ಶಿಸಿ ಬಹಳ ಹರ್ಷದಿಂದ ಅವರ ಬಂಗಲೆಗೆ ದಯಮಾಡಿಸಿದರು ತಾಲೂಕ ಅಮಲ್ದಾರರವರು ರೆವಿನ್ಯೂಆಫೀಸರೊಂದಿಗೆ ಬಂದು ಸರ್ ಶೆಟ್ಟರವರಿಗೆ ಹಾರತುರಾಯಿಗಳನ್ನು ಒಪ್ಪಿಸಿ ಸುಸ್ವಾಗತವನ್ನು ಬಯಸಿದರು ಬಳಿಕ ಸಾಹುಕಾರರ ಔತಣವನ್ನು ತೀರಿಸಿಕೊಂಡು ಎರಡು ಗಂಟೆ ಕಾಲ ವಿಶ್ರಾಂತಿ ತೆಗೆದುಕೊಂಡು ಸಾಹುಕಾರರ ಜೊತೆಯಲ್ಲಿ ಟೌನನ್ನೆಲ್ಲಾ ನೋಡಿಕೊಂಡು ಶ್ರೀ ಚಂದ್ರಮೌಳೀಶ್ವರ ದೇವಸ್ಥಾನಕ್ಕೆ ಹೋಗಿ ದೇವರದರ್ಶನ ಮಾಡಿಕೊಂಡು ಕೃಷ್ಣರಾಜನಗರದ ಅಭಿವೃದ್ಧಿಯನ್ನು ಕಂಡು ಮ|| ರಾ|| ಸಾಹುಕಾರ್ ಸಿದ್ಧಲಿಂಗಶೆಟ್ಟರವರು ಮಾಡಿರುವ ಧರ್ಮಕಾರ್ಯವನ್ನು ಕೊಂಡಾಡಿ ಬಹಳ ಸಂತೋಷದಿಂದ ಮಧ್ಯಾಹ್ನ ೩ ಘಂಟೆಗೆ ಮೈಸೂರಿಗೆ ಪ್ರಯಾಣ ಮಾಡಿದರು

ಪ್ರತ್ಯಕ್ಷದರ್ಶಿ

ಶ್ರೀ ವೀರೇಶಾಯನಮಃ

ಶಿಂಗಟಾಲೂರು

ಶ್ರೀ ವೀರಭದ್ರಸ್ವಾಮಿ ದೇವಾಲಯಕ್ಕೆ ತಾ||26 9 35 ನೆಯ ದಿವಸ ಮುಂಡರಗಿ ಮ|| ಮಹಾಲ್ಕರಿಸಾಹೇಬರವರು ಪತ್ನೀಸಮೇತರಾಗಿ ಬಂದು ದೇವತಾ ದರ್ಶನವನ್ನು ಮಾಡಿಕೊಂಡು ದೇವಸ್ಥಾನದ ವಿನಿಯೋಗವನ್ನು ಪರಾಮರ್ಶಿಸಿ ವಿಜಿಟ್ ಬುಕ್ಕಿನಲ್ಲಿ ತಮ್ಮ ಅಭಿಪ್ರಾಯವನ್ನು ಇಂಗ್ಲೀಷಿನಲ್ಲಿ ವ್ಯಕ್ತಗೊಳಿಸಿರುವುದರ ಕನ್ನಡ ಭಾಷಾಂತರ—

‘ ಈ ದಿವಸ ನಾನು ಶ್ರೀ ವೀರಭದ್ರ ದೇವಸ್ಥಾನದ ದರ್ಶನ ಮಾಡಿಕೊಂಡೆನು ದೇವಸ್ಥಾನದ ಕಮಿಟಿಯ ವ್ಯವಸ್ಥೆಯನ್ನು ನೋಡಿ ಬಹಳ ಸಂತೋಷವಾಯಿತು ಈ ಕಮಿಟಿಯು ದೇವಸ್ಥಾನಕ್ಕೆ ಬರುವ ಯಾತ್ರಿಕರಿಗೆ ಅನುಕೂಲವಾಗುವಂಥ ಸುಧಾರಣೆಗಳ ಸಲುವಾಗಿ ಬಹಳ ಪ್ರಯತ್ನ ಪಡುತ್ತಲಿದೆ ಮುಖ್ಯವಾಗಿ ಕಮಿಟಿಯ ಪ್ರೆಸಿಡೆಂಟರಾದ ಮ|| ಎಸ್ ವಿ ಕುಬಸದ ಇವರು ಸುವ್ಯವಸ್ಥೆಯ ಸಲುವಾಗಿ ಮನಃಪೂರ್ವಕ ಶ್ರಮಪಡುವುದನ್ನು ನೋಡಿ ಆನಂದವಾಯಿತು

ತಾ|| ೨೬ ೯ ೩೫ ಎಸ್. ಟಿ. ವಿರಕ್ತಮಠ.
ಮಹಾಲ್ಕರಿ ಮುಂಡರಗಿ.

ಮೈಸೂರು ಪ್ರಜಾಪ್ರತಿನಿಧಿ ಸಭೆ

ದಿವಾನ್ ಸಾಹೇಬರವರ ಭಾಷಣ.

[ಕಳೆದ ವಾರದ ಶೇಷ]

ರೇಷ್ಮೆ ಕೈಗಾರಿಕೆ.

ಪರತಟದಲ್ಲಿ [illegible] ರೇಷ್ಮೆಯ [illegible] 1934 ನೆಯ [illegible]

[illegible]

[illegible] ನಲ್ಲಿ ಕೆಲಸ ನಡೆಯುತ್ತಿದೆ. [illegible] ಯವರು 1,03 200 [illegible] ಮಾಡಬೇಕಾಗಿದ್ದಿತು.

ಕಬ್ಬಿಣದ ಕಾರ್ಖಾನೆ.

ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ [illegible] ಪ್ರಸಕ್ತ ವರ್ಷದಲ್ಲಿ [illegible] ಕಾರ್ಖಾನೆಯು [illegible] ಪ್ರಮಾಣಗಳಲ್ಲಿ ಸಾಮಗ್ರಿಗಳು [illegible]

[illegible] ಕಾರ್ಖಾನೆಯ [illegible] ಕೆಲಸಕ್ಕೆ [illegible] ಸ್ಥಳದಲ್ಲಿದ್ದ [illegible]

ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ [illegible] ವಿದ್ಯುಚ್ಛಕ್ತಿಯ [illegible] ಕೆಲಸವು [illegible] ಭದ್ರಾವತಿಗೆ ವಿದ್ಯುಚ್ಛಕ್ತಿಯನ್ನು [illegible] ಗುವುದು.

ಉಕ್ಕಿನ ತಯಾರಿಕೆಯ ಯಂತ್ರಗಳು [illegible] ವೇಗ ನಡೆಯುತ್ತಿದೆ. [illegible] ಉಕ್ಕಿನ ತಯಾರಿಕೆಯ ಯಂತ್ರಸಾಮಗ್ರಿಗಳಲ್ಲಿ [illegible] ತಲುಪಿವೆ. ಯಂತ್ರಗಳ [illegible] ಕೆಲಸವು [illegible] ತಿಂಗಳಿನ ಕೊನೆಯ ವೇಳೆಗೆ ಪೂರೈಸುವ ನಿರೀಕ್ಷೆಯಿದೆ. ಮುಂದಿನ [illegible] ತಿಂಗಳಿನಲ್ಲಿ ಉಕ್ಕಿನ ತಯಾರಿ ಕೆಲಸವು ಪ್ರಾರಂಭವಾಗುತ್ತದೆ.

ಗಂಧದೆಣ್ಣೆ ಕಾರ್ಖಾನೆ.

ಮೈಸೂರು ನಗರದಲ್ಲಿರುವ ಗಂಧದೆಣ್ಣೆಯ ಕಾರ್ಖಾನೆಯಲ್ಲಿ ವರ್ಷವೆಲ್ಲಾ ಕೆಲಸ ನಡೆಯಿತು. ಆಲ್ಲದೆ ಕಡೂರಿನಲ್ಲಿಯೂ, ಆನೇಕಲ್ಲಿನಲ್ಲಿಯೂ ಗಂಧದ ಮರದಿಂದ ಎಣ್ಣೆಯನ್ನು ಭಟ್ಟಿ ಇಳಿಸುವ ಕೆಲಸವನ್ನೂ ಯಥಾಪ್ರಕಾರ ನಡೆಸಲಾಯಿತು. ಕಡೂರಿನ ಕೆಲಸವನ್ನು ಈಚೆಗೆ ನಿಲ್ಲಿಸಲಾಗಿದೆ. 1933-1934 ನೆಯ ಸಾಲಿಗಿಂತಲೂ 1934-1935ನೆಯ ಸಾಲಿನಲ್ಲಿ ಗಂಧದೆಣ್ಣೆಯ ಮಾರಿಕ ಹುಟ್ಟುವಳಿಯು ಅಧಿಕವಾಗಿದ್ದಿತು.

ಪ್ರಸಕ್ತ ವರ್ಷದಲ್ಲಿ (1934-35 ರಲ್ಲಿ) ಅದಕ್ಕೆ ಹಿಂದಿನ ವರ್ಷಕ್ಕಿಂತಲೂ ಅಧಿಕವಾಗಿ ಗಂಧದೆಣ್ಣೆಯು ಮಾರಾಟವಾಯಿತು. ಅವಾನ್ನು ಪ್ರೋಟೀಯ ಪರಿಣಾಮವಾಗಿ ಗಂಧದ ಎಣ್ಣೆಯನ್ನು ಕಡಮೆ ಧಾರಣೆಗೆ ಮಾರಾಟಮಾಡಬೇಕಾಯಿತು.

ಸಕ್ಕರೆ ಕಾರ್ಖಾನೆ.

ಪ್ರಸಕ್ತ ವರ್ಷದಲ್ಲಿ ಹೊಸ ಸಕ್ಕರೆ ಕಾರ್ಖಾನೆಯಿಂದ ಸಮರ್ಪಕ ಕಾರ್ಯ ನಡೆಯಿತು.

ಸಕ್ಕರೆ ಕಾರ್ಖಾನೆಯಲ್ಲಿ ಮೊದಲಿನಿಂದಲೂ ಹೆಚ್ಚು ಕೆಲಸ ನಡೆಯುತ್ತಿದೆ. [illegible] 1,400 [illegible] ಈಗ [illegible] 3,700 [illegible]

[illegible]

[illegible]

ಹೊಸ ಉದ್ಯಮಗಳು.

[illegible]

ಆಯವ್ಯಯಗಳು.

1934-35 ನೆಯ ಸಾಲಿನ ಆಯವ್ಯಯಗಳ ಕಚ್ಚಾ ಲೆಕ್ಕಗಳು ಈಗ ಸಿದ್ಧವಾಗಿವೆ. ಅವುಗಳ ಪ್ರಕಾರ ತೋರಬಂದಿರುವ ವಿವರಗಳನ್ನು ಸಂಕ್ಷೇಪವಾಗಿ ತಮ್ಮ ಅವಗಾಹನೆಗೆ ತರಬಿಚ್ಛಿಸುತ್ತೇನೆ. ತಿದ್ದುಪಾಟು ಅಂದಾಜುಗಳ ಮೇರೆಗೆ, ಹುಟ್ಟುವಳಿ ಬಾಬನಲ್ಲಿ ಆಯವ್ಯಯಗಳು 365.81 ಲಕ್ಷ ರೂಪಾಯಿಗಳೂ ಖ 371.43 ಲಕ್ಷ ರೂಪಾಯಿಗಳೂ ಆಗಿದ್ದು, ವೆಚ್ಚವು ಹುಟ್ಟು ಗಿಂತ 5.62 ಲಕ್ಷ ರೂಪಾಯಿಗಳು ಹೆಚ್ಚಾಗುವಂತೆ ನಿ ಯಿದ್ದಿತು. ಆದರೆ ಅವೇಕ್ಷಾಲಿನ. ಬಜೆಟ್ ಪ್ರಕಾರ ಮಾ ವೆಚ್ಚವು ಕಳೆದು ಒಂದು ಲಕ್ಷರೂಪಾಯಿಗಳ ಉಳಿತಾಯ ಕಂಡುಬರುವುದಾಗಿ ಅಂದಾಜಾಗಿದ್ದಿತು. ವಾಸ್ತವಿಕವಾದ ಆ ವ್ಯಯಗಳ ಕಚ್ಚಾ ಲೆಕ್ಕಗಳು ಈಗ ಸಿದ್ಧವಾಗಿವೆಯೆಂದು ಸೂ ದನಷ್ಟೆ. ಆ ಲೆಕ್ಕಗಳ ಪ್ರಕಾರ 1934-35 ನೆಯ ಸಾಲಿನ ಹು ವಳಿಯು 367.77 ಲಕ್ಷ ರೂಪಾಯಿಗಳೂ, ವೆಚ್ಚವು 368.13 ರೂಪಾಯಿಗಳೂ ಆಗುವಂತೆಯೂ, ಒಟ್ಟಿನಲ್ಲಿ ಹುಟ್ಟುವಳಿ ವೆಚ್ಚವು ಕೇವಲ 36,000 ರೂಪಾಯಿಗಳಷ್ಟು ಅಲ್ಪಸ್ವಲ್ಪ ಆಗಿರುವುದು ಮಾತ್ರವೇ ಹೆಚ್ಚಾಗುವಂತೆಯೂ ತೋರಿಬಂದಿ ಮೇಗೆ ಅಂದಾಜಿಗಿಂತ ಹೆಚ್ಚು ಹುಟ್ಟುವಳಿಯೂ ಬಂದಿದೆ; ಆ ವೆಚ್ಚವು ಮೊದಲಿನ ಅಂದಾಜಿನಲ್ಲಿದ್ದುದಕ್ಕಿಂತ ಕಡಿಮೆಯ ಮಾಡಿರುವುದಾಗಿದೆ.

ತಿದ್ದುಪಾಟು ಅಂದಾಜುಗಳಲ್ಲಿ ನಿರೀಕ್ಷಿಸಿದ್ದಕ್ಕಿಂತ ಕೆ ಬಾಬುಗಳಲ್ಲಿ ಹೆಚ್ಚು ಹುಟ್ಟುವಳಿಯು ಬಂದಿದೆ. ಗಂಧದ ಮರಮಾರಿದ ತೆರಿಗೆ ಸ್ಟಾಂಪು, ಕೃಷ್ಣರಾಜಸಾಗರದ ವಿದ್ಯುಚ್ಛಕ್ತಿ ಕಾರ್ಖಾನೆಗಳು—ಇವೇ ಆ ಬಾಬುಗಳು. ಇವುಗಳಲ್ಲಿ ನ ನಿರೀಕ್ಷೆಯನ್ನು ದಕ್ಕಿಂತ ಹೆಚ್ಚು ಹುಟ್ಟುವಳಿಯು ಬಂದಿರುವುದ ಪ್ರತಿಯಾಗಿ ಜಮೀನುಕಂದಾಯ, ಫಾರೆಸ್ಟು, ಎಕ್ಸೈಜು, ಮು ಬೆಂಗಳೂರಿನ ನೀರು ಸರಬರಾಯಿ ಸಂಬಂಧದ ಕಾರ್ಖಾನೆ ಈ ಬಾಬುಗಳಲ್ಲಿ ನಾವು ನಿರೀಕ್ಷಿಸಿದ್ದಷ್ಟು ಹುಟ್ಟುವಳಿ ಬಾ ತಪ್ಪಿಹೋಗಿದೆ.

ಜ್ಯುಡಿಷಿಯಲ್ ಇಲಾಖೆ.

ಹೈಕೋರ್ಟಿನಲ್ಲಿ ವ್ಯವಸ್ಥೆಯಾಗಬೇಕಾಗಿ ಬಾಕಿ ಉಳಿ ರಿಯ ಅಪೀಲುಗಳ ಸಂಖ್ಯೆಯು ಬಹಳ ಹೆಚ್ಚಾಗಿದ್ದಿತು. ಕಾರಣ, ಹೈಕೋರ್ಟಿನಲ್ಲಿ ಮೂರನೆಯ ಜಡ್ಜಿಯವರನ್ನು ತಾ ಯಿಯಾಗಿ ಒಂದು ವರ್ಷಕಾಲಕ್ಕೆ ನೇಮಕಮಾಡಲಾಯಿ ಡಿಸ್ಟ್ರಿಕ್ಟು ಕೋರ್ಟುಗಳಲ್ಲಿ ಬಾಕಿಯಾಗಿ ಉಳಿದಿದ್ದ ಮೊಕದ್ದ ಗಳು ಬೇಗ ಇತ್ಯರ್ಥವಾಗುವಂತೆ ಏರ್ಪಾಡು ಮಾಡುವು ಯುಕ್ತವೆಂದು ಕಂಡುಬಂದಿತು. ಆದಕಾರಣ, ಕೋಲಾ ಹಾಸನ, ಚಿಕ್ಕಮಗಳೂರು ಮತ್ತು ಚಿತ್ರದುರ್ಗದ ಮ್ಯಾಜಿಸ್ಟ್ರೇ ಮತ್ತು ಸಬಾರ್ಡಿನೇಟ್ ಜಡ್ಜಿಗಳಿಗೆ ಅಸಲು ದಾವೆಗಳನ್ನು ಹಿ ವಿಚಾರಣೆಮಾಡುವ ಅಧಿಕಾರವನ್ನು ಕೊಡಲಾಯಿತು

ವೈದ್ಯದ (ಮೆಡಿಕಲ್) ಇಲಾಖೆ.

ಪ್ರಸಕ್ತ ವರ್ಷದ (1934-35) ಕೊನೆಯಲ್ಲಿ ಸಂಸ್ಥಾನದ ವೈದ್ಯಸಂಸ್ಥೆಗಳ ಒಟ್ಟು ಸಂಖ್ಯೆಯು 282. ಅವುಗಳಲ್ಲಿ ಒ 53,72,916 ಮಂದಿಗೆ ಚಿಕಿತ್ಸೆ ನಡೆಯಿತು. ಇವರಲ್ಲಿ 49.4 ಮಂದಿ ವೈದ್ಯಶಾಲೆಗಳಲ್ಲೇ ಇದ್ದು ಚಿಕಿತ್ಸೆಹೊಂದಿದ ಉಳಿದ 53,23,476 ಮಂದಿ ಅವುಗಳಲ್ಲಿರಬೇಕಾದ ಅವಶ್ಯ ಯಿಲ್ಲದೆ ಚಿಕಿತ್ಸೆ ಪಡೆದರು.

ವೈದ್ಯಸಹಾಯವನ್ನು ಹೆಚ್ಚಿಸುವ ಕೆಲಸವು—ಅದರಲ್ಲಿಯ ಮುಖ್ಯವಾಗಿ ಸ್ತ್ರೀಯರಿಗೂ ಮಕ್ಕಳಿಗೂ ವೈದ್ಯಸಹಾಯವ ಹೆಚ್ಚಿಸಲು ಕೆಲಸವು—ಪ್ರಸಕ್ತ ವರ್ಷ (1934-35) ಬ ಚಿಕ್ಕಾಗಿ ನಡೆದಿರುವುದು ಗಮನಾರ್ಹವಾದ ವಿಚಾರವಾಗಿದೆ. ಬೆ ಳೂರಿನ ವಾಣೀವಿಲಾಸ ಆಸ್ಪತ್ರೆ, ಚಿಕ್ಕಮಗಳೂರಿನ ಹೊ ಆಸ್ಪತ್ರೆ, ಡಿಸ್ಟ್ರಿಕ್ಟು ಆಸ್ಪತ್ರೆಗೆ ಸೇರಿದಂತೆ ಹಾಸನದಲ್ಲಿ ಕಟ್ಟಿದ ಹೆರಿಗೆ ವಾರ್ಡು—ಇವುಗಳ ಪ್ರವೇಶಮಹೋತ್ಸವವು ಪ್ರಸ ವರ್ಷದಲ್ಲಿ ನಡೆದು, ಅವುಗಳಲ್ಲಿ ಕೆಲಸವು ಪ್ರಾರಂಭವಾಯಿ ಶಿವಮೊಗ್ಗೆಯಲ್ಲಿ ಮ್ಯಾಗ್ಗಾನ್ ಆಸ್ಪತ್ರೆಗಾಗಿ ಕಟ್ಟುವ ಹೊಸಕಟ್ಟ ದಲ್ಲಿ ಕಾರ್ಯಾರಂಭವಾಯಿತು. ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯಲ್ಲಿ ಕಟ್ಟುವ (ಎಕ್ಸ್‌ರೇ ಮುಂತಾದುವುಗಳ ಸಾ ಸಲಕರಣೆಗಳನ್ನೊಳಗೊಂಡ) "ರೇಡಿಯಾಲಾಜಿಕಲ್" ಚಿಕಿ ಶಾಲೆಯ ಹೊಸ ಕಟ್ಟಡದ ಕಾಮಗಾರಿಯು ಪೂರೈಸಿ ಕೋಲಾರದಲ್ಲಿ ಹೊಸ ಆಸ್ಪತ್ರೆಯನ್ನು ಕಟ್ಟುವ ಕೆಲಸವು ಬ ಶೀಘ್ರವಾಗಿ ಪ್ರಾರಂಭವಾಗುತ್ತದೆ. ಅದು ಸಂಸ್ಥಾನದಲ್ಲಿ ಅತ್ಯಂತ ಸೊಗಸಾಗಿರುವ ಆಸ್ಪತ್ರೆಗಳಲ್ಲೊಂದಾಗುತ್ತದೆ. ಕೋ ರದ ಪ್ರಜೆಗಳ ಔದಾರ್ಯದ ಫಲವಾಗಿ ಅದು ಸಾಧ್ಯವಾಗುತ್ತ

ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ವೈದ್ಯದ ಇಲಾಖೆಯ ಕೆಲಸ ನಡೆದಿರುವ ಬಗೆಯನ್ನು ಸಂಕ್ಷೇಪವಾಗಿ ಸೂಚಿಸಿದರೆ ವೈ ಸಹಾಯದ ವಿಷಯದಲ್ಲಿ ಎಷ್ಟುಮಟ್ಟಿನ ಸೌಕರ್ಯಗಳು ಹೆಚ್ಚಿ ಬಂದಿರುವುದು ಗೊತ್ತಾಗುತ್ತದೆ; ಈ ಅವಧಿಯಲ್ಲಿ ಹೊಸದ ನಿರ್ಮಿತವಾದ ಆಸ್ಪತ್ರೆಗಳ ಮತ್ತು ಡಿಸ್ಪೆನ್ಸರಿಗಳ ಸಂಖ್ಯೆಯು ರೋಗಿಗಳನ್ನು ಆಸ್ಪತ್ರೆಗಳಲ್ಲಿಟ್ಟುಕೊಂಡು ಚಿಕಿತ್ಸೆಮಾಡುವ ಸೌ ರ್ಯವನ್ನು ಹೆಚ್ಚಿಸಲಾಗಿದೆ. ಅದರ ಫಲಿತಾಂಶವಾಗಿ ಮೊದಲಿಗಿ ಹೆಚ್ಚಾಗಿ 19,130 ಮಂದಿಯನ್ನು ಆಸ್ಪತ್ರೆಗಳಲ್ಲಿಟ್ಟುಕೊಂ ಚಿಕಿತ್ಸೆ ಮಾಡಲಾಯಿತು. ಮನೆಗಳಲ್ಲಿದ್ದುಕೊಂಡೇ ಆಸ್ಪತ್ರೆ ಲ್ಲಿಯೂ ಡಿಸ್ಪೆನ್ಸರಿಗಳಲ್ಲಿಯೂ ಚಿಕಿತ್ಸೆಹೊಂದಿದ ರೋಗಿಗಳ ಖ್ಯೆಯು 20,86,546 ಹೆಚ್ಚಾಗಿದೆ. ವೈದ್ಯಸಹಾಯದ ಮೊಬಲಿ ತಲೂ ಮೂರು ಲಕ್ಷ ರೂಪಾಯಿಗಳಷ್ಟು ಭಾರಿ ಮೊಬಲಿ ಹೆಚ್ಚಿದೆ. ಆಸ್ಪತ್ರೆಗಳಲ್ಲಿ ಮೊದಲಿಗಿಂತ ಹೆಚ್ಚಾಗಿ ಒಂದು ಸಲ 245 ಮಂದಿ ಗಂಡಸರನ್ನೂ 445 ಮಂದಿ ಹೆಂಗಸರನ್ನೂ ಇಟ್ ಕೊಂಡು ಚಿಕಿತ್ಸೆಮಾಡಲು ಸಾಧ್ಯವಾಗುವಂತೆ ಮಂಚಗಳು, ಹಾ ಗಳು ಮುಂತಾದ ಸೌಕರ್ಯಗಳನ್ನು ಹೆಚ್ಚಿಸಲಾಗಿದೆ. ಹೀಗೆ ಗ ಸರ ಮತ್ತು ಹೆಂಗಸರ ಚಿಕಿತ್ಸೆಯ ಸೌಕರ್ಯಗಳು ಹೆಚ್ಚಿ ಸಾಧ್ಯವಾದದಕ್ಕೆ ಪರೋಪಕಾರಿಗಳಾದ ಪುಣ್ಯಾತ್ಮರಿಂದ ಉ

...ಗಿ ಧನಸಹಾಯವಾಗಿರುವುದೇ ಆವಲಂಬನ. ಕಳೆದ ಐದು ವರ್ಷಗಳಲ್ಲಿ ಆರ್ಥವರಿಂದ ಈ ರೀತಿ ನಡೆದಿರುವ ಧನಸಹಾಯವು ...12,000 ರೂಪಾಯಿಗಳು.

ವಿದ್ಯಾಭ್ಯಾಸ.

ಪ್ರಸಕ್ತ ವರ್ಷದಲ್ಲಿ (1934-35) ಹೆಚ್ಚು ಸ್ಕೂಲುಗಳನ್ನು ...ಪಿಸಿ ವಿದ್ಯಾಭಿವೃದ್ಧಿ ಮಾಡುವ ಕಾರ್ಯಕಲಾಪಗಳು ಅಧಿಕವಾಗಿ ...ಯಲಿಲ್ಲ. ಪಾಠಪ್ರವಚನಗಳೇ ಮುಂತಾದುವುಗಳ ದಕ್ಷತೆಯನ್ನು ...ಸಿಕೊಂಡಿದ್ದು, ಹೊಸ ಸ್ಕೂಲುಗಳ ಸ್ಥಾಪನೆಗೆ ಹೆಚ್ಚು ಮೊಬಲಗುಗಳನ್ನು ಸರ್ಕಾರದವರು ಕೊಡುವ ಅನುಕೂಲದೊರೆಯದೇ ... ಕೆಲಸಕ್ಕೆ ಕೈಹಾಕಲು ಇಲಾಖೆಯವರು ಪ್ರೋತ್ಸಾಹಗಳನ್ನು ಮಾಡಿಕೊಳ್ಳುವುದಕ್ಕೇ ಮುಖ್ಯವಾಗಿ ಅವರು ಗಮನಕೊಡುತ್ತಿದ್ದರು. ಪ್ರಸಕ್ತ ವರ್ಷದಲ್ಲಿ (1934-35) ವಿದ್ಯಾಭ್ಯಾಸಕ್ಕಾಗಿ ಒಟ್ಟು 54.85 ಲಕ್ಷ ರೂಪಾಯಿಗಳು ವೆಚ್ಚವಾದವು. 1933-34 ರಲ್ಲಿ ವಿದ್ಯಾಭ್ಯಾಸಕ್ಕಾಗಿ 55-30 ಲಕ್ಷ ರೂಪಾಯಿಗಳು ವೆಚ್ಚವಾಗಿದ್ದುವು. ಸ್ಕೂಲುಗಳಲ್ಲಿ ವ್ಯಾಸಂಗ ಮಾಡುತ್ತಿದ್ದವರ ಸಂಖ್ಯೆಯು 1933-34 ರಲ್ಲಿ 2,97,850 ಇದ್ದುದು 1934-35 ರಲ್ಲಿ 3,00,367 ಕ್ಕೆ ಹೆಚ್ಚಿತು. ಸ್ಕೂಲುಗಳಿಗೆ ಹೋಗುವ ವಯಸ್ಸಿನ ಬಾಲಕ ಬಾಲಿಕೆಯರಲ್ಲಿ ಸುಮಾರು ಮೂರರಲ್ಲೊಂದು ಭಾಗದವರು ವ್ಯಾಸಂಗ ಮಾಡುತ್ತಿದ್ದರು. 1933-34 ರಲ್ಲಿ ಪ್ರಜಾ ಸಂಖ್ಯೆಯಲ್ಲಿ ಪ್ರತಿ 29.59 ಮಂದಿಗೆ ಒಬ್ಬರಂತೆಯೂ, 1934-35 ರಲ್ಲಿ ಪ್ರತಿ 20.24 ಮಂದಿಗೆ ಒಬ್ಬರಂತೆಯೂ ವ್ಯಾಸಂಗ ಮಾಡುತ್ತಿದ್ದಂತಾಯಿತು.

ಪ್ರಾಥಮಿಕ ವಿದ್ಯಾಭ್ಯಾಸವನ್ನು (ಪ್ರೈಮರಿ ವಿದ್ಯಾಭ್ಯಾಸವನ್ನು) ಉತ್ತಮಪಡಿಸುವ ವಿಷಯಕ್ಕೆ ಅವಿಚ್ಛಿನ್ನವಾಗಿ ಗಮನ ಕೊಡುತ್ತಿರಲಾಗಿದೆ. ಈಗಿರತಕ್ಕ ಕ್ರಮದ ಕೆಲವು ನ್ಯೂನತೆಗಳನ್ನು ಪರಿಹರಿಸಿ ಇನ್ನೂ ತೃಪ್ತಿಕರವಾದ ಫಲಿತಾಂಶಗಳು ದೊರೆಯುವಂತೆ ಮಾಡುವ ವಿಷಯದಲ್ಲಿ ವಿದ್ಯಾಭ್ಯಾಸದ ಡೈರಕ್ಟರವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ.

1928 ನೆಯ ಇಸವಿಯಿಂದ ಮಿಡ್ಲ್ ಸ್ಕೂಲ್ ಪರೀಕ್ಷೆಗೆ ಹಿಂದಿಯೂ ಉರ್ದೂವೂ ಐಚ್ಛಿಕ ವಿಷಯಗಳಾಗಿರುವಂತೆ ಗೊತ್ತು ಮಾಡಲಾಗಿದೆ.

ಪಬ್ಲಿಕ್ ವರ್ಕ್ಸ್ ಇಲಾಖೆ.

ಸ್ತ್ರೀಯರಿಗೋಸ್ಕರವೂ ಮತ್ತು ಮಕ್ಕಳಿಗೋಸ್ಕರವೂ ಬೆಂಗಳೂರಿನಲ್ಲಿ ನಿರ್ಮಿತವಾಗಿರುವ ವಾಣೀವಿಲಾಸ ಆಸ್ಪತ್ರೆಯ ಕಟ್ಟಡವು ಪೂರೈಸಿತು. 1935 ನೆಯ ಇಸವಿ ಮಾರ್ಚಿ ತಿಂಗಳಿನಲ್ಲಿ ಶ್ರೀ ಮನ್ಮಹಾರಾಜರವರು ಕೃಪೆಮಾಡಿ ಅದರ ಪ್ರವೇಶಮಹೋತ್ಸವವನ್ನು ನೆರವೇರಿಸಿದರು. ಅದೇ ತಿಂಗಳಿನಲ್ಲಿ ಶ್ರೀಮನ್ಮಹಾರಾಜರವರು ಮೈಸೂರು ನಗರದಲ್ಲಿ ಅಂಗಹೀನರಿಗಾಗಿ ಏರ್ಪಟ್ಟಿರುವ "ಸೆಂಟ್ರಲ್ ಇನ್ಸ್ಟಿಟ್ಯೂಟ್" ಶಿಕ್ಷಣ ಶಾಲೆಯ ಸಂಬಂಧದಲ್ಲಿ ಕಟ್ಟಿರತಕ್ಕ ಹೊಸಕಟ್ಟಡದ ಪ್ರವೇಶಮಹೋತ್ಸವವನ್ನು ಕೃಪೆಮಾಡಿ ನೆರವೇರಿಸಿದರು. ಪ್ರಸಕ್ತ ವರ್ಷ (1934-35 ನೆಯ ಸಾಲಿನಲ್ಲಿ) ಕಟ್ಟಿ ಪೂರೈಸಿದ ಇತರ ಮುಖ್ಯವಾದ ಕಟ್ಟಡಗಳು ಯಾವುವೆಂದರೆ: ತುಮಕೂರಿನ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನ ಕಟ್ಟಡ; ಚಿಕ್ಕಮಗಳೂರಿನಲ್ಲಿ ಹೆರಿಗೆ ಆಸ್ಪತ್ರೆಯ ಕಟ್ಟಡ; ಶಿವಮೊಗ್ಗೆಯ ಮೆಗ್ಗಾನ್ ಆಸ್ಪತ್ರೆಗೆ ಸೇರಿದಂತೆ ಕಟ್ಟಿರುವ ಕಟ್ಟಡ; ಹಾಸನದ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯಲ್ಲಿ ಹೆರಿಗೆಯ "ಬ್ಲಾಕ್"—ಇವುಗಳೇ. ಬೆಂಗಳೂರಿನಲ್ಲಿ "ಸರ್ ಪುಟ್ಟಣ್ಣಚೆಟ್ಟಿ ಟೌನ್ ಹಾಲ್" ನಗರ ಭವನವೂ ಈಚೆಗೆ ಪೂರೈಸಿತು. ಕಳೆದ ತಿಂಗಳು ಶ್ರೀಮನ್ಮಹಾರಾಜರವರು ಕೃಪೆಮಾಡಿ ಅದರ ಪ್ರವೇಶಮಹೋತ್ಸವವನ್ನು ನೆರವೇರಿಸಿದರು. ಬೆಂಗಳೂರಿನಲ್ಲಿ ವೃತ್ತಿಶಿಕ್ಷಣಾಲಯದ (ಟೆಕ್ನಿಕಲ್ ಇನ್ಸ್ಟಿಟ್ಯೂಟ್) ಕಟ್ಟಡದ ಕೆಲಸವೂ ಮತ್ತು ಮೈಸೂರಿನಲ್ಲಿ ಮೆಡಿಕಲ್ ಕಾಲೇಜು ಕಟ್ಟಡದ ಕೆಲಸವೂ ಬೇಗಬೇಗ ನಡೆಯುತ್ತಿವೆ. ಬೆಂಗಳೂರು ನಗರದಲ್ಲಿ ಸುಮಾರು 64,000 ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಕಟ್ಟಬೇಕೆಂದಿರುವ ಮಕ್ಕಳ ಆಸ್ಪತ್ರೆ ಕಟ್ಟಡದ ಕೆಲಸವೂ, ಸುಮಾರು 75,000 ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಕಟ್ಟಬೇಕೆಂದಿರುವ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡ್ ಕಚೇರಿಯ ಕಟ್ಟಡದ ಕೆಲಸವೂ ಪ್ರಸಕ್ತವರ್ಷ (1934-35) ಪ್ರಾರಂಭವಾದುವು. ಮಾನಸಿಕ ರೋಗಗಳ ಆಸ್ಪತ್ರೆಗಾಗಿ ಒಂದು ಹೊಸ ಕಟ್ಟಡವನ್ನು ಕಟ್ಟಲು ಅಂದಾಜುಗಳು ಸಿದ್ಧವಾಗಿವೆ. ಅವು ಶೀಘ್ರವಾಗಿ ಮಂಜೂರಾಗುತ್ತವೆ.

ಕಪಿನೀ ನದಿಯ ಸೇತುವೆಯು ಪೂರೈಸುತ್ತ ಬಂದಿದೆ. ನಾವು ನಾಥಪುರದ ಬಳಿಯಲ್ಲಿ ಕಾವೇರೀ ನದಿಗೆ ಸೇತುವೆಯನ್ನು ಕಟ್ಟುವ ವಿಚಾರವು ಈಗ ಬಹುಕಾಲದಿಂದಲೂ ಪರ್ಯಾಲೋಚನೆಯಲ್ಲಿದ್ದಿತು. ಅದರ ಕೆಲಸವು ಶೀಘ್ರದಲ್ಲಿಯೇ ಪ್ರಾರಂಭವಾಗುತ್ತದೆ. ರಸ್ತೆ ನಿಧಿಯ (ರೋಡ್ ಫಂಡ್) ಲೆಕ್ಕದ ಬಾಬತು ಇಂಡಿಯಾ ಸರ್ಕಾರದವರು ಈ ಸೇತುವೆಯ ಕಾಮಗಾರಿಗೆ 1½ ಲಕ್ಷ ರೂಪಾಯಿಗಳನ್ನಾಗಲಿ ಅದಾ ಸೇತುವೆಯನ್ನು ಕಟ್ಟುವ ವೆಚ್ಚದಲ್ಲಿ ಅರ್ಧ ಭಾಗದ ಮೊಬಲಗು ಇದ್ದರೆ ಕಡಮೆಯಾಗುವ ಪಕ್ಷದಲ್ಲಿ ಆ ಅರ್ಧ ಭಾಗದ ಮೊಬಲಗನ್ನಾಗಲಿ, ಕೊಡುವುದಾಗಿ ತೀರ್ಮಾನಿಸಿ ಉಪಕರಿಸಿದ್ದಾರೆ. ಅದರಿಂದ ಈ ಕಾಮಗಾರಿಯನ್ನು ಹಿಡಿಯಲು ಅನುಕೂಲವಾಗುತ್ತದೆ.

ನೀರಾವರೀ ಕಾಮಗಾರಿಗಳ ಬಾಬಿನಲ್ಲಿ ಪ್ರಸಕ್ತವರ್ಷದಲ್ಲಿ ಕೂಡ ಎಂದಿನಂತೆಯೇ ವಿಚಕ್ಷಣೆಯಿಂದ ಕೆಲಸ ನಡೆಯಿತು. ಕಳೆದ ಮಾರ್ಚ್ ತಿಂಗಳಿನಿಂದ ಮೈಸೂರನ್ನು ಕಸಬೆಯಾಗಿಟ್ಟು ಒಬ್ಬರು ಸೂಪರಿಂಟೆಂಡಿಂಗ್ ಇಂಜನೀಯರವರನ್ನು ನೇಮಕ ಮಾಡಲಾಯಿತು. ಕೃಷ್ಣರಾಜಸಾಗರದ ಬಯಲಿನಲ್ಲಿ ನೀರಾವರಿಯನ್ನು ಹೆಚ್ಚಿಸಿ ಅನುಕೂಲಪಡಿಸುವ ವಿಚಾರಕ್ಕೂ, ತತ್ಸಂಬಂಧವಾದ ಇತರ ಕಾಮಗಾರಿಗಳ ವಿಷಯಕ್ಕೂ ಸಂತತವೂ ತೀವ್ರವಾಗಿ ಗಮನಕೊಡುತ್ತ ಬರುವುದು ಸಾಧ್ಯವಾಗಲೆಂಬುದೇ ಇದರ ಉದ್ದೇಶ. ತುಂಗಭದ್ರಾ ನದಿಯ ನೀರಿನ ಯಾವ ಯಾವ ಪ್ರಾಂತದವರಿಗೆ ಎಷ್ಟೆಷ್ಟು ಹಕ್ಕಿರುವುದನ್ನು ನಿಷ್ಕರ್ಷಿಸಿ ಒಂದು ಒಪ್ಪಂದ ಮಾಡಿಕೊಳ್ಳುವ ಉದ್ದೇಶದಿಂದ, ಸಂಬಂಧಪಟ್ಟ ಸರ್ಕಾರಗಳ ಪ್ರತಿನಿಧಿಗಳ ಒಂದು ಸಮ್ಮೇಳನವು ನಡೆಯಿತು. ಮದ್ರಾಸು, ಬೊಂಬಾಯಿ, ಮೈಸೂರು ಮತ್ತು ಹೈದರಾಬಾದು—ಈ ನಾಲ್ಕು ಸರ್ಕಾರಗಳ ಪ್ರತಿನಿಧಿಗಳೂ ಸಮ್ಮೇಳನದಲ್ಲಿ ಭಾಗಿಗಳಾಗಿದ್ದರು. 1934 ನೆಯ ಇಸವಿಯ ಜುಲೈ ತಿಂಗಳಿನಲ್ಲಿಯೂ ಮತ್ತು ಅಕ್ಟೋಬರ್ ತಿಂಗಳಿನಲ್ಲಿಯೂ ಅವರು ಸಭೆ ಸೇರಿದ್ದರು. ಚರ್ಚೆಗಳು ನಡೆದ ಬಳಿಕ ನಿಷ್ಕೃಷ್ಟವಾದ ತೀರ್ಮಾನವಾದುದಕ್ಕೆ ಬರುವುದು ಸಾಧ್ಯವಾಗಲಿಲ್ಲ. ಆದಕಾರಣ, ಆ ವಿಚಾರವನ್ನು ಇಂಡಿಯಾ ಸರಕಾರದವರು ಇತ್ಯರ್ಥಪಡಿಸಬೇಕೆಂದು ಬಿನ್ನವಿಸಲಾಗಿದೆ. ಅವರ ತೀರ್ಮಾನವನ್ನು ನಿರೀಕ್ಷಿಸಲಾಗಿದೆ. ಘನವೆತ್ತ ದಿವಾನ್ ಮಿ|| ಮಿರ್ಜಾರವರು ಕಳೆದ ತಿಂಗಳು ಇಂಡಿಯಾ ಸರ್ಕಾರದ ಶಾಸನ ಸಭೆಯಲ್ಲಿ (ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ) ಸೂಚಿಸಿದಂತೆ ಈ ವಿಷಯವು ರಾಜಕೀಯ ವಿಚಾರದಲ್ಲಿಂದಲೂ, ಶಿಲ್ಪಕಲೆಯ ಸಂಬಂಧದ (ಇಂಜನಿಯರಿಂಗ್ ಸಂಬಂಧದ) ಪಾರಿಭಾಷಿಕ ವಿಚಾರಗಳಿಂದಲೂ ಮತ್ತು ಹಣದ ಸಂಬಂಧದ ವಿಚಾರಗಳಿಂದಲೂ ಕೂಡಿದ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಆದಕಾರಣ ಈ ವಿಷಯವನ್ನು ಇಂಡಿಯಾ ಸರಕಾರದವರು ಜಾಗರೂಕವಾಗಿ ಪರಿಶೀಲಿಸಿ ಸ್ವಲ್ಪ ಕಾಲದ ಒಳಗೆ ತೀರ್ಮಾನಿಸಬೇಕೆಂದು ನಮಗೆ ತೋರುತ್ತದೆ. ತುಂಗಭದ್ರಾ ನದಿಗೆ ಅಡ್ಡವಾಗಿ ಕಟ್ಟುವ ಸಂದರ್ಭದಲ್ಲಿ ನಮ್ಮ ಸಂಸ್ಥಾನದ ಹಿತವನ್ನು ಕಾಪಾಡಿಕೊಳ್ಳಬೇಕೆಂಬ ವಿಚಾರದಲ್ಲಿ ಸರಿಯಾದ ಲೆಕ್ಕಪತ್ರಗಳನ್ನು ಸಿದ್ಧಪಡಿಸಿಕೊಳ್ಳುವುದಕ್ಕಾಗಿ ನಮ್ಮ ಸರ್ಕಾರದವರು ಕೆಲವು ನದಿಯ ನೀರಿನ ಅಳತೆಗಳನ್ನು ಜಾಗರೂಕತೆಯಾಗಿ ನಡೆಯಿಸಿ ನೀರಿನ ಲೆಕ್ಕಗಳನ್ನು ಸಂಗ್ರಹಿಸುತ್ತಿದ್ದಾರೆ.

ವಿದ್ಯುಚ್ಛಕ್ತಿ ಇಲಾಖೆ.

ವಿದ್ಯುಚ್ಛಕ್ತಿ ಇಲಾಖೆಯವರು ಚಿಕ್ಕ ಪಟ್ಟಣಗಳಿಗೂ ಗ್ರಾಮಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸುವ ಕಾರ್ಯಕಲಾಪಗಳನ್ನು ಹುರುಪಾಗಿ ನಡೆಯಿಸುತ್ತಿದ್ದಾರೆ. ಪ್ರಸಕ್ತವರ್ಷ (1934-35) ಗುಂಡ್ಲುಪೇಟೆ, ಬೆಂಗಳೂರು ಮತ್ತು ಕೋಲಾರದ ಡಿಸ್ಟ್ರಿಕ್ಟುಗಳ ಕೆಲಕೆಲವು ಸಣ್ಣ ಸಣ್ಣ ಗ್ರಾಮಗಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕುವ ಕೆಲಸವು ನಡೆಯಿತು.

ಕೃಷ್ಣರಾಜನಗರ, ಹೊಳೆನರಸೀಪುರ, ಹಾಸನ, ಚಿಕ್ಕಮಗಳೂರು, ತರೀಕೆರೆ, ಬೇಲೂರು ಮತ್ತು ಶಿವಮೊಗ್ಗ—ಈ ನಗರಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕುವ ಅಂದಾಜುಗಳು ಮಂಜೂರಾಗಿವೆ.

ರೈಲ್ವೆಗಳು.

ಸಂಸ್ಥಾನದಲ್ಲಿ ರೈಲುಮಾರ್ಗದ ಒಟ್ಟು ಉತ್ಪತ್ತಿ ಪ್ರಸಕ್ತ ವರ್ಷದಲ್ಲಿ ಕೂಡ (1934-35) ಅದರ ಹಿಂದಿನ ವರ್ಷದಲ್ಲಿದ್ದಷ್ಟೇ ಇದ್ದಿತು. ಹಿಂದಿನ ಬಾಕಿಗಳೂ ಸೇರಿ 1934-35 ನೆಯ ಸಾಲಿನಲ್ಲಿ ಒಟ್ಟು ಹುಟ್ಟುವಳಿಯ ಮೊಬಲಗು 70.35 ಲಕ್ಷ ರೂಪಾಯಿಗಳು. 1933-34 ನೆಯ ಸಾಲಿನಲ್ಲಿ ಒಟ್ಟು ಹುಟ್ಟುವಳಿಯ ಮೊಬಲಗು 71.19 ಲಕ್ಷ ರೂಪಾಯಿಗಳು. 1934-35 ನೆಯ ಸಾಲಿನಲ್ಲಿ ವೆಚ್ಚವು 59.04 ಲಕ್ಷ ರೂಪಾಯಿಗಳು. 1933-34 ನೆಯ ಸಾಲಿನಲ್ಲಿ ವೆಚ್ಚವು 56.50 ಲಕ್ಷ ರೂಪಾಯಿಗಳು. ಸವಕಲು ಭರ್ತಿ ನಿಧಿಗೆ (ಡಿಪ್ರೀಸಿಯೇಷನ್ ಫಂಡಿಗೆ) ಕೊಟ್ಟ ಮೊಬಲಗು ಕಂಪನಿಗಳಿಗೂ ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಕೊಡಬೇಕಾದ ವಂತಿಗೆಗಳು ಮತ್ತು ಸಾಲದ ಮೇಲೆ ಕೊಡಬೇಕಾಗಿರುವ ಬಡ್ಡಿ ಮೊಬಲಗುಗಳು, ಇವೆಲ್ಲ ಸೇರಿ ಇನ್ನೂ ಮೊಬಲಗು ವೆಚ್ಚವಾಗಿರುತ್ತದೆ. ಅಂತು ನಿವ್ವಳವಾಗಿ ಸರ್ಕಾರದವರಿಗೆ 1933-34 ನೆಯ ಸಾಲಿನಲ್ಲಿ 14.60 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬಂದಿತು. 1934-35 ನೆಯ ಸಾಲಿನಲ್ಲಿ 10-41 ಲಕ್ಷ ರೂಪಾಯಿಗಳ ನಿವ್ವಳ ಹುಟ್ಟುವಳಿಯು ಬಂದಿತು. 1934-35 ನೆಯ ಸಾಲಿನಲ್ಲಿ 10-41 ಲಕ್ಷ ರೂಪಾಯಿಗಳ ನಿವ್ವಳ ಹುಟ್ಟುವಳಿಯು ಬಂದಿತು. ಎಂದರೆ, ಬಂಡವಾಳದ ಮೇಲೆ ಸೇಕಡ 2.52 ರಂತೆ ಮಾತ್ರವೇ ಪ್ರತಿಫಲವು ಬಂದ ಹಾಗಾಯಿತು.

ಈಗ ಆನುಪನ್ನರವರೆಗೂ ಇರುವ ರೈಲುಮಾರ್ಗವನ್ನು ಸಾಗರದವರೆಗೂ ಹಾಕುವುದಕ್ಕಾಗಿ ಚಾಲ್ತಿ ಸಾಲಿನಲ್ಲಿ ಬಜೆಟ್ಟಿನಲ್ಲಿ 3 ಲಕ್ಷ ರೂಪಾಯಿಗಳು ಒದಗಿಸಲಾಗಿದೆ.

ಸರ್ಕಾರಿ ಆಡಳಿತದಲ್ಲಿರುವ ರೈಲುಗಳಲ್ಲಿ ಪ್ರಯಾಣಿಕರಿಗೆ ಕೆಲವು ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳು ಯಾವುವೆಂದರೆ: ಕೋಲಾರ—ಬಂಗಾರಪೇಟೆ, ಬೆಂಗಳೂರು—ಚಿಕ್ಕಬಳ್ಳಾಪುರ, ಮೈಸೂರು—ಚಾಮರಾಜನಗರ ಈ ರೈಲುಮಾರ್ಗಗಳಲ್ಲಿ ಮೂರನೆಯ ತರಗತಿಯ ಪ್ರಯಾಣದ ಟಿಕೇಟು ಛಾರ್ಜನ್ನು ಕಡಿಮೆಮಾಡಿರುವುದು; ಎರಡನೆಯ ತರಗತಿಯ ಅದೇ ಟಿಕೇಟು ಛಾರ್ಜನ್ನು ಅದೇರೀತಿ ತಗ್ಗಿಸಿ ಅದು ಇಂಟರ್‌ಮೀಡಿಯಟ್ ತರಗತಿಯ ಛಾರ್ಜಿನಷ್ಟರ ಹತ್ತಿರ ಹತ್ತಿರಕ್ಕೆ ಇಳಿಯುವಂತೆ ಮಾಡಿರುವುದು; ಕೆಲವು ಸ್ಟೇಷನ್ನುಗಳಿಗೆ ನಡುವೆ ಪ್ರಯಾಣಕ್ಕೆ ವಾರದಕೊನೆಯಲ್ಲಿ ಹೋಗಿಬರುವ ಪ್ರಯಾಣಗಳಿರ ದಕ್ಕೋಸ್ಕರ "ವೀಕ್ ಎಂಡ್" ಟಿಕೇಟುಗಳನ್ನು ರಿಯಾಯಿತಿ ದರದಲ್ಲಿ ಕೊಡುವಂತೆ ಮಾಡಿರುವುದು; ಇವು ಮೂರು ಮುಖ್ಯವಾದ ಆ ಸೌಕರ್ಯಗಳು.

ಮೈಸೂರು ಸಂಸ್ಥಾನದ ರೈಲ್ವೆಯನ್ನು ಚಾಮರಾಜನಗರದಿಂದ ಸತ್ಯಮಂಗಲದವರೆಗೆ ಹಾಕಲು ಅವಕಾಶಕೊಟ್ಟು, ಅಲ್ಲಿಂದ ಮುಂದೆ ಪಳನಿಯವರೆಗೂ ರೈಲುಮಾರ್ಗವು ಏರ್ಪಡುವಂತೆ ಮಾಡುವ ವಿಚಾರವು ಇನ್ನೂ ಇಂಡಿಯಾಸರ್ಕಾರದ ರೈಲ್ವೆ ಬೋರ್ಡಿನವರ ಪರ್ಯಾಲೋಚನೆಯಲ್ಲಿದೆ. ಈ ವಿಚಾರವು ಮೈಸೂರು ಸಂಸ್ಥಾನದ ಪುರೋಭಿವೃದ್ಧಿಗೆ ಅತ್ಯವಶ್ಯಕವಾಗಿ ಬೇಕಾದಂಥ ಪ್ರಾಮುಖ್ಯ ವಿಚಾರ. ಅಲ್ಲದೆ ಬಸ್ಸು ಮುಂತಾದುವುಗಳ ಮೂಲಕ ರಸ್ತೆಗಳಲ್ಲಿ ಪೈಪೋಟಿಯಿರುವ ಸನ್ನಿವೇಶದಲ್ಲಿ ರೈಲು ಸಂಚಾರದಲ್ಲಿ ಈಗಿರುವುದರಲ್ಲಿ ಹೆಚ್ಚು ಭಾಗವು ಮುಂದೆ ಉಳಿದಿರಬೇಕಾದರೂ ಸಹ, ಇದು ಅತ್ಯಗತ್ಯವೆಂದು ನಾವು ನಂಬಿದ್ದೇವೆ.

ಶ್ರೀ ಜಗದ್ಗುರು ರೇವಣಸಿದ್ಧೇಶ್ವರ ಮೂರ್ತಿ ಸ್ಥಾಪನೆ.

ನೋಟಿ.

ಮಾನವರು ಶಿವಧ್ಯಾನವಿಲ್ಲದೆ ಮೋಕ್ಷಮಾರ್ಗವನ್ನು ಸಾಧಿಸಲಾರರು. ಅದ್ದರಿಂದಲೇ ಪೂರ್ವದ ಮುನಿಪುಂಗವರು ಏಕಾಂತ ಸ್ಥಳಪ್ರದೇಶವನ್ನು ಆರೈಸಿ, ಆ ಸ್ಥಳದಲ್ಲಿ ಪರಶಿವನನ್ನು ನಿರ್ಮಲಚಿತ್ತದಲ್ಲಿ ನೆಲೆಗೊಳ್ಳುವಂತೆ ಮಾಡಿಕೊಂಡು ಕ್ಷೇತ್ರಾರ್ಥವಾಗಿ ಆಯಾ ಸ್ಥಳದಲ್ಲಿ ಶಿವಲಿಂಗವನ್ನು ಸ್ಥಾಪಿಸಿದ್ದಾರೆಂದು ಆಯಾ ಮುನಿಪುಂಗವರ ಚರಿತ್ರದಿಂದ ತಿಳಿಯಬರುತ್ತದೆ. ಈ ತತ್ವವನ್ನು ಸಂಪೂರ್ಣ ಬಲ್ಲವರಾದ ನಿಜಾಮ ಸ್ಟೇಟ್ ಹುಮನಾಬಾದ ತಾಲೂಕ ಪೈಕಿ ಹಿರೇಮಠಾಧೀನವಾದ 'ಮೋಘಾಯಿಮೂಲಕ' ಎಂಬ ಗ್ರಾಮದಲ್ಲಿರುವ ಶ್ರೀ ಬಾಪುರಾವ ಪಾಟೀಲ ಇವರು ಶಿವಲಿಂಗಾನುಷ್ಠಾನವನ್ನು ೩ ತಿಂಗಳವರೆಗೆ ನೆರವೇರಿಸಿ, ಕ್ಷೇತ್ರಾರ್ಥವಾಗಿ 'ಶ್ರೀ ರೇವಣಸಿದ್ಧೇಶ್ವರ' ನೆಂಬ ಪವಿತ್ರಾಭಿಧಾನದಿಂದ ಶಿವಲಿಂಗವನ್ನು ಹೋಟಗಿ ಶ್ರೀಗಳವರ ಗುರುತ್ವದಲ್ಲಿ ಬಾದ್ರಪದ ಬ|| ೧೩ ದಿವಸ ಸ್ಥಾಪನಗೊಳಿಸಿ ದನ್ಯರಾದರೆಂದು ತಿಳಿಸಲು ಅತ್ಯಾನಂದವಾಗುತ್ತದೆ.

ಈ ಗ್ರಾಮದಲ್ಲಿ ಶ್ರೀ ಬಾಪುರಾವ ಮತ್ತು ರಾಮಚಂದ್ರಪ್ಪ ಇವರು ಕೇವಲ ರಾಮಲಕ್ಷ್ಮಣರಂತೆ ಪರಸ್ಪರ ಪ್ರೇಮವುಳ್ಳವರಿದ್ದಾರೆ. ರಾಮಚಂದ್ರಪ್ಪ ಎಂಬವರು ಹಿರಿಯರು ಇವರ ವಯಸ್ಸು ೩೬ ಬಾಪುರಾವ ಇವರ ವಯಸ್ಸು ೧೯ ಇವರಿಬ್ಬರೂ ತಮ್ಮ ತಂದೆಯವರಾದ ಭೀಮರಾವ ಎಂಬವರು ಶಿವೈಕ್ಯರಾದ ಮೇಲೆ ಸೋಲಾಪುರಕ್ಕೆ ಬಂದು ವಾಸಮಾಡಿದ್ದಾರೆ. ಈ ಸಹೋದರರು ಪುರಾಣ, ಪ್ರವಚನ, ಕೀರ್ತನಾದಿಗಳನ್ನು ಕೇಳುವದರಲ್ಲಿ ಅತ್ಯಂತ ಶ್ರದ್ಧೆಯುಳ್ಳವರಾಗಿದ್ದು ಅಸಾಧಾರಣ ಗುರುಭಕ್ತಿನಿಷ್ಠರಾಗಿರುವರು. ದಕ್ಷಿಣಮಹಾರಾಷ್ಟ್ರ ಭಾಗದಲ್ಲಿ ಹೋಟಗಿ ಶ್ರೀಗಳವರ 'ಶಿವದೀಕ್ಷಾ' ಬೀಜದ ಭಕ್ತರೆಂಬುದಕ್ಕೆ ಕಾರಣವಾಯಿತು. ನೊಳಲೇ ಭಕ್ತಿಬಲದಿಂದ ಪವಿತ್ರರಾದ ರಾಮಚಂದ್ರಪ್ಪ ಮತ್ತು ಬಾಪುರಾವ ಎಂಬವರ ಹೃದಯಕ್ಷೇತ್ರದಲ್ಲಿ ಬೀಜವು ಬಿದ್ದಮೇಲೆ ಕೇಳುವುದೇನು? ಇವರೂ ಇವರ ಸಂಬಂಧಿಕರೂ ಪಂಡಿತಾರ್ಯಮದಲ್ಲಿ ತಮ್ಮ ತಮ್ಮ ಕಾರ್ಯಾನುಸಾರವಾಗಿ ಹೋಟಗೀ ಶ್ರೀಗಳ ನೇತೃತ್ವದಲ್ಲಿ ಶಿವದೀಕ್ಷೆಯನ್ನು ಪಡೆದು ಗುರುಕರುಣಾಕಟಾಕ್ಷಕ್ಕೆ ಪಾತ್ರರಾದರು. ಬಾಪುರಾವ ಎಂಬವರು ತಮ್ಮ ಗ್ರಾಮದ ಪ್ರಶ್ಮಶಾನದ ಗುಡ್ಡದಲ್ಲಿ ಶ್ರಾವಣ ಶು|| ಪ್ರತಿಪದೆ ಮೊದಲ್ಗೊಂಡು ಭಾದ್ರಪದ ಬ|| ೧೩ ರವರೆಗೆ ೩ ತಿಂಗಳು ಅನ್ನವಿಲ್ಲದೆ ಕೇವಲ ೭.೮ ತೊಲ ಗೋ-ಕ್ಷೀರ ದಿಂದಲೇ ಕಠಿಣತರವಾದ ಶಿವಲಿಂಗಾನುಷ್ಠಾನವನ್ನು ನೆರವೇರಿಸಿದರು. ಸಮಾಪ್ತಿಗೆ ಹೋಟಗಿ ಶ್ರೀಗಳನ್ನು ಕರೆಯಿಸಿ, ಅನುಷ್ಠಾನ ಕ್ಷೇತ್ರಾರ್ಥವಾಗಿ ತಮ್ಮ ರಾಜಗುರುಗಳ ಹೆಸರಿನಿಂದ 'ಶ್ರೀ ರೇವಣಸಿದ್ಧೇಶ್ವರ' ಲಿಂಗಮೂರ್ತಿಯನ್ನು ಸ್ಥಾಪಿಸಿದರು. ೩ ಸಾವಿರಕ್ಕಿಂತ ಹೆಚ್ಚು ಜನರು ನೆರೆದಿದ್ದರು. ಭಕ್ತಮಹೇಶ್ವರರಿಗೆ ಅನ್ನಸಂತರ್ಪಣೆಯಾಯಿತು. ರಂತರ ಭೀಮರಾವ ಮುಲಗೆ ಬಸವಂತರಾವ ಪಾಟೀಲ, ಹನುಮಂತರಾವ ಟಿಟಗಾರ, ಅಂದಪ್ಪ ಟಿಟಗಾರ, ಶಿವಲಿಂಗಪ್ಪ ದೇವಂತಿಗಿ ಪಾಟೀಲ, ನಾಮಯ್ಯ ಮುಲಗೆ, ಮಲಕಪ್ಪ ಪಾಟೀಲ, ಯೋಗಪ್ಪ ಪಾಟೀಲ, ಆಪ್ಪರಾವ ಆಳಂದ, ಆಪ್ಪಾರಾವ ಬಾನಾಪೂರ, ಈಶ್ವರಪ್ಪ ಪಾಟೀಲ ರಜಾಪುರ ಈ ಮುಖಂಡರು ವಿಶೇಷ ಪರಿಶ್ರಮವನ್ನು ವಹಿಸಿದರು. ಸಾಯಂಕಾಲ ಹೋಟಗಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸೋಲಾಪುರದಿಂದ ಆಗಮಿಸಿದ್ದ ಸೌ|| ಭಾಗೀರಥೀಬಾಯಿ ಕಟಾವ ವೀರಶೈವ ಧರ್ಮಸುಧಾರಣಾಸಂಘ ಸೋಲಾಪುರ, ವೀರಶೈವ ಧರ್ಮ ಪ್ರಸಾರಕ ಸಂಘ ಸರಸಂಬಾ ಇತ್ಯಾದಿ ಜನರ ವ್ಯಾಖ್ಯಾನಗಳಾದವು. ಮಾರನೇ ದಿವಸ ಘನ ಧರ್ಮರಾವ ಪಾಟೀಲ ಇವರ ಭವ್ಯಮಂದಿರದಲ್ಲಿ ಸಭೆ ಸೇರಿ ಸೌ|| ಭಾಗೀರಥೀಬಾಯಿ ಕಟಾವ ಇವರು ಸ್ತ್ರೀಯರಿಗೆ ಅತ್ಯಂತ ಉತ್ತಮವಾಗಿ ಬೋಧಿಸಿದರು. ಮೋಘಾದ ವೀರಶೈವರೇ ಧನ್ಯರು! ಈ ಶುಭಸಮಯದಲ್ಲಿ ಪ್ರಭಾಪೋಷಣಕ್ಕಾಗಿ ೨ ರೂ, ಗಳು ಸಮರ್ಪಿಸಲ್ಪಟ್ಟವು.

ಶಿವಲಿಂಗಪ್ಪ ಪಾಟೀಲ, ಘೋತ್ರಿ.

ಪಂಚಾಚಾರ್ಯ ಪ್ರಭಾ.

೧೯೩೫ ನೇ ಅಕ್ಟೋಬರ್ ತಾ|| ೨೧ನೇ ಸೋಮವಾರ

ಲಿಂಗಧಾರಣವು ವೇದೋಕ್ತವಾದುದು.

ನಮ್ಮ [illegible] "ಅಯಂ ಮೇ ಹಸ್ತೋ ಭಗವಾನ್" ಎಂಬ ಮಂತ್ರವು ವೇದದಲ್ಲಿ ಇಷ್ಟಲಿಂಗವನ್ನು ಎಡಬಿಡದೆ ಧರಿಸತಕ್ಕ [illegible] ಪ್ರಾಚೀನತ್ವವನ್ನು ಸ್ಪಷ್ಟಪಡಿಸುತ್ತದೆಯಲ್ಲ! ಆದರೆ ಈ ಮಂತ್ರಕ್ಕೆ [illegible] ಸ್ಥಾವರಲಿಂಗಪರವಾಗಿಯೂ [illegible] ಅರ್ಥವನ್ನು [illegible] ಮಂತ್ರವು "ಅಯಂ ಮೇ ವಿಶ್ವಭೇಷಜೋ(?)" [illegible] ಈ ಹಸ್ತವು [illegible] [illegible] (ಶಿವಲಿಂಗವನ್ನು ಸ್ಪರ್ಶಮಾಡುತ್ತದೆ) [illegible] ಲಿಂಗ [illegible] ಹಸ್ತವು [illegible] ಇಷ್ಟ [illegible] ಮಂತ್ರವು ಸ್ಥಾವರಲಿಂಗಪರ [illegible] ದೀಕ್ಷಾ [illegible] ಇಷ್ಟಲಿಂಗವನ್ನು [illegible] ಅರ್ಥವನ್ನು ವಿಧಿಸುವುದಿಲ್ಲವೆಂಬ ಆಕ್ಷೇಪವನ್ನು [illegible] ಈ ಮಂತ್ರದಲ್ಲಿ ಶಿವಾಭಿಮರ್ಶನಃ ಎಂಬ ವಾಕ್ಯವಿರುವುದು ಸರಿಯಷ್ಟೆ! ಆದರೆ ಈ ವಾಕ್ಯಕ್ಕೆ ಹಸ್ತವು ಯಾವಾಗಲೂ ಶಿವನನ್ನು ಸ್ಪರ್ಶಮಾಡಿಯೇ ಇರುತ್ತದೆ ಎಂಬ ಅರ್ಥವು ಸ್ಪಷ್ಟವಾಗಿ ತೋರಿಬರುತ್ತದೆ. ವಾರ ತಿಥಿ ದಿನಗಳ ಮೇಲೆ ಪೂಜಿಸಲ್ಪಡುವ ಸ್ಥಾವರಲಿಂಗವನ್ನು ಈ ವಾಕ್ಯದಲ್ಲಿ ಹೇಳಿದ ರೀತಿಯಾಗಿ ಯಾವಾಗಲೂ ಎಡಬಿಡದೆ ಸ್ಪರ್ಶಮಾಡಿಕೊಂಡಿರುವುದು ಯಾರಿಂದಲೂ ಸಾಧ್ಯವಾಗತಕ್ಕದ್ದಲ್ಲ. ಗಂಧಾದಿಸುಗಂಧದ್ರವ್ಯಗಳನ್ನು ಹಚ್ಚುವ ಸಮಯದಲ್ಲಿಯೂ ನೈವೇದ್ಯಾದಿಗಳನ್ನು ಸಮರ್ಪಿಸುವ ಸಮಯದಲ್ಲಿಯೂ ಮಾತ್ರ ಯತ್ಕಿಂಚಿತ್ ಸ್ಪರ್ಶವು ಸಿದ್ಧಿಸುವುದಲ್ಲದೆ ಅವಿಚ್ಛಿನ್ನವಾಗಿ ಎಡಬಿಡದೆ ಶಿವಲಿಂಗಸ್ಪರ್ಶವು ಸಿದ್ಧಿಸುವುದಿಲ್ಲ. ಆದುದರಿಂದ ಈ ಮಂತ್ರವು ಸ್ಥಾವರಲಿಂಗಕ್ಕೆ ಗಂಧಾದಿಗಳನ್ನು ಲೇಪಿಸುವ ಸಮಯದಲ್ಲಿ ವಿನಿಯೋಗಿಸಲ್ಪಟ್ಟಿಲ್ಲವು. ಮತ್ತು ಈ ಹಸ್ತವು ಭಗವತ್ಸ್ವರೂಪವೆಂದೂ ಮಾತೃಸ್ವರೂಪವೆಂದೂ ಪಿತೃಸ್ವರೂಪವೆಂದೂ ಹೇಳುವ "ಅಯಂ ಮಾತಾ ಅಯಂ ಪಿತಾ' ಮುಂತಾದ ಪದಗಳು ಈ ಮಂತ್ರದಲ್ಲಿ ಕಂಡುಬರುತ್ತವೆ. ಅಚೇತನವಾದ ಇಂಥ ಹಸ್ತಕ್ಕೆ ಭಗವತ್ಸ್ವರೂಪತೆಯೂ ಮಾತೃಸ್ವರೂಪತೆಯೂ ಪಿತೃಸ್ವರೂಪತೆಯೂ ಎಂದೂ ಸಂಭವಿಸುವುದಿಲ್ಲ. ಆದುದರಿಂದ ವೀರಶೈವಸಿದ್ಧಾಂತಾನುಸಾರವಾಗಿ ಗುರುವಿನಿಂದ ವಾಮಹಸ್ತದಲ್ಲಿರಿಸಲ್ಪಟ್ಟ ಇಷ್ಟಲಿಂಗಪರವಾಗಿಯೇ ಈ ಮಂತ್ರದ ಅರ್ಥವನ್ನು ನಿಶ್ಚಯಮಾಡಬೇಕಾಗಿದೆ.

> ಸಂಸ್ಕೃತ್ಯ ಗುರುಣಾ ದತ್ತಮಿಷ್ಟಲಿಂಗಮುತಾಪ್ರಿಯಃ |
> ನಿತ್ಯಂ ಸ್ವವಾಮಹಸ್ತಾಗ್ರೇ ಸಾವಧಾನೇನ ಪೂಜಯೇತ್ ||
> ಪ್ರಮಾದಾತ್ಪತಿತೇ ಲಿಂಗೇ ಸಹ ಪ್ರಾಣಾನ್ ಪರಿತ್ಯಜೇತ್ |
> [illegible] ಪ್ರತಿಷ್ಠಾ [illegible] ಯಥಾ |
> [illegible] ಪ್ರತಿಷ್ಠಾಂ [illegible] ||

ಶ್ರೀ ಗುರುವಿನಿಂದ ದೀಕ್ಷಾವಿಧಾನಪೂರ್ವಕ ಪರಿಶುದ್ಧವಾಗಿ ಕೊಡಲ್ಪಟ್ಟ ಇಷ್ಟಲಿಂಗವನ್ನು ಬಹು ಜಾಗರೂಕತೆಯಿಂದ ಪ್ರತಿದಿನವೂ ತಪ್ಪದೆ ತನ್ನ ವಾಮಹಸ್ತದಲ್ಲಿರಿಸಿ ಶಾಂತಮನಸ್ಸಿನಿಂದ ಪೂಜಿಸುತ್ತಿರಬೇಕು. ಹಾಗೆ ಪೂಜಿಸುವಾಗ [illegible] ಕಾರಣದಿಂದ [illegible] ತನ್ನ ಇಷ್ಟಲಿಂಗವು [illegible] ಪ್ರಾಣ [illegible] ಶಿವಲಿಂಗವನ್ನು [illegible] ಹೇಗೆ [illegible] [illegible] ಇಷ್ಟಲಿಂಗವನ್ನು ಯಾವಾಗಲೂ [illegible] ಅನಂತ ಪ್ರಮಾಣಗಳು [illegible] ಹಸ್ತದಲ್ಲಿ [illegible] ಇಷ್ಟಲಿಂಗಕ್ಕೂ [illegible] ಆದುದರಿಂದ ಈ ಮಂತ್ರದಲ್ಲಿ [illegible] ಈ ಹಸ್ತವು ಎಡಬಿಡದೆ ಇಷ್ಟಲಿಂಗಸಂಬಂಧವನ್ನು ಹೊಂದಿರುವುದ [illegible] [illegible] ಇಷ್ಟಲಿಂಗ [illegible] ಇಷ್ಟಲಿಂಗಧಾರಣಪರವಾಗಿ [illegible] ಅನಂತ [illegible] ಪ್ರತಿಪಾದಿಸುತ್ತದೆ.

> [illegible] ಪ್ರಥಿವ್ಯಾ [illegible]
> [illegible] |

ಎಂಬ ಮಂತ್ರದಲ್ಲಿಯೂ ಸಹ ಪರಿಚ್ಛಿನ್ನವಾದ ಸೋಮಲತೆಯು ಸ್ವರ್ಗ ಭೂಮಿ ಸೂರ್ಯ ಇಂದ್ರಾದಿ ಸಮಸ್ತ ಪದಾರ್ಥಗಳನ್ನು ಸೃಷ್ಟಿಮಾಡಿದ್ದು ಎಂದು ಆಪಾತತಃ ಅರ್ಥವಾದರೂ, ಸೋಮಲತೆಯು ಅಚೇತನವಾದುದರಿಂದ ಅದಕ್ಕೆ ಸೃಷ್ಟಿಕರ್ತೃತ್ವಾದಿಗಳು ಸಂಭವಿಸಲಾರವು. ಆದುದರಿಂದ ಸೋಮನೆಂಬ ಪದಕ್ಕೆ ಸೋಮಲತಾದಿಷ್ಠಿತನಾದ ಪರಶಿವನೆಂದು ಅರ್ಥಮಾಡುವುದೇ ಯುಕ್ತವಾದುದು. 'ಉಮಯಾ ಸಹಿತಃ ಸೋಮಃ' ಎಂಬ ವ್ಯುತ್ಪತ್ತಿಯಂತೆ ಶಕ್ತಿವಿಶಿಷ್ಟನಾದ ಪರಶಿವನು 'ದಿವಃ ಜನಿತಾ-ಸ್ವರ್ಗವನ್ನು ಸೃಷ್ಟಿಸಿದವನೂ, ಪೃಥಿವ್ಯಾಃ ಜನಿತಾ-ಭೂಲೋಕವನ್ನು ಸೃಷ್ಟಿಸಿದವನೂ, ಸೂರ್ಯಸ್ಯ ಜನಿತಾ-ಸೂರ್ಯನನ್ನು ಸೃಷ್ಟಿಸಿದವನೂ ಆಗಿ ಪವತೆ-ಪವಿತ್ರಗೊಳಿಸುತ್ತಾನೆ' ಎಂಬ ಅರ್ಥವೇ ನ್ಯಾಯಸಮ್ಮತವಾದುದು. ಹೀಗೆ ಶ್ರುತಿಯಲ್ಲಿ ಅನೇಕ ಮಂತ್ರಾರ್ಥಗಳು ಕಂಡುಬರುತ್ತವೆ. ಆದುದರಿಂದ ಇಲ್ಲಿ 'ಅಯಂ ಮೇ ಹಸ್ತಃ" ಎಂಬ ಮಂತ್ರವು ಸಹ ಇಷ್ಟಲಿಂಗಧಾರಣಪರವಾದುದೆಂದು ಹೇಳುವುದೇ ಸರ್ವಸಮಂಜಸವಾಗಿ ತೋರುವದು.

ಒಂದುವೇಳೆ "ಅಯಂ ಮೇ ಹಸ್ತಃ" ಎಂಬ ಮಂತ್ರಕ್ಕೆ ವಾದಿಗಳು ಹೇಳುವ ಸ್ಥಾವರಲಿಂಗಪರವಾಗಿಯೇ ಅರ್ಥವನ್ನು ಅಂಗೀಕರಿಸಿದರೂ ಗಂಧಾದಿದ್ರವ್ಯವನ್ನು ಲೇಪಿಸುವ ಸಮಯದಲ್ಲಿ ಮಾತ್ರ ಯತ್ಕಿಂಚಿತ್ ಸ್ಪರ್ಶಯೋಗ್ಯತೆಯನ್ನು ಪಡೆದಿರುವುದರಿಂದ ಆ ದಕ್ಷಿಣಹಸ್ತವು ಮಾತೃಸ್ವರೂಪವೆಂದೂ ಪಿತೃಸ್ವರೂಪವೆಂದೂ ಭಗವತ್ಸ್ವರೂಪವೆಂದೂ ಸ್ತುತಿಗೆ ವಿಷಯವಾಗುವುದಾದರೆ, ಇನ್ನು ಚೇತನಾಚೇತನಾತ್ಮಕವಾದೀ ಅಖಂಡಬ್ರಹ್ಮಾಂಡಮಂಡಲದ ಸೃಷ್ಟಿ-ಸ್ಥಿತಿ ಸಂಹಾರಗಳನ್ನು ಮಾಡುವ ಶಕ್ತಿಯುಳ್ಳ ಅಂಥ ಶಿವಲಿಂಗವು ಅವಿಚ್ಛಿನ್ನಸಂಬಂಧದಿಂದ ಎಡಬಿಡದೆ ವಾಮಹಸ್ತವೆಂಬ ಪೀಠದಲ್ಲಿ ಸನ್ನಿಹಿತವಾಗಿರುವುದರಿಂದ ಅಂಥ ಶಿವಲಿಂಗಾಶ್ರಿತವಾದ ವಾಮಹಸ್ತವನ್ನು ಸಹ ಭಗವತ್ಸ್ವರೂಪವೆಂದೂ ಮಾತೃಸ್ವರೂಪವೆಂದೂ ಪಿತೃಸ್ವರೂಪವೆಂದೂ ಸ್ತೋತ್ರಮಾಡಬಹುದೆಂದು ಕೈಮುತಿಕನ್ಯಾಯದಿಂದಲೇ ಸಿದ್ಧವಾಗುತ್ತದೆ. ಆದುದರಿಂದ ಎಡಬಿಡದೆ ಹಸ್ತಗತವಾದ ಚಲನಚೈತನ್ಯವಾದ ಇಷ್ಟಲಿಂಗವು ಯಾವಾಗಲೂ ತಾಯಿತಂದೆಗಳಂತೆ ನಮ್ಮನ್ನು ರಕ್ಷಿಸುತ್ತಿರುವುದರಿಂದ ಸ್ತುತಿಸುವುದು ಅತ್ಯಂತ ಸಮರ್ಪಕವಾದುದರಿಂದ—

> [illegible] ಭಾವಸ್ತುತಃ ||

ಎಂಬ ಋಗ್ವೇದವಚನಿತವಾದ ಮಂತ್ರದಿಂದ ಅವಿಚ್ಛಿನ್ನಸಂಬಂಧವುಳ್ಳ ಲಿಂಗಾಂಗಸಾಮರಸ್ಯದ್ಯೋತಕವಾದ [illegible] ಇಷ್ಟಲಿಂಗಕ್ಕೆ ವಾಮಹಸ್ತಾಧಿಕರಣತ್ವವು ಸ್ಪಷ್ಟವಾಗಿ ತೋರಿಬರುತ್ತದೆ.

ವರ್ತಮಾನಸಂಗ್ರಹ.

ಗ್ರಿಸರೀನಿನ ಬೆಲೆ ಏರಿತು!

[illegible] ವರ್ತಕರು ಔಷಧಗಳಿಗೆ ವಿಶೇಷವಾಗಿ [illegible] "ಗ್ರಿಸರೀನ್" ಎಂಬ ಪದಾರ್ಥವನ್ನು ಮುಂದೆ ಯುದ್ಧವು ಯೂರೋಪು ದೇಶಕ್ಕೆ [illegible] ಇಷ್ಟುಬಂದ ಬೆಲೆಗೆ ಮಾರಿ ಒಳ್ಳೆ ಲಾಭವನ್ನು ಸಂಪಾದಿಸಬಹುದೆಂಬ ಆಶೆಯಿಂದ ಕೂಡಿಟ್ಟು [illegible] ಬೆಲೆಯನ್ನು 15 [illegible]

ಸೈನ್ಯಪಡೆಯ ಪ್ರಯಾಣ.

[illegible] ಸೈನ್ಯಪಡೆಯು ಮುಂದಿನ [illegible] ಪ್ರಾಂತ್ಯಕ್ಕೆ ಹೋಗ [illegible] ಕಳೆದ 16 ತಾರೀಖಿ [illegible] ಹಡಗನ್ನು ಹತ್ತಿ ಪ್ರಯಾಣ ಮಾಡಿತು. ಈ ಪಡೆಯ [illegible] ಭಾಗವು "ಎಲ್ಲೋರ" ಎಂಬ ಹಡಗಿನ ಮೂಲಕ ಪ್ರಯಾಣಮಾಡಿತು. [illegible] ಯಾವ [illegible] ಹೋಗುವುದೆಂಬುದು ತಿಳಿದು ಬಂದಿಲ್ಲ.

ದೋಣಿಯ ಅನಾಹುತ!

ಕಳೆದ 1 ನೇ ತಾರೀಖಿನ ಬೆಳಗ್ಗೆ ಜಿಜವಾ [illegible] ಸೂಪರಿಂಟೆಂಡಿಂಗ್ ಇಂಜನಿಯರೂ ಅವರ ಪತ್ನಿಯೂ [illegible] ಸೇವಕರೊಡನೆ ದೋಣಿಯಲ್ಲಿ ಕುಳಿತು [illegible] ಹೋಗುತ್ತಿದ್ದಾಗ ಆಕಸ್ಮಾತ್ತಾಗಿ ದೋಣಿಯು ಬುರುಡೆ ಎಲ್ಲರೂ ನೀರಿನಲ್ಲಿ ಮುಳುಗಿದರು. ಇಬ್ಬರು ಸೇವಕರು ಮಾತ್ರ ದಡವನ್ನು ಮುಟ್ಟಿದರು. ಇಂಜನಿಯರು ಮತ್ತು ಅವರ ಪತ್ನಿಯವರು ಮೃತರಾದರು. ಅವರ ದೇಹಗಳನ್ನು ಹುಡುಕಿ ಸಾಯಂಕಾಲ [illegible] ಹೊರಗೆ ತೆಗೆದರೆಂದು ಕೇಳುತ್ತೇವೆ.

ಶ್ರೀಮನ್ಮಹಾರಾಜರವರು ನಾಲ್ಕೈದು ದಿವಸ [illegible] ನೀಲಗಿರಿಗೆ ದಯಮಾಡಿಸಿದ್ದು, ಪುನಃ [illegible] ದಿವಸ ರಾಜಧಾನಿಗೆ ದಯಮಾಡಿಸಿದರು.

ಕಳೆದ ಮಂಗಳವಾರ ಚಾಮುಂಡಿಬೆಟ್ಟದ ಬಳಿ [illegible] ಎಂಬವನು ಆತ್ಮಹತ್ಯೆ ಮಾಡಿಕೊಂಡಿದ್ದನು. ವಯಸ್ಸು ಸುಮಾರು 30-35 ವರುಷವಿರಬಹುದು. ಮೈಸೂರು [illegible] ಕೆಲಸಮಾಡುತ್ತಿದ್ದನು. ಎರಡನೇ ಮದುವೆಯಾಗಿದ್ದನು. ಆ ಹೆಂಡತಿಯು ತವರಿಗೆ ಹೋಗಿದ್ದುದರಿಂದ ಅದನ್ನು ಕುರಿತು [illegible] ವಿಷಯದಲ್ಲಿ ಪರಸ್ಪರ ಜಗಳವಾಗುತ್ತಿತ್ತು. ಈ [illegible] ಹಿಂದಿನ ದಿವಸ ತವರುಮನೆಗೆ ಹೋಗಿ ಹೆಂಡತಿಯನ್ನು ಕರೆಯಲು ಆಕೆಯು ಬರಲಿಲ್ಲವಾದ್ದರಿಂದ ಇವನು ಮನೆಬಿಟ್ಟು ಬೆಟ್ಟದಬಳಿ ನೇಣುಹಾಕಿಕೊಂಡನಂತೆ!

ವಿದ್ಯುಚ್ಛಕ್ತಿಯಿಂದ ಕೆಮ್ಮು ಮತ್ತು ನೆಗಡಿಗಳನ್ನು ಗುಣಮಾಡಬಹುದು

ಲಂಡನ್ನಿನ ಡಾ|| ಡಬ್ಲ್ಯು ಜಿ. ಮೂರ್ ಎಂಬ ಶಾಸ್ತ್ರಜ್ಞನು ೯ ವರ್ಷಗಳ ಕಾಲ ಶೋಧವನ್ನು ಮಾಡಿ ಹೊಸ ಕೆತ್ತಿಯೊಂದನ್ನು ಕಂಡುಹಿಡಿದಿದ್ದಾನೆ. ಟಿಟೇನಿಯಂ ಎಂಬ ಲೋಹವನ್ನು ಟಂಗಸ್ಟನ್ ಎಂಬ ಲೋಹದೊಡನೆ ಬೆರಸಿ ಅವರ ಮೂಲಕ ವಿದ್ಯುತ್ ಕಿರಣಗಳನ್ನು ರೋಗಿಯ ಗಂಟಲ ಮೇಲೆ ಪ್ರಯೋಗಿಸಿ ಕೆಮ್ಮು ಮತ್ತು ಶೀತವ್ಯಾಧಿಯನ್ನು, ಮೂಗಿಗೆ ಸಂಬಂಧಪಟ್ಟ ಇತರ ಅನೇಕ ವ್ಯಾಧಿಗಳನ್ನು ಗುಣಪಡಿಸಬಹುದೆಂದು ಹೇಳುತ್ತಾನೆ

ಇಟಲಿ ದೇಶಕ್ಕೆ ಬಹಿಷ್ಕಾರ.

ಬರ್ಮಾ ಆಯಿಲ್ ಕಂಪೆನಿಯವರು ರಂಗೂನಿನಿಂದ ಇಟಲಿ ದೇಶಕ್ಕೆ ಕಳುಹಿಸಲು ಪ್ಯಾರಫಿನ್ ಮತ್ತು ಮೇಣವನ್ನು "ಬಾರ್ಬರಿಗೋ' ಎಂಬ ಇಟಲಿ ದೇಶದ ಹಡಗಿಗೆ ಭರ್ತಿ ಮಾಡಿಸಿದ್ದರು ಆದರೆ ಹಡಗು ಹೊರಡುವವರೊಳಗೆ ಕಂಪೆನಿಯ ಮೇಲಧಿಕಾರಿಗಳು ಇಟಲಿಗೆ ಸಾಮಾನುಗಳನ್ನು ಕಳುಹಿಸಕೂಡದೆಂದು ಲಂಡನ್ನಿನಿಂದ ತಂತಿ ಮಾಡಿದಕಾರಣ ತುಂಬಿದ್ದ ಸಾಮಾನುಗಳನ್ನು ಕೆಳಕ್ಕೆ ಇಳಿಸಿ ಬರೀ ಹಡಗು ಕಳಿಸಬೇಕಾಯಿತು ಇದನ್ನು ನೋಡಿದರೆ ಇಟಲಿ ದೇಶದ ಮೇಲೆ ಹಾಕಲಿರುವ ಬಹಿಷ್ಕಾರವು ಜಾರಿಗೆ ಬಂದಿರುವುದೆಂದು ತೋರುತ್ತದೆ

ಯುದ್ಧಗಳಿಂದ ಆದ ಮರಣಗಳಿಗಿಂತಲೂ ಮೋಟಾರ್ ವಾಹನಗಳಿಂದಾದ ಸಾವಿನ ಸಂಖ್ಯೆಯೇ ಹೆಚ್ಚು.

1899 ರಿಂದ 1902 ರ ವರೆಗೆ ನಡೆದ ದಕ್ಷಿಣಆಫ್ರಿಕದ ಯುದ್ಧದಲ್ಲಿ 7381 ಜನರುಮಾತ್ರ ಸತ್ತರು ಆದರೆ ಕಳೆದ ಒಂದುವರ್ಷದ ಮೋಟಾರ್ ಬಂಡಿಗಳಿಂದ ಸತ್ತರು 7343 ಜನರು ಸತ್ತರು 1898 ರಿಂದ 1902ರವರೆಗೆ ನಡೆದ ದಕ್ಷಿಣಅಮೇರಿಕದ ಯುದ್ಧದಲ್ಲಿ 2900 ಮಂದಿ ಸತ್ತರು ಆದರೆ ಮೋಟಾರುಗಳಿಗ ಸಿಕ್ಕಿ ಸಾಯುವವರ ಸಂಖ್ಯೆಯು 6 ತಿಂಗಳಲ್ಲಿ ಇಷ್ಟಾಗುವುದು ಪದ್ಧತಿಯಾಗಿ ಬಿಟ್ಟಿದೆ 1920ನೇ ಇಸವಿಯಿಂದ ಮೋಟಾರುಗಳ ಹಾವಳಿಯಿಂದ 76040 ಜನರು ಪ್ರಾಣ ಕಳೆದುಕೊಂಡಿರುವರೆಂದೂ, 1793 ರಿಂದ 1815ರ ವರೆಗೆ ಫ್ರಾನ್ಸಿಗೂ ಇಂಗ್ಲೆಂಡಿಗೂ ನಡೆದ ಯುದ್ಧದಲ್ಲಿ 16812 ಮಂದಿ ಮೃತರಾದರೆಂದೂ, ಎಣಿಸಿನೋಡಿದರೆ, ಯುದ್ಧದಿಂದಾಗುವ ಪ್ರಾಣಹಾನಿಗಿಂತಲೂ ಮೋಟಾರು ವಾಹನಗಳಿಂದೊದಗುವ ಪ್ರಾಣನಷ್ಟವೇ ಹೆಚ್ಚಾಗಿದೆಯೆಂದೂ ಎಣಿಸಲಾಗಿದೆ

ಇಟಲಿ ಅಬ್ಬೀನಿಯಾ ಯುದ್ಧ !

ಅಬ್ಬೀನಿಯಾದಲ್ಲಿ ಸೈನ್ಯಗಳು ಬಹಳ ಭರದಿಂದ ಸಜ್ಜುಗೊಳುತ್ತಿವೆ ಚಕ್ರವರ್ತಿಗಳು ಇವುಗಳನ್ನು ಪರಿಶೀಲಿಸಿ **50000** ಜನ ಸೈನಿಕರನ್ನು ಉತ್ತರದಕ್ಷಿಣ ಭಾಗಗಳಿಗೆ ಕಳುಹಿಸುವರು ತಮ್ಮ ತಮ್ಮ ನಾಯಕರೊಡನೆ ದೇಶದ ಎಲ್ಲಾ ಭಾಗಗಳಿಂದಲೂ ಸೈನಿಕರು ಅಡಿಸ್ ಅಬಾಬ ನಗರಕ್ಕೆ ಬರುತ್ತಿದ್ದಾರೆ ಡೆಸ್ಸಿ ಮತ್ತು ಮಕಾಲೆ ಪ್ರಾಂತಕ್ಕೆ ಮುಖ್ಯವಾಗಿ 4000 ಜನ ಇಂಪೀರಿಯಲ್ ಸೈನಿಕರನ್ನು ಕಳುಹಿಸಿಕೊಡುವರು ಹರಾರ್ ಪ್ರಾಂತಕ್ಕೆ ಸೈನ್ಯವನ್ನು ಕಳುಹಿಸಿಕೊಟ್ಟಿದ್ದರೂ ಇಟಲಿಯವರ ಮೇಲೆ ಬಿದ್ದು ಯುದ್ಧಮಾಡಬೇಕೆಂದು ಆಜ್ಞೆಮಾಡಿಲ್ಲ ಕೆಲವು ಮುಖ್ಯಸ್ಥಳಗಳಲ್ಲಿ ಕಾದಿದ್ದು ಮುಂದೆ ನುಗ್ಗುವ ಇಟಲಿಯ ಪಡೆಗಳನ್ನು ತಡೆಯಬೇಕೆಂದು ಚಕ್ರವರ್ತಿಗಳ ಅಪ್ಪಣೆಯಾಗಿದೆ ನವೆಂಬರ್ ತಿಂಗಳಲ್ಲಿ ಸಾಧಾರಣವಾಗಿ ಬರುವ ಜ್ವರವು ಅಬ್ಬೀನಿಯಾಕ್ಕೆ ಬಹಳ ಸಹಾಯಮಾಡುವುದಂತೆ! ಈಗಾಗಲೇ ಹತ್ತಾರುಸಾವಿರ ಇಟಲಿ ಸೈನಿಕರು ಜ್ವರದ ಬಾಧೆಯಿಂದ ಆಗರ್ಡ ಪ್ರಾಂತವನ್ನು ಬಿಟ್ಟು ಇರಿಟ್ರಿಯಾಕ್ಕೆ ಪ್ರಯಾಣಬೆಳೆಸಿರುವರು ಹೀಗೆ ದಕ್ಷಿಣ ಪ್ರಾಂತವನ್ನು ಇಟಲಿಯವರು ಬಿಡುತ್ತಾಬಂದರೆ ದಕ್ಷಿಣ ಭಾಗದ ಅಬ್ಬಿನಿಯಾ ಸೈನ್ಯಾಧಿಕಾರಿ ಜನರಲ್ ನಾಸಿಬರವರು ಇಟಲಿಯ ಎಡಭಾಗದ ಸೈನ್ಯದ ಮೇಲೆ ಬೀಳಲು ಅನುಕೂಲವಾಗಬಹುದು

ಕಳೆದವಾರದಲ್ಲಿ ಹೆಚ್ಚು ಕದನಗಳು ನಡೆದಿರುವುದಿಲ್ಲ ಆದಾಗ್ಯೂ ಸೈನ್ಯಗಳ ಸಿದ್ಧತೆಗಳೂ ಚಲನಗಳೂ ಹೆಚ್ಚಾಗಿದ್ದುವು ಅಡೋವಾಕ್ಕೆ ಆಗ್ನೇಯದಿಕ್ಕಿನಲ್ಲಿ ಮರ್ಜ ಮತ್ತು ಅಬಾರೋ ಎಂಬ ಪ್ರದೇಶಗಳ ಮಧ್ಯದಲ್ಲಿರುವ ಬೈಲು ಪ್ರದೇಶಗಳನ್ನು ಇಟಲಿಯ ನೂರಾರು ಮೋಟಾರುಗಳು ಮತ್ತು ಟ್ಯಾಂಕುಗಳು ದಾಟುತ್ತಿವೆ ಇವುಗಳ ವೇಗವನ್ನೂ ಭದ್ರತೆಯನ್ನೂ ನೋಡಿ ಆಶ್ಚರ್ಯದಿಂದ ಅಬ್ಬೀನಿಯಾ ಸೈನಿಕರು ಇವುಗಳಮೇಲೆ ಕೈ ಮಾಡಿರುವುದಿಲ್ಲ ಆದರೆ ಇವರು ಮಕಾಲೆ ಪ್ರಾಂತದ ಸುತ್ತ ಕಾಡುಗಳಲ್ಲಿ ಸೇರಿಕೊಂಡು, ಸಮಯನೋಡಿ ಮೇಲೆ ಬೀಳುವರೆಂದು ಕಾಣುತ್ತದೆ

ಅಬ್ಬೀನಿಯಾದ ಮುಖ್ಯ ಸೈನ್ಯಾಧಿಪತಿಯಾದ ರಾಸ್ ಸಯೂಂ ರವರ ಸಹಾಯಕ್ಕೆ ದಕ್ಷಿಣಭಾಗದಿಂದ ಹೆಚ್ಚು ಸೈನ್ಯವು ಕಳುಹಿಸಲ್ಪಟ್ಟಿತು ಆದರೆ ಇವರು ಇಟಲಿ ಯವರಮೇಲೆ ಬೀಳದೆ ಮಕಾಲೆ ಪ್ರಾಂತದಕಡೆಗೆ ಹಿಮ್ಮೆಟ್ಟುತ್ತಿದ್ದಾರೆ ರಾಸ್ ಕಾಸಾರವರ ಸೈನ್ಯದ ಸಂಗಡ ತಮ್ಮ ಸೈನ್ಯವನ್ನೂ ಕೂಡಿಸಿ ಯುದ್ಧಮಾಡಬೇಕೆಂದು ಯೋಚಿಸಿರುವಂತೆ ಕಾಣುತ್ತದೆ ರಾಸ್ ಕಾಸಾ ರವರ ಸೈನ್ಯವು ಅಕ್ಸಂನಗರದ ಪಶ್ಚಿಮಭಾಗದಲ್ಲಿರುವ ಟಕಾಜೆ ನದಿಯನ್ನು ದಾಟಿರುವುದರಿಂದ ಇಟಲಿಯವರು ಮಕಾಲೆ ಕಡೆ ನುಗ್ಗುವವರೆಗೆ ಇವರಿಗೆ ಅಬ್ಬೀನಿಯಾ ಸೈನ್ಯಗಳಿಂದ ತೊಂದರೆಯುಂಟಾಗುವುದರ ಬಗ್ಗೆ ಯೋಚಿಸುತ್ತಿದ್ದಾರೆ

ಗಾರ್ಗುಬಿಯೆಂಬಲ್ಲಿ ಇಟಲಿ ವಿಮಾನಗಳು ಬಾಂಬು ಎಸೆದ ಪ್ರಯುಕ್ತ ಗುಡಿಸಲುಗಳಲ್ಲಿ ಅವಿತುಕೊಂಡಿದ್ದ ಸೈನಿಕರ ಸಹಿತ ಮಣ್ಣು ಕುಸಿದು 36 ಜನರು ಹೂತು ಹೋದರು ಗೆಲ್ಲಾಬಿಯಲ್ಲಿ ವಿಪರೀತ ಮಳೆಸುರಿಯುತ್ತಿರುವುದರಿಂದ ಇಟಲಿ ಸೈನಿಕರು ಮುಂದೆ ನುಗ್ಗುವ ಕಾರ್ಯವನ್ನು ನಿಲ್ಲಿಸುವರೆಂದು ತಿಳಿದು ಬರುತ್ತದೆ

ಫ್ರೆಂಚ್ ರಾಜಧಾನಿಗಳಾದ ಮಿ|| ಲವಾಲರವರು ಇಟಲಿ ಅಬ್ಬೀನಿಯಾ ಬಗ್ಗೆ ಒಂದು ಒಪ್ಪಂದಕ್ಕೆ ಬರಲು ಕಟ್ಟಕಡೆಯ ಪ್ರಯತ್ನವನ್ನು ಮಾಡುತ್ತಿರುವರು ಆದರೂ ಖಂಡಿತ ಪ್ರಯೋಜನ ಕಾರಿಯಾಗುವುದಿಲ್ಲವೆಂದು ಎಲ್ಲರೂ ತಿಳಿದಿದ್ದಾರೆ

ಇಟಲಿಯ ಎಲ್ಲ ವಸ್ತುಗಳ ಮೇಲೂ ಬಹಿಷ್ಕಾರ ಹಾಕಿ ಯಾರೂ ಕೊಳ್ಳದಂತೆ ಮಾಡಬೇಕೆಂದು ಜಿನೀವರು ತಂದ ಸಲಹೆಗೆ ಸಾಮಾನ್ಯವಾಗಿ ಎಲ್ಲ ದೇಶದವರೂ ಒಪ್ಪಿಗೆ ಕೊಟ್ಟಿರುತ್ತಾರೆ ಅಮೆರಿಕೆಯವರು ಮಾತ್ರ ಏನು ಮಾಡುವರೆಂಬುದು ತೀರ್ಮಾನವಾಗಿಲ್ಲ ಅಮೆರಿಕೆಯ ಕೂಲಿಕಾರರ ಸಭೆಯು ಮಾತ್ರ ನ್ಯಾಯವಿರೋಧಿ ವರ್ತಿಸಿದ ಇಟಲಿಯೊಡನೆ ಯಾರೂ ಸಹಕರಿಸಬಾರದೆಂದು ಪ್ರಾರ್ಥಿಸಿದೆ

ಎರಿಟ್ರಿಯಾಕ್ಕೆ ಸೇರಿದ ಕೆಂಪುಸಮುದ್ರ ತೀರದ ಮಸ್ಸಾವಾ (ಬಂದರು) ರೇವು ಪಟ್ಟಣದಲ್ಲಿ ಇಟಲಿಯವರು ಅಸಾಧ್ಯಸಿದ್ಧತೆಗಳನ್ನು ಮಾಡುತ್ತಿದ್ದಾರೆ ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟಿಷರಿಗೆ ಸೇರಿರುವ ಜಿಬ್ರಾಲ್ಟರಿಗಿಂತಲೂ ಇದನ್ನು ಹೆಚ್ಚು ಭದ್ರಮಾಡಬೇಕೆಂದು ಯೋಚಿಸಿರುವಂತಿದೆ ಈ ರೇವಿನಿಂದ ಉತ್ತರಕ್ಕೆ ಹಲವು ಮೈಲಿಗಳ ದೂರದಲ್ಲಿ 15 ಅಂಗುಲ ಫಿರಂಗಿಗಳನ್ನು ಗುಪ್ತಸ್ಥಳಗಳಲ್ಲಿ ಸ್ಥಾಪಿಸಿದ್ದಾರೆ ಈ ಫಿರಂಗಿಗಳು ಸುಮಾರು 20 ಮೈಲುಗಳ ದೂರ ಗುಂಡುಹಾರಿಸಬಲ್ಲವು ಮೋಲ್ ಕೋಟೆಯಿಂದಾಚೆ ಇರುವ ದ್ವೀಪಗಳಲ್ಲಿ 4 ಮತ್ತು 6 ಅಂಗುಲ ಫಿರಂಗಿಗಳನ್ನು ಗುಪ್ತ ರೀತಿಯಿಂದ ರಾತ್ರಿಕಾಲಗಳಲ್ಲಿ ಸ್ಥಾಪಿಸಿ ಸಿದ್ಧಗೊಳಿಸಿದ್ದಾರೆ ಈ ಸಮುದ್ರದ ದಡದಲ್ಲಿ ತಮ್ಮ ನೂರಾರು ಸಬ್ ಮೆರಿನುಗಳನ್ನು ಕೂಡಿಸಿದ್ದಾರೆ ಅವುಗಳ ಮೇಲಿರುವ ಸಂಖ್ಯೆಗಳಿಗೆ ಬಣ್ಣ ಬಳಿಸಿರುವುದರಿಂದ ಇಷ್ಟೇ ಇವೆಯೆಂದು ತಿಳಿಯಲು ಸಾಧ್ಯವಿಲ್ಲ ಈಗ ಆಫ್ರಿಕೆಯ ಈ ಪ್ರದೇಶದಲ್ಲಿ ಸುಮಾರು 700 ಇಟಲಿಯ ವಿಮಾನಗಳು ಸೇರಿವೆಯೆಂದು ಊಹಿಸಲಾಗಿದೆ ಇವುಗಳೆಲ್ಲವೂ ಬಾಂಬು ಹಾಕುವ ವಿಮಾನಗಳಾಗಿವೆ. ಇತ್ತೀಚೆಗೆ ಇವುಗಳಲ್ಲದೆ ಎರಡು ಕಡೆಗಳಲ್ಲೂ ಫಿರಂಗಿಯನ್ನೇರಿಸಿರುವ 100 ವಿಮಾನಗಳು ಮಸ್ಸಾವಕ್ಕೆ ಬಂದಿವೆ ಅಬ್ಬೀನಿಯಾದ ಕಾಡು ಜನರು ಒಟ್ಟಿಗೆ ಒಂದು ಕಡೆ ಸೇರುವುದಿಲ್ಲವಾದ್ದರಿಂದ ಅವರ ಮೇಲೆ ಬಾಂಬು ಹಾಕುವುದು ಅಷ್ಟು ಪ್ರಯೋಜನಕಾರಿಯಲ್ಲವೆಂದು ತಿಳಿದು ಅಂಥ ಜನಗಳನ್ನು ಧಾರಿಗೆ ತರಲು ಈ ಫಿರಂಗಿಯ ವಿಮಾನಗಳನ್ನು ಉಪಯೋಗಿಸುವರಂತೆ! ಇವು ಜನರಿಗೆ ಸಮೀಪವಾಗಿ ಹಾರಿ ಅವರ ಮೇಲೆ ಗುಂಡಿನ ಮಳೆಯನ್ನು ಸುರಿಸಿ ಅವರನ್ನು ನಿರ್ಮೂಲಮಾಡುವುದೆಂದು ಯೋಚಿಸಿದ್ದಾರೆ

ಹೀಗೆ ನಾನಾ ರೀತಿಯಿಂದಲೂ ಮಸ್ಸಾವದಲ್ಲಿ ಸಿದ್ಧಪಡಿಸಿರುವ ಕೋಟೆಯಿಂದಲೂ ಕೆಂಪು ಸಮುದ್ರದ ದಕ್ಷಿಣಭಾಗದಲ್ಲಿ ಇಟಾಲಿಯನ್ನರ ಕೈ ಮೇಲಾಗುವುದೆಂದು ಯೋಚಿಸಲಾಗಿದೆ

ವೈಮಾನಿಕರನ್ನು ಸೆರೆ ಹಿಡಿಯಲಾಗಿದೆ.

ಎರಡು ಇಟಲಿಯ ವಿಮಾನಗಳು ಯತ್ನವಿಲ್ಲದೆ ಒಂದಪ್ಪರಿಂದ ಅಬೀಸಿನಿಯದಲ್ಲಿ ಇಳಿಯಬೇಕಾಯಿತು. ವೈಮಾನಿಕರಿಗೇನೂ ಅಪಾಯವಾಗಿಲ್ಲ ಆದರೆ ಅಬಿಸೀನಿಯರು ಅವರನ್ನು ಸೆರೆಹಿಡಿದರೆಂದು ತಿಳಿದುಬಂದಿದೆ.

ಇಂಡಿಯಾ ಕಾರ್ಯದರ್ಶಿಗಳಾಗಿರುವ ಮಾರ್ಕ್ವಿಸ್ ಆಫ್ ಜಟ್ಲೆಂಡ್‌ರವರ ಭಾಷಣ

ಆಕ್ಸ್ ಫರ್ಡ್ ವಿಶ್ವವಿದ್ಯಾನಿಲಯದ 'ಕನ್ಸರ್ವೆಟಿವ್' ಪಕ್ಷದವರನ್ನು ಸಂಬೋಧಿಸಿ ಇಂಡಿಯಾ ಕಾರ್ಯದರ್ಶಿಗಳಾದ ಜಟ್ಲೆಂಡ್‌ರವರು ೧೯೩೫ ನೆಯ ಮಸೂದೆಯ (ಇಂಡಿಯಾ ಸರಕಾರ ಮಸೂದೆ) ಅನಂತರ' ಎಂಬ ವಿಷಯರನಾಗಿ ಭಾಷಣಮಾಡಿದರು ಆ ಭಾಷಣವಾದ ಮೇಲೆ ಇಟಲಿ ಅಬಿಸೀನಿಯಾ ಪ್ರಸಂಗದಲ್ಲಿ ಸೈನ್ಯಸಿದ್ಧತೆಯು ಸಹ ಪ್ರಾರಂಭವಾಗುವುದೋ ಏನೋ ಹೇಳಲಾಗದು ಅಧಿಕಾರ ಪತ್ರ ಹೊರಡುವ ನಿರ್ಬಂಧನ ಪ್ರತಿರೋಧಗಳಿಂದ ಯುದ್ಧ ಪ್ರವೇಶ ಮಾಡಬೇಕಾಗಿ ಬಂದರೆ 'ಬ್ರಿಟನ್ನು ಜನರು ಪಡೆದ ಸೈನ್ಯಗಳನ್ನು ತರಿಸುವುದೇ' ಎಂಬ ಪ್ರಶ್ನೆಗೆ ಈಗ ಉತ್ತರ ಕೊಡಲಾರನು. ಆಗಿನ ಸ್ಥಿತಿಗತಿಗಳ ಮೇಲೆ ಎಲ್ಲ ಅವಲಂಬಿಸಿರುತ್ತದೆಯೆಂಬದಾಗಿ ಹೇಳಿದರು ಒಂದು ವೇಳೆ ಬ್ರಿಟನ್ನು ಇಟಲಿಯ ಮೇಲೆ ದಸ್ತಪ್ರಯೋಗ ಮಾಡಬೇಕಾಗಿ ಬಂದರೆ ಭಾರತೀಯದ ಸೈನ್ಯಗಳನ್ನು ಸಹ 'ನೀವೂ ಸಹಾಯಕ್ಕೆ ಬನ್ನಿ' ರೆಂದು ಕೇಳುವುದರಲ್ಲಿ ಆಶ್ಚರ್ಯವೇನೂ ಇಲ್ಲ ಎಂಬುದಾಗಿ ಅಭಿಪ್ರಾಯಪಟ್ಟರು 'ಪರಿಸ್ಥಿತಿಯನ್ನು ವಿವರವಾಗಿ ನೋಡಿದರೆ ಭಾರತೀಯರೆಲ್ಲರೂ ಅಬಿಸೀನಿಯ ವಿಚಾರದಲ್ಲಿ ಪೂರ್ಣ ಸಹಾನುಭೂತಿಯುಳ್ಳವರಾಗಿದ್ದಾರೆ ನನ್ನ ಅಭಿಪ್ರಾಯದಲ್ಲಿ ಈ ಮರವೃಕ್ಷ ಅಬೀಸೀನಿಯಾದೇಶದ ಸಹಾಯಕ್ಕೆ ಬಂದು ಅವರ ಕಷ್ಟನಿವಾರಣೆಮಾಡುವುದರಲ್ಲಿ ಭಾರತೀಯರು ತನಗೆ ಉಚಿತವಾದ ಪಾತ್ರವಹಿಸಲು ಸಿದ್ಧವಾಗಿವೆ ಎಂದು ಅಪ್ಪಣೆಕೊಡಿಸಿದರು

ಬ್ರಿಟಿಷರಿಗೆ ಫ್ರೆಂಚರ ನೌಕಾ ಸಹಾಯ.

'ಸಂದರ್ಭೋಚಿತವಾಗಿದರೆ ನೀವು ನಮಗೆ ನೌಕಾಸಹಾಯ ನೀಡುವಿರಾ?' ಎಂಬುದಾಗಿ ಬ್ರಿಟಿಷರು ಫ್ರೆಂಚರನ್ನು ಕೇಳಿದ್ದರು ಬ್ರಿಟಿಷರು ಕೇಳಿದ್ದ ಎಲ್ಲ ಅಂಶಗಳ ವಿಚಾರದಲ್ಲಿಯೂ ಫ್ರೆಂಚರು "ಆಗಬಹುದು' ಎಂದು ಉತ್ತರವಿತ್ತರು ಈ ಸಂಬಂಧವಾಗಿ ಫ್ರೆಂಚ್ ಸರಕಾರದಿಂದ ಬ್ರಿಟಿಷ್ ರಾಜಧಾನಿಗಳಿಗೆ ಆಗಲೇ ಉತ್ತರವು ಬಂದಿದೆ

ಸ್ವೀಕಾರ

ಹೊಸನಾಬಾದ ತಾ|| ಮೊಘಲಬಿದ್ರಿಕಾ ಗ್ರಾಮದಲ್ಲಿ ಮ|| ರಾ|| ಬಾಪೂರಾವ್ ಇವರು ಅನುಷ್ಠಾನವನ್ನು ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಶ್ರೀ ಹೊಟಗಿ ಬೃಹನ್ಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಕೊಪ್ಪಳಜಿಲ್ಲಾ ಅಳವುಂಡಿಯಲ್ಲಿರುವ ಬನ್ನಿಕೊಪ್ಪ ಹಿರೇಮಠದ ವೇ|| ಶಿವಯ್ಯನವರು ಸ್ಕೂಲ್‌ಮಾಸ್ತರ್ ಇವರು ವಿಜಯದಶಮಿಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ ಯನ್ನು ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವದಾ ಲಕ್ಷ್ಯದಲ್ಲಿಡತಕ್ಕದ್ದು

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಕುಂದಗೋಳದ ಶ್ರೀ ಜಗದ್ಗುರು ವಿಶ್ವಾರಾಧ್ಯ ಫ್ರೀ ಬೋರ್ಡಿಂಗಿಗೆ

ಶ್ರೀಮಂತ ನಾನಾ ಸಾಹೇಬ ನಾಡಗೌಡ (ನಾಡಕರ್ಣಿ) ಮತ್ತು ಸರಕಾರಿ ಅಧಿಕಾರಿಗಳ ಭೇಟಿ

ಕುಂದಗೋಳದಲ್ಲಿ ಬೋರ್ಡಿಂಗ ಸ್ಥಾಪಿಸಲ್ಪಟ್ಟಿದ್ದುದು ಈ ಹಿಂದೆಯೇ ಪ್ರಭಾಪತ್ರಿಕಾ ಮೂಲಕವಾಗಿ ಸರ್ವರಿಗೂ ತಿಳಿದಿದೆ. ಇಷ್ಟು ಸ್ವಲ್ಪ ಕಾಲದಲ್ಲಿಯೇ ಬೋರ್ಡಿಂಗು ಜನಪ್ರಿಯವಾಗಿ [illegible] ಕಾಲಗಳ ಮೊತ್ತ [illegible] ಹೋಗುತ್ತಿರುವುದು [illegible] ತಿಯ ಕಾಲ [illegible] ಯುತ್ತಲಿದೆ [illegible] ಕುಂದಗೋಳವು ಕರ್ನಾಟಕದ [illegible] ಯಲ್ಲಿ ಎಡುತ್ತಲಿದೆ [illegible] ಪೇಕ್ಷೆಬುದ್ಧಿಯಿಂದ ವೀರಶೈವ ಸಮಾಜದ [illegible] ಕೆಲಸ ನಡೆಯಿಸಿದ್ದಾರೆ. ಇವರ [illegible] ಧರ್ಮಾಧ್ಯಕ್ಷರಾದ ಶ್ರೀ [illegible] ಗಳಿಗೆ ಸಲ್ಲತಕ್ಕ [illegible]

ತಾ|| [illegible] ರಂದು [illegible] ಸರಕಾರಿ ಅಧಿಕಾರಿಗಳೂ ಶ್ರೀಮಂತ ನಾನಾಸಾಹೇಬ ನಾಡಗೌಡ ಶ್ರೀಮಂತ [illegible] ಪ್ರಭೃತಿಗಳೂ [illegible] ಬೋರ್ಡಿಂಗಿನ [illegible] ಪಟ್ಟಿಕೆಯನ್ನು ನೋಡಲಿಕ್ಕೆ [illegible] ಗಿನ ಹೇರಂಡ [illegible] ಗೇರಿ ಇವರ ಸೂಚನೆಯ ಮೇರೆಗೆ ಶ್ರೀಮಂತ ನಾನಾ ಸಾಹೇಬ ನಾಡಗೌಡ ಕುಂದಗೋಳ ಇವರ [illegible] ಸ್ಥಾನವನ್ನು [illegible] ವಿದ್ಯಾರ್ಥಿಗಳ ಹಿಂದೆಯೇ [illegible] ಆವರ [illegible] ಕರಾದ ಶ್ರೀ [illegible] ಎಸ್ ಸಿ ಇವರಿಂದಿಗೆ [illegible] ವು [illegible] ಬೋರ್ಡಿಂಗಿನ [illegible] ರ್ಥಿಗಳ ಆಚರಣೆ [illegible] ಪವಸ್ಥೆಯೂ ಸಮರ್ಪಕವಾಗಿದ್ದು [illegible] ಯ ಸಮುಯಕ್ಕೆ ಇತಿಹಾಸ ಸಂಶೋಧಕರಾದ [illegible] ಸಾಹೇಬ [illegible] ತಮ್ಮ ಭಾಷಣ [illegible] ದ್ದರು

“ವೀರಶೈವ ಧರ್ಮವು [illegible] ತನ ಕಾಲದಿಂದಿರುತ್ತದೆ ಮತ್ತು ಈ ಧರ್ಮವು [illegible] ಗವಾದಿಗಳ [illegible] ದಿಂದ ನಿಂತಿರುವದು [illegible]

ಸಾರ್ವಜನಿಕ ಸಂಸ್ಥೆಗಳು ನಡೆಯುವದಕ್ಕಾಗಿ ಜನರಲ್ಲಿ ಬಿಚ್ಚುಗೈಯಿಂದ ದಾನಮಾಡುವ ಪ್ರವೃತ್ತಿ [illegible] ಜನರು ತಾವು ಕೊಟ್ಟ ಹಣದ ಪ್ರತಿಯೊಂದು [illegible] ಸಹ ಅವಶ್ಯವಾಗಿ ಸತ್ಪಾತ್ರದಾನವಾಗುವಂತೆ [illegible] ಕೊಡಬೇಕೆಂದೂ [illegible] ಸಮಾಜವು ಪ್ರಗತಿಹೊಂದ[illegible] ವಿವರಿಸಿದರು [illegible] ಗಳಲ್ಲಿ ದಾನಧರ್ಮ ವಿಷಯಕ್ಕೆ ಕೆಲವು ನಿಯಮಗಳ [illegible] ಅನುಸರಿಸಿಯೇ ಅವರು ದಾನ ಮಾಡ [illegible] ಸಂಸ್ಥೆಗಳು [illegible] ವಾಗಿ [illegible] ಆರೋಗ್ಯಕ್ಕೆ ಸಹ ದಾನದಾಂ [illegible] ದೇಶದಲ್ಲಿ [illegible] ತನಕ್ಕೆ ಇವರು ಸರ್ವಥಾ [illegible] ಕೊಡುವದಿಲ್ಲವೆಂದು ಹೇಳಿದರು. ಕುಂದಗೋಳದಲ್ಲಿ ಬಹು ಜನರು ಶ್ರೀಮಂತರಿದ್ದಾರೆ. ಅವರು ಈ ಸಂಸ್ಥೆಯನ್ನು ಪ್ರಗತಿಪರ ಉನ್ನತ ಶಿಖರಕ್ಕೆ ಮುಟ್ಟಿಸುವರೆಂದೂ ಅಲ್ಲದೆ ಧರ್ಮಾಧ್ಯಕ್ಷರು ಇವಕ್ಕೂ ಹೆಚ್ಚಿಗೆ ತಮ್ಮ ಭಕ್ತ ಮಂಡಳಿಗೆ ಸಹಾಯವನ್ನೀಯಲಿಕ್ಕೆ ಪ್ರೋತ್ಸಾಹವನ್ನೀಯಲೆಂದೂ ವ್ಯಕ್ತಪಡಿಸಿದರು

[illegible]

ವರ್ತಮಾನ[illegible]

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ರೇಣುಕವಿಜಯಪುರಾಣ ಸಮಾಪ್ತಿ ಬಸನಾಳ.

[illegible] ತಾಲೂಕು ಬಸನಾಳ ಗ್ರಾಮದಲ್ಲಿ ಶ್ರೀ ರೇಣುಕವಿಜಯಪುರಾಣಶ್ರವಣವು ಪದ್ಧತಿಯ ಪ್ರಕಾ[illegible] ನಡೆದು ಇದೇ ಆಶ್ವಯುಜ ಶುದ್ಧ ೩ ಸೋಮವಾ[illegible] ದಿವಸ ಸಮಾಪ್ತಿಯಾಯಿತು. ಬಸನಾಳ ಮಠದ [illegible] [illegible] ರುದ್ರಾರಾಧ್ಯಶಾಸ್ತ್ರಿಗಳ ವ್ಯವಸ್ಥಾಪಕತ್ವ[illegible] ದಲ್ಲೂ ಚನ್ನವೀರಯ್ಯನವರ ಮನೋಹರವಾದ [illegible] ಚಿಕಯಿಂದಲೂ, ಬಸಪ್ಪ ಪಶುಪತಿಹಾಳ ಇವರ ಹೇ[illegible] ಚಿಕೆಯಿಂದಲೂ ಪುರಾಣಪ್ರವಚನಕಾರ್ಯವು ಬಹು ತೃ[illegible] ಕರವಾಗಿ ನೆರವೇರಿತು

ಈ ಪುರಾಣವು ಕಡೆ ಸಮಯದಲ್ಲಿ ಹೂಲಿ ಬೃಹ[illegible] [illegible] ಶ್ರೀ [illegible] ಸ್ವಾಮಿಗಳ[illegible] ಭಕ್ತರ ಪ್ರಾರ್ಥನೆಯನ್ನಂಗೀಕರಿಸಿ ಇಲ್ಲಿಗೆ ದಯಮಾಡಿ[illegible] ಪುರಾಣಸಮಾಪ್ತಿಯವರೆಗೆ ಶಿವಯೋಗತತ್ಪರರಾಗಿ[illegible] ಪ್ರತಿನಿತ್ಯ ಸಮಸ್ತಜನರಿಗೆ ಧಾರ್ಮಿಕ, ಸಾಮಾ[illegible] [illegible] ವಿಷಯಗಳನ್ನು ಉಪದೇಶಮಾಡಿ ಧನ್ಯರನ್ನಾ[illegible] ಮಾಡಿದರು. ಹೂಲಿ ಜರಪಟ್ಟಾಧ್ಯಕ್ಷರು ದಯಮಾ[illegible] ಸಿದ್ದರಿಂದ ಈ ಪ್ರಾಂತವೇ ಮಳೆಬೆಳೆಗಳಿಂದ ಫಲ[illegible] ವಾಗಿ ಪರಿಣಮಿಸಿತೆಂದು ಸುತ್ತಲಿನ ಎಲ್ಲ ಗ್ರಾಮ[illegible] ನರೂ ಕೊಂಡಾಡುತ್ತಿರುವರು

ಪುರಾಣಸಮಾಪ್ತಿಯವರೆಗೆ ಖರ್ಚಿನ ಭಾರವನ್ನೆಲ್ಲ[illegible] ಇಲ್ಲಿಯ ಶ್ರೀಮತಿ ಲಿಂಗಡಿ ಬಸಪ್ಪನವರೇ ವಹಿಸಿದ್ದ[illegible] ಇವರು ಗುರುಭಕ್ತತತ್ಪರರಾಗಿ, ಅನ್ನದಾನಿ[illegible] ಯೂ ಸಂಸ್ಕೃತಾಭಿಮಾನಿಗಳೂ ಆಗಿದ್ದು ಧರ್ಮಕಾರ್ಯ[illegible] ಕರಿಗೆ ಇವರ ಪ್ರವೃತ್ತಿಯು ವಿಶೇಷವಾಗಿರುವದು. ಪ್ರ[illegible] ವರುಷವೂ ಶ್ರೀ ರೇಣುಕವಿಜಯಪುರಾಣವನ್ನು ನಡೆ[illegible] [illegible] ಪುರಾಣಶ್ರವಣಕ್ಕಾಗಿ ಆಜೂಬಾಜೂ ಗ್ರಾ[illegible] [illegible] ಆರಾಧ್ಯರನ್ನು ನಿರ್ಮಲ[illegible] [illegible] ಮಾಡುತ್ತಿರುವರು. ಬಸನಾಳಗ್ರಾಮವು [illegible] ಮಹಾತ್ಮಾಯಿಯಿಂದಲೇ ಪುಣ್ಯಗ್ರಾಮವೆಂದು ಪ್ರಖ್ಯಾ[illegible] ವಾಗಿದೆ

ಶ್ರೀ ಜಗದ್ಗುರು ರೇಣುಕರು ಇದರಂತೆಯೇ ಇವ[illegible] ಧರ್ಮಕಾರ್ಯಕ್ಕೆ ಸಹಾಯವನ್ನಿತ್ತು ಈ ಗ್ರಾಮ[illegible] ಪ್ರಮುಖರಿಗೂ ಇದರಂತೆಯೇ ಸದ್ಬುದ್ಧಿಯನ್ನು ಕೊ[illegible] ಡಲೆಂದು ಶ್ರೀ ರೇಣುಕ ಭಗವತ್ಪಾದರಲ್ಲಿ ಪ್ರಾರ್ಥಿಸುವ,

ಓರ್ವ ಗ್ರಾಮಸ್ಥ[illegible]

ಸೌಕರ್ಯದ ಯಾತ್ರೆಗಳು! ಚಾರ್ಜು ಬಹಳೇ ಸುಲಭ!! ಪ್ರಸಿದ್ಧ ಪುಣ್ಯಕ್ಷೇತ್ರಗಳು!!

ಉತ್ತರ ಮತ್ತು ದಕ್ಷಿಣ ಹಿಂದೂಸ್ಥಾನ ಮಹಾಯಾತ್ರೆ

☞ ಶ್ರೀಕಾಶೀ ರಾಮೇಶ್ವರ ಮಹಾಯಾತ್ರೆಯು ☜

ತಾ|| ೨೯—೧೨—೩೫ ರಿಂದ ತಾ|| ೧೫—೨—೩೬ ರ ವರೆಗೆ.

ಪ್ರಸಿದ್ಧ ೫೨ ಕ್ಷೇತ್ರಗಳು.

ಟ್ರೇನಿನಲ್ಲಿ ಒಬ್ಬರಿಗೆ ಇಬ್ಬರ ಸ್ಥಳ ಸಿಗುವದು ಸೆಕೆಂಡ್ ಕ್ಲಾಸ್ ೩೦೦ ರೂ. ಥರ್ಡ್ ಕ್ಲಾಸ್ ೧೪[illegible]

ಹೆಚ್ಚಿನ ಮಾಹಿತಿಗಾಗಿ ಪತ್ರ ಬರೆಯಬೇಕು

೨೫ ಜನ ಯಾತ್ರಿಕರನ್ನು ಕೂಡಿಸಿಕೊಟ್ಟವರನ್ನು ಪುಕಟ್ ಯಾತ್ರೆಗೆ ಕರೆದುಕೊಂಡೂ ಹೋಗುವೆವು ಏಜಂಟರಿಗೆ ಯೋಗ್ಯ ಕಮಿಷನ್ ಸಿಗುವದು ಪತ್ರ ಬರೆಯಬೇಕು ಅಥವಾ ಸಮಕ್ಷಮ ಭೆಟ್ಟಿಯಾಗಬೇಕು

ಆಫೀಸ್—
ಜಮಖಂಡಿ ರಸ್ತೆ ಮೋಟಾರ್ ಸ್ಟ್ಯಾಂಡ್ ಹತ್ತಿರ, ಬನಹಟ್ಟಿ

ಶಿವಾನಂದ ಯಾತ್ರಾಶ್ರಮ [illegible]
ಬನಹಟ್ಟಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರೆಯುಂತಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ನೂರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರೆ ಲ್ಲರು ತಮ್ಮ ಆಲಸ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಪರಿಹಾರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕ ದಲ್ಲಿ ಶಿಷ್ಯರುಗಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿ ಪ್ರತಿ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಒಳ್ಳೆ ಕಾಗದ ಉಪಯೋಗಿಸುವದಲ್ಲದೆ ಸುಂದರ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಿಂಹಾಸನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು. ಔಷಧ ಭಂಡಾರದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮುಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೨—೦—೦
೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೬—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ರಸವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೬೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಯಶದಭಸ್ಮ	೧	೦—೮—೦
ಅಭ್ರಕಭಸ್ಮ	೧	೦—೮—೦
ಹಿಂಗುಳಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ವೈಕ್ರಾಂತಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಶೋಭಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೨೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಸಂತೋಷಪೂರ್ವಕವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವದಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೬೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ [illegible]	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು [illegible] ಮಹರ್ಷಿಗಳಿಗೆ [illegible]	೦—೧—೩
[illegible]	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು [illegible]	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು [illegible]	೦—೦—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು [illegible] ಫೋಟೋ	೦—೦—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗ [illegible] ಫೋಟೋ	೦—೦—೬
ಶ್ರೀ ಜಗದ್ಗುರು ರುದ್ರಮುನಿ [illegible] ಶಿವಾಚಾರ್ಯರು [illegible] ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ [illegible]	೦—೦—೬
ಶ್ರೀ ರೇಣುಕಾಚಾರ್ಯರ [illegible] ಧಾರಣಮಾಡಿ [illegible] ಶಿವಲಿಂಗಗಳನ್ನು [illegible]	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ [illegible] ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀ [illegible] ಫೋಟೋ	೦—೦—೬
ಪಂಡಿತ ಶ್ರೀ ಕಾಶೀ [illegible] ಫೋಟೋ ಬೆಲೆ ಒಂದಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ [illegible] ಸುಂದರವಾದ ಫೋಟೋ ಒಂದಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ [illegible] ಅತ್ಯಂತ ಪ್ರಾಚೀನ [illegible] ಫೋಟೋ ಒಂದಕ್ಕೆ	೦—೦—೬
ಶ್ರೀ ಜಗದ್ಗುರು [illegible] ಫೋಟೋ	೦—೦—೬
ಶ್ರೀ ಜಗದ್ಗುರು [illegible] ಸುಂದರ ಫೋಟೋ	೦—೦—೬
[illegible] ಫೋಟೋ	೦—೦—೬
[illegible] ಫೋಟೋ	೦—೦—೬

ಸೂಚನೆ —[illegible]

ದೊರೆಯುವ ಸ್ಥಳ—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ[illegible] ಕಂಡುಹಿಡಿಯಲ್ಪಟ್ಟು ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ[illegible]

(Registered Trade Mark)

ಗಳನ್ನು ಕೊಟ್ಟಿ[illegible] ರು. ಪ್ರಸಿದ್ಧವಾದ[illegible] ನಶ್ಯದ ಪುಡಿಯಿಂ[illegible] ಸ್ವಸ್ಥವಾಗುವ ವ್ಯಾ[illegible] ಧಿಗಳು ಯಾವವೆಂ[illegible] ದರೆ —ಪೀನಸ, ಒಂ[illegible] ತಲೆನೋವು ತಲೆ[illegible] ಲ್ಲಿಯ ರೋಗಗಳು[illegible] ಕಣ್ಣುಗಳಲ್ಲಿ ಉಂ[illegible] ಗತಕ್ಕ ಸರ್ವವ್ಯಾಧಿಗಳು, ಒಂದೋಪ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ [illegible] ಲ್ಪಟ್ಟ [illegible] ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ[illegible] ಯನ್ನೂ ಸಹ ಹೆಚ್ಚು ಮಾಡುತ್ತದೆ ಮೂರುಬಟ್ಟಿ[illegible] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು[illegible] ಯಲ್ಲಿ ಒಂದು ಚಟಿಕೆಯನ್ನು ಮಿಶ್ರಮಾಡಿದರೆ ಎಲ್ಲ[illegible] ಪರಿಮಳವಾಗುವುದು ಇದನ್ನು ಅನೇಕ ಪ್ರಭುಗ[illegible] ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋ[illegible] ಸುತ್ತಾರೆ ಪಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು[illegible]

ಒಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦ [illegible]
ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ. ಪಿ. [illegible]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[10] ಪೋ ಬಾ [illegible], ಮದರಾಸ[illegible]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯ [illegible]	೩ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ ([illegible] ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿವರ ([illegible] ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ([illegible] ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ [illegible] ([illegible] ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ([illegible] ಆವೃತ್ತಿ)	೧ ಆಣೆ
ಒಸವಾದಿ [illegible] ([illegible] ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯ [illegible] ([illegible] ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವ[illegible]	೨ ಆಣೆ
ಗುರುಸ್ಥಾಪನ[illegible]	೨ ಆಣೆ
ಶ್ರೀ ರುದ್ರಮುನಿ [illegible]	೨ ಆಣೆ
ವೀರಶೈವಮತ[illegible]	೩ ಆಣೆ
ವೀರಶೈವಾಚಾರ[illegible] ([illegible] ಆವೃತ್ತಿ)	೩ ಆಣೆ
ವಿವಾಹವಿಧಿ ([illegible] ಆವೃತ್ತಿ)	೪ ಆಣೆ
ಸನ್ಯಾಸಾಶ್ರಮ [illegible] ([illegible] ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೬ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ ([illegible] ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣವು (ಕನ್ನಡ)	೮ ಆ[illegible]
पंडित श्रीकाशीनाथशास्त्री यांचें भाषण (मराठी)	८ आ[illegible]
Speeches by Pandit Shri Kashinatha Shastri (*English*)	12 A[illegible]
ವೀರಶೈವರತ್ನ ([illegible] ಆವೃತ್ತಿ)	೧೨ ಆ[illegible]
ವೈದಿಕಶಿವಪೂಜಾ ವಿಧಿ ([illegible])	೧೨ ಆ[illegible]
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ[illegible]
ಮಾಹೇಶ್ವರ ದೀಕ್ಷಾವಿಧಿ ([illegible] ಆವೃತ್ತಿ)	೧೨ ಆ[illegible]
ಸಿದ್ಧಾಂತಶಿಖಾಮಣಿ ([illegible])	೧೨ ಆ[illegible]
ಶಿವಾಸೂತ್ರ ಸಿದ್ಧಾಂತದರ್ಪಣ	೧೨ ಆ[illegible]
ಸಟೀಕ ರೇಣುಕವಿಜಯ ([illegible] ಆವೃತ್ತಿ)	೧ ರೂ[illegible]
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾ[illegible])	೧ ರೂ[illegible]
ವೀರಶೈವಸಿದ್ಧಾಂತಸುಧಾಕರ	೨ ರೂ[illegible]
ಶಿವಾದ್ವೈತನಿರಾಸ ([illegible] ಪುಟ)	೮ ರೂ[illegible]
लिंगधारणचंद्रिका (संस्कृत)	३ [illegible]
महानारायणोपनिषत् (वीरशैवभाष्य संस्कृत)	१ [illegible]
वीरशैवेंदुशेखर (संस्कृत)	१ [illegible]

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ[illegible] ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ[illegible] ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು[illegible]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ[illegible]

REGISTERED No M 2266 || ಶ್ರೀ ಜಗದ್ಗುರು ಪಂಚಾಚಾರ್ಯರಃ ಪ್ರಸೀದಂತು || REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ವಾಲಿಸ್ಫುದೀಲೋಕಯಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೮ನೇ ಅಕ್ಟೋಬರ್ ೧೯೩೫ [ಸಂಚಿಕೆ ೨೫

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ

ಸುವರ್ಣ ರಜತ ತಿರ್ಯಗಾಂದೋಲಿಕಾ (ಅಡ್ಡಪಲ್ಲಕ್ಕಿ) ಮಹೋತ್ಸವಾಹ್ವಾನಪತ್ರಿಕಾ.

ಬ್ಯಾಡಗಿಪುರನಿವಾಸಿಗಳಾದ ವೀರಶೈವ ಮಂಡಳಿಯವರು ವಿನಯಪೂರ್ವಕವಾಗಿ ಪ್ರಕಟಪಡಿಸಿಕೊಳ್ಳುವದೇನಂದರೆ—ನಮ್ಮಗಳ ಪ್ರಾರ್ಥನೆಯ ಮೇರೆಗೆ ಶ್ರೀಮಹಾ|| ||ಸನ್ನಿಧಿಯವರು ಇದೇ ಯುವನಾಮ ಸಂವತ್ಸರ ಕಾರ್ತೀಕ ಶು|| ೮ (ತಾ|| 1 11 1935) ಸೋಮವಾರ ಪ್ರಾತಃಕಾಲ ೯|| ಘಂಟೆಗೆ ಸಕಲ ಬಿರುದಾವಳಿಗಳೊಡನೆ ದಯಮಾಡಿಸುತ್ತಾರಾದ ಪ್ರಯುಕ್ತ ಅತ್ಯಂತ ವಿಜೃಂಭಣೆಯಿಂದ ಜರುಗುವ ಶ್ರೀಜಗದ್ಗುರುಗಳವರ ತಿರ್ಯಗಾಂದೋಲಿಕಾ (ಅಡ್ಡಪಲ್ಲಕ್ಕಿ) ಮಹೋತ್ಸವಕ್ಕೆ ತಾವು ಪುತ್ರಮಿತ್ರಕಲತ್ರರೊಡನೆ ಆಗಮಿಸಿ, ಉತ್ಸವಭಾಗಿಗಳಾಗಿ ಶ್ರೀ ಮಹಾ|| ||ಸನ್ನಿಧಾನದ ದರ್ಶನಾಶೀರ್ವಾದಗಳಿಗೆ ಪಾತ್ರರಾಗುವದಲ್ಲದೆ, ನಮ್ಮಗಳ ಮನಸ್ಸಿಗೆ ಸಂತೋಷವನ್ನುಂಟುಮಾಡಬೇಕಾಗಿ ಆಶಿಸುತ್ತೇವೆ

ಶ್ರೀ ಮ.ಹಾ|| ||ಸನ್ನಿಧಿಯ ಸೇವಾನಿರತರಾದ
ಬ್ಯಾಡಗಿ, ತಾ|| ೨೫ ೧೦ ೧೯೩೫ ವೀರಶೈವಮಂಡಳಿಯವರು

ಹಿಂದುಸ್ಥಾನದ ಸಂಪತ್ತು

ಹಿಂದೂಜನರು ಮೊದಲು ತಮ್ಮ ಗುಡಿ ಗೋಪುರದೊಳಗೆ ಬಂಗಾರ, ಬೆಳ್ಳಿ, ಮುತ್ತು, ರತ್ನ, ವಜ್ರ ಮುಂತಾದವುಗಳನ್ನು ಕೆತ್ತಿಸಿ ಸುಶೋಭಿತವಾಗಿ ಮಾಡಿ ತಮ್ಮ ದೈವಿಕಭಕ್ತಿಯನ್ನು ವ್ಯಕ್ತಪಡಿಸುತ್ತಿದ್ದರು ನಮ್ಮ ಈಗಿನ ಹಿತಚಿಂತಕರಿಗಿಂತ ಪೂರ್ವದ ಹಿತಚಿಂತಕರಾದ ಘಜನೀಮಹಮ್ಮದ, ಘೋರೀಮಹಮ್ಮದ ಮೊದಲಾದವರು ಹಿಂದುಗಳ ದೇವಾಲಯಗಳಲ್ಲಿ ಹುಗಿದಿಟ್ಟ ಹೇರಳ ನಿಧಿಯನ್ನು ಅಪಹರಿಸುವ ದುರ್ಬುದ್ಧಿಯಿಂದ ಹಿಂದುಸ್ಥಾನದ ಮೇಲೆ ಅನೇಕಸಾರೆ ದಾಳಿಯನ್ನಿಟ್ಟು ಅನೇಕ ಹಿಂದುಗಳ ಪ್ರಾಣಹಾನಿಯನ್ನು ಮಾಡಿ, ಹೇರಳವಾದ ಸಂಪತ್ತನ್ನು ಒಯ್ದರು ಆ ಸಂಪತ್ತಿನ ವಿವರವು ಹೀಗಿದೆ—

ಘಜನಿಮಹಮ್ಮದನು ಮಥುರಾ, ಕನೋಜ ಪ್ರಾಂತಗಳನ್ನು ಸುಲಿಗೆಮಾಡಿ ಸುಟ್ಟು, ಅಲ್ಲಿಯ ದೇವಾಲಯಗಳನ್ನು ಒಡೆದು, ಹೇರಳದ್ರವ್ಯವನ್ನು ಒಯ್ದನು ಇಷ್ಟರಿಂದ ಅವನು ತೃಪ್ತನಾಗದೆ, ಸೌರಾಷ್ಟ್ರ ಸೋಮನಾಥ ದೇವಾಲಯದಲ್ಲಿ ಅಗಣಿತ ಮುತ್ತು, ರತ್ನ, ವಜ್ರ, ಬಂಗಾರ, ಬೆಳ್ಳಿ ಸಿಗುವವೆಂದರಿತು ಕಾಠೇವಾಡ ಪ್ರಾಂತದಲ್ಲಿರುವ ಸೋಮನಾಥ ದೇವಾಲಯಕ್ಕೆ ಮುತ್ತಿಗೆ ಹಾಕಿದನು ಈ ಸೋಮನಾಥೇಶ್ವರನ ಪೂಜಾವಿಧಿಯೋಗಕ್ಷೇಮಕ್ಕಾಗಿ ೧೦ ಸಾವಿರ ಇನಾಮು ಹಾಕಲ್ಪಟ್ಟಿದ್ದವು ಒಂದು ಸಾವಿರ ಬ್ರಾಹ್ಮಣ ಅರ್ಚಕರು ಅಲ್ಲಿ ಸುಖವಾಗಿ ಜೀವಿಸುತ್ತಿದ್ದರು ಈ ಅರ್ಚಕರು ಘಜನಿ ಮಹಮ್ಮದನಿಗೆ ಹೇರಳದ್ರವ್ಯವನ್ನು ಕೊಡುತ್ತೇವೆ, ಮೂರ್ತಿಯನ್ನು ಒಡೆಯಬೇಡವೆಂದು ಕೈಕಾಲು ಹಿಡಿದು ಬೇಡಿಕೊಂಡರು ಆದರೆ ಅವನ ಪಾಷಾಣ ಹೃದಯದಲ್ಲಿ ದಯವು ಒಡೆಯಲಿಲ್ಲ ೫೦ ಸಾವಿರ ಜನ ರಜಪೂತವೀರರು ಸೋಮನಾಥಲಿಂಗದ ಸಂರಕ್ಷಣೆಗಾಗಿ ಕಾದಾಡಿ ಮಡಿದರು ಘಜನಿಯು ಲಿಂಗದ ಮೂರ್ತಿಯನ್ನು ಭಗ್ನಮಾಡಿ ಅನೇಕ ವಜ್ರ, ರತ್ನ, ಮುತ್ತು, ಬಂಗಾರಗಳನ್ನು ಒಯ್ದನು ದೇವಾಲಯದ ಗಂಟೆಯ ಸರಪಳಿಯು ಎರಡು ನೂರು ಮಣ ಬಂಗಾರದ್ದಾಗಿದ್ದವು ಉತ್ಸವಮೂರ್ತಿಯ ಪಲ್ಲಕ್ಕಿಗೆ ಮುತ್ತು, ರತ್ನ, ವಜ್ರಗಳನ್ನು ಕೆತ್ತಿದ್ದರು ಬಂಗಾರದ ದೀಪಗಳಿದ್ದವು ಗರ್ಭಗುಡಿಯಲ್ಲಿ ಶಿವಲಿಂಗದ ಮುಂದೆ ರತ್ನ, ವಜ್ರಗಳನ್ನು ಕೆತ್ತಿದ ಬಂಗಾರದ ದೀಪಗಳು ಉರಿಯುತ್ತಿದ್ದವು ಇವೆಲ್ಲವುಗಳನ್ನು ಮಹಮ್ಮದನು ಇಪ್ಪತ್ತು ಒಂಟೆಗಳ ಮೇಲೆ ಹೇರಿಕೊಂಡು ಹೋದನು

ಇವನ ತರುವಾಯ ಇನ್ನೊಂದು ದೊಡ್ಡ ಸುಲಿಗೆಯ ಕಥೆಯುಂಟು ಇದು ಮಲ್ಲಿಕ್‌ಕಾಫರನಿಂದಾದುದು ಇವನು ಹಿಂದೂ ಆಗಿದ್ದು ಇಸ್ಲಾಮಿ ಧರ್ಮವನ್ನು ಸ್ವೀಕಾರಮಾಡಿ ಮಲ್ಲಿಕ್‌ಕಾಫರನೆಂದು ಹೆಸರಿಟ್ಟುಕೊಂಡು ಸುಲ್ತಾನ ಅಲ್ಲಾವುದ್ದೀನ ಖಿಲಜಿಯಲ್ಲಿ ಸಂಬಳಕ್ಕೆ ನಿಂತು ಅವನ ಪ್ರೀತಿಯ ಅಂಗರಕ್ಷಕನಾಗಲು ಸುಲ್ತಾನನು ಅವನನ್ನು ದಕ್ಷಿಣ ಹಿಂದುಸ್ಥಾನದ ಸುಬೇದಾರನನ್ನಾಗಿಮಾಡಿ ಕಳುಹಿಸಿದನು ಮಲಿಕ್‌ಕಾಫರನು ದಕ್ಷಿಣಕ್ಕೆ ದಂಡೆತ್ತಿ ಬಂದು ಓರಂಗಲ್ಲಿಗೆ ಮುತ್ತಿಗೆ ಹಾಕಿ ಕೈವಶಮಾಡಿಕೊಂಡು ಹಳೇಬೀಡಿನ ಹೊಯ್ಸಳ ರಾಜರೊಡನೆಯೂ, ಕರ್ನಾಟಕದ ರಾಜರೊಡನೆಯೂ, ಯುದ್ಧಮಾಡಿ ಮಧುರಾ, ಹಳೇಬೀಡು ಮುಂತಾದ ನಾಡುಗಳನ್ನು ವಶಮಾಡಿಕೊಂಡು ಅಲ್ಲಿಯ ಜನರಿಗೆ ಪರಿಪರಿಯಿಂದ ಕಷ್ಟವನ್ನು ಕೊಟ್ಟು ಹೇರಳದ್ರವ್ಯವನ್ನು ಸುಲಿಗೆಮಾಡಿಕೊಂಡು ಹೋದನು ಇವನು ಹೊಯ್ಸಳ ರಾಜನನ್ನು ಸೆರೆಯಲ್ಲಿಟ್ಟು ೬೧೨ ಆನೆಗಳನ್ನೂ, ೨೦,೦೦೦ ಕುದುರೆಗಳನ್ನೂ ಒಯ್ದದ್ದಲ್ಲದೆ, ೯೬,೦೦೦ ಮಣತೂಕ ಬಂಗಾರ, ಮುತ್ತು, ರತ್ನಾದಿಗಳಿಂದ ತುಂಬಿದ ಅನೇಕ ಪೆಟ್ಟಿಗೆಗಳನ್ನೂ ಹೇರಿಸಿಕೊಂಡು ಹೋದನೆಂದು ಇತಿಹಾಸಕಾರರು ಉಸುರಿದೆಂದು ಬರೆದಿರುವರು

ಆಮೇಲೆ ಇರಾಣದೇಶದ ಅರಸುತನಕ್ಕೆ ಬಂದ ನಾದಿರಷಹನೆಂಬುವನು ೧೭೩೮ ನೆಯ ಇಸವಿಯಲ್ಲಿ ಕಾಬೂಲಿಗೆ ದಾಳಿಯಿಟ್ಟು ಅದನ್ನು ತೆಗೆದುಕೊಂಡು ಆಮೇಲೆ ದಿಲ್ಲಿ ಪಟ್ಟಣವನ್ನು ಮುತ್ತಿ ವಶಪಡಿಸಿಕೊಂಡು ತನ್ನ ಸಿಪಾಯಿಗಳಿಗೆ ಕೆಲ ದಿವಸ ಒಂದೇಸಮನೆ ಸುಲಿಗೆ ಮಾಡಲಿಕ್ಕೆ ಅಪ್ಪಣೆಕೊಟ್ಟನು ಇದರಲ್ಲಿ ಲಕ್ಷಗಟ್ಟಳೆ ಪ್ರಾಣಹಿಂಸೆಯಾಯಿತು ಕೋಟಿಗಟ್ಟಳೆ ಅರ್ಥಹಾನಿಯಾಯಿತು. ಅವನು ಒಯ್ದ ಬೆಳ್ಳಿ, ಬಂಗಾರ, ರತ್ನ ಮುಂತಾದವುಗಳ ಕಿಮ್ಮತ್ತು ೩,೦೦ ೦೦,೦೦೦ ಪೌಂಡ್ ಬಂಗಾರ ಸಹಿತ ಕೋಹಿನೂರ್ ವಜ್ರವು ಅವನ ಕೈವಶವಾಯಿತೆಂದು ಶೋಧಕರು ಲೆಕ್ಕಮಾಡಿದ್ದಾರೆ

ಕೋಹಿನೂರ್ ಅಂದರೆ (Mountain of Light) ಪ್ರಕಾಶಪರ್ವತ ಇದು ೬೦೨ ಕಾರಟ್ ತೂಕದ್ದು ಆಗ್ರಾದ ೭ ಟೆರ್ ಗಿರ್ತ ಹಚ್ಚು ತೂಕ ಉಳ್ಳದ್ದು ಇದು ಗೋಲಕೊಂಡದ ಗಣಿಯಿಂದ ತೆಗೆಯಲ್ಪಟ್ಟಿತು ಇದನ್ನು ಮೊಗಲ ಬಾದಶಹನಾದ ಷಾಜಹಾನನು ಧರಿಸುತ್ತಿದ್ದನು ಇದನ್ನು ಇರಾಣದೇಶದ ಅರಸನಾದ ನಾದಿರ್ ಷಹನು ಎತ್ತಿಕೊಂಡು ಇರಾಣಕ್ಕೆ ಒಯ್ದನು ಅನಂತರ ಪಂಜಾಬ ಸಿಖ್ಖರ ಮುಖ್ಯನಾಯಕನಾದ ರಣಜಿತ್ ಸಿಂಗನ ಕೈಗೆ ಬಂತು ಅವನು ಮಡಿದಮೇಲೆ ಅದು ನಮ್ಮ ಈಗಿನ ಪಂಚಮಜಾರ್ಜರ ಪೂರ್ವಜರ ಕಿರೀಟವನ್ನು ಹತ್ತಿತು ಇನ್ನೂ ಅಲ್ಲಿಯೇ ಇದೆ ಇದು ಸರಾಸರಿ ೧೫ ತೊಲ ತೂಕದ ವಜ್ರವು ಇದರ ಬೆಲೆ ಕಟ್ಟುವದು ಅಸಾಧ್ಯ

ಮೊಗಲ್ ಚಕ್ರವರ್ತಿಯಾದ ಷಾಜಹಾನನು ಒಂದು ನವಿಲು ಸಿಂಹಾಸನವನ್ನು (Peacock throne) ತನ್ನ ಒಡ್ಡೋಲಗದಲ್ಲಿ ನಿರ್ಮಿಸಿದ್ದನು ಇದನ್ನು ನೋಡಿದ ಪ್ರೆಂಚ್ ಪ್ರವಾಸಿಯಾದ ಟ್ರಾವರ್ನಿಯರನು ಹೀಗೆ ವರ್ಣಿಸಿದ್ದಾನೆ ಈ ಸಿಂಹಾಸನವು ೬ ಪೂಟ್ ಉದ್ದ ೮ ಪೂಟ್ ಅಗಲವಿದೆ ಇದಕ್ಕೆ ೨೮ ಇಂಚು ಉದ್ದವಾದ ನಾಲ್ಕು ಬಂಗಾರದ ಕಾಲುಗಳಿವೆ ಇದರ ಆಸಿಕೆಯಲ್ಲಿ ಎರಡು ಸುಂದರವಾದ ನವಿಲುಗಳು ಕೆತ್ತಲ್ಪಟ್ಟಿವೆ ಇದರ ಆವರಣವು ೧೨ ಕಂಬಗಳ ಮೇಲೆ ನಿಂತಿದೆ ಮುತ್ತು ರತ್ನ, ಪಚ್ಚೆ ವಜ್ರ ಮುಂತಾದ ದೇದೀಪ್ಯಮಾನವಾದ ಜ್ಯೋತಿಗಳು ಇದರಲ್ಲಿ ಅಲ್ಲಲ್ಲಿ ಸಾಲು ಸಾಲಾಗಿ ಜೋಡಿಸಲ್ಪಟ್ಟಿದ್ದವು ಇದರ ಬೆಲೆಯು ಸುಮಾರು ೯ ಕೋಟಿ ರೂ ಆಗುವುದು'

ಸ್ವೀಕಾರ

ಗದಗ ಬೆಟಗೇರಿಯಲ್ಲಿರುವ ಮ|| ರಾ|| ಮಹದೇವಪ್ಪ ಗೋಡಿ ಇವರ ಪುತ್ರಿ ಹು|| ಕಂ|| ಸೌ|| ಚಿ|| ಸೌ|| ಶಿವವ್ವನನ್ನು ಕೊಪ್ಪಳ ಜಿಲ್ಲಾ ಪೈಕಿ ಗುಡಗೇರಿ ಗ್ರಾಮದಲ್ಲಿರುವ ಮ|| ರಾ|| ನಿಂಗಪ್ಪ ಚಳಗೇರಿ ಇವರ ಪುತ್ರ ಚಿ|| ಸಂ|| ಸಂಗಪ್ಪನಿಗೆ ಕೊಡುವುದಾಗಿ ನಿಶ್ಚಿತಾರ್ಥವನ್ನು ನಡೆಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ ವಧುವಿನ ಕಡೆಯವರದು 1 ರೂ ವರನ ಕಡೆಯವರದು 1 ರೂ ಜುಮ್ಲಾ 2 ರೂ ಗಳು ಮ|| ರಾ|| ನೀಲಪ್ಪಗೌಡ ಹಿಂದುನೆ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಟೀಕೆಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯ ವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

—

21 ನೆಯ ಕನ್ನಡ ಸಾಹಿತ್ಯ ಸಮ್ಮೇಳನ

[illegible]

—

೩ನೆಯ ಸಮಾಚಾರ ಪತ್ರಿಕೆ

—

೨೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನವು ಜೊಂಬಾಯಿ ನಗರದಲ್ಲಿ ೧೯೩೫ನೆಯ ಡಿಸೆಂಬರ್ ೨೮, ೨೯, ೩೦ ನೆಯ ತಾರೀಖು (ಶುಕ್ರವಾರ, ಶನಿವಾರ, ರವಿವಾರ) ಗಳಲ್ಲಿ ನಡೆಯ [illegible] ಜೊಂಬಾಯಿ ಸರಕಾರದ ವಿದ್ಯಾ [illegible] ರದ ದಿವಾನ್ ಬಹದ್ದೂರ್ ಎಸ್ ಟಿ ಕಾಂಬಳೆ ಬಿ.ಎ., ಎಲ್.ಎಲ್.ಬಿ., ಇವರ [illegible] ಸ್ವಾಗತಮಂಡಲಿ ಏರ್ಪಟ್ಟು ಸಮ್ಮೇಳನಕ್ಕೆ ಬೇಕಾದ ಅನುಕೂಲತೆಗಳನ್ನು ಸಂಭ್ರಮದಿಂದ [illegible] ಸುತ್ತಿದೆ

ಸುಪ್ರಸಿದ್ಧ ವಿದ್ವಾಂಸರೂ ಮೈಸೂರು [illegible] ಇಲಾಖೆಯ ಡೈರೆಕ್ಟರವರೂ [illegible] ಎನ್ ಎಸ್ [illegible] (ಕ್ಯಾಂಟಬ್) ಬಾರ್ ಎಟ್ ಲಾ ಇವರು ಅಧ್ಯಕ್ಷ ಸ್ಥಾನವನ್ನು ವಹಿಸಲು ಒಪ್ಪಿರುತ್ತಾರೆ

ಸಮ್ಮೇಳನದಲ್ಲಿ [illegible] ಗಳಿ ವಿಷಯಗಳನ್ನು [illegible] ಕಾವ್ಯ ವಾಚನ ನಾಟಕ [illegible] ಕಾರ್ಯಗಳನ್ನು ನಡೆಸಬೇಕಾಗಿ [illegible] ಕಾಲದಲ್ಲಿ ಬೇರೆ ಸಭೆ [illegible] ಮೊದಲಾದವುಗಳನ್ನು [illegible] ಬೇಕಾಗಿ [illegible] ತಮ್ಮ ಉದ್ದೇಶವನ್ನು ಈ (೧೯೩೫) ಅಕ್ಟೋಬರ್ ೩೧ ರೊಳಗಾಗಿ ಬೆಂಗಳೂರಿನಲ್ಲಿರುವ ಸಾಹಿತ್ಯಪರಿಷತ್ತಿನ ಕಾರ್ಯದರ್ಶಿ ಯವರಿಗೆ [illegible] ಸ್ವಾಗತಮಂಡಲಿಯ [illegible] ಗಳಿ ತಿಳಿಯಪಡಿಸಬೇಕೆಂದು [illegible] ನಿಯಮಗಳು [illegible]

ನಿಯಮಗಳು

(೧) (ಅ) ಸಮ್ಮೇಳನದಲ್ಲಿ ಪ್ರಬಂಧಗಳನ್ನು ಓದ ಬಯಸುವವರು ವಿಷಯಗಳನ್ನು ಸೂಚಿಸಲಿಚ್ಛಿಸುವವರೂ ಆ ಪ್ರತಿಗಳನ್ನು ಅಕ್ಟೋಬರ್ ೩೧ರೊಳಗಾಗಿ ಕಾರ್ಯನಿರ್ವಾಹಕ ಮಂಡಲಿಗಳಿಗೆ, ಸ್ವಾಗತ ಮಂಡಲಿಗಳಿಗೆ ಬರೆದು ತಿಳಿಸಿರಬೇಕು

(ಆ) ಸ್ವಾಗತಮಂಡಲಿಯವರು ತಮ್ಮಲ್ಲಿಗೆ ಬಂದ ಠರಾವುಗಳನ್ನು ತಮ್ಮ ಶಿಫಾರಸುಗಳೊಡನೆ ನವೆಂಬರು ೧೦ ರೊಳಗಾಗಿ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಗೆ ಕಳುಹಿಸತಕ್ಕದ್ದು

೧೨. ಸಮ್ಮೇಳನಕಾಲದಲ್ಲಿ ನಾಟಕಮಾಡಬೇಕೆ ದಿರುವ ನಾಟಕ ಸಂಘಗಳು ಕಾವ್ಯವಾಚನ ಮಾಡಲು ಇಚ್ಛಿಸುವ ಗವಕರೂ, ಕಥಾನಕ ಕಾರರೂ ಗಾಯಕರೂ, ಇಂಥ ಇತರಸಾಂಸ್ಕೃತಿಕ ವಿಷಯಗಳ ಪರ ಅಕ್ಟೋಬರು ತಿಂಗಳು ೩೧ ರೊಳಗಾಗಿ ತಾವು ಉದ್ದೇಶಿಸಿರುವ ಕಾರ್ಯವಿವರವನ್ನು ಸ್ವಾಗತ ಮಂಡಲಿಗೆ ಅಥವಾ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಗೆ ತಿಳಿಸಿರಬೇಕು. ಆ ಕಾರ್ಯವಿವರಗಳಿಂದ ಆರಿಸಿದ ಪರ [illegible] ಗಳನ್ನು ಆ ಮಂಡಲಿಗಳು ಗಮನಕ್ಕೆ ತೆಗೆದು ಕೊಳ್ಳಬೇಕಾದ್ದಿಲ್ಲ. ಸ್ವಾಗತಮಂಡಲಿಯು ತಮ್ಮಲ್ಲಿಗೆ ಬಂದ ಇಂಥ ಪರಿವಾರುಗಳನ್ನು ತನ್ನ ಶಿಫಾರಸು ಗಳೊಡನೆ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಗೆ ನವೆಂಬರು ೧೦ ರೊಳಗಾಗಿ ಕಳುಹಿಸಬೇಕು

೧೮. ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ **ಇನ್ನಾವ ಸಭೆ, ಸಮ್ಮೇಳನ, ಪ್ರದರ್ಶನ ಮೊದಲಾದ ಸಮಾರಂಭಗಳನ್ನಾದರೂ ನಡೆಯಿಸಬೇಕೆಂದು ಇಚ್ಛ ಪಡುವ ಸಂಸ್ಥೆಗಳೂ ಅಕ್ಟೋಬರ್ ೩೧ ರೊಳಗಾಗಿ** ತಮ್ಮ ಉದ್ದೇಶವನ್ನು ಸ್ವಾಗತಮಂಡಲಿಗೂ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಗೂ ತಿಳಿಸಿರ [illegible] ವ್ಯವಸ್ಥೆಯಾಗತಕ್ಕದ್ದು

[illegible]

[illegible]

[illegible]

[illegible]

[illegible]

[illegible]

[illegible]

ಕನ್ನಡ ಸಾಹಿತ್ಯ ಸಮ್ಮೇಳನ.

[illegible]

—

ಸ್ವಾಗತ ಸಮಿತಿ

—

[illegible]

—

ಸಮ್ಮೇಳನದ ದಿನಗಳು

ಕನ್ನಡ ಸಾಹಿತ್ಯ ಸಮ್ಮೇಳನದ ೨೧ ನೆಯ ಅಧಿವೇಶನವು ಜರುಗುವ ಡಿಸೆಂಬರ್ ೨೮ ನೆಯ ೨೯ ನೆಯ ಮತ್ತು ೩೦ ನೆಯ ತಾರೀಖುಗಳ ದಿವಸಗಳಲ್ಲಿ ಜರುಗುವ ಅಧಿವೇಶನವು ಕೂಡ ತಕ್ಕ ಸ್ಥಳ, ಕಾರ್ಯಾರಂಭವಾಗುವ ವೇಳೆ ಮುಂತಾದ ಇತರ ತಪಶೀಲುಗಳನ್ನು ಕ್ರಮೇಣ ಪ್ರಸಿದ್ಧಿಸಲಾಗುವದು

ಪ್ರತಿನಿಧಿಗಳು.

ಕರ್ನಾಟಕ ಸಾಹಿತ್ಯ ಸಮ್ಮೇಳನದ ಉದ್ದೇಶಗಳನ್ನು ಅಂಗೀಕರಿಸಿ, ನಿಯಮಾನುಸಾರವಾ[illegible] ಸಮ್ಮೇಳನದ ಕಾರ್ಯಗಳಲ್ಲಿ ಭಾಗವಹಿಸಲು ಇ[illegible] ಪಡುವವರನ್ನು ಸ್ವಾಗತ ಮಂಡಳಿಯು ಸಮ್ಮೇಳನ[illegible] ಬಗ್ಗೆ ಪ್ರತಿನಿಧಿಗಳೆಂದು ಅಂಗೀಕರಿಸಬಹುದು ಇ[illegible] ಪ್ರತಿನಿಧಿಗಳು ಸ್ವಾಗತಮಂಡಲಿಯು ವಿಧಿಸಿರುವ ರು[illegible] ಮನ್ನ (ಫೀಯನ್ನು) ಕೊಟ್ಟು ಅದರ ಕಟ್ಟುಪಾಡು[illegible] ಒಳಪಟ್ಟಿರತಕ್ಕದ್ದು ಇಂಥ ಪ್ರತಿನಿಧಿಗಳು ಸಮ್ಮೇ[illegible] ನದಲ್ಲಿ ಭಾಷಣಮಾಡುವದು, ಪ್ರಬಂಧಗಳನ್ನೋ[illegible] ವದು ನಿರ್ಣಯಗಳನ್ನು ಸೂಚಿಸುವದು ಮೊದಲಾ[illegible] ಸಮ್ಮೇಳನದ ಕಾರ್ಯಗಳಲ್ಲಿ ಭಾಗವಹಿಸಲು ಅರ್ಹ[illegible] ಗರು ”

ಫೀಗಳು.

ಪ್ರತಿ ಪ್ರತಿನಿಧಿಗಳ ಬಗ್ಗೆ ೨ ರೂಪಾಯಿಗಳ[illegible] ಸ್ತ್ರೀ ಪ್ರತಿನಿಧಿಗಳ ಬಗ್ಗೆ ೮ ಆಣೆ ಮತ್ತು ವಿದ್ಯಾರ್ಥಿ[illegible] ಪ್ರತಿನಿಧಿಗಳ ಬಗ್ಗೆ ೮ ಆಣೆ ಹೀಗೆ ಪ್ರತಿನಿಧಿ[illegible] ಫೀಯನ್ನು ಗೊತ್ತುಪಡಿಸಿರುತ್ತದೆ ಪ್ರೇಕ್ಷಕರಾದವ[illegible] ಪುರುಷ ಮತ್ತು ಸ್ತ್ರೀಯರಿಗೆ ಯಾವತ್ತು ಅಧಿವೇಶನ[illegible] ಬಗ್ಗೆ ಪ್ರವೇಶಫೀ ೧ ರೂ ಮತ್ತು ೮ ಆಣೆ ಹೀ[illegible] ಫೀಯನ್ನು ಗೊತ್ತುಮಾಡಲಾಗಿದೆ ಪ್ರತಿನಿಧಿಗಳೆಂ[illegible] ಗಳೀ ಪ್ರೇಕ್ಷಕರೆಂದಾಗಲೀ ಸಮ್ಮೇಳನಕ್ಕೆ ಒಳಬ[illegible] ಸುವವರು ಪೋಸ್ಟ್ ಮನಿಯಾರ್ಡರ ರೂಪದ[illegible] ಮಾತ್ರ ಆವಶ್ಯಕ ಫೀ ಸಹಿತವಾಗಿ ಡಿಸೆಂಬರ್ [illegible] ನೆಯ ತಾರೀಖಿನೊಳಗಾಗಿ ಅರ್ಜಿಗಳನ್ನು ಕಳುಹಿ[illegible] ಬೇಕು [illegible] ಮುಟ್ಟಿದ ಬಗ್ಗೆ ಪಾವತಿಗಳನ್ನ[illegible] ಕಳುಹಿಸಲಾಗುವದು

ಸಭಾಗೃಹದಲ್ಲಿ ಸ್ಥಳಕ್ರಮ ಯೋಜನೆ.

ಈ ಕೆಳಗಿನಂತೆ ಸ್ಥಾನಕ್ರಮ ಯೋಜನೆಯ[illegible] ಗೊತ್ತುಪಡಿಸಲ್ಪಟ್ಟಿದೆ —

೧ ಸನ್ಮಾನ್ಯ ಅತಿಥಿಗಳು
೨ ದೇಣಿಗೆ ಕೊಟ್ಟವರು
೩ ಪ್ರತಿನಿಧಿಗಳು
೪ ಸ್ವಾಗತ ಸಮಿತಿಯ ಸಭಾಸದರು
೫ ಪ್ರೇಕ್ಷಕರು

ಸಮ್ಮೇಳನದ ಕಾರ್ಯಗಳಲ್ಲಿ ಅಂಗವಹಿಸುವದ[illegible]

ಸ್ವಾಗತ ಸಮಿತಿಯ ಸಭಾಸದರಿಗೆ ಮತ್ತು ಪ್ರತಿ[illegible] ದಿಗಳಿಗೆ ಮಾತ್ರ ಸಮ್ಮೇಳನದ ಚರ್ಚೆ ಮತ್ತು ಕಾ[illegible] ಳಲ್ಲಿ ಅಂಗವಹಿಸಲಿಕ್ಕೆ ಅಧಿಕಾರವಿರುವದು

ಪ್ರತಿನಿಧಿಗಳ ಬಗ್ಗೆ ವಾಸಸ್ಥಳ ಮತ್ತು ಭೋಜನದ ವ್ಯವಸ್ಥೆ.

ಪ್ರತಿನಿಧಿಗಳನ್ನು ಯಾವತ್ತರನ್ನೂ ಒಂದೇ ಕಟ್ಟ[illegible] ದಲ್ಲಿ ಇದು ಸಾಧ್ಯವಾಗದಿದ್ದರೆ ಒಂದಕ್ಕೊಂದು ಸಮೀ[illegible] ಪವಾಗಿರುವ ಅನೇಕ ಕಟ್ಟಡಗಳಲ್ಲಿ, ಇಳಿಸಿಕೊಳ್ಳ[illegible] ವ್ಯವಸ್ಥೆಯನ್ನು ಮಾಡಲಾಗುವದು ಸ್ತ್ರೀ ಪ್ರತಿನಿಧಿ[illegible] ಬಗ್ಗೆ ಬೇರೆಯಾದ ವಾಸಸ್ಥಳಗಳ ಯೋಜನೆ[illegible] ಮಾಡಲ್ಪಡುವದು ಸಹ ಕುಟುಂಬ ಆಗಮಿಸ[illegible] ಪ್ರತಿನಿಧಿಗಳ ಬಗ್ಗೆ ಪ್ರತ್ಯೇಕ ವ್ಯವಸ್ಥೆಯು ಮಾಡ[illegible] ದವದು ಇಳಿದುಕೊಳ್ಳುವ ಮತ್ತು ಭೋಜನ[illegible] ಬಗ್ಗೆ ವೆಚ್ಚವು ಪ್ರತಿಯೊಂದು ವ್ಯಕ್ತಿಗೆ ಪ್ರತಿದಿನ[illegible] ರೂ ೧-೦-೦ ಆಗುವದೆಂದು ಅಂದಾಜು ಮಾಡ[illegible] ಗಿದೆ ಪ್ರತ್ಯಕ್ಷ ವೆಚ್ಚವು ಇದಕ್ಕೂ ಕಡಿಮೆಯಾ[illegible] ಆ ಪ್ರಕಾರ ಹಣವು ತಿರುಗಿ ಕೊಡಲ್ಪಡುವದು [illegible] ವಿಷಯದಲ್ಲಿ ಚಿಕ್ಕ ಮಕ್ಕಳ ಬಗ್ಗೆ ಯೋಗ್ಯ ಸವಲ[illegible] ಕೊಡಲ್ಪಡುವದು ಪ್ರತಿನಿಧಿಗಳ ಬಿಡಾರದಲ್ಲಿ ಸ್ಥ[illegible] ವನ್ನು ಪಡೆಯಲಿಕ್ಕೆ ಇಚ್ಛಿಸುವವರು ತಾವು [illegible] ಯಲು ಯೋಜಿಸಿರುವ ಅವಧಿಯ ಸಂಪೂರ್ಣ [illegible] ಮನ್ನು ಮುಂಗಡವಾಗಿ ಕಳುಹಿಸಬೇಕು ಈ ರಕ[illegible] ಮುಟ್ಟಿದನಂತರ ಸ್ಥಳವು ಕಾಯ್ದಿಡಲ್ಪಡುವದು [illegible] ಆವಶ್ಯಕ ರಕಮಿಲ್ಲದೆ ಬಂದ ಅರ್ಜಿಗಳನ್ನು ವಿಚಾ[illegible] ತೆಗೆದುಕೊಳ್ಳಲಾಗುವದಿಲ್ಲ ಇಂಥ ರಕಮನ್ನು[illegible] ಪೋಸ್ಟಲ್ ಮನಿಯಾರ್ಡರ ರೂಪದಲ್ಲಿ ಮಾತ್ರ ಕ[illegible] ಹಿಸಬೇಕು

ವಾಹನಗಳ ಅನುಕೂಲತೆಗಳು.

ಪ್ರತಿನಿಧಿಗಳನ್ನು ರೈಲ್ವೆ ಸ್ಟೇಷನ್ನಿನಿಂದ ಪ್ರತಿ[illegible] ಗಳ ಬಿಡಾರಗಳಿಗೆ ಮತ್ತು ಈ ಬಿಡಾರಗಳಿಂದ ಸ[illegible]

ಗ್ರಹಕ್ಕೆ ಮತ್ತು ಅಲ್ಲಿಂದ ತಿರುಗಿಬಿಡಾರಗಳಿಗೆ ತಲ್ಪಿಸುವ ವಾಹನಗಳ ವ್ಯವಸ್ಥೆಯನ್ನು ಮೂರು ದಿನಗಳ ಒಗ್ಗೆ ಪುಕ್ಕಟೆಯಾಗಿ ಮಾಡಲಾಗುವದು ಇತರ ಪ್ರಸಂಗಗಳಲ್ಲಿ ವಾಹನಗಳನ್ನು ಉಪಯೋಗಿಸಬೇಕಾದಲ್ಲಿ ಆಯಾ ಪ್ರಸಂಗದ ಪ್ರಕಾರ ವೆಚ್ಚದ ಆಕಾರಿಸಲ್ಪಡಬಹುದಾದ ಹಣವನ್ನು ಸಂಬಂಧಪಟ್ಟ ಜನರು ಕೊಡಬೇಕಾಗುವದು

ಮನರಂಜನೆ.

ಸಮ್ಮೇಲನವು ನಡೆಯುತಕ್ಕ ಮೂರೂ ದಿವಸಗಳಲ್ಲಿ ನಾಟಕ, ಗಾಯನ, ವಿವಿಧ ಮನರಂಜನ ಕಾರ್ಯ ಮುಂತಾದ ರೂಪಗಳಲ್ಲಿ ಮನರಂಜನೆಯ ಸಾಧನಗಳನ್ನು ಪೂರೈಸುವ ವ್ಯವಸ್ಥೆಯು ಮಾಡಲ್ಪಡುವದು ಪ್ರತಿನಿಧಿಗಳು ಮತ್ತು ಇತರರು ಇವುಗಳಿಗೆ ಪ್ರೇಕ್ಷಕರಾಗಲಿಚ್ಛಿಸಿದರೆ ತಿಕೀಟುಗಳನ್ನು ಕೊಂಡುಕೊಳ್ಳಬೇಕಾಗುವುದು

ಕರ್ನಾಟಕ ಕಲಾಕೌಶಲ್ಯ ಪ್ರದರ್ಶನ

ಡಿಶಂಬರ್ ೨೫ನೇ ತಾರೀಖಿನಿಂದ ೩೧ನೇ ತಾರೀಖಿನ ವರೆಗೆ ಸಾಂಗಗೊಳಿಸಲು ಯೋಚಿಸಿದ ಕರ್ನಾಟಕ ಕಲಾ ಕೌಶಲ್ಯ ಪ್ರದರ್ಶನವು ಬೇರೊಂದು ಕಟ್ಟಡದಲ್ಲಿ ಕಲಾಭಿಮಾನಿಗಳ ಪ್ರದರ್ಶನಕ್ಕಾಗಿ ತೆರೆದಿಡಲ್ಪಡುವದು ಕಲಾಕೌಶಲ್ಯಗಳ ವಸ್ತುಗಳನ್ನು ಪ್ರದರ್ಶಿಸುವದರ ಹೊತ್ತಿಗೆ ಗಾಯನ ವಾದನ ಕಾರ್ಯಕ್ರಮಗಳ ಯೋಜನೆಯು ಸಹ ಪ್ರದರ್ಶನಭವನದಲ್ಲಿ ಮಾಡಲ್ಪಡುವದು ಈ ಪ್ರದರ್ಶನದಲ್ಲಿ ಹಸರಿಗೆ ಮಾತ್ರ ಪ್ರವೇಶ ಫೀಯನ್ನು ಆಕಾರಿಸಲಾಗುವುದು ಈ ಬಗ್ಗೆ ಟಿಕೀಟುಗಳು ಆ ಸ್ಥಳದಲ್ಲಿಯೇ ದೊರೆಯುವವು ಪ್ರದರ್ಶನದ ಸನ್ಮಾನ್ಯ ವ್ಯವಸ್ಥಾಪಕರು ಈ ವಿಷಯದಲ್ಲಿ ಬೇರೊಂದು ಸಮಾಚಾರ ಪತ್ರಿಕೆಯನ್ನು ಪ್ರಸಿದ್ಧಿಸಲಿರುವರು

ಸಮ್ಮೇಲನಕ್ಕೆ ಗ್ರಂಥಗನ್ನಳ ಸಾದರ ಮಾಡುವದು.

ಬೆಂಗಳೂರು ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಈ ನೊಬಲೇ ತಮ್ಮ ಸಮಾಚಾರ ಪತ್ರಿಕೆಗಳಲ್ಲಿ ಪ್ರಸಿದ್ಧಿಸಿದಂತೆ ಪ್ರಶಂಸಾಪತ್ರ, ಪಾರಿತೋಷಕ ಮುಂತಾದ ಮಾನಗಳನ್ನು ಪಡೆಯುವದಕ್ಕಾಗಿ ತಮ್ಮ ಗ್ರಂಥಗಳನ್ನು ಸಮ್ಮೇಲನಕ್ಕೆ ಸಾದರ ಮಾಡಲಿಚ್ಛಿಸುವ ಗ್ರಂಥಕಾರರು ಬೆಂಗಳೂರು ಸಾಹಿತ್ಯ ಪರಿಷತ್ತಿನ ಕಡೆಗಾಗಲಿ ಮುಂಬಯಿಯ ಸ್ವಾಗತ ಸಮಿತಿಯ ಕಡೆಗಾಗಲಿ ತಮ್ಮ ತಮ್ಮ ಗ್ರಂಥಗಳನ್ನು ಅಕ್ಟೋಬರ್ ತಿಂಗಳ ಕೊನೆಯ ಒಳಗಾಗಿ ಆದಷ್ಟು ಬೇಗನೆ ಕಳುಹಿಸಿಕೊಡಬೇಕು ಇಂಥ ಗ್ರಂಥಕಾರರು ಅಥವಾ ಬರಹಗಾರರು ಸಮ್ಮೇಲನಕ್ಕೆ ಪ್ರತಿನಿಧಿಗಳೆಂದು ಸೇರುವದು ಅವಶ್ಯವಾಗಿದೆ

ವಿನಂತಿ.

ಬರುವ ಡಿಶಂಬರ್‌ನಲ್ಲಿ ಜರುಗತಕ್ಕ ಸಾಹಿತ್ಯ ಸಮ್ಮೇಲನವು ಕನ್ನಡ ವಾಙ್ಮಯದ ಇತಿಹಾಸದಲ್ಲಿ ಪ್ರತಿಮವಾದದ್ದಿರುತ್ತದೆ ಕರ್ನಾಟಕದಿಂದ ಅತಿದೂರವಾದದ್ದೆಂದೆನಿಸುವ ಮುಂಬಯಿ ಪಟ್ಟಣದಲ್ಲಿ ಕನ್ನಡಿಗರು ಕನ್ನಡ ಸಾಹಿತ್ಯ ಸಮ್ಮೇಲನವನ್ನು ಜರುಗಿಸುವದೆಂದರೆ ಅದೊಂದು ಅಪೂರ್ವ ಸಾಹಸವೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಸಮ್ಮೇಲನದ ಮುಖ್ಯ ಕಾರ್ಯಾಂಶವು ಕನ್ನಡ ಭಾಷೆ ಮತ್ತು ವಾಙ್ಮಯ ಮುಂತಾದವುಗಳ ಬಗ್ಗೆ ವಿಚಾರ ವಿನಿಮಯ ಮತ್ತು ಒಪ್ಪಿಗೆಗಳ ರೂಪದಲ್ಲಿ ಇರುವದಾದರೂ ಈ ಭಾಷೆಯ ಮತ್ತು ವಾಙ್ಮಯದ ವರ್ಚಸ್ವಿನ ವ್ಯಾಪ್ತಿಯನ್ನು ಬೆಳೆಸುವ ಮುಂತಾದ ಮಹತ್ವವಾದ ಪ್ರಶ್ನೆಗಳು ಸಮ್ಮೇಲನದ ಲಕ್ಷ್ಯವನ್ನು ತಕ್ಕಮಟ್ಟಿಗೆ ಎಳೆಯುವ ಸಂಭವವಿದೆ ಹಿಂದುಸ್ಥಾನದ ಹೆಬ್ಬಾಗಿಲೆಂದೆನಿಸಿದ ಮುಂಬಯಿಯಂಥ ಪಟ್ಟಣದಲ್ಲಿ ಈ ಸಮ್ಮೇಲನವು ಜರುಗತಕ್ಕದ್ದಿರುವದರಿಂದ ಆ ಪಟ್ಟಣದ ಅನೇಕ ದಿಶೆಗಳಲ್ಲಿಯ ಬೆಳವಣಿಗೆಯನ್ನು ಸ್ವತಃ ಕಣ್ಣಿನಿಂದ ನೋಡುವ ಸುಸಂಧಿಯು ಒದಗಿಬಂದಿದೆ ಮುಂಬಯಿ ಶಹರದ ಮಾಹಿತಿಯ ಸಚಿತ್ರ ಕೈಪಿಡಿಗಳು ಇಂಗ್ರೇಜಿ ಮತ್ತು ಕನ್ನಡ ಭಾಷೆಗಳಲ್ಲಿ ತಯಾರಾಗುತ್ತಿದ್ದು ಅವು ಕ್ಷಿಪ್ರದಲ್ಲಿಯೇ ಅಲ್ಪ ಬೆಲೆಗೆ ದೊರಕುವವು ಪರಸ್ಥಳದ ಶಿಕ್ಷಕರು ಮತ್ತು ಪ್ರೊಫೆಸರರು ತಮ್ಮ ತಮ್ಮ ವಿದ್ಯಾರ್ಥಿಗಳ ಹಿತದ ದೃಷ್ಟಿಯಿಂದ ಅವರ ಒಗ್ಗೆ ಈ ಭವ್ಯ ಪಟ್ಟಣವನ್ನು ಮತ್ತು ಅದರ ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವದಕ್ಕಾಗಿ ಶೈಕ್ಷಣಿಕ ಪ್ರವಾಸಗಳ ಯೋಜನೆಯನ್ನು ಮಾಡಬಹುದು ಸಾರಾಂಶವೆಂದರೆ, ಈ ಶೋಭಾಯಮಾನವಾದ ಪಟ್ಟಣವನ್ನು ನೋಡ ಹೊರಟರೆ ಅದೊಂದು ಶಿಕ್ಷಣದ ಭಾಗವೇ ಎನಿಸುವದು ಈ ವಿಷಯದಲ್ಲಿ ಪ್ರತಿನಿಧಿಗಳಿಗೆ ಶಕ್ಯವಿರುವ ಯಾವತ್ತು ಅನುಕೂಲತೆಗಳನ್ನು ಒದಗಿಸಿಕೊಡಲಾಗುವದು

ಸಮ್ಮೇಲನದ ದಿನಗಳಲ್ಲಿ ಸ್ವಾಗತ ಸಮಿತಿಯ ಪ್ರಮುಖ ಸಭಾಸದರು, ಪ್ರತಿನಿಧಿಗಳೊಡನೆ ಸಂಪೂರ್ಣವಾಗಿ ಬೆರೆತು ಅವರ ಸ್ನೇಹ ಸಂಪಾದನೆ ಮಾಡುವದಕ್ಕಾಗಿ ಮತ್ತು ವಿಚಾರವಿನಿಮಯ ಮಾಡಿ ಪರಸ್ಪರ ಸಾಮಾನ್ಯ ಪ್ರಶ್ನೆಗಳ ವಿಷಯಗಳಲ್ಲಿ ಏಕಾಭಿಪ್ರಾಯವನ್ನುಂಟುಮಾಡುವದಕ್ಕಾಗಿ, ಪಟ್ಟಣದಲ್ಲಿಯ ತಮ್ಮ ಬಿಡಾರಗಳನ್ನು ಬಿಟ್ಟು ಪ್ರತಿನಿಧಿಗಳ ಬಿಡಾರಗಳಲ್ಲಿ ವಾಸಿಸುವರು ಆದ್ದರಿಂದ ಯಾವತ್ತು ಪ್ರತಿನಿಧಿಗಳು ಪ್ರತಿನಿಧಿಗಳ ಬಿಡಾರಗಳಲ್ಲಿ ವಾಸಿಸುವದು ಎಲ್ಲ ದೃಷ್ಟಿಯಿಂದ ಇಷ್ಟವಾಗಿರುವದು

ಕೊನೆಯ ವಿನಂತಿಯೆಂದರೆ, ವಿಶಾಲ ಕರ್ನಾಟಕದ ಯಾವತ್ತು ಕನ್ನಡಿಗರು ಪ್ರತಿನಿಧಿಗಳೆಂದು ಮತ್ತು ಪ್ರೇಕ್ಷಕರೆಂದು ಬಹು ಸಂಖ್ಯೆಯಿಂದ ಸೇರಿ ಸಮ್ಮೇಲನವನ್ನು ಯಶಸ್ವಿಯಾಗಿ ಸಾಗಗೊಳಿಸಿ ಮಾತೃಭಾಷೆಯಾದ ಕನ್ನಡ ಭಾಷೆಯ ಸೇವೆಯನ್ನು ಯಥಾಶಕ್ತಿ ಮಾಡಬೇಕು

ಜಿ ಕೆ ಒಸಿಗೇರಿ, ಎಂ ಎ, ಎಲ್ ಎಲ್ ಬಿ
ಎ ರ ಪಟ್
ಎಚ್ ಎಸ್ ಕಟ್ಟೀಮನಿ
ಗೌರವ ಸಾಮಾನ್ಯ ಕಾರ್ಯದರ್ಶಿಗಳು

೮, ದ್ವಾರಕಾದಾಸ ಮನ್ಸನ್ಸ,
ಬೆನ್‌ಹ್ಯಾಂ ಹಾಲ್ ಲೇನ್
ಗಿರಿಗಾವ ಮುಂಬಯಿ ೪
೨೪ ನೆಯ ಸಪ್ಟಂಬರ್ ೧೯೩೫

ಓಂನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ವಿಷಾದವಾರ್ತೆ

ಕೈ|| ವ|| ರುದ್ರಾಯ ಸಾಲಿಮಠ (ಮುಳಗುಂದ ಹಿರೇಮಠ) ಸಾ|| ಉಪ್ಪಿನಬಟಗೇರಿ ಜಿ|| ಕೊಪ್ಪಳ ಇವರ ಪುತ್ರರಾದ ಶ್ರೀ ಮಹಾ ಕೊಟ್ರಯ್ಯನವರು ಕಳೆದ ಭಾದ್ರಪದ ಬ|| ೧೧ ಸೋಮವಾರ ಹಗಲು ೩ ಘಂಟೆಗೆ ಶಿವಾಧೀನರಾದರು ಇವರು ಆ ದಿವಸ ಬೆಳಿಗ್ಗೆ ಒಬ್ಬ ಭಕ್ತನ ಮನೆಯಲ್ಲಿ ಶಿವಸಹಸ್ರನಾಮಾವಳಿ ಪಾರಾಯಣವನ್ನು ಮಾಡಿದ್ದಾರೆ ಆರೋಗ್ಯದಿಂದ ಇದ್ದವರು ಒಂದ ತಾಸಿನಲ್ಲಿಯೇ ಮೃತರಾದುದನ್ನು ಕೇಳಿ ಯಾರಿಗೆ ವಿಷಾದವೆನಿಸದಿರದು? "ಶರಣರ ಅರಿವು ಮರಣದಲ್ಲಿ" ಎಂಬ ಗಾಥಾವಾಕ್ಯವು ಸ್ಮೃತಿಪಥಕ್ಕೆ ಬಾರದಿರದು

ಇವರು ಕುಶಲಮತಿಗಳಾಗಿದ್ದರು ಅಲ್ಲದೆ ಬಂಧುಪ್ರೇಮ ಜನವಲುಮೆ ಗುರುಮಾರ್ಗಾಭಿಲಾಷೆ ಮುಂತಾದ ಸದ್ಗುಣಗಳಿಂದ ಭೂಷಿತರಾಗಿದ್ದರು ಪುರಾಣರೂಪದಿಂದ ಜನರಿಗೆ ಬೋಧಿಸುತ್ತಿದ್ದರು ಇವರಿಗೆ ಸತ್ಯಶೋಧನಾದಿಗಳನ್ನು ನಿರ್ಧರಿಸುವ ಯೋಗ್ಯತೆ ಇತ್ತು ಇದಕ್ಕೆ ಇವರು ತಾ|| ೨೮ ೧೧-೧೯೩೪ನೇ ಕರ್ನಾಟಕ ಬಂಧುವಿನಲ್ಲಿ ಪ್ರಸಿದ್ಧಿಸಿದ "ಶ್ರೀ ಶಂಕರಾಚಾರ್ಯರ ಕಾಲನಿರ್ಣಯ" ಲೇಖ ಮತ್ತು ಇದೇ ಪತ್ರಿಕೆಯ ತಾ|| ೨೦-೨ ೧೯೩೫ ನೇ ಸಂಚಿಕೆಯಲ್ಲಿ ಶ್ರೀಯುತ ಕೆ ಎಲ್ ಸಂಗಬಸವಪ್ಪನವರು ಪ್ರಕಟಿಸಿದ "ಸವಿನುಡಿಯೋ ಬಿರುನುಡಿಯೋ" ಈ ಲೇಖಗಳೇ ಸಾಕ್ಷಿಗಳಾಗಿವೆ

ಶ್ರೀ ಕೇದಾರಜಗದ್ಗುರುಗಳನ್ನು ತಮ್ಮಲ್ಲಿಗೆ (ಉಪ್ಪಿನ ಬೆಟಗೇರಿ) ಸ್ವಾಗತಿಸಿಕೊಳ್ಳುವದಕ್ಕಾಗಿ ಹಣಗಾದಿ ಗುರುಭಕ್ತರಿಗೆ ಬೋಧಿಸಿ ಆಕಾರ್ಯವನ್ನು ಪೂರ್ತಿಗೊಳಿಸಿದ ಕೀರ್ತಿಯು ಇವರ ಪಾಲಿಗೇ ಸರಿ!

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಶ್ರೀಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ ವಿಷಯದಲ್ಲಿ ಮ|| ರಾ|| ಎ ಎಂ ಪಿ ವೆಂಕಟರಾವ್ ಇವರು ಸಂಗ್ರಹಿಸಿ ಪ್ರಕಟಿಗೊಳಿಸಿದ ಲೇಖದ ಉದಾಹರಣೆ ಮುಂತಾದವುಗಳಿಂದ "ಪಂಚಲೇಖಾಂಕ" ಗಳಿಂದ ಪ್ರಕಟಗೊಳಿಸುವದರಲ್ಲಿದ್ದರು ಕೈ|| ವಾ|| ಮಾದಿನೂರು ಹಿರೇಮಠದ ಶಾಂತವೀರ ಶಾಸ್ತ್ರಿಗಳು "ಶ್ರೀ ಗುರ್ಜೇಶಾಷ್ಟೋತ್ತರಶತನಾಮಾವಳಿ" ಯನ್ನು ವಿರಚಿಸಿದ್ದು ವಿದಿತವಷ್ಟೆ! ಕೈ|| ವಾ|| ಶಾಂತಗೇರಿ ಅಯ್ಯಪ್ಪಶಾಸ್ತ್ರಿಗಳು ಪಂ|| ವೇ|| ಅಮರನಾಥಶಾಸ್ತ್ರಿಗಳು ಹಿರೇಮಠ ಬನ್ನಿಕೊಪ್ಪ ಇವರ ಪದ್ಯಗಳನ್ನು ಸೇರಿಸಿ ಆ ನಾಮಾವಳಿ ಗ್ರಂಥವನ್ನು ಪ್ರಕಾಶಪಡಿಸುವವರಿದ್ದರು ಈ ವಿಷಯಗಳನ್ನು ಧರ್ಮವೀರ ಬಿರುದಾಂಕಿತ ವೇ|| ಶಿವಯ್ಯಸ್ವಾಮಿ ಹಿರೇಮಠ ಸ್ಕೂಲ ಮಾಸ್ತರ ಅಳವಂಡಿ ಇವರಿಂದ ತಿಳಿದು ಆ ಪುಣ್ಯಾತ್ಮರ ವಿಯೋಗದಿಂದ ಯಾರಿಗೆ ಅತ್ಯಂತ ವಿಷಾದವೆನಿಸದು ಶ್ರೀ ಶಂಕರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ

ಪಿ ಎಂ ಗುರುಪಾದಾರ್ಯ,

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು

ಶ್ರೀ ಜಗದ್ಗುರು (ಶ್ರೀ ಶೈಲ) ಸರ್ವತ ಮಹಾ ಸಂಸ್ಥಾನ ಸಂಚಾರಿ ಟೆನ ಗುರುತ್ವಾದಿಕಾರಿಗಳವರ ಶುಭಾಗಮನ ಮಹೋತ್ಸವ.

ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶ್ರೀಮನ್ಮಾರ್ಗಲಾಟಿ ವಿಶ್ವಾವೃಕ್ಷ ಶಿವಾಚಾರ್ಯ ರಾಜದೇಶಿಕೇಂದ್ರ ಮಹಾಸ್ವಾಮಿಗಳ ಸಂಚಾರಿಟೆನ ಗುರುತ್ವಾಧಿಕಾರಿಗಳಾದ ಶ್ರೀಮತ್ ಕೌಂಡಿನ್ಯಪುರಿ ಶಿಲಾಮಠ ಪಟ್ಟಾಧ್ಯಕ್ಷ ಶ್ರೀ ಶಿವಶಂಕರಶಿವಾಚಾರ್ಯಸ್ವಾಮಿಗಳು (ವೇದಾಂತಭೂಷಣ) ಇವರು ಜಗದುದ್ಧಾರಾರ್ಥವಾಗಿ ದೇಶಮಧ್ಯದಲ್ಲಿ ಸಂಚರಿಸುತ್ತಾ ಮಹಾಸಂಸ್ಥಾನದ ಸಂಚಾರಿಟೆನ ಸದ್ವಾದಿಕಾರಿಗಳಾದ ಆರ್ ಎ ಎಂ ಮರಿದೇವರು ಶಿವಾನಂದಯೋಗಿಗಳು ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ತಾ|| 19 9 ೩೫ ಗುರುವಾರ ಪ್ರಾತಃಕಾಲ 8 ಘಂಟೆಗೆ ಸರಿಯಾಗಿ ಆನೆ ಕುದುರೆ ಮುಂತಾದ ಸಕಲ ಬಿರುದಾವಳಿಸಮೇತ ದೇವದುರ್ಗ ಟೌನು ಮುಕ್ಕಾಮಿಗೆ ದಯಮಾಡಿಸುವದರೊಳಗಾಗಿ ಪುರಪ್ರಮುಖರಾದ ಶಿಖರಮಠದ ವೇ|| ಸಿದ್ಧರಾಮಪ್ಪನವರು, ಜಿ ಎಂ ಏಕಾಂಬರಯ್ಯನವರು ಮುರಕತ್ತಿ ಸೂಗಯ್ಯ, ಡಿ ಬಸವಯ್ಯ, ರಾ|| ಶ್ರೀ|| ಮಾಲಿ ಪಾಟೀಲ, ಪಟ್ವಾರ ಅಮರಪ್ಪನವರು, ಪೋಲೀಸ್ ಪಾಟೀಲ ಬಸವಂತರಾಯ ಯಜಮಾನ ಗಬ್ಬೂರು ಮಲ್ಲಣ್ಣನವರು, ರೇವಣಸಿದ್ಧಪ್ಪನವರು, ಕಣೆ ಚಿನ್ನಪ್ಪನವರು, ನಾರದ ಬಸವಲಿಂಗಪ್ಪನವರು, ಒಂಟಿ ಚೆನ್ನಬಸಪ್ಪನವರು, ಜಿ ವಕೀಲು ಕರಿಬಸಪ್ಪನವರು, ವಕೀಲು ಕಲ್ಯಾಣಪ್ಪನವರು ಮುಂತಾದ ಸಮಸ್ತ ಶೈವದ ಸದ್ಭಕ್ತಾದಿಗಳು ಇಷ್ಟಲಿಂಗ ಹಸ್ತರಾಗಿ ಬ್ಯಾಂಡ್ ವಾಜಾಭಜಂತ್ರಿ ಮುಂತಾದ ಮಂಗಲವಾದ್ಯ ವೈಭವದೊಡನೆ ಶ್ರೀಗಳವರನ್ನು ಎದುರುಗೊಂಡು ಸಾಷ್ಟಾಂಗನಮಸ್ಕಾರಪೂರ್ವಕ ಸನ್ನಿಧಿಯವರಿಗೆ ಫಲಪುಷ್ಪ ಹಾರತುರಾಯಿಗಳನ್ನು ಅರ್ಪಿಸಿದನಂತರ ಮಹೋತ್ಸವವು ತಳಿರು ತೋರಣ ರಂಭಾಸ್ತಂಭಗಳಿಂದ ಅಲಂಕರಿಸಲ್ಪಟ್ಟ ರಾಜವೀಧಿಗಳಲ್ಲಿ ಅತ್ಯಂತ ವಿಜೃಂಭಣೆಯಿಂದ ಹೊರಟು ೧೧ ಘಂಟೆಗೆ ಸರಿಯಾಗಿ ಪುರಮಧ್ಯದಲ್ಲಿ ವಿರಾಜಮಾನವಾದ ಶಿಖರಮಠಕ್ಕೆ ಬಂದಿತು ಅನಂತರ ಶ್ರೀಸ್ವಾಮಿಗಳು ಅಮೃತಮಯವಾಣಿಯಿಂದ "ಶ್ಲೋ|| ದುರ್ಲಭಂ ತ್ರಯಮೇವೈತತ್ ದೇವಾನುಗ್ರಹಕಾರಕಂ|| ಮನುಷ್ಯತ್ವಂ ಮುಮುಕ್ಷುತ್ವಂ ಮಹಾಜನಸಮಾಶ್ರಯಃ ||" ಎಂಬ ಉಕ್ತಿಗನುಸಾರವಾಗಿ ಭಾಷಣಮಾಡಿ ಸಭಿಕರ ಮನಸ್ಸನ್ನು ಆನಂದಪಡಿಸಿದರು ಅನಂತರ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ, ಶ್ರೀ ಜಗದ್ಗುರು ಶ್ರೀಮನ್ಮಾರ್ಗಲಾಟಿ ಭಿಕ್ಷಾವರ್ತಿ ಶಿವಾಚಾರ್ಯ ಮಹಾರಾಜಕೀ ಜೈ, ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಜಿ ಎಂ ಏಕಾಮ್ರನಾಥ, ದೇವದುರ್ಗ

ಪಂಚಾಚಾರ್ಯ ಪ್ರಭಾ.

೧೯೩೫ ನೇ ಅಕ್ಟೋಬರ್ ತಾ|| ೨೮ನೇ ಸೋಮವಾರ

ಲಿಂಗಧಾರಣವು ವೇದೋಕ್ತವಾದುದು.

"ಅಯಂ ಮೇ ಹಸ್ತೋ ಭಗವಾನ್" ಎಂಬ ಋಗ್ವೇದ ಮಂತ್ರವು ಹಿಂದೆ ಹೇಳಿದ ಪ್ರಕಾರವಾಗಿ ಶ್ರೀಗುರುಗಳಿಂದ ದೀಕ್ಷಾಸಂಸ್ಕಾರಪೂರ್ವಕವಾಗಿ ಕೊಡಲ್ಪಟ್ಟ ಇಷ್ಟಲಿಂಗವನ್ನು ಪ್ರತಿನಿತ್ಯವೂ [illegible] ಸುಖಾಸನದ ಮೇಲಿದ್ದು ದಕ್ಷಿಣಹಸ್ತದಿಂದ ಪೂಜಿಸಬೇಕೆಂಬ ಅರ್ಥವನ್ನು ಸ್ಪಷ್ಟಪಡಿಸುವದರಿಂದ ಇಷ್ಟಲಿಂಗಧಾರಣವನ್ನು ವಿಧಾನಮಾಡಿದಂತಾಯಿತು. ಆದರೆ ಇದೇ ಋಕ್ಶಾಖೆಯಲ್ಲಿ "ಅಯಂ ಮೇ ಹಸ್ತೋ ಭಗವಾನ್" ಎಂಬ ಮಂತ್ರಕ್ಕಿಂತಲೂ ಮೊದಲೇ ಹೇಳಲ್ಪಟ್ಟ "ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ" ಎಂಬ ಮಂತ್ರದಿಂದಲೇ ಇಷ್ಟಲಿಂಗಧಾರಣವಿಧಾನವು ಆಗ ಮಾಡಲ್ಪಟ್ಟಿರುವುದಿಲ್ಲ! ಹೀಗಿರುವಲ್ಲಿ ಪುನಃ ಸೂಚಿರುವ "ಅಯಂ ಮೇ ಹಸ್ತ" ಎಂಬ ಮಂತ್ರವು ಅದೇ ಇಷ್ಟಲಿಂಗಧಾರಣವನ್ನು ವಿಧಾನಮಾಡುವ ಪ್ರಾಪ್ತಿಯನ್ನು ಹೇಳುವುದಾದರೆ, ಅದು ಅಸ್ಥಾನದಲ್ಲಿ ಎಂಬ ದೋಷದಿಂದೊಡಗೂಡಬೇಕಾಗುವದು. "ಅಯಂ ಮೇ ಹಸ್ತ" ಎಂಬ ಮಂತ್ರವು ಯಾವ ಶಾಖೆಯಲ್ಲಿ ಹೇಳಲ್ಪಟ್ಟಿರುತ್ತದೆಯೋ ಅದೇ ಶಾಖೆಯಲ್ಲಿ "ಪವಿತ್ರಂತೇ" ಎಂಬ ಮಂತ್ರವೂ ಹೇಳಲ್ಪಟ್ಟಿರುತ್ತದೆ. ಹೀಗೆ ಒಂದೇ ಶಾಖೆಯಲ್ಲಿ ಹೇಳಲ್ಪಟ್ಟಿರುವ ಎರಡು ಮಂತ್ರಗಳೂ ಇಷ್ಟಲಿಂಗಧಾರಣರೂಪವಾದ ಒಂದೇ ಅರ್ಥವನ್ನು ಕೂಡುವುದಾದರೆ ಪೂರ್ವಮೀಮಾಂಸಾನ್ಯಾಯವಾಗಿ ಅಪೂರ್ವವಿಧಿಯು ನಿಯಮಕ್ಕೆ ಭಂಗವುಂಟಾಗುವುದರಿಂದ "ಅಯಂ ಮೇ ಹಸ್ತ" ಎಂಬ ಋಗ್ವೇದವಾಕ್ಯದಿಂದ ವೇದದಲ್ಲಿ ಇಷ್ಟಲಿಂಗಧಾರಣವಾಗಲಿ, ಹಸ್ತದಲ್ಲಿ ಪೂಜೆಯಾಗಲಿ ಸಿದ್ಧವಾಗುವದಿಲ್ಲವೆಂಬ ವಾದಿಯ ಸಂದೇಹವನ್ನು ಪರಿಹರಿಸಿಕೊಳ್ಳಬೇಕಾಗಿದೆ. ಆದರೆ ಇಷ್ಟಲಿಂಗಧಾರಣವಿಧಾಯಕಗಳಾದ ಅನೇಕ ಮಂತ್ರಗಳು ಒಂದೇ ಶಾಖೆಯಲ್ಲಿ ಹೇಳಲ್ಪಟ್ಟಿರುವುದರಿಂದ ಅವಾಂತರ ಅನ್ಯಥಾಸಿದ್ಧಿಯೆಂಬ ದೋಷವು ತೋರಿಬಂದರೂ ವಿಶೇಷ ದೃಷ್ಟಿಯಿಂದ ಎಷ್ಟು ಮಾತ್ರವೂ ಆ ದೋಷಕ್ಕವಕಾಶವಿಲ್ಲವು. ಮೊದಲು ಹೇಳಲ್ಪಟ್ಟಿರುವ "ಪವಿತ್ರಂತೇ ವಿತತಂ ಬ್ರಹ್ಮಣಸ್ಪತೇ" ಎಂಬ ಮಂತ್ರವು ಸಾಮಾನ್ಯವಾಗಿ ದೇಹದಲ್ಲಿ ಇಷ್ಟಲಿಂಗವನ್ನು ಧರಿಸಬೇಕೆಂದು ವಿಧಾನಮಾಡಿತು. ಆ ದೇಹದಲ್ಲಿ ಮಸ್ತಕಕಂಠಹಸ್ತಾದಿ ಅನೇಕ ಉತ್ತಮಾಂಗಗಳೂ ಅನೇಕ ನೀಚಾಂಗಗಳೂ ಇರುವುದರಿಂದ "ಪವಿತ್ರಂತೇ" ಎಂಬ ವಾಕ್ಯದಿಂದ ವಿಧಾನಮಾಡಲ್ಪಟ್ಟ ಆ ಪರಬ್ರಹ್ಮಸಾಕ್ಷ್ಯವಾದ ಇಷ್ಟಲಿಂಗವನ್ನು ಯಾವ ಅಂಗಗಳಲ್ಲಿ ಧರಿಸಬೇಕು? ಯಾವ ಅಂಗಗಳಲ್ಲಿ ಧರಿಸಲಾಗದು? ಯಾವ ಸ್ಥಲದಲ್ಲಿಟ್ಟು ಪೂಜಿಸಬೇಕು? ಯಾವ ಸ್ಥಲದಲ್ಲಿ ಪೂಜಿಸಲಾಗದೆಂಬ ವಿಶೇಷಾಕಾಂಕ್ಷಿತವಾದ ಜ್ಞಾನವನ್ನುಂಟುಮಾಡಿಕೊಡುವುದಕ್ಕಾಗಿ ಮುಂದೆ "ಅಯಂ ಮೇ ಹಸ್ತೋ ಭಗವಾನ್" ಎಂಬ ಮಂತ್ರವು ಪ್ರವರ್ತಿಸಿರುವುದರಿಂದ ಲಿಂಗಧಾರಣವಿಧಾಯಕವಾದ "ಪವಿತ್ರಂತೇ" ಎಂಬ ಸಾಮಾನ್ಯ ವಾಕ್ಯಕ್ಕಿಂತಲೂ 'ಅಯಂ ಮೇ ಹಸ್ತಃ' ಎಂಬ ವಾಕ್ಯವು ಇಷ್ಟಲಿಂಗವನ್ನು ಧರಿಸುವ ವಿಶೇಷ ಸ್ಥಲಗಳನ್ನು ನಿರ್ದೇಶಮಾಡುವುದಲ್ಲದೆ ಹಸ್ತವೆಂಬ ಸ್ಥಲದಲ್ಲಿ ಪೂಜಾನಿಯಮವನ್ನೂ ಹೇಳುವುದರಿಂದ ಆ ಎರಡು ಮಂತ್ರಗಳಿಗೂ ಭಿನ್ನಾರ್ಥವೇ ಸಿದ್ಧವಾಗುವುದರಿಂದ "ಅಯಂ ಮೇ ಹಸ್ತಃ" ಎಂಬ ವಾಕ್ಯಕ್ಕೆ ಅನ್ಯಥಾಸಿದ್ಧಿಯೆಂಬ ದೋಷವನ್ನು ಕೊಡಲವಕಾಶವಿಲ್ಲವು. ಶ್ರೀ ವೀರಶೈವ ಮತಸ್ಥಾಪನಾಚಾರ್ಯರಾದ ರೇಣುಕ ಭಗವತ್ಪಾದಾಚಾರ್ಯರವರಾದರೋ ಈ ಮಂತ್ರದಲ್ಲಿ ಹೇಳಲ್ಪಟ್ಟಿರುವ ಇಷ್ಟಲಿಂಗದ ಸ್ವರೂಪವನ್ನೂ, ಆ ಲಿಂಗವನ್ನು ಯಾವ ಯಾವ ಅಂಗಗಳಲ್ಲಿ ಧರಿಸಬೇಕೆಂಬುದನ್ನೂ ವಿಧಿಸಿರುತ್ತಾರೆ.

[illegible]

[illegible] ಇಷ್ಟಲಿಂಗವನ್ನು [illegible] ಭಗವಾನ್" ಎಂಬ ಋಗ್ವೇದಮಂತ್ರ [illegible] ಹಸ್ತಾಧಿಕರಣಕ [illegible] ಬಂದ ಪ್ರಶ್ನೆಗಳಿಗೆ [illegible]

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಕೊತ್ವಾಲ್ ರಾಮಣ್ಣನವರ ಬೀದಿಯಲ್ಲಿರುವ ಸಂಗೀತವಿದ್ವಾನ್ ಚೌಡಯ್ಯನವರ ಸಹೋದರಿಯ ಎರಡು ವರ್ಷದ ಮಗುವು ಅವರ ಮನೆಯಲ್ಲಿಯ ಬಳಿ ತುಂಬಿದ್ದ ಗಾರೆತೊಟ್ಟಿಯ ನೀರಿನಲ್ಲಿ ಬಿದ್ದು ಮರಣಹೊಂದಿತೆಂದು ತಿಳಿದುಬಂದಿದೆ

ಕಳೆದ ೨೨ನೇ ತಾರೀಖಿನ ದಿವಸ ರಾಜಧಾನಿಯ ಮಿಷನ್ ಆಸ್ಪತ್ರೆ ರಸ್ತೆಯಲ್ಲಿ ಒಬ್ಬ ಮುಸಲ್ಮಾನ ಸ್ತ್ರೀಯ ಮೇಲೆ ಟಾಂಗಾಗಾಡಿಯೊಂದು ಹರಿದಪ್ರಯುಕ್ತ ತುಂಬಾ ಗಾಯಗಳಾಗಿ ಕೃಷ್ಣರಾಜಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವಳೆಂದೂ ಟಾಂಗಾ ಬಿಟ್ಟವನು ಪತ್ತೆಯಿಲ್ಲವೆಂದೂ ತಿಳಿದುಬಂದಿದೆ.

ಮೈಸೂರಿನ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರಾದ ಸರ್ ಫ್ರಾಂಕ್‌ನಾಯ್ಸ್‌ರವರು ನವಂಬರ್ ೭ ನೇ ತಾರೀಖಿನ ದಿವಸ ವಿಮಾನದಿಂದ ರಾಜಧಾನಿಗೆ ದಯಮಾಡಿಸಿ ೮ ನೇ ತಾರೀಖಿನ ದಿವಸ ತಿರುಮಕೂಡ್ಲು ಬಳಿ ಕಪಿನಿ ನದಿಗೆ ಕಟ್ಟಿರುವ ಸೇತುವೆಯ ಪ್ರಾರಂಭೋತ್ಸವವನ್ನು ನೆರವೇರಿಸುವವರಾಗಿದ್ದಾರೆ.

ತಾ|| 12-10-35 ರಲ್ಲಿ ಮೈಸೂರು ದಸರಾ ಎಗ್ಜಿಬಿಷನ್ನಿನಲ್ಲಿ ನಡೆದ (ಫ್ಯಾನ್ಸಿಡ್ರೆಸ್) ನಮೂನೆ ಉಡುಪನ್ನು ಧರಿಸಿದವರ ಸ್ಪರ್ಧೆಯನ್ನು ನಡೆಸಿದರು. ಈ ಸ್ಪರ್ಧೆಯಲ್ಲಿ ಡಾ|| ಟಿ. ಎಸ್. ಸಿದ್ದಪ್ಪನವರ ಮೊಮ್ಮಕ್ಕಳು ಜಪಾನು ಹುಡುಗಿಯ ಹಾಗೆ ಡ್ರೆಸ್ ಮಾಡಿಕೊಂಡಿದ್ದವಳಿಗೆ ಮೊದಲನೆಯ ಬಹುಮಾನವೂ, ಜಪಾನು ಚಿಕ್ಕ ಸೋಲ್ಜರ ಹಾಗೆ ಡ್ರೆಸ್ ಮಾಡಿಕೊಂಡಿದ್ದ ಬಾಲಕನಿಗೆ ಮೂರನೆಯ ಬಹುಮಾನವೂ ದೊರಕಿತು

ಬೆಂಗಳೂರಿನ ಮಿ|| ಸಿ ಎಚ್. ಆರ್ಕ್ ಎಂಬುವರ ಮೋಟಾರಿನಲ್ಲಿ ಕೆಲವು ಕೈಬರಹದ ಪುಸ್ತಕಗಳನ್ನು ತುಂಬಿಕೊಂಡು ಚೌರಿ ಎಂಬ ಡ್ರೈವರನು ಮದರಾಸಿಗೆ ತೆಗೆದುಕೊಂಡು ಹೋಗುತ್ತಿರುವಾಗ್ಗೆ, ಕಾಟ್‌ಪಾಡಿ ಬಳಿ ಕೆಲವು ದರೋಡೆಕೋರರು ದಾರಿಯಲ್ಲಿ ಅಡ್ಡಕಟ್ಟಿ ಮೋಟಾರನ್ನು ನಿಲ್ಲಿಸಿ ಡ್ರೈವರನ ಬಳಿ ಇದ್ದ ಹಣವನ್ನೆಲ್ಲಾ ಕಿತ್ತುಕೊಂಡುಹೋದರು. ಡ್ರೈವರನು ಮದರಾಸಿಗೆ ಹೋಗಿ ಪೋಲೀಸರಿಗೆ ಫಿರ್ಯಾದುಕೊಟ್ಟಿದ್ದಾನೆ

ಅನೇಕ ವರ್ಷಗಳಿಂದ ಬೆಂಗಳೂರಿನಲ್ಲಿ ಸ್ಥಾಪಿಸಿ ನಡೆಸಿಕೊಂಡು ಬರುತ್ತಿದ್ದ ಎಂ ಎಸ್. ಎಂ ರೈಲ್ವೆ ಕಾರ್ಖಾನೆ (ವರ್ಕ್‌ಷಾಪ್) ಯು ಕಳೆದ ಬುಧವಾರ ಮುಚ್ಚಲ್ಪಟ್ಟಿತು. ಇದರಿಂದ ಅಲ್ಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ ಅನೇಕಜನರು ನಿರುದ್ಯೋಗಿಗಳಾದರು.. ಅಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ಸುಮಾರು ೩೫೧ ಮಂದಿ ತಾವೇ ಕೆಲಸಬಿಟ್ಟರೆಂದೂ, ಕೆಲವರನ್ನು ವೈದ್ಯರಸಲಹೆಯಂತೆ ಕೆಲಸದಿಂದ ತೆಗೆದರೆಂದೂ, ಕೆಲವರಿಗೆ ಬೇರೆಬೇರೆ ಇಲಾಖೆಗಳಲ್ಲಿ ಕೆಲಸ ಕೊಡಲಾಯಿತೆಂದೂ ತಿಳಿದು ಬಂದಿದೆ

ಮೈಸೂರಿಗೆ 10 ಮೈಲು ದೂರದಲ್ಲಿರುವ ನಾಕುಕಾರಸುಂಡಿ ಎಂಬಲ್ಲಿಗೆ ಕಳೆದ ೧ನೇ ತಾರೀಖು ಬುಧವಾರ ದಿವಸ ಕಾಳಾಚಾರಿ, ಕೆಂಪಾಚಾರಿ ಮತ್ತೆ ಮೂವರು ಕಳ್ಳತನ ಮಾಡಲು ಹೋಗಿ, ಪರಿಯಸಿದ್ಧ ಎಂಬವನ ಮನೆಗೆ ಕನ್ನಹಾಕಲು ಪ್ರಯತ್ನಪಡುತ್ತಿರುವಲ್ಲಿ ಈ ಸುಳಿವನ್ನು ತಿಳಿದ ಆ ಗ್ರಾಮದ ಸುಮಾರು ೫೦-೬೦ ಜನರು ಇವರನ್ನು ಸುತ್ತುಗಟ್ಟಿ ಹಿಡಿಯಲು ಪ್ರಯತ್ನಪಟ್ಟರು ಆದರಲ್ಲಿ ಕಾಳಾಚಾರಿ ಮತ್ತು ಕೆಂಪಾಚಾರಿ ಎಂಬವರು ಸಿಕ್ಕಿಬಿದ್ದರು. ಉಳಿದ ಮೂವರು ತಪ್ಪಿಸಿಕೊಂಡು ಓಡಿಹೋದರು. ಕೈಗೆ ಸಿಕ್ಕಿದ ಇಬ್ಬರನ್ನು ಈ ಜನರು ಹೊಡೆದು ಕೊಂದು ಹಳ್ಳಿಗೆ ಎರಡು ಮೈಲು ದೂರದಲ್ಲಿ ಹೂತುಬಿಟ್ಟರು. ಈ ವಿಷಯವು ಪೋಲೀಸಿಗೆ ತಿಳಿದು, ಅವರು ಹೆಣಗಳನ್ನು ಹೊರಕ್ಕೆ ತೆಗೆಯಿಸಿ ಡಾಕ್ಟರ್ ಪರೀಕ್ಷೆಗೆ ಕಳಿಸಿ ಕೊಲೆ ಆಪಾದನೆ ಮೇಲೆ, ಕರಿಯ, ಸಿದ್ದಯ್ಯ ಮತ್ತು ಗಿರಿಗೌಡ ಎಂಬವರನ್ನು ದಸ್ತಗಿರಿ ಮಾಡಿರುತ್ತಾರೆಂದು ತಿಳಿದುಬಂದಿದೆ.

ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ ಮೈಸೂರು.

ರಾಜಧಾನಿಯಲ್ಲಿ ನೂತನವಾಗಿ "ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ" ಎಂಬ ಅಭಿಧಾನದಿಂದ ಪ್ರಸಿದ್ಧ ನಟನಟೀವರ್ಗದಿಂದ ಕೂಡಿದ ನಾಟಕ ಸಂಘವೊಂದು ಸ್ಥಾಪಿತವಾಗಿರುವುದು. ಈ ಸಂಘದವರು ದೈವಭಕ್ತಿ, ರಾಜಭಕ್ತಿ, ಮಾತೃಭಕ್ತಿ ಪ್ರಧಾನಗಳಾದ "ಭೂಕೈಲಾಸ, ರಾಜಭಕ್ತಿ ಮತ್ತು ರಾಜಸಿಂಹ" ಎಂಬ ಮೂರು ನಾಟಕಗಳನ್ನು ಬಹಳ ಹಣವೆಚ್ಚಮಾಡಿ ಸಿದ್ಧಪಡಿಸಿರುವರು, ಇವರು ರಚಿಸಿರುವ ಸೀನರಿಗಳು ಪ್ರೇಕ್ಷಣೀಯಗಳಾಗಿದ್ದು ಅಭಿನಯಕೌಶಲವು ವರ್ಣನೀಯವಾಗಿದೆ. ಈ ಸಂಘದ ಸ್ಥಾಪಕರು ಮ|| ರಾ|| ಸುಬ್ಬಯ್ಯನಾಯುಡು ಮತ್ತು ಮ|| ರಾ|| ನಾಗೇಂದ್ರರಾಯರು ಆಗಿರುವರು. ಇವರು ತಮ್ಮ ಅಭಿನಯ ಕೌಶಲದಿಂದ ಮೈಸೂರಿನ ಮಹಾಜನಗಳನ್ನು ಸಂತೋಷಪಡಿಸಿದ್ದರಲ್ಲಿ ಮಾತ್ರ ತೃಪ್ತಿಹೊಂದದೆ ಇತರ ಕರ್ಣಾಟಕದಲ್ಲೆಲ್ಲಾ ನಾಟಕ ಕಲೆಯು ಉತ್ಕೃಷ್ಟ

ತ್ರಿಯನ್ನೂ ಉಪಯೋಗವನ್ನೂ ಪ್ರದರ್ಶಿಸುವುದರ ಮೂಲಕ ದೇಶಸೇವೆ ಭಾಷಾಸೇವೆಗಳನ್ನು ಮಾಡಲೆಳಸಿ, ಬೆಂಗಳೂರಿನ ಕಡೆಗೆ ಪ್ರಯಾಣ ಮಾಡಲು ನಿರ್ಧರಿಸಿದುದನ್ನು ತಿಳಿದ ಮ|| ರಾ|| ಗಳಾದ ಮಾಧವರಾವ್ ಪವಾರ್, ರಾಜರಾಜೇಶ್ವರಿಹಾಲ್ ಪ್ರೊ|| ರಾಮಚಂದ್ರರಾವ್, ಭಗವಾನ್ ಸೆಟ್ಟಿ ಕಂಪೆನಿಯ ಪ್ರೊ|| ನಾಗರಾಜಸೆಟ್ಟರೇ ಮೊದಲಾದ ವರ್ತಕಮಂಡಲಿಯವರೂ ಮತ್ತು ಪುರಪ್ರಮುಖರೂ ಸೇರಿ ನಾಟ್ಯಕಲೆಯಲ್ಲಿ ತಮಗಿರುವ ಪ್ರೀತ್ಯಭಿಮಾನಗಳನ್ನು ಕಾರ್ಯತಃ ತೋರಿಸಿ ಪ್ರೋತ್ಸಾಹಿಸಲು ಕಳೆದ 23 ನೇ ತಾರೀಖಿನ ದಿವಸ ಮೈಸೂರು ಪೌರಸಭಾಧ್ಯಕ್ಷರಾದ ಶ್ರೀಮಾನ್ ಎಂ. ಎ. ಶ್ರೀನಿವಾಸಶರ್ಮರವರ ಅಧ್ಯಕ್ಷತೆಯಲ್ಲಿ "ರಾಜಸಿಂಹ" ಎಂಬ ನಾಟಕವನ್ನು ಆಡಿಸಿ, ಸಂಘಕ್ಕೂ ಮತ್ತು ಮುಖ್ಯಪಾತ್ರಗಳನ್ನು ವಹಿಸಿದ್ದ ಕೆಲವು ನಟನಟಿಯರಿಗೂ ರಜತನಿರ್ಮಿತ, ಕಪ್ಪು (ಬಟ್ಟಲು) ಷೀಲ್ಡ್, ಮೆಡಲು ಇತ್ಯಾದಿ ಬಹುಮಾನಗಳನ್ನು ಅಧ್ಯಕ್ಷರ ಹಸ್ತ ಕೊಡಿಸಿದ್ದಲ್ಲದೆ, ಇವರು ಹೋದ ಕಡೆಗಳಲ್ಲೆಲ್ಲಾ ಇದೇ ರೀತಿ ದೇಶಸೇವೆ ಭಾಷಾಸೇವೆಗಳನ್ನು ಮಾಡಿ ಪ್ರಸಿದ್ಧರಾಗಲೆಂದು ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರು ನಾಟಕಾಭಿನಯದಿಂದ ಪ್ರಪಂಚಕ್ಕೆ ಆಗುವ ಲಾಭ, ಪಾಶ್ಚಿಮಾತ್ಯ ದೇಶಗಳಲ್ಲಿ ನಾಟಕಕಲೆಯು ಎಷ್ಟು ಉನ್ನತಿಗೆ ಬಂದಿದೆ, ನಾವುಗಳೂ ಕೂಡ ಹೇಗೆ ಇದನ್ನು ಮುಂದಕ್ಕೆ ತಂದು ಇದರಿಂದ ಲಾಭಹೊಂದಬಹುದು. ಇತ್ಯಾದಿ ವಿಚಾರಗಳನ್ನು ಕುರಿತು ಭಾಷಣ ಮಾಡಿದರು. ಅನಂತರ ಕಂಪೆನಿಯ ಪರವಾಗಿ ಮ|| ರಾ|| ನಾಗೇಂದ್ರರಾಯರೂ ಮ|| ಸುಬ್ಬಯ್ಯನಾಯುಡುರವರೂ ಸಭಾಧ್ಯಕ್ಷರಿಗೂ ಮತ್ತು ಈ ಸಂಘವನ್ನು ಸ್ಥಾಪಿಸಲು ತಮಗೆ ಸಹಾಯ ಮಾಡಿದ ಬಂಧುಗಳಿಗೂ ಮತ್ತು ವರ್ತಕ ಮಹನೀಯರುಗಳಿಗೂ ತಮ್ಮ ಕೃತಜ್ಞತೆಯನ್ನು ಸೂಚಿಸಿ ಪುಷ್ಪಹಾರಗಳನ್ನು ಸಮರ್ಪಿಸಿದರು.

ವರ್ತಮಾನಸಂಗ್ರಹ.

ಪೋರ್ಚುಗೀಸಿಗೆ ಸೇರಿದ ಬಾಂದವಾಡಿಯಲ್ಲಿರುವ ಸೊಂಧಾ ದೊರೆಗಳಾದ ಶ್ರೀ ಬಸವಲಿಂಗರಾಜ ಒಡೆಯರನ್ನು 21-7-35 ನೆಯ ದಿವಸ ಗುಂಡುಹಾಕಿಕೊಂದಿರುವುದು ತಿಳಿಯಷ್ಟೆ. ಈ ಕೊಲೆಪಾತಕರನ್ನು ಪತ್ತೆ ಮಾಡಲು ಪೋರ್ಚುಗೀಸ್ ಸರ್ಕಾರವು ಬಹಳ ಮುತುವರ್ಜಿಯನ್ನು ವಹಿಸಿರುತ್ತಲಿದೆ ಎರಡು ಮೂರು ಜನಗಳು ರಾಜನನ್ನು ಕೊಂದವರು ನಾವೆಂದು ಮುಂದುಬಂದಿದ್ದರಿಂದ ಸರ್ಕಾರದವರು ದಸ್ತಗಿರಿಮಾಡಿದ್ದಾರೆ ಈ ಮೃತರಾಜರ ಧರ್ಮಪತ್ನಿಯು ಅವರ ಒಂದು ಹೆಣ್ಣು ಕೂಸು ರಾಜವಾಡೆಯಲ್ಲಿ ಸರ್ಕಾರದ ಪರ ಪೋಷಣೆಯಲ್ಲಿದ್ದಾರೆ. ಈ ಮೃತರಾಜರ ತಮ್ಮನಾದ ಮಧುಲಿಂಗರಾಜ ಒಡೆಯರೆಂಬುವರನ್ನು ಸರ್ಕಾರದವರು ತಮ್ಮ ಅಧೀನದಲ್ಲಿಟ್ಟುಕೊಂಡಿರುತ್ತಾರೆ

ಲಾಹೋರಿನಲ್ಲಿ ಕಳೆದ 23 ನೇ ತಾರೀಖಿನ ದಿವಸ ಸಾಯಂಕಾಲ ಮುಸಲ್ಮಾನ ಬಡಗಿಯೊಬ್ಬನು ಸುತ್ತಿಗೆಯನ್ನು ಹಿಡಿದುಕೊಂಡು ಆವೇಶದಿಂದ ಹೊರಟು ಬೀದಿಯಲ್ಲಿದ್ದ ಹಿಂದೂಗಳ ಮೇಲೂ ಸಿಕ್ಕರ ಮೇಲೂ ಬಿದ್ದು ನಾಲ್ವರನ್ನು ಗಾಯಗೊಳಿಸಿದನು. ಅದರಲ್ಲಿ ಒಬ್ಬನು ಮೃತನಾದನು. ಉಳಿದವರ ಸ್ಥಿತಿಯು ಚಿಂತಾಜನಕವಾಗಿದೆ. ಸಶಸ್ತ್ರ ಪೋಲೀಸರು ಹೆಚ್ಚು ಗಲಭೆಗೆ ಅವಕಾಶವಾಗದಂತೆ ಎಚ್ಚರಿಕೆ ತೆಗೆದುಕೊಂಡಿದ್ದಾರೆ. ಹಂತಕನನ್ನು ಜನರು ಹಿಡಿದರು. ಮರಣಹೊಂದಿದ ಹಿಂದುವಿನ ದೇಹವನ್ನು ಮೆರವಣಿಗೆಮಾಡಿ ತೆಗೆದುಕೊಂಡು ಹೋಗಬೇಕೆಂದು ಜನಗಳು ಸೇರಿದರು. ಪೋಲೀಸರು ಇದರಿಂದ ಗಲಭೆಗೆ ಕಾರಣವಾಗಬಹುದೆಂದು ಇವರನ್ನು ತಡೆದು ಚದುರುವಂತೆ ಆಜ್ಞೆಮಾಡಿದರೂ ಕೇಳದಿರಲು ಲಾಠಿಯನ್ನು ಉಪಯೋಗಿಸಿ ಚದುರಿಸಿದರು. ಆದರೆ ಪುನಃ ಜನರು ಸೇರಿ ಮುಂದುವರಿಯಲು ಪ್ರಯತ್ನಪಟ್ಟರು. ಪರಿಸ್ಥಿತಿಯು ಕಠಿಣವಾಗುವ ಸಂಭವವಿತ್ತು. ಅಷ್ಟರಲ್ಲಿ ಕೆಲವು ಹಿಂದೂ ಸಿಕ್ ಮುಖಂಡರು ಮುಂದೆ ಬಂದು ಶವವನ್ನು ಸಾಗಿಸಲು ಅಪ್ಪಣೆ ಬಂದಿದ್ದ ಮಾರ್ಗದಲ್ಲಿಯೇ ತೆಗೆದುಕೊಂಡು ಹೋಗುವುದು ಒಳ್ಳೆಯದೆಂದು ಜನಗಳಿಗೆ ಸಮಾಧಾನ ಮಾಡಿ ಒಪ್ಪಿಸಿದ್ದರಿಂದ ಹೆಚ್ಚು ಗಲಾಟೆಯಿಲ್ಲದೆ ಶಾಂತವಾಯಿತು.

ಕಲ್ಲಿದ್ದಲಿನಿಂದ ಪೆಟ್ರೋಲ್

ಕಲ್ಲಿದ್ದಲಿನಿಂದ ಪೆಟ್ರೋಲ್ ಎಣ್ಣೆಯನ್ನು ತಯಾರಿಸುವ ಯಂತ್ರಾಲಯದ ಪ್ರಾರಂಭೋತ್ಸವವು ಬ್ರಿಟಿಷ್ ಸರ್ಕಾರದ ಮಾಜಿ ಮುಖ್ಯಮಂತ್ರಿಗಳಾದ ಮಿ|| ರ್ಯಾಮ್ಸೆ ಮೆಕ್ಡೊನಾಲ್ಡ್ ರವರಿಂದ ಇಂಗ್ಲೆಂಡಿನ ಬಿಲ್ಲಿಂಗ್‌ಹ್ಯಾಂ ಎಂಬಲ್ಲಿ ನೆರವೇರಿಸಲ್ಪಟ್ಟಿತು. ಹೆಚ್ಚು ಪ್ರಮಾಣದಲ್ಲಿ ಕೃತಕರೀತಿಯಿಂದ ಪೆಟ್ರೋಲ್ ಎಣ್ಣೆಯನ್ನು ತಯಾರಿಸಲು ಕಾರ್ಖಾನೆಯು ಸ್ಥಾಪಿತವಾಗಿರುವುದು ಪ್ರಪಂಚದಲ್ಲಿ ಇದೇ ಮೊದಲನೆಯದಾಗಿದೆ

ಇಟಲಿ-ಅಬ್ಸೀನಿಯಾ ಸಂಗ್ರಾಮ.

ಅಬ್ಸೀನಿಯದ ಉತ್ತರಭಾಗದ ಯುದ್ಧಭೂಮಿಯಲ್ಲಿ ವಿಶೇಷ ಕದನಗಳೇನೂ ಸಂಭವಿಸಿರುವುದಿಲ್ಲ. ಇಟಲಿಯವರು ತಾವು ಜಯಿಸಿದ ಪ್ರಾಂತಗಳಲ್ಲಿ ತಾವು ಇರಲು ಬೇಕಾದ ಅನುಕೂಲಗಳನ್ನು ಮಾಡಿಕೊಳ್ಳುತ್ತಿದ್ದಾರೆ ಅಲ್ಲಲ್ಲಿರುವ ಕಾಡುಗಳನ್ನು ಸಂಪಡಿಸಿ ಸಂಚಾರಯೋಗ್ಯವಾದ ನೂರಾರು ಮೈಲು ರಸ್ತೆಯನ್ನು ಮಾಡಿಕೊಂಡಿರುವುದಲ್ಲದೆ, ನೀರಿಗೆ ಬಹಳ ಕಷ್ಟವಾಗಿದ್ದ ಕಾರಣ ನೂರಾರು ಭಾವಿಗಳನ್ನು ತೋಡಿಸಿರುವರು. ನೀರನ್ನು ಕೂಡಿಡಲು ಬೇಕಾಗುವ ನೂರಾರು ಸ್ಟಾರೀ ತೊಟ್ಟಿಗಳನ್ನೂ ಕಟ್ಟಿರುತ್ತಾರೆ ಸರ್ವಸನ್ನಾಹವನ್ನೂ ಸಾವಕಾಶವಾಗಿ ಮಾಡಿಕೊಂಡು ಒಮ್ಮೆಲೆ ಶತ್ರುಗಳಮೇಲೆ ಬೀಳಲು ಹವಣಿಸುತ್ತಿರುವಂತಿದೆ ವಿಮಾನಗಳುಮಾತ್ರ ನಿತ್ಯವೂ ಶತ್ರುಕ್ಷೇತ್ರಗಳಮೇಲೆ ಹಾರಿ ಅವರ ಸೈನ್ಯದ ಚಲನವಲನಗಳನ್ನು ಗಮನಿಸುತ್ತಿರುವುದಲ್ಲದೆ ಸಾಧ್ಯವಾದಂತೆ ಬಾಂಬುಗಳನ್ನುಹಾಕಿ ಅವರನ್ನು ನಾಶಮಾಡಲು ಪ್ರಯತ್ನಿಸುತ್ತಿವೆ ದಕ್ಷಿಣಯುದ್ಧಕ್ಷೇತ್ರದಲ್ಲಿಮಾತ್ರ ವೆಬ್ಬಿಶಿಬೇಲಿ ನದಿಗೆ ಉತ್ತರದಲ್ಲಿ, ಬಾಗೀರ, ಮತ್ತು ತಿಲ್ಲಾವೆ ನಗರಗಳಬಳಿ ಇದ್ದ ಅಬ್ಸೀನಿಯಾ ಸೈನ್ಯದಮೇಲೆ ಇಟಲಿ ವಿಮಾನಗಳು ಭಾರಿ ಗುಂಡುಗಳ ಮಳೆ ಸುರಿಸಿದವೆಂದೂ, ಇಟಲಿ ಸೈನಿಕರು ಮುಂದೆ ನುಗ್ಗಿಬಂದಾಗ ಅಬ್ಸೀನಿಯರು ಸ್ವಲ್ಪವೂ ಹೆದರದೆ ಕೈಕೈಹತ್ತಿ ಹೊಡೆದಾಡಿದರೆಂದೂ ಈ ಯುದ್ಧಗಳ ಫಲವಾಗಿ ಎರಡು ಕಡೆಯೂ ಅನೇಕರು ಸತ್ತರೆಂದೂ, ಇಟಲಿ ಸೋಮಾಲಿಲ್ಯಾಂಡಿನಲ್ಲಿ ಅಧಿಕಾರವನ್ನು ನಡೆಸುತ್ತಿದ್ದ ಜನರಲ್ ಗ್ರೆಜಿಯಾನಿಯಾ ಎಂಬವರು ಕೆಲವು ಸೈನ್ಯಗಳಸಮೇತ ಮುಂದೆನುಗ್ಗಿ 600 ಅಡಿ ಎತ್ತರದಲ್ಲಿರುವ ದಗ್ನೇರಿಯಾ ಎಂಬ ಅಬ್ಸೀನಿಯರು ವಿಪರೀತ ಸಂಗ್ರಾಮ ಸಾಮಗ್ರಿಗಳನ್ನು ಕೂಡಿಟ್ಟಿದ್ದ ದುರ್ಗವನ್ನು ಕೈವಶಮಾಡಿಕೊಂಡರೆಂದೂ ಪ್ರಕಟವಾಗಿದೆ.

ಹರಾರ್ ನಗರವನ್ನು ಇಟಲಿಯವರು ಮುತ್ತುವಂತೆ ಅಬ್ಸೀನಿಯರು ತಕ್ಕ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಸೈನ್ಯವನ್ನು ಅಸಾಧ್ಯವಾಗಿ ಸೇರಿಸಿ ವ್ಯೂಹಗಳನ್ನು ರಚಿಸಿದ್ದಾರೆ. ಅಬ್ಸೀನಿಯಾ ಚಕ್ರವರ್ತಿಗಳಾದ ರಾಸ್ ತಫಾರಿಯವರು ಯುದ್ಧದಲ್ಲಿ ತಾವೇ ಜಯಶಾಲಿಗಳಾಗುತ್ತೇವೆಂಬ ನಂಬಿಕೆಯನ್ನಿಟ್ಟಿದ್ದಾರೆ. ದಕ್ಷಿಣದಲ್ಲಿ ವೆಬ್ಬಿಶಿಬೇಲಿ ನದಿಯ ಹತ್ತಿರದ ರಣರಂಗದ ಬಲಭಾಗದಲ್ಲಿ ರಾಸ್ ಡೆಸ್ಟಾರವರ ಸೈನ್ಯಕ್ಕೂ ಇಟಾಲಿಯನ್ನರಿಗೂ ಪ್ರಚಂಡ ಯುದ್ಧವಾರಂಭವಾಗಿರುವುದಾಗಿ ಸುದ್ದಿಯಿದೆ. ಇನ್ನೂ ನಿರ್ಧರವಾಗಿಲ್ಲ. ಏನೇ ಆದಾಗ್ಯೂ ಗೊರಹೈಪ್ರದೇಶವನ್ನು ಕೈಬಿಡದೆ ರಕ್ಷಿಸಬೇಕೆಂದು ರಾಸ್ ಡೆಸ್ಟಾರವರಿಗೆ ಆಜ್ಞೆಯಾಗಿದೆ ಗೊರಹೈ ಮತ್ತು ಜಿಜಿಗಾಗಳ ಸರಹದ್ದಿನಲ್ಲಿ ಇಲ್ಲಿಯವರೆಗಾದ ಕದನಗಳೆಲ್ಲಕ್ಕಿಂತ ಭಾರಿ ಯುದ್ಧವಾಗುವ ಸಂಭವವಿದೆ. ಇಲ್ಲಿ ಸೇರಿರುವ ಅಬ್ಸೀನಿಯರ 3 ಲಕ್ಷ ಸೈನಿಕರಿಗೂ ನುಗ್ಗಿಬರುತ್ತಿರುವ ಇಟಲಿಯವರ 1 ಲಕ್ಷ 60 ಸಾವಿರ ಸೈನ್ಯಕ್ಕೂ ಕಡಿದಾಟವೊದಗುವಂತಿದೆ. ಗೊರಹೈಯೆಂಬುದು ಬಹಳ ಮುಖ್ಯಸ್ಥಳವಿದ್ದು ಅದು ಇಟಲಿಯವರ ಕೈಗೆ ಬಿದ್ದರೆ ಅವರ ಕಷ್ಟಗಳು ಬಹಳಮಟ್ಟಿಗೆ ಕಡಿಮೆಯಾಗುವುವು. ನೀರಿಗೆ ಗತಿಯಿಲ್ಲದೆ ಓಗಡೆನ್ ಪ್ರಾಂತ್ಯದಲ್ಲಿ ಬಹಳ ಕಷ್ಟದಿಂದ ಮುಂದೆ ನುಗ್ಗುತ್ತಿರುವವರ ಕಷ್ಟಗಳು ಕೊನೆಗಾಣುವುವು. ಈಗ ಇಟಲಿಯವರು ನಲ್‌ವಲ್‌ಕೆ ವಾಯುವ್ಯ ಭಾಗಕ್ಕಿರುವ ಪಸಾಬದೆ ಎಂಬ ಮುಖ್ಯನಗರದ ಕಡೆ ನುಗ್ಗುತ್ತಿರುವರಂತೆ! ಈ ನಗರವು ಹರಾರಿಗೆ 140 ಮೈಲಿಗಳ ದೂರದಲ್ಲಿದೆ. ಇದರಿಂದ ಇಟಾಲಿಯನ್ನರನ್ನು ಎದುರಿಸಲು ನಿಂತಿರುವ ಅಬ್ಸೀನಿಯಾ ಸೈನ್ಯಗಳನ್ನು ಸುತ್ತುಗಟ್ಟಿ ಹಿಂಭಾಗದಿಂದ ಕೇಂದ್ರಸ್ಥಾನಗಳಾದ ಗೊರಹೈ ಮತ್ತು ಕ್ಲೇಫಂ ಕಡೆಗಳಿಂದ ಸಹಾಯ ಬರದಂತೆ ತಡೆದು ಹಿಂದುಗಡೆಯಿಂದ ಶತ್ರುಗಳನ್ನು ನಿರ್ನಾಮಮಾಡಬೇಕೆಂದು ಯೋಚಿಸಿರುವುದಾಗಿ ಹೇಳಲಾಗಿದೆ.

ಇಟಲಿ ಅಬ್ಸೀನಿಯಾ ಪ್ರಶ್ನೆ.

ಇಟಲಿ ಅಬ್ಸೀನಿಯಗಳು ಯುದ್ಧದಲ್ಲಿ ತೊಡಗಿ ತಿಂಗಳ ಮೇಲಾದರೂ ಜನಾಂಗಸಂಘದವರು ನಿರಾಶರಾಗದೇ ಶಾಂತರೀತಿಯಿಂದ ಯುದ್ಧ ನಿಲ್ಲಿಸುವ ಪ್ರಯತ್ನಗಳನ್ನು ಮಾಡುತ್ತಲೇ ಇದ್ದಾರೆ ಇಟಲಿಯ ವಸ್ತುಗಳ ಮೇಲೆ ಬಹಿಷ್ಕಾರ ಹಾಕಬೇಕೆಂಬ ವಿಷಯಕ್ಕೆ ಲೀಗಿನವರೆಲ್ಲರೂ ಒಪ್ಪಿದರೂ ಅದು ಇನ್ನೂ ಸರಿಯಾಗಿ ಜಾರಿಗೆ ಬಂದಿರುವುದಿಲ್ಲ. ಫ್ರೆಂಚ್ ಪ್ರತಿನಿಧಿಗಳಾದ ಲವಾಲರವರು ಇನ್ನೂ ಶಾಂತಿಸಂಧಾನದ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಈ ಸಂಬಂಧದಲ್ಲಿ ಇಟಲಿಯು ಕೆಲವು ಷರತ್ತುಗಳನ್ನು ಮುಂದೊಡ್ಡಿದೆ. ಅಂದರೆ ಈಗ ಇಟಲಿಯವರು ಜಯಿಸಿರುವ ಅಬ್ಸೀನಿಯದ ಭಾಗಗಳನ್ನೆಲ್ಲಾ ಅವರಿಗೇ ಬಿಟ್ಟುಕೊಡಬೇಕೆಂತಲೂ ಉಳಿದ ಭಾಗವನ್ನು ಲೀಗಿನ ಮುಖಾಂತರ ಇಟಲಿಯು ವರ್ಚಸ್ಸು ಯಾವ ದೇಶಗಳಲ್ಲಿ ಚನ್ನಾಗಿ ನಡೆಯುತ್ತದೆಯೋ ಅಂಥವರ ಆಡಳಿತ ಮೇಲ್ವಿಚಾರಣೆಗೆ ಒಳಪಡಿಸಬೇಕೆಂದೂ ಮುಸೊಲೀನಿಯವರು ಸೂಚನೆಕೊಟ್ಟಿದ್ದಾರೆಂದೂ, ಈ ವಿಷಯಗಳನ್ನು ಲವಾಲರವರು ಬ್ರಿಟಿಷ್ ರಾಯಭಾರಿಗಳಿಗೆ ತಿಳುಹಿಸಿರುವರೆಂದೂ ಫ್ರೆಂಚ್ ಪತ್ರಿಕೆಗಳು ಪ್ರಕಟಿಸಿವೆ. ಲೀಗಿನವರು ಇಟಲಿಯ ಮೇಲೆ ಹಾಕಲಿರುವ ಎಲ್ಲಾ ಬಹಿಷ್ಕಾರಗಳನ್ನೂ ತಾನೂ ಪ್ರಯೋಗಿಸುವುದಾಗಿ ದಕ್ಷಿಣ ಅಫ್ರಿಕವು ಲೀಗ್ ಸಭೆಗೆ ತಿಳಿಸಿದೆ. ಅಮೇರಿಕದೇಶದವರೂ ಕೂಡ ಈ ಸಂದರ್ಭದಲ್ಲಿ ತಾವು ತಾಟಸ್ಥ್ಯಭಾವವನ್ನು ವಹಿಸಿ ಸುಮ್ಮನಿರುವುದು ಸರಿಯಲ್ಲವೆಂದೂ ಹ್ಯಾಗಾದರೂ ಮಾಡಿ ಯುದ್ಧವನ್ನು ನಿಲ್ಲಿಸಲು ಪ್ರಯತ್ನಪಟ್ಟು ಲೀಗಿನವರ ಕೂಡ ಸಹಕರಿಸಬೇಕೆಂದು, ತಮ್ಮ ಅಧಿಕಾರಿಗಳಲ್ಲಿ ಪ್ರಾರ್ಥಿಸಿದ್ದಾರೆ.

ನ್ಯೂಯಾರ್ಕ್ ಟೈಂಸ್ ಪತ್ರಿಕೆಯ ಪ್ರಾರ್ಥನೆ.

ಅಂತರರಾಷ್ಟ್ರೀಯ ಸಂಘದ ಶಾಂತಿಪ್ರಯತ್ನಗಳಿಗೆ ರೂಸ್‌ವೆಲ್ಟರು ನೈತಿಕಬೆಂಬಲವನ್ನು ಕೊಡಬೇಕೆಂದು 'ನ್ಯೂಯಾರ್ಕ್ ಟೈಂಸ್' ಪತ್ರಿಕೆಯು ಪ್ರಾರ್ಥನೆಮಾಡಿರುವುದು. ಅಮೇರಿಕಾದೇಶವು ತಾಟಸ್ಥ್ಯಭಾವವನ್ನು ವಹಿಸಿ, ಸುಮ್ಮನಿದ್ದ ಪಕ್ಷದಲ್ಲಿ ಮುಸೊಲೀನಿಯವರಿಗೆ ಪ್ರೋತ್ಸಾಹಕೊಟ್ಟಂತಾಗಿ, ಅವರು ಅಂತರರಾಷ್ಟ್ರೀಯ ಸಂಘವನ್ನು ಧಿಕ್ಕರಿಸುವರೆಂದೂ, ಅಂತರರಾಷ್ಟ್ರೀಯ ಸಂಘದ ಶಾಂತಿಸ್ಥಾಪನೆಯ ವಿಷಯದಲ್ಲಿ ಅಮೇರಿಕಾದೇಶವು ಸಹಾಯಮಾಡಬೇಕೆಂದು ಪ್ರಾರ್ಥಿಸಿರುವುದಕ್ಕೆ ಉಚಿತವಾದ ಪ್ರತ್ಯುತ್ತರವನ್ನು ಅಮೇರಿಕಾಸರ್ಕಾರವು ಕೊಡಬೇಕೆಂದೂ ಆ ಪತ್ರಿಕೆಯು ಬರೆದಿರುವುದು.

ಇಟಲಿ ಹಡಗುಗಳಲ್ಲಿ ಹತ್ತುವವರೇ ಇಲ್ಲ!

ಇಟಲಿ ದೇಶದ ಮೇಲೆ ಆರ್ಥಿಕ ಪ್ರತಿಬಂಧಕಗಳನ್ನು ಹಾಕಬೇಕೆಂಬ ಆಜ್ಞೆಯಿಂದ, ಈಗಾಗಲೇ ಇಟಲಿ ದೇಶಕ್ಕೆ ಹಾನಿತಟ್ಟುವುದು ಪ್ರಾರಂಭವಾಗಿದೆ. ಇಟಲಿದೇಶದ 'ಲಾಯಿಡ್ ಟ್ರಿಸ್ಟಿನೋ' ಹಡಗುಗಳಲ್ಲಿ, ಇಂಡಿಯಾ ದೇಶದವರು ಸಂಚಾರ ಮಾಡುವುದು ಹೆಚ್ಚಾಗಿತ್ತು. ಆದರೆ, ಪ್ರತಿಬಂಧಕಗಳನ್ನು ಹಾಕಬೇಕೆಂದು ನಿರ್ಧರಿಸಿದ ಮೇಲೆ, ಪ್ರಯಾಣಿಕರ ಸಂಖ್ಯೆ ಕಡಮೆಯಾಗುತ್ತಿದೆ. ಮುಂಬೈ ರೇವುಪಟ್ಟಣದಿಂದ ಹೊರಟ 'ಕಾಂಟೆ ವರ್ಡೆ' ಎಂಬ ಹಡಗಿನಲ್ಲಿ 15 ಮಂದಿ ಪ್ರಯಾಣಿಕರು ಮಾತ್ರವಿದ್ದರು. ಈ ಹಡಗಿನಲ್ಲಿ 330 ಮಂದಿ ಪ್ರಯಾಣಿಕರಿಗೆ ಸ್ಥಳವಿದೆ.

ವೀರಶೈವ ಸುಧಾರಣೆ
(ಲೇಖಾಂಕ ೩)

ಲೇಖಕ— [illegible]

ಶ್ರೀ [illegible]

ವಾಚಕ ಮಹಾಶಯರೇ! [illegible] ಸ್ವತಂತ್ರವಾದ ನಮ್ಮ ಮತವಿಷಯವನ್ನು [illegible] ವೀರಶೈವಮತವು [illegible] ಇದು ಶ್ರೀ ಜಗದ್ಗುರು ರೇಣುಕಾದಿ [illegible] ಜಗದಾದಿಯಲ್ಲಿ [illegible] ವಿಷಯವನ್ನು ವೀರಶೈವ [illegible] ಮಾಗ ವನ್ನು [illegible] ಸುತ್ತಲಿವೆ [illegible] ವನ್ನು [illegible] ಆದ [illegible] ಇತ್ತೀಚೆ [illegible] ಮಾತುಗಳಿಂದ ಈ ಮತವು [illegible] ಪ್ರಳಯಸುತ್ತ [illegible] ಆಯಾ ಕಾಲದಲ್ಲಿಯ [illegible] ದೂರಿ ಕರಿಸಲ್ಪಟ್ಟು [illegible] ಅತ್ಯಂತ ಪ್ರಾಚೀನವಾದ [illegible] ದಲೂ [illegible] ನಿಣಾಯವನ್ನು [illegible] ವಾಡಿದರೆ [illegible] ಲ್ಲವೆ, [illegible] ಲಾಭವಾದರೂ [illegible] ವವರೆ [illegible] ನಾವು ಹೇಳಿದ [illegible] ಯನ್ನು ಎತ್ತಿರಿ! [illegible] ನೋಡಿರಿ! [illegible] ತಿಳಿದುಕೊಳ್ಳಿರಿ! [illegible] ಯಿತು

ವಾಚಕಮಹೋ [illegible] ಸ್ವತಂತ್ರ [illegible] ನಾದ ಈ ವೀರಶೈವಮತ [illegible] ಸಹಿಸಲಾರದ [illegible] ಯಿರು [illegible] ದ್ವಾರೆ [illegible] ಇತರ ಮತ [illegible] ಸರಿಯಾದ [illegible] ಸಂಸ್ಕೃತ ಸಾಹಿತ್ಯದಲ್ಲಿ ಪ್ರವೇಶವಿಲ್ಲದ [illegible] ಗಂಥವನ್ನು [illegible] ಯಿಂದಲೂ [illegible] ಲೇಶಮಾತ್ರವೂ [illegible] ಬೇಕ ಮದೂ [illegible] ಡಾ|| ಬಾಂಡಾಂಕರಂತಹ [illegible] ಜ್ಞಾನವೃದ್ಧರೂ [illegible] ವನ್ನು [illegible] ಲೀನರೂ, ಜ್ಞಾನವೃದ್ಧರೂ [illegible] ಕರು ವೀರಶೈವ ಮತವು [illegible] ತವಾದುದೆಂತಲೂ ಬ್ರಾಹ್ಮಣಾದಿ [illegible] ತವಾದ ದೆಂತಲೂ [illegible] ವರ್ಣಕುಲದಲ್ಲಿ [illegible] ಮಾಡುತ್ತಲಿದ್ದಾರೆ.

ನಿಜವಾಗಿ [illegible] ಯಿಂದ ಏನೂ [illegible] ಇಂತಹ ಪರಸ್ಪರ ಅಸೂಯೆಯನ್ನು [illegible] ರಾಮಯ್ಯ ಶಿವಯ್ಯ [illegible] ಹಾಗೆಯೇ [illegible] ತ್ರನು [illegible] ವನ್ನು [illegible] ಭೂತರೂ ವೀರಶೈವಮತೋದ್ಧಾರಕರೂ [illegible] ವರ್ಯ ಶ್ರೀ [illegible] ಕರ್ನಾಟಕ [illegible] ಶೈಲ್ಸ್ [illegible] ಧೀಶರಾದ ಶ್ರೀ ಕೃಷ್ಣಭೂಪಾಲರ ರಾಜ [illegible] ಕಂಗೊಳಿಸುವ ಮೈಸೂರು ಪಟ್ಟಣದಲ್ಲಿ [illegible] ದ್ವಾರೆ ಈ ಧರ್ಮಮೂರ್ತಿಗಳು [illegible] ಕೆಲವು ವರ್ಷಗಳಲ್ಲಿಯೇ ಮತ ಮತಗಳಲ್ಲಿರುವ [illegible] ಸೂಯೆಗಳು ಅಡಗಿಹೋಗಿ [illegible] ಎಲ್ಲೆಲ್ಲಿಯೂ ಪ್ರೇಮ [illegible]

[illegible]

ಬ್ರಹ [illegible] ಪ್ರಯತ್ನ [illegible] ಶಾಸ್ತ್ರ [illegible] ಎಷ್ಟೋ [illegible] ನಾವು [illegible] ಜಂಗಮ [illegible] ಒದಲು [illegible] ಈ ವಿಷಯವನ್ನು [illegible] ಲಕ್ಷ್ಯಕ್ಕೆ [illegible] ಅತ್ಯಂತ [illegible] ಜಾಗಿ [illegible] ನಮ್ಮ ಶಾಸ್ತ್ರ [illegible] ತಳ್ಳಲು ಉಚ್ಚಶಿಕ್ಷಣವನ್ನು ಹೊಂದಿ ಪಂಡಿತರಾಗಿ ಬನ್ನಿರೆಂದು ಅಪ್ಪಣೆ ನೀಡುವುದು ಯೋಗ್ಯವಾಗಿ ತೋರುತ್ತದೆ. ಪಾಪ! ಹೀಗೆ ಸಹಾಯ ಮಾಡಿ ಓದಿಸತಕ್ಕ ಮನಸ್ಸು ಸಮಾಜಪುರುಷನ [illegible] ಯಲ್ಲೇ ಬಂದಿಲ್ಲವೇನು! ಹಾಗಾದರೆ ಬಡವಾದ [illegible] ವರ್ಗ [illegible] ವಿದ್ಯೆಯನ್ನು ಅಲ್ಪಸ್ವಲ್ಪ ಓದಿಕೊಂಡು [illegible] ಹೊಟ್ಟೆ ಹೊರೆಯಬಹುದಾಗಿತ್ತು ಅವರೆ ನೀನು ನಿನ್ನ ಹೊಟ್ಟೆಯಪಾಡನ್ನು ಲಕ್ಷಿಸದೆ [illegible] ಗೀರ್ವಾಣವಿದ್ಯಾಸಾಗರದಲ್ಲಿ ಈಸು ಬಿದ್ದಿದ್ದೀಯಿ! ಒಳ್ಳೆಯದು, ಭಿಕ್ಷೆ ಮಾಡಿದರೂ [illegible] ಉಪವಾಸ ಮಾಡಿದರೂ ಚಿಂತೆಯಿಲ್ಲ [illegible] ವಿದ್ಯಾಸಾಗರದಲ್ಲಿರುವ ರತ್ನವನ್ನು ಮಾತ್ರ [illegible] ನೀನು ತರುವ ಆ ರತ್ನಪ್ರಭೆಯಿಂದ ಈ [illegible] ಕೃತಾರ್ಥವಾಗುವುದಲ್ಲದೆ [illegible] ಸಂಪೂರ್ಣವಾದ [illegible] ಶಾಸ್ತ್ರಿಗಳ ವೇ! ಈ [illegible] ಮಾತನ್ನು [illegible] ಅಂಗೀಕಾರಮಾಡ! [illegible] ನೀನು ನಿನ್ನ ಮತಗ್ರಂಥಗ [illegible] ಬನ್ನ [illegible] ನಿನ್ನ [illegible] ಸಜ್ಜನರಿಗೆ ನಿಜವಾದ ಮಾರ್ಗವನ್ನು ತೋರ [illegible] ರಕ್ಷಣ [illegible] ಅಲ್ಲದ ಸರಪಮಾರ್ಗಗಳ [illegible] ಒರವಿದು [illegible] ತಮ್ಮಿಂದ [illegible] ನೀನು ಸಂಪೂರ್ಣಪಂಡಿತನಾ [illegible] ಪಾಂಡಿತ್ಯ [illegible] ನೀನು ತೋರಿಸುವ ಪ್ರಮಾಣ [illegible] ಒಪ್ಪಿಕೊಳ್ಳಲೇ [illegible] ಒಂದೆರಡು [illegible] ಇದ್ದೀಯೆ [illegible] ಹೆ [illegible]!

ಶ್ರೀಮ[illegible]ರು [illegible] ಪ್ರೀತಿವಂತ
ತರೀಕೆರೆ ತಾ|| ಬುಡೇರು ಬೃಹನ್ಮಠದ
ಚರಪಟ್ಟಾಧ್ಯಕ್ಷ
ಶಿವಲಿಂಗಸ್ವಾಮಿಗಳವರು
ಈ ಮೂಲಕವಾಗಿ ದೇಶಮಧ್ಯದಲ್ಲಿರುವ
ಸಕಲ ಭಕ್ತಮಾಹೇಶ್ವರರಲ್ಲಿ
ಭಿನ್ನವಿಸಿಕೊಳ್ಳುವುದೇನೆಂದರೆ—

[illegible] ನಮ್ಮ [illegible] ಉದ್ಭವ [illegible] ಇದು ಒದುಕಾಲದಿಂದ [illegible] ಬೀಳ [illegible] ಇರುವುದು ಇದಕ್ಕಾಗಿ [illegible] ಶಿಲಾಮಂಟಪವನ್ನು ಮಾಡಿಸಬೇಕೆಂದು ಈಶ್ವರ ಪ್ರೇರಣೆಯಾಗಿರುವುದರಿಂದ [illegible] ಕಾರ್ಯಾರಂಭಕ ಸಂಕಲ್ಪಮಾಡಿರು [illegible] ದೇಶಮಧ್ಯದಲ್ಲಿರುವ ದೇವಭಕ್ತರು [illegible] ಈ ಕಾರ್ಯವು ಪೂರೈಸಬೇಕಾಗಿ [illegible] ಮಹಾಜನಗಳೆಲ್ಲರೂ ಈ ಶಿವಾಲಯ [illegible] ಕಾರ್ಯದಲ್ಲಿ ಭಾಗಿಗಳಾಗಿ ಇಹದಲ್ಲಿ [illegible] ಪಡೆದು, ಪರದಲ್ಲಿಯನ್ನು ಹೊಂದುವವರಲ್ಲದೆ [illegible] ಪಾತ್ರರಾಗಬೇಕಾಗಿ ಅಪೇಕ್ಷಿಸುವೆವ

ಶ್ರೀ ಕ್ಷೇತ್ರ ರಾಮೇಶ್ವರಕ್ಕೆ
ಯಾತ್ರಾರ್ಥಿಗಳಾಗಿ ಬರತಕ್ಕ ವೀರಶೈವರಿಗೆ

ಸೂಚನೆ.

ಸುಪ್ರಸಿದ್ಧವಾಗಿರುವ ಶ್ರೀರಾಮೇಶ್ವರಕ್ಷೇತ್ರಕ್ಕೆ [illegible] ವ ವೀರಶೈವರಿಗೆ ಯಾವ ಪ್ರಕಾರದ ಸೌಕರ್ಯವೂ ಇಲ್ಲದಿರುವುದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ನಾವು ವೀರಶೈವರ ವಸತಿಗಾಗಿ **ಜಂಗಮವಾಡಿ** ಎಂಬ ಸ್ಥಳವನ್ನು ಏರ್ಪಡಿಸಿರುವೆವು. ವೀರಶೈವರಿಗೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುವೆವಲ್ಲದೆ ದರ್ಶನಾದಿಗಳಿಗೆ ಬೇಕಾಗುವ ಷುವ್ಯವಸ್ಥೆಯನ್ನು ಕಲ್ಪಿಸಿಕೊಡುವೆವು. ಮಾಹಿತಿಗಾಗಿ ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಕೋರಿಕೆ.

ಗುರುಸಿದ್ಧಸ್ವಾಮಿ,
(೨) ಜಂಗಮವಾಡಿ ಮಠ, ರಾಮೇಶ್ವರಂ,
ಪೋ|| ರಾಮೇಶ್ವರ (S I R)

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭಾರತಖಂಡದಲ್ಲಿರುವ ಪ್ರತಿಯೊಂದು ಗುರುವಂಶದ ಮಠಕ್ಕೆ ಅನೇಕ ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದು ವರ್ಷಗಳಿಗೋ ಹತ್ತು ವರ್ಷಗಳಿಗೋ ಒಂದುಸಾರಿ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರೆಲ್ಲರೂ ತಮ್ಮ ಜ್ಞಾಪಕಶಕ್ತಿಯನುಸರಿಸಿ ಶಿಷ್ಯರ ಮನೆಗಳನ್ನು ಬರೆದುಕೊಂಡು ಕಾಣಿಕೆಯನ್ನು ವಸೂಲು ತೆಗೆದುಕೊಂಡು ಬರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ತಪ್ಪಿಸುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯತಕ್ಕ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ನಮ್ಮ ದೇಶದ ಎಲ್ಲಾ ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಈ ಪುಸ್ತಕದಲ್ಲಿ ವಿವರವನ್ನೆಲ್ಲಾ ಬರೆದು ಶಾಶ್ವತವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಒಳ್ಳೆ ಕಾಗದಗಳನ್ನು ಉಪಯೋಗಿಸಿ ಉತ್ತಮವಾದ ಮುದ್ರಣ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಒಗದ್ಗುರು ಕೇದಾರಸಂಸ್ಥಾನದ ಧರ್ಮಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಈ ಔಷಧಾಲಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣ ಮಕರಧ್ವಜ	೧	೩೨—೦—೦
ರಸ ಚಂದ್ರೋದಯ	೧	೧೦—೦—೦
ಷಡ್ಗುಣ ಗಂಧಕ ಜಾರಿತ (ಎರಡನೇ ನಂಬರ್)	೧	೮—೦—೦
ರಸ ಸಿಂದೂರ	೧	೨—೦—೦
ಮಲ್ಲ ಸಿಂಧೂರ	೧	೪—೦—೦
ತಾಲ ಸಿಂಧೂರ	೧	೬—೦—೦
ಶಿಲಾ ಸಿಂಧೂರ	೧	೪—೦—೦
ಸ್ವರ್ಣ ವಂಗ	೧	೬—೦—೦
ವಂಗ	೧	೧—೦—೦
ಭಸ್ಮಗಳು		
ಸ್ವರ್ಣ ಭಸ್ಮ	೧	೪೦—೦—೦
ರಜತ ಭಸ್ಮ	೧	೪—೦—೦
ತಾಮ್ರ ಭಸ್ಮ	೧	೦—೮—೦
ಲೋಹ ಭಸ್ಮ	೧	೦—೧೨—೦
ನಾಗ ಭಸ್ಮ	೧	೦—೮—೦
ವಂಗ ಭಸ್ಮ	೧	೦—೮—೦
ಅಭ್ರಕ ಭಸ್ಮ	೧	೦—೮—೦
ಮಂಡೂರ ಭಸ್ಮ	೧	೦—೮—೦
ಶಂಖ ಭಸ್ಮ	೧	೦—೮—೦
ಗೋದಂತಿ ಭಸ್ಮ	೧	೦—೮—೦
ಸ್ವರ್ಣಮಾಕ್ಷಿಕ ಭಸ್ಮ	೧	೦—೧೨—೦
ಪ್ರವಾಳ ಭಸ್ಮ	೧	೩—೦—೦
ಮುಕ್ತಾ ಭಸ್ಮ	೧	೬೦—೦—೦
ಕಾಸೀಸ ಭಸ್ಮ	೧	೦—೮—೦
ಕಪರ್ದಿಕ ಭಸ್ಮ	೧	೦—೮—೦
ಶೃಂಗದ ಕೋಡಿನ ಭಸ್ಮ	೧	೦—೮—೦
ಸೀಸ ಹರತಾಳ ಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯ ಪುಟ	೧	೧—೦—೦
ಶಿಲಾಜಿತ ಅಗ್ನಿ ಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ ಚೂರ್ಣ ಗುಟಿಕಾ ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ್,

ಆಯುರ್ವೇದಿಕರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಬ್ರ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯ ವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯ ವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವಿನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧೨ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಶೋಭಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ನಿಃಶಂಕೆಯಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರಿಗೆ ಅಪ್ಪಣೆಯನ್ನಿತ್ತಿರುವದಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ದಿವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೬೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಬಹುದಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬಿಳಿ ೧೩	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬಿಳಿ	೦—೨—೬
ಸಕಲ ಶಿವಾಚಾರ್ಯಾದಿಗಳಿಗೆ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬಿಳಿ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೬×೧೦ ಬಿಳಿ ೧೩	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬಿಳಿ ೧೩	೦—೨—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೨—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೩—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೨—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೨—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುಂಡಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೩	೦—೨—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೨—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತಿರುವ ಫೋಟೋ	೦—೨—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬಿಳಿ ೧೩	೦—೨—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೩	೦—೨—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೩	೦—೨—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೨—೯
ಶ್ರೀ ಜಗದ್ಗುರು ಕೇದಾರಸಿಂಹಾಸನಸ್ಥಾನ ಹಿಮಾಲಯದ ಸುಂದರ ಫೋಟೋ	೦—೨—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೨—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೨—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ

ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯ ಪ್ಲೆಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಪ್ರೀತಿಕರ ಆರೋಗ್ಯವನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಅತ್ಯಂತ ಪರಿಮಳವಾಗುವುದು. ಇದನ್ನು ಅನೇಕ ಪ್ರಮುಖರು ತಮ್ಮ ಗೃಹದಲ್ಲಿ ಕುಟುಂಬಸಮೇತರಾಗಿ ಉಪಯೋಗಿಸುತ್ತಾರೆ. ಮಾದರಿಗಾಗಿ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ ೩-೮-೦ ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[11] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) ..	೧ ಆಣೆ
ಶ್ರೀ ಪಂಚಾಚಾರ್ಯ ಮಂಗಳಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಪಂಚವಾದಿ ಸಿದ್ಧಾಂತದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಗುರುಸ್ವರೂಪಸ್ತವದೀಪಿಕೆ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತವಿವಾದಪಾಶ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)....	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಋಷಿಮತಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವರ ಭಾಷಣವು (ತೆಲುಗು)	೬ ಅಣ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೀರಶೈವರತ್ನ (೪ನೆಯ ಆವೃತ್ತಿ)	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ..	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ ...	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಸಹಿತ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೦ ಪುಟ)	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಧ್ಯಾಪಕ ಶ್ರೀ ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಸಲ್ಪಡುವುದು.

ಪಂಚಾಸ್ಯಾಸನಸಂಕಾಶತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಶ್ಯುರ್ವೀಲೋಕಪಮ್ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೪ನೇ ನವಂಬರ್ ೧೯೩೫ [ಸಂಚಿಕೆ ೨೬

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಸುವರ್ಣರಜತಾಂದೋಲಿಕೋತ್ಸವಾಹ್ವಾನ ಪತ್ರಿಕಾ.

ಜಗಲೂರು ಟಿ. ಎಸ್. ಮಹಾಲಿಂಗಪ್ಪ, ಕಲ್ಲಪ್ಪ ಇವರು ಮಾಡುವ ವಿಜ್ಞಾಪನೆಗಳು.

ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಪಾದಪೂಜಾ ಮಹಾರುದ್ರಾಭಿಷೇಕ ದರ್ಶನಾಶೀರ್ವಾದಗಳಿಂದ ಪುನೀತರಾಗುವ ಸದಿಚ್ಛೆಯಿಂದ ನಾವುಗಳು ಶ್ರೀ ಮಹಾ || || ಸ್ವಾಮಿಗಳವರ ದಿವ್ಯಸನ್ನಿಧಾನದಲ್ಲಿ ಪ್ರಾರ್ಥಿಸಿಕೊಂಡಪ್ರಕಾರ ಶ್ರೀ ಜಗದ್ಗುರುಗಳವರು (ತಾ|| ೩-೧೧-೧೯೩೫) ನೆಯ ಭಾನುವಾರ ಪ್ರಾತಃಕಾಲ ೮ ಘಂಟೆಗೆ ಪದ್ಧತಿಪ್ರಕಾರ ಸಕಲ ಬಿರುದಾವಳಿಗಳೊಡನೆ ದಯಮಾಡಿಸುವರು. (ತಾ|| ೪-೧೧-೧೯೩೫) ನೆಯ ಸೋಮವಾರ ಪ್ರಾತಃಕಾಲ ೮ ಘಂಟೆಗೆ ಶ್ರೀ ಮಹಾ || || ಸ್ವಾಮಿಗಳ ಪಾದಪೂಜಾ, ಮಹಾರುದ್ರಾಭಿಷೇಕಗಳು ನೆರವೇರುವವು. ಈ ಮಹಾಸಮಾರಂಭಕ್ಕೆ ಗುರುಭಕ್ತರು ಆಗಮಿಸಿ, ಶ್ರೀ ಮಹಾ || || ಸನ್ನಿಧಾನದ ದರ್ಶನಾಶೀರ್ವಾದಗಳಿಗೆ ಪಾತ್ರರಾಗುವುದರ ಮೂಲಕ ನಮ್ಮ ಮನಸ್ಸಂತೋಷಪಡಿಸಬೇಕಾಗಿ ಕೋರುತ್ತೇವೆ.

ಜಗಲೂರು, ತಮ್ಮ ವಿಧೇಯರು,
ತಾ|| ೨೯-೧೦-೩೫. ಮಹಾಲಿಂಗಪ್ಪ, ಕಲ್ಲಪ್ಪ.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಜಯಂತು ಶ್ರೀ ಪಂಚಾಚಾರ್ಯಾಃ ಶಿವಾಚಾರ್ಯಶಿಖಾಮಣೀಃ |
ಯೇಷಾಂ ವೀರಶೈವಸಿದ್ಧಾಂತಂ ಸ್ವಾತ್ಮರೂಪಾವಭಾಸ ಭೂತಲೇ ||

ಶ್ರೀಮದ್ರಂಭಾಪುರೀವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿನಾಂ

ಸುವರ್ಣರಜತತಿರ್ಯಗಾಂದೋಲಿಕಾ (ಅಡ್ಡಪಲ್ಲಕ್ಕಿ) ಮಹೋತ್ಸವಾಹ್ವಾನಪತ್ರಿಕಾ.

ಧಾರವಾಡ ಜಿ|| ಹಾವೇರಿಶಹರನಿವಾಸಿಗಳಾದ ವೀರಶೈವ ಮಂಡಳಿಯವರು ವಿನಯಪೂರ್ವಕವಾಗಿ ಶ್ರುತಪಡಿಸಿಕೊಳ್ಳುವದೇನೆಂದರೆ :—ನಮ್ಮಗಳ ಪ್ರಾರ್ಥನೆಯ ಪ್ರಕಾರ ಶ್ರೀ ಮಹಾ || || ಸನ್ನಿಧಿಯವರು ಇದೇ ಯುವನಾಮ ಸಂವತ್ಸರದ ಕಾರ್ತಿಕ ಬಹುಳ ೩ (ತಾ|| ೧೩-೧೧-೧೯೩೫) ನೆಯ ಬುಧವಾರ ಪ್ರಾತಃಕಾಲ ೮ ಘಂಟೆಯಿಂದ ಸಕಲಬಿರುದಾವಳಿಗಳೊಡನೆ ದಯಮಾಡಿಸುತ್ತಾರಾದ ಪ್ರಯುಕ್ತ, ಅತ್ಯಂತವಿಜೃಂಭಣೆಯಿಂದ ಜರುಗುವ ಶ್ರೀಜಗದ್ಗುರುಗಳವರ ತಿರ್ಯಗಾಂದೋಲಿಕಾ (ಅಡ್ಡಪಲ್ಲಕ್ಕಿ) ಮಹೋತ್ಸವಕ್ಕೆ ಸರ್ವರೂ ಪುತ್ರಮಿತ್ರಕಲತ್ರರೊಡನೆ ಆಗಮಿಸಿ, ಉತ್ಸವಭಾಗಿಗಳಾಗಿ ಶ್ರೀ ಮಹಾ || || ಸನ್ನಿಧಾನದ ದರ್ಶನಾಶೀರ್ವಾದಗಳಿಗೆ ಪಾತ್ರರಾಗುವದಲ್ಲದೆ, ನಮ್ಮಗಳ ಮನಸ್ಸಿಗೆ ಸಂತೋಷವನ್ನುಂಟುಮಾಡಬೇಕಾಗಿ ಆಶಿಸುತ್ತೇವೆ.

ಶ್ರೀ ಮಹಾ ( ) ಸನ್ನಿಧಿಯ ಸೇವಾಭಿಲಾಷಿಗಳಾದ,
ವೀರಶೈವಮಂಡಳಿಯವರು, ಹಾವೇರಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವದಾ ಲಕ್ಷ್ಯದಲ್ಲಿಡತಕ್ಕದ್ದು.

ಶಿವಾಲಯ ನಿರ್ಮಾಣ ಮತ್ತು ಸ್ತುತ್ಯವಾದ ದಾನ.

ಶ್ರೀ ವಾಣೀವಿಲಾಸ ಸೇತುವೆಯ ಪ್ರಾರಂಭೋತ್ಸವ.

ವೈಸರಾಯ್ ಕೌನ್ಸಿಲ್ ಮಂತ್ರಿಗಳಾದ ಸ[illegible] ಫ್ರಾಂಕ್‌ನಾಯ್ಸ್‌ರವರು ಕಳೆದ ಗುರುವಾರ ಮಧ್ಯಾ[illegible] ಬೆಂಗಳೂರನ್ನು ಬಿಟ್ಟು ದಾರಿಯಲ್ಲಿ ಮಂಡ್ಯದ ಸಕ್ಕ[illegible] ಗಿರಣಿ, ಕೃಷ್ಣರಾಜಸಾಗರದ ಅಣೆಕಟ್ಟು ಮತ್ತು ಬೃ[illegible]ದಾವನ ಇವುಗಳನ್ನು ಸಂದರ್ಶಿಸಿ, ಅಲ್ಲಿ ಏರ್ಪಡಿಸಿ[illegible] ಉಪಹಾರಾದಿಗಳನ್ನು ತೀರಿಸಿಕೊಂಡು ಸಾಯಂಕಾ[illegible] ರಾಜಧಾನಿಗೆ ತಲುಪಿದರು ಶುಕ್ರವಾರ ಪ್ರಾತಃಕಾ[illegible] ಗಂಧದಕಾರ್ಖಾನೆ, ಟೆಕ್ನಿಕಲ್ ಇನ್ಸ್ಟಿಟ್ಯೂಟ್, ರೇ[illegible] ಕಾರ್ಖಾನೆ ಮುಂತಾದುವನ್ನು ಸಂದರ್ಶಿಸಿ, ಮಧ್ಯಾ[illegible] ೩ ಘಂಟೆಗೆ ಟಿ ನರಸೀಪುರಕ್ಕೆ ದಯಮಾಡಿಸಿ ಅ[illegible]ಕ್ಕೆ ಮ॥ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ[illegible]ವರ ಹೆಸರಿನಿಂದ ಕಪಿಲಾನದಿಗೆ ಕಟ್ಟಿಸಿರುವ ಸೇತು[illegible]ಯ ಪ್ರಾರಂಭೋತ್ಸವವನ್ನು ನಡೆಸಿದರು ಈ ಸೇ[illegible]ವೆಯ ನಿರ್ಮಾಣದಿಂದ ಕೊಳ್ಳೆಗಾಲ, ಸತ್ಯಮಂಗ[illegible] ಮೊದಲಾದ ಸ್ಥಳಗಳಿಗೆ ಹೋಗಲು ಸಮೀಪವಾ[illegible] ದಾರಿಯನ್ನು ಕಲ್ಪಿಸಿದಂತಾಯಿತು. ಮದರಾ[illegible] ಸರ್ಕಾರಕ್ಕೆ ಸೇರಿದ ಪ್ರದೇಶಗಳಿಗೆ ಹೋಗ[illegible] ಇದರಿಂದ ಅನುಕೂಲವಾಗಿ ದೇಶದ ಅಭಿವೃದ್ಧಿಗೆ ಕಾ[illegible]ಣವಾಗುತ್ತದೆಂದು ಇದನ್ನು ಕಟ್ಟಲು ಹಿಡಿದ ಸುಮಾ[illegible] ೩ ಲಕ್ಷ ೪೫ ಸಾವಿರ ರೂಪಾಯಿಗಳಲ್ಲಿ ಇಂಡಿಯ[illegible] ಸರ್ಕಾರದವರು ಅರ್ಧವನ್ನು ಕೊಡಲೊಪ್ಪಿ ಕೆಲಸ[illegible] ಸುಗಮವಾಗಿಯೂ ಶೀಘ್ರವಾಗಿಯೂ ಆಗಲು ಅ[illegible] ಕೂಲಪಡಿಸಿದುದಕ್ಕಾಗಿ ಮೈಸೂರು ಸರ್ಕಾರದವ[illegible] ತಮ್ಮ ಕೃತಜ್ಞತೆಯನ್ನು ಸೂಚಿಸಿದ್ದಾರೆ.

ಮೈಸೂರು ಮಂತ್ರಿಮಂಡಲದ ಕಾರ್ಯಕ್ರಮ[illegible]

ಮಂತ್ರಿಮಂಡಲದ ಕಾರ್ಯಗಳಲ್ಲಿ ಈ ರೀತಿ ಬದಲ[illegible]ವಣೆಗಳಾಗಿವೆ ದಿವಾನ್ ಸರ್ ಮಿರ್ಜಾ ಇಸ್ಮಾಯಿ[illegible]ರವರು ಎಲ್ಲ ಇಲಾಖೆಗಳ ಮುಖ್ಯ ವಿಷಯಗಳ[illegible] ಪರ್ಯಾಲೋಚಿಸುವರು. ಅದರಲ್ಲೂ ಅರಮನೆ, ರಾ[illegible]ಕೀಯ, ಆರ್ಥಿಕ, ಮರಾಮತ್, ರೈಲ್ವೆಗಳು, ಪ್ರ[illegible] ಪ್ರತಿನಿಧಿ ಸಭೆ, ಶಾಸನಸಭೆ, ಕಬ್ಬಿಣದ ಕಾರ್ಖಾನೆ[illegible] ಸಕ್ಕರೆ ಕಾರ್ಖಾನೆ, ಸರ್ಕಾರದ ಉಪವನಗಳು, ಪ್ರ[illegible]ಶನ ಮತ್ತು ಸೆಕ್ರೆಟೇರಿಯಟ್, ಇವುಗಳಿಗೆ ಸಂಬ[illegible]ಧಪಟ್ಟ ವಿಷಯಗಳನ್ನು ನೋಡಿಕೊಳ್ಳುವರು.

ಪ್ರಥಮ ಸಚಿವರು—ಶಿಕ್ಷಣ, ವಿಶ್ವವಿದ್ಯಾನಿ[illegible]ಯ, ಶಾಸನ, ನ್ಯಾಯ ನಿಬಂಧನೆ, ಮುಜರಾಯಿ[illegible] ಲ್ಯಾಂಡ್ ರೆವಿನ್ಯೂ, ಮಿಲಿಟರಿ, ಪೋಲೀಸು, ಜ್ಯು[illegible]ಯಲ್, ರೆವಿನ್ಯೂ, ಸರ್ವೇ ಮತ್ತು ಸೆಟ್ಲ್‌ಮೆಂಟ್[illegible] ವಿದ್ಯುಚ್ಛಕ್ತಿ, ಪ್ರಾಕ್ತನ ಶಾಖೆ ಮತ್ತು ಸರಿಮನೆ[illegible] ಪೋರ್ಟ್‌ಫೋಲಿಯೋ, ಪ್ರಥಮ ಸಚಿವರು ಸೆಂಟ್ರ[illegible] ರಿಕ್ರೂಟ್‌ಮೆಂಟ್ ಬೋರ್ಡ್, ಸ್ಟೋರ್ಸ್ ಪರ್ಚೇ[illegible] ಕಮಿಟಿ, ಲೋಕಲ್ ಸರ್ವಿಸ್ ಎಕ್ಸಾಮಿನೇಷ[illegible] ಬೋರ್ಡ್, ಎಲೆಕ್ಟ್ರಿಕಲ್ ಮತ್ತು ಪಬ್ಲಿಕ್ ವರ್ಕ್ಸ್[illegible] ಇಲಾಖೆಗಳ ಸಮಿತಿಗಳ ಅಧ್ಯಕ್ಷರು, ಸ್ಟೋರ್ಸ್ ಬೋ[illegible]ರ್ಡಿಗೆ ಉಪಾಧ್ಯಕ್ಷರು.

ದ್ವಿತೀಯ ಸಚಿವರು—ಅರಣ್ಯ, ವ್ಯವಸಾಯ, ವ್ಯಾಪಾರ, ವಾಣಿಜ್ಯ ಪೋಸ್ಟ್ ಮತ್ತು ಟೆಲಿಗ್ರಾಫ್ಸ್, ಪೇಟೆಂಟ್ಸ್ ಮತ್ತು ಡಿಸೈನ್ಸ್, ಭೂಗರ್ಭಶಾಸ್ತ್ರ, ಗಣಿಗಳು, ಶ್ರೀಗಂಧದ ಎಣ್ಣೆ ಗಿರಣಿ, ಅಬ್ಕಾರಿ, ವ್ಯವಸಾಯ, ಡಿಸ್ಟ್ರಿಕ್ಟ್ ಬೋರ್ಡು, ಪೌರಸಭೆಗಳು, ಗ್ರಾಮಪಂಚಾಯತಿ, ಸ್ಟ್ಯಾಂಪ್ಸ್, ರೆಜಿಸ್ಟ್ರೇಷನ್, ಜಾಯಿಂಟ್ ಸ್ಟಾಕ್ ಕಂಪನಿ, ಪ್ರಿಂಟಿಂಗ್, ಸ್ಟೇಷನರಿ, ಮಿಟಿಯೊರಾಲಜಿ ಇತರ ವಿಷಯಗಳು (ಸೆನ್ಸಸ್ ಅಧಿಕಾರ ವರದಿಗಳು, ಆರ್ಥಿಕಸಮ್ಮೇಲನ). ದ್ವಿತೀಯ ಸಚಿವರು ವ್ಯವಸಾಯ ಮತ್ತು ವಾಣಿಜ್ಯ ಸಮಿತಿ, ಸಿರಿಕಲ್ಚರ್ ಸಮಿತಿ, ಗಂಧದೆಣ್ಣೆ ಸಮಿತಿ, ವ್ಯವಸಾಯ ಸಮಿತಿ, ಲೋಕಲ್ ಸೆಲ್ಫ್ ಗವರ್ನ್ಮೆಂಟ್, ಹಣಕಾಸು ಪ್ರೊಕ್ಯೂರ್ಮೆಂಟ್ ಸಮಿತಿಗಳು, ಪ್ರದರ್ಶನ ಸಮಿತಿ, ಮೈಸೂರು ಸಂಸ್ಥಾನ ವಿವಾಹ ಸಮಿತಿಗಳ ಅಧ್ಯಕ್ಷರು.

ವರ್ತಮಾನಸಂಗ್ರಹ.

ಬೊಂಬಾಯಿನ ವಕೀಲರೊಬ್ಬರು ಕಳೆದ ೯ನೇ ತಾರೀಖಿನ ಸಾಯಂಕಾಲ ಕೊಲಾಬಾದ ಕಡೆ ವಿಹಾರಾರ್ಥವಾಗಿ ಹೋಗಿದ್ದ ಕಾಲದಲ್ಲಿ ಕಳ್ಳರು ಇವರನ್ನು ಮುತ್ತಿ ಇವರಲ್ಲಿದ್ದ ಸುಮಾರು 4 ಸಾವಿರ ರೂಪಾಯಿ ಬೆಲೆಬಾಳುವ ಆಭರಣಗಳನ್ನು ಕಿತ್ತುಕೊಂಡು ಹೋದ ವಿಷಯ ತಿಳಿದುಬರುತ್ತದೆ.

ಬಳ್ಳಾರಿಯಲ್ಲಿ ಪ್ಲೇಗು.

ಬಳ್ಳಾರಿ ಪೌರಸಭೆಯ ಆರೋಗ್ಯಶಾಖೆಯವರು ಎಷ್ಟು ಮುತುವರ್ಜಿ ವಹಿಸಿದರೂ ಪ್ಲೇಗುರೋಗದ ಬಾಧೆಯನ್ನು ಕಡಮೆಮಾಡಲು ಸಾಧ್ಯವಾಗದುವುದಿಲ್ಲ ಇದುವರೆಗೆ 100 ಮಂದಿಯಮೇಲೆ ಪ್ಲೇಗು ತಗುಲಿ ೫೦ ಜನರು ಮರಣಹೊಂದಿರುವರು ಬ್ರೂಸ್‌ಪೇಟೆಯ ಕೆಲವು ಭಾಗದ ಜನರು ಊರುಬಿಟ್ಟಿರುವುದಾಗಿಯೂ, ಗಾಂಧಿನಗರ, ಸತ್ಯನಾರಾಯಣಪೇಟೆ, ದಂಡು ಮುಂತಾದ ಪ್ರದೇಶಗಳು ಜನರಿಂದ ತುಂಬಿಹೋಗಿರುವುದಾಗಿಯೂ ತಿಳಿದುಬರುತ್ತದೆ

ದೇಶಬಂಧು ಪತ್ರಿಕೆ.

ಧಾರವಾಡ ಡಿಸ್ಟ್ರಿಕ್ಟು ಹುಬ್ಬಳ್ಳಿ ಪಟ್ಟಣದಲ್ಲಿರುವ ಮ|| ರಾ|| ಎಸ್ ಬಿ ಸಾವಳಿ ಎಂಬ ಗುರುಭಕ್ತ ಮಹಾಶಯರು ಈ ತಿಂಗಳು 7 ನೆಯ ತಾರೀಖಿನಿಂದ "ದೇಶಬಂಧು" ಎಂಬ ಹೆಸರಿನ ದೈನಿಕ ಪತ್ರಿಕೆಯನ್ನು ತೆಗೆಯಲು ಪ್ರಾರಂಭಿಸಿರುತ್ತಾರೆ ಈ ಪತ್ರಿಕೆಯಲ್ಲಿ ಸಾಮಾಜಿಕ, ಧಾರ್ಮಿಕ, ನೈತಿಕ, ರಾಜಕೀಯ ವಿಷಯಗಳು ಪ್ರಕಟವಾಗುವುದರಿಂದ ಈ ಪತ್ರಿಕೆಯು ಸರ್ವಜನಾದರಣೀಯವಾಗಿದೆ ದೇಶಬಂಧು ಪತ್ರಿಕೆಯು ಶ್ರೀ ಜಗದೀಶ್ವರನ ಅನುಗ್ರಹದಿಂದ ಚಿರಕಾಲ ಬಾಳಿ ತನ್ನ ಉದ್ದೇಶವನ್ನು ಸಫಲಗೊಳಿಸಿಕೊಳ್ಳಲೆಂದು ಹಾರೈಸುತ್ತೇವೆ.

ಸ್ವಯಂವರ.

ಕಳೆದ ತಿಂಗಳು ೨೬ ನೇ ತಾರೀಖಿನ ದಿವಸ ಅಲಿಘರ್ ಪ್ರಾಂತದ ಲಕ್ಷಾಧಿಕಾರಿಣಿಯಾದ ಯುವತಿಯು ಪ್ರಾಪ್ತವಯಸ್ಕಳಾದ್ದರಿಂದ ತನ್ನ ಭಾವಿಪತಿಯನ್ನು ಆರಿಸಿಕೊಳ್ಳಲು ಅಲ್ಲಿಯ ಡಿಸ್ಟ್ರಿಕ್ಟ್ ಜಡ್ಜರವರ ಸಹಾಯವನ್ನು ಅಪೇಕ್ಷಿಸಿದಳು ಅವರು ಅದಕ್ಕೊಪ್ಪಿ ಕನ್ಯೆಯನ್ನೂ ಆಕೆಯ ಅಜ್ಜಿಯನ್ನೂ ತಮ್ಮ ಛೇಂಬರಿನಲ್ಲಿ ಕುಳ್ಳಿರಿಸಿ, ವಿವಾಹವಾಗಲು ಇಷ್ಟವುಳ್ಳವರಾಗಿ ಬಂದಿದ್ದ ವಿದ್ಯಾವಂತರಾದ ಅನೇಕ ಜನ ಯುವಕರನ್ನು ಒಬ್ಬೊಬ್ಬರನ್ನಾಗಿ ಒಳಕ್ಕೆ ಬರಮಾಡಿ ಪರೀಕ್ಷಿಸಿದರು. ಆಕೆಯು ಅಲ್ಲಿ ಬಂದಿದ್ದ ಅನೇಕಜನ ಗ್ರಾಜುಯೇಟುಗಳನ್ನು ನಿರಾಕರಿಸಿ ಸುಂದರನಾದ ಒಬ್ಬ ಅಂಡರ್ ಗ್ರಾಜುಯೇಟನ್ನು ವರಿಸಿದಳು ಜಡ್ಜಿಯವರು ಅದನ್ನು ಅನುಮೋದಿಸಿದರಂತೆ !

ಹುಲಿಗೆ ಬದಲು ಡಾಕ್ಟರರ ಶಿಕಾರಿ!

ಮಡಕೇರಿಗೆ ೪೦ ಮೈಲು ದೂರದಲ್ಲಿರುವ ಶ್ರೀಮಂಗಲದ ಡಾಕ್ಟರ್ ಎ ಸುಬ್ಬಯ್ಯನವರು ತಮ್ಮ ಭಾವಮೈದುನನೊಡನೆ ಕಳೆದ ತಿಂಗಳು ತಾರೀಖು ೨೮ ನೆಯ ಸೋಮವಾರ ಕಾಡಿಗೆ ಶಿಕಾರಿಗಾಗಿ ಹೋಗಿದ್ದು ವಾಪಸು ಬರುವಾಗ ದಟ್ಟವಾದ ಒಂದು ಪೊದೆಯ ಬಳಿಗೆ ಬಂದರು. ಹಿಂದಿನ ವರ್ಷ ಅದೇ ಸ್ಥಳದಲ್ಲಿ ಒಂದು ಭಾರೀ ಹುಲಿಯನ್ನು ಬೇಟೆಮಾಡಿದ್ದರು ಈಗಲೂ ತಮಗೆ ದೊಡ್ಡ ಶಿಕಾರಿ ಲಭಿಸಬಹುದೆಂದು ತಿಳಿದು ಇಬ್ಬರೂ ಬೇರೆಬೇರೆ ಕಡೆಯಿಂದ ಆ ಪೊದೆಯನ್ನು ಒಳಸಿಕೊಂಡು ಬರುವಂತೆ ನಿಶ್ಚಯಿಸಿ ಹೊರಟರು. ಸ್ವಲ್ಪದೂರ ನಡೆದ ಮೇಲೆ ಡಾಕ್ಟರರ ಭಾವಮೈದುನನಿಗೆ ಏನೋ ಶಬ್ದವಾದಂತೆ ಕೇಳಿಸಿತು. ತತ್ಕ್ಷಣವೇ ಬಂದೂಕಿನಿಂದ ಆ ಕಡೆಗೆ ಎರಡು ಸಲ ಗುಂಡು ಹಾರಿಸಿದನು ಅನಂತರ ಡಾಕ್ಟರರ ಜೊತೆಯಲ್ಲಿದ್ದ ಸೇವಕನ ಕೂಗು ಕೇಳಿತು ಆಗ ಭಾವಮೈದುನನು ಡಾಕ್ಟರರ ಬಳಿಗೆ ಹೋಗಿ ನೋಡಲು ಅವರು ಗುಂಡಿನ ಏಟು ತಗಲಿ ಸತ್ತುಬಿದ್ದಿದ್ದರೆಂದು ತಿಳಿದುಬರುತ್ತದೆ

ಇಟಲಿ-ಅಬ್ಸೀನಿಯಾ ಯುದ್ಧ !

ಉತ್ತರ ಯುದ್ಧರಂಗದ ಕಡೆ ಇಟಲಿಯವರು ಸರ್ವಸನ್ನಾಹದೊಡನೆ ಮಕಾಲೆ ಕಡೆಗೆ ಮುಂದುವರಿದು. ಮಕಾಲೆ ಪಟ್ಟಣವನ್ನು ವಶಪಡಿಸಿಕೊಂಡರು ಮಕಾಲೆಯ ಸುತ್ತುಮುತ್ತಲಿರುವ ಕೆಲವು ಗುಡ್ಡಗಳೂ ಇವರ ಕೈವಶವಾದವು ಇಲ್ಲಿಂದ ಮುಂದಕ್ಕೆ ಅಡಿ ಇಟ್ಟಕೂಡಲೆ ಅಬ್ಸೀನಿಯಾ ಸೈನ್ಯಕ್ಕೂ ಇಟಲಿಯ ಸೈನ್ಯಕ್ಕೂ ಘೋರಯುದ್ಧವಾಗಬಹುದೆಂದು ಊಹಿಸಲಾಗಿದೆ ರಾಸ್‌ಸಿಯೂಂ ಮತ್ತು ರಾಸ್‌ಕಾಸಾ ಇವರುಗಳು ತಮ್ಮ ಸೈನ್ಯವ್ಯೂಹವನ್ನು ರಚಿಸಿ ಸಮಯವನ್ನು ಕಾಯುತ್ತಿದ್ದಾರೆಂದು ತಿಳಿದುಬರುತ್ತದೆ.

ದಕ್ಷಿಣ ರಂಗದಲ್ಲಿಯೂ ಇಟಲಿಯ ಸೈನಿಕರು ಮುಂದುವರಿದಿರುತ್ತಾರೆ ಆದರೆ ಉತ್ತರದಲ್ಲಿ ಇಟಲಿಯವರು ನಡೆಸುತ್ತಿರುವ ಆಕ್ರಮಣಕ್ಕೆ ಪ್ರತೀಕಾರವನ್ನು ದಕ್ಷಿಣದಲ್ಲಿ ಮಾಡಬೇಕೆಂದು ಅಬ್ಸೀನಿಯಾ ಚಕ್ರವರ್ತಿಗಳು ನೂತನ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಸೈನ್ಯಪಡೆಯನ್ನು ದಕ್ಷಿಣಭಾಗಕ್ಕೆ ಕಳುಹಿಸಿರುತ್ತಾರೆಂದು ತಿಳಿದುಬರುತ್ತದೆ

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಶುಭಾಗಮನ ಕೊಟ್ಟೂರು.

ಶ್ರೀ ಜಗದ್ಗುರುಗಳವರು ಕೊಟ್ಟೂರುಪಟ್ಟಣದಲ್ಲಿರುವ ವೇ|| ಮಿರಾಳಪಟ್ಟಮಠದ ಜಾಗಟಗೇರಿ ಸಣ್ಣವೀರಪ್ಪಯ್ಯನವರು ಮತ್ತು ಚನ್ನವೀರಪ್ಪಯ್ಯನವರು ಇವರ ಪ್ರಾರ್ಥನೆಯಮೇರೆಗೆ ಕಳೆದ ತಿಂಗಳು 30 ನೆಯ ತಾರೀಖಿನ ದಿವಸ ಕೊಟ್ಟೂರಿಗೆ ದಿಜಯಂಗೈಸಿದರು. ಮೇಲ್ಕಂಡ ಉಭಯ ಮಹಾಶಯರು ತಮ್ಮ ಅಣ್ಣಂದಿರಾದ ಕೈ|| ದೊಡ್ಡವೀರಪ್ಪಯ್ಯನವರ ಸತ್ಸಂಕಲ್ಪದಂತೆ ಮಠಸ್ಥಾಪನೆಗಾಗಿ ಶಂಕುಸ್ಥಾಪನೆಯನ್ನು ಮಾಡಿಸಲು ಶ್ರೀಗಳವರನ್ನು ದಯಮಾಡಿಸಿಕೊಂಡಿದ್ದರು ಕೈ|| ದೊಡ್ಡವೀರಪ್ಪಯ್ಯನವರು ಬಳ್ಳಾರಿ ಪ್ರಾಂತದಲ್ಲಿ ಸುಪ್ರಸಿದ್ಧ ಪುರುಷರಾಗಿದ್ದು ಪಂಚಪೀಠಗಳಿಗೆ ಪ್ರಾಣಪ್ರಿಯರಾಗಿದ್ದರು. ಇಂಥ ಪುಣ್ಯಾತ್ಮರ ಸತ್ಸಂಕಲ್ಪವನ್ನು ನೆರವೇರಿಸಿದುದು, ಈ ಉಭಯ ಅನುಜರಿಗೆ ಭೂಷಣಾಸ್ಪದವೆಂದು ಹೇಳಬಹುದಾಗಿದೆ. ಕಾರ್ತಿಕ ಶು|| ೩ ದಿವಸ ಶ್ರೀ ಜಗದ್ಗುರುಗಳವರ ಪವಿತ್ರಹಸ್ತದಿಂದ ಮಠದ ಶಂಕುಸ್ಥಾಪನಕಾರ್ಯವು ಅತ್ಯಂತ ವೈಭವದಿಂದ ನೆರವೇರಿತು. ಆ ಸಮಯದಲ್ಲಿ ಗ್ರಾಮದ ಸಕಲ ಪ್ರಮುಖರು ಆಗಮಿಸಿ ಈ ಕಾರ್ಯಕ್ಕೆ ಶೋಭೆಯನ್ನುಂಟುಮಾಡಿದ್ದರು. ಕಾರ್ಯವು ಮುಗಿದ ಮೇಲೆ ಶ್ರೀ ಜಗದ್ಗುರುಗಳವರು, ಶ್ರೀ ಹಸುಗೋಡು ಶ್ರೀಪಟ್ಟದಸ್ವಾಮಿಗಳವರು ಮತ್ತು ಉಪ್ಪಿನಬೆಟಗೇರಿ ಹಿರೇಮಠದ ವೇ|| ವಾಮದೇವಶಾಸ್ತ್ರಿಗಳು ಧಾರ್ಮಿಕ ವಿಷಯದಲ್ಲಿ ಭಾಷಣಗಳನ್ನು ಮಾಡಿದರು. ಬಳಿಕ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಮಂಗಲ ಕಾರ್ಯಸಮಾರಂಭ ಸಮಯದಲ್ಲಿ ಪ್ರಭಾಪೋಷಣ ದ್ರವ್ಯವು ಸಮರ್ಪಿಸಲ್ಪಟ್ಟಿತು. ಪ್ರತ್ಯಕ್ಷದರ್ಶಿ.

ಸ್ವೀಕಾರ

ಬಿರೂರು ಟವನ್ನಿನಲ್ಲಿ ವಾಸವಾಗಿರುವ ನರಸಿಂಹರಾಜಪುರದ ಮ|| ರಾ|| ಶಾಂತಪ್ಪಶೆಟ್ಟರವರ ೩೪ ನೆಯ ವರ್ಷದ ವರ್ಧಂತ್ಯುತ್ಸವವು ವಿಶೇಷ ವೈಭವದಿಂದ ನೆರವೇರಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮ|| ರಾ|| ಬಿರೂರು ದೊಡ್ಡಮನೆ ಹಾಲಪ್ಪನವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ಶಿವಾನಂದ ರೈಸ್‌ಮಿಲ್ಲಿನಲ್ಲಿ ದೀಪಾವಳಿ ಸಂಬಂಧವಾದ ಧನಲಕ್ಷ್ಮೀ ಪೂಜೆಯು ನೆರವೇರಿದ ಸಮಯದಲ್ಲಿ ಮಿಲ್ಲಿನ ಮಾಲಿಕರಾದ ಮ|| ರಾ|| ನ್ಯಾಮತಿ ಹುರಿಕಡಲೆ ಸಾ|| ಮುದ್ದಪ್ಪನವರು ಪ್ರಭಾ ಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಯು ಕೀರ್ತನಕೇಸರಿ ಗುಬ್ಬಿ ಶ್ರೀ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[1ನೇ ಪುಟದಿಂದ ಮುಂದುವರಿದುದು]

ಮದಲ್ಲಿ ಪುನಃ ಸಭೆಗೂಡಿತು. ಪದ್ಧತಿ ಪ್ರಕಾರ ಶ್ರೀ ಮಹಾಚಾರ್ಯಪುಂಗವರು ಸಕಾಲಕ್ಕೆ ಸಭೆಗೆ ದಯಮಾಡಿಸಿ ಸಿಂಹಾಸನಾರೋಹಿಸಿದ ಕೂಡಲೆ ಪುರಾಣರತ್ನ ಬಸವಲಿಂಗಶಾಸ್ತ್ರಿಗಳು ಧರ್ಮಸಾಧನವಾದ ಶರೀರದಿಂದ ಮಹಾಮಹಸ್ಥಾಪನಾಚಾರ್ಯರ ಸಿದ್ಧಾಂತ ತತ್ವಗಳಂ ವಿವೇಚಿಸಿಕೊಂಡು ಲಿಂಗಪೂಜಾದಿಗಳಿಂದ ಜನ್ಮವನ್ನು ಸಾರ್ಥಕಮಾಡಿಕೊಳ್ಳುವುದು ಮನುಷ್ಯನ ಕರ್ತವ್ಯವೆನಿಸಿರುವುದು ಇತ್ಯಾದಿಯಾಗಿ ಉಪನ್ಯಸಿಸಿದರು. ಬಳಿಕ ಶ್ರೀಮಾನ್ ಮರಿಗಪ್ಪಣ್ಣ ನೋಟಿಗಿ ಕಬ್ಬೂರು ಸ್ವಾಗತ ಸಂಘಾಧ್ಯಕ್ಷರು ಇವರು ಶ್ರೀ ಮಹಾಗುರು ಸನ್ನಿಧಾನಕ್ಕೆ ಅರ್ಪಣಪತ್ರಿಕೆಯನ್ನೊಪ್ಪಿಸಿದರು ಶ್ರೀ ಜಗದ್ಗುರುಗಳವರು ಆ ಪತ್ರಿಕೆಯಲ್ಲಿ ಕಂಡ ಪ್ರಸ್ತುತ ಪ್ರಾರ್ಥನೆಗಳನ್ನು ಚಿತ್ತಕ್ಕೆ ತಂದು ಒಂದೊಂದು ವಿಷಯಗಳನ್ನು ಸಪ್ರಮಾಣವಾಗಿಯೂ ಸಯುಕ್ತವಾಗಿಯೂ ಬೋಧಿಸಿ ಧರ್ಮವೆ ಜಯಕ್ಕೆ ಆಧಾರವಾದ್ದರಿಂದ ಸರ್ವರೂ ತಮ್ಮ ತಮ್ಮ ಧರ್ಮಾಚರಣೆಯಲ್ಲಿದ್ದು ಐಹಿಕಾಮುಷ್ಮಿಕ ಫಲಗಳನ್ನು ಪಡೆಯುವುದು ಕರ್ತವ್ಯವಾಗಿದೆ ಎಂದು ಅಪ್ಪಣೆಕೊಡಿಸುವದರ ಜೊತೆಗೆ ಮಠದ ಸಿದ್ಧಾಂತ ಸ್ವರೂಪವನ್ನೂ ಅಪ್ಪಣೆ ಕೊಡಿಸಿದರು ಪ್ರಕೃತಕಾಲದಲ್ಲಿ ಧರ್ಮವು ಹಲವು ಮುಖದಿಂದ ಹ್ರಾಸವಾಗ ಹತ್ತಿರುವುದು. ಸನಾತನ ಧರ್ಮಾಭಿಮಾನಿಗಳಿಗೆ ಅತ್ಯಂತ ಶೋಚನೀಯವೇ ಸರಿ ! ನೀವುಗಳೆಲ್ಲ ಪರಸ್ಪರ ಸೌಹಾರ್ದಭಾವದಿಂದ ಸಹಾನುಭೂತಿಯನ್ನು ತೋರಿಸುತ್ತಾ ಧರ್ಮದ ಜೀರ್ಣೋದ್ಧಾರಕ್ಕೆ ಯತ್ನಿಸತಕ್ಕದೆಂದು ಅಪ್ಪಣೆಕೊಡಿಸಿದರು ವೇಳೆಯಾದ್ದರಿಂದ ಅಪ್ಪಣೆಯಂತೆ ಸಭೆಯು ವಿಸರ್ಜಿತವಾಯಿತು. ನಿತ್ಯವೂ ದರ್ಬಾರು ನಡೆಯುತ್ತಲೇ ಇದೆ ಸರ್ವಮತೀಯರೂ ಸಂತೋಷದಿಂದ ದರ್ಬಾರಿಗೆ ಬರುತ್ತಿರುವರು ಶ್ರೀಗಳವರು ಶಮಾನಿಷ್ಠರೂ, ಸರ್ವಪ್ರಾಣಿದಯಾಪರರೂ, ಸಮಾಜೋದ್ಧಾರಕರೂ ಇರುವರೆಂಬುದನ್ನು ವರ್ಣಿಸುವಶಕ್ಯವಿಲ್ಲ ಮತಾಂತರದವರು ಯಾವವಿಧವಾದ ಸಂಕೋಚಭಾವವಿಲ್ಲದೆ ಆದರಿಸುತ್ತಿರುವರು ಆ ಮಹಾಚಾರ್ಯರ ತಪಃಪ್ರಭಾವವೇನೆಂದೇ ಹೇಳಲು ಅಡ್ಡಿಯಿಲ್ಲ. ತಾ|| 6 11-35 ಬುಧವಾರ ಬೆಳಗ್ಗೆ ಬ್ಯಾಡಗಿ ನಿವಾಸಿಗಳಾದ ಶ್ರೀ|| ಸತ್ಯೇಂದ್ರಪ್ಪ ತುಕಾರಾಮಪ್ಪ ಕಟಾವಕರ್ ಈ ಮಹಾಶಯರು ಶ್ರೀ ಜಗದ್ಗುರುಗಳವರನ್ನು ಅತ್ಯಂತ ಭಕ್ತಿಯಿಂದ ಮಹಾಸಂಸ್ಥಾನದ ಪದ್ಧತಿಪ್ರಕಾರ ತಮ್ಮ ಮನೆಗೆ ದಯಮಾಡಿಸಿಕೊಂಡು ಹೋಗಿ ಸರ್ವಮತೀಯ ಪ್ರಮುಖರನ್ನೂ ಬರಮಾಡಿಕೊಂಡು ಬಂಧುಬಾಂಧವರೊಡನೆ ಪಾದಪೂಜೆಯನ್ನು ಮಾಡಿ ಕಾಣಿಕೆಯನ್ನರ್ಪಿಸಿ ಕೃತಾರ್ಥರಾದರು ಸದರಿ ಸತ್ಯೇಂದ್ರಪ್ಪನವರು ಅನ್ಯಮತೀಯರಾಗಿದ್ದರೂ ಗುರುದೇವತಾಭಕ್ತಿಯುಳ್ಳ ಮನೆತನದವರಾಗಿದ್ದುದರಿಂದ ಕರ್ತವ್ಯ ಕರ್ಮದಿಂದ ತಮ್ಮ ವಂಶಕ್ಕೆ ಗೌರವವನ್ನು ಕೊಟ್ಟಿದ್ದು ದು ಇವರ ಕೀರ್ತಿ ಪ್ರತಿಷ್ಠೆಗಳಿಗೆ ಕಾರಣವೆಂದು ಬೇರೆ ಹೇಳಬೇಕಾದ ಅವಶ್ಯಕತೆಯಿಲ್ಲ ಇಂತಹ ಆಸ್ತಿಕ ಶಿರೋಮಣಿಗಳಿಂದಲೇ ವರ್ಣಾಶ್ರಮಧರ್ಮಶೋಭಿತವಾದ ಭಾರತಭೂಮಿಯು ಪುನರುದ್ಧಾರಕ್ಕೆ ಅವಕಾಶವುಂಟಾಯಿತೆಂದೇ ಭಾವಿಸಬೇಕಾಗಿದೆ ಒಟ್ಟಿಗೆ ಬ್ಯಾಡಗಿಯ ಮಹಾಶಯರೇ ಧನ್ಯರಿರುವರು. ಈ ಮಹಾಶಯರಿಗೆ ಜಗನ್ನಿಯಾಮಕನು ಸಕಲಮನೋಬಯಕೆಗಳನ್ನು ಕೊಟ್ಟು ರಕ್ಷಿಸುತ್ತಿರಲೆಂದು ಕೋರುವ,

ಓರ್ವ ಗುರುಭಕ್ತ.

[೩ನೇ ಪುಟದಿಂದ ಮುಂದುವರಿದುದು]

೧ ಒಂದು ಮಾಯಾಚಿತ್ರ ದೀಪ (ಮ್ಯಾಜಿಕ ಲ್ಯಾಂಟರ್ನ)

೨ ಅದಕ್ಕೆ ಕೆಲವು ಚಿತ್ರಪಟಗಳು (ಸ್ಲೈಡ್)

೩ ಪ್ರಯೋಗಪ್ರದರ್ಶನ [illegible] ದ್ರವ್ಯಗಳು ಮತ್ತು ಅವಕ್ಕೆ ಬೇಕಾದ [illegible] ಮತ್ತು [illegible] ಪಾತ್ರೆಗಳು [illegible]

೪ ಚಲಚ್ಚಿತ್ರ (ಸಿನಿಮಾ) [illegible]

೫ ಆ ಯಂತ್ರಕ್ಕೆ ಬೇಕಾದ [illegible]

೬ ಒಂದು [illegible] ಮತ್ತು [illegible] ಸಂಗೀತದ ಪೆಟ್ಟಿಗೆಗಳು

ಪ್ರಚಾರಕರು [illegible]

[illegible]

ಹೀಗೆ ಜನರಲ್ಲಿ ಹೊಸ ತಿಳುವಳಿಕೆಯನ್ನು ಹರಡುವ ಕೆಲಸವು ಸಂಪೂರ್ಣವಾಗಿ ನಡೆಯಬೇಕಾದ್ದು [illegible] ವಿಶ್ವವಿದ್ಯಾನಿಲಯ [illegible] ಕನ್ನಡ [illegible] ನಡೆಯಬೇಕಾದ್ದು ಮತ್ತು ಯಂತ್ರಪ್ರಯೋಗ ಪ್ರದರ್ಶನಗಳ ಸಮೇತ ನಡೆಯಬೇಕಾದ್ದು ಅವಶ್ಯವಾದುದರಿಂದ ಈ ಏರ್ಪಾಟು ವಿಶೇಷ ದನಸ್ಸಹಾಯವನ್ನು ಅಪೇಕ್ಷಿಸತಕ್ಕದ್ದಾಗಿದೆ

ವೆಚ್ಚದ ವಿಚಾರ

ಶಿಕ್ಷಣದಲ್ಲಿ ಪ್ರಚಾರಕರಿಗೆ ತಿಂಗಳೊಂದಕ್ಕೆ ತಲಾ [illegible] ರೂಪಾಯಿಗಳನ್ನಾದರೂ ವೇತನವನ್ನು ಸಲ್ಲಿಸಬೇಕಾಗುವುದು ಹೀಗೆ ೮ ಮಂದಿಗೆ ಒಟ್ಟು ತಿಂಗಳೊಂದಕ್ಕೆ ೨೦೦ ರೂಪಾಯಿಗಳಂತೆ ೬ ತಿಂಗಳಿಗೆ ೧೨೦೦ ರೂಪಾಯಿಗಳು ಬೇಕಾಗುವುದು ಇದರ ಜೊತೆಗೆ ಎರಡು ಬಸ್ಸುಗಳ ಬೆಲೆ ಒಂದೊಂದಕ್ಕೆ ರೂ ೩೦೦೦ ದಂತೆ ರೂ ೬೦೦೦ ಆಗುವುದು ಇದರ ಜೊತೆಗೆ ಮಾಯಾದೀಪ, ಸಿನಿಮಾ, ಗ್ರಾಮೊಫೋನ್ ಮೊದಲಾದ ಯಂತ್ರಗಳು, ಅವುಗಳಿಗೆ ಬೇಕಾದ ಸಲಕರಣೆಗಳು, ರಸಾಯನ ದ್ರವ್ಯಗಳು— ಇವೆಲ್ಲವೂ ಸೇರಿ ಒಟ್ಟಿಗೆ ೧೨೦೦೦ ರೂಪಾಯಿಗಳಿಗೆ ಕಡಮೆ ಇಲ್ಲದೆ ಬೇಕಾಗುತ್ತದೆ ಇದು ಕಾರ್ಯಾರಂಭಕ್ಕೆ ಬೇಕಾದ ಮೊದಲು ಬಂಡವಾಳ

ಇದರ ಮೇಲೆ ತಿಂಗಳು ತಿಂಗಳಿಗೆ ಆಗಬೇಕಾಗಿರುವ ವೆಚ್ಚದ ವಿವರ—

೧ ಎಂಟು ಮಂದಿಗೆ ತಲಾ ರೂ ೨೦ ರಂತೆ ಒಟ್ಟು ರೂ. ೨೦೦

೨ [illegible] ಬೇಕಾದ ಪೆಟ್ರೋಲ್ ಮುಂತಾದವುಗಳಿಗೆ [illegible] ೧೫೦ ರಂತೆ ಎರಡಕ್ಕೆ [illegible]

[illegible]

[illegible]

ನೆರವಾಗಿ ಬರಲು ಅನೇಕ ಮಂದಿ ಕನ್ನಡಿಗ ವಿದ್ವಾಂಸರೂ, [illegible] ಗಳೂ ಸಿದ್ಧರಾಗಿರುವರೆಂದು ಪರಿಷತ್ತಿಗೆ ಈಗ ಭರವಸೆ [illegible] ಆದರೆ ಅದಕ್ಕೆ ಬೇಕಾದ ಇತರ ಸಹಾಯ ಸಂಪತ್ತು ಒದಗಿಸಿಕೊಡುವ ಭಾರವು ನಮ್ಮ ಸ್ಥಳೀಯಸಂಸ್ಥೆಗಳು, ಭಾಷಾಭಿಮಾನಿಗಳೂ ಜನಾಭಿಮಾನಿಗಳೂ ಆದ ಮಹನೀಯರನ್ನೂ ಮತ್ತು ಸರಕಾರಗಳನ್ನೂ ಹೊಂದಿರುತ್ತದೆ.

ಈ ಮೇಲಿನ ಕಾರ್ಯಕ್ರಮದ ಮುಖ್ಯಾಂಶಗಳನ್ನು ಮೈಸೂರು ಸರಕಾರದ ಅವಗಾಹನೆಯ ಬಗ್ಗೆ ಕಳುಹಿಸಿದ್ದಾಗಿದೆ ಅವನ್ನು ಕುರಿತು ಮೈಸೂರು ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಎಂ ಇಸ್ಮಾಯಿಲ್ ಕೆ ಟಿ, ಸಿ ಐ ಇ ಒ ಬಿ ಇ ಅವರು ತಮ್ಮ ಸಂಪೂರ್ಣವಾದ ಒಪ್ಪಿಗೆಯನ್ನೂ, ಸಹಾನುಭೂತಿಯನ್ನೂ ತಿಳಿಸಿ ಪಡಿಸುತ್ತಾರೆ ಅದರಂತೆಯೇ ಮೈಸೂರು ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರವರಾದ ಡಾ|| ಇ ಪಿ ಮೆಟ್ಕಾಫ್, ಡಿ ಎಸ್ಸಿ, ಎಫ್ ಇನ್‌ಸ್ಟ್ ಪಿ ಅವರೂ ತಮ್ಮ ಮೆಚ್ಚುಗೆಯನ್ನೂ ಸಹಾನುಭೂತಿಯನ್ನೂ ವ್ಯಕ್ತಪಡಿಸಿರುತ್ತಾರೆ

ಈ ಪತ್ರಿಕೆಯನ್ನು ಓದುವ ತಾವು ಈ ವಿಷಯದಲ್ಲಿ ಸಹಾನುಭೂತಿ ತೋರಿ, ತಮಗೆ ಸಾಧ್ಯವಿರುವಮಟ್ಟಿಗೂ ತಮ್ಮ ಪ್ರಭಾವವನ್ನು ತಮ್ಮ ಊರಿನ ಸಾರ್ವಜನಿಕ ಸಂಸ್ಥೆಗಳಲ್ಲಿಯೂ ನಮ್ಮ ಮಿತ್ರವರ್ಗದಲ್ಲಿಯೂ ಉಪಯೋಗಿಸಿ, ಈ ಮೇಲಿನ ಸಂಕಲ್ಪವನ್ನು ಈಡೇರಿಸಬೇಕೆಂದು ಪರಿಷತ್ತು ಪ್ರಾರ್ಥಿಸುತ್ತದೆ

ಈ ಕಾರಕ್ಕೆಂದು ಕಳುಹಿಸುವ ಎಲ್ಲ ಹಣವನ್ನೂ ಪ್ರತ್ಯೇಕವಾಗಿರಿಸಿ ಅದನ್ನು ಈ ಉದ್ದೇಶಕ್ಕಾಗಿಯೇ ವಿನಿಯೋಗಿಸಲಾಗುವುದು ಮತ್ತು ಹಾಗೆ ಬರುವ ಎಲ್ಲ ವಿಧದ ಸಹಾಯವನ್ನೂ ಆಗಿಂದಾಗ್ಗೆ ಪತ್ರಿಕೆಗಳ ಮೂಲಕ ಪ್ರಕಟಪಡಿಸಲಾಗುವುದು ಮುಖ್ಯವಾಗಿ ಈ ಪ್ರಯತ್ನವು ಎಂದೆಂದರೆ ಅಂದು ಹೇಗೆಂದರೆ ಹಾಗೆ ಮಾಡಲಾಗುವಂಥಾದ್ದಲ್ಲ ಇದು ಶ್ರಮಸಾಧ್ಯವಾದ ಮತ್ತು ಸ್ವಲ್ಪಕಾಲದ ಪೂರ್ವಸಿದ್ಧತೆಯನ್ನು ಅಪೇಕ್ಷಿಸತಕ್ಕ ಕೆಲಸ ಆದಕಾರಣ, ಪರಿಷತ್ತು ನಿರೀಕ್ಷಿಸಬಹುದಾದ ಸಹಾಯದ ವಿಷಯದಲ್ಲಿ ತಮ್ಮಿಂದ ಬೇಗನೆ ಅದನ್ನು ಬೇಗನೆ ಬರಬೇಕೆಂದು ಬೇಡುತ್ತೇನೆ

ಸಿ ಕೆ ವೆಂಕಟರಾಮಯ್ಯ
ಗೌರವಕಾರ್ಯದರ್ಶಿ
ಕರ್ನಾಟಕ ಸಾಹಿತ್ಯ ಪರಿಷತ್ತು
ಬೆಂಗಳೂರು ಸಿಟಿ

ಶ್ರೀ ಕ್ಷೇತ್ರ ರಾಮೇಶ್ವರಕ್ಕೆ ಯಾತ್ರಾರ್ಥಿಗಳಾಗಿ ಬರತಕ್ಕ ವೀರಶೈವರಿಗೆ

ಸೂಚನೆ.

ಸುಪ್ರಸಿದ್ಧವಾಗಿರುವ ಶ್ರೀರಾಮೇಶ್ವರಕ್ಷೇತ್ರಕ್ಕೆ ಬರುವ ವೀರಶೈವರಿಗೆ ಯಾವ ಪ್ರಕಾರದ ಸೌಕರ್ಯವೂ ಇಲ್ಲದಿರುವದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ನಾವು ವೀರಶೈವರ ವಸತಿಗಾಗಿ "**ಜಂಗಮವಾಡಿ**" ಎಂಬ ಸ್ಥಳವನ್ನು ಏರ್ಪಡಿಸಿರುವೆವು ವೀರಶೈವರಿಗೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಕೊಡುವೆವಲ್ಲದೆ ದರ್ಶನಾದಿಗಳಿಗೆ ಬೇಕಾಗುವ ವ್ಯವಸ್ಥೆಯನ್ನು ಕಲ್ಪಿಸಿಕೊಡುವೆವು ಮಾಹಿತಿಗಾಗಿ ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಕೋರಿಕೆ

ಗುರುಸಿದ್ಧಸ್ವಾಮಿ,
ಜಂಗಮವಾಡಿ ಮಠ, ರಾಮೇಶ್ವರ,
(10) ಪೋ|| ರಾಮೇಶ್ವರ (S.I.Ry)

ಸೌಕರ್ಯದ ಯಾತ್ರೆಗಳು! ಚಾರ್ಜು ಬಹಳೇ ಸುಲಭ!! ಪ್ರಸಿದ್ಧ ಪುಣ್ಯಕ್ಷೇತ್ರಗಳು!!!

ಉತ್ತರ ಮತ್ತು ದಕ್ಷಿಣ ಹಿಂದೂಸ್ಥಾನ ಮಹಾಯಾತ್ರೆ.

☞ ಶ್ರೀಕಾಶೀ ರಾಮೇಶ್ವರ ಮಹಾಯಾತ್ರೆಯು ☜

ತಾ|| ೨೯—೧೨—೩೫ ರಿಂದ ತಾ|| ೧೫—೨—೩೬ ರ ವರೆಗೆ.

ಪ್ರಸಿದ್ಧ ೫೨ ಕ್ಷೇತ್ರಗಳು.

ಟ್ರೇನಿನಲ್ಲಿ ಒಬ್ಬರಿಗೆ ಇಬ್ಬರ ಸ್ಥಳ ಸಿಗುವದು. ಸೆಕೆಂಡ್ ಕ್ಲಾಸ್ ೩೧೦ ರೂ. ಥರ್ಡ್ ಕ್ಲಾಸ್ ೧೪೦.

ಹೆಚ್ಚಿನ ಮಾಹಿತಿಗಾಗಿ ಪತ್ರಬರೆಯಬೇಕು

೨೫ ಜನ ಯಾತ್ರಿಕರನ್ನು ಕೂಡಿಸಿಕೊಟ್ಟವರನ್ನ ಫ್ರೀಟಿಕೀಟ್ ಯಾತ್ರೆಗೆ ಕರೆದುಕೊಂಡೂ ಹೋಗುವೆವು ಏಜಂಟರಿಗೆ ಯೋಗ್ಯ ಕಮಿಷನ್ ಸಿಗುವದು ಪತ್ರ ಬರೆಯಬೇಕು ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ಆಫೀಸ್—
ಜಮಖಂಡಿ ರಸ್ತೆ, ಮೋಟಾರ್ ಸ್ಟ್ಯಾಂಡ್ ಹತ್ತರ,
ಬಿಜಾಪುರ.

ಶಿವಾನಂದ ಯಾತ್ರಾಕಂಪನಿ,
ಬಿಜಾಪುರ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರಣಿಮಂಡಲದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಅವರೇ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೋಗಕ್ಷೇಮ ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುತ್ತಿರುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ಪರಿಹರಿಸುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸತಾಗಿ ಮುದ್ರಿಸಿಕೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಉತ್ತಮ ಕೆಂಪು ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

" ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಈ ಕೆಳಕಂಡ ಬೆಲೆಯಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳಿಭಸ್ಮ	೧	೦—೮—೦
ಕಾಂಚನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಒವಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿಖಾರತ್ನದಂತೆ ಶೋಭಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಶಕ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೮೮ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ [illegible]	೦—೪—೦
ಶ್ರೀ ರೇಣು ಕಾದಿ ಪಂಚಾಚಾರ್ಯರು [illegible] ಮಹರ್ಷಿಗಳಿಗೆ [illegible]	೦—೧—೬
ಸಿದ್ಧ [illegible]	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ [illegible]	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ [illegible]	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶರ ಶ್ರೀ ಜಗದ್ಗುರು [illegible]	೦—೦—೯
ಶ್ರೀಮದುಜ್ಜಯಿನೀ [illegible]	೦—೦—೯
ಶ್ರೀ ಜಗದ್ಗುರು [illegible]	೦—೦—೯
ಶ್ರೀ ರೇಣುಕಾಚಾರ್ಯರು [illegible]	೦—೦—೯
ಶ್ರೀ ರೇಣುಕಾಚಾರ್ಯರು [illegible]	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ [illegible] ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ [illegible]	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ [illegible]	೦—೦—೯
ಶ್ರೀ ಜಗದ್ಗುರು ಉಜ್ಜಯಿನಿ [illegible] ಫೋಟೋ	೦—೦—೯
ಶ್ರೀ ಜಗದ್ಗುರು ಉಜ್ಜಯಿನಿ [illegible] ಫೋಟೋ	೦—೦—೯
ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶಿವಯೋಗಿ [illegible] ಫೋಟೋ	೦—೦—೯
ಕೊಲ್ಲಾಪುರದಲ್ಲಿ [illegible] ಫೋಟೋ	೦—೦—೯

ಸೂಚನೆ — [illegible]

[illegible]

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ... ಕಂಡುಹಿಡಿಯಲ್ಪಟ್ಟ ಸಾವಿರಾರು ಮಂದಿಗಳು, ಇದ... ಉಪಯೋಗಿಸಿ ಸಾವಿರಾರುಗಳಿಗೆ, ಯೋಗ್ಯತಾಪ...

(Registered Trade Mark)

ಗಳನ್ನು ಕೊಟ್ಟಿ... ಈ ಪ್ರಸಿದ್ಧವಾದ... ನಶ್ಯದ ಪುಡಿಯಿ... ಸ್ಪಷ್ಟವಾಗುವ ವ್ಯಾ... ಧಿಗಳು ಯಾವವೆಂ... ತೆ — ಶೀತ, ಒ... ತಲೆನೋವು, ತಲೆ... ಶ್ಲೆಯ ರೋಗಗಳ... ಕಣ್ಣುಗಳಲ್ಲಿ ಉಂಟಾ... ಗತಕ್ಕ ಸರ್ವವ್ಯಾಧಿಗಳು, ಜಡದೋಷ ಮುಂತಾ... ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮ... ಲ್ಪಟ್ಟ ಈ ವ್ಯಾಧಿಗಳನ್ನು ಸ್ಪಷ್ಟಪಡಿಸಿ ಜ್ಞಾಪಕಶಕ್ತಿ... ಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬಟ್ಟ... ಸಾಧಾರಣ ನಶ್ಯದ ಜೊತೆಗೆ ಈ ಸುಗಂಧ ನಶ್ಯದಪು... ಯನ್ನು ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ... ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳ... ತಮ್ಮ ಗೃಹದಲ್ಲಿ ಕುಟುಂಬಸಮೇತವಾಗಿ ಉಪಯೋ... ಸುತ್ತಾರೆ ಮಾದರಿಸೀಸೆ ಪ್ಯಾಕೆಟ್ಟು ಕಳುಹಿಸಲಾದೀತು...

ಡಬ್ಬಿ ಒಂದಕ್ಕೆ ಕ್ರಯ ರೂ ೦-೪-೦. ವಿ. ಪಿ. ೦ ೪...

ಡಜನ್ ಒಂದಕ್ಕೆ ಕ್ರಯ ರೂ ೩-೮-೦ ವಿ. ಪಿ. ೮ ಆ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೧೩] ಪೋ. ಬಾ. ೫೧೦, ಮದರಾಸ್...

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೩ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೨ ಆಣೆ
ಗೋತ್ರಸೂತ್ರಸಟ (ಹೊಸ ಆವೃತ್ತಿ)	೧ ಆಣೆ
ಷಟ್ಸ್ಥಲಶಾಸ್ತ್ರಮಂಜರಿ (ಹೊಸ ಆವೃತ್ತಿ ಸಂಸ್ಕೃತ)	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (ಹೊಸ ಆವೃತ್ತಿ)	೨ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಲಿ (ಹೊಸ ಆವೃತ್ತಿ)	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (ಹೊಸ ಆವೃತ್ತಿ)	೨ ಆಣೆ
ಬಸವಾದಿ ಶಿವಭಕ್ತ ದರ್ಪಣ (ಹೊಸ ಆವೃತ್ತಿ)	೩ ಆಣೆ
ಶ್ರೀ ರೇಣುಕಾಚಾರ್ಯಶತಕ (ಹೊಸ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಶಿವಭಕ್ತವಿಲಾಸ	೩ ಆಣೆ
ಶ್ರೀಗುರುಭಕ್ತಪದಗಳು ...	೩ ಆಣೆ
ಗುರುಸ್ವರೂಪಪ್ರಕಾಶ	೩ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೩ ಆಣೆ
ವೀರಶೈವಮತಮಾನಸಾಂಕಾ ..	೪ ಆಣೆ
ವೀರಶೈವಾಚಾರಮು (ಹೊಸ ಆವೃತ್ತಿ) ..	೪ ಆಣೆ
ವಿವಾಹವಿಧಿ (ಹೊಸ ಆವೃತ್ತಿ) ...	೬ ಆಣೆ
ಷಟ್ಸ್ಥಲಶಾಸ್ತ್ರದ ವಿಮರ್ಶ ತತ್ತ್ವ ಸ್ಪಷ್ಟೀಕರಣ (ಹೊಸ ಆವೃತ್ತಿ) ..	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಸಟೀಕ್ಷ ರ ಕವಿಕೃತ)	೮ ಆಣೆ
... ಧ್ವಾಂತ ದಿವಾಕರ (ಹೊಸ ಆವೃತ್ತಿ)	೮ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಯವಾರಿ ಭಾಷಣಮುಲು (ತೆಲುಗು)	೮ ಆ...
पण्डित श्रीकाशीनाथशास्त्री यांचें भाषण (मराठी)	८ आ...
Speeches by Pandit Shri Kashinatha Shastri (*English*)	12 A...
... ತತ್ವ (ಹೊಸ ಆವೃತ್ತಿ) ...	೧೨ ಆ...
... ವಿಧಿ (ವೈದಿಕ ...)	೧೨ ಆ...
ಶ್ರೀ ಜಗದ್ಗುರು ಪಂಚಾಚಾರ್ಯ ಸಹಸ್ರನಾಮ...	.. ೧೨ ಆ...
... ದೀಕ್ಷಾವಿಧಿ (ಹೊಸ ಆವೃತ್ತಿ)	.... ೧೨ ಆ...
... (ತ್ರಿಲೋಚನಶಿವಾಚಾರ್ಯಕೃತ)	.... ೧೨ ಆ...
... ಸಿದ್ಧಾಂತದರ್ಪಣ	.. ೧೨ ಆ...
... (ಹೊಸ ಆವೃತ್ತಿ) ...	.... ೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	.... ೧ ರೂ
... ಉಪನಿಷತ್ (ವೀರಶೈವಭಾಷ್ಯ) ...	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	.... ೧ ರೂ
ವೀರಶೈವ ಸಿದ್ಧಾಂತಸುಧಾಕರ	.... ೨ ರೂ
ಶಿವಾದ್ವೈತ ... (... ೧೩೦ ಪುಟ)	.... ೮ ರೂ
लिङ्गधारणचन्द्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेन्दुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು [illegible] ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible]

REGISTERED No M 2266 ॥ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪಥಪರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ವಾಲಿತ್ಯುವೀಲೋಕಸಮ್ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೮ನೇ ನವಂಬರ್ ೧೯೩೬ [ಸಂಚಿಕೆ ೨೮

ಶ್ರೀ ವಾಣೀವಿಲಾಸ ಸೇತುವೆ.

ಸರ್ ಫ್ರಾಂಕ್ ನಾಯ್ಸ್‌ರವರ ಭಾಷಣ.

ಈ ಸೇತುವೆಯನ್ನು ಪ್ರಾರಂಭಮಾಡಬೇಕೆಂದು ಶ್ರೀಮನ್ಮಹಾರಾಜರವರ ಸರ್ಕಾರದವರು ನನ್ನನ್ನು ಕೇಳಿ ನನಗೆ ಅವರು ಒಂದು ದೊಡ್ಡ ಮರ್ಯಾದೆಯನ್ನು ಮಾಡಿರುತ್ತಾರೆ. ಸರ್ ಮಿರ್ಜಾ ಇಸ್ಮಾಯಿಲ್‌ರವರಿಂದಲೇ ನನಗೆ ಆಹ್ವಾನಬಂದಿರುವುದು ಮತ್ತೂ ನನಗೆ ಸಂತೋಷವನ್ನುಂಟುಮಾಡಿರುತ್ತದೆ. ನಾನು ಮೊದಲಿನಿಂದಲೂ ಮೈಸೂರು ಸಂಸ್ಥಾನದ ಚರಿತ್ರೆ ಅಭ್ಯಾಸವನ್ನು ಮಾಡುವುದರಲ್ಲಿ ನನಗೆ ಬಹು ಶ್ರದ್ಧೆ. ಮೈಸೂರು ಸಂಸ್ಥಾನದ ಪರಿಚಯವು ನನಗೆ ಮೊದಲು ೩೩ ವರ್ಷಗಳ ಕೆಳಗೆ ಆಯಿತು. ನನ್ನ ಹಳೇ ಸ್ನೇಹಿತರುಗಳಾದ ಸರ್ ಮುರ್ರೆ ಹ್ಯಾಮಿಕ್, ಸರ್ ಶ್ರೀ ಹಯವದನರಾವ್ ಇವರು ಬರೆದಿರುವ ಮೈಸೂರು ಸಂಸ್ಥಾನದ ಚರಿತ್ರೆಯ ಪುಸ್ತಕಗಳು ನನ್ನಲ್ಲಿರುವುದೇ ಮೈಸೂರಿನ ಬಗ್ಗೆ ನನ್ನಲ್ಲಿರುವ ಪ್ರೇಮಕ್ಕೆ ರುಜುವಾತಾಗಿದೆ. ಅಲ್ಲದೆ, ಆ ಪುಸ್ತಕಗಳನ್ನು ನಾನು ಓದಿಯೂ ಇರುತ್ತೇನೆ. ಮೈಸೂರಿಗೂ ನನಗೂ 'ಸ್ವಲ್ಪ' ಸಂಬಂಧವೇನೂ ಇಲ್ಲ. ಮೈಸೂರು ಪ್ರಾಂತ್ಯದ ಬಳಿಯಲ್ಲಿ ಇರುವ ಬಳ್ಳಾರಿ ಜಿಲ್ಲೆಯಲ್ಲಿ ನಾನಿದ್ದುದರಿಂದಲೇ ಈ ನನ್ನ ಪ್ರೇಮಕ್ಕೆ ಕಾರಣ. ನಾನು ಬಳ್ಳಾರಿಯಲ್ಲಿದ್ದಾಗ್ಗೆ ಈ ಸೇತುವೆಯು ಯಾರ ಹೆಸರನ್ನಿಡುವೆಯೋ ಆ ಮಹಿಳಾರತ್ನವು ಬಳ್ಳಾರಿಗೆ ದಯಮಾಡಿಸುತ್ತಿದ್ದರು. ಆದ್ದರಿಂದ ಆಕೆಯ ಸಾಮರ್ಥ್ಯದಿಂದ ಮುಂದುವರಿದಿರುವ ಮೈಸೂರಿನ ಚರಿತ್ರೆಗೆ ಸಂಬಂಧಪಟ್ಟ ಯಾವ ಅಧಿಕಾರಿಯೂ ಈ ಮಾದರೀ ಸಂಸ್ಥಾನದ ಅಭಿವೃದ್ಧಿಯನ್ನು ಕಂಡು ಕೌತುಕವನ್ನು ವ್ಯಕ್ತಪಡಿಸದೇ ಇರಲಾರನು. ಆಗಿನ ದಿನಗಳು ಸ್ವಲ್ಪ ನನಗೆ ಚೆನ್ನಾಗಿ ಜ್ಞಾಪಕದಲ್ಲಿವೆ. ಬಳ್ಳಾರಿಯಲ್ಲಿದ್ದಾಗ್ಗೆ ಒಂದುಸಲ ಮದರಾಸಿಗೆ ಹೋಗಬೇಕಾಗಿ ಬಂದು ಮೈಸೂರು ಪ್ರಾಂತ್ಯದ ಗಡಿಯಲ್ಲಿರುವ ಹರಪನಹಳ್ಳಿಯಿಂದ ಹಿರಿಯೂರಿಗೆ ಎತ್ತಿನ ಬಂಡಿಯಲ್ಲಿ ರೈಲು ಹತ್ತಲು ಪ್ರಯಾಣಮಾಡಿದ್ದನ್ನು ನಾನು ಮರೆತಿಲ್ಲ. ಆ ಕಾಲದಲ್ಲೂ ಮೈಸೂರಿನ ರಸ್ತೆಗಳು ಸಾಧಾರಣವಾಗಿ ಒಳ್ಳೆಯ ಸ್ಥಿತಿಯಲ್ಲಿಯೇ ಇದ್ದುವು. ಅಲ್ಲಿಂದಾಚೆಗೆ ಅನೇಕ ವರ್ಷಗಳಾದಮೇಲೆ ಭಾರತ ಸರ್ಕಾರದ ಸಮಿತಿಯ ಜೊತೆಯಲ್ಲಿ ನಾನು ಮೈಸೂರಿಗೆ ಬಂದಿದ್ದೆನು. ಆಗಲೇ ನನಗೆ ಮೈಸೂರಿನ ಪ್ರಭಾವವು ತಿಳಿಯಬಂದದ್ದು. ಆ ಸಮಯದಲ್ಲಿ ನನಗೆ ತೋರಿಬಂದ ಅಂಶಗಳನ್ನು ಮುಂದೆ ತಿಳಿಸುವೆನು. ಸದ್ಯಕ್ಕೆ ಈ ಸೇತುವೆಯ ವಿಷಯವನ್ನು ನಿಮ್ಮ ಗಮನಕ್ಕೆ ತರಬೇಕಾಗಿದೆ.

ಸೇತುವೆಗಳ ಅವಶ್ಯಕತೆ

"ಈ ಸೇತುವೆಯ ಇಂಜನಿಯರಿಂಗ್ ದೃಷ್ಟಿಗೆ ಸಂಬಂಧಪಟ್ಟ ಅಂಶಗಳನ್ನು ನಾನು ಹೆಚ್ಚು ಹೇಳಬೇಕಾಗಿಲ್ಲ. ೧೧ ಸ್ಪಾನುಗಳನ್ನು ಹೊಂದಿ ೩|| ಲಕ್ಷ ರೂಪಾಯಿಗಳ ಖರ್ಚನ್ನು ಒಳಗೊಂಡಿರುವ ಈ ಸೇತುವೆ ಎಷ್ಟು ಕಾಲ ಕೆಲಸ ಹಿಡಿದಿದೆ, ಎಷ್ಟು ಗಮನವು ಕೊಡಲ್ಪಟ್ಟಿದೆ ಎಂಬುದು ನನಗೆ ತಿಳಿದಿದೆ. ಮೈಸೂರಿನ ಅನೇಕ ಸ್ವಾತಂತ್ರ್ಯಕರವಾದ ಇಂಜನಿಯರಿಂಗ್ ಕೆಲಸಗಳಲ್ಲಿ ಈ ಸೇತುವೆಯು ಒಂದು. ಮುಖ್ಯವಾಗಿ ಪ್ರಯೋಜನ ದೃಷ್ಟಿಯಿಂದ ನಾವು ಈ ಸೇತುವೆಯ ಪ್ರಾಮುಖ್ಯತೆಯನ್ನು ನೋಡಬೇಕು. ಈ ಸಂದರ್ಭದಲ್ಲಿ ನಾನು ಒಂದೆರಡು ಅಂಶಗಳನ್ನು ತಿಳಿಸಬೇಕಾಗಿದೆ. ನೂರು ವರ್ಷಗಳ ಹಿಂದೆ ಸೇತುವೆಗಳನ್ನು ಕಟ್ಟುವ ಕೆಲಸಕ್ಕೆ ಎಷ್ಟು ಗಮನ ಕೊಡಲ್ಪಡುತ್ತಿರಲಿಲ್ಲವೆನ್ನುವುದು ನೆನೆಯಲು ಯೋಗ್ಯ. ರೋಡ್ ಫಂಡಿನಿಂದ ಹಣ ಒದಗಿಸಬಹುದಾದ ವ್ಯವಸ್ಥೆಗಳೆಲ್ಲ ಬ್ರಿಟಿಷ್ ಭಾರತದಲ್ಲಿ ವಿವಿಧಪ್ರಕಾರ ಸೇತುವೆಗಳ ಆವಶ್ಯಕತೆ ಇದೆ. ಕೆಲವು ಸಾವಿರ ರೂಪಾಯಿಗಳ ಹಿಡಿಯುವ ಸೇತುವೆಗಳೂ ಬೇಕು. ಹೀಗಿರುವಲ್ಲಿ ಸಣ್ಣ ಸಣ್ಣ ದೋಣಿಗಳ ಮೂಲಕವೇ ನದಿಗಳನ್ನು ದಾಟಿ ನಾವು ಹೋಗುತ್ತಿರುವೆವೆಂಬುದನ್ನು ತಿಳಿಯುವುದು ಅಸಾಧ್ಯವಲ್ಲ. ಎಂತಹ ಸೇತುವೆಯನ್ನು ಕಟ್ಟಬೇಕಾದರೂ ವಿಶೇಷವಾಗಿ ಹಣಬೇಕಾಗುವುದು. ಮಿತ ಆದಾಯದಿಂದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯದಲ್ಲಿ ನಿರ್ವಾಹವಿಲ್ಲದ ಸೇತುವೆ ಕಟ್ಟುವ ವ್ಯವಸ್ಥೆಗಳಿಗೇ ಕೈಹಾಕಿರುವುದು ಸ್ವಾಭಾವಿಕ. ಸರ್ವಸಾಧಾರಣವಾಗಿ ಅನುಭವಕ್ಕೆ ತಂದುಕೊಂಡಿಲ್ಲದ ವಿಷಯ ಮೈಸೂರಿನವರು ಕೈಹಾಕುವರೆಂದು ನನಗೆ ತೋರಿಬರುತ್ತದೆ.

ಈ ಸಂದರ್ಭದಲ್ಲಿ ನಾನು ನಿಮಗೆ ಮತ್ತೊಂದಂಶವನ್ನು ಹೇಳಬೇಕಾಗಿದೆ. ರಸ್ತೆಗಳ ಅಭಿವೃದ್ಧಿಯ ವಿಷಯದಲ್ಲಿ ಇಂಡಿಯಾ ಸರಕಾರಕ್ಕೂ ದೇಶೀಯ ಸಂಸ್ಥಾನಗಳಿಗೂ ಈಚೆಗೆ ಕ್ರಮೇಣ ಸಹಕಾರ ಸಂಬಂಧ ಬೆಳೆಯುತ್ತಿದೆ. ಈ ಸೇತುವೆಯು ಅರ್ಧ ಖರ್ಚನ್ನು ಭಾರತ ಸರ್ಕಾರದ ರಸ್ತೆಗಳ ಫಂಡುಗಳಿಂದ ಕೊಡಲಾಗಿದೆ. ೬|| ಲಕ್ಷ ರೂಗಳನ್ನು ಖರ್ಚುಮಾಡಿ, ಶ್ರೀಮನ್ಮಹಾರಾಜರವರ ಸರ್ಕಾರದವರು ಕೆಲವು ವರ್ಷಗಳ ಕೆಳಗೆ ಸಮೀಪದಲ್ಲೇ ಕಾವೇರಿ ನದಿಗೆ ಕಟ್ಟಿದ ದೊಡ್ಡಸೇತುವೆಗೆ ಈ ಸೇತುವೆಯು ಅಂಗವಾಗಿರುತ್ತದೆ. ಕಾವೇರಿ ಸೇತುವೆಯು ಮೈಸೂರಿಗೂ ಶಿವನಸಮುದ್ರಕ್ಕೂ ನೇರವಾದ ಒಂದು ರಸ್ತೆಯ ನಿರ್ಮಾಣಕ್ಕೆ ಅವಕಾಶಕೊಟ್ಟಿರುತ್ತೆ. ಈ ಹೊಸ ಸೇತುವೆಯು ಆ ರಸ್ತೆಯನ್ನು ಮದರಾಸ್ ಪ್ರಾಂತ್ಯದ ಕೊಳ್ಳೆಗಾಲ ಮತ್ತು ಇತರ ಮುಖ್ಯ ಸ್ಥಳಗಳಿಗೆ ಸೇರಿಸಿದೆ.

ರೋಡ್ ನಿಧಿಯ ವ್ಯಯ ಕ್ರಮ.

ಮೇಲೆ ನಾನು ಸೂಚಿಸಿದ ಸಹಕಾರ ವಾತಾವರಣವು ೧೯೨೭-೨೮ರಲ್ಲಿ ಭಾರತ ರಸ್ತೆಗಳ ಅಭಿವೃದ್ಧಿ ಸಮಿತಿಯ ಶಿಫಾರಸಿನ ಪ್ರಯುಕ್ತ ಉದ್ಭವವಾದ ರೋಡ್ ಫಂಡಿನ ಫಲಿತಾಂಶ. ಭಾರತ ಸರ್ಕಾರದವರು ಸಂಕುಚಿತ ನ್ಯಾಯಸಂಬಂಧವಾದ ಕಾರಣಗಳನ್ನು ಮುಂದಿಟ್ಟು ದೇಶೀಯ ಸಂಸ್ಥಾನಗಳಿಗೆ ಪೆಟ್ರೋಲ್ ತೆರಿಗೆಗೆ ಸಂಬಂಧಿಸಿದ ರೋಡ್ ಫಂಡಿನಲ್ಲಿ ಭಾಗವಿಲ್ಲವೆಂದು ಅಭಿಪ್ರಾಯಪಟ್ಟಿದ್ದನ್ನು ರೋಡ್ ಸಮಿತಿಯವರು ಒಪ್ಪದೇ ಇದ್ದದ್ದನ್ನು ತಿಳಿಸಲು ನನಗೆ ಬಹು ಸಂತೋಷವಾಗುತ್ತದೆ. ಇತರ ದೊಡ್ಡ ಸಂಸ್ಥಾನಗಳಂತೆಯೇ ಮೈಸೂರಿಗೂ 'ರಸ್ತೆನಿಧಿ'ಯಲ್ಲಿ ಒಂದು ಭಾಗಕ್ಕೆ ಹಕ್ಕು ಇದೆ. ೧೯೩೦ನೇ ವರ್ಷದಿಂದ ಇದುವರೆಗೂ ಮೈಸೂರು ಸರ್ಕಾರದವರು ಈ ನಿಧಿಯಲ್ಲಿ ೧೩ ಲಕ್ಷ ರೂಪಾಯಿಗಳನ್ನು ಪಡೆದಿರುತ್ತಾರೆ. ಸದ್ಯ ವರ್ಷದಲ್ಲೇ ಬಂದ ವರ್ಷದ ಆದಾಯದ ಭಾಗವೂ ಅವರಿಗೆ ಒದಗುವುದು. ಇದು ಸಾಧಾರಣ ಭಾಗವಾಯಿತು. ರಿಸರ್ವ್ ನಿಧಿಯಿಂದ ನಾವು (ಇಂಡಿಯಾ ಸರ್ಕಾರದವರು) ಈ ಸೇತುವೆಯ ಸಲುವಾಗಿ ೧|| ಲಕ್ಷ ರೂಗಳನ್ನು ಕೊಡುವುದಲ್ಲದೆ ಈ ಸಂದರ್ಭದಲ್ಲಿ ಕಾವೇರಿ ನದಿಯ ಮೇಲೆ ಕಟ್ಟಿದ ಸೇತುವೆಯ ಖರ್ಚಿನಲ್ಲಿ ಅರ್ಧ ಭಾಗವಾದ ೧| ಲಕ್ಷವನ್ನು ಕೊಡಬೇಕೆಂದಿದ್ದೇವೆ. ಅಲ್ಲದೆ ರಸ್ತೆಗಳ ಕೆಲಸಕ್ಕೆ ಸಂಬಂಧಿಸಿ ಮೈಸೂರಿಗೂ ದಕ್ಷಿಣ ಭಾರತಕ್ಕೂ ಅನ್ವಯಿಸುವಂತೆ ಪರಿಶೋಧನೆ ನಡೆಸಲು ೫೦೦೦ ರೂಪಾಯಿಗಳನ್ನು ಮಂಜೂರು ಮಾಡುವೆವು.

ಕೃತಜ್ಞತಾಪೂರ್ವಕ ವಂದನೆಗಳು

'ಆದ್ದರಿಂದ ಕಳೆದ ವರ್ಷಗಳಲ್ಲಿ ನಾವು ನಿಜವಾಗಿಯೂ ಬಹುಮಟ್ಟಿಗೆ ಈ ವಿಷಯದಲ್ಲಿ ಮುಂದುವರಿದಿದ್ದೇವೆ. ಈ ಸಹಕಾರ ವಿಷಯವನ್ನೆತ್ತಿ ಮಾತನಾಡುವಾಗ್ಗೆ ಶ್ರೀಮನ್ಮಹಾರಾಜರವರಿಗೂ, ಅವರ ಸರ್ಕಾರಕ್ಕೂ, ಅದರಲ್ಲೂ ಸರ್ ಮಿರ್ಜಾರವರಿಗೂ, ದಿವಾನ್ ಬಹದ್ದೂರ್ ಶ್ರೀ ಎನ್ ಎನ್ ಅಯ್ಯಂಗಾರ್ಯರಿಗೂ ವಂದನೆಗಳನ್ನು ಸಮರ್ಪಿಸುವುದನ್ನು ನಾನು ಮರೆಯಲಾಗದು. ರೋಡ್ ಕಾಂಗ್ರೆಸ್ಸಿನ ದ್ವಿತೀಯ ಅಧಿವೇಶನವನ್ನು ಬೆಂಗಳೂರಿನಲ್ಲಿ ನಡೆಸಬೇಕೆಂದು ಅವರು ಆಹ್ವಾನ ಇತ್ತಿರುವುದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಉದಾರ ಹೃದಯವನ್ನು ಹೊಂದಿರುವ ಶ್ರೀಮನ್ಮಹಾರಾಜರವರ ವ್ಯಕ್ತಿಪ್ರಭಾವವನ್ನಂತೂ ನಾನು ಹೇಳಲು ಅಸಮರ್ಥ.'

ಉಚಿತಸಹಾಯಮಾಡಲಾಗುವುದು

ಮೈಸೂರಿನ ಕೆಲವು ನೂತನ ವ್ಯವಸ್ಥೆಗಳಿಗೆ ಇಂಡಿಯಾಸರಕಾರದವರು (ಪ್ರಾಜೆಕ್ಟ್ಸ್) ಸಹಾಯಮಾಡಬೇಕೆಂದು ಬಿನ್ನವತ್ತಳೆಯಲ್ಲಿ ಸೂಚಿಸಿದ್ದ ಬಿನ್ನಹವನ್ನೆತ್ತಿ ಮಾತನಾಡುತ್ತಾ, 'ಈ ವಿಷಯದಲ್ಲಿ ನಾನೇನೂ ವಿಶೇಷವಾಗಿ ಹೇಳಲಾರೆ. ನಿಮ್ಮ ಬಿನ್ನಹವೇನು? ಅದಕ್ಕೆ ಸಕಾರಣಗಳಿವೆಯೋ? ಎಂಬ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಸ್ತೆಗಳ ನಿಧಿಯಿಂದ ಹಣ ಒದಗಿಸಲಾಗುವುದೆಂದು ಮಾತ್ರ ಹೇಳಬಲ್ಲೆ. ಮೈಸೂರು ರೈಲ್ವೆಗೂ ಸೌತ್ ಇಂಡಿಯನ್ ರೈಲ್ವೆಗಳಿಗೂ ಸಂಬಂಧವಿರಬೇಕೆಂದು ನೀವು ಸೂಚಿಸಿರುವ ಬಿನ್ನಹದ ಬಗ್ಗೆಯೂ ನಾನು ಹೇಳುವುದು ಇಷ್ಟೇ. ಈ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನನ್ನ ಸಹೋದ್ಯೋಗಿಗಳಾದ ರೈಲ್ವೆ ಮೆಂಬರಿಗೆ ಅಗತ್ಯವಾಗಿ ತಿಳಿಸುತ್ತೇನೆ' ಇತ್ಯಾದಿಯಾಗಿ ಭಾಷಣಮಾಡಿದರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ಶ್ರೀ ಜಗದ್ಗುರು ಪಂಚಾಚಾರ್ಯ [illegible]

ಶ್ರೀ ಕೇದಾರನಾಥನ ಯಾತ್ರೆ

ಶ್ರೀ ಜಗದ್ಗುರು [illegible] ಶಿವಾಜ್ಞೆಯ [illegible] ಗಳಿಂದ ಜಪತಪಿಸಿ [illegible] ಈ ಮಠದ [illegible] ಪುಣ್ಯಕ್ಷೇತ್ರಗಳಲ್ಲಿ [illegible] ವಿಷಯವು [illegible] ಕ್ಷೇತ್ರದಲ್ಲಿ [illegible] ಕ್ಷೇತ್ರವನ್ನು [illegible] ದಿವಸ [illegible] 21 [illegible] ಪಟ್ಟಾಧಿಕಾರ [illegible] ಪಂಡಿತರು [illegible] ವನ್ನು ಮಾಡಿದರು [illegible] ಲ್ಪಟ್ಟಿತು [illegible] ಶ್ರೀ ಕೇದಾರ ಜಗದ್ಗುರುಗಳವರ [illegible] ರೇಣುಕಾಭಿಷೇಕ [illegible] ಭಕ್ತಾದಿಗಳು [illegible] ಡಿತು. ಕೇದಾರ ಕ್ಷೇತ್ರ [illegible] ದಿವಸ ದರ್ಮಶಾಲೆಯಲ್ಲಿ [illegible] ನೆರವೇರಿಸಿ ಶ್ರೀ ಜಗದಾಚಾರ್ಯರ [illegible] ಯನ್ನು ಸಮರ್ಪಿಸಿದರು. ಕೇದಾರಲಿಂಗಾರ್ಚಕರು 11 ನೆಯ ತಾರೀಖಿನ ದಿವಸ ಕ್ಷೇತ್ರವನ್ನು ಬಿಟ್ಟು ಪ್ರಯಾಣವಾಡುವ ಸಮಯದಲ್ಲಿ [illegible] ವಸ್ತ್ರಾಭರಣ ರುದ್ರಾಕ್ಷಿ ಫಲಾದಿಗಳನ್ನಿತ್ತು ಹಾರೈಸಿದರು. ಅದೇ ದಿವಸ ಅಯೋಧ್ಯೆಯಮಾರ್ಗವಾಗಿ ಹೊರಟು ತಾ|| 1೩ನೆಯ ದಿವಸ ಹರದ್ವಾರಕ್ಕೆ ತಲಪಿದರು •

ಬಲ್ಲಾರಿಯಿಂದ ಇಲ್ಲಿಗೆ ಸುಮಾರು 31—0—0 ರೂ ಗಳು ರೈಲ್ವೆ ಛಾರ್ಜಾಗುವುದು. ಹರದ್ವಾರದಲ್ಲಿ ಬ್ರಹ್ಮಕುಂಡ, ರಾಜಘಾಟ ಇತ್ಯಾದಿಗಳು ಪ್ರೇಕ್ಷಣೀಯಗಳಾಗಿವೆ. ಹರದ್ವಾರದಿಂದ ಋಷಿಕೇಶದವರೆಗೆ ಮಾತ್ರ ರೈಲಿರುವುದು. ರೈಲು ಛಾರ್ಜು 0—8—0 ಆಗುವುದು. ಋಷಿಕೇಶದಿಂದ ಕೇದಾರಕ್ಷೇತ್ರವು 12೦ ಮೈಲು ದೂರವಿರುವುದು. ಋಷಿಕೇಶದಿಂದ ಲಕ್ಷ್ಮಣಝೂಲಾಕ್ಕೆ ಮೋಟರಿರುವುದು. ಲಕ್ಷ್ಮಣ ಝೂಲಾದಲ್ಲಿ ರಾಮ ಲಕ್ಷ್ಮಣರ ದೇವಾಲಯಗಳೂ, ಶ್ರೀ ರುದ್ರಮೂರ್ತಿಯ ದೇವಾಲಯವೂ ಪ್ರೇಕ್ಷಣೀಯಗಳಾಗಿವೆ. ಶ್ರೀ ರುದ್ರಮೂರ್ತಿಯ ಜಟೆಯಿಂದ ಗಂಗಾನದಿಯ ನೀರು ಸದಾ ಅದ್ಭುತಾಕಾರವಾಗಿ ಉಕ್ಕುತ್ತಿರುವುದು. ಅಲ್ಲಿಂದ ಅದ್ಭುತವಾದ ಪರ್ವತಗಳ ಮಧ್ಯದಲ್ಲಿ ಕುದುರೆಯ ಮೂಲಕ ಪ್ರಯಾಣಮಾಡುತ್ತಾ 3 ದಿನಗಳಿಗೆ ದೇವಪ್ರಯಾಗಕ್ಕೆ ತಲಪಿದೆವು. ಒಂದು ಕುದುರೆಯ ಬಾಡಿಗೆ 12—0—0 ರೂ ಆಗುವುದು. ಇಲ್ಲಿ [illegible] ನದಿಗಳು ಕೂಡುವವು. ಇಲ್ಲಿಗೆ ಗಂಗೋತ್ರಿ ಕ್ಷೇತ್ರವು 1[illegible] ಮೈಲಿ ಇರುವುದು. [illegible] ದೇವಪ್ರಯಾಗಕ್ಕೆ 1[illegible] ಮೈಲು ದೂರದಲ್ಲಿರುವ ಶ್ರೀ ನಗರವು [illegible] ಅಲ್ಲಿಂದ 1[illegible] ಮೈಲು ದೂರದಲ್ಲಿ [illegible] ರುದ್ರಪ್ರಯಾಗಕ್ಕೆ ಪ್ರಯಾಣಮಾಡಿದೆವು [illegible] ಕೇದಾರಕ್ಕೂ ಬೇರೆ ಬೇರೆ [illegible] 1೦ ಮೈಲು ಆಗು [illegible] ಮೈಲಾಗುವುದು [illegible] ಪ್ರಯಾಗಗಳಲ್ಲಿ [illegible] ಮತ್ತು ಕ್ಷೀರಗಂಗಾ ನದಿ [illegible] ಯಾತ್ರಿಕರು ಇಲ್ಲಿ [illegible] ಮಾಡಿಕೊಂಡು ಕೇದಾರಕ್ಕೆ ಪ್ರಯಾಣ ಬೆಳೆಸುವರು

[illegible] ತಾ|| 1೩ನೆಯ ದಿವಸ ಶ್ರೀ [illegible] ತಲಪಿದರು [illegible] ಎದುರ್ಗೊಂಡು [illegible] ವಿಜಯಶೀಲರಾಗಿ [illegible] ಮಾಹಾತ್ಮೆಯು [illegible] ಮತ್ತು [illegible] ಸಿಂಹಾಸನವು [illegible] ಪ್ರಾಚೀನ [illegible] ಶ್ರೀ ವೀರಶೈವ [illegible] ಪ್ರಾಚೀನ [illegible] ಬ್ರಾಹ್ಮಣರಿಂ [illegible]

ಇಲ್ಲಿನ [illegible] ಈ [illegible] ದಿಗ [illegible] ವಿಜಯನಗರದ [illegible] ಪಟ್ಟಾಭಿ [illegible] ಮಹಾರಾಜರು [illegible] ಶ್ರೀ ಜಗದ್ಗುರು [illegible] ಪೂರ್ವಜರು [illegible] ಪಂಚಾಚಾರ್ಯರು [illegible] ಶ್ರೀ ಕೇದಾರನಾಥ ದೇವಾಲಯ, [illegible] ಗುಪ್ತಕಾಶಿ ವಿಶ್ವನಾಥ ಗೋಪೇಶ್ವರ, [illegible] ನ್ಯಾಯಾಧೀನವಲ್ಲಿರುವ [illegible] ದೇವಸ್ಥಾನಗಳಿಗೆ [illegible] ಯಾತ್ರಿಕರಿಂದ ಬರುವ ವರಮಾನವು [illegible] 13೦ ಹಳ್ಳಿ [illegible] ಮಠಕ್ಕೆ ಸೇರಿರುವವು. ಈ ಪ್ರಾಂತ್ಯದಲ್ಲಿ ಈ ಮಠವು ರಾಜಾಧಿರಾಜರಿಂದಲೂ, ಬ್ರಿಟಿಷ್ ಸರಕಾರದವರಿಂದಲೂ ಮಾನ್ಯತೆಯನ್ನು ಪಡೆದಿರುವುದು ಉಂಟು!

11 ಕ 3೦ನೆಯ ದಿವಸ ಶ್ರೀ ಜಗದ್ಗುರುಗಳವರೊಡನೆ ಶ್ರೀ ಕೇದಾರನಾಥಸ್ವಾಮಿಯವರ ದರ್ಶನಕ್ಕೆ ಹೊರಟು 12 ನೆಯ ತಾರೀಖಿನ ದಿವಸ ಗೌರೀಕುಂಡದಲ್ಲಿ ಸ್ನಾನವನ್ನು ಮಾಡಿಕೊಂಡು 11 ಘಂಟೆಯ ಸುಮಾರಿಗೆ ಕೇದಾರೇಶ್ವರನ ದರ್ಶನಮಾಡಿಕೊಂಡೆವು. ಶ್ರೀ ಕೇದಾರೇಶ್ವರನ ಪೂಜೆಯು 6 ತಿಂಗಳು ಮಾನವರಿಂದಲೂ, 6 ತಿಂಗಳು ದೇವತೆಗಳಿಂದಲೂ ನೆರವೇರುವುದು. ವೈಶಾಖ ಶು|| ೫ ದಿವಸ ದೇವಾಲಯದ ಬಾಗಿಲನ್ನು ತೆಗೆಯುವರು. ಆ ಸಮಯಕ್ಕೆ ಊಖಾಮಠದ ರಾವಲರವರು ಟೆಹರಿ ಮಹಾರಾಜರ ಮುಖ್ಯಾಧಿಕಾರಿಗಳು ಬರುವರು. ಆಗಲೇ ಅಖಂಡಜ್ಯೋತಿಯ ದರ್ಶನವಾಗುವುದು. ಈ ಮಹಾಜ್ಯೋತಿಯ ದರ್ಶನಕ್ಕಾಗಿ ಭರತಖಂಡದ ನಾನಾ ಭಾಗಗಳಿಂದ ಹತ್ತಾರು ಸಾವಿರ ಜನ ಯಾತ್ರಿಕರು ಬರುವರು. ಇಲ್ಲಿ ಅನೇಕ ಕುಂಡಗಳಿರುವವು. ಒಂದು ಕುಂಡದಲ್ಲಿ ಜಲಮಿಶ್ರವಾದ ಪಾದರಸವು ಸಿಕ್ಕುವುದು. ಮತ್ತೊಂದಾದ ಬುದ್ಬುದಕುಂಡದಲ್ಲಿ "ಜಯ ನಮಃ ಪಾರ್ವತೀಪತೇ ಹರಹರ ಮಹಾದೇವ" ಎಂದ ಕೂಡಲೆ ಒಳಗಿನಿಂದ ಗಂಗೆಯ ನೀರು ಉಕ್ಕುವುದು. ಇಲ್ಲಿಗೆ ಸ್ವಲ್ಪ ದೂರದಲ್ಲಿ ಚಂದ್ರಶಿಲೆಯೆಂಬ ಹೆಸರಿನ ಮಹತ್ತರವಾದ ಶಿಲೆಯಿರುವುದು. ಇದೇ ಮಾರ್ಗವಾಗಿ

ನೆಂದೂ, ಇನ್ನೊಬ್ಬನನ್ನು ಮೇಲಕ್ಕೆ ತೆಗೆದು ಆಸ್ಪತ್ರೆ[illegible] ಸಾಗಿಸಿ ಚಿಕಿತ್ಸೆ ನಡೆಸಿದ್ದರಿಂದ ಗುಣಹೊಂದುತ್ತಿ[illegible] ನೆಂದೂ ತಿಳಿದುಬಂದಿದೆ

ಕಳೆದ 1೬ ನೆಯ ತಾರೀಖಿನ ದಿವಸ ಪ್ರಾತಃ[illegible] ಬೆಂಗಳೂರು ಚಾಮರಾಜಪೇಟೆ 3 ನೆಯ ಬೀದಿ[illegible] ಕೊನೆಯಲ್ಲಿರುವ ಮಾವಿನತೋಪಿನ ಬಳಿ ಕಳ್ಳನೊಬ್ಬ[illegible] ೬ ವರ್ಷ ವಯಸ್ಸಿನ ಹೊನ್ನಮ್ಮನೆಂಬ ಬಾಲಿಕೆಗೆ ತಿಂ[illegible] ಯ ಆಸೆ ತೋರಿಸಿ ಮರೆಗೆ ಕರೆದುಕೊಂಡುಹೋ[illegible] ಬಾಯಿಗೆ ಬಟ್ಟೆ ತುರುಕಿ ಕಾಲಿನಲ್ಲಿದ್ದ ಬೆಳ್ಳಿ ಬಳೆ[illegible] ಗಳನ್ನು ಅಪಹರಿಸಿದನೆಂದು ಪೋಲೀಸರಿಗೆ ದೂರು ಹೋ[illegible] ದುದರಿಂದ ಪೋಲೀಸರು ಶೋಧಿಸುತ್ತಿದ್ದಾರೆ

ಈಗ್ಗೆ 2 ವಾರಗಳಿಂದ ಶ್ರೀಮನ್ಮಹಾರಾಜರ[illegible] ಸಮ್ಮುಖದಲ್ಲಿ ಪ್ರಸಿದ್ಧ ವಿದ್ವಾಂಸರ ಸಂಗೀತವಿ[illegible] ಯು ಪ್ರದರ್ಶಿಸಲ್ಪಡುತ್ತಿದೆ. ಅವುಗಳಲ್ಲಿ ವೇಣುಗಾ[illegible] ನಿಪುಣರಾದ ಶ್ರೀ|| ಎ ಕೆ ಸುಬ್ಬರಾಯರಿಗೂ, ಪಿಟೀ[illegible] ಲುವಾದನದಲ್ಲಿ ಕೀರ್ತಿಪಡೆದಿರುವ ಶ್ರೀ|| ಚೌಡ[illegible] ನವರಿಗೂ ಮಹಾಪ್ರಭುಗಳು ಬಿಲ್ಲೆಕತ್ತಿಗಳನ್ನೂ ಮ[illegible] ಶಾಲುಜೋಡಿಗಳನ್ನೂ ದಯಪಾಲಿಸಿದರೆಂದೂ, ಇನ್ನು ಹಲವು ಸಂಗೀತ ನಿಪುಣರ ಸಂಗೀತಪ್ರೌಢಿಮಾಪ್ರ[illegible] ರ್ಶನಕ್ಕೆ ಅವಕಾಶ ಕಲ್ಪಿಸಲ್ಪಟ್ಟಿದೆಯೆಂದೂ ತಿಳಿ[illegible] ಬಂದಿದೆ

ವಿಚಿತ್ರಮೋಸ !

ಕಳೆದ ೯ ನೆಯ ತಾರೀಖಿನ ದಿವಸ ರಾಜಧಾನಿಯ[illegible] ವಿಚಿತ್ರವಾದ ಮೋಸವು ನಡೆಯಿತು. ಲಕ್ಷಣವಾ[illegible] ಉಡುಪನ್ನು ಧರಿಸಿದ ಸುಮಾರು ೨೩ ವರ್ಷ ವಯಸ್ಸಿ[illegible] ಯುವಕನೊಬ್ಬನು ದರ್ಬಾರ್‌ಸರ್ಜನ್ ಡಾಕ್ಟರ್ ರಾಬರ್ಟ್‌ಸನ್‌ರವರ ಮನೆಗೆ ಹೋಗಿ, ತಾನು ಜಿಲ್ಲಾ[illegible] ಕಾರಿಗಳಾದ ಶ್ರೀ|| ಬಿ ಟಿ ಕೇಶವಯ್ಯಂಗಾರ್ಯ[illegible] ಸಹೋದರನೆಂದೂ, ತನ್ನ ತಂಗಿಗೆ ಬಹಳ ಅಲಸ್ಯವಾ[illegible] ಗಿರುವುದರಿಂದ ಡಾಕ್ಟರನ್ನು ಶೀಘ್ರವಾಗಿ ಕರೆದುಕೊ[illegible] ಡುಹೋಗಲು ಬಂದೆನೆಂದೂ ಹೇಳಿದನು. ಇದನ್ನು ಕೇಳಿದ ಡಾಕ್ಟರರ ಪತ್ನಿಯವರು, ಅವರು ಮನೆಯಲ್ಲಿ[illegible] ನೆಂದೂ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿರುವುದಾ[illegible] ಯೂ ತಿಳಿಸಿದರು. ಇದಕ್ಕೆ ಯುವಕನು ಡಾಕ್ಟರ[illegible] ಸಂಗಡ ಫೋನಿನಲ್ಲಿ ಮಾತನಾಡಲು ಅವಕಾಶ ಕೊ[illegible] ಬೇಕೆಂದು ಕೇಳಿಕೊಂಡನು. ಅದಕ್ಕೆ ಡಾಕ್ಟರರ ಪತ್ನಿ[illegible] ಯವರು ಸಮ್ಮತಿಸಿ ಅವನನ್ನು ಫೋನಿನ ಬಳಿ ಬಿಟ್ಟು ತಮ್ಮ ಕೆಲಸದಮೇಲೆ ಮನೆಯೊಳಕ್ಕೆ ಹೊರಟು ಹೋ[illegible] ದರು. ಯುವಕನು ಫೋನಿನಲ್ಲಿ ಡಾಕ್ಟರರ ಸಂಗ[illegible] ಮಾತನಾಡುವ ಬದಲು ಮೈಸೂರಿನ ಪ್ರಸಿದ್ಧ ಪತ್ತೇ[illegible] ದಾರ್ ಸಿ ಕೃಷ್ಣಯ್ಯಶೆಟ್ಟರ ಅಂಗಡಿಯವರಲ್ಲಿ ಡಾಕ್ಟರ್ ಹೇಳಿದಂತೆ ಕೂಡಲೆ ೬ ತೊಲ ಸ್ವಚ್ಛವಾದ ಭಂಗಾ[illegible] ವನ್ನು ಕಳುಹಿಸಿಕೊಡಬೇಕೆಂದು ಹೇಳಿದನಂತೆ! ಅ[illegible] ನ್ನು ನಂಬಿ, ಶೆಟ್ಟರು ತಮ್ಮ ಅಂಗಡಿಯಲ್ಲಿ ಕೆಲಸ[illegible] ರುವ ಎಚ್ ಪಿ ಶಿವಲಿಂಗಪ್ಪ ಎಂಬುವರ ಸಂಗ[illegible] ೬ ತೊಲ ಭಂಗಾರವನ್ನು ಕಳುಹಿಸಿಕೊಟ್ಟರು. ಅತನು ಡಾ|| ರಾಬರ್ಟ್‌ಸನ್‌ರ ಗೃಹದಬಳಿ ಬಂದಾಗ ಬಾಗಿಲ[illegible] ಯಲ್ಲಿ ಕಾದಿದ್ದ ಆ ತರುಣನು, ಭಂಗಾರವನ್ನು ತೆಗೆದು ಕೊಂಡು ಡೆಲಿವರಿ ಬುಕ್ಕಿಗೆ ರುಜುಹಾಕಿ ಕಳುಹಿಸಿ[illegible] ನಂತೆ! ೬7 ದಿನಗಳು ಕಳೆದ ನಂತರ ಶೆಟ್ಟರು ಡಾ|| ರಾಬರ್ಟ್‌ಸನ್‌ರವರಿಗೆ 'ಬಿಲ್' ಕಳುಹಿಸಿದರು. ಆಗ ಡಾಕ್ಟರರು ಆಶ್ಚರ್ಯಪಟ್ಟು ತಮಗೆ ಸಮಾಚಾರವೇ ತಿಳಿಯದೆಂದೂ, ತಾವು ಭಂಗಾರಕ್ಕೆ ಹೇಳಿಕಳುಹಿಸಲಿಲ್ಲ[illegible] ವೆಂದೂ ಹೇಳಲು ಶೆಟ್ಟರಿಗೆ ಅನುಮಾನಬಂದು ಡಾಕ್ಟರರನ್ನು ಭೇಟಿಮಾಡಿ ವಿಚಾರಿಸುವಲ್ಲಿ ಮೇಲ್ಕಂಡ ಅಂಶಗಳು ಡಾಕ್ಟರರವರ ಪತ್ನಿಯಿಂದ ವಿಶದವಾದುವು. ಮೋಸಗಾರನು ಜಿಲ್ಲಾಧಿಕಾರಿಗಳ ತಮ್ಮನೆಂದು ಹೇಳಿ ಕೊಂಡದ್ದರಿಂದ ಶೆಟ್ಟರು ಜಿಲ್ಲಾಧಿಕಾರಿಗಳನ್ನು ಕಂಡು ವಿಷಯವನ್ನು ತಿಳಿಸಿದರು. ಅದರಮೇಲೆ ಜಿಲ್ಲಾಧಿಕಾರಿಗಳಿಗೆ ಯಾರೂ ತಮ್ಮಂದಿರಿಲ್ಲವೆಂದೂ ಅವರ ಮನೆಯಲ್ಲಿ ಯಾರೂ ರೋಗಗ್ರಸ್ತರಾಗಿಯೂ ಇಲ್ಲವೆಂದೂ ತಿಳಿದುಬಂದಿತು. ಈ ವಿಷಯವು ಈಗ ಜಿಲ್ಲಾ ಪೋಲೀಸು ಅಧಿಕಾರಿಗಳ ಗಮನಕ್ಕೆ ತರಲ್ಪಟ್ಟು ಪತ್ತೆ ತರದೂದು ನಡೆಯುತ್ತಿದೆ. ಡೆಲಿವರಿ ಪುಸ್ತಕದಲ್ಲಿ ಮಾಡಿರುವ ರುಜುವಿನಿಂದ ಯಾವ ಸಹಾಯವೂ ಆಗುವಂತಿಲ್ಲವೆಂದು ತಿಳಿದುಬಂದಿದೆ.

ವರ್ತಮಾನಸಂಗ್ರಹ.

ಕಳೆದ 13 ನೆಯ ತಾರೀಕು ಬುಧವಾರದ ದಿವಸ ಶ್ರೀರಂಭಾಪುರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವು ಹಾವೇರಿ ಪಟ್ಟಣದಲ್ಲಿ ಅತ್ಯದ್ಭುತವಾಗಿ ನಡೆಯಿತೆಂದು ಕೇಳುತ್ತೇವೆ ಈ ಸಂಬಂಧವಾದ ಲೇಖವು ಕಾಲಾತೀತವಾಗಿ ಬಂದುದರಿಂದ ಮುಂದಿನ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುತ್ತದೆ

ಹೊಳಲುಗುಂದಿ.

ಬಳ್ಳಾರಿ ಡಿ|| ಬೋರ್ಡಿಗೆ ಈಗ್ಗೆ 3 ವರ್ಷಗಳಿಂದ ನಾಮಕರಾಗಿದ್ದ ಮ|| ರಾ|| ಗೌಡರ ಬಸವನಗೌಡರು ಈ ಸಾರಿಯೂ ಮೆಂಬರಾಗಿ ಆರಿಸಿ ಒಂದುಪಕ್ಷಾಗಿ ನಾಕ್ಕಂಡ ಪ್ರಾಪ್ತವಾದವರು ಅವರನ್ನು ಅಭೂತಪೂರ್ವವಾಗಿ ಗೌರವಿಸಿದರೆಂದು ಒಬ್ಬ ವಾತ್ಮೀದಾರರು ತಿಳಿಸುತ್ತಾರೆ

ದಿಲ್ಲಿಯಲ್ಲಿ ಭೂಕಂಪ!

ಕಳೆದ ಮಂಗಳವಾರ ಮಧ್ಯಾಹ್ನ 3 10 ಘಂಟೆಯ ಸಮಯದಲ್ಲಿ ಹೊಸದೆಹಲಿಯಲ್ಲಿ ಭೂಕಂಪವಾಗಿ ಭೂಮಿಯು ಗುಡುಗಿದ ಶಬ್ದವು ಕೇಳಬಂದಿತು ಆದರೆ ಯಾರಿಗೂ ಅಪಾಯವೇನೂ ಉಂಟಾಗಿಲ್ಲವೆಂದು ತಿಳಿಯಬರುತ್ತದೆ

ಬಿರುಗಾಳಿಯಿಂದ ಭಯಂಕರವಾದ ಅನಾಹುತ!

ಅಮೇರಿಕದ ಫ್ಲಾರಿಡಾ ಸಂಸ್ಥಾನದಲ್ಲಿ ಕಳೆದವಾರ ಬಿರುಗಾಳಿ ಎದ್ದು ಕಟ್ಟಡಗಳು ಉರುಳಿ ನಾಲ್ಕು ಜನರು ಮೃತಪಟ್ಟರು ನೂರಾರು ಜನರಿಗೆ ಗಾಯಗಳಾಗಿವೆ ಸುಮಾರು 2 ಲಕ್ಷ ಪೌಂಡುಗಳಷ್ಟು ನಷ್ಟ ಸಂಭವಿಸಿರುವುದಾಗಿ ತಿಳಿದುಬಂದಿದೆ

ಸಿಕ್ ಸಮಿತಿಯವರಿಗೆ ಆಜ್ಞೆ!

ಲಾಹೋರು ಗಲಭೆಗೆ ಕಾರಣವಾದ ಷಾಹಿದ್‌ಗಂಜ್ ಮಸೀದಿಯ ನಿವೇಶನವನ್ನು ಸದ್ಯಃ ತಾವು ಉಪಯೋಗಿಸದಂತೆ, ತಡೆಯಾಜ್ಞೆಯನ್ನು ಕೊಡಬೇಕೆಂದು ಹಲವು ಮುಸ್ಲಿಂ ಮುಖಂಡರು ಬೇಡಿಕೊಂಡಿದ್ದರ ಮೇಲೆ ಜಿಲ್ಲಾ ನ್ಯಾಯಾಧೀಶರು ಕಟ್ಟಕಡೆಯ ತೀರ್ಪಿಯಾಗುವವರೆಗೂ ಸದರೀ ನಿವೇಶನವನ್ನು ಸಿಖ್‌ಗರು ದ್ವಾರ ಸಮಿತಿಯವರು ಉಪಯೋಗಿಸಿಕೊಳ್ಳಕೂಡದೆಂದು ಆಜ್ಞೆ ಮಾಡಿದ್ದಾರೆ

ತಂದೆಯ ಮರಣಕ್ಕಾಗಿ ಗವರ್ನರರ ಕೊಲೆ!

ಚೀಣದ ಟೀಟ್ಸಿನ್ ಪ್ರಾಂತದ ಗೌರ್ನರ್ ಆಗಿದ್ದ ಸನ್‌ಚುಯಾನ್‌ಫ್ಯಾಂಗ್ ಎಂಬವರನ್ನು ಬೌದ್ಧ ಆರಾಧನೆಯ ಕಾಲದಲ್ಲಿ ಹೆಂಗಸೊಬ್ಬಳು ಗುಂಡಿನಿಂದ ಹೊಡೆದು ಕೊಂದಳು ಈಕೆಯು ಸಂಚುಯಾನ್‌ಫ್ಯಾಂಗರಿಂದ ಕೊಲೆಗೆ ಗುರಿಪಡಿಸಲ್ಪಟ್ಟ ಒಬ್ಬ ಮುಖ್ಯಾಧಿಕಾರಿಯ ಮಗಳೆಂದೂ ತಂದೆಯ ಮರಣದ ಸೇಡು ತೀರಿಸಿಕೊಳ್ಳಲು ಈ ರೀತಿ ಮಾಡಿದಳೆಂದೂ ತಿಳಿದುಬರುತ್ತದೆ ಈಕೆಯು ತೊಂದರೆಯಿಲ್ಲದೆ ಪೋಲೀಸರ ವಶವಾದಳು

ಜಪಾನಿಗೂ ಚೀನಕ್ಕೂ ಮನಸ್ತಾಪ!

ಕಳೆದ 8 ನೆಯ ತಾರೀಖಿನ ಸಾಯಂಕಾಲ ಜಪಾನ್ ನೌಕಾಸೈನಿಕನೊಬ್ಬನನ್ನು ಗುಂಡುಹೊಡೆದು ಕೊಂದಕಾರಣ ಚೀನಾ ಜಪಾನ್‌ಗಳಿಗೆ ವೈಮನಸ್ಯ ಹೆಚ್ಚಾಗಿದೆ. ಇಂಟರ್ ನ್ಯಾಷನಲ್ ಸೆಟಲ್‌ಮೆಂಟಿನ ಜಪಾನ್ ಭಾಗದ ರಸ್ತೆಗಳಲ್ಲಿ ಹೋಗುವವರನ್ನೆಲ್ಲ ನೌಕಾ ಸೈನಿಕರು ಹಿಡಿದು ಶೋಧಿಸುತ್ತಿದ್ದಾರೆ ಈ ಸಂಬಂಧವಾಗಿ ಜಪಾನಿನ 'ಆಟಕಾ' ಎಂಬ ಯುದ್ಧದ ಹಡಗು ಷಾಂಘಾಯಿಗೆ ಹೊರಡಲು ಆಜ್ಞೆಯಾಗಿದೆ 'ಜನರಲ್ ಸ್ಟಾಫ್' ಸೈನ್ಯಪಡೆಯ, ಯಸೂವಾ ಎಂಬವರು ಷಾಂಘಾಯ್ ಪೌರಸಭಾಧ್ಯಕ್ಷರನ್ನು ಭೆಟ್ಟಿಮಾಡಿ, ಹತ್ಯಾಕಾರಿಯ ಪತ್ತೆಯ ವಿಷಯದಲ್ಲಿ ಚೀನಾದವರ ವಿಚಾರವು ನಿಷ್ಫಲವಾದರೆ, ತಕ್ಕ ಕಾರ್ಯಕ್ರಮವನ್ನು ತಾವು ಕೈಕೊಳ್ಳಬೇಕಾಗುವುದೆಂದು ತಿಳಿಸಿರುತ್ತಾರೆ

ಗ್ರೀಸ್ ದೊರೆಗಳು ಸ್ವದೇಶಕ್ಕೆ ಹಿಂತಿರುಗಿದರು.

ಈಗ್ಗೆ ಸುಮಾರು 11 ವರ್ಷದಿಂದ ರಾಜ್ಯಪದಚ್ಯುತರಾಗಿ ಇಂಗ್ಲೆಂಡಿನಲ್ಲಿ ಅಜ್ಞಾತವಾಸದಲ್ಲಿದ್ದ ಗ್ರೀಸ್ ದೇಶದ ದೊರೆಗಳಾದ ಜಾರ್ಜ್ ಪ್ರಭುಗಳನ್ನು ಈಗ ಗ್ರೀಸ್ ದೇಶದ ಪ್ರಜೆಗಳೆಲ್ಲ ಸೇರಿ ಅವರೇ ರಾಜ್ಯವಾಳಬೇಕೆಂದು ಒಪ್ಪಿ ಆಹ್ವಾನಿಸಿದುದರಿಂದ, ಪ್ರಜೆಗಳ ಇಷ್ಟ ಪ್ರಕಾರ ಸಿಂಹಾಸನವೇರಿ ರಾಜ್ಯಾಡಳಿತ ನಡೆಸಲು ದೊರೆಗಳು ಇದೇ ನವೆಂಬರ್ 1 ನೆಯ ತಾರೀಕಿನ ದಿವಸ ಲಂಡನ್ ನಗರದ ವಿಕ್ಟೋರಿಯಾ ಸ್ಟೇಷನಿನಲ್ಲಿ ರೈಲು ಹತ್ತಿದರು. ಇವರನ್ನು ಸುಖಪ್ರಯಾಣ ಬಯಸಿ ಕಳುಹಿಸಿಕೊಡಲು ನಮ್ಮ ಪ್ರಿನ್ಸ್ ಆಫ್ ವೇಲ್ಸ್ ರಾಜಕುಮಾರರೂ, ಡ್ಯೂಕ್ ಮತ್ತು ಡಚ್ಚೆಸ್ ಆಫ್ ಯಾರ್ಕ್, ಡ್ಯೂಕ್ ಮತ್ತು ಡಚ್ಚೆಸ್ ಆಫ್ ಕೆಂಟ್ ರಾಜಪುತ್ರ, ಮತ್ತು ರಾಜಪುತ್ರಿಯರೂ ರೈಲ್ವೆ ಸ್ಟೇಷನಿಗೆ ಬಂದಿದ್ದರು ಇವರಲ್ಲದೆ ಸರ್ ಸ್ಯಾಮ್ಯುಯಲ್‌ಹೋರರು, ಫ್ರಾನ್ಸ್ ಮತ್ತು ಬೆಲ್ಜಿಯಮ್ ರಾಯಭಾರಿಗಳೂ, ಗ್ರೀಕ್‌ಮರಕ್ಕೆ ಸೇರಿದ ಇಬ್ಬರು ಪಾದ್ರಿಯರೂ ಹಾಜರಿದ್ದರು ಗ್ರೀಕ್ ರಾಷ್ಟ್ರದ ಜಯಜಯಕಾರಗಳ ಸಮೇತ ರೈಲು ಹೊರಟಿತು ತಮ್ಮ ಅಜ್ಞಾತವಾಸ ಕಾಲದಲ್ಲಿ ಬ್ರಿಟಿಷರು ತಮಗೆ ತೋರಿಸಿದ ಆದರಾತಿಥ್ಯಕ್ಕಾಗಿ ತಮ್ಮ ಅಭಿನಂದನಾಪೂರ್ವಕ ಸಂದೇಶವನ್ನು ಜಾರ್ಜ್ ಪ್ರಭುಗಳು ರೂಟರ್‌ಮೂಲಕ ತಿಳಿಸಿರುತ್ತಾರೆ

ಫ್ರೆಂಚ್ ಜ್ಯೋತಿಷ್ಯನ ಭವಿಷ್ಯ! ಮುಸ್ಸೋಲಿನಿಗೆ ಶನಿಕಾಟಪ್ರಾಪ್ತಿ!

ಪ್ಯಾರಿಸ್‌ನಿವಾಸಿಯಾದ ಫ್ರೆಂಚ್ ಜ್ಯೋತಿಷ್ಯನು ಬೆಲ್ಜಿಯಂ ದೊರೆಗೂ ಫ್ರೆಂಚ್ ರಾಜ್ಯಾಧ್ಯಕ್ಷನಿಗೂ ಅವರಿಗೊದಗಿದ ತೊಂದರೆಗಳ ವಿಷಯವಾಗಿ ನುಡಿದಿದ್ದ ಭವಿಷ್ಯವು ನಿಜವಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈತನೇ ಮುಸ್ಸೋಲಿನಿಯ ಭವಿಷ್ಯವನ್ನು ನುಡಿದಿರುವನು ಇದು ಫ್ರೆಂಚ್ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. 1937 ನೇ ಮಾರ್ಚಿ 7 ನೆಯ ತಾರೀಖು ಮುಸ್ಸೋಲಿನಿಗೆ ಕಂಟಕದಿನ! ಈಗ ಅಬಿಸೀನಿಯದಲ್ಲಿ ನಡೆಯುತ್ತಿರುವ ಇಟಾಲಿಯನ್ನರ ದಾಳಿಯು ನವೆಂಬರ್ ಕೊನೆಯವರೆಗೆ ಮಾತ್ರ ಜಯಪ್ರದವಾಗಿ ನಡೆಯುವುದು ಅನಂತರ ಅವರಿಗೆ ವಿಧವಿಧವಾದ ಕಷ್ಟಗಳು ಒದಗುವುದಲ್ಲದೆ, ಅನೇಕ ರೋಗಗಳೂ ಅವರನ್ನು ಆವರಿಸುವುವು ಇದನ್ನು ಸಹಿಸಲಾರದೆ ಅವರು ಇಟಲಿಗೆ ಹಿಂತಿರುಗುವರು ಇದರಿಂದ ಈ ರೋಗಗಳು ಯೂರೋಪಿನಲ್ಲಿಯೂ ಹರಡುವುವು ಮುಸ್ಸೋಲಿನಿಗೆ ಅನೇಕ ಹಣಕಾಸಿನ ತೊಂದರೆಯೊದಗುವುದು ಇದರಿಂದ ಅಸಮಾಧಾನಗೊಂಡ ಇಟಲಿಯ ಜನರು ಇವನ ಮೇಲೆ ಬೀಳುವರು ಇಟಲಿಯ ವಸಾಹತುಗಳಲ್ಲಿಯೂ ಅನೇಕವಿಧವಾದ ರಾಜಕೀಯ ತೊಂದರೆಗಳು ಉಂಟಾಗುವುವು ಎಂದು ಹೇಳಿರುತ್ತಾನೆ

ಇಟಲಿ ಅಬ್ಸೀನಿಯಾ ಯುದ್ಧ ಸಮಾಚಾರ!

ಉತ್ತರ ರಣರಂಗದಲ್ಲಿ ಮಕಾಲೆಯೂ ಅದರ ಸುತ್ತುಮುತ್ತಿನ ಪ್ರದೇಶಗಳೂ ಇಟಲಿಯವರ ವಶವಾದವು ಅಲ್ಲಿಂದ ಮುಂದೆ ಇಟಲಿಯವರು ನುಗ್ಗಲು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ ಇವರನ್ನು ಎದುರಿಸಲು ಅಬ್ಸೀನಿಯಾ ಸೈನ್ಯಾಧಿಪತಿಗಳಾದ ರಾಸ್‌ಸಯಾಂರವರು ಮಹತ್ಪ್ರಯತ್ನಮಾಡುತ್ತಿರುವರು ಅಲ್ಲದೆ ಚಕ್ರವರ್ತಿಗಳು ತಾವೇ ಸ್ವತಃ ಸೈನ್ಯದ ಮುಂದಾಳುತನವನ್ನು ವಹಿಸಲು ಡೆಸ್ಸಿ ಎಂಬಲ್ಲಿಗೆ ಬರುವುದಾಗಿ ತಿಳಿದುಬರುತ್ತದೆ.

ದಕ್ಷಿಣರಂಗದಲ್ಲಿ ಗೊರಹೈ ಪ್ರಾಂತವನ್ನು ಇಟಲಿಯವರಿಗೆ ಬಿಟ್ಟುಕೊಡಕೂಡದೆಂದು ಎಷ್ಟು ಪ್ರಯತ್ನ ಮಾಡಿದರೂ ಸಾಧ್ಯವಾಗದೆ ಗೊರಹೈ ಇಟಲಿಯವರ ವಶವಾಯಿತು ಇದರಿಂದ ಅಬ್ಸೀನಿಯದವರಿಗೆ ಬಹಳ ನಷ್ಟವೂ ಇಟಲಿಯವರಿಗೆ ಬಹಳ ಅನುಕೂಲವೂ ಆದಂತಾಯಿತು ಇದರಿಂದ ನೊಂದ ಅಬಿಸೀನಿಯನರು ದಗ್ಗಾಬೂರ್ ಎಂಬದರ ಬಳಿ ಇರುವ ಅನಾಲೆ ಎಂಬಲ್ಲಿ ಪ್ರಾಣದ ಮೇಲೆ ಲಕ್ಷ್ಯವಿಲ್ಲದೆ ಇಟಲಿಯವರ ಮೇಲೆ ಬಿದ್ದುದರಿಂದ ಇಟಲಿ ಸೈನಿಕರು ಸೋತು ಹಿಮ್ಮೆಟ್ಟಬೇಕಾಯಿತೆಂದೂ ಇದರಿಂದ ಇಟಲಿಯವರ 3 ಸಶಸ್ತ್ರ ಮೋಟಾರುಗಳು ಅಬಿಸೀನಿಯರ ವಶವಾಯಿತೆಂದೂ, 6 ಮಂದಿ ಇಟಲಿ ಅಧಿಕಾರಿಗಳೂ ಅನೇಕ ಮಂದಿ ಸೈನಿಕರು ಪ್ರಾಣಬಿಟ್ಟರೆಂದೂ, ಸಾವಿರಾರು ಮಂದಿ ಸೆರೆಸಿಕ್ಕಿಬಿದ್ದರೆಂದೂ ಉಳಿದವರು ರಣರಂಗದಿಂದ ದಿಕ್ಕೆಟ್ಟು ಓಡಿದರೆಂದೂ ಅಡಿಸ್ ಅಬಾಬಾದಿಂದ ಸುದ್ದಿ ಬಂದಿದೆ ಆದರೆ ರೋಮಿನಿಂದ ಹೊರಟಿರುವ ಸುದ್ದಿಯಂತೆ ಇಟಲಿಯವರಿಗೇನೂ ಬಹಳ ನಷ್ಟವಾಗಲಿಲ್ಲವೆಂದೂ ಒಂದು ಸಶಸ್ತ್ರ ಮೋಟಾರು ಮಾತ್ರ ಮುರಿದಿರುವುದಾಗಿಯೂ ಇಟಲಿ ಪಡೆಗಳು ಕ್ರಮವಾಗಿ ಮುಂದರಿಯುತ್ತಿರುವುವೆಂದೂ, ಯುದ್ಧ ವಿಮಾನಗಳು ಕಾರ್ಯಭಾಗ ನಡೆಸಲು ಅಬಿಸೀನಿಯದ ಮೇಲೆ ಕಳುಹಿಸಲ್ಪಟ್ಟಿರುವವೆಂದೂ ತಿಳಿದುಬರುತ್ತದೆ ಇತ್ತೀಚೆಗೆ ಯುದ್ಧರಂಗದಿಂದ ಸರಿಯಾದ ಸಮಾಚಾರಗಳು ಬರುತ್ತಿರುವುದಿಲ್ಲ

ಈ ಮಧ್ಯೆ ಜನಾಂಗಸಂಘೋಜನಕೂಟದವರು ಈ ತಿಂಗಳು 18ನೇ ತಾರೀಕಿನ ದಿವಸದಿಂದ ಇಟಲಿಯ ಮೇಲೆ ಆರ್ಥಿಕದಿಗ್ಬಂಧನಗಳನ್ನು ಹಾಕಬೇಕೆಂದು ನಿಶ್ಚಯಿಸಿರುತ್ತಾರೆ ಇದರಿಂದ ಇಟಲಿಗೆ ಸ್ವಲ್ಪ ತೊಂದರೆಯಾಗಬಹುದಾದರೂ, ಎಣ್ಣೆ ಮೊದಲಾದ ಪದಾರ್ಥಗಳು ಇಟಲಿಗೆ ಯಾರಿಂದಲೂ ಹೋಗದಂತೆ ಪೂರ್ತಿಯಾಗಿ ತಡೆಕಟ್ಟುವುದು ಅಷ್ಟು ಸುಲಭವಲ್ಲವೆಂದೂ, ಅಲ್ಲದೆ ಇದಕ್ಕೆಲ್ಲಾ ಮೊದಲೇ ಸಿದ್ಧಪಡಿಸಿಕೊಂಡಿರುವ ಮುಸೋಲಿನಿಯು ಇದಕ್ಕೆ ಹೆದರುವಂತಿಲ್ಲವೆಂದೂ ತಿಳಿದುಬರುತ್ತಿದೆ ಈ ಸಂಘದ ಪ್ರಯತ್ನಗಳು ಕಾರ್ಯಕಾರಿಯಾಗುವುದರೊಳಗೆ ಅಬ್ಸೀನಿಯವು ಶತ್ರುಗಳ ಪಾಲಾಗುವುದೆಂದು ತಿಳಿದವರು ಯೋಚಿಸುತ್ತಿದ್ದಾರೆ ಅಬಿಸಿನಿಯಾದೇಶದ ಭವಿತವ್ಯತೆಯು ಹೇಗಿದೆಯೋ ನೋಡಬೇಕಾಗಿದೆ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ನೈಜಾಂ ಶಿವಯೋಗಮಂದಿರ.

ಶ್ರೀಮದ್ವೀರಶೈವ ಲಿಂಗಿಬ್ರಾಹ್ಮಣ ವಿದ್ಯಾಪೀಠಾಂತರ್ಗತ ಮರೀಲ ಬೃಹನ್ಮಠದ ಶ್ರೀ ಪ್ರಭುಲಿಂಗ ಶಿವಾಚಾರ್ಯರಿಂದ ಆನ್ವರಿ ನೈಜಾಂ ಇಲಾಖಾ ಗುಡಗುಂಡಿ ಸಂಸ್ಥಾನದ ಪ್ರಸಿದ್ಧ ಗುಡಿತ್ರರ ಬಸವೇಶ್ವರನ ವಿಶ್ವಾಮ್ಯಸ್ಥಾನಾಂತರದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಶಿವಯೋಗಮಂದಿರದಲ್ಲಿರುವ ಬ್ರಹ್ಮಚಾರಿಗಳ ಶಿಕ್ಷಣಕ್ಕಾಗಿ ಭರತಖಂಡದ ಎಲ್ಲಾ ಭಾಗದಲ್ಲಿರುವ ಭಕ್ತಮಾಹೇಶ್ವರರು ತಮ್ಮ ತಮ್ಮ ಶಕ್ತ್ಯನುಸಾರವಾಗಿ ಧನಸಹಾಯಮಾಡಿ ಕೀರ್ತಿಭಾಜನರಾಗಬೇಕೆಂದು ಕೋರುವ,

ವಿ ಎಸ್ ಪಂಚಲಿಂಗಶಾಸ್ತ್ರಿಗಳು,
ಅಧ್ಯಾಪಕ

ಸ್ವೀಕಾರ

ಧಾರವಾಡ ಡಿ|| ಗದಗಪಟ್ಟಣದಲ್ಲಿ ಇದೇ ಕಾರ್ತೀಕ ಶು|| 1 ದಿವಸ ಶ್ರೀಯುತ ವೀರಬಸವಪ್ಪ ಮತ್ತು ಗೋಪುರಪ್ಪಶೆಟ್ರ ಎಂಬ ಹೆಸರಿನಿಂದಲೂ, ಮುಂಬಯಿ ಪಟ್ಟಣದಲ್ಲಿ ಶ್ರೀಯುತ ಪಂಪಣ್ಣ ಕಾಶಪ್ಪಶೆಟ್ರ ಕಮಿಷನ್ ಏಜಂಟ್ ಎಂಬ ಹೆಸರಿನಿಂದಲೂ ಹಲವು ಅಂಗಡಿಗಳು ಸ್ಥಾಪಿಸಲ್ಪಟ್ಟು ತತ್ಸಂಬಂಧವಾದ ಪೂಜಾ ಸಮಯದಲ್ಲಿ ಪ್ರಜಾಶ್ರೇಯಸ್ಕರ ನವ ಪ್ರಿಂಟ್ ಪ್ರೆಸ್ಸಿಗೆ 5 ರೂ ಗಳು ಹುಬ್ಬಳ್ಳಿ ನಿವಾಸಿಗಳಾದ ಮ|| ರಾ|| ಶ್ರೀಮಂತ ಗುಗ್ಗರಿ ಕಲ್ಲಪ್ಪನವರ ದ್ವಾರಾ ತಲ್ಪಿರುತ್ತವೆ

ಶಿಕಾರಿಪುರ ತಾಲ್ಲೂಕು ಕಡೆನಂದಿಹಳ್ಳಿಯಲ್ಲಿರುವ ಮ|| ರಾ|| ಮಾಸ್ಟರ್ ಬಿಂಗ್ಪನವರು ದೇವರ ಪ್ರತಿಷ್ಠೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪ್ರೋತ್ಸಾಹಕ್ಕಾಗಿ ನವ ಪ್ರೆಸ್ಸಿದ 1 ರೂ ಯು ವೇ|| ಮಾಸೂರು ಹಿರೇಮಠದ ಚನ್ನವೀರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಮಹೋತ್ಸವ, ಜಗಲೂರು.

ತಾ|| 3 11 1937 ನೆಯ ದಿವಸ ಶ್ರೀ ಜಗದ್ಗುರುಗಳವರ ಮಹೋತ್ಸವವು ಇದೇ ಊರಿನ ಶ್ರೀಮಂತರಾದ ಜೆ. ಎಸ್. ಮಹಾಲಿಂಗಪ್ಪನವರ ಮತ್ತು ಕಲ್ಲಪ್ಪನವರು ಈ ಉಭಯ ಸಹೋದರರ ಪ್ರಾರ್ಥನಾ ಪ್ರಕಾರ ಹೊರಟಿತು ಉತ್ಸವಕ್ಕೆ ಪುರಪ್ರಮುಖರೂ ಸ್ಥಳೀಯ ಸರ್ಕಾರಿ ಆಫೀಸರೂ ಹರಿಹರ, ದಾವಣಗೆರೆ, ಅವರಗೊಳ್ಳ, ನ್ಯಾಮತಿ ಮುಂತಾದ ಅನೇಕ ಪರಸ್ಥಳದ ಗುರುಭಕ್ತಮಹಾಶಯರು ಆಗಮಿಸಿದ್ದರು ಉತ್ಸವವು ನ್ಯಾಮತಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರ ತಮ್ಮ ಗಮನೀಕವಾದ ಶ್ರೀಗುರುಭಕ್ತಿಯನ್ನು ತೋರುವ ಶ್ರೀಮತ್ಪಂಚಾಚಾರ್ಯರ ನಾಮಸಂಕೀರ್ತನೆಯಿಂದಲೂ ವಾದ್ಯವೈಭವದಿಂದಲೂ ಅಗಣಿತಜನಸ್ತೋಮದಲ್ಲಿ ನೆರವೇರಿತು ಈ ಓರ್ಮುನಸಿಪಲ್ ಪ್ರೆಸಿಡೆಂಟರಾದ ಜೆ ಮಾಕಪ್ಪನ ಇಮಾಮಸಾಹೇಬರವರು ಮತ್ತು ಇವರ ಸಹೋದರರು, ಶ್ರೀಮಾನ್ ರಾಘವೇಂದ್ರರಾಯರ, ರಿ|| ಪ್ರೋ ಇನ್ಸ್‌ಪೆಕ್ಟರ್ ಚೌಡಯ್ಯನವರು ಮುಂತಾದ ಸನ್ಮತೀಯರು ಗುರುದರ್ಶನಕ್ಕಾಗಿ ಆಗಮಿಸಿದರು ಉತ್ಸವವು ಮಹಾಲಿಂಗಪ್ಪನವರ ಭವನಕ್ಕೆ ಆಗಮಿಸಿದ ಅನಂತರ ಮ|| ರಾ|| ಮಹಾಲಿಂಗಪ್ಪನವರು ಶ್ರೀಗಳವರು ತಮ್ಮ ಪ್ರಾರ್ಥನೆಯನ್ನು ಅಂಗೀಕಾರ ಮಾಡಿದ್ದು ತಮ್ಮ ಸುದೈವವೆಂದು ಸಂಭಾಷಿಸಿದರು. ಅನಂತರ ಬೆಂಗಳೂರು ಮಹಾಜನಮಂಡಲದ ಶ್ರೀ ಗಂಗಾಧರಶಿವಾಚಾರ್ಯಸ್ವಾಮಿಗಳವರು ಗುರುಭಕ್ತಿಯ ವಿಷಯವಾಗಿ ಮಹತ್ತರವಾದ ಭಾಷಣವನ್ನು ಮಾಡಿದರು ಬಳಿಕ ದಾವಣಗೆರೆ ಗದಿಗೆಪ್ಪನವರ ಚಂದ್ರಯ್ಯನವರು ಶ್ರೀಮಂತ ಮಹಾಲಿಂಗಪ್ಪನವರ ಮತ್ತು ಕಲ್ಲಪ್ಪನವರ ಗುರುಭಕ್ತಿಪರಾಯಣತೆಯನ್ನು ಕೊಂಡಾಡಿದರು ಶ್ರೀಮಂತ ಇಮಾಮಸಾಹೇಬರವರು, ಶ್ರೀ ರಾಘವೇಂದ್ರರಾಯರವರು ಇನ್ನೂ ಕೆಲವು ಅನ್ಯಮತೀಯ ಪ್ರಮುಖ ಮಹಾಶಯರ ಪ್ರಾಮಾಣಿಕವಾದ ಗುಣಕಥನವನ್ನು ಮಾಡಿದರು ಬಳಿಕ ಮುನಸಿಪಾಲಿಟಿ ಪ್ರೆಸಿಡೆಂಟರಾದ ಇಮಾಮಸಾಹೇಬರವರು ಶ್ರೀಗಳವರ ತಪಸ್ಸಿನ ಪ್ರಭಾವವನ್ನೂ, ಇಂಥ ಮಹಾಸ್ವಾಮಿಗಳವರ ದರ್ಶನಾಶೀರ್ವಾದಕ್ಕೆ ಪಾತ್ರರಾಗುವ ಸುಯೋಗವನ್ನು ಒದಗಿಸಿದ ಮಹಾಲಿಂಗಪ್ಪ ಕಲ್ಲಪ್ಪನವರನ್ನೂ ವರ್ಣಿಸಿ ಸಭಿಕರ ಪರವಾಗಿ ವಂದನೆಗಳನ್ನರ್ಪಿಸಿದರು ಅನಂತರ ಶ್ರೀಗಳವರು ಮಾನವಜನ್ಮದ ಮಹತ್ವವನ್ನೂ, ಶಿವಪೂಜಾಮಹತ್ವವನ್ನೂ ಬಹು ಮನೋಹರವಾಗಿ ಬೋಧಿಸಿದರು ಬಳಿಕ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಪ್ರತ್ಯಕ್ಷದರ್ಶಿ

ಕರ್ನಾಟಕ ಸಾಹಿತ್ಯ ಪರಿಷತ್ತು.

ಶ್ರೀ ಕೃಷ್ಣರಾಜಪರಿಷನ್ಮಂದಿರ, ನರಸಿಂಹರಾಜ ರಸ್ತೆ ಬೆಂಗಳೂರು ಸಿಟಿ

ಉಪನ್ಯಾಸಕರ ಅನುಕೂಲಗಳು

ಪರಿಷತ್ತಿನ ಪರವಾಗಿ ಪರಸ್ಥಳಗಳಿಗೆ ಹೋಗುವ ಉಪನ್ಯಾಸಕರ ಮತ್ತು ಗಮಕಿಗಳ ನೆಚ್ಚ ಮೊದಲಾದುವುಗಳ ವಿಚಾರ.

ಪರಿಷತ್ತಿನಿಂದ ಗೊತ್ತುಮಾಡಿರುವ ಉಪನ್ಯಾಸಕರನ್ನಾಗಲಿ ಗಮಕಿಗಳನ್ನಾಗಲಿ ಆಹ್ವಾನಿಸುವವರು ಈ ಕೆಳಗಿನ ನಿಯಮಗಳನ್ನು ನಡಸಿಕೊಡಬೇಕೆಂದು ಪರಿಷತ್ತು ಕೋರುತ್ತದೆ :—

೧ ಆಹ್ವಾನಿತರು ಅವರ ಊರಿನಿಂದ ಉಪನ್ಯಾಸ ಸ್ಥಳಕ್ಕೆ ಬಂದು ಅಲ್ಲಿಂದ ಹಿಂದಿರುಗಿಹೋಗಲು ತಗಲುವ ಪ್ರಯಾಣದ ವೆಚ್ಚವನ್ನು ಆಹ್ವಾನಿತರು ಸಲ್ಲಿಸಬೇಕು. ಈ ವಿಚಾರದಲ್ಲಿ ಆಯಾ ಉಪನ್ಯಾಸಕ ಗಮಕಿಗಳಿಗೆ ಆಹ್ವಾನಕರ್ತರು ಮೊದಲೇ ಕಾಗದ ಬರೆದು ಅವರ ಅನುಕೂಲವನ್ನು ತಿಳಿದುಕೊಂಡು ಪ್ರಯಾಣದ ಸಾರ ನಡೆಸುವುದು ಉಚಿತವಾಗಿರುವುದು

೨ ಆಹ್ವಾನಿತರು ಬರುವ ವೇಳೆಯನ್ನು ಆಹ್ವಾನಕರ್ತರು ಮೊದಲೇ ತಿಳಿದುಕೊಂಡು, ತಮ್ಮ ಸ್ಟೇಷನ್ ಯಾರಾದರೂ ಒಬ್ಬರು ಅವರನ್ನು ಇದಿರುಗೊಂಡು ಅವರನ್ನು ತಮ್ಮ ಸ್ಥಳದಲ್ಲಿ ಇಳಿಸಿಕೊಳ್ಳುವಂತೆ ಏರ್ಪಾಟು ಮಾಡಬೇಕು.

೩ ಆಹ್ವಾನಿತರಿಗೆ ಬೇಕಾದ ಆಹಾರ ನಿಯಮ ಮೊದಲಾದ ಅನುಕೂಲಗಳ ವಿವರಗಳನ್ನು ತಿಳಿದುಕೊಂಡು ತಕ್ಕ ಏರ್ಪಾಟುಗಳನ್ನು ನಡಸಿಕೊಡಬೇಕು

೪ ಉಪನ್ಯಾಸಕ್ಕೆ ತಕ್ಕ ಸಭಾಮಂದಿರವನ್ನು ಗೊತ್ತುಮಾಡಬೇಕು

೫ ಉಪನ್ಯಾಸದ ವಿಷಯವನ್ನು ಒಂದುದಿನ ಮುಂಚೆ ಯಾವುದಾದರೂ ಪತ್ರಿಕೆಯ ಮೂಲಕ ತಿಳಿಯಪಡಿಸಬೇಕು ಉಪನ್ಯಾಸಕ್ಕೆ ಜನರು ಕೂಡಿದಮೇಲೆಯೂ ಸಭಾ ಕಾರ್ಯಕ್ರಮದ ಕಾರ್ಯಕ್ರಮ ಬರಿಗೆ ಬಿನ್ನಹಗಳನ್ನು ಕೇಳಿಸಬೇಕು

೬ ಕರೆದ ದಿವಸ ಉಪನ್ಯಾಸಕ್ಕೆ ಉಪಕರಣವಾಗಿ ಬೇಕಾದ ಸ್ಲೈಡ್ ಲ್ಯಾಂಟರ್ನ್ ಸಿನಿಮಾ ಯಂತ್ರ ಮೊದಲಾದ ಸಾಧನಗಳನ್ನು ಉಪನ್ಯಾಸಕರಿಗೂ ಕೂಡಲು ಅನುಕೂಲವಾದ ಸೌಕರ್ಯಗಳನ್ನೂ ಏರ್ಪಡಿಸಬೇಕು

೭ ಉಪನ್ಯಾಸದ ವಿವರಗಳನ್ನು ಸಂಗ್ರಹಿಸಿ ಪತ್ರಿಕೆಗಳಿಗೆ ಪ್ರಕಟಿಸಲು ಕಳುಹಿಸಬೇಕು

೮ ಉಪನ್ಯಾಸಕರು ತಮ್ಮೂರಿಗೆ ಹಿಂದಿರುಗುವ ಪ್ರಯಾಣಕ್ಕೆ ಬೇಕಾದ ಗಾಡಿ ಮೊದಲಾದ ಸೌಕರ್ಯಗಳನ್ನು ಒದಗಿಸಿಕೊಡಬೇಕು.

ಸಿ. ಕೆ ವೆಂಕಟರಾಮಯ್ಯ,

22 11 37 ಬೆಂಗಳೂರು ಸಿಟಿ

ಪ್ರಧಾನ ಕಾರ್ಯದರ್ಶಿ ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು ಸಿಟಿ

ಕನ್ನಡ ಗ್ರಂಥಪ್ರಕಟನ ಕರ್ತರಲ್ಲಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ವಿಜ್ಞಾಪನೆ.

ಮಹಾಶಯರೆ,

ಕನ್ನಡದಲ್ಲಿ ಗ್ರಂಥಾಭಿವೃದ್ಧಿ ಯಾವರೀತಿ ನಡೆಯುತ್ತಿದೆ ಎಂಬ ವಿವರಗಳನ್ನು ಆಗಾಗ ಸಂಗ್ರಹಿಸಿ ಪ್ರಸಿದ್ಧಗೊಳಿಸುವುದು ಪರಿಷತ್ತಿನ ಮುಖ್ಯೋದ್ದೇಶಗಳಲ್ಲೊಂದಾಗಿದೆ ಇದಕ್ಕಾಗಿ ಗ್ರಂಥಕರ್ತರೂ ಗ್ರಂಥಪ್ರಕಾಶಕರೂ ತಮ್ಮ ತಮ್ಮ ಪ್ರಕಟನೆಗಳ ಹೆಸರು ಬೆಲೆ, ಸ್ವರೂಪ ಮೊದಲಾದ ವಿವರಗಳನ್ನು ಪರಿಷತ್ತಿಗೆ ಬರೆದು ತಿಳುಹಿಸಬೇಕೆಂದು ಆಗಾಗ ಬೇಡಿಕೊಂಡಿದ್ದೇವೆ ಈಗ ೧೯೩೪ ನೆಯ ಇಸ್ವಿಯಲ್ಲಿಯೂ ೧೯೩೫ ... ಯೂ ಪ್ರಕಟವಾಗಿರುವ ಕನ್ನಡಪುಸ್ತಕಗಳಿಗೆ ಸಂಬಂಧಪಟ್ಟ ವಿವರಗಳನ್ನು ಪರಿಷತ್ತಿನ ಮುಂದಿನ ವಾರ್ಷಿಕ ವರದಿಯಲ್ಲಿ ಸೇರಿಸಬೇಕೆಂದು ಉದ್ದೇಶವಿದೆ. ಆದ್ದರಿಂದ ಎಲ್ಲ ಗ್ರಂಥ ಪ್ರಕಟನ ಕರ್ತರೂ ಕೂಡಿದಷ್ಟು ಬೇಗ ಈ ಕೆಳಗಿನ ವಿವರಗಳನ್ನು ಪರಿಷತ್ತಿಗೆ ಬರೆದು ತಿಳಿಸುವ ಉಪಕಾರ ಮಾಡಬೇಕೆಂದು ಬೇಡುತ್ತೇವೆ.

(೧) ಪುಸ್ತಕದ ಹೆಸರು, (೨) ಪುಸ್ತಕದ ... ತೆಹರೀನಾದರೂ ಇದ್ದರೆ ಅದು; (೩) ಪುಸ್ತಕದ ವಿಷಯ. (೪) ಪುಸ್ತಕದ ಜಾತಿ; (೫) ಪುಸ್ತಕದ ಲೇಖಕರ ಹೆಸರು, ವಿಳಾಸ; (೬) ಪುಸ್ತಕದ ಪ್ರಕಟನಕರ್ತರ ಹೆಸರು, ವಿಳಾಸ, (೭) ಪುಸ್ತಕದ ಮೊದಲನೆಯ ಪ್ರಕಟನೆಯ ತಾರೀಖು; (೮) ಪುಸ್ತಕದ ಈಗಿನ ಪ್ರಕಟನೆಯ ತಾರೀಖು; (೯) ಪುಸ್ತಕದ ಈಗಿನ ಪ್ರಕಟನೆ ಎಷ್ಟನೆಯ ಆವೃತ್ತಿಯದು, (೧೦) ಪುಸ್ತಕದ ಬೆಲೆ ಉತ್ತಮ ಪ್ರತಿ, ಸಾಮಾನ್ಯ ಪ್ರತಿ, (೧೧) ಈ ಪುಸ್ತಕ ಇದುವರೆಗೆ ಒಟ್ಟು ಎಷ್ಟು ಪ್ರತಿ ಮುದ್ರಿತವಾಗಿದೆ, (೧೨) ವಿಶೇಷಾಂಶಗಳು (ದೊರೆತಿರುವ ಬಹುಮಾನ ಇತ್ಯಾದಿ ವಿವರಗಳೇನಾದರೂ ಇದ್ದರೆ ಅವು)

ಇನ್ನುಮುಂದೆ ತಾವು ಯಾವ ಗ್ರಂಥವನ್ನು ಪ್ರಕಟಪಡಿಸಿದರೂ ಅದು ಪ್ರಕಟವಾದೊಡನೆಯೆ ಅದರ ವಿವರಗಳನ್ನು ಪರಿಷತ್ತಿಗೆ ತಿಳಿಯಪಡಿಸಿದರೆ ಅದರ ಸಮಾಚಾರವನ್ನು ಉಚಿತವಾಗಿ ಪರಿಷತ್ಪತ್ರಿಕೆಯಲ್ಲಿ ಪ್ರಕಟಗೊಳಿಸಲಾಗುವುದು.

ಮೇಲಿನ ವಿವರಗಳುಳ್ಳ ಅಚ್ಚಾದ ಫಾರಂಗಳು ಪರಿಷತ್ಕಾರ್ಯಾಲಯದಿಂದ ಉಚಿತವಾಗಿ ದೊರೆಯಬಹುದು

ತಮ್ಮ ಸಹಾಯ ಸಹಕಾರಗಳನ್ನು ಬೇಡುತ್ತಿರುವ ವಿಧೇಯ,

ಎಂ ಆರ್. ಶ್ರೀನಿವಾಸಮೂರ್ತಿ, ಬಿ ಎ

ವ್ಯವಸ್ಥಾಪಕ ಗ್ರಂಥ ಭಂಡಾರ ಸಮಿತಿ

ಕರ್ನಾಟಕ ಸಾಹಿತ್ಯ ಪರಿಷತ್ತು

ಬೆಂಗಳೂರು ಸಿಟಿ

ಬೆಂಗಳೂರು ಸಿಟಿ

ತಾ|| ೧೬ನೆಯ ಅಕ್ಟೋಬರ್ ೧೯೩೭

ಸೌಕರ್ಯದ ಯಾತ್ರಿಗಳು! ಚಾರ್ಜು ಬಹಳೇ ಸುಲಭ!! ಪ್ರಸಿದ್ಧ ಪುಣ್ಯಕ್ಷೇತ್ರಗಳು!!

ಉತ್ತರ ಮತ್ತು ದಕ್ಷಿಣ ಹಿಂದೂಸ್ಥಾನದ ಮಹಾಯಾತ್ರೆ.

☞ ಶ್ರೀಕಾಶೀ ರಾಮೇಶ್ವರ ಮಹಾಯಾತ್ರೆಯು ☜

ತಾ|| ೨೮—೧೨—೩೭ ರಿಂದ ತಾ|| ೧೫—೨—೩೮ ರ ವರೆಗೆ.

ಪ್ರಸಿದ್ಧ ೫೦ ಕ್ಷೇತ್ರಗಳು.

ಟ್ರೇನಿನಲ್ಲಿ ಒಬ್ಬರಿಗೆ ಇಬ್ಬರ ಸ್ಥಳ ಸಿಗುವದು. ಸೆಕೆಂಡ್ ಕ್ಲಾಸ್ ೩೧೦ ರೂ. ಥರ್ಡ್ ಕ್ಲಾಸ್ ೧೮...

ಹೆಚ್ಚಿನ ಮಾಹಿತಿಗಾಗಿ ಪತ್ರಬರೆಯಬೇಕು

೨೫ ಜನ ಯಾತ್ರಿಕರನ್ನು ಕೂಡಿಸಿಕೊಟ್ಟವರನ್ನು ಪುಕಟ್ ಯಾತ್ರೆಗೆ ಕರೆದುಕೊಂಡು ಹೋಗುವೆವು

ಏಜಂಟರಿಗೆ ಯೋಗ್ಯ ಕಮಿಷನ್ ಸಿಗುವದು ಪತ್ರ ಬರೆಯಬೇಕು ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ಆಫೀಸ್ — ಜನಮಾದಿ ರಸ್ತೆ, ನೋಟಾರ್ ಸ್ಟ್ಯಾಂಡ್ ಹತ್ತರ ಬನ್ಹಟ್ಟಿ } (4)

ತಿವಾರೀಕಂಡ ಯಾತ್ರಾಕಂಪನಿ ಬನ್ಹಟ್ಟಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭೂಮಂಡಲದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ವರುಷಕ್ಕೆ ಹತ್ತು ವರ್ಷಕ್ಕೆ ಒಂದು ಸಾರೆ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯವನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ನಿವಾರಿಸುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿವೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಪ್ರತ್ಯೇಕ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಒಳ್ಳೆ ಕಾಗದವನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಕಡಿಮೆ ಬೆಲೆಯಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೨—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
...ಂದೂರ	೧	೩—೦—೦
ಮಲ್ಲಸಿಂದೂರ	೧	೪—೦—೦
ತಾಲಸಿಂದೂರ	೧	೪—೦—೦
ರಸಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
...ವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
...ತ್ರಾಳಭಸ್ಮ	೧	೦—೮—೦
...ಜಿನಭಸ್ಮ	೧	೦—೮—೦
...ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೪—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
...ಕವಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೨—೨—೦
ಪ್ರವಾಳಭಸ್ಮ	೧	೦—೮—೦
...ಪ್ಪಿನ ಭಸ್ಮ	೧	೦—೮—೦
...ರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
...ಸ್ತೂರಿ (೧ನೇ ನಂಬರ್)	೧	೫೦—೦—೦
...ಪಿತ ಸರ್ಪಪುಟ	೧	೧—೦—೦
...ಪಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಳಿಗಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. ಬೆಲೆ ೧೨ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಪ್ರಖ್ಯಾತಿಯಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೬೬ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮ ಸ್ವಾಮಿಗಳು **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಠಿತೀಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೯೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮೀಷನ್ ವಜಾ ಹೋಗಬೇಕಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ [illegible]	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು [illegible] ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ [illegible]	೦—೧—೬
[illegible] ಆಚಾರ್ಯರು [illegible]	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ [illegible]	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ [illegible]	೦—೦—೯
ಶ್ರೀ ಕಾಶೀ ಸಿಂಹಾಸನಸ್ಥಿರ ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶ್ರೀ ಮಹಾಂಶ [illegible] ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು [illegible] ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು [illegible] ಧಾರಣವಾಡಿ [illegible] ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ [illegible] ಫೋಟೋ	೦—೦—೯
ಶ್ರೀ [illegible] ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ [illegible]	೦—೦—೯
ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶ್ರೀ ಜಗದ್ಗುರು [illegible] ಫೋಟೋ	೦—೦—೬
ಶ್ರೀ ಜಗದ್ಗುರು [illegible] ಫೋಟೋ	೦—೦—೯
[illegible]	೦—೦—೯
[illegible] ಜಗದ್ಗುರುಗಳವರ [illegible] ಫೋಟೋ	೦—೦—೯

ಸೂಚನೆ —[illegible]
[illegible] ತರಿಸಿಕೊಳ್ಳುವವರಿಗೆ [illegible]

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ ಬಿ ಯವರ

ಸುಗಂಧ ನಶ್ಯದಪುಡಿ

[illegible] ಈ ಸುಗಂಧ ನಶ್ಯದಪುಡಿ[illegible]

ಗಳನ್ನು [illegible] ಪ್ರಸಿದ್ಧವಾದ [illegible] ನಶ್ಯದ ಪುಡಿ[illegible] ಸ್ವಸ್ಥವಾಗುವ [illegible] ಧಿಗಳು [illegible] ತಲೆನೋವು, ತಲೆ[illegible] ಯ ರೋಗಗಳ[illegible] ಕಣ್ಣುಗಳಲ್ಲಿ ಉಂಟಾ[illegible] ಗತಕ್ಕ ಸರ್ವವ್ಯಾಧಿಗಳು, [illegible] ವ್ಯಾಧಿಗಳು ಪರಿಹಾರವಾಗುವವಲ್ಲದೆ [illegible] ಯನ್ನೂ ಸಹ ಹೆಚ್ಚುಮಾಡುತ್ತದೆ [illegible] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು[illegible] ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ [illegible] ಇದನ್ನು ಅನೇಕ [illegible]

[illegible] ಕ್ರಯ ರೂ ೦ ೪ ೦ ವಿ ಪಿ [illegible]
[illegible] ಕ್ರಯ ರೂ ೨ ೮ ೦ ವಿ ಪಿ [illegible]

[illegible] ತಿಳಿಯುವಂತೆ ಬರೆಯಿರಿ
[illegible] ಕಂಪೆನಿ ಲಿಮಿಟೆಡ್,
[11] ಪೋ ಬಾ [illegible]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ [illegible]	೨ ಆ[illegible]
ಮರುಳಸಿದ್ಧೇಶ್ವರಸ್ತೋತ್ರ	೧ ಆ[illegible]
ಗೋತ್ರಸೂತ್ರಪಟ ([illegible] ಆವೃತ್ತಿ)	೧ ಆ[illegible]
[illegible] ([illegible] ಆವೃತ್ತಿ ಸಂಸ್ಕೃತ)	೧ ಆ[illegible]
ಪಂಚಪಂಚಶತಿ ಪ್ರಶ್ನೋತ್ತರ ([illegible] ಆವೃತ್ತಿ)	೧ ಆ[illegible]
ಶ್ರೀ ಪಂಚಾಚಾರ್ಯ [illegible] ([illegible] ಆವೃತ್ತಿ)	೧ ಆ[illegible]
ಸಂಕ್ಷಿಪ್ತ ಶಿವಪೂಜಾವಿಧಿ ([illegible] ಆವೃತ್ತಿ)	೧ ಆ[illegible]
ಬಸವಾದಿ [illegible] ([illegible] ಆವೃತ್ತಿ)	೨ ಆ[illegible]
ಶ್ರೀ ರೇಣುಕಾಚಾರ್ಯಶತಕ ([illegible] ಆವೃತ್ತಿ)	೨ ಆ[illegible]
ಪಂಚಾಚಾರ್ಯ ಪ್ರಭಾವ	೨ ಆ[illegible]
ಶಿವಶಕ್ತಿವಿಲಾಸ	೨ ಆ[illegible]
ಶ್ರೀಗುರುತತ್ವ[illegible]	೨ ಆ[illegible]
ಗುರುಸ್ವರೂಪ[illegible]	೨ ಆ[illegible]
ಶ್ರೀ ರುದ್ರಮುನಿ[illegible]	೨ ಆ[illegible]
ವೀರಶೈವಮತ[illegible]	೩ ಆ[illegible]
ವೀರಶೈವಾಚಾರ[illegible] ([illegible] ಆವೃತ್ತಿ)	೩ ಆ[illegible]
ವಿವಾಹವಿಧಿ ([illegible]ನೆಯ ಆವೃತ್ತಿ)	೮ ಆ[illegible]
ಕನ್ಯಾಸಾಕ್ಷ್ಯ ವಿಮರ್ಶ [illegible] ([illegible] ಆವೃತ್ತಿ)	೪ ಆ[illegible]
ವೈದಿಕ[illegible]ರಹಸ್ಯ	೪ ಆ[illegible]
ಆಗಮಪರಿಜ್ಞಾನ	೮ ಆ[illegible]
ಶಿವಾಧಿಕ್ಯರತ್ನಾವಳಿ ([illegible])	೮ ಆ[illegible]
[illegible]ಧ್ವಾಂತ ದಿವಾಕರ ([illegible] ಆವೃತ್ತಿ)	೮ ಆ[illegible]
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೮ ಆ[illegible]
पंडित श्रीकाशीनाथशास्त्री यांचे भाषण (मराठी)	८ आणे
Speeches by Pandit Shri Kashinatha Shastri (English)	12 A[illegible]
[illegible] ([illegible] ಆವೃತ್ತಿ)	೧೨ ಆ[illegible]
ವೈದಿಕ[illegible] ([illegible])	೧೨ ಆ[illegible]
ಶ್ರೀ ಜಗದ್ಗುರು ಪಂಚಾಚಾರ್ಯ ಸೂಕ್ತರತ್ನಾಕರ	೧೨ ಆ[illegible]
[illegible] ([illegible] ಆವೃತ್ತಿ)	೧೨ ಆ[illegible]
[illegible]	೧೨ ಆ[illegible]
[illegible]ಸಿದ್ಧಾಂತ[illegible]	೧೨ ಆ[illegible]
[illegible] ([illegible] ಆವೃತ್ತಿ)	೧ ರೂ[illegible]
ಸಿದ್ಧಾಂತಶಿಖೋಪನಿಷತ್ ([illegible])	೧ ರೂ[illegible]
[illegible] ([illegible])	೧ ರೂ[illegible]
[illegible] ಮಹಾಪುರಾಣ ([illegible])	೧ ರೂ[illegible]
[illegible]ಸಿದ್ಧಾಂತಸುಧಾಕರ	೨ ರೂ[illegible]
[illegible] ([illegible] ಪುಟ)	೮ ರೂ[illegible]
लिंगधारणचन्द्रिका (संस्कृत)	३ रु[illegible]
महानारायणोपनिषत् (चारावभाष्य संस्कृत)	१ रु[illegible]
वीरशैवचूडामणि / [illegible] (संस्कृत)	१ रु[illegible]

[illegible] ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ[illegible] [illegible] ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ[illegible] [illegible] ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

[illegible] ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ[illegible]

REGISTERED No M 2266 || ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿತ್ಸ್ವದೀಲೋಕಮಂ ||

ಸಂಪಾದಕರು—ಅಷ್ಟಾಕ ವಿದ್ವಾನ್ ವೇ|| ಶಿ|| ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ   ಬಿಡಿ ಪ್ರತಿ ೧ಕ್ಕೆ ೯ ಪೈ.   ಪರಸ್ಥಳದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ನೇ ನವೆಂಬರ್ ೧೯೩೫ [ಸಂಚಿಕೆ ೨೯

ದೀಕ್ಷಾಸಮಾರಂಭ
ಹೋಟಗಿ ಶ್ರೀಗಳವರ ಶುಭಾಗಮನ

ಸೋಲಾಪೂರ ತಾಲೂಕು ಪೈಕಿ ಮುಕ್ಕಾಂ ನಿಂಬರಗಿಯಲ್ಲಿರುವ ವೀರಶೈವ ಸಮಾಜ ಪ್ರಧಾನಿಗಳ ಆಗ್ರಹದ ಮೇರೆಗೆ ಶ್ರೀ ಗುರು ಷಟ್‌ಸ್ಥಲ ಬ್ರಹ್ಮಿ ಬಾಲತಪಸ್ವಿ ಬೃಹನ್ಮಠ ಹೋಟಗಿ ಇವರ ಶುಭಾಗಮನವಾಯಿತು ಶ್ರೀಗಳವರ ನೇತೃತ್ವದಲ್ಲಿ ೨೬೬ ಮಂದಿಗೆ ಮೂಳಕೊಡಿ, ಹತ್ತೂರ, ಮುಳೂರ, ಕಲ್ಲೂರ, ನೆಗಳೂರ, ಜೈನಾಪೂರ, ಸೂರಪೂರ ಮುಂತಾದ ಪಟ್ಟದದೇವರ ಗುರುತ್ವ ಶಾಖಾನುಸಾರವಾಗಿ, ದೀಕ್ಷಾ ಸಂಸ್ಕಾರವು ವೇದೋಕ್ತ ವಿಧಾನಪೂರ್ವಕ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಮೋಕ್ಷಪ್ರದವಾದ ಈ ಮಂಗಳ ಕಾರ್ಯದಲ್ಲಿ ಶ್ರೀಮಂತ ರೇವಣಸಿದ್ದಪ್ಪ ಗೌಡ, ಶಂಕರಪ್ಪ ಡೊಳ್ಳೆ, ಸಿದ್ಧರಾಮಪ್ಪಾ ಡೊಳ್ಳೆ, ಆನಂದರಾವ ಪಾಟೀಲ ವಗೈರೆ ಪ್ರತಿಷ್ಠಿತರು ಭಾಗವಹಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾದರು ಈ ವಿಷಯವನ್ನು ತಿಳಿಸಲು ಅತ್ಯಂತ ಆನಂದವೆನಿಸುತ್ತದೆ (11 11 35) ಸೋಮವಾರ ಸೋಲಾಪೂರ ತಾಲ್ಲೂಕು ಪೈಕಿ ಮುಕ್ಕಾಂ, ವಿಂಚೂರದಲ್ಲಿಯ ಜನರ ಅಪೇಕ್ಷೆಯ ಮೇರೆಗೆ ಹೋಟಗಿ ಶ್ರೀಗಳವರ ಆಗಮನವಾಯಿತು ಶ್ರೀಗಳವರ ನೇತೃತ್ವದಲ್ಲಿ ನೂರಾತೊಂಬತ್ತೈದು ಮಂದಿಗಳಿಗೆ ಮುಳ್ಳೂರ, ಕಲ್ಲೂರ, ನೆಗಳೂರ, ಜೈನಾಪೂರ, ಸೂರಪುರ, ಮುಂತಾದ ಪಟ್ಟದೇವರ ಗುರುತ್ವ ಶಾಖಾನುಸಾರವಾಗಿ (ತಾ|| 19-11 35) ಮಂಗಳವಾರದ ದಿವಸ ದೀಕ್ಷಾ ಸಂಸ್ಕಾರವು ವೇದೋಕ್ತವಿಧಾನವಾಗಿ ನೆರವೇರಿಸಲ್ಪಟ್ಟಿತು ಈ ಮಂಗಳಕರವಾದ ಕಾರ್ಯದಲ್ಲಿ ಸೋಮಣ್ಣ ಮಾಸ್ತರ, ಭೀಮಾಣ್ಣಾ ಮಾಸ್ತರ, ಮಲಕಪ್ಪಾ ಮಾಸ್ತರ ಸಿದ್ಧಗೊಂಡಾಪಾಟೀಲ, ಮಾಲಿಪಾಟೀಲ ಮೊದಲಾದವರು ವಿಶೇಷ ಪರಿಶ್ರಮ ವಹಿಸಿಕೊಂಡು ಪುಣ್ಯಭಾಗಿಗಳಾದರು ಇದರಂತೆ ಎಲ್ಲರಿಗೂ ಸದ್ಬುದ್ಧಿಯನ್ನು ಕೊಟ್ಟು ರಕ್ಷಿಸಲೆಂದು ಜಗದಾಚಾರ್ಯರ ಚರಣಾರವಿಂದದಲ್ಲಿ ಪ್ರಾರ್ಥಿಸುತ್ತೇನೆ ಈ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ಒಂದುರೂಪಾಯಿ ಸಮರ್ಪಿಸಲ್ಪಟ್ಟಿತು

ಓರ್ವ ಗುರುಭಕ್ತ,
ರಾಮಚಂದ್ರಪ್ಪ ಭೀಮರಾವ,
ಬರಜದಾರ ನೋಕ್ಷರ

ಕಾಂತೂರಿನ ಜಂಗಮ ಭಕ್ತಾಗ್ರಣಿಗಳಾದ ಶ್ರೀಮಾನ್ ಹೇರೂರ ಶಂಕರಣ್ಣನವರ ನಿಧನ

ಗುಲಬುರ್ಗಾ ಜಿಲ್ಹಾ ಕಾಂತೂರು ನಿವಾಸಿಗಳಾದ ಶ್ರೀಮಾನ್ ಹೇರೂರ ಶಂಕರಣ್ಣನವರು ಕಾರ್ತಿಕ ಶುದ್ಧ ಚೌತಿ ಗುರುವಾರ ರಾತ್ರಿ ಧರ್ಮಪುರವೆಂಬ ಗ್ರಾಮದಲ್ಲಿ ಕೈಲಾಸವಾಸಿಗಳಾದರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ವಿಷಾದವೆನಿಸುತ್ತದೆ ಇವರಿಗೆ ಅವಸಾನಕಾಲದಲ್ಲಿ ೭೦ ವರ್ಷಗಳಾಗಿದ್ದವು ಇವರು ಅದೇ ದಿವಸ ಮುಗುಳನಾಗಾವಿ ಕಟ್ಟೀಮನೆ ಹಿರೇಮಠದ ಶಂಬಸವೇಶ್ವರಸ್ವಾಮಿಗಳ ಪುಣ್ಯತಿಥಿಗೋಸ್ಕರವಾಗಿ ಮಧ್ಯಾಹ್ನ ೧೨|| ಘಂಟೆಯ ರೈಲಿಗೆ ಮಳೇಮಠದೇವರೊಂದಿಗೆ ಹೊರಟು ಸಾಯಂಕಾಲ ೫ ಘಂಟೆಗೆ ಮರ್ತೂರು ಸ್ಟೇಷನ್ನಿಗೆ ಇಳಿದು ಮುಗುಳನಾಗಾವಿಗೆ ಕಾಲುನಡಿಗೆಯಿಂದಲೇ ಹೊರಡಲುದ್ಯುಕ್ತರಾಗಿ ಕತ್ತಲೆಯಾದ ಪ್ರಯುಕ್ತ ಮಧ್ಯಮಾರ್ಗದಲ್ಲಿದ್ದ ಧರ್ಮಪುರವೆಂಬಗ್ರಾಮದಲ್ಲಿರುವ ಮಠದಲ್ಲಿ ಉಳಿದುಕೊಂಡರು ಎಲ್ಲರೂ ನಿದ್ರಿಸುತ್ತಿದ್ದು ಬೆಳಗಿನ ೪ ಘಂಟೆ ಸಮಯದಲ್ಲಿ ಮಳೇಮಠದೇವರು ವಿದ್ಯಾರ್ಥಿಗಳು ಹೊರಡುವದಕ್ಕೆ ಇವರನ್ನು ಎಬ್ಬಿಸಲಿಕ್ಕೆಂದು ಹೋಗಿ ನೋಡುವಲ್ಲಿ ಮಲಗಿದವರು ಮಲಗಿದ ಹಾಗೆಯೇ ಪಕ್ಕದಲ್ಲಿ ಮಲಗಿಕೊಂಡಿದ್ದ ಮಠದೇವರ ಕಡೆಗೆ ಕೈಮುಗಿದು ಹಾಗೆಯೇ ಪ್ರಾಣವನ್ನು ಬಿಟ್ಟಿದ್ದರು ಮುಗಿದ ಕೈಗಳು ಮುಗಿದಹಾಗೆಯೇ ಇದ್ದವು ಈ ಪ್ರಕಾರವಾಗಿ ಮೃತರಾದುದನ್ನು ಕೇಳಿ ಯಾರಿಗೆ ತಾನೇ ಆಶ್ಚರ್ಯವೆನಿಸದಿರದು "ಶರಣರ ಅರಿವು ಮರಣದಲ್ಲಿ" ಎಂಬ ಗಾಧಾವಾಕ್ಯವು ಸ್ಮೃತಿಪಥಕ್ಕೆ ಬಾರದಿರದು ಇವರು ಗೃಹಸ್ಥಾಶ್ರಮಿಗಳಾಗಿದ್ದುಕೊಂಡು ಲೌಕಿಕ ಪಾರಮಾರ್ಥವೆರಡನ್ನು ನಡೆಯಿಸುತ್ತ ಕುಂಬಾರ ಹುಳದಂತೆಯೂ ನೀರಿನಲ್ಲಿರುವ ಕಮಲದಂತೆಯೂ ನಾಲಿಗೆಗೆ ಹತ್ತಿದ ತುಪ್ಪದಂತೆಯೂ ಇದ್ದುಕೊಂಡು ಸಂಸಾರವ್ಯವಹಾರವನ್ನು ನಡೆಯಿಸಿಕೊಂಡು ಹೋಗುತ್ತಿದ್ದರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಕುಶಲಮತಿಗಳೂ ಬಂಧುಪ್ರೇಮಿಗಳೂ ಗುರುಲಿಂಗ ಜಂಗಮಸೇವಾಧುರೀಣರೂ ಆಗಿದ್ದರಲ್ಲದೆ ಇವರು ಸದ್ಗುಣಗಳ ಸಮೂಹವೇ ಮೂರ್ತಿಮತ್ತಾಗಿದ್ದಂತೆ ಇದ್ದರು ಇವರು ಹಸಿದುಬಂದ ಜಂಗಮರನ್ನು ಊಟಮಾಡಿಸದೆ ಎಂದಿಗೂ ಹಿಂದಕ್ಕೆ ಕಳಿಸಿದವರಲ್ಲ, ಜಂಗಮವೇ ತಮ್ಮ ಪ್ರಾಣವೆಂದೂ ತಮ್ಮ ಪ್ರಾಣವೇ ಜಂಗಮವೆಂದೂ ಇವರ ಭಾವನೆಯಾಗಿದ್ದಿತು ಮತ್ತು ಸ್ತುತಿನಿಂದೆಗಳಿಗೆ ಹಿಗ್ಗಿ ತಗ್ಗಿದವರಲ್ಲವು ಯಾವಾಗಲೂ ಶಿವಾನುಭವವಿಚಾರದಲ್ಲಿ ಮಗ್ನರಾಗಿರುತ್ತಿದ್ದರು ಇಂತ ಸದ್ಭಕ್ತರು ಈಗಿನ ಕಾಲದಲ್ಲಿ ದೊರೆಯುವದು ದುರ್ಲಭವು ಇವರ ಅಂತ್ಯೇಷ್ಟಿಸಂಸ್ಕಾರವಾದರೋ ಮುಗುಳನಾಗಾವಿ ಪಟ್ಟಾಧ್ಯಕ್ಷರಾದ ಸಿದ್ಧಲಿಂಗಶಿವಾಚಾರ್ಯಸ್ವಾಮಿಗಳವರ ಕಡೆಯಿಂದಲೂ ಮತ್ತು ಧರ್ಮಪುರದ ವೀರಶೈವ ಮತಬಾಂಧವರಿಂದಲೂ ವೈಭವದೊಡನೆ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು ಇವರು ಮುಗುಳನಾಗಾವಿ ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರಲ್ಲಿ ಸುಮಾರು ಹನ್ನೆರಡು (೧೨) ವರ್ಷಗಳಲ್ಲಾಗಾಯಿತು ಅತ್ಯಂತವಾದ ಭಕ್ತಿಯನ್ನಿಟ್ಟು ಅವರು ಹೇಳಿದ ಆಜ್ಞೆಯನ್ನು ಸ್ವಲ್ಪವೂ ಮೀರದೆ ಕೇವಲ ಕಿಂಕರಭಾವದಿಂದ ನಡೆದುಕೊಳ್ಳುತ್ತಿದ್ದರು ಹಗಲಿರುಳು ಆ ಸ್ವಾಮಿಗಳವರ ಪಾದಧ್ಯಾನದಲ್ಲಿಯೇ ಆಸಕ್ತರಾಗಿರುತ್ತಿದ್ದರು. ಇಂಥ ಗುರುಭಕ್ತರನ್ನು ಕಳೆದುಕೊಂಡುದು ನಮ್ಮಗಳ ದುರ್ದೈವವೆಂದೇ ಹೇಳಬೇಕು ಇವರ ಆತ್ಮಕ್ಕೆ ಜಗದೀಶ್ವರನು ಶಾಂತಿಸುಖವನ್ನು ಕೊಡುವದಲ್ಲದೆ ಇವರ ಕುಟುಂಬ ವರ್ಗಕ್ಕೆ ಮನಸ್ಸಮಾಧಾನವನ್ನೀಯಲೆಂದು ಬೇಡಿಕೊಳ್ಳುತ್ತೇನೆ

ಬಸಪ್ಪ ಸಾಹುಕಾರ್,
ಗೋಳಿ ಮುಗುಳನಾಗಾವಿ

ಸ್ವೀಕಾರ

ಸೋಲಾಪುರದ ತಾಲ್ಲೋಕು ವಿಂಚೂರಗ್ರಾಮದಲ್ಲಿ ಹೋಟಗಿ ಶ್ರೀಗಳವರ ನೇತೃತ್ವದಲ್ಲಿ ನಡೆದ ವಟುಗಳ ದೀಕ್ಷಾಸಮಾರಂಭಕಾಲದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ ಯು ಹೋಟಗಿ ಶ್ರೀಗಳವರ ದ್ವಾರಾ ತಲ್ಪಿರುತ್ತದೆ

ಈ ಮೌಲ್ಯಂತ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ತನ್ನ ಪೂರ್ವಜನ್ಮ ವೃತ್ತಾಂತವನ್ನು ಬಲ್ಲ ಹುಡುಗಿ

ಹೊಸದಿಲ್ಲಿಯ ಲಾಲಾಸಿಂಗ್‌ಬಹದ್ದೂರ್ ಎಂಬುವರ ಮಗಳಾದ ಶಾಂತಾ ಎಂಬ ೮ ವರ್ಷ ವಯಸ್ಸಿನ ಹುಡುಗಿಯು ತನ್ನ ಪೂರ್ವಜನ್ಮದ ವೃತ್ತಾಂತವನ್ನು ಹೇಳುತ್ತಿದ್ದಾಳೆ ಈಕೆಯು ತನ್ನ ಹಿಂದಿನ ಜನ್ಮದಲ್ಲಿ ಮಥುರಾಪಟ್ಟಣದಲ್ಲಿ ಒಬ್ಬನನ್ನು ಮದುವೆಯಾಗಿದ್ದೆನೆಂದು ಆತನ ವಿಳಾಸವನ್ನು ಹೇಳಿದಳು ಅದರಂತೆ ವಿಚಾರಿಸಿ ಆತನ ತಮ್ಮನನ್ನು ಕರೆದುತರಲು ಅವನನ್ನು ಗುರುತುಹಿಡಿದಳು 15 11-3೫ರಲ್ಲಿ ಆಕೆಯ ಪೂರ್ವಜನ್ಮ ಪತಿಯು ಬರಲು ಕೂಡಲೆ ಆತನನ್ನು ಗುರುತಿಸಿ, ತನ್ನ ಹಿಂದಿನ ಜನ್ಮದಯೋಗಕ್ಷೇಮವನ್ನೆಲ್ಲಾ ವಿಚಾರಿಸಿದಳು ಅಷ್ಟರಲ್ಲೇ ಜ್ಞಾಪಿಸಿಕೊಂಡು ತಾನು ದೇವರ ಹರಿಕೆಗೆಂದು 100 ರೂಪಾಯಿಗಳನ್ನು ಹೂತಿಟ್ಟಿರುವೆನೆಂದೂ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನು ಜೀವಸಹಿತ ಉಳಿದರೆ ಅವನ ಶ್ರೇಯಸ್ಸಿಗಾಗಿ ಆ ಹಣವನ್ನು ದೇವರಿಗೆ ಸಮರ್ಪಿಸಬೇಕೆಂದು ಇಟ್ಟಿದ್ದೆನೆಂದು ಹೇಳಿದಳು ಆ ಮಗನು ಈಗ 11 ವರ್ಷ ವಯಸ್ಸಿನವನಾಗಿರುವನು ದಿಲ್ಲಿಯಲ್ಲಿ ಜನ್ಮವೆತ್ತುವ ಪೂರ್ವ ಬೇರೊಂದು ಕಡೆ ಈಕೆಯು ಹುಟ್ಟಿ ೩½ ವರ್ಷ ಬೆಳೆದು ಮೃತಳಾದೆನೆಂದು ಹೇಳುತ್ತಾಳೆ. ಈಕೆಯು ಪೂರ್ವಜನ್ಮ ಪತಿಯು ಇವಳು ಹೇಳಿದ 100 ರೂಪಾಯಿಗಳನ್ನು ಹೂತಿಟ್ಟ ಸ್ಥಳದಲ್ಲಿದೆಯೊ ಇಲ್ಲವೋ ಎಂಬ ವಿಷಯವನ್ನು ತಿಳಿಯಲು ಊರಿಗೆ ಹೋಗಿದ್ದಾನಂತೆ, ಪುನರ್ಜನ್ಮವೇ ಇಲ್ಲವೆಂದು ವಾದಿಸುವ ನಾಸ್ತಿಕರಿಗೆ ಇದೊಂದು ಪ್ರಬಲ ನಿದರ್ಶನವಾಗಿದೆ.

ಪತ್ರವ್ಯವಹಾರ

ಬಾತ್ಮೀದಾರರು ಅಭಿಪ್ರಾಯಪಡುವ [illegible] ಪತ್ರಿಕೆ [illegible] ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾ[illegible] ಪ್ರತಿಷ್ಠಿತ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ

ಶ್ರೀ ಜಗದ್ಗುರು

ಶಿವಾನಂದರಾಜೇಂದ್ರ ಶಿವಾಚಾರ್ಯ

ಮಹಾಸ್ವಾಮಿಗಳವರ

ಅಡ್ಡಪಲ್ಲಕ್ಕಿಯ ಮಹೋತ್ಸವ ಸಂಭ್ರಮ

ಹಾವೇರಿ

ಹಾವೇರಿಯು ಧಾರವಾಡ ಡಿಸ್ಟ್ರಿಕ್ಟಿನಲ್ಲಿ [illegible] ತಾಲೂಕ ಸ್ಥಲವಿದ್ದು ವ್ಯಾಪಾರ [illegible] ಪ್ರಸಿದ್ಧವಾಗಿರುವುದು [illegible]ದಲ್ಲಿ [illegible] ತರ ಸ[illegible] ವಿರಾಸದ ಗತ್ತು [illegible] ರದ ಗಾರತು ಒಂದು [illegible] ಈ ಸ್ಥಲವು ಶ್ರೀ ಜಗದ್ಗುರು [illegible] ರಕ್ಕೆ ಪ್ರೇಮಾವಂಸನ್ನ ಸರೆಂದ [illegible] ವಿಲ್ಲ. ಇಂತಹ ಹಾವೇರಿಯ [illegible] ಪುರಿ ಜಗದ್ಗುರುಗಳವರನ್ನ ಪರಮನಾದಿ [illegible] ಬರಲು ಸತ್ಸ ಕಲವನ್ನ [illegible] ಪ್ರಕರ [illegible] ಕೊಂಡು ಶ್ರೀ ಮಹಾ [illegible] ನ್ನ ಪಡಪ ತಾ|| [illegible] ಮಹೋತ್ಸ [illegible] ಶ್ರೀಣಪತ್ರಿಕೆಯ [illegible] ಪ್ರಸಿದ್ಧಮಾಡಿದ್ದ [illegible] ತೋರಣಮಂಟಪ [illegible] ಪುರವು ಅಲಂಕೃತ ತ ಮಹಾ [illegible] ಸಂದರ್ಭ [illegible] ಗುರುಭಕ್ತರ ದರ್ಶನದ ಅಂದ್ಯಸಾವ [illegible] ಗೂಳಿಸಲ್ಪಟ್ಟಿತು. ಒಂದು ಎಂದವರನ್ನು [illegible] ಪೌರರ ಸಡಗರವು ವಿಶೇಷವಾಂತ ಶ್ರೀ ಜಗದ್ಗುರುಗಳವರ ಪುರಪ್ರವೇಶೋತ್ಸವವನ್ನ ಸಂದಣಾಗಿ ನರವೇರಿಸಲು ಬ್ರಿಟಿಷ ಗೌರ್ನಮೆಂಟಿನ ಜಿಲ್ಲಾ ಪ್ರಭುತ್ವದಲ್ಲಿ [illegible] ಅಲಂಕೃತವಾಗಿ ಸಿದ್ಧವಾಯಿತು. ಗುರುಮನೆಯ ಪ್ರಭುತ್ವವೇ ನವಮಾನ್ಯ [illegible] ಇದಕ್ಕೆ ಜಗದಿ [illegible] ಶ್ರೀಮಹಾ ಗುರುಪುಂಗವರು ತಾ|| [illegible] ಸೋಮವಾರ ಬೈಡಿಗಿ ವೀರಶೈವರ ಪ್ರಾರ್ಥನೆಯ ಸ್ವೀಕಾರ ಬ್ಯಾಡಗಿ ಮುಕ್ಕಾಂ ಮಾಡಿ ಅಖಿಲಭಕ್ತರನ್ನು ಸದ್ಬೋಧದಿಂದ ತೃಪ್ತಿಗೊಳಿಸಿ [illegible] ಮೊದಲಿಯ [illegible] ಲಂದ ಮಾಡಲ್ಪಟ್ಟ ಅವರ ಸೇವೆಯ [illegible] ಕೊಂಡು ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ಹಾವೇರಿಗೆ ಬಿಜಯಂಗೈಸಲು ತಮ್ಮ ಪರಿವಾರಕ್ಕೆ ಅಪ್ಪಣೆಯನ್ನು ಮಾಡಿದರು. ಕೂಡಲೇ ಮಹಾಸಂಸ್ಥಾನದ ಸಕಲ ಸಾವಗ್ರಿಗಳೂ ಹಾವೇರಿಗೆ ಸಾಗಿಸಲ್ಪಟ್ಟವು. ಗಜ ಶ್ವವಾಹಕರೂ ತಮ್ಮ ತಮ್ಮ ವಾಹನದೊಡನೆ ಒಂದು ಪುರದ ಶೋಭೆಯನ್ನ ಹೆಚ್ಚಿಸಲು ಕಾರಣರಾದರು. ಪ್ರಸಿದ್ಧ ಪತ್ರಿಕೆಯಿಂದ ತೋರಿಸಲ್ಪಟ್ಟ ಮುಹೂರ್ತಕ್ಕೆ ಸರಿಯಾಗಿ ಬುಕಾಚಾರ್ಯರಿಂದ ಕಡೇನಂದಿಹಳ್ಳಿ ಸಾಗರದ ಹೊಳೇಹೊನ್ನೇಶ್ವರ ಮಠಾಧ್ಯಕ್ಷ ಬ್ರ|| ಪಂ|| ಚರಮೂರ್ತ್ಯಧ್ಯಕ್ಷ ಮಹಾಲಿಂಗಶಿವಾಚಾರ್ಯರೂ ಬೆಂಗಳೂರು ಮಹಾಂತಿನಮಠಾಧ್ಯಕ್ಷ ರಾ|| ಬ್ರ|| ಪಂ|| ಶ್ರೀ ಗಂಗಾಧರ ಶಿವಾಚಾರ್ಯರೂ ಸೊಂಡಿಬ್ಬ [illegible] ರಾಧ್ಯಕ್ಷ ರಾ|| ಬ್ರ|| ಪಂ|| ಶ್ರೀ ಉಪಾಸಕ ಶಿವಾಚಾರ್ಯರೂ [illegible] ಬೃಹನ್ಮಠಾಧ್ಯಕ್ಷ ರಾ|| ಬ್ರ|| ಶ್ರೀ ಚರಪಟ್ಟಾಧ್ಯಕ್ಷಸ್ವಾಮಿಗಳವರೂ ಬಂಕಾಪುರ ಅರಳೆಲೆ ಮಠಾಧ್ಯಕ್ಷ ರಾ|| ಬ್ರ|| ಶ್ರೀ [illegible]ಗಳವರೂ ಬನ್ನಿಹಟ್ಟಿ ಮಠಾಧ್ಯಕ್ಷ ರಾ|| ಬ್ರ|| ಶ್ರೀ [illegible]ದಸ್ವಾಮಿಗಳವರೂ ಕ್ಯಾಸನೂರು ಮಠಾಧ್ಯಕ್ಷ ರಾ|| ಬ್ರ|| ಶ್ರೀ ಪಟ್ಟದಸ್ವಾಮಿಗಳವರೂ ಮುಂತಾದ ಗುರುಕುಲಾಗ್ರಣಿಗಳು ಆಗಮಿಸಿದ್ದರು ಮತ್ತು ವೇ|| ಹಿರೇಮಠದ ಸೋಮಯ್ಯನವರು ವೇ|| ನರೇಂದ್ರಮಠದ ಗುರುಸಿದ್ಧಯ್ಯನವರು ವೇ|| ಹಿರೇಮಠದ ವಕೀಲರೂ ಶ್ರೀಮಾನ್ ರಾವ್‌ಸಾಹೇಬ ಮಂಟಣಗುಶೆಟ್ಟರು ಶ್ರೀಮಾನ್ ಸಿಂಗಿರಿ ಚನ್ನಬಸಪ್ಪನವರು ಶ್ರೀಮಾನ್ ಮಿಳ್ಳಿ[illegible]ಪಿಂಪಟ್ಟಿ [illegible] ಶೆಟ್ಟರು ಶ್ರೀಮಾನ್ ಬೆಳ್ಳಿ [illegible]ನವರು ಶ್ರೀಮಾನ್ ಸಿಂಗಳೆ ಮಹಿಮಾ[illegible]ನವರು ವೇ|| [illegible] ಗಯ್ಯನವರು ವೇ|| [illegible] ಶ್ರೀಮಾನ್ ಎಸ್ [illegible] ಶ್ರೀಮಾನ್ [illegible] ಪ್ರಜೆಸ್ತ [illegible] ಶ್ರೀಮಾನ್ [illegible]ನವರು ಬಾಕೀ [illegible] ಶ್ರೀಮಾನ್ [illegible]ನವರು [illegible] ಮುಂತಾದ ವೇ|| [illegible] ಮೊದಲಾದ [illegible] ಮಹಾಜನಗಳು [illegible] ಸಿಗ್ಗಲಿ [illegible] ಪುರ [illegible] ಬಗಡಿ [illegible] ದವಣಗೆರೆ [illegible] ನಗ್ಲಿ [illegible] ವರದಿಗರ, ಶಿರಾಕೊಪ್ಪ [illegible] ಅನೇಕ ಪ್ರದೇಶ [illegible] ದಿಕ್ಕುಗಳ ಬಂದ್ದರು [illegible] ಬುದ್ಧಿವಂತರು [illegible] ತಮ್ಮ ತಮ್ಮ ಇಷ್ಟ [illegible] ಸಂಪನ್ನವಾದ [illegible] ವಿರಕ್ತ ಮಠ [illegible] ಜಗದ್ಗುರು ಪಂಚಾ[illegible] ಜನಸ ಕತನ್ನ [illegible] ಮಾಡಲು ಒದ್ದ [illegible] ಸತ್ಯವಂತ [illegible] ಸಿದ್ಧೇಶ್ವರ [illegible] ಇದ್ದ ನಿಲ್ಲಾ [illegible] ಮಂಗಳ [illegible]ವನ್ನು [illegible] ಮಾಡಿ [illegible] ಸ್ವೀ[illegible] ತಮ್ಮ ಪರಿವಾ[illegible] ತ್ಯಾಜ್ಯಸ್ವರವರು [illegible] ಕಂತ [illegible] ದೊಡನೆ [illegible] ಮಾಡಿತು ಮಹಾಗುರುಗಳವರ [illegible] ಜನರ ಜರಿಗ [illegible] ಸ್ವೀಕರಿಸಿ ಸರ್ವರ ಪರಿ[illegible]ವನ್ನು ಮಾಡಿ [illegible] ದರ್ಶನಾಪೇಕ್ಷಿತರ [illegible] ರೋಹಿಸಿದರು. ಕಂಠಾಡನ ದೂರದ ಜಯಘೋಷವು ಯಿತು. [illegible] ಬಿರುದಾವಳಿ [illegible] ಘೋಷ [illegible] ಇಷ್ಟು ತೆರದ [illegible] ಪವಮು ಸಂಗೀತವೇ ನದೊಡನೆ ಶಿವ ಭಜನವನ್ನು ಪ್ರಾರಂಭಿಸಿದರು. ಸಂತಾ[illegible] [illegible] ಆರಂಭವಾಯಿತು. ಸರಕಾರಿ ಪ್ರಭುತ್ವದವರ ವಕ್ಷಿಯಿಂದ ಉತ್ಸವವು ಶಾಂತರೀತಿಯಿಂದ ಪ್ರಜಲಿತವಾಯಿತ. ಪುರವೀಥಿಗಳಲ್ಲಿ ಧರ್ಮವೀರರು ತಮ್ಮ ತಮ್ಮ ಮನೆಗಳ ಮುಂಭಾಗದಲ್ಲಿ ಕುಟುಂಬಪರಿವಾರದೊಡನೆ ನಿಂತು ಜನವನ್ನೆತ್ತಿ ಸಲಾಂ [illegible] ದರ್ಶನ ಪಡೆದರು. ಮಹಾಗುರು ಪುರಪ್ರವೇಶೋತ್ಸವಸಮಯವು ಸರ್ವರಿಗೂ ಆನಂದದಾಯಕವಾಗಿದ್ದ ಪರಿಂದ ಉತ್ಸವದಲ್ಲಿ ನಡೆದ ಧರ್ಮೋತ್ಸಾಹವನ್ನು ವರ್ಣಿಸಲು ಅಸಾಧ್ಯವಾಗಿತ್ತು. ಇಂತಹ ವೈಭವದಿಂದ ಶ್ರೀ ಜಗದ್ಗುರುಗಳವರ ಮಹೋತ್ಸವವು ಸುಂದರವಾದ ದರ್ಬಾರಮಂಟಪಕ್ಕೆ ಬಂದ ಕೂಡಲೆ ಮಹಾಸ್ವಾಮಿಗಳವರು ಆಂದೋಲಿಕೆಯಿಂದವತರಿಸಿ ಅಲಂಕೃತವಾದ ಸುವರ್ಣ ರಜತರತ್ನಗಳ ಸಿಂಹಾಸನವನ್ನಾರೋಹಿಸಿದರು. ಕೂಡಲೆ ಸಭ್ಯರ ಕರತಾಡನಪೂರ್ವಕ ಜಯಧ್ವನಿಯಾಯಿತು. ಬಳಿಕ ವೇ|| ಹಿರೇಹರಕುಣಿ ಹಿರೇಮಠ ವಕೀಲರು ಶ್ರೀ ಮಹಾ ಜಗದ್ಗುರುಗಳವರು ಮೈಸೂರುದೇಶದ ಸಂಚಾರವನ್ನು ಪ್ರಾರಂಭಿಸಿಕೊಂಡು ಅಲ್ಲಿಯ ಭಕ್ತರನ್ನುದ್ಧರಿಸಿದಂತೆ ಬ್ರಿಟಿಷ ಪ್ರಭುತ್ವದ ಭಕ್ತರನ್ನುದ್ಧರಿಸಲು ದಯಮಾಡಿಸಿರುವುದು ಅತ್ಯಾನಂದದ ವಿಷಯವಾಗಿರುವುದು. ಈ ಸುಸಮಯದಲ್ಲಿ ಸರ್ವಭಕ್ತರೂ ಮುಂದರಿದು ಮಹಾಗುರುಸೇವೆಯನ್ನು ಮಾಡಿ ಕೃತಾರ್ಥರಾಗುವುದು ಅವಶ್ಯಕರ್ತವ್ಯವಾಗಿದೆ. ಈ ಸುಸಂಧಿಯಲ್ಲಿ ನಮ್ಮ ಹುಬ್ಬಳ್ಳಿಯ ಪ್ರಮುಖಮಹಾಶಯರು ಶ್ರೀ ಜಗದ್ಗುರುಗಳವರನ್ನು ತಮ್ಮಲ್ಲಿಗೆ ದಯಮಾಡಿಸಿಕೊಂಡು ಹೋಗಬೇಕೆಂಬುವ ಪ್ರೇಮದಿಂದ ಪೂವಮಾಲೆಯನ್ನರ್ಪಿಸುವರೆಂಬುದನ್ನು ತಿಳಿಯಪಡಿಸಿದರು. ಅದರಂತೆ ಪೂವಮಾಲಿಗಳು ಅರ್ಪಿಸಲ್ಪಟ್ಟವು. ಬಳಿಕ ಬೆಂಗಳೂರು ಮಹಾಂತಿನಮಠಾಧ್ಯಕ್ಷರಾದ ರಾ|| ಬ್ರ|| ಪಂ|| ಶ್ರೀ ಗಂಗಾಧರಶಿವಾಚಾರ್ಯರು ತಾಯಿಯನ್ನಗಲಿದ ಶಿಶುವಿನಂತೆ ಈವರೆಗೂ ಅನಾಥರಾಗಿ ದುಃಖಪಡುತ್ತಿದ್ದೆವು. ಈವಾಗ ಆಚಾರ್ಯಚರಣವನ್ನು ತನುಮನಧನಗಳಿಂದ ಸೇವಿಸಿ ಸನಾಥತ್ವದಿಂದ ಕೃತಾರ್ಥರಾಗಲು ಒದಗಿದ ಈ ಸಮಯವು ಜನ್ಮಾಂತರ ಸುಕೃತವಿಶೇಷ[illegible] ಜನ್ಯವೇ ಆಗಿರುವದು. ಇಂತಹ ಸುಸಮಯದಲ್ಲಿ ಸರ್ವರೂ ಮಹಾಗುರುಸೇವೆಯನ್ನು ಮಾಡಿ ಪುನೀತರಾಗತಕ್ಕದ್ದೆಂದು ಉಪನ್ಯಸಿಸಿದರು. ಶ್ರೀ ಮಹಾಗುರುಗಳವರು ಭಕ್ತಸಂದೋಹದ ಹೃದಯವಿಕಾಸದಿಂದುಂಟಾದ ಸೇವಾಚತುರತೆಯನ್ನು ನೋಡಿ ಆನಂದಿಸಿ ಜಗತ್ತಿನಲ್ಲಿ ಪ್ರೇಮವೆಂಬುದು ಮಹತ್ತರವಾದದ್ದು. ಇದು ಉಪಾಧಿಭೇದದಿಂದ ಹಲವು ನಾಮಗಳನ್ನು ಧರಿಸುತ್ತದೆ. ಗುರುವಿನಲ್ಲಿರುವ ಪ್ರೇಮಕ್ಕೆ ಭಕ್ತಿಯೆಂಬ ಹೆಸರಿರುವದು. ಈ ಪ್ರೇಮವು ನಿತ್ಯಸುಖವನ್ನು ಕೊಡುತ್ತದೆ. ಗುರು ದೇವತೆಗಳಲ್ಲಿ ವಿಧೇಯನಾಗಿ ಭಕ್ತಿಭಾವದಿಂದ ಶಿವಾಜ್ಞೆಯಂತೆ ನಡೆದುಕೊಂಡು ಹೋಗುವವನೇ ಸರ್ವಸುಖಿಯಾಗಿಯೂ ಎಂಬುದರ ವಿವೇಕವು ಸನಾತನಧರ್ಮಿಗೆ ಅವಶ್ಯಕವಾದದ್ದು. ಈ ಸ್ಥಿತಿಯು ಪುಣ್ಯಬಲದಿಂದಲ್ಲದೆ ದೊರೆಯುವದಿಲ್ಲ. ಈ ದಿವಸ ಮತಭೇದಗಳಿಲ್ಲದೆ ಸರ್ವರೂ ಸೌಹಾರ್ದಭಾವದಿಂದಿದ್ದು, ಮಹೋತ್ಸವಕ್ಕೆ ಭಾಗಿಗಳಾಗಿದ್ದುದು ಜಗನ್ನಿಯಾಮಕನಿಗೆ ತುಂಬಾ ಸಂತೋಷವಾಗಿದೆ. ಗುಣವಂತರೂ ಭಕ್ತಿವಂತರೂ, ಧರ್ಮಾಭಿಮಾನಿಗಳೂ ಆದ ನಿಮಗೆ [illegible] ವಾಕ್ಯ ಸಿಕ್ಕಗಳೆನಿಸಿದ ಪಾರ್ವತಿ ಪರಮೇಶ್ವರರ ಸಂತತಿ ಸಂಪತ್ತಿಗಳನ್ನು ಕೊಟ್ಟು ರಕ್ಷಿಸಲೆಂದೂ ಲೋಕದಲ್ಲಿ ಮತಗಳು ಹಲವು ವಿಧವಾಗಿರುವವು. ಎಲ್ಲ ಮತೀಯರು ತಮ್ಮ ತಮ್ಮ ಮತಸ್ಥಾಪಕರ ಅಪ್ಪಣೆಯಂತೆ ನಡೆದು ಕೃತಾರ್ಥರಾಗಬೇಕಾಗಿದೆಯಾದ್ದರಿಂದ ಸರ್ವಮತೀಯರು ತಮ್ಮ ತಮ್ಮ ಧರ್ಮದ ಅಭ್ಯಾಸಕ್ಕೆ ಉನ್ಮುಖರಾಗಿ ತಾ[illegible] ರಣೆಯನ್ನು ಸಾಗಿಸಿಕೊಂಡು ಹೋಗಲು ವಿಘ್ನ ಬಾರದಂತೆ ಅವರವರ ಧರ್ಮದಂತೆ ರಕ್ಷಣೆಯನ್ನು ಮಾಡುತ್ತಿರುವ ನಿಷ್ಪಕ್ಷಪಾತದ ಧರ್ಮಪರಿಪಾಲನೆಗೆ ಬ್ರಿಟಿಷ್ ಪ್ರಭುತ್ವವು ಆಚಂದ್ರಾರ್ಕವಾಗಿರಲೆಂದೂ ಸಧ್ಯ ಕಾಲದ ಚಕ್ರವರ್ತಿಗಳಾದ ಪಂಚಮ ಜಾರ್ಜ್ ಸಾರ್ವಭೌಮರು ಪತ್ನೀಪುತ್ರರೊಡನೆ ಚಿರಕಾಲ ರಾಜ್ಯಭಾರವನ್ನು ಮಾಡಲೆಂದೂ ಹರಸಿದರು. ವೇಳೆಯು ವಿಶೇಷವಾದ್ದರಿಂದ ಆಚಾರ್ಯಜಯಘೋಷದೊಡನೆ ಸಭೆಯು ವಿಸರ್ಜಿತವಾಯಿತು. ಪುನಃ ಸಾಯಂಕಾಲ ಆರುವರೆ ಘಂಟೆಗೆ ದರ್ಬಾರು ಆರಂಭವಾಯಿತು. ವೇ|| ಎಳೆಹೊಳೆಮಠದ ಬಸಪ್ಪಯ್ಯನವರು ಜಗದ್ಗುರುಗಳ ವಿಷಯವಾಗಿ ರಚಿಸಿದ್ದ ಪದ್ಯಗಳನ್ನೋದಿದರು. ಶ್ರೀ ಮಹಾಸನ್ನಿಧಾನದ ಅಪ್ಪಣೆಯನ್ನು ಪಡೆದು ವೇ|| ಪಂ|| ಪುರಾಣರತ್ನ ಬಸವಲಿಂಗಶಾಸ್ತ್ರಿ ಆರಾಧ್ಯಮಠ ಸುಣ್ಣಕಲ್ಲು ಬಿದರಿ, ಇವರು ಪುಣ್ಯಲಭ್ಯವಾದ ಮನುಷ್ಯಜನ್ಮದಲ್ಲಿ ಮಾಡಬೇಕಾದ ಕಾರ್ಯವನ್ನು ಮಾಡಿ ಮುಕ್ತರಾಗುವುದು ಪ್ರತಿಯೊಬ್ಬನ ಕಾರ್ಯವಾಗಿದೆ. [illegible]ಗೊಡ್ಡಿದ ದೀಪದಂತೆ ಅಸ್ಥಿರವಾದ ಸಂಸಾರಗರ್ತದಲ್ಲಿ ಬಿದ್ದು ಜಗನ್ನಿಯಾಮಕನ ಕಟ್ಟಳೆಯನ್ನು ಮರೆತು ವ್ಯರ್ಥ ಸರಳುತ್ತಿರುವುದು ಮನುಷ್ಯಜನ್ಮಕ್ಕೆ ತಕ್ಕುದಲ್ಲ. ಪ್ರತಿಯೊಬ್ಬ ಸನಾತನ ಧರ್ಮಿಯು ತಮ್ಮ ತಮ್ಮ ಕರ್ತವ್ಯಕರ್ಮದ ಕಡೆಗೆ ಲಕ್ಷ್ಯವನ್ನು ಕೊಟ್ಟು ಸುಖಕ್ಕೆ ಭಾಗಿಯಾಗಬೇಕು. ಈ ತತ್ವವನ್ನು ಧ್ಯಾನಿಸಿ ಹಾವೇರಿಯ ಮಹಾಜನಗಳು ಜಗದ್ಗುರುಗಳವರನ್ನು ದಯಮಾಡಿಸಿಕೊಂಡುಬಂದು ತನುಮನೋಧನಗಳನ್ನರ್ಪಿಸಲು ಸಿದ್ಧರಾಗಿರುವುದು ಅವರ ಕೃತಾರ್ಥತೆಗೆ ಕಾರಣವಲ್ಲದೆ ಸರ್ವಜಗದ ಜನಗಳಿಗೂ ಸೌಭಾಗ್ಯವನ್ನು ಮೊರಕಿಸಿಕೊಟ್ಟುದು ತುಂಬಾ ಶ್ರೇಯಸ್ಕರವಾಗಿರುವುದು ಎಂದು ಉಪನ್ಯಸಿಸಿದರು. ಬಳಿಕ ಮಹಾಸಂಸ್ಥಾನದ ಕಾರಭಾರಿಗಳಾದ ವೇ|| ಪಂ|| ಹರೀಶ್ವರಶಾಸ್ತ್ರಿ ಆರಾಧ್ಯಮಠ ಸುಣಕಲ್ಲಬಿದರಿ ಇವರು ಮುಂದಿನ ಕಾರ್ಯಗಳನ್ನು ಸೂಚಿಸಿದರು. ಅನಂತರ ವೇ|| ಹಿರೇಹರಕುಣಿ ಹಿರೇಮಠ ವಕೀಲರು ಹುಬ್ಬಳ್ಳಿ ಇವರು ಹಾವೇರಿಯ ವೀರಶೈವ ಮಹಾಶಯರ ಪರವಾಗಿ ಬಿನ್ನವತ್ತಳೆಯನ್ನು ಓದಿ ಶ್ರೀ ಮಹಾಸನ್ನಿಧಾನಕ್ಕೆ ಅರ್ಪಿಸಿದರು. ಶ್ರೀ ಪೂಜ್ಯಭಗವತ್ಪಾದರು

ಬಿನ್ನವತ್ತಳೆಯಲ್ಲಿ ನಿರ್ದಿಷ್ಟಗಳಾದ ವಿಷಯುಗಳನ್ನು ಒಂದೊಂದಾಗಿಯೇ ತೆಗೆದುಕೊಂಡು ಶಾಸ್ತ್ರಪೂರ್ವಕವಾಗಿಯೂ, ಸಯುಕ್ತಿಕವಾಗಿಯೂ ತದ್ದ್ವಾರಾ ಪ್ರಕೃತಸಿದ್ಧಾಂತವು ಸರ್ವರಿಗೂ ಗೋಚರವಾಗುವಂತೆ ಉತ್ತರರೂಪವಾಗಿ ಅಪ್ಪಣೆಯನ್ನು ಕೊಡಿಸಿದ ಶುಭಚಿತ್ತವಿಕಾಸವಾಗುವಂತೆ ಮಾಡಿಸಿ ಚಳ್ಳಕೆರೆಗಳ ಪ್ರತಿನಿಧಿಗಳಾದ ತಾಲ್ಲೂಕು ಧನಿಗಳು, ಪೋಲೀಸ್ ಇನ್ಸ್‌ಪೆಕ್ಟರ್ ಸಾಹೇಬರು ಈ ದಿವಸದ ಉತ್ಸವವನ್ನು ಬಹುಮುಖವರ್ಜಿಯಾಗಿ ಮಾಡಿಸಿ ವೀರಶೈವ ಸಮಾಜಕ್ಕೆ ಆನಂದವನ್ನುಂಟುಮಾಡಿದ್ದರಿಂದ ಇವರು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದು ಆಶೀರ್ವದಿಸಿದರು. ವೇಳೆಯಾದ್ದರಿಂದ ಸಭೆಯು ವಿಸರ್ಜಿತವಾಯಿತು. ತಾ|| ೧೯-೧೧-೧೯೩೫ ಗುರುವಾರ ಸಾಯಂಕಾಲಕ್ಕೆ ಸಭೆಯು ಪ್ರಾರಂಭವಾಗಿ ಗುರುಸೇವೆಯನ್ನು ಮಾಡುವುದಕ್ಕಾಗಿ ಬಂದಿದ್ದ ಶ್ರೀಮಾನ್ ಮೈಸೂರು ಮಹಾಸಂಸ್ಥಾನದ ಆಸ್ಥಾನವಿದ್ವಾನ್ ದೇವೇಂದ್ರಪ್ಪನವರ ಸಂಗೀತವೂ ಪಿಟೀಲು ಮತ್ತು ಜಲತರಂಗವಾದನವೂ ಇದರ ಜೊತೆಗೆ ಕೊಳಲು ಮೃದಂಗ ವಾದಕರ ವಾದ್ಯವಾದನವೂ ಬಹು ವಿಜೃಂಭಣೆಯಾಗಿ ಜರಗಿತು. ತಾರೀಖು ೧೫-೧೧-೧೯೩೫ ನೆಯ ಶುಕ್ರವಾರ ಸಾಯಂಕಾಲವೂ ದರ್ಬಾರು ನಡೆದು ಬೀರೂರು ಕೀರ್ತನಾಲಂಕಾರ ವೇ|| ನಂಜುಂಡಾರಾಧ್ಯರ ಬ|| ಯವರಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಕೀರ್ತನವೂ ಬೆಂಗಳೂರು ಮಹಾಂತಿನಮಠದ ಷ|| ಬ್ರ|| ಶಂ|| ಶ್ರೀ ಗಂಗಾಧರಶಿವಾಚಾರ್ಯರ ಸದ್ಬೋಧದ ಅವಶ್ಯಕತೆಯು ಎಂಬ ವಿಷಯದಮೇಲೆ ಭಾಷಣವಾಯಿತು. ತಾ|| ೧೬-೧೧-೧೯೩೫ ರಲ್ಲಿ ಶಕ್ತಿವಿಶಿಷ್ಟಾದ್ವೈತವೆಂಬ ವಿಷಯಕವಾಗಿ ಕಡೆನಂದೀಹಳ್ಳಿ ಸೋಮೇಶ್ವರಮಠದ ಷ|| ಬ್ರ|| ಶಂ|| ಮಹಾಲಿಂಗಶಿವಾಚಾರ್ಯರ ಉಪನ್ಯಾಸವು ಜರಗುವುದೆಂದು ಸೂಚಿಸಿ ಸಭೆಯು ವಿಸರ್ಜಿತವಾಯಿತು. ಇದರಂತೆ ನಿತ್ಯವೂ ಉಪನ್ಯಾಸ, ಕೀರ್ತನ, ಸಂಗೀತ, ಪುರಾಣಶ್ರವಣವು ಜರುಗುತ್ತಿರುವುದು. ಅನೇಕ ಗ್ರಾಮದ ಮಹಾಶಯರು ದರ್ಬಾರಿಗೆ ಬಂದು ಸಚ್ಛ್ರವಣವನ್ನು ಮಾಡಿಕೊಂಡು ಮಹಾಚಾರ್ಯರ ದರ್ಶನಾಶೀರ್ವಾದಗಳಂ ಪಡೆದು ಕೃತಾರ್ಥರಾಗುತ್ತಿರುವರು. ಈಗಾಗಲೇ ಎಷ್ಟೋ ಗ್ರಾಮದವರು ಶ್ರೀ ಜಗದ್ಗುರು ಮಹಾಸನ್ನಿಧಾನಕ್ಕೆ ತಮ್ಮ ತಮ್ಮ ಗ್ರಾಮಗಳಿಗೆ ದಯಮಾಡಿಸಿಕೊಂಡು ಹೋಗುವ ಕುರಿತು ಬಿನ್ನಹವನ್ನು ಮಾಡಿಕೊಂಡಿರುವರು. ಮಾಡಿಕೊಳ್ಳುತ್ತಲೂ ಇದ್ದಾರೆ. ಜನತೆಯಲ್ಲಿ ಉತ್ತರದಿಂದ ಧರ್ಮಜಾಗ್ರತಿಯುಂಟಾಗುತ್ತಿರುವುದು ಬಲವಾದ ಸಂತೋಷಕ್ಕೆ ಕಾರಣವಾಗಿದೆ. ಕಲಿಯೇ ನಿನ್ನ ಸ್ವರೂಪವು ಗೋಚರವಾಗಿ ಸನಾತನಧರ್ಮತೂರರು ಎಚ್ಚರವನ್ನು ಹೊಂದಿದರು. ಇನ್ನು ನಿನ್ನ ಕುಟಿಲತನವನ್ನು ದೂರಮಾಡಿ ಸಾತ್ವಿಕವೃತ್ತಿಯನ್ನು ಅಂಗೀಕರಿಸಿ ಸ್ವರೂಪವನ್ನು ಉಳಿಸಿಕೊ. ಪುನಃ ಪುನಃ ಮಾನಗೇಡಿಯಾಗಬೇಡವೆಂದು ಎಚ್ಚರಿಸಿರುವೆನು. ಜಗತ್ತಿನಲ್ಲಿ ಗುರುದೇವತಾ ಭಕ್ತಿಯು ನೆಲಗೊಂಡು ತದ್ದ್ವಾರಾ ಸರ್ವರಿಗೂ ಐಹಿಕಾಮುಷ್ಮಿಕಫಲವು ಸಿದ್ಧಿಸಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಸ್ಮರಿಸುತ್ತೇನೆ.

ಗುರುಚರಣಸೇವಕ

ಶ್ರೀ ರಾಮೇಶ್ವರ ಕ್ಷೇತ್ರಕ್ಕೆ ಯಾತ್ರಾರ್ಥಿಗಳಾಗಿ ಬರತಕ್ಕ ವೀರಶೈವರಿಗೆ

ಸೂಚನೆ.

ಸುಪ್ರಸಿದ್ಧವಾಗಿರುವ ಶ್ರೀರಾಮೇಶ್ವರಕ್ಷೇತ್ರಕ್ಕೆ ಬರುವ ವೀರಶೈವರಿಗೆ ಯಾವ ಪ್ರಕಾರದ ಸೌಕರ್ಯವೂ ಇಲ್ಲದಿರುವದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ನಾವು ವೀರಶೈವರ ವಸತಿಗಾಗಿ "ಜಂಗಮವಾಡಿ" ಎಂಬ ಸ್ಥಳವನ್ನು ಏರ್ಪಡಿಸಿರುವೆವು. ವೀರಶೈವರಿಗೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುವೆವಲ್ಲದೆ ದರ್ಶನಾದಿಗಳಿಗೆ ಬೇಕಾಗುವ ಸುವ್ಯವಸ್ಥೆಯನ್ನು ಕಲ್ಪಿಸಿಕೊಡುವೆವು. ಮಾಹಿತಿಗಾಗಿ ನಮ್ಮ ಸಂಗಡ ಪತ್ರವ್ಯವಹಾರ ಮಾಡಬೇಕಾಗಿ ಕೋರಿಕೆ.

ಗುರುಸಿದ್ಧಸ್ವಾಮಿ,
(11) ಜಂಗಮವಾಡಿ ಮಠ, ರಾಮೇಶ್ವರ,
ಪೋ|| ರಾಮೇಶ್ವರ (S.I.Ry)

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ನ ಗುರೋರಧಿಕಂ ತತ್ತ್ವಂ ನ ಗುರೋರಧಿಕಂ ತಪಃ | ತಸ್ಮಾತ್ತತ್ವತಃ ನಾಸ್ತಿ ತಸ್ಮೈ ಶ್ರೀ ಗುರವೇ ನಮಃ ||
ಜೀಯಾತ್ಶ್ರೀರೇಣುಕಾಚಾರ್ಯಃ ಶಿವಾಚಾರ್ಯ ಶಿವಾಪರಃ | ಯೋ ವೀರಶೈವ ಸಿದ್ಧಾಂತ ಸ್ಥಾಪನಾಚಾರ್ಯ ಭೂತಲೇ ||

ವಿಶುದ್ಧವೇದವೇದಾಂತಪುರಾಣಾಗಮೇತಿಹಾಸಸಕಲಶಾಸ್ತ್ರಪ್ರಸಿದ್ಧ ಶ್ರೀಮದ್ವೀರಶೈವಮತಾಭಿಮಾನಕೇವಲ ಸಾಚಾರ್ಯವರ್ಯರದುಷ್ಟನಿಗ್ರಹಶಿಷ್ಟಪರಿಪಾಲನಶೀಲ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು

ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರ

ದಿವ್ಯಸನ್ನಿಧಾನಂಗಳಲ್ಲಿ—

ಹಾವೇರಿ ಟವನ್ನಿನ ಪಟ್ಟಣಶಾಧಿಕಾರಿಗಳು, ಮಠಸ್ಥರು, ಶೆಟ್ಟರು, ಯಜಮಾನರು, ಗೌಡರು ಬಣಕಾರರು, ಬುದ್ಧಿವಂತರು ಮುಂತಾದ ಸಮಸ್ತ ವೀರಶೈವ ಮಂಡಳಿಯವರು ಮತ್ತು ಸ್ವಾಗತಸಂಘದ ಸದಸ್ಯರು ಅಸಾಧಾರಣ ಭಕ್ತಿಭಾವದಿಂದ ಸಮರ್ಪಣೆಯನ್ನು ಮಾಡಿದ ಬಿನ್ನವತ್ತಳೆಯು

ಮಹಾಗುರುಚರಣರೇ,

ಜಗದಾದಿಯಲ್ಲಿ ಪರಶಿವನ ಪಂಚಮುಖಗಳಿಂದವತರಿಸಿದ ಶ್ರೀ ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ವಿಶ್ವಕರ್ಣರೆಂಬ ಮಹಾಚಾರ್ಯರು ಪರಶಿವನ ಪ್ರೇರಣೆಯಿಂ ಭೂಲೋಕದಲ್ಲಿ ಕೊಲ್ಲಿಪಾಕಿ, ವಟಕ್ಷೇತ್ರ, ಹಿಮಾಲಯ, ಶ್ರೀಶೈಲ, ಕಾಶೀಕ್ಷೇತ್ರಗಳಲ್ಲಿ ವಿರಾಜಮಾನಗಳಾದ ಸೋಮನಾಥ, ಸಿದ್ಧೇಶ್ವರ, ರಾಮನಾಥ ಮಲ್ಲಿಕಾರ್ಜುನ, ವಿಶ್ವನಾಥಗಳೆಂಬ ಪಂಚಜ್ಯೋತಿರ್ಲಿಂಗಗಳಿಂದವತರಿಸಿ, ವೇದಾಗಮಾದಿಗಳ ಆಲೋಡನೆಯಿಂ ಸಿದ್ಧಮಾದ ಶಿವಸಿದ್ಧಾಂತಸಾರವೆನಿಪ ಶಕ್ತಿವಿಶಿಷ್ಟಾದ್ವೈತಾತ್ಮಕವಾದ ನಮ್ಮೀ ವೀರಶೈವಮತವನ್ನು ಸ್ಥಾಪಿಸಿ ಮತ್ತೆ ಸೋಪಾನಗಳೆಂತಿರುವ ವರ್ಣಾಶ್ರಮಧರ್ಮಗಳ ವಿವರಣದಿಂ ಮತತತ್ವಗಳಂ ನಿರ್ಣಯಿಸಿ ಬೋಧದಿಂದಾಸೇತು ಹಿಮಾಚಲ ಪರ್ಯಂತವಾಗಿ ನೆಲಗೊಳಿಸಿದ ಸಂಗತಿಯು ಶಾಸ್ತ್ರಸಿದ್ಧವೂ, ಲೋಕಪ್ರಸಿದ್ಧವೂ ಆಗಿರುವದು.

ಮಹಾಚಾರ್ಯರೇ, ವೀರಶೈವನಿಗೆ ಮಹಾಚಾರ್ಯಸಿದ್ಧಾಂತದಂತೆ ಲಿಂಗಧಾರಣವೇ ಮುಖ್ಯ ಚಿಹ್ನವಾಗಿರುತ್ತದೆ. ಶಿಶುವು ಗರ್ಭದಲ್ಲಿರುವಾಗ್ಯೆ ಎಂಟನೆಯ ತಿಂಗಳಲ್ಲಿಯೇ ಶಾಸ್ತ್ರನಿಯಮದಂತೆ ಲಿಂಗಧಾರಣೆಯನ್ನು ಹೊಂದತಕ್ಕದಿದ್ದರೂ ಎಂಟನೆಯ ವರ್ಷದಲ್ಲಿ ಜ್ಯೋತಿಶ್ಯಾಸ್ತ್ರೋಕ್ತ ಶುಭಸಮಯದೋಳ್ ಪಂಚಾಚಾರ್ಯಸಂಜ್ಞಕ ಪಂಚಕಲಶಸ್ಥಾಪನಾಪೂರ್ವಕವಾಗಿ ಗುರುಕೃತ ಶಿವದೀಕ್ಷೆಯನ್ನು ಹೊಂದಿ ಲಿಂಗಾಂಗತತ್ವಜ್ಞಾನಪೂರ್ವಕಾಷ್ಟಾವರಣ, ಪಂಚಾಚಾರ ನಿರತನಾಗಿ ವೀರಶೈವನು ಒಂದೇ ಜನ್ಮದಿಂ ಮುಕ್ತಿಯಂ ಪಡೆಯತಕ್ಕವನಿರುವನೆಂಬ ಶಿವಾಗಮಗಳ ಸಿದ್ಧಾಂತವನ್ನು ಸರ್ವತ್ರ ಬೋಧಿಸಿದ ಶ್ರೀ ಜಗದ್ಗುರು ರೇಣುಕಾದ್ಯಾಚಾರ್ಯಪುಂಗವರು ತವಿಕ್ರಮದ ಆಶ್ರಮಾನುಸಾರವಾಗಿ ನೆಲೆಗೊಳಿಸಲ್ಪಟ್ಟ ಧರ್ಮಾಚಾರಗಳ ಭದ್ರತೆಗಾಗಿ, ರಂಭಾಪುರೀ (ಬಾಳೇಹಳ್ಳಿ) ಉಜ್ಜಯಿನೀ, ಹಿಮಾಲಯ, ಶ್ರೀಶೈಲ, ಕಾಶೀಕ್ಷೇತ್ರಗಳಲ್ಲಿ ತಮ್ಮ ತಮ್ಮ ಸಿಂಹಾಸನಗಳನ್ನು ಸ್ಥಾಪಿಸಿ, ಅವುಗಳಿಗೆ ಅಧೀನವಾಗಿ ಭಕ್ತರೊಳ್ ಧರ್ಮಜಾಗ್ರತೆಗೊಳಿಸಲು ಪ್ರತಿ ಗ್ರಾಮಗಳಲ್ಲಿಯೂ ಶಾಖಾಮಠಗಳನ್ನು ನೆಲೆಗೊಳಿಸಿ, ಸೇತು ಶೀತಾಚಲದ ವರೆಗೆ ಇರುವ ವೀರಶೈವರ ಶಿಕ್ಷಾರಕ್ಷಣ ದಂಡ ಖಂಡನ ನಿಗ್ರಹಾನುಗ್ರಹಾದಿಗಳಂ ಮಾಡುತ್ತ ಪರಂಪರೆಯಿಂದ ನಮ್ಮನ್ನುದ್ಧರಿಸುತ್ತ ಬಂದಿರುವದು ಮಹಾಸನ್ನಿಧಿಯ ಚಿತ್ತಕ್ಕೆ ವೇದ್ಯವೇ ಇರುವುದು.

ಶ್ರೀಮಹಾಪೂಜ್ಯಪಾದರೇ, ಹೀಗೆ ಬಲವತ್ತರ ಸಾಧನಗಳಿದ್ದಾಗ್ಯೂ ನಮ್ಮ ಮತವು ಧರ್ಮವಿದ್ಯಾ ಶಿಕ್ಷಣೆಯಿಂದ ಚ್ಯುತವಾಗಿ ಕಲಿಕಾಲಪ್ರಭಾವದಿಂದ ಹೆಚ್ಚಿದ ನಾಸ್ತಿಕರ ದುರ್ಬೋಧನದಿಂದ ಧರ್ಮಹ್ರಾಸದ ದೋಷಕ್ಕೆ ಗುರಿಯಾಗಿದೆಯೆಂದು ಅರಿಕೆಮಾಡಿಕೊಳ್ಳಲು ಅತ್ಯಂತ ವಿಷಾದವೆನಿಸುತ್ತದೆ. ಇದನ್ನು ಪೂರ್ವರೂಪಕ್ಕೆ ತರುವುದು ಮಹಾಚಾರ್ಯರ ಕರ್ತವ್ಯವಾಗಿರುವುದೆಂಬುದನ್ನು ಭಕ್ತೋದ್ಧಾರ ಮಹಾಗುರುಸಾರ್ವಭೌಮರಿಗೆ ಅರಿಕೆಮಾಡಿಕೊಳ್ಳಲು ಕಸ್ತರಿಲ್ಲ.

ದಯಾನಿಧಿಗಳೇ, ಧರ್ಮೋದ್ಧಾರಕ್ಕೆ ಧರ್ಮವಿದ್ಯಾಭ್ಯಾಸವು ಅತ್ಯವಶ್ಯಕವಿದ್ದು, ಅದು ನಮ್ಮಗಳ ಧರ್ಮಜಾಗ್ರತೆಗೆ ನಿಯಮಿತರಾದ ಶಾಖಾಮಠಾಧಿಕಾರಿಗಳಿಗೆ ಪ್ರಧಾನವಾಗಿಯೂ, ಎಲ್ಲರಿಗೂ ಅಪ್ರಧಾನವಾಗಿಯೂ, ಅಗಲಿಕ್ಕೆ ಬೇಕಾಗಿದೆ. ಇದರ ಅಭಾವದಿಂದುಂಟಾದ ವಿಕಲ್ಪಜ್ಞಾನದಿಂದ ಮತೀಯರ ವರ್ತನವು ಆಚಾರ್ಯಸಿದ್ಧಾಂತಕ್ಕನುಸಾರವಾಗಿ ಎಷ್ಟೋ ಭಾಗಗಳಲ್ಲಿ ವ್ಯತ್ಯಾಸವಿದ್ದಂತೆ ಲೋಕವಲ್ಲ ಅವಹೇಳನೆಗೆ ಗುರಿಯಾಗಿದೆಯೆಂದು ಬಹಳ ದುಃಖದಿಂದ ಅರಿಕೆಮಾಡಿಕೊಳ್ಳುತ್ತೇವೆ ಮಹಾಸ್ವಾಮಿ.

ಶ್ರೀ ಜಗದ್ಗುರು ರಂಭಾಪುರೀ ಮಹಾಪೀಠವು ಮೈಸೂರುರಾಜ್ಯಾಧಿಪತ್ಯಕ್ಕೊಳಪಟ್ಟಿದ್ದು, ಹಿಂದಿನ ಜಗದ್ಗುರುಗಳವರು ಪರಂಧಾಮವನ್ನು ಹೊಂದಿದನಂತರ ಕಾರಣಾಂತರದಿಂದ ನಾಲ್ಕು ವರ್ಷಗಳ ಕಾಲ ಅನಾಯಕವಾಗಿದ್ದದರಿಂದ ನಮ್ಮ ಮತಕ್ಕೆ ದೊಡ್ಡದೊಂದು ಕೊರತೆಯಾಗಿತ್ತು. ಈ ಕೊರತೆಯನ್ನು ದೂರ ಮಾಡಲು ಧರ್ಮಾವತಾರಿ ಧರ್ಮಪ್ರಭು ರಾಜರ್ಷಿಪುಂಗವರೆನಿಸಿ ಕರ್ಣಾಟಕ ಸಿಂಹಾಸನಾಧೀಶ್ವರ ಶ್ರೀಮನ್ ಮಹಾರಾಜ ಸಾಲ್ವಡಿ ಶ್ರೀ ಕೃಷ್ಣ ರಾಜೇಂದ್ರ ಒಡೆಯರ್, ಬಹದ್ದೂರವರು ಅಖಿಲ ವೀರಶೈವರ ಪ್ರಾರ್ಥನೆಯನ್ನು ದಿವ್ಯಚಿತ್ತಕ್ಕೆ ತಂದು, ಇದರ ಜೀರ್ಣೋದ್ಧಾರ ಮಾಡಲು ವಿದ್ಯಾನಿಧಿಗಳೂ, ವ್ಯಾಕರಣತೀರ್ಥ ವಿದ್ಯಾಭೂಷಣೇತ್ಯಾದಿ ಬಿರುದಾಂಕಿತರೂ ಸುಶಾಂತರೂ, ತಪೋನಿರತರೂ ಭಕ್ತೋದ್ಧಾರಚಿತ್ತರೂ, ಆದ ತಮ್ಮನ್ನು ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಕ್ಕೆ ಕರ್ತರನ್ನಾಗಿ ಮಾಡಿ ನಮ್ಮ ಮತಕ್ಕೆ ಮಹೋಪಕಾರವನ್ನು ಮಾಡಿದ್ದರಿಂದ ಆ ಪ್ರಭುಗಳವರಿಗೆ ನಾವು ಚಿರಋಣಿಗಳಾಗಿರುವೆವು.

ಶ್ರೀಗುರು ಸಾರ್ವಭೌಮರೇ, ತಾವು ಶ್ರೀಮದ್ರಂಭಾಪುರೀ ವೀರಸಿಂಹಾಸನವನ್ನಾರೋಹಿಸಿ ಶ್ರೀಮನ್ ಮೈಸೂರು ಮಹಾ ಪ್ರಭುಗಳವರಿಂದ ಕೊಡಲ್ಪಟ್ಟ ಅನಂತ ಬಿರುದಾವಳಿಗಳೊಡನೆ ನಿಷ್ಕಂಟಕವಾಗಿ ಮೈಸೂರು ರಾಜ್ಯದಲ್ಲಿ ಸಂಚರಿಸುತ್ತ ಧರ್ಮೋಪದೇಶದಿಂ ಭಕ್ತಲೋಕವನ್ನುದ್ಧರಿಸುತ್ತ ಸ್ವಮತಪರಮತೀಯರಿಂದಲೂ ಮಾನಿತರಾಗಿ ದ್ವಿತೀಯ ರಾಜಧಾನಿಯೆನಿಸಿ ಬೆಂಗಳೂರಿಗೂ, ಮಹಾರಾಜಧಾನಿಯಾದ ಮೈಸೂರಿಗೂ, ಮಹಾವೈಭವದಿಂದ ದಯಮಾಡಿಸಿ, ಸಮಸ್ತ ಭಕ್ತರ ಇಚ್ಛೆಯನ್ನು ಪೂರ್ತಿ ಮಾಡಿದುದಲ್ಲದೆ, ಶ್ರೀಮನ್ ಮಹಾರಾಜರ್ಷಿ ಪುಂಗವ ಶ್ರೀ ಕೃಷ್ಣರಾಜೇಂದ್ರ ಒಡೆಯರವರಿಂದಲೂ, ಆಹೂತರಾಗಿ ಸಕಲ ರಾಜಮರ್ಯಾದೆಗಳಿಂದ ಅರಮನೆಗೂ ದಯಮಾಡಿಸಿ, ರಾಜಪೂಜಿತರಾಗಿ ರಾಜವಂಶೋದ್ಧಾರಕ್ಕೆ ಅನುಷ್ಠಾನ ಪೂರ್ವಕ ಜಯಾಶೀರ್ವಾದವನ್ನು ಮಾಡಿ ನಮ್ಮ ವೀರಶೈವ ಮತಕ್ಕೆ ಅಭೂತಪೂರ್ವವಾದ ಶೋಭೆಯನ್ನುಂಟುಮಾಡಿದುದಕ್ಕೆ ಅಖಿಲ ಭಾರತೀಯ ವೀರಶೈವರು ಆನಂದಸಾಗರದಲ್ಲಿ ಓಲಾಡುತ್ತಿರುವರು.

ಮಹಾಸ್ವಾಮಿ, ಜಗದ್ಗುರುಗಳಾದ ತಾವುಗಳು ಸಿಂಹಾಸನವನ್ನಾರೋಹಿಸಿದಂದಿನಿಂದ ವೀರಶೈವಮತದ ಸ್ವರೂಪವು ಸರ್ವತೋಮುಖವಾಗಿ ಪ್ರಕಾಶವಾಗುತ್ತಿರುತ್ತದೆ. ಮಹಾಪೀಠಗಳ ಶೋಭೆಯೂ, ದಿನೇ ದಿನೇ ವರ್ಧಮಾನವಾಗುತ್ತಿರುವುದು. ಇದು ವೀರಶೈವ ಸಮಾಜಕ್ಕೆ ಅತ್ಯಂತ ಸಂತೋಷದಾಯಕವಾಗಿರುವುದಲ್ಲದೆ ಪರಮತೀಯರು ಸಹ ತಮ್ಮ ಸರ್ವ

(೬ನೆಯ ಪುಟವನ್ನು ನೋಡಿ)

ಪಂಚಾಚಾರ್ಯ ಪ್ರಭಾ.

೧೯೩೫ನೇ ನವಂಬರ್ ತಾ|| ೨೫ನೇ ಸೋಮವಾರ

ಲಿಂಗಧಾರಣವು ವೇದೋಕ್ತವಾದುದು.

"ತ್ರಿಪುಂಡ್ರಂ ಯೇ ವಿನಿಂದಂತಿ ನಿಂದಂತಿ ಶಿವಮೇವ ತೇ' ಎಂಬ ಜಾಬಾಲೋಪನಿಷತ್ತಿನಲ್ಲಿ ತ್ರಿಪುಂಡ್ರಧಾರಣ ಲಿಂಗಧಾರಣಗಳಿಗೆ ಉಪಮಾನೋಪಮೇಯಭಾವವು ತೋರುವುದರಿಂದ ಉಪಮಾಲಂಕಾರವನ್ನು ವೇದವು ಹುದುಗಿಸಿದ ಉಪಮಾನ. ಉಪಮೇಯ. ಸಾಧಾರಣ ಧರ್ಮ ಸಾದೃಶ್ಯವಾಚಕವಾದ ಇವ ಮೊದಲಾದವುಗಳು ಈ ನಾಲ್ಕು ಒಂದು ವಾಕ್ಯದಲ್ಲಿ ಇದ್ದರೆ ಅಂದ ಸ್ಥಳದಲ್ಲಿ ಉಪಮಾಲಂಕಾರವನ್ನು ಹೇಳುವರು. 'ಸ್ವಯೋ [illegible] ಎಂಬುದರಲ್ಲಿ [illegible] ಉಪಮಾನ ಉಪಮೇಯ. ಮತ್ತು ಸಾಧಾರಣ ಧರ್ಮಗಳಿದ್ದರೂ ಸಾದೃಶ್ಯವಾಚಕವಾದ ಇವ ಶಬ್ದವು ಈ ವಾಕ್ಯದಲ್ಲಿ ಇಲ್ಲದಿರುವುದರಿಂದ ಆದ ಸ್ಥಳದಲ್ಲಿ ಉಪಮಾಲಂಕಾರವನ್ನು ಹೇಳಲು ಆಗದು. ಆದರೆ 'ತ್ರಿಪುಂಡ್ರಂ ಯೇ ವಿನಿಂದಂತಿ ನಿಂದಂತಿ ಶಿವಮೇವ ತೇ' ಎಂಬ ಜಾಬಾಲೋಪನಿಷದ್ವಾಕ್ಯದಲ್ಲಿ ತ್ರಿಪುಂಡ್ರಧಾರಣ ಲಿಂಗಧಾರಣಗಳು ಉಪಮಾನ ಉಪಮೇಯಗಳು ಮತ್ತು ಧರ್ಮವು [illegible] ತೋರಿಸುವ ಇವ [illegible] ಇಲ್ಲದಿದ್ದರೂ ಲಿಂಗಧಾರಣ [illegible] ಈ ಲಿಂಗಧಾರಣೆಯು ಪ್ರಸಿದ್ಧವಾದ ಪ್ರತಿಯೋಗಿ (ಉಪಮಾನ) ವಸ್ತುವಾಗಿ ಇರುವದಲ್ಲದೆ [illegible] ಇವಾದಿ [illegible] ಅಲಂಕಾರಿಕರ [illegible] ಇರುವುದರಿಂದ ಈ ವಾಕ್ಯದಲ್ಲಿ [illegible] ಲಿಂಗಧಾರಣ ಸಿದ್ಧಿಯಾಗಬಾರದೆಂದು ಆಕ್ಷೇಪವು [illegible] [illegible] ನೋಡುವಲ್ಲಿ ಅದು ಅಕ್ಷೇಪಕ್ಕೆ [illegible] ಯಾಕೆಂದರೆ ಈ ಜಾಬಾಲೋಪನಿಷದ್ವಾಕ್ಯದಲ್ಲಿ "ಸ್ವಯೋಃ [illegible]" ಎಂಬ ವಾಕ್ಯದಲ್ಲಿ ಹೇಳಿದಂತೆ ಸಾದೃಶ್ಯವಾಚಕವಾದ ಇವ ಶಬ್ದವು ಇಲ್ಲದಿದ್ದರೂ ಉಪಮಾನಾಲಂಕಾರವನ್ನು ಹೇಳುವರು. ಅದು ಹೇಗೆಂದರೆ—ಉಪಮಾನಾಲಂಕಾರದಲ್ಲಿ [illegible] ಮಾಲಂಕಾರವೆಂತಲೂ [illegible] ಎರಡು ಪ್ರಕಾರವುಂಟು. ಇವುಗಳಲ್ಲಿ [illegible] ಮಾಲಂಕಾರವನ್ನು ಹೇಳುವಾಗ [illegible] ಉಪಮೇಯ, ಧರ್ಮ, ವಾಚಕ ಈ ನಾಲ್ಕು [illegible] ವಾಕ್ಯದಲ್ಲಿ ಇರಬೇಕು. ಲುಪ್ತೋಪಮಾಲಂಕಾರವನ್ನು ಹೇಳುವಾಗ ಈ ನಾಲ್ಕರಲ್ಲಿ ಯಾವುದಾದರೂ ಒಂದು ಅದನ್ನು ಹೇಳದೆ ಇರಬಹುದೆಂದು ಅಲಂಕಾರ [illegible] ರಹಸ್ಯವಾಗಿರುವುದರಿಂದ 'ತ್ರಿಪುಂಡ್ರಂ ಯೇ ವಿನಿಂದಂತಿ ನಿಂದಂತಿ ಶಿವಮೇವ ತೇ' ಎಂಬಲ್ಲಿ [illegible] ಯೋಗಿಯಾದ ಶಿವಲಿಂಗಧಾರಣವು ಉಪಮೇಯವಾದ ತ್ರಿಪುಂಡ್ರಧಾರಣೆಯು ಸಾಧಾರಣ ಧರ್ಮವೂ ಸ್ಪಷ್ಟವಾಗಿದ್ದರೂ ಸಾದೃಶ್ಯವಾಚಕವಾದ ಇವಶಬ್ದವು ಮಾತ್ರ ಇಲ್ಲದಿರುವುದರಿಂದ ಉಪಮಾಲಂಕಾರದ ಭೇದವಾದ ವಾಚಕಲುಪ್ತೋಪಮಾಲಂಕಾರವನ್ನು ಹೇಳಲು ಯಾವ ಅಭ್ಯಂತರವೂ ತೋರುವುದಿಲ್ಲ. ಇಂತಹ ಲೋಕದಲ್ಲಿ ಅನಂತ ಉದಾಹರಣೆಗಳು ಕಂಡುಬರುತ್ತವೆ. 'ವಾಕ್ಪಟುತ್ವೇ ಬೃಹಸ್ಪತಿಃ' ಈತನು ಮಾತಾಡುವುದರಲ್ಲಿ ಬೃಹಸ್ಪತಿಯೇ ಆಗಿದ್ದಾನೆ. ಇತ್ಯಾದಿ ಪ್ರಸಿದ್ಧವಾದ ವಾಕ್ಯಗಳಲ್ಲಿ ಪ್ರಸಿದ್ಧೋಪಮಾನವಾದ ಬೃಹಸ್ಪತಿ ಶಬ್ದವೂ ಉಪಮೇಯವೆನಿಸಿದ ಪುರುಷನು ವಾಗ್ಮಿತ್ವರೂಪವಾದ ಉಭಯನಿಷ್ಠ ಸಾಧಾರಣಧರ್ಮವೂ ಈ ವಾಕ್ಯದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟು ಸಾದೃಶ್ಯವನ್ನು ತೋರಿಸುವ ಇವಾದಿ ಶಬ್ದಗಳು ಮಾತ್ರ ಸ್ಪಷ್ಟವಾಗಿ ಹೇಳಲ್ಪಡದಿದ್ದರೂ ಈತನು ಮಾತನಾಡುವುದರಲ್ಲಿ ಬೃಹಸ್ಪತಿಗೆ ಸಮಾನನಾಗಿರುವನೆಂಬುದೇ ಕವಿಯ ಆಶಯವಾಗಿರುವುದರಿಂದ ಸಾದೃಶ್ಯವು ಬುದ್ಧಿಸ್ಥವಾಗಿ ತೋರಿಯೇ ತೋರುವುದರಿಂದ ಆಲಂಕಾರಿಕರು ಉಪಮಾಲಂಕಾರದ ಭೇದವೆನಿಸಿದ ಲುಪ್ತೋಪಮಾಲಂಕಾರವನ್ನು ಅಂಗೀಕರಿಸಿರುವಂತೆ "ತ್ರಿಪುಂಡ್ರಂ ಯೇ ವಿನಿಂದಂತಿ ನಿಂದಂತಿ ಶಿವಮೇವ ತೇ" ಎಂಬ ಜಾಬಾಲೋಪನಿಷದ್ವಾಕ್ಯದಲ್ಲಿಯೂ ಯಾರು ತ್ರಿಪುಂಡ್ರವನ್ನು ತ್ರಿಪುಂಡ್ರಧಾರಣವನ್ನು ದೂಷಿಸುವರೋ ಅವರು ಶಿವಲಿಂಗವನ್ನು ಶಿವಲಿಂಗಧಾರಣವನ್ನು ದೂಷಿಸುವವರಿಗೆ ಸಮಾನರಾಗುವರು ಎಂಬುದೇ ಆ ವಾಕ್ಯದ ರಹಸ್ಯವಾಗಿರುವುದರಿಂದ ಉಪಮಾನ ಉಪಮೇಯ ಸಾಧಾರಣಧರ್ಮಗಳೂ ಈ ವಾಕ್ಯದಲ್ಲಿ ಸ್ಪಷ್ಟವಾಗಿದ್ದು ಸಾದೃಶ್ಯವಾಚಕವಾದ ಇವ ಶಬ್ದವು ಗಮ್ಯಮಾನವಾಗಿ ತೋರುವುದರಿಂದ ಲಿಂಗಧಾರಣಕ್ಕೆ ಗಮ್ಯಮಾನವಾದ ಸಾದೃಶ್ಯದಿಂದೊಡಗೂಡಿದ ಶೀವಸ್ವರೂಪತ್ವವು ಸಿದ್ಧವಾಗುವುದರಿಂದ ಅಂದ ಲಿಂಗಧಾರಣಬೋಧಕವಾದ ಜಾಬಾಲೋಪನಿಷದ್ವಾಕ್ಯದಲ್ಲಿ ಸಾದೃಶ್ಯವಾಚಕವಾದ ಇವಶಬ್ದ ಇಲ್ಲದಿದ್ದರೂ ಮಾತಾಡುವುದರಲ್ಲಿ ಬೃಹಸ್ಪತಿಯೇ ಆಗಿರುವನೆಂಬಲ್ಲಿ ವಾಚಾಲಕನಾದ ಪುರುಷನಿಗೆ ಬೃಹಸ್ಪತಿ ಸಾದೃಶ್ಯವು ತೋರುವಂತೆ, ತ್ರಿಪುಂಡ್ರಧಾರಣೆಗೆ ಶಿವಲಿಂಗಧಾರಣ ಸಾದೃಶ್ಯವು ಸ್ಪಷ್ಟವಾಗಿ ತೋರುವುದರಿಂದ ತ್ರಿಪುಂಡ್ರಂ ಯೇ ನಿಂದಂತಿ ಎಂಬಲ್ಲಿ ಲುಪ್ತೋಪಮಾಲಂಕಾರವನ್ನು ಯಾವುದರಿಂದ ಪ್ರಸಿದ್ಧೋಪಮಾನ ಪ್ರತಿಯೋಗಿಯಾದ ಲಿಂಗಧಾರಣಕ್ಕೆ ಸಿದ್ಧಿಸುವುದೆಂಬುದರಲ್ಲಿ ಸಂಶಯವಿಲ್ಲ.

ಒಳದೇಶದ ವೃತ್ತಾಂತಗಳು.

ಮೈಸೂರು ಶಾಣೋಖಿ ಸಬೋಸಲ್ಸ್‌ನಲ್ಲಿ ಸಿಲ್ವರ್ ಸ್ಮಿತ್ ಕೆಲಸ ಮಾಡುತ್ತಿದ್ದ ೨೧ ವರ್ಷ ವಯಸ್ಸಿನ ಕೃಷ್ಣನ್ [illegible] ಎಂಬುವನು ಸೇಣ ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನೆಂದು ತಿಳಿದುಬಂದಿದೆ.

ವಿಶ್ವೇಶ್ವರಪುರದ ಸಕಾರ್ [illegible] ದವರ [illegible] ರಕುಂತಲಮ್ಮ ಎಂಬ ಕೆಲಸದವಳು [illegible] ಕುಡಿದಳು. ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟು ಅಲ್ಲಿ ಚಿಕಿತ್ಸೆ ಮಾಡಿದ್ದರಿಂದ ಗುಣಹೊಂದುತ್ತಿರುವಳು.

ಕಳೆದ 21 ನೆಯ ತಾರೀಖು ನಡೆದ 'ಸೆನೆಟ್' ಸಭೆಯಲ್ಲಿ ಸರ್ ಪುಟ್ಟಣ್ಣಚೆಟ್ಟರಿಗೆ "ಡಾಕ್ಟರ್ ಆಫ್ ಲಾಸ್" ಎಂಬ ಗೌರವ ಪದವಿಯನ್ನು ಕೊಡಬೇಕೆಂದು ಸರ್ವಾನುಮತದಿಂದ ನಿರ್ಧರಿಸಲಾಯಿತೆಂದು ತಿಳಿದು ಸಂತೋಷಿಸುತ್ತೇವೆ.

ಮೈಸೂರಿಗೆ ಹತ್ತುಮೈಲಿ ದೂರದಲ್ಲಿರುವ ಆಯರಹಳ್ಳಿಯಲ್ಲಿ ಯಾವನೋ ಒಬ್ಬನನ್ನು ಕೊಲೆಮಾಡಿ ಬಾವಿಗೆ ಹಾಕಿರುವರೆಂಬುದಾಗಿ ಸುದ್ದಿ ಬಂದಕಾರಣ ಪೋಲೀಸರು ತನಿಖೆ ನಡೆಯಿಸಲು ಹೋಗಿದ್ದಾರೆ. ವಿವರಗಳು ಗೊತ್ತಾಗಿಲ್ಲ.

ಬೆಂಗಳೂರು, ಸಿಟಿ ಬೋಂಬಾಬಜಾರಿನ ಹತ್ತಿರ ಒಂದು ಮನೆಯ ಕೊಠಡಿಯೊಂದರಲ್ಲಿ ಗಂಧದ ಮರದ ತುಂಡುಗಳನ್ನು ತುಂಬಿದ್ದುದನ್ನು ಪೋಲೀಸರು ಪತ್ತೆಹಚ್ಚಿ ಮೂರು ಜನರನ್ನು ದಸ್ತಗಿರಿಮಾಡಿ, ವಿಚಾರಣೆ ನಡೆಸುತ್ತಿರುವುದಾಗಿ ಕೇಳುತ್ತೇವೆ.

ಚನ್ನಪಟ್ಟಣದ ಮದರ [illegible] ಬಯ್ಯಾರ ಪ ಅರ್. ವಿ [illegible] ನೆಂಬುವನ [illegible] ಸಂಪಾದಿಸಲು [illegible] ಕವಾಗಿ [illegible] ಕೊಟ್ಟಿದ್ದ [illegible] ಪತ್ರಗಳನ್ನು ಸರಕಾರ [illegible] ದನ್ನು [illegible] ಕೊಡಲಾದುದರಿಂದ ಸರ್ಕಾರದವರು [illegible]

ಮೈಸೂರು [illegible] ಯ ಸಮಸ್ಯೆಯು [illegible] ಗಳವರಲ್ಲಿ [illegible] ಅಂತವರ [illegible] ವಿದ್ಯಾರ್ಥಿಗಳಲ್ಲಿ [illegible] ಸಂಘವು [illegible] ಪ್ರತಿ [illegible] ಅಂಕದ [illegible] ಈ ತಿಂಗಳು 30 ನೆಯ ತಾರೀಖಿನೊಳಗಾಗಿ [illegible] ಗಳಿಗೆ [illegible] ಹಾಕಿಕೊಳ್ಳಬಹುದೆಂದು ತಿಳಿಸುತ್ತಾರೆ.

ಕಳೆದ 17ನೆಯ ತಾರೀಖಿನ ದಿವಸ ಶ್ರೀ [illegible] ಚಾಮುಂಡಿ [illegible] ಶಿಕ್ಷಕರಾದ ಶ್ರೀ ಜಿ ಟಿ. [illegible] ರವರು, ಮೈಸೂರಿಂದ 8 ಮೈಲು ದೂರದಲ್ಲಿ [illegible] ದುದಕಡೆ [illegible] ಹೋಗಿದ್ದಾಗ ಅವರ ಕುದುರೆಯು ಒಂದು ಬೇಲಿಯನ್ನು ಹಾರುವಾಗ ಮುಗ್ಗರಿಸಿದುದರಿಂದ ಇವರು ಕೆಳಕ್ಕೆಬಿದ್ದು ಬಹಳ ಗಾಯಗಳಾದವು, ಕೂಡಲೆ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನಡೆಸಿದರು, ಈಗ ಗುಣಹೊಂದುತ್ತಿದ್ದಾರೆ.

ಬೆಂಗಳೂರಿನಿಂದ ಚಿಂತಾಮಣಿಗೆ ಹೋಗುವ ಷಟಲ್ ರೈಲು ಕಳೆದ 18 ನೆಯ ತಾರೀಖಿನ ದಿವಸ ಶಿಡ್ಲಘಟ್ಟಕ್ಕೂ ಗಿಡ್ನಹಳ್ಳಿಗೂ ನಡುವೆ ಕಂಬಿ ತಪ್ಪಿ ಉರುಳಿದುದರಿಂದ 6 ಜನರಿಗೆ ಗಾಯಗಳಾದವು. ಎರಡು ಗಾಡಿಗಳನ್ನು ಸೇರಿಸುವ ಬಫರ್ ಮುರಿದು ಹೋದುದರಿಂದ ಎರಡು ಗಾಡಿಗಳು ಡಿಕ್ಕಿ ಹೊಡೆದು ರೈಲು ಕಂಬಿಯಿಂದ ಕಳಚಿಕೊಂಡಿತೆಂದು ಹೇಳಲಾಗಿದೆ. ರೈಲ್ವೆ ಗಾರ್ಡು ಒಬ್ಬರಿಗೆ ಗಾಯವಾಗಿದೆ.

ನವಂಬರ್ ೨೮ ನೆಯ ತಾರೀಖು ಸಾಯಂಕಾಲ [illegible] ಘಂಟೆಗೆ ಮೈಸೂರು ನಗರಭವನದಲ್ಲಿ ಒಂದು ಸಾರ್ವಜನಿಕಸಭೆ ನಡೆಯುವುದು. ಹೆಚ್ಚು ಸಾಮಾನುಗಳ ಮೇಲೆ ಸುಂಕವನ್ನು ಹಾಕುವ ಸಲಹೆ ಮತ್ತು ಎತ್ತಿನ ಗಾಡಿಗಳ ಮೇಲೆ ವಸೂಲ್ಮಾಡುತ್ತಿರುವ ಸುಂಕವನ್ನು ಹೆಚ್ಚಿಸುವ ಸಲಹೆ ಇವುಗಳನ್ನು ಚರ್ಚಿಸುವುದಕ್ಕಾಗಿಯೇ ಸಾರ್ವಜನಿಕ ಸಭೆ ಸೇರುವುದು. ತೆರಿಗೆ ದಾರರೆಲ್ಲರೂ ಈ ಸಾರ್ವಜನಿಕ ಸಭೆಗೆ ಬರಬೇಕೆಂದು ಕೋರಲಾಗಿದೆ.

ಬೆಂಗಳೂರು ರಾಮಣ್ಣಶೇಟಿಯ ದೇವಾಂಗ ಜಾತಿಯ ಅಣ್ಣಯ್ಯಪ್ಪನೆಂಬುವನು ೧೯ ನೆಯ ತಾರೀಖಿನದಿನ ದ್ರಾವಕವನ್ನು ಕುಡಿದು ಆತ್ಮಹತ್ಯೆ ಮಾಡಿಕೊಂಡನು. ಇವನು ಬಹಳ ಸಾಲಮಾಡಿ ಅದನ್ನು ತೀರಿಸಲು ಶಕ್ತಿಯಿಲ್ಲದೆ ಪ್ರಾಣಕಳೆದುಕೊಳ್ಳಲು ನಿಶ್ಚಯಿಸಿ 'ಸಲ್ಫ್ಯೂರಿಕ್ ಆಸಿಡ್' ದ್ರಾವಕವನ್ನು ಕುಡಿದನು. ಕೂಡಲೆ ಇವನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆ ಮಾಡಿಸಿದರೂ ಪ್ರಯೋಜನವಾಗದೆ ಮರಣಹೊಂದಿದನು.

ಬೆಂಗಳೂರು ವಿಶ್ವೇಶ್ವರಪುರದ 2 ನೇ ಕ್ರಾಸ್ ರಸ್ತೆಯಲ್ಲಿರುವ ಲಾಯರ್ ಎ. ವೆಂಕಟರಾಯರ ಮನೆಯಲ್ಲಿ ಕಳೆದವಾರ ಕೆಲವು ಬೆಳ್ಳಿಪಾತ್ರೆಗಳು ಕಳುವಾದವು. ಸಂದೇಹದಿಂದ ಅವರ ಮನೆಯಲ್ಲಿ ಮಲಗುತ್ತಿದ್ದ ತಾಯಮ್ಮ ಎಂಬುವಳ ಮೇಲೆ ಪೋಲೀಸಿನವರಲ್ಲಿ ದೂರು ಕೊಟ್ಟರು. ಪೋಲೀಸಿನವರು ತಾಯಮ್ಮನನ್ನು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಬಹಳ ಕ್ರೂರವಾಗಿ ಹಿಂಸಿಸಿ ಮೈಮೇಲೆ ಗಾಯಗಳಾಗುವಂತೆ ಹೊಡೆದರೆಂದೂ, ವಿಕ್ಟೋರಿಯಾ ಆಸ್ಪತ್ರೆಯ ಡಾಕ್ಟರಿಂದಲೂ ಮತ್ತು ವಿಶ್ವೇಶ್ವರಪುರದ ಡಾಕ್ಟರಿಂದಲೂ ಸರ್ಟಿಫಿಕೇಟು ಪಡೆದು ಆಕೆಯು ತನ್ನನ್ನು ಹಿಂಸಿಸಿದ ಪೋಲೀಸರ ಮೇಲೆ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ 32ನೆಯ ತಾರೀಖು ಮೊಕದ್ದಮೆ ಹೂಡಿದಳೆಂದು ಕೇಳುತ್ತೇವೆ.

ವರ್ತಮಾನಸಂಗ್ರಹ.

ಕ್ರಿಸ್‌ಮಸ್ ಹಬ್ಬದದಿನ ಜಾರ್ಜ್ ಸಾರ್ವಭೌಮರು ಬ್ರಿಟಿಷ್ ಸಾಮ್ರಾಜ್ಯಕ್ಕೆಲ್ಲ ತಮ್ಮ ಸಂದೇಶವನ್ನು ಆಕಾಶವಾರ್ತಾಯಂತ್ರಗಳ ಮೂಲಕ ಕಳುಹಿಸಲಿದ್ದಾರೆ.

ಜರ್ಮನೀ ಸರ್ಕಾರದವರು ಅಪ್ಪಣೆಪಡೆಯದೆ ಪರದೇಶಗಳಿಗೆ ಯುದ್ಧಸಾಮಗ್ರಿಗಳನ್ನು ಕಳುಹಿಸಲಾಗದೆಂದೂ ಆಜ್ಞೆ ಹೊರಡಿಸಿರುತ್ತಾರೆ. ಈ ಆಜ್ಞೋಲ್ಲಂಘನೆಮಾಡಿದವರಿಗೆ ಕಠಿಣಶಿಕ್ಷೆಯು ವಿಧಿಸಲ್ಪಡುತ್ತದೆ. ಆಜ್ಞೆಯು ಇಂಥಾದೇಶಕ್ಕೆ ಮಾತ್ರ ಅನ್ವಯಿಸುವುದೆಂದು ಹೇಳಿಲ್ಲ.

ಗ್ವಾಲಿಯರ್ ಸಂಸ್ಥಾನದ ಮಾಂಡಸಾರ್ ಜಿಲ್ಲೆಯ ಮಹದೇವಘಟ್ಟ ಎಂಬಲ್ಲಿ ಚಬೂತ್ರವನ್ನು ಉಪಯೋಗಿಸಲು ಅಡ್ಡಿ ಪಡಿಸಿದ್ದ ಕೆಲವು ಮುಸ್ಲಿಮರು ಇದ್ದಕ್ಕಿದ್ದ ಹಾಗೆ ಮಹಾದೇವದೇವಸ್ಥಾನದಲ್ಲಿದ್ದ ಹಿಂದುಗಳ ಮೇಲೆ ಬಿದ್ದರೆಂದೂ ಇದರಿಂದ ಒಬ್ಬ ಹಿಂದು ಮರಣಹೊಂದಿ ಅನೇಕರಿಗೆ ಗಾಯಗಳಾಗಿರುವುದಾಗಿಯೂ ಪೋಲೀಸು ಸೂಪರಿಂಟೆಂಡೆಂಟರು 33 ಜನರನ್ನು ದಸ್ತಗಿರಿಮಾಡಿ ತನಿಖೆ ನಡೆಸುತ್ತಿರುವುದಾಗಿ ತಿಳಿದುಬಂದಿದೆ.

ಸೋಲಾಪೂರ್ ಸಂತೆಯಿಂದ ಬರುತ್ತಿದ್ದ ಜನಗಳೂ ಮತ್ತು ದನಗಳೂ ದೋಣಿಯು ಅನಾಹುತಕ್ಕೆ ಒಳಗಾಗಿ ದುಃಖದ ಪರಿಸ್ಥಿತಿಗೆ ಈಡಾದರು. ಜನಗಳು ಮತ್ತು ದನಗಳನ್ನು ತುಂಬಿಕೊಂಡು ಬರುತ್ತಿದ್ದ ದೋಣಿಯು ಗಂಗಾನದಿಯ ಒಂದು ಭಾರಿ ಸುಳಿಗೆಸಿಕ್ಕಿ ಪಾತಾಳಕ್ಕೆ ಹೊರಟುಹೋಯಿತು. ೨೫ ಜನ ಪ್ರಯಾಣಿಕರಲ್ಲಿ ೨೦ ಜನ ಬಚಾಯಿಸಿಕೊಂಡರು. ಆದರೆ ಉಳಿದ ಐವರೂ ಮತ್ತು ದನಗಳೂ ಮರಣಹೊಂದಿರುವ ರೆಂದು ಹೇಳಲಾಗಿದೆ. ಯುನೈಟೆಡ್ ಪ್ರೆಸ್ ಸುದ್ದಿಯ ಪ್ರಕಾರ ಆ ದೋಣಿಯಲ್ಲಿದ್ದ ಎಲ್ಲಾ ದನಕರುಗಳನ್ನೂ ಬಚಾಯಿಸಲಾಯಿತೆಂದು ತಿಳಿದಿದೆ.

ಅಮೇರಿಕದ ಲಾಸ್‌ಏಂಜಲ್ಸ್ ಪಟ್ಟಣದ ನಾವಿಕ ಸಂಘದವರ ನಾಯಕರಾದ ಜೆ ಆರ್. ರಾಬರ್ಟ್‌ಸನ್ ಎಂಬುವರು ಕಾರ್ಡೆಲ್ ಹಲ್‌ರವರಿಗೆ 'ಬರೆಗಾರ್' ಎಂಬ ಸಾಮಾನು ನೌಕೆಯು ಪೆಟ್ರೋಲು ಭರ್ತಿಮಾಡಿಕೊಂಡು ಹೊರಡಲು ಸಿದ್ಧವಾಗಿದೆ. ಬಹುಶಃ ಇಟಲಿ ಸೋಮಾಲಿಲ್ಯಾಂಡಿಗೆ ಸಿಂಗಪುರದ ಮಾರ್ಗವಾಗಿ ಹೋಗುತ್ತಾಗಿದೆ. ನಾವು ಆ ನೌಕೆಯು ಪ್ರಯಾಣ ಮಾಡಲು ಬಿಟ್ಟಲ್ಲಿ 'ಸ್ಟೇಟ್' ಶಾಖೆಯವರು ನಾವಿಕರಿಗೆ ಪ್ರಾಣರಕ್ಷಣೆಕೊಡುವುದಾಗಿ ಭರವಸೆ ಕೊಡುವವರೆಗೆ ನೌಕೆಯನ್ನು ಬಿಡುವುದಿಲ್ಲ ಎಂದು ತಿಳಿಸಿದ್ದಾರೆ. 'ಸ್ಟೇಟ್' ಶಾಖೆಯ ಅಧಿಕಾರಿಗಳು ಇವರ ಮೇಲೆ ಯಾವ ಟೀಕೆಯನ್ನು ಮಾಡುವುದಿಲ್ಲವೆಂದು ಹೇಳಿರುವುದಾಗಿ ತಿಳಿದುಬಂದಿದೆ.

ಆಕಸ್ಮಿಕವಾದ ಮರಣಗಳು.

ಈತಿಂಗಳು ೯ನೇ ತಾರೀಕಿಗೆ ಮುಗಿದ ೧ ವಾರದಲ್ಲಿ ಗ್ರೇಟ್‌ಬ್ರಿಟನ್ನಿನ ರಸ್ತೆಗಳಲ್ಲಿ 3421 ಮಂದಿಗೆ ಅಪಾಯವೂ 133 ಮಂದಿಗೆ ಅಕಾಲಮರಣವೂ ಸಂಭವಿಸಿರುವುದಾಗಿ ಪ್ರಕಟವಾಗಿದೆ.

ಹಡಗಿನ ಅನಾಹುತ.

ಜರ್ಮ ದೇಶಕ್ಕೆ ಸೇರಿದ ಇವಿಬೋಲು ಎಂಬ ಹಡಗು ಕಳೆದವಾರ ಬಂದರಿನ ಸಮೀಪದಲ್ಲಿಯೇ ಬಿರುಗಾಳಿಗೆ ಸಿಕ್ಕಿ ಮುಳುಗಿದುದರಿಂದ ಅದರಲ್ಲಿದ್ದ 90 ಮಂದಿಯೂ ನೀರಿನಪಾಲಾಗಿ ಮರಣಹೊಂದಿದರು.

ಅತ್ಯಾಚಾರ

ಕಳೆದ 16ನೆಯ ತಾರೀಕು ಶನಿವಾರ ಲಾಹೋರಿನಲ್ಲಿ ೪ ಜನ ಯುವಕರು ಮೋಟಾರನ್ನು ತೆಗೆದುಕೊಂಡು ಹೋಗಿ ಒಂದು ಮನೆಯ ಮುಂದೆ ನಿಲ್ಲಿಸಿ ಮನೆಯೊಳಕ್ಕೆ ನುಗ್ಗಿ ಒಬ್ಬ ಮುಸ್ಲಿಂ ಹುಡಿಗಿಯನ್ನು ಬಲಾತ್ಕಾರದಿಂದ ಎಳೆದು ಕೊಂಡು ಬಂದು ಮೋಟರಿನಲ್ಲಿ ಕುಳ್ಳಿರಿಸಿಕೊಂಡು ಪರಾರಿಯಾದರೆಂದೂ ಅಕ್ಕಪಕ್ಕದ ಮನೆಯವರು ಸಹಾಯಕ್ಕೆ ಬರುವುದರಲ್ಲಿ ಅವರನ್ನು ಆ ಮೋಟರು ಓಡಿಸಿಕೊಂಡು ಹೋಗಿರುತ್ತಾರೆಂದೂ ತಿಳಿದು ಬಂದಿದೆ. ಪತ್ತೆ ತರದೂದು ನಡೆಯುತ್ತಿದೆ.

ಪ್ರಪಂಚದಲ್ಲಿ ಆತ್ಮಹತ್ಯೆ ಪರಿಮಾಣ

ಇಂಗ್ಲೆಂಡ್ ವೇಲ್ಸ್ ದೇಶಗಳಲ್ಲಿ ಒಬ್ಬಹೆಂಗಸು ಆತ್ಮಹತ್ಯೆಮಾಡಿಕೊಳ್ಳುವುದರಲ್ಲಿ ೩ ಮಂದಿ ಗಂಡಸರು ಆತ್ಮಹತ್ಯೆ ಮಾಡಿಕೊಳ್ಳುವರಂತೆ. ನ್ಯೂಜಿಲೆಂಡಿನಲ್ಲಿ ನಾಲ್ವರು ಗಂಡಸರಿಗೆ ಒಬ್ಬಹೆಂಗಸಿನಂತೆ ಆತ್ಮಹತ್ಯೆ ನಡೆಯುತ್ತದೆ. ಜರ್ಮನಿ. ಇಟಲಿ ಮತ್ತು ಜಪಾನ್ ದೇಶಗಳಲ್ಲೂ ಗಂಡಸರಲ್ಲೇ ಆತ್ಮಹತ್ಯೆಯು ಹೆಚ್ಚಾಗಿದೆ ಆದರೆ ಇಂಡಿಯಾದಲ್ಲಿ ಪ್ರಯಾಸದಿಂದ ಲೆಖ್ಖ ಹಾಕಿದ್ದರಲ್ಲಿ ಗಂಡಸರಿಗಿಂತ ಸ್ತ್ರೀಯರೇ ಹೆಚ್ಚು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂದು ತಿಳಿದುಬಂದಿದೆ. ಇದಕ್ಕೇನು ಕಾರಣವೋ ತಿಳಿಯದು.

ಮಗಳನ್ನು ಕ್ರೂರವಾಗಿ ಶಿಕ್ಷಿಸಿದ್ದಕ್ಕೆ ತಂದೆಗೆ 2 ತಿಂಗಳು ಕಠಿಣಶಿಕ್ಷೆ

ನೆಲ್ಲೂರಿನ ಪೆರುಮಾಳ್ ಭಟ್ಟರು ಎಂಬಾತನು ತನ್ನ 7 ವರ್ಷ ವಯಸ್ಸಿನ ಸುಂದರಮ್ಮನೆಂಬ ಮಗಳು ಮನೆ ಕೆಲಸ ಮಾಡದೇ ಹಟಮಾಡಿದಳೆಂದು ಅವಳ ಮೈಮೇಲೆ 7-8 ಕಡೆ ಬರೆಗಳನ್ನು ಹಾಕಿದನು. ಇದನ್ನು ತಿಳಿದು ಪೋಲೀಸರು ಕ್ರೂರಿಯಾದ ತಂದೆಯ ಮೇಲೆ ಮೊಕದ್ದಮೆಯನ್ನು ಹೂಡಿದರು. ಸಬ್ ಮ್ಯಾಜಿಸ್ಟ್ರೇಟರು ವಿಚಾರವನ್ನು ವಿಮರ್ಶಿಸಿ, ಮಕ್ಕಳನ್ನು ಶಿಕ್ಷಿಸುವ ಅಧಿಕಾರವು ತಂದೆಗಿದ್ದರೂ ಈ ವಿಚಾರದಲ್ಲಿ ಪಶುವಿನಂತೆ ವರ್ತಿಸಿದ್ದರಿಂದ ತಂದೆಗೆ 2 ತಿಂಗಳು ಕಠಿಣಶಿಕ್ಷೆಯನ್ನು ವಿಧಿಸಿದರು.

ಆಕಸ್ಮಿಕವಾದ ಭಯಂಕರ ಕೊಲೆ.

ಕಳೆದ ೧೬ನೆಯ ತಾರೀಕು ರಾವಲ್ಪಿಂಡಿ ಮೆಕಾನಿಕಲ್ ಟ್ರಾನ್ಸ್‌ಪೋರ್ಟ್ ಶಾಖೆಯಲ್ಲಿ ಜಮೇದಾರನಾಗಿದ್ದವನೊಬ್ಬನ ಮನೆಗೆ ಅಕಸ್ಮಾತ್ ಬೆಂಕಿಬಿದ್ದು ಅವನೂ, ಅವನ ಹೆಂಡತಿಯೂ, ಮಕ್ಕಳೂ ನಾಶವಾದರೆಂದು ತಿಳಿದುಬಂದಿರುತ್ತದೆ. ಆದರೆ ಪೋಲೀಸಿನವರು ತನಿಖೆ ನಡೆಸಿದ್ದರಲ್ಲಿ ಮನೆಗೆ ಆಕಸ್ಮಿಕವಾಗಿ ಬೆಂಕಿ ಬೀಳಲಿಲ್ಲವೆಂದೂ ಯಾರೋ ಮನೆಯವರೆಲ್ಲರನ್ನೂ ಕೊಂದು ಮನೆಗೆ ಬೆಂಕಿ ಹತ್ತಿಸಿರಬೇಕೆಂದು ಊಹಿಸಲಾಗಿದೆ. ಪೋಲೀಸಿನವರು ಜಮೇದಾರನ ಸೇವಕನೊಬ್ಬನನ್ನು ಸೆರೆಹಿಡಿದು ಕೆಲವು ಸಾಮಾನುಗಳನ್ನು ವಶಪಡಿಸಿಕೊಂಡಿರುವರು. ಆ ಸಾಮಾನುಗಳೆಲ್ಲವೂ ಬೆಂದುಹೋದವರದು.

ಈಜಿಪ್ಟಿನಲ್ಲಿ ದಂಗೆ.

ಈಜಿಪ್ಟಿನ ಮುಖ್ಯ ಪಟ್ಟಣವಾದ ಕೈರೋ ನಗರದ ಸ್ವತಂತ್ರ ಪಕ್ಷದವರೂ ಶಾಲಾವಿದ್ಯಾರ್ಥಿಗಳೂ, ಬ್ರಿಟಿಷರು ತಮ್ಮ ಮೇಲೆ ನಡೆಸುತ್ತಿರುವ ಅಧಿಕಾರವನ್ನು ವಿರೋಧಿಸಿ ದಂಗೆ ನಡೆಸಿದರು. ತಮ್ಮ ಸರಕಾರದ ಅನುಮತಿ ಇಲ್ಲದೆ ಅಲೆಕ್ಸಾಂಡ್ರಿಯ ರೇವಿನಲ್ಲಿ ಬ್ರಿಟಿಷರು ತಮ್ಮ ಸಮರನೌಕೆಗಳನ್ನು ಹೆಚ್ಚಿಸಿದ್ದೂ ಇನ್ನೂ ಇತರ ವಿಷಯಗಳೂ ಈ ಗುಂಪಿನವರಿಗೆ ಬಹಳ ಅಸಮಾಧಾನವನ್ನುಂಟುಮಾಡಿದುದರಿಂದ ಬ್ರಿಟಿಷರು ವಾಸಮಾಡುವ ಕಡೆಗಳಿಗೆ ಗುಂಪು ಕಟ್ಟಿ ನುಗ್ಗಿ ಗಲಭೆ ಮಾಡುವುದಕ್ಕೆ ಮೊದಲು ಮಾಡಲು ಬ್ರಿಟಿಷರ ಕೈಕೆಳಗಿದ್ದ ಈಜಿಪ್ಟ್ ಪೋಲೀಸ್ ದಳದವರು ದಂಗೆಕೋರರ ಮೇಲೆ ಗುಂಡು ಹಾರಿಸಿ ಅವರು ಮುಂದೆ ನುಗ್ಗದಂತೆ ತಡೆದರು. ಈ ಗಲಭೆಯಲ್ಲಿ ದಂಗೆಕೋರರ ಕಡೆ ಕೆಲವು ಮರಣಗಳೂ ಅನೇಕರಿಗೆ ಘಾಯಗಳೂ ಆಗಿವೆ ಗಲಭೆಯು ಮುಂದುವರಿಯದಂತೆ ಪೋಲೀಸರು ಕಾಯುತ್ತಿದ್ದಾರೆ.

ಗುಬ್ಬಿಗಳು ಮನುಷ್ಯನ ಪ್ರಾಣವನ್ನುಳಿಸಿದವು!

ಆಸ್ಟ್ರಿಯಾ ದೇಶದ ರಾಜಧಾನಿಯಾದ ವಿಯನ್ನದಲ್ಲಿ ಒಂದು ವಿಚಿತ್ರಪ್ರಸಂಗ ನಡೆಯಿತು. ಫ್ರಾನ್ಸ್ ಓಬರ್‌ಬರ್ ಎಂಬಾತ 75 ವರ್ಷದ ಹಣ್ಣು ಹಣ್ಣು ಮುದುಕ. ಆಬಾಲಬ್ರಹ್ಮಚಾರಿ ಪ್ರತಿನಿತ್ಯವೂ ಎದ್ದು ತನ್ನ ಮನೆಯ ಕಿಟಕಿಯಿಂದ ಗುಬ್ಬಿಗಳಿಗೆ ಕಾಳುಕೊಟ್ಟು ತಿನ್ನಿಸುತ್ತಿದ್ದನಂತೆ. ಒಂದುದಿನ ಎಂದಿನಂತೆ ಗುಬ್ಬಿಗಳೆಲ್ಲ ಕಿಟಕಿ ಬಳಿ ಸೇರಿದುವು ಬಾಗಲೇ ತೆರೆಯಲಿಲ್ಲ! ಸರಿ, ಕೂಗಿ ಆವಾಂತರ ಮಾಡಿಬಿಟ್ಟವು! ಆದರೂ ಹಾಕಿದ ಬಾಗಲು ಹಾಕೇ ಇತು ಅವು ಮಾತ್ರ ಆವಾಂತರ ಮಾಡುವುದನ್ನು ಕಡಿಮೆ ಮಾಡಲಿಲ್ಲ. ಅಕ್ಕಪಕ್ಕದ ಮನೆಯವರು ಈ ಆವಾಂತರವನ್ನು ಕೇಳಿ ಅವನ ಮನೆಯಮುಂದೆ ನೆರೆದರು ಬಾಗಿಲು ತಟ್ಟಿದರು. ಕೂಗಿದರು ಒಳಗಿನಿಂದ ಸದ್ದೇ ಹೊರಡಲಿಲ್ಲ ಅವರಿಗೆ ಅನುಮಾನಬಂದು, ಬಾಗಿಲೊಡೆದು ನೋಡುವಲ್ಲಿ ಮುದುಕ ಜ್ಞಾನಪಾನವಿಲ್ಲದೆ ಮಲಗಿದ್ದಾನೆ! ಆಮೇಲೆ ಅವನನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನಡೆಯಿಸಿದ ಮೇಲೆ ಜ್ಞಾನಬಂದು ಹುಷಾರಾದ!

ಅಬಿಸೀನಿಯಕ್ಕೆ ಜಪಾನ್ ಯುದ್ಧ ಸಾಮಗ್ರಿ

ಜಪಾನಿನರು ತಮ್ಮಲ್ಲಿದ್ದ ಅಮೂಲ್ಯವಾದ ಬಂದೂಕ ಮದ್ದು, ಗುಂಡು ಮೊದಲಾದ ಯುದ್ಧಸಾಮಗ್ರಿಗಳನ್ನು ಅಬಿಸೀನಿಯದವರಿಗೆ ಒದಗಿಸಲು ಮೊದಲು ಮಾಡಿದ್ದಾರೆ. ಈ ಸಾಮಾನುಗಳು ಜಿಬೂಟಿಯಲ್ಲಿ ಇಳಿಸಲ್ಪಟ್ಟು ಅಲ್ಲಿಂದ ರೈಲ್ ಮಾರ್ಗವಾಗಿ ಅಡಿಸ್ ಅಬಾಬಾಕ್ಕೆ ಹೋಗುವುವು. ಹಿಂದಿನ ಮಹಾಯುದ್ಧಕಾಲದಲ್ಲಿ ಜಪಾನ್ ರೈಫಲ್‌ಗಳಿಂದ ಇಂಗ್ಲೀಷರಿಗೆ ಬಹಳ ಸಹಾಯವಾಗಿತ್ತು. ಇಂಗ್ಲೆಂಡ್ ಮತ್ತು ಬೆಲ್ಜಿಯಂನವರೂ ಅಬಿಸೀನಿಯಕ್ಕೆ ಶಸ್ತ್ರಗಳನ್ನು ಒದಗಿಸುತ್ತಿದ್ದಾರೆ.

ಅಬಿಸೀನಿಯಾಯುದ್ಧರಂಗ.

ಅಬಿಸೀನಿಯದ ಯುದ್ಧದಲ್ಲಿ ಇಟಲಿಯ ಸೇನಾನಾಯಕರಾಗಿದ್ದ ಡೀಬೋನೋರವರನ್ನು ಅವರ ಅನಾರೋಗ್ಯಕಾರಣದಿಂದಲೂ ಅವರಿಗೆ ಇನ್ನೂ ಹೆಚ್ಚಿನ ಅಧಿಕಾರಕೊಡುವುದಕ್ಕೋಸ್ಕರಲೂ ಹಿಂದಕ್ಕೆ ಕರೆಸಿಕೊಂಡು ಅವರ ಸ್ಥಾನಕ್ಕೆ ಬಡೋಗ್ಲಿಯೋ ಎಂಬುವರನ್ನು ಕಳಿಸಿರುವದರಿಂದ ಈ ಸ್ಥಾನಬದಲಾವಣೆಗಳ ಮೂಲಕ ಸದ್ಯಃ ಯುದ್ಧವು ಮುಂದರಿದಿರುವುದಿಲ್ಲ ಇನ್ನೂ ೫-6 ವಾರಗಳವರಿವಿಗೂ ಹೀಗೆ ತಾಟಸ್ಥ್ಯವನ್ನು ವಹಿಸಿರುವುದಾಗಿ ವದಂತಿಯಿದೆ ಇಟಾಲಿಯನ್ ಸೈನಿಕರೂ ದಳಪತಿಗಳೂ ಈಗ ತಾವು ಆಕ್ರಮಿಸಿರುವ ಪ್ರದೇಶಗಳನ್ನು ಭದ್ರಪಡಿಸಿಕೊಳ್ಳುವುದರಲ್ಲಿ ತೊಡಗಿದ್ದಾರೆ. ಮಕಾಲೆಯಲ್ಲಿ ದೊಡ್ಡದೊಡ್ಡ ಫಿರಂಗಿಗಳನ್ನು ತಂದು ನಿಲ್ಲಿಸಿರುತ್ತಾರೆ

ಅಬಿಸೀನಿಯಾ ಚಕ್ರವರ್ತಿಗಳು ತಮ್ಮ ಸೈನ್ಯಗಳ ರಚನಾಕ್ರಮಗಳನ್ನು ಸ್ವತಃ ಪರಿಶೀಲಿಸಲು ರಾಜಧಾನಿಯಿಂದ ವಿಮಾನದಲ್ಲಿ ಕುಳಿತು ಪ್ರಯಾಣಮಾಡಿದ್ದರು. ಇವರು ಯಾವ ಕಡೆಗೆ ಹೋದರೆಂಬ ವಿಷಯವು ತಿಳಿದಿರಲಿಲ್ಲ. ಇವರು ಇಷ್ಟು ಗುಪ್ತರೀತಿಯಲ್ಲಿ ಪ್ರಯಾಣಮಾಡಿದಾಗ್ಯೂ ಶತ್ರುವಿಮಾನಗಳ ಕೈಗೆ ಸಿಕ್ಕಿ ಬೀಳುವವರಲ್ಲಿದ್ದರೆಂದೂ ಅದೃಷ್ಟವಶಾತ್ ಅವುಗಳ ದೃಷ್ಟಿಗೆ ಬೀಳದೇ ತಪ್ಪಿಸಿಕೊಂಡು ಬಂದರೆಂದೂ ತಿಳಿದುಬಂದಿದೆ

ಚಕ್ರವರ್ತಿಗಳು ದಕ್ಷಿಣ ರಣರಂಗದ ಕಡೆಗೆ ಹೋಗಿ ಹರಾರ್ ನಗರದಲ್ಲಿಳಿದು ಆಸ್ಪತ್ರೆಯಲ್ಲಿ ಗಾಯಗೊಂಡು ಚಿಕಿತ್ಸೆಪಡೆಯುತ್ತಿದ್ದವರನ್ನು ನೋಡಿ ಅವರುಗಳ ದೇಶಾಭಿಮಾನವನ್ನು ಅಭಿನಂದಿಸಿ, ಜಿಜಿಗಾದಲ್ಲಿ ಸೈನ್ಯಬಲವನ್ನು ಪರಾಂಬರಿಸಿ ಎಚ್ಚರಿಕೆಯಿಂದ ಯುದ್ಧಮಾಡುವಂತೆ ಹಿತೋಪದೇಶಮಾಡಿ ಅಲ್ಲಿನ ಸ್ವೀಡಿಷ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವ ಗಾಯಗೊಂಡವರನ್ನು ಬಹುಮಾನಿಸಿ. ದಂಡನಾಯಕ, ನಸೀಬು ಮತ್ತು ತುರ್ಕಿ ಜನರಲ್ ವಾಹಿದ್‌ಪಾಷಾರವರೊಂದಿಗೆ ಸಂಗ್ರಾಮ ವಿಚಾರವನ್ನು ಆಲೋಚಿಸಿ ಹೊಸ ತರಹದ ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಿದರು. ಅಲ್ಲಿಂದ ದಗಾಬೂರ್ ಎಂಬಲ್ಲಿಗೆ ಮೋಟಾರಿನಲ್ಲಿ ಕೂಡ ಪ್ರಯಾಣ ಮಾಡಿದರು. ಈಚೆಗೆ ಅಬ್ಸೀನಿಯನರು ಅನಾಲೆಯಲ್ಲಿ ಇಟಾಲಿಯನರನ್ನು ಸೋಲಿಸಿ ವಶಪಡಿಸಿಕೊಂಡಿದ್ದ ಯುದ್ಧದ ಟ್ಯಾಂಕುಗಳನ್ನು ನೋಡಿಕೊಂಡು ರಾಜಧಾನಿಗೆ ಹಿಂತಿರುಗಿದರು. ಚಕ್ರವರ್ತಿಗಳು ವಿಮಾನದಲ್ಲಿ ಸಂಚಾರಮಾಡಿದ್ದು ಇದೇ ಮೊದಲು ಇವರ ಸಂಚಾರ ಕಾಲದಲ್ಲಿ ಇವರ ವಿಮಾನದ ಸುತ್ತಲೂ ೬ ವಿಮಾನಗಳಿದ್ದು ಚಕ್ರವರ್ತಿಗಳ ವಿಮಾನವನ್ನು ರಕ್ಷಿಸುತ್ತಿದ್ದವೆಂದು ತಿಳಿದುಬಂದಿದೆ.

ವಿಮಾನಗಳಮೂಲಕ ಅಬ್ಸೀನಿಯ ಸೈನ್ಯಗಳ ಸ್ಥಿತಿಗತಿಗಳನ್ನು ಪರಿಶೀಲಿಸಿದ್ದರಲ್ಲಿ ಮಕಾಲೆಗೆ ದಕ್ಷಿಣಪ್ರದೇಶಗಳಲ್ಲಿ 50ಸಾವಿರ ಮಂದಿಯವರಿವಿಗೆ ಅಬ್ಸೀನಿಯಾ ಸೈನ್ಯವು ಸೇರಿರುವುದಾಗಿ ತಿಳಿದುಬರುತ್ತದೆ ಅಬ್ಸೀನಿಯಾ ದಳಪತಿಯಾದ ರಾಸ್‌ಸೆಯಾಮನು ಸುಮಾರು 1000 ಮಂದಿಸೈನಿಕರೊಡನೆ ತೆಂಬ್ರಿಯನ್ ಎಂಬಲ್ಲಿ ಇಟಲಿಯವರೊಡನೆ ಯುದ್ಧಮಾಡಿದನೆಂದೂ ಹಲವು ಘಂಟೆಗಳ ಕಾಲ ಯುದ್ಧವು ನಡೆದ ಮೇಲೆ ಇಟಲಿಯವರು ಕೆಲವು ಹೊಸ ಸೈನ್ಯವನ್ನು ತಂದು ಸೇರಿಸಿದ್ದರಿಂದ ಹಿಮ್ಮೆಟ್ಟಿದನೆಂದು ತಿಳಿದುಬರುತ್ತದೆ ಈ ಯುದ್ಧದಲ್ಲಿ ಇಟಲಿಯವರು ಫಿರಂಗಿಗಳನ್ನೂ, ರೈಫಲ್‌ಗಳನ್ನೂ ಉಪಯೋಗಿಸಿದರು

ಅಬ್ಸೀನಿಯಾ ಚಕ್ರವರ್ತಿಗಳು ಯುದ್ಧಕ್ಷೇತ್ರವನ್ನು ಪರಿಶೀಲಿಸಿದ್ದರಲ್ಲಿ ಭಯಕ್ಕೇನೂ ಕಾರಣವಿಲ್ಲವೆಂದೂ, ಒಗಡನ್ನಿನಲ್ಲಿ ಬಹಳಪ್ರದೇಶಗಳು ಇಟಲಿಯ ಕೈವಶವಾಗಿ ಅಲ್ಲಿನ ರೂಕ್ಷಜನರ ನಾಯಕರು ತಮ್ಮ ಕಡೆ ಸೇರಿದರೆಂದು ಇಟಲಿಯವರು ಹರಡಿದ್ದ ಸಮಾಚಾರವು ಸುಳ್ಳೆಂದೂ, ವಾಯುಬಲದ ಮುತ್ತಿಗೆಗಳಿಂದ ಜನರ ಮೇಲೇನೂ ಪರಿಣಾಮವಾಗಿಲ್ಲವೆಂದೂ ತಿಳಿಸುತ್ತಾರೆ.

(೩ನೆಯ ಪುಟದಿಂದ ಮುಂದುವರಿದುದು)

ಸಮತಾಗುಣವನ್ನು ಅಭಿನಂದಿಸಿ ಶ್ರೀ ಸನ್ನಿಧಾನವರು ತಮ್ಮ ವಿಶಾಲತನವನ್ನು ವ್ಯಕ್ತಪಡಿಸುತ್ತಿರುವುದು ಅಖಿಲ ಭಾರತೀಯರ ಐಕ್ಯಕ್ಕೆ ಕಾರಣವೆಂದು ಸಂತೋಷದಿಂದ ಅರಿಕೆಮಾಡಿಕೊಳ್ಳುವೆವು ... ಸ್ವಾಮಿ

ವಿದ್ಯಾನಿಧಿಗಳೇ, ಶ್ರೀ ... ಜ್ಞಾನ ವರ್ಧಕ ... ಗಳು ವಿದ್ಯಾಪಕ್ಷಪಾತಿಗಳಾಗಿ ... ಕಾಶೀ ... ವ ... ಪೂನಾ, ಕಲಕತ್ತಾ, ಬೆಂಗಳೂರ ಮೈಸೂರು ಮುಂತಾದ ಸ್ಥಳಗಳಲ್ಲಿ ವೈದಿಕ ಮತ್ತು ಇಂಗ್ಲಿಷ ವಿದ್ಯಾರ್ಥಿಗಳಿಗೆ ಪೋಷಣವನ್ನು ಕೊಟ್ಟದ್ದರಿಂದ ಎಷ್ಟೋ ಜನಗಳು ಉತ್ತೀರ್ಣರಾಗಿ ... ಉದ್ಯೋಗದಲ್ಲಿಯ ... ಸಮಾಜ ಹಿತಚಿಂತಕರಾಗಿದ್ದಾರೆ ... ಒಟ್ಟಿನ ಮೇಲೆ ... ವಿದ್ಯಾವಂತರ ಸಂಖ್ಯೆಯು ... ವಿದ್ಯಾವಂತರ ಸಂಖ್ಯೆಯು ಬಹಳ ... ಇರುವದು ಮಹಾ ಸನ್ನಿಧಾನಕ್ಕೆ ... ಕೊರತೆಯನ್ನು ... ಬೆಂಗಳೂರಿನಲ್ಲಿ ಒಂದು ಸಂಸ್ಕೃತ ಕಾಲೇಜನ್ನು ... ವೃದ್ಧಿಗೆ ... ಅಂತ್ಯಂತ ... ಮತೋ ... ರುವೆವು

ಮಹಾಸ್ವಾಮಿಗಳೇ ನಮ್ಮ ... ಲಕ್ಷ್ಮೀ ... ತ್ರಿಯಾವಂತರಿಂದಲೂ ... ವಿದ್ಯಾವಂತರಿಂದಲೂ ಸುಸಿಜ್ಜಿತವಾಗಿದ್ದಿತು ... ಶುಭಾಗಮನದ ... ಯ ನಮಗಿಲ್ಲದಿದ್ದರೂ ... ಗುರುಗಳ ... ಭಕ್ತರಾದ ನಮ್ಮಗಳ ... ಯನ್ನು ... ತಂದು ನಮ್ಮ ... ಗಳನ್ನು ... ಮಾಡಿದುದಕ್ಕಾಗಿ ... ಅರ್ಪಿಸುವೆವು ಮಹಾಸ್ವಾಮಿ

ಮಹಾ ಗುರುಗಳೇ ... ಸನ್ನಿಧಾನವು ... ರಿಸಿ ಮೈಸೂರು ದೇಶವನ್ನು ಪವಿತ್ರಮಾಡಿದಂತೆ ಈಗಾಗ ನಮ್ಮ ... ದಯಮಾಡಿ ... ಸರ್ವಸಮತ ಗುಣಪ್ರಧಾನರಾದ ... ಇಂಗ್ಲಿಷ ... ವಿಚಾರ ಶಿಷ್ಯಜನ ... ಬೋಲಿಕೆ ... ವಾದಿಗಳು ... ಮಹಾ ಸನ್ನಿಧಾನದವರ ... ಪ್ರವಾಸ ... ಗಿಂದ ... ಪೂರ್ವಕ ಜಯಘೋಷವನ್ನು ಮಾಡಿ ... ಪೂಜಿತರಾದ ಜಂಗಮಸಾರ್ವಭೌಮ ಜಗದ್ಗುರು ... ಸನ್ನಿಧಾನದಲ್ಲಿ ಭಕ್ತಿಪೂರ್ವಕ ... ಸಮರ್ಪಿಸುವ ... ವತ್ಸಲರು ... ಸ್ವಾಮಿ

ಶ್ರೀ ಮಹಾ ॥ ... ಸನ್ನಿಧಿಯ ... ಹಾವೇರಿ ವೀರಶೈವಮಠಸ್ಥರು ... ಮೊದಲಾದ ದೈವದವರು ... ಸ್ವಾಗತಸಮಿತಿಯ ಸದಸ್ಯರು

ಶ್ರೀ॥ ಷ ಬ್ರ॥ ಬಸವದೇವರಕೇರಿ ... ಹಿರೇಮಠ ಕಾರನೆಲ್ಲಿ ಸ್ವಾಗತಸಮಿತಿ (ಅಧ್ಯಕ್ಷ)

ಶ್ರೀ॥ ಷ॥ ಬ್ರ॥ ಶ್ರೀ ಚೆನ್ನವೀರಸ್ವಾಮಿಗಳು ಹಸರೂರ ಬಣ್ಣದಮಠ ಹಾವೇರಿ ಸ್ವಾಗತಸಮಿತಿ (ಉಪಾಧ್ಯಕ್ಷ)

ಶರಬಸಪ ನೂರಂದಪ್ಪ ಯರೇಶೀಮಿ ಸ್ವಾಗತ ಸಮಿತಿ (ಕೋಶಾಧ್ಯಕ್ಷ)

ಗೌರವ ಕಾರ್ಯದರ್ಶಿಗಳ

ತುರಿಗೆಯ್ಯನವರು, ನಡುವಿನವರ ... ದ್ರಯ್ಯನವರು ವರದೀಮಠ ಪುಟ್ಟಯ್ಯನವರು, ಕುಂಬಾರಗೇರಿ ಮಠ ಸಿ ಕೆ ಕುಲಕರ್ಣಿ, ವಕೀಲ, ಬಿ.ಎ, ಎಲ್‌ಎಲ್‌ಬಿ, ಎಸ್ ಬಿ ಹಿರೇಮಠ ವಕೀಲ ಬಿ.ಎ ಎಲ್‌ಎಲ್‌ಬಿ ... ಚನ್ನಬಸಯ್ಯನವರು ಅಂಪಾ ... ವರಮಠ ... ದ್ಯಾವಯ್ಯನವರು ... ಗುರುಲಿಂಗಯ್ಯನವರ ... ಚೌಕಿಮಠ ... ವೀರಪ್ಪ ... ಯರೇಶೀಮಿ ... ಮ್ಯಾನಿಸಿಪಲ್ (ಮು ಕೌನ್ಸಿಲರ) ... ನವರ (ಮು ಕೌನ್ಸಿಲರ) ... ವಕೀಲ ಬಿ.ಎ ಎಲ್‌ಎಲ್‌ಬಿ ... ಯರೇಶೀಮಿ ... ನೂರ ... ಬಸಪ್ಪ ... ನವರು ... ಯರೇಶೀಮಿ ಮ ಕೌನ್ಸಿಲರ) ... ವಕೀಲ ... ವೀರಪ್ಪ ... ಬಸಪ್ಪ ... ನಂದಿ

ಕರ್ನಾಟಕ ಸಾಹಿತ್ಯ ಪರಿಷತ್ತು

ಶ್ರೀ ... ಪರಿಷನ್ಮಂದಿರ

... ಶಂಕರಪುರ ...

ಬೆಂಗಳೂರು ಸಿಟಿ

... ಪ್ರಕಟಣೆ

ವ್ಯಾಸಪತ್ರಿಕೆ

... ಸದಸ್ಯರಲ್ಲಿ ವಿಜ್ಞಾಪನೆ ... ವಿಷೇಶವಾಗಿ ... ಡಿಸೆಂಬರ್ ... ತಾರೀಖು ... ಬೋಧ ಯಿಯು ... ಸಾಹಿತ್ಯ ... ಉತ್ತರ ...

... ಪತ್ರಿಕೆ ... ವಿವರ ... ಸದಸ್ಯರ ... ಹೆಸರು ... ಡಿಸೆಂಬರ್ ... ತಿಳಿಸುವಂತೆ ... ಹೆಸರು ಕೊಡಬೇಕೆಂದು ಕೋರಿದೆ

ಪರಿಷತ್ತಿನ ... ಸಂಖ್ಯೆಗಳು ... ಓದುವ ಸಲುವಾಗಿ ... ಹೆಸರು ಮೊದಲಾದ ... ಕಳುಹಿಸಬೇಕೆಂದು ಕೋರಿದೆ

ಪರಿಷತ್ತಿನ ಸದಸ್ಯರೆಲ್ಲರೂ ಇದಿಷ್ಟನ್ನು ... ಮಾಡಿ ... ಗಳನ್ನು ಸರಬರಾಜು ಮಾಡಬೇಕೆಂದು ಬೇಡುತ್ತೇನೆ

ಬೆಂಗಳೂರ ಸಿಟಿ ... ವೆಂಕಟರ ... ವಯ್ಯ

೧೯ನೆ ನವೆಂಬರ ... ಗೌರವಕಾರ್ಯದರ್ಶಿ

ವೀರಶೈವ ಮಹಾಜನಗಳಲ್ಲಿ ವಿಜ್ಞಾಪನೆಗಳು.

ತಾರೀಖು ೨೨ ನವೆಂಬರ್ ೧೯೩೫ ನೆಯ ಯುವನ ಸಂ॥ ಕಾರ್ತಿಕ ಬ॥ ೧ ಸೋಮವಾರ ಸಾಯಂಕಾಲ ೫ ಘಂಟೆಗೆ ವೀರಶೈವ ಬೋರ್ಡಿಂಗ (ರಾಯಚೂರ) ನಲ್ಲಿ ಸಭೆಯು ಸೇರಿ, ಶ್ರೀಮದ್ವೀರಶೈವ ಮಹಾಸಭೆಯ ೧೩ ನೆಯ ಅಧಿವೇಶನವು ರಾಯಚೂರು ನಗರದಲ್ಲಿ ೧೯೩೬ ನೆಯ ಇಸವಿಯ ಮೇ ತಿಂಗಳು ಅಂದರೆ ಧಾತುನಾಮಸಂ॥ ವೈಶಾಖ ಮಾಸದಲ್ಲಿ ಜರಗುವಂತೆ ಸರ್ವಾನುಮತದಿಂದ ನಿಶ್ಚಯಿಸಲ್ಪಟ್ಟಿರುತ್ತದೆ. ಕಾರಣ ಅಖಿಲ ವೀರಶೈವರಿಗೆ ಈ ಸೂಚನೆಯ ದ್ವಾರ ತಿಳಿಸಿರುತ್ತೇವೆ.

ಸೆಕ್ರೆಟರಿ

ಹರಿ ವಿರೂಪಾಕ್ಷಗೌಡ, ವಕೀಲ ಹೈಕೋರ್ಟ

ಸೆಕ್ರೆಟರಿ ಕಮಿಟಿ, ೧೩ನೆಯ ವೀರಶೈವ

ಮಹಾಸಭೆ ರಾಯಚೂರು

ಲಾವಣಿ ಹಾಡುವ ಸ್ಪರ್ಧೆ.

ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರದ ತಾಲ್ಲೂಕು ಘಾಟಿಯಲ್ಲಿ ಇದೇ ಯುವನಾಮ ಸಂವತ್ಸರದ ಪುಷ್ಯ ಶುದ್ಧ ಷಷ್ಠಿ ಮಂಗಳವಾರ ಮೊದಲೊಂಡು ನಡೆಯುವ ಶ್ರೀ ಸುಬ್ರಹ್ಮಣ್ಯಸ್ವಾಮಿ ಬ್ರಹ್ಮರಥೋತ್ಸವ ಮತ್ತು ದನಗಳ ಪರಿಷೆಯ ಸಂಬಂಧದಲ್ಲಿ ೩೧-೧೨ ಮತ್ತು ೧-೧-೩೬ ಈ ಎರಡು ದಿನಗಳಲ್ಲಿಯೂ ಕನ್ನಡದಲ್ಲಿ ಲಾವಣಿಗಳನ್ನು ಹಾಡುವ ಸ್ಪರ್ಧೆಯನ್ನು ಏರ್ಪಡಿಸಿರುತ್ತೆ. ಆದಕಾರಣ ಈ ಕೆಳಗೆ ಸೂಚಿಸಿರುವಂತೆ ಬಹುಮಾನಗಳನ್ನು ಕೊಡಲಾಗುವುದು. ಲಾವಣಿಗಳನ್ನು ಹಾಡುವವರಲ್ಲಿ ಸ್ಪರ್ಧೆಯಲ್ಲಿ ಭಾಗಿಗಳಾಗಲಿಚ್ಛಿಸುವವರು ೨೫-೧೨-೩೫ ನೆ ತಾರೀಖಿನೊಳಗಾಗಿ ಬೆಂಗಳೂರಿನಲ್ಲಿರುವ ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸರವರಿಗೆ ತಿಳಿಸಬೇಕೆಂದು ಕೋರಿದೆ. ಸ್ಪರ್ಧೆಗಾರರು ತಮ್ಮ ಪ್ರಯಾಣದ ವೆಚ್ಚ ಊಟದ ಖರ್ಚುವನ್ನು ತಾವೇ ವಹಿಸಿಕೊಳ್ಳಬೇಕಾಗುತ್ತದೆ. ಸ್ಥಳವಸತಿಯನ್ನು ಏರ್ಪಡಿಸಲಾಗುವುದು. ಸ್ಪರ್ಧೆಯ ಸಂಬಂಧದಲ್ಲಿ ನೇಮಕವಾಗುವ ಸಮಿತಿಯವರು ಒಪ್ಪುವ ಲಾವಣಿಗಳನ್ನು ಹಾಡಲು ಮಾತ್ರವೇ ಅವಕಾಶ. ಸ್ಪರ್ಧೆಯ ಪರೀಕ್ಷೆಯಲ್ಲಿ ಸಮಿತಿಯವರ ತೀರ್ಮಾನವೇ ಅಖೈರು ತೀರ್ಮಾನ. ಬಹುಮಾನಗಳ ವಿವರ—ಮೊದಲನೆಯ ಬಹುಮಾನ ಚಿನ್ನದಪದಕ, ಎರಡನೆಯ ಬಹುಮಾನ ಬೆಳ್ಳಿಯಪದಕ, ಮೂರನೆಯ ಬಹುಮಾನ ಬೆಳ್ಳಿಯಪದಕ, ನಾಲ್ಕನೆಯ ಬಹುಮಾನ ನಗದು ಐದು ರೂಪಾಯಿ.

ಜಿ ಬಿ ಮಲ್ಲಾರಾಧ್ಯ,

ದೊಡ್ಡಬಳ್ಳಾಪುರದ ಸಬ್‌ಡಿವಿಜನ್ ಆಫೀಸರ್

ಸೌಕರ್ಯದ ಯಾತ್ರೆಗಳು! ಚಾರ್ಜು ಬಹಳೇ ಸುಲಭ!! ಪ್ರಸಿದ್ಧ ಪುಣ್ಯಕ್ಷೇತ್ರಗಳು!!!

ಉತ್ತರ ಮತ್ತು ದಕ್ಷಿಣ ಹಿಂದೂಸ್ಥಾನ ಮಹಾಯಾತ್ರೆ

ಶ್ರೀಕಾಶೀ ರಾಮೇಶ್ವರ ಮಹಾಯಾತ್ರೆಯು

ತಾ॥ ೨೯—೧೨—೩೫ ರಿಂದ ತಾ॥ ೧೫—೨—೩೬ ರ ವರೆಗೆ.

ಪ್ರಸಿದ್ಧ ೫೨ ಕ್ಷೇತ್ರಗಳು.

ಟ್ರೇನಿನಲ್ಲಿ ಒಬ್ಬರಿಗೆ ಇಬ್ಬರ ಸ್ಥಳ ಸಿಗುವದು ಸೆಕೆಂಡ್ ಕ್ಲಾಸ್ ೩೧೦ ರೂ. ಥರ್ಡ್ ಕ್ಲಾಸ್ ೧೪೯

ಹೆಚ್ಚಿನ ಮಾಹಿತಿಗಾಗಿ ಪತ್ರಬರೆಯಬೇಕು

೨೫ ಜನ ಯಾತ್ರಿಕರನ್ನು ಕೂಡಿಸಿಕೊಟ್ಟವರನ್ನು ಪುಕಟ್ ಯಾತ್ರೆಗೆ ಕರೆದುಕೊಂಡು ಹೋಗುವೆವು ಏಜಂಟರಿಗೆ ಯೋಗ್ಯ ಕಮಿಷನ್ ಸಿಗುವದು ಪತ್ರ ಬರೆಯಬೇಕು ಅಥವಾ ಸಮಕ್ಷಮ ಭೆಟ್ಟಿಯಾಗಬೇಕು

ಆಫೀಸ್— ಜಮಾಯಿ ... ಸ್ಟ್ಯಾಂಡ್ ಹತ್ತಿರ ಒಟ್ಟಿ } (೧)

ಶಿವಾನಂದ ಯಾತ್ರಾಕಂಪನಿ, ಬಿಜಾಪೂರ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಪಂಚಪೀಠಗಳಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸೇರಿದವರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದು ವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ತಮ್ಮ ಶಕ್ತ್ಯನುಸರಿಸಿ ಶಿಷ್ಯರ ಯಾವತ್ತು ವಿಷಯ ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ನಿವಾರಿಸುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯತಕ್ಕ ವಿಷಯಗಳನ್ನು ವಿವರವಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಇದರಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಉತ್ತಮವಾದ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಕಡಿಮೆ ಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೌಲ್ಯ
ಸ್ವರ್ಣ ಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ರಸಕರ್ಪೂರ	೧	೨—೦—೦
ಮಲ್ಲಸಿಂದೂರ	೧	೬—೦—೦
ತಾಳಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
[illegible]ಂಗ	೧	೩—೦—೦
[illegible]ಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೬೦—೦—೦
[illegible]ಭಸ್ಮ	೧	೬—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦ ೧೨—೦
[illegible]ಭಸ್ಮ	೧	೦—೮—೦
[illegible]	೧	೦—೮—೦
[illegible]ಭಸ್ಮ	೧	೦—೮—೦
[illegible]ಭಸ್ಮ	೧	೦—೮—೦
[illegible]ಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
[illegible] ಮೌಕ್ತಿಕಭಸ್ಮ	೧	೦ ೧೨—೦
[illegible]ಭಸ್ಮ	೧	೩—೦—೦
[illegible]ರತ್ನಭಸ್ಮ	೧	೬೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
[illegible]ಂಗದ ಕೋಡಿನ ಭಸ್ಮ	೧	೦—೮—೦
[illegible]ಹರತಾಲಭಸ್ಮ	೧	೦—೮—೦
[illegible] (೧ನೇ ನಂಬರ್)	೧	೫೦—೦—೦
[illegible] ಸೂರ್ಯಪುಟ	೧	೧—೦—೦
[illegible] ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ ಗುಗ್ಗುಳ ಮುಂತಾದ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ವೇಳೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವೋಪಯುಕ್ತವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಶೋಭಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲಗ್ರಂಥವು ಕೇವಲ ೩೦ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೭ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಸಂತೋಷಪೂರ್ವಕವಾಗಿ ಹೇಳಬೇಕಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರನ್ನು ಗೌರವಿಸಿದ್ದಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿದೆಯೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೭ ಪುಟಗಳಿಂದ ಕೂಡಿದ್ದು ಒಳ್ಳೆ ಬಿಳಿಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೮ ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ [illegible] ಫೋಟೋ ಸೈಜು ೨೦ \ ೧೪ ಬೆಲೆ ಒಂದಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು [illegible] ಅಗಸ್ತ್ಯ [illegible] ವ್ಯಾಸ [illegible] ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೮\೧೪ ಬೆಲೆ	೦—೧—೬
ಸದ್ಯಃ [illegible] ಆಚಾರ್ಯರು [illegible] ಫೋಟೋ ಸೈಜು ೧೪ \ ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ [illegible] ಫೋಟೋ ಸೈಜು ೧೪\೧೦ ಬೆಲೆ ಒಂದಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ [illegible] ಫೋಟೋ ಸೈಜು ೧೦\೮ ಬೆಲೆ ಒಂದಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶ್ರೀಮದುಜ್ಜಯಿನಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು [illegible] ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ [illegible] ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು [illegible] ಗುರುರೂಪವನ್ನು ಧಾರಣಮಾಡಿ [illegible] ಒಂದಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ [illegible] ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನಿ ಜಗದ್ಗುರುಗಳವರ [illegible] ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಒಂದಕ್ಕೆ	೦—೦—೯
ಶ್ರೀ ಜಗದ್ಗುರು [illegible] ಫೋಟೋ ಒಂದಕ್ಕೆ	೦—೦—೯
ಶ್ರೀ ಜಗದ್ಗುರು [illegible] ಫೋಟೋ ಒಂದಕ್ಕೆ	೦—೦—೯
ಶ್ರೀ ಜಗದ್ಗುರು [illegible] ಫೋಟೋ	೦—೦—೯
ಶ್ರೀ ಜಗದ್ಗುರು [illegible] ಫೋಟೋ	೦—೦—೯
[illegible] ಫೋಟೋ	೦—೦—೯
[illegible] ಫೋಟೋ	೦—೦—೯

[illegible] ರೂಪಾಯಿಗಳ ಮೇಲೆ [illegible] ಫೋಟೋ [illegible] ಕೊಡಲಾಗುವದು

[illegible] —ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೀ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ[illegible] ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ[illegible] ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ[illegible]

(Registered Trade Mark)

ಗಳನ್ನು ಕೊಟ್ಟಿ[illegible] ರು ಪ್ರಸಿದ್ಧವಾದ[illegible] ನಶ್ಯದ ಪುಡಿಯ[illegible] ಸ್ಪಷ್ಟವಾಗುವ [illegible] ಧಿಗಳು ಯಾವವೆ[illegible] ರೆ —ಸೀನು, [illegible] ತಲೆನೋವು, ತಲೆ[illegible] ಲ್ಲಿಯ ರೋಗಗಳ[illegible] ಕಣ್ಣುಗಳಲ್ಲಿ ಉಂಟ[illegible] ಗತಕ್ಕ ಸರ್ವವ್ಯಾಧಿಗಳು ಜಾಡೋಪ ಮುಂತಾ[illegible] ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ [illegible] ಲ್ಪಟ್ಟ [illegible] ವ್ಯಾಧಿಗಳನ್ನು ಸ್ಪಷ್ಟಪಡಿಸಿ ಬ್ಲಾ[illegible] ಯನ್ನೂ ಸಹ [illegible] ಮೂರುಬೆ[illegible] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ[illegible] ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ [illegible] ಪರಿಮಳವಾಗುವುದು ಇದನ್ನು ಅನೇಕ ಪ್ರಮುಗ[illegible] ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ[illegible] ಸುತ್ತಾರೆ ಪಾದರಿಸೀಸೆ ಪೂಗಸಟ್ಟಿ ಕಳುಹಿಸಲಾದೀ[illegible]

ಒಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ ೦ [illegible]
ಡಜನ್ ಒಂದಕ್ಕೆ ಕ್ರಯ ರೂ ೨ ೮ ೦ ವಿ. ಪಿ ೮ [illegible]

ನಿಮ್ಮ ವಿಳಾಸವನ್ನು ತಿಳಿಯುವಂತೆ ಬರಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[10] ಪೋ ಬಾ ೫೧೦, ಮದರಾಸ[illegible]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು [illegible]	೩ ಆಣೆ
ಮರುಳಸಿದ್ಧೇಶ್ವರ[illegible]	೧ ಆಣೆ
ಗೋತ್ರಸೂತ್ರಪಟ (ಎ[illegible])	೧ ಆಣೆ
ಸನಾತ್ಯಸಾತ್ಯಮುನಿಪ[illegible] ([illegible])	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ([illegible])	೧ ಆಣೆ
ಶ್ರೀ ಪಂಚಾಚಾರ್ಯ [illegible] ([illegible] ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ([illegible] ಆವೃತ್ತಿ)	೧ ಆಣೆ
ಬಸವಾದಿ [illegible] ([illegible] ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ ([illegible] ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವ[illegible]	೨ ಆಣೆ
ಗುರುಸ್ವರೂಪ[illegible]	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ವೀರಶೈವಾಚಾರವಿಧಿ ([illegible] ಆವೃತ್ತಿ)	೩ ಆಣೆ
ವಿವಾಹವಿಧಿ ([illegible]ನೆಯ ಆವೃತ್ತಿ)	೪ ಆಣೆ
ಸನಾತ್ಯಸಾತ್ಯಮು [illegible] ([illegible]ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ ([illegible]ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ[illegible]
पंडित श्रीकाशीनाथशास्त्री यांचें भाषण (मराठी)	೮ ಆ[illegible]
Speeches by Pandit Shri Kashinatha Shastri (*English*)	12 A[illegible]
[illegible] ([illegible]ನೆಯ ಆವೃತ್ತಿ)	೧೨ ಆ[illegible]
[illegible]ವಿಧಿ (ವೈದಿಕ [illegible])	೧೨ ಆ[illegible]
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ[illegible]
[illegible] ದೀಕ್ಷಾವಿಧಿ ([illegible]ನೆಯ ಆವೃತ್ತಿ)	೧೨ ಆ[illegible]
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ[illegible]
ಶಿವಾಗಮಸೂತ್ರಸಿದ್ಧಾಂತದರ್ಪಣ	೧೨ ಆ[illegible]
ಸಚಿತ್ರ ರೇಣುಕವಿಜಯ ([illegible]ನೆಯ ಆವೃತ್ತಿ)	೧ ರೂ[illegible]
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ [illegible])	೧ ರೂ[illegible]
ವೀರಶೈವಸಿದ್ಧಾಂತಸುಧಾಕರ	೨ ರೂ[illegible]
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ [illegible] ಪುಟ)	೮ ರೂ[illegible]
लिंगधारणचंद्रिका (संस्कृत)	१ [illegible]
महानारायणोपनिषत् (वीरशैवभाष्य-संस्कृत)	१ [illegible]
वीरशैवेंदुशेखर (संस्कृत)	१ [illegible]

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿ[illegible] ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ[illegible] ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ[illegible]

ಮೈಸೂರು [illegible] ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ಮುದ್ರಿಸಿ ಪ್ರಕಟಿಸಲ್ಪಟ್ಟ[illegible]

REGISTERED No M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯರೇ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪದತಲಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಯಾದ್ವಿಭೂತ್ಯೈಃ ಲೋಕಮ್ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ನೇ ಡಿಸೆಂಬರ್ ೧೯೩೪ [ಸಂಚಿಕೆ ೩೦

ಬಾಗೇಪಲ್ಲಿ ತಾಲ್ಲೂಕು ಮಾರಗಾನಕುಂಟೆಗ್ರಾಮಕ್ಕೆ ರೆವಿನ್ಯೂ ಕಮೀಷನರ್ ಕೆ ವಿ ಅನಂತರಾವ್ ಸಾಹೇಬರವರ

ಆಗಮನ

ಮಹಾಸ್ವಾಮಿ ಡೆಪ್ಯೂಟಿಕಮೀಷನರ್ ಸಾಹೇಬರವರು ಈಗ್ಗೆ 10 ತಿಂಗಳ ಕೆಳಗೆ ಒದಗಿದ್ದ ವೀರಕ್ಷಾಮವನ್ನು ಈ ಹಳ್ಳಿಗೆ ದಯಮಾಡಿಸಿ ಇಲ್ಲಿ 20 ವರ್ಷಗಳಿಂದ ಕೆರೆಗಳು ತುಂಬದೆ ಪ್ರಜೆಗಳು ಕಷ್ಟಪಡುತ್ತಿರುವ ವಿಚಾರಗಳನ್ನು ಗ್ರಾಮಪಂಚಾಯತಿ ಛೇರ್ಮನ್‌ರೂ ವಿಲೇಜ್ ಮುನಿಸಿಫರೂ ಆದ ಮ|| ರಾ|| ಅಪ್ಪಾಜಿನ ಜುಂಡಪ್ಪನವರು ಹೇಳಿದ ಪರಿಹಾರದ ಸಲಹೆಗಳನ್ನು ಸಾವಧಾನದಿಂದ ಕೇಳಿ ಈ ಗ್ರಾಮದ ಜಮೀನುಗಳ ಉಂದಾಯ ರಿಮಿಷನ್ ಮುಖಾಂತರವೂ ಪೆನುಗೊಂಡ ಹಿರಿಯೂರಿಗೆ ಸೇರುವ 8 ಮೈಲಿ ರಸ್ತೆಯಲ್ಲಿ 6 ಮೈಲುಗಳವರಿಗೆ ದುರಸ್ತುಮಾಡಲು ಸ್ಯಾಂಕ್ಷನ್‌ಮಾಡಿ ಬಡಜನರಿಗೆ ಜೀವನವನ್ನು ಕಲ್ಪಿಸಿಕೊಟ್ಟು ದಯಮಾಡಿಸಿದವರು ನಮ್ಮ ಡೆಪ್ಯೂಟಿಕಮೀಷನರ್‌ಸಾಹೇಬರವರು ಮಾಡಿಸಿದ ಈ ಸಹಾಯವು ಆಚಂದ್ರಾರ್ಕವಾಗಿ ಮರೆಯದವಿಷಯವಾಗಿದೆ

ಈಗ 20 ವರುಷಗಳಿಂದ ತುಂಬದೆ ಇದ್ದ ಕೆರೆಗಳು ತುಂಬಿ ಜನಗಳು ಸಂತೋಷಚಿತ್ತರಾಗಿರುವ ಸಮಯಕ್ಕೆ ಪುನಃ ಮಹಾಸ್ವಾಮಿಯವರ ಸವಾರಿಯು ಗೂಳೂರ ಮಾರ್ಗದಿಂದ ಕಳೆದ ತಿಂಗಳು 15 ನೆಯ ತಾರೀಖಿನ ದಿವಸ ಮೋಟಾರಿನಲ್ಲಿ ಚಿತ್ತೈಸಿ ಪಂಚಾಯಿತಿಯವರೂ, ಛೇರ್ಮನ್‌ರೂ ಪಂಚಾಯಿತಿಹಾಲ್ ಮುಂಭಾಗದಲ್ಲಿ ತಯಾರಿಸಿದ್ದ ಚಪ್ಪರದಲ್ಲಿ ಫಲ ಪುಷ್ಪಹಾರ-ತುರಾಯಿಗಳನ್ನು ಸ್ವೀಕರಿಸಿ ಹೊಸದಾಗಿ ತಯಾರಿಸಿದ್ದ ರೋಡಿನಲ್ಲಿ ಹೊರಟು ಪುನಃ ವಾಪಸು ಬಂದು ನಮ್ಮ ಮೈಸೂರು ಗಡಿವರವಿಗೂ ಮಾಡಿಸಿರುವ ರೋಡನ್ನು ನೋಡಿ ಬಹಳ ಚೆನ್ನಾಗಿರುವುದಾಗಿ ಅಪ್ಪಣೆ ಕೊಡಿಸಿ, ವಿ ಪಿ ಛೇರ್ಮನ್‌ರವರು ವಿಜ್ಞಾಪನಾ ಪತ್ರಿಕೆಯನ್ನು ಸಮರ್ಪಿಸಿ, ಹೊಸದಾಗಿ ತಯಾರಿಸಿರುವ ರೋಡನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿಸಬೇಕಾಗಿಯೂ, ಈ ಗ್ರಾಮಕ್ಕೆ 8 ಮೈಲುದೂರದ ಗೂಳೂರುವರಿವಿಗೂ ಬರುವ ಬಸ್ಸುಗಳು ಇಲ್ಲಿಗೆ ಬಂದುಹೋಗಲು ಲೈಸೆನ್ಸು ಕೊಡಬೇಕಾಗಿಯೂ, ಈ ಗ್ರಾಮದಲ್ಲಿ ಈಗ ಹಾಲಿ ಇರುವ ಯುನಾನಿ ಆಸ್ಪತ್ರೆಗೆ ಒಬ್ಬ ಸೂಲಗಿತ್ತಿಯನ್ನೂ, ಒಬ್ಬ ಆಳನ್ನೂ, ಕೆಲವು ಇಂಗ್ಲೀಷು ಔಷಧಿಗಳನ್ನೂ ಕೊಡಿಸಬೇಕಾಗಿಯೂ, ಈ ಗ್ರಾಮಕ್ಕೆ ದಿನಚರಿ ಪೋಸ್ಟು ಬರಲು ಏರ್ಪಾಟುಮಾಡಿಸಿಕೊಡಬೇಕಾಗಿಯೂ ಸಹ ಕೇಳಿಕೊಂಡ ಅಹವಾಲನ್ನು ಸಾವಧಾನದಿಂದ ಕೇಳಿ, ಮಾಡಿಸಿಕೊಡುವುದಾಗಿ ಅಪ್ಪಣೆಕೊಡಿಸಿ ಮುಂದಕ್ಕೆ ಚಿತ್ತೈಸಿದರು

ಈ ಗ್ರಾಮಕ್ಕೆ ಈ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಗ್ರಾಮವನ್ನು ಅಭಿವೃದ್ಧಿಗೆ ತಂದು ಕಾಪಾಡುತ್ತಾರೆಂದು ಎದುರುನೋಡುತ್ತೇವೆ

ಅಪ್ಪಾಜಿನ ಜುಂಡಪ್ಪ, ವಿ ಪಿ ಛೇರ್ಮನ್,
ಮಾರಗಾನಕುಂಟೆ, ಬಾಗೇಪಲ್ಲಿ ತಾಲ್ಲೂಕು

ಮೃತ್ಯುವಾರ್ತೆ.

ಶಿವಮೊಗ್ಗ ಡಿ|| ಸ್ಯಮತಿ ಗ್ರಾಮನಿವಾಸಿಗಳಾದ ಮ|| ರಾ|| ಸೂಗೂರು ಸಿದ್ದವೀರಪ್ಪನವರು ನವಂಬರ್ ತಾ|| ೮ನೇ ಶುಕ್ರವಾರ ರಾತ್ರಿ ೧೦ ಘಂಟೆಯ ಸಮಯದಲ್ಲಿ ಶಿವಾಧೀನರಾದರು. ಇವರು ವೀರಶೈವಸ್ವಧರ್ಮಪವಿತ್ರರೂ, ಆಚಾರನಿಷ್ಠರೂ, ಗುರುಪದ ಕಿಂಕರರೂ, ದೊಡ್ಡ ಕುಟುಂಬಿಗಳೂ ಆಗಿದ್ದರು ಇಂತಹ ಸದ್ಗುಣ ಸಮುದಾಯವು ಇವರ ಪೂರ್ವಾರ್ಜಿತ ಪುಣ್ಯಫಲವಿಶೇಷದಿಂದ ಲಬ್ಧವಾಗಿದ್ದು ಈ ಜನ್ಮದಲ್ಲಿಯೇ ಪ್ರಕಾಶತೆಯನ್ನು ಹೊಂದಿತೆನ್ನುವುದಕ್ಕೆ ಇವರ ಆಶ್ಚರ್ಯಕರವಾದ ಮರಣವೇ ಸಾಕ್ಷಿಯಾಗಿದೆ ಇವರು ತಮ್ಮ ಅವಸಾನಕಾಲದದಿನ ಪ್ರಾತಸ್ಸಮಯದಲ್ಲಿ ಅಲ್ಲಲ್ಲಿ ಸಂಚರಿಸಿ ಎಲ್ಲರಲ್ಲೂ ಮಾತನಾಡಿ ಸ್ವಗೃಹಕ್ಕೆ ಬಂದು ಯಾವದೋಒಂದು ಕಾರ್ಯನಿಮಿತ್ತವಾಗಿ ಯಾರನ್ನೋ ನಿರೀಕ್ಷಿಸುತ್ತಾ ಕುಳಿತಿರುವ ಗತ್ಯಲ್ಪ ದೇಹಾಲಸ್ಯವಾದಂತಾಗಿ ಹಾಗೆಯೇ ಮಲಗಿಸಿ ಪುನಃ ಎಚ್ಚರವಾಗದೆ ತಮ್ಮ ಭೌತಿಕಶರೀರವನ್ನು ತ್ಯಜಿಸಿದರು ಯಾವ ರೋಗಾದ್ಯುಪದ್ರವಗಳಿಗೂ ಸಿಲುಕದೆ ಶರಣರಿರುವ ಮರಣದಲ್ಲಿ ಪರಿಕಿಸಬೇಕೆಂಬುಕ್ತಿಗನೆ ಸಾರವಾಗಿ ಯಾವ ಯೋಗಿಗೂ ಅಲಭ್ಯವಾದೀ ಮರಣವಂ ಪೊಂದಿದನೀತನೇ ಧನ್ಯನು ಈ ಮಹಾಶಯನ ಶಿವಸಾಯುಜ್ಯಪದವಿಯ ಸಂಬಂಧವಾಗಿ ಇವರ ಜ್ಯೇಷ್ಠಪುತ್ರರಾದ ಮ|| ರಾ|| ಲೋಕೇಶ್ವರಪ್ಪನವರು ಕಳೆದ ನವಂಬರ್ ತಾ|| ೧೯ನೇ ಮಂಗಳವಾರ ಮಧ್ಯಾಹ್ನ ಮಹಾಭೂರುದ್ರಗಣಸಂತರ್ಪಣೆಯನ್ನು ನಡೆಯಿಸಿ ರಾತ್ರಿ ೯ ಘಂಟೆಯಿಂದ ಕೀರ್ತನಕೇಸರಿ ಕವಿಭೂಷಣೇತ್ಯಾದಿ ಬಿರುದಾಂಕಿತರಾದ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರಿಂದ ನೀತಿಬೋಧಪ್ರದವಾದ 'ಮೃತ್ಯುಪರೀಕ್ಷೆ' ಎಂಬ ಶಿವಕೀರ್ತನೆಯನ್ನು ಅನುವಾದಮಾಡಿಸಿ ತಮ್ಮ ಜನ್ಮದಾತೃವಿನ ಶಿವೈಕ್ಯದ ಜ್ಞಾಪಕಾರ್ಥವಾಗಿ ಪ್ರಭಾಪೋಷಣಕ್ಕೆ 1 ರೂ ಯನ್ನ ಸಮರ್ಪಿಸಿ ತಮ್ಮ ನೈಜವಾದ ಪಿತೃಭಕ್ತಿಯನ್ನು ಪ್ರಕಾಶಗೊಳಿಸಿದರು ಇಂತಹವರೇ ಅಲ್ಲವೇ ಸುಪುತ್ರರೆಂದೆನಿಸಿಕೊಳ್ಳಲು ಯೋಗ್ಯರು ಶ್ರೀ|| ಸಿದ್ದವೀರಪ್ಪನವರ ವಿಯೋಗದಿಂದ ಪ್ರಾಪಂಚಿಕ ದುಃಖಭಾಜನರಾಗಿರುವ ಇವರ ಅಶೇಷಕುಟುಂಬವರ್ಗಕ್ಕೆ ಮನಶ್ಶಾಂತಿಯನ್ನು ದಯಪಾಲಿಸಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುವ

ಓರ್ವ ಗುಪ್ತೈಕಪಕ್ಷಪಾತಿ

ನಿಧನ

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿ ವಾಸವಾಗಿದ್ದ ತಾಳಕೆರೆ ಪಿ ಬಾಣಸವಾಡಿ ರುದ್ರಪ್ಪನವರ ದ್ವಿತೀಯ ಪುತ್ರ ಬಿ ಎಂ ಸಂಜ ಂಡಪ್ಪನವರು ತಾ|| 1-11-34 ನೆ ಮಂಗಳವಾರ ರಾತ್ರಿ 8 ಗಂಟೆ ಸಮಯದಲ್ಲಿ ಕೈಲಾಸವಾಸಿಗಳಾದರೆಂದು ತಿಳಿಸಲು ತುಂಬಾ ವಿಷಾದವೆನಿಸುತ್ತದೆ ಇವರು ಅಲ್ಪವಯಸ್ಸಿನವರಾದರೂ ರೇಣುಕ ಜಯಂತಿ ಮೊದಲಾದ ಕಾರ್ಯಗಳಲ್ಲಿ ಶ್ರಮವಹಿಸಿ ಕೆಲಸ ಮಾಡುತ್ತಿದ್ದರಲ್ಲದೆ ಇಲ್ಲಿಗ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು ದಯಮಾಡಿಸಿದ ಸಮಯದಲ್ಲಿ ಭಕ್ತಿಯಿಂದ ಕೆಲಸ ಮಾಡಿದರು ಇವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ದುಃಖಿತರಾದ ಇವರ ಕುಟುಂಬಕ್ಕೆ ಶಾಂತಿಸಮಾಧಾನಗಳನ್ನೀಯಲೆಂದೂ ಪ್ರಾರ್ಥಿಸುತ್ತೇನೆ

ಓರ್ವ ದುಃಖಭಾಗಿ

ಶ್ರೀ ಕರ್ನಾಟಕ ನಾಟ್ಯೋದಯ ಸಂಗೀತ ನಾಟಕಮಂಡಲಿ

ಹರಪನಹಳ್ಳಿ

ಈ ಮಂಡಲಿಯವರು ಹೂವಿನಹಡಗಲಿಗೆ ಬಂದು ಕೆಲವು ದಿವಸಗಳಿಂದ ತಮ್ಮ ಜನರಂಜಕಗಳಾದ ಸೋಹಂ, ವರದಕ್ಷಿಣೆ, ಹೇಮರೆಡ್ಡಿ ಮಲ್ಲಮ್ಮ, ಎಚ್ಚಮ್ಮನಾಯಕ, ಸತೀಸಾವಿತ್ರಿ, ಶ್ರೀರಾಮಪಾದುಕಾಪಟ್ಟಾಭಿಷೇಕ, ಲಂಕಾದಹನ ಮೊದಲಾದ ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳನ್ನು ನಾಟ್ಯರಂಗದಲ್ಲಿ ಪ್ರದರ್ಶಿಸಿ ಜನತೆಯ ಪ್ರೀತಿಗೆ ಪಾತ್ರರಾದುದಲ್ಲದೇ ಒಂದು ನಾಟಕಕ್ಕೆ ಬಂದ ದ್ರವ್ಯವನ್ನು ಇದೇ ಗ್ರಾಮದ ಶ್ರೀ ಕಾಳಿಕಾಂಬಾದೇವಾಲಯಕ್ಕೆ ಅರ್ಪಿಸಿದರು ಇದೇ ತಿಂಗಳು 30 ನೇ ತಾರೀಖಿನಲ್ಲಿ ತಮ್ಮ ಜನರಂಜಕವಾದ ಸ್ತ್ರೀ ಎಂಬ ಕಡೇ ನಾಟಕವನ್ನು ಪ್ರದರ್ಶಿಸಿ ಇಲ್ಲಿಂದ ಮುಂದಕ್ಕೆ ಪ್ರಯಾಣ ಬೆಳಸಿದರು. ಕರ್ನಾಟಕದೇಶಾಭಿಮಾನಿಗಳು ಈ ಕಂಪೆನಿಗೆ ಪ್ರೋತ್ಸಾಹಕೊಡುವರೆಂದು ನಂಬಿದ್ದೇನೆ

ಸೊಪ್ಪಿನ ಗುರುಲಿಂಗಪ್ಪ,
ಹರಪನಹಳ್ಳಿ

ಅಫ್ಘನಿಸ್ಥಾನದಲ್ಲಿ ಕರೆನ್ಸಿ ನೋಟಿನ ಚಲಾವಣೆ

ಇದುವರಿವಿಗೆ ಅಫ್ಘನಿಸ್ಥಾನದಲ್ಲಿ ನೋಟುಗಳ ಚಲಾವಣೆ ಇರಲಿಲ್ಲ ಈಗ ಅದರ ಚಲಾವಣೆ ಮೊದಲಾಗಿದೆ ಆಫ್ಘನ್ ದೊರೆಗಳು ರೆವಿನ್ಯೂ ಶಾಖೆಯ ಮಂತ್ರಿಗಳಿಗೆ ಅಪ್ಪಣೆಮಾಡಿದಂತೆ 5, 10, 20, 50 ಮತ್ತು 100 ರೂ ಗಳ ಕರೆನ್ಸಿ ನೋಟುಗಳನ್ನು ಚಲಾವಣೆಗೆ ತಂದಿರುತ್ತಾರೆ

ಪತ್ರವ್ಯವಹಾರ

ಚಾತುರ್ಮಾಸ್ಯದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳೆಂಬ ವಿಷಯವನ್ನು ಸವರೂ ಲಕ್ಷ್ಯದಲ್ಲಿಡತಕ್ಕದ್ದು

ಮಹನೀಯರ ಹಿತೋಕ್ತಿಗಳು.

(ಹಿಂದಿನ ಸಂಚಿಕೆಯಿಂದ)

---

೭೧ ಜೋ ವ ಚರ್ಯವನೆ [illegible] ಗವರವರಿಗವರ ಮನವನೊಲಿಸ ದೇ [illegible] ಮುವಿವೇಕಿಗಳಿಗ ಅಕ್ಕತತ್ತ್ವಪ [illegible] ಪಠಪ್ರವೃತವ ರನೇ [illegible] ದಂತೆ ಸುರಕ್ಷಣ [illegible] ರತ್ರುಗಳನ್ನು [illegible] ಬಟ್ಟೆಗಳ [illegible] ಹುತ್ತ ಲೌಕಿಕ [illegible] ಪಂಕ್ತಿಗ [illegible] ದಿಗ ಜನರ [illegible] ವೇ ಬ್ರಹ್ಮ [illegible] ತ್ಮನೇ ಬ್ರಹ್ಮ ನಿತ್ಯವಸ್ತು [illegible] ವ ನಸ್ಸಿನ ಜಿರಿತ ಪರವಶರ ದವರಿ [illegible] ದುದೇ ಬ್ರಹ್ಮಸ್ಥ ಆದರೆ ಇವರಲ್ಲಿ [illegible] ವೆಂದು ತಿಳಿದುಕೊಂಡು ವರ್ಗ ವವರ [illegible] ನೀತಿಕಾರರು ' ಜಾತಿಯು [illegible] ಸದ್ಗುಣಪೂರಿತ ಕಲಕ್ಕಿಂತ [illegible] ಕುಲವು ಬೇಕಾಯಿಂದ ಸಟ್ಟ [illegible] ಸಮುದ್ರದಲ್ಲಿ ಮುಳುಗಲಿ ಶೌರ್ಯ [illegible] ಯಲಿ," ಆದರೆ "ಹಣವೊಂದೇ [illegible] ಎಂಬಂತೆ ಯಾವುದು ಏನಾದರೂ [illegible] ಹಣವೇ ಪ್ರಧಾನವೆನ್ನುತ್ತಾರೆಂದು [illegible]

ಹೇ ಹಣವೇ! ಅಹಹ! [illegible] ನಿನ್ನ ಪ್ರಭಾವವೆಷ್ಟೆಂದು ಹೇಳೋಣ [illegible] ದವರಿಗೆ ನೀನೇ ಪ್ರಧಾನವೆಂದು ತಿಳಿದ [illegible] ಸಹೋದರರನ್ನೂ, ಮಿತ್ರರನ್ನೂ [illegible] ರನ್ನೂ, ದೇವರನ್ನೂ ಕೂಡ ಮರೆಯಿಸಿ [illegible] ರಾಗಿ, ನೀನೇ ಗುರುವಾಗಿ ನೀನು [illegible] ಪರಿಣಮಿಸಿ ಸ್ವಾರ್ಥಕ್ಕೆ, ದುರ [illegible] ವೃತ್ತಿಯಮಾಡಿಸಿ ಮಾಡಬಾರದ [illegible] ವಂತೆ ಪ್ರೇರೇಪಿಸುವೆಯಲ್ಲವೆ? ಪರವಂಚನೆ [illegible] ರಣೆ ಮಾಡುವ ನಾಲಿಗೆಯಿಂದ ಅಸತ್ಯವನ್ನು [illegible] ವೆಯಲ್ಲವೆ? ಪರಮಾತ್ಮನ, ಗುರುಗಳ ಪೂಜೆ [illegible] ಹಸ್ತಗಳಿಂದ ಅಕಾರ್ಯಗಳನ್ನು ಮಾಡಿಸುವೆ [illegible] ಮತ್ತು ನಮಗೆ ಕೈಯಲ್ಲಿ ಇಲ್ಲ [illegible] ಯಾದರೆಸಾಕು, ತಲೆಯನ್ನೆತ್ತಿ ಯಾರ ಲಕ್ಷ್ಯವೂ ಇಲ್ಲದಂತೆ ತಲೆಮರೆಯಿಸಿಕೊಂಡು ತಿರುಗುವ [illegible] ಮಾಡುವೆಯಲ್ಲವೆ? ಮತ್ತು ಹೊಟ್ಟೆ ಬಟ್ಟೆ ಕಟ್ಟಿ ಅನೇಕ ಕಷ್ಟನಿಷ್ಠುರಗಳನ್ನು ಅನುಭವಿಸಿ ನಿನ್ನನ್ನು ಲಾಲನೆಪಾಲನೆಗಳಿಂದ ಚಿಕ್ಕವನನ್ನು ದೊಡ್ಡವನನ್ನಾಗಿಮಾಡಿ ಬೆಳೆಯಿಸಿದ ನಿನ್ನ ಆರಾಧಕನು ಸಾಯುವಕಾಲದಲ್ಲಿ, ಮುಕ್ತಿಯನ್ನು ಕೊಡುವ ಮಹಾಮಂತ್ರವನ್ನೂ ಕೂಡ ಮರೆತು ನಿನ್ನ ಧ್ಯಾನವನ್ನೇ ಮಾಡುತ್ತಾ ನಿನ್ನನ್ನು ಬಿಟ್ಟುಹೋಗಲಾರದೆ ಕಣ್ಣು ಕಣ್ಣು ಬಿಡುತ್ತಾ ಬಹುವಾಗಿ ಪೇಚಾಡುತ್ತಿರುತ್ತಾನೆ ಅಂತೂ ಕೊನೆಗೆ ಕರ್ಮಗತಿಯಿಂದ ನಿವಾರಣವಿಲ್ಲದೆ ನಿನ್ನ ಧ್ಯಾನದಲ್ಲಿಯೇ ಹೊರಟುಹೋಗುವನು ಆದರೆ ನೀನು ಮಾತ್ರ ಯಾರ ಹಿಂದೆಯೂ ಹೋಗುವದಿಲ್ಲವು ಹೇ, ಹಣವೇ! ವಿಚಾರಮಾಡಿನೋಡಿದರೆ, ನೀನು ಬಹು ಕೃತಘ್ನನಲ್ಲವೇ?

೭೨ ಪ್ರತಿಜೀವಿಯ ಕರ್ತವ್ಯಕರ್ಮಕ್ಕನುಸಾರ ನ್ಯಾಯಾನ್ಯಾಯವನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ ಶುಭಾಶುಭಫಲಗಳನ್ನು ಕೊಡತಕ್ಕ ಭಗವಂತನೊಬ್ಬನಿರುವನು ಆದರೆ ಲೌಕಿಕದಲ್ಲಿ ಯಾರಿಗಾದರೂ [illegible] ವ್ಯವಹಾರದಲ್ಲಿ ಯಾಗಲಿ [illegible] ಬಂದರೆ—ನ್ಯಾಯವಿಮರ್ಶೆಮಾಡಿ [illegible] ಕೆಲವರು ಮಿತ್ರತ್ವದಿಂದಾಗಲಿ [illegible] ಕೆಲವರು [illegible] ಇನ್ನೂ ಕೆಲವರು ಪರರು [illegible] ಹಿಂದ ಮುಂದು ನೋಡುತ್ತಾ [illegible] ಹೀಗೆ ಮಾಡುವದರಿಂದ ನಮ್ಮ ಸಮಾಜ [illegible] ಗಳ ಕಾರ್ಯ [illegible] ಕೆಲಸಗಳಲ್ಲೊಂದಾದ ಸತ್ಯ [illegible] ಈ ವಿಷಯದಲ್ಲಿ [illegible] ಚಕ್ರವರ್ತಿಗೆ ಅಸಮಂಜಸನಾದ [illegible] ಇವನು ಪ್ರತಿ [illegible] ಸಿಕ್ಕಿದರೂ ಅವರನ್ನು [illegible] [illegible]

[illegible] ಇವರು ಮಗ, ತಮ್ಮನೆಂಬ [illegible] ದೃಷ್ಟಿಯನ್ನಿಟ್ಟು [illegible] ನ್ಯಾಯವಾಡಿರು [illegible] ಮಗ ಮಿತ್ರನೆಂಬ [illegible] ದುರಭಿಮಾ [illegible] ನ್ಯಾಯವೆನಿಸುವದಿಲ್ಲವು [illegible] ಮಾಡಿದ್ದಕ್ಕೆ [illegible] ಎರಡಕ್ಕೂ ಒಂದೇ [illegible] ತಪ್ಪು [illegible] ಮಾಡಿದ್ದಾದರೆ ತಪ್ಪು [illegible] ಯೆಂಬ ನಾಣ್ಣುಡಿ [illegible] ಒಂದೇ ಬೆಲೆ ಒಬ್ಬ ರಾಜನ [illegible] ಒಂದೇ ಬೆಲೆ.

[illegible] ಜನರು ಅಂಗಡಿಯನ್ನಿಟ್ಟು [illegible] ಬರಲು ಉಪ್ಪಿನವನ [illegible] ತನಗಿಲ್ಲವೆ? ಮತ್ತು ಮುಪ್ಪಿನಿಂದ [illegible] ಮರುಗುವುದು, [illegible] ಕೊಡುವುದಕ್ಕೆ ಸಂಕಟಪಡುವುದು [illegible]

೭೪ ಒಬ್ಬರು ತಾವು ಮಾಡತಕ್ಕ ಕಾರ್ಯಗಳಲ್ಲಿ ಜಯವನ್ನು ಹೊಂದಿದರೆ ನಾನು ಮಾಡಿದೆನೆಂತಲೂ [illegible] ದೇವರು ಕೆಡಿಸಿದನೆಂತಲೂ ಹೇಳುವುದು ವಾಡಿಕೆಯಲ್ಲಿರುವುದು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ನಾನು ಬಹು ಕಷ್ಟಪಟ್ಟು ಓದಿದೆನೆಂತಲೂ, ವ್ಯವಸಾಯಗಾರರು ಬೆಳೆ ಚೆನ್ನಾಗಿ ಬಂದರೆ ಅವರು ಬಹು ಕಷ್ಟಪಟ್ಟು ಭೂಮಿ ಸಾಗುವಳಿ ಮಾಡಿರುವೆನೆಂತಲೂ, ವ್ಯವಹಾರಿಕರು ಲಾಭವಾದರೆ ನಾವು ಬುದ್ಧಿಯಿಂದಲೂ ಬಹುಯುಕ್ತಿಯಿಂದಲೂ ವ್ಯಾಪಾರ ಮಾಡಿದೆವೆಂದೂ, ಅಹಂಕೃತಿಮಾಡಿಕೊಳ್ಳುವರು. ಆದರೆ ಅವರಿಗೆ ವ್ಯತಿರಿಕ್ತಫಲವಾದರೆ 'ಅನಿಷ್ಟಕ್ಕೆ ಶನೀಶ್ವರ ಗುರಿ' ಎಂಬಂತೆ ದೇವರಮೇಲೆ [illegible] ತ್ತಾರೆ ಹೀಗೆ ಹೇಳುವದು ನ್ಯಾಯವಾದುದಲ್ಲ [illegible] ನಮ್ಮ ಸಂಚಿತಕರ್ಮಕ್ಕನುಸರಿಸಿ ಅಂದರೆ ಪೂರ್ವ ಜನ್ಮದಲ್ಲಿ ಮಾಡಿದಕರ್ಮಕ್ಕೆ ತಕ್ಕ ಫಲವನ್ನು ದೇವರು ಉಂಟುಮಾಡುತ್ತಾನೆ ಶುಭಾಶುಭ [illegible] ಗಳನ್ನು ಪಡೆಯುವುದು ನಮ್ಮ ಕೈಯಲ್ಲಿ ಏನಿರುವುದು [illegible] ಈ ಸಂದರ್ಭದಲ್ಲಿ ಉದಾಹರಣೆಗಾಗಿ—ಒಬ್ಬ ಬ್ರಾಹ್ಮಣನ ತೋಟಕ್ಕೆ ಒಂದು ಹಸು ನುಗ್ಗಿ ಕೆಲ ಫಸಲು ನಷ್ಟಮಾಡಿತು ಆಗ ಅವನು ಸಿಟ್ಟುಗೊಂಡು ಹೊಡೆಯಲಾಗಿ ಆ ಹಸು ಸತ್ತುಹೋಯಿತು ಹೀಗಿರುತ್ತಿರಲು ಒಂದುದಿನ ಒಬ್ಬ ಬ್ರಾಹ್ಮಣನು ಇವನನ್ನು ಕುರಿತು 'ಸ್ವಾಮಿ, ತಾವು ಬ್ರಾಹ್ಮಣರು, ವೇದಾಂತಿಗಳು ಹಸುವನ್ನು ಕೊಂದಿರಿ, ಗೋಹತ್ಯಾದೋಷ ಬರಲಿಲ್ಲವೆ?' ಎಂದನು ಅದಕ್ಕೆ ಅವನು ನಾನು ಕೊಲ್ಲಲಿಲ್ಲ, ನನ್ನ ಕೈ ಹೊಡೆದು ಕೊಂದಿತು ಹಸ್ತಗಳಿಗೆ ಇಂದ್ರನಧಿದೇವತೆ. ಈ ಪಾಪವು ಇಂದ್ರನದು ಎಂದು ಹೇಳಿದನು ಇಂದ್ರನು ಇದನ್ನು ತಿಳಿದು ವೇಷಧಾರಿಯಾಗಿ ಆ ಬ್ರಾಹ್ಮಣನ ತೋಟಕ್ಕೆ ಬಂದು 'ಸ್ವಾಮಿ, ಈ ತೋಟ ಯಾರದು! ಈ ಗಿಡಗಳನ್ನು ಹಾಕಿಸಿದವರು ಯಾರು!' ಎಂದು ಕೇಳಿದನು ಅದಕ್ಕೆ ಆ ಗೃಹಸ್ಥನು 'ಸ್ವಾಮಿ! ತೋಟವು ನನ್ನದು, ಗಿಡಗಳನ್ನು ನಾನೇ ನಟ್ಟು ಬಹು ಶ್ರದ್ಧೆಯಿಂದ ಬೆಳೆಸಿದ್ದೇನೆಂದನು ಆಗ ಇಂದ್ರನು—ಇದೆಲ್ಲವೂ ನಿನ್ನದಾಗಿ ಈ ಕೆಲಸಕ್ಕೆಲ್ಲಾ ನೀನೇ ಕರ್ತನಾಗಿರಲು 'ಕೊಲೆ ಪಾತಕ' [illegible] ಮೇಲೆಯಾಕೆ ಹೊರೆಸಿತು' ಎಂದನು [illegible] ಬಯಂತೆ ಈ ಗೋಹತ್ಯೆಯನ್ನು ಮಾತ್ರ ಆ ಒಡೆಯನಾದ ಇಂದ್ರನಮೇಲೆ ಹೊರಿಸುವುದು ಅನ್ಯಾಯ ಎನಲು ಬ್ರಾಹ್ಮಣನು ನಾಚಿಕೆಯಿಂದ ತಲೆ ತಗ್ಗಿಸಿದನಂತೆ ಆದ್ದರಿಂದ ನಾವು ನಮ್ಮ ಸ್ವಯಂಕೃತಾಪರಾಧಕ್ಕಾಗಿ ಪರಮಾತ್ಮನಮೇಲೆ ಅಪವಾದ ಹೊರಿಸುವುದು ನಮ್ಮ ಮಂದತನವನ್ನೂ, ಮನೋದೌರ್ಬಲ್ಯವನ್ನೂ ಸೂಚಿಸುವುದು ಬೈದು ಹೇಳಿದವ ಬುದ್ಧೀ ಹೇಳಿದ ನಕ್ಕು ಹೇಳಿದವ ಕೆಡಹೇಳಿದ

೭೫ ನಾಯಿ ಕೂಗು ಗಿರಿಮುಟ್ಟೀತೆ' ಎಂಬ [illegible] ಗಾದೆಯಂತೆ ನಾವು ಭಾವಶುದ್ಧಿಯಿಲ್ಲದೆ ಸ್ವಾರ್ಥ [illegible] ದುರಾಶೆ ಮೋಹ ಸಿಟ್ಟು ಇವುಗಳಿಗೆ ತುತ್ತಾಗಿ, ಹಣದಮೇಲಿನ ವ್ಯಾಮೋಹದಿಂದ ನಮ್ಮ ಯೋಗ್ಯತೆಗೆ [illegible] ದಂತಹ ಕ್ಷುಲ್ಲಕ ಕೃತ್ಯಗಳನ್ನು ಮಾಡುತ್ತಿದ್ದು [illegible] ನಿಷೇಧವಿಲ್ಲದೆ ವೇದಮಂತ್ರ-ಸ್ತೋತ್ರಗಳನ್ನು 'ಕೊಂಡ ಕಿತ್ತ ನೋಕೆಯಂತೆ' ಅರಚುತ್ತಾ ಎಷ್ಟು ಪೂಜೆ [illegible] ತನಾದಿಗಳನ್ನು ಮಾಡಿದರೂ ವ್ಯರ್ಥಾಂಶವೇ ಯಾಗುವುದಲ್ಲದೆ ಯಾವ ಫಲವೂ ಆಗುವುದಿಲ್ಲ ಮತ್ತು ಸಕಲ ಸದಾಚಾರಗಳಿಗೆ ದೂರದಿಂದಲೇ ಶರಣುಹೊಡೆದು, ದುರಾಚಾರಗಳಿಗೆ ತೌರುಮನೆಯಾಗಿ ಅಡವಿಸೇರಿ ಗುಹೆಯಲ್ಲಿ ಕುಳಿತು ಮೌನಧರಿಸಿದರೇನು ಇಲ್ಲವೆ ಮನೆಯಲ್ಲಿ ಕದಬಾಗಿಲು ಹಾಕಿಕೊಂಡು ಎಷ್ಟು ವ್ರತ ಪೂಜೆ ಮಾಡಿದರೇನು! ಎಲ್ಲವೂ [illegible] ನಲ್ಲಿ ಹೋಮಮಾಡಿದಂತಾಗುವುದು ಅಯ್ಯೋ ಮಾನವ ಜೀವಿಗಳೆ ಇನ್ನಾದರೂ ಅರಿತುಕೊಳ್ಳಬಾರದೆ! [illegible] ಜಗತ್ಪಾಲಕನಾದ ಪರಶಿವನೇ! ಕ್ಷುದ್ರಬುದ್ಧಿಗಳಿಂದ [illegible] ರಿಗ ಸದ್ಬುದ್ಧಿಯನ್ನು ಕೊಡಬಾರದೇ! ಒಟ್ಟಿನಲ್ಲಿ ನಾವು ಈ ಜಗತ್ತಿಗೆ ಏತಕ್ಕೆಬಂದೆವು! ಹಾಗೆ ಬಂದದ್ದಕ್ಕೆ ಮಾಡಿಕೊಂಡು ಹೋಗಬೇಕಾದ ಮುಖ್ಯ ಕರ್ತವ್ಯವೇನು! ಎಂಬುದನ್ನು ಅರಿತುಕೊಂಡು [illegible] ರಂತೆ ನಡೆದು 'ಮನುಷ್ಯ' ನೆಂಬ ಹೆಸರನ್ನು ಸಾರ್ಥಕ ಮಾಡಿಕೊಂಡು ಕೃತಾರ್ಥರಾಗಬೇಕು "ಅಗಮ ನರಿಯದೆ ಹೇಗಯ್ಯ ಶಿವಪೂಜೆ| ನಾಗಸಂಪಿಗೆ ಮರನೇರಿ ಮುದಿಗೂಗೆ| ಕೂಗಿ ಪೋದಂತೆ ಸರ್ವಜ್ಞ||"

೭೬ ಮನುಷ್ಯನು ಸಾಯುವಾಗ ಯಾವ ಯಾವ ರೂಪವನ್ನು ಸ್ಮರಿಸುತ್ತಾನೋ ಮುಂದಿನ ಜನ್ಮದಲ್ಲಿ ಅವನು ಅದೇ ರೂಪವನ್ನು ಪಡೆಯುತ್ತಾನೆ [illegible] ಸಾಯುವಕಾಲದಲ್ಲಿ ತನಗೆ ಶ್ರೇಷ್ಠವಾದ (ಪರಮಾತ್ಮನ) ರೂಪವು ನೆನಪಿಗೆ ಬರಬೇಕಾಗಿದ್ದರೆ ಜೀವಿತ ಕಾಲದಲ್ಲೆಲ್ಲಾ ಅವನು ಅದೇ ಚಿಂತನೆಯನ್ನು ಮಾಡಬೇಕಾಗುತ್ತದೆ. ಭರತನ ಕಥೆಯು ಇದಕ್ಕೆ [illegible] ಮಾನವಾಗಿರುವದು—ಭರತನು ಚಕ್ರವರ್ತಿಯಾಗಿದ್ದು ಅನೇಕ ಸತ್ಕರ್ಮಗಳನ್ನುಮಾಡಿ [illegible]

ವೈರಾಗ್ಯತಾಳಿ ಮಕ್ಕಳಿಗೆ ರಾಜ್ಯವನ್ನೊಪ್ಪಿಸಿ, ತಾನು ಮುನಿವೃತ್ತಿಯನ್ನು ಕೈಕೊಂಡು ಪರಮಾತ್ಮಭಾವನೆಯನ್ನು ಮನಸ್ಸಿನಲ್ಲಿ ತುಂಬಿಕೊಳ್ಳುವ "ವ್ರತವನ್ನು" ಎಡೆಬಿಡದೆ ನಡೆಸಿದನು. ಈ ಪ್ರಯತ್ನದಿಂದ ಅವನಿಗೆ ಅದೇ ಜನ್ಮದಲ್ಲಿಯೇ ಸಾಕ್ಷಾತ್ಕಾರವಾಗಿ ಹುಟ್ಟುಸಾವುಗಳ ಕೋಟಲೆಯು ತಪ್ಪಬೇಕಾಗಿತ್ತು. ಆದರೆ ಇದಕ್ಕೊಂದು ವಿಘ್ನಬಂತು. ಒಮ್ಮೆ ಭರತನು ನದೀತೀರದಲ್ಲಿ ಆಹ್ನಿಕವನ್ನು ಮಾಡುತ್ತಿರುವಾಗ, ಒಂದು ಪೂರ್ಣ ಗರ್ಭಿಣಿಯಾದ ಜಿಗರೆಯು ಸಿಂಹದ ಗರ್ಜನೆಯ ಭೀತಿಯಿಂದ ನದಿಯಲ್ಲಿ ಹಾರಿತು. ಆಗ ಹೊಟ್ಟೆಯೊಳಗಿನ ಮರಿಯು ನೀರಿನಲ್ಲಿ ಬಿದ್ದಿತು. ಭರತನು ನೋಡಿ ಕನಿಕರದಿಂದ ಆ ಮರಿಯನ್ನು ತಂದು ತಾನೇ ತಾಯಿಯಾಗಿ ಬಹುಪ್ರೀತಿಯಿಂದ ಸಾಕುತ್ತಾ, ಒಂದು ಕ್ಷಣವಾದರೂ ಅಗಲಿರಲಾರದೆ ಅದರಲ್ಲಿಯೇ ಪೂರ್ಣ ಮಮತೆಯನ್ನಿಟ್ಟು ತನ್ನ ಧ್ಯಾನಾದಿಗಳನ್ನೆಲ್ಲಾ ಮರೆತು ಅದರಲ್ಲಿಯೇ ತನ್ಮಯವೃತ್ತಿಯಾಗಿದ್ದುದರಿಂದ ಅವನು ಸಾಯುವ ಕಾಲದಲ್ಲಿ ಅವನ ಮುಂದೆ ಜಿಂಕೆಮರಿಯ ವಿಚಾರವೇ ಬಂದುನಿಂತಿತು. ತಾನು ಸತ್ತಮೇಲೆ ಆ ಮರಿಯ ಗತಿಯೇನೆಂಬ ಯೋಚನೆಯೇ ಅವನ ಮನಸ್ಸನ್ನಾಕ್ರಮಿಸಿತ್ತು. ಈ ಸ್ಥಿತಿಯಲ್ಲಿ ಅವನ ಪ್ರಾಣವು ಹೋಗುತ್ತಲೇ ಮುಂದಿನ ಜನ್ಮದಲ್ಲಿ ಜಿಂಕೆಯೇ ಆದನೆಂದೂ, ಆ ಜಿಂಕೆಯ ಜನ್ಮವು ಕಳೆದಮೇಲೆ ಒಬ್ಬ ಬ್ರಾಹ್ಮಣನಾಗಿ ತನ್ನ ಸಾಧನೆಯನ್ನು ಮುಗಿಸಿ ಮುಕ್ತನಾದನೆಂದೂ ಭಾಗವತದಲ್ಲಿ ಹೇಳಿರುವದು. ಆದುದರಿಂದಲೇ "ಸತ್ಪುರುಷರನ್ನು ಅವರ ಮರಣಕಾಲದಲ್ಲಿ ನೋಡಬೇಕು" ಎಂಬ ಲೋಕೋಕ್ತಿಯು ಪ್ರಸಿದ್ಧವಾಗಿರುವದು. ಆದ್ದರಿಂದ ಮನುಜನು ತನ್ನ ಉದ್ಧಾರಕ್ಕಾಗಿ ಪ್ರತಿಬಂಧಕವಾಗಿರುವ ಹೊನ್ನು, ಹೆಣ್ಣು, ಮಣ್ಣು ಇವುಗಳಲ್ಲಿಯೇ ಮನಸ್ಸನ್ನಿಡದೆ, ತನಗೆ ಹಿತವಾದ ನೆನಪೇ ಕೊನೆಗೂ ಬರುವಂತೆ ಯಾವಾಗಲೂ ಪ್ರಯತ್ನಮಾಡಬೇಕು. ಜನರಿಗೆ ಮಕ್ಕಳಮೇಲೆ ವ್ಯಾಮೋಹ ಅಧಿಕವಾಗಿರುವುದರಿಂದ ಅಂತ್ಯಕಾಲದಲ್ಲಿ ಅವರ ಮೂಲಕವಾಗಿಯಾದರೂ ದೇವರ ಸ್ಮರಣೆಮಾಡಲೆಂಬುದ್ದೇಶದಿಂದಲೇ ಮಕ್ಕಳಿಗೆ ದೇವರ ಹೆಸರಿಡುವ ರೂಢಿಯು ಬಂದಿರುವದು. ಈ ವಿಷಯದಲ್ಲಿ ಗೀತೆಯೂ ಸಹ 'ಯಂ ಯಂ ವಾಪಿ ಸ್ಮರನ್ಭಾವಂ ತ್ಯಜತ್ಯಂತೇ ಕಳೇಬರಂ | ತಂತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ||" ಎಂದು ಸಾರುವದು. (ಸಶೇಷ)

ವೀರಶೈವ ಸುಧಾರಣೆ.

(ಲೇಖಾಂಕ ೪)

" ಶಿಕ—ಕಾವ್ಯತೀರ್ಥ ಸಾಹಿತ್ಯಾಚಾರ ವೇದಾಂತಶಾಸ್ತ್ರೀ ಶ್ರೀ ಪಾಗೀಶಶಿವಾಚಾರ್ಯ ಬ್ರಹನ್ಮಠ ಮುದೇನೂರು

ಎಲೈ ಅರ್ಜುನನೇ! ಯಾವ ಮನುಷ್ಯನು ಶಾಸ್ತ್ರಪದ್ಧತಿ (ವರ್ಣಸಾಂಕರ್ಯದಿಂದ ನರಕವುಂಟಾಗುವುದು, ಗುಣರಹಿತವಾದುದಾದರೂ ತನ್ನ ಧರ್ಮವೇ ಸುಖಕರವು, ಮುಂತಾದ ಬಹುಪ್ರಾಚೀನಕಾಲದ ನಡತೆ) ಯನ್ನು ತ್ಯಾಗ ಮಾಡಿ ತನ್ನ ಮನಸ್ಸಿಗೆ ಬಂದಂತೆ ನಡೆಯುವುದಕ್ಕಾರಂಭಿಸುವನೋ ಅತನು ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕು ಬಗೆಯಾದ ಪುರುಷಾರ್ಥಗಳಲ್ಲಿ ಯಾವುದೊಂದರ ಸಿದ್ಧಿಯನ್ನೂ, ಈ ಲೋಕದಲ್ಲಿ ಯಾವ ಸುಖವನ್ನೂ, ಕೊನೆಗೆ ಪರಲೋಕವನ್ನೂ ಕೂಡ ಹೊಂದಲು ಅನರ್ಹನಾಗುವನು. ಆದದರಿಂದ ಈ ಜಗತ್ತಿನಲ್ಲಿ ಇದು ಮಾಡುವುದಕ್ಕೆ ಯೋಗ್ಯವಾದುದು, ಇದು ಅಯೋಗ್ಯವಾದುದೆಂಬುದನ್ನು ತಿಳಿಯುವುದಕ್ಕಾಗಿ ನಿನಗೆ ಶಾಸ್ತ್ರ (ಧರ್ಮಶಾಸ್ತ್ರ) ವೇ ಪ್ರಮಾಣವಾಗಿದೆ. ಆದುಕಾರಣ ಇಂತಹ ಶಾಸ್ತ್ರದಲ್ಲಿ ಸಿದ್ಧಾಂತಿತವಾದ ಪ್ರಾಚೀನೋಕ್ತಿಯನ್ನು ನೀನು ತಿಳಿದು ಕೊಂಡು ನಿನ್ನ ವರ್ಣ (ಜಾತಿ) ಕ್ಕೆ ತಕ್ಕ ಕರ್ಮಗಳನ್ನು ಆಚರಿಸಲು ಯೋಗ್ಯನಾಗಿದ್ದೀಯೆ. ಎಲೈ ತಪಸ್ವಿಯಾದ ಅರ್ಜುನನೇ! (ಈಶ್ವರನಾಗಿರುವ) ನಾನು ಆಯಾಜೀವಾತ್ಮರುಗಳ ಹುಟ್ಟುವಿಕೆಯೊಡನೆಯೇ ಉಂಟಾಗತಕ್ಕ ಸತ್ವ, ರಜಸ್ತಮೋಗುಣಗಳಾದ ಪ್ರಕೃತಿಗುಣಗಳಮೇಲಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ಆಯಾ ವರ್ಣದವರು ಆಚರಿಸಲು ಯೋಗ್ಯಗಳಾದ ಕರ್ಮಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿರುವೆನು. ಆದಕಾರಣ ತನ್ನ ಹುಟ್ಟುವಿಕೆಯೊಡನೆಯೇ ಉಂಟಾಗಿ ಬರುವ ಆಯಾ ವರ್ಣ (ಜಾತಿ) ಕರ್ಮಗಳನ್ನು ಆಚರಿಸುವುದರಿಂದ ಮನುಷ್ಯನು ಎಳ್ಳಷ್ಟೂ ಪಾಪವನ್ನು ಹೊಂದಲಾರನು. (ಆಚರಿಸದಿದ್ದರೆ ಮಾತ್ರ ಅವಶ್ಯವಾಗಿಯೂ ಪಾಪಿಯಾಗುವನು.)

ಶ್ರೀಕೃಷ್ಣನ ಹೇಳಿಕೆಯನ್ನು ಕೇಳಿದಿರಾ! "ಸಂಕರಸ್ಯ ಚ ಕರ್ತಾ ಸ್ಯಾಂ" ಎಂದುಕೊಂಡು ವರ್ಣಸಾಂಕರ್ಯಕ್ಕೆ ಎಷ್ಟು ಹೆದರಿದ್ದಾನೆ! "ಶ್ರೇಯಾನ್ ಸ್ವಧರ್ಮಃ" ಎಂದುಕೊಂಡು ಆಯಾಯ ಆಚಾರ್ಯಸ್ಥಾಪಿತಗಳಾದ ವೈದಿಕಧರ್ಮಗಳಮೇಲೆ ಎಷ್ಟು ಅಭಿಮಾನವನ್ನು ತೋರಿಸಿದ್ದಾನೆ! "ಸ್ವಧರ್ಮೇ ನಿಧನಂ ಶ್ರೇಯಃ" ಎಂದುಕೊಂಡು ತನ್ನ ಧರ್ಮವನ್ನು ಎಂದಿಗೂ ಬಿಡಬಾರದೆಂಬ ಸಿದ್ಧಾಂತವನ್ನು ಎಷ್ಟು ಒತ್ತಾಯದಿಂದ ಸಾರಿದ್ದಾನೆ! "ಯದಾ ಯದಾ ಹಿ ಧರ್ಮಸ್ಯ" ಮುಂತಾಗಿ ಹೇಳಿಕೊಂಡು ಧರ್ಮಗ್ಲಾನಿ ಪ್ರಸಂಗದಲ್ಲಿ ಅವಶ್ಯವಾಗಿಯೂ ಈಶ್ವರನು ಧರ್ಮವನ್ನು ಕಾಪಾಡುತ್ತಾನೆಂಬ ಸ್ವಾಭಿಪ್ರಾಯವನ್ನು ಸಿಡಿಲಿನಂತೆ ಕೊರಗಿಸುವ ಅಧರ್ಮಿಗಳ ಎದೆಯನ್ನು ಎಷ್ಟು ನಡುಗಿಸಿದ್ದಾನೆ! "ಧರ್ಮಸಂಸ್ಥಾಪನಾರ್ಥಾಯ" ಎಂದುಕೊಂಡು ಪ್ರತಿಯುಗಗಳಲ್ಲಿಯೂ ಆಚಾರ್ಯ, ಋಷಿ ಮೊದಲಾದ ವೇದಾಗಮಜೀವಿಗಳಿಂದ ಆಯಾ ಧರ್ಮಸ್ಥಾಪನೆಯು ಆಗಿಯೇ ಆಗುವುದೆಂತಲೂ, ಆಗಲೇಬೇಕೆಂತಲೂ ಎಲ್ಲರಿಗೂ ತಿಳಿಯುವಂತೆ ತನ್ನ ಹೃದಯವನ್ನು ಹೇಗೆ ಬಿಚ್ಚಿಟ್ಟಿದ್ದಾನೆ! "ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ" ಎಂದುಕೊಂಡು ಧರ್ಮಶಾಸ್ತ್ರ ಮುಂತಾದ ವೇದಾಗಮಪ್ರಮಾಣಿತಗಳಾದ ಗ್ರಂಥಪ್ರಮಾಣಗಳನ್ನು ಸರ್ವರೂ ಒಪ್ಪಲೇಬೇಕೆಂತಲೂ, ಒಪ್ಪದಿದ್ದರೆ ಜ್ಞಾನವೇ (ತಿಳುವಳಿಕೆಯೇ) ಉಂಟಾಗುವುದಿಲ್ಲವೆಂತಲೂ, ಚಿಕ್ಕಮಕ್ಕಳೂ ಕೂಡ ತಿಳಿದುಕೊಳ್ಳುವಂತೆ ಎಷ್ಟು ಸುಲಭವಾಗಿ ಹೇಳಿದ್ದಾನೆ! ಧರ್ಮಶಾಸ್ತ್ರಗಳಮೇಲೆ ಎಷ್ಟು ಶ್ರದ್ಧೆಯನ್ನು ತೋರಿದ್ದಾನೆ!! "ಯಃ ಶಾಸ್ತ್ರವಿಧಿಮುತ್ಸೃಜ್ಯ" ಮುಂತಾಗಿ ಹೇಳಿಕೊಂಡು ಧರ್ಮಶಾಸ್ತ್ರಗಳ ಹೇಳಿಕೆಯನ್ನು ಯಾರೂ ಮೀರಲಾಗದೆಂತಲೂ, ಮೀರಿ ನಡೆದರೆ ನರಕವೇ ಉಂಟಾಗುವುದೆಂತಲೂ ತಿಳಿಹಿಸುತ್ತ ಧರ್ಮಶಾಸ್ತ್ರಗಳು ಕಲ್ಪಿತವಾದವುಗಳೆಂದು ಬೊಗಳುವ ಧರ್ಮಲಂಡರಿಗೆ ಎಷ್ಟು ಎಚ್ಚರಿಕೆಯನ್ನು ಕೊಟ್ಟಿದ್ದಾನೆ! 'ಬ್ರಾಹ್ಮಣ ಕ್ಷತ್ರಿಯ ವಿಶಾಂ ಶೂದ್ರಾಣಾಂ' ಮುಂತಾಗಿ ಹೇಳಿಕೊಂಡು ಬ್ರಾಹ್ಮಣಾದಿ ನಾಲ್ಕು ವರ್ಣ (ಜಾತಿ) ಗಳು ವೇದಾಗಮೋಕ್ತಗಳೆಂದ ಸ್ಮೃತಿಮತಗಳಲ್ಲಿಯೂ ಉಂಟೆಂಬುದನ್ನು ತಿಳಿಯಪಡಿಸಿ ವರ್ಣಗಳು ಕಲ್ಪಿತಗಳೆಂದು ಹೇಳಿ ಹಾರಾಡುವ ಜಾತಿ ಸಂಕರಕಾರರ ಮೋರೆಗಳು ಕಪ್ಪಾಗುವಂತೆ ಮಾಡಿದ್ದಾನೆ, "ಸ್ವಭಾವನಿಯತಂ ಕರ್ಮ" ಎಂದು ಹೇಳಿ ಆಯಾ ವರ್ಣದವರ ಗುಣಕರ್ಮಗಳು ಆವರವರ ಹುಟ್ಟುವಿಕೆಯೊಡನೆಯೇ ಬರತಕ್ಕವಾಗಳೆಂದು ಸ್ಪಷ್ಟ ಮಾಡುತ್ತ ಮನುಷ್ಯರು ತಾವು ಹುಟ್ಟಿದನಂತರವೇ ತಮ್ಮ ತಮ್ಮ ಗುಣಕರ್ಮಗಳ ಮೇಲಿಂದ ಬೇರೆ ಜಾತಿಯವರಾಗಬಹುದೆಂದು ವ್ಯರ್ಥವಾಗಿ ಬಡಬಡಿಸುವ ಮೂರ್ಖರ ಕಿವಿಗಳನ್ನು ಹರಿಗುಟ್ಟುವಂತೆ ಬಲವಾಗಿ ಹಿಂಡಿದ್ದಾನೆ, ಇನ್ನೇನಾಗಬೇಕು?

ಅಯ್ಯಾ ಢಂಗಿನ ಗೀತಾಭಕ್ತರೇ! ನಾವು ಗೀತೆಯಲ್ಲಿ ಹೇಳಿರುವಂತೆ ನಡೆಯುತ್ತೇವೆಂದು ಹೇಳುತ್ತ ಜನರನ್ನು ಮರುಳುಮಾಡಿ ಚನ್ನಾಗಿ ದುಡ್ಡು ಸೆಳೆದುಕೊಂಡು ಪುನಃ ಗೀತೆಯ ಸಂಪೂರ್ಣವಿರೋಧವಾಗಿ—ಎಲ್ಲಿಯ ಧರ್ಮ? ಎಲ್ಲಿಯ ಶಾಸ್ತ್ರ? ವೇದಗಳಂತೆ! ಆಗಮಗಳಂತೆ! ಯಾವುದರಲ್ಲೂ ಏನೂ ಇಲ್ಲ ನಡೆಯಿರೋ! ಹಿಂದೆ ಆಗಿಹೋದವರೆಲ್ಲರೂ ನಮ್ಮಂತೆಯೇ ಮನುಷ್ಯರು, ಅವರಿಗೆ ತಿಳಿದಂತೆ ಅವರು ಮಾಡಿದರೆ ನಮಗೆ ತಿಳಿದಂತೆ ನಾವು ಮಾಡೋಣ ಮುಂತಾಗಿ ಅಪಲಪಿಸುತ್ತ ವರ್ಣಸಾಂಕರ್ಯವೇ ಮೊದಲಾದ ಅತಿಹೇಯಗಳಾದ ಪಾತಕಾರ್ಯಗಳನ್ನು ಮಾಡುತ್ತಿರುವಿರಲ್ಲಾ! ನಿಮ್ಮೀದುಷ್ಕೃತಿಯನ್ನು ತಿಳಿದವರು ನಿಮಗೆ ಗೀತಾಭಕ್ತರೆಂದು ಹೇಗನ್ನಬೇಕು? (ಎಲೈ ಸ್ವಧರ್ಮದ್ರೋಹಿಗಳಾದ ಪಾಪಿಗಳೇ! ನಿಮ್ಮ ಜನ್ಮಗಳಿಗೆ ಶತಶಃ ಧಿಕ್ಕಾರವಿರಲಿ! ದುಷ್ಟನಿಗ್ರಹಿಯಾದ ದೇವರು ನಿಮ್ಮನ್ನು ಘೋರವಾದ ನರಕದಲ್ಲಿಕ್ಕಲಿ!")

ವಾಚಕಮಹಾಶಯರೇ! ನಾವು ಎತ್ತನೋಡಿದರತ್ತ ಸಾವಿರಾರು ಗ್ರಂಥಗಳಲ್ಲಿ ವರ್ಣಾಶ್ರಮಸಿದ್ಧಾಂತವು ಬಹು ಪ್ರಾಚೀನವಾದುದೆಂತಲೂ, ವರ್ಣ (ಜಾತಿ) ವು ಜನ್ಮಸಿದ್ಧವಾದುದೆಂತಲೂ ಪ್ರತಿಪಾದಿತವಾಗಿದೆ. ಉಚ್ಚವರ್ಣವನ್ನು ಹೊಂದಬೇಕೆಂಬ ಬಯಕೆಯುಳ್ಳವರು ಈ ಜನ್ಮದಲ್ಲಿ ಸದಾಚಾರಗಳನ್ನಾಚರಿಸಬೇಕು, ಎಂದರೇನೇ ಮುಂದಿನ ಜನ್ಮದಲ್ಲಿ ಅವರ ಅಪೇಕ್ಷೆಯು ಸಫಲವಾಗಬಹುದು. ಇನ್ನು ಕ್ರಿಮಿಕೀಟಾದಿ ಪಾಪಜನ್ಮಗಳ ಬಯಕೆಯಿದ್ದರೆ ದುರಾಚಾರವನ್ನಾಚರಿಸಿದರಾಯಿತು. ಇನ್ನೇನೂ ಬೇಕಾಗಿಯೇ ಇಲ್ಲ. ಈ ವಿಷಯವನ್ನು ಛಾಂದೋಗ್ಯಾದಿ ಉಪನಿಷತ್ತುಗಳೂ, ಶ್ರುತಿ-ಸ್ಮೃತಿ ಪುರಾಣಗಳೂ, ಸಾರಿಸಾರಿ ಹೇಳುತ್ತಿವೆ. ಆದುದರಿಂದ ಒಂದೇಜನ್ಮದಲ್ಲಿ ಸದ್ಗುಣಗಳಿಂದಲೂ, ಸದಾಚಾರಗಳಿಂದಲೂ ಉಚ್ಚಜಾತಿಯ ಪ್ರಭುತ್ವವನ್ನೆಳಸುವ ಬಣ್ಣದಮಾತಿನ ಅಣ್ಣಗಳು ತಾವು ನಡೆಯುತ್ತಿರುವ ದಾರಿಯು ಸಂಪೂರ್ಣ ಪಾಪಮಯವಾದುದೆಂದು ತಿಳಿದುಕೊಂಡು ಪ್ರಾಚೀನ ಸಿದ್ಧಾಂತದಂತೆ ನಡೆಯುವುದಕ್ಕಾಗಿ ಇನ್ನಾದರೂ ಶಾಂತತೆಯನ್ನು ತಾಳಿ ವರ್ಣ (ಜಾತಿ) ಗಳ ಜನ್ಮಸಿದ್ಧವಾದುವುಗಳೇ ಹೊರತು ಗುಣ ಕರ್ಮಸಿದ್ಧವಾದವುಗಳಲ್ಲವೆಂಬ ಅಂಶವನ್ನು ಚನ್ನಾಗಿ ನೆನಪಿನಲ್ಲಿಟ್ಟುಕೊಂಡು ಒಂದು ಜನ್ಮದಲ್ಲಿ ಒಂದೇ ಜಾತಿಯು, ಎರಡನೆಯ ಜಾತಿಯು ಸಿದ್ಧಿಸಬೇಕಾದರೆ ಎರಡನೆಯ ಜನ್ಮವೇ ಉಂಟಾಗಬೇಕೆಂಬ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳಬೇಕಾಗಿ ಬಯಸುತ್ತೇವೆ.

ಈಗ ಅನೇಕರು ಒಂದೇಜನ್ಮದಲ್ಲಿಯೇ ಮೊದಲಿನ ತಮ್ಮ ಜಾತಿಯನ್ನುಬಿಟ್ಟು ಎರಡನೆಯ ಜಾತಿಯಾದ ಕ್ರಿಶ್ಚಿಯನ್ನರೋ, ಆರ್ಯಸಮಾಜಿಗಳೋ, ಮುಸಲ್ಮಾನರೋ ಆಗ ತ್ವರಿತವಾಗಿಂದಮೇಲೆ ಒಂದೇಜನ್ಮದಲ್ಲಿ ಎರಡೋ ಮೂರೋ ಬೇರೆಬೇರೆ ಜಾತಿಗಳು ಸಿದ್ಧಿಸಿದಂತಾದುವಲ್ಲಾ! ಎಂದು ಯಾರಾದರೂ ಕೇಳಬಹುದು. ಇದಕ್ಕುತ್ತರವೇನೆಂದರೆ— ಒಬ್ಬನು ತಾನು ಹುಟ್ಟಿದ ಜಾತಿಯನ್ನುಬಿಟ್ಟು ಬೇರೆಯಪಂಗಡಕ್ಕೆ ಸೇರಿದರೆ ಧರ್ಮಶಾಸ್ತ್ರಗಳು ಅತನನ್ನು ಧರ್ಮಭ್ರಷ್ಟನೆಂತಲೂ ಜಾತಿಭ್ರಷ್ಟನೆಂತಲೂ ಕರೆಯುತ್ತವೆ, ಇದಲ್ಲದೆ ಹೀಗೆ ಜಾತಿಭ್ರಷ್ಟನಾದ ಮನುಷ್ಯನು ತಾನು ಸೇರುವ ಎರಡನೆಯ ಜಾತಿಯಲ್ಲಿ ಹುಟ್ಟಿದವನಾದಕಾರಣ ಆ ಜಾತಿಯು ಅತನಿಗೆ ಸರಿಬೀಳದಿದ್ದರೆ ಮತ್ತೊಂದುಜಾತಿಗೆ ಸೇರಿಕೊಂಡು ಮೊದಲುಸೇರಿದ ಜಾತಿಯವರಿಂದಲೂ ಜಾತಿಭ್ರಷ್ಟನೆನಿಸಿಕೊಂಡು ಹೀಗೆ ಆಮನುಷ್ಯನು ಎಲ್ಲಿ ಹೋದರೂ ಕುಲಗೇಡಿ, ಕುಲಘಾತಕ, ಕುಲಭ್ರಷ್ಟನೆಂಬ ಅಪವಾದವನ್ನೇ ಹೊರಬೇಕಾಗುವುದು. ಆದಕಾರಣ ಮನುಷ್ಯನು ತನಗಪೇಕ್ಷಿತವಾದ ಯಾವುದೋ ಒಂದು ಪವಿತ್ರಜಾತಿಯವನೆಂದು ನಿಜವಾಗಿಯೂ ಹೇಳಿಸಿಕೊಳ್ಳಬೇಕಾದರೆ ಅತನಿಗೆ ಎರಡನೆಯ ಜನ್ಮದ ಅವಶ್ಯಕತೆಯುಂಟೇ ಉಂಟು, ಇರಲಿ. ಪ್ರಾಚೀನ ಧರ್ಮಶಾಸ್ತ್ರಪ್ರಮಾಣಗಳಿಗೆ ಈಗಿನ ವರ್ಣಸಂಕರರು ಹೇಗೆಹೇಗೆ ಅಪಾರ್ಥಗಳನ್ನು ಮಾಡುತ್ತ ನಡೆದಿರುವರೆಂಬುದು ಇದೀಗ ನಮ್ಮ ವಾಚಕಮಹಾಶಯರಿಗೆ ಸ್ಪಷ್ಟವಾಗಿ ತಿಳಿದಂತಾಯಿತು.

ಇನ್ನು ಕೃಷ್ಣಗೀತೆಯು ವೇದಸಮವಾದ ಯಾವ ಮಹಾಗ್ರಂಥದ ಭೀಷ್ಮಪರ್ವವೆಂಬ ಒಂದುಭಾಗದಲ್ಲಿ ಅಂತರ್ಗತವಾಗಿದೆಯೋ ಆ ಮಹಾಭಾರತದ ಉಮಾಮಹೇಶ್ವರ ಸಂವಾದದಲ್ಲಿ ಪಾರ್ವತೀದೇವಿಯು ಶಿವನನ್ನು ಕುರಿತು—ವರ್ಣ (ಜಾತಿ) ಗಳು ಜನ್ಮಸಿದ್ಧವಾದ ಸ್ವಭಾವದಿಂದುಂಟಾಗುವವೋ? ಅಥವಾ ಕ್ರಿಯೆ (ಕರ್ಮಾಚರಣೆ) ಯಿಂದುಂಟಾಗುವವೋ? ಎಂದು ಪ್ರಶ್ನೆಮಾಡಿರುವುದೂ, ಶಿವನು ಆ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ದಯಪಾಲಿಸಿರುವುದೂ ಹೀಗಿದೆ ನೋಡಿರಿ!

ಪ್ರಶ್ನೆ—ಭಗವನ್ ಭಗನೇತ್ರಘ್ನ ಕಾಲಸೂದನ ಶಂಕರ | ಇಮೇ ವರ್ಣಾಶ್ಚ ಚತ್ವಾರೋ ವಿಹಿತಾಃ ಸ್ವ

[೭ನೇ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ.

೧೯೩೫ನೆಯ ಡಿಸೆಂಬರ್ ತಾ|| ೨ನೆಯ ಸೋಮವಾರ

ಲಿಂಗಧಾರಣವು ವೇದೋಕ್ತವಾದುದು.

"ತ್ರಿಪುಂಡ್ರಂ ಯೇ ವಿನಿಂದಂತಿ" ಎಂಬ ವಾಕ್ಯದಲ್ಲಿ ಉಪಮಾಲಂಕಾರಸಮನ್ವಯದಿಂದ ಲಿಂಗಧಾರಣವು ಸಿದ್ಧವಾಯಿತು. ಇನ್ನು ದೃಷ್ಟಾಂತಾಲಂಕಾರದಿಂದ ಲಿಂಗಧಾರಣವು ಸಿದ್ಧವಾದಪ್ರಕಾರವು "ಜೇದಿ ಬಿಂಬಪ್ರತಿಬಿಂಬತ್ವಂ ದೃಷ್ಟಾಂತಸ್ತದಲಂಕೃತಿಃ" ಯಾವ ವಾಕ್ಯದಲ್ಲಿ ಬಿಂಬಪ್ರತಿಬಿಂಬಭಾವವಿರುವುದೋ ಅಲ್ಲಿ ದೃಷ್ಟಾಂತಾಲಂಕಾರವಾಗುತ್ತದೆ ಎಂದು ದೃಷ್ಟಾಂತಾಲಂಕಾರದ ಲಕ್ಷಣವು. ಬಿಂಬಪ್ರತಿಬಿಂಬಭಾವವೆಂದರೆ "ವಸ್ತುತಃ ಭಿನ್ನಯೋ ಪರಸ್ಪರಸಾದೃಶ್ಯಾದಭಿನ್ನಯೋಃ ಪೃಥಗುಪಾದಾನಂ ಬಿಂಬಪ್ರತಿಬಿಂಬಭಾವಃ" ಎಂಬುವ ಲಕ್ಷಣವಾಕ್ಯದಿಂದ ಯಾವ ಸ್ಥಲದಲ್ಲಿ ಉಪಮಾನ ಉಪಮೇಯಗಳೆರಡೂ ಒಂದೇ ವಾಕ್ಯದಲ್ಲಿಲ್ಲದೆ ಭಿನ್ನಭಿನ್ನವಾಕ್ಯಗಳಲ್ಲಿದ್ದು ಒಂದಕ್ಕೊಂದು ಸಾದೃಶ್ಯದಿಂದ ಅಭಿನ್ನಗಳಾಗಿ ತೋರುವುವೋ ಆ ಸ್ಥಲದಲ್ಲಿ ಬಿಂಬಪ್ರತಿಬಿಂಬಭಾವವೆಂದು [illegible] ಹೇಳುತ್ತದೆ. "ತ್ವಮೇವ ಕೇವಲಂ [illegible] ಕಾಂತಿ [illegible] ಎಂದು [illegible] ರಾಜನನ್ನು [illegible] ದೃಷ್ಟಾಂತಾಲಂಕಾರದ ಉದಾಹರಣೆಯಾಗುತ್ತದೆ. [illegible] ಬಿಂಬ (ಉಪಮಾನ) ವಾಕ್ಯವು [illegible] ಪ್ರತಿಬಿಂಬ (ಉಪಮಾನ) ವಾಕ್ಯವು [illegible]

[illegible]

ಧಾರಣ ತ್ರಿಪುಂಡ್ರಧಾರಣ [illegible] ನೇಯಗಳ [illegible] ಪ್ರತಿಬಿಂಬ [illegible] ಸಾದೃಶ್ಯವು ಸ್ಪಷ್ಟವಾಗಿ ತೋರುವುದರಿಂದ ದೃಷ್ಟಾಂತಾಲಂಕಾರವು ಸಮನ್ವಯವಾಗುತ್ತದೆ. ಈಗೆ ಬಿಂಬ ಪ್ರತಿಬಿಂಬ ಭಾವವೆಂಬುದು ಯಾವಾಗಲೂ [illegible] ಸ್ಪರಿಂದ ಚಂದ್ರಕಾಂತಿಗೆ ಪ್ರಾಪ್ತಪ್ರತಿಯೋಗಿತ್ವವು ಸಿದ್ಧವಾಗುವಂತೆ ಇಲ್ಲಿ ಲಿಂಗಧಾರಣಕ್ಕೆ ಪುಂಡ್ರ ಪ್ರತಿಯೋಗಿತ್ವವು ಸಿದ್ಧವಾಗುವುದರಿಂದ ದೃಷ್ಟಾಂತಾಲಂಕಾರ ಲಕ್ಷಣಾನುಸಾರವಾಗಿ ಲಿಂಗಧಾರಣವು ಸಿದ್ಧವಾದಂತಾಯಿತು. ಆದರೆ "ತ್ರಿಪುಂಡ್ರಂ ಯೇ ವಿನಿಂದಂತಿ ನಿಂದಂತಿ ಶಿವಮೇವ ತೇ" ಎಂಬುವ ಜಾಬಾಲೋಪನಿಷದ್ವಾಕ್ಯದಿಂದ ಲಿಂಗಧಾರಣವು ಸಿದ್ಧವಾದರೂ ಶ್ರೀ ರೇಣುಕಾದಿ ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವಸಿದ್ಧಾಂತಾನುಸಾರವಾಗಿ ಕಂಠಾದಿ ಉತ್ತಮಾಂಗಗಳಲ್ಲಿ ಧರಿಸಲ್ಪಡುತ್ತ ವಾಮಹಸ್ತವೆಂಬ ಸಿಂಹಾಸನದ ಮೇಲಿರಿಸಿ ಪೂಜಿಸಲ್ಪಡುವ ಪಂಚಸೂತ್ರಘಟಿತವಾದ ಇಷ್ಟಲಿಂಗಧಾರಣವು ಸಿದ್ಧವಾಗುವುದೆಂದು ಹೇಳಲಾಗುವುದಿಲ್ಲವು. ಏಕೆಂದರೆ, ಆ ವಾಕ್ಯದಲ್ಲಿ ಇಷ್ಟಲಿಂಗಧಾರಣವೆಂಬುದು ಸ್ಪಷ್ಟವಾಗಿರದೆ ಸಾಮಾನ್ಯವಾಗಿ ಲಿಂಗಧಾರಣವು ಸಿದ್ಧವಾಗುವದರಿಂದ ಸರ್ವಸಮ್ಮತವಾದ ಅಂತರ್ಲಿಂಗಧಾರಣವನ್ನಾಗಲಿ ದೇಹದಲ್ಲಿ ಧರಿಸಲ್ಪಡುವ ಇಷ್ಟಲಿಂಗಧಾರಣವನ್ನಾಗಲಿ ಎರಡರಲ್ಲಿ ಯಾವುದನ್ನಾದರೂ ಹೇಳಲು ಅವಕಾಶವು ಶಿಕ್ಷವುದರಿಂದ ಇಷ್ಟಲಿಂಗಧಾರಣವೇ ಸಿದ್ಧಿಸುವುದೆಂದು ನಿಯಮವೆಂದ ಹೇಗ ಹೇಳಲಿಕ್ಕಾದೀತೆಂಬ ಒಂದು ಆಕ್ಷೇಪವು ಬರಬಹುದು. ಆದರೆ ಉಪನಿಷತ್ತಿನಲ್ಲಿ ಬಿಂಬವಾಕ್ಯವೆನಿಸಿದ ತ್ರಿಪುಂಡ್ರರೇಖೆಗಳು ಲಲಾಟ ವಿರಸ್ಸು ಮುಂತಾದ ಸ್ಥೂಲದೇಹದಲ್ಲಿ ಧರಿಸಲ್ಪಡತಕ್ಕ ವಸ್ತುವಾಗಿವೆಯಲ್ಲದೆ ಸೂಕ್ಷ್ಮದೇಹದಲ್ಲಿ ಧರಿಸತಕ್ಕ ವಸ್ತುಗಳಾಗಿಲ್ಲವು. ಇಲ್ಲಿ ವಾದಿಯು ಹೇಳುವ ಅಂತರ್ಲಿಂಗಧಾರಣವನ್ನೇ ಪ್ರತಿಬಿಂಬ ವಾಕ್ಯವನ್ನಾಗಿ ಅಂಗೀಕಾರಮಾಡುವುದಾದರೆ ತ್ರಿಪುಂಡ್ರ ಧಾರಣರೂಪವಾದ ಬಿಂಬವಾಕ್ಯಕ್ಕೆ ಸರಿಹೋಗುವುದಿಲ್ಲ. ಒಂದಕ್ಕೆ ಅಂತರ್ಧಾರಣವನ್ನು ಹೇಳಿ ಮತ್ತೊಂದಕ್ಕೆ ಬಹಿರ್ಧಾರಣವನ್ನು ಹೇಳುವುದಾದರೆ ಅಂಥ ಸ್ಥಲದಲ್ಲಿ ಸಾದೃಶ್ಯವೇ ತೋರದಂತಾಗುವದು. ಮತ್ತು "ಯತ್ರಾ ಯದ್ಭಾವ್ಯತೇ ಯಚ್ಚ ತತ್ರಾದೃಗವಗನ್ಯತೇ" ಎಂಬ ನ್ಯಾಯಕ್ಕಂತೂ ಅತಿವಿರೋಧವಾಗುವುದರಿಂದ ದೇಹದಲ್ಲಿ ಧರಿಸಲ್ಪಟ್ಟಿರುವ ತ್ರಿಪುಂಡ್ರವೇ ಉಪಮೇಯವಾದಮೇಲೆ ಅಂಥ ದೇಹದಲ್ಲಿ ಧರಿಸಲ್ಪಡುವ ಇಷ್ಟಲಿಂಗವೇ ಉಪಮಾನವಾಗಲೇಬೇಕು ಹಾಗಿಲ್ಲದೆಹೋದರೆ ಬಾಹ್ಯದಲ್ಲಿ ಧರಿಸಲ್ಪಡುವ ಸ್ಥೂಲಭಸ್ಮಕ್ಕೂ ಮನಸ್ಸಿನಲ್ಲಿ ಧ್ಯಾನಿಸಲ್ಪಡುವ ಸೂಕ್ಷ್ಮರೂಪವಾದ ಜ್ಯೋತಿರ್ಲಿಂಗಕ್ಕೂ ಹೋಲಿಕೆಯು ಸಂಭವಿಸದಿರುವದರಿಂದ ಅಲಂಕಾರವೇ ಸಂಭವಿಸದಂತಾಗುವದು. ದೀಕ್ಷಾಪೂರ್ವಕವಾಗಿ ಗುರುವಿನಿಂದ ಕೊಡಲ್ಪಟ್ಟಿರುವ ಇಷ್ಟಲಿಂಗಧಾರಣವೇ ಜಾಬಾಲೋಪನಿಷತ್ತಿನ ಅರ್ಥವೆಂದು ಸಿದ್ಧವಾಗುತ್ತದೆ, ಮತ್ತು ಇದರಂತೆ ಕಾಲ ಗ್ನಿರುದ್ರೋಪನಿಷದಾದಿಗಳಲ್ಲಿಯೂ ಸಹ ಲಿಂಗಧಾರಣಸಿದ್ಧಿಯು ಆಗುತ್ತದೆ ಹೇಗಂದರೆ, "ಯಾ ಸಾ ಪ್ರಥಮಾ ರೇಖಾ" ಇತ್ಯಾದಿಯಾಗಿ ಆ ವಾಕ್ಯಗ [illegible] ಮೂರು ರೇಖೆಗಳಲ್ಲಿ ಮೊದಲನೆ ರೇಖೆಯು [illegible] ಎರಡನೆಯ ರೇಖೆಯು [illegible] ಮೂರನೆಯ ರೇಖೆಯು [illegible] ಮಹತ್ವವು ವರ್ಣಿಸಲ್ಪಟ್ಟಿರುತ್ತದೆ. [illegible] ತ್ರಿಪುಂಡ್ರರೇಖೆಗಳೇ ಧಾರಣವಿಧಿ [illegible] ಇಷ್ಟ ಪ್ರತ್ಯಕ್ಷ [illegible]

[illegible] ||

[illegible] ತ್ರಿಪುಂಡ್ರಧಾರಣದಲ್ಲಿ [illegible] ಇರುವುದಿಲ್ಲ.

ಒಳದೇಶದ ವೃತ್ತಾಂತಗಳು.

[illegible] ತಾಲ್ಲೂಕು [illegible] ಹಳ್ಳಿಯ ಸುತ್ತು [illegible] ಹುಲಿ [illegible] ದಿನ [illegible] ತಿಂಗಳ [illegible] ಯನ್ನು [illegible]

ಬೆಂಗಳೂರು ಬಳಿ ಯಲಹಂಕದ ನಿವಾಸಿಗಳಾದ [illegible] ದರಿಂದ [illegible] ಹೊಟ್ಟೆ ಉಬ್ಬರಿಸಿಕೊಂಡು ಆಸ್ಪತ್ರೆಗೆ ಹೋಗಿ ಚಿಕಿತ್ಸೆಹೊಂದಿದರೂ ಅವರಲ್ಲಿ ಒಬ್ಬನು ಮೃತನಾದನು. ಪೋಲೀಸರು ಮಹಜರು ನಡೆಸಿದರು

ಕಳೆದತಿಂಗಳು 26ನೆಯ ತಾರೀಕು ರಾತ್ರಿ 8 ಘಂಟೆ ವೇಳೆಯಲ್ಲಿ ಹಳ್ಳದಕೇರಿಯಲ್ಲಿರುವ ಶ್ರೀ ಗಂಗಾಧರ ಶಾಸ್ತ್ರಿಗಳೆಂಬುವರ ಮನೆಯವರು ದೇವಸ್ಥಾನಕ್ಕೆ ಹೋಗಿದ್ದಾಗ್ಗೆ ಯಾರೋ ಕಳ್ಳರು ಅವರ ಮನೆಯ ಬಾಗಿಲುಮುರಿದು ಒಳಗೆನುಗ್ಗಿ ಸುಮಾರು 40-50 ರೂ ಬೆಲೆಬಾಳುವ ಪದಾರ್ಥಗಳನ್ನು ಅಪಹರಿಸಿರುವುದಾ[illegible] ಕೇಳುತ್ತೇವೆ.

ಬೇಲೂರಿನ ಬಳಿ ಇರುವ ಹಳ್ಳಿಯೊಂದರ ಶ[illegible] ಶಾಸನವೊ[illegible] ಸಿಕ್ಕಿದೆ ಅದರ ಪಠನೆಯು ಮುಗಿಯು[illegible] ಬಂದಿದೆ. ಓರಿಯಂಟಲ್ ಸಮ್ಮೇಳನ ಸಮಯ[illegible] ಅದರ ಭಾಷಾಂತರ ಮತ್ತು ಮೂಲವನ್ನು ಪ್ರಕಟಿ[illegible] ಸ್ತಾರೆಂಬುದಾಗಿ ವರ್ತಮಾನಬಂದಿದೆ.

ಮೈಸೂರು ತಾಲ್ಲೂಕಿಗೆ ಸೇರಿದ ಚಿಕ್ಕಳ್ಳಿಗ್ರಾಮ[illegible] ಪಟೇಲರಾಗಿರುವ ಶ್ರೀ ದೇವಗೌಡರವರ ಮನೆಗೆ ಕ[illegible] ಹಾಕಿ (೨೫-೧೧-೩೫ನೆಯ ದಿನ) ಸುಮಾರು ೩೦[illegible] ರೂ ಬೆಲೆಬಾಳುವ ವಸ್ತುಗಳನ್ನು ಅಪಹರಿಸಿಕೊಂ[illegible] ಹೋಗಿರುತ್ತಾರೆಂದು ಪೋಲೀಸರಿಗೆ ವರ್ತಮಾನ[illegible] ದಿದೆ. ತನಿಖೆ ನಡೆಯಿಸಲು ಹೋಗಿರುತ್ತಾರೆ.

ರಾಜಧಾನಿಯ ಪ್ರಜೆಗಳು ನವೆಂಬರ್ ೨೬ನೆ[illegible] ಮಂಗಳವಾರ ಸಾಯಂಕಾಲ ಟೌನಹಾಲಿನಲ್ಲಿ ಅಡ್ವೊ[illegible] ಕೇಟ್ ಮ|| ಎಚ್. ಸುಬ್ಬರಾಯರ ಅಧ್ಯಕ್ಷತೆಯ[illegible] ಸೇರಿ ಸಿಟಿ ಮುನಿಸಿಪಾಲಿಟಿಯವರು ಕೆಲವು ಪದಾ[illegible] ಗಳಮೇಲೆ ಹೊಸದಾಗಿ ಸುಂಕ ಹಾಕಕೂಡದೆಂ[illegible] ಆಕ್ಷೇಪಮಾಡುವಂತೆ ಸರ್ವಾನುಮತದಿಂದ ತೀರ್ಮಾ[illegible] ಮಾಡಿದರು

ರಾಜಧಾನಿಯ ಕ್ಷಯರೋಗದ ಆಸ್ಪತ್ರೆಯ ಸೂ[illegible] ರಿಂಟೆಂಡೆಂಟ್ ಡಾಕ್ಟರ್ ಬಿ ಜಯರಾಮರವ[illegible] ರೇಡಿಯೋ ಮುಖಾಂತರ ಭಾಷಣಮಾಡುತಾ[illegible] ಮೈಸೂರುಸಿಟಿಯಲ್ಲಿ ಸುಮಾರು ೭ ಸಾವಿರ ಮಂ[illegible] ಕ್ಷಯರೋಗಿಗಳಿದ್ದಾರೆಂದೂ, ಪ್ರತಿವರುಷವೂ [illegible] ಮಾರು ೭೫೧ ಜನರು ಈ ರೋಗಕ್ಕೆ ತುತ್ತಾಗುತ್ತಿದ್ದಾ[illegible] ರೆಂದೂ ತಿಳಿಸಿದರು

ಕಳೆದತಿಂಗಳು ೨೦ನೆಯ ತಾರೀಕು ಬೆಳಗೆ ಬೆಂ[illegible] ಳೂರಿನಿಂದ ಮೈಸೂರುಕಡೆಗೆ ಮೇಲ್ ರೈಲುಗಾಡಿಯ[illegible] ಬರುತ್ತಿರುವಾಗ ಚನ್ನಪಟ್ಟಣದಬಳಿ ಸುಬ್ಬಮ್ಮನೆಂ[illegible] ಸುಮಾರು ೭೦ ವರ್ಷ ವಯಸ್ಸಿನ ಹೆಂಗಸೊಬ್ಬಳು [illegible] ಬಿದ್ದು ಆಕೆಯು ಕೂಡಲೆ ಮೃತಪಟ್ಟಳೆಂದು ತಿಳಿ[illegible] ಬಂದಿದೆ. ಪೋಲೀಸರು ಮಹಜರುನಡಿಸಿ ಆಕಸ್ಮಿ[illegible] ಮರಣವೆಂದು ತೀರ್ಮಾನಿಸಿದರು.

ಕಳೆದ ತಿಂಗಳು ೨೮ ನೆಯ ತಾರೀಕು ಬೆಳಗೆ [illegible] ಸೀಕೆರಿಯಿಂದ ಮೈಸೂರಿಗೆ ಬರುತ್ತಿದ್ದ ರೈಲು ತೋ[illegible] ಹಳ್ಳಿ ಸಾಗರಕಟ್ಟೆ ಸ್ಟೇಷನುಗಳ ನಡುವೆ ಕಟಿಂಗಿ[illegible] ಬರುತ್ತಿದ್ದ ಎಡೆಹಳ್ಳಿಯ ಸಿದ್ದಮ್ಮ ಎಂಬಾಕೆಗೆ [illegible] ಹೊಡೆದದ್ದರಿಂದ ಆಕೆಯ ಮಂಡಿ ಮುರಿದುಹೋ[illegible] ತು ಚಿಕಿತ್ಸೆಗಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಕ[illegible] ದ್ದಾರೆಂದು ಕೇಳುತ್ತೇವೆ

ಮದ್ದೂರು ತಾಲ್ಲೂಕು ಹೊಂದಲಗೆರೆಗ್ರಾಮ[illegible] ಪಟೇಲ್ ಬಸವೇಗೌಡನನ್ನು ಕೊಲೆಮಾಡಿದ[illegible] ನ್ಯಾಯದ ಮೇಲೆ ಮೊಕದ್ದಮೆಯಾಗಿತ್ತು. ಇದ[illegible] ಮೂರನೆಯ ಅಪರಾಧಿ ತಿಮ್ಮಯ್ಯನು ತಪ್ಪ[illegible] ಒಪ್ಪಿಕೊಂಡದ್ದರಿಂದ ನ್ಯಾಯಾಧೀಶರು ಅವ[illegible] ಜೀವಾವಧಿ ಗಡೀಪಾರ್ ಶಿಕ್ಷೆಯನ್ನು ವಿಧಿಸಿ ಉ[illegible] ಕರಿಯ, ದಾಸ, ವಿಷಕಂಠ ಎಂಬ ಮೂವರನ್ನು ಬಿ[illegible] ಗಡೆಮಾಡಿಬಿಟ್ಟರು

ಕೋಲಾರದ ಚಿನ್ನದಗಣಿ ಫೋರ್ಮನ್ ಮಿ|| [illegible] ಹೆಚ್ ಮಾರ್ಗನ್ ಎಂಬವರು ಕಳೆದ ೨೦ನೇ [illegible] ವಾರ ತಮ್ಮ ಮನೆಯಲ್ಲಿ ನೇಣುಹಾಕಿಕೊಂಡು [illegible] ಹತ್ಯೆ ಮಾಡಿಕೊಂಡರು ಇವರಿಗೆ ಬುದ್ಧಿ ಸ್ಥಿಮಿ[illegible] ಲ್ಲದ ಕಾಲದಲ್ಲಿ ಆತ್ಮಹತ್ಯೆ ಮಾಡಿಕೊಂಡರೆ[illegible] ಪೋಲೀಸರು ಮಹಜರುನಡೆಸಿ ರಿಕಾರ್ಡು ಮಾಡಿದ[illegible] ಇವರ ಹೆಂಡತಿಯೂ ಮತ್ತು ಮಗನೂ ಇಂಗ್ಲೆಂಡಿ[illegible] ದ್ದಾರೆಂದು ತಿಳಿದುಬಂದಿದೆ.

ಮೈಸೂರು ಡಿಸ್ಟ್ರಿಕ್ಟ್ ಪಿರಿಯಾಪಟ್ಟಣದಲ್ಲಿ ಸು[illegible] ರು 8 ಸಾವಿರ ಮಂದಿ ಕೊಕ್ಕೆ ಹುಳು (Ho[illegible] worm) ರೋಗದಿಂದ ನರಳುತ್ತಿರುವರೆಂದು ಡಿಸ್ಟ್ರಿ[illegible] ಆರೋಗ್ಯಶಾಖಾಧಿಕಾರಿಗಳು ಪರಿಶೀಲನೆ ನಡೆಸಿರು[illegible] ಲ್ಲದೆ ಡಿಸ್ಟ್ರಿಕ್ಟ್ ಬೋರ್ಡಿನವರು ರೋಗಿಗಳ ಚಿ[illegible] ಗೂ ಹೊಸದಾದರಿಯ ಬೋರ್‌ಹೋಲ್ ಕಕ್ಕ[illegible] ಗಳನ್ನು ಕಟ್ಟಿಸುವುದಕ್ಕೂ 4 ಸಾವಿರ ರೂಪಾಯಿಗಳ[illegible] ಖರ್ಚುಮಾಡುವರೆಂದು ತಿಳಿದುಬಂದಿದೆ

ನಂಜನಗೂಡು ತಾಲ್ಲೂಕು ಕಸಬೆ ಹೋಬಳಿ ಬಳಿ ಇರುವ ಸಿಂಧುವಳ್ಳಿ ಕ್ರಾಂಗಣೆಯ ಕಾಲುಗಳ ಕೆರೆಯಲ್ಲಿರುವ ಒಂದು ಸರಕಾರಿ ತೋಟದಲ್ಲಿ ಸುಮಾರು ೩ ಅಡಿ ಎತ್ತರ ಸುಲುವಾಗಿ ಬೆಳೆದ ಹೂವುಳ್ಳ ಬೆಟ್ಟದ ಗಾಂಜಾಗಿಡವಿತ್ತೆಂದೂ, ಅಬ್ಕಾರಿ ಖಾತೆಯವರು ಇದನ್ನು ಪರಿಶೀಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ. ಆ ಒಂದು ಗಿಡದಲ್ಲಿರುವ ಸೊಪ್ಪಿನ ಬೆಲೆಯು ಸುಮಾರು ೬೦ ರೂ. ಗಳಾಗಬಹುದೆಂದು ಅಂದಾಜು ಮಾಡಲ್ಪಟ್ಟಿದೆ

ವಯೋವೃದ್ಧರಾದ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿಯವರ ದೇಹದಲ್ಲಿ ಅಲಕ್ಷವುಂಟಾಗಿದ್ದು ಜಗದೀಶನ ಅನುಗ್ರಹದಿಂದ ಈಗ ಸಂಪೂರ್ಣ ಆರೋಗ್ಯವನ್ನು ಹೊಂದಿರುವರೆಂಬ ಸಮಾಚಾರವನ್ನು ಕೇಳಿ ಸಂತೋಷಿಸುತ್ತೇವೆ. ವೀರಶೈವಸಮಾಜದಲ್ಲೂ ಅನ್ಯಸಮಾಜದಲ್ಲೂ ಪ್ರಖ್ಯಾತಿಪಡೆದು ಈಶ್ವರ ಪ್ರೀತ್ಯರ್ಥವಾಗಿ ಅನೇಕ ಪುಣ್ಯಕಾರ್ಯಗಳನ್ನು ಮಾಡುತ್ತ ಜಗದ್ವಂದ್ಯರಾಗಿರುವ ಇವರಿಗೆ ಜಗದ್ವಲ್ಲಭನಾದ ಪರಮೇಶ್ವರನು ದೀರ್ಘಾಯುರಾರೋಗ್ಯಭಾಗ್ಯವನ್ನು ಕೊಡಬೇಕೆಂದು ಪ್ರಾರ್ಥಿಸುವೆವು.

ಮೈಸೂರು ದೇಶದಲ್ಲಿ ಒಂದು ಸಣ್ಣ ಮುಸಲ್ಮಾನರ ಪಂಗಡವಿದೆ. ಅವರಲ್ಲಿ ಯಾರಾದರೂ ಸತ್ತರೆ ಮುಸ್ಲಿಂ ಸ್ಮಶಾನದಲ್ಲಿ ಅವರನ್ನು 'ದಫನ್' ಮಾಡಕೂಡದು. ಚನ್ನಪಟ್ಟಣದ ಬಳಿ ಅವರದೇ ಒಂದು ಸ್ಮಶಾನವಿದೆಯಂತೆ! ಮೈಸೂರು ಸಂಸ್ಥಾನದಲ್ಲಿ ಅವರಲ್ಲಿ ಯಾರು ಸತ್ತರೂ ಶವಕ್ಕೆ ಚನ್ನಪಟ್ಟಣದ ಯಾತ್ರೆಮಾಡಿಸದೆ ಹೋದರೆ 'ದಫನ್' ಕ್ರಿಯೆಗೆ ಅವಕಾಶವಿಲ್ಲವಂತೆ! ಆ ಪಂಗಡದವರು ಕೆಲವರು ಮೊನ್ನೆ ಮೊನ್ನೆ ದಿವಾನರವರಿಗೂ ಹೋಗಿ ಈ ಕಷ್ಟಪರಿಹಾರಕ್ಕೆ ಅವರಲ್ಲಿ ಮೊರೆ ಇಟ್ಟರೆಂದು ಕೇಳುತ್ತೇವೆ

ನವೆಂಬರ್ ೨೭ನೇ ತಾ|| ರಾತ್ರಿ ಬಿಡದಿ ಸ್ಟೇಷನ್ನಿಗೆ ರೈಲು ಬಂದು ನಿಂತಾಗ ಯಾವನೋ ಒಬ್ಬನು ಹೆಂಗಸರ ಗಾಡಿಗೆ ಹೊಕ್ಕು ಗಂಟೊಂದನ್ನು ತೆಗೆದುಕೊಂಡು ಪರಾರಿಯಾಗುತ್ತಿದ್ದನಂತೆ. ಹತ್ತಿರದಲ್ಲಿಯೇ ಇದ್ದ ಪೋಲೀಸ್ ಕಾನ್ಸ್ಟೇಬಲ್ ಆತನನ್ನು ಹಿಡಿದುಕೊಂಡನಂತೆ. ಆದರೆ ಪಕ್ಕದಲ್ಲಿದ್ದ ಮತ್ತೊಬ್ಬನು ಬಂದು ಪೋಲೀಸಿನವರನ್ನು ಹೊಡೆದು, ತಮ್ಮವನನ್ನು ಬಿಡಿಸಿಕೊಂಡು ಇಬ್ಬರೂ ಪರಾರಿಯಾದರೆಂದು, ಸುದ್ದಿ ಬಂದಿದೆ. ಗಂಟನ್ನು ಅಲ್ಲಿಯೇ ಬಿಟ್ಟು ಹೋಗಿರುತ್ತಾರೆ. ಪರಾತ್ಕರ ಪತ್ತೆ ಕರದೂನು ನಡೆಯುತ್ತಿದೆಯೆಂದು ವರ್ತಮಾನ.

ನಮ್ಮ ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ಈಗ ಕೆಲವು ದಿನಗಳಿಂದಲೂ ದಕ್ಷಿಣ ದೇಶದ ಎಲ್ಲ ಸಂಗೀತ ವಿದ್ವಾಂಸರುಗಳ ವಿದ್ಯಾಪ್ರದರ್ಶನವು ನಡೆಯುತ್ತಿದೆ. ಈ ಸಂದರ್ಭದಲ್ಲಿ ರಾಜಧಾನಿಯ ಪಿಟೀಲು ವಾದನದಲ್ಲಿ ಅದ್ವಿತೀಯಪಾಂಡಿತ್ಯವನ್ನು ಪಡೆದು ಪ್ರಸಿದ್ಧಿ ಹೊಂದಿರುವ ವಿದ್ವಾನ್ ಚೌಡಯ್ಯನವರ ಪಿಟೀಲು ವಾದನವು ಮಹಾಸ್ವಾಮಿಗಳವರ ಸಮ್ಮುಖದಲ್ಲಿ ನಡೆದು ಅವರನ್ನು ಅತ್ಯಂತ ಆನಂದಗೊಳಿಸಿದ್ದರಿಂದ, ಮಹಾಸ್ವಾಮಿಯವರು ವಿದ್ವಾನ್ ಚೌಡಯ್ಯನವರಿಗೆ 300 ರೂಪಾಯಿಗಳೊಡನೆ ಶಾಲುಜೋಡಿಗಳನ್ನು ಕೊಟ್ಟು ಬಹುಮಾನಿಸಿದುದಲ್ಲದೆ ಅವರನ್ನು ತಮ್ಮ ಆಸ್ಥಾನದ ವಿದ್ವಾಂಸರಾಗಿ ತೆಗೆದುಕೊಂಡು ವಿದ್ವದ್ದೀಕ್ಷನವನ್ನು ಅನುಗ್ರಹಿಸಿದರೆಂದು ಕೇಳಲು ಸಂತೋಷಿಸುತ್ತೇವೆ

ರಾಜಧಾನಿಯಲ್ಲಿ ವಾಸವಾಗಿರುವ ಸುಮಾರು ೧೫ ವರ್ಷವುಳ್ಳ ಓರ್ವ ಬ್ರಾಹ್ಮಣಬಾಲಕನು ಯಾವಾಗಲೂ ಸರ್ಪಗಳನ್ನು ನಿರ್ಭಯವಾಗಿ ಹಿಡಿದುಕೊಂಡು ಕೊರಳಿನಲ್ಲಿಯೂ, ನಡುವಿನಲ್ಲಿಯೂ, ಕೈಯಲ್ಲಿಯೂ ಸುತ್ತಿಕೊಂಡು ನಾನಾವಿಧವಾಗಿ ಆಟವಾಡಿಸುತ್ತ ಜನಗಳನ್ನು ವಿನೋದಪಡಿಸುತ್ತಿರುವುದೇ ಆತನ ಸ್ವಭಾವವಾಗಿದ್ದಿತು. ಹೀಗಿರುವಲ್ಲಿ ಕಳೆದ ಶುಕ್ರವಾರ ಒಂದು ಘೋರ ಸರ್ಪವನ್ನು ಹಿಡಿದು ಆಡಿಸುತ್ತಿರುವಲ್ಲಿ ಆ ಸರ್ಪವು ಆಕಸ್ಮಿಕವಾಗಿ ಆತನನ್ನು ಕಚ್ಚಿತು. ಹುಡುಗನು ಸರ್ಪದಷ್ಟನಾಗಿ ವಿಷವೇರಿದುದರಿಂದ ಪ್ರಜ್ಞೆ ತಪ್ಪಿ ಎರಡು ದಿವಸಗಳವರೆಗೆ ಮಲಗಿದ್ದು, ಡಾಕ್ಟರುಗಳ ಚಿಕಿತ್ಸೆಯು ಏನೂ ಪ್ರಯೋಜನಕಾರಿಯಾಗದೆ ಯಮಲೋಕಕ್ಕೆ ಅತಿಥಿಯಾದನು. ದೈವಬಲವು ತಪ್ಪಿದ ಮೇಲೆ ಯಾವ ಮೂಲಿಕಾದಿಶಕ್ತಿಗಳೂ [illegible]ರವು.

ವರ್ತಮಾನಸಂಗ್ರಹ.

ಬರೋಡಾ ರಾಜಕುಮಾರರಾದ ಶ್ರೀ ಧೈರ್ಯಶೀಲರಾವ್ ಗಾಯಕವಾಡರು ರಾಜಧಾನಿಗೆ ದಯಮಾಡಿಸಿ ಜಹಗೀರದಾರರ ಬಂಗಲೆಯಲ್ಲಿಳಿದಿರುವರು. ಇನ್ನು ಕೆಲವು ದಿವಸಗಳಿದ್ದು ಪ್ರಯಾಣ ಮಾಡುವರೆಂದು ಕೇಳುತ್ತೇವೆ

ಟರ್ಕಿ ರಿಪಬ್ಲಿಕ್ಕಿನ ಪ್ರೆಸಿಡೆಂಟರಾದ ಕೆಮಾಲ್ ಪಾಷಾರವರ ಕುಮಾರಿ ಜಹ್ರಾ ಐಲೀ ಎಂಬಾಕೆಯು ಇಂಗ್ಲೆಂಡಿನಲ್ಲಿ ವ್ಯಾಸಂಗಮಾಡುತ್ತಿದ್ದು ಸ್ವದೇಶಕ್ಕೆ ಹಿಂತಿರುಗುತ್ತಿದ್ದಾಗ ಎಲ್ಲಿಯೋ ರೈಲ್‌ಗಾಡಿಯ ಬಾಗಿಲಿನಿಂದ ಕೆಳಗೆಬಿದ್ದು ಗಾಯಪಟ್ಟು ಮೃತಳಾದಳೆಂದು ಕೇಳುತ್ತೇವೆ

ಶ್ರೀಮದ್ರಂಭಾಪುರಿ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಮುಕ್ಕಾಂ ಧಾರವಾಡ ಜಿಲ್ಲಾ ಹಾವೇರಿಪಟ್ಟಣದಲ್ಲಿಯೇ ಇರುತ್ತದೆ. ಪ್ರತಿ ದಿವಸವೂ ವಿದ್ವಜ್ಜನಗಳ ಧಾರ್ಮಿಕೋಪನ್ಯಾಸಗಳು ನಡೆಯುತ್ತಲಿವೆ. ಗುರುದ್ವೇಷಿಗಳ ಹೃದಯವು ಇನ್ನೂ ಮೌಢ್ಯಾವಸ್ಥೆಯಿಂದ ಬಿಡುಗಡೆಯಾಗಿಲ್ಲವು.

ನವೆಂಬರ್ ೨೫ ನೇ ತಾರೀಖಿನ ರಾತ್ರಿ, ಮಾಲ್ಗರ್ ಬಳಿಯಲ್ಲಿ ಮದುವೆಮಾಡಿಕೊಂಡು ಒಂದು ಗುಂಪು ಮುಂಬಯಿ ಕಡೆಗೆ ಕಾರಿನಲ್ಲಿ ಬರುತ್ತಿತ್ತು. ಬರುವ ಭರದಲ್ಲಿ ಕಾರು ಒಂದು ಮರಕ್ಕೆ ಢಿಕ್ಕಿಹೊಡೆಯಿತು. ಐವರು ಕೂತಿದ್ದವರಲ್ಲಿ ಒಬ್ಬನು ತತ್‌ಕ್ಷಣ ಪ್ರಾಣಬಿಟ್ಟನು. ಇನ್ನೊಬ್ಬನು ಕಾರಿನಿಂದ ಹಾರಿ ತೀವ್ರ ಗಾಯಗಳನ್ನು ಪಡೆದು ಅವನೂ ಪ್ರಾಣಬಿಟ್ಟನು. ಕಾರಿನೊಳಗಿದ್ದ ಇನ್ನು ಮೂವರು ಅಜ್ಜಿಬಜ್ಜಿಯಾದರು ಎಲ್ಲರೂ ಆಸ್ಪತ್ರೆಯಲ್ಲಿ ಸತ್ತರು. ವರನ ತಂದೆಯು ಇನ್ನೊಂದು ಕಾರಿನಲ್ಲಿ ಹಿಂದುಗಡೆ ಬರುತ್ತಿದ್ದನು. ಈ ಅನಾಹುತವನ್ನು ಕಂಡು ಎದೆಯೊಡೆದು ಅವನೂ ಸತ್ತನು.

ವೇದ, ಕಾವ್ಯ, ಸ್ಮೃತಿ, ತೀರ್ಥ, ಧರ್ಮಾಚಾರ್ಯ, ವಿದ್ಯಾನಿಧಿ, ವಿದ್ಯಾರತ್ನ ಮುಂತಾದ ಪ್ರಶಸ್ತಿಗಳಿಂದೊಡಗೂಡಿದ ವೇ|| ಬ್ರ|| ಚಿ|| ಮು|| ವೀರಭದ್ರಶಾಸ್ತ್ರಿಗಳವರು ಯಾದಗಿರಿಯಲ್ಲಿ ಸ್ಥಾಪಿತವಾಗಿರುವ ಸಂಸ್ಕೃತ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಅಧಿಕಾರವನ್ನು ಹೊಂದಿದರೆಂಬ ಸಮಾಚಾರವು ಅತ್ಯಂತ ಸಂತೋಷಜನಕವಾಗಿದೆ. ಸುಶೀಲರೂ ಸಿದ್ಧಾಂತಜ್ಞರೂ ಆದ ಇಂಥ ಅಸಾಧಾರಣ ವಿದ್ವಾಂಸರು ಲಭಿಸಿದ್ದುದು ಈ ಮಹಾಪಾಠಶಾಲೆಯ ಭಾಗ್ಯೋದಯವೇ ಸರಿ. ಇನ್ನು ಕಾಲೇಜ್ ಸ್ಥಾಪಕರ ಉದ್ದೇಶವು ಬೇಗನೆ ಫಲಿಸುವದೆಂಬುದರಲ್ಲಿ ಈ ವಿದ್ವಾಂಸರು ನೇಮಿಸಿರುವುದೇ ಬಲವಾದ ನಿದರ್ಶನವು

ಮುಸ್ಲಿಂ ಹಂತಕರನ್ನು ಹಿಡಿದುಕೊಟ್ಟವರಿಗೆ ೧೦೦ ರೂಪಾಯಿ ಬಹುಮಾನ.

ಕಳೆದ ತಿಂಗಳು ೨೬ ನೆಯ ತಾರೀಖು ಲಾಹೋರು ನಗರದ ಮುಸ್ಲಿಮರ ಕೇರಿಯಲ್ಲಿ ಬರುತ್ತಿದ್ದ ಸಿಕ್ಖನೊಬ್ಬನ ಮೇಲೆ ಇಬ್ಬರು ಮುಸ್ಲಿಮರು ಬಿದ್ದು, ಕಠಾರಿಯಿಂದ ಇರಿದು ಪ್ರಾಣಾಪಾಯಕರವಾದ ಘಾಯಗಳನ್ನು ಮಾಡಿದ್ದರಿಂದ ಕೋಮುವಾರು ಗಲಭೆಯಲ್ಲಿ ಉಂಟಾಗಿದ್ದ ಶಾಂತಿಯು ದೂರವಾಗುವ ಪರಿಸ್ಥಿತಿಯುಂಟಾಯಿತು. ಅಷ್ಟರಲ್ಲಿ ಪೋಲೀಸರು ಬಂದು ಗಲಭೆಗೆ ಅವಕಾಶವಾಗದಂತೆ ತಡೆದರು. ಗಾಯಗೊಂಡ ಸಿಕ್ಖನ ಸ್ಥಿತಿ ಅನುಮಾನಾಸ್ಪದವಾಗಿದೆ. ಹಂತಕರು ಸಿಕ್ಕಿರುವುದಿಲ್ಲ. ಅವರುಗಳನ್ನು ಹಿಡಿದುಕೊಟ್ಟವರಿಗೆ ೧೦೦ ರೂ. ಬಹುಮಾನ ಕೊಡುವುದಾಗಿ ಪೋಲೀಸರು ಪ್ರಕಟಿಸಿರುತ್ತಾರೆ

ಮೆದುಳಿಲ್ಲದ ಮಗು

ನ್ಯೂಯಾರ್ಕದಲ್ಲಿ ಮೆದುಳಿಲ್ಲದ ಒಂದು ವಿಚಿತ್ರ ಮಗುವು ಜನಿಸಿ, ೨೭ ದಿವಸಗಳವರೆಗೆ ಜೀವದಿಂದ ಇದ್ದು ಸತ್ತಿರುವದು. ಮನುಷ್ಯನ ಯಾವತ್ತು ಕಾರ್ಯಗಳು, ಅಂದರೆ ತಿನ್ನುವುದು, ಅಳುವುದು, ಚಲಿಸುವುದು, ನೋವನ್ನು ತಿಳಿಯುವುದು, ಮೆದುಳಿಲ್ಲದೆ ಆಗದು ಎಂದು ವೈದ್ಯಕೀಯ ಜನರ ಮಾತು. ಆದರೆ ಈ ವಿಚಿತ್ರ ಮಗುವು ಮೆದುಳಿಲ್ಲದೆ ಅಳುವುದು ಮಾತ್ರವಲ್ಲದೆ, ಆಹಾರವನ್ನು ಸ್ವೀಕರಿಸಿದೆ. ಕೈಕಾಲುಗಳನ್ನು ಅಲ್ಲಾಡಿಸಿದೆ. ಈ ಮಗುವನ್ನು ಪರೀಕ್ಷಿಸಿದ ವೈದ್ಯರು ಅದರ ತಲೆಯಲ್ಲಿ ಮಾತ್ರ ಒಂದು ದ್ರಾವಕವಿತ್ತೆಂದು ಹೇಳುತ್ತಿದ್ದಾರೆ. ಮೆದುಳಿಲ್ಲದೆ ಈ ಮಗುವು ನಾಲ್ಕಾರು ದಿವಸಗಳ ಮೇಲೆ ಈ ರೀತಿಯಲ್ಲಿ ಜೀವಿಸಿದುದರಲ್ಲಿ ಪ್ರಖ್ಯಾತ ವೈದ್ಯರು ದಿಗ್ಭ್ರಮೆಗೊಂಡಿರುತ್ತಾರೆ.

ಹಾವು ಆಡಿನ ಹಾಲು ಕುಡಿಯಿತು.

ಮಿರಜಿಯ ಹತ್ತಿರ ಇರುವ ಕವಠೆಎಂಬ ಹಳ್ಳಿಯಲ್ಲೊಬ್ಬ ರೈತನಲ್ಲೊಂದು ಆಡು ಇದೆ. ಪ್ರತಿದಿನ ಬೆಳಿಗ್ಗೆ ಅದರ ಹಾಲನ್ನು ಹಿಂಡುವಾಗ ಹಾಲೇ ಇರುತ್ತಿರಲಿಲ್ಲ. ಹೀಗೇಕೆಂಬುದು ಇವನಿಗೆ ತಿಳಿಯದಾಯಿತು. ಅವನಿಗೆ ಸಂಶಯ ಬಂದಿತು. ರಾತ್ರಿ ಆಡಿನ ಹಾಲನ್ನು ಯಾರು ಕುಡಿಯುತ್ತಾರೆ ನೋಡಬೇಕೆಂದು ಕಾವಲು ಕಾದನು. ಒಂದುದಿನ ರಾತ್ರಿ ನಿತ್ಯದಂತೆ ಆಡನ್ನು ಕಟ್ಟಿಹಾಕಿ ರಾತ್ರಿಯೆಲ್ಲಾ ಕಾವಲಿದ್ದನು. ಮಧ್ಯರಾತ್ರಿಯಾದಮೇಲೆ ಒಂದು ನಾಗರಹಾವು ಬಂದು ಆಡಿನಕಾಲಿಗೆ ತನ್ನ ಬಾಲದಿಂದ ಕೊಡಕುಹಾಕಿ ಅದನ್ನು ಕೆಡವಿತು. ಆಮೇಲೆ ಆಡಿನಮೊಲೆಯ ಹಾಲನ್ನು ಕುಡಿಯತೊಡಗಿತು. ಆಗ ಆಡು ಅರಚಿತು. ಹತ್ತಿರ ಕಾವಲಿದ್ದವರು ಬಂದು ಹಾವನ್ನು ಹೊಡೆದು ಕೊಂದರು. ಇದನ್ನು ನೋಡಿ ಎಲ್ಲರೂ ಚಕಿತರಾದರು.

ಯುವತಿಯ ವಿಚಿತ್ರಬದಲಾವಣೆ.

ಹಂಗೇರಿಯಲ್ಲಿ ೧೭ ವರ್ಷದ ಹುಡುಗಿಯೊಬ್ಬಳು ೪೦ ವರ್ಷದ ಸ್ಪೇನ್ ಸ್ತ್ರೀಯಾಗಿ ಬದಲಾವಣೆ ಹೊಂದಿದಳು. ಈ ಬದಲಾವಣೆಯ ವಿಷಯದಲ್ಲಿ ಹಂಗೇರಿಯದ ಪತ್ರಿಕೆಗಳು ತಿಳಿಸುವುದೇನೆಂದರೆ 'ಹುಡುಗಿಯು ಮೊನ್ನೆ ನರಗಳ ಸಂಬಂಧದ ರೋಗದಿಂದ ಪ್ರಜ್ಞೆ ತಪ್ಪಿದ್ದಳು. ಚೇತರಿಸಿಕೊಂಡನಂತರ ತನ್ನ ಮಾತೃಭಾಷೆಯನ್ನು ಮರೆತವಳಾಗಿ ಸ್ಪೇನಿಷ್ ಭಾಷೆಯನ್ನು ಮಾತನಾಡಲಾರಂಭಿಸಿದಳು ಮತ್ತು ತಾನು ಓರ್ವ ಸ್ಪೇನಿಷ್ ಹೆಂಗಸೆಂದೂ, ತನಗೆ ಹತ್ತುಮಕ್ಕಳಿವೆ. ಸ್ಪೇನಿನ ಮೆಡ್ರಿಡ್ ತನ್ನ ವಾಸ್ತವ್ಯದೇಶವೆಂದು ತಿಳಿಸಿದಳು. ಮೆಡ್ರಿಡನ್ನು ಇಷ್ಟರವರೆಗೆ ನೋಡದ ಈ ಹುಡುಗಿಯು ಅದನ್ನು ಸರಿಯಾಗಿ ವರ್ಣಿಸಿದಳು. ನಮ್ಮ ಪ್ರತಿನಿಧಿಗಳ ಇಚ್ಛೆಯಮೇರೆಗೆ ಸ್ಪೇನಿಷ್‌ಭಾಷೆಯಲ್ಲಿ ಕೆಲವು ವಾಕ್ಯಗಳನ್ನು ಬರೆದಳು.' ಆಧ್ಯಾತ್ಮಿಕರು ಇದು ಒಂದು ವಿಚಿತ್ರತರದ ಆತ್ಮಬದಲಾವಣೆ ಅಥವಾ ಪೂರ್ವಜನ್ಮ ಸ್ಮರಣವೆಂದು ಹೇಳುತ್ತಾರೆ.

ಸ್ವೀಕಾರ

ಶಿವಮೊಗ್ಗ ಡಿ|| ನ್ಯಾಮತಿ ಗ್ರಾಮವಾಸಿಗಳಾದ ಮ|| ರಾ|| ಸೋಗೆ ಸಿದ್ಧವೀರಪ್ಪನವರು ಶಿವಾಧೀನರಾದ ಸಮಯದಲ್ಲಿ ಮೃತರ ಆತ್ಮಶಾಂತಿಗಾಗಿ ಇವರ ಪುತ್ರ ಮ|| ರಾ|| ಲೋಕೇಶ್ವರಪ್ಪನವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಕೀರ್ತನಕೇಸರಿ ಶ್ರೀ|| ಗುಬ್ಬಿ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ತಾಂಡೂರು ನಿವಾಸಿ ಹೆರೂರು ಶಂಕರಣ್ಣನವರ ಅಂತ್ಯೇಷ್ಟಿ ಸಂಸ್ಕಾರಸಮಯದಲ್ಲಿ ಮುಗುಳನಾಗಾವಿ ಮಳೆಮಠದೇವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಯು ತಾಂಡೂರು ವೇದಪಾಠಶಾಲಾಧ್ಯಾಪಕರ ವೇ|| ಚಂದ್ರಶೇಖರ ಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೩ನೇ ಪುಟದಿಂದ ಮುಂದುವರಿದುದು]

ಸ್ವಭಾವತಃ|| ಉತ್ಕರ್ಷೋ [illegible]ಯಯಾ ವರ್ಣೇ ಸಂಭವಂತಿ ಮಹೇಶ್ವರಿ ಏವಮೇವ [illegible] ಸ್ವಂಮೇ ಪ್ರೋಕ್ತಂ ತ್ವಮಪೇ[illegible]||

ಉತ್ತರ— ಸ್ವಭಾವಾದೇವ [illegible] ಬ್ರಾಹ್ಮಣಾದಯಃ | ಏಕಜಾತ್ಯೈ ಸಮುತ್ಪನ್ನ ಮನ್ಯವರ್ಣತ್ವಮಾಗತಂ| [illegible] ಪುನರ್ಜನ್ಮನಿ ಜಾಯತೇ (ಅನುಶಾಸನಪರ್ವ [illegible] ಅಧ್ಯಾಯ [illegible])

ಪ್ರಶ್ನೆಗೆ ಉತ್ತರ [illegible] ಉತ್ತರವು—ಬ್ರಾಹ್ಮಣಾದಿ [illegible] ವತಃ ಉಂಟಾಗುತ್ತವೆ [illegible] ತನ್ನ ವರ್ಣಕ್ಕೆ [illegible] ಲಾದದು, ಆ ಜನ್ಮ (ಎರಡನೆಯ) ವರ್ಣ [illegible] ಈ ಜನ್ಮದ [illegible] ದಲ್ಲಿ ಉಂಟಾಗುವುದ [illegible]

ಸಕಲಜಗತ್ತಿನ [illegible] ಜನ್ಮಸಿದ್ಧ[illegible] ಪುನರ್ಜನ್ಮದ [illegible] ಅಭಿಪ್ರಾಯವ [illegible] ಇವಲ್ಲದೆ [illegible]

ವರ್ಣ ಸಂಕರ [illegible] ಬೇಕು [illegible] ನಮಗಿರುವ [illegible]

[illegible] ಅಭಿಪ್ರಾಯಕ್ಕೆ ಸರಿಯಾದ [illegible] ದ್ದರೂ [illegible] ರತದ ವರ್ಣವ್ಯವಸ್ಥೆ[illegible]—

ವರ್ಣೋತ್ಕರ್ಷಮವಾಪ್ನೋ[illegible] ಕರ್ಮಣಾ [illegible] ಪುನರ್ಜನ್ಮ[illegible] ಕ್ರಿಯಾಹೀನಃ [illegible] ಎಂಬ ಶ್ಲೋಕಗಳನ್ನು [illegible] ಸದಾಚಾರಸಂಪನ್ನನೂ [illegible] ದರೆ ಆತನು ಬ್ರಾಹ್ಮಣ[illegible] ಬ್ರಾಹ್ಮಣನು ಆಚಾರಹೀನ[illegible] ಶೂದ್ರನಿಗಿಂತ ಕಡೆ[illegible] ಅನ್ಯಾಯವೆನೋಡಿ! ಇಲ್ಲಿ [illegible] ಹೀಗಿರದೆ ಇದ್ದಿದ್ದರೆ [illegible] ಗ್ರಂಥದಲ್ಲಿ ಒಂದು [illegible]—

ಏಕಜಾತ್ಯಾ [illegible] ತಚ್ಚ ಕರ್ಮವಿಶೇಷೇಣ [illegible]|

(ಒಂದು ಜನ್ಮದಲ್ಲಿ ತನ್ನ [illegible] ಎರಡನೆಯ ವರ್ಣವ[illegible] ಸಾಧ್ಯವಿಲ್ಲ, ಎರಡನೆಯ [illegible] ದಕ್ಕೆ ಆತನಿಗೆ ಪುನರ್ಜನ್ಮ[illegible] ಪ್ರಾಯವುಳ್ಳ ಶ್ಲೋಕವನ್ನ [illegible] ಅದಕ್ಕೆ ವಿರೋಧವಾದ [illegible] ಯುಕ್ತಿಸಂಗತವಾಗುವುದಿಲ್ಲವಷ್ಟೆ! [illegible] ರಣವಿರೋಧವು ನಮ್ಮಂತಹ [illegible] ಯುವುದೆಂದಮೇಲೆ ಮತಿ[illegible] ತಿಳಿಯದುಂಟೆ? ತಿಳಿದಿದ್ದರೆ "ಶೂದ್ರೋ[illegible] ಶೀಲಸಂ[illegible]

ಪನ್ನೋ ಮುಂತಾಗಿ ಮತ್ತೇಕೆ ಹೇಳಿದನೆಂದು [illegible] ದ್ಧಿವಂತರು ಕೇಳಬಹುದು! ಹೀಗೆ ಕೇಳತಕ್ಕವ[illegible] ನಿತಾಂತವೂಢತ್ವವರಿಗೂ ಅವಶ್ಯವಾಗಿ ಬುದ್ಧಿ [illegible] ವಿವೃಜ್ಞನಿಯಾದ ವ್ಯಾಸಮಹರ್ಷಿಗೆ [illegible] ಆತನು ಒಂದೆಡೆಯಲ್ಲಿ [illegible] ರೂಪವಾಗಿ 'ಏಕ ಜಾತ್ಯ[illegible] ಮುಂತಾಗಿ ನುಡಿಸಿರುವ [illegible] ಶೀಲಸಂಪನ್ನೋ" ಮುಂತಾದ ಅರ್ಥವಾದ (ವಿಷಯಪ್ರಶಂಸಾ) ಸ್ಥಲ ವನ್ನು ಪುನರ್ಜನ್ಮನಿ ಎಂದು ಬರೆಯುವುದು

[illegible] ವಿಟ್ಟಿರುವನೆಂಬುದು ಚನ್ನಾಗಿ [illegible] ಇಲ್ಲಿ ವಿಧಿವಚನವೆಂಬುದೇ ಮುಖ್ಯ [illegible] ಕೇವಲ ವಸ್ತುವಿನ ಪ್ರಶಂ[illegible] ತಿಪಾದಿಸುವುದೆಂತಲೇ ತಿಳಿದು [illegible] ಅರ್ಥವಾದಕ್ಕಾಗಿ ಉದಾಹ[illegible] 'ಮಮ ಭಕ್ತೋ ಮಹೇ[illegible] (ಶಿವಲಿಂಗವನ್ನು ಧರಿಸಿರುವಾತನು ಯಾವಾ[illegible])

[illegible] ಯತಿ [illegible]

[illegible] ಸದಾಚಾರಿಯೇ [illegible] ಚಿತ್ರವನ್ನು [illegible] ಪೂಜ್ಯನಾ[illegible] ಭಕ್ತಿ, ಲಿಂಗಧಾರಣ, [illegible] ಕೇವಲ ಪ್ರಶಂಸೆಗಾಗಿ [illegible] ಕ್ರಿಯೆಯು [illegible] (ಸತ್ಯವೆ) ಎನ್ನು [illegible] ಇಂತಹ [illegible]— [illegible] ಭಾವಿಸುವುದಾದರೆ [illegible] ಶಿವನಾಗಬೇ[illegible] ಜನನ ಮರಣ, [illegible] ಬರುವ [illegible] ಪ್ರದು [illegible] ಬಡಿಗೆಯನ್ನು [illegible] ಶೈವ್ಯಾಲಯಗಳು, [illegible] ಪೂಜ್ಯ [illegible] ಪ್ರದಂತೂ ಸೂರ್ಯನು [illegible] ವಿಲ್ಲವೆಂಬುದು [illegible]

[illegible] ವರ್ಣೋತ್ಕರ್ಷಮವಾಪ್ನೋತಿ" [illegible] ಕೇವಲ ಅರ್ಥವಾದ [illegible] ತಿಳಿದುಕೊಂಡು ಆ [illegible] ವಿರೋಧವಾಗ [illegible] ಬುದ್ಧಿವಂತರಾದ [illegible] ವಿರೋಧವು

ಪರಿಹಾರವಾಗದಂತೆ ಅರ್ಥಮಾಡಿಕೊಳ್ಳುವುದು [illegible] ರ್ಖತನವೆಂತ ಹೇಳದೆ ಇನ್ನೇನು ಹೇಳೋಣ? ಮ[illegible] ಭಾರತದೊಳಗಿನ "ವರ್ಣೋತ್ಕರ್ಷಮವಾಪ್ನೋ[illegible] ಮುಂತಾದ ಅರ್ಥವಾದ (ವಸ್ತುಪ್ರಶಂಸಾ) ಪರ[illegible] ಲಾದ ವಾಕ್ಯಗಳಿಂದ—ಮನುಷ್ಯನು ಸದಾಚಾರಿ[illegible] ಆಗಬೇಕು. ನಾನು ಬ್ರಾಹ್ಮಣನು ಅಗ್ರವರ್ಣದವ[illegible] ಎಂಬ ಹೆಮ್ಮೆಯಿಂದ ದುರಾಚಾರಿಯಾಗಬಾರದ[illegible] ನಾನು ಶೂದ್ರನು ಕೊನೆಯ ವರ್ಣದವನೆಂಬ ನಿ[illegible] ಭಾವನೆಯಿಂದ ಸದಾಚಾರ ಸದ್ಗುಣಗಳನ್ನು ಬಿಡ[illegible] ರದೆಂದು ಉಪದೇಶರೂಪವಾಗಿ ಆಚಾರವಿಷಯ[illegible] ಬ್ರಾಹ್ಮಣಾದಿ ಸಕಲ ವರ್ಣದವರಿಗೂ ಸ್ವಲ್ಪ ಎ[illegible] ರಿಕೆಕೊಡೋಣ! ಅವರೆಲ್ಲರನ್ನೂ ಸುಧಾರಿಸೋ[illegible] ಎಂಬುದೇ ವ್ಯಾಸಮಹರ್ಷಿಗಳ ಉದ್ದೇಶವಾಗಿದ್ದ[illegible] ಹೊರತು ಮತ್ತೇನೂ ಬೇರೆಯಾಗಿ ಕಂಡುಬರ[illegible] ದಿಲ್ಲ. ಇದೂ ಅಲ್ಲದೆ ಮಹಾಭಾರತವೇ ಆಗಲಿ [illegible] ತರ್ಗತವಾದ ಕೃಷ್ಣಗೀತೆಯೇ ಆಗಲಿ ಸಾಕ್ಷಾ[illegible] ಧರ್ಮಶಾಸ್ತ್ರಗಳಂತೂ ಅಲ್ಲವೇ ಅಲ್ಲ. ಅವುಗ[illegible] ಕೇವಲ ಪ್ರಾಚೀನ ಧರ್ಮಶಾಸ್ತ್ರಗಳ ಮಾತುಗಳ[illegible] ವ್ಯಾಸಮಹರ್ಷಿಗಳು ಪ್ರಮಾಣಕ್ಕಾಗಿ ತೆಗೆದುಕೊ[illegible] ರುವುದು ಮಾತ್ರ ಕಂಡುಬರುವುದು. ಇದೋ ನೋ[illegible] ಮಹಾಭಾರತದ ಎಷ್ಟೋ ಕಡೆಗೆ ವ್ಯಾಸಮಹ[illegible] ಗಳೇ "ಇತಿ ಶಾಸ್ತ್ರನಿದರ್ಶನಂ" ಮುಂತಾಗಿ [illegible] ದ್ದಾರೆ. ಹಾಗೆ ಒಂದು ವೇಳೆ ಮಹಾಭಾರತವ[illegible] ಧರ್ಮಶಾಸ್ತ್ರವೆಂತಲೇ ಹೇಳಿಕೊಂಡರೆ ಅದರಲ್ಲಿ ಕ[illegible] ಒರುವ ಪ್ರತಿಯೊಂದು ನಡೆಯನ್ನೂ ಮಾನವರು [illegible] ರಿಸಬೇಕಾಗುವದು. ಉದಾಹರಣೆಗಾಗಿ—ಮಹಾ[illegible] ರತದಲ್ಲಿ ದ್ರೌಪದಿಗೆ ಐದು ಮಂದಿ ಗಂಡರು ಕ[illegible] ಬರುವರು, ಮಹಾಭಾರತದ ಪ್ರತಿಯೊಂದು ಮಾ[illegible] ಆಚರಿಸಲು ಯೋಗ್ಯವಾಗಿದೆ ಎಂದು ತಿಳಿದುಕೊಂ[illegible] ಈ ಮೇಲಿನ ಉದಾಹರಣೆಯೂ ಜಗತ್ತಿನಲ್ಲಿ ಪ್ರ[illegible] ವಾಗಬೇಕಾಗುವದು. ಹಾಗೆ ಇದ ವರೆಗೆ ಪ್ರಚ[illegible] ಗಿಯೂ ಇಲ್ಲ, ಆಗುವಂತೆಯೂ ಇಲ್ಲ. ಆದುದ[illegible] ದಲೇ ಪೂರ್ವದವರು ವೇದಾಗಮಗಳನ್ನೂ, ಮ[illegible] ಯಾಜ್ಞವಲ್ಕ್ಯಾದಿ ಸ್ಮೃತಿಗಳನ್ನೂ ನಿದರ್ಶನವ[illegible] ಟ್ಟುಕೊಂಡು ನಡೆದಿರುವರು. ನಮ್ಮ ಹಿರಿಯ[illegible] ಮಹಾಭಾರತವನ್ನು 'ಭಾರತಃ ಪಂಚಮೋ ವೇದ[illegible] "ವೇದತುಲ್ಯೋ ಮಹಾಭಾರತೇ" ಮುಂತಾಗಿ [illegible] ಸಿರುವುದು. ಇದು ಸಕಲ ಲೋಕಾದರ್ಶರೂಪವ[illegible] ಐತಿಹಾಸಿಕ ಮಹಾಗ್ರಂಥವೆಂಬುದರಿಂದಲೇ ಹೊ[illegible] ಇದೊಂದು ಧರ್ಮಶಾಸ್ತ್ರವೇ ಎಂಬುದರಿಂದ ಅಲ್ಲ. [illegible] ಧರ್ಮಶಾಸ್ತ್ರವಲ್ಲವೆಂದ ಮೇಲೆ ಅಪ್ರಮಾಣಗ್ರಂಥ[illegible] ಎಂದು ಶಂಕೆಯುಂಟಾಗಬಹುದು, ಹಾಗಲ್ಲ. ಪೂರ್[illegible] ಪರವಿರೋಧವಾಗದಂತೆ ಅರ್ಥಮಾಡಿಕೊಳ್ಳಲು [illegible] ರ್ಥರಾದವರಿಗೆ ಈ ಮಹಾಭಾರತವಷ್ಟೇ ಅಲ್ಲ, [illegible] ರಂತೆ ಇನ್ನೂ ಅನೇಕಗ್ರಂಥಗಳೂ ಪ್ರಮಾಣ[illegible] ಗಳಾಗಿಯೇ ಇವೆ, ಎಂಬುದನ್ನು ಸರ್ವರೂ ತಿ[illegible] ಬೇಕು. (ಸಶೇಷ)

ಸೌಕರ್ಯದ ಯಾತ್ರೆಗಳು! ಚಾರ್ಜು ಬಹಳೇ ಸುಲಭ!! ಪ್ರಸಿದ್ಧ ಪುಣ್ಯಕ್ಷೇತ್ರಗಳು[illegible]

ಉತ್ತರ ಮತ್ತು ದಕ್ಷಿಣ ಹಿಂದೂಸ್ಥಾನ ಮಹಾಯಾತ್ರೆ.

[illegible] ಶ್ರೀಕಾಶೀ ರಾಮೇಶ್ವರ ಮಹಾಯಾತ್ರೆಯು [illegible]

ತಾ|| [illegible] ರಿಂದ ತಾ|| [illegible] ರ ವರೆಗೆ.

ಪ್ರಸಿದ್ಧ ೫೨ ಕ್ಷೇತ್ರಗಳು.

[illegible] ಸ್ಥಳ ಸಿಗುವದು. ಸೆಕೆಂಡ್ ಕ್ಲಾಸ್ ೩೦೦ ರೂ. ಥರ್ಡ್ ಕ್ಲಾಸ್ [illegible]

[illegible] ಪತ್ರಬರೆಯಬೇಕು.

[illegible] ಕೂಡಿಸಿಕೊಟ್ಟವರನ್ನು ಪುಕಟ್ ಯಾತ್ರೆಗೆ ಕರೆದುಕೊಂಡೂ ಹೋಗುವ[illegible]

[illegible] ಸಿಗುವದು. ಪತ್ರ ಬರೆಯಬೇಕು ಅಥವಾ ಸಮಕ್ಷಮ ಭೆಟ್ಟಿಯಾಗಬೇಕು[illegible]

[illegible] } (೧) ಶಿವಾನಂದ ಯಾತ್ರಾ ಕಂ[illegible]

ಬಚ್ಚಲ್ಲೆ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಪಂಚಪೀಠಗಳಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಜ್ಞಾಪಕವನ್ನನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೊರಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ನಿವಾರಿಸುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ಕರಿಸಿಕೊಂಡು ಅದರಲ್ಲಿ ಹೇಳಿದಂತೆ ವಿವರವನ್ನೆಲ್ಲಾ ಬರೆದು ಪರಂಪರೆಯಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಒಳ್ಳೆ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಪೀಠಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಈ ಕಾರ್ಯಾಲಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦———
ಪೂರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಳಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ರೌಪ್ಯವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೨೦—೦—೦
ರೌಪ್ಯಭಸ್ಮ	೧	೬—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಳಿಭಸ್ಮ	೧	೦—೮—೦
ಕಾಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುತ್ತಿನಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಶೃಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೬
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್— ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ ಗುಗ್ಗುಲಾದಿ ಔಷಧಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರವಾಗಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಲಿ, ಶಿವಾಷ್ಟೋತ್ತರಶತನಾಮಾವಲಿ, ಶಿವಕವಚ ಪಾರ್ವತೀದೇವಿನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವಿನಾಮಾವಳಿ, ಷಣ್ಮುಖಸ್ವಾಮಿನಾಮಾವಲಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವೋಪಯುಕ್ತವಾಗಿ ಸತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಪ್ರವರ್ತಿಸುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಕಾಶಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಆ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿರುವರು. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮ ಸ್ವಾಮಿಯವರಾದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರವರಿಗೆ ಆಶ್ರಯನ್ನಿತ್ತಿರುವದಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೭೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಬುದ್ಧಿವಿಕಸನೆಗೆ ಪ್ರವೃತ್ತಿಯನ್ನಿಡುವ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ **ಬೆಲೆ ೪ ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಹಿಂಭಕ್ತು ಅವ್ಯಕ್ತಲಿಂಗಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸಾನಂದ ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶರಾದ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯನಿ ಸಿಂಹಾಸನಾಧೀಶರಾದ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನಿ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೆ [illegible] ಪೀಠದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಶ್ರೀಶೈಲ ಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥ ಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಿಪಾಕ ಕ್ಷೇತ್ರದಲ್ಲಿ ನೆರವೇರಿದ ಉಜ್ಜಯನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯನ್ನು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಿಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ನೆಗಡಿ, ಒಣ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ

ಉಂಟಾಗತಕ್ಕ ಸರ್ವವ್ಯಾಧಿಗಳು ಒಂದೇ ಮಂತ್ರದ ಹಾಗೆ ದಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ [illegible] ಲ್ಪಟ್ಟ ಆ ವ್ಯಾಧಿಗಳನ್ನು ನಷ್ಟಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ ಮಾರುಬಿಟ್ಟ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವು ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಕ್ಕೆ ಸದಾ ಉಪಯೋಗಿಸುತ್ತಾ ಆದರಿಸೀ ಪ್ರಗಸಟ್ಟಿ ಕಳುಹಿಸಲಾಗಿದೆ.

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦ ವಿ. ಪಿ. ೦-೪-[illegible]
ಡಜನ್ ಒಂದಕ್ಕೆ ಕ್ರಯ ರೂ ೩-೮-೦ ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಯುವಂತೆ ಬರಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[೧೧] ಪೋ. ನಂ ೫೧೦ ಮದರಾಸ್.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಮಾಲೆ	೩ ಪೈ
ಮಹಾಲಿಂಗಭ್ರೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಪಂಚಾಚಾರ್ಯಸ್ತೋತ್ರ [illegible] (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಸುಪ್ರಭಾತಸ್ತೋತ್ರಗಳು (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಒಸವಾದಿ ಸ್ವತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾವ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ವರೂಪಸ್ತವನದೀಪಿಕೆ	೨ ಆಣೆ
ಶ್ರೀ ರುದ್ರಮುನಿ ಶಿವಾಚಾರ್ಯಶತಕ	೨ ಆಣೆ
ವೀರಶೈವಮತಪ್ರಾಮಾಣ್ಯ ..	೩ ಆಣೆ
ವೀರಶೈವಾಚಾರ (೭ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೮ ಆಣೆ
ವೀರಶೈವಾಶ್ರಮ ಧರ್ಮ ತತ್ತ್ವನಿರೂಪಣ (೨ನೆಯ ಆವೃತ್ತಿ)	೪ ಆಣೆ
ವೈದಿಕಸಾಧ್ವ ರಹಸ್ಯ ...	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣಮು (ತೆಲುಗು)	೮ ಆಣೆ
पण्डित श्रीकाशीनाथशास्त्री याचे भाषण (मराठी)	८ आणे
Speeches by Pandit Shri Kashinatha Shastri (*English*)	12 As
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತ ಅತ್ಯಂತ ಸುಂದರಮುದ್ರಣ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ..	೧೨ ಆಣೆ
ಶಿವಾಸೂತ್ರ ಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ..	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ವೀರಶೈವಸಿದ್ಧಾಂತಸುಧಾಕರ ...	೨ ರೂ
ಶಿವಾದ್ವೈತಮಂಜರಿ (ತನ್ನ ವ್ಯಾಖ್ಯಾನ ೧೩೩ ಪುಟ) ..	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य संस्कृत) ...	१ रु.
वीरशैवेन्दुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

REGISTERED No M 2266 ‖ ಶ್ರೀ ಜಗದ್ಗುರು ಪಂಚಾಚಾರ್ಯರ್ ಪ್ರಸೀದಂತು ‖ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ‖
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ವಾಲಿತ್ಯದೀಲೋಕಯಂ ‖

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ ಪರಸ್ಥಳದವರಿಗೆ ೩ ರೂ ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಡಿಸೆಂಬರ್ ೧೯೩೫ [ಸಂಚಿಕೆ ೩೧

ಶ್ರೀ ಜಗದ್ಗುರು ಪಂಚಾಚಾರ್ಯಾ ಪ್ರಸೀದಂತು

ಶ್ರೀ ಗುರುಬಸವರಾಜನ ಕಾರ್ತಿಕ ಮಹೋತ್ಸವ ಕೊಟ್ಟೂರು

ಬಳ್ಳಾರಿ ಡಿಸ್ಟ್ರಿಕ್ಟ ಕೊಟ್ಟೂರು ಪಟ್ಟಣದಲ್ಲಿ ಆಗಾಧ ಮಹಿಮಾಶೀಲನಾದ ಶ್ರೀ ಕೊಟ್ಟೂರೇಶನ ಕಾರ್ತಿಕ ಮಹೋತ್ಸವವು ಇದೇ ಮಾರ್ಗಶಿರ ಶು॥೧ಳ ಸೋಮವಾರ ತಾ॥ ೨-12-35 ನೇ ದಿವಸ ಸದ್ಧತಿ ಮೇರೆಗೆ ಬಹು ವಿಜೃಂಭಣೆಯಿಂದ ನಡೆಯುತ್ತದೆ ಇಲ್ಲಿ ಹವೆಯು ಆರೋಗ್ಯಕರವಾಗಿರುತ್ತದೆ ಯಾತ್ರಿಕರಿಗೆ ಯಾವ ತೊಂದರೆಯೂ ಇರುವದಿಲ್ಲ ಈ ಮಹೋತ್ಸವಕ್ಕಾಗಿ ಬರುವ ಮಹಾಶಯರಿಗೆ ಗುರುಬಸವರಾಜನ ಉತ್ಸವದರ್ಶನವಲ್ಲದೆ ಈ ಗ್ರಾಮದ ಗಣೇಶನ ದೇವಸ್ಥಾನದಲ್ಲಿ ಆಶ್ವೀಜ ಶುದ್ಧ ಪ್ರತಿಪದೆಯು ಲಾಗಾಯಿತು ಹಾರ್ಮೋನಿಯಂ, ಪಿಟೀಲು ತಬಲಾ ಇತ್ಯಾದಿಗಳಿಂದ ಕೂಡಿ ಶ್ರಿ ( ) ಲಸಗೋಡು ವೇ॥ಷ॥ಬ್ರ॥ ಶ್ರೀ ಪೂಜ್ಯಪಾದರಾದ ಪಟ್ಟಾಧ್ಯಕ್ಷ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹಾತ್ಮನ ಪುರಾಣಪ್ರವಚನವನ್ನು ಸರಸವಾಗಿ ಸರ್ವ ಆಬಾಲವೃದ್ಧರಿಗೂ ಪಂಡಿತಪಾಮರರಿಗೂ ಉತ್ಸಾಹಾನಂದಕರವಾಗುವಂತೆ ಬೋಧಿಸುತ್ತಿರುವುದರಿಂದ ಮತ್ತು ಆಗಾಗ್ಯೆ ಆಗಮಿಸುತ್ತಿರುವ ವೇ॥ಪಂ॥ ವಿಶ್ವನಾಥ ಶಾಸ್ತ್ರಿಗಳು ವೇ॥ಪಂ॥ ಮರುಳಸಿದ್ಧಶಾಸ್ತ್ರಿಗಳು ಉಪನ್ಯಾಸಮಾಡುತ್ತಿರುವದರಿಂದ ಆ ಮಹಾನುಭಾವನ ಅಸದೃಶ ಮಹತ್ವದ ಶ್ರವಣದ ಫಲವೂ ಸಹ ಲಭಿಸುವದು ಆದಕಾರಣ ಫಲಾಪೇಕ್ಷಿಗಳಾದ ಸದ್ಭಕ್ತರು ಸಕಾಲಿಕ ಸರಿಯಾಗಿ ಆಗಮಿಸತಕ್ಕದ್ದು

ವೇ॥ ಪಿ ಯಂ ಮರುಳಶಿವಯ್ಯ ಕೊಟ್ಟೂರು

ದೀಕ್ಷಾ ಸಂಸ್ಕಾರ, ಸಿಂದಖೇಡ

ವೀರಶೈವ ಧರ್ಮದಲ್ಲಿ ಮುಖ್ಯಸಂಸ್ಕಾರವಾದ ದೀಕ್ಷಾಸಂಸ್ಕಾರವು ದಕ್ಷಿಣಮಹಾರಾಷ್ಟ್ರಭಾಗದಲ್ಲಿ ಒಳ್ಳೇ ವೈಭವದಿಂದಲೂ, ಆನಂದದಿಂದಲೂ, ಜೋರಿನಿಂದಲೂ ಸಾಗಿರುವದನ್ನು ಕಂಡು ಕೇಳಿ ಯಾವ ನಿಜವಾದ ವೀರಶೈವನಿಗೆ ಆನಂದವಾಗಲಿಕ್ಕಿಲ್ಲ? ದೀಕ್ಷಾಸಂಸ್ಕಾರವಿಧಿಯನ್ನು ಮುಂದರಿಸಲು ಬದ್ಧಕಂಕಣರಾದ ಶ್ರೀ॥ ಷ॥ ಬ್ರ॥ ಚೆನ್ನವೀರಶಿವಾಚಾರ್ಯರು ಬೃಹನ್ಮಠ ಹೋಟಗಿ, ಇವರನ್ನು ಶ್ರೀ ಫಕೀರಸ್ವಾಮಿಗಳು ಕರೆದುಕೊಂಡು ಹೋಗಿ ೨ ದಿವಸಗಳವರೆಗೆ ವೀರಶೈವ ಧರ್ಮಸುಧಾರಣೆಯ ಬಗ್ಗೆ ಅನೇಕಾನೇಕ ವಿಷಯಗಳಿಂದ ಕೂಡಿದ ವ್ಯಾಖ್ಯಾನಗಳನ್ನು ಮಾಡಿಸಿದರು ಈ ವ್ಯಾಖ್ಯಾನವನ್ನು ಕೇಳಿ ಸಿಂದಖೇಡ ಗ್ರಾಮವಾಸಿಗಳೆಲ್ಲರೂ ಶಿವದೀಕ್ಷೆಗೆ ಒಪ್ಪಿ ತಾರೀಖು 25-11-35 ಕ್ಕೆ ಕಲ್ಲೂರು ಪಟ್ಟಾಧ್ಯಕ್ಷರ ಗುರುತ್ವದಲ್ಲಿಯೂ, ರುದ್ರಸ್ವಾಮಿಗಳ ಗುರುತ್ವದಲ್ಲಿಯೂ, ಹೋಟಗೀ ಶ್ರೀಗಳ ವೈದಿಕತ್ವದಲ್ಲಿಯೂ, ಸಶಾಸ್ತ್ರ ಶಿವಾಸಹಿತ ೧೨೨ ಜನರು ಶಿವದೀಕ್ಷಾಸಂಸ್ಕಾರವನ್ನು ಹೊಂದಿ ಪುನೀತರಾದರು ಈ ಕಾರ್ಯಕ್ಕೆ ಶ್ರೀ ಫಕೀರಸ್ವಾಮಿಗಳು, ಸೀಲಕಂಠಪ್ಪ ಮೊಕಾಸೆ, ಚನ್ನಪ್ಪ ಮೊಕಾಸ, ಬಾಬೂರಾವ ಮೊಕಾಸೆ, ಅಣ್ಣಾರಾವ, ಇಬ್ಬರು ವೃದ್ಧ ಮುತ್ತಂದಿರು, ಲಿಂಗಪ್ಪ ಮಾಸ್ತರ ಮೊಕಾಸ, ಶ್ರೀ ರುದ್ರಸ್ವಾಮಿ ಇತ್ಯಾದಿ ಜನರು ಬಹಳ ಪ್ರಯತ್ನಪಟ್ಟು ನಡೆಸಿದರು ಅವರಲ್ಲಿ ಶ್ರೀ ರುದ್ರಸ್ವಾಮಿ, ಲಿಂಗಪ್ಪ ಮಾಸ್ತರ ಇವರಿಬ್ಬರು ಸತತ 18 ತಾಸು (೨ದಿವಸ) ಅನ್ನ ನೀರು ನಿದ್ರಾದಿಗಳನ್ನು ತೊರೆದು ಪ್ರಯತ್ನಪಟ್ಟಿರುವದರಿಂದ ಇದರ ಸರ್ವ ಶ್ರೇಯಸ್ಸು ಇವರೀರ್ವರಿಗೇ ಸೇರತಕ್ಕದ್ದು ಎಂದು ಹೇಳಲಿಕ್ಕೆ ಯಾವ ಆಭ್ಯಂತರವೂ ಇಲ್ಲ ಅರ್ಥ ಸ್ವರೂಪದ ಸೋಲಾಪೂರ ಶ್ರೀಯುತ ರೇವಣಸಿದ್ಧಪ್ಪ ಹಿರೇಹಬ್ಬು ಇವರು ವಿಶೇಷಸಹಾಯವನ್ನು ಮಾಡಿರುತ್ತಾರೆ ಈ ಮಹನೀಯರಿಗೆ ಯಾವಾಗಲೂ ಇದೇ ಸದ್ಬುದ್ಧಿಯನ್ನೀಯಲೆಂದು ಜಗದಾಚಾರ್ಯರನ್ನು ಪ್ರಾರ್ಥಿಸುತ್ತೇನೆ

ಪೂರ್ವದಲ್ಲಿ ಗುರುವರ್ಗದವರು ಉಪದೇಶಿಸದೆ ಇದ್ದುದಕ್ಕಾಗಿ ನಮ್ಮ ವೀರಶೈವರು, ನಾವು ಯಾರು? ನಮ್ಮ ಧರ್ಮವಾವುದು? ನಮ್ಮ ಗುರುಗಳಾರು? ಎಂಬುದನ್ನರಿಯದೆ ಕಂಡಕಂಡವರಿಂದ ಉಪದೇಶವನ್ನು ಹೊಂದಿ ಯಮುನದನದ ಕಾವಲುಗಾರರಾಗುತ್ತಿದ್ದರು ಸದ್ಯ ಹೋಟಗೀ ಶ್ರೀಗಳಿಂದ ಅವರೆಲ್ಲರೂ ತಮ್ಮ ನಿಜವಾದ ಮಾರ್ಗವನ್ನು ಸ್ವೀಕರಿಸುವದನ್ನು ಕಂಡು ಆನಂದವೆನಿಸುತ್ತಿದೆ ನಿಜವಾದ ವೀರಶೈವರು ನಿಜಸ್ಥಿತಿಯನ್ನು ಸ್ವೀಕರಿಸುವದರಲ್ಲೇನು ಮಹತ್ವವಿದೆ? ಆಧೂರ್ತಸಂಘಗಳ ಜಾಲದಲ್ಲಿ ಬಿದ್ದು ಒದ್ದಾಡುವ ವೀರಶೈವರೇ? ಏಳಿರಿ, ಎಚ್ಚರರಾಗಿರಿ ನಿಮ್ಮ ಗುರುಗಳನ್ನು ಹುಡುಕಿರಿ ದುರಭಿಮಾನವನ್ನು ಬಿಡಿರಿ? ಹಿಂದಕ್ಕೆ ಆದದ್ದು ಆಗಿಹೋಯಿತು ಇನ್ನಾದರೂ ಸನ್ಮಾರ್ಗಗಾಮಿಗಳಾಗಿರಿ ವೇಶ್ಯಾಪುತ್ರರಂತೆ ಕಂಡಕಂಡವರಿಗೆ ತಂದೆಯೆಂದು ಬೆನ್ನುಹತ್ತುವದು ಸರಿಯಲ್ಲ ಹುಲಿಗಳಾದ ನೀವು ಕುರಿಗಳ ಸಹವಾಸದಿಂದ ಬ್ಯಾ ಬ್ಯಾ ಎಂದು ಒದರಬೇಡಿರಿ, ನಿಮ್ಮ ಸ್ವರೂಪಕ್ಕೂ ಇತರರ ಸ್ವರೂಪಕ್ಕೂ ಅಂತರವಿರುವದನ್ನು ಕಣ್ಣು ತೆರೆದು ನೋಡಿರಿ, ಅಸ್ತು

ಶ್ರೀ ರುದ್ರಾರಾಧ್ಯ ಸೇನಾಂದ

ನೋಟೀಸು

ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಪಸ್ಮಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನ...
पंडित श्रीकाशीनाथ...
Speeches by Pandi...
ವೀರಶೈವರತ್ನ (೪ನೆಯ...
ವೈದಿಕಶಿವಪೂಜಾವಿಧಿ
ಶ್ರೀ ಜಗದ್ಗುರು ಪಂಚ...
ಮಾಹೇಶ್ವರ ದೀಕ್ಷಾ...
ಸಿದ್ಧಾಂತಸಾರಾವಳಿ (...
ಶಿವಾಸೂತ್ರಸಿದ್ಧಾಂತ...
ಸಚಿತ್ರ ರೇಣುಕವಿಜಯ...
ಸಿದ್ಧಾಂತಶಿಖೋಪನಿಷ...
ಕೇನೋಪನಿಷತ್ (...
ರೇಣುಕವಿಜಯ ಮಹಾ...
ವೀರಶೈವಸಿದ್ಧಾಂತಸು...
ಶಿವಾದ್ವೈತಮಂಜರಿ
लिंगधारणचंद्रि...
महानारायणोप...
वीरशैवेन्दुशेखर
೧ ರೂಪಾಯಿ...
೫ ರೂ. ಗಳಿಗೆ ಮೆ...
ವ್ಯಾಪಾರಿಗಳಿಗೂ ೧...
ಮ್ಯಾನೇಜರ್—ಶ್ರೀ...

ರೆ|| ಬ್ರದರ್ ರೊಮ್ಯುಲಸ್ ಎಂಬ ಜರ್ಮ... ಪಾದ್ರಿಯು ರಹದಾರಿ ಪಡೆಯದೆ ಮೈಸೂರು ಕಾ... ನಲ್ಲಿ ಆನೆಯೊಂದನ್ನು ಗುಂಡುಹಾರಿಸಿ ಕೊಂದರೆಂದು ಪೋಲೀಸರು ಹೂಡಿದ ವ್ಯವಹಾರವು, ನಂಜನಗೂಡು ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ವಿಚಾರಣೆಯಾಗಿ ಇವರು ಅಪರಾಧಿಗಳಲ್ಲವೆಂದೂ ಇವರು ಗುಂಡು ಹೊಡೆದಾ... ಇವರೂ ಮತ್ತು ಆನೆಯೂ ಮೈಸೂರು ಗಡಿಯನ್ನು ಬಿಟ್ಟು ಬ್ರಿಟಿಷ್ ಇಂಡಿಯಾಕ್ಕೆ ಸೇರಿದ ಪ್ರದೇಶದಲ್ಲಿ... ದ್ದರಿಂದಲೂ ಸಾಕ್ಷಿ ಬಂದು ಅವರು ನಿರಪರಾಧಿಗಳೆಂದು ತೀರ್ಪುಕೊಡಲ್ಪಟ್ಟಿತು.

ಅರಮನೆ ಗೇಮ್ಸ್ ಶಾಖೆಯವರು ಕಾರಾಪುರದ ಮಾಸ್ತಿಗುಡಿ ಬಳಿ ಕಾಡಿನಲ್ಲಿ ಗಂಡು ಆನೆಯೊಂದು ಇರುವುದನ್ನು ಕಂಡು ಅದನ್ನು ಹಿಡಿಯಲು ವಿಶ... ಪಳಗಿದ ಹೆಣ್ಣಾನೆಯೊಂದನ್ನು ಅದರ ಬಳಿಗಟ್ಟಿದರು. ಅವೆರಡೂ ಆಟವಾಡುತ್ತಿರುವಲ್ಲಿ ಒಬ್ಬ ಮಾವುತನು ಧೈರ್ಯವಾಗಿ ಸಲಗನ ಹಿಂದೆ ಸದ್ದಿಲ್ಲದೇ ಹೋಗಿ ಅದರ ಹಿಂದಲ ಕಾಲಿಗೆ ಹಗ್ಗದ ಬೇಡಿಯನ್ನು ಹಾಕಿದನು. ಆಗ ಅದು ಓಡಿಹೋಗಲು ಯತ್ನಿಸಲು ಮತ್ತೆ ಕೆಲವು ಹಳೆ ಆನೆಗಳನ್ನು ತೆಗೆದುಕೊಂಡು ಹೋಗಿ ಅದನ್ನು ಸುತ್ತುಗಟ್ಟಿ ಹಿಡಿದು ಮರಕ್ಕೆ ಬಿಗಿದರು. ಇದು 8 ಅಡಿ ಎತ್ತರವಿದ್ದು ಸುಮಾರು 20 ವರ್ಷ ವಯಸ್ಸಿನದೆಂದು ಊಹಿಸಲಾಗಿದೆ.

ವರ್ತಮಾನಸಂಗ್ರಹ.

ಗ್ರೀಸಿನ ಮಹಾರಾಜರ ಇಷ್ಟದಂತೆ ಒಂದು ಸಾವಿರ ಮಂದಿ ರಾಜಕೀಯ ಖೈದಿಗಳನ್ನು ಕಳೆದ ಸೋಮವಾರದ ದಿವಸ ಇವರ ಹೊಸ ಮಂತ್ರಿಗಳಾದ ಡೆಮರಾಡ್ ಎಂಬುವರು ಬಿಡುಗಡೆ ಮಾಡಿದರೆಂದು ಪ್ರಕಟವಾಗಿದೆ.

ತಾತಾನಗರದ ಏಳುಜನ ಮುನಿಸಿಪಲ್ ಕೌನ್ಸಿಲರುಗಳೂ ಮತ್ತು ವೈಸ್‌ಪ್ರೆಸಿಡೆಂಟರೂ ಸೇರಿ ತಮ್ಮ ಮುನಿಸಿಪಾಲಿಟಿಯ ಆಡಳಿತವು ಚನ್ನಾಗಿ ನಡೆಯುತ್ತಿಲ್ಲವಾಗಿ ಅದನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂದು ಸಿಂಧೂದೇಶದ ಕಮಿಷನರಿಗೆ ಅರ್ಜಿ ಹಾಕಿರುವರೆಂದು ತಿಳಿದುಬಂದಿದೆ.

ಅಬ್ಸೀನಿಯದಲ್ಲಿಯ ಅವಾಷ್ ಎಂಬಲ್ಲಿ ಹವಾಷ್ ನದಿಯ ಮೇಲೆ ಕಟ್ಟಿರುವ ಮುಖ್ಯ ರೈಲ್ವೆ ಸೇತುವೆಯ ಬಳಿ ೬ ಮಂದಿ ಇಟಲಿಯ, ಸಾಧುಗಳ ವೇಷವನ್ನು ಧರಿಸಿಕೊಂಡಿದ್ದವರು ಸಿಕ್ಕಿದ್ದಾರೆ. ಸರಿಯಾದ ರಹದಾರಿ ಪಡೆದು ಬಂದಿರಲಿಲ್ಲವಾಗಿ ಅವರನ್ನು ದಸ್ತಗಿರಿ ಮಾಡಿ, ಅವರ ಬಳಿ ಇದ್ದ ೩೫೦ ಪೌಂಡುಗಳನ್ನು ವಶಪಡಿಸಿಕೊಂಡು ಪೋಲೀಸು ಕಾವಲಿನಲ್ಲಿರಿಸಿರುತ್ತಾರೆ.

ಬೇಟೆಗೆಂದು ಹೋಗುವವರಿಗೆ ಹೀಗೂ ಆಗುವುದುಂಟೆ? ಸರ್ ಫಜಲ್ ಹುಸೇನ್—ಈತನು ಇಂಡಿಯಾ ಸರಕಾರದ ವಾಣಿಜ್ಯಶಾಖೆಯ ಒಬ್ಬ ಸಹಾಯಕ ಗುಮಾಸ್ತೆ. ಈತನು ಕೈಗಾರಿಕೆಯ ಶಾಖೆಯ ಇನ್ಸ್‌ಪೆಕ್ಟರ್ ಮಿತ್ರನೊಡನೆ ಬೇಟೆಗಾಗಿ ಹೊರಟ ದಾರಿಯಲ್ಲಿ ಚೆನ್ನಾಗಿ ಬೆಳೆದ ಒಂದು ಕತ್ತೆಕಿರುಬ ಇವರಿಗೆ ಸಿಕ್ಕಿತು. ಹುಸೇನ್ ಆ ಮೃಗವನ್ನು ಬೂಟ್ಸಿನಿಂದ ಒದ್ದನು. ಆಗ ಆ ಮೃಗವು ಆ ಕಾಲನ್ನು ತನ್ನ ಬಾಯಿಂದ ಹಿಡಿದುಕೊಂಡು ಅವನನ್ನು ನುಂಗಲು ನೋಡಿತು. ಅಷ್ಟರಲ್ಲಿ ಅವನ ಮಿತ್ರನು ಗುಂಡುಹಾರಿಸಿ ಕಿರುಬವನ್ನು ಕೊಂದರೂ, ಕಿರುಬನ ಬಾಯಿಂದ ಕಾಲನ್ನು ಬಿಡಿಸಲಾಗಲಿಲ್ಲ. ಕೊನೆಗೆ ಮೃಗದ ಬಾಯಲ್ಲಿ ಕಾಲಿದ್ದ ಹುಸೇನನನ್ನು ಆಸ್ಪತ್ರೆಗೆ ಸಾಗಿಸಿ ಅಲ್ಲಿ ಕಾಲು ಬಿಡಿಸಿ ಗಾಯಗಳಿಗೆ ಔಷಧ ಲೇಪನಮಾಡಿದುದಾಯಿತು.

ಚಿಕಾಗೊ ಪಟ್ಟಣದಲ್ಲಿ ಸ್ತ್ರೀಯರ ಮಾನರಕ್ಷಣೆ ಮಾಡುವುದಕ್ಕೋಸ್ಕರ 'ಲೀಗ್ ಆಫ್ ಮಾಡೆಸ್ಟಿ' ಎಂಬ ಹೆಸರಿನಿಂದ ಒಂದು ಸಮಿತಿಯು ಏರ್ಪಟ್ಟಿದೆ. ಈಚೆಗೆ ಹೊಸ ಹೊಸ ಫ್ಯಾಷನ್‌ಗಳು ನಾಗರೀಕತೆಗೆ ತಕ್ಕಂತೆ ಬರುತ್ತಿರುವುದರಿಂದ ಸ್ತ್ರೀಯರ ಮಾನರಕ್ಷ...

ಮೈಸೂರು ಮಾರ್ಕೆಟ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಚ್ಚುಹಾಕ್ಕಿ ... ಪ್ರ||

ಕ್ಷಣ ಕಡಿಮೆಯಾಗುತ್ತಿದೆಯೆಂದು ಮಹಿಳೆಯರಿಗೆ ಎಚ್ಚರಿಕೆ ಕೊಡುವುದೇ ಈ ಸಂಘದ ಕೆಲಸ. ಸ್ತ್ರೀಯರು ಯಾವ ರೀತಿಯ ಉಡುಪನ್ನು ಧರಿಸಬೇಕೆಂದು ಸೂಚಿಸುವ ಒಂದು ಕಾನೂನನ್ನು ಇವರು ತಯಾರು ಮಾಡಿರುವರು. ಆ ಕಾನೂನಿನಲ್ಲಿ "ಸ್ತ್ರೀಯರು ಧರಿಸುವ ಉಡುಪಿನಲ್ಲಿ ಕತ್ತಿನಪಟ್ಟಿಯು ಒಂದು ಅಥವಾ ಎರಡು ಅಂಗುಲಕ್ಕೆ ಹೆಚ್ಚಾಗಿ ಬಿಟ್ಟಿರಬಾರದು. ಕತ್ತು ತುಂಬಾ ಮುಚ್ಚಿಕೊಳ್ಳುವಂತಿರಬೇಕು. ಕೈ ತೋಳು ಮೊಣಕೈಗಳ ವರೆಗಾದರೂ ಮುಚ್ಚಿಕೊಳ್ಳುವಂತಿರಬೇಕು. ಮೇಲಿನ ಉಡುಪಿನ ಒಳಗೆ ಧರಿಸತಕ್ಕ ಲಂಗವು ಮೊಣಕಾಲಿನ ಕೆಳಕ್ಕೆ ಬರುವಂತಿರಬೇಕು. ಕಾಲುಚೀಲಗಳು ಮೊಣಕಾಲಿನ ಮೇಲಕ್ಕೆ ಬರಬೇಕಲ್ಲದೆ ಅವು ಅವಯವಗಳು ಕಾಣಿಸುವಷ್ಟು ತೆಳ್ಳಗಿರಬಾರದು, ಅಥವಾ ಮಾಂಸದ ಬಣ್ಣವಾಗಿಯೂ ಇರಬಾರದು. ಸ್ತ್ರೀಯರ ಉಡುಪುಗಳು ಎಲ್ಲಾ ಅಂಗಗಳನ್ನೂ ಸಂಪೂರ್ಣವಾಗಿ ಮುಚ್ಚಬೇಕಲ್ಲದೆ ಯಾವ ಅಂಗವೂ ಕಾಣುವಂತಿರಬಾರದು ಎಂದು ತಿಳಿಸುತ್ತದೆ

ಯುವಕನ ಹತ್ಯೆ.

ಚನ್ನಿಯ್ಯನೆಂಬ ಯುವಕನು ಮಾಮುಸಾಪುರವೆಂಬಲ್ಲಿಂದ ಶ್ರೀ ವಿಲ್ಲಿಪುತ್ತೂರಿಗೆ ಬೈಸಿಕಲ್ ಮೇಲೆ ಹೋಗುತ್ತಿದ್ದಾಗ ಈತನ ದ್ವೇಷಿಗಳು ಕೆಲವರು ದಾರಿಯಲ್ಲಿ ಇವನನ್ನು ತಡೆದು ಹೊಡೆದುಕೊಂದಿರುತ್ತಾರೆ. ಪೋಲೀಸರು ವಿಷಯವನ್ನು ತಿಳಿದು ಶವವನ್ನು ಪರೀಕ್ಷೆಗೆ ಆಸ್ಪತ್ರೆಗೆ ಕಳುಹಿಸಿ ಹತ್ಯಾಕಾರಿಗಳ ಪತ್ತೇತರದೂದು ನಡೆಸುತ್ತಿರುವುದಾಗಿ ತಿಳಿದುಬರುತ್ತದೆ.

ಮರಣದಂಡನೆ.

ಭೂಮಿಯ ಮೇಲೆ ತಾನೇ ದೇವರ ಪ್ರತಿನಿಧಿಯೆಂದೂ, ಮುಂದಾಗುವ ಧರ್ಮಯುದ್ಧಕ್ಕೆ ಎಲ್ಲರೂ ಸಿದ್ಧರಾಗಿರಬೇಕೆಂದೂ ಸಾರುತ್ತಾ ಕೃಷಿಕರನ್ನು ದಂಗೆ ಏಳುವಂತೆ ಪ್ರೇರೇಪಿಸುತ್ತಿದ್ದ ಅಬ್ದುಲ್ ಮುತಾಲಿಬ್ ಎಂಬುವನಿಗೂ ಅವನ ಮೂವರು ಶಿಷ್ಯರಿಗೂ ರಷ್ಯದ ಸೋವಿಯಟ್ ಸರ್ಕಾರದವರು ಮರಣದಂಡನೆಯನ್ನು ವಿಧಿಸಿದರೆಂದು ತಿಳಿದುಬಂದಿದೆ.

ಕೋರ್ಟು ರಿಕಾರ್ಡು ಸಹಿತ ಒಂಟೆಯೇ ಅದೃಶ್ಯ

ಸುಕ್ಕುರ್ ಜಿಲ್ಲೆ ಕಲೆಕ್ಟರ್ ಕೋರ್ಟಿನ ರಿಕಾರ್ಡುಗಳನ್ನು ಒಂಟೆಯ ಮೇಲೆ ಹೇರಿಕೊಂಡು ಸಮೀಪದ ಹಳ್ಳಿಯ ಮೊಕದ್ದಮೆಯೊಂದನ್ನು ವಿಚಾರಿಸಲು ಹೋಗುತ್ತಿದ್ದಾಗ ಮೊಕದ್ದಮೆಗೆ ಸಂಬಂಧಪಟ್ಟ ರಿಕಾರ್ಡನ್ನು ಹೊತ್ತಿದ್ದ ಒಂಟೆಯು ಮಾಯವಾಗಿ ಅದರ ಬದಲು ಬೇರೊಂದು ಒಂಟೆ ಇದ್ದದ್ದು ನೋಡಿ ಆಶ್ಚರ್ಯವಾಗಿದೆ. ರಿಕಾರ್ಡಿನ ಸಹಿತ ಒಂಟೆಯನ್ನು ಯಾರೋ ದುಷ್ಟರು ಅಪಹರಿಸಿರುವುದಾಗಿ ಯೋಚಿಸಲಾಗಿದೆ

ನೌಕಾಸಮ್ಮೇಳನ

ತಮ್ಮ ತಮ್ಮ ನೌಕಾಬಲಗಳ ಪ್ರಮಾಣಗಳನ್ನು ನಿರ್ಧರಿಸಿ ಒಂದು ಒಪ್ಪಿತಕ್ಕೆ ಬರಲು ಇಂಗ್ಲೆಂಡ್, ಅಮೆರಿಕ, ಜಪಾನ್ ಪ್ರತಿನಿಧಿಗಳೆಲ್ಲರೂ ಸೇರಿ ಮಾತುಕಥೆ ನಡೆಸಿದ್ದರಲ್ಲಿ ಜಪಾನ್ ಪ್ರತಿನಿಧಿಗಳಾದ ಆಡ್ಮಿರಲ್ ನಾಗಾನೋರವರು, ಬ್ರಿಟನ್ ಮತ್ತು ಅಮೆರಿಕಗಳಷ್ಟೇ ನಮಗೂ ನೌಕಾಬಲವಿರಬೇಕೆಂದರು. ಅವರು ಇದಕ್ಕೆಂತ ಕಮ್ಮಿಮಾಡಲು ಒಪ್ಪುವಂತಿಲ್ಲವಾಗಿ ಇತರ ಪ್ರತಿನಿಧಿಗಳಿಗೆ ಅಸಮಾಧಾನವೂ ಆಶಾಭಂಗವೂ ಆಗಿರುತ್ತದೆಂದು ಊಹಿಸಲಾಗಿದೆ

ಬ್ರಹ್ಮಪುತ್ರಾನದಿಗೆ ದೊಡ್ಡ ಕಟ್ಟೆ.

ಮೊಹಾಕೊವಾರ್‌ಪೋರ್ ಎಂಬಲ್ಲಿಯ ಸುಮಾರು ೩೦ ಹಳ್ಳಿಯವರು ಸೇರಿ ಗೌರ್ನಮೆಂಟು ಸಹಾಯವಿಲ್ಲದೆ ತಮ್ಮ ಸ್ವಂತ ದೇಹಶ್ರಮದಿಂದ ಬ್ರಹ್ಮಪುತ್ರಾನದಿಗೆ ಸುಮಾರು ೨ ಮೈಲು ಉದ್ದದವರೆಗೂ ಎರಡು ಕಡೆಗೂ ಕಟ್ಟೆಯನ್ನು ಹಾಕಿ ಎಷ್ಟು ಪ್ರವಾಹ ಬಂದರೂ ತಮ್ಮ ಹಳ್ಳಿಗೆ ನೀರುನುಗ್ಗಿ ಹಾಳುಮಾಡದಂತೆ ತಡೆಗಟ್ಟಲು ಕೆಲಸವನ್ನು ಮೊದಲುಮಾಡಿರುತ್ತಾರೆ. ಇದೇ ಕಟ್ಟೆಯ ಕೆಲಸವು, ನಾಲ್ಕು ವರುಷಗಳ ಹಿಂದೆ ಎಚ್. ಎಚ್. ಗೋಸ್ವಾಮಿ ಶಿವಸಾಗರ್ ಎಂಬುವರಿಂದ ಮೊದಲುಮಾಡಿ ನಿಲ್ಲಿಸಲ್ಪಟ್ಟಿತ್ತು

ಪೆಟ್ರೋಲ್ ಕಳ್ಳವ್ಯಾಪಾರದ ಪತ್ತೆ.

ಕಳ್ಳತನದಲ್ಲಿ ಪೆಟ್ರೋಲ್ ವ್ಯಾಪಾರಮಾಡುತ್ತಿದ್ದರೆಂದು ಬೊಂಬಾಯಿ ವಾಡಿಯಾ ಬಂದರಿನ ಗೂಡ್ಸ್ ಯಾರ್ಡಿನಲ್ಲಿ ಇಬ್ಬರನ್ನು ಪೋಲೀಸರು ದಸ್ತಗಿರಿಮಾಡಿದ್ದಾರೆ. ಈಗ ಸುಮಾರು ೬-೭ ವರ್ಷಗಳಿಂದಲೂ ಬೊಂಬಾಯಿಯಲ್ಲಿ ನಡೆಯುತ್ತಿದ್ದ ಭಾರಿ ಪೆಟ್ರೋಲ್ ಕಳ್ಳವ್ಯಾಪಾರವನ್ನು ಪತ್ತೆ ಮಾಡಿದಂತಾಯಿತೆಂದೂ ಊಹಿಸಲಾಗಿದೆ. ದಸ್ತಗಿರಿಯಾದವರು ಕಳೆದ ೧೮ ತಿಂಗಳಲ್ಲಿ ಸುಮಾರು ೭೫೦೦ ಗ್ಯಾಲನ್ ಪೆಟ್ರೋಲನ್ನು ಕಳ್ಳರಹದಾರಿಯಮೇಲೆ ಹೊರಕ್ಕೆ ಕಳುಹಿಸಿರುವರೆಂದು ಹೇಳುತ್ತಾರೆ. ದಸ್ತಗಿರಿಯಾದವರನ್ನು ಜಾಮೀನಿನಮೇಲೆ ಬಿಟ್ಟಿರುತ್ತಾರೆ

ಕೃತ್ರಿಮಪತ್ರ ನಿರ್ಮಾಪಕನ ವಿಚಿತ್ರ ಜೀವನ

ಇಂಗ್ಲೆಂಡಿನ ಮಿಡ್‌ಲ್ಯಾಂಡ್ಸ್ ಪ್ರಾಂತದ ಹಳ್ಳಿಯೊಂದರ ಬಡವರ ಆಸ್ಪತ್ರೆಯಲ್ಲಿ ಕಾಪರ್‌ಪ್ಲೇಟ್ ಜಾಕ್ ಎಂಬುವನೊಬ್ಬನು ಬಹಳ ದರಿದ್ರಾವಸ್ಥೆಯಲ್ಲಿದ್ದು ಮೃತನಾದನು. ಈತನು ಪಶ್ಚಿಮ ಲಂಡನ್ ಪಟ್ಟಣ ಕೃತ್ರಿಮಪತ್ರನಿರ್ಮಾಣಸಂಸ್ಥೆಯಲ್ಲಿ ಒಬ್ಬ ಮುಖ್ಯನೆಂದೂ ಇವನು ಇದುವರೆವಿಗೆ ತನ್ನ ಕಡೆಯವರಿಗಾಗಿ 20,000 ಪೌಂಡುಗಳಷ್ಟು ಛಕ್ಕುಗಳನ್ನು ತಯಾರಿಸಿ ಹಣವನ್ನು ತನ್ನ ಜೊತೆಗಾರರಿಗೆ ಕೊಟ್ಟಿರುವುದಲ್ಲದೆ ಅದರಲ್ಲಿ ಒಂದು ಕಾಸನ್ನಾದರೂ ತಾನು ಉಪಯೋಗಿಸಿಕೊಂಡಿರುವುದಿಲ್ಲವೆಂದೂ, ತಾನು ಯಾವಾಗಲೂ ಬಡತನದಲ್ಲಿಯೇ ಕಾಲಕಳೆದನೆಂದೂ, ಇವನು ಇಂಥವನೆಂಬುದು ಇವನು ತಯಾರಿಸಿದ ಕೃತ್ರಿಮ ಛಕ್ಕುಗಳನ್ನು ಹೊರಗಿನವರಿಗೆ ತಲುಪಿಸುತ್ತಿದ್ದ ಸ್ತ್ರೀಯೊಬ್ಬಳಿಗಲ್ಲದೆ ಮತ್ಯಾರಿಗೂ ತಿಳಿದಿರಲಿಲ್ಲ. ಇವನ ಜೊತೆಗಾರರಿಗೆ ಕೂಡ ಇವನಾರೆಂಬುದು ಗೊತ್ತಿರಲಿಲ್ಲ. ಇವನ ಸಮೀಪದಲ್ಲಿ ವಾಸಿಸುತ್ತಿದ್ದ ಹಳ್ಳಿಯವರೆಲ್ಲರೂ ಇವನನ್ನು ಬಹಳ ಕರುಣಾಶಾಲಿಯೂ, ವಿದ್ಯಾವಂತನೂ, ಸ್ನೇಹಪರನೂ, ದಾನಿಯೂ, ಆದ ವಿಶ್ವಾಸಿ ಮನುಷ್ಯನೆಂದು ಮಾತ್ರ ತಿಳಿದುಕೊಂಡಿದ್ದರು

ಇಟಲಿ ಅಬ್ಸೀನಿಯಾ ಯುದ್ಧ

ಹೊಸ ದಂಡನಾಯಕರಾದ ಬಡೋಗ್ಲಿಯೋರವರು ಬಂದಂದಿನಿಂದ ಯಾವ ಕಡೆಯೂ ವಿಶೇಷ್ಯಯುದ್ಧವಾಗಲಿ ಇಟಲಿಯವರು ಮುಂದುವರಿಯುವುದಾಗಲಿ ನಡೆದಿರಲಿಲ್ಲ. ಈಗ ಕಳೆದ ೬ ನೇ ತಾರೀಕಿನಿಂದ ಎಲ್ಲ ಕಡೆಗಳಲ್ಲೂ ವಾಯು ಮುತ್ತಿಗೆಯು ನಡೆಯಲು ಮೊದಲಾಗಿದೆ. ಇಟಲಿಯ ಹನ್ನೆರಡು ವಿಮಾನಗಳು ಡೆಸ್ಸಿಯ ಮೇಲೆ ಬಾಂಬುಗಳನ್ನು ಹಾಕಿದ್ದರಿಂದ, ಆಸ್ಪತ್ರೆಯ ಕೆಲವು ಭಾಗಗಳೂ, 27 ಮಂದಿ ವೈದ್ಯರೂ, ಅನೇಕ ಉಪಕರಣಗಳೂ ನಾಶವಾದವು. ಅರಮನೆಯ ಕೆಲವು ಭಾಗವು ಸುಟ್ಟುಹೋಯಿತು. ಚಕ್ರವರ್ತಿಗಳ ಸಮೀಪ ೧೧ ಅಡಿಗಳ ದೂರದಲ್ಲಿ ಬಾಂಬು ಬಿದ್ದವು. ಅವರಿಗೆ ಯಾವ ಅಪಾಯವೂ ಆಗಲಿಲ್ಲ. ಪ್ರಜೆಗಳಲ್ಲಿ ಬಹು ಭಾಗ ಬೆಟ್ಟಗುಡ್ಡಗಳಿಗೆ ಹೋಗಿ ಅವಿತುಕೊಂಡಿದ್ದ ಪ್ರಯುಕ್ತ ಹೆಚ್ಚು ಪ್ರಾಣಾಪಾಯವಾಗಲಿಲ್ಲ. ಗೊಂಡಾರ್ ಎಂಬಲ್ಲಿ ವಿಮಾನಗಳು ಬಾಂಬುಗಳನ್ನು ಹಾಕಿದ್ದರಿಂದ ೪ ಮಂದಿ ಸ್ತ್ರೀಯರೂ, ೨ ಮಕ್ಕಳೂ ಸತ್ತರು. ೩೦ ಮಂದಿಗೆ ಗಾಯಗಳಾದವು. ಬಾಂಬಿನ ವೃಷ್ಟಿಯಿಂದ ಆಗುವ ನಿರಪರಾಧಿಗಳ ಕೊಲೆಯಿಂದ ಅಬಿಸೀನಿಯರ ಹೃದಯವು ಕಲ್ಲಿನಂತಾಗಿ ಅಪರಾಧಿಗಳಿಗೆ ಹ್ಯಾಗಾದರೂ ಪ್ರತೀಕಾರಮಾಡಬೇಕೆಂದು ನಿಶ್ಚಯಿಸಿರುತ್ತಾರೆ. ಸ್ತ್ರೀಯರೆಲ್ಲರೂ ತಮ್ಮ ಪದ್ಧತಿಯಂತೆ ಯುದ್ಧಭೂಮಿಯಲ್ಲಿರುವ ತಮ್ಮ ಪತಿಗಳನ್ನು ಬಂದು ಸೇರುತ್ತಿದ್ದಾರೆ. ಚಕ್ರವರ್ತಿನಿಯವರೂ ತಮ್ಮ ಪತಿಯ ಸಂಗಡವಿರಲು ಡೆಸ್ಸಿಗೆ ಪ್ರಯಾಣಸನ್ನಾಹ ಮಾಡುತ್ತಿದ್ದಾರೆಂದು ಸಮಾಚಾರ ಬಂದಿರುತ್ತದೆ

ಅಬ್ಸೀನಿಯಾ ಯುದ್ಧರಂಗವು ಹೀಗಿರುತಿರುವಲ್ಲಿ ಅತ್ತಕಡೆ ಫ್ರಾನ್ಸ್ ಪ್ರತಿನಿಧಿಯಾದ ಲವಾಲರೂ ಮತ್ತು ಇಂಗ್ಲೀಷರ ಪ್ರತಿನಿಧಿಗಳಾದ ಹೋರರೂ ಸೇರಿ ಉಭಯಪಕ್ಷಗಳೂ ಸಮಾಧಾನಹೊಂದಿ ಒಪ್ಪುವಂತಹ ಯಾವುದಾದರೊಂದು ತೀರ್ಮಾನಮಾಡಬೇಕೆಂದು ಮಹತ್ಪ್ರಯತ್ನ ಮಾಡಿ ಕೊನೆಗೆ ಇಟಲಿಯು ಕೆಂಪುಸಮುದ್ರತೀರದಲ್ಲಿರುವ ಅಸಾಬವೆಂಬ ತನ್ನ ರೇವನ್ನು ಅಬ್ಸೀನಿಯಕ್ಕೆ ಬಿಟ್ಟುಕೊಡಬೇಕೆಂದೂ ಮತ್ತು ಈ ರೇವಿಗೆ ಹೋಗಲು ಸಾಕೆಷ್ಟು ಮಾರ್ಗವನ್ನು ತನ್ನ ಪ್ರದೇಶದೊಳಗಿಂದ ಬಿಟ್ಟುಕೊಡಬೇಕು. ಇಟಲಿಯು ಇದಕ್ಕೆ ಒಪ್ಪದಿದ್ದರೆ ಇಂಗ್ಲೆಂಡು ತನಗೆ ಸೇರಿದ ಬಂದರೊಂದನ್ನು ಬಿಟ್ಟುಕೊಡುವುದು. ಇದಕ್ಕೆ ಪ್ರತಿಯಾಗಿ ಅಬ್ಸೀನಿಯವು, ಅಕ್ಸಂ, ಅಡೋವ ಎರಡು ನಗರಗಳನ್ನುಳಿದು ಉಳಿದ ಟಿಗರ್ ಪ್ರಾಂತವೆಲ್ಲವನ್ನೂ ಮತ್ತು ಡಾನಕಿಲ್ ಪ್ರದೇಶವನ್ನೂ ಇಟಲಿಗೆ ಬಿಟ್ಟುಕೊಡುವುದು ಎಂಬ ಸಲಹೆಯನ್ನು ಸಿದ್ಧಪಡಿಸಿ, ಎರಡುಪಕ್ಷಗಳ ಒಪ್ಪಿತಕ್ಕಾಗಿ ಇಟಲಿ ಮತ್ತು ಅಬ್ಸೀನಿಯಾಗಳಿಗೆ ಕಳುಹಿಸಿದರು. ಇದಕ್ಕೆ ಮುಸ್ಸೊಲಿನಿಯು ಉತ್ತರಕೊಡುವುದಕ್ಕೆ ಇನ್ನೂ ಸಾವಕಾಶಬೇಕೆಂದು ಸುಮ್ಮನಿದ್ದಾನೆ. ಅಬ್ಸೀನಿಯಾ ಚಕ್ರವರ್ತಿಗಳುಮಾತ್ರ ಇದನ್ನು ತಿರಸ್ಕರಿಸುವುದಲ್ಲದೆ ಅನ್ಯಾಯವಾಗಿ ತಮ್ಮ ಮೇಲೆ ಧಾಳಿ ನಡೆಸಿರುವ ಇಟಲಿಗೆ ತನ್ನದೇಶದಲ್ಲಿ ಯಾವ ಭಾಗವನ್ನೂ ಕೊಡುವುದಿಲ್ಲವೆಂದೂ ಈ ರೀತಿಯಾದ ತೀರ್ಮಾನವನ್ನು ಇತರರು ಮಾಡುವುದು ನ್ಯಾಯವಲ್ಲವೆಂದೂ ತಿಳಿಸಿರುತ್ತಾನೆ.

ಪ್ಯಾರಿಸ್ಸಿನಲ್ಲಿರುವ ಅಬ್ಸೀನಿಯ ರಾಯಭಾರಿಯೂ ಕೂಡ ವಿಷಯವನ್ನು ಚರ್ಚಿಸಲು ಈಗ ಸೇರಲಿರುವ 18 ಜನರ ಸಮಿತಿಗೆ ತಾನು ಹೋಗುವುದಿಲ್ಲವೆಂದೂ, ಪ್ಯಾರಿಸ್ ಸಂಧಾನಗಳು ಲೀಗ್ ಸಭೆಯ ತತ್ವಗಳಿಗೆ ಅನುಸಾರವಾಗಿರುವವೇ ಎಂಬ ವಿಷಯವನ್ನು ಸಭೆಯವರೇ ಆಲೋಚಿಸಿ ತಿಳಿಸಲೆಂದು ಹೇಳುತ್ತಾರೆ

ಚೀನಾ ಜಪಾನ್ ಪರಿಸ್ಥಿತಿ.

ಉತ್ತರಚೀನಾಕ್ಕೆ ಸ್ವರಾಜ್ಯಕೊಡದಿದ್ದರೆ ತಾವು ಯುದ್ಧಕ್ಕೆ ಸಿದ್ಧರಾಗಿರುವುದಾಗಿ, ದೋಹೆರದಲ್ಲಿರುವ ಜಪಾನ್ ರಾಯಭಾರಿಯು ನಾನ್‌ಕಿಂಗ್ ಸರ್ಕಾರಕ್ಕೆ ತಿಳಿಸಿರುತ್ತಾರೆ. ಪೀಪಿಂಗ್‌ನಗರದ ಮೇಲೆ ಜಪಾನ್ ಬಾಂಬಿಂಗ್ ವಿಮಾನಗಳು ಹಾರಾಡಿದುದರಿಂದ ಪ್ರಜೆಗಳು ಭಯದಿಂದ ಭ್ರಾಂತರಾಗಿದ್ದಾರೆ. 9 ಜನಾಂಗಗಳು ಸೇರಿ ಚೀಣವು ಸ್ವತಂತ್ರರಾಜ್ಯವೆಂದು ಒಪ್ಪಿ ರುಜುಮಾಡಿರುವುಕ್ಕೆ ಈಗಿನ ಪರಿಸ್ಥಿತಿಯಲ್ಲಿ ಜಪಾನು ಒಪ್ಪುವುದಿಲ್ಲವೆಂದು ತಿಳಿಸಿದೆ.

ಪೋಚಾಂಗ್ ಎಂಬ ಪ್ರದೇಶದಿಂದ ಚೀಣಾದೇಶೀಯರನ್ನು ಓಡಿಸಲು ೧ ಸಾವಿರ ಮಂಗೋಲ್ ಸೈನಿಕರು ಮುಂದೆ ನುಗ್ಗುತ್ತಿದ್ದಾರೆ. ಇವರು ಮಾಂಚುಕೋ ಸೈನ್ಯಕ್ಕೆ ಬೆಂಬಲ ಕೊಡುವರಂತೆ

ಸೀಪಿಂಗ್ ನಗರದ ಉತ್ತರಕ್ಕಿರುವ ಕುಯಾನ್ ನಗರದಿಂದ ಚೈನಾ ಸೈನಿಕರನ್ನು ಮಾಂಚುಕೋ ಸೈನಿಕರು ಹೊಡೆದೋಡಿಸಿ ನಗರವನ್ನು ಆಕ್ರಮಿಸಿದರು. ಚೀಣದ ಸೇನಾನಾಯಕರು ಯುದ್ಧದಲ್ಲಿ ತೀವ್ರಗಾಯಗೊಂಡರೆಂದು ಸುದ್ದಿ ಬಂದಿದೆ

ಜಪಾನ್ ಸೈನ್ಯಾಧಿಕಾರಿಗಳು, ಪೂರ್ವಚಹಾರ್ ಪ್ರಾಂತವನ್ನು ಮಂಗೋಲಿಯನ್ನರಿಗೆ ಬಿಟ್ಟುಕೊಡಬೇಕೆಂದು ಚೈನದವರನ್ನು ಕೇಳಿದ್ದಾರೆ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ೧೧೮ ಜಗದ್ಗುರು ಶ್ರೀಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ವರ್ಧಂತ್ಯುತ್ಸವ ಹಾವೇರಿ

ಪ್ರತಿ ವರ್ಷದ ಪದ್ಧತಿಯಂತೆ ಈ ಯುವ ನಾಮ ಸಂವತ್ಸರದ ಪುಷ್ಯ ಶುದ್ಧ ... ಸೋಮವಾರ ಶ್ರೀ ಜಗದ್ಗುರುಗಳವರ ವರ್ಧಂತ್ಯುತ್ಸವವು ಹಾವೇರಿಯಲ್ಲಿ ಅತಿ ವೈಭವದಿಂದ ನಡೆಯಿತು. ಶ್ರೀ ... ಗುರು ... ಭಕ್ತರು ... ಸನ್ನಿಧಾನ ... ಇಂದಿಗೆ ಹತ್ತು ವರ್ಷಗಳ ... ಶ್ರೀಮದ್ ... ತಪೋನುಷ್ಠಾನ ಬಲದಿಂದ ... ನಿರ್ವಿಘ್ನವಾಗಿ ಜರಗುತ್ತ ಹಾವೇರಿಯ ... ಮಂಡಲಿಗೆ ಶ್ರೀ ಪೂಜ್ಯರ ಪರಮ ವರ್ಧಂತ್ಯುತ್ಸವದ ... ವೆಯು ದೊರೆತದ್ದು ಉತ್ತರೋತ್ತರ ಶ್ರೇಯೋಭಿವೃದ್ಧಿಗೆ ಕಾರಣವಾಗಿದೆ ಎಂದು ಹೇಳಲು ... ತೋಷವು ಓಗುತ್ತದೆ. ಪದ್ಧತಿಯಂತೆ ಸೂರ್ಯೋದಯ ವೇಳೆಗೆ ಶ್ರೀ ಜಗದ್ಗುರುಗಳವರ ಅನುಷ್ಠಾನದೊಡನೆ ಗೋತ್ರ ... ಸಹಸ್ರ ಬಿಲ್ವ ... ಮಧ್ಯಾಹ್ನ ... ಶ್ರೀ ... ಭಕ್ತರ ... ಸಂತರ್ಪಣೆಯು ಜರುಗಿತು. ಈ ಮಹೋತ್ಸವಕ್ಕೆ ಅನೇಕ ... ದೇಶದಿಂದ ... ವಾಸಿಗರು ... ಘಂಟೆಗೆ ವ್ಯಾಸ ... ಶ್ರೀ ... ಪೂಜ್ಯರ ... ವವು ಜರುಗಬೇಕೆಂದು ನಿರ್ಣಯಿಸಿ ... ಬಿರುದ ವೋಲಗದೊಡನೆ ಉತ್ಸವ ... ಹೊಸಪೇಟೆ ಹಳೆಪೂರು ... ಪೇಟೆ ಮತ್ತು ... ವಿಜೃಂಭಣೆಯಿಂದ ಜರುಗಿತು. ... ಮಸ್ಕಿ ಮಠ್ಯೆ ಗುರು ... ತನ್ನ ... ಮನೆಯ ಮುಂದೆ ... ಸತ್ಕಾರ ... ನೈವೇದ್ಯ ... ಪಡೆದರು ... ಲಂಗಲೂ ಭಜನೆ ... ನಗರದಲ್ಲೂ ... ಉತ್ಸವವು ವಿಜೃಂಭಣೆಯಿಂದ ಜರುಗಿ ... ಟಕ್ಕೆ ಒಂದಿತು. ಮಹಾ ... ದರು ... ದಿಂದವತರಿಸಿ ... ಸನ್ನಿಧಾನ ... ಕೂಡಲೆ ಸರ್ವರೂ ಜಯಧ್ವನಿಗೈದು ... ಮಂಟಪದಲ್ಲಿ ಸ್ತ್ರೀಪುರುಷರು ... ಭಕ್ತವೃಂದವು ... ಕ್ರಮದಂತೆ ಕರೂರ ಮಠದ ಗವಯಿ ಗುರು ... ಯ್ಯನವರ ಸಂಗೀತವು ಜರುಗಿತು. ... ಸಂಸ್ಥಾನದ ... ವೇ|| ಪಂಡಿತ ಧರ್ಮ ಭೂಷಣ ಹರೀಶ್ವರ ಶಾಸ್ತ್ರಿಗಳು ಮೊದಲು ಕಾರ್ಯಕ್ರಮವನ್ನು ಸೂಚಿಸಿದ ಪ್ರಕಾರ ಮೈಸೂರು ಚಿಕ್ಕ ... ಸೆಯಿಂದ ಮಹಾಪ್ರಸಾದ ... ಸಮಯಗಳಲ್ಲಿ ಮಹಾಗುರು ... ಕೆಯಾಗಿ ಶ್ರೀ ಮಠ ಸನ್ನಿಧಾನದ ಪೂಜಾನುಷ್ಠಾನಕ್ಕೆ ... ಧರಿಸತಕ್ಕ ವಸ್ತ್ರಗಳೂ ... ಮಾನುಗಳೂ ಕಳುಹಿಸಲ್ಪಡುತ್ತಿದ್ದಂತೆ ಈ ಸಮಯದಲ್ಲಿಯೂ ಪೂಜಾ ಸಾಮಾನುಗಳೊಡನೆ ... ಅಮೂಲ್ಯ ವಸ್ತುಗಳು ಕಳುಹಿಸಲ್ಪಟ್ಟಿದ್ದರಿಂದ ... ಗಳನ್ನು ತಂದ ಶ್ರೀಮಾನ್ ವಿಶ್ವೇಶ್ವರಯ್ಯನವರಿಂ... ವರ ಮಹಾ ಸಭೆಯಲ್ಲಿ ಶ್ರೀ ಸನ್ನಿಧಾನಕ್ಕೆ ಸಮರ್ಪಿಸಿದರು. ಮಹಾಸಂಸ್ಥಾನದ ಪರಿವಾರದವರಿಂದಲೂ ಗ್ರಾಮ ಗ್ರಾಮಾಂತರಗಳಿಂದ ಆಗಮಿಸಿದ್ದ ಸತ್ಪುರು... ಷರಿಂದಲೂ ... ಕೆಯು ಸಮರ್ಪಿಸಲ್ಪಟ್ಟಿತು. ಬೆಂಗಳೂರು ಮಹಾಂತಿನ ಮಠಾಧ್ಯಕ್ಷ ಶ್ರೀ|| ಷ|| ಗಂಗಾಧರ ಶಿವಾಚಾರ್ಯರ ಮುಖದಿಂದ ಶ್ರೀ ಪ್ರಸಿದ್ಧ ಗ್ರಂಥಕರ್ತರಾದ ... ಕಣಿ ... ನಾಥ ಇವರು ತಾವು ಬರೆದ ... ಗ್ರಂಥರತ್ನಗಳನ್ನು ಸನ್ನಿಧಾನಕ್ಕೆ ಕಾಣಿಕೆಯಾಗಿ ಸಮರ್ಪಿಸಿದರು. ಈ ವಿದ್ವನ್ಮಣಿಗಳು ನಮ್ಮ ... ರಾಜ್ಯಕ್ಕೆ ಪರಿಚಿತರಾಗಿರುವದರಿಂದ ಇವರ ಗ್ರಂಥ ರಚನಾ ಚತುರತೆಗೂ ದೇಶೋಪಕಾರಕ್ಕೂ ಮೊದಲಾದ ಗುಣಕ್ಕೂ ಸಂತೋಷಪಟ್ಟು ... ವಿತು ಪಕ್ಷದ ಅನೇಕ ಕಡೆ ಸೇವೆಯನ್ನು ಮಾಡಿದ್ದ ವೇ|| ಎಲೆಹೊ...

ಮಠದ ... ಮಾಸ್ತರ ... ಬಸವಪ್ಪಯ್ಯನವರು ... ಗವಯಿ ಗುರುಬಸಯ್ಯನವರ ... ಜನರೆಲ್ಲರ ಮನಸ್ಸು ... ಇಂದ್ರಜಾಲ ... ಗಣಿಸಲ್ಪಟ್ಟವು. ... ಶ್ರೀ ... ಸ್ವಾಮಿಗಳವರ ... ವನ್ನು ವರ್ಣಿಸಿದನಂತರ ಶ್ರೀ ಜಗದ್ಗುರುಗಳವರ ... ವನ್ನು ... ಇದರ ... [illegible]

ರೆ ಶಿಷ್ಯಾದಿಗಳನ್ನು ಬರಮಾಡಿಕೊಂಡು ಆಲೋಚನೆ ಮಾಡಲಾಯಿತು. ಉತ್ತರಾಧಿಕಾರಕ್ಕಾಗಿ ಇದೇ ... ರದ ಮಾಘಮಾಸಕ್ಕೆ ಜನರಲ್ ಮೀಟಿಂಗ್ ಮಾಡಬಹುದಾಗಿ ... ಗಡವರನ್ನು ಗುಂತಕಲ್ ಮೊಕ್ಕಾಮಿಗೆ ... ಮಾಡಿಕೊಳ್ಳುವ ಆಲೋಚನೆಗಾಗಿ ಗುರುಸೇವಾಧುರೀಣರಾದ, ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಆರೋಗ್ಯನಿರೀಕ್ಷಣೆಯಿಂದ ಆಲೋಚನೆ ಅಮುಕ್ತ ಜಾರಿತಲು ರಿಜಲ್ಟ್ ಮಾಡಿ ಉಭಯ ಶ್ರೀಗಳವರು ಶ್ರೀ ಶಿವಾಧರಶಾಸ್ತ್ರಿಗಳವರಿಗೆ ಶ್ರೀ ಜಗದಾಚಾರ್ಯರ ಜಾಗ್ರತೆ ಆರೋಗ್ಯವನ್ನುಂಟುಮಾಡಲೆಂದು ಆಶೀರ್ವಾದ ಶ್ರೀಮುಖವನ್ನು ಮೈಸೂರಿಗೆ ಬರಮಾಡಿದರು.

ಶ್ರೀ ವಯೋವೃದ್ಧರಾದ ಜಗದ್ಗುರು ಪೂಜ್ಯಪಾದರವರಿಗೆ ವೇ|| ಭಂಗಾರಶನಹಳ್ಳಿ ಚಿಕ್ಕನಹಳ್ಳಿ ಹಿರೇಮಠಾಧಿಕಾರಿಗಳಾದ ಕೈ|| ಚನ್ನಬಸವದೇವರ ಜ್ಯೇಷ್ಠ ಪುತ್ರ ಮರುಳಸಿದ್ಧದೇವರು ಗುರುಭಕ್ತಿ ನಿಷ್ಠರಾಗಿ ಪಾದಪೂಜಾದಿ ಗಣಾರಾಧನೆಯನ್ನು ಮಾಡಿಸಿ ಕೃತ... ಶಿರ ... ದಕ್ಕೆ ಪಾತ್ರರಾದರು.

ಶ್ರೀ ಜಗದ್ಗುರುಗಳವರು ಉಜ್ಜಯಿನಿ ಸಂಸ್ಥಾನ ಆನರರಿ ಏಜಂಟರಾದ ವೇ|| ಆರ್ ಎಚ್ ಎಂ ಮು... ಪೇಂದ್ರಸ್ವಾಮಿಯವರಿಗೂ ಸದರಿ ಮರುಳಸಿದ್ಧದೇವರಿಗೂ ಯಳಗೋಡು ಭಕ್ತರಾದ ತಿಪ್ಪಣ್ಣನವರಿಗೂ ಫಲ ... ದ ಪುಷ್ಪಹಾರಾದಿಗಳನ್ನು ದಯಪಾಲಿಸಿ ಗುರುಸೇವಾಸಕ್ತರಾಗಿ ಯಶಸ್ವಿಗಳಾಗಬೇಕೆಂದು ಸೂಚಿಸಿ ಪ್ರಯಾಣಕ್ಕೆ ಅಪ್ಪಣೆಮಾಡಿದರು. ಉತ್ತರಾಧಿಕಾರ ಜನರಲ್ ಮೀಟಿಂಗ್ ತಾರೀಖ್ ಮುಂದೆ ಪ್ರಕಟಿಸಲಾಗುವದು.

ಏಜಂಟ್ ಶ್ರೀ ಜಗದ್ಗುರು ಸಂಸ್ಥಾ[ನ]

ಗುರುಮಹೇಶ್ವರನ ಜಾತ್ರೆ, ದಾವಣಗೆರೆ

೧೯೩೫ನೆಯ ಡಿಸೆಂಬರ್ ೨೫ನೆಯ ಮಂಗಳವಾರ ಮತ್ತು ೨೬ನೆಯ ಬುಧವಾರ ಈ ದಿವಸಗಳಲ್ಲಿ ದಾವಣಗೆರೆ ತಾಲ್ಲೂಕು ಬಸಾಪುರಗ್ರಾಮದಲ್ಲಿ ಶ್ರೀ ಗುರುಮಹೇಶ್ವರನ ಜಾತ್ರೆಯು ಪದ್ಧತಿ ಪ್ರಕಾರ ವಿಜೃಂಭಣೆಯಿಂದ ನೆರವೇರುವುದು. ಆದುದರಿಂದ ಭಕ್ತಮಹಾ ಜನಗಳು ಸಕಾಲಕ್ಕೆ ಬಂದು ಶ್ರೀ ಗುರುಮಹೇಶ್ವರನಿಗೆ ಕಾಣಿಕೆ ಮಂಡುವು ಮೊದಲಾದವುಗಳನ್ನು ಸಲ್ಲಿಸಿ ಪುನೀತರಾಗಬೇಕಾಗಿ ಕೋರಿಕೆ.

೧೯೩೬ನೆಯ ಡಿಸೆಂಬರ್ ತಿಂಗಳಲ್ಲಿ ನೆರವೇರುವ ಶ್ರೀ ಗುರು ಬಕ್ಕೇಶ್ವರನ ಕಾರ್ತೀಕ ಮಹೋತ್ಸವವು ಬಹು ವಿಜೃಂಭಣೆಯಿಂದ ನೆರವೇರುವುದು. ಆದ್ದರಿಂದ ಸರ್ವ ಭಕ್ತ ಮಹಾಜನಗಳು ಸಕಾಲಕ್ಕೆ ಆಗಮಿಸಿ ಉತ್ಸವದಲ್ಲಿ ಭಾಗಿಗಳಾಗಬೇಕಾಗಿ ಪ್ರಾರ್ಥನೆ.

ಮೋಂಡರಗಿ ವೀರಪ್ಪ,
ದಾವಣಗೆರೆ

ಸೌಕರ್ಯದ ಯಾತ್ರೆಗಳ ! ಚಾರ್ಜು ಬಹಳೇ ಸುಲಭ !! ಪ್ರಸಿದ್ಧ ಪುಣ್ಯಕ್ಷೇತ್ರಗಳು !!!

ಉತ್ತರ ಮತ್ತು ದಕ್ಷಿಣ ಹಿಂದೂಸ್ಥಾನ ಮಹಾಯಾತ್ರೆ

ಶ್ರೀಕಾಶೀ ರಾಮೇಶ್ವರ ಮಹಾಯಾತ್ರೆಯು

ತಾ|| ೨೫—೧೨—೩೫ ರಿಂದ ತಾ|| ೧೫—೨—೩೬ ರ ವರೆಗೆ.

ಪ್ರಸಿದ್ಧ ೫೦ ಕ್ಷೇತ್ರಗಳು

ಟ್ರೇನಿನಲ್ಲಿ ಒಬ್ಬರಿಗೆ ಇಬ್ಬರ ಸ್ಥಳ ಸಿಗುವದು ಸೆಕೆಂಡ್ ಕ್ಲಾಸ್ ೩೦೦ ರೂ ಥರ್ಡ್ ಕ್ಲಾಸ್ ೧೮೦

ರಿಜಿಸ್ಟರ ಮಾಹಿತಿಗಾಗಿ ಪತ್ರ ಬರೆಯಬೇಕು.

೩೦ ಜನ ಯಾತ್ರಿಕರನ್ನು ಕೂಡಿಸಿಕೊಟ್ಟವರನ್ನ ಪುಕಟ್ ಯಾತ್ರೆಗೆ ಕರೆದುಕೊಂಡು ಹೋಗುವೆವು

ಏಜಂಟರಿಗೆ ಯೋಗ್ಯ ಕಮಿಷನ್ ಸಿಗುವದು ಪತ್ರ ಬರೆಯಬೇಕು ಅಥವಾ ಸಮಕ್ಷಮ ಭೆಟ್ಟಿಯಾಗಬೇಕು

ಜವಾಬ ... (೮)

ಶಿವಾನಂದ ಯಾತ್ರಾಕಂಪನಿ
ಬಸ್ಥಟ್ಟಿ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭೂತಳದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ನೂರಾರು ಶಿಷ್ಯರ ಮನೆಗಳಿರುತ್ತಿದ್ದು ಆ ಮಠಾಧಿಕಾರಿಗಳು ಹತ್ತುವರ್ಷಕ್ಕೋ ಹನ್ನೆರಡುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ತಪ್ಪಿಸುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಿಸಿಕೊಳ್ಳುತ್ತೇವೆ, ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸಕಲ ಭಕ್ತರು ತಮ್ಮ ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ಕರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶಿ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ ಪಿ ಚಾರ್ಜ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿಖಾರತ್ನದಂತೆ ಪ್ರಖ್ಯಾತಿಹೊಂದಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಕಾಶಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೦ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೬೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುರ್ಲಭವಾದ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ ಪಿ ಚಾರ್ಜ ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಒಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳ ಸಂಕ್ಷೇಪದಲ್ಲಿ ದೊರೆಯುವವು.

ಔಷಧ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೨—೦—೦
ಸ್ವರ್ಣಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಮ್ರಸಿಂದೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ರಸವಂಗ	೧	೧—೦—೦

ಭಸ್ಮಗಳು.

ಔಷಧ ಹೆಸರು	ತೊಲೆ	ಮೌಲ್ಯ
ಸ್ವರ್ಣಭಸ್ಮ	೧	೪೦—೦—೦
ರೌಪ್ಯಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ವಿಶಾಲ್ಯಭಸ್ಮ	೧	೦—೮—೦
ಜಸದಭಸ್ಮ	೧	೦—೮—೦
ಶಂಖಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪರ್ದಿಕೆಯ ಭಸ್ಮ	೧	೦—೮—೦
ಶೃಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್ —ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಒಖಿಮಠ, ಜಿಲ್ಲಾ ಗಢವಾಲ್ ಯು. ಪಿ

ಮನೋಹರವಾದ ಫೋಟೋಗಳು.

	ರೂ ಅ ಪೈ
ಶ್ರೀ ರೇಣುಕಾಚಾರ್ಯರ ಬಂಧಕ್ಕೆ ಅಷ್ಟಕಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ ದಧೀಚಿ ವ್ಯಾಸ ಸನಂದ ಮೊದಲಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೦×೧೬ ಬೆಲೆ	೦—೧—೬
ಸತ್ಯ ಪಿ ರಾಠೊ ಪಾದಪೂಜಿತರಕ್ತ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೬×೧೨ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಧೂಳಿಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿ ಮೂರು ಕೋಟಿ ಶಿವಲಿಂಗಗಳನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀ ಮದುಜ್ಜಯಿನಿ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿ ಅವರು [illegible] ಫೋಟೋ	೦—೦—೯
ಪಂಡಿತ ಶಿ. ಕಾ. ಶಿ. ನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಶ್ರೀ ರಂಭಾಪುರಿ ಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಶಾಲೆಯ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸ ಲಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೆ ಫೋಟೋ ಗಳಿಗೆ ೧ ರೂಪಾಯಿಗೆ ೧ ಆಣೆ ರಂತೆ ಕಮಿಷನ್ ಕೊಡಲಾಗುವುದು

ವ್ಯವಸ್ಥಾಪಕರು—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ[illegible] ಕಂಡುಹಿಡಿಯಲ್ಪಟ್ಟು ಸಾವಿರಾರುಮಂದಿಗಳು ಇದ[illegible] ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ[illegible]

ಗಳನ್ನು ಕೊಟ್ಟಿ[illegible] ರು. ಪ್ರಸಿದ್ಧವಾದ[illegible] ನಶ್ಯದ ಪುಡಿಯಿಂ[illegible] ಸ್ವಸ್ಥವಾಗುವ ವ್ಯಾ[illegible]ಧಿಗಳು ಯಾವವೆಂ[illegible]ರೆ —ಪೀನಸ, ಒಂ[illegible] ತಲೆನೋವು ತಲೆ[illegible]ಳ್ಳಿಯ ರೋಗಗಳು[illegible] ಕಣ್ಣುಗಳಲ್ಲಿ ಉಂಟಾ[illegible] ಗತಕ್ಕ ಸರ್ವವ್ಯಾದಿಗಳು, ಒಂದೋಪ ಮಂತ್ರ[illegible] ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ [illegible]ಲ್ಪಟ್ಟ ಕಫ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ[illegible]ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿ[illegible] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿ[illegible]ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಒಳ್ಳೆ[illegible] ಪರಿಮಳವಾಗುವುದು. ಇದನ್ನು ಅನೇಕ ಪ್ರಮುಖ[illegible] ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ[illegible] ಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗು[illegible]

ಬುಡ್ಡಿ ಒಂದಕ್ಕೆ ಕ್ರಯ ರೂ ೦ ೪ ೦ ವಿ. ಪಿ. ೦ ೪[illegible]
ಡಜನ್ ಒಂದಕ್ಕೆ ಕ್ರಯ ರೂ ೩ ೮ ೦ ವಿ. ಪಿ. ೮ ಆ[illegible]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೧೯] ಪೋ. ಬಾ. ೫೧೦ ಮದರಾಸ್[illegible]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೩ ಆಣೆ
ಮರುಳಸಿದ್ಧೇಶ್ವರಸ್ತೋತ್ರ	[illegible]
ಗೋತ್ರಸೂತ್ರಪಟ (೪ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಪರಾಮರ್ಶ (೩ನೆಯ ಆವೃತ್ತಿ ಸಂಸ್ಕೃತ)	[illegible]
ಪಂಚವಿಂಶತಿ ಪ್ರಶ್ನೆಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೩ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ಸಿದ್ಧತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಗುರುಸ್ವರೂಪಸ್ವಪ್ನದೀಪಿಕೆ	೩ ಆಣೆ
ಶ್ರೀ ರುದ್ರಮುನಿಶಿವಾಚಾರ್ಯ ಶತಕ	೩ ಆಣೆ
ವೀರಶೈವಮತವಿಚಾರಮೀಮಾಂಸಾ ..	೪ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) .	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೮ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೩ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ .	೪ ಆಣೆ
ಆಗಮಪರಿಜ್ಞಾನ . .	೮ ಆಣೆ
ಶಿವಾಧಿಕ್ಯರತ್ನಾವಳಿ (ಸದಕ್ಷರ ಕವಿಕೃತ)	೮ ಆಣೆ
ಬಸವದ್ಧ್ವಾಂತ ದಿವಾಕರ (೩ನೆಯ ಆವೃತ್ತಿ) .	೮ ಆಣೆ

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಯವರ ಭಾಷಣಮು (ತೆಲುಗು)	೮ ಆಣೆ
पण्डित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 A[illegible]
ವೀರಶೈವರತ್ನ (೪ನೆಯ ಆವೃತ್ತಿ) ..	೧೨ ಆಣೆ
ವೈದಿಕಶಿವಪೂಜಾ ವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಹಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾದ್ವೈತಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ...	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ) ..	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕೆ) ..	೧ ರೂ
ವೀರಶೈವಸಿದ್ಧಾಂತಸುಧಾಕರ ...	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೩೮ ಪುಟ)	೮ ರೂ
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ ಗೆ ೩ ಆಣೆಯಂತೆ ಕಮಿಷನ್ ಕೊಡಲಾಗುವುದು.

ವ್ಯವಸ್ಥಾಪಕರು—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ರಾ|| ಬ್ರ|| ಪಂಡಿತ ಶಿವ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿತ ಪ್ರಕಾಶಿತವು

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ ೮ ಆಣೆ ವಿ. ಪಿ. ಚಾರ್ಜ್ ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ನೇ ಡಿಸೆಂಬರ್ ೧೯೩೫ [ಸಂಚಿಕೆ ೩೩

ಹುಬ್ಬಳ್ಳಿಯ ವೀರಶೈವ ಮಹಾಜನಗಳ ಬಹಿರಂಗಸಭೆ

ಶ್ರೀಮಜ್ಜಗದ್ಗುರು ಪಂಚಾಚಾರ್ಯರ ವಿಷಯದಲ್ಲಿ ದ್ವೇಷಾಪೂರಿತವಾಗಿ ಬರೆದಿರುವ ಪುಸ್ತಕಗಳನ್ನೂ ಪತ್ರ ಲೇಖಗಳನ್ನೂ ಖಂಡಿಸುವ ಬಗ್ಗೆ ಈ ಮೊದಲು ಪ್ರಸಿದ್ಧಪಡಿಸಿದಂತೆ ಶ್ರೀಮಾನ್ ಎಸ್ ಸಿ ಹಾಲೇವಾಡಿಮಠ ಬಿ ಎ, ಎಲ್ ಎಲ್ ಬಿ ಪ್ಲೀಡರ್, ಹುಬ್ಬಳ್ಳಿ ಇವರ ಅಧ್ಯಕ್ಷತೆಯಲ್ಲಿ ಈ ಸಭೆಯು ತಾ|| 1-12-35ನೆಯ ರಾತ್ರಿ 8 ಘಂಟೆಗೆ ಹುಬ್ಬಳ್ಳಿಯ ಬೊಮ್ಮಾಪುರ ರಸ್ತೆಯಲ್ಲಿ ನೆರವೇರಿತು

ಈಗ ಕೆಲವು ದಿವಸಗಳ ಹಿಂದೆ ಹುಬ್ಬಳ್ಳಿ ಓಲಿಪುರದಲ್ಲಿ ಮಿ|| ಕಲ್ಬುರ್ಗಿ ಬಿ ಎ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮುಖ್ಯಭಾಷಣಕಾರರಾದ ಮಿ|| ಎಸ್ ಡಿ ಪಾವಟೆ ಬಿ ಎ, ಎಲ್ ಎಲ್ ಬಿ ಪ್ಲೀಡರ್ ಇವರು ತಮ್ಮ ಭಾಷಣದಲ್ಲಿ "ಬಸವ ಪ್ರಾಂತ ದಿವಾಕರ" ಎಂಬ ಪುಸ್ತಕವನ್ನು ಖಂಡಿಸಿ ಮಾತನಾಡಿದ್ದಲ್ಲದೆ ಶ್ರೀಮಜ್ಜಗದ್ಗುರುಗಳ ವಿಷಯದಲ್ಲಿ ತಿರಸ್ಕಾರಪೂರಿತವಾದ ಮಾತುಗಳನ್ನು ಉಪಯೋಗಿಸಿದರು ಈ ಸಂದರ್ಭದಲ್ಲಿ ನಿಷ್ಪಕ್ಷಪಾತಿಗಳಾದ ಕೆಲವರು ಮಾತನಾಡಲು ಯತ್ನಿಸಿದರೂ ಅವಕಾಶಕೊಡಲಿಲ್ಲವಾದ್ದರಿಂದ ಬೇರೆ ಸಭೆಯನ್ನು ಕೂಡಿಸಬೇಕಾಯಿತು,

(1) ಈ ಸಭೆಯಲ್ಲಿ ಮ|| ರಾ|| ಮೆಣಸಿನಕಾಯಿ ಸ್ಕೂಲು ಟೀಚರು ಮತ್ತು ಸಿದ್ಧಪ್ಪ ಹುಗಾರ ಇವರುಗಳು ತಾತ್ಕಾಲಿಕ ವೀರಶೈವ ಸಮಾಜದ ಸ್ಥಿತಿಯನ್ನೂ ಶ್ರೀ ಜಗದ್ಗುರು ಪಂಚಾಚಾರ್ಯರ ವಿಷಯವನ್ನು ಕುರಿತು ಭಾಷಣಮಾಡಿದರು ಅನಂತರ ಮಿ|| ಪಿ ಐ ಹಿರೇಮಠ ಪ್ಲೀಡರ್ ಹುಬ್ಬಳ್ಳಿ ಇವರು, "ವೀರಶೈವಗತವೈಭವ" ಎಂಬ ಶಿರೋನಾಮದಿಂದ, ಲೇಖಕನ ಹೆಸರಾಗಲಿ ಪ್ರಿಂಟಿಂಗ್ ಪ್ರೆಸ್ಸಿನ ಹೆಸರಾಗಲಿ ಇಲ್ಲದೇ ಪ್ರಕಟಿಸಲ್ಪಟ್ಟಿರುವ ದೋಷಾರೋಪಣೆಗಳಿಂದ ಕೂಡಿದ ಲೇಖನವನ್ನು ಮತ್ತು ಪಂಚಾಚಾರ್ಯರ ವಿಷಯಕವಾದ ಇತರ ಅವಾಚ್ಯಗಳಿಂದ ಕೂಡಿದ ಓಂವಣಿಗೆಗಳನ್ನೂ ಪುಸ್ತಕಗಳನ್ನೂ ಓದಿ ತೋರಿಸಿದ್ದಲ್ಲದೆ ಅವುಗಳನ್ನು ಬರೆದವರನ್ನೂ, ಅವುಗಳನ್ನು ಪ್ರಕಟಿಸಲು ಸಹಾಯ ಮಾಡಿದವರನ್ನೂ ಖಂಡಿಸಿ ಮಾತನಾಡಿದರು

(2) ಅನಂತರ ಮಿ|| ಹಿರೇಮಠ ಇವರು ಮೇಲ್ಕಂಡ ಲೇಖಗಳನ್ನೂ ಅವುಗಳನ್ನು ಬರೆದವರನ್ನೂ ಅವಕ್ಕೆ ಸಹಾಯಕರನ್ನೂ ಖಂಡಿಸುವ ಠರಾವನ್ನು ಸಭೆಯ ಮುಂದಿಟ್ಟರು ಸದರಿ ಠರಾವಿಗೆ ಮಿ|| ಮಲ್ಲಪ್ಪ ಬೀರಂಪುರ ಇವರು ತಮ್ಮ ಸಹಾನುಭೂತಿಯನ್ನು ಸೂಚಿಸಿದರು ಅನಂತರ ಠರಾವು ಏಕವಾಕ್ಯದಿಂದ ಅನುಮೋದಿಸಲ್ಪಟ್ಟಿತು

(3) ನಿಷ್ಕಾರಣವಾಗಿ ಭಕ್ತರಲ್ಲಿರುವ ಭಕ್ತಿವಿಶ್ವಾಸಗಳನ್ನು ಹಾಳುಮಾಡಲು ಮಿ|| ಪಾವಟೆಯವರೂ ಮತ್ತು ಅವರ ಕಡೆಯವರೂ ನಡೆಸುತ್ತಿರುವ ನಿರಾಧಾರವೂ ನಿಷ್ಕಾರಣವೂ ಆದ ಚಳುವಳಿಯೂ ಕೂಡ ಏಕವಾಕ್ಯತೆಯಿಂದ ಸಭಿಕರಿಂದ ಖಂಡಿಸಲ್ಪಟ್ಟಿತು

(4) ಈ ಸಭೆಯವರು, ಹುಬ್ಬಳ್ಳಿಯ ಭಕ್ತರು ತಮ್ಮಲ್ಲಿಗೆ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡಿರುವ ಪಂಚ ಮಹಾಪೀಠಗಳಲ್ಲೊಂದಾದ ಬಾಳೇಹೊನ್ನೂರು ಪೀಠದ ಮಹಾಸ್ವಾಮಿಗಳ ವಿಷಯದಲ್ಲಿ ಹುಬ್ಬಳ್ಳಿಯ ಪ್ರಜೆಗಳ ಇಷ್ಟಕ್ಕೆ ವಿರೋಧವಾಗಿ ಅವಮರ್ಯಾದ ಯುತವಾದ ಭಾವನೆಗಳಿಂದ ಭಕ್ತರ ಭಕ್ತಿಗೆ ಕುಂದು ತರಲು ಮಿ|| ಪಾವಟೆಯವರಿಂದಲೂ ಮತ್ತು ಅವರ ಕಡೆಯವರಿಂದಲೂ ಆಗಾಗ್ಗೆ ನಡೆಸಲ್ಪಡುವ ಯಾವ ಸಭೆಗೂ ಹೋಗಕೂಡದೆಂದು ತೀರ್ಮಾನಿಸಿದರು

(5) ಈ ಸಭೆಯಲ್ಲಿ ಪಾಸಾದ ಠರಾವನ್ನು ಕೆಳಗೆ ನಮೂದಿಸಿರುವರಿಗೆಲ್ಲಾ ಕಳಿಸಿಕೊಡಲು ಸಭಾಧ್ಯಕ್ಷರಿಗೆ ಅಧಿಕಾರವು ಕೊಡಲ್ಪಟ್ಟಿತು

(1) ಪಂಚಸಿಂಹಾಸನಾಧಿಪತಿಗಳಿಗೆ (a) ಕಾಶಿ (b) ಹಿಮವತ್ಕೇದಾರ (c) ಶ್ರೀಶೈಲ (d) ಬಾಳೇಹೊನ್ನೂರು (e) ಉಜ್ಜಯಿನಿ

(2) ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಮೈಸೂರು.

(3) ದಿವಾನ್ ಬಹದ್ದೂರ್ ಎಸ್ ಟಿ ಕಂಬಳಿ ಬಿ ಎ, ಎಲ್ ಎಲ್ ಬಿ ಬೊಂಬಾಯಿ ವಿದ್ಯಾ ಇಲಾಖಾ ಮಂತ್ರಿಗಳು

(4) ದಿವಾನ್ ಬಹದ್ದೂರ್ ಸರ್ ಕೆ ಪಿ ಪುಟ್ಟಣ್ಣಚೆಟ್ಟರು ಡಾಕ್ಟರ್ ಆಫ್ ಲಾ (LL D) ಬೆಂಗಳೂರು

(5) ಕಲೆಕ್ಟರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್, ಧಾರವಾಡ

(6) ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಧಾರವಾಡ

ಹುಬ್ಬಳ್ಳಿ, ತಾ|| 7-12-35 ಎಸ್ ಸಿ ಹಾಲೇವಾಡಿಮಠ ಬಿ ಎ, ಎಲ್ ಎಲ್ ಬಿ

ಸ್ವೀಕಾರ

ಅನಂತಪುರ ಡಿ|| ಕೊಂಡಕುಂದಿ ಗ್ರಾಮದ ಶಿಲಾಮಠದ ಕೈ|| ಶ್ರೀಮತಿ ಬಸವಮ್ಮನವರ ಕೈಲಾಸಗಣಾರಾಧನೆಯ ಸಮಯದಲ್ಲ ಅವರ ಆತ್ಮಶಾಂತ್ಯರ್ಥವಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಶ್ರೀ ಶಿಲಾಮಠದ ಷ|| ಬ್ರ|| ಶಿವಶಂಕರ ಶಿವಾಚಾರ್ಯ ಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ದುಃಖವಾರ್ತೆ.

ಅನಂತಪುರ ಡಿ|| ಕುಂಡಕುಂದಿ ಶಿಲಾಮಠದ ಗುರು ಶಾಂತಮೂರ್ತಿಗಳವರ ಧರ್ಮಪತ್ನಿಯರಾದ ಬಸವಮ್ಮನವರ ಕೆಲವುದಿನಗಳಿಂದ ದಂತರೋಗಪೀಡಿತೆಯರಾಗಿ ಇದೇ ಮಾರ್ಗಶಿರ ೯ ಬುಧವಾರ ಹಗಲು ೩ ಘಂಟೆಯ ಸಮಯದಲ್ಲಿ ಶಿವನಾಮೋಚ್ಚಾರಣೆಯಿಂದ ತಮ್ಮ ಜಡಶರೀರವನ್ನು ಬಿಟ್ಟು ಶಿವಸಾಯುಜ್ಯವನ್ನು ಹೊಂದಿದರು ಶ್ರೀ ಬಸವಮ್ಮನವರು ಪತಿವ್ರತಾಶಿರೋಮಣಿಗಳೂ ಸದಾಚಾರದಯಾದಾಕ್ಷಿಣ್ಯಾದಿ ಗುಣಸಂಪನ್ನೆಯರೂ ಆಗಿದ್ದರು ಈ ಪತಿವ್ರತಾಶಿರೋಮಣಿಗಳ ಗುಣವರ್ಣನೆಯನ್ನು ಮಾಡಿದ್ದಾದರೆ ಚರಿತ್ರಾತ್ಮಕವಾದ ದೊಡ್ಡ ಗ್ರಂಥವೇ ಆಗುವುದು ಇಂತಹ ಸದ್ಗುಣಸಂಪನ್ನೆಯಾದ ಬಸಮ್ಮನವರು ಗುರುವರ್ಗದ ಮನೆತನದವರಾದಕಾರಣ ಭಕ್ತರ ಸುವಾಸಿನಿಯರು ಮಂಗಳಕಾರ್ಯಗಳಲ್ಲಿ ದಂಪತಿಪೂಜಾವಿಧಿಯಿಂದ ಇವರನ್ನು ಪೂಜಿಸುತ್ತಿದ್ದರು. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ||' ಎಂಬ ವಾಕ್ಯದಂತೆ ಇವರ ಪ್ರದೇಶವು ಶಿವಸಾನ್ನಿಧ್ಯ ಉಳ್ಳದ್ದಾಗಿರುವದು ಇವರ ಸದುಪದೇಶದಿಂದ ಬಳ್ಳಾರಿ ಅನಂತಪುರಪ್ರಾಂತಗಳ ಸ್ತ್ರೀಜನರು ಪತಿವ್ರತಾಧರ್ಮಪರಾಯಣೆಯರೂ ಸದಾಚಾರಸಂಪನ್ನೆಯರೂ ಆಗಿರುವರು ಇಂತಹ ಸನ್ಮಾರ್ಗದರ್ಶಿಕೆಯರನ್ನು ಕಳೆದುಕೊಂಡದ್ದು ವೀರಶೈವ ಸಮಾಜದ ದುರ್ದೈವವೇ ಸರಿ ಶ್ರೀ ಬಸಮ್ಮನವರಿಗೆ ಮೂವರು ಪುತ್ರರೂ ನಾಲ್ವರು ಪುತ್ರಿಯರೂ ಪೌತ್ರರೂ ಇರುವರು ಇವರ ಕೈಲಾಸಗಣಾರಾಧನೆಯನ್ನು ಇವರ ಪುತ್ರರಾದ ವೇ|| ಶಿವಯೋಗೀಶ್ವರಶಾಸ್ತ್ರಿಗಳವರು ವಿಧಿವತ್ತಾಗಿ ನೆರವೇರಿಸಿದರು ಮೃತರ ಆತ್ಮಕ್ಕೆ ಶಾಶ್ವತವಾದ ಮೋಕ್ಷಸುಖವನ್ನುಂಟುಮಾಡಲೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ.

ಓರ್ವ ದುಃಖಭಾಗಿ.

ಹೈದರಾಬಾದಿನ ನಿಜಾಮರ ಆಳ್ವಿಕೆಯ 25 ನೆಯ ವರ್ಷವು ಕಳೆದ ಬುಧವಾರ 4 ನೇ ತಾರೀಖಿಗೆ ಪೂರ್ಣವಾದ್ದರಿಂದ ಆ ದಿವಸ ಮರ್ಯಾದಾರ್ಥ ತೋಪುಗಳನ್ನು ಹಾರಿಸಿ, ಕೆಲವು ಅನಿವಾರ್ಯನಿಮಿತ್ತ ಆ ದಿವಸ ನಡೆಯಬೇಕಾಗಿದ್ದ ಜ್ಯೂಬಿಲಿ ಉತ್ಸವವನ್ನು ಬರುವ ಫೆಬ್ರವರಿ ತಿಂಗಳಲ್ಲಿ ನಡೆಯುವಂತೆ ನಿಶ್ಚಯಿಸಲಾಗಿದೆ ಇದಕ್ಕಾಗಿ ಬಹಳ ಸನ್ನಾಹಗಳು ನಡೆಯುತ್ತಿರುವುದಲ್ಲದೆ ದೇಶವಿದೇಶದರಾಜರುಗಳಿಗೆಲ್ಲಾ ಆಹ್ವಾನಪತ್ರಿಕೆಗಳು ಹೋಗಿವೆ. ಈ ಉತ್ಸವವು ಅತ್ಯಂತ ವೈಭವದಿಂದ ನಡೆಯುವುದೆಂದು ನಿರೀಕ್ಷಿಸಲಾಗಿದೆ.

ಪತ್ರವ್ಯವಹಾರ.

ಚಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು

ಮಹನೀಯರ ಹಿತೋಕ್ತಿಗಳು

(ಹಿಂದಿನಂಕದ ಮುಂದಿನ ಭಾಗ)

೭೭. ಮನುಷ್ಯನಿಗೆ ಆತ್ಮಸಿದ್ಧಿಯು ಸಿದ್ಧಿಯೇ ವಿನಾ ಅಣಿಮಾದಿ ಅಷ್ಟ ಸಿದ್ಧಿಗಳು ಸಿದ್ಧಿಯಲ್ಲ ಏಕೆಂದರೆ—ಮಾನವನಿಗೆ ಒಂದು ಸಿದ್ಧಿಯು ಸಿದ್ಧವಾದಕೂಡಲೆ ಈಶ್ವರನನ್ನು ಮರೆತು ಅಹಂಕಾರಿಯಾಗುವನು, ಇಂತಹ ಅಹಂಕಾರಿಯ ಹೃದಯದಲ್ಲಿ ಆತ್ಮಾನುಭವವು ಅನಿಭವಿಸಲಾರದು

೭೮ ಜಲಪೂರಿತವಾದ ಒಂದು ಘಟದಲ್ಲಿ ಒಂದು ಮತ್ಸ್ಯವನ್ನು ಬಿಟ್ಟರೆ ಆ ಜಲವು ಅಪವಿತ್ರವೂ ದುರ್ವಾಸನಯೂ ಆಗುವದು ಆದರೆ ಪುಷ್ಕರಣಿಯಲ್ಲಿ ಎಷ್ಟೋ ಸಹಸ್ರ ಮತ್ಸ್ಯಗಳಿದ್ದಾಗ್ಯೂ ಅದರ ಜಲವು ಅಪವಿತ್ರವಾಗುವುದಿಲ್ಲವು ಕಾರಣವೇನೆಂದರೆ ಅದು ವಿಸ್ತೃತ ಪಾತ್ರೆ, ಪಾತ್ರೆಯು ಸಂಕೀರ್ಣವಾಗಿದ್ದರೆ, ಸ್ವಭಾವತಃ ಅದು ಸಾಮಾನ್ಯವಾದ ದೋಷದಿಂದಲೇ ಕಲುಷಿತವಾಗುವದು. ಬೃಹದ್ವಿಸ್ತೃತವಾದ ಆಧಾರದಲ್ಲಿ ಆಧೇಯಕ್ಕೆ ದೋಷವು ಶೀಘ್ರವಾಗಿ ಸ್ಪರ್ಶಿಸುವದಿಲ್ಲ ಆದುದರಿಂದ ಹೃದಯವು ಪವಿತ್ರವಾಗಿರಬೇಕಾದರೆ ಮೊದಲು ಅದರ ಪ್ರಸಾರವನ್ನು (ವಿಶಾಲ ಹೃದಯ) ವೃದ್ಧಿಗೊಳಿಸಬೇಕಾದುದಾವಶ್ಯಕವು

೭೯ ನಾವು ಸರ್ವದಾ ಒಂದೇ ಗೃಹದಲ್ಲಿ ಆಬದ್ಧರಾಗಿದ್ದರೆ ಶರೀರಸ್ವಾಸ್ಥ್ಯವಾಗಲೀ, ಹರ್ಷವಾಗಲೀ ಇರುವದಿಲ್ಲ ಆಗಾಗ್ಗೆ ಗೃಹದಿಂದ ಹೊರಗೆ ಹೋಗಿ ಸಂಚರಿಸಿ ಮುಕ್ತವಾಯು ಸೇವನೆಮಾಡಬೇಕಾದುದಾವಶ್ಯಕವು ಅದುಕಾರಣ ಚಿರಕಾಲವೂ ಈ ದೇಹವುದ್ದಲ್ಲಿಯೇ ಸಮಾಹಿತರಾಗಿದ್ದರೆ ಮನಸ್ವಾಸ್ಥ್ಯವಾಗಲೀ ಮನೋಲ್ಲಾಸವಾಗಲೀ ಹೇಗುಂಟಾದೀತು? ಆದುದರಿಂದ ಆಗಾಗ್ಗೆ ಮನಸ್ಸನ್ನು ಈ ದೇಹಾವರೋಧದಿಂದ ಬಿಡುಗಡೆಗೊಳಿಸಬೇಕಾದುದಾವಶ್ಯಕವು ಸರ್ವದಾ ದೇಹಾಬದ್ಧನಾಗಿದ್ದರೆ ಸ್ವಸರ್ಗಿಕ ಪುಷ್ಟಿಯಾಗಲೀ ವಿಕಸವಾಗಲೀ ಎಂದಿಗೂ ಉಂಟಾಗುವದಿಲ್ಲ

೮೦ ಮನುಷ್ಯನ ಶರೀರದಲ್ಲಿ ಸಾತ್ವಿಕ ರಾಜಸ ತಾಮಸಗುಣಗಳು ಒದಗಿ ಕಾಲದಲ್ಲಿ ಆಯಾ ಚಿಹ್ನೆಗಳಿಂದ ನಿರ್ಣಯಿಸಬಹುದು ಅದು ಹೇಗೆಂದರೆ ಕಣ್ಣು, ಕಿವಿ ಮೊದಲಾದ ಇಂದ್ರಿಯಸ್ಥಾನಗಳಲ್ಲೆಲ್ಲಾ ಮನಸ್ಸು ಪ್ರವಹಿಸಿ ವಿಷಯಗಳನ್ನು ಗ್ರಹಿಸುವ ಕಾಲದಲ್ಲಿ ಸತ್ವಗುಣವು ಪರಿವೃದ್ಧವೆಂತಲೂ ಕೆಲಸದಲ್ಲಿ ತೊಡಗಬೇಕೆಂಬ ಲವಲವಿಕೆಯೂ ಕೆಲಸವನ್ನಾರಂಭಿಸುವಿಕೆಯೂ ಹರ್ಷಾದಿಗಳಲ್ಲಿ ಪ್ರವೃತ್ತಿಯೂ ಆಗುಂಟಾಗುವ ಕಾಲದಲ್ಲಿ ರಜೋಗುಣವೂ ಅವಿವೇಕವೂ ಯಾವಕೆಲಸದಲ್ಲಿಯೂ ತೊಡಗದಿರುವದೂ ಮಾಡಬೇಕಾದ್ದನ್ನು ಬಿಡುವದೂ ಮೂಢತೆಯೂ ಹೆಚ್ಚಿದಕಾಲದಲ್ಲಿ ತಮೋಗುಣವೂ ಉದ್ಭೂತವಾಗಿರುವದೆಂದು ತಿಳಿಯಬೇಕು ಮನುಷ್ಯನ ಜನ್ಮೋದ್ಯೋಗವೂ ಮರಣಕಾಲದಲ್ಲಿ ಆಗುವ ಇವುಗಳ ಉದ್ಭೂತಿಯನ್ನವಲಂಬಿಸಿರುವದೆಂದು ಗೀತೆಯು ಹೇಳುವದು ಮನುಷ್ಯನ ಮರಣಕಾಲದಲ್ಲಿ ಸತ್ವಗುಣವು ಮೇಲೆಬಂದಿದ್ದರೆ ನಿರ್ಮಲವಾದ ಪುಣ್ಯಲೋಕಪ್ರಾಪ್ತಿಯೂ ರಜೋಗುಣದ ಉದ್ರೇಕವು ಹೆಚ್ಚಾಗಿದ್ದರೆ ಕರ್ಮಾಸಕ್ತರಾದ ಜನರಲ್ಲಿ ಜನ್ಮವೂ ತಮೋಗುಣದಲ್ಲಿ ಮುಳುಗಿದ್ದರೆ ಪಶುಪಕ್ಷಿಜನ್ಮವೂ ಉಂಟಾಗುವದು

೮೧ ಮನುಷ್ಯನು ದಾನಮಾಡುವುದರಲ್ಲಿಯೂ ಗುಣಭೇದಗಳಿರುವವು. ಪ್ರತ್ಯುಪಕಾರವನ್ನು ಪಡೆಯುವದೃಷ್ಟಿಯಿಲ್ಲದೆ ಇದನ್ನು ನಾನು ಕೊಟ್ಟು ಕೃತಾರ್ಥನಾಗಬೇಕೆಂದು, ದಾನಮಾಡುವುದಕ್ಕೆ ಯೋಗ್ಯವಾದ ಸ್ಥಲದಲ್ಲಿ, ಯೋಗ್ಯವಾದ ಕಾಲದಲ್ಲಿ ಯೋಗ್ಯರಾದವರಿಗೆ ಕೊಡುವದು ಸಾತ್ವಿಕ ದಾನವೆನಿಸುವದು ಧರ್ಮರಾಜನು ಕೊಡುತ್ತಿದ್ದ ದಾನಗಳು ಇದಕ್ಕುದಾಹರಣೆ ಫಲಾಪೇಕ್ಷೆಯಿಂದ ಅಥವಾ ಪ್ರತ್ಯುಪಕಾರದ ನಿರೀಕ್ಷಣೆಯಿಂದ ಮನಸ್ಸಿನಲ್ಲಿ ನೊಂದುಕೊಂಡು ಕೊಡುವದು ರಾಜಸದಾನವೆನಿಸುವದು ಸುಯೋಧನನು ಪಾಂಡವರ ಕೇಡನ್ನು ಬಯಸಿ ದೂರ್ವಾಸರನ್ನು ಮನೆಯಲ್ಲಿಟ್ಟುಕೊಂಡು ಅವರನ್ನು ಅನೇಕ ದಾನಗಳಿಂದ ಒಲಿಸಿಕೊಂಡದ್ದು ಇದಕ್ಕುದಾಹರಣೆಯು ಅಶುಚಿಯಾದ ಸ್ಥಲದಲ್ಲಿ ಯುಕ್ತವಲ್ಲದ ಕಾಲದಲ್ಲಿ ಆದರವಿಲ್ಲದೆ ಅವಮಾನಪೂರ್ವಕವಾಗಿ ಅಯೋಗ್ಯರಿಗೆ ಕೊಡುವದು ತಾಮಸ ದಾನವು

೮೨ ಮನಷ್ಯನು ಮಾಡುವ ತಪಸ್ಸಿನಲ್ಲಿಯೂ ಗುಣಭೇದಗಳಿರುವವು ಅವುಗಳನ್ನು ತಿಳಿದು ಕೊಳ್ಳುವುದಕ್ಕೆ ಮೊದಲು ತಪಸ್ಸಿನ ಸ್ವರೂಪವನ್ನು ತಿಳಿಯಬೇಕು. ದೇವರು, ವಿಪ್ರರು, ಗುರುಗಳು, ಪ್ರಾಜ್ಞರು ಇವರನ್ನು ಪೂಜಿಸುವದೂ, ಶುಚಿಯಾಗಿರುವದೂ, ಋಜುತ್ವದಿಂದಿರುವದೂ ಬ್ರಹ್ಮಚರ್ಯೆಯೂ ಅಹಿಂಸೆಯೂ ಇವೆಲ್ಲವೂ ಶಾರೀರಕ ತಪಸ್ಸುಗಳು ಮತ್ತೊಬ್ಬರಿಗೆ ನೋವನ್ನು ಕೊಡದಂಥದ್ದೂ ಸತ್ಯವೂ ಪ್ರಿಯವೂ ಹಿತವೂ ಆದಂಥ ಮಾತೂ ವೇದಾಧ್ಯಯನವೂ ಇವೆಲ್ಲವೂ ವಾಙ್ಮಯ ತಪಸ್ಸುಗಳು. ಮನಸ್ಸಿನ ಶಾಂತಿಯು ಒಳಗಿನ ಅಂತಃಕರಣದ ಪ್ರಸನ್ನತೆಯನ್ನು ತೋರಿಸುವಂಥ ಮುಖಮುದ್ರೆಯೂ ಮಿತಭಾಷಣವೂ ಮನಸ್ಸನ್ನು ಬಿಗಿಹಿಡಿಯುವದೂ ಮತ್ತೊಬ್ಬರೊಡನೆ ವ್ಯವಹಾರ ಮಾಡುವಾಗ ಒಳಗೊಂದು ಹೊರಗೊಂದು ಇಲ್ಲದಿರುವದೂ ಇವು ಮಾನಸಿಕ ತಪಸ್ಸುಗಳು ಇನ್ನು ಇವುಗಳ ಗುಣಭೇದವನ್ನೂ ತಿಳಿದುಕೊಳ್ಳಬೇಕು ಫಲಾಪೇಕ್ಷೆಯನ್ನು ಬಿಟ್ಟು ಒಳ್ಳೇ ಶ್ರದ್ಧೆಯಿಂದ ಮಾಡುವ ತಪಸ್ಸು ಸಾತ್ವಿಕವೆನಿಸುವದು ವಸಿಷ್ಠರ ತಪಸ್ಸು ಇದಕ್ಕುದಾಹರಣೆ ತಾನೊಬ್ಬ ತಪಸ್ವಿಯೆನಿಸಿಕೊಳ್ಳಬೇಕೆಂದೂ ತನಗೆಲ್ಲರೂ ನಮಸ್ಕಾರವನ್ನು ಮಾಡಲೆಂದೂ ತನ್ನನ್ನು ಇತರರು ಪೂಜ್ಯನೆಂದು ತಿಳಿಯಲೆಂದೂ ಮಾಡುವ ತಪಸ್ಸು ರಾಜಸವೆನಿಸುವದು ಬ್ರಾಹ್ಮಣ್ಯವನ್ನು ಪಡೆಯಬೇಕೆಂದು ಮಾಡಿದ ವಿಶ್ವಾಮಿತ್ರರ ತಪಸ್ಸು ಇದಕ್ಕುದಾಹರಣೆಯು, ಹಿಂದುಮುಂದು ವಿಚಾರಮಾಡದೆ ತನ್ನ ಕಷ್ಟವನ್ನು ಸಹಿಸುತ್ತ ಇತರರ ನಾಶಕ್ಕಾಗಿ ಮಾಡುವ ತಪಸ್ಸು ತಾಮಸವೆನಿಸುವದು. ದೇವತೆಗಳನ್ನು ಹಿಂಸಿಸಬೇಕೆಂಬುದ್ದೇಶದಿಂದ ರಾವಣ, ಹಿರಣ್ಯಕಶಿಪು, ಮೊದಲಾದವರು ಮಾಡಿದ ತಪಸ್ಸು ಇದಕ್ಕುದಾಹರಣೆಯು

೮೩ ಮಾನವನ ಜ್ಞಾನಗಳಲ್ಲಿಯೂ ಗುಣಭೇದಗಳಿರುವವು ಅದು ಹೇಗೆಂದರೆ ನಾಶವಾಗುವ ಸ್ವಭಾವವುಳ್ಳ ಎಲ್ಲಾ ವಸ್ತುಗಳಲ್ಲಿಯೂ ನಾಶರಹಿತವಾದ ಒಂದು ವಸ್ತುವನ್ನು (ಪರಬ್ರಹ್ಮವನ್ನು) ನೋಡುತ್ತ ದೇಹಭೇದದಿಂದ ಬೇರೆಬೇರೆಯಾದವುಗಳಲ್ಲಿ ಅಖಂಡವಾದ ವಸ್ತುವನ್ನು ತಿಳಿಯುವದು ಸಾತ್ವಿಕ ಜ್ಞಾನ ಎಲ್ಲ ವಸ್ತುಗಳನ್ನು ಭಿನ್ನಭಿನ್ನವಾಗಿಯೇ ತಿಳಿಯುವದು ರಾಜಸಜ್ಞಾನವು ದೇಹವೇ ಮೊದಲಾದ ಹೊರಗಣ ರೂಪಕ್ಕೇ ಆತ್ಮತ್ವವನ್ನು ಕೊಟ್ಟು ಅದರ ಹೊರತು ಅದರೊಳಗೆ ನಿಯಾಮಕನೊಬ್ಬನು ಬೇರೆ ಇಲ್ಲವೆಂದು ತಿಳಿದು ಅತ್ಯಕ್ಷುದ್ರವಾದ ತತ್ವ ತಿಳಿವಳಿಕೆಯನ್ನು ಹೊಂದುವದು ತಾಮಸಜ್ಞಾನವು

೮೪ ವಾಚಕಮಹನೀಯರೇ? ನಾವು ಮಾಡುವ ಕಾರ್ಯಗಳಲ್ಲಿಯೂ ಗುಣಭೇದಗಳಿರುವವು ಅವು ಹೇಗೆನ್ನುವಿರೋ? ಆತ್ಮಾಸಕ್ತಿಯಿಲ್ಲದೆ, ಒಬ್ಬರ ಮೇಲಿನ ಪ್ರೇಮಕ್ಕಾಗಿ ಅಥವಾ ದ್ವೇಷಕ್ಕಾಗಿ ಮಾಡತಕ್ಕದ್ದಾಗಿರದೆ, ಫಲೇಚ್ಛೆಯಿಲ್ಲದೆ, ತಾನು ಯಾವಾಗಲೂ ಮಾಡತಕ್ಕದ್ದೆಂದು ಮಾಡುವದು ಸಾತ್ವಿಕಕರ್ಮವೆನಿಸುವದು **ತಾನು ಇದನ್ನು ನಿರ್ವಹಿಸುವೆನೆಂಬ ಅಹಂಕಾರದೊಡನೆ ಅನೇಕ ಬಗೆಯ ಆಯಾಸಗಳನ್ನು ಸಹಿಸಿಕೊಂಡು ಯಾವುದೋ ಒಂದು ಫಲಕ್ಕಾಗಿ ಮಾಡುವದು ರಾಜಸಕರ್ಮವು ತನಗೂ ಮುಂದೆ ದೊರೆಯುವ ವಸ್ತುವಿಗೂ ಇರುವ ಸಂಬಂಧವನ್ನೂ ತನಗಾಗುವ ಶಕ್ತಿಕ್ಷಯವನ್ನೂ ಅರ್ಥಕ್ಷಯವನ್ನೂ ತನ್ನಿಂದಾದೀತೋ ಇಲ್ಲವೋ ಎಂಬುದನ್ನು ನೋಡಿಕೊಳ್ಳದೆ ಅವಿವೇಕದಿಂದ ಮಾಡುವ ಕೆಲಸವು ತಾಮಸವೆನಿಸುವದು.**

೮೫. ಈ ಜಗತ್ತಿನಲ್ಲಿರುವ ಜನರನ್ನು ಸಾತ್ವಿಕ, ರಾಜಸ, ತಾಮಸರೆಂದು ಮೂರು ವಿಧವಾಗಿ ವಿಂಗಡಿಸಬಹುದು ಅದು ಹೇಗೆಂದರೆ—ತಾನು ಮಾಡುತ್ತೇನೆಂದು ಭಾವಿಸದೆ, ಫಲಾಶೆಯನ್ನು ಮಾಡದೆ, ಧೈರ್ಯದಿಂದಲೂ ಉತ್ಸಾಹದಿಂದಲೂ ಕೂಡಿ ಸಿದ್ಧಿಸಿದರೆ ಹರ್ಷಕ್ಕೂ ಅಸಿದ್ಧಿಯಾದರೆ ವಿಷಾದಕ್ಕೂ ಒಳಗಾಗದವನಾಗಿ ಮಾಡುವವನು ಸಾತ್ವಿಕನು ಕೆಲಸದಲ್ಲಿ ಅತಿ ಪ್ರೇಮವನ್ನಿಟ್ಟು ಅದರಿಂದೊಂದು ಫಲವನ್ನು ಬಯಸಿ, ಪರಪೀಡಾ ಸ್ವಭಾವದವನಾಗಿ, ಕ್ಷುದ್ರವಾದ ಹಣಕ್ಕಾಗಿ ಬಾಯನೀರು ಸುರಿಸುತ್ತಾ ಅದರ ಪ್ರಾಪ್ತಿಗಾಗಿ ಮಾತು ಮಾತಿಗೆ ಆಣೆ ಪ್ರಮಾಣ ಮಾಡುತ್ತ ಒಳಗೂ ಹೊರಗೂ ಶುಚಿತ್ವವಿಲ್ಲದೆ, ಹರ್ಷವಿಷಾದಗಳನ್ನು ಪಡೆಯತಕ್ಕವನಾಗಿ ಮಾಡುವವನು ರಾಜಸನು ಮನಸ್ಸಿನ ಸ್ಥಿರತ್ವವಿಲ್ಲದೆ, ತಕ್ಕ ಬುದ್ಧಿಯಿಲ್ಲದೆ, ಯಾರಿಗೂ ಬಗ್ಗಿ ನಡೆಯದೆ(ನಿರ್ಲಕ್ಷ್ಯನಾಗಿ) ಕಪಟದ ಮಾತುಗಳನ್ನಾಡುವವನಾಗಿ, ನಿಷ್ಕರುಣಿಯಾಗಿ, ಮಾಯಾವಿಯಾಗಿ, ಅಸೂಯಾಪರನಾಗಿ, ಮತ್ತೊಬ್ಬರ ವೃತ್ತಿಯನ್ನು ಹರಣಮಾಡುವವನಾಗಿ, ಜಡನಾಗಿ ಮೂಢನಾಗಿ, ಸ್ವಾರ್ಥನಾಗಿ, ದುರಾಚಾರಪರನಾಗಿ, ಲಜ್ಜಾವಿಹೀನನಾಗಿ, ಧರ್ಮಶಾಸನವನ್ನು ಧಿಕ್ಕರಿಸುವವನಾಗಿ, ಯಾವಾಗಲೂ, ಕೊರಗುವವನಾಗಿ, ಎಂದಿಗೂ ಮುಗಿಸದವನಾಗಿ ಮಾಡುವವನು ತಾಮಸವೆನಿಸುವನು

೮೬ ಮನುಜನ ಬುದ್ಧಿಗಳಲ್ಲಿ ಸಾತ್ವಿಕ ರಾಜಸ ತಾಮಸಗಳೆಂದು ಮೂರು ವಿಧವುಂಟು ಅದು ಹೇಗೆಂದರೆ—ಯಾವ ಕೆಲಸಕ್ಕೆ ಕೈಹಾಕಬೇಕು, ಯಾವುದಕ್ಕೆ ಹಿಮ್ಮೆಟ್ಟಬೇಕು, ಯೋಗ್ಯವುಯಾವುದು, ಅಯೋಗ್ಯವುಯಾವುದು, ಯಾವುದರಿಂದ ಭಯವುಂಟಾಗುವದು, ಯಾವುದರಿಂದ ಬಂಧ, ಯಾವುದರಿಂದ ಬಿಡುಗಡೆ (ಮೋಕ್ಷ) ಇವುಗಳನ್ನು ತಿಳಿಯುವ ಬುದ್ಧಿಯು ಸಾತ್ವಿಕವೆನಿಸುವದು ಯಾವುದು ಶಾಸ್ತ್ರಸಮ್ಮತವೆಂದೂ, ಯಾವುದು ಶಾಸ್ತ್ರಕ್ಕೆ ಅಸಮ್ಮತವೆಂದೂ, ಮಾಡಬಹುದಾದದ್ದು ಯಾವುದೆಂದೂ, ಮಾಡಬಾರದ್ದು ಯಾವುದೆಂದೂ ಎಲ್ಲಾ ಬಗೆಯಿಂದ ವಿಚಾರಮಾಡಿದರೂ ತಿಳಿಯದೆ ಇರುವ ಬುದ್ಧಿಯು ರಾಜಸವು ಅಜ್ಞಾನದಿಂದ ಅಧರ್ಮವನ್ನೇ ಧರ್ಮವೆಂದು ಒಂದನ್ನು ಇನ್ನೊಂದನ್ನಾಗಿಯೇ ತಿಳಿಯುವ ಬುದ್ಧಿಯು ತಾಮಸವೆನಿಸುವದು.

(ಸಶೇಷ)

ಆರ್. ಎಂ. ಮಲ್ಲಿಕಾರ್ಜುನಾರಾಧ್ಯ, ಶಿಷ್ಯಾ...

ಓಂ ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ

ಸದ್ಗುರುವಿನ ಮಹಿಮೆಯು ಅತ್ಯದ್ಭುತವಾದುದು

ಪ್ರತ್ಯಕ್ಷಫಲಾನುಭವ.

ವಿಸ್ತಾರವಾದೀವಿಶ್ವದಲ್ಲಿರುವ ಆಸ್ತಿಕಮತಾನುಯಾಯಿಗಳಾದ ಸಮಸ್ತ ನನ್ನ ವಿಶ್ವಬಂಧುಗಳೇ!—ಇಂದಿಗೆರಡುವರುಷಗಳಲ್ಲಿ ತಿಪ್ಟೂರಿನ ನನ್ನ ಸಮಾಜಬಂಧು ಒಬ್ಬನು ನಿಷ್ಕಾರಣವಾಗಿ ಕೆಲ ಕುಹಕಿ... ದುರ್ಬೋಧನೆಯಿಂದ ತುಮಕೂರು ಒಂದನೇವರ್ಗ... ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನನ್ನ ಮೇಲೆ ಕ್ರಿಮಿನಲ್ (ಫೌಜದಾರಿ) ವ್ಯಾಜ್ಯವನ್ನು ಹೂಡಿದ್ದನು ತತ್ಸಂಬಂಧವಾದ ಜಡ್ಜ್‌ಮೆಂಟ್ ತಾರೀಖು 30-11-3... ರಲ್ಲಿತ್ತು ತಾರೀಖು ೨೯ ರಲ್ಲಿ ನಾನು ರಾತ್ರಿ ನ... ವಂಶ ಗುರುಗಳೂ, ತಪೋಧನರೂ, ಶ್ರೀಮದುಜ್ಜ... ಯಿನೀ ಸದ್ಧರ್ಮಸಿಂಹಾಸನಾಧೀಶ್ವರರೂ ಆದ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಹಾಗೂ ... ಮಾನರಾದ ಅಭಿನವರೇಣುಕ ಶ್ರೀ ಜಗದ್ಗುರು ಶಿವಾ... ನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವ... ಧ್ಯಾನಮಾಡಿ, 'ಗುರುವರ್ಯರೇ! ನಾಳೆ ನನ್ನ ಕೇ...ನಲ್ಲಿ ಶುಭವಾಗುವ ನಿಮಿತ್ತ ಸ್ವಪ್ನದಲ್ಲಿ ಏನಾದರೂ ಶುಭಚಿಹ್ನೆಯ ಗುರುತನ್ನು ತೋರಿಸಬೇಕು' ಎಂದ...

...ತ್ತಕ್ಕೆ ಮುಗಿದ ಒಂದು ವರ್ಷದಲ್ಲಿ ಕಂಪೆನಿಗೆ 386853 ರೂಪಾಯಿಗಳು ಲಾಭಬಂದಿರುವುದಾಗಿ ಡೈರೆಕ್ಟರ ರಿಪೋರ್ಟಿನಿಂದ ತಿಳಿದು ಬರುತ್ತದೆ. ಷೇರುದಾರರಿಗೆ ಸೇಕಡ 10ರಂತೆ ಡಿವಿಡೆಂಡ್ ಹಂಚಬೇಕೆಂದೂ ಆದಾಯದ ತೆರಿಗೆ ತಿಳ್ಳದ ಬೋನಸ್ಸನ್ನು ಸೇಕಡ 1½ ರಂತೆ ಕೊಡಬೇಕೆಂದೂ ಒಂದು ಲಕ್ಷರೂಪಾಯಿಗಳನ್ನು ರಿಜರ್ವ್‍ಫಂಡಿಗೆ ಜಮಾಮಾಡಬೇಕೆಂದೂ ತೀರ್ಮಾನವಾಯಿತು.

ಶಿವನಸಮುದ್ರದ ಎಲೆಕ್ಟ್ರಿಕ್ ಜನರೇಟಿಂಗ್ ಸ್ಟೇಷನ್ ಬಳಿ ನದಿಯ ದಡದಲ್ಲಿ ಸುಮಾರು 300 ಅಡಿ ಕೆಳಗಿರುವ ಟ್ರಾನ್ಸ್ ಫಾರ್ಮರ್ ಸ್ಟೇಷನ್ನಿಗೆ ಇಳಿಸಲು ಇಟ್ಟಿರುವ ಟ್ರಾಲಿಯಲ್ಲಿ ಸುಮಾರು 8 ಮಂದಿ ಕೆಲಸಗಾರರು ಕೂತು ಮೇಲಕ್ಕೆ ಬರುತ್ತಿರುವಾಗ ಮೇಲಕ್ಕೆ ಎಳೆದು ಕೊಳ್ಳುವ ತಂತಿಯು ಮಷಿನ್ನಿಗೆ ಸುತ್ತಿಕೊಳ್ಳಲು ಏನೋ ಅಡ್ಡಿಯಾದ್ದರಿಂದ ಟ್ರಾಲಿಯು ಅಕಸ್ಮಾತ್ ಹಿಂದಕ್ಕೆ ಜಾರಿ ಒಳಗಿದ್ದವರೆಲ್ಲಾ ಹೊರಗೆಸೆಯಿತು. ಒಬ್ಬನು ಟ್ರಾಲಿಯ ಕೆಳಕ್ಕೆ ಸಿಕ್ಕಿದ್ದರಿಂದ ಕೂಡಲೆ ಮೃತಪಟ್ಟನು. ಇನ್ನೊಬ್ಬನಿಗೆ ವಿಶೇಷ ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವನಾಗಿಯೂ, ಉಳಿದವರಿಗೆಲ್ಲಾ ಸ್ವಲ್ಪ ಗಾಯಗಳಾಗಿರುವುದಾಗಿಯೂ ತಿಳಿದುಬಂದಿದೆ.

ಬೆಂಗಳೂರಿನಿಂದ ಚಿಕ್ಕಮಗಳೂರಿಗೆ ರಿಸರ್ವ್ ಪೋಲೀಸ್‍ದಳವನ್ನು ಪರೀಕ್ಷಿಸಲು ಹೋಗಿದ್ದ ಶ್ರೀ ಲಾಲರು ಪೋಲೀಸ್ ದಳವನ್ನು ಪರೀಕ್ಷಿಸಿದನಂತರ ಶಿಕಾರಿಗಾಗಿ ಚಿಕ್ಕಮಗಳೂರು ಕೋಟೆ ಕೆರೆಗೆಹೋಗಿ ಅಲ್ಲಿ ಎರಡು ಬಾತುಗಳನ್ನು ಗುಂಡಿನಿಂದ ಹೊಡೆದರು. ನೀರಿನಮೇಲಿದ್ದ ಆ ಕೋಳಿಗಳು ತೇಲಿಬಿದ್ದೊಡನೆಯೇ ನೀರಿಗೆ ಬಿದ್ದವು. ಹತ್ತಿರದಲ್ಲಿದ್ದ ರಿಸರ್ವ್‍ದಳದ ಕಾನ್‍ಸ್ಟೇಬಲ್ ಓಬಯ್ಯನೆಂಬುವನು ಅದನ್ನು ನೀರಿನಿಂದ ತೆಗೆಯಲು ಕೆರೆಯಲ್ಲಿಬಿದ್ದು ಈಜಿಕೊಂಡು ಹೋದನು. ಹೊಂಡು ವಿಪರೀತವಾಗಿ ಬೆಳೆದಿದ್ದುದರಿಂದ ಹಿಂತಿರುಗಿ ಬರಲು ಸಾಧ್ಯವಾಗದೆ ನೀರಿನಲ್ಲಿ ಮುಳುಗಿದನು. ಕೆರೆಯ ತಡಿಯಲ್ಲಿದ್ದ ಇನ್ನೊಬ್ಬನು ಕೂಡಲೇ ನೀರಿಗೆ ಬಿದ್ದು ಓಬಯ್ಯನನ್ನು ಮೇಲಕ್ಕೆ ತಂದನು. ಡಾಕ್ಟರ್ ಚಿಕಿತ್ಸೆ ನಡೆಸಿದರೂ ಹೆಚ್ಚಾಗಿ ನೀರುಕುಡಿದಿದ್ದುದರಿಂದ ಓಬಯ್ಯನು ಮರಣಹೊಂದಿದನೆಂದು ಕೇಳುತ್ತೇವೆ.

ವರ್ತಮಾನಸಂಗ್ರಹ.

ಪಾಣಾನಗರದಿಂದ ಸ್ವಲ್ಪ ದೂರದಲ್ಲಿರುವ ಕಿಲ್ ಎಂಬ ಹಳ್ಳಿಯಲ್ಲಿ ಒಂದು ದರೋಡೆಯು ನಡೆಯಿತೆಂದು ಕೇಳುತ್ತೇವೆ. ಇದರಲ್ಲಿ ಹಳ್ಳಿಯವರಿಗೂ ಡಕಾಯಿತರಿಗೂ ಹೊಡೆದಾಟವಾಗಿ ಸುಮಾರು 5-6 ಮಂದಿಗೆ ವಿಶೇಷ ಗಾಯಗಳಾದವೆಂದೂ ಸುಮಾರು 2000 ರೂಪಾಯಿಗಳ ಒಡವೆಗಳು ಡಕಾಯಿತರ ಪಾಲಾದವೆಂದೂ ಸುದ್ದಿಯು ಬಂದಿದೆ. ಥಾಣಾ ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಈ ಸಲದ ಕ್ರಿಸ್‍ಮಸ್ ಹಬ್ಬಕ್ಕಾಗಿ ಇಂಡಿಯಾ, ಮಲಯ ಮತ್ತು ಆಫ್ರಿಕಾದೇಶಗಳಿಗೆ ಲಂಡನ್‍ಪಟ್ಟಣದಿಂದ ವಿಮಾನಗಳ ಮೂಲಕ ರವಾನಿಸಲ್ಪಟ್ಟಿರುವಷ್ಟು ಕಾಗದಗಳೂ, ಪಾರ್ಸಲುಗಳೂ, ಹಿಂದೆ ಎಂದೂ ರವಾನೆಯಾಗಿರಲಿಲ್ಲವಂತೆ. ಕಳೆದ 15ನೆಯ ತಾರೀಕು ಹೊರಟ ವಿಮಾನದಲ್ಲಿ ಇಂಡಿಯಕ್ಕೆ ತಲಪಬೇಕಾದ 3 ಟನ್ ಕಾಗದಗಳೂ ಆಫ್ರಿಕಕ್ಕೆ ಹೋಗಬೇಕಾದ 1 ಟನ್ ಕಾಗದಗಳೂ ಇದ್ದವೆಂದು ಹೇಳುತ್ತಾರೆ.

ಅಮೆರಿಕಾ ವೈಜ್ಞಾನಿಕರು ಪ್ರಪಂಚದಲ್ಲಿರುವ ದೂರದರ್ಶಕ ಯಂತ್ರಗಳೆಲ್ಲಕ್ಕಿಂತಲೂ ಭಾರಿಯಂತ್ರವನ್ನು ತಯಾರಿಸಲು ನಿಶ್ಚಯಿಸಿ ಅದಕ್ಕೆ ಉಪಯೋಗಿಸಲು 20 ಟನ್ ತೂಕದ ಘಾತಗನ್ನಡಿಯನ್ನು ನ್ಯೂಯಾರ್ಕ್ ಪಟ್ಟಣದಲ್ಲಿ ತಯಾರಿಸಿ ಅದನ್ನು ಉಜ್ಜಿ ಸರಿಪಡಿಸಲು ಸ್ಪೆಷಲ್ ರೈಲಿನಮೂಲಕ ಕ್ಯಾಲಿಫೋರ್ನಿಯದಲ್ಲಿರುವ ಪ್ಯಾಸಡಿನ್ ಎಂಬ ಊರಿಗೆ ಕಳಿಸಿರುತ್ತಾರೆ. ಅದನ್ನು ಸರಿಪಡಿಸಲು ಸುಮಾರು ೧೫ ವರ್ಷ ಕಾಲ ಹಿಡಿಯಬಹುದೆಂದು ಎಣಿಸಲಾಗಿದೆ.

ಇಟಲಿ—ಅಬ್ಸೀನಿಯಾ ಸಂಗ್ರಾಮದ ಪರಿಸ್ಥಿತಿ.

ಇಟಲಿ ಅಬ್ಸೀನಿಯಗಳ ಯುದ್ಧವನ್ನು ನಿಲ್ಲಿಸಿ ಒಂದು ಒಪ್ಪಂದಮಾಡಿಸಬೇಕೆಂದು ಕೆಲವು ಸಲಹೆಗಳನ್ನು ಸ್ಯಾಮ್ಯುಯಲ್‍ಹೋರರೂ ಮತ್ತು ಲವಾಲರೂ ಸೇರಿ ತಯಾರಿಸಿ ಎರಡು ರಾಜ್ಯಗಳವರ ಒಪ್ಪಿಗೆಗಾಗಿ ಕಳಿಸಿದ್ದರಷ್ಟೆ. ಅದರಲ್ಲಿ ಕಂಡಂತೆ ಮೇಲೆಬಿದ್ದು ಇಷ್ಟು ಅನರ್ಥಗಳನ್ನು ಉಂಟುಮಾಡಿದ ಇಟಲಿಗೆ ಅಬ್ಸೀನಿಯದ ಕೆಲವು ಭಾಗಗಳನ್ನು ಬಿಟ್ಟುಕೊಟ್ಟು ಸಮಾಧಾನಮಾಡಿಕೊಳ್ಳಬೇಕೆಂದು ಇದ್ದ ಸಲಹೆಯನ್ನು ನೋಡಿ ಅಬ್ಸೀನಿಯಾ ಚಕ್ರವರ್ತಿಗಳು ಇದು ತನಗೆ ಕೇವಲ ಅವಮಾನಕರವೆಂದೂ, ಅನ್ಯಾಯವಾಗಿ ಲೀಗ್ ಶರತ್ತುಗಳಿಗೆ ವ್ಯತಿರಿಕ್ತವಾಗಿ ತಮ್ಮ ಮೇಲೆ ಬಿದ್ದ ಇಟಲಿಗೆ ರಾಜ್ಯದ ಕೆಲವು ಭಾಗಗಳನ್ನು ಕೊಡುವುದು ಎಂದಿಗೂ ಸಾಧ್ಯವಿಲ್ಲವೆಂದು ತಿರಸ್ಕರಿಸಿದರು. ಮುಸ್ಸೋಲಿನಿಯು ಮಾತ್ರ ಸಲಹೆಗಳಲ್ಲಿ ಸ್ವಲ್ಪ ತಿದ್ದುಪಡಿ ಮಾಡಿದರೆ ಅದಕ್ಕೆ ಒಪ್ಪಿಕೊಳ್ಳಬಹುದೆಂದು ಸೂಚಿಸಿದ್ದಾನೆ. ಅಂದರೆ ಓಗಡೆನ್ ಮತ್ತು ಡಾನಕಿಲ್ ಪ್ರಾಂತ್ಯದ ಸಂಗಡ ಆಕ್ಸಂನಗರವನ್ನೂ ಇಟಲಿಗೇ ಬಿಟ್ಟುಬಿಡಬೇಕು. ಅಸ್ಸಾಬ್ ಬಂದರಿನ ಉಪಯೋಗವನ್ನು ಅಬಿಸೀನಿಯದವರಿಗೆಕೊಟ್ಟರೂ, ಅಸಾಬ್‍ಮೇಲಿನ ಅಧಿಕಾರವೆಲ್ಲವೂ ಇಟಾಲಿಯನ್ನರ ಕೈಯಲ್ಲೇ ಇರಬೇಕು. ದಕ್ಷಿಣದಲ್ಲಿ ಇಟಲಿಯವರು ಹೋಗಿ ನೆಲೆಸಬಹುದೆಂದು ಬೇರ್ಪಡಿಸಿರುವ ಕ್ಷೇತ್ರದಲ್ಲಿ ಅನ್ಯದೇಶೀಯರಿಗೆ ಯಾವ ವಿಧವಾದ ರಿಯಾಯಿತಿಯೂ ಇರಕೂಡದು. ಅದರ ಪೋಲೀಸು ವ್ಯವಸ್ಥೆಯೆಲ್ಲವೂ ಇಟಲಿಯವರ ಕೈಲಿರಬೇಕು ಇತ್ಯಾದಿ.

ಇಟಲಿಯವರು ತಮ್ಮ ವಿಮಾನಮುತ್ತಿಗೆಗಳನ್ನು ಮುಂದುವರಿಸುತ್ತಿದ್ದಾರೆ. ಇದರಿಂದ ಅಬ್ಸೀನಿಯಾ ಸೈನ್ಯಗಳಿಗೆ ಅಲ್ಲಲ್ಲಿ ಅಲ್ಪಸ್ವಲ್ಪ ನಷ್ಟವಾಗುತ್ತಿದೆ.

ಸೋಮಾಲೀಲ್ಯಾಂಡ್ ಕಡೆ ಡೋಲೊನಗರಕ್ಕೆ 150 ಮೈಲಿ ದೂರದಲ್ಲಿದ್ದ ರಾಸ್ ದೆಸ್ಟಾರವರ ಸೈನ್ಯದ ಮೇಲೆ ಇಟಲಿ ವಿಮಾನಗಳು ಬಾಂಬುಗಳನ್ನು ಹಾಕಿದುದಲ್ಲದೆ, ಸಮೀಪದಲ್ಲಿ ಹಾರುತ್ತಾ ಫಿರಂಗಿಗಳಿಂದ ಗುಂಡಿನ ಮಳೆಗರೆದು ಅಪಾರನಷ್ಟವುಂಟುಮಾಡಿದುವೆಂದು ಇಟಲಿಯವರ ವರ್ತಮಾನವು ತಿಳಿಸುತ್ತದೆ. ಸಸಾಬನೆಗೆ ಆಗ್ನೇಯದಲ್ಲಿ ಸೋಮಾಲಿ ಸೈನಿಕರಿಗೂ ಇಥಿಯೋಪಿಯಾ ಸೈನಿಕರಿಗೂ ಆದ ಯುದ್ಧದಲ್ಲಿ ಯಾರೂ ಸೋಲಲಿಲ್ಲ. ಇದರಲ್ಲಿ ಇಟಲಿಯ ಯುದ್ಧದ ಮೋಟಾರುಗಳೂ, ಟ್ಯಾಂಕುಗಳೂ ಕೆಲಸಮಾಡಿದರೂ ಹೆಚ್ಚೇನೂ ಪ್ರಯೋಜನವಾಗಲಿಲ್ಲ. ಅನೇಕ ಸೋಮಾಲಿಗಳು ಇಟಲಿಯವರನ್ನು ತ್ಯಜಿಸಿ ಅಬಿಸೀನಿಯದ ಕಡೆ ಸೇರಿದರೆಂದು ವದಂತಿ.

ಈಚೆಗೆ ಅಬಿಸೀನಿಯನರೂ ತಮ್ಮ ವಿಚಿತ್ರಯುದ್ಧವಿಧಾನವನ್ನು ಮುಂದುವರಿಸುವಂತಿದೆ. ಟಕ್ಕಾಜೆ ಬಳಿ ಯುದ್ಧದಲ್ಲಿ ಅಬ್ಸೀನಿಯನರು ತಮ್ಮ ಕೌಶಲವನ್ನು ತೋರಿರುತ್ತಾರೆ. ಸುಮಾರು ರಾತ್ರಿ 3ಘಂಟೆ ಸಮಯದಲ್ಲಿ ಚಂದ್ರಪ್ರಕಾಶವೂ ಇಲ್ಲದ ಅಂಧಕಾರದಲ್ಲಿ ಅಬ್ಸೀನಿಯಾ ಸೈನ್ಯಗಳು ಮುಂದೆ ನುಗ್ಗಲು ಮೊದಲುಮಾಡಿದವು. ಇದ್ದಕ್ಕಿದ್ದ ಹಾಗೆ ಸುಮಾರು 4 ಘಂಟೆ ಸಮಯದಲ್ಲಿ ಇಟಲಿ ಸೈನ್ಯದ ಕಾವಲುಗಾರರ ಮೇಲೆ ಬಿದ್ದು ಸ್ವಲ್ಪಕಾಲ ಇಟಲಿಯವರು ಫಿರಂಗಿಗಳಿಂದ ಗುಂಡುಹಾರಿಸದಂತೆ ತಡೆದವು. ಇಷ್ಟು ಹೊತ್ತಿಗೆ ಇಥೋಪಿಯನರ ಮುಖ್ಯಪಡೆಯು ನದಿಯನ್ನು ದಾಟಿತು. ಇಟಲಿಯವರ ಕಣ್ಣುಮುಂದೆಯೇ ಇಷ್ಟೂ ನಡೆಯಿತು. ಇಟಲಿಯವರ ಫಿರಂಗಿಗಳು ಅವರನ್ನು ಹಿಮ್ಮೆಟ್ಟಿಸಲಾಗಲಿಲ್ಲ. ಮುಂಭಾಗದ ರಕ್ಷಣಸ್ಥಳಗಳನ್ನೆಲ್ಲಾ ಇಟಾಲಿಯನ್ನರು ಬಿಡಬೇಕಾಯಿತು. ಹಿಂದುಗಡೆಯ ಸ್ಥಳಗಳನ್ನು ಅವರು ಬಲಪಡಿಸಿದರು. ಇಲ್ಲಿಯ ವೇಳೆಗೆ 6 ಘಂಟೆಯಾಯಿತು. ಮುಂಭಾಗದ ಸೈನ್ಯವು ಹಿಮ್ಮೆಟ್ಟಿ ಹಿಂದಿನ ಸೈನ್ಯವು ಪೋರ್ಡ್ ಎಂಬಲ್ಲಿ ಯುದ್ಧಾರಂಭಮಾಡಿತು. ಇಲ್ಲಿ ಅಬಿಸೀನಿಯದವರಿಗೆ ಬಹಳ ನಷ್ಟವಾಯಿತೆಂದು ಇಟಲಿಯವರು ಹೇಳುತ್ತಾರೆ. ಮಧ್ಯಾಹ್ನದವೇಳೆಗೆ, ಡೆಡ್ಜ್‍ಸ್ಮ್ಯಾಚ್ ಆಯೇಲುಬುರೆ ಕೈಕೆಳಗೆ ಇಥೋಪಿಯದ ಅನೇಕ ಸೈನಿಕರು 50 ಮೈಲು ಕೆಳಗೆ ನದಿಯನ್ನು ದಾಟಿದರು. ಇದನ್ನು ತಿಳಿದಮೇಲೆ ಇಟಲಿ ಸೈನಿಕರು ನಿರ್ವಾಹವಿಲ್ಲದೇ ಹಿಮ್ಮೆಟ್ಟಬೇಕಾಯಿತೆಂದು ಸುದ್ದಿಬಂದಿದೆ. ಈ ಸೋಲನ್ನು ಇಟಲಿಯವರೂ ಒಪ್ಪಿಕೊಳ್ಳುತ್ತಾರೆ.

ಸ್ಯಾಮ್ಯುಯಲ್ ಹೋರ್ ಮತ್ತು ಲಾವಲ್‍ರವರು ಸೇರಿ ತಯಾರಿಸಿದ್ದ ಇಟಲೀ ಅಬ್ಸೀನಿಯಾಸಂಬಂಧದ ಸಮಾಧಾನಸಲಹೆಗಳನ್ನು ಬ್ರಿಟಿಷ್ ಮಂತ್ರಿಮಂಡಲದವರೂ ಮತ್ತು ಪ್ರಜಾಪಕ್ಷದವರೂ ಸಭೆಸೇರಿ ಚರ್ಚಿಸಿ ಸಲಹೆಗಳು ನ್ಯಾಯಸಮರ್ಪಕವಾಗಿಲ್ಲವೆಂದೂ ಇದರಿಂದ ಬ್ರಿಟಿಷರಲ್ಲಿ ಇತರರಿಗಿರುವ ನಂಬಿಗೆಯು ಹಾಳಾಗುವುದೆಂದೂ ತೀರ್ಮಾನಿಸಿದರು.

ಸರ್ ಹೋರರು ಕೆಲಸಬಿಟ್ಟರು.

ಬ್ರಿಟಿಷ್ ವಿದೇಶಮಂತ್ರಿಗಳಾದ ಸರ್ ಸ್ಯಾಮ್ಯುಯಲ್ ಹೋರರವರು ತಮ್ಮ ಕೆಲಸಕ್ಕೆ ರಾಜೀನಾಮೆಯಿತ್ತರು. ರಾಜೀನಾಮೆಯು ಅಂಗೀಕರಿಸಲ್ಪಡುವುದೆಂದು ಊಹಿಸಲಾಗಿದೆ. ರಾಜೀನಾಮೆಗೆ ಕಾರಣ ಇನ್ನೂ ಪ್ರಕಟವಾಗಿಲ್ಲ. ಇಷ್ಟರಲ್ಲೆ ಹೋರರವರೇ ಸ್ವತಃ ಅದನ್ನು ವಿವರಿಸುವರೆಂದು ನಿರೀಕ್ಷಿಸಲಾಗಿದೆ.

ಲೀಗ್‍ಸಭೆಯಲ್ಲಿ ಇಥಿಯೋಪಿಯಾ ಪ್ರತಿನಿಧಿಗಳು ಅದ್ಭುತ ಭಾಷಣಮಾಡಿದರು. 'ಒಪ್ಪಂದಮಾಡಿಕೊಂಡು ಶಾಂತಿಸ್ಥಾಪನೆ ಮಾಡಲು ನಮಗೆ ಇಷ್ಟವಿಲ್ಲ. ಅಬಿಸೀನಿಯವನ್ನು ಹಂಚಿಕೊಳ್ಳುವ ಯಾವ ಸಲಹೆಗಳಿಗೂ ನಾವು ಒಪ್ಪುವುದಿಲ್ಲ. ಅಬಿಸೀನಿಯರೆಲ್ಲರೂ ದೇಹತ್ಯಾಗಮಾಡಿ ಶತ್ರುಗಳು ಆಕ್ರಮಿಸಲು ಬಿಟ್ಟುಕೊಡುವರೆಂಬುದನ್ನು ನಾವು ನಂಬುವುದಿಲ್ಲ. ಇಥಿಯೋಪಿಯವು ಲೀಗ್ ಕೌನ್ಸಿಲ್ಲಿನ ಕೈಗೆ ತಾನಾಗಿ ಬಿದ್ದಿದೆ. ಕಡೆಯಲ್ಲಿ ತನ್ನ ಅಭಿಪ್ರಾಯಗಳನ್ನು ತಿಳಿಸುವ ಅಧಿಕಾರವನ್ನ ಇಟ್ಟುಕೊಂಡಿದೆ' ಎಂದು ಹೇಳಿ ಮುಗಿಸಿದರು.

ಯುದ್ಧಭಯವು ಪೂರ್ತಿ ಯೂರೋಪುದೇಶವನ್ನೇ ಕ್ರಮೇಣ ಆವರಿಸುತ್ತಿದೆ. ಕೆಲವರು ಇಟಲಿಯಪರವಾಗಿಯೂ ಮತ್ತೆಕೆಲವರು ಅದಕ್ಕೆ ಪ್ರತಿಯಾಗಿಯೂ ಯೋಚಿಸುತ್ತಾ ಯೂರೋಪಿನ ಜನಾಂಗಗಳು ಪಕ್ಷಪ್ರತಿಪಕ್ಷಗಳಾಗಿ ಒಡೆದುಹೋಗುತ್ತಿವೆ. ಇದರಿಂದ ಇನ್ನೊಂದು ಮಹಾಯುದ್ಧವೇ ಪ್ರಾಪ್ತವಾಗುವುದೋ ಎನ್ನುವಂತಿದೆ. ಈ ವಿಷಯವು ಇಟಲಿಗೂ ತಿಳಿದಿದೆ. ಆದರಿಂದಲೇ ಅಂಥ ಸಂದರ್ಭದಲ್ಲಿ ಇಂಗ್ಲೆಂಡಿನವರೇನಾದರೂ ಶತ್ರುಪಕ್ಷ ವಹಿಸಿದರೆ ಇಗ್ಲೆಂಡನ್ನು ಬಾಂಬುಗಳಿಂದ ಸುಟ್ಟುಬಿಡಲು ಬೇಕಾದ ಸನ್ನಾಹಗಳನ್ನು ಮಾಡುತ್ತಿರುವರಂತೆ.

ಮುಸ್ಸೋಲಿನಿಯವರ ಅಭಿಪ್ರಾಯ.

ರೀಕ್ಲೇಮ್ಡ್ ಪೋಂಟೈನ್ ಮಾರ್ಷಸ್ ಎಂಬುವಲ್ಲಿ ಸ್ಥಾಪಿತವಾದ ಪೋಂಟಿನಿಯಾ ಎಂಬ ಊರಿನ ಪ್ರಾರಂಭೋತ್ಸವಸಮಯದಲ್ಲಿ ಮುಸ್ಸೋಲಿನಿಯವರು ಭಾಷಣಮಾಡುತ್ತಾ. ತಮ್ಮ ಆಶಯಗಳನ್ನು ತಿಳಿಸಿದರು.

'ಇಟಲಿಯಮೇಲೆ ಪ್ರಯೋಗಿಸಿರುವ ದಿಗ್ಬಂಧನೆಗಳನ್ನು ಅದು ಎದುರಿಸುವುದು ಸಿದ್ಧ. ಪೂರ್ವ ಆಫ್ರಿಕದಲ್ಲಿ ಅದು ತನ್ನ ಹಟವನ್ನು ಸಾಧಿಸಿಯೇ ತೀರುವುದಾಗಿ ಸ್ಥಿರಸಂಕಲ್ಪಮಾಡಿದೆ. ಈ ಯುದ್ಧವು ಬಡವರಿಗಾಗಿ ನಡೆಸುತ್ತಿರುವುದು. ಇತರರು ಕಪಟವಿದ್ಯೆ, ಅಹಂಕಾರ ಮತ್ತು ಕನ್ಸರ್ವೇಟಿವ್ ಮನೋಭಾವಗಳನ್ನೆಲ್ಲಾ ನಮ್ಮಮೇಲೆ ಪ್ರಯೋಗಮಾಡಿರುತ್ತಾರೆ. ಇದನ್ನೆಲ್ಲಾ ಎದುರಿಸಿ ನಾವು ಕಡೆಯವರಿವಿಗೆ ಈ ಸಂಗ್ರಾಮವನ್ನು ನಡೆಸಿಯೇ ತೀರುವೆವು. ಮತ್ತು ಜಯಪಡೆಯುವೆವು. ಬಹುದೂರದಲ್ಲಿರುವ ರೂಕ್ಷಜನರ ದೇಶಕ್ಕೆ ಇಟಲಿಯು ತನ್ನ ಜನರನ್ನು ಸುಮ್ಮನೆ ಕಳುಹಿಸಲಾರದು. ಇಟಲಿಯ ಧ್ವಜದಿಂದ ಆಪ್ರಾಂತವು ರಕ್ಷಿಸಲ್ಪಡುವವರಿವಿಗೂ ಇಟಲಿಯ ಜನಾಂಗವು ಅಲ್ಲಿ ಹೋಗಿ ನೆಲೆಸಲು ಅವಕಾಶ ಕೊಡುವುದಿಲ್ಲ. ಬಹುಕಾಲದವರಿವಿಗೆ ಇಟಲಿಯವರು ಮುತ್ತಿಗೆಯನ್ನು ತಡೆದು ನಿಲ್ಲಿಸಬಲ್ಲರು. ಅದರಲ್ಲಿಯೂ ಅತ್ಯವು ನಿಶ್ಚಲ್ಯಹವಾಗಿರುವಾಗ ನ್ಯಾಯವು ನಮ್ಮದೇ ಆಗಿರುವಾಗ ಇಟಲಿಯನ್ನರು ಮತ್ತೂ ಹೆಚ್ಚಿನ ಶೌರ್ಯ ತೋರಬಲ್ಲರು' ಎಂದು ಹೇಳಿದರು.

UNIVERSITY MEDICAL SCHOOL ASSOCIATION.

Speech by Raja Dharma Praveena Dewan Bahadur

P MAHADEVIAH [illegible]

[illegible]

Sir K P PUTTANNA CHETTY, Ladies and Gentlemen and students of the Medical School

Medicine [illegible] leading [illegible] life and perhaps [illegible] more [illegible] to disease—to [illegible] the device [illegible] his arm Whether [illegible] hygiene on the one hand and the [illegible] on the [illegible] be seen

[illegible] constitution [illegible] is the [illegible] form the structure of the tissues [illegible] blood pressure [illegible] normal qualities [illegible] action [illegible] his fellows [illegible]

"In the [illegible] well adapted [illegible] as witness [illegible] tropics in the [illegible] that [illegible] turned only [illegible] static state and there [illegible] keeps rather than [illegible]

Unquestionably [illegible] important [illegible] the weeding out [illegible] developed the process [illegible] has received [illegible] the human [illegible] ideals [illegible] help [illegible] mentally deficient [illegible] surgery [illegible] existence [illegible] brain rather than [illegible] his high place in Nature

I now proceed to make a few remarks on [illegible] medicine a subject which [illegible] many matters [illegible] interest There never was a time in the history [illegible] the earliest attempt made to heal wounds [illegible] healing art is coeval with the earliest prehistoric people They were savages and were frequently engaged in battle [illegible] another in which they inflicted and received terrible injuries [illegible] arrows, spears of [illegible] and hatchets of stone and they [illegible] received injuries in contest with wild beasts The first attempt of early man to heal these injuries are disclosed to us in bones [illegible] men that have been found Surgeons will find from skulls that new bone was eventually knitted to the old broken bones were cured and injured arms and legs were cut off by operation by means of rough flint implements and were healed in spite of the very crude treatment of those times In surgery the ancient people did remarkable things considering the state of knowledge at the time From the existence of papyrus documents dating from 3500 years before Christ It is found that at that time it was a common thing to practise quite difficult surgical operations and surgical instruments have been preserved which were made in very early times in Egypt Ancient India was not behind other countries in its knowledge of medicine The Rig Veda and the Atharvana Veda contain spells against the demons of disease, and during the Brahmanical period up to 1000 A.D., medicine attained a high degree of efficiency and the three distinguished names are those of Charaka Susruta and Vagbhata According to Indian Physiology the vital processes are supposed to be actuated by air bile and phlegm and health is regarded as due to a proper relationship of these The materia medica of India was particularly rich in drugs, of which many have been imported into Western medicine A large number of surgical instruments were employed with considerable skill, and it is stated that Indian Surgeons were experts at cataract operations and reparative surgery by skin grafting methods which also found their way through the Arabs into Western Surgery

Western medicine took its origin in Greece when it was at its highest intellectual development Hippocrates (460-370 B.C.) was the most celebrated among the early Greek practitioners He was a contemporary of Plato, Thucydides and Pericles and he is said to have rendered valuable service to the City of Athens in connection with epidemics Aristotle was also a great authority of medicine He is said to have made many discoveries on the structure and functions of the bodies of animals and it was from Aristotle's already stated that his pupil Alexander the Great derived his great interest in medicine It is said that before Hippocrates doctors knew nothing about the action of the human heart the motion of the limbs the action of the lungs, the process of digestion and about the manner in which heat is maintained in the body Hippocrates studied hard and introduced a new and great system He is said to have written a number of useful treatises The prominent features of his works are said to be their rationalism and entire absence of the earlier mysticism to the light he gave to observations made from examination of the minute complexion temperature, respiration, and auscultation by laying the ear on the patient's chest Simple forms of diet were held by him in great estimation, and barley water honey in water and diluted wine were his favourite forms of nourishment. Many students gathered about Hippocrates to learn his new methods of treatment and he made them all take a solemn oath to respect their teacher as a father to share their knowledge freely with their fellows to believe with stainless honour and never to divulge a secret learnt in the sick room This oath is still respected by all good physicians and the name of Hyppocrates is held in great honour by the members of the medical Profession His writings were a great gift to the world although people did not show wisdom to understand all that he really had done for the cure of the human body It was Hyppocrates that discovered that the cause of certain diseases may be traced by listening to the sounds in a patient's chest, but it took 2000 years to make this knowledge really useful and then one Laennec a doctor in Brittany invented the Stethoscope an instrument which every doctor now carries in his pocket because it enables him to hear the action of the heart and the movements of the lungs

Another celebrated figure in ancient medicine was Claudius Galen (131-200 A.D.) who was also a Greek His prolonged study of philosophy and medicine and careful reading of the teaching of Hippocrates made him famous as a Physician He went to Rome where he delivered public lectures and became the attending physician of the Emperor Marcus Aurelius He was a man of indefatigable energy and an indefatigable writer on medical subjects and it is said that he produced some 500 treatises of which over 100 are still in existence Galen was the first man to judge the health by the pulse of a patient and it is said that medicine [illegible] was simply [illegible] he got by his teachings which from the foundation on which the superstructure of modern medicine is laid

The outbreak of plague in the 14th century, the sweating sickness of England and the appearance of syphilis in the 15th century demonstrated diseases not treated by the ancients and threw practical medicine on its own resources and the introduction of firearms in the 14th century performed a similar office to surgery Up to the beginning of the 17th century all the doctors who studied Anatomy were much puzzled by the flow of blood and the beat of the body and it was William Harvey (1578-1657) who published his book on the "Motion of the Heart" which opened up entirely new conceptions regarding the bodily functions He showed that it is when the heart contracts that it does its work and that is then that it sends the blood to all parts of the body This was a great discovery Though Harvey knew of its greatness yet he made his first announcement simply and modestly in a lecture to a class of only a few students in London When the other doctors heard of it some of them denounced him fiercely but he lived to see his discovery believed by all Some years later an Italian named Malpighi discovered the capillary veins and thus completed Harvey's work

Thomas Sydenham (1624-89) is celebrated for having given a clear description of Gout, the first accounts of scarlet fever and of chorea and for popularising the use of the recently introduced Peruvian bark against Malaria The invention of the Microscope about 1590 and its application to the structure of the body by Swammerdam Malpighi and Leeuwenhoek from 1660 added greatly to scientific medicine These workers also discovered the capillary blood vessels the blood corpuscles spermatozoa and bacteria Edward Jenner (1749) discovered the theory of vaccination He claimed that by spreading vaccination throughout the world small-pox would be entirely out of existence His theory was hotly opposed but after a year more than 70 of the leading medical men of London signed an article declaring their faith in it The news of this important discovery was carried throughout the civilised world and Jenner received very many honours while Parliament gave him 150 000

Beaumont (1825) in America was the first to study the movements and digestive power of the stomach in situ, experimenting for several years on a Canadian trapper whose stomach had been left open through a gun shot wound as the result of a unique accident The middle of the 19th century was remarkable for several important discoveries The demonstration of the anaesthetic properties of ether by Morton in 1846 and the introduction of Chloroform by Simpson in 1847 produced a profound influence on all branches of medicine

(To be continued)

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ವೀರಶೈವಸಂಪ್ರದಾಯದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಂಬಂಧಿಸಿದ ಶಿಷ್ಯರ ಮನೆಗಳಿರುತ್ತವೆ. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಜ್ಞಾಪಕಶಕ್ತಿಯನ್ನನುಸರಿಸಿ ಶಿಷ್ಯರ ಮನೆಗಳ ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಚೆನ್ನಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಇದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ಶಾಶ್ವತವಾಗಿ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಉತ್ತಮ ತರದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಒಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು. ಈ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲ	ಮೌಲ್ಯ
ಸುವರ್ಣಮಕರಧ್ವಜ	೧	೩೦—೦—೦
ಸ್ವರ್ಣ ಚಂದ್ರೋದಯ	೧	೧೦—೦—೦
೨ ನೇ ನಂಬರ್	೧	೮—೦—೦
ಪೂರ್ಣಚಂದ್ರ	೧	೩—೦—೦
ರಸಸಿಂಧೂರ	೧	೬—೦—೦
ತಾಲಸಿಂಧೂರ	೧	೬—೦—೦
ಮಲ್ಲಸಿಂಧೂರ	೧	೬—೦—೦
ಸ್ವರ್ಣವಂಗ	೧	೫—೦—೦
ಕ್ರೌಂಚ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೬೦—೦—೦
ರಜತಭಸ್ಮ	೧	೪—೦—೦
ಅಭ್ರಕಭಸ್ಮ	೧	೦—೮—೦
...ಹಭಸ್ಮ	೧	೦ ೧೨—೦
ವಂಗಭಸ್ಮ	೧	೦—೮—೦
...ಭಸ್ಮ	೧	೦—೮—೦
ತಾಮ್ರಭಸ್ಮ	೧	೦—೮—೦
...ಭಸ್ಮ	೧	೦—೮—೦
...ಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦ ೧೨—೦
...ಭಸ್ಮ	೧	೩—೦—೦
ಮುತ್ತಿನಭಸ್ಮ	೧	೬೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
...ಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್— ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಳಿಗೆ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದು. ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ. ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಸಮಾಜಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವವೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ— ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಶೋಭಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹು ಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಶಕ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿದ್ದಾರೆ. ಈ ಮೂಲಗ್ರಂಥವು ಕೇವಲ ೩೦ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೫೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಸಂತೋಷಪೂರ್ವಕವಾಗಿ ಹೇಳಬಹುದಾಗಿದೆ. ನಮ್ಮ ಸ್ವಾಮಿಗಳಾದ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಂಡಿತರನ್ನು ಗೌರವಿಸುತ್ತಿರುವರಲ್ಲದೆ ಈ ಗ್ರಂಥವನ್ನು ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಪ್ರೋತ್ಸಾಹವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರದಿತ್ತೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೮೨ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. **ಈ ಮಹಾಗ್ರಂಥದ ಬೆಲೆ ೮ ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ ಆ ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಲಿಂಗಗಳಿಂದ ಕೂಡಿದ ಫೋಟೋ ಸೈಜು ೨೦\೧೪ ಬೆಲೆ ಒಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಶಿವಾಶಿವಜ್ಞಾನದಿಂದ ಅಗಸ್ತ್ಯ ದಧೀಚಿ ವ್ಯಾಸ [illegible] ಮೊದಲಾದ ಮಹರ್ಷಿಗಳಿಗೆ ಶಿವಾದ್ವೈತವನ್ನು ಉಪದೇಶಿಸುವ ಫೋಟೋ ಸೈಜು ೧೦\೧೨ ಬೆಲೆ	೦—೧—೬
ಸಧ್ಯಃ ಶೀಘ್ರಫಲಪ್ರದರಾದ [illegible] ಜಗದ್ಗುರು ಆಚಾರ್ಯರು [illegible] ಸೈಜು ೧೪\೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪\೧೦ ಬೆಲೆ [illegible]	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦\೮ ಬೆಲೆ ಒಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಫೋಟೋ	೦—೦—೯
ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನಿ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ [illegible]	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ [illegible] ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ [illegible] ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಒಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನಿ [illegible] ಅತ್ಯಂತ ಸುಂದರ [illegible]	೦—೦—೯
ಶ್ರೀ ಜಗದ್ಗುರು ಉಜ್ಜಯಿನಿ [illegible] ಅತ್ಯಂತ [illegible] ಫೋಟೋ	೦—೦—೯
ಶ್ರೀ ಜಗದ್ಗುರು [illegible] ಅತ್ಯಂತ ಸುಂದರ [illegible] ಫೋಟೋ	೦—೦—೯
ಶ್ರೀ ಜಗದ್ಗುರು [illegible] ಸುಂದರ ಫೋಟೋ	೦—೦—೯
ಶಿವಯೋಗಿಗಳ ಮಧ್ಯದಲ್ಲಿ ಶೋಭಿಸುವ [illegible]	೦—೦—೯
ಕೊಲ್ಲಾಪುರದಲ್ಲಿ [illegible] ಉಜ್ಜಯಿನಿ ಜಗದ್ಗುರುಗಳವರ ಅತ್ಯಂತ [illegible] ಫೋಟೋ	೦—೦—೯

ಸೂಚನೆ —ಒಂದು ರೂಪಾಯಿಗಿಂತಲೂ ಕಡಿಮೆ [illegible] ಮೇಲೆ ತರಿಸಿಕೊಳ್ಳುವವರಿಗೆ ಫೋಟೋ [illegible] ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಪಿ ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ[illegible] ಕಂಡುಹಿಡಿಯಲ್ಪಟ್ಟು ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ನಿರಾವಿದರಾಗುಗಳಾಗಿ, ಯೋಗ್ಯತಾಪತ್ರ[illegible]

(Registered Trade Mark)

ಗಳನ್ನು ಕೊಟ್ಟಿ[illegible] ರು. ಪ್ರಸಿದ್ಧವಾದ[illegible] ನಶ್ಯದ ಪುಡಿಯಿ[illegible] ಸ್ವಸ್ಥವಾಗುವ ವ್ಯಾ[illegible]ಧಿಗಳು ಯಾವವೆ[illegible] ದ —ಪಿನಸಿ, ಬಿ[illegible] ತಲೆನೋವು, ತಲೆ[illegible]ಲ್ಲಿಯ ರೋಗಗಳ[illegible] ಕಣ್ಣುಗಳಲ್ಲಿ ಉಂಟ[illegible]ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ [illegible]ಲ್ಪಟ್ಟ [illegible]ವ್ಯಾದಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ ಮೂರುಬಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು[illegible]ಇಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ [illegible] ಪರಿಮಳವಾಗುವುದು ಇದನ್ನು ಅನೇಕ ಪ್ರಭುಗಳ ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋ[illegible] ಸುವುದರಿಂದ ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗುವ[illegible]

ಡಬ್ಬಿ ಒಂದಕ್ಕೆ ಕ್ರಯ ರೂ ೦-೪-೦ ವಿ. ಪಿ. ೦-[illegible]
ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ. ಪಿ. [illegible]

ನಿಮ್ಮ ಅಪ್ಪಣೆಯನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ

[೧೯] ಪೋ ಬಾ ೫೧೦ ಮದರಾಸ

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಮಾಲೆ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಳಸ್ತೋತ್ರಾವಳಿ (೩ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾಪದ್ಧತಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ಸಿದ್ಧತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಗುರುಸ್ವರೂಪತತ್ತ್ವಪ್ರದೀಪಿಕಾ	೨ ಆಣೆ
ಶ್ರೀ ರುದ್ರಮುನಿಶಿವಾಚಾರ್ಯಶತಕ	೨ ಆಣೆ
ವೀರಶೈವಮತಮಹಿಮಾಂಕುರ	೩ ಆಣೆ
ವೀರಶೈವಾಚಾರಪದ್ಧತಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಆಗಮಪರಿಜ್ಞಾನ ...	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ) ...	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ[illegible]
पंडित श्रीकाशीनाथशास्त्री यांचें भाषण (मराठी)	/ आ[illegible]
Speeches by Pandit Shri Kashinatha Shastri (*English*)	12 A[illegible]
ವೀರಶೈವರಹಸ್ಯ (೪ನೆಯ ಆವೃತ್ತಿ) ..	೧೨ ಆ[illegible]
ವೈದಿಕಶಿವಪೂಜಾವಿಧಿ (ವೈದಿಕ ರಾಜ್ಯ ಕ್ರಮಾದ ಅನಂತ [illegible])	೧೨ ಆ[illegible]
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ[illegible]
ನವಾಸ್ಕೃತ ದೀಕ್ಷಾವಿಧಿ (೨ನೆಯ ಆವೃತ್ತಿ) ...	೧೨ ಆ[illegible]
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ[illegible]
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨ ಆ[illegible]
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ[illegible]
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) ...	೧ ರೂ[illegible]
ಕೇನೋಪನಿಷತ್ (ವೀರಶೈವಭಾಷ್ಯ) .	೧ ರೂ[illegible]
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ ಸಹಿತ)	೧ ರೂ[illegible]
ವೀರಶೈವಸಿದ್ಧಾಂತಸುಧಾಕರ	೨ ರೂ[illegible]
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ [illegible] ಪುಟ) ...	೮ ರೂ[illegible]
लिंगधारणचंद्रिका (संस्कृत)	३ [illegible]
महानारायणोपनिषत् (वीरशैवभाष्य–संस्कृत)	१ [illegible]
वीरशैवेन्दुशेखर (संस्कृत)	१ [illegible]

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ[illegible] ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ[illegible] ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು[illegible]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ತಾ|| [illegible] ಗುರುಪಾದಸ್ವಾಮಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ[illegible]

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಭವಾತಪನಿಭರ್ ಪಂಚಾಕ್ಷಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೯.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ನೇ ಡಿಸೆಂಬರ್ ೧೯೩೪ [ಸಂಚಿಕೆ ೩೪

ಕನ್ನಡಭಾಷಾಸ್ವರೂಪ.

ಮೈಸೂರು ದೇಶದ ಮೈಸೂರು ವಿದ್ಯಾಶಾಲಾ ಪಂಡಿತ ಮಂಡಳಿಯ ಆಶ್ರಯದಲ್ಲಿ ಶ್ರೀಮನ್ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿ ಈ ಮಂಡಲದ ಅಧ್ಯಕ್ಷರಾದ ಮ॥ ರಾ॥ ಎ ಸುಬ್ರಹ್ಮಣ್ಯಯ್ಯರ್ ಬಿ.ಎ., ವಿಶ್ರಾಂತ ಎಕ್ಸೈಸ್ ಕಮಿಷನರ್ ಇವರ ಅಧ್ಯಕ್ಷತೆಯಲ್ಲಿ ೨೧ ನೆಯ ತಾ॥ ದಿವಸ ಆಸ್ಥಾನ ವಿದ್ವಾನ್ ಮೈಸೂರು ಟ್ರೈನಿಂಗ್ ಕಾಲೇಜ್ ಸೀನಿಯರ್ ಕನ್ನಡ ಪಂಡಿತರು ಶ್ರೀ ಉ ಕಿ ಶ್ರೀನಿವಾಸ ರಂಗಾಚಾರ್ಯರು "ಕನ್ನಡ ಭಾಷೆಯ ಸ್ವರೂಪ" ಎಂಬ ವಿಷಯವಾಗಿ ಒಂದು ಉಪನ್ಯಾಸವನ್ನು ಕೊಟ್ಟರು ಇವರ ಅಭಿಪ್ರಾಯವು ಬಹಳ ಹೊಸದೂ ಆಶ್ಚರ್ಯಕರವೂ ಸಾಧುವೂ ಆಗಿರುವುದರಿಂದ ಸಭಿಕರು ಅತ್ಯಾನಂದಭರಿತರಾಗಿ ಲಾಲಿಸಿದರು ಮತ್ತು ಶ್ಲಾಘಿಸಿದರು ಅವರ ಭಾಷಣದ ಸಾರಾಂಶವಿದು—ನಾನು ಕನ್ನಡವು ಸಂಸ್ಕೃತ ಜನ್ಯವೆಂದು ಭಾಷಾಶಾಸ್ತ್ರಗಳ ಪದ್ಧತಿಯಂತೆ ನಿರ್ವಹಣಮಾಡಿ ಕನ್ನಡದ ಕನ್ನಡಿ ಅಥವಾ ಕರ್ನಾಟಕ ಶಬ್ದಮೂಲದರ್ಪಣವೆಂಬ ಒಂದು ಗ್ರಂಥವನ್ನು ರಚಿಸಿರುವೆನು ಅದು ಶ್ರೀ ವರ್ಧಮಾನ ಮುದ್ರಣಾಲಯದಲ್ಲಿ ಮುದ್ರಿತವಾಗುತ್ತಿದೆ ಕನ್ನಡದ ಶಬ್ದರಾಶಿಗಳೆಲ್ಲಾ ತತ್ಸಮ ತದ್ಭವ ದೇಶ್ಯಸ್ವರೂಪದಲ್ಲಿವೆ ಈ ತತ್ಸಮ ತದ್ಭವ ಮಧ್ಯದಲ್ಲಿರುವ ದೇಶ್ಯಶಬ್ದಗಳೂ ಸಂಸ್ಕೃತ ಧಾತುಜನ್ಯಗಳಾಗಿವೆ "ಭವೇದ್ದೇಶ್ಯಾ ತತ್ರಲಕ್ಷಣಮಂತರಾ" ಎಂದರೆ ವ್ಯಾಕರಣ ನಿಯಮಗಳಿಗೊಳಪಡದೆ ಆಯಾ ದೇಶಗಳ ವ್ಯವಹಾರಾನುಗುಣವಾಗಿ ರೂಪ ತಾಳಿರುವ ಶಬ್ದಗಳಿಗೆ ದೇಶ್ಯವೆಂದು ಸಂಜ್ಞೆ ಎಂದು ಷಡ್ಭಾಷಾಚಂದ್ರಿಕಾಕಾರರು ಶ್ರೀಮದ್ಲಕ್ಷ್ಮೀಕಾದಿ ಮತಾನುಗುಣವಾಗಿ ಹೇಳುವಂತೆ ಈ ಕನ್ನಡದ ದೇಶ್ಯಶಬ್ದಗಳೆಲ್ಲಾ ಪ್ರಾಕೃತ ಲಕ್ಷಣಗಳನ್ನು ಹೊತ್ತಿರುವುವು ಈ ಅಭಿಪ್ರಾಯಗಳನ್ನೇ ಕರ್ನಾಟಕ ಲಕ್ಷಣಾಚಾರ್ಯರಾದ ನಾಗವರ್ಮ ಕೇಶಿರಾಜಾದಿಗಳೂ ಒಪ್ಪಿರುವರು ಈ ದೇಶ್ಯಗಳಿಗೆ ಸಂಸ್ಕೃತ ಧಾತು ಸಂಬಂಧವನ್ನು ತೋರಿಸಲು ಸಂಸ್ಕೃತದವರ ಪದ್ಧತಿಯನ್ನೇ ಕನ್ನಡಕ್ಕೂ ಉಪಯೋಗಿಸಿ ನೋಡಿರುತ್ತೇನೆ ಆದರೆ ಕನ್ನಡ ಶಬ್ದಗಳಿಗೆಲ್ಲಾ ಈ ರೀತಿಯೇ ವ್ಯುತ್ಪತ್ತಿ ಪದ್ಧತಿಯನ್ನು ತರಬೇಕೆಂದು ನನ್ನ ಅಭಿಪ್ರಾಯವಲ್ಲ; ತೋರಿಸುವ ರೀತಿಯಲ್ಲೇ ಈ ಶಬ್ದಗಳು ಹುಟ್ಟಿದುವೆಂದಾಗಲಿ ಅಲ್ಲ, ಪರಂತು ಶಬ್ದೋತ್ಪತ್ತಿ ಪ್ರಕಾರವನ್ನು ಶಬ್ದೋತ್ಪತ್ತಿ ಪ್ರಕರಣದಲ್ಲಿ ಬೇರೆ ರೀತಿ ತೋರಿಸಲಾಗಿದೆ. ಈ ದಿನ ಅಲ್ಪಕಾಲದಲ್ಲಿ ಯಾವುದನ್ನೂ ಹೇಳಲು ಸಾಧ್ಯವಿಲ್ಲದುದರಿಂದ ಲೋಕವ್ಯವಹಾರಕ್ಕೆ ಸಾಧಾರಣವಾಗಿ ಬೇಕಾಗುವ ಕೆಲವು ಶಬ್ದಗಳಿಗೆಮಾತ್ರ ಸಂಸ್ಕೃತ ಮೂಲಧಾತು ಸಂಬಂಧವನ್ನು ನಿರೂಪಿಸುವೆನು. ಹೇಗೆಂದರೆ— (ಸಂ ಧಾ) ತನುವಿಸ್ತಾರೇ (ಸಂ) ತಾತ-ತನೋತಿ ವಿಸ್ತಾರಯತಿ ಗೋತ್ರಾದೀನಿತಿ|ತನ+'ದೃತನಿಭ್ಯಾಂ ದೀರ್ಘಶ್ಚ' ಉಣಾ ಇತಿ ಸೂ: ದೀರ್ಘಶ್ಚ ಅನುದಾತ್ತೇತಿ ನಲೋಪಃ) (ತಾತ) ತಂದೆ (ಕ) ತನು ವಿಸ್ತಾರೆ ತನ್ನ ವಂಶವನ್ನು ವಿಸ್ತರಿಸತಕ್ಕವನು ಅಥವಾ ತನುಂ ದದಾತೀತಿ, ಶರೀರವನ್ನು ಕೊಡತಕ್ಕವನು ತಂದೆ (ಸಂಸ್ಕೃತದಂತೆ ವ್ಯಾಕರಣನಿಯಮಗಳು ಕನ್ನಡದಲ್ಲಿಲ್ಲ) ಇದನ್ನು ದರ್ಪಣದ ತದ್ಭವ ಪ್ರಕರಣದ ೩೦೦ನೇ ಸೂತ್ರಕ್ಕೆ ಉದಾಹರಣವಾಗಿ ಆದಿ ದೀರ್ಘಕ್ಕೆ ಹ್ರಸ್ವಂ ತಾತ (ಸಂ) ತಂದೆ (ದ್ರ)' ಎಂದ ಹೇಳಲ್ಪಟ್ಟದೆ (ಸಂಧಾ) ಅಂಗಗತೌ ಅಥವಾ ಅಬಿಗತೌ+ಷೆಞ್ ಸ್ತ್ರಿಯಾಂಬಾಪ್ ಅಮ್ಬಾ ಅಂಬ್ಯತೆ ಸ್ನೇಹೇನೋಪಗಮ್ಯತೆ ಇತ್ಯಮ್ಬಾ (ದ್ಬ) ಅಮ್ಮ ಅಪ್ಪ ಅವ್ವೆ (ಅಮ್ಬ (ಸಂ) ಅಪ್ಪ (ದ್ಬ) (ಸಂ ಧಾ) ತಾಯ್—ಸಂತಾನಪಾಲನಯೋಃ ತಾಯತೇ ಇತಿ ತಾಯಿ ಸಂತಾನಕರ್ಮ ಪಾಲನಕರ್ಮಗಳುಳ್ಳವಳು (ಕ) ತಾಯ್ (ಸಂ ದಾ) ಮಕಿ ಮಂಡನೇ ಗತೌಚ ಮಂಕತಇತಿ ಮಗ (ವಂಶವನ್ನು ಭೂಷಿಸತಕ್ಕವನು ಅಥವಾ ವಂಶವನ್ನು ನಡೆಸತಕ್ಕವನು) ಕನೀ ದೀಪ್ತಿ ಕಾಂತಿಗತಿಷು. ಕನತಿ ಪ್ರಕಾಶಯತೀತಿ (ಕ) ಕಣ್ (ಸಂ ದಾ) ಸಲ್ಲಗತೌ ಸಲ್ಲಯತೀತಿ (ಕ) ಗಲ್ (ಆಹಾರಾದಿಗಳನ್ನು ಹೊಂದಿಸುವ. ಚರ್ಮಸಾಸ್ಥಿ) (ಸಂ ಧಾ) ಕಲಗತೌ ಕಲಕ್ಷೇಪೇ ಕಲಯತಿ ಗಚ್ಛತಿ ಕಾಲಯತಿ ಕ್ಷೇಪಯತಿ ಯತ್ರ ಕುತ್ರವಾ ಶರೀರಂ ಇತಿ (ಕ) ಕಾಲ್ (ಸಂ ದಾ) ಮೃಙ್ ಪ್ರಾಣತ್ಯಾಗೆ ಮ್ರಿಯತೇ ಕಾಷ್ಟಾದ್ಯರ್ಥಂ ಇತಿ (ಕ) ಮರ (ಸಂ ಧಾ) ಪೃಙ್ ಆವರಣೆ ವಾರಯತಿ ಆಚ್ಛಾದಯತೀತಿ (ಕ) ಊರ್ (ಇಗ್ಯಣಸ್ಸಂಪ್ರಸಾರಣಂ ಎಂದು ವಕಾರಕ್ಕೆ ಸಂಸ್ಕೃತದಲ್ಲೇ ಉತ್ವವುಂಟು) (ಸ—) ಆಸನುಂತಾತ್ ಸೇನಾಮುಖಂ ನಯತೀತಿ (ಅ+ಣೀಞ್ (ಧಾ)(ಕ)ಆನೆ (ಸಂ ಧಾ) ನೆಯಗತೌ ನಯತಿ ಗಚ್ಛತೀತಿ (ಕ) ನಾಯ್ (ಯಾವಾಗಲೂ ಊರುಗಳಲ್ಲಿ ಅಲೆದಾಡುತ್ತ ತಿರುಗುವ ಪ್ರಾಣಿ ಈರೀತಿ ಎಲ್ಲಾ ಕನ್ನಡಪದಗಳೂ ಸಂಸ್ಕೃತಧಾತುಜನ್ಯಗಳಾಗಿವೆ ನೊತ್ತಮೊದಲು ಕನ್ನಡ ಎಂಬುದೇ (ಸಂಧಾ) ಕನೀ ದೀಪ್ತಿಕಾಂತಿಗತಿಷು+ನದಭಾಷಾಯಾಂ ಎಂಬ ಧಾತುಗಳು ಕನ್+ನಡ=ಕನ್ನಡ ಎಂದರೆ ಪ್ರಕಾಶವಾದ ವ್ಯವಹಾರಭಾಷೆ ಎಂದಾಗಿದೆ ದ್ರವಿಡ ಅಥವಾ ತಮಿಲ್, ತಮಿಳ್ ಎಂಬುದೂ ದ್ರಮೇಡಾ ಎಂಬುದರ ತದ್ಭವ ಕಾವೇರೀ ತಾಮ್ರಪರ್ಣ್ಯಾದಿಗಳ ದ್ರವಯುಕ್ತವಾದ ಇಡಾ (ದ್ರವ+ಇಡಾ) ದ್ರವಿಡ ಎಂದಾಗಿ ಬಳಿಕ ದ್ರವ—ಇದರ ಆದಿ ದ ಕಾರಕ್ಕೆ ತಕಾರಾದೇಶರೇಫಲೋಪ. ತಪ ಎಂದೂ ಇಡಾ=ಇಳಾ ಇದರ (ದ್ಬ) ಇಲ್=ತವಿಲ್ (ವಕ್ಕೆಮಾದೇಶ) ತಮಿಲ್, ತಮಿಳ್, ತಮಿಷ್ ಆಗಿರುವುದು ಇಷ್ಟೊಂದು ದೂರವಾದ ಮೂಲರೂಪ ವಿಕೃತಿರೂಪಗಳ ಪರಸ್ಪರ ಸಂಬಂಧವು ಸಾಮಾನ್ಯರಿಗೆ ತೋರಿಬರುವಂತಿಲ್ಲ ಆದುದರಿಂದ ಸಂಸ್ಕೃತವರ್ಗಕ್ಕೆ ಸೇರಿಲ್ಲವೆಂದೇ ಕೆಲವರು ಹೇಳಲಾರಂಭಿಸಿದರು ಕನ್ನಡದಲ್ಲಿ ದೈವವಾಚಕಪದ 'ದೇವರ' ಎನ್ನುವದಾಗಿದೆ ಬೇರೆಯಿಲ್ಲ ಮಿಕ್ಕವೆಲ್ಲಾ ತ್ರಿಮೂರ್ತಿವಾಚಕಗಳು ತಮಿಳಿನ "ಕಡವುಳ್" ಕಠಕಪ್ (ಸಂ ಧಾ) ಹರ್ಷವುಳ್ಳವನು ಆನಂದಮಯದೇವರು ಕೋ "ಕ ಇತಿ ಬ್ರಹ್ಮಣೋನಾಮ" ಎಂದು ನಿಘಂಟು (ಸಂ) ರಾಮಃ (ಪ್ರಾಕೃತ) ರಾಮೋ ಈ ರೀತಿ ಕೋ+ನ್ (ತಮಿಳಿನ ಪ್ರತ್ಯಯ) ಕೋನ್, ಪೆರುಮಾಳ್ ಪೆರುಮೆ (ಪೆರ್ಮೆ) —ಅತ್—(ಅಲಭೂಷಣಪರ್ಯಾಪ್ತಿವಾರಣೇಷು ಅಲ್ಯತೇ ಪ್ರಾಪ್ಯತೇ ಸರ್ವಂ ಸರ್ವಹಿತಂ ತನಗೆ ಇಷ್ಟವಾದುದನ್ನು ಹೊಂದತಕ್ಕವನು ಆಳ್) ಪ್ರ್ಯಾಪಾಲಪ ಪ್ರಾಪಣಯೋಃ ಪಕ್ಷೇ ಪರತೀತಿ ಪರ ಪೆರ+ಮೆ (ಭಾವಾರ್ಥದ ಪ್ರತ್ಯಯ) ಪೆರುಮೆ+ಆಳ್ ಪೆರು+ಆಳ್=ಮಹಾ ಪುರುಷ=ಪೆರುಮಾಳ್=ಅತಿಶಯಿತನಾದ ಪುರುಷ ಎಂದರೆ ಪುರುಷೋತ್ತಮ ಎಂದಾಗಿದೆ ಹೀಗೆ ದೇಶ್ಯಪದಗಳ ಸ್ವರೂಪವೇ ಇದ ಮೇಲೆ ತತ್ಸಮತದ್ಭವವಿಚಾರವು ಸಾಕ್ಷಾತ್ಸಂಬಂಧವುಳ್ಳದೆಂದು ಪ್ರಸಿದ್ಧವಾಗಿ ಎಲ್ಲರಿಗೂ ತಿಳಿದೇ ಇದೆ ಆದುದರಿಂದ ಈ ಭಾಷೆಗೆ ಪ್ರಾಕೃತಲಕ್ಷಣವು ಲಕ್ಷಣಾಚಾರ್ಯರಿಂದ ಹೇಗ ಹೇಳಲ್ಪಟ್ಟಿದೆ ಪ್ರಾಕೃತಸಂಸ್ಕೃತವ್ಯಾಕರಣ ಸಂಬಂಧಗಳಿಂದ ಈ ಭಾಷಾವಿಷಯದ ಲೋಪ ತಿಳಿದುಬರವುದು? ವ್ಯಾಕರಣವಿಷಯಗಳಲ್ಲಿ ಹೇಗೆ ಸಾಮ್ಯವನ್ನು ಹೊಂದಿರುವುದು? ಸಂಸ್ಕೃತದ ಏಕವರ್ಗಕ್ಕೆ ಇವು ಹೇಗೆ ಸೇರುವವು? ಎಂದು ಮೊದಲಾದುವನ್ನು ಹೇಳಲು ಕಾಲಾವಕಾಶವಿಲ್ಲವಾದುದರಿಂದ ಇಷ್ಟೇ ಹೇಳಿ ಉಪನ್ಯಾಸವನ್ನು ಮುಗಿಸಿರುವೆನೆಂದು ನಿಗಮನಮಾಡಿದರು

ಈ ಉಪನ್ಯಾಸವು ಸಂಸ್ಕೃತವು ಮಾತೃಭಾಷೆ ಎಂಬುದನ್ನು ಸ್ಪಷ್ಟವಾಗಿ ದೃಢಪಡಿಸಿರುತ್ತದೆ ಇದು ಯುಕ್ತಿಗಳಿಂದ ಕೂಡಿರುವುದರಿಂದ 'ಯುಕ್ತಿಯುಕ್ತಂ ವಚೋಗ್ರಾಹ್ಯಂ' ಎಂಬಂತೆ ಸರ್ವರಿಂದಲೂ ಆದರಣೀಯವಾಗಿರುತ್ತದೆ

ಚಕ್ರವರ್ತಿ, ತಿರುಮಲಾಚಾರ್ಯಃ
ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲಾ,
ವೈ ಆಗಮ ಪ್ರೊಫೆಸರ್ ಆಸ್ಥಾನ ವಿದ್ವಾನ್,
ವ್ಯಾಕರಣ ವೇದಾಂತ ವಿದ್ವಾನ್.

ದೀಕ್ಷಾ

ಸೋಲಾಪುರ ತಾಲ್ಲೂಕ ಪೈಕಿ ದಿಂಡೂರ ಗ್ರಾಮದ ಹಿರೇಮಠದ ಶ್ರೀ ನಿಜಗುಣಸ್ವಾಮಿಗಳು ಹೋಟಗಿ ಶ್ರೀಗಳವರ ಗುರುತ್ವದಲ್ಲಿ ೧೫ ಜನರಿಗೆ ಶಿವದೀಕ್ಷಾ ಸಮಾರಂಭವನ್ನು ಮಾರ್ಗಶೀರ್ಷ ಶು॥ ೮ ಬುಧವಾರ ನೆರವೇರಿಸಿದರು. ಬಾಳಪ್ಪನೆಂಬ ಪತ್ತರಸಂಗದ ಪಾಟೀಲರು ಒಳ್ಳೇ ಭಕ್ತಿಯಿಂದ ಈ ಕಾರ್ಯವನ್ನು ಪೂರೈಸಿದರು

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಮಹನೀಯರ ಹಿತೋಕ್ತಿಗಳು

(ಹಿಂದಿನಿಂದ ಮುಂದುವರಿದುದು)

೮೭ ಮನುಷ್ಯನಿಗೆ ಧೈರ್ಯಗಳಲ್ಲಿ ಮೂರು ವಿಧವುಂಟು— ಮನಸ್ಸು, ಪ್ರಾಣ, ಇಂದ್ರಿಯ—ಇವುಗಳನ್ನು ಎಡೆಬಿಡದೆ ಪ್ರಯತ್ನದಿಂದ ಬಿಗಿಹಿಡಿಯುವ ಧೈರ್ಯವು ಸಾತ್ವಿಕವು. ಧರ್ಮ, ಅರ್ಥ, ಕಾಮ—ಇವುಗಳನ್ನು ನಿಶ್ಚಯವಾ ಆಚರಿಸಬೇಕೆಂದು ನಿಶ್ಚಯಿಸಿದ್ದು ಪ್ರಸಂಗತ್ವೇನ ಫಲವನ್ನು ಅಪೇಕ್ಷಿಸುವ ಧೈರ್ಯವು ರಾಜಸವು. ನಿದ್ರೆ, ಭಯ, ದುಃಖ, ಕೊರಗು, ಮದ—ಇವುಗಳನ್ನು ಬಿಡಬಾರದ ಕ್ಷುದ್ರವಾದ ಧೈರ್ಯವು ತಾಮಸವೆನಿಸುವದು.

೮೮. ಮಾನವನ ಸುಖಗಳಲ್ಲಿ ಸಾತ್ವಿಕ, ರಾಜಸ, ತಾಮಸಗಳೆಂಬ ಮೂರು ವಿಧವುಂಟು. ಅದು ಹೇಗೆಂದರೆ—ಮೊದಲು ವಿಷದಂತೆ ತೋರಿ ಆ ಮೇಲೆ ಅಮೃತದಂತೆ ಪರಿಣಮಿಸುವಂಥ ದಿವ್ಯವಾದ ಆತ್ಮಾನುಭವಜನ್ಯಸುಖವು ಸಾತ್ವಿಕವೆನಿಸುವದು. ವಿಷಯ ಮತ್ತು ಇಂದ್ರಿಯ ಇವುಗಳ ಸಂಯೋಗದಿಂದ ಮೊದಲು ಅಮೃತದಂತಿದ್ದು ಕೊನೆಗೆ ವಿಷವಾಗುವ ಸುಖವು ರಾಜಸವು. ಆದಿಯಲ್ಲಿಯೂ ಅಂತ್ಯದಲ್ಲಿಯೂ ಕೂಡ ಮಂಕು ಮಾಡುವಂಥ ನಿದ್ರೆ, ಆಲಸ್ಯ, ಪ್ರಮಾದ—ಇವುಗಳಿಂದಾದ ಸುಖವು ತಾಮಸವೆನಿಸುವದು.

೮೯ ಪಾಪ ಪುಣ್ಯಗಳು ಕಾಯಿಕ, ವಾಚಿಕ ಮತ್ತು ಮಾನಸಿಕಗಳೆಂದು ಮೂರು ವಿಧ. ಪ್ರಾಣಿಹಿಂಸೆ ಚೌರ್ಯ ಮತ್ತು ಪರದಾರಗಮನ ಇವು ಕಾಯಿಕಪಾಪಗಳು. ಅಸತ್ಯಭಾಷಣ, ಪಾರುಷ್ಯ ಮಿಥ್ಯಾಕಥನಾದಿಗಳು ವಾಚಿಕ ಪಾಪಗಳು. ಪರಧನಚಿಂತೆ, ಭೂತದಯಾಶೂನ್ಯತೆ ಮೊದಲಾದವುಗಳು ಮಾನಸಿಕ ಪಾಪಗಳು. ಈ ಪಾಪತ್ರಯಕ್ಕೆ ವಿರುದ್ಧವಾದ ಕೃತ್ಯಗಳು ಪುಣ್ಯಕರ್ಮವೆಂದು ಕರೆಯಲ್ಪಡುವವು. ಜೀವಿಯು ಕಾಯಿಕ ಪಾಪದ್ವಾರಾ ಸ್ಥಾವರಯೋನಿಯಲ್ಲಿಯೂ, ವಾಚಿಕ ಪಾಪದ್ವಾರಾ ತಿರ್ಯಗ್ಯೋನಿಯಲ್ಲಿಯೂ, ಮಾನಸಿಕ ಪಾಪದ್ವಾರಾ ಅಂತ್ಯ ಜಾತಿಯಲ್ಲಿಯೂ ಹುಟ್ಟುವನೆಂದು ಮನುಸಂಹಿತೆಯಲ್ಲಿ ಹೇಳಿರುವದು. ಆದ್ದರಿಂದ ಈ ಮೂರು ಪಾಪಕೃತ್ಯಗಳೂ ವರ್ಜನೀಯವಾದವುಗಳಾಗಿವೆ.

೯೦ ಪ್ರಿಯಮಿತ್ರರೇ, ಇದೇನಾಶ್ಚರ್ಯ! ನಮ್ಮ ಸುತ್ತಮುತ್ತಲಿರುವ ಚರಾಚರ ವಸ್ತುಗಳೆಲ್ಲವೂ ಎಲ್ಲಿಂದ ಬಂದವು? ಜೀವಿಗಳು ಮರಣಾನಂತರ ಎಲ್ಲಿಗೆ ಹೋಗುವರು? ಲಕ್ಷೋಪಲಕ್ಷ ಜನನ ಮರಣಗಳು ಪ್ರತಿದಿವಸವೂ ಸಂಭವಿಸುವದಷ್ಟೆ? ಇವೆಲ್ಲಾ ಹೇಗೆ ಸಂಭವಿಸುವವು? ಯಾರು ಇದಕ್ಕೆ ಕಾರಣ ಭೂತರು? ಈ ವಿಷಯಗಳೆಲ್ಲವನ್ನೂ ಸಾವಧಾನದಿಂದ ವಿಚಾರಿಸಿ ಮನಸ್ಸಿನಲ್ಲಿ ಲೇಶಾಂಶವೂ ಸಂಶಯವಿಲ್ಲದಂತೆ ಮಾಡಿಕೊಳ್ಳುವದೇ ಮನುಷ್ಯ ಜನ್ಮದ ಮುಖ್ಯೋದ್ದೇಶವಾಗಿದೆಯಲ್ಲವೆ? ಯಾವ ಮನುಷ್ಯನು ಜನನಾರಭ್ಯ ಮರಣಾವಧಿ ತಾಪತ್ರಯಾದಿ ಪ್ರಾಪಂಚಿಕ ವ್ಯಸನಗಳಲ್ಲಿಯೂ, ಪಶುಯೋಗ್ಯವಾದ ಕೇವಲ ಇಂದ್ರಿಯಾನುಭೋಗಗಳಲ್ಲಿಯೂ ಕಾಲವನ್ನು ಕಳೆಯುಬಿಡುವನೋ ಅವನ ಜನ್ಮವು ನಿರರ್ಥಕವಾಗುವದು. ಅಲ್ಲದೆ, ಭೋಜನ, ಆಚ್ಛಾದನ, ಮಜ್ಜನ, ಮೈಥುನ, ಶಯನ ಇವೇ ಮೊದಲಾದವುಗಳಲ್ಲೇ ನಿರಂತರ ಆಸಕ್ತರಾಗಿ ಸಾಯುವವರೆಗೂ ಸಂಸಾರಲಂಪಟರಾಗಿ ಪ್ರಾಣ ಹೋಗವಾಗಲೂ ಧನಪಿಶಾಚಿಗಳಂತೆ ಹಣಕ್ಕೋಸುಗ ಕೊರಗಿ ಕೊರಗಿ ಹೆಂಡತಿ ಮಕ್ಕಳನ್ನು ಬಿಟ್ಟು ಹೋಗಲಾರದೆ ಪರಲೋಕದ ಭೀತಿಯನ್ನೇ ತೊರೆದು ಇಹಕ್ಕೇ ಬಳಲುತ್ತಿರುವದು ಪಶುವೃತ್ತಿಯೇ ಸರಿ. ವಾಚಕ ಮಹನೀಯರೇ! ಈ ಪ್ರಪಂಚವಂದರೂ ಯಾವಾಗ ಏತಕ್ಕೆ ನಿರ್ಮಿತವಾಯಿತು? ಎಂಬುದು ಆದಿಪುರುಷನಾದ ಭಗವಂತನಿಗೆ ತಿಳಿದಿರುವುದೇ ವಿನಾ ಮಿಕ್ಕವರದನ್ನರಿಯಲಸಾಧ್ಯವು. ಚರಾಚರ ವಸ್ತುಗಳೆಲ್ಲವೂ ಪರಮಾತ್ಮನಿಂದ ಬಾಳುತ್ತಿರುವವು. ಪ್ರತಿಯೊಬ್ಬ ಮನುಜನೂ ಅಹಂಕಾರವಶನಾಗಿ 'ನಾನು ಕೆಲಸ ಮಾಡುತ್ತೇನೆ ನಾನು ಊಟ ಮಾಡುತ್ತೇನೆ' ಎಂಬುದಾಗಿ ತಿಳಿದಿರುವನು. ವಸ್ತುತಃ ಪ್ರಾಣಿಗಳೆಲ್ಲವೂ, ಪರಮಾತ್ಮನ ಆದೇಶದಿಂದ. ಪರಮಾತ್ಮನೇ ನಮ್ಮನ್ನು ನಡೆಸುವ ಈ ಸಮಸ್ತ ವಿಚಿತ್ರ ವ್ಯಾಪಾರಗಳಿಗೂ ಕಾರಣನಾಗಿದ್ದಾನೆ. ಪರಮಾತ್ಮನ ಕ್ರಿಯಾಶಕ್ತಿಯಿಂದ ಕಲ್ಪಿತವಾದ ಪಂಚಭೂತಗಳು ಪರಮಾತ್ಮನ ಇಚ್ಛಾಶಕ್ತಿಯ ಸಹಾಯದಿಂದ ಪಂಚೀಕರಣಹೊಂದಿ ಪ್ರಕೃತಿ ಪುರುಷರ ಸಂಯೋಗದಿಂದ ಪ್ರಕಟವಾಗಿರುವದು. ಪುರುಷನ ಸಹಾಯವಿಲ್ಲದೆ ಇದ್ದಲ್ಲಿ ಪ್ರಕೃತಿಯು ಜಡವಾದ್ದರಿಂದ ತಾನು ತನ್ನನ್ನು ತಿಳಿಯಲಾರದು. ಬ್ರಹ್ಮಾಂಡದ ಸೃಷ್ಟಿಸ್ಥಿತಿಗಳು ಆದಿಪುರುಷನ ಇಚ್ಛಾ, ಕ್ರಿಯಾ, ಜ್ಞಾನ, ಈ ಮೂರು ಶಕ್ತಿಗಳ ಅಧೀನವಾಗಿವೆ. ಆದ್ದರಿಂದ ಈ ಪ್ರಪಂಚದಲ್ಲಿ ನಡೆಯುತ್ತಿರುವ ವಿಚಿತ್ರ ವ್ಯಾಪಾರಾದ್ಯಂತವು ಅವನ ಅಧೀನವಾಗಿದೆ. ಭಗವದ್ವ್ಯಾಪಾರವೇ ಸಮಸ್ತ ಪ್ರಪಂಚಗಳ ವ್ಯಾಪಾರಕ್ಕೆ ಕಾರಣವೆಂದೂ ಸಮಸ್ತ ಪ್ರಪಂಚಗಳೂ ಚಿದಾಭಾಸಯುಕ್ತರಾದ ಜೀವೇಶ್ವರರ ಉಪಾದಿರೂಪವಾದ್ದರಿಂದ, ಅವುಗಳನ್ನು ಕಂಬ ಮರದಲ್ಲಿ ಪುರುಷನಂತೆಯೂ, ಹಗ್ಗದಲ್ಲಿ ಸರ್ಪದಂತೆಯೂ, ಮರಳು ಭೂಮಿಯಲ್ಲಿ ಮೃಗಜಲದಂತೆಯೂ ವಿಚಾರದಿಂದ ಮಿಥ್ಯವೆಂದು ತಿಳಿದು ಮೋಕ್ಷದ ಧನವನ್ನು ಮಾಡಿ ... ತತ್ತ್ವಮಸಿ" ಮೊದಲಾದ ಮಹಾವಾಕ್ಯಗಳನ್ನು ... ಮಹರ್ಷಿಗಳು ... ಪಾಲಿಸಿರುವರು. ಇಂತಹ ಮಹಾವಾಕ್ಯ ಶ್ರವಣ ಮನನ ನಿದಿಧ್ಯಾಸನಗಳಿಂದ ಉಂಟಾಗತಕ್ಕ ಜ್ಞಾನವೇ ಜ್ಞಾನವು. ಇದರಿಂದ ... ಸಹಜ ಸುಖವು.

ತತ್ವಮಸಿ ಎಂಬ ಮಹಾವಾಕ್ಯಾರ್ಥ ... ಮೋಕ್ಷವು. ಈ ಮೋಕ್ಷವೆಂಬ ಅರಮನೆಯನ್ನು ... ಮೋಕ್ಷಮಾರ್ಗವನ್ನು ಹಿಡಿದಿರುವ ಪ್ರತಿಯೊಬ್ಬನೂ ವಿದ್ಯಾಭ್ಯಾಸ ಸತ್ಸಂಗವನ್ನು ಮಾಡಿ ಅರಮನೆಯನ್ನು ಸೇರುವದು ಸಕಲರ ಮುಖ್ಯ ಕರ್ತವ್ಯವು.

೯೧ ಭಗವದ್ಭಕ್ತರಲ್ಲಿ ಆರ್ತ, ಜಿಜ್ಞಾಸು, ಅರ್ಥಾರ್ಥಿ, ಜ್ಞಾನಿ ಎಂದು ನಾಲ್ಕು ಬಗೆಯವೆ. ಯಾವುದಾದರೊಂದು ಕಷ್ಟದ ಪರಿಹಾರಕ್ಕಾಗಿ ಶರಣುಹೋಗುವವನು ಆರ್ತನು. ಮನುಷ್ಯನ ಕುತೂಹಲವನ್ನು ಕಳೆದು ಕೊಳ್ಳುವುದಕ್ಕಾಗಿ ತಿಳಿಯಬಿಚ್ಛಿಸುವವನು ಜಿಜ್ಞಾಸು, ಯಾವುದಾದರೊಂದು ಇಷ್ಟಾರ್ಥವನ್ನು ಬಯಸುವವನು ಅರ್ಥಾರ್ಥಿಯು. ಪರಮಾತ್ಮ ಸ್ವರೂಪವನ್ನು ತಿಳಿದು ಭಜಿಸುವವನು ಜ್ಞಾನಿಯು. ಈ ನಾಲ್ವರಲ್ಲಿ ಜ್ಞಾನಿಯೇ ಹೆಚ್ಚಿನವನೆಂದು ಸ್ಪಷ್ಟವಾಗುತ್ತದೆ. ಏಕೆಂದರೆ ಆರ್ತ ಮೊದಲಾದ ಮೂವರಿಗೆ ಯಾವದಾದರೊಂದು ಬಗೆಯ ಪ್ರತಿ ಫಲದ ನಿರೀಕ್ಷಣೆ ಇರುತ್ತದೆ. ಆದ್ದರಿಂದ ಅದು ವ್ಯಾಪಾರಿಯ ಭಕ್ತಿಯೆನಿಸುವದು. ಜ್ಞಾನಿಯದು ಹಾಗಲ್ಲ. ಅವನು ಪರಮಾತ್ಮ ಸ್ವರೂಪವನ್ನು ತಿಳಿದು ಅವನಿಗೆ ಕೇವಲ ಗುಣಲುಬ್ಧನಾಗಿ, ಶರಣು ಹೋಗುತ್ತಾನೆ. ಆದ್ದರಿಂದ ಅವನು ಹೆಚ್ಚಿನವನು. ಪರಮಾತ್ಮ ಸ್ವರೂಪದ ಜ್ಞಾನವಿಲ್ಲದೆ ಮಾಡಿದ ಭಕ್ತಿಯು ನಿಶ್ಚಲವಾಗಿ ನಿಲ್ಲುವದಿಲ್ಲ. ಅದನ್ನು ಶಾಸ್ತ್ರಕಾರರು ಗೌಣಭಕ್ತಿ ಎನ್ನುತ್ತಾರೆ. ಪರಮಾತ್ಮ ಸ್ವರೂಪಜ್ಞಾನ ಪೂರ್ವಕವಾದ ಭಕ್ತಿಯು ಪರಭಕ್ತಿಯು. ಇದೇ ನಿಜವಾದ ಭಕ್ತಿಯು. ಉದಾಹರಣೆಗಾಗಿ ನೋಡಿರಿ! ವಿದುರನ ಹೆಂಡತಿಯು ಸ್ನಾನ ಮಾಡುತ್ತಿದ್ದಾಗ ಒಂದು ದಿನ ಶ್ರೀ ಕೃಷ್ಣನು ಒಂದು ಬಾಗಿಲಲ್ಲಿ ನಿಂತು ತನ್ನ ಬಂದಿರುವಿಕೆಯನ್ನು ಸೂಚಿಸಿದನು. ಒಡನೆಯೇ ವಿದುರನ ಹೆಂಡತಿಗೆ ಕೃಷ್ಣನ ಮೇಲಿನ ಪ್ರೇಮದ (ಭಕ್ತಿಯ) ಭರದಲ್ಲಿ ದೇಹಭಾವವೇ ಹಾರಿ ಹೋಯಿತು. ಆಗ ಆಕೆಯು ಬೆತ್ತಲೆಯಾಗಿಯೇ ಎದ್ದು ಬಂದು ಬಾಗಿಲನ್ನು ತೆಗೆದು ಅವನನ್ನು ಒಂದು ಕಡೆ ಕೂಡಿಸಿ ಬಾಳೆಯಹಣ್ಣುಗಳನ್ನು ತಂದು ಸಿಪ್ಪೆಯನ್ನು ಸುಲಿದು ಹಣ್ಣನ್ನು ಕೆಳಕ್ಕೆ ಬಿಸಾಡಿ ಸಿಪ್ಪೆಯನ್ನೇ ತಿನ್ನಿಸುತ್ತಿದ್ದಳು. ಕೃಷ್ಣನಾದರೂ ಸಿಪ್ಪೆಯನ್ನೇ ಬಾಯಿ ಚಪ್ಪರಿಸಿ ಕೊಂಡು ತಿನ್ನುತ್ತಿದ್ದನೆಂಬ ಇತಿಹಾಸ ವಿರುವದು. ಅಂದರೆ ಆಕೆಯ ಭಕ್ತಿಯುರಸವು ಆ ಸಿಪ್ಪೆಯಲ್ಲಿ ಮಿಶ್ರವಾಗಿದ್ದದರಿಂದ ಆ ಸಿಪ್ಪೆಯನ್ನೇ ಆನಂದದಿಂದ ತಿಂದನು. ಇದಕ್ಕೇ ಪರಭಕ್ತಿ ಎನ್ನುವದು.

೯೨ ಕರ್ಮಯೋಗ, ರಾಜಯೋಗ ಮೊದಲಾದವುಗಳು ದೂರದಲ್ಲಿ ನಿಂತು ಫಲಭರಿತವಾದ ಮರದ ಸೌಂದರ್ಯವನ್ನು ನೋಡಿ ಆನಂದಿಸುವಂಥ ಸಾಧನಗಳಾಗಿರುತ್ತವೆ. ಭಕ್ತಿಯೋಗವು ಮರದ ಕೆಳಗೆ ನಿಂತು ಹಣ್ಣು ತಿನ್ನುವಂಥ ಸಾಧನವಾಗಿರುತ್ತದೆ. ಕರ್ಮಯೋಗ, ರಾಜಯೋಗಗಳಲ್ಲಿ ದೇವರ ಸ್ವರೂಪ ಸಂಬಂಧವು ಇನ್ನೂ ಹತ್ತಿರವಾಗಿರುವುದಿಲ್ಲ. ಭಕ್ತಿಯೋಗದಲ್ಲಿ ಮೊದಲಿನಿಂದಲೇ ಆದರ ಸಂಬಂಧವೇ ಸಂಸ್ಥಾನವಾಗಿರುವದು ಮತ್ತು ಕರ್ಮಯೋಗದಲ್ಲಿ ಈಶ್ವರ ಪ್ರೀತಿಗಾಗಿ ಅನೇಕ ಉಪಕರಣಗಳನ್ನು ಒದಗಿಸಿಕೊಳ್ಳಬೇಕಾಗುವದು. ರಾಜಯೋಗದಲ್ಲಿ ಈಶ್ವರ ಪ್ರೀತಿಗಾಗಿ ದೇಹದಂಡನೆಯನ್ನೂ ಮನೋದಂಡನೆಯನ್ನೂ ಮಾಡಬೇಕಾಗುವದು. ಭಕ್ತಿಯೋಗದಲ್ಲಿ ಅಂಥದ್ದೇನೂ ಇರುವದಿಲ್ಲ. ಹಾಯಾಗಿದ್ದು ಇದ್ದಷ್ಟರಲ್ಲಿಯೇ ಈಶ್ವರಾರ್ಚನೆಯನ್ನು ಮಾಡಿದರಾಯಿತು. "ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ, ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ" || ಎಂಬ ಗೀತೋಕ್ತಿಯಂತೆ ಭಕ್ತಿಯೋಗದಲ್ಲಿ ದೇವರಿಗೆ ಒಂದು ಎಲೆಯನ್ನೋ ಒಂದು ಹೂವನ್ನೋ ಒಂದು ಹಣ್ಣನ್ನೋ ಕೊನೆಗೆ ಒಂದು ಉದ್ಧರಣೆ ನೀರನ್ನೋ ಕೊಟ್ಟರೂ ಸಾಕು. ಆದರೆ ಅವನು ಶುದ್ಧ ಬುದ್ಧಿಯುಳ್ಳವನಾಗಿ ಪ್ರೇಮದಿಂದ ಧರ್ಮದಿಂದ ಸಂಪಾದಿಸಿ ಪ್ರೇಮ (ಭಕ್ತಿಯಿಂದ) ದಿಂದ ಕೊಟ್ಟದ್ದಾಗ ಬೇಕು. ಅದನ್ನು ದೇವರು ಆನಂದದಿಂದ ಸ್ವೀಕರಿಸುವನು. ಕೌರವರಿಗೂ ಪಾಂಡವರಿಗೂ ಸಂಧಿಯನ್ನು ಮಾಡುವುದಕ್ಕಾಗಿ ಶ್ರೀ ಕೃಷ್ಣನು ಹಸ್ತಿನಾವತಿಗೆ ಬಂದಾಗ್ಯೆ ಶೂದ್ರನೂ ಬಡವನೂ ಆದ ವಿದುರನು ಕೊಟ್ಟ ಒಂದು ಸ್ವಲ್ಪ ಹಾಲಿನಿಂದ ಅವನ ಹೊಟ್ಟೆ ತುಂಬಿ ಹರಿದ ಕೋಡಿಯು ಅಲ್ಲಿಯೇ ಹೊಳೆಯಾಗಿ ಒಂದು ಕ್ಷೀರಸಾಗರವನ್ನುಂಟುಮಾಡಿತು. ಕೃಷ್ಣನ ಬಾಲ್ಯಸ್ನೇಹಿತನಾದ ಕುಚೇಲನು ನೆರೆಹೊರೆಯವರನ್ನು ದೈನ್ಯದಿಂದ ಬೇಡಿ ತಂದ ಹೊಟ್ಟುಗಳಿದ ಒಂದು ಹಿಡಿ ಅವಲಕ್ಕಿಯಿಂದ ಕೃಷ್ಣನ ಮನೆಯ ಮಂದಿಗೆಲ್ಲಾ ತೃಪ್ತಿಯಾಯಿತೆಂಬ ಇತಿಹಾಸಗಳಿವೆ. ಆದ್ದರಿಂದ ಭಕ್ತಿಮಾರ್ಗವೇ ಬಹು ಸುಲಭವಾದ ಮಾರ್ಗವಾಗಿರುವದು.

೯೩ ಎಲೈ ಭೂಲೋಕದ ಜನರುಗಳಿರಾ! ನೀವೆಲ್ಲರೂ ಒಂದೇ ಮರದ ಹಣ್ಣುಗಳು, ಒಂದೇ ಕೊಂಬೆಯ ಎಲೆಗಳು, ಆದ್ದರಿಂದ ಪೂರ್ಣವಾದ ಸದಾಶಯದಿಂದಲೂ ಸಾಮರಸ್ಯದಿಂದಲೂ ಪ್ರೇಮದಿಂದಲೂ ಹೊಂದಿಕೆಯಿಂದಲೂ ಕೂಡಿ ನಡೆಯಿರಿ. ಮನುಷ್ಯನು ತನ್ನ ದೇಶವನ್ನು ಪ್ರೀತಿಸುವನೆಂದು ಹೆಮ್ಮೆ ಪಡಬಾರದು. ತನ್ನಂತಿರುವ ಮಾನವರನ್ನು ಪ್ರೀತಿಸುವೆನೆಂದು ಬೇಕಾದರೆ ಹೆಮ್ಮೆ ಪಡಬಹುದು. ಈ ಭೂಲೋಕವೆಂಬುದು ಒಂದು ಹಿಡಿ ಮಣ್ಣು; ಇದೆಲ್ಲ ಒಂದೇ ಮನೆ, ಇದು ಒಂದಾಗಿಯೇ ಇರಲಿ. ನಿಮ್ಮನ್ನು ಒಬ್ಬರು ಕೊಂದರೂ ಕೊಲ್ಲಲಿ ನೀವು ಮಾತ್ರ ಅವರನ್ನು ಕೊಲ್ಲದಿರಿ. ಕೊಟ್ಟ ಮಾತಿನಂತೆ ನಡೆದುಕೊಳ್ಳಿರಿ, ಕತ್ತಲೆಯ ದೀಪವಾಗಿರಿ, ಕಷ್ಟದಲ್ಲಿ ಸಹಾಯಕರಾಗಿರಿ, ನೀರಡಿಕೆಯುಳ್ಳವರಿಗೆ ಸಮುದ್ರವಾಗಿರಿ, ಸಂಕಟ ಪಡುತ್ತಿರುವವರಿಗೆ ಆಸರೆಯಾಗಿರಿ. ಮತ್ತು ಧೈರ್ಯವೆಂಬ ಐರಾವತ, ಶಾಂತಿಯೆಂಬ ಕಾಮಧೇನು, ದಮವೆಂಬ ಮಂದಾರ ವೃಕ್ಷಗಳ ಗುಂಪು, ಮೈತ್ರಿ ಮುಂತಾದ ಶುಭವಾಸನೆಗಳೆಂಬ ಅಪ್ಸರಸ್ತ್ರೀಯರು, ವಿವೇಕವೆಂಬ ಉಚ್ಚೈಃಶ್ರವಸ್ಸು, ಸಂತೋಷವೆಂಬ ಚಿಂತಾಮಣಿ, ಆತ್ಮಜ್ಞಾನವೆಂಬ ಹೆಚ್ಚಿನ ಸಮರಸ ಅಮೃತ, ವೈರಾಗ್ಯವೆಂಬ ಚಂದ್ರೋದಯ—ಇವುಗಳಿಂದೊಡಗೂಡಿದ ವೇದಾಂತ ಸಾಗರವನ್ನು ಪ್ರತಿದಿನವೂ ಆಶ್ರಯಿಸುವವರಾಗಿ ಮುಕ್ತಿ ಲಕ್ಷ್ಮಿಯನ್ನು ಪಡೆಯುವವರಾಗಿರಿ.

ಆರ್. ಎಂ. ಮಲ್ಲಿಕಾರ್ಜುನಾರಾಧ್ಯ, ಶಿಷ್ಯ

ಕಾಶೀಕ್ಷೇತ್ರಕ್ಕೆ ಬಾಳ್ಳಿಸ್ವಾಮಿಗಳವರ ಆಗಮನ.

ಚತುರ್ವಿಧಪುರುಷಾರ್ಥಗಳನ್ನು ಹೊಂದಬೇಕಾದರೆ, ಜಗತ್ಕರ್ತೃವಾದ ಪರಶಿವನ ಧ್ಯಾನವನ್ನೂ, ಪೂಜೆಯನ್ನೂ ಮಾಡಬೇಕಾಗುತ್ತದೆ. ಅಂತಹ ಜಗತ್ಕರ್ತೃವಾದ ಪರಮಾತ್ಮನನ್ನು ಒಲಿಸಬೇಕಾದರೆ, ಮೊದಲು ಪ್ರಸಿದ್ಧ ಪ್ರಸಿದ್ಧ ತೀರ್ಥಯಾತ್ರೆಗಳನ್ನು ಮಾಡಿ ಅಲ್ಲಲ್ಲಿಯ ಶಿವಲಿಂಗಗಳನ್ನು ಸಂದರ್ಶಿಸಬೇಕಾಗುತ್ತದೆ ಇದರಿಂದ ಮಾನವನ ಮನಸ್ಸು ಪರಿಶುದ್ಧವಾಗಿ ಪರಮಾತ್ಮನಲ್ಲಿ ತಾದಾತ್ಮ್ಯವನ್ನು ಹೊಂದುವದು ಇದರಂತೆ, ಪರಮ ವೈರಾಗ್ಯಮೂರ್ತಿಗಳಾದ ಬಳ್ಳಿ ಹಿರೇಮಠದ ಶ್ರೀ|| ಷ|| ಬ್ರ|| ಚನ್ನಬಸವ ಶಿವಾಚಾರ್ಯಸ್ವಾಮಿಗಳವರು ತಮ್ಮ ಭಕ್ತರೊಡಗೂಡಿ ತೀರ್ಥಯಾತ್ರೆಗೆ ಹೊರಟು ನಾಶಿಕ, ಪ್ರಯಾಗ ಮುಂತಾದ ಹಲಕೆಲವು ತೀರ್ಥಯಾತ್ರೆಗಳನ್ನು ಮಾಡುತ್ತ, ತಾ|| ೪-೧೨-೩೫ ನೆಯ ದಿವಸ ಭೂಕೈಲಾಸವಾದ ಶ್ರೀ ಕಾಶೀಕ್ಷೇತ್ರಕ್ಕೆ ಆಗಮಿಸಿದರು ಮರುದಿವಸ ಶ್ರೀ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಪಂಚಾಕ್ಷರಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಗೆ ಭಕ್ತಾದಿಗಳೊಡನೆ ವಿಶೇಷ ಕಾಣಿಕೆಯನ್ನೊಪ್ಪಿಸಿ ಕೃತಕೃತ್ಯರಾದರು ಬಳಿಕ ತಾ|| ೭-೧೨-೩೫ ನೆಯ ದಿವಸ ರಾತ್ರಿ ೭|| ಘಂಟೆಗೆ ವೀರಶೈವ ವಿದ್ವತ್ಸಂಘದ ೮ನೆಯ ವಿಶೇಷ ಅಧಿವೇಶನದ ಸಭೆಯು ಶ್ರೀ|| ಷ|| ಬ್ರ|| ಬಾಳ್ಳಿ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರುಗಿತು ಸಭೆಯು ಪಂಡಿತರಿಂದಲೂ, ಸ್ವಾಮಿಗಳಿಂದಲೂ, ಯಾತ್ರಿಕರಿಂದಲೂ ಅಲಂಕೃತವಾಗಿತ್ತು ಮೊಟ್ಟಮೊದಲು ವೀರಶೈವ ವಿದ್ವತ್ಸಂಘದ ಸೆಕ್ರೆಟರಿಗಳಾದ ಶ್ರೀ ಗುರುದೇವ ಶಿವಾಚಾರ್ಯರು, ಚಿಕ್ಕಮಣ್ಣೂರು ಇವರು ಸಭೆಯ ಅಧ್ಯಕ್ಷತೆಯನ್ನು ಸ್ವೀಕರಿಸುವದಕ್ಕೋಸ್ಕರ ಶ್ರೀ ಬಾಳ್ಳಿ ಸ್ವಾಮಿಗಳವರನ್ನು ವಿದ್ವತ್ಸಂಘದ ಪರಿಯಿಂದ ಕೋರಿದರು ಅದಕ್ಕೆ ಶ್ರೀ ವಾಗೀಶಶಿವಾಚಾರ್ಯರು ಅನುಮೋದವನ್ನಿತ್ತರು ಬಳಿಕ ಶ್ರೀ ಬಾಳ್ಳಿ ಸ್ವಾಮಿಗಳು ಈ ತಹ ಜಗದ್ಗುರು ಪೀಠದಸ್ಥಾನದಲ್ಲಿಯೂ ಮತ್ತು ಅನೇಕ ವಿದ್ವಚ್ಛಿರೋಮಣಿಗಳ ಸಮೂಹದಲ್ಲಿಯೂ ಅಧ್ಯಕ್ಷಸ್ಥಾನವನ್ನು ವಹಿಸುವದಕ್ಕೆ ಸಮರ್ಥನಾಗದಿದ್ದರೂ ಶ್ರೀ ಜಗದ್ಗುರು ವಿಶ್ವಾರಾಧ್ಯಮಹಾಸ್ವಾಮಿಗಳವರ ಸೇವೆಯೆಂದು ಭಾವಿಸಿ, ನಾನೀಗ ಅಧ್ಯಕ್ಷತೆಯನ್ನು ಸ್ವೀಕರಿಸುವೆನೆಂದು ಹೇಳಿ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು ಆಚಾರ್ಯಸ್ತವನವಾದನಂತರ ಸಾಹಿತ್ಯಾಚಾರ್ಯ, ಕಾವ್ಯತೀರ್ಥ, ವೇದಾಂತಶಾಸ್ತ್ರೀ ಇತ್ಯಾದಿ ಪದವೀಧರರಾದ ಶ್ರೀ ವಾಗೀಶಶಿವಾಚಾರ್ಯರು ಸಂಘದ ಉದ್ದೇಶವನ್ನೂ, ಸಂಘವು ಮಾಡಿರುವ ಕಾರ್ಯಗಳನ್ನೂ ಕುರಿತು ಅರ್ಧ ಘಂಟೆಯವರೆಗೆ ಭಾಷಣವನ್ನು ಮಾಡಿದರು ತರುವಾಯ ಶ್ರೀ|| ಷ|| ಬ್ರ|| ಮಲ್ಲಿಕಾರ್ಜುನಶಿವಾಚಾರ್ಯರು, ಚಿಮ್ಮಲಗಿ ಇವರು "ವೀರಶೈವ ಮತೋತ್ಕರ್ಷ" ವಿಷಯವಾಗಿ ಬಹು ರಮಣೀಯವಾದ ಭಾಷಣವನ್ನು ಮಾಡಿದರು ಅನಂತರ ತರ್ಕರತ್ನ, ಕಾವ್ಯತೀರ್ಥ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯರು, ಬಿಚ್ಚಾಲಿ ಇವರು "ವೀರಶೈವ ಮತದ ಅವನತಿ" ಎಂಬ ವಿಷಯವನ್ನೊಳಗೊಂಡು ಪ್ರಾಚೀನಕಾಲದಲ್ಲಿ ಈ ಮತಕ್ಕೆ ಇದ್ದ ಪ್ರಾಶಸ್ತ್ಯವನ್ನೂ, ಈಗ ವರ್ಣಸಂಕರಕಾರರ ಮತ್ತು ಇತರ ಧರ್ಮಗಳ ಆಘಾತದಿಂದುಂಟಾಗಿರುವ ಕ್ಷೀಣತೆಯನ್ನೂ ವ್ಯಕ್ತಗೊಳಿಸುತ್ತ ಅತ್ಯಂತ ಕಳಕಳಿಯಿಂದ ವ್ಯಾಖ್ಯಾನವನ್ನು ಮಾಡಿದರು ಅನಂತರ ಶ್ರೀ|| ಷ|| ಬ್ರ|| ಋಷಭಶಿವಾಚಾರ್ಯರು ಕಾವ್ಯತೀರ್ಥ, ಮಹಿಸಾಳ ಇವರು "ವೀರಶೈವ ಪ್ರಾಚೀನತೆ" ಎಂಬ ವಿಷಯದ ಮೇಲೆ ಭಾಷಣವನ್ನು ಮಾಡಿದರು ಅನಂತರ ಶ್ರೀ ಗುರುದೇವಶಿವಾಚಾರ್ಯರು "ಪಂಚಪೀಠಗಳ ಮಹತ್ವ" ಎಂಬ ವಿಷಯದಲ್ಲಿ ಭಾಷಣವನ್ನು ಮಾಡಿ ಆಡೆಗೆ, ತಾ|| ೪-೧೨-೩೫ ನೆಯ ದಿವಸ ಕಾಶೀ ವೀರಶೈವ ವಿದ್ವತ್ಸಂಘಕ್ಕೆ ವೇ|| ಮಹಾನಂದದೇಶಿಕರು ಅಷ್ಟೂರು ಬೇಗಂಪೇಟ್ ಇವರು ಧನಸಹಾಯವನ್ನು ಮಾಡಿದ ಬಗ್ಗೆಯೂ, ತಾ|| ೨೭-೧೧-೩೫ ನೆಯ ದಿವಸದಲ್ಲಿ ವೇ|| ಮ|| ರಾ|| ವೀರಭದ್ರಶಾಸ್ತ್ರಿಗಳವರು ಯಾದಗಿರಿ ಸಂಸ್ಕೃತಕಾಲೇಜಿಗೆ ಪ್ರಿನ್ಸಿಪಾಲರಾದ ಬಗ್ಗೆಯೂ ಸದಸ್ಯರೆಲ್ಲರ ಅನುಮತಿಯಿಂದ ಆನಂದವನ್ನು ಪ್ರಕಟಿಸಿದರು. ಅನಂತರ ಅಧ್ಯಕ್ಷರಾದ ಸ್ವಾಮಿಗಳವರು ಲಲಿತವಾದ ಕನ್ನಡನುಡಿಯಿಂದ ಪಂಡಿತರ ಭಾಷಣಗಳ ವಿಷಯವನ್ನು ಪುಷ್ಟೀಕರಿಸಿ, ತಮ್ಮ ತಮ್ಮ ಆಚಾರ್ಯರ ಕಡೆಯಿಂದಲೇ ಶಿವದೀಕ್ಷೆಯನ್ನು ಹೊಂದಿ ಎಷ್ಟೋ ಜನ ಮಹರ್ಷಿಗಳು ಮೋಕ್ಷವನ್ನು ಹೊಂದಿದ್ದಾರೆಂತಲೂ, ಅದರಂತೆಯೇ ನಾವುಗಳು ನಮ್ಮ ನಮ್ಮ ಆಚಾರ್ಯರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರಲ್ಲಿ ಘನವಾದ ಭಕ್ತಿಯನ್ನಿಟ್ಟು ಮೋಕ್ಷಮಾರ್ಗಿಗಳಾಗಬೇಕೆಂತಲೂ, ಗುರುವಿನಲ್ಲಿಯೂ, ಶಿವನಲ್ಲಿಯೂ ಭೇದಬುದ್ಧಿಯನ್ನಿಡದೆ ನಡೆದುಕೊಳ್ಳಬೇಕೆಂತಲೂ, ಇದಕ್ಕೆ ತಪ್ಪಿದರೆ ಪರಮಾತ್ಮನ ನಿಂದೆಯನ್ನು ಮಾಡಿದ ಪಾಪವು ಸಗಲುವುದೆಂತಲೂ, ನರಕವು ತಪ್ಪದೆಂತಲೂ ಇವೇ ಮೊದಲಾದ ವಿಷಯಗಳನ್ನು ತೆಗೆದುಕೊಂಡು ಶ್ರೋತೃಗಳ ಮನದಣಿಯುವಂತೆ ಸ್ಪಷ್ಟಶಬ್ದಗಳಿಂದ ಭಾಷಣವನ್ನು ಮಾಡಿದರು ಅನಂತರ ವಿದ್ವತ್ಸಂಘದ ಸೆಕ್ರೆಟರಿಗಳವರು ಅಧ್ಯಕ್ಷರ ಅಭಾರಮನ್ನಣೆಯನ್ನು ಮಾಡಿ ಮಹಾಸ್ವಾಮಿಗಳು ತಮ್ಮ ಸರ್ವಕಾರ್ಯವನ್ನು ಬದಿಗಿಟ್ಟು, ನಮ್ಮ ಸಂಘದ ಪ್ರಾರ್ಥನೆಯ ಮೇರೆಗೆ ಅಧ್ಯಕ್ಷಪದವಿಯನ್ನು ಸ್ವೀಕರಿಸಿ, ಹಿತೋಪದೇಶವನ್ನು ಮಾಡಿದುದಕ್ಕಾಗಿ ನಾವುಗಳು ಬಹಳವಾಗಿ ಸಂತೋಷಿಸುತ್ತೇವೆಂದು ಹೇಳಿದರು ಅನಂತರ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು ಆಗಲೇ ಬಾಳ್ಳಿ ಶ್ರೀಗಳವರು ತಮ್ಮ ಭಕ್ತಾದಿಗಳಿಂದ ವಿದ್ವತ್ಸಂಘಕ್ಕೆ ತಕ್ಕ ದ್ರವ್ಯಸಹಾಯವನ್ನು ಮಾಡಿಸಿದದಲ್ಲದೆ ತಾವುಗಳು ಸ್ವತಃ ಸಹಾಯವನ್ನು ಮಾಡಿ ವಿದ್ವತ್ಸಂಘಕ್ಕೆ ಮಹೋಪಕಾರವನ್ನೆಸಗಿದರು

ಈ ಪ್ರಕಾರವಾಗಿ ಸಹಾಯವನ್ನು ಮಾಡಿದ ಈ ಮಹನೀಯರಿಗೆ ಶ್ರೀಜಗದ್ಗುರು ವಿಶ್ವಾರಾಧ್ಯರೂ ವಿಶ್ವರಕ್ಷಕನಾದ ವಿಶ್ವನಾಥನೂ ಮಂಗಲವನ್ನೀಯಲೆಂದೂ ಇಂಥವರ ಆಗಮನದಿಂದ ಈ ವಿದ್ವತ್ಸಂಘವು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದೂ ಹಾರೈಸುವ,

ಕಾಶೀ ವೀರಶೈವ ವಿದ್ವತ್ಸಂಘದ,
ಸೆಕ್ರೆಟರಿ

ನಮಃ ಪಂಚಜಗದ್ಗುರುಭ್ಯಃ

ದೀಕ್ಷಾ ಮತ್ತು ವಿವಾಹಸಮಾರಂಭ
ಸೋಲಾಪುರ

